ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,
ದಿನಾಂಕ
20,640

ಕರ್ನಾಟಕ ವಿಧಾನಸಭೆಯ ನಡೆವಳಿಕೆಗಳು
KARNATAKA LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ಎಂಟನೆಯ ಅಧಿವೇಶನ
EIGHTH SESSION

ಸಂಪುಟ ೧ (ಕ್ರಮಾಂಕ ೧ರಿಂದ ೫)

VOLUME I — (NOS. 1 TO 5)

(೪ನೇ ಜನವರಿ ೧೯೯೩ರಿಂದ ೮ನೇ ಜನವರಿ ೧೯೯೩ರವರೆಗೆ)

(4th January 1993 To 8th January 1993)

ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Karnataka Legislature Secretariat

CONTENTS

TO THE

KARNATAKA LEGISLATIVE ASSEMBLY DEBATES

Volume - I (Nos. 1 to 5)

(೪ನೇ ಜನವರಿ ೧೯೯೩ರಿಂದ ೮ನೇ ಜನವರಿ ೧೯೯೩ರವರೆಗೆ)

ಸೋಮವಾರ, ೪ನೇ ಜನವರಿ ೧೯೯೩

ಪುಷ್ಯ ೧೪ ಶಕ ೧೯೧೪

1. ಸಂತಾಪ ಸೂಚನೆ 1-2
2. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 2-30
3. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು. 30-34
4. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 35-76
5. ಅರ್ಜಿಗಳನ್ನೊಪ್ಪಿಸುವುದು. 76-77
6. ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ.
   - ಅ) ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಚುನಾವಣೆಯ ಬಗ್ಗೆ. 77-79
   - ಆ) ಹಿಂದಿನ ಸರ್ಕಾರದ ವೈಫಲ್ಯತೆಯ ಬಗ್ಗೆ. 79-80
   - ಇ) ಬಾಡಿಗೆ ನಿಯಂತ್ರಣ ಕಾಯಿದೆ 1961ರ ಬಗ್ಗೆ. 80-83
   - ಈ) ಕೊಪ್ಪದಲ್ಲಿ ಲೋಕಾಯುಕ್ತ ಅಧಿಕಾರಿಗಳ ಮೇಲೆ ಹಲ್ಲೆ. 83-84
   - ಉ) ಅರೆಕಾಲಿಕ ಉಪನ್ಯಾಸಕರನ್ನು ಖಾಯಂ ಮಾಡುವುದು. 84-88
   - ಊ) ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯ ಬಗ್ಗೆ. 88

ಹಕ್ಕುಚ್ಯುತಿ ನಿರ್ಣಯ ಮಂಡನೆಗೆ ಅನುಮತಿ ಕೋರಿಕೆ.

1) ಮೈಸೂರಿನಲ್ಲಿ ಆದಂತಹ ಗಲಭೆಗಳ ಬಗ್ಗೆ ಶ್ರೀ ಬಿ.ಎಸ್. ಯಡಿಯೂರಪ್ಪನವರು ಶ್ರೀ ಅಜೀಜ್ ಸೇಠ್‌ರವರ ಬಗ್ಗೆ ಆರೋಪಿಸಲಾದ ವಿಷಯ. 94-100

2) ಬೀದರ್ ಜಿಲ್ಲೆಯಲ್ಲಿ ಆದಂತಹ ಗಲಭೆಗಳ ಕುರಿತು ಮುಖ್ಯಮಂತ್ರಿಗಳಿಂದ ಹೇಳಿಕೆ ಬಗ್ಗೆ. 100-05

8. ಗಮನ ಸೆಳೆಯುವ ಸೂಚನೆ

ಯಗಚಿ ನದಿಗೆ ಹೊಸದಾಗಿ ಸೇತುವೆ ನಿರ್ಮಿಸುವ ಬಗ್ಗೆ. 105-06

9. ನಿಯಮ 334ರ ಮೇರೆಗೆ

1) 1991-92ನೇ ಸಾಲಿನಲ್ಲಿ ಶಾಸಕರ ಮತಕ್ಷೇತ್ರಗಳಲ್ಲಿ 40 ಲಕ್ಷ ರೂಪಾಯಿಗಳ ಕಾಮಗಾರಿ ಕುರಿತು. 107

2) ಕಬ್ಬಲಿಗೆ, ಕೋಳಿ, ಗಂಗಮತ, ಮೊಗವೀರ, ಅಂಬಿಗ, ಬೆಸ್ತ, ಬೆಸ್ತರು, ನೈಕೋಡಿ, ತಳವಾರ, ನಾಟಿಕರ್, ಸುಣಗಾರ, ಕೋಳಿದೋರ್, ಮಹದೇವ ಕೋಳಿ ಇತ್ಯಾದಿ ಪಂಗಡಗಳನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವ ಕುರಿತು. 107-08

3) ಬೈಲಹೊಂಗಲ ತಾಲ್ಲೂಕಿನ ಪೈಕಿ ಕೆಂಗಾನೂರು ಮತ್ತು ಸೌಂದತ್ತಿ ತಾಲ್ಲೂಕು ಪೈಕಿ ಮಾಟೊಳ್ಳಿ ಹಾಗೂ ಎಕ್ಕುಂಡಿ ಗ್ರಾಮಗಳಲ್ಲಿ ಮೀನುಗಾರರಿಗೆ ಮನೆ ಕಟ್ಟುವುದರ ಬಗ್ಗೆ. 108-09

4) ಕರ್ನಾಟಕದಿಂದ ಹೆಚ್ಚುವರಿ ಕಬ್ಬನ್ನು ಗಡಿ ರಾಜ್ಯಗಳಲ್ಲಿ ವಿಶೇಷವಾಗಿ ಮಹಾರಾಷ್ಟ್ರಕ್ಕೆ ಸಾಗಿಸುವ ಹಿನ್ನಲೆಯಲ್ಲಿ ರೈತರಿಗೆ ಆಗುತ್ತಿರುವ ತೊಂದರೆ ಬಗ್ಗೆ. 109-10

5) ಮಂಗಳೂರು ಸಮೀಪದ ಬೆಂಗ್ರೆ ಪ್ರದೇಶವನ್ನು ಮಹಾನಗರ ಪಾಲಿಕೆಗೆ ಸೇರಿಸುವ ಕುರಿತು. 110

6) ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ, ಬೆಂಗಳೂರು ಇದರ ಪಾಲಿಥಿನ್ ಸಂಸ್ಕರಣ ಘಟಕವನ್ನು ಪರಿಷ್ಕರಿಸುವ ಬಗ್ಗೆ. 110-12

10. ಗಮನ ಸೆಳೆಯುವ ಸೂಚನೆ.

ರಾಜ್ಯದಲ್ಲಿನ ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆ ಸಂಬಳದಲ್ಲಿ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳ ಈಡೇರಿಕೆ ಕುರಿತು. 112-15

11. ಅಯೋಧ್ಯೆಯ ಘಟನೆ ನಂತರ ರಾಜ್ಯದಲ್ಲಿ ಇತ್ತೀಚೆಗೆ ಜರುಗಿದ ಕೋಮು ಗಲಭೆಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಯವರ ಹೇಳಿಕೆ ಮೇಲೆ ಚರ್ಚೆ (ಮುಂದುವರೆದುದು) 115-80

12. ಮಂತ್ರಿಗಳ ಹೇಳಿಕೆ

1) ಕೊಪ್ಪದಲ್ಲಿ ನಡೆದಂತ ಘಟನೆ ಬಗ್ಗೆ. 180-83

2) ಬಾಡಿಗೆ ಕಾಯಿದೆ ನಿಯಂತ್ರಣದ ಬಗ್ಗೆ. 183

13. ಶಾಸನ ರಚನಾ ಕಾರ್ಯಕಲಾಪಗಳು (ವಿಧೇಯಕಗಳ ಮಂಡನೆ)

1) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 1992 216-25

2) 1992ರ ಕರ್ನಾಟಕ ಅವಶ್ಯಕ ವಸ್ತುಗಳ (ನಿಯಂತ್ರಣ) ವಿಧೇಯಕ 225-37

3) 1992ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ವಿಧೇಯಕ. 237-41

14. ಅನುಬಂಧಗಳು 241-72

ಮಂಗಳವಾರ, ೫ನೇ ಜನವರಿ ೧೯೯೩

ಪುಷ್ಯ ೧೫ ಶಕ ೧೯೧೪

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತಗಗಳು. 243-305

2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 305-414

3. ವರದಿಗಳನ್ನೊಪ್ಪಿಸುವುದು. 414-19

4. ಅಭ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಧ ವಿಷಯಗಳು.

1) ಬಳ್ಳಾರಿ ಜಿಲ್ಲೆಯಲ್ಲಿ ನೆರೆ ಹಾವಳಿಯಿಂದ ರೈತರಿಗೆ ಆಗಿರುವ ಅನಾಹುತ. 419-23

2) ತಾಲ್ಲೂಕು ಹಾಗೂ ಡಿಸ್ಟ್ರಿಕ್ಟ್ ಟ್ರೆಜರಿಗಳಿಗೆ ಸರ್ಕಾರದಿಂದ ಬ್ಯಾನ್ ಆರ್ಡರ್ ನೀಡಿರುವ ಬಗ್ಗೆ. 423-26

3) ಹೆಚ್.ಡಿ.ಸಿ.ಯಿಂದ ನೂಲು ಸಿಗದೆ ನೇಕಾರರಿಗೆ ತೊಂದರೆ. 426-29

5. ಗಮನ ಸೆಳೆಯುವ ಸೂಚನೆಗಳು

1. ಹತ್ತಿಯ ಬೆಲೆ ಇಳಿತದ ಬಗ್ಗೆ. 429-33

2. ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕಂಬಳಿ ತಯಾರಿಸುವ ನೇಕಾರರಿಗೆ ಆಗಿರುವ ತೊಂದರೆ. 433-35

6. ನಿಯಮ 334 ಮೇರೆಗೆ

1. ಬೆಂಗಳೂರು ನಗರದಲ್ಲಿ ರಸ್ತೆ ಅಪಘಾತಗಳನ್ನು ಹಾಗೂ ಸಂಚಾರ ವ್ಯವಸ್ಥೆಗಳನ್ನು ಉತ್ತಮಪಡಿಸಲು ಉನ್ನತಮಟ್ಟದ ಸಮಿತಿ ರಚನೆ. 435

2. ಮೈಸೂರು ಜಿಲ್ಲೆ ಕೊಳ್ಳೇಗಾಲದ ಕಸಬ ಹೋಬಳಿಯ ಕಬಿನಿ ನಾಲೆ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ರೈತರಿಗೆ ಹೆಚ್ಚು ನೀರಾವರಿ ತೆರಿಗೆ ಹಾಕಿರುವುದು. 435-36

3. ಹಿಂದುಳಿದ ಹಾಗೂ ಅಲ್ಪ ಸಂಖ್ಯಾತರ ನಿರ್ದೇಶನಾಲಯದಲ್ಲಿನ ನೌಕರರು ಅಧಿಕಾರಿಗಳಿಗೆ ಮುಂಬಡ್ತಿ. 436-37

4. ನಿರುದ್ಯೋಗಿ ವೈದ್ಯಕೀಯ ಪಧವೀಧರರಿಗೆ ಗ್ರಾಮೀಣ ಪ್ರದೇಶದಲ್ಲಿ ನರ್ಸಿಂಗ್ ಹೋಂಗಳನ್ನು ಕಟ್ಟಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಕಡಿಮೆ ಬಡ್ಡಿ ದರದಲ್ಲಿ ಸಾಲ. 437-38

5. ಮಂಗಳೂರಿನ ಕಂಕನಾಡಿಯಿಂದ ತಲಪಾಡಿ ಗಡಿಯವರೆಗೆ ಓಡುವ ಸಿಟಿ ಎಕ್ಸ್‌ಪ್ರೆಸ್ ಬಸ್‌ಗಳನ್ನು ನಿಲ್ಲಿಸುವುದು ಮತ್ತಿತರ ಬಸ್ಸುಗಳ ವೇಗ ಕಡಿಮೆಗೊಳಿಸುವುದು. 438

6. ದಕ್ಷಿಣ ಜಿಲ್ಲೆಯ ಕುಂದಾಪುರ ತಾಲ್ಲೂಕು ಕಿರಿ ಮಂಜೇಶ್ವರ ಗ್ರಾಮದ ಕೊಡಗೇರಿಗೆ ಸಮುದ್ರ ಕೊರತೆಯಿಂದಾಗುವ ಅನಾಹುತವನ್ನು ತಪ್ಪಿಸಲು ತಡೆಗೋಡೆ 438

7. ವಿಟ್ಲ ವಿದ್ಯುತ್ ಸಬ್‌ಸ್ಟೇಷನ್‌ನ ಕೆಲಸವನ್ನು ಆದಷ್ಟು ಬೇಗನೆ ಮುಗಿಸುವುದು. 439

8. ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58ರಿಂದ 55ಕ್ಕೆ ಇಳಿಸುವ ಬಗ್ಗೆ 440

7. ವಿತ್ತೀಯ ಕಾರ್ಯಕಲಾಪಗಳು (ಅನುಪೂರಕ ಅಂದಾಜುಗಳನ್ನು ಒಪ್ಪಿಸುವುದು) 441

8. ವರದಿಗಳನ್ನೊಪ್ಪಿಸುವುದು. 441-94

9. ಶಾಸನ ರಚನಾ ಕಾರ್ಯಕಲಾಪಗಳು.

ಅ) 1992ರ ಕರ್ನಾಟಕ ಸರಕುಗಳ ಪ್ರವೇಶ ಮೇಲಣ ತೆರಿಗೆ (2ನೇ ತಿದ್ದುಪಡಿ) ವಿಧೇಯಕ. 494-95

ಆ) 1993ರ ಕರ್ನಾಟಕ ಬಾಡಿಗೆ ನಿಯಂತ್ರಣ (ಪೂರ್ವಾನ್ವಯದಿಂದ ಅವಧಿ ವಿಧೇಯಕ ವಿಸ್ತರಣೆ). 495-506

ಬಿ) ಪರ್ಯಾಲೋಚನಾ ಪ್ರಸ್ತಾಪ

1) 1992ನೇ ಸಾಲಿನ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ. 506-22

13. ಅನುಬಂಧಗಳು. 522

ಬುಧವಾರ, ೬ನೇ ಜನವರಿ ೧೯೯೩

ಪುಷ್ಯ ೧೬ ಶಕ ೧೯೧೪

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 523-60

2. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು. 560-61

3. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 561-88

4. ಗಮನ ಸೆಳೆಯುವ ಸೂಚನೆಗಳು

   1. ರಾಜ್ಯದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಉಚಿತ ನಿವೇಶನಗಳ ವಿತರಣೆ 588-98

   2. ತಿಪ್ಪಸಂದ್ರ ಮತ್ತು ಮಾಳಗಾನಹಳ್ಳಿಯಲ್ಲಿ ಪಿ.ಹೆಚ್.ಸಿ. ಮತ್ತು ಪಿ.ಹೆಚ್.ಯು. ಕೇಂದ್ರಗಳನ್ನು ತೆರೆಯದೇ ಇರುವುದು. 598-600

5. ನಿಯಮ 334ರ ಮೇರೆಗೆ :

   1. ಶ್ರೀ ಹಾಲು ಸಿದ್ಧನಾಥ್ ಸಹಕಾರಿ ಸಕ್ಕರೆ ಕಾರ್ಖಾನೆಯ ಚುನಾಯಿತ ಮಂಡಳಿಯನ್ನು ವಿಸರ್ಜಿಸುವ ಸರ್ಕಾರದ ಆಲೋಚನೆ ಬಗ್ಗೆ. 600-01

   2. ಹಿರಿಯ ಕೆಲಸ ಪರಿವೀಕ್ಷಕರನ್ನು ಜೂನಿಯರ್ ಇಂಜಿನಿಯರ್ ಹುದ್ದೆಗೆ ಪದನಾಮ ಬದಲಾವಣೆ. 601-02

   3. ಆರೋಗ್ಯ ಇಲಾಖೆಯಲ್ಲಿ ಕುಷ್ಠರೋಗ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಫಿಸಿಯೋಥೆರಪಿ ಅವರುಗಳ ಬಡ್ತಿ. 602-03

   4. ಬಯಲು ಸೀಮೆ ಅಭಿವೃದ್ಧಿ ಮಂಡಳಿ ರಚನೆ ಮಾಡುವ ಬಗ್ಗೆ. 603

   5. ಬ್ರಹ್ಮಾವರ ಪೋಲೀಸ್ ಠಾಣೆಯ ವ್ಯಾಪ್ತಿಯ ವಾರಂಬಳ್ಳಿ ಗ್ರಾಮದಲ್ಲಿ ವಿವಿಯನ್ ಡಿಸಿಲ್ವ ಎಂಬುವರ ಕೊಲೆಯಾಗಿರುವ ಬಗ್ಗೆ. 603-05

   6. ಮಂಡ್ಯ ನಗರದ ಮಧ್ಯೆ ಹಾದು ಹೋಗುವ ಬೆಂಗಳೂರು, ಮೈಸೂರು ರಸ್ತೆಯ ಮಧ್ಯದಲ್ಲಿರುವ ಮೀಡಿಯನ್ ಕುರಿತು. 605-06

   7. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳು ಸಮ ಸಂಘಟನೆಗಳಿಂದು ಪರಿಗಣಿಸುವ ಸಮಿತಿಯ ಕಾರ್ಯ ವೈಖರಿ. 606-07

8. ಗಂಗೊಳ್ಳಿ ಮೀನುಗಾರಿಕೆ ಸಹಕಾರಿ ಸಂಘದಿಂದ ಮೀನುಗಾರರಿಗೆ ದೋಣಿ ನಡೆಸಲು ಸೀಮೆಎಣ್ಣೆ ದೊರೆಯದಿರುವ ಬಗ್ಗೆ. 607-08

9. ಗುಲ್ಬರ್ಗಾ ಜಿಲ್ಲೆಯ ಷಹಾಪುರ ತಾಲ್ಲೂಕಿಗೆ ಟ್ರಾನ್ಸ್‌ಫಾರ್ಮರ್‌ಗಳನ್ನು ಒದಗಿಸುವ ಕುರಿತು. 608-80

6. ಪ್ರಕಟಣೆಗಳು 680

ಗುರುವಾರ, ೭ನೇ ಜನವರಿ ೧೯೯೩

ಪುಷ್ಯ ೧೭ ಶಕ ೧೯೧೪

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 681-27

2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 727-85

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು. 785-87

4. ನಿಲುವಳಿ ಸೂಚನೆಯ ಪ್ರಸ್ತಾವ
ಶ್ರೀ ಎಸ್. ಬಂಗಾರಪ್ಪನವರ ಆಡಳಿತದಲ್ಲಿ ರಾಜ್ಯದ ಬೊಕ್ಕಸಕ್ಕೆ ಆಗಿರತಕ್ಕ ಹಾನಿ ಬಗ್ಗೆ. 787-806

5. ನಿಯಮ 68ರ ಮೇರೆಗೆ
ರಾಜ್ಯದಲ್ಲಿ ಇತ್ತೀಚೆಗೆ ಉಂಟಾದ ನೆರೆ ಹಾವಳಿ 806-34

6. ಶಾಸನ ರಚನಾ ಕಾರ್ಯಕಲಾಪಗಳು

ಅ) ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ (ತಿದ್ದುಪಡಿ) ವಿಧೇಯಕ 1992. 834-58

7. ಪ್ರಕಟಣೆ 858

8. ಶಾಸನ ರಚನಾ ಕಾರ್ಯಕಲಾಪಗಳು
ಕರ್ನಾಟಕ ಬಾಡಿಗೆ ನಿಯಂತ್ರಣ (ಪೂರ್ವಾನ್ವಯದಿಂದ ಅವಧಿ ವಿಸ್ತರಣೆ) ವಿಧೇಯಕ 1993. 858-66

9. ಪ್ರಕಟಣೆಗಳು

ಅ) ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯ ತೀರ್ಮಾನಗಳು. 866Ë67

ಶುಕ್ರವಾರ, ೮ನೇ ಜನವರಿ ೧೯೯೩

ಪುಷ್ಯ ೧೮ ಶಕ ೧೯೧೪

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 869-903
2. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು. 903-04
3. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 904-36
4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಿದ ವಿಷಯಗಳು.
   1. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬೌದ್ಧಿಕ ಚಟುವಟಿಕೆಗಳು ಸ್ಥಗಿತಗೊಂಡಿರುವುದು. 936-40
   2. ಕರ್ನಾಟಕ ರಾಜ್ಯದಲ್ಲಿ ಆಡಳಿತ ಭಾಷೆಯಾಗಿ ಕನ್ನಡ ಜಾರಿ 940-47
   3. ರಾಯಚೂರು ಶಾಖೋತ್ಪನ್ನ ಘಟಕದಲ್ಲಿರುವ ಬೂದಿ ಸಾಗಣಿಕೆಯ ಟೆಂಡರ್‌ನಲ್ಲಿ ಅವ್ಯವಹಾರ. 947-49
   4. ಬೆಣ್ಣೆತೋರ ನೀರಾವರಿ ಯೋಜನೆಯಡಿಯಲ್ಲಿ ಮುಳುಗಡೆಯಾಗುತ್ತಿರುವ ಹಳ್ಳಿಗಳ ಮನೆಗಳ ಪರಿಹಾರ ಧನದ ಕಡಿತದ ಬಗ್ಗೆ. 949
   5. ಬೆಂಗಳೂರು ನಗರದ ಕಿದ್ವಾಯ್ ಮತ್ತು ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಪರೀಕ್ಷೆ ಮಾಡದ ಬ್ಲಡ್ ಟ್ರಾನ್ಸ್‌ಫ್ಯೂಷನ್ ಮಾಡುತ್ತಿರುವ ಬಗ್ಗೆ 949-50
5. ಗಮನ ಸೆಳೆಯುವ ಸೂಚನೆಗಳು
   (1) ನಾಯಕ ಮತ್ತು ಪರಿವಾರ ಜನಾಂಗವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವ ವಿಚಾರ. 950-53
   (2) ತುರುವೇಕೆರೆ ತಾಲ್ಲೂಕು ಸೂಳೆಕೆರೆ ಗ್ರಾಮದ ಹೆಣ್ಣುಮಕ್ಕಳ ಮೇಲೆ ನಡೆದ ಅತ್ಯಾಚಾರ 953-57
6. ನಿಯಮ 334ರ ಮೇರೆಗೆ.
   1) ಖಾಸಗಿ ಹೊಸ ಮೆಡಿಕಲ್ ಮತ್ತು ಡೆಂಟಲ್ ಕಾಲೇಜುಗಳನ್ನು ಮಂಜೂರು ಮಾಡುವುದು. 957-58
   2) ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕಿನ ವೆಸ್ಟ್ ಆಫ್ ಕಾರ್ಡ್ ರೋಡ್ ಶಾಖೆಯೊಂದರಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆದಿರುವುದು. 958-60
   3) ಚಿಕ್ಕಮಂಗಳೂರು ಜಿಲ್ಲಾ ಪರಿಷತ್‌ನವರಿಂದ ಮೈಸೂರು ಲ್ಯಾಂಪ್ಸ್ ಬಲ್ಬನ್ನು ಉಪಯೋಗಿಸಬೇಕೆಂದು ಆದೇಶ ನೀಡಿರುವುದು. 960

4) ಹೆಣ್ಣೂರು ಬಾಣಸವಾಡಿ ಬಿ.ಡಿ.ಎ. ಬಡಾವಣೆಗಳಿಗೆ ನಗರ ಸಾರಿಗೆ ಕಪ್ಪು ಹಲಗೆ ಬಸ್ಸುಗಳನ್ನು ಓಡಿಸುವುದು. 960-62

5) ಕರ್ನಾಟಕ ರಾಜ್ಯಾದ್ಯಂತ ಬಡ ಭೂರಹಿತ ಕಾರ್ಮಿಕರ ಬಗರ್ ಹುಕುಂ ಸಾಗುವಳಿದಾರರಿಗೆ ಸಕ್ರಮಣಕ್ಕೆ ಅರ್ಜಿ ಸಲ್ಲಿಸಲು ಕಾನೂನಿನ ಅವಕಾಶ ನೀಡುವುದು. 962-63

6) ಕರ್ನಾಟಕ ರಾಜ್ಯದಲ್ಲಿ ಮನೆ ಕಂದಾಯ ವಸೂಲಿ ಮಾಡುವಲ್ಲಿ ನೀತಿ ನಿಯಮ ರೂಪಿಸುವುದು. 963-64

7) ಮಂಡ್ಯ ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಗಳನ್ನು ಹೆಚ್ಚಿಗೆ ಮಾಡುವುದು. 964

8) ಗುಲ್ಬರ್ಗ ಜಿಲ್ಲೆಯ ಖಾಸಗೀ ಸಾರಿಗೆ ಸಂಸ್ಥೆಯ ಕಾರ್ಮಿಕರನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ನೇಮಕ ಮಾಡುವುದು. 964-65

9) ಸಂಕೇಶ್ವರ ಕ್ಷೇತ್ರದ ಮತನೂರ ನಾಲಾ ಕೆರೆ ಕೆಲಸೇದ ಪ್ರಾರಂಭಕ್ಕೆ ಒತ್ತಾಯ 965-66

7. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

ಖಾಸಗಿ ಸದಸ್ಯರ ವಿಧೇಯಕಗಳನ್ನು ತೆಗೆದುಕೊಳ್ಳುವ ಕುರಿತು. 966-71

8. ನಿಯಮ 68ರ ಮೇರೆಗೆ

ರಾಜ್ಯದಲ್ಲಿ ಇತ್ತೀಚೆಗೆ ಬಿದ್ದ ಮಳೆಯಿಂದ ಉಂಟಾದ ತೊಂದರೆ ಹಾಗೂ ನೆರೆಹಾವಳಿ ಬಗ್ಗೆ ಚರ್ಚೆ 971-94

9. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

1) ಗೃಹ ನಿರ್ಮಾಣ ಸಹಕಾರ ಸಂಘಗಳ ಬಗ್ಗೆ ಜಿ.ವಿ.ಕೆ. ರಾವ್ ಸಮಿತಿಯವರು ನೀಡಿರುವ ವರದಿ 994-1006

2) ಆಡಳಿತದಲ್ಲಿ ಕನ್ನಡ ಭಾಷೆಯ ಅನುಷ್ಠಾನದ ಬಗ್ಗೆ 994-1006

10. ಶಾಸನ ರಚನಾ ಕಾರ್ಯಕಲಾಪಗಳು

1993ನೇ ಇಸವಿಯ ಕರ್ನಾಟಕ ಧನ ವಿನಿಯೋಗ ವಿಧೇಯಕ ಮಂಡನೆ ಹಾಗೂ ಪರ್ಯಾಲೋಚನಾ ಪ್ರಸ್ತಾವ 1006-12

11. ಪ್ರಕಟಣೆ 1012-13

12. ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ. 1013-18

13. ಅನುಬಂಧ 1019-23

ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ೪ನೇ ಜನವರಿ ೧೯೯೩, ಪುಷ್ಯ ೧೪, ಶಕ ೧೯೧೪

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೦೫ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು: (ಶ್ರೀಮತಿ ನಾಗಮ್ಮ ಕೇಶವಮೂರ್ತಿ) ಅವರು ಪೀಠವನ್ನು

ಅಲಂಕರಿಸಿದರು.

ಶ್ರೀ ಪಿ.ಸಿ. ಸಿದ್ದನಗೌಡರ್ : ಸನ್ಮಾನ್ಯ ಉಪಾಧ್ಯಕ್ಷರಿಗೆ ಹೊಸ ವರ್ಷದ ಶುಭಾಶಯಗಳು.

ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಉಪಾಧ್ಯಕ್ಷರಿಗೆ, ಸ್ನೇಹಿತರಿಗೆ, ಸದಸ್ಯರಿಗೆ ಹೊಸ ವರ್ಷದ ಶುಭಾಶಯಗಳು.

ಉಪಾಧ್ಯಕ್ಷರು : ನಿಮಗೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು.

ಶ್ರೀ ಆರ್.ವಿ. ದೇಶಪಾಂಡೆ : ತಮಗೆ ಹೊಸ ವರ್ಷದ ಶುಭಾಶಯಗಳನ್ನರ್ಪಿಸುತ್ತೇನೆ.

ಉಪಾಧ್ಯಕ್ಷರು : ವಂದನೆಗಳು.

ಸಂತಾಪ ಸೂಚನೆ

ಉಪಾಧ್ಯಕ್ಷರು : ಪ್ರಜಾಪ್ರತಿನಿಧಿ ಸಭೆಯ ಸದಸ್ಯರೂ ಹಾಗೂ ವಿದಾನ ಸಭೆಯ ಮಾಜಿ ಸದಸ್ಯರೂ ಆಗಿದ್ದ ಶ್ರೀ ಬಿ. ನಾರಾಯಣಸ್ವಾಮಪ್ಪನವರು ದಿನಾಂಕ : 30-12-92ರಂದು ನಿಧನರಾದರು.

ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು, 1941 ರಿಂದ 1945 ಹಾಗೂ 1945 ರಿಂದ 1949ರ ಅವಧಿಯಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ, 1967-71ರ ಅವಧಿಯಲ್ಲಿ ನಾಲ್ಕನೇ ವಿಧಾನಸಭೆಯ ಸದಸ್ಯರಾಗಿ, ಯಲಹಂಕ ಕ್ಷೇತ್ರವನ್ನು ಪ್ರತಿನಿಧಿಸಿ, ಸೇವೆ ಸಲ್ಲಿಸುವುದರ ಜೊತೆಗೆ, ಬೆಂಗಳೂರು ಜಿಲ್ಲಾಮಂಡಳಿ, ತಾಲ್ಲೂಕು ಅಭಿವೃದ್ಧಿ ಮಂಡಳಿಯು ಸದಸ್ಯರಾಗಿ ಹಾಗೂ ಗ್ರಾಮೀಣ ಕೈಗಾರಿಕಾ ಸಂಘದ ಅಧ್ಯಕ್ಷರಾಗಿ, ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಿದ ಕೀರ್ತಿ ಶ್ರಿಯುತರದ್ದಾಗಿರುತ್ತದೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನಾಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸಿದರು)

ಈ ಸಂತಾಪ ಸೂಚಕ ನಿರ್ಣಯವನ್ನು ಅವರ ಮನೆಯವರಿಗೆ ಕಳುಹಿಸಿಕೊಡಲಾಗುವುದು.

ಉಪಾಧ್ಯಕ್ಷರು : ಪ್ರಶ್ನೆ 102(614), ಇದು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳಿಗೆ ಕಳುಹಿಸಿದ್ದರು. ಅದನ್ನು ಈಗ ಬೇರೆ ಮಂತ್ರಿಗಳಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಇದಕ್ಕೆ ಇನ್ನು ಉತ್ತರ ಬಂದಿಲ್ಲ ಮುಂದೆ ಇದನ್ನು ತೆಗೆದುಕೊಳ್ಳೋಣ.

ಶ್ರೀ ಬಿ. ಶಿವರಾಮು : ಇದು ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥ ಪ್ರಶ್ನೆ ಇಲ್ಲ, ಲೋಕೋಪಯೋಗಿ ಇಲಾಖೆಗೆ ಏತಕ್ಕೆ ಹೋಗುತ್ತದೆಯೋ ಗೊತ್ತಿಲ್ಲ.

ಶ್ರೀ ಎಂ.ವೈ. ಘೋರ್ಪಡೆ : ಅಧ್ಯಕ್ಷರೆ, ಈ ಪ್ರಶ್ನೆ ನಮ್ಮ ಕಡೆ ಇಲ್ಲ.

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೆ, ಸದನದಲ್ಲಿ ನನ್ನ ಪ್ರಶ್ನೆಗೆ ಉತ್ತರ ಕೊಡಿಸಬೇಕು.

MADAM DEPUTY SPEAKER : We will take it up later after the answer is received.

SRI. B. SHIVARAMU : This week please.

ಮಂಡಲ್ ಪಂಚಾಯತ್ ಹಾಗೂ ಜಿಲ್ಲಾ ಪರಿಷತ್ತುಗಳಿಗೆ ಚುನಾವಣೆ

636 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಚುನಾವಣೆಗಳನ್ನು ನಡೆಸಲು ಸರ್ಕಾರಕ್ಕೆ ಸುಪ್ರೀಮ್ ಕೋರ್ಟ್‌ನಿಂದ ಆದೇಶ ಬಂದಿದೆಯೇ?

ಆ) ಬಂದಿದ್ದಲ್ಲಿ, ಆದೇಶದ ಪ್ರಕಾರ ಚುನಾವಣೆಗಳನ್ನು ನಡೆಸಲಾಗುವುದೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಹೌದು.

ಆ) ಇದನ್ನು ಸರಕಾರ ಪರಿಶೀಲಿಸುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಿಣಿಯವರೆ, ಸನ್ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂತಹ ಉತ್ತರದಿಂದ ಎರಡು ಉಪಪ್ರಶ್ನೆಗಳು ಉದ್ಭವ ಆಗುತ್ತದೆ. ಒಂದು ರಾಜ್ಯದಲ್ಲ ಮಂಡಲ್ ಪಂಚಾಯತ್ ಮತ್ತು ಜಿಲ್ಲಾಪರಿಷತ್ತು ಚುನಾವಣೆಗಳನ್ನು ನಡೆಸಲಿಕ್ಕೆ ಸುಪ್ರೀಂ ಕೋರ್ಟ್‌ನಿಂದ ಆದೇಶ ಬಂದಿದೆ ಎನ್ನತಕ್ಕಂತ ಮಾತನ್ನು ಹೇಳಿದ್ದಾರೆ. ಹಾಗಾದರೆ ಆ ಆದೇಶದ ಖಚಿತವಾದ ವಿವರಗಳು ಏನು ಎಂಬುದು ಒಂದು. ಎರಡನೆಯದಾಗಿ ಇತ್ತೀಚೆಗೆ ಕೇಂದ್ರ ಸರ್ಕಾರ ಮಾಡಿರತಕ್ಕಂತಹ ಸಂವಿಧಾನದ 73ನೆ ತಿದ್ದುಪಡಿ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ನಿಲುವು ಏನು? ಮಾನ್ಯ ಮಂತ್ರಿಗಳು ಇದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಮಾನ್ಯ ಘೋರ್ಪಡೆಯವರಿಂದ ಇದನ್ನು ನಾನು ನಿರೀಕ್ಷೆ

ಮಾಡೋದಿಲ್ಲ. ಅವರು ಆಗುತ್ತದೆ ಅಥವಾ ಇಲ್ಲ ಎಂದು ಹೇಳುವವರು. ಆದ್ದರಿಂದ ದಯಮಾಡಿ ಈ ನನ್ನ ಉಪ ಪ್ರಶ್ನೆಗಳಿಗೆ ಉತ್ತರ ಕೊಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಈ ಚುನಾವಣೆ ಜೂನ್ ಒಳಗಾಗಿ ಮಾಡಬೇಕೆಂದು ಸುಪ್ರೀಂ ಕೋರ್ಟಿನಿಂದ ಸ್ಪಷ್ಟವಾದಂಥ ಆದೇಶ ಇದೆ. ಅದರ ಬಗ್ಗೆ ಎರಡು ಅಭಿಪ್ರಾಯಗಳು ಇಲ್ಲ. ಈಗ ಅದರ ಮಧ್ಯೆ ಏನಾಗಿದೆ ಎಂದರೆ 73ನೇ ಅಮೆಂಡ್‌ಮೆಂಟ್ ಎಂದು ನಾವು ಏನು ಕರೆಯುತ್ತಿದ್ದೇವೆ ಅದಕ್ಕೋಸ್ಕರ ಇದು ಪರಿಶೀಲನೆಯಲ್ಲಿದೆ ಎಂದು ನಾನು ಆ ಉತ್ತರವನ್ನು ಹೇಳಿದೆ. 73ನೆ ಅಮೆಂಡ್‌ಮೆಂಟ್ ಪ್ರಕಾರ ನಾವು ಕಾಯಿದೆ ಮಾಡಬೇಕಾಗುತ್ತದೆ. ಈಗ ಅಲ್ಲಿ ತ್ರೀ-ಟೈರ್ ಸಿಸ್ಟಂ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಗ್ರಾಮಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಡೈರೆಕ್ಟ್ ಎಲೆಕ್ಟೆಡ್ ಬಾಡೀಸ್ ಇರಬೇಕೆಂದು ಆ ಅಮೆಂಡ್‌ಮೆಂಟ್‌ನಲ್ಲಿ ಹೇಳಿದ್ದಾರೆ. ರಿಸರ್ವೇಷನ್ ಬಗ್ಗೆ ಹೇಳುತ್ತಾ, ಮಹಿಳೆಯರಿಗೆ ಎಷ್ಟು ರಿಸರ್ವೇಷನ್ ಕೊಡಬೇಕು. ಸುಮಾರು ಅರ್ಧ ಇರಬೇಕು. ಅದರಲ್ಲಿಯೂ ಕೂಡ ಮೂರನೆಯ ಒಂದು ಭಾಗ ಎಸ್.ಸಿ., ಎಸ್.ಟಿ. ಹೆಣ್ಣುಮಕ್ಕಳಿಗೆ ರಿಸರ್ವ್ ಮಾಡಿ ಇಡಬೇಕು. ಬೇರೆ ಬ್ಯಾಕ್‌ವರ್ಡ್ ಕ್ಲಾಸ್ ರಿಸರ್ವೇಷನ್ ಮಾಡಲಿಕ್ಕೆ ಅವಕಾಶ ಇರಬೇಕು, ಹೀಗೆ ವಗೈರೆ ವಗೈರೆ ಹೇಳಿದ್ದಾರೆ. ಈಗ ಪ್ರಶ್ನೆ ಏನೆಂದರೆ ನಾವು ನಮ್ಮ ಕಾಯಿದೆಯನ್ನು ಸಂಪೂರ್ಣವಾಗಿ ಕಾನ್ಸ್‌ಟಿಟ್ಯೂಷನಲ್ ಅಮೆಂಡ್‌ಮೆಂಟ್ ಪ್ರಕಾರ ಮಾಡಬೇಕಾದರೆ ಡಿ-ಲಿಮಿಟೇಷನ್ ಮಾಡುವುದು ಅನಿವಾರ್ಯ. ಡೀ ಲಿಮಿಟೇಷನ್ ಮಾಡದೇ ಹೋದರೆ ತಾಲ್ಲೂಕು ಮಟ್ಟದಲ್ಲಿ ಚುನಾವಣೆ ಮಾಡಲಿಕ್ಕ ಆಗುವುದಿಲ್ಲ. ಈ ಆದೇಶ ಕೊಟ್ಟ ತಕ್ಷಣ ಜಿಲ್ಲಾ ಮತ್ತು ಮಂಡಲ ಮಟ್ಟದಲ್ಲಿ ಜೂನ್ ತಿಂಗಳಲ್ಲಿ ಚುನಾವಣೆ ಮಾಡಿ, ಕೆಲವೇ ತಿಂಗಳಲ್ಲಿ ನಾವು ತಾಲ್ಲೂಕು ಲೆವೆಲ್ ಚುನಾವಣೆಗಳನ್ನು ಮಾಡುವುದಾದರೆ, ನಾವು ಎರಡೆರಡು ಎಲೆಕ್ಷನ್‌ಗಳನ್ನು ಒಂದೇ ವರ್ಷದಲ್ಲಿ ಮಾಡಿದಂತಾಗುತ್ತದೆ. ಪುನಃ ನವೆಂಬರ್ 94ರಲ್ಲಿ ಅಸೆಂಬ್ಲಿ ಎಲೆಕ್ಷನ್ ಬರುತ್ತದೆ. ಇದರಿಂದ ಖರ್ಚು ಜಾಸ್ತಿಯಾಗುತ್ತದೆ. ಅಷ್ಟೆ ಅಲ್ಲ, ಸ್ವಲ್ಪ ತೊಂದರೆಯೂ ಕೂಡ ಆಗುತ್ತದೆ. ಈ ದೃಷ್ಟಿಯಿಂದಲೇ ನಾವು ಪರಿಶೀಲನೆ ಮಾಡುತ್ತಿರುವುದು.

ಈ ಎಲ್ಲಾ ಅಂಶಗಳನ್ನು ನಾವು ಸುಪ್ರೀಂ ಕೋರ್ಟಿನ ಮುಂದೆ ಮಂಡಿಸಲಿಕ್ಕೆ ಅವಕಾಶ ಇದೆ. ಇವತ್ತು ಅದನ್ನು ನಾವು ಮಾಡಬೇಕೆ? ಬೇಡವೇ? ಈ ನಿರ್ಧಾರಕ್ಕೆ ಸರ್ಕಾರ ಬಂದಿಲ್ಲ, ನಿಮ್ಮ ಸಲಹೆ ಸಹಕಾರಗಳನ್ನು ಕೂಡ ನಾವು ಕೇಳುತ್ತಾ ಇದ್ದೇವೆ ಮತ್ತೆ ಈ ವಾದ ಸುಪ್ರೀಂಕೋರ್ಟ್ ಮುಂದೆ ಇರುವುದಾದರೆ ಇನ್ನು ಆರು ತಿಂಗಳು ಟೈಮ್ ಕೇಳಬೇಕಾಗುತ್ತದೆ. ಅಂದರೆ ಏನು ಮೇ ತಿಂಗಳಲ್ಲಿ ಅಮೆಂಡ್‌ಮೆಂಟ್ ಸಂಪೂರ್ಣವಾಗಿ, ಸಮಗ್ರವಾಗಿ ಪರಿಪೂರ್ಣವಾಗಿ ಕಾನ್ಸಿಟ್ಯೂಷನ್ ಅಮೆಂಡ್‌ಮೆಂಟ್‌ಗೆ ಸರಿಹೋಗುವ ರೀತಿಯಲ್ಲಿ ನಾನು ನಮ್ಮ ಕಾಯಿದೆಗೆ ಈ ಸಭೆಯಲ್ಲಿ ಪಾಸು ಮಾಡಿಕೊಂಡು ಅದರ ಆಧಾರದ ಮೇಲೆ 3-4 ತಿಂಗಳಲ್ಲಿ ಡಿಲಿಮಿಟೇಷನ್ ಮಾಡಿ ಮತ್ತು ಎಲೆಕ್ಟೋರಲ್ ರೋಲ್ಸ್ ಪ್ರಕಾರ ಏನು ಕ್ರಮ ಇತ್ತೋ ಅದನ್ನು ಪೂರೈಸಿದರೆ ಡಿಸೆಂಬರ್ ತಿಂಗಳಲ್ಲಿ ನಾವು ಚುನಾವಣೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಸಂಪೂರ್ಣವಾಗಿ ಅಮೆಂಡ್‌ಮೆಂಟ್ಸ್ ಪ್ರಕಾರ ಹೋಗುವುದಾದರೆ ಇದ್ದ ಕಾಯಿದೆ ಪ್ರಕಾರ ಮಾಡುವುದಾದರೆ ಮೇ,

ಜೂನ್‌ನಲ್ಲಿ ಪುನಃ ತಿದ್ದುಪಡಿ ಮಾಡುವುದಾದರೆ ಅಥವಾ ಚುನಾವಣೆ ಡಿಲಿಮಿಟೇಷನ್ ಮಾಡುವುದಾದರೆ ಎರಡು-ಎರಡು ಎಲೆಕ್ಷನ್‌ಗಳನ್ನು ನಾವು ಮಾಡಬೇಕಾಗುತ್ತದೆ. ಇದರಿಂದ ಬೇರೆ ತೊಂದರೆಗಳು ಕೂಡ ಉಂಟಾಗುತ್ತದೆ. ಮತ್ತೆ ತಾಲ್ಲೂಕ್‌ಲೆವೆಲ್‌ನಲ್ಲಿ ಏನು ಬಾಡಿ ಇದೆ.

It is an obligatory. It is to be elected. ಇದರ ಟರ್ಮ್ ಬೇಗೆ ಆಗುತ್ತದೆ. Village term, mandal term, Zilla parishad term option ನಮ್ಮ ಮುಂದೆ ಇದೆ. ಸರ್ಕಾರದ ಅಂತಿಮ ತೀರ್ಮಾನ ಇದು ಎಂದು ನಾನು ಹೇಳುತ್ತಿಲ್ಲ. ಸುಪ್ರೀಂ ಕೋರ್ಟ್ ಪ್ರಕಾರ ಚುನಾವಣೆ ಮಾಡುವುದು ಒಂದು ಈ 73ನೇ ಕಾನ್ಸಿಟ್ಯೂಷನ್ ಏನು ಇದೆ ಅದರ ಪ್ರಕಾರ ನಮ್ಮ ಆಕ್ಟನ್ನು ಸರಿಪಡಿಸಿಕೊಂಡು ಅಮೆಂಡ್‌ಮೆಂಟ್‌ನ್ನು ಮಾಡಬೇಕಾದರೆ ಆರು ತಿಂಗಳು ಬೇಕಾಗುತ್ತದೆ. ಏಕೆಂದರೆ ಡಿಲಿಮಿಟೇಷನ್‌ಗೆ 3-4 ತಿಂಗಳಾದರೂ ಬೇಕಾಗುತ್ತದೆ. ಇದನ್ನು ತೀರ್ಮಾನ ಮಾಡುವಾಗ ತಮ್ಮ ಸಲಹೆ ಸಹಕಾರಗಳನ್ನು ಕೂಡ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪನವರು : ಮಾನ್ಯ ಅಧ್ಯಕ್ಷಣಿಯವರೇ, ಈ 72ನೇರಾಜ್ಯಾಂಗ ತಿದ್ದುಪಡಿ ಪ್ರಕಾರ ನನ್ನ ಹತ್ತಿರ ಪಾರ್ಲಿಮೆಂಟ್‌ನಲ್ಲಿ ಪಾಸು ಆಗಿರುವ ಬಿಲ್ಲಿನ ಕಾಪಿ ಇದೆ. ರಿಸರ್ವೇಷನ್ ಪ್ರಕಾರ ಸ್ತ್ರೀಯರಿಗೆ ಶೇ 33 ಭಾಗ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಅವರ ಪಾಲು ಇರುತ್ತದೆ ಅಷ್ಟು, ಬ್ಯಾಕ್‌ವರ್ಡ್‌ಕ್ಲಾಸ್‌ಗೆ ರಿಸರ್ವೇಷನ್ ಇದೆ. ಈ ಮೂರನ್ನು ಅಳವಡಿಸಿಕೊಂಡು ಮಾಡಬೇಕಾಗುತ್ತದೆ. We have to followup. There is no other option. ಈಗಿರುವ ಕಾಯಿದೆ ಏನು ಇದೆ, ಈ ಕಾಯಿದೆ ಪ್ರಕಾರ ಮಾಡಿದರೆ, ಜಿಲ್ಲಾ ಪರಿಷತ್ತಿನಲ್ಲಿ 19 ಆಡಳಿತ ಮಂಡಳಿಗಳಿವೆಯಲ್ಲ ಅದರಲ್ಲಿ 6 ಜನ ಸ್ತ್ರೀಯರು ಅಧ್ಯಕ್ಷರಾಗುತ್ತಾರೆ. ಪರಿಶಿಷ್ಟ ಜಾತಿಯಿಂದ 2-3 ಜನ ಆಗಬಹುದು, ಬ್ಯಾಕ್‌ವರ್ಡ್ ಕ್ಲಾಸ್‌ನವರು ಆಗಬಹುದು, ಇದರ ಜೊತೆಗೆ ತಾಲ್ಲೂಕು ಸಮಿತಿ ಬೇರೆ ಇದೆ. We have to follow it up compulsorily. Existing ಆಕ್ಟ್‌ನಲ್ಲಿ ಮಾಡುವುದಾದರೆ ಈ ರಿಸರ್ವೇಷನ್ ಯಾವಾಗ ಇಲ್ಲವೋ ಅದು ಸಂಬಂಧಪಟ್ಟ ಪರಿಶಿಷ್ಟ ಜಾತಿ, ಬ್ಯಾಕ್‌ವರ್ಡ್ ಕ್ಲಾಸ್ ಸ್ತ್ರೀಯರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಈಗ ಸುಪ್ರೀಂ ಕೋರ್ಟ ಮುಂದೆ ತಾವು ಹೋಗಿ ಈ ರೀತಿ ಸಮಸ್ಯೆ ಇದೆ ಎಂದು ಹೇಳಿ ಇನ್ನು 3-4 ತಿಂಗಳು ಟೈಮ್ ಎಕ್ಸ್‌ಟ್ರಾ ತೆಗೆದುಕೊಂಡು ಬರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷಣಿಯವರೆ, ಇದರ ಬಗ್ಗೆ ಧೀರ್ಘವಾದ ಚರ್ಚೆ ಅಗತ್ಯ ಇದೆ ಎಂದು ನಿಲುವಳಿ ಸೂಚನೆಯನ್ನು ನಾನು ಕಳುಹಿಸಿದ್ದೇನೆ. ಬಹುಶಃ ಇವರು ಚುನಾವಣೆ ನಡೆಸುವುದಕ್ಕೆ ಬೆದರಿದಂತೆ ಕಾಣಿಸುತ್ತದೆ. ಜೂನ್ ತಿಂಗಳೊಳಗೆ ಚುನಾವಣೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್ ಆದೇಶ ಇದೆ. ಲೋಕಸಭೆಯಲ್ಲಿ 73ಕ್ಕೆ ಅಮೆಂಡ್‌ಮೆಂಟ್ ಆಗಿದೆ ಅದಕ್ಕೆ ಸಂಬಂಧಪಟ್ಟಂತೆ ಏನಾದರೂ ತಿದ್ದುಪಡಿ ಇದ್ದರೆ ಈಗಲೇ ತಂದು ಬಿಡಿ. ಬೇಕಾದರೆ ಇನ್ನು ಒಂದು ವಾರ ಅಧಿವೇಶನವನ್ನು ಮುಂದುವರಿಸಿ. ಮೇ, ಜೂನ್ ತಿಂಗಳಲ್ಲಿ ಚುನಾವಣೆ ಆಗಬೇಕು. ತಿದ್ದುಪಡಿ ಅಗತ್ಯ ಇದ್ದರೆ ನೀವು ಹಿಂದು ಮುಂದು ಯೋಚನೆ ಮಾಡದೇ ಈಗಲೇ ಅಮೆಂಡ್‌ಮೆಂಡ್ ತಂದು ಬಿಡಿ. ಒಟ್ಟಿನಲ್ಲಿ ಜೂನ್ ತಿಂಗಳಲ್ಲಿ ಚುನಾವಣೆ ಮಾಡಲೇಬೇಕು.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷಿಣಿಯವರೇ, ಸರ್ಕಾರದ ಉದ್ದೇಶ ಕೂಡ ಆದಷ್ಟು ಬೇಗ ಚುನಾವಣೆಗಳನ್ನು ನಡೆಸಬೇಕು ಎಂಬುದೇ ಆಗಿದೆ. ಇಂಟರ್‌ಮೀಡಿಯಟ್ ಲೆವೆಲ್ ಅಥವಾ ತಾಲ್ಲೂಕು ಲೆವೆಲ್‌ನಲ್ಲಿ ಏನು ಇದೆ ಅಲ್ಲಿ ಡೈರೆಕ್ಟ್ ಎಲೆಕ್ಟೆಡ್ ಬಾಡಿ ಸ್ಥಾಪನೆ ಮಾಡಬೇಕಾಗುತ್ತದೆ. ಅದಕ್ಕೆ ಕ್ಷೇತ್ರ ಪುನರ್ ವಿಂಗಡಣೆ ಮಾಡಬೇಕಾಗುತ್ತದೆ. ನಾವು ತಿದ್ದುಪಡಿ ಮಾಡಿದರೆ ಡೀ ಲೀಮಿಟೇಷನ್ ಮಾಡುವುದಕ್ಕೆ ಕಾಲಾವಕಾಶ ಬೇಕಾಗುತ್ತದೆ. ಎಲೆಕ್ಟೊರಲ್ ರೋಲ್ ಡಿಸ್ಟ್ರಿಬ್ಯೂಟ್ ಮಾಡುವುದಕ್ಕೆ ಕಾಲಾವಕಾಶ ಬೇಕಾಗುತ್ತದೆ. ನಾವು ರೂಲ್ಸ್ ಪ್ರಕಾರ ಹೋಗುವುದಾದರೆ ಫೆಬ್ರವರಿ ಅಥವಾ ಮಾರ್ಚಿ ತಿಂಗಳಲ್ಲಿ ಬಜೆಟ್ ಸೆಷನ್ ಬರುತ್ತದೆ. ನಾವು ಕಾಂಪ್ರಹೆನ್ಸೀವ್ ಬಿಲ್ ತಯಾರು ಮಾಡುವುದಕ್ಕೆ 2-3 ತಿಂಗಳಾದರೂ ಬೇಕಾಗುತ್ತದೆ. ಈಗ ತಾನೇ 77ನೇ ತಿದ್ದುಪಡಿ ಆಗಿ ಬಂದಿದೆ. ತಾವು ಒಪ್ಪುವುದಾದರೆ ಮೇ ತಿಂಗಳಲ್ಲಿ I am prepared to come before this House with comprehensive amendments.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನಾಗರೂ ಕೇಳುತ್ತೇನೆ. ನೀವು ಇದನ್ನು ಯೋಚನೆ ಮಾಡಿ, ಮಾಡುವುದಕ್ಕೆ ಏನು ಇದೆ? ನೀವು ಇದನ್ನೇ ತಯಾರಿಸುವುದಕ್ಕೆ ಕಷ್ಟವೇನು ಆಗುವುದಿಲ್ಲ. ಬೇಕಾದರೆ ಈ ಅಧಿವೇಶನವನ್ನು 8-10ದಿವಸ ಎಕ್ಸ್‌ಟೆಂಡ್ ಮಾಡಿ. ಆದರೆ ಡಿಸೆಂಬರ್ ತಿಂಗಳು ಎಂದು ಹೇಳುವುದು ಬೇಡ.

SRI M.Y. GHORPADE : Madam Speaker, I want to make it very clear that the Government is not anxious to postpone elections. It is anxious to bring amendments to the Act. Let us discusss it in a friendly way.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೇ,...

ಉಪಾಧ್ಯಕ್ಷಿಣಿಯವರು : ಈ ಪ್ರಶ್ನೆಯನ್ನು ನೀವು ಬೇರೆ ರೂಪದಲ್ಲಿ ಕಳಿಸಿದರೆ ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಪಾಟೀಲ್ ನಾಗರಾಜ್ : ಮಾನ್ಯ ವೆಂಕಟಪ್ಪನವರು ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಆದ್ದರಿಂದ ನನಗೂ ಅವಕಾಶ ಮಾಡಿಕೊಟ್ಟರೆ ನನ್ನ ಅಭಿಪ್ರಾಯವನ್ನು ತಿಳಿಸುತ್ತೇನೆ.

SRI M.Y. GHORPADE : I am prepared to bring the amendment as soon as possible. De-limitation will take some time. Taluk level constituencies are to be done.

ಡೀ ಲಿಮಿಟೇಷನ್‌ಗೆ ಟೈಂ ಬೇಕಾಗುತ್ತದೆ. ನಾವು ಪ್ರತಿಯೊಂದು ವಿಚಾರವನ್ನು ಪರಿಶೀಲನೆ ಮಾಡಿ ಯಾವ ಯಾವ ಹಂತದಲ್ಲಿ ಎಷ್ಟೆಷ್ಟು ಜನ ಸದಸ್ಯರಿರಬೇಕೆಂದು ನಿರ್ಣಯ ಮಾಡಬೇಕಾಗುತ್ತದೆ. ಅನಂತರ 3-4 ತಿಂಗಳ ಕಾಲಾವಕಾಶ ಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಾಗಲೇ ನಿಮಗೆ ಬೇಕು ಬೇಕಾದ ರೀತಿಯಲ್ಲಿ ತಿದ್ದುಪಡಿ ತಂದುಕೊಂಡು ರೂಲ್ಸ್ ಮಾಡಿಕೊಂಡಿದ್ದೀರಿ. ಈಗ ಚುನಾವಣೆ ಅಂದಾಗ ನಿಮಗೆ ಭಯ ಏಕೆ?

ಉಪಾಧ್ಯಕ್ಷಿಣಿಯವರು : ವಾಟಾಳ್ ನಾಗರಾಜುರವರೇ ತಾವು ಏನು ಕೇಳಬೇಕೋ ಕೇಳಿ.

ಶ್ರೀ ಎಂ.ವಿ. ವೆಂಕಟಪ್ಪ : ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಉಪಾಧ್ಯಕ್ಷಿಣಿಯವರು : ನೀವು ಬೇರೆ ರೂಪದಲ್ಲಿ ಕಳುಹಿಸಿ, ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಪಂಚಾಯುತ್ ರಾಜ್ಯ ಸಚಿವರಾದ ಘೋರ್ಪಡೆಯವರು ಈ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಪ್ರಪ್ರಥಮವಾಗಿ ಬಂದಾಗ ಗ್ರಾಮೀಣ ಅಭಿವೃದ್ಧಿ ಸಚಿವರು ಆಗಿದ್ದರು. ಬಹಳ ಆದರ್ಶವಾದಂಥ ರೀತಿ ನೀತಿಗಳನ್ನು ಇಟ್ಟುಕೊಂಡಿದ್ದಾರೆ. ಆದರೆ ಒಂದು ಮಾತನ್ನು ನಾನು ಹೇಳುತ್ತಿದ್ದೇನೆ. ಸರ್ಕಾರ ಇದರ ಬಗ್ಗೆ ತಿದ್ದುಪಡಿಯನ್ನು ತರುವಂತಹ ಅವಶ್ಯಕತೆ ಏನೂ ಇಲ್ಲ. ತಿದ್ದುಪಡಿ ತರತಕ್ಕ ವಿಚಾರವನ್ನು ಆಮೇಲೆ ಯೋಚನೆ ಮಾಡೋಣ. ತಾಲ್ಲೂಕು ಮಟ್ಟದಲ್ಲಿ ಚುನಾವಣೆಗಳನ್ನು ಪಕ್ಷ ರಹಿತವಾಗಿ ನಡೆಸಬೇಕು ಎನ್ನತಕ್ಕಂಥದ್ದು ತಮ್ಮ ನಿರ್ಧಾರ ಎಂದು ಹೇಳಿದ್ದೀರಿ. ಅದು ಸರ್ಕಾರದ ನಿರ್ಧಾರವೇ ಅಥವಾ ನಿಮ್ಮ ನೀತಿಯೇ? ತಾವು ದಯಮಾಡಿ ಸ್ವಲ್ಪ ಹೇಳಬೇಕು.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ ಇದು ನನ್ನ ವ್ಯಯುಕ್ತಿಕ ಅಭಿಪ್ರಾಯ. ಈಗ ಆ ಅಭಿಪ್ರಾಯಕ್ಕೆ ನಮ್ಮ ಕಾಂಗ್ರೆಸ್ ಪಕ್ಷ ಹಾಗೂ ಬೇರೆ ಪಕ್ಷಗಳು ಒಪ್ಪುವುದಾದರೆ ಆಧಾರದ ಮೇಲೆ ನಾವು ಒಂದು ರೀತಿಯ ಒಪ್ಪಂದಕ್ಕೆ ಬರಲು ಸಾಧ್ಯವಾಗುತ್ತದೆ ಆದರೆ ಕಾನೂನು ಪ್ರಕಾರ ಆ ರೀತಿ ಮಾಡಲು ಬರುತ್ತದೆಯೋ ಇಲ್ಲವೋ ಅದು ಬೇರೆ ವಿಷಯ. ನಾನು ಅದನ್ನು ಹೇಳಲಿಲ್ಲ. ಕಾಂಗ್ರೆಸ್ ಪಕ್ಷಕ್ಕೆ ನನ್ನ ಮನವಿ ಏನೆಂದರೆ ಬೇರೆ ಪಕ್ಷದವರನ್ನು ಬರಮಾಡಿಕೊಂಡು ಅವರ ಜೊತೆ ಚರ್ಚೆ ಮಾಡಿ ಅವರೆಲ್ಲರೂ ಒಪ್ಪುವುದಾದರೆ ನಾವು ಪಾರ್ಟಿ ಸಿಂಬಲ್ ಮೇಲ ಕ್ಯಾಂಡಿಡೇಟ್ಸ್‌ನ್ನು ಹಾಕಬೇಕಾದ್ದಿಲ್ಲ, ಎಂಬುದು ನನ್ನ ಅಭಿಪ್ರಾಯ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷಿಣಿಯುವರೆ, ತಾವು ಅಧಿಕಾರ ವಹಿಸಿಕೊಂಡ ನಂತರ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗ್ರಾಮೀಣ ಸಚಿವರು ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ತಕ್ಷಣ ಚುನಾವಣೆ ಮಾಡುತ್ತೇವೆಂದು ಹೇಳಿಗ್ದಾರೆ. ಆದರೆ ಮೊನ್ನೆ 8-10 ದಿವಸಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಇದು ವಿರೋಧಪಕ್ಷದ ಜೊತೆ ಚರ್ಚೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಇದರಿಂದಾಗಿ ನಮಗೆ ಅನುಮಾನ ಉಂಟಾಗಿದೆ. ಈಗ ನೀವು ಚುನಾವಣೆ ಮಾಡುವುದಕ್ಕೆ ಸಾಧ್ಯವಿದೆ. ಎರಡನೆಯದು ಸಂವಿಧಾನದ 77ನೇ ಅಮೆಂಡ್‌ಮೆಂಟ್ ಏನು ಪಾಸ್ ಆಗಿದೆ ಅದು ಕೂಡಲೇ ಈ ಮನೆಯಲ್ಲಿ ರ್‍ಯಾಟಿಫೈ ಆಗಬೇಕಾಗಿದೆ. ರ್‍ಯಾಟಿಫೈ ಆಗುವುದಕ್ಕೆ ಮುಂಚೆ ನೀವು ಅಮೆಂಡ್‌ಮೆಂಟ್ ಮಾಡುವುದಕ್ಕೆ ಬರುವುದಿಲ್ಲ. ಈ ಕೆಲಸವನ್ನು ನೀವು ಇನ್ನು ಒಂದು ವಾರದೊಳಗೆ ಅಥವಾ ಫೆಬ್ರವರಿಯಲ್ಲಿ ಮಾಡಿ ಮೇ ಅಥವಾ ಜೂನ್‌ನಲ್ಲಿ ಚುನಾವಣೆಯನ್ನು ಏತಕ್ಕೆ ಮಾಡಬಾರದು?

ಮಾನ್ಯ ಉಪಾಧ್ಯಕ್ಷಿಣಿಯವರು : ಈಗ ನೇರವಾಗಿ ಪ್ರಶ್ನೆಗೆ ಹೋಗಿ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಉಪಾಧ್ಯಕ್ಷಿಣಿಯವರೇ ಈಗ ಸುಪ್ರೀಂ ಕೋರ್ಟ್ ಒಂದು ಆದೇಶ ಕೊಟ್ಟಿದೆ. ಈ ಟರ್ಮ್ಸ್‌ನ್ನು ಎಕ್ಸ್‌ಟೆಂಡ್ ಮಾಡಬೇಕು ಎಂದು ಹೇಳುವುದಾದರೆ ನಾವು ಪುನಃ ಪುನಃ ಅವರನ್ನು ಕೇಳುವುದು ಕಷ್ಟವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷಣಿಯವರೇ ಇದನ್ನು ಬೇರೆ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷಣಿಯವರು : ನಾನು ಹೇಳಿದ್ದೇನೆ. 10-15 ನಿಮಿಷಗಳೇ ಆಗಿದೆ. ನೀವು ಇದರ ಬಗ್ಗೆ ಬೇರೆ ರೀತಿಯಲ್ಲಿ ಕಳುಹಿಸಿಕೊಡಿ. ಅದನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಂತ್ರಿಗಳ ಬಗ್ಗೆ ಗೌರವ ಇದೆ. ಸರ್ಕಾರಕ್ಕೆ ಚುನಾವಣೆಗಳನ್ನು ನಡೆಸುವ ಬಗ್ಗೆ ಆಲೋಚನೆ ಇದ್ದರೆ ಹೇಳಿ. ಸರ್ಕಾರಕ್ಕೆ ಆ ಒಂದು ಒಳ್ಳೆಯ ಅಭಿಪ್ರಾಯ ಇಲ್ಲ, ಜಿಲ್ಲಾಪರಿಷತ್ತುಗಳ ಚುನಾವಣೆಗಳನ್ನು ನಡೆಸದೆ ನಾಶಮಾಡಿದ್ದಾರೆ...

(ಗೊಂದಲ)

ಆದ್ದರಿಂದ ಸರ್ಕಾರದ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡುವರು)

ಉಪಾಧ್ಯಕ್ಷಣಿಯವರು : ಮಾನ್ಯ ಪಿ.ಜಿ.ಆರ್. ಸಿಂಧ್ಯರವರೇ ಇದನ್ನು ಅರ್ಧಗಂಟೆ ಕಾಲದ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ದಯವಿಟ್ಟು.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಂಡಲ ಪಂಚಾಯತ್‌ಗಳಿಗೆ ಚುನಾವಣೆ ಇಲ್ಲದೆ, ಮಂಡಲ್ ಪಂಚಾಯತ್‌ಗಳು ಇಲ್ಲದೆ ಜನರು ತಬ್ಬಲಿಗಳಾಗಿದ್ದಾರೆ.

MADAM DEPUTY SPEAKER : I wan't allow to speak in the question hour.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ವೀರಪ್ಪ ಮೊಯಿಲಿ ಅವರು ಮುಖ್ಯಮಂತ್ರಿಗಳಾದ ತಕ್ಷಣ ಜಿಲ್ಲಾಪರಿಷತ್ತಿಗೆ ಚುನಾವಣೆಗಳನ್ನು ಮಾಡುತ್ತೇವೆಂದು ಹೇಳಿದ್ದರು. ಆದ್ದರಿಂದ ದಯವಿಟ್ಟು ಚರ್ಚೆ ಮಾಡಲು ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷಣಿಯವರು : ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಜಿಲ್ಲಾ ಪರಿಷತ್ತುಗಳ ಬಗ್ಗೆ ವಿಶ್ವಾಸ ಇಲ್ಲ, ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿ ನಾವು ವಾಕ್‌ಔಟ್ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಯಡಿಯೂರಪ್ಪನವರು, ಮಾನ್ಯ ಈಶ್ವರಪ್ಪನವರು ಮತ್ತು ಮಾನ್ಯ ರುಕ್ಮಯ್ಯ ಪೂಜಾರಿಯವರು ಸಭಾತ್ಯಾಗವನ್ನು ಮಾಡಿದರು)

ಉಪಾಧ್ಯಕ್ಷಣಿಯವರು : ಈ ಮಾನ್ಯ ಸಿಂಧ್ಯರವರೇ......

(ಗೊಂದಲ)

ಉಪಾಧ್ಯಕ್ಷಣಿಯವರು : ಈ ರೀತಿ ನಿಂತು ಮಾತನಾಡುವವರದು ಯಾರದು ರೆಕಾರ್ಡ್‌ಗೆ ಹೋಗುವುದಿಲ್ಲ, ಮಾನ್ಯ ಸಿಂಧ್ಯಾರವರನ್ನು ಕರೆದಿದ್ದೇನೆ, ಅವರು ಪ್ರಶ್ನೆಯನ್ನು ಕೇಳಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷಣಿಯವರೇ, ನಾನು ಈ ಸಂದರ್ಭದಲ್ಲಿ ರಾಜಕೀಯವಾಗಿ ಉಪಯೋಗಿಸಿಕೊಳ್ಳಲಿಕ್ಕೆ ಈ ಪ್ರಶ್ನೆಯನ್ನು ಕೇಳಲಿಲ್ಲ. ನಾನು ಪ್ರಶ್ನೆ ಹಾಕಿರತಕ್ಕಂಥದ್ದು ಮಂಡಲ್ ಪಂಚಾಯತ್ ಮತ್ತು ಜಿಲ್ಲಾಪರಿಷತ್ತುಗಳಿಗೆ ನಿಜವಾಗಿಯೂ ಜೀವ ಕೊಡತಕ್ಕಂಥ ದೃಷ್ಟಿಯಿಂದ ನಾವೆಲ್ಲರೂ ಕುಳಿತು ಚರ್ಚೆಮಾಡಿ ಇದರ ಬಗ್ಗೆ ತೀರ್ಮಾನ ಮಾಡಬೇಕಾಗುತ್ತದೆ ನಾನು ಇಷ್ಟೇ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳತಕ್ಕಂಥದ್ದು. ತಾವು ಸುಪ್ರೀಮ್ ಕೋರ್ಟಿಗೆ ಹೋಗಬೇಕಾಗುತ್ತದೆ. ಇದು ತಮ್ಮ ಸಚಿವ ಸಂಪುಟದ ನಿರ್ಧಾರ. 73ನೇ ಸಂವಿಧಾನದ ತಿದ್ದುಪಡಿ ಏನಿದೆ ಅದನ್ನು ಇಲ್ಲಿ ತರತಕ್ಕಂಥದ್ದು ಸಹಿತ ತಾವು ಆಲೋಚನೆ ಮಾಡಬೇಕಾಗುತ್ತದೆ. ಇದು ತಮ್ಮ ಜವಾಬ್ದಾರಿ. ಆದರೆ 1993ನೇ ಇಸವಿಯಲ್ಲಿ ಎಲ್ಲಾ ಚುನಾವಣೆಗಳನ್ನು ಮುಗಿಸುತ್ತೀರಾ ಇದರ ಬಗ್ಗೆ ಆಶ್ವಾಸನೆ ಬೇಕು.

ಶ್ರೀ ಎಂ.ವೈ. ಘೋರ್ಪಡೆ : ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಸರ್ಕಾರಕ್ಕೆ ಚುನಾವಣೆ ಮಾಡಲಿಕ್ಕೆ ಇಚ್ಛೆಯಿಲ್ಲ. ಸರ್ಕಾರ ಚುನಾವಣೆ ಮಾಡಲಿಕ್ಕೆ ಇಷ್ಟವಿದ್ದರೆ...

(ಗೊಂದಲ)

SRI. M.Y. GHORPADE : The hon'ble leader of the opposition may kindly appreciate that delimitation of the constituencies, all that may not be practicable to complete it before May. We have clear direction from the Supreme Court to hold election before June. I am only saying that if this Act is to be brought completely in conformity with the constitutional amendment including de-limitation of constituencies at the taluk level then we may require little more time and if we have to ask for time we might as well ask till the end of this year i.e., December, another six months time. The Supreme Court in all probability will consider it. This is a very reasonable request. But it may not be practicable to do all these comprehensive amendments plus delimitation within a matter of two or three months.

ಬೆಂಗಳೂರು ನಗರದಲ್ಲಿ ಡಾ. ಅಂಬೇಡ್ಕರ್ ಭವನ

45 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಡಾ// ಅಂಬೇಡ್ಕರ್ ಭವನ ಕಟ್ಟುತ್ತೇವೆಂದು ಸರ್ಕಾರದವರು ಘೋಷಿಸಿದ್ದು ಯಾವಾಗ?

ಆ) ಅದಕ್ಕೆ ಸಂಬಂಧಪಟ್ಟ ನಿರ್ದೇಶನ ನಕ್ಷೆಗಳು ಮಾಡಲಾಗಿದೆಯೇ?

ಇ) ಹಾಗಿದ್ದಲ್ಲಿ ಅದರ ವಿವರಗಳೇನು ಹಾಗೂ ತಗಲುವ ಅಂದಾಜು ವೆಚ್ಚವೆಷ್ಟು?

ಈ) ಈ ಕಟ್ಟಡವನ್ನು ಎಂದಿಗೆ ಮುಗಿಸಬೇಕೆಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ದಿನಾಂಕ 22-6-86

ಆ) ಹೌದು.

ಇ) ಸದರಿ ಭವನ ಎರಡು ನೆಲಮಾಳಿಗೆಗಳು ಹೊಂದಿದ್ದು, ಮೊದಲನೆಯ ನೆಲಮಾಳಿಗೆಯಲ್ಲಿ ಉಪಹಾರ ಮಂದಿರ, ಮತ್ತು ಉಗ್ರಾಣ ಹೊಂದಿರುತ್ತದೆ. ಎರಡನೆಯ ನೆಲಮಾಳಿಗೆಯಲ್ಲಿ ಗ್ರಂಥಾಲಯ, ಮ್ಯೂಜಿಯಂ, ಪ್ರಾರ್ಥನಾ ಮಂದಿರ ಹೊಂದಿರುತ್ತದೆ. ನೆಲ ಅಂತಸ್ಥಿನಲ್ಲಿ ಮತ್ತು ಬಾಲ್ಕನಿಯಲ್ಲಿ ಒಟ್ಟು 1175 ಆಸನಗಳುಳ್ಳ ಸಭಾಭವನ ಹಾಗೂ ಅದಕ್ಕೆ ಸಂಬಂಧಪಟ್ಟ ವ್ಯವಸ್ಥೆಗಳಿವೆ. ಇವುಗಳೆಲ್ಲದರ ಪೂರ್ಣ ಅಂದಾಜು ವೆಚ್ಚ 650-00 ಲಕ್ಷ ರೂಪಾಯಿಗಳು.

ಈ) ಕಟ್ಟಡದ ನಿರ್ಮಾಣವನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು. ಪ್ರಥಮ ಹಂತದಲ್ಲಿ ನೆಲಮಾಳಿಗೆ ಕಾಮಗಾರಿಗಳಿಗೆ 160ಲಕ್ಷ ರೂ॥ಗಳ ಅಂದಾಜಿನಲ್ಲಿ ಗುತ್ತಿಗೆಗಳು ಸ್ವೀಕೃತವಾಗಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ. ಇದು ಮಳೆಗಾಲವನ್ನು ಬಿಟ್ಟು 18 ತಿಂಗಳಲ್ಲಿ ಪೂರ್ಣವಾಗುವುದು. ಅನುದಾನದ ಲಭ್ಯತೆಯನ್ನು ಅನುಸರಿಸಿ, ಶೀಘ್ರವಾಗಿ ಪೂರ್ಣಗೊಳಿಸಲಾಗುವುದು.

ಶ್ರೀ ಎಂ.ವಿ. ವೆಂಕಟಪ್ಪ : ಈಗ ಅಂಬೇಡ್ಕರ್ ಭವನದ ಫೌಂಡೇಷನ್ ಸ್ಟೋನ್ ಏನಾದರೂ ಹಾಕಿದ್ದೀರಾ? ಇಲ್ಲದೆ ಇದ್ದರೆ ತಾವು ಏಪ್ರಿಲ್ 14ರ ಒಳಗೆ ಅಂದರೆ ಅಂಬೇಡ್ಕರ್‌ರವರ ಬರ್ತಡೇ ಒಳಗೆ ಅದನ್ನು ಹಾಕುವುದಕ್ಕೆ ಪ್ರಯತ್ನ ಪಡುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್ : ಈಗ ಆ ಕಾರ್ಯವನ್ನು ಮಾಡಬೇಕು ಎಂದು ಹೇಳಿ ಟೆಂಡರ್ ಕರೆಯಲಾಗಿದೆ. ಟೆಂಡರನ್ನು ಒಪ್ಪಿಕೊಂಡು ಕಾರ್ಯ ಪ್ರಾರಂಭ ಮಾಡಬೇಕಾಗುತ್ತದೆ. ಈ ಮಧ್ಯೆ ಅದಕ್ಕೆ ಫೌಂಡೇಶನ್ ಹಾಕುವುದಕ್ಕೆ ಕೂಡ ಕೆಲಸ ಪ್ರಾರಂಭ ಮಾಡಬೇಕು ಎಂದು ಹೇಳಿ ವಿಚಾರ ಮಾಡುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ : ಅಂಬೇಡ್ಕರ್ ಅವರ ಸಾಹಿತ್ಯ ಅಂದರೆ ಅವರ ಬಗ್ಗೆ ಬರವಣಿಗೆಗಳ ಏನೇನು ಇವೆ, ಅವುಗಳೆಲ್ಲವನ್ನೂ ಕ್ರೋಢೀಕರಿಸಿ, ಅಂಬೇಡ್ಕರ್ ಭವನದಲ್ಲಿ ಒಂದು ದೊಡ್ಡದಾಗಿ ಲೈಬ್ರರಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಕೆ. ಹೆಚ್. ರಂಗನಾಥ್ : ನನಗೆ ಭವನ ಕಟ್ಟಿಸುವ ಕೆಲಸ ಅಷ್ಟೆ ಇರುವುದು. ಬಾಕಿದೆಲ್ಲಾ ನನಗೆ ಸಂಬಂಧಪಟ್ಟಿದ್ದು ಅಲ್ಲ.

ಶ್ರೀ ಬಾಬುರಾವ್ ಚವಾಣ್ : ಈ ಪ್ರಶ್ನೆಯನ್ನು ಹೋದ ಸಲ ನಾವು ಸನ್ಮಾನ್ಯ ಸಭಾಧ್ಯಕ್ಷರಿಗೆ ಕೇಳಿದ್ದೆವು. ಅಂಬೇಡ್ಕರ್ ಭವನದ ಬಗ್ಗೆ ಬಹಳ ಡಿಲೆ ಆಗುತ್ತಾ ಇದೆ. ಅದಕ್ಕೆ ಮಾನ್ಯ ಮಂತ್ರಿಗಳನ್ನು ನಾನು ಕೇಳುತ್ತಾ ಇದ್ದೇನೆ. ಅದಕ್ಕೆ ತೀವ್ರ ಗತಿಯಿಂದ ಕೆಲಸ ಮಾಡಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಇದು ತೀವ್ರಗತಿಯಲ್ಲೇ ನಡೆಯುತ್ತಾ ಇದೆ. ತೀವ್ರಗತಿಯಲ್ಲೇ ಪ್ರಾರಂಭ ಆಗುತ್ತಾ ಇದೆ. ಈ ವರ್ಷ ಒಂದು ಕೋಟಿ 50 ಲಕ್ಷ ಹಣವನ್ನು ಇದಕ್ಕೆ ಒದಗಿಸಲಾಗಿದೆ.

ಎನ್.ಆರ್.ಡಬ್ಲ್ಯೂ. ಯೋಜನೆ

517 - ಶ್ರೀ ಪಿ. ಸಿ ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎನ್.ಆರ್.ಡಬ್ಲ್ಯೂ. ಯೋಜನೆಯನ್ನು 1971ನೇ ಜನಗಣತಿಯ ಆಧಾರದ ಮೇಲೆ ಮಾಡಲಾದ ಸಂಗತಿ ನಿಜವೇ?

ಆ) ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ಈಗ 1991-92ನೇ ಸಾಲಿನ ಜನಗಣತಿಯ ಆಧಾರದ ಮೇಲೆ ಯೋಜನೆ ಹಮ್ಮಿಕೊಳ್ಳುವ ವಿಚಾರ ಇದೆಯೇ?

ಈ) ಹಾಗಿದ್ದಲ್ಲಿ ಈ ಯೋಜನೆಯನ್ನು ತಯಾರಿಸುವಾಗ ಮುಂದಿನ 2000 ಇಸವಿಯನ್ನು ಗಮನದಲ್ಲಿಟ್ಟುಕೊಂಡು ತಯಾರಿಸಲಾಗುವುದೇ?

ಉ) ಈ ಯೋಜನೆಯ ಉಸ್ತುವಾರಿಯನ್ನು ಜಿಲ್ಲಾ ಪರಿಷತ್ತುಗಳಿಗೆ ವಹಿಸಿಕೊಡುವ ಸಂಭವ ಇದೆಯೇ?

ಊ) ಧಾರವಾಡ ಜಿಲ್ಲೆಯಲ್ಲಿನ ವಿಸ್ತರಣೆಯಾದ ಪ್ರದೇಶಗಳಿಗೆ ಈ ಯೋಜನೆಯಡಿ ಮತ್ತೊಂದು ಟ್ಯಾಂಕ್ ಕಟ್ಟಿ ನೀರು ಸರಬರಾಜು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಋ) ಹಾಗಿದ್ದಲ್ಲಿ, ಇದನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು ಮತ್ತು ಯೋಜನೆಯನ್ನು ಜಿಲ್ಲಾ ಪರಿಷತ್ತು ವಹಿಸಿಕೊಳ್ಳುವುದೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 1981ರ ಇಸವಿಯಿಂದು ಮೊದಲು ಕೈಗೊಂಡ ಯೋಜನೆಗಳನ್ನು 1971ರ ಜನಗಣತಿಯ ಆಧಾರದಮೇಲೆ ತಯಾರಿಸಲಾಗಿತ್ತು, ಆದರೆ ಈಗ ತಯಾರಿಸಲಾಗುವ ಯೋಜನೆಗಳನ್ನು 1981ನೇ ಇಸವಿ ಜನಗಣತಿಯನ್ನು ಆಧರಿಸಿ ತಯಾರಿಸಲಾಗುತ್ತಿದೆ. ಇನ್ನು ಮುಂದೆ 1991ನೇ ಇಸವಿ ಜನಗಣತಿಯ ವಿವರಗಳು ಪ್ರಕಟಣೆ ಆದ ಮೇಲೆ, ಅದರ ಆಧಾರದ ಮೇಲೆ ತಯಾರಿಸಲಾಗುವುದು.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಹೌದು. ಮೇಲೆ ವಿವರಿಸಿದ ರೀತಿಯಲ್ಲಿ.

ಈ) ಇಲ್ಲ. 2001ನೇ ಇಸವಿಗೆ ಅಂದಾಜು ಮಾಡಿದ ಜನಸಂಖ್ಯೆಯನ್ನು ಪರಿಗಣಿಸಲಾಗುತ್ತದೆ.

ಉ) ಪ್ರಸ್ತುತ ಈ ಯೋಜನೆಗಳ ಉಸ್ತುವಾರಿಯನ್ನು ಮಂಡಲ ಪಂಚಾಯಿತಿಗಳಿಗೆ ವಹಿಸಲಾಗುತ್ತಿದೆ. ಮುಂದೆ ಈ ಕಾರ್ಯನೀತಿಯ ಬದಲಾವಣೆಯ ಸಾಧ್ಯತೆ ಯಾವಾಗಲೂ ಇರುತ್ತದೆ.

ಊ) ಸುಧಾರಣೆ ಯೋಜನೆಗಳನ್ನು ಯಾವಾಗ ಅಥವಾ ಎಲ್ಲಿ ಬೇಕಾಗುತ್ತದೆಯೋ ಅಲ್ಲಿ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಪಿ.ಸಿ. ಸಿದ್ದನಗೌಡರ್ : ಮಾನ್ಯ ಅಧ್ಯಕ್ಷಣಿಯವರೇ, ನನ್ನ ಮೊದಲನೆಯ ಪ್ರಶ್ನೆಗೆ ಸೆನ್ಸಸ್ ಪ್ರಕಾರ ಎನ್‌ಆರ್‌ಡಬ್ಲ್ಯೂ ಯೋಜನೆಯಲ್ಲಿ ಕುಡಿಯುವ ನೀರಿನ ಯೋಜನೆ ಮಾಡಿರಿ ಎಂದು ಕೇಳಿದ್ದೆ. ಸರ್ಕಾದವರು 1991ನೇ ಸೆನ್ಸಸ್ ಪ್ರಕಾರ ಇನ್ನು ಬಂದಿಲ್ಲ ಎಂದು ಹೇಳುತ್ತಿದ್ದಾರೆ. ನನಗೆ ತಿಳಿದಮಟ್ಟಿಗೆ ಸೆನ್ಸಸ್ ಈಗಾಗಲೇ ಆಗಿದೆ. ಆಮೇಲೆ ಎರಡನೆಯ ಪ್ರಶ್ನೆಯಲ್ಲಿ ಹೇಳುತ್ತಿದ್ದಾರೆ, ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು. ಪ್ರಶ್ನೆ ಏನೆಂದರೆ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಯೋಜನೆ ಮಾಡಿದರೆ ಇಪ್ಪತ್ತು ವರ್ಷ ಹಿಂದೆ ಸರ್ಕಾರದವರು ಹೋಗುತ್ತಿದ್ದಾರೆ. ಪ್ರೆಸೆಂಟ್ ಪಾಪ್ಯೂಲೇಷನ್ ಏನು ಇದೆ ಅದರ ಆಧಾರ ಇಟ್ಟುಕೊಂಡು ಕುಡಿಯುವ ನೀರಿನ ಯೋಜನೆ ಮಾಡಿರಿ ಎಂದು ಹೇಳುತ್ತಿದ್ದೇನೆ. ಅದನ್ನು ಮಾಡುತ್ತಾರೋ ಇಲ್ಲವೋ ಎನ್ನುವುದು ಎರಡನೆಯ ಪ್ರಶ್ನೆ. ಮೂರನೆಯದು ಟ್ಯಾಂಕ್ ಕಟ್ಟುತ್ತಾ ಇದ್ದಾರ?....

ಶ್ರೀ ಎಂ.ವೈ. ಘೋರ್ಪಡೆ : 1991ರವರೆಗೂ ನಾವು 1971ರ ಸೆನ್ಸಸ್ ಪ್ರಕಾರ ಯೋಜನೆಗಳನ್ನು ಮಾಡುತ್ತಾ ಇದ್ದೇವೆ. ಈಗ ಹೊಸ ಸೆನ್ಸಸ್ ಪ್ರಕಾರ ಮಾಡುತ್ತಾ ಇದ್ದೇವೆ. ಮತ್ತು ಅದರಿಂದ ಅನಾನುಕೂಲತೆ ಆಗಬೇಕಾದದ್ದು ಇಲ್ಲ. ಏಕೆಂದರೆ ಎಲ್ಲೆಲ್ಲಿ ಆಗ್‌ಮೆಂಟೇಷಶನ್ ಬೇಕು ಅದನ್ನು ಮಾಡುವ ಕಾರ್ಯಕ್ರಮ ಸರ್ಕಾರಕ್ಕೆ ಇದೆ. ಮತ್ತೆ ಈ ಪ್ರೊಜೆಕ್ಟೆಡ್ ಪಾಪ್ಯುಲೇಷನ್ ಅಂದರೆ 10 ವರ್ಷಕ್ಕೆ ಇಪ್ಪತ್ತು ವರ್ಷಕ್ಕೆ ಜಾಸ್ತಿ ಪಾಪುಲೇಷನ್ ಆಗುತ್ತದೆ ಎಂದು ಇಟ್ಟುಕೊಂಡು ನಾವು ಸ್ಕೀಮ್ಸ್ ಮಾಡುತ್ತಾ ಇದ್ದೇವೆ. ಆದುದರಿಂದ ಯಾವ ಸೆನ್ಸಸ್ ಪ್ರಕಾರ ಮಾಡಿದರೂ ಜನಕ್ಕೆ ತೊಂದರೆ ಆಗಲಿಕ್ಕೆ ಇಲ್ಲ, ಆಗುವ ಅವಶ್ಯಕತೆ ಇಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷಣಿಯವರೆ, ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ. ಆದರೆ ಈ ತರಹ ಈ ಕೊಳವೆ ಬಾವಿ ಮೂಲಕ ನೀರನ್ನು ಸರಬರಾಜು ಮಾಡಬೇಕಾಗಿದ್ದರೆ, ಆ ಗ್ರಾಮದಲ್ಲಿ ಇಂತಿಷ್ಟು ಜನಸಂಖ್ಯೆ ಇರಬೇಕು ಎನ್ನತಕ್ಕಂಥಾದ್ದು ನಿಗದಿ ಇದೆ. ಅದಕ್ಕೆ ಒಂದೂವರೆ ಸಾವಿರವೋ ಅಥವಾ ಒಂದು ಸಾವಿರ ಎಂದು ನಿಗದಿ ಇದೆ. ಅದು ಇಲ್ಲದೆ ಇದ್ದರೆ ಆ ಯೋಜನೆಗಳನ್ನು ಮಂಜೂರು ಮಾಡುತ್ತಾ ಇಲ್ಲ, ಇದರಿಂದ ಏನಾಗುತ್ತಾ ಇದೆ ಎಂದರೆ ಅನೇಕ ಗ್ರಾಮಗಳಲ್ಲಿ ನಿಜವಾಗಿಯೂ ತೊಂದರೆ ಇದ್ದರೂ ಸಹ ಈ ಯೋಜನೆಗಳು ಮಂಜೂರು ಆಗುತ್ತಾ ಇಲ್ಲ. ಅವಶ್ಯಕತೆಯನ್ನು ನೋಡಿ ಈ ಯೋಜನೆಗಳನ್ನು ಮಂಜೂರಾತಿ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಂ.ವೈ. ಘೋರ್ಪಡೆ : ಈಗ ಕರ್ನಾಟಕದಲ್ಲಿ ಸುಮಾರು ಇಪ್ಪತ್ತೈದು ಸಾವಿರ ಗ್ರಾಮಗಳು ಅಲ್ಲದೆ ಈ ಹ್ಯಾಬಿಟೇಷನ್ಸ್ ಇನ್ನು ಇಪ್ಪತ್ತೈದು ಸಾವಿರ ಇದೆ. ಇದಕ್ಕೆ ಒಂದಾದರೂ ಕೊಳವೆ ಬಾವಿಯನ್ನು ಕೊಡುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಮತ್ತೆ ಎಲ್ಲೆಲ್ಲಿ ಬಹಳ ತೊಂದರೆ ಜನಕ್ಕೆ ಆಗುತ್ತಾ ಇದೆ ಅಲ್ಲಿ ನೀರಿನ ವ್ಯವಸ್ಥೆ ಮಾಡಬೇಕಾದದ್ದು ಸರ್ಕಾರದ ಉದ್ದೇಶ. ಅದಕ್ಕೆ ಯಾವ ಒಂದು ರೂಲ್ ಅಡ್ಡ ಬರುವುದಕ್ಕೆ ನಾವು ಬಿಡುವುದಿಲ್ಲ.

(ಗೊಂದಲ)

ಶ್ರೀ ಸಿ. ಬೈರ್‍ಯಗೌಡ : ಅಧ್ಯಕ್ಷರೆ, ನಾನು ಕೇಳಿದ್ದುದು, ಒಂದು ಅವರು ಉತ್ತರ ಹೇಳುವುದು ಮತ್ತೊಂದು ಆಗಿದೆ.

ಉಪಾಧ್ಯಕ್ಷರು : ಈಗ ಶ್ರೀ ಪಿ.ಸಿ. ಸಿದ್ದನಗೌಡರು ಪ್ರಶ್ನೆ ಕೇಳಬೇಕು.

ಶ್ರೀ ಪಿ.ಸಿ. ಸಿದ್ದನಗೌಡರ್ : ಅಧ್ಯಕ್ಷರೆ, ಎನ್‌ಆರ್‌ಡಬ್ಲ್ಯು ಯೋಚನೆಯನ್ನು ಇಲಾಖೆಯಿಂದ ಮಾಡಿದರೆ ಬಹಳ ಸೂಕ್ತ ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಕಂಟ್ರಾಕ್ಟುದಾರರು ಅರ್ಧ ಕೆಲಸವನ್ನು ಮಾಡಿ ಅನೇಕ ಗ್ರಾಮದಲ್ಲಿ ಬಿಟ್ಟಿದ್ದಾರೆ. ಇದು ಇಲಾಖೆಯಿಂದ ಮಾಡಬೇಕು ಎನ್ನುವುದು ಒಂದು. ಎರಡನೇಯ ಪ್ರಶ್ನೆ ಈ ಜಿಲ್ಲಾ ಪರಿಷತ್ತಿನವರೇ ಎನ್‌ಆರ್‌ಡಬ್ಲ್ಯು ಯೋಜನೆಯನ್ನು ಆ ಇಲಾಖೆಯವರೇ ತೆಗೆದುಕೊಳ್ಳಬೇಕು ಎನ್ನುವುದು ನನ್ನ ಎರಡನೇ ಪ್ರಶ್ನೆ. ಈ ಯೋಜನೆಯನ್ನು ಜಿಲ್ಲಾ ಪರಿಷತ್ತಿನವರು ವಹಿಸಿಕೊಳ್ಳಬೇಕು. ಎನ್‌ಆರ್‌ಡಬ್ಲ್ಯು ಯೋಜನೆ ಕಂಪ್ಲೀಟ್ ಆದಕೂಡಲೇ ಮಂಡಲ್ ಪಂಚಾಯಿತಿಗೆ ಹ್ಯಾಂಡ್‌ಓವರ್ ಮಾಡುತ್ತಾರೆ.

11.35 ಪಿ.ಎಂ.

ಒಂದು ಮಿಷನ್ ಕೆಟ್ಟರೆ ರಿಪೇರಿ ಮಾಡಿಸಲು 5,000 ರೂಪಾಯಿಗಳು ಯಾವ ಮಂಡಲದಲ್ಲೂ ಇರುವುದಿಲ್ಲ. ಹೀಗೆಯೇ ಅನೇಕ ಗ್ರಾಮಗಳಲ್ಲಿ ತೊಂದರೆಗಳು ಇವೆ. ಇಲಾಖೆಯಿಂದ ಮಾಡಿಸುವ ಬಗ್ಗೆ ಕ್ರಮ ಕೈಗೊಳ್ಳುತ್ತೀರಾ?

SRI. M.Y. GHORPADE : The Government is prepared to re-consider and review that arrangement. ಮೇಂಟೆನೆನ್ಸ್‌ನಲ್ಲಿ ತೊಂದರೆ ಆಗಿದ್ದರೆ ಅದನ್ನು ಪೂರ್ಣವಾಗಿ ಪರಿಶೀಲನೆ ಮಾಡೋಣ ಅದೇ ರೀತಿ ಯಾವ ಒಂದು ರೂಲ್ ನಿಂದ ಈ ರೀತಿ ತೊಂದರೆ ಆಗುತ್ತಾ ಇದ್ದರೆ ಆ ರೂಲ್‌ನ್ನು ವೇವ್ ಮಾಡಲು ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಪಿ.ಸಿ. ಸಿದ್ದನಗೌಡರ್ : ಇಲಾಖೆಯಿಂದ ಮಾಡಬೇಕು ಎನ್ನುವುದೇ ನನ್ನ ಪ್ರಶ್ನೆ. ಅರ್ಧ ಕಟ್ಟಿ ಕೆಲವು ಕಡೆ ಹಾಗೆ ನಿಂತಿದೆ. ಆದ್ದರಿಂದ ನಾನು ಈ ಸಲಹೆ ಮಾಡುತ್ತಿದ್ದೇನೆ ಎರಡನೆಯದಾಗಿ ಅವರೇ ವಹಿಸಿಕೊಳ್ಳಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ವಿವರಗಳನ್ನು ಪಂಚಾಯತ್ ರಾಜ್ ಇಲಾಖೆಯಿಂದ ತರಿಸಬೇಕಾಗಿದೆ. ಆದ್ದರಿಂದ ಸ್ವಲ್ಪ ಕಾಲಾವಕಾಶ ಕೇಳಿ ಪತ್ರ ಬರೆದಿದ್ದೇನೆ. ಆದ್ದರಿಂದ ಇದನ್ನು ಹೆಲ್ಡ್‌ಓವರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಣಿಯವರು : ಮಾನ್ಯ ಸಚಿವರು ಸ್ವಲ್ಪ ಕಾಲಾವಕಾಶ ಕೇಳಿದ್ದಾರೆ ಮುಂದೆ ತೆಗೆದುಕೊಳ್ಳೋಣ.

ಲೋಕೋಪಯೋಗಿ ರಸ್ತೆಗಳ ದುರಸ್ತಿ

469 - ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್ತುಗಳಿಂದ ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲ್ಪಟ್ಟ ರಸ್ತೆಗಳ ದುರಸ್ತಿ ಕಾರ್ಯ ತೀವ್ರವಾಗಿ ಆಲಕ್ಷಿಸಲ್ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರಸ್ತೆಗಳ ದುರಸ್ತಿ ಕಾರ್ಯಕ್ಕೆ ಎಷ್ಟು ಹಣ ನಿಗಧಿಯಾಗಿದೆ ಹಾಗೂ ಇದುವರೆಗೆ ಮಂಜೂರಾದ ಒಟ್ಟು ಹಣವೆಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು) :

ಅ) ಜಿಲ್ಲಾಪರಿಷತ್‌ಗಳಿಂದ ಲೋಕೋಪಯೋಗಿ ಇಲಾಖೆಗೆ ಇತ್ತೀಚೆಗೆ ವರ್ಗಾಯಿಸಲ್ಪಟ್ಟ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಜಿಲ್ಲೆ ಪರಿಷತ್ತಿನ ವ್ಯಾಪ್ತಿಯಿಂದ ವರ್ಗಾಯಿಸಲ್ಪಟ್ಟ 10000 ಕಿ.ಮೀ ರಸ್ತೆಗಳ ನಿರ್ವಹಣೆಗೆ ಪ್ರತಿವರ್ಷವೂ 13.20 ಕೋಟಿ ರೂ.ಗಳ ಅನುದಾನ ನಿಗಧಿಪಡಿಸಿದೆ. ಇದುವರೆವಿಗೂ ಅನುದಾನ ಬಿಡುಗಡೆ ಆಗಿರುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಮಂತ್ರಿಗಳ ಉತ್ತರ ಪ್ರಕಾರ ಪ್ರತಿ ಕಿ.ಮೀ.ಗೆ 13 ಸಾವಿರ ಎಂದು ಅನುದಾನ ಇಟ್ಟಿದ್ದೇವೆಂದು ಹೇಳಿದ್ದಾರೆ. ಅದನ್ನು ಇನ್ನೂ ಬಿಡುಗಡೆ ಮಾಡಿಲ್ಲ. ಹಿಂದಿನ ಸರ್ಕಾರ ಈ ರಸ್ತೆಗಳಿಗಾಗಿ ಪ್ರತಿ ಕ್ಷೇತ್ರಕ್ಕೆ ನಲವತ್ತು ಲಕ್ಷ ರೂಪಾಯಿ ಬಿಡುಗಡೆ ಮಾಡುವುದಾಗಿ ಭರವಸೆ ಕೊಟ್ಟಿದ್ದರು ಅದಕ್ಕೆ ಸರ್ಕಾರ ಬದ್ಧವಾಗಿದೆಯೇ? ಬದ್ಧವಾಗಿದ್ದರೆ ಮಾರ್ಚ್ ಒಳಗೆ ಎಷ್ಟು ಹಣವನ್ನು ಅದಕ್ಕಾಗಿ ಬಿಡುಗಡೆ ಮಾಡುತ್ತೀರಿ?

ಶ್ರೀ ಕೆ.ಹೆಚ್ ರಂಗನಾಥ್ : 40 ಲಕ್ಷ ರೂ. ಕಾರ್ಯಕ್ರಮಕ್ಕೂ ಈ ಕಾರ್ಯಕ್ರಮಕ್ಕೂ ಸಂಬಂಧವಿಲ್ಲ. 1992ನೇ ಜನವರಿಯಲ್ಲಿ ಸರ್ಕಾರ ಪ್ರತಿ ಕ್ಷೇತ್ರದಲ್ಲಿ 50 ಕಿ.ಮೀ. ರಸ್ತೆಯನ್ನು ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯಿಂದ ಉತ್ತಮ ಪಡಿಸುವ ಒಂದು ತೀರ್ಮಾನ ಕೈಗೊಂಡಿದೆ. ಆ ಒಂದು ತೀರ್ಮಾನ ತೆಗೆದುಕೊಂಡ ನಂತರ ಸರ್ಕಾರಿ ಆಜ್ಞೆ ಆಗಿದೆ. ಆದರೆ ಹಣ ಇನ್ನೂ ಒದಗಿಸದೇ ಇದ್ದುದರಿಂದ ಅದನ್ನು ಕಾರ್ಯಗತ ಮಾಡಲು ಸಾಧ್ಯವಾಗಿಲ್ಲ. ಈಗ ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ಈ ಕೆಲಸವನ್ನು ಮಾಡಬೇಕು ಎಂಬ ಅಭಿಪ್ರಾಯಕ್ಕೆ ಬರಲಾಗಿದೆ. ತಮಗೆ ಗೊತ್ತಿರುವ ಹಾಗೆ 50 ಕಿ.ಮೀ. ಅಂದರೆ ಸುಮಾರು 10 ಸಾವಿರ ಕಿ.ಮೀ ರಸ್ತೆ ಆಗುತ್ತದೆ ಇದನ್ನು ತೀರ್ಮಾನ ಮಾಡುವಾಗ ಹತ್ತು ವರ್ಷಗಳಲ್ಲಿ ಮಾಡಬೇಕು ಎನ್ನುವ ಒಂದು ಅಭಿಪ್ರಾಯಕ್ಕೆ ಬರಲಾಯಿತು. ಈ ಹತ್ತು ಸಾವಿರ ಕಿ.ಮೀ. ರಸ್ತೆಯನ್ನು ನಾವು ಮೇಲ್‌ದರ್ಜೆಗೆ ಏರಿಸಲು ಹತ್ತು ವರ್ಷಗಳ ತನಕ ಕಾದುಕೊಂಡು ಕುಳಿತುಕೊಂಡರೆ ಈಗಿನ ಅಂದಾಜು ಪ್ರಕಾರ 150 ಕೋಟಿ ಎಂದು ವಿಚಾರ ಮಾಡಿದ್ದಾರೆ. ಅದು ಇನ್ನು ಹತ್ತು ವರ್ಷಕ್ಕೆ ಅಂದರೆ ಎರಡು ಪಟ್ಟು ಹೆಚ್ಚಾಗಬಹುದು. ನನ್ನ ವಿಚಾರ ಆದ್ದರಿಂದ ಅಷ್ಟು ದೂರ ಕಾಯತಕ್ಕದ್ದು ಸರಿಯಿಲ್ಲ. ಆ ಕಾಲವನ್ನು ಇನ್ನೂ ಕಡಿಮೆ ಮಾಡಬೇಕು,

ಅದಕ್ಕಾಗಿ ಎಷ್ಟು ಹಣಬೇಕು ಅಷ್ಟನ್ನು ಒದಗಿಸಿಕೊಡಬೇಕೆಂಬ ವಿಚಾರ ಸರ್ಕಾರದ ಮುಂದೆ ಇದೆ. ಈ ರಸ್ತೆಗಳನ್ನು ಮೇಲ್‌ದರ್ಜೆಗೆ ಏರಿಸಲು 150 ಕೋಟಿ ರೂಪಾಯಿ ಹಾಗೂ ಅದರ ಮೆಂಟೆನೆನ್ಸ್ ಮಾಡಲು ಪ್ರತಿ ವರ್ಷ ಹದಿಮೂರು ಕೋಟಿ ರೂಪಾಯಿಗಳು ಅಂದರೆ ಅದಕ್ಕಾಗಿ 130 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಹಣವನ್ನು ಒದಗಿಸುವ ವಿಚಾರ ಇದರಲ್ಲಿರುವುದರಿಂದ ಸ್ವಲ್ಪ ತಡವಾಗಿದೆ. ಸರ್ಕಾರ ಈ ಬಗ್ಗೆ ವಿಚಾರ ಮಾಡುತ್ತಿದೆ. ಶೀಘ್ರವಾಗಿ ಕಾರ್ಯಕ್ರಮವನ್ನು ನಾವು ಮಾಡಲು ಎಲ್ಲಾ ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ : ಇಲ್ಲಿಯವರೆಗೂ ಬಿಡುಗಡೆ ಮಾಡಿದಂತ ಹಣ ಎಷ್ಟು? ಇಲ್ಲಿಯವರೆಗೆ ಯಾವ ಹಣವನ್ನು ಬಿಡುಗಡೆ ಮಾಡಿಲ್ಲ.

ಪ್ರೊ ಎಂ.ಡಿ. ನಂಜುಂಡಸ್ವಾಮಿ : ಸಭಾಧ್ಯಕ್ಷಣಿಯವರೆ, ಸನ್ಮಾನ್ಯ ಮಂತ್ರಿಗಳು ಹೇಳಿದರು ಹತ್ತು ವರ್ಷಗಳಲ್ಲಿ ಮಾಡಬೇಕು ಅದು ಸರಿ ಅಲ್ಲ ಇತ್ಯಾದಿ ಹೇಳಿದರು, ಬಹಳ ಹಣ ಬೇಕಾಗುತ್ತದೆ ಎಂದು ಹೇಳಿದರು. ಬೇಗ ಮುಗಿಸಬೇಕಾದರೆ ಬೇಕಾದಷ್ಟು ಹಣವನ್ನು ಯಾವ ರೀತಿ ಕ್ರೋಢೀಕರಿಸಬಹುದು-ಎಂಬುದನ್ನು ಯೋಚನೆ ಮಾಡಬೇಕು ಎಂದು ಹೇಳಿದರು. ನಾನು ಒಂದು ಸಲಹೆಯನ್ನು ತಮ್ಮ ಮೂಲಕ ಸರ್ಕಾರಕ್ಕೆ ಕೊಡಲಿಚ್ಛಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಹತ್ತು ವರ್ಷ ಬಹಳ ಹೆಚ್ಚು ಸಮಯ ಆದ್ದರಿಂದ ಅದನ್ನು ಕಡಿಮೆ ಮಾಡಬೇಕು ಅದಕ್ಕಾಗಿ ಎಷ್ಟು ಹಣಬೇಕು ಅಷ್ಟನ್ನು ಒದಗಿಸಬೇಕು ಎಂಬುದರ ಬಗ್ಗೆ ಸರ್ಕಾರ ವಿಚಾರ ಮಾಡುತ್ತಿದೆ. ಬಹಳ ಮಟ್ಟಿಗೆ ಬಡ್ಜೆಟ್ ಅಧಿವೇಶನದ ಹೊತ್ತಿಗೆ ಅದರ ಒಂದು ಅಭಿಪ್ರಾಯ ಸ್ಪಷ್ಟವಾಗಲಿಕ್ಕೆ ಸಾಧ್ಯವಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮೈಂಟೆನೆನ್ಸ್‌ಗೆ ಹಣವನ್ನು ಬಿಡುಗಡೆ ಮಾಡಿದ್ದೀರಾ?

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ನಾನು ಒಂದು ಸಲಹೆ ಮಾಡುತ್ತಿದ್ದೇನೆ. ಏಕೆಂದರೆ, ಸರ್ಕಾರದ್ದು ಇನ್ನೊಂದು ಕಾರ್ಯಕ್ರಮ ಇದೆ. ಅದನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತಿದ್ದೇನೆ. ರಸ್ತೆಗಳು ಎಷ್ಟು ಹಾಳಾಗಿವೆ ಎಂದರೆ, ರಸ್ತೆಗಳು ಹಾಳಾಗಿವೆ ಎಂದು ಕೆ.ಎಸ್.ಆರ್.ಟಿ.ಸಿ. ಯವರು ಬಸ್ಸುಗಳನ್ನು ಓಡಿಸುವುದಿಲ್ಲ, ಹಾಗಾಗಿ ನಮ್ಮ ಹಳ್ಳಿಗಳಲ್ಲಿ ಮಕ್ಕಳು ಬಸ್ಸಿನ ಟಾಪಿನ ಮೇಲೆ ಪುಸ್ತಕ, ಟಿಫಿನ್ ಕ್ಯಾರಿಯರ್ ಇಟ್ಟುಕೊಂಡು ಓಡಾಡುತ್ತಿದ್ದಾರೆ. ಬೆಳಿಗ್ಗೆ ಹೋದವರು ಸಾಯಂಕಾಲ ಮನೆಗೆ ಬರುತ್ತಾರೋ ಇಲ್ಲವೋ ಎಂಬ ಆತಂಕವುಂಟಾಗುತ್ತದೆ.

MADAM DEPUTY SPEAKER : Please be short.

PROF. M.D. NANJUNDASWAMY : No. on this issue, I have decided to walk out of this House. This Government has stupid another programme called Metro in Bangalore City for which they have 1600 crores. ಅದಕ್ಕೆ ಆದ್ಯತೆ ಕೊಡುತ್ತಿದ್ದಾರೆ. ನಾನು ಕೇಳುತ್ತಿರುವುದು ನಮ್ಮ ಹಳ್ಳಿಗಾಡಿನ ರಸ್ತೆಗಳಿಗೆ ಮೊದಲು ಆದ್ಯತೆಯನ್ನು ಕೊಡಬೇಕು. I want a categorical assurance from this Government that unless and untill the Roads and the Transport system

is improved in rural areas, this Government will not take up Metro operation in Bangalore City. ಬೊಂಬಾಯಿ ನಗರದಲ್ಲಿ ಮೆಟ್ರೋ ಇಲ್ಲ, ಬೆಂಗಳೂರು ನಗರದಲ್ಲಿ ಇವರಿಗೆ ಮೆಟ್ರೋ ಬೇಕೆ? Unless I get a categorical statement from this Government that they will not take up this Metro, I will walk out of this House, Not only walk out,...

(Hon. Member Sri. M.D. Nanjundaswamy staged a walkout)

MADAM DEPUTY SPEAKER : Let the Minister reply.

I want to warn this Government that we will physically obstruct the construction of Metro sistem in Bangalore City.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಉಪಾಧ್ಯಕ್ಷೆಯವರೇ, ಮಾನ್ಯ ಸದಸ್ಯರು ಅಷ್ಟು ಬಾವೋದ್ರೇಕವಾಗಬೇಕಾದ್ದು ಅನಾವಶ್ಯಕ. ಏಕೆಂದರೆ, ಅವರು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ರಸ್ತೆಗಳು ಹಾಳಾಗಿರುವುದರ ಬಗ್ಗೆ ಹೇಳಿದ್ದಾರೆ. ರಸ್ತೆಗಳು ಚೆನ್ನಾಗಿ ಇವೆ ಎಂದು ಹೇಳಿ ಸಮರ್ಥನೆ ಮಾಡುವುದಕ್ಕೆ ನಾನು ಇಲ್ಲಿ ನಿಂತಿಲ್ಲ. ರಸ್ತೆಗಳು ಹಾಳಾಗಿವೆ. ತಾವು ಹಳ್ಳಿಗಾಡಿನಲ್ಲಿ ಎಷ್ಟು ಸಂಚಾರ ಮಾಡುತ್ತೀರೋ ಅದಕ್ಕಿಂತ ಹೆಚ್ಚು ನಾನು ಓಡಾಡುತ್ತೇನೆ. ಮಾನ್ಯ ಸದಸ್ಯರು ಎಷ್ಟು ಓಡಾಡಿದ್ದಾರೋ ಅದಕ್ಕೂ ಹೆಚ್ಚು ನಾನು ಓಡಾಡುತ್ತೇನೆ.

(INTERRUPTIONS)

DEPUTY SPEAKER : Let the Minister answer.

PROF. M.D. NANJUNDASWAMY : I want to....

ಶ್ರೀ ಕೆ.ಹೆಚ್. ರಂಗನಾಥ್ : ತಾವು ನನಗೆ ಹೇಳಲು ಅವಕಾಶ ಕೊಡಿ ಮಾನ್ಯ ಸದಸ್ಯರು ಹೇಳುವುದು ವಾಸ್ತವಾಂಶ ಅವರು ಓಡಾಡುವುದಕ್ಕಿಂತಲೂ ಹೆಚ್ಚು ನಾನು ಹಳ್ಳಿಗಾಡಿನಲ್ಲಿ ಓಡಾಡುತ್ತೇನೆ. ನಾನು ನೋಡಿದ್ದೇನೆ. ಮಾನ್ಯ ಸದಸ್ಯರು ಮಕ್ಕಳು ಬಸ್ಸಿನ ಮೇಲೆ ಓಡಾಡುತ್ತಿದ್ದಾರೆ ಎಂದು ಹೇಳಿದ್ದಾರೆ ಅದು ಸತ್ಯಾಂಶ. ಅದನ್ನು ನಾವು ಸರಿ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದಲೇ 1990ರ ಸೆಪ್ಟೆಂಬರ್ 13ನೇ ತಾರೀಖು ಮಂತ್ರಿ ವರ್ಗದಲ್ಲಿ ಒಂದು ವಿಚಾರ ಮಾಡಿ ಅದನ್ನು ತೆಗೆದುಕೊಳ್ಳಬೇಕು ಎಂದು ತೀರ್ಮಾನವಾಗಿದೆ. ಕಾರಣಾಂತರದಿಂದ ಒಂದು ವರ್ಷ ತಡವಾಗಿದೆ. ಮಾನ್ಯ ಸದಸ್ಯರು ಇದಕ್ಕೂ ಬೆಂಗಳೂರು ಮೆಟ್ರೋಗೂ ಲಿಂಕ್ ಮಾಡಬೇಕಾದದ್ದು ಅನಾವಶ್ಯಕ. ಮೆಟ್ರೊ ಪರಿಸ್ಥಿತಿ ಬೇರೆ ಹಳ್ಳಿಗಾಡಿನ ಸಂಪರ್ಕ ಪರಿಸ್ಥಿತಿ ಬೇರೆ. ಅದನ್ನು ಸರ್ಕಾರ ಗಮನಿಸಿದೆ, ಕೆಲಸ ಮಾಡಬೇಕಾಗಿದೆ. ನಾನು ಅದಕ್ಕೆ ಹೇಳಿದ್ದುದು ಸರ್ಕಾರದ ಖಚಿತ ನಿಲುವು ಏನೆಂದರೆ ನಾಳೆ ಬಡ್ಜೆಟ್ ಸೆಷನ್ ಬರುವುದರೊಳಗೆ ಜಾಗ್ರತೆಯಾಗಿ ಹತ್ತು ಸಾವಿರ ಕಿಲೊಮೀಟರ್ ರಸ್ತೆ ಏನು ಇದೆ, ಅದನ್ನು ವ್ಯವಸ್ಥೆ ಮಾಡಬೇಕಾಗುತ್ತದೆ. ಹೆಚ್ಚು ಬಸ್ಸುಗಳು ಹಳ್ಳಿಗಾಡಿನಲ್ಲಿ ಸಂಚಾರ ಮಾಡಿದರೆ, ಅಂದರೆ ಹತ್ತು ಹದಿನೈದು ಬಸ್ಸುಗಳು ಸಂಚಾರ ಮಾಡಿದರೆ ಜನ ಬಸ್ಸಿನ ಮೇಲೆ ಕುಳಿತುಕೊಳ್ಳಬೇಕಾಗಿಲ್ಲ, ಬಸ್ಸಿನಲ್ಲಿ ಬರುತ್ತಾರೆ. ಅದನ್ನು ಸರ್ಕಾರ ಮನಗಂಡಿದೆ. ಅದನ್ನು ಜಾಗ್ರತೆಯಾಗಿ ಮಾಡುವಂತಹ ವಿಚಾರವನ್ನು ಸರ್ಕಾರ ಮಾಡುತ್ತದೆ.

ಪ್ರೊ. ಎಂ.ಸಿ. ನಂಜುಂಡಸ್ವಾಮಿ : ನನಗೆ ಸರ್ಕಾರದಿಂದ ಕೆಲವೊಂದು ವಿಷಯಗಳ ಬಗ್ಗೆ ಹೇಳಿಕೆ ಬರಬೇಕು. ಅವರು ಯಾವುದಕ್ಕೆ ಆದ್ಯತೆ ಕೊಡುತ್ತಾರೆ ಮೊದಲು ಈ ಕೆಲಸ ಮುಗಿಸಿ. ನಾನು ಇದರ ಬಗ್ಗೆ ಹೊರಗೆ ಹೇಳಿದ್ದೇನೆ. ಈ ಸರ್ಕಾರ "ಎಲ್ಲಾ ಬೆಟ್ಟ ನೆಲ್ಲಿ ನೆಟ್ಟ" ಎನ್ನುವ ರೀತಿಯಲ್ಲಿ ಕೆಲಸ ಮಾಡುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ಎರಡಕ್ಕೂ ಆದ್ಯತೆ ಕೊಡಬೇಕಾಗುತ್ತದೆ. ಒಂದು ಮತ್ತೊಂದನ್ನು ಕಾಯಬೇಕಾಗಿಲ್ಲ. ಮೆಟ್ರೋಗೆ ಹಳ್ಳಿಗಾಡಿನ ಕೆಲಸವನ್ನು ಕಾಯಬೇಕಾಗಿದ್ದಿಲ್ಲ. ಹಳ್ಳಿಗಾಡಿನ ಕೆಲಸಕ್ಕೆ ಮೆಟ್ರೊ ಕಾಯಬೇಕಾದ್ದಿಲ್ಲ. ಎರಡಕ್ಕೂ ಆದ್ಯತೆ ಕೊಡಬೇಕಾಗುತ್ತದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಈ ಸರ್ಕಾರದವರು ಮೆಟ್ರೋ ಹೇಗೆ ಮಾಡುತ್ತಾರೋ ನಾವು ನೋಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ : ಈ ರಸ್ತೆ ರಿಪೇರಿಗಾಗಿ ಮಾರ್ಚಿ ತಿಂಗಳೊಳಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿಸಿದ್ದಿರಿ ಎಂಬುದನ್ನು ಸಚಿವರು ಹೇಳಲಿಲ್ಲ.

ಪ್ರೊ. ಎನ್. ನಂಜುಂಡಸ್ವಾಮಿ :ಈ ಸರ್ಕಾರ ಹೇಗೆ ಮೆಟ್ರೊ ಮಾಡುತ್ತಿರೆಂಬುದನ್ನು ನಾವೂ ನೋಡುತ್ತೇವೆ.

ಉಪಾಧ್ಯಕ್ಷಣೆಯವರು : ಡಿ.ಆರ್. ಪಾಟೀಲರೇ ತಮ್ಮ ಕೊನೆಯ ಪ್ರಶ್ನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಮುಖ್ಯ ಮಂತ್ರಿಗಳೆ ಈ ರಸ್ತೆ ನಿರ್ವಹಣೆಗಾಗಿ ಮಾರ್ಚಿಯೊಳಗಾಗಿ ಎಷ್ಟು ಹಣವನ್ನು ಬಿಡಡುಗಡೆ ಮಾಡುತ್ತಿರಿ ಅಂತ ಉತ್ತರ ಕೊಡಲಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ನಾನು ತಕ್ಷಣವೇ ಹೇಳವುದಕ್ಕೆ ಸಾಧ್ಯವಿಲ್ಲ. ನಾನು ಮೊದಲೆ ಹೇಳಿದೆ ಎಲ್ಲೆಲ್ಲಿ ಅತಿ ಅವಶ್ಯಕವಾಗಿ ಆಗಬೇಕು, ಅದನ್ನು ಮಾಡಬೇಕು ಎಂದು ಅಂತ ಈಗಾಗಲೇ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡು ಅದನ್ನು ಕಾರ್ಯಗತ ಮಾಡುತ್ತಿದೆ. ಮಾನ್ಯ ಸದಸ್ಯರಿಗೆ ಆಕಸ್ಮಿಕವಾಗಿ ಆ ಭಾಗದಲ್ಲಿ ಅವರ ಕ್ಷೇತ್ರದಲ್ಲಿ ಆಗತಕ್ಕಂಥದ್ದು ಏನಾದರೂ ಇದ್ದರೆ ಅದನ್ನು ತಿಳಿಸಿದರೆ ಅದನ್ನು ಮಾಡಿಸಿಕೊಡುತ್ತೇನೆ.

(ಗೊಂದಲ)

ಶ್ರೀ ಶಿವಾನಂದ ಹೆಚ್.ಕೌಜಲಗಿ : ಉಪಾಧ್ಯಕ್ಷಣೆಯವರೆ ಇದು ಬಹಳ ಮುಖ್ಯವಾದ ಪ್ರಶ್ನೆ ಈ ಮಾರ್ಚಿಯೊಳಗೆ ತಾವು ಮೆಂಟೆನೆನ್ಸ್ ಸಲುವಾಗಿ ಏನಾದರೂ ಹಣ ಬಿಡುಗಡೆ ಮಾಡುತೀರೋ ಹೇಗೆ?

ಶ್ರೀ ಕೆ.ಹೆಚ್. ರಂಗನಾಥ್ : ನಾನು ಈಗಾಗಲೇ ಹೇಳಿದೆ. ಎಲ್ಲೆಲ್ಲಿ ಅವಶ್ಯಕತೆ ಇದೆ ಅದನ್ನು ತೆಗೆದುಕೊಳ್ಳಬೇಕೆಂದು ಮೊದಲೇ ನಿರ್ಧರಿಸಿ. ಅದನ್ನು ತೆಗೆದುಕೊಳ್ಳುತ್ತಿದ್ದಾರೆ.

ಹಾಸನ ಜಿಲ್ಲೆಯ ರಸ್ತೆಗಳ ದುರಸ್ತಿ ಕಾರ್ಯ

365 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯ ಯಾವ ಯಾವ ವಿಧಾನ ಸಭಾ ಕ್ಷೇತ್ರಗಳಿಗೆ ಕಳೆದ ಮೂರು ವರ್ಷಗಳಿಂದ ಲೋಕೋಪಯೋಗಿ ಇಲಾಖೆಯಿಂದ ರಸ್ತೆಗಳನ್ನು ದುರಸ್ತಿ ಮಾಡಲು ಸರ್ಕಾರ ವಿಶೇಷ ಅನುದಾನ ಕೊಟ್ಟಿದೆ (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಹಾಸನ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆಗಳಿಗೆ ದುರಸ್ತಿಗಾಗಿ ಕೆಳಕಂಡಂತೆ ಹೆಚ್ಚುವರಿ ಅನುದಾನ ನೀಡಲಾಗಿದೆ.

ಕ್ಷೇತ್ರ	*89-90*	*90-91*	*91-92*
ಹಾಸನ	7.30	6.00	2.00
ಬೇಲೂರು	1.10	-	-
ಹೊಳೆನರಸೀಪುರ	1.90	-	-
ಅರಕಲಗೂಡು	2.00	-	2.60
ಶ್ರವಣಬೆಳಗೊಳ	1.70	-	-
ಸಕಲೇಶಪುರ	1.00	-	-
ಒಟ್ಟು	**15.00**	**6.00**	**4.60**

ಶ್ರೀ ಕೆ.ಹೆಚ್. ಹನುಮೆಗೌಡ : ಹಾಸನ ಜಿಲ್ಲೆಯಲ್ಲಿ ಯಾವ ಯಾವ ವಿಧಾನಸಭಾ ಕ್ಷೇತ್ರಗಳಿಗೆ ಕಳೆದ 3 ವರ್ಷಗಳಿಂದ ಲೋಕೋಪಯೋಗಿ ಇಲಾಖೆಯಿಂದ ರಸ್ತೆಗಳನ್ನು ದುರಸ್ತಿ ಮಾಡಲು ಸರ್ಕಾರ ವಿಶೇಷ ಅನುದಾನ ಕೊಟ್ಟಿದೆ, ವಿವರ ಕೊಡಿ ಅಂತ ನಾನು ಹೇಳಿದ್ದೇನೆ. ಉಪಾಧ್ಯಕ್ಷಿಣಿಯವರೇ, ವಿವರ ಕೊಟ್ಟಿದ್ದಾರೆ.

ತಾಲ್ಲೂಕುವಾರು ವಿವರ ನೀಡಬೇಕೆಂದು ಕೇಳಲ್ಲ, ಇದನ್ನು ಯಾರು ಸೇರಿಸಿದರು? ಏಕೆ ಸೇರಿಸಿದರೆಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷಣಿಯವರೇ ತಮ್ಮ ಆಫೀಸಿನಿಂದ ಪ್ರಶ್ನೆ ಹೇಗಿರುತ್ತದೆಯೋ ಅದಕ್ಕೆ ಸರಿಯಾಗಿ ನಮ್ಮ ಇಲಾಖೆಯಲ್ಲಿ ಉತ್ತರವನ್ನು ತಯಾರು ಮಾಡುತ್ತಾರೆ. ಮಾನ್ಯ ಸದಸ್ಯರ ಮೂಲ ಪ್ರಶ್ನೆ ಹೇಗಿತ್ತೆಂದು ನಮಗೆ ಗೊತ್ತಿಲ್ಲ.

ಶ್ರೀ ಕೆ.ಹೆಚ್. ಹನುಮೆಗೌಡ : ಮಾನ್ಯ ಅಧ್ಯಕ್ಷಣಿಯವರೆ, ನಾನು ಯಾವುದೊ ಒಂದು ಉದ್ದೇಶದಿಂದ ಈ ಪ್ರಶ್ನೆ ಹಾಕಿದ್ದೇನೆ. ನಾನು ಎಷ್ಟು ಕೇಳಿದ್ದನೋ ಅಷ್ಟಕ್ಕೆ ಮಾತ್ರ ಉತ್ತರವನ್ನು ನಿರೀಕ್ಷಣೆ ಮಾಡುತ್ತೇನೆ. ನಾನು ಕೇಳದೆ ಇರುವುದನ್ನು ನೀವು ತಿಳಿಸಿರುವುದಕ್ಕೆ ಕಾರಣ ಏನು? ಹಾಗೆ ಕೇಳುವುದರಿಂದ ನನಗೇನು ಪ್ರಯೋಜನ? ನಾನು ಪ್ರಶ್ನೆಯನ್ನು ಕೇಳುವ ಅರ್ಥವಾದರೂ ಏನು? ಈಗ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಮಾಹಿತಿ ನಾನು ಕೇಳಿರುವ ಪ್ರಶ್ನೆ ಪ್ರಕಾರ ಇಲ್ಲ, ಇವತ್ತೆ ಅದಕ್ಕೆ ಸರಿಯಾದ ಮಾಹಿತಿ ಕೊಡುವುದಕ್ಕಾಗದಿದ್ದರೆ ದಯವಿಟ್ಟು ಇನ್ನು 2-3 ದಿನದೊಳಗೆ ಪೂರ್ಣ ಮಾಹಿತಿಯನ್ನು ಕ್ಷೇತ್ರವಾರು ಕೊಡಲಿ ನನಗೆ ಕ್ಷೇತ್ರವಾರು ವಿವರಬೇಕು.

ಉಪಾಧ್ಯಕ್ಷರು : ಅವರಿಗೆ ಕ್ಷೇತ್ರವಾರು ವಿವರ ಬೇಕಂತೆ.

ಶ್ರೀ ಕೆ.ಹೆಚ್. ರಂಗನಾಥ್ : ಆದುದರಿಂದಲೇ ನಾನು ಹೇಳಿದ್ದುದು ಪ್ರಶ್ನೆ ಹೇಗೆ ಕೊಟ್ಟಿದ್ದಾರೆ ಎಂದು ಹೇಳಿ ನಮ್ಮ ಇಲಾಖೆಯಿಂದ ಪರಿಶೀಲನೆ ಮಾಡುವುದಕ್ಕೆ ಸಾಧ್ಯ ಆಗುವುದಿಲ್ಲ. ತಮ್ಮ ಲೆಜಿಸಲೇಟರ್ ಸೆಕ್ರೆಟರಿಯೇಟ್‌ನ ಮೂಲ ಪ್ರಶ್ನೆಯನ್ನು ತಾವು ತರಿಸಿ ಕೊಡಬೇಕು. ತರಿಸಿಕೊಡಬೇಕಾದರೆ ತರಿಸಿ ಕೊಡುತ್ತೇವೆ. ಇದರಲ್ಲಿ ಹಾಸನ ಜಿಲ್ಲೆಗೆ ಸಂಬಂಧಪಟ್ಟಂತೆ ಉತ್ತರ ಇದೆ. ಅವರು ಕ್ಷೇತ್ರವಾರು ಕೇಳಿದರೆ ಕ್ಷೇತ್ರವಾರು ಕೊಡುತ್ತೇನೆ.

ಉಪಾಧ್ಯಕ್ಷಣೀಯವರು : ಅವರಿಗೆ ಕ್ಷೇತ್ರವಾರು ವಿವರ ಬೇಕಂತೆ, ಆದ್ದರಿಂದ ಈ ಪ್ರಶ್ನೆಯನ್ನು ವಿಥೋಲ್ಡ್ ಮಾಡಿ ಇನ್ನೊಂದು ದಿವಸ ತೆಗೆದುಕೊಳ್ಳುತ್ತೇನೆ.

ಟ್ರೈಸಂ ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಫಲಾನುಭವಿಗಳ ಸಂಖ್ಯೆ.

1011 - ಶ್ರೀ ಬಿ. ಬಸವರಾಜು (ಬ್ರಹ್ಮಾವರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟ್ರೈಸಂ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾಪರಿಷತ್, ಈ ಸಾಲಿನಲ್ಲಿ ಎಷ್ಟು ಜನ ಫಲಾನುಭವಿಗಳನ್ನು ಗುರುತಿಸಿ ಆಯ್ಕೆ ಮಾಡಲಾಗಿರುವುದು (ತಾಲ್ಲೂಕುವಾರು ವಿವರಗಳನ್ನು ವ್ಯಕ್ತಿಗತ ಮಾಹಿತಿಯೊಂದಿಗೆ ನೀಡುವುದು)?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲಾಪರಿಷತ್, 727 ಗ್ರಾಮೀಣ ಯುವಕರನ್ನು ಟ್ರೈಸಂ ಯೋಜನೆಯಡಿ ತರಬೇತಿ ಹೊಂದಲು ಫಲಾನುಭವಿಗಳಾಗಿ ಗುರುತಿಸಿ ಈ ಸಾಲಿನಲ್ಲಿ (1992-93) ಆಯ್ಕೆ ಮಾಡಲಾಗಿದೆ.

ಟ್ರೈಸಂ ಯೋಜನೆಯಡಿ ಆಯ್ಕೆ ಆಗಿರುವ ಫಲಾನುಭವಿಗಳ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

ಷೋಷ್ವಾರೆ

ಕ್ರ ಸಂ	*ತಾಲ್ಲೂಕು ಹೆಸರು*	*ತರಬೇತಿಗೆ ಆಯ್ಕೆ ಆಗಿರುವ ಅಭ್ಯರ್ಥಿಗಳ ಸಂಖ್ಯೆ*
1.	ಕುಂದಾಪುರ	81
2.	ಉಡುಪಿ	87
3.	ಕಾರ್ಕಳ	98
4.	ಬಂಟವಾಳ	132
5.	ಮಂಗಳೂರು	80
6.	ಪುತ್ತೂರು	80
7.	ಬೆಳತಂಗಡಿ	98
8.	ಸೂಳ್ಯ	71
	ಒಟ್ಟು	727

ಶ್ರೀ ಪಿ. ಬಸವರಾಜು : ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮೀಣ ಯುವಕರಿಗೆ ಟ್ರೈಸಂ ಯೋಜನೆಯಲ್ಲಿ ಸುಮಾರು 727 ಜನ ಫಲಾನುಭವಿಗಳನ್ನು ಗುರುತಿಸಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಆ ಫಲಾನುಭವಿಗಳಿಗೆ ಯಾವ ಯಾವ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದಾರೆಂದು ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಟ್ರೈಸಂ ಟ್ರೈನಿಂಗ್ ಪ್ರೋಗ್ರಾಂಗೆ ಸಂಬಂಧಪಟ್ಟಿದ್ದುದು. ಟ್ರೈನಿಂಗ್‌ನ್ನೂ ಬೇರೆ ಬೇರೆ ರೀತಿಯಲ್ಲಿ ಕೊಡುತ್ತಿದ್ದಾರೆ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಜನರಿಗೆ ಟ್ರೈಸಂ ಪ್ರಕಾರ ಟ್ರೈನಿಂಗ್ ಕೊಡಲು ಸಾಧ್ಯವಾಗಿದೆ ಎಂಬ ವಿವರಗಳನ್ನೂ ಕೊಟ್ಟಿದ್ದೇನೆ. ಅದರ ಉದ್ದೇಶ ಏನೆಂದರೆ ಅವರನ್ನು ಉದ್ಯೋಗಕ್ಕೆ ಅರ್ಹರನ್ನಾಗಿ ಮಾಡಬೇಕೆಂಬುದು. ಅದು ನೌಕರಿಗೆ ಸೇರುವುದಕ್ಕೆ ಇರಬಹುದು ಅಥವಾ ಸ್ವಂತ ಉದ್ಯೋಗಕ್ಕೆ ಸಂಬಂಧಪಟ್ಟಂತೆ ಇರಬಹುದು. ಒಟ್ಟಿನಲ್ಲಿ ಅವರಿಗೆ ಉದ್ಯೋಗಕ್ಕೆ ಸೇರುವ ಅರ್ಹತೆ ಬರಲಿ ಎಂಬುದೆ ಈ ಟ್ರೈಸಂ ಪ್ರೋಗ್ರಾಂನ ಉದ್ದೇಶವಾಗಿದೆ. ಮತ್ತು ಐ.ಆರ್.ಡಿ.ಪಿ.ಗೂ ಈ ಟ್ರೈಸಂ ಪ್ರೋಗ್ರಾಂಗೂ ಒಂದು ಸಂಬಂಧ ಇದೆ. ಇವರು ಎಲ್ಲಾದರೂ ಸಾಲವನ್ನು ತೆಗೆದುಕೊಂಡು ಸ್ವಂತ ಉದ್ಯೋಗವನ್ನು ಮಾಡಿಕೊಳ್ಳಲಿ ಎಂಬುದು ಇದರ ಉದ್ದೇಶ.

ಶ್ರೀ ಪಿ. ಬಸವರಾಜ್ : ತಾವು ಪಲಾನುಭವಿಗಳನ್ನು ಯಾವರೀತಿ ಆಯ್ಕೆ ಮಾಡುತ್ತೀರಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ : ಅದು ಪ್ರೊಸಿಜರ್ ಪ್ರಕಾರ ಯಾರ್‍ಯಾರು ಅರ್ಜಿ ಹಾಕಿರುತ್ತಾರೆ ಅವರನ್ನು, ತಾಲ್ಲೂಕು ಮಟ್ಟದಲ್ಲಿ ಸೆಲೆಕ್ಟ್ ಮಾಡುವ ಒಂದು ಕ್ರಮ ಇದೆ. ಅದರ ಪ್ರಕಾರ ಸೆಲೆಕ್ಟ್ ಮಾಡಿ ಬೇರೆ ಬೇರೆ ಕ್ರಾಫ್ಟ್ ಟ್ರೈನಿಂಗ್ ಪ್ರೊಗ್ರಾಂಗೆ ಹಾಕುತ್ತಾರೆ. ಇದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರತಕ್ಕಂತಹ ವಿಷಯ.

ಮುಂಡರಗಿ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧದ ನಿರ್ಮಾಣ

630 -ಶ್ರೀ ಕೆ.ಹೆಚ್. ಕುರಡಿಗಿ (ಮುಂಡರಗಿ) : ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕು ಕಛೇರಿಯು ಪೂರ್ಣ ಶಿಥಿಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಮಿನಿ ವಿಧಾನಸೌಧ, ಕಟ್ಟುವ ವಿಚಾರವು ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲೀ, ಯಾವಾಗ ಕಟ್ಟಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಹೌದು.

ಇ) ಈ ಪ್ರಸ್ತಾವನೆಯನ್ನು 1993-94ರ ಸಾಲಿನಲ್ಲಿ ಆಯವ್ಯಯದಲ್ಲಿ ಸೇರಿಸುವ ವಿಷಯವು ಪರಿಶೀಲನೆಯಲ್ಲಿದೆ.

ಶ್ರೀ ಕೆ.ಹೆಚ್. ಕುರುಡಗಿ : ತಾವು ಮೊದಲನೆಯ ಉತ್ತರದಲ್ಲಿ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಎರಡನೆಯದರಲ್ಲಿ ಇನ್ನು 93-94ರಲ್ಲಿ

ವಿಚಾರ ಮಾಡುತ್ತೇವೆ ಎಂದು ಹೇಳಿದ್ದೀರಿ. ಆ ಕಛೇರಿಯು ಇವತ್ತು ನಾಳೆ ಅಥವಾ ಇನ್ನು ಆರು ತಿಂಗಳೊಳಗೆ ಬೀಳುತ್ತದೆ. ಆದ ಕಾರಣ, 93-94ರ ಸಾಲಿನಲ್ಲಿ ಡೆಫ಼್‌ನೇಟಾಗಿ ಈ ಕೆಲಸವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್ : ಇದನ್ನು 1993-94ರ ಬಜೆಟ್‌ಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಕೊರಟಗೆರೆಯಲ್ಲಿ ಮುನ್ಸೀಫ್ ಕೋರ್ಟ್ ಕಟ್ಟಡ

67 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊರಟಗೆರೆಯಲ್ಲಿರುವ ಮುನ್ಸೀಫ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯವು ಬಾಡಿಗೆ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿದ್ದು ಸ್ಥಳಾವಕಾಶದ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ನ್ಯಾಯಾಲಯ ಕಟ್ಟಡ ಕಟ್ಟಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ?

ಇ) ಈ ಕಟ್ಟಡವನ್ನು ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಕೊರಟಗೆರೆ ಮುನ್ಸೀಫ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯವು ಸುಮಾರು 3 ವರ್ಷಗಳಿಂದ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಈ ನ್ಯಾಯಾಲಯದ ಸ್ಥಳಾವಕಾಶದ ಕೊರತೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ದೂರುಗಳು ಸರ್ಕಾರಕ್ಕೆ ಬಂದಿರುವುದಿಲ್ಲ.

ಆ) ಈ ಬಗ್ಗೆ ಕರ್ನಾಟಕ ಉಚ್ಚನ್ಯಾಯಾಲಯದಿಂದ ಯಾವುದು ಪ್ರಸ್ತಾವನೆಗಳು ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಸಿ. ವೀರಭದ್ರಯ್ಯ : ಕೊರಟಗೆರೆಯಲ್ಲಿ ಮುನ್ಸೀಫ್ ನ್ಯಾಯಾಲಯದಲ್ಲಿ ಜನಗಳಿಗೆ ಕುಳಿತುಕೊಳ್ಳುವುದಕ್ಕೆ ಅವಕಾಶ ಇಲ್ಲ. ಒಂದು ಸಣ್ಣ ರೋಡಿನಲ್ಲಿ ಜನರು ನಿಂತುಕೊಳ್ಳಬೇಕಾಗುತ್ತದೆ. ನಾನು ಅನೇಕ ಸಲ ಸರ್ಕಾರದ ಗಮನಕ್ಕೆ ಈ ವಿಚಾರದಲ್ಲಿ ಬರೆದಿದ್ದರೂ, ಹೇಳಿದ್ದರೂ ಇಲ್ಲಿ ಯಾವುದೂ ಕೆಲಸ ಆಗಿಲ್ಲ. ದಯಮಾಡಿ ಸರ್ಕಾರದವರು ಈ ಕೂಡಲೇ ಮುನ್ಸೀಫ್ ನ್ಯಾಯಾಲಯದ ಕಟ್ಟಡವನ್ನು ಕಟ್ಟಿಸಿಕೊಡಬೇಕು. ಅದಕ್ಕೆ ನಾನು ಜಾಗದ ವ್ಯವಸ್ಥೆ ಕೂಡ ಮಾಡಿದ್ದೇನೆ. ಯಾವಾಗ ಕಟ್ಟಡ ಕಟ್ಟುತ್ತೀರಿ, ಮತ್ತು ಈ ವ್ಯವಸ್ಥೆ ಯಾವಾಗ ಮಾಡುತ್ತೀರಿ?

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಅದಷ್ಟು ಬೇಗ ಎಲ್ಲೆಲ್ಲಿ ಮುನ್ಸೀಫ್ ನ್ಯಾಯಾಲಯಗಳಿಗೆ ಕಟ್ಟಡ ಇಲ್ಲವೋ ಅಲ್ಲೆಲ್ಲ ಕಟ್ಟುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ನಮ್ಮ ರಾಜ್ಯದಲ್ಲಿ ಈಗ 53 ಸ್ಥಳಗಳಿಗೆ ಕಟ್ಟಡಗಳನ್ನು ಒದಗಿಸಬೇಕು. ಈ 53 ಸ್ಥಳಗಳಿಗೆ ಕಟ್ಟಡಗಳನ್ನು ಒದಗಿಸುವುದಕ್ಕೆ ನಿರ್ಧಾರ ಮಾಡಿದ್ದೇವೆ. ಆದರೆ ಅದನ್ನು ಹಂತ ಹಂತವಾಗಿ ಮಾಡಬೇಕಾಗುತ್ತದೆ. ಕೆಲವು

ಕೋರ್ಟುಗಳಿಗೆ 10 ವರ್ಷಗಳಿಂದ ಕಟ್ಟಡ ಇಲ್ಲ. ಆದ್ಯತೆ ಆಧಾರದ ಮೇಲೆ ಹಣಕಾಸು ಎಷ್ಟು ಸಿಗುತ್ತದೆ ನೋಡಿಕೊಂಡು ಕಟ್ಟಡವನ್ನು ಮಾಡುತ್ತೇವೆ. ಕೊರಟಗೆರೆಯಲ್ಲಿ ಅಷ್ಟು ವಿಶೇಷವಾಗಿ ಕಷ್ಟ ಇದ್ದರೆ ಅದಕ್ಕೆ ಆದ್ಯತೆ ಕೊಡುವ ಪ್ರಯತ್ನ ಮಾಡೋಣ.

ಶ್ರೀ ಸಿ. ವೀರಭದ್ರಯ್ಯ : ಈ ಕೂಡಲೇ ಕಟ್ಟಡ ಆಗಲೇಬೇಕು. ಇಲ್ಲದಿದ್ದರೆ ಬಹಳ ತೊಂದರೆ ಆಗುತ್ತದೆ. ಜನಗಳು ರೋಡಿನಲ್ಲಿ ಬಿಸಿಲಿನಲ್ಲಿ ನಿಂತುಕೊಂಡು ಕಾಯಬೇಕಾದ ಸ್ಥಿತಿ ಇದೆ.

ಶ್ರೀ ಟಿ.ಎಂ. ಮಂಜುನಾಥ್ : ತಮಗೆ ಗೊತ್ತಿರುವ ಹಾಗೆ ಕೊರಟಗೆರೆ ಹಿಂದುಳಿದ ಪ್ರದೇಶ. ಅದಕ್ಕೆ ತಾವು ಮೊದಲನೆಯ ಆದ್ಯತೆ ಕೊಟ್ಟು ಈ ವರ್ಷವೇ ಪ್ರಾರಂಭ ಮಾಡುವುದಕ್ಕೆ ಸಹಕರಿಸುತ್ತಿರೆಂದು ನಾನು ಕೇಳುತ್ತಿದ್ದೇನೆ. ಅಲ್ಲಿ ಬಹಳ ಅವಶ್ಯಕತೆ ಇದೆ. ದಯವಿಟ್ಟು ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಅಲ್ಲಿ ಅವಶ್ಯಕತೆ ಇದೆ ಎಂದು ತಾವು ಹೇಳತಕ್ಕಂತಹ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಆದ್ಯತೆ ಕೊಡುತ್ತೇವೆ ಎಂದು ಹೇಳಿದ್ದೇನೆ. ಹೆಚ್ಚು ಕಷ್ಟ ಇದ್ದರೆ ವರ್ಷದ ಬಜೆಟ್‌ನ್ನು ನೋಡಿಕೊಂಡು ಮೊದಲೇ ಅದನ್ನು ಮಾಡೋಣ.

ಸಿಂಧನೂರು ಹಳ್ಳ ಹಾಗೂ ಪೋತನಾಳ ಹಳ್ಳಕ್ಕೆ ಸೇತುವೆಯ ನಿರ್ಮಾಣ.

155-ಶ್ರೀ ಬಿ. ಹಂಪನಗೌಡರ್ (ಸಿಂಧನೂರು) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನೆರೆಹಾವಳಿಯ ಪ್ರವಾಹದಿಂದ ಸಿಂಧನೂರು ಹಳ್ಳ ಹಾಗೂ ಪೋತನಾಳ ಹಳ್ಳಕ್ಕೆ ಕಟ್ಟಿದ ಸೇತುವೆ ನಾಶವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಹೊಸ ಸೇತುವೆ ನಿರ್ಮಾಣ ಮಾಡುವ ಉದ್ದೇಶ ಸರಕಾರಕ್ಕೆ ಇದೆಯೇ?*

ಇ) *ಹಾಗಿದ್ದಲ್ಲಿ, ಹೊಸ ಸೇತುವೆಗಳ ನಿರ್ಮಾಣವನ್ನು ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು) :

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸಧ್ಯದಲ್ಲಿ ಈ ಎರಡೂ ಮುಳುಗು ಸೇತುವೆಗಳನ್ನು ದುರಸ್ತಿಪಡಿಸಿ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಸಿಂಧನೂರು ಹಳ್ಳಕ್ಕೆ ಹೊಸ ಪರ್ಯಾಯ ಸೇತುವೆ ನಿರ್ಮಾಣ ಮಾಡುವ ಬಗ್ಗೆ ಸರ್ಕಾರವು ಪರಿಶೀಲಿಸುವುದು.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಹಂಪನಗೌಡ : ನಾನು ಸಿಂಧನೂರು ಹಳ್ಳಿ ನೆರೆಹಾವಳಿಯಿಂದ ಸೇತುವೆ ಸಂಪೂರ್ಣವಾಗಿ ನಾಶವಾಗಿದೆ ಎಂಬುದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಉತ್ತರದಲ್ಲಿ ಎರಡು ಸೇತುವೆಗಳು ನೆರೆ ಹಾವಳಿಯಿಂದ ತುಂಬಾ ನಷ್ಟವಾಗಿದೆ ಎಂದು ಹೇಳಿದ್ದಾರೆ. ಆದರೆ ಮೂರನೆಯ ಪ್ರಶ್ನೆಗೆ ಉತ್ತರದಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ನಾನು ಕೇಳುತ್ತಿರುವುದು ಈ ಸೇತುವೆ ನಾಲ್ಕು ಜಿಲ್ಲೆಗಳಿಗೆ ಸಂಪರ್ಕ ಹೊಂದಿರತಕ್ಕಂತಹ ಸೇತುವೆ. ಇದು ಬಹಳಷ್ಟು

ತೀವ್ರಗತಿಯಲ್ಲಿ ಆಗಬೇಕು. ನಿಗದಿತವಾಗಿ ತಾವು ಯಾವಾಗ ಅದನ್ನು ಪ್ರಾರಂಭ ಮಾಡುತ್ತೀರಿ ಎಂಬುದರ ಬಗ್ಗೆ ಸರ್ಕಾರ ಹೇಳಬೇಕು. ನಿಗದಿತ ವೇಳೆ ಹೇಳಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಅದಕ್ಕೆ ಪರಿಶೀಲನೆ ಆಗಬೇಕಾಗುತ್ತದೆ. ಷೋತನಾಳ್ ಹಳ್ಳಕ್ಕೆ ಲೊಯರ್ ಕ್ರಾಸ್‌ವೇ ಸಾಕು. ಆದರೆ ಸಿಂಧನೂರ್ ಹಳ್ಳಕ್ಕೆ ಸೇತುವೆ ಬೇಕಾಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ಪರಿಶೀಲನೆ ಮಾಡಬೇಕಾಗಿದೆ. ಎಸ್ಟಿಮೇಟು ವಗೈರೆ ಆದ ನಂತರ ಕಾರ್ಯ ಪ್ರಾರಂಭ ಮಾಡಬೇಕಾಗುತ್ತದೆ. ಹಾಗೂ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಸ್ವಲ್ಪ ತಡವಾಗಬಹುದು. ಆದರೆ ಹೆಚ್ಚು ತಡವಾಗುವುದಿಲ್ಲ. ನಾನು ಅದನ್ನು ನೋಡಿದ್ದೇನೆ. ಬಹಳ ದಿವಸ ಅಲ್ಲಿಯೇ ಓಡಾಡಿದ್ದೇನೆ. ಇದರ ಬಗ್ಗೆ ಚೆನ್ನಾಗಿ ಗೊತ್ತಿದೆ. ಈ ಸಾರಿ ತುಂಬಾ ತೊಂದರೆ ಆಗಿದೆ ಎಂಬುದು ನನಗೆ ಗೊತ್ತು ಜಾಗ್ರತೆಯಾಗಿ ಇದು ಆಗಲು ನಾವು ಪ್ರಯತ್ನ ಮಾಡೋಣ.

ಶ್ರೀ ಬಿ. ಹಂಪನಗೌಡ : ಈ ಸೇತುವೆ ನಾಲ್ಕು ಜಿಲ್ಲೆಗಳಿಗೆ ಕಲ್ಪಿಸುತ್ತದೆ. ಈ ಸೇತುವೆ ಮೇಲೆಯೇ ಲಾರಿಗಳು ಬಸ್ಸುಗಳು ಹಾಗೂ ರೈತರು ಬೆಳೆದಂತಹ ಬೆಳೆಗಳು ಹೋಗಬೇಕಾಗುತ್ತದೆ. ಇದು ಒಂದು ಪ್ರಾಮುಖ್ಯವಾದ ಸೇತುವೆ. ಆದುದರಿಂದ ಬಹಳ ತ್ವರಿತವಾಗಿ ಈ ಕೆಲಸ ಆಗಬೇಕಾಗುತ್ತದೆ. ಹೆದ್ದಾರಿ ಮಧ್ಯೆ ಇರತಕ್ಕ ಸೇತುವೆ ಇದಾಗಿದೆ. ನನಗೆ ನಿಗದಿತವಾದ ಉತ್ತರ ಬೇಕು. ಈ ವರ್ಷ ಅಥವಾ ಮುಂದಿನ ವರ್ಷ ತೆಗೆದುಕೊಳ್ಳುತ್ತೀರಾ ಅಥವಾ ಇಲ್ಲವೇ ಎಂಬುದನ್ನು ತಿಳಿಸಬೇಕು. ಪರಿಶೀಲನೆ ಎಂದರೆ 10 ವರ್ಷ ಆಗುತ್ತದೆ ಮಾನ್ಯ ಸಚಿವರು ಯಾವಾಗ ಮಾಡುತ್ತೇವೆ ಎಂಬುದನ್ನು ಹೇಳುತ್ತಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : 10 ವರ್ಷ ಪರಿಶೀಲನೆ ಮಾಡುವಂತಿದ್ದರೆ ನಾವು ಹೇಳುವುದೇ ಇಲ್ಲ. ಹಾಗೇನಾದರೂ ಇದ್ದಿದ್ದರೆ ಇಲ್ಲ ಎಂದು ಹೇಳಿಬಿಡುತ್ತಿದ್ದೆ. ಜಾಗ್ರತೆಯಾಗಿ ಮಾಡುತ್ತೇವೆ ಬಹಳ ಮಟ್ಟಿಗೆ 93ರಲ್ಲಿ ಅದರ ಅಭಿಪ್ರಾಯ ಗೊತ್ತಾಗಬಹುದು.

ಶ್ರೀ ಬಿ. ಹಂಪನಗೌಡ : ಹೋದ ವರ್ಷ ಇದೇ ಮಳೆಗಾಲದಲ್ಲಿ ಆ ಸೇತುವೆ ಸಂಪೂರ್ಣ ನಾಶವಾಯಿತು. ಪುನಃ ಈ ವರ್ಷ ಪೂರ್ಣವಾಗಿ ನೆಲಸಮವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಇನ್ನೂ ಯೋಚನೆ ಮಾಡಬೇಕು, ಪರಿಶೀಲನೆ ಮಾಡಬೇಕು ಎಂದು ಹೇಳುವುದು ಸರಿಯಲ್ಲ ಈಗ ನೆರೆ ಹಾವಳಿಯ ದುಡ್ಡು ಬಂದಿದೆ ಅದರಲ್ಲಿ ತೆಗೆದುಕೊಳ್ಳಬಹುದು.

ಶ್ರೀ ಕೆ.ಹೆಚ್. ರಂಗನಾಥ್ : ನೆರೆಹಾವಳಿಯಿಂದ ತೊಂದರೆ ಆಗಿರತಕ್ಕ ವಿಚಾರ ಗೊತ್ತಾದ ತಕ್ಷಣವೇ ಸಂಚಾರಕ್ಕಾಗಿ ತಾತ್ಕಾಲಿಕ ಅನುಕೂಲಗಳನ್ನು ಮಾಡಿಕೊಟ್ಟಿದ್ದೇವೆ ಅಲ್ಲಿ ಉತ್ತಮವಾದ ಸೇತುವೆ ಆಗಬೇಕು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಜಾಗ್ರತೆಯಾಗಿ ಪರಿಶೀಲನೆ ಎಂದರೆ ಎಗ್ಸಾಮೀನ್ ಮಾಡಿಸತಕ್ಕದ್ದು. ಅದನ್ನು ಮಾಡಿಸಿ, ಎಸ್ಟಿಮೇಟ್ ಮಾಡಿಸಿ ಮುಂದಕ್ಕೆ ಕ್ರಮ ಕೈಗೊಳ್ಳುತ್ತೇವೆ ಒಟ್ಟಿನಲ್ಲಿ ಈ ಕೆಲಸವನ್ನು ಜಾಗ್ರತೆ ಮಾಡಲು ಕ್ರಮ ಕೈಗೊಳ್ಳುತ್ತೇವೆ.

ರಾಜ್ಯದ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರಿನ ಶುದ್ದೀಕರಣ.

1 - ಶ್ರೀ ಕೆ. ಹರ್ಷಕುಮಾರ್‌ಗೌಡ (ಚಾಮರಾಜ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಗ್ರಾಮಾಂತರ ಪ್ರದೇಶಗಳ ನಾಗರೀಕರಿಗೆ ಕುಡಿಯುವ ನೀರಿನ ಶುದ್ದೀಕರಣದ ಯೋಜನೆಯಡಿಯಲ್ಲಿನ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದಿಂದ ಈವರೆಗೆ ಬಿಡುಗಡೆ ಆಗಿರುವ ಹಣವೆಷ್ಟು?

ಆ) ಈ ಕಾರ್ಯಕ್ರಮವನ್ನು ರಾಜ್ಯದ ಯಾವ ಯಾವ ಜಿಲ್ಲೆ ಮತ್ತು ಗ್ರಾಮಗಳಲ್ಲಿ ಅಳವಡಿಸಲಾಗಿದೆ.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ ಸಚಿವರು) :

ಅ) ರೂ. 36.17 ಲಕ್ಷಗಳು.

ಆ) 1) ಒಂದು ದಿನಕ್ಕೆ ತಲಾ 20 ಲೀಟರ್‌ನಷ್ಟು ಪರಿಶುದ್ಧವಾದ ಕುಡಿಯುವ ನೀರನ್ನು ಸರಬರಾಜು ಮಾಡಲು ಧಾರವಾಡ ಜಿಲ್ಲೆಯ ಈ ಕೆಳಕಂಡ ಗ್ರಾಮಗಳಲ್ಲಿ ಡಿಫ್ಲೋರಿಡೇಷನ್ ಯಂತ್ರಗಳನ್ನು ಅಳವಡಿಸದೆ ಇವುಗಳು ಇನ್ನೂ ಚಾಲನೆಯಲ್ಲಿಲ್ಲ. ವಿದ್ಯುಚ್ಛಕ್ತಿಗೋಸ್ಕರ ಕಾಯಲಾಗಿದೆ.

ಮುಂಡರಗಿ ತಾಲ್ಲೂಕು : 1) ಡಂಬಳಗ್ರಾಮ
2) ಮೇವುಂಡಿ ಗ್ರಾಮ

2) ಕೇಂದ್ರ ಸರ್ಕಾರವು ನೇರವಾಗಿಯೇ ಕರಾರು ಮಾಡಿ ಕೊಂಡು, 9 ಡಿಫ್ಲೋರಿಡೇಷನ್ ಯಂತ್ರಗಳನ್ನು (ಕೈಪಂಪಿಗೆ ಜೋಡಿಸುವಂತಹ) ಈ ಕೆಳಕಂಡ 7 ಹಳ್ಳಿಗಳಲ್ಲಿ ಅಳವಡಿಸಲಾಗಿದೆ.

ಕ್ರ ಸಂ	*ಜಿಲ್ಲೆ*	*ತಾಲ್ಲೂಕು*	*ಹಳ್ಳಿ*	*ಯಂತ್ರಗಳ ಸಂಖ್ಯೆ*
1.	ಧಾರವಾಡ	ಮುಂಡರಗಿ	ನಾರಾಯಣಪುರ	1
2.	ಧಾರವಾಡ	ಮುಂಡರಗಿ	ಡಿ.ರಾಮನಹಳ್ಳಿ	2
3.	ಧಾರವಾಡ	ಮುಂಡರಗಿ	ಬರದೂರು	1
4.	ಧಾರವಾಡ	ಮುಂಡರಗಿ	ಹರ್ಲಾಪೂರ	1
			ಉಪಮೊತ್ತ	5
5.	ಗುಲ್ಬರ್ಗಾ	ಶೋರಾಪುರ	ಗೋದ್ರಿಹಾಳ	2
6.	ತುಮಕೂರು	ಪಾವಗಡ	ಕಡಮಾಳಕುಂಟೆ	1
7.	ತುಮಕೂರು	ಪಾವಗಡ	ತಾಪಗಾನದೊಡ್ಡಿ	1
			ಉಪಮೊತ್ತ	2
			ಮೊತ್ತ	೯

ಶ್ರೀ ಕೆ. ಹರ್ಷಕುಮಾರ್ ಗೌಡ : ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿರತಕ್ಕ ಜನತೆಗೆ ಕುಡಿಯುವ ನೀರಿನ ಶುದ್ದೀಕರಣ ಯೋಜನೆಯಲ್ಲಿ

ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆ ಆದ ಹಣ 36 ಲಕ್ಷ ಚಿಲ್ಲರೆ ಎಂದು ಹೇಳಿದ್ದಾರೆ. ಎಲ್ಲಾ ಗ್ರಾಮಗಳಿಗೂ ಶುದ್ದೀಕರಣ ಯಂತ್ರಗಳನ್ನು ಅಳವಡಿಸಿಕೊಳ್ಳಲು ಕೇಂದ್ರ ಸರ್ಕಾರ ಯೋಜನೆಗಳನ್ನು ಹಮ್ಮಿಕೊಂಡಿದೆ. ಆದರೆ ರಾಜ್ಯದಲ್ಲಿ ಕೇವಲ 7 ಗ್ರಾಮಗಳಲ್ಲಿ ಸುಮಾರು ಒಂಭತ್ತು ಶುದ್ದೀಕರಣ ಯಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆಯೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಇದಕ್ಕೆ ಕಾರಣಗಳು ಏನು? ಕೇಂದ್ರ ಸರ್ಕಾರ ಇದರಲ್ಲಿ ತಾರತಮ್ಯ ಮಾಡಿದೆಯೇ ಅಥವಾ ಅಧಿಕಾರಿಗಳು ಲೋಪ ಮಾಡಿದ್ದಾರೆಯೇ? ಇದರಲ್ಲಿ ಅಧಿಕಾರಿಗಳ ಬೇಜಾವಾಬ್ದಾರಿ ಏನಾದರೂ ಇದೆಯೇ? ಏಕೆಂದರೆ ಇದು ಗ್ರಾಮೀಣ ಜನತೆಯ ಆರೋಗ್ಯದ ಬದುಕಿನ ಪ್ರಶ್ನೆಯಾಗಿದೆ, ಅವರು ಕುಡಿಯುವ ನೀರಿನ ಪ್ರಶ್ನೆಯಾಗಿದೆ, ಇದರಲ್ಲಿ ಬೇಜವಾಬ್ದಾರಿ, ಅಸಡ್ಡೆ ತೋರಿಸಲು ಕಾರಣಗಳೇನು?

ಶ್ರೀ ಎಂ.ವೈ. ಘೋರ್ಪಡೆ : ಇದರಲ್ಲಿ ಅಸಡ್ಡೆ ಪ್ರಶ್ನೆ ಬರುವುದಿಲ್ಲ, ಇದು ಫಿಲ್ ಅಂಡ್ ಡ್ರಾ ಟೈಪ್ ಸ್ಕೀಮ್ಸ್ ಎರಡು ಹಳ್ಳಿಗಳಿಗೆ ಅನ್ವಯಿಸಲಾಗುತ್ತದೆ. ಇದರ ಜೊತೆಗೆ 7 ಹಳ್ಳಿಗಳಲ್ಲಿ ಈ ಯಂತ್ರವನ್ನು ಕೂಡಿಸಿದ್ದೇವೆ. ಕೇಂದ್ರದಿಂದ ನಮಗೆ ಎಷ್ಟು ಹಣ ಬಂದಿದೆ, ಅಷ್ಟು ಖರ್ಚಾಗಿದೆ. ಇದನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿದೆ. ಇದು ಯಶಸ್ವಿಯಾದರೆ, ಎಲ್ಲೆಲ್ಲಿ ಇದರ ಅವಶ್ಯಕತೆ ಇದೆಯೋ ಅಲ್ಲೆಲ್ಲಾ ಇದನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತದೆ; ಇದರಲ್ಲಿ ಅಸಡ್ಡೆ-ಆಗಿದೆ ಎಂದು ನನಗನಿಸುವುದಿಲ್ಲ. ಕೇಂದ್ರ ಸರ್ಕಾರದಿಂದ ಈ ಕಾರ್ಯಕ್ರಮಕ್ಕಾಗಿ ಹಣ ಬಂದಿದೆ ಹಾಗೂ ಬರುತ್ತಾ ಇದೆ. ನಿಮಗೆ ಹೇಳಬೇಕಾದರೆ ಈಗ 90 ಲಕ್ಷ ರೂಪಾಯಿಗಳ ಎಸ್ಟಿಮೇಟ್‌ನ್ನು ತಯಾರುಮಾಡಿದ್ದೇವೆ. ಇದರಲ್ಲಿ ಖರ್ಚು 46 ಲಕ್ಷ ರೂಪಾಯಿ ಆಗಿದೆ. ಒಂದೆರಡು ಕಡೆಗಳಲ್ಲಿ ತೊಂದರೆ ಆಗಿದೆ. ವಿದ್ಯುತ್‌ಶಕ್ತಿ ಬರದೇ ಇರುವುದರಿಂದ ಒಂದೆರಡು ಗ್ರಾಮಗಳಲ್ಲಿ ತೊಂದರೆ ಆಗಿದೆ. ಅವುಗಳನ್ನು ಸರಿಪಡಿಸಲು ಪ್ರಯತ್ನ ಮಾಡುತ್ತೇವೆ. ಒಟ್ಟಿನಲ್ಲಿ ಈ ಕಾರ್ಯಕ್ರಮ ಏನು ಇದೆ ಬಹಳ ಒಳ್ಳೆಯ ಕಾರ್ಯಕ್ರಮ. ಇದನ್ನು ನಾವು ಮುಂದುವರಿಸಿಕೊಂಡು ಹೋಗುತ್ತೇವೆ.

ಶ್ರೀ ಕೆ. ಹರ್ಷಕುಮಾರ ಗೌಡ : ನಮಗೆ ತಿಳಿದ ಮಟ್ಟಿಗೆ, ಆಂಧ್ರ ಮತ್ತು ತಮಿಳುನಾಡಿನಲ್ಲಿ ಸಂಪೂರ್ಣವಾಗಿ ಜಾರಿಗೆ ತಂದಿದ್ದಾರೆ. ಈ ಕಾರ್ಯಕ್ರಮಗಳನ್ನು ಪ್ರಾರಂಭ ಮಾಡಿದ್ದುದು ಈ ಯೋಜನೆಯನ್ನು ಯಾವಾಗ? ಏಕೆಂದರೆ, ಆರಂಭಿಕ ಹಂತ, ಪ್ರಾಯೋಗಿಕ ಹಂತ ಎಂದು ಹೇಳುತ್ತಿದ್ದೀರಿ. ಆಂಧ್ರಪ್ರದೇಶದಲ್ಲಿ ಸಂಪೂರ್ಣವಾಗಿ ಅಳವಡಿಸಿದ್ದಾರೆ. ನಮಗೆ ತಿಳಿದ ಮಟ್ಟಿಗೆ ಅಧಿಕಾರಿಗಳ ಒಂದು ಬೇಜವಾಬ್ದಾರಿತನದಿಂದಾಗಿ ಈ ಕಾರ್ಯಕ್ರಮ ಪ್ರಾರಂಭವಾಗಿಲ್ಲ ಎಂದೆನಿಸುತ್ತದೆ. ಅದಕ್ಕೆ ತಾವು ಉತ್ತರ ಕೊಡಬೇಕು.

SRI M.Y. GHORPADE : Madam, I have already said Rs. 46 lakhs have been relased. 20.2.91 ಒಂದು ಗೌರ್ನಮೆಂಟ್ ಆರ್ಡರ್ ಇದೆ. ಆ ನಂತರ ಹಣ ರಿಲೀಸ್ ಆಗಿದೆ. Therefore there is no great delay. We have taken up 7 villages. We have set up pump sets in 2 villages. There is no such delay in this programme.

ಶ್ರೀ ಕೆ. ಹರ್ಷಕುಮಾರ್ ಗೌಡ : ತಾವು ಮೊದಲೂ ಗ್ರಾಮೀಣಾಭಿವೃದ್ಧಿ ಮಂತ್ರಿಗಳಾಗಿದ್ದಿರಿ. ಈಗಲೂ ಆಗಿದ್ದೀರಿ. ಆಂಧ್ರದ ಎಲ್ಲಾ ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮ ಆಗಿದೆ. ನಮ್ಮಲ್ಲಿ ಏಕೆ ಆಗಿಲ್ಲ? ಡಿಲೇ ಆಗಿಲ್ಲ ಎಂದು ಹೇಳಬಹುದು. ಆಂಧ್ರದಲ್ಲಿ ಮಂಡಲ ಮಟ್ಟದಲ್ಲಿ ಆಗಿದೆ. ಕೇಂದ್ರದಿಂದ ಬರತಕ್ಕ ಸೌಲಭ್ಯಗಳನ್ನು ರಾಜ್ಯಕ್ಕೆ ತೆಗೆದುಕೊಳ್ಳುವುದರಲ್ಲಿ ಅಧಿಕಾರಿಗಳ ವೈಫಲ್ಯ ಎದ್ದು ಕಾಣುತ್ತದೆ. ಅದಕ್ಕಾಗಿ ಈ ಪ್ರಶ್ನೆ ಕೇಳಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ : ತಮಗೆ ಗೊತ್ತಿರುವ ಹಾಗೆ ಟೆಕ್ನಿಕಲ್ ಮಿಷನ್ ಪ್ರಕಾರ ಮಾಡಿರತಕ್ಕ ಕಾರ್ಯಕ್ರಮ. ಇದನ್ನು ಕೆಲವೇ ಹಳ್ಳಿಗಳಲ್ಲಿ ತೆಗೆದುಕೊಂಡಿರುವುದು ನಿಜ. ಈ ಒಂದು ಅನುಭವದಿಂದ ಇನ್ನೂ ಕೆಲವು ಹಳ್ಳಿಗಳಲ್ಲಿ ಇದೇ ಕಾರ್ಯಕ್ರಮ ಮುಂದುವರಿಸಬೇಕೆಂದು ತಮ್ಮ ಅಭಿಪ್ರಾಯ ಇದ್ದರೆ ಇದರ ಬಗ್ಗೆ ನಾನು ಸಹಕಾರ ಕೊಡುವುದಕ್ಕೆ ತಯಾರು ಇದ್ದೇನೆ. ಇದು ಕೇಂದ್ರ ಸರ್ಕಾರದ ಒಂದು ಕಾರ್ಯಕ್ರಮ.

ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಭಾರಿ ಮತ್ತು ಕಿರು ನೀರು ಸರಬರಾಜು ಯೋಜನೆಗಳ ಸಂಖ್ಯೆ

1056-ಶ್ರೀ ಸಾದತ್ ಅಲಿ ಖಾನ್ (ಚೆನ್ನಪಟ್ಟಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) 1989-90, 1990-91 ಮತ್ತು 1991-92 ಇಲ್ಲಿಯವರೆಗೆ ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಕೈಗೆತ್ತಿಕೊಳ್ಳಲಾದ ಭಾರಿ ನೀರು ಸರಬರಾಜು ಯೋಜನೆ ಮತ್ತು ಕಿರುನೀರು ಸರಬರಾಜು ಯೋಜನೆಗಳ ಒಟ್ಟು ಸಂಖ್ಯೆ (ಹಳ್ಳಿವಾರು ವಿವರಗಳನ್ನು ಒದಗಿಸುವುದು) ?

2) ಮೇಲಿನ ತಾಲ್ಲೂಕಿನಲ್ಲಿ ಕಟ್ಟಬೇಕಾಗಿರುವ ಬಾಕಿ ಉಳಿದಿರುವ ತೊಟ್ಟಿಗಳ ಸಂಖ್ಯೆ (ಹಳ್ಳಿವಾರು ವಿವರಗಳನ್ನು ಒದಗಿಸುವುದು) ?

3) ಯಾವಾಗ ಇವುಗಳನ್ನು ಪೂರ್ಣಗೊಳಿಸಲಾಗುವುದು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1) ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಕೈಗೆತ್ತಿಕೊಳ್ಳಲಾದ ಭಾರಿ ನೀರು ಸರಬರಾಜು ಯೋಜನೆಗಳ ಮತ್ತು ಕಿರು ನೀರು ಸರಬರಾಜು ಯೋಜನೆಗಳ ಸಂಖ್ಯೆ ಈ ಕೆಳಕಂಡಂತಿದೆ:

	ಭಾರಿ ನೀರು ಸರಬರಾಜು ಯೋಜನೆ ಸರಬರಾಜು (ಕೊಳಾಯಿ ನೀರು ಸರಬರಾಜು ಯೋಜನೆ)	*ಕಿರು ನೀರು ಯೋಜನೆ*
1989-90	11	8
1990-91	18	12
1991-92	5	4
1992-93	ಈವರೆಗೆ 1	4

(ಹಳ್ಳಿವಾರು ವಿವರಗಳನ್ನು ಲಗತ್ತಿಸಿದೆ)

2) 12 (ಹಳ್ಳಿವಾರು ವಿವರಗಳನ್ನು ಲಗತ್ತಿಸಿದೆ).

3) 5 ತೊಟ್ಟಿಗವನ್ನು 30.6.1993ರ ವೇಳೆಗೆ ಮತ್ತು ಉಳಿದ 7 ತೊಟ್ಟುಗಳನ್ನು 30-9-93ರ ವೇಳೆಗೆ ಪೂರ್ಣಗೊಳಿಸಲಾಗುವುದು.

ಅನುಬಂಧ

ಭಾರಿ ನೀರು ಸರಬರಾಜು ಯೋಜನೆಗಳು (ಕೊಳಾಯಿ ನೀರು ಸರಬರಾಜು ಯೋಜನೆ)

1989-90

1) ತಗಚಗೆರೆ (2) ಮುಕುಂದ (3) ಮಂದಾರಗುಪ್ಪೆ (4) ಮತ್ತಿಕೆರೆ (5) ವಿರೂಪಾಕ್ಷಿಪುರ (6) ಮಣಸಿಗಾನಹಳ್ಳಿ (7) ಮುಂಗಡಿಹಳ್ಳಿ (8) ಹನಿಯೂರು (9) ಹುಡಿಕೆ ಹೊಸಹಳ್ಳಿ (10) ಹಾರೋಕೊಪ್ಪ (11) ಮುದಿಗೆರೆ

1990-91

1) ಬೇವೂರು (2) ಕದರಮಂಗಲ (3) ದಶಾವರ (4) ಸಂಕಲಗೆರೆ (5) ಸುಳ್ಳೇರಿ (6) ಹೊನ್ನಾಯ್ಕನ ಹಳ್ಳಿ (7) ಪಟ್ಲು (8) ಹೊಂಗನೂರು (9) ಇಗ್ಗಲೂರು ಎಕೆಸಿ (10) ಕೂಡುವಾರು (11) ನಾಗಾವರ (12) ಮಾಲೂರು ಪಟ್ಟಣ (13) ಮಾಕಳಿ (14) ಸೋಗಾಲ (15) ಮಲ್ಲೂರು (16) ಅಬ್ಬೂರು (17) ಮಂಡ್ಯ ಬೊಮ್ಮನಾಯ್ಕನ ಹಳ್ಳಿ (18) ಮೈಲನಾಯಕನಹಳ್ಳಿ.

1991-92

1)ಚಕ್ಕೆರೆ (2) ಅಕ್ಕೂರು (3) ಎಸ್.ಎಂ. ಹಳ್ಳಿ (4) ಮೋಲೆ ದೊಡ್ಡಿ (5) ನೆರಳೂರು

1992-93

1) ಹರೂರು

ಕಿರು ನೀರು ಸರಬರಾಜು ಯೋಜನೆ

1989-90

1) ಅಂಬಾಡಿಹಳ್ಳಿ (2) ಸರಗೂರು (3) ಕೊಂಡಾಪುರ (4) ಬಾಚಹಳ್ಳಿ (5) ಅಪ್ಪಗೆರೆ (6) ಪೀತಲ್ಲಿದೊಡ್ಡಿ (7) ಕೋಡಿಹೊಸಹಳ್ಳಿ (8) ಕುಂತೂರು ದೊಡ್ಡಿ.

1990-91

1) ಚಿಕ್ಕಲೂರು (2) ಗೌಡಗೆರೆ (3) ಅಮ್ಮಲ್ಲಿದೊಡ್ಡಿ (4) ಹುಲುವಾಡಿ (5) ಸುಣ್ಣೇರು (6) ಅಬ್ಬೂರುದೊಡ್ಡಿ (7) ಜಾಗದಪುರ (8) ನಿಟ್ಟೇನಹಳ್ಳಿ (9) ಬೈರಶೆಟ್ಟಿಹಳ್ಳಿ 10) ಬಲ್ಲಾಪಟ್ಟಣ (11) ಬಾಚೇಟಹಳ್ಳಿ (12) ಸಿಡಗಾನಹಳ್ಳಿ

1991-92

1) ಬೆಳ್‌ಕೆರೆ (2) ಬಿ.ವಿ.ಪಾಳ್ಯ (3) ಸೀಭನಹಳ್ಳಿ (4)ಕೊಲ್ಲಾಪುರ

1992-93

(1) ಸೋಗಾಲ (2) ಕರನಹಳ್ಳಿ (3) ಮೋಲೆ (4) ಮಾದಾಪುರ

ನಿರ್ಮಿಸಲು ಬಾಕಿ ಇರುವ ಟ್ಯಾಂಕುಗಳ ವಿವರಗಳು

30-6-93ರ ವಳಗೆ ಮುಗಿಸಲ್ಪಡುವ ಟ್ಯಾಂಕುಗಳ ವಿವರಗಳು

1) ಸಂಕಲಗೆರೆ (2) ಮುಡಿಕೆಹೊಸಹಳ್ಳಿ (3) ಮುಡಿಗೆರೆ (4) ಮತ್ತಿಕೆರೆ (5) ಸುಳ್ಳೇರಿ

30-9-93ರ ವಳಗೆ ಮುಗಿಸಲ್ಪಡುವ ಟ್ಯಾಂಕುಗಳ ವಿವರಗಳು

1) ವಂದಾರಗುಪ್ಪೆ (2) ಅಕ್ಕಬರು (3) ಚಕ್ಕೆರೆ (4) ಮಾಲೂರು ಪಟ್ಟಣ (5) ನೆರಳೂರು (6) ಮೋಲೆ ದೊಡ್ಡಿ (7) ಹರೂರು.

ಶ್ರೀ ಸಾದತ್ ಆಲಿ ಖಾನ್ : ನನಗೆ ಇಲ್ಲಿ ವಿವರವಾದ ಉತ್ತರ ಬಂದಿದೆ. ಇದರಲ್ಲಿ ಒಂದು ಇಂಜಸ್ಟೀಸ್ ಆಗಿದೆ. 1992-93ನೇ ಸಾಲಿನಲ್ಲಿ ಚನ್ನಪಟ್ಟಣ ತಾಲ್ಲೂಕಿಗೆ 12 ಬಾರಿ ನೀರು ಸರಬರಾಜು ಯೋಜನೆಗಳನ್ನು ಕೇಳಿದ್ದು, ತಮ್ಮ ಉತ್ತರದ ಪ್ರಕಾರ ಕೊಟ್ಟಿರುವುದು ಕೇವಲ 1 ಮಾತ್ರ. ಇದರಿಂದಾಗಿ ಬೆಂಗಳೂರು ರೂರಲ್ ಜಿಲ್ಲಾಪರಿಷತ್ತಿನಲ್ಲಿ ಬಹಳ ಇಂಜಸ್ಟೀಸ್ ಆಗಿದೆ. ಮತ್ತು ಕಿರು ನೀರು ಸರಬರಾಜು ಯೋಜನೆ ಕೇವಲ 4 ಕೊಟ್ಟಿದ್ದೀರಿ. ಈ ವಿಚಾರವಾಗಿ ಎನ್‌ಕ್ವಯರಿ ಮಾಡಿ. ಮತ್ತೆ ಮೇಜರ್ ವಾಟರ್ ಟ್ಯಾಂಕ್‌ಗಳು 12 ಏನು ಕೈಗೆತ್ತಿಕೊಳ್ಳಲಾಗಿತ್ತು ಅವು ಇನ್‌ಕಂಪ್ಲೀಟ್ ಆಗಿವೆ. ನವೆಂಬರ್‌ನಲ್ಲಿ ಕಂಪ್ಲೀಟ್ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಎಂ.ವೈ. ಘೋರ್ಪಡೆ : ಚನ್ನಪಟ್ಟಣ ತಾಲ್ಲೂಕಿನ ಬಗ್ಗೆ ನಮಗೆ ತಿಳಿದ ಮಟ್ಟಿಗೆ ಸಾಕಷ್ಟು ಮಾಹಿತಿಗಳನ್ನು ನಾವು ಒದಗಿಸಿಕೊಟ್ಟಿದ್ದೇವೆ. ಇನ್ನೂ ಕಟ್ಟದೆ ಬಾಕಿ ಉಳಿದಿರುವ ತೊಟ್ಟಿಗಳ ಸಂಖ್ಯೆ 12 ಎಂದು ಹೇಳಿದ್ದೇನೆ. ಇವುಗಳಲ್ಲಿ 5 ಟ್ಯಾಂಕುಗಳನ್ನು ಜೂನ್ ಒಳಗೆ ಹಾಗೂ ಮಿಕ್ಕ 7ನ್ನು ಸೆಪ್ಟಂಬರ್ ಮೂವತ್ತರ ಳಗೆ ಪೂರ್ಣಗೊಳಿಸಲಾಗುವುದೆಂದು ಹೇಳಿದ್ದೇನೆ. ಸಾಮಾನ್ಯವಾಗಿ ಇಷ್ಟೊಂದು ವಿವರಗಳು ಇಂತಹ ಪ್ರಶ್ನೆಗೆ ಕೊಡುವುದು ಬಹಳ ಕಷ್ಟವಾಗುತ್ತದೆ. ಆದರೂ ಕೂಡ ಎಷ್ಟು ಸಾಧ್ಯವೋ ಅಷ್ಟೂ ವಿವರಗಳನ್ನು ಕೊಟ್ಟಿದ್ದೇವೆ. ಆದರೂ ಅನ್ಯಾಯವಾಗಿದೆ ಎಂದರೆ ಏನು ಉತ್ತರ ಹೇಳಲಿ ?

ಶ್ರೀ ಸಾದತ್ ಆಲಿ ಖಾನ್ : ಅನ್ಯಾಯ ಎಂದರೆ, 1992-93ಕ್ಕೆ 12 ಮೇಜರ್ ವಾಟರ್ ಸಪ್ಲೈ ಸ್ಕೀಮ್ ಕೇಳಿದ್ದು, ಕೊಟ್ಟಿರುವುದು ಕೇವಲ 1 ಮಾತ್ರ.

ಶ್ರೀ ಎಂ.ವೈ. ಘೋರ್ಪಡೆ : ಕೊಳಾಯಿ ನೀರು ಸರಬರಾಜು ಯೋಜನೆಯಾಗಲೀ, ಮಿನಿ ವಾಟರ್ ಸಪ್ಲೈ ಆಗಲೀ, ಬೋರ್ವೆಲ್ ಆಗಲೀ ತಾವು ಕೇಳಿದ್ದೆಲ್ಲಾ ತಕ್ಷಣ ಮಾಡುವುದಕ್ಕೆ ಆಗುವುದಿಲ್ಲ.

12.05 ಪಿ.ಎಂ.

ಉದ್ದೇಶಪೂರ್ವಕವಾಗಿ ನ್ಯಾಯವಾದಂಥ ಪೈಪ್ ವಾಟರ್ ಸ್ಕೀಮ್, ಮಿನಿ ವಾಟರ್ ಸ್ಕೀಮು ಇದ್ದು ಅದನ್ನು ಅವರು ತೆಗೆದುಕೊಂಡಿಲ್ಲವೆಂದು ನೀವು ಹೇಳುವುದಾದರೆ certainly I will look into it.

ಬೆಂಗಳೂರು ಮತ್ತು ಮೈಸೂರು ಹೆದ್ದಾರಿಯನ್ನು ಎಕ್ಸ್‌ಪ್ರೆಸ್ ಆಗಿ ಪರಿವರ್ತನೆ.

217 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮೈಸೂರು ಹೆದ್ದಾರಿಯನ್ನು "ಎಕ್ಸ್‌ಪ್ರೆಸ್ ವೇ" ಆಗಿ ಪರಿವರ್ತಿಸುವ ಆಲೋಚನೆ ಸರ್ಕಾರಕ್ಕಿದೆಯೇ?

ಆ) ಈ ಹಿನ್ನಲೆಯಲ್ಲಿ ಪೂರ್ವಬಾವಿ ಸಿದ್ಧತೆಗಳೇನಾದರೂ ನಡೆದಿದೆಯೇ?

ಇ) ಯೋಜನೆ ಇದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು) :

ಅ) ಪ್ರತ್ಯೇಕವಾದ "ಎಕ್ಸ್‌ಪ್ರೆಸ್ ವೇ" ನಿರ್ಮಿಸುವ ಪ್ರಸ್ತಾಪವು ಸರ್ಕಾರದ ಮುಂದಿದೆ.

ಆ) ನಡೆದಿವೆ.

ಇ) ರಸ್ತೆಗೆ ಬೇಕಾಗುವ ಭೂಸ್ವಾಧೀನದ ನಂತರ ಪ್ರಾರಂಭಿಸುವ ಪ್ರಸ್ತಾಪವಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೇ, ಇದು ಅತ್ಯಂದ ಪ್ರಮುಖವಾದ ಪ್ರಶ್ನೆ ಇದು. ಬೆಂಗಳೂರು ಮೈಸೂರು ಹೆದ್ದಾರಿಗೆ ಎಕ್ಸ್‌ಪ್ರೆಸ್ ವೇ ನಿರ್ಮಿಸಿರುವ ಪ್ರಸ್ತಾಪ ಸರ್ಕಾರದ ಮುಂದಿದೆ. ರಸ್ತೆ ಬಗ್ಗೆ ಭೂಸ್ವಾಧೀನದ ಪ್ರಶ್ನೆ ಇದೆಯೆಂದು ಹೇಳಿದ್ದಾರೆ. ನಾನು ನೇರವಾಗಿ ಕೇಳುವಂಥಾದ್ದು ಭೂಸ್ವಾಧೀನದ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಈಗಾಗಲೇ ಪ್ರಾರಂಭ ಮಾಡಿದ್ದೀರ? ಅದಕ್ಕೆ ಎಷ್ಟು ಹಣ ಬೇಕಾಗುತ್ತದೆ. ಅದಕ್ಕೆ ತಾವು ಬಜೆಟ್‌ನಲ್ಲಿ ಹಣವನ್ನು ಮೀಸಲಾಗಿಟ್ಟಿದ್ದೀರಾ? ದಯವಾಡಿ ಉತ್ತರ ಕೊಡಬೇಕು.

ಶ್ರೀ ಕೆ.ಎಚ್. ರಂಗನಾಥ್ : ಈ ರಸ್ತೆ ಕಾಮಗಾರಿಯದು ಒಂದು ನೀತಿಯ ಪ್ರಶ್ನೆ. ನೇರವಾಗಿರತಕ್ಕ ರಸ್ತೆಯಾಗಬೇಕು ಎನ್ನುವುದರಲ್ಲಿ ಭಿನ್ನಾಬಿಪ್ರಾಯವಿಲ್ಲ. ಸುಮಾರು 139 ಕಿಲೋಮೀಟರ್ ಇರತಕ್ಕ ಈ ರಸ್ತೆಯನ್ನು ಮಾಡಬೇಕೆಂದು ಹೇಳಿ ಒಂದು ತೀರ್ಮಾನವಾಗಿದೆ. ಅದಕ್ಕೆ ಕನ್‌ಸಲ್‌ಟೆನ್ಸಿಗೆ ಕೂಡ ಕೊಟ್ಟಿದ್ದಾರೆ. 1982ರಲ್ಲಿ ಈ ಒಂದು ಅಭಿಪ್ರಾಯಕ್ಕೆ ಬಂದು, ಮೆಸಸ್ ಇಂಟರ್ ಕಾಂಟಿನೆಂಟಲ್ ಅಂಡ್ ಟೆಕ್‌ನೋಕ್ರಾಪ್ಟ್ ಲಿಮಿಟೆಡ್‌ಗೆ ಕನ್‌ಸಲ್‌ಟೆನ್ಸಿ, ವಹಿಸಿ ಅದನ್ನು ಮಾಡಿಕೊಡಬೇಕೆಂದು ಹೇಳಿದ್ದಾರೆ. ಅದರ ಪ್ರಕಾರ ಸುಮಾರು 161 ಕೋಟಿ ರೂಪಾಯಿ ಆಗುತ್ತದೆ ಎಂದು ಅವರು ಪ್ರಸ್ತಾಪ ಮಾಡಿದ್ದಾರೆ. ಕನ್‌ಸಲ್‌ಟೆನ್ಸಿಗೆ 13.5 ಲಕ್ಷ ರೂಪಾಯಿಗಳನ್ನು ಕೂಡ ಕೊಟ್ಟಿದ್ದೇವೆ. ನಮ್ಮಲ್ಲೆ ಮಾಡಿಸಬಹುದಾಗಿತ್ತು. ನಮ್ಮಲ್ಲಿ ಇಂಜಿನಿಯರುಗಳು ಇಲ್ಲವೆಂದಲ್ಲ, ಆದರೆ ಕಾರಣಾಂತರಗಳಿಂದ ಅದು ನಡೆದು ಹೋಗಿದೆ. ಈಗ ಪ್ರಶ್ನೆ ಏನೆಂದರೆ ಟೆಂಡರ್ ಕೂಡ ಕರೆದು 10 ಜನರ ಟೆಂಡರ್ ಅರ್ಜಿ ತೆಗೆದುಕೊಂಡು ಅದರಲ್ಲಿ ಒಬ್ಬರಿಗೆ ಮೆಸರ್ಸ್ ಕೋಡೇಸ್ ಕಂಪನಿಯವರಿಗೆ ಗುತ್ತಿಗೆ ಕೊಟ್ಟಿದ್ದಾರೆ. 1987ರಲ್ಲಿ ಯೋಚನೆ ಮಾಡಿ ಪ್ರೈವೇಟೈಸೇಷನ್ ಸ್ಕೀಮ್‌ನಲ್ಲಿ ಕೊಟ್ಟು ಬಿಟ್ಟಿದ್ದಾರೆ. ಆಗ ಪ್ರೈವೇಟೈಸೇಷನ್ ಬಂದು ಬಿಟ್ಟಿತು. ಪಾಪ ಹಾಗೆ ಮಾಡಿದ್ದಾರೆ. ಸಂಚಾರಕ್ಕೆ ರಸ್ತೆಯನ್ನು ಬಳಸಿದ್ದಕ್ಕೆ ಅವರ ಕಡೆಯಿಂದ ಸುಂಕ ವಸೂಲು ಮಾಡಿಕೊಳ್ಳುವುದು ಅಂತ ಕೂಡ ಆಗಿದೆ. ಹಾಗಾಗಿ ಬಜೆಟ್‌ನಲ್ಲಿ ಕೇವಲ 5 ಲಕ್ಷ ರೂಪಾಯಿಗಳನ್ನು ಲ್ಯಾಂಡ್ ಅಕ್ವಿಜಿಷನ್‌ಗೆಂದು

ಇಟ್ಟಿದ್ದಾರೆ. ಮತ್ತೆ ಗುತ್ತಿಗೆ ಕರಾರು ಪರಿಶೀಲನೆ ಮಾಡುವುದಕ್ಕೆ ಒಂದು ಸಮಿತಿಯನ್ನು ಕೂಡ ನೇಮಕ ಮಾಡಿದ್ದಾರೆ. ಪ್ರಶ್ನೆ ಏನೆಂದರೆ ಸುಂಕ ವಸೂಲಿ ಮಾಡಿ, ಪ್ರೈವೇಟ್‌ನವರಿಗೆ ಈ ರಸ್ತೆ ಕೊಡತಕ್ಕದ್ದು ಎಂದು ಮಾತನಾಡುವುದು ಸುಲಭ. ಇದು ಗುಜರಾತ್‌ನಲ್ಲಿದೆ ಎಂದು ಹೇಳಿದ್ದಾರೆ. ಆದರೆ ಇದನ್ನು ಸರ್ಕಾರ ಪುನರ್ ಪರಿಶೀಲನೆ ಮಾಡಬೇಕಾಗುತ್ತದೆ. ಮತ್ತು ಈ ಸಭೆಯು ಕೂಡ ಪುನರ್‌ಪರಿಶೀಲನೆ ಮಾಡತಕ್ಕ ಪರಿಸ್ಥಿತಿ ಬರುತ್ತದೆ. ಬರೀ ನಮ್ಮ ಮನಸ್ಸಿಗೆ ಬಂದಾಗ ತೀರ್ಮಾನ ತೆಗೆದುಕೊಳ್ಳುವುದಿಲ್ಲ, ಈ ಸಭೆಯ ಮುಖಾಂತರ ರಾಜ್ಯದ ಜನತೆಯ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಅವಶ್ಯಕವಾಗುತ್ತದೆ. ಆ ದೃಷ್ಟಿಯಿಂದ ಇವೊತ್ತಿನ ವಸ್ತು ಸ್ಥಿತಿ ಏನೆಂದು ತಮ್ಮ ಮುಂದೆ ಇಟ್ಟಿದ್ದೇನೆ. ಮತ್ತೆ ಸರ್ಕಾರ ಪರಿಶೀಲನೆ ಮಾಡಿ, ಕ್ಯಾಬಿನೆಟ್‌ನಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿ, ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ತಕ್ಷಣ ನಾವು ಭೂಸ್ವಾಧೀನ ಮಾಡುವುದಕ್ಕೆ ಪ್ರಾರಂಭ ಮಾಡುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದೇ ಒಂದು ನೇರವಾದ ಪ್ರಶ್ನೆ. ಈಗಾಗಲೇ ತಾವು ಏನು ಹೇಳಿದ್ದೀರಿ, ಬಡ ಬೋರೆಗೌಡ ಕೊಟ್ಟಂಥ ತೆರಿಗೆ ಹಣದಿಂದ 13.5 ಲಕ್ಷ ರೂಪಾಯಿಗಳನ್ನು ಕನ್‌ಸಲ್‌ಟೆನ್ಸಿಗೋಸ್ಕರ ಖರ್ಚು ಮಾಡಿದ್ದೀರಿ. ಒಂದು ರೀತಿ ಇದನ್ನು ಮಾಡಬೇಕೆ ಬೇಡವೇ ಎನ್ನುವ ನಿರ್ಧಾರಕ್ಕೆ ಬರುವುದಕ್ಕೆ ಮುಂಚೆಯೇ ಒಂದು ರೀತಿ "ಕೂಸು ಹುಟ್ಟುವುದಕ್ಕೆ ಮುಂಚೆ ಕುಲಾವಿ ಹೊಲಿಸಿದ ಹಾಗೆ" 13 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ನಾನು ನೇರವಾಗಿ ನಿಮ್ಮನ್ನು ಕೇಳುತ್ತೇನೆ ಇದರ ಅಗತ್ಯ ಇದೆ ಅಂದರೆ ಮಾಡಿ, ಇಲ್ಲವೆಂದರೆ 13 ಲಕ್ಷ ರೂಪಾಯಿಗಳನ್ನು ಇವರ ಹೆಸರಿನಲ್ಲಿ ತೆಗೆದುಕೊಂಡು ಇಲ್ಲಿ ಯಾರೋ ತಿಂದಿದ್ದರೆ ಅದರ ಬಗ್ಗೆ ರೆಕಾರ್ಡ್ ತೆಗೆದು ವಸೂಲು ಮಾಡುವುದಕ್ಕೆ ಪ್ರಯತ್ನ ಮಾಡಿ. ನುಂಗಿ ಹಾಕುವ ಪ್ರಶ್ನೆ ಬಂದಾಗ ಆ ದೇವರು ಸಹ ಈ ಕಡೆ ಗಮನ ಕೊಡುತ್ತಾನೆ. ತುಂಬಾ ಸಂತೋಷ, ತಮ್ಮ ಉತ್ತರದಲ್ಲಿ ಅನೇಕ ಗೌಪ್ಯ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ ಸತ್ಯ ಸಂಗತಿಗಳನ್ನು ಹೇಳಿದ್ದೀರಿ. ಆದರೆ ಇದರಲ್ಲಿ 13 ಲಕ್ಷ ರೂಪಾಯಿಗಳನ್ನು ತಿಂದು ಹಾಕಿದ್ದಾರೆ.

ಉಪಾಧ್ಯಕ್ಷರು : ನೇರವಾದ ಪ್ರಶ್ನೆ ಹಾಕಿ.

ಶ್ರೀ ಕೆ.ಎಚ್. ರಂಗನಾಥ್ : ಕನ್‌ಸಲ್‌ಟೆನ್ಸಿಯನ್ನು ಬಿಟ್ಟಿ ಮಾಡುತ್ತಾರೆಯೇ? ಅವರು ಫೀಸ್ ಕೇಳಿದ್ದಾರೆ ; ಇವರು ಕೊಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ವೇ ನಿರ್ಮಾಣ ಮಾಡುವುದಕ್ಕೆ ಕನ್‌ಸಲ್‌ಟೆನ್ಸಿಗಾಗಿ 13 ಲಕ್ಷ ರೂಪಾಯಿಯನ್ನು ಖರ್ಚು ಮಾಡಿದ್ದಾರೆಂದರೆ ನಮ್ಮಲ್ಲಿ ಎಕ್ಸ್‌ಪರ್ಟ್ಸ್ ಇರಲಿಲ್ಲವೇ? ಇದನ್ನು ತಾವು ಮಾಡುವ ಹಾಗಿದ್ದರೆ, ಮುಂದುವರೆಸಿ, ಇಲ್ಲದಿದ್ದರೆ ತಮ್ಮ ಕಾಲದಲ್ಲಿ ಕನ್‌ಸಲಟೆನ್ಸಿಗಾಗಿ ಹತ್ತು ಹನ್ನೆರಡು ಲಕ್ಷ ರೂಪಾಯಿ ಖರ್ಚು ಆಗುವುದು ಬೇಡ. ಇದನ್ನು ತಾವು ಮಾಡುತ್ತೀರೋ ಇಲ್ಲವೋ? ಇದರ ಬಗೆ ಕ್ಯಾಬಿನೆಟ್‌ನಲಿ ಯಾವಾಗ ಚರ್ಚೆ ಮಾಡುತ್ತೀರಿ?

ಶ್ರೀ ಕೆ.ಹೆಚ್. ರಂಗನಾಥ್ : ಅದನ್ನೇ ನಾನು ಹೇಳಿದ್ದು. ಇದೊಂದು ನೀತಿ ಪ್ರಶ್ನೆ. ಈ ಸಭೆ ಸದನ ಒಪ್ಪಬೇಕಾಗುತ್ತದೆ. ಅದಕ್ಕೆ ಪೂರ್ವಬಾವಿಗಾಗಿ ಸರ್ಕಾರ ಪುನರ್ ಪರಿಶೀಲನೆಮಾಡುತ್ತದೆ. ಇದನ್ನು ನಾನು ಕ್ಯಾಬಿನೆಟ್ ಗಮನಕ್ಕೂ ತರುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಪ್ರಶ್ನೆ (264) ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಬರುತ್ತದೆ.

ಉಪಾಧ್ಯಕ್ಷಿಣಿಯವರು : ಇದು ಬೇರೆ ಇಲಾಖೆಗೆ ವರ್ಗಾಯಿಸಲ್ಪಟ್ಟಿದೆ. ಮುಂದೆ ಇದನ್ನು ತೆಗೆದುಕೊಳ್ಳೋಣ.

ಶ್ರೀ ಕೆ.ಜೆ. ಜಾರ್ಜ್ : ಕಾರ್ಪೊರೇಷನ್ ವ್ಯಾಪ್ತಿಯಲ್ಲಿರುವ ಸರ್ಕಾರಿ ಶಾಲೆಗಳನ್ನು ಲೋಕೋಪಯೋಗಿ ಇಲಾಖೆಯವರು ಮೇಂಟೇನ್ ಮಾಡುತ್ತಾರೆ. ಆದ್ದರಿಂದ ಈ ಶಾಲಾ ಕಟ್ಟಡ ಸದರಿ ಇಲಾಖೆಗೆ ಬರುತ್ತದೆ. ಆದರೆ, ಲೋಕೋಪಯೋಗಿ ಇಲಾಖೆಗೆ ಬರುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ಅದು ಬರುತ್ತದೆಂದು ನಾನು ಹೇಳುತ್ತಿದ್ದೇನೆ.

ಉಪಧ್ಯಕ್ಷಿಣಿಯವರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಪಂಚನಹಳ್ಳಿ-ಸಿರಾ ರಸ್ತೆ

107-ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಪಂಚನಹಳ್ಳಿ-ಸಿರಾ ರಸ್ತೆ ರಾಜ್ಯ ಹೆದ್ದಾರಿಗೆ ಬರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ರಸ್ತೆ ಹೆದ್ದಾರಿಯ ಲಕ್ಷಣಗಳೇನು?*

ಇ) *ಆ ರಸ್ತೆಗೆ ಡಾಂಬರ್ ಹಾಕಿಸಿ ಇಲ್ಲಿನ ಜನರಿಗೆ ಆಗುವ ಅನಾನುಕೂಲಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಗಮನಕ್ಕೆ ಬಂದಿದೆ.

ಆ) ರಾಜ್ಯ ಹೆದ್ದಾರಿಯು ಜಿಲ್ಲಾ ಕೇಂದ್ರಗಳನ್ನು ಸಂಪರ್ಕಿಸುವ ರಸ್ತೆಯಾಗಿದ್ದು ಕನಿಷ್ಟ 3.75 ಮೀಟರ್ ಅಗಲಕ್ಕೆ ಡಾಂಬರು ಮೇಲ್ಮೈಯನ್ನು ಹೊಂದಿರಬೇಕು ಹಾಗೂ ದ್ವಿಪಥ ಸಂಚಾರಕ್ಕೆ ಅನುಕೂಲವಿರಬೇಕು.

ಇ) ಈ ರಸ್ತೆಯ ಬಾಗವು 30 ಕಿಮೀ. ಉದ್ದವಿದ್ದು, 21.3 ಕಿಮೀ. ಉದ್ದಕ್ಕೆ ಡಾಂಬರಿನ ರಸ್ತೆಯಾಗಿದೆ. ಇನ್ನುಳಿದ 16.7 ಕಿಮೀ. ಉದ್ದದ ಜಲ್ಲಿ ರಸ್ತೆಯ ಪೈಕಿ 5 ಕಿಮೀ ಉದ್ದದ ರಸ್ತೆಯನ್ನು 1992-3ನೇ ಸಾಲಿನಲ್ಲಿ ಸುಮಾರು 5.00 ಲಕ್ಷ ರೂ.ಗಳ ಅಂದಾಜಿನಲ್ಲಿ ಡಾಂಬರೀಕರಣ ಮಾಡುವ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆ. ಉಳಿದ ಬಾಗದ ಜಲ್ಲಿ ರಸ್ತೆಯನ್ನು ಅನುದಾನದ ಲಭ್ಯತೆಯನ್ನು ಅನುಸರಿಸಿ ಹಂತಹಂತವಾಗಿ ಡಾಂಬರೀಕರಿಸಲಾಗುವುದು.

ಮುದ್ದೇಬಿಹಾಳ್ ತಾಲ್ಲೂಕು ನಲತ್ತವಾಡ ಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆ

896 - ಶ್ರೀ ಎ.ಎಸ್. ನಾಡಗೌಡ (ಅಪ್ಪಾಜಿ) (ಮುದ್ದೇಬಿಹಾಳ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರ?

1. ಕೃಷ್ಣ ಮೇಲ್ದಂಡೆ ಪುನರ್ವಸತಿ ಯೋಜನೊಯಡಿಯಲ್ಲಿ ಬಿಜಾಪುರ ಜಿಲ್ಲೆ ಮುದ್ದೇಬಿಹಾಳ್ ತಾಲ್ಲೂಕು ನಲತ್ತವಾಡ ಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆ ಪ್ರಾರಂಭಿಸುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಬಂದಿದ್ದಲ್ಲಿ, ಈ ಯೋಜನೆಯು ಯಾವಾಗ ಪ್ರಾರಂಭವಾಗುವುದು?

3. ಅದಕ್ಕೆ ತಗಲುವ ವೆಚ್ಚ ಮತ್ತು ಎಷ್ಟು ಅವಧಿಯೊಳಗೆ ಪೂರ್ಣಗೊಳಿಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1. ಇಲ್ಲ.

2. ಉದ್ಭವಿಸುವುದಿಲ್ಲ.

3. ಉದ್ಭವಿಸುವುದಿಲ್ಲ.

ಜಿಲ್ಲಾಪರಿಷತ್ತಿನಿಂದ ಪಡೆದ ರಸ್ತೆಗಳ ಅಭಿವೃದ್ಧಿ.

266 -ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಜಿಲ್ಲಾಪರಿಷತ್ತಿನಿಂದ ಪಡೆದುಕೊಂಡ ರಸ್ತೆಗಳ ಅಭಿವೃದ್ಧಿಗಾಗಿ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಆ) ರಸ್ತೆಗಳು ತೀರಾ ಹಾಳಾಗಿದ್ದು ಅವುಗಳ ಅಭಿವೃದ್ಧಿ ಕೂಡಲೇ ಆಗಬೇಕಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ, ಅವುಗಳ ತುರ್ತು ದುರಸ್ತಿಗಾಗಿ ಸರ್ಕಾರವು ಏನು ಕ್ರಮ ಕೈಗೊಂಡಿದೆ?

ಶ್ರೀ. ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು) :

ಅ) ಜಿಲ್ಲಾಪರಿಷತ್ತಿನಿಂದ ಪಡೆದುಕೊಂಡ 10,000 ಕಿಮೀ. ರಸ್ತೆಯನ್ನು 10 ವರ್ಷಗಳ ಅವಧಿಯಲ್ಲಿ ಮುಖ್ಯ ಜಿಲ್ಲಾ ರಸ್ತೆಯ ಮಟ್ಟಕ್ಕೆ ಅಭಿವೃದ್ಧಿಪಡಿಸುವುದಕ್ಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. 1993-94ನೇ ಸಾಲಿನಿಂದ ಅಭಿವೃದ್ಧಿಯ ಕಾಮಗಾರಿಯನ್ನು ತೆಗೆದುಕೊಳ್ಳಲಾಗುವುದು.

ಆ) ಗಮನಕ್ಕೆ ಬಂದಿದೆ.

ಇ) ಈ ರಸ್ತೆಗಳ ನಿರ್ವಹಣೆಗೆ ಅನುದಾನ ಬಿಡುಗಡೆಯಾದ ನಂತರ ವ್ಯಾಪಕ ದುರಸ್ತಿಯನ್ನು ತೆಗೆದುಕೊಳ್ಳಲಾಗುವುದು. ತಕ್ಷಣದಲ್ಲಿ ಅತ್ಯಂತ ಕೆಟ್ಟು ಹೋದ ಭಾಗಗಳನ್ನು ತುರ್ತು ದುರಸ್ತಿ ಮಾಡುವಂತೆ ಮುಖ್ಯ ಇಂಜಿನಿಯರ್‌ರವರುಗಳಿಗೆ ಈಗಾಗಲೇ ಸೂಚನೆಯನ್ನು ನೀಡಲಾಗಿದೆ.

ರಾಜ್ಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸುವುದು.

795 - ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಉನ್ನತೀಕರಿಸಲು ಕೇಂದ್ರಕ್ಕೆ ಶಿಫಾರ್ಸು ಮಾಡಲಾಗಿರುವ ರಾಜ್ಯ ಹೆದ್ದಾರಿಗಳು ಯಾವುವು?

ಆ) ಉನ್ನತೀಕರಣಕ್ಕೆ ಪ್ರಸ್ತಾಪಿಸಲಾದ ರಾಜ್ಯ ರಸ್ತೆಗಳ ಉದ್ದ ಎಷ್ಟು? (ಕಿ.ಮೀಟರ್‌ಗಳಲ್ಲಿ)

ಇ) ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಕೇಂದ್ರವು ಒಪ್ಪಿರುವ ರಾಜ್ಯ ಹೆದ್ದಾರಿಗಳು ಯಾವುವು?

ಈ) ಪ್ರಸ್ತಾವನೆಗಳಿಗೆ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯಲು ತೆಗೆದುಕೊಳ್ಳಲಾಗುವ ಕ್ರಮವೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) 4,400 ಕಿ. ಮೀಟರುಗಳು.

ಇ) ಯಾವುವು ಇಲ್ಲ.

ಈ) ಈ ವಿಷಯದಲ್ಲಿ, ರಾಜ್ಯ ಲೋಕೋಪಯೋಗಿ ಇಲಾಖೆ ಹಾಗೂ ಕರ್ನಾಟಕ ಮುಖ್ಯ ಮಂತ್ರಿಗಳು, ಲೋಕೋಪಯೋಗಿ ಇಲಾಖೆ ಸಚಿವರು ಮತ್ತು ಹಲವಾರು ಕರ್ನಾಟಕದಲ್ಲಿನ ಲೋಕಸಭಾ ಸದಸ್ಯರುಗಳು ಹಲವು ಸಚಿವರ : ಅಧಿಕಾರಿಗಳ ಮಟ್ಟದ ಸಭೆಗಳಲ್ಲಿ ಮುಖತ: ಮತ್ತು ಅರೆ ಸರ್ಕಾರಿ ಪತ್ರ ಮುಖೇನ ಕೇಂದ್ರ ಸರ್ಕಾರವನ್ನು ಪ್ರಧಾನ ಮಂತ್ರಿಗಳನ್ನು ಮತ್ತು ಭೂಸಾರಿಗೆ ಸಚಿವರನ್ನು ಬಹಳವಾಗಿ ಒತ್ತಾಯಪಡಿಸಿರುತ್ತಾರೆ. ಪ್ರಸ್ತಾವನೆಗಳನ್ನು ಮಂಜೂರು ಮಾಡುವವರೆವಿಗೂ ಇದೇ ಪ್ರಯತ್ನಗಳನ್ನು ಮುಂದುವರೆಸಲಾಗುತ್ತದೆ.

ಪಟ್ಟಿ		
ಕ್ರ ಸಂ.	ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸುವಂತೆ ಕೋರಿರುವ ರಾಜ್ಯ ಹೆದ್ದಾರಿಗಳು	ಉದ್ದ (ಕಿ.ಮೀ)
1.	ಆಂಧ್ರಪ್ರದೇಶದ ಗೂಟಿಯಿಂದ ಗುಂಟಕಲ್ - ಬಳ್ಳಾರಿ - ಹೊಸಪೇಟೆ - ಕೊಪ್ಪಳ - ಗದಗ್ - ಹುಬ್ಬಳ್ಳಿ - ಕಾರವಾರ (ಇವುಗಳನ್ನು ಸೇರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-17)	422
2.	ಬೆಂಗಳೂರು - ಮೈಸೂರು - ನಂಜನಗೂಡು - ಗುಂಡ್ಲುಪೇಟೆ - ಊಟಿ - ಕೊಯಮತ್ತೂರು (ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 47 ತಮಿಳುನಾಡಿನಲ್ಲಿ ಸೇರುವಂತೆ	220
3.	ಮೈಸೂರು - ಶ್ರೀರಂಗಪಟ್ಟಣ - ನಾಗಮಂಗಲ - ಚಿಕ್ಕನಾಯಕನಹಳ್ಳಿ - ಹುಳಿಯಾರ್ - ಹಿರಿಯೂರ್ - ಬಳ್ಳಾರಿ - ಷಹಪುರ - ಗುಲ್ಬರ್ಗ - ಹುಮ್ನಾಬಾದ್ (ರಾಷ್ಟ್ರೀಯ ಹೆದ್ದಾರಿ 9ನ್ನು ಸೇರುವಂತೆ)	678
4.	ತುಮಕೂರು - ಅರಸಿಕೆರೆ - ಶಿವಮೊಗ್ಗ - ಸಾಗರ - ಹೊನ್ನಾವರ - (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	332
5.	ಬೆಂಗಳೂರು - ಮೈಸೂರು- ಮಡಿಕೇರಿ - ಮಂಗಳೂರು (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	385
6.	ಬೆಳಗಾಂ - ಬಿಜಾಪುರ - ಗುಲ್ಬರ್ಗಾ - ಹುಮ್ನಾಬಾದ್ (ರಾಷ್ಟ್ರೀಯ ಹೆದ್ದಾರಿ 9ನ್ನು ಸೇರುವಂತೆ)	364
7.	ಬೆಳಗಾಂ - ಬಾಗಲಕೋಟೆ - ರಾಯಚೂರು - ಮೆಹಬೂಬ್‌ನಗರ (ಆಂಧ್ರಪ್ರದೇಶದಲ್ಲಿ)	336

8.	ಚಿತ್ರದುರ್ಗ - ಹೊಳಲ್ಕೆರ್ - ಹೊಸದುರ್ಗ - ಚಿಕ್ಕಮಗಳೂರು - ಮೂಡಿಗೆರೆ - ಬೆಳ್ತಂಗಡಿ - ಬಂಟ್ವಾಳ - ಮಂಗಳೂರು (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	283
9.	ಧಾರವಾಡ - ಲೋಂಡಾ - ಅನ್‌ಮೋದ್ - ಪಣಜಿ (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	95
10.	ಪಡುಬಿದ್ರಿ - ಕಾರ್ಕಳ - ಶೃಂಗೇರಿ - ತೀರ್ಥಹಳ್ಳಿ - ಶಿಕಾರಿಪುರ - ಶಿರಾಳಕೊಪ್ಪ - ಹುಬ್ಬಳ್ಳಿ - ಬಾಗಲಕೋಟೆ - ಹುನಗುಂದ.	550
11.	ಶಿರಾ - (ಬೆಂಗಳೂರು - ಪೂನಾ ರಾಷ್ಟ್ರೀಯ ಹೆದ್ದಾರಿ 4) ಮಧುಗಿರಿ - ಗೌರಿಬಿದನೂರು - ಚಿಕ್ಕಬಳ್ಳಾಪುರ - ಚಿಂತಾಮಣಿ - ಶ್ರೀನಿವಾಸಪುರ - ಮುಳಬಾಗಲು (ಬೆಂಗಳೂರು-ಮದ್ರಾಸ್ ರಾಷ್ಟ್ರೀಯ ಹೆದ್ದಾರಿ ನಂ. 4)	160
12.	ಚಿತ್ರದುರ್ಗ - ಶಿವಮೊಗ್ಗ - ಸಕಲೇಶಪುರ - ಮಡಿಕೇರಿ ಹಾಗೂ ಕೇರಳದಲ್ಲಿರುವ ತಲ್ಲಿಚೇರಿ.	325
13.	ಬೆಂಗಳೂರು - ಕನಕಪುರ - ಮಳವಳ್ಳಿ - ನಂಜನಗೂಡು - ಸುಲ್ತಾನಬತ್ತೇರಿ - ಹಾಗೂ ಕೇರಳದಲ್ಲಿರುವ ಕಲ್ಲಿಕೋಟೆ.	250
	ಒಟ್ಟು ಉದ್ದ	**4400**

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) : ದಿನಾಂಕ 4-1-1993ರ ಲಿಖಿತ ಮೂಲಕ ಉತ್ತರಿಸುವ 6ನೇ ಪಟ್ಟಿಯಲ್ಲಿರುವ 88 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 518, 556, 912, 664, 803, 954, 1012, 1013, 1000, 1058, 110, 133, 239, 863, 338 ಎ 357, 359, 360, 371, ಹಾಗೂ 804 ಪ್ರಶ್ನೆಗಳನ್ನು ಹೊರತು ಪಡಿಸಿ ಇನ್ನು ಉಳಿದ 68 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯದ ರಸ್ತೆಗಳ ಅವ್ಯವಸ್ಥೆ

427 - ಶ್ರೀ ಈಶ್ವರಪ್ಪ ಕೆ.ಎಸ್ (ಶಿವಮೊಗ್ಗ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ರಸ್ತೆಗಳು ತೀರಾ ಹದಗೆಟ್ಟ ಸ್ಥಿತಿಯಲ್ಲಿದ್ದು ವಾಹನಗಳು ಓಡಾಡುವುದಕ್ಕೆ ಅಡಚಣೆ ಉಂಟಾಗುತ್ತಿರುವುದರಿಂದ ಅಪಘಾತಗಳು ಹೆಚ್ಚಾಗಿ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಶಾಶ್ವತ ವ್ಯವಸ್ಥೆಯೊಂದನ್ನು (ರಾಷ್ಟ್ರೀಯ ಹೆದ್ದಾರಿಯಲ್ಲಿರುವಂತೆ) ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳ ಮಾದರಿಯಲ್ಲೇ ದುರಸ್ತಿಗೊಳಿಸುವ ಯೋಜನೆ ಸರ್ಕಾರಕ್ಕೆ ಏನಾದರೂ ಇದೆಯೇ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು) :

ಅ) ರಾಜ್ಯದ ಎಲ್ಲಾ ರಸ್ತೆಗಳು ತೀರಾ ಹದಗೆಟ್ಟಿವೆ ಎಂದು ಹೇಳ ಬರುವುದಿಲ್ಲ. ಇತ್ತೀಚಿನ ಅತಿವೃಷ್ಟಿಯಿಂದಲೂ ಹಾಗೂ ಚಂಡಮಾರುತದಿಂದ ಆದ ಮಳೆಯಿಂದಲೂ ಸುಮಾರು 3230 ಕಿ.ಮೀ. ರಸ್ತೆಗಳು ಹಾನಿಗೊಳಗಾಗಿದೆ. ಇದರಿಂದಲೇ ಅಡಚಣೆ ಉಂಟಾಗಿ ಅಪಘಾತ ಹೆಚ್ಚಾಗಿವೆ ಎಂದೂ ಹೇಳಲಾಗುವುದಿಲ್ಲ.

ಆ) ರಸ್ತೆಗಳ ಸಾಮಾನ್ಯ ನಿರ್ವಹಣೆಗೆ ಹಾಗೂ ಪ್ರತಿ ಆರು ವರ್ಷಗಳಿಗೊಮ್ಮೆ ಯೋಜನಾಬದ್ಧವಾಗಿ ಮಾಡಿ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಅನುದಾನವನ್ನು ವೈಜ್ಞಾನಿಕವಾಗಿ ನಿರ್ದಿಷ್ಟಪಡಿಸುವಂತೆ ಹಾಗೂ ಸೂಕ್ತ ಶಿಫಾರಸ್ಸು ಮಾಡುವಂತೆಯೂ ಮತ್ತು ಈ ಬಗ್ಗ ಸೂಕ್ತ ನಿಯಮಾವಳಿ ರೂಪಿಸುವಂತೆಯು ಕೇಂದ್ರ ಸರ್ಕಾರವು ನೇಮಿಸಿರುವ 10ನೇ ಆರ್ಥಿಕ ಆಯೋಗದ ಮುಂದೆ ಬೇಡಿಕೆ ಮಂಡಿಸಲಾಗುತ್ತಿದೆ. ಈ ಬಗ್ಗೆ ಪ್ರಾಥಮಿಕ ಚರ್ಚೆಯನ್ನೂ ಸಹ ಆರ್ಥಿಕ ಆಯೋಗದ ಸದಸ್ಯರೊಡನೆ ಮಾಡಲಾಗಿದ್ದು ಈ ಬಗ್ಗೆ ವೈಜ್ಞಾನಿಕವಾದ ಶಾಶ್ವತ ವ್ಯವಸ್ಥೆ ಮಾಡಲು ಉದ್ದೇಶಿಸಲಾಗಿದೆ.

ಇ) ರಾಜ್ಯ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಬೇರೆ ಬೇರೆ ಅಳತೆಗೋಲು (ಸ್ಟ್ಯಾಂಡರ್ಡ್) ನಿಗದಿಪಡಿಸಿರುವುದರಿಂದ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿ ಮಾದರಿಯಲ್ಲಿ ವ್ಯವಸ್ಥೆಗೊಳಿಸಲು ಯಾವ ನಿರ್ದಿಷ್ಟ ಯೋಜನೆಗಳಿರುವುದಿಲ್ಲ.

ಶಿವಮೊಗ್ಗದಲ್ಲಿ ಕುವೆಂಪು ರಂಗಮಂದಿರದ ನಿರ್ಮಾಣ

426 - ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ) : ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಕುವೆಂಪು ರಂಗಮಂದಿರಕ್ಕೆ 1989ರಿಂದೀಚೆಗೆ ಒಂದು ರೂಪಾಯಿಯನ್ನು ಕೂಡ ಬಿಡುಗಡೆ ಮಾಡದಿರುವ ವಿಚಾರವು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ರಾಷ್ಟ್ರಕವಿ ಕುವೆಂಪುರವರ ಅಮೃತ ಹಸ್ತದಿಂದ ಈ ರಂಗಮಂದಿರದ ಉದ್ಘಾಟನೆ ಮಾಡಬೇಕೆಂದು ನಾಗರೀಕರ ಬಯಕೆಯಾಗಿದ್ದು, ಇದಕ್ಕಾಗಿ ಸರ್ಕಾರದವರು ತಕ್ಷಣ ಬಿಡುಗಡೆ ಮಾಡಿ ಕುವೆಂಪು ರಂಗಮಂದಿರವನ್ನು ಪೂರ್ಣಗೊಳಿಸುವರೆ.?

ಶ್ರೀ ಕೆ.ಎಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಈ ಮಾಹಿತಿಯು ತಪ್ಪಾಗಿರುತ್ತೆ. 1982-83ರಿಂದ ಈವರೆವಿಗೂ ಸರ್ಕಾರದ ವತಿಯಿಂದ 19.95ಲಕ್ಷ ರೂ.ಗಳ ಬಿಡುಗಡೆಯನ್ನು, ಸಾರ್ವಜನಿಕ ವಂತಿಕೆಯಿಂದ 20.37ಲಕ್ಷ ರೂ.ಗಳನ್ನು ಬಿಟ್ಟು 40.32 ಲಕ್ಷ. ರೂ.ಗಳನ್ನು ಬಿಡುಗಡೆ ಮಾಡಿದ್ದು ಆ ಪೈಕಿ ಈವರೆವಿಗೆ ಒಟ್ಟು 370.03 ರೂ.ಗಳನ್ನು ಖರ್ಚು ಮಾಡಿರುತ್ತೆ.

ಆ) ಈ ಮೊದಲಿಗೆ (1982ರಲ್ಲಿ) ಸದರಿ ಕಾಮಗಾರಿಯ ಅಂದಾಜು 24.00 ಲಕ್ಷಗಳಾಗಿದ್ದು, ಅದಕ್ಕೆ ಅನುಗುಣವಾಗಿ ಪ್ರತಿ ಸಾಲಿನಲ್ಲಿಯೂ ಸಾಕಷ್ಟು ಹಣ ಬಿಡುಗಡೆ ಮಾಡಲಾಗುತ್ತಿತ್ತು. ಪರಿಷ್ಕೃತ ಅಂದಾಜಿನಂತೆ ಈಗ 97.70 ಲಕ್ಷ ರೂ. ಗಳಾಗಿರುತ್ತದೆ. ಪರಿಷ್ಕೃತ ಅಂದಾಜಿನಂತೆ ಬಾಕಿ ಹಣವನ್ನು ಒದಗಿಸುವ ಬಗ್ಗೆ ಮತ್ತು ಜಾಗ್ರತೆ ಪೂರ್ಣ ಗೊಳಿಸುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.

ಉಚಿತ ಕಾನೂನು ನೆರವು

471 - ಬಾಬಾಗೌಡ ಪಾಟೀಲ (ಕಿತ್ತೂರು) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಚಿತ ಕಾನೂನು ನೆರವು ಯಶಸ್ವಿಯಾಗಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಇದಕ್ಕೆ ಬದಲಾಗಿ ಬಡವರಿಗೆ ಬೇರೆ ವಿಧವಾದ ಕಾನೂನು ನೆರವು ನೀಡಲು ಸಾಧ್ಯವಿದೆಯೇ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆ ಬಗ್ಗೆ

515 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆ ಕಾಮಗಾರಿ ಕೆಲಸವನ್ನು ಯಾವಾಗ ಪ್ರಾರಂಭಿಸಲಾಯಿತು?

ಆ) ಈ ಕಾಮಗಾರಿಗಾಗಿ ವೆಚ್ಚ ಮಾಡಿದ ಹಣವೆಷ್ಟು. ಮತ್ತು ಅದರ ಕೆಲಸ ಯಾವ ಹಂತದಲ್ಲಿದೆ?

ಇ) ಈ ಕಾಮಗಾರಿ ಕೆಲಸದಲ್ಲಿ ಅವ್ಯವಹಾರ ನಡೆದಿದೆ ಎಂದು ಸಾರ್ವಜನಿಕರಿಂದ ದೂರು ಏನಾದರೂ ಬಂದಿದೆಯೇ, ಬಂದಿದ್ದಲ್ಲಿ ತನಿಖೆ ಮಾಡಲಾಗುವುದೇ?

ಈ) ಈ ಕಾಮಗಾರಿ ಕೆಲಸವನ್ನು ಎಷ್ಟು ದಿನಗಳಲ್ಲಿ ಪೂರೈಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಸದ್ಯಕ್ಕೆ ಮಂಜೂರಾಗಿರುವ 17.425 ಕಿ.ಮೀ. ರಸ್ತೆಯ ಮಣ್ಣಿನ ಮತ್ತು ಸಿ.ಡಿ. ಕೆಲಸಗಳನ್ನು ಜುಲೈ 87ರಲ್ಲೂ ಹಾಗೂ ಜಲ್ಲಿ ಡಾಂಬರು ಕೆಲಸವನ್ನು 90ರಲ್ಲಿ ಪ್ರಾರಂಭಿಸಲಾಯಿತು.

ಆ) ಈ ಕಾಮಗಾರಿಗೆ ಈವರೆಗೆ ಸುಮಾರು 350 ಲಕ್ಷ ರೂ.ಗಳ ವೆಚ್ಚವಾಗಿರುತ್ತದೆ. ಮಣ್ಣಿನ ಮತ್ತು ಸಿ.ಡಿ. ಕೆಲಸಗಳು ಮುಗಿದಿದ್ದು, ಜಲ್ಲಿ ಮತ್ತು ಡಾಂಬರು ಕೆಲಸದ ಗುತ್ತಿಗೆದಾರರು ಕೆಲಸವನ್ನು ಪೂರೈಸದ ಕಾರಣ ಗುತ್ತಿಗೆಯನ್ನು ಡಿಸೆಂಬರ್ 91ರಲ್ಲಿ ರದ್ದುಗೊಳಿಸಿ ಇಲಾಖಾವತಿಯಿಂದ ತೆಗೆದುಕೊಳ್ಳಲಾಗಿದ್ದು, ಪ್ರಗತಿಯಲ್ಲಿದೆ. ಕೆಲವು ತಾಂತ್ರಿಕ ಅಡಚಣೆಗಳಿಂದ ಕೆಲಸ ಸ್ವಲ್ಪ ನಿಧಾನವಾಗಿದ್ದು, ಭಾರತ ಸರ್ಕಾರದ ಭೂಸಾರಿಗೆ ಇಲಾಖೆಯಿಂದ, ಒಪ್ಪಿಗೆ ಬಂದ ನಂತರ ಕೆಲಸವನ್ನು ಆದಷ್ಟು ಜಾಗ್ರತೆಯಾಗಿ ಮುಗಿಸಲಾಗುವುದು.

ಇ) ಇಂತಹ ದೂರುಗಳು ಯಾವೂ ಬಂದಿಲ್ಲ.

ಈ) ಡಿಸೆಂಬರ್ 93ರ ವೇಳೆಗೆ ಮುಗಿಸುವ ಕಾರ್ಯಕ್ರಮ ಇದೆ.

ವರದಾ ನದಿಗೆ ಸೇತುವೆ ಕಟ್ಟಲು ಸುಂಕ ವಸೂಲಿ

516 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆ ಹಾವೇರಿ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಹುಣಿಮಲ್ಲಿ ಹಳ್ಳಿಯಲ್ಲಿ ವರದಾ ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆ ಕಾಮಗಾರಿ ಯಾವಾಗ ಪೂರ್ಣಗೊಂಡಿತು ಮತ್ತು ಇದಕ್ಕೆ ಖರ್ಚಾದ ಹಣವೆಷ್ಟು?

ಆ) ಈ ಮೇಲ್ಕಂಡ ಸೇತುವೆ ನಿರ್ಮಾಣಕ್ಕೆ ಖರ್ಚಾದ ಹಣವನ್ನು ಸರ್ಕಾರ ಸೇತುವೆ ಮೇಲೆ ಓಡಾಡುವ ವಾಹನಗಳಿಂದ ತೆರಿಗೆ ರೂಪದಲ್ಲಿ ವಸೂಲಿ ಮಾಡುತ್ತಿರುವುದು ನಿಜವೇ?

ಇ) ಹಾಗಿದ್ದಲ್ಲಿ, ಇದುವರೆವಿಗೂ ಎಷ್ಟು ತೆರಿಗೆ ಹಣ ವಸೂಲಾಗಿದೆ?

ಈ) ಈ ತೆರಿಗೆ ಹಣ ವಸೂಲು ಮಾಡಲು ಸರ್ಕಾರವು ಯಾರಿಗೆ ಗುತ್ತಿಗೆ ನೀಡಿದೆ ಹಾಗೂ ಈ ಗುತ್ತಿಗೆಯ ಅವಧಿ ಯಾವಾಗ ಮುಗಿಯುವುದು?

ಉ) ಈ ಮೇಲ್ಕಂಡ ಗುತ್ತಿಗೆದಾರರು ಸರ್ಕಾರ ನಿಗದಿಪಡಿಸಿದ ಹಣಕ್ಕಿಂತ ಹೆಚ್ಚಾಗಿ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ ಸರ್ಕಾರ ಇದರ ಬಗ್ಗೆ ಕ್ರಮ ಕೈಗೊಂಡು ಕೂಡಲೇ ನಿಗದಿಪಡಿಸಿದ ದರಗಳನ್ನು ವಸೂಲಿ ಮಾಡುವಂತೆ ಸುತ್ತೋಲೆ ಹೊರಡಿಸುವುದೇ ಮತ್ತು ಹೀಗೆ ವಸೂಲು ಮಾಡುತ್ತಿರುವ ಪದ್ಧತಿ ಎಂದಿಗೆ ಕೊನೆಗೊಳ್ಳುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಸೇತುವೆ ಹಾಗೂ ಕೂಡು ರಸ್ತೆಗಳ ನಿರ್ಮಾಣ ಕಾಮಗಾರಿಯನ್ನು ಜೂನ್ 1990ರಲ್ಲಿ ಪೂರ್ಣಗೊಳಿಸಲಾಯಿತು. ಈ ಕಾಮಗಾರಿಗೆ 2,14,38,634-00 ರೂ.ಗಳು ವೆಚ್ಚವಾಗಿವೆ.

ಆ) ಹೌದು.

ಇ) 1992ರ ನವೆಂಬರ್ ತಿಂಗಳಿನ ಅಂತ್ಯದವರೆಗೆ 2,21,78,594-00ರೂ.ಗಳು ವಸೂಲಾಗಿದೆ.

ಈ) ಪ್ರಸಕ್ತ ಸಾಲಿನಲ್ಲಿ 6-7-92ರಿಂದ ಈ ಸೇತುವೆಯ ಮೇಲೆ ತೆರಿಗೆ ಹಣ ವಸೂಲು ಮಾಡಲು ಶ್ರೀ ಎನ್.ಹೆಚ್. ಕೋನರೆಡ್ಡಿ, ಗುತ್ತಿಗೆದಾರರು, ಚಿಲಕವಾಡ, ನವಲಗುಂದ ಇವರಿಗೆ ಗುತ್ತಿಗೆ ನೀಡಲಾಗಿದೆ. ಈ ಗುತ್ತಿಗೆಯ ಅವಧಿಯು 31-3-93ರಂದು ಮುಗಿಯುತ್ತದೆ.

ಉ) ಈ ತರಹದ ಪ್ರಕರಣಗಳು ಈವರೆವಿಗೂ ವರದಿಯಾಗಿಲ್ಲ.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಮತೀರ್ಥ ಹೊಳೆಗೆ ಕಟ್ಟಿದ ಸೇತುವೆ ಕೊಚ್ಚಿ ಹೋಗಿರುವ ಬಗ್ಗೆ

519 - ಶ್ರೀಮತಿ ಸುಮಾವಸಂತ (ವಿರಾಜಪೇಟೆ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ವೀರಾಜಪೇಟೆ ತಾಲ್ಲೂಕು, ಶ್ರೀಮಂಗಲ ಮಂಡಲ ವ್ಯಾಪ್ತಿಗೆ ಬರುವ ಹೇರ್ಮಾಡು ದೇವಸ್ಥಾನದ ಪಕ್ಕ ರಾಮತೀರ್ಥ ಹೊಳೆಗೆ ಕಟ್ಟಿದ ಸೇತುವೆಯ ಎರಡೂ ಬದಿ ಮಳೆಗೆ ಕೊಚ್ಚಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಇ) ಕಾಮಗಾರಿ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು) :

ಅ) ರಾಮತೀರ್ಥ ಹೊಳೆಗೆ ಹೆರ್ಮಾಡು ದೇವಸ್ಥಾನದ ಬಳಿ ಇರುವ ಸೇತುವೆಯ ಎರಡೂ ಬದಿಗಳಿಗೆ ಅತಿವೃಷ್ಟಿಯಿಂದ ಸುಮಾರು 50,000 ರೂ.ಗಳಷ್ಟು ಹಾನಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸಂಚಾರಕ್ಕೆ ತೊಂದರೆ ಆಗದಂತೆ ಕಾರ್ಯ ನಿರ್ವಹಿಸಲಾಗಿದ್ದು, ಅತಿವೃಷ್ಟಿ ಪರಿಹಾರ ಅನುದಾನ ದೊರೆತನಂತರ ಸಂಪೂರ್ಣ ದುರಸ್ತಿ ಮಾಡಲಾಗುವುದು.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಸಿರಾ ನೆಲ್ಲಿಗೆರೆ ರಸ್ತೆಯಲ್ಲಿರುವ ಸೇತುವೆ ದುರಸ್ತಿ

557 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯ್ಕನಹಳ್ಳಿ ತಾಲ್ಲೂಕು, ಬೆಳ್ಳಾರ ಗ್ರಾಮದ ಸಿರಾ-ನೆಲ್ಲಿಗೆರೆ ರಸ್ತೆಯಲ್ಲಿರುವ ಸೇತುವೆಯು ಅಪಾಯದ ಅಂಚಿನಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅದರ ದುರಸ್ತಿಗಾಗಿ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಸೇತುವೆ ದುರಸ್ತಿ ಕಾರ್ಯ ಕೈಗೊಂಡಿದ್ದು ಜನವರಿ 1993 ರ ಅಂತ್ಯದಲ್ಲಿ ಪೂರ್ಣಗೊಳಿಸಲಾಗುವುದು.

ತುಮಕೂರು ಜಿಲ್ಲೆಯಲ್ಲಿ ನೀರು ಸರಬರಾಜು ಯೋಜನೆ

913 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ತುಮಕೂರು ಜಿಲ್ಲೆಯಲ್ಲಿ ನೀರು ಸರಬರಾಜು ಯೋಜನೆಯಡಿಯಲ್ಲಿ ನಿಗಧಿಪಡಿಸುವ ಅನುದಾನವೆಷ್ಟು ?

2) ನೀರು ಸರಬರಾಜು ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಅನುದಾನ ಹಾಗೂ ವಿಶೇಷವಾಗಿ ಕಿರುನೀರು ಸರಬಾರಾಜು ಯೋಜನೆಗಳನ್ನು ಪೂರೈಸಲು ಬೇಕಾಗುವ ಅನುದಾನವೆಷ್ಟು ?

3) 199-93ನೇ ಸಾಲಿನಲ್ಲಿ ಕಳ್ಳಂಬೆಳ್ಳ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಕಿರುನೀರು ಸರಬರಾಜು ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

4) ಈ ಎಲ್ಲಾ ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಸರಕಾರವು ಪೂರ್ಣಗೊಳಿಸುವುದೆ ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು) :

ಅ) ರೂ. 303.50 ಲಕ್ಷಗಳು.

ಆ) ನೀರು ಸರಬರಾಜು ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾಗುವ ಅನುದಾನ ರೂ. 359.50 ಲಕ್ಷಗಳು. ಇದರಲ್ಲಿ ಕಿರು ನೀರು ಸರಬರಾಜು ಯೋಜನೆಗಳನ್ನು ಪೂರೈಸಲು ಬೇಕಾಗುವ ಅನುದಾನ ರೂ. 83.74 ಲಕ್ಷಗಳು.

ಇ) 11.

ಈ) ಹೌದು.

ನೆಲಮಂಗಲ ಟೌನ್‌ನಲ್ಲಿ ನ್ಯಾಯಾಲಯದ ಕಟ್ಟಡ.

61 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನೆಲಮಂಗಲದಲ್ಲಿರುವ ಹಾಲಿ ಮುನ್ಸಿಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಬಾಡಿಗೆ ಕೊಠಡಿಯಲ್ಲಿ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಪ್ರತ್ಯೇಕವಾದ ದೊಡ್ಡ ಕಟ್ಟಡ ನಿರ್ಮಿಸಲು ಸರ್ಕಾರವು ಸೂಕ್ತ ಕ್ರಮಕೈಗೊಳ್ಳುವುದೇ ?

ಶ್ರೀ ಹಾರ್‍ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹೌದು.

ಆ) ನೆಲಮಂಗಲದಲ್ಲಿ ಮುನ್ಸಿಫ್ ನ್ಯಾಯಾಲಯದ ಹೊಸ ಕಟ್ಟಡವನ್ನು ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದ ಪರಿಶಿಷ್ಟ ಜಾತಿ ಮತ್ತು ವರ್ಗದವರ ಕೇರಿಗಳಿಗೆ ವಿದ್ಯುತ್ ದೀಪ ಹಾಗೂ ಕುಡಿಯುವ ನೀರು

615 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅನೇಕ ಕಡೆಗಳಲ್ಲಿ ಜಾತಿ ಮತ್ತು ಪರಿಶಿಷ್ಟ ವರ್ಗದವರು ವಾಸಿಸುವ ಕೇರಿಗಳಲ್ಲಿ ವಿದ್ಯುತ್ ದೀಪ ಹಾಗೂ ಕುಡಿಯುವ ನೀರಿನ ಸೌಲಭ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ನೆಲಮಂಗಲ ವಿಧಾನಸಭಾ ಕ್ಷೇತ್ರದ ಎಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಗ್ರಾಮದ ಕೇರಿಗಳಿಗೆ ವಿದ್ಯುತ್ ಸೌಕರ್ಯ ಹಾಗೂ ಕುಡಿಯುವ ನೀರಿನ ಸೌಲಭ್ಯ ಇಲ್ಲವಾಗಿದೆ, ಮಾಹಿತಿಯನ್ನು ಹೋಬಳಿ ಹಾಗೂ ಗ್ರಾಮವಾರು ಒದಗಿಸುವುದು.

ಇ) ಈ ಬಗ್ಗೆ ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸಚಿವರು) :

ಅ) ಬಂದಿದೆ.

ಆ) ಕುಡಿಯುವ ನೀರಿನ ಸೌಕರ್ಯ ಇಲ್ಲದೇ ಇರುವ ಜನವಸತಿಗಳು.

ನೆಲಮಂಗಲ ತಾಲ್ಲೂಕು-ಕಸಬ ಹೋಬಳಿ.

1) ಬಾಣಸವಾಡಿ ಪರಿಶಿಷ್ಟ ವರ್ಗದ ಜನವಸತಿ.

2) ಸೋಲದೇವನಹಳ್ಳಿ ಪರಿಶಿಷ್ಟ ವರ್ಗದ ಜನವಸತಿ.

3) ಚೌಡಸಂದ್ರ ಪರಿಶಿಷ್ಟ ವರ್ಗದ ಹೊಸ ಕಾಲೋನಿ.

4) ಕೆ.ಬಿ. ಶ್ರೀನಿವಾಸಪುರ.

ಬೆಂಗಳೂರು ತಾಲ್ಲೂಕು ದಾಸನಾಪುರ ಹೋಬಳಿ.

1) ಮಲ್ಲಸಂದ್ರ 2) ಶಿವನಪುರ ಜೆ.ಹೆಚ್.ಸಿ. 3) ಕಡಬಗೆರೆ ಕ್ರಾಸ್

ವಿದ್ಯುತ್ ಸೌಕರ್ಯ ಇಲ್ಲದೇ ಇರುವ ಜನವಸತಿಗಳು.

ನೆಲಮಂಗಲ ತಾಲ್ಲೂಕು-ಕಸಬ ಹೋಬಳಿ.

1) ಗೊಲ್ಲಹಳ್ಳಿ ಜನತಾ ಕಾಲೋನಿ 2) ಅರ್ಜುನ ಬೆಟ್ಟಹಳ್ಳಿ ಜ.ಕಾ.

3) ಕೆ.ಜಿ. ಶ್ರೀನಿವಾಸಪುರ ಜ.ಕಾ. 4) ಕನೇಗೌಡನಹಳ್ಳಿ ಜ.ಕಾ.

ದೊಡ್ಡಬಳ್ಳಾಪುರ ತಾಲ್ಲೂಕು-ಮಧುರೆ ಹೋಬಳಿ

1) ಕಾಡನೂರು ಕಾಲೋನಿ 2) ಗೆಜ್ಜಗದಹಳ್ಳಿ ಕಾಲೋನಿ. 3) ಮಲ್ಲೋಹಳ್ಳಿ ಕಾ. 4) ಮುಪ್ಪಡಿಗೆಟ್ಟ ಕಾ. 5) ಕಮ್ಮಸಂದ್ರ ಕಾ. 6) ಎಂ.ಜಿ. ರಾಮರಾವ್ ಕಾ. 7) ಕನ್ನಮಂಗಲ ಕಾ. 8) ವಡಗೆರೆ ಕಾ. 9) ಮಾರಸಂದ್ರ ಕಾ.

ಮಾಗಡಿ ತಾಲ್ಲೂಕು-ಸೋಲೂರು ಹೋಬಳಿ

1) ಜೆರೋಜಗರ್ 2) ಬುಡ್ಡಯ್ಯನಪಾಳ್ಯ 3) ಶ್ರೀನಿವಾಸನಗರ 4) ಗೋಡಿಗುಡ್ಡಪಾಳ್ಯ 5) ತಟ್ಟೆಕೆರೆ ಎ.ಕೆ. ಕಾಲೋನಿ 6) ಹರಸಿಣಕುಂಟೆ ಎ.ಕೆ.ಕಾ. 7) ಜಗನ್ನಾಥಪುರ ಕಾಲೋನಿ 8) ಕುರುಬರಪಾಳ್ಯ 9) ಉಮರಸಪಾಳ್ಯ 10) ಬೈಜಾಪುರ 11) ಓಬಳಯ್ಯಕುಲಿಪಾಳ್ಯ 12)ಲಕ್ಕೇನಹಳ್ಳಿ ಕಾ. 13)ತುಂಬರಪಾಳ್ಯ. 14)ದೊಡ್ಡಾರಯ್ಯನಪಾಳ್ಯ.

ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿ

1) ಕಡಬಗೆರೆ ಜನತಾ ಕಾಲೋನಿ 2) ಆನಂದನಗರ ಜ.ಕಾ. 3) ಚಾಮುಂಡಿ ಜ.ಕಾ 4) ವಲ್ಲಭಾಯಿಪಟೇಲನಗರ 5) ಕೆ.ಜಿ. ಲಕ್ಕೇನಹಳ್ಳಿ ಜ.ಕಾ 6) ಮಾಡೋಹಳ್ಳಿ ಜ.ಕಾ 7) ಕಾಚೋಹಳ್ಳಿ ಜ.ಕಾ 8) ಕಮ್ಮಸಂದ್ರ ಜ.ಕಾ 8) ಕಮ್ಮಸಂದ್ರ ಜ.ಕಾ. 9) ಗಂಗೊಂಡನಹಳ್ಳಿ ಜ.ಕಾ. 10) ತೊರೆಗಾನಸಂದ್ರ ಜ.ಕಾ. 11) ವಡೇರಹಳ್ಳಿ ಜನತಾ ಕಾಲೋನಿ.

ಇ) ಹೌದು, 7 ಜನವಸತಿಗಳಲ್ಲಿ, 4 ಜನವಸತಿಗಳಿಗೆ ನೀರು ಸರಬರಾಜು ಯೋಜನೆಗಳು ಅನುಮೋದಿಸಲ್ಪಟ್ಟಿವೆ. ಬಾಕಿ ಯೋಜನೆಗಳನ್ನು ಆದ್ಯತೆ ಮೇಲೆ ತೆಗೆದುಕೊಳ್ಳಲಾಗುತ್ತದೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ 14 ಜನವಸತಿಗಳಲ್ಲಿ ವಿದ್ಯುದೀಕರಣ ಕೆಲಸವನ್ನು ತೆಗೆದುಕೊಂಡಿದೆ. ಮಿಕ್ಕ ಜನವಸತಿಗಳಲ್ಲಿ ಬೇಗನೇ ತೆಗೆದುಕೊಳ್ಳಲಾಗುವುದು.

ಕುಮದ್ವತಿ ನದಿಗೆ ಚಿಕ್ಕ ಮಾರನಹಳ್ಳಿ ಹತ್ತಿರ ಮೋರಿ ನಿರ್ಮಾಣ.

694 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ಕ್ಷೇತ್ರದ ಕುಮದ್ವತಿ ನದಿಗೆ ಅಡ್ಡಲಾಗಿ ಹನುಮಂತೇಗೌಡನಪಾಳ್ಯ, ಮತ್ತು ಚಿಕ್ಕಮಾರನ ಹಳ್ಳಿ ಹತ್ತಿರ ಮೋರಿಯನ್ನು ನಿರ್ಮಾಣ ಮಾಡುವ ಉದ್ದೇಶವು ಸರ್ಕಾರದ ಗಮನದಲ್ಲಿದೆಯೇ?

ಆ) ಬೈರಸಂದ್ರದ ಹತ್ತಿರ ಕುಮದ್ವತಿ ನದಿಗೆ ಮೋರಿ ನಿರ್ಮಾಣ ಹಾಗೂ ತೊರೆಕೆಂಪನಹಳ್ಳಿ ಹತ್ತಿರ ಸೀಗೆಹಳ್ಳಕ್ಕೆ ಮೋರಿ ನಿರ್ಮಾಣದ ಬಗ್ಗೆ ಮನವಿಗಳು ಬಂದಿರುವುದು ನಿಜವೆ?

ಇ) ಮೇಲ್ಕಂಡ ನಾಲ್ಕು ಸ್ಥಳಗಳಲ್ಲಿ ಮೋರಿ ನಿರ್ಮಾಣವಿಲ್ಲದೆ ಸಾರ್ವಜನಿಕರು ಮತ್ತು ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ತಿಳಿದುಬಂದಿದೆಯೆ?

ಈ) ಹಾಗಿದ್ದಲ್ಲಿ, ಮೇಲ್ಕಂಡ ಸ್ಥಳಗಳಲ್ಲಿ ಮೋರಿಗಳನ್ನು ನಿರ್ಮಾಣ ಮಾಡುವ ಸಲುವಾಗಿ ಹೆಚ್ಚುವಾರಿ ಹಣವನ್ನು ಬಿಡುಗಡೆ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು) :

ಅ) ಹೌದು.

ಆ) ನಿಜ.

ಇ) ಮಳೆಗಾಲದಲ್ಲಿ ತೊಂದರೆಯಾಗುವುದು ಕಂಡು ಬಂದಿದೆ.

ಈ) ಕೆಲಸಗಳ ಅದ್ಯತೆಗೆ ಅನುಸಾರವಾಗಿ 1993-94ರ ಆಯವ್ಯಯದಲ್ಲಿ ಸೇರಿಸುವ ಬಗ್ಗೆ ಪರಿಶೀಲಿಸಲಾಗುವುದು.

ರೋಜಗಾರ್ ಯೋಜನೆಯಡಿಯಲ್ಲಿ ಕೇಂದ್ರದಿಂದ ಬಂದ ಹಣದ ಮೊತ್ತ

636ಎ - ಶ್ರೀ ಪಿ.ಜಿ.ಆರ್. ಸಿಂಧ್ಯ, (ಕನಕಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೋಜಗಾರ್ ಯೋಜನೆಯಡಿಯಲ್ಲಿ 1991-92ನೇ ಮತ್ತು 92-93ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದಿರುವ ಹಣವೆಷ್ಟು? (ಜಿಲ್ಲಾವಾರು ವಿವರಗಳನ್ನು ನೀಡುವುದು)

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) 1991-92 ಮತ್ತು 1992-93ನೇ ಸಾಲುಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರಕಾರಕ್ಕೆ ಬಂದಿರುವ ಹಣದ ವಿವರಗಳನ್ನು ತೋರಿಸುವ ತಖ್ತೆ "ಎ" ಮತ್ತು "ಬಿ" ಲಗತ್ತಿಸಿದೆ.

ANNEXURE-A

DISTRICTWISE CENTRAL RELEASES DURING 1991-92

(Rs. in lakhs)

Sl. No.	*District*	*Releases*
1.	Bangalore(U)	229.00
2.	Bangalore(R)	331.87
3.	Kolar	679.37
4.	Tumkur	667.08
5.	Chitradurga	476.30
6.	Shimoga	364.18
7.	Mysore	811.48
8.	Mandya	306.32
9.	Hassan	363.03
10.	Chickmagalur	252.00
11.	Kodagu	91.13
12.	Dakshina Kannada	341.13
13.	Belgaum	350.39
14.	Bijapur	633.48
15.	Dharwad	538.21

16.	Uttara Kannada	121.34
17.	Gulbarga	570.92
18.	Raichur	439.97
19.	Bellary	334.08
20.	Bidar	297.59
	Total	**8198.67**

ರಾಜ್ಯದ ಲೋಕೋಪಯೋಗಿ ರಸ್ತೆಗಳ ದುರಸ್ತಿ

1035 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಲೋಕೋಪಯೋಗಿ ರಸ್ತೆಗಳ ದುರಸ್ತಿಗಾಗಿ (ಮೈನ್ಟೇನನ್ಸ್ ಗ್ರಾಂಟ್ಸ್) ಪ್ರತಿ ವರ್ಷ ಪ್ರತಿ ಕಿ.ಮೀ.ಗೆ ಕೊಡುವ ಹಣವೆಷ್ಟು?

ಆ) 1991-92ನೇ ಸಾಲಿನಲ್ಲಿ ಎಷ್ಟು ಹಣ ಖರ್ಚಾಗಿದೆ?

ಇ) 1992-93ನೇ ಸಾಲಿನಲ್ಲಿ ಇದಕ್ಕಾಗಿ ನಿಗಧಿಪಡಿಸಿರುವ ಹಣವೆಷ್ಟು ಮತ್ತು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

		ಪ್ರತಿ ಕಿ.ಮೀ.ಗೆ
ಅ)	ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆ	13200ರೂ. ಗಳು
ಆ)	ಇತರ ಜಿಲ್ಲಾ ರಸ್ತೆ	12100 ರೂ. ಗಳು.
ಇ)	ಹಳ್ಳಿ ದರ್ಜೆ ರಸ್ತೆ	6050 ರೂ. ಗಳು.
ಈ)	ಅಯಕಟ್ಟು ರಸ್ತೆಗಳು	6050ರೂ. ಗಳು.

ಆ) 52.37 ಕೋಟಿ ರೂ. ಗಳನ್ನು 1991-92ನೇ ಸಾಲಿನಲ್ಲಿ ವೆಚ್ಚ ಮಾಡಲಾಗಿದೆ.

ಇ) 49.00 ಕೋಟಿ ರೂ. ಗಳನ್ನು 1992-93ನೇ ಸಾಲಿನಲ್ಲಿ ಆಯವ್ಯಯದಲ್ಲಿ ನಿಗಧಿಪಡಿಸಿದ್ದು ನವೆಂಬರ್ 1992ರವರೆವಿಗೆ 27.26 ಕೋಟಿ ರೂ. ವೆಚ್ಚವಾಗಿದೆ.

Repair works to the damaged bridge on Markhandeya River M Belgaum. Kadoli Road.

649 - SRI B.I.PATIL (Uchgaon) : Will the Minister for Public Works be pleased to state.

a) Whether it has come to the notice of the Government that the bridge at Belgaum-Kadoli road on Markhandeya river has been severely damaged?

b) If so, when the Government would take up the construction work of the said bridge?

SRI K.H. RANGANATH (Minister for Public Works) :

a) The bridge proposed at Kamgrali across Markandeya river is not damaged. The road surface and railings only were damaged. Repairs for the same are taken up.

b) Question does not arise.

ಜವಾಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ಜಿಲ್ಲಾಪರಿಷತ್ತುಗಳಿಗೆ ಒದಗಿಸಲಾದ ಹಣದ ಮೊತ್ತ.

6863 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1992-93ನೇ ಸಾಲಿನಲ್ಲಿ ಜವಾಹಾರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ರಾಜ್ಯದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಒದಗಿಸಬೇಕಾಗಿದ್ದ ಹಣದ ಮೊತ್ತವೆಷ್ಟು, ಮತ್ತು ಈವರೆಗೆ ಒದಗಿಸಿದ ಹಣದ ಮೊತ್ತವೆಷ್ಟು?

ಆ) ಸಕಾಲಕ್ಕೆ ಸರಿಯಾಗಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಹಣ ಬಿಡುಗಡೆ ಮಾಡದಿರುವುದಕ್ಕೆ ಕಾರಣಗಳೇನು, ವಿಳಂಬದಿಂದ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸ್ಥಗಿತ ಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ನಿಗದಿತ ಕಾಮಗಾರಿಗಳನ್ನು ಕಾರ್ಯಗತ ಮಾಡಲು ಅವಶ್ಯವಿರುವ ಹಣದ ಮೊತ್ತವೆಷ್ಟು, ಹಾಗೂ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

	೧೯೯೨-೯೩ನೇ ಸಾಲಿನಲ್ಲಿ ಒದಗಿಸಬೇಕಾಗಿದ್ದ ಹಣ	ಒದಗಿಸಿದ್ದ ಹಣ
1. ಜಿಲ್ಲಾ ಪರಿಷತ್	4962.16	4898.31
2. ಮಂಡಲ ಪಂಚಾಯತ್	6801.16	6618.86
ಒಟ್ಟು	**11763.32**	**11517**

ಆ) ಈ ಸಾಲಿನಲ್ಲಿ ಮೊದಲನೇ ಕಂತಿನ ಹಣವನ್ನು ಏಪ್ರಿಲ್ ತಿಂಗಳಲ್ಲಿ ಎಲ್ಲಾ ಜಿಲ್ಲಾ ಪರಿಷತ್ ಡಿಆರ್‌ಡಿಎಸ್, ಬೆಂಗಳೂರುಗಳಿಗೆ ಬಿಡುಗಡೆ ಮಾಡಲಾಗಿದೆ. ತದನಂತರ, ಎರಡನೇ ಕಂತಿನ ಹಣವನ್ನು ಕೂಡ ಈ ತಿಂಗಳಲ್ಲಿ (ಡಿಸೆಂಬರ್) ಎಲ್ಲಾ ಜಿಲ್ಲಾ ಪರಿಷತ್, ಡಿಆರ್,ಡಿಎಸ್, ಬೆಂಗಳೂರುಗಳಿಗೆ ಬಿಡುಗಡೆ ಮಾಡಲಾಗಿದೆ. ಆದುದರಿಂದ ಸರ್ಕಾರವು ಹಣವನ್ನು ಸಕಾಲದಲ್ಲಿ, ಎಲ್ಲಾ ಜಿಲ್ಲಾ ಪರಿಷತ್ ಡಿಆರ್‌ಡಿಎಸ್, ಬೆಂಗಳೂರು ಗಳಿಗೆ ಬಿಡುಗಡೆ ಮಾಡಲಾಗಿದೆ.

ಇ) ನಿಗದಿತ ಕಾಮಗಾರಿಗಳನ್ನು ಕಾರ್ಯಗತ ಮಾಡಲು ಅವಶ್ಯವಿರುವ ಹಣದ ಮೊತ್ತ 11763.32 ಲಕ್ಷ ರೂ.ಗಳು.

ಈಗಾಗಲೇ 11517.17 ಲಕ್ಷ ರೂ.ಗಳನ್ನು ಎಲ್ಲಾ ಜಿಲ್ಲಾ ಪರಿಷತ್ ಡಿಆರ್‌ಡಿಎಸ್, ಬೆಂಗಳೂರು ಗಳಿಗೆ ಬಿಡುಗಡೆ ಮಾಡಲಾಗಿದೆ.

ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತ್ತಿ ಚುನಾವಣೆ

665 - ಶ್ರೀ ಬಿ.ಹೆಚ್. ಬನ್ನೀಕೋಡ್ (ಹಿರೇಕೆರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ವೋಚ್ಚ ನ್ಯಾಯಾಲಯದ ಆದೇಶದ ರೀತ್ಯಾ ನಿಗದಿತ ವೇಳೆಯಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತ್ತಿಗಳಿಗೆ ಚುನಾವಣೆ ನಡೆಸಲು ಸರ್ಕಾರವು ಉದ್ದೇಶಿಸಿದೆಯೆ?

ಆ) ಈ ಬಗ್ಗೆ ಯಾವುದಾದರೂ ಕ್ರಮವನ್ನು ಸರ್ಕಾರವು ಕೈಗೊಂಡಿದೆಯೇ?

ಇ) ಜಿಲ್ಲಾ ಪರಿಷತ್ತುಗಳ ಮತ ಕ್ಷೇತ್ರವನ್ನು ಈಗ ಇದ್ದಂತೆಯೆ ಮುಂದುವರೆಸಲಾಗುವುದೋ ಅಥವಾ ಪುನರ್ ವಿಗಂಡನೆ ಮಾಡಲು ಕ್ರಮ ಕೈಗೊಳ್ಳಲಾಗುವುದೋ?

ಈ) ಮಂಡಲ ಪಂಚಾಯತ್‌ಗಳ ಮತಕ್ಷೇತ್ರಗಳನ್ನು ಪುನರ್ ವಿಂಗಡನೆ ಮಾಡಲು ಸರ್ಕಾರವು ಯೋಚಿಸಿದೆಯೇ ಹಾಗಿದ್ದಲ್ಲಿ, ಯಾವ ಆಧಾರ ಮತ್ತು ನೀತಿಯನ್ನು ಅನುಸರಿಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯುತ್ ರಾಜ್ಯ ಸಚಿವರು) :

ಅ) ತೀವ್ರ ಪರಿಶೀಲನೆಯಲ್ಲಿದೆ.

ಆ) ಅದೇ.

ಇ) ಅದೇ.

ಈ) ಅದೇ.

ಮಂಡಲ ಪಂಚಾಯತ್ ಕಾರ್ಯದರ್ಶಿಗಳ ನೇಮಕಾತಿ

806 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮಂಡಲ ಪಂಚಾಯತ್ ಕಾರ್ಯಾಲಯಗಳೆಷ್ಟು?

ಆ) ಇವುಗಳಿಗೆಲ್ಲಾ ಕಾರ್ಯದರ್ಶಿಗಳನ್ನು ನೇಮಕ ಮಾಡಲಾಗಿದೆಯೆ?

ಇ) ಇಲ್ಲದಿದ್ದಲ್ಲಿ ಕೊರತೆಯಿರುವ ಕಾರ್ಯದರ್ಶಿಗಳೆಷ್ಟು ಹಾಗೂ ಅವುಗಳನ್ನು ನೇಕಮ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 2534.

ಆ) ಬಹುತೇಕ ಮಂಡಲ ಪಂಚಾಯತಿಗಳಿಗೆ ಕಾರ್ಯದರರ್ಶಿಗಳನ್ನು ನೇಮಕಮಾಡಲಾಗಿದೆ.

ಇ) 103 ಮಂಡಲ ಪಂಚಾಯತ್ ಕಾರ್ಯದರ್ಶಿಗಳ ಹುದ್ದೆಗಳು ಖಾಲಿ ಇದ್ದು ಅವುಗಳನ್ನು ತುಂಬುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಲಿದೆ.

ರಸ್ತೆಗಳ ಅಭಿವೃದ್ಧಿ ವಿಚಾರ

807 - ಶ್ರೀ ಯು.ಕೆ. ಶಾಮಣ್ಣ (ಶೃಂಗೇರಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.?

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಅಭಿವೃದ್ಧಿಗಾಗಿ ಶಾಸಕರ ಕ್ಷೇತ್ರಕ್ಕೆ ಹಣವನ್ನು ನಿಗದಿಪಡಿಸಿರುವುದು ನಿಜವೇ?
ಹಾಗಿದ್ದಲ್ಲಿ ಹಣವೆಷ್ಟು?

ಆ) ಶೃಂಗೇರಿ ಕ್ಷೇತ್ರದಲ್ಲಿ 3 ತಾಲ್ಲೂಕುಗಳಿದ್ದು ರಸ್ತೆ ವಿಸ್ತೀರ್ಣವು ಜಾಸ್ತಿಯಿರುವುದು ನಿಜವೆ?

ಇ) ಹಾಗಿದ್ದಲ್ಲಿ ಈ ರಸ್ತೆಗಳ ಅಭಿವೃದ್ಧಿಗಾಗಿ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಹೌದು. 1991-92ನೇ ಸಾಲಿನಲ್ಲಿ 12.00 ಲಕ್ಷ ರೂ:ಗಳನ್ನು ನಿಗದಿಪಡಿಸಿದೆ.

ಆ) ರಾಜ್ಯ ಹೆದ್ದಾರಿ 65 ಕಿ.ಮೀ. ಮತ್ತು ಜಿಲ್ಲಾ ಮುಖ್ಯ ರಸ್ತೆ 401.20 ಕಿ.ಮೀ. ಇರುತ್ತದೆ.

ಇ) ಈ ಕ್ಷೇತ್ರದಲ್ಲಿ ಅಭಿವೃದ್ಧಿಗೆ 1991-92ರಲ್ಲಿ ನಿಗದಿಪಡಿಸಿದ್ದ 12..00 ಲಕ್ಷ ರೂ.ಗಳ ಅನುದಾನ ಹಾಗೂ 1992-93ನೇ ಸಾಲಿನಲ್ಲಿ ನೀಡಿರುವ 15.00 ಲಕ್ಷ ರೂ.ಗಳ ಅನುದಾನದಲ್ಲಿ ರಸ್ತೆಗಳ ಅಭಿವೃದ್ಧಿಯನ್ನು ಮಾಡಲಾಗುತ್ತಿದೆ. ಅಲ್ಲದೆ ಲಭ್ಯ ಮಾಡಿರುವ ನಿರ್ವಹಣಾ ಅನುದಾನದಲ್ಲಿ ಈ ಕ್ಷೇತ್ರದ ರಸ್ತೆಗಳನ್ನು ಸಂಚಾರಕ್ಕೆ ಅಡಚಣೆ ಆಗದಂತೆ ನಿರ್ವಹಿಸಲಾಗುತ್ತಿದೆ.

ಹುಕ್ಕೇರಿ ತಾಲ್ಲೂಕಿಗೆ ಮಿನಿ ವಿಧಾನಸೌಧದ ಮಂಜೂರಾತಿ.

953 - ಶ್ರೀ ಬಿ. ಉಮೇಷ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿಗೆ ಮಿನಿ ವಿಧಾನಸೌಧ ಮಂಜೂರಾಗಿದೆಯೆ, ಆಗಿದ್ದರೆ ಯಾವಾಗ?

ಆ) ಮಿನಿ ವಿಧಾನ ಸೌಧ ಕಟ್ಟಲು ಸ್ಥಳ ಒದಗಿಸಲಾಗಿದೆಯೇ, ಒದಗಿಸಿದ್ದಲ್ಲಿ ಹಾಗೂ ಇದಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಇಲಾಖೆಯ ಸಚಿವರು) :

ಅ) ಆದೇಶ ಸಂಖ್ಯೆ ಆರ್‌ಡಿ 78 ಡಬ್ಲ್ಯೂಬಿಆರ್ 90 ದಿನಾಂಕ 28-9-92ರ ಆದೇಶದಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಆ) ಹುಕ್ಕೇರಿ ನಗರದ ಸರ್ವೆ ನಂ: 114ರಲ್ಲಿನ ನಿವೇಶನವನ್ನು ಈಗಾಗಲೇ ವಶಪಡಿಸಿಕೊಳ್ಳಲಾಗಿದೆ. ಒಟ್ಟು 45 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಾಣ ಮಾಡಲು ನಿಯಮದ ರೀತ್ಯ ಕ್ರಮ ಕೈಗೊಂಡು ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಹುಕ್ಕೇರಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆ

955 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಪಾಶ್ಚಾಪೂರ ಹಾಗೂ ಸುತ್ತಲಿನ ಹನ್ನೊಂದು ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ ಪ್ರಾರಂಭಿಸಲಾಗಿದ್ದು ಅದು ಪೂರ್ತಿ ಹಾಳಾಗಿರುವ ವಿಷಯವು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಬಂದಿದ್ದಲ್ಲಿ, ಅದನ್ನು ಸುಸಜ್ಜಿತಗೊಳಿಸಲು ಕೈಕೊಂಡ ಕ್ರಮಗಳೇನು ?

ಇ) ಯಾವಾಗ ಪೂರ್ತಿಯಾಗಿ ಸುಸಜ್ಜಿತಗೊಳಿಸಲಾಗುವುದು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ ಸಚಿವರು) :

ಅ) ಈಗ ಯಾವ ತೊಂದರೆಯೂ ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಹುಕ್ಕೇರಿ ತಾಲ್ಲೂಕಿನ ಎನ್.ಆರ್. ಡಬ್ಲ್ಯೂ. ಎಸ್. ಸ್ಕೀಮ್‌ಗಳಿಗೆ ಮಂಜೂರಾದ ಹಣ

956 - ಶ್ರೀ ಉಮೇಶ್ ವಿ.ಕತ್ತಿ (ಹುಕ್ಕೇರಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಕ್ಷೇತ್ರದಲ್ಲಿ ಈ ವರ್ಷ ಮಂಜೂರಾದ ಎನ್.ಆರ್.ಡಬ್ಲ್ಯೂ.ಎಸ್. ಸ್ಕೀಮ್‌ಗಳೆಷ್ಟು ?

ಆ) ಸದರಿ ಸ್ಕೀಮ್‌ಗಳ ಬಗ್ಗೆ ಈ ವರ್ಷ ಖರ್ಚು ಮಾಡಿದ ಹಣವೆಷ್ಟು ?

ಇ) ಯಾವ ಯಾವ ಸ್ಕೀಮ್‌ಗಳು ಯಾವ ಯಾವ ಹಂತದಲ್ಲಿದೆ ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಸಚಿವರು) :

ಅ) 23.

ಆ) ರೂ. 2.94 ಲಕ್ಷಗಳು.

ಇ) ಯೋಜನೆಗಳ ಹಂತವನ್ನು ತಿಳಿಸುವ ಪಟ್ಟಿಯನ್ನು ಲಗತ್ತಿಸಲಾಗಿದೆ.

Unstarred LAO No. 956

STATEMENT SHOWING THE STAGE OF WORK OF NATIONAL RURAL WATER SUPPLY (N.R.W.S) SCHEME DURING 1992-93 UNDER PIPED WATER SUPPLY SCHEME.

Sl. No	*Name of the Scheme*	*Stage of work*
Hukkeri Constituency		
1.	Aralikatti (T)	completed.
2	Basapur (T)	completed.
3	Kotabagi (T)	Borewell source established Rising main & Distsribution System completed. Elevated Service reservoir work is under progress. Pumps procured.
4	Sarapur (T)	Source established Rising Main Distribution System and Elevated service reservoir work under progress pumps procured.
5	Hullolihatti (T)	Source established. Elevated service reservoir completed Rising main under progress.
6.	Pachapur Aug (T)	Work completed completion report to be submitted.
7.	Badakundri (T)	-do-
8.	Belvi (T)	-do- and final bill to be paid.
9.	Shirur (T)	Source required Plans and Estimates are submitted to Circle office in four copies.
10.	Gutaguddi (T)	Plans and Estimates are under preparation source established.
Sankeshwar Constituency		
1.	Modaga (T)	Work completed report to be submited to Accountant General.
2	Kamatnur	-do-
3	Benakanhalli (T)	Source required. Plans & Estimates are submitted to circle office in four copies.
4.	Hadalga (T)	Source required Plans & Estimates are submitted to Circle office for approval.
5.	Rashing (NT)	Source required, Plans & Estimates are submitted to Circle office for approval

6.	Bhairapur (NT)	-do-
7.	Honnihalli (NT)	-do-
8.	Nidasoshihatti (NT)	Fresh work plans and estimates to be santioned.
9.	Gavanal (NT)	-do-
10.	Masarguppi (NT)	-do-
11.	Kurnivadi (NT)	This is dropped due to the scheme included in World Bank Aid Programme.
12.	Salamwadi (NT)	Plans & Estimates to be sanctioned.
13	Khot Dhondagatti · Bellanki (NT)	Source required, plans & estimates to be sanctioned.

ಸೇತುವೆಯ ನೇಗಿದಾಳ ಹತ್ತಿರ ಹಿರಣ್ಯಕೇಶಿ ನದಿಗೆ ಸೇತುವೆಯ ನಿರ್ಮಾಣ

957 - ಶ್ರೀ ಉಮೇಶ್ ವಿ.ಕತ್ತಿ (ಹುಕ್ಕೇರಿ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನಲ್ಲಿ ಧೋಡಗೇರಿ ನೇಗಿದಾಳ ಮಧ್ಯದಲ್ಲಿ ಹಿರಣ್ಯಕೇಶಿ ನದಿಗೆ ಸೇತುವೆ ನಿರ್ಮಿಸಲು ಸರಕಾರವು ಕ್ರಮ ಕೈಕೊಳ್ಳುವುದೆ?

ಆ) ನದಿಯ ದಕ್ಷಿಣ ಭಾಗದ ಜನರು ತಾಲ್ಲೂಕಾ ಸ್ಥಳಕ್ಕೆ ಬರಬೇಕಾದರೆ 9-25 ಕಿ.ಮೀ. ಮತ್ತು ತೆಗೆದು ಬರಬೇಕಾಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಸೇತುವೆ ನಿರ್ಮಿಸಿ ಸಾರ್ವಜನಿಕರಿಗೆ ತೊಂದರೆ ನಿವಾರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಎಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಸಧ್ಯದಲ್ಲಿ ಈ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ.

ಆ) ಹೌದು.

ಇ) ಈ ಬಗ್ಗೆ ಪರಿಶೀಲಿಸಲಾಗುವುದು.

ಜಿಲ್ಲಾ ಪರಿಷತ್‌ಗಳ ರಸ್ತೆ ಹಾಗೂ ಸೇತುವೆಗಳ ದುರಸ್ತಿ

985-ಶ್ರೀ ಬಿ.ಆರ್. ಗುರುದೇವ್ (ಸಕಲೇಶಪುರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಈ ವರ್ಷದ ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಆದ ಅತಿವೃಷ್ಟಿಯಿಂದ ಸಕಲೇಶಪುರ ಕ್ಷೇತ್ರದಲ್ಲಿ ರಸ್ತೆ ಹಾಗೂ ಸೇತುವೆಗಳು ಹಾನಿಗೊಳಗಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಹಾನಿಗೊಳಗಾಗಿರುವ ಆ ರಸ್ತೆ ಮತ್ತು ಸೇತುವೆಗಳನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):

ಅ) ಬಂದಿದೆ.

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಾನಿಗೊಳಗಾಗಿರುವ ರಸ್ತೆ ಮತ್ತು ಸೇತುವೆಗಳ ತುರ್ತು ದುರಸ್ತಿಗೆ 20.00ಲಕ್ಷ ರೂ. ಗಳನ್ನು ಬಿಡುಗಡೆ ಮಾಡಲಾಗಿದೆ. ಸಕಲೇಶಪುರ ಕ್ಷೇತ್ರದ ವ್ಯಾಪ್ತಿಯಲ್ಲಿ 13 ತುರ್ತು ದುರಸ್ತಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.

ಸಕಲೇಶಪುರ ಮೂಡಿಗೆರೆ ನಡುವೆ ಇರುವ ಹಗಲಹಟ್ಟಿ ಬಳಿ ಇರುವ ಸೇತುವೆ

983-ಶ್ರೀ ಬಿ.ಆರ್. ಗುರುದೇವ್ (ಸಕಲೇಶಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಕಲೇಶಪುರ-ಮೂಡಿಗೆರೆ ನಡುವೆ ಇರುವ ಅಗಲಹಟ್ಟಿ ಬಳಿ ಇರುವ ಸೇತುವೆಯು ಸುಮಾರು 100 ವರ್ಷಗಳಷ್ಟು ಹಿಂದಿನದಾಗಿದ್ದು ಆ ಸೇತುವೆ ಶಿಥಿಲಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಹೊಸ ಸೇತುವೆ ನಿರ್ಮಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ಈ ಸೇತುವೆಯ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):

ಅ) ಸೇತುವೆಯು ದುರ್ಬಲವಾಗಿದೆ.

ಆ) ಸೇತುವೆಯ ಪುನರ್ ನಿರ್ಮಾಣ ಕೆಲಸವನ್ನು 93-94ನೇ ಆಯವ್ಯಯ ಪಟ್ಟಿಯಲ್ಲಿ ಸೇರಿಸುವ ಪ್ರಸ್ತಾಪವಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಸಕಲೇಶಪುರ ಕೊಡ್ಲಿಪೇಟೆ ರಸ್ತೆಯಲ್ಲಿ ಜಮ್ಮನಹಳ್ಳಿ ಬಳಿ ಇರುವ ಸೇತುವೆ ಶಿಥಿಲಗೊಂಡಿರುವುದು.

338 - ಶ್ರೀ ಬಿ.ಆರ್. ಗುರುದೇವ್ (ಸಕಲೇಶಪುರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಕಲೇಶಪುರ ಕೂಡ್ಲಿಪೇಟೆ ರಸ್ತೆಯಲ್ಲಿ ಜಮ್ಮನಹಳ್ಳಿ ಬಳಿ ಇರುವ ಸೇತುವೆಯು ಸುಮಾರು 100 ವರ್ಷಗಳಷ್ಟು ಹಳೆಯದಾಗಿದ್ದು, ಶಿಥಿಲಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಸೇತುವೆಯನ್ನು ಹೊಸದಾಗಿ ನಿರ್ಮಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳಾವುವು?

ಇ) ಈ ಸೇತುವೆಯ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು)

ಅ) ಈ ಸೇತುವೆಯು ದುರ್ಬಲವಾಗಿದೆ.

ಆ) ಸೇತುವೆಯ ಪುನರ್ ನಿರ್ಮಾಣ ಕೆಲಸವನ್ನು 93-94ನೇ ಆಯವ್ಯಯ ಪಟ್ಟಿಯಲ್ಲಿ ಸೇರಿಸುವ ಪ್ರಸ್ತಾಪವಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ರ... ...ಗಳು,
ಗ್ರಂಥಾಲಯ,
...ಸೌಧ, ಬೆಂಗಳೂರು,
ದಿನಾಂಕ..........

ಬೆಳಗೋಡು ಮತ್ತು ಹಾಸನ ನಡುವೆ ಈಶ್ವರಹಳ್ಳಿ ಬಳಿ ಇರುವ ಸೇತುವೆ

986-ಶ್ರೀ ಬಿ.ಆರ್. ಗುರುದೇವ್ (ಸಕಲೇಶಪುರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗೋಡು - ಹಾಸನ ನಡುವೆ ಈಶ್ವರಹಳ್ಳಿ ಬಳಿ ಇರುವ ಸೇತುವೆಯು ಸುಮಾರು ನೂರು ವರ್ಷಗಳಷ್ಟು ಹಳೆಯದಾಗಿದ್ದು, ಆ ಸೇತುವೆಯು ಶಿಥಿಲಗೊಂಡಿರುವುದರಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):

ಅ) ಹೌದು. ಈ ಸೇತುವೆಯನ್ನು ಸುಮಾರು 100 ವರ್ಷಗಳ ಹಿಂದೆ ನಿರ್ಮಿಸಿದ್ದು ಇತ್ತೀಚೆಗೆ ಮಳೆಯಿಂದ ಗುದ್ದುಕಂಬದ ಬಳಿ ಕೊರೆತ ಉಂಟಾಗಿದ್ದಿತು.

ಆ) ದುರಸ್ತಿ ಕಾಮಗಾರಿಯನ್ನು 0.30 ಲಕ್ಷ ರೂ.ಗಳ ವೆಚ್ಚದಲ್ಲಿ ತೆಗೆದುಕೊಳ್ಳಲಾಗಿದೆ.

ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸೌಲಭ್ಯ

1006 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ಕುಂಜಾಲು ಪೇಟೆಯಲ್ಲಿ, ಎಸ್.ಆರ್. ಡಬ್ಲ್ಯು. ಎಸ್. ಯೋಜನೆಯನ್ವಯ ಕುಡಿಯುವ ನೀರಿನ ಯೋಜನೆ ಮಂಜೂರು ಆಗಿದ್ದು ಯಾವಾಗ?

ಆ) ಎಷ್ಟು ವರ್ಷಗಳಿಂದ ಈ ಕಾಮಗಾರಿ ಅರ್ಧಕ್ಕೆ ನಿಂತಿರುತ್ತದೆ? ಹಾಗೂ ವಿಳಂಬಕ್ಕೆ ಕಾರಣಗಳೇನು?

ಇ) ಜನರಿಗೆ ಅತಿ ಅನುಕೂಲವಿರುವ ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು):

ಅ) ಆಡಳಿತಾತ್ಮಕ ಮಂಜೂರಾತಿ ದಿನಾಂಕ 27-3-1986

ತಾಂತ್ರಿಕ ಮಂಜೂರಾತಿ ದಿನಾಂಕ 31-10-1986

ಆ) ನಾಲ್ಕು ವರ್ಷ. ಬಾವಿಯಿಂದ ನೀರು ಶೇಖರಣಾ ತೊಟ್ಟಿಗೆ ಏರು ಕೊಳವೆಯನ್ನು ಹಾಕಲು ಭೂಮಿ ದೊರೆಯದೆ ಇರುವುದರಿಂದ ಈ ಕಾಮಗಾರಿಯ ಕೆಲಸವು ನಿಂತಿರುತ್ತದೆ. ಖಾಸಗಿ ಜಮೀನು ಮಾಲೀಕರು ತಡೆಯಾಜ್ಞೆ ತಂದಿದ್ದು ಪ್ರಕರಣವು ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗಬೇಕಾಗಿದೆ.

ಏರು ಕೊಳವೆ ಹಾಕಲು ಬೇಕಾಗಿರುವ ಭೂಮಿಯನ್ನು ಜಿಲ್ಲಾ ಪರಿಷತ್ತು ಸ್ವಾಧೀನ ಪಡಿಸಿಕೊಂಡ ಮೇಲೆ ಅಥವಾ ಭೂಮಿಯು ಜಿಲ್ಲಾಪರಿಷತ್ತಿಗೆ ಹಸ್ತಾಂತರವಾದ ಕೂಡಲೆ.

ಬ್ರಹ್ಮಾವರ ಮುಖ್ಯ ರಸ್ತೆಯ ಡಾಂಬರೀಕರಣ ಕುರಿತು

1010-ಶ್ರೀ ಪಿ. ಬಸವರಾಜ್ (ಬ್ರಹ್ಮಾವರ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉಡುಪಿ ತಾಲ್ಲೂಕು ಹೆಬ್ರಿ-ಸಂತೆಕಟ್ಟೆ-ಪೇತ್ರಿ-ಬ್ರಹ್ಮಾವರ ಮುಖ್ಯ ರಸ್ತೆಯು ತುಂಬಾ ಹೊಂಡಗಳಿಂದ ಕೂಡಿದ್ದು, ಡಾಂಬರೀಕರಣ ಬಹು ವರ್ಷಗಳಿಂದ ನಡೆಯದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಆ ರಸ್ತೆಯ ಡಾಂಬರೀಕರಣ ಕುರಿತಂತೆ ಸಾರ್ವಜನಿಕರು ಮನವಿಗಳನ್ನು ಸಲ್ಲಿಸಿರುವರೇ?

ಇ) ಹಾಗಿದ್ದಲ್ಲಿ ಯಾವಾಗ ಆ ರಸ್ತೆಯ ಸಂಪೂರ್ಣ ಡಾಂಬರೀಕರಣ ಮಾಡಲು ಕ್ರಮ ಕೈಗೊಳ್ಳಲಾಗುವುದು?

ಶ್ರಿ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಈ ರಸ್ತೆಯಲ್ಲಿ ಅಲ್ಲಲ್ಲಿ ಹೊಂಡಗಳಾಗಿದ್ದು 1.20 ಲಕ್ಷ ರೂ. ಒಟ್ಟು ಅಂದಾಜಿನಲ್ಲಿ ದುರಸ್ತಿಪಡಿಸಲಾಗುತ್ತಿದೆ.

ಆ) ಮನವಿ ಸಲ್ಲಿಸಿದ್ದಾರೆ.

ಇ) ಈ ರಸ್ತೆಯ ಅತ್ಯಂತ ಕೆಟ್ಟು ಹೋದ ಭಾಗಗಳ ಮರು ಡಾಂಬರೀಕರಣವನ್ನು 1.55 ಲಕ್ಷ ರೂ. ಗಳ ವೆಚ್ಚದಲ್ಲಿ ತೆಗೆದುಕೊಳ್ಳಲಾಗಿದೆ. ಈ ರಸ್ತೆಯ ಪೂರ್ಣ ಉದ್ದಕ್ಕೆ (29.60 ಕಿ.ಮೀ) ಮರು ಡಾಂಬರೀಕರಣವನ್ನು ಹಂತ ಹಂತವಾಗಿ ಅನುದಾನದ ಲಭ್ಯತೆಯನ್ನು ಸರಿಸಿ ತೆಗೆದುಕೊಳ್ಳಲಾಗುವುದು.

ಭೀಮಾ ನದಿಯಿಂದ ಚಡಚಾನ್ ಗ್ರಾಮಕ್ಕೆ ಕುಡಿಯುವ ನೀರಿನ ಸರಬರಾಜು.

1015-ಶ್ರೀ ಮನೋಹರ್-ಉ-ಐನಾಪುರ (ಬಳ್ಳೋಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭೀಮಾ ನದಿಯಿಂದ ಚಡಚಾನ್ ಗ್ರಾಮಕ್ಕೆ ಕುಡಿಯುವ ನೀರನ್ನು ಒದಗಿಸುವ ಯೋಜನೆಯು ಅನುಮೋದಿಸಲ್ಪಟ್ಟಿದೆಯೇ?

ಆ) ಹಾಗಿದ್ದಲ್ಲಿ, ಯಾವಾಗ ಅನುಮೋದಿಸಲ್ಪಟ್ಟಿದೆ? ಯಾವಾಗ ಪೂರ್ಣಗೊಳಿಸಲಾಗುವುದು ಮತ್ತು ಈ ಯೋಜನೆಗೆ ಎಷ್ಟು ಹಣವನ್ನು ಮೀಸಲಿಡಲಾಗಿದೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು):

ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಜಿಲ್ಲಾ ಪರಿಷತ್, ಮಂಡಲ ಪಂಚಾಯಿತಿ ಚುನಾವಣೆ.

1019 - ಶ್ರೀ ಮನೋಹರ ಐನಾಪುರ್ (ಬಳ್ಳೋಳಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ಸಂಸ್ಥೆಗಳು ಕೆಲಸವನ್ನೇ ಮಾಡುತ್ತಿಲ್ಲ ಎಂಬುದು ಸರ್ಕಾರಕ್ಕೆ ಗೊತ್ತಿದೆಯೇ?

ಆ) *ಹಾಗಿದ್ದಲ್ಲಿ ಚುನಾವಣೆ ನಡೆಸುವವರೆಗೆ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಸಲಹಾ ಮಂಡಳಿಯನ್ನು ನಾಮನಿರ್ದೇಶನ ಮಾಡಲು ಸರ್ಕಾರ ಯೋಜಿಸುತ್ತಿದೆಯೇ?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು):

ಅ) ಇಲ್ಲ,

ಆ) ಉದ್ಭವಿಸುವುದಿಲ್ಲ.

ಇಂಡಿ ತಾಲ್ಲೂಕಿಗೆ ಕುಡಿಯುವ ನೀರಿನ ಯೋಜನೆ

1020 - ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಡಚ್ ನೆರವಿನಡಿ ಕುಡಿಯುವ ನೀರಿನ ಹಾಗೂ ನೈರ್ಮಲ್ಯೀಕರಣ ಯೋಜನೆಯಡಿಯಲ್ಲಿ ಇಂಡಿ ತಾಲ್ಲೂಕಿನಲ್ಲಿನ ಎಷ್ಟು ಹಳ್ಳಿಗಳನ್ನು ಸೇರಿಸಲಾಗಿದೆ?*

ಆ) *ಈ ಯೋಜನೆಯಡಿ ಸರ್ಕಾರವು ಇನ್ನೂ ಕೆಲವು ಹಳ್ಳಿಗಳನ್ನು ಸೇರಿಸಲು ಉದ್ದೇಶಿಸಿದೆಯೇ?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) 6 ಹಳ್ಳಿಗಳು

ಆ) ಇಲ್ಲ,

Release of amount to the Zilla Parishads towards construction of roads and bridges.

1027 - Sri. Manohar Ainapur (Ballolli): Wiil the Minister for Public Works be pleased to state?

a) *Whether the Government had sanctioned Rs. 40 lakhs to each constituency for the construction of roads and bridges for having taken up new roads from Zilla Parishad?*

b) *Whether the money has been released, if so, the total progress of the department in that aspect,*

Sri. K.H. Ranganath (Minister for public works):

a) No.

b) No.

ಜಿಲ್ಲಾಪರಿಷತ್ ಮತ್ತು ಮಂಡಲಪಂಚಾಯಿತಿ ಚುನಾವಣೆ

1016 - ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1991ರ ಜನಗಣತಿ ಆಧಾರದ ಮೇಲೆ ಚುನಾವಣೆಗಳನ್ನು ನಡೆಸುವ ಬಗ್ಗೆ ಸರ್ಕಾರ ಯೋಚಿಸಿದೆಯೇ? ಮತ್ತು 1991ರ ಜನಗಣತಿ ಆಧಾರದ ಮೇಲೆ ಚುನಾವಣಾ ಕ್ಷೇತ್ರಗಳನ್ನು ರಚಿಸಲಾಗುವುದೇ? ಅಥವಾ ಅವು ಈಗಿರುವ ಹಾಗೆಯೇ ಇರುತ್ತದೆಯೇ?

ಆ) ಸರ್ಕಾರವು ಚುನಾವಣೆಯನ್ನು ನಡೆಸದೇ ಇದ್ದರೆ ಸರ್ಕಾರದ ನಿಲುವೇನು?

ಇ) ನಾಮನಿರ್ದೇಶನ ಮಾಡುವ ಬಗ್ಗೆ ಸರ್ಕಾರವು ಏನಾದರೂ ಯೋಚಿಸಿದೆಯೇ?

ಶ್ರೀಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಅ)ನಲ್ಲಿ ನೀಡಿರುವ ಉತ್ತರದನ್ವಯ ಉದ್ಭವಿಸುವುದಿಲ್ಲ.

ಇ) ಇಲ್ಲ.

ಚನ್ನಪಟ್ಟಣ ತಾಲ್ಲೂಕಿನಲ್ಲಿರುವ ಕೊಳವೆ ಬಾವಿಗಳು.

1055-ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1989ಕ್ಕೂ ಮುಂಚೆ ಚನ್ನಪಟ್ಟಣ ತಾಲ್ಲೂಕಿನಲ್ಲಿ ಎಷ್ಟು ಕೊಳವೆ ಬಾವಿಗಳಿದ್ದವು?

ಆ) 1989-90, 1990-91, 1991-92 ಇಲ್ಲಿಯವರೆಗೆ ಚನ್ನಪಟ್ಟಣ ತಾಲ್ಲೂಕಿನಲ್ಲಿ ಕೊರೆದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು? (ವಿವರಗಳನ್ನು ಒದಗಿಸುವುದು):

ಇ) ಚನ್ನಪಟ್ಟಣ ತಾಲ್ಲೂಕಿನಲ್ಲಿ ಕೊಳವೆ ಬಾವಿಗಳನ್ನು ಮಂಜೂರು ಮಾಡುವ ಸಲುವಾಗಿ ಜಿಲ್ಲಾ ಪರಿಷತ್‌ನಲ್ಲಿ ಬಾಕಿ ಇರುವ ಅರ್ಜಿಗಳ ಸಂಖ್ಯೆ

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) 868

ಆ)	1989-90	113
	1990-91	65
	1991-92	71
	1992-93	– 62 (11 :92ರವರೆಗೆ)

(ವಿವರಗಳನ್ನು ಲಗತ್ತಿಸಿದೆ)

ಇ) ಯಾವುದೂ ಇಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1055

ಚನ್ನಪಟ್ಟಣ ತಾಲ್ಲೂಕಿನಲ್ಲಿ ಕೊಳವೆ ಬಾವಿಗಳನ್ನು ಕೊರೆದ ಬಗ್ಗೆ ವಿವರಗಳು

ಕ್ರ. ಸಂ.	ಮಂಡಲ ಹೆಸರು	*31-3-89* ರಲ್ಲಿದ್ದ ಸಂಖ್ಯೆ	*1989-90*	*1990-91*	*1991-91*	*1992-93 11 : 92* ರವರೆಗೆ	11 : 92ರ ಅಂತ್ಯದವರೆಗಿನ ಒಟ್ಟು ಸಂಖ್ಯೆ
1	2	3	4	5	6	7	8
1.	ದಶಾವರ	57	3	7	5	3	75
2.	ರಾಮಪುರ	75	10	3	7	3	98
3.	ಟಿವ್ವೂರು	70	14	4	6	5	99
4.	ಬ್ಯಾದ್ರಹಳ್ಳಿ	65	7	6	5	3	86
5.	ಮೂಡಿಗೆರೆ	52	7	7	5	2	73
6.	ಮಾಲೂರು	36	7	2	3	1	49
7.	ತಾಗಚಗೆರೆ	64	4	5	7	7	87
8.	ಹೊಂಗನೂರು	71	8	2	5	2	88
9.	ಸಿಂಗರಾಜಪುರ	69	18	6	7	3	103
10.	ಕೋಡಂಬಹಳ್ಳಿ	59	12	4	7	8	90
11.	ವೈ.ಟಿ. ಹಳ್ಳಿ	64	6	5	4	11	90
12.	ಹೋರೋಕೊಪ್ಪ	62	6	1	2	5	76
13.	ಅಕ್ಕೂರು	64	3	3	6	4	80
14.	ಮಾಲೂರುಪಟ್ಣ	60	8	10	2	5	85
	ಒಟ್ಟು	**868**	**113**	**65**	**71**	**62**	**1179**

ಮಂಜೂರಾದ ರಾಷ್ಟ್ರೀಯ ಹೆದ್ದಾರಿಗಳ ಉದ್ದ.

352-ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಮ್ಮ ರಾಜ್ಯಕ್ಕೆ ಭಾರತ ಸರ್ಕಾರದಿಂದ ಇತ್ತೀಚೆಗೆ ಮಂಜೂರಾದ ರಾಷ್ಟ್ರೀಯ ಹೆದ್ದಾರಿಗಳ ಒಟ್ಟು ಉದ್ದ ಎಷ್ಟು (ಕಿ.ಮೀ. ಗಳಲ್ಲಿ)

ಆ) ಬೈಪಾಸ್ ರಸ್ತೆಗಳು ಸೇರಿದಂತೆ ರಸ್ತೆಗಳ ಅಂದಾಜು ವೆಚ್ಚವೆಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಯಾವುದೂ ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಸೂಳೆಕೋಟೆ ಹತ್ತಿರ ಸೇತುವೆ ಕೆಲಸ

451-ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ): ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕಿನ ಸೂಳೆಕೋಟೆ ಹತ್ತಿರ ಒಂದು ಸೇತುವೆ ಕಟ್ಟಲು ಮಂಜೂರಾಗಿದ್ದು ಸುಮಾರು 20 ಲಕ್ಷ ರೂ.ಗಳು ಖರ್ಚಾಗಿದ್ದು ಇನ್ನೂ ಅರ್ಧ ಕೆಲಸ ಹಾಗೆಯೇ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ ಅದಕ್ಕೆ ಕಾರಣಗಳೇನು? ಮತ್ತು ಅದನ್ನು ಯಾವಾಗ ಪೂರೈಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):

ಅ) ಬಂದಿದೆ.

ಆ) ಜಿಲ್ಲಾಪರಿಷತ್‌ಗೆ ಈ ಕೆಲಸವನ್ನು 1987ರಲ್ಲಿ ಹಸ್ತಾಂತರಿಸಿದ್ದು, ಸಾಕಷ್ಟು ಅನುದಾನವಿಲ್ಲದಿದ್ದ ಕಾರಣ ಹಾಗೂ ಕೂಡುರಸ್ತೆಯ ಭೂ ಸ್ವಾಧೀನದಲ್ಲಿ ವಿಳಂಬವಾದುದರಿಂದ ಸೇತುವೆಯ ಕಾರ್ಯವನ್ನು ಮುಂದುವರೆಸಿರಲಿಲ್ಲ. ಜಿಲ್ಲಾ ಪರಿಷತ್‌ನಿಂದ ಈ ದೊಡ್ಡ ಮೊತ್ತದ ಕಾಮಗಾರಿಯನ್ನು ನಿರ್ವಹಿಸುವುದು ಸಾಧ್ಯವಿಲ್ಲವೆಂಬುದನ್ನು ಉನ್ನತಾಧಿಕಾರ ಸಮಿತಿಯು ನಿರ್ಣಯಿಸಿ ದಿನಾಂಕ 12.6.91 ರಲ್ಲಿ ಲೋಕೋಪಯೋಗಿ ಇಲಾಖೆಗೆ ವಹಿಸಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯ ನಿರ್ಮಾಣ ನಿಗಮದವರಿಗೆ ಕಾಮಗಾರಿಯನ್ನು 91-92ರಲ್ಲಿ ವಹಿಸಲಾಗಿದ್ದು, ಅನುದಾನವನ್ನು ಅನುಸರಿಸಿ 93-94ರ ಅವಧಿಯಲ್ಲಿ ಪೂರ್ಣಗೊಳಿಸುವ ಕಾರ್ಯಕ್ರಮವಿದೆ.

ತ್ಯಾಮಗೊಂಡ್ಲು ಕಳಘಟ್ಟ ರಸ್ತೆಯಲ್ಲಿರುವ ಕಾಸ್‌ವೇ ನಿರ್ಮಾಣ ಕಾರ್ಯ.

68-ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲು ಕೆಳಘಟ್ಟ ರಸ್ತೆಲ್ಲಿರುವ ಕಾಸ್ ವೇ ಬಹಳ ದಿನಗಳಿಂದ ನಿರ್ಮಾಣವಾಗದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಸಂಬಂಧ ಸರ್ಕಾರದಿಂದ ತೆಗೆದುಕೊಂಡ ಕ್ರಮವೇನು?

ಇ) ಈ ಕಾಮಗಾರಿಯನ್ನು ಪ್ರಾರಂಭಿಸಲು ಎಷ್ಟು ಕಾಲಾವಕಾಶ ಬೇಕಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಬಂದಿದೆ.

ಆ) ಈ ಕಾಮಗಾರಿಯನ್ನು 1993-94ನೇ ಸಾಲಿನಲ್ಲಿ ತೆಗೆದುಕೊಳ್ಳುವ ಪ್ರಸ್ತಾವವಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ವಿವಿಧ ಹಂತಗಳ ನ್ಯಾಯಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ನ್ಯಾಯಾಧೀಶರುಗಳ ಬಗ್ಗೆ

03-ಶ್ರೀ ಹರ್ಷಕುಮಾರ ಗೌಡ (ಚಾಮರಾಜ): ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ವಿವಿಧ (ಹಂತಗಳು) ನ್ಯಾಯಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ನ್ಯಾಯಾಧೀಶರುಗಳ ಸಂಖ್ಯೆ ಎಷ್ಟು ?

ಆ) ರಾಜ್ಯದಲ್ಲಿ, ಸರ್ಕಾರದವರು ಹೊಸದಾಗಿ ಪ್ರಾರಂಭ ಸಲ್ಲಿಸುವ ನ್ಯಾಯಾಲಯಗಳಷ್ಟು ? ಹಾಗೂ ಅವುಗಳನ್ನು ಯಾವ ತಾಲ್ಲೂಕು ಸ್ಥಳಗಳಲ್ಲಿ ಪ್ರಾರಂಭಿಸಲಾಗುವುದು ?

ಶ್ರೀ ಹಾರನಹಳ್ಳಿ ರಾಮಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) 1. ಜಿಲ್ಲಾ ನ್ಯಾಯಾಧೀಶರು, ಸೂಪರ್ ಟೈಂ ಜಿಲ್ಲಾ ನ್ಯಾಯಾಧೀಶರು ಸೇರಿ 86.ಅನ್ಯ ಸೇವೆಯ ಮೇರೆಗೆ ಕೆಲಸ ನಿರ್ವಹಿಸುತ್ತಿರುವ ನ್ಯಾಯಾಧೀಶರನ್ನು ಸೇರಿಸಿ.

2. ಸಿವಿಲ್ ನ್ಯಾಯಾಧೀಶರು 123

3. ಮುನ್ಸಿಫ್ ನ್ಯಾಯಧೀಶರು 226

ಆ) ರಾಜ್ಯದ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ವಿವಿಧ ರೀತಿಯ 90ನ್ಯಾಯಲಯಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಅವುಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ANNEXURE

BANGALORE CITY

1. Creation of 26 Additional Courts in Bangalore City Viz.,
   a. Eight Additional Courts of City of Small Causes.
   c. Ten Additional Chief Metropolitan Magistrates Courts.
   d. Three Metropolitan Magistrate Courts (Traffic).
2. Creation of the post of XXIII Addl. City Civil & Sessions Judge, B'lore City for trial of cases under the Prevention of Corporation Act.
3. Creation of two posts i.e., II and III Additional Principal Judge to the Family Court, Bangalore.

4. Setting up of exclusive court for expenditious trial and punishment of Drug Traffickers (D.J. Cadre) at Bangalore.

BANGALORE RURAL DISTRICT

5. Creation of II Additional District & Sessions Court at Bangalore.
6. Creation of II Additional Civil Judge's Court at Bangalore.
7. Creation of the Court of II Addl. Munisiff at Bangalore.
8. Creation of Addl. Munsiff & J.M.F.C.'s Court at Anekal

BANGALORE DISTRICT

9. Establishment of District & Session Judge's Court at Bangalore District.
10. Establishment of a Court of Civil Judge andd J.M.F.C. at Bangalore District.

BELLARY DISTRICT

11. Creation of the Court of Addl. Civil Judge at Bellary.
12. Creation of the Court of II Addl. Munsiff at Bellary.
13. Establishment of the Court of Munsiff and J.M.F.C. at Sandur.
14. Esablishment of the Court of Munsiff and J.M.F.C. at Hagaribommanahalli.

BELGAUM DISTRICT

15. Creation of the Court of Addl. Munsiff at Athani.
16. Creation of the Court of Addl. Munsiff and J.M.F.C., at Raibag.
17. Creation of the Court of Addl. Munsiff & J.M.F.C. at Bailhongal.
18. Conversion of the Court of Addl. Civil Judge Bailhongal sitting at Saundatti into independent Civil Judge's Court, Saundatti.
19. Establishment of Munsiff and J.M.F.C., Nipani by shifting the Court of J.M.F.C., Chikodi.
20. Creation of a Court of Addl. Munsiff and J.M.F.C., at Kanpur.

BIJAPUR DISTRICT

21. Creation of a Court of II Additional Munsiff and J.M.F.C. at Bijapur.
22. Creation of a Court of Additional District and Sessions Judge at Bijapur.
23. Creation of a Court of Additional District and Sessions Judge at Bijapur for tial of cases under Prevention of Corruption Act.
24. Establishment of a Court of Munsiff and J.M.F.C. at Bilagi.
25. Creation of a Court of Addl. Munsiff at Jamkhandi.
26. Creation of a Court of Addl. Munsiff and J.M .F.C., at Mudhol.

BIDAR DISTRICT

27. Creation of a Court of Addl.District & Sessions Judge's Court at Bidar.
28. Establishment of Civil Judge's Court at Basavakalyan.

Chitradurga District

29. Establishment of Court of Munsiff & J.M.F.C., at Challakere.
30. Establishment of Court of Munsiff & J.M.F.C., at Jagalure.

CHICKMANGALUR DISTRICT

31. Creation of a Court of Addl. Munsiff & J.M.F.C. at Kadur.

DHARWAR DISTRICT

32. Creation of a Court of III Addl. District and Sessions Judge at Dharwad.
33. Creation of a Court of II Addl. Civil Judge & CJM., Dharwad.
34. Creation of a Court of III Addl. Munsiff at Dharwad
35. Creation of a Court of Munsiff & JMFC., at Shiggoan.
36. Creation of a Court of III Addl. Munsiff at Gadag.
37. Creation of a Court of IV Addl. Munsiff at Hubli.
38. Creation of a Court of Addl. Munsiff & JMFC., at Haveri.

Dakshina Kanna District

39. Creation of a Court of Addl. Civil Judge at Udupi.

GULBARGA DISTRICT

40. Establishment of Family Court at Gulbarga.
41. Establishment of the Court of Munsiff and JMFC., at Afzalpur

HASSAN DISTRICT

42. Creation of a Court of Addl. Munsiff and JMFC., at Hassan.

KODAGU MADIKERI

43. Creation of a Court of Addl. Munsiff and JMFC., at Somwarpet.

KOLAR DISTRICT

44. Creation of a Court of II Addl. District and Sessions Judge at Kolar.
45. Creation of a Court of Addl. Munsiff and JMFC., at Chickballapur.
46. Creation of a Court of Addl. Munsiff and JMFC., at Chintamani.
47. Creation of a Court of Addl. Munsiff and JMFC., at Gowribidanur.

MYSORE DISTRICT

48. Creation of a Court of Addl. District and Sessions Judge, Mysore, for trial of cases under Prevention of Corruption Act.
49. Creation of a Court of V Additional I Munsiff , Mysore.

50. Creation of a Court of Addl. Munsiff and JMFC., at Chamarajanagar.

51. Creation of a Court of Addl. Munsiff and J.M.F.C., at Kollegal.

52. Creation of a Court of Addl. Munsiff at Nanjanagud.

53. Creation of J.M.F.C., III Court at Mysore.

MANDYA DISTRICT

54. Creation of a Court of J.M.F.C., at Mandya.

55. Creation of a Court of Addl. Munsiff & J.M.F.C., at Maddur.

56. Creation of a Court of Addl. Munsiff and J.M.F.C., at Malavalli.

RAICHUR DISTRICT

57. Establishment of Family court at Raichur (Govt. Proposal)

58. Creation of a Court of Addl. Civil Judge at Raichur.

59. Creation of a Court of Addl. Munsiff and J.M.F.C., at Sindhanoor.

SHIMOGA DISTRICT

60. Creation of a Court of I Addl. Munsiff and J.M.F.C., at Bhadravathi.

61. Creation of a Court of II Addl. Munsiff and J.M.F.C., at Sagar.

TUMKUR DISTRICT

62. Creation of III Addl. Munsiff & J.M.F.C. IV Court at Tumkur.

63. Creation of the Court of Addl. Munsiff and J.M.F.C., at Tiptur.

64. Creation of a Court of Addl. Munsiff and J.M.F.C., at Pavagada.

ಕೊಲ್ಲೂರು ಹೊಳೆಗೆ ಸೇತುವೆ ನಿರ್ಮಾಣ

66 - ಶ್ರೀ ಜಿ.ಎಸ್. ಆಚಾರ್ (ಬೈಂದೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆ ಕುಂದಾಪುರ ತಾಲ್ಲೂಕಿನಲ್ಲಿ ಕೊಲ್ಲೂರು ಹೊಳೆಗೆ ಅಡ್ಡಲಾಗಿ ಸೇತುವೆ ರಚಿಸಲು ಕಳೆದ ನಾಲ್ಕು ದಶಕಗಳಿಂದಲೂ ಸಾರ್ವಜನಿಕರಿಂದ ಒತ್ತಾಯವಿರುವುದು ಹಾಗೂ ಹಲವು ಬಾರಿ ಅಂದಾಜು ಪಟ್ಟಿ ತಯಾರಾಗಿದ್ದರೂ ಅದರ ಕೆಲಸ ಪ್ರಾರಂಭವಾಗದೇ ಇರುವುದು ಸರ್ಕಾರಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸೇತುವೆ ರಚನೆ ಸಲುವಾಗಿ ಸರ್ಕಾರವು ಯಾವ ಕ್ರಮ ಕೈಗೊಂಡಿದೆ.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಬಂದಿದೆ.

ಆ) ಈ ರಸ್ತೆಯು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ. ಕೊಲ್ಲೂರು ಹೊಳೆಗೆ ಸೇತುವೆ ನಿರ್ಮಾಣಕ್ಕೆ ಸುಮಾರು 125 ಲಕ್ಷ ರೂ.ಗಳ ಅಂದಾಜು ಆಗುತ್ತದೆ. ಇಷ್ಟು ಮೊತ್ತದ ಕಾಮಗಾರಿಯನ್ನು ತೆಗೆದುಕೊಳ್ಳಲು ರಾಜ್ಯದ ವತಿಯಿಂದ ಅನುದಾನದ ಕೊರತೆ ಇರುವುದರಿಂದ ಕೇಂದ್ರ ರಸ್ತೆ ನಿಧಿಯಿಂದ ತೆಗೆದುಕೊಳ್ಳಲು

ಉದ್ದೇಶಿಸಿದೆ. ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಸಿ.ಆರ್.ಎಫ್. ಅನುದಾನದ ಬಿಡುಗಡೆಯನ್ನು ಕಾಯಲಾಗುತ್ತಿದೆ.

ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಚುನಾವಣೆ.

69-ಶ್ರೀ ಬಸವರಾಜ ರಾಯ ರೆಡ್ಡಿ (ಯಲ್ಬುರ್ಗ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ಚುನಾವಣೆಯನ್ನು ಯಾವ ದಿನಾಂಕದಂದು ನಡೆಸಲಾಗುವುದು.

ಆ) ಹಾಗೆ ನಡೆಸುವುದಾದಲ್ಲಿ ಆ ಚುನಾವಣೆಗಳನ್ನು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಯ ಈಗಿರುವ ಮಸೂದೆಯ ಅಡಿಯಲ್ಲಿಯೇ ನಡೆಸಲಾಗುತ್ತದೆಯೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ತೀರ್ಥಹಳ್ಳಿಯಲ್ಲಿರುವ ಮುನ್ಸೀಫ್ ನ್ಯಾಯಾಲಯಕ್ಕೆ ಸ್ವಂತ ಕಟ್ಟಡ.

108 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ): ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿಯಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದೆ?

ಆ) ಆ ನ್ಯಾಯಾಲಯಕ್ಕೆ ಸ್ವಂತ ಕಟ್ಟಡ ಇಲ್ಲದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಈ) ಈ ವರ್ಷವೇ ಅಲ್ಲಿ ಕಟ್ಟಡವನ್ನು ಕಟ್ಟಲು ಸರ್ಕಾರದವರು ಕ್ರಮಕೈಗೊಳ್ಳುವರೆ?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ತೀರ್ಥಹಳ್ಳಿಯಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಸುಮಾರು 10 ವರ್ಷಗಳಿಂದ ಕೆಲಸ ಮಾಡುತ್ತಿದೆ.

ಆ) ಹೌದು.

ಇ) ಕಳೆದ 05 ವರ್ಷಗಳಿಂದ ನ್ಯಾಯಾಲಯಗಳ ಹೊಸ ಕಟ್ಟಡಕ್ಕೆ ಮಂಜೂರು ಮಾಡಿರುವ ಅನುದಾನದ ಕೊರತೆಯಿಂದ ಈ ನ್ಯಾಯಾಲಯ ಕಟ್ಟಡ ಸ್ಥಾಪನೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ.

ಈ) ಈ ಬಗ್ಗೆ ಪರಿಶೀಲಿಸಲಾಗುವುದು.

ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ಪ್ರತಿವರ್ಷ ಬರುವ ಸಿಆರ್‌ಎಫ್ ಹಣದ ಮೊತ್ತ

154 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಪ್ರತಿ ವರ್ಷ ಬರಬೇಕಾದ ಸಿ.ಆರ್.ಎಫ್. ಹಣವೆಷ್ಟು?

ಆ) ಇದು ಪ್ರತಿ ವರ್ಷ ನಮ್ಮ ರಾಜ್ಯಕ್ಕೆ ಬರುತ್ತಿದೆಯೇ? ಹಾಗೂ ಇನ್ನೂ ಎಷ್ಟು ಹಣ ಬರಬೇಕಾಗಿದೆ.

ಇ) ಮೂಡಿಗೆರೆ ತಾಲ್ಲೂಕಿನಲ್ಲಿ ಸಿ.ಆರ್.ಎಫ್. ಹಣದಲ್ಲಿ ಎಷ್ಟು ರಸ್ತೆ ಕಾಮಗಾರಿಗಳನ್ನು ಪ್ರಾರಂಭಿಸಲು ಶಿಫಾರಸ್ಸು ಮಾಡಲಾಗಿದೆ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಸಿ.ಆರ್.ಎಫ್. ಅನುದಾನದ ಬಗ್ಗೆ ಸಂಸತ್ತಿನಲ್ಲಿ ಮೇ 1988ರಲ್ಲಿ ಅಂಗೀಕರಿಸಿದ ಹೊಸ ನಿರ್ಣಯದ ಪ್ರಕಾರ ಪ್ರತಿ ವರ್ಷ ರಾಜ್ಯಕ್ಕೆ 15.57 ಕೋಟಿ ರೂ.ಗಳು ಬರಬೇಕಾಗಿದೆ.

ಆ) ಇಲ್ಲ, ಕೇಂದ್ರ ಆರ್ಥಿಕ ಸಚಿವಾಲಯವು ಸಂಸತ್ತಿನಲ್ಲಿ ಅಂಗೀಕರಿಸಿದ ಹೊಸ ನಿರ್ಣಯದ ಪ್ರಕಾರ ಅನುದಾನವನ್ನು ಇದುವರೆವಿಗೂ ರಾಜ್ಯಕ್ಕೆ ಬಿಡುಗಡೆ ಮಾಡಿರುವುದಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಬರಬೇಕಾದ ಹಣ 62.28 ಕೋಟಿ ರೂ.ಗಳು.

ಇ) ಮೂಡಿಗೆರೆ ತಾಲ್ಲೋಕಿನ ಮೂರು ರಸ್ತೆ ಕಾಮಗಾರಿಗಳನ್ನು ಶಿಫಾರಸ್ಸು ಮಾಡಲಾಗಿದೆ.

ಮೂಡಿಗೆರೆ ತಾಲ್ಲೂಕಿನ ಮಾಗುಂಡಿ-ಕಳಸರಸ್ತೆ ಹಾಳಾಗಿರುವ ಕುರಿತು

111 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ಮಾಗುಂಡಿ ಕಳಸ ರಸ್ತೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮೇಲಿನ ರಸ್ತೆ ಅಭಿವೃದ್ಧಿಗೆ ಸರ್ಕಾರ ವಿಶೇಷ ಅನುದಾನ ಬಿಡುಗಡೆ ಮಾಡಿ ದುರಸ್ತಿ ಕೆಲಸಗಳನ್ನು ಮಾಡುವುದೇ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಪಡುಬಿದ್ರೆ-ಕೊಟ್ಟಿಗೆಹಾರದ, ರಸ್ತೆಯ ಮಾಗುಂಡಿ-ಕಳಸ ಭಾಗದ ರಸ್ತೆಯು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ರಸ್ತೆಯ ಭಾಗವನ್ನು ದುರಸ್ತಿ ಪಡಿಸಿ ಅಭಿವೃದ್ಧಿಪಡಿಸಲು ಗುತ್ತಿಗೆಯನ್ನು ಕರೆಯಲಾಗಿದ್ದು ಈ ಸಾಲಿನಲ್ಲಿಯೇ ಪೂರ್ಣಗೊಳಿಸಲಾಗುವುದು.

ಮೂಡಿಗೆರೆ ತಾಲ್ಲೂಕಿನಲ್ಲಿ ಒಟ್ಟು ಸಮಸ್ಯಾತ್ಮಕ ಗ್ರಾಮಗಳ ಸಂಖ್ಯೆ

112 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಎಷ್ಟು ಸಮಸ್ಯಾತ್ಮಕ ಗ್ರಾಮಗಳಿವೆ.

ಆ) ಇಂತಹ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಕೇಂದ್ರ ಸರ್ಕಾರದ ನಿಯಮಾವಳಿ ಪ್ರಕಾರ ಮೂಡಿಗೆರೆ ತಾಲ್ಲೂಕಿನಲ್ಲಿ 1985ರಲ್ಲಿ ಗುರುತಿಸಲಾದ ಸಮಸ್ಯಾತ್ಮಕ ಹಳ್ಳಿಗಳ: ಜನವಸತಿಗಳ ಸಂಖ್ಯೆ 196.

ಆ) ಸಮಸ್ಯಾತ್ಮಕ ಗ್ರಾಮಗಳಿಗೂ ಜನವಸತಿಗಳಿಗೂ 1.60 ಕಿ.ಮೀ. ಒಳಗೆ ಕುಡಿಯುವ ನೀರಿನ ಮೂಲ (ಜಲಮೂಲ) ವನ್ನು ಒದಗಿಸಲಾಗಿದೆ.

ಅರಕಲಗೂಡಿನ ಪ್ರಥಮ ದರ್ಜೆ ನ್ಯಾಯಾಲಯಕ್ಕೆ ಕಟ್ಟಡ

152 - ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು): ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅರಕಲಗೂಡಿನಲ್ಲಿರುವ ಪ್ರಥಮ ದರ್ಜೆ ನ್ಯಾಯಾಲಯಕ್ಕೆ ಕಟ್ಟಡವಿಲ್ಲದೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಅರಕಲಗೂಡಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ನಿರ್ಮಿಸಿರುವ ನೂತನ ಬಸ್ ನಿಲ್ದಾಣವನ್ನು ನ್ಯಾಯಾಲಯದ ಕಟ್ಟಡಕ್ಕೆ ವಹಿಸಿಕೊಳ್ಳುವಂತೆ ಪ್ರಸ್ತಾವನೆ ಎಂದಿನಿಂದ ನಡೆದಿರುತ್ತದೆ.

ಇ) ಇದಕ್ಕೆ ವಿಳಂಬವಾಗಲು ಕಾರಣಗಳೇನು ?

ಈ) ವಿಳಂಬವನ್ನು ಪರಿಹರಿಸಲು ಸರ್ಕಾರವು ಏನು ಕ್ರಮ ಕೈಗೊಂಡಿರುತ್ತದೆ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ಹೌದು.

ಆ) ಅರಕಲಗೂಡಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ನಿರ್ಮಿಸಿರುವ ನೂತನ ಬಸ್ ನಿಲ್ದಾಣವನ್ನು ನ್ಯಾಯಾಲಯ ಕಟ್ಟಡಕ್ಕೆ ರೂ. 12,85,04-5-00ಖರೀದಿಸುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ.

ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಚುನಾವಣೆ

151 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ಚುನಾವಣೆಗಳನ್ನು ಯಾವಾಗ ನಡೆಸಲು ಸರ್ಕಾರ ಉದ್ದೇಶಿಸಿದೆ.

ಆ) ಚುನಾವಣೆಗೂ ಮುಂಚೆ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ಕ್ಷೇತ್ರಗಳ ಪುನರ್ ವಿಂಗಡಣೆ ಮಾಡಲಾಗುವುದೇ ?

ಇ) ಮಾಡುವುದಾದಲ್ಲಿ ಕ್ಷೇತ್ರಗಳ ಪುನರ್ ವಿಂಗಡಣೆಗೆ ಎಷ್ಟು ಕಾಲಾವಕಾಶ ಬೇಕಾಗುತ್ತದೆ.

ಈ) ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿ ನಿಯಮಗಳಿಗೆ ತಿದ್ದುಪಡಿಗಳನ್ನು ತರಲು ಸರ್ಕಾರವು ಉದ್ದೇಶಿಸಿರುತ್ತದೆಯೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) -ಅದೇ-

ಇ) . -ಅದೇ-

ಈ) -ಅದೇ-

ಶಿಕಾರಿಪುರ ಪಟ್ಟಣದಲ್ಲಿ ಮಿನಿ ವಿಧಾನಸೌಧ.

216 - ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ಪಟ್ಟಣದಲ್ಲಿ "ಮಿನಿ ವಿಧಾನ ಸೌಧ" ಕಟ್ಟಲು ಸರ್ಕಾರವು ತೀರ್ಮಾನಿಸಿದೆಯೇ?

ಆ) ಹಾಗಿದ್ದರೆ ಈ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಹೌದು.

ಆ) 45 ಲಕ್ಷ ರೂ. ಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಅದೇ ಸಂಖ್ಯೆ ಆರ್‌ಡಿ 78 ಡಬ್ಲ್ಯೂಬಿಆರ್ 90 ದಿನಾಂಕ 28-9-92 ರಲ್ಲಿ ನೀಡಿದ್ದು, ಈಗಾಗಲೇ ಗುತ್ತಿಗೆ ಸವಾಲನ್ನು ದಿನಾಂಕ 8-1-1993ಕ್ಕೆ ಕೊನೆದಿನವಾಗಿ ಆಹ್ವಾನಿಸಿದೆ. ಗುತ್ತಿಗೆ ಸವಾಲ್ ಅನುಮೋದನೆ ಆದಕೂಡಲೆ ಕಾರ್ಯ ಪ್ರಾರಂಭಿಸಲಾಗುವುದು.

ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಬಗ್ಗೆ

218 - ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯ್ತಿಗಳ ಚುನಾಯಿತ ಪ್ರತಿನಿಧಿಗಳ ಕಾಲಾವಧಿ ಮುಗಿದ ಮೇಲೆ ಈ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಮಾಡದೆ ಇರಲು ಕಾರಣವೇನು?

ಆ) ಈ ಸಂಸ್ಥೆಗಳಿಗೆ ಸಲಹಾ ಸಮಿತಿಗಳನ್ನು ನೇಮಿಸಲು ಸರ್ಕಾರಕ್ಕೆ ಉದ್ದೇಶವಿದೆಯೇ?

ಇ) ಇದ್ದಲ್ಲಿ ಈ ಕ್ರಮ ಜನತಂತ್ರ ವಿರೋಧಿ ಕ್ರಮ ಎಂಬುದು ಸರ್ಕಾರಕ್ಕೆ ತಿಳಿದಿಲ್ಲವೆ?

ಈ) ಅಂತಹಾ ಸಲಹಾ ಸಮಿತಿಯನ್ನು ನೇಮಿಸುವಂತಹ ಆಲೋಚನೆಯನ್ನು ಕೈಬಿಟ್ಟು ಸರ್ವೋಚ್ಚನ್ಯಾಯಾಲಯದ ತೀರ್ಮಾನದ ಪ್ರಕಾರ ಈ ಸಂಸ್ಥೆಗಳಿಗೆ ಯಾವ ದಿನಾಂಕದಂದು ಚುನಾವಣೆ ನಡೆಸಲಾಗುವುದು.

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) -ಇಲ್ಲ-

ಇ) ಉದ್ಭವಿಸುವುದಿಲ್ಲ.

ಈ) ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಕಟೀಲು ಬೈಪಾಸುರಸ್ತೆ

265 - ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಟೀಲು ದೇವಸ್ಥಾನದ ವಠಾರದಲ್ಲಿ ಜನ ಸಂದಣಿಯಿಂದ ರಾಜ್ಯ ಹೆದ್ದಾರಿಯಲ್ಲಿ ವಾಹನಸಂಚಾರಕ್ಕೆ ತೊಂದರೆಯಾಗುವುದರಿಂದ ಬೈಪಾಸು ರಸ್ತೆಯ ನಿರ್ಮಾಣ ಮಾಡಲಾಗುವುದೆಂದು ವಿಧಾನಸಭೆಯಲ್ಲಿ ಇತ್ತ ಭರವಸೆಯಂತೆ ಸರ್ಕಾರವು ಏನು ಕ್ರಮ ಕೈಗೊಂಡಿದೆ.

ಆ) ಈ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು?

ಇ) ವಿಮಾನ ನಿಲ್ದಾಣಕ್ಕೆ ಹೋಗುವ ಜನರಿಗೆ ತೊಂದರೆಯಾಗದಂತೆ ಈ ರಸ್ತೆಯ ನಿರ್ಮಾಣವನ್ನು ಯಾವಾಗ ಪ್ರಾರಂಭ ಮಾಡಲಾಗುವುದು.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಭೂಸ್ವಾಧೀನದ ವಿಷಯವನ್ನು ಒಳಗೊಂಡಿದ್ದರಿಂದ ಈ ಕಾಮಗಾರಿಯನ್ನು 1992-93ನೇ ಸಾಲಿನ ಆಯವ್ಯಯದ ಪಟ್ಟಿಯಲ್ಲಿ ಸೇರಿಸಲಾಗಿಲ್ಲ.

ಆ) ಒಟ್ಟು 13.00 ಲಕ್ಷ ರೂ. ಅಂಧಾಜಾಗುತ್ತದೆ.

ಇ) ಭೂಸ್ವಾಧೀನವಾದ ನಂತರ ಕೆಲಸವನ್ನು ಪ್ರಾರಂಭಿಸಲಾಗುವುದು.

ಚಿತಾಪುರ ಬಳಿ ರೈಲ್ವೆ ಹಳಿ ಮೇಲೆ ಸೇತುವೆ ನಿರ್ಮಾಣ.

863-ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಹಾಗೂ ಚಿತ್ತಾಪೂರ ಕ್ಷೇತ್ರದ ಸುಮಾರು 25-30 ಗ್ರಾಮಗಳಿಗೆ ಸಂಪರ್ಕವಿರುವ ರಸ್ತೆಗೆ ಚಿತ್ತಾಪೂರಿನ ಸಮೀಪ ರೈಲ್ವೆ ಹಳಿ ಮೇಲೆ ಸೇತುವೆ ಇಲ್ಲದೆ ಬಸ್ಸುಗಳು ಹಾಗೂ ವಾಹನಗಳ ಪ್ರಯಾಣ ಕಷ್ಟಕರವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ಮೇಲಿನ ಸೇತುವೆಗಾಗಿ ಅಡಿಗಲ್ಲು ಸಮಾರಂಭವನ್ನು ಮಾಡಿದ್ದು ನಿಜವೇ?

ಇ) ಹಾಗಿದ್ದಲ್ಲಿ ಅಡಿಗಲ್ಲು ಸಮಾರಂಭ ಮಾಡಿರುವ 'ಸ್ಥಳ ಯಾವ ಸರ್ವೆ ನಂಬರಿನಲ್ಲಿ ಇದೆ. ಈ ಕೆಲಸ ಮಂಜೂರಾಗಿದ್ದರೂ ಕೆಲಸ ಪ್ರಾರಂಭವಾಗಿಲ್ಲದಿರುವುದಕ್ಕೆ ಕಾರಣಗಳೇನು?

ಈ) ಈಗಾಲಾದರೂ ಕೆಲಸ ಪ್ರಾರಂಭ ಮಾಡಿ ಆ ಭಾಗದ ಜನರ ಹಾಗೂ ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಗಮನಕ್ಕೆ ಬಂದಿರುತ್ತದೆ.

ಆ) ನಿಜ.

ಇ) ಚಿತ್ತಾಪುರದ ಚಿತ್ತಾಪುರ (ಪಿ) 129ನೇ ಸರ್ವೆ ನಂಬರಿನಲ್ಲಿ ಅಡಿಗಲ್ಲೂ ಮಾಡಲಾಯಿತು. ರೈಲ್ವೆ ಮೇಲು ಸೇತುವೆಯನ್ನು ರೈಲ್ವೆ ಇಲಾಖೆಯವರೇ ಮಾಡಬೇಕಿದ್ದು, ಇದಕ್ಕಾಗಿ ಅವರಿಗೆ 18.62 ಲಕ್ಷ ರೂ.ಗಳ ಠೇವಣಿಯನ್ನು ಸಹ ಮಾಡಲಾಗಿದೆ. ಪೂರ್ವಭಾವಿ ಪರಿಶೀಲನೆ ನಡೆದಿದ್ದು ರೈಲ್ವೆ ಇಲಾಖೆಯವರು ನಕ್ಷೆಗಳನ್ನು ಅಂತಿಮಗೊಳಿಸಬೇಕಾಗಿದೆ.

ಈ) ಶೀಘ್ರ ಕೆಲಸ ಪ್ರಾರಂಭಿಸಲು ರೈಲ್ವೆ ಇಲಾಖೆಯವರಿಗೆ ಒತ್ತಾಯಿಸಲಾಗುತ್ತಿದೆ.

ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4-ನ್ನು ಅಗಲಗೊಳಿಸುವುದು.

943 - ಶ್ರೀ ಎಸ್.ಷಫಿ ಅಹ್ಮದ್ (ತುಮಕೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-4ನ್ನು ನಾಲ್ಕುಪಥ ರಸ್ತೆಯನ್ನಾಗಿ ಅಗಲ ಗೊಳಿಸುವ ಕಾರ್ಯಕ್ರಮ ಯಾವ ಹಂತದಲ್ಲಿದೆ?

ಆ) ನೆಲಮಂಗಲದಿಂದ ತುಮಕೂರ್‌ವರೆಗಿನ ಕೆಲಸವನ್ನು ಯಾವಾಗ ತೆಗೆದುಕೊಳ್ಳಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಭಾರತ ಸರ್ಕಾರದ ಭೂಸಾರಿಗೆ ಮಂತ್ರಾಲಯದ ಪರಿಶೀಲನೆಯಲ್ಲಿದೆ.

ಆ) ರಾಷ್ಟ್ರೀಯ ಹೆದ್ದಾರಿ ನಂ. 4 ರಲ್ಲಿ ನೆಲಮಂಗಲದಿಂದ ತುಮಕೂರುವರೆಗಿನ 45 ಕಿ.ಮೀ.ಗಳು ಉದ್ದದ ದ್ವಿಪಥ ರಸ್ತೆಯನ್ನು ನಾಲ್ಕು ಪಥ ರಸ್ತೆಯನ್ನಾಗಿ ಪರಿವರ್ತಿಸುವ ಮತ್ತು ಬಲಪಡಿಸುವ ಕೆಲಸದ ಸರ್ವೆ ಮತ್ತು ಇನ್ವೆಷ್ಟಿಗೇಷನ್ ಕಾರ್ಯ ಮುಗಿದಿದ್ದು, ಸದರಿ ಕೆಲಸವನ್ನು ಏಷಿಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಸಹಾಯ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲು ಕೇಂದ್ರ ಸರ್ಕಾರದವರು ಶಿಫಾರಸ್ಸು ಮಾಡಿರುತ್ತಾರೆ. ಈ ಯೋಜನೆಯು ಬ್ಯಾಂಕಿನ ಪರಿಶೀಲನೆಯಲ್ಲಿದೆ. ಒಪ್ಪಿಗೆ ದೊರೆತ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಜಿಲ್ಲಾ ಪರಿಷತ್ತುಗಳಿಂದ ರಸ್ತೆ ಡಾಂಬರೀಕರಣಕ್ಕೆ ಪಡೆಯಲಾದ ಹಣ.

338 - ಶ್ರೀ ಎಸ್.ಶಫಿ ಅಹಮದ್ (ತುಮಕೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್ತುಗಳಿಂದ ಪಡೆಯಲಾದ ರಸ್ತೆಗಳನ್ನು ಡಾಂಬರೀಕರಣ ಮಾಡುವ ಸಲುವಾಗಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ನೀಡಲಾದ ಅನುದಾನ ಎಷ್ಟು? ಹಾಗೂ ಈ ಕೆಲಸಗಳು ಯಾವಾಗ ಪ್ರಾರಂಭವಾಗುತ್ತವೆ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):

ಅ) ಅನುದಾನವನ್ನು ಇನ್ನೂ ಬಿಡುಗಡೆ ಮಾಡಿರುವುದಿಲ್ಲ. 1993 - 94ನೇ ಸಾಲಿನಿಂದ ಅಭಿವೃದ್ಧಿ ಕಾಮಗಾರಿಗಳನ್ನು ಹಂತಹಂತವಾಗಿ ತೆಗೆದುಕೊಳ್ಳುವ ಪ್ರಸ್ತಾಪವಿದೆ.

ರಸ್ತೆಗಳನ್ನು ದುರಸ್ತಿ ಮಾಡಲು ಹಣ ಬಿಡುಗಡೆ

358 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1992 - 93ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ತ್ ರಸ್ತೆಗಳನ್ನು ಜಿಲ್ಲಾಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡ ನಂತರ ಎಷ್ಟು ಹಣವನ್ನು ದುರಸ್ತಿಗಾಗಿ ಲೋಕೋಪಯೋಗಿ ಇಲಾಖೆಗೆ ಬಿಡುಗಡೆ ಮಾಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

ಆ) ಇನ್ನೂವರೆಗೂ ಹಣ ಬಿಡುಗಡೆಯಾಗದಿದ್ದಲ್ಲಿ ಇನ್ನು ಎಷ್ಟು ದಿವಸಗಳಲ್ಲಿ ಹಣ ಬಿಡುಗಡೆ ಮಾಡಲಾಗುವುದು?

ಇ) ಹಣ ಬಿಡುಗಡೆ ಮಾಡದೇ ಇರುವುದರಿಂದ ರಸ್ತೆಗಳನ್ನು ದುರಸ್ತಿ ಮಾಡದೇ ರಸ್ತೆಗಳು ಮತ್ತಷ್ಟು ಕೆಡುತ್ತಿರುವ ಸಂಗತಿ ಸರಕಾರದವರ ಗಮನಕ್ಕೆ ಬಂದಿದೆಯೇ?

ಈ) ವಿಧಾನ ಸಭಾ ಸದಸ್ಯರು ಶಿಫಾರಸ್ಸು ಮಾಡಿದ ರಸ್ತೆಗಳನ್ನು ದುರಸ್ತಿ ಮಾಡಿಸುವ ಕೆಲಸಕ್ಕೆ ಇದುವರೆಗೂ ಪೂರ್ಣ ಹಣ ಕೊಡದೇ ಇರುವ ಸಂಗತಿ ಸರಕಾರದವರ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಇನ್ನೂ ಎಷ್ಟು ಹಣ ಕೊಡಬೇಕಾಗಿವುದು?

ಊ) ಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ? ಮತ್ತು ಇನೂ ಎಷ್ಟು ಹಣವನ್ನು ಬಿಡುಗಡೆ ಮಾಡಬೇಕಾಗಿದೆ.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಹಣ ಬಿಡುಗಡೆಯಾಗಿಲ್ಲ.

ಆ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಸರ್ಕಾರದ ಗಮನಕ್ಕೆ ಬಂದಿದೆ.

ಈ) ಹೌದು. ಗಮನಕ್ಕೆ ಬಂದಿದೆ.

ಉ) ಇನ್ನೂ 324 ಲಕ್ಷ ರೂ.ಗಳನ್ನು ನೀಡಬೇಕಿದ್ದು ಈ ಸಾಲಿನಲ್ಲಿ ನೀಡಲಾಗಿದೆ.

ಊ) ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಅನುಬಂಧ

12.00 ಲಕ್ಷ ರೂ.ಗಳ ಕಾಮಗಾರಿಗಳನ್ನು ತೆಗೆದುಕೊಂಡಿರುವ ವಿಧಾನಸಭಾ ಕ್ಷೇತ್ರಗಳ ವಿವರ

ಕ್ರ. ಸಂ.	ಜಿಲ್ಲೆ ಮತ್ತು ವಿಧಾನಸಭಾ ಕ್ಷೇತ್ರ	ನಿಗಧಿಪಡಿಸಿದ	ಅಕ್ಟೋಬರ್
1.	**ಬೆಂಗಳೂರು ಜಿಲ್ಲೆ**		
	1) ಉತ್ತರ ಹಳ್ಳಿ 2) ವರ್ತೂರು		
	3) ಆನೇಕಲ್ 4) ಯಲಹಂಕ		
	5) ಹೊಸಕೋಟೆ 6) ಮಾಗಡಿ		
	7) ನೆಲಮಂಗಲ 8) ಕೊರಟಗೆರೆ		
	9) ದೊಡ್ಡಬಳ್ಳಾಪುರ 10) ದೇವನಹಳ್ಳಿ		
	11) ರಾಮನಗರ 12) ಚನ್ನಪಟ್ಟಣ		
	13) ಕನಕಪುರ 14)ಸಾತನೂರು	168.00	169.35
2.	**ಕೋಲಾರ ಜಿಲ್ಲೆ :**		
	1) ಕೋಲಾರ 2) ವೇಮಗಲ್		
	3) ಬೇತಮಂಗಲ 4) ಕೆ.ಜಿ.ಎಫ್		
	5) ಮಾಲೂರು 6) ಶಿಡ್ಲಘಟ್ಟ		
	7) ಚಿಕ್ಕಬಳ್ಳಾಪುರ 8)ಚಿಂತಾಮಣಿ		
	9)ಬಾಗೇಪಲ್ಲಿ 10) ಗೌರಿಬಿದನೂರು		
	11) ಶ್ರೀನಿವಾಸಪುರ 12) ಮುಳಬಾಗಿಲು	144.00	142.79
3.	**ತುಮಕೂರು ಜಿಲ್ಲೆ**		
	1) ತುಮಕೂರು 2)ಗುಬ್ಬಿ 3)ಕುಣಿಗಲ್		
	4)ತುರುವೇಕೆರೆ 5)ಬೆಳ್ಳಾವಿ 6)ತಿಪಟೂರು		
	7) ಸಿ.ಎನ್.ಹಳ್ಳಿ 8)ಕಳ್ಳಂಬಳ್ಳ 9)ಶಿರಾ		
	10) ಕೊರಟಗೆರೆ 11)ಮಧುಗಿರಿ		
	12) ಪಾವಗಡ 13)ಹುಲಿಯೂರುದುರ್ಗ	156.00	126.26
4.	**ಮೈಸೂರು ಜಿಲ್ಲೆ**		
	1) ಕೃಷ್ಣರಾಜಪುರಂ 2)ಚಾಮರಾಜಪುರ		
	3)ನರಸಿಂಹರಾಜಪುರ 4) ಚಾಮುಂಡೇಶ್ವರಿಪುರಂ		
	5) ಬನ್ನೂರು 6) ಟೀ.ನರಸೀಪುರ		
	7)ನಂಜನಗೂಡು 8)ಸಂತೇಮಾರನಹಳ್ಳಿ		
	9)ಕೆ.ಆರ್.ನಗರ 10)ಪಿರಿಯಾಪಟ್ಟಣ		
	11) ಹುಣಸೂರು 12)ಹೆಚ್.ಡಿ.ಕೋಟೆ		
	13)ಚಾಮರಾಜನಗರ 14)ಗುಂಡ್ಲುಪೇಟೆ		
	15)ಕೊಳ್ಳೇಗಾಲ	180.00	204.57

5. ಮಂಡ್ಯ ಜಿಲ್ಲೆ		
1) ಮಂಡ್ಯ 2)ಕೆರೆಗೋಡು 3)ಮದ್ದೂರು		
4)ಮಳವಳ್ಳಿ 5) ಕಿರುಗಾವಲು		
6)ಕೆ.ಆರ್.ಪೇಟೆ 7) ನಾಗಮಂಗಲ		
8) ಶ್ರೀರಂಗಪಟ್ಟಣ 9) ಪಾಂಡವಪುರ	108-00	128.40
6. ಶಿವಮೊಗ್ಗ ಜಿಲ್ಲೆ		
1) ಶಿವಮೊಗ್ಗ 2)ಹೊನ್ನಾಳಿ		
3)ಹೊಳೆಹೊನ್ನೂರು 4)ಭದ್ರಾವತಿ		
5) ಚನ್ನಗಿರಿ 6) ತೀರ್ಥಹಳ್ಳಿ 7) ಸಾಗರ		
8) ಹೊಸನಗರ 9)ಶಿಕಾರಿಪುರ 10)ಸೊರಬ	120.00	115.91
7. ಚಿಕ್ಕಮಗಳೂರು ಜಿಲ್ಲೆ		
1) ಚಿಕ್ಕಮಗಳೂರು 2) ಮೂಡಿಗೆರೆ		
3) ಬೀರೂರು 4)ಕಡೂರು		
5) ತರೀಕೆರೆ 6) ಶೃಂಗೇರಿ	72.00	73.76
8. ಚಿತ್ರದುರ್ಗ ಜಿಲ್ಲೆ		
1) ಚಿತ್ರದುರ್ಗ 2) ಹಿರಿಯೂರು		
3) ಚಳ್ಳಕೆರೆ 4) ಮೊಳಕಾಲ್ಮೂರು		
5) ಜಗಳೂರು 6)ಬ್ರಹ್ಮಸಾಗರ		
7) ದಾವಣಗೆರೆ 8) ಮಾಯಕೊಂಡ		
9)ಹರಿಹರ 10) ಹೊಸದುರ್ಗ		
11) ಹೊಳಲ್ಕೆರೆ	132.00	97.57
9. ಕೊಡಗು (ಮಡಿಕೇರಿ ಜಿಲ್ಲೆ)		
1) ವೀರಾಜಪೇಟೆ 2)ಸೋಮವಾರಪೇಟೆ		
3) ಮಡಿಕೇರಿ	36.00	59.97
10. ಹಾಸನ ಜಿಲ್ಲೆ		
1) ಹಾಸನ 2) ಬೇಲೂರು		
3) ಶ್ರವಣಬೆಳಗೊಳ 4)ಗಂಡಸಿ		
5)ಅರೇಕೆರೆ 6)ಹೊಳೆನರಸೀಪುರ		
7)ಅರಕಲಗೂಡು 8)ಸಕಲೇಶಪುರ	96.00	97.87
11. ದಕ್ಷಿಣ ಕನ್ನಡ ಜಿಲ್ಲೆ		
1) ಮಂಗಳೂರು 2) ಉಲ್ಲಾಳ 3) ಸೂರತ್ಕಲ್		
4) ಬಂಟ್ವಾಳ 5) ಮೂಲ್ಕಿ 6) ಮೂಡಬಿದ್ರಿ		
7) ಪುತ್ತೂರು 8) ವಿಠ್ಠಲ 9) ಸುಳ್ಯ		
10) ಕಾಪು 11)ಉಡುಪಿ 12) ಬ್ರಹ್ಮಾವರ		
13) ಕಾರ್ಕಳ 14) ಬೆಳ್ತಂಗಡಿ 15) ಕುಂದಾಪುರ		
16) ಬೈಂದೂರು	192.00	159.00

12. ಧಾರವಾಡ ಜಿಲ್ಲೆ		
1)ಗದಗ 2) ನವಲಗುಂದ 3) ರೋಣ		
4)ನರಗುಂದ 5)ಶಿರಹಟ್ಟಿ 6)ಮುಂಡರಗಿ		
7)ಧಾರವಾಡ ಸಿಟಿ		
8) ಧಾರವಾಡ ಗ್ರಾಮೀಣ 9) ಕಲಘಟಕಿ		
10) ಹುಬ್ಬಳ್ಳಿ ಸಿಟಿ 11)ಹುಬ್ಬಳ್ಳಿ ಗ್ರಾಮೀಣ		
12)ಕುಂದಗೋಳ 13) ಹಾವೇರಿ		
14) ಶಿಗ್ಗಾಂವ್ 15) ಬ್ಯಾಡಗಿ		
16) ರಾಣಿಬೆನ್ನೂರು 17) ಹಿರೇಕೆರೂರು		
18)ಹಾನಗಲ್	228.00	234.91
13. ಉತ್ತರ ಕನ್ನಡ ಜಿಲ್ಲೆ (ಕಾರವಾರ)		
1) ಕಾರವಾರ 2) ಕುಮಟಾ 3) ಅಂಕೋಲಾ		
4)ಬಟ್ಕಳ 5) ಶಿರಸಿ 6) ಹಳಿಯಾಳ	72.00	81.68
14. ಬಳ್ಳಾರಿ ಜಿಲ್ಲೆ		
1) ಬಳ್ಳಾರಿ 2) ಕುರುಗೋಡು 3)ಶಿರಗೊಪ್ಪ		
4) ಹೊಸಪೇಟೆ 5) ಸಂಡೂರು		
6) ಹರಪನಹಳ್ಳಿ 7) ಕೊಟ್ಟೂರು		
8) ಕೊಡ್ಲಿಗಿ 9) ಹಡಗಲಿ	108.00	98.78
15. ಗುಲ್ಬರ್ಗಾ ಜಿಲ್ಲೆ		
1) ಚಿಂಚೋಳಿ 2) ಶೋರಾಪುರ		
3)ಶಹಾಪುರ 4)ಯಾದಗೀರ್ 5)ಚಿತ್ತಾಪುರ		
6) ಸೇಡಂ 7)ಶಹಬಾದ್ 8) ಅಲಂದ್		
9) ಅಫಜಲಪುರ 10)ಕಮಲಾಪುರ		
11) ಜೇವರ್ಗಿ 12) ಗುಲ್ಬರ್ಗಾ		
13) ಗುರುಮಿಟ್ಕಲ್	156.00	83.65
16. ಬೀದರ್ ಜಿಲ್ಲೆ		
1) ಬೀದರ್ 2)ಹುಮ್ನಾಬಾದ್ 3) ಭಾಲ್ಕಿ		
4) ಔರಾದ್ 5) ಹುಲಸೂರು		
6) ಬಸವಕಲ್ಯಾಣ	72.00	65.71
17. ಬೆಳಗಾಂ ಜಿಲ್ಲೆ		
1) ಬೆಳಗಾಂ 2)ಬಾಗೇವಾಡಿ 3) ಬೈಲಹೊಂಗಲ		
4) ಕಿತ್ತೂರು 5)ಖಾನಪುರ 6)ಸವದತ್ತಿ		
7) ಹುಕ್ಕೇರಿ 8)ಸಂಕೇಶ್ವರ 9)ಗೋಕಾಕ್		
10)ಚಿಕ್ಕೋಡಿ 11) ಹಿಂಡಲಗಾ 12) ನಿಪ್ಪಾಣಿ		
13) ರಾಯಭಾಗ 14)ಅಥಣಿ 15) ಕಾಗರ	180.00	24.38

18. ಬಿಜಾಪುರ ಜಿಲ್ಲೆ		
1) ಬಿಜಾಪುರ 2) ತಿಕೋಟಾ 3)ಇಂಡಿ		
4) ಬಳ್ಳೋಳಿ 5) ಶಿಂದಗಿ		
6) ಬಸವನಬಾಗೇವಾಡಿ 7) ಹೂವಿನಪ್ಪರಗಿ		
8) ಮುದ್ದೇನಬಿಹಾಳ 9) ಜಮಖಂಡಿ		
10) ಮುಧೋಳ್ 11)ಬಾಗಲಕೋಟೆ		
12)ಬಿಳಗಿ 13) ಹುನಗುಂದ 14)ಬಾದಾಮಿ		
15)ಗುಳೇದಗುಡ್ಡ	180.00	126.55
19. ರಾಯಚೂರು ಜಿಲ್ಲೆ.		
1) ರಾಯಚೂರು 2)ಕಲ್ಮಲ 30 ದೇವದುರ್ಗ		
4) ಲಿಂಗಸುಗೂರು 5) ಮಾನ್ವಿ 6) ಕುಷ್ಟಗಿ		
7) ಶಿಂಧನೂರು 8) ಯಲಬುರ್ಗಾ 9) ಕೊಪ್ಪಳ		
10)ಕನಕಗಿರಿ 11) ಗಂಗಾವತಿ	132.00	117.85
ಒಟ್ಟು	2532.00	2208.46

ವರದಕ್ಷಿಣೆ ಹಾಗೂ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ತಪ್ಪಿಸಲು ಕ್ರಮ

364 - ಶ್ರೀ ವಾಟಾಳ್ ನಾಗಾರಾಜ್ (ಚಾಮರಾಜನಗರ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವರದಕ್ಷಿಣೆ ಹಾಗೂ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಪ್ಪಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

1) ರಾಜ್ಯದಲ್ಲಿ ಹೆಚ್ಚುತ್ತಿರುವ ವರದಕ್ಷಿಣೆ ಸಾವು ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ತನಿಖೆ ವಿಚಾರಣೆ ನಡೆಸಲು ಸಿಒಡಿಯಲ್ಲಿ ಒಂದು ಪ್ರತ್ಯೇಕ ದಳ'ನ್ನು ಸರ್ಕಾರ 1989ರಲ್ಲಿ ಮಂಜೂರು ಮಾಡಿದೆ. ಈ ದಳವು ಇದುವರೆವಿಗೂ ಸುಮಾರು 450 ಕ್ಕೂ ಹೆಚ್ಚಿನ ವರದಕ್ಷಿಣೆ ಸಾವಿನ ಪ್ರಕರಣಗಳ ತನಿಖೆಯನ್ನು ಯಶಸ್ವಿಯಾಗಿ ಮಾಡಿ ಮುಗಿಸಿದೆ. ಸರ್ಕಾರವು ದಿನಾಂಕ 25-1-92ರ ತನ್ನ ಆದೇಶದಲ್ಲಿ ವರದಕ್ಷಿಣೆ ನಿಷೇಧ ದಳಕ್ಕೆ 2 ಉಪ ಆರಕ್ಷಕ ಅಧೀಕ್ಷಕರು, 11 ಮಹಿಳಾ ಪೋಲೀಸ್ ನಿರೀಕ್ಷಕರು, 4 ಪೋಲೀಸ್ ನಿರೀಕ್ಷಕರುಗಳ ಹೆಚ್ಚಿನ ಹುದ್ದೆಗಳನ್ನು ಇತರ ಸಲಕರಣೆಗಳೊಂದಿಗೆ ಮಂಜೂರು ಮಾಡಿದೆ.

2) ವರದಕ್ಷಿಣೆ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳ ವಿಚಾರಣೆಗಾಗಿ, ಬೆಂಗಳೂರಿನಲ್ಲಿ ಒಂದು ವಿಶೇಷ ನ್ಯಾಯಾಲಯವನ್ನು 1990ರ ಆಗಸ್ಟ್ ತಿಂಗಳಿನಲ್ಲಿ ಸ್ಥಾಪಿಸಲಾಗಿದೆ. ಇದು ಪ್ರಕರಣಗಳ ಶೀಘ್ರ ವಿಲೇವಾರಿಗೆ ಬಹಳ ಸಹಾಯಕಾರಿಯಾಗಿದೆ.

3) 1992ರಲ್ಲಿ ಈ ನ್ಯಾಯಾಲಯವು 8 ಪ್ರಕರಣಗಳಲ್ಲಿ ಸಂಬಂಧಪಟ್ಟ ಆರೋಪಿಗಳಿಗೆ ಶಿಕ್ಷೆಯನ್ನು ವಿಧಿಸಿದೆ. ಈ ಶಿಕ್ಷೆಯ ಪ್ರಮಾಣವು ಜೀವಾವಧಿ ಶಿಕ್ಷೆಯೂ ಸೇರಿದಂತೆ 7ರಿಂದ 3 ವರ್ಷಗಳ ಅವಧಿಯವರೆಗೆ ಆಗಿರುತ್ತದೆ.

4) ಮಹಿಳೆಯ ಮೇಲಿನ ದೌರ್ಜನ್ಯದ ಪ್ರಕರಣಗಳ ವಿಶ್ಲೇಷಣೆ ನಡೆಸಿ,ಸೂಕ್ತ ಸಲಹೆಗಳನ್ನು ನೀಡಲು ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದ್ದು, ಸರ್ಕಾರದ ಕಾನೂನು ಕಾರ್ಯದರ್ಶಿಯವರು ಇದರ ಮುಖ್ಯಸ್ಥರಾಗಿರುತ್ತಾರೆ. ಪೋಲೀಸ್ ಮಹಾ ನಿರ್ದೇಶಕರು ಸರ್ಕಾರದ ಒಳಾಡಳಿತ ಇಲಾಖೆಯ ಕಾರ್ಯದರ್ಶಿಯವರು ಮತ್ತು ಅಭಿಯೋಗ ನಿರ್ದೇಶಕರು ಈ ಸಮಿತಿಯ ಸದಸ್ಯರಾಗಿರುತ್ತಾರೆ.

5) ಮಹಿಳೆಯರ ಮೇಲಿನ ದೌರ್ಜನ್ಯಗಳು ಮತ್ತು ವರದಕ್ಷಿಣೆ ಸಾವಿರ ಪ್ರಕರಣಗಳನ್ನು ತನಿಖೆ ಮಾಡುವ ಪೋಲೀಸ್ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳು, ಚರ್ಚಾಕೂಟಗಳನ್ನು ಏರ್ಪಡಿಸಿದ್ದು, ಸಮಾಜ ಸೇವಕರು, ವೈದ್ಯಕೀಯ ವೃತ್ತಿಯವರು, ಕಾನೂನು ಪರಿಣಿತರನ್ನು ಕರೆಯಿಸಿ ಉಪನ್ಯಾಸ ನೀಡಲಾಗುತ್ತಿದೆ. ಹಾಗೂ ವರದಕ್ಷಿಣೆ ಪಿಡುಗಿನ ಬಗ್ಗೆ ಸಮಾಜವನ್ನು ಎಚ್ಚರಗೊಳಿಸಲಾಗುತ್ತಿದೆ.

6) ಮಹಿಳೆಯರ ಮೇಲಿನ ದೌರ್ಜನ್ಯಗಳಲ್ಲಿ ನ್ಯಾಯಾಲಯವು ಆರೋಪಿಗಳಿಗೆ ಶಿಕ್ಷೆ ವಿಧಿಸಿದ ಬಗ್ಗೆ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ನೀಡಲಾಗುತ್ತಿದೆ.

7) ವರದಕ್ಷಿಣೆ ಸಾವಿನ ಪ್ರಕರಣಗಳನ್ನು ಘೋರ ಅಪರಾಧವೆಂದು ಪರಿಗಣಿಸಿ ಇಲಾಖೆಯ ಉನ್ನತ ಅಧಿಕಾರಿಗಳ ಅಂದರೆ ಡಿವೈಎಸ್‌ಪಿ ದರ್ಜೆಯ ಅಧಿಕಾರಿಗಳಿಂದ ತನಿಖೆಯನ್ನು ನಡೆಸಲಾಗುತ್ತಿದೆ.

8) ವರದಕ್ಷಿಣೆ ಸಮಸ್ಯೆಗಳ ನಿವಾರಣೆಗಾಗಿ ಪೋಲೀಸ್ ಇಲಾಖೆಯ ಅಧಿಕಾರಗಳ, ಅಭಿಯೋಜಕರುಗಳು ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಗಾಗ ಸಭೆ ಸೇರಿ ಚರ್ಚಿಸಿ, ಸುಧಾರಣಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಚುನಾವಣೆ

363-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಜಿಲ್ಲಾ ಪರಿಷತ್, ಮಂಡಲ ಪಂಚಾಯ್ತಿ ಚುನಾವಣೆಗಳನ್ನು ನಡೆಸುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಪ್ರತಿಹಳ್ಳಿಗೂ ಒಳಚರಂಡಿ, ಕುಡಿಯುವ ನೀರಿನ ವ್ಯವಸ್ಥೆ

364-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟುಉತ್ತರಿಸುವರೆ?

ಅ) ಸರ್ಕಾರವು ಪ್ರತಿ ಹಳ್ಳಿಗಳಲ್ಲೂ ಈ ಕೆಳಗಿನ ವ್ಯವಸ್ಥೆಗಳಿಗೆ ವಿಶೇಷ ಯೋಜನೆಯನ್ನು ಹಾಕಿಕೊಂಡಿರುವುದೆ?

ಅ) ಒಳಚರಂಡಿ ವ್ಯವಸ್ಥೆ?

ಆ) ಕುಡಿಯುವ ನೀರಿನ ವ್ಯವಸ್ಥೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಇಲ್ಲ

ಆ) ಕಾರ್ಯಕ್ರಮದಂತೆ

ವಿಧಾನ ಮಂಡಲದ ಅಧಿವೇಶನವನ್ನು ಮುಂದೂಡಿದ ಬಗ್ಗೆ.

778 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಧಾನ ಸಭಾ ಅಧಿವೇಶನವು 1992ರ ಡಿಸೆಂಬರ್ 16 ರಿಂದ ಪ್ರಾರಂಭವಾಗಬೇಕಾಗಿದ್ದುದು ನಿಜವೇ?

ಆ) ಹಾಗಿದ್ದಲ್ಲಿ ಸರ್ಕಾರವು 1992ರ ಡಿಸೆಂಬರ್ 28ಕ್ಕೆ ಇದನ್ನು ಮುಂದೂಡುತ್ತಿರುವುದಕ್ಕೆ ಕಾರಣಗಳೇನು?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ಹೌದು.

ಆ) ರಾಜ್ಯದಲ್ಲಿ ಗಲಭೆ ಪರಿಸ್ಥಿತಿಯ ಕಾರಣದಿಂದ, ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವ ದೃಷ್ಟಿಯಿಂದ ವಿಧಾನ ಮಂಡಲದ ಅಧಿವೇಶನ ಕರೆಯುವುದನ್ನು ಮುಂದೂಡಲು ತೀರ್ಮಾನ ಕೈಗೊಳ್ಳಲಾಯಿತು.

ಬಸವಕಲ್ಯಾಣ ತಾಲ್ಲೂಕಿನ ಲೋಕೋಪಯೋಗಿ ಅತಿಥಿಗೃಹಗಳ ಸಂಖ್ಯೆ

796 - ಶ್ರೀ ಬಸವರಾಜಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವ ಕಲ್ಯಾಣ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ಅತಿಥಿಗೃಹಗಳ ಸಂಖ್ಯೆ ಎಷ್ಟು?

(ತಾಲ್ಲೂಕು ವಾರು ಮಾಹಿತಿ ನೀಡುವುದು)

ಆ) ಬಸವಕಲ್ಯಾಣ ಅತಿಥಿಗೃಹ ತಿಪ್ರಾಂಥ ಅತಿಥಿಗೃಹ ಸಸ್ತಾಪುರ ಅತಿಥಿಗೃಹಗಳನ್ನು ಅಭಿವೃದ್ಧಿಗೊಳಿಸಲು ಸರ್ಕಾರವು (ಏನಾದರೂ) ಕ್ರಮ ಕೈಗೊಂಡಿದೆಯೇ ಹಾಗಿದ್ದರೆ, ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಒಟ್ಟು 7

1. ಬಸವಕಲ್ಯಾಣ	ಟಿ.ಬಿ.	-1
2. ಟಿಪ್ರಾಂತ್‌ನಲ್ಲಿ	ಟಿ.ಬಿ.	-1
3. ಸಸ್ತಾಪುರದಲ್ಲಿ		1ಬಿ-1

4. ಬೊಸ್ಗಾದಲ್ಲಿ	ಪ್ರಮಂದಿರ	1
5. ರಾಜೇಶ್ವರ	ಹಳ್ಳಿ	1
6. ಮುಡ್ಬಿಯಲ್ಲಿ		1
7. ಹಲ್ಸೂರ್‌ಬಲ್ಲಿ		1

ಆ) ಬಸವಕಲ್ಯಾಣ ಮತ್ತು ಸಸ್ತಾಪುರ ಅತಿಥಿಗೃಹಗಳ ಅಭಿವೃದ್ಧಿಗಾಗಿ ತಲಾ 1.50 ಲಕ್ಷ ರೂ.ಗಳು ಮಂಜೂರಾಗಿದ್ದು, 199-93ರ ಸಾಲಿನಲ್ಲಿ ಕೈಗೊಳ್ಳಲಾಗುವುದು.

ತಿಪ್ರಾಂಥ ಅತಿಥಿಗೃಹದ ಅಭಿವೃದ್ಧಿಗೊಳಿಸಲು ಸಹ ಕ್ರಮ ಕೈಗೊಳ್ಳಲಾಗುವುದು.

ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್‌ಗಳ ಚುನಾವಣೆ

798 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಚುನಾವಣೆ ನಡೆಸಲು ಸರ್ಕಾರವು ನಿರ್ಧಾರವನ್ನು ತೆಗೆದುಕೊಂಡಿದೆಯೇ?

ಆ) ಹಾಗಿದ್ದಲ್ಲಿ ಈ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು?

ಇ) ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಕಾಯ್ದೆಗೆ ತಿದ್ದುಪಡಿ ತಂದನಂತರ ಚುನಾವಣೆಯನ್ನು ನಡೆಸುವ ಪ್ರಸ್ತಾವನೆಯಿದೆಯೇ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಈ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ.

ಇ) ಹೌದು.

ಬಸವಕಲ್ಯಾಣ ತಾಲ್ಲೂಕಿನ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ

799 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ತಾಲ್ಲೂಕಿನ ಸಸ್ತಾಪುರ,ಮಂಡಾಲ, ಗುಂದೂರು, ಗುಂಡೂರುವಾಡಿ, ಹಾರ್ಕೂಡ್, ಅಲ್ಗೋಡ್ ಹೊನ್ನಳ್ಳಿ ರಾಮತೀರ್ಥ(ಕೆ) ಗೋಟಾಲ ಗ್ರಾಮಗಳಲ್ಲಿ ನಳ ಯೋಜನೆ ಇದ್ದರೂ ಸಹ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಯಾವ ಕ್ರಮ ಕೈಗೊಂಡಿರುವಿರಿ? ಇಲ್ಲದಿದ್ದರೆ ಕಾರಣವೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತುಪಂಚಾಯತ್ ರಾಜ್ ಸಚಿವರು):

ಅ) ಇಲ್ಲ,

ಆ) ಉದ್ಭವಿಸುವುದಿಲ್ಲ.

ಚಿಕ್ಕೋಡಿ ತಾಲ್ಲೂಕಿನಲ್ಲಿ ಮಂಜರಿ ಹತ್ತಿರ ಕೃಷ್ಣನದಿಗೆ ಸೇತುವೆ ನಿರ್ಮಾಣ

520 - ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕೋಡಿ ತಾಲ್ಲೂಕಿನಲ್ಲಿ ಮಂಜರಿ ಹತ್ತಿರ ಕೃಷ್ಣನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಲಾಗುತ್ತಿದೆಯೇ?

ಆ) ಹಾಗಿದ್ದಲ್ಲಿ ಈ ಸೇತುವೆಯನ್ನು ಎಂದು ಪೂರ್ಣಗೊಳಿಸಲಾಗುವುದು.

ಇ) ಸದರಿ ಸೇತುವೆಯ ಒಟ್ಟು ಅಂದಾಜು ವೆಚ್ಚವೆಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಹೌದು.

ಆ) ಮೇ 1994ರ ಹೊತ್ತಿಗೆ ಪೂರ್ಣ ಗೊಳಿಸುವ ನಿರೀಕ್ಷೆಯಿದೆ.

ಇ) ರೂ. 184.36 ಲಕ್ಷಗಳು

ಮಾಗೂರು ಹತ್ತಿರ ವೇದಗಂಗಾ ನದಿಗೆ ಸೇತುವೆ ನಿರ್ಮಾಣ

521 - ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕೋಡಿ ತಾಲ್ಲೂಕಿನ ಮಾಗೂರು ಹತ್ತಿರ ವೇದಗಂಗಾ ನದಿಗೆ ಸೇತುವೆಗೆ ಮಂಜೂರಾತಿ ನೀಡಲಾಗಿದೆಯೇ?

ಆ) ಹಾಗಿದ್ದಲ್ಲಿ, ಸೇತುವೆಯ ಕೆಲಸ ಯಾವಾಗ ಪ್ರಾರಂಭವಾಗುವುದು?

ಇ) ಸೇತುವೆಯ ಒಟ್ಟು ಅಂದಾಜು ಮೊತ್ತ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸೇತುವೆ ನಿರ್ಮಾಣಕ್ಕೆ ಸುಮಾರು *100.00* ಲಕ್ಷ ರೂ. *ಗಳ* ಅಂದಾಜು ಆಗುತ್ತದೆ.

ಅಂಕೋಲ ತಾಲ್ಲೂಕಿಗೆ ಕುಡಿಯುವ ನೀರಿನ ವ್ಯವಸ್ಥೆ

1044 - ಶ್ರೀ ಸುಭಾಷ್ ಜೋಷಿ(ನಿಪ್ಪಾಣಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿಪ್ಪಾಣಿ ಕ್ಷೇತ್ರದ ಅಂಕೋಲದಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರವು ಕೈಗೊಂಡ ಕ್ರಮ ಏನು?)

ಸದರಿ ಗ್ರಾಮಕ್ಕೆ ಪುನಃಶ್ಚೇತನ ಯೋಜನೆಯನ್ನು ಕೈಗೊಳ್ಳುವ ಸಾಧ್ಯತೆ ಇದೆಯೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಹೌದು.

ಆ) ಈ ಗ್ರಾಮವನ್ನು ವಿಶ್ವಬ್ಯಾಂಕ್ ಧನಸಹಾಯದಿಂದ ತೆಗೆದುಕೊಳ್ಳಲಾಗುವ ಸಮಗ್ರ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆಯ ಹಂತ 1ರಲ್ಲಿ ಪ್ರಸ್ತಾಪಿಸಲಾಗಿತ್ತು. ಆದರೆ ಈ ಗ್ರಾಮದಲ್ಲಿ ಅಂತರಜಲದೊರೆಯದ ಕಾರಣದಿಂದ, ದೂದ್ ಗಂಗಾ ನದಿಯನ್ನು ಜಲ ಮೂಲವಾಗಿಟ್ಟುಕೊಂಡು ಈ ಯೋಜನೆಯ 2ನೇ ಹಂತದಲ್ಲಿ ತೆಗೆದುಕೊಳ್ಳಲು ಯೋಚಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಪೂಣೆ ಬೆಂಗಳೂರು ರಸ್ತೆಯಿಂದ ಗಡಂಗ್ಲಜ್ ರಸ್ತೆ ಮಂಜೂರಾತಿ

1045 - ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೂಣೆ-ಬೆಂಗಳೂರು ರಸ್ತೆಯಿಂದ ಗಡಂಗ್ಲಜ್ ರಸ್ತೆಯನ್ನು ಮಂಜೂರು ಮಾಡಲಾಗಿದೆಯೇ?

ಆ) ಮಂಜೂರಾಗಿದ್ದರೆ ಯಾವಾಗಿನಿಂದ್ ಈ ಕಾರ್ಯವನ್ನು ಪ್ರಾರಂಬಿಸಲಾಗುವುದು ಹಾಗೂ ಈ ಕೆಲಸದ ಅಂದಾಜುವೆಚ್ಚ ಎಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಈ ರಸ್ತೆಯನ್ನು ಇತ್ತೀಚೆಗೆ ಮುಖ್ಯ ಜಿಲ್ಲಾ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದ್ದು ಅಭಿವೃದ್ಧಿಯ ಕಾಮಗಾರಿಗಳು ತೆಗೆದುಕೊಳ್ಳುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಈ ರಸ್ತೆಯು 12 ಕಿ.ಮೀ.ಉದ್ದವಿದ್ದು ಅಭಿವೃದ್ಧಿಗಾಗಿ 15 ಲಕ್ಷ ರೂ.ಗಳ ಅಂದಾಜು ಆಗುತ್ತದೆ. ಈ ರಸ್ತೆಯನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾಪವು ಸರ್ಕಾರದ ಪರಿಶೀಲನೆಯಲ್ಲಿದೆ.

ಜಿಲ್ಲಾ ಪರಿಷತ್ ಮತ್ತು ಮಂಡಲಪಂಚಾಯತ್ ಚುನಾವಣೆ

153-ಶ್ರೀ ರಾಮಲಿಂಗರೆಡ್ಡಿ (ಜಯನಗರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪರಿಷತ್ ಮತ್ತು ಮಂಡಲ್‌ಪಂಚಾಯತ್ ಗಳಿಗೆ ಚುನಾವಣೆ ನಡೆಸಲು ಸರ್ಕಾರವು ಏನಾದರೂ ಕ್ರಮ ತೆಗೆದುಕೊಂಡಿದೆಯೇ?

ಆ) ಹಾಗಿದ್ದಲ್ಲಿ ಈ ಸಂಸ್ಥೆಗಳಿಗೆ ಯಾವಾಗ ಚುನಾವಣೆ ನಡೆಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಅದೇ

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ರಾಮಲಿಂಗರೆಡ್ಡಿ : ಮಾನ್ಯ ಉಪಾಧ್ಯಾಕ್ಷಿಣಿಯವರೆ, ಕೆಳಕಂಡ ಅರ್ಜಿಗಳನ್ನು ನಾನು ಸಭೆಗೆ ಒಪ್ಪಿಸುತ್ತೇನೆ.

1. ನಗರ ಸಭೆಯ ಖಾಲಿ ಇರತಕ್ಕ ಕಟ್ಟಡವನ್ನು ಶಾಲೆಗೆ ನೀಡುವ ಬಗ್ಗೆ

2. ಭಾರತ್ ಎಜುಕೇಷನ್ ಸೊಸೈಟಿಗೆ ಅನುದಾನ ನೀಡುವ ಬಗ್ಗೆ,

3. ಬೆಂಗಳೂರಿಗೆ ಹೇಮಾವತಿಯಿಂದ ನೀರನ್ನು ಸರಬರಾಜು ಮಾಡುವ ಬಗ್ಗೆ,

4. ಕೊಳಚೆ ಪ್ರದೇಶದ ನಿವಾಸಿಗಳಿಗೆ ಹಕ್ಕು ಪತ್ರ ನೀಡುವ ಬಗ್ಗೆ,

5. ಕರ್ನಾಟಕ ವಿದ್ಯುತ್ ನಿಗಮದಿಂದ ಪರಿಹಾರ ಕೊಡಿಸುವ ಬಗ್ಗೆ.

ಉಪಾಧ್ಯಕ್ಷಿಣಿಯವರು : ಅರ್ಜಿಗಳನ್ನು ಒಪ್ಪಿಸಲಾಯಿತು.

ಶ್ರೀ ಆರ್.ವಿ. ದೇಶಪಾಂಡೆ : ನಾನು ತಮ್ಮ ಪರ್ಮಿಷನ್ ಕೇಳಿದ್ದೇನೆ..

ಶ್ರೀ ಬಿ.ಆರ್. ಯಡಿಯೂರಪ್ಪ (ಶಿಕಾರಿಪುರ) : ನಾನು ನಿಲುವಳಿ ಸೂಚನೆ ಕಳುಹಿಸಿದ್ದೇನೆ. ಇಡೀ ನಮ್ಮ ರಾಜ್ಯ ನೂರಕ್ಕೆ ಇಪ್ಪತ್ತೆರಡಷ್ಟು ಜಿಲ್ಲಾಪರಿಷತ್ತು ಮತ್ತು ಮಂಡಲ್ ಪಂಚಾಯತಿಗಳಿಗೆ ಚುನಾವಣೆ ಮೇ ತಿಂಗಳಲ್ಲಿ ಆಗುತ್ತದೆಂದು ಹೇಳಿದ್ದೀರಿ. ಇದು ಇಡೀ ರಾಜ್ಯದ ಜನತೆಗೆ ಸಂಬಂಧಪಟ್ಟ ವಿಷಯ.

ಉಪಾಧ್ಯಕ್ಷಿಣಿಯವರು : ದಯವಿಟ್ಟು ಕುಳಿತುಕೊಳ್ಳಿ. ಶ್ರೀ ಅಜೀಜ್ ಸೇಠ್ ಅವರು ಒಂದು ಪ್ರಿವಿಲೇಜ್ ಕಳುಹಿಸಿದ್ದಾರೆ. ಅದಕ್ಕೆ ನಾವು...(ಗೊಂದಲ)

ಈ ರೀತಿ ಎಲ್ಲರೂ ನಿಂತುಕೊಂಡರೆ ಹೇಗೆ? ಪ್ರಿವಿಲೇಜ್ ಮೋಷನ್‌ನ್ನು ಮೊದಲು ತೆಗೆದುಕೊಳ್ಳಬೇಕು.

ಶ್ರೀಆರ್.ವಿ. ದೇಶಪಾಂಡೆ : ಲೋಕಾಯುಕ್ತ ಆಫೀಸರುಗಳು ಮುಖ್ಯ ಮಂತ್ರಿಗಳನ್ನು ನೋಡಬೇಕು, ತಾವು ಒಳ್ಳೆಯ ಆಡಳಿತ ಕೊಡುತ್ತೇನೆ. ಮತ್ತು ಏನೂ ಕರೆಪ್ಷನ್ ಆಗಿಲ್ಲ.

(ಗೊಂದಲ)

ಉಪಾಧ್ಯಕ್ಷಣಿಯವರು : ಇಬ್ಬರೂ ಒಟ್ಟಿಗೆ ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮೊದಲು ನಿಲುವಳಿ ಸೂಚನೆ ಕಳುಹಿಸಿದ್ದೇನೆ. ತಾವು ತೆಗೆದುಕೊಳ್ಳುತ್ತೇನೆಯ ಒಪ್ಪಿದ್ದೀರಿ. ಹಿಂದಿನ ಸರ್ಕಾರದ ವೈಫಲ್ಯತೆ ಬಗ್ಗೆ ನಾನು ನಿಲುವಳಿ ಸೂಚನೆಯು ನೋಟೀಸ್‌ನ್ನು ಕಳುಹಿಸಿದ್ದೇನೆ. ಇದಕ್ಕೆ ತಾವು ಅವಕಾಶ ಮಾಡಿ ಕೊಡುತ್ತೇನೆಂದು ಹೇಳಿದ್ದೀರಿ. ಅಧಿವೇಶನದ ಮೊದಲನೇಯ ದಿವಸ ಪ್ರಶ್ನೋತ್ತರ ಕಾಲವನ್ನು ತೆಗೆದುಹಾಕಿ ಈ ವಿಷಯವನ್ನು ತೆಗೆದುಕೊಳ್ಳಿ ಎಂದು ವಿನಂತಿ ಮಾಡಿದ್ದೆ. ಅದರ ವಿರೋಧ ಪಕ್ಷದ ನಾಯಕರು ಅಯೋಧ್ಯೆಯ ವಿಷಯವನ್ನು ತೆಗೆದುಕೊಂಡು ಬಂದರು. ಈ ಸರ್ಕಾರದ ವೈಫಲ್ಯದ ಹಾಗೂ ಅವ್ಯವಹಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ವಿರೋಧಪಕ್ಷದ ಸಿದ್ದರಿಲ್ಲಿಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನಾವು ನೋಟೀಸ್ ಕೊಟ್ಟಿದ್ದೇವೆ. ನಾವು ರೈಸ್ ಮಾಡಿದ್ದೇವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಅವ್ಯವಹಾರದ ಬಗ್ಗೆ ನಾನು ಮೊದಲು ನಿಲುವಳಿ ಸೂಚನೆ ಕಳುಹಿಸಿದ್ದೇನೆ. ತಾವು ಯಾರಿಗೆ ಅಲೋ ಮಾಡುತ್ತೀರಿ.

(ಗೊಂದಲ)

ಉಪಾಧ್ಯಕ್ಷರು : ಎಲ್ಲರೂ ಒಟ್ಟಿಗೆ ನಿಂತುಕೊಂಡು ಮಾತನಾಡಿದರೆ ಹೇಗೆ?

ಶ್ರೀ ಆರ್.ವಿ. ದೇಶಪಾಂಡೆ : ನಾವೂ ನೋಟೀಸ್ ಕೊಟ್ಟಿದ್ದೇವೆ, ತಮ್ಮ ಪರ್ಮಿಷನ್ ಕೇಳಿದ್ದೇವೆ.

ಉಪಾಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ತಾವು ನಿಲುವಳಿ ಸೂಚನೆ ಕಳುಹಿಸಿದ್ದೀರಿ. ಇದೇ ವಿಚಾರದ ಬಗ್ಗೆ ಇಂದು ಪ್ರಶ್ನೆಯೂ ಬಂದು ಆಗಲೇ ಉತ್ತರವನ್ನು ಕೊಟ್ಟಿದ್ದಾರೆ ಅದು ಯಾವುದು ಎಂದರೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತ್ತಿಗಳ ಚುನಾವಣೆಗಳ ಬಗ್ಗೆ ಪ್ರಶ್ನೆ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಅರ್ಧ ಘಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಆಗಲೇ ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ನನ್ನ ರಕ್ಷಣೆಗೆ ಬರಬೇಕು, ಅರ್ಧ ಘಂಟೆ ಚರ್ಚೆಗೆ ನನ್ನ ಒಪ್ಪಿಗೆ ಇದೆ. ದಯಮಾಡಿ ಈ ವೈಫಲ್ಯತೆ ಬಗ್ಗೆ ಮೊದಲನೆಯ ದಿವಸವೇ ನಾನು ನೋಟೀಸ್ ಕಳುಹಿಸಿದ್ದೇನೆ.

ಉಪಾಧ್ಯಕ್ಷರು : ನಾನು ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ.ಎಸ್ ಯಡಿಯೂರಪ್ಪ : ನಾನು ಅಧಿವೇಶನದ ಮೊದಲನೇ ದಿವಸವೇ ಪ್ರಶ್ನೋತ್ತರವನ್ನು ತೆಗೆದು ಹಾಕಿ ಎಂದು ಹೇಳಿದ್ದೆ. ತಾವು ಅವಕಾಶವನ್ನು ಮಾಡಿಕೊಡುತ್ತೇನೆಂದು ಹೇಳಿದ್ದಿರಿ. ಇಂದು ವಿರೋಧಪಕ್ಷದ ನಾಯಕರು ಹೊಸದಾಗಿ ಪ್ರಸ್ತಾಪ ಮಾಡುತ್ತಿದ್ದಾರೆ. ಈ ಸದನ ಪ್ರಾರಂಭವಾದ ದಿನವೇ ಈ ಬಗ್ಗೆ ನಾನು ಹೇಳಿದ್ದೇನೆ. ಎರಡು ವರ್ಷಗಳ ಭ್ರಷ್ಟಾಚಾರದ ಹಗರಣದ ಬಗ್ಗೆ ಪ್ರಸ್ತಾಪ ಮಾಡಬೇಕು.

(ಗೊಂದಲ).

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಬಗ್ಗೆ ಮೊದಲು ಪ್ರಸ್ತಾಪ ಮಾಡುವುದಕ್ಕೆ ನಮಗೆ ಅವಕಾಶ ಮಾಡಿಕೊಡಬೇಕು. ಈ ಸರ್ಕಾರದ ವಿಷಯದಲ್ಲಿ ಚಾರ್ಜ್ ಶೀಟ್ ಕೊಟ್ಟಿರುವವರು ನಾವು ಈ ಸಮಯದಲ್ಲಿ ಅವರು ಎಲ್ಲಿ, ಇದ್ದರು.ಇದರ ಬಗ್ಗೆ ಚರ್ಚೆಯನ್ನೇ ಮಾಡಲಿಲ್ಲ.

ಉಪಾಧ್ಯಕ್ಷರು : ಈ ದಿನ ಬೆಳಿಗ್ಗೆ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತ್ತಿ ಚುನಾವಣೆ ಬಗ್ಗೆ ತಾವು ಒಂದು ನಿಲುವಳಿ ಸೂಚನೆ ಕೊಟ್ಟು ನನ್ನ ಹತ್ತಿರ ಮಾತನಾಡಿದ್ದೀರಿ. ತಾವು ರೈಸ್‌ಮಾಡಿ ಎಂದು ನಾನು ಅಪ್ಪಣೆ ಕೊಟ್ಟೆ. ಇದೇ ವಿಚಾರದಲ್ಲಿ ಇಲ್ಲಿ ಈ ದಿವಸ ಪ್ರಶ್ನೆಯೂ ಬಂತು ಪ್ರಶ್ನೆ ಕಾಲದಲ್ಲಿ ಹೆಚ್ಚು ಉತ್ತರ ಸಿಗುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಅರ್ಧ ಘಂಟೆ ಚರ್ಚೆಗೆ ಖಂಡಿತವಾಗಿಯೂ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನೆ. ಈಗ ಆ ವಿಷಯ ಮುಗಿದಿದೆ. ಮಾನ್ಯ ದೇಶಪಾಂಡೆಯವರು ಏನನ್ನು ಹೇಳುತ್ತಿದ್ದಾರೆ.

ಹಿಂದಿನ ಸರ್ಕಾರದ ವೈಫಲ್ಯದ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ : 28ನೇ ತಾರೀಖು ನಾನು ಪ್ರಶ್ನೋತ್ತರ ಕಾಲವನ್ನು ತೆಗೆದುಹಾಕಿ ಎಂದು ಹೇಳಿದ್ದೇನೆ. ಈ ಭ್ರಷ್ಟಾಚಾರದ ಹಗರಣದ ಬಗ್ಗೆ ಚರ್ಚೆ ಆಗಬೇಕೆಂದು ಪ್ರಸ್ತಾಪ ಮಾಡಿದವರು ನಾವು. ಸರ್ಕಾರದ ವೈಫಲ್ಯದ ಬಗ್ಗೆ ಇಡೀ ದೇಶಕ್ಕೆ ಚಾರ್ಜ್ ಶೀಟ್ ತೆಗೆದುಕೊಂಡು ಹೋದವರು ನಾವು. ನಾವು ಮೊದಲು ನಿಲುವಳಿ ಸೂಚನೆ ಕಳುಹಿಸಿದ್ದೇವೆ.

ಉಪಾಧ್ಯಕ್ಷರು : ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಮೊದಲು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಭ್ರಷ್ಟಾಚಾರದ ಹಗರಣದ ಚಾರ್ಜ್ ಶೀಟ್ ಕೊಟ್ಟಿರುವವರು ನಾವು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಹಿಂದಿನ ಸರ್ಕಾರವನ್ನು ವಜಾ ಮಾಡುವುದಕ್ಕೆ ನಾವು ಕಾರಣಕರ್ತರು. ನಮಗೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಈ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಆದುದರಿಂದ ನಮಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ನಾವೂ ಕೂಡ ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಈ ವಿಚಾರವನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಮುಖ್ಯ ಮಂತ್ರಿಗಳವರ ಗಮನಕ್ಕೂ ತಂದಿದ್ದೇವೆ. ವಿರೋಧಪಕ್ಷದ ನಾಯಕರು ರೈಸ್ ಮಾಡಬಾರದು ಎಂದು ಹೇಳುವ ಅಧಿಕಾರ ನಿಮಗೇನಿದೆ. ನಾವು ಮತ್ತು ಎಸ್.ಜೆ.ಪಿ.ಯವರು ಈಗಾಗಲೇ ರೈಸ್ ಮಾಡಿದ್ದೇವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಶಾಮೀಲಾಗಿದ್ದೀರಿ. ನೀವು ಪರೋಕ್ಷವಾಗಿ ಬೆಂಬಲ ಕೊಟ್ಟ ಹಾಗೆ. ಏಕೆ ಮಾತನಾಡುತ್ತೀರಿ. ನಿಮಗೆ ಮಾತನಾಡುವುದಕ್ಕೆ ನೈತಿಕ ಹಕ್ಕು ಇಲ್ಲ.

(ಸಭೆಯಲ್ಲಿ ಅತೀವ ಗೊಂದಲ. ಅನೇಕ ಜನ ಸದಸ್ಯರು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

Sri D.B. Chandregowda : A situation has arisen in the State......

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅದರ ಅರ್ಥ ನೀವಿಬ್ಬರೂ ಶಾಮೀಲಾಗಿದ್ದೀರಿ. ಹಿಂದಿನ ವಿರೋಧ ಪಕ್ಷದ ನಾಯಕರು ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಎಂದು.....

(ಗೊಂದಲ)

ಉಪಾಧ್ಯಕ್ಷರು : ಎಲ್ಲರೂ ಹೀಗೆ ನಿಂತುಕೊಂಡರೆ ನಾವು ಸಭೆಯನ್ನು ನಿರ್ವಹಣೆ ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ?

ಶ್ರೀ ಆರ್. ದೇಶಪಾಂಡೆ : ಹಿಂದಿನ ವಿರೋಧ ಪಕ್ಷದ ನಾಯಕರು ಸರ್ಕಾರದ ಜೊತೆ ಶಾಮೀಲಾಗಿದ್ದಾರೆ ಎಂದು ಹೇಳುತ್ತಿದ್ದಾರೆ. ಇದನ್ನು ನಾನು ಅಬ್ಜೆಕ್ಟ್ ಮಾಡುತ್ತೇನೆ. ಅದನ್ನು ಅವರು ವಾಪಾಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

(ಅನೇಕ ಜನ ಸದಸ್ಯರು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಉಪಾಧ್ಯಕ್ಷರು : ಶ್ರೀಯುತ ಚಂದ್ರೇಗೌಡರೇ, ಇಷ್ಟು ಜನ ನಿಂತು ಕೊಂಡರೆ can anything go on record. ಈಗ ಪಾರ್ಲಿಮೆಂಟರಿ ಮಿನಿಸ್ಟರ್ ಅವರು ಏನೋ ಹೇಳುತ್ತಾರಂತೆ.

Revalidation Existring Rent control Act.

Sri D.B. ChandreGowda : Before he answers I have a very important matter. The Karnataka Rent Control Act, 1961 has expired on 31st December, 1992. This day the Act has come to an end. The act is not in force. This Act actually has no existence at all as the duration ended on 31st December 1992....

ಶ್ರೀ ಬಿ.ಎಸ್. ಯಡಿಯೂರಪ್ಪ : ಅಂಥಾದ್ದು ಏನಾದರೂ ಕೇಳಿ.

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ.

Sri D.B. Chandre Gowda : Its life not extended before 31st December 1992 as a result the Rent Control Act has come to an end. They have no powers and authority to act. Such being the case, should we not revalidate, that has not been done. What happens to the legal status of the cases now pending before the Rent control Courts and the High Court. It is my view, it may not be possible to continue the Act ಇಡೀ ರಾಜ್ಯದಲ್ಲಿ ಇವತ್ತ ಮಾತನಾಡತಕ್ಕಂಥವರು ಬಹಳ ದೀರ್ಘವಾಗಿ ಈಡಿ ಸದನ ಮತ್ತು ಸರ್ಕಾರ, ಆಡಳಿತ ಹೇಗೆ ನಡೆಯುತ್ತಿದೆ ಎನ್ನುವುದಕ್ಕೆ ಇದು ಒಂದು ಪ್ರತ್ಯಕ್ಷದರ್ಶಿ. ಮಾನ್ಯ ಅಧ್ಯಕ್ಷರೇ, because it becomes absolutely necessary for taking for the action. ಈಗ ಕೆಲಸ ಮಾಡುತ್ತಾ ಇರತಕ್ಕಂಥವರಿಗೆ prior permission of the President or after the validation assent of the President of India has to be obtained.

ಈಗ ಇರತಕ್ಕಂಥ ಸ್ಥಿತಿ ಏನು? ಶಾಸನ ಸಭೆ ಸೇರಿದೆ. ಆಕ್ಟ್ revalidate ಆಗುವುದಿಲ್ಲ, ಸಹಸ್ರಾರು ಜನ, ಲಕ್ಷಾಂತರ ಜನ ಟೆನೆಂಟ್ಸ್ ಇವತ್ತು ಕೋರ್ಟಿನ ರಕ್ಷಣೆಯಲ್ಲಿದ್ದಾರೆ

ಕೋರ್ಟಿಗೆ ಇದ್ದ ಅಧಿಕಾರವನ್ನು ಕಿತ್ತುಕೊಂಡಿದ್ದೀರಿ. ಇಂದು ನಿನ್ನೆ, ಮೊನ್ನೆ, ಮೂರು ನಾಲ್ಕು ದಿವಸಗಳಲ್ಲಿ ಈ ಮಾಲೀಕರುಗಳು ಟೆನೆಂಟ್ಸ್‌ನ್ನು ಹೊರಗೆ ಹಾಕಿದರು ಎಂದರೆ ಯಾವ ಶಾಸನದಿಂದ ಸರ್ಕಾರ ರಕ್ಷಣೆ ಕೊಡುತ್ತೇದೆ ಎಂದು ನಾನು ಕೇಳುತ್ತೇನೆ. ಈಗಾಗಲೇ ಈ ಕೆಲಸ ಪ್ರಾರಂಭವಾಗಿದೆ. Under Article 201 of the Constitution now you cannot validate the Act that is why I said prior consent of the President or afterwards the President's assent is necessary. This is one situation. Why this Providision? The fact that there is conflict between the State Act and the central Act there are central Acts, like Transfer of Property Act and other Acts which primarily are in conflict with the State Acts because that is not in the State List..

ಜವಾಬ್ದಾರಿಕೆಯಿಂದ ಕೆಲಸ ಮಾಡತಕ್ಕಂಥ ಸರ್ಕಾರ ಒಂದು ಶಾಸನದ ಅವಧಿ ಮುಗಿದಿದೆಯೆಂದು ಹೇಳಿದರೆ ಅದನ್ನು ಗಮನಿಸದೆ ಲಕ್ಷಾಂತರ ಜನ ಟೇನೆಂಟ್ಸ್‌ನ್ನು ಬೀದಿಗೆ ಹಾಕತಕ್ಕಂಥ ಪ್ರಮೇಯ ಉದ್ಭವವಾಗಿದೆ. ಆದ್ದರಿಂದ ಇದರ ಬಗ್ಗೆ ಯಾರು ಗಮನಿಸಬೇಕು? ನಾವು ಗಮನಿಸಬೇಕೇ? Therefore, I would ask the Government as to how would they advice the concerned, courts to behave, how do they give protection to the tenants and what were the administration doing? Is there any legal department in this Government? The Law department should have taken notice of such matters at the right time and the Act should have been revalidated. I demand explanation from this Government as to why such a big lapse has taken place and if necessary an equiry is to be codnucted into the matter and lastly how to this Government particularly give protection to the tenants.

ಇದು ಒಂದಲ್ಲ ನೂರಲ್ಲ ಲಕ್ಷಾಂತರ ಕೇಸುಗಳು ಕೋರ್ಟಿನಲ್ಲಿ ಪೆಂಡಿಂಗ್ ಇವೆ. ಹತ್ತಾರು ವರ್ಷಗಳಿಂದ ಜನರು ಕೋರ್ಟುಗಳಿಗೆ ಅಲೆದಿದ್ದಾರೆ. ವಕೀಲರುಗಳಿಗೆ ದುಡ್ಡು ಕೊಟ್ಟಿದ್ದಾರೆ. Court takes the view at the lower level or at the Apex levbel that this Act is no more in force. What are the consequences of it? I would like to know from the Government, whether they will take any steps in this regard?

ಶ್ರೀ ಬಿ.ಎಸ್. ಯಡಿಯೂರಪ್ಪ : ರೆಂಟ್ ಕಂಟ್ರೋಲ್ ಆಕ್ಟ್ ಫೋರ್ಸ್‌ನಲ್ಲಿ ಇದೆಯೋ ಇಲ್ಲವೋ? ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೇ? ಪತ್ರಿಕಾ ರಂಗದವರು ಪತ್ರಿಕೆಯಲ್ಲಿ ಬರೆದು ನಮಗೆ ಜ್ಞಾನೋದಯ ಮಾಡಿದ್ದಾರೆ. ಅಲ್ಲಿಯವರೆಗೆ ನಿಮ್ಮ ಅಧಿಕಾರಿಗಳು ಕುಂಭಕರ್ಣನ ನಿದ್ದೆಯಲ್ಲಿ ಇದ್ದರು. ಇದೇ ರೀತಿ ಏನೇನು ಪರಿಸ್ಥಿತಿಗಳು ಒದಗಿ ಬಂದಿದೆಯೋ ಗೊತ್ತಿಲ್ಲ. ಎಲ್ಲಾ ಕಡೆ ಗಲಾಟೆ, ಯಾರನ್ನು ಮಂತ್ರಿ ಮಾಡಬೇಕು ಯಾರನ್ನು ಕೈಬಿಡಬೇಕು ಇದರಲ್ಲಿ ತಾವು ತಲ್ಲೀನರಾಗಿದ್ದೀರಿ, ಯಾವ ಶಾಸನ ಜಾರಿಗೆ ತರಬೇಕು. ಯಾವ ಶಾಸನದ ಅವಧಿ ಮುಗಿದಿದೆ, ಏನು ಮಾಡಬೇಕು ಏನೂ ಗೊತ್ತಿಲ್ಲ, ನೀವು ಏನು

Sri R.V. Deshpande : It is a Serious lapse on the part of the Goverment. The Hon'ble law Minister should make a statement and also tell us how are you going to protect the tenants, what action you are going to take against the officers responisble for this lapse. This is a very important matter. You must tell the Assembly today only.

ಶ್ರೀ ವಾಟಾಳ್ ನಾಗರಾಜ್ : ಈ ಶಾಸನ ಸತ್ತು 5 ದಿವಸ ಆಗಿದೆ. ಇದರ ಕಥೆ ಮುಗಿದಿದೆ. 5 ದಿನದಿಂದ ನಡೆಯುತ್ತಿರತಕ್ಕ ಘೋರ ಗಂಭೀರ ಪರಿಸ್ಥಿತಿಯ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಮಾನ್ಯ ವೀರಪ್ಪ ಮೊಯಿಲಿಯವರು ಅಧಿಕಾರಕ್ಕೆ ಬಂದ ನಂತರ ಬಹಳ ಎಚ್ಚರಿಕೆಯಿಂದ ಯಾವುದೇ ರೀತಿ ನಮ್ಮ ಆಡಳಿತಕ್ಕೆ ಯಾವ ಲೋಪ ಬರದ ಹಾಗೆ ನೋಡಿಕೊಳ್ಳುತ್ತೇವೆಂದು ಹೇಳಿದ್ದರು. ಈಗ ಮೊದಲನೆ ಸಾರಿ ಜಾರಿ ಬಿದ್ದಿದ್ದಾರೆ. ಇದು ಲಘುವಾದ ವಿಚಾರ ಅಲ್ಲ. ಕಣ್ಣಿಗೆ ಕಾಣುವ ಹಾಗೆ ನಡೆದಿದೆ. ಇಡೀ ರಾಜ್ಯದಲ್ಲಿ ಲಕ್ಷಾಂತರ ಜನ ಬಾಡಿಗೆದಾರರು ಈ ಕಾನೂನಿನ ನೆರಳಿನಲ್ಲಿ ಇದ್ದಾರೆ. ಈ ಕಾನೂನಿನ ರಕ್ಷಣೆಯಲ್ಲಿ ಯಾರ್‍ಯಾರು ಇದ್ದಾರೆ ಅವರಿಗೆ ನಿಜವಾಗಿಯೂ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ಸರ್ಕಾರ ಏನು ಮಾಡುತ್ತಾ ಇದೆ. 5 ದಿವಸಗಳಿಂದ ನಡೆದಿರತಕ್ಕ ದುರಂತಗಳಿಗೆ ಆಗಿರತಕ್ಕಂಥ ದುರಂತಗಳಿಗೆ ಅನ್ಯಾಯಗಳಿಗೆ ಸರ್ಕಾರ ಹೊಣೆಯಾಗಿದೆ. ಸರ್ಕಾರ ಯಾವ ರೀತಿ ಇದರ ಬಗ್ಗೆ ಸಮಜಾಯಿಸಿ ಹೇಳುತ್ತದೆ. ರಾಜ್ಯದ ಜನತೆಗೆ ಸರ್ಕಾರ ಯಾವ ರೀತಿ ಕೊಡುತ್ತದೆ ಎಂಬುದನ್ನು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ರೆವೆನ್ಯೂ ಮಿನಿಸ್ಟರ್‌ಗೆ ಸಂಬಂಧಪಟ್ಟಿದ್ದು ಅವರು ಉತ್ತರ ಕೊಡಬೇಕಾಗುತ್ತದೆ.

ಶ್ರೀ ಶಿವಾನಂದ ಎಚ್. ಕೌಜಲಗಿ : ಈಗಾಗಲೇ ಕೋರ್ಟ್‌ನಲ್ಲಿ ಅನೇಕ ಆರ್ಡ್‌ರ್‌ಗಳು ಆಗಿವೆ. ಎವಿಕ್ಷನ್ ಪಿಟಿಸನ್ ಮೇಲೆ ಅದಂಥವರಿಗೆ ತಾವು ಯಾವ ರೀತಿ ಪ್ರೊಟೆಕ್ಷನ್ ಕೊಡುತ್ತೀರಿ ಎಂದ ಕೇಳುತ್ತೇನೆ.

Sri M.Rajashekharmurthy (Minister for Revenue) : Madam, I have already extended Validation of the Act for another three years. This decision was taken before 31st December. If the Hon'ble Members want I will make a statement in the course of the day.

Sri D.B. Chandre Gowda : I have serious objection. When the Legislative Assembly is in session this Government should have brought to the notice first. If the Legislative Assemblies are taken callous by the Minister concemed I have nothing to say. I would only say that they should try to know the limits as Ministers.

(ಗೊಂದಲ)

Sri R.V. Deshapande : If they had brought it before the House we would have been happy.

ಇದು ಜನತೆಗೆ ಗೊತ್ತಾಗಬೇಕು ನೀವು. ಸುಮ್ಮನೆ ಇದ್ದರೆ ನಾಡಿನ ಜನಗಳಿಗೆ ಇದು ಯಾವಾಗ ಗೊತ್ತಾಗಬೇಕು? ಕೋರ್ಟುಗಳಿಗೆ ಯಾವಾಗ ಗೊತ್ತಾಗಬೇಕು?

ಶ್ರೀ ಡಿ.ಬಿ. ಚಂದ್ರೇಗೌಡ : ಜನರಲ್ ಆಕ್ಟ್ ಅಪ್ಲೈ ಆಗುತ್ತದೆಂದು ನನಗೂ ಗೊತ್ತಿದೆ. ಇದು ಲ್ಯಾಪ್ಸ್ ಆಗಿ ಸುಮಾರು ಒಂದು ವಾರ ಆಗಿದೆ. ತಾವು ಏನು ರೀವ್ಯಾಲಿಡೇಟ್ ಮಾಡಿದ್ದೇವೆಂದು ಹೇಳಿದ್ದೀರಿ ಅದು ಶಾಸನ ಸಭೆಯ ಗಮನಕ್ಕೆ ಬರಲಿಲ್ಲ. ಈ ರೀತಿ ಲ್ಯಾಪ್ಸ್ ಆಗಿರುವುದು ಪತ್ರಿಕೆಗಳ ಮೂಲಕ ನಮ್ಮ ಗಮನಕ್ಕೆ ಬಂದಿದೆ. ಅದಕ್ಕೆ ಮುಂಚೆ ಇದು ಸರ್ಕಾರದ ಗಮನಕ್ಕೆ ಬಂದಿರಲಿಲ್ಲವೆ? This was the first duty to bring such a legislation before the house and make known to the general public that you are serious about it. So far nothing has been done according to me. If it was extended before 31st December I would like to know why it was not brought before this House.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೇ, ನಾನು ತಮ್ಮ ಕಚೇರಿಗೆ ಬಂದು ಒಂದು ವಿಚಾರದ ಬಗ್ಗೆ ಗಮನ ಸೆಳೆದಿದ್ದೆ. ದಯವಿಟ್ಟು ಅವಕಾಶ ಕೊಡಬೇಕು. ಈ ರಾಜ್ಯದ...

(ಗೊಂದಲ)

Madam Deputy Speaker : He is prepared to make a statement today..

"ಕೊಪ್ಪದಲ್ಲಿ ಲೋಕಾಯುಕ್ತ ಅಧಿಕಾರಿಗಳ ಮೇಲೆ ಹಲ್ಲೆ."

+ ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷಣಿಯವರೇ, ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿ ಬಂದಮೇಲೆ ತಮ್ಮ ಕ್ಲೀನ್ ಗೌರ್ನಮೆಂಟ್ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಕೊಪ್ಪದಲ್ಲಿ ಡಿವಿಜನಲ್ ಫಾರೆಸ್ಟ್ ಆಫೀಸರ್‌ನ್ನು ಲೋಕಾಯುಕ್ತ ಅಧಿಕಾರಿಗಳು ಟ್ರ್ಯಾಪ್ ಮಾಡುವುದಕ್ಕೆ ಹೋದಾಗ ಅಲ್ಲಿನ ಸ್ಥಳೀಯ ಪೋಲೀಸರು ಸಹಕಾರ ಮಾಡಿಲ್ಲ, ಅಲ್ಲಿ ಮಾಡಿದಂಥ ಮಹಜರ್‌ಅಂದರೆ ಪಂಚನಾಮೆ ರೆಕಾರ್ಡ್‌ಗಳನ್ನು ಸುಟ್ಟಿದ್ದಾರೆ. ಅಲ್ಲಿ ಲೋಕಾಯುಕ್ತ ಡಿ.ಎಸ್.ಪಿ.ಯವರು ಯಾವುದೇ ಕಂಪ್ಲೇಂಟ್ ಕೊಡುವುದಕ್ಕೆ ಅವಕಾಶ ಕೊಟ್ಟಿಲ್ಲ. ಲೋಕಾಯುಕ್ತ ಡಿ.ಎಸ್.ಪಿ. ಯವರು ಕೊನೆಗೆ ಚಿಕ್ಕಮಗಳೂರಿಗೆ ಬಂದು ಕಂಪ್ಲೇಂಟ್ ಫೈಲ್ ಮಾಡಿದ್ದಾರೆ. ಇದು ಆಗಿದುದ್ದು 24.12.92ನೇ ತಾರೀಖು. ಅಲ್ಲಿದ್ದ ಸ್ಥಳೀಯ ಆರ್.ಎಫ್.ಓ. ನರಸಿಂಹಯ್ಯ ಅವರು ಮತ್ತು ಸ್ಥಳೀಯ ಶೃಂಗೇರಿ ಶಾಸಕರಾದ ಶಾಮಣ್ಣನವರು ಇಬ್ಬರೂ ಲೋಕಾಯುಕ್ತ ಇನ್‌ವೆಸ್ಟಿಗೇಷನ್‌ಗೆ ಅಡ್ಡ ಬಂದು, ಅಲ್ಲಿದ್ದ ಲೋಕಾಯುಕ್ತ ಆಫೀಸರ್ ಮೇಲೆ ಒತ್ತಡ ತಂದು, ಇದೇ ಪ್ರಕಾರ ಪಂಚನಾಮ ಬರೆಯಬೇಕು, ಅಧಿಕಾರಿ ಮೇಲೆ ಯಾವುದೇ ದೂರು ಇಲ್ಲ ಎಂದು ಹೇಳಬೇಕು ಈ ರೀತಿ ಒತ್ತಾಯ ಮಾಡಿದ್ದಾರೆ, ಈ ರೀತಿ ಆದರೆ ಯಾವ ಪ್ರಕಾರ ಒಳ್ಳೆಯ ಆಡಳಿತ ಕೊಡುವುದಕ್ಕೆ ಸಾಧ್ಯವಾಗಬಹುದು? ನಂತರ ಲೋಕಾಯುಕ್ತ ಆಫೀಸರ್ ಚಿಕ್ಕಮಗಳೂರಿಗೆ ಹೋಗಿ ಕಂಪ್ಲೇಂಟ್ ಮಾಡಿದ್ದಾರೆ, ಕಂಪ್ಲೇಂಟ್ ಯಾರು ಕೊಟ್ಟಿದ್ದಾರೆ ಅವರ ಜೀವಕ್ಕೆ ಭಯ ಇದೆ, ಹೀಗಾಗಿ ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ. ತಾವು ಯಾವ ರೀತಿ ಕ್ರಮ ಡಿ.ಎಫ್.ಓ. ಮತ್ತು ಆರ್.ಎಫ್.ಓ ಮೇಲೆ ತೆಗೆದುಕೊಳ್ಳುತ್ತೀರಿ. ಯಾವ ರೀತಿ

ಲೋಕಾಯುಕ್ತ ಅಧಿಕಾರಿಗೆ ಸಂರಕ್ಷಣೆ ಕೊಡುತ್ತೀರಿ ಎಂದು ಕೇಳುತ್ತೇನೆ, ಸ್ಥಳೀಯ ಶಾಸಕರ ಮೇಲೆ ದೂರು ಮಾಡಿದ್ದಾರೆ, ಆ ದೂರು ನಿಜವಾಗಿದ್ದರೆ ತಾವು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂದು ಸ್ಪಷ್ಟವಾಗಿ ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೇ, ತಾವು ಏನು ವಿಚಾರ ಎತ್ತಿದ್ದೀರಿ ಇದು ಸರಕಾರದ ಗಮನದಲ್ಲಿದೆ. ಇದರ ಬಗ್ಗೆ ನಾನು ಸಂಜೆಯ ಒಳಗೆ ಸದನ ಇವತ್ತು ಮುಗಿಯುವುದರೊಳಗೆ ಒಂದು ಹೇಳಿಕೆ ಕೊಡುತ್ತೇನೆ.

"ಅರೆಕಾಲಿಕ ಉಪನ್ಯಾಸಕರನ್ನು ಖಾಯಂ ಮಾಡುವ ಬಗ್ಗೆ"

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯದ 369 ಜನ ಅರೆಕಾಲಿಕ ಉಪನ್ಯಾಸಕರು ಇಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಸುಮಾರು 5-10 ವರ್ಷಗಳಿಂದ ಇವರು ಉದ್ಯೋಗ ಮಾಡುತ್ತಿದ್ದಾರೆ. ಇವರಿಗೆ ಕೊಡುತ್ತಿರತಕ್ಕ ಸಂಬಳ ಕೇವಲ ಆರು ನೂರು ರೂಪಾಯಿ. ಇವರಿಗೆ 35 ವರ್ಷ ಮೀರಿ ಹೋಗುತ್ತಿದೆ. ಮೊನ್ನೆ ಪಿ.ಎಸ್.ಸಿ.ಯಿಂದ ಸೆಲೆಕ್ಷನ್ ಆಯಿತು. ಇವರಿಗೆ ಅದರಲ್ಲಿ ಅವಕಾಶ ಸಿಗಲಿಲ್ಲ. ಇವರು ಎಕ್ಸಾಮಿನೇಷನ್ ವರ್ಕ್, ಎಲೆಕ್ಷನ್ ವರ್ಕ್ ಖಾಯಂ ಲೆಕ್ಚರರ್‌ಗಳು ಮಾಡುವ ರೀತಿ ಎಲ್ಲಾ ಕೆಲಸ ಮಾಡುತ್ತಿದ್ದಾರೆ. ಇವರಿಗೆ ಉದ್ಯೋಗವನ್ನು ಖಾಯಂ ಮಾಡುವ ದಿಕ್ಕಿನಲ್ಲಿ ಸರಕಾರದ ಪ್ರಯತ್ನ ಆಗಿಲ್ಲ, ಇವರು ಸತ್ಯಾಗ್ರಹ ಮಾಡುತ್ತಿದ್ದಾರೆ. ಪ್ರತಿಸಲ ವಿಧಾನಸಭೆ ನಡೆಯುವ ಸಂದರ್ಭದಲ್ಲಿ ಬರುತ್ತಾರೆ. ಉಪವಾಸ ಸತ್ಯಾಗ್ರಹ ಮಾಡುತ್ತಾರೆ. ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡುತ್ತಾರೆ. ಎಲ್ಲಾ ಹೇಳುತ್ತಾರೆ. ಇವರು ಇರತಕ್ಕದ್ದು 6 ನೂರು ಜನ ಮಾತ್ರ. ಜಾಸ್ತಿ ಇಲ್ಲ, ಇವರಿಗೆ ಖಾಯಂ ಮಾಡುವ ಪ್ರಯತ್ನದ ಬಗ್ಗೆ ಸರಕಾರ ಯೋಚನೆ ಮಾಡುತ್ತದೆಯೇ? ಇವರಿಗೆ ಬದುಕುವುದಕ್ಕೆ ಅವಕಾಶ ಮಾಡಿಕೊಡುವ ದಿಕ್ಕಿನಲ್ಲಿ ಸರಕಾರ ಯೋಚನೆ ಮಾಡಿ ಇವರಿಗೆ ಖಾಯಂ ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈ ಬಗ್ಗೆ ಅನೇಕ ಸಾರಿ ಇವರುಗಳು ಸರಕಾರಕ್ಕೆ ಮನವಿಗಳ ಮೇಲೆ ಮನವಿ ಕೊಟ್ಟಿರುತ್ತಾರೆ. ನಿಯೋಗಗಳ ಮೇಲೆ ನಿಯೋಗಗಳು ಬಂದಿದೆ. ಈ ಸರಕಾರ ಎಂದು ನಾನು ಹೇಳುವುದಿಲ್ಲ, ಈ ಸರಕಾರವನ್ನು ಅವರು ಭೇಟಿ ಮಾಡಿರಬಹುದು. ಬಿಟ್ಟಿರಬಹುದು ನನಗೆ ಗೊತ್ತಿಲ್ಲ.

ಶ್ರೀ ಸಿ. ಭೈರೇಗೌಡ : ಆಗಿನ ವಿದ್ಯಾ ಮಂತ್ರಿಗಳು ಈಗ ಮುಖ್ಯಮಂತ್ರಿಗಳಾಗಿದ್ದಾರೆ. ಅವರಿಗೆ ವಿಚಾರ ಎಲ್ಲಾ ಗೊತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಅರೆಕಾಲಿಕ ಉಪನ್ಯಾಸಕರ ವಿಚಾರ ತಮಗೆ ಗೊತ್ತಿದೆ. ಇದು ಪ್ರಾಮುಖವಾದ ವಿಚಾರ. ಇದರ ಬಗ್ಗೆ ತಾವು ಗಮನಹರಿಸಿದ್ದೀರಿ. ತೀರ್ಮಾನ ಮಾಡಿದ್ದೀರಿ, ಭರವಸೆ ಕೊಟ್ಟಿದ್ದೀರಿ. ಮತ್ತೆ ಮತ್ತೆ ಪ್ರತಿಸಾರಿ ಶಾಸನಸಭೆ ಸೇರಿದಾಗ ಅವರುಸತ್ಯಾಗ್ರಹ ಮಾಡತಕ್ಕ ಪರಿಸ್ಥಿತಿ ಇದೆ, ಸರಕಾರ ಅವರ ಒಂದು ತೊಂದರೆಯನ್ನು ನಿವಾರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ರೋಸ್ಟರ್ ಸಿಸ್ಟಮ್ ಪ್ರಕಾರ ಆಯ್ಕೆಯಾಗಿದ್ದಾರೆ. ಇದು ತಮಗೆ ಗೊತ್ತಿದೆ. ತಾವು ಎಜುಕೇಷನ್ ಮಿನಿಸ್ಟರ್

ಆಗಿದ್ದಿರಿ. ಇದು ಅವರು ಜೀವನದ ಅಳಿವು ಉಳಿವಿನ ಪ್ರಶ್ನೆ. ಅವರನ್ನು ಖಾಯಂ ಮಾಡುವುದರ ಬಗ್ಗೆ ಏನಾದರೂ ಒಂದು ಅಷ್ಯೂರೆನ್ಸ್ ತಾವು ಕೊಡಬೇಕು.

12.35 ಪಿ.ಎಂ

ಶ್ರೀ ಎಸ್.ಎಂ. ಯಾಹ್ಯಾ (ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ ಪಾರ್ಟ್ ಟೈಮ್ ಲೆಕ್ಚರರ್ಸ್ ಬಗ್ಗೆ ಮಾನ್ಯ ಶಾಸಕರುಗಳು ವಿಚಾರವನ್ನು ಎತ್ತಿದ್ದಾರೆ. ಪಾರ್ಟ್ ಟೈಮ್ ಲೆಕ್ಚರರ್ಸ್ ಹೇಗೆ ಉದ್ಭವವಾದರು ಎನ್ನುವುದನ್ನು ತಿಳಿಸಬೇಕಾಗಿದೆ. 1987ನೇ ಇಸವಿಯಲ್ಲಿ ಇದಕ್ಕೆ ಬ್ಯಾನ್ ಆರ್ಡರ್ ಇತ್ತು. ಇದು ಬಹಳ ಕಾಂಪ್ಲಿಕೇಟೆಡ್ ವಿಚಾರ. ಅದಕ್ಕೆ ಏನಾದರೂ ಉಪಾಯ ಕಂಡುಹಿಡಿಯುವುದು ನಮ್ಮ ನಿಮ್ಮ ಎಲ್ಲರ ಕರ್ತವ್ಯ. ಏಕೆಂದರೆ ಏಕಾನಮಿ ಆರ್ಡರ್ 1987ರಲ್ಲಿ ಬಂದ ಮೇಲೆ ಯಾರಿಗೂ ತೆಗೆದುಕೊಂಡಿಲ್ಲ. ಎಲ್ಲೆಲ್ಲಿ ಲೆಕ್ಚರರ್ಸ್ ಇರಲಿಲ್ಲ ಅದಕ್ಕೆ ಪಾರ್ಟ್ ಟೈಮ್ ಸಿಸ್ಟಂ ಮತ್ತೇ ಸ್ಟಾಪ್-ಗ್ಯಾಪ್ ಸಿಸ್ಟಂ ಆಯಿತು. ಅವರಿಗೆ 1500 ರೂಪಾಯಿ ಕೊಟ್ಟರು ಇವರಿಗೆ 600 ರೂಪಾಯಿ ಸಂಬಳ ಕೊಟ್ಟರು. ನಮ್ಮ ಸರ್ಕಾರ ಬಂದ ಮೇಲೆ ಸ್ಟೆಪ್ಸ್ ತೆಗೆದುಕೊಂಡಿದ್ದೇವೆ. ಒಂದೊಂದಾಗಿ ತೆಗೆದುಕೊಳ್ಳುತ್ತಾ ಬಂದಿದ್ದೇವೆ. ಸ್ಟಾಪ್-ಗ್ಯಾಪ್‌ನಲ್ಲಿದ್ದ 450 ಜನ ಅವರೆಲ್ಲರಿಗೂ ಎಂಪ್ಲಾಯ್‌ಮೆಂಟ್ ಕೊಟ್ಟಿದ್ದೇವೆ. ಇನ್ನು ಕೆಲವರಿಗೆ ನಾವು ಪಬ್ಲಿಕ್ ಸರ್ವೀಸ್ ಕಮೀಷನ್‌ನಿಂದ 350 ಜನರನ್ನು ಮಾಡಿದ್ದೇವೆ. 120 ಜನ ಪಬ್ಲಿಕ್ ಸರ್ವೀಸ್ ಕಮೀಷನ್‌ನಿಂದ ವೆಯಿಂಟಿಂಗ್ ಲಿಸ್ಟ್ ಇದ್ದವರಿಗೂ ಕೊಟ್ಟಿದ್ದೇವೆ. ಈಗ ಇನ್ನೊಂದು ಮಾಡಿದ್ದೇವೆ. 3ನೇ ಭಾಗದಲ್ಲಿ ನಾವು ಡೈರೆಕ್ಟೊರೇಟ್‌ನಿಂದ ಯಾವ ಕಾಲೇಜ್‌ಗಳಲ್ಲಿ ಎಕ್ಸಸ್ ಇದ್ದಾರೆ, ಅದು ಪ್ರವೇಟ್ ಕಾಲೇಜ್‌ಗಳು ಸೇರಿ, ಎಲ್ಲೆಲ್ಲಿ ಎಕ್ಸಸ್ ಎಂದು ಕಂಡು ಬರುತ್ತದೆ ಅಲ್ಲಿಂದ ಇದುವರೆಗೂ 45 ಜನ ಎಕ್ಸಸ್ ಲೆಕ್ಚರರ್ಸ್ ಅನ್ನು ಹುಡುಕಿದ್ದೇವೆ. ಅವರಿಗೆ ಬೇರೆ ಕಡೆ ಹಾಕಿದ್ದೇವೆ. ಎಕ್ಸಸ್ ಎಂದು ಎಲ್ಲೆಲ್ಲಿ ಇದೆ ಅಂತಹವರನ್ನು ಹುಡುಕಲು ಒಂದು ಸ್ಕ್ವಾಡ್ ಮಾಡಿ ಕಂಡು ಹಿಡಿಯುತ್ತಿದ್ದೇವೆ. ಮತ್ತೆ ಎಲ್ಲಿ ಲೆಕ್ಚರರ್ಸ್ ಸರ್‌ಪ್ಲೆಸ್ ಇದ್ದಾರೆ ಅಂತಹ ಕಡೆ ಎಕ್ಸಸ್ ಇರುವ ಕಡೆಯಿಂದ ತೆಗೆದು ಹಾಕಬೇಕೆಂದು ತೀರ್ಮಾನ ಮಾಡಿದ್ದೇವೆ. ಪ್ರವೇಟ್ ಕಾಲೇಜುಗಳಿಗೆ ಗ್ರ್ಯಾಂಟ್ ನಿಲ್ಲಿಸಬೇಕೆಂದು ಸಹ ಮಾಡಿದ್ದೇವೆ. ಈ ರೀತಿಯ ಕೆಲಸಗಳು ನಡೆಯುತ್ತಿವೆ. ಆಮೇಲೆ ಗೊತ್ತಾಗುತ್ತದೆ. ಎಷ್ಟು ಕಾಲೇಜುಗಳಲ್ಲಿ ಎಷ್ಟು ಲೆಕ್ಚರರ್ಸ್ ಖಾಲಿ ಇದ್ದಾರೆ ಎಂದು. ಈ ವಿಚಾರವನ್ನೂ ಸಹ ನಾವು ಯೋಚನೆ ಮಾಡಿ ಖಂಡಿತವಾಗಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರಿಗೆ ಸಂಬಳ 1500ರೂಪಾಯಿಗಳಾದರೂ ಮಾಡಿ ಸ್ವಾಮಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಸಂಬಳ ಆದರೂ ಜಾಸ್ತಿ ಮಾಡಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ತಾವೇನು ನಿರ್ಧಾರ ಮಾಡುತ್ತೀರಿ ಅದನ್ನು ತಕ್ಷಣ . ಮಾಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅವರು 600 ರೂಪಾಯಿಗಳ ಸಂಬಳದಲ್ಲಿ ಜೀವನ ಮಾಡುವುದಕ್ಕಾಗುತ್ತದೆಯೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವರನ್ನು ಖಾಯಂ ಮಾಡುವುದು ಒಂದು ಕಡೆ. ಸಂಬಳ ಜಾಸ್ತಿ ಮಾಡುತ್ತೇವೆ ಎನ್ನುವ ಭರವಸೆ ಆದರೂ ಕೊಡಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಅವರನ್ನು ಕರೆಯಿಸಿ ಮಾತನಾಡಬಹುದಲ್ಲ ಚರ್ಚೆ ಮಾಡಿ ತಕ್ಷಣ ತೀರ್ಮಾನ ಮಾಡುವುದಕ್ಕೆ ಸಾಧ್ಯ ಇದ್ದರೆ ಮಾಡಿ ಮೊದಲು ಸಂಬಳ ಜಾಸ್ತಿ ಮಾಡಿ.

ಶ್ರೀ ಎಸ್.ಎಂ. ಯಾಹ್ಯಾ : ತಕ್ಷಣ ಮಾಡುವುದಕ್ಕೆ ಬರುವುದಿಲ್ಲ ಈ ವಿಚಾರ ಕಾಂಪ್ಲಿಕೇಟೆಡ್ ಇದೆ. ಸ್ಟ್ಯಾಪ್ ಗ್ಯಾಪ್‌ನವರದ್ದು ತೆಗೆದುಕೊಂಡಿದ್ದೇವೆ. ತಮಗೆ ಗೊತ್ತಿದೆ. ನಮ್ಮ ಸರ್ಕಾರದ ನೀತಿ ಉದ್ದೇಶ ಏನೆಂದರೆ ಯಾವ ಸ್ಕೂಲ್‌ನಲ್ಲೂ ಟೀಚರ್ಸ್ ಇಲ್ಲ ಎಂದು ಹೇಳಬಾರದು ಎನ್ನುವುದು ಪ್ರೈಮರಿ ಸ್ಕೂಲ್ ಹೈಸ್ಕೂಲ್ ಕಾಲೇಜುಗಳಲ್ಲಿ ಟೀಚರ್ಸ್ ಇರಬೇಕು ಇನ್ನು ಒಂದೂವರೆ ತಿಂಗಳಲ್ಲಿ ಇದನ್ನೆಲ್ಲಾ ನಾವು ವಿಚಾರ ಮಾಡಿ ಒಂದು ಸ್ಟ್ರ್ಯಾಟಜಿ ಮಾಡಿ ಮಾಡುತ್ತೇವೆ. ಈಗಲೇ ನಾವು ಏನನ್ನು ಹೇಳುವುದಕ್ಕೆ ಆಗುವುದಿಲ್ಲ. ಇನ್ನೊಂದು ವಿಚಾರವನ್ನು ನಮ್ಮ ಸ್ನೇಹಿತರು ಹೇಳಿದರು ಅದನ್ನು ನಾವು ಮಾಡಲಿಕ್ಕೆ ಸಾಧ್ಯವಿದ್ದರೆ ಖಂಡಿತವಾಗಿ ಮಾಡೋಣ.

Sri R.V. Deshpande : Hon'ble Minister can call them and discuss.

Sri S.M. Yahya : That we can do, there is no problem as such...

ಶ್ರೀ ವಾಟಾಳ್ ನಾಗರಾಜ್ : ಸಂಬಳ ಜಾಸ್ತಿ ಮಾಡತಕ್ಕಂಥ ಭರವಸೆ ತಾವು ಕೊಟ್ಟಿದ್ದೀರಿ.

ಶ್ರೀ ಎಸ್.ಎಂ. ಯಾಹ್ಯಾ : ವಿಚಾರ ಮಾಡುತ್ತೇನೆಂದು ಹೇಳಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಕೊನೆಯ ಪಕ್ಷ 1500 ರೂಪಾಯಿಗಳ ಸಂಬಳ ಆದರೂ ಮಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳಿಗೆ ವಿದ್ಯಾ ಇಲಾಖೆ ಬಗ್ಗೆ ಸಾಕಷ್ಟು ಪರಿಣಿತಿ ಇದೆ. ತಮ್ಮ ನಿಲುವು ಏನೆಂದು ತಾವೇ ಒಂದು

ಮಾತು ಹೇಳಿ. ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಹೇಳಬೇಕು. ಅವರು ಸುಮಾರು 10 ವರ್ಷ ಜೀತದಾಳುಗಳ ರೀತಿ ದುಡಿದ್ದಿದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಹೇಳಿ ಸ್ವಾಮಿ.ತಾವು ದಯವಿಟ್ಟು...

ಶ್ರೀ ಎಸ್.ಎಂ. ಯಾಹ್ಯಾ : ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ವಿಚಾರ ಮಾಡಿ ಮಾಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್ : ನಮಗೆ ಮಾನ್ಯ ವಿದ್ಯಾ ಸಚಿವರ ಬಗ್ಗೆ ನಂಬಿಕೆ ಇದೆ. ಮಾನ್ಯ ಮುಖ್ಯಮಂತ್ರಿಗಳ ಸಭೆಯಲ್ಲಿರುವುದರಿಂದ ಅವರೇ ಒಂದು ಮಾತು ಹೇಳಲಿ. ಆಗ ಅವರಿಗೆ ಒಂದು ನಂಬಿಕೆ ಬರುತ್ತದೆ ದಯವಿಟ್ಟು ಹೇಳಿ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಮಾನ್ಯ ಅಧ್ಯಕ್ಷರೇ ಹಾಲಿ ಶಿಕ್ಷಣ ಸಚಿವರ ಉತ್ತರ ಕೊಟ್ಟ ಮೇಲೆ ಮಾಜಿ ಶಿಕ್ಷಣ ಸಚಿವರ ಉತ್ತರ ಹೇಳುವ ಅವಶ್ಯಕತೆ ಎಲ್ಲಿ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಬಹಳ ಧಾರಾಳವಾಗಿದ್ದರು. ಅವರ ಧಾರಾಳತನ ಈಗ ಸ್ವಲ್ಪ ಕಡಿಮೆ ಆಗಿದೆಯೋ ಏನೋ ಸ್ವಲ್ಪ ಧಾರಾಳವಾಗಿ ಇರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಯಾವಾಗಲೂ ಧಾರಾಳವಾಗಿಯೇ ಇರುತ್ತೇವೆ. ಅದರಲ್ಲಿ ಏನು ಅನುಮಾನ ಇಟ್ಟುಕೊಳ್ಳುವ ಅವಶ್ಯಕತೆ ಇಲ್ಲ, ತಾವು ಹೇಳಿದ್ದರಲ್ಲಿ ಒಂದು ಮಾತು ಸತ್ಯ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಹೇಳಿದ್ದು ಒಂದು ಮಾತು ಸತ್ಯ. ಏಕೆಂದರೆ ಪಾರ್ಟ್‌ಟೈಂ ನೇಮಕಾತಿ ಇದೆಯೋ? ಅದರ ಬಗ್ಗೆ ಬಹಳ ಅನಿರ್ಧಿಷ್ಟವಾದಂಥ ಪರಿಸ್ಥಿತಿ ಇದೆ. ಅವರಿಗೂ ಒಂದು ರೀತಿ ತ್ರಿಶಂಕು ಆಗಿದೆ. ಅವರು ಅದನ್ನು ನಂಬಿಕೊಂಡಿದ್ದಾರೆ. ನಮ್ಮಲ್ಲಿ ನಾವು ಒಂದು ಪರಂಪರೆ ಇಟ್ಟುಕೊಂಡಿದ್ದೇವೆ. ಅರೆಕಾಲಿಕ ನೇಮಕಾತಿ ಅದೊಂದು ಸೀಮಿತ ಉದ್ದೇಶಕ್ಕಾಗಿ ಇರುತ್ತದೆ. ಸಬ್‌ಸ್ಟ್ಯಾಂಟೀವ್ ಪೋಸ್ಟ್‌ನಲ್ಲಿ ಕೆಲವು ಅಪಾಯಿಂಟ್‌ಮೆಂಟ್‌ಮಾಡಿದರೆ ಒಂದು ವಿಚಾರ ಬೇರೆ. ಆದರೆ, ಇಲ್ಲಿ ಅರೆಕಾಲಿಕ ನೇಮಕಾತಿಗಳಲ್ಲಿ ಏನಾಗಿದೆ ಎಂದರೆ ಸಬ್‌ಸ್ಟ್ಯಾಂಟಿವ್ ಪೋಸ್ಟ್‌ಗೆ ಅಪಾಯಿಂಟ್‌ಮೆಂಟ್ ಮಾಡಿಲ್ಲ, ಅದು ಬರೀ ಒಂದು ವಾರಕ್ಕೆ 2 ಗಂಟೆ ಕಾಲ ಪಾಠ ಅಷ್ಟೆ ಮಾಡುತ್ತಿದ್ದಾರೆ. ಅದು ಮರ್ಕೆಂಟೈಲ್ ತಮಗೆ ಗೊತ್ತಿದೆ. ವಕೀಲಾರದವಾರು ಮತ್ತು ಕೆಲವು ಕಾಲೇಜುಗಳಲ್ಲಿ ಕೆಲಸ ಮಾಡಿದವರಾದ ತಮಗೆ ಅನುಭವ ಇದೆ. ಮರ್ಕೆಂಟೈಲ್ ಲಾದಲ್ಲಿ ಪಾಠ ಮಾಡುವುದಕ್ಕೆ ಲಾಯರ್‌ಗಳನ್ನು ಪಾರ್ಟಟೈಂ ನಾವು ನೇಮಕ ಮಾಡುತ್ತೇವೆ. ಅದು ವಾರಕ್ಕೆ 2 ಗಂಟೆ ಪಾಠ ಮಾತ್ರ. ಸಾರಸಗಟಾಗಿ ನಾವು ಅರೆಕಾಲಿಕ

ಉಪನ್ಯಾಸಕರನ್ನು ಖಾಯಂ ಮಾಡುತ್ತೇವೆಂದು ಹೇಳಿದರೆ ಅವರನ್ನು ಖಾಯಂ ಮಾಡಬೇಕಾಗುತ್ತದೆ. ಅದಕ್ಕೇ ಅವರು ಹೇಳಿದರು ಅನೇಕ ಪ್ರಶ್ನೆಗಳು ಉದ್ಭವವಾಗುತ್ತವೆ. ಸಬ್‌ಸ್ಟ್ಯಾಂಟಿವ್ ಪೋಸ್ಟ್‌ಗೆ ಅವರು ಕೆಲಸ ಮಾಡುತ್ತಿದ್ದರೆ ತಾವು ಹೇಳುತ್ತಿರುವುದು ಸರಿ. ಇದನ್ನೆಲ್ಲಾ ನಾವು ವಿಶ್ಲೇಷಣೆ ಮಾಡಿದ್ದೇವೆ. ವಿಶ್ಲೇಷಣೆ ಮಾಡಿ ಅದಕ್ಕೆ ಯಾವ ತರಹ ನಿರ್ಣಯ ಕೊಡಬೇಕಾಗುತ್ತದೆ. ಅದಕ್ಕೆ ನಿರ್ಣಯ ಕೊಡುವಾಗ ಒಂದು ವಿಚಾರ ತಾವು ಖಂಡಿತವಾಗಿ ಗಮನದಲ್ಲಿಟ್ಟುಕೊಳ್ಳಬಹುದು. ನಾವು ಸಹಾನುಭೂತಿಯಿಂದ ನಿರ್ಣಯ ತೆಗೆದುಕೊಳ್ಳುತ್ತೇವೆ. ಅದಕ್ಕೆ ನಿಮಗೆ ಅನುಮಾನ ಬೇಡ. ಅದು ಕ್ಯಾಬಿನೆಟ್‌ಗೆ ಬರಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅವರು ಆಶಾವಾದವನ್ನು ಇಟ್ಟುಕೊಂಡಿದ್ದಾರೆ. ನಮ್ಮ ನಿರೀಕ್ಷಣೆ ವಿಫಲವಾಗುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಒಳ್ಳೆಯ ಭರವಸೆಯನ್ನು ಕೊಡುತ್ತಾರೆಂದು ನಾವು ಇದ್ದರೆ ಏಕೋ ಕೊಡುತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಹೇಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅನ್ನ ಕೊಡಿ ಎಂದರೆ ಭರವಸೆ ಕೊಡುತ್ತಿದ್ದಾರೆ.... ದಯವಿಟ್ಟು ಇದು ಬೇಡ. 369 ಜನ ಮಾತ್ರ ಅವರು ಇರುವುದು.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ತಾವು ಏನು ಹೇಳಿದಿರಿ, ಕೆಲವರು ಮಾಡುತ್ತಿದ್ದಾರೆ. ಸರಿ ಒಪ್ಪುತ್ತೇವೆ, ಕೆಲವರು ಮಾಡುತ್ತಿಲ್ಲ, ಅದೂ ಇದೆ ಇದರಲ್ಲಿ, ಈಗಾಗಲೇ ಒಮ್ಮೆ ಇದು ಕ್ಯಾಬಿನೆಟ್‌ಗೆ ಬಂದಿತ್ತು. ಒಂದು ಸೂತ್ರ ಹುಡುಕಬೇಕು. ಏಕೆಂದರೆ ಯಾರೇ ಆಗಲಿ ಅವರ ಜೀವನದಲ್ಲಿ ಅನಿರ್ದಿಷ್ಟ ಪರಿಸ್ಥಿತಿ ಇರಬಾರದು. ಅವರು ಯುವಕರಿರುತ್ತಾರೆ. ಬಹಳ ವರ್ಷಗಳಿಂದ ಕೆಲಸ ಮಾಡಿದವರು ಇರುತ್ತಾರೆ. ಇದಕ್ಕೆ ಸಮರ್ಪಕವಾದಂಥ ಸೂಕ್ತವಾದಂಥ ಮತ್ತು ಸಮಾಧಾನಕರವಾದಂಥ ಒಂದು ಸೂತ್ರವನ್ನು ನಾವು ಕಂಡುಹಿಡಿಯುತ್ತೇವೆ. ಇದು ಒಮ್ಮೆ ಕ್ಯಾಬಿನೆಟ್‌ಗೆ ನಾನು ಶಿಕ್ಷಣ ಸಚಿವನಾಗಿದ್ದಾಗ ಬಂದಿತ್ತು. ತಾವು ಆಶಾಭಾವನೆಯನ್ನು ಇಟ್ಟುಕೊಳ್ಳಬಹುದು. ಆಶಾಭಾವನೆ ಇಟ್ಟುಕೊಳ್ಳುವುದಕ್ಕೆ ಏನೂ ಅಡ್ಡಿ ಇಲ್ಲ, ತಮ್ಮ ಮನಸ್ಸಿಗೆ ಸಮಾಧಾನವಾಗಿರತಕ್ಕ ಹಾಗೆ ನಾವು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮೂಗಿನ ಮೇಲೆ ತುಪ್ಪ ಹಚ್ಚಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಆದರೆ, ದಯಮಾಡಿ ಅವರು ಉಪನ್ಯಾಸಕರು ಮುಷ್ಕರ ವಾಪಸ್ಸು ತೆಗೆದುಕೊಳ್ಳಲಿ ನಾವೂ ಆದಷ್ಟು ಜಾಗ್ರತೆ ಅವರನ್ನು ಕರೆಯಿಸಿ ಮಾತನಾಡುತ್ತೇವೆ. ಆಮೇಲೆ ಜಾಗ್ರತೆ ಅದನ್ನು ಕ್ಯಾಬಿನೆಟ್‌ಗೆ ತೆಗೆದುಕೊಂಡು ಒಂದು ನಿರ್ಣಯ ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಭರವಸೆಯನ್ನು ಅವರಿಗೆ ಖಂಡಿತಾ ತಿಳಿಸುತ್ತೇನೆ.

ಕಿಡ್ವಾಯಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಆಪರೇಷನ್ ಸರಿಯಾದ ರೀತಿಯಲ್ಲಿ ಆಗದೇ ಇರುವುದು.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಉಪಾಧ್ಯಕ್ಷಣೆಯವರೆ, ನಮ್ಮ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ನಮ್ಮ ಸರ್ಕಾರದ ಅತ್ಯಂತ ಪ್ರತಿಷ್ಠಿತ ಆಸ್ಪತ್ರೆಯಾಗಿರತಕ್ಕಂತ "ಕಿಡ್ವಾಯಿ ಕ್ಯಾನ್ಸರ್‌ಆಸ್ಪತ್ರೆಯಲ್ಲಿ" ಶಸ್ತ್ರ ಚಿಕಿತ್ಸೆ ಕೆಲಸವನ್ನು

ಸಂಪೂರ್ಣವಾಗಿ ನಿಲ್ಲಿಸಿದ್ದಾರೆ ಅನ್ನತಕ್ಕಂಥ ವರದಿ ನನಗೆ ಬಂದಿದೆ. ಇದಕ್ಕೆ ಏನು ಕಾರಣ? ಈ ಹಿಂದೆ ಅಲ್ಲಿ ಒಬ್ಬರಿಗೆ ಕ್ಯಾನ್ಸರ್ ಬಂದಿರತಕ್ಕ ಪೇಷೆಂಟ್ ಮೇಲೆ ಅಪರೇಷನ್ ಮಾಡತಕ್ಕಂತ ಸಂದರ್ಭದಲ್ಲಿ ಒಂದು ರೇಡಿಯಂ ಇರತಕ್ಕ ಒಂದು ತಂತಿಯನ್ನು ಅಪರೇಷನ್ ಮಾಡಿದ ಮೇಲೆ ಹೊರಗಡೆ ತೆಗೆಯದೆ ಅಲ್ಲೇ ಬಿಟ್ಟುಬಿಟ್ಟು ಅಪರೇಷನ್ ಅನ್ನು ಕ್ಲೋಸ್ ಮಾಡಿಬಿಟ್ಟಿದ್ದಾರೆ. ಇದರಿಂದಾಗಿ ಆ ಪೇಷೆಂಟ್ ಹೊರಗಡೆ ಹೋದಮೇಲೆ ಅಂದರೆ ಆಸ್ಪತ್ರೆಯಲ್ಲಿ ಆ ವಾರ್ಡ್‌ನಲ್ಲಿರತಕ್ಕಂಥ ಎಲ್ಲಾ ಇತರೆ ರೋಗಿಗಳ ಮೇಲೂ ಸಹಿತಾ ಇದರಿಂದ ತೊಂದರೆಯಾಗಿದೆಯೆಂದು, ಇದು ಒಂದು. ಇದಾದಮೇಲೆ ಸರ್ಕಾರದವರು ಮುಂಬಯಿಯಿಂದ ಕೆಲವು ವಿಜ್ಞಾನಿಗಳನ್ನು ಕರೆಯಿರಿ ಅವರ ಅಭಿಪ್ರಾಯ ಕೇಳಿದ್ದಾರೆ. ಮತ್ತೆ ಹಿಂದಿನ ಡೈರೆಕ್ಟರ್ ಡಾ|| ಕೃಷ್ಣ ಭಾರ್ಗವ ಅವರಿಂದ ಒಂದು ಎನ್‌ಕ್ವೈಯರಿ ಮಾಡಲು ಅನೌನ್ಸ್ ಮಾಡಿದ್ದಾರೆಂದು ನಾನು ಪತ್ರಿಕೆಗಳ ಮೂಲಕ ತಿಳಿದುಕೊಂಡಿದ್ದೇನೆ. ಆದರೆ ಇಲ್ಲಿ ತೊಂದರೆ ಆಗಿರತಕ್ಕಂಥಾದ್ದು ಏನೆಂದರೆ ಇದು ಅಷ್ಟಕ್ಕೆ ಸಾಲದು, ಕ್ಯಾನ್ಸರ್, ಈ ಒಂದು ಪ್ರಕರಣ ಏನು ನಡೆದಿದೆ ಇದರ ಬಗ್ಗೆ ಒಂದು ತನಿಖೆಯಾಗಬೇಕು. ಏಕೆ ತನಿಖೆಯಾಗಬೇಕೆಂದರೆ, ನನಗೆ ತಿಳಿದಿರುವ ಹಾಗೆ ಕಳೆದ ಒಂದೂವರೆ ಎರಡು ವರ್ಷದಲ್ಲಿ ಈ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಗುಣಮಟ್ಟ ಬಹಳ ಕಡಿಮೆ ಆಗಿದೆ. ಮತ್ತೆ ಪೇಷೆಂಟ್ಸ್‌ನ್ನು ಬಹಳ ನೆಗ್ಲೆಕ್ಟ್ ಮಾಡಿದ್ದಾರೆ. ಕೇಂದ್ರ ಸರ್ಕಾರದಿಂದ ಕೋಟ್ಯಾಂತರ ರೂಪಾಯಿ ಹಣವನ್ನು ನಾವು ತೆಗೆದುಕೊಂಡು, ಕ್ಯಾನ್ಸರ್ ತಮಗೆ ಗೊತ್ತಿರುವ ಹಾಗೆ ಸ್ಪ್ರೆಡ್ ಆಗದೇ ಇರುವ ಹಾಗೆ ನೋಡಿಕೊಳ್ಳತಕ್ಕಂಥಾದ್ದೇ ಅದರಲ್ಲಿರತ್ಕಕಂಥ ಒಂದು ಟ್ರೀಟ್‌ಮೆಂಟ್. ಡಾಕ್ಟರ್‌ಗಳ ನೆಗ್ಲಿಜೆನ್ಸ್‌ನಿಂದಾಗಿ ಈ ಒಂದು ಪ್ರಕರಣ ಹೊರಗೆ ಬಂದಿದೆ. ಏಕೆಂದರೆ ಅದು ಈ ಒಂದು ತಂತಿ ಸಿಗಲಿಲ್ಲ ಎನ್ನುವ ಲೆಕ್ಕಾಚಾರ ಹಾಕಿದಾಗ ಮಾತ್ರ ಇದು ಗೊತ್ತಾಗಿರತಕ್ಕಂಥಾದ್ದು.

ನನಗೆ ಅಲ್ಲಿರತಕ್ಕಂಥವರು ತಿಳಿಸಿದ ಹಾಗೆ ಅಲ್ಲಿ ಈ ರೀತಿ ಹಲವಾರು ಪ್ರಕರಣಗಳು ನಡೆದಿವೆ. ಯಾರೂ ಕೂಡ ಕ್ಯಾನ್ಸರ್ ಬಂದಮೇಲೆ ಬಹಳ ದಿವಸ ಬದುಕುವುದಿಲ್ಲ. ಕ್ಯಾನ್ಸರ್ ಇದ್ದವರು ಬೇಗ ಸತ್ತು ಹೋಗುತ್ತಾರೆ. ಈ ರೀತಿಯಾಗಿ ಎಷ್ಟು ಪ್ರಕರಣಗಳು ನಡೆದಿದೆ ಎನ್ನತಕ್ಕಂಥಾದ್ದು ತಪಾಸಣೆ ಮಾಡುವುದು. ಪತ್ತೆ ಹಚ್ಚುವುದು ಕಷ್ಟವಾಗಿದೆ. ನಾನು ಮುಖ್ಯಮಂತ್ರಿಯವರಲ್ಲಿ ವಿನಂತಿಸಿಕೊಳ್ಳುವುದು ಏನೆಂದರೆ ತತ್‌ಕ್ಷಣ ಕ್ಯಾನ್ಸರ್ ಟ್ರೀಟ್‌ಮೆಂಟ್‌ಗೆ ಅಲ್ಟರ್‌ನೇಟಿವ್ ಅರೇಂಜ್‌ಮೆಂಟ್ ಮಾಡಬೇಕಾಗುತ್ತದೆ. ಅದರಲ್ಲಿ ಇರತ್ಕಕಂತ ಟ್ರೀಟ್‌ಮೆಂಟ್ ಮತ್ತು ಅಪರೇಷನ್ ನಿಂತು ಹೋದರೆ ಅದರ ಉಪಯೋಗ ಏನೂ ಆಗುವುದಿಲ್ಲ. ಇದು ನಮ್ಮ ದಕ್ಷಿಣ ಭಾರತದಲ್ಲಿಯೇ ಒಂದು ದೊಡ್ಡ ಕ್ಯಾನ್ಸರ್ ಆಸ್ಪತ್ರೆಯಾಗಿದೆ. ಆದ್ದರಿಂದ ದಯಮಾಡಿ ತಾವುಗಳು ತತ್‌ಕ್ಷಣ ಒಂದು ವಿಚಾರಣೆಯನ್ನು ಮಾಡಿಸಬೇಕು. ಎರಡನೆಯದಾಗಿ ಅಲ್ಲಿ ಸರಿಯಾಗಿ ಚಿಕಿತ್ಸೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ ; ಮಾನ್ಯ ಉಪಾಧ್ಯಕ್ಷಣಿಯವರೇ, ಏನು ಈ ಘಟನೆ ನಡೆದಿದೆ. ಅಂಥ ಘಟನೆಗಳು ಅಲ್ಲಿ ಹಿಂದೆಯೂ ನಡೆದಿಲ್ಲ. ಮುಂದೆ ನಡೆಯುವುದಕ್ಕೆ ಆಸ್ಪದ ಕೊಡುವುದಿಲ್ಲ. ಆ ಬಗ್ಗೆ ಜಾಗ್ರತಿ ವಹಿಸುತ್ತೇವೆ. ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯು ಇಡೀ ದೇಶದಲ್ಲಿಯೇ ಒಂದು ಪ್ರತಿಷ್ಠಿತ

ಸಂಸ್ಥೆಯಾಗಿದೆ. ಆ ಸಂಸ್ಥೆ ಬಗ್ಗೆ ಅಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿ ಇವೆ. ನಮ್ಮ ರಾಜ್ಯದ ಪ್ರತಿಷ್ಠಿತ ಸಂಸ್ಥೆಯನ್ನು ಅದರ ಗೌರವವನ್ನು ಉಳಿಸಿಕೊಳ್ಳುವುದಕ್ಕೆ ನಾವೆಲ್ಲರೂ ಇಂದು ಕಟಿಬದ್ಧರಾಗಿ ಕೆಲಸವನ್ನು ಮಾಡಬೇಕಾಗಿದೆ. ಅಲ್ಲಿ ಏನಾದರೂ ದೋಷ ಇದ್ದರೆ ಅದನ್ನು ಹುಡುಕಿ ತಪ್ಪಿತಸ್ಥರು ಯಾರಿದ್ದಾರೆ ಅವರನ್ನು ಶಿಕ್ಷಿಸಬೇಕು. ಇದು ಎರಡೂ ಜೊತೆಯಾಗಬಾರದು. ಇದು ಪ್ರತ್ಯೇಕವಾಗಿ ಆಗಬೇಕಾಗುತ್ತದೆ. ಈ ಬಗ್ಗೆ ನಮ್ಮ ಗಮನಕ್ಕೆ ವಿಚಾರ ಬಂದ ಕೂಡಲೇ ಸಾರ್ವಜನಿಕರ ಮನಸ್ಸಿನಲ್ಲಿರತಕ್ಕಂಥ ಆತಂಕ ಮತ್ತು ಶಂಕೆಗಳನ್ನು ತತ್‌ಕ್ಷಣ ದೂರ ಮಾಡಬೇಕೆಂದು ಕೆಲವು ವಿಜ್ಞಾನಿಗಳನ್ನು ಕರೆಸಿದ್ದೇವೆ. ಹಾಗೆಯೇ ಡಾ ಕೃಷ್ಣಭಾರ್ಗವರವರಿಗೆ ಗೊತ್ತಿದೆ. ಅವರು ಆ ಸಂಸ್ಥೆಯ ಸಂಸ್ಥಾಪಕರೂ ಕೂಡ ಆಗಿದ್ದಾರೆ. ಅವರನ್ನೇ ಏಕಸದಸ್ಯ ಆಯೋಗ ಮಾಡಿ ವಿಚಾರಣೆ ಮಾಡಬೇಕೆಂದು ನೇಮಕ ಮಾಡಿದ್ದೇವೆ. ಅವರ ವರದಿಯು ಬರಲಿ. ಅದ ಬಂದ ಮೇಲೆ ಯಾರಾದರೂ ತಪ್ಪಿತಸ್ಥರು ಇದ್ದರೆ ಅವರ ಮೇಲೆ ಶಿಕ್ಷೆ ವಿಧಿಸುವುದಕ್ಕೆ ಅದರ ಮೇಲೆ ವಿಚಾರಣೆ ಮಾಡುವುದು ಇದ್ದರೆ ಖಂಡಿತ ಮಾಡೋಣ. ಆದರೆ ಅಲ್ಲಿ ಯಾವುದೇ ರೀತಿಯಲ್ಲಿ ನಡೆಯತಕ್ಕಂಥ ಚಿಕಿತ್ಸೆ ನಿಂತಿಲ್ಲ. ಅಲ್ಲಿ ಸಾಕಷ್ಟು ಪರಿಣತರು ಇದ್ದಾರೆ. ಸಾಕಷ್ಟು ಸಾಧನ ಸಲಕರಣೆಗಳೂ ಇದ್ದಾವೆ. ಏನಾದರೂ ಲೋಪದೋಷಗಳು ಇದ್ದರೆ, ಅದರ ಬಗ್ಗೆ ಸರಿಯಾದಂತ ಸಕಾಲಿಕ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಆ ಸಂಸ್ಥೆ ತನ್ನ ಪ್ರತಿಷ್ಠೆಯನ್ನು ಉಳಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಕಿದ್ವಾಯಿ ಸಂಸ್ಥೆಯು ದೇಶದಲ್ಲಿಯೇ ಬಹಳ ಗೌರವ ಮತ್ತು ಹೆಸರನ್ನು ಪಡೆದಿರತಕ್ಕಂಥ ಸಂಸ್ಥೆಯಾಗಿದೆ. ಆದರೆ ಅಲ್ಲಿರುವ ರೋಗಿಗಳಿಗೆ ಸರಕಾರದವರು ಇನ್ನೂ ಹೆಚ್ಚಿನ ಒಂದು ವ್ಯವಸ್ಥೆಯನ್ನು ಮಾಡಬೇಕಾಗಿದೆ. ಅಲ್ಲಿ ಜಾಗವಿಲ್ಲದೆ ರೋಗಿಗಳು ಹೊರಗೆ ಮಲಗಿರುತ್ತಾರೆ. ಹೆಚ್ಚಿನ ಪ್ರಮಾಣದಲ್ಲಿ ಅಲ್ಲಿಗೆ ಜನ ಬರುತ್ತಿದ್ದಾರೆ. ಅಪಾರವಾಗಿ ರೋಗಿಗಳು ಬರುತ್ತಾರೆ. ಇನ್ನೂ ವ್ಯವಸ್ಥೆಯಾಗ ಬೇಕಾಗಿದೆ.

ಮಾನ್ಯ ಉಪಾಧ್ಯಕ್ಷಿಣಿಯವರೇ ನಮ್ಮ ಈ ಹೊಸ ಸರಕಾರವು ಬಂದ ನಂತರ ಕಾವೇರಿ ಮತ್ತು ಕೃಷ್ಣದ ವಿಚಾರವಾಗಿ ಕಾವೇರಿ ನ್ಯಾಯಮಂಡಳಿಯ ತೀರ್ಪು ಬಂತು, ತೀರ್ಪು ಬಂದಮೇಲೆ, ನಾವು ಅದನ್ನು ಈ ಸದನದಲ್ಲಿ ತಿರಸ್ಕರಿಸಿದ್ದೇವೆ. ತಾತ್ಕಾಲಿಕವಾಗಿ ಕೊಟ್ಟಂಥ ತೀರ್ಪನ್ನು ನಾವು ತಿರಸ್ಕರಿಸಿದ್ದೇವೆ. ಅದಲ್ಲದೆ ಹಿಂದಿನ ಮುಖ್ಯಮಂತ್ರಿಯವರು ಮತ್ತು ಈಗಿನ ಮುಖ್ಯಮಂತ್ರಿಯವರು ಸಚಿವರಾಗಿದ್ದಾಗ, ನಮ್ಮನ್ನು ಅನೇಕ ಭಾರಿ ಈ ವಿಷಯ ಕುರಿತು ಚರ್ಚೆಗೆ ಕರೆದಾಗ ನಾವು ನ್ಯಾಯಮಂಡಳಿಯನ್ನು ಬಹಿಷ್ಕಾರ ಮಾಡಬೇಕು, ಸರಕಾರದವರು ಬಹಿಷ್ಕಾರ ಮಾಡುವಂಥ ನೀತಿಯನ್ನು ತಳೆದಿದ್ದಾರೆಯೇ ಎಂದು ಒಕ್ಕೊರಲಿಂದ ಹೇಳಿ, ನಾವುಗಳು ವಿರೋಧಪಕ್ಷದವರುಗಳು ಹೊರಗಡೆ ಬಂದಿದ್ದೇವೆ. ಇದು ಆದ ನಂತರ ರಾಜ್ಯದಲ್ಲಿ ಅನೇಕ ರಾಜಕೀಯ ಗೊಂದಲಗಳು ಉಂಟಾಗಿ ಅನೇಕ ಗಂಭೀರ ಸಮಸ್ಯೆಗಳಿಂದಾಗಿ ಕಾವೇರಿ ಸಮಸ್ಯೆಯು ಸ್ವಲ್ಪ ದೂರ ಸರಿಯುವಂತಾಯಿತು. ಮಾನ್ಯ ಮೊಯಿಲಿ ಅವರು ನ್ಯಾಯ ಮಂಡಳಿಯ ಜೊತೆಯಲ್ಲಿ ನಡೆದಂಥ ರೀತಿನೀತಿಗಳ ಬಗ್ಗೆ ನಮಗೆ ಶಂಕೆ ಇಲ್ಲ, ಮುಖ್ಯಮಂತ್ರಿಗಳಾಗಿದ್ದಾರೆ, ಈ ವಿಷಯದ ಬಗ್ಗೆ ಆಳವಾಗಿ ಅಭ್ಯಾಸ ಮಾಡಿದ್ದಾರೆ, ಒಂದು ರೀತಿಯಾಗಿ ತಾವುಗಳು ಕಾವೇರಿಯ ಶಿಲ್ಪಿಯೂ ಕೂಡ ಆಗಿದ್ದೀರಿ. ಎಂದು ಹೇಳಿದರೆ ತಪ್ಪಾಗಲಾರದು.

ಆದರೆ ಇದುವರೆಗೂ ಹೊಸ ಸರಕಾರವು ಬಂದ ನಂತರ ಈ ಬಗ್ಗೆ ತಾವು ಸರಕಾರದ ನಿಲುವು ಏನು ಎಂಬ ಬಗ್ಗೆ ತಾವುಗಳು ನಮ್ಮನ್ನು ಕರೆಯಲಿಲ್ಲ, ಅಥವಾ ಸರಕಾರದ ನೀತಿ ಏನೆಂಬುದನ್ನು ಹೇಳಲಿಲ್ಲ. ಈ ಬಗ್ಗೆ ನ್ಯಾಯಮಂಡಳಿಯಲ್ಲಿ ಕಲಾಪಗಳು ನಡೆಯುತ್ತಾ ಇವೆ. ಇಂಥ ಸಂದರ್ಭದಲ್ಲಿ ನಮ್ಮ ಹೊಸ ಸರಕಾರದ ನಿಲುವು ಏನು ಎಂಬುದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ತಾವುಗಳು ನ್ಯಾಯಮಂಡಳಿಗೆ ಬಹಿಷ್ಕಾರ ಹಾಕಿದ್ದೀರಾ ಎಂಬ ಬಗ್ಗೆ ಸ್ಪಷ್ಟಪಡಿಸಬೇಕು. ಅದೇ ರೀತಿಯಲ್ಲಿ ಕೃಷ್ಣ ಬಗ್ಗೆ ಬಚಾವತ್ ತೀರ್ಪನ್ನು ಕೂಡ ಹೊರಗೆ ಹಾಕಬೇಕೆಂಬುದು ನಮ್ಮೆಲ್ಲರ ಕೂಗು ಸರಕಾರದ ನಿಲುವು ಈ ಬಗ್ಗೆ ಏನು ಎಂಬ ಬಗ್ಗೆ ತಿಳಿಸಬೇಕು. ತೀರ್ಪಿನಂತೆ ಎರಡು ಸಾವಿರ ವರ್ಷಗಳೊಳಗಾಗಿ ಕೃಷ್ಣ ಕಾಮಗಾರಿಗಳನ್ನು ಎಲ್ಲಾ ಮಾಡಿ ಮುಗಿಸುವುದಕ್ಕೆ ಸಾಧ್ಯ ಇದೆಯೇ ಅದರ ವ್ಯವಸ್ಥೆ ಏನು ಗೊತ್ತಿಲ್ಲ. ಅದರ ಬಗ್ಗೆ ತಾವು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಆಂಧ್ರದ ಮುಖ್ಯ ಮಂತ್ರಿಗಳು ಯಾವ ಕ್ರಮಗಳನ್ನು ಹಾಕಿಕೊಂಡಿದ್ದೀರಿ, ಹೇಗೆ ವ್ಯವಸ್ಥೆ ಮಾಡಿದ್ದೀರಿ ಎಂಬ ಬಗ್ಗೆ ನಮಗೆ ತಿಳಿದಿಲ್ಲ. ಅದನ್ನು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಅದರ ಜೊತೆಗೆ ಕರ್ನಾಟಕದ ಮುಖ್ಯಮಂತ್ರಿಗಳಾದ ತಾವು ಆಂಧ್ರದ ಮುಖ್ಯಮಂತ್ರಿಗಳು ಸೇರಿ ಹಿಂದೆ ವೀರೇಂದ್ರಪಾಟೀಲರಿದ್ದಾದ ಮೈಸೂರಿನಲ್ಲಿ ಸೇರಿದ್ದು ಬಿಟ್ಟರೆ ಮತ್ತೆ ಸೇರಿಲ್ಲ, ನಂತರ ನಾವು ಸೇರುತ್ತೇವೆ ಎಂದು ಹಿಂದೆ ಇದ್ದ ಬಂಗಾರಪ್ಪನವರು ಹೇಳಿದರು. ಈ ಕಾವೇರಿ ಕೃಷ್ಣ ಕನ್ನಡಿಗರ ಜೀವನ್ಮರಣದ ಪ್ರಶ್ನೆ. ಇದರ ಬಗ್ಗೆ ತಮ್ಮ ಸ್ಪಷ್ಟ ನಿಲುವು ನೀತಿಯನ್ನು ಈ ಸಭೆಗೆ ಹೇಳಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಇದು ಬಹಳ ದೊಡ್ಡ ವಿಷಯ. ನೀವು ಬೇರೆ ರೂಪದಲ್ಲಿ ಕಳುಹಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಮುಖ್ಯಮಂತ್ರಿಗಳು ಅಧಿಕಾರ ವಹಿಸಿಕೊಂಡ ತಕ್ಷಣ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಎಲ್ಲಾ ವಿರೋಧ ಪಕ್ಷದ ಸದಸ್ಯರ ಸಭೆಯನ್ನು ಕರೆಯುತ್ತಾರೆಂದು ಯೋಚನೆ ಮಾಡಿದ್ದೆವು. ಕಾವೇರಿ ವಾದ ನೆನೆಗುದಿಗೆ ಬಿದ್ದಿದೆ. ಇವತ್ತೇನೋ ಒಳ್ಳೆಯ ಮಳೆಯಾಯಿತು. ರೈತರಿಗೆ ಈ ಸಮಸ್ಯೆಯ ಗಂಭೀರತೆ ಕಾಣದೇ ಇರಬಹುದು ಆದರೆ ಇವತ್ತು ತಾವು ಆ ಟ್ರಿಬ್ಯೂನಲನ್ನು ಬಹಿಷ್ಕಾರ ಮಾಡುತ್ತ ಇದ್ದೀರಾ? ಅಥವಾ ನಮ್ಮ ಅಡ್ವೊಕೇಟ್ಸ್ ಏನು ಮಾಡುತ್ತಿದ್ದಾರೆ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಮಳೆಯಾಗಿರಬಹುದು, ಸಮಸ್ಯೆ ಸ್ವಲ್ಪ ಕಡಿಮೆ ಆಗಿರಬಹುದು ಆದರೆ ಇದು ಗಂಭೀರವಾದ ಸಮಸ್ಯೆ ಹಾಗಾಗಿ ಸರ್ಕಾರ ತನ್ನ ನಿಲುವನ್ನು ಹೇಳಬೇಕಾಗುತ್ತದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ತಮ್ಮಲ್ಲಿ ನನ್ನದೊಂದು ಅರಿಕೆ. ಅಧ್ಯಕ್ಷರು ಸಭೆಯಲ್ಲಿ ಎದ್ದು ನಿಂತಾಗ ಯಾವ ಸದಸ್ಯರೂ ಮೇಲೆ ಏಳಬಾರದು ಎಂದು ನಿಯಮ ಇದೆ. ಇದು ನಿಯಮದಷ್ಟೇ ಅಲ್ಲ ಸಭೆಯ ಗೌರವದ ಪ್ರಶ್ನೆ. ಇದನ್ನು ನಾವು ಬಹಳ ಉಲ್ಲಂಘನೆ ಮಾಡುತ್ತಾ ಇದ್ದೇವೆ. ಎರಡನೆಯದು, ಹಲವಾರು ಜನ ಒಟ್ಟಿಗೆ ಮಾತಾಡ್ತೀರಿ. ನೀವು ಏನು ಹೇಳ್ತೀರೋ ಅದು ನಮಗೆ

ಗೊತ್ತಾಗೋವುದಿಲ್ಲ. ಆದ್ದರಿಂದ ಈ ಎರಡನ್ನು ನನ್ನ ಮಿತ್ರರು ಅನುಸರಿಸಬೇಕೆಂದು ವಿನಯದಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷಿಣಿಯವರೇ, ಈ ಕಾವೇರಿ ವಿಚಾರದಲ್ಲಿ ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾದ ಮೇಲೆ ನಾವು ವಿರೋಧ ಪಕ್ಷದ ಎಲ್ಲಾ ನಾಯಕರನ್ನು ಕರೆದಾಗ ಸಲಹೆ ಮಾಡಿದೆವು. ನೀವು ತಕ್ಷಣ ಇದರ ಬಗ್ಗೆ ಒಂದು ಸಭೆ ಕರೆದು ನಮ್ಮೆಲ್ಲರ ಅಭಿಪ್ರಾಯ ಪಡೆಯಬೇಕು ಎಂದು ನಮಗೇನಾಗಿದೆ ಎಂದರೆ ದುರ್ದೈವಕ್ಕೆ ಒಂದೇ ಪಾರ್ಟಿಯ ಮೂರು ಮುಖ್ಯಮಂತ್ರಿಗಳನ್ನು ಮೂರು ವರ್ಷದಲ್ಲಿ ನೋಡುತ್ತಿದ್ದೇವೆ. ಪ್ರತಿಸಾರಿ ಒಬ್ಬೊಬ್ಬರ ಹೇಳಿಕೆ ಒಂದೊಂದು ತರಹ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇನ್ನೆಷ್ಟು ಸಲ ನೋಡಬೇಕೋ ಅದು ಗೊತ್ತಿಲ್ಲ, ಅದನ್ನೂ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನೀವು ಬರಲ್ಲ, ಅದು ಬೇರೆ ವಿಚಾರ. ನೀವು ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಇವರು ಬರುವುದಿಲ್ಲ, ನಿಮಗ್ಯಾಕೇ ಗಾಬರೀನೋ ನನಗಂತೂ ಅರ್ಥವಾಗೋದಿಲ್ಲ. ಈ ಬಿಜೆಪಿಯವರ ಬಗ್ಗೆ ನಿಮಗೆ ಯಾವಾಗಲೂ ಗಾಬರೀನೇ.

ಶ್ರೀ ವಾಟಾಳ್ ನಾಗರಾಜ್ : ನೀವು ಹೋಗಬಹುದಾದರೆ ಯಾವಾಗ ಹೋಗ್ತೀರಿ? ಇನ್ನೆರಡು ವರ್ಷದಲ್ಲಿ ಹೋಗ್ತೀರಾ? ಅಥವಾ ಯಾವಾಗ ಹೋಗ್ತೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಷ್ಟು ಬೇಗ ನಿನ್ನೆ ಮೊನ್ನೆ ಸಭೆಯಾಗಿದೆ. ಚರ್ಚೆಯಾಗಿದೆ. ಅದರ ವಿವರ ಸಧ್ಯದಲ್ಲೇ ಕೊಡೋರಿದ್ದಾರೆ. ಬೇರೆ ವಿಷಯ ಮಾತಾಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈ ಸಂದರ್ಭದಲ್ಲಿ ನಮ್ಮ ಯಡಿಯೂರಪ್ಪನವರಿಗೆ ಒಂದು ಕಿವಿಮಾತು ಏನೆಂದರೆ ನಿಮ್ಮ ಸರ್ಟಿಫಿಕೆಟ್ ನಮಗ್ಯಾರಿಗೂ ಬೇಕಾಗಿಲ್ಲ. ನೀವು ಮಾತಾಡುವಾಗ ನಮ್ಮ ಪಕ್ಷದ ಆಂತರಿಕ ವಿಚಾರದಲ್ಲೂ ಕೈಹಾಕಿದ್ದೀರಿ. ಚಂದ್ರೇಗೌಡರನ್ನು ತೆಗೆದದ್ದು. ಇದು ನಮ್ಮ ಪಕ್ಷದ ಆಂತರಿಕ ವಿಚಾರ. ದಯವಿಟ್ಟು ಇದರಲ್ಲಿ ತಲೆಹಾಕಬೇಡಿ ಇವತ್ತು ಹೇಳಿಕೆ ಮಾಡೋದುದಷ್ಟೇ ಅಲ್ಲ ಆ ಕಾವೇರಿ ಹೈಪವರ್ ಕಮಿಟಿ ಸಭೆಯನ್ನು ತಕ್ಷಣ ಕರೆದು ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷಿಣಿಯವರೇ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜರು ಯಡಿಯೂರಪ್ಪನವರು ಸನ್ಮಾನ್ಯ ಸಿಂಧ್ಯ ಅವರು ನಮ್ಮ ವಿರೋಧ ಪಕ್ಷದ ನಾಯಕರಾದ ದೇಶಪಾಂಡೆಯವರು ಎತ್ತಿದ ವಿಷಯ ಬಹಳ ಗಂಭೀರವಾದದ್ದು. ಈಗ ಏನೊಂದು ಉನ್ನತ ಮಟ್ಟದ ಸಮಿತಿ ಸಭೆ ಕಾವೇರಿ ಬಗ್ಗೆ ಕರೆಯಬೇಕೆಂದು ಏನಿತ್ತು ಅದರ ಬಗ್ಗೆ ತಮ್ಮ ಹತ್ತಿರ ಅನೌಪಚಾರಿಕವಾಗಿ ಮಾತಾಡಿದಾಗ ನಾನು ಹೇಳಿದ್ದೆ ಅದನ್ನು ತಕ್ಷಣ ಕರೆಯುತ್ತೇವೆ ಎಂದು. ಆಗ ಹೇಳಿದ್ದೆ. ಹೇಗೂ ಅಧಿವೇಶನ, ಬಂತು, ಆ ಸಮಯದಲ್ಲೇ ಸೇರೋಣ 8 ಅಥವಾ 9ರೊಳಗಡೆ ಕಾವೇರಿ ನೀರಿನ ಅಪೆಕ್ಸ್ ಸಭೆಯನ್ನು

ಕರೆಯೋಣ ಅಲ್ಲಿ ಕೂಲಂಕಷವಾಗಿ ಚರ್ಚೆ ಮಾಡೋಣ. ಮತ್ತೆ ನಿಲುವಿನ ಬಗ್ಗೆ ನೀತಿ ಬಗ್ಗೆ ನಮ್ಮಲ್ಲಿ ಯಾವ ಬದಲಾವಣೆ ಕೂಡ ಇಲ್ಲ.

ನಮ್ಮ ಹಿಂದಿನ ಮುಖ್ಯಮಂತ್ರಿಯವರು ಮಾಡಿದ ಸರ್ಕಾರದ ಧೋರಣೆ ಏನಿದೆ, ನಮ್ಮ ಪಾಲಿನ ನೀರಿನ ಹಕ್ಕು ಏನಿದೆ, ಅದನ್ನು ಧಕ್ಕಿಸಿಕೊಳ್ಳುವುದಕ್ಕೆ ನಾವು ಅನವರತವಾಗಿ ಸಮರ್ಪಣಾ ಮನೋಭಾವದಿಂದ ನಮ್ಮ ಸರ್ಕಾರ ಕೂಡ ಅದರಲ್ಲಿ ಕೆಲಸವನ್ನು ಮಾಡುತ್ತದೆ. ಅದರ ಬಗ್ಗೆ ತಾವು ಅನುಮಾನವನ್ನು ಇಟ್ಟುಕೊಳ್ಳಬೇಡಿ. ಅದು ಕರ್ನಾಟಕ ರಾಜ್ಯದ ಜನತೆಯ ಹಿತಾಸಕ್ತಿ, ನಮ್ಮ ಹಿತಾಸಕ್ತಿ, ನಮ್ಮ ನೀರಿನ ಪಾಲು ನಮಗೆ ಬಂದೇ ಬರುತ್ತದೆ. ಅದಕ್ಕೆ ಕಾನೂನಿನ ಹೋರಾಟ, ಯಾವುದೇ ಹೋರಾಟಕ್ಕೂ ನಾವು ಸಿದ್ಧರಿದ್ದೇವೆ. ಕೃಷ್ಣಾ ಬಚಾವತ್ ಅವಾರ್ಡ್ ಬಗ್ಗೆಯೂ ಹೌದು, ಸನ್ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾದ ಮೇಲೆ ತಿರುಪತಿಯಲ್ಲಿ ಒಂದು ಸಭೆಯನ್ನು ಕರೆದಿದ್ದರು. ಅದರಲ್ಲಿ ಆಂಧ್ರದ ಮುಖ್ಯಮಂತ್ರಿಯವರು....

ಶ್ರೀ ವಾಟಾಳ್ ನಾಗರಾಜ್ : ಆ ಸಭೆ ಮೈಸೂರಿನಲ್ಲಿ ಆಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ : ಮೈಸೂರಿನಲ್ಲಿ ಆದಮೇಲೆ ತಿರುಪತಿಯಲ್ಲಿ ಆಯಿತು. ಮೈಸೂರಿನಲ್ಲೂ ಆಯಿತು. ತಿರುಪತಿಯಲ್ಲೂ ಆಯಿತು. ತಿರುಪತಿ ಸಭೆಗೂ ಆ ಎರಡೂ ಸಭೆಗೂ ಕೂಡ ನಾನು ಹೋಗಿದ್ದೆ. ಏನು ನಿರ್ಣಯ....

ಶ್ರೀ ಬಿ.ಎಸ್. ಯಡಿಯೂರಪ್ಪ : ತಿರುಪತಿ ಬೇಡ ಸ್ವಾಮಿ. ಬೇರೆ ಒಳ್ಳೆಯ ಸ್ಥಳದಲ್ಲಿ ಮಾಡಿ. ತಿರುಪತಿಯಲ್ಲಿ ಆದದ್ದೆಲ್ಲಾ ಮೈಮೇಲೆ ಬಂದಿದೆ ನಿಮಗೆ. ಈ ಸಾರಿ ಬೇರೆ ಒಳ್ಳೆಯ ಕಡೆಗೆ ಕರೆಯಿರಿ. ಇದು ನನ್ನ ರಿಕ್ವೆಸ್ಟ್. That's all my request.

ಶ್ರೀ ಆರ್.ವಿ. ದೇಶಪಾಂಡೆ : ಮೀಟಿಂಗ್ ಅಯೋಧ್ಯೆ. ಅಯೋಧ್ಯೆ ತಪ್ಪಿದರೆ ಮಥುರಾ. ಮಥುರಾ ತಪ್ಪಿದರೆ ಕಾಶಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ತಾವು ಸಭೆಯನ್ನು ತಿರುಪತಿಯಲ್ಲಿ ಕರೆಯುವುದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ, ನೀವು ಎಲ್ಲಿಯಾದರೂ ಕರೆಯಿರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ನಾವು ಆಲೋಚನೆ ಮಾಡಿದ್ದೇವೆ. ತಿರುಪತಿಯಲ್ಲೂ ಬೇಡ ಅಯೋಧ್ಯೆಯಲ್ಲೂ ಬೇಡ, ಮಹಾಬಲ್ಲೇಶ್ವರದಲ್ಲಿ ಮಾಡೋಣ ಎನ್ನುವ ಒಂದು ಆಲೋಚನೆಯನ್ನು ಮಾಡಿದ್ದೇವೆ. ಈಗ ಆ ಸಭೆಯ ಬಗ್ಗೆ ನಾನು ಮತ್ತು ಆಂಧ್ರದ ಮುಖ್ಯಮಂತ್ರಿಯವರು ಮತ್ತು ನಮ್ಮ ಮಹಾರಾಷ್ಟ್ರದ ಮುಖ್ಯಮಂತ್ರಿಯವರು ಅನೌಪಚಾರಿಕವಾಗಿ ಮಾತನಾಡಿಕೊಂಡಿದ್ದೇವೆ. ಅದನ್ನು ಮಹಾಬಲ್ಲೇಶ್ವರದಲ್ಲಿ ಆದಷ್ಟು ಜಾಗ್ರತೆ ಕರೆಯಬೇಕು ಎಂದು ಹೇಳಿ ಮಹಾರಾಷ್ಟ್ರದ ಮುಖ್ಯಮಂತ್ರಿ ಸನ್ಮಾನ್ಯ ಸುಧಾಕರ ನಾಯಕ್‌ರವರು ಮತ್ತು ನಾವು ಮಾತನಾಡಿಕೊಂಡಿದ್ದೇವೆ. ಬಹುಶಃ ಸಧ್ಯದಲ್ಲಿಯೇ ಮುಖ್ಯಮಂತ್ರಿಗಳು ಆ ಸಭೆಯನ್ನು ಕರೆಯುವುದರಲ್ಲಿ ಇದ್ದೇವೆ. ಅದರಲ್ಲಿ ನಾವೂ ಕೂಡ ಭಾಗವಹಿಸುತ್ತೇವೆ.

ಉಪಾಧ್ಯಕ್ಷರು : ಈಗ ಶ್ರೀಯುತ ಅಜೀಜ್ ಸೇಠ್‌ರವರು.

ಹಕ್ಕು ಭಾದ್ಯತಾ ಪ್ರಸ್ತಾವ

ಮಾನ್ಯ ಬಿ.ಎಸ್. ಎಡೆಯೂರಪ್ಪನವರು ಅಜೀಜ್‌ಸೇಠ್‌ರವರ ಬಗ್ಗೆ ಆರೋಪಿಸಿದರೆನ್ನಲಾದ ವಿಷಯ

Sri Azeez Sait : Madam Speaker, I beg to move a privilege Motion under Rule 191 against my colleague Mr.B.S. Yediyurappa for his derogatory statements made in several papers from Mysore, bangalore and Ramnagaram. He has attributed that I have been involved in violence in Mysore dated 8th December 1992 in Hindu and Deccan Herald inspite of the fact that the Chief Minister had made a statement saying that it was not correct and I have no involvement in any of these activities. Therefore, by such statements I have been humiliated, my image has been tarnished..... and I have been pained and I have to seek justice and the only authority of mine is this august House, Therefore, my Privilege Motion may be accepted.

Madam Deputy Speaker : Mr. Yediyurappa Do you have anything to say about this

(ಗೊಂದಲ)

Sri D.B. Chandre Gowda : The Hon'ble Senior Member could submit as to what does he want?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ...

(ಗೊಂದಲ)

Sri Azeez Sait : I said it has to be referred to Privilege Committees.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಅಜೀಜ್ ಸೇಠ್‌ರವರು......

ಉಪಾಧ್ಯಕ್ಷರು : ಅಂಥದ್ದು ಏನಿದೆ ಇದರಲ್ಲಿ, ಅವರುಂಟು, ಇವರುಂಟು

ಶ್ರೀ ಸಿ. ಬೈರೇಗೌಡ : ಅವರು ಹೇಳಿದುದ್ದು ನಮಗೆ ಏನೂ ಅರ್ಥವಾಗಿಲ್ಲ. ಏನು ಇದೆ ಎನ್ನತಕ್ಕಂಥದ್ದು ಇಲ್ಲ. ಅವರು ಏನು ಕೊಟ್ಟಿದ್ದಾರೆ. ಎನ್ನತಕ್ಕಂಥದ್ದನ್ನು ದಯವಿಟ್ಟು ತಿಳಿಸಬೇಕು.

ಉಪಾಧ್ಯಕ್ಷರು : ಅವರು ಅದನ್ನು ನನಗೆ ಕಳುಹಿಸಿದ್ದಾರೆ. I do not want you to say anything on this.

ಶ್ರೀ ಸಿ. ಬೈರೇಗೌಡ : ಏನು ಕೊಟ್ಟಿದ್ದಾರೆ ಎನ್ನತಕ್ಕಂಥದ್ದನ್ನು ದಯವಿಟ್ಟು ತಿಳಿಸಿ. ಸಭೆಯಲ್ಲಿ ಕುಳಿತಿರತಕ್ಕಂಥ ನಮಗೂ ಅದು ಅರ್ಥವಾಗಬೇಕಾಗುತ್ತದೆ. ಅದು ಏನು ಎನ್ನತಕ್ಕಂಥದ್ದನ್ನು ಹೇಳಿದರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್ : ಹಕ್ಕುಚ್ಯುತಿ ಬಗ್ಗೆ ನಿರ್ಣಯದ ಸಂಪೂರ್ಣ ಪರಿಪಾಠ ಏನು ಎಂದು ಸಭೆಗೆ ಗೊತ್ತಾಗಬೇಕಾಗಲ್ಲ, ಹಕ್ಕುಚ್ಯುತಿಯನ್ನು ತಂದಿದ್ದಾರೆ. ಏನು ತಂದಿದ್ದಾರೆ. ಏನು ವಿಚಾರ ಎಂದು ಹೇಳಿದರೆ ನಂತರ ಅದು ನಮಗೆ ಗೊತ್ತಾಗುತ್ತದೆ. ನಮಗೆ ಅರ್ಥವೇ ಆಗಿಲ್ಲ, ಏನು ಎನ್ನುವುದನ್ನು ತಿಳಿಸಿ.

Madam Deputy Speaker : Let us see whether he has anything to say on this?

Sri Azeez Sait : Madam I will read out. I hereby give notice under Rule 191 of the Rules of Procedure and conduct of Business in Legislative Assembly seeking permission of the Hon'ble Speaker to raise the question of breach of privilege against Sri B.S. Yediyurappa. Hon'ble Member of this House. The Hon'ble member has made a brief statement alleging that I was responsible for inciting violence in the City of Mysore since 8th December 1992. He has further stated that he has prepared to prove my involvement before the Legislative Assembly. Clipping of the Papers are enclosed herewith in support of the Privilege Motion.

The utterances of the Hon'ble Member against me in the Press has prevented me to discharge my duties as Member of this August House. My image ~~in the~~ public eyes has been tarnished.

Under these circumstances, I may kindly be permitted to raise the Privilege Motion against Sri B.S. Yediyurappa, MLA in the House and also to request you to refer this matter to the privilege Committee.

One of the statements he has made from Bangalore that the former Transport and Wakf Minister Azeez Sait had a hand in communal violence in Mysore Dated 17/12/1992. Then in Hindu, dated 19/12/1992, it has appeared thus.

"The state BJP President, Mr. B.S. Yediyurappa, has demanded the State Government to insititute an inquiry into the recent violence that rocked Mysore City, and the alleged role of the former Minister, Mr. Azeez Sait in sperking the violence.

Speaking to newspersons here today, Mr. Yediyurappa said the organised violence in the city proved the existence of an 'unseen hand'. The Home Commissioner also having expressed the opinion that there were some vested interests behind it, a complete inquiry was imperative.

Similarly, I have enclosed herewith the clippings from 5-6 Papers. Hence, I request that this matter may please be referred to the privilege Committee.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ, ಈಗ ಇರುವಂತಹ ನಮ್ಮ ನಿಯಮಾವಳಿಗಳ ಪ್ರಕಾರ ಇದು ಹಕ್ಕುಚ್ಯುತಿಗೆ ಒಳಪಡುವುದಿಲ್ಲ. ಹೊರಗಡೆ ನಾನು ಏನಾದರೂ ಸ್ಟೇಟ್‌ಮೆಂಟ್ ಮಾಡಿದ್ದರೆ ನನ್ನ ವಿರುದ್ಧ ಕೋರ್ಟಿಗೆ ತಾವು ಹೋಗಬಹುದು. ಪರಿಹಾರವನ್ನು ಕೇಳಬಹುದು. ತಾವು ಕೋರ್ಟಿನಿಂದ ನೋಟೀಸ್ ಕಳಿಸಿದ್ದೀರಿ. ನನಗೆ ತಲುಪಿದೆ, ನಾನು ಅದಕ್ಕೆ ಉತ್ತರವನ್ನು ಎಲ್ಲಿ ಕೊಡಬೇಕೋ ಕೊಡುತ್ತೇನೆ. ಇಲ್ಲಿ ನೀವು ಏನು ಪ್ರಸ್ತಾಪ ಮಾಡಿದ್ದೀರಿ. ಏಕೆ ಈ ಪ್ರಶ್ನೆ ಬಂತು, ತಾವು ಕೋರ್ಟಿಗೆ ಹೋಗಿದ್ದೀರಿ, ನೋಟೀಸ್ ಬಂತು. ಮಾನ್ಯ ಅಜೀಜ್ ಸೇಠ್‌ರವರು ನನ್ನ ಮಿತ್ರರು. ಅನೇಕ ಸಂದರ್ಭದಲ್ಲಿ.....

(ಗೊಂದಲ)

ಇಲ್ಲಿ ಪ್ರಶ್ನೆ ಗಂಭೀರವಾದಂತಹದು. ಮಾನ್ಯ ಹಿರಿಯ ಸದಸ್ಯರಾದ , ಮಾಜಿ ಸಚಿವರಾದ ಶ್ರೀ ಅಜೀಜ್ ಸೇಠ್‌ರವರು ಅವರು ಏನು ಹೇಳಿದ್ದಾರೆ. ಸದನದ ಒಳಗಡೆ ಇರಬಹುದು, ಹೊರಗಡೆ ಇರಬಹುದು, ನಾನು ಅವರ ಬಗ್ಗೆ ಅಥವಾ ಯಾವುದೇ ಸದಸ್ಯರ ಬಗ್ಗೆ ಹಗುರವಾಗಿ ಮಾತನಾಡುವಂತಹ ಅಭ್ಯಾಸ ನನಗೆ ಇಲ್ಲ. ಅದು ಸರಿಯೂ ಅಲ್ಲ. ಇಲ್ಲಿ ನಾನು ಏನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಎಂದರೆ ಮೈಸೂರು ಘಟನೆಗಳು ಆದಮೇಲೆ ಆ ಘಟನೆಗಳು ಏನು ಆಗಿದೆ ಎಂದು ನೋಡುವುದಕ್ಕೆ ಅಲ್ಲಿ ಓಡಾಟ ಮಾಡಿದಾಗ ಒಂದು ವಿಷಯವನ್ನು ತಾವು ಗಮನಿಸಿರಬಹುದು. ನಮ್ಮ ಹೋಮ್ ಸೆಕ್ರಟರಿ ಶ್ರೀ ಮುತ್ತಣ್ಣನವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಮೈಸೂರಿನಲ್ಲಿ ಈ ರೀತಿ ಘಟನೆಗಳು ಏನು ನಡೆದಿವೆ. ಅದಕ್ಕೆ ತುಂಬಾ ಜವಾಬ್ದಾರಿ ಇರುವಂತಹ ವ್ಯಕ್ತಿಗಳ ಕೈವಾಡ ಇದೆ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಅದರ ಕಾಪೀಸ್ ಕೊಡುತ್ತೇನೆ. ಇಲ್ಲಿ ಏಕೆ ಈ ಪ್ರಶ್ನೆ ಬಂತು ಇಲ್ಲಿ ಪ್ರಶ್ನೆ ಬಂದಿರುವಂತಹದು ಮೈಸೂರಿನಲ್ಲಿ ಆದಂತಹ ಗಲಭೆಗಳ ಬಗ್ಗೆ ಏನು ಆಗಿದೆ ಎಂದು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದಾಗ, ಮಾನ್ಯ ಅಜೀಜ್ ಸೇಠ್‌ರವರಿಗೆ ಗೊತ್ತಿದೆ. ಗಲಭೆಗಳು ಆದಂತಹ ಸಂದರ್ಭದಲ್ಲಿ ತಾವು ಒಬ್ಬ ಶಾಸಕರಾಗಿ ಅಲ್ಲಿ ಆ ಘಟನೆ ಆಗದ ಹಾಗೆ ಅಲ್ಲಿ ಇರಬೇಕಾಗಿತ್ತೋ ಅಲ್ಲಿ ಇರದೇ ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆ ಒಂದು ರೀತಿಯ ಶೆಲ್ಟರ್ ತೆಗೆದುಕೊಳ್ಳುವ ರೀತಿಯಲ್ಲಿ ಅವರ ಜೊತೆ ರಾಜ್ಯದಲ್ಲಿ ಪ್ರವಾಸ ಮಾಡುತ್ತಿದ್ದರು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಯೀಲ್ಡ್ ಆಗಿಲ್ಲ, ನನಗೆ ಉತ್ತರ ಹೇಳುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಉತ್ತರ ಹೇಳುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದರೆ ಹೇಗೆ?

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್ : ಅವರು ಈಗ ಏನು ಹೇಳುತ್ತಿದ್ದಾರೆ, ಅದು ಪ್ರಿವಿಲೇಜ್ ಮೋಷನ್‌ಗೆ ಸಮರ್ಥನೆ ಆಯಿತು.

(ಗೊಂದಲ)

ಉಪಾಧ್ಯಕ್ಷರು : ಒಂದನ್ನು ತಾವು ಹೇಳಬೇಕು. Whether you deny the statement or you still hold it as good?

ಎರಡರಲ್ಲಿ ಒಂದನ್ನು ನೀವು ಹೇಳಿದರೆ ಸಾಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಡಿನೈ ಮಾಡುತ್ತಾ ಇಲ್ಲ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ....

(ಗೊಂದಲ)

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಇದನ್ನು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡುವುದು ಒಳ್ಳೆಯದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ನನ್ನನ್ನು ಕರೆದಿದ್ದೀರಿ.....

ಉಪಾಧ್ಯಕ್ಷರು : ಹೆಚ್ಚು ವಿವರಗಳಿಗೆ ತಾವು ಹೋಗುವುದು ಬೇಕಾಗಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಇದರಲ್ಲಿ ಡಿಸ್ಕಷನ್‌ಗೆ ಅವಕಾಶ ಇಲ್ಲ.....

1.05 ಪಿ.ಎಂ

Further I have enclosed the clipping from the Deccan Herald dated 19/12/1992 which reads thus :

State BJP President B.S. Yediyurappa has claimed he has evidence to establish former Minister Azeez Sait's and some other ruling party leaders' active role in inciting violence in the city since December. He said he would place that evidence before the Legislative Assembly in its ensuing session.

Addressing the press here today, he also demanded that home Secretary, Muthanna reveal the names of those who incited the violence, as he had claimed the riots were organised. He said Mr.Sait was under the illusion that he would be an itergral part of any cabinet and that because he had been left out by chief Minister M. Veerappa Moily he had created trouble.

I am on a point of order.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಜೀಜ್ ಸೇಠ್‌ರವರು ತಮ್ಮ ಹಕ್ಕಿಗೆ ಚ್ಯುತಿ ಬಂದಿದೆ ಎಂದು ಇಲ್ಲಿ ಮೂವ್ ಮಾಡಿದ್ದಾರೆ. ಮಾನ್ಯ ಯಡಿಯೂರಪ್ಪನವರು ಹೌದು ನಾನು ಹೇಳಿರತಕ್ಕದ್ದು ನಿಜ ಎಂದು ಹೇಳಿದ್ದಾರೆ. ನಾವು ಸದನದಲ್ಲಿ ಮಾಡಿಕೊಂಡಿರಕ್ಕ ನಿಯಮಗಳ ಪ್ರಕಾರವಾಗಿ ಇಲ್ಲಿ ಚರ್ಚೆಗೆ ಅವಕಾಶ ಇಲ್ಲ, ಆದ್ದರಿಂದ ಇದನ್ನು ಇಮಿಡಿಯೇಟ್ ಆಗಿ ರೆಫರ್ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಪೂರ್ತಿ ಹೇಳಲು ಬಿಡದೇ ಇದ್ದರೆ ಹೇಗೆ?

ಉಪಾಧ್ಯಕ್ಷಣಿಯವರು : ಪೂರ್ತಿ ಹೇಳುವುದಕ್ಕೆ ಎರಡು ಗಂಟೆ ತೆಗೆದುಕೊಳ್ಳುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡಬೇಕೆಂದು ಹೇಳಿದ್ದೇನೆ.

ಶ್ರೀ ಸಿ. ಬೈರೇಗೌಡ : ಬಾಯಿಗೆ ಬಂದ ಹಾಗೆ ಮಾತನಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಇದರ ಬಗ್ಗೆ ನ್ಯಾಯಾಂಗ ತನಿಖೆ.... ಯಾಗಬೇಕೆಂದು ಹೇಳಿದ್ದೇನೆ. ನ್ಯಾಯಾಂಗ ತನಿಖೆಯನ್ನು ಮಾಡಿಸಿ.

ಶ್ರೀ ಸಿ. ಬೈರೇಗೌಡ : ಇಲ್ಲಿ ಬಾಯಿಗೆ ಬಂದ ಹಾಗೆ ಮಾತನಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷಣಿಯವರು : ಈಗ ಪಾರ್ಲಿಮೆಂಟರಿ ಮಿನಿಸ್ಟರ್ ಏನೋ ಹೇಳುತ್ತಿದ್ದಾರೆ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ರಿಪೋರ್ಟ್ ಏನಿದೆ, ಇದರ ಬಗ್ಗೆ ವರದಿಯನ್ನು ಕೊಡಿ. ಇದರ ಬಗ್ಗೆ ಯಾರ್‍ಯಾರ ಕೈವಾದ ಇದೆ ನಿಮಗೆ ಏನು ವರದಿ ಬಂದಿದೆ ಅದನ್ನು ಕೊಡಿ. ಜನಗಳು ಹೇಳಿದರೆಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇದರ ಬಗ್ಗೆ ತನಿಖೆಯಾಗಬೇಕೆಂದು ಹೇಳಿದ್ದೇನೆ ಹೊರತು, ಮಾನ್ಯ ಅಜೀಜ್ ಸೇಠ್‌ರವರು ಇದಕ್ಕೆ ಜವಾಬ್ದಾರರದೆಂದು ನಾನು ಹೇಳಿಲ್ಲ, ನಾನು ಹೇಳಿರುವುದೇನೆಂದರೆ ಯಾವುದೇ ವ್ಯಕ್ತಿಯನ್ನು ಕೇಳಿದರೂ ಸಹ ಈ ಗಲಭೆಗೆ ಅಜೀಜ್ ಸೇಠ್‌ರವರು ಜವಾಬ್ದಾರರು ಎಂದು ಜನಗಳು ಹೇಳಿದ್ದಾರೆ.

(ಗೊಂದಲ)

ಉಪಾಧ್ಯಕ್ಷಣಿಯವರು : ಮಾನ್ಯ ಬೈರೇಗೌಡರೆ ಮಂತ್ರಿಗಳು ಏನೋ ಹೇಳುತ್ತಾರೆ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಗಲಭೆಗೆ ಅಜೀಜ್ ಸೇಠ್‌ರವರು ಜವಾಬ್ದಾರರು ಎಂದು ಜನ ಮಾತನಾಡುತ್ತಿದ್ದಾರೆ. ತನಿಖೆ ಮಾಡಿ. ಇದನ್ನು ನಾನು ಹೇಳಿದ್ದೇನೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ನನಗೆ ಅವಕಾಶವನ್ನು ಕೊಡಬೇಕು.

ಉಪಾಧ್ಯಕ್ಷಣಿಯವರು : ತಾವು ಒಂದು ನಿಮಿಷ ತಾಳಿ, ಅವರು ಮಾತನಾಡುತ್ತಿದ್ದಾರೆ.

Sri Harnahally Ramaswamy : If any members casts aspersions or makes an allegation against another member, it constitutes a breach of privilege and it amounts to bringing down the image which also comes under Article 105 of the Constitution. When a question of breach of privilege is raised before the House, the Speaker allows the member against whom such allegation is made to explain his stand. Therefore, you have given an opportunity to Sri B.S. Yediyurappa to explain his stand in the matter. He has, in a sense stated that he stands by his statement. If he denies his statement, let it be referred to the Privilege committee.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳದೇ ಇರುವುದನ್ನು ನನ್ನ ಬಾಯಲ್ಲಿ ಹೇಳಿಸಬೇಡಿ. ಜನ ಏನು ಹೇಳಿದ್ದಾರೆ. ಅದನ್ನು ನಾನು ಹೇಳಿದ್ದೇನೆ. ಸದನದ ಸಮಿತಿ ಮಾಡಿ ಸತ್ಯ ಸಂಗತಿಫಲು ಹೊರಬರಲಿ, ನಾನು ಹೇಳದೇ ಇರುವುದನ್ನು ನನ್ನ ಬಾಯಿಂದ ಹೇಳಿಸುತ್ತಿದ್ದಾರೆ. ಜನ ಏನು ಹೇಳಿದ್ದಾರೆ. ಅದನ್ನು ನಾನು ಹೇಳಿದ್ದೇನೆ.

Sri Harnahalli Ramaswamy : This may be referred to be privilege Committee. There is a prima facie case for referring the matter to the Privilege Committee.

ಶ್ರೀ ಟಿ.ಎಸ್. ಯಡಿಯೂರಪ್ಪ : ಈ ಗಲಭೆಯಾಗಿರುವ ಬಗ್ಗೆ ಸತ್ಯಸಂಗತಿಯನ್ನು ತಿಳಿದುಕೊಳ್ಳುವುದಕ್ಕೆ ಯಾರ್ಯಾರ ಕೈವಾದ ಇತ್ತು ಎಂದು ತಿಳಿದುಕೊಳ್ಳುವುದಕ್ಕೋಸ್ಕರ ಸದನದ ಸಮಿತಿ ಮಾಡಿ ಎಂದು ನಾವು ಕೇಳುತ್ತಿದ್ದೇನೆ.

ಉಪಾಧ್ಯಕ್ಷಣಿಯವರು : ಮಾನ್ಯ ಯಡಿಯೂರಪ್ಪನವರೇ ಅವರು ಈಲ್ಡ್ ಆಗಿಲ್ಲ.

Sri D.B. Chandre Gowda : Madam Speaker, the Parliamentary Affairs Minister is trying to substantitate hsi case. I feel it is not necessary because the hon'ble member himself wants a House Committee to be constituted for this Purpose. The only committee that is available is the privilege Committee. When he accepts where is the question of argument?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ ಈಗ ಪ್ರಿವಿಲೇಜ್ ವಿಚಾರದಲ್ಲಿ ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಹೇಳಿದ್ದಾರೆ. ಅದನ್ನು ತಾವು ಪ್ರಿವಿಲೇಜ್ ಕಮಿಟಿಗೆ ಕೊಡತಕ್ಕಂತ ಅಥವಾ ಇಲ್ಲಿಯೇ ವಿಚಾರಣೆ ಮಾಡತಕ್ಕಂಥಾದ್ದು ತಮ್ಮ ಆದೇಶಕ್ಕೆ ಬಿಟ್ಟಿದುದ್ದು. ಆದರೆ

ಒಂದು ಮಾತನ್ನು ಸನ್ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹೇಳಿದ್ದಾರೆ. ಏನೆಂದರೆ ಮುಖ್ಯಮಂತ್ರಿಗಳ ಶೆಲ್ಟರ್ ತೆಗೆದುಕೊಳ್ಳುವುದಕ್ಕೆ ಬೇರೆ ಕಡೆ ಹೋದರು ಎಂದು. ತಾವು ಹೇಳಿರುವ ಈ ಮಾತು ಸರಿಯಲ್ಲ.ಏಕೆಂದರೆ, ಸನ್ಮಾನ್ಯ ಅಜೀಜ್ ಸೇಠ್‌ರವರನ್ನು ನಾನು ಬೇರೆ ಬೇರೆ ಸ್ಥಳಗಳಲ್ಲಿ ಸುತ್ತಾಡುವುದಕ್ಕಾಗಿ ಸ್ವತಃ ಅವರನ್ನು ಆಹ್ವಾನಿಸಿದ್ದೇನೇ ಹೊರತು, ಅವರು ಯಾವುದೇ ರೀತಿಯಿಂದ ಮಾಡಿದ್ದಲ್ಲ. ಆದುದರಿಂದ, ತಾವು ಕೊಡತಕ್ಕಂಥ ಹೇಳಿಕೆ ಏನಿದೆ, ಅದು ಖಂಡಿತಾ ಸರಿಯಲ್ಲ. ಇಂತಹ ಹಿರಿಯ ಮಾಜಿ ಸಚಿವರು ಮತ್ತು ಹಿರಿಯ ಸದಸ್ಯರಾಗಿರುವವರ ಬಗ್ಗೆ ನಾವು ಬಹಳ ಲಘುವಾಗಿ ಮಾತನಾಡತಕ್ಕಂಥಾದ್ದು ನಮಗೆ ಹಾಗೂ ಈ ಸದನಕ್ಕೆ ಶೋಭೆ ತರುವುದಿಲ್ಲವೆಂದು ಅಷ್ಟು ಮಾತ್ರ ಹೇಳಬಲ್ಲೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಡೆದಿರುವ ಘಟನೆ ಬಗ್ಗೆ ತಾವು ನ್ಯಾಯಾಂಗ ತನಿಖೆಗೆ ಒಳಪಡಿಸುತ್ತೀರಾ?

(ಗೊಂದಲ)

ಉಪಾಧ್ಯಕ್ಷರು : ಆ ಪ್ರಶ್ನೆ ಈಗ ಬರುವುದಿಲ್ಲ. ಮಾನ್ಯ ಅಜೀಜ್ ಸೇಠ್‌ರವರು ತಂದಿರುವ ವಿಚಾರದಲ್ಲಿ I will reserve my ruling regarding this matter. I will give my ruling tomorrow.

ಮುಖ್ಯಮಂತ್ರಿಗಳು ಬೀದರ್‌ನಲ್ಲಿ ನೀಡಿದ ಹೇಳಿಕೆಯ ಬಗ್ಗೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವ ಕಲ್ಯಾಣ) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಧಂಗೆಗ್ರಸ್ತವಾಗಿರತಕ್ಕಂಥ ಬೀದರ್ ಜಿಲ್ಲೆಗೆ ಪ್ರವಾಸ ಮಾಡಿದಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರ ಹೇಳಿಕೆಯನ್ನು ಬೀದರ್‌ನ ಸ್ಥಳೀಯ ಎಲ್ಲಾ ಪತ್ರಿಕೆಗಳಲ್ಲಿಯೂ ಕೂಡ ಬಂದಿದೆ. ಈ ಸಂಬಂಧವಾಗಿ ನಾನು ಏನು ಹಕ್ಕುಚ್ಯುತಿ ನೋಟೀಸ್‌ನ್ನು ಕೊಟ್ಟಿದ್ದೇನೆ, ಅದರ ಮೇಲೆ ಮಾತನಾಡುವುದಕ್ಕೆ ತಾವು ನನಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಹಕ್ಕುಚ್ಯುತಿ ನೋಟೀಸ್ ಈ ರೀತಿ ಇದೆ.

"I wish to give notice of Breach of Privilege under Rule 191 of the Rules of Procedure of Legislative Assembly on the Hon'ble Chief Minister, Sri M. Veerappa Moily for his statement appeared in Bidar KI Awaz dated 16-12-1992. It is reported in the enclosed paper that Sri Veerappa Moily, the Hon'ble Chief Minister has stated that the incidents at Bidar would not have happened if Mr. Laikuddin(defeated Congress (I) candidate from Bidar)was elected by the people from Bidar as their MLA.

If the reported statement is true, definitely, it attracts the rule relat to the Breach of Privilege.

I therefore request you to kindly give permission to raise the Breach of Privilege in the House".

ಗ್ರಂಥಾಲಯ, ವಿಧಾನ ಸೌಧ, ಬೆಂಗಳೂರು. ದಿನಾಂಕ......
20,640

ಇದಲ್ಲದೆ, ಇನ್ನೂ ಹಲವಾರು ವಿಷಯಗಳ ಬಗ್ಗೆ ಮಾತನಾಡಬೇಕಾಗಿರುವುದರಿಂದ ತಾವು ನನಗೆ ದಯಮಾಡಿ ಅವಕಾಶ ಮಾಡಿಕೊಡಬೇಕೆಂದು ಈ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಸದಸ್ಯರು ಏನು ಒಂದು ಸೂಚನೆ ಕೊಟ್ಟಿದ್ದಾರೆ. ಇದನ್ನು ಯಾರ ಮೇಲೆ ಹೇಳಿದ್ದಾರೋ, ಅವರಿಂದ ಉತ್ತರ ಕೊಡಿ ಎಂದು ನಾವು ಕೇಳಬೇಕಾದಂಥ ಅವಶ್ಯಕತೆಯೂ ಇಲ್ಲ. ಏಕೆಂದರೆ, ಯಾವ ಶಾಸನ ಸಭೆ ಸದಸ್ಯರ ಮೇಲೂ ಯಾವ ಅಪಾದನೆ ಮಾಡಿದ್ದಾರೆನ್ನುವ ಶಬ್ದ ಈ ಪ್ರಿವಿಲೇಜ್ ರೈಸ್ ಮೋಷನ್‌ನಲ್ಲಿ ಇಲ್ಲ. ರಾಜಕೀಯವಾಗಿ ಭಾಷಣ ಮಾಡಿದ್ದರೆಂದು ಹೇಳುತ್ತಿದ್ದಾರೆ. ನಮ್ಮ ಕರ್ತವ್ಯ ನಿಮ್ಮನ್ನು ಸೋಲಿಸಬೇಕೆಂದು, ನಿಮ್ಮ ಕರ್ತವ್ಯ ನಮ್ಮನ್ನು ಸೋಲಿಸಬೇಕೆಂದು ಇದು ನಮ್ಮ ದೇಶಾದ್ಯಂತ ನಡೆಯುತ್ತಿರುತ್ತದೆ. ಇಲ್ಲಿ ಮುಖ್ಯಮಂತ್ರಿಗಳ ಮೇಲೆ, ಅಥವಾ ಯಾವ ಸದಸ್ಯರ ಮೇಲೆ ಅಪಾದನೆ ಮಾಡಿರುವುದು Prima facie, there is no case. He need not be called upon to give any reply. It should be dismissed.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಖ್ಯವಾದ ಪಾಯಿಂಟ್ ಏನೆಂದರೆ....

ಉಪಾಧ್ಯಕ್ಷಿಣಿಯವರು : ಮಾನ್ಯ ಯಡಿಯೂರಪ್ಪನವರೇ, ಈಗ ಸಂಸದೀಯ ಸಚಿವರು ಹೇಳಿದ್ದಾರಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಪಕ್ಷದ ಒಬ್ಬ ಸದಸ್ಯರಿಗೆ ಸಂಬಂಧಪಟ್ಟರತಕ್ಕ ಪ್ರಶ್ನೆ ಏನಿದೆಯೋ ಅದನ್ನು ನಾನು ಓದುತ್ತೇನೆ. ಏನೆಂದರೆ, ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ವೀರಪ್ಪ ಮೊಯಿಲಿಯವರು ಮುಂದುವರಿದು....

ಶ್ರೀ ಬಸವರಾಜ ಪಾಟೀಲ್ ಅಟ್ಟೂರು : ನಾನು ಹೇಳುವುದೇನೆಂದರೆ, ಧಂಗೆಗ್ರಸ್ತ ಪ್ರದೇಶಕ್ಕೆ ಮುಖ್ಯಮಂತ್ರಿಗಳು ಪ್ರಥಮ ಬಾರಿ ಭೇಟಿ ಕೊಟ್ಟಿದ್ದರು. ನಾವು ಮುಖ್ಯ ಮಂತ್ರಿಗಳ ಮೇಲೆ ಸಂಪೂರ್ಣವಾಗಿ ವಿಶ್ವಾಸ ಇಟ್ಟುಕೊಂಡಿದ್ದೆವು. ಅಲ್ಲದೆ, ನಮ್ಮ ಮುಖ್ಯಮಂತ್ರಿಗಳು ತುಂಬಾ ಒಳ್ಳೆಯವರು ಎನ್ನುವ ಭಾವನೆಯನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಅಲ್ಲಿ ದೊಡ್ಡ ಪ್ರಮಾಣದಲ್ಲಿ ಧಂಗೆ ನಡೆಯುವಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಈ ರೀತಿ ಮಾತಾಡತಕ್ಕಂಥಾದ್ದು ಸರಿಯಲ್ಲ. ಅಲ್ಲಿರತಕ್ಕಂಥ ವಿಧಾನಸಭಾ ಸದಸ್ಯರಾದ ಶ್ರೀ ನಾರಾಯಣರಾವ್ ಮನಹಳ್ಳಿಯವರ ಹಕ್ಕಿಗೂ ಕೂಡ ಇದರಿಂದ ಧಕ್ಕೆ ಬಂದಿದೆ. ಇದು ಅಲ್ಲಿನ ಸ್ಥಳೀಯ ಪತ್ರಿಕೆಗಳಲ್ಲಿ ಬಂದಿರುವುದರಿಂದ, ಇದೊಂದು ಚರ್ಚೆಗೆ ಗ್ರಾಸವಾಗಿದೆ.

ಆ ಕಾರಣಕ್ಕಾಗಿ ನಾನು ಬ್ರೀಚ್ ಆಫ್ ಪ್ರಿವಿಲೇಜ್ ಸೂಚನೆಯನ್ನು ತಂದಿದ್ದೇನೆ. ಮುಖ್ಯಮಂತ್ರಿಗಳು ಅದರ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕು. ಅವರು ಯಾವ ರೀತಿಯಲ್ಲಿ ಹೇಳಿದ್ದಾರೆ ಎಂಬ ಬಗ್ಗೆ ಅವರು ಒಂದು ಮಾತನ್ನು ಹೇಳಬೇಕು. ಉತ್ತರ ಕರ್ನಾಟಕದ ಒಂದು ಪತ್ರಿಕೆಯಲ್ಲಿ ಅದರ ಬಗ್ಗೆ ಬಂದಿರತಕ್ಕದ್ದನ್ನು ಈಗ ಓದುತ್ತೇನೆ.

(ಹಿಂದಿಯಲ್ಲಿ ಓದಿದರು)

ಉಪಾಧ್ಯಕ್ಷಣೆಯರು : ನೀವು ಅದನ್ನೆಲ್ಲಾ ಕೊಟ್ಟಿರುವ ಪತ್ರದಲ್ಲಿ ಮೆನ್‌ಷನ್‌ಮಾಡಿದ್ದೀರಿ. ಆದ್ದರಿಂದ ಅದನ್ನೇ ಮತ್ತೆ ಓದುವ ಅಗತ್ಯವಿಲ್ಲ

(ಹಿಂದಿಯಲ್ಲಿ ಪತ್ರಿಕೆಯನ್ನು ಓದಿದರು)

ಶ್ರೀ ವಾಟಾಳ್ ನಾಗರಾಜ್ : ಉಪಾಧ್ಯಕ್ಷಣೆಯವರೆ, ಅದು ಯಾವುದೋ ಪೇಪರ್, ಅದರ ಭಾಷೆ ನಮಗೆ ಅರ್ಥವಾಗುವುದಿಲ್ಲ. ಆ ಪೇಪರ್‌ನಲ್ಲಿ ಏನು ಬರೆದಿದ್ದಾರೋ ನಮಗೆ ತಿಳಿಯುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಉಪಾಧ್ಯಕ್ಷಣೆಯರೇ, ತಾರೀಖು 28ರ ಪ್ರಜಾವಾಣಿ ಪತ್ರಿಕೆಯಲ್ಲಿ ಬೀದರ್ ವಿಧಾನಸಭಾ ಕ್ಷೇತ್ರದಲ್ಲಿ ಅಲ್ಪಸಂಖ್ಯಾತ ಅಭ್ಯರ್ಥಿಗೆ ಮತವನ್ನು ನೀಡಿ ಆಯ್ಕೆ ಮಾಡಿದ್ದರೆ ಇಲ್ಲಿ ದಂಗೆ ನಡೆಯುತ್ತಿರಲಿಲ್ಲವೇನೋ ಎಂದು ವರದಿಯಾಗಿದೆ.

ಉಪಾಧ್ಯಕ್ಷಣೆಯರು : ನೀವು ಅಟ್ಟೂರ್‌ರವರ ಪರವಾಗಿ ಹೇಳುತ್ತಿದ್ದೀರ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಯವರು ಅದು ತಪ್ಪಾಗಿ ವರದಿಯಾಗಿದ್ದರೆ ಅದು ಬೇರೆ ವಿಷಯ. ಆದರೆ ಇಲ್ಲಿ ಏನಾಗಿದೆ ಎಂದರೆ, ಬೀದರ್ ವಿಧಾನಸಭಾ ಕ್ಷೇತ್ರದಲ್ಲಿ ಅಲ್ಪಸಂಖ್ಯಾತ ಅಭ್ಯರ್ಥಿಗೆ ಮತವನ್ನು ನೀಡಿ ಆಯ್ಕೆ ಮಾಡಿದ್ದರೆ ಅಲ್ಲಿ ದಂಗೆ ನಡೆಯುತ್ತಿರಲ್ಲಿಲ್ಲವೆಂದು ಹೇಳಿದರು ಎನ್ನಲಾಗಿದೆ. ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರಪ್ಪ ಮೊಯಿಲಿಯವರು ಬೀದರ್ ನಗರಕ್ಕೆ ಬೇಟಿ ನೀಡಿದ ನಂತರ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ನಗರದ ಗಣ್ಯರ ಸಭೆಯಲ್ಲಿ ಮಾತನಾಡಿ ನಮಗೆ ಈಗ ಮುಂದಿರತಕ್ಕ ಕರ್ತವ್ಯವೇನೆಂದರೆ ಶಾಂತಿ ಸ್ಥಾಪನೆ, ನೊಂದವರ ಹೃದಯಕ್ಕೆ ಸಾಂತ್ವನ ಹೇಳುವುದೆಂದಿದ್ದರು.

ಶ್ರೀ ಎಂ. ಮಹದೇವು : ಉಪಾಧ್ಯಕ್ಷಣೆಯವರೇ, ಇದು ಬಿಜೆಪಿಯವರ ಕಟ್ಟುಕಥೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮಹದೇವುರವರು ಇಲ್ಲಿ ತಮಾಷೆ ಮಾಡುತ್ತಾರೆಯೆ ಮುಖ್ಯಮಂತ್ರಿಗಳು ಜವಾಬ್ದಾರಿ ಹೊಂದಿರತಕ್ಕವರು, ಅಲ್ಪಸಂಖ್ಯಾತರನ್ನು ಆಯ್ಕೆ ಮಾಡಿದ್ದರೆ ಆ ಕ್ಷೇತ್ರದಲ್ಲಿ ಗಲಭೆಯಾಗುತ್ತಿರಲಿಲ್ಲ.....

(ಗೊಂದಲ)

ಉಪಾಧ್ಯಕ್ಷಣೆಯರು : ಪ್ರಿವಿಲೇಜ್ ಮೋಷನ್‌ಗೆ ಅವರೂ ಮಾತನಾಡುತ್ತಾರೆ. ಇವರೂ ಮಾತನಾಡುತ್ತಾರೆ, ಹೀಗಾದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ನಾನು ತಮಗೆ ಸಹಾಯ ಮಾಡುತ್ತಿದ್ದೇವೆ. ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಕೇಳೋಣವೆಂದರೆ ಇವರು ಯಾರೂ ಸುಮ್ಮನೆ ಇರುತ್ತಿಲ್ಲವಲ್ಲ?

ಶ್ರೀ ಎಂ. ಮಹದೇವು : ಉಪಾಧ್ಯಕ್ಷಣಿಯವರೆ, ಯಾವ ಜವಾಬ್ದಾರಿಯನ್ನು ಹೊಂದಿರತಕ್ಕ ಮುಖ್ಯಮಂತ್ರಿಗಳೂ ಸಹ ಅಂಥ ಹೇಳಿಕೆಯನ್ನು ಕೊಡಲು ಸಾಧ್ಯವಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕಾಗಿಯೇ ಬ್ರಿಚ್ ಆಫ್ ಪ್ರಿವಿಲೇಜ್ ಆಗಿ ತಂದಿದ್ದೇವೆ ಅವರು ಅದಕ್ಕೆ ಹೇಳಲೇ ಬೇಕಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಣಿಯರೆ, ಮಾನ್ಯ ಅಟ್ಟೂರ್‌ರವರು ಹಕ್ಕುಚ್ಯುತಿಯ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ ಅದು ಪೂರ್ಣವಾಗಿ ಸರಿಯಲ್ಲ. ವಿಚಾರಣೆ ನಡೆದುದು ಇಷ್ಟು. ಇದು ಪಕ್ಷದ ಸಭೆಯಲ್ಲಿ ನಡೆದಂಥ ವಿಚಾರ. ಅದನ್ನು ನಾವಿಲ್ಲಿ ಹೇಳಬೇಕಾಗಿಲ್ಲ. ಅದು ಪತ್ರಿಕೆಯಲ್ಲ ವರದಿ ಬಂದಿದೆ. ಪಕ್ಷದ ಸಭೆಯಲ್ಲಿ ಯಾವ ಪತ್ರಿಕಾ ವರದಿಗಾರರು ಇರುವುದಿಲ್ಲ. ಆದರೂ ಕೂಡ ಇಲ್ಲಿ ಅದರ ಪ್ರಸ್ತಾಪವಾಗಿರುವುದರಿಂದ ಅದರ ಬಗ್ಗೆ ನಾನು ಹೇಳುವುದಕ್ಕೆ ಬಯಸುತ್ತೇನೆ. ಪಕ್ಷದ ಸಂಘಟನೆಗೆ ಪಕ್ಷದ ಐಕ್ಯತೆಗಾಗಿ ನಾವು ಮಾತನಾಡುತ್ತೇವೆ. ನಾವು ಹೇಳಬಹುದು ಮುಂದಿನ ಚುನಾವಣೆಯಲ್ಲಿ ಬಿ.ಜಿ.ಪಿ ಅಭ್ಯರ್ಥಿಯನ್ನು ಸೋಲಿಸಬೇಕೆಂದು ಕೋಮುವಾದಿಗಳನ್ನು ಹೊಡೆದೂಡಿಸಬೇಕೆಂದು ನಮ್ಮ ಭಾಷಣದಲ್ಲಿ ಹೇಳುತ್ತೇವೆ, ಅದು ನಮ್ಮ ಸಿದ್ಧಾಂಥ ಅದು ನಮ್ಮ ಕರ್ತವ್ಯ, ಅದನ್ನು ನಾವು ಮಾಡುತ್ತೇವೆ. ಶ್ರೀಮಾನ್ ನಾರಾಯಣರಾವ್‌ರವರು ಬಹಳ ಒಳ್ಳೆಯವರು ಮತ್ತು ಸಜ್ಜನರು. ಅವರ ಬಗ್ಗೆ ನಮಗೇನಿಲ್ಲ. ಆದರೆ ಅವರು ದಾರಿತಪ್ಪಿ ನಿಮ್ಮ ಪಕ್ಷಕ್ಕೆ ಹೋಗಿದ್ದಾರೆ ಅಷ್ಟೇ. ಆದರೆ ಅದರ ಮುಂದಿನ ಚುನಾವಣೆಯಲ್ಲಿ ನಾವು ಅವರನ್ನು ಸೋಲಿಸುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಮುಖ್ಯಮಂತ್ರಿಗಳು ನಮ್ಮನ್ನು ಸೋಲಿಸಿದರೆ ನಿಮ್ಮನ್ನು ನಾವು ಸೋಲಿಸುತ್ತೇವೆ ಇದು ಛಾಲೆಂಜ್.

ಶ್ರೀ ಎಂ. ವೀರಪ್ಪ ಮೊಯಿಲಿ : ಆ ಪ್ರಶ್ನೆ ಪ್ರತ್ಯೇಕ. ಅದು ರಾಜಕೀಯ. ನಾನು ಮುಖ್ಯಮಂತ್ರಿಯಾಗಿ ಸೋಲಿಸುವುದಿಲ್ಲ. 1972ರಿಂದ ಅಂದರೆ ಕಳೆದ 5 ಚುನಾವಣೆಗಳಿಂದ ನೀವು ನಮ್ಮ ಕಾರ್ಕಳದಲ್ಲಿ ಇದನ್ನೇ ಮಾಡುತ್ತಾ ಬಂದಿದ್ದೀರಿ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಎಲ್ಲರೂ ಮಾತನಾಡುವುದು ಬೇಡ. ಈಗ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷಿಣಿಯವರೆ, ಅವರು ಹೇಳಿದ್ದನ್ನು ರೆಕಾರ್ಡ್‌ನಿಂದ ತೆಗೆದುಹಾಕಬೇಕು.

ಉಪಾಧ್ಯಕ್ಷರು : ಅದು ಏನು ಎಂದು ನಾನು ತರಿಸಿಕೊಂಡು ನೋಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ನಾರಾಯಣರಾಯರು ವಿದ್ಯುಕ್ತವಾಗಿ ಚುನಾಯಿತವಾಗಿರುವಂಥ ಪ್ರತಿನಿಧಿಗಳು. ಅವರ ವಿರುದ್ಧವಾಗಿ ನಾನು ಯಾವತ್ತು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ

ಒಂದು ಮಾತು ಏನೆಂದರೆ, ನಾನು ಈ ವಿಚಾರವನ್ನು ನಮ್ಮ ಪಕ್ಷದಲ್ಲಿ ಹೇಳಿದ್ದೇನೆ. ತಾವೆಲ್ಲರೂ ಒಗ್ಗಟ್ಟಾಗಿ ಚುನಾವಣೆಯಲ್ಲಿ ಕೆಲಸ ಮಾಡಿದ್ದರೆ ಲೈಕುದ್ದೀನ್‌ರವರು ಗೆಲ್ಲುತ್ತಿದ್ದರು. ಸೋಲುತ್ತಿರಲಿಲ್ಲ ಎಂದು ನಮ್ಮ ಪಕ್ಷದವರಿಗೆ ಒಂದು ಕಿವಿ ಮಾತನ್ನು ನಾನು ಹೇಳಿದ್ದೇನೆ. ಅಷ್ಟೇ ಹೊರತು ಬೇರೆ ಇಲ್ಲ. ಅವರು ಗೆದ್ದಿದ್ದರೆ ಬೀದರ್‌ನಲ್ಲಿ ಗಲಾಟೆ ಆಗುತ್ತಿರಲಿಲ್ಲ ಎಂದು ಹೇಳತಕ್ಕದ್ದು ಬಹುಶಃ ಅದು ಒಂದು ತಪ್ಪು ಕಲ್ಪನೆ. ಆ ಸ್ಟೇಟ್‌ಮೆಂಟ್‌ಗೂ ಈ ಸ್ಟೇಟ್‌ಮೆಂಟ್‌ಗೂ ಏನೇನೂ ಸಂಬಂಧವಿಲ್ಲ. ಒಟ್ಟಿನಲ್ಲಿ ಆ ವರದಿ ಸರಿಯಾಗ ಪತ್ರಿಕೆಗಳಲ್ಲಿ ಬಂದಿಲ್ಲ, ಏಕೆಂದರೆ It was wrongly connected that statement and this statement.

ಇಲ್ಲಿ ಪತ್ರಿಕಾ ಪ್ರತಿನಿಧಿಗಳು ಇದ್ದುದ್ದು ನನಗೆ ಕಾಣಲಿಲ್ಲ. ಅಲ್ಲ ಇದ್ದುದು ನಮ್ಮ ಪಕ್ಷದವರು. ನಾವು ಯಾವತ್ತೂ ಆರೀತಿ ಹೇಳುವುದಿಲ್ಲ, ನಾವು ಜವಾಬ್ದಾರಿಯಿಂದ ಮಾತನಾಡುತ್ತೇವೆ. ನಾವು ಏನು ಹೇಳಿದ್ದೇವೆಂದರೆ....

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರತಿಯೊಂದು ಸಾರಿಯೂ ಸರಿಯಾಗಿ ಮಾತನಾಡುತ್ತಿದ್ದವರು ಈಗ ಸಿಕ್ಕಿಬಿದ್ದಿರಲ್ಲ ಎಂದು ನಾವು ಚಿಂತನೆ ಮಾಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ : ವಿಧ್ಯುಕ್ತವಾಗಿ ಚುನಾಯಿತವಾದಂಥ ಒಬ್ಬ ಸದಸ್ಯರ ವಿಚಾರದಲ್ಲಿ ರಿಫ್ಲೆಕ್ಟ್ ಆಗುವಂಥ ರೀತಿಯಲ್ಲಿ ನಾನು ಮಾತನಾಡುವುದಿಲ್ಲ. ಆದರೆ ಒಂದು ಮಾತನ್ನು ನಾನು ಹೇಳಿದ್ದೇನೆ. ಕೇವಲ ಕಾಂಗ್ರೆಸ್ ಪಕ್ಷದವರು ಮಾತ್ರ ಒಗ್ಗಟ್ಟಾಗಿ ಇರುವುದಿಲ್ಲ, ಎಲ್ಲಾ ಜಾತ್ಯಾತೀತ ಶಕ್ತಿಗಳೂ ಕೂಡ ಒಗ್ಗಟ್ಟಾಗಿ ಬಿ.ಜೆ.ಪಿ. ಯವರನ್ನು ಸೋಲಿಸಬೇಕೆಂದು ನಾನು ಹೇಳುತ್ತಿದ್ದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಣಿಯವರೆ, ನೀವು ಇದನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸುತ್ತಿದ್ದೀರಾ?

ಉಪಾಧ್ಯಕ್ಷಿಣಿಯವರು : ನೀವೂ ಹೇಳಿದ್ದಾಯಿತು, ಅದೇ ರೀತಿ ಅವರೂ ಕೂಡ ಹೇಳಿದ್ದಾಯಿತು. ಈಗ ಕೌಲ್ ಅಂಡ್ ಶಕ್ದರ್‌ರವರ 259ನೇ ಪೇಜ್‌ನಲ್ಲಿರುವ ಪ್ರಕಾರ "Statements made by Ministers at Party Meetings are not considered to be the matter of privilege." issue So I reject this Privilege motion.

ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಂಡಿದ್ದೇವೆ. ಮಾನ್ಯ ಚಂದ್ರೇಗೌಡರೆ ಮಾತನಾಡಿ.

ಶ್ರೀ ಎಸ್.ಹೆಚ್. ಕೌಜಲಗಿ : ನಾನು ಜೀರೋ ಅವರ್‌ನಲ್ಲಿ ಎತ್ತಿದ್ದೇನೆ.

ಉಪಾಧ್ಯಕ್ಷಣಿಯವರು : ನಾನು ಈಗಾಗಲೇ ಮುಂದೆ ಹೋಗಿದ್ದೇವೆ ಜೀರೋ ಅವರ್ ಆದಮೇಲೆ ಮುಂದಕ್ಕೆ ಬಂದಿದ್ದೇವೆ. ಈಗ ಮಾನ್ಯ ಡಿ.ಬಿ. ಚಂದ್ರೇಗೌಡರು ಮಾತನಾಡುತ್ತಾರೆ. Zero hour is over.

ಶ್ರೀ ಎಸ್.ಹೆಚ್. ಕೌಜಲಗಿ : ನಾನು ಬಹಳ ಹೊತ್ತಿನಿಂದ ತಮ್ಮನ್ನು ಕೇಳುತ್ತಿದ್ದೇನೆ.

ಉಪಾಧ್ಯಕ್ಷಣಿಯವರು : ಇಲ್ಲ, ಅದು ಆಗುವುದಿಲ್ಲ ನೀವು ನಾಳೆ ರೈಸ್ ಮಾಡಿ.

(ಗೊಂದಲ)

ಉಪಾಧ್ಯಕ್ಷಣಿಯವರು : ಮಾನ್ಯ ಚಂದ್ರೇಗೌಡರು ಮತ್ತು ಮಾನ್ಯ ಬಸವರಾಜ ಅಟ್ಟೂರ್‌ರವರು ಗಮನ ಸೆಳೆಯುವ ಸೂಚಿಸಿ ಪ್ರಸ್ತಾಪ ಮಾಡಬೇಕು.

ಶ್ರೀ ಎಸ್.ಹೆಚ್. ಕೌಜಲಗಿ : ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಉಪಾಧ್ಯಕ್ಷಣಿಯವರು : ಜೀರೋ ಅವರ್ ಮುಗಿದುಹೋಯಿತು.

(ಗೊಂದಲ)

ಕೃಷ್ಣ ಮೇಲ್ದಂಡೆ ಯೋಜನೆಯ ಪುನರ್ವಸತಿ ಸೌಕರ್ಯ

ಶ್ರೀ ಎಸ್.ಹೆಚ್. ಕೌಜಲಗಿ : ವಸತಿ ಸೌಕರ್ಯವನ್ನು ಒದಗಿಸುವುದರಲ್ಲಿ ಕೈಗೊಂಡ ಕ್ರಮ ಕುಂಠಿತವಾಗಿರುದರಿಂದ ವಿಶ್ವ ಬ್ಯಾಂಕ್ ಈ ಕ್ರಮವನ್ನು ಕೈಗೊಂಡಿದೆ ಎಂದು ತಿಳಿದುಬರುತ್ತದೆ. ಹೀಗಾಗಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ನೀಡುತ್ತಿರುವ ಆರ್ಥಿಕ ಧನವನ್ನು ವಿಶ್ವಬ್ಯಾಂಕ್‌ನವರು ಕಳೆದ 2 ತಿಂಗಳಿಂದ ಸ್ಥಗಿತಗೊಳಿಸಿದೆ ಎಂದು ತಿಳಿದುಬರುತ್ತಿದೆ. ನಾವು 2000ನೇ ಇಸವಿಯೊಳಗೆ ಈ ಯೋಜನೆಯನ್ನು ಪೂರ್ತಿ ಮುಗಿಸುತ್ತೀರಾ ಎಂದು ನಾವು ಕೇಳುತ್ತಿದ್ದೇವೆ. ಆದರೆ ಸರ್ಕಾರದವರು ಗ್ರ್ಯಾಂಟ್‌ಗೆ ಸಂಬಂಧಪಟ್ಟ ಅಕೌಂಟ್ಸ್‌ನ್ನು ಕೊಡದಿದ್ದರೆ ಮತ್ತು ಎರಡನೆಯದಾಗಿ ಈ ಕೆಲಸವನ್ನು ಮಾಡದೇ ಇರುವುದರಿಂದ ವಿಶ್ವಬ್ಯಾಂಕ್‌ನವರು ಕೊಡತಕ್ಕ ಹಣವನ್ನು ಸ್ಥಗಿತಗೊಳಿಸಿದ್ದಾರೆಂದು ತಿಳಿದುಬಂದಿರುವುದರಿಂದ ಸರ್ಕಾರದವರು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂದು ನಾನು ಕೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾಳೆ ಉತ್ತರ ಕೊಡುತ್ತೇನೆ.

ಗಮನ ಸೆಳೆಯುವ ಸೂಚನೆಗಳು.

ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷಣಿಯವರೇ, ರಾಜ್ಯದಲ್ಲಿಯ ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆ ಸಂಬಳದಲ್ಲಿ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆ ಈಡೇರಿಸುವ ಬಗ್ಗೆ ಮಾನ್ಯ ಸಮಾಜಕಲ್ಯಾಣ ಮಂತ್ರಿಗಳ ಗಮನ ಸೆಳೆಯುತ್ತೇನೆ.

MADAM DEPUTY SPEAKER: Since the Hon'ble Minister is in the Upper House, we shall take up this matter afterwards.

Sri D.B. Chandregowda : This is a question of procedure.

ಉತ್ತರಗಳಾದರೂ ಬರಬೇಕಲ್ಲ.

ಉಪಾಧ್ಯಕ್ಷಣಿಯವರು : ಉತ್ತರಗಳನ್ನು ಕಳಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸ್ಟೇಟ್‌ಮೆಂಟ್ ಬಂದಿಲ್ಲ ಎಂದರೆ Why did you include it in the Agenda? Having included in the Agenda,

ಸ್ಟೇಟ್‌ಮೆಂಟ್ ಬಂದಿಲ್ಲವೆಂದರೆ ಇದನ್ನು ಹೊಸದಾಗಿ ಕಲಿಯಬೇಕಾಗುತ್ತದೆ. There is a certain procedure.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ಇಡೀ ರಾಜ್ಯದಲ್ಲಿರುವ ಅತಿ ಮಹತ್ವದ ಗಂಭೀರವಾದ ಪ್ರಶ್ನೆ ಇದು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆ ನೀಡಬೇಕು.

ಉಪಾಧ್ಯಕ್ಷಣಿಯವರು : ಮಾನ್ಯ ಮಂತ್ರಿಗಳು ಬರುತ್ತಾರೆ ಬಂದ ತಕ್ಷಣ ಹೇಳಿಕೆ ಕೊಡುತ್ತಾರೆ. ಈಗ ಇನ್ನೊಂದು ಕಾಲಿಂಗ್ ಅಟೆನ್‌ಷನ್ ತೆಗೆದುಕೊಳ್ಳೋಣ.

ಯುಗಚಿ ನದಿಗೆ ಹೊಸದಾಗಿ ಸೇತುವೆ ನಿರ್ಮಾಣದ ಬಗ್ಗೆ.

ಶ್ರೀ ಬಿ.ಹೆಚ್. ಲಕ್ಷಣಯ್ಯ : ಮಾನ್ಯ ಉಪಾಧ್ಯಕ್ಷಣಿಯವರೇ, ಬೇಲೂರು ಪಟ್ಟಣದ ಯಗಚಿ ನದಿಗೆ ಹೊಸದಾಗಿ ಸೇತುವೆ ನಿರ್ಮಾಣ ಮಾಡುವ ಬಗ್ಗೆ ಮಾನ್ಯ ಲೋಕೋಪಯೋಗಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆ ಮಾಡುವುದಕ್ಕೆ ಇಚ್ಚಿಸುತ್ತೇನೆ.

ಈ ಸೇತುವೆಯು, ಚಿಕ್ಕಬಳ್ಳಾಪುರ-ಮೂಡಿಗೆರೆ ರಾಜ್ಯ ಹೆದ್ದಾರಿ ರಸ್ತೆಯ 251 ಕಿ.ಮೀ.ನಲ್ಲಿ ಯಗಚಿ ಹೊಳೆಗೆ ಅಡ್ಡಲಾಗಿ ಬರುತ್ತದೆ. ಈ ರಸ್ತೆಯು ಯಗಚಿ ನದಿಯನ್ನು ದಾಟಿ ಭೇಲೂರು ಪಟ್ಟಮದ ಮೂಲಕ ಹಾದು ಹೋಗುತ್ತದೆ. ಸದರಿ ಸೇತುವೆಯು ಕಲ್ಲಿನ ಕಮಾನು ಕಟ್ಟಡದ್ದಾಗಿದ್ದು, ಸುಮಾರು ನೂರು ವರ್ಷಗಳ ಹಿಂದೆಯೇ ಕಟ್ಟಲಾಗಿದೆ. ಈ ಸೇತುವೆಯ ಮೇಲೆ ಏಕಮುಖ ವಾಹನ ಸಂಚಾರಕ್ಕೆ ಮಾತ್ರ ಸೌಲಭ್ಯವಿದ್ದು 4.3 ಮೀಟರ್ ಅಗಲವಿರುತ್ತದೆ.

ಸೇತುವೆಯ ನಡುಕಂಬಗಳ ಬಳಿ ಅನಧಿಕೃತವಾಗಿ ಮರಳು ತೆಗೆಯುತ್ತಿದ್ದುದರಿಂದ ಕೊರೆತ ಕಂಡುಬಂದಿತ್ತು. ಇದನ್ನು ದುರಸ್ತಿಪಡಿಸಲಾಗಿದೆ. ಗುದ್ದುಗಂಬದ (ಅಬಟ್‌ಮೆಂಟ್) ಬಳಿ ಆಗಿರುವ ಕೊರತೆಯನ್ನು ದುರಸ್ತಿಪಡಿಸಲಾಗುತ್ತಿದೆ.

ಈ ಸೇತುವೆಯ ಮೇಲೆ ಏಕಮುಕ ವಾಹನ ಸಂಚಾರಕ್ಕೆ ಮಾತ್ರ ಸೌಲಭ್ಯವಿರುವುದರಿಂದ ದ್ವಿಮುಖ ಸಂಚಾರಕ್ಕೆ ಅಡಚಣೆಯಾಗುತ್ತದೆ. ದ್ವಿಪಥದ ಹೊಸ ಸೇತುವೆಯನ್ನು ನಿರ್ಮಾಣ ಮಾಡಲು ಸುಮಾರು 75 ಲಕ್ಷ ರೂ.ಗಳಾಗುವುದೆಂದು ಅಂದಾಜು ಮಾಡಲಾಗಿದೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಈ ಸೇತುವೆ ಸುಮಾರು ಒಂದು ಶತಮಾನಕ್ಕಿಂತಲೂ ಹೆಚ್ಚಿನ ಕಾಲದ್ದಾಗಿದೆ. ಆ ಸೇತುವೆ ಮೇಲೆ ಕಬ್ಬಿಣದ ಕಂಬಗಳನ್ನು ತುಂಬಿದಂತಹ ಅನೇಕ ದೊಡ್ಡ ವಾಹನಗಳು ಕುದುರೆ ಮುಖಕ್ಕೆ ಹೋಗುತ್ತವೆ ಆಗ ಅದು ಜರುಗಿದ ಹಾಗಾಗುತ್ತದೆ. ಇದು ಹಳೆಯ ಸೇತುವೆಯಾಗಿರುವುದರಿಂದ ಒಂದು ಪಕ್ಷ ಅದು ಕುಸಿದರೆ ಮತ್ತೆ ಆ ಕಡೆ ಬೇಲೂರು ಪಟ್ಟಣ ಅಲ್ಲದೆ ಮೂಡಿಗೆರೆ, ಧರ್ಮಸ್ಥಳ, ಉಡುಪಿ ಈ ಕಡೆ ಹೋಗತಕ್ಕಂತಹ ವಾಹನಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಅದನ್ನು ಈ ವರ್ಷದ ಬಡ್ಜೆಟ್ಟಿಗೆ ಸೇರಿಸಿ ಈ ಸೇತುವೆಯನ್ನು ನಿರ್ಮಾಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್ : ಈಗಾಗಲೇ ನಾನು ಪ್ರಸ್ತಾಪ ಮಾಡಿದ್ದೇನೆ. ಸೇತುವೆ ಭದ್ರವಾಗಿದೆ. ಕುಸಿಯತಕ್ಕಂತಹ ಪರಿಸ್ಥಿತಿ ಏನೂ ಇಲ್ಲ 4.3 ಮೀಟರ್ ಆಗಿರುವುದರಿಂದ 2 ವಾಹನಗಳು ಹೋಗುವುದಕ್ಕೆ ಸಾಧ್ಯವಾಗಿಲ್ಲ. ಅದರ ಭದ್ರತೆ ಬಗ್ಗೆ ಸ್ಟೆಬಿಲಿಟಿ ಬಗ್ಗೆ ನಾವು ಸಂಶಯ ಪಡಬೇಕಿಲ್ಲ ಅದು ಭದ್ರವಾಗಿದೆ.

ಉಪಾಧ್ಯಕ್ಷಣೆಯವರು : ಈಗ ನಿಯಮ 334 ತೆಗೆದುಕೊಳ್ಳೋಣ.

ನಿಯಮ 334ರ ಮೇರೆಗೆ

1991-92ನೇ ಸಾಲಿನಲ್ಲಿ ಶಾಸಕರ ಮತಕ್ಷೇತ್ರಗಳಲ್ಲಿ 40 ಲಕ್ಷ ರೂಪಾಯಿಗಳ ಕಾಮಗಾರಿ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಅಧ್ಯಕ್ಷರೇ 1991-92ನೇ ಸಾಲಿನಲ್ಲಿ ಪ್ರತಿಯೊಬ್ಬ ಶಾಸಕರಿಗೂ 40ಲಕ್ಷ ರೂಪಾಯಿ ಹಣದ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅಧಿಕಾರ ನೀಡಲಾಯಿತು. ಅದರಲ್ಲಿ ನನ್ನ ಸೇಡಂ ಮತ ಕ್ಷೇತ್ರದಲ್ಲಿ ಕಮಲಾವತಿ ನದಿಗೆ ಬೆಟಗೇರ ಸಮೀಪ ಈಗಿರುವ ಕೆಳದರ್ಜೆ ಸೇತುವೆಯನ್ನು ಎತ್ತರಿಸಿ ಮೇಲ್ದರ್ಜೆ ಸೇತುವೆ ನಿರ್ಮಿಸಲು ಸುಮಾರು 32 ಲಕ್ಷ ರೂಪಾಯಿ, ಮುಧೋಳ ಪ್ರವಾಸಿ ಮಂದಿರಕ್ಕೆ 3 ಲಕ್ಷ ರೂಪಾಯಿ ಸೇಡಂ ಪ್ರವಾಸಿ ಮಂದಿರಕ್ಕೆ ಹತ್ತಿರ ಅಡೀಪಾಯದವರೆಗೆ ಆಗಿರುವ ಕೋಣೆಗಳಿಗೆ ಎರಡು ಲಕ್ಷ ರೂಪಾಯಿ ಹಾಗೂ ಸೇಡಂ ಕ್ಷೇತ್ರದ ಚಿತಾಪುರ ತಾಲ್ಲೂಕಿನ ರಾಮತೀರ್ಥ ಗ್ರಾಮದ ಸಮೀಪ ಸಿಮೆಂಟ್ ರಸ್ತೆಯ ರೋಡ್ ಡ್ಯಾಂಗೆ 4 ಲಕ್ಷ ರೂಪಾಯಿಗಳ ಅಂದಾಜು ಪತ್ರಗಳನ್ನು ಕಳುಹಿಸಲಾಗಿತ್ತು. ಆದರೆ ಇಲ್ಲಿಯವರೆಗೆ ಇದರ ಬಗ್ಗೆ ಯಾವ ಮಾಹಿತಿ ಇಲ್ಲ. ಕಾಮಗಾರಿಗಳು ಪ್ರಾರಂಭವಾಗಿಲ್ಲ. ಈ ಕಾಮಗಾರಿಗಳನ್ನು ಪ್ರಾರಂಭ ಮಾಡಿ ಮುಗಿಸುವುದು ಯಾವಾಗ ಎಂದು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

Sri K.H. Ranganath (Minister for Public works) I take note of this statement.

ಗಂಗಮತ-ಮೊಗವೀರ, ಅಂಬಿಗ, ಬೆಸ್ತ, ಇತ್ಯಾದಿ ಪಂಗಡಗಳನ್ನು ಪರಿಶಿಷ್ಟ ವರ್ಗಕ್ಕೆ ಸೇರ್ಪಡೆ.

ಶ್ರೀ ಬಾಬುರಾವ್ ಚಿಂಚನಸೂರ್ : (ಚಿತ್ತಾಪುರ) ಮಾನ್ಯ ಉಪಾಧ್ಯಕ್ಷಣೆಯವರೇ ಕಬ್ಬಲಿಗೆ, ಕೋಳಿ, ಗಂಗಮತ, ಮೊಗವೀರ, ಅಂಬಿಗ, ಬೆಸ್ತ, ಬೆಸ್ತರು, ನೈಕೋಡಿ, ತಳವಾರ, ನಾಟಿಕೆರೆ, ಸೂಗಾರ್, ಕೊಳಿದೋರ್, ಮಹದೇವಕೋಳಿ ಮತ್ತು ಇತ್ಯಾದಿ ಪಂಗಡಗಳನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಲು ಸುಮಾರು 3 ವರ್ಷಗಳಿಂದ ಸತತವಾಗಿ ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಿ ಹೋರಾಟ ಮಾಡಿದರೂ ಸಹ ಇದುವರೆವಿಗೂ ಯಾವ ಪ್ರಯೋಜನವಾಗಿರುವುದಿಲ್ಲ. ಈ ಗುಂಪಿನ ಜನರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಅತ್ಯಂತ ಕೀಳು ಮಟ್ಟದಲ್ಲಿದ್ದರೂ ಸಹ ಸರ್ಕಾರದವರು ಗಮನ ಹರಿಸದೆ ಮಲತಾಯಿ ಧೋರಣೆಯಿಂದ ಕಡೆಗಣಿಸಿಕೊಂಡು ಬರುತ್ತಿದ್ದಾರೆ.

ದಿನಾಂಕ. 20.3.1992ರಂದು ಮಾಜಿ ಮುಖ್ಯಮಂತ್ರಿಗಳು ಈ ಜನಾಂಗದವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಲು ಸಚಿವ ಸಂಪುಟದ ಮುಂದೆ ಮಂಡಿಸಲು ಮಾನ್ಯ

ಸಮಾಜ ಕಲ್ಯಾಣ ಮಂತ್ರಿಯವರಿಗೆ ಹಾಗೂ ಇಲಾಖೆ ಕಾರ್ಯದರ್ಶಿಯವರಿಗೆ ಸೂಚಿಸಿದ್ದೇನೆ ಎಂದು ನನಗೆ ಪತ್ರ ಬರೆದಿರುತ್ತಾರೆ. ಆದರೂ, ಈ ಮೇಲ್ಕಂಡ ಜನಾಂಗದವರನ್ನು ಪರಿಶಿಷ್ಟವರ್ಗಕ್ಕೆ ಸೇರಿಸಿರುವುದಿಲ್ಲ. ಆದುದರಿಂದ ಸರ್ಕಾರವು ಕೂಡಲೇ ಈ ಜನಾಂಗದವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂದು ಮಾನ್ಯ ಸಭಾಧ್ಯಕ್ಷರವರ ಮುಖಾಂತರ ಸರ್ಕಾರವನ್ನು ಕೋರುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ ಮಾನ್ಯ ಸಮಾಜಕಲ್ಯಾಣ ಸಚಿವರ ಪರವಾಗಿ ಈ ಹೇಳಿಕೆಯನ್ನು ಕೊಡುವುದಕ್ಕೆ ಇಚ್ಛಿಪಡುತ್ತೇನೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿ ಯಾವುದೇ ಜಾತಿಯನ್ನು ಸೇರಿಸುವ ಅಧಿಕಾರ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಸೇರಿದೆ. ಕಬ್ಬಲಿಗ, ಕೋಳಿ, ಗಂಗಮತ, ಮೊಗವೀರ, ಅಂಬಿಗ, ಬೆಸ್ತರು ಇತ್ಯಾದಿ ಪಂಗಡಗಳಿಗೆ ಸೇರಿದ ಜನಾಂಗದವರು ತಮ್ಮನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂದು ಸರ್ಕಾರಕ್ಕೆ ಈಗಾಗಲೇ ಮನವಿಯನ್ನು ಸಲ್ಲಿಸಿರುತ್ತಾರೆ. ಇದೇ ರೀತಿ ಹಲವಾರು ಜಾತಿಯವರು ತಮ್ಮನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂದು ಅಥವಾ ಈಗಾಗಲೇ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದಲ್ಲಿ ಇರುವ ಜಾತಿಗಳನ್ನು ಸಮಾನ ಜಾತಿಗಳೆಂದು ಪರಿಗಣಿಸಬೇಕೆಂದು ಕೋರಿ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿರುತ್ತಾರೆ, ಇನ್ನೂ ಸಲ್ಲಿಸುತ್ತಲೂ ಇದ್ದಾರೆ. ಈ ಮನವಿಗಳನ್ನು ಪರಿಶೀಲಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಲು ಸರ್ಕಾರವು ದಿನಾಂಕ 5.1.1991ರಲ್ಲಿ ಸಮಾಜಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಮಾನ್ಯ ಸಚಿವರುಗಳು, ಲೋಕಸಭಾ ಸದಸ್ಯರೂ, ವಿಧಾನ ಸಭೆ ಮತ್ತು ಪರಿಷತ್ತಿನ ಸದಸ್ಯರೂ ಹಾಗೂ ಇತರ ಗಣ್ಯ ವ್ಯಕ್ತಿಗಳನ್ನು ಒಳಗೊಂಡಂತೆ 31ಜನ ಸದಸ್ಯರ ಸಮಿತಿಯೊಂದನ್ನು ರಚಿಸಿದೆ. ಈ ಸಮಿತಿಯೂ ಸಹ ತನ್ನಲ್ಲೇ 3 ಉಪ ಸಮಿತಿಗಳನ್ನು ರಚಿಸಿಕೊಂಡು ಕಾರ್ಯಪ್ರವೃತ್ತವಾಗಿದೆ. ಈ ಪೈಕಿ ಲೋಕಸಭಾ ಸದಸ್ಯ ಮಾನ್ಯ ಡಿ.ಕೆ. ನಾಯ್ಕರ್ ಅವರ ನೇತೃತ್ವದ ಸಮಿತಿ ಮುಖ್ಯ ಸಮಿತಿಗೆ ತನ್ನ ಶಿಫಾರಸುಗಳನ್ನು ಸಲ್ಲಿಸಿದೆ. ಇತರೆ ಎರಡು ಉಪ ಸಮಿತಿಗಳ ವರದಿ ಇನ್ನೂ ನಿರೀಕ್ಷಿಸಲಾಗಿದೆ. ಈ ಉಪ ಸಮಿತಿಗಳ ಮುಖ್ಯ ಸಮಿತಿ ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕಾಗಿರುತ್ತದೆ. ಸರ್ಕಾರಕ್ಕೆ ಬಂದಿರುವ ಎಲ್ಲಾ ಜಾತಿಗಳ ಮನವಿಗಳನ್ನು ಈ ಸಮಿತಿ ಮುಂದೆ ಈಗಾಗಲೇ ಮಂಡಿಸಲಾಗಿದೆ. ಈ ಸಮಿತಿಯು ಸರ್ಕಾರಕ್ಕೆ ಇನ್ನು ತನ್ನ ವರದಿಯನ್ನು ಸಲ್ಲಿಸಿರುವುದಿಲ್ಲ. ಸರ್ಕಾರಕ್ಕೆ ವರದಿ ಸಲ್ಲಿಸಿದ ನಂತರ ಇದನ್ನು ಸೂಕ್ತವಾಗಿ ಪರಿಶೀಲಿಸಿ ಅರ್ಹ ಜನಾಂಗಗಳನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗವೆಂದು ಪರಿಗಣಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಡಲಾಗುವುದು.

3) ಸೌಂದತ್ತಿ ತಾಲ್ಲೂಕಿನಲ್ಲಿ ಮೀನುಗಾರರಿಗೆ ಮನೆಗಳ ನಿರ್ಮಾಣ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷಣಿಯವರೆ, ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಪೈಕಿ ಕೆಂಗಾನೂರ ಮತ್ತು ಸೌದತ್ತಿ ತಾಲ್ಲೂಕು ಪೈಕಿ ಮೆಟ್ಟೊಳ್ಳಿ ಹಾಗೂ ಎಕ್ಕುಂಡಿ ಗ್ರಾಮಗಳಲ್ಲಿ ಮೀನುಗಾರರಿಗೆ ಮನೆಗಳನ್ನು ಕಟ್ಟಲು ನಿರ್ಣಯಿಸಲಾಗಿತ್ತು. ಮುಖ್ಯ ವಾಸ್ತುಶಿಲ್ಪಿ ಇಲಾಖೆಯವರು ಈಗಾಗಲೇ ಮನೆಗಳನ್ನು ಕಟ್ಟಲು ಪ್ಲಾನ್ ತಯಾರಿಸಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು,

ನಿಯಮಗಳ ಪ್ರಕಾರ ಈಗಾಗಲೇ ಸ್ಥಳವನ್ನು ಇಲಾಖೆಯವರಿಗೆ ಮನೆ ಕಟ್ಟಲು ವಹಿಸಿಕೊಟ್ಟಿರುವರು. ಆದಕಾರಣ, ಕೂಡಲೇ ವಿಧಾನ ಸಭೆಯಲ್ಲಿ ಆಶ್ವಾಸನೆ ನೀಡಿದ ಪ್ರಕಾರ ಮನೆಗಳನ್ನು ಕಟ್ಟಲು ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಮೀನುಗಾರಿಕೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಯವರು) : ಮಾನ್ಯ ಉಪಾಧ್ಯಕ್ಷಣಿಯವರೇ ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು, ಕೆಂಗಾನೂರು ಮತ್ತು ಸೌಂದತ್ತಿ ತಾಲ್ಲೂಕಿನ ಮಾಟೊಳ್ಳಿ ಮತ್ತು ಎಕ್ಕುಂಡಿ ಗ್ರಾಮಗಳಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಮೀನುಗಾರರ ಕ್ಷೇಮಾಭಿವೃದ್ಧಿ ನಿಧಿ ಯೋಜನೆಯಡಿ ವೃತ್ತಿನಿರತ ನಿರ್ವಸತಿ ಮೀನುಗಾರರಿಗೆ ವಸತಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಿದ್ದು ಈ ಬಗ್ಗೆ ಅಧೀನ ಅಧಿಕಾರಿಗಳಿಂದ ಸೂಕ್ತ ಪ್ರಸ್ತಾವನೆಯನ್ನು ನಿರೀಕ್ಷಿಸಲಾಗಿದೆ. ಸೌಂದತ್ತಿ ತಾಲ್ಲೂಕಿನ ಚೌಡಯ್ಯ ಮೀನುಗಾರರ ಸಹಕಾರ ಸಂಘದವರ ಮೆಟೊಳ್ಳಿ ಗ್ರಾಮದಿಂದ 37 ಅರ್ಜಿಗಳನ್ನು ಮತ್ತು ಎಕ್ಕುಂಡಿ ಗ್ರಾಮದಿಂದ 27 ಅರ್ಜಿಗಳನ್ನು ಕಳುಹಿಸಿದ್ದು ಸದ್ಯಕ್ಕೆ ಮೀನುಗಾರರ ಸ್ವಂತ ನಿವೇಶನಗಳನ್ನು ಹೊಂದಿದ್ದು, ಅವರಿಗೆ ಯೋಜನೆಯಡಿಯಲ್ಲಿ ವಸತಿ ಸೌಲಭ್ಯ ಕಲ್ಪಿಸಲು ಅಂದಾಜು ಮತ್ತು ನಕ್ಷೆಯನ್ನು ತಯಾರಿಸಲು ಬೆಳಗಾವಿ ಜಿಲ್ಲಾ ಪರಿಷತ್ತಿನ ಕಾರ್ಯನಿರ್ವಾಹಕ ಅಭಿಯಂತರರನ್ನು ಕೋರಿದೆ. ಸೂಕ್ತ ಪ್ರಸ್ತಾವನೆಯು ಅಧೀನ ಅಧಿಕಾರಿಗಳಿಂದ ಬಂದ ಕೂಡಲೇ ಮಂಜೂರಾತಿಯ ಬಗ್ಗೆ ಪರಿಶೀಲಿಸಲಾಗುವುದು.

4) ಕರ್ನಾಟಕದ ಹೆಚ್ಚುವರಿ ಕಬ್ಬನ್ನು ಮಹಾರಾಷ್ಟ್ರಕ್ಕೆ ಸಾಗಿಸುವಲ್ಲಿ ತೊಂದರೆ.

1.35 ಪಿ ಎಂ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಉಪಾಧ್ಯಕ್ಷಣಿಯವರೆ, ಕರ್ನಾಟಕದಿಂದ ಹೆಚ್ಚುವರಿ ಕಬ್ಬನ್ನು ಗಡಿ ರಾಜ್ಯಗಳಲ್ಲಿ ವಿಶೇಷವಾಗಿ ಮಹಾರಾಷ್ಟ್ರಕ್ಕೆ ಸಾಗಿಸುವ ಹಿನ್ನೆಲೆಯಲ್ಲಿ ರೈತರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಬೇಕಾಗಿದೆ. ಕರ್ನಾಟಕದಲ್ಲಿರುವ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿ ಕಬ್ಬನ್ನು ನುರಿಸುವ ಸ್ಥಿತಿಯಲ್ಲಿ ಇಲ್ಲ, ಇದರಿಂದಾಗಿ ಯೋಗ್ಯ ಸಮಯದಲ್ಲಿ ಕಬ್ಬನ್ನು ಕಳುಹಿಸಿಕೊಡುವ ಉದ್ದೇಶಕ್ಕಾಗಿ ರೈತರು ಆಸೆ ಪಟ್ಟಿದ್ದಾರೆ. ಯಾವುದೇ ತೆರಿಗೆ ಇಲ್ಲದೇ ಹೆಚ್ಚುವರಿ ಕಬ್ಬನ್ನು ಬೇರೆ ರಾಜ್ಯಕ್ಕೆ ಕಳುಹಿಸಿಕೊಡುವ ಸರ್ಕಾರದ ಹಿಂದಿನ ನೀತಿಯನ್ನು ಮುಂದುವರಿಸುವಲ್ಲಿ ಸರ್ಕಾರಕ್ಕೆ ಇರುವ ತೊಂದರೆ ಏನು ಎಂದು ಮಾನ್ಯ ಮುಖ್ಯ ಮಂತ್ರಿಗಳಿಂದ ಸದನದಲ್ಲಿ ಹೇಳಿಕೆಯನ್ನು ಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ನಮ್ಮ ರಾಜ್ಯದ ಕಬ್ಬಿನ ಉತ್ಪಾದನೆ ವಿಚಾರದಲ್ಲಿ ಈಗಾಗಲೇ ಆ ಭಾಗದ ಶಾಸಕರು ನನ್ನ ಜೊತೆಯಲ್ಲಿ ಮಾತನಾಡಿದ್ದಾರೆ. ಇವತ್ತು ಅಥವಾ ನಾಳೆ ಈ ಬಗ್ಗೆ ಒಂದು ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಾನೂ ಕೂಡ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ತಾವು ಕೂಡ ಚರ್ಚೆ ಮಾಡಿದ್ದೀರಿ. ಆ ಭಾಗದ ಎಲ್ಲಾ ಶಾಸಕರು ಮಾಡಿದ್ದಾರೆ. ಈ ಬಗ್ಗೆ ಇವತ್ತು ಅಥವಾ ನಾಳೆ ಸೂಕ್ತ ನಿರ್ಣಯ ತೆಗೆದುಕೊಂಡು ಪ್ರಕಟನೆ ಮಾಡುತ್ತೇವೆ.

5) ಬೆಂಗ್ರೆ ಪ್ರದೇಶದ 12 ಸಾವಿರದ ಜನರನ್ನು ಮಂಗಳೂರು ಮಹಾನಗರ ಪಾಲಿಕೆಗೆ ಸೇರಿಸಲು ಒತ್ತಾಯ.

ಶ್ರೀ ಬಿ.ಎಂ. ಇದಿನಬ್ಬ (ಉಲ್ಲಾಳ) : ಮಾನ್ಯ ಉಪಾಧ್ಯಕ್ಷಣಿಯವರೆ, ಮಂಗಳೂರು ಸಮೀಪದ ಬೆಂಗ್ರೆ ಪ್ರದೇಶದಲ್ಲಿ ಸುಮಾರು 12 ಸಾವಿರದಷ್ಟು ಜನರಿದ್ದಾರೆ. ಆದರೆ ಈವರೆಗೂ ಈ ಪ್ರದೇಶ ಮಂಡಲ ಪಂಚಾಯತಿ ಅಥವಾ ಜಿಲ್ಲಾ ಪರಿಷತ್ತಿಗೆ ಸೇರಿಲ್ಲ, ಮಂಗಳೂರು ಮಹಾನಗರ ಪಾಲಿಕೆಗೂ ಸೇರಿಲ್ಲ. ಈ ಕುರಿತು ಕಳೆದ ಒಂದೆರಡು ವರ್ಷಗಳಿಂದ ಬೆಂಗ್ರೆ ಪ್ರದೇಶವನ್ನು ಮಂಗಳೂರು ಮಹಾನಗರ ಪಾಲಿಕೆಗೆ ಸೇರಿಸಬೇಕೆಂದು ನಾನು ಕೇಳುತ್ತಲೇ ಬಂದಿರುತ್ತೇನೆ. ಈ ಬಗ್ಗೆ ಇನ್ನೂ ಯಾವುದೇ ಕ್ರಮ ಕೈಗೊಂಡಿಲ್ಲ, ಆ ಭಾಗದ ಜನರಿಗೆ ಅಭಿವೃದ್ಧಿ ಕೆಲಸಗಳಿಲ್ಲ, ಶಾಲಾ ಮತ್ತಿತರ ವ್ಯವಸ್ಥೆಗಳಿಲ್ಲ. ಆದಕಾರಣ ಬೆಂಗ್ರೆ ಪ್ರದೇಶವನ್ನು ಅತೀ ಜರೂರಾಗಿ ಮಂಗಳೂರು ಮಹಾನಗರ ಪಾಲಿಕೆಗೆ ಸೇರಿಸಬೇಕಾಗಿ ಬಯಸುತ್ತೇನೆ. ಈ ಕುರಿತು ನಗರಾಭಿವೃದ್ಧಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ :(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಈ ವಿಷಯ ಸಲಹೆ ರೂಪದಲ್ಲಿ ಬಂದಿದೆ.ಇದರ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲಿಸಿ ನಿರ್ಣಯ ತೆಗೆದುಕೊಳ್ಳುತ್ತದೆ.

6) Enhancement of processing charges by the poly there Industries engaged by K.S.F.C.

SRI T.B. JAYACHANDR (KALLAMBELLA) : The Karnataka state Forest Industries Corporation Ltd., Bangalore, has engaged about 21 captive Units all over the state for manufacturing polythene bags on labour charge basis.

The previous revision of processing charges was done in 1987 bringing t to Rs. 3.50 per Kg. Following were the rates of different services that he manufacturer has to utilise in 1987.

1) Electricity - Rs. 0.70 per unit.

2) Transportation - Rs. 0.15 per kg.

3) Wages for skilled operator - Rs.1000/- per month

4) Wages for labourers - Rs.10/- per day.

5) Bank Guarantee Commission - 1.5%.

Now, even after lapse of 5 years the Processing Charges remain the ame, although the rates of all the above services have increased as ollows.

1) Electricity-Rs 1.4 per unit inclusive of Min.charges.

2) Transportation - 0.45 per kg.

3) Wages for Skilled Operator - Rs.2500/- per month.

4) Wages for Labourers - Rs.25/- per day.

5) Bank Guarantee Commission - 2.5%

6) Cost of Maintenance- has increased three times.

Inspite of repeated requests, by the units, the processing charges have not been increased and this has led to the sickness among the units. Some of the Units are not in a position to repay the Term Loan from K.S.F.C. Since all these units are manufacturing Polythene Bags for Karnataka State Forest Industries corporation only, they have not come in contact with the general consumar market and hence the units are finding it difficult to make both ends meet.

Hence, it is requested that the processing Charges be increased taking all the factors into account so that the units can run with reasonable profits, thereby reducing the unemployment.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷಣಿಯವರೆ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

1) ಪಾಲಿಥೀನ್ ಚೀಲಗಳ ತಯಾರಿಕೆಗೆ 1983-84ರ ಸಾಲಿನಲ್ಲಿ ಪರಿಗಣಿಸಿದ ಘಟಕಗಳಿಗೆ (ಕಂಡಕ್ಟೀವ್ ಯುನಿಟ್ಸ್) ವಹಿಸಲಾಯಿತು

2) ಇಲ್ಲಿಯವರೆಗೆ ಕಂಪನಿಯಲ್ಲಿ 22 ಘಟಕಗಳನ್ನು ನೊಂದಾಯಿಸಿಕೊಳ್ಳಲಾಗಿದೆ.

3) ದರ ಪರಿಷ್ಕರಣೆಯನ್ನು 1984 ರಿಂದ ಈಚೆಗೆ, ಕೆ.ಜಿ. 1 ಕ್ಕೆ ರೂ.2.75 ರಿಂದ ರೂ.3.75 ಕ್ಕೆ ಎರಡು ಸಾರಿ ಪರಿಷ್ಕರಿಸಲಾಗಿದೆ.

4) ಈ ಘಟಕಗಳ ಮುಖಾಂತರ 1990-91ನೇ ಸಾಲಿನಲ್ಲಿ 349 ಮೆಟ್ರಿಕ್ ಟನ್‌ಗಳು, 1991-92ರಲ್ಲಿ 349 ಮೆಟ್ರಿಕ್ ಟನ್ನ್‌ಗಳು ಮತ್ತು 1992-93ರಲ್ಲಿ 176 ಮೆಟ್ರಿಕ್ ಟನ್‌ಗಳಷ್ಟು ಪಾಲಿಥೀನ್ ಚೀಲಗಳನ್ನು ತಯಾರಿಸಲಾಗಿದೆ. 1991-92ರಲ್ಲಿ ಅರಣ್ಯ ಇಲಾಖೆಯ ಪಾಲಿಥೀನ್ ಚೀಲಗಳ ಬೇಡಿಕೆಯ ಶೇಕಡ 25ರಷ್ಟನ್ನು ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ಸಂಸ್ಥೆಗೆ ವಹಿಸಲಾಯಿತು.

5) ದಿನಾಂಕ 28-9-1987 ರಿಂದ ಅನುವಹಿಸುವಂತೆ ಪಾಲಿಥೀನ್ ಸಂಸ್ಕರಣ ವೆಚ್ಚವನ್ನು ದೊಡ್ಡ ಅಳತೆಯ ಚೀಲಗಳಿಗೆ ಕೆ.ಜಿ. 1ಕ್ಕೆ ರೂ.3-50 ರಂತೆಯೂ ಮತ್ತು ಸಣ್ಣ ಅಳತೆಯ ಚೀಲಗಳಿಗೆ ಕೆ.ಜಿ. 1 ಕ್ಕೆ ರೂ.3-75ರಂತೆಯೂ ಪರಿಷ್ಕರಿಸಲಾಯಿತು.

6) ದರ ಪರಿಷ್ಕರಣ ಮಾಡುವಾಗಿ ವಿದ್ಯುತ್‌ಚ್ಛಕ್ತಿ, ಕುಶಲ ಹಾಗೂ ಅರಕುಶಲಗಾರರ ಸಂಬಳ ಮತ್ತು ದಿನಗೂಲಿ, ದುರಸ್ತಿಗಳು ಮತ್ತು ನಿರ್ವಹಣೆಯ ವೆಚ್ಚಗಳು, ದೂರವಾಣಿ, ಮುದ್ರಣ, ಅಂಚೆ, ಕಚ್ಚಾವಸ್ತುಗಳು ಮಂತಾದವುಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

7) ಸಂಸ್ಕರಣ ವೆಚ್ಚವನ್ನು ಪ್ರತ್ಯೇಕವಾಗಿ ಪರಿಷ್ಕರಿಸಲು ಬರುವುದಿಲ್ಲ. ಕಂಪನಿಯ ಪಾಲಿಥೀನ್ ಚೀಲಗಳ ಮಾರುವ ಬೆಲೆಯು ದುಭಾರಿಯಾಗಿರುವುದಿಲ್ಲ. ಇದು ಹೊರಗಿನ ಮಾರುಕಟ್ಟೆಯ ದರದಂತೆ ಹೆಚ್ಚು ಅಥವಾ ಕಡಿಮೆ ಇರಬೇಕಾಗುತ್ತದೆ. ಆದ್ದರಿಂದ ಕಂಪನಿಯ ತಯಾರಿಕಾ ಘಟಕಗಳ ಸಂಸ್ಕರಣ ದರಗಳು ಆದರ

ಮಾರಾಟ ಬೆಲೆಗೆ ಅನುಗುಣವಾಗಿ ಇರಬೇಕಾಗಿರುತ್ತದೆ. ಇಲ್ಲದಿದ್ದರೆ ಕಂಪನಿಯು ನಷ್ಟವನ್ನು ಅನುಭವಿಸಬೇಕಾಗುತ್ತದೆ ಅಥವಾ ಮಾರುಕಟ್ಟೆ ಬೆಲೆಗಳಿಗೆ ತಾಳಿಕೊಳ್ಳುವ ರೀತಿಯಲ್ಲಿ ಮಾರಾಟದ ಬೆಲೆಯನ್ನು ಹೆಚ್ಚಿಸಬೇಕಾಗುತ್ತದೆ. ಸಂಸ್ಥೆಯು ಶೇಕಡ 3ರಷ್ಟು ಅತ್ಯಲ್ಪ ಲಾಭಾಂಶವನ್ನು ಹೊಂದಿರುವುದರಿಂದ ಸಂಸ್ಕರಣ ವೆಚ್ಚದಲ್ಲಿ ಯಾವುದೇ ಏರಿಕೆಯನ್ನು ಹೇರಿದರೂ ಕಂಪನಿಯು ನಷ್ಟಕ್ಕೆ ಒಳಗಾಗುವುದು.

8) ಪರಿಗಣಿಸಿದ ಘಟಕಗಳು ಕಂಪನಿ ಜೊತೆಗೆ ಬದ್ಧವಾಗಿರಬೇಕೆಂಬ ಬಲತ್ಕಾರ ಇರುವುದಿಲ್ಲ. ಅವುಗಳು ಬಾಹ್ಯಮಾರುಕಟ್ಟೆಯಲ್ಲಿ ಸ್ವಾತಂತ್ರವಾಗಿ ಸೇರಲು ಸಂಸ್ಥೆಯು ಅವುಗಳನ್ನು ಬಿಟ್ಟುಕೊಡಲು ತಯಾರಾಗಿದೆ. ಸಂಸ್ತೆಯ ಚಾಲ್ತಿ ಸಂಸ್ಕರಣ ವೆಚ್ಚಗಳಿಗೆ ಒಪ್ಪಿಕೊಂಡು ಹಲವು ಇತರ ತಯಾರಿಕಾ ಘಟಕಗಳಲ್ಲಿ ತಮ್ಮನ್ನು ಪರಿಗಣಿಸಬೇಕೆಂದು ಬಹಳಷ್ಟು ಬೇಡಿಕೆಗಳು ಬರುತ್ತವೆ.

9) ಕಳೆದ 5ವರ್ಷಗಳಿಂದ 22ಪರಿಗಣಿಸಿದ ಘಟಕಗಳಿಂದ ದರಗಳನ್ನು ಪರಿಷ್ಕರಿಸಬೇಕೆಂಬ ಲಿಖಿತ ಬೇಡಿಕೆ ಯಾವ ಘಟಕದಿಂದಲೂ ಬಂದಿರುವುದಿಲ್ಲ.

10) ಹಾಗೂದರೂ ಮಾರುಕಟ್ಟೆ ದರಗಳು ಮತ್ತು ಸಂಸ್ಥೆಯ ಲಾಭಕ್ಕೆ ಸಂಬಂಧಿಸಿದಂತೆ ಸಂಸ್ಕರಣ ವೆಚ್ಚವನ್ನು ಕೋರಿಕೆಗೆ ಅನುಗುಣವಾಗಿ ಹೆಚ್ಚಿಸಲಾಗುವುದು.

11) ಚಾಲ್ತಿ ತಯಾರಿಕಾ ವೆಚ್ಚ ಕೆ.ಜಿ. 1ಕ್ಕೆ ರೂ. 59.18 ಇದ್ದರೂ ಮಾರಾಟ ದರ ಕೆ.ಜಿ.1ಕ್ಕೆ ರೂ. 62-25 ಇರುತ್ತದೆ.

ರಾಜ್ಯದಲ್ಲಿಯ ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆ ಸಂಬಳದಲ್ಲಿ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಯು ಈಡೇರಿಕೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ಮಾನ್ಯ ಉಪಾಧ್ಯಕ್ಷರೇ, ರಾಜ್ಯದಲ್ಲಿಯ ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆ ಸಂಬಳದಲ್ಲಿ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆ ಈಡೇರಿಸುವ ಬಗ್ಗೆ ಸಮಾಜ ಕಲ್ಯಾಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

+ ಶ್ರೀ ಧರ್ಮಸಿಂಗ್ : (ಸಮಾಜ ಕಲ್ಯಾಣ ಮಂತ್ರಿಗಳು) : ಮಾನ್ಯ ಅಧ್ಯಕ್ಷಣಿಯವರೇ, ಈ ವಿಚಾರವಾಗಿ ಈ ಕೆಳಕಂಡ ಹೇಳಿಕೆ ನೀಡಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ಸಮಗ್ರ ಬಾಲ ವಿಕಾಸ ಯೋಜನೆ (ಐ.ಸಿ.ಡಿ.ಎಸ್) ಕಾರ್ಯಕ್ರಮವು ಕೇಂದ್ರ ಸರ್ಕಾರದ ನಿಯಾಮಾವಳಿಗಳಂತೆ ಅನಷ್ಠಾನಗೊಳ್ಳುತ್ತಲಿದೆ. ಈ ಯೋಜನೆಯಡಿ ಒಟ್ಟು ೧೪೨ ಪ್ರಾಜೆಕ್ಟ್‌ಗಳಿದ್ದು, ಇವುಗಳಲ್ಲಿ ೧೧೨ ಕೇಂದ್ರ ಸರ್ಕಾರದ ವೆಚ್ಚದಿಂದಲೂ ಮತ್ತು ಉಳಿದ ೩೦ ರಾಜ್ಯ ಸರ್ಕಾರದ ವೆಚ್ಚದಿಂದಲೂ ನಡೆಯುತ್ತಿವೆ. ಈ ಯೋಜನೆಯಡಿ ೨೩,೭೬೩ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಗೌರವ ಧನ ಮಾತ್ರ ಪಡೆಯುವ ಕಾರ್ಯಕರ್ತೆಯರಾಗಿದ್ದು, ಗೌರವ ಧನದ ಅಧಾರದ ಮೇಲೆಯೇ ಕೆಲಸ ನಿರ್ವಹಿಸುತ್ತಿದ್ದಾರೆ. ಇವರ ಎಲ್ಲಾ ಸೇವಾ ನಿಯಮಗಳೂ ಕೇಂದ್ರ ಸರ್ಕಾರದಿಂದಲೇ ನಿರೂಪಿಸಲ್ಪಟ್ಟಿವೆ. ಇವರಿಗೆ ಈಗ ಸಂದಾಯವಾಗುತ್ತಿರುವ ಗೌರವ ಧನದ ವಿವರ, ಇವರ ವಿದ್ಯಾರ್ಹತೆ ಮತ್ತು ಸೇವೆ ಸಲ್ಲಿಸಿದ ಅವಧಿ ಇವುಗಳನ್ನು ಆಧಾರವಾಗಿಟ್ಟುಕೊಂಡು ಕನಿಷ್ಟ ಮಾಹೆಯಾನ ರೂ.225 ರಿಂದ ರೂ.325ವರೆಗೆ ಕೊಡಲಾಗುತ್ತಿದೆ. ಸಹಾಯಕಿಯರಿಗೆ ಮಾಹೆಯಾನ ಗೊತ್ತಾದ ಸಂಭಾವನೆ 110 ರೂ. ಎಂದು ನಿಗಧಿಯಾಗಿದೆ. ಈ ಎಲ್ಲಾ ಸೇವಾ ನಿಯಮಗಳೂ ಕೇಂದ್ರ ಸರ್ಕಾರದಿಂದಲೇ ನಿರೂಪಿಸಲ್ಪಟ್ಟಿವೆ.

ಈ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ತಮ್ಮ ಸಂಘಗಳ ಮೂಲಕ ಬೇಡಿಕೆಗಳನ್ನು ಸರ್ಕಾರದ ಮುಂದೆ ಆಗಾಗ ಇಟ್ಟು ಮುಷ್ಕರಗಳನ್ನೂ ಸಹ ಮಾಡುತ್ತಿದ್ದಾರೆ. ಈ ಬೇಡಿಕೆಗಳ ಪೂರೈಕೆಯ ಬಗ್ಗೆ, ಸರ್ಕಾರ ಈಗಾಗಲೇ ಕಾರ್ಯಕ್ರಮ ಕೈಗೊಂಡಿದ್ದು, ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ, ಹಲವಾರು ಬೇಡಿಕೆಗಳನ್ನು ಈಡೇರಿಸಲಾಗಿದೆ. ಮುಖ್ಯವಾದ ಬೇಡಿಕೆಗಳಲ್ಲಿ ಒಂದಾದ ಸಂಭಾವನೆಯ ಹೆಚ್ಚಳದ ಬಗ್ಗೆ, ಕೇಂದ್ರ ಸರ್ಕಾರ ದಿನಾಂಕ ೨೦-೯-೯೨ರಂದು, ಈ ಗೌರವ ಧನವನ್ನು ಕಾರ್ಯಕರ್ತೆಯರಿಗೆ ಪ್ರತಿ ತಿಂಗಳು ೧೨೫ ರೂಪಾಯಿಗಳು ಮತ್ತು ಸಹಾಯಕಿಯರಿಗೆ ರೂ. ೬೦ ರೂಪಾಯಿಗಳಿಗೆ ಹೆಚ್ಚಿಸಿ, ದಿನಾಂಕ ೨-೧೦-೯೨ರಿಂದ ಅನ್ವಯವಾಗುವಂತೆ ಆದೇಶ ಹೊರಡಿಸಲು ಸೂಚಿಸಿದ್ದಾರೆ. ಇದೇ ದರದಲ್ಲಿ ರಾಜ್ಯ ಸರ್ಕಾರ ನಿರ್ವಹಿಸುತ್ತಿರುವ ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡುತ್ತಿರುವವರಿಗೂ ಗೌರವ ಧನ ಹೆಚ್ಚಿಸಬೇಕಾಗಿರುವುದರಿಂದ, ಈ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚನೆ ನಡೆದಿದ್ದು, ಶೀಘ್ರದಲ್ಲಿಯೇ ಹೆಚ್ಚುವರಿ ಗೌರವಧನ ಕೊಡುವ ಬಗ್ಗೆ ಆದೇಶವನ್ನು ಹೊರಡಿಸಲಾಗುತ್ತದೆ.

ಉಳಿದ ಬೇಡಿಕೆಗಳೆಂದರೆ, ತಮ್ಮನ್ನು ಸರ್ಕಾರಿ ನೌಕರರೆಂದು ಪರಿಗಣಿಸುವುದೂ, ನಿವೃತ್ತಿ ವೇತನ ಕೊಡುವುದೂ, ಮುಂಬಡ್ತಿ ಕೊಡುವುದೂ, ಆರೋಗ್ಯ ಮತ್ತು ಶಿಕ್ಷಣ ಇಲಾಖೆಗಳಲ್ಲಿನ ತತ್ಸಮಾನ ಹುದ್ದೆಗಳ ಆಯ್ಕೆಗೆ ಪರಿಗಣಿಸುವುದೂ, ದಿನ ಭತ್ಯೆ ಹೆಚ್ಚಿಸುವುದೂ, ಆಗಿವೆ.

ಸರ್ಕಾರ ಈಗಾಗಲೇ ದಿನಾಂಕ ೯-೧೧-೯೨ರಂದು ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಪ್ರತಿ ತಿಂಗಳು ಕೊಡುತ್ತಿದ್ದ ದಿನ ಭತ್ಯೆಯ ದರವನ್ನು ರೂ ೫-೫೦ರಿಂದ ರೂ. ೨೦-೦೦ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ.

ಕೇಂದ್ರ ಸರ್ಕಾರ ರೂಪಿಸಿರುವ ನಿಯಮಾವಳಿಗಳ ಪ್ರಕಾರ ಈ ಇಡೀ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಕೆಲಸ ಮಾಡುತ್ತಿರುವುದರಿಂದಲೂ, ಮತ್ತು ಇವರ ಮಾಹೆಯಾನ ಸಂಭಾವನೆ ಗೌರವ ಧನವಾಗಿರುವುದರಿಂದಲೂ, ಇವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲು ಈಗಿನ ನಿಯಮಗಳಂತೆ ಸಾಧ್ಯವಿಲ್ಲ. ಆದರೂ, ಮಾನವೀಯ ದೃಷ್ಟಿಯಿಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವೃಂದತ್ತು ನೇಮಕಾತಿ ನಿಯಮಗಳನ್ನು ಸಡಿಲಿಸಿ, ವಯೋಮಿತಿಯನ್ನು ೪೫ ವರ್ಷಕ್ಕೂ, ಮತ್ತು ಸೇವಾ ಅವಧಿಯನ್ನು ೧೫ ವರ್ಷಕ್ಕೂ ಹೆಚ್ಚಿಸಿ, ರಿಯಾಯತಿಗಳನ್ನು ಉಪಯೋಗಿಸಿಕೊಂಡು, ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಅಲ್ಲದೆ, ವಿದ್ಯಾರ್ಹತೆಯಲ್ಲಿಯೂ ಕೂಡ ರಿಯಾಯತಿ ನೀಡಲಾಗಿದೆ. ಆರೋಗ್ಯ ಮತ್ತು ಶಿಕ್ಷಣ ಇಲಾಖೆಯ ಸೂಕ್ತ ಹುದ್ದೆಗಳಿಗೆ ಇವರನ್ನು ಪರಿಗಣಿಸುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳೊಡನೆ ಸಮಾಲೋಚನೆ ನಡೆಸಲಾಗುತ್ತಿದೆ.

ಈ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಬೇಡಿಕೆಗಳು ಮೂಲತಃ ಕೇಂದ್ರ ಸರ್ಕಾರದ ಒಪ್ಪಿಗೆಯಿಂದಲೇ ಈಡೇರಿಸಲ್ಪಡಬೇಕಾಗಿರುವುದರಿಂದ, ಈ ದಿಶೆಯಲ್ಲಿ ಅಗತ್ಯವಾದ ಎಲ್ಲಾ ಕ್ರಮಗಳನ್ನೂ, ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಲಾಗುತ್ತದೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು : ಮಾನ್ಯ ಉಪಾಧ್ಯಕ್ಷಣಿಯವರೆ, ಇದು ಮಹತ್ವ ಪೂರ್ಣವಾದ ವಿಚಾರವಿದೆ. ಈಗಾಗಲೇ ಅಂಗನವಾಡಿ

ಕಾರ್ಯಕರ್ತೆಯರು ಮತ್ತು ಅಂಗನವಾಡಿ ಸಹಾಯಕರು ರಾಜ್ಯದಲ್ಲಿ ಸತ್ಯಾಗ್ರಹ ಉಪವಾಸ ಮಾಡುತ್ತಿದ್ದಾರೆ. ಹಲವಾರು ಸಾರಿ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳ ಕಡೆಗೆ ಹೋಗಿ ಅವರ ಬೇಡಿಕೆ ಈಡೇರಿಸುವಸಲು ವಾಗಿ ಹೇಳಿದ್ದಾರೆ. ಇದುವರೆಗೂ ಅವರಿಗೆ ಅನುಕೂಲವಾಗಿಲ್ಲ. ಈ ಸಭೆಯ ಮುಖಾಂತರ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ ಯಾವರೀತಿಯಾಗಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಶಿಕ್ಷಕರು ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ, ಅಷ್ಟೇ ಪ್ರಮಾಣದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಸಹಾಯಕರು ಗ್ರಾಮಾಂತರ ಪ್ರದೇಶಗಳಲ್ಲಿ ಹಳ್ಳಿ ಹಳ್ಳಿಗಳಿಗೆ ಹೋಗಿ ಸಣ್ಣ ಸಣ್ಣ ಮಕ್ಕಳಿಗೆ ವಿದ್ಯಾರ್ಜನೆ ಕೊಡುವುದು ಪಾಠಪ್ರವಚನಗಳನ್ನು ಮಾಡುವುದು ಇಂತಹ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ. ಸರ್ಕಾರದವರು ಹೆಣ್ಣುಮಕ್ಕಳಿಗೆ ಶೇಕಡ 30ರಷ್ಟು ಮೀಸಲಾತಿಯನ್ನು ಈ ವರ್ಷದಿಂದ ಇಟ್ಟಿದ್ದಾರೆ. ಈ ಬಹಳಷ್ಟು ಜನ ಮಹಿಳೆಯರು ಈ ಒಂದು ಕೆಲಸದಲ್ಲಿ ಭಾಗಿಯಾಗಿದ್ದಾರೆ. ಇವರಿಗೆ ಬಹಳ ಅನ್ಯಾಯವಾಗುತ್ತಿದೆ. ಅವರಿಗೆ 300ರೂಪಾಯಿಗಳನ್ನು ಏನು ಕೊಡುತ್ತಿದ್ದಾರೆ. ಅದು ಸಾಮಾನ್ಯ ಒಬ್ಬ ಲೇಬರ್‌ಗೆ ಏನು ಕೂಲಿ ಸಿಗುತ್ತದೆ ಅಷ್ಟು ಸಹ ಸಿಗುತ್ತಿಲ್ಲವೆಂದು ತೀವ್ರವಾದ ಕಳಕಳಿಯನ್ನು ವ್ಯಕ್ತಪಡಿಸುತ್ತೇನೆ. ಹಳ್ಳಿ ಹಳ್ಳಿಗೆ ಭೇಟಿ ಕೊಟ್ಟು ಪರಿಶ್ರಮದ ಕೆಲಸ ಮಾಡುವ ಅವರಿಗೆ ಹೆಚ್ಚು ಸಂಬಳ ಕೊಡಬೇಕು. ರಾಜ್ಯ ಸರ್ಕಾರದ ಮುಂದೆ ಅವರ ಹಲವಾರು ಬೇಡಿಕೆಗಳು ಇವೆ. ಪ್ರಮುಖವಾದ ಬೇಡಿಕೆ ಏನೆಂದರೆ ಪ್ರತ್ಯೇಕ ನಿರ್ದೇಶನಾಲಯ ಮಾಡಿ ಎನ್ನುವುದು ಅವರ ನೌಕರಿಯನ್ನು ಖಾಯಂ ಮಾಡುವ ಬಗ್ಗೆ ಸರ್ಕಾರದವರು ಅಷ್ಟು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಅದನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಪ್ರತ್ಯೇಕ ನಿರ್ದೇಶನಾಲಯ ಮಾಡಬೇಕು. ಅವರಿಗೆ ಸಂಬಳವನ್ನು ಹೆಚ್ಚಿಗೆ ಕೊಡಬೇಕು ಸರ್ಕಾರಿ ನೌಕರರೆಂದು ಟ್ರೀಟ್ ಮಾಡುವ ಸಲುವಾಗಿ ತಾವು ಕೇಂದ್ರ ಸರ್ಕಾರಕ್ಕೆ ಏತಕ್ಕೆ ಶಿಫಾರಸ್ಸು ಮಾಡಬಾರದು ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ಈಗಾಗಲೇ ಮಾನ್ಯ ಸದಸ್ಯರಾದ ಬಸವರಾಜಪಾಟೇಲ್ ಅಟ್ಟೂರ್‌ರವರು ಹೇಳಿದಹಾಗೆ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರು ರಾಜ್ಯಸರ್ಕಾರದಲ್ಲಿ ಸಾಕಷ್ಟು ಸಲ ಪ್ರತಿಭಟನೆ ಮಾಡಿದ್ದಾರೆ. 23,763 ಜನ ಅಂಗನವಾಡಿ ಕಾರ್ಯಕರ್ತೆಯರು, ಅಷ್ಟೇ ಪ್ರಮಾಣದಲ್ಲಿ ಸಹಾಯಕರು ಇದ್ದಾರೆ.

ಇದು ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಖಾತೆಗೆ ಸಂಬಂಧಪಟ್ಟಿದ್ದು. ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ 2ನೇ ಅಕ್ಟೋಬರ್‌ನಲ್ಲಿ ಒಂದು ಆದೇಶವನ್ನು ಕಳುಹಿಸಿದ್ದಾರೆ. ಈಗ ಪ್ರಸ್ತುತ ತಿಂಗಳಿಗೆ 125 ರೂಪಾಯಿ ಹೆಚ್ಚಳ ಮಾಡಿದ್ದಾರೆ. ಕೆಲಸ ಮಾಡುವ ಕಾರ್ಯಕರ್ತರಲ್ಲಿ ಮೆಟ್ರಿಕ್ ಪಾಸಾದವರು ಪಾಸಾಗಲಾರದವರು, ಇದ್ದಾರೆ. 5 ವರ್ಷ 10 ವರ್ಷ ಸರ್ವೀಸ್ ಮಾಡಿದ್ದಾರೆ. ಈ ತರಹ ಹೆಚ್ಚಳ ಮಾಡಿರುವುದರಿಂದ ಕೇಂದ್ರ ಸರ್ಕಾರಕ್ಕೆ 555 ಲಕ್ಷ ಖರ್ಚು ಬರುತ್ತಾ ಇದೆ. ಕೇಂದ್ರ ಸರ್ಕಾರ ಕೊಟ್ಟರೆ ನಾವು ಸಹ ನಮ್ಮಲ್ಲಿರುವ 3 ಸಾವಿರ ಅಂಗನವಾಡಿ ಕಾರ್ಯಕರ್ತರಿಗೆ ಕೊಡಬೇಕಾಗುತ್ತದೆ. ಆದರಿಂದ ನಮಗೆ 79ಲಕ್ಷ ಖರ್ಚು ಬರುತ್ತಿದೆ. ಅವರನ್ನು ಪರ್ಮನೆಂಟ್ ಮಾಡತಕ್ಕದ್ದು ಕೇವಲ

ರಾಜ್ಯಸರ್ಕಾರಕ್ಕೆ ಸಂಬಂಧಪಟ್ಟ ಸಮಸ್ಯೆಯಲ್ಲ. ಕೇಂದ್ರಸರ್ಕಾರದ ಜೊತೆಯಲ್ಲಿ ಸಮಾಲೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಈಗ ಕೊಡುವ ಸವಲತ್ತುಗಳನ್ನು ಎಲ್ಲರೂ ತೆಗೆದುಕೊಳ್ಳುತಿದ್ದಾರೆ. 45ವರ್ಷ ಆದವರು ಕೆಲಸ ಮಾಡುತ್ತಿದ್ದಾರೆ ಅವರ ವಯೋಮಿತಿಯನ್ನು ಕಂಡೋನ್ ಮಾಡಿದ್ದೇವೆ. ನಮ್ಮ ರಾಜ್ಯಸ್ವದ ವ್ಯಾಪ್ತಿಯಲ್ಲಿ ಬರುವುದನ್ನು ಮಾಡಿದ್ದೇವೆ. ಅವರನ್ನು ಪರ್ಮನೆಂಟ್ ಮಾಡಬೇಕಾದರೆ ಅದಕ್ಕಾಗಿ ತಗಲತಕ್ಕ ವೆಚ್ಚ 71ಕೋಟಿ ರೂಪಾಯಿಗಳು. ಇದು ತೀವ್ರತರವಾದ ಪ್ರಶ್ನೆ ಇದೆ. ಶಿಕ್ಷಣ ಇಲಾಖೆ ಮತ್ತು ಬೇರೆ ಇಲಾಖೆಗಳಲ್ಲಿಯೂ ಸಹ ಹಳ್ಳಿಗಳಲ್ಲಿ ಕೆಲಸ ಮಾಡತಕ್ಕವರು ಇದ್ದಾರೆ. ಅದರ ಬಗ್ಗೆ ಕೇಂದ್ರ ಸರ್ಕಾರದ ಜೊತೆಯಲ್ಲಿ ಸಮಾಲೋಚನೆ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು : ನಿರ್ದಿಷ್ಟವಾಗಿ ಮಾನ್ಯ ಮಂತ್ರಿಗಳು ಹೇಳಬೇಕು. ಬೇರೆ ವಿಚಾರಗಳನ್ನು ತಾವು ಕೇಂದ್ರಸರ್ಕಾರಕ್ಕೆ ಶಿಫಾರಸ್ಸು ಮಾಡಿರಿ. ಸಪರೇಟ್ ಇಲಾಖೆ ಮತ್ತು ನೌಕರಿಯನ್ನು ಪರ್ಮನೆಂಟ್ ಮಾಡಬೇಕೆಂದು ಅವರು ಕೇಳುತ್ತಿದ್ದಾರೆ. ಈ ಸಮಸ್ಯೆಗಳ ಬಗ್ಗೆ ಕೇಂದ್ರಸರ್ಕಾರದ ಜೊತೆಗೆ ಸಂಪರ್ಕಿಸಿ. ಆದರೆ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ಸ್ಯಾಲರಿ ಏನು ಕೊಡುತ್ತಾ ಇದ್ದೀರಿ ಅದು ಬಹಳ ಕಡಿಮೆ ಕೊಡುತ್ತಾ ಇದ್ದೀರಿ. ದಯಮಾಡಿ ಮಾನ್ಯಮಂತ್ರಿಗಳು ಈ ವಿಚಾರವನ್ನು ಬಹಳ ಗಂಭೀರವಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕಾಗಿದೆ. 300ರೂಪಾಯಿ ಏನು ಕೊಡುತ್ತಾ ಇದ್ದೀರಿ ಅದು ಯಾವುದಕ್ಕೂ ಸಾಲುವುದಿಲ್ಲ, ಅವರು ಜೀವನಮಾಡುವುದು ಸಮಸ್ಯೆಯಿದೆ. ಗರೀಬ ಹೆಣ್ಣುಮಕ್ಕಳಿಗೆ ಅಪಾಯಿಂಟ್‌ಮೆಂಟ್ ಕೊಟ್ಟಿದ್ದೀರಿ. ದಯವಿಟ್ಟು ಸರ್ಕಾರ ಅವರ ಸಂಬಳವನ್ನು ಹೆಚ್ಚಳ ಮಾಡಬೇಕು. ಸರ್ಕಾರ ದೊಡ್ಡ ದೊಡ್ಡ ಇಲಾಖೆಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದೆ. ಅದರಲ್ಲಿ ಬಹಳಷ್ಟು ಹಣ ಸೋರಿಹೋಗುತ್ತಿದೆ. ಸರ್ಕಾರ ಬಡ ಹೆಣ್ಣುಮಕ್ಕಳ ಸಲುವಾಗಿ ಏತಕ್ಕೆ ಹಣವನ್ನು ಖರ್ಚು ಮಾಡಬಾರದು? ಸಂಬಳ ಹೆಚ್ಚಿಗೆ ಮಾಡಬೇಕೆಂದು ಅವರ ಬೇಡಿಕೆಯಿದೆ. ತಾವು ಗೃಹಮಂತ್ರಿಗಳಾಗಿದ್ದಾಗ ಚೆನ್ನಾಗಿ ಕೆಲಸ ಮಾಡಿದ್ದೀರಿ.

ಈ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೀರಿ. ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಬಹಳ ತೊಂದರೆಯಾಗುತ್ತಿದೆ, ಅವರ ಸಂಬಳ ಹೆಚ್ಚಿಗೆಯಾಗಬೇಕು. ಇದು ಇಡೀ ರಾಜ್ಯದ ಸಮಸ್ಯೆ ಇದೆ.

ಶ್ರೀ ಧರ್ಮಸಿಂಗ್ : ಮಾನ್ಯ ಸದಸ್ಯರೇ ಪ್ರಸ್ತಾಪ ಮಾಡಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಕೇಂದ್ರದ ಜೊತೆ ಸಮಾಲೋಚನೆ ಮಾಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಯೋಧ್ಯೆಯ ಘಟನೆಯ ನಂತರ ರಾಜ್ಯದಲ್ಲಿ ಇತ್ತೀಚೆಗೆ ಜರುಗಿದ ಕೋಮುಗಲಭೆಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಯ ಮೇಲೆ ಚರ್ಚೆ.

ಉಪಾಧ್ಯಕ್ಷರು : ಶ್ರೀ ವಾಟಾಳ್ ನಾಗರಾಜ್‌ರವರೇ, ತಾವು ಈಗ ಶುರುಮಾಡಿ. ಆಮೇಲೆ ತಿರುಗಿ ಮುಂದುವರೆಸಬಹುದು.

ಶ್ರೀ ವಾಟಾಳ್ ನಾಗರಾಜ್ : ನಾನು ಒಂದು ನಿಮಿಷ ಮಾತನಾಡಿ, ಆಮೇಲೆ ಮುಂದುವರೆಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಮನ ಹೆಸರು ಹೇಳಿ ಊಟಕ್ಕೆ ಹೋಗೋಣ.

ಒಬ್ಬರು ಮಾನ್ಯ ಸದಸ್ಯರು : ಶ್ರೀ ಯಡಿಯೂರಪ್ಪನವರು ಎಷ್ಟುರಾಮನ ಹೆಸರು ಹೇಳಿದರೂ, ರಾಮ ಮಾತ್ರ ಅವರನ್ನು ಮೆಚ್ಚುವುದಿಲ್ಲ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷಣಿಯವರೇ, ಅಯೋಧ್ಯೆ ಘಟನೆ ಆದನಂತರ ಒಂದು ಸುದೀರ್ಘವಾದ ಚರ್ಚೆ ಮತ್ತು ವಿಮರ್ಶೆ ಆಗಬೇಕಿತ್ತು. ಈ ಬಗ್ಗೆ ಸಭೆಯನ್ನು ಕರೆಯಬೇಕೆಂದು ಹೇಳಿ ನಾವು ಸರ್ಕಾರವನ್ನು ಅನೇಕಬಾರಿ ಒತ್ತಾಯ ಮಾಡಿದ್ದೂ ಆಯಿತು. ಮಾನ್ಯ ಮುಖ್ಯಮಂತ್ರಿಯವರು ಈ ಸಭೆಯನ್ನು ಕರೆದು ಈ ಒಂದು ಚರ್ಚೆಗೆ ಒಂದು ಅವಕಾಶ ದೊರೆತಿದ್ದುದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಇದು ಬಹಳ ಅತ್ಯಂತ ಮಹತ್ತರವಾದಂಥ, ಗಂಭೀರವಾದಂಥ ವಿಚಾರ ಈ ಬಗ್ಗೆ ಇಡೀ ದೇಶದಲ್ಲಿ ಭಾರಿ ಪ್ರಮಾಣದಲ್ಲಿ ವಿಚಾರವಿಮರ್ಶೆಗಳು ನಡೆದಿವೆ. ಈಗಾಗಲೇ ಲೋಕಸಭೆಯಲ್ಲಿ ಇದರ ಬಗ್ಗೆ ಸುದೀರ್ಘವಾದಂಥ ಚರ್ಚೆಗಳು ನಡೆದಿವೆ. ಇವತ್ತು ನಮ್ಮ ಶಾಸನಸಭೆಯಲ್ಲಿ ಇದರಿಂದ, ಈ ಚರ್ಚೆಯಿಂದ ಮಹತ್ತರವಾದಂಥ ಪ್ರಯೋಜನವಾಗುತ್ತದೆ ಎಂದು ಅಲ್ಲದೇ ಇದ್ದರೂ, ಒಂದು ರೀತಿಯ ವಿಶ್ಲೇಷಣೆ ಆಗಿ ಒಂದು ರೀತಿಯ ಶವಸಂಸ್ಕಾರ ಮಾಡುತ್ತಿದ್ದೇವೆ ಏನೋ ಎನ್ನುವ ಭಾವನೆ ಬರುತ್ತಿದೆ. ಸಮಗ್ರವಾದ ಚಿಂತನೆ ಈಗಾಗಲೇ ನಡೆದಿದೆ. ಕೇಂದ್ರಸರ್ಕಾರ, ಲೋಕಸಭೆಗಳು, ಅನೇಕ ಪತ್ರಿಕೆಗಳು, ಅನೇಕ ವಿಚಾರ ವಿಮರ್ಶಕರು ಮಾತನಾಡಿ ಇದರ ಒಂದು ಚಿಂತನೆಯನ್ನು ದೇಶದ ಮುಂದಿಟ್ಟಿದ್ದಾರೆ. ನಾವು ಇವತ್ತಿನದಿವಸ ನಡೆದಿರತಕ್ಕಂಥ ವಿಚಾರವನ್ನು ಮತ್ತೆ ಉಲ್ಬಣಗೊಳಿಸಬೇಕೇ, ನಾವು ಈ ಬಗ್ಗೆ ಸುದೀರ್ಘವಾಗಿ ಒಂದು ಉತ್ತಮವಾದ ವಾತಾವರಣ ನಿರ್ಮಾಣ ಮಾಡುವುದಕ್ಕೆ, ಮಾರ್ಗದರ್ಶನ ನೀಡಬೇಕು ಎನ್ನತಕ್ಕದ್ದು ಮುಖ್ಯವೇ ಎಂದು ನಾವು ಪ್ರಾಮಾಣಿಕವಾಗಿ ನೋಡಬೇಕಾದ ಪ್ರಶ್ನೆ ನಮ್ಮ ಮುಂದಿದೆ. ಮಾನ್ಯ ಮುಖ್ಯಮಂತ್ರಿಯವರು ಹೊಸದಾಗಿ ಬಂದಿದ್ದಾರೆ. ಬಂದನಂತರ ಒಂದರಮೇಲೊಂದು ನಮ್ಮ ರಾಜ್ಯದಲ್ಲಿ ಅನೇಕ ವಿಚಾರಗಳು ಪರಿಣಮಿಸಿದವು. ಅವರು ಬಂದನಂತರ ನೆರೆಹಾವಳಿ ಶುರುವಾಯಿತು. ಈ ಅಯೋಧ್ಯೆ ವಿಚಾರ ಶುರುವಾಯಿತು. ಇದರಿಂದ ರಾಜ್ಯದ ಆಡಳಿತದ ಬಗ್ಗೆ ಗಮನ ಕೊಡತಕ್ಕಂಥಾದ್ದು ಕಡಿಮೆಯಾಗಿದೆ. ಅವರೂ ಸಹ ಪ್ರಜಾಪ್ರಭುತ್ವ ದೃಷ್ಟಿಯಿಂದ ಶಾಸನಸಭೆಯ ಮಹತ್ವವನ್ನು ಅರಿತು ಈ ಸದನದಲ್ಲಿ ಚರ್ಚೆಯ ಅವಶ್ಯಕತೆ ಇದೆ ಎನ್ನತಕ್ಕಂಥ ಮಾತನ್ನು ಅನುಮೋದಿಸಿ ಈ ಸಭೆಯನ್ನು ಕರೆದಿರುವುದಕ್ಕಾಗಿ ನಾನು ಅವರನ್ನು ನಿಜವಾಗಿಯೂ ಅಭಿನಂದಿಸುತ್ತೇನೆ. ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ಮುಂದುವರೆಸಬೇಕೋ ಅಥವಾ....

ಉಪಾಧ್ಯಕ್ಷರು : ಐದು ನಿಮಿಷ ಮಾತನಾಡಿ. ಎರಡು ಗಂಟೆಗೆ ನಾನು ಅಡ್ಜರ್ನ್ ಮಾಡುತ್ತೇನೆ.

ಈ ಸಂದರ್ಭದಲ್ಲಿ ಈ ದೇಶದಲ್ಲಿ ಮತ್ತು ನಾಡಿನಲ್ಲಿ ನಡೆದಿರತಕ್ಕ ಪರಿಸ್ಥಿತಿ. ನಡೆದಂಥ ಅಶಾಂತಿ ವಾತಾವರಣದ ದಳ್ಳುರಿ ಇಡೀ ದೇಶವನ್ನೇ ನಡುಗಿಸಿದೆ.

ಈ ದೇಶದ ಭದ್ರತೆ ಐಕ್ಯತೆ ಬಗ್ಗೆಯೂ ಸಹ ತೀವ್ರವಾದ ಚಿಂತನೆಗೆ ಒಳಪಡಿಸಿದೆ. ಇಂತಹ ಸಂದರ್ಭದಲ್ಲಿ ನಮ್ಮ ದೇಶದ ಪ್ರಜಾಪ್ರಭುತ್ವಕ್ಕೆ ಅತ್ಯಂತ ಮಹತ್ತರವಾದ ಬೆಲೆಯನ್ನು ಕೊಟ್ಟಿರತಕ್ಕಂಥಾದ್ದು, ಇಂತಹ ಪರಿಸ್ಥಿತಿಯೇ ಆಗಾಗ ನಿರ್ಮಾಣವಾಗುತ್ತಾ ಇದ್ದರೆ, ದೇಶದ ಪ್ರಜಾಪ್ರಭುತ್ವದ ಬಗ್ಗೆ ಚಿಂತನೆ ಮಾಡಬೇಕಾದ ಕಾಲ ಇವತ್ತು ನಮ್ಮೆಲ್ಲರನ್ನೂ ಆವರಿಸಿದೆ. ಈ ಪ್ರಜಾಪ್ರಭುತ್ವ ಉಳಿದರೆ, ಈ ದೇಶ ಉಳಿದರೆ ನಾವೆಲ್ಲರೂ ಉಳಿಯುತ್ತೇವೆ. ಈ ದೇಶದ ಉಳಿವಿಗಾಗಿ, ಪ್ರಜಾತಂತ್ರ ವ್ಯವಸ್ಥೆ ಅತಿ ಹೆಚ್ಚಿನ ರೀತಿಯಲ್ಲಿ ಉಳಿಯುವುದಕ್ಕೆ ನಾವೆಲ್ಲರೂ ಯಾವುದೇ ಪಕ್ಷದಲ್ಲಿರಲಿ, ಅತಿ ಮುಖ್ಯವಾಗಿ ಕಾಣಬೇಕಾದ ಮಹತ್ತರವಾದ ಒಂದು ಪ್ರಶ್ನೆ, ಇವತ್ತು ಅನೇಕ ಸಂತರು, ಶರಣರು ಈ ದೇಶದಲ್ಲಿ ಈ ನಾಡಿನಲ್ಲಿ ಇದ್ದು, ತಮ್ಮ ಸಂದೇಶವನ್ನು ಇಡೀ ನಾಡಿನಲ್ಲಿ ಇಡೀ ದೇಶದಲ್ಲಿ ನೀಡಿ ಈ ನಾಡಿನ ಭವ್ಯ ಭವಿಷ್ಯದ ಬಗ್ಗೆ, ನಾಡಿನ ಪರಂಪರೆ ಬಗ್ಗೆ, ಈ ನಾಡಿನ ಇತಿಹಾಸದ ಬಗ್ಗೆ ತಮ್ಮ ಅನೇಕ ಬರವಣಿಗೆಗಳ ಮೂಲಕ, ಬರಹದ ಮೂಲಕ, ಚಿಂತನೆಯ ಮೂಲಕ ಬೆಳಕನ್ನು ಚೆಲ್ಲಿದ್ದಾರೆ. ನಾನು ಪ್ರಾರಂಭಕ್ಕೆ ಮುಂಚೆ, ರಾಷ್ಟ್ರಕವಿ ಕುವೆಂಪುರವರು ಆ ಕಾಲದಲ್ಲಿ ಬರೆದ ಕವಿತೆ, ಎಷ್ಟು ಚೆನ್ನಾಗಿ ಸೊಗಸಾಗಿ ಇದೆಯೆಂದು ಹೇಳಿದ್ದಾರೆ, ಅದನ್ನು ಈ ದೇಶದ ಉದ್ದಗಲಕ್ಕೂ ಸ್ವಾಗತ ಮಾಡಬೇಕಾಗಿದೆ.

ಜಯ ಭಾರತ ಜನನಿಯ ತನುಜಾತೆ,

ಜಯಹೇ ಕರ್ನಾಟಕ ಮಾತೆ,

ಸರ್ವ ಜನಾಂಗದ ಶಾಂತಿಯ ತೋಟ

ರಸಿಕರ ಕಂಗಳ ಸೆಳೆಯುವ ನೋಟ

ಹಿಂದು, ಮುಸಲ್ಮಾನ್, ಕ್ರೈಸ್ತ, ಪಾರಸಿಕ

ಜೈನರೋದ್ಯಾನ ಎಂತಹ ಮಾತನ್ನು ರಾಷ್ಟ್ರಕವಿ ಕುವೆಂಪುರವರು

ತಮ್ಮ ಬರವಣಿಗೆಯ ಮೂಲಕ, ತಮ್ಮ ವಾಣಿಯ ಮೂಲಕ, ಈ ನಾಡಿಗೆ ಎಂತಹ ಮಾತನ್ನು ಹೇಳಿದ್ದಾರೆಂದರೆ, ಒಂದೊಂದು ಮಾತೂ ಸಹ ಈ ನಾಡಿನ ಪರಂಪರೆಯ ಬಗ್ಗೆ, ಈ ನಾಡಿನಲ್ಲಿ ಶಾಂತಿಯನ್ನು ನೆಲೆಸುವ ಬಗ್ಗೆ, ಈ ನಾಡಿನಲ್ಲಿ ಯಾವುದೇ ಒಂದು ಕೋಮುದ್ವೇಶ ಇರಬಾರದು, ನಾವೆಲ್ಲಾ ಒಂದಾಗಿದ್ದೇವೆ. ಈ ನಾಡು ಶಾಂತಿಯ ನೋಟ. ಈ ನಾಡು ಭವ್ಯ ಪರಂಪರೆಯ ನಾಡು ಎಂದು, ಎಷ್ಟು ಸುಂದರವಾಗಿ ಅವರು ಹೇಳಿದ್ದಾರೆ. ಈ ದಿಸೆಯಲ್ಲಿ ನಾವೆಲ್ಲರೂ ನೋಡಿದಾಗ, ನಾವು ಎಲ್ಲಿಗೆ ಹೋಗುತ್ತಿದ್ದೇವೆ. ಮೊದಲು ನೀನು ಮಾನವನಾಗು ಏನಾದರೂ ಮಾಡು ನೀನು ಮಾನವನಾಗು. ಸಿದ್ದಯ್ಯ ಪುರಾಣಿಕರು ದೊಡ್ಡ ಬರಹಗಾರರು. ಏನಾದರೂ ಆಗು ನೀನು ಮಾನವನಾಗು, ಎಂತಹ ಮಾತನ್ನು ಹೇಳಿದ್ದಾರೆ. ಮಾನವನಾಗು ಎನ್ನುವುದರಲ್ಲಿ ಒಂದು ಶಕ್ತಿ ಇದೆ, ಮಾನವ ಎನ್ನುವವರಿಗೆ ಯಾವುದೂ ಇರಬಾರದು, ದ್ವೇಷ, ಅಸೂಯೆ, ಧರ್ಮ, ಕೋಮು ಇದು ಯಾವುದೂ ಇಲ್ಲದೇ ಇರುವವನು ಮಾನವ. ಅದಕ್ಕಾಗಿಯೇ ಅವರು ಏನಾದರೂ ಆಗು, ನೀನು ಮಾನವನಾಗು ಎಂದು ಹೇಳಿದ್ದಾರೆ. ರಾಷ್ಟ್ರಕವಿ ಕುವೆಂಪುರವರು ಎಲ್ಲರೂ ವಿಶ್ವಮಾನವರಾಗಬೇಕು ಎಂತಹ ಶರಣರು, ಕವಿಗಳು, ಸಂತರು ಈ ನಾಡಿನಲ್ಲಿ ಹುಟ್ಟಿದ್ದಾರೆ. ಕಬೀರ ಹುಟ್ಟಿದ ನಾಡು, ಕವಿಗಳು

ಹುಟ್ಟಿದ ನಾಡು, ಬಸವೇಶ್ವರರು ಹುಟ್ಟಿದ ನಾಡು, ಸರ್ವಜ್ಞ ಹುಟ್ಟಿದ ನಾಡು- ಇಂತಹ ಪವಿತ್ರ ನಾಡಿನಲ್ಲಿ ನಾವು ಇವತ್ತು ಏನು ನೋಡುತ್ತಿದ್ದೇವೆ. ನಮ್ಮ ಚಿಂತನೆ ನೋಡಿದಾಗ, ಭಯ, ಭೀತಿ ಆವರಿಸಿದೆ. ರಾಜ್ಯದಲ್ಲಿ, ದೇಶದಲ್ಲಿ ಒಂದು ರೀತಿಯ ಕಗ್ಗತ್ತಲು ಆವರಿಸಿದೆ. ಇದನ್ನು ಹೋಗಲಾಡಿಸ ಬೇಕಾದರೆ ನಮ್ಮ ಹೃದಯಪರಿವರ್ತನೆಯಾಗಬೇಕು. ಹೃದಯ ಒಂದಾಗಬೇಕು. ವ್ಯಕ್ತಿ ದ್ವೇಷ ಕಡಿಮೆಯಾಗಬೇಕು. ಇದು ಆಗಲಿಲ್ಲವೆಂದು ಹೇಳಿದರೆ, ನಾವು ಯಾರೂ ಈ ದೇಶದಲ್ಲಿ ಉಳಿಯುವುದಕ್ಕೆ ಸಾಧ್ಯವಿಲ್ಲ, ಪ್ರಜೆಗಳೂ ಉಳಿಯುವುದಿಲ್ಲ, ಈ ದೇಶವೂ ಉಳಿಯುವುದಿಲ್ಲ ಎನ್ನುವ ಮಾತನ್ನು ಈ ಮಹಾಸಭೆಯಲ್ಲಿ ಹೇಳುತ್ತಿದ್ದೇನೆ. ಇವತ್ತು ನಡೆದಿರತಕ್ಕ ವಿಚಾರಗಳ ಬಗ್ಗೆ ನಾವು ಸಮಗ್ರವಾಗಿ ಚಿಂತನೆ ಮಾಡುತ್ತಾ ಹೋದರೆ, ಯಾರು ಯಾರ ಮೇಲೆ ನಾವು ತಪ್ಪನ್ನು ತೋರಿಸಬೇಕು.

ಒಂದು ಕಡೆ ರಾಜಕಾರಣ, ಮತ್ತೊಂದು ಕಡೆ ಅಧಿಕಾರಕ್ಕಾಗಿ ಕಚ್ಚಾಟ, ಇನ್ನೊಂದು ಕಡೆ ಧರ್ಮದ ಕೂಗಾಟ ಇನ್ನೊಂದು ಕಡೆ ದ್ವಂಧ್ವ, ನಾವು ಎಲ್ಲಿಗೆ ತಲುಪುತ್ತಿದ್ದೇವೆ. ನಾವು ಈ ಪರಿಸ್ಥಿತಿಯಲ್ಲಿ ಪರಿಣಾಮಕಾರಿಯಾದಂಥ ಈ ಒಂದು ವ್ಯವಸ್ಥೆ ಎಲ್ಲೋ ಒಂದು ಕಡೆ ಕೆಟ್ಟಿದೆ. ಈ ದೇಶದ ವ್ಯವಸ್ತೆ ಎಲ್ಲೋ ಒಂದು ಕಡೆ ಕೆಟ್ಟಿದೆ. ವ್ಯವಸ್ಥೆ ಎಲ್ಲಿ ಕೆಟ್ಟಿದೆ? ಈ ವ್ಯವಸ್ಥೆಯನ್ನು ಸರಿಪಡಿಸತಕ್ಕಂಥ ಒಂದು ಚಿಂತನೆ ಏನು? ಈ ಬಗ್ಗೆ ನಾವು ಚಿಂತನೆ ಮಾಡಬೇಕೇ ಹೊರತು ಶಾಸನಸಬೆಯಲ್ಲಿ, ಲೋಕಸಭೆಯಲ್ಲಿ, ಮತವನ್ನು ಗಳಿಸತಕ್ಕಂಥ ಒಂದೇ ಒಂದು ನೀತಿಯಿಂದ ನಾವು ಒಂದಲ್ಲ ಒಂದು ರೀತಿಯಲ್ಲಿ ಹೊರಟ್ಟಿದ್ದೇವೆ, ಎಲ್ಲಾ ಪಕ್ಷದವರೂ, ಒಂದು ಪಕ್ಷದ ವಿಚಾರ ಅಲ್ಲ, ಎಲ್ಲಾ ಪಕ್ಷದವರೂ ಮತಗಳನ್ನು ಗಳಿಸತಕ್ಕಂಥ ಚಿಂತನೆಯಲ್ಲಿ ಇದ್ದಾರೆಯೇ ಹೊರತು ಬೇರೆ ಮಾತೇ ಇಲ್ಲ. ಜನತಾದಳ, ಬಿ.ಜೆ.ಪಿ., ಕಾಂಗ್ರೆಸ್, ಎಲ್ಲರೂ ಮತವನ್ನು ಗಳಿಸತಕ್ಕಂಥ ದಿಕ್ಕಿನಲ್ಲಿಯೇ ಹೊರಟಿದ್ದೇವೆ.

ಶ್ರೀ ಬಿ.ಎಸ್. ಬನ್ನಿಕೋಡ್ : ಪಕ್ಷೇತರರೂ ಸಹ

ಉಪಾಧ್ಯಕ್ಷರು : ಶ್ರೀಯುತ ನಾಗರಾಜ್‌ರವರೇ, ಎರಡು ಘಂಟೆ ಆಯಿತು. ಈಗ ಸಭೆಯನ್ನು ಮುಂದೂಡಿ ಮತ್ತೆ ಮೂರು ಗಂಟೆಗೆ ಸೇರೋಣ.

ಸದನವು ಮಧ್ಯಾಹ್ನ 2 ಗಂಟೆ 02 ನಿಮಿಷಕ್ಕೆ ಮೂಂದೂಡಲ್ಪಟ್ಟು ಮತ್ತೆ 3.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.

(ಸದನವು ಮತ್ತೆ 3 ಗಂಟೆ 10 ನಿಮಿಷಕ್ಕೆ ಪ್ರಾರಂಭವಾಯಿತು (ಉಪಾಧ್ಯಕ್ಷರು : ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಪೀಠವನ್ನಲಂಕರಿಸಿದರು.)

ಉಪಾಧ್ಯಕ್ಷರು : ಇನ್ನೂ 29 ಜನರ ಪಟ್ಟಿ ನನ್ನ ಮುಂದೆ ಇದೆ. ದಯವಿಟ್ಟು ತಾವು ಅದಷ್ಟು ಬೇಕ ಚರ್ಚೆ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಭಾವೈಕ್ಯತೆ ಬಗ್ಗೆ ಮತ್ತೊಂದು ಕವಿತೆಯನ್ನು ರಾಷ್ಟ್ರಕವಿ ಕುವೆಂಪು ಅವರು ಎಷ್ಟೊಂದು ಚನ್ನಾಗಿ, ಸೊಗಸಾಗಿ ರಚಿಸಿದ್ದಾರೆ.

ವಂಚುಹನು ದುಷ್ಟ ವ್ಯಾಘ್ರ, ಅದರ ಬಾಯ್ಗೆ ಬೀಳಬೇಡ.

ನೂಂಕು ತಾಕಿಗೆಲ್ಲ ಕೇಡ, ಬಾ ನನ್ನ ಬಳಿಗೆ ಶೀಘ್ರ.

ನೀನು ನಾನು ಬೇರೆ ಜಾತಿ, ಎಂಬುವವರ ಕುಹಕ ನೀತಿ,

ನಂಬಿದರದೇ ನಮಗೆ ಭೀತಿ,

ಒಂದೇ ರೀತಿ, ಒಂದೇ ಜಾತಿ, ಒಂದೇ ನಾಡು, ಒಂದೇ ಬೀಡು.

ಎಂತಹ ಮಾತನ್ನು ರಾಷ್ಟ್ರಕವಿ ಕುವೆಂಪು ಅವರು ನಮ್ಮ ನಾಡಿಗೆ, ದೇಶಕ್ಕೆ ಹೇಳಿದ್ದಾರೆ.

ಒಂದೇ, ಒಂದೇ, ಒಂದೇ, ನಾವೆಲ್ಲರೂ ಒಂದೇ

ನಿನಗೆ ಸುಖವು ಬೇಕೆ ಕೇಳು, ನನ್ನ ಮಾತು ಕೇಳು

ಬಳಿಗೆ ಬಾ, ಒಳಗೆ ಬಾ, ನನ್ನೊಳಾಗು, ನನ್ನನಾಳು,

ನೀನೇ ನಾನು, ನಾನೇ ನೀನು, ಆಗಿ ಸುಖದಿ ಬಾಳು.

ಇಂತಹ ಮಾತನ್ನಾಡಿದ ಮಹೋನ್ನತ ಕವಿಗಳು ಹುಟ್ಟಿದಂಥ ನಾಡು. ಈ ನಾಡಿನ ಭವ್ಯ ಕನಸನ್ನು ಕಂಡ ಅನೇಕ ಜನ ಶರಣರು ಇವತ್ತು ಹೇಳಿರತಕ್ಕಂಥ ವಾಕ್ಯಗಳು, ಮಾತುಗಳು ಎಲ್ಲವನ್ನೂ ಮೀರಿ ಬೇರೆ ದೃಷ್ಟಿಕೋನಕ್ಕೆ ಈ ದೇಶ, ತಾಯಿ ನಾಡು ಹೋಗುತ್ತಿದೆ.

ನೀವು ದೇಶವನ್ನು ಆಳತಕ್ಕವರು ಯಾವುದೇ ಪಕ್ಷದವರು ಆಗಿರಲಿ, ಯಾವುದೇ ರಾಜಕಾರಣಿಗಳು ಆಗಿರಲಿ ಅವರು ಈ ದೇಶದ ಭದ್ರತೆ ಉಳಿಸತಕ್ಕ ಚಿಂತನೆ ನಿಮ್ಮಲ್ಲಿ ಇದೆಯೇ? ಇದು ಮುಖ್ಯವಾಗಿರತಕ್ಕ ಕರ್ತವ್ಯ. ಆ ಕರ್ತವ್ಯವನ್ನು ನಾವು ಪ್ರಾಮಾಣಿಕವಾಗಿ ಮಾಡಬೇಕಾದಂತಹ ಸಂದರ್ಭ ಇವತ್ತು ಅತಿಮುಖ್ಯವಾಗಿ ಒದಗಿದೆ. ಅಯೋಧ್ಯೆಯ ಘಟನೆಯ ವಿಶ್ಲೇಷಣೆಗಿಂತ ಹೆಚ್ಚಾಗಿ ಕರ್ನಾಟಕದಲ್ಲಿ, ಕರ್ನಾಟಕದ ಪರಿಸ್ಥಿತಿಯನ್ನು ನೋಡಿದಾಗ, ಅತ್ಯಂತ ಶೋಚನೀಯವಾದ ಒಂದು ರೀತಿಯ ಗಂಬೀರವಾದಂತಹ ವಾತಾವರಣ ನಿರ್ಮಾಣವಾಗಿದೆ. ನಿರಪರಾಧಿಗಳು ಸಂಬಂಧವಿಲ್ಲದಿರತಕ್ಕವರು ಅನೇಕರು ಪೋಲೀಸರ ಗೋಲಿಬಾರಿಗೆ ತುತ್ತಾಗಬೇಕಾಯಿತು. ಎಲ್ಲದಕ್ಕೂ ಪೋಲೀಸರ ಗೋಲಿಬಾರ್. ಯಾವುದೇ ಒಂದು ಸಂಧರ್ಭದಲ್ಲಿ ಪೋಲೀಸರು ಗೋಲಿಬಾರ್ ಮಾಡಬೇಕಾದರೆ ಕೆಲವು ವಿಧಿವಿಧಾನಗಳು ಇವೆ. ಗೋಲಿಬಾರ್ ಇವತ್ತು ಏನಾಗಿದೆ ಅಂದರೆ ದೀಪಾವಳಿ ಹಬ್ಬದಲ್ಲಿ ಮೆಣಯಿನಕಾಯಿ ಪಟಾಕಿ ಹಚ್ಚಿದ ಹಾಗೆ ಆಗಿದೆ. ಗೋಲಿಬಾರೆ ಮಾಡಬೇಕಾದರೆ ಅದಕ್ಕೆ ಮುಂಚೆ ಅನುಸರಿಸಬೇಕಾದ ವಿಧಾನಗಳೇನು? ಒಂದು ಗೋಲಿಬಾರ್ ಮಾಡಬೇಕಾದರೆ ಅನೇಕ ವಿಧಿ ವಿಧಾನಗಳು ಇವೆ. ಈಗ ಅದು ಇಲ್ಲವೇ ಇಲ್ಲ, ಇಲ್ಲೊಂದು ಮೆರವಣಿಗೆ ಬಂತು ತಕ್ಷಣ ಬಂದೂಕು ಹಿಡಿ, ಹೊಡಿ. ಮೆರವಣಿಗೆ ಬರುವುದಕ್ಕೆ ಮುಂಚೆ ಮೆರವಣಿಗೆ ತರುವವರಿಗೆ ನೀವು ಎಚ್ಚರಿಕೆಯನ್ನು ಕೊಡಬೇಕು. ಮೆರವಣಿಕೆಯಾಗದ ರೀತಿಯಲ್ಲಿ ಸಂಬಂಧಪಟ್ಟ ಮುಖಂಡರುಗಳನ್ನು ಕರೆದು ಕುಳಿತುಕೊಂಡು ಶಾಂತರೀತಿಯಲ್ಲಿ ಮಾತನಾಡಿ ಶಾಂತ ವಾತಾವರಣ ತರತಕ್ಕೆ ರೀತಿಯಲ್ಲಿ ನೀವು ನಡೆದುಕೊಂಡಿದ್ದೀರಾ? ಖಂಡಿತಾ ಇಲ್ಲ, ಆದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೇವೆ. 6ನೇ ತಾರೀಖು ಅಯೋಧ್ಯೆಯಲ್ಲಿ ಕರಸೇವೆ ಆಗುತ್ತದೆ. 6ನೆಯ ತಾರೀಖು ಕರಸೇವೆ ನಡೆಯುತ್ತದೆಂದು ಸುಮಾರು ಎರಡು ತಿಂಗಳುಗಳಿಂದ

ಪ್ರಚಾರ ನಡೆಯುತ್ತಿದೆ. ಕರ್ನಾಟಕ ರಾಜ್ಯಕ್ಕೆ ಮಾತ್ರ ನಾನು ಸೀಮಿತವಾಗುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಕೋಮುಗಲಬೆಯಾಗುತ್ತದೆನ್ನುವುದು ನಮ್ಮ ಪೋಲೀಸ್‌ನವರಿಗೆ ಗೊತ್ತೇ ಇರಲಿಲ್ಲ. ಸ್ಥಳದಲ್ಲಿಯೇ ಎಚ್ಚರಿಕೆಯನ್ನು ವಹಿಸಬಹುದಾಗಿತ್ತು, ವಹಿಸಿದ್ದಾರೆಯೆ? ಖಂಡಿತಾ ಇಲ್ಲ. ಎಚ್ಚರಿಕೆಯನ್ನು ವಹಿಸಿದ್ದರೆ ಕರ್ನಾಟಕ ರಾಜ್ಯದಲ್ಲಿ ಪೋಲೀಸರು ಗೋಲಿಬಾರ್ ಮಾಡಬೇಕಾಗಿರಲಿಲ್ಲ. ರಾಜ್ಯದಲ್ಲಿ ಸತ್ತಿರುವವರು 78 ಜನ ಎಂದು ಒಂದು ಹೇಳಿಕೆಯಿದೆ. ನಾನು ಆ ಹೇಳಿಕೆಯನ್ನು ನೋಡಿದ್ದೇನೆ. ಪೋಲೀಸ್ ಸ್ಟೇಶನ್‌ನಲ್ಲಿ ಕೋರ್ಟ್‌ಗೆ ಚಾರ್ಜ್‌ಶೀಟ್ ಕೊಟ್ಟಹಾಗೆ ಫಸ್ಟ್ ಎಫ್‌ಐಆರ್ ಹಾಕುತ್ತಾರೆ ನಂತರ ಚಾರ್ಜ್‌ಶೀಟ್ ಇರುತ್ತದೆ. ಯಾರ್ಯಾರು ಸತ್ತಿದ್ದಾರೆಂದು ನಾನು ಹುಡುಕುತ್ತಾ ಹೋದೆ. ಒಬ್ಬ ಪೋಲೀಸ್‌ನವರು ಸತ್ತಿಲ್ಲ. ನಾನು ಅವರು ಸಾಯಬೇಕೆಂದು ಹೇಳುತ್ತಿಲ್ಲ. ಸತ್ತಿರುವವರು ನಾಗರೀಕರು. ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆಯನ್ನು ನಾನು ಸಂಪೂರ್ಣವಾಗಿ ಓದಿದ್ದೇನೆ. ಒಬ್ಬ ಪೋಲೀಸ್‌ನವರು ಸತ್ತಿಲ್ಲ. ಅವರಿಗೆ ಎಲ್ಲೂ ಏಟು ಬೀಳುವುದಿಲ್ಲ. ಏಕೆಂದರೆ ಅವರಿಗೆ ರಕ್ಷಣೆ ಇದೆ. ಎಲ್ಲಿಯಾದರೂ ಪೋಲೀಸ್‌ನವರಿಗೆ ಸ್ವಲ್ಪ ಏಟು ಬಿತ್ತೆಂದರೆ ಪೋಲೀಸ್‌ನವರ ಮೇಲೆ ಕಲ್ಲು ಬಿದ್ದರೆ, ನಾವು ಲಾಠಿಚಾರ್ಜ್ ಮಾಡಿದೆವು ಆಮೇಲೆ ಜನರು ನಮ್ಮ ಮೇಲೆ ಬಿದ್ದರು ಎಂದು ಎಲ್ಲೂ ಹೇಳುವುದಿಲ್ಲ. ಇದು ಇತಿಹಾಸದಲ್ಲಿ ಪೋಲೀಸರ ನೀತಿ. 6ನೆಯ ತಾರೀಖು ಪೋಲೀಸ್ ಇಲಾಖೆಯ ಅಧಿಕಾರಿಗಳು ಪೊಲೀಸ್ ಇಲಾಖೆಯ ಕಾರ್ಯದರ್ಶಿಗಳು ಈ ದೇಶದಲ್ಲಿ ಗಲಬೆಯಾದಾಗ ಸಬೆ ಸೇರುತ್ತಾರೆ. 5ನೆಯ ತಾರೀಖು ಸಬೆ ಸೇರುವುದಿಲ್ಲ. 4ನೇ ತಾರೀಖು ಸಬೆ ಸೇರುವುದಿಲ್ಲ. 1ನೆಯ ತಾರೀಖು ಸಬೆ ಸೇರುವುದಿಲ್ಲ. ಸಬೆ ಸೇರಿ ಈ ರಾಜ್ಯದ ಪರಿಸ್ಥಿತಿಯನ್ನು ನಾವು ಯಾವ ರೀತಿ ಸುಧಾರಣೆ ಮಾಡಬೇಕು, ರಾಜ್ಯದ ಅಶಾಂತ ಪರಿಸ್ಥಿತಿಯನ್ನು ಶಮನ ಮಾಡುವುದಕ್ಕೆ ನಮ್ಮಲ್ಲಿರತಕ್ಕ ವ್ಯವಸ್ಥೆಯೇನು, ಅದರ ಬಗ್ಗೆ ಒಂದು ಕಡೆಯು ಸಹ ಪ್ರಯತ್ನ ಇಲ್ಲ. 6ನೆಯ ತಾರೀಖು ಮಾತ್ರ ಅವರು ಸಬೆಸೇರುತ್ತಾರೆ. ರಾಷ್ಟ್ರ ಧ್ವಜವನ್ನು ಬೀದರ್‌ನಲ್ಲಿ ಒಂದು ಕಡೆ ಸುಟ್ಟಿದ್ದಾರೆ. ಅವರ ಹೇಳಿಕೆಯಲ್ಲಿ ಅದನ್ನು ಕೊಟ್ಟಿದ್ದಾರೆ.

ಇನ್ನೂ ಕೆಲವು ಕಡೆ ಪೋಲೀಸರು ಅನಿವಾರ್ಯವಾಗಿ ಗೋಲಿಬಾರ್ ಮಾಡಬೇಕಾಯಿತಂತೆ. ಏನು ಅನಿವಾರ್ಯತೆ ಇತ್ತು? ಅನಿವಾರ್ಯವಾಗಿ ಗೋಲಿಬಾರ್ ಮಾಡಬೇಕಾಯಿತು ಎಂದು ಪ್ರತಿನಿತ್ಯ ಗೋಲಿಬಾರ್ ಮಾಡುವುದು. ಸತ್ತವರಿಗೆ 50 ಸಾವಿರ ರೂಪಾಯಿ ಕೊಡುವುದನ್ನು ಇವರ ಸರ್ಕಾರ ಬಂದಮೇಲೆ ಒಂದು ಲಕ್ಷ ಮಾಡಿದ್ದಾರೆ. ಮುಂದಿನ ಸರ್ಕಾರ ಒಂದೂವರೆ ಲಕ್ಷ ಮಾಡುತ್ತದೆ. ಶ್ರೀ ಜಾಲಪ್ಪನವರ ಸರ್ಕಾರ ಇದ್ದಾಗ ಎಷ್ಟು ಇತ್ತೋ ಗೊತ್ತಿಲ್ಲ. ಬಹಳಷ್ಟು ದರೋಡೆಕೋರರು ಬಂದರೆ ಕಣ್ಣಿಗೆ ಮೆಣಸಿನಪುಡಿ ಹಾಕಿಬಿಡಿ ಎಂದು ಹೇಳಿದ್ದರು. ಇದನ್ನು ನಾನು ನೋಡುತ್ತಿದ್ದೇನೆ. ನಿಮ್ಮ ಪೋಲೀಸ್ ಇಲಾಖೆಯಲ್ಲಿ ಉನ್ನತವಾದಂಥ ಶ್ರೇಷ್ಠಮಟ್ಟದ, ದಕ್ಷತೆ ಇರತಕ್ಕಂಥ ಅಧಿಕಾರಿಗಳು ಇದ್ದಾರೆ. ಅದನ್ನು ನಾನು ತಳ್ಳಿ ಹಾಕುವುದಿಲ್ಲ. ಬೇರೆ ರಾಜ್ಯಗಳಿಗಿಂತ ನಮ್ಮ ಕರ್ನಾಟಕ ರಾಜ್ಯದಲ್ಲಿ ಉತ್ತಮವಾದಂಥ ಪೋಲೀಸ್ ವ್ಯವಸ್ಥೆ ಇದೆ. ಅದರೆ ಇವತ್ತು ಪರಿಸ್ಥಿತಿ ಏನಾಗಿದೆ? ಅನೇಕ ಕಡೆ ನಾನು ನೋಡಿದ್ದೇನೆ. ಪೋಲೀಸರು ಈ ಗೋಲೀಬಾರ್‌ಗಳನ್ನು ಪರಿಸ್ಥಿತಿಯನ್ನು ನಿಯಂತ್ರಣ ಮಾಡುವುದರಲ್ಲಿ ಒಂದೇಒಂದು ವಿಧಾನವಾಗಿ

ಅನುಸರಿಸುತ್ತಾರೆ. ಅದನ್ನು ಬಿಟ್ಟರೆ ಬೇರೆ ವಿಧಾನ ಅವರಿಗೆ ಇಲ್ಲವೇ ಇಲ್ಲ. ಗೋಲಿಬಾರ್ ಮಾಡುವುದಕ್ಕೆ ಮುಂಚೆ ರಬ್ಬರ್‌ಗುಂಡು ಹೊಡೆಯಿರಿ ಎಂದು ಹೇಳುತ್ತಾರೆ. ಗೋಲಿಬಾರ್ ಮಾಡುವುದಕ್ಕೆ ಮುಂಚೆ ಬಿಳಿಯ ಬಾವುಟ ಹಾರಿಸಬೇಕಾಗುತ್ತದೆ. ಅದಕ್ಕೆ ಮುಂಚೆ ಎಚ್ಚರಿಕೆ ಹೇಳಬೇಕಾಗುತ್ತದೆ. ಇದಾವುದೂ ಇಲ್ಲದೆ ಜನ ಬಂದರು ಅಂತ ಧಡಧಡ ಹೊಡೆದರೆ ಹೇಗೆ? ಟಿಯರ್‌ಗ್ಯಾಸ್ ಬಿಡಬೇಕು, ಲಾಠಿಚಾರ್ಜ್ ಮಾಡಬೇಕು. ಇದೆಲ್ಲಾ ಆದಮೇಲೆ ಗೋಲಿಬಾರ್ ಮಾಡಬೇಕು. ಈಗ ಹಾಗಲ್ಲ, ಮೊದಲು ಗೋಲಿಬಾರ್, ಅಮೇಲೆ ಟಿಯರ್‌ಗ್ಯಾಸ್, ಅಮೇಲೆ ಲಾಠಿಚಾರ್ಜ್ ಇದು ನಿಜಕ್ಕೂ ವಿಪರ್ಯಾಸವೇ ಸರಿ. ಈ ಪೋಲೀಸ್ ಇಲಾಖೆಯಲ್ಲಿನ ವ್ಯವಸ್ಥೆ ಇದೆಯಲ್ಲ, ಇದು ಬದಲಾವಣೆ ಆಗಬೇಕು. ಎಲ್ಲದಕ್ಕೂ ಗೋಲಿಬಾರ್ ಒಂದೇ ಮಂತ್ರ ಎಂದರೆ ಅದನ್ನು ನಾನು ಒಪ್ಪುವುದಿಲ್ಲ. ಈ ಬಗ್ಗೆ ರಾಜ್ಯದಲ್ಲಿ ನಡೆದಿರತಕ್ಕಂಥ ಗೋಲಿಬಾರೆ ಬಗ್ಗೆ ಸಮಗ್ರವಾಗಿ ಸರ್ಕಾರ ನ್ಯಾಯಾಂಗ ತನಿಖೆಯನ್ನು ನಡೆಸಬೇಕು. ಇದೂ ಅಲ್ಲದೆ, ಈ ರಾಜ್ಯದಲ್ಲಿ ನಡೆದಿರತಕ್ಕಂಥ ಕೋಮು ಗಲಭೆಗಳ ಬಗ್ಗೆ ಗೋಲಿಬಾರ್ ಬಗ್ಗೆ ಹೇಳಿಕೆಯೊಂದೇ ಅಲ್ಲ, ಶ್ವೇತಪತ್ರವನ್ನು ಸಮಗ್ರವಾಗಿ ಸರ್ಕಾರ ಹೊರಡಿಸಬೇಕು. ಈ ಒಂದು ಹೇಳಿಕೆಯಿಂದ ಸಮಸ್ಯೆ ಬಗ್ಗೆ ಬೆಳಕನ್ನು ಚೆಲ್ಲುವುದಕ್ಕೆ ಆಗುವುದಿಲ್ಲ. ಆದ್ದರಿಂದ ಒಂದು ನ್ಯಾಯಾಂಗ ತನಿಖೆಯನ್ನು, ಮತ್ತೊಂದು, ಶ್ವೇತಪತ್ರವನ್ನು ಹೊರಡಿಸತಕ್ಕಂಥಾದ್ದು ಅತಿಮುಖ್ಯ. ಮೈಸೂರಿನಲ್ಲಿ 6ನೇ ತಾರೀಖು ಗಲಬೆ ಇಲ್ಲ, 7ನೇ ತಾರೀಖು ಗಲಬೆ ಇಲ್ಲ, 8ನೇ ತಾರೀಖು ಗಲಬೆ ಇಲ್ಲ. 9ರಿಂದ ಗಲಬೆ ಶುರುವಾಗುತ್ತದೆ. ಇದಕ್ಕೆ ಕಾರಣವೇನು? ಮೈಸೂರಿನಲ್ಲಿ 6,7,8ರಂದು ಇಲ್ಲದ ಗಲಬೆ 9ನೇ ತಾರೀಖಿನಿಂದ ಶುರುವಾಗುತ್ತದೆ. ಮೈಸೂರಿನಲ್ಲಿ ಗೋಲಿಬಾರನಲ್ಲಿ ಸತ್ತವರು ಎಷ್ಟು? ಬೇರೆ ಕಡೆ ಬೀದರ್‌ನಲ್ಲಿ, ಗುಲ್ಬರ್ಗಾದಲ್ಲಿ, ಮಂಗಳೂರಿನಲ್ಲಿ ಸತ್ತವರು ಎಷ್ಟು? ಇದನ್ನು ಲೆಕ್ಕ ಹಾಕುದಾಗ ಮೈಸೂರಿನಲ್ಲಿ ಗಲಬೆ ಶುರುವಾಗುವುದು 8 ರಂದು ರಾತ್ರಿ ಒಂಭತ್ತು ಗಂಟೆಮೇಲೆ. ಇದಕ್ಕೆ ಕಾರಣ ಹಿನ್ನೆಲೆ ಏನು? ಈ ಬಗ್ಗೆ ಹೇಳಿಕೆಯಲ್ಲಿ ಏನು ಇಲ್ಲ. ಅಲ್ಲಿರುವಂಥ ಪೋಲೀಸ್ ಕಮಿಷನರ್ ಅವರನ್ನು ಬದಲಾವಣೆ ಮಾಡಿದರು. ಬೇರೆಯವರು ಬಂದು ಏನು ಅನುಕೂಲ ಆಯಿತು? ಮರುದಿವಸವೂ ಅಲ್ಲಿ ಗಲಾಟೆ ಇತ್ತು. ಅಂದರೆ ಪೋಲೀಸ್ ಇಲಾಖೆಯಲ್ಲಿ ಧಕ್ಷತೆ ಕುಂಠಿಹೋಗುತಿದೆ. ಈ ರೀತಿ ನೀವು ಒಂದು ಸಂಧರ್ಭದಲ್ಲಿ ತತಕ್ಷಣ ಒಬ್ಬ ಅಧಿಕಾರಿ ಮೇಲೆ ಹೊಣೆಯನ್ನು ಹೊರಿಸಿ ಆ ಅಧಿಕಾರಿಯನ್ನು ಬದಲಾವಣೆ ಮಾಡುವುದರಿಂದ ಇದು ನಿಜವಾಗಿಯೂ ಒಂದು ರೀತಿಯಲ್ಲಿ ಪೋಲೀಸ್ ಇಲಾಖೆಯಲ್ಲಿ ಅಧಕ್ಷತೆ ಪ್ರಾರಂಭರಾಗುತ್ತದೆ. ಮೈಸೂರು ಪೋಲೀಸ್ ಕಮಿಷನರ್ ಅವರನ್ನು ಬದಲಾವಣೆ ಮಾಡಲಿಕ್ಕೆ ಕಾರಣ ಇದ್ದರೆ, ಬೇರೆ ಅವರ ಮೇಲೆ ಇದ್ದಂಥ ಚಾರ್ಜಸ್ ಏನು? ಅದನ್ನು ಇದರಲ್ಲಿ ಹೇಳಿದ್ದೀರಾ? ಇಲ್ಲ. ಬೇರೆ ಅಧಿಕಾರಿಗಳು ಯಾರೂ ಇರಲಿಲ್ಲವೇ? ಪ್ರಜಾವಾಣಿ ಪತ್ರಿಕೆಯಲ್ಲಿ ವರದಿ ಬಂದಿದೆ, ಅಲ್ಲಿಯ ಪೋಲೀಸ್ ಕಮಿಷನರ್ ಅವರಿಗೂ ಜಿಲ್ಲಾಧಿಕಾರಿಗಳಿಗೂ ಹೊಂದಾಣಿಕೆ ಇರಲಿಲ್ಲ ಎಂದು. ಇದೇ ಪೋಲೀಸ್ ಕಮಿಷನ್‌ರ್ ಬಗ್ಗೆ ಎಲ್ಲಿ ಹೇಳಿದ್ದೀರಿ? ಇಲ್ಲ.

ಪೋಲೀಸ್ ಕಮೀಷನರನ್ನು ಬದಲಾವಣೆ ಮಾಡಬೇಕಾದರೆ, ಅವರು ಏನು ಮಾಡಿದ್ದಾರೆ, ಸರ್ಕಾರಕ್ಕೆ ಏನಾದರೊಂದು ಇರಬೇಕು. ಏನೋ ಅಪರಾಧ ಮಾಡಿದ್ದಾರೆ, ಗುರುತರವಾದ ಸಾಕ್ಷ್ಯ, ಆಧಾರಗಳು ಇವೆ ಎಂದರೆ ಹೇಳಲಿ. ರಾಜ್ಯದ ಮೂಲೆ ಮೂಲೆಗಳಲ್ಲಿ ಗೋಲಿಬಾರ್ ಆಗಿದೆ, ಯಾವ ಒಬ್ಬ ಅಧಿಕಾರಿಯನ್ನೂ ಬದಲಾವಣೆ ಮಾಡಿಲ್ಲ. ಮೈಸೂರು ಪೋಲೀಸ್ ಕಮೀಷನರ್ ಅವರನ್ನು ಬದಲಾವಣೆ ಮಾಡತಕ್ಕಂಥ ಸಾಕ್ಷ್ಯಾಧಾರಗಳು ನಿಮ್ಮಲ್ಲಿ ಏನಿವೆ, ಅವುಗಳನ್ನು ಸದನದ ಮುಂದೆ ಇಡಬೇಕು. ಬರೀ ಬದಲಾವಣೆ ಒಂದೇ ಅಲ್ಲ. ಆ ಅಧಿಕಾರಿಯಿಂದ ನಿಮಗೆ ನಿಜವಾಗಿಯೂ ಅನ್ಯಾಯ ನಡೆದಿದೆ, ಅಧಿಕಾರದ ಮೋಸ ನಡೆದಿದೆ ಎಂದು ಇದ್ದರೆ ಹೇಳಿ. ಬೇರೆ ಜಿಲ್ಲೆಯಲ್ಲಿ ಗೋಲಿಬಾರ್ ಆಗಿದೆ, ಯಾರನ್ನೂ ಬದಲಾವಣೆ ಮಾಡಿಲ್ಲ. ಮೈಸೂರಿನಲ್ಲಿ 12 ಗಂಟೆ ರಾತ್ರಿಯಲ್ಲಿ, ಅಲ್ಲಿಯೇ ಕುಳಿತುಕೊಂಡು, ಈ ಅಧಿಕಾರಿಯನ್ನು ಬದಲಾವಣೆ ಮಾಡಿದ್ದಾರೆ. ರೀತಿ ಮಾಡಿದರೆ, ಪೋಲೀಸ್ ಇಲಾಖೆಯಲ್ಲಿ ದಕ್ಷತೆ ಹೇಗೆ ಬರುತ್ತದೆ? ನಿಮ್ಮ ಸರ್ಕಾರದ ಬಗ್ಗೆ ನಂಬಿಕೆ ಹೇಗೆ ಬರುತ್ತದೆ ; ಇಂತಹ ಉನ್ನತವಾದ ಅಧಿಕಾರಿಗಳನ್ನು ಬದಲಾವಣೆ ಮಾಡುವಂತಾದ್ದು ಯಾರಿಗೂ ಶೋಬೆ ತರುವುದಿಲ್ಲ, ಇದು ಬಹಳ ತೀವ್ರವಾದದ್ದು. ಮೈಸೂರು ಪೋಲೀಸ್ ಕಮೀಷನರ್ ಬದಲಾವಣೆ ಬಗ್ಗೆ ಏನೇನು ಸಾಕ್ಷಗಳು ಇವೆ, ಅವುಗಳನ್ನು ಈ ಸದನದ ಮುಂದೆ ಇಡಬೇಕು. ಸುಮ್ಮ-ಸುಮ್ಮನೆ ರಾತ್ರೋರಾತ್ರಿ ಹೋಗಿ, ಯಾರೋ ಹೇಳಿದರು ಎಂದು ಬದಲಾವಣೆ ಮಾಡಿದರು. ಅಂದರೆ, ಅವರು ಗೋಲಿಬಾರ್ ಮಾಡಬೇಕಾಗಿತ್ತೆ, ಮೈಸೂರು ಕಮೀಷನರ್ ಆ ರೀತಿ ಮಾಡದೇ ಇರುವುದು ತಪ್ಪೆ, ಜನಗಳ ಮೇಲೆ ಗೋಲಿಬಾರ್ ಮಾಡಲಿಲ್ಲ, ನಿಮ್ಮ ಮಂತ್ರ ಗೋಲಿಬಾರ್ ಮಾಡಬೇಕಾಗಿತ್ತು. ಸಿಕ್ಕಿಸಿಕ್ಕಿದವರಿಗೆ ಗೋಲಿಬಾರ್ ಮಾಡಿ, ರಸ್ತೆ ರಸ್ತೆಯಲ್ಲಿ ಹೆಣಗಳನ್ನು ಉರುಳಿಸಿದ್ದರೆ ಪೋಲೀಸಿನವರಿಗೆ ದೊಡ್ಡ ಕಿರೀಟವೇ. ಇದು ಸಾಧ್ಯವಿಲ್ಲ. ಬಹಳ ಸೌಜನ್ಯದಿಂದ ನೋಡಬೇಕೆಂದು ಪ್ರಯತ್ನಪಟ್ಟು, ಕೊನೆಗೆ 9ನೇ ತಾರೀಖು, ನನ್ನ ತಾಲ್ಲೂಕು ಚಾಮರಾಜನಗರ, ನಾನು ಈ ಕ್ಷೇತ್ರದ ಶಾಸಕ. ಪ್ರತಿ ಸಾರಿಯೂ ಚಾಮರಾಜನಗರ ತಾಲ್ಲೂಕಿನಲ್ಲಿ ದಳ್ಳುರಿ ಆಗುತ್ತಿತ್ತು. ಆದರೆ, ಈ ಭಾರಿಈ ಕೋಮುಗಲಬೆ ಅಲ್ಲ, ಒಂದು ಸಣ್ಣ ಗಲಬೆ ಕೂಡ ಆಗದೇ ಪವಿತ್ರವಾದ, ಶಾಂತ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ನನು, ನಮ್ಮ ತಾಲ್ಲೂಕಿನ ಅಧಿಕಾರಿಗಳು, ನಮ್ಮ ತಾಲ್ಲೂಕಿನ ಪೋಲೀಸ್ ಅಧಿಕಾರಿಗಳು, ನಮ್ಮ ತಾಲ್ಲೂಕಿನ ರೆವಿನ್ಯೂ ಅಧಿಕಾರಿಗಳು, ನಮ್ಮ ತಾಲ್ಲೂಕಿನ ಎಲ್ಲಾ ಅಧಿಕಾರಿಗಳನ್ನು ಈ ಸಬೆಯ ಮೂಲಕ ನಾನು ಅಬಿನಂದಿಸುತ್ತೇನೆ. ಆದರೆ, ಸರ್ಕಾರದವದ ಈ ಹೇಳಿಕೆಯಲ್ಲಿ ಒಂದು ಲೈನೂ ಇಲ್ಲ, ಎಲ್ಲಿ ಗಲಬೆ ಆಗಬೇಕಾಗಿತ್ತೋ, ಆ ಸ್ಥಳದಲ್ಲಿ ಶಾಂತ ವಾತಾವರಣವನ್ನು ಮೂಡಿಸಿರತಕ್ಕ ಶಾಸಕರಿಗೆ, ಸ್ಥಳೀಯ ಅಧಿಕಾರಿಗಳಿಗೆ ಒಂದು ಲೈನೂ ಹೇಳಿಲ್ಲ. ಚೆನ್ನಾಗಿ ಮಾಡಿದ್ದಾರೆಂದು ಸರ್ಕಾರದವರು ಹೇಳಬೇಕಾಗಿತ್ತು. ನನ್ನ ಪ್ರಕಾರ 25 ಲಕ್ಷ ಕೊಡಲೇಬೇಕಾಗಿತ್ತು. ಮೂರು ಕಾಸೂ ಕೊಟ್ಟಿಲ್ಲ. ಪರಿಹಾರವಲ್ಲ, ಶಾಸಕರಿಗೆ ಬಹುಮಾನ ಕೊಡಬೇಕಾಗಿತ್ತು. ಎಷ್ಟೊಂದು ಜನರ ಜೀವ,ಆಸ್ತಿ ಹೋಗುವುದು ತಪ್ಪಿತು. ನಿಜವಾಗಿಯೂ. ಸರ್ಕಾರ ಯೋಚನೆ ಮಾಡಿ, ಚಿಂತನೆ ಮಾಡಬೇಕಾಗಿತ್ತು. ಇದೇ ರೀತಿ ಎಲ್ಲಾ ಕಡೆಯೂ ಆಗಿದ್ದರೆ, ಕರ್ನಾಟಕ ಮೂಲೆ ಮೂಲೆಗಳಲ್ಲಿ

ಶಾಂತ ವಾತಾವರಣ ಆಗಿರುತ್ತಿತ್ತು. ಒಬ್ಬ ಶಾಸಕ, ಅಧಿಕಾರಿಗಳನ್ನು ಇಟ್ಟುಕೊಂಡು, ಇಡೀ ಚಾಮರಾಜನಗರ ತಾಲ್ಲೂಕನ್ನೂ ಅದರಲ್ಲಿಯೂ ಚಾಮರಾಜನಗರ ಪುರಸಭೆಯ ಪ್ರದೇಶದಲ್ಲಿ ಯಾವತ್ತೂ ಗಲಬೆಗಳಾಗಿ ಸಾವುಗಳು ನಡೆಯುತ್ತಿದ್ದವು ಈ ಸಾರಿ ಆ ರೀತಿ ಆಗದಿರತಕ್ಕ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದೇವೆ. ಕಾವೇರಿ ಗಲಾಟೆ ಇಡೀ ರಾಜ್ಯದಲ್ಲೇ ಆಯಿತು. ಆ ಗಲಾಟೆಯಲ್ಲಿ ನಾವು, ನೀವೆಲ್ಲಾ ಒಟ್ಟಿಗೆ ಸೇರಿದ್ದೇವೆ.

ಶ್ರೀ ಸಿ. ಬೈರೇಗೌಡ : ಆ ಗಲಾಟೆ ಮಾಡುವುದಕ್ಕೆ ನಾನು ಸೇರಿಲ್ಲ. ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಅಂದರೆ, ಕರ್ನಾಟಕ ಪರ ನಾವೂ, ನೀವೂ ಇದ್ದವು ಎಂದು ಅರ್ಥ. ಒಂದು ವಿಚಾರದಲ್ಲಿ ತಾವು ಒಳ್ಳೆಯ ಸಜ್ಜನರು, ಸತ್ಯವಂತರು, ಸೌಮ್ಯವಾಗಿದ್ದಿರಿ.

ಶ್ರೀ ಡಿ.ಎ. ಚಿನ್ನಪ್ಪ : ಇಡೀ ಕೊಡಗಿನಲ್ಲಿ ಒಂದೇಒಂದು ಗಲಾಟೆ ಆಗಲಿಲ್ಲ. ಇದರ ಬಗ್ಗೆ ಏನಾದರೂ ಹೇಳತ್ತೀರಾ?

ಶ್ರೀ ಎಂ.ಪಿ. ವೆಂಕಟೇಶ್ : ಶಿವಮೊಗ್ಗ ಜಿಲ್ಲೆಯಲ್ಲಿ ಈ ಬಾರಿ ಒಂದೇಒಂದು ಗಲಾಟೆ ಆಗಲಿಲ್ಲ, ಪ್ರತಿಸಾರಿಯೂ ಗಲಾಟೆ ಆಗುತ್ತಿತ್ತು.

ಶ್ರೀ ಸಿ. ಬೈರೇಗೌಡ : ಚಾಮರಾಜನಗರಕ್ಕೆ 25 ಲಕ್ಷ, ಕೊಡಗಿಗೆ 50 ಲಕ್ಷ ಮತ್ತು ಇವರಿಗೆ ಒಂದು ಕೋಟಿ ಬಹುಮಾನವಾಗಿ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಇದನ್ನು ಲಘುವಾಗಿ ಏಕೆ ತೆಗೆದುಕೊಳ್ಳುತ್ತೀರಿ. ನಾನು ಮತ್ತೊಮ್ಮೆ ಹೇಳುತ್ತೇನೆ. 4 ಗೋಲಿಬಾರ್ ಆಗಿದ್ದು, 8 ಜನ ಸತ್ತರೆ, ಲೂಟಿ ಆಗಿದ್ದರೆ, ತಕ್ಷಣ ರಾತ್ರೋರಾತ್ರಿ ಚೆಕ್ ಕೊಡುತ್ತಾರೆ. ಜೊತೆಗೆ ಅಲ್ಲಿ ಅಶಾಂತ ವಾತಾವರಣ ನಿರ್ಮಾಣ ಆಗುತ್ತಿತ್ತು. ಆದರೆ, ನಾವು ಶಾಂತ ವಾತಾವರಣ ನಿರ್ಮಾಣ ಮಾಡಿ, ರಾಜ್ಯಕ್ಕೆ ಹೆಸರು ತಂದು, ಯಾವುದೇ ತೊಂದರೆ ಇಲ್ಲದಂತೆ ಮಾಡಿರುವಾಗ, ಕೊಡುವುದರಲ್ಲಿ ತಪ್ಪೇನಿದೆ.

ಗ್ರಾಂಟ್ ಏನು ಬಹುಮಾನವನ್ನೇ ಕೊಡಲಿ, ನಾನು ಹೇಳುತ್ತೇನೆ. ಈ ದುಡ್ಡಿನಲ್ಲಿ ಖರ್ಚನ್ನಾದರೂ ಮಾಡುತ್ತೇವೆ. ಮಾನ್ಯ ನಮ್ಮ ಬೈರೇಗೌಡರು ಎಲ್ಲಾ ವಿಚಾರವನ್ನು ಬಹಳ ಲಘುವಾಗಿ ತೆಗೆದುಕೊಳ್ಳುತ್ತಾರೆ. ಅವರ ಬಗ್ಗೆ ನನಗೆ ಗೌರವ ಇದೆ. ಈ ತರಹ ಲಘುವಾಗಿ ತೆಗೆದುಕೊಂಡರೆ ನಾನೇನು ಮಾಡಲಿ. ಅಲ್ಲಿರತಕ್ಕ ಅಧಿಕಾರಿಗಳಿಗೆ ನಾನು ಮೊನ್ನೆ ಹೋಗಿ ನಾನು ಸ್ವಂತ ನಿಂತು ಅವರಿಗೆ ಹಾರ ಹಾಕಿ, ಊಟ ಕೊಡಿಸಿ ಅವರಿಗೆ ಬೆನ್ನುತಟ್ಟಿ ಬಂದೆ. ಏಕೆಂದರೆ ನನ್ನ ತಾಲ್ಲೂಕಿನಲ್ಲಿ ಗಲಾಟೆಯಾಗಲಿಲ್ಲವೆಂದು ನನಗೆ ಪ್ರಮಾಣಿಕವಾಗಿಯೂ ಖುಷಿಯಾಯಿತು. ಆ ಖುಷಿಗೆ ನಾನು ನನ್ನ ಗೌರವವನ್ನು ಅವರಿಗೆ ಸಲ್ಲಿಸಲೇಬೇಕು. ಇದಾದ ನಂತರ ನಮ್ಮ ಪರಿಹಾರದ ಬಗ್ಗೆ ಪತ್ರಿಕೆಯಲ್ಲಿ ಹೇಳಿದ್ದಿರಿ. 15 ನಿಮಿಷಕ್ಕೆ ಚೆಕ್ ಹೊರಟು ಹೋಯಿತು, 20 ನಿಮಿಷಕ್ಕೆ ಚೆಕ್ಕು ಹೊರಟು ಹೋಯಿತು, ಮನೆಯನ್ನೆಲ್ಲಾ ಕಟ್ಟಿದ್ದೇವೆ. ಎಲ್ಲಾ ಮಹಡಿ ಮನೆಯನ್ನು ಕಟ್ಟಿದ್ದೇವೆಂದು ಹೇಳಿದರು, ಏನೂ ಕಟ್ಟಿಲ್ಲ. ಪರಿಹಾರವನ್ನು ಎಷ್ಟು ಕೊಟ್ಟಿದ್ದೀರೆಂದು ನೀವು ಸಭೆಯ ಮುಂದೆ ಹೇಳಿ? ಎಲ್ಲಿ ಕೊಟ್ಟಿದ್ದೀರಿ ಯಾರ್ಯಾರು ಆ ಕಾಲೊನಿಗೆ ಹೋಗುತ್ತಿದ್ದೀರಿ,

ಎರಡೆರಡು ಮೂಟೆ ಅಕ್ಕಿಯನ್ನು ಎತ್ತಿಕೊಂಡು ಹೋಗಿ ಸೇರಿನಲ್ಲಿ ಜನಕ್ಕೆ ಒಂದೊಂದು ಸೇರು ಅಕ್ಕಿಯನ್ನು ಹಂಚಿಬಿಡುವುದು. ಇದರಿಂದ ನನಗೆ ಅನ್ನಿಸಿದ ಹಾಗೆ ಈ ಜನಕ್ಕೆ ಏನೂ ಪ್ರಯೋಜನವಾಗುವುದಿಲ್ಲ. ಪ್ರಾರಂಬದಲ್ಲಿ ನಿಮಗೆ ಏನು ಉತ್ಸಾಹ ಇತ್ತು. ಅದು ಈಗ ಇಲ್ಲ. ಸಮಾರೋಪಾದಿಯಲ್ಲಿ ಪರಿಹಾರ ಕೊಡುವುದರಲ್ಲಿ ಸರಕಾರ ಸಂಪೂರ್ಣವಾಗಿ ವಿಫಲವಾಗಿದೆ. ಎಲ್ಲೋ ಕಣ್ಣಿಗೆ ಕಾಣುವ ಹಾಗೆ 1 ಲಕ್ಷ, 2 ಲಕ್ಷ ಕೊಟ್ಟಿದ್ದೇವೆಂದು ಹೇಳುತ್ತೀರಿ. ಒಂದು ಕಡೆ ಗೋಲಿಬಾರ್ ಮಾಡುವುದು, ಮತ್ತೊಂದು ಕಡೆ 50 ಸಾವಿರ ರೂಪಾಯಿಯಿಂದ 1 ಲಕ್ಷ ರೂಪಾಯಿಯ ಚೆಕ್ ಕೊಟ್ಟು ಬಿಡುವುದು, ಇದು ಪರಿಹಾರವೇನು? ಇದು ನಿಮ್ಮ ನೀತಿಯೇನು? ನಿಮ್ಮ ಪರಿಹಾರ ನೀತಿ ಇದೆಯಲ್ಲಾ ಇದು ಬಹಳ ಅನ್ಯಾಯದಿಂದ ಕೂಡಿದೆ. ಕೋಮು ಗಲಬೆಯಲ್ಲಿ ಸತ್ತವರಿಗೆ 1ಲಕ್ಷ, ನೆರೆಹಾವಳಿಯಲ್ಲಿ ಸತ್ತವರಿಗೆ 10 ಸಾವಿರ. ಇದು ಯಾವ ನೀತಿ? ನೆರೆಹಾವಳಿಯಲ್ಲಿ ಸತ್ತವರಿಗೂ 1 ಲಕ್ಷ ಕೊಡಿ, ಏತಕ್ಕೆ ಕೊಡಬಾರದು? ಇಂತಹ ಪರಿಸ್ಥಿತಿಯಲ್ಲಿ ಸತ್ತವರಿಗೆಲ್ಲಾ ನಿಮ್ಮ ಸರ್ಕಾರದ ನೀತಿ ಒಂದೇ ಆಗಬೇಕು. ಒಂದು ಲಕ್ಷ ರೂಪಾಯಿಯನ್ನು ಕೊಡಿ. ಇವತ್ತು ನೀವು ಎಷ್ಟು ಜಂರಿಗೆ ಒಂದು ಲಕ್ಷ ರೂಪಾಯಿ ಪರಿಹಾರವನ್ನು ಕೊಟ್ಟಿದ್ದೀರಿ ಎಂದು ಸಬೆಯ ಮುಂದೆ ಹೇಳಬೇಕು. ಎಷ್ಟು ಜನರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೀರಿ? ಎಷ್ಟು ಜನ ಗಾಯಾಳುಗಳಿಗೆ ನೀವು ವ್ಯವಸ್ಥೆಯನ್ನು ಮಾಡಿದ್ದೀರಿ. ಆಸ್ಪತ್ರೆಯಲ್ಲಿರುವ ಎಷ್ಟು ಜನರಿಗೆ ನೀವು ಔಷಧಿ ಉಪಚಾರಗಳನ್ನು ಮಾಡಿದ್ದೀರಿ,

ಎಷ್ಟೋ ಜನಗಳಿಗೆ ಇವತ್ತು ಔಷಧಿಗಳು ಸಿಕ್ಕಿಲ್ಲ, ಪರಿಹಾರ ಸಿಕ್ಕಿಲ್ಲ, ಆಹಾರ ಇಲ್ಲ. ಮನೆಯಲ್ಲಿರುವ ಯಜಮಾನರುಗಳನ್ನು ಕಳೆದುಕೊಂಡು ಬೀದಿ ಬಿಕಾರಿಗಳಾಗಿ ಇವತ್ತು ಸುತ್ತುತ್ತಿದ್ದಾರೆ. ಸರ್ಕಾರ ಪರಿಹಾರವನ್ನು ಕೊಡುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಕರ್ನಾಟಕದ ಉದ್ದಗಲಕ್ಕೂ ನಿಮ್ಮ ಪರಿಹಾರ ಇಲ್ಲ. ಪತ್ರಿಕೆಗಳಲ್ಲಿ ಮುಖ್ಯಮಂತ್ರಿಗಳು ಹೋದರು, ನೋಡಿದರು, ಬಂದರು, ಇದನ್ನು ಬಿಟ್ಟರೆ ಪರಿಹಾರ ಎಲ್ಲಿ ಕೊಟ್ಟಿದ್ದೀರಿ? ಖಂಡಿತವಾಗಿ ಕೊಟ್ಟಿಲ್ಲ. ತಕ್ಷಣ ನೀವು ಸಮಾರೋಪಾದಿಯಲ್ಲಿ ಪರಿಹಾರವನ್ನು ಕೊಡತಕ್ಕ ಕಾರ್ಯವನ್ನು ಅತಿ ಜಾಗ್ರತೆಯಿಂದ ಮಾಡಬೇಕೆಂದು ನಾನು ತಮಗೇ ಹೇಳುತ್ತಿದ್ದೇನೆ. ಅಧಿಕೃತವಾಗಿ ಸತ್ತಿರತಕ್ಕವರು 78 ಎಂದು ಕೊಟ್ಟಿದ್ದೀರಿ. ಅವರ ಹೆಸರುಗಳನ್ನು ನೀವು ಕೊಟ್ಟಿಲ್ಲ, ಯಾರ್‍ಯಾರು ಸತ್ತಿದ್ದಾರೆ. ಯಾವ ಮೊಹಲ್ಲದವರು ಸತ್ತಿದ್ದಾರೆ. ಎಲ್ಲಿಯವರು ಸತ್ತಿದ್ದರೆಂದು ನೀವು ಕೊಡಬೇಕಲ್ಲವೆ? ಅದು ಎಲ್ಲಿದೆ? ಈ ಹೇಳಿಕೆಯಲ್ಲಿ ಉಪ್ಪಿಲ್ಲ,ಹುಳಿ ಇಲ್ಲ, ಏನು ಹೇಳಿಕೆ ಇದು. ಈ ಹೇಳಿಕೆಯಿಂದ ತೃಪ್ತಿ ಬರುವುದಿಲ್ಲ. ಮುಖ್ಯಮಂತ್ರಿಗಳು ಕೊಟ್ಟಿರುವ ಹೇಳಿಕೆಯಲ್ಲಿ ತೃಪ್ತಿ ಬರುವುದಿಲ್ಲ. ಈ ಹೇಳಿಕೆಯಲ್ಲಿ ಏನೂ ಇಲ್ಲ. ಬ್ರಹ್ಮಾಂಡವಾಗಿ ಇಡೀ ರಾಜ್ಯವೇ ಅಶಾಂತಿಯ ದಳ್ಳುರಿಯಲ್ಲಿದ್ದು ಬೆಂಕಿಯನ್ನು ಕಂಡಂಥ ರಾಜ್ಯದಲ್ಲಿ ನೀವು ಕೊಟ್ಟಿರತಕ್ಕ ಹೇಳಿಕೆಯಲ್ಲಿ ಏನೇನೂ ಇಲ್ಲ. ಅಧಿಕೃತವಾಗಿ 78 ಜನ ಸತ್ತಿದ್ದಾರೆ. ಅನಧಿಕೃತವಾಗಿ ಸುಮಾರು 200 ಜನ ಸತ್ತಿದ್ದಾರೆಂದು ನಾನು ಹೇಳುತ್ತೇನೆ. ನಿಮ್ಮಲ್ಲಿ ವ್ಯವಸ್ಥೆ ಎಲ್ಲಿದೆ. ನಿಮ್ಮ ಗುಪ್ತ ದಳ ಏನಾಯಿತು. 6ನೇ ತಾರೀಖಿನ ದಿವಸ ರಾಜ್ಯದಲ್ಲಿ ಅನಾಯಕತ್ವ ಆಗಬಹುದು, ಗದ್ದಲಗಳು ಆಗಬಹುದೆಂದು ತಿಳಿದು ತಡೆಹಿಡಿಯುವುದಕ್ಕೆ ನೀವು ವ್ಯವಸ್ಥಿತವಾಗಿ ನೀವು ಸಬೆಗಳ ಮೇಲೆ ಸಬೆಗಳನ್ನು ಮಾಡಬಹುದಾಗಿತ್ತು. 6ನೇ ತಾರೀಖಿನ ಮುಂಚೆ ನೀವು ಏನಾದರೂ ಶಾಂತಿ ಸಮಿತಿಯ ಸಬೆಗಳನ್ನು ಎಲ್ಲಾದರೂ

ಕರೆದಿದ್ದಿರೋ, ನೀವು ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ರಾಜ್ಯಮಟ್ಟದಲ್ಲಿ ಎಲ್ಲೂ ಕರೆಯಲಿಲ್ಲ. ರಾಜ್ಯ ಮಟ್ಟದ್ದೇ ಒಂದು ಶಾಂತಿ ಸಮಿತಿ ಎಂದು ಇದೆ. ವರ್ಷಕ್ಕೆ ಒಂದು ಸಾರಿ ಕರೆದು ಮೂರನೆಯ ಮಹಡಿಯಲ್ಲಿ ಸಬೆಯನ್ನು ಕರೆದು ಮೂರನೆಯ ಮಹಡಿಯಲ್ಲಿ ಸಭೆಯನ್ನು ಕರೆದು ಹೋಗುತ್ತೀರೋ ಹೊರತು ಪರಿಣಾಮಕಾರಿಯಾಗಿ ನೀವು ಸಭೆಯನ್ನು ಕರೆದು ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ಇಂತಹ ಶಾಂತಿ ಸಮಿತಿಯ ಸಬೆಗಳನ್ನು ಕರೆದು ಪೋಲೀಸ್ ಅಧಿಕಾರಿಗಳ ಜೊತೆಯಲ್ಲಿ ಸೇರಿ ವ್ಯವಸ್ಥಿತವಾಗಿ ಮಾಡಿದ್ದರೆ ಈ ಗದ್ದಲ ಸುಮಾರು 100ಕ್ಕೆ 50 ಬಾಗ ಕಡಿಮೆ ಆಗುತ್ತಿತ್ತು ಎನ್ನತಕ್ಕ ಮಾತನ್ನು ತಮ್ಮಲ್ಲಿ ಕಳಕಳಿಯಿಂದ ಹೇಳುತ್ತಿದ್ದೇನೆ.

ಸ್ವಾಮಿ ಜಾತಿ ವಾದದ ಬಗ್ಗೆ, ಜಾತಿ ವಾದಿಗಳು ಯಾರು? ಜಾತಿವಾದಿಗಳಲ್ಲದಿದ್ದವರು ಯಾರು? ಇದು ಎರಡು ವರ್ಗ. ಜಾತಿವಾದಿಗಳು ಅಂದರೆ ಇವರೆಲ್ಲಾ ಒಂದು ಜಾತಿವಾದಗಳ ಗುಂಪು ಎಂದು ಕರೆದುಬಿಡುತ್ತಾರೆ. ಇನ್ನೊಂದು ಗುಂಪು ಜಾತಿವಾದಿಗಳಲ್ಲ ಎಂದು. ಹಾಗೆ ಅಂದರೆ ಏನು? ಇದಕ್ಕೆ ನನಗೆ ಇನ್ನೂ ಉತ್ತರ ಸಿಕ್ಕಿಲ್ಲ. ಜಾತಿವಾದಿಗಳು. ಜಾತಿವಾದಿಗಳಲ್ಲದವರು. ಪ್ರಾಮಾಣಿಕವಾಗಿ ಅವರವರ ಹೃದಯ ಬಿಚ್ಚಿ ಹೇಳಿಕೊಳ್ಳಬೇಕು. ನಿಮ್ಮ ಮಂತ್ರಿಮಂಡಲದ ರಚನೆ ಆಗುವುದೇ ಜಾತಿಯ ಅಧಾರದ ಮೇಲೆ. ನೀವು ಸೀಟು ಕೊಡುವುದೇ ಜಾತಿಯ ಆಧಾರದ ಮೇಲೆ. ನೀವೆಲ್ಲರೂ ಪ್ರತಿ ನಿತ್ಯ ಬೆಳಿಗ್ಗೆ ಎದ್ದರೆ ವೈದ್ಯಕೀಯ ಕಾಲೇಜು ನೀಮ್ಮ ತಾಂತ್ರಿಕ ಕಾಲೇಜು ಪ್ರತಿಯೊಂದು ವ್ಯವಸ್ಥೆ ಇರುವುದು ಜಾತಿಯ ಆಧಾರದ ಮೇಲೆ. ನಡೆಯುತ್ತದೆ, ಜಾತ್ಯಾತೀತ ಅಂದರೆ ಏನು? ಇವಲ್ಲಾ ನೀವು ಸುಮ್ಮನೆ ಒಂದು ತರಹ ಅಪರಾಧ ಮಾಡುತ್ತಿದ್ದೀರಲ್ಲ ಈ ದೇಶಕ್ಕೆ. ವರ್ಗಾವರ್ಗಿ ಅಷ್ಟೆ. ಜಾತಿ ಆಧಾರ. ಅಧಿಕಾರಿಗಳನ್ನು ತರತಕ್ಕಂಥಾದ್ದು ಜಾತಿಯ ಆಧಾರದ ಮೇಲೆ ನೀವೆಲ್ಲಾ ಸತ್ಯವನ್ನು ಒಪ್ಪಿಕೊಳ್ಳಬೇಕು. ಸುಮ್ಮನೆ ನಾವೆಲ್ಲಾ ಇಲ್ಲಿ ಮಾತನಾಡಿಕೊಳ್ಳುತ್ತೇವೆ. ಮೈನಾರಿಟಿ ಮುಖ್ಯಮಂತ್ರಿ ಬಂದಿದ್ದಾರಪ್ಪ ಅವರನ್ನು ನಾವು ಕಾಪಾಡಬೇಕು. ಅವರಲ್ಲಿ ಏನೇ ಇದ್ದರೂ ಎಂಥಾದ್ದೇ ಮಾಡಿರಲಿ ಅವರನ್ನು ಕಾಪಾಡಬೇಕು ಅಂತ ನಮ್ಮ ನಮ್ಮಲ್ಲಿ ಹೃದಯಗಳು ಬಂದರೆ ಅವರು ಏನೇ ನಡೆಸಿದರೂ ಕಾಪಾಡಬೇಕು ಅಂತ ನಮ್ಮ ನಮ್ಮಲ್ಲಿ ಹೃದಯಗಳಿಲ್ಲಿ ಮಾತನಾಡಿಕೊಳ್ಳುತ್ತವೆ. ಒಬ್ಬ ಹಿಂದುಳಿದ ವರ್ಗದ ಮುಖ್ಯಮಂತ್ರಿ ಬಂದಿದ್ದರೆ ನಾವು ಏನಾದರೂ ಸರಿ ಅವರು ಏನೆ ಮಾಡಿದರೂ ಸರಿ ನಾವೂ ಕೈ ಹಾಕಬಾರದು, ಮುಂದುವರಿದ ಮುಖ್ಯಮಂತ್ರಿಗಳು ಬಂದಾಗ ಅವರು ಏನೇ ಮಾಡಿದರೂ ನಮ್ಮವರು ಯಾರೋ ಒಬ್ಬರು ಬಂದಿದ್ದಾರೆ ಕೈ ಹಾಕಬಾರದು. ಇದನ್ನು ಬಹಿರಂಗವಾಗಿ ಹೇಳುವುದಿಲ್ಲ ಅಂತರಂಗದಲ್ಲಿ ಹೇಳಿಕೊಳ್ಳುತ್ತೇವೆ. ಎಲ್ಲಿದ್ದೀರಿ ನೀವೆಲ್ಲಾ ಎಲ್ಲಿ ಹೋಗುತ್ತೀರಿ. ಎಲ್ಲಿಗೆ ಹೋಗಿ ತಲುಪುತ್ತೀರಿ? ಯಾವ ಯುಗದಲ್ಲಿದ್ದೀರಿ? ಜಾತ್ಯಾತೀತ 800 ವರ್ಷಗಳ ಹಿಂದೆ ಬಸವೇಶ್ವರರು ಹೇಳಿದ್ದನ್ನು ಓದಬೇಕು. ತಾವೆಲ್ಲರೂ, ಏನು ಹೇಳಿದ್ದಾರೆ ಎಂದು. ನಿಜವಾಗಿಯೂ ಈ ಜಾತಿಯನ್ನು ತೆಗೆಯುವುದಕ್ಕೆ ನಡೆಸಿದಂತಹ ಕ್ರಾಂತಿಯನ್ನು ಬಸವೇಶ್ವರರೇ ಉಳಿಯಲಿಲ್ಲ. ಕನಕದಾಸರೂ ಉಳಿಯಲಿಲ್ಲ, "ಕುಲ ಕುಲವೆಂದು, ಹೊಡೆದಾಡುವಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ "ಎಂತಹ ಮಾತನ್ನು ಹೇಳಿದರು. ಅವರನ್ನು ತೆಗೆದುಕೊಂಡು ಹೋಗಿ ನಮ್ಮ ಕುಲಕ್ಕೆ ಹಿಡಿದುಕೊಂಡುಬಿಟ್ಟೆವು. ನಾವೆಲ್ಲಾ ಇವತ್ತು

ಬರೀ ಮಾತನಾಡುತ್ತಿದ್ದೇವೆ ಅಷ್ಟೇ. ಬರೀ ಬಾಷಣ ವೇದಿಕೆಗಳ ಮೇಲೆ ಜಾತ್ಯಾತೀತ ಎಂದು. ಇದೆಲ್ಲಾ ಅರ್ಥವಿಲ್ಲದ್ದು. ನಾವೇನು ಮಾಡಿದರೂ ಜಾತಿಗಳ ಆಧಾರದ ಮೇಲೆ ಮಾಡುವುದು. ಇವೆಲ್ಲ ಏನು ಸುಧೀರ್ಘವಾಗಿ ಹೇಳುತ್ತಾ ಹೋದರೆ ಈ ಸಭೆಯಲ್ಲಿ ನಾವು ನೀವೆಲ್ಲಾ ಚುನಾವಣೆಗೆ ನಿಲ್ಲತಕ್ಕಂಥವರು. ಇವೆಲ್ಲಾ ಮಾತನಾಡುತ್ತಾ ಹೋದರೆ ನಮಗೆ ಕೆಲವರು ಓಟು ಕೊಡುತ್ತಾರೆ? ಕೆಲವರು ಓಟು ಕೊಡುವುದಿಲ್ಲ, ಇವೆಲ್ಲಾ ಸ್ವಲ್ಪ ತಾಪತ್ರಯಕ್ಕೆ ಸಿಕ್ಕಿಹಾಕಿಕೊಳ್ಳುತ್ತೇವೆ. ನಾವೇನು ಮಾತನಾಡುವುದಕ್ಕೆ ಹೋದರೂ ಅಪರಾಧಕ್ಕೆ ಸಿಕ್ಕಿಹಾಕಿಕೊಳ್ಳುತ್ತೇವೆ. ಅನೇಕ ಸಾರಿ ನಮ್ಮನ್ನು ಕರೆದಾಗ ಇವೆಲ್ಲಾ ಮಾತನಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತೇವೆ ನೀವು ಹೇಳಿದ್ದಕ್ಕೆಲ್ಲಾ ನಮಸ್ಕಾರ, ನಮಸ್ಕಾರ ಅಂತ ಹೇಳುವುದು, ಕಂಡ ಗುಡಿಗೆಳಿಗೆಲ್ಲಾ ಕರೆದು ನಮಸ್ಕಾರ ಅಂದರೆ ನಮಸ್ಕಾರ ಮಾಡುವುದು ನಾವು ನೀವು ಹೇಳುವುದು ಸರಿಯಲ್ಲ ನಮಸ್ಕಾರ ಅಂದರೆ, ಮಾಡದೇ ಹೋದರೆ ನೀವೆಲ್ಲಾ ವಿಚಾರವಂತರು ಅಂದರೆ ಏನು? ಇವೆಲ್ಲ ಒಂದಕ್ಕೊಂದು ಕೊಂಡಿ ಇದ್ದ ಹಾಗೆ ಆ ರೀತಿ ವಿಶ್ಲೇಷಣೆ ಮಾಡುತ್ತಾ ಹೋದರೆ, ಮತದಾರರ ಇವತ್ತಿನ ವ್ಯವಸ್ಥೆಯಲ್ಲಿ ಉಳಿದುಕೊಳ್ಳುವುದಕ್ಕಾಗುವುದಿಲ್ಲ. ಆದಕ್ಕಾಗಿ ಯಾರೇ ರಸ್ತೆಯಲ್ಲಿ ಗುಡಿ ಕಟ್ಟಿ ನಮಸ್ಕಾರ ಮಾಡಿ ಅಂದ್ರೆ ಮಾಡಲೇಬೇಕು ಚುನಾವಣೆ ಸಂದರ್ಭದಲ್ಲಿ ನೀವು ನಮಸ್ಕಾರ ಮಾಡಲ್ಲ ಅಂದ್ರೆ ನಿಮಗೆ ಓಟು ಕೊಡುತ್ತಾರಾ ನಾವೆಲ್ಲಾ ಪ್ರಾಮಾಣಿಕವಾಗಿ ಮಾತನಾಡೋಣ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಸದಸ್ಯರು ಮಾಡನಾಡುತ್ತಾ ಬಸವೇಶ್ವರರೇ ಉಳಿಯಲಿಲ್ಲ ಎನ್ನುವ ಮಾತನ್ನು ಬಹಳ ಸುಲಭವಾಗಿ ಹೇಳಿಬಿಟ್ಟರು. ಆದರೆ ಅವರು ಹೇಳಿರತಕ್ಕಂಥ ಮಾತು ಉಳಿದಿದೆ ಅಂತ ಒಪ್ಪಿಕೊಳ್ಳುತ್ತೀರಾ? ಅವರು "ದಯೆಯೇ ಧರ್ಮದ ಮೂಲವಯ್ಯ" ಅಂತ ಹೇಳಿದರು ಅದು ಇನ್ನು 10 ಸಾವಿರ ವರ್ಷಗಳಾದರೂ ಯಾರೂ ಮರೆಯುವುದಕ್ಕೆ ಸಾಧ್ಯವಿಲ್ಲ. ಶಾಸ್ತ್ರಿಯವಾಗಿ ಸ್ಪಷ್ಟವಾಗಿ ಬಸವೇಶ್ವರರು ಹೇಳಿದರು. ದೇವರು ಇದ್ದರೆ ಹೃದಯದಲ್ಲಿ ಇರುತ್ತಾನೆ. ಅದಕ್ಕೆ ನೀವು ಪ್ರತ್ಯೇಕವಾಗಿ ಏನಾದರೂ ಮಾಡಿಕೊಳ್ಳಿ ಹೃದಯದಲ್ಲಿ ದೇವರು ಇರುತ್ತಾನೆ ಅಂತ ಹೇಳಿದರು. ಇದು ಮೂಲಬೂತವಾದ ಮಾತು. ಬರೀ ಬಸವೇಶ್ವರರು ಹೇಳಿದ್ದು ಅಲ್ಲ, ನಮ್ಮ ಸಂಸ್ಕೃತಿಯ ಮೂಲಭೂತವಾದ ವಿಶ್ವಾಸ. ಒಪ್ಪುತ್ತೀರಾ? ಆ ಆಧಾರದ ಮೇಲೆ ಜಾತ್ಯತೀತ ಎಂದು ಮಾಡಿದರು. ಅದರ ಅರ್ಥ ಏನು?

ಇದನ್ನು ನಾವು ಸಿದ್ಧಾಂತ ಅಂತ ಒಪ್ಪಿಕೊಳ್ಳುವುದಾದರೆ, ಬರೀ ಸಿದ್ಧಾಂತ ಅಲ್ಲ, ಅನುಭವದ ಮಾತು ಅಂತ ಒಪ್ಪಿಕೊಳ್ಳುವುದಾದರೆ ಎಲ್ಲರಿಗೂ ಸರಿಸಮಾನವಾಗಿ ನೋಡಿಕೊಳ್ಳತಕ್ಕಂಥ ಒಂದು ಜವಾಬ್ದಾರಿ ನಮ್ಮ ಎಲ್ಲರ ಮೇಲಿದೆ. ಅದನ್ನು ಒಪ್ಪಿಕೊಳ್ಳುತ್ತೀರಾ? ಅಂದ ಮೇಲೆ ಜಾತ್ಯತೀತ ಅದಕ್ಕೆ ಅರ್ಥ ಇಲ್ಲವೆಂದು ಹೇಳುವುದು ಬಹಳ ಕಷ್ಟ. ನಾವು ಏನಾದರೂ ಪ್ರಜಾಪ್ರಭುತ್ವದಲ್ಲಿ ನ್ಯಾಯವಾಗಿ ಇರುವುದಾದರೆ ಎಲ್ಲಾ ಜಾತಿ ಮತದಲ್ಲಿರತಕ್ಕಂಥ ಜನರು ಏನಿದ್ದಾರೆ ಅವರಿಗೆ ಸರಿ ಸಮಾನವಾದಂಥ ನ್ಯಾಯವಾದಂಥ ಪ್ರಾತಿನಿಧ್ಯ ಎಲ್ಲಾ ಕೆಲಸದಲ್ಲಿ ಸಿಗಬೇಕೆಂದು ನೀವು ಒಪ್ಪುತ್ತೀರಿ? ಆ ಕಾರಣದಿಂದ ಜಾತ್ಯಾತೀತ ಸಿದ್ಧಾಂತದಲ್ಲಿ ಅಥವಾ ಅನುಭವದಲ್ಲಿ ಅಥವಾ ಸಂವಿಧಾನದಲ್ಲಿ, ಮತ್ತೆ ಪ್ರಾಕ್ಟಿಕಲ್ ಪಾಲಿಟಿಕ್ಸ್‌ನಲ್ಲಿ

ಅರ್ಥ ಇಲ್ಲವೆಂದು ಹೇಳುವುದು, ಇದನ್ನು ನಾನು ಖಂಡಿಸಬೇಕಾಗುತ್ತದೆ. ಇದು ನನ್ನ ಅಭಿಪ್ರಾಯ, ಇದನ್ನು ಈ ಸಂದರ್ಭದಲ್ಲಿ ಹೇಳಲೇಬೇಕಾಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿದರು, 'ದಯೆ ಇಲ್ಲದ ಧರ್ಮ ಯಾವುದಯ್ಯ' ಇದು ಬಸವಣ್ಣನವರು ಹೇಳಿದರು. ಅದು ಅಜರಾಮರವಾಗಿ ಉಳಿಯುತ್ತದೆಂದು ಹೇಳಿದರು. ಎಲ್ಲರೂ ಸಮಾನತೆಯನ್ನು ಒಪ್ಪುತ್ತಾರೆ. ಮಾನ್ಯ ನಾಗರಾಜ್‌ರವರು ಹೇಳಿದ್ದು ಇದು ಬರಿ ಬಾಷಣದಲ್ಲಿ ಹೇಳುತ್ತಿದ್ದಾರೆ. ಆದರೆ ಮನಸ್ಸಿನ ಪರಿವರ್ತನೆ ಆ ರೀತಿ ಆಗಿಲ್ಲ, ಸಾಮಾನ್ಯ ಮನುಷ್ಯನಾಗಿರಬಹುದು, ಆಡಳಿತ ನಡೆಸತಕ್ಕಂಥವರು ಇರಬಹುದು, ರಾಜಕಾರಣಿ ಇರಬಹುದು, ಆ ಒಂದು ಮಾನಸಿಕ ಪರಿವರ್ತನೆ ಸಮಾನತೆಯ ಸೃಷ್ಟಿಯಲ್ಲಿ ನಡೆದಿಲ್ಲ. ಈ ದೇಶದಲ್ಲಿ ಆಡಳಿತ ನಡೆಸಿಕೊಂಡು ಬಂದವರು ಸಹಿತಾ ಅದನ್ನು ಮರೆತು ಮಾನವನ ಸಮಾನತೆಗೆ ಇರತಕ್ಕಂಥ ವಾಸ್ತವೀಕತೆಯನ್ನು ಮರೆತು ಅದನ್ನು ಆಚರಣೆಯಲ್ಲಿ ತರದೆ, ಪಮಾನತೆಯಿಂದ ನಡೆಸಿಕೊಂಡು ಬರದೇ ಇದ್ದುದಕ್ಕೆ ಈ ಪರಿಸ್ಥಿತಿ ಬಂದಿದೆ ಎಂದು ಹೇಳುತ್ತಿದ್ದಾರೆ. ಆಡಳಿತ ನಡೆಸುವವರು ಈ ದೇಶದ ನಾಗರೀಕರನ್ನು ಸಮಾನವಾಗಿ, ಏಕರೂಪವಾಗಿ ನಡೆಸಿಕೊಂಡು ಬಂದಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ; ಈ ಪ್ರತಿಕ್ರಿಯೇ ಬರುತ್ತಿರಲಿಲ್ಲವೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಂ.ವೈ. ಘೋರ್ಪಡೆ : ಒಂದೇ ಒಂದು ಮಾತನ್ನು ಹೇಳುತ್ತೇನೆ, ಅದೇ ಮಾತನ್ನು ಸಕರಾತ್ಮಕವಾಗಿ ನಕರಾತ್ಮಕವಾಗಿ ನೆಗೆಟೀವ್ ಆಗಿ ಹೇಳುವುದು ಬೇಡ. ನೂರಾರು ವರ್ಷಗಳಿಂದ ಎಲ್ಲ ಮತ ಜಾತಿಗಳ ಜನ ಪೀಸ್‌ಫುಲ್ ಹಾರ್ಮೋನಿಯಿಂದ ಬಾಳಿದ್ದಾರೆ. ಅದರ ಮೇಲೆ ಎಂಪೆಸಿಸ್ ಕೊಟ್ಟು ಹೇಳಿದರೆ, ಒಂದು ಒಳ್ಳೆಯ ವಾತಾವರಣ ಬರುವುದಕ್ಕೆ ಸಾಧ್ಯ .

ಶ್ರೀ ವಾಟಾಳ್ ನಾಗರಾಜ್ : ತಾವು ಬರುವುದಕ್ಕೆ ಸ್ವಲ್ಪ ತಡ ಮಾಡಿದಿರಿ, ಒಂದು ಅಧ್ಯಕ್ಷರೆ, 'ದಯೇ ಇಲ್ಲದ ಧರ್ಮ ಯಾವುದಯ್ಯಾ' ನಿಜ ಅದನ್ನೇ ಬಸವಣ್ಣನವರು ಹೇಳಿದ್ದುದು. ನಾನು ಹೇಳಿದ್ದೂ ಅವರ ಚಿಂತನೆ ಅವರು ಬರೆದಂಥ ವಿಚಾರಗಳ ಬಗ್ಗೆ ನನ್ನ ತಕರಾರೇನಿಲ್ಲ, ಎಂಟುನೂರು ವರ್ಷಗಳ ಹಿಂದೆ ಏನಾಯಿತೋ ಅದು ಆಚರಣೆಯಲ್ಲಿಲ್ಲ, ಅದು ಪುಸ್ತಕದಲ್ಲಿತ್ತು ಆ ಪುಸ್ತಕಗಳನ್ನು ದೇವರ ಮುಂದೆ ಇಟ್ಟು ಗಂಧದ ಕಡ್ಡಿಯನ್ನು ಹಚ್ಚುತ್ತಿದ್ದೇವೆ. ಆದರೆ ಆಚರಣೆಯಲ್ಲಿಲ್ಲ, ಎಲ್ಲರೂ ಹೃದಯ ಬಿಚ್ಚಿ ಜಾತಿಯನ್ನು ಬಿಟ್ಟಿದ್ದೇವೆಂದು ಹೇಳ್ರಿ ಸ್ವಾಮಿ?

ಶ್ರೀ ಎಂ.ವೈ. ಘೋರ್ಪಡೆ : ಹೇಳಿದರೆ ನಾನು ಸ್ವಲ್ಪ ಮುಟ್ಟಿಗೆ ಹೇಳಬಹುದು.

ಶ್ರೀ ವಾಟಾಳ್ ನಾಗರಾಜ್ : ನೀವು ಬರುವುದಕ್ಕೆ ಮುಂಚಿತವಾಗಿ ರಾಷ್ಟ್ರ ಕವಿ ಕುವೆಂಪು ಹೇಳಿದ್ದನ್ನು ಹೇಳಿದೆ. 'ಬಾರತ ಜನನಿಯ ತನುಜಾತೆ ಜಯಹೆ ಕರ್ನಾಟಕ ಮಾತೆ, ಸರ್ವ ಜನಾಂಗದ ಶಾಂತಿಯ ತೋಟ, ರಸಿಕರ ಕಂಗಳ ಸೆಳೆವ ನೋಟ, ಹಿಂದು-ಕ್ರೈಸ್ತ, ಮುಸಲ್ಮಾನ ಪಾರಸೀಕ-ಜೈನರ ಉದ್ಯಾನ' ಇದನ್ನು ನಾನು ಸುಂದರವಾಗಿ ಮೊದಲೇ ಹೇಳಿದ್ದೇನೆ. ಇದನ್ನು ರಾಷ್ಟ್ರಕವಿ ಕುವೆಂಪುರವರು ಬರೆದಿದ್ದಾರೆ. ಇವರು ರಾಮಾಯಣ ದರ್ಶನವನ್ನೂ ಬರೆದಿದ್ದಾರೆ. ದೇಶಕ್ಕೆ, ಸಮಾಜಕ್ಕೆ, ನಾಡಿಗೆ ಬಹಳ ಒಳ್ಳೆಯ ವಾಣಿಯಿಂದ ಅವರ ಕವಿತ್ವದಿಂದ

ಅನೇಕ ವಿಚಾರಗಳನ್ನು ಬರೆದಿದ್ದಾರೆ. ಅವರು ಈ ನಾಡಿನ ಒಬ್ಬ ಹಿಮಾಲಯ ಪರ್ವತದಂಥ ಕವಿ, ರಾಮಾಯಣ ದರ್ಶನವನ್ನು ಬರೆದು ಬಹಳ ಮಹೋನ್ನತವಾದಂಥ ದೊಡ್ಡ ವ್ಯಕ್ತಿತ್ವವನ್ನು ಪಡೆದಿದ್ದಾರೆ. ಬೆಂಗಳೂರಿನಲ್ಲಿ ರಾಮಾಯಣ ದರ್ಶನವನ್ನು ಆನೆ ಮೇಲಿಟ್ಟು 25 ವರ್ಷಗಳ ಹಿಂದೆ ಮೈಸೂರು ಬ್ಯಾಂಕ್ ಸರ್ಕಲ್‌ನಲ್ಲಿ ಈ ಮಹಾ ಕವಿಯ ಕೃತಿಯನ್ನು ಮೆರವಣಿಗೆ ಮಾಡಿದ್ದೇನೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ನಮ್ಮಲ್ಲಿ ಅನೇಕ ಜನ ಕವಿಗಳಿದ್ದಾರೆ. ಶಿಶುನಾಳ ಷರೀಪರು, ಅವರನ್ನು ಏನು ಹೇಳುತ್ತೀರಿ? ಮುಸ್ಲಿಮ್ ಕವಿ ಎಂದು ಹೇಳಿತ್ತಾರಾ? ಕಬೀರ್, ಸಂತ ತುಕಾರಾಮ್ ಇವರಿಗೆ ಏನು ಹೇಳುತ್ತೀರಿ? ಇವರೆಲ್ಲರೂ ನಾಡಿಗೆ ದೇಶಕ್ಕೆ ಹೇಳಿರುವುದು ಆಚರಣೆಯಲ್ಲಿ ಇದೆಯೇ ಎಂದು ನಾನು ನೇರವಾಗಿ ನಿಮನ್ನು ಕೇಳುತ್ತಿದ್ದೇನೆ

ಶ್ರೀ ಎಂ.ವೈ. ಘೋರ್ಪಡೆ : ಮನಸ್ಸಿನಂತೆ ಮಹದೇವ.

ಶ್ರೀ ವಾಟಾಳ್ ನಾಗರಾಜ್ : ಮನಸ್ಸೇ ಇಲ್ಲ, ಇನ್ನು ಮಹದೇವ ಎಲ್ಲಿ ಬರುತ್ತಾನೆ? ಇಷ್ಟೊಂದು ಜಾತಿಯ ಗೊಂದಲದಲ್ಲಿ ನಾವು ಸಿಕ್ಕಿ ಬಿದ್ದಿದ್ದೇವೆ. ನಾವು ವೇದಿಕೆಯಲ್ಲಿ ಹೋಗಿ ಏನೇನೋ ಹೇಳುತ್ತೇವೆ. ಅರ್ಥವಿಲ್ಲದಂಥ ವಿಚಾರಗಳನ್ನು ಹೇಳುತ್ತೇವೆ, ಅದು ಸರಿಯಾದಂಥ ನಿರ್ಧಾರಗಳಲ್ಲ. ಅಯೋಧ್ಯೆ ಹಿನ್ನೆಲೆಯಲ್ಲಿ ಪಾರ್ಲಿಮೆಂಟ್‌ನಲ್ಲಿ ಈ ದೇಶದ ಮಹೋನ್ನತ ನಾಯಕರಾದ ಶ್ರೀಮಾನ್ ವಾಜಪೇಯಿಯವರು 6ನೇ ತಾರೀಖು ನಡೆದಂಥ ಘಟನೆಗಳ ಬಗ್ಗೆ ಒಂದು ಬಾಷಣ ಮಾಡಿದರು. ಅವರ ಮಾತುಗಳು ಈ ಸಂಬಂಧವಾಗಿ ಮಾತ್ರವಲ್ಲ, ಎಲ್ಲಾ ವಿಚಾರಗಳಲ್ಲಿ ಅವರು ಮಾತನಾಡುವಾಗ ಈ ದೇಶದ ಒಂದು ವಿಚಾರವನ್ನು ಗಮನದಲ್ಲಿ ಇಟ್ಟುಕೊಂಡು ಈ ದೇಶದ ಜನತೆಯನ್ನು ಸ್ಪಂಧಿಸುತ್ತಾರೆ. ಈ ದೇಶದ ಜನತೆಯೂ ಕೂಡ ಅವರ ವ್ಯಕ್ತಿತ್ವದ ಬಗ್ಗೆ ಅಪಾರವಾದ್ದಂಥ ಗೌರವವನ್ನು ಇಟ್ಟು ಕೊಂಡಿದ್ದಾರೆ. ಅವರು ಏನು ಮಾತನಾಡಿದರು? ನಾವು ಕರಸೇವೆಯನ್ನು ಮಾಡುತ್ತೇವೆ ಹೇಳಿದುದು ನಿಜ. ಆದರೆ ಆದ ಘಟನೇಗೆ ಎಲ್ಲದಕ್ಕೂ ಕಾರಣಕರ್ತರು ಯಾರು? ನೀವು ಆಗುವ ಅನಾಹುತವನ್ನು ತಡೆ ಹಿಡಿಯ ಬಹುದಾಗಿತ್ತಲ್ಲ? ಅಂಥ ಒಂದು ಶಕ್ತಿಯು ದೇಶದಲ್ಲಿ ಇದೆಯಲ್ಲ? ಹಾಗಾದರೆ ನಾಳೆ ನಾವು ವಿಧಾನಸೌಧಕ್ಕೆ ನುಗ್ಗುತ್ತೇವೆ ಎಂದು ಹೇಳಿದರೆ ನಮ್ಮ ಸರಕಾರವು ಸುಮ್ಮನೆ ಇರುತ್ತದೆಯೇ? ಕೂಡಲೇ ಪೋಲೀಸರನ್ನು ತಂದು ನಿಲ್ಲಿಸಿ; ಹಾಗೆ ಬಂದ ನಮ್ಮನ್ನು ತತ್ಕ್ಷಣವೇ ಹಿಡಿದು ತೆಗೆದುಕೊಂಡು ಹೋಗಿ ಕಬ್ಬನ್‌ಪಾರ್ಕ್ ಪೋಲೀಸ್ ಸ್ಟೇಷನ್‌ನಲ್ಲಿ ಹಾಕುತ್ತದೆ. ಆದ್ದರಿಂದ ಈ ಒಂದು ದುರ್ಘಟನೆಗೆ ದೇಶದ ಪ್ರಧಾನಿಯವರೇ ನೇರವಾಗಿ ಹೊಣೆ ಎಂದು ವಾಜಪೇಯಿಯವರು ಹೇಳಿದರು. ಅದನ್ನು ಬಿಟ್ಟು ಬೇರೆ ಮಾತಿಲ್ಲ. ಅದನ್ನು ಅವರು ಕದ್ದು ಮುಚ್ಚಿ ಹೇಳಲಿಲ್ಲ. ಬಹಿರಂಗವಾಗಿಯೇ ಹೇಳಿದ್ದಾರೆ. ಅದೇ ಸಮಯದಲ್ಲಿ ಅವರು ದೇಶಕ್ಕೂ ಕೂಡ ವಿಷಾದವನ್ನು ವ್ಯಕ್ತಪಡಿಸಿದರು. ದೇಶದ ಜನರಿಂದ ಕ್ಷಮೆಯನ್ನು ಕೇಳಿದ್ದರು. ಈ ದೇಶದಲ್ಲಿ ಆಗಬಾರದ್ದು ಆಗಿ ಹೋಗಿದೆ, ನಾವು ಈಗ ದೇಶದ ಕ್ಷಮೆಯನ್ನು ಕೇಳುತ್ತೇವೆ ಎಂಬ ಬಹಳ ಎತ್ತರದ ಮಾತುಗಳನ್ನು ಆಡಿದರು.

ಆದರೆ ನೀವುಗಳು ಒಂದರಿಂದ ಒಂದು ಏನು ಮಾಡಿಕೊಂಡು ಬಂದಿದ್ದೀರಿ, ಈ ಪ್ರಕರಣಗಳಿಗೆ ಈ ದೇಶದಲ್ಲಿ ಇಷ್ಟೊಂದು ಗೊಂದಲ ವಾತಾವರಣವನ್ನು ನಿರ್ಮಾಣವಾಗುವುದಕ್ಕಿಂತ ಹೆಚ್ಚಾಗಿ ನಾವು ಬಿಜೆಪಿಯವರಿಗೆ ಬೈಯುವುದು, ನೀವು

ಬಾಬರಿ ಮಸೀದಿಯನ್ನು ಒಡೆದುದು ಸರಿಯಲ್ಲ ಎಂದು ಹೇಳುವುದು, ಇದೆಲ್ಲಾ ಆಗುವ ಹೊತ್ತಿಗೆ ನೀವುಗಳು ಎಲ್ಲಿಗೆ ಹೋಗಿದ್ದೀರಿ? ನಿಮ್ಮ ಗುಪ್ತದಳ ಎಲ್ಲಿಗೆ ಹೋಗಿತ್ತು? ಅದು ಸತ್ತು ಹೋಗಿತ್ತೇ? ನಮ್ಮದ್ದು ದೊಡ್ಡ ದೇಶ, ಮಹೋನ್ನತವಾದಂಥ ದೇಶ. ಇಲ್ಲಿ ಕೇಂದ್ರ ಸರಕಾರ ಇದೆ. ಅದಕ್ಕೆ ಜವಾಬ್ದಾರಿಯೂ ಇದೆ. ನಮ್ಮ ದೇಶದ ಗೃಹಮಂತ್ರಿಗಳಿಗೆ ಗೊತ್ತಿಲ್ಲ? ನಮ್ಮ ದೇಶದ ಪ್ರಧಾನಿಗಳಿಗೆ ಗೊತ್ತಿಲ್ಲ? ಹಾಗಾದರೆ ಇದರ ಅರ್ಥ ಏನು? ಅವರೆಲ್ಲ ಜಪ ಮಾಡುತ್ತಿದ್ದರೆ? ಇವೊತ್ತು ಯಾರ ಮೇಲೆ ಗೂಬೆ ಕೂಡಿಸಿ ನೀವುಗಳು ಉಳಿದು ಕೊಳ್ಳುವುದಕ್ಕೋಸ್ಕರವಾಗಿ ಒಂದಾದ ಮೇಲೆ ಒಂದರಂತೆ ಸರಕಾರಗಳನ್ನು ಉರುಳಿಸಿದ್ದೀರಿ. ಆ ಸರಕಾರಗಳನ್ನು ವಜಾ ಮಾಡಿದ್ದೀರಿ. ಹಲವಾರು ಸಂಘ ಸಂಸ್ಥೆಗಳನ್ನು ವಜಾ ಮಾಡಿದ್ದೀರಿ. ಏನೇ ಆದರೂ ಕೂಡ ನಿಮ್ಮ ಹೃದಯ ಹೇಳುತ್ತಾ ಇದೆ, ಆ ಹೃದಯ ಇದೆಯಲ್ಲ ಅದನ್ನು ನೀವುಗಳು ನೋಡಬೇಕು.ಏನಾಗಿದೆ ಒಳಗಡೆ ನೋಡಿಕೊಳ್ಳ ಬೇಕು. ನಿಮ್ಮ ಹೃದಯವನ್ನು ನೀವುಗಳು ಧೈರ್ಯವಾಗಿ ಕೇಳಿದರೆ ನೀವು ಮಾಡಿರತಕ್ಕಂಥ ರೀತಿ ಸರಿಯೇ? ಉತ್ತರ ಪ್ರದೇಶದ ಸರಕಾರದವರು ನಿವು ವಜಾ ಮಾಡುವುದಕ್ಕಿಂತ ಆರುಗಂಟೆಗೆ ಮುಂಚೆಯೇ ರಾಜೀನಾಮೆ ಕೊಟ್ಟಿದ್ದರು. ಆದರೆ ನೀವು ಏಳುವರೆ ಗಂಟೆಗೆ ಸರಕಾರವನ್ನು ವಜಾ ಮಾಡಿದ್ದೇವೆ ಎಂದು ಹೇಳಿದ ನೋಟಿಫಿಕೇಶನ್ ಹೊರಡಿಸುತ್ತೀರಿ. ಅವರು ಅಂದೇ ರಾಜೀನಾಮೆ ಕೊಟ್ಟಿದ್ದೇವೆ ಎಂದು ಹೇಳಿದ ಮೇಲೆ ಮರುದಿವಸ ನೀವು ಉತ್ತರ ಪ್ರದೇಶ ಸರಕಾರವನ್ನು ವಜಾ ಮಾಡಿದ್ದೇವೆ ಎಂದು ಹೇಳುತ್ತೀರಿ. ನಿಮಗಿಂತ ಉತ್ತರ ಪ್ರದೇಶ ಸರಕಾರದವರೇ ಉಳಿದುಕೊಳ್ಳುವುದಕ್ಕೆ ತಯಾರಾಗಿಲ್ಲ, ಅಲ್ಲಿ ನಡೆದಿರತಕ್ಕಂಥ ಇಡೀ ವ್ಯವಸ್ಥೆಗೆ ನಾನು ಜವಾಬ್ದಾರಿ ಎಂದು ಹೇಳಿ ಮುಖ್ಯಮಂತ್ರಿಗಳಾದ ಶ್ರೀ ಕಲ್ಯಾಣ್ ಸಿಂಗ್‌ರವರು ರಾಜೀನಾಮೆ ಕೊಟ್ಟರು. ಆದರೆ ಅವರ ರಾಜಿನಾಮೆಯ ಪ್ರಕಟಣೆಯನ್ನು ನೀವು ಯಾವಾಗ ಮಾಡುತ್ತೀರಿ? ಕೇಂದ್ರ ಸರಕಾರದವರು ಚಳಿಯಲ್ಲಿ ಕುಳಿತುಕೊಂಡು ಅನಂತರ ನೋಟಿಪಿಕೇಷನ್ ಹೊರಡಿಸುತ್ತೀರಿ. ಇದು ಸರಿಯಾದ ಕ್ರಮ ಅಲ್ಲ. ದೇಶದಲ್ಲಿನ ಈ ಮೂರು ರಾಜ್ಯ ಸರಕಾರಗಳನ್ನು ಏನು ನೀವು ವಜಾ ಮಾಡಿದ್ದೀರಿ? ಹಾಗೆ ಮಾಡಲು ನಿಮಗೆ ಯಾವ ನೈತಿಕ ಹಕ್ಕು ಇದೆ? ಸರ್ಕಾರಿಯೂ ಕಮಿಶನ್‌ನಲ್ಲಿ ಏನು ಹೇಳಿದ್ದಾರೆ? ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಇರತಕ್ಕಂಥ ಸಂಬಂಧ ಏನು ಇದೆ, ರಾಜ್ಯಗಳ ವ್ಯವಸ್ಥೆ ರಾಜ್ಯಗಳ ಅಧಿಕಾರ, ಎಷ್ಟು ಎಂಬುದನ್ನು ಅದರಲ್ಲಿ ಅವರು ಪರಿಣಾಮಕಾರಿಯಾಗಿ ಹೇಳಿದ್ದಾರೆ. ಆದರೆ ನೀವು ಸರ್ಕಾರಿಯಾ ಕಮಿಶನ್‌ನ್ನು ಗಾಳಿಗೆ ತೂರಿ ಬಿಟ್ಟಿದ್ದೀರಿ. ಅದನ್ನು ಬೀದಿಗೆ ಬಿಸಾಡಿದ್ದೀರಿ. ಅದರ ಬಗ್ಗೆ ನಿಮಗೆ ಚಿಂತನೆ ಇತ್ತೋ ಇಲ್ಲವೇ ಇಲ್ಲ. ತಮಿಳುನಾಡಿನ ಹಿರಿಯ ಮುಖಂಡ ಕರುಣಾನಿಧಿಯವರು ಇದೇ ಮಾತನ್ನು ಹೇಳಿದ್ದಾರೆ, ಆಂಧ್ರಪ್ರದೇಶದ ಏನ್.ಟಿ. ರಾಮರಾವ್‌ರವರು ಹೇಳಿದ್ದಾರೆ. ಇನ್ನೂ ಅನೇಕ ದೊಡ್ಡ ದೊಡ್ಡ ಜನರು ಈ ಬಗ್ಗೆ ಹೇಳಿದ್ದಾರೆ.

ಸಂವಿಧಾನದ 356ಅನ್ನು ನೀವು ಎಷ್ಟರಮಟ್ಟಿಗೆ ದುರುಪಯೋಗಪಡಿಸಿಕೊಂಡಿದ್ದೀರಿ, ಎಷ್ಟು ಅವ್ಯವಸ್ಥೆಗೆ ಹೊರಟಿದ್ದೀರಿ, ಇದು ಸರಿಯಲ್ಲ, ಹೀಗೆಂದಾಕ್ಷಣಕ್ಕೆ ನಾವೆಲ್ಲ ಬಿಜೆಪಿ ಪರ ಅಂತಲ್ಲ, ಅದಲ್ಲ, ಒಂದು ಪ್ರಜಾಪ್ರಭುತ್ವವನ್ನು ನೇರವಾಗಿ ಕೊಂದುಹಾಕಿದಿರಿ, ಯಾವ ಪ್ರಜಾಪ್ರಭುತ್ವ ಈ ದೇಶದಲ್ಲಿ ಬೆಳಗಿತು ಪ್ರಧಾನಮಂತ್ರಿ ನರಸಿಂಹರಾಯರು ಪ್ರಜಾಪ್ರಭುತ್ವವನ್ನು ಕೊಲೆ ಮಾಡಿದ್ದಾರೆ. ಇದರ ಬಗ್ಗೆ

ಎರಡನೆಯ ಅಬಿಪ್ರಾಯ ಇಲ್ಲವೇ ಇಲ್ಲ, ಇದರಲ್ಲಿ ನಾನು ಹೇಳುತ್ತಿದ್ದೇನೆ, ಸರ್ಕಾರ ವಜಾ ಮಾಡುವುದಾಗಲಿ, ಏನು ತಮಗೆ ಇದ್ದಕ್ಕಿದ್ದ ಹಾಗೆ ಆರ್‌ಎಸ್‌ಎಸ್‌ನ ಭಜರಂಗದಳಗಳನ್ನು ಬಲಿ ತಗೊಂಡ್ರಲ್ಲ, ಏನು, ನನಗೆ ಅರ್ಥವಾಗಲಿಲ್ಲ, ಒಂದು ಕಡೆ ಹೋಗಿ ಅಫೀಸ್ ಮುಚ್ಚುತ್ತೀರಿ, ಮತ್ತೊಂದು ಕಡೆ ಹೋಗಿ ಅವರನ್ನು ಬಿಡುಗಡೆ ಮಾಡುತ್ತೀರಿ ಅದೇನು ನೀತಿ ನಿಮ್ಮದು ಅದೇನು ವ್ಯವಸ್ಥೆ, ನಿಮಗೇನು ಅರ್ಥವೇ ಆಗಲ್ಲವೋ ಈ ದೇಶದ ವ್ಯವಸ್ಥೆ, ಮತ್ತೆ ಏನು ಸ್ವಾಮಿ ದೇವರ ದರ್ಶನಕ್ಕೆ ಅಲ್ಲಿನ ಸ್ಥಳೀಯ ಆಡಳಿತ ಬಿಟ್ಟುಬಿಡ್ತಿಲ್ಲ ಅಂತಂದರೆ ಅವರೇನೋ ಬಿಟ್ಟುಬಿಟ್ಟಿದ್ದಾರೆ, ನನಗೊತ್ತಿಲ್ಲ ಅಂದರೆ ಇದೇನು ಮೈಸೂರು ಮುನಿಸಿಪಾಲಿಟಿ ಕೆಟ್ಟುಹೋಯಿತೇ? ಒಂದು ದೇಶದ ಪ್ರಧಾನಮಂತ್ರಿಗಳು ಹುಡುಗಾಟಿಕೆಯಿಂದ ಈ ರೀತಿ ಮಾತಾಡುತ್ತಾರೆಂದರೆ ನಮಗೆ ಬಯಬರುತ್ತದೆ, ಈ ದೇಶದ ಗತಿಯೇನು? ನಾವು ನಿಜವಾಗಿಯೂ ಇಂದಿರಾಗಾಂಧಿಯವರನ್ನು ರಾಜೀವಗಾಂಧಿಯವರನ್ನು ಇವತ್ತು ನೆನೆಯುತ್ತೇವೆ. ಅವರ ಸ್ಥೈರ್ಯಕ್ಕೆ ಧೈರ್ಯಕ್ಕೆ ಮೆಚ್ಚುತ್ತೇನೆ ಇವತ್ತು. ಈ ದೇಶದ ದುರ್ದೈವ, ಅದರ ಬಗ್ಗೆ ಎರಡು ಅಭಿಪ್ರಾಯವೇ ಇಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸ್ವಾಮಿ ಇವರು ಹೇಳೋದು, ಅವರು ಇದ್ದಾಗ ಮಾತ್ರ ಅವರ ಬಗ್ಗೆ ಒಳ್ಳೆಯ ಅಬಿಪ್ರಾಯ ಇರುವುದಿಲ್ಲ, ಅವರು ಹೋದಮೇಲೆ

ಶ್ರೀ ವಾಟಾಳ್ ನಾಗರಾಜ್ : ರಾಜೀವ್ ಗಾಂಧಿಯವರ ಧೈರ್ಯವನ್ನು ಮೆಚ್ಚಿದ್ದೇನೆ ಎಂದು ಹೇಳಿದೆನೇ ಹೊರತು ವೀರೇಂದ್ರಪಾಟೀಲರನ್ನು ತೆಗೆದದ್ದು ಮೆಚ್ಚಲಿಲ್ಲ, ನಿಜ, ಅದೇನು ಮಾಡುವುದಕ್ಕಾಗುತ್ತದೆ? ರಾತ್ರೋರಾತ್ರಿ ವೀರೇಂದ್ರಪಾಟೀಲರನ್ನು ಬಿಟ್ಟು ಎಲ್ಲಿ ಓಡಿಹೋಗಿ ಬಿಟ್ಟರು. ನಾನೊಬ್ಬನೇ ಪಾಪ, ವಿರೋಧಪಕ್ಷದವನಾದರೂ ಅವರ ಪರಿಸ್ಥಿತಿ ನೋಡಿ, ನಾನೂ ಪಾಪ ನಂಜನಗೂಡಿನ ಮಹಾದೇವ್, ಪಾಪ ಅಲ್ಲಿ ನೋಡಿ ತಲೆಮೇಲೆ ಕೈಹೊತ್ಕೊಂಡು ಕುಳಿತಿದ್ದಾರೆ ಇಬ್ಬರೇ ಇದ್ದುದು. ಕೇಳಿ, ಇದನೆಲ್ಲಾ ಸ್ಪಷ್ಟವಾಗಿ ಇವತ್ತು ತೀರ್ಮಾನಮಾಡಿ ಬಿಡೋಣ.

ಇದೊಂದೇ ಅಲ್ಲ ಅಧ್ಯಕ್ಷರೇ, ಮೊನ್ನೆ ಪ್ರಧಾನಮಂತ್ರಿಗಳು ನಮ್ಮ ಕರ್ನಾಟಕಕ್ಕೆ ಬಂದರು, ಕೋಮುಗಲಭೆಯಲ್ಲಿ ಸತ್ತಿರುವ ಎಷ್ಟು ಪ್ರದೇಶಕ್ಕೆ ಹೋಗಿದರು ಅಧ್ಯಕ್ಷರೇ. ಎಲ್ಲೂ ಹೋಗಲಿಲ್ಲವಲ್ಲ, ಎಲ್ಲಾದರೂ ಕರೆದುಕೊಂಡು ಹೋಗಿದ್ದಿರಾ? ನೀವು, ನೋಡಿಬನ್ನಿ ಸುಟ್ಟಿರೋದು ಅಂತ, ಇಲ್ಲ, ಹೋಗಲಿಲ್ಲ. ಅದು ಬ್ಯಾಡಿ, ಸಂಜೀವರೆಡ್ಡಿಯವರು ಈ ದೇಶದ ಮಹಾ ದೊಡ್ಡ ನಾಯಕರು ಅವರಿಗೆ ನಾವು ಆಶ್ರಯ ಕೊಟ್ಟಿದ್ದೇವೆ. ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ಅವರನ್ನು ಬಂದು ನೋಡಿದಾಗ, ವೀರೇಂದ್ರ ಪಾಟೀಲರನ್ನು ನೋಡಬಹುದಿತ್ತಲ್ಲ, ಗುಂಡೂರಾಯರನ್ನು ನೋಡಬಹುದಿತ್ತಲ್ಲ, ಅವರು ಹುಷಾರಿಲ್ಲ, ಜತ್ತಿಯವರನ್ನು ನೋಡಬಹುದಿತ್ತಲ್ಲ, ಅವರ್ಯಾರೂ ಊರಲಿಲ್ಲವೋ? ನಿಮ್ಮ ಕಣ್ಣಿಗೆ ಅವರು ಬೀಳುವುದೇ ಇಲ್ಲವೋ? ಇದನ್ನೆಲ್ಲಾ ಹೇಳುವುದಕ್ಕೆ ನಿಮಗೆ ಶಕ್ತಿ ಧೈರ್ಯ ಇಲ್ಲವೋ? ಆದರೆ ನಮ್ಮ ಮುಖ್ಯಮಂತ್ರಿಗಳ ಬಗ್ಗೆ ಗೌರವ ಇದೆ, ಅವರು ಎಲ್ಲರ ಮನೆಗೂ ಹೋಗಿದ್ದರು, ನಿಜಲಿಂಗಪ್ಪನವರ ಮನೆಗೆ ಜತ್ತಿಯವರ ಮನೆಗೆ, ವೀರೇಂದ್ರಪಾಟೀಲರ ಮನೆಗೂ ಹೋಗಿದ್ದರು. ಅವರ ಬಗ್ಗೆ ನಾವು ಮಾತಾಡ್ತಿಲ್ಲ ರಾಯರೇ, ನಾವು ಮಾತಾಡ್ತಿರೋದು

ನರಸಿಂಹರಾಯರ ಬಗ್ಗೆ. ಹೋಗಬಹುದಾಗಿತ್ತಲ್ಲ, ಏಕೆ ಹೋಗಲಿಲ್ಲ ನೀವು? ಅವರ ಮೇಲೆ ಕೋಪವೇ ನಿಮಗೆ. ಏನು ಮಾಡಿದ್ದಾರೆ. ಅವರಿಗೆ ಪಾರ್ಶ್ವವಾಯು ಹೊಡೆದು ಅಂತಹ ಸಂಧರ್ಭದಲ್ಲೂ ಬಂದು ಇಲ್ಲಿ ಕುಳಿತು ಈ ಸದನದ ಕಾರ್ಯಕಲಾಪದಲ್ಲಿ ಭಾಗವಹಿಸುವಂತಹ ವಿಚಾರ ಅವರಿಗಿದೆಯಲ್ಲ. ನಿಮ್ಮ ಕೇಂದ್ರ ಸರ್ಕಾರವನ್ನು ಟೀಕೆ ಮಾಡಿದವರು ನಮ್ಮ ಮಾಜಿ ಮುಖ್ಯಮಂತ್ರಿಗಳಾದ ಹೆಗಡೆಯವರು, ವೀರೇಂದ್ರಪಾಟೀಲರು ಈ ಸದನದಲ್ಲಿ, ಸದನದ ಹೊರಗೆ ನಮ್ಮ ಸ್ನೇಹಿತರಾದ ಬಂಗಾರಪ್ಪನವರು ಮಾಡಲಿಲ್ಲವೋ? ಕೇಂದ್ರ ಸರ್ಕಾರ ಎಚ್ಚರದಿಂದಿದ್ದರೆ ಈ ಪರಿಸ್ಥಿತಿ ಆಗ್ತಾ ಇರಲಿಲ್ಲ ಅಂತ ಮೈಸೂರಲ್ಲಿ ಹೇಳಿಕೆ ಕೊಡಲಿಲ್ಲವೋ? ಮತ್ತೇಕೆ ಅವರ ಬಗ್ಗೆ ನೀವ್ಯಾರೂ ಮಂತ್ರಿಗಳಾಗೋರು ಮಾತೆ ಆಡೋದಿಲ್ಲ. ಇದೇನು ಸಮಾಚಾರ ಅಂದರೆ ಪಾಪ ಆ ಮೊಯಿಲಿಯವರ ಕಾಲೆಳೆಯುವ ನಾಟಕವೇ ಇದು.

ಏಕೆಂದರೆ ವೀರೇಂದ್ರಪಾಟೀಲರ ಮೇಲೆ ಆಕ್ಷನ್ ತೆಗೆದುಕೊಳ್ಳಿ. ಅವರಿಗೆ ಪಾಪ ವೀರೇಂದ್ರ ಪಾಟೀಲರು ಸಹಕಾರ ಮಾಡುತ್ತಿದ್ದಾರೆ. ಇವರ ಸಹಕಾರ ಬಂದದ್ದು ಒಳ್ಳೆಯದು ಆಯಿತು ಎಂದು ಹೇಳಿದರು. ನಮ್ಮ ರಮೇಶ್ ಅವರು ಬಹಳ ದೊಡ್ಡ ನಲವತ್ತು ವರುಷದ ರಾಜಕೀಯದಲ್ಲಿದ್ದಂತಹ ಹಿರಿಯ ರಾಜಕಾರಣಿಗಳು, ವೀರೇಂದ್ರಪಾಟೀಲರನ್ನು ವಜಾ ಮಾಡಿ ಎಂದು ಹೇಳಿದ್ದರಂತೆ, ಅದು ಪತ್ರಿಕೆಯಲ್ಲಿ ಬಂದಿದೆ; ಏನು ಹೇಳಿದರೋ ಗೊತ್ತಿಲ್ಲ. ಅದರಲ್ಲಿ ಪಕ್ಷದ ವಿಚಾರ ಬಂದಿದೆ. ತಕ್ಷಣವೇ, ಪಾಪ ಅಲ್ಲಿ ಗಾಡ್ಗೀಳ್ ಒಬ್ಬರು ಹೇಳುತ್ತಾರೆ ಇಲ್ಲ ನಿಮ್ಮನ್ನು ತೆಗೆಯುವುದಿಲ್ಲವೆಂಥು, ಅವರು ಕೃಪೆ ಮಾಡುತ್ತಿದ್ದಾರೆ ಅವರಿಗೆ. ಅವರು ಇದನ್ನೆಲ್ಲಾ ಕೇರ್ ಮಾಡುತ್ತಿಲ್ಲ. ನಾನು ಹೋಗಿದ್ದೆ. ಪಾಪ ಗಂಬೀರವಾಗಿ ಕೈ ತಿಕ್ಕಿಸಿಕೊಂಡು, ಮೈ ತಿಕ್ಕಿಸಿಕೊಂಡು ಕುಳಿತಿದ್ದಾರೆಯೇ ಹೊರತು ನೀವು ತಲೆ ಹೊಡೆದುಕೊಳ್ಳಬೇಕೆ ಅಷ್ಟೇ ಹೊರತು ಪಾಪ ಆ ವ್ಯಕ್ತಿತ್ವದ ಬಗ್ಗೆ ನೀವ್ಯಾರು ಚಿಂತನೆ ಮಾಡಬೇಕಾಗಿಲ್ಲ. ಈ ಹೇಳಿಕೆಗಳು, ಗಾಡ್ಗೀಳ್ ಹೇಳಿಬಿಟ್ಟರೆ ಕೃಪೆ ಏನಲ್ಲ, ಏನು ಕೃಪೆ? ಅವರಿಗೆ. ಪಾಪ ಅವರು ಸೌಜನ್ಯಕ್ಕೆ ಹೇಳಿರಬಹುದು; ಅವರು ಏನು ಹೇಳುತ್ತಾರೆ, ಎಂದರೆ ಪಾಪ ಅವರು ಸರಿಯಿಲ್ಲ, ಬಹಳ ಅನಾರೋಗ್ಯದಲ್ಲಿದ್ದಾರೆ, ನೀವೆಲ್ಲಾ ಅವರನ್ನು ತೆಗೆಯಬೇಕು ಎಂದು ಇದ್ದೀರೋ? ಅದು ನಿಮ್ಮ ಪಾಪದ ಕೆಲಸ, ಮಾಡಿಕೊಳ್ಳಿ. ನಿಮ್ಮ ಹಣೆಬರಹ. ನಾವೇನು ಮಾಡುವುದಕ್ಕಾಗುತ್ತದೆ. ಈ ರೀತಿ ಪರಿಸ್ಥಿತಿ ಇರುವಾಗ ನನಗನ್ನಿಸುತ್ತದೆ, ಇದು ಅಷ್ಟೊಂದು, ಸರಿಯಲ್ಲವೆಂದು. ನಿಮ್ಮ ವ್ಯವಸ್ಥೆಯೆ ಇದಾಗಿದೆ.

ಅದಕ್ಕೆ ನಾನು ನೇರವಾಗಿ ಹೇಳುತ್ತಿದ್ದೇನೆ, ಯಾವುದೇ ಸರ್ಕಾರಗಳನ್ನು ವಜಾ ಮಾಡುವುದಕ್ಕೆ ಮುನ್ನವಾಗಿ, ಯಾವುದೇ ಪಕ್ಷಗಳನ್ನು, ಸಂಘ ಸಂಸ್ಥೆಗಳನ್ನು ವಜಾ ಮಾಡುವುದಕ್ಕೆ ಮುಂಚಿತವಾಗಿ ಈ ಪ್ರಾಯಶ್ಚಿತ್ತಕ್ಕೆಲ್ಲಾ ನಾನೊಬ್ಬನೇ ಹೊಣೆ ಎಂದು ಹೇಳಿ — ಪ್ರಧಾನಮಂತ್ರಿ ನರಸಿಂಹರಾಯರು ರಾಜೀನಾಮೆ ಕೊಟ್ಟು ಈ ದೇಶಕ್ಕೆ ಕ್ಷಮಾಪಣೆಯನ್ನು ಕೇಳಿದ್ದರೆ ನಿಜವಾಗಲೂ ನಾವು ಅವರನ್ನು ಮೆಚ್ಚುತ್ತಿದ್ದೆವು. ಈಗ ಅದನ್ನು ಬಿಟ್ಟು ಯಾವುದ್ಯಾವುದೋ ರೂಪದಲ್ಲಿ ಉಳಿದುಕೊಳ್ಳಬೇಕು ಎಂದು ಹೇಳಿ ಅವರು ಹೊರಟಿದ್ದಾರೆ. ವಿರೋಧ ಪಕ್ಷದವರಿಗೂ ಇವರಿಗೂ ಚುನಾವಣೆ ಬೇಕಾಗಿಲ್ಲ. ಇವರು ಹೊರಟಿದ್ದಾರೆ. ಚುನಾವಣೆ ನೀವು ಹೋಗುತ್ತೀರಾ ಎಂದು

ನಾನು ಕೇಳಿದೆ. ನಾನು ತಮಗೆ ಹೇಳುತ್ತೇನೆ. ಈಗ ನಮಗೆ ಏನಾಗಿದೆ ಎಂದರೆ ಇಲ್ಲಿ ಯಡಿಯೂರಪ್ಪನವರು ಕುಳಿತಿದ್ದಾರೆ, ಆ ಕಡೆ ನಮ್ಮ ಗೌಡರು ಕುಳಿತಿದ್ದಾರೆ. ಇವರ ಕಾಟ ನಮ್ಮ ಕೈಯಲ್ಲಿ ತಡೆದುಕೊಳ್ಳುವುದಕ್ಕಾಗುವುದಿಲ್ಲ. ಮಧ್ಯಾಹ್ನ ನಾವು ಮಾತನಾಡಿದೆವು. ಇಲ್ಲಿ ಬಾಬುಗೌಡರು ಕುಳಿತಿದ್ದಾರೆ. ಈ ಕಡೆ ಜನತಾ ದಳದವರು. ಅವರು ದೇಶಪಾಂಡೆ ಹೇಳುತ್ತಾರೆ, ಈ ಕಡೆ ನಮ್ಮ ಯಡಿಯೂರಪ್ಪನವರು ಇವರಿಬ್ಬರ ಮಧ್ಯೆ ನಾವು ಸಿಕ್ಕಿದ್ದೇವೆ. ಆದುದರಿಂದ ಏನು ಆಗಿದೆ ಎಂದು ಹೇಳಿದರೆ ಮಾತು ಎತ್ತಿದರೆ ನೀವೆಷ್ಟು? ನೀವೆಷ್ಟು? ನಿಜ. ಇವರ ಸಹಕಾರವನ್ನು ನೀವೆಲ್ಲಾ ತೆಗೆದುಕೊಂಡುಬಿಟ್ಟಿದ್ದೀರಿ. ಇವರ ಬಗ್ಗೆ ಮಾತನಾಡುವುದಕ್ಕೆ ಏನೂ ಉಳಿದಿಲ್ಲ. ತಮಗೆ ಹೇಳುತ್ತೇನೆ, ನೀವೆಲ್ಲಾ ತೆಗೆದುಕೊಂಡಿದ್ದೀರಿ, ನೀವು ನೆಂಟರುಗಳೇ. ನೆಂಟಸ್ಥನ ನಡೆದಿದೆ. ಬಿಜೆಪಿ ಯವರ ಬೆಂಬಲವನ್ನು ನೀವೆಲ್ಲರೂ ತೆಗೆದುಕೊಂಡಿದ್ದೀರಿ. ಕಾಂಗ್ರೆಸ್‌ನವರು ತೆಗೆದುಕೊಂಡಿದ್ದೀರಿ ಜನತಾ ದಳದವರು ತೆಗೆದುಕೊಂಡಿದ್ದೀರಿ. ಆದ್ದರಿಂದ ನನಗನ್ನಿಸುತ್ತದೆ, ಈ ಪರಿಸ್ಥಿತಿಯಲ್ಲಿರುವಾಗ, ನಾನು ಹೇಳುತ್ತಿದ್ದೇನೆ, ಈ ದೇಶದಲ್ಲಿ ಈ ರಂಪಗಳು ಇವೆಲ್ಲಾ ಮಾಡುವುದರ ಬದಲು ವ್ಯವಸ್ಥಿತವಾಗಿ, ದೇಶದ ಉಳಿವಿಗಾಗಿ, ದೇಶದ ರಕ್ಷಣೆಗಾಗಿ, ಈ ನಾಡಿನ ದೇಶದ ಎಲ್ಲಾ ಪಕ್ಷಗಳು, ಎಲ್ಲಾ ವ್ಯವಸ್ಥೆ, ಎಲ್ಲಾ ಮುಖಂಡರುಗಳು ಇದರ ಬಗ್ಗೆ ಒಂದು ಚಿಂತನೆ ನಡೆಸಬೇಕಾದಂಥ ಅವಶ್ಯಕತೆ ಈಗ ಅತೀ ಮುಖ್ಯವಾಗಿದೆ. ಇಂಥ ಸಂಧರ್ಭದಲ್ಲಿ ನಾವು ಒಂದು ಕಣಜಕ್ಕೆ ನೇರವಾಗಿ ಕಣ್ಣಿಡುವ ಬದಲು ಓಟು ಬೇಕು, ನಾವೇನು, ಅದರಿಂದ ಪರಿತ್ಯಾಗ ಮಾಡಿ ಇಲ್ಲಿ ಬಂದಿರತಕ್ಕಂಥವರು ಏನಲ್ಲ, ಚುನಾವಣೆಯಲ್ಲಿ ಬರಬೇಕು, ಗೆಲ್ಲಲೇಬೇಕು. ಇಲ್ಲಿ ಶಾಸನಸಭೆಗೆ ಬಂದಾಗಲೇ ಇಲ್ಲಿ ಇಷ್ಟೆಲ್ಲಾ ವ್ಯವಸ್ಥೆ ಇರುವುದು, ಮಾತನಾಡತಕ್ಕಂಥದ್ದು ಈ ಮಾತಿನ ಮನೆಯಲ್ಲೇ. ಆದರೆ ಚುನಾವಣೆ ಗುರಿ ಎಂದು ಜೊತೆಗೆ ಈ ದೇಶದ ಗುರಿ, ಪ್ರಜಾಪ್ರಭುತ್ವದ ಗುರಿ ಇವರೆಡೂ ಇರಬೇಕಾದದ್ದು ಅವಶ್ಯಕ. ಈ ಕರ್ತವ್ಯದಲ್ಲಿ ನಾವು ಅತಿ ಮುಖ್ಯವಾಗಿ ನಮ್ಮಲ್ಲಿ ಯಾವುದೇ ಒಂದು ಕೋಮಿನ ವ್ಯವಸ್ಥೆಯ ಬಗ್ಗೆ ಸಿಡಿದೆದ್ದು ನಾವು ನಾವೇ ಈ ದೇಶದಲ್ಲಿ ಈ ಕೋಮು ಸರಿಯಿಲ್ಲ, ನೀವು ಸರಿ ಇಲ್ಲ ಎಂದು ಮನುಷ್ಯ ಮನುಷ್ಯರೇ ನಾವು ಒಂದು ರೀತಿ ಮೃಗಗಳಿಗಿಂತ ಕಡೆಯದಾಗಿ ನಾವು ದ್ವೇಷವನ್ನು ಮಾಡಿಕೊಂಡು ಹೋಗತಕ್ಕಂಥದ್ದು ಇದು ಸರಿಯಾದಂಥ ವ್ಯವಸ್ಥೆಯಲ್ಲ. ಸರಿಯಾದ ಕ್ರಮವಲ್ಲ. ಆದ್ದರಿಂದ ಇವತ್ತು ನಾವು ದೇವರುಗಳ ಬಗ್ಗೆ ಈ ದೇವರು ಸರಿಯಲ್ಲ, ಆ ದೇವರು ಸರಿಯಲ್ಲ, ಇವಲ್ಲಾ ನಾವು ಚರ್ಚೆ ಮಾಡಿಕೊಳ್ಳತಕ್ಕಂತದ್ದು ಇದು ಅಪ್ರಕೃತವಾದಂಥ ಪರಿಸ್ಥಿತಿ-ಮತ್ತು ಈ ಸದನವೂ ಸಹ ಅ ಚರ್ಚೆಗೆ ಒಳ್ಳೆಯ ಒಂದು ವೇದಿಕೆಯೇನಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ.

ಛೇರ್ಮನ್ : ತಾವು ಇನ್ನು ಎಷ್ಟು ಹೊತ್ತು ತೆಗೆದುಕೊಳ್ಳುತ್ತೀರಿ, ಇನ್ನೂ ಮಾತನಾಡುವವರು ಬಹಳ ಜನ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಇನ್ನು ಐದು ನಿಮಿಷದಲ್ಲಿ ಮುಗಿಸುತ್ತೇನೆ. ಇನ್ನು ಪೋಲೀಸಿನ ವ್ಯವಸ್ಥೆ ಇದೆಯಲ್ಲ, ಅವರಿಗೆ ಕೊಟ್ಟಿರತಕ್ಕ ಆಧುನಿಕ ಶಸ್ತ್ರಾಸ್ತ್ರಗಳು ಇವೆಯಲ್ಲ. ಆ ಶಸ್ತ್ರಾಸ್ತ್ರಗಳ ಬಗ್ಗೆ ತಮಗೆ ಹೇಳಿದರೆ ನಗು ಬರುತ್ತದೆ, ಯಾವುದೋ ಬ್ರಿಟೀಷರ ಕಾಲದ ಬಂದೂಕುಗಳು. ಯಾವುದೋ

ಕಾಲದ ಆಲಾಕಪ್‌ಗಳು. ಯಾವುದೋ ಕಾಲದ ವ್ಯವಸ್ಥೆ ಮತ್ತು ನಮಗೆ ಇರತಕ್ಕ ಪೋಲೀಸನವರ ಸಂಖ್ಯೆ, ನಮಗೆ ಇರತಕ್ಕ ಸಂಖ್ಯೆ ಇರಬೇಕು? ಎಷ್ಟು ಪೋಲೀಸ್ ಸ್ಟೇಷನ್‌ಗಳು ಇರಬೇಕು? ಎಷ್ಟು ಹೊಸ-ಹೊಸ ಒಳ್ಳೆಯ ಒಳ್ಳೆಯ ಬಂದೂಕುಗಳ ವ್ಯವಸ್ಥೆ, ಶಸ್ತ್ರಾಸ್ತ್ರಗಳು ಇರಬೇಕು. ಇದು ಯಾವ ವ್ಯವಸ್ಥೆ ಬಗ್ಗೆಯೂ ಚಿಂತನೆ ಮಾಡಲಿಲ್ಲ, ಚಿಂತನೆ ಇಲ್ಲ, ಯಾವುಲೋ ಹಳೆಯ ಕಾಲದ ಬಂದೂಕು, ಎಲ್ಲಿಯವರೆಗೆ ಹೋಗಿದ್ದಾರೆ ಎಂದರೆ ಮೈಸೂರಿನ ಒಂದು ಪತ್ರಿಕೆಯಲ್ಲಿ ಓದಿದೆ. ಪೋಲೀಸ್ ಕಾನ್‌ಸ್ಟೇಬಲ್‌ಗಳು ಗುಂಡು ಹಾರಿಸಬಹುದು ಎಂದು ಹೇಳಿಕೆ ಕೊಟ್ಟಿದ್ದಾರೆ. ಕಾನ್‌ಸ್ಟೇಬಲ್‌ಗಳು, ಗುಂಡು ಹಾರಿಸುವುದಕ್ಕೆ ಒಂದು ವ್ಯವಸ್ಥೆ ಇದೆ. ಈ ಅವ್ಯವಸ್ಥೆಯಲ್ಲಿ ನಾವು ಇವತ್ತು ಇದ್ದೇವೆ. ಒಂದು ಕಡೆ, ಈ ದಳ್ಳುರಿ, ಗಲಭೆ ಹತ್ತಿದರೆ ಇಡೀ ರಾಜ್ಯದ ಉದ್ದಗಲಕ್ಕೂ ಪೋಲೀಸಿನ ರಕ್ಷಣೆ ಕೊಡುವುದಕ್ಕೆ ನಮ್ಮಲ್ಲಿ ಸರಿಯಾದ ಪೋಲೀಸ್ ವ್ಯವಸ್ಥೆ ಇಲ್ಲ. ಆದ್ದರಿಂದ ಇದರ ಬಗ್ಗೆ ಚಿಂತನೆ ಆಗಬೇಕು. ಇಡೀ ಪೋಲೀಸ್ ಇಲಾಖೆ ಬದಲಾವಣೆ ಆಗಬೇಕು. ಕರ್ನಾಟಕ ರಾಜ್ಯದಲ್ಲಿ ನಾಲ್ಕು ಕೋಟಿ ಜನಸಂಖ್ಯೆಗಿಂತ ಮೇಲಿರುವಾಗ ಎಷ್ಟು ಪೋಲೀಸ್ ಸ್ಟೇಷನ್‌ಗಳು ಇವೆ. ಎರಡು ಸಾವಿರ ಜನಕ್ಕೆ ಒಬ್ಬ ಪೋಲೀಸ್ ಸ್ಟೇಷನ್ ಇರಬಹುದು ಎಂದು ನನಗೆ ಅನಿಸುತ್ತದೆ. ಇನ್ನೂ ಜಾಸ್ತಿ ಇರಬಹುದು ಎಂದು ಅನಿಸುತ್ತದೆ. ಈ ವ್ಯವಸ್ಥೆಯಲ್ಲಿ ನಾವು ಸಂಪೂರ್ಣವಾಗಿ ಇಡೀ ಪೋಲೀಸ್ ಇಲಾಖೆಗೆ ಒಂದು ಹೊಸ ಚೈತನ್ಯವನ್ನು ಕೊಡತಕ್ಕಂಥ, ಒಂದು ಹೊಸ ರೂಪವನ್ನು ಕೊಡತಕ್ಕಂಥ ಒಂದು ವ್ಯವಸ್ಥೆ ಇವತ್ತು ನಿರ್ಧಾರ ಆಗಬೇಕಾಗಿದೆ. ಈ ಸಂಭರ್ಭದಲ್ಲಿ ಶಾಂತಿ ಸಭೆಗಳು, ಶಾಂತಿ ಬಗ್ಗೆ ಆಕಾಶವಾಣಿ ಮತ್ತು ದೂರದರ್ಶನದ ಮೂಲಕ ಕೆಲವು ಮುಖಗಳನ್ನು ತೋರಿಸಿದರು. ಎಲ್ಲಾ ಶಾಂತಿ ಆಗಬೇಕು. ದೇಶದಲ್ಲಿ ಶಾಂತಿ ಇರಬೇಕು ಎಂದು ಹೇಳಿ. ಈ ಮುಖಗಳಲ್ಲಿ ನಾಲ್ಕು ಜನ ಇಡೀ ರಾಜ್ಯಕ್ಕೆ, ದೇಶಕ್ಕೆ ಗೊತ್ತಿರತಕ್ಕವರು. ಇನ್ನು ಒಂದು ಆರು ಜನ ಅವರ ಮನೆಯವರಿಗೇ ಗೊತ್ತಿಲ್ಲದೇ ಇರತಕ್ಕವರು.

ಛೇರ್ಮನ್ : ಐದು ನಿಮಿಷ ಆಯಿತು;

ಶ್ರೀ ವಾಟಾಳ್ ನಾಗರಾಜ್: ನೀವು ಹೀಗೆ ಹೇಳಿದರೆ ನಾವು ಕುಳಿದುಕೊಳ್ಳುತ್ತೇವೆಯೇ? ಕೇಳಿ ಸ್ವಲ್ಪ, ದಯಮಾಡಿ. ದೂರದರ್ಶನದಲ್ಲಿ ಸಿಂಧ್ಯರವರೇ ನಿಮ್ಮನ್ನು ಏನಾದರೂ ಕರೆದಿದ್ದೀರಾ? ದೇಶಕ್ಕೆಲ್ಲಾ ಶಾಂತಿ ಹೇಳುವುದಕ್ಕೆ. ಅಲ್ಲಿ ಕೆಲವು ಕಾಂಟ್ರಾಕ್ಟ್ ತೆಗೆದುಕೊಂಡು ಬಿಟ್ಟರು. ನಮಗೆ ಶಾಂತಿ ಹೇಳುವುದಕ್ಕೆ ನಮ್ಮನ್ನು ಬಿಟ್ಟರೆ ಬೇರೆ ಯಾರೂ ಇಲ್ಲ ಎಂದು ನಾನೂ ನೋಡಿದೆ. ಎರಡು ಸಾರಿ ನೋಡಿದೆ. ನಾಲ್ಕು ನಾಲ್ಕು ಜನ ಒಳ್ಳೆಯವರು. ಇನ್ನು ಕೆಲವರು ಕರೆದುಕೊಂಡು ಹೋಗಿರುವವರು ಹೇಳುತ್ತಾರೆ, ಯಾರು ಇವರು ಎಂದು. ಕರೆದುಕೊಂಡು ಹೋದವರಿಗೇ ಗೊತ್ತಿಲ್ಲ. ಯಾರಿಗೂ ಗೊತ್ತಿಲ್ಲ. ಕೊನೆಯಪಕ್ಷ ದೂರದರ್ಶನದ ಮೂಲಕ ಇಂತಹವರು ಶಾಂತಿಯನ್ನು ಹೇಳುತ್ತಾರೆಂದು ಹೇಳಿದರೆ ಹೌದಪ್ಪಾ ಏನು ಬಹಳ ಶಾಂತಿ ಹೇಳುತ್ತಾರೆಂದು ಹೇಳಬಹುದು. ಅವರು ಯಾರಿಗೂ ಗೊತ್ತಿಲ್ಲವಲ್ಲಾ ಸ್ವಾಮಿ ; ಅವರ ಮುಖಗಳು. ಅವರಿಂದ ಶಾಂತಿ ಹೇಳಿಸಿದರೆ ಇನ್ನಲ್ಲೆ ಶಾಂತಿ ಆಗುತ್ತದೆ ? ನಾವು ಹೇಳಬೇಕು ಎಂದಲ್ಲ, ನಾವ್ಯಾರೂ ಅವರ ಕಣ್ಣಿಗೆ ಕಾಣಲೇ ಇಲ್ಲ. ನಮಗೆ ಅವರು ಕೊಡುವುದು ಬಿಡುವುದು ಆ ಪ್ರಶ್ನೆ ಬೇರೆ. ನೀವು ಬನ್ನಿ ನಾಲ್ಕು ಮಾತು ಹೇಳಿ ಎಂದು

ಅವರು ಕರೆಯಲಿಲ್ಲ, ಅವರ ಕ್ಯಾಮಾರಾಗಳು ಎಲ್ಲೆಲ್ಲೋ ಹೋಗುತ್ತವೆ. ಯಾರ ಮುಖಕ್ಕೆ ಹಿಡಿಯುತ್ತವೋ ಗೊತ್ತಿಲ್ಲ, ಪುನಃ ಬೆಳಿಗ್ಗೆ ನಾವು ನೋಡುತ್ತೇವೆ. ಅದು ಪರಿಸ್ಥಿತಿ ಹೀಗೆ ಆಗಿದೆ. ಆದ್ದರಿಂದ ನಮ್ಮ ಈ ವ್ಯವಸ್ಥೆಯಲ್ಲಿ ರಾಜ್ಯಕ್ಕೆ, ದೇಶಕ್ಕೆ ಸಂದೇಶ ನೀಡತಕ್ಕವರಿಂದ ಅವರ ವ್ಯಕ್ತಿತ್ವ ನೋಡಿ ಜನರಿಗೆ, ಜನಸಾಮಾನ್ಯರಿಗೆ ಗೊತ್ತಿರತಕ್ಕ ಜನರಿಂದ ಸಂದೇಶವನ್ನು ಕಳಿಸಿದರೆ ಅದಕ್ಕೆ ಅರ್ಥ ಆಗುತ್ತದೆ. ಕೊನೆಯದಾಗಿ ಈ ನಾಡಿನ, ದೇಶದ ವ್ಯವಸ್ಥೆ ಸುಭದ್ರವಾಗಿ ಇರತಕ್ಕ ಒಂದು ವ್ಯವಸ್ಥೆ ಆಗಬೇಕು. ಪ್ರಜಾತಂತ್ರ ಉಳಿಯಬೇಕು. ಈ ಪ್ರಜಾತಂತ್ರದ ಉಳಿವಿಗೆ ನಾವೆಲ್ಲರೂ ಸಂಪೂರ್ಣವಾಗಿ ಸಹಕಾರ ನೀಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸನ್ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಈ ರಾಷ್ಟ್ರದಲ್ಲಿ ಬಹಳ ಬೃಹದಾಯಕಾರವಾಗಿ ಬೆಳೆದಿರತಕ್ಕಂಥ ಸಮಸ್ಯೆ ಬಗ್ಗೆ ಮಾತನಾಡುವುದಕ್ಕೆ ನನಗೆ ಎರಡು ನಿಮಿಷ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತುಂಬಾ ಚಿರಋಣಿಯಾಗಿದ್ದೇನೆ. ಆದರೆ ಈ ಸರಕಾರದಲ್ಲಿ 14 ಜನಮಂತ್ರಿಗಳು ಇದ್ದಾರೆ. ಮಂತ್ರಿಗಳ ಪೈಕಿ ನನ್ನ ಬಗ್ಗೆ ಕರುಣೆಯಿಂದ ಶ್ರೀಮತಿ ಮನೋರಮಾ ಮಧ್ವರಾಜ್, ಸಿಂಧ್ಯಾರವರು ಮಾತನಾಡುತ್ತಾರೆ ಎಂದು ಕುಳಿತುಕೊಂಡು ಕೇಳಿಸಿಕೊಳ್ಳುತ್ತಿದ್ದಾರೆ. ಇಂತಹ ದೊಡ್ಡ ಸಮಸ್ಯೆ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ, ಮಾನ್ಯ ಮುಖ್ಯಮಂತ್ರಿಗಳು ಈ ಚರ್ಚೆ ಆದಂಥ ಸಂದರ್ಭದಲ್ಲಿ ಅರ್ಧಗಂಟೆ, 5 ನಿಮಿಷ ಒಂದೆರಡು ಸಲ ಬಂದು ಹೋಗಿದ್ದಾರೆ. ಯಾರೂ ಸಹಿತ ಇಲ್ಲಿ ಇಲ್ಲ, ಇಲ್ಲಿರತಕ್ಕಂಥವರು ಹೋಮ್ ಸೆಕ್ರೆಟರಿ, ಪೋಲೀಸ್ ಕಮಿಷನರ್ ಹಾಗೂ ಡಿ.ಜಿ.ಪಿ. ಅವರು ನಾಲ್ಕು ಜನ ಮಾತ್ರ, ಈ ಕಡೆ ಪ್ರೆಸ್‌ನವರು ಇದ್ದಾರೆ, ಇದು ನನಗೆ ಅರ್ಥ ಆಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರು ಇರಲೇ ಬೇಕಾಗಿರುವುದರಿಂದ ಇದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇದು ಏನೇ ಆದರೂ ನಾನು ಈ ವಿಚಾರದ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬೇಕಾಗುತ್ತದೆ. ನಾನು ಎಲ್ಲಿ ನಿಲ್ಲುತ್ತೇನೆ ಎನ್ನುವ ಕಾರಣದಿಂದ ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದು ಅತ್ಯಂತ ನೋವಿನಿಂದ ಕೂಡಿರತಕ್ಕ ವಿಚಾರವಾಗಿದ್ದು ನಮ್ಮ ದೇಶದ ಅಳಿವು ಮತ್ತು ಉಳಿವಿನ ಪ್ರಶ್ನೆ ನಮ್ಮ ಮುಂದೆ ಬಂದಿದೆ. ಇವತ್ತು ನಾವೆಲ್ಲಾ ತಲೆತಗ್ಗಿಸತಕ್ಕ ಒಂದು ಘಟನೆ ನಡೆದಿದೆ. ನಮ್ಮ ಹೃದಯಗಳು ಇವತ್ತು ಒಟ್ಟಿಗೆ ಇಲ್ಲ.ಒಂದು ಬಾರಿ ರಿಯಲ್ ಎಸ್ಟೇಟ್ ಏಜೆನ್ಸಿಯವರು ಬಹುಶಃ ಎಲ್ಲಾ ಶಾಸಕರಿಗೂ ಒಂದು ಗ್ರೀಟಿಂಗ್ಸ್ ಕಳುಹಿಸಿದ್ದಾರೆ. ಅವರು ಏನು ಮಾಡಿದ್ದಾರೆ ಎಂದರೆ ನಮ್ಮ ಮುಖ್ಯವಾದ ನಾಲ್ಕು ಧರ್ಮಗಳಾಗಿರತಕ್ಕಂಥ, ಹಿಂದೂ ಧರ್ಮ, ಮುಸ್ಲಿಂ ಧರ್ಮ, ಕ್ರಿಶ್ಚಿಯನ್ ಧರ್ಮ ಮತ್ತು ಪಾರಸೀ ಧರ್ಮಗಳವರ ಹೃದಯಗಳು ಯಾವ ರೀತಿ ಚೂರುಚೂರಾಗಿದೆ ಎಂದು ಬಹಳ ಚೆನ್ನಾಗಿ ಈ ಎಸ್ಟೇಟ್ ಏಜೆನ್ಸಿಯವರು ಗ್ರೀಟಿಂಗ್ಸ್ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಈ ರೀತಿ ಇವತ್ತು ನಮ್ಮ ಎಲ್ಲ ಹೃದಯಗಳು ಒಡೆದಿದೆ. ಬಹುಶಃ ನಾನು ಕಳೆದ 25-30 ವರ್ಷಗಳಿಂದ ನನಗೆ ಬುದ್ಧಿ ಬಂದಮೇಲೆ, ನನ್ನ ಅನುಭವದಲ್ಲಿ ಇಂತಹ ಒಂದು ಪರಿಸ್ಥಿತಿ ಬಂದೇ ಇರಲಿಲ್ಲ ಎಂದು

ತಿಳಿದುಕೊಂಡಿದ್ದೇನೆ. ಇವತ್ತು ಸಾವಿರಾರು ಜನ ಪ್ರಾಣಗಳನ್ನು ಕಳೆದುಕೊಂಡಿದ್ದಾರೆ. ಅವರ ಕುಟುಂಬಗಳ ಸಮಸ್ಯೆ, ಅವರ ಕುಟುಂಬದ ಸದಸ್ಯರುಗಳ ಆಕ್ರಂದನದ ನಾದ ನಮಗೆ ಯಾರಿಗೂ ತಲುಪಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸದನದಲ್ಲಿ ಮೊದಲನೆಯ ಬಾರಿಗೆ ಈ ಸಮಸ್ಯೆ ಬಗ್ಗೆ ಎರಡು ಉತ್ತಮವಾದ ಮಾತುಗಳನ್ನು ನಾವು ಕೇಳಿದ್ದೇವೆ. ಒಂದು ರಾಮಕೃಷ್ಣ ಹೆಗಡೆಯವರ ಮಾತುಗಳು, ಇನ್ನೊಂದು ಮಾನ್ಯ ವೀರೇಂದ್ರಪಾಟೀಲರ ಮಾತುಗಳು. ಅವರು ಬಹಳ ಚೆನ್ನಾಗಿ ತಮ್ಮ ಹೃದಯವನ್ನು ಬಿಚ್ಚಿ ಈ ದೇಶದ ಮತ್ತು ಈ ನಾಡಿನ ಪರಿಸ್ಥಿತಿ ಇವತ್ತು ಏನಿದೆ ಎನ್ನುವುದರ ಬಗ್ಗೆ ಮಾತನಾಡಿದ್ದಾರೆ. ಮೊದಲನೆ ಬಾರಿಗೆ ಈ ಸಮಸ್ಯೆ ಬಗ್ಗೆ ಯಾವುದೇ ಸಂಧರ್ಭದಲ್ಲಿ ಹಿಂದುಮುಸ್ಲಿಂ ಗಲಾಟೆಯಾಗುತ್ತದೆ. ಈ ಸಮಸ್ಯೆ ಬಗ್ಗೆ ಚರ್ಚೆ ಮಾಡುವುದು ಬೇಡ ಎನ್ನತಕ್ಕಂಥ ಒಂದು ವಾದ ಇರುತ್ತಿತ್ತು. ಆದರೆ ಇವತ್ತು ಮೊದಲನೇ ಸಾರಿಗೆ ಈ ದೇಶದ ಲೋಕಸಭೆಯಲ್ಲಿ, ಅಷ್ಟೆ ಅಲ್ಲ, ಎಲ್ಲಾ ವಿಧಾನಸಭೆಗಳಲ್ಲಿ ಸಹಿತ ಇದರ ಬಗ್ಗೆ ಮಾತನಾಡಲಿಕ್ಕೆ ಪ್ರಾರಂಭ ಮಾಡಿದ್ದೇವೆ. ಇದು ಎಲ್ಲದರೂ ಒಂದು ಕಡೆ ಅಂತ್ಯ ಆಗಬೇಕು ಎನ್ನುವುದು ನಮ್ಮೆಲ್ಲರ ಅಭಿಪ್ರಾಯ. ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. 6ನೇ ತಾರೀಖು ಬಾಬರಿ ಮಸೀದಿ ಒಡೆದುಹೋದ ಮೇಲೆ ಎರಡು ಮೂರು ದಿವಸ ಎಲ್ಲಾ ಕಡೆ ರಜೆ ಇತ್ತು, ನಾನೂ ಮನೆಯಲ್ಲೇ ಇದ್ದೆ. ನಾನು ನನ್ನ ಮನೆಯ ಮಹಡಿಯ ಮೇಲುಗಡೆಯಿಂದ ಕೆಳಗಡೆ ಬರಬೇಕಾದರೆ ನನ್ನ ಮನೆಯಲ್ಲಿರತಕ್ಕಂಥ ಆರೂವರೆ ವರ್ಷದ ನನ್ನ ಮಗ ಚಿನ್ನು ಎಂದು, ಇನ್ನೊಬ್ಬ ನಮ್ಮ ನೆಂಟರ ಮಗ ಸಾಂಬಾ ಎಂದು ನಾಲ್ಕು ವರ್ಷದವನು, ಇಬ್ಬರೂ ಕುಸ್ತಿ ಆಡುತ್ತಿದ್ದರು. ಏತಕ್ಕೆ ಕುಸ್ತಿ ಆಡುತ್ತಿದ್ದೀರಿ ಎಂದು ನಾನು ಕೇಳಿದೆ, ಅವರು ನೋಡಿ ಇವನು ಮುಸಲ್ಮಾನ್ ಇವನು ಹಿಂದೂ ಎಂದು ಹೇಳುತ್ತಾನೆ. ಈ ಘಟನೆಯಿಂದ ನಿಜವಾಗಿಯೂ ನನಗೆ ನೋವಾಯಿತು.

ಶ್ರೀ ಕೆ.ಎಸ್. ಈಶ್ವರಪ್ಪ : ಇದೆಲ್ಲಾ ಕಥೆ ....

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಹೌದು ನಿಮಗೆಲ್ಲಾ ಕಥೆ ಎನಿಸುತ್ತದೆ, ನಾಚಿಕೆ ಆಗಬೇಕು, ಈ ರೀತಿ ಮಾತನಾಡುವುದಕ್ಕೆ, ಹೃದಯ ಇಲ್ಲದಿರತಕ್ಕಂಥ ಜನ ನೀವು, ನಿಮಗೆ ಏನು ಅರ್ಥವಾಗುತ್ತದೆ, ಕಲ್ಲು ಹೃದಯ ನಿಮ್ಮದು, ಈ ದೇಶವನ್ನು ಹಾಳು ಮಾಡಿದ್ದೀರಿ. ಅವತ್ತು ಹಿಂದೂ ಮುಸಲ್ಮಾನ್ ಕುಸ್ತಿಯನ್ನು ನೋಡಿ ಈ ಜಾತಿಯ ವಿಷಬೀಜವನ್ನು ನಮ್ಮ ರಕ್ತದ ಧಮನಿಗಳಲ್ಲಿ ತುಂಬಿಕೊಂಡಿರತಕ್ಕಂಥ ಪ್ರತಿಯೊಬ್ಬರನೂ ಸಹ ನಾವು ಇವತ್ತು ಟೀಕೆ ಮಾಡಬೇಕಾಗುತ್ತದೆ. ನನಗೆ ಬಹಳ ನೋವಾಗತಕ್ಕಂಥದ್ದು ಇಂತಹ ಪರಿಸ್ಥಿತಿಯಲ್ಲಿ ನಮ್ಮ ದೇಶದಲ್ಲಿ ಒಂದು ನಾಯಕತ್ವ ಎನ್ನತಕ್ಕಂಥಾದ್ದು ಇಲ್ಲ. ಗಾಂಧೀಜಿಯವರು ಇಲ್ಲ, ಜೆ.ಪಿ. ಇಲ್ಲ, ಇವತ್ತು ಯಾರೂ ಸಹಿತ ಎದ್ದುನಿಂತು ಈ ದೇಶವನ್ನು ಒಳ್ಳೆಯ ಮಾರ್ಗದಲ್ಲಿ ತೆಗೆದುಕೊಂಡು ಹೋಗಬಲ್ಲೆ ಎನ್ನತಕ್ಕಂಥ ಸ್ಥಿತಿಯಲ್ಲಿ ಯಾರೂ ಇಲ್ಲ.

4.10 ಪಿ.ಎಂ.

ಆವೊತ್ತಿನ ಕಾಂಗ್ರೆಸ್ ಇವೊತ್ತಿಲ್ಲ, ನಾನು ಯಾವೊತ್ತು ಸಹ ಕಾಂಗ್ರೆಸ್ಸಿನ ಸದಸ್ಯನಲ್ಲ. ಆದರೆ, ನಮ್ಮ ಮನೆತನ ಕಾಂಗ್ರೆಸ್ಸಿನದು. ಬಹುಶಃ ಇದು ನಿಮ್ಮಲ್ಲಿ

ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಏಕೆಂದರೆ, ನಾನು ಒಂದು ಸಣ್ಣ ಹಳ್ಳಿಯ ಸ್ವಾತಂತ್ರ್ಯ ಹೋರಾಟಗಾರರ ಮನೆತನದಿಂದ ಬಂದಿರತಕ್ಕವನು. ನನ್ನ ತಂದೆಯವರಿಗೆ, ನಾನು ಕಾಂಗ್ರೆಸ್ ಪಕ್ಷ ಸೇರಬೇಕೆಂದು ಅಪೇಕ್ಷೆ, ನಾನು ಕಾಂಗ್ರೆಸ್ ಪಕ್ಷಕ್ಕೆ ಸೇರುವುದಿಲ್ಲವೆಂದು ನನಗೂ ಅವರಿಗೂ ವಿರೋಧವಿದೆ. ಅವೊತ್ತಿನ ಕಾಂಗ್ರೆಸ್ ಇವೊತ್ತಿಲ್ಲವೆಂದು ಸ್ವತಃ ಪ್ರಧಾನಮಂತ್ರಿಗಳಾದ ಶ್ರೀ ಪಿ.ವಿ. ನರಸಿಂಹರಾವ್‌ರವರೇ ಹೇಳಿದ್ದಾರೆ. ಇವೊತ್ತು ರಾಜೀವ್‌ಗಾಂಧಿಯವರು ಇಲ್ಲ, ಶ್ರೀಮತಿ ಇಂದಿರಾಗಾಂಧಿಯವರು ಇಲ್ಲ. ಇವೊತ್ತಿನ ದಿವಸ ನಾವೆಲ್ಲರೂ ಒಟ್ಟಿಗೆ ಕಾಂಗ್ರೆಸ್ಸಿನಲ್ಲಿ ಹೋಗಬೇಕೆಂದು ನರಸಿಂಹರಾಯರು ಹೇಳಿದ್ದಾರೆ. ನಾವೆಲ್ಲರೂ ಸಹ ದೇಶಾಬಿಮಾನಿಗಳಂತೆ ನಮ್ಮ ಪಕ್ಷದ ಕೋಟೆಗಳಿಂದ ಹೊರಗೆ ಬಂದು ಮಾತನಾಡತಕ್ಕಂಥಾದ್ದು ಅಷ್ಟೇ ಅಲ್ಲ, ಕೆಲಸವನ್ನು ಮಾಡದೆ ಹೋದರೆ, ಬಹುಶಃ ಈ ದೇಶ ಒಂದು ದೇಶವಾಗಿ ಉಳಿಯತಕ್ಕಂಥಾದ್ದು ಬಹಳ ಕಷ್ಟವಿದೆಯೆಂದು ನಾನು ನಂಬಿದ್ದೇನೆ. ನಮ್ಮ ಓಟಿನ ದೃಷ್ಟಿ ಬದಲಾಗಬೇಕು. ನಮ್ಮ ಮುಸಲ್ಮಾನ್ ಬಾಂಧವರಲ್ಲಿ ವಿಶೇಷವಾಗಿ ಮುಖಂಡರಲ್ಲಿ ಎರಡು ತರಹದ ಮುಖಂಡರುಗಳಿದ್ದಾರೆ. ಅವರಲ್ಲಿ ಕೆಲವರು ಮೂಲಭೂತವಾದಿಗಳಿದ್ದಾರೆ, ಮಾಡರೇಟ್ ಮುಸ್ಲಿಂ ಲೀಡರ್‌ಗಳಿದ್ದಾರೆ. ಇವೊತ್ತಿನ ಈ ಸಭೆಯಲ್ಲಿ ನನ್ನ ಪಕ್ಷದ ಅಧ್ಯಕ್ಷರು, ಕಾರ್ಯಾಧ್ಯಕ್ಷರು ಹಾಗೂ ನನ್ನ ಆತ್ಮೀಯ ಮಿತ್ರರಾದಂಥ ಡಾ. ಜೀವರಾಜ ಆಳ್ವರವರು ಬಾಗವಹಿಸಬೇಕಾಗಿತ್ತು. ದುರದೃಷ್ಟವಶಾತ್, ಅವರ ಮನೆಯಲ್ಲಿ ಆಕಸ್ಮಿಕವಾಗಿ ಒಂದು ಸಾವು ಆಗಿರುವ ಪ್ರಯುಕ್ತ ಬೇರೆ ಕಡೆಗೆ ಹೋಗಿದ್ದಾರೆ. ಅವರು ಜಯಮಹಲ್ ಎಂಬ ಕ್ಷೇತ್ರದಲ್ಲಿ ಸುಮಾರು ಹತ್ತು ವರ್ಷಗಳ ಕಾಲ ಶಾಸಕರಾಗಿದ್ದರು. ಈಗ ಸನ್ಮಾನ್ಯ ಸಚಿವರಾದ ಶ್ರೀ ಯಾಹ್ಯಾರವರು ಆ ಕ್ಷೇತ್ರದ ಪ್ರತಿನಿಧಿಗಳಾಗಿದ್ದಾರೆ. ಡಾ. ಆಳ್ವರವರು ತಮ್ಮ ಅನೇಕ ಅನುಭವದ ವಿಚಾರಗಳನ್ನು ನನಗೆ ಹೇಳಿದ್ದಾರೆ. ಅವರಿಗೆ ಹೇಳಬೇಕೆಂದು ತುಂಬಾ ಆಸೆ ಇತ್ತು. ಆದರೆ, ಅವರು ಕಾರಣಾಂತರಗಳಿಂದ ಸಭೆಯಲ್ಲಿ ಭಾಗವಹಿಸುವುದಕ್ಕೆ ಆಗುತ್ತಿಲ್ಲ. ನಿಮಗೆ ಹೇಳುತ್ತಿದ್ದೇನೆ. ಇವೊತ್ತಿನವರೆವಗೂ ನಾವೆಲ್ಲರೂ ಸಹ ಮುಸಲ್ಮಾನರನ್ನು ಓಟಿನ ದೃಷ್ಟಿಯಿಂದ ಟ್ಯಾಂಪರ್ ಮಾಡಿಕೊಂಡು ಬಂದಿದ್ದೇವೆ. ಬಹುಶಃ ನಮ್ಮಲ್ಲಿ ಅನೇಕರಿಗೆ ಗೊತ್ತಿರಲಿಕ್ಕಿಲ್ಲ, ಮುಸಲ್ಮಾನರಲ್ಲಿ ಶಿಕ್ಷಣದ ಮಟ್ಟ ಎಷ್ಟಿದೆಯೆಂದರೆ, ನಮ್ಮಲ್ಲಿ ಸಾಕ್ಷರತೆಯ ಮಟ್ಟ ಶೇಕಡ 40 ಇದ್ದರೆ ಅವರಲ್ಲಿ ಕೇವಲ ಶೇಕಡ 5ರಷ್ಟಿದೆಯೆಂದು ನಮ್ಮಲ್ಲಿ ಅನೇಕರಿಗೆ ಗೊತ್ತಿಲ್ಲ. ಇವೊತ್ತು ಎಷ್ಟು ಜನ ಮುಸಲ್ಮಾನರು ಸರ್ಕಾರಿ ಆಡಳಿತದಲ್ಲಿದ್ದಾರೆ? ಎಷ್ಟು ಜನ ಸರ್ಕಾರಿ ಸೇವೆಯಲ್ಲಿದ್ದಾರೆ? ಮುಸ್ಲಿಮರಿಗೆ ಅವರ ಜನಸಂಖ್ಯೆಯ ಆಧಾರದ ಮೇಲೆ ಅದು ಸರ್ಕಾರಿ ಸೇವೆ ಇರಬಹುದು, ಮಿಲಿಟರಿ ಸೇವೆ ಇರಬಹುದು, ಪೋಲೀಸ್ ಸೇವೆ ಇರಬಹುದು. ಅವರಿಗೆ ರೆಪ್ರಸೆಂಟೇಷನ್ ಸಿಕ್ಕಿಲ್ಲ. ಆದರೆ, ಇದಕ್ಕೆ ಕಾರಣವೇನೆಂದರೆ, ಮುಸಲ್ಮಾನರನ್ನು ಬಡತನದಲ್ಲಿಯೇ ಇಟ್ಟು, ಪ್ರತಿನಿತ್ಯವೂ ಸಹ ಅವರು ಬಡತನದಲ್ಲಿಯೇ ಬೇಯುತ್ತಿರತಕ್ಕಂಥ ಮುಂದೆ ನಾವು ಎರಡು ವಿಚಾರಗಳನ್ನು ಇಟ್ಟುಕೊಂಡು ಬಂದಿದ್ದೇವೆ. ಮೊದಲನೆಯದು, ಅವರ ಮಸೀದಿಯ ಬಗ್ಗೆ. ಎರಡನೆಯದು,ಸ್ಮಶಾನದ ಬಗ್ಗೆ. ಯಾವುದೇ ಊರಿನಲ್ಲಿ ಹೋಗಿ ನೋಡಿದರೆ, ಬಹಳ ಮುಖ್ಯವಾಗಿ ಮುಸಲ್ಮಾನ ನಾಯಕರು ಇದನ್ನು ತಿಳಿದುಕೊಳ್ಳಬೇಕಾಗಿದೆ. ಮುಸಲ್ಮಾನರು ಒಗ್ಗಟ್ಟಾಗತಕ್ಕಂಥಾದ್ದು ಅವರ ಊರಿನ ಮಸೀದಿಗೆ ಏನಾದರೂ ತೊಂದರೆಯಾಗಿದ್ದರೆ, ಇಲ್ಲವೆ ಮಸೀದಿ ಬಿಟ್ಟರೆ ಸ್ಮಶಾನ ಜಾಗದ ವಿಷಯ ಮಾತ್ರ. ಈ ಎರಡು ವಿಚಾರಗಳನ್ನು ಬಿಟ್ಟರೆ ಮುಸಲ್ಮಾನರನ್ನು ನಾವು ಈ ದೇಶದ ಮುಖ್ಯವಾಹಿನಿಯಲ್ಲಿ ಹೋಗುವುದಕ್ಕೆ ಬಿಟ್ಟಿಲ್ಲವೆನ್ನತಕ್ಕಂಥ

ಮಾತನ್ನು ಹೇಳಬೇಕಾಗಿದೆ. ಇವೊತ್ತು ರಾಜಕೀಯವಾಗಿ ಅವರನ್ನು ನೀವು ಒಬ್ಬ ಪ್ರೆಸಿಡೆಂಟ್ ಆಫ್ ಇಂಡಿಯಾ ಮಾಡುವುದರಿಂದ, ಒಬ್ಬ ಮುಸಲ್ಮಾನನನ್ನು ಚೀಫ್‌ಜಸ್ಟೀಸ್ ಆಫ್ ಇಂಡಿಯಾ ಮಾಡುವುದರಿಂದ ಮುಸಲ್ಮಾನರ ಬಡತನದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲವೆಂದು ನೀವು ತಿಳಿದುಕೊಂಡಿದ್ದೀರಿ. ಇವೊತ್ತಿನವರೆಗೆ ಅವರು ತಮ್ಮ ಮಕ್ಕಳನ್ನು ನಮ್ಮ ಸರ್ಕಾರಿ ಶಾಲೆಗಳಲ್ಲಿ ಸೇರಿಸುವುದಕ್ಕೆ ತಯಾರಿಲ್ಲ, ನಮಗೆ ಪ್ರತ್ಯೇಕವಾಗಿ ಉರ್ದು ಶಾಲೆ ಬೇಕೆಂದು ಅವರು ಕೇಳುತ್ತಾರೆ. ಕೇರಳ ರಾಜ್ಯದಲ್ಲಿ ಒಂದು ಬಿಟ್ಟರೆ ಬೇರೆ ಎಲ್ಲಾ ಕಡೆಗಳಲ್ಲಿಯೂ ಉರ್ದು ಶಾಲೆಗಳಲ್ಲಿ ಪ್ರತ್ಯೇಕವಾಗಿ ಇಡುವುದಕ್ಕೆ ಅವರು ಪ್ರಯತ್ನ ಮಾಡಿಕೊಂಡು ಬಂದಿದ್ದೇವೆ. ಇವೊತ್ತು ಮುಸ್ಲಿಂ ಮೂಲಭೂತವಾದದ ಬಗ್ಗೆ ಮಾತನಾಡತಕ್ಕಂಥ ಮುಸ್ಲಿಂ ಲೀಗ್ ಜೊತೆಯಲ್ಲಿ ಕಾಂಗ್ರೆಸ್ಸಿನವರು ಕಳೆದ ಮೂವತ್ತು ವರ್ಷಗಳ ಕಾಲ ಫ್ರೆಂಡ್‌ಶಿಪ್ ಮಾಡಿಕೊಂಡು ಬರುತ್ತಾರೆಂದರೆ ಕಾಂಗ್ರೆಸ್ಸಿಗೆ ನೈತಿಕವಾಗಿ ಹಕ್ಕು ಎಲ್ಲಿದೆ? ಎನ್ನತಕ್ಕಂಥ ಪ್ರಶ್ನೆ ಬರುತ್ತೆದ. ಮಾನ್ಯ ಅಧ್ಯಕ್ಷರೆ, ಇದು ತಮ್ಮ ಗಮನಕ್ಕೂ ಸಹ ಬಂದಿರಲಿಕ್ಕೂ ಸಾಕು.

ಮಾನ್ಯ ಉಪಾಧ್ಯಕ್ಷಣಿಯವರೆ, ನಮ್ಮ ಕೆಲವು ಸ್ನೇಹಿತರು ಅಯೋಧ್ಯೆಯ ವಿಚಾರ ರಾಮನ ಬಗ್ಗೆ ಅಥವಾ ರಾಮನ ನಂಬಿಕೆಯ ಬಗ್ಗೆ ಕೇವಲ ಹೊರಗಡೆ ತೋರಿಸುತ್ತಿದ್ದಾರೆ. ಇವರಿಗೆ ರಾಮದೇವರ ಬಗ್ಗೆ ರಾಮನ ಬಗ್ಗೆ ಅಸಕ್ತಿ ಇರತಕ್ಕದ್ದನ್ನು ಪ್ರತ್ಯೇಕವಾಗಿ ಪ್ರಚಾರ ಮಾಡುತ್ತಾರೆ. ನಮ್ಮ ದೇಶದಲ್ಲಿ ಹಿಂದೂಗಳಿಗೆ ಒಂದು ಕಾನೂನು ಇದೆ, ಮುಸ್ಲಿಂರಿಗೆ ಒಂದು ಕಾನೂನು ಇದೆ, ಹೀಗಿದ್ದರೆ ಹೇಗಾಗುತ್ತದೆಂದು ಈ ದೇಶದಲ್ಲಿ ಹಗಲೂರಾತ್ರಿ ಪ್ರಚಾರ ನಡೆಸಿದ್ದಾರೆ. ಇದು ವಾಸ್ತವಿಕವಾಗಿರತಕ್ಕ ಒಂದು ಅಂಶ. ಅವರಿಗೆ ಒಂದು ಕಾನೂನು ಇವರಿಗೆ ಒಂದು ಕಾನೂನು ಅದು ಏಕೆ ಎನ್ನುವ ಪ್ರಚಾರ ನಡೆದಿದೆ. ಸಾಮಾನ್ಯವಾಗಿ ಹಿಂದುಗಳ ಪರವಾಗಿ ಪ್ರಚಾರವನ್ನು ಇವರು ಸತತವಾಗಿ ಮಾಡಿಕೊಂಡು ಬಂದಿದ್ದಾರೆ. ಆದುದರಿಂದ ಈ ನಾನು ವಿನಂತಿಮಾಡಿಕೊಳ್ಳುವುದೇನೆಂದರೆ, ನೀವು ಬಹಳ ದೀರ್ಘವಾಗಿ ಯೋಚನೆ ಮಾಡಬೇಕಾಗಿದೆ, ಸ್ವಾತಂತ್ರ್ಯ ಬಂದು 47 ವರ್ಷಗಳ ನಂತರ ನಮ್ಮ ದೇಶದಲ್ಲಿರತಕ್ಕ ಮುಸಲ್ಮಾನರ ಬಡತನ ನಿವಾರಣೆಯಾಗದಿರುವುದಕ್ಕೆ ಯಾರು ಕಾರಣ? ಅದು ರಾಜ್ಯ ಸರ್ಕಾರವಿರಬಹುದು ಅಥವಾ ಕೇಂದ್ರ ಸರ್ಕಾರವಿರಬಹುದು, ಆಡಳಿತದಲ್ಲಿ ನಿಮಗೆ ಪ್ರಾತಿನಿಧ್ಯ ಸಿಗದೇ ಇರುವುದಕ್ಕೆ ಕಾರಣವೇನು? ಮಿಲಿಟರೀ ಸರ್ವಿಸ್‌ನಲ್ಲಿ, ಪೋಲೀಸ್ ಅಡ್ಮಿನಿಸ್ಟ್ರೇಶನ್‌ನಲ್ಲಿ ಏಕಿಲ್ಲ ಸ್ವಾತಂತ್ರ್ಯ ಬಂದು 47 ವರ್ಷಗಳಾದರೂ ಕೂಡ ನಿಮಗೆ ಏಕೆ ಪ್ರಾತಿನಿಧ್ಯವಿಲ್ಲ? 47 ವರ್ಷಗಳ ಕಾಲದ ಆಡಳಿತವಾಗಿದೆ ಅದರಲ್ಲಿ 2-3 ವರ್ಷಗಳ ಕಾಲದ ಜನತಾದಳದ ಆಡಳಿತವನ್ನು ಬಿಟ್ಟರೆ ಕಾಂಗ್ರೆಸ್ ಆಡಳಿತದಲ್ಲಿತ್ತು. ಇದುವರೆಗೆ ನಿಮ್ಮ ಮಸೀದಿಯ ಸಮಸ್ಯೆ, ಸ್ಮಶಾಣದ ಸಮಸ್ಯೆಗಳೇಕೆ ಬಗೆಹರಿದಿಲ್ಲ? ಯಾವುದೇ ಊರನ್ನು ನೋಡಿದರೂ ಸಹ ಮಸೀದಿ ಮತ್ತು ಸ್ಮಶಾಣ. ಇವೆರಡೇ ಸಮಸ್ಯೆಗಳು ಸಾಮಾನ್ಯವಾಗಿ ಮುಸಲ್ಮಾನ ಜನಗಳ ಮುಂದೆ ಇರಬೇಕಾದರೆ ಕಾರಣವೇನು? ಇದನ್ನು ಯೋಚನೆ ಮಾಡಬೇಕು. ಆದ್ದರಿಂದ ಯಾಹ್ಯಾರಂಥ ಮುಖಂಡರು ಇದರ ನಾಯಕತ್ವವನ್ನು ವಹಿಸಿಕೊಳ್ಳಬೇಕು. ಫಂಡಮೆಂಟಲಿಸ್ಟ್ ಮುಸಲ್ಮಾನರ್ಯಾರು ಇದ್ದಾರೆ ಅವರನ್ನು ನೀವು ಬೇರ್ಪಡಿಸಬೇಕಾಗಿಲ್ಲ, ಮುಸಲ್ಮಾನ ಬಾಂಧವರು ಈ ದೇಶದ ಮೇನ್‌ಸ್ಟ್ರೀಮ್‌ಗೆ

ಬರಬೇಕಾದರೆ ಇರತಕ್ಕಂಥ ಅಡ್ಡಗೋಡೆ ಏನು ಎನ್ನುವುದರ ಬಗ್ಗೆ ವಿಚಾರ್ ಮಾಡಬೇಕು.

ಶ್ರೀ ಎಸ್.ಎಂ. ಯಾಹ್ಯಾ : ಮಾನ್ಯ ಸಿಂಧ್ಯರವರು ಪ್ರಾಮುಖ್ಯವಾದ ವಿಚಾರವನ್ನು ಹೇಳುತ್ತಿದ್ದಾರೆ. ದೇಶದ ಸ್ವಾತಂತ್ರ್ಯ ಬಂದು 47 ವರ್ಷಗಳ ನಂತರ ಮೈನಾರಿಟೀಸ್, ಅದರಲ್ಲಿಯೂ ಮುಸ್ಲಿಂರು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರಲು ಕಾರಣವೇನು ಎನ್ನುವುದರ ಬಗ್ಗೆ ಬಹಳಷ್ಟು ಯೋಚನೆ ಮಾಡತಕ್ಕ ವಿಚಾರ. ಅವರ ಅಂಥ ಒಂದು ಡೀಬೇಟ್‌ನಿಂದ ಎಲ್ಲರ ವಿಚಾರವನ್ನು ತಿಳಿದುಕೊಂಡು there should be a common debate this is a very interesting and important question. The minorties in this country, if they are socially, economically and politically backward, then India cannot be forward. After all India can be really progressive, really forward if all the communities in this country, especialy the minorities, due to various historical reasons are backward today. Muslims are backward due to various reasons. Therefore, I must thank Mr. Sindhia for throwing light on this matter. We are very much concerned about the poverty, unemployment, illiteracy amongst the muslim and this is not only the matter for the muslim leadership alone. It is a matter of the entire nation. These are all national problems. In any civilized country minority problems are national problems, and certain privileges are given to minorities. Here again, we see, certain section of the people telling how minorities are appeased, how minorities are given everything. Let us see the statistics, let us see the situation, let us see what are the privileges given in this country to the minorities. As Mr. Sindhia righly said, they are so backward, socially, economically and educationally, and I must say this is really the crux of the problem and it is not for the muslim leadership alone but for others also. We must remember Mrs. Indira Gandhi.

We must remember Mrs.Indira Gandhi today, because she made certain attempts in her 15-point Programme to help this really unfortunate to community. They are today, fear-sticken. Muslims are really fear-sticken. They donot see their safety, neither personal nor property. Nothing is safe, they feel. This should not happen in a civilized country like ours. In a great country which has tremendous civilisation and culture, this should not happen Minorities should not feel unsecure. Therefore, it is the responsibility of one and all of us to see that the minorities live not only with all the rights, but they live in a way equally along with others.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನಗೂ ಸಹಿತ ಈ ವಿಚಾರ ಗೊತ್ತಿರಲಿಲ್ಲ. ಕೇಂದ್ರಸರ್ಕಾರದಿಂದ ಮತ್ತು ರಾಜ್ಯಸರ್ಕಾರದಿಂದ ನೂರಕ್ಕೆ ಕೇವಲ 5 ಪರ್ಸೆಂಟ್

ಮಾತ್ರ ಅಕ್ಷರಸ್ಥರಿದ್ದಾರೆ, ಲಿಟ್ರಸಿ ಪರ್ಸೆಂಟೇಜ್ 5 ಪರ್ಸೆಂಟ್ ಎಂದು ನನಗೆ ತಿಳಿದಿದ್ದೇ ಈ ಚರ್ಚೆ, ಪ್ರಾರಂಭವಾದಮೇಲೆ. Iam not telling that you are the only murderers of this crime. ಮುಸ್ಲಿಂ ಲೀಡರ್ಸ್ ಅಥವಾ ಕಾಂಗ್ರೆಸ್ ಪಕ್ಷ ಒಂದೇ ಎಂದು ನಾನು ಹೇಳುತ್ತಿಲ್ಲ. ಈ ಕ್ರೈಂಗೆ ನಾವೆಲ್ಲರೂ ಅಬೆಟರ್ಸ್ ಆಗಿದ್ದೇವೆ. ಈ ಪರಿಸ್ಥಿತಿಗೆ ನಾವೆಲ್ಲರೂ ಕಾರಣ ಕಾರಣಕರ್ತರಾಗಿದ್ದೇವೆ. ನಾನು ಕೇವಲ ಜನತಾ ದಳದ ಶಾಸಕನಾಗಿರುವ ದೃಷ್ಟಿಯಿಂದಲೇ ಈ ಮಾತನ್ನು ಹೇಳುತ್ತಿಲ್ಲ ಈ ದೇಶದ ಒಬ್ಬ ಸಾಮಾನ್ಯ ಪ್ರಜೆಯಾಗಿದ್ದು ಹೇಳುತ್ತಿದ್ದೇನೆ. ನೀವು ನನ್ನನ್ನು ಒಬ್ಬ ಆದರ್ಶ ಹಿಂದೂ ಎಂದು ಕರೆಯಬಹುದು. ನಾನು ಹಿಂದೂ ಆಗಿರುವುದಕ್ಕೆ ಬಹಳ ಹೆಮ್ಮೆ ಪಡುತ್ತೇನೆ. ನಾನು ರಾಮನ ಬಗ್ಗೆ ಅಗೌರವದಿಂದ ಎಂದೂ ಮಾತನಾಡಿಲ್ಲ. ರಾಮನ ಬಗ್ಗೆ ಅಪಾರವಾದ ಗೌರವ ಇಟ್ಟುಕೊಂಡಿರುವವನು ನಾನು. ಆದರೆ ಸೆಕ್ಯುಲರಿಸಂ ಎಂದರೆ ಏನು? ನಮ್ಮ ಪ್ರೈಮರಿ ಸ್ಕೂಲ್‌ನಿಂದ ಹಿಡಿದು ಪ್ರೌಢಶಾಲೆಯವರೆಗೂ ಸೆಕ್ಯುಲರಿಸಂ ಎಂದರೆ ಏನು ಎಂಬ ಬಗ್ಗೆ ನಾವು ಎಲ್ಲೂ ಕೂಡ ತಿಳುವಳಿಕೆಯನ್ನು ಕೊಡುತ್ತಿಲ್ಲ. ಈ ದೇಶದಲ್ಲಿ 15 ಕೋಟಿ ಮುಸಲ್ಮಾನರಿದ್ದಾರೆ. 15 ಕೋಟಿ ಮುಸಲ್ಮಾನರ ಜೊತೆಯಲ್ಲಿ ನಾವು ಬಾಳಬೇಕು, ಬದುಕಬೇಕೆಂಬ ಭಾವನೆ ನಮ್ಮಲ್ಲಿ ಎಷ್ಟು ಜನರಿಗೆ ಇದೆ? ಇದು ಮೊದಲು ತೀರ್ಮಾನವಾಗಬೇಕು. ನಮ್ಮ ಮನಸ್ಸಿನೊಳಗೆ ಮತ್ತು ನಮ್ಮ ಶಿಕ್ಷಣ ಪದ್ಧತಿಯ ಮೂಲಕ ನಾನು ನಿರ್ಮಾಣ ಮಾಡಿರತಕ್ಕ ಪರಿಸರದ ಮುಖಾಂತರ ನಾವೆಲ್ಲರೂ ಈ ದೇಶದಲ್ಲಿ ಸಮಾನವಾಗಿ ಮುಸಲ್ಮಾನರ ಜೊತೆಯಲ್ಲಿ ಬಾಳಬೇಕು, ಬದುಕಬೇಕೆಂಬ ಭಾವನೆಯನ್ನು ತರಬೇಕು, ಆದರೆ ಇದು ಆಗುತ್ತಿಲ್ಲ. ಕೇವಲ ಓಟಿನ ದೃಷ್ಟಿಕೋನವನ್ನು ನಾವು ಇಟ್ಟುಕೊಂಡಿದ್ದೇವೆ. ಪ್ರಾಫೆಟ್ ಮಹಮ್ಮದ್‌ನ ಹುಟ್ಟು ಹಬ್ಬಕ್ಕೆ ರಜೆಯನ್ನು ಕೊಡುವುದರ ಮುಖಾಂತರ ಮುಸಲ್ಮಾನರ ಆರ್ಥಿಕ ಪ್ರಗತಿಯನ್ನು ಮಾಡುತ್ತೇವೆಂದರೆ ಅದನ್ನು ನಾನು ಒಪ್ಪುವುದಿಲ್ಲ. ಅದು ಸಾಧ್ಯ ಕೂಡ ಇಲ್ಲ. ನಾನು ಈ ಮಾತನ್ನು ಬಹಳ ಜವಾಬ್ದಾರಿಯಿಂದ ಯೋಚನೆ ಮಾಡಿ ಹೇಳುತ್ತಿದ್ದೇನೆ. ಇನ್ನು ಬಿ.ಜೆ.ಪಿ. ಮಿತ್ರರು ಯಾರಿದ್ದಾರೆ ಅವರು ನನ್ನ ಅಭಿಪ್ರಾಯದಲ್ಲಿ ಬಿ.ಜೆ.ಪಿ. ಯವರು ಅಲ್ಲವೇ ಅಲ್ಲ There is no political party called B.J.P., It is a political projection of R.S.S.

ಆರ್.ಎಸ್.ಎಸ್. ಅಂದರೆ ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ನೀವು ಬ್ಯಾನ್ ಮಾಡಿರಬಹುದು. ಆದರೆ ನಾನಾದರೂ ಹೇಳುತ್ತೇನೆ, ಆರ್.ಎಸ್.ಎಸ್.ನವರು ಇವತ್ತು 27 ಲಕ್ಷ ಜನ ಕಾರ್ಯಕರ್ತರಿದ್ದಾರೆ. ಬ್ಯಾನ್ ಮಾಡುವ ಮುಖಾಂತರ ಆರ್.ಎಸ್.ಎಸ್. ನ್ನು ಸುಟ್ಟು ಹಾಕುತ್ತೇವೆಂದು ನೀವೇನಾದರೂ ತಿಳಿದುಕೊಂಡಿದ್ದರೆ ಖಂಡಿತವಾಗಿ ಅದು ಕನಸಿನಮಾತು. ಇದನ್ನು ನೀವು ತಿಳಿದುಕೊಳ್ಳಬೇಕು. ನಾವೆಲ್ಲರೂ ಇವತ್ತು ವಾಸ್ತವಾಂಶವನ್ನು ಕುರಿತು ಮಾತನಾಡೋಣ. ನಾನು ಇದರಲ್ಲಿ ರಾಜಕೀಯವನ್ನು ಮಾಡಬೇಕೆಂಬ ಉದ್ದೇಶದಿಂದ ಈ ಮಾತನ್ನು ಹೇಳುತ್ತಿಲ್ಲ. ನನಗೆ ಮಾನ್ಯ ವೀರೇಂದ್ರ ಪಾಟೀಲರ ಬಗ್ಗೆ ಬಹಳ ಅಭಿಮಾನವಿದೆ. ಅವರ ಅನಾರೋಗ್ಯ ಪರಿಸ್ಥಿತಿಯಲ್ಲೂ ಕೂಡ ಈ ದೇಶದ ವಿಚಾರದಲ್ಲಿ ಮಾತನಾಡಬೇಕೆಂದು ಅವರು ಇಲ್ಲಿಗೆ ಬಂದು ಮಾತನಾಡಿದ್ದಾರೆ. ನಾವೂ ಇದರ ಬಗ್ಗೆ ಚರ್ಚೆಮಾಡಿದ್ದೇವೆ. ಮಾನ್ಯ ವೀರೇಂದ್ರಪಾಟೀಲರ ಬಗ್ಗೆ ನಾವು ನಮ್ಮ ಅಭಿಮಾನವನ್ನು ವ್ಯಕ್ತಮಾಡಿದ್ದೇವೆ.

ಕಾಂಗ್ರೆಸ್ ಪಕ್ಷದವರನ್ನು ಮಾಡಬೇಕೆಂಬ ಮನಸ್ಸು ನನಗಿಲ್ಲ, ನಮಗೆ ದೇಶದಲ್ಲಿ ಒಂದು ಸುಭದ್ರವಾದ ಸರ್ಕಾರ ಇರಬೇಕಾಗಿದೆ. ಯಾರು ಆಡಳಿತವನ್ನು ಇವತ್ತು ನಡೆಸುತ್ತಿದ್ದಾರೆಂಬುದು ಮುಖ್ಯವಲ್ಲ. ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನಿಯಾಗಿರಬಹುದು ಮಾನ್ಯ ನರಸಿಂಹರಾಯರು ಪ್ರಧಾನಿಯಾಗಿರಬಹುದು, ಇದು ನಮಗೆ ಮುಖ್ಯವಲ್ಲ ಯಾರದ್ದರೂ ನಮಗೆ ಒಂದು ಒಳ್ಳೆಯ ಸುಭದ್ರವಾದ ಸರ್ಕಾರ ಇರಬೇಕು. ನಮ್ಮ ಕುಟುಂಬಕ್ಕೆ ಒಬ್ಬ ಯಜಮಾನ ಇರಬೇಕು.

ಆದರೆ ಇವತ್ತು ನಮಗೆ ಆ ಯಜಮಾನ ಇಲ್ಲದೇ ಇರತಕ್ಕ ಒಂದು ಕುಟುಂಬ ನಮ್ಮದಾಗಿದೆ. ಯಜಮಾನವಿಲ್ಲದ ದೇಶವಾಗಿದೆ. ಮಾನ್ಯ ಯಡಿಯೂರಪ್ಪನವರಿಗೆ ತಿಳುವಳಿಕೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ನಾವು ತಪ್ಪು ಮಾಡಿದ್ದೇವೆಂದು ನನಗೂ ಭಾಸವಾಗುತ್ತಿದೆ. ಅವರ ಸಹವಾಸದಲ್ಲಿ ನಾವು 1977ರಲ್ಲಿ ಅಧಿಕಾರಕ್ಕೆ ಬಂದೆವು. ನಮ್ಮ ಸರ್ಕಾರ ಬಂದಾಗ ಮಾನ್ಯ ಮುರಾರ್ಜಿಯವರು ಪ್ರಧಾನಮಂತ್ರಿಗಳಾದರು. ಆಗ ಈ ರಾಮಜನ್ಮ ಭೂಮಿಯ ಪ್ರಶ್ನೆ ಬರಲಿಲ್ಲ. 1989ರಲ್ಲಿ ನಮ್ಮ ಸರ್ಕಾರ ಬಂತು, 1983ರಲ್ಲಿ ಈ ರಾಜ್ಯದಲ್ಲಿ ನಾವೂ, ನೀವೂ ಸೇರಿ ಸರ್ಕಾರವನ್ನು ರಚನೆ ಮಾಡಿದೆವು. ಆ ಸಂದರ್ಭದಲ್ಲೂ ಕೂಡ ಈ ರಾಮಜನ್ಮ ಭೂಮಿಯ ಪ್ರಶ್ನೆ ಬರಲಿಲ್ಲ. 1989ರಲ್ಲಿ ವಿ.ಪಿ.ಸಿಂಗ್‌ರವರನ್ನು ಪ್ರಧಾನ ಮಂತ್ರಿಯನ್ನಾಗಿ ಮಾಡಿದಾಗಲೂ ಈ ಪ್ರಶ್ನೆ ಉದ್ಭವವಾಗಿರಲಿಲ್ಲ.

ರಥ ಯಾತ್ರೆ ಪ್ರಾರಂಭವಾಯಿತು, ರಥ ಯಾತ್ರೆ ಪ್ರಾರಂಭವಾದ ಮೇಲೆ ಏನಾಗಿದೆ ಪ್ರತಿಯೊಂದು ಹಳ್ಳಿಯಲ್ಲೂ ಸಹ ಅಲ್ಪ ಸಂಖ್ಯಾತ ವರ್ಗದವರು ಮೊದಲನೆಯ ಬಾರಿಗೆ ಭಯ ಭೀತರಾಗಿದ್ದಾರೆ. ಎಲ್ಲಾ ಕಡೆಯಲ್ಲೂ ಹೆದರಿದ್ದಾರೆ. ಅವರ ಹೆಣ್ಣು ಮಕ್ಕಳನ್ನು ಪಟ್ಟಣಕ್ಕೆ ಕಳಿಸಿದ್ದಾರೆ ಮರ್ಯಾದೆಯಿಂದ ಬದುಕುವುದಕ್ಕಾಗಿ, ಜೀವದ ಮೇಲೆ ಭಯಕ್ಕೋಸ್ಕರವಾಗಿ ಈ ಕೆಲಸ ಮಾಡಿದ್ದಾರೆ ಇದನ್ನು ನಾವೆಲ್ಲ ಅರಿತುಕೊಳ್ಳಬೇಕಾಗಿದೆ. ಅವರ ಕಣ್ಣಲ್ಲಿ ಕಣ್ಣೀರು ಬರುವುದಿಲ್ಲ ರಕ್ತ ಬರುತ್ತದೆ. ಇಟ್ಟಿಗೆ ಯಾತ್ರೆಗಳನ್ನು ಮಾಡಿದ್ದೀರಿ ನನ್ನದು ತಕರಾರು ಏನೂ ಇಲ್ಲ, ಆದರೆ ಇದರಲ್ಲಿದ್ದಂತಹ ಭಾವನೆ ಏನು ಇದೆ ಆ ಭಾವನೆಯಿಂದ ಈ ದೇಶದಲ್ಲಿ ಏನಾಗಿದೆ ಎಂದರೆ ಎಲ್ಲಾ ಕಡೆಗಳಲ್ಲೂ ಜನ ಭಯ ಭೀತರಾಗಿದ್ದಾರೆ. ಈಗ ಆರ್‌ಎಸ್‌ಎಸ್ ಭಜರಂಗ ದಳ, ವಿಹೆಚ್‌ಪಿ, ಬಿಜೆಪಿ, ಇವುಗಳನ್ನು ಬ್ಯಾನ್ ಮಾಡುವುದರಿಂದ ಸಂಪೂರ್ಣವಾಗಿ ಇವುಗಳನ್ನು ನಾವು ಮಾಡಬಹುದೆಂದು ನಾನು ತಿಳಿದುಕೊಂಡಿಲ್ಲ, ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ನಾನು ರಾಷ್ಟ್ರ ದ್ರೋಹಿಗಳು ಎಂದು ಹೇಳುವ ಮಟ್ಟಕ್ಕೆ ಎಲ್ಲೂ ಹೋಗುವುದಿಲ್ಲ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕೆಲವು ವ್ಯಕ್ತಿಗಳ ಪರಿಚಯ ವೈಯಕ್ತಿಕವಾಗಿ ನನಗೆ ಇದೆ. ದೇಶ ಪ್ರೇಮಿಗಳು ಪ್ರಾಮಾಣಿಕ ನಿಷ್ಠೆಯಿಂದ ದುಡಿಯತಕ್ಕಂಥ ಮುಖಂಡರುಗಳಿದ್ದಾರೆ 27 ಲಕ್ಷ ಜನ ಕಾರ್ಯಕರ್ತರಿದ್ದಾರೆ ಅವರ ಪ್ರಾಮಾಣಿಕತೆಯನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಆದರೆ ಒಂದು ನನಗೆ ಗೊತ್ತಿರುವ ಹಾಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮನಸ್ಸು ಅವರ ನಿಷ್ಠೆ ಮೊದಲು ಅವರ ಸಂಘಟನೆಗೆ ನಂತರ ದೇಶಕ್ಕೆ ಅದನ್ನು ಅದಲು ಬದಲು ಮಾಡಿಕೊಳ್ಳಿ. ಮುಂಚೆ ದೇಶಕ್ಕೆ ಮಾಡಿ ಆಮೇಲೆ ಸಂಘಟನೆಗೆ ಮಾಡಿ ಹಿಂದೂ ರಾಷ್ಟ್ರದ (ಮಾನ್ಯ ಉಪಾಧ್ಯಕ್ಷಣಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು) ಒಂದು ಕಲ್ಪನೆಯನ್ನು

ಇಟ್ಟುಕೊಂಡಿದ್ದೀರಿ. ಹಿಂದೂ ರಾಷ್ಟ್ರ ಅಂದರೆ ಏನು? ಎಲ್ಲಿಯವರೆಗೆ ಆರ್.ಎಸ್.ಎಸ್. ಹಿಂದೂ ರಾಷ್ಟ್ರದ ಕಲ್ಪನೆಯನ್ನು ಬಿಡುವುದಕ್ಕೆ ಸಾಧ್ಯವಿಲ್ಲ, ಹಿಂದೂ ರಾಷ್ಟ್ರವನ್ನು ಕಟ್ಟಲಿಕ್ಕೆ ಸಾಧ್ಯವಿಲ್ಲ, ಯಾವ ವೇದದಲ್ಲಿ ಈ ರೀತಿ ಯಾವ ಪುರಾಣದಲ್ಲಿ ಹೇಳಿದೆಯೋ, ಎಲ್ಲಿ ಹೇಳಿದೆ?

ಪ್ರೊ॥ ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷಣಿಯವರೆ, ಹಿಂದೂ ರಾಷ್ಟ್ರವನ್ನು ವೇದ ಪುರಾಣದಲ್ಲಿ ಹೇಳಿದೆಯೊ, ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ವೇದದಲ್ಲಿ ಹೇಳಿದೆ ತಾವು ಮಾತನಾಡಿದ ಮೇಲೆ ನನಗೆ ಅವಕಾಶ ಕೊಡುತ್ತಾರೋ ಏನೋ ನಾನು ಮನುಧರ್ಮ ಶಾಸ್ತ್ರವನ್ನು ತಂದಿಟ್ಟುಕೊಂಡಿದ್ದೇನೆ. ವೇದದಲ್ಲಿ ಏನು ಹೇಳಿದೆ ಎಂದು ಆಮೇಲೆ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಜವಾಗಿ ಹಿಂದೂಗಳು ಯಾರು? ಪ್ರೊ॥ ನಂಜುಂಡಸ್ವಾಮಿಯವರು ವಿಚಾರವಾದಿಗಳು ಅವರ ಜೊತೆಯಲ್ಲಿ ನಾನು ಈ ಸಂದರ್ಭದಲ್ಲಿ ತರ್ಕಕ್ಕೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ, ಆದರೆ ನಾನು ಹಿಂದೂ ಧರ್ಮವನ್ನು ಅರ್ಥ ಮಾಡಿಕೊಂಡಿರುವ ಹಾಗೆ *it is a way of life* ಅದು ಒಂದು ಜೀವನ ಪದ್ಧತಿ. ಬಸವೇಶ್ವರರು ಇರಬಹುದು, ಪರಮಹಂಸರು ಇರಬಹುದು, ಬುದ್ಧ ಇರಬಹುದು ಕನಕದಾಸರು ಇರಬಹುದು ಯಾರೇ ಹೇಳಿರಬಹುದು ಆದರೆ ಬೇರೆ ಧರ್ಮವನ್ನು ದ್ವೇಷ ಮಾಡತಕ್ಕ ಮಾತನ್ನು ಯಾರೂ ಎಲ್ಲೂ ಹೇಳಿಲ್ಲ. ರಾಮಕೃಷ್ಣ ಪರಮಹಂಸರು ಹೇಳಿರತಕ್ಕಂತಹ ಮಾತನ್ನು ನಾನು ಕೋಟ್ ಮಾಡುತ್ತಿದ್ದೇನೆ. "Hinduism is not a historical religion like Buddhism, Christianity its Islam, each of which has been articulated by the teachings of its individual founder, Hinduism baffles all attempts to give it an easy and convenient definition, the truths of the Hindu Scriptures the Vedas were not fomulated by historical persons. Moreover the universal nature of Hiduism frustrates any endeavour to confine it in an exact statementi, the Vedas preach an impersonal reality as ultimate truth, and not the personal God."

ಸದ್ಯಕ್ಕೆ ಬೇರೆ ಒಂದು ಹೆಸರನ್ನು ಹಿಂದು ಧರ್ಮ ಕೊಟ್ಟಿದೆಯೇವಿನಹ ಹಿಂದು ಧರ್ಮ ಎಲ್ಲೂ ಸಹಿತ ನೀವು ಮುಸಲ್ಮಾನರು, ಕ್ರಿಶ್ಚಿಯನ್ನರು, ಫಾರ್ಸಿಗಳನ್ನು ವಿರೋಧ ಮಾಡಿ ಎಂದು ಹೇಳಲಿಲ್ಲ. ನೀವು ಸನಾತನ ಧರ್ಮದ ಬಗ್ಗೆ ಹೇಳತಕ್ಕಂಥ ವಿಚಾರ ಮಾಡಿ. ನೀವು ಓಟಿಗೋಸ್ಕರ ರಾಮನ ಕಿರೀಟವನ್ನು ಧರಿಸುತ್ತಿರಲ್ಲ, ನಾಚಿಕೆಯಾಗಬೇಕು. ಯಾರು ಡಾಲ್ಮಿಯಾ, ಈ ದೇಶದ ಕೋಟ್ಯಾಧೀಶ್ವರ ಡಾಲ್ಮಿಯ ರಾಮನ ಕಿರೀಟವನ್ನು ಹಾಕಿಕೊಳ್ಳುತ್ತಾರೆ. ಸಿಂಗಾರ ಹಾಕಿಕೊಳ್ಳುತ್ತಾರೆ. ಅವರ ಬಗ್ಗೆ ವೈಯಕ್ತಿಕವಾದ ಗೌರವ ಇದೆ. ಮುರಳಿಮನೋಹರ ಜೋಶಿಯವರು ರಾಮನ ಕಿರೀಟವನ್ನು ಹಾಕಿಕೊಳ್ಳುತ್ತಾರೆ. ಇಂಥ ಪವಿತ್ರವಾದ ಕಿರೀಟವನ್ನು ಓಟಿಗೋಸ್ಕರ ಪರದಾಡುತ್ತಿರತಕ್ಕಂಥ ನನ್ನಂಥ ಪಾಪಿಗಳು ಹಾಕಿಕೊಳ್ಳಬಹುದೇ, ಇದನ್ನು ಯೋಚನೆ ಮಾಡಬೇಕಾಗುತ್ತದೆ. ನಾಟಕದಲ್ಲಿ ಹಾಕಿಕೊಳ್ಳಬಹುದು.

ಶ್ರೀ ಬಿ.ಹೆಚ್. ಬನ್ನಿಕೋಡ್ : ರಾಮನಬಗ್ಗೆ ಅವರು ಹೇಳುವುದನ್ನು ಒಪ್ಪಿಕೊಳ್ಳಬಹುದು. ನಾಟಕೀಯವಾಗಿಯಲ್ಲ, ನಿಜ ಜೀವನದಲ್ಲಿ ರಾಮನ ಬಗ್ಗೆ ಹೇಳುತ್ತಿದ್ದಾರೆ ಅದಕ್ಕೆ ಹೇಳಿ?

Sri. P.G.R. SINDIA : They behave like demi Gods.

ನಾವೇ ದೇವರೆಂದು ಹೇಳುವ ಭಾವನೆಯಲ್ಲಿ ವರ್ತನೆ ಮಾಡುತ್ತಿದ್ದಾರೆ. ಮತ್ತೆ ನಮ್ಮ ರಾಮನ ಪಾದುಕೆ, ನನಗಂತೂ ಇದು ಅರ್ಥವಾಗುವುದಿಲ್ಲ, ರಾಮನ ಪಾದುಕೆ ಆಯಿತು, ಭರತನ ಪಾದುಕೆ ಆಯಿತು. ಈ ಸಮಸ್ಯೆಗಳನ್ನು ಬಗೆಹರಿಸದೇ ಹೋದರೆ ಇನ್ನು 20 ವರ್ಷಗಳನಂತರ ಆದವಾನಿಯವರ ಪಾದುಕೆಯನ್ನು ಇದೇ ರೀತಿ ರಾಮನ ಪಾದುಕೆ ಎಂದು ಹೇಳಿಕೊಂಡು ಹೋಗುತ್ತೀರೋ, ಇನ್ನು 30 ವರ್ಷಗಳಾದ ಮೇಲೆ ಮಾನ್ಯ ಯಡಿಯೂರಪ್ಪನವರ ಪಾದುಕೆಯನ್ನು ಹೊರತಕ್ಕಂಥ ಸ್ಥಿತಿಗೆ ಬರುತ್ತೀರೋ ಏನೋ ನನಗಂತೂ ಗೊತ್ತಿಲ್ಲ.

ನಾನು ಈ ಮಾತನ್ನು ಅವರ ಹೃದಯಪರಿವರ್ತನೆಯಾಗಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಅವರ ಹೃದಯ ಪರಿವರ್ತನೆಯಾಗಿ ಈ ದೇಶದಲ್ಲಿ ಹಿಂದುಗಳು ಮುಸಲ್ಮಾನರು, ನಾವೆಲ್ಲರೂ ಒಂದೇ ಸಮಾನರು ಎನ್ನುವ ಮನೋಭಾವನೆಯಿಂದ ಹೋಗಬೇಕೆನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆಯೇ ಹೊರತು ಅವರನ್ನು ಪ್ರವೋಕ್ ಮಾಡಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಸಿಂಧ್ಯರವರೇ, ಅವರ ಮನಸ್ಸು ವಜ್ರದಷ್ಟು ಕಠೋರವಾಗಿದೆ. ಅದನ್ನು ಏನಾದರೂ ಒಲಿಸುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಜವಾಗಿಯೂ ಹೇಳುತ್ತಿದ್ದೇನೆ ಅವರ ಬೂಟಾಟಿಕೆ ಬಯಲಾಗುತ್ತಿದೆ.

ಶ್ರೀ ಟಿ.ಎಂ. ಮಂಜುನಾಥ್ : ಶ್ರೀ ರಾಮಚಂದ್ರ ಒಬ್ಬ ಚಕ್ರವರ್ತಿ. ಅವನು ಹಾಕುತ್ತಿದ್ದ ಪಾದುಕೆ ಚರ್ಮದಿಂದ ಮಾಡಿರತಕ್ಕಂಥದ್ದು. ಅದನ್ನು ಭರತ ತೆಗೆದುಕೊಂಡು ಹೋಗಿದ್ದ ಇವರು ಮೂರು ಸಾವಿರ ನಾಲ್ಕು ಸಾವಿರ ಮರದ ಪಾದುಕೆಗಳನ್ನು ತೆಗೆದುಕೊಂಡು ಹೋಗಿ ದೇಶದ ತುಂಬ ಹರಡುತ್ತಿದ್ದಾರೆ. ರಾಮ ಪಾದುಕೆ ಎಲ್ಲಿದೆ ಇದರ ಬಗ್ಗೆ ಸ್ವಲ್ಪ ವಿಶ್ಲೇಷಣೆ ಕೊಡಬೇಕು.

Sri. P.G.R. SINDHIA : In 1948 we lost our father of the Nation. ಆದರೆ ನೀವು ಆರನೆಯ ತಾರೀಖು ಮಾಡಿರತಕ್ಕಂಥ ಕೆಲಸದಿಂದಾಗಿ The Spirit of the Nation is dead. ಇದು ನಗೆಪಾಟಲ ಪರಿಸ್ಥಿತಿಯಾಗಿದೆ. ಮಾನ್ಯ ವೀರೇಂದ್ರ ಪಾಟೀಲ್‌ರವರು ಈ ದೇಶದ ಬಗ್ಗೆ ಬಿ.ಬಿ.ಸಿ.ಯಲ್ಲಿ ವಿದೇಶಗಳಲ್ಲಿ ನಮ್ಮ ಬಗ್ಗೆ ಶೇಕಡಾ 75 ರಷ್ಟು ಜನ ಅಗೌರವದಿಂದ ನೋಡುತ್ತಿದ್ದಾರೆನ್ನತಕ್ಕಂಥ ಮಾತನ್ನು ಹೇಳುತ್ತಿದ್ದರು. ಇದನ್ನು ಯಾರು ಮಾಡಿದವರು ಸ್ವಾಮಿ. ಯಾವುದೋ 500 ವರ್ಷಗಳ ಹಿಂದೆ ಕಟ್ಟಿದಂಥ ಬಾಬರಿ ಮಸೀದಿಯ ಬಗ್ಗೆ ಹೇಳುತ್ತಿದ್ದೀರಿ. ಬೆಳಗಿನಿಂದ ಸಾಯಂಕಾಲದ ವರೆಗೆ ವಿವೇಕಾನಂದ ಹೆಸರನ್ನು ಹೇಳುತ್ತೀರಾ? ಕನ್ಯಾಕುಮಾರಿಯ ವಿವೇಕಾನಂದರ ಮಾತನ್ನು ಹೇಳುತ್ತೀರಾ? ವಿವೇಕಾನಂದ ಪೂಜ್ಯ ಪುರುಷ ಎನ್ನತಕ್ಕ ಮಾತನ್ನು ಹೇಳುತ್ತೀರಾ? ಅಮೇರಿಕಾದಲ್ಲಿರತಕ್ಕಂಥವರು ಸ್ವಾಮಿ ವಿವೇಕನಂದರನ್ನು ಕೇಳುತ್ತಾರೆ. ವಿವೇಕಾನಂದರು ಏನು ಹೇಳಿದರೆಂದರೆ I am

made out of four Religions. The four spirits are there in my heart. equlity of Islam, Love of Christianity, Compassion of Buddha and tolerance of Hinduism.

ಎನ್ನತಕ್ಕಂಥ ಮಾತು. ನಿಮಗೆ ಅದು ಜ್ಞಾಪಕಕ್ಕೆ ಬರಲಿಲ್ಲ, ಇಂಡಿಯಾ ಟುಡೆಯಲ್ಲಿ ಓದಬೇಕು. ನಾವು ಎಲ್ಲರೂ ಸಹಿತ, ಈ ದೇಶದ ಪ್ರತಿಯೊಬ್ಬ ಪ್ರಜ್ಞಾವಂತರೂ ಸಹಿತ ಡಿಸೆಂಬರ್ 6ನೇ ತಾರೀಖು ನಡೆದದ್ದನ್ನು ನಾವು ಗಮನಿಸಬೇಕು. ಆ ದಿನಬೆಳಗಿನ ಜಾವ 9 ಗಂಟೆಯಿಂದ ಸಾಯಂಕಾಲ 4-15 ರವರೆಗೆ ಯಾವ ರೀತಿ ಇತ್ತು. 4.15ರಿಂದ 4-49ರ ಒಳಗಡೆ ಈ ದೇಶದ ಸ್ಪಿರಿಟನ್ನು ಯಾವ ರೀತಿ ಅವರು ಸಾಯಿಸಿದ್ದಾರೆನ್ನುವುದನ್ನು ಇದರಲ್ಲಿ ಕೊಟ್ಟಿದ್ದಾರೆ. ಲಕ್ಷಾಂತರ ಜನ ಸೇರಿ ಬಾಬರಿ ಮಸೀದಿಯನ್ನು ಡಿಮಾಲಿಷ್ ಮಾಡಿದರು. ಯಾರು ಇದಕ್ಕೆ ಜವಾಬ್ದಾರರು? ಈ ದೇಶದಲ್ಲಿ ರಕ್ತಪಾತವಾಗುತ್ತಿದೆ, ಈ ದೇಶ ಹುರಿಯುತ್ತಿದೆ, ಇದಕ್ಕೆ ವಿರೋಧ ಪಕ್ಷದ ನಾಯಕರು ರಾಜೀನಾಮೆಕೊಡುತ್ತಾರೆ. ಇದಕ್ಕೆ ಕಾರಣವೇನು? ಆ ಸರ್ಕಾರಗಳನ್ನು ನಡೆಸುತ್ತಿರತಕ್ಕಂಥ ಮಾನ್ಯ ಮುಖ್ಯ ಮಂತ್ರಿಗಳು ರಾಜೀನಾಮೆ ಕೊಡುತ್ತಾರೆ. ಇದಕ್ಕೆ ಏನು ಕಾರಣ? ನೀವು ಈ ದೇಶದ ಜನರನ್ನು ಮೋಸಮಾಡಲಿಕ್ಕೆ ಹೊರಟಿದ್ದೀರಿ. ಇದಕ್ಕೆ ಉತ್ತರ ಯಾರು ಕೊಡತಕ್ಕಂಥವರು.

ಇದರಲ್ಲಿ ಕೆಲವು ವಿಚಾರಗಳು, ಇವೆ. ಭಾರತೀಯ ಜನತಾ ಪಕ್ಷದ ಲೋಕಸಭಾ ಸದಸ್ಯರಾದ ಉಮಾ ಭಾರತಿಯವರು ಹೇಳಿದ್ದಾರೆ, "It is the most blissful day of my life. I keep pinching myself to see if I am aware

ಅಶೋಕ ಸಿಂಗಲ್ ಅವರು ಹೇಳಿದ್ದಾರೆ "Hindu sentiments in this country cannot be subjugated for long. This has been proved today."

ನೀವಲ್ಲ ಇದನ್ನು ಕೆಡವಿರತಕ್ಕವರು. ಯಾರು ಆಂಟಿ ಸೋಷಿಯಲ್ ಎಲಿಮೆಂಟ್ಸ್ ಇದ್ದಾರೆ, ಬಾಂಬೆಯಿಂದ ಬಂದ ಶಿವಸೇನೆಯವರು ಇದನ್ನು ಕೆಡವಿದ್ದಾರೋ?, ಇಲ್ಲಿ ಸಾಧ್ವಿ ರೀತಾಂಬರಿಯವರು ಹೇಳುತ್ತಾರೆ? ಆಲ್ ಅವರೇ ತಕ್ಕಾರ್ ಎಂದು ಹೇಳಿದ್ದಾರೆ. ಹೊಡಿ ಇನ್ನೊಂದೇಟನ್ನು ಅದನ್ನು ಕಿತ್ತಾಕು. ಕರಸೇವಕರು ಹೇಳುತ್ತಾರೆ. "The Leaders who do not allow Kar Seva will face our Mar Seva" ಎಂದು ಹೇಳುತ್ತಾರೆ. ನೀವು ಅಲ್ಲ ಇದನ್ನು ಮಾಡಿರತಕ್ಕವರು. ಬಾಬ್ರಿ ಮಸೀದಿಯನ್ನು ಒಡೆದಿರತಕ್ಕವರು ನೀವು ಅಲ್ಲ, ಹಾಗಾದರೆ ಒಡೆದಿರತಕ್ಕವರು ಯಾರು? ಇದನ್ನು ನೀವು ವಿಚಾರ ಮಾಡಬೇಕು. ರಾಷ್ಟ್ರೀಯ ಸ್ವಯಂ ಸೇವಕ ಸಂಘ ಬೇರೆ, ಬಿಜೆಪಿ, ಬೇರೆ, ವಿಹೆಚ್‌ಪಿ. ಬೇರೆ, ವಿದ್ಯಾರ್ಥಿ ಪರಿಷತ್ತು ಬೇರೆ, ಭಜರಂಗ ಬೇರೆ ಎಂದು ಹೇಳಬಹುದು. ಆದ್ದರೆ, ನನಗೆ ಹೇಳುವುದಕ್ಕಾಗುವುದಿಲ್ಲ, ವಿದ್ಯಾರ್ಥಿ ದಿಸೆಯಲ್ಲಿ ನಾವು ವಿದ್ಯಾರ್ಥಿ ಪರಿಷತ್ತಿನಲ್ಲಿ ಕಾರ್ಯದರ್ಶಿಯಾಗಿ ದುಡಿದಿರತಕ್ಕವನು. ಆದುದರಿಂದ ನಿಮ್ಮೆಲ್ಲರಮೇಲೆ ನನಗೆ ಗೌರವ ಇದೆ. ನೀವು ಪ್ರಾಮಾಣಿಕ ಜನ. ನೀವು ಹೋಗತಕ್ಕ ದಾರಿ ಸರಿಯಲ್ಲ. ನೀವು ಹಿಂದುತ್ವವನ್ನು ಎಲ್ಲಿಯವರೆಗೆ ಬಿಡುವುದಿಲ್ಲ ಅಲ್ಲಿಯವರೆಗೆ ದೇಶವನ್ನು ಕಟ್ಟುವುದಕ್ಕಾಗುವುದಿಲ್ಲ. ಇಂದು ದೇಶವನ್ನು ಒಡೆತಕ್ಕ ಪ್ರಯತ್ನ ಆಗುತ್ತಿದೆ. ಇದನ್ನು ನೀವು ಅರ್ಥ ಮಾಡಿಕೊಳ್ಳಬೇಕಾಗಿದೆ. ದುರ್ದೈವದಿಂದ ದುಃಖದಿಂದ ಹೇಳಬೇಕಾದ ಮಾತು ಎಂದರೆ ನಮ್ಮ ಕೇಂದ್ರ ಸರ್ಕಾರದ ಜವಾಬ್ದಾರಿಯನ್ನು ಹೊತ್ತಂಥ ಜನಗಳು ಯಾವ ದಿಕ್ಕಿನಲ್ಲಿ ನಡೆದುಕೊಂಡು

ಹೋಗುತ್ತಿದ್ದಾರೆಂಬುದನ್ನು ಸ್ವಲ್ಪ ವಿಚಾರ ಮಾಡೋಣ. ಮಾನ್ಯ ವೀರೇಂದ್ರ ಪಾಟೀಲರು ಅದರ ಬಗ್ಗೆ ಏನು ಹೇಳಿದರು ಅದನ್ನು ಕೇಳಿ ಮನಸ್ಸಿನಲ್ಲಿ ಎಲ್ಲರಿಗೂ ನೋವಾಯಿತು. ಈ ಮಾತನ್ನು ಏತಕ್ಕೆ ಹೇಳಿದ್ದಾರೆಂದು. ಆದರೆ ರಮೇಶ್ ಅವರು ಸ್ವಲ್ಪ ವಿಚಾರ ಮಾಡಬೇಕು. ನಿಮ್ಮ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ. ನೀವು ಬೇರೆಯವರ ಅಭಿಪ್ರಾಯ ಕೇಳಿ. ನಿಮ್ಮಪಕ್ಷದ ಆಂತರಿಕ ವಿಚಾರದಲ್ಲಿ ಕೈ ಹಾಕುವುದಕ್ಕೆ, ಬಾಯಿ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಆದರೆ ಮಾನ್ಯ ವೀರೇಂದ್ರ ಪಾಟೀಲರು ಹೇಳಿರತಕ್ಕ ಮಾತಿನಲ್ಲಿರತಕ್ಕ ಸತ್ಯತೆ ಬಗ್ಗೆ ಹೃದಯ ಮುಟ್ಟಿ ನೋಡಿಕೊಂಡು ವಿಚಾರ ಮಾಡಬೇಕು.

ಶ್ರೀ ಎಸ್. ರಮೇಶ್ : ಯಾವ ಉದ್ದೇಶದಿಂದ ಹೇಳಿದ್ದಾರೆಂದು ಹೃದಯ ಮುಟ್ಟಿಕೊಂಡು ನೋಡಬೇಕು? ಅವರು ಹೇಳಿರುವ ರೀತಿ ನೀತಿ ಮೇಲೆ ಹೋಗುತ್ತದೆ. ನಿಮ್ಮಂಥವರಿಗೆ ಜಾಗ ಕೊಟ್ಟಿದ್ದಾರೆಲ್ಲ ಎಂದು ಬೇಜಾರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹೇಳುವ ವಿಚಾರಗಳನ್ನು ಎಲ್ಲಿ ಹೇಳಬೇಕೆಂಬ ತೀರ್ಮಾನವನ್ನು ಅವರೇ ಮಾಡಬೇಕು. ಹಿಂದೆ ಹೇಳಿ ಈ ಸ್ಥಿತಿ ಆಗಿದೆ. ಇನ್ನು ಮೇಲೆ ಮುಂದೆ ಹೇಳುವುದು ಒಳ್ಳೆಯದು. ಹಿಂದು ಮುಸ್ಲಿಮರ ಬಗ್ಗೆ ಈ ಸದನದಲ್ಲಿ ಚರ್ಚೆಯಾಗುವುದು ಒಳ್ಳೆಯದು. ಅದು ಆಗದೆ ಇಲ್ಲಿಯವರೆಗೆ ಬಂದಿರುವದು. ನಾವು ಪೋಲೀಸರನ್ನು ಏತಕ್ಕೆ ಬೈಯಬೇಕು? ಪೋಲೀಸ್ ಅಧಿಕಾರಿಗಳು ಏನು ಮಾಡುತ್ತಾರೆ? ಅವರನ್ನು ಬೈಯುವುದಕ್ಕೆ ನಾನು ತಯಾರಿಲ್ಲ. ಆಡಳಿತ ನಡೆಸತಕ್ಕ ನಾವು, ಮುಖಂಡತ್ವ ಹೊತ್ತಿರತಕ್ಕ ನಾವು ಏನು ಮಾಡಿದ್ದೇವೆ? ಕಾಂಗ್ರೆಸ್ ಪರಿಸ್ಥಿತಿ ೧೯೭೭ ರ ಕಾಂಗ್ರೆಸ್ ಅಲ್ಲ. ಮೊರಾರ್ಜಿ ದೇಸಾಯಿ, ಚರಣಸಿಂಗರಿಗೆ ಟೀಕೆ ಮಾಡಿ ಅಧಿಕಾರಕ್ಕೆ ಬರುವುದಕ್ಕೆ ೧೯೮೦ರ ಕಾಂಗ್ರೆಸ್ ಅಲ್ಲ, ೧೯೮೯ರ ಪರಿಸ್ಥಿತಿಯೂ ಇಲ್ಲ. ಕಾಂಗ್ರೆಸ್ ಅಧ್ಯಕ್ಷರು ಈ ಮಾತನ್ನು ಹೇಳಿದ್ದಾರೆ.

"There is no Vote Catcher, there is no Mr. Clean."

ಇದನ್ನು ನೀವು ಅರ್ಥ ಮಾಡಿಕೊಳ್ಳಬೇಕಾಗಿದೆ. ಬಹಳ ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಇವತ್ತಿನ ಕಾಂಗ್ರೆಸ್ ಅಧ್ಯಕ್ಷರು ಯಾರಿದ್ದಾರೆ ಅವರು ನಮ್ಮ ದೇಶದ ಪ್ರಧಾನಿಗಳಾಗಿರುವುದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಓಟ್ ಕ್ಯಾಚರ್ ಇಲ್ಲ, ಮಿಸ್ಟರ್ ಕ್ಲೀನೂ ಇಲ್ಲ, ಇಂದಿರಾ ಕಾಂಗ್ರೆಸ್ ಇಲ್ಲ, ಯಾವ ರೀತಿ ದೇಶವನ್ನು ಉಳಿಸಬೇಕೆಂದು ವಿಚಾರ ಮಾಡಿ. ನಾನು ಶ್ರೀಮತಿ ಇಂದಿರಾ ಗಾಂಧಿಯವರನ್ನು ೨೧ ವರ್ಷಗಳ ಕಾಲ ವಿರೋಧ ಮಾಡಿರುವವನು.

೪.೪೦ ಪಿ.ಎಂ.

ಆದರೆ ಇಂದಿರಾಗಾಂಧಿಯವರು ಇವತ್ತು ಬದುಕಿದ್ದರೆ ನಿಮಗೆ ಹೇಳುತ್ತೇನೆ, ಬೆಂಗಳೂರಿನಲ್ಲಿ ಅಷ್ಟೇ ಅಲ್ಲ, ಇಡೀ ದೇಶದಲ್ಲಿ ಬೃಹತ್ ರ್‍ಯಾಲಿ ಮಾಡುಸುತ್ತಿದ್ದರೆ. ನಿಮಗೆ ಕಾಂಗ್ರೆಸ್ ಮುಖಂಡರಿಗೆ ಜನರ ಹತ್ತಿರ ಹೋಗುವುದಕ್ಕೆ ತಾಕತ್ತು ಇದೆಯೇ ಇವತ್ತು? ಡೆಲ್ಲಿಯಲ್ಲಿ ಒಂದು ಬೃಹತ್ ರ್‍ಯಾಲಿಯನ್ನು ಮಾಡುವುದಕ್ಕೆ ನಿಮ್ಮ ಪ್ರಧಾನಿಗಳಿಗೆ ಆಗಿದೆಯೇ? ವ್ಯಾಪಾರಿಗಳನ್ನು ಕರೆದು ಮಾತನಾಡಿದ್ದೀರಿ? ಇದನ್ನು ಅರ್ಥ ಮಾಡಿಕೊಳ್ಳಬೇಕು. ಕಾಂಗ್ರೆಸ್ ಮುಖಂಡರಿಗೆ, ನಿಮಗೆ ಜನರ ಹತ್ತಿರ ಹೋಗುವುದಕ್ಕೆ ಧೈರ್ಯ ಇಲ್ಲ.

ಶ್ರೀ ಎಸ್. ರಮೇಶ್ : ಸಿಂಧ್ಯಾ ಅವರ ಹುರುಪು ಬಹಳ ಚೆನ್ನಾಗಿದೆ. ಸುಮ್ಮನೆ ಇರುವ ನಮ್ಮನ್ನು ಎಬ್ಬಿಸುತ್ತಿದ್ದಾರೆ.ನಮಗೆ ಜನರ ಹತ್ತಿರ ಹೋಗುವ ಧೈರ್ಯ ಇಲ್ಲ ಎಂದಲ್ಲ.ಆದರೆ ಉರಿಯುವ ಬೆಂಕಿಗೆ ತುಪ್ಪಸುರಿಯಬಾರದೆಂದು ಸುಮ್ಮನಿದ್ದೇನೆ. ಕಾವೇರಿ ಪ್ರಶ್ನೆ ವಿಚಾರದಲ್ಲಿ ನಾನು ಸಭೆಗೆ ಹೋದಾಗ ಅಲ್ಲಿ ಯಡಿಯೂರಪ್ಪನವರ ಕಡೆಯವರು ಹೇಳಿದರು. ರಮೇಶ್ ಬಂದ. ಗಲಾಟೆ ಮಾಡಿಸಿದ ಎಂದು. ಅದು ಆಗಬಾರದು ಎನ್ನುವ ಉದ್ದೇಶದಿಂದ ಇದು. ಈ ವಾರ ತಡೆಯಿರಿ. ಈ ವಾರ ಕಳೆದ ಮೇಲೆ ನಾನು ಬರುತ್ತೇನೆ. ಕಾಮಾಕ್ಷಿಪಾಳ್ಯದ ಸುತ್ತಮುತ್ತ ಮಾತ್ರ ಗಲಾಟೆ. ಅಲ್ಲಿಯಾರು ಸ್ವಾಮಿ ಇರುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ರಮೇಶ್ ಅವರಿಗೆ ಬೆಂಗಳೂರಿಗೆ ಜನರನ್ನು ತರುವ ಶಕ್ತಿ ಇದೆ. ಆ ಬಗ್ಗೆ ತಕರಾರು ಮಾಡುತ್ತಾ ಇಲ್ಲ. ನೀವು ಯಾವುದಕ್ಕೋ ಏನನ್ನೋ ಹೇಳುತ್ತಿದ್ದೀರಿ.

ಉಪಾಧ್ಯಾಕ್ಷರು : ಸಿಂಧ್ಯಾ ಅವರೇ 10 ನಿಮಿಷದಲ್ಲಿ ಮುಗಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ರಮೇಶ್ ಅವರಿಗೆ ಬೆಂಗಳೂರಿಗೆ ಜನ ತರುವ ಶಕ್ತಿ ಇದೆ. ಆದರೆ ಡೆಲ್ಲಿಯಲ್ಲಿ ನಿಮ್ಮ ಜನರಿಗೆ ಜನರನ್ನು ತರುವ ಶಕ್ತಿ ಇಲ್ಲ.

ಶ್ರೀ ಎಸ್. ರಮೇಶ್ : ಕಾಂಗ್ರೆಸ್ ಪಕ್ಷ ಇವತ್ತು ಚುನಾವಣೆಗೋಸ್ಕರ ಬಾವುಟ ಇಟ್ಟುಕೊಂಡು ಬಂದ ಪಕ್ಷ ಅಲ್ಲ. ಏನು ಬೇಕೋ ಅದನ್ನು ಮಾಡುತ್ತೇವೆ. ಆದರೆ ಸಮಯ ಬಂದಾಗ ಕಾದು ನೋಡಿ ಮಾಡಬೇಕಾಗುತ್ತದೆ. ಅದನ್ನು ಕಾಯುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಒಪ್ಪಿಕೊಳ್ಳುತ್ತೇನೆ. For a moment, I agree that Ramesh Congress has got that capacity. ಅದು ಬಿಡಿ ಹೋಗಲಿ. ಉಪಾಧ್ಯಕ್ಷಿಣಿಯವರೇ, ನಾವು ಯಡಿಯೂರಪ್ಪನವರನ್ನು ಸುಲಭವಾಗಿ ಕೂರಿಸಿ ನೀನು ಅಬೇಟರ್, ನೀವು ಕ್ರೈಮ್ ಮಾಡಿದ್ದೀಯಾ, ಕ್ರೈಮ್ ಮಾಡಿದ್ದೀಯಾ ಎಂದು ಹೇಳುತ್ತಿದ್ದೇವೆ. ಇಲ್ಲಿ ವೀರೇಂದ್ರ ಪಾಟೀಲರು, ರಾಮಕೃಷ್ಣ ಹೆಗ್ಡೆಯವರು ಮತ್ತು ವಾಟಾಳ್ ನಾಗರಾಜ್ ಅವರನ್ನು ಬಿಟ್ಟರೆ ಎಲ್ಲರೂ ಯಡಿಯೂರಪ್ಪನವರೇ ಕ್ರೈಮ್ ಮಾಡಿರೋದು ಎಂದು ಹೇಳಿದ್ದಾರೆ. ನಾನು ಹೇಳುತ್ತೇನೆ. ಅವರು ಕ್ರೈಮ್ ಮಾಡಿದ್ದರೆ ನೀವೆಲ್ಲಾ, ಅಬೇಟರ್ಸ್. 6 ನೇ ತಾರೀಖು ನಿಮ್ಮ ಸರ್ಕಾರ ಏನು ಮಾಡುತ್ತಿತ್ತು? 5 ನೇ ತಾರೀಖು ರಾತ್ರಿಯವರೆಗೂ ಕೂಡ ಭಜರಂಗದಳ, ಆರ್‌ಎಸ್‌ಎಸ್, ವಿಹೆಚ್ ಪಿಗಳೆಲ್ಲಾ ದೇಶ ಪ್ರೇಮಿಗಳು. ಇವರ ಜೊತೆ ಸಂಧಾನ ಮಾಡುತ್ತಿದ್ದೀರಿ. ಇವರ ಮಾತನ್ನು ನೀವು ನಂಬಿದಿರಿ. ಅವರು 6ನೇ ತಾರೀಖು ದೇಶದ್ರೋಹಿಗಳಾಗುತ್ತಾರೆಯೇ? ಅವರನ್ನು ಈ ದೇಶದಿಂದ ಓಡಿಸಬೇಕೆಂದು ಮಾಡಿದ್ದೀರಾ? 5ನೇ ತಾರೀಖಿನ ರಾತ್ರಿವರೆಗೂ ಸಂಧಾನ ಮಾಡಿ, 6ನೇ ತಾರೀಖು ಕಲ್ಯಾಣಸಿಂಗ್ ಅವರು ನಾಲ್ಕೂವರೆ ಗಂಟೆಗೆ ರಾಜೀನಾಮೆ ಕೊಡುತ್ತಾರೆ. ರಾಜೀನಾಮೆ ಕೊಟ್ಟಿರತಕ್ಕ ಸರ್ಕಾರವನ್ನು ರಾತ್ರಿ 9 ಗಂಟೆಗೆ ಡಿಸ್‌ಮಿಸ್ ಮಾಡಿದ್ದೇವೆಂದು ರಾಷ್ಟ್ರಪತಿಗಳ ಮುಖಾಂತರ ಹೇಳಿಸುತ್ತೀರಿ. ನಿಮ್ಮ ಡಿಲ್ಲಿ ನಾಯಕತ್ವ ಸ್ಟ್ರಾಂಗ್ ಇದೆಯೇ ಎಂದು ಯೋಚನೆ ಮಾಡಿ. ಎಷ್ಟು ಓಟು ಕೊಟ್ಟು ಗೆಲ್ಲಿಸಬಲ್ಲರು ಎಂದು ಯೋಚನೆ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಜನ ಸೇರಿಸುವ ಶಕ್ತಿ ಇಲ್ಲ, ಓಟು ಬರಲ್ಲ ಎಂದು ಹೇಳುತ್ತಿದ್ದೀರಿ.ಅವರು ಮುಂದೆ ಏನು ಮಾಡಬೇಕೆಂದಾದರೂ ಹೇಳಿ. ತಮ್ಮ ಸಲಹೆಯನ್ನು ಕೊಡಿ.

ಶ್ರೀ ಎಸ್. ರಮೇಶ್ : ಊರಿನಲ್ಲಿರುವ ದೇವಸ್ಥಾನದ ದೀಪ ಹಚ್ಚುವುದಕ್ಕೆ ವ್ಯವಸ್ಥೆ ಮಾಡಿ. ಯಾವ ದೇವರೂ ಯಾರ ಮನೆ ಮುಂದೆ ಬಂದು ಉಪವಾಸ ಕುಳಿತಿಲ್ಲ ಬಂದು. ಅದನ್ನು ನೋಡಿ ಎಂದು ವಿತರ್ಕವಾಗಿ ಹೇಳುತ್ತಿದ್ದಾರಷ್ಟೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : 24 ಗಂಟೆಗಳ ಕಾಲ ಕೇಂದ್ರ ಸರ್ಕಾರವೇ ಈ ದೇಶದಲ್ಲಿ ಇರಲಿಲ್ಲ. ಮಸೀದಿ ಒಡೆದರು. ರಾಮಲಾಲಾ ಎಂದು ಒಂದು ಪ್ರತಿಮೆಯನ್ನು ತೆಗೆದುಕೊಂಡು ಹೋಗಿ ರಾಮನ ಹೆಸರಿನಲ್ಲಿ ಇಟ್ಟರು. ಹರಿಶಿನ, ಕುಂಕುಮ ಹಚ್ಚಿದರು. ನಾಮ ಹಾಕಿದರು. ಲಾಲನ ಪೂಜೆ ಮಾಡಿದರು. ಎಲ್ಲಾ ರೀತಿಯ ಹೋಮ ಮಾಡಿದರು. ಗೋಡೆಯನ್ನು ಕಟ್ಟಿದರು. ಎಲ್ಲಾ ಮಾಡಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದನ್ನೆಲ್ಲಾ ನಿಮ್ಮ ಮನೆಯಲ್ಲಿ ಹೋಗಿ ಹೇಳಿದರೆ ಖಂಡಿತಾ ನಿಮ್ಮನ್ನು ಮನೆಗೆ ಸೇರಿಸುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಮಗೆ ಗೊತ್ತಿಲ್ಲ ನಮ್ಮ ಮನೆ ವಿಚಾರ. ಇದೆಲ್ಲಾ ಆದಮೇಲೆ ಕೂಡ ಕೈಕಟ್ಟಿ ಕುಳಿತಿದ್ದೀರಾ ಎಂದರೆ ಇದು ಸರ್ಕಾರವೇ? ದಯಮಾಡಿ ಯೋಚನೆ ಮಾಡಿ.

ನಿಮ್ಮ ಕೈಯಲ್ಲಿ ನಿಲ್ಲಿಸುವುದಕ್ಕಾಗುತ್ತಿರಲಿಲ್ಲವೆಂದರೆ ಹೇಳಬೇಕಾಗಿತ್ತು. ನನ್ನ ಕೈಯಲ್ಲಿ ಇದು ಆಗುವುದಿಲ್ಲ ರಾಜಿನಾಮೆ ಕೊಡುತ್ತೇನೆ, ರಾಷ್ಟ್ರಾಧ್ಯಕ್ಷರು ಏನು ಬೇಕಾದರೂ ಮಾಡಿ ಕೊಳ್ಳಿಯೆಂದು. ಇದನ್ನು ನಿಮ್ಮ ಕೈಯಲ್ಲಿ ಮಾಡಲಿಕ್ಕೆ ಆಗಲಿಲ್ಲ. ಮಸೀದಿ ಒಡೆಯುವುದು ಗೊತ್ತಿರಲಿಲ್ಲವೆ? 6 ನೇ ತಾರೀಖಿನ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ರಿಹರ್ಸಲ್ ಮಾಡಿರತಕ್ಕದ್ದು ಎಲ್ಲಾ ಬಂದಿದೆ. ಅವರು ರಿಹರ್ಸಲ್ ಮಾಡಿರತಕ್ಕ ಅದರ ಎಲ್ಲಾ ಫೋಟೋಗಳು ಬಂದಿವೆ. ದೊಡ್ಡ ದೊಡ್ಡ ಹಗ್ಗಗಳನ್ನು ಹಾಕಿ ಮಸೀದಿಗೆ ಎಲ್ಲಾ ಕಡೆಯಿಂದ ಹಾರೆ ಪಿಕಾಸಿ ತೆಗೆದುಕೊಂಡು ಹೋಗಿ "ಮಾರಾಹೈ ಜೀತ್‌ನೇಕೇಲಿಯೆ ಹಮ್ ರಾಮ್‌ಕಾ ಸೇವಕ್ ಹನುಮಾನ್ ಐ" ಎಂದು ಎಳೆದಿದ್ದಾರೆ. ನಿಮ್ಮ ಕೇಂದ್ರ ಸರ್ಕಾರ ಏನು ಮಾಡುತ್ತಿತ್ತು? ನನಗೆ ಅರ್ಥವಾಗುತ್ತಿಲ್ಲ. ಇವತ್ತು ಹೇಳುತ್ತಿದ್ದಾರೆ ನಿಮಗೆ ನಾಚಿಕೆಯಾಗಬೇಕು. ಗುಜರಾತ್‌ನಲ್ಲಿ ನಿಮ್ಮದೇ ಸರ್ಕಾರ ಇದೆ.

ಶ್ರೀ ಹಾರ್‍ನಳ್ಳಿ ರಾಮಸ್ವಾಮಿ : ಕಾಂಗ್ರೆಸ್‌ಗೆ ನಾಚಿಕೆಯಾಗಬೇಕಾದ ಕಾರಣವಿಲ್ಲ.

ಶ್ರೀ ವಾಟಾಳ್ ನಾಗಾರಾಜ್ : ಅದು ಇಲ್ಲವೇ ಇಲ್ಲವೆಂದರೆ ಬಿಡಿ.

(ಗೊಂದಲ)

ಶ್ರೀ ಹಾರ್‍ನಳ್ಳಿ ರಾಮಸ್ವಾಮಿ : ನಾನು ಮಾನ್ಯ ಸಿಂಧ್ಯಾರವರ ಪರ್ಮಿಷನ್ ತೆಗೆದುಕೊಂಡು ಒಂದು ಮಾತು ಹೇಳುವುದಕ್ಕೆ ಹೊರಟೆ. ನೀವು ಸ್ವಲ್ಪ ತಾಳಿ, ಎರಡು ವಾಕ್ಯ ಹೇಳುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ? ಉತ್ತರ ಭಾರತದಲ್ಲಿ ಬಿಜೆಪಿಯವರು ಪ್ರಬಲರಾಗುವುದಕ್ಕೆ ಎರಡು ಕಾರಣ. ಒಂದು 1989ರಲ್ಲಿ ಅವರ ಜೊತೆಯಲ್ಲಿ ನೀವು ಸೇರಿಕೊಂಡು ಅಧಿಕಾರ ಸಂಪಾದನೆ ಮಾಡಿದಿರಿ. ಕೊನೆಯವರೆಗೂ ಅವರ ಜೊತೆಯಲ್ಲಿ ಇದ್ದೀರಿ. ಅದರಿಂದ ಅವರು ಪ್ರಬಲರಾದರು. ಎರಡನೆಯದು

ವಿ.ಪಿ. ಸಿಂಗ್‌ರವರನ್ನು ಅಧಿಕಾರದಲ್ಲಿ ಕೂರಿಸಿ ಮನೆಗೆ ಹೋದಿರಿ. ನಮ್ಮನ್ನು ಕಳುಹಿಸಿದರು ಅವರೂ ಹೋದರು.

ಶ್ರೀ ವಾಟಾಳ್ ನಾಗಾರಾಜ್ : ಮೂರನೆಯದು ಲೋಕಸಭೆಯಲ್ಲಿ ಉಪಾಧ್ಯಕ್ಷರನ್ನು ನೀವು ಮಾಡಿದಿರಿ.

ಶ್ರೀ ಹಾರ್‍ನಳ್ಳಿ ರಾಮಸ್ವಾಮಿ : ಲೋಕಸಭೆಯಲ್ಲಿ ಉಪಾಧ್ಯಕ್ಷರ ಕೃಪೆ ನಿಮ್ಮಿಂದ ಆಯಿತು. ನಮ್ಮ ಜೊತೆಯಲ್ಲಿ ನೀವು ಸಹಕಾರ ಮಾಡಲಿಲ್ಲ.

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ಸಿಂಧ್ಯಾರವರು ಕಾಂಗ್ರೆಸ್ ಸರ್ಕಾರ ಏನು ಮಾಡುತ್ತಾ ಇತ್ತು, ಕೇಂದ್ರ ಸರ್ಕಾರ ಏನು ಮಾಡುತ್ತಾ ಇತ್ತು ಎಂದು ಹೇಳಿದ್ದಾರೆ. ಅವರಿಗೆ ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳ ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆ. ಅವರು ಕೊಟ್ಟಂಥ ಆಶ್ವಾಸನೆ, ಅವರು ಕೋರ್ಟಿಗೆ ಕೊಟ್ಟಂಥ ಅಫಿಡವಿಟ್ ಮತ್ತು ಬಿಜೆಪಿ ನಾಯಕರು ಪಾರ್ಲಿಮೆಂಟ್‌ನಲ್ಲಿ ಕೊಟ್ಟಂತಹ ಮಾತಿನಲ್ಲಿ ವಿಶ್ವಾಸವಿಟ್ಟು ಏನೇನು ಮಾಡಬೇಕಾಗಿತ್ತು ಅಷ್ಟನ್ನು ಮಾಡಿದ್ದಾರೆ. ಆದರೂ ಸಹಿತ ನಾನು ತಮ್ಮಲ್ಲಿ ಕೇಳುತ್ತಿದ್ದೇನೆ. ತಾವು ಜತನಾದಳದ ಮುಖಂಡರು, ಉತ್ತರಪ್ರದೇಶದಲ್ಲಿ ಜನತಾ ದಳದ ಮುಖಂಡರು ಇದ್ದರು. ತಮ್ಮ ಸೇವಕರು ಇದ್ದರು, ನಿಸ್ಸೀಮರು ಇದ್ದರು ಅವರೇನು ಕ್ರಮವನ್ನು ತೆಗೆದುಕೊಂಡರು? ದೇಶಭಕ್ತರು ತಾವು, ತಮ್ಮ ಕಾರ್ಯ ಅದರೊಳಗೆ ಏನು? ಅದಕ್ಕೆ ಸ್ವಲ್ಪ ಉತ್ತರ ಕೊಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಣೆಯವರೆ, ಗುಜರಾತ್‌ನಲ್ಲಿ ಅವರಿಗೆ ಟ್ರೈನಿಂಗ್ ಆಗಿದೆಯೆಂದು ಇವತ್ತು ಪತ್ರಿಕೆಗಳಲ್ಲಿ ವರದಿಯಾಗಿದೆ. ಅದನ್ನು ಕೇಂದ್ರ ಸರ್ಕಾರದವರು ಹೇಳುತ್ತಿದ್ದಾರೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೇ ಎಂದು ಯಾರು ನಿಮಗೆ ಹೇಳಿದರು? ನೀವು ಬಿಜೆಪಿಯವರು ಒಟ್ಟಿಗೆ ಇದ್ದವರು. ಎರಡೂ ಮೂರು ಸಾರಿ ನೀವು ಒಟ್ಟಿಗೆ ಸೇರಿ ಸರ್ಕಾರ ಮಾಡಿದ್ದೀರಿ. ಕರ್ನಾಟಕದಲ್ಲಿ ನಾವು ಮಾಡಿದ್ದೇವೆ. ಅವರನ್ನು ನಾವು ರಾಷ್ಟ್ರದ್ರೋಹಿಗಳೆಂ ದು ಕರೆಯುವುದಕ್ಕೆ ಹೋಗುವುದಿಲ್ಲ, ಅವರು ನಾವು ನೀವು ಕುಳಿತುಕೊಂಡು ಯೋಚನೆ ಮಾಡದಿದ್ದರೆ ಅವರು ಹಿಂದೂ ರಾಷ್ಟ್ರ ಕಾನ್‌ಸೆಪ್ಟ್ ಬಿಡದಿದ್ದರೆ ದೇಶ ಕಟ್ಟುವುದಕ್ಕೆ ಆಗುವುದಿಲ್ಲ, ಇದನ್ನು ನಾವು ಗಮನದಲ್ಲಿಟ್ಟಕೊಳ್ಳಬೇಕಾಗಿದೆ. ಇವತ್ತು ವಿಎಚ್‌ಪಿ ಆರ್‌ಎಸ್‌ಎಸ್ ಭಜರಂಗದಳ ಮತ್ತೊಂದು ಅವುಗಳನ್ನು ಬ್ಯಾನ್ ಮಾಡಿದ್ದೀರಿ. ಎಮರ್ಜೆನ್ಸಿಯಲ್ಲಿ ಸಂವಿಧಾನವನ್ನು ಬದಲಾವಣೆ ಮಾಡಿ ಲಕ್ಷಾಂತರ ಜನರನ್ನು ಜೈಲಿಗೆ ಹಾಕಿ ಅವರನ್ನು ಸಾಯಿಸುವುದಕ್ಕೆ ಆಗಲಿಲ್ಲ, ಬ್ಯಾನ್ ಮಾಡುವುದರಿಂದ ಅವರನ್ನು ಮುಗಿಸುತ್ತೇವೆಂದು ಅಂದುಕೊಂಡಿದ್ದರೆ ಅದರಷ್ಟು ತಪ್ಪು ತಿಳುವಳಿಕೆ ಯಾವುದೂ ಸಹಿತ ಇಲ್ಲ, ರಾಮಕೃಷ್ಣ ಹೆಗಡೆಯವರು ಒಂದು ಮಾತು ಹೇಳಿದರು. ನೀವು ಏನಾದರೂ ಸಿಲೋನ್‌ನಲ್ಲಿ ಎಲ್‌ಟಿಟಿಇನವರು ಯಾವ ರೀತಿ ಆಗಿದ್ದಾರೆ ಆತರಹ ಮಾಡಬೇಕೆಂದರೆ ನೀವು ಆರ್‌ಎಸ್ ಎಸ್ ಬ್ಯಾನ್ ಮಾಡಿ ಇಟ್ಟುಕೊಳ್ಳಿ.

ಇದರ ಬಗ್ಗೆ ಹೆದರಿಕೊಳ್ಳಬೇಕಾದದ್ದು ಏನೂ ಇಲ್ಲ, ಇಲಲಿ ಮಾತನಾಡಿಬಿಟ್ಟರೆ ಜೈಲಿಗೆ ಹಾಕಿ ಬಿಡುತ್ತಾರೆ ಎನ್ನುವ ಹೆದರಿಕೆ ಈ ದೇಶದಲ್ಲಿ ಉಳಿದಿಲ್ಲ. ಕಾನೂನು ಮುರಿಯಬಹುದು ಎಂದು ನೀವೇ ತೋರಿಸಿಕೊಟ್ಟಿದ್ದೀರಿ. ಅದರ ಬಗ್ಗೆ

ಇವತ್ತು ಮಾತು ಬೇಡ. ಮತ್ತೆ ಆರ್ಟಿಕಲ್ 356 ಇದೆಯೆಂದು ಹೇಳಿ ಪುಕಸಟ್ಟೆಯಾಗಿ ಮೂರು ಸರ್ಕಾರಗಳು ಸಿಕ್ಕಿದವು ನಿಮಗೆ. ಅವರನ್ನು ಹೊಡೆದು ಕಳಿಸಿದ್ದೀರಿ. ಇವತ್ತು ನಾನು ಹೇಳುತ್ತೇನೆ, ಪಂಜಾಬಿನ ಬೇಯಂತ ಸಿಂಗ್ ಸರ್ಕಾರವನ್ನು ನೀವು ಏಕೆ ಕಿತ್ತು ಹಾಕಲಿಲ್ಲ? ಪಂಜಾಬಿನ ಬೇಯಂತ್ ಸಿಂಗ್ ಸರ್ಕಾರವನ್ನು ಕಿತ್ತುಹಾಕತಕ್ಕಂಥ ದಮ್ ಏಕಿಲ್ಲ ನಿಮಗೆ? ಶ್ರೀ ಬೇಯಂತ್ ಸಿಂಗ್ ಏನು ಹೇಳಿದ್ದಾರೆ ಎಂದರೆ ನಾವು ಆರ್.ಎಸ್.ಎಸ್. ನ್ನು ಅರೆಸ್ಟ್ ಮಾಡುವುದಿಲ್ಲ, ಬಿ.ಜೆ.ಪಿ. ಯವರನ್ನು ಅರೆಸ್ಟ್ ಮಾಡುವುದಿಲ್ಲ ಎಂದು. ಏನು ಮಾಡಿದ್ದೀರಿ ನೀವು? ಅದರಿಂದ ದಯವಿಟ್ಟು ನಿಮ್ಮ ಕೃಷ್ಟಿಕೋನವನ್ನು ಈಗಾಲಾದರೂ ಬದಲಾಯಿಸಿ, ಕಣ್ಣುತೆರೆದು ಯೋಚನೆ ಮಾಡಿ. ನೀವು ಹೋಗುತ್ತಾ ಇರತಕ್ಕಂಥ ದಾರಿ ಸರಿಯಿಲ್ಲ ಎನ್ನುವುದನ್ನು ಈಗಲಾದರೂ ನೀವು ಯೋಚನೆ ಮಾಡಿ. ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ ನನಗೆ ಬಹಳ ವಿಚಿತ್ರವಾಗಿ ಕಾಣುತ್ತಿದೆ. ನಾವು ಈ ವಿಚಾರದ ಬಗ್ಗೆ ಚರ್ಚೆಯಾಗಬೇಕೆಂದು ಮೂವ್ ಮಾಡಿದ್ದು ಅಡ್ಜರ್ನ್‌ಮೆಂಟ್ ಮೋಶನ್ ಮೂಲಕ. ಆದರೆ ಸಭಾನಾಯಕರೂ, ಶ್ರೀ ಧರ್ಮ್‌ಸಿಂಗ್ ಹೇಳಿದರು ಇದು ಅಡ್ಜರ್ನ್‌ಮೆಂಟ್ ಮೋಶನ್ ಬೇಡ, ಸರ್ಕಾರಕ್ಕೆ ಸ್ವಲ್ಪ ಎಂಬ್ರಾಸ್‌ಮೆಂಟ್ ಆಗುತ್ತದೆ. ಇದರ ಬಗ್ಗೆ ಚರ್ಚೆ ಮಾಡೋಣ ಎಂದು ಹೇಳಿದರು. ಚರ್ಚೆ ಮಾಡುವುದಕ್ಕೆ ನಾವೂ ಒಪ್ಪಿಕೊಂಡೆವು. ಆದರೆ ಮುಖ್ಯಮಂತ್ರಿಗಳು ಹೇಳಿದ್ದಿದು ಪೋಲೀಸ್ ಸ್ಟೇಟ್‌ಮೆಂಟ್. ಇದು ಸತ್ಯಕ್ಕೆ ಬಹಳ ದೂರವಾಗಿದೆ. ಸುಳ್ಳು ಎಂದು ನಾವು ಹೇಳುವುದಿಲ್ಲ. ಪಾಪ, ಅಧಿಕಾರಿಗಳಿಗೆ ಹೇಳಿ ಕೊಟ್ಟಿರುತ್ತಾರೆ, ಹೀಗೀಗೆ ಬರೆಯಿರಿ ಎಂದು ಆದ್ದರಿಂದ– ಅವರನ್ನು ಟೀಕೆ ಮಾಡುವುದಕ್ಕೆ ನಾನು ತಯಾರಿಲ್ಲ. ಇವರ ಹೇಳಿಕೆಯಲ್ಲಿ 5 ನೇ ಪುಟದಲ್ಲಿ ಹೇಳಿದ್ದಾರೆ.

"....ಈ ರೀತಿ 6.12.92 ರಿಂದ 15.12.92ರವರೆಗೆ ರಾಜ್ಯದ ಕೆಲವು ಪ್ರದೇಶಗಳಲ್ಲಿ ಹಿಂಸಾತ್ಮಕ ಘಟನೆಗಳು ನಡೆದಿರುವಾಗ, ಕೊಡಗು, ಬಳ್ಳಾರಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಉತ್ತರ-ಕನ್ನಡ, ರಾಯಚೂರು ಜಿಲ್ಲೆಗಳಲ್ಲಿ ಹಿಂಸಾತ್ಮಕ ಘಟನೆಗಳು ನಡೆಯಲಿಲ್ಲ...

ನಿಜ. ಹಾಸನದಲ್ಲಿ, ಚಾಮರಾಜನಗರ, ಕನಕಪುರದಲ್ಲಿ, ಮತ್ತೊಂದು ಕಡೆ ನಡೆದಿಲ್ಲ. ನಮ್ಮೆಲ್ಲರಿಗಿಂತ ಹೆಚ್ಚಾಗಿ ಜನರಿಗೆ ನಾವು ಕೃತಜ್ಞರಾಗಿರಬೇಕು. ಏಕೆಂದರೆ ಅವರು ಗಲಾಟೆಗೆ ಹೋಗಲಿಲ್ಲ, ಅವರು ಬುದ್ಧಿ ಕಲಿತುಕೊಂಡಿರುವುದರಿಂದ ಗಲಾಟೆ ಮಾಡಿಕೊಳ್ಳಲಿಲ್ಲ. ಬೆಳಗಾವಿಯಲ್ಲಿ ನಡೆಯಿತು. ಆದರೆ ರಾಯಚೂರಿನಲ್ಲಿ ನಡೆದಿಲ್ಲವೆಂದು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಹಂಪನಗೌಡರನ್ನು ಕೇಳಿದರೆ ಅವರು ಹೇಳುತ್ತಾರೆ, ಸಿಂಧನೂರಿನಲ್ಲಿ ಏನೆಲ್ಲಾ ಆಯಿತು, ಆರರಿಂದ ಎಂಟರವರೆಗೆ ಎಷ್ಟು ಗಲಾಟೆಯಾಗಿದೆ ಎಂದು. ಅಲ್ಲಿ 30-40 ಜನರನ್ನು ಅರೆಸ್ಟ್ ಮಾಡಿದ್ದಾರೆ. ಹೊಡೆದಾಟವಾಗಿದೆ, ಲೂಟಿಯಾಗಿದೆ, ಬೆಂಕಿ ಹಚ್ಚಿದ್ದಾರೆ. ಅದರ ಬಗ್ಗೆ ಇಲ್ಲಿ ಒಂದು ಚೂರೂ ಪ್ರಸ್ತಾಪ ಇಲ್ಲ, ನಾನು ಹೇಳುತ್ತೇನೆ, ಜನ ಅಪೇಕ್ಷೆ ಮಾಡಿದ್ದುದು ಏನು? ಕೊನೆಯಪಕ್ಷ ಕರ್ನಾಟಕ ರಾಜ್ಯದ ನಾಲ್ಕೂವರೆ ಕೋಟಿ ಜನರಿಗೆ ಇಲ್ಲಿ ಒಂದು ಸರ್ಕಾರ ಇದೆ, ಒಬ್ಬ ಮುಖ್ಯಮಂತ್ರಿ ಇದ್ದಾರೆ, ಒಬ್ಬ ನಾಯಕರು ಇದ್ದಾರೆ ಎನ್ನುವುದಾಗಿದ್ದರೆ ಒಂದು ಲೀಡರ್‌ಶಿಪ್ ಕೊಡಬೇಕು, ಒಂದು ಡೈರೆಕ್ಷನ್ ಕೊಡಬೇಕು, ಈ ದೃಷ್ಟಿಯಲ್ಲಿ ನಾವೆಲ್ಲಾ ಹೋಗಬೇಕಾಗಿದೆ. ಕರ್ನಾಟಕ ಟಿಪ್ಪೂಸುಲ್ತಾನನ ಇದ್ದ, ಬಸವೇಶ್ವರರೂ ಇದ್ದರು. ಇವರೆಲ್ಲ ಒಟ್ಟಿಗೆ

ಹೋಗಿರತಕ್ಕಂಥ ನಾಡು ಇದು. ಈ ರೀತಿ ದೇಶದಲ್ಲಿ ಆಗಿರುವುದು ತಪ್ಪು ಎಂದು, ಈ ಮಾತನ್ನು ಹೇಳಬೇಕಾಗಿತ್ತು. ಈ ಸಭೆಯಲ್ಲಿ ಒಂದು ನಿರ್ಣಯವನ್ನು ಮಂಡಿಸಬೇಕಾಗಿತ್ತು. ಕೇಂದ್ರ ಸರ್ಕಾರ ಮಾಡಿರತಕ್ಕಂಥಾದ್ದು ತಪ್ಪು, ಅದು ನಿಷ್ಕ್ರೀಯವಾಗಿರತಕ್ಕಂಥ ಸರ್ಕಾರ ಎಂದು ಹೇಳಬೇಕಾಗಿತ್ತು. ಅದರಿಂದ ಏನೂ ಆಗುತ್ತಿರಲಿಲ್ಲ. ನಿಮ್ಮನ್ನು ಯಾರು ತೆಗೆಯುವುದಕ್ಕೆ ಆಗುವುದಿಲ್ಲ. ಕರ್ನಾಟಕ ರಾಜ್ಯದ ಜನತೆ ನಿಮ್ಮನ್ನು ಆರಿಸಿರುವುದು ಡೆಲ್ಲಿಯ ಜನ ನಿಮ್ಮನ್ನು ಆರಿಸಿಲ್ಲ. ಕರ್ನಾಟಕ ರಾಜ್ಯದ ಜನ ನಿಮ್ಮನ್ನು ಆರಿಸಿದ್ದಾರೆ. ತಪ್ಪು ಮಾಡಿದ್ದೇವೆ ಎಂದು ನಮ್ಮನ್ನು ಇಲ್ಲಿ ಕೂರಿಸಿದ್ದಾರೆ. ಸರಿ ಮಾಡಬೇಕು ಎಂದು ಹೇಳಿ ನಿಮ್ಮನ್ನು ಅಲ್ಲಿ ಕೂರಿಸಿದ್ದಾರೆಯೇ ಹೊರತು ಡೆಲ್ಲಿಯವರನ್ನು ಪ್ಲೀಸ್ ಮಾಡಬೇಕೆಂದು ಈ ರೀತಿ ಸ್ಟೇಟ್‌ಮೆಂಟ್ ಕೊಡುವುದರಿಂದ ಏನೂ ಅರ್ಥವಿಲ್ಲದ ಈ ಮಾತನ್ನು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು : ದಯವಿಟ್ಟು ಮುಗಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದನ್ನು ತೀವ್ರವಾಗಿ ನಾನು ಖಂಡಿಸುತ್ತೇನೆ. ಏಕೆಂದರೆ this is a directionless, and leaderless Government. But, it is not a solutiton to the present problem.

ಇವತ್ತು ನಮ್ಮ ನ್ಯಾಷನಲ್ ಇಂಟಿಗ್ರೇಶನ್ ಸಭೆ ಆಗುತ್ತದೆ. ನ್ಯಾಷನಲ್ ಇಂಟಿಗ್ರೇಷನ್ ಸಭೆಯಲ್ಲಿ ಏನಿದೆ, ಮುಖ್ಯ ಮಂತ್ರಿಗಳು ಹೋಗುತ್ತಾರೆ, ಪೋಲೀಸರು ಕೊಟ್ಟಿರತಕ್ಕಂಥ ವರದಿಯನ್ನು ಓದುತ್ತಾರೆ. ಇದರಿಂದ ಏನೂ ಮಾಡುವುದಕ್ಕಾಗುವುದಿಲ್ಲ. ಪೀಸ್ ಕಮಿಟಿಗಳು ಇರುತ್ತವೆ. ರಮೇಶ ಇರಬಹುದು, ಸಿಂಧ್ಯಾ ಇರಬಹುದು, ಯಾರು ಕೇಳುತ್ತಾರೆ ನಮ್ಮ ಮಾತನ್ನು? ದೊಂಬಿಯಾಗುತ್ತದೆ ಎಂದು ಹೇಳಿದರೆ, ಅನಾವಶ್ಯಕವಾಗಿ ಪೋಲೀಸರನ್ನು ಮುಂದೆ ಕಳಿಸಿ ನಾವು ಹಿಂದೆ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ. ಶ್ರೀ ವಾಟಾಳ್ ಅವರು ಹೇಳಿದ ಹಾಗೆ ದೂರದರ್ಶನ, ರೇಡಿಯೋ ಮೂಲಕ ನಾಲ್ಕು ಗೋಡೆಗಳ ಮಧ್ಯೆ ಕುಳಿತು ನಾವು ಮಾತನಾಡಬೇಕೇ ವಿನಹ ಈ ಪೀಸ್ ಕಮಿಟಿಗಳಿಗೆ ಸರ್ಕಾರದ ಕಮಿಟಿಗಳಿಗೆ ಏನೂ ಅರ್ಥ ಇಲ್ಲದ ಹಾಗೆ ಆಗಿದೆ.

ಇದಕ್ಕೆ ಏನಾದರೂ ಸೆಲ್ಯೂಷನ್ ಕಂಡುಹಿಡಿಯುವುದಕ್ಕೆ ಸಾಧ್ಯವೇ, ಇದನ್ನು ಯೋಚನೆ ಮಾಡಬೇಕು. ಇದು ರಾಷ್ಟ್ರಮಟ್ಟದಲ್ಲಿ ಆಗದಿರಬಹುದು, ರಾಜ್ಯಮಟ್ಟದಲ್ಲಾದರೂ ಈ ಪ್ರಯತ್ನವನ್ನು ನೀವು ಮಾಡಿ. ಸಂಬಂಧಪಟ್ಟ ಎಲ್ಲಾ ಜಾತಿಯ ಮುಖಂಡರನ್ನೂ ಕರೆಯಿಸಿ, ಯಾವ ರೀತಿ ಸಮಸ್ಯೆ ಬಗೆಹರಿಸಬೇಕು, ಮುಸ್ಲಿಮರಲ್ಲಿ ಹಿಂದುಗಳ ಬಗ್ಗೆ, ಹಿಂದುಗಳಲ್ಲಿ ಮುಸ್ಲಿಮರ ಬಗ್ಗೆ ಅಪನಂಬಿಕೆ ಬರಬೇಕಾದರೆ ಕಾರಣ ಏನು? ನಿಜವಾದ ಸಮಸ್ಯೆ ಏನೆಂಬುದನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಕೊನೆಯಪಕ್ಷ ನಮ್ಮ ರಾಜ್ಯದ ಮಟ್ಟಿಗೆ ಮುಸಲ್ಮಾನರನ್ನು ಕಿತ್ತು ತಿಂದುಹಾಕತಕ್ಕಂಥ ಬಡತನದ ಸಮಸ್ಯೆ ಏನಿದೆ ಅದನ್ನು ಬಗೆಹರಿಸುವುದಕ್ಕೆ ವಿಶೇಷವಾದ ಕಾರ್ಯಕ್ರಮವನ್ನು ನೀವು ಹಾಕಿ. ರಾಜ್ಯದಲ್ಲಿ ಅವರ ಸ್ಮಶಾನ ಮತ್ತು ಮಸೀದಿಗಳಿಗೆ ಇರತಕ್ಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿ. ಏಕೆ ಗಲಾಟೆಯಾಗುತ್ತದೆ ನೋಡೋಣ. ಇದರ ಜೊತೆಗೆ ಇನ್ನೊಂದು ವಿಚಾರವನ್ನು ಈ ಸಂದರ್ಭದಲ್ಲಿ ಸಲಹೆ ರೂಪದಲ್ಲಿ ಕೊಡುವುದಕ್ಕೆ ಬಯಸುತ್ತೇನೆ. ಇವತ್ತು ಅನೇಕ ಕಡೆಗಳಲ್ಲಿ ಓವರ್ ನೈಟ್ ದೇವಸ್ಥಾನಗಳು ಬರುತ್ತದೆ. ಓವರ್ ನೈಟ್ ಮಸೀದಿಗಳು ಬರುತ್ತವೆ. ರಾಷ್ಟ್ರೀಯ ಹೆದ್ದಾರಿಪಕ್ಕದಲ್ಲಿ, ರಾಜ್ಯ ಹೆದ್ದಾರಿ ಪಕ್ಕದಲ್ಲಿ

ಎಂ.ಡಿ.ಆರ್. ಪಕ್ಕದಲ್ಲಿ, ಇವುಗಳನ್ನು ಕೇಳುವವರೂ ಇಲ್ಲ, ಹೇಳುವವರೂ ಇಲ್ಲ. ಶನಿಮಹಾತ್ಮನ ದೇವಸ್ಥಾನಗಳು ಎಂದು ಇವರು ಹೇಳುತ್ತಾರೆ, ಆಮೇಲೆ, ಇವರು ಯಾವುದೋ ಕಾಲದಲ್ಲಿ ಟಿಪ್ಪಣಿ ಕಾಪಿ ಸಿಕ್ಕಿತು, ಅದರಲ್ಲಿ ನಮ್ಮದೂ ಇತ್ತು ಎಂದು ಇವರು ಹೇಳುತ್ತಾರೆ. ಹೀಗಾಗಿ ಹಿಂದು ಮುಸಲ್ಮಾನ್ ಗಲಾಟೆ ಶುರುವಾಗುತ್ತದೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸಹ ವಿಶೇಷವಾದ ಕಾನೂನನ್ನು ಮಾಡಬೇಕು. ಯಾರಾದರೂ ಹೊಸದಾಗಿ ಮಸೀದಿಯನ್ನು, ದೇವಸ್ಥಾನವನ್ನು, ಗುಡಿ ಗೋಪುರಗಳನ್ನು ಕಟ್ಟಬೇಕಾದರೆ, ಆ ಜಾಗದ ಬಗ್ಗೆ ಸರ್ಕಾರದ ಪರವಾನಗಿ ಇಲ್ಲದೆ ಕಟ್ಟಬಾರದು ಎಂಬ ಒಂದು ಕಟ್ಟಾಜ್ಞೆಯ ಮುಖಾಂತರ, ತಕ್ಷಣ 2-3 ತಿಂಗಳಲ್ಲಿ ಇಂತಹ ಕಾನೂನು ಮಾಡಿ, ದೇಶಕ್ಕೆ ವಿಶೇಷವಾದ, ಮಾದರಿಯನ್ನು ಕರ್ನಾಟಕ ರಾಜ್ಯದಿಂದ ಹಾಕಿಕೊಡಿ. ಮತ್ತೆ ನಮ್ಮ ಪೋಲೀಸಿನವರು, ಪಾಪ, ಮೊನ್ನೆ ನಾನು ಮತ್ತು ಸನ್ಮಾನ್ಯ ದೇಶಪಾಂಡೆಯವರು ಬೆಂಗಳೂರಿನಲ್ಲಿರತಕ್ಕ ಬೌರಿಂಗ್ ಆಸ್ಪತ್ರೆ, ಮತ್ತು ವಿಕ್ಟೋರಿಯಾ ಆಸ್ಪತ್ರೆಗಳಿಗೆ, ನೀವು ಹೋದಹಾಗೆಯೇ ನಾವೂ ಕೂಡ ಹೋಗಿದ್ದೆವು. ನಾವು ಕೂಡ ಪೋಲೀಸ್ ರಕ್ಷಣೆಯಲ್ಲಿ ಹೋದೆವು. ಅಲ್ಲಿ ಪೋಲೀಸಿನವರು ಗುಂಡೇಟು ತಿಂದಿರತಕ್ಕವರ ಅನುಭವವನ್ನು ಕೇಳಿದಾಗ, ನಿಮಗೂ ಈ ಅನುಭವ ಆಗಿರಬಹುದು. 100ಕ್ಕೆ 80ರಷ್ಟು ಜನ ದಾರಿಯಲ್ಲಿ ಹೋಗುತ್ತಿದ್ದವರು, ಯಾವುದೇ ಸಂಬಂಧ ಇಲ್ಲದಿರತಕ್ಕಂಥವರು ಇವತ್ತು ಸತ್ತಿರಬಹುದು ಏನು ಎಂಬುದು ನನಗೆ ಗೊತ್ತಿಲ್ಲ. ಆದರೆ ಬದುಕಿರುವವರು ಹೇಳಿರತಕ್ಕ ವಿಚಾರವನ್ನು ಹೇಳುತ್ತಿದ್ದೇನೆ. ಸಾವಿರಾರು ಜನ ಅನಾಮಿಕರು ಏಟುಗಳನ್ನು ತಿಂದಿದ್ದಾರೆ. ಇವರಿಗೆ ಪರಿಹಾರದ ಮೊತ್ತ ಎರಡೂವರೆ ಸಾವಿರ ಇದು ಸಾಲುವುದಿಲ್ಲ, ಅಂಗವಿಕರರಾದವರಿಗೆ ಪೆನ್‌ಷನ್ ಮತ್ತೊಂದು ಮಾಡುತ್ತೇವೆಂದು ಹೇಳಿದ್ದೀರಿ. ಅದರ ಬಗ್ಗೆ ಆಗಬೇಕು. ಆದರೆ, ನಮ್ಮ ಪೋಲೀಸನವರಿಗೆ ನಮ್ಮ ಸರ್ಕಾರ ಇದ್ದಾಗಲೂ ಸಹಿತ ಪ್ರಯತ್ನ ಮಾಡಿದೆವು. ಆದರೆ, ಹಣಕಾಸಿನ ತೊಂದರೆಯಿಂದ ಆಗಲಿಲ್ಲ, ಇದರಿಂದಾಗಿ ನಾನು ಸರ್ಕಾರಕ್ಕೆ ಸಲಹೆ ಕೊಡತಕ್ಕಂಥಾದ್ದು ಈ ಕೋಮುಘರ್ಷಣೆಗಳನ್ನು ಕಂಟ್ರೋಲ್ ಮಾಡುವುದಕ್ಕೆ ಯಾವ ರೀತಿ ಅರ್ಮ್ಡ್ ಪೋಲೀಸ್ ಎಂದು ಮಾಡಿದ್ದೇವೆ, ರಿಸರ್ವ್ ಪೋಲೀಸ್ ಎಂದು ಮಾಡಿದ್ದೇವೆ. ಅದೇ ರೀತಿಯಾಗಿ ಒಂದು ಸ್ಪೆಷಲ್ ಫೋರ್ಸ್‌ನ್ನು, ಒಂದು ಕೇಡರನ್ನು ತಯಾರು ಮಾಡಬೇಕು. ಇಂತಹ 20 ಸಾವಿರ, 10 ಸಾವಿರ ಜನರನ್ನು ತಯಾರು ಮಾಡಬೇಕು. ಆಗ ಏನಾಗುತ್ತದೆ, ಪೋಲೀಸಿನವರಿಲ್ಲೂ ಸಹಿತ, ಇವರು ಹಿಂದುಗಳ ಪರವಾಗಿದ್ದಾರೆ. ಇವರು ಮುಸ್ಲಿಮರ ಪರವಾಗಿದ್ದಾರೆ ಎಂಬ ಭಾವನೆ ಬರಬಾರದು. ಅದಕ್ಕೋಸ್ಕರ ತರಬೇತಿ ಪಡೆದ, ಪೂರ್ಣ ಉಪಕರಣಗಳ ಸಹಿತ ಇರತಕ್ಕಂಥ ತಂಡವನ್ನು ನಾವು ತಯಾರು ಮಾಡಬೇಕು. ಆಮೇಲೆ ಸತ್ತವರ ಕುಟುಂಬಗಳಿಗೆ 1 ಲಕ್ಷ, 2 ಲಕ್ಷ ಕೊಟ್ಟು ಸಾವಿರಾರು ಕೋಟಿ ರೂಪಾಯಿಗಳ ಆಸ್ತಿಯನ್ನು ಹಾಳು ಮಾಡುವ ಬದಲಾಗಿ, ಆ ರೀತಿ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತಿದ್ದೇನೆ. ಮೈಸೂರಿನಲ್ಲಿ, ಬೀದರ್‌ನಲ್ಲಿ, ರಾಯಚೂರಿನಲ್ಲಿ, ಸಿಂಧನೂರಿನಲ್ಲಿ, ಗುಲ್ಬರ್ಗಾದಲ್ಲಿ, ರಾಜಕೀಯ ಶಕ್ತಿಗಳ ಪ್ರೇರಣೆಯಿಂದಲೋ ಅಥವಾ ಬೇರೆ ಕಾರಣಗಳಿಂದಲೋ ನನಗೆ ಗೊತ್ತಿಲ್ಲ, ಆದರೆ ಒಂದು ನಿಜ. 6ನೇ ತಾರೀಖು, 7ನೇ ತಾರೀಖು 8ನೇ ತಾರೀಖಿನ ನಂತರ, ಗಲಾಟೆ ಆಯಿತು. ಇದಕ್ಕೆ ಏನೋ ಕಾರಣಗಳು ಇರಬೇಕು. ಯಾವ ಶಕ್ತಿಗಳು ಇದರ ಹಿಂದೆ ಇವೆ ಎನ್ನುವುದನ್ನು ಗುರುತು ಮಾಡಬೇಕು. ಒಂದೆರಡು ತಿಂಗಳೊಳಗಾಗಿ ವರದಿಯನ್ನು ತರಿಸತಕ್ಕಂಥ

ಗ್ರಂಥಾಲಯಂ,

ಒಂದು ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಪ್ರಧಾನ [illegible] ಮಾಡುತ್ತೇನೆ. ಬಹಳ ಮುಖ್ಯವಾಗಿ ನಾವೆಲ್ಲರೂ ಸಹಿತ ಕೇವಲ ಪಕ್ಷದ ಚೌಕಟ್ಟಿನ [illegible] ಒಳಗೆ... ಮಾತನಾಡದೇ, ಇದರಿಂದ ಹೊರಗಡೆ ಹೃದಯ ಬಿಚ್ಚಿ ಮಾತನಾಡಿ, ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡೋಣ. ನಮ್ಮ ಬಿ.ಜೆ.ಪಿ. ಅಥವಾ ಮಾತೃಸಂಸ್ಥೆಯಾದ ಆರ್.ಎಸ್.ಎಸ್. ಸದಸ್ಯರು, ಸ್ನೇಹಿತರುಗಳು ಯಾರಿದ್ದಾರೆ, ಮೂಲಭೂತವಾಗಿ ನಾವೆಲ್ಲರೂ ತಿಳಿದುಕೊಳ್ಳಬೇಕು. ಹಿಂದೂ ರಾಷ್ಟ್ರದ ಕಲ್ಪನೆಯನ್ನು ನೀವು ಬಿಡಬೇಕು. ಇಲ್ಲದೇ ಹೋದರೆ ಸಾಧ್ಯವೇ ಇಲ್ಲ. ಬಿ.ಜೆ.ಪಿ. ಅಥವಾ ಆರ್.ಎಸ್.ಎಸ್.ನಲ್ಲಿ ಇರತಕ್ಕಂಥ ಮಾಡರೇಟ್ಸ್‌ಗೆ ಈ ಮಾತನ್ನು ಹೇಳುತ್ತಿದ್ದೇನೆ. ನೀವು ಇದನ್ನು ಬಿಡಬೇಕು. ನಿಮ್ಮ ಸಂಸ್ಥೆಯ ಶಿಸ್ತಿನ ಬಗ್ಗೆ, ಪ್ರಾಮಾಣಿಕತೆ, ಮತ್ತು ದೇಶಪ್ರೇಮದ ಬಗ್ಗೆ ಯಾರೂ ಪ್ರಶ್ನೆ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ನೀವು ಬದಲಾವಣೆ ಮಾಡಿಕೊಳ್ಳದೇ ಹೋದರೆ, ಈ ದೇಶವನ್ನು ಒಡೆಯತಕ್ಕಂಥ ಪ್ರಯತ್ನವಾಗುತ್ತದೆ. ಆದುದರಿಂದ ದಯಮಾಡಿ ತಮ್ಮ ಮನಸ್ಸು ಪರಿವರ್ತನೆ ಆಗುವುದಕ್ಕೆ ಕೊನೆಯ ಪಕ್ಷ ಈ ಸಾವಿರಾರು ಜನ ಅನಾಮಿಕರು ಏನು ಸತ್ತಿದ್ದಾರೆ, ಆ ಸತ್ತಿರುವವರಿಂದಲಾದರೂ ನಿಮಗೆ ಪ್ರೇರಣೆ ಸಿಗಲಿ.

ಕೋಟ್ಯಾಂತರ ರೂಪಾಯಿಗಳ ನಷ್ಟ, ದಂಗೆ ಏನಾಗಿದೆ ಅದರಿಂದ ತಮ್ಮ ಕಣ್ಣು ತೆರೆಯಲಿ ಎಂದು ಹೇಳಿ, ತಾವು ಸಾಕಷ್ಟು ಸಮಯ ಅವಕಾಶ ಕೊಟ್ಟಿದ್ದಕ್ಕಾಗಿ ನಿಮಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಅಯೋಧ್ಯೆ ಪ್ರಕರಣದ ಹಿನ್ನೆಲೆಯಲ್ಲಿ ನಮ್ಮ ರಾಜ್ಯದಲ್ಲಿ ನಡೆದ ಮತೀಯ ಗಲಭೆಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ಆದರೆ ಗಲಭೆಗಳು ನಡೆಯುವುದಕ್ಕೆ ಏನು ಕಾರಣ, ಮತ್ತೆ ಮುಂದೆ ಗಲಭೆಗಳು ಆಗದಿರುವುದಕ್ಕೆ ನಾವು ಏನು ಮಾಡಬೇಕು, ಅಷ್ಟರಮಟ್ಟಿಗೆ ಮಾತ್ರ ಮಾತನಾಡುತ್ತೇನೆ. ನಾನು ಕಳೆದ ಯಾವುದೋ ಒಂದು ಅಧಿವೇಶನದಲ್ಲಿ ಧರ್ಮದ ಬಗ್ಗೆ ಚರ್ಚೆ ಬಂದಾಗ ಒಂದು ಮಾತು ಹೇಳಿದ್ದೆ. ಆ ಮಾತಿನಲ್ಲಿ ಪೂರ್ತಿ ನಂಬಿಕೆ ಇರುವಂತವನು ನಾನು. ಅದೇ ಮಾತನ್ನು ಹೇಳುವುದರಿಂದ ಇವತ್ತಿನ ಚರ್ಚೆಯನ್ನು ಪ್ರಾರಂಭ ಮಾಡುತ್ತಿದ್ದೇನೆ. ಧರ್ಮ ಮತ್ತು ರಾಜೀಕೀಯಕ್ಕೆ ಬಹಳ ದಿವಸದಿಂದ ಕೊಡುತ್ತಿರತಕ್ಕಂಥ ಒಂದು ವಿಶ್ಲೇಷಣೆ Yesterday's religion, yesterday's politics are to-day's politics, to-day's religion......

ನಿನ್ನೆಯ ಧಾರ್ಮಿಕ ಚಟುವಟಿಕೆಗಳು ನಿನ್ನೆಯ ರಾಜಕಾರಣ, ಇವತ್ತಿನ ರಾಜಕಾರಣ ಇವತ್ತಿನ ಧರ್ಮ. ಇದನ್ನು ಏತಕ್ಕೆ ಪ್ರಾರಂಭದಲ್ಲಿ ಹೇಳುತ್ತಿದ್ದೇನೆ ಎಂದರೆ ನಮ್ಮ ಸಂವಿಧಾನದಲ್ಲಿ ಮೊದಲನೇಯ ಪುಟದಲ್ಲೇ ನಾವು ಧರ್ಮ ನಿರಪೇಕ್ಷತೆ ಎಂದು ಬರೆದುಕೊಂಡಿದ್ದೇವೆ. We are a secular state on the first page of the Constitution..

ಸಂವಿಧಾನದ ಮೂರನೆಯ ಭಾಗದಲ್ಲಿ ನಾವು ಪ್ರತಿಯೊಬ್ಬ ಪ್ರಜೆಗೂ ಧಾರ್ಮಿಕ ಸ್ವಾತಂತ್ರ್ಯ ಕೊಟ್ಟಿದ್ದೇವೆ. ಸಂವಿಧಾನದ ನಾಲ್ಕನೇ ಭಾಗದಲ್ಲಿ, ಜೀವನದಲ್ಲಿ ವೈಜ್ಞಾನಿಕ ದೃಷ್ಟಿಕೋನ ಬೆಳೆಸಿಕೊಳ್ಳಬೇಕೆಂಬ ಮಾತನಾಡಿದ್ದೇವೆ. ಆದರೆ ನಮ್ಮ ದೈನಂದಿನ ಚಟುವಟಿಕೆಯಲ್ಲಿ ಈ ಮೂರೂ ವಿಷಯಗಳು ಏನಿದೆ ಅದಕ್ಕೆ ಸಂಬಂಧಪಟ್ಟಹಾಗೆ ನಾವು ನಮ್ಮ ನಡವಳಿಕೆಯನ್ನು ರೂಪಿಸಿಕೊಂಡಿಲ್ಲ. ಹೀಗೆ ನಾವು ಅಪ್ರಜ್ಞಾಪೂರ್ವಕವಾಗಿಯೋ

ಅಥವಾ ಪ್ರಜ್ಞಾಪೂರ್ವಕವಾಗಿಯೋ, ಸಂವಿಧಾನದಲ್ಲಿ ಏನು ಹೇಳಿದ್ದೇವೆ ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದೇವೆ. ಈ ಅಧಿವೇಶನದ ಪ್ರಾರಂಭದ ದಿವಸ ನಾವು ಏನು ಅಪ್ರಜ್ಞಾಪೂರ್ವಕವಾಗಿ ಒಂದು ತಪ್ಪು ಮಾಡುತ್ತಿದ್ದೇವೆ ಅದನ್ನು ನಾನು ಸೂಚಿಸಿ ಒಂದು ತಿದ್ದುಪಡಿ ಮಾಡುವ ಮೂಲಕ ತೋರಿಸಿದೆ, ಆ ತಿದ್ದುಪಡಿ ಸ್ವೀಕಾರವಾಯಿತೋ ಇಲ್ಲವೋ . ನನಗೆ ಗೊತ್ತಿಲ್ಲ. ಆದರೆ ಈ ಸದನ ಒಂದು ರಾಜ್ಯದ ಪ್ರತೀಕ. ಅದನ್ನು ಒಪ್ಪಿ ಈ ಸದನದ ಸದಸ್ಯರಾದ ನಾವು ಧರ್ಮ ನಿರಪೇಕ್ಷತೆಗೆ ಸಂಬಂಧ ಇರುವಂತಹ ಒಂದು ಪದವನ್ನು ಉಪಯೋಗಿಸುವುದರಲ್ಲಿ ತಪ್ಪು ಮಾಡುತ್ತೇವೆ. ನನ್ನ ದೃಷ್ಟಿಯಲ್ಲಿ, We are all secular individuals and live in a secular way. We die in a secular way, ಹಾರ್ನಹಳ್ಳಿ ರಾಮಸ್ವಾಮಿಯವರೇನೂ ವೈಕುಂಠ ಸೇರಲ್ಲ ನಾನು ಕೈಲಾಸ ಸೇರೋಲ್ಲ. We die in a secular way.

ನಾವು ಬರೀ ಕಣ್ಮರೆಯಾಗುತ್ತೇವೆ. ಅಂತಹ ಒಂದು ಸೆಕ್ಯುಲರ್ ಪದಗಳನ್ನು ಬಳಸುವುದರಲ್ಲಿ ನಾವು ಅಪ್ರಜ್ಞಾಪೂರಕವಾಗಿ ತಪ್ಪು ಮಾಡುತ್ತಾ ಇದ್ರೆ, ಎಲ್ಲಿಯವರೆಗೂ ಮಾಡುತ್ತೇವೋ ಅಲ್ಲಿಯವರೆಗೂ ಈ ಗಲಭೆಗಳು ನಿಲ್ಲುವುದಿಲ್ಲ, ಈ ದೇಶದ ಮೊದಲನೆಯ ರಾಷ್ಟ್ರಪತಿಯಾದ ಡಾಕ್ಟರ್ ರಾಜೇಂದ್ರಪ್ರಸಾದ್‌ರವರು ಕಾಶಿಯಲ್ಲಿ ಸಾರ್ವಜನಿಕವಾಗಿ 200 ಜನ ಬ್ರಾಹ್ಮಣರ ಕಾಲು ತೊಳೆದರು. ಇವೊತ್ತಿನ ರಾಷ್ಟ್ರಪತಿಗಳು ಸಾರ್ವಜನಿಕವಾಗಿ ತಿರುಪತಿಗೆ ಹೋಗಿ ಮುಂಡನೆ ಮಾಡಿಸಿಕೊಳ್ಳುತ್ತಾರೆ. ಹಾಗೆಯೇ ಇವತ್ತಿನ ಪ್ರಧಾನಿ ಮಂತ್ರಿಗಳು ಸಾರ್ವಜನಿಕವಾಗಿ ಪವಾಡ ಪುರುಷ ಎಂದು ಕರೆಯಿಸಿಕೊಳ್ಳುವ ವ್ಯಕ್ತಿಗಳಿಗೆ ಹೋಗಿ ಕಾಲು ಮುಟ್ಟಿ ನಮಸ್ಕಾರ ಮಾಡುತ್ತಾರೆ. ಈ ರೀತಿಯ obscurantism ಎಲ್ಲಿಯವರೆಗೂ ಈ ದೇಶದಲ್ಲಿ ಇರುತ್ತದೆಯೋ ಇಂತಹ obscurantism ಎಲ್ಲಿಯವರೆಗೂ ಅಧಿಕಾರದಲ್ಲಿರುತ್ತಾರೋ ಅಲ್ಲಿಯವರೆಗೂ ಈ ಗೊಂದಲಗಳಿಗೆ ಅವರೇ ಕಾರಣಕರ್ತರಾಗುತ್ತಾರೆ. ಆ ಕಾರಣ ನಾವು ಧರ್ಮ ಅಂದರೆ, ಏನು? ಧಾರ್ಮಿಕ ಸ್ವಾತಂತ್ರ್ಯ ಅಂದರೆ ಏನು? ಧರ್ಮ ನಿರಪೇಕ್ಷತೆ ಅಂದರೆ ಏನು ಇದರ ಬಗ್ಗೆ ಇನ್ನು ಮುಂದೆ ಆದರೂ ಸ್ಪಷ್ಟವಾಗಿ ವಿಚಾರ ರೂಪಿಸಿಕೊಳ್ಳದಿದ್ದರೆ ಅದಕ್ಕೆ ಸಂಬಂಧಪಟ್ಟ ಹಾಗೆ ನಾವು ನಮ್ಮ ಧೈನಂದಿನ ಜೀವನದಲ್ಲಿ ಸ್ಪಷ್ಟವಾದ ಚಟುವಟಿಕೆಗಳನ್ನು ನಡವಳಿಕೆಗಳನ್ನು ರೂಪಿಸಿಕೊಳ್ಳದಿದ್ದರೆ ಈ ಗೊಂದಲಗಳು ಗಲಭೆಗಳು ನಿಲ್ಲುವುದಕ್ಕೆ ಎಂದೆಂದೂ ಸಾಧ್ಯವಿಲ್ಲ, ಧರ್ಮ ಅಂದರೆ ಏನು? ಎಲ್ಲಾ ಧರ್ಮಗಳಲ್ಲಿ ಹೇಳಿರುವುದು ಇಷ್ಟೇ. ಒಬ್ಬ ವ್ಯಕ್ತಿ ಅವನಿಗೆ ಸೃಷ್ಟಿಕರ್ತನ ಬಗ್ಗೆ ನಂಬಿಕೆ ಇದ್ದರೆ, ಈ ಜಗತ್ತನ್ನು ಸೃಷ್ಟಿ ಮಾಡಿದಂತಹ ಸೃಷ್ಟಿ ಕರ್ತನಿಗೂ ಈ ಜಗತ್ತಿನಲ್ಲಿ ಒಂದು ಅಂಶವಾದ ತನಗೂ ಇರುವಂತಹ ಸಂಬಂಧವನ್ನು ಗುರುತಿಸಿಕೊಳ್ಳುವ ಪ್ರಯತ್ನಕ್ಕೆ ಧಾರ್ಮಿಕ ಚಟುವಟಿಕೆ ಎಂದು ಕರೆಯುತ್ತೇವೆ. when an individual tries to trace his identity with his creator is called religion. ನನ್ನಂತಹವನಿಗೆ ಸೃಷ್ಟಿಕರ್ತನ ಬಗ್ಗೆ ನಂಬಿಕೆ ಇಲ್ಲದಿದ್ದರೆ ಧರ್ಮ ಹೇಳುತ್ತದೆ o.k. try to trace your identity with the first intelligent cause ಈ ಜಗತ್ತು ಸೃಷ್ಟಿಯಾಗುವುದಕ್ಕೆ ಏನೊ ಒಂದು ಶಕ್ತಿ ಕಾರಣ ಅದು ಗೊಂದಲದ ವಾದವೆ ಇಷ್ಟಾದರೂ ನೀನು ಗುರುತಿಸಿಕೊಳ್ಳುವ ಪ್ರಯತ್ನ ಮಾಡದೇ you will be religious person.

ಧರ್ಮ ಹೇಳುವುದು, ಇಂತಹ ಧಾರ್ಮಿಕ ಸ್ವಾತಂತ್ರ್ಯವನ್ನು ನಾವು ನಮ್ಮ ಸಂವಿಧಾನದಲ್ಲಿ ಅಳವಡಿಸಿರುವುದು It is a right to all citizens it is a individual

right... ನಮ್ಮ ಸಂವಿಧಾನದಲ್ಲಿ ಇರುವುದು ವ್ಯಕ್ತಿ ಸ್ವಾತಂತ್ರ್ಯ ಮತ್ತು ವೈಯುಕ್ತಿಕ ಸ್ವಾತಂತ್ರ್ಯ. No religion contempletes group activity.

ಗುಂಪು ಚಟುವಟಿಕೆ ಧರ್ಮದ ಕಲ್ಪನೆಯ ಒಳಗೆ ಬರುವುದಿಲ್ಲ. ಒಬ್ಬ ಯುವಕ ಮತ್ತು ಯುವತಿ ನಡುವೆ ಪ್ರೇಮ ಸಂಬಂಧವನ್ನು ಗುರುತಿಸಿಕೊಳ್ಳುವುದು ಎಷ್ಟು ಪವಿತ್ರವಾಗಿ ವೈಯುಕ್ತಿಕ ಮಟ್ಟದಲ್ಲಿ ನಡೆಯಬೇಕು ಅದೇ ಮಟ್ಟದಲ್ಲಿ ನನಗೂ ದೇವರಿಗೂ ಇರುವಂತಹ ಸಂಬಂಧವನ್ನು ಗುರುತಿಸಿಕೊಳ್ಳುವುದು ವೈಯಕ್ತಿಕ ಮಟ್ಟದಲ್ಲಿ ನಡೆಯಬೇಕೆ ಹೊರತು, ಗುಂಪು ಚಟುವಟಿಕೆ ಮೂಲಕ ಅಲ್ಲ. All of us cannot court a single girl. Can we? It ceases to be called as love. All of us cannot in a group try to court gurad it ceases to be religion. It merely becomes politics and intruing. ಆ ಕಾರಣ ನಮ್ಮ ಸಂವಿಧಾನದಲ್ಲಿ ಧಾರ್ಮಿಕ ಸ್ವಾತಂತ್ರ್ಯ ಏನಿದೆ ಅಂಥಾದ್ದನ್ನು ನಾವು ಚಲಾಯಿಸುವುದಕ್ಕೋಸ್ಕರ ಪ್ರಯತ್ನ ಮಾಡಿದ್ದೇವೆ. ಅದು ವೈಯುಕ್ತಿಕ ಮಟ್ಟಕ್ಕೆ ಸೀಮಿತವಾಗಿರಬೇಕು.

5.10 ಪಿ.ಎಂ

ಇದನ್ನು ಪ್ರಾರಂಭಕ್ಕೆ ಏಕೆ ಹೇಳುತ್ತಿದ್ದೇನೆಂದರೆ, ಸಾಮೂಹಿಕವಾಗಿ ನಾವು ದರ್ಶನ ಮಾಡುತ್ತೇವೆ ಎನ್ನುವ ಒಂದು ಗುಂಪು, ಸಾಮೂಹಿಕವಾಗಿ ನಾವು ನಮೂಜು ಮಾಡುತ್ತೇವೆಂದು ಹೇಳುವ ಇನ್ನೊಂದು ಗುಂಪು. ಎರಡೂ ಅವಿವೇಕಿ ಗುಂಪುಗಳೇ ಇಂಥಾ ಅವಿವೇಕಿ ಚಟುವಟಿಕೆಗೆ ಇನ್ನು ಮುಂದಾದರೂ ನಾವು ಅವಕಾಶ ಮಾಡಿಕೊಡಬಾರದು. ಈಗ ನಡೆಯುತ್ತಿದೆಯಲ್ಲಾ ಗೊಂದಲ ಇದು ಹಿಂದುತ್ವ ಎನ್ನುವ ಪ್ರತಿಷ್ಠಾಪನೆಗೆ ಎಂದು ಹೇಳುತ್ತಾರೆ ಕೆಲವರು, ಹಿಂದೂ ರಾಷ್ಟ್ರ ಕಟ್ಟಲಿಕ್ಕಾಗಿ ಮಾಡುತ್ತಿರುವಂಥ ಚಟುವಟಿಕೆ ಎನ್ನುತ್ತಾರೆ ಕೆಲವರು. ಈ ಹಿಂದುತ್ವ ಅಂದರೆ ಏನು ಎನ್ನುವುದೇ ನನಗೆ ಗೊತ್ತಾಗಿಲ್ಲ. ನಾನು ಬಹಳ ದಿವಸಗಳಿಂದ ಇತಿಹಾಸದ ವಿದ್ಯಾರ್ಥಿ. ಈ ಹಿಂದುತ್ವ ಅಂದರೆ ಏನು? ಇವರು ಹಿಂದುತ್ವ ಎಂದು ಏನನ್ನು ಕರೆಯುವುದಕ್ಕೆ ಹೊರಟಿದ್ದಾರೆ? ಅದಕ್ಕೆ ಧರ್ಮ ಎನ್ನುವಂಥ ಒಂದು ಅಂತಸ್ತನ್ನು ಕೊಡುವುದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ನಾವು ಸ್ವಲ್ಪ ಪರೀಕ್ಷೆ ಮಾಡಬೇಕು ಮತ್ತೆ ಯಾರು ಯಾರು ಈ ಹಿಂದೂ ಎಂದು ಓಡಾಡುತ್ತಾ ಇದ್ದಾರೆ. ಇವರಿಗೆ ಆ ಒಂದು ಹೆಸರನ್ನು ನಾಮಕರಣಾ ಮಾಡಿದವರು ಯಾರು ಎನ್ನುವುದನ್ನು ತಿಳಿಸಬೇಕು. ಸಿಂಧ್ಯಾರವರು ಹೇಳಿದ ಹಾಗೆ ಧರ್ಮ ಎಂದರೆ ಒಂದು ಜೀವನ ಕ್ರಮ. ನಿಜ. It is a way of life. Yes, there was a way of life in this country. There was a way of life. ಆದರೆ, ಆವೇ ಆಫ್ ಲೈಫ್‌ಗೆ ನಾವು ಕೊಟ್ಟುಕೊಂಡಿದ್ದಂಥ ಹೆಸರು ವೈದಿಕ ಧರ್ಮ ಎಂದು. ಹಿಂದೂ ಧರ್ಮ ಎಂದು ಹೆಸರು ಕೊಟ್ಟವನು ಮೊದಲು ವಾಸ್ಕೋಡಿಗಾಮ. ಪೋರ್ಚಗೀಸರು ಈ ದೇಶಕ್ಕೆ ಬಂದಾಗ ಈ ದೇಶದ ಜೀವನ ಕ್ರಮವನ್ನು ನೋಡಿ ಪೋರ್ಚಗೀಸ್ ಭಾಷೆಯಲ್ಲಿ ಇಂದು ಎಂದು ಕರೆದರು. "INDU" ಇಂದು ಎಂದು ಮೊದಲು ಕರೆದವರು ಪೋರ್ಚಗೀಸರು. ಅಲ್ಲಿಯವರೆಗೂ ನಾವು ವೈದಿಕರು. ಅವರು ಏನು ಇಂದು ಎಂದು ಕರೆಯುತ್ತಿದ್ದರೋ ಇಲ್ಲಿ ಅದನ್ನು ವೈದಿಕ ಪದ್ಧತಿ ಮತ್ತು ವೈದಿಕ ಧರ್ಮ ಎಂದು ಕರೆಯುತ್ತಿದ್ದರು. ಯಾರು ವೈದಿಕ ಆಚರಣೆ ಮಾಡುತ್ತಿದ್ದರೋ ಅವರು ವೈದಿಕ ಧರ್ಮ ಎಂದು ಕರೆಯುತ್ತಿದ್ದರು.

ವೈದಿಕ ಧರ್ಮ ಅಂದರೆ ಏನು? ಆಮೇಲೆ ಹೇಳುತ್ತೇನೆ. ಅನಂತರ ಬಂದ ಫ್ರೆಂಚರು ಇಂಡ್ ಎಂದು ಕರೆದರು "INDE" ಅನಂತರ ಬಂದವರು ಮಧ್ಯ ಪ್ರ್ಯಾಚ್ಯದಿಂದ, ಅವರು ಮಹಾಪ್ರಾಣ ಉಪಯೋಗಿಸಿ 'ಹಿಂದೂ' ಎಂದರು. ಇವರು ಯಾರು ಹಿಂದುತ್ವ, ಹಿಂದ ರಾಷ್ಟ್ರ ಕಟ್ಟುವುದಕ್ಕೆ ಹೊರಟಿದ್ದಾರೋ ಅವರಿಗೆ ನಾಮಕರಣ ಮಾಡಿದವರು ಪರಕೀಯರು. ಆದರೆ ನಮ್ಮ ನಿಜವಾದ ಹೆಸರು ನಮ್ಮಲ್ಲಿದ್ದಂಥ ನಿಜವಾದಂಥ ಜೀವನ ಕ್ರಮಕ್ಕೆ ವೈದಿಕ ಧರ್ಮ ಎಂದು ಕರೆದುಕೊಳ್ಳುತ್ತಿದ್ದರು. ಯಾರು ವೈದಿಕ ಆಚರಣೆ ಮಾಡುತ್ತಿದ್ದರೋ, ವೇದಗಳನ್ನು ಆಚರಿಸುತ್ತಿದ್ದರೋ ಅವರು. ಮುಂದಿನ ಪ್ರಶ್ನೆ ವೈದಿಕ ಧರ್ಮವೆಂದು ಏನು ಕರೆಯುತ್ತಾರೆ? ಏನು ವೈದಿಕ ವಿಚಾರವೆಂದು ಹೇಳುತ್ತೇನೆ. ಈ ವೈದಿಕ ವಿಚಾರಕ್ಕೆ ಧರ್ಮದ ಅಂತಸ್ತನ್ನು ಕೊಡುವುದಕ್ಕೆ ಸಾಧ್ಯ ಉಂಟಾ ಅಂತ? Whether anybody on this earth can give the status of a religion to what is called the 'Vedism' is my question. ಮನುಧರ್ಮ ಶಾಸ್ತ್ರದ ಬಹಳ ಮುಖ್ಯವಾದಂಥ ಕೆಲವು ಶ್ಲೋಕಗಳನ್ನು ತಂದಿದ್ದೇನೆ ಉಪಾಧ್ಯಕ್ಷಣಿಯವರೆ, ತಾವು ನನಗೆ ಕಾಲಾವಕಾಶ ಮಾಡಿಕೊಡಬೇಕು. ಬ್ರಹ್ಮ ಮನು ಸ್ಮೃತಿಗಳನ್ನು ರಚಿಸಿದ. ಭೃಗು ಮಹರ್ಷಿಗೆ ಕೊಟ್ಟ. ಭೃಗು ಮಹರ್ಷಿ ರಾಜ ಆಗಿದ್ದಂಥ ಮನುಗೆ ಅದನ್ನು ತಲುಪಿಸಿದ. ಮನು ಅದನ್ನು ಜಾರಿಗೆ ತಂದ. ಮನು ಧರ್ಮ ಶಾಸ್ತ್ರದ ಮೊದಲನೆಯ ಅಧ್ಯಾಯದಿಂದ ಹಿಡಿದು 10ನೇ ಅಧ್ಯಾಯದ ವರೆಗಿನ ಕೆಲವು ಆಯ್ದ ಶ್ಲೋಕಗಳನ್ನು ನಾನು ಓದಿ ಹೇಳುತ್ತೇನೆ. ಇದನ್ನೇ ವೈದಿಕ ಧರ್ಮ ಎಂದು ಕರೆಯುತ್ತಾ ಇದ್ದರು. ಅನಂತರ ಇವರು ಇದನ್ನೇ ಹಿಂದೂ ಧರ್ಮ ಎಂದು ನಂಬಿರುವುದು. ನಾನು ಈಗ ಹಿಂದುತ್ವದ ಬಗ್ಗೆ ಇರುವ ಆಯ್ದ ಕೆಲವೊಂದು ಶ್ಲೋಕಗಳನ್ನು ಓದಿ ಹೇಳುತ್ತೇನೆ. 'A Brahmana is a great god whether he be a saint or an idiot'

ಇದು 9ನೇ ಅಧ್ಯಾಯದ 317ನೇ ಶ್ಲೋಕವಾಗಿದೆ. ತಾವುಗಳು ಬೇಕಾದರೆ ಬರೆದುಕೊಳ್ಳಬಹುದು. You can cross check from the original text.

ಶ್ರೀ ವಾಟಾಳ್ ನಾಗರಾಜ್ : ಅದಕ್ಕೊಂದು ನ್ಯಾಯಾಂಗ ತನಿಖೆಯೂ ಆಗಲಿ...

(ನಗು)

ಪ್ರೊ ಎಂ.ಡಿ. ನಂಜುಂಡಸ್ವಾಮಿ : ಇನ್ನೊಂದು 10ನೇ ಅಧ್ಯಾಯದಲ್ಲಿನ 75ನೇ ಶ್ಲೋಕ "A bramhana who does the work of a 'Shudra' is still a high caste man".

ಒಂದು ಕಡೆ ವರ್ಣಾಶ್ರಮ ಧರ್ಮ ಅಂದರೆ ಗುಣಕರ್ಮ ವಿಭಾಗಶಃ ಎಂದು ಮಾತನಾಡುತ್ತಾರೆ. ಆದರೆ "Even if a Brahmin does the work of a 'Shudra' is still a high caste man". ಇನ್ನೊಂದು ಇದೆ. 2ನೇ ಅಧ್ಯಾಯದ 31ನೇ ಶ್ಲೋಕ.

"The name given to a Brahmana shall indicate virtue and the name given to a 'shudra' shall indicate lowliness". ಇವುಗಳೆಲ್ಲವೂ ಮನುಧರ್ಮ

ಶಾಸ್ತ್ರದ ಕೆಲವು ಅಂಶಗಳು. "The second part of the 'shudra's name shall be 'Dasan'. ಇಲ್ಲಿ ಎಲ್ಲಾ ಶೂದ್ರರುಗಳ ಹೆಸರಿನ ಕೊನೆಯಲ್ಲಿ ದಾಸಸ್ ಎಂದು ಸೇರಿಸಬೇಕು. "The Shastras have prescribed....' ಹಾಗೆಯೇ ಅವರು ಯಾವ ರೀತಿಯಲ್ಲಿ ಶ್ರಾದ್ಧವನ್ನು ಮಾಡುತ್ತಾ ಇದ್ದರು ಎಂಬ ವಿಚಾರವನ್ನು ಮನುಧರ್ಮ ಶಾಸ್ತ್ರದಲ್ಲಿ ಹೇಳುತ್ತಾರೆ. ನಾನು ಮೊನ್ನೆ ಶಿವೈಕ್ಯರಾದರು' ಎಂದು ಹೇಳಿದ್ದಕ್ಕಿಂತ ಘೋರವಾದ ವಿಚಾರಗಳು ಇವೆ. ಅದರಲ್ಲಿ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಯಾವ ಯಾವ ಮಾಂಸವನ್ನು ತಿಂದರೆ ಆತ್ಮಕ್ಕೆ ಎಷ್ಟೆಷ್ಟು ಪಿರಿಯಡ್ ಶಾಂತಿ ಸಿಗುತ್ತದೆ ಎನ್ನುವ ಕೋಷ್ಟಕವೇ ಇದೆ.

The 'Shasstras' have prescribed the kind of animal flesh that should be used at 'Shradda' to satisfy the dead soul. The period for which the satisfaction will lost is also indicated. That is the satisfaction to the soul lost. Some details are in the manu Dharma Shastra, which are given below. The flesh of jinjely red rice -tugar-a-dal- water and tubas will give one month's peace.

ಒಂದು ತಿಂಗಳು ಆತ್ಮಕ್ಕೆ ಶಾಂತಿ ಸಿಗುತ್ತದೆ. ಇದನ್ನು ಶ್ರಾದ್ಧದ ದಿನ ತಿನ್ನಬೇಕು. ಆಮೆ ಮತ್ತು ಮೀನು ತಿಂದರೆ 2 ತಿಂಗಳು ಆತ್ಮಕ್ಕೆ ಶಾಂತಿ ಸಿಗುತ್ತದೆ. ಜಿಂಕೆ ತಿಂದರೆ 3 ತಿಂಗಳು ಆತ್ಮಕ್ಕೆ ಶಾಂತಿ ಸಿಗುತ್ತದೆ. ಕುರಿ ತಿಂದರೆ 4 ತಿಂಗಳು ಆತ್ಮಕ್ಕೆ ಶಾಂತಿ ಸಿಗುತ್ತದೆ. ಪಕ್ಷಿಗಳನ್ನು ತಿಂದರೆ ಆತ್ಮಕ್ಕೆ 5 ತಿಂಗಳು ಶಾಂತಿ ಸಿಗುತ್ತದೆ. ಮೇಕೆ ತಿಂದರೆ ಆತ್ಮಕ್ಕೆ 6 ತಿಂಗಳು ಶಾಂತಿ ಸಿಗುತ್ತದೆ. ಚುಕ್ಕೆ ಇರುವಂಥ ಜಿಂಕೆ ತಿಂದರೆ 7 ತಿಂಗಳು ಶಾಂತಿ ಸಿಗುತ್ತದೆ. ಗೆರೆಗಳ ಇರುವ ಜಿಂಕೆ ತಿಂದರೆ 8 ತಿಂಗಳು ಶಾಂತಿ ಸಿಗುತ್ತದೆ. ಕೊಂಬು ಇರುವ ಜಿಂಕೆ ತಿಂದರೆ 9 ತಿಂಗಳು ಶಾಂತಿ ಸಿಗುತ್ತದೆ. ಮುಳ್ಳು ಹಂದಿ ಮತ್ತು ಕಾಡುಕೋಣವನ್ನು ತಿಂದರೆ 10 ತಿಂಗಳು ಆತ್ಮಕ್ಕೆ ಶಾಂತಿ ಸಿಗುತ್ತದೆ. ರ‍್ಯಾಬಿಟ್ ಮತ್ತು ಟಾರ್ಟೈಸ್ ತಿಂದರೆ 11 ತಿಂಗಳು ಶಾಂತಿ ಸಿಗುತ್ತದೆ. ಟಾರ್ಟೈಸ್ ಮತ್ತು ರ‍್ಯಾಬಿಟ್ ಒಟ್ಟಿಗೆ ತಿಂದರೆ 12 ತಿಂಗಳು ಶಾಂತಿ ಸಿಗುತ್ತದೆ. Cows milk, curds and ghee and old goat, if taken there will be 12 years peace. ಮುದಿ ಮೇಕೆ ತಿಂದರೆ 12 ವರ್ಷಗಳ ಕಾಲ ಶಾಂತಿ ಸಿಗುತ್ತದೆ. 'Amruth' a special boned fish, if consumed there will be peace for ever. ಎಲ್ಲಾ ಕಾಲಕ್ಕೂ ಶಾಂತಿ ಸಿಗುತ್ತದೆ. ಇವರ ಪ್ರಕಾರ ಅಮೃತ ಎನ್ನುವ ಮೀನನ್ನು ನಾವು ಹುಡುಕಿಕೊಂಡು ಹೋಗಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಮಗೆ ಎಷ್ಟು ಶಾಂತಿ ಸಿಕ್ಕಿದೆ ಎಂದು ಹೇಳಬಹುದೆ?

ಪ್ರೊ ಎಂ.ಡಿ. ನಂಜುಂಡಸ್ವಾಮಿ : ನನಗೆ, ಶಾಂತಿ ಸಿಗುವುದು ಸತ್ತಮೇಲೆ ಅಲ್ಲವೇ?

ಶ್ರೀ. ಡಿ.ಬಿ. ಚಂದ್ರೇಗೌಡ : ನಿಮಗೆ ಯಾವ ಶಾಂತಿ ಸಿಗುತ್ತದೆ? ನಮಗೆ ಬಹಳ ಸಿಕ್ಕಿಬಿಟ್ಟಿದೆ ಆಗಲೇ, ಹೋಗಲಿ ಎಷ್ಟು ಗಳಿಸಿದ್ದೀರಿ

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಒಂದು ನಿಮಿಷ, ನಿಮಗೆಲ್ಲ ಅನುಮಾನ ಬರದೇ ಇರುವ ರೀತಿ ಒಂದೆರೆಡು ವಿಷಯ ಹೇಳಬೇಕು. ಇದು ಶ್ರಾದ್ಧದಲ್ಲಿ ತಿಂದರೆ, ಅಂದರೆ ಸತ್ತವರಿಗೆ ಶಾಂತಿ ಸಿಗುತ್ತದೆ, ಅದರಿಂದ ನನಗೆಷ್ಟು ಸಿಗುತ್ತದೆ ಎನ್ನುವುದಕ್ಕೆ ಇನ್ನೂ ಬಹಳ ದಿವಸದ ನಂತರ ಅದು ಗೊತ್ತಾಗುವುದು. ಆಮೇಲೆ ಇದು ಶ್ರಾದ್ಧ ಮಾಡುವವರು ಬರೀ ಬ್ರಾಹ್ಮಣರೇ. ಬ್ರಾಹ್ಮಣರು ಇದನ್ನೆಲ್ಲಾ ತಿಂದರೆ ಅವರ ಪಿತೃಗಳಿಗೆ ಇಷ್ಟಿಷ್ಟು ಕಾಲಾವಧಿ ಶಾಂತಿ ಸಿಗುತ್ತದೆ ಎನ್ನುವ ಕೋಷ್ಟಕ ಇದು.

ಶ್ರೀ ಆರ್. ಎನ್.ನಾಯಕ್ : ಮನುಷ್ಯರು ಮನುಷ್ಯರನ್ನು ತಿಂದುಬಿಟ್ಟರೆ ಎಷ್ಟು ವರ್ಷ ಶಾಂತಿ ಸಿಗಬಹುದು, ಏನಿದೆ, ಏನಿಲ್ಲ.

ಪ್ರೊ ಎಂ.ಡಿ. ನಂಜುಂಡಸ್ವಾಮಿ : ಅದು ಆಮೇಲೆ ಹೇಳುತ್ತೇನೆ. ನನ್ನ ವಿಷಯವನ್ನು ನಮ್ಮ ಚಂದ್ರೇಗೌಡರು ಹೇಳುತ್ತಿದ್ದರು. ನಾನು ಯಾವ ಪಂಥಕ್ಕೆ ಸೇರಿದವನು ಎಂದು ನಿಮಗೆ ಪರಿಚಯವಿಲ್ಲ, ನಾನು ಸತ್ತ ಮೇಲೆ ಉತ್ತರ ಕ್ರಿಯೆ ಬೇಡ ಅಂತ ಈಗಾಗಲೇ ಹೇಳಿಯಾಗಿದೆ. ನನ್ನ ದೇಹವನ್ನು ಇಲ್ಲಿ ಮೆಡಿಕಲ್ ಕಾಲೇಜಿಗೆ ಕೊಡಿ ಎಂದು ಹೇಳಿದ್ದೇನೆ. Because I don't believe in the other world and I don't believe in rebirth. ಅವೆಲ್ಲ ಶುದ್ಧ ಮೂಢ ನಂಬಿಕೆಗಳು,ಆ ಕಾರಣ ಇದನ್ನೆಲ್ಲಾ ನಾನು ಬರೆದಿಟ್ಟಿದ್ದೇನೆ. ಆ ಕಾರಣ ತಮ್ಮ ಸಂಶಯ ನಿವಾರಣೆ ಆಯಿತೇ? ಸಭಾಧ್ಯಕ್ಷಿಣಿಯವರೇ ಇನ್ನೂ ಕೆಲವು ಇವೆ.A Brahmin who fails to eat flesh of Sacrificial animal shall have 21 rebirths as cow. A Brahmana may give for the livelihood of Shudra remnants of his food. ಎಂಜಲು ಕೊಡಬಹುದಂತೆ ಮನುಧರ್ಮಶಾಸ್ತ್ರ ಹೇಳುತ್ತದೆ. His torn clothes and testless grain. ಅಂದರೆ ರುಚಿಯಿಲ್ಲದೇ ಇರೋ ದವಸಧಾನ್ಯವೆಲ್ಲಾ ಬ್ರಾಹ್ಮಣ ಶೂದ್ರನಿಗೆ ಕೊಡಬಹುದಂತೆ.

ಶ್ರೀ ಆರ್.ಎನ್. ನಾಯಕ್ : ನಾನು ಬ್ರಾಹ್ಮಣ ಆಗಿ ಹುಟ್ಟಲಿಲ್ಲವಲ್ಲ ಅಂತ.

ಪ್ರೊ ಎಂ.ಡಿ. ನಂಜುಂಡಸ್ವಾಮಿ : ದಯವಿಟ್ಟು ನಾಯಕ್‌ರವರೇ ನೀವು ಬಹಳ ಶೂದ್ರರಾಗಿ ಬಿಹೇವ್ ಮಾಡಬಾರದು.

ಶ್ರೀ ಆರ್. ಎನ್. ನಾಯಕ್: ಇನ್ನು ನೂರು ಸಲ ನಾನು ಶೂದ್ರನಾಗಿ ಹುಟ್ಟಿದರೂ ನಾನು ಪಶ್ಚಾತ್ತಾಪ ಮಾಡೋದಿಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ನೋಡಿ ಹೀಗೇ, ಇದು ಬಹಳ ಗಂಭೀರವಾದ ವಿಚಾರ ನಾವು ಹೀಗೆ ನಕ್ಕುನಕ್ಕು ಸಾವಿರಾರು ವರ್ಷ ಶೂದ್ರರಾಗಿ ಇದ್ದೇವೆ. ಇದನ್ನು ನಾಶ ಮಾಡುವುದಕ್ಕೆ ನಾವು ಕಾರ್ಯಕ್ರಮ ಹಾಕಬೇಕು, ನಾನೇನೋ ವೈಯಕ್ತಿಕವಾಗಿ ಹಾಕಿ 20 ವರ್ಷ ಆಯಿತು. ಇಲ್ಲಿ ಏಕೆ ಇದನ್ನೆಲ್ಲಾ ತಂದಿದ್ದೇನೆ ಅಂದರೆ 224 ಜನರಿದ್ದಾರಲ್ಲ ಅವರೂ ನನ್ನ ಜೊತೆ ಬರ್‍ತಾರೇನೋ ಎಂಬ ಆಶೆಯಿಂದ ಕಂಡು ಓದುತ್ತಾ ಇದ್ದೇನೆ. ಗಂಡು ಹೆಣ್ಣಿನ ಸಂಬಂಧದಲ್ಲೂ ಯಾವ ರೀತಿ ಈ ವೈದಿಕ ಧರ್ಮ ಹೇಳುತ್ತದೆ. Children be gotten by a Brahmin from a Shudra women shall have no rights to property.

ಆದರೆ ಇನ್ನೊಂದು ಕಡೆ ಹೇಳುತ್ತದೆ A Shudra who unites with a brahmin women under protection shall be cut to pieces and his property confiscated. ಇದೆಲ್ಲ ಗೊತ್ತಿದೆ ಹಾರ್ನಳ್ಳಿ ರಾಮಸ್ವಾಮಿಯವರಿಗೆ ನಗುತ್ತಾ ನೋಡ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕಾಗಿಯೇ ಅವರು ಅದರಿಂದ ಟೋಪಿ ಹಾಕಿಸಿಕೊಳ್ಳೋದು ಬೇಡ ಅಂತ ನೀವೇ ಹಾಕಿಕೊಂಡು ಬಂದುಬಿಟ್ಟಿದ್ದೀರಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ನಾನು ತಿಳಿದುಕೊಂಡಿರುವ ಹಾಗೆ ಮಾನ್ಯ ಸದಸ್ಯರು ಹೇಳಿರೋದನ್ನೆಲ್ಲ ಮನುಧರ್ಮಶಾಸ್ತ್ರದಲ್ಲಿ ಬರೆದಿದ್ದಾರೆ. ಮನುಧರ್ಮಶಾಸ್ತ್ರದಲ್ಲಿ ಎರಡು ಭಾಗ ಇದೆ. ಮೂಲ ಧರ್ಮ ಅಂತ, ಆ ಚರಿತಧರ್ಮ ಅಂತ. ಸಾವಿರ ಎರಡು ಸಾವಿರ ವರ್ಷದ ಹಿಂದೆ ಆ ಶಾಸ್ತ್ರ ಬರೆದಾಗ ಆ ರೀತಿ ಇರಬಹುದು. ಅವುಗಳದ್ದೆಲ್ಲಾ ರುಚಿ ಕಂಡಿರಬೇಕಾದರೆ ನಮ್ಮ ಪೈಕಿ ಅನಂತಕೃಷ್ಣ ಅವರಿಗೊಬ್ಬರಿಗೆ ಗೊತ್ತಿರಬಹುದು. ಮೂಲ ಧರ್ಮದ ಬಗ್ಗೆ ಅದರಲ್ಲಿ ಒಂದು ಶ್ಲೋಕ ಇದೆ. ನಮ್ಮ ಬಸವಣ್ಣನವರು ಹೇಳಿದ್ದಾರೆ. " ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ. ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ ಎಂದು ಏನು ಮಾತನ್ನು ಹೇಳಿದ್ದಾರೆ. ಇದೇ ಆಧಾರರೂಪವಾಗಿ ಮೂಲ ಒಂದು ಶ್ಲೋಕಮಾತನ್ನು ಹೇಳಿದ್ದಾರೆ, ಇದೇ ಆಧಾರರೂಪವಾಗಿ ಮೂಲ ಒಂದು ಶ್ಲೋಕ ಇದೆ.

"ಧೃತಿ ಕ್ಷಮ ದಮಸ್ತೇಯ ಶೌಚಂ ಇಂದ್ರಿಯ ನಿಗ್ರಹಂ,

ದ್ವೀರ್ ವಿದ್ಯಾಸತ್ಯಮಕ್ರೋಧ: ದಶಮಂ ಧರ್ಮ ಲಕ್ಷಣಂ.

ಧರ್ಮ ಅಂದರೇನು ಎಂದರೆ ಹತ್ತು ಲಕ್ಷಣಗಳು ಇರುತ್ತವೆ. ಅಸತ್ಯವನ್ನು ಹೇಳಬೇಡ. ಧೃತಿ ಧೈರ್ಯವಾಗಿರು, ಕ್ಷಮೆ ಇರಲಿ, ಈ ರೀತಿ ಹತ್ತು ಗುಣಗಳನ್ನು ಈ ಟೆನ್ ಕಮಾಂಡ್‌ಮೆಂಟ್ಸ್ ಎಂದು ಹೇಳುತ್ತಾರಲ್ಲಾ, ಅದೇ ರೀತಿ ಹತ್ತು ಗುಣಗಳನ್ನು ಹೇಳಿದ್ದಾರೆ. ಇದನ್ನು ಗಾಂಧೀಜಿಯವರು 11 ಮಾಡಿದರು.

"ಅಹಿಂಸಾ ಸತ್ಯಮಕ್ರೋಧ: ತ್ಯಾಗ ಕರ್ಮಸುಕೌಶಲಮ್

ಶರೀರ ಶ್ರಮಾಸ್ವಾದ ಸರ್ವತ್ರ ಭಯವರ್ದನ.

ಸರ್ವಧರ್ಮ ಸಮಾನತ್ವ ಶರೀರೇ ಸ್ಪರ್ಶಭಾವನ.

ಈ ರೀತಿ ಹನ್ನೊಂದು ಏಕಾದಶಿ ವ್ರತಗಳನ್ನು ಹೇಳಿದರು. ಮೂಲಧರ್ಮದ ಮಾತು ಏನು ಅದರಲ್ಲಿ ಇದೆ, ಅದನ್ನು ಮಾತ್ರ ಅಕ್ಸೆಪ್ಟ್ ಮಾಡಬಹುದಾಗಿದೆ. ಬಾಕಿಯದೆಲ್ಲಾ ಯಾವಾಗ ಪಿತೃಗಳಿಗೆ ಶಾಂತಿ ಸಿಗುತ್ತದೆ. ಅವೆಲ್ಲಾ ಪುಸ್ತಕದ ಬದನೆಕಾಯಿಯಾಗಿಯೇ ಉಳಿದಿದೆ. ಗಾಂಧೀಜಿ ಹೇಳಿದರು, ಯಾವುದೇ ಶಾಸ್ತ್ರಗಳಲ್ಲಿ ಹೇಳಿದರೂ ನನ್ನ ಆತ್ಮಕ್ಕೆ ಒಪ್ಪದಿದ್ದರೆ ಅದನ್ನು ನಾನು ರಿಜೆಕ್ಟ್ ಮಾಡುತ್ತೇನೆಂದು. ಅದು ರಿಜೆಕ್ಟ್ ಆಗಿ ಸಾವಿರಾರು ವರ್ಷಗಳಾಗಿ ಹೋದವು. ಇನ್ನೊಂದು ಮಾತನ್ನೇ ಹೇಳಿ ನಾನು ಮುಗಿಸುತ್ತೇನೆ. ವೈದಿಕ ಧರ್ಮ ಎಂತಲೇ ನಮ್ಮಲ್ಲಿ ಇರಲಿಲ್ಲ, ಸನಾತನ ಧರ್ಮ ಎಂದು ಇತ್ತು. That dharma which remains for ever.

ಧರ್ಮ ಎನ್ನುವುದನ್ನು ನಾವು ಲಾ ನಲ್ಲಿ ಡಿಫೈನ್ ಮಾಡುತ್ತೇವೆ. ಅವರು ಪ್ರೊಫೆಸರ್ ಆಗಿದ್ದವರು. Law is the regulation of human conduct. ಅದೇ ರೀತಿಯಲ್ಲಿ ಧರ್ಮ ಎನ್ನುವುದು "ಧರ್ಮ ಧಾರಯತೀ ಇತೀ ಧರ್ಮ".

ಡಿ.ವಿ. ಗುಂಡಪ್ಪನವರ ಡೆಪನೀಷನ್ ಪ್ರಕಾರ. That which sustains, that which remains for ever. that is dharma. ಇವೆಲ್ಲಾ ಆಚರಣೆ ಏನು ಇದೆ.ಅದು ಕಾಲಕಾಲಕ್ಕೆ ಬದಲಾವಣೆಯಾಗಿ ಹೋಗಿದೆ. ಕೆಲವು ಕಾಲದಲ್ಲಿ ಮನುಷ್ಯರನ್ನೇ ತಿನ್ನುತ್ತಿರಬಹುದು. ದನ ತಿನ್ನುತ್ತಿರಬಹುದು. ಮಾಂಸ ತಿನ್ನುತ್ತಿರಬಹುದು. ರಾಮಾಯಣ ಕಾಲದಲ್ಲಿ ತಮಗೆಲ್ಲಾ ಗೊತ್ತಿದೆ. ಭರದ್ವಾಜ ಆಶ್ರಮದಲ್ಲಿ ಒಂದು ಕರುವನ್ನು ಕೊಂದು ರಾಮ ವಾಪಸ್ ಬಂದಾಗ ಎಲ್ಲರಿಗೂ ಊಟಕ್ಕೆ ಬಡಿಸಿದ. ಅದು ಆ ಕಾಲದ ಧರ್ಮವೇ ವಿನಹ ಶಾಶ್ವತ ಧರ್ಮವಾಗುವುದಿಲ್ಲ, ಆದ್ದರಿಂದ ನಾನು ದೇಶ ಕಾಲಗಳನ್ನು ನೋಡಿಕೊಂಡು ಧರ್ಮ ಎನ್ನುವ ಶಬ್ದಕ್ಕೆ ಅರ್ಥ ಕಲ್ಪಿಸಬಹುದು. ಉದಾ : ಬೆಂಗಾಲ್‌ನಲ್ಲಿ ಇವತ್ತು ಬ್ರಾಹ್ಮಣರು ತಿಥಿ ಮಾಡಬೇಕಾದರೆ ಮೀನು ಇಲ್ಲದೆ ಮಾಡುವುದಿಲ್ಲ, ಇಲ್ಲಿ ನಮ್ಮಲ್ಲಿ ಉದ್ದಿನ ವಡೆಯನ್ನು ಮಾಡುತ್ತಾರೆ. ಅಲ್ಲಿ ಮೀನು ಇಲ್ಲದೆ ಮಾಡುವುದಿಲ್ಲ, ಅಂದರೆ ಧರ್ಮ ಎನ್ನುವುದು ಆಚರಣೆ ಏನಿದೆ. ಅದು ದೇಶ ಕಾಲಕ್ಕೆ ಅನುಗುಣವಾಗಿದೆ.

This is not what the rushis contempleted. I do not want to enter into any further discussion on this matter. I respect Prof. Nanjundaswamy for his erudition. Scholarship and analysis. I fully share his views so far as his retionalist thinking is concerned.

ನಮ್ಮಲ್ಲೂ ಬೇಕಾದಷ್ಟು ಮೂಢನಂಬಿಕೆಗಳು ಬಂದುಬಿಟ್ಟು ನಾವು ಸಿಪ್ಪೆಯನ್ನು ಇಟ್ಟುಕೊಂಡಿದ್ದೇವೆ, ಮಾಲನ್ನು ಮರೆತಿದ್ದೇವೆ. ಇದರಲ್ಲಿ ಜನಗಳನ್ನು ಎಚ್ಚರಿಸುವುದಕ್ಕೆ ಹೊರಟಿರುವುದು ಸ್ವಾಗತಾರ್ಹವಾಗಿದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಮೊದಲು ಒಂದು ತೀರ್ಮಾನಕ್ಕೆ ಬರಬೇಕು, ಹಿಂದುತ್ವ ಎನ್ನುವ ಬಗ್ಗೆ ಹಿಂದೂ ಧರ್ಮವೆನ್ನುವ ಬಗ್ಗೆ ನಾವೇ ಗೊಂದಲದಲ್ಲಿ ಇರಬಾರದು. ಆ ಕಾರಣ ಇದು ಮೂಲ ಧರ್ಮ ಎಂದಾದರೂ ಇರಬಹುದು. ಆದರೆ ಯಾವ ತಳಹದಿ ಮೇಲೆ ನಮ್ಮ ಚಿಂತನೆ ಬೆಳೆದು ಬಂದಿದೆ ನಮ್ಮ ಇತಿಹಾಸದಲ್ಲಿ ಎನ್ನುವುದನ್ನು ತಿಳಿದುಕೊಳ್ಳುವುದು ಬಹಳ ಮುಖ್ಯ. ಇನ್ನೊಂದು ಎರಡು ಮೂರು ಮಾತನ್ನು ಹೇಳಿ ಬಿಟ್ಟು ಬಿಡುತ್ತೇನೆ. ಇದನ್ನು ಹೇಳಿದರೆ ಬಹಳ ಟೈಮ್ ಹಿಡಿಯುತ್ತದೆ. ನಂತರ ಬೇರೆ ವಿಷಯಕ್ಕೆ ಬರುತ್ತೇನೆ. A Shudra who does no Service to Brahmana is still a slave, a born slave. The food gets polluted by the Smell of a pig, look of a dog and the touch of a Shudra.

"Shudras tongue shall be cut if he abuses a Brahmin. If a Shudra commands a Brahmin to do a thing, boiling oil should be poured in his mouth and in his ears." ಇನ್ನು ಈ ರೀತಿ ಬಹಳ ಇವೆ. ತಮ್ಮ ಮೂಲಕ ನಾನು ಹಾರ್ನಳ್ಳಿ ರಾಮಸ್ವಾಮಿಯವರಿಗೆ ತಿಳಿಸುವುದು ಏನೆಂದರೆ I am a student of Hindu Jurisprudence. I am a student of Hindu Political History or

Indian Political History also. ಇದು ಯಾವತ್ತಾದರೂ ನಮ್ಮ ದೇಶ ಭರತ ಖಂಡ ಎಂದು ಏನು ಹೇಳುತ್ತೇವೆ ಅದು ಯಾವತ್ತಾದರೂ ಹಿಂದೂ ರಾಷ್ಟ್ರ ಆಗಿತ್ತೆ ಎಂದು ನನ್ನ ಪ್ರಶ್ನೆ. ಅದು ಯಾವತ್ತಿಗೂ ಆಗಿಲ್ಲ, ಈ ಸನಾತನ ಧರ್ಮ ಎಂದು ಏನು ಹೇಳಿದೆ. ವೈದಿಕ ಧರ್ಮ ಯಾವಾಗ ಈ ದೇಶದಲ್ಲಿ ಪ್ರವೇಶ ಮಾಡಿತು? ಖೈಬರ್ ಕಣಿವೆ ಮೂಲಕ, ನಾನು ಏನು ಹೇಳುತ್ತಿದ್ದೇನೆ, ಅದು ನಮಗೆ ಅನ್ವಯಿಸುವುದಿಲ್ಲ ಎಂದು. ಇತ್ತೀಚೆಗೆ ಇತಿಹಾಸವನ್ನೇ ತಿರುಚುವಂತಹ ಪ್ರಯತ್ನ ನಡೆಯುತ್ತಿದೆ. ಆರ್ಯನರು, ಮಧ್ಯ ಪ್ರಾಚೀನದಿಂದ, ಯೂರೋಪಿನಿಂದ ಬರಲಿಲ್ಲ ಎನ್ನುವಂತಹ ಹೊಸ ಸಂಶೋಧನೆಗಳನ್ನು ಬರೆಯಿಸುತ್ತಿದ್ದಾರೆ. ಹೊಸ ಚರಿತ್ರೆ ಬರೆಯಿಸುತ್ತಿದ್ದಾರೆ. ಇದರ ಹಿಂದೆ ಒಂದು ದೊಡ್ಡ ಕುತಂತ್ರ ಇದೆ. ಅದರಲ್ಲಿ ನಾವೂ ನೀವೂ ಪ್ರಾಥಮಿಕ ಶಾಲೆಯಲ್ಲಿ ಓದಿದ್ದು ಇದು. ಆರ್ಯನರು ಬಂದರು, ಮಧ್ಯ ಯುರೋಪಿನಿಂದ. ಅವರ ಜೊತೆಗೆ ಒಂದು ಹೊಸ ಜೀವನದ ಕ್ರಮ ತಂದರು. ಒಂದು ಬೇರೆ ವಿಚಾರ ತಂದರು. ಅದೇ ವಿಚಾರ ಇದೆ.ಆದರೆ ಅವರು ಯಾವತ್ತಿನಿಂದ ಬಂದರು. ಆ ವಿಚಾರದ ವಿರುದ್ಧ ಹೋರಾಟ ನಡೆದಂತಹ ದೇಶ ಇದೆ. ರಾಮಾಯಣ ಮಹಾಭಾರತದ ಕಾಲಕ್ಕಿಂತ ಹಿಂದಿನಿಂದಲೂ ಈ ಕೆಟ್ಟ ವಿಚಾರನ್ನು ಈಗ ನಾನು ಓದಿ ಹೇಳಿದೆ. ಇದರ ವಿರುದ್ಧ ಹೋರಾಟ ನಡೆದಂಥ ದೇಶ ಇದು. ಈ ಭರತ ಖಂಡ. ಚಾರುವಾಕ ಎಂದು ತಾವುಹೇಳಿರಬಹುದು. ಮಹರ್ಷಿ ಚಾರುವಾಕರ ಹೋರಾಟ ತ್ರೇತಾಯುಗಕ್ಕೂ ಹಿಂದಿನಿಂದ ನಡೆದುಕೊಂಡ ಬಂದಿದೆ. ಮಹಾವೀರರ ಕಾಲಕ್ಕೆ ಹಿಂದಿನಿಂದ ನಡೆದುಕೊಂಡು ಬಂದಿದೆ.

ಈ ದೇಶ ಬರೀ ಹಿಂದೂ ಧರ್ಮ ಎಂದು ಹೇಳುತ್ತಾರೆ. ಅದಕ್ಕೆ ಸಂಬಂಧ ಪಟ್ಟಂತಹ ದೇಶ ಅಲ್ಲ, ಈ ಸನಾತನ ಧರ್ಮ ಎಂದು ಇದೆ, ಅದರ ವಿರುದ್ಧ ಏನೇನು ಹೋರಾಟಗಳು ನಡೆಯಿತು. ಚಾರುವಾಕರ ಹೋರಾಟ ಮಹಾವೀರರ ಹೋರಾಟ, ಗೌತಮ ಬುದ್ಧನ ಹೋರಾಟ. ಅನಂತರ ಪ್ರಾದೇಶಿಕವಾಗಿ ಬಸವೇಶ್ವರರ ಹೋರಾಟ. ಅಥವಾ ಮಹಾರಾಷ್ಟದಲ್ಲಿ ಫೂಲೆ ಹೋರಾಟ. ತಮಿಳುನಾಡಿನಲ್ಲಿ ಪೆರಿಯಾರ್ ಹೋರಾಟ. ಕೇರಳದಲ್ಲಿ ನಾರಾಯಣಗುರು ಹೋರಾಟ. ಪಂಜಾಬಿನಲ್ಲಿ ಗುರು ನಾನಕ್‌ರ ಹೋರಾಟ. ಇದು ಎಲ್ಲ ಏನು ಹುಟ್ಟಿನಿಂದಲೇ ಅಸಮಾನತೆ ಭೋದನೆ ಮಾಡುವಂತಹ ವಿಚಾರ ಇದೆ, ಕೆಟ್ಟ ವಿಚಾರಇದೆ. ಈ ವಿಚಾರದ ವಿರುದ್ಧ ಹೋರಾಟ ಮಾಡಿದಂತಹ ಪುಣ್ಯ ಭೂಮಿ ಇದು, ಭಾರತ. ಇದನ್ನು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಇದು ಹಿಂದೂ ರಾಷ್ಟ್ರ ಅಲ್ಲ. ಇವರು ಏನು ಹಿಂದೂ ಧರ್ಮ ಎಂದು ಹೇಳುತ್ತಾರೆ. ಆ ಹಿಂದೂ ಧರ್ಮದ ವಿರುದ್ಧ ಹೋರಾಟಗಳು ನಡೆದುಕೊಂಡು ಬಂದಿರುವಂತಹ ಇತಿಹಾಸ, ಭಾರತದ ಇತಿಹಾಸ. We have a secular history and not religious bigotary. ಈ ಮಾತನ್ನು ಯಾರು ಇಟ್ಟಿಗೆ ರಾಜಕಾರಣ ಮಾಡಿದರು, ಅಥವಾ ಚಪ್ಪಲಿ ರಾಜಕಾರಣ ಮಾಡಿದರು. ಅವರೂ ತಿಳಿದುಕೊಳ್ಳಬೇಕು ಎಂದು ಹೇಳುತ್ತಿದ್ದೇನೆ. ಅದರಲ್ಲಿ ಹೆಚ್ಚಿಗೆ ಹೆಚ್ಚಿಗೆ ಭಾಗವಹಿಸಿದವರು, ಈ ಸನಾತನ ಧರ್ಮ ಯಾರನ್ನು ಶೂದ್ರ ಎಂದು ಕರೆಯುತ್ತದೆಯೋ ಅವರೇ ಇಟ್ಟಿಗೆಯನ್ನು ಹೊತ್ತವರು, ಚಪ್ಪಲಿಯನ್ನು ಹೊತ್ತವರು. ಇಂತಹ ಚಟುವಟಿಕೆಗಳು ಇನ್ನು ಮುಂದೆ ನಡೆಯಬಾರದು. ಯಾರು ಈ ವಿಚಾರದಲ್ಲಿ ಇನ್ನೂ ನಂಬಿಕೆ ಇಟ್ಟುಕೊಂಡಿದ್ದಾರೆ. ಅವರು ಈ ವಿಚಾರದ

ಮೂಲಕಸ್ವರ್ಗಕ್ಕಾದರೂ ಹೋಗಬಹುದು ನರಕಕ್ಕಾದರೂ ಹೋಗಬಹುದು. ಅವರ ತಂಟೆಗೆ ಅವರನ್ನು ಬಿಡುವುದು ಒಳ್ಳೆಯದು. ಈಗ ನಾನು ಏನು ಮಾತನಾಡುಬೇಕು ಎಂದು ಇದ್ದೇನೆ, ಅದನ್ನು ಮಾತನಾಡಬಾರದು ಎಂದು ನಿಮ್ಮ ಪಕ್ಷದ ಸದಸ್ಯರು ಹೇಳಿದ್ದಾರೆ. ಕೆಲವರು, ಹೇಳಿದ್ದಾರೆ ರಾಮನ ಬಗ್ಗೆ ನಿಮಗೆ ಗೊತ್ತಿಲ್ಲ ರಾಮ ಒಬ್ಬ ದೇವರು ಎಂದು ಪೂಜೆ ಮಾಡುವುದಕ್ಕೆ ಯೋಗ್ಯತೆ ಇರುವಂತಹ ವ್ಯಕ್ತಿಯೇ ಅಥವಾ ರಾಮ ಒಬ್ಬ ದೇವರೇ?

ವಾಲ್ಮೀಕಿ ರಾಮಾಯಣವನ್ನು ಬರೆದಿದ್ದು ತಾರೀಖು ನಮಗೆ ಗೊತ್ತಿಲ್ಲವೇ? ವಾಲ್ಮೀಕಿ ಬರೆಯುವುದಕ್ಕೆ ಹಿಂದೆ ರಾಮ ಎಲ್ಲಿದ್ದ? ಮೂಲ ರಾಮಾಯಣವನ್ನು ತಂದಿದ್ದೇನೆ. ವಾಲ್ಮೀಕಿ ರಾಮಾಯಣ ಶ್ಲೋಕಗಳನ್ನೇನಾದರೂ ನಾನು ಓದುವುದಕ್ಕೆ ಶುರುಮಾಡಿದರೆ ರಾಮ ಚಾರಿತ್ರ್ಯ ರಹಿತ ವ್ಯಕ್ತಿಯೆನ್ನುವುದನ್ನು ವಾಲ್ಮೀಕಿ ಸ್ಪಷ್ಟವಾಗಿ ಚಿತ್ರಿಸಿದ್ದಾನೆ. ರಾಮಾಯಣದಲ್ಲಿನ ಪಾತ್ರಗಳು ಎನ್ನುವ ಪುಸ್ತಕಗಳು ಇವೆ. ಕಾಲಾವಕಾಶ ಇಲ್ಲದೇ ಇರುವುದರಿಂದ ಒಂದು ಹೆಚ್ಚಿನ ಪ್ರತಿಯನ್ನು ನಾನು ತಂದಿದ್ದೇನೆ. ಅದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ತಾವು ನಿಧಾನವಾಗಿ ಪರಮಾರ್ಶಿಸಬಹುದು.

ಉಪಾಧ್ಯಕ್ಷಿಣಿಯವರು : ನಿಮಗೂ ಬೇಕಾದರೆ ಪ್ರತಿಯನ್ನು ಕಳುಹಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ರಾತ್ರಿಯಲ್ಲಾ ರಾಮಾಯಣವನ್ನು ಕೇಳಿಕೇಳಿ ನಮಗೂ ಸಾಕಾಗಿದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಸಭಾಧ್ಯಕ್ಷಣಿಯವರೆ ಇನ್ನು ನಾನು ಏನೂ ಹೆಚ್ಚಿಗೆ ಹೇಳುವುದಿಲ್ಲ. ಈಗ ನಡೆಯುತ್ತಿರುವುದು ಎಂತಹ ಚಟುವಟಿಕೆ ಅಂದರೆ ಹಿಂದು ರಾಷ್ಟ್ರವನ್ನು ಕಟ್ಟುತ್ತೇವೆ ಎನ್ನತಕ್ಕ ಕಾರ್ಯಕ್ರಮಕ್ಕೆ ಹಣ ಖರ್ಚಾಗುತ್ತಿರುವುದು ಜೈನರದು. ಹಿಂದು ರಾಷ್ಟ್ರ ಕಟ್ಟುತ್ತೇವೆ ಎಂದು ಕಾರ್ಯಕ್ರಮಕ್ಕೆ ಉಪಯೋಗವಾಗುತ್ತಿರುವ ಹಣ ಜೈನರದು. ಜೈನರು ಮಹಾವೀರನ ಶಿಷ್ಯರು, ಅವರೇನು ದಡ್ಡರಲ್ಲ, ಅವರಿಗೂ ಮಹಾವೀರನ ಚಳುವಳಿಯಲ್ಲಿ ಅತ್ಯಂತ ಗೌರವ, ಇರುವಂತಹ ಜನವೇ ಆದರೂ ಜೈನರು ಏಕೆ ಹಣವನ್ನು ಈ ಹಿಂದು ರಾಷ್ಟ್ರವನ್ನು ಕಟ್ಟುವುದಕ್ಕೆ ಕೊಡುತ್ತಿದ್ದಾರೆ ಎನ್ನುವುದನ್ನು ನಾವು ಸ್ವಲ್ಪ ಅರ್ಥಮಾಡಿಕೊಳ್ಳಬೇಕು. ಏನು ವೈದೀಕ ಕಾಲದಲ್ಲಿ ಯಾವ ಆರ್ಥಿಕ ರಾಜಕೀಯ ವ್ಯವಸ್ಥೆ ಇತ್ತು ಇಲ್ಲೊಂದು ಶ್ಲೋಕವನ್ನು ಹೇಳುವುದು ಮರೆತೆ. ಯಾವ ಕ್ಷತ್ರೀಯ, ಬ್ರಾಹ್ಮಣನನ್ನು ರಕ್ಷಣೆ ಮಾಡುವುದಿಲ್ಲವೋ ಮತ್ತು ಉಪನಯನವನ್ನು ಮಾಡಿಕೊಳ್ಳುವುದಿಲ್ಲವೋ ಅವನು ಶೂದ್ರ ಆಗುತ್ತಾನೆ ಎನ್ನುವುದು ಇದೆ. ಹಾಗೆಯೇ ಈ ಕ್ಷತ್ರಿಯನನ್ನು ಅವರು ಹಿಡಿದುಕೊಂಡಿದ್ದರು. ನಂತರ ಯಾರನ್ನು ಹಿಡಿದುಕೊಂಡರು, ಅಂದರೆ ವೈಶ್ಯರು ಮತ್ತು ಬ್ರಾಹ್ಮಣರು. ಈಗ ಮತ್ತೆ ವೈಶ್ಯರ ಹಣದಲ್ಲಿ ಹಿಂದು ರಾಷ್ಟ್ರವನ್ನು ಕಟ್ಟುವಂತಹ ಮತ್ತು ಸನಾತನ ರಾಷ್ಟ್ರ ಕಟ್ಟುವಂತಹ ಪ್ರಯತ್ನ ಅಂದರೆ ಮತ್ತೆ ವೈದೀಕ ಕಾಲಕ್ಕೆ ವಾಪಸ್ಸು ನಮ್ಮ ದೇಶವನ್ನು ತೆಗೆದುಕೊಂಡು ಹೋಗುವಂತಹ ಪ್ರಯತ್ನ ಇದೊಂದು ರಾಜಕೀಯ ಕುತಂತ್ರ. ಅಷ್ಟೇ ಹೊರತು ಇವರಿಗೆ ನಿಜವಾಗಿಯೂ ರಾಮನ ದೇವಸ್ಥಾನವನ್ನು ರಾಮಜನ್ಮಭೂಮಿಯನ್ನು ಇಲ್ಲಿ ಕಟ್ಟಬೇಕೆನ್ನುವಂತಹ ಆಸಕ್ತಿ ಅಂತೂ ಇಲ್ಲವೇ ಇಲ್ಲ, ಮತ್ತೆ ಪಟ್ಟಜೀ ಮತ್ತು ಶೇಟ್‌ಜೀ ರಾಜ್ಯವನ್ನು ಕಟ್ಟಬೇಕೆಂದು ಹೊರಡುತ್ತಿದ್ದಾರೆ. ಆದ್ದರಿಂದ ಮಾನ್ಯ

ಸದಸ್ಯರುಗಳು ಬಹಳ ಎಚ್ಚರಿಕೆಯಿಂದ ಇನ್ನು ಮುಂದೆ ನಾವು ಇದನ್ನು ಯಾವರೀತಿ ಎದುರಿಸಬೇಕೆನ್ನುವುದನ್ನು ಆಲೋಚನೆ ಮಾಡಬೇಕು. ಸಭಾಧ್ಯಕ್ಷಿಣಿಯವರೇ, ತಾವು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಂ.ಇದಿನಬ್ಬ (ಉಲ್ಲಾಳ) : ಮಾನ್ಯ ಉಪಾಧ್ಯಕ್ಷಣಿಯವರೆ, ಈ ದಿವಸ ಮಾನ್ಯ ಮುಖ್ಯ ಮಂತ್ರಿಗಳು ತಂದಿರತಕ್ಕ ಹೇಳಿಕೆಯ ಬಗ್ಗೆ ಮತ್ತು ಅಯೋಧ್ಯೆ ಘಟನೆಯ ಬಗ್ಗೆ ನಡೆಯತಕ್ಕ ಈ ಚರ್ಚೆಯಲ್ಲಿ ನನ್ನ ಒಂದೆರಡು ಅನಿಸಿಕೆಗಳನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಈ ಭಾರತ ದೇಶ ಎಂದು ಹೇಳಿದರೆ, ಬಹಳ ಚರಿತ್ರೆ ಇರತಕ್ಕ ಸಂಸ್ಕೃತಿ ಇರತಕ್ಕ ಅನೇಕ ಮತಗಳು ಅನೇಕ ಜಾತಿಗಳು, ಅನೇಕ ಉಪಜಾತಿಗಳು ಇರತಕ್ಕಂಥ ದೇಶವಾಗಿದೆ. ಅನೇಕ ಜಾತಿಗಳು ಮಾತ್ರಅಲ್ಲ, ಸಾವಿರದ ಇನ್ನೂರಕ್ಕೂ ಮಿಕ್ಕಿದ ಉಪಜಾತಿಗಳು ಇರತಕ್ಕ ಒಂದು ದೇಶ. ಇದು ವಿವಿಧತೆಯಲ್ಲಿ ಏಕತೆಯನ್ನು ಕಾಣತಕ್ಕ ವಿವಿಧತೆಯಲ್ಲಿ ವೈವಿಧ್ಯತೆಯನ್ನು ಕಾಣತಕ್ಕ ದೇಶವೆಂದು ಮೊನ್ನೆ ಡಿಸೆಂಬರ್ 6ನೇ ತಾರೀಖಿನವರೆಗೂ ದೇಶದಲ್ಲಿ ಮಾತ್ರವಲ್ಲ ಇಡೀ ಜಗತ್ತಿನಲ್ಲಿ ಜಗತ್ ಜಾಹಿರಾಗಿದೆ.

5.40 ಪಿ.ಎಂ.

ಕೆಲವು ಹೆಚ್ಚು-ಕಡಿಮೆಯಾಗಿರಬಹುದು. ಅದನ್ನೆಲ್ಲಾ ಸುಧಾರಿಸಿಕೊಂಡು ಬಂದಿದ್ದಾರೆ. ಇಂತಹ ಒಂದು ದೇಶ ಗೌರವ, ಪರದೇಶದಲ್ಲಿಯೂ ಕೂಡ ಒಳ್ಳೆಯ ರೀತಿಯಲ್ಲಿತ್ತು. ಇಲ್ಲಿರತಕ್ಕಂಥ ಪರಕೀಯರನ್ನು ಓಡಿಸುವುದಕ್ಕೆ ಮಹಾತ್ಮಗಾಂಧೀಜಿಯವರು ಮಾಡಿರತಕ್ಕಂಥ ತ್ಯಾಗ, ಬಲಿದಾನ ಅವರ ಜೊತೆಯಲ್ಲಿ ಸೇರಿರತಕ್ಕಂಥ ಅವರ ಅನುಯಾಯಿಗಳು ಮಾಡಿರತಕ್ಕಂಥ ಆ ಬಲಿದಾನ ಕೂಡ ಜಗತ್ತಿನಲ್ಲಿ ಜಗಜ್ಜಾಹೀರಾಗಿದೆ. ಇವತ್ತು ಅನೇಕರಿಗೆ ಗೊತ್ತಿಲ್ಲ. ಸ್ವಾತಂತ್ರ್ಯಪೂರ್ವದಲ್ಲಿ ಯಾವ ರೀತಿಯಲ್ಲಿ ಅನ್ಯೋನ್ಯತೆ ಹಿಂದೂಗಳಲ್ಲಿ, ಮುಸ್ಲಿಮರಲ್ಲಿ, ಕ್ರೈಸ್ತರಲ್ಲಿ, ಸಿಖ್ಖರಲ್ಲಿ ಇತ್ತು, ಮತ್ತು ಎಂತಹ ಭಾಂದವ್ಯ ಇತ್ತೋ, ಅಂತಹ ಭಾಂದವ್ಯದಿಂದಲೇ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು ಎಂಬುದಾಗಿ ಯಾರೂ ಆಲೋಚಿಸುವುದಿಲ್ಲ.ಎಲ್ಲರೂ ಅವರ ನಂತರವೇ ಹುಟ್ಟಿರುವವರೇ ಹೆಚ್ಚಾಗಿರುವವರು. ಸ್ವಾತಂತ್ರ್ಯ ಸಮರದಲ್ಲಿ ಹೋರಾಡಿರುವಂಥ ಜನರು ಬಹಳ ಕಡಿಮೆ ಸಂಖ್ಯೆಲ್ಲಿದ್ದಾರೆ. ಅವರುಗಳಿಗೆಲ್ಲಾ ಸ್ವಾತಂತ್ರ್ಯ ಪೂರ್ವದ ಪರಿಸ್ಥಿತಿ ಗೊತ್ತಿದೆ. ಆಗ ಮಹಾತ್ಮಾಗಾಂಧೀಜಿಯವರು ಹಿಂದೂಗಳು, ಸಿಖ್ಖರ ಜೊತೆ ಓಡಾಡಿಕೊಂಡು ಕೆಲಸ ಮಾಡಿದ್ದರಿಂದ ಈ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ಯುದ್ಧದಲ್ಲಿ ಸಿಕ್ಕಿದಂಥ ಸ್ವಾತಂತ್ರ್ಯ ಇದಲ್ಲ, ಮಹಾತ್ಮ ಗಾಂಧೀಜಿಯವರ ನ್ಯಾಯ, ಸತ್ಯ, ಅಹಿಂಸೆಗಳ ತಳಹದಿಯಲ್ಲಿ ಸಿಕ್ಕಿದಂಥ ಸ್ವಾತಂತ್ರ್ಯದಲ್ಲಿ ಮಹಾನ್ ಮೇಧಾವಿ, ವಿದ್ವಾಂಸ ಎನಿಸಿಕೊಂಡ ಮೌಲಾನಾ ಆಜಾದ್‌ರವರು ಸರ್ವವನ್ನೂ ತ್ಯಾಗ ಮಾಡಿದ್ದುದು ಆಗ ಕಣ್ಣ ಮುಂದಿತ್ತು. ಪೇಶಾವರದಲ್ಲಿ ಕೋಟ್ಯಾಧಿಪತಿಗಳಾಗಿದ್ದ ಖಾನ್ ಅಬ್ದುಲ್ ಗಫರ್‌ಖಾನ್ ಸಾಹೇಬರು ಎಲ್ಲವನ್ನೂ ತೊರೆದು ಮಹಾತ್ಮ ಗಾಂಧೀಜಿಯವರ ಶಿಷ್ಯರಾಗಿ ಈ ದೇಶಕ್ಕೆ ಸ್ವಾತಂತ್ರ್ಯ ತರಬೇಕೆಂದು ತ್ಯಾಗ ಮಾಡಿದರು. ಅದೇ ರೀತಿ ಮಹಮದ್ ಅಲಿ, ಶೌಕತ್ ಅಲಿ, ಡಾ. ಅನ್ಸಾರಿಯವರು, ಅದೇ ರೀತಿಯಲ್ಲಿ ಸಿಖ್ಖರು, ಹಿಂದೂಗಳು, ಇನ್ನೂ ಅನೇಕ ರೀತಿಯ ಬಂಧುಗಳು, ಮೇಧಾವಿಗಳು ಮಹಾತ್ಮ ಗಾಂಧೀಜಿಯವರ ಮಾತಿನಲ್ಲಿ ವಿಶ್ವಾಸವಿಟ್ಟು, ಎಲ್ಲರೂ ಒಗ್ಗಟ್ಟಿನಿಂದ, ಸೌಹಾರ್ದತೆಯಿಂದ, ಐಕ್ಯತೆಯಿಂದ ಹೋರಾಟ

ಮಾಡಿದ್ದರಿಂದ ಈ ದೇಶಕ್ಕೆ ಆಗಸ್ಟ್ 15, 1947ನೇ ಇಸವಿಯಲ್ಲಿ ಸ್ವಾತಂತ್ರ್ಯ ಬಂದಿತು. ಆಗ ನಮ್ಮಲ್ಲಿ ಸೌಹಾರ್ದತೆ, ಐಕ್ಯಮತ್ಯ, ಸಂಸ್ಕೃತಿ ಇತ್ತು. ಈಗ, 1992ನೇ ಇಸವಿಯಲ್ಲಿ ಈ ಸಂಸ್ಕೃತಿ, ಐಕ್ಯತೆಯನ್ನು, ಒಡೆದುಹಾಕಬೇಕೆಂದು ಹೇಳಿದರೆ ಅದರ ಅರ್ಥವೇನು? ಎಂಬುದನ್ನು ನಾವೆಲ್ಲರೂ ಆಲೋಚನೆ ಮಾಡಬೇಕಾಗುತ್ತದೆ. ಈ ಸೃಷ್ಟಿ ದೇವರದು ಎಂದು ನಾವು ಹೇಳುತ್ತೇವೆ, ಈ ಪ್ರಕೃತಿ ದೇವರದು ಎಂದು ನಾವು ಹೇಳುತ್ತೇವೆ. ಅಂತೆಯೇ,ಮನುಷ್ಯರು ಸಹ ದೇವರ ಸೃಷ್ಟಿ ಎಂದು ಹೇಳುತ್ತಾರೆ. ಈ ಗಾಳಿ, ಬೆಳಕು, ನೀರು, ಭೂಮಿ ಎಲ್ಲವೂ ದೇವರದು ಎಂದು ಹೇಳುವಾಗ, ಈ ಬೆಳಕು ಮುಸಲ್ಮಾನರದ್ದು, ಈ ಗಾಳಿ ಹಿಂದೂಗಳದ್ದು, ಈ ಭೂಮಿ ಮತ್ತೊಬ್ಬರದು ಅಲ್ಲ. ಆದುದರಿಂದ, ದೇವರ ಸೃಷ್ಟಿಯಲ್ಲಿ ಎಲ್ಲರೂ ಸರ್ವಸಮಾನರು. ಈ ಬೆಳಕು ಮುಸ್ಲಿಮರ ಮನೆಗೂ ಬೀಳುತ್ತದೆ. ಹಿಂದೂಗಳ ಮನೆಗಳಿಗೂ ಬೀಳುತ್ತದೆ. ಬಡವರ ಮನೆಗೂ ಬೀಳುತ್ತದೆ. ಕೋಟ್ಯಾಧಿಪತಿಗಳ ಮನೆಗೂ ಬೀಳುತ್ತದೆ. ಆದುದರಿಂದ, ಎಲ್ಲರೂ ಸಮಾನರು. ಅದೇ ರೀತಿಯಲ್ಲಿ ನಾವು ಶ್ವಾಸ-ಉಚ್ಛ್ವಾಸಗಳ ಮೂಲಕ ತೆಗೆದುಕೊಳ್ಳುವಂಥ ಗಾಳಿಯನ್ನು ನಿಗದಿತ ಪ್ರಮಾಣದಲ್ಲಿ ತೆಗೆದುಕೊಳ್ಳುತ್ತೇವೆಯೇ ಹೊರತು ಹೆಚ್ಚಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಬಿಡುವುದಕ್ಕೂ ಆಗುವುದಿಲ್ಲ. ಎಷ್ಟು ತೆಗೆದುಕೊಳ್ಳಬೇಕು, ಎಷ್ಟು ಬಿಡಬೇಕೋ ಅಷ್ಟಷ್ಟೇ ಮಾಡಬೇಕಾಗುತ್ತದೆ. ಇಂತಹ ಎಲ್ಲಾ ವ್ಯವಸ್ಥೆಯಿರುವಾಗ ನಾವು ಈ ರೀತಿಯಲ್ಲಿ ಒಬ್ಬರಿಗೊಬ್ಬರಿಗೆ ಹಿಂಸೆ ಮಾಡಿ ಕೊಲ್ಲಬೇಕೆಂದು ಹೇಳತಕ್ಕಂಥ ಪರಿಸ್ಥಿತಿ ಏಕೆ? ಎಂಬುದನ್ನು ನಾವೆಲ್ಲರೂ ಇವೊತ್ತು ಆಲೋಚನೆ ಮಾಡಬೇಕು. ಕರ್ಮ ಧರ್ಮಗಳ ಬಗ್ಗೆ ಪ್ರೊಫೆಸರ್ ಎಂ.ಡಿ. ನಂಜುಂಡಸ್ವಾಮಿಯವರು ಬಹಳ ಚೆನ್ನಾಗಿ ಹೇಳಿದರು. ಧರ್ಮವೆಂದರೆ, ಅದು ಒಬ್ಬ ಮನುಷ್ಯನ ಏಕತೆಯಲ್ಲಿದ್ದು, ದೇವರ ಕಡೆಗೆ ಹೋಗತಕ್ಕಂಥ ಒಂದು ವ್ಯವಸ್ಥೆಯಲ್ಲದೆ, ಅವನು ಒಳ್ಳೆಯದನ್ನು ಮಾಡಿದರೆ, ಅವನನ್ನು ಒಳ್ಳೆಯದ ರೀತಿಯಲ್ಲಿ ಮೋಕ್ಷದ ಕಡೆ ಕೊಂಡೊಯ್ಯತಕ್ಕಂಥ ರೀತಿಯಲ್ಲಿದೆ. ಧರ್ಮ ಎಲ್ಲವನ್ನು ಕದಡುವುದಕ್ಕೆ, ಎಲ್ಲರನ್ನೂ ಹಾಳು ಮಾಡತಕ್ಕಂಥ ರೀತಿಯಲ್ಲಿಲ್ಲ. ಇಂದು ರಾಜಕೀಯ ಬಹಳ ಮೇಲೆ ಬಂದಿರುವುದರಿಂದ, ಧರ್ಮ ರಾಜಕೀಯದೊಳಗೆ ಬೆರೆತು ಹೋಗಿದೆ. ಇದೇ ದೊಡ್ಡ ಅಪಾಯ. ಯಾವಾಗಲೂ ಧರ್ಮ ಮತ್ತು ರಾಜಕೀಯ ಒಂದಾಗಿದ್ದರೆ ಅಲ್ಲಿ ಅಪಾಯ ಉಂಟೆಂದೇ ಲೆಕ್ಕ. ರಾಜಕೀಯವೆಂದರೆ ಓಟು ಗಿಟ್ಟಿಸತಕ್ಕಂಥ ಒಂದು ರೀತಿ. ಯಾವ ರೀತಿಯಲ್ಲಿ ಓಟನ್ನು ಗಿಟ್ಟಿಸಬಹುದೆಂದು ನಾವು ಆಲೋಚನೆ ಮಾಡುತ್ತಾ ಹೋದರೆ ಅದಕ್ಕೆ ಕರ್ಮವನ್ನು ಬೆರಕೆ ಮಾಡಿದರೆ ಖಂಡಿತವಾಗಿಯೂ ಅತ್ಯುನ್ನತ ಸ್ಥಾನದಲ್ಲಿದ್ದಂಥ ಈ ದೇಶ ಇನ್ನು ಮುಂದೆ ಆ ರೀತಿ ಹೋಗುವುದಕ್ಕೆ ಸಾಧ್ಯವಿಲ್ಲ, ಇದನ್ನು ನಾವೆಲ್ಲರೂ ಇವೊತ್ತು ತಿಳಿದುಕೊಳ್ಳಬೇಕಾಗಿದೆ. ಆದುದರಿಂದ, ಡಿಸೆಂಬರ್ 6ನೇ ತಾರೀಖಿನ ದಿವಸ ನಡೆದಿರತಕ್ಕಂಥ ಅಯೋಧ್ಯೆ ಘಟನೆಯ ಬಗ್ಗೆ ತಾವೆಲ್ಲರೂ ಓದಿದ್ದೀರಿ, ಕೇಳಿದ್ದೀರಿ. ಇವೊತ್ತು ಮಾನ್ಯ ಸಿಂಧ್ಯಾರವರು ಒಳ್ಳೆಯ ರೀತಿಯಲ್ಲಿ ಕೆಲವು ವಿಚಾರಗಳನ್ನು ಹೇಳಿದರು. ಅಂತೆಯೇ ಪ್ರೊಫೆಸರ್ ನಂಜುಂಡಸ್ವಾಮಿಯವರು, ಮೊನ್ನೆ ದಿವಸ ವೈ.ಕೆ. ರಾಮಯ್ಯನವರು ಮತ್ತು ದೇಶಪಾಂಡೆಯವರು ಸಹ ಹೇಳಿದರು. ಇದನ್ನೆಲ್ಲಾ ಗಮದಲ್ಲಿಟ್ಟುಕೊಂಡರೆ ಈ ದೇಶ ಇಡೀ ಜಗತ್ತಿನಲ್ಲಿಯೇ ಒಂದು ಮಾದರಿಯಾಗಿರತಕ್ಕಂಥ ದೇಶ ಇವೊತ್ತು ಅಧಃಪತನದ ಹಾದಿಯನ್ನು ಹಿಡಿಯುತ್ತಿದೆ. ಮಹಾ ದೊಡ್ಡ ಕವಿಯಾದ ಡಾ. ಕುವೆಂಪುರವರು ಏನು ಹೇಳುತ್ತಾರೆಂದರೆ:

"ಗುಡಿ, ಚರ್ಚು, ಮಸೀದಿಗಳ ಬಿಟ್ಟು ಹೊರಬನ್ನಿ
ಬಡತನದ ಬುಡವ ಕೀಳಬನ್ನಿ,ಓ ಸೋದರರೇ ಬೇಗ ಬನ್ನಿ
ಮೂಢ ನಂಬಿಕೆಯ ಹೊಡೆದಟ್ಟಿ
ನುಚ್ಚುನೂರಾಗಿ ಮಾಡಿ ಬನ್ನಿ
ಈ ಮೂಢ ನಂಬಿಕೆಗೆ ಬಲಿಯಾಗಬೇಡಿ
ಕರ್ಮ ಎಂದು ಹೇಳಿಕೊಂಡು ತಲೆ ಕೆಡಿಸಿಕೊಳ್ಳಬೇಡಿ."

ಇದನ್ನು ಅವರು ಇಡೀ ದೇಶದಲ್ಲಿರುವ ಜನರಿಗೆ ಹೇಳಿದ್ದುದು. ಇವೊತ್ತು ನಮ್ಮ ದೇಶದಲ್ಲಿ ಬಡತನ ಯಾವ ರೀತಿಯಲ್ಲಿದೆ? ಅನ್ನವಿಲ್ಲ, ಬಟ್ಟೆ ಇಲ್ಲ, ಕೋಟಿಗಟ್ಟಲೆ ಜನರು ನಿರ್ಗತಿಕರಾಗಿರುವಾಗ ಅವರ ಕಡೆ ನೋಡಿ ಅವರಿಗೆ ರಕ್ಷಣೆ ಮಾಡತಕ್ಕಂಥ ಕೆಲಸ ಬಿಟ್ಟು, ಬೇರೆ ಒಂದು ಧರ್ಮದ ಹೆಸರು ಹೇಳಿಕೊಂಡು ಜನರನ್ನು ಬೇರೆಡೆಗೆ ಕೊಂಡೊಯ್ಯತಕ್ಕಂಥ ರೀತಿ ಈ ದೇಶದ ಕೀರ್ತಿಗೆ ಕಳಂಕ ತಂದಿದೆಯೆಂದು ಹೇಳುತ್ತೇನೆ. ಮೊನ್ನೆ ಡಿಸೆಂಬರ್ 6ರಂದು ನಡೆದಂಥ ಘಟನೆ ಇಡೀ ಭಾರತದಲ್ಲಿ ಮಾತ್ರವಲ್ಲ ಇಡೀ ಜಗತ್ತಿನಲ್ಲಿ ಅವಗಣನೆಗೆ, ಕೀರ್ತಿಗೆ ಒಳಪಡುವುದಿಲ್ಲ, ಎಲ್ಲರೂ ದೂರುತ್ತಿದ್ದಾರೆ, ಎಲ್ಲರು ಖಂಡಿಸುತ್ತಿದ್ದಾರೆ, ಆ ರೀತಿಯಲ್ಲಿ ಉಜ್ಜಿದಂಥ ಮಸಿ ಯಾರಿಂದಲೂ ಅದನ್ನು ಅಳಿಸಿಹಾಕಲು ಸಾಧ್ಯವಿಲ್ಲವೆಂದು ಬೇರೆ ಬೇರೆ ಪತ್ರಿಕೆಗಳಲ್ಲಿ ಬರುತ್ತಿದೆ. ದೇವರ ಬಗ್ಗೆ ಮತ್ತು ದೇವರ ನಂಬಿಕೆಯ ಬಗ್ಗೆ ಮಂಜೇಶ್ವರ ಗೋವಿಂದ ಪೈಗಳವರು ಹೇಳುತ್ತಾರೆ.

ಅಣುರೇಣು ತೃಣಕಾಷ್ಠದಲಿ ಸಂಚರಿಸುತಿಹನು,
ದೇವರು ಅಲ್ಲಿ ಇಲ್ಲಿ ಇಲ್ಲ,
ಅಣುರೇಣು ತೃಣಕಾಷ್ಠದಲ್ಲಿ ಸಂಚರಿಸುತಿಹನು
ಕಣ್‌ಗಳನ್ನು ತೆರೆವರ್ ಗೋಚರಿಸುತಿಹನು.

ಬುದ್ಧಿ ಇದ್ದವರಿಗೆ ಅದೆಲ್ಲ ಕಾಣುತ್ತದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಮತ್ತೊಬ್ಬ ರಾಷ್ಟ್ರಕವಿಯಾದ ದಿನಕರ ದೇಸಾಯಿಯವರು ಸುಮಾರು 40 ವರ್ಷಗಳ ಹಿಂದೆಯೇ ದೇವರ ಬಗ್ಗೆ ಜೋರಾಗಿ ಹೇಳಿದ್ದಾರೆ.

"ದೇವರ ವಿಶ್ವ ರೂಪವನು ಮರೆತುಬಿಟ್ಟೆಯ?
ಆ ಜಗಕೆ ಗೋಡೆಯ ಹಾಕಿ ಗುಡಿಯನು ಕಟ್ಟಬಲ್ಲೆಯ?
ಮರಳಿ ನೀವು ಹಳ್ಳಿಗೋಡು, ದೀನ ಜನರ ಪಾದವನೋಡು,
ಇರಲು ಗುಡಿಯು ಇಲ್ಲವಲ್ಲ? ಹೊಟ್ಟೆ ತುಂಬ ಅನ್ನವಿಲ್ಲ,
ಹರಿಗೆಯೆಂದು ಗುಡಿಯನೊಂದು ಕಟ್ಟುತಿರುವೆಯ?
ಹರಿಯ ವಿಶ್ವ ರೂಪವನ್ನೆ ಮರೆತು ಬಿಟ್ಟೆಯ?

ಹೀನನಗಿಂತ ದೇವ ಬಡವನೆಂದು ಬಗೆದು ಬಿಟ್ಟೆಯ ಎಂದು." ನಲವತ್ತು ವರ್ಷಗಳ ಹಿಂದೆಯೇ ಬರೆದು ಬಿಟ್ಟಿದ್ದಾರೆ.

ಇವೆಲ್ಲವುಗಳನ್ನು ನಾವುಗಳು ಶಾಲೆಗೆ ಹೋಗುತ್ತಿರುವಾಗ ಪಠಣ ಮಾಡಿದಂಥ ಕವಿತೆಗಳು. ಅವುಗಳನ್ನು ನೆನಸುವಾಗ ನಮ್ಮ ದೇಶಕ್ಕೆ ಇಂದು ಏನಾಗಿದೆ, ಇದು ಹಿಂದುಗಳು, ಮುಸಲ್ಮಾನರು ಕ್ರೈಸ್ತರು ಒಟ್ಟಾಗಿ ಕೆಲಸ ಮಾಡಲಿಲ್ಲವೋ? ಅದಕ್ಕೆ ಮೂರು ಉದಾಹರಣೆಗಳನ್ನು ಕೊಡುತ್ತೇನೆ. ಸ್ವಾತಂತ್ರ್ಯ ಸಿಕ್ಕಿದ ಮೇಲೆ ನಮ್ಮಲ್ಲಿ ಮೂರು ಯುದ್ಧಗಳು ನಡೆದವು ಮೊದಲನೆಯದಾಗಿ 1962 ರಲ್ಲಿ ನಮ್ಮ ದೇಶದ ಮೇಲೆ ಚೈನಾದೇಶವು ಯುದ್ಧ ಮಾಡಿತು. ಕೆಂಪು ಕೋಟೆಯಲ್ಲಿ ತಮ್ಮ ಪತಾಕೆಯನ್ನ ಹಾರಿಸಬೇಕೆಂದು ಹೇಳಿ ಯುದ್ಧ ಮಾಡಿತು. ಕುಶಾಲಿಗೆ ಮಾಡಿದ ಯುದ್ಧವಲ್ಲ ಅದು. ಆ ಸಮಯದಲ್ಲಿ ಜವಹರಲಾಲ್‌ನೆಹರುರವರು ನಮ್ಮ ದೇಶದ ಪ್ರಧಾನಮಂತ್ರಿಗಳಾಗಿದ್ದರು. ಆಗ ಅವರು ಹೇಳಿದರೂ ಈ ದೇಶದ ಸರ್ವರೂ ಒಟ್ಟುಗೂಡಿ, ಐಕ್ಯಮತ್ಯದಿಂದ ಕನ್ಯಾಕುಮಾರಿಯಿಂದ ಹಿಡಿದು ಹಿಮಾಲಯದವರೆಗೆ ಎಲ್ಲಾರು ಹೋರಾಡಬೇಕೆಂದು. ಆ ಕಾಲದಲ್ಲಿ ಕನ್ಯಾಕುಮಾರಿಯಿಂದ ಹಿಮಾಲಯದವರೆಗಿನ ಹಿಂದೂಗಳು, ಮುಸಲ್ಮಾನರು, ಕ್ರೈಸ್ತರು, ಸಿಖ್ಖರು ಎಲ್ಲರೂ ಸಹ ಒಟ್ಟುಗೂಡಿ ಕೆಲಸ ಮಾಡಿದುದರಿಂದ, ಹೋರಾಡಿದುದರಿಂದ, ಅನೇಕ ಸೈನಿಕರು ಹೋರಾಡಿದುದರಿಂದ ಹಿಂದೂಗಳು ಅಂತಲ್ಲ ಮುಸಲ್ಮಾನರು ಅಂತಲ್ಲ, ಕ್ರೈಸ್ತರು ಅಂತಲ್ಲ , ಸಿಖ್ಖರು ಅಂತಲ್ಲ, ಎಲ್ಲಾರೂ ಸಹ ಒಟ್ಟಾಗಿ ಹೋರಾಡಿದುದರಿಂದ ನಮಗೆ ಜಯವಾಯಿತು. ಚೈನಾ ದೇಶವು ಸೋತು ಹೋದುದನ್ನು ನಾವು ಕಂಡಿದ್ದೇವೆ. ಅದೇ ರೀತಿ ಪುನಃ 1965ನೇ ಇಸವಿಯಲ್ಲಿ ಚೈನಾ ಮತ್ತು ಪಾಕಿಸ್ತಾನ ದೇಶಗಳು ಎರಡನೆ ಸಲ ನಮ್ಮ ದೇಶದ ಮೇಲೆ ಯುದ್ಧ ಮಾಡಿತು, ಆ ಯುದ್ಧವೂ ಸಹ ಸ್ವಾತಂತ್ರ್ಯ ಸಿಕ್ಕಿದ ಮೇಲೆಯೇ ನಡೆದದ್ದು. ಅದನ್ನು ಏಕೆ ಮರೆತುಹೋಗಿಲ್ಲ? ಆಗ ಶ್ರೀಮಾನ್ ಲಾಲ್‌ಬಹದ್ದೂರ್ ಶಾಸ್ತ್ರಿಯವರು ನಮ್ಮ ದೇಶದ ಪ್ರಧಾನಿಗಳಾಗಿದ್ದರು. ಅವರೂ ಸಹ ಇಡೀ ದೇಶದ ಜನರೆಲ್ಲರೂ ಒಗ್ಗಟ್ಟಾಗಿರಬೇಕು, ಹಿಂದುಗಳು, ಮುಸಲ್ಮಾನರು, ಕ್ರೈಸ್ತರು ಸಿಖ್ಖರು ಎಲ್ಲಾರೂ ಬಂದಂಥ ಶತ್ರುಗಳನ್ನು ಹೊಡೆದೋಡಿಸಬೇಕೆಂದು ಹೇಳಿದರು. ಆಗ ಇಡೀ ದೇಶದ ಎಲ್ಲಾರು ಒಂದಾಗಿ ಹೋರಾಡಿದ್ದರಿಂದ, ಒಬ್ಬರೂ ಮಾತನಾಡದೆ, ಒಬ್ಬರೂ ಎದುರಾಕಿಕೊಳ್ಳದೆ ಹೋರಾಟ ಮಾಡಿದ್ದರಿಂದ ಚೈನ ಮತ್ತು ಪಾಕೀಸ್ತಾನ ದೇಶಗಳು ಸೋತು ಮಣ್ಣುಮುಕ್ಕಿ ಹೋದುದನ್ನು ನಾವುಗಳು ಕಂಡಿದ್ದೇವೆ. ಮುಸಲ್ಮಾನರ ಬಗ್ಗೆ ಎರಡು ಅಭಿಪ್ರಾಯವನ್ನು ಗ್ರಹಿಸುವ ಅಗತ್ಯವಿಲ್ಲ ಎನ್ನುವ ಉದ್ದೇಶದಿಂದ ನಾನು ಇದನ್ನು ಹೇಳುತ್ತಿದ್ದೇನೆ. ಅವರು ಈ ದೇಶದಲ್ಲಿ ಹುಟ್ಟುತ್ತಾರೆ. ಬಾಳುತ್ತಾರೆ, ಸಾಯುತ್ತಾರೆ ಅದರಲ್ಲಿ ಯಾವುದೇ ರೀತಿಯಾದ ಸಂಶಯವಿಲ್ಲ. ಆದ್ದರಿಂದ ಈ ಉದಾಹರಣೆಯನ್ನು ಕೊಟ್ಟು ಹೇಳುತ್ತಿದ್ದೇನೆ, ಅವರೆಲ್ಲಿಯೂ ಕೂಡ ಮೋಸ ಮಾಡಲಿಲ್ಲ. 1971ನೇ ಇಸವಿಯಲ್ಲಿ ನಮ್ಮ ದೇಶದ ಮೇಲೆ ಪಾಕಿಸ್ತಾನ ಯುದ್ಧ ಮಾಡಿತು. 15 ದಿನಗಳ ಕಾಲ ನಡೆದಂಥ ದೊಡ್ಡ ಯುದ್ಧ, ಆಗಲೂ ಕೂಡ ಪ್ರಧಾನಿಯಾಗಿದ್ದಂಥ ಶ್ರೀಮತಿ ಇಂದಿರಾಗಾಂಧಿಯವರು ಈ ದೇಶದ ಸರ್ವರೂ ಒಂದಾಗಿ ಒಗ್ಗಟ್ಟಾಗಿ ದೇಶವನ್ನು ಉಳಿಸಬೇಕು, ದೇಶವನ್ನು ರಕ್ಷಿಸಬೇಕೆಂದು ಹೇಳಿದಾಗ ಎಲ್ಲಾ ಜನಾಂಗದವರೂ ಒಗ್ಗಟ್ಟಾಗಿ ಹೋರಾಡಿದರು. ನಮ್ಮ ರೈತರು ಆ ಸಂದರ್ಭದಲ್ಲಿ ಒಳ್ಳೆಯ ಬೆಳೆಯನ್ನು ಬೆಳೆದು ಯೋಧರಿಗೆ ಕೊಟ್ಟರು. ರೈತರು ಒಳ್ಳೆಯ ರೀತಿಯಲ್ಲಿ ಭತ್ತ, ಗೋಧಿ, ರಾಗಿಯನ್ನು ಬೆಳೆದರು, ಅದನ್ನು ಯೋಧರಿಗೆ ಕಳಿಸಿ ಮುಸಲ್ಮಾನರು, ಹಿಂದುಗಳು, ಕ್ರೈಸ್ತರು,ಸಿಖ್‌ರು ಎನ್ನದೆ ಎಲ್ಲಾ ಒಂದಾಗಿ ಹೋರಾಡಿದರು. ಆಗಲೂ ಸಹ ನಮಗೆ ಜಯ ಸಿಕ್ಕಿ ಪಾಕಿಸ್ತಾನ ಸೋತು ಹೋದುದು ನಮ್ಮ ಕಣ್ಣು

ಮುಂದೆ ಇದೆ. ಈ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ಮೇಲೆ ಮೂರು ಯುದ್ಧಗಳಾಗಿವೆ ಎಲ್ಲದರಲ್ಲಿಯೂ ಎಲ್ಲರೂ ಒಂದಾಗಿ ಹೋರಾಡಿದ್ದಾರೆ. ಎಲ್ಲಿಯೂ ಹಿಂದುಗಳು, ಮುಸಲ್ಮಾನರು, ಕ್ರೈಸ್ತರು,ಸಿಖ್ಖರು ಎಂದು ಹೇಳತಕ್ಕ ಭೇದ್ ಬಂದದ್ದು ಇಲ್ಲ, ಅದೇ ರೀತಿಯಲ್ಲಿ ಅನೇಕ ವಿಚಾರಗಳನ್ನು ನೋಡಬಹುದು.ಆದುದರಿಂದ ಯಾರ ಮೇಲೂ ಸಂಶಯವನ್ನು ಗ್ರಹಿಸತಕ್ಕ ಅವಶ್ಯಕತೆ ಇರಲಿಲ್ಲ, ಆದರೆ ಡಿಸೆಂಬರ್ 6, 1992ರಲ್ಲಿ ಇಂಥ ಒಂದು ರಣರಂಗ ಏಕಾಯಿತು ಎಂದು ಹೇಳತಕ್ಕದ್ದು ಬಹಳ ಬೇಸರದ ವಿಚಾರ. ಏಕೆಂದರೆ ಈ ದೇಶದಲ್ಲಿ 86 ಕೋಟಿ ನಾವು ಜನರಿದ್ದೇವೆ. ಹೀಗಿರುವಾಗ ಅಣ್ಣ ತಮ್ಮಂದಿರಂತೆ, ಭಾರತಕ್ಕಾಗಿ ಕೆಲಸಮಾಡಿ, ಈ ದೇಶದ ರಕ್ಷಣೆಯನ್ನು, ಈ ದೇಶದ ಸ್ವಾತಂತ್ರ್ಯವನ್ನು ಉಳಿಸುವುದಕ್ಕೆ ಕೆಲಸ ಮಾಡಬೇಕಾಗಿರತಕ್ಕದ್ದು ನಮ್ಮ ಧರ್ಮ. ಆ ರೀತಿಯಲ್ಲಿ ನಾವು ಕೆಲಸ ಮಾಡಬೇಕು, ಅದರಲ್ಲಿ ಅವರು ಬೇರೆ ಇವರು ಬೇರೆ ಎನ್ನತಕ್ಕ ಪ್ರಶ್ನೆಯೇ ಇಲ್ಲ, ಈ ದೇಶಕ್ಕೆ ಎಂಥ ಗಂಡಾಂತರವೇ ಬಂದರೂ ನಾವೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು. ಆದುದರಿಂದ ಡಿಸೆಂಬರ್ 6ರ ಘಟನೆಯಿಂದ ಇಡೀ ದೇಶದಲ್ಲಿ ಅಲ್ಲೋಲ ಕಲ್ಲೋಲವಾಯಿತು. ಸುಮಾರು 1300 ಜನರು ಅದರಿಂದಾಗಿ ಸತ್ತು ಹೋಗಿದ್ದಾರೆ. ಕೋಟಿಗಟ್ಟಲೆ ಆಸ್ತಿಪಾಸ್ತಿಯ ನಷ್ಟವಾಗಿದೆ. ಅದರಲ್ಲಿಯೂ ಅಲ್ಲೋಲ ಕಲ್ಲೋಲದಲ್ಲಿ ಆಗಿರತಕ್ಕ ವೈಪರೀತ್ಯವೆಂದರೆ ನಿರಪರಾಧಿಗಳು, ಬಡವರು, ನಿರ್ಗತಿಕರು, ಏನೂ ಇಲ್ಲದಂಥ ಜನರು ಮೂರು ನಾಲ್ಕು ದಿನಗಳ ಕಾಲ ಅನ್ನವಿಲ್ಲದೆ, ಅಕ್ಕಿಯಿಲ್ಲದೆ, ರೇಷನ್ ಇಲ್ಲದೆ, ಕೆಲಸವಿಲ್ಲದೆ ಕರ್ಫ್ಯೂ ಇದ್ದುದರಿಂದ ಹೊರಗೆಬಾರದೆ ಕಂಗಾಲಾಗಿ ಅವರುಗಳು ಪಟ್ಟಿರತಕ್ಕ ಕಷ್ಟವನ್ನು ಎಂದೆಂದೂ ಆ ದೇವರು ಮೆಚ್ಚತಕ್ಕ ವಿಚಾರವಲ್ಲ.

ಆದುದರಿಂದ ಈ ಸೃಷ್ಟಿಯನ್ನು ಮಾಡಿರತಕ್ಕ ದೇವರ ಬಗ್ಗೆ ನಮಗೆ ನಂಬಿಕೆ ಇದ್ದರೆ ನಾವು ಯಾರನ್ನೂ ಏನೂ ಮಾಡಬಾರದು. ಪ್ರವಾದಿಗಳೂ ಕೂಡ ಹೇಳುತ್ತಾರೆ, ದೇವಗ್ರಹಗಳು ನನ್ನದು, ಅದನ್ನು ನಾನು ನೋಡಿಕೊಳ್ಳುತ್ತೇನೆ. ಅದಕ್ಕಾಗಿ ನೀವು ಯಾರ ಜೀವವನ್ನೂ ತೆಗೆಯಬೇಡಿ. ಜೀವವನ್ನೂ ತೆಗೆಯತಕ್ಕ ಅಧಿಕಾರ ನಿಮಗಿಲ್ಲ ಎನ್ನತಕ್ಕ ಮಾತನ್ನು ಹೇಳಿದ್ದಾರೆ.ಇದನ್ನೆಲ್ಲಾ ಯಾರು ನೋಡುತ್ತಾರೆ. ಮಾನ್ಯ ಪ್ರೊಫೆಸರ್‌ರವರು ಕೆಲವು ಶ್ಲೋಕಗಳನ್ನು ಓದಿ ಹೇಳಿದರು. ಅದು ನಮಗೇ ಗೊತ್ತಿರಲಿಲ್ಲ, ಅವರು ಅದನ್ನು ಹೇಳಿದಾಗ ಇಂಥಾದ್ದೂ ಉಂಟು ಎನ್ನತಕ್ಕ ವಿಚಾರ ನಮಗೆ ಗೊತ್ತಾಯಿತು. ಹೀಗೆ ತಿಳಿದವರು ಯಾರಾದರೂ ಹೇಳಿದರೆ ನಮಗೆ ಗೊತ್ತಾಗುತ್ತದೆ. ಈ ದೇಶದಲ್ಲಿ ಪುನಃ ನಾವು ಸೌಹಾರ್ದತೆ ತರಬೇಕು,ಕೋಮುಸಾಮರಸ್ಯವನ್ನು ತರಬೇಕು. ಅದಕ್ಕಾಗಿ ಬೇರೆ ಬೇರೆ ರೀತಿಯ ಕೆಲಸಗಳನ್ನು ನಾವು _ ಮಾಡಬೇಕಾಗಿದೆ. ಯಾವ ರೀತಿ ಎಂದರೆ ನಾವು ಮನೆ ಮನೆಗೆ ಹೋಗಿ ನಾವು ಹಿಂದೂಗಳು, ಮುಸ್ಲಿಮರ ಅಣ್ಣತಮ್ಮಂದಿರು ಎನ್ನತಕ್ಕ ಭಾವನೆಯನ್ನು ಅವರಲ್ಲಿ ಹುಟ್ಟಿಸಬೇಕು. ಅದಕ್ಕೆ ಚಿಕ್ಕ ಚಿಕ್ಕ ಪುಸ್ತಕಗಳನ್ನು,ಲಾವಣಿಗಳನ್ನು, ಕವಿತೆಗಳನ್ನು ಪ್ರಕಟಮಾಡಿ ಮನೆ ಮನೆಗೆ ವಿತರಣೆ ಮಾಡತಕ್ಕದ್ದು ಇವತ್ತು ಅಗತ್ಯವಿದೆ. ಅಂದರೆ ಇವತ್ತು ಜನರ ಮನಸ್ಸು ಅಷ್ಟು ಕಲುಷಿತವಾಗಿದೆ. ಜನರ ಮೆದುಳು ಅಷ್ಟು ವಾಷ್ ಆಗಿಹೋಗಿದೆ. ಈ ಕೋಮು ಸೌಹಾರ್ದ ನೆಲೆನಿಂತು ಈ ದೇಶ ಉಳಿಯಬೇಕು, ಒಡೆಯಬೇಕು, ತುಂಡುತುಂಡಾಗಬೇಕೆಂದರೆ ಅದು ದೊಡ್ಡ ಕೆಲಸವೇನೂ ಅಲ್ಲ. ಏಕೆಂದರೆ ಪಂಜಾಬಿನಲ್ಲಿ ಸಿಖ್ಖರು ಪ್ರತ್ಯೇಕವಾಗಬೇಕೆಂದು

ಕೇಳುತ್ತಿದ್ದಾರೆ. ಕಾಶ್ಮೀರದಲ್ಲಿ ಮುಸ್ಲೀಮರು ಕೇಳುತ್ತಿದ್ದಾರೆ. ಅವರು ಜಗಳ ಮಾಡುತ್ತಿದ್ದಾರೆ. ಇದೇ ರೀತಿ ನಾಗಾಲ್ಯಾಂಡ್‌ನಲ್ಲಿ ಕ್ರಿಶ್ಚಿಯನ್ನರು ಕೇಳುತ್ತಿದ್ದಾರೆ, ಜಗಳ ಮಾಡುತ್ತಿದ್ದಾರೆ. ತಮಿಳ್ನಾಡಿನಲ್ಲಿ ಶೂದ್ರರು ಕೇಳುತ್ತಿದ್ದಾರೆ, ಜಗಳ ಮಾಡುತ್ತಿದ್ದಾರೆ. ನಾವು ಈಗ ಈ ಕೋಮು ಸೌಹಾರ್ದವನ್ನು ಉಳಿಸಿಕೊಳ್ಳದಿದ್ದರೆ ದುಷ್ಟ ಶಕ್ತಿಗೆ ಬಲ ಬಂದರೆ ಈ ದೇಶ ಅಖಂಡವಾಗಬೇಕು, ಅಖಂಡವಾಗಬೇಕೆಂದು ಹೇಳತಕ್ಕ ನಾವುಎಲ್ಲಿಗೆ ಮುಟ್ಟಬಹುದೆಂಬುದನ್ನು ನಾವು ನೀವೆಲ್ಲರೂ ಯೋಚನೆ ಮಾಡಬೇಕು. ಅಯೋಧ್ಯೆಯ ಇತ್ತೀಚಿನ ಘಟನೆ ನಮ್ಮ ಭಾರತ ದೇಶಕ್ಕೆ ಒಂದು ದೊಡ್ಡ ಕಳಂಕವನ್ನು ತಂದಿದೆ. 800 ವರ್ಷಗಳಕಾಲ ಮೊಘಲರು ಈ ದೇಶವನ್ನು ಆಳಿದರೂ ಕೂಡ ಬಹಳ ಉತ್ತಮವಾದ ಕೆತ್ತನೆ ಕೆಲಸಗಳನ್ನು, ಕಲಾಕೃತಿಗಳನ್ನು ಮಾಡಿದ್ದಾರೆ. ರವೀಂದ್ರನಾಥ್ ಠಾಗೋರ್‌ರವರು ತಮ್ಮ ಒಂದು ಕವಿತೆಯನ್ನು ಏನು ಹೇಳಿದ್ದಾರೆ ಅದರ ಕನ್ನಡ ಅನುವಾದ ಈ ರೀತಿ ಉಂಟು :-

"ಅಕೋ ಚೀಣರು, ಶಕ ಹೂಣರು,
ಪಾರಸಿಕರು, ಪಠಾಣರು, ಮೊಘಲ್ ರಸಿಕರು,
ಪ್ರಿಯ ಪ್ರಾಣರು, ಒಂದೇ ಶಿರ,
ಒಂದೇ ಮನ, ಈ ತನುಮನ ಧನ ಭರತಾರ್ಪಣವು.
ಮಾನವ್ಯವು, ಇಹ ದಿವ್ಯವು, ನವ ನವ್ಯವು ಬಹುಭವ್ಯವು,
ಅಹ ವಿಸ್ಮೃತ ಈ ಭಾರತ ಒಲ್ಲರ ಹಿತ ತತ್ಪ್ರೇಷಿತ,
ಮತ್ ಸ್ನೇಹಿತ, ಓ ಮನ್ನಿನ,
ಪ್ರಿಯ ಮನ್ನಿನ, ಈ ತನುಮನಧನ ಭರತಾರ್ಪಣಣವು.

ಎಂದು ಮಾನ್ಯ ಠಾಗೋರ್‌ರವರು ಬರೆದಂಥ ಕವನ ಇದು. ಅಲ್ಲಿಂದ ಅವರು ಬಂದಿದ್ದಾರೆ,ಇಲ್ಲಿಂದ ಇವರು ಬಂದಿದ್ದಾರೆ, ಪಾರಸಿಕರು ಬಂದಿದ್ದಾರೆ, ಮೊಘಲರು ಬಂದಿದ್ದಾರೆ, ಇದರಿಂದ ಎಲ್ಲಾ ಒಳ್ಳೆಯದೇ ಆಗಿದೆ. ಆದುದರಿಂದ ಇವರೆಲ್ಲರೂ ಭಾರತ ದೇಶಕ್ಕೆ ಅರ್ಪಣವನ್ನೇ ಮಾಡಿದ್ದಾರೆ. ಯಾರ ಮೇಲೂ ದ್ವೇಷ ಮಾಡತಕ್ಕ ಅಗತ್ಯವಿಲ್ಲವೆಂದು ಕವಿ ರವೀಂದ್ರನಾಥ ಠಾಗೋರ್‌ರವರು ಹೇಳಿದ್ದಾರೆ. ಇದೇ ರೀತಿ ಖ್ಯಾತ ಕವಿಗಳಾದ ಕಿರಿಯಣ್ಣ ರೈ ಹೇಳುತ್ತಾರೆ.

"ಐಕ್ಯದಮೃತದ ರಸಕ್ಕೆ ಜೀವ ಜೀವದ ಬೆಸುಗೆ,
ಕೂಡಿಬರೆ ಭೀಮ ಬಲ ನಮ್ಮೊಳುಂಟು,
ಐಕ್ಯದಮೃತದ ರಸಕೆ, ಜೀವ ಜೀವದ ಬೆಸುಗೆ,
ಹಿಂದೂಗಳ ಮುಸಲ್ಮಾನರ, ಕ್ರೈಸ್ತರ, ಸಿಖ್ಖರ ಪಾರ್ಸಿಗಳ ಈ ಬೆಸುಗೆ
ಐಕ್ಯಮೃತದ ರಸಕೆ, ಜೀವ ಜೀವದ ಬೆಸುಗೆ
ಕೂಡಿದರೆ ಭೀಮ ಬಲ ನಮ್ಮೊಳುಂಟು
ಹದಿನಾಲ್ಕು ಲೋಕವನು, ಸಪ್ತಸಾಗರವನ್ನು
ಎದ್ದು ದಾಂಟುವ ಶಕ್ತಿ ವೇಗವುಂಟು,

ಐಕ್ಯದಮೃತದ ಕಾಂಕ್ರೀಟ್ ರಸ ಇಲ್ಲದಿದ್ದರೆ

ಆ ಬೆಸುಗೆ ಇಲ್ಲದಿದ್ದರೆ ಹಿಂದೂಗಳ, ಮುಸಲ್ಮಾನರ ಕ್ರೈಸ್ತರ ಸಿಖ್ಖರ ಈ ಹೊಂದಾಣಿಕೆ ಇಲ್ಲದಿದ್ದರೆ ಈ ದೇಶ ಉಳಿಯುವುದಕ್ಕೆ ಸಾಧ್ಯವಿಲ್ಲ ಎಂದು ಹೇಳತಕ್ಕ ರೀತಿಯಲ್ಲಿ ಕವಿ ರೈ ಗಳು ಹೇಳುತ್ತಿದ್ದಾರೆ. ಇದೇ ರೀತಿಯಲ್ಲಿ ಇನ್ನೂ ಎಷ್ಟೋಕವಿಗಳು ಹೇಳಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರೂ ಅನೇಕ ಕವಿತೆಗಳನ್ನು ಉದಾಹರಣೆಯಾಗಿ ಹೇಳಿದರೆ. ಈ ಕವಿ ವಾಣಿಯನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ರವಿ ಕಾಣದ್ದನ್ನು ಕವಿ ಕಾಣುತ್ತಾನೆಂದು ಹೇಳತಕ್ಕ ಸಂದರ್ಭ. ಇವತ್ತು ಮಾನ್ಯ ಕುವೆಂಪುರವರು ಹೇಳತಕ್ಕ ಒಂದೊಂದು ಶಬ್ದವನ್ನೂ ಕೂಡ ಇಡೀ ಜಗತ್ತೇ ತನ್ನ ಕಿವಿಗೊಟ್ಟು ಕೇಳತಕ್ಕ ಶಬ್ದವಾಗಿದೆ. ಇಡೀ ಜಗತ್ತಿನ ಮಾನವತೆಯೇ ಒಂದು ಎಂದು ಒಬ್ಬ ಮಹಾನ್ ಕವಿ ಹೇಳಿದ್ದಾರೆ. ಈ ದೇಶಕ್ಕೆ ಬಂದಿರತಕ್ಕ ಗಂಡಾಂತರವನ್ನು ತಪ್ಪಿಸಬೇಕು.ತಪ್ಪಿಸಬೇಕಾದರೆ ಭವಿಷ್ಯದಲ್ಲಿ ನಾವು ಇನ್ನು ಮುಂದೆ ನಾವು ಅಣ್ಣ ತಮ್ಮಂದಿರಂತಂ ಬಾಳತಕ್ಕ, ಭಾರತೀಯರಾಗಿ ಬಾಳತಕ್ಕ, ಎಲ್ಲಾ ವೈಷಮ್ಯವನ್ನೂ ಮರೆಯತಕ್ಕ ಒಂದು ವ್ಯವಸ್ಥೆಗೆ ನಾವು ಬರಬೇಕು. ಈಗ ಕಲುಷಿತವಾಗಿರತಕ್ಕ, ಹಾಳಾಗಿರತಕ್ಕ, ಪ್ರತಿಯೊಂದು ಮನೆಮನೆಗೂ ಹೋಗಿ ಪ್ರತಿಯೊಂದು ಮನೆ ಮನೆಯಲ್ಲೂ ಮನ ಮನಕ್ಕೆ ಈ ಸೌಹಾರ್ದವನ್ನು ಬಿತ್ತಿ ಪುನಃ ನಾವು ಒಂದು ಚೇತನಕ್ಕೆ ಬರದೇ ಹೋದರೆ ಇದೇ ರೀತಿಯಲ್ಲಿ ನಾವು ಜಗಳಮಾಡುತ್ತಾ ಹೋದರೆ ಈ ದೇಶ ಮತ್ತೊಮ್ಮೆ ಭಿನ್ನಭಿನ್ನವಾಗಿ, ತುಂಡು ತುಂಡಾಗಿ, ಚೂರು ಚೂರಾಗಿ ಹೋಳಾಗಿ ಹೋಗತಕ್ಕ ಪರಿಸ್ಥಿತಿ ಬಂದರೂ ಬರಬಹುದು. ಮೊನ್ನೆ ೬-೭-೮ರ ಘಟನೆ ನೋಡಿ ಆ ದುಃಖವನ್ನು ನೋಡಿ ನಾನು ಒಂದು ಕವಿತೆ ಬರೆದಿದ್ದೇನೆ. ಅದನ್ನು ಹಾಡಿ ಇನ್ನು ಮುಂದೆ ನಾವೆಲ್ಲರೂ ಶಾಂತಿಯಿಂದ ಸೌಹಾರ್ದದಿಂದ ಪ್ರೀತಿಯಿಂದ ಬಾಳತಕ್ಕಂಥ ವ್ಯವಸ್ಥೆಯಾಗಬೇಕು ಆ ರೀತಿಯಲ್ಲಿ ನಮ್ಮ ಎಲ್ಲಾ ಕಾರ್ಯಕ್ರಮಗಳಾಗಬೇಕು. ಅದೇ ರೀತಿಯಲ್ಲಿ ನಮ್ಮ ಮುಖ್ಯ ಮಂತ್ರಿಗಳು ತಂದಿರತಕ್ಕಂಥ ಹೇಳಿರತಕ್ಕಂಥ ಘಟನೆಯಲ್ಲಿ ಆಗಿರತಕ್ಕಂತಹ ಘಟನೆಗೆ ಅನೇಕ ರೀತಿಯ ನಷ್ಟವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೭ ಜೀವ ಹೋಗಿದೆ ತಲಾ ಒಂದೊಂದು ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಕರ್ನಾಟಕದಲ್ಲಿ ೭೦ ಜೀವ ಹೋಗಿದೆ, ಅವರಿಗೂ ಕೂಡ ಹಣ ಬೇಗ ಬಿಡುಗಡೆ ಮಾಡಿದ್ದಾರೆ. ಅದೇ ರೀತಿ ಹಾನಿಯಾದ ಸ್ಥಳಗಳಿಗೆ ತಹಶೀಲ್ದಾರ್, ಬಿ.ಡಿ.ಓ.ಗಳು ಹೋಗಿ ಪರಿಶೀಲಿಸಿ ೭ ದಿವಸಗಳಲ್ಲಿ ಮನೆ ಮನೆಗೆ ಹೋಗಿ ಎಷ್ಟು ನಷ್ಟವಾಗಿದೆ ಅದನ್ನು ಲೆಕ್ಕಾಚಾರ ಮಾಡಿ ಪರಿಹಾರ ಕೊಟ್ಟಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆ ಇತರೆ ಕಡೆಗಳಲ್ಲಿ ಹಣ ಬಿಡುಗಡೆ ಮಾಡಿದ್ದಾರೆ. ನನಗೆ ಗೊತ್ತಿದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹಣ ಎಲ್ಲಿ ಬಿಡುಗಡೆಯಾಗಿದೆ ಎಂದು ಹೇಳಿದರು...

ಶ್ರೀ ವಾಟಾಳ್ ನಾಗರಾಜ್ : ಕಾಂಗ್ರೆಸ್ ಪಕ್ಷದವರು ಇರುವ ಕ್ಷೇತ್ರಗಳಲ್ಲಿ ಬಿಡುಗಡೆ ಮಾಡಿರಬಹುದೆಂದು ಕಾಣುತ್ತದೆ.

ಶ್ರೀ ಬಿ.ಎಂ. ಇದಿನಬ್ಬ : ಎಲ್ಲಿ ಗಲಭೆಯಾಗಿದೆ ಅಲ್ಲಿ, ಎಲ್ಲ ಕಡೆ ಹಣ ಬಿಡುಗಡೆ ಏತಕ್ಕೆ ಮಾಡುತ್ತಾರೆ. ಧರ್ಮ, ಧರ್ಮವೆಂದು, ನಾವು ಸಾವು ಹೊಡೆದುಕೊಳ್ಳುತ್ತೇವೆ. ಪೋಲೀಸಿನವರು ಏನು ಮಾಡಬಹುದು ಅವರು ಮಾಡುವಂತಹ ಕೆಲಸ ಅವರು ಮಾಡಿದ್ದಾರೆ. ಕೆಲವು ಕಡೆ ಹೆಚ್ಚೂ ಕಡಿಮೆಯಾಗಿರಬಹುದು.

ಶ್ರೀ ವಾಟಾಳ್ ನಾಗರಾಜ್ : ಎಲ್ಲರನ್ನೂ ಗುಂಡಿಕ್ಕಿ ಹೊಡೆಯಿರಿ ಯಾರು ಬೇಡ ಅಂತ ಹೇಳುತ್ತಾರೆ.

ಶ್ರೀ ಬಿ.ಎಂ. ಇದಿನಬ್ಬ : ಪೋಲೀಸಿನವರಲ್ಲೂ ಸೌಹಾರ್ದ ಬರುವ ಹಾಗೆ, ಜನರಲ್ಲೂ ಸೌಹಾರ್ದ ಬರುವ ಹಾಗೆ. ವಾಟಾಳ್ ನಾಗರಾಜ್‌ರವರೇ ತಮ್ಮ ಭಾಷಣದಲ್ಲಿ ಕುವೆಂಪುರವರ ಅನೇಕ ಕವನಗಳನ್ನು ಹೇಳಿದ್ದೀರಿ.

ಶ್ರೀ ವಾಟಾಳ್ ನಾಗಾರಾಜ್ : ಕುವೆಂಪು ಕವನವನ್ನು ನಾನು ಹೇಳಿದ್ದೇನೆ. ಆದರೆ ಪೋಲೀಸ್‌ನವರು ಏನು ಮಾಡುತ್ತಾರೆ ಗುಂಡು ಹೊಡೆಯುವುದೇ ಒಂದು ಕೆಲಸವೆಂದು ಹೇಳುವುದಾದರೆ ಅದಕ್ಕೆ ಮಂಗಳಾರತಿ ಎತ್ತುವುದಕ್ಕೆ ನಾವು ಇಲ್ಲಿ ಬರೋಣವೇ?

ಶ್ರೀ ಬಿ.ಎಂ. ಇದಿನಬ್ಬ : ಪೋಲೀಸರು ಗುಂಡು ಹೊಡೆಯಬಾರದು ಏನೂ ಮಾಡಬಾರದೆಂದು ಹೇಳಿದರೆ ಏನು ಮಾಡುವುದು ಹೇಳಿ?

ಶ್ರೀ ವಾಟಾಳ್ ನಾಗರಾಜ್ : ಏನೂ ಮಾಡಲೇಕೂಡದೆಂದು ನಾನು ಹೇಳಲಿಲ್ಲ ಸಿಕ್ಕಾಪಟ್ಟೆ ಬಂದೂಕು ತೆಗೆದುಕೊಂಡು ಹೊಡೆಯಬೇಡಿ ಹೋಗಿ ವೀರಪ್ಪನ್ ಅನ್ನು ಹಿಡಿಯಿರಿ ಎಂದರೆ ಊರೊಳಗೆ ಬಂದೂಕು ತೆಗೆದುಕೊಂಡು ಹೊಡೆದರೆ ನಾವೇನು ಮಾಡುವುದಕ್ಕಾಗುತ್ತದೆ ಇಲ್ಲಿ.

ಶ್ರೀ ಬಿ.ಎಂ. ಇದಿನಬ್ಬ : ನಾನು ಒಂದು ಕವನವನ್ನು ಇಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

"ದೇಶಕ್ಕೆ ಐಕ್ಯದ ಬೆಸುಗೆ

ದೇಶದ ಸರ್ವರೂ ಒಂದಾಗಿ ಬನ್ನಿ,

ಕೋಮು ಸೌಹಾರ್ದ ಸ್ಥಿರಗೊಳಿಸೆ ಬನ್ನಿ.

ದೇಶದಲ್ಲಿ ಎಲ್ಲೆಲ್ಲೂ ಕೋಮು ಹಿಂಸೆಯ ಚೆಲ್ಲಾಟ,

ಅಣ್ಣ ತಮ್ಮಂದಿರೆ ರಕ್ತ ಹರಿಸುವ ಹುಚ್ಚಾಟ,

ಹೇಳುವರಿಲ್ಲ ಕೇಳುವವರಿಲ್ಲ ಭೀತಿಯಾ ಪರದಾಟ,

ನಿರಪರಾಧಿಗಳನು ಕೊಂದು ನಲಿದಾಡುವ ಮೂರ್ಖರಾಟದೇ:

ಏಕಾಗಿ ಈ ದ್ವೇಷ, ಏಕಾಗಿ ಈ ಸರ್ವ ನಾಶ,

ಏಕಾಗಿ ಈ ಮಾರಣ ಹೋಮ ಬೇಡವೇ ದೇಶಕ್ಕೆ ಕ್ಷೇಮ: ಕಾಳಿಲ್ಲ ಕೂಳಿಲ್ಲ,

ಅಂಗಿ ಬಟ್ಟೆಗಳಿಲ್ಲ, ವಾಸಕ್ಕೆ ಗುಡಿ ಇಲ್ಲ, ವೈದ್ಯಕೀಯ ನೆರವಿಲ್ಲ

ಬಡತನದಿ ಎಲ್ಲೆಲ್ಲು ಬಳಲುತಿರುವವರಲ್ಲ ಅಂಥವರ ವಧಿಸಲು ಮುಂದಾಗಿರುವರಲ್ಲ,ದೇ:

ಜಾತಿಮತಾಂಧತೆಯ ಕೋಮು ದಳ್ಳುರಿ, ಈ ಬೆಂಕಿಯಾ ಜ್ವಾಲೆಯ ಬಿಸಿ ಬಿಸಿ ಉರಿ

ಯಾರ ಉದ್ಧಾರಕ್ಕೆ ಈ ಕಸರತ್ತು, ಯಾರ ಉಳಿವಿಗೆ ಈ ಮಸಲತ್ತು: ಭಾರತಕ್ಕೆ ಬಂದಿಹುದು

ಘೋರ ವಿಪತ್ತು ನಾಶ ಸ್ಥಿರಚರ ಸೊತ್ತು.ದೇ:

ಇದು ವಿಜ್ಞಾನ ಯುಗವಂತೆ, ಇದು ಸಾಕ್ಷರತೆಯ ಬೀಡಂತೆ, ಇದು ವಿದ್ಯಾವಂತರ ನೆಲೆಯಂತೆ, ಹಾಗಿದ್ದೂ ಈ ಕೋಮು ಹಿಂಸೆಯಂತೆ ವಿದ್ಯಾವಂತರೆ, ಇಂದು ಅತ್ಯಂತ ಕ್ರೂರಿಗಳಂತೆ.

ಹೀಗಾದರೆ ಪ್ರಳಯಕ್ಕೆ ಹೆಚ್ಚು ಕಾಲವುಂಟೆ ಭೂಕಂಪ, ಪ್ರಕೃತಿ ವಿಕೋಪ ತಪ್ಪಲುಂಟೆ. ದೇ:

1992ರ ದಶಂಬರ ದೇಶಕ್ಕೆ ರಣರಂಗವಾಯ್ತೆ, ಪ್ರಜಾಪ್ರಭುತ್ವ ಜಾತ್ಯಾತೀತತೆ ಚೂರಾಗಿ ಹೋಯ್ತೇ, ಇದ ನೀಗಿಸಲು ಸರ್ವರೂ ಒಮ್ಮನದಿ ಬನ್ನಿ: ದೇಶವನು ಉಳಿಸಲಿಕ್ಕೆ ಪಣ ತೊಟ್ಟು ಬನ್ನಿ

ಐಕ್ಯದ ಅಮೃತದ ರಸಕೆ ಹೃದಯ ಹೃದಯದ ಬೆಸುಗೆ ಸ್ಥಿರವಾಗಿ

ಈ ದೇಶ ಅಮರವಾಗಬೇಕು, ಹಿಂದು ಮುಸ್ಲಿಮ್ ಸಿಖ್ಖರೆಲ್ಲ ಸೌಹಾರ್ದದಲ್ಲಿ ಬಾಳಬೇಕು ದೇಶದಾ ಕೀರ್ತಿ ಬಾನೆತ್ತರಕೆ ಏರಬೇಕು.

ದೇವರು ಅನುಗ್ರಹಿಸಬೇಕು.

ಉಪಾಧ್ಯಕ್ಷಣಿಯವರು : ಮಾನ್ಯ ಚಂದ್ರೇಗೌಡರು ತಾವು ಮಾತನಾಡುತ್ತೀರಾ? ಈಗ 7-00 ಗಂಟೆಗೆ ಚರ್ಚೆಯನ್ನು ಮುಗಿಸಬೇಕಾಗುತ್ತದೆ. ಆದ್ದರಿಂದ ತಾವೆಲ್ಲರೂ ಸ್ವಲ್ಪ ಸ್ವಲ್ಪ ಕಾಲ ತೆಗೆದುಕೊಂಡು ಮಾತನಾಡಿದರೆ ಬಹಳ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : 6 ಗಂಟೆಯಾಗಿದೆ, ಈಗ ಚರ್ಚೆ ಪ್ರಾರಂಭಮಾಡಬೇಕೆಂದರೆ ತಮ್ಮ ಕಾರ್ಯಾಲಯದಲ್ಲಿ ವಿಡಿಯೋ ಪ್ರೋಗ್ರಾಂ ಇದೆ.

ಉಪಾಧ್ಯಕ್ಷಣಿಯವರು : ವಿಡಿಯೋ ಪ್ರದರ್ಶನ ರದ್ದಾಗಿದೆ. ಏತಕ್ಕೆಂದರೆ ಅದು ಸರಿಯಾಗಿ ಬರುತ್ತಿಲ್ಲವಂತೆ ಆದ್ದರಿಂದ 7-00 ಗಂಟೆ ತನಕ ಚರ್ಚೆ ಮಾಡಿ ಆಮೇಲೆ ಬಿಲ್ಸ್‌ಗಳನ್ನು ತೆಗೆದುಕೊಳ್ಳಲಾಗುತ್ತದೆ. ಆದ್ದರಿಂದ ತಾವು ದಯವಿಟ್ಟು ಎಲ್ಲರೂ 10-15 ನಿಮಿಷ ತೆಗೆದುಕೊಂಡರೆ ಬಹಳ ಜನರು ಮಾತನಾಡಲಿಕ್ಕೆ ಸಾಧ್ಯವಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಎದ್ದಕೂಡಲೇ ಏತಕ್ಕೆ ಈ ಪ್ರಶ್ನೆ ಬರುತ್ತದೆ. ಬೇಡಿ ಎಂದರೆ ನಾನು ಮಾತನಾಡಲಿಕ್ಕೆ ಸಿದ್ಧವಿಲ್ಲ. ನನಗೆ ಮಾತನಾಡಬೇಕೆಂಬ ಚಟವೂ ಇಲ್ಲ ಅದರ ಅಗತ್ಯವೂ ಇಲ್ಲ, ನಾನು ಎದ್ದ ಕೂಡಲೇ ಈ ಪ್ರಶ್ನೆ ಹಾಕುತ್ತೀರಲ್ಲ!

(ಗೊಂದಲ)

ಉಪಾಧ್ಯಕ್ಷಣಿಯವರು : ಸದನಕ್ಕೆ ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ, ಸ್ವಲ್ಪ ಸ್ವಲ್ಪ ಮಾತನಾಡಿದರೆ ಎಲ್ಲರಿಗೂ ಅವಕಾಶ ಸಿಗುತ್ತದೆಂದು.

+ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ): ಸನ್ಮಾನ್ಯ ಅಧ್ಯಕ್ಷಣೀಯವರೇ ಇವತ್ತು ಒಂದು ಮಹತ್ತರವಾದ ಘಟನೆಯನ್ನು ಚರ್ಚೆ ಮಾಡುವುದಕ್ಕೆ ನಾನು ಎದ್ದು ನಿಂತಿದ್ದೇನೆ. ಡಿಸೆಂಬರ್ 6ನೇ ತಾರೀಖು ಭಾರತದಲ್ಲಿ ನಡೆದಂಥ ಘಟನೆ

ಈ ರಾಷ್ಟ್ರಕ್ಕೆ ಅಷ್ಟೇ ಸೀಮಿತವಾಗಿಲ್ಲ, ವಿಶ್ವದಾದ್ಯಂತ ಇವತ್ತು ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. ಏನು ನಡೆಯುತ್ತಿದೆ ಚರ್ಚೆ ವಿಶ್ವದಾದ್ಯಂತ ಎನ್ನುವುದಕ್ಕೆ ಮುನ್ನ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಪ್ರಾರಂಭಕ್ಕೆ ಒಂದು ಮಾತನ್ನು ಹೇಳಿದ್ದಾರೆ. ದಿನಾಂಕ 6-12-1992ರಲ್ಲಿ ಅಯೋಧ್ಯೆಯಲ್ಲಿ ಅತ್ಯಂತ ಹೇಯ ಹಾಗೂ ಖಂಡನೀಯ ಒಂದು ಘಟನೆ ನಡೆಯಿತು. ಇದಕ್ಕೆ ಕಾರಣರು ಯಾರು ಮತ್ತು ಅದನ್ನು ತಪ್ಪಿಸುವವರು ಯಾರು? ಇದರ ಜವಾಬ್ದಾರಿ ನಮಗಲ್ಲ. ಇದಕ್ಕೆ ಕಾರಣವಾಗಿರತಕ್ಕಂಥದ್ದು ಉತ್ತರ ಪ್ರದೇಶದ ಸರ್ಕಾರವಾದರೆ ಇದನ್ನು ತಪ್ಪಿಸಬಹುದಾದಂಥ ಅಧಿಕಾರ ಕೇಂದ್ರ ಸರ್ಕಾರದ್ದು ಇತ್ತು. ಈ ಎರಡು ಸರ್ಕಾರಗಳ ಅಪರಾಧದಿಂದಾಗಿ ಇವತ್ತು ಸಹಸ್ರಾರು ಜನ ತಮ್ಮ ಪ್ರಾಣಾರ್ಪಣೆ ಮಾಡಿದ್ದಾರೆ. ನೂರಾರುಕೋಟಿ ರೂಪಾಯಿಗಳ ಪರಿಹಾರವನ್ನು ಕೊಡತಕ್ಕಂಥ ಪರಿಸ್ಥಿತಿ ಈ ದೇಶಕ್ಕೆ, ರಾಜ್ಯಗಳಿಗೆ ಬಂದಿವೆ. ಮಾನ್ಯ ಮುಖ್ಯಮಂತ್ರಿಗಳು ಖಂಡಿಸಿದಹಾಗೆ ಮಾಧ್ಯಮಗಳು ದೈನಿಕಗಳು ಮತ್ತುದಿನಪತ್ರಿಕೆಗಳು, ವಾರಪತ್ರಿಕೆಗಳು ಮಾಸಪತ್ರಿಕೆಗಳು, ಎಲ್ಲದಕ್ಕಿಂತಲೂ ಹೆಚ್ಚಾಗಿ ಭಾರತೀಯ ಜನತಾ ಪಕ್ಷದ ಅತ್ಯಂತ ಗೌರವಾನ್ವಿತ ಹಿರಿಯ ಸದಸ್ಯರಾದಂಥ ಶ್ರೀಮಾನ್ ವಾಜಪೇಯಿಯವರು ಇದನ್ನು ಖಂಡಿಸಿದ್ದಾರೆ. ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾದ ಶ್ರೀ ಮುರಳಿ ಮನೋಹರ ಜೋಷಿಯವರು ಇದನ್ನು ಖಂಡಿಸಿದ್ದಾರೆ. ಖಂಡಿಸುವುದು ಸುಲಭ. ಆದರೆ ತಪ್ಪಿಸುವುದು ಯಾರು ಎಂಬುದು ಪ್ರಶ್ನೆ. ತಪ್ಪಿಸುವುದಕ್ಕೆ ಸಾಧ್ಯವಿದ್ದ ಜನರು ಜಗತ್ತಿಗೆ ಕೊಟ್ಟಂಥ ವಿವರಗಳ ಕೆಲವು ಭಾಗಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಚುನಾವಣೆಗಳು ನಡೆಯುತ್ತವೆ, ಅಧಿಕಾರಕ್ಕೆ ಬರುತ್ತೇವೆ. ಇದು ಜನತಂತ್ರ. 16ನೇ ಶತಮಾನದಲ್ಲಿ ಜನತಂತ್ರ ಇರಲಿಲ್ಲ, ಸರ್ವಾಧಿಕಾರ ಇತ್ತು. ಈ ದೇಶ ಬಾಬರನ ಕೈಯಲ್ಲಿತ್ತು. 20ನೇ ಶತಮಾನದಲ್ಲಿ ಬಾಬರ್ ಕಟ್ಟಿದ ಮಸೀದಿ ಜನತಂತ್ರ ವ್ಯವಸ್ಥೆಯ ಈ ಭಾರತದಲ್ಲಿ ಬಂದಿದೆ. ಈ ವ್ಯತ್ಯಾಸವನ್ನು ಎಲ್ಲರೂ ಗುರುತಿಸಬಲ್ಲಿರಿ. ಚುನಾಯಿತ ಸರ್ಕಾರ, ಕಾನೂನು ಜಾರಿಗೆ ಕೊಡಬೇಕಾದ ಸರ್ಕಾರ, ಹಾಗೆ ಕಾನೂನು ಜಾರಿಗೆ ಕೊಡುತ್ತೇವೆಂದು ರಾಜ್ಯಾಂಗಬದ್ಧವಾಗಿ ಪ್ರಮಾಣ ಮಾಡಿ ಅಧಿಕಾರಕ್ಕೆ ಬಂದಂಥ ಜನ, ಸಹಕಾರ ಕೊಡಲಿಲ್ಲವೆಂಬ ಕಾರಣಕ್ಕಾಗಿ ಕೇಂದ್ರ ಸರ್ಕಾರ ಉತ್ತರ ಪ್ರದೇಶದ ಸರ್ಕಾರವನ್ನು ವಜಾ ಮಾಡಿತು. ಅಂದರೆ ತಪ್ಪು ಯಾರಿಂದ ಆಗಿದೆ. ಕೇಂದ್ರ ಸರ್ಕಾರಕ್ಕೂ ಗೊತ್ತಾಗಿದೆ. ಉತ್ತರ ಪ್ರದೇಶವನ್ನು ಆಳುತ್ತಿದ್ದ ಭಾರತೀಯ ಜನತಾ ಪಕ್ಷದ ಸರ್ಕಾರ ಈ ಬಾಬ್ರಿ ಮಸೀದಿಯನ್ನು ಕೆಡವುದಕ್ಕೆ ಕಾರಣ ಎನ್ನುವ ಸಮಾಧಾನ ಆದಮೇಲೆ ಸರ್ಕಾರವನ್ನು ವಜಾ ಮಾಡಿದೆ. ಅದಕ್ಕೆ ಮತ್ತೊಂದು ಸಾಕ್ಷಿ ಹುಡುಕುವುದು ಬೇಡ. ಈ ಶಾಸನಗಳನ್ನು ಮುರಿಯುವುದೇ ದೀಕ್ಷೆ ಅಂತ ಅವರು ಭಾವನೆ ಮಾಡಿ, ಕಾನೂನು ಜಾರಿಗೆ ಕೊಡುವ ದಿಸೆಯಲ್ಲಿ ವಿಮುಖವಾದುದು ಪ್ರಜಾತಂತ್ರದ ದುರಂತವೆಂದು ಭಾವಿಸುತ್ತೇನೆ. ಓಟಿನ ರಾಜಕಾರಣಕ್ಕಾಗಿ ಧರ್ಮಾಂಧತೆಯನ್ನು ಪುರಸ್ಕರಿಸುವುದು, ಅಪರಾಧಿಗಳಿಗೆ ರಕ್ಷಣೆ ಕೊಡುವುದು, ಅಧಿಕಾರದಲ್ಲಿ ಉಳಿಯುವುದೇ ನಮ್ಮ ಉದ್ದೇಶ ಎಂಬ ಭಾವನೆ ಇರತಕ್ಕದ್ದು ಜನತಂತ್ರದ ಅಣಕ. ಡಿಸೆಂಬರ್ 6ನೇ ತಾರೀಖು ಮಸೂದೆ, ಮಸೀದಿ ಎರಡು ಮುರಿದು ಬಿದ್ದವು. ಮಸೀದಿ ಬಿತ್ತು ಎಂದು ಅಷ್ಟೇ ನೋಡಿದರೆ ಸಾಲದು, ಮಸೂದೆಗಳು ಯಾವುವು ಬಿದ್ದವು

ಎಂಬುದನ್ನು ನೋಡಬೇಕು. ನಿಜವಾಗಿ ಮುರಿದು ಬಿದ್ದುದ್ದು ನನ್ನ ದೃಷ್ಟಿಯಲ್ಲಿ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾದಂಥ ಪರಮತ ಸಹಿಷ್ಣುತೆ.

ಮುರಿದು ಬಿದಿದ್ದು ನಮ್ಮ ಮಹಾ ಮಂತ್ರವಾದಂಥ ವಿವಿಧತೆಯಲ್ಲಿ ಏಕತೆ, ಏಕತೆಯ ಹೆಸರಿನಲ್ಲಿ ಇವತ್ತು ನಾವು ವಿವಿಧತೆಯನ್ನು ಆಚರಿಸುತ್ತಿದ್ದೇವೆ. ಈಗ ತಾನೇ ಹಿರಿಯ ಸದಸ್ಯರು ಮಾತನಾಡುತ್ತಾ ಹೇಳಿದ ಹಾಗೆ ವಿಶ್ವ ಮಾನವತ್ವದ ತೌರೂರಾದ ಭಾರತದಲ್ಲಿ ಇದಕ್ಕೆ ಧಕ್ಕೆ ಬಂದಿದ್ದು ಏನೋ ಎಂಬ ಶಂಕೆ ಉಂಟಾಗಿದೆ. ಆದುದರಿಂದ ಮಾಡಬೇಕಾದ ಕೆಲಸ ಬಿ.ಜಿ.ಪಿ.ಯನ್ನು ನಿಗ್ರಹಿಸಬೇಕೆಂಬ ಚಿಂತನೆ ಯಾರಿಗಾದರೂ ಇದ್ದರೆ ಅದನ್ನು ನಿಷೇಧದಿಂದ ಅಲ್ಲ, ಅದನ್ನು ಬಹಿಷ್ಕರಿಸಬೇಕಾದ ಕೆಲಸ ಮಾಡಬೇಕು. ಹೇಗೆ ಬಹಿಷ್ಕರಿಸಬೇಕೆಂಬ ವಿವರಕ್ಕೆ ಹೋಗುವುದಿಲ್ಲ, ಮೊದಲು ಈ ಎರಡೂ ಸರ್ಕಾರಗಳಿಗೆ ಜವಾಬ್ದಾರಿಯ ಹೊರೆಯನ್ನು ಹೊರಿಸುವ ಮುನ್ನ ಮುಖ್ಯವಾದ ಕೆಲವು ಅಂಶಗಳನ್ನು ಗಮನಿಸಬೇಕು. 1949ನೇ ಇಸವಿ ಡಿಸೆಂಬರ್ 22ನೇ ತಾರೀಖಿನವರೆಗೆ ಆ ಮಸೀದಿ ವಿಚಾರ ಇರಲಿಲ್ಲ, ಮಂದಿರದ ವಿಚಾರ ಇರಲಿಲ್ಲ. 22-12-1949ರಲ್ಲಿ ರಾತ್ರೋ ರಾತ್ರಿ ತೆಗೆದುಕೊಂಡು ಹೋಗಿ ರಾಮನ ವಿಗ್ರಹ ಇಟ್ಟು ಪ್ರತಿಷ್ಠಾಪನೆ ಅಲ್ಲ, ಇಟ್ಟು ಬೀಗ ಮುರಿದ ಪ್ರಸಂಗದಿಂದ ಪುನಃ ಅದಕ್ಕೆ ಚಾಲನೆ ಸಿಕ್ಕಿತು. 1989ರ ನವೆಂಬರ್ 11ನೇ ತಾರೀಖು ಆಗ ಪ್ರಧಾನ ಮಂತ್ರಿಯಾಗಿದ್ದ ಶ್ರೀ ರಾಜೀವ್ ಗಾಂಧಿಯವರ ನೇತೃತ್ವದಲ್ಲಿ ಶಿಲಾನ್ಯಾಸ ಕಾರ್ಯ ನಡೆಯಿತು. ಈ ಶಿಲಾನ್ಯಾಸ ಆದಮೇಲೆ ಇದಕ್ಕೆ ಹೊಸ ತಿರುವು ಬರುತ್ತದೆ. ಅಪರಾಧ ಎಲ್ಲಿ ಆಗಿದೆ? 1949ರಲ್ಲಿ ಬೀಗ ಯಾರು ತೆಗೆದರು? 1989ರಲ್ಲಿ ಯಾರು ಶಿಲಾನ್ಯಾಸ ಮಾಡಿದರು? ಮುಂದೆ ಮೊದಲ ಪ್ರಯತ್ನ ವಿಹೆಚ್‌ಪಿ ಅವರಿಂದ 30ನೇ ಅಕ್ಟೋಬರ್ ತಿಂಗಳಲ್ಲಿ ನಡೆಯಿತು. ಅದು ಮಸೀದಿ ಒಡೆಯುವ ಪ್ರಯತ್ನ. ಅಕ್ಟೋಬರ್ 2ನೇ ತಾರೀಖು ಹಾಯ್ ರಾಂ ಎಂದು ಹೇಳಿದ ಗಾಂಧೀಜಿಯವರನ್ನು ಜೀವಂತವಾಗಿ ಹೂಳುವ ಕೆಲಸ ಮೊದಲು ಗೋಡೆ ಒಡೆಯುವುದರಿಂದ ಪ್ರಾರಂಭವಾಯಿತು.

6.10 ಪಿ.ಎಂ.

ಸೆಪ್ಟೆಂಬರ್ 27, 1989ರಂದು ಒಂದು ಕರಾರು ಮಾಡಿಕೊಳ್ಳುತ್ತಾರೆ. ಅದರಲ್ಲಿ ವಿಹೆಚ್‌ಪಿ ಅವರೂ ಇದ್ದಾರೆ. ವಿಪಿ ಸಿಂಗ್ ಅವರ ಸರ್ಕಾರ ಇದೆ. ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಏನು ಮಾಡುತ್ತಾರೆಂದರೆ, ಲಕ್ನೋ ನ್ಯಾಯಲಯದ ಆದೇಶಗಳನ್ನು ಪಾಲಿಸುವ ಭರವಸೆ, ಕೋಮು ಸೌಹಾರ್ದತೆ ಕಾಪಾಡುವ ಧೀಕ್ಷೆ. ಆ ಎರಡು ಕೆಲಸ ಮೂರು ಸರ್ಕಾರಗಳು ಮತ್ತು ಸಂಬಂಧಪಟ್ಟ ಗುಂಪುಗಳಿಂದ ಆಗಿದೆ. ಇದರಂತೆ ನಡೆದರೇ? ಇದು ಮೊದಲನೆಯ ಪ್ರಶ್ನೆ. ಬಹಳ ಮುಖ್ಯವಾಗಿ ಈ ದೇಶದಲ್ಲಿ ನಾವು ಗಮನಿಸಬೇಕಾದುದು ಆಗಸ್ಟ್ 9ನೇ ತಾರೀಖು 1990 ನೇ ಇಸವಿಯಲ್ಲಿ ವಿ.ಪಿ. ಸಿಂಗ್. ಸರ್ಕಾರ ಮಂಡಲ್ ವರದಿ ಜಾರಿಗೆ ಕೊಡುವ ಕೆಲಸ ಮಾಡಿತು. ಆ ಶಿಫಾರಸ್ಸಿನಲ್ಲಿ ಅಂದು ಬಿಜೆಪಿ ಪಕ್ಷದ ಅಧ್ಯಕ್ಷರು 10 ಸಾವಿರ ಕಿ.ಮೀ. ಸೋಮನಾಥ ಅಯೋಧ್ಯೆ ರಥಯಾತ್ರೆ ಪ್ರಾರಂಭವಾಗುತ್ತದೆ. ಪ್ರೊ. ನಂಜುಂಡಸ್ವಾಮಿ ಅವರು ಹಿಂದಕ್ಕೆ ನಮ್ಮನ್ನು ಕರೆದುಕೊಂಡು ಹೋಗತಕ್ಕ

ಪ್ರಯತ್ನ ನಡೆಯುತ್ತಿದೆ ಎಂದು ಹೇಳಿದರೋ, ಕೈ ಹಿಡಿದು ಎಳೆಯತಕ್ಕ ಮೊದಲನೇ ಪ್ರಯತ್ನವನ್ನು ನಾವು ಮೊದಲು ರಥ ಯಾತ್ರೆ ಮೂಲಕ ನೋಡುತ್ತೇವೆ. ಅಕ್ಟೋಬರ್ 17ನೇ ತಾರೀಖು ಬಿಜೆಪಿ ಅವರು ರಥಯಾತ್ರೆ ನಿಲ್ಲಿಸಲು ವಿ.ಪಿ.ಸಿಂಗ್ ಸರ್ಕಾರ ಪ್ರಯತ್ನ ಪಟ್ಟರೆ, ಸರ್ಕಾರಕ್ಕೆ ಕೊಟ್ಟ ಬೆಂಬಲವನ್ನು ವಾಪಸ್ಸು, ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಈಗ ನಾವು ಯಾರುಹೊಣೆ ಎಂದರೆ ನಾನು ಈ ವಿಚಾರಗಳು ಏಕೆ ಹೇಳುತ್ತಿದ್ದೇನೆ ಎಂದರೆ, ನಡೆದ ಸಂಗತಿ ಬಹಳಷ್ಟು ಜನ ನಾವು ಮುಚ್ಚುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಏಕೆಂದರೆ, ಅಕ್ಟೋಬರ್ 19ನೇ ತಾರೀಖು ಕೇಂದ್ರ ಸರ್ಕಾರ ಒಂದು ಅಧ್ಯಾದೇಶವನ್ನು ಹೊರಡಿಸುತ್ತದೆ. 2.77 ಎಕರೆ ವಿವಾದಿತ ಜಾಗವನ್ನು ಕೇಂದ್ರ ಸರ್ಕಾರ ತನ್ನ ಕೈಗೆ ತೆಗೆದುಕೊಳ್ಳುವ ಆರ್ಡಿನೆನ್ಸ್ ಹೊರಡಿಸುತ್ತದೆ. ಆಮೇಲೆ ಎರಡೇ ದಿವಸದಲ್ಲಿ ಅಕ್ಟೋಬರ್ 21ನೇ ತಾರೀಖು ಅಷ್ಟೇ ಹೊತ್ತಿಗೆ ಅದನ್ನು ವಾಪಸ್ಸು ಪಡೆಯಿತು. ಏತಕ್ಕೆ ಪಡೆದರು, ಏನು ಆಯಿತು ಅದರ ವಿವರಗಳಿಗೆ ನಾನು ಸಮಯಾಭಾವದಿಂದ ಹೋಗುವುದಿಲ್ಲ. ಇದರ ಪರಿಣಾಮ ಏನಾಗುತ್ತದೆ? ಅಕ್ಟೋಬರ್ 23ನೇ ತಾರೀಖು ಬಿಹಾರದ ಸಮಸ್ತೀಪುರದಲ್ಲಿ ಹಿರಿಯ ನಾಯಕರಾದ ಎಲ್.ಕೆ. ಅಡ್ವಾನಿಯವರ ಬಂಧನ.

ಡಿಸೆಂಬರ್ 6ನೇ ತಾರೀಖು ಮಸೀದಿ ಒಡೆಯತಕ್ಕ ಕಾರ್ಯಕ್ರಮ ಕೇಂದ್ರ ಸರ್ಕಾರಕ್ಕೆ ಗೊತ್ತಿದ್ದು ಆಗ ಬಂಧಿಸಲಿಲ್ಲ. ಹಿಂದಿನ ಸರ್ಕಾರ ಅಕ್ಟೋಬರ್ 23ರಂದು ಬಂಧನ ಮಾಡಿ, ತನ್ನ ಸರ್ಕಾರವನ್ನು ನವೆಂಬರ್ 7ನೇ ತಾರೀಖು ಕಳೆದುಕೊಳ್ಳುತ್ತದೆ. ಇಲ್ಲಿ ಸರ್ಕಾರವನ್ನು ಉಳಿಸಿಕೊಂಡು ಮಸೀದಿಯನ್ನು ಕೆಡವಿದ ಮೇಲೆ ಅವರನ್ನು ಬಂದಿಸುತ್ತಾರೆ. ಈ ವ್ಯತ್ಯಾಸವನ್ನು ನಾವು ನೋಡಬೇಕು. ಬಿಜೆಪಿ ಬೆಂಬಲವನ್ನು ವಾಪಸ್ಸು ಪಡೆದ ವಿ.ಪಿ.ಸಿಂಗ್.ಸರ್ಕಾರ ನವೆಂಬರ್ 7ನೇ ತಾರೀಖು ಬೀಳುತ್ತದೆ. ಆಗ ಯಾರೂ ಸೆಕ್ಯುಲರ್ ವಿಚಾರ ಮಾತನಾಡುವುದಿಲ್ಲ.

ವಿ.ಪಿ. ಸಿಂಗ್ ಅವರ ಸರ್ಕಾರ ಬಿದ್ದಾಗ ಮಾತನಾಡಲಿಲ್ಲ. ಇವತ್ತು ಈ ದೇಶಕ್ಕೆ ಸೆಕ್ಯುಲರಿಸಂಗೆ ಹೊಡೆತ ಬಿದ್ದಿದೆ. ಎಲ್ಲಾ ಕಮ್ಯುನಲ್ ಫೋರ್ಸ್‌ಸ್‌ನ್ನು ಟಿಫೀಟ್ ಮಾಡುವುದಕ್ಕೆ ಎಲ್ಲಾ ಸೆಕ್ಯೂಲರ್ ಫೋರ್ಸ್‌ಸ್ ಒಂದಾಗಬೇಕು, ಇದನ್ನು ಆ ದಿವಸ ಏಕೆ ಮಾತನಾಡಲಿಲ್ಲ? ಆ ಸೆಕ್ಯುಲಕ್ ಜನರಿಗೆ ಕೊಡತಕ್ಕ ಪ್ರಯತ್ನ ಮಾಡಿದಾಗ, ಅಧಿಕಾರದಿಂದ ಕಿತ್ತು ಹೋಗಿದ್ದಾಗ ಈ ಸೆಕ್ಯುಲರ್ ಎಲ್ಲಿ ಹೋಗಿತ್ತು? ಇದೇ ವಿಚಾರವಾಗಿ ಲೋಕಸಭೆಗೆ ಚುನಾವಣೆ ನಡೆಯಿತು. ವಿ.ಪಿ.ಸಿಂಗ್ ಸೋತರು.

ಶ್ರೀ ಸಿ. ಭೈರೈಗೌಡ : ತಾವು ಬಹಳ ಪ್ರಮುಖವಾದ ಅಂಶವನ್ನು ಪ್ರಸ್ತಾಪ ಮಾಡಿದ್ದೀರಿ. ಅದು ವಾಸ್ತವಾಂಶ ಕೂಡ ಹೌದು. ಆದರೆ ಇದೇ ಸದನದಲ್ಲಿ ನಿಮ್ಮ ಪಕ್ಷದ ನಾಯಕರಾದ ರಾಮಕೃಷ್ಣ ಹೆಗೆಡೆಯವರು ಕೂಡ ಮಾತನಾಡಿದ್ದಾರೆ. ಅವರು ಮಾತನಾಡುವಾಗ ರಾಮಕೃಷ್ಣ ಹೆಗೆಡೆಯವರು ಈ ಅಂಶವನ್ನು ಪ್ರಸ್ತಾಪ ಮಾಡಲೇ ಇಲ್ಲ ಅದಕ್ಕೆ ಏನು ಕಾರಣವೆಂದು ದಯವಿಟ್ಟು ಏನಾದರೂ ಹೇಳುವುದಕ್ಕೆ ಸಾಧ್ಯವೇ?

ಶ್ರೀ ಡಿ.ಬಿ. ಚಂದ್ರೇಗೌಡ : ಸದಸ್ಯರ ಹಕ್ಕಿನ ಮಧ್ಯೆ ನಾನು ಪ್ರವೇಶ ಮಾಡುವುದಿಲ್ಲ. ಅದು ಅವರ ಅಭಿಪ್ರಾಯ. ನೀವು ಇಲ್ಲಿ ಒಳಗಡೆ ಏನೋ ಸಿಗುತ್ತದೆಂದು ಹುಡುಕುವುದಕ್ಕೆ ಪ್ರಯತ್ನ ಮಾಡಬೇಡಿ ಏನೂ ಸಿಗುವುದಿಲ್ಲ.

ಶ್ರೀ ಸಿ. ಭೈರೇಗೌಡ : ಒಳಗಡೆ ಇರುವುದರಿಂದ ನಾನು ಪ್ರಸ್ತಾಪ ಮಾಡಿದ್ದು.

ಶ್ರೀ ಡಿ.ಬಿ. ಚಂದ್ರೇಗೌಡ : ಸೆಕ್ಯೂಲರಿಸಂ ಮಾತನಾಡುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ನಾನು ಎಚ್ಚರಿಕೆ ಕೊಡುತ್ತೇನೆ. ವಿ.ಪಿ. ಸಿಂಗ್‌ರವರಿಗೆ ಏನಾಯಿತು? ವಿ.ಪಿ. ಸಿಂಗ್‌ರವರ ನೇತೃತ್ವದ ಪಕ್ಷಕ್ಕೆ ಗತಿಯೇನು ಬಂತು ಅದಕ್ಕಿಂತ ಕೆಟ್ಟ ಸ್ಥಿತಿಗೆ ಹೋಗುತ್ತೀರಿ? ಇವತ್ತು ನಿಮ್ಮ ಜೊತೆಗೆ ಈಗ ಯಾರೂ ಇಲ್ಲ ಕಳೆದ ಲೋಕಸಭೆಯ ಚುನಾವಣೆಯಲ್ಲಿ ನೀವು ಗೆದ್ದಿದ್ದೀರಾ? ವಿ.ಪಿ. ಸಿಂಗ್‌ರವರು ಸೋತರು, ನೀವು ಗೆದ್ದಿದ್ದೀರಾ? ಕಾಂಗ್ರೆಸ್ ಪಕ್ಷ ಗೆದ್ದಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ : 1989ರಲ್ಲಿ ವಿ.ಪಿ. ಸಿಂಗ್‌ರವರು ಗೆದ್ದಿದ್ದರೆ?

ಶ್ರೀ ಡಿ.ಬಿ. ಚಂದ್ರೇಗೌಡ : ಇವತ್ತಿಗೂ ನಿಮ್ಮ ಸಂಖ್ಯೆ 243ಕ್ಕಿಂತ ಹೆಚ್ಚಿಗೆ ದಾಟಲಿಲ್ಲ. ಆದರೆ ಈ ಮಾತು ಹೇಳುವುದಕ್ಕೆ ಕಾರಣ. 24-5-1991ರಂದು ಉತ್ತರಪ್ರದೇಶದಲ್ಲಿ ಬಿಜೆಪಿ ಪಕ್ಷ ಸರ್ಕಾರ ರಚಿಸಿತು. ಕಲ್ಯಾಣಸಿಂಗರು 24-6-94ರಂದು

ಮುಖ್ಯಮಂತ್ರಿಯಾದರು. 25ನೇ ತಾರೀಖು ಬೆಳಿಗ್ಗೆ ಮೊದಲು ಕೆಲಸ ಕಲ್ಯಾಣಸಿಂಗರು ಏನು ಮಾಡಿದರು? ತನ್ನೆಲ್ಲ ಮಂತ್ರಿಮಂಡಲದ ಸದಸ್ಯರೊಡನೆ ಅವರನ್ನೆಲ್ಲ ಕರೆದುಕೊಂಡು ಕೋರ್ಟ್‌ನಲ್ಲಿ ಜಗಳವಿದ್ದಂತಹ ಜಾಗಕ್ಕೆ ಪ್ರವೇಶ ಮಾಡಿ ಎಲ್ಲಾ ಆದೇಶಗಳನ್ನು ಮೀರಿ, ನಿಷಿದ್ಧ ಜಾಗದಲ್ಲಿ ಇದೇ ಜಾಗದಲ್ಲಿ ಮಂದಿರ ಕಟ್ಟುತ್ತೇವೆ ಎನ್ನತಕ್ಕ ಪ್ರಮಾಣ ಮಾಡಿದರು. ಇದು ಕೇಂದ್ರಸರ್ಕಾರಕ್ಕೆ ಗೊತ್ತಿರದಲಿಲ್ಲವೆ? ನಾವು ನಂಬಿದ್ದೇವೆಂದು ನಾವು ನಂಬಿದ್ದೇವೆಂದು ಬೆಳಕು ಹರಿದರೂ ಹೇಳತಕ್ಕ ಕೇಂದ್ರ ಸರ್ಕಾರಕ್ಕೆ ಇದು ಗೊತ್ತಿರಲಿಲ್ಲವೆ? ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್ ಸಭೆಯಲ್ಲಿ ಉತ್ತರಪ್ರದೇಶ ಮುಖ್ಯಮಂತ್ರಿಗಳು ಏನು ಹೇಳಿದರು? ಕಲ್ಯಾಣಸಿಂಗರು ಏನು ಹೇಳಿದರು? I quote proceeding of N.I.C. "Pending a final solution, the Government of UP will hold itself fully responsible for the protection of Ramjanma Bhoomi/Babri Masjid structure." ಈ ಸರ್ಕಾರ ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್ ಸಭೆಯಲ್ಲಿ ಕೊಟ್ಟ ಮಾತಿನಂತೆ ನಡೆದು ಕೊಂಡಿದೆ? ದೂರು ಯಾರ ಮೇಲೆ ಹಾಕುತ್ತಾ ಇದ್ದೀರಿ? ಸರ್ವೋಚ್ಚ ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಿದ್ದರು ಅದರಂತೆ ನಡೆದುಕೊಂಡರೆ? ಎಲ್ಲದಕ್ಕಿಂತ ಮುಖ್ಯವಾಗಿ ಕಲ್ಯಾಣಸಿಂಗರ ಸರ್ಕಾರ ಮಾಡಿದಂತಹ ಬಹಳ ಮುಖ್ಯವಾದ ಕೆಲಸ ಅಕ್ಟೋಬರ್ 7 ಅಥವಾ 10ರ ಮಧ್ಯೆ ಮಾಡಿದ ಜಾಗವನ್ನು, ರಾಜ್ಯಸರ್ಕಾರ ಉದ್ದೇಶಿತ ಕಾರಣಗಳಿಗಾಗಿ ವಶಪಡಿಸಿಕೊಂಡಿತು. ಇದಕ್ಕೆ ಕೊಟ್ಟ ಕಾರಣಗಳೇನು? Development of Tourism and providing amentities to the pilgrims at Ayodya. ಯಾವ ರೀತಿ ಈ ಮಾತು ಕೊಟ್ಟು ಈ ಜಾಗವನ್ನು ವಶಪಡಿಸಿಕೊಂಡಿತ್ತು? ಮೊನ್ನೆ ಲಕ್ನೋ ನ್ಯಾಯಾಲಯದಿಂದ ಬಂದಂತಹ ತೀರ್ಪಿನಲ್ಲಿ ಅಲ್ಲಿ ಮೂರು ಜನ ಜಡ್ಜ್‌ಗಳು ಒಂದೇ ಮಾತನ್ನು ಹೇಳುತ್ತಾರೆ. ಏನು ಹೇಳುತ್ತಾರೆಂದರೆ "The Bench hold thatt from the beginning the aim of the acquisition proceedings was the construction of a temple"

This is the proceedings of the Court. Where? ಎಲ್ಲಿ On the site of the mosque and the real purpose was hidden and camouflaged by the estensible purpose stated in the notification viz., development of tourism and providing amenities to the pilgrims At Ayodya. ಇದು ಚಾರಿತ್ರಿಕ ಮೋಸ.

ಈ ಇಂಟಿಗ್ರೇಶನ್ ಕೌನ್ಸಿಲ್ ಎಂದು ಹೇಳತಕ್ಕಂಥಾದ್ದು ಇರಲಿ, ಸರ್ವೋಚ್ಚ ನ್ಯಾಯಾಲಯಕ್ಕೆ ಕಳಿಸಿರತಕ್ಕಂಥಾದ್ದು ಇರಲಿ, ಸಾರ್ವಜನಿಕ ವೇದಿಕೆಗಳಲ್ಲಿ ಹೇಳಿದ್ದುದು ಇರಲಿ, 2.77 ಎಕರೆ ಪ್ರದೇಶವನ್ನು ವಶಪಡಿಸಿಕೊಳ್ಳುವ ಉದ್ದೇಶ ಇರಲಿ, ಇದಕ್ಕೆ ಭಂಗ ತರತಕ್ಕಂಥ ಕೆಲಸ ಏನು ನಡೆದಿದೆ, ಇದಕ್ಕಿಂತ ಜನತಂತ್ರದ ಮತ್ತೊಂದು Most indignified way of using the people's mandate, ಇನ್ನೊಂದನ್ನು ನಾನು ನೋಡುವುದಿಲ್ಲ, ಕೇಂದ್ರಸರ್ಕಾರಕ್ಕೆ ಇಷ್ಟೆಲ್ಲ ಹಿನ್ನಲೆ ಇರತಕ್ಕಂಥ ಉತ್ತರಪ್ರದೇಶದ ಸರ್ಕಾರದ ಚರಿತ್ರೆ ಗೊತ್ತಿದ್ದರೂ, ಸಾಂಕೇತಿಕ ಕೀರ್ತನೆ, ಭಜನೆಗಳಿಗೆ ಅವಕಾಶ ಕೊಟ್ಟಿದ್ದನ್ನು ನಂಬುತ್ತೇನೆ. ಈ ನಂಬಿಕೆಗೆ ಪಾತ್ರವಾಗುತ್ತದೆಯೇ ಉತ್ತರಪ್ರದೇಶದ ಸರ್ಕಾರ. ಬಹಳ ಮುಖ್ಯವಾದಂಥಾದ್ದು ಏನು? ಗುಜರಾತಿನ ಒಂದು ಗ್ರಾಮದಲ್ಲಿ ಮಸೀದಿ ಒಡೆಯತಕ್ಕಂಥ ಕೆಲಸಕ್ಕೆ ಕರಸೇವಕರಿಗೆ ತರಬೇತಿ ನಡೆಯುತ್ತಿತ್ತು

ಎನ್ನತಕ್ಕಂಥಾದ್ದು ಎಲ್ಲರಿಗೂ ಗೊತ್ತಾಗಿದೆ. ಆದರೆ ಗುಜರಾತ್ ಸರ್ಕಾರಕ್ಕೆ ಗೊತ್ತಾಗುವುದಿಲ್ಲ, ಆಳುವ ಕೇಂದ್ರಸರ್ಕಾರಕ್ಕೆ ಗೊತ್ತಾಗುವುದಿಲ್ಲ. ಉಳಿದವರಿಗೆಲ್ಲ ಗೊತ್ತಾಗುತ್ತದೆ. ಇಷ್ಟೆಲ್ಲ ಹಿನ್ನೆಲೆ ಇರತಕ್ಕಂಥ ಉತ್ತರಪ್ರದೇಶ ಸರಕಾರವನ್ನು ನಾನು ನಂಬಿದೆ ಎಂದು ಪ್ರಧಾನಿಗಳಾದ ಶ್ರೀ ಪಿ.ವಿ. ನರಸಿಂಹರಾವ್ ಅವರು ಹೇಳಿದರೆ, ಯಾರನ್ನು ಅವರು ಮೋಸ ಮಾಡುತ್ತಿದ್ದಾರೆ? ಚೀನಾದೇಶದಲ್ಲಿ ಒಂದು ಗಾದೆಯನ್ನು ಹೇಳುತ್ತಾರೆ. ಇಂಗ್ಲೀಷಿನಲ್ಲಿರುವುದನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳುತ್ತೇನೆ. ಒಮ್ಮೆ ಮೋಸ ಹೋದರೆ ಆತ ಸತ್ಯವಂತನೇ ಇರಬೇಕು. ಎರಡನೆಯ ಸಾರಿ ಮತ್ತೆ ಮೋಸ ಹೋದರೆ ಆತ ಮೂರ್ಖನೇ ಸರಿ ಎನ್ನುವಂಥಾದ್ದು. ಮೂರು-ನಾಲ್ಕು ಸಾರಿ ಗೊತ್ತಿದ್ದೂ ಮೋಸಹೋದರೆ? ಇದನ್ನು ಬೇಕಾಗಿಯೇ ಮಾಡಿದರು. ಇದನ್ನು ನಾವು ಜಗಜ್ಜಾಹೀರು ಮಾಡಬೇಕಾದಂಥ ಸಂದರ್ಭ 1992 ಮಾರ್ಚ್ 20ರಂದು ಉತ್ತರಪ್ರದೇಶದ ಸರ್ಕಾರ ತಾನು ವಶಪಡಿಸಿಕೊಂಡಿದ್ದ 2.77 ಎಕರೆ ಭೂಮಿಯ ಬಗ್ಗೆ ಉದ್ದೇಶ ಏನಿತ್ತು? Development of tourism and providing amenities to the pilgrims at Ayodhya ಈ 2.77 ಎಕರೆ ಪ್ರದೇಶವನ್ನು ಒಂದು ಖಾಸಗಿ ದತ್ತಿ, ರಾಮದೇವಾಲಯವನ್ನು ಕಟ್ಟುವುದಕ್ಕಾಗಿಯೇ ಇದ್ದಂಥ ಒಂದು ಟ್ರಸ್ಟ್, ರಾಮಜನ್ಮಭೂಮಿ ನ್ಯಾಸ ಎನ್ನತಕ್ಕಂಥ ಟ್ರಸ್ಟಿಗೆ ವರ್ಗಾವಣೆ ಮಾಡುತ್ತದೆ. ಇದು ಕೇಂದ್ರಸರ್ಕಾರಕ್ಕೆ ಗೊತ್ತಿರಲಿಲ್ಲವೇನು? ಈ ದತ್ತಿಯ ಉದ್ದೇಶ ಇದ್ದದ್ದು ರಾಮದೇವಾಲಯವನ್ನು ಕಟ್ಟುವಂಥಾದ್ದು. ಆದ್ದರಿಂದ ಉದ್ದೇಶಪೂರ್ವಕವಾಗಿ ಯಾವ ದತ್ತಿಗೆ ರಾಮದೇವಾಲಯ ಕಟ್ಟುವುದಕ್ಕೆ ರಾಜ್ಯಸರ್ಕಾರ ವರ್ಗಾವಣೆ ಮಾಡಿಕೊಡುತ್ತದೆ, ಮೊದಲು ನಮಗೆ ಗೊತ್ತಿರಲಿಲ್ಲ, ನಾವು ನಂಬಿದ್ದೇವೆ ಎಂದು ಹೇಳಿದರೆ ಹೇಗೆ? ಬಹಳ ಮುಖ್ಯವಾಗಿ ನಾನು ಬಿ.ಜೆ.ಪಿ. ಮುಖಂಡರುಗಳನ್ನು ಕೇಳುತ್ತೇನೆ. ಈಗ ಮೊಸಳೆ ಕಣ್ಣೀರು ಸುರಿಸಿ ಏನೂ ಪ್ರಯೋಜನ ಇಲ್ಲ. ಉತ್ತರ ಪ್ರದೇಶದ ಸರ್ಕಾರಕ್ಕೆ ಜನಾದೇಶ ಇದ್ದು ಆ ಕೆಲಸ ಮಾಡುವುದಕ್ಕೆ ಜನರು ಮತ ಕೊಟ್ಟಿದ್ದರು. ಜನಾದೇಶ ಬಂದದ್ದು, ಅಧಿಕಾರ ಅವರ ಕೈಗೆ ಸಿಕ್ಕಿದ್ದು ಉಳಿದ ಎಲ್ಲಾ ರಾಜಕೀಯ ಪಕ್ಷಗಳ ದೊಂಬರಾಟದಿಂದ. It is only a mockery. ಉತ್ತರ ಪ್ರದೇಶವನ್ನು ಆಳತಕ್ಕ ಬಿ.ಜೆ.ಪಿ. ಸರ್ಕಾರಕ್ಕೆ 31ಕ್ಕಿಂತ ಹೆಚ್ಚು ಶೇಕಡಾವಾರು ಮತ ಸಿಕ್ಕಿರಲಿಲ್ಲ, ಶೇಕಡಾ 69ರಷ್ಟು ಜನ ಇದರ ವಿರೋಧವಾಗಿದ್ದರು ಎಂಬುದನ್ನು ಅವರು ಗಮನಿಸಬೇಕಾಗಿತ್ತು. ಉತ್ತರ ಪ್ರದೇಶದ ಜನರ ಆದೇಶ ಸಿಕ್ಕಿತ್ತು ಎಂದು ಮಸೀದಿ ಒಡೆಯುವುದಾದರೆ, ರಾಷ್ಟ್ರವ್ಯಾಪಿಯಾಗಿ ಬಿ.ಜೆ.ಪಿ.ಯನ್ನು ಹೊರಗೆ ಇಟ್ಟರಲ್ಲ, ಈ ರಾಷ್ಟ್ರದ ಜನರ ಅಭಿಪ್ರಾಯ ಏನಿತ್ತು? ಈ ಅಭಿಪ್ರಾಯಕ್ಕೆ ವಿರುದ್ಧವಾಗಿ ಮಸೀದಿ ಒಡೆಯತಕ್ಕಂಥ ಕೆಲಸವನ್ನು ಸರ್ಕಾರ ನಡೆಸಿದರೆ ಇದು ರಾಷ್ಟ್ರ ವಿರೋಧಿ ಕೆಲಸ ಆಗುವುದಿಲ್ಲವೇ ಎನ್ನುವ ಮಾತನ್ನು ನಾನು ಕೇಳುತ್ತೇನೆ. ನೀವು ಮಸೀದಿಯನ್ನು ಒಡೆಯುವುದಕ್ಕೆ ಮುನ್ನ, ರಾಮಮಂದಿರವನ್ನು ಕಟ್ಟುವುದಕ್ಕೆ ಜನಾದೇಶ ಇತ್ತೆಂದು ಹೇಳುವವರು ಈ ಸಮಸ್ಯೆಯನ್ನು ರಾಷ್ಟ್ರವ್ಯಾಪಿಯಾಗಿ ಏಕೆ ಮಾಡಿದರು.

ಇಡೀ ರಾಷ್ಟ್ರದಲ್ಲಿ ಆದಂಥ ಸಹಸ್ರಾರು ಸಾವುನೋವುಗಳಿಗೆ ಕಾರಣರಾದಿರಿ. ಬಿ.ಜೆ.ಪಿ. ಈ ಒಂದು ವಿಚಾರದಲ್ಲಿ ಅಪರಾಧಿ ಸ್ಥಾನದಿಂದ ಕೆಳಕ್ಕೆ ಇಳಿಯುವುದಕ್ಕೆ ಸಾಧ್ಯವೇ ಇಲ್ಲ, ಮುಂದೆ ಈ ವಿಚಾರದಲ್ಲಿ, ಅದೇ ಜಡ್ಜಮೆಂಟ್‌ನಲ್ಲಿ ಜನಾದೇಶದ ಬಗ್ಗೆ ಏನು ಹೇಳುತ್ತಾರೆ. ಮೊನ್ನೆ ಬಂದಂಥ ಮೂರು ಜನ ನ್ಯಾಯಾಧೀಶರು

ಲಕ್ನೋ ಹೈಕೋರ್ಟಿನಲ್ಲಿ, all the three judges categorically rejected this argument which was right described by Justice Raza "fraught with dangerous and disastrous consequences and the same is in derogation to the mandate of the Constitution."

ಈ ಮಾತನ್ನು, ಈ ಶಬ್ದವನ್ನು, derogatory to the mandate of the constitution ಅಂದರೆ, ಯಾವ ನ್ಯಾಯಾಲಯಗಳ ತೀರ್ಪಿಗೂ ಬೆಲೆ ಇಲ್ಲ, ಆದೇಶಕ್ಕೂ ಬೆಲೆ ಇಲ್ಲ, ಇವತ್ತು ರಾಜ್ಯಾಂಗದ ವಿರುದ್ಧವಾಗಿ ಕೆಲಸ ಮಾಡಿರತಕ್ಕ ಯಾವುದೇ ಪಕ್ಷ ಅಥವಾ ವ್ಯಕ್ತಿ, ಭಾರತದಲ್ಲಿ ಬದುಕಿರಬಹುದು. ಉಳಿದ ದೇಶದಲ್ಲಿ ಆಗಿದ್ದರೆ, ಇವತ್ತು ಇದರ ಸ್ಥಿತಿ ಏನಾಗುತ್ತಿತ್ತು ಎನ್ನುವುದನ್ನು ಊಹಿಸುವುದಕ್ಕೂ ಕೂಡ ಸಾಧ್ಯವಿಲ್ಲ. ಆದ್ದರಿಂದ ಈಗ ಮಂದಿರ ಕಟ್ಟಬೇಕೋ, ಮಸೀದಿ ಕಟ್ಟಬೇಕೋ ಎನ್ನುವ ಪ್ರಶ್ನೆ ನಮ್ಮ ಮುಂದೆ ಇಲ್ಲ. ನಮ್ಮ ಮುಂದೆ ಇರುವುದು, ಮುರಿದ ಮನಸ್ಸನ್ನು ಕಟ್ಟುವುದು ಹೇಗೆ? ಇದಕ್ಕೆ ಕಾರಣ ಇದೆ. ರಾಷ್ಟ್ರಕವಿ ಕುವೆಂಪುರವರು ಹೇಳಿದ ಮಾತು ನನಗೆ ನೆನಪು ಬರುತ್ತದೆ. 1974 ಡಿಸೆಂಬರ್ 8ನೇ ತಾರೀಖು, ಬೆಂಗಳೂರು ವಿಶ್ವವಿದ್ಯಾನಿಲಯದ 10ನೇ ಘಟಿಕೋತ್ಸವ ಭಾಷಣ ಮಾಡುತ್ತಾ ಒಂದು ಮಾತನ್ನು ಹೇಳುತ್ತಾರೆ. "ಅವರು, ಹಿಂದೆ ಗುರುವಿದ್ದ, ಅಂದರೆ ಮಹಾತ್ಮ ಗಾಂಧಿ ಇದ್ದರು, ಮುಂದೆ ಗುರಿ ಇತ್ತು. ಸ್ವಾತಂತ್ರ್ಯ ಬೇಕು ಎನ್ನುವ ಗುರಿ ಇತ್ತು. ಸ್ವಾತಂತ್ರ್ಯ ಪೂರ್ವಕ್ಕೆ ಸಾಗಿತು ವೀರರ ದಂಡು, ಇಂದು ಹಿಂದೆ ಗುರು ಇಲ್ಲ, ಮುಂದೆ ಗುರಿ ಇಲ್ಲ, ಮುನ್ನುಗ್ಗುತ್ತಿದೆ ಹೇಡಿ ಹಿಂಡು ಇವತ್ತು ಆ ದಂಡು ಇಲ್ಲ, ಹೇಡಿ ಹಿಂಡು ಏನೋ ಓಟು ಸಿಗುತ್ತದೆಂದು ನುಗ್ಗುತ್ತಿದೆ. ಇದಕ್ಕಿಂತ ಉತ್ತಮವಾದ ಬೇರೆ ಭಾಷೆಯಲ್ಲಿ ನನಗೆ ಹೇಳುವುದಕ್ಕೆ ಬರುವುದಿಲ್ಲ. ಅವರದೇ ಆದಂಥ ಇನ್ನೊಂದು ಮಾತು ಇಲ್ಲಿ ಹೇಳಬೇಕು.

"ಅಶೋಕ ವೃಕ್ಷದ ಅಡಿಯಲ್ಲಿ, ಶಶೋಕ ಸೀತೆಯು ಕಂಡೆ, ಇದು ರಾಮಾಯಣದರ್ಶನದಲ್ಲಿ ಬರತಕ್ಕಂಥ ಮಾತು. ಈಗ ಏನು ನೋಡುತ್ತಿದ್ದೇನೆ, "ಇಂದು ಅಶೋಕ ಚಕ್ರದ ಧ್ವಜದಡಿಯಲ್ಲಿ, ಶಶೋಕ ಜನತೆಯನ್ನು ಕಾಣುತ್ತಿದ್ದೇವೆ ಇದಕ್ಕೆ ಯಾರು ಕಾರಣರು? ಈಶಶೋಕ ಜನತೆಗೆ ಕಾರಣರು ಯಾರು? ಹಿಂದೆ ಹೇಳಿದಂಥ ಎಲ್ಲರೂ ಕಾರಣ. ಆದರೆ, ಇವತ್ತು ನಾವು ಈ ಪರಿಸ್ಥಿತಿಯನ್ನು ವಿಶ್ಲೇಷಣೆ ಮಾಡಿದಾಗ ಎಲ್ಲರೂ ಅಪರಾಧಿಗಳೇ. ಮಸೀದಿ ಉಳಿಸುವುದಕ್ಕಾಗಿ, ಅದನ್ನು ಮೈಮೇಲೆ ಹಾಕಿಕೊಂಡ ವಿ.ಪಿ. ಸಿಂಗ್‌ರವರೂ ಅಪರಾಧಿ, ಅದನ್ನು ಕೆಡವಿ, ಸರ್ಕಾರ ಇಟ್ಟುಕೊಂಡಿರುವ ನರಸಿಂಹರಾಯರೂ ಅಪರಾಧಿ, ಜನಾದೇಶ ಇದೆಯೆಂದು ಮಸೀದಿಯನ್ನು ಕೆಡವಿದ ಭಾರತೀಯ ಜನತಾ ಪಾರ್ಟಿಯೂ ಅಪರಾಧಿ. ನಾವು ಎಲ್ಲಿಗೆ ಹೋಗುತ್ತಿದ್ದೇವೆ. 1982ರಲ್ಲಿ ವಿಶ್ವಧರ್ಮ ಸಮ್ಮೇಳನಕ್ಕೆ ವಿವೇಕಾನಂದರು ಪಾಶ್ಚಿಮಾತ್ಯ ರಾಷ್ಟ್ರಕ್ಕೆ ನಮ್ಮಲ್ಲಿಂದ ಏನನ್ನು ತೆಗೆದುಕೊಂಡು ಹೋದರು, ಏನಾದರೂ ತೆಗೆದುಕೊಂಡು ಹೋಗಿರಬೇಕಲ್ಲ. ಸ್ವಾಮಿ ವಿವೇಕಾನಂದರು ಕೊಂಡೊಯ್ದುದ್ದು ಭಾರತೀಯ ಸಂಸ್ಕೃತಿಯ ಪರಂಪರೆಯನ್ನು, ಸಹಧರ್ಮದ ಇಲ್ಲಿಯ ಪದ್ಧತಿಯನ್ನು, ಸಮನ್ವಯವನ್ನು ತೆಗೆದುಕೊಂಡು ಹೋದರು. ಇವತ್ತು ನಾನು ಹೇಳುತ್ತೇನೆ. ಯಾರಾದರೂ ಹೊರ ದೇಶದಲ್ಲಿ ಭಾರತೀಯ ಹಿಂದೂ ಸಂಸ್ಕೃತಿಯ ಬಗ್ಗೆ ಮಾತನಾಡತಕ್ಕ ಒಂದು ಮಾರಲ್ ಕರೇಜ್ ಯಾರಿಗಾದರೂ ಈಗ

ಇದೆಯೋ, ಯಾರಾದರೂ ಮಾಡುವುದಕ್ಕೆ ಸಾಧ್ಯವೇ? You have totally lost in the comity of Nations.

ಬಹಳ ದೂರಕ್ಕೆ ಹೋಗಿ ಚರ್ಚೆ ಮಾಡಬೇಕಾದುದು ಇಲ್ಲ, ಧರ್ಮಸ್ಥಳ ಒಂದು ಶೈವ ಕ್ಷೇತ್ರ. ಎಲ್ಲರೂ ಹೋಗುತ್ತಾರೆ. ಇದು ಶೈವ ಕ್ಷೇತ್ರ, ಶಿವನ ದೇವಾಲಯ ಅಥವಾ ಈಶ್ವರನ ದೇವಾಲಯ ಇದೆ. ಈ ದೇವಾಲಯದ ಪೂಜಾರಿಗಳು ವೈಷ್ಣವರು, ಶೈವ ದೇವಾಲಯದಲ್ಲಿ ವೈಷ್ಣವರು ಪೂಜೆ ಮಾಡುತ್ತಾರೆ, ಧರ್ಮಾಧಿಕಾರಿಗಳು ಜೈನರು, ಇದು ನಮ್ಮ ಸಂಸ್ಕೃತಿ ದತ್ತಾತ್ರಯ ಪೀಠ ಮತ್ತು ಬಾಬಾಬುಡನ್‌ಗಿರಿ ಎಂದು ಕರೆಯುತ್ತಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಇದೆ, ಇದರ ಶಾಖಾದ್ರಿ ಮುಸಲ್ಮಾನ ಅಲ್ಲಿ ಪೂಜೆ ಮಾಡುವವರು ಮುಸಲ್ಮಾನರು ,ಭಕ್ತಾಧಿಗಳು ಹಿಂದೂಗಳು, ಮುಸಲ್ಮಾನರು ಇಬ್ಬರೂ ಇದ್ದಾರೆ. ನನ್ನ ಕ್ಷೇತ್ರದ ಹಣಗೆರೆ ಎಂಬ ಊರಿನಲ್ಲಿ ಹೊರಗಡೆ ಚೌಡೇಶ್ವರಿ ದೇವಾಲಯ ಇದೆ, ಅಲ್ಲಿಗೆ ಎಲ್ಲಾ ಹೋಗಿ ಕುಂಕುಮ ಹಚ್ಚಿಕೊಂಡು ಆಮೇಲೆ ನಂತರ ಗೋರಿಗೆ ಹೋಗುತ್ತಾರೆ. ಬೆಂಗಳೂರಿನಲ್ಲಿ ಕರಗ ಆಗುತ್ತದೆ. ಕರಗದ ದರ್ಮದೇವತೆ ಮೊದಲು ಮಸ್ತಾನ್ ಸಾಹೇಬರ ದರ್ಗಾಕ್ಕೆ ಹೋಗಿ ಪೂಜೆ ಸಲ್ಲಿಸಿದ ಮೇಲೆ ಕರಗ ಶುರುವಾಗುತ್ತದೆ. ಮಸ್ತಾನ ಸಾಹೇಬರ ಅನುಮತಿ ಬೇಕು ಧರ್ಮದೇವತೆಗೆ, ಶಬರಿ ಮಲೆ ದೇವಸ್ಥಾನಕ್ಕೆ ಹೋಗುತ್ತಿದ್ದಾರೆ, ಭಕ್ತಾದಿಗಳು. ಸ್ವಾಮಿಯೇ ಶರಣಂ ಅಯ್ಯಪ್ಪ ಎನ್ನುತ್ತಾರೆ. ಈ ಪದ ಎಲ್ಲಿಂದ ಬಂತು ಎಂದು ನನಗೆ ಕುತೂಹಲ ಉಂಟಾಯಿತು, ಸ್ವಲ್ಪ ಹುಡುಕಾಡುವುದಕ್ಕೆ ಪ್ರಯತ್ನ ಮಾಡಿದೆ, ಬುದ್ಧಂ ಶರಣಂ ಗಚ್ಛಾಮಿ ಎಂಬ ಬೌದ್ಧ ಮತದ ಪದದಿಂದ ಸ್ವಾಮಿಯೇ ಶರಣಂ ಅಯ್ಯಪ್ಪ ಬಂತು. ಬೌದ್ಧಮತ, ಜೈನಮತ, ಮುಸಲ್ಮಾನರು, ಎಲ್ಲರನ್ನೂ ಸೇರಿಸುವಂತ ವ್ಯವಸ್ಥೆ ಇದು. ಈ ರಾಜ್ಯದ್ದು.

ಗೋವಾದಲ್ಲಿ ಸಂತ ಕ್ಸೇವಿಯರ್‌ನ ದೇಹದರ್ಶನಕ್ಕೆ ಈಚೆಗೆ ನಾನು ಹೋಗಿದ್ದೆ. ಅಲ್ಲಿ ಯಾರಿದ್ದಾರೆ ಎಂದು ನೋಡಿದರೆ ಶೇಕಡಾವಾರು ಮುಸಲ್ಮಾನರು, ಹಿಂದೂಗಳು ಜಾಸ್ತಿ, ಉಳಿದ ಎಲ್ಲಾ ಜಾತಿಯ ಜನ ಅಲ್ಲಿಗೆ ಬಂದಿದ್ದರು. ಬಹಳ ದೂರಕ್ಕೆ ಏತಕ್ಕೆ ಹೋಗಬೇಕು. ಇನ್‌ಫ್ಯಾಂಟ್ ಜೀಸಸ್ ಒಂದು ಜಾಗ ಇಲ್ಲೇ ಇದೆ. ಜೀಸಸ್ ಎಂಬ ಮಗು, ಬೆಂಗಳೂರಿನಲ್ಲಿ ಇದೆ, ಅಲ್ಲಿಗೆ ಹೋದರೆ ಶೇಕಡಾ 90ರಷ್ಟು ಜನ ಕ್ರಿಶ್ಚಿಯನ್ನೇತರರು ಅಲ್ಲಿದ್ದಾರೆ. ಇನ್ನೂ ಬಹಳ ದೂರಕ್ಕೆ ಹೋಗುವುದೇ ಬೇಡ. ಶಿರಹಟ್ಟಿಯಲ್ಲಿ ಫಕೀರಸ್ವಾಮಿ ಮಠದ ಪಕ್ಕದಲ್ಲಿ ಶಿಶುನಾಳ ಶರೀಫರ ಗೋರಿ ಇದೆ. ಶಿಶುನಾಳ ಷರೀಫರು ಮುಸಲ್ಮಾನರಿಗೆ ಸಾಹೇಬರಾದರು, ಹಿಂದೂಗಳಿಗೆ ಶಿವಯೋಗಿಗಳಾದರು. ಇಂತಹ ಒಂದು ಹಿನ್ನೆಲೆಯಿಂದ ಬಂದಂಥ ಕರ್ನಾಟಕದಲ್ಲಿ ಏತಕ್ಕೆ ಹೀಗೆ ಆಯಿತು? ಈ ಪ್ರಶ್ನೆಗೆ ಯಾರಿಂದ ಅಪರಾಧವಾಗಿದೆಯೋ ಅವರಿಂದ ಉತ್ತರವನ್ನೂ ನಾನು ನಿರೀಕ್ಷೆ ಮಾಡುತ್ತೇನೆ. ಈ ಒಂದು ಕಾರಣಕ್ಕಾಗಿ ಪಾಕಿಸ್ತಾನದಲ್ಲಿ ಈ ವಿಷಯವನ್ನು ವಿಶ್ವಸಂಸ್ಥೆಯ ಸಬೆಯಲ್ಲಿ, ಯುನೈಟೆಡ್ ನೇಷನ್ಸ್ ಆರ್ಗನೈಸೇಷನ್ಸ್ ಸಭೆಯಲ್ಲಿ ಚರ್ಚೆ ಮಾಡಬೇಕೆಂದು ಹೇಳಿದರು. ಮುಸ್ಲಿಂ ರಾಷ್ಟ್ರಗಳ ಒಂದು ಶೃಂಗಸಭೆ ನಡೆಯಬೇಕೆಂದರು. ಅರ್ಥಾತ್ ಇವತ್ತು ಬಾಂಗ್ಲಾ ದೇಶದ 25 ಸಹಸ್ರ ಜನ ಮಸೀದಿ ಕಟ್ಟುವುದಕ್ಕೆ ಬರುತ್ತಿದ್ದಾರೆ. ಪತ್ರಿಕೆಗಳಲ್ಲಿ ಸುದ್ಧಿ ಬಂದಿದೆ. ಭರುತ್ತಿದ್ದಾರೆ. ಏನು ಆಯಿತು ಈ ದೇಶಕ್ಕೆ? ಮೂರೂವರೆಸಾವಿರ ಕೋಟಿ ರೂಪಾಯಿಗಳ ಬ್ಯಾಂಕ್ ಹಣದ, ಶೇರುಹಗರಣ ಮರೆತು ಹೋಯಿತು,

1400 ಕೋಟಿ ರೂಪಾಯಿಗಳ ಬೋಫೋರ್ಸ್ ಹಗರಣ ಮರೆತು ಹೋಯಿತು, ಗೋಬ್ಬರದ ಬೆಲೆ ಮೂರು ನಾಲ್ಕು ಪಟ್ಟು ಹೆಚ್ಚಾದದ್ದು ಮರೆತು ಹೋಯಿತು, ಸುಮಾರು 400 ಕೋಟಿ ರೂಪಾಯಿಗಳಷ್ಟು ಲುಕ್ಸಾನಾಯಿತು, ಕರ್ನಾಟಕದಲ್ಲಿ ದೊಡ್ಡ ಪ್ರಮಾಣದ ನೆರೆಹಾವಳಿಯಿಂದ, ಅದರ ಖರ್ಚು ಮಾಡುವುದಕ್ಕೆ ವೇಳೆ ಇಲ್ಲ, ಈಗ ಸತ್ತವರಿಗೆಲ್ಲಾ ಲಕ್ಷ ಲಕ್ಷ ಪರಿಹಾರ ಕೊಡುತ್ತಿದ್ದೇವೆ. ಯಾರ ಮನೆಯ ದುಡ್ಡು ಕೊಡುತ್ತೇವೆ.

ಯಾರ ದುಡ್ಡು ಕೊಡುತ್ತಿದ್ದೀರಿ? ನೀವು ಧರ್ಮದರ್ಶಿಗಳು ಅಲ್ಲಿ ಕುಳಿತುಕೊಂಡಿರುವವರು. ಯಾರೋ ಮಾಡಿದ ಅಪರಾಧಕ್ಕೆ ಧಾರಾಳವಾಗಿ ಕೊಡುತ್ತಿದ್ದೇವೆಂಬ ಕೀರ್ತಿಗೆ ತಾವು ಬಾಸಿನರಾಗಿದ್ದೀರಲ್ಲ ಏನು ಮಾಡುತ್ತಿದೆ ನಿಮ್ಮ ಅಡ್ಮಿನಿಸ್ಟ್ರೇಷನ್? What happened in Mysore. Your Commissioner of Police if he were to be little vigilant and I would toËday make an allegation that he is responsible for the entire Mysore episode.. 9ನೇ ತಾರೀಖು ಶಾಂತವಾಗಿದ್ದ ಮೈಸೂರಿನಲ್ಲಿ ತಾರೀಖಿನ ಮೇಲೆ ಸಾವಿರ ಸರಮಾಲೆ.ಆಮೇಲೆ ಪರಿಹಾರ. Do you know what he says in the meeting...ಅಯೋಧ್ಯೆಯಲ್ಲಿ ಮಳೆ ಬಿದ್ದರೆ ಮೈಸೂರಿನಲ್ಲಿ ಏಕೆ ಛತ್ರಿ ಹಿಡಿಯಬೇಕು ಎನ್ನುತ್ತಾರೆ. ಆಡಳಿತವನ್ನು ಸರಿಪಡಿಸು ಎಂದು ಹೇಳಿದರೆ, ಅಯೋಧ್ಯೆಯಲ್ಲಿ ಆದ ಮಳೆಗೆ ಮೈಸೂರಿನಲ್ಲಿ ಏತಕ್ಕೆ ಛತ್ರಿ ಹಿಡಿಯಬೇಕು? ಇಂತಹ ಆಫೀಸರ್ಸ್ ಇಡೀ ನಮ್ಮ ಸಮಾಜಕ್ಕೆ ಅತ್ಯಂತ ದೊಡ್ಡ ದುರಂತ. ರಾಜ್ಯದಲ್ಲಿ ವಿಶೇಷವಾಗಿ ಏನು ನಡೆಯಬೇಕಾಗಿತ್ತು, ಟ್ರೆಡಿಷನಲ್ ಏರಿಯಾದಲ್ಲಿ ಗಲಾಟೆ ಆಗಿಲ್ಲ. ಎಲ್ಲೂ ಟ್ರೆಡಿಷನಲ್ ಏರಿಯಾದಲ್ಲಿ ಗಲಾಟೆ ಆಗಿಲ್ಲ. ನಾನು ಎಲ್ಲಾ ಕಡೆಗೆ ಅಲ್ಲದಿದ್ದರೂ ಕೆಲವು ಕಡೆಗೆ ಹೋಗಿ ಬಂದಿದ್ದೇನೆ. ನಾನ್ ಟ್ರೆಡಿಷನಲ್ ಏರಿಯಾಗಳಲ್ಲಿ ಗಲಾಟೆ ಆಗಿದೆ. ಮಂಗಳೂರಿನಲ್ಲಿ ಕೂಡ ಆಯಾಯಾ ಪ್ರದೇಶದಲ್ಲಿಯೂ ಕೂಡ ನಾನ್ ಟ್ರೆಡಿಷನಲ್ ಏರಿಯಾಗಳಲ್ಲಿ ಗಲಾಟೆಆಗಿದೆ. ಆಮೇಲೆ ಹೋಗುತ್ತೇನೆ ಸಮಾಧಾನ ಮಾಡುತ್ತೇವೆ. ಕಣ್ಣೀರು ಹೊರೆಸಿ ಪರಿಹಾರ ಕೊಟ್ಟು ಈ ದೇಶದ ಜನರು ಕೊಟ್ಟ ತೆರಿಗೆ ಹಣದಿಂದ ಬಂದಂತಹ ಹಣ ಕೊಟ್ಟು ಕೈ ಮುಗಿದು ಬರುತ್ತೇವೆ. ಹೊಣೆಗಾರಿಕೆ ನಿಗದಿ ಮಾಡಿ ಜನಗಳಿಗೆ ಏತಕ್ಕೆ ಹೇಳುವುದಿಲ್ಲ ನೀವು? ನಾನು ಅದಕ್ಕೆ ಕೆಲವು ಪ್ರದೇಶಗಳಿಗೆ ನನಗೆ ಗೊತ್ತಾಯಿತು ನಾನು ಹೆಚ್ಚು ದೀರ್ಘ ಕಾಲ ತೆಗೆದುಕೊಳ್ಳುವುದಿಲ್ಲ. ನಾನು ಸರಳವಾದಂತಹ ಒಂದು ಸಲಹೆಯನ್ನು ಕೆಲವು ಕರೆ ಕೊಟ್ಟೆ. ನಾನು ರಾಯಚೂರಿನ ಸಿಂಧನೂರುನಲ್ಲಿ ನಡೆದಂತಹ ಪ್ರಕರಣ ಏನಿದೆ ಅದನ್ನು ದಯಮಾಡಿ ವರದಿ ತರಿಸಿ ಹೇಳಿದ ಮೇಲೆ ಅದನ್ನೇ ಒಂದು ದಿನ ಚರ್ಚೆ ಮಾಡೋಣ. ಸುಮಾರು 8Ë10 ಗಂಟೆಗಳ ಕಾಲ 5 ಸಾವಿರ ಜನರು ಆ ಕಡೆ ಈ ಕಡೆ ನಿಂತಿದ್ದಾರೆ.

ಪೋಲೀಸ್ ಬಂದೋಬಸ್ತು ಇಲ್ಲ, ಏನು ಮಾಡುತ್ತಿದ್ದರು ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್? and why we still believe with them.

ಅವರು ನಮ್ಮ ರಕ್ಷಕರೆಂದು ತಿಳಿದು ರಕ್ಷಣೆಯ ಜವಾಬ್ದಾರಿಯನ್ನು ನಿರ್ವಹಿಸಿಲ್ಲ ಆಮೇಲೆ ಪರಿಹಾರ ಕೊಡುವುದು ಕೊಡೋಣ. ಕೈ ಮುರಿದವರಿಗೆ ಇಷ್ಟು? ಕಾಲು ಮುರಿದವರಿಗೆ ಇಷ್ಟು? ತಲೆ ಹೋದವರಿಗೆ ಇಷ್ಟು ಎಂದು ಏನು ನಿಗದಿ ಮಾಡಿದ್ದೇವೆ ಕೊಡೋಣ. ಆದರೆ ಇಂತಹ ಘಟನೆಯನ್ನು ತಪ್ಪಿಸಬಹುದಾದಂತಹ

ಅವಕಾಶವನ್ನು ತಪ್ಪಿಸಿದಂತಹ ಜನರಿಗೆ ಏನು ಶಿಕ್ಷೆ? ಪ್ರಚೋದನೆ ಮಾಡಿದಂತಹವರಿಗೆ ಏನು ಶಿಕ್ಷೆ? ಯಾರೋ ಅಯೋಧ್ಯೆಯಲ್ಲಿ ಮಾಡಿದ್ದಕ್ಕೆ ನಾವು ಇಲ್ಲಿ ಅದರ ಜವಾಬ್ದಾರಿ ಹೊತ್ತು ಪರಿಹಾರ ಕೊಟ್ಟು ತಲೆ ಮೇಲೆ ಹೊತ್ತುಕೊಂಡು ತಿರುಗಬೇಕು. ಇಂತಹ ದುಸ್ಥಿತಿಗೆ ಕಾರಣರಾದವರು ಯಾರು ನಾನು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ ಪರಿಹಾರ ಕೊಡುವಾಗ ನೀವು ತೋರಿಸಿದ ಉತ್ಸಾಹ ಇದೆಯಲ್ಲಾ ಅದೇ ಮನಸ್ಸು ಕಟ್ಟುವ ಕೆಲಸದಲ್ಲಿ ಉತ್ಸಾಹ ಬೇಕು. ಅಧಿಕಾರಿಗಳು ಆಳತಕ್ಕಂಥ ಜನರು, ಚುನಾಯಿತ ಪ್ರತಿನಿಧಿಗಳು ಸಾರ್ವಜನಿಕ ವೇದಿಕೆಗಳಲ್ಲಿ ಹೋಗಿ ಭಾಷಣ ಮಾಡಿ ಬರತಕ್ಕಂಥಾದ್ದು ಅಲ್ಲ. ಏನಾಗಿದೆ ಈ ಕೆಲಸವಿನೇನು ಆಗಿಲ್ಲ. ನಾನು ನನ್ನ ಗ್ರಾಮಕ್ಕೆ ಹೋದಾಗ ಹೇಳಿದರು ನಾನು 10-20 ವರ್ಷಗಳಿಂದ ಒಟ್ಟಿಗೆ ಇದ್ದೆವು ಆವತ್ತು ಮನಸ್ಸು ಒಂದಾಗಿತ್ತು ಮನೆ ಬೇರೆ ಬೇರೆ ಆಗಿದ್ದವು ಆದರೆ ಇವತ್ತು ಮನೆಗಳು ಒಂದಾಗಿವೆ ಮನಸ್ಸು ಬೇರೆ ಬೇರೆ ಆಗಿವೆ. ಇದನ್ನು ಸರಿಪಡಿಸುವುದಕ್ಕೆ ಕನಿಷ್ಠ ಏನೂ ಮಾಡದಿದ್ದರೂ ಪ್ರತಿ ಗ್ರಾಮದಲ್ಲಿ ಪ್ರತಿ ತಾಲ್ಲೂಕಿನಲ್ಲಿ ೨ ವರ್ಗದ ಮುಖಂಡರುಗಳು ಸಾಯಂಕಾಲ ಕುಳಿತುಕೊಂಡು ಒಂದು ಲೋಟ ಚಹ ಕುಡಿಯುಲಿ ಸಾಕು. ಸಾಧ್ಯವಾದರೆ ವಾರಕ್ಕೊಂದು ಸಾರಿ ಊಟ ಮಾಡಲಿ ಸಾಕು. ನಾನು ಮತ್ತೊಂದು ಮುಸ್ಲಿಂ ಮುಖಂಡರಿಗೆ ಹೇಳುತ್ತೇನೆ. ನಮ್ಮ ನಡವಳಿ ಗಳಿಂದ ಯಾರು ಮಸೀದಿಯನ್ನು ಮುರಿದಿದ್ದಾರೋ ಅವರು ನಾಚಿಕೆಯಿಂದ ತಲೆ ತಗ್ಗಿಸಬೇಕು ಆ ರೀತಿ ನಡೆದುಕೊಳ್ಳಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮೈಸೂರಿನಲ್ಲಿ 9 ನೇ ತಾರೀಖಿನವರೆಗೂ ಗಲಾಟೆ ನಡೆದಿಲ್ಲ. ಗಲಾಟೆ ನಡೆಯದೆ ಇರುವುದಕ್ಕೆ ಕಮೀಷನರ್ ಕಾರಣ?

ಶ್ರೀ ಡಿ.ಬಿ. ಚಂದ್ರೇಗೌಡ : ಹೌದು.

ಶ್ರೀ ವಾಟಾಳ್ ನಾಗರಾಜ್ : ಕಮೀಷನರ್ ಒಬ್ಬರೇ...

ಶ್ರೀ ಡಿ.ಬಿ. ಚಂದ್ರೇಗೌಡ : ಅವರನ್ನೇ ಕೇಳೋಣ.

ಶ್ರೀ ಡಿ.ಬಿ. ಚಂದ್ರೇಗೌಡ : ಕೇಳಿ ಆಯಿತು.

6.40 ಪಿ.ಎಂ.

ಯಾರ ಬಗ್ಗೆ ವಿಶೇಷವಾದಂಥ ಗೌರವ, ವಿಶೇಷವಾದಂಥ ವಿಶ್ವಾಸವನ್ನು ಇಟ್ಟುಕೊಂಡಿದ್ದೆವೋ? ಅಂಥವರು ಕೂಡ ಪ್ರಚೋದನಕಾರಿಯಾಗಿ ಹೇಳತಕ್ಕಂಥ ಪ್ರಯತ್ನ ಮಾಡಿದರೆ, ನಾನು ಅದರ ಮೂಲಕ್ಕೆ ಪ್ರೊಫೆಸರ್ ನಂಜುಂಡಸ್ವಾಮಿಯವರು ಹೋದ ಹಾಗೆ ಹೋಗಬೇಕಾದಂಥ ಪರಿಸ್ಥಿತಿ ಬರಬಹುದು. ಅದಕ್ಕೆ ನಾನು ಹೋಗುವುದಿಲ್ಲ. ಆದರೆ ಇಂಥವು ರಾಷ್ಟ್ರೀಯ ಮಟ್ಟದಲ್ಲಿ ಪುರಸ್ಕಾರ ಕೊಟ್ಟು ಕರೆದು ಪರಿಹಾರಕ್ಕಾಗಿ ಪ್ರಯತ್ನಿಸಿದಂಥ ವಿ.ಪಿ.ಸಿಂಗ್ ಅವರಂಥ ಮುಖಂಡರು, ಇವತ್ತು ಯಾರ ಮನಸ್ಸಿನಲ್ಲಿ ಅವರು ಇದ್ದಾರೋ ಬಿಟ್ಟಿದ್ದಾರೋ? ಈ ದೊಡ್ಡ ಜವಾಬ್ದಾರಿಯನ್ನು ಅಂಥವರೇ ಹೊರಬೇಕು. ಉಳಿದ ಯಾರ ಬಗ್ಗೆಯೂ ನಂಬಿಕೆ ಜನರಲ್ಲಿ ಉಳಿದಿಲ್ಲ. ಅಂಥಾ ನಂಬಿಕೆ ಇರತಕ್ಕಂಥ ಜನರು ಪ್ರಾಮಾಣಿಕವಾಗಿ ಇವತ್ತು ಆಗಿರತಕ್ಕಂಥ ದುರಂತವನ್ನು ತಪ್ಪಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆ ಎನ್ನುವಂಥಾದ್ದು, ಏಕೆಂದರೆ ಜಗತ್ತಿನ ದೊಡ್ಡ ಪ್ರಜಾತಂತ್ರದ

ಸಾರ್ವಭೌಮ ಅಧಿಕಾರವಿದ್ದಂಥ ಪ್ರಧಾನ ಮಂತ್ರ ಪದವಿ ಬಿಡುವಷ್ಟು ತ್ಯಾಗ ಅವರ ಮನಸ್ಸಿನಲ್ಲಿ ಇದ್ದುದರಿಂದ ಇವತ್ತಿಗೂ ಕೂ ಅಂಥವರ ಪ್ರಯತ್ನದಿಂದಲೇ ಮುಂದೆ ಏನಾದರೂ ಈ ದೇಶದಲ್ಲಿ ಸಮಾಧಾನದ ನೆಲೆಗಟ್ಟನ್ನು ಕಟ್ಟುವುದಕ್ಕೆ ಸಾಧ್ಯವೆನ್ನುವಂಥ ಮಾತನ್ನು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಣಿಯವರು : ಮಾನ್ಯ ಮುಖ್ಯ ಮಂತ್ರಿಗಳು, ಸ್ಟೇಟ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದರು.

ಕೊಪ್ಪದಲ್ಲಿ ನಡೆದ ಘಟನೆಯ ಬಗ್ಗೆ ಮುಖ್ಯಮಂತ್ರಿಗಳ ಹೇಳಿಕೆ.

+ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಬೆಳಿಗ್ಗೆ ಕೊಪ್ಪದಲ್ಲಿ ನಡೆದಂಥ ಘಟನೆ ಬಗ್ಗೆ ಪ್ರಸ್ತಾವನೆ ಬಂತು. ಆ ಬಗ್ಗೆ ಒಂದು ಸಣ್ಣ ಹೇಳಿಕೆ ಕೊಡುತ್ತೇನೆ.

ದಿನಾಂಕ : 24.12.92ರಂದು ಅರಣ್ಯ ಗುತ್ತಿಗೆದಾರರಾದ ಶ್ರೀ ಮುಕ್ತರ್ ಅಹ್ಮದ್ ಅವರು ನೀಡಿದ ದೂರಿನ ಮೇರೆಗೆ ಶ್ರೀ ಶಿವಣ್ಣ, ಡಿ.ಎಫ್.ಓ. ಇವರನ್ನು ರೂ. 5000-00 ಲಂಚ ಪಡೆಯುವ ಆರೋಪದಲ್ಲಿ ಹಿಡಿಯುವ ಉದ್ದೇಶದಿಂದ ಕರ್ನಾಟಕ ಲೋಕಾಯುಕ್ತ ಡಿ.ಎಸ್.ಪಿ. ಶ್ರೀ ನರಸಿಂಹಯ್ಯ ಮತ್ತು ಅವರ ಸಿಬ್ಬಂದಿಯವರು ಹೋದಾಗ ಸುಮಾರು 100 ರಿಂದ 150 ಜನ ತಡೆದರಂತಲೂ ಹಾಗೂ ಈ ಸಂದರ್ಭದಲ್ಲಿ ಗಲಭೆ ಉಂಟಾಯಿತು ಎಂತಲೂ ಕೊಪ್ಪದ ಪೋಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಅವರು ವರದಿ ಮಾಡಿದ್ದಾರೆ. ಲೋಕಾಯುಕ್ತ ಸಿಬ್ಬಂದಿಯವರಿಗೆ ಡಿ.ಎಫ್.ಓ. ಅವರ ಕಛೇರಿ ಪ್ರವೇಶಿಸದಂತೆ ಆತಂಕ ಉಂಟಾಯಿತುತೆಂತಲೂ ತಿಳಿದು ಬಂದಿದೆ. ಈ ಸಂದರ್ಭದಲ್ಲಿ ಉಂಟಾದ ಗಲಭೆಯಲ್ಲಿ ಶ್ರೀ ಮುಕ್ತರ್ ಅಹ್ಮದ್ ಅವರಿಗೆ ಸೇರಿದ್ದೆಂದು ಹೇಳಲಾದ ಮಾರುತಿ ಕಾರು ಸಂಖ್ಯೆ: ಕೆ.ಎ.-19:2456 ಇದಕ್ಕೆ ಹಾನಿಗೊಳಿಸಲಾಗಿದ್ದು ಅಂದಾಜು ನಷ್ಟ ರೂ. 1,67,000-00 ಎಂದು ವರದಿಯಾಗಿದೆ. ಈ ಗಲಭೆ ಕುರಿತು ಕೊಪ್ಪ ಪೋಲೀಸ್ ಠಾಣೆಯಲ್ಲಿ ಕ್ರೈಮ್ ನಂ. 109-92 ಇದನ್ನು ಸಿ.ಆರ್.ಪಿ.ಸಿ. 143, 147, 148 ಮುಂತಾದ ಪ್ರಕರಣಗಳ ಮೇರೆಗೆ ದಾಖಲೆಮಾಡಿಕೊಂಡಿದ್ದು ಸದರಿ ಪ್ರಕರಣವನ್ನು ತನಿಖೆಮಾಡಲಾಗುತ್ತಿದೆ.

ಅನಂತರ ದಿನಾಂಕ: 25.12.92 ರಂದು ಕರ್ನಾಟಕ ಲೋಕಾಯುಕ್ತ ಡಿ.ಎಸ್.ಪಿ. ಅವರಾದ ಶ್ರೀ ನರಸಿಂಹಮೂರ್ತಿರಾವ್ ಅವರು ಇದೇ ಪ್ರಕರಣದ ಬಗ್ಗೆ ಚಿಕ್ಕಮಗಳೂರಿನಲ್ಲಿ ದೂರು ನೀಡಿದ್ದು, ಸದರಿ ದೂರನ್ನು ಕೂಡ ಸಿ.ಆರ್.ಪಿ.ಸಿ. ಪ್ರಕರಣ 143, 147, 148, 186, 189 ಹಾಗೂ ಐ.ಪಿ.ಸಿ. ಪ್ರಕರಣ 506ರ ಮೇರೆಗೆ ದಾಖಲೆ ಮಾಡಿಕೊಳ್ಳಲಾಗಿದೆ. ಈ ದೂರನ್ನು ಕೊಪ್ಪ ಪೋಲೀಸ್ ಠಾಣೆಗೆ ವರ್ಗಾಯಿಸಲಾಗಿದ್ದು, ತರೀಕೆರೆ ಉಪ ವಿಭಾಗದ ಡಿ.ಎಸ್.ಪಿ.ಅವರು ತನಿಖೆ ನಡೆಸುತ್ತಿದ್ದಾರೆ. ಈ ಪ್ರಕರಣದಲ್ಲಿ ಇನ್ನೂ ಯಾರನ್ನು ದಸ್ತಗಿರಿ ಮಾಡಿಲ್ಲ.

ಈ ವಿಷಯದ ಗಂಭೀರತೆಯನ್ನು ಗಮನಿಸಿ, COD ಯವರಿಗೆ ತನಿಖೆಯನ್ನು ಒಪ್ಪಿಸಲು ನಿರ್ಧರಿಸಲಾಗಿದೆ.

ಇದು ಬಹಳ ಗಂಭೀರವಾದಂಥ ಪ್ರಕರಣವಾಗಿದೆ. ಲೋಕಾಯುಕ್ತದವರು ಹೋಗಿ ಟ್ರ್ಯಾಪ್ ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಅದರ ಒಂದು ಸುಳಿವು ಸಿಕ್ಕಿದ ಮೇಲೆ ಅಲ್ಲಿಗೆ ಅವರು ಹೋದ ಮೇಲೆ ಅವರ ಮೇಲೆ ಗಲಭೆಯಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದೇ ಒಂದು, ಮಾತನ್ನು ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುತ್ತೇನೆ. ತಮಗೆ ಅಲ್ಲಿ ಎರಡು ಜನ ಡಿ.ಎಫ್.ಓ.ಗಳು ಇದ್ದಾರೆಂದು ಗೊತ್ತೆ?

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಹೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷಣಿಯವರೇ, ಇಲ್ಲಿ ಏನಾಗಿದೆ ಎಂದರೆ ಲೋಕಾಯುಕ್ತದಿಂದ ಒಂದು ವರದಿ ಬಂದಿದೆ. ಅದು ಒಂದು ವರ್ಷನ್. ಮತ್ತೊಂದು ವರ್ಷನ್ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಿಂದ ಬಂದಿದೆ. ಒಂದು ವರ್ಷನ್‌ಗೂ ಮತ್ತೊಂದು ವರ್ಷನ್‌ಗೂ ವ್ಯತ್ಯಾಸ ಇದೆ. ಒಂದು ವರ್ಷನ್‌ನ್ನು ನಂಬಿದರೆ ಅವರನ್ನು ವಿಮುಕ್ತಿ ಮಾಡಬೇಕು. ಲೋಕಾಯುಕ್ತ ವರ್ಷನ್ ಒಪ್ಪಿದರೆ ಅದರಲ್ಲಿ ಫಾರೆಸ್ಟ್‌ಡಿಪಾರ್ಟ್‌ಮೆಂಟಿನ ಡಿ.ಎಫ್.ಓ. ಮತ್ತು ಆರ್. ಎಫ್.ಓ., ಇವರ ಮೇಲೆಲ್ಲಾ ಆಪಾದನೆ ಮಾಡಿದ್ದಾರೆ.

ಆ ಎರಡೂ ವರ್ಷನ್‌ನನ್ನು ನಾವು ಇವೊತ್ತು ತೀರ್ಮಾನ ಮಾಡಬೇಕಾಗಿದೆ ಎಂಬ ಪ್ರಶ್ನೆ ಇದೆ. ನಾನು ಇಲ್ಲಿ ಕುಳಿತುಕೊಂಡು ಸರ್ಕಾರದಲ್ಲಿ ಒಂದು ತೀರ್ಮಾನಮಾಡುವುದಕ್ಕೆ ಹೋದರೆ ಕೊನೆಗೆ ಕೆಲವು ಸಾರಿ ಅದು ತಪ್ಪು ಆಗುತ್ತದೆ. ಅದನ್ನು ನಾನು ಏನು ಮಾಡಿದ್ದೇನೆ ಅಂದರೆ ಎರಡೂ ವರ್ಷನ್‌ಗಳನ್ನು ಏಕೆಂದರೆ ಪೋಲೀಸ್ ಇಲಾಖೆಗೆ ಕೊಟ್ಟರೂ ಕೂಡ ಅದು ಸಿಓಡಿ ಯಿಂದ ಮಾಡಬಹುದು. ಲೋಕಾಯುಕ್ತದ ಡಿಜಿಪಿಯವರಿಗೆ ಇದನ್ನು ಒಪ್ಪಿಸೋಣ ಎಂದು ಮಾಡಿದೆ. ಆದರೆ ಲೋಕಾಯುಕ್ತದ ಮೇಲೆ is a party I cannot get it required into by the Lokayuktha.

ಈಗ ನಾವು ಫಾರೆಸ್ಟ್ ಇಲಾಖೆಗೆ ಕಳುಹಿಸಿದ್ದರೂ ಕೂಡ ಅಲ್ಲಿಯೂ ಕೂಡ ಐಜಿಪಿ ಫಾರೆಸ್ಟ್‌ಸೆಲ್‌ನವರು ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಸಿಓಡಿ ಯವರು ಯಾರು? ಅವರೂ ಕೂಡ ಅವರೇ. ಅವರೇನೂ ಆಕಾಶದಿಂದ ಬಂದಿಲ್ಲ. ಅವರೂ ಪೋಲೀಸರೇ. ಒಟ್ಟಿನಲ್ಲಿ ಲೋಕಾಯುಕ್ತದವರು ನೈತಿಕ ಸ್ಥೈರ್ಯವನ್ನು ಕಳೆದುಕೊಳ್ಳಬಾರದು.

ಶ್ರೀ ಎಂ. ವೀರಪ್ಪ ಮೊಯಿಲಿ : ಇದರಲ್ಲಿ ಎರಡು ಭಾಗ ಇದೆ. ಲೋಕಾಯುಕ್ತದವರು ಟ್ರ್ಯಾಪ್‌ಗೆ ಹೋದರೆ ಕೂಡಲೇ ಈ ತರಹ ತಡೆ ಮಾಡಿಕೊಂಡು ಆಕ್ಷೇಪಣೆ ಮಾಡಿದರೆ, ಮುಂದೆ ಲೋಕಾಯುಕ್ತದವರು ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಡಿ.ಎಫ್.ಓ. ಅಷ್ಟೇ ಪ್ರಾಮಾಣಿಕನಾದರೂ He has no business to obstruct Lokayuktha from functioning. He can prove otherwise.

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕಾಗಿ ತಮಗೆ ಹೇಳಿದೆ. ಒಂದೇ ಜಾಗದಲ್ಲಿ ಇಬ್ಬರು ಡಿಎಫ್‌ಓ ಇದ್ದಾರೆ...

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಫಾರೆಸ್ಟ್ ಅಧಿಕಾರಿಯ ಪರವಾಗಿ ಅಲ್ಲಿಯ ಪ್ರಮುಖರು ನಿಂತುಕೊಳ್ಳುತ್ತಾರೆ ಅಂದರೆ, ಆತನಿಗೆ ಎಷ್ಟು ಸಾಮರ್ಥ್ಯ

ಇರಬಹುದು? ಲೋಕಾಯುಕ್ತ ಅಧಿಕಾರಿಯನ್ನು ತಡೆದು ಫಾರೆಸ್ಟ್ ಅಧಿಕಾರಿಯ ಪರವಾಗಿ ನಿಲ್ಲುವವರಿಗೆ ಏನು ಹೇಳಬೇಕು? How dare that Officer?

Sri. M. Veerappa Moily : Whether he is a Forest Officer or DFO or any body for that matter. he has no bunsiness to obstruct Lokayuktha.

ಏಕೆಂದರೆ ಮುಂದೆ ಲೋಕಾಯುಕ್ತದವರು ಟ್ರಾಪ್ ಮಾಡುವಾಗ, ಇಲ್ಲ ನಾನು ಪ್ರಾಮಾಣಿಕನಾಗಿದ್ದೇನೆಂದು ಟ್ರ್ಯಾಪ್ ಆಗುವವರು ಈ ರೀತಿ ಅಡ್ಡಿ ಮಾಡಿದರೆ ಮುಂದೆ ಯಾವ ಲೋಕಾಯುಕ್ತದವರು ಕೂಡ ಕೆಲಸ ಮಾಡುವುದಕ್ಕಾಗುವುದಿಲ್ಲ. This has got to be borne in mind. that is one part of-ಇನ್ನು ಚರ್ಜ್‌ನಲ್ಲಿರತಕ್ಕಂಥವರು ಶಿವಣ್ಣ. He is the D.F.O. not Raghothama Rao.

He has approached the KAT and obtained the stay. What should be done with regards to that order is a matter of seperate question. As on that day Shivanna was the D.F.O. and there are no two D.F.O's in that division. Shivanna is incharge of the whole division. I am sending Sri. Revanasiddaiah, who is the I.G.P. or the C.O.D., I want him to go personnaly and give a report iimmediately.

ಒಂದು ಇಂಟೀರಿಯಂ ರಿಪೋರ್ಟ್‌ನ್ನು ಕೊಡಬೇಕು, ಈ ಕೆಲಸವನ್ನು ಬೇಗನೆ ಇನ್‌ವೆಸ್ಟಿಗೇಷನ್ ಮಾಡಬೇಕು. ಯಾರು ತಪ್ಪಿತಸ್ಥರು ಇದ್ದಾರೆ. ಅವರು ಏನೇ ಆಗಿರಲಿ we are not going to shield. I am asking him to proceed to Koppa tomorrow itslef and I will ask him to submit an interim report. ಇಂಟೀರಿಯಂ ವರದಿಯನ್ನು ಏನು ಎಲ್ಲಿ ಕೊಡುತ್ತಾರೆ ಅದರ ಪ್ರಕಾರ we will submit a report to the House before we rise.

ಬಹುಶಃ ಒಂದೆರಡು ದಿವಸಗಳಲ್ಲಿ ಈ ಸದನದ ಪ್ರಸಕ್ತ ಅಧಿವೇಶನವು ಮುಗಿಯುವುದರೊಳಗೆ ನಾನು ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್‌ನ್ನು ಕೊಡುತ್ತೇನೆ.

ಶ್ರೀ ಆರ್.ವಿ. ಸಿಂಧ್ಯಾ : ಇಲ್ಲಿ ಏನಾಗಿದೆ ಎಂದರೆ ಪೋಲೀಸ್ ಮತ್ತು ಲೋಕಾಯುಕ್ತರವರ ಫೈಟ್‌ನಿಂದಾಗಿ, ಈಗ ಯಾರು ಕಂಪ್ಲೇಂಟ್ ಕೊಟ್ಟಿದ್ದಾರೋ ಅವರ ಜೀವಕ್ಕೆ ಭಯ ಇದೆ. ಅವರು ಇಲ್ಲಿ ಬಂದು ನಮಗೆ ಪರ್ಸ್‌ನಲ್ ಆಗಿ ಬೇಟಿಯಾಗಿ ಹೋಗಿದ್ದಾರೆ. ಅವರಿಗೆ ಈಗ ಸಂಪೂರ್ಣವಾದ ರಕ್ಷಣೆಯನ್ನು ಕೊಡುವಂಥಾದ್ದು ಸರಕಾರದವರ ಜವಾಬ್ದಾರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಮುಕ್ತಾರ್ ಅಹಮದ್ ಎಂಬ ವ್ಯಕ್ತಿ 5-6 ವರ್ಷಗಳಿಂದ ಕೋರ್ಟ್‌ಗೆ ಅಲೆದಾಡಿ ಪರ್ಮಿಟ್‌ನ್ನು ತೆಗೆದುಕೊಂಡು ಹೋಗಿದ್ದಾನೆ. ಅಧಿಕಾರಿಯು ಅವನಿಗೆ ಲೈಸನ್ಸ್ ಕೊಡುವ ಬದಲು ದುಡ್ಡು ಕೇಳಿದ. ಟ್ರಾಪ್ ಮಾಡಲು ಹೋದಾಗ ಆ ಅಧಿಕಾರಿಗೆ ಅಲ್ಲಿಯ ಪ್ರಮುಖರು ಬೆಂಬಲವಾಗಿ ನಿಂತುಕೊಳ್ಳುತ್ತಾರೆ ಅಂದರೆ ಯಾರು ಉಳಿಯುವುದಕ್ಕೆ ಸಾಧ್ಯ? ನಿಜವಾಗಿಯೂ ಇದು ಗೌರವ ತರುತ್ತದೆಯೇ? ತಾವು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಅದಕ್ಕೆ ಸೂಕ್ತ ತನಿಖೆ ಮಾಡಿಸಿ, ಯಾವುದೇ ಇನ್‌ಫ್ಲೂಯನ್ಸ್‌ಗೆ ಬಲಿಯಾಗದೆ ಇದರಲ್ಲಿ ಯಾರಿಗೆ ಶಿಕ್ಷೆಯಾಗಬೇಕು, ಯಾರು ನಿರಪರಾಧಿ ಇದ್ದಾನೆಲಿವರಿಗೆ ರಕ್ಷಣೆ ಕೊಡಬೇಕು. ಆತನ ವಾಹನಕ್ಕೆ ಕೂಡ ಬೆಂಕಿ ಹಚ್ಚಿದ್ದಾರೆ.

ಅದರ ಲಾಸ್ ತುಂಬಿ ಕೊಡಬೇಕು. ಅಂತೆಯೇ ಕೂಡಲೇ ಪರ್ಮಿಟ್ ಕೊಡುವ ಕೆಲಸವನ್ನು ಮಾಡಬೇಕು.

ಶ್ರೀ ಯು.ಕೆ. ಶಾಮಣ್ಣ : ನನ್ನ ಕ್ಷೇತ್ರದಲ್ಲಿ ನಡೆದಿರತಕ್ಕಂಥ ಹಗರಣದ ಬಗ್ಗೆ ಮಾನ್ಯ ಮಂತ್ರಿಯವರು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಮೇಡಂ ಇವರಿಗೆ ಏನೂ ಹೇಳಲಿಕ್ಕೆ ಅಧಿಕಾರ ಇಲ್ಲ, ಏಕೆಂದರೆ ಮುಖ್ಯಮಂತ್ರಿಗಳು ರಿಪ್ಲೈ ಕೊಟ್ಟಿದ್ದಾರೆ. ಅವರಿಗೆ ನೋವಾಗುತ್ತದೆ. ಇವರು ಏಕೆ ಮಾತಾಡಬೇಕು.

ಉಪಾಧ್ಯಕ್ಷಿಣಿಯವರು : ಅವರು ಲೋಕಲ್ ಎಂಎಲ್ಎ, Let him say...

ಶ್ರೀ ಯು.ಕೆ. ಶಾಮಣ್ಣ : ಬೆಳಿಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಆ ಕ್ಷೇತ್ರ ಶಾಸಕರ ಹಸ್ತಕ್ಷೇಪ ಇದೆ ಎನ್ನುವುದನ್ನು ಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದು ಸತ್ಯಕ್ಕೆ ದೂರವಾದದ್ದು, ಅದನ್ನು ನಾನು ಖಂಡಿಸುತ್ತಿದ್ದೇನೆ. ಕಾರಣವೇನೆಂದರೆ ನಾನು ಆ ದಿವಸ ಎನ್ಆರ್‌ಪುರದಲ್ಲಿ ಮಿಟಿಂಗ್‌ನಲ್ಲಿ ಇರುವ ಸಂದರ್ಭದಲ್ಲಿ ಟ್ರಾಪ್ ಮಾಡಿರುವ ಪ್ರಶ್ನೆ ಇದು ಅಲ್ಲಿ ಬರಲೇ ಇಲ್ಲ. ನಾನು ಮತೀಯ ಗಲಭೆಗಳಿಗೆ ಅವಕಾಶವಾಗಬಾರದೆಂದು, ಹಿಂದೂ ಮುಸ್ಲಿಮರ ಐಕ್ಯತೆಗೆ ಧಕ್ಕೆ ಬರಬಾರದೆಂದೂ...

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ ಇಲ್ಲಿ ಕಾಗೆ ಗುಬ್ಬಿ ಕಥೆ ಹೇಳಿದರೆ ಹೇಗೆ? ಅವತ್ತು ಶಾಸಕರು ಹೋಗಿ ಬೆಂಬಲವಾಗಿ ನಿಂತುಕೊಂಡಿದ್ದು ಎಲ್ಲಾ ಇದೆ. ಈಗ ಹಿಂದೂ ಮುಸ್ಲಿಂ ಗಲಾಟೆ ಇಲ್ಲಿ ಎಲ್ಲಿ ಬರುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಮೀಲ್ಡ್ ಆಗುವುದಿದ್ದರೆ, ನಮಗೆ After all he is the Hon'ble Member of this Asembly .You know this incident . It is subject to .. ಮಾಹಿತಿ ಪ್ರಕಾರ ಮಾಜಿ ಸಚಿವರೂ ಮಾಜಿ ಶಾಸಕರು ಆದ ಗೋವಿಂದೇಗೌಡರು,... ನೋ.... ಕ್ಷಮಿಸಿ, ಯು.ಕೆ. ಶಾಮಣ್ಣ ಅವರನ್ನು ಸಮಾಧಾನ ಮಾಡಲಿಕ್ಕೆ ಹೋಗಿದ್ದರು ಅಂತ...

(ಗೊಂದಲ)

ಶ್ರೀ ಯು.ಕೆ. ಶಾಮಣ್ಣ : ಮತೀಯ ಗಲಬೆಗಳು ಆಗಬಾರದು ಎಂಬ ದೃಷ್ಟಿಯಿಂದಲೇ ನನ್ನ ಕ್ಷೇತ್ರಕ್ಕೆ ಹೋಗಿದ್ದೇನೆ ಎಂದು ಸ್ಪಷ್ಟ ಮಾಡುತ್ತಿದ್ದೇನೆ.

ಮಂತ್ರಿಗಳ ಹೇಳಿಕೆ

ಉಪಾಧ್ಯಕ್ಷಿಣಿಯವರು : ಈಗ ಕಂದಾಯ ಸಚಿವರು ಸ್ಟೇಟ್‌ಮೆಂಟ್ ಮಾಡಬಹುದು.

ಬಾಡಿಗೆ ಕಾಯಿದೆ ನಿಯಂತ್ರಣಾ ಬಗ್ಗೆ.

+ SRI M. RAJSHEKHARA MURTHY (Minister for Revenue) : Madam Speaker, Hon'ble Member, Shri DB Chandregowda made a reference to the Rent Control Act which expired on the 31st December. While makeing that reference, he explained the consequences consequent to the expiry of the time. At that time, I stood up and told him that I wll be making a

statement in the course of the day. Consequently I am making the following statement.

The Karnataka rent Control Act, 1961 (Karnataka Act No. 22 of 1961) came into force on 31/12/1961...

ಶ್ರೀ ವಾಟಾಳ್ ನಾಗರಾಜ್ : ನೋಡಿ ನಮ್ಮ ಸ್ನೇಹಿತರೆಲ್ಲ ನೀವು ರಾಜಶೇಖರಮೂರ್ತಿಯವರು ಓದುವಾಗ ಸುಮ್ಮನೆ ಕುಳಿತಿದ್ದೀರಿ ಎಂದು ಆರೋಪಿಸುತ್ತಿದ್ದಾರೆ. ತಾವು ಕನ್ನಡದಲ್ಲಿ ಹೇಳುವುದು ಒಳ್ಳೆಯದಲ್ಲವೇ? ನೋಡಿ ನೀವು ಮೈಸೂರು ಜಿಲ್ಲೆಯವರು ಎಂದು ಸುಮ್ಮನೆ ಕುಳಿತಿದ್ದೀರಿ ಅಂತಾರೆ, ಈ ಆರೋಪಣೆ ಒಪ್ಪಿಕೊಳ್ಳೋಕ್ಕೆ ನಾನಂತೂ ತಯಾರಿಲ್ಲ ನೂರಕ್ಕೆ ನೂರು ಎಲ್ಲರೂ ಕನ್ನಡ, ರಾಜಶೇಖರಮೂರ್ತಿಯವರು ಅನೇಕ ಸಾರಿ ಇಂಗ್ಲೀಷ್‌ನಲ್ಲಿ ಹೇಳಿರುತ್ತಾರೆ ಅವರೂ ಕನ್ನಡದಲ್ಲಿ ಹೇಳುವುದು ಒಳ್ಳೆಯದು, ಈ ಸಬೆಗೆ ಅದು ಬಾಷಣ ರಾಜ್ಯಬಾಷೆ ಕನ್ನಡವಾಗಿರುವಾಗ ತಾವು ಏಕೆ ಇಂಗ್ಲೀಷಿಗೆ ಹೋಗ್ತಿರೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ. ರಾಜಶೇಖರ ಮೂರ್ತಿ : ಸ್ಟೇಟ್‌ಮೆಂಟ್ ಇಂಗ್ಲೀಷಿನಲ್ಲಿರೋದ್ರಿಂದ ಅದಕ್ಕಾಗಿ The Hon'ble Members has done his duty taking objection in my reading in English. I will change my English version and read it in Kannada but not today.

The Karnataka Rent Control Act, 1961 (Statement enclosed).

The Karnataka Rent Control Act, 1961 (Karnataka Act No.22 of 1961) came into force on 31/12/1961. The said Act was extended from time to time and finally it was extended till 31st December, 1992 by Act No.17 of 1983.

Sub-section (4) ofSection 1 of the said Act, provides for the applicability of section 6 of the Karnataka General Clauses Act, 1889, as if the Karnataka Rent Control Act would be a permanent Act.

From the above provision, it is clear that the following are saved, namely:

1 any right, privilege, obligation or liability acquired, accrued or incurred under any enactment so repealed; or

2. any penalty, forfeiture or punishment incurred in respect of any offence committed against any enactment so repealed; or

3. any investigation, legal proceeding or remedy in respect of any such right, privilege, obligation, liability, penalty, forfeiture or punishment as aforesaid;

and any such investigation, legal proceeding or rmedy may be instituted, continued or enforced and any such penalty, forfeiture or punishment may be imposed as if the repealing Act had not been passed.

A similar situation arose in the year 1982. The Karnataka Rent Control Act was due to expire on 31/12/82. The Karnataka Rent Control (Amendment) Ordinance 10 of 1982 was promulgated on 31/12/82 extending the period of the said Act by 10years. Since the said ordinace was due to lapse on 6/3/83 as the legislature met on 24/1/83, another Ordinace was promulgated, i.e. The Karnataka Ordinace No.4 of 1983 on 28th Feb. 1983 much before the date of expiry of first Ordinance (date of expiry 6/3/83)

Meanwhile the Legislature has again met on 10/3/83. The Karnataka Rent Control (Amendment) Bill 1983 was introduced in the Legislative Assembly on 25th March 1983. The Bill was passed by legislative Assembly on 30th March 1983 and by Council on 31st March 1993. The Bill was sent to Government of India for obtaining the assent of the President on 3/6/83. Meanwhile, the assent of the President received on 15th July 1983 and the Bill has been published as Karnataka Act no.17 of 1983 on 18/7/83. In between the date of passage of the Bill by the both the Houses of the legislature and receipt of the assent of the President to the Bill, the second ordinance issued was lapsed on 24th April 1983. Thus, there is a gap of more than two months from 25/4/83 to the publication of the Act on 18/7/83.

Under the expiry of the above Act, the tenants who are in possession cannot be evicted without recourse under the transfer of property Act, 1882. Now the remedy lies before the Civil Courts for such remedy for eviction or recovery of rents. i.e. till the duration of expiry Act is extended retrospectively.

The Revenue Department has already prepared the Karnataka Rent Control (Retrospective Extension-of Duration) Bill, 1993. The same will be introdduced before the Legislative Assembly tomorrow.

After passing of the said Bill, the Governor will have to reserve the Bill for the consideration and assent of the President of India.

In view of the urgency, a Senior Officer of the Government will be deputed to New Delhi to seek the assent of the President, urgently.

ಶ್ರೀ ಸಿ. ಬೈರೇಗೌಡ : ಬೆಳಿಗ್ಗೆ ತಾವು ಹೇಳಿದ ಹೇಳಿಕೆಗೂ ಈಗ ಮಾಡುತ್ತಿರತಕ್ಕಂಥ ಹೇಳಿಕೆಗೂ ಬಹಳ ವ್ಯತ್ಯಾಸ ಇದೆ.

(ಗೊಂದಲ)

SRI D.B. CHANDRE GOWDA : I want a copy of the statement.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಯಾರನ್ನೋ ಉಳಿಸುವುದಕ್ಕೆ ಹೋಗಿ ನೀವು ಸಿಕ್ಕಿಹಾಕಿಕೊಳ್ಳುವಂಥ ಕೆಲಸವನ್ನು ಏತಕ್ಕೆ ಮಾಡುತ್ತೀರಿ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ತಮ್ಮಿಂದ ಇದನ್ನು ನಿರೀಕ್ಷೆ ಮಾಡಿರಲಿಲ್ಲ. ನಿಮ್ಮ ಬಗ್ಗೆ ಬಹಳ ಗೌರವ ಇತ್ತು. ಬೆಳಿಗ್ಗೆ ಹೇಳಿದ್ದೇ ಒಂದು. ಈಗ ಹೇಳುತ್ತಿರುವುದೇ ಒಂದು. ಇದಕ್ಕೂ ಅದಕ್ಕೂ ಬಹಳ ವ್ಯತ್ಯಾಸ ಇದೆ.

(ಗೊಂದಲ)

ಉಪಾಧ್ಯಕ್ಷರು: ಒಬ್ಬೊಬ್ಬರು ಮಾತನಾಡಿ.

(ಗೊಂದಲ)

SRI D.B. CHANDRE GOWDA :I want a copy of the statement please.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಬೆಳಿಗ್ಗೆ ತಾವು ಹೇಳಿದಿರಿ, ಇದು ಪ್ರಿವಿಲೇಜ್ ಆಗುತ್ತದೆ. ಈ ಸದನವನ್ನು ತಪ್ಪು ದಾರಿಗೆ ಎಳೆದಂತೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಡಿಸೆಂಬರ್ 1 ತಾರೀಖಿಗೆ ನಾವು ಮಾಡಿದ್ದೇವೆ ಎಂದು ಹೇಳಿದರು. ನಾಳೆ ಬೆಳಿಗ್ಗೆ ಅಸೆಂಬ್ಲಿಯಲ್ಲಿ ತರುತ್ತೇವೆ ಎಂದು ಹೇಳಿದರೆ ಹೇಗೆ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಪ್ರಿವಿಲೇಜ್ ಆಗುತ್ತದೆ. ಈ ಸದನವನ್ನು ತಾವು ತಪ್ಪುದಾರಿಗೆ ಎಳೆದಿದ್ದೀರಿ.

ಉಪಾಧ್ಯಕ್ಷರು : ಹೀಗೆ ನಾಲ್ಕು ಜನ ಒಟ್ಟಿಗೆ ಎದ್ದು ಮಾತನಾಡಿದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇದು ಪ್ರಿವಿಲೇಜ್ ಆಗುತ್ತದೆ. ನಾವು ಪ್ರಿವಿಲೇಜನ್ನು ಮೂವ್ ಮಾಡಬೇಕಾಗುತ್ತದೆ. ಬೆಳಿಗ್ಗೆ ತಾವು ಹೇಳಿದ್ದಕ್ಕೂ ಈಗ ಮಾಡುತ್ತಿರುವ ಸ್ಟೇಟ್‌ಮೆಂಟ್‌ಗೂ ತುಂಬಾ ವ್ಯತ್ಯಾಸವಾಗುತ್ತದೆ.

ಉಪಾಧ್ಯಕ್ಷರು : ಅವರು ಏನು ಹೇಳುತ್ತಾರೋ ಕೇಳೋಣ. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಶಿವಾನಂದ ಹೆಚ್. ಕೌಜಲಗಿ : ಇವತ್ತು ಮಾರ್ನಿಂಗ್, ತಾವು ಹೇಳಿದ್ದೀರಿ, ಈಗಾಗಲೇ ತಾವು ಗೌರ್ನಮೆಂಟ್ ಆಫ್ ಇಂಡಿಯಾಗೆ ಬರೆದಿದ್ದೇವೆ

ಎಂದು ಹೇಳಿದಿರಿ. ಅದು ರೆಕಾರ್ಡ್‌ನಲ್ಲಿದೆ. ಈಗ ಹೇಳುತ್ತೀರಿ, ಇನ್ನು ಮೇಲೆ ಬರೆಯುತ್ತೇವೆ ಎಂದು ಹೇಳಿ. ಇದು ಹೇಗೆ? - We have got highest respect to you sir.

Sri M. Rajashekar Murthy : This mourning I made a statement that I have passed an order extending the term of the Bill then I told I will be making a statement in the course of the day if necessary. All these details I have given now . There is no exchange in my statement.

Sri. D.B. Chandre Gowda : No. Are you in a position, as Minister though authorised to extend the time limt, without exploiting the recourse of Ordinance or brining it before the House for legislation..

Sri. M. Rajashekar Murthy : When the Government passed an order extending the Act for some more time..

(ಗೊಂದಲ)

Sri. Ry Deshpande : Whether you have got powers?

ಶ್ರೀ ಸಿ. ಬೈರೇಗೌಡ : ಕಡತವನ್ನು ತರಿಸಿ, ದಯವಿಟ್ಟು ತರಿಸಿ.

(ಗೊಂದಲ)

Sri M. Rajashekar Murthy : Please listen to me.

ಶ್ರೀ ಸಿ. ಬೈರೇಗೌಡ : ಇವತ್ತು ಬೆಳಿಗ್ಗೆ ಮಾನ್ಯ ಚಂದ್ರೇಗೌಡರು, ಹಾಗೂ ಉಳಿದಂತಹ ಸದಸ್ಯರು ಈ ವಿಷಯವನ್ನು ಪ್ರಸ್ತಾಪ ಮಾಡಿಗ ಮೇಲೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಅವರು ಏನು ಉತ್ತರವನ್ನು ಕೊಟ್ಟಿದ್ದಾರೆ ಎಂದರೆ 'Already extended the time' ಎಂಬ ಪದವನ್ನು ಉಪಯೋಗಿಸಿದ್ದಾರೆ. ನಾವೆಲ್ಲ ಪೆಚ್ಚಾದೆವು. ಈ ಪರಿಸ್ಥಿತಿ ನೋಡಿ. ನಾವು ವಿರೋಧ ಪಕ್ಷದಲ್ಲಿ ಕುಳಿತುಕೊಂಡು, ನಾವೆಲ್ಲಾ ಪೆಚ್ಚಾದೆವು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮಂಥವರು ತಪ್ಪು ಆಗಿದೆ ಅದನ್ನು ತಿದ್ದಿಕೊಳ್ಳುತ್ತೇವೆಂದು ಹೇಳಬಹುದು. ಚರ್ಚೆ ಮಾಡಿ ನೀವು ಎಂದು ಹೇಳಬಹುದಿತ್ತು.

(ಗೊಂದಲ)

ಉಪಾಧ್ಯಕ್ಷರು : ಅವರು ಏನು ಹೇಳುತ್ತಾರೋ ಕೇಳೋಣ.

Sri M. Rajasekar Murthy : I want your indulgence for few minutes. First the Government will have to take an administrative decision. I have taken the administrative decision to extend the Act. In pursuance of the administrative decision, the Legislature Wing prepares the Bill. I have taken the administrative decision on 31st December 1992.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ನೀವು ತೀರ್ಮಾನ ತೆಗೆದುಕೊಂಡಿದ್ದೀರಿ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : 31ನೇ ತಾರೀಖಿಗೆ ಆಕ್ಟ್ ಎಕ್ಸ್‌ಪೈರಿ ಆಗುತ್ತದೆ.

ನಾವು 28ನೇ ತಾರೀಖಿನಿಂದ ಸೆಷನ್ ಸೇರಿದ್ದೇವೆ. ನೀವು ಬಿಲ್ ಫಾರಂನಲ್ಲಿ ಇಂಟ್ರಡ್ಯೂಸ್ ಮಾಡಿ ಪ್ರೆಸಿಡೆಂಟ್ ಕನ್‌ಸೆಂಟ್‌ಗೆ ಕಳುಹಿಸಬೇಕಾಗುತ್ತದೆ. ಟೈಮ್ ಲಿಮಿಟ್ ಎಕ್ಸ್‌ಟೆನ್‌ಷನ್‌ಗೆ ಎಂದು ಗೊತ್ತಿದ್ದರೆ 28 ನೇ ತಾರೀಖು ಅಥವಾ 27ನೇ ತಾರೀಖು ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ಸಭಾ ನಾಯಕರು ತಿಳಿಸಬಹುದಿತ್ತು. ತಿಳಿಸದಿದ್ದರೆ ನಾವೆಲ್ಲಾ ಒಪ್ಪಿಕೊಳ್ಳುತ್ತಿದ್ದೆವು. Alright it is a very urgent matter ನಾವು ಕಂಡೋಲೆನ್ಸ್ ಆದ ಮಾರನೇಯ ದಿವಸ ಅಥವಾ ಆವತ್ತೇ ಮಾಡಿಕೊಡುತ್ತಿದ್ದೆವು. ಈಗ ಅದೂ ಮಾನ್ಯ ಚಂದ್ರೇಗೌಡರು ಇದನ್ನು ರೈಸ್ ಮಾಡಿದ ಮೇಲೆ ಆಟ್‌ಲೀಸ್ಟ್ ನೀವು ಹೇಳಬಹುದಿತ್ತು. ಈಗ ಇದನ್ನು ಮಾಡಿದೆ ಎಂದು ಹೇಳುತ್ತಿದ್ದೀರಿ. ನಾವು ಕೇಳಿಕೊಳ್ಳುವುದು ಇಷ್ಟೇ. Atleast you apologise to the public that it is an administrative lapse. ತಪ್ಪು ಆಗಿದೆ, ಅದನ್ನು ನೀವು ಒಪ್ಪಿಕೊಳ್ಳಿ. ನೀವು ಅಷ್ಟಾದರೂ ಹೇಳಿ, ತಪ್ಪಾಗಿದೆ ಒಪ್ಪಿಕೊಳ್ಳುತ್ತೇವೆಂದು ಹೇಳಿ.

ಶ್ರೀ ಹೆಚ್. ಏಕಾಂತಯ್ಯ : ಇದಕ್ಕಿಂತ ಮುಖ್ಯವಾಗಿ ಸುಗ್ರೀವಾಜ್ಞೆ ಮುಖಾಂತರ ನೀವು 28ಕ್ಕಿಂತ ಮೊದಲೇ ಈ ಅಧ್ಯಾದೇಶವನ್ನು ಹೊರಡಿಸಿದ್ದರೆ ಇದಕ್ಕೆ ಅರ್ಥ ಇರುತ್ತಿತ್ತು. ಅದನ್ನು ಮಾಡಲಿಲ್ಲ. 31ನೇ ತಾರೀಖು ಕೊನೆ ಆಗುತ್ತದೆ ಎಂದು ನಿಮ್ಮ ಅಧಿಕಾರಿಗಳಿಗೆ ಗೊತ್ತಿದ್ದರೆ ಈ ರೀತಿ ಆಗುತ್ತಾ ಇರಲಿಲ್ಲ. ಸರ್ಕಾರದ ಅಧಿಕಾರಿಗಳು ಏನು ಮಾಡುತ್ತಿದ್ದರು. ಸರ್ಕಾರ ನಡೆಸುವ ರೀತಿಯೇ ಇದು?

ಶ್ರೀ ವಾಟಾಳ್ ನಾಗರಾಜ್ : ಅಧಿಕಾರಿಗಳು ನಿಮ್ಮನ್ನು ತಪ್ಪು ದಾರಿಗೆ ತಂದಿದ್ದಾರೆ ಇದಕ್ಕೆ ನೀವು ಜವಾಬ್ದಾರರು ಆಗುತ್ತೀರಿ. ಬೆಳಿಗ್ಗೆ ನೀವು ಹೇಳಿದ್ದುದು ಒಂದು ಈಗ ಹೇಳುವುದು ಒಂದು ಆಗಿದೆ.

ಶ್ರೀ ಹೆಚ್. ಏಕಾಂತಯ್ಯ : ಯಾವುದಾದರೂ ಒಂದು ಕಾಯಿದೆ ನಿರ್ದಿಷ್ಟವಾದ ದಿವಸದಿಂದ ಸಮಾಪ್ತಿ ಆಗುತ್ತದೆ ಎಂದು ಆದರೆ ಅದಕ್ಕಿಂತ ಮೊದಲು ಕ್ರಮವನ್ನು ತೆಗೆದುಕೊಳ್ಳುವಂತಹ ಪೂರ್ವಭಾವಿಯಾದ ಕ್ರಮದ ಹೊಣೆಗಾರಿಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸರ್ಕಾರದಲ್ಲಿ ಇರಬೇಕು. ಇದರ ವಿಫಲತೆಯನ್ನು ನಾವು ಹೇಳುತ್ತಾ ಇರುವುದು. ನೀವು ಇದನ್ನು ಇವತ್ತಿನ ದಿವಸ ಸರಿಪಡಿಸುವುದಕ್ಕೆ ಸಾಧ್ಯ ಇಲ್ಲ. ನೀವು ಯಾವುದೇ ಕಾನೂನನ್ನು ಇಪತ್ತು ಮಾಡಿದರೂ ಸಹ ಅದು ಅಧ್ಯಕ್ಷರ ಪರವಾನಗಿ ಪಡೆಯುವವರೆಗೆ ಅದು ಕಾನೂನಾಗಿ ಬರುವುದಿಲ್ಲ. ಈ ತಪ್ಪನ್ನು ಒಪ್ಪಿಕೊಂಡು, ಈ ತಪ್ಪಿಗೆ ಯಾರು ಕಾರಣಕರ್ತರಾಗಿದ್ದಾರೆ? ನಿಮ್ಮ ಇಲಾಖೆಯಲ್ಲಿ ಮತ್ತು ಕಾನೂನು ಇಲಾಖೆಯಲ್ಲಿ ಮತ್ತು ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ಅದು ಒಂದು ಭಾಗ. ಮತ್ತೊಂದು ಜಹಳ ಮುಖ್ಯವಾಗಿ ನಿಮಗೆ ಅಧ್ಯಾದೇಶವನ್ನು ತರುವುದಕ್ಕೆ ಇದ್ದಂಥ ತೊಂದರೆ ಏನು?

ಶ್ರೀ ಕೆ.ಹೆಚ್. ಏಕಾಂತಯ್ಯ : ಗೊತ್ತಿಲ್ಲ ಅಷ್ಟೆ?

Sri. D.B. Chandre Gowda : What is the difficulty to the Government. Why did you not resort to bring an ordinance? Whether the House was prorogued? ಅಥವಾ ಅಲ್ಲಿ ನಿಮ್ಮ ರಾಜಕಾರಣವಾಗಿ ಈ ಪ್ರೊರೇಗ್ ಆಗಿದ್ದರೆ ಆ ಶಾಸನ ಸಭೆಯನ್ನು ಅಧ್ಯಕ್ಷರು ಕರೆಯಬೇಕಾಗಿತ್ತು. ಪ್ರೊರೇಗ್ ಆಗಿದ್ದರೆ ರಾಜ್ಯಪಾಲರು ಕರೆಯಬೇಕಾಗುತ್ತದೆ. ಇಂತಹ ಸುಗ್ರೀವಾಜ್ಞೆ ಯಾವಾಗ When the House is prorogued. When the House is not prorogued - ಅದಕ್ಕಾಗಿ ನಾನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದನ್ನು ಹೇಳಿದ್ದುದು. ಈ ಉದ್ದೇಶವನ್ನು ಇಟ್ಟುಕೊಂಡೇ ಹೇಳಿದೆ. ಇಂತಹ ಸಂದರ್ಭ ಬರಬಹುದು ಎಂದು. ಏಕಾಏಕಿ 16ನೇ ತಾರೀಖು ಅಸೆಂಬ್ಲಿಯನ್ನು 28ನೇ ತಾರೀಖಿಗೆ ಮುಂದೆ ಹಾಕುವ ಮುನ್ನ ಇಂತಹ ಮುಂದಾಲೋಚನೆಗಳನ್ನು ಏಕೆ ಮಾಡಲಿಲ್ಲ?

ಶ್ರೀ ಹೆಚ್. ಏಕಾಂತಯ್ಯ : ಇದಕ್ಕಿಂತ ಮೊದಲು ಕಾನೂನು ಇಲಾಖೆಯ ಕಾರ್ಯದರ್ಶಿಗಳೂ ನಿಮ್ಮ ಇಲಾಖೆಯ ಕಾರ್ಯದರ್ಶಿಗಳೂ ಸೇರಿದಂತೆ ಏನು ಮಾಡುತ್ತಿದ್ದರು? ಅದನ್ನು ನಾವು ನಿಮ್ಮನ್ನು ಕೇಳುತ್ತಿರುವುದು.

Sri.D.B. Chandre Gowda : Is it the way to run the Government? Why should we have the Legal Department? It is a lapse not only on the part of the administratition but on the part of the Government. ನೀವು responsible Government ಎಂದು ಹೇಳಿದ ಮೇಲೆ either you should have resorted to the ordinance or you should have made of the earliest possible available opportunity to bring it in the form of Bill and get it passed in the House. ಈ ಎರಡನ್ನೂ ಮಾಡಲಿಲ್ಲ. ಹಾಗಾದರೆ ಉದ್ದೇಶವೇನು?

ಶಾಸನ ಸಭೆಯ ಉದ್ದೇಶವೇನು 28ನೇ ತಾರೀಖಿನ ಮೂರು ದಿವಸಗಳ ಕಾಲ ನಾವು ಏನಾದರೂ ಅಡ್ಡಿಪಡಿಸಿದ್ದೇವೆಯೋ ಆಮೇಲೂ 31ನೇ ತಾರೀಖಿನವರೆಗೆ ಮೂರು ದಿವಸದ ತನಕ ಅವಕಾಶ ಇತ್ತು. What was the Administration doing? I hold the Government squarely responsible for this. The Government come out with an apology to this August House and through this House to the people of the State.

ಅಲ್ಲಿಂದಾಚೆಗೆ 1 ನೇ ತಾರೀಖಿನಿಂದ ಇವತ್ತಿನವರೆಗೆ ಈ ಪ್ರಕ್ರಿಯೆಯಿಂದ ಆಗಿರತಕ್ಕ ನಷ್ಟವನ್ನು ಅನಾಹುತವನ್ನು ಸರಿಪಡಿಸತಕ್ಕ ಕಾರ್ಯಕ್ರಮ ಏನು? ಇಷ್ಟಾನ್ನಾದರೂ ಅವರು ಹೇಳಬೇಕು.

Sri. M.Rajashekar Murthy : Madam Deputy Speaker, I will find out who is responsible for the the delay. I will make an enquiry and take severe action against those who are responsible for the delay and lapse. I think, the hon'ble Members on the Opposition will leave the matter to me and will keep faith in me. I will take action.

Sri. R.V. Deshpande : The Government officers are responsible.They have to apoligise to the House. It is a serious lapse. What was the difficulty in bring the ordinance?

Sri. S.H. Koujalgi : The Government will have to apologise because it is a lapse on the part of the Government. It is a very serious matter. What were they doing for the last 4 months.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಖ್ಯ ಮಂತ್ರಿಗಳು ಹಿಂದಿನ ಸರ್ಕಾರದ ಕೆಲವು ವಿಷಯಗಳ ಮೇಲೆ ಶಸ್ತ್ರಚಿಕಿತ್ಸೆ ಆಗಬೇಕೆಂದು ಮಾತನಾಡುತ್ತಾರೆ. ನಿಮ್ಮ ಸರ್ಕಾರದ ಶಸ್ತ್ರಚಿಕಿತ್ಸೆ ಪ್ರಾರಂಭ ಆಯಿತ್ತಲ್ಲಾ.

ಉಪಾಧ್ಯಕ್ಷಣಿಯವರು : ಈಗ ಮಾನ್ಯ ಮಂತ್ರಿಗಳು ಏನು ಹೇಳಬೇಕೋ ಅವರು ಹೇಳಿದ್ದಾರೆ. ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

Sri D.B. Chandre Gowda : Madam Deputy Speaker, You are the custodian of the rights and privileges of not only the hon.Members but of the House also. I feel here that it is a clear case of contempt of the House. You should come to our rescue, otherwise, there is no point in debating here ನೀವು ಅನೇಕ ವರ್ಷಗಳ ಕಾಲ ಸಂಸದೀಯ ವ್ಯವಹಾರ ಮಂತ್ರಿಗಳಾಗಿದ್ದವರು. ನೀವು ಮಾರ್ಗದರ್ಶನ ಮಾಡಬೇಕು. ತಮ್ಮಿಂದ ನಾನು ಇದನ್ನು ನಿರೀಕ್ಷೆ ಮಾಡುವುದಿಲ್ಲ.

ಶ್ರೀ ಎಸ್.ಎಸ್. ಕೌಜಲಗಿ : ತಪ್ಪಾಗಿರುವುದನ್ನು ತಪ್ಪೆಂದು ಹೇಳಬೇಕು.

ಉಪಾಧ್ಯಕ್ಷಣಿಯವರು :ಈಗ ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳ ಬಗ್ಗೆ ತನಿಖೆಯನ್ನು ನಡೆಸುತ್ತೇವೆ Suitable action will be taken. ಎಂದು ಹೇಳಿದ್ದಾರೆ. I think, it is quite sufficient.

Sri. P.G.R. Sindya : For having done all these things, ಅಧಿಕಾರಿಗಳ ಮೇಲೆ ಜವಾಬ್ದಾರಿ ಹೊರಿಸುತ್ತೇವೆ ಅಂತ ಹೇಳಿದರೆ ಹೇಗೆ? he has to regret to this House.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರ ಇದನ್ನು ಹಗುರವಾಗಿ ತೆಗೆದುಕೊಂಡರೆ ನಮ್ಮದೇನೂ ಅಡ್ಡಿ ಇಲ್ಲ, ಆದರೆ ಇದೊಂದು ಸೀರಿಯಸ್ ಲ್ಯಾಪ್ಸ್ ಆಗುತ್ತದೆ.

ಉಪಾಧ್ಯಾಕ್ಷಣಿಯವರು : ಸ್ಯೂಟೆಬಲ್ ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೋಲಾರದ ಘಟನೆಯ ಬಗ್ಗೆ ತಾವು ಸ್ಟೇಟ್‌ಮೆಂಟ್ ಮಾಡುತ್ತೇವೆಂದು ಹೇಳಿದಿರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾಳೆ ಮಾಡೋಣ.

ಶಾಸನ ರಚನಾ ಕಾರ್ಯಕಲಾಪಗಳು

ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ 1992

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, 1992ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೊಡುತ್ತೇನೆ.

ಉಪಾಧ್ಯಕ್ಷಣೆಯವರು : ಪ್ರಸ್ತಾಪ ಏನೆಂದರೆ "1992ರ ಕರ್ನಾಟಕ ತೆರಿಗೆ ಕಾನೂನುಗಳ ತಿದ್ದುಪಡಿ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

"ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು."

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷಣೆಯವರೇ, 1992ನೇ ಸಾಲಿನ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷಣೆಯವರು : ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ-I

7.10 ಪಿ.ಎಂ.

(2) 1992ರ ಕರ್ನಾಟಕ ಅವಶ್ಯಕ ವಸ್ತುಗಳ (ನಿಯಂತ್ರಣ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷಣೆಯವರೇ, 1992ರ ಕರ್ನಾಟಕ ಅವಶ್ಯಕ ವಸ್ತುಗಳ (ನಿಯಂತ್ರಣ) ವಿಧೇಯಕವನ್ನು ಸಬೆಯು ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷಣೆಯವರು : ಪ್ರಸ್ತಾವ ಏನೆಂದರೆ, "1992ರ ಕರ್ನಾಟಕ ಅವಶ್ಯಕ ವಸ್ತುಗಳ (ನಿಯಂತ್ರಣ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷಣೆಯವರೇ 1992ರ ಕರ್ನಾಟಕ ಅವಶ್ಯಕ ವಸ್ತುಗಳ (ನಿಯಂತ್ರಣ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷಣೆಯವರು : ವಿಧೇಯಕವನ್ನು ಮಂಡಿಸಲಾಗಿದೆ.

(3) 1992ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಬೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷಣೆಯವರೇ, 1992ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಆದಿಭೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷಣೆಯವರು : ಪ್ರಸ್ತಾವ ಏನೆಂದರೆ, "1992ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷಣೆಯವರೇ, 1992ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಬೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷಣೆಯವರು : ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ - II & III

THE KARNATAKA WAKF BOARD (APPOINTMENT OF SPECIAL OFFICER) BILL, 1992.

Motion for consideration

+ Sri. S.M. Yahya (Minister for Higher Education and Wakf) : Madam Deputy Speaker, I beg to move-

"That the Karnataka Wakf Board (Appointment of Special Officer) Bill, 1992 be taken into consideration."

The Questions was proposed.

Sri. S.M. Yahya : Madam, there were series of complaints of irrigularities and mismanagement against the previous Management of the Wakf board. Further, 4 Members of the Board had resigned and as a result of which, the management of the Wakf Board was almost at a standstill. Hence, in the interest of the public and in the interest of Wakf institutions, it was necessary to replace the old management by an appointment of a Special Officer. I can recall here that when I was Wakf Minister during Veerendra Patil's Ministry, I had assured that I would look into all those irregularities and misappropriation. When a new Government came, we had appealed that let the Chairman voluntarily retire to pave the way for appointment of new chairman and Members of the Board to the Government in order to continue our own policies and programmes of Walf institutions. However, he could not resign. I was under the impression that he would resign and that will end up the matter in a democratic institution like ours. We thought that the Chairman and the Members of the Board will resign. However, it has not happened. The previous management has committed

series of lapses. In the interest of public, we thought it fit to replace the old management by new Management. Hence, the Bill.

+ ಶ್ರೀ ಆರ್. ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷಣಿಯವರೇ, ಈ ವಿಧೇಯಕಕ್ಕೆ ನಮ್ಮ ಪಕ್ಷದ ಸಂಪೂರ್ಣ ವಿರೋಧವಿದೆ. ಏಕೆಂದರೆ, ಈ ಒಂದು ವಿಧೇಯಕವನ್ನು ತಾವು ಏನು ತಂದಿದ್ದೀರಿ.. ಇದು totally political motivated ಇದೆ ಮತ್ತು ಅನ್‌ಜಸ್ಟೀಸ್ ಇದೆ. ನಮ್ಮ ಪಕ್ಷದ ಅಧ್ಯಕ್ಷರು ವಕ್ಫ್ ಬೋರ್ಡ್ ಅಧ್ಯಕ್ಷರಾಗಿದ್ದರು ನಿಜ. ಆದರೆ, 1954ರ ವಕ್ಫ್ ಬೋರ್ಡ್ ಕಾಯಿದೆ ಪ್ರಕಾರ ಒಂದು ವಕ್ಫ್‌ಬೋರ್ಡಿನ ಅಧ್ಯಕ್ಷರ ಮತ್ತು ಸದಸ್ಯರ ನೇಮಕವಾದರೆ ಅವರ ಸೇವೆಯ ಅವಧಿ ಐದು ವರ್ಷಗಳಿರುತ್ತದೆ. ಪ್ರಜಾಪ್ರಭುತ್ವದಲ್ಲಿ ನಮಗೆ ವಿಶ್ವಾಸವಿದೆಯೆಂದು ತಾವು ಹೇಳಿಕೊಂಡು ಹೋದಿರಿ. ಈಗ ನಿಮಗೆ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಲ್ಲದಿರುವುದು ಸ್ಪಷ್ಟವಾಗಿದೆ. ಐದು ವರ್ಷಗಳ ಅವಧಿ 1993ನೇ ಇಸವಿಯಲ್ಲೇ ಮುಗಿಯುತ್ತಿತ್ತು. ಅಲ್ಲದೆ, ತಾವು ಈ ವಕ್ಫ್ ಬೋರ್ಡ್ ಅಧ್ಯಕ್ಷರನ್ನು ಅವರ ಸ್ಥಾನದಿಂದ ತೆಗೆಯುವುದಕ್ಕಾಗುವುದಿಲ್ಲ, ಬೋರ್ಡನ್ನು ಸಹ ತೆಗೆಯುವುದಕ್ಕಾಗುವುದಿಲ್ಲ. ನೀವು ದುರುದ್ದೇಶವಿಟ್ಟುಕೊಂಡು ವಕ್ಫ್ ಬೋರ್ಡಿಗೆ ಆರ್ಡಿನೆನ್ಸ್ ಪ್ರಕಾರ ಒಬ್ಬ ವಿಶೇಷಾಧಿಕಾರಿಯನ್ನು ನೇಮಕ ಮಾಡಿದ್ದೀರಿ. ವಕ್ಫ್ ಬೋರ್ಡ್ ಸೆಕ್ಷನ್ 18ರ ಪ್ರಕಾರ ಛೇರ್ಮನ್ ಆಗಿರಲಿ ಅಥವಾ ಸದಸ್ಯರಾಗಿರಲಿ ಕಾಯಿದೆಗೆ ವಿರುದ್ಧವಾಗಿ ಕೆಲಸ ಮಾಡಿದರೆ, ವಕ್ಫ್‌ನ ಪ್ರಾಪರ್ಟಿಯನ್ನು ಮೆಂಟೇನ್ ಮಾಡುವುದರಲ್ಲಿ ದುರುಪಯೋಗ ಮಾಡಿದ್ದರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇದೆ, ಹಾಗಾದರೆ ಅಲ್ಲಿ ಏಕೆ ಕ್ರಮ ತೆಗೆದುಕೊಂಡಿಲ್ಲ? ನಿಮಗೆ ಏನು ಕಷ್ಟವಾಯಿತು ಕ್ರಮ ತೆಗೆದುಕೊಳ್ಳಲು ? ನಿಯಮ 18ರ ಕೆಳಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ಕಷ್ಟವಾಯಿತು ನಿಮಗೆ? ಏಕೆಂದರೆ ಅಲ್ಲಿ explanation ಕೊಡಬೇಕಾಗಿತ್ತು. ಆ ರೀತಿ ವಿವರಣೆಯನ್ನು ಕೊಡುವಾಗ ಅವರು ಯಾವುದೂ ತಪ್ಪು ಮಾಡಿಲ್ಲ ತಪ್ಪಾಗಿದ್ದರೆ ಅದು ನಿಮ್ಮ ಕಡೆಯಿಂದ ಆಗಿದೆ, ಎಂದರು. ಸೈಫುದ್ದೀನ್‌ರವರು ಛೇರ್ಮನ್‌ರಾದ ಮೇಲೆ ವಕ್ಫ್ ಬೋರ್ಡ್‌ನ ಮುಖಾಂತರ ಸಾಕಷ್ಟು ಬೆಳವಣಿಗೆ ಅಲ್ಪಸಂಖ್ಯಾತರಲ್ಲಿ ಆಗಿದೆ, ಸಾಕಷ್ಟು ಅಲ್ಪ ಸಂಖ್ಯಾತ ಸಂಸ್ಥೆಗಳಿಗೆ ಸಹಾಯಕವಾಗಿದೆ, ಆದರೆ ತಾವು ಅವರ ಶಕ್ತಿ ಬೆಳೆಯುತ್ತಿದೆ ಎಂದು ರಾಜಕೀಯವಾಗಿ ಆರ್ಡಿನೆನ್ಸ್ ಮಾಡಿ ಈ ಮಸೂದೆಯನ್ನು ತಂದಿದ್ದೀರಿ, ಅದರ ಪ್ರಕಾರ ಬೋರ್ಡ್‌ಆಫ್ ಮೇನೇಜ್‌ಮೆಂಟ್ ಸೂಪರ್‌ಸೀಡ್ ಆಗುತ್ತದೆ. ಬೋರ್ಡ್‌ನ ನಿಯಮ 64ರ ಪ್ರಕಾರ ಇದಕ್ಕೆ ಅವಕಾಶವಿದೆ. There is provision in the Wakf board.

ತಾವು ನೋಟೀಸನ್ನು ಕೂಡ ಕೊಟ್ಟಿರಿ, ನೋಟೀಸಿಗೆ ಉತ್ತರವನ್ನು ಸಹ ಕೊಟ್ಟರು ಆದರೆ ಆ ಉತ್ತರವನ್ನು ವಿಚಾರಣೆ ಮಾಡಿದಿರೇ ವಿನಹ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ತಾವು ಏನು ಈ ಒಂದು ಮಸೂದೆಯನ್ನು ತಂದಿದ್ದೀರಿ ಇದು ಸರಿಯಲ್ಲ, ಇದರಿಂದ ಆ ಸಂಸ್ಥೆಗಳು ನಾಶವಾಗುತ್ತಾ ಹೋಗುತ್ತವೆ. ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಇವತ್ತು ನೀವು ಅದನ್ನು ಮಾಡುತ್ತೀರಿ ನಾಳೆ ನಾವು ಬಂದರೂ ಅದನ್ನೇ ಮಾಡುತ್ತೇವೆ. ಅದಕ್ಕೊ

ಕೊನೆ ಇಲ್ಲ, ಹೀಗಾಗಿ ನ್ಯಾಯಬದ್ಧ ಕಾಲಾವಧಿ ಏನಿದೆ. ಅದರ ಪ್ರಕಾರ ಅವರು ಕೆಲಸ ಮಾಡುವುದಕ್ಕೆ ಆಗುವುದಿಲ್ಲ ಅವುಗಳು ಕಾಲಾವಧಿಯನ್ನು ಪೂರೈಸುವಂತೆ ಮಾಡಬೇಕಾದುದು ಸರ್ಕಾರದ ಜವಾಬ್ದಾರಿ ಮತ್ತು ಕರ್ತವ್ಯ, ಅದು ನನ್ನ ಭಾವನೆ. ತಾವು ಇದರ ಬಗ್ಗೆ ಒಂದು ಕಮೀಷನನ್ನು ನೇಮಕ ಮಾಡಿವಿಚಾರಣೆ ಮಾಡಬೇಕೆಂದು ಹೇಳಿದಿರಿ. ಅದರ ಬಗ್ಗೆ ತಮಗೆ ವರದಿ ಕೂಡ ಬಂತು. ಆದರೆ ಅದರ ಮೇಲೆ ಏಕೆ ಕ್ರಮತೆಗೆದುಕೊಂಡಿಲ್ಲ? ತಪ್ಪಾಗಿದ್ದರೆ, ದುರ್ವ್ಯವಹಾರವಾಗಿದ್ದರೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ತಾವು ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಷನ್‌ನಲ್ಲಿ ' ಹೇಳಿದಿರಿ.

"that the Board was unable to perform, and has persistently made default in performance of the duties imposed on it by or under the Wakf Act, 1954 and has abused its powers and the members of the Board have committed serious irregularities, in the Management of the properties under the control of the said Board."

You please inform the House, which are the irregularities they have committed, which are not explained. You could have mentioned them in the statement of objections and reasons. You would have explained when you introduced the bill as to what are the irregularities committed by them. I challenge that there are no irrigularities committed. It is only political motivated Bill. You have appointed a commission also. I will show you.

Sri.S.M. Yahya : It is for different purposes.

Sri R.V. Deshpande : Whatever it is but it is for irregularities.

ಅದರ ಬಗ್ಗೆ ತಾವು ಏನು ಕ್ರಮವನ್ನು ತೆಗೆದುಕೊಂಡಿಲ್ಲ. ನಾವು ಈಗ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಈ ಬಿಲ್ಲು ಸದನದಲ್ಲಿ ಪಾಸ್ ಆಗಬೇಕಾದರೆ ಏನೇನು ಇರೆಗ್ಯೂಲಾರಿಟೀಸ್ ಮಾಡಿದ್ದಾರೆ, ಏನೇನು ಅಧಿಕಾರವನ್ನು ದುರುಪಯೋಗಿಸಿದ್ದಾರೆ ಅದನ್ನು ಹೇಳಬೇಕಾಗುತ್ತದೆ. ಅದನ್ನು ಹೇಳದ ವಿನಹ ತಾವು ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಷನ್‌ನಲ್ಲಿ ಅದನ್ನು ಹಾಕಿ ಬಿಲ್ಲನ್ನು ಪಾಸ್ ಮಾಡಬೇಕೆಂದು ಹೋದರೆ ಅದು ಸಾಧ್ಯವಾಗುವುದಿಲ್ಲ, ಅದು ಸರಿಯಾಗುವುದಿಲ್ಲ. ಹಾಗಾಗಿ ವಕ್ಸ್ ಬೋರ್ಡ್‌ನವರು ಹೈಕೋರ್ಟಿಗೆ ಹೋದರೆ ಹೈಕೋರ್ಟಿನಲ್ಲಿ ಅದಕ್ಕೆ ಸ್ಟೇ ಸಿಕ್ಕಿತು, ಸರ್ಕಾರ ಯಾವುದೇ ಆಜ್ಞೆಯನ್ನು ಮಾಡದಿದ್ದರೂ ಸಹ ಅವರಿಗೆ ನೋಟೀಸನ್ನು ಕೊಟ್ಟು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರು. ಹೈಕೋರ್ಟಿನ ಆಜ್ಞೆ ಉಲ್ಲಂಘನೆಯಾಗಬಾರದು, ಅದು ಓವರ್ ಕಂ ಆಗಬಾರದೆಂದು ಕೊಟ್ಟಿದ್ದೀರಿ. ಆದರೆ ಅಲ್ಲಿ ವಿವರಣೆಗೆ ಬಂತು, ವಿವರಣೆಯು ಸ್ಯಾಟಿಸ್‌ಫ್ಯಾಕ್ಷನ್‌ನ್ನಾಗಿತ್ತು. ಹಾಗಾಗಿ ನಿಮಗೆ ಕ್ರಮ ತೆಗೆದುಕೊಳ್ಳಲು ಆಗಲಿಲ್ಲವೆಂದು ಈಗ ಹಿಂಬಾಗಿಲಿನಿಂದ ಈ ಸ್ಪೆಶಲ್ ಆಫೀಸರ್‌ನ್ನು ನೇಮಕ ಮಾಡಿದ್ದೀರಿ. ಇವತ್ತು ನಿಯಮ 4ರಲ್ಲಿ ತಾವು ಏನು ಹೇಳಿದ್ದೀರೆಂದರೆ

"Notwithstanding anything contained in the Wakf Act, or in any other law for the time being in force, or in any decree or order of any court, tribunal or other authority, on and from the appointed day, the Government shall appoint a person who shall be a Muslim as Special Officer to manage the affairs of the Wakf Board...,

ಇದರ ಅವಶ್ಯಕತೆ ಏನು ಇತ್ತು?

When you are talking of Secularism, why should you mention in Section 4 here that only Muslims official should be appointed as Special Officer? It is a shame on the part of the Government ನಾವು ಅಯೋಧ್ಯೆಯ ಬಗ್ಗೆ ಇಲ್ಲಿ ಚರ್ಚೆಮಾಡುತ್ತಿದ್ದೇವೆ. ಸೆಕ್ಯುಲರಿಸಂ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಆದರೆ ಇಲ್ಲಿ ಇಂಥ ಒಂದು ಬಿಲ್ಲನ್ನು ತರುತ್ತಿದ್ದೀರಿ. The officer to be appointed should be a Muslim. Why? I would like to know. I would like you to withdraw this bill, if you believe in Secularism, because it is not in the interest of the State, it is not in the interest of the communal harmony.

ನಾವು ಇಲ್ಲಿ ಒಂದು ಕಡೆ ಸೆಕ್ಯುಲರಿಸಂ ಬಗ್ಗೆ ಮಾತನಾಡುತ್ತಿದ್ದೇವೆ.

ಶ್ರೀಎಸ್. ಎಂ. ಯಾಹ್ಯಾ : ತಾವು ಒಂದು ನಿಮಿಷ ಯೀಲ್ಡಾಗಿ, This Bill is based on 1954 Wakf Act. In the Wakf Act 1954 what has been mentioned the same words have been repeated here.

ಶ್ರೀ ಆರ್.ವಿ. ದೇಶಪಾಂಡೆ : 1954ರಲ್ಲಿ ಸೆಂಟ್ರಲ್ ವಕ್ಫ್ ಆಕ್ಟ್‌ನಲ್ಲಿ ಸ್ಪೆಷಲ್ ಆಫೀಸರನ್ನು ನೇಮಕ ಮಾಡುವುದಕ್ಕೆ ಯಾವುದೇ ಪ್ರೊವಿಷನ್ ಇಲ್ಲ. ಈಗ ನಾನು ಹೇಳಿದಂತೆ ಎಲ್ಲಾ ಓವರ್ ಕಂ ಮಾಡಿ ಈ ಪೋರ್ಷನ್ ಪ್ರೋಸೀಡ್ ಮಾಡುವುದಕ್ಕೂ ಆಗುವುದಿಲ್ಲ. ಕೋರ್ಟಿಗೆ ಹೋಗಿದ್ದಾರೆ. ಅಲ್ಲಿ ಕೋರ್ಟ್‌ನಲ್ಲಿ ಓವರ್‌ಕಂ ಮಾಡುವುದಕ್ಕಾಗುವುದಿಲ್ಲ, ಹಾಗೆ ಮಾಡಿದ್ದೀರಿ. ಇದನ್ನು ಮಾಡುವಾಗ ತಾವು ಏನು ಪ್ರೊವಿಷನ್ ಹಾಕಿದಿರಿ, ಆದರೆ ಇಲ್ಲಿ ಒಬ್ಬ ಮುಸ್ಲಿಂ ಅಧಿಕಾರಿಯನ್ನು ಹಾಕುತ್ತಿದ್ದೀರಿ. ಇದನ್ನು ಏತಕ್ಕೆ ಮಾಡಿದ್ದೀರಿ. ಬೇರೆ ಸಮಾಜದವರನ್ನು ಹಾಕಿ, ಒಬ್ಬ ಕ್ರಿಶ್ಚಿಯನ್ ಅನ್ನು ಹಾಕಿ, ಒಬ್ಬ ಹಿಂದೂವನ್ನು ಹಾಕಿ, ಬೇರೆ ಯಾವುದೇ ಒಬ್ಬ ಹಿಂದೂವನ್ನು ಇಲ್ಲಿ ನೇಮಕ ಮಾಡಿದರೆ ಅದಕ್ಕೆ ನಾವು ಆಡಿಟರ್‌ನ್ನು ವ್ಯವಸ್ಥೆ ಮಾಡುವುದಿಲ್ಲವೇ? ಆದುದರಿಂದ ನಾನು ಸರ್ಕಾರದ ಮೇಲೆ ಒತ್ತಾಯ ತರುತ್ತಿದ್ದೇನೆ. ದಯವಿಟ್ಟು ಈ ಬಿಲ್ಲನ್ನು ವಿತ್‌ಡ್ರಾ ಮಾಡಿ. ಇದು ನಮ್ಮ ಸೆಕ್ಯುಲರಿಸಂಗೆ ಸರಿಯಲ್ಲ, ಇದರಿಂದ ರಾಂಗ್ ಸಿಗ್ನಲ್ಸ್ ಹೋಗಬಹುದು. ಇದರಿಂದಾಗಿ ನಾವುಇವತ್ತು ಏನು ಈ ಅಯೋಧ್ಯೆಯ ಬಗ್ಗೆ ಮಾತನಾಡುತ್ತಿದ್ದೇವೆ ಅದೆಲ್ಲಾ ನೀರಿನಲ್ಲಿ ಕೊಚ್ಚಿ ಹೋದಂತಾಗುತ್ತದೆ. ಹೀಗಾಗಬಾರದು. ತಾವು ಮಾಡಿರುವ ಈ ನೀತಿಯಿಂದ ಬಿಲ್ಲಿನ ಉದ್ದೇಶ ಸಫಲವಾಗುವುದಕ್ಕೆ ಸಾಧ್ಯವಿಲ್ಲವಾದ್ದರಿಂದಲೇ ಬಿಲ್ಲನ್ನು ತಾವು ವಿತ್‌ಡ್ರಾ ಮಾಡಬೇಕು. It is a politically motivated bill, it is done with vengence and it should be withdrawn.

ಶ್ರೀ ಸಿ. ಬೈರೇಗೌಡ (ವೇಮಗಲ್): ಮಾನ್ಯ ಉಪಾಧ್ಯಕ್ಷಿಣಿಯವರೇ, ವಕ್ಫ್ ಮಂಡಲಿಯಲ್ಲಿ ದುರುಪಯೋಗವಾಗಿರತಕ್ಕದ್ದು ನಿಜ. ಇದರಲ್ಲಿ ಯಾವುದೇ ಅನುಮಾನವೂ ಇಲ್ಲ. ಅದು ರಾಜ್ಯಮಟ್ಟದಲ್ಲಾಗಲಿ, ಜಿಲ್ಲಾ ಮಟ್ಟದಲ್ಲಾಗಲಿ ಇರತಕ್ಕ ಸಮಿತಿಗಳು ಈ ಆಸ್ತಿಯನ್ನು ಸಾಕಷ್ಟು ದುರುಪಯೋಗ ಮಾಡಿಕೊಳ್ಳುತ್ತಿವೆ. ಇಡೀ ರಾಜ್ಯಾದ್ಯಂತ ವಕ್ಫ್ಆಸ್ತಿತ್ವ ಕೇವಲ ನೂರಾರು ಕೋಟಿ ರೂ. ನಷ್ಟಲ್ಲ, ಸಾವಿರಾರು ಕೋಟಿ ರೂ. ಗಳಷ್ಟು ಇದೆ. ಬೆಂಗಳೂರು ಒಂದರಲ್ಲೇ ಸುಮಾರು 500 ಕೋಟಿ. ರೂ. ನಷ್ಟು ಆಸ್ತಿ ಇದೆ. ಇದೇ ರೀತಿ ಜಿಲ್ಲಾಮಟ್ಟದಲ್ಲಿ, ಆಯಾ ಜಿಲ್ಲೆಗೆ ಸಂಬಂಧಪಟ್ಟಂತೆ ಅನೇಕ ಗ್ರಾಮಾಂತರ ಪ್ರದೇಶದಲ್ಲಿ ವಕ್ಫ್ ಆಸ್ತಿ ಇದೆ. ನನ್ನ ಕ್ಷೇತ್ರದಲ್ಲೂ ವಕ್ಫ್ ಆಸ್ತಿ ಇದೆ. ಜಿಲ್ಲಾ ಮಟ್ಟದಲ್ಲಿರತಕ್ಕವರು ವಕ್ಫ್ ಮಂಡಲಿಯ ಅಧ್ಯಕ್ಷರು ಆಗುತ್ತಾರೆ, ಅಥವಾ ಸದಸ್ಯರಾಗುತ್ತಾರೆ. ಅವರು ಆ ಆಸ್ತಿಯನ್ನು ತಮ್ಮದೇ ಎಂದು ಮಾಡಿಕೊಳ್ಳುತ್ತಿದ್ದಾರೆ. ಅನೇಕ ಕಡೆ ಬೆಳೆದು ನಿಂತಿರತಕ್ಕ ಮರಗಳಿವೆ. ಪ್ರತಿವರ್ಷ ಇದರಿಂದ ಆದಾಯ ಬರುತ್ತಿದೆ. ಇವೆಲ್ಲಾ ಅವರ ಸ್ವಂತ ಆಸ್ತಿಯಾಗುತ್ತಿಥೆ. ಇದನ್ನು ಮಾರಾಟ ಮಾಡತಕ್ಕ ಸಂದರ್ಭದಲ್ಲಿಯೂ ಕೂಡ ಯಾವುದೇ ನಿಯಮಾವಳಿಗಳನ್ನು ಅವರು ಪಾಲಿಸುತ್ತಿಲ್ಲ. ಯಾರು ಅದರ ಅಧ್ಯಕ್ಷರು. ಸದಸ್ಯರಿರುತ್ತಾರೆ ಅವರು ದಿನಬೆಳಗಾದರೆ ಕೇವಲ ಲೂಟಿಮಾಡತಕ್ಕದ್ದೇ ಅವರ ಕೆಲಸವಾಗಿದೆ. ಅಲ್ಲಿ ಅನ್ಯಾಯ ನಡೆಯುತ್ತಿದೆ ಅದನ್ನು ಸರಿಪಡಿಸೋಣ ಎಂದರೆ ನಮಗೆ ಆಗುತ್ತಿಲ್ಲ. ಏಕೆಂದರೆ ಅದರ ರೂಲ್ಸ್, ಕಾನೂನು ನಮಗೆ ಗೊತ್ತಿಲ್ಲ. ವಕ್ಫ್ ಆಸ್ತಿಯನ್ನಾಗಲಿ ಬೇರೆ ದೇವಸ್ಥಾನದ ಆಸ್ತಿಯನ್ನಾಗಲಿ ಕಾಪಾಡತಕ್ಕದ್ದು ನಮ್ಮ ಕರ್ತವ್ಯ. ಏಕೆಂದರೆ ಅದು ಸಾರ್ವಜನಿಕರ ಆಸ್ತಿ. ಇವತ್ತು ಈ ಕೆಲಸ ವಕ್ಫ್ ಮಂಡಲಿಯಿಂದ ರಾಜ್ಯ ಮಟ್ಟದಲ್ಲಾಗಲಿ, ಜಿಲ್ಲಾ ಮಟ್ಟದ್ದಾಗಲೀ ಆಗುತ್ತಿಲ್ಲ. ತಮಗೆ ಉದಾಹರಣೆಗೆ ಹೇಳುವುದಾದರೆ ಬೆಂಗಳೂರಿನಲ್ಲಿ ಒಂದು ಬಡಾ ಮಕಾನ್ ಎಂದು ಇದೆ. ಇದು ಮಾನ್ಯ ಯಾಹ್ಯಾರವರಿಗೂ ಕೂಡ ಗೊತ್ತಿದೆ. ಇದು ಯಾರ ವಶದಲ್ಲಿದೆ? ಇದು ಹತ್ತಾರು ಎಕರೆ ಭೂಮಿ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಜಮೀನು ನೂರಾರು ಕೋಟಿ ರೂ.ಗಳ ಬೆಲೆ ಬಾಳುತ್ತದೆ. ಅಲ್ಲಿ ಹೇಳುವವರೂ ಕೇಳುವವರೂ ಯಾರೂ ಇಲ್ಲ. ಒಬ್ಬರು ಒಂದು ಚೀಟಿಯನ್ನು ಬರೆದು ಕೊಟ್ಟರೆ ಅಲ್ಲಿ ಒಂದು ಅಂಗಡಿಯನ್ನು ಹಾಕಿಕೊಳ್ಳಬಹುದು, ಅಥವಾ ಇನ್ನೂ ಏನು ಬೇಕಾದರೂ ಮಾಡಿಕೊಳ್ಳಬಹುದು. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನನ್ನ ಹತ್ತಿರ ಇರತಕ್ಕ ಇದೊಂದು ಸಣ್ಣ ಮಾಹಿತಿ. ಇದೇ ರೀತಿ ಬೆಂಗಳೂರು ನಗರದಲ್ಲಿ ವಕ್ಫ್ ಮಂಡಲಿಗೆ ಸೇರಿರತಕ್ಕ ಆಸ್ತಿ ಬಹಳ ಇದೆ. ಅದನ್ನು ಯಾರೂ ಕೂಡ ರಕ್ಷಣೆ ಮಾಡುತ್ತಿಲ್ಲ. ನಾನಾದರೂ ಹೇಳುತ್ತೇನೆ. ಮಾನ್ಯ ದೇಶಪಾಂಡೆಯವರು ಇದನ್ನು ರಾಜಕೀಯವಾಗಿ ತಂದಿರತಕ್ಕ ಬಿಲ್ಲು ಎಂದು ಏನು ಹೇಳಿದರು ಅದು ನಿಜ. ಅದನ್ನು ನಾನು ಒಪ್ಪುತ್ತೇನೆ. ಕಾರಣ ಏನೆಂದರೆ ಸಯಿಫುದ್ದೀನ್‌ರವರು ಅಧ್ಯಕ್ಷರಾಗಿ ಬಂದಮೇಲೆ ಇದೇನೂ ನಡೆದಿಲ್ಲ. ಮೊದಲಿನಿಂದಲೂ ಇದು ನಡೆಯುತ್ತಾ ಬಂದಿದೆ.

ಏನು ಕ್ರಮ ತೆಗೆದುಕೊಂಡಿದ್ದೀರಿ. ಲೂಟಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ. ಲೂಟಿ ಮಾಡುವುದ್ದಕ್ಕೆ ನೀವು ಅವಕಾಶ ಮಾಡಿಕೊಟ್ಟು ಯಾರೋ ಒಬ್ಬರು ಅಧ್ಯಕ್ಷರಾಗಿ ನೇಮಕವಾಗಿದ್ದಾರೆ. ಅವರು ಲೂಟಿ ಮಾಡಿಕೊಳ್ಳಬೇಕು. ನೀವು ಲೂಟಿ ಮಾಡುವುದಕ್ಕೆ

ಅವಕಾಶಮಾಡಿಕೊಳ್ಳಬೇಕು. ಇದರಲ್ಲಿ ಇರುವುದು ಇಷ್ಟೇ ಇನ್ನು ಏನೂ ವ್ಯತ್ಯಾಸವಿಲ್ಲ. ಅವರು ಮಾಡುವುದಕ್ಕೆ ಬದಲಾಗಿ ನಾವೇ ಮಾಡೋಣ. ಇಲ್ಲವೇ ಅವರ ಜೊತೆಯಲ್ಲಿ ನಾವೂ ಮಾಡೋಣವೆನ್ನುವ ಉದ್ದೇಶದಿಂದ ಇವತ್ತಿನ ದಿವಸ ಈ ಬಿಲ್ಲನ್ನು ತಂದಿದ್ದೀರಿ. ಇದರ ಉದ್ದೇಶ ಒಳ್ಳೆಯದಿರಬಹುದು. ಆದರೆ ನೀವು ಕೇವಲ ಒಂದು ಅವಧಿಯಲ್ಲಿ ಆಗಿರತಕ್ಕಂತಹ ಅಕ್ರಮಗಳನ್ನು ಮಾತ್ರ ಇವತ್ತಿನ ದಿವಸ ಹೇಳುವುದಕ್ಕೆ ಹೊರಟಿದ್ದೀರಿ. ಇದರ ಹಿಂದೆ ನಡೆದಿರತಕ್ಕಂತಹ ಅಕ್ರಮಗಳ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಿದೆ ಅದರ ಬಗ್ಗೆ ವಿಚಾರಣೆಯಾಗಿದೆ. ಬೇರೆ ಕಾರಣದಿಂದ ವಿಚಾರಣಾ ಆಯೋಗ ಆಗಿದೆ ಎಂದು ತಾವು ಹೇಳುತ್ತಿದ್ದೀರಿ. ನೀವೇ ನಿಮ್ಮ ಅಬ್ಜೆಕ್ಷನ್ಸ್ ಅಂಡ್ ರೀಸನ್ಸ್‌ನಲ್ಲಿ ಒಪ್ಪಿಕೊಂಡಿದ್ದೀರಿ You are incapable of managing ಎಂದು. ಇದರ ಬಗ್ಗೆ ತೆಗೆದುಕೊಂಡಿರತಕ್ಕಂತಹ ಕ್ರಮ ಏನು? ಕೇವಲ ವಿಶೇಷ ಅಧಿಕಾರಿಯನ್ನು ಹಾಕಿದರೆ ಇಲ್ಲಿ ನೀವು ಮಾಡಿರತಕ್ಕಂಥಾದ್ದು ಮುಚ್ಚಿ ಹೋಗುತ್ತದೆಯೇ? ಹಾಗೆಂದು ತಾವು ತಿಳಿದುಕೊಂಡಿದ್ದೀರಾ? ಇಲ್ಲ ಅದು ಸಾರ್ವಜನಿಕರ ಆಸ್ತಿ ಸಮಾಜಕ್ಕೆ ಸಂಬಂಧಪಟ್ಟಿರತಕ್ಕಂತಹ ಆಸ್ತಿ ಅದು ಸಂರಕ್ಷಣೆಯಾಗಬೇಕಿದೆ. ಆದ್ದರಿಂದ ಈ ಸಣ್ಣ ಬಿಲ್ಲನ್ನು ತಂದಿರುವುದರಿಂದ ನಾವು ಮಹಾ ಸಾಧನೆ ಮಾಡಿದ್ದೇವೆಂದು ಬೆನ್ನು ತಟ್ಟಿಕೊಳ್ಳಬೇಕಿಲ್ಲ. ಅಲ್ಲಿ ಆಗಿರತಕ್ಕಂತಹ ಅಪವ್ಯಯದ ಬಗ್ಗೆ ಅಲ್ಲಿ ಬಗ್ಗೆ ಅಲ್ಲಿ ಆಗಿರತಕ್ಕಂತಹ ಲೂಟಿ ಬಗ್ಗೆ ನಿಮಗೆ ಧೈರ್ಯವಿದ್ದರೆ ವಿಚಾರಣೆ ನಡೆಸಿ. ಅದನ್ನು ರಕ್ಷಣೆ ಮಾಡುತ್ತೇವೆ. ಬತಾಕತ್ತು ಇದ್ದರೆ,ಇದರ ಹಿಂದೆ ಯಾರು ಯಾರಿದ್ದಾರೆ ಎನ್ನುವುದು ಹೊರಗೆ ಬರಬೇಕಾಗಿದೆ. ಇಲ್ಲಿ ಯಾರೂ ಬಡವರಿಲ್ಲ. ಸೈಕಲ್ ರಿಪೇರಿ ಮಾಡತಕ್ಕಂತಹ ಜಟಕ ಹೊಡೆಯತಕ್ಕಂತಹ ಸಾಬರು ಇಲ್ಲಿ ಇಲ್ಲ. ನೂರಾರು ಕೋಟಿ ರೂಪಾಯಿ ಲೂಟಿ ಹೊಡೆದಿರುವಥಾದ್ದು ಕಣ್ಣಿಗೆ ಕಾಣುತ್ತದೆ. ಎಲ್ಲರಿಗೂ ಇದು ಗೊತ್ತಿದೆ ಗೊತ್ತಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಕಣ್ಣೆದುರಿಗೆ ನಡೆಯತಕ್ಕಂತಹ ಅನೇಕ ನಿದರ್ಶನಗಳು ಇವೆ. ಆದ್ದರಿಂದ ಏನೋ ಮಾಡಿ ರಕ್ಷಣೆ ಮಾಡುತ್ತೇವೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಎಲ್ಲೆಲ್ಲಿ ಆಸ್ತಿ ಲೂಟಿಯಾಗಿದೆ ಏನೇನಾಗಿದೆ ಎನ್ನುವುದನ್ನು ಈ ಸದನಕ್ಕೆ ತಿಳಿಸಬೇಕಾಗಿದೆ. ಈ ರಾಜ್ಯದ ಜನರಿಗೆ ತಿಳಿಸಬೇಕಾಗಿದೆ. ಇದನ್ನು ಮೊದಲು ಮಾಡಿ. ಈ ಮಸೂದೆಗೆ ನನ್ನ ವಿರೋಧವಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಉಪಾಧ್ಯಕ್ಷಣಿಯವರೇ, ಮಸೂದೆಯನ್ನು ಮಂಡನೆ ಮಾಡಿರತಕ್ಕಂತಹ ಸಚಿವರು, ನಾನು ಹಿಂದೆ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಇವರಿಗೆ ಅಪೀಲು ಮಾಡಿಕೊಂಡಿದ್ದೆನಮ್ಮ ಸರ್ಕಾರ ಬಂದಿದೆ ನಿಮ್ಮಸರಕಾರ ಹೋಗಿದೆ ಆದ್ದರಿಂದ ರಾಜಿನಾಮೆ ಕೊಡಬೇಕು ಎಂದು ಈಗ ತಾವು ಅದನ್ನೇ ಹೇಳಿದ್ದೀರಿ? ತಮ್ಮ ಬಗ್ಗೆ ನನನೆ ಬಹಳ ಗೌರವ ಇದೆ. ಆದರೆ ತಾವು ಹೇಳಿರತಕ್ಕಂತಹ ವಾಕ್ಯ ಏನು ಇದೆ..

ಶ್ರೀ ಎಸ್. ಎಂ. ಯಾಹ್ಯಾ : ಆಗ ಬಹಳಷ್ಟು ಇರ್ರೆಗ್ಯೂಲಾರಿಟೀಸ್ ಇತ್ತು. ಬೇಕಾದಷ್ಟು ಗಲಭೆಗಳು ಆಯಿತು ಆಗ ನಾನು ಕೇಳಿಕೊಂಡೆ ಸೈಫುದ್ದೀನ್‌ರವರು ನಮ್ಮ ಸ್ನೇಹಿತರು ಆದರೂ ಹೊಸ ಸರ್ಕಾರ ಬಂದಿದೆ. ಹೊಸ ನೀತಿ ಪ್ರಕಾರ ನಡೆಯುವ ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದಕ್ಕೆ ಇನ್ನೊಂದು ಅರ್ಥ ಬರುತ್ತದೆ.ಆಗ ನಾವು ವಿರೋಧ ಪಕ್ಷದಲ್ಲಿದ್ದುಕೊಂಡು ಆ ಅರ್ಥ ಸರಿಯಿಲ್ಲವೆಂದು ನಾವು ಹೇಳುತ್ತೇವೆ. ತಾವು ಒಂದೂವರೆ ವರ್ಷ ಸರಕಾರದಲ್ಲಿರಲಿಲ್ಲ. ಅವರು ಅಧ್ಯಕ್ಷರಾಗಿ ಮುಂದುವರಿದರು ಈಗ ನೀವು ಮತ್ತೆ ಮಂತ್ರಿಯಾಗಿ ಬಂದ ತಕ್ಷಣ ಅವರನ್ನು ತೆಗೆಯುತ್ತೇನೆ ಅಂದರೆ ಅದಕ್ಕೆ ಅರ್ಥ ಏನು ಬರುತ್ತದೆ? ಇನ್ನೊಂದು ಪ್ರಶ್ನೆ ಬರುತ್ತದೆ. 4 ಜನ ಸದಸ್ಯರು ರಾಜೀನಾಮೆ ಕೊಟ್ಟಿದ್ದರು ಅದಕ್ಕೋಸ್ಕರ ನಾವು ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿದ್ದೇವೆಂದು ಹೇಳುವ ಇನ್ನೊಂದು ಮಾತು ಇದೆ. 4 ಜನ ಸದಸ್ಯರನ್ನು ನೀವು ನೇಮಕ ಮಾಡುವುದಕ್ಕಾಗುತ್ತಿರಲಿಲ್ಲವೇ? ಒಂದು ಪ್ರಿನ್ಸಿಪಲ್ ಇದರಲ್ಲಿದೆ. ನಾವು ಇದನ್ನು ಬೆಳಿಗ್ಗೆ ಚರ್ಚೆ ಮಾಡಿದೆವು. ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಬಗ್ಗೆ ಕಂಪ್ಲೇಂಟ್ಸ್ ಇದೆ, ಅವರ ಅವಧಿ ಇನ್ನೂ ಮೂರು ವರುಷ ಇದೆ. ಪೋಸ್ಟಿಗೆ ನಾವು ಪೊಲಿಟಿಕಲೈಸ್ ಮಾಡುವುದು ಸರಿಯಲ್ಲ, ಇರ್ರೆಗ್ಯೂಲಾರಿಟೀಸ್ ಇದ್ದರೂ ಕೂಡ ಅವರನ್ನು ತೆಗೆಯುವುದಿಲ್ಲ 2 ತಿಂಗಳು ಮುಂದುವರಿಸುವುದನ್ನು ಯೋಚನೆ ಮಾಡಬೇಕು ಎನ್ನತಕ್ಕಂತಹ ಅಭಿಪ್ರಾಯ ನಮ್ಮ ಸಮ್ಮಲ್ಲಿ ಬಂತು. ಈಗ ಪ್ರಶ್ನೆ ಏನಾಗಿದೆ ನೀವು ಒಂದು ಇನ್ಸ್‌ಟಿಟ್ಯೂಷನ್ ಅನ್ನು ಡೆವಲಪ್ ಮಾಡತಕ್ಕಂಥಾದ್ದೇ ಕಷ್ಟ ಅಂಥಾದ್ದರಲ್ಲಿ ಆ ಇನ್ಸ್‌ಟಿಟ್ಯೂಷನ್ನಿನ ಆಟಾನಮಿಯನ್ನು ನೀವು ಹೀಗೆ ಕೊಂಡು ಕೊಂಡು ಹೋದರೆ ಆ ಇನ್ಸ್‌ಟಿಟ್ಯೂಷನ್ ಎಲ್ಲಿ ಉಳಿಯುತ್ತದೆ? ನಿಮ್ಮ ಸರಕಾರ ಬಂತು ನೀವು ಇನ್ನೂ 2 ವರ್ಷ ಇರಿ ನಿಮ್ಮ ಟರ್ಮ್ ಪೂರ್ತಿ ಮಾಡಿ ಸಂತೋಷ.

ಇಲ್ಲಿ ಬೇಸಿಕ್ ಅಪ್ರೋಚ್ ಏನು ಇದೆ ಅದು ತಪ್ಪೆಂದು ನಾನು ಹೇಳುತ್ತಿದ್ದೇನೆ. ಅವರು ದುರುಪಯೋಗ ಮಾಡಿಕೊಂಡಿರತಕ್ಕಂಥ ಪ್ರಕರಣಗಳು ಇವೆ. ಒಬ್ಬ ಮುಸಲ್ಮಾನ್ ಆಫೀಸರನ್ನು ನಿಮ್ಮ ಇಚ್ಛೆಯ ಪ್ರಕಾರ ಅಪಾಯಿಂಟ್ ಮಾಡಿಕೊಂಡರೆ ಅದು ತಪ್ಪು. ಮುಸಲ್ಮಾನರನ್ನೇ ಏತಕ್ಕೆ ಅಪಾಯಿಂಟ್ ಮಾಡಿಕೊಳ್ಳಬೇಕು? ಆಫೀಸರ್‌ಗಳ ಪೈಕಿ ಬೇಕಾದಷ್ಟು ಜನ ಐ.ಎ.ಎಸ್. ಆಫೀಸರ್‌ಗಳು ಇದ್ದಾರೆ. ಇದು ಏನಿದ್ದರೂ ಕಾನೂನು ಪ್ರಕಾರ ಕೆಲಸ ಮಾಡತಕ್ಕಂಥದ್ದು ಅಷ್ಟೇ. ಕಾನೂನು ಪ್ರಕಾರ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಆ ಜಾತಿಯವರೇ, ಆ ಧರ್ಮದವರೇ ಆಗಬೇಕೆನ್ನುವುದೇನು ಇಲ್ಲ. ಒಂದು ಪಕ್ಷ ನೀವು ನಿಮ್ಮವರನ್ನೆ ಮಾಡಿಟ್ಟುಕೊಂಡಿದ್ದರೆ ಅವರುಗಳು ದುರುಪಯೋಗ ಮಾಡುವುದಿಲ್ಲವೆಂದು ಹೇಗೆ ಹೇಳುತ್ತೀರಿ? ಈಗ ನಮ್ಮ ಮಾನ್ಯ ಬೈರೇಗೌಡರು ಹೇಳಿದರು, ಅಲ್ಲಿ ಬಹಳ ದುರುಪಯೋಗವಾಗಿದೆ, ಹಿಂದೆಲ್ಲ ವಕ್ಫ್ ಬೋರ್ಡ್‌ನಲ್ಲಿ ದುರುಪಯೋಗವಾಗಿದೆ, ಅಲ್ಲಿ ಯಾವ ರೀತಿ ವಿಚಾರಣೆಯೂ ಆಗಿಲ್ಲವೆಂದು ಹೇಳಿದರು. ಹಾಗಾದರೆ ಅಡ್ಮಿನಿಸ್ಟ್ರೇಟರ್ ಇದ್ದರೆ ಅವನೇನು ಹರಿಶ್ಚಂದ್ರನೇ? ಅವನು ದುರುಪಯೋಗ ಮಾಡುವುದಿಲ್ಲವೇ? ಇದನ್ನು ಏತಕ್ಕೋಸ್ಕರ ಮಾಡುತ್ತಿದ್ದೀರಿ ಎಂದರೆ ರಾಜಕೀಯ ಉದ್ದೇಶಕ್ಕೋಸ್ಕರ ಮಾಡುತ್ತಿದ್ದೀರಿ.

ಕನ್‌ವೀನರ್ಸ್ ವಿಶೇಷವಾಗಿ ಅಡ್ಮಿನಿಸ್ಟ್ರೇಷನ್ ಏನಾದರೂ ಅಂಥ ಒಂದು ಕ್ರಮವನ್ನು ಇಟ್ಟುಕೊಂಡಿದ್ದರೆ ಏನೂ ಇಲ್ಲದೆ ಮಾನ್ಯ ಅಜೀಜ್‌ಸೇಠ್ ರವರು ಇದ್ದಾಗಲೇ ಇದನ್ನು ಮಾಡಿರತಕ್ಕಂಥ ಎಂದು ಗೊತ್ತಿತ್ತು. ಆದರೆ ಇದು ತಪ್ಪು ಎಂದು ನಾನು ಹೇಳುತ್ತೇನೆ. ಅಡ್ಮಿನಿಸ್ಟ್ರೇಟರನ್ನು ಅಪಾಯಿಂಟ್ ಮಾಡಿ ಆಗಿದೆ.

ಮತ್ತೆ ಅವರನ್ನು ಚೇರ್‌ಮನ್ ಆಗಿ ತೆಗೆದುಕೊಂಡು ಬರುವುದಕ್ಕಾಗುವುದಿಲ್ಲ. ನಿಮಗೆ ಮೆಜಾರಿಟಿ ಇದೆ, ಆದರೆ ನೀವು ಹೋಗತಕ್ಕಂಥ ದಾರಿ ಸರಿಯೇ ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಇಂಥ ಪ್ರಾವಿಷನ್ ಮಾಡಿಕೊಳ್ಳತಕ್ಕಂಥದ್ದೇ ತಪ್ಪು. ನಮ್ಮ ಕಾನ್‌ಸ್ಟಿಟ್ಯೂಷನ್ ನಲ್ಲಿ ಎಮರ್ಜನ್ಸಿ ಫ್ರೊಕ್ಲೈಮ್ ಮಾಡಲಿಕ್ಕೆ ಕಾನೂನಿನಿಂದ ಎಮರ್ಜೆನ್ಸಿ ಬಂತು ಇಲ್ಲದಿದ್ದರೆ ಎಮರ್ಜೆನ್ಸಿ ಬರುತ್ತಿರಲಿಲ್ಲ. 1977ರಲ್ಲಿ ಆ ತರಹದ ಒಂದು ಪ್ರಾವಿಷನ್‌ನ್ನು ಡ್ರಾಕೋಲಿಯನ್ ರೂಲ್ ನೀವು ಮಾಡತಕ್ಕಂಥದ್ದು ಇದೆ. ದಯವಿಟ್ಟು ಆ ರೀತಿ ಮಾಡುವುದರಿಂದ, ನಿಮ್ಮದು ಓಪನ್ ಗೌವರ್ನಮೆಂಟ್, ಒಳ್ಳೆಯ ಅಡ್ಮಿನಿಸ್ಟ್ರೇಷನ್ ಕೊಡುತ್ತೇವೆ, ಡೆಮಾಕ್ರೆಟಿಕ್ ವ್ಯಾಲ್ಯೂಸ್ ಪ್ರಕಾರವೇ ಹೋಗುತ್ತೇವೆಂದು ಏನು ಹೇಳುತ್ತಿದ್ದೀರಿ ಅದಕ್ಕೆ ಇದು ಭೂಷಣವಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

+ಶ್ರೀ ಎಚ್. ಏಕಾಂತಯ್ಯ (ಚಿತ್ರದುರ್ಗ): ಮಾನ್ಯ ಅಧ್ಯಕ್ಷಣೆಯವರೇ, ಈ ಒಂದು ಮಸೂದೆಯನ್ನು ತಂದಿರತಕ್ಕಂಥದ್ದು ರಾಜಕೀಯ ಉದ್ದೇಶದಿಂದ ಕೂಡಿದ್ದುದು ಎನ್ನುವ ಮಾತನ್ನು ನೇರವಾಗಿ ಸಂಬಂದಪಟ್ಟ ಮಂತ್ರಿಗಳು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ ಮಾನ್ಯ ಯಾಹ್ಯಾರವರು ಬಹಳ ಪ್ರಗತಿಪರರು, ಅವರು ಜಾತ್ಯಾತೀತತೆಯ ಬಗ್ಗೆ ಮಾತನಾಡಿದಾಗ ನನಗೆ ಸ್ವಲ್ಪ ಮಟ್ಟಿಗೆ ಗೌರವ ಇತ್ತೆಂದು ಹೇಳಿದರೆ ತಪ್ಪಾಗಲಾರದು. ಈ ಕಾನೂನನ್ನು ಯಾವಾಗ ಇವರು ತಂದರು ಆಗ ಇದನ್ನು ನೋಡಿದಾಗ ಇವರು ಜಾತ್ಯಾತೀತತೆ ಏನು ಇದೆ, ಸೆಕ್ಯೂಲಾರಿಸಂ ಎಂದು ಏನು ಇದೆ ಆ ಗುಂಪಿಗೆ ಇವರೂ ಸೇರಿರುತ್ತಾರೆಂದು ಅನುಮಾನ ಬರುತ್ತದೆ. ಯಾವಾಗ ನೀವು ಮುಸ್ಲೀಮ್ ಸ್ಪೆಷಲ್ ಆಫೀಸರ್ ಬೇಕೆಂದು ಹೇಳುವುದಾದರೆ ಇದು ಯಾವ ಒಂದು ಸಮುದಾಯವನ್ನು ತೃಪ್ತಿ ಪಡಿಸತಕ್ಕಂಥ ಕೆಲಸ ಹೌದೇ ಅಲ್ಲವೇ. ಕೇವಲ ಒಬ್ಬ ಅಧಿಕಾರಿ ಒಂದು ಜಾತಿಗೆ ಸೇರಿದವ ಎನ್ನುವ ಕಾರಣದಿಂದಲೇ ಅವನು ನಿಸ್ಪಕ್ಷಪಾತವಾಗಿ ಜನತೆಯ ಹಿತವನ್ನು ಸಾಧಿಸತಕ್ಕ ಕ್ರಮ ತೆಗೆದುಕೊಳ್ಳಲಿಕ್ಕೆ ಸಾಧ್ಯವೇ? ಅಂಥ ಒಂದು ನಂಬಿಕೆ ಸರ್ಕಾರ ಅಥವಾ ಮಾನ್ಯ ಮಂತ್ರಿಗಳು ಹೊಂದಿದ್ದಾರೆಯೇ? ಅದಕ್ಕೆ ನೇರವಾದ ಉತ್ತರವನ್ನು ಅವರಿಂದ ಬಯಸುತ್ತೇನೆ. ಮತ್ತೊಂದು ವಿಷಯ ; ಈ ಕಾನೂನನ್ನು ತಂದಿರುವುದು ಮುಖ್ಯವಾಗಿ ಅಲ್ಲಿರುವಂಥ ಅಧ್ಯಕ್ಷರನ್ನು ಬದಲಿಸಬೇಕೆಂಬ ಅಪೇಕ್ಷೆಯಿಂದ, ಇದನ್ನು ಅವರು ಒಪ್ಪಿಕೊಳ್ಳಬೇಕು. ರಾಜಕೀಯ ಕಾರಣಕ್ಕೋಸ್ಕರ ನಾವು ತಂದಿದ್ದೇವೆ. ಅಲ್ಲಿ ಅನೇಕ ಅವ್ಯವಹಾರಗಳು ಆಗಿವೆಎನ್ನುವ ಮಾತನ್ನು ಹೇಳಿದಿರಿ. ಅವ್ಯವಹಾರಗಳು ಆಗಿರಬಹುದು ಅಂಥ ಒಪ್ಪಿಕೊಳ್ಳಬಹುದು. ಇಲ್ಲವೆನ್ನುವ ಮಾತನ್ನು ಹೇಳುವುದಿಲ್ಲ. ನಾನು ಅದನ್ನು ವಿಚಾರಣೆ ಮಾಡುವಂಥ ಅಧಿಕಾರವಿಲ್ಲ, ಆದರೆ ನಾನು ಕೇಳುತ್ತೇನೆ, ಈ ಸರ್ಕಾರ ಅವ್ಯವಹಾರ ಮಾಡಿದರೆ ಈ ಸರ್ಕಾರವನ್ನೇ ಬದಲಿಸುತ್ತೀರಾ? ಯಾವುದಾದರೂ ಅವ್ಯವಹಾರ ಆದರೆಅಥವಾ ಏನಾದರೂ ಅಕ್ರಮವಾಗಿ ಹಣವನ್ನು ಗಳಿಸಿದ್ದರೆ, ದುರುಪಯೋಗ ಆದರೆ ಆ ದುರುಪಯೋಗವನ್ನು ನಿಲ್ಲಿಸುವುದು ಅವರನ್ನು ತೆಗೆದುಹಾಕುವ ಮುಖಾಂತರವಲ್ಲ, ಅದಕ್ಕೆ ಬದಲು ಯಾರು ದುರುಪಯೋಗ ಮಾಡಿದ್ದಾರೆ. ಯಾರು ಅವ್ಯವಹಾರಕ್ಕೆ ಕಾರಣರಾಗಿದ್ದಾರೆ ಯಾರು ಸಮಾಜಘಾತುಕರಾಗಿದ್ದಾರೆ, ಸಮಾಜದ ಆಸ್ತಿಯನ್ನು ಯಾರು ದುರುಪಯೋಗ ಮಾಡಿಕೊಂಡಿದ್ದಾರೆ ಅವರನ್ನು ಬಹಿರಂಗವಾಗಿ ವಿಚಾರಣೆಗೆ ಒಳಪಡಿಸುವ ಮುಖಾಂತರ ಮತ್ತು ತಪ್ಪಿತಸ್ಥರಾಗಿದ್ದರೆ ಅವರಿಗೆ ಶಿಕ್ಷೆಯನ್ನು ಕೊಡುವ ಮುಖಾಂತರ ಮಾತ್ರ

ಇದನ್ನು ಸರಿಪಡಿಸಬೇಕಾಗಿದೆ. ಅದಕ್ಕೆ ಬದಲಾಗಿ ತಾವು ಒಂದು ಕಾನೂನನ್ನು ತಂದಿದ್ದೀರಿ. ಈ ಕಾನೂನಿನಲ್ಲಿ ತಾವು ಹೇಳುತ್ತೀರಾ ನನಗಂತೂ ನಾಚಿಕೆಯಾಗುತ್ತದೆ. ನಿಮಗೇನು ಅನಿಸುತ್ತದೆಯೋ ಗೊತ್ತಿಲ್ಲ. "Whereas it has been brought to the notice of the State Government that the Karnataka Board of Wakf is unable to perform and has persistently made default in the performance of the duties.. and Whereas it has been brought to the notice of the State Government that the present members of the Kaarnataka Board of Wakfs have also committed serious irregularities... ಏತಕ್ಕೆ ಸ್ವಾಮಿ ಮೊದಲೆಲ್ಲಾ ಸತ್ಯಹರಿಶ್ಚಂದ್ರರು ಇದ್ದರೆ, ಅವರ ಮೇಲೆ ಯಾವ ಆರೋಪಗಳು ಇರಲಿಲ್ಲವೇ? ಇದರ ಬಗ್ಗೆ ವಿಚಾರಣೆ ಮಾಡಬೇಕು.

ಏಕೆ ಸ್ವಾಮಿ ಈ ಪದ? ಏತಕ್ಕೆ ಇದನ್ನು ಉಪಯೋಗಿಸಿದಿರಿ? ಮೊದಲಿನಿಂದ ಇದು ನಡೆದುಕೊಂಡು ಬಂದಿದೆ. ಇರ್ರೆಗ್ಯೂಲಾರಿಟೀಸ್ ಆಗಿದೆ. ಇಂಥ ಸಂದರ್ಭದಲ್ಲಿ ಸ್ಪೆಶಲ್ ಆಫೀಸರ್ ಅನ್ನು ನೇಮಿಸುತ್ತೇವೆಂದು ಹೇಳುವುದಲ್ಲ. ಈಗ ಗೂಬೆ ಕೂರಿಸುವುದಕ್ಕೆ, ಅಥವಾ ಅಧಿಕಾರ ಪಡೆದುಕೊಂಡು ತಮಗೆ ಇಷ್ಟ ಬಂದ ರೀತಿಯಲ್ಲಿ ದುರುಪಯೋಗ ಮಾಡಿಕೊಳ್ಳಬೇಕೆಂದು ಇರಾದೆಯಿಂದ ಇಂಥ ಕಾನೂನುತರುತ್ತಿದ್ದೀರಾ? ಮುಂದಕ್ಕೆ ಹೋದರೆ, "It has been represented to the State Government that the continuance of the present management..."

ಪಾಪ, ಹಿಂದೆ ಇದ್ದವರು ಸತ್ಯ ಹರಿಶ್ಚಂದ್ರರು. ಮುಂದೆ ಬರುವವರು? ಸತ್ಯಹರಿಶ್ಚಂದ್ರರೇ?

ಶ್ರೀ ಎಸ್.ಎಂ. ಯಾಹ್ಯಾ : ಅದು ಅಲ್ಲ. ಹಳೇ ಬೋರ್ಡ್ ಯಾವುದು ಇತ್ತು, ಅದರ ವಿಚಾರ ಹೇಳಬೇಕಾಗುತ್ತದೆ. ಮೊದಲಿದ್ದವರ ವಿಚಾರ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಏತಕ್ಕೆ ಬರುವುದಿಲ್ಲ? ನೀವು ಕಾನೂನು ತಂದಿರುವುದು. ಈಗಿರತಕ್ಕ ಅಧ್ಯಕ್ಷರು, ಸದಸ್ಯರು ಅವ್ಯವಹಾರ ಮಾಡಿದ್ದಾರೆ, ಅವರನ್ನು ಬದಲಾಯಿಸಬೇಕೆಂದು ಕಾನೂನು ತಂದಿದ್ದೇವೆಂದು ಹೇಳುತ್ತಿದ್ದೀರಿ. ಅದನ್ನು ಹೇಳಬೇಕಾಗಿರಲಿಲ್ಲ. ಎಲ್ಲೆಲ್ಲಿ ಅವ್ಯವಹಾರ ಆಗುತ್ತದೇ ಅಲ್ಲಿ ಯಾರೇ ಸದಸ್ಯರಿರಲಿ, ಯಾರೇ ಅಧ್ಯಕ್ಷರಿರಲಿ, ಎಂಥ ಸಂದರ್ಭಗಳಲ್ಲೂ ಈ ಕಾನೂನು ಜಾರಿಗೆ ತರುವ ಉದ್ದೇಶದಿಂದ ಇದನ್ನು ತಂದಿದ್ದೇವೆಂದು ಹೇಳುವುದಕ್ಕೆ ನೀವು ಸಿದ್ಧರಿಲ್ಲ. ಅದಕ್ಕೆ ಏಕೆ ಇಂಥ ಆರ್ಡಿನೆನ್ಸ್ ಹೊರಡಿಸಬೇಕು. ಆದುದರಿಂದ ಇದು ಏನು ಸೂಚಿಸುತ್ತದೆಂದರೆ ನಿಮಗೆ ಅವರ ಬಗ್ಗೆ ಇರುವ ದ್ವೇಷವನ್ನು ತೋರಿಸುತ್ತದೆ. ಮುಂಚೆ ಇದ್ದ ವಕ್ಫ್ ಬೋರ್ಡ್ ಅಧ್ಯಕ್ಷರು ಮತ್ತು ಸದಸ್ಯರು ಯಾವುದೇ ಅವ್ಯವಹಾರಗಳನ್ನು ಮಾಡದೆ ಪ್ರಾಮಾಣಿಕರಿದ್ದರೆ? ಅವರ ಮೇಲೆ ಯಾವ ದೂರುಗಳು ಇರಲಿಲ್ಲವೇ? ತಮಗೆ ಗೊತ್ತಿರುವ ಹಾಗೆ ಸರ್ಕಾರದ ದಾಖಲೆಗಳಲ್ಲಿ ವಕ್ಫ್ ಬೋರ್ಡ್ ಅಧ್ಯಕ್ಷರ ಸದಸ್ಯರ ಮೇಲೆ ಆರೋಪ ಇಲ್ಲವೆ? ಅಂಥ ಎಲ್ಲಾ ಆರೋಪ ಇರುವ ಅಧ್ಯಕ್ಷರನ್ನು,ಸದಸ್ಯರನ್ನು ತೆಗೆದುಹಾಕುವುದಕ್ಕೆ ತಯಾರಿದ್ದೀರಾ? ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ತಮಗೆ ಇಷ್ಟ ಇಲ್ಲವೆ ತಮಗೆ ಬೇಕಿಲ್ಲದವರನ್ನು ತೆಗೆಯುವ ದುರುದ್ದೇಶದಿಂದ ಇಂಥ ಕಾನೂನು ತಂದಿದ್ದೇವೆಂದು ಹೇಳಿದ್ದು. ನಿಮ್ಮ ಒಳ ಮನಸ್ಸು ಒಪ್ಪುತ್ತೀರೆಂದು ನಾನು ಭಾವಿಸಿದ್ದೇನೆ. ಈಗ

ಗ್ರಂಥಾಲಯ,

ಏನು ಸ್ಪೆಷಲ್ ಆಫೀಸರ್ ಮುಸ್ಲಿಮರೇ ಇರಬೇಕೆಂಬುದನ್ನು ಸ್ಪಷ್ಟಪಡಿಸಿದ್ದೀರಿ. ಮುಸ್ಲಿಂ ಎಂಬ ಪದವನ್ನು ತೆಗೆಯಿರಿ ನಿಮಗೆ ಜಾತ್ಯಾತೀತ ವ್ಯವಸ್ಥೆಯಲ್ಲಿ ನಂಬಿಕೆ... ಇದ್ದರೆ, ಕೇವಲ ಅಲ್ಪ ಸಂಖ್ಯಾತರನ್ನು ತೃಪ್ತಿ ಪಡಿಸುವ ಉದ್ದೇಶ ಇಲ್ಲದಿದ್ದರೆ ಖಂಡಿತ ಆ ಪದವನ್ನು ತೆಗೆದುಹಾಕಬೇಕು. ನಾವು ನಿಮ್ಮ ಪರವಾಗಿದ್ದೇವೆ. ವಕ್ಫ್ ಬೋರ್ಡ್ ಕಾಯಿದೆ ಅಡಿಯಲ್ಲಿ ಖಂಡಿತವಾಗಿ ಇದು ಬರಬಾರದು.

ಮುಸ್ಲಿಮರು ಬಡವರಿದ್ದಾರೆ, ಅವರಿಗೋಸ್ಕರ ಈ ಪದವನ್ನು ಉಪಯೋಗಿಸಿದ್ದೇವೆ ಎಂಬ ಮಾತು ಹೇಳಿ, ಅಂಥ ಅಧಿಕಾರಿ ಮುಸ್ಲಿಂ ಆಗುವ ಮುಖಾಂತರ ಇದನ್ನು ಸರಿ ಮಾಡುವುದಕ್ಕೆ ಸಾಧ್ಯ ಎಂಬ ಭಾವನೆ ಇದ್ದರೆ ಅಂಥ ಸರ್ಕಾರಕ್ಕೆ ಧಿಕ್ಕಾರ ಎಂಬ ಮಾತನ್ನು ಹೇಳುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಉಪಾಧ್ಯಕ್ಷಣೆಯವರೆ, ಆಶ್ಚರ್ಯಕರ ಸಂಗತಿ ಎಂದರೆ ಬಹುಶಃ ಈ ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ಈ ರೀತಿ ದೊಡ್ಡ ಅಪರಾಧ ಮಾಡುವ ಕೆಲಸ ಮಾಡುತ್ತಿದ್ದಾರೆ. ಅಲ್ಪ ಸಂಖ್ಯಾಂತರನ್ನು ರಕ್ಷಣೆ ಮಾಡಬೇಕೆಂದು ಇದ್ದರೆ ವಕ್ಫ್ ಬೋರ್ಡ್ ಪ್ರಾಪರ್ಟಿ ದುರುಪಯೋಗ ಏನು ಆಗುತ್ತಿದೆ ಅದನ್ನು ತಡೆಯಬೇಕೆಂಬ ಪ್ರಾಮಾಣಿಕ ಪ್ರಯತ್ನ ತಮಗೆ ಇದ್ದರೆ ಯಾರೋ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕ ಮಾಡುವುದರಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ತಮಗೆ ಗೊತ್ತಿದೆ ಮೈಸೂರಿನ ಕೃಷ್ಣರಾಜೇಂದ್ರ ಮಾರುಕಟ್ಟೆ ಪಕ್ಕದಲ್ಲಿ ಕೋಟಿಗಟ್ಟಲೆ ಬೆಲೆ ಬಾಳುವ ವಕ್ಫ್ ಬೋರ್ಡ್‌ಗೆ ಸಂಬಂಧಪಟ್ಟ ಆಸ್ತಿಯನ್ನು ಅಲ್ಲಿರತಕ್ಕ ಅಧ್ಯಕ್ಷ, ಜವಾಬ್ದಾರಿ ಸ್ಥಾನದಲ್ಲಿ ಇಲ್ಲಿ ಕುಳಿತಂತ ವ್ಯಕ್ತಿ ಯಾರು ಅವರ ರಕ್ಷಣೆ ಮಾಡಬೇಕಾಗಿತ್ತು ಅವರೇ ಭಕ್ಷಣೆ ಮಾಡಿದ್ದು, ಕೋಟಿಗಟ್ಟಲೆ ಆಸ್ತಿಯನ್ನು ಮಾಡಿಕೊಂಡು ಚೆಕ್ ಕ್ಯಾಷ್ ಮಾಡಿಸಿ ಕೊಡ ವ್ಯವಹಾರ ಕಣ್ಮುಂದೆ ಇದೆ. ಹೀಗಿರಬೇಕಾದರೆ ತಾವು ಇನ್ನೂ ಅಧಿಕಾರಕ್ಕೆ ಬಂದು ಜವಾಬ್ದಾರಿ ವಹಿಸಿಕೊಂಡು 40 ದಿನಗಳು ಕೂಡ ಆಗಿಲ್ಲ. ಇಷ್ಟು ತರಾತುರಿಯಿಂದ ಈ ಮಸೂದೆಯನ್ನು ತಂದದ್ದು, ಹಿಂದಿನವರ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕಾಗಿದೆಯೇ? ಇನ್ನನು ಮುಂದೆ ಎಲ್ಲೆಲ್ಲಿ ಅವ್ಯವಹಾರಗಳನ್ನೂ ತಡೆಯುವಂಥ ಪ್ರಾಮಾಣಿಕ ಪ್ರಯತ್ನ ತಮಗೆ ಇದ್ದರೆ, ಇದೇ ಮಾರ್ಗವೇ? ಅಂಥ ಸಂಸ್ಥೆಗಳನ್ನು ರದ್ದು ಮಾಡಿ ಸ್ಪೆಶಲ್ ಆಫೀಸರನ್ನು ನೇಮಕ ಮಾಡುತ್ತೀರಾ?.......

(ಮಧ್ಯೆ ಮಾನ್ಯ ಸದಸ್ಯರೊಬ್ಬರು ಮಾತನಾಡಿದರು)

ನಾನು ಆರೋಪ ಮಾಡುತ್ತಿದ್ದೇನೆ, ನೀವೂ ಸೇರಿದ್ದೀರಿ ಎಂದು.

ಉಪಾಧ್ಯಕ್ಷಿಣಿಯವರು : ಅವರು ಮಾತನಾಡಿದ ಮೇಲೆ ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿಮಗೆ ಹೇಳಲಿಲ್ಲ. ದಯಮಾಡಿ ಕ್ಷಮಿಸಿ. ನೀವು ರಕ್ಷಣೆ ಮಾಡುವ ಜನರೇನು? ಇವತ್ತಿನ ದಿವಸ ವಕ್ಫ್ ಬೋರ್ಡ್ ಪ್ರಾಪರ್ಟಿಯನ್ನು ದುರುಪಯೋಗ ಮಾಡುತ್ತಿದ್ದಾರೆಂದು ಸ್ಪಷ್ಟವಾದ ಆರೋಪ ಇದೆ. ನೀವು ಸದನದ ಕಾರ್ಯಕಲಾಪ ಹೇಗೆ ನಡೆಸುತ್ತೀರಿ?

(ಗೊಂದಲ)

ಉಪಾಧ್ಯಕ್ಷಣೆಯವರು : ಅವರು ಯೀಲ್ಡ್ ಆಗಿಲ್ಲ, ಅವರು ಮಾತನಾಡಿದ ಮೇಲೆ, ತಾವು ಮಾತನಾಡಿ.

ಬಿ.ಎಸ್. ಯಡಿಯೂರಪ್ಪ : ಅವರೇನು ಮಾತನಾಡುವುದು, ಇದು ಕ್ರಮವೇನು ?

7.40 ಪಿ.ಎಂ.

ಇನ್ನು ಎರಡನೆಯದಾಗಿ, ರಾಂಗ್ ಸಿಗ್ನಲ್ ಕಳಿಸಿರುವುದು ಇಲ್ಲಿ ತಾವು ಹೇಳಿರುವ ಪ್ರಕಾರ"Government shall appoint a person who shall be a Muslim as Special Offi cer to manage the affairs of the Wakf Board." ಸ್ವಾಮಿ ಕೇಳುತ್ತೇನೆ. ಈ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ, ವಿಧಾನ ಮಂಡಲದ ಒಳಗೆ ಕಾರ್ಯಕಲಾಪಗಳಲ್ಲಿ ಈ ರೀತಿ ಯಾವುದೇ ಸಂಸ್ಥೆ ಬಗ್ಗೆ ಈ ರೀತಿ ಅಪಾಯಿಂಟ್ ಮಾಡುವಾಗ ಒಬ್ಬ ಮುಸ್ಲಿಂ ಇರಬೇಕೆಂದು ಶಬ್ದವನ್ನು ಉಪಯೋಗಿಸಿರತಕ್ಕ ಉದಾಹರಣೆ ಇದೆಯೇ? ನಿಮ್ಮ ಸರ್ಕಾರದ ಪಾಲಿಸಿ ವ್ಯತ್ಯಾಸ ಆಗಿದೆಯೇ? ರಾಜ್ಯಾಂಗದ ತಿದ್ದುಪಡಿ ಬೇಕಾದಾಗ ಮಾಡಿಕೊಳ್ಳುತ್ತಾರೆ? ಆ ತಿದ್ದುಪಡಿಗಳನ್ನು ಸರಿಯಾಗಿ ಮಾಡಿದ್ದರೆ ತಾನೇ ಇಲ್ಲದಿದ್ದರೆ ಇದನ್ನು ರಾಜ್ಯಾಂಗ ವಿರೋಧಿ ಕ್ರಮ ಎಂದು ಹೇಳುವುದು. ರಾಜ್ಯಾಂಗ ತಿದ್ದುಪಡಿಯನ್ನು ಸರಿಯಾಗಿ ಮಾಡಿದ್ದಾರೆಂದು ಹೇಳುವುದಕ್ಕೆ ಬರುವುದಿಲ್ಲ. ಹಾಗಾದರೆ ಈಗ ಒಂದು ಮಾಡಿ. ಇನ್ನು ಮುಂದೆ ಹಿಂದೂ ಟೆಂಪಲ್‌ಗಳ ವಿಷಯ ಬಂದಾಗ ಹಿಂದೂಗಳನ್ನು ಅಪಾಯಿಂಟ್ ಮಾಡುತ್ತೇವೆ, ಮುಸ್ಲಿಮ್ಸ್ ಅಪಾಯಿಂಟ್ ಮಾಡುವುದಿಲ್ಲವೆಂದು ಮಾಡಿ. ಅದು ನಿಮ್ಮ ಪಾಲಿಸಿಯಾದರೆ ಅದಕ್ಕೆ ವಿರೋಧ ಇಲ್ಲ. ನಾಳೆ ಲಿಂಗಾಯಿತರ ಸಂಸ್ಥೆಗಳಿಗೆ ಲಿಂಗಾಯಿತರನ್ನೇ ಮಾಡಿ.

ಬ್ರಾಹ್ಮಣರ ಸಂಸ್ಥೆಗಳಿಗೆ ಬ್ರಾಹ್ಮಣರನ್ನು, ಕುರುಬರ ಸಂಸ್ಥೆಗಳಿಗೆ ಕುರುಬರನ್ನೇ ನೇಮಕ ಮಾಡಿ. ಏನು ಮಾಡುವುದಕ್ಕೆ ಹೊರಟಿದ್ದೀರಿ? ಈ ಒಂದು ವ್ಯವಸ್ಥೆಯನ್ನು ಬುಡಸಹಿತ ಕಿತ್ತುಹಾಕುವ ಪ್ರಯತ್ನ ಮಾಡುತ್ತಿದ್ದೀರಿ? ಈ ರೀತಿಯಾದ ಅಲ್ಪಸಂಖ್ಯಾತ ಸೃಷ್ಟೀಕರಣ ನೀತಿಯನ್ನು ನಿಮ್ಮಿಂದ ನಿರೀಕ್ಷೆ ಮಾಡಿಲ್ಲ, ನಾವುಇದನ್ನು ಪ್ರತಿಭಟನೆ ಮಾಡಿ ವಾಕೌಟ್ ಮಾಡಬಾರದು ಎನ್ನುವುದಾದರೆ ಆ ಶಬ್ದವನ್ನು ವಾಪಸ್ ತೆಗೆದು ಬೇರೆ ರೀತಿಯಲ್ಲಿ ತರಬೇಕೆಂದು ಹೇಳುತ್ತೇನೆ. ಆ ಒಂದು ಶಬ್ದವನ್ನು ಉಪಯೋಗಿಸಿರುವುದಕ್ಕೆ ನಾವು ವಾಕೌಟ್ ಮಾಡಬೇಕಾಗುತ್ತದೆ. ಇದಕ್ಕಾಗಿ ತಾವು ಬೇಷರತ್ ಕ್ಷಮಾಪಣೆ ಕೇಳಬೇಕು. ಈ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸಬೇಕು.

ಶ್ರೀ ಶಫಿ ಅಹಮದ್ (ತುಮಕೂರು) : ಮಾನ್ಯ ಅಧ್ಯಕ್ಷರೇ, ವೀರೇಂದ್ರ ಪಾಟೀಲರ ಕಾಲದಲ್ಲಿ ಅವರು ಡೆಮಾಕ್ರಟಿಕ್ ನಾರ್ಮ್ಸ್ ಪ್ರಕಾರ ಏನು ಛೇರ್ಮನ್ ಆಗಿದ್ದರು ಅವರನ್ನು ಡೆಮಾಕ್ರಟಿಕ್ ನಾರ್ಮ್ಸ್ ಪ್ರಕಾರ. ವಿತ್‌ಡ್ರಾ ಮಾಡಿಕೊಂಡು ಬೇರೆಯವರಿಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡಿದ್ದೆವು. ಆದರೆ ಕಾರಣಾಂತರದಿಂದ ಕಳೆದ ಸಾರಿ ಅಜೀಜ್‌ಸೇಠ್ ಅವರು ಸಚಿವರಾಗಿದ್ದಾಗ ಈ ಸಮಸ್ಯೆ ಬಂತು. ಯಾವ ರೀತಿ ಅವ್ಯವಹಾರ ನಡಿದಿದೆ ಎಲ್ಲಾ ಸದಸ್ಯರಿಗೂ ಗೊತ್ತಿದೆ. ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಅವ್ಯವಹಾರ ನಡೆದಿರುವುದರಿಂದ ಅಡ್ಮಿನಿಸ್ಟ್ರೇಟರ್ಸ್ ನೇಮಕ ಮಾಡುವ ವಿಚಾರ ಸದನದಲ್ಲಿ ಬಂತು. ಆದುದರಿಂದ ನಾನು ವಿರೋಧ ಪಕ್ಷದ ಎಲ್ಲಾ ಸದಸ್ಯರಿಗೂ ಮನವಿ ಮಾಡಿಕೊಳ್ಳುತ್ತೇನೆ. ಇದನ್ನು

ಒಳ್ಳೆಯ ಉದ್ದೇಶದಿಂದಲೇ ತರಲಾಗಿದೆ. ಇದಕ್ಕೆ ಎಲ್ಲರೂ ಒಮ್ಮತದಿಂದ ಒಪ್ಪಿಗೆಯನ್ನು ಕೊಟ್ಟರೆ ಒಳ್ಳೆಯದು. ಈ ಮುಸ್ಲಿಮ್ ಎನ್ನುವ ಪದದ ಬಗ್ಗೆ ಯಡಿಯೂರಪ್ಪನವರು ವಿಷಾದ ಹೇಳಿದ್ದಾರೆ. ಇವತ್ತು ಏನಾಗಿದೆ? ನಮ್ಮ ಕೇಂದ್ರ ಸರ್ಕಾರದಲ್ಲಿ ವಕ್ಫ್ ಸಚಿವರು ಸೀತರಾಮ ಕೇಸರಿಯವರು ಇದ್ದಾರೆ. ಆದ್ದರಿಂಧ ಯಾವ ರೀತಿಯ ತಾರತಮ್ಯ ಇದರಲ್ಲಿ ತೋರಿಸಿಲ್ಲ. ಆದುದರಿಂದ ಈ ಪದ ಬಂದಿರುವುದು ತಪ್ಪು ಇಲ್ಲ. ಸೆಂಟ್ರಲ್ ಆಕ್ಟ್‌ನಲ್ಲಿ ಸಹಾ ಅಳವಡಿಸಿಕೊಂಡು ಇವತ್ತು ವಕ್ಫ್ ಆಕ್ಟ್ 1954ರಲ್ಲಿ ಆಕ್ಟ್ ಮಂಜೂರು ಮಾಡುವ ಸಂದರ್ಭದಲ್ಲಿ ಈ ಪದ ಉಪಯೋಗಿಸಿದ್ದಾರೆ. ಆದ್ದರಿಂದ ದಯಮಾಡಿ ಒಮ್ಮತದ ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷಣಿಯವರೇ, ವಕ್ಫ್ ಬೋರ್ಡ್‌ಗೆ ಸಂಬಂಧಪಟ್ಟ ಸಚಿವರು ಈ ರೀತಿ ತರುತ್ತಾರೆಂದು ನಾವು ನಿರೀಕ್ಷಣೆ ಮಾಡಿರಲಿಲ್ಲ. ನಿಮ್ಮ ಮಾತಿಗೂ ಇಲ್ಲಿ ತಂದಿರತಕ್ಕ ಕೃತಿಗೂ ಸಂಬಂಧ ಇಲ್ಲ. ಯಾವುದೋ ಒತ್ತಡಕ್ಕೆ ಇದನ್ನು ತಂದಿರತಕ್ಕದ್ದು ಎಂದು ನನಗನ್ನಿಸುತ್ತದೆ. ಅಜೀಜ್‌ಸೇಟ್ ಅವರು ಮಾಡಿದರು. ಆದರೆ ಇವರು ತರುವಾಗ ಇದರ ಬದಲಾವಣೆ ಮಾಡಬಹುದಾಗಿತ್ತು. ಬದಲಾವಣೆ ಮಾಡುವುದಕ್ಕೆ ಅವಕಾಶ ಇತ್ತು. ಸಾರ್ವಜನಿಕವಾಗಿ ದೊಡ್ಡ ಅಪವಾದಕ್ಕೆ ತಾವು ಗುರಿ ಆಗುತ್ತೀರಿ.

ಈಗಲೂ ಸಹಾ ಒಳ್ಳೆಯ ಅವಕಾಶ ಇದೆ. ತಾವು ಆ ಪದ ಬದಲಾವಣೆ ಮಾಡಿ. ವಿಶೇಷ ಅಧಿಕಾರಿ ನೇಮಕ ಮಾಡುವಾಗ ಯಾರನ್ನಾದರೂ ಬೇಕಾದರೂ ನೇಮಕ ಮಾಡಬಹುದು. ಇಲ್ಲದಿದ್ದರೆ ಏನಾಗುತ್ತದೆ ಉದ್ದೇಶಪೂರ್ವಕವಾಗಿ ನಿಮ್ಮ ಮೇಲೆ ಕಪ್ಪುಛಾಯೆ ಬರುವಹಾಗೆ ಮಾಡಿಕೊಳ್ಳಬೇಡಿ. ಏತಕ್ಕೆ ಮಾಡಿಕೊಳ್ಳುತ್ತೀರಿ? ನೀವು ಉತ್ತರ ಕೊಡಿ, ಇದು ಒಳ್ಳೆಯ ರೀತಿ ಏನೂ ಅಲ್ಲ. ನಾವು ಕಳೆದ ನಾಲ್ಕು ದಿವಸಗಳಿಂದ ಮತ್ತು ಬೆಳಿಗ್ಗೆಯಿಂದ ಧರ್ಮದ ಬಗ್ಗೆ ನೀತಿಯ ಬಗ್ಗೆ ರಾಷ್ಟ್ರದ ಬಗ್ಗೆ ಜಾತ್ಯಾತೀತತೆಯ ಬಗ್ಗೆಮಾತನಾಡಿದ್ದೇವೆ. ಮಾತನಾಡಿ ಇಲ್ಲಿ ಬಂದು ಪೂಜಾರಿ ಏನೋ ಕಥೆ ಹೇಳಿದ ಹಾಗೆ ರಾತ್ರಿ ಹೋಗಿ ಬದನೆಕಾಯಿ ತಿಂದ ಎನ್ನುವ ಗಾದೆ ಆಗಬಾರದು. ಆದ್ದರಿಂದ ಆ ಗಾದೆಗೆ ಒಂದು ಕೆಟ್ಟ ಹೆಸರು ಬರತಕ್ಕ ನೀತಿಯಾಗಬಾರದು. ಇದು ಒಂದು ಒಳ್ಳೆಯ ಸಂಪ್ರದಾಯವಲ್ಲ. ಅದರ ಬಗ್ಗೆ ತೀವ್ರವಾಗಿ ಚಿಂತನೆ ಮಾಡಿದ್ದೇವೆ. ನನಗನ್ನಿಸುತ್ತದೆ ಈ ಪದವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಾರೆಂದು ನಾವು ಅಂದುಕೊಂಡಿದ್ದೇವೆ. ಹಠ ಮಾಡುತ್ತೇವೆ ಹಿಂದಕ್ಕೆ ತೆಗೆಯುವುದಿಲ್ಲವೆಂದು ಹೇಳುವುದಾದರೆ ಇದಕ್ಕೆ ನಾವು ಒಪ್ಪಿಗೆ ಕೊಡುವುದಕ್ಕೆ ಸಿದ್ಧರಿಲ್ಲ. ನಮ್ಮ ರೀತಿನೀತಿ ಬದಲಾವಣೆಯಾಗುತ್ತವೆಂದು ನಾನು ತಮಗೆ ಹೇಳುತ್ತೇನೆ.

ವಕ್ಫ್‌ಬೋರ್ಡ್ ಬಗ್ಗೆ ನಾನು ಚಿಂತನೆ ಮಾಡುವುದಕ್ಕೆ ಹೋಗುವುದಿಲ್ಲ. ಮೊದಲು ಮಾತನಾಡಿದಂತಹ ಅನೇಕ ಜನ, ವಕ್ಫ್‌ಬೋರ್ಡ್‌ನಲ್ಲಿ ನಿಮ್ಮವರಿಗೆ ಅನ್ಯಾಯವಾಗಿರತಕ್ಕ ಅನೇಕ ವಿಚಾರಗಳನ್ನು ಹೇಳಿದ್ದಾರೆ. ನಾನು ಹೇಳುವುದಾದರೆ,ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಅನೇಕ ಭ್ರಷ್ಟಾಚಾರಗಳು ನಡೆದಿವೆ. ಅಲ್ಲಿರತಕ್ಕ ಸಂಬಂಧಪಟ್ಟ ಕೋಮಿನವರಿಂದ ಆ ಜನಗಳಿಗೆ ಆಗಿರತಕ್ಕ ಅನ್ಯಾಯಗಳ ಬಗ್ಗೆ ಹೇಳಬೇಕಾಗುತ್ತದೆ. ದಯ ಮಾಡಿ ಮುಸ್ಲಿಂ ಅಧಿಕಾರಿ ಎನ್ನುವ ಪದ ಏನಿದೆ ಅದು ಇಂತಹವರೇ ಇರಬೇಕೆಂದು ಏತಕ್ಕೆ ಹೇಳುತ್ತೀರಿ? ಆ ಪದವನ್ನು

ತೆಗೆದುಹಾಕಿ ತಾವು ಈ ತಿದ್ದುಪಡಿ ಬಿಲ್ಲು ತರಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

+ ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಚಿಕ್ಕಮಗಳೂರು) : ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಸದನದಲ್ಲಿ ಈ ಬಿಲ್ಲನ್ನು ಮಾನ್ಯ ಮಂತ್ರಿಗಳು ತಂದಿದ್ದಾರೆ ಈ ವಿಚಾರದಲ್ಲಿ ನಿಮ್ಮ ವಿರೋಧ ಪಕ್ಷದವರೆಲ್ಲರೂ ಮಾತನಾಡಿದ್ದಾರೆ. ತಮ್ಮ ಗಮನಕ್ಕೆ ತರುವುದಾದರೆ ಮಾನ್ಯ ಸಮಾಜವಾದಿ ಜನತಾಪಕ್ಷದ ಮಾನ್ಯ ಬೈರೇಗೌಡರು, ಮತ್ತು ಭಾರತೀಯ ಜನತಾ ಪಕ್ಷದ ನಾಯಕರಾದ ಯಡಿಯೂರಪ್ಪನವರು, ವಕ್ಫ್‌ಬೋರ್ಡ್‌ನಲ್ಲಿ ಅವ್ಯವಹಾರ ಆಗಿದೆ ಎಂದು ಹೇಳಿದ್ದಾರೆ. ಗೌರವಾನ್ವಿತ ಸದಸ್ಯರಾದ ಮಾನ್ಯ ಯಡಿಯೂರಪ್ಪನವರು ಮೈಸೂರು ನಗರದ ಚಾಮರಾಜ ಮಾರ್ಕೆಟ್‌ನ ಒಂದು ಜಾಗದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರು ನೇರವಾಗಿ ಒಬ್ಬರಮೇಲೆ ಆರೋಪ ಮಾಡಿದ್ದಾರೆ ಆ ರೀತಿ ಮಾಡಿದರೆ ತಪ್ಪಾಗುತ್ತದೆಂದು ನಾನು ಭಾವಿಸುತ್ತೇನೆ. ಅದಕ್ಕೆ ತಕ್ಕಂತಹ ದಾಖಲೆಗಳನ್ನು ಹೊಂದಿದ್ದಲ್ಲಿ ಬಹುಶಃ ಈ ಮನೆಯಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದರೆ ಅದು ಉತ್ತಮವೆಂದು ನಾನು ಭಾವಿಸುತ್ತೇನೆ. ಅದರ ಜೊತೆಗೆ ಈ ಬಿಲ್ಲಿನ ಬಗ್ಗೆ ಪ್ರಸ್ತಾಪ ಮಾಡುವಾಗ ಅಲ್ಲಿ ದುರುಪಯೋಗವಾಗಿರತಕ್ಕದ್ದು ನಿಜವಾಗಿದ್ದರೆ ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಇದು ಎಲ್ಲ. ಪಕ್ಷದ ರಾಜಕೀಯ ಮುಖಂಡರಿಗೂ ಗೊತ್ತಿರತಕ್ಕ ವಿಚಾರ. ವಿರೋಧ ಪಕ್ಷದ ನಾಯಕರು ಸಹ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅನೇಕ ಜನ ಮುಸ್ಲಿಂ ಬಾಂಧವರು ಜನತಾ ಪಕ್ಷದ ಅಧ್ಯಕ್ಷರಿಗೆ ಕಾರ್ಯದರ್ಶಿಯವರಿಗೆ ಸದಸ್ಯರುಗಳಿಗೆ ಈ ವಿಚಾರವನ್ನು ಅವರ ಗಮನಕ್ಕೆ ತಂದು ಇದರಲ್ಲಿ ದುರುಪಯೋಗ ಹಾಗೂ ಅವ್ಯವಹಾರಗಳು ನಡೆಯುತ್ತಿವೆ. ತಾವು ಈಗ ಅಧ್ಯಕ್ಷರಾಗಿ, ನೇಮಕಗೊಂಡಿದ್ದೀರಿ. ವಕ್ಫ್ ಮಂಡಳಿಗೆ ತಾವು ಬುದ್ಧಿವಾದ ಹೇಳಬೇಕೆಂದು ತಮ್ಮ ಗಮನಕ್ಕೆ ತಂದಿದ್ದೇನೆ. ನೂರಕ್ಕೆ ನೂರರಷ್ಟು ದುರ್ವ್ಯವಹಾರ ಆಗಿದೆ ದುರುಪಯೋಗವಾಗಿದೆ ಎನ್ನುವ ವಿಚಾರವನ್ನು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಅಲ್ಲಿ ಬದಲಾವಣೆ ಮಾಡಲಿಕ್ಕೆ ಈ ಬಿಲ್ಲನ್ನು ತಂದಿರುವುದು ನಿಜಕ್ಕೂ ಸಂತೋಷ. ಜೊತೆಗೆ ಎಲ್ಲ ಪಕ್ಷದ ವರಿಷ್ಠರು ಅಲ್ಪಸಂಖ್ಯಾತರ ಹಿತವನ್ನು ಕಾಪಾಡುವ ವಿಚಾರಗಳನ್ನು ಮಾತನಾಡಿದರೆ ಆಗುವುದಿಲ್ಲ, ವಿಚಾರದ ಭಾವನೆಗಳಲ್ಲಿ ಮಾತನಾಡಿದಾಗ ನಾವು ಯಶಸ್ವಿಯಾಗಬಹುದು ಅದನ್ನು ತಮ್ಮ ಗಮನಕ್ಕೆ ತರುವುದಲ್ಲದೆ, ಮಾನ್ಯ ವಿರೋಧ ಪಕ್ಷದ ನಾಯಕರುಗಳೆಲ್ಲ ಮುಸ್ಲಿಂ ಎನ್ನುವ ಪದವನ್ನು ಬಳಸಿರುವ ಬಗ್ಗೆ ವಿರೋಧ ಮಾನ್ಯ ವಿರೋಧ ಪಕ್ಷದ ನಾಯಕರುಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ತಮಗೆ ಗೊತ್ತಿರುವ ಹಾಗೆ ವಕ್ಫ್ ಮಂಡಳಿಯಲ್ಲಿ ಅನೇಕ ಆಸ್ತಿಪಾಸ್ತಿಗಳು ದುರುಪಯೋಗವಾಗಿದೆ. ಕೋಟ್ಯಾಂತರ ರೂಪಾಯಿ ಆಸ್ತಿ ಕರ್ನಾಟಕ ರಾಜ್ಯದಲ್ಲಿ ದುರುಪಯೋಗವಾಗಿದೆ. ತಾವು ಸಹ ಹೇಳಿದ್ದೀರಿ. ಸರ್ಕಾರ ವಕ್ಫ್ ಮಂಡಲಿಗೆ ಒಬ್ಬ ಮುಸ್ಲಿಂ ಅಧಿಕಾರಿ ಇರಬೇಕೆಂದು ತಂದಿರುವುದು ಅಲ್ಲಿನ ಆಸ್ತಿಪಾಸ್ತಿ ಉಳಿಯಬೇಕು ಎನ್ನುವ ದೃಷ್ಟಿಯಿಂದ ಆ ಪದವನ್ನು ಬಳಸಿದ್ದಾರೆಂದರೆ ತಪ್ಪಾಗಲಾರದು. ಅದರ ಜೊತೆಗೆ ನಮ್ಮದು ಜಾತ್ಯಾತೀತ ರಾಷ್ಟ್ರವಾಗಿದ್ದರೂ ಸಹ ನಾವು ಅನೇಕ ಸರ್ಕಾರಿ ಕಾರ್ಯಕ್ರಮಗಳಲ್ಲಿ ನಾವು ಯಾರೂ ವಿರೋಧ ವ್ಯಕ್ತಪಡಿಸಿದ್ದು ಯಾವುದೂ ಇಲ್ಲ.

ತಮಗೆ ಮತ್ತು ನನಗೆ ತಿಳುವಳಿಕೆ ಇದ್ದಹಾಗೆ ಮೊನ್ನೆವರೆಗೆ ಶ್ರೀ ಸೀತರಾಮ ಕೇಸರಿಯವರು ವಕ್ಫ್‌ಮಂಡಳಿಯ ಎಲ್ಲಾ ವ್ಯವಹಾರಗಳನ್ನು ಕೇಂದ್ರಸರ್ಕಾರದಲ್ಲಿ

ನೋಡಿಕೊಂಡು ಬರುತ್ತಿದ್ದಾರೆ. ಅದಕ್ಕಾಗಿ ಅಖಂಡ ರಾಷ್ಟ್ರದ ಮುಸ್ಲೀಮರು ವ್ಯಥೆ ಪಡುತ್ತಿಲ್ಲ. ಈ ತರಹ ಬದಲಾವಣೆಗಾಗಿ ನಾವು ಪ್ರಯತ್ನ ಮಾಡುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಹಿಂದಿನಿಂದ ನಡೆದುಕೊಂಡು ಬರುತ್ತಾ ಇರುವಂಥ ಪದ್ಧತಿಯೊಂದು ಹೇಳಿದರೆ, ವಕ್ಫ್‌ಮಂಡಳಿಗೆ ಮಂತ್ರಿಯಾಗುವವರು ಮುಸ್ಲೀಮರೇ ಆಗಬೇಕು ಅಥವಾ ವಕ್ಫ್ ಮಂಡಳಿಯ ಅಧ್ಯಕ್ಷನಾಗಬೇಕಾದರೆ ಮುಸ್ಲೀಮರೇ ಆಗಬೇಕೆಂದು ಅನೇಕ ವರ್ಷಗಳಿಂದ ಇದೆ. ಇವತ್ತು ಏನಾಗಿದೆ? ನಮ್ಮ ಸರ್ಕಾರ ಇದ್ದಾಗ ಮತ್ತು ಹಿಂದೆ ಬೇರೆ ಪಕ್ಷಗಳ ಸರ್ಕಾರಗಳು ಇದ್ದಾಗಲೂ ಸಹ ಮುಸ್ಲೀಮರನ್ನೇ ನೇಮಕ ಮಾಡಿದ್ದರು. ಆದರೆ ನನ್ನ ಭಾವನೆಯಲ್ಲಿ ಅಲ್ಪಸಂಖ್ಯಾತರ ಹಿತರಕ್ಷಣೆ ಕಾಪಾಡುವ ಸಲುವಾಗಿ ಒಬ್ಬ ಮುಸ್ಲೀಮ್ ಆಫೀಸರನ್ನು ನೇಮಿಸುವುದರಲ್ಲಿ ಜಾತೀಯತೆ ಬರುವುದಿಲ್ಲ. ಈ ಭಾವನೆಯಿಂದ ನಾನು ಮಾನ್ಯ ವಿರೋಧ ಪಕ್ಷದ ಸದಸ್ಯರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಅಲ್ಪಸಂಖ್ಯಾತರ ರಕ್ಷಣೆಗಾಗಿ ಅವರ ಆಸ್ತಿಪಾಸ್ತಿಗಳನ್ನು ಕಾಪಾಡುವುದಕ್ಕೆ ಈ ಒಂದು ಅನುಕೂಲವನ್ನು ತಾವು ಒದಗಿಸಿಕೊಟ್ಟಹಾಗೆ ಆಗುತ್ತದೆ. ಆದ್ದರಿಂದ ತಾವೆಲ್ಲ ಮಾನ್ಯ ಗೌರವಾನ್ವಿತ ಸದಸ್ಯರು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ಸಚಿವರು ತಂದಿರತಕ್ಕಂಥ ಬಿಲ್ಲಿಗೆ ವಿರೋಧ ವ್ಯಕ್ತಪಡಿಸುತ್ತೇನೆ. ಈಗಾಗಲೇ ಹಿರಿಯ ಸದಸ್ಯರು ಇದರ ಬಗ್ಗೆ ಹೇಳಿದ್ದಾರೆ. ನಾನು ಕೇವಲ ಎರಡು ವಿಷಯಗಳನ್ನು ಕೇಳುತ್ತಿದ್ದೇನೆ. ಮೊದಲನೆಯದಾಗ್ಗಿ ಮಾನ್ಯ ಮಂತ್ರಿಗಳು Wakf Act means 1954, 54 Central Act - Administrator Appointment provision ಇದರಲ್ಲಿ ಸ್ಪೆಶಲ್‌ಆಫೀಸರ್ ಅಥವಾ ಅಡ್ಮಿನಿಸ್ಟ್ರೇಟರ್‌ನ್ನು ಅಪಾಯಿಂಟ್ ಮಾಡುವುದಕ್ಕೆ ಪ್ರಾವಿಶನ್ ಎಲ್ಲಿದೆ ಎಂದು ತಾವು ತೋರಿಸಿಕೊಡಬೇಕು. ಎರಡನೆಯದ್ದು Regarding Muslims, he must be a Muslim ಅಂತ ಹೇಳಿದ್ದಾರೆ. ಅದು ಎಲ್ಲಿಯೂ ಇಲ್ಲ. ತಾವು ವಿಚಾರ ಮಾಡಬೇಕು. ಮೊದಲು ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್‌ನಲ್ಲಿ Charity Comissioner must be a lingayat. Lingayat ಇರಬೇಕು ಅಂತ ಇತ್ತು. ಕಳೆದ ನಾಲ್ಕು ವರ್ಷಗಳಿಂದ ಇದಕ್ಕೆ ಅಮೆಂಡ್‌ಮೆಂಟ್ ಆಗಿದೆ. ಯಾರು ಬೇಕಾದರೂ ಡಿಸ್ಟ್ರಿಕ್ಟ್ ಜಡ್ಜ್ ಗ್ರೇಡ್‌ನವರು ಆಫೀಸರ್ ಆಗಬಹುದು. ಈ ಬಾಂಬೆ ಪಬ್ಲಿಕ್ ಟಸ್ಟ್ ಆಕ್ಟ್‌ನಲ್ಲಿ ತಾವೇ ಅಮೆಂಡ್‌ಮೆಂಟ್ ಮಾಡಿ ಕಳೆದ ನಾಲ್ಕು ವರ್ಷಗಳಿಂದ ಲಿಂಗಾಯಿತಚಾರಿಟಿ ಕಮೀಷನರ್ ಏನು ಹಾಕುತ್ತಿದ್ದರು, ಇದನ್ನು ಬಂದ್‌ಮಾಡಿ ಯಾರನ್ನು ಬೇಕಾದರೂ ಹಾಕುತ್ತಿದ್ದೀರಿ. ಆದರೆ ಇಲ್ಲಿ ಏಕೆ ಹೇಗೆ? Is it not discrimination? ವಕ್ಫ್ ಬೋರ್ಡ್‌ಗೆ ಮುಸ್ಲಿಂ ಮಿನಿಸ್ಟರ್ ಇದ್ದರೆ ಅವರಿಗೆ ಪ್ರೊಟೆಕ್ಷನ್ ಸಿಗುತ್ತದೆ ಎಂದು ಹೇಳುವುದರಲ್ಲಿ ಯಾವ ನ್ಯಾಯವಿದೆ? ದಯಮಾಡಿ ಇದನ್ನು ಮುಸ್ಲಿಂ ಎನ್ನುವುದನ್ನು ಬಿಟ್ಟುಬಿಡಬೇಕು. ಬೇರೆಯವರು ಇದ್ದರೂ ಸಹಿತ ಅವರು ಕಂಟ್ರೋಲ್ ಮಾಡುವುದಕ್ಕೆ ಬರುತ್ತದೆ. ಆದಕಾರಣ ಈ ಪದವನ್ನು ತೆಗೆಯಬೇಕು ಮತ್ತು ಈ ಬಿಲ್‌ನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ 1958ನೇ ಇಸವಿಯಿಂದ 1984ರವರೆಗೆ ಲಿಂಗಾಯತ ಚಾರಿಟಿ ಕಮೀಷನರ್ ಅವರು ಇರುತ್ತಿದ್ದರು. ಆದರೆ ಈಗ ಮಾತ್ರ

ನಾಲ್ಕು ವರ್ಷಗಳಿಂದ ಬೇರೆಯವರನ್ನು ಏಕೆ ಹಾಕುತ್ತಿದ್ದೀರಿ? ಇದಕ್ಕೆ ಏನು ಕಾರಣ? ಅಂದರೆ ಇಲ್ಲಿ ಬೇರೆ ಜಾತಿಯವರು ಇರಬಹುದು ಎಂದು ಹೇಳಿ ಅವರಿಗೆ ಮಾತ್ರ ಅವರ ಜಾತಿಯವರೇ ಬೇಕು ಎಂದು ಹೇಳುವುದು ಸರಿಯಲ್ಲ ಆದಕಾರಣ ಈ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಬೇಕು. ಆದ್ದರಿಂದ ಈ ಅಮೆಂಡ್‌ಮೆಂಟ್ ಏನಿದೆ ಇದು politically motivated ಎಂದು ಹೇಳಿದ್ದುದು ಸತ್ಯ ಇದೆ. ಆದ್ದರಿಂದ ಇದನ್ನು ನಾನು ವಿರೋಧ ಮಾಡುತ್ತೇನೆ.

+ಶ್ರೀ ಎ.ಎಂ. ಹಿಂಡಸಗೇರಿ (ಹುಬ್ಬಳ್ಳಿ) : ಮಾನ್ಯ ಉಪಾಧ್ಯಕ್ಷರೇ, ಇವತ್ತಿನ ದಿವಸ ಮಾನ್ಯ ವಕ್ಫ್ ಮಂತ್ರಿಗಳು ಏನು ಅಮೆಂಡ್‌ಮೆಂಟ್ ಬಿಲ್ ತಂದಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅನೇಕ ಹಿರಿಯ ಸದಸ್ಯರು ಮತ್ತು ವಿರೋಧಪಕ್ಷದ ನಾಯಕರು ಈಗಾಗಲೇ ಮಾತನಾಡಿದ್ದಾರೆ. ಈ ಹಿಂದಿನ ಮಂಡಳಿಯಲ್ಲಿ ಸಾಕಷ್ಟು ಅವ್ಯವಹಾರ ಆಗಿದೆ. ಮಿಸ್‌ಮ್ಯಾನೇಜ್‌ಮೆಂಟ್ ಆಗಿದೆ. ಅದಕ್ಕೋಸ್ಕರ ಅವರದೇ ಅಪಾಯಿಂಟ್ ಆಗಿದ್ದಕ್ಕೆ ಆ ಸದಸ್ಯರು ರಾಜೀನಾಮೆ ಕೊಟ್ಟಿದ್ದರು. ಅವರಲ್ಲಿ ಒಬ್ಬರ ಮೇಲ ಕ್ರಿಮಿನಲ್ ಕೇಸ್ ಆಗಿದೆ. ಅದಕ್ಕೋಸ್ಕರ ಇದು ಒಂದು ಸಾಕ್ಷಿ ಎಂದು ಹೇಳುವುದಕ್ಕೆ ಇಚ್ಚಿಪಡುತ್ತೇನೆ. ಈ ಮಂಡಳಿ ವತಿಯಿಂದ Purely muslim religious institutions ವ್ಯವಸ್ಥೆ ಆಗುತ್ತದೆ. ಮತ್ತು ಸರ್ಕಾರದಿಂದ ಅದಕ್ಕೆ ಸಹಾಯವಾಗುತ್ತದೆ. ಅದಕ್ಕೋಸ್ಕರ 1954ನೇ ಸೆಂಟ್ರಲ್ ಆಕ್ಟ್ ಪ್ರಕಾರ ಸ್ಪೆಶಲ್ ಆಫೀಸರ್‌ಮುಸ್ಲಿಂ ಇರಬೇಕು ಎಂದು ಏನು ಶಬ್ದವನ್ನು ಉಪಯೋಗಿಸಿದ್ದಾರೆ ಅದು ತಪ್ಪಲ್ಲ, ಸರಿಯಿದೆ. ಅದರಿಂದ ಸೆಕ್ಯುಲರಿಸಂಗೆ ತಪ್ಪು ಆಗುವುದಿಲ್ಲ. ತಾವು ಎಲ್ಲರೂ ಕೂಡಿ ವ್ಯವಸ್ಥೆ ಮಾಡುತ್ತಿದ್ದೇವೆ. ಈ ಮುಸ್ಲೀಮ್‌ಗೆ ಸಂಬಂಧಪಟ್ಟಿರತಕ್ಕಂಥ ಸಂಸ್ಥೆ. ಇದರಿಂದ ಗ್ರಾಂಟ್ ಸಹ ಮುಸ್ಲಿಮ್‌ರಿಗೆ ಸಿಗುತ್ತದೆಯೇ ಹೊರತು ಬೇರೆಯವರಿಗೆ ಸಿಗುವುದಿಲ್ಲ. ಆದಕಾರಣ ಈ ವ್ಯವಸ್ಥೆ ಮಾಡುವುದರಲ್ಲಿ ಏನೂ ತಪ್ಪು ಇಲ್ಲವೆಂದು ಹೇಳುವುದಕ್ಕೆ ಇಚ್ಚಿಪಡುತ್ತೇನೆ.

+ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) :ಮಾನ್ಯ ಉಪಾಧ್ಯಕ್ಷರೇ, ಸರ್ಕಾರದವರು ಏನು ಬಿಲ್ಲನ್ನು ತಂದಿದ್ದಾರೆ. ಅದಕ್ಕೆ ನನ್ನ ಸ್ಪಷ್ಟ ವಿರೋಧವಿದೆ. ಈಗಾಗಲೇ ಸರ್ಕಾರ ಬಂದು ಕೇವಲ 40 ದಿವಸಗಳಾಗಿದ್ದರೂ ಕೂಡ, ಇವರು ಪರೋಕ್ಷವಾಗಿ ಗುರುತಿಸುತ್ತಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರಿಗೆ ಅಧಿಕಾರ ಕೊಡಬೇಕೆಂದು ಗುರಿತಿಸತಕ್ಕ ಕೆಲಸವನ್ನು ಈಗಾಗಲೇ ಮಾಡಿದ್ದಾರೆ. ಮೊನ್ನೆ ನಾನು, ನಮ್ಮ ಉಪನಾಯಕರಾದ ಸಿಂಧ್ಯರವರ ಹತ್ತಿರ ಮಾತನಾಡಿದ್ದೇವೆ. ಈಗ ವೀರಪ್ಪ ಮೊಯಿಲಿಯವರ ಸರ್ಕಾರ ಬಂದಿದೆ ಒಳ್ಳೆಯ ದಿನಗಳು ಅಲ್ಲ, ಏಕೆಂದರೆ, ಕಾಂಗ್ರೆಸ್ ಕಾರ್ಯಕರ್ತರಿಗೆ ಅಧಿಕಾರ ಕೊಡತಕ್ಕ ಕೆಲಸವಾಗುತ್ತಿದೆ.....

ಉಪಾಧ್ಯಕ್ಷರು : ಈಗಾಗಲೇ ಎಲ್ಲರೂ ಸಾಕಷ್ಟು ಮಾತನಾಡಿದ್ದಾರೆ. ಸಂಕ್ಷಿಪ್ತವಾಗಿ ಮಾತನಾಡಿ.

ಶ್ರೀ ಎಂ. ನಾರಾಯಣಸ್ವಾಮಿ ; ಏಕೆಂದರೆ, ಪರೋಕ್ಷವಾಗಿ, ಕಾಂಗ್ರೆಸ್ ಕಾರ್ಯಕರ್ತರನ್ನು ಅಥವಾ ಅವರ ಅನಿಸಿಕೆ ಪ್ರಕಾರವಾಗಿ ಮಾಡತಕ್ಕಂಥ ಒಬ್ಬ ಅಧಿಕಾರಿಯನ್ನು ನೇಮಕ ಮಾಡುವುದಕ್ಕೆ ಈ ತಿದ್ದುಪಡಿಯನ್ನು ತಂದಿದ್ದಾರೆಂದು ನನ್ನ ಭಾವನೆ. ನಮ್ಮ ಬೈರೇಗೌಡರು ಹೇಳಿದ ರೀತಿ ಈ ವಕ್ಫ್ ಸಂಸ್ಥೆಯಲ್ಲಿ

ಅನೇಕ ಅವ್ಯವಹಾರ ಆಗಿರಬಹುದು. ಆದರೆ, ಸರ್ಕಾರದಲ್ಲಿ ನಿರ್ದಿಷ್ಟವಾದ ಅಧಿಕಾರ ಇದೆ. ನಿರ್ಧಿಷ್ಟವಾದ ಜವಾಬ್ದಾರಿ ಇದೆ. ಈಗಿರತಕ್ಕ ಇತಿಮಿತಿಯಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕ ಕೆಲಸ ಮಾಡಬೇಕು. ಅಥವಾ ಇದರ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡಿ, ತಪ್ಪಿತಸ್ಥರು ಯಾರಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕ ಕೆಲಸ ಮಾಡಬೇಕು. ಯಾವುದೋ ಒಂದು ಪೊಳ್ಳು ನೆಪ ಒಡ್ಡಿ, ಬರೀ ತಿದ್ದುಪಡಿ ಮಾಡಬೇಕೆಂಬ ದೃಷ್ಟಿಯಿಂದ ಅಲ್ಲ. ನನ್ನ ಅನಿಸಿಕೆ ಪ್ರಕಾರವಾಗಿ ಕೂಡ ಸ್ಪಷ್ಟವಾಗಿ ಇದನ್ನು ವಿರೋಧ ಮಾಡುತ್ತೇನೆ.

ಉಪಾಧ್ಯಕ್ಷರು : ಎಲ್ಲರೂ ಇದೇ ಮಾತನ್ನು ಹೇಳಿದ್ದಾರೆ.

ಶ್ರೀ ಎಂ. ನಾರಾಯಣಸ್ವಾಮಿ : ಈ ಬಿಲ್ಲನ್ನು ಪಾಸ್ ಮಾಡುವುದಕ್ಕೆ ಅವಕಾಶ ಕೊಡಬಾರದು ಎಂದು ನನ್ನ ಸ್ಪಷ್ಟ ಅನಿಸಿಕೆ. ದಯಮಾಡಿ ಈ ವಿಚಾರದಲ್ಲಿ ಸರ್ಕಾರದವರು ಏನು ಮಂಡನೆ ಮಾಡಿದ್ದಾರೆ, ಇದನ್ನು ವಾಪಸ್ ತೆಗೆದುಕೊಳ್ಳತಕ್ಕ ಕೆಲಸವಾಗಲಿ ಎಂದು ನನ್ನ ಮನವಿ.

ಶ್ರೀ ಕೆ.ಎಸ್. ಈಶ್ವರಪ್ಪ : ಇವತ್ತಿನವರೆಗೆ ಇಡೀ ದೇಶದಲ್ಲಿ ನಾವು ಹೇಳಿಕೊಂಡು ಬಂದಿದ್ದೇವೆ. ಕಾಂಗ್ರೆಸ್‌ನವರು ಸೂಡೋ ಸೆಕ್ಯುಲರಿಸಂ ಫಾಲೋ ಮಾಡುತ್ತಿದ್ದಾರೆ. ಮತ್ತೆ ನಾವು ಈ ರೀತಿ ಹೇಳುವುದಕ್ಕೆ ಮತ್ತೊಂದು ಅಂಶವನ್ನು ಉದಾಹರಣೆಯಾಗಿ ಸ್ಪಷ್ಟವಾಗಿ ಜೀವಂತವಾಗಿ ಕೊಟ್ಟಿದ್ದಾರೆ. ಇದನ್ನು ವಾಪಸ್ ತೆಗೆದುಕೊಳ್ಳಬೇಕು ಮತ್ತು ರಾಜ್ಯದ ಜನತೆಗೆ ಕ್ಷಮಾಪಣೆ ಕೇಳಬೇಕು. ಇದನ್ನು ಪ್ರತಿಭಟನೆ ಮಾಡಿ ನಾವು ಧರಣಿ ಮಾಡುತ್ತೇವೆ.

(ಬಿ.ಜೆ.ಪಿ. ಸದಸ್ಯರು, ಸಭಾಧ್ಯಕ್ಷರ ಪೀಠದ ಮುಂದೆ ಬಂದು ಧರಣಿ ಕುಳಿತರು)

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಇನ್ನೂ ಏನನ್ನೂ ಹೇಳಿಲ್ಲ, ಅವರು ಏನು ಹೇಳುತ್ತಾರೆಂದು ನಮಗೆ ಗೊತ್ತಿಲ್ಲ, ನೀವು ಆಗಲೇ....

ಶ್ರೀ ಎಸ್.ಎಂ. ಯಾಹ್ಯಾ : ನನ್ನ ಉತ್ತರವನ್ನು ಕೇಳುವುದಕ್ಕ ಅವರಿಗೆ ಸೌಜನ್ಯ ಇಲ್ಲ.

ಉಪಾಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ನೀವು ಇಲ್ಲಿಂದ ಮಾತನಾಡುವುದು ಸರಿಯಲ್ಲ, ಯಾವುದೂ ರೆಕಾರ್ಡ್ ಆಗುವುದಿಲ್ಲ, ಯಾವುದನ್ನೂ ರೆಕಾರ್ಡ್ ಮಾಡಿಕೊಳ್ಳಬೇಕು.

(ಉಪಾಧ್ಯಕ್ಷರು ಆದೇಶದ ಮೇರೆಗೆ ಈ ಸಂದರ್ಭದಲ್ಲಿ ರೆಕಾರ್ಡ್ ಮಾಡಿರುವುದಿಲ್ಲ)

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಯಾಹ್ಯರವರ ಬಗ್ಗೆ ಅಪರವಾದ ಗೌರವ ಇದೆ. ಟೋಟಲ್ ಸೆಕ್ಯೂಲರಿಸಂ ಬಗ್ಗೆ ಪರವಾಗಿದ್ದಾರೆ. ಇದರ ಬಗ್ಗೆ ನಮ್ಮ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಈಗ ಏನು ಆರ್ಡಿನೆನ್ಸ್ ಆಯಿತು, ಅದರಂತೆ ತಾವು ಬಿಲ್ಲನ್ನು ತಂದಿದ್ದೀರಿ. ಆಗ ಈ ಸಚಿವರು ಇರಲಿಲ್ಲ. ತಾವು ಈ ಮನೆಯ ಫೀಲಿಂಗ್ಸ್‌ನ್ನು ತಿಳಿದುಕೊಳ್ಳಬೇಕು. ಅರ್ಥಮಾಡಿಕೊಳ್ಳಬೇಕು. ಒಂದು ವಕ್ಫ್ ಬೋರ್ಡಿಗೆ ಒಬ್ಬ ಮುಸ್ಲಿಂ ಅಧಿಕಾರಿಯನ್ನು ಹಾಕಬೇಕೆಂದು ಪ್ರಾವಿಷನ್ ಮಾಡಿದರೆ ಬೇರೆಯವರಿಗೆ ತೊಂದರೆಯಾಗುತ್ತದೆ. ಈ ಫೀಲಿಂಗ್ಸ್‌ನ್ನು ನೀವು

ಗಮನದಲ್ಲಿಟ್ಟುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. It will hurt other's feelings.

ಶ್ರೀ ಎಸ್.ಎಂ. ಯಾಹ್ಯ : ನಮ್ಮ ಉತ್ತರವನ್ನು ಕೇಳಿಕೊಳ್ಳಿ. ಇದು ಸಮಾಧಾನ ಆಗಲಿಲ್ಲವೆಂದರೆ, ನಂತರ ನೀವು ತೀರ್ಮಾನ ಮಾಡಿ. There is some point. ನೀವು ಹೇಳಿದಹಾಗೆ ಮಾಡುವುದಕ್ಕೆ ಬರುವುದಿಲ್ಲ, ನೀವು ಹೇಳಿದಹಾಗೆ ಕೇಳುವುದಕ್ಕೆ ಬರುವುದಿಲ್ಲ, ನಮಗೆ ಒಂದು ಉದ್ದೇಶ ಇದೆ, ಆ ಉದ್ದೇಶ ಪ್ರಕಾರ ಕೆಲಸ ಮಾಡಬೇಕಾಗಿದೆ.

(Interruptions)

ಉಪಾಧ್ಯಕ್ಷರು : ನೀವು ಇಲ್ಲಿಂದ ಏನನ್ನು ಮಾತನಾಡರೂ ರೆಕಾರ್ಡ್‌ಗೆ ಹೋಗುವುದಿಲ್ಲ, ಈಶ್ವರಪ್ಪನವರೇ ದಯಮಾಡಿ ಹೋಗಿ ಕುಳಿತುಕೊಳ್ಳಿ.

Sri S.M. Yahya : How can he treaten our Members here. ದಯಮಾಡಿ ವಾಪಸ್ ಹೋಗಿ ನನ್ನ ಉತ್ತರವನ್ನು ಕೇಳಿ.

ಉಪಾಧ್ಯಕ್ಷರು : ದಯಮಾಡಿ ವಾಪಸ್ ಹೋಗಿ; ಅವರು ಏನು ಉತ್ತರ ಹೇಳುತ್ತಾರೆ. ಅದನ್ನು ಕೇಳಿ

(ಭಾರತೀಯ ಜನತಾ ಪಕ್ಷದ ಸದಸ್ಯರು ವೆಲ್‌ನಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಉಪಾಧ್ಯಕ್ಷರು : ಅವರು ಏನು ಹೇಳುತ್ತಾರೆ ಅದನ್ನು ಕೇಳಿರಿ.

ಶ್ರೀ ಎಸ್.ಎಂ. ಯಾಹ್ಯಾ : ಸೆಕ್ಯುಲರಿಸಂ ಕಾಂಟ್ರಾಕ್ಟ್ ಎಲ್ಲಾ ಇವರಿಗೇ ಕೊಟ್ಟುಬಿಟ್ಟಿದ್ದಾರೆ. ಇದೇ ನಿಮ್ಮ ಸಂಸ್ಕೃತಿ ಗೊತ್ತಾಗುವುದಿಲ್ಲವೇ? ಎಲ್ಲಾ ಕಡೆ ಹೊಡೆದು ಬಡಿದು ಮಾಡುವ ಸಂಸ್ಕೃತಿ.

ಶ್ರೀ ಕೆ. ಹರ್ಷಕುಮಾರ್‌ಗೌಡ : ಇದು ರಾಜಕೀಯ

ಉಪಾಧ್ಯಕ್ಷರು : ನೀವು ವೆಲ್‌ನಲ್ಲಿ ನಿಂತುಕೊಂಡು ಮಾತನಾಡುವುದು ಒಂದೂ ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ಹೋಗಿ ಕುಳಿತುಕೊಳ್ಳಿ. ಮಿನಿಸ್ಟರ್‌ರವರು ಏನೋ ಕನ್‌ವಿನ್ಸ್ ಮಾಡುತ್ತಾರೆ ನೋಡಿ, ದಯವಿಟ್ಟು ಹೋಗಿ ಕುಳಿತುಕೊಳ್ಳಿ....

(ಗೊಂದಲ)

ಶ್ರೀ ಎಸ್.ಎಂ. ಯಾಹ್ಯಾ : ನೀವು ಹೇಳಿದಹಾಗೆ ನಮ್ಮ ಪಕ್ಷದ ಸದಸ್ಯರೆಲ್ಲರೂ ಕೇಳಬೇಕೇ, ಅವರು ಡಿಫೆಂಡ್ ಮಾಡಬಾರದೇ

(ಗೊಂದಲ)

Srri S.M. Yahya : How can be threaten our Members here....

ಉಪಾಧ್ಯಕ್ಷರು : ಮಂತ್ರಿಗಳು ಉತ್ತರ ಹೇಳುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಎಂದರೆ ಹೇಗೆ?

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಭಾರತೀಯ ಜನತಾ ಪಕ್ಷದ ಸದಸ್ಯರಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ. ತಾವು ಸೀಟ್‌ಗೆ ಹೋಗಿ. ಅವರು

ಏನು ಹೇಳುತ್ತಾರೆ. ಅದನ್ನು ಕೇಳುವುದು ನಮ್ಮ ಕರ್ತವ್ಯ. ಅದಕ್ಕೆ ನೀವು ಸಹಕರಿಸಬೇಕಾಗುತ್ತದೆ. ಅವರು ಏನು ಹೇಳುತ್ತಾರೆ ಕೇಳಿ, ನಂತರ ತಾವು ಏನಾದರೂ ಕೇಳಿ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಉಪಾಧ್ಯಕ್ಷರು : ಅವರು ಉತ್ತರ ಏನು ಕೊಡುತ್ತಾರೆ ಕೇಳುವ ಸೌಜನ್ಯ ಇರಬೇಕು ತಾವು ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ., ಅವರು ಏನು ಹೇಳುತ್ತಾರೆ. ಕೇಳಿ, ಆಮೇಲೆ ಬೇಕಾದರೆ ತಾವು ಕೇಳಬಹುದು.

ಶ್ರೀ ಎ.ಕೆ. ಅನಂತಕೃಷ್ಣ : ಇದು ಬಿ.ಜೆ.ಪಿ.ಯವರ ಮೊಂಡಾಟ. ಇವರು ಪ್ರಜಾಪ್ರಭುತ್ವ ಮಾತನಾಡುವ ಜನ, ಕುಳಿತುಕೊಂಡು ಕೇಳುವುದಕ್ಕೂ ತಯಾರಾಗಿಲ್ಲ, ನಿಮಗಿಂತ ಜಾಸ್ತಿ ಜನ ಸದಸ್ಯರು ಮಾತನಾಡಿದ್ದಾರೆ. ಅವರೆಲ್ಲಾ ಕುಳಿಕುಕೊಂಡಿಲ್ಲವೇ? ನೀವೂ ಅಲ್ಲಿಗೆ ಬಂದು ಕುಳಿಕುಕೊಳ್ಳಿ. ನಾನು ಜವಾಬು ಕೊಡುತ್ತೇನೆ. ಗಂಟಲು ಜೋರಾಗಿದೆ ಎಂದು ಇಷ್ಟಬಂದಹಾಗೆ ಜೋರು ಮಾಡಬಹುದೇ?

(ಗೊಂದಲ)

Madam Deputy Speaker : Please resume your seat.

ಶ್ರೀ ಎಸ್.ಎಂ. ಯಾಹ್ಯಾ : ಈ ಆರ್ಡಿನೆನ್ಸ್ ಬಿಲ್ ರೂಪದಲ್ಲಿ ಬಂದಿದೆ. ಇದು ಮೂರು ತಿಂಗಳ ಹಿಂದೆ ಮಾಡಿರುವಂತಹ ಆರ್ಡಿನೆನ್ಸ್.ಇದರಲ್ಲಿ ಯಾವ ರಾಜಕೀಯ ಉದ್ದೇಶ ಇಲ್ಲ, ಇದರಲ್ಲಿ ಯಾವುದಾದರೂ ಒಳ್ಳೆಯ ಉದ್ದೇಶ ಇರುವುದಾದರೆ ವಕ್ಫ್ ಇನ್‌ಸ್ಟಿಟ್ಯೂಷನ್ಸ್ ರಕ್ಷಣೆ ಮಾಡುವುದು. ವಕ್ಫ್ ಎಂದರೆ charitable institution organised on All India basis with Wakf Council at the Head of the entire country and Wakf Board in other States.

ಆದುದರಿಂದ ಕಾನೂನು ಪ್ರಕಾರ ಯಾವುದು ಇದೆ. 1954ರ ವಕ್ಫ್ ಆಕ್ಟ್ ಇದನ್ನು ಮೌಲಾನಾ ಅಬ್ದುಲ್ ಕಲಮ್ ಅಜಾದ್‌ರವರು ಇದನ್ನನು ಆಗ ಪಾರ್ಲಿಮೆಂಟ್‌ನಲ್ಲಿ ತಂದರು. ಇದು ಸೆಂಟ್ರಲ್ ಆಕ್ಟ್ ಆಗಿದೆ. ಇದನ್ನು ಯಾವ ಕಾರಣದಿಂದ, ಯಾವ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದೇವೆ. ಬಹಳ ಒಳ್ಳೆಯ ಉದ್ದೇಶದಿಂದ ತಂದಿದ್ದೇವೆ. ಇದನ್ನು ಯಾವ ರಾಜಕೀಯ ಉದ್ದೇಶದಿಂದಲೂ ತರಲಿಲ್ಲ, ಏತಕ್ಕೆಂದರೆ ನಿಮ್ಮ ಗಮನಕ್ಕೂ ಬಂದಿರಬಹುದು. ನಮ್ಮ ಗಮನಕ್ಕೂ ಬಂದಿರಬಹುದು. ಬಹಳಷ್ಟು ಕಂಪ್ಲೆಟ್ಸ್ ಎಂದರೆ ಹೇಳುವುದಕ್ಕೇ ಸಾಧ್ಯ ಇಲ್ಲ., ಅಷ್ಟು ಕಂಪ್ಲೇಂಟ್ಸ್ ಬಂದವು. ಆ ನಂತರ ನಿಮ್ಮವರೇ ಆದ ಮೊಯ್ದೀನ್‌ರವರು ಎಂ.ಎಲ್.ಸಿ. ಕೂಡಾ ಆಗಿದ್ದಾರೆ. ಅವರೂ ಸಹ ನಮಗೆ ಹೇಳಿದರು. ನಮಗೂ ನೋಡುವುದಕ್ಕೆ ಆಗುವುದಿಲ್ಲ, ನಾನು ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದರು, ಯಾವ ದುರುದ್ದೇಶವೂ ಇಲ್ಲ, ಮೊಯಿನುದ್ದೀನ್ ಸಾಹೇಬರಿಗೆ ಬೇಕಾದರೆ ಕೇಳಿ. ಅವರು ರಿಸೈನ ಮಾಡಿದರು. ಏನೂ ಸರಿಯಾಗಿ ನಡೆಯುತ್ತಿಲ್ಲ, ಎಂದು ರಿಸೈನ್ ಮಾಡಿದರು. ಇದರಲ್ಲಿ ಯಾವ ದುರುದ್ದೇಶ ಇಲ್ಲ, ಇದರಿಂದ ಆಗುವುದೂ ಏನಿಲ್ಲ ಹೋಗುವುದೂ ಏನಿಲ್ಲ, ರಿಸರ್ವೇಷನ್ ಆಫ್ ವಕ್ಫ್ ಇನ್‌ಸ್ಟಿಟ್ಯೂಷನ್ ಮತ್ತು ವಕ್ಫ್' ಪ್ರಾಪರ್ಟಿ ಇದು ನಮ್ಮ ಮೂಲ ಉದ್ದೇಶ.

ಈ ಸಂಸ್ಥೆಗಳನ್ನು ಕಾಪಾಡಿಕೊಳ್ಳಬೇಕು. ಈ ಸಂಸ್ಥೆಗಳಿಂದ ಯಾವ ಕಮ್ಯೂನಿಟಿಗೆ ಲಾಭ ಆಗಬೇಕು, ಅದಕ್ಕಾಗಿ ಈ ಸಂಸ್ಥೆಗಳನ್ನೆಲ್ಲಾ ಒಟ್ಟು ಮಾಡಿ ಚೆನ್ನಾಗಿ ಮಾಡಬೇಕು. ಆದ್ದರಿಂದ ನಾನು ಇದನ್ನೆಲ್ಲಾ ಕ್ಲೀನ್ ಮಾಡಬೇಕೆಂದು ಹಲವಾರು ಸ್ಟೆಪ್ಸ್ ತೆಗೆದುಕೊಂಡಿದ್ದೇನೆ. ಪೇಪರ್‌ನಲ್ಲಿ ಬಂದಿರಬಹುದು. ಹಲವಾರು ಸ್ಟೆಪ್ಸ್ ತೆಗೆದುಕೊಂಡು ಯಾವ ಕಮ್ಯುನಿಟಿಗೆ ಯಾವ ಬಡ ಮುಸಲ್ಮಾನರಿಗೆ ಲಾಭ ಆಗಬೇಕು ಅವರಿಗೆ ಒಂದು ಸಾವಿರ ಜನಕ್ಕೆ ಸ್ಕಾಲರ್‌ಶೀಪ್ ಇಲ್ಲಿಯೂ ಕೂಡ ಮುಸ್ಲಿಂ ಅಂತ ಉಪಯೋಗ ಮಾಡಿದರೆ ತಾವ್ಯಾರು ಗಾಬರಿಪಡಬೇಕಾದದು ಬೇಡ. ಮುಸ್ಲಿಂ ಕಮ್ಯುನಿಟಿಯ 500 ಜನ ಹುಡುಗಿಯರಿಗೆ 500 ಜನ ಹುಡುಗರಿಗೆ ಎಂದು ಮಾಡಿದ್ದೇವೆ. ಯಾವ ಸೆಕ್ಯುಲರ್‌ಗೆ ಇದರಿಂದ ಹಾನಿ ಆಗುತ್ತದೆ. ಸೆಕ್ಯುಲರ್ ಮೇಲೆ ಆಕಾಶ ಕಳಚಿ ಬೀಳುತ್ತದೆ ಎಂದರೆ ನನಗೆ ಬಹಳ ಆಶ್ಚರ್ಯ ಆಯಿತು. ನಮ್ಮೆಲ್ಲಾ ಸ್ನೇಹಿತರು ಹೇಳುವಾಗ ಅದಕ್ಕೆ ವಕ್ಫ್ ಆಕ್ಟ್ ಇವತ್ತು it is a personal law, law of the community that is the basis just like Hindu Marriage Act, Hindu Succession Act and there are nine subjects which come under the personnel law.

ಮುಸ್ಲಿಂ ಕಮ್ಯುನಿಟಿಗೆ ಬಿಟ್ಟ ಎಲ್ಲಾ ಜನರಲ್ ಲಾ ಅಪ್ಲೇ ಆಗುತ್ತದೆ. ಮ್ಯಾರೇಜ್ ಬಗ್ಗೆ ಮುಸ್ಲಿಂ ಮ್ಯಾರೇಜ್ ಆಕ್ಟ್ ಅಪ್ಲೈ ಆಗುತ್ತದೆ. ಅದೇ ರೀತಿ ಸಕ್ಸೇಶನ್ ಬರುವಾಗ ಮುಸ್ಲಿಂ ಸಕ್ಸೇಶನ್ ಆಕ್ಟ್ ಅಪ್ಲೈ ಆಗುತ್ತದೆ. ಹಿಂದುಗಳಿಗೆ ಹಿಂದೂ ಸಕ್ಸೇಶನ್ ಆಕ್ಟ್ ಅಪ್ಲೈ ಆಗುತ್ತದೆ. ಟೆಂಪಲ್ ಮಸೀದಿ ಇನ್ನು ಯಾವುದು ಇದೆ ಗುರುದ್ವಾರ್ ಇವೆಲ್ಲಾ ಪರ್ಸನಲ್ ಲಾ ಅಪ್ಲೈ ಆಗುತ್ತದೆ. ಹಿಂದುಗಳಿಗೆ ಬೇಕಾದಂತಹ ಟೆಂಪಲ್ಸ್ ಮಠಗಳಿಗೆ ಹಿಂದೂ ಲಾ ಅಪ್ಲೈ ಆಗಬೇಕೆಂದು ಅಲ್ ಇಂಡಿಯಾ ಆಕ್ಟ್ ಅಪ್ಲೈ ಆಗಬೇಕು. ನಾನು ಎಷ್ಟೋ ಸಲ ಹೇಳಿದ್ದೇನೆ. ವಕ್ಫ್ ಆಕ್ಟ್ ಇದ್ದ ಹಾಗೆ ಹಿಂದೂ ಲಾ ಒಟ್ಟುಗೂಡಿಸಿ ಕನ್‌ಸಾಲಿಡೇಟೆಡ್ ಮಾಡಬೇಕೆಂದು ಆ ದೇವರಾಜು ಅರಸು ಮಿನಿಸ್ಟ್ರಿ ಇದ್ದಾಗ ನಾನು ಹೇಳಿದ್ದೇನೆ. ವಿಧ ವಿಧವಾದ ಡೈವರ್ಜೆಂಟ್ ಆಫ್ ವೀವ್ಸ್ ಇರುವುದರಿಂದ ಕನ್‌ಸಾಲಿರೇಟೆಡ್ ಮಾಡಲಿಕ್ಕೆ ಹಿಂದೂ ಇನ್‌ಸ್ಟಿಟ್ಯೂಶನ್ಸ್ ಒಂದು ಕಡೆ ಒಂದು ಆಕ್ಟ್ ಕೆಳಗೆ ಬರುವಂತೆ ಮಾಡುವುದಕ್ಕೆ ಇದುವರೆಗೂ ಆಗಲಿಲ್ಲ. ಅದೇ ಮುಸ್ಲಿಂ ಲಾ ಪ್ರಕಾರ 1954ರಲ್ಲಿ ಅದಕ್ಕಿಂತ ಮುಂಚೆ ಇರಲಿಲ್ಲ. ಎಲ್ಲಾ ಮುಸ್ಲಿಂ ಇನ್‌ಸ್ಟಿಟ್ಯೂಟ್ಸ್ ಕನ್‌ಸಾಲಿಡೇಟೆಡ್ ಮಾಡಿಕೊಂಡು ಒಂದು ಆಕ್ಟ್ ಮಾಡಿದ್ದೇವೆ. ಇದರಿಂದ ಸೆಕ್ಯುಲರಿಸಂಗೆ ಘಾತ ಆಗಿದೆಯೆಂದು ನನಗೆ ಅರ್ಥ ಆಗಲಿಲ್ಲ.

ಶ್ರೀ ಎಂ. ನಾರಾಯಣಸ್ವಾಮಿ : 54ರಲ್ಲಿ ಆಕ್ಟ್ ಮಾಡಿದ್ದೀರಿ ಏನು ಪ್ರಯೋಜನ ?

ಶ್ರೀ ಎಸ್.ಎಂ. ಯಾಹ್ಯಾ : ಸ್ವಲ್ಪ ಕೇಳಿಕೊಳ್ಳಿ. ಬಹಳ ಚೆನ್ನಾಗಿ ಬೈರೇಗೌಡರು ಒಂದು ಮಾತು ಹೇಳಿದರು. ಅದಕ್ಕೆ ನೆನಪು ಬರುತ್ತದೆ. ನಾನು ವಕ್ಫ್ ಬಗ್ಗೆ ಸ್ಟಡೀ ಮಾಡಿಲ್ಲ ನನಗೇನೂ ಗೊತ್ತಿಲ್ಲ ಎಂದು ಆ ಒಂದು ವಿಚಾರ ಕರೆಕ್ಟ್ ಆಗಿದೆ. ಆಫೀಸರ್ಸ್ ಆಗಲಿ ಯಾರೇ ಆಗಲಿ ನಾನು ಹೇಳುವುದು ಅಲ್ಲ ಅವರಿಗೂ ಎಷ್ಟೋ ವಿಚಾರಗಳು ಗೊತ್ತಾಗುವುದಿಲ್ಲ. ಮತ್ತೆ ನಾನು ಎಷ್ಟೋ ಸಲ ಯೋಚನೆ ಮಾಡಿದ್ದೇನೆ. ಎಲ್ಲಾ ಡಿಸ್ಟ್ರಿಕ್ಟ್‌ನಲ್ಲಿ ಒಂದು ಸ್ಟೇಟ್ ಲೆವೆಲ್‌ನಲ್ಲಿ ನಾನು ಮುಖ್ಯಮಂತ್ರಿಗಳಿಗೆ ಹೇಳಿದೆ. preservation of wakf properties

Irregularities - it is not only Muslims concerned, it is a Central Act.

ಎಲ್ಲಾ ಡಿಸ್ಟ್ರಿಕ್ಟ್‌ನಲ್ಲಿ ನಾವು ಇನ್ನು 5-10 ದಿವಸದಲ್ಲಿ ಶುರು ಮಾಡುತ್ತೇವೆ. ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲಿ ವಕ್ಫ್ ವಿಚಾರದಲ್ಲಿ ನಾವು ಒಂದು ಸಭೆ ಮಾಡಿಕೊಂಡು ಎಲ್ಲಾ ಲೆಜಿಸ್‌ಲೇಟರ್ಸ್ ಯಾವುದೇ ಕಮ್ಯುನಿಟಿ ಇರಲಿ ಅವರಿಗೂ ಆಕ್ಟ್ ಪ್ರಕಾರ ರೆಸ್ಪಾನ್ಸಿಬಲಿಟಿ ಇದೆ. ವಕ್ಫ್ ಇನ್‌ಸ್ಟಿಟ್ಯೂಶನ್ಸ್ ವಕ್ಫ್ ಪ್ರಾಪರಿಟಿ ಪ್ರಿಜರ್ವ್ ಮಾಡಬೇಕೆಂದು ಇದೆ. ಅದಕ್ಕಾಗಿ ನಾನು ಹೇಳಿದೆ ಬೈರೇಗೌಡರು ಬಹಳ ಚೆನ್ನಾಗಿ ಹೇಳಿದರು. ನಾನು 1974ರಲ್ಲಿ ವಕ್ಫ್ ಮಿನಿಸ್ಟರ್ ಆಗಿದ್ದಾಗ ಒಂದು ವರ್ಷ ಬಹಳ ಚೆನ್ನಾಗಿ ಮಾಡಿದ್ದೆ. ಕೊಡಗಿನಲ್ಲಿ ನಮ್ಮ ಬೆಳ್ಳಿಯಪ್ಪನವರು ಇದ್ದರು. ಆ ಕಾಲದಲ್ಲಿ ಅವರು ಇದ್ದರು. ಜನರಲ್ ವಕ್ಫ್ ವಿಚಾರದಲ್ಲಿ ಅವರಿಗೆ ಮಾತನಾಡಲಿಕ್ಕೆ ಗೊತ್ತಿಲ್ಲ. ಆ ಕಾರಣದಿಂದ ವಕ್ಫ್ ಆಕ್ಟ್ ಮುಖಾಂತರ ನಾವು ತಿಳಿಸುತ್ತೇವೆ.

This is part of the personal law, it helps the Community and Wakf Act 1954-Section 10 read with section 20. The Chairman and all Members must be/Muslims because it is part of personal law. This is the logic otherwise I am the last person. We always uphold the norms 8 & secualrism. Those who talk secularism they are the real pseudo secular, they are most communal people. They talk pseudo secularism. Thses are the people who destroyed the whole structure, those people who are defeating this country. Therefore, I said it is a personal law which many of you don't know I understand I have decided that there should be a Conference of Wakf at the State level and district levels. There will be a big Conference in Bangalore. it is State-wise. This is just to educate and to get support from you also. This is one part of it. Secondly, these are 11 members including the Chairman along with members. All must be muslims because it is a personal law. There must be one shia. This Special officers is just substitute the Board. The Special Officer is just like Chairman and Members of the whole thing. In 1954 Act, we have no power also, we have given residuary power under the Act. We have used that power under the Act. Special Officer substitute the Board. The Board consists of the Chairman and Members all of them are muslims. It is nothing against the secularism and it is nothing against the part of our personal law. The Constitution of India prevails here. As long as the Constitution of India provides for it will continue. All this is there, whether we call Hindu Succession Act, Hindu Marriages Act or Muslim Succession Act- all these things remain because of our Constitutions. There is a right. What the constitution provides cannot be called communal. What the Constitution provides it cannot be less than secular. The Constitution

provides only secular attitude. Therefore, what Constitution provides, how can it be communal and how can it be illegal and unconstitutonal? So, it is within the purview of law and Constitutional law. Therefore, there is nothing communal. Therefore, there is nothing wrong or communal, So, the special officer or the Administrator, Who is No.1, legally also should be there, because substitute the members and Chairman of the Board. The purpose of appointing a muslim Officer is that he should be helpful practically also to the Board. He should be a person who know the muslim law. It is nothing communal like. it is nothing non-secular. If necessary we can suggest the Government of India to change the Wakf Act also in cases of like this. But, as we are within the Constitutional lilmit, we are within the limit of the Central Law and therefore, there is nothing objectionable at all. I don't want to say much about this. These are all the things talked over. We cannot change if you want to change also. We have to work with in the frame work of the Contitution. We have to work within provisions of the law. You see, in Central Government invariably the Wakf Minister need not be a muslim. Law never say a Muslim should alone be the Wakf Minister. Throughout, you see. Here also, usually the Revenue Minister is the Wakf Minister. otherwise, there is nothing in it. The Revenue Minister. will not be having time and as such it will be tagged on to a Muslim Minister. Absolutely there is nothing wrong. It can be looked after by any Minister of any community. Here, we are within the framework of the law and with in the framework of the Wakf Act and Personal Law. We cannot change because it is the Act of the Government of India. Absolutely there is nothing wrong. My friends should not feel that secualrism has collapsed. We will not do that. We are absolutely secular in our nature and in our attitude. If necessary we will create secualr attitude throughout the country.

SRI.R.V. DESHPANDE : We admire the Hon'ble Minister as far as certain things are concerned.

ಅವರು ಈಗಾಗಲೇ ಹೇಳಿದಹಾಗೆ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಕೊಡುವ ಈ ಕೆಲಸವನ್ನು ನಾನು ಅಡ್‌ಮೈರ್ ಮಾಡುತ್ತೇವೆ. ಹಾಗೆಯೇ ವಕ್ಫ್ ಪ್ರಾಪರ್ಟಿಯನ್ನು ಪ್ರೊಟೆಕ್ಟ್ ಮಾಡುವುದು ಕೇವಲ ಮುಸಲ್ಮಾನರದ್ದು ಮಾತ್ರವಲ್ಲ, ನಮ್ಮೆಲ್ಲರ ಕೆಲಸವೂ ಆಗಿದೆ, ಇದರಲ್ಲಿ ಎಲ್ಲರೂ ಭಾಗಿಯಾದ ಬೇಕಾಗುತ್ತದೆ. ಎಲ್ಲಾ ತರಹದ ಸಹಕಾರ ಎಲ್ಲರಿಂದಲೂ ಸಿಗಬೇಕಾಗುತ್ತದೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಹಾಗೆಯೇ ವಕ್ಫ್‌ಬೋರ್ಡ್ ಪರ್ಸನಲ್ ಲಾ ಎಂಬುದನ್ನು ಕೂಡ ನಾವು ಒಪ್ಪಿಕೊಳ್ಳುತ್ತೇನೆ. ವಕ್ಫ್‌ಬೋರ್ಡ್‌ಗೆ ಗ್ರಾಂಟ್‌ನ್ನು ಸರಕಾರದವರು ಬೇಕಾದಷ್ಟು ಕೊಡುವ ಆ ಕೆಲಸವನ್ನು ಮಾಡಬೇಕಾಗುತ್ತದೆ, ಏಕೆಂದರೆ ಸಾಕಷ್ಟು ಜನರು ಅಲ್ಪಸಂಖ್ಯಾತರು ಇದ್ದಾರೆ. ಅಲ್ಪಸಂಖ್ಯಾತರ ಸಂಸ್ಥೆಗಳು ನಮ್ಮಲ್ಲಿ ಸಾಕಷ್ಟು ಇವೆ. ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಸಾಕಷ್ಟು ಮಸೀದಿಗಳು ಇವೆ. ಅವುಗಳನ್ನು ಕಟ್ಟಲು ಹಣ ಇಲ್ಲ. ಅವುಗಳಿಗೆ ಸಹಾಯ ಮಾಡಬೇಕಾಗುತ್ತದೆ. ನಾವು ಕೂಡ ಆ ಬಗ್ಗೆ ಒತ್ತಾಯ ತಂದಿದ್ದೇವೆ. ಆ ಬಗ್ಗೆ ಯಾವ ಸಂದೇಹವೂ ಇಲ್ಲ. ಆ ಬಗ್ಗೆ ನಮ್ಮ ಸಹಕಾರವೂ ಇದೆ. ಆದರೆ ತಾವು ಏನು ಹೇಳಿದ್ದೀರಿ ಅಂದರೆ, ಚೇರ್ಮನ್ ಮತ್ತು ಮೆಂಬರ್ಸ್ should be muslims. That is provided. No hindu could be a member there. ನಾವು ಒಪ್ಪಿಕೊಳ್ಳುತ್ತೇವೆ. The appointment of a special officers is not correct. He is not appointed for a permanent period you have appointed him for a period of one year.

ಅಂದರೆ ತಾವು ಸ್ಪೆಸಿಫಿಕ್ ಆಗಿ ಮುಸಲ್ಮಾನರನ್ನೇ ಅಪಾಯಿಂಟ್ ಮಾಡಬೇಕೆಂದು ಹಾಕಿದ ವರ್ಡ್ ಏನಿದೆ ಅದನ್ನು ಹಾಕುವ ಅವಶ್ಯಕತೆ ಇದ್ದಿಲ್ಲ-ಎಂದು ನಾನು ಭಾವಿಸುತ್ತೇನೆ. There is no necessity of bringing this provision. Even if you have appointed a muslim officer in the normal course, we would not have abjected.

SRI S.M. YAHYA : The Special officer discharges the duties of the wohle Board. That means he is substituting the Board. I mean there is quite a legal point involved in it. Otherwise, what is there in it. Without mentioning muslim we cannot appoint a muslim also. There is nothing wrong in this. Let us educate. (Interruptions) I am frankly telling you, without that also. I came recently and I never knew all these things. I did lot of studies on all these things. The Law Department has also given the opinion, because that means the main Act will be affected because he is substituting the Board. The Board consists of the Chairman and Muslim members. If he wants to discharge his duties and responsibilities then a muslim must be there. This is also the advice given to us. This is absolutely right according to me.

Sri R.V. DESH-PANDE : I fully support as far as the upliftment of minorities are concerned. I feel it a duty to support bill it. But, somehow

we are not convinced that it is not a politically motivated. First of all the Bill is politically motivated. Because the Chairman belongs to the Janatha Dal Party and only to remove him this Bill is brought and secondly, we still feel that there was no necessity for the use of the words 'Muslim shall be appointed' On this pretext we walk out and express our protest for this Bill.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಹಿಂದೂ ಸಂಸ್ಥೆಗಳು ಇದ್ದರೆ, ಅಲ್ಲಿ ಎಸ್‌ಸಿ, ಎಸ್‌ಟಿ ಮೆಂಬರ್ಸ್ ನಾಮಿನೇಟ್ ಮಾಡುತ್ತೀರಿ. ನಿಮ್ಮದು ಏನಾದರೂ ವಿಷಯ ಬಂದರೆ ಅಲ್ಲಿ ಪರ್ಸನಲ್ ಲಾ ಎಂದು ಹೇಳುತ್ತೀರಿ. ಅಲ್ಲಿ ಬೇರೆ ಯಾರನ್ನೂ ಹಾಕುವುದಿಲ್ಲ. ಆದರೆ ಹಿಂದು ಸಂಸ್ಥೆಗಳ ವಿಚಾರ ಬಂದರೆ ಅಲ್ಲಿ ರಿಸರ್ವೇಶನ್ ಎಂದು ಹೇಳುತ್ತೀರಿ.

ಶ್ರೀ ವಾಟಾಳ್ ನಾಗರಾಜ್ : ಇದು ಒಳ್ಳೆಯ ನೀತಿ ಅಲ್ಲ. ಸರ್ಕಾರಕ್ಕೆ ಇನ್ನೂ ಅವಕಾಶ ಇದೆ, ಮತ್ತೊಮ್ಮೆ ಪರಿಶೀಲನೆ ಮಾಡಲಿ.

ಉಪಾಧ್ಯಕ್ಷಣಿಯವರು : ಸರಕಾರದ ಕಡೆಯಿಂದ ಏನು ಉತ್ತರವನ್ನು ಕೊಡಬೇಕೊ ಅದನ್ನು ಕೊಟ್ಟಿದ್ದಾರೆ. ತಾವುಗಳು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಮತ್ತೊಮ್ಮೆ ಅವರು ಪರಿಶೀಲನೆ ಮಾಡಲಿ ಇವತ್ತು ಇದನ್ನು ತರುವುದು ಬೇಡ, ಇವತ್ತು ತಡೆಹಿಡಿಯಿರಿ.

ಉಪಾಧ್ಯಕ್ಷಿಣಿಯವರು : ಪರಿಶೀಲನೆ ಮಾಡಿ ಏನು ಉತ್ತರ ಕೊಡಬೇಕೋ ಅದನ್ನು ಕೊಟ್ಟಾಗಿದೆ. ಈಗ ನಾನು ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ ಆದಷ್ಟೂ ತಾವು ಹೇಳಿದ್ದೀರಿ, ಅವರೂ ಉತ್ತರ ಕೊಟ್ಟಿದ್ದಾರೆ.

ಉಪಾಧ್ಯಕ್ಷಣಿಯವರು : ಪ್ರಸ್ತಾವ ಏನೆಂದರೆ, 1992ನೇ ಸಾಲಿನ ಕರ್ನಾಟಕ ವಕ್ಫ್ ಮಂಡಲಿ(ವಿಶೇಷಾಧಿಕಾರಿಯ ನೇಮಕ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2ರಿಂದ 6ರವರೆಗೆ

ಉಪಾಧ್ಯಕ್ಷಣಿಯವರು : "ಖಂಡ 2ರಿಂದ 6ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2ರಿಂದ 6ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 1 ಇತ್ಯಾದಿ.

ಉಪಾಧ್ಯಕ್ಷಣಿಯವರು : ಪ್ರಸ್ತಾವ ಏನೆಂದರೆ ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು).

ಶ್ರೀ ಎಸ್.ಎಂ. ಯಾಹ್ಯಾ: (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು) : 1992ನೇ ಸಾಲಿನ ಕರ್ನಾಟಕ ವಕ್ಫ್ ಮಂಡಲಿ (ವಿಶೇಷಾಧಿಕಾರಿಯ ನೇಮಕ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಣಿಯವರು : ಪ್ರಸ್ತಾವ ಏನೆಂದರೆ "1992ರ ಕರ್ನಾಟಕ ವಕ್ಫ್ ಮಂಡಲಿ (ವಿಶೇಷಾಧಿಕಾರಿಯ ನೇಮಕ) ವಿಧೇಯಕವನ್ನು ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಉಪಾಧ್ಯಕ್ಷಣಿಯವರು : ಅಯೋಧ್ಯೆಯ ಘಟನೆಯ ನಂತರ ರಾಜ್ಯದಲ್ಲಿ ಇತ್ತೀಚೆಗೆ ಜರುಗಿದ ಕೋಮುಗಲಭೆಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ ಮೇಲೆ ಚರ್ಚೆ ಮುಗಿದಿದೆ. ನಾಳೆ ದಿವಸ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಈಗ ಸಭೆಯನ್ನು ಮುಂದೂಡಿ ನಾಳೆ ಬೆಳಿಗ್ಗೆ 11ಗಂಟೆಗೆ ಮತ್ತೆ ಸೇರಲಾಗುವುದು.

(ಸದನವು 8 ಗಂಟೆ 24 ನಿಮಿಷಕ್ಕೆ ಮುಕ್ತಯವಾಗಿ, ಪುನಃ ದಿನಾಂಕ 5ನೇ ಜನವರಿ ಮಾಹೆ 1993ರ ಮಂಗಳವಾರದಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ನಿರ್ಧರಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತಿದೆ)

ಅನುಬಂಧ I

ಕರ್ನಾಟಕ ವಿಧಾನಸಭೆ

ಒಂಭತ್ತನೆ ವಿಧಾನಸಭೆ

(ಎಂಟನೆಯ ಅಧಿವೇಶನ)

ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 1992.

(1992ರ ವಿಧಾನಸಭಾ ವಿಧೇಯಕ ಸಂಖ್ಯೆ 29)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ :

ಭಾರತ ಗಣರಾಜ್ಯದ ನಲವತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.

1. ಚಿಕ್ಕ ಹೆಸರು ಮತ್ತು ಪ್ರಾರಂಭ, (1) ಈ ಅಧಿನಿಯಮವನ್ನು ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1992 ಎಂದು ಕರೆಯತಕ್ಕದ್ದು.

(2) ಇದು 1992ರ ನವೆಂಬರ್ 9ರಿಂದ ಜಾರಿಗೆ ಬಂದಿರುವುದಾಗಿ ಭಾವಸತಕ್ಕದ್ದು.

2. 1979ರ ಕರ್ನಾಟಕ ಅಧಿನಿಯಮ 27ರ ತಿದ್ದುಪಡಿ : 1979ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮದಲ್ಲಿ (1979ರ ಕರ್ನಾಟಕ ಅಧಿನಿಯಮ 27).

(1) 3ಸಿ ಪ್ರಕರಣವನ್ನು ಲೋಪಿಸತಕ್ಕದ್ದು ;

(2) 4ನೇ ಪ್ರಕರಣದ, 1ನೇ ಉಪ ಪ್ರಕರಣದ, (ಎ) ಖಂಡದಲ್ಲಿ "1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ (1957ರ ಕರ್ನಾಟಕ ಅಧಿನಿಯಮ 25) ಮೇರೆಗೆ ಯಾರ ವಹಿವಾಟಿನ ಒಟ್ಟು ಮೊತ್ತವು ಒಂದು ವರ್ಷದಲ್ಲಿ ಎಪ್ಪತ್ತೈದು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲರೊ" ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳಿಗೆ ಬದಲಾಗಿ "1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ (1957ರ ಕರ್ನಾಟಕ ಅಧಿನಿಯಮ 25) 10ನೇ ಪ್ರಕರಣದ ಮೇರೆಗೆ ನೋಂದಾಯಿಸಲಾದ ಅಥವಾ ನೋಂದಾಯಿಸಲು ಬದ್ಧರಾದ" ಎಂಬ ಪದಗಳು ಅಂಕಿಗಳು ಮತ್ತು ಆವರಣಗಳನ್ನು ಪ್ರತಿಯೋಜಿಸತಕ್ಕದ್ದು;

(3) "ಸಹಾಯಕ ಕಮೀಷನರು, ಡೆಪ್ಯುಟಿ ಕಮೀಷನರು" ಮತ್ತು "ಜಂಟಿ ಕಮೀಷನರು" ಎಂಬ ಅಭಿವ್ಯಕ್ತಿಗಳು ಬರುವೆಡೆಯಲ್ಲೆಲ್ಲ ಅನುಕ್ರಮವಾಗಿ "ಡೆಪ್ಯುಟಿ ಕಮೀಷನರ್" ಜಂಟಿ ಕಮೀಷನರ್" ಮತ್ತು "ಅಡಿಷನಲ್ ಕಮೀಷನರ್" ಎಂಬ ಅಭಿವ್ಯಕ್ತಿಗಳನ್ನು ಪ್ರತಿಯೋಜಿಸತಕ್ಕದ್ದು.

3. 1979ರ ಕರ್ನಾಟಕ ಅಧಿನಿಯಮ 35ನೇ ಪ್ರಕರಣದ ತಿದ್ದುಪಡಿ : 1979ರ ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ

ಅಧಿನಿಯಮದ (1976ರ ಕರ್ನಾಟಕ ಅಧಿನಿಯಮ 35) 'ಸಹಾಯಕ ವೃತ್ತಿ ತೆರಿಗೆ ಅಧಿಕಾರ", "ವೃತ್ತಿ ತೆರಿಗೆ ಅಧಿಕಾರಿ", "ಡೆಪ್ಯುಟಿ ಕಮೀಷನರ್" ಮತ್ತು "ಜಂಟಿ ಕಮೀಷನರ್" ಎಂಬ ಅಭಿವ್ಯಕ್ತಿಗಳು ಬರುವೆಡೆಯಲ್ಲೆಲ್ಲ ಅನುಕ್ರಮವಾಗಿ "ವೃತ್ತಿ ತೆರಿಗೆ ಅಧಿಕಾರಿ" "ಸಹಾಯಕ ವೃತ್ತಿ ತೆರಿಗೆ ಕಮೀಷನರ್", "ಜಂಟಿ ಕಮೀಷನರ್" ಮತ್ತು "ಅಡಿಷನಲ್ ಕಮೀಷನರ್" ಎಂಬ ಅಭಿವ್ಯಕ್ತಿಗಳನ್ನು ಪ್ರತಿಯೋಜಿಸತಕ್ಕದ್ದು

4. 1958ರ ಕರ್ನಾಟಕ ಅಧಿನಿಯಮ 30ರ ತಿದ್ದುಪಡಿ : 1958ರ ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮದಲ್ಲಿ (1958ರ ಕರ್ನಾಟಕ ಅಧಿನಿಯಮ 30) "ಸಹಾಯಕ ಕಮೀಷ್ನರ್" ಮತ್ತು "ಜಂಟಿ ಕಮೀಷನರ್" ಎಂಬ ಅಭಿವ್ಯಕ್ತಿಗಳು ಬರುವೆಡೆಯೆಲ್ಲೆಲ್ಲಾ ಅನುಕ್ರಮವಾಗಿ "ಡೆಪ್ಯುಟಿ ಕಮೀಷನರ್" ಮತ್ತು "ಅಡಿಷನಲ್ ಕಮೀಷನರ್" ಎಂಬ ಅಭಿವ್ಯಕ್ತಿಗಳನ್ನು ಪ್ರತಿಯೋಜಿಸತಕ್ಕುದು.

5. 1957ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ : 1957ರ ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮದಲ್ಲಿ (1957ರ ಕರ್ನಾಟಕ ಅಧಿನಿಯಮ 22) "ಸಹಾಯಕ ಕೃಷಿ ವರಮಾನ ತೆರಿಗೆ ಅಧಿಕಾರಿ " "ಕೃಷಿ ವರಮಾನ ತೆರಿಗೆ ಅಧಿಕಾರಿ". "ಸಹಾಯಕ ಕಮೀಷನರ್" "ಡೆಪ್ಯುಟಿ ಕಮೀಷನರ್" ಮತ್ತು "ಜಂಟಿ ಕಮೀಷನಲ್" ಎಂಬ ಅಭಿವ್ಯಕ್ತಿಗಳು ಬರುವೆಡೆಯಲ್ಲೆಲ್ಲಾ ಅನುಕ್ರಮವಾಗಿ "ಕೃಷಿ ವರಮಾನ ತೆರಿಗೆ ಅಧಿಕಾರಿ" "ಕೃಷಿ ವರಮಾನ ತೆರಿಗೆಯ ಸಹಾಯಕ ಕಮೀಷನರ್", "ಡೆಪ್ಯುಟಿ ಕಮೀಷನರ್", "ಜಂಟಿ ಕಮೀಷನರ್" ಮತ್ತು "ಅಡಿಷನಲ್ ಕಮೀಷನರ್" ಎಂಬ ಅಭಿವ್ಯಕ್ತಿಗಳನ್ನು ಪ್ರತಿಯೋಜಿಸತಕ್ಕದ್ದು.

6. 1957ರ ಕರ್ನಾಟಕ ಅಧಿನಿಯಮ 25ರ ತಿದ್ದುಪಡಿ : 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದಲ್ಲಿ (1957ರ ಕರ್ನಾಟಕ ಅಧಿನಿಯಮ 25)

(1) 8ಎ ಪ್ರಕರಣದಲ್ಲಿ (5)ನೇ ಉಪಪ್ರಕರಣದ ತರುವಾಯ ಈ ಮುಂದಿನ ಉಪ ಪ್ರಕರಣವನ್ನು 1984ರ ಏಪ್ರಿಲ್ ಮೊದಲನೇ ದಿನಾಂಕದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು, ಎಂದರೆ...

"(6) (1)ನೇ ಉಪಪ್ರಕರಣದ ಅಥವಾ (2ಎ) ಉಪಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ಅಧಿಸೂಚನೆಯು, ಯಾವುದೇ ನಿರ್ದಿಷ್ಟ ಸರಕುಗಳು ಅಥವಾ ಸರಕುಗಳ ವರ್ಗದಿಂದ ಅಥವಾ ವ್ಯಕ್ತಿಗಳ ಯಾವುದೇ ನಿರ್ದಿಷ್ಟ ವರ್ಗದಿಂದ ಅಥವಾ ವ್ಯಾಪಾರಿಗಳ ಯಾವುದೇ ನಿರ್ದಿಷ್ಟ ವರ್ಗದಿಂದ ಯಾವುದೇ ನಿರ್ದಿಷ್ಟ ವರ್ಗದ ಸರಕುಗಳ ಮಾರಾಟ ಅಥವಾ ಖರೀದಿಯ ಮೇಲಣ ಅಂಥ ಅಧಿಸೂಚನೆಗನುಸಾರವಾಗಿ ಸಂದಾಯ ಮಾಡಬೇಕಾದ ತೆರಿಗೆಯನ್ನು ಈ ಅಧಿನಿಯದಲ್ಲಿ ತಿದ್ದುಪಡಿ ಮಾಡುವ ಮೂಲಕ ಮಾರ್ಪಾಟು ಮಾಡಿದ್ದರೂ, (3)ನೇ ಉಪ ಪ್ರಕರಣದ ಮೇರೆಗೆ ಅದನ್ನು ರದ್ದುಪಡಿಸುವವರೆಗೆ ಮಾನ್ಯವಾಗಿರತಕ್ಕದ್ದು.

(2) 22ಎ ಪ್ರಕರಣದಲ್ಲಿ,

(i) (3)ನೇ ಉಪ ಪ್ರಕರಣದಲ್ಲಿ "ಯಾವುದೇ ಆದೇಶವನ್ನು ಹೊರಡಿಸುವ" ಎಂಬ ಪದಗಳಿಗೆ ಬದಲಾಗಿ "ಯಾವುದೇ ಅಧಿಕಾರವನ್ನು ಚಲಾಯಿಸುವ " ಎಂಬ ಪದಗಳನ್ನು 1992ನೇ ಏಪ್ರಿಲ್ ಮೊದಲನೇ ದಿನಾಂಕದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿರುವುದಾಗಿ ಭಾವಿಸತಕ್ಕದ್ದು

(ii) (4)ನೇ ಉಪ ಪ್ರಕರಣದ ತರುವಾಯ, ಈ ಮುಂದಿನ ವಿವರಣೆಗಳನ್ನು ಸೇರಿಸತಕ್ಕದ್ದು, ಎಂದರೆ ;

ವಿವರಣೆ I : " (1) ಅಥವಾ (2)ನೇ ಉಪ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಯುಕ್ತ ಪ್ರಾಧಿಕಾರವು ಹೊರಡಿಸಿದ ಆದೇಶ ಅಥವಾ ದಾಖಲಿರ್ಮಾಡಿದ ವ್ಯವಹರಣೆಯು ಇತರ ಕೆಲವು ವ್ಯವಹರಣೆಗಳಲ್ಲಿ ರಾಜಸ್ವಕ್ಕೆ ವಿರುದ್ಧವಾಗಿ ಉಚ್ಚ ನ್ಯಾಯಾಲಯವು ತನ್ನ ತೀರ್ಮಾನವನ್ನು ನೀಡಿರುವ ಅಂಶವನ್ನು ಒಳಗೊಂಡಿದ್ದರೆ ಮತ್ತು ಉಚ್ಚ ನ್ಯಾಯಾಲಯದ ಅಂಥ ತೀರ್ಮಾನದ ವಿರುದ್ಧವಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಅಪೀಲು ಇತ್ಯರ್ಥದಲ್ಲಿದ್ದರೆ. (3)ನೇ ಪ್ರಕರಣದ (ಸಿ) ಖಂಡದಲ್ಲಿ ಉಲ್ಲೇಖಿತವಾದ ಅವಧಿಯನ್ನು ಲೆಕ್ಕ ಹಾಕುವಾಗ ಉಚ್ಚ ನ್ಯಾಯಾಲಯದ ತೀರ್ಮಾನದ ದಿನಾಂಕ ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಮಾನದ ದಿನಾಂಕದ ನಡುವಣ ಅವಧಿಯನ್ನು ಬಿಟ್ಟುಬಿಡತಕ್ಕದ್ದು.

ವಿವರಣೆ II: (3)ನೇ ಉಪ ಪ್ರಕರಣದ ಉದ್ದೇಶಕ್ಕಾಗಿ ಕಾಲಮಿತಿಯ ಅವಧಿಯನ್ನು ಲೆಕ್ಕ ಹಾಕುವಾಗ ಯಾವುದೇ ನ್ಯಾಯಾಲಯದ ನಿರ್ಬಂಧಕಾಜ್ಞೆಯ ಮೂಲಕ ಈ ಪ್ರಕರಣದ ಮೇರೆಗಿನ ಯಾವುದೇ ವ್ಯವಹರಣೆಯನ್ನು ಯಾವ ಅವಧಿಯವರೆಗೆ ತಡೆಹಿಡಿಯಲಾಗುವುದೋ ಆ ಯಾವುದೇ ಅವಧಿಯನ್ನು ಬಿಟ್ಟುಬಿಡತಕ್ಕುದು.

(3) **"ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿ",** "ವಾಣಿಜ್ಯ ತೆರಿಗೆ ಅಧಿಕಾರಿ", "ವಾಣಿಜ್ಯ ತೆರಿಗೆಗಳ ಸಹಾಯಕ ಕಮೀಷನರ್" "ಡೆಪ್ಯುಟಿ ಕಮೀಷನರ್" ಮತ್ತು "ಜಂಟಿ ಕಮೀಷನರ್" ಎಂಬ ಅಭಿವ್ಯಕ್ತಿಗಳು ಬರುವಡೆಯಲ್ಲೆಲ್ಲ ಅನುಕ್ರಮವಾಗಿ "ವಾಣಿಜ್ಯ ತೆರಿಗೆ ಅಧಿಕಾರಿ" "ವಾಣಿಜ್ಯ ತೆರಿಗೆಗಳ ಸಹಾಯಕ ಕಮೀಷನರ್" "ಡೆಪ್ಯುಟಿ ಕಮೀಷನರ್" "ಜಂಟಿ ಕಮೀಷನರ್" ಮತ್ತು "ಅಡಿಷನಲ್ ಕಮೀಷನರ್" ಎಂಬ ಅಭಿವ್ಯಕ್ತಿಗಳನ್ನು ಪ್ರತಿಯೋಜಿಸತಕ್ಕದ್ದು.

7. ಮಾನ್ಯೀಕರಣ : ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಯಾವುದೇ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಒಳಗೊಂಡಿದ್ದರೂ, 1984ನೇ ಏಪ್ರಿಲ್ ಮೊದಲನೇ ದಿನಾಂಕದಂದು ಅಥವಾ ಆ ತರುವಾಯ (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗುವ) 1957ರ ಕರ್ನಾಟಕ ಮಾರಾಟ ತೆರಿಗೆಗಳ ಅಧಿನಿಯಮದ (1957ರ ಕರ್ನಾಟಕ ಅಧಿನಿಯಮ 25) 8ಎ ಪ್ರಕರಣದ (1)ನೇ ಉಪಪ್ರಕರಣ ಅಥವಾ (2ಎ) ಉಪ ಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ಅಧಿಸೂಚನೆಯನ್ನು ಮಾನ್ಯವೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದಿಂದ ತಿದ್ದುಪಡಿಯೂದ ಮೂಲ ಅಧಿನಿಯಮದ 8ಎ ಪ್ರಕರಣದ ಉಪ ಬಂಧಗಳು 1984ರ ಏಪ್ರಿಲ್ ಮೊದಲನೇ ದಿನಾಂಕದಿಂದ ಜಾರಿಗೆ ಬರುವಂತೆ ಜಾರಿಯಲ್ಲಿದಿದ್ದರೆ ಹೇಗೋ ಹಾಗೆ, ಸದರಿ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ರದ್ದು ಮಾಡುವವರೆಗೆ, ಜಾರಿಯಲ್ಲಿರುವುದು ಮುಂದುವರಿಯತಕ್ಕುದು.

8. ನಿರಸನ ಮತ್ತು ಉಳಿಸುವಿಕೆ : (1) 1992ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧ್ಯಾದೇಶವನ್ನು (1992ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 18) ಈ ಮೂಲಕ ನಿರಸನಗೊಳಿಸಲಾಗಿದೆ.

(2)ಹಾಗೆ ನಿರಸನಗೊಂಡಿದ್ದರೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದ, 1979ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮದ (1979ರ ಕರ್ನಾಟಕ ಅಧಿನಿಯಮ 27) 1976ರ ಕರ್ನಾಟಕ ವೃತ್ತಿಗಳು, ವ್ಯಾಪಾರಗಳು ಆಜೀವಿಕೆಗಳು ಮತ್ತು ಉದ್ಯೋಗಳ ಅಧಿನಿಯಮದ (1976ರ ಕರ್ನಾಟಕ ಅಧಿನಿಯಮ 35), 1958ರ ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮದ (1958ರ ಕರ್ನಾಟಕ ಅಧಿನಿಯಮ 30), 1957ರ ಕೃಷಿವರಮಾನ ತೆರಿಗೆ ಅಧಿನಿಯಮದ (1957ರ ಕರ್ನಾಟಕ ಅಧಿನಿಯಮ 22) ಮತ್ತು 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ (1957ರ ಕರ್ನಾಟಕ ಅಧಿನಿಯಮ 25) ಮೇರೆಗೆ ಮಾಡಲಾದ ಯಾವುದೇ ಕೃತ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಸದರಿ ಅಧಿನಿಯಮಗಳ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

ಉದ್ದೇಶಗಳ ಮತ್ತು ಕಾರಣಗಳ ಹೇಳಿಕೆ

ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಹುದ್ದೆಗಳನ್ನು ಪುನರ್‌ಪದನಾಮಗೊಳಿಸಿದುದರ ಪರಿಣಾಮವಾಗಿ ಸಂಬಂಧಪಟ್ಟ ತೆರಿಗೆ ಕಾನೂನುಗಳಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡುವುದು ಅವಶ್ಯವಾಗಿದೆ.

ಶಾ ವ್ಯಾಲೀಸ್ ಮೊಕದ್ದಮೆಯಲ್ಲಿ ನಮ್ಮ ಉಚ್ಚ ನ್ಯಾಯಾಲಯದ ಪೂರ್ಣ ಪೀಠವು, ಜನಾರ್ಧನಾಚಾರ್ಯರ ಮೊಕದ್ದಮೆಯಲ್ಲಿನ ನಮ್ಮ ಉಚ್ಚ ನ್ಯಾಯಾಲಯದ ವಿಭಾಗ ಪೀಠದ ತೀರ್ಪನ್ನು ತಳ್ಳಿಹಾಕಿ ಅಧಿಸೂಚನೆಗಳ ಮೂಲಕ ಯಾವ ಸರಕುಗಳಿಗೆ ವಿನಾಯಿತಿ ನೀಡಲಾಗಿತ್ತೋ ಆ ಸರಕುಗಳ ವರ್ಗಕ್ಕೆ ಸಂಬಂಧಿಸಿದ ಯಾವುದೇ ನಮೂದನ್ನು ಸೇರಿಸುವ ಮೂಲಕ ಅಧಿನಿಯಮದ ಸುಸಂಗತ ಉಪಬಂಧಗಳ ತರುವಾಯ ತಿದ್ದುಪಡಿಯಾಗಿರುವುದರಿಂದ 1957ರ – ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ 8ಎ ಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಗಳು ಪ್ರವರ್ತನೀಯವಲ್ಲ ಎಂಬುದಾಗಿ ತೀರ್ಪು ನೀಡಿದೆ. ಆದ್ದರಿಂದ ಈಗಾಗಲೇ ಹೊರಡಿಸಲಾದ ಅಧಿಸೂಚನೆಯನ್ನು ಉಳಿಸಿಕೊಳ್ಳುವ ಸಲುವಾಗಿ ಸದರಿ ಅಧಿನಿಯಮವನ್ನು ಸೂಕ್ತವಾಗಿ ತಿದ್ದುಪಡಿ ಮಾಡುವುದು ಅಗತ್ಯವೆಂದು ಭಾವಿಸಲಾಯಿತು.

ವಿಷಯವು ತುರ್ತುಸ್ವರೂಪದ್ದಾದುದರಿಂದ ಮತ್ತು ಉಭಯ ಸದನಗಳು ಅಧಿವೇಶನದಲ್ಲಿಲ್ಲದ್ದುದರಿಂದ, 1992ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧ್ಯಾದೇಶವನ್ನು ಪ್ರಖ್ಯಾಪಿಸುವ ಮೂಲಕ ತಿದ್ದುಪಡಿಗಳನ್ನು ತರಲಾಯಿತು.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲು ಮಂಡಿಸಲು ಕೋರಲಾಗಿದೆ. ಆದ್ದರಿಂದ ಈ ವಿಧೇಯಕವನ್ನು ಮಂಡಿಸಲಾಗಿದೆ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಗಳ 79ನೇ ನಿಯಮದ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ

ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಹುದ್ದೆಗಳನ್ನು ಪುನರ್ ಪದನಾಮಗೊಳಿಸಿದುದರ ಪರಿಣಾಮವಾಗಿ, ಸಂಬಂಧಪಟ್ಟ ತೆರಿಗೆ ಕಾನೂನುಗಳಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡುವುದು ಅವಶ್ಯವಾಗಿದೆ.

ಶಾ ವ್ಯಾಲೀಸ್ ಮೊಕದ್ದಮೆಯಲ್ಲಿ ನಮ್ಮ ಉಚ್ಚ ನ್ಯಾಯಾಲಯದ ಪೂರ್ಣಪೀಠವು, ಜನಾರ್ಧನಾಚಾರ್ಯರ ಮೊಕದ್ದಮೆಯಲ್ಲಿ ನಮ್ಮ ಉಚ್ಚ ನ್ಯಾಯಾಲಯದ ವಿಭಾಗ ಪೀಠದ ತೀರ್ಪನ್ನು ತಳ್ಳಿಹಾಕಿ ಅಧಿಸೂಚನೆಗಳ ಮೂಲಕ ಯಾವ ಸರಕುಗಳಿಗೆ ವಿನಾಯಿತಿ ನೀಡಲಾಗಿತ್ತೋ ಆ ಸರಕುಗಳ ವರ್ಗಕ್ಕೆ ಸಂಬಂಧಿಸಿದ ಯಾವುದೇ ನಮೂದನ್ನು ಸೇರಿಸುವ ಮೂಲಕ ಅಧಿನಿಯಮದ ಸುಸಂಗತ ಉಪಬಂಧಗಳು ತರುವಾಯ ತಿದ್ದುಪಡಿಯಾಗಿರುವುದರಿಂದ 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ 8ಎ ಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಗಳು ಪ್ರವರ್ತನೀಯವಲ್ಲ ಎಂಬುದಾಗಿ ತೀರ್ಪು ನೀಡಿದೆ. ಆದ್ದರಿಂದ ಈಗಾಗಲೇ ಹೊರಡಿಸಲಾದ ಅಧಿಸೂಚನೆಯನ್ನು ಉಳಿಸಿಕೊಳ್ಳುವ ಸಲುವಾಗಿ ಸದರಿ ಅಧಿನಿಯಮವನ್ನು ಸೂಕ್ತವಾಗಿ ತಿದ್ದುಪಡಿ ಮಾಡುವುದು ಅಗತ್ಯವೆಂದು ಭಾವಿಸಲಾಯಿತು.

ವಿಷಯವು ತುರ್ತು ಸ್ವರೂಪದ್ದಾದುದರಿಂದ ಮತ್ತು ಉಭಯ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ, 1992ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧ್ಯಾದೇಶವನ್ನು ಪ್ರಖ್ಯಾಪಿಸುವ ಮೂಲಕ ತಿದ್ದುಪಡಿಗಳನ್ನು ತರಲಾಯಿತು.

ಎಂ. ವೀರಪ್ಪ ಮೊಯಿಲಿ

ಮುಖ್ಯಮಂತ್ರಿ.

ಮ. ಇನ್ನಾಸಪ್ಪ

ಕಾರ್ಯದರ್ಶಿ.

ಅನುಬಂಧ

1977ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮದ (1977ರ ಕರ್ನಾಟಕ ಅಧಿನಿಯಮದ 27) ಉದ್ಧೃತ ಭಾಗ

** ** **

3 ಸಿ ತಯಾರಿಕಾ ಘಟಕಗಳಿಗೆ ಮಾರಾಟ ಮಾಡಲಾದ ಸರಕುಗಳಿಗೆ ತೆರಿಗೆ ಸಂದಾಯ ಮಾಡುವ ಹೊಣೆಗಾರಿಕೆ : (1) 3ನೇ ಪ್ರಕರಣದಲ್ಲಿ ಏನೇ ಇದ್ದರೂ, ಅಧಿನಿಯಮದ ಅನುಸೂಚಿಯ 16 ಬಿ ನಮೂದಿನಲ್ಲಿ ನಿರ್ದಿಷ್ಟಪಡಿಸಲಾದ ಸರಕುಗಳನ್ನು, 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ಒಂದು ವರ್ಷದಲ್ಲಿ ಒಟ್ಟಾರೆ ಹತ್ತು ಲಕ್ಷಗಳಿಗಿಂತ ಕಡಿಮೆ ವಹಿವಾಟು ಇರುವಂಥ ತಯಾರಿಕಾ ಘಟಕಗಳಿಗೆ ಮಾರಾಟ ಮಾಡಿದರೆ ಅಂಥ ಸರಕುಗಳ ಪ್ರವೇಶದ ಸಂಬಂಧದಲ್ಲಿ ಯಾವೊಬ್ಬ ವ್ಯಾಪಾರಿಯೂ ಯಾವುದೇ ತೆರಿಗೆಯನ್ನು ಸಂದಾಯ ಮಾಡತಕ್ಕದ್ದಲ್ಲ.

(2) ಸರಕುಗಳನ್ನು ಮಾರಾಟ ಮಾಡುವ ಡೀಲರನ್ನು, ಗೊತ್ತುಪಡಿಸಿದ ಪ್ರಾಧಿಕಾರದಿಂದ ಪಡೆಯಲಾದ ಗೊತ್ತುಪಡಿಸಿದ ನಮೂನೆಯಲ್ಲಿ ಸರಕುಗಳನ್ನು ಖರೀದಿಸುವ ತಯಾರಿಕಾ ಘಟಕರು ಗೊತ್ತುಪಡಿಸಿದ ವಿಧಾನದಲ್ಲಿ ನೀಡಿದ ಒಂದು ಘೋಷಣೆಯನ್ನು ಕರನಿರ್ಧಾರಣಾ ಪ್ರಾಧಿಕಾರಿಗೆ ಸಲ್ಲಿಸಿದ ಹೊರತು, (1)ನೇ ಉಪ ಪ್ರಕರಣದ ಉಪಬಂಧಗಳು ಅವನಿಗೆ ಅನ್ವಯಿಸತಕ್ಕದ್ದಲ್ಲ.

(3) ಸರಕುಗಳನ್ನು ಖರೀದಿಸುವ ತಯಾರಿಕಾ ಘಟಕವು ಸಲ್ಲಿಸದ ಘೋಷಣೆಯು ಸರಿಯಲ್ಲವೆಂದು ಕಂಡುಬಂದರೆ, ಕರ ನಿರ್ಧಾರಣಾ ಪ್ರಾಧಿಕಾರಿಯು ಅಂಥ ಘಟಕಕ್ಕೆ ವಿಚಾರಣೆಗೊಳಪಡಲು ಒಂದು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ, ಲಿಖಿತ ಆದೇಶದ ಮೂಲಕ, ಅಂಥ ಸರಕುಗಳ ಪ್ರವೇಶದ ಮೇಲೆ 3ನೇ ಪ್ರಕರಣದ ಮೇರೆಗೆ ವಿಧಿಸಲಾಗುವ ತೆರಿಗೆ ಮೊಬಲಗಿಗಿಂತ ಕಡಿಮೆಯಿಲ್ಲದ ಮೊತ್ತವನ್ನು ದಂಡದ ರೂಪದಲ್ಲಿ ವಿಧಿಸತಕ್ಕದ್ದು. ಆದರೆ ಆ ಮೊಬಲಗು ಅಂಥ ತೆರಿಗೆ ಮೊಬಲಗಿನ ಎರಡರಷ್ಟು ಮೊಬಲಗನ್ನು ಮೀರತಕ್ಕದ್ದಲ್ಲ.

ವಿವರಣೆ : ಈ ಪ್ರಕರಣ ಮತ್ತು ಅನುಸೂಚಿಯ 16ಬಿ ಕ್ರಮಸಂಖ್ಯೆಯ ವಿವರಣೆ 1ರ ಉದ್ದೇಶಗಳಿಗಾಗಿ, ತಯಾರಿಕಾ ಘಟಕ ಎಂಬುದರಲ್ಲಿ ಸರಕುಗಳ ಸಂಸ್ಕರಣೆ, ವೃದ್ಧಿ ಅಥವಾ ದುರಸ್ಥಿಯಲ್ಲಿ ನಿರತವಾದ ಒಂದು ಘಟಕವೂ ಸೇರುತ್ತದೆ.

4 **ಡೀಲರುಗಳ ನೋಂದಣಿ** (1) (ಎ) ಈ ಅಧಿನಿಯಮದ ಮೇರೆಗೆ ತೆರಿಗೆಗೆ ಗುರಿಯಾಗುವ ಸರಕುಗಳನ್ನು ಖರೀದಿಸುವ ಅಥವಾ ಪಡೆಯುವ ಮತ್ತು ಸ್ಥಳೀಯ ಪ್ರದೇಶದಲ್ಲಿ ವ್ಯವಹಾರ ನಡೆಸುವ ಮತ್ತು 1957ರ ಕರ್ನಾಟಕ ಮರಾಟ ತೆರಿಗೆ ಅಧಿನಿಯದಮ (1957ರ ಕರ್ನಾಟಕ ಅಧಿನಿಯಮ 25) ಮೇರೆಗೆ ವರ್ಷದಲ್ಲಿ ಒಟ್ಟಾರೆ ವಹಿವಾಟು ಮೊತ್ತವು ಎಪ್ಪತ್ತೈದು ಸಾವಿರ ರೂಪಾಯಿಗಿಂತ ಕಡಿಮೆಯಿಲ್ಲದ ಪ್ರತಿಯೊಬ್ಬ ಡೀಲರನ್ನು ಅಥವಾ 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ (1957ರ ಕರ್ನಾಟಕ ಅಧಿನಿಯದ 25) ಉಧ್ಧೃತ ಭಾಗ.

** ** **

8,ಎ. ತೆರಿಗೆಯಿಂದ ವಿನಾಯಿತಿ ಮತ್ತು ತೆರಿಗೆ ಇಳಿತಾಯಗಳನ್ನು ಅಧಿಸೂಚಿಸಲು ರಾಜ್ಯ ಸರ್ಕಾರದ ಅಧಿಕಾರ, (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ,

(ಎ) ಅನುಕ್ರಮದ ವ್ಯಾಪಾರಿಗಳು ಮಾಡಿದ ಮಾರಾಟದ ಸರಣಿಯಲ್ಲಿನ ಎಲ್ಲ ಹಂತಗಳಲ್ಲಿ ಯಾವುದೇ ನಿರ್ದಿಷ್ಟ ಪಡಿಸಿದ ಸರಕುಗಳ ಅಥವಾ ಸರಕುಗಳ ವರ್ಗದ ಮಾರಾಟ ಅಥವಾ ಖರೀದಿಯ ಮೇಲೆ ; ಅಥವಾ

(ಬಿ) ನಿರ್ದಿಷ್ಟಪಡಿಸಿದ ವ್ಯಕ್ತಿಗಳ ಯಾವುದೇ ವರ್ಗದಿಂದ ಒಟ್ಟು ವಹಿವಾಟಿನ ಹಣದ ಪೂರ್ಣ ಅಥವಾ ಯಾವುದೇ ಭಾಗದ ಬಗ್ಗೆ ;ಅಥವಾ

(ಸಿ) ನಿರ್ದಿಷ್ಟಪಡಿಸಿದ ವ್ಯಾಪಾರಿಗಳ ಯಾವುದೇ ವರ್ಗವು ತಮ್ಮ ಒಟ್ಟು ವಹಿವಾಟಿನ ಹಣದ ಪೂರ್ಣ ಅಥವಾ ಯಾವುದೇ ಭಾಗದ ಸಂಬಂಧವಾಗಿ ನಿರ್ದಿಷ್ಟಪಡಿಸಿದ ಸರಕುಗಳ ಯಾವುದೇ ವರ್ಗದ ಮಾರಾಟ ಅಥವಾ ಖರೀದಿಯ ಮೇಲೆ ;

ಈ ಅಧಿನಿಯಮದ ಮೇರೆಗೆ ಸಂದಾಯವಾಗತಕ್ಕ ಯಾವುದೇ ತೆರಿಗೆಯ ಸಂಬಂಧವಾಗಿ ದರದಲ್ಲಿ ವಿನಾಯತಿ ಅಥವಾ ಇಳಿತಾಯ ನೀಡಬಹುದು ;

(2) (1)ನೇ ಉಪ ಪ್ರಕರಣದ ಮೇರೆಗೆ ಅಧಿಸೂಚಸಲಾದ ತೆರಿಗೆಯಿಂದ ಯಾವುದೇ ವಿನಾಯಿತಿ ಅಥವಾ ತೆರಿಗೆಯ ದರದಲ್ಲಿನ ಇಳಿತಾಯವು, ಅಧಿಸೂಚನೆ ಎಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(2ಎ) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಒಂದು ಅನುಸೂಚಿಯಿಂದ ಇನ್ನೊಂದು ಅನುಸೂಚಿಗೆ ಯಾವುದೇ ನಮೂದು ಅಥವಾ ಅದರ ಭಾಗವನ್ನು ಬದಲಾಯಿಸಬಹುದು ಮತ್ತು ಮಾರಾಟ ಅಥವಾ ಖರೀದಿಯ ಮೇಲಿನ ವಿಧಿಸುವಿಕೆಯ ಹಂತವನ್ನು ಬದಲಾಯಿಸಬಹುದು, ಆದರೆ ಯಾವುದೇ ಸಂದರ್ಭದಲ್ಲಿ ತೆರಿಗೆಯ ದರವನ್ನು ಏರಿಸುವ ರೀತಿ ಅಲ್ಲ ;

ಪರಂತು, ಯಾವುದೇ ಸರಕುಗಳ ಸಂದರ್ಭದಲ್ಲಿ ಈ ಉಪ ಪ್ರಕರಣದ ಮೇರೆಗೆ ವಿಧಿಸುವಿಕೆಯ ಹಂತವನ್ನು ಬದಲಾಯಿಸಿರುವಾಗ ಮತ್ತು ಅಂಥ ಸರಕುಗಳು ಬದಲಾಯಿಸಲ್ಪಟ್ಟ ನಮೂದಿನ ಮೇರೆಗೆ ತೆರಿಗೆ ವಿಧಿಸುವುದಕ್ಕೆ ಒಳಪಟ್ಟಿದ್ದಾರೆ. ಆಗ ಅಂಥ ಸರಕುಗಳು ವರ್ಗಾಯಿಸಲ್ಪಟ್ಟ ನಮೂದಿನ ಮೇರೆಗೆ ತೆರಿಗೆಗೆ ಒಳಪಟ್ಟಿರತಕ್ಕುದಲ್ಲ.

(3) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲ (1)ನೇ ಉಪಪ್ರಕರಣದ ಅಥವಾ (2ಎ) ಉಪ ಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ಅಧಿಸೂಚನೆಯನ್ನು ರದ್ದುಪಡಿಸಬಹುದು ಅಥವಾ ವ್ಯತ್ಯಾಸಗೊಳಿಸಬಹುದು.

** ** **

22ಎ. ಜಂಟಿ ಕಮೀಷನರು ಮತ್ತು ಕಮೀಷನರ ಪರಿಷ್ಕರಣಾಧಿಕಾರಿಗಳು

(1) ** **

(2) ** ** **

(2) ಜಂಟಿ ಕಮೀಷನರು ಅಥವಾ ಕಮೀಷನರು,

(ಎ) ಆದೇಶದ ಬಗ್ಗೆ ಅಪೀಲು ಸಲ್ಲಿಸುವ ಸಮಯವು ಮುಕ್ತಾಯವಾಗಿರದಿದ್ದರೆ

(ಬಿ) ಆದೇಶವನ್ನು 20ನೇ ಪ್ರಕರಣ ಅಥವಾ 22ನೇ ಪ್ರಕರಣದ ಮೇರೆಗಿನ ಒಂದು ಅಪೀಲು ಅಥವಾ ಉಚ್ಚನ್ಯಾಯಾಲಯದಲ್ಲಿನ ಒಂದು ಪರಿಷ್ಕರಣೆಯ ವಸ್ತು ವಿಷಯವನ್ನಾಗಿಸಿದ್ದರೆ ;

(ಸಿ) ಪರಿಷ್ಕರಿಸಬೇಕೆಂದು ಉದ್ದೇಶಿಸಿರುವ ಆದೇಶವನ್ನು ಹೊರಡಿಸಿದ ತರುವಾಯ ನಾಲ್ಕು ವರ್ಷಗಳಿಗಿಂತ ಹೆಚ್ಚು ಅವಧಿ ಮುಗಿದಿದ್ದರೆ,

ಸಂದರ್ಭಾನುಸಾರ (1)ನೇ ಉಪ-ಪ್ರಕರಣದ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

ಅನುಬಂಧ II

ಕರ್ನಾಟಕ ವಿಧಾನಸಭೆ

ಒಂಭತ್ತನೆಯ ವಿಧಾನಸಭೆ

(ಎಂಟನೆಯ ಅಧಿವೇಶನ)

ಕರ್ನಾಟಕ ಆವಶ್ಯಕ ವಸ್ತುಗಳ (ನಿಯಂತ್ರಣ) ವಿಧೇಯಕ, 1992

(1992ರ ವಿಧಾನಸಭಾ ವಿಧೇಯಕ ಸಂಖ್ಯೆ 30)

ಸಾರ್ವಜನಿಕ ಹಿತದೃಷ್ಟಿಯಿಂದ ಕೆಲವು ಆವಶ್ಯಕ ವಸ್ತುಗಳ ಉತ್ಪಾದನೆ, ಸರಬರಾಜು ಮತ್ತು ವಿತರಣೆಯನ್ನು ಮತ್ತು ಅವುಗಳ ವ್ಯಾಪಾರ ಹಾಗೂ ವಾಣಿಜ್ಯವನ್ನು ನಿಯಂತ್ರಿಸುವುದಕ್ಕಾಗಿ ಉಪಬಂಧ ಕಲ್ಪಿಸುವ ಒಂದು ವಿಧೇಯಕ.

ಸಾರ್ವಜನಿಕ ಹಿತದೃಷ್ಟಿಯಿಂದ ಕೆಲವು ಆವಶ್ಯಕ ವಸ್ತುಗಳ ಉತ್ಪಾದನೆ, ಸರಬರಾಜು ಮತ್ತು ವಿತರಣೆಯನ್ನು ಮತ್ತು ಅವುಗಳ ವ್ಯಾಪಾರ ಹಾಗೂ ವಾಣಿಜ್ಯವನ್ನು ನಿಯಂತ್ರಿಸುವುದಕ್ಕೆ ಮತ್ತು ಅವುಗಳಿಗೆ ಸಂಬಂಧಪಟ್ಟ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ ;

ಇದು ಭಾರತ ಗಣರಾಜ್ಯದ ನಲವತ್ತೂರನೆ ವರ್ಷದಲ್ಲಿ ಕರ್ನಾಟಕ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕುದು.

1. ಸಂಕ್ಷಿಪ್ತ ಹೆಸರು ಪ್ರಾರಂಭ ಮತ್ತು ಅವಧಿ (1) ಈ ಅಧಿನಿಯಮವನ್ನು ಕರ್ನಾಟಕ ಆವಶ್ಯಕ ವಸ್ತುಗಳ (ನಿಯಂತ್ರಣ) ಅಧಿನಿಯಮ, 1992 ಎಂದು, ಕರೆಯತಕ್ಕುದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕುದು ಮತ್ತು ಐದು ವರ್ಷಗಳ ಅವಧಿಯವರೆಗೆ ಜಾರಿಯಲ್ಲಿರತಕ್ಕುದು.

2. ಪರಿಭಾಷೆಗಳು : ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಅನ್ಯಥಾ ಅಗತ್ಯವಿದ್ದ ಹೊರತು :

(ಎ) "ಆವಶ್ಯಕ ವಸ್ತು" ಎಂದರೆ 1955 ಆವಶ್ಯಕ ವಸ್ತುಗಳ ಅಧಿನಿಯಮದಲ್ಲಿ (1955ರ ಕೇಂದ್ರ ಅಧಿನಿಯಮ 10) ಪರಿಭಾಷಿಸಿದಂಥ ಆವಶ್ಯಕ ವಸ್ತುವಾಗಿಲ್ಲದ, ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ ಅಧಿಸೂಚನೆಯ ಮೂಲಕ ಆವಶ್ಯಕ ವಸ್ತುವೆಂದು ಘೋಷಿಸಬಹುದಾದಂಥ ವಸ್ತು ;

(ಬಿ) "ಉದ್ಯಮ" ಎಂದರೆ ಯಾವುದೇ ವ್ಯವಹಾರ ಅಥವಾ ವ್ಯಾಪಾರದ ಮೂಲಕ ಕೈಗೊಂಡ ಯಾವುದೇ ಉದ್ಯಮ ಮತ್ತು ಇದು ಸಾಗಣೆ ಸಮಯದಲ್ಲಿ ಸರಕುಗಳ ನಿರ್ವಹಣೆ, ಅವುಗಳ ಹೇರು ತುಂಬುವ ಅಥವಾ ಹೆಸರು ಇಳಿಸುವ ಕೆಲಸವನ್ನು ಒಳಗೊಳ್ಳುತ್ತದೆ.

3. ಆವಶ್ಯಕ ವಸ್ತುಗಳ ಉತ್ಪಾದನೆ, ಸರಬರಾಜು, ವಿತರಣೆಯನ್ನು ನಿಯಂತ್ರಿಸುವ ಅಧಿಕಾರ : (1) ಯಾವುದೇ ಆವಶ್ಯಕ ವಸ್ತುವಿನ ಸರಬರಾಜನ್ನು ನಿರ್ವಹಿಸುವುದಕ್ಕಾಗಿ ಅಥವಾ ಹೆಚ್ಚಿಸುವುದಕ್ಕಾಗಿ ಅಥವಾ ಅಂಥ ಯಾವುದೇ ವಸ್ತುವಿನ ಗುಣಮಟ್ಟವನ್ನು ಕಾಪಾಡುವುದಕ್ಕಾಗಿ ಅಥವಾ ಅವುಗಳು ನ್ಯಾಯಸಮ್ಮತವಾಗಿ

ವಿತರಣೆಯಾಗುವಂತೆ ಮತ್ತು ನ್ಯಾಯ ಬೆಲೆಗಳಿಗೆ ದೊರೆಯುವಂತೆ ನೋಡಿಕೊಳ್ಳುವುದಕ್ಕಾಗಿ, ಅವುಗಳ ಉತ್ಪಾದನೆ, ಸರಬರಾಜು ಮತ್ತು ವಿತರಣೆಯನ್ನು ಮತ್ತು ಅದರ ವ್ಯಾಪಾರ ಹಾಗೂ ವಾಣಿಜ್ಯವನ್ನು ನಿಯಂತ್ರಿಸುವುದು ಅಥವಾ ನಿಷೇಧಿಸುವುದು ಅವಶ್ಯವೆಂದು ಅಥವಾ ಯುಕ್ತವೆಂದು ರಾಜ್ಯ ಸರ್ಕಾರವು ಭಾವಿಸಿದರೆ ಅದು ಹಾಗೆ ಮಾಡಲು ಆದೇಶದ ಮೂಲಕ ಉಪಬಂಧ ಕಲ್ಪಿಸಬಹುದು.

(2)(1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳ ಸಾಮಾನ್ಯತೆಗೆ ಬಾಧಕವಾಗದಂತೆ, ಅದರ ಮೇರೆಗೆ ಮಾಡಲಾದ ಯಾವುದೇ ಆದೇಶವು

(ಎ) ಯಾವುದೇ ಆವಶ್ಯಕ ವಸ್ತುವಿನ ಉತ್ಪಾದನೆ ಅಥವಾ ತಯಾರಿಕೆಯನ್ನು ಲೈಸೆನ್ಸುಗಳು, ಪರ್ಮಿಟ್ಟುಗಳ ಮೂಲಕ ಅಥವಾ ಅನ್ಯಥಾ ವಿನಿಯಮಿಸುವುದಕ್ಕಾಗಿ ;

(ಬಿ) ಯಾವುದೇ ಆವಶ್ಯಕ ವಸ್ತುವನ್ನು ಕೊಳ್ಳಬಹುದಾದ ಅಥವಾ ಮಾರಾಟದ ಬೆಲೆಯನ್ನು ನಿಯಂತ್ರಿಸುವುದುಕ್ಕಾಗಿ ;

(ಸಿ) ಯಾವುದೇ ಆವಶ್ಯಕ ವಸ್ತುವಿನ ದಾಸ್ತಾನು, ಸಾಗಣೆ, ವಿತರಣೆ ವಿಲೇವಾರಿ, ಆರ್ಜನೆ ಉಪಯೋಗ ಅಥವಾ ಬಳಕೆಯನ್ನು ಲೈಸೆನ್ಸ್‌ಗಳ, ಪರ್ಮಿಟ್ಟುಗಳ ಮೂಲಕ ಅಥವಾ ಅನ್ಯಥಾ ವಿನಿಯಮಿಸುವುದಕ್ಕಾಗಿ ;

(ಡಿ) ಸಾಮಾನ್ಯವಾಗಿ, ಮಾರಾಟಕ್ಕೆ ಇಟ್ಟಿರುವ ಯಾವುದೇ ಆವಶ್ಯಕ ವಸ್ತುವನ್ನು ಮಾರಾಟ ಮಾಡದೇ ಇರುವುದನ್ನು ನಿಷೇದಿಸುವುದಕ್ಕಾಗಿ ;

(ಇ) ಯಾವುದೇ ಆವಶ್ಯಕ ವಸ್ತುವನ್ನು ದಾಸ್ತಾನು ಮಾಡಿರುವ ಅಥವಾ ಅದರ ಉತ್ಪಾದನೆಯಲ್ಲಿ ತೊಡಗಿರುವ ಅಥವಾ ಅದನ್ನು ಖರೀದಿಸುವ ಅಥವಾ ಮಾರಾಟ ಮಾಡುವ ವ್ಯಾಪಾರದಲ್ಲಿ ನಿರತನಾದ ಯಾವೊಬ್ಬ ವ್ಯಕ್ತಿಯನ್ನು ಅವನು ದಾಸ್ತಾನು ಮಾಡಿದ ಅಥವಾ ಉತ್ಪಾದಿಸಿದ ಅಥವಾ ಸ್ವೀಕರಿಸಿದ ವಸ್ತುವಿನ ಪ್ರಮಾಣದಲ್ಲಿ ಪೂರ್ಣವಾಗಿ ಅಥವಾ ಅದರ ಒಂದು ನಿರ್ದಿಷ್ಟ ಭಾಗವನ್ನು ಸರ್ಕಾರಕ್ಕೆ ಅಥವಾ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಒಬ್ಬ ಅಧಿಕಾರಿಗೆ ಅಥವಾ ಏಜೆಂಟನಿಗೆ ಅಥವಾ ಇತರ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗಕ್ಕೆ ಮತ್ತು ಅಂಥ ಸಂದರ್ಭಗಳಲ್ಲಿ ಮಾರಾಟ ಮಾಡುವಂತೆ ಅಗತ್ಯಪಡಿಸುವುದಕ್ಕಾಗಿ;

(ಎಫ್) ಆದೇಶವನ್ನು ಮಾಡುವಂಥ ಪ್ರಾಧಿಕಾರಿಯ ಅಭಿಪ್ರಾಯದಲ್ಲಿ ಯಾವುದೇ ಅವಶ್ಯಕ ವಸ್ತುವಿಗೆ ಸಂಬಂಧಿಸಿದ ಯಾವುದೇ ವರ್ಗದ ಯಾವುದೇ ವಾಣಿಜ್ಯ ಅಥವಾ ಆರ್ಥಿಕ ವ್ಯವಹಾರಗಳು ಸಾರ್ವಜನಿಕ ಹಿತಾಸಕ್ತಿಗೆ ಹಾನಿಕರವಾಗಿದೆ ಅಥವಾ ವಿನಿಮಯ ಗೊಳಿಸದಿದ್ದರೆ ಅದು ಹಾನಿಕರವಾಗುವ ಸಂಭವವಿದೆ ಎನ್ನಿಸುತ್ತದೆಯೋ ಅವುಗಳನ್ನು ವಿನಿಯಮಿಸುವುದಕ್ಕಾಗಿ ಅಥವಾ ನಿಷೇಧಿಸುವುದಕ್ಕಾಗಿ;

(ಜಿ) ಮೇಲೆ ಹೇಳಿದ ಯಾವುದೇ ವಿಷಯಗಳನ್ನು ವಿನಿಯಮಗೊಳಿಸುವ ಅಥವಾ ನಿಷೇಧಿಸುವ ದೃಷ್ಟಿಯಿಂದ ಯಾವುದೇ ಮಾಹಿತಿ ಅಥವಾ ಅಂಕಿ ಅಂಶಗಳನ್ನು ಸಂಗ್ರಹಿಸುವುದಕ್ಕಾಗಿ ;

(ಹೆಚ್) ಯಾವುದೇ ಆವಶ್ಯಕ ವಸ್ತುವಿನ ಉತ್ಪಾದನೆ, ಸರಬರಾಜು ಅಥವಾ ವಿತರಣೆಯಲ್ಲಿ ಅಥವಾ ಅವುಗಳ ವ್ಯಾಪಾರ ಮತ್ತು ವಾಣಿಜ್ಯದಲ್ಲಿ ನಿರತರಾದ ವ್ಯಕ್ತಿಗಳನ್ನು ತಮ್ಮ ವ್ಯಾಪಾರಕ್ಕೆ ಸಂಬಂಧಪಟ್ಟ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ

ಪುಸ್ತಕಗಳು ಲೆಕ್ಕ ಪತ್ರಗಳು ಮತ್ತು ಅಭಿಲೇಖಗಳನ್ನು ನಿರ್ವಹಿಸಿಕೊಂಡು ಬರಲು ಮತ್ತು ತನಿಖೆಗಾಗಿ ಹಾಜರುಪಡಿಸಲು ಮತ್ತು ಅವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸಲು ಅಗತ್ಯಪಡಿಸುವುದಕ್ಕಾಗಿ ;

(ಐ) ಯಾವುದೇ ಆವಶ್ಯಕ ವಸ್ತುವಿನ ಸಂಸ್ಕರಣವನ್ನು ವಿನಿಯಮಗೊಳಿಸುವುದಕ್ಕಾಗಿ;

(ಜೆ) ಅಸ್ತಿತ್ವದಲ್ಲಿರುವ ಒಂದು ಇಡೀ ಉದ್ಯಮದ ಮೇಲೆ ಅಥವಾ ಅದರ ಯಾವುದೇ ಬಾಗದ ಮೇಲೆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ನಿಯಂತ್ರಣದ ಪ್ರಕಾರ್ಯಗಳನ್ನು ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು, ಚಲಾಯಿಸುವುದಕ್ಕಾಗಿ ;

(ಕೆ) ಲೈಸೆನ್ಸ್, ಪರ್ಮಿಟ್ ಅಥವಾ ಇತರೆ ದಸ್ತಾವೇಜುಗಳನ್ನು, ಮಂಜೂರು ಮಾಡುವುದಕ್ಕಾಗಿ ಅಥವಾ ನೀಡುವುದಕ್ಕಾಗಿ, ಇವುಗಳ ಬಗ್ಗೆ ಶುಲ್ಕ ವಿಧಿಸುವುದಕ್ಕಾಗಿ, ಅಂಥ ಯಾವುದೇ ಲೈಸೆನ್ಸ್, ಪರ್ಮಿಟ್ ಅಥವಾ ಇತರೆ ದಸ್ತಾವೇಜಿನ ಷರತ್ತುಗಳ ಸರಿಯಾದ ಪೂರೈಕೆಗೆ ಭದ್ರತೆಯಾಗಿ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಠೇವಣಿ ಇಡಬೇಕಾದಂಥ ಮೊತ್ತ, ಯಾವುದಾದರೂ ಇದ್ದರೆ, ಅದನ್ನು ಠೇವಣಿ ಇಡುವುದಕ್ಕಾಗಿ, ಅಂಥ ಯಾವುದೇ ಷರತ್ತಿನ ಉಲ್ಲಂಘನೆಯ ಬಗ್ಗೆ ಹಾಗೆ ಠೇವಣಿ ಇಟ್ಟ ಮೊಬಲಗನ್ನು ಅಥವಾ ಅದರ ಯಾವುದೇ ಭಾಗವನ್ನು ಮುಟ್ಟುಗೋಲು ಹಾಕುವುದಕ್ಕಾಗಿ ಮತ್ತು ಆದೇಶದಲ್ಲಿ ನಿರ್ದಿಷ್ಟಪಡಿಸಿರಬಹುದಾದಂಥ ಪ್ರಾಧಿಕಾರಿಯಿಂದ ಅಂಥ ಮುಟ್ಟುಗೋಲಿನ ನ್ಯಾಯ ನಿರ್ಣಯಕ್ಕಾಗಿ ;

(ಎಲ್) ವಿಶೇಷವಾಗಿ ಆವಶ್ಯ ವಸ್ತುಗಳ ವಿಂಗಡಣೆ ಮತ್ತು ಭಾಂಗಿ ಕಟ್ಟುವುದು, ಆವರಣಗಳು, ವಾಹನಗಳು, ನೌಕೆಗಳು, ವಿಮಾನ ಅಥವಾ ಇತರೆ ಸಾಗಣೆ ಸಾಧನಗಳ ಮತ್ತು ಪ್ರಾಣಿಗಳ ಶೋಧನೆ ಮತ್ತು ಪರೀಕ್ಷೆಗಾಗಿ ಮತ್ತು ಹಾಗೆ ಪ್ರವೇಶಿಸಲು, ಶೋಧಿಸಲು ಅಥವಾ ಪರೀಕ್ಷಿಸಲು ಪ್ರಾಧಿಕೃತನಾದ ವ್ಯಕ್ತಿಯು, ಅವನಿಗೆ ಯಾವುದೇ ವಸ್ತುವಿನ ಸಂಬಂಧದಲ್ಲಿ ಆದೇಶದ ಉಲ್ಲಂಘನೆಯಾಗಿದೆ ಅಥವಾ, ಆಗುತ್ತಿದೆ ಅಥವಾ ಆಗಲಿದೆ ಎಂದು ನಂಬಲು ಕಾರಣವಿದೆಯೇ ಅಂಥ ವಸ್ತುಗಳು ಕಂಡುಬಂದ ಭಾಂಗಿ, ಹೊದಿಕೆ ಅಥವಾ ಪಾತ್ರದ ವಶಪಡಿಸಿಕೊಳ್ಳುವುದು ಒಳಗೊಂಡಂತೆ ಯಾವುದೇ ಪ್ರಾಸಂಗಿಕ ಅಥವಾ ಪೂರಕ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು.

(3) (2)ನೇ ಉಪ-ಪ್ರಕರಣದ (ಇ) ಖಂಡಕ್ಕೆ ಸಂಬಂಧಿದಂತೆ ಮಾಡಲಾದ ಒಂದು ಆದೇಶದ ಪಾಲನೆಯಲ್ಲಿ ಯಾವುದೇ ಆವಶ್ಯಕ ವಸ್ತುಗಳನ್ನು ಯಾವೊಬ್ಬ ವ್ಯಕ್ತಿಯು ಮಾರಾಟ ಮಾಡಿದಲ್ಲಿ, ಅವನಿಗೆ ಅದರ ಬಗ್ಗೆ ಇದರಲ್ಲಿ ಇನ್ನು ಮುಂದೆ ಉಪಬಂಧಿಸಲಾದಂತೆ ಬೆಲೆಯನ್ನು ಸಂದಾಯ ಮಾಡತಕ್ಕುದು ;

(ಎ) ಈ ಪ್ರಕರಣದ ಮೇರೆಗೆ ನಿಗದಿಪಡಿಸಲಾದ ನಿಯಂತ್ರಿಕ ಬೆಲೆ, ಯಾವುದಾದರೂ ಇದ್ದಲ್ಲಿ, ಅದಕ್ಕೆ ಸಂಗತವಾಗಿರುವಂತೆ ಬೆಲೆಯನ್ನು ಒಪ್ಪಬಹುದಾಗಿದ್ದರೆ, ಹಾಗೆ ಒಪ್ಪಲಾದ ಬೆಲೆ ;

(ಬಿ) ಅಂಥ ಒಪ್ಪಂದಕ್ಕೆ ಬರಲಾಗದಿರುವಲ್ಲಿ, ಮಾರಾಟದ ದಿನಾಂಕದಂದು ಆ ಪ್ರದೇಶದಲ್ಲಿ ಪ್ರಚಲಿತವಿರುವ ಮಾರುಕಟ್ಟೆ ದರದಲ್ಲಿ ಲೆಕ್ಕ ಹಾಕಲಾದ ಬೆಲೆ.

4. ಅಧಿಕಾರಗಳ ಪ್ರತ್ಯಾಯೋಜನೆ ; ರಾಜ್ಯ ಸರ್ಕಾರವು, ಅಧಿಸೂಚಿತ ಆದೇಶದ ಮೂಲಕ, ಆ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ವಿಷಯಗಳಿಗೆ ಸಂಬಂಧಪಟ್ಟಂತೆ ಮತ್ತು ಅಂಥ ಷರತ್ತುಗಳು ಏನಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, 3ನೇ ಪ್ರಕರಣದ ಅಡಿಯಲ್ಲಿ ಆದೇಶಗಳನ್ನು ಮಾಡುವ ಅಥವಾ ಅಧಿಸೂಚನೆಗಳನ್ನು ಹೊರಡಿಸುವ ಅಧಿಕಾರವು, ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ರಾಜ್ಯ ಸರ್ಕಾರಕ್ಕೆ ಅಧೀನವಾಗಿರುವ ಅಂಥ ಅಧಿಕಾರಿ ಅಥವಾ ಪ್ರಾಧಿಕಾರಿಯು ಸಹ ಚಲಾಯಿಸುವಂತಿರತಕ್ಕುದು ಎಂದು ನಿರ್ದೇಶಿಸಬಹುದು.

5. ಇತರ ಅಧಿನಿಯಮಿತಿಗಳಿಗೆ ಅಸಂಗತವಾಗಿರುವ ಆದೇಶಗಳ ಪರಿಣಾಮ : 3ನೇ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶವು ಈ ಅಧಿನಿಯಮವಲ್ಲದ ಇತರ ಯಾವುದೇ ಅಧಿನಿಯಮಿತಿಯಲ್ಲಿ ಅಥವಾ ಈ ಅಧಿನಿಯಮದ ಹೊರತು ಇತರ ಯಾವುದೇ ಅಧಿನಿಯಮಿತಿಯ ಆಧಾರದಿಂದ ಪರಿಣಾಮವುಳ್ಳ ಯಾವುದೇ ಲಿಖಿತ ಪತ್ರದಲ್ಲಿ, ಅದಕ್ಕೆ ಅಸಂಗತವಾದ ಏನನ್ನೇ ಒಳಗೊಂಡಿದ್ದರೂ ಪರಿಣಾಮಕಾರಿಯಾಗಿರತಕ್ಕುದು.

6. ಆವಶ್ಯಕ ವಸ್ತುವಿನ ಮುಟ್ಟುಗೋಲು : (1) ಯಾವುದೇ ಆವಶ್ಯ ವಸ್ತುವನ್ನು ಆ ಸಂಬಂಧವಾಗಿ 3ನೇ ಪ್ರಕರಣದ ಮೇರೆಗೆ ಮಾಡಿದ ಆದೇಶದ ಅನುಸರಣೆಯಲ್ಲಿ ವಶಪಡಿಸಿಕೊಂಡಲ್ಲಿ ಅಂಥ ಆವಶ್ಯಕ ವಸ್ತುವನ್ನು ಎಲ್ಲಿ ವಶಪಡಿಸಿಕೊಳ್ಳಲಾಯಿತೋ ಆ ಜಿಲ್ಲೆಯ ಡೆಪ್ಯುಟಿ ಕಮೀಷನರಿಗೆ ಅನಗತ್ಯ ವಿಳಂಬವಿಲ್ಲದೆ, ಅಂಥ ವಶಪಡಿಸಿಕೊಂಡ ಬಗ್ಗೆ ಒಂದು ವರದಿಯನ್ನು ಸಲ್ಲಿಸತಕ್ಕುದು ಮತ್ತು ಅಂಥ ಆದೇಶದ ಉಲ್ಲಂಘನೆಯ ಬಗ್ಗೆ ಪ್ರಾಸಿಕ್ಯೂಷನ್ ಹೂಡಿರಲಿ ಅಥವಾ ಹೂಡಿರದಿರಲಿ, ವಶಪಡಿಸಿಕೊಳ್ಳಲಾದ ಆವಶ್ಯಕ ವಸ್ತುವನ್ನು ತನಿಖೆಗಾಗಿ ತನ್ನ ಮುಂದೆ ಹಾಜರುಪಡಿಸುವುದು ಯುಕ್ತವೆಂದು ತನಗೆ ತೋರಿಬಂದರೆ ಡೆಪ್ಯುಟಿ ಕಮೀಷನರು ಹಾಗೆ ಮಾಡಲು ನಿರ್ದೇಶಿಸಬಹುದು ಮತ್ತು ಆ ಆದೇಶದ ಉಲ್ಲಂಘನೆಯಾಗಿದೆ ಎಂದು ಅವನಿಗೆ ಮನದಟ್ಟಾದರೆ,

(ಎ) ಹಾಗೆ ವಶಪಡಿಸಿಕೊಳ್ಳಲಾದ ಆವಶ್ಯಕ ವಸ್ತುವನ್ನು ;

(ಬಿ) ಅಂಥ ಆವಶ್ಯಕ ವಸ್ತು ಕಂಡುಬಂದ ಯಾವುದೇ ಭಾಂಗಿ, ಹೊದಿಕೆ ಅಥವಾ ಪಾತ್ರವನ್ನು ; ಮತ್ತು

(ಸಿ) ಅಂಥ ಆವಶ್ಯಕ ವಸ್ತುವನ್ನು ಕೊಂಡೊಯ್ಯಲು ಬಳಸಿದ ಯಾವುದೇ ಪ್ರಾಣಿ, ವಾಹನ, ನೌಕೆ ಅಥವಾ ಇತರ ಸಾಗಣೆ ಸಾಧನವನ್ನು ;

ಮುಟ್ಟುಗೋಲು ಮಾಡಲು ಆದೇಶಿಸಬಹುದು.

ಪರಂತು, ಸರಕುಗಳು ಅಥವಾ ಪ್ರಯಾಣಿಕರನ್ನು ಬಾಡಿಗೆಗೆ ಸಾಗಿಸಲು ಬಳಸಿದ ಯಾವುದೇ ಪ್ರಾಣಿ, ವಾಹನ, ನೌಕೆ ಅಥವಾ ಇತರ ಸಾಗಣೆ ಸಾಧನದ ಸಂದರ್ಭದಲ್ಲಿ, ಅದರ ಮುಟ್ಟುಗೋಲಿನ ಬದಲು, ಅಂಥ ಪ್ರಾಣಿ, ವಾಹನ, ನೌಕೆ ಅಥವಾ ಇತರ ಸಾಗಣೆ ಸಾಧನದ ಒಡೆಯನಿಗೆ ಅಂಥ ಪ್ರಾಣಿ, ವಾಹನ, ನೌಕೆ ಅಥವಾ ಇತರ ಸಾಗಣೆ ಸಾಧನದಲ್ಲಿ ಸಾಗಿಸಲು ಯತ್ನಿಸಿದ ಆವಶ್ಯಕ ವಸ್ತುವನ್ನು ವಶಪಡಿಸಿಕೊಳ್ಳುವ ದಿನಾಂಕದಂದು ಇದ್ದ ಮಾರುಕಟ್ಟೆ ಬೆಲೆಯನ್ನು ಮೀರದ ಜುಲ್ಮಾನೆಯನ್ನು ಸಂದಾಯ ಮಾಡಲು ಅವಕಾಶ ಕೊಡತಕ್ಕದು.

(2) (1)ನೇ ಉಪ-ಪ್ರಕರಣದ ಮೇರೆಗೆ ಡೆಪ್ಯುಟಿ ಕಮೀಷನರು, ಯಾವುದೇ ಆವಶ್ಯಕ ವಸ್ತುವನ್ನು ವಶಪಡಿಸಿಕೊಂಡ ವರದಿಯನ್ನು ಸ್ವೀಕರಿಸಿದ ನಂತರ ಅಥವಾ ತನಿಖೆ ಮಾಡಿದ ನಂತರ, ಆ ಆವಶ್ಯಕ ವಸ್ತುವು ತ್ವರಿತವಾಗಿ ಮತ್ತು ನೈಸರ್ಗಿಕವಾಗಿ ಹಾಳಾಗುವುದೆಂದು ಅಥವಾ ಅನ್ಯಥಾ ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೆ ಮಾಡುವುದು ಯುಕ್ತವೆಂದು ಅಭಿಪ್ರಾಯಪಟ್ಟರೆ, ಅವರು

(i) ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಅಂಥ ಆವಶ್ಯಕ ವಸ್ತುವಿಗೆ ನಿಗದಿಪಡಿಸಿರುವ ನಿಯಂತ್ರಿತ ಬೆಲೆ ಯಾವುದಾದರೂ ಇದ್ದರೆ, ಆ ಬೆಲೆಗೆ ಅದನ್ನು ಮಾರಾಟ ಮಾಡಲು, ಅಥವಾ

(ii) ಅಂಥ ಯಾವುದೇ ಬೆಲೆಯನ್ನು ನಿಗಧಿಪಡಿಸದೆ ಇರುವಲ್ಲಿ, ಅದನ್ನು ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡಲು ಆದೇಶಿಸಬಹುದು.

(3) ಮೇಲೆ ಹೇಳಿದಂತೆ, ಯಾವುದೇ ಆವಶ್ಯಕ ವಸ್ತುವನ್ನು ಮಾರಾಟ ಮಾಡಿದ್ದಲ್ಲಿ, ಅದಕ್ಕೆ ಸಂಬಂಧಪಟ್ಟ ಮಾರಾಟ ಅಥವಾ ಹರಾಜಿನ ವೆಚ್ಚಗಳು ಅಥವಾ ಇತರ ಅನುಷಂಗಿಕ ವೆಚ್ಚಗಳನ್ನು ಕಳೆದ ತರುವಾಯ, ಅದರ ಮಾರಾಟದ ಉತ್ಪತ್ತಿಯನ್ನು,

(ಎ) ಮುಟ್ಟುಗೋಲಿನ ಆದೇಶವನ್ನು ಅಂತಿಮವಾಗಿ ಡೆಪ್ಯುಟಿ ಕಮೀಷನರು ಮಾಡದಿದ್ದಲ್ಲಿ ; ಅಥವಾ

(ಬಿ) 8ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗಿನ, ಅಪೀಲಿನ, ಮೇಲೆ ಮಾಡಿದ ಆದೇಶವು ಹಾಗೆ ಅಗತ್ಯಪಡಿಸಿದ್ದಲ್ಲಿ, ಅಥವಾ,

(ಸಿ) ಈ ಪ್ರಕರಣದ ಮೇರೆಗೆ ಮಾಡಿದ ಮುಟ್ಟುಗೋಲಿನ ಆದೇಶದ ಸಂಬಂಧದಲ್ಲಿ ಮುಟ್ಟುಗೋಲಿನ ಆದೇಶದ ಉಲ್ಲಂಘನೆಗಾಗಿ ಪ್ರಾಸಿಕ್ಯೂಷನನ್ನು ಹೂಡಲಾಗಿದ್ದು ಸಂಬಂಧಪಟ್ಟ ವ್ಯಕ್ತಿಯು ನಿರ್ದೋಷಿಯೆಂದು ತೀರ್ಮಾನವಾಗಿದ್ದಲ್ಲಿ,

ಅದರ ಒಡೆಯನಿಗೆ ಅಥವಾ ಅದನ್ನು ಯಾರಿಂದ ವಶಪಡಿಸಿಕೊಳ್ಳಲಾಯಿತೋ ಆ ವ್ಯಕ್ತಿಗೆ ಸಂದಾಯ ಮಾಡತಕ್ಕುದು.

7. ಆವಶ್ಯಕ ವಸ್ತುವನ್ನು ಮುಟ್ಟುಗೋಲಿನ ಹಾಕಿಕೊಳ್ಳುವ ಮುನ್ನ ಕಾರಣ ತೋರಿಸಲು ಕೇಳಿ ನೋಟೀಸು ಹೊರಡಿಸುವುದು : (1)ಯಾವುದೇ ಆವಶ್ಯಕ ವಸ್ತು, ಭಾಂಗಿ, ಹೊದಿಕೆ, ಪಾತ್ರ, ಪ್ರಾಣಿ, ವಾಹನ, ನೌಕೆ ಅಥವಾ ಇತರೆ ಸಾಗಣೆ ಸಾಧನವನ್ನು ಮುಟ್ಟುಗೋಲು ಹಾಕಿಕೊಳ್ಳುವ 6ನೇ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು, ಅಂಥ ಅವಶ್ಯಕ ವಸ್ತು, ಭಾಂಗಿ, ಹೊದಿಕೆ, ಪಾತ್ರ, ಪ್ರಾಣಿ, ವಾಹನ ನೌಕೆ ಅಥವಾ ಇತರೆ ಸಾಗಣೆ ಸಾಧನದ ಒಡೆಯನಿಗೆ ಅಥವಾ ಯಾರಿಂದ ಅದನ್ನು ವಶಪಡಿಸಿಕೊಳ್ಳಲಾಯಿತೋ ಆ ವ್ಯಕ್ತಿಗೆ,

(ಎ) ಆವಶ್ಯಕ ವಸ್ತು, ಭಾಂಗಿ, ಹೊದಿಕೆ, ಪಾತ್ರ, ಪ್ರಾಣಿ, ವಾಹನ, ನೌಕೆ ಅಥವಾ ಇತರ ಸಾಗಣೆ ಸಾಧನವನ್ನು ಯಾವ ಆಧಾರದ ಮೇಲೆ ಮುಟ್ಟುಗೋಲು ಹಾಕಿ ಕೊಳ್ಳಲು ಉದ್ದೇಶಿಸಲಾಗಿದೆ ಎಂಬುದನ್ನು ತಿಳಿಸಿ ಲಿಖಿತ ನೋಟೀಸು ಕೊಟ್ಟ ಹೊರತು ;

(ಬಿ) ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಯುಕ್ತ ಸಮಯದಲ್ಲಿ ಮುಟ್ಟುಗೋಲಿಗೆ ಇರುವ ಕಾರಣಗಳ ವಿರುದ್ಧವಾಗಿ ಲಿಖಿತದಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳಲು ಅವನಿಗೆ ಒಂದು ಅವಕಾಶ ಕೊಟ್ಟ ಹೊರತು, ಮತ್ತು

(ಸಿ) ಆ ಸಂಬಂಧವಾಗಿ ಅಹವಾಲು ಹೇಳಿಕೊಳ್ಳಲು ಅವನಿಗೆ ಯುಕ್ತ ಅವಕಾಶವನ್ನು ಕೊಟ್ಟ ಹೊರತು-ಮಾಡತಕ್ಕುದಲ್ಲ.

(2) ಯಾವುದೇ ಪ್ರಾಣಿ, ವಾಹನ, ನೌಕೆ, ಅಥವಾ ಇತರ ಸಾಗಣೆ ಸಾಧನದ ಒಡೆಯನು ತನಗೆ ಅಥವಾ ತನ್ನ ಏಜೆಂಟ್,ಯಾರಾದರೂ ಇದ್ದರೆ, ಅವನಿಗೆ ಮತ್ತು ಆ ಪ್ರಾಣಿ, ವಾಹನ, ನೌಕೆಮ ಅಥವಾ ಇತರ ಸಾಗಣೆ ಸಾಧನವನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ವ್ಯಕ್ತಿಯ ತಿಳವಳಿಕೆಗೆ ಬಾರದಂತೆ ಅಥವಾ ವಿಶೇಷ ಸಮ್ಮತಿ ಇಲ್ಲದೆ ಆವಶ್ಯಕ ವಸ್ತುವನ್ನು ಒಯ್ಯಲು ಅದನ್ನು ಬಳಸಲಾಯಿತೆಂದು ಮತ್ತು ಅಂಥ ಬಳಕೆ ವಿರುದ್ಧ ಪ್ರತಿಯೊಬ್ಬರು ಎಲ್ಲ ಉಚಿತ ಮತ್ತು ಅಗತ್ಯವಾದ ಮುನ್ನೆಚ್ಚರಿಕೆ ವಹಿಸಿದ್ದರೆಂದು ಡೆಪ್ಯುಟಿ ಕಮೀಷನರಿಗೆ ಮನವರಿಕೆಯಾಗುವಂತೆ ರುಜುವಾತು ಪಡಿಸಿದರೆ (1)ನೇ ಉಪ-ಪ್ರಕರಣದ ಉಪಬಂಧಗಳಿಗೆ ಪ್ರತಿಕೂಲವಾಗದಂತೆ 6ನೇ ಪ್ರಕರಣದ ಮೇರೆಗೆ ಯಾವುದೇ ಪ್ರಾಣಿ, ವಾಹನ, ನೌಕೆ ಅಥವಾ ಇತರ ಸಾಗಣೆ ಸಾಧನವನ್ನು ಮುಟ್ಟುಗೋಲು ಹಾಕಿಕೊಳ್ಳುವ ಯಾವುದೇ ಆದೇಶವನ್ನು ಮಾಡತಕ್ಕುದಲ್ಲ.

(3) ಯಾವುದೇ ಆವಶ್ಯಕ ವಸ್ತು ಭಾಂಗಿ, ಹೊದಿಕೆ, ಪಾತ್ರ, ಪ್ರಾಣಿ, ವಾಹನ, ನೌಕೆ ಅಥವಾ ಇತರ ಸಾಗಣೆ ಸಾಧನವನ್ನು ಮುಟ್ಟುಗೋಲು ಹಾಕಿಕೊಳ್ಳುವ ಯಾವುದೇ ಆದೇಶವು, (1)ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ನೋಟೀಸನ್ನು ನೀಡುವಾಗ ಆ ಖಂಡದ ಉಪಬಂಧವನ್ನು ವಾಸ್ತವಿಕವಾಗಿ ಪಾಲಿಸಿದ್ದರೆ ಆ ನೋಟೀಸಿನಲ್ಲಿರುವ ಯಾವುದೇ ದೋಷ ಅಥವಾ ಅಕ್ರಮತೆಯ ಕಾರಣ ಮಾತ್ರದಿಂದಲೇ ಅಮಾನ್ಯವಾಗತಕ್ಕುದಲ್ಲ.

8. ಅಪೀಲು (1) 6ನೇ ಪ್ರಕರಣದ ಮೇರೆಗೆ ಮಾಡಿದ ಮುಟ್ಟುಗೋಲಿನ ಆದೇಶದಿಂದ ಬಾಧಿತನಾದ ಯೊವ್ವೊಬ್ಬ ವ್ಯಕ್ತಿಯು, ಅಂಥ ಆದೇಶವು ತನಗೆ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ರಾಜ್ಯ ಸರ್ಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು ಮತ್ತು ರಾಜ್ಯ ಸರ್ಕಾರವು ವಿಚಾರಣೆಗಾಗಿ ಅಪೀಲುದಾರನಿಗೆ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರುವಾಯ. ತಾನು ಸೂಕ್ತರೆಂದು ಭಾವಿಸಬಹುದಾದಂತೆ ಯಾವ ಆದೇಶ ವಿರುದ್ಧ ಅಪೀಲು ಮಾಡಲಾಗಿದೆಯೋ ಆ ಆದೇಶವನ್ನು ದೃಢಪಡಿಸುವ ಮಾರ್ಪಡಿಸುವ ಅಥವಾ ರದ್ದುಗೊಳಿಸುವ ಅಂಥ ಆದೇಶವನ್ನು ಹೊರಡಿಸತಕ್ಕುದು.

(2) 6ನೇ ಪ್ರಕರಣದ ಮೇರೆಗೆ ಮಾಡುವ ಒಂದು ಆದೇಶವನ್ನು ರಾಜ್ಯ ಸರ್ಕಾರವು ಮಾರ್ಪಾಟು ಮಾಡಿದ್ದಲ್ಲಿ ಅಥವಾ ರದ್ದುಗೊಳಿಸಿದ್ದಲ್ಲಿ ಅಥವಾ ಯಾವ ಆದೇಶದ ಸಂಬಂಧದಲ್ಲಿ 6ನೇ ಪ್ರಕರಣದ ಮೇರೆಗೆ ಮುಟ್ಟುಗೋಲಿನ ಆದೇಶವನ್ನು ಹೊರಡಿಸಲಾಗಿದಿಯೋ ಅಂಥ ಆದೇಶದ ಉಲ್ಲಂಘನೆಯ ಬಗ್ಗೆ ನಡೆಸಲಾದ ಪ್ರಾಸಿಕ್ಯೂಷನ್ನಿಗೆ ಸಂಬಂಧಪಟ್ಟ ವ್ಯಕ್ತಿಯು ನಿರ್ದೋಷಿ ಎಂದು ತೀರ್ಮಾನವಾಗಿದ್ದಲ್ಲಿ ಮತ್ತು ಈ ಎರಡೂ ಸಂದರ್ಭಗಳಲ್ಲಿ ಯಾವುದೇ ಕಾರಣಕ್ಕೂ ವಶಪಡಿಸಿಕೊಳ್ಳಲಾದ

ಆವಶ್ಯಕ ವಸ್ತುವನ್ನು ಹಿಂದಿರುಗಿಸಲು ಸಾಧ್ಯವಿಲ್ಲದಿರುವಲ್ಲಿ 6ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಿರುವುದರ ಹೊರತು, ಆವಶ್ಯಕ ವಸ್ತುವನ್ನು, ಸರ್ಕಾರಕ್ಕೆ ಮಾರಾಟ ಮಾಡಲಾಗದಿದ್ದರೆ ಹೇಗೋ ಹಾಗೆ, ಆವಶ್ಯಕ ವಸ್ತುಗಳನ್ನು ವಶಪಡಿಸಿಕೊಂಡ ದಿನಾಂಕದಿಂದ ಲೆಕ್ಕ ಮಾಡಿದ ಯುಕ್ತ ಬಡ್ಡಿ ಸಹಿತ ಅದರ ಬೆಲೆಯನ್ನು ಅಂಥ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು ಮತ್ತು ಅಂಥ ಬೆಲೆಯನ್ನು 3ನೇ ಪ್ರಕರಣದ (3)ಉಪ-ಪ್ರಕರಣದ ಉಪಬಂಧಗಳಿಗನುಸಾರವಾಗಿ ನಿರ್ಧರಿಸತಕ್ಕದು.

9. **ಮುಟ್ಟುಗೋಲು ಕುರಿತ ಐತೀರ್ಪು ಇತರ ದಂಡನೆಗಳಿಗೆ ಅಡ್ಡಿಯಾಗತಕ್ಕುದಲ್ಲ** : ಈ ಪ್ರಕರಣದ ಮೇರೆಗೆ, ಡೆಪ್ಯುಟಿ ಕಮೀಷನರು ನೀಡಿದ ಯಾವುದೇ ಮುಟ್ಟುಗೋಲನ್ನು ಕುರಿತ ಐತೀರ್ಪು, ಅದರಿಂದ ಬಾಧಿತನಾದಂಥ ವ್ಯಕ್ತಿಗೆ ಈ ಅಧಿನಿಯಮದ ಮೇರೆಗೆ ಅವನು ಬದ್ಧನಾದ ದಂಡನೆಯನ್ನು ವಿಧಿಸಲು ಪ್ರತಿಬಂಧಕವಾಗತಕ್ಕುದಲ್ಲ.

10. **ಕೆಲವು ಪ್ರಕರಣಗಳಲ್ಲಿ ಅಧಿಕಾರವ್ಯಾಪ್ತಿಯ ಪ್ರತಿಬಂಧ** : ಯಾವುದೇ ಆವಶ್ಯಕ ವಸ್ತುವನ್ನು ಅದರ ಸಂಬಂಧವಾಗಿ 3ನೇ ಪ್ರಕರಣದ ಮೇರೆಗೆ ಮಾಡಲಾದ ಆದೇಶದ ಅನುಸರಣೆಯಲ್ಲಿ ವಶಪಡಿಸಿಕೊಂಡಾಗಲೆಲ್ಲ, ಅಂಥ ಸ್ವತ್ತಿನ ಸ್ವಾಧೀನ ವಶಾವಣೆ, ವಿಲೇವಾರಿ ಅಥವಾ ವಿತರಣೆಗೆ ಸಂಬಂಧಿಸಿದ ಆದೇಶವನ್ನು 8ನೇ ಪ್ರಕರಣದ ಮೇರೆಗೆ ಮಾಡಲು ಡೆಪ್ಯುಟಿ ಕಮೀಷನರು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕುದು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ವಿರುದ್ಧವಾದುದು. ಏನೇ ಇದ್ದರೂ, ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರವು ಆ ಸಂಬಂಧದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕುದಲ್ಲ.

11. **ದಂಡಗಳು** : 3ನೇ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶವನ್ನು ಯಾವೊಬ್ಬ ವ್ಯಕ್ತಿಯು ಉಲ್ಲಂಘಿಸಿದರೆ

(ಎ) ಅವನು :

(i) ಆ ಪ್ರಕರಣದ (2)ನೇ ಉಪ-ಪ್ರಕರಣದ (ಜಿ) ಖಂಡ ಅಥವಾ (ಹೆಚ್) ಖಂಡಕ್ಕೆ ಸಂಬಂಧಿಸಿದಂತೆ ಮಾಡಲಾದ ಆದೇಶದ ಸಂದರ್ಭದಲ್ಲಿ, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯವರೆಗಿನ ಕಾರಾವಾಸದಿಂದ ದಂಡನೀಯನಾಗತಕ್ಕುದು ಮತ್ತು ಜುಲ್ಮಾನೆಗೆ ಸಹ ಬದ್ಧನಾಗತಕ್ಕುದು ; ಮತ್ತು

(ii) ಇತರ ಯಾವುದೇ ಆದೇಶದ ಸಂದರ್ಭದಲ್ಲಿ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯವರೆಗಿನ ಕಾರಾವಾಸದಿಂದ ದಂಡನೀಯವಾಗತಕ್ಕುದು ಮತ್ತು ಜುಲ್ಮಾನೆಗೆ ಸಹ ಬದ್ಧನಾಗತಕ್ಕುದು.

ಪರಂತು, ಜುಲ್ಮಾನೆಯ ಶಿಕ್ಷೆಯೊಂದನ್ನೇ ವಿಧಿಸುವುದು ನ್ಯಾಯೋಚಿತವಾಗುವುದೆಂದು ನ್ಯಾಯಾಲಯವು ಅಭಿಪ್ರಾಯಪಟ್ಟರೆ, ಅದು ಅಭಿಲೇಖಿಸಬೇಕಾದ ಕಾರಣಗಳಿಗಾಗಿ ಕಾರಾವಾಸದ ಶಿಕ್ಷೆಯನ್ನು ವಿಧಿಸಬಹುದು ; ಮತ್ತು

(ಬಿ) ಆದೇಶವನ್ನು ಉಲ್ಲಂಘಿಸಲಾಗಿರುವ ಸಂಬಂಧದ ಯಾವುದೇ ಸ್ವತ್ತು ಅಥವಾ ನ್ಯಾಯಾಲಯವು ಉಚಿತವೆಂದು ಭಾವಿಸುವಂಥ ಸ್ವತ್ತಿನ ಅಂಥ ಭಾಗವನ್ನು ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲು ಮಾಡತಕ್ಕುದು ;

ಪರಂತು, ಸಂಪೂರ್ಣ ಸ್ವತ್ತು, ಅಥವಾ ಸಂದರ್ಭಾನುಸಾರ ಅದರ ಯಾವುದೇ ಭಾಗದ ಸಂಬಂಧದಲ್ಲಿ ಮುಟ್ಟುಗೋಲು ಮಾಡುವಂತೆ ನಿರ್ದೇಶಿಸುವುದು ಅವಶ್ಯವಿಲ್ಲವೆಂದು ನ್ಯಾಯಾಲಯವು ಅಭಿಪ್ರಾಯಪಟ್ಟರೆ, ಅದು ಅಭಿಲೇಖಿಸಬೇಕಾದ ಕಾರಣಗಳಿಗಾಗಿ ಹಾಗೆ ಮಾಡದಿರಬಹುದು.

12. ಪ್ರಯತ್ನಗಳು ಮತ್ತು ದುಷ್ಪ್ರೇರಣೆ : 3ನೇ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶವನ್ನು ಉಲ್ಲಂಘಿಸಲು ಪ್ರಯತ್ನಿಸುವ ಅಥವಾ ಅದರ ಉಲ್ಲಂಘನೆಗೆ ದುಷ್ಪ್ರೇರಣೆ ನೀಡುವ ಯಾವೊಬ್ಬ ವ್ಯಕ್ತಿಯು ಆ ಆದೇಶವನ್ನು ಉಲ್ಲಂಘಿಸಿದ್ದಾನೆಂದು ಭಾವಿಸತಕ್ಕದು

13. ಸುಳ್ಳು ಹೇಳಿಕೆ, ಯಾವೊಬ್ಬ ವ್ಯಕ್ತಿಯುಳು

(i) 3ನೇ ಪ್ರಕರಣದ ಮೇರೆಗೆ ಮಾಡಲಾದ ಆದೇಶದ ಮೂಲಕ ಅಗತ್ಯಪಡಿಸಿದಾಗ, ಯಾವುದೇ ಮುಖ್ಯ ವಿವರದಲ್ಲಿ ಸುಳ್ಳು ಹೇಳಿಕೆಯನ್ನು ನೀಡಿದರೆ ಅಥವಾ ಮಾಹಿತಿಯನ್ನು ಒದಗಿಸಿದರೆ ಮತ್ತು ಅದು ಸುಳ್ಳೆಂದು ಅವನಿಗೆ ತಿಳಿದಿದ್ದರೆ ಅಥವಾ ಹಾಗೆ ನಂಬಲು ಯುಕ್ತ ಕಾರಣಗಳಿದ್ದರೆ ಅಥವಾ ನಿಜವೆಂದು ನಂಬದಿದ್ದರೆ ಅಥವಾ.

(ii) ಯಾವುದೇ ಅಂಥ ಆದೇಶದ ಮೂಲಕ ನಿರ್ವಹಿಸಬೇಕೆಂದು ಅಥವಾ ಒದಗಿಸಬೇಕೆಂದು ಅಗತ್ಯಪಡಿಸಲಾಗಿರುವ ಯಾವುದೇ ಲೆಕ್ಕ ಪತ್ರಗಳ ಪುಸ್ತಕ, ದಾಖಲೆ, ಘೋಷಣೆ ವಿವರಪಟ್ಟಿ ಅಥವಾ ಇತರ ದಸ್ತಾವೇಜಿನಲ್ಲಿ ಮೇಲೆ ಹೇಳಿದಂಥ ಹೇಳಿಕೆಯನ್ನು ಮಾಡಿದರೆ, ಅವನು ಮೂರು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅತವಾ ಇವೆರಡರಿಂದಲೂ ದಂಡನೀಯನಾಗತಕ್ಕುದು.

14 ಕಂಪನಿಗಳಿಂದ ಅಪರಾಧ : (1) 3ನೇ ಪ್ರಕರಣದ ಮೇರೆಗೆ ಮಾಡಲಾದ ಒಂದು ಆದೇಶವನ್ನು ಉಲ್ಲಂಘಿಸುವ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಉಲ್ಲಂಘನೆಯು ಘಟಿಸಿದ ಸಮಯದಲ್ಲಿ ಆ ಕಂಪನಿಯ ವ್ಯವಹಾರಗಳ ನಿರ್ವಹಣೆಗಾಗಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಉಲ್ಲಂಘನೆಯ ದೋಷಿಯೆಂದು ಭಾವಿಸತಕ್ಕುದು ಮತ್ತುಅವರ ವಿರುದ್ಧದ ವ್ಯವಹರಣೆಗೆ ಗುರಿಯಾಗಲು ಬದ್ಧನಾಗಿರತಕ್ಕುದು ಮತ್ತು ತದನುಸಾರವಾಗಿ ದಂಡಿತನಾಗತಕ್ಕುದು.

ಪರಂತು, ಈ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಉಲ್ಲಂಘನೆಯು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಉಲ್ಲಂಘನೆಯನ್ನು ತಡೆಗಟ್ಟಲು ತಾನು ಎಲ್ಲಾ ರೀತಿಯ ಸೂಕ್ತ ಪ್ರಯತ್ನ ವಹಿಸಿದ್ದೆನೆಂದು ಅಂಥ ಯಾವೊಬ್ಬ ವ್ಯಕ್ತಿಯು ರುಜುವಾತುಪಡಿಸಿದರೆ ಅಂಥ ವ್ಯಕ್ತಿಯನ್ನು ಯಾವುದೇ ದಂಡನೆಗೆ ಬದ್ಧವಾಗುವಂತೆ ಮಾಡತಕ್ಕುದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ಒಂದು ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ವಿಶೇಷ ಸಮ್ಮಿತಿಯಿಂದ ಅಥವಾ ಅವನ ಕಡೆಯಿಂದಾದ ಯಾವುದೇ ನಿರ್ಲಕ್ಷದ ಕಾರಣದಿಂದ ಸಂಭವಿಸಿತೆಂದು

ರುಜುವಾತಾದರೆ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಪರಾಧದ ದೋಷಿ ಎಂದು ಭಾವಿಸತಕ್ಕುದು ಮತ್ತು ಅವನು ತನ್ನ ವಿರುದ್ಧದ ವ್ಯವಹಣೆಗೆ ಗುರಿಯಾಗಲು ಬದ್ಧನಾಗತಕ್ಕುದು ಮತ್ತು ತದನುಸಾರವಾಗಿ ದಂಡಿತನಾಗತಕ್ಕುದು.

ವಿವರಣೆ : ಈ ಪ್ರಕರಣದ ಉದ್ದೇಶಗಳಿಗಾಗಿ

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮ್ ಅಥವಾ ವ್ಯಕ್ತಿಗಳ ಇತರ ಸಂಸ್ಥೆಯನ್ನು ಒಳಗೊಳ್ಳುತ್ತದೆ ; ಮತ್ತು

(ಬಿ) "ನಿರ್ದೇಶಕ" ಎಂದರೆ, ಒಂದು ಫರ್ಮಿನ ಸಂಬಂಧದಲ್ಲಿ ಫರ್ಮಿನ ಒಬ್ಬ ಪಾಲುದಾರ.

15. ಅಪರಾಧಗಳ ಸಂಜ್ಞೇಯತೆ : ಯಾವ ನ್ಯಾಯಾಲಯವೂ, ಭಾರತ ದಂಡ ಸಂಹಿತೆಯ (ಕೇಂದ್ರ ಅಧಿನಿಯಮ 1960ರ 45) 21ನೇ ಪ್ರಕರಣದಲ್ಲಿ ಪರಿಭಾಷಿಸಲಾದಂತೆ ಲೋಕ ನೌಕರನಾಗಿರುವ ವ್ಯಕ್ತಿಯು ಮಾಡಿದ ಅಂಥ ಅಪರಾಧಕ್ಕೆ ಕಾರಣವಾದ ಸಂಗತಿಗಳನ್ನು ಕುರಿತು ಮಾಡಿದ ಲಿಖಿತ ವರದಿಯ ಮೇಲಲ್ಲದೆ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕುದಲ್ಲ.

16.ಆದೇಶಗಳಿಗೆ ಸಂಬಂಧಪಟ್ಟಂತೆ ಪೂರ್ವಭಾವನೆ : ಒಂದು ಪ್ರಾಧಿಕಾರವು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರರನ್ನು ಚಲಾಯಿಸಿ ಒಂದು ಆದೇಶವನ್ನು ಮಾಡಲಾಗಿದೆ ಮತ್ತು ಅದಕ್ಕೆ ಸಹಿ ಹಾಕಲಾಗಿದೆ ಎಂದು ತಾತ್ಪರ್ಯವಾದರೆ, ನ್ಯಾಯಾಲಯವು ಅಂಥ ಆದೇಶವನ್ನು ಭಾರತ ಸಾಕ್ಷ್ಯ ಅಧಿನಿಯಮ 1872ರ (ಕೇಂದ್ರ ಅಧಿನಿಯಮ, 1872ರ 1) ಅರ್ಥ ವ್ಯಾಪ್ತಿಯಲ್ಲಿ ಆ ಪ್ರಾಧಿಕಾರವು ಮಾಡಿದೆ ಎಂಬುದಾಗಿ ಪೂರ್ವ ಭಾವನೆ ಮಾಡತಕ್ಕುದು.

17. ರುಜುವಾತಿನ ಹೊಣೆಗಾರಿಕೆ : ಯಾವುದೇ ಕಾರ್ಯ ಮಾಡುವುದನ್ನು ಅಥವಾ ವಿಧಿಬದ್ಧ ಅಧಿಕಾರವಿಲ್ಲದೆ ಅಥವಾ ಪರ್ಮಿಟ್, ಲೈಸೆನ್ಸ್ ಅಥವಾ ಇತರ ದಸ್ತಾವೇಜಿಲ್ಲದೆ ಯಾವುದೇ ವಸ್ತುವನ್ನು ಸ್ವಾಧೀನದಲ್ಲಿಟ್ಟುಕೊಳ್ಳುವುದನ್ನು ಪ್ರತಿಬಂಧಿಸುವಂಥ 3ನೇ ಪ್ರಕರಣದ ಮೇರೆಗೆ ಮಾಡಿದ ಆದೇಶದ ಉಲ್ಲಂಘನೆಗಾಗಿ ಯಾವೊಬ್ಬ ವ್ಯಕ್ತಿಯನ್ನು ಪ್ರಾಸಿಕ್ಯೂಷನ್ನಿಗೆ, ಗುರಿಪಡಿಸಿರುವಲ್ಲಿ, ಅಂಥ ಅಧಿಕಾರ ಪರ್ಮಿಟ್ ಲೈಸೆನ್ಸ್ ಅಥವಾ ಇತರ ದಸ್ತಾವೇಜನ್ನು ತಾನು ಹೊಂದಿದ್ದೇನೆಂದು ರುಜುವಾತುಪಡಿಸುವುದು ಅವನ ಹೊಣೆಯಾಗಿರತಕ್ಕುದು.

18. ಈ ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮಕ್ಕೆ ರಕ್ಷಣೆ : (1) 3ನೇ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕೃತ್ಯದ ಬಗ್ಗೆ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹಾರಣೆಯು ಇರತಕ್ಕುದಲ್ಲ.

(2) 3ನೇ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕೃತ್ಯದಿಂದ ಹಾನಿಯುಂಟಾಗಿದ್ದರೆ ಅಥವಾ ಉಂಟಾಗುವ ಸಂಭವವಿದ್ದರೆ, ಅದಕ್ಕಾಗಿ ಸರ್ಕಾರದ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯು ಇರತಕ್ಕುದಲ್ಲ.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸಾರ್ವಜನಿಕ ಹಿತದೃಷ್ಟಿಯಿಂದ, ಕೆಲವು ಅವಶ್ಯಕ ವಸ್ತುಗಳ ಉತ್ಪಾದನೆ, ಸರಬರಾಜು ಮತ್ತು ವಿತರಣೆಯನ್ನು ಮತ್ತು ಅವುಗಳಲ್ಲಿ ವ್ಯವಹಾರ ಮತ್ತು ವಾಣಿಜ್ಯವನ್ನು ನಿಯಂತ್ರಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಅಗತ್ಯವೆಂದು ಕಂಡುಬಂದಿದೆ.

ಆದ್ದರಿಂದ ಈ ವಿಧೇಯಕ.

ಎಂ. ವೀರಪ್ಪ ಮೊಯಿಲಿ
ಮುಖ್ಯಮಂತ್ರಿ

ಮ. ಇನ್ನಾಸಪ್ಪ
ಕಾರ್ಯದರ್ಶಿ.

ಆರ್ಥಿಕ ಜ್ಞಾಪಕ ಪತ್ರ

ಕರ್ನಾಟಕ ಆವಶ್ಯಕ ವಸ್ತುಗಳ (ನಿಯಂತ್ರಣ) ಅಧಿನಿಯಮದ, 1992ನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರಲು ಅಧಿನಿಯಮದ ಅಡಿಯಲ್ಲಿ ಅಗತ್ಯವಿರುವ ಸಿಬ್ಬಂದಿ ವರ್ಗದ ನೇಮಕಾತಿಗಾಗಿ ವಾರ್ಷಿಕ ರೂಪಾಯಿ ಮೂರು ಲಕ್ಷ ವೆಚ್ಚ ತಗಲುತ್ತದೆ.

ಅನುಬಂಧ III

ಕರ್ನಾಟಕ ವಿಧಾನಸಭೆ

ಒಂಭತ್ತನೆಯ ವಿಧಾನಸಭೆ

(ಎಂಟನೆಯ ಅಧಿವೇಶನ)

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ (ತಿದ್ದುಪಡಿ) ವಿಧೇಯಕ, 1992

(1992ರ ವಿಧಾನಸಭಾ ವಿಧೇಯಕ ಸಂಖ್ಯೆ 32)

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಬೋಗದಾರರನ್ನು ಒಕ್ಕಲೆಬ್ಬಿಸುವ ಅಧಿನಿಯಮ, 1974ನ್ನು ಮತ್ತಷ್ಟು ತಿದ್ದುಪಡಿ ಮಾಡಲು ವಿಧೇಯಕ,

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) ಅಧಿನಿಯಮ, 1974 (1974ರ ಕರ್ನಾಟಕ ಅಧಿನಿಯಮ ಸಂಖ್ಯೆ 32)ನ್ನು ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಬಾರತ ಗಣರಾಜ್ಯದ ನಲವತ್ತಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ :

1. ಚಿಕ್ಕ ಹೆಸರು ಮತ್ತು ಪ್ರಾರಂಭ : (1) ಈ ಅಧಿನಿಯಮವನ್ನು ಕರ್ನಾಟಕ ಸಾರ್ವಜನಿಕ ಆವರಣಗಳ ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ (ತಿದ್ದುಪಡಿ) ಅಧಿನಿಯಮ. 1992 ಎಂದು ಕರೆಯತಕ್ಕುದು.

2. 2ನೇ ಪ್ರಕರಣದ ತಿದ್ದುಪಡಿ : ಕರ್ನಾಟಕ ಸಾರ್ವಜನಿಕ ಆವರಣ (ಅನಧಿಕೃತ ನಿವಾಸಿಗಳನ್ನು ಒಕ್ಕಲೆಬ್ಬಿಸುವ) ಅಧಿನಿಯಮ, 1974 (1974ರ ಕರ್ನಾಟಕ ಅಧಿನಿಯಮ ಸಂಖ್ಯೆ 32) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಕರೆಯಲಾಗುವ) 2ನೇ ಪ್ರಕರಣದ (ಇ) ಖಂಡದಲ್ಲಿ,

(i) (vi) ನೇ ಉಪಖಂಡವಾದ ತರುವಾಯ ಈ ಮುಂದಿನ ಉಪಖಂಡವನ್ನು ಸೇರಿಸತಕ್ಕುದು, ಎಂದರೆ,

"(vii) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ ಸಂಖ್ಯೆ 28) ಅಥವಾ ಕೃಷಿವಿಜ್ಞಾನ ವಿಶ್ವವಿದ್ಯಾಲಯ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ ಸಂಖ್ಯೆ 22)ರಡಿ ಸ್ಥಾಪಿಸಲಾದ ವಿಶ್ವವಿದ್ಯಾಲಯ" ;

(ii) ವಿವರಣೆಯಲ್ಲಿರುವ ಬಾಬು ಸಂಖ್ಯೆ (ಸಿ), (ಡಿ) ಮತ್ತು (ಇ)ಗಳಿಗೆ ಬದಲಾಗಿ ಈ ಮುಂದಿನ ಬಾಬುಗಳನ್ನು ಪ್ರತಿಯೋಜಿಸತಕ್ಕುದು, ಎಂದರೆ,

(ಸಿ) ಕರ್ನಾಟಕ ಮೇಲಪಟ್ಟು ಸುಧಾರಣಾ ಮಂಡಲಿಗಳು ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ ಸಂಖ್ಯೆ 11) ರ ಮೇರೆಗೆ ಸ್ಥಾಪಿತವಾದ

(ಡಿ) ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ್ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ಅಧಿನಿಯಮ, 1983 (1985ರ ಕರ್ನಾಟಕ ಅಧಿನಿಯಮ ಸಂಖ್ಯೆ 20)ರ ಮೇರೆಗೆ ಸ್ಥಾಪಿತವಾದ ಜಿಲ್ಲಾ ಪರಿಷತ್ತು ಅಥವಾ ಮಂಡಲ್ ಪಂಚಾಯತಿ ;

(ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ ಸಂಖ್ಯೆ 34)ರ ಮೇರೆಗೆ ರಚಿತವಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ;

(ಎಫ್) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ ಸಂಖ್ಯೆ 34)ರ ಮೇರೆಗೆ ರಚಿತವಾದ ನಗರಾಭಿವೃದ್ಧಿ ಪ್ರಾಧಿಕಾರ

3. 3ನೇ ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮದ 3ನೇ ಪ್ರಕರಣದ (ಎ) ಖಂಡದಲ್ಲಿ ii) ನೇ ಬಾಬಿನಲ್ಲಿ "ಸ್ಥಳೀಯ ಪ್ರಾದಿಕಾರ" ಎಂಬ ಪದಗಳ ತರುವಾಯ "ಅಥವಾ ರಾಜ್ಯ ಸರ್ಕಾರಿ ಸೇವೆಗಳ ಬಿ ಗುಂಪಿನ ಅಧಿಕಾರಿಯ ದರ್ಜೆಗಿಂತ ಕೆಳಗಿನ ದರ್ಜೆಯವನಲ್ಲದಂಥ ಅಧಿಕಾರಿ"ಎಂಬ ಪದಗಳನ್ನು ಸೇರಿಸತಕ್ಕದ್ದು.

4. ನಿರಸನ ಮತ್ತು ಉಳಿಸುವಿಕೆಗಳು : (1) ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರ ಒಕ್ಕಲೆಬ್ಬಿಸುವ ತಿದ್ದುಪಡಿ) ಅಧ್ಯಾದೇಶ, 1992 (1992ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 14) ಈ ಮೂಲಕ ನಿರಸಿತವಾಗಿದೆ;

(2) ಹಾಗೆ ನಿರಸಿತವಾಗಿದ್ದರೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಲಾದ ಯಾವುದೇ ಕೃತ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂಥ ಮೂಲ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕುದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) ಅಧಿನಿಯಮ, 1971ನ್ನು ತಿದ್ದುಪಡಿ ಮಾಡುವ ಮೂಲಕ 'ಸಾರ್ವನಿಜಕ ಆವರಣಗಳು' ಎಂಬ ಪದದ ಅರ್ಥವ್ಯಾಪ್ತಿಯಲ್ಲಿ, ವಿಶ್ವವಿದ್ಯಾಲಯಗಳಿಗೆ ಸೇರಿದ ಮತ್ತು ವಿಶ್ವವಿದ್ಯಾಲಯಗಳ ಮೂಲಕ ಅಥವಾ ಅವುಗಳ ಪರವಾಗಿ ಗುತ್ತಿಗೆಗೆ ತೆಗೆದುಕೊಳ್ಳಲಾದ ಆವರಣಗಳನ್ನು ಒಳಗೊಳ್ಳುವಂತೆ ಮಾಡುವುದು ಮತ್ತು 'ಸ್ಥಳೀಯ ಪ್ರಾಧಿಕಾರ' ಎಂಬ ಪದದ ಅರ್ಥವ್ಯಾಪ್ತಿಯಲ್ಲಿ ಅಭಿವೃದ್ಧಿ ಮಂಡಲಿಗಳು, ಜಿಲ್ಲಾ ಪರಿಷತ್ತುಗಳು, ಮಂಡಲ್ ಪಂಚಾಯಿತಿಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಒಳಗೊಳ್ಳುವಂತೆ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದೇ ಪ್ರಕಾರ, ಕರ್ನಾಟಕ ಸಾರ್ವಜನಿಕ ಆವರಣಗಳು (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ಅಧ್ಯಾದೇಶ, 1992ನ್ನು ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶಕ್ಕೆ ಬದಲಾಗಿ ಈ ವಿಧೇಯಕವನ್ನು ಮಂಡಿಸಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕವನ್ನು ಮಂಡಿಸಲಾಗಿದೆ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ಕಾರ್ಯಕಲಾಪಗಳ ನಿಯಮಗಳ 79ನೇ ನಿಯಮದಿಂದ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) ಅಧಿನಿಯಮ, 1974ನ್ನು ತಿದ್ದುಪಡಿ ಮಾಡುವ ಮೂಲಕ 'ಸಾರ್ವಜನಿಕ ಆವರಣಗಳ' ಎಂಬ ಪದದ ಅರ್ಥವ್ಯಾಪ್ತಿಯಲ್ಲಿ ವಿಶ್ವವಿದ್ಯಾಲಯಗಳಿಗೆ ಸೇರಿದ ಮತ್ತು ವಿಶ್ವವಿದ್ಯಾಲಯಗಳ ಮೂಲಕ ಅಥವಾ ಅವುಗಳ ಪರವಾಗಿ ಗುತ್ತಿಗೆಗೆ ತೆಗೆದುಕೊಳ್ಳಲಾದ ಆವರಣಗಳನ್ನು ಒಳಗೊಳ್ಳುವಂತೆ ಮಾಡುವುದು ಮತ್ತು 'ಸ್ಥಳೀಯ ಪ್ರಾಧಿಕಾರ' ಎಂಬ ಪದದ ಅರ್ಥವ್ಯಾಪ್ತಿಯಲ್ಲಿ ಅಭಿವೃದ್ಧಿ ಮಂಡಲಿಗಳು, ಜಿಲ್ಲಾ ಪರಿಷತ್ತುಗಳು, ಮಂಡಲ್ ಪಂಚಾಯತಿಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಒಳಗೊಳ್ಳುವಂತೆ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಅದೇ ಪ್ರಕಾರ, ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ಅಧ್ಯಾದೇಶ, 1992ನ್ನು ಪ್ರಖ್ಯಾಪಿಸಲಾಯಿತು.

ರಾಜ್ಯ ವಿಧಾನಮಂಡಲದ ಉಭಯ ಸದನಗಳೂ ಅಧಿವೇಶನದಲ್ಲಿಲ್ಲದಿದ್ದುದರಿಂದ ಮತ್ತು ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರ ಒಕ್ಕಲೆಬ್ಬಿಸುವ) (ತಿದ್ದುಪಡಿ) ಅಧ್ಯಾದೇಶ, 1992ನ್ನು (1992ರ ಕರ್ನಾಟಕ ಅಧ್ಯಾದೇಶ) ಪ್ರಖ್ಯಾಪಿಸಲಾಯಿತು.

ಎಂ. ರಾಜಶೇಖರ ಮೂರ್ತಿ
ಕಂದಾಯ ಸಚಿವರು

ಮ. ಇನ್ನಾಸಪ್ಪ
ಕಾರ್ಯದರ್ಶಿ

ಅನುಬಂಧ

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರ ಒಕ್ಕಲೆಬ್ಬಿಸುವ) ಅಧಿನಿಯಮ, 1974 (1974ರ ಕರ್ನಾಟಕ ಅಧಿನಿಯಮ ಸಂಖ್ಯೆ 32)ರ ಉದ್ಧೃತ ಭಾಗಗಳು.

xx xx xx xx

2. **ಪರಿಭಾಷೆಗಳು** :- ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ

(ಎ) xx xx xx

(ಬಿ) xx xx xx

(ಸಿ) xx xx xx

(ಡಿ) xx xx xx

(ಇ) "ಸಾರ್ವಜನಿಕ ಆವರಣಗಳು" ಎಂದರೆ ರಾಜ್ಯ ಸರ್ಕಾರಕ್ಕೆ ಸೇರಿದ ಅಥವಾ ಹಂಚಿಕೆ ಮಾಡಲಾಗಿರುವ ಅಥವಾ ರಾಜ್ಯ ಸರ್ಕಾರ ಅಥವಾ ಅದರ ಪರವಾಗಿ ಗುತ್ತಿಗೆ ಮೇಲೆ ತೆಗೆದುಕೊಂಡಿರುವ ಅಥವಾ ಕೋರಿಕೆ ಸಲ್ಲಿಸಲಾಗಿರುವ ಯಾವುದೇ ಆವರಣಗಳು ಮತ್ತು ಈ ಮುಂದಿನವುಗಳಿಗೆ ಸೇರಿದ ಅಥವಾ ಅವುಗಳು ಅಥವಾ ಅವುಗಳ ಪರವಾಗಿ ಗುತ್ತಿಗೆಯ ಮೇಲೆ ಪಡೆಯಲಾದ ಯಾವುದೇ ಕಟ್ಟಡಗಳನ್ನು ಒಳಗೊಳ್ಳುತ್ತದೆ

(i) ಸ್ಥಳೀಯ ಪ್ರಾಧಿಕಾರ ;

(ii) ಕಂಪನಿಗಳ ಅಧಿನಿಯಮ, 1955 (1956ರ ಕೇಂದ್ರ ಅಧಿನಿಯಮ ಸಂಖ್ಯೆ 1)ರ 3ನೇ ಪ್ರಕರಣದಲ್ಲಿ ಪರಿಭಾಷಿಸಲಾಗಿರುವ ಯಾವುದೇ ಕಂಪನಿಯಲ್ಲಿ ರಾಜ್ಯ ಸರ್ಕಾರವು ಶೇಕಡ 51 ರಷ್ಟಕ್ಕೆ ಕಡಿಮೆಯಿಲ್ಲದಂತೆ ಸಂದಾಯ ಮಾಡಿರುವ ಷೇರು ಬಂಡವಾಳವನ್ನು ಹೊಂದಿರುವ ಕಂಪನಿ ;

(iii) (ಕೇಂದ್ರ ಅಧಿನಿಯಮ) ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ (ಕಂಪನಿಗಳ ಅಧಿನಿಯಮ, 1956 3ನೇ ಪ್ರಕರಣದಲ್ಲಿ ಪರಿಭಾಷಿಸಲಾಗಿರುವಂತಹ ಕಂಪನಿಯಾಗಿಲ್ಲದ) ಮತ್ತು ರಾಜ್ಯ ಸರ್ಕಾರದ ಒಡೆತನ ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಯಾವುದೇ ನಿಗಮ ; ಮತ್ತು

(iv) ರಾಜ್ಯ ಸರ್ಕಾರದ ಆಡಳಿತ ನಿರ್ವಹಣೆಯಲ್ಲಿರುವ ಮುಜರಾಯಿ ಸಂಸ್ಥೆ ಅಥವಾ ಮತೀಯ ಅಥವಾ ಧರ್ಮಾದಾಯ ಸಂಸ್ಥೆ ;

(v) **ಕರ್ನಾಟಕ ರಾಜ್ಯ** ವಕ್ಫ್ ಮಂಡಲಿಯ ಆಡಳಿತ ನಿರ್ವಹಣೆಯಡಿಯಿರುವ ವಕ್ಫ್ ; (vi) ರಾಜ್ಯ ಸರ್ಕಾರ ಮತ್ತು ಆಂಧ್ರಪ್ರದೇಶ ಸರ್ಕಾರಗಳು ಜಂಟಿಯಾಗಿ ಮತ್ತು ಆಂಧ್ರರಾಜ್ಯ ಸರ್ಕಾರದ ಅಧಿನಿಯಮ, 1953 (1953ರ ಕೇಂದ್ರ ಅಧಿನಿಯಮ ಸಂಖ್ಯೆ 30)ರ 66ನೇ ಪ್ರಕರಣದ (4)ನೇ ಉಪ ಪ್ರಕರಣದಡಿ ಭಾರತ ಸರ್ಕಾರವು ರಚಿಸಿದ ತುಂಗಭದ್ರಾ ಮಂಡಲಿಯ ಆಡಳಿತ ನಿರ್ವಹಣೆ ಅಥವಾ

ವಿವರಣೆ : ಈ ಖಂಡದ ಉದ್ದೇಶಗಳಿಗಾಗಿ "ಸ್ಥಳೀಯ ಪ್ರಾಧಿಕಾರ"ಎಂದರೇ

(ಎ) ಪೌರನಿಗಮ ;

(ಬಿ) ಪಟ್ಟಣ ಅಥವಾ ನಗರ ಪುರಸಭಾ ಪರಿಷತ್ತು

(ಬಿಬಿ) ಕರ್ನಾಟಕ ವ್ಯವಸಾಯೋತ್ಪನ್ನ ಮಾರುಕಟ್ಟೆ (ವಿನಿಯಮನ) ಅಧಿನಿಯಮ 1966 (1966ರ ಕರ್ನಾಟಕ ಅಧಿನಿಯಮ ಸಂಖ್ಯೆ 27) ರಡಿ ಸ್ಥಾಪಿತವಾದ ಮಾರುಕಟ್ಟೆ ಸಮಿತಿ ;

(ಸಿ) (ಮೈಸೂರು ನಗರ) ಅಭಿವೃದ್ಧಿ ಅಧಿನಿಯಮ 1903 (1903ರ ಮೈಸೂರು ಅಧಿನಿಯಮ ಸಂಖ್ಯೆ 3) ಮತ್ತು ಬೆಂಗಳೂರು ನಗರಾಭಿವೃದ್ಧಿ ಅಧಿನಿಯಮ 1945 (1945 ಮೈಸೂರು ಅಧಿನಿಯಮ ಸಂಖ್ಯೆ 5)ರಡಿ ರಚಿತವಾದ ನಗರಾಭಿವೃದ್ಧಿ ನ್ಯಾಸ ಮಂಡಲಿ ;

(ಡಿ) ತಾಲ್ಲೂಕು ಅಭಿವೃದ್ಧಿ ಮಂಡಲಿ ;

(ಇ) ಟೌನ್ ಪಂಚಾಯತಿ ಅಥವಾ ಗ್ರಾಮಪಂಚಾಯತಿ.

xx xx xx xx

ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಮಂಗಳವಾರ ೫ನೇ ಜನವರಿ ೧೯೯೩, ಪುಷ್ಯ ೧೫, ಶಕ ೧೯೧೪,

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೦೫ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : **(ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ)** ಅವರು

ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.)

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ) : ಮಾನ್ಯ ಉಪಾಧ್ಯಕ್ಷರೇ, 121(36)ನೇ ಪ್ರಶ್ನೆಯನ್ನು ತಡೆಹಿಡಿಯಬೇಕೆಂದು ನಾನು ಮನವಿ ಮಾಡುತ್ತೇನೆ.

ಉಪಾಧ್ಯಕ್ಷರು : ಇದನ್ನು ನಾನು ವಿತ್‌ಹೆಲ್ಡ್ ಮಾಡಿದ್ದೇನೆ. ಮತ್ತೆ ತಿರುಗಿ ಹಾಕೋಣ.

ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ರೋಸ್ಟರ್ ಪದ್ಧತಿ

170 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ನೇಮಕಾತಿ ಮಾಡುವಾಗ ಹಾಗೂ ಬಡ್ತಿ ನೀಡುವಾಗ ಮೀಸಲಾತಿ ರೋಸ್ಟರ್ ಪದ್ಧತಿಯನ್ನು ಪಾಲಿಸಲಾಗಿದೆಯೇ?*

ಆ) *ಹಾಗಿದ್ದಲ್ಲಿ, ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಬಡ್ತಿ ನೀಡುವಾಗ ಮೀಸಲಾತಿಯನ್ನು ಪಾಲಿಸದಿರಲು ಕಾರಣಗಳೇನು?*

ಇ) *1984ರಲ್ಲಿ ಮೀಸಲಾತಿ ಹುದ್ದೆಗಳ ಆಯ್ಕೆಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದು ಆಯ್ಕೆ ಸಂದರ್ಭದಲ್ಲಿ ಬೇರೆ ವರ್ಗದವರನ್ನು ಆಯ್ಕೆ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಈ) *ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರವು ಮೀಸಲಾತಿ ಉಲ್ಲಂಘನೆ ಮಾಡಿದವರರ ಮೇಲೆ ಕೈಗೊಂಡಿರುವ ಕ್ರಮಗಳೇನು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಅಭಿವೃದ್ಧಿ ಅಧಿಕಾರಿ ಹುದ್ದೆಗೆ 1987ರಲ್ಲಿ ಬಡ್ತಿ ನೀಡುವಾಗ ಉಪಅಭಿವೃದ್ಧಿ ಅಧಿಕಾರಿಯಾಗಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು

ಇಲ್ಲದಿದ್ದ ಕಾರಣ ಸದರಿ ಹುದ್ದೆಯನ್ನು ಬೇರೆ ಪಂಗಡಕ್ಕೆ ಸೇರಿದ ಅಭ್ಯರ್ಥಿಗೆ ಬಡ್ತಿ ನೀಡಿ ತುಂಬಲಾಯಿತು.

ಇ) 1984ರಲ್ಲಿ ನೇಮಕಾತಿಗಳನ್ನು ಮಾಡುವಾಗ ಕೆಲವೊಂದು ಹುದ್ದೆಗಳಿಗೆ ಪರಿಶಿಷ್ಟ ಪಂಗಡ/ಜಾತಿ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ ಬೇರೆ ವರ್ಗದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿರುತ್ತದೆ.

ಈ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀಮತಿ ಮೋಟಮ್ಮ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ನನ್ನ ಪ್ರಶ್ನೆಗೆ ಉತ್ತರ ಹೇಳುವಾಗ ಇಲ್ಲಿ ಅಭ್ಯರ್ಥಿಗಳು ಸಿಗದೇ ಇದ್ದ ಕಾರಣ ನಾವು ಬೇರೆ ವರ್ಗದವರನ್ನು ಭರ್ತಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ, ಯಾವುದೇ ಹುದ್ದೆಯನ್ನು ಹರಿಜನ-ಗಿರಿಜನರಿಗೆ ಕಾದಿರಿಸಿದ್ದು, ಆ ಹುದ್ದೆಯನ್ನು ಭರ್ತಿ ಮಾಡಬೇಕಾದಾಗ ಅದಕ್ಕೆ ಹರಿಜನ ಅಭ್ಯರ್ಥಿಗಳು ಸಿಗದೇ ಇದ್ದಾಗ ಸಂವಿಧಾನ ಏನು ಹೇಳುತ್ತದೆಂದರೆ, ಆ ಹುದ್ದೆಯನ್ನು ಕಾದಿರಿಸಿ ಮುಂದೆ ಅಭ್ಯರ್ಥಿಗಳು ಸಿಕ್ಕಿದಾಗ ಭರ್ತಿ ಮಾಡಬೇಕೆಂದು ಇದೆ. ಆದರೆ, ಇವೊತ್ತು ಈ ಕೆಲಸವನ್ನು ಮಾಡದೆ ಉದ್ದೇಶಪೂರ್ವಕವಾಗಿ ಇಂತಹ ಹುದ್ದೆಗಳನ್ನು ಭರ್ತಿ ಮಾಡುವಾಗ ಹರಿಜನ ಅಭ್ಯರ್ಥಿಗಳು ಸಿಗುವುದಿಲ್ಲ ಎಂದು ಒಂದು ನೆಪ ಹೇಳಿ ಬೇರೆ ಅಭ್ಯರ್ಥಿಗಳನ್ನು ತುಂಬುವ ಪ್ರಯತ್ನ ಮಾಡಿದರೆ ಹರಿಜನ ಗಿರಜನರ ಸಂವಿಧಾನಾತ್ಮಕ ಹಕ್ಕನ್ನು ಹಗಲು ದರೋಡೆ ಮಾಡಿದ ಹಾಗೆ ಆಗುತ್ತದೆ. ಇಂತಹ ಅಧಿಕಾರಿಗಳ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂಬುದು ನನ್ನ ಪ್ರಶ್ನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಪ್ರಶ್ನೆ ಕೇಳಲಿಲ್ಲ.

ಶ್ರೀಮತಿ ಮೋಟಮ್ಮ : ಇದೇ ನಾನು ಪ್ರಶ್ನೆ ಕೇಳುವುದು. ಉದ್ದೇಶಪೂರ್ವಕವಾಗಿ ತಪ್ಪು ಮಾಡಿದಂಥ ಅಧಿಕಾರಿಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇದು ಹಗಲು ದರೋಡೆ ಎಂದು ನಾನು ಹೇಳುತ್ತಿದ್ದೇನೆ. ಹರಿಜನರಿಗೆ ಸಿಗುವ ಹಕ್ಕನ್ನು ಕಿತ್ತು ಬೇರೆಯವರಿಗೆ ಕೊಟ್ಟು ಹಗಲು ದರೋಡೆ ಮಾಡಿದಂಥ ಅಧಿಕಾರಿಗಳ ಬಗ್ಗೆ ತಮ್ಮ ಕ್ರಮ ಏನು ಎನ್ನತಕ್ಕಂಥಾದ್ದು ನನ್ನ ಪ್ರಶ್ನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಮಾನ್ಯ ಸದಸ್ಯರ ಅಭಿಪ್ರಾಯವನ್ನು ಮತ್ತು ಭಾವನೆಗಳನ್ನು ನಾನು ಪೂರ್ತಿಯಾಗಿ ತಿಳಿದುಕೊಂಡಿದ್ದೇನೆ. ಸುಮಾರು ಹನ್ನೊಂದು ಹುದ್ದೆಗಳನ್ನು 1984ರಲ್ಲಿ ಏನು ಭರ್ತಿ ಮಾಡಿದ್ದರು, ಆಗ ಇದರಲ್ಲಿ ರೆಕಾರ್ಡ್ ಕೀಪರ್, ಸ್ವಾಗತಕಾರ ಮತ್ತು ಸಹಾಯ ಖಜಾಂಜಿ ಈ ಹುದ್ದೆಗಳಿಗೆ ಮೀಸಲಾತಿ ಪ್ರಕಾರ ಪರಿಶಿಷ್ಟ ಜಾತಿಗೆ ಸೇರಿದ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಲಾಗಿದೆ. ಆದರೆ ವ್ಯವಸ್ಥಾಪಕರು, ಅಂತರಿಕ ಲೆಕ್ಕ ಪರಿಶೋಧನೆ, ಯೋಜನಾಧಿಕಾರಿ, ಕಾರ್ಯ ನಿರ್ವಾಹಕ ಸದಸ್ಯರ ಆಪ್ತ ಸಹಾಯಕ ಹುದ್ದೆಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳಿಂದ ಅರ್ಜಿಗಳು ಬರದಿರುವ ಕಾರಣ ಬೇರೆ ವರ್ಗದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ನಮಗೆ ಅವರು ಮಾಹಿತಿಯನ್ನು ಒದಗಿಸಿದ್ದಾರೆ.

ಆಮೇಲೆ ಸಹಾಯಕ ಅಭಿಯಂತರರು, ಸಹಾಯಕರು, ಕಿವಿಯ ಸಹಾಯಕರು, ಈ ಹುದ್ದೆಗಳಿಗೆ ನೇಮಕ ಮಾಡುವಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಿರುತ್ತಾರೆ. ಆದ್ದರಿಂದ ಈ ಮೂರು ಹುದ್ದೆಗಳು ಏನು ಇವೆ, ವ್ಯವಸ್ಥಾಪಕರು ಆಂತರಿಕ ಲೆಕ್ಕಪರಿಶೋಧಕರು, ಅಂದರೆ ಚಾರ್ಟೆಡ್ ಅಕೌಂಟೆಂಟ್ ಬೇಕಾಗುತ್ತದೆ. ಆದರೆ ಯೋಜನಾ ಅಧಿಕಾರಿ, ಕಾರ್ಯನಿರ್ವಾಹಕ ಸದಸ್ಯರ ಹುದ್ದೆಗಳಿಗೆ ಚಾರ್ಟೆಡ್ ಅಕೌಂಟ್‌ಂಟ್ ಬೇಕಾಗಿಲ್ಲ. It is not that technical affair. ಅದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಇದು ಸ್ವಲ್ಪ ಸಲುಗೆಯಾಗಿದೆ. ನಮ್ಮ ಅನೇಕ ಇಲಾಖೆಗಳಲ್ಲಿ ಕೂಡ ನಾವು ಪರಿಶೀಲನೆ ಮಾಡಿದಾಗ, ಏನು ಸಂವಿಧಾನದ ಪ್ರಕಾರ ಮತ್ತು ನೇಮಕಾತಿ ನಿಯಮಗಳ ಪ್ರಕಾರ ನೇಮಕಾತಿ ಮಾಡಬೇಕೊ ಮೀಸಲಾತಿ ಒದಗಿಸಬೇಕೊ, ಅದನ್ನು ಒಂದು ರೀತಿ ರೂಢಿಯಿಂದ, ಬಹಳ ಸಲುಗೆಯಿಂದ ತೆಗೆದುಕೊಂಡು ನಿಜವಾಗಿ ಸಾಮಾಜಿಕ ನ್ಯಾಯವನ್ನು ಅಪಹರಿಸತಕ್ಕಂತಹ ಕೆಲಸ ಬೇರೆ ಬೇರೆ ಇಲಾಖೆಗಳಲ್ಲಿ ಕೆಲವು ಸಲ ಆಗುತ್ತದೆ. ಒಂದು ವಿಚಾರವನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಾನು ಖಂಡಿತವಾಗಿಯೂ ಇದನ್ನು ತನಿಖೆ ಮಾಡುತ್ತೇನೆ. ಏಕೆಂದರೆ ಇದು ಹೇಳುವುದಕ್ಕೆ ಬಹಳ ಸುಲಭ. ಪರಿಶಿಷ್ಟ ವರ್ಗದವರು ಮತ್ತು ಪರಿಶಿಷ್ಟ ಪಂಗಡದವರು ಸಿಗಲಿಲ್ಲ ಎಂದು ಹೇಳುವುದಕ್ಕೆ ಬಹಳ ಸುಲಭ. ಆದರೆ ಅದು ಸಾಧನೆ ಮಾಡಿದರೆ, ಮನಸ್ಸು ಇದ್ದರೆ ಮಾರ್ಗ ಯಾವತ್ತೂ ಇದೆ. ಏಕೆಂದರೆ, ಒಂದು ಅಡ್ವರ್‌ಟೈಸಸ್‌ಮೆಂಟ್ ಮಾಡಿ ಬರದಿದ್ದರೆ, ಇನ್ನೊಂದು ಅಡ್ವರ್‌ಟೈಸ್‌ಮೆಂಟ್ ಮಾಡಬೇಕು. ಮನಸ್ಸು ಇದ್ದರೆ ಮಾಡಲಿಕ್ಕೆ ಆಗುತ್ತದೆ. ಆದರೆ ಇದು ಯಾವುದೇ ಮೀಸಲಾತಿ, ಈ ಸಾಮಾಜಿಕ ನ್ಯಾಯವನ್ನು ಕೊಡತಕ್ಕಂತಹ ಒಂದು ಕಾರ್ಯಕ್ರಮ ಏನಿದೆ ಅದು ಬರೇ ತೋರಿಕೆಗೆ ಮಾತ್ರ ಇರಬಹುದು. ಅದಕ್ಕೆ ಅವರವರ ಮಟ್ಟದಲ್ಲಿ ಅಂದರೆ, ಅಧಿಕಾರಿಗಳ ಮಟ್ಟದಲ್ಲಿ ಮತ್ತು ಸರ್ಕಾರದ ಮಟ್ಟದಲ್ಲಿ ಅದಕ್ಕೆ ಹೃದಯ ಮಿಡಿಯಬೇಕಾಗುತ್ತದೆ. ಆದರಿಂದ ಇದರಲ್ಲಿ ಏನಾದರೂ ಲೋಪದೋಷ ಆಗಿದ್ದರೆ, ಅಚಾತುರ್ಯವಾಗಿದ್ದರೆ, ಅದರ ಬಗ್ಗೆ ನಾನು ತನಿಖೆ ಮಾಡುತ್ತೇನೆ, ಮತ್ತು ಕ್ರಮ ಕೂಡ ತೆಗೆದುಕೊಳ್ಳುತ್ತೇನೆ. ಆದರೆ ಮುಂದೆ ಎಲ್ಲಾ ಇಲಾಖೆಯಗಳಿಗೂ ಕೂಡ ಈ ಬಗ್ಗೆ ಒಂದು ಕಟ್ಟುನಿಟ್ಟಾದಂಥ ಆದೇಶವನ್ನು ಕೊಟ್ಟು, ಇಂತಹ ಸಾಮಾಜಿಕ ನ್ಯಾಯ ಕೊಡುವುದರಲ್ಲಿ ಬೇಳೆ ಯಾವುದೇ ವಿಚಾರಗಳಲ್ಲಿ ಒಪ್ಪಂದ ಇಲ್ಲ. We are not going to compromise on the question of this philosophy.

ಅದ್ದರಿಂದ ಈ ಬಗ್ಗೆ ತಮ್ಮ ಭಾವನೆಯನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಇದರ ಬಗ್ಗೆ ತನಿಖೆ ಮಾಡುತ್ತೇನೆ. ಮುಂದೆ ಯಾವುದೇ ಇಲಾಖೆಯಿಂದ ಈ ರೀತಿಯ ತೊಂದರೆ, ಅನ್ಯಾಯ ಆಗದ ರೀತಿಯಲ್ಲಿ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಮೋಟಮ್ಮ : ನಾನು ಮುಖ್ಯಮಂತ್ರಿಗಳಿಗೆ ಈ ಬಗ್ಗೆ ಅಭಿನಂದಿಸುತ್ತೇನೆ. ಆದರೆ ನನ್ನದು ಒಂದು ಬಹಳ ಮುಖ್ಯವಾದ ಪ್ರಶ್ನೆ ಏನೆಂದರೆ, ಈಗ ಏನು ಕೆಲವು ಹುದ್ದೆಗಳು ಏನು ಕೈತಪ್ಪಿ ಹೋಗಿವೆ.....

ಉಪಾಧ್ಯಕ್ಷಿಣಿಯವರು : ಈಗ ಅವರು ಪೂರ್ತಿಯಾಗಿ ಉತ್ತರವನ್ನು ಕೊಟ್ಟುಬಿಟ್ಟಿದ್ದಾರೆ.

ಶ್ರೀಮತಿ ಮೋಟಮ್ಮ : ಕೆಲವು ಹುದ್ದೆಗಳು ಈ ಜನಕ್ಕೆ ಏನು ಸಿಗಬೇಕಾಗಿತ್ತೋ ಅವು ಕೈತಪ್ಪಿ ಹೋಗಿವೆ. 1984ರಲ್ಲಿ ಸಾಕಷ್ಟು ಹುದ್ದೆಗಳನ್ನು ಕಾಲ್‌ಫರ್ ಮಾಡಿದ್ದಾರೆ. ಅದರಲ್ಲಿ ಮ್ಯಾನೇಜರ್ ಪೋಸ್ಟ್, ಪ್ರಾಜೆಕ್ಟ್ ಆಫೀಸರ್ಸ್ ಪೋಸ್ಟ್, ಅಸಿಸ್ಟೆಂಟ್ ಇಂಜನಿಯರ್ ಪೋಸ್ಟ್, ಪರ್ಸನಲ್ ಅಸಿಸ್ಟೆಂಟ್ ಪೋಸ್ಟ್, ರೆಕಾರ್ಡ್ ಕೀಪರ್, ಸ್ಟನೋಗ್ರಾಫರ್ ಪೋಸ್ಟ್ ಏನಿದೆ, ಇದರಲ್ಲೇ ವ್ಯತ್ಯಾಸ ಮಾಡಿದ್ದಾರೆ. ಏಕೆಂದರೆ, ಎರಡು ಪೋಸ್ಟ್, ಹರಿಜನರಿಗೆ ಇಟ್ಟಿದ್ದರೆ ಎರಡನ್ನು ತುಂಬಲಿಕ್ಕೆ ಆಗಿಲ್ಲ, ಕೆಲವರಿಗೆ ಕೊಟ್ಟಿದ್ದಾರೆ. ಕೆಲವೊಂದನ್ನು ಮೇಜರ್ ಕಮ್ಯೂನಿಟಿಗೆ ತುಂಬಿದ್ದಾರೆ. ಅದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ ರಿಸರ್ವೇಶನ್‌ನಲ್ಲಿ ಹರಿಜನರಿಗೆ ಸಿಗಬೇಕಾದ ಒಂದು ಹುದ್ದೆ ಈಗ ಏನು ಕೈತಪ್ಪಿಹೋಗಿದೆ. ಅದು ಪುನಃ ತುಂಬಿ ಅವರಿಗೆ ನ್ಯಾಯ ಒದಗಿಸಿಕೊಡುತ್ತೀರಾ ಎನ್ನುವುದು ಮೊದಲನೆ ಪ್ರಶ್ನೆ. ಎರಡನೆಯದು, ದಿನಾಂಕ 28-10-92ರಲ್ಲಿ ವಿಧಾನಸಭೆಯ ಹರಿಜನ ಗಿರಿಜನ ಕಲ್ಯಾಣ ಸಮಿತಿ ಈ ಒಂದು ಬೋರ್ಡಿಗೆ ಭೇಟಿ ಮಾಡಿ ಸಂಬಂಧಪಟ್ಟ ಅನ್ಯಾಯಗಳನ್ನೆಲ್ಲಾ ನಾವು ಅಧಿಕಾರಿಗಳ ಗಮನಕ್ಕೆ ತಂದು, ಏಕೆ ಹೀಗೆ ಆಗಿದೆ, ಇದನ್ನು ಕೂಡಲೇ ಸರಿಪಡಿಸಬೇಕು ಎಂದು ಹೇಳಿ, ಇಷ್ಟು ದಿವಸಗಳಾದರೂ ಸಹ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಲಿಲ್ಲ. ಇದಕ್ಕೆ ಮುಖ್ಯ ಕಾರಣ ಸರ್ಕಾರವನ್ನು ಯಾರು ಪ್ರತಿನಿಧಿಸುತ್ತಾರೆ ಅಂತಹ ಅಧಿಕಾರಿಗಳು ಮೊದಲನೆಯದಾಗಿ ಹೊಣೆಯಾಗಿರುತ್ತಾರೆ. ಬೋರ್ಡ್ ಅಧಿಕಾರಿಗಳು ಹೊಣೆಯಾಗಿರುತ್ತಾರೆ. ಅವರ ಮೇಲೆ ನೀವು ಉಗ್ರ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯಸದಸ್ಯರು ಕೊನೆಯಲ್ಲಿ ಹೇಳಿದಂತಹ ವಿಚಾರಗಳಿಗೆ ನಾನು ಮೊದಲೆ ಉತ್ತರ ಕೊಟ್ಟಿದ್ದೇನೆ. ಆದರೆ ಬ್ಯಾಕ್‌ಲ್ಯಾಗ್ ತುಂಬಿಸತಕ್ಕಂತಹ ರೀತಿಯಲ್ಲಿ ಏನು ಕಾರ್ಯಕ್ರಮ ತೆಗೆದುಕೊಳ್ಳ ಬೇಕೋ ಅದನ್ನು ನಾನು ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷಣಿಯವರು : ಶ್ರೀ ಕೆ. ಲಕ್ಕಣ್ಣನವರ 123(481)ನೇ ಪ್ರಶ್ನೆಗೆ ಮಾನ್ಯ ಮುಖ್ಯ ಮಂತ್ರಿಗಳು ಟೈಂ ಕೇಳಿದ್ದಾರೆ, ಆದ್ದರಿಂದ ಈ ಪ್ರಶ್ನೆಯಲ್ಲಿ ವಿತ್‌ಹೆಲ್ಡ್ ಮಾಡುತ್ತಿದ್ದೇವೆ. ಅದನ್ನು ಮುಂದೆ ತೆಗೆದುಕೊಳ್ಳುತ್ತೇವೆ.

ರಾಜ್ಯದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ

422 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರದ ಆಕ್ರಮಣ ನಡೆಯುತ್ತಿರುವ ಪ್ರಮಾಣ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಅದನ್ನು ತಡೆಯಲು ಸರ್ಕಾರವು ಯಾವ ಪರಿಣಾಮಕಾರಿ ಕ್ರಮ ಕೈಗೊಂಡಿದೆ?

ಇ) ಅತ್ಯಾಚಾರ ಮತ್ತು ದೌರ್ಜನ್ಯಕ್ಕೊಳಗಾದ ಮಹಿಳೆಯರನ್ನು ಮರುವಸತಿಗೊಳಿಸಲು ಸರ್ಕಾರ ತೆಗೆದುಕೊಂಡ ತೀವ್ರ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ರಾಜ್ಯದ ಮಹಿಳೆಯರ ಮೇಲೆ ಅತ್ಯಾಚಾರದ ಪ್ರಮಾಣ ಹೆಚ್ಚಾಗಿರುವುದು ಕಂಡು ಬಂದಿಲ್ಲ.

ಆ) ಅತ್ಯಾಚಾರದ ದೂರು ಬಂದ ತಕ್ಷಣವೇ ಮೊಕದ್ದಮೆ ದಾಖಲು ಮಾಡಿಕೊಂಡು ನಿಷ್ಪಕ್ಷಪಾತವಾದ ತನಿಖೆ ಕೈಗೊಂಡು ಸಂಬಂಧಪಟ್ಟ ಆರೋಪಿಗಳನ್ನು ದಸ್ತಗಿರಿ ಮಾಡಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು.

ಇ) ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಅನೈತಿಕ ವ್ಯವಹಾರ(ನಿಷೇಧ) ಅಧಿನಿಯಮದ ಮೇರೆಗೆ ತರಬೇತಿ ಮತ್ತು ಪುನರ್ವಸತಿಗಾಗಿ ನ್ಯಾಯಾಲಯದಿಂದ ಕಳುಹಿಸಲ್ಪಟ್ಟ ಮಹಿಳೆಯರನ್ನು ಸ್ವೀಕರಿಸಲು ರಾಜ್ಯದಲ್ಲಿ 11 ಸ್ವೀಕಾರ ಕೇಂದ್ರಗಳು ಮತ್ತು 8 ರಾಜ್ಯ ಗೃಹಗಳು ಇವೆ. ಮಹಿಳೆಯರ ಅನೈತಿಕ ವ್ಯವಹಾರ ನಿಷೇಧ ಅಧಿನಿಯಮದ ಮೇರೆಗೆ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಮಾತ್ರ ಪ್ರವೇಶ ದೊರಕಿಸಿ ಕೊಡಲು ಬೆಂಗಳೂರಿನ ರಾಜ್ಯ ಮಹಿಳಾನಿಲಯದಲ್ಲಿ ಅವಕಾಶ ಕಲ್ಪಿಸಿಲಾಗಿದೆ. ನ್ಯಾಯಾಲಯಗಳು ಮತ್ತು ರಾಜ್ಯದ ಗೃಹಗಳಿಂದ ಹಾಗೂ ಸ್ವೀಕಾರ ಕೇಂದ್ರಗಳಿಂದ ವರ್ಗಾಯಿಸಲ್ಪಟ್ಟವರನ್ನು ಸಹ ರಾಜ್ಯ ಮಹಿಳಾ ನಿಲಯದಲ್ಲಿ ಸೇರಿಸಿಕೊಳ್ಳಲಾಗಿದೆ.

ರಾಜ್ಯ ಗೃಹಗಳಲ್ಲಿರುವ ಮಹಿಳೆಯರಿಗೆ ತರಬೇತಿ ನೀಡಲು ನೆಯ್ಗೆ, ಹೊಲಿಗೆ ಕಸೂತಿಯಂತಹ ಕರಕುಶಲ ಮತ್ತು ಹಿಡಕೆಗಳನ್ನು ತಯಾರಿಸುವುದು, ಸಿದ್ಧಪಡಿಸಿದ ಉಡುಪುಗಳು. ಕ್ಯಾನ್‌ವಾಸ್ ಬ್ಯಾಗ್ ತಯಾರಿಸುವುದು ಮತ್ತು ಕೈಮಗ್ಗ ನೇಯ್ಗೆ ಮುಂತಾದವುಗಳಿಗಾಗಿ ಉತ್ಪಾದನಾ ಘಟಕಗಳನ್ನು ಪ್ರಾರಂಭಿಸಲಾಗಿದೆ. ಬಳ್ಳಾರಿ ಮತ್ತು ಮೈಸೂರಿನಲ್ಲಿರುವ ಮಹಿಳೆಯರ ರಾಜ್ಯಗೃಹಗಳಲ್ಲಿ ಮಜೂರಿ ನೀಡುವ ಪದ್ಧತಿಯನ್ನು ಸಹ ಪ್ರಾರಂಭಿಸಲಾಗಿದೆ. ರಾಜ್ಯಗೃಹಗಳಲ್ಲಿ ಲೋಯರ್ ಸೆಕೆಂಡರಿ ಮತ್ತು ಎಸ್.ಎಸ್.ಎಲ್.ಸಿ ತರಗತಿಗಳಿಗೆ ಕಂಡೆನ್ಸರ್ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ.

ಇವುಗಳಲ್ಲದೆ ಸಂಕಷ್ಟದಲ್ಲಿರುವ ಮಹಿಳೆಯರಿಗೆ ತರಬೇತಿ ಕೇಂದ್ರಗಳನ್ನು ಸ್ಥಾಪಿಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲು ಬೇಕಾಗುವ ವೆಚ್ಚಗಳ ಶೇಕಡಾ 90ರಷ್ಟನ್ನು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ವತಿಯಿಂದ 45:45ರಷ್ಟು ನೀಡಲಾಗುತ್ತಿದೆ. ಉಳಿದ ಶೇಕಡಾ 10ರಷ್ಟನ್ನು ಸ್ವಯಂ ಸೇವಾ ಸಂಸ್ಥೆಗಳು ಭರಿಸಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಅಧ್ಯಕ್ಷಿಣಿಯವರೇ, ಕರ್ನಾಟಕ ರಾಜ್ಯದಲ್ಲಿ ಮಹಿಳೆಯರ ಮೇಲೆ ಆಕ್ರಮಣ ಮತ್ತು ಅತ್ಯಾಚಾರ ನಡೆಯುತ್ತಿರುವ ಪ್ರಮಾಣ ಹೆಚ್ಚುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ರಾಜ್ಯದ ಮಹಿಳೆಯರ ಮೇಲೆ ಅತ್ಯಾಚಾರ ಪ್ರಮಾಣ ಹೆಚ್ಚಾಗಿರುವುದು ಕಂಡು ಬಂದಿಲ್ಲ ಎಂದು ಹೇಳಿದ್ದಾರೆ. ಅದನ್ನು ತಡೆಯಲು ಸರ್ಕಾರ ಯಾವ ಪರಿಣಾಮಕಾರಿ ಕ್ರಮ ಕೈಗೊಂಡಿದೆ ಎಂದರೆ ಸಂಬಂಧಪಟ್ಟ ಆರೋಪಿಗಳನ್ನು ದಸ್ತಗಿರಿ ಮಾಡಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಲಯಕ್ಕೆ ಸಲ್ಲಿಸಲಾಗುವುದು ಎಂದು ಹೇಳಿದ್ದಾರೆ. ನಾನು ಸನ್ಮಾನ್ಯ ಮುಖ್ಯ ಮಂತ್ರಿಯವರನ್ನು ತಮ್ಮ ಮುಖಾಂತರ ಕೇಳುವುದಿಷ್ಟೆ, ಚಿತ್ರದುರ್ಗ ಮತ್ತು ಗುಲ್ಬರ್ಗದಲ್ಲಿ ಮಹಿಳೆಯರನ್ನು ಬೆತ್ತಲೆ ಮಾಡಿ, ಮಾನಭಂಗ ಮಾಡಿದ್ದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಎನ್ನುವುದು ಒಂದು ಪ್ರಶ್ನೆ. ಇದರ ಬಗ್ಗೆ ತಾವು ಏನು ಕ್ರಮ ಕೈಗೊಂಡಿದ್ದೀರಿ ಎಂದು

ಕೇಳಲಿಕ್ಕೆ ಇಷ್ಟಪಡುತ್ತೇನೆ. ಎರಡನೆಯದಾಗಿ ಇಡೀ ರಾಜ್ಯದಲ್ಲಿ ವರದಕ್ಷಿಣೆಯಿಂದ ಹೆಣ್ಣು ಮಕ್ಕಳು ತುಂಬ ಕಷ್ಟ ಅನುಭವಿಸುತ್ತಿದ್ದಾರೆ. ಎಲ್ಲರೂ ಕೂಡ ವರದಕ್ಷಿಣೆ ಹೆಸರಿನಲ್ಲಿ ಶೋಷಣೆ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಕೇಳಲಿಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗ ಕಳೆದ 3 ವರ್ಷಗಳಿಂದ ರಾಜ್ಯದ ಮಹಿಳೆಯರ ಮೇಲೆ ನಡೆದ ಅತ್ಯಾಚಾರ, ದೌರ್ಜನ್ಯದ ಪಟ್ಟಿ ಇದೆ. ವರದಕ್ಷಿಣೆ ಸಾವು 1990ರಲ್ಲಿ 228, 1991ರಲ್ಲಿ 227, 1992ರಲ್ಲಿ ೧೯೫. ಈ ವರದಕ್ಷಿಣೆ ವಿಚಾರದಲ್ಲಿ ಈಗಾಗಲೇ ವರದಕ್ಷಿಣೆ ಸಾವಿನ ಪ್ರಕರಣವನ್ನು ಘೋರ ಅಪರಾಧವೆಂದು ಪರಿಗಣಿಸಿ ನಾವು ಇಲಾಖೆಯ ಉನ್ನತಾಧಿಕಾರಿಗಳು ಅಂದರೆ ಡಿ.ಎಸ್.ಪಿ. ಮಟ್ಟದ ಮೇಲಿನ ಅಧಿಕಾರಿಗಳ ಮುಖಾಂತರ ನೇರವಾಗಿ ನಾವು ತನಿಖೆ ಮಾಡಿಸುತ್ತಿದ್ದೇವೆ. ಈಗ ಮಹಿಳೆಯರ ಮೇಲೆ ವರದಕ್ಷಿಣೆ ಸಾವು ಅತ್ಯಾಚಾರ ದೌರ್ಜನ್ಯ ಮತ್ತು ಅವರನ್ನು ದುರುಪಯೋಗ ಮಾಡಿಕೊಂಡು ಏನು ವ್ಯವಹಾರ ಮಾಡತಕ್ಕಂಥಾದ್ದು ಇದೆ ಇದೆಲ್ಲವನ್ನು ನಿಗ್ರಹಿಸಬೇಕೆಂದು ಹೇಳಿ ಈಗಾಗಲೇ ಸರ್ಕಾರದಲ್ಲಿ ಒಂದು ಆಲೋಚನೆ ಮಾಡಿದ್ದೇವೆ. ಅಂದರೆ ಯಾವ ರೀತಿಯಲ್ಲಿ ಪರಿಶಿಷ್ಟ ವರ್ಗ, ಪರಿಶಿಷ್ಟ ಪಂಗಡದವರ ಮೇಲೆ ಆಗತಕ್ಕ ದೌರ್ಜನ್ಯಗಳಿಗೆ ನಾವು ಪ್ರತ್ಯೇಕವಾಗಿ ಒಂದು ಸೆಲ್ ಮಾಡಿದ್ದೇವೆ, ಅದೇ ಪ್ರಕಾರ ನಾವು ಮಹಿಳೆಯರ ಮೇಲೆ ಏನಾದರೂ ದೌರ್ಜನ್ಯ, ಅತ್ಯಾಚಾರ, ವರದಕ್ಷಿಣೆ ಸಾವು ಇದನ್ನೆಲ್ಲಾ ನಾವು ಸರಿಯಾಗಿ ನಿಗ್ರಹಿಸಬೇಕೆಂಬ ಉದ್ದೇಶದಿಂದ ವುಮೆನ್ಸ್ ರೈಟ್ಸ್ ಅಂಡ್ ಪ್ರೊಟೆಕ್ಷನ್ ಸೆಲ್ ಎಂದು ಪ್ರತ್ಯೇಕವಾಗಿ ಮಾಡಬೇಕೆಂದು ಸರ್ಕಾರದ ಆಲೋಚನೆಯಲ್ಲಿದೆ. ಅದನ್ನು ನಾವು ಸದ್ಯದಲ್ಲಿ ಮಾಡುತ್ತೇವೆ ಮತ್ತೆ ಕೆಲವು ಪೇಟೆಗಳಲ್ಲಿ ಮಹಿಳೆಯರಿಂದಲೇ ನಿರ್ವಹಿಸತಕ್ಕಂಥ ಪೋಲೀಸ್ ಸ್ಟೇಷನ್‌ಗಳನ್ನು ಕೂಡ ನಾವು ಮಾಡಬೇಕೆಂದಿದ್ದೇವೆ. ನಮ್ಮ ಸರ್ಕಾರ ಸದ್ಯದಲ್ಲಿ ಬೆಂಗಳೂರಿನಲ್ಲಿ ಮಹಿಳೆಯರೇ ನಿರ್ವಹಿಸತಕ್ಕಂತ ಪೋಲೀಸ್ ಸ್ಟೇಷನ್ ಅನ್ನು ಪ್ರಾರಂಭಿಸಲಾಗುವುದು.

ಶ್ರೀ ವಾಟಾಳ್ ನಾಗರಾಜ್ : ಅವರು ಬಹಳ ಕಡಿಮೆ ಇರುವುದರಿಂದ ಅವರನ್ನು ಕಾಯಲು ಪುರುಷರು ಬೇಕಾಗುತ್ತದೆ. ಸ್ವಲ್ಪ ಯೋಚನೆ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಮನೆಯಲ್ಲಿ ಪುರುಷರನ್ನು ಕಾಯಲಿಕ್ಕೆ ಮಹಿಳೆಯರು ಬೇಕು. ಮನೆಯ ಹೊರಗಡೆ ಮಾತ್ರ ನೀವು ಕಾಯಬೇಕು. ಇದು ಹೇಗೆ ಎಂದು ನನಗೆ ಅರ್ಥವಾಗುವುದಿಲ್ಲ. ಆದ್ದರಿಂದ ಇದಕ್ಕೆ ನಾವು ಬೇರೆ ಬೇರೆ ಕಾರ್ಯಕ್ರಮವನ್ನು ಹಾಕಿ ನಿರ್ಧಾಕ್ಷಿಣ್ಯವಾಗಿ ಇಂತಹ ಪ್ರಕರಣಗಳನ್ನು ನಾವು ನಿಲ್ಲಿಸಲು ಕ್ರಮವನ್ನು ಕೈಗೊಳ್ಳುತ್ತೇವೆ. ಚಿತ್ರದುರ್ಗ ಗುಲ್‌ಬರ್ಗ ವಿಚಾರ ಹೇಳಿದ್ದೀರಿ, ಬೇಕಾದರೆ ಅದರ ಮಾಹಿತಿಯನ್ನು ತಮಗೆ ಪ್ರತ್ಯೇಕವಾಗಿ ಕಳುಹಿಸುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ವುಮೆನ್ ರೈಟ್ಸ್ ಅಂಡ್ ಪ್ರೊಟೆಕ್ಷನ್ ಸೆಲ್ ಮಾಡುತ್ತಿರುವುದು ನಿಜಕ್ಕೂ ಕರ್ನಾಟಕ ರಾಜ್ಯಕ್ಕೆ ಮಾತ್ರವಲ್ಲ ಇಡೀ ದೇಶಕ್ಕೆ ಮಾದರಿಯಾಗಿದೆ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ., ಆ ರೈಟ್‌ನ್ನು ಅವರಿಗೆ ಕೊಡಬೇಕು. ಅವರಿಗೆ ನಿರ್ಬಂಧ ಹಾಕಿ ಅವರು ಮುಂದುವರಿಯುವ ದಿಕ್ಕಿನಲ್ಲಿ ತೊಂದರೆಯಾಗದ ರೀತಿಯಲ್ಲಿ ಗಮನಕೊಡಬೇಕೆಂದು ಹೇಳುತ್ತೇನೆ.

ಚಿತ್ರದುರ್ಗ, ಗುಲ್ಬರ್ಗಾದಲ್ಲಿ ಮಹಿಳೆಯರ ಮಾನಭಂಗ ಆದ ವಿಚಾರವನ್ನು ತಿಳಿಸಿದೆ. ಅದು ತಮ್ಮ ಗಮನಕ್ಕೆ ಬಂದಿಲ್ಲವೇ ಆ ಬಗ್ಗೆ ಯಾವಾಗ ಮಾಹಿತಿ ತರಿಸಿಕೊಳ್ಳುತ್ತೀರಿ ಮತ್ತು ಏನು ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ತಾವು ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಆ ಬಗ್ಗೆ ನಾನು ಸರಿಯಾದ ಮಾಹಿತಿಯನ್ನು ತಮಗೆ ಕಳುಹಿಸುತ್ತೇವೆ ಅಥವಾ ಸದನದಲ್ಲಿ ಆ ವಿಷಯವನ್ನು ಪ್ರಸ್ತಾಪ ಮಾಡಿದರೆ ಉತ್ತರಿಸುತ್ತೇನೆ.

ಉಪಾಧ್ಯಕ್ಷಿಣಿಯವರು : ಮಾನ್ಯ ಪುಟ್ಟಸ್ವಾಮಿ ಗೌಡರ್, 125(249)ನೇ ಪ್ರಶ್ನೆಗೆ ಮಾನ್ಯ ಮುಖ್ಯ ಮಂತ್ರಿಗಳು ಸಮಯ ಕೇಳಿದ್ದಾರೆ. ಆದ್ದರಿಂದ ಅದನ್ನು ನಾನು ಮುಂದೆ ತೆಗೆದುಕೊಳ್ಳುತ್ತೇನೆ.

ಸಿ.ಡಿ.ಎಸ್. ನಾಲೆಯ ಮೇಲಿನ ಸೇತುವೆಗಳು

605 - ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕದೇವರಾಯಸಾಗರ ನಾಲೆಯಲ್ಲಿ ಎಷ್ಟು ಸೇತುವೆಗಳು ಹಾಳಾಗಿವೆ (ಬಿದ್ದು ಹೋಗಿವೆ)?

ಆ) ಅದನ್ನು ಯಾವಾಗ ಕಟ್ಟಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಒಂದು.

ಆ) 1993-94ನೇ ಸಾಲಿನಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಶ್ರೀಮತಿ ದಮಯಂತಿ ಬೋರೇಗೌಡ : ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಚಿಕ್ಕದೇವರಾಯ ಸಾಗರ ನಾಲೆಯಲ್ಲಿ ಒಂದು ಸೇತುವೆ ಹಾಳಾಗಿದೆ ಎಂದು ಹೇಳಿದ್ದೀರಿ. ಆಕ್ಚುವಲ್ಲಾಗಿ ಒಂದು ಸೇತುವೆ ಬಿದ್ದೇ ಹೋಗಿದೆ. ಇನ್ನು ಮೂರು ಸೇತುವೆಗಳು ಹಾಳಾಗಿವೆ. ಇದರಿಂದಾಗಿ ರೈತರಿಗೆ ಬಹಳ ತೊಂದರೆಯಾಗಿರುವುದರಿಂದ ಕೂಡಲೆ ಆ ಸೇತುವೆ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಇದನ್ನೆಲ್ಲಾ ದುರಸ್ತಿ ಮಾಡತಕ್ಕ ಕಾರ್ಯಕ್ರಮವನ್ನು 1993-94ರ ಸಾಲಿನಲ್ಲಿ ಕೈಗೊಳ್ಳುತ್ತಿದ್ದೇವೆ ಮತ್ತು ಚಿಕ್ಕದೇವರಾಯನ ಅಣೆಕಟ್ಟು ಮತ್ತು ನಾಲೆಯ ಆಧುನೀಕರಣ ಕಾಮಗಾರಿಯನ್ನು ರಾಷ್ಟ್ರೀಯ ಜಲನಿರ್ವಹಣಾ ಯೋಜನೆಯ ಅಡಿಯಲ್ಲಿ ತೆಗೆದುಕೊಳ್ಳಬೇಕೆಂದು ನಿಶ್ಚಯ ಮಾಡಿದ್ದೇವೆ. ಅನೇಕ ಶಿಥಿಲಗೊಂಡಿರುವ ಸೇತುವೆಗಳ ದುರಸ್ತಿ ಕಾರ್ಯವನ್ನೂ ಕೂಡ ಈ ಯೋಜನೆಯ ಅಡಿಯಲ್ಲಿ ತೆಗೆದುಕೊಳ್ಳುವುದಕ್ಕೆ ಆದೇಶ ಕೊಡುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ : ಚಿಕ್ಕದೇವರಾಯಸಾಗರ ನಾಲೆಯ ಮೇಲಿರುವ ಸೇತುವೆ ದುರಸ್ತಿ ಅದೇರೀತಿ ನಾಲೆ ಪಕ್ಕದಲ್ಲಿ ಬರತಕ್ಕ ಸರ್ವಿಸ್ ರೋಡ್‌ನಲ್ಲಿ ಬರತಕ್ಕ ಸೇತುವೆಗಳು ರೈತರ ಉಪಯೋಗಕ್ಕೆ ಇದ್ದರೂ ಅವು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಬಂದು ದುರಸ್ತಿ ಕಾರ್ಯಕ್ರಮದಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ನಾಲಾ ಸರ್ವಿಸ್ ರಸ್ತೆಗಳನ್ನು ಮತ್ತು ಇರಿಗೇಷನ್

ಟ್ರಾಕ್ ರಸ್ತೆಗಳನ್ನು ಜಿಲ್ಲಾ ಪರಿಷತ್ ವ್ಯಾಪ್ತಿಯಿಂದ ಹೊರತು ಪಡಿಸಿ ನೀರಾವರಿ ಇಲಾಖೆಗೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸರ್ಕಾರ ಪರಿಗಣಿಸುತ್ತದೆಯೆ?

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಸಲಹೆಗಳು ಬಹಳ ಯುಕ್ತವಾಗಿವೆ. ಆ ಬಗ್ಗೆ ನಾವು ಮುಂದೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

SMT. DAMAYANTHI BOREGOWDA : It is stated in answer that work is proposed to be taken up during 1993-94. I request that it should be taken up immediately.

ಶ್ರೀ ಎಂ. ವೀರಪ್ಪ ಮೊಯಿಲಿ : ಇನ್ನು ಎರಡೇ ತಿಂಗಳು ಇರುವುದು. ಎರಡು ತಿಂಗಳಲ್ಲಿ ಕೆಲಸ ಮಾಡಬೇಕೆಂದರೆ ಮಾಡುತ್ತೇವೆ.

ಶ್ರೀಮತಿ ದಮಯಂತಿ ಬೋರೆಗೌಡ : ಉದ್ದೇಶ ಎನ್ನುತ್ತೀರಿ ಪ್ರೊಪೋಸಲ್ ಎನ್ನುತ್ತೀರಿ.

SRI M. VEERAPPA MOILY : We will take up the work during 1993-94. 1993-94ರ ಆಯವ್ಯಯದಲ್ಲಿ ಅಥವಾ ಹಣಕಾಸಿನ ವರ್ಷದಲ್ಲಿ ಇದನ್ನು ತೆಗೆದುಕೊಳ್ಳುತ್ತೇನೆ. ಈ ಎರಡು ತಿಂಗಳಲ್ಲಿ ಮಾಡುವುದಕ್ಕೆ ಆಗುತ್ತದೆಯೋ ಇಲ್ಲವೇ ಎಂದು ನೋಡಬೇಕಾಗುತ್ತದೆ. ಒಟ್ಟಿನಲ್ಲಿ ಏಪ್ರಿಲ್ ನಂತರ ಈ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ತುಂಗಾ ಮೇಲ್ದಂಡೆ ಯೋಜನೆಗೆ ಒದಗಿಸಿದ ಹಣ

666 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ (ಅಪ್ಪರ್ ತುಂಗಾ) ನೀರಾವರಿ ಯೋಜನೆಯನ್ನು ಕಾರ್ಯಗತ ಮಾಡಲು ೮ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆಯೇ ಹಾಗಿದ್ದಲ್ಲಿ, ಈ ಯೋಜನೆಗೆ ಒದಗಿಸಿದ ಹಣವೆಷ್ಟು?

ಆ) ಸದರಿ ಯೋಜನೆಯ ಮಂಜುರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆಯೆ ಹಾಗಿದ್ದಲ್ಲಿ ಕೇಂದ್ರ ಸರ್ಕಾರದ ಕ್ರಮವೇನು?

ಇ) ಕೇಂದ್ರ ಸರ್ಕಾರದಿಂದ ವಾಪಸ್ಸು ಈ ಯೇಜನೆಯು ಮಂಜುರಾತಿಗಾಗಿ ಬರಲು ಕಾರಣವೇನು. ರಾಜ್ಯ ಸರ್ಕಾರವು ಈ ಯೋಜನೆಯ ಮಂಜೂರಾತಿಗಾಗಿ ಮಾಡಿದ ಪ್ರಯತ್ನಗಳೇನು. ಹಾಗಿದ್ದಲ್ಲಿ ಕಳೆದ ಒಂದು ವರ್ಷದಿಂದಲೂ ವಿಳಂಬವಾಗುತ್ತಿರಲು ಕಾರಣವೇನು ಹಾಗೂ ಯಾರು ಕಾರಣರು?

ಈ) ಈ ಯೋಜನೆಗೆ ಕೇಂದ್ರ ಸರ್ಕಾರದ ಮಂಜೂರಾತಿ ಪಡೆಯಲು ಮತ್ತು ೮ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರ್ಪಡೆ ಮಾಡಲು ರಾಜ್ಯ ಸರ್ಕಾರ ಮಾಡಿದ ಮತ್ತು ಮಾಡಲಿರುವ ಕ್ರಮಗಳೇನು?

ಉ) 1992-93ನೇ ಸಾಲಿನಲ್ಲಿ ಈ ಯೋಜನೆಗೆ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಒದಗಿಸಲಾದ ಹಣವೆಷ್ಟು. ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು. ಮತ್ತು ಪೂರ್ಣಗೊಳಿಸಿ ನೀರಾವರಿ ಒದಗಿಸಲು ಸರ್ಕಾರ ಉದ್ದೇಶಿಸಿದೆಯೆ ಹಾಗೂ ಈ ಬಗ್ಗೆ ಸರ್ಕಾರದ ನೀತಿ ಮತ್ತು ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)

ಅ) ಈ ಯೋಜನೆಯನ್ನು ಕರಡು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದ್ದು, ಇದಕ್ಕಾಗಿ ರೂ.25 ಕೋಟಿ ಹಣವನ್ನು ಒದಗಿಸಲು ಉದ್ದೇಶಿಸಲಾಗಿದೆ.

ಆ) ಯೋಜನೆಯ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದ್ದು, ಈ ಬಗ್ಗೆ ಕೇಂದ್ರ ಜಲ ಆಯೋಗ ಹಲವು ತಾಂತ್ರಿಕ ವಿಚಾರಗಳ ಬಗ್ಗೆ ವಿವರಗಳನ್ನು ಕೇಳಿದೆ.

ಇ) ಕೇಂದ್ರ ಸರ್ಕಾರ ಕಂತುಗಳಲ್ಲಿ ಕೇಳಿದ ಹಲವು ವಿಚಾರಗಳಿಗೆ ಪಾಲನಾ ವರದಿಯನ್ನು ಕಳುಹಿಸಬೇಕಾಗಿದೆ. ಈ ಬಗ್ಗೆ ಹಲವು ಇಲಾಖೆಗಳಿಂದ ವಿವರಗಳನ್ನು ಪಡೆಯುಬೇಕಾಗಿದ್ದು, ಸಂಬಂಧಪಟ್ಟವರಿಂದ ವಿವರಗಳನ್ನು ತರಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಈ) ಈ ಯೋಜನೆಯನ್ನು ಕರಡು ೮ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದ್ದು, ಆದಷ್ಟು ಶೀಘ್ರವಾಗಿ ಕೇಂದ್ರ ಸರ್ಕಾರದ ಮಂಜೂರಾತಿ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಈ ಯೋಜನೆಗೆ 1992-93ನೇ ಸಾಲಿನಲ್ಲಿ ರೂ. 2.50 ಕೋಟಿ ಹಣವನ್ನು ಒದಗಿಸಲಾಗಿದೆ. ಈ ಯೋಜನೆಯನ್ನು ಶೀಘ್ರದಲ್ಲಿ ಕಾರ್ಯಗತ ಮಾಡುವ ಉದ್ದೇಶದಿಂದ ಹೊಸದಾಗಿ ಒಂದು ವಲಯವನ್ನು ಸ್ಥಾಪಿಸಲಾಗಿದ್ದು, ಅದಕ್ಕಾಗಿಯೇ ಛಬ್ಬ ಮುಖ್ಯ ಅಭಿಯಂತರನ್ನು ಸಹ ನೇಮಿಸಲಾಗಿದೆ. ಈ ಯೋಜನೆಯ ಪ್ರಾರಂಭಿಕ ಕಾಮಗಾರಿಗಳನ್ನು ಪ್ರಸ್ತುತ ಸಾಲಿನಲ್ಲಿ ಕೈಗೊಳ್ಳುವ ಕಾರ್ಯಕ್ರಮವಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇದು ಅತ್ಯಂತ ಮಹತ್ವದ ವಿಷಯ. ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳ ಸುಮಾರು 6-7 ತಾಲ್ಲೂಕುಗಳಿಗೆ ಎರಡು ಲಕ್ಷದ ಮೂವತ್ತನಾಲ್ಕು ಸಾವಿರ ಎಕರೆಗಳಿಗೆ ನೀರನ್ನು ಒದಗಿಸಬಹುದಾದ ಮತ್ತು ರೈತರಿಗೆ ವರದಾನವಾಗಬಹುದಾದಂಥ ತುಂಗಾ ಮೇಲ್ದಂಡೆ ಯೋಜನೆಯ ಬಗ್ಗೆ ನಾವು ಪ್ರಶ್ನೆ ಕೇಳಿದ್ದೇನೆ. ಇದನ್ನು ೮ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದೀರಾ? ಮತ್ತು ಇದಕ್ಕೆ ಎಷ್ಟು ಹಣ ಇಟ್ಟೀದ್ದೀರಿ? ಇವತ್ತಿನ ಅಂದಾಜಿನ ಪ್ರಕಾರ ಇದಕ್ಕೆ ವೆಚ್ಚವಾಗತಕ್ಕದ್ದು 233ಕೋಟಿ ರೂಪಾಯಿಗಳು. ನೀವು 8ನೇ ಯೋಜನೆಯಲ್ಲಿ ಸೇರಿಸಿ 25ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೇವೆಂದು ಉತ್ತರಿಸಿದ್ದೀರಿ. 233ಕೋಟಿ ರೂಪಾಯಿಗಳನ್ನು ಕೊಡಬೇಕಾದುದಕ್ಕೆ ಕೇವಲ 25 ಕೋಟಿ ರೂಪಾಯಿಗಳನ್ನು ಇಟ್ಟರೆ ಇದನ್ನು ಮುಗಿಸುವುದು ಯಾವಾಗ? ಎರಡು ಸಾವಿರ ಇಸವಿಯೊಳಗೆ ನೀರಿನ ಬಳಕೆ ಸಂಪೂರ್ಣವಾಗಿ ಮಾಡುತ್ತೇವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಆದರೆ ಈ 233 ಕೋಟಿ ರೂಪಾಯಿಗಳನ್ನು ಒದಗಿಸುವುದು ಯಾವಾಗ? ಈ ರೀತಿ ಹೋದರೆ ರೈತನ ಬಗ್ಗೆ, ನೀರಾವರಿ ಬಗ್ಗೆ ಸರ್ಕಾರಕ್ಕೆ ಎಷ್ಟು ಮಟ್ಟಿಗೆ ಕಳಕಳಿ ಇದೆ ಎಂದು ತೋರಿಸುತ್ತದೆ. ಎರಡನೆಯದಾಗಿ, ಕೇಂದ್ರದ ಜಲಮಂಡಲಿಯ ಅನುಮತಿ ಪಡೆಯಲಾಗಿದೆಯೆ ಎಂದು ಕೇಳಿದಕ್ಕೆ ಇನ್ನೂ ಇಲ್ಲವೆಂದು ಹೇಳಿದ್ದಾರೆ. ಹಾಗಾದರೆ ಅನುಮತಿ ಪಡೆಯುವುದು ಯಾವಾಗ? ಕೇಂದ್ರಕ್ಕೆ ಕಳುಹಿಸಲಾಗಿದೆ ಎಂದು ಹೇಳಿದ್ದಾರೆ. ಕಳೆದ ಮೂರು ವರ್ಷಗಳಿಂದ ರಾಜ್ಯ ಸರ್ಕಾರ ಕೇಂದ್ರಸರ್ಕಾರಕ್ಕೆ ಜಲಮಂಡಳಿಯ

ಅನುಮತಿಗೆ ಕಳುಹಿಸುತ್ತಿದೆಯೆ? ಸರ್ಕಾರ ಈ ಬಗ್ಗೆ ಯಾವುದೇ ಪ್ರಯತ್ನ ಮಾಡಿಲ್ಲ. ಈ ಯೋಜನೆ ಮಂಜುರಾತಿ ಪಡೆಯುವುದಕ್ಕೆ ಸರ್ಕಾರಕ್ಕೆ ಇಚ್ಛೆಇದೆಯೇ? ಇದು ಮೂರು ಸಾರಿ ವಾಪಸ್ಸು ಬಂದಿದೆ, ಅಂದರೆ ಯಾವ ಕಾರಣಕ್ಕಾಗಿ ನಮ್ಮ ಅಧಿಕಾರಿಗಳಿಂದ ತಾಂತ್ರಿಕ ವರದಿ ಸರಿಯಾಗಿ ಹೋಗಿಲ್ಲ ಎನಿಸುತ್ತದೆ. ಅಥವಾ ನಮ್ಮ ಅಧಿಕಾರಿಗಳು ಸರಿಯಾಗಿ ಕಳುಹಿಸಿದ್ದರೆ ರಾಜಕೀಯ ಇಚ್ಛಾ ಶಕ್ತಿ ಸರ್ಕಾರಕ್ಕೆ ಇಲ್ಲ, ಸರ್ಕಾರ ಪ್ರಯತ್ನ ಮಾಡಿಲ್ಲ ಎನಿಸುತ್ತದೆ. ಇದಕ್ಕೆ ಇಷ್ಟು ಕಡಿಮೆ ಹಣ ಇಟ್ಟರೆ ಸಾಲದು. ಕನಿಷ್ಠ ಪಕ್ಷ ಎರಡೂವರೆ ಕೋಟಿ ರೂಪಾಯಿಗಳನ್ನು ಈ ವರ್ಷದ ಆಯವ್ಯಯದಲ್ಲಿ ಇಟ್ಟಿದ್ದೇವೆಂದು ಹೇಳಿದ್ದಾರೆ. ಕೇಂದ್ರದ ಮಂಜೂರಾತಿ ಬರದಿದ್ದರೆ ಇದನ್ನು ಯಾವಾಗ ಮಾಡುತ್ತೀರಿ, ನೀರನ್ನು ಯಾವಾಗ ಬಳಸಿಕೊಳ್ಳುತ್ತೀರಿ? ಇವತ್ತು ಲಕ್ಷಾಂತರ ಜನರು ಬರಗಾಲದಿಂದ ಬಳಲುತ್ತಿದ್ದಾರೆ. ಇದಕ್ಕೆ ನಿರ್ದಿಷ್ಟವಾಗಿ ಈ ಬಡ್ಜೆಟ್‌ನಲ್ಲಿ ಕನಿಷ್ಟ 50 ಕೋಟಿ ರೂಪಾಯಿಗಳನ್ನು ಒದಗಿಸಬೇಕು. ಕೇಂದ್ರ ಸರ್ಕಾರದಿಂದ ಒಂದು ತಿಂಗಳ ಒಳಗೆ ಮಂಜೂರಾತಿಯನ್ನು ಪಡೆಯಬೇಕು. ಇದಕ್ಕೆ ಅಣೆಕಟ್ಟು ಕಟ್ಟಬೇಕಾಗಿಲ್ಲ, ಯಾವುದೇ ಹೆಚ್ಚು ವೆಚ್ಚ ಮಾಡಬೇಕಾಗಿಲ್ಲ. ಇದು ಹಸಿ ನೀರಾವರಿ ಯೋಜನೆ. ತಾವು ದಯವಿಟ್ಟು ಕನಿಷ್ಟ 50 ಕೋಟಿ ರೂಪಾಯಿಗಳನ್ನು ಈ ವರ್ಷದ ಆಯವ್ಯಯದಲ್ಲಿ ಒದಗಿಸಬೇಕು. ಕೇಂದ್ರದ ಅನುಮತಿಯನ್ನು 1 ತಿಂಗಳೊಳಗೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷಿಣಿಯವರೇ, ಇದಕ್ಕೆ ಎಲ್ಲಾ ಉತ್ತರವನ್ನು ಅವರೇ ಕೊಟ್ಟಿದ್ದಾರೆ. ಮನಸ್ಸು ಮಾಡಿದರೆ 1 ತಿಂಗಳಲ್ಲಿ ಇದನ್ನು ಮಾಡಿ ಬಿಡಬಹುದೆಂದು ಹೇಳಿದ್ದಾರೆ, ವಿಶ್ವಾಸ ಇರಲಿ. ನಾನು ಇದನ್ನು ಮಾಡುತ್ತೇನೆ. ಈ ಯೋಜನೆಗೆ 1988-89ರ ದರಗಳ ಪ್ರಕಾರ 271.41 ಕೋಟಿ ಎಂದು ಹೇಳಿದ್ದು, 1990-91ರ ಪ್ರಕಾರ 380 ಕೋಟಿ ರೂಪಾಯಿಗಳಾಗಿದೆ. ಇದರಿಂದ ಸುಮಾರು 12.24 ಟಿಎಂಸಿ ನೀರನ್ನು ಉಪಯೋಗ ಮಾಡುತ್ತಾರೆ. ಈ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿಯನ್ನು ನಮ್ಮ ಸರ್ಕಾರ ಕೊಟ್ಟಿದೆ. ಆದರೆ ಕೇಂದ್ರ ಜಲ ಆಯೋಗಕ್ಕೆ ಒಪ್ಪಿಗೆಗೆ ಕಳುಹಿಸಿದ್ದು ಅವರು ಕೆಲವು ತಾಂತ್ರಿಕ ವಿಷಯಗಳ ಬಗ್ಗೆ ವಿವರಗಳನ್ನು ಕೇಳಿದ್ದಾರೆ. ಅದಕ್ಕೆ ಮಾರ್ಚ್ 92ರಲ್ಲಿ ಉತ್ತರ ಕೊಟ್ಟಿದ್ದೇವೆ. ಇನ್ನು ಕೆಲವು ವಿವರಗಳನ್ನು ಕೊಡುವುದಕ್ಕಾಗಿ ಬೇರೆ ಬೇರೆ ಇಲಾಖೆಗಳಿಂದ ವಿವರ ಪಡೆಯಬೇಕಾಗಿದೆ. ಅದನ್ನು ತಕ್ಷಣ ನಾವು ಕೊಡುತ್ತೇವೆ. ಆದರೆ ಒಂದು ಮಾತನ್ನು ಹೇಳುತ್ತೇನೆ. ತಾವು ಹೇಳಿದ ಪ್ರಕಾರ 1 ತಿಂಗಳ ಒಳಗೆ ಆಯೋಗದಿಂದ ಮಂಜೂರಾತಿ ತೆಗೆದುಕೊಳ್ಳುವುದಕ್ಕೆ ಎಲ್ಲಾ ರೀತಿಯ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ಸಾಧ್ಯವಿದ್ದರೆ ನಾನೇ ಡೆಲ್ಲಿಗೆ ಹೋಗಿ ಮಂಜೂರಾತಿ ತರಿಸಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಕೇಂದ್ರದವರು ಪರ್ಮಿಷನ್ ಕೊಡದೇ ಇದ್ದರೆ ನಮ್ಮದೇ ಹಣದಲ್ಲಿ ಕಟ್ಟುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಇದು ಹೈಪಾಥಟಿಕಲ್ ಪ್ರಶ್ನೆ ಆಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : 1992-93ರಲ್ಲಿ ಎರಡೂವರೆ ಕೋಟಿ ಅಲೋಕೇಷನ್ ಮಾಡಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಉಳಿದಿರತಕ್ಕದ್ದು ಇನ್ನು 2 ತಿಂಗಳು ಮಾತ್ರ. ಈ ಎರಡೂವರೆ ಕೋಟಿ ರೂಪಾಯಿ ಖರ್ಚು ಆಗಿದೆಯೇ? ಏಕೆಂದರೆ ಒಂದು ಪ್ರಾಜೆಕ್ಟ್‌ಗೆ ಅಡಿಗಲ್ಲು ಹಾಕಿರಬಹುದು. ಅಲ್ಲಿ ಪ್ರಿಲಿಮಿನರಿ ಕೆಲಸ ಕಾರ್ಯಗಳು ಏನಿವೆ ಅವನ್ನು ಮಾಡುವುದಕ್ಕೆ ಕೆಲಸ ಪ್ರಾರಂಭವಾಗಿದೆಯೇ? ಎರಡನೆಯದಾಗಿ, ಕೇಂದ್ರ ಸರ್ಕಾರ ಇದಕ್ಕೆ ಒಪ್ಪಿಗೆ ಕೊಡಲಿ ಅಥವಾ ಬಿಡಲಿ, ಆ ಪ್ರಯತ್ನವನ್ನು ಮುಂದುವರಿಸಿಕೊಂಡು ಹೋಗಿ. ಆದರೆ ಇದನ್ನು ರಾಜ್ಯ ಸರ್ಕಾರ ಮುಂದುವರೆಸಿಕೊಂಡು ಹೋಗುವುದಕ್ಕೆ ಏನಾದರೂ ತೊಂದರೆ ಇದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಇದನ್ನು ಶೀಘ್ರವಾಗಿ ಕಾರ್ಯಗತ ಮಾಡುವುದಕ್ಕೆ ಈಗಾಗಲೇ ಒಂದು ಹೊಸ ವಲಯ ಸ್ಥಾಪನೆ ಮಾಡಿದ್ದೇವೆ. ಒಬ್ಬ ಮುಖ್ಯ ಎಂಜಿನಿಯರಿಂಗ್ ನೇಮಕ ಮಾಡಿಯಾಗಿದೆ. ಪ್ರಾರಂಭಿಕ ಕೆಲಸ ಮಾಡಬೇಕೆಂದು ಈಗಾಗಲೇ ಹೇಳಿದ್ದೇವೆ. ಇನ್ನು ಮಾರ್ಚ್ ತಿಂಗಳ ಒಳಗೆ ಎರಡೂವರೆ ಕೋಟಿ ಏನು ಒದಗಿಸಿದ್ದೇವೆ. ಅದರ ಮೂಲಕ ನಾವು ಪ್ರಾರಂಭಿಕ ಮಾಡುತ್ತೇವೆ. ಇದಕ್ಕೆ ಕೇಂದ್ರದ ಒಪ್ಪಿಗೆಯನ್ನು ಕಾದು ಈ ಕೆಲಸವನ್ನು ನಿಲ್ಲಿಸುವುದಿಲ್ಲ, ಅದನ್ನು ಮುಂದುವರಿಸುತ್ತೇವೆ.

SRI P.G.R. SINDYA : Whether the Government of India gives its approval or not we will go ahead with the are Project. This is the assurance that we want.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಅಷ್ಯೂರೆನ್ಸ್ ಇಷ್ಟೆ. ಈಗ ಕೇಂದ್ರದ ಒಪ್ಪಿಗೆ ಬೇಕು. ಕೇಂದ್ರದ ಜಲ ಆಯೋಗದ ಪ್ರಯತ್ನ ಒಂದು ಕಡೆ ನಡೆಯುತ್ತಿದೆ. ಪ್ರಾರಂಭಿಕವಾದಂತಹ ಕೆಲಸ ಮಾಡಲಿಕ್ಕೆ ಏನೂ ಆತಂಕ ಕೂಡ ಇಲ್ಲ, ಅದು ಮುಂದುವರಿಯುತ್ತದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ನೀವು ಎಷ್ಟು ರೂಪಾಯಿಗಳನ್ನು ಈ ವರ್ಷ ಕೊಟ್ಟಿದ್ದೀರಿ. ಒಟ್ಟು ಪ್ರಾಜೆಕ್ಟ್‌ಗೆ ಎಷ್ಟು ರೂಪಾಯಿಗಳನ್ನು ಖರ್ಚು ಮಾಡುತ್ತೀರಿ ಎನ್ನುವುದಲ್ಲ ನನಗೆ ಮುಖ್ಯ. ನಾನು ಕರ್ನಾಟಕದ ರೈತನಾಗಿ ನಿಮ್ಮನ್ನು ಕೇಳುತ್ತಿರುವುದು ಇಷ್ಟು. ನೀವು 12.2 ಟಿಎಂಸಿ ಎಫ್‌ಟಿ ಅಷ್ಟು ನೀರನ್ನು ಇದು ಉಪಯೋಗಿಸಿಕೊಳ್ಳುತ್ತೇದೆ ಎಂದು ಹೇಳಿದಿರಿ. ಮಾನ್ಯ ಸಭಾಧ್ಯಕ್ಷಿಣಿಯವರೆ ಇಲ್ಲಿಯೇ ಬಹಳ ದೊಡ್ಡ ಮೋಸ ಆಗುತ್ತಾ ಇರುವುದು. ಕಾವೇರಿ ಜಲಾನಯನದಲ್ಲಿ ನಮಗೆ ಏನು ಏನು ಮೋಸ ಆಗಿದೆ, ಈಗಾಗಲೇ ಆಗುತ್ತಾ ಇದೆ, ಅದಕ್ಕಿಂತ ಒಂದು ದೊಡ್ಡ ಮೋಸ ಈ ತುಂಗಭದ್ರಾ ಉಪ ಜಲಾನಯನ ಎಂದು ಏನು ಹೇಳುತ್ತೇವೆ, ತುಂಗಭದ್ರಾ ಸಬ್‌ಬೇಸಿನ್ ಇದರಲ್ಲಿ ನಮ್ಮ ನೀರಿನ ಹಕ್ಕು ಎಷ್ಟು ಎನ್ನುವುದು ಈ ಸರ್ಕಾರದ ಗಮನಕ್ಕೆ ಇನ್ನೂ ಬಂದಿಲ್ಲ. 12.2 ಟಿಎಂಸಿ ಎಫ್‌ಟಿ ನೀರಿನಲ್ಲಿ ಏನು ನೀರಾವರಿ ಮಾಡುತ್ತೀರಿ? ಬಚಾವತ್ ವರದಿ ಆಧಾರದ ಮೇಲೆ ತುಂಗಭದ್ರಾ ಉಪ ಜಲಾನಯನದಲ್ಲಿ ನಮ್ಮ ಪಾಲು 120 ಟಿಎಂಸಿಎಫ್‌ಟಿ ಇನ್ನೂ ಇದೆ. ಆ 120 ಟಿಎಂಸಿಎಫ್‌ಟಿಯನ್ನು ನಾವು ಬಳಸುತ್ತೇವೆ ಎಂದು ನೀವು ಕೇಂದ್ರ ಸರ್ಕಾರಕ್ಕೆ ಮೊದಲು ತಿಳಿಸಬೇಕು. ಅಪ್ಪರ್ ತುಂಗಾ 60 ಟಿಎಂಸಿಎಫ್‌ಟಿ ಅಪ್ಪರ್ ಭದ್ರಾ 60 ಟಿಎಂಸಿಎಫ್‌ಟಿ

ನಮ್ಮ ಪಾಲು ಅದು, ನಮ್ಮ ಹಕ್ಕು ಅದು. ಅದರ ಬಗ್ಗೆ ತಾವು ಗಮನ ಹರಿಸಲಿಲ್ಲ ಎಂದರೆ, ಕಾವೇರಿ ಬಗ್ಗೆ ಯಾರು ಆರೋಪ ಹೊತ್ತಿದ್ದಾರೋ, ಕೃಷ್ಣ ನೀರಿನ ಬಗ್ಗೆ ನೀವು ಅಷ್ಟೇ ಆರೋಪ ಹೊತ್ತು ನೀವು ಈ ಜನಕ್ಕೆ ಜವಾಬ ಕೊಡಬೇಕಾಗುತ್ತದೆ. ಅದರ ಬಗ್ಗೆ ಏನು ಹೇಳುತ್ತೀರಿ, ಎಷ್ಟು ಟಿಎಂಸಿಎಫ್‌ಟಿ ನಮ್ಮ ಹಕ್ಕು ಎನ್ನುವುದು ನಿಮಗೇನಾದರೂ ತಿಳಿದಿದೆಯೇ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ಬಚಾವತ್ ಅವಾರ್ಡ್ ಪ್ರಕಾರ ಕೃಷ್ಣಾ ಜಲಾನಯನದಲ್ಲಿ ಕರ್ನಾಟಕ ರಾಜ್ಯದ ಹಕ್ಕು ಬಚಾವತ್ ಅವಾರ್ಡ್‌ನಲ್ಲಿಯೇ ಅಂದರೆ ಎ ಮತ್ತು ಬಿ ಅವಾರ್ಡ್‌ಗಳಲ್ಲಿ ನಮೂದಿತ ಅದು ನಿಷ್ಕರ್ಷೆ ಆಗತಕ್ಕಂಥಾದ್ದು. ಈಗ ಅಪ್ಪರ್ ತುಂಗಾದಲ್ಲಿ....

PROF M.D. NANJUNDASWAMY : I am restricting only to Tunga Bhadra Sub-basin.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಅಪ್ಪರ್ ತುಂಗಾದಲ್ಲಿ ಎಷ್ಟು ನೀರನ್ನು ಉಪಯೋಗ ಮಾಡಲಿಕ್ಕೆ ಸಾಧ್ಯ ಇದೆ ಎಂಬ ಮಾಹಿತಿಯನ್ನು ಸಂಗ್ರಹ ಮಾಡಿಕೊಂಡು ಇಷ್ಟು ನೀರು ಉಪಯೋಗ ಮಾಡಬಹುದು,ಈ ಯೋಜನೆಯನ್ನು ಮಾಡಬೇಕು ಎಂದು ತಾಂತ್ರಿಕವಾದಂತಹ ವರದಿ ಮತ್ತು ಮಾಹಿತಿ ಏನಿದೆ ಅದರ ಪ್ರಕಾರ ನಾವು ಮಾಡಿದ್ದೇವೆ. ಈಗ ತಾವು ಇನ್ನೂ ಹೆಚ್ಚು ನೀರು ಉಪಯೋಗ ಮಾಡಲಿಕ್ಕೆ ಸಾಧ್ಯ ಇದೆ ಎಂದು ಹೇಳುತ್ತೀರಿ.

ಪ್ರೊ ಎಂ.ಡಿ. ನಂಜುಂಡಸ್ವಾಮಿ : ನಾನು ಇದರ ಬಗ್ಗೆ ಪೂರ್ಣ ಕ್ಲಾರಿಫೈ ಮಾಡುತ್ತೇನೆ. ಇನ್ನೂ 120 ಟಿಎಂಸಿ ನಮ್ಮ ಪಾಲು, ನಮ್ಮಲ್ಲಿ ಶೇಖರಣೆ ಆಗುವ ನೀರು ಎನ್ನುವುದನ್ನು ಬಚಾವತ್ ವರದಿ ಉಲ್ಲೇಖ ಮಾಡಿದೆ. ಆದರೆ ಅದರಲ್ಲಿ ಕಡಪ, ಕರ್ನೂಲ್‌ನಲ್ಲಿ ಬರಗಾಲ ಬರಬಹುದಾದ ಸಾಧ್ಯತೆಗಳು ಇರುವುದರಿಂದ ಈ ನೀರನ್ನು ಕರ್ನಾಟಕ ಉಪಯೋಗಿಸಬಾರದು ಎಂದು ಹೇಳಿದೆ. ಇದನ್ನು ನೀವು ಒಪ್ಪುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಇಲ್ಲಿ ಪ್ರಶ್ನೆ ಏನೆಂದರೆ, ತುಂಗನದಿಗೆ ಅಡ್ಡಲಾಗಿ ಏನು ಗಾಜನೂರು ಬಳಿ ನಿರ್ಮಿಸಿರುವ ಅಣೆಕಟ್ಟು ಏನು ಇದೆ ಅದಕ್ಕೆ ಸಂಬಂಧಪಟ್ಟಿದ್ದು ಏಕೆಂದರೆ ಇದು ಮುಳುಗಡೆ ಪ್ರಶ್ನೆ ಕೂಡ ಅಲ್ಲಿ ಬರುತ್ತದೆ. ಆದ್ದರಿಂದ ಅಲ್ಲಿ ಈ ನೀರನ್ನು ಉಪಯೋಗ ಮಾಡಬೇಕೆ? ಅಥವಾ ಇನ್ನೊಂದು ಯೋಜನೆಯಿಂದ ಉಪಯೋಗ ಮಾಡಬೇಕೆ? ಈ ಪ್ರಶ್ನೆ ಇರತಕ್ಕಂಥಾದ್ದು. ಆದರೆ ತಾವು ಏನು ಸೂಚನೆ ಕೊಟ್ಟಿದ್ದೀರಿ. ಅದರಲ್ಲಿ ಹೆಚ್ಚು ನೀರು ಉಪಯೋಗ ಮಾಡುವುದು ಇದ್ದರೆ ತಾಂತ್ರಿಕವಾಗಿ ಏನು ಎಂದು ನಾವು ಪುನರ್ ಪರಿಶೀಲನೆ ಮಾಡುತ್ತೇವೆ, ಆ ಪ್ರಶ್ನೆ ಪ್ರತ್ಯೇಕ.

ಶ್ರೀ ಡಿ.ಆರ್. ಪಾಟೀಲ್ : ಈ ಯೋಜನೆಯನ್ನು 2 ಸಾವಿರ ವರ್ಷದೊಳಗೆ ಪೂರ್ತಿಯಾಗಿ ಮುಗಿಸುವ ಇಚ್ಛೆ ಸರ್ಕಾರಕ್ಕೆ ಇದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಬಚಾವತ್ ಅವಾರ್ಡ್‌ನ ಪ್ರಕಾರ ಏನು ನಮಗೆ ನೀರಿನ ಪಾಲು ಬಂದಿದೆ, ಅದನ್ನು ಎರಡು ಸಾವಿರ ಎಡಿ ಒಳಗೆ ಉಪಯೋಗ ಮಾಡಬೇಕು ಎನ್ನುವುದೇ ಸರ್ಕಾರದ ದೃಢ ಸಂಕಲ್ಪ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಎರಡು ಸಾವಿರ ಇಸವಿಯೊಳಗೆ ಸರ್ಕಾರದ ದೃಢ ಸಂಕಲ್ಪ ಏನು ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಇದಕ್ಕೆ ತಗಲತಕ್ಕಂತ ವೆಚ್ಚ 280 ಕೋಟಿ ಎಂದು ಹೇಳಿದರು. ಈ ವರ್ಷದ ಆಯವ್ಯಯದಲ್ಲಿ ಎರಡೂವರೆ ಕೋಟಿ ರೂಪಾಯಿಗಳನ್ನು ಇಟ್ಟರೆ ಅದನ್ನು ಪೂರ್ಣ ಮಾಡಲಿಕ್ಕೆ ಎಷ್ಟು ನೂರು ಶತಮಾನಗಳು ಬೇಕು ತಾವು ಯೋಚನೆ ಮಾಡಿ. ಈ ಸರ್ಕಾರ, ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು. ಈ ವರ್ಷದ ಆಯವ್ಯಯದಲ್ಲಿ ಕನಿಷ್ಠ 50ಕೋಟಿ ರೂಪಾಯಿ ಹಣವನ್ನು ಈ ಯೋಜನೆಗೆ ಇಡುತ್ತೇವ ಎಂದು ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಐವತ್ತು ಕೋಟಿ ತೆಗೆದಿಟ್ಟರೆ ಐವತ್ತು ವರ್ಷ ಬೇಕು, ಸಂಕಲ್ಪ ಬೇಡ, ಹಣ ಕೊಡುವುದನ್ನು ಹೇಳಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇದನ್ನು ಎರಡು ಸಾವಿರ ಇಸವಿಯೊಳಗೆ ಮಾಡಬೇಕು. ಇವತ್ತು 280 ಕೋಟಿ ಅಂದರೆ ಆರು ವರ್ಷಗಳಲ್ಲಿ ಇದನ್ನು ನೀವು ಪೂರ್ತಿ ಮಾಡಲಿಕ್ಕೆ ಸಾಧ್ಯ. ಅದಕ್ಕಾಗಿ ಕನಿಷ್ಠ ಐವತ್ತು ಕೋಟಿ ರೂಪಾಯಿಗಳನ್ನು ಈ ವರ್ಷದ ಆಯವ್ಯಯದಲ್ಲಿ ಇಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

11.35 A.M

ಶ್ರೀ ಎಂ. ವೀರಪ್ಪ ಮೊಯಿಲಿ : ಇದು ಒಳ್ಳೆಯ ಪ್ರಶ್ನೆ. ಆದರೆ ಇದು ಎರಡು ಮಿಶ್ರಣ ಆಗಿ ಬಿಟ್ಟಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಂಕಲ್ಪ ಬೇಡ. ನಿರ್ಧಾರ ಬೇಕು. ಈ ವರ್ಷ ಬಡ್ಜೆಟ್‌ನಲ್ಲಿ ಎಷ್ಟು ತೆಗೆದು ಇಟ್ಟಿದ್ದೀರಿ. 2 ಸಾವಿರದ ಇಸವಿಯೊಳಗೆ ಮುಗಿಸುತ್ತೀರ ಎಂಬುದನ್ನು ಸ್ಪಷ್ಟವಾಗಿ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಲಿಲ್ಲ. ಸಂಕಲ್ಪ ಮಾಡಿದ್ದೇವೆ ಎಂದು ಹೇಳಿದರು. ದೇವಸ್ಥಾನಗಳಲ್ಲಿ ಸಂಕಲ್ಪ ಮಾಡುತ್ತಾರೆ. ಆ ಸಂಕಲ್ಪ ಅಲ್ಲ. ಎರಡುಸಾವಿರ ವರ್ಷ ಬಹಳ ದೂರ ಇಲ್ಲ. ಇನ್ನೂ ಒಂದು ನೂರು ವರ್ಷ ಇಲ್ಲ. ಆದ್ದರಿಂದ 2 ಸಾವಿರದ ವರ್ಷದೊಳಗೆ ಮುಗಿಸಲು ನಿಮ್ಮ ಸಂಪತ್ತು ಎಷ್ಟು ಇದೆ? ವರ್ಷಕ್ಕೆ ಎಷ್ಟೆಷ್ಟು ಖರ್ಚು ಮಾಡುತ್ತೀರಿ ಎನ್ನತಕ್ಕದ್ದು ಒಂದು. ಇನ್ನು ಬಚಾವತ್ ತೀರ್ಪು ಏನಿದೆ ಅದರ ಬಗ್ಗೆ ಹೇಳಬೇಕಾದರೆ ನಾವಂತೂ ಬಚಾವತ್ ತೀರ್ಪನ್ನು ಬಹಿಷ್ಕರಿಸಬೇಕು, ಆ ತೀರ್ಪನ್ನು ತಳ್ಳಿಹಾಕ ಬೇಕೆಂದು ಹೇಳುತ್ತಿದ್ದೇನೆ. ನಿಮ್ಮ ಸರ್ಕಾರದ ನಿರ್ಧಾರ ಏನು? ನೀವು ಆ ಬಚಾವತ್ ತೀರ್ಪನ್ನು ಒಪ್ಪುತ್ತೀರೋ ಈಗಾಗಲೆ ಒಪ್ಪಿದ್ದಾರೆ. ಈ ರಾಜ್ಯದಲ್ಲಿ ನಾವೆಲ್ಲಾ ಅದರಿಂದ ಅನ್ಯಾಯ ಆಗುತ್ತಿದೆ ಎಂದು ಹೇಳಿದ್ದೇವೆ. ನೀವು ಈ ಬಚಾವತ್ ತೀರ್ಪನ್ನು ಒಪ್ಪುತ್ತೀರೋ?

ಉಪಾಧ್ಯಕ್ಷಿಣಿಯವರು : ಇನ್ನು ಉಪ ಪ್ರಶ್ನೆಗಳು ಸಾಕು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. I cannot take more time for this question during the question hour, because the other questions with lapse. If you feel it is of such an importance, you can send me a letter and I

can take it up in some other form. ಬೇರೆ ಪ್ರಶ್ನೆ ಲ್ಯಾಪ್ಸ್ ಆಗಲು ತಾವು ಒಪ್ಪುವುದಾದರೆ ನನ್ನದೇನು ಅಭ್ಯಂತರವಿಲ್ಲ.

ಪ್ರೊ ಎಂ.ಡಿ. ನಂಜುಂಡಸ್ವಾಮಿ : ಎರಡು ಸಾವಿರದ ಎ.ಡಿ.ಯ ಡೆಡ್‌ಲೈನ್ ಅನ್ನು ತಾವು ಒಪ್ಪುತ್ತೀರೋ, ಅದು ವೈಜ್ಞಾನಿಕವೇ ಎಂದು ನಾನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ಇದರಲ್ಲಿ ಎರಡೂ ಮಿಶ್ರಣವಾಗಿ ಬಿಟ್ಟಿದೆ. ನಾನು ಹೇಳಿದ್ದು ಏನೆಂದರೆ ಬಜಾವತ್ ಅವಾರ್ಡ್ ಪ್ರಕಾರ ಕೃಷ್ಣಾ ಜಲಾಯನದಲ್ಲಿ ನಮ್ಮ ಪಾಲಿನ ನೀರನ್ನು 2 ಸಾವಿರ ಎ.ಡಿ. ಹೊತ್ತಿಗೆ ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುತ್ತೇನೆ. ಆ ದಿಸೆಯಲ್ಲಿ ಕಾರ್ಯಕ್ರಮ ರೂಪಿಸುತ್ತೇವೆ ಎನ್ನುವುದು ಒಂದು. ಮಾನ್ಯ ಬನ್ನಿಕೋಡ್ ರವರು 6 ವರ್ಷಗಳಲ್ಲಿ ಮುಗಿಸುತ್ತೀರಾ, ಎರಡು ಸಾವಿರದ ವರ್ಷದ ಹೊತ್ತಿಗೆ ಅಪ್ಪರ ತುಂಗಾ ಯೋಜನೆಯನ್ನು ಮುಗಿಸುತ್ತೀರಾ ಎಂದು ಕೇಳಿದರು.

ಅದಕ್ಕೆ ಹೊಂದಿಕೊಂಡಂಥ ಯೋಜನೆ ಇದ್ದುದರಿಂದ ಅದನ್ನು ಮುಗಿಸುತ್ತೇನೆ ಎಂಬುದು ಒಂದು ಅಂಶ. ಇನ್ನು ಹಣ ಹೇಗೆ ಒದಗಿಸುತ್ತೀರಿ ಎನ್ನುವ ಪ್ರಶ್ನೆ ಪ್ರತ್ಯೇಕ. ನಾವು 1993-94ನೇ ಇಸವಿಯಲ್ಲಿ ಕೃಷ್ಣಾ ಜಲಾನಯನ ಮತ್ತು ಆ ವಿಭಾಗಕ್ಕೆ ಸೇರಿ 600 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಕಾವೇರಿ ಜಲಾನಯನಕ್ಕೆ ಸಂಬಂಧಪಟ್ಟಂತೆ ನಾನ್ ಪ್ಲಾನ್‌ನಲ್ಲಿ 300 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ ಹೀಗೆ ಒಟ್ಟು 900 ಕೋಟಿ ರೂಪಾಯಿಗಳನ್ನು ನೀರಾವರಿ ಯೋಜನೆಗೆ ಮಿಸಲಾಗಿಡಬೇಕು ಎಂದು ಹೇಳಿ 1993-94ರಲ್ಲಿ ಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಈ ಮಾತನ್ನು ಹಗಲೂ ರಾತ್ರಿ ಕೇಳಿ ಕೇಳಿ ಸಾಕಾಗಿದೆ.

ಶ್ರೀ ಸಿ. ಬೈರೇಗೌಡ : ಆದರೆ ಅಲ್ಲಿ ಏನೂ ಆಗಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ : 1993-94 ರಲ್ಲಿ 900 ಕೋಟಿ ರೂಪಾಯಿಗಳನ್ನು ಕರ್ನಾಟಕ ರಾಜ್ಯದಲ್ಲಿ ನೀರಾವರಿ ಯೋಜನೆಗಳಿಗಾಗಿ ಒದಗಿಸಿ, ಕೇಂದ್ರದ ಯೋಜನಾ ಆಯೋಗದ ಮಂಜೂರಾತಿಯೂ ಕೂಡ ಇದಕ್ಕೆ ಸಿಕ್ಕಿದೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಬೇರೆ ಪ್ರಶ್ನೆಗಳು ಲಾಪ್ಸ್ ಆಗುತ್ತದೆ, ಆದ್ದರಿಂದ ಇದನ್ನು ಇಲ್ಲಿಗೆ ಮುಗಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಇದು ವರ್ಲ್ಡ್ ಬ್ಯಾಂಕ್‌ನ ಪ್ರಾಜೆಕ್ಟ್ ಕೂಡ ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಆಗಲೇ ಹೇಳಿದ ಹಾಗೆ 6 ವರ್ಷಗಳಲ್ಲಿ ಈ ಕಾರ್ಯಕ್ರಮವನ್ನು ಮುಗಿಸಲಿಕ್ಕೆ ಎಷ್ಟು ಹಣವನ್ನು ಒದಗಿಸಬೇಕೋ ಅಷ್ಟನ್ನು ಒದಗಿಸುತ್ತೇವೆ ಸ್ವಲ್ಪ ಹೆಚ್ಚು ಮಾಡಬೇಕಾದರೆ ಅದಕ್ಕೂ ಪ್ರಯತ್ನ ಮಾಡುತ್ತೇವೆ.

ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರನ್ನು ಭರ್ತಿ ಮಾಡುವ ಬಗ್ಗೆ

828 - ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಂಜನಿಯರಿಂಗ್ ಇಲಾಖೆಯಲ್ಲಿ ಬ್ಯಾಕ್‌ಲಾಗ್ ನೇಮಕಾತಿ ಮತ್ತು ಹುದ್ದೆಗಳನ್ನು ತುಂಬುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವೇ?

ಆ) ಈ ಸಂಬಂಧದಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಹೌದು. ಕರ್ನಾಟಕ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ಅಭಿಯಂತರರ ಕ್ಷೇಮಾಭಿವೃದ್ಧಿ ಸಂಘದವರು ಸಹಾಯಕ ಕಾರ್ಯಪಾಲಕ ಅಭಿಯಂತರರ ವೃಂದದಿಂದ ಕಾರ್ಯಪಾಲಕ ಅಭಿಯರತರರ ವೃಂದಕ್ಕೆ ಬಡ್ತಿ ನೀಡುವಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಮನವಿ ಸಲ್ಲಿಸಿರುತ್ತಾರೆ.

ಆ) ಈ ಮನವಿ ಬಗ್ಗೆ ಸರ್ಕಾರವು ತೀವ್ರವಾಗಿ ಪರಿಶೀಲಿಸುತ್ತಿದೆ.

ಶ್ರೀ ಕೆ. ಸಿದ್ದಯ್ಯ : ನನ್ನ ಪ್ರಶ್ನೆಗೆ ಉತ್ತರವಾಗಿ ತೀವ್ರವಾಗಿ ಪರಿಶೀಲನೆ ಮಾಡುತ್ತೇನೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಇದರಲ್ಲಿ ಏನಾದರೂ ನ್ಯೂನತೆಗಳಿವೆಯೇ, ಇದ್ದರೆ ಆ ನ್ಯೂನತೆಗಳು ಯಾವುವು? ಇದ್ದು ಬೇಗ ಮಾಡಲು ನಿಮಗೆ ಇರತಕ್ಕ ತೊಂದರೆಗಳು ಏನು? ಇನ್ನು ಎಷ್ಟು ದಿವಸಗಳಲ್ಲಿ ಮಾಡುತ್ತೀರಿ? ಇದರ ಬಗ್ಗೆ ಕ್ಲಿಯರ್‌ಆಗಿ ಮಾನ್ಯ ಸಚಿವರು ಉತ್ತರವನ್ನು ನೀಡಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಈ ಒಂದು ಕಾನೂನು 3.12.92 ರಿಂದ ಏನು ಕೊನೆಗೊಳ್ಳುತ್ತಿತ್ತು ಅದನ್ನು ಮತ್ತೆ ಎರಡು ವರ್ಷಕಾಲ ಮುಂದುವರೆಸಿ ಸರ್ಕಾರಿ ಆಜ್ಞೆಯನ್ನು ಹೊರಡಿಸಲಾಗಿದೆ.

ಶ್ರೀ ಕೆ. ಸಿದ್ದಯ್ಯ : ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಮುಂದುವರಿಸಿರುವುದು ಸರಿಯಾಗಿದೆ. ಆದರೆ ಇದೇ ರೀತಿ ಒಂದು ವರ್ಷದ ವರೆಗೂ ಮುಂದುವರೆಸಿಕೊಂಡು ಹೋಗುತ್ತೀರ ಹೇಗೆ? ಏಕೆಂದರೆ ಶೀಘ್ರವಾಗಿ ಪರಿಶೀಲನೆ ಮಾಡುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಇದರಲ್ಲಿ ಕಷ್ಟವಾದಂಥ ನ್ಯೂನತೆಗಳು ಇದ್ದರೆ ಅವು ಯಾವುವು? ಇದಕ್ಕಾಗಿ ಎಷ್ಟು ದಿವಸ ಬೇಕು ಎಂಬುದನ್ನು ತಿಳಿಸುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್ : ಈಗ ಮತ್ತೆ ಎರಡು ವರ್ಷಗಳ ಕಾಲ ಅದನ್ನು ಮುಂದುವರಿಸಲಾಗಿದೆ.

ಶ್ರೀ ಕೆ. ಸಿದ್ದಯ್ಯ : ನಾವು ಕೇಳಿರುವುದಕ್ಕೆ ತಾವು ಎರಡು ವರ್ಷ ಕಾಲ ಮುಂದುವರೆಸಬಹುದು. ಆದರೆ ಅದರಲ್ಲಿ ನ್ಯೂನತೆಗಳು ಏನಾದರೂ ಇದ್ದರೆ ತಿಳಿಸಿ. ಆ ನೂನ್ಯತೆಗಳನ್ನು ಪರಿಹಾರ ಮಾಡುವುದಕ್ಕೆ ಇನ್ನೂ ಎರಡು ವರ್ಷ ತೆಗೆದುಕೊಳ್ಳುತ್ತೀರಾ? ಅದು ಇದ್ದರೆ ಎಷ್ಟು ದಿವಸ ತೆಗೆದುಕೊಳ್ಳುತ್ತೀರಿ, ಆ ನ್ಯೂನತೆಗಳು ಯಾವುದು ಹೇಳಿ?

ಶ್ರೀ ಕೆ.ಹೆಚ್. ರಂಗನಾಥ್ : ನನಗೆ ಪ್ರಶ್ನೆ ಅರ್ಥವಾಗಿಲ್ಲ, ಮಾನ್ಯ ಸದಸ್ಯರು ಸರಿಯಾಗಿ ಹೇಳಿದರೆ ನಾನು ಉತ್ತರ ಹೇಳಬಹುದು.

ಉಪಾಸಭಾಧ್ಯಕ್ಷರು : ತಾವು ಇನ್ನೊಂದು ಸಲ ಪ್ರಶ್ನೆಯನ್ನು ರಿಪೀಟ್ ಮಾಡಿ.

ಶ್ರೀ ಕೆ.ಹೆಚ್. ರಂಗನಾಥ್ : ಪ್ರಶ್ನೆ ಏನು ಎನ್ನುವುದನ್ನು ಸ್ಪೆಸಿಫಿಕ್ ಆಗಿ ಕೇಳಿ.

ಶ್ರೀ ಕೆ. ಸಿದ್ಧಯ್ಯ : ನಾನು ಪ್ರಶ್ನೆಯನ್ನು ಸ್ಪೆಸಿಫಿಕ್ ಆಗಿಯೇ ಕೇಳುವುದು. ಈಗ ತಾವು ಬ್ಯಾಕ್‌ಲಾಗ್ ವಿಚಾರದಲ್ಲಿ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಅದನ್ನು ನಾನು ಒಪ್ಪಿಕೊಂಡೆ. ಒಂದು ವೇಳೆ ಇದಕ್ಕೆ ಎರಡು ವರ್ಷ ಬೇಕಾಗುತ್ತದೆ ಎಂದು ಹೇಳಿದ್ದೀರಿ. ಇದರಲ್ಲಿ ನ್ಯೂನತೆಗಳು ಏನಾದರೂ ಇದ್ದರೆ ಅವು ಯಾವ ಯಾವ ನ್ಯೂನತೆಗಳು, ಅವನ್ನು ತೀರಿಸುವುದಕ್ಕೆ ಎಷ್ಟೇ ದಿವಸಗಳು ಬೇಕಾಗುತ್ತದೆ. ಆ ನ್ಯೂನತೆಗಳು ಏನೇನು ಎಂಬುದನ್ನು ತಾವು ಹೇಳಿದರೆ ನಮಗೆ ಗೊತ್ತಾಗುತ್ತದೆ. ಇಲ್ಲದಿದ್ದರೆ ನಮಗೆ ಹೇಗೆ ಗೊತ್ತಾಗುತ್ತದೆ. ದಯವಿಟ್ಟು ನ್ಯೂನತೆಗಳಲು ಏನು ಎನ್ನುವುದನ್ನು ತಿಳಿಸಿ, ಅದನ್ನು ಪರಿಹರಿಸುವುದಕ್ಕೆ ಎಷ್ಟು ದಿವಸ ಬೇಕು ಎನ್ನುವುದನ್ನು ತಿಳಿಸಿ. ಇದೇ ಸ್ಪೆಸಿಫಿಕ್ಕಾದ ಕ್ವೆಶ್ಚನ್.

ಶ್ರೀ ಕೆ.ಹೆಚ್. ರಂಗನಾಥ್ : ಬ್ಯಾಕ್‌ಲಾಗ್‌ಗೆ 3-12-90 ರಿಂದ ಎರಡು ವರ್ಷಗಳ ಕಾಲ ಬ್ಯಾಕ್‌ಲಾಗ್ ಕೊಡಬೇಕೆಂದು ಹಿಂದಿನ ಸರ್ಕಾರ ಆದೇಶ ಜಾರಿಗೆ ತಂದಿತ್ತು. ಅದು ಮೊನ್ನೆ 2-12-92ಕ್ಕೆ ಕೊನೆಯಾಗಿದೆ. 3-12-92ರಿಂದ ಇನ್ನೆರಡು ವರ್ಷಗಳವರೆಗೆ ಅದನ್ನು ಮುಂದುವರಿಸಲಾಗಿದೆ.

ಶ್ರೀ ಕೆ. ಸಿದ್ದಯ್ಯ : ನಾನು ಕೇಳಿದ ಪ್ರಶ್ನೆಗೆ ಮಾನ್ಯ ಮುಂತ್ರಿಗಳು ಕ್ಲಿಯರಾಗಿ ಉತ್ತರ ಕೊಡಲಿಲ್ಲ. ಆದ್ದರಿಂದ ನಾನು ಮತ್ತೆ ಅದನ್ನು ರಿಪಿಟ್ ಆಗಿ ಕೇಳುತ್ತಿದ್ದೇನೆ. ಮತ್ತೆ ಕ್ಲಿಯರಾಗಿ ಕೇಳುತ್ತೇನೆ. ಈಗ ಅದರಲ್ಲಿ ಎಷ್ಟು ಬ್ಯಾಕ್‌ಲಾಗ್ ಹುದ್ದೆಗಳು ಇವೆ ಎಂಬುದನ್ನು ಅವರಿಗೆ ಗೊತ್ತಿದೆ. ಆ ಹುದ್ದೆಗಳನ್ನು ನೇರವಾಗಿ ಬೇಗ ತುಂಬುವುದಕ್ಕೆ ಇರತಕ್ಕಂಥ ನ್ಯೂನತೆಗಳು ಎನ್ನುವುದನ್ನು ಹೇಳಲಿ. ಮತ್ತು ಏಕಕಾಲದಲ್ಲಿ ಈಗ ಎಷ್ಟು ಹುದ್ದೆಗಳು ಇವೆ ಅಷ್ಟು ಕೊಡಲಿ. ಇದರಲ್ಲಿ ತೊಂದರೆಗಳು ಏನಾದರೂ ಇದ್ದರೆ ಹೇಳಿ.

ಶ್ರೀ ಕೆ.ಎಚ್. ರಂಗನಾಥ್ : ಎರಡು ವರ್ಷಗಳವರೆಗೆ ಮುಂದುವರೆಸುವುದರಿಂದ ಯಾವ ಹುದ್ದೆಗಳು ಬ್ಯಾಕ್‌ಲಾಗ್ ಪ್ರಕಾರ ಕೊಡಬೇಕೋ ಅದನ್ನು ಕೊಡುತ್ತೇವೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಮಾನ್ಯ ಮಂತ್ರಿಗಳು ಈ ಬ್ಯಾಕ್‌ಲಾಗ್ ತುಂಬುವುದಕ್ಕೆ ಈ ನೇಮಕಾತಿ ಹುದ್ದೆಗಳನ್ನು ಎರಡು ವರ್ಷಗಳ ಕಾಲ ಮುಂದುವರೆಸಿದ್ದೇವೆಂದು ಹೇಳಿದರು. ಇಲ್ಲಿರುವ ಪ್ರಶ್ನೆ ಏನೆಂದರೆ, ಇಂಜಿನಿಯರಿಂಗ್ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ಬ್ಯಾಕ್‌ಲಾಗ್ ನೇಮಕಾತಿ ಹಾಗೂ ಹುದ್ದೆಗಳಿಗೆ ಸಂಬಂಧಿಸಿದಂತೆ ಎಂದು ಇದೆ. ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ ಬ್ಯಾಕ್‌ಲಾಗ್ ಆಗಿರತಕ್ಕಂಥ ಎಷ್ಟು ಹುದ್ದೆಗಳಿವೆ? ಇದುವರೆಗೂ ಎಷ್ಟು ಹುದ್ದೆಗಳನ್ನು ತುಂಬಿದ್ದೀರಿ? ಈಗ ತುಂಬುದಕ್ಕೆ ಏನು ಪ್ರಯತ್ನ ನಡೆಸಿದ್ದೀರಿ?

ಶ್ರೀ ಕೆ.ಹೆಚ್. ರಂಗನಾಥ್ : ಬ್ಯಾಕ್‌ಲಾಗ್ ಹುದ್ದೆಗಳು 1978-82ರವರೆಗೆ ಎಸ್.ಸಿ-32, ಎಸ್.ಟಿ-7 ಖಾಲಿ ಇದ್ದವು. ಅವನ್ನು ಭರ್ತಿ ಮಾಡುವಾಗ 1978-82 ರವರೆಗೆ ಅಂದರೆ ಆ ಪಿರೀಡ್‌ನಲ್ಲಿ 32 ಹುದ್ದೆಗಳು ಭರ್ತಿಯಾಗಬೇಕಾಗಿತ್ತು. ಆದರೆ ತುಂಬಿದ್ದು ಎಸ್.ಸಿ-9, ಎಸ್.ಟಿ-7. 1982-85 ರವರೆಗೆ ಬ್ಯಾಕ್‌ಲಾಗ್ ಪ್ರಕಾರ ಎಸ್.ಸಿ.47, ಎಸ್.ಟಿ-10 ವೇಕೆನ್ಸಿಗಳು ಇದ್ದವು. ಆದರೆ ಭರ್ತಿಯಾಗಿದ್ದು ಎಸ್.ಸಿ.2, ಎಸ್.ಟಿ-8.

ಬ್ಯಾಕ್‌ಲಾಗ್‌ನಲ್ಲಿ - ಷಾರ್ಟ್‌ಫಾಲ್ 1978-82ರಲ್ಲಿ ಉಳಿದಿದ್ದು 23, 1982-85 ರಲ್ಲಿ 25 ಉಳಿದಿದ್ದು, 1985-90 ರವರೆಗೆ 338 ಪ್ರೊಮೋಶನ್ ಆಯಿತು. ಅಂದಿನ ರೂಲ್ಸ್ ಪ್ರಕಾರ, ರಿಸರ್ವೇಷನ್ ಪಾಲಿಸಿ ಪ್ರಕಾರ ಮಾಡುವುದಕ್ಕೆ ಆಗಲಿಲ್ಲ. ಮುಂದೆ 1990-92 ರಲ್ಲಿ 129 ಪ್ರಮೋಷನ್ ಆಯಿತು. ಅದರಲ್ಲಿ ಎಸ್.ಸಿ.-20 ಬರಬೇಕಾಗಿತ್ತು, ಎಸ್.ಟಿ-4 ಬರಬೇಕಾಗಿತ್ತು ಅದರಲ್ಲಿ ಎಸ್.ಸಿ.ಗೆ 20 ಹುದ್ದೆಗಳನ್ನು ಕೊಡಲಾಗಿದೆ. ಎಸ್.ಟಿ.ಗೆ 4 ನ್ನು ಕೊಡಲಾಗಿದೆ.

ಶ್ರೀ ಕೆ. ಸಿದ್ದಯ್ಯ : ಇದುವರೆಗೆ ಸರಿಯಾದ ಉತ್ತರ ಬಂದಿಲ್ಲ. ಎರಡು ವರ್ಷಗಳಲ್ಲಿ ಹುದ್ದೆಗಳನ್ನು ತುಂಬುತ್ತೇವೆಂದು ಮಂತ್ರಿಗಳು ಹೇಳಿದರು. ಆಗ ಎಷ್ಟು ಬ್ಯಾಕ್‌ಲಾಗ್ ಇತ್ತು? ಈ ಮಧ್ಯದಲ್ಲಿ ಏನೂ ಅಪಾಯಿಂಟ್‌ಮೆಂಟ್ ಮಾಡಿಲ್ಲವೆ? ಅಥವಾ ಪ್ರಮೋಶನ್ಸ್ ಕೊಟ್ಟಿಲ್ಲವೇ? ಎರಡು ವರ್ಷಗಳಿಂದ ಯಾವ ಹುದ್ದೆಗಳನ್ನು ತುಂಬಿಲ್ಲವೇ? ತುಂಬುವಾಗ ಈ ಬ್ಯಾಕ್‌ಲಾಗ್‌ನ್ನು ಪೂರ್ತಿಯಾಗಿ ಏಕೆ ತುಂಬಲಿಲ್ಲ? ಇದರ ಜೊತೆಗೆ ಈ ಬ್ಯಾಕ್‌ಲಾಗ್‌ನ್ನು ತುಂಬುವುದಕ್ಕೆ ಅವರು ಅನುಸರಿಸಿದಂಥ ಪ್ರೊಸಿಜರ್ ಏನು? ಇದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಸದಸ್ಯರ ಪ್ರಶ್ನೆ ನನಗೆ ಅರ್ಥವಾಗುವುದಿಲ್ಲ.

ಶ್ರೀ ಕೆ. ಸಿದ್ದಯ್ಯ : ಮತ್ತೆ ಇನ್ನೊಂದು ಸಾರಿ ಅರ್ಥವಾಗುವ ಹಾಗೆ ಹೇಳುತ್ತೇನೆ. ಬ್ಯಾಕ್‌ಲಾಗ್ ಎಷ್ಟಿದೆ ಎಂದು ನಿರ್ದಿಷ್ಟವಾಗಿ ಅವರಿಗೆ ಗೊತ್ತು. ಈ ಹುದ್ದೆಗಳನ್ನು ತುಂಬಬೇಕಾದರೆ ಅವರು ಅನುಸರಿಸಿದಂಥ ಪ್ರೊಸೀಜರ್ ಏನು? ಎರಡು ವರ್ಷಗಳಿಂದ ಈ ಹುದ್ದೆಗಳು ಇದ್ದರೆ ಏಕಕಾಲದಲ್ಲಿ ಈ ಹುದ್ದೆಗಳನ್ನು ಏಕೆ ತುಂಬಲಿಲ್ಲ? ದಯವಿಟ್ಟು ಇದನ್ನು ತಿಳಿಸಿ.

ಶ್ರೀ ಕೆ.ಎಚ್. ರಂಗನಾಥ್ : ನಾನು ಈಗ ಹೇಳಿದೆ. ಮೊದಲ ಸಾರಿ 1978ರಿಂದ 1982ರವರೆಗೆ 32 ಹುದ್ದೆಗಳು ಭರ್ತಿಯಾಗಬೇಕಿತ್ತು. ಅದರಲ್ಲಿ ಕೇವಲ 9 ಆಯಿತು. ಅರ್ಹರಾದ ಅಭ್ಯರ್ಥಿಗಳು ಇರಲಿಲ್ಲವೆಂದು ಆಗಿದೆ. ಮತ್ತೆ 1982ರಿಂದ 1985ರಲ್ಲಿ 47 ಆಗಬೇಕಿತ್ತು. ಎಸ್.ಟಿ.ಗೆ 22 ಆಯಿತು. 25 ಇನ್ನೂ ಉಳಿದಿದೆ. ಮಾನ್ಯ ಸದಸ್ಯರು ನೋಟ್ ಮಾಡಿಕೊಂಡು ಲೆಕ್ಕಹಾಕಬೇಕು. ಹಾಗೆ ಸುಮ್ಮನೆ ಕೇಳುತ್ತಾ ಇದ್ದರೆ ಆಗುವುದಿಲ್ಲ. ಅವಾಗಲೂ ಕೂಡ ಅರ್ಹ ಅಭ್ಯರ್ಥಿಗಳು ಇರಲಿಲ್ಲವೆಂದು ಮಾಡಲಿಲ್ಲ. ಇದು ಸರ್ಕಾರದಲ್ಲಿ ಇರತಕ್ಕಂಥ ವರದಿ. ಮುಂದೆ 338 ಹುದ್ದೆಗಳು ಪ್ರಮೋಶನ್‌ವಾದವು. ಆಗ ಅಂದಿದ್ದ ಪಾಲಿಸಿ ಪ್ರಕಾರ ಮಾಡಲಿಕ್ಕೆ ಬಾರದೇ ಇದ್ದಿದ್ದರಿಂದ ಭರ್ತಿ ಮಾಡಲಿಲ್ಲ. 1990-92 ಈ ಎರಡು ವರ್ಷಗಳಲ್ಲಿ ಬ್ಯಾಕ್‌ಲಾಗ್ನಲ್ಲಿ ಮಾಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಮೇಲೆ 129 ಹುದ್ದೆಗಳಿಗೆ ಪ್ರಮೋಶನ್ಸ್ ಕೊಟ್ಟಿದ್ದಾರೆ. 20 ಬರಬೇಕಿತ್ತು ಮತ್ತು 20ಕ್ಕೂ ಭರ್ತಿ ಮಾಡಿದ್ದಾರೆ. ಮತ್ತೆ ಎರಡು ವರ್ಷ ನಾವು ಮುಂದುವರೆಸಿದ್ದೇವೆ. ಎಷ್ಟು ಬರುತ್ತದೋ ಅಷ್ಟನ್ನೂ ಭರ್ತಿ ಮಾಡುತ್ತೇವೆ.

ಶ್ರೀ ಕೆ. ಸಿದ್ದಯ್ಯ : ಇದು ಮುಖ್ಯವಾದ ಪ್ರಶ್ನೆ. ಅವರು ಹೇಳಿರತಕ್ಕಂಥ ವಿಚಾರ ಕ್ಲಿಯರ್ ಆಗಿ ಗೊತ್ತಾಗುವುದಿಲ್ಲ. ಇದರ ಬಗ್ಗೆ ಅರ್ಧಗಂಟೆ ಚರ್ಚೆಮಾಡಿದರೆ ಬಹಳ ಒಳ್ಳೆಯದು.

ಉಪಾಧ್ಯಕ್ಷಣೆಯವರು : ಅವರ ಪ್ರಶ್ನೆ ನಿಮಗೆ ಅರ್ಥವಾಗುವುದಿಲ್ಲ, ನಿಮ್ಮ ಉತ್ತರ ಅವರಿಗೆ ಅರ್ಥವಾಗುವುದಿಲ್ಲ ಎಂದು ಹೇಳುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್ : ಎಲ್ಲೂ ತಪ್ಪಿರಬೇಕು. ನನ್ನಲ್ಲಿ ತಪ್ಪಿರಬೇಕು. ಇಲ್ಲವೇ ಅವರಲ್ಲಿ ತಪ್ಪಿರಬೇಕು.

ಶ್ರೀ ಬಾಬುರಾವ್ ಚವಾಣ್ : ಹರಿಜನ-ಗಿರಿಜನರಿಗೆ ಕೊಡುತ್ತಾ ಇರತಕ್ಕಂಥ ಸೌಲಭ್ಯವನ್ನು ಸರಿಯಾಗಿ ಕೊಟ್ಟಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀ ಸಿದ್ಧಯ್ಯನವರಿಗೆ ಉತ್ತರಗಳ ಪಟ್ಟಿ ಬಂದಿದೆ. ನನಗೆ ಬಂದಿಲ್ಲ, ನಾನು ನೇರವಾಗಿ ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಬ್ಯಾಕ್‌ಲಾಗ್ ವೆಕೆನ್ಸಿಗಳಲ್ಲಿ ಹರಿಜನ-ಗಿರಿಜನ ಅಭ್ಯರ್ಥಿಗಳು ಸಿಕ್ಕಿಲ್ಲವೆಂದು ತಾವು ಹೇಳುತ್ತಿದ್ದೀರಿ. ಅದಕ್ಕೆ ಸಾಖಲೆಗಳನ್ನು ತಾವು ನಮಗೆ ಒದಗಿಸಿಕೊಡುತ್ತೀರಾ? ಎರಡನೆಯದು , ಇದನ್ನು ಯಾವ ಆಧಾರದ ಮೇಲೆ ತಾವು ಹೇಳುತ್ತಿದ್ದೀರಿ ನನ್ನ ನೇರವಾದ ಆರೋಪ ಏನೆಂದರೆ, ಅಭ್ಯರ್ಥಿಗಳು ಇದ್ದರೂ ಕೂಡ ಅವರನ್ನು ತಳ್ಳಿಹಾಕುವಂಥ ಕುತಂತ್ರ ಆಫೀಸಿನಲ್ಲಿ ಆಗಿದೆ. ಮೂರನೆಯದು, ಬ್ಯಾಕ್‌ಲಾಗ್ ವೆಕೆನ್ಸಿಗಳನ್ನು ಎರಡು ವರ್ಷಗಳಿಂದ ಮುಂದುವರೆಸುತ್ತಿದ್ದೀರಿ. ಇದನ್ನು ಕೂಡಲೆ ಫಿಲ್‌ಅಪ್ ಮಾಡುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ.ಎಚ್. ರಂಗನಾಥ್ : ಮಾನ್ಯ ಉಪಾಧ್ಯಕ್ಷಣೆಯವರೇ, ಅರ್ಹರಾದಂಥ ಅಭ್ಯರ್ಥಿಗಳು ಇರಲಿಲ್ಲವೆಂದು ಏಕೆ ಹೇಳಿದ್ದಾರೆ ಎಂದರೆ, ಮುಂದಿನ ಬಡ್ತಿ ಪಡೆಯುವಾಗ ಒಂದು ಹುದ್ದೆಯಲ್ಲಿ ಕನಿಷ್ಟ ಐದು ವರ್ಷ ಸೇವೆ ಮಾಡಿರಬೇಕು ಎಂದು ಕಾನೂನು ಇದೆ. ಆದ್ದರಿಂದ ಬಡ್ತಿಯನ್ನು ಐದು ವರ್ಷ ಆದವರಿಗೆ ಕೊಡುತ್ತಾರೆ. ಒಂದು ವೇಳೆ ಐದು ವರ್ಷ ಆಗದೇ ಇದ್ದರೂ ಕೂಡ ಮೂರು ವರ್ಷ ಆಗಿದ್ದರೆ ಕೊಟತಕ್ಕಂಥಾದ್ದೂ ಇದೆ. ಆದರೆ ಕಾರಣಾಂತರಗಳಿಂದ ಇದನ್ನು ಕೊಟ್ಟಿಲ್ಲ; ಹೀಗಾಗಿ ಉಳಿದುಕೊಂಡು ಬಂದಿದೆ. ಏಕೆ ಅರ್ಹ ಆಗಲಿಲ್ಲವೆಂದರೆ, ಬಹುಶಃ 5 ವರ್ಷಗಳನ್ನು ಕನ್ಸಿಡರ್ ಮಾಡಿರಬಹುದೆಂದು ಕಾಣುತ್ತದೆ. ಅದಕ್ಕೋಸ್ಕರ ಅವರಿಗೆ ಕೊಟ್ಟಿಲ್ಲ.

ಶ್ರೀಮತಿ ರೇಣುಕಾ ರಾಜೇಂದ್ರನ್ : ಮಾನ್ಯ ಮುಖ್ಯಮಂತ್ರಿಯವರು ಶ್ರೀಮತಿ ಮೋಟಮ್ಮನವರ ಪ್ರಶ್ನೆಗೆ ಉತ್ತರವಾಗಿ ಬ್ಯಾಕ್‌ಲಾಗ್‌ನ್ನು ತುಂಬಲಾಗುವುದು, ಇದನ್ನು ಸರಿಪಡಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ ಎಂದು ಕೇಳಲ್ಪಟ್ಟೆ. ವಿವಿಧ ಇಲಾಖೆಗಳಲ್ಲಿ ಇದೇ ರೀತಿ ಆಗಿದೆ. ಎರಡು ವರ್ಷಗಳಿಂದ 1990ರಲ್ಲಿ ಏನು ಜಾರಿ ಮಾಡಿದ್ದರು ಕಾನೂನಿನ ಪ್ರಯೋಜನ ನಮ್ಮ ಪರಿಶಿಷ್ಟ ಪಂಗಡದವರಿಗೆ ವಿವಿಧ ಇಲಾಖೆಗಳಲ್ಲಿ ಯಾರಿಗೂ ಲಭಿಸಿಲ್ಲ. ಇಂಥಾದ್ದನ್ನು ವಿಶೇಷ ನೇಮಕಾತಿ ಮೂಲಕ ನೇಮಕ ಮಾಡಲಿಕ್ಕೆ ಸರ್ಕಾರ ಪ್ರಯತ್ನಿಸುತ್ತದೆ, ಎನ್ನುವುದು ಒಂದು. ಮತ್ತೆ ಬ್ಯಾಕ್‌ಲಾಗ್ ತುಂಬುವುದಕ್ಕೋಸ್ಕರ ಈ ಸರ್ಕಾರದ ನೀತಿ ಏನಿದೆ ಅಂದರೆ, ಎಕಾನಮಿ ಮೆಷರ್ಸ್‌ನಿಂದ ಯಾವ ಇಲಾಖೆಯಲ್ಲೂ ರಿಕ್ರೂಟ್‌ಮೆಂಟ್ ಮಾಡುತ್ತಾ ಇಲ್ಲ, ಬರೀ ಟೀಚರ್ಸ್, ಡಾಕ್ಟರ್ಸ್ ಮಾತ್ರ ಮಾಡುತ್ತಾ ಇದ್ದೇವೆಂದು ಹೇಳುತ್ತಿದ್ದಾರೆ. ಆ ನಿಯಮಗಳನ್ನು ಸಡಿಲಗೊಳಿಸಿ ವಿಶೇಷ ನೇಮಕಾತಿ ಮಾಡಲಿಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ? ಎನ್ನುವುದು ನನ್ನ ಪ್ರಶ್ನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಪ್ರಶ್ನೆ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತಹ ಪ್ರಶ್ನೆ. ಮಾನ್ಯ ಸದಸ್ಯರು ಜನರಲ್ ಆಗಿ ಕೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅದನ್ನು ಗಮನಕ್ಕೆ ತೆಗೆದುಕೊಂಡು ಮಾಡುತ್ತಾರೆ ಎಂದು ಹೇಳುತ್ತೇನೆ. ಇದು ಇಂಜಿನಿಯರಿಂಗ್ ಇಲಾಖೆಗೆ ಸಂಬಂಧಪಟ್ಟಿದ್ದು ಇರುವುದರಿಂದ ನಾವು ಈಗ ಎರಡು ವರ್ಷ ಮುಂದುವರೆಸಿದ್ದೇವೆ. ಕಾನೂನು ಪ್ರಕಾರ ಅವರಿಗೆ ಏನು ದಕ್ಕಬೇಕೋ ಅದನ್ನು ಒದಗಿಸಿಕೊಡತಕ್ಕಂತಹ ಕೆಲಸವನ್ನು ಮಾಡುತ್ತೇವೆ.

ಉಳ್ಳಾಲದಿಂದ ಮರಳಿನ ಅನಧಿಕೃತ ಸಾಗಾಣಿಕೆ

977 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರ?

ಅ) ಮಂಗಳೂರು ತಾಲ್ಲೂಕಿನ ಉಳ್ಳಾಲದಿಂದ ತಲಪಾಡಿವರೆಗಿನ ಸಮುದ್ರ ಕಿನಾರೆಯ ಮರಳನ್ನು ಅನಧಿಕೃತವಾಗಿ ಸಾಗಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ರೀತಿಯ ಸಾಗಾಟದಿಂದ ಕಡಲು ಕೊರೆತ ಜಾಸ್ತಿ ಆಗುವುದಕ್ಕೆ ನೆರವು ನೀಡಿದಂತಾಗುವುದಿಲ್ಲವೇ?

ಇ) ಈ ಭಾಗದ ಮರಳು ಸಾಗಾಣಿಕೆಯ ಗುತ್ತಿಗೆಗೆ ನೇಮಕ ಮಾಡಲಾಗಿದೆಯೇ? ಹಾಗಿದ್ದಲ್ಲಿ ಅದರ ಪಟ್ಟಿ ಒದಗಿಸುವುದು.

ಈ) ಸಮುದ್ರ ಕಿನಾರೆಯ ರಕ್ಷಣೆಗಾಗಿ ಈ ಮರಳು ಅಗೆದು ತೆಗೆಯದಂತೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಗುತ್ತಿಗೆ ಮಂಜೂರು ಮಾಡಿಲ್ಲ.

ಈ) ಈ ಪ್ರದೇಶವನ್ನು ಈಗಾಗಲೇ ಕಂದಾಯ ಇಲಾಖೆಯ ಅರಣ್ಯ ಇಲಾಖೆಗೆ ಒಪ್ಪಿಸಿ ಗಿಡ ಮರಗಳನ್ನು ಬೆಳೆಯುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಶ್ರೀ ಬಿ.ಎಂ. ಇದಿನಬ್ಬ : ನನ್ನ ಪ್ರಶ್ನೆಯಲ್ಲಿ ಉಳ್ಳಾಲದಿಂದ ತಲಪಾಡಿಯವರೆಗೆ ಅನಧಿಕೃತವಾಗಿ ಮರಳನ್ನು ಸಾಗಿಸತ್ತಿರತಕ್ಕ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ, ಅದಕ್ಕೆ ಇಲ್ಲ, ಉದ್ಭವಿಸುವುದಿಲ್ಲ, ಗುತ್ತಿಗೆ ಮಂಜೂರು ಮಾಡಿಲ್ಲ ಎಂದು ಹೇಳಿದೆ. ಆದರೆ ಎಲ್ಲಿಯೋ ತಪ್ಪಿಹೋಗಿದೆ ಎಂದು ನನಗೆ ಕಾಣಿಸುತ್ತಾ ಇದೆ. ಏಕೆಂದರೆ ದಿನನಿತ್ಯ ಲಾರಿಗಳಲ್ಲಿ ಕಳ್ಳಾಟಗಳಲ್ಲಿ ಕೊಂಡು ಹೋಗತಕ್ಕಂತ ವಿಚಾರ ಪ್ರತಿಯೊಬ್ಬರು ಬಂದು ನಮ್ಮ ಹತ್ತಿರ ಆಗಾಗ ಹೇಳುತ್ತಿದ್ದಾರೆ, ದೂರು ಕೊಡುತ್ತಾ ಇದ್ದಾರೆ. ಅಲ್ಲದೆ ಕಳ್ಳಸಾಗಾಣಿಕೆಯಲ್ಲಿ ಮರಳನ್ನು ಸಾಗಿಸುತ್ತಿದ್ದಾಗ ಅದರ ಎದುರು ಧರಣೆ ಮಾಡಿದ್ದು, ಅದನಾನು ನಿಲ್ಲಿಸಿದ್ದು, ಹೀಗೆ ಎಷ್ಟೊ ಕಾರ್ಯಕ್ರಮಗಳು ಇರುತ್ತವೆ. ಆದುದರಿಂದ ಗಣಿ ಇಲಾಖೆಯಲ್ಲಿ ಏನಾದರೂ ಉಪಾಯದಿಂದ ಕೆಲವರು ಈ ರೀತಿ ಕೊಂಡು ಹೋಗುತ್ತಾರೆ ಎಂಬುದನ್ನು ಮಂತ್ರಿಗಳು ಕೂಲಂಕಷವಾಗಿ ತಿಳಿದು ಅದಕ್ಕೆ ಒಂದು ಉಪಾಯವನ್ನು ಮಾಡಿ ಅದನ್ನು

ನಿಲ್ಲಿಸಿಬಿಡುವುದು ಒಳ್ಳೆಯದು. ಇದು ದಿನನಿತ್ಯ ನಡೆಯುತ್ತಿರತಕ್ಕಂತಹ ವಿಚಾರ, ನಮಗೆ ದಿನನಿತ್ಯ ದೂರುಗಳು ಬರುತ್ತಿವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ತಾವು ಕಾಣಿಸಿದಂತಹ ಪ್ರದೇಶಗಳಲ್ಲಿ ಕಡಲ ಕೊರೆತ ತಪ್ಪಿಸುವ ಉದ್ದೇಶದಿಂದ ಅಲ್ಲಿ ಮರಳು ತೆಗೆಯಬಾರದು ಮತ್ತು ಅಲ್ಲಿ ಗಿಡಮರಗಳನ್ನು ನೆಡಬೇಕು ಎಂದು ಸರ್ಕಾರ ನಿರ್ಣಯ ಮಾಡಿ, ಅರಣ್ಯ ಇಲಾಖೆಗೆ ಆ ಜಾಗವನ್ನು ಕೊಟ್ಟಿದ್ದೇವೆ. ಅನಧಿಕೃತವಾಗಿ ಮತ್ತು ಅಕ್ರಮವಾಗಿ ಮರಳನ್ನು ಸಾಗಿಸುವಂತಹ ವಿಚಾರ ತಾವು ಈಗ ಸರ್ಕಾರಕ್ಕೆ ಹೇಳಿದ್ದೀರಿ. ಅದಕ್ಕೆ ಕಠಿಣವಾದಂತಹ ಕಾರ್ಯಕ್ರಮ ತೆಗೆದುಕೊಂಡು ಯಾವುದೇ ರೀತಿಯಲ್ಲಿ ಮರಳನ್ನು ತೆಗೆಯದ ರೀತಿಯಲ್ಲಿ ಮಾಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ನಾನು ಒಂದು ವಿಚಾರ ತಂದಿದ್ದೇನೆ. ನೇರವಾಗಿ ಈ ಪ್ರಶ್ನೆಗೆ ಸಂಬಂಧಪಡದೇ ಇದ್ದರೂ ಸಹ ಕೇಳಬೇಕಾಗಿದೆ. ಹಿಂದೆ ಸ್ಯಾಂಡ್ ತೆಗೆಯುವುದಕ್ಕೆ ಏನು ಪರ್ಮಿಷನ್ ಕೊಡುತ್ತಿದ್ದರು, ಅದು ಟೋಟಲಿ ಸ್ಟಾಪ್ ಆಗಿದೆ. ಕೇಂದ್ರಸರ್ಕಾರದಿಂದ ರಾಜ್ಯಸರ್ಕಾರಕ್ಕೆ ಒಂದು ಪತ್ರ ಬರೆದು, ಇದು ಎನ್‌ವೈರ್ನಮೆಂಟ್ ಕ್ಲಿಯರೆನ್ಸ್ ಆಗದ ವಿನಃ ಯಾವುದೇ ಪರ್ಮಿಟ್ ಕೊಡಬಾರದು ಎನ್ನುವ ಆದೇಶ ಕೊಟ್ಟಿದ್ದಾರೆ. ಆ ಆದೇಶದ ಮೇರೆಗೆ ಇವತ್ತು ಎಲ್ಲಾ ಫಾರೆಸ್ಟ್ ಅಧಿಕಾರಿಗಳು ಅದೇ ಆದೇಶ ತೋರಿಸಿ ಪರ್ಮಿಟ್ ಕೊಡುತ್ತಾ ಇಲ್ಲ. ಹೀಗಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸೀ ಬರ್ಡ್ ಇರಬಹುದು, ಕೈಗಾ ಪ್ರಾಜೆಕ್ಟ್ ಕೆಲಸ ಇರಬಹುದು, ಏಷಿಯನ್ ಬ್ಯಾಂಕ್ ತೆಗೆದುಕೊಂಡೆ ರೋಡ್ ಇರಬಹುದು, ಎಲ್ಲಾ ಕೆಲಸ ನಿಂತುಹೋಗಿದೆ. ಅವರು ಹೇಳಿದ ಹಾಗೆ ಅಲ್ಲಿ ಅನ್ ಅಥರೈಸ್ಡ್ ಅನ್ ಸ್ಯಾಂಡ್ ತೆಗೆಯುತ್ತಿದ್ದಾರೆ, ಗವರ್ನಮೆಂಟ್‌ಗೆ ರೆವೆನ್ಯೂ ಬರುತ್ತಾ ಇಲ್ಲ, ಅಥರೈಸ್ಡ್ ಸ್ಯಾಂಡ್ ತೆಗೆದುಕೊಂಡು ಹೋಗುತ್ತಾ ಇದ್ದಾರೆ. ಒನಿಯನ್ ಜನರಿಗೆ ಸಿಕ್ಕುತ್ತಾ ಇಲ್ಲ. ಹಾಗಾಗಿ ಇದೊಂದು ಜ್ವಲಂತ ಸಮಸ್ಯೆಯಾಗಿದೆ. ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಇಲ್ಲಿ ಸ್ಟಾಪ್ ಆಗಿವೆ. ತಮ್ಮ ಸರ್ಕಾರದ ನಿಲುವು ಏನು ? ಈ ಸಮಸ್ಯೆಯನ್ನು ಯಾವ ಪ್ರಕಾರ ಬಗೆಹರಿಸುತ್ತೀರಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ವಿರೋಧಪಕ್ಷದ ನಾಯಕರು ಒಂದು ವಿಶೇಷವಾದಂತಹ ವಿಚಾರವನ್ನು ನಮ್ಮ ಗಮನಕ್ಕೆ ತಂದು ಅದರಿಂದ ಕಾಮಗಾರಿಗಳಿಗೆ ತೊಂದರೆ ಆಗುತ್ತದೆ ಎಂದು ಹೇಳಿದ್ದಾರೆ. ಇದರ ವಿಚಾರವಾಗಿ ನಾನು ಪ್ರತ್ಯೇಕವಾಗಿ ಅಧಿಕಾರವನ್ನು ಕರೆದು ಯಾವ ರೀತಿಯಲ್ಲಿ ಇದನ್ನು ಸರಿಪಡಿಸಬಹುದು ಎಂಬುದನ್ನು ನೋಡಿ ಕ್ರಮಕೈಗೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೆ, ಮೂರನೇ ತಾರೀಖಿನ ಸಂಜೆವಾಣಿಯಲ್ಲಿ ಒಂದು ಸಂಗತಿ ಬಂದಿದೆ. "ಪಿನಾಕಿನಿ" ಮರಳು ಆಂಧ್ರಕ್ಕೆ ಅಕ್ರಮ ಸಾಗಾಣಿಕೆ ಘರ್ಷಣೆ ಎಂದು ಬಂದಿದೆ. ಅಲ್ಲಿ ಗನ್ ಫೈಟಿಂಗ್ ಕೂಡ ಆಗಿದೆ. ನಗರಗಳು ಸಿಕ್ಕಾಪಟ್ಟೆ ಬೆಳೆಯುತ್ತಿವೆ. ಮರಳು ಬಾರದೇ ಇದ್ದರೆ ನಡೆಯುವುದಿಲ್ಲ, ಮರಳು ಬೇಕಾಗುತ್ತದೆ. ಆದರೆ ಈ ಮರಳನ್ನು ತೆಗೆದುಕೊಂಡು ಹೋಗುತ್ತಿರುವುದರಿಂದ ಸರ್ಕಾರಕ್ಕೂ ಲಾಭ ಇಲ್ಲ, ಜೊತೆಗೆ ರೈತರೂ ಹಾಳಾಗುತ್ತಿದ್ದಾರೆ. ಮರಳು

ತೆಗೆಯುವುದರಿಂದ ನೀರು ಭೂಮಿಯೊಳಗೆ ಪರ್ಕ್ಯುಲೇಟ್ ಆಗುವುದಿಲ್ಲ. ಪಕ್ಕದಲ್ಲಿರುವ ಬಾವಿಗಳಲ್ಲಿ ನೀರು ಬರುವುದಿಲ್ಲ. ಇಂತಹ ಆಪಾಯವನ್ನು ರೈತರು ಅನುಭವಿಸುತ್ತಿದ್ದಾರೆ. ಎರಡನೆಯದಾಗಿ, ಕೆಲವು ಪುಡಾರಿಗಳು ಹುಟ್ಟಿಕೊಂಡು ಒಂದು ಲಾರಿಗೆ 10 ರಿಂದ 20 ರೂಪಾಯಿ ವಸೂಲು ಮಾಡಿಕೊಳ್ಳುತ್ತಿದ್ದಾರೆ. ಲಾರಿಯವರು ದುಡ್ಡು ಕೊಡುವುದಿಲ್ಲ ಎಂದಾಗ ಫೈಟಿಂಗ್ ನಡೆದಿದೆ. ದಯವಿಟ್ಟು ತಾವು ಏನಾದರೂ ಮಾಡಿ ಇದನ್ನು ರೆಗ್ಯುಲರೈಸ್ ಮಾಡಿ, ಈ ಪುಡಾರಿಗಳು ಹಣ ತಿನ್ನುವುದನ್ನು ತಪ್ಪಿಸಿ, ಇಲ್ಲವೇ ನೇರವಾಗಿ ಸರ್ಕಾರಕ್ಕೆ ಹಣ ಬರಲಿ. ಮರಳು ಎತ್ತಲೇ ಬೇಕಾಗುತ್ತದೆ. ಇಲ್ಲವೆಂದರೆ ನಮ್ಮ ನಾಯಕರು ಹೇಳಿದ ಹಾಗೆ ಎಲ್ಲ ಡೆವಲಪ್‌ಮೆಂಟ್ ವರ್ಕ್ ನಿಂತು ಹೋಗುತ್ತದೆ. ಆದ್ದರಿಂದ ದಯಮಾಡಿ ಈ ಪುಡಾರಿಗಳ ಕಾಟ ತಪ್ಪಿಸಿ ನೇರವಾಗಿ ಸರ್ಕಾರಕ್ಕೆ ಹಣ ಬರುವಂತೆ ಏನಾದರೂ ವ್ಯವಸ್ಥೆ ಮಾಡಿಕೊಳ್ಳುತ್ತೀರ. ಅದರ ಬಗ್ಗೆ ಆರ್ಟಿಕಲ್ ಬಂದಿರುವ ಈ ಪೇಪರ್ ತಮಗೆ ಕಳುಹಿಸಿಕೊಡುತ್ತಾ ಇದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ಗಮನಿಸಿ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಬೊಮ್ಮನಹಳ್ಳಿಯಲ್ಲಿರುವ ಆರಣ್ಯ ಭೂಮಿಯ ವಿಸ್ತೀರ್ಣ

616 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ.

ಅ) ನೆಲಮಂಗಲ ತಾಲ್ಲೂಕು ಬೊಮ್ಮನಹಳ್ಳಿ ಅರಣ್ಯಕ್ಕೆ ಸೇರಿದ ಭೂ ವಿಸ್ತೀರ್ಣವೆಷ್ಟು?

ಆ) ನಿರುಪಯುಕ್ತವಾಗಿರುವ ಆ ಜಾಗದಲ್ಲಿ ಒಂದು ಕೈಗಾರಿಕಾ ಕೇಂದ್ರವನ್ನ ಮಾಡಿದರೆ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗ ಅವಕಾಶ ದೊರೆಯಲು ಅನುಕೂಲವಾಗುವುದೆಂಬು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) 161 ಎಕರೆ 9 ಗಂಟೆ. (64.76 ಹೆಕ್ಟೇರ್)

ಆ) ಈ ಪ್ರದೇಶವನ್ನು ರಾಜ್ಯ ಅರಣ್ಯ ಎಂದು 1932ರಲ್ಲಿ ಘೋಷಿಸಿಲಾಗಿದೆ. ಈ ಅರಣ್ಯ ಪ್ರದೇಶದಲ್ಲಿ ನೀಲಗಿರಿ ನೆಡುತೋಪು ಇರುತ್ತದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಅಂಜನಮೂರ್ತಿ : ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ಬೊಮ್ಮನಹಳ್ಳಿ ಆರಣ್ಯ ಪ್ರದೇಶ ನೆಲಮಂಗಲ ಟೌನ್‌ಗೆ ಅತೀ ಸಮೀಪದಲ್ಲಿ ಇದ್ದು ರಾಷ್ಟ್ರೀಯ ಹೆದ್ದಾರಿ 4ರ ಪಕ್ಕದಲ್ಲಿರತಕ್ಕಂತ ಪ್ರದೇಶ. ಇಲ್ಲಿ 161 ಎಕರೆ ಜಮಿನು ಇದೆ. ತಮ್ಮ ಮುಖಾಂತರ ಸಚಿವರನ್ನು ಕೇಳುತ್ತಿದ್ದೇನೆ. ಅಲ್ಲಿ ಬೆಲೆ ಬಾಳತಕ್ಕ ಮರಗಳು ಅಂದರೆ ತೇಗ, ಹೊನ್ನೆ ಮತ್ತಿ ಇನ್ನೂ ಅನೇಕ ಬೆಲೆ ಬಾಳತಕ್ಕ ಮರಗಳು ಇವೆಯೇ? ಎರಡನೆಯದಾಗಿ ಆ ಅರಣ್ಯದಲ್ಲಿ ವನ್ಯ ಮೃಗಗಳು ಅಂದರೆ ಜಿಂಕೆ, ಸಿಂಹ, ಚಿರತ್ ಮುಂತಾದ ಪ್ರಾಣಿಗಳು ಇವೆಯೇ ಎಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ಒಂದು ಅರಣ್ಯವನ್ನು 1932ರಲ್ಲಿ ರಾಜ್ಯ ಅರಣ್ಯ ಎಂದು ಘೋಷಿಸಲಾಗಿದೆ. ಆದಕಾರಣ ಅದನ್ನು ಬೇರೆ ಯಾವುದಕ್ಕಾದರೂ ಉಪಯೋಗ ಮಾಡುವುದಾದರೆ ನಾವು ಸೆಂಟ್ರಲ್ ಗೌರ್ನಮೆಂಟ್‌ನ ಅನುಮತಿ ಕೊಡಲೆಬೇಕಾಗುತ್ತದೆ. ಅದಲ್ಲದೆ ಇದುವರೆಗೆ ಯಾವ ಒಂದು ಇಂಡಸ್ಟ್ರಿಯಲ್ ಎಸ್ಟೇಟ್ ಮಾಡುವುದಕ್ಕೆ ಮನವಿ ಬರಲಿಲ್ಲ. ಮನವಿ ಬಂದಿದ್ದರೆ ಇದನ್ನು ಪರಿಶೀಲನೆ ಮಾಡಬಹುದಾಗಿತ್ತು.

ಶ್ರೀ ಅಂಜನಮೂರ್ತಿ : ಮಾನ್ಯ ಉಪಾಧ್ಯಕ್ಷಿಣಿಯವರೇ, ಉತ್ತರದಲ್ಲಿ ಕೊಟ್ಟಿರುವ ಪ್ರಕಾರ ಆ 161 ಎಕರೆಗಳಲ್ಲಿ ನೀಲಗಿರಿ ಮರಗಳು ಬೆಳೆಯುತ್ತಿವೆ ಎಂದು ಹೇಳುತ್ತಿದ್ದಾರೆ. ತಮಗೆ ಗೊತ್ತಿರುವ ಹಾಗೆ ಆ ನೀಲಗಿರಿ ಮರಗಳನ್ನು ಹಳ್ಳಿಗಾಡಿನಲ್ಲಿ ಜನರು ಕಳವು ಮಾಡತಕ್ಕಂಥಾದ್ದು ನಡೆಯುತ್ತಿದೆ. ಮಾನ್ಯ ಸಚಿವರು ಇಂಡಸ್ಟ್ರಿಯಲ್ ಎಸ್ಟೇಟ್ ಮಾಡುವುದಕ್ಕೆ ಯಾವ ಮನವಿ ಬಂದಿಲ್ಲ ಎಂದು ಹೇಳಿದರು. ನಾನು ಭಾವಿಸುತ್ತೇನೆ. ಅದು ಸತ್ಯಕ್ಕೆ ದೂರವಾದುದು. ಇದರ ಬಗ್ಗೆ ನಾನು ಅನೇಕ ಮನವಿಗಳನ್ನು ಸಹಾ ಸಲ್ಲಿಸಿದ್ದೇನೆ. ಈ ವಿಚಾರದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶವನ್ನು ನಮಗೆ ಬಿಡುಗಡೆ ಮಾಡಿಕೊಡಿ, ಅಲ್ಲಿ ಕೈಗಾರಿಕಾ ಘಟಕಗಳನ್ನು ಕಟ್ಟುತ್ತೇವೆಂದು ಕೇಳಿದ್ದಾರೆ. ಅದು ಸರ್ಕಾರದ ಗಮನದಲ್ಲಿದೆ. ಅಲ್ಲಿ ಕೈಗಾರಿಕಾ ಶೆಡ್ಡುಗಳನ್ನು ನಿರ್ಮಿಸಿದರೆ ನಿರುದ್ಯೋಗ ಸಮಸ್ಯೆ ಬಗೆಸರಿಸಲಿಕ್ಕೆ ಸಾಕಷ್ಟು ಉಪಯೋಗವಾಗುತ್ತದೆ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೋ ಎಂದು ನಾನು ತಮ್ಮ ಮೂಲಕ ಮನವಿ ಮಾಡುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಅಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ ಸ್ಥಾಪಿಸಿದರೆ ನಿರುದ್ಯೋಗ ಕಡಿಮೆ ಆಗುತ್ತದೆ ಎಂದು ಹೇಳುವ ವಿಷಯದಲ್ಲಿ ನಮ್ಮ ಭಿನ್ನಾಭಿಪ್ರಾಯ ಇಲ್ಲ. ಆದರೆ ತಹಶೀಲ್ದಾರ್‌ಗೆ ಮನವಿ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಅದು ಇಷ್ಟರವರೆಗೆ ಅರಣ್ಯ ಇಲಾಖೆಗೆ ಬರಲಿಲ್ಲ, ಅಲ್ಲಿ ಸಿ ಅಂಡ್ ಡಿ ಲ್ಯಾಂಡ್ಸ್ ಹಾಗೂ ರೆವಿನ್ಯೂ ಲ್ಯಾಂಡ್ಸ್ ಇದೆ. ಅದನ್ನು ನೋಡಿ ಅದರಲ್ಲಿ ಸಹಾ ಈ ಒಂದು ಇಂಡಸ್ಟ್ರೀಯಲ್ ಸೆಂಟರ್ ಮಾಡಿಸಬಹುದು.

ಶ್ರೀ ಅಂಜನಮೂರ್ತಿ : ತಾವು ಕೇಂದ್ರ ಸರ್ಕಾರದ ಅನುಮತಿ ಪಡೆದು ಇಂಡಸ್ಟ್ರಿಯಲ್ ಏಸ್ಟೇಟ್ ಮಾಡಿ. ಈ ನಿರುದ್ಯೋಗ ಸಮಸ್ಯೆ ಬಗೆಹರಿಸುವುದಕ್ಕೆ ಸರ್ಕಾರ ಖಚಿತವಾದ ತೀರ್ಮಾನ ಕೈಗೊಳ್ಳುತ್ತದೆಯೇ ಎಂಬ ಪ್ರಶ್ನೆ ಕೇಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಅಧ್ಯಕ್ಷಿಣಿಯವರೆ, ಯಾವ ಮನವಿ ಬಂದಿದೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಕೆ.ಇ.ಬಿ.ಯಲ್ಲಿ ಖಾಲಿ ಇರುವ ಹುದ್ದೆಗಳು

181 - ಶ್ರೀ ಕೆ. ಲಕ್ಕಣ್ಣ (ರಾಜಾಜೀನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕರ್ನಾಟಕ ವಿದ್ಯುತ್ ಮಂಡಳಿಯಲ್ಲಿ ಅಸಿಸ್ಟೆಂಟ್ ಇಂಜಿನಿಯರ್, ಜ್ಯೂನಿಯರ್ ಇಂಜಿನಿಯರ್ ಮೀಟರ್ ರೀಡರ್ ಹುದ್ದೆಗಳಿಗೆ ನೇಮಕಾತಿ ಮಾಡಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ನೇಮಕಾತಿ ಮಾಡಿಕೊಂಡಿದ್ದಲ್ಲಿ ಯಾವ ಆಧಾರದ ಮೇಲೆ ಮಾಡಿಕೊಳ್ಳಲಾಗಿದೆ, ವಿವರಣೆ ನೀಡುವುದು ?

ಇ) ನೇಮಕಾತಿ ಯಾವ ಯಾವ ಗುಂಪಿನ ಆಧಾರದ ಮೇಲೆ ಮಾಡಲಾಗಿದೆ (ಅವರ ಹೆಸರುಗಳ ವಿವರಣೆ ನೀಡುವುದು)

ಈ) ನೇಮಕಾತಿ ಸಮಿತಿ ಸದಸ್ಯರ ಹೆಸರು ಮತ್ತು ಅವರ ಹುದ್ದೆಯ ವಿವರಣೆಯನ್ನು ನೀಡಲಾಗುವುದೇ ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ದಿನಾಂಕ 20-6-89ರ ಮಂಡಳಿಯ ಆದೇಶದ ಸಂಖ್ಯೆ. ಬಿ 16:44739:80-81 ರಲ್ಲಿನ ಆಧಾರದ ಮೇಲೆ ಖಾಲಿ ಇದ್ದ ಸಹಾಯಕ ಇಂಜಿನಿಯರ್ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.

ಇ) ದಿನಾಂಕ 12-12-86 ರ ಸರ್ಕಾರದ ಅದೇಶ ಸಂಖ್ಯೆ: ಡಿಪಿಎಆರ್.28: ಎಸ್‌ಬಿಸಿ.86ರ ಅನುಬಂಧ 1ರ ನೇಮಕಾತಿ ರೋಸ್ಟರ್ ಕ್ರಮಸಂಖ್ಯೆ ಕ್ರಮಸಂಖ್ಯೆ.1 ರಿಂದ 100ರ ಅಡಿಯಲ್ಲಿ ವಿವಿಧ ಪಂಗಡಗಳಿಗೆ ಅಂದರೆ ಸಾಮಾನ್ಯ ಅಭ್ಯರ್ಥಿ ಗ್ರೂಪ್ ಎ.ಬಿ.ಸಿ.ಡಿ.ಇ; ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಇರಿಸಲಾದ ಮಿಸಲಾತಾ ಆಧಾರದ ಮೇಲೆ ನೇಮಕಾತಿ ಮಾಡಲಾಗಿದೆ.

ಆಯ್ಕೆಯಾದವರ ಹೆಸರಿನ ಪಟ್ಟಿಯನ್ನು ಲಗತ್ತಿಸಿದೆ.

ಈ) ಸಹಾಯಕ ಅಭಿಯಂತರರ ನೇಮಕಾತಿ ಸಮಿತಿಯಲ್ಲಿದ್ದ ಸದಸ್ಯರ ಹೆಸರು ಮತ್ತು ಅವರ ಹುದ್ದೆಯ ಪದನಾಮ ಈ ಕೆಳಕಂಡಂತಿದೆ.

1.	ಶ್ರೀ. ಎಸ್. ಗೋವಿಂದಪ್ಪ, ತಾಂತ್ರಿಕ ಸದಸ್ಯರು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ.	ಅಧ್ಯಕ್ಷರು
2.	ಶ್ರೀ ಭರತ್‌ಲಾಲ್ ಮೀನ, ಕಾರ್ಯದರ್ಶಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ.	ಸದಸ್ಯರು
3.	ಶ್ರೀ ಪಿ. ನರಸಿಂಹಮೂರ್ತಿ, ಪ್ರಧಾನ ಅಭಿಯಂತರರು (ವಿ), (ಜನರಲ್), ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ.	ಸದಸ್ಯರು

4. ಶ್ರೀ ಬಿ.ಎಂ. ಶಿವಪ್ರಕಾಶ್, ಜಂಟಿ ನಿರ್ದೇಶಕರು (ಆಡಳಿತ) ಸದಸ್ಯರು

5. ಶ್ರೀ ಬಿ.ಆರ್. ಪರಸುರಾಂ, ಉಪ ನಿರ್ದೇಶಕರು, (ಆಡಳಿತ) ಸದಸ್ಯರು

6. ಶ್ರೀ ಎನ್. ವೆಂಕಟನರಸಿಂಹಯ್ಯ, ಜಂಟಿ ನಿರ್ದೇಶಕರು, (ಆಡಳಿತ) ಸದಸ್ಯರು

7. ಶ್ರೀ ಎ.ಎಲ್. ಉಮೇಶ್, ಉಪನಿರ್ದೇಶಕರು, ಕೇಂದ್ರ ಕಛೇರಿ. ಸದಸ್ಯರು

ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ,
ವಿಶ್ವೇಶ್ವರಯ್ಯ ಮುಖ್ಯ ಗೋಪುರ.

8. ಶ್ರೀ.ಎಂ.ವಿ. ತಿಮ್ಮಯ್ಯ, ಉಪನಿರ್ದೇಶಕರು, (ಆಡಳಿತ-2),
ಸಮಾಜ ಕಲ್ಯಾಣ ಇಲಾಖೆ ನಿರ್ದೇಶಕರ ಕಛೇರಿ. ಸದಸ್ಯರು

ವೃತ್ತ ಮಟ್ಟದ ಹುದ್ದೆಗಳ ನೇಮಕಾತಿ ಸಮಿತಿಯ ಹಾಲಿ ಸದಸ್ಯರುಗಳ
ವಿವರ ಕೆಳಕಂಡಂತಿದೆ.

1. ಶ್ರೀ. ಗಿರಿಯಪ್ಪ, ಅಧೀಕ್ಷಕ ಅಭಿಯಂತರರು (ವಿ) ಅಧ್ಯಕ್ಷರು

2. ಶ್ರೀ ಕೆ. ಜಯತೀರ್ಥಾಚಾರ್, ಉಪ ಲೆಕ್ಕನಿಯಂತ್ರಣಾಧಿಕಾರಿ, ಸದಸ್ಯರು

3. ಶ್ರೀ ಬಿ. ಮಹದೇವಪ್ಪ, ಕಾರ್ಯನಿರ್ವಾಹಕ ಅಭಿಯಂತರರು (ವಿ) ಸದಸ್ಯರು.

GROUP	*Assistant Engineers (El)*	*Jr. Engineers (El)*	*Meter Readers/operators /Overseers*
2	3	4	5
General Merit	44	20	13
Group- 'A'	11	2	3
Group- 'B'	27	7	8
Group- 'C'	35	9	9
Group- 'D'	27	6	5
Group- 'E'	11	5	3
Scheduled Caste	31	12	12
Scheduled Tribes	06	8	5
Ex. M.P.	08	4	—
TOTAL	194	73	58

STATEMENT SHOWING THE LIST OF SELECTED CANDIDATES FOR THE POST OF MEMBER READERS/OVERSEERS/OPERATOR

SL. No.	*NAME OF THE CANDIDATES*	*GROUP*	*CADRE*
1	2	3	4
I BANGALORE CIRCLE			
1.	Peter NIcholas Fernandes	G.M.	Mr/OV/OP
2.	Sheshagiri C	G.M.	-do-
3.	Sanjay Bevur	G.M.	-do-
4.	Mallaiah H.C.	G.M.	-do-
5.	Anil Kumar A.V.	G.M.	-do-
6.	Ahowkath Ali H.	G.M.	-do-
7.	Shankarappa S.	G.M.	-do-
8.	Purushothama H.V.	'B'	-do-
9.	Nagaraja K.C.	ST	-do-
10.	Krishna B.N.	'C'	-do-
11.	Srinivasa K.	SC	-do-
12.	Prakash K.	'B'	-do-
13.	Suresh Chandu	'C'	-do-
14.	Raju	'B'	-do-
15.	Naseerulla	'C'	-do-
16.	Madhusudhan	'D'	-do-
17.	Jagunatha P.V.	'C'	-do-
18.	Kantharaju K.C.	'SC'	-do-
19.	Ramesh	'SC'	-do-
20.	Thima Bovi	SC	-do-
21.	Nirmala M.C.	'B'	-do-
22.	Dhakya Naik	SC	-do-
23.	Revanasiddaiah	'D'	-do-
24.	Viswanatha C.	'E'	-do-
25.	Krishna H.K.	'C'	-do-
26	Jayarama S.M.	'D'	-do-
27.	Shambulinga Swamy M.	'D'	-do-
28.	Raghunatha E.	'ST'	-do-
29.	Siddalingaiah S.	SC	-do-
30	Ramesh	SC	-do-

31.	Bhoga Narasimhaiah	'C'	-do-
32.	Raju K.M.	'A'	-do-
33.	Prasannakumar D.	'A'	-do-
34.	Kalitha B.S.	'C'	-do-(PH)

II HUBLI CIRCLE

1.	Prasanna Kumar T.	G.M.	MR/OV/OP
2.	Raghunatha D.V.	G.M.	-do-
3.	Shivayogi R.	G.M.	-do-
4.	Govindaraju T.	'C'	-do-
5.	Suresh C.	'B'	-do-
6.	Satish Bellary	'D'	-do-
7.	Nanjunda Swamy N.	'E'	-do-
8.	Lokesh G.M.	SC	-do-
9.	Umesh Channabasappa Naik	ST	-do-
10.	Nagaraja Harapanahalli	ST	-do-
11.	Yadav Lakshsman Borkar	SC	-do-

III MUNIRABAD CIRCLE1.Rex Thomas D'SouzaGMMR/OV/OP

2.	Channabasavanna T.	GM	-do-
3.	Sreenivasa K.	GM	-do-
4.	Md. Saleem	'C'	-do-
5.	Chandrashekar	'E'	-do-
6.	Chinnappa KOtrappa Hadapad	'D'	-do-
7.	Thippeswamy S.	SC	-do-
8.	Sannapla Halappa	'B'	-do-
9.	Kumar K.	SC	-do-
10.	Nagaraj K.	'B'	-do-
11.	Malleshappa P.	ST	-do-
12.	Narasimhalu	SC	-do-
13.	Hanumanth Nidoni	'A'	-do-

STATEMENT SHOWING THE LIST OF SELECTED CANDIATES FORTHEPOSTOFJUNIORENGINEERS(ELECL/MECH/TELE/CIVIL)

SL. No.	*NAME OF THE CANDIDATES*	*GROUP*	*CADRE*
1	2	3	4
I BANGALORE CIRCLE :			
	NIL		
II MYSORE CIRCLE :			
1.	Ananda K.A.	GM	J.E.(Elecl)
2.	Adishesha S.	GM	-do-
3.	Bharathi K.S.	GM	-do-
4.	Shivakumara K..	GM	-do-
5.	Neelakanta Veecerabhadrappa P.	GM	-do-
6.	Bhaskara T.	GM	-do-
7.	Muktumsab Halasangi	C	-do-
8.	Timmegowda D.	C	-do-
9.	Mallikarjuna Swamy	D	-do-
10.	Yogesh V.K .	C	-do-
11.	Syed Abdul Raheem	C	-do-
12.	Suresh P.S.	B	-do-
13.	Siddalingappa P.M.	D	-do-
14.	Somashekar B.	E	-do-
15.	Umashankar B.	'B'	-do-
16.	Sridhar Naik H.	SC	-do-
17.	Mahadesh.	'A'	-do-
18.	Kiran Nagappa Aligeri	SC	-do-
19.	Rameesh H.J.	SC	-do-
20.	Shankara A.M.	SC	-do-
21.	Nagaraj B.C.	GM	-do- (Ex.M.P.)
22.	Ramakrishna R.	GM	-do- (do)
23.	Lokesh L.	GM	J.E.(Mech)
24.	Nataraj M.S.	ST	-do-
25.	Srinivasa S.M	ST	J.E. (Tele/Elec-tronics)
26.	Jayanna R.	ST	J.E.(Civil)

III TUMKUR CIRCLE

1.	Gatheesha S.K.	GM	J.E.(Elecl)
2.	Girish Kumar M.	GM	-do-
3.	Jayaram J.M.	GM	-do-
4.	Mallikarjuna G.	GM	-do-
5.	Devaraj	GM	-do-
6.	Gangadhara A.R.	'B'	-do-
7.	Udaya Kumar M.B.	GM	-do-
8.	Jayadeva M.S.	'B'	-do-
9.	Vidyadhara S. Salimath	"	-do-
10.	Adireddy Y.V.	"	-do-
11.	Bhaskara Chari C.M.	"	J.E.(Elecl)
12.	Amruth Rao	SC	-do-
13.	Ramaswamy M.L	SC	-do-
14.	Lakshmanarayana R.S	'E'	-do-
15.	Shivanagendra N.A.	ST	J.E.(Elecl)
16.	Manikyachar	GM	-do-(Ex.MP)
17.	Manjanna V.	SC	J.E. (Civil)
18.	Meti Hanumanthappa	'B'	J.E. (Mech)
19.	Arasaraju B.G.	'A'	-do-
20.	Sujatha P.R.	ST	J.E.(Tele/Elec)

IV SHIMOGA CIRCLE

1.	Basavaraj S.H.	GM	J.E.(Elecl)
2.	Dinesh H.R.	GM	-do-
3.	Ganaraja Bhat S.	GM	-do-
4.	Sunil Kumar R.A.	'E'	-do-
5.	Nagaraja M.L.	SC	-do-
6.	Abdul Munaf E.	'C'	-do-
7.	Krishnamurthy Naik	'B'	-do-
8.	Manjappa M.	ST	-do-
9.	Dhirendra Rangachar Mundagud	GM	-do-(Ex-MP)
10.	Harish Kumar K.	GM	J.E.(Civil)
11.	Mohan N.R.	SC	-do-
12.	Kumari Yeshoda T.A.	ST	-do-

V BELGAUM CIRCLE

1.	Sridhara Rao G.P.	GM	J.E.(Elecl)
2.	Thammanna Murtheppa Navar	'C'	-do-

3.	Shanmukhappa D.M.	'B'	-do-
4.	Sadashiva Kalappa Taradale	'D'	-do-
5.	Appasab Sangappa Makani	'E'	-do-
6.	Shivalingappa	ST	-do-
7.	Kiran V.M.	SC	J.E.(Civil)

VI MUNIRABAD CIRCLE :

1.	Hanumesh	GM	J.E.(Elecl)
2.	Chandrashekar H.B.	GM	-do-
3.	Ashok Halli	'D'	-do-
4.	Srinivasa Kuna	'C'	-do-
5.	Kannan	'E'	-do-
6.	Arjun R. Huchabeeragol	GM	J.E. (Civil)
7.	Chandra Mohan V.	SC	-do-
8.	Venkatesh D.	ST	-do-

KARNATAKA ELECTRICITY BOARD

MAIN LIST

Statement showing the list of selected candidates for the post of Assistant Engineers.

Sl. No.	*Interview No.*	*Name of the Candidate*	*Candidate selected under group*
SRIYUTHS/SMTS			
1.	624	Nagesh P.	GM
2.	635	Bhimanna S. Hebbal	GM
3.	642	Mallikarjuna N.B.	GM
4.	618	Ashok Sangappa Kattimari	GM
5.	150	Mohan Kumar R.S.	GM
6.	1501	Nagabhushana	D
7.	180	Umesha B.S.	GM
8.	192	Sathyanarayana B.N	GM
9.	1014	Manjunath Prasanna H.N.	GM Not reported
10.	168	Jagadisha N. Belagali	GM
11.	195	Ravikantha R. Kamath H.	GM
12.	1399	Dinesh H.K.	C
13.	129	Nataraja E.	GM
14.	155	Prakash H.R.	GM

15.	50	Divakara T.J	GM	
16.	1380	Mohammed Asifulla Khan	C	
17.	1029	Vidhyarani	GM	
18.	143	Sharanamma S. Jangin	GM	
19.	1452	Nagarajaiah B.N.	C	
20.	1503	Shivaprakash H.M.	D	
21.	1679	Lakshmikantha B.S.	E	
22.	1240	Munigopala Raju K.M.	A	
23.	1460	Chandra Mouli K	C	
24.	1705	Narasimsh Landith	E	
25.	203	Subramanyam N.	GM	
26.	1251	Gurappa K. Gotyal	B	
27.	230	Ramesh Gudi	GM	
28.	1260	Siddaram S. Teli	D	
29.	211	Shivapralash T.H.	GM	
30.	1	Dinesh Rao	GM	Not reported
31.	234	Vinayakaraj J.P	GM	
32.	2	Venkatesh Halivi	GM	
33.	1474	Rolme Mohed Sahed	C	
34.	1504	Ravinranath B.N.	D	
35.	4	Rajini. B.	GM	Not reported
36.	1132	Manjunatha S.V.	SC	
37.	1706	Ravikumar S.L.	SC	
38.	1515	Channaveeraiah. M.	D	
39.	1465	Mayi Gowda Y.M.	C	
40.	1523	Siddaram Ratil	D	
41.	1650	Keshavamurthy M	E	
42.	1255	Somaraju L	B	
43.	1736	Shivanna K	C	
44.	1133	Mahadevaswamy Prasanna K.N.	SC	
45.	156	Gangadhara B.S.	GM	
46.	163	Paddmalatha T.L.	GM	
47.	1259	Srinivasaiah G.	B	
48.	1584	Jagadeisha S.	D	
49.	1463	Kishor Kumar S.R.	C	
50.	1448	Swamygowda H.L.	C	
51.	1522	Maheshwarappa D.	D	

52.	1514	Shasidhara S.G.	D
53.	1520	Lokeshwara T.J.	D
54.	1215	Venkateshulu B.	A
55.	1324	Krishna	C
56.	1505	Totad S. Channappa	D
57.	1534	Jagadhisha B.V.	D
58.	1136	Lakhman Chavan	SC
59.	1647	Ameetha C.V	E
60.	1270	Malatesh N. Podaliyavar	B
61.	1458	Malleshappa B.V.	C
62.	1299	Narayana D.	B
63.	93	Mohammed Mujeeb	C
64.	1725	Devrajaswamy B.G.	B
65.	1529	Ramesha B.G.	C
66.	1641	Deepak Babu Kamath	E
67.	1785	Sujatha C.	E
68.	1137	Naarasimha Murthy D	SC
69.	254	Jayananda M.	B
70.	1472	Hanumantharayappa	C
71.	1462	Nagaraja	C
72.	1469	Ravishakar E.	C
73.	1481	Narasimha Murthy L.N.	C
74.	1294	Chandrashekar	B
75.	1219	Kodandapani D	A
76.	1461	Rahamathulla	C
77.	1735	Chetan D.	C
78.	1450	Venkatesha Muthy R	C
79.	1257	Venkatachalam C.V.	B
80.	1654	Rayappa S. Varur	E
81.	317	Mohan K.N.	C
82.	1525	Basavaraja Patil	D
83.	1326	Thippaswamy S.	C
84.	1587	Thrineswara B.P.S.	D
85.	1468	Ramachandra R.	C
86.	1261	Mariyappa H.	B
87.	1328	Krishsna Prasad H.V.	C
88.	1507	Basappa K.Pattana Shetti	D

89.	1252	Harish Kumar V.	B
90.	1277	Ramesh H.N.	B
91.	1508	Nagaraja M.C.	D
92.	1459	Imtaz N.H.	C
93.	1533	Rushabendrappa S.	D
94.	1645	Paniraj Gupta A.P.	E
95.	1511	Parmar Dhierajal N.	D
96.	1138	Umesh B.J.	SC
97.	1153	Chandrasekaraiah G.R.	SC
98.	1279	Dhamodharan N.	B
99.	1509	Shanthamallappa S.T.	D
100.	2180	Mohammed Chouse Peer	A
101.	1139	Nagarajan N.R.M.	SC
102.	1213	Sateesh H.	A
103.	1512	Ramachandramurthy N.	B
104.	1178	Nagarjuna D.	SC
105.	1217	Syed M. Hussian	A
106.	1250	Venkatarathna G.	A
107.	276	Manjunatha Swamy S.H.	B
108.	1256	Nagappa S.H.	B
109.	1203	Gangaraju M.	ST
110.	1141	Krishnappa V.	SC
111.	1255	Prasadkumar	B
112.	1742	Ramachandra K	SC
113.	1264	Lourduswamy	B
114.	1074	Nagaraj B.	B
115.	459	Sharathchandra Pal	D
116.	1158	Muninarayana S.N.	SC
117.	1320	Harish R. Naik	B
118.	1721	Usha Padma R	ST
119.	1134	Jayakumar R.	SC
120.	1155	Nagaraju P.N.	SC
121.	2079	Ramesh L. Bendigeri	SC
122.	1202	Koteppa S.	ST
123.	1174	Hanumantharayappa	SC
124.	1154	Adinarayana C.	SC
125.	1150	Govindappa KV	SC

126.	1171	Chowdappa N.V.	SC
127.	1210	Gopalkrishna V	ST
128.	1156	Shivalal Bhilagi R.	SC
129.	1700	Mahadevan S	SC
130	1201	Padmavathi	SC
131.	620	Keshavamurthy M.S.	GM not reported

ADDITIONAL LIST OF CANDIDATES SELECTED FOR THE POST OF ASSISTANT ENGINEER, ELECTRICAL.

Sl. No.	Interview No.	Name of the candidate	Candidate selected under Group
1	2	3	4
SRIYUTHS : SMTS.			
1	629	Mruthyujaya A.R.	G.M.
2.	632	Mounesh S. Pattar	-do-
3	1752	Nagaraj R	C
4	1016	Sridhar B.H.	G.M.
5	2006	Ramaswamy G.	A
6	56	Veeresh Kumar Hebbal	G.M.
7	6	EBY. Kuriyakose	G.M.
8	19	Sunil Kumar K.	G.M.
9	16	Sarala M.R.	G.M.
10	38	Lokesh K.L.	-do-
11	53	Nagaraj N.	-do-
12	289	Deepak H.S.	-do-
13	210	Ravikumar B.C.	-do-
14	138	Vajaya J	-do-
15	206	Jagadeesh B.S.	-do-
16	131	Annegowda M.S.	-do-
17	59	Shashidhara Shivacharya V.M.	-do-
18	109	Syed M.Ahmed	-do-
19	107	Shahidhar M.R.	-do-
20	322	Chandrashekaraiah S.B.	-do-
21	171	Suvarna Siddalingappa Dhaded	-do-
22	165	Narasimhamurthy N.	-do-
23	222	Swarooprani K.M.	-do-

24	654	Krishnamurthy K.S.	B
25	1358	Lakshminarayana D.V.	C
26	1482	Nagaraj C.	C
27	1590	Chandranath Patil	D
28.	1456	Shivannagowda R. Patil	C
29	1470	Kanthareddy B.	C
30	1466	Rajashekhar B.N.	C
31	1335	Hemaprabhu N.K.	C
32	1646	Dinesh Upadya Y.	E
33	1500	Hanumantha Rao Sanghashethy	D
34	1516	Ravishankar A.M.	D
35	1457	Mahalingappa D.	C
36	1643	Satishchandra N.S.	E
37	1658	Manohar H.Kulkarni	E
38	1455	Asifkhan	C
39.	1480	Narayanagowda N	C
೪೦	1527	Sudha S.N.	D
41	1517	Shailaja P	D
42	1176	Viswanath Naik	Sc
43	1218	Veeranna S.	A
44	1549	Shobha H. Patil	D
45	1216	Vasudev H.H.	A
46	1265	Shanthakumar R.,	B
47	1289	Varoor N.S.	B
48	1233	Ravindra M.	B
49	1726	Tulsi Sridhar Murthy	A
50	1258	Paramesh K.	B
51	1728	Chandrappa H.S.	B
52	305	Balaraman K.	D
53	1266	Gopal R.	D
54	1204	Basappa H.	S.T
55	1162	Pawar Mansingh	S.C
56	1205	Jagannath	S.T.
57.	1169	Shivaprasad D.	S.C.
58	1159	Antu Hanumanth Kamble	S.C
59.	1743	Vijaya Lakshmi M.H.	SC

60.	1149	Mythili K.M.	SC
61.	1151	Gangaraju V.	SC
62.	1170	Sheela G.	SC
63.	1148	Shivakumar S.C.	SC

NOTE : The additional list will be operated only in case of drop-outs, if any, in the main list of 131 candidates.

GROUPWISE ABSTRACT

GROUP		Nos.
Group	'A'	11
-"-	'B'	27
"	'C'	35
"	'D'	27
"	'E'	11
	G.M.	44
	S.C.	31
	S.T.	6
	Ex. M.P	2
TOTAL		194

ಶ್ರೀ ಕೆ. ಲಕ್ಕಣ್ಣ : ಮಾನ್ಯ ಅಧ್ಯಕ್ಷಣೆಯವರೆ, ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಇತ್ತೀಚೆಗೆ 131 ಜನ ಅಸಿಸ್ಟೆಂಟ್ ಇಂಜಿನಿಯರ್, ಜೂನಿಯರ್ ಇಂಜಿನಿಯರ್ ಮತ್ತು ಮೀಟರ್ ರೀಡರ್‌ಗಳನ್ನು ತೆಗೆದುಕೊಂಡಿದ್ದಾರೆ. ಅಲ್ಲಿ 8 ಜನ ಸದಸ್ಯರ ರಾಜ್ಯ ಮಟ್ಟದ ಒಂದು ಆಯ್ಕೆ ಸಮಿತಿ ಇದೆ. ಆ ಸಮಿತಿಯನ್ನು ಕೈ ಬಿಟ್ಟು ಸರ್ಕಲ್ ಲೆವಲ್‌ನ 3 ಜನರ ಸಮಿತಿಯನ್ನು ಮಾಡಿ ಆಯ್ಕೆ ಮಾಡಿದ್ದಾರೆ. ಇದಕ್ಕೆ ಕಾರಣ ಏನು? ಮತ್ತು ಲಿಖಿತ ಪರೀಕ್ಷೆಯನ್ನು ಮಾಡಬೇಕೆಂದು ಕಡ್ಡಾಯ ಮಾಡಿದ್ದಾರೆ. ಮತ್ತು ಇತ್ತೀಚೆಗಿನ ಸರ್ಕಾರದ ಆಜ್ಞೆಯ ಪ್ರಕಾರ ಹಳ್ಳಿಗಳಿಂದ ಬಂದಂತಹ ಅಭ್ಯರ್ಥಿಗಳಿಗೆ 15 ಪ್ರೋತ್ಸಾಹ ನಂಬರನ್ನು ಕೊಡಬೇಕು. ಆದ್ದರಿಂದ ಆಯ್ಕೆ ಮಾಡುವಾಗ ಯಾವ ರೀತಿ ಆಯ್ಕೆ ಮಾಡಿದ್ದಾರೆಂದು ಮಾನ್ಯ ಮುಖ್ಯ ಮಂತ್ರಿಯವರನ್ನು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಣೆಯವರೆ, ದಿನಾಂಕ 3.8.87ರಲ್ಲಿ ಆಗಿನ ವಿದ್ಯುಚ್ಛಕ್ತಿ ಮಂತ್ರಿಗಳ ಸಮ್ಮುಖದಲ್ಲಿ ನಡೆದ ಜಂಟಿ ಸಭೆಯಲ್ಲಿ ಅವಶ್ಯಕತೆಗಳ ಆಧಾರದ ಮೇಲೆ ಕೆಲವು ಹುದ್ದೆಗಳನ್ನು ಸೃಷ್ಟಿಸಿ, ಸರಕಾರದ ಗಮನಕ್ಕೆ ತಂದು, ಅದರ ನೇಮಕಾತಿ ಮಾಡಬೇಕೆಂದು ಆಗಿತ್ತು. ಆಮೇಲೆ 88ರಲ್ಲಿ ಅಲ್ಲಿ ಖಾಲಿ ಇದ್ದಂಥ 198 ಸಹಾಯ ಅಭಿಯಂತರ-(ಮೆಕ್ಯಾನಿಕಲ್, ಎಲೆಕ್ಟ್ರಿಕಲ್) ಹುದ್ದೆಗಳ ಪೈಕಿ 66 ಶೇಕಡ ನೇಮಕಾತಿ ಮಾಡಲು ಅದು ಅನುಮತಿ ಪಡೆದು 89ರಿಂದ ಬೇರೆ ಬೇರೆ ಪ್ರಕಟಣೆಗಳನ್ನು ಹೊರಡಿಸಿ ವಿವಿಧ ಗುಂಪುಗಳಿಗೆ ಸುಮಾರು 132 ಹುದ್ದೆಗಳಿಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, 131

ಅಭ್ಯರ್ಥಿಗಳನ್ನು ಹಾಗೂ ಅಧಿಕ ಪಟ್ಟಿಯಲ್ಲಿ 63 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ದಿನಾಂಕ 27.11.90ರ ಮಂಡಳಿ ಪತ್ರದಲ್ಲಿ ಅನುಮತಿ ಪಡೆದು ಆಯ್ಕೆಯಾಗಿದಂಥ ಎಲ್ಲ ಅಭ್ಯರ್ಥಿಗಳಿಗೂ ಕೂಡ ಮಂಡಳಿಯ ಒಪ್ಪಿಗೆ ಪಡೆದು ಆದೇಶಗಳನ್ನು ಕೊಟ್ಟಿದ್ದಾರೆ. ಆದುದರಿಂದ 86ನೇ ಇಸವಿಯ ಕರ್ನಾಟಕ ಸರಕಾರದ ಆದೇಶದ ಪ್ರಕಾರ ವಿವಿಧ ಗ್ರೂಪ್‌ಗಳಿಗೆ ಏನು ಮೀಸಲಾತಿ ಇದೆ ಅದಕ್ಕೆ ಅನುಸಾರವಾಗಿ ನೇಮಕಾತಿ ಮಾಡಲಾಗಿದೆ. ಆದುದರಿಂದ ಇನ್ನು ಮುಂದೆ ನೇಮಕಾತಿ ಮಾಡುವಾಗ ಗ್ರಾಮಾಂತರ ಪ್ರದೇಶಕ್ಕೆ 15 ಪರ್ಸೆಂಟ್ ಏನು ಕೊಡಬೇಕು ಅದನ್ನು ಗಮನದಲ್ಲಿಟ್ಟೇ ಮಾಡುತ್ತಾರೆ. ಇಲ್ಲಿಯವರೆಗೆ ಆದದ್ದು ಇಷ್ಟೇ. 91 ನೇಮಕಾತಿ ಮಾಡಿದ್ದಾರೆ. ಇದನ್ನು ಮೀಸಲಾತಿ ಆಧಾರದ ಮೇಲೆ ಮಾಡಿದ್ದಾರೆ. ನೇಮಕಾತಿ ಆದೇಶ ಎಲ್ಲರಿಗೂ ಕೂಡ ಹೋಗಿದೆ.

ಶ್ರೀ ಕೆ. ಲಕ್ಕಣ್ಣ : ರಾಜ್ಯಮಟ್ಟದ ಆಯ್ಕೆ ಸಮಿತಿ ಇದ್ದರೂ ಅದನ್ನು ಬಿಟ್ಟು ಸರ್ಕಲ್ ಮಟ್ಟದ ಸಮಿತಿ ಮಾಡಿದ್ದಾರೆ. ಅದನ್ನು ತಾವು ಹೇಳಲಿಲ್ಲ, ಮತ್ತೆ ಲಿಖಿತ ಪರೀಕ್ಷೆ ಕಡ್ಡಾಯವಾಗಿ ಮಾಡಬೇಕೆಂದು ಇದೆ, ಆದರೆ ಮಾಡಿಲ್ಲ, ಈ ಎರಡನ್ನೂ ಕೈಬಿಟ್ಟಿದ್ದಕ್ಕೆ ಕಾರಣ ಏನು ಎನ್ನುವುದನ್ನು ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ರಿಕ್ರೂಟ್ ಮೆಂಟ್ ರೂಲ್ಸ್ ಪ್ರಕಾರ ಇದಕ್ಕೆ ರಿಟನ್ ಎಕ್ಸಾಮಿನೇಷನ್ ಇಲ್ಲ. It does not provide for that. ಈಗ ನೇಮಕಾತಿ ಏನು ಮಾಡಿದ್ದಾರೆ ಅದನ್ನು ನಿಯಮಾವಳಿ ಪ್ರಕಾರ ಮಾಡಿದ್ದಾರೆ. ಇನ್ನು ಮುಂದೆ ಏನು ನೇಮಕಾತಿ ಆಗಬೇಕು, ಸರಕಾರ ಸಾಮಾನ್ಯವಾಗಿ ಏನು ಕೆಲವು ನೇಮಕಾತಿ ನಿಯಮಗಳನ್ನು ಮಾಡಿದೆ, ಅದಕ್ಕೆ ಒಳಪಟ್ಟು ನೇಮಕಾತಿ ಮಾಡುತ್ತೇವೆ.

ಶ್ರೀ ಕೆ. ಲಕ್ಕಣ್ಣ : ರಾಜ್ಯಮಟ್ಟದ ಆಯ್ಕೆ ಸಮಿತಿ ಬಿಟ್ಟು ಸರ್ಕಲ್ ಲೆವೆಲ್ ಸಮಿತಿ ಮಾಡಿದ್ದಾರೆ. ಇದಕ್ಕೆ ಕಾರಣ ಏನು, ಮೂರು ಜನ ಸದಸ್ಯರು. ಸಮಿತಿ ಮಾಡಿ ಆಯ್ಕೆ ಮಾಡಿದ್ದಾರೆ. 8 ಜನರ ರಾಜ್ಯ ಮಟ್ಟದ ಸಮಿತಿ ಇತ್ತು.

ಶ್ರೀ ಎಂ. ವೀರಪ್ಪ ಮೊಯ್ಲಿ : ಈಗಾಗಲೇ ಹೇಳಿದಂತೆ 89 ರಲ್ಲಿ ಬೇರೆ ಬೇರೆ ಪ್ರಕಟಣೆ ಮಾಡಿ 27.11.1990 ರಲ್ಲಿ ನೇಮಕಾತಿ ಮಾಡಿ, ಎಲ್ಲರಿಗೂ ಆದೇಶ ಕೊಟ್ಟಿದ್ದಾರೆ. ನೇಮಕಾತಿ ನಿಯಮಾವಳಿಗಳನ್ನು ಏನಾದರೂ ಉಲ್ಲಂಘನೆ ಮಾಡಿ ಮಾಡಿದ್ದರೆ ಅದರ ಬಗ್ಗೆ ನಾನು ತನಿಖೆ ಮಾಡಿಸುತ್ತೇನೆ.

ತುರುವೇಕೆರೆ ತಾಲ್ಲೂಕಿನಲ್ಲಿ ಟ್ರಾನ್ಸ್‌ಫಾರ್ಮ್‌ಗಳು ಸುಟ್ಟು ಹೋಗಿರುವುದು.

368 - ಶ್ರೀ ಎಸ್. ರುದ್ರಪ್ಪ (ತುರುವೇಕೆರೆ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುರುವೇಕೆರೆ ತಾಲ್ಲೂಕಿನಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮವೇನು?*

ಇ) *ಟ್ರಾನ್ಸ್‌ಫಾರ್ಮರ್ ಸುಟ್ಟು ಹೋಗಿರುವುದರಿಂದ ಆ ತಾಲ್ಲೂಕಿನ ಎಷ್ಟು ಗ್ರಾಮಗಳಲ್ಲಿ ವಿದ್ಯುಚ್ಛಕ್ತಿ ಇರುವುದಿಲ್ಲ?*

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ಸುಟ್ಟು ಹೋಗಿರುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಹೊಸ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಸರಬರಾಜಿಗನುಗುಣವಾಗಿ ಆದ್ಯತೆ ಮೇರೆಗೆ ಬದಲಾಯಿಸಲಾಗುತ್ತಿದೆ.

ಇ) ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋದುದರಿಂದ ಈ ತಾಲ್ಲೂಕಿನ 6 ಗ್ರಾಮಗಳಿಗೆ ವಿದ್ಯುತ್ ಸರಬರಾಜು ಇರುವುದಿಲ್ಲ. ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ಈಗ ಒದಗಿಸಲಾಗುತ್ತಿದ್ದು, ಸದರೀ ಗ್ರಾಮಗಳಿಗೆ ವಿದ್ಯುತ್ ಸರಬರಾಜನ್ನು ಪುನರ್ ವ್ಯವಸ್ಥೆ ಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎಸ್. ರುದ್ರಪ್ಪ : ಸನ್ಮಾನ್ಯ ಅಧ್ಯಕ್ಷರೇ, ತುರುವೇಕೆರೆ ತಾಲ್ಲೂಕಿನಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟುಹೋಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ, ಸುಟ್ಟು ಹೋಗಿರುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಹೊಸ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಸರಬರಾಜಿಗನುಗುಣವಾಗಿ ಆದ್ಯತೆ ಮೇರೆಗೆ ಬದಲಾಯಿಸಲಾಗುತ್ತಿದೆ ಎಂದು ಹೇಳಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಸುಮಾರು ನಾಲ್ಕು ತಿಂಗಳಿಂದ ಸುಮಾರು 33 ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿವೆ. ಕಳೆದ ನಾಲ್ಕು ತಿಂಗಳಿಂದ ಕೆಲವು ಗ್ರಾಮಗಳಿಗೆ ಸರಿಯಾಗಿ ವಿದ್ಯುತ್ ಸರಬರಾಜು ಇಲ್ಲ, ಸೀಮೆ ಎಣ್ಣೆ ಅಭಾವ ಬೇರೆ ಇದೆ. ಇದರಿಂದ ಜನರು ಕತ್ತಲಲ್ಲಿ ವಾಸ ಮಾಡುವ ಪರಿಸ್ಥಿತಿಯಲ್ಲಿದ್ದಾರೆ. ಎಷ್ಟು ದಿನಗಳಲ್ಲಿ ಈ 33ಟ್ರಾನ್ಸ್‌ಫಾರ್ಮರ್‌ಗಳನ್ನು ಒದಗಿಸಿಕೊಡುತ್ತೀರಿ. ರೈತರು ತಮ್ಮ ತೋಟಗಳಿಗೆ ಐ.ಪಿ. ಸೆಟ್ ಮೂಲಕ ನೀರು ಹಾಯಿಸಲು ಅವಕಾಶ ಮಾಡಿಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಈ ಎಲ್ಲಾ ಕಾರ್ಯಕ್ರಮಗಳನ್ನು ಈಗಾಗಲೇ ಕೈಗೆತ್ತಿಕೊಂಡಿದ್ದೇವೆ. ಇನ್ನೊಂದು 6 ಗ್ರಾಮಗಳಿಗೆ ಇದು ಬಾಕಿ ಉಳಿದಿದೆ. ಇದನ್ನು ಜೋಡಣೆ ಮಾಡತಕ್ಕ ಕೆಲಸ ಕೂಡಾ ಸಾಗಿದೆ. ಇನ್ನು ಒಂದು ವಾರದೊಳಗೆ ವಿದ್ಯುಚ್ಛಕ್ತಿ ಏರ್ಪಾಡು ಮಾಡುವುದಕ್ಕೆ ನಾವು ಎಲ್ಲಾ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷಣೆಯವರು : ಶ್ರೀಯುತ ರಾಣೆಯವರು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಇದು ಪ್ರಮುಖವಾದ ವಿಚಾರ, ಈ ವಿಷಯವನ್ನು ಅರ್ಧಗಂಟೆ ಚರ್ಚೆಗೆ ಇಟ್ಟರೆ ಉತ್ತಮವಾಗುತ್ತದೆ.

(ಗೊಂದಲ)

12.05 P.M.

ಉಪಾಧ್ಯಕ್ಷಣೆಯವರು : ಈಗ ಪ್ರಶ್ನೆ ಕೇಳಿರುವುದು ತುರುವೇಕೆರೆ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ. ಅವರು ಉತ್ತರ ಕೊಡುತ್ತಿದ್ದಾರೆ ಕೇಳಿ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ : ಇದು ತುರುವೇಕೆರೆ ತಾಲ್ಲೂಕಿಗೆ ಸಂಬಂಧಪಟ್ಟಿದ್ದು.

(ಗೊಂದಲ)

ಶ್ರೀ ಬಸವರಾಜರಾಯರೆಡ್ಡಿ : ಇದು ಇಡೀ ರಾಜ್ಯಕ್ಕೆ ಸಂಬಂಧಿಸಿದ ಸಮಸ್ಯೆ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ : ದಯಮಾಡಿ ನಾನು ಹೇಳುತ್ತೇನೆ. ಆಮೇಲೆ ಏನಾದರೂ ಉಳಿದಿದ್ದರೆ ಪ್ರಶ್ನೆ ಕೇಳಿ. ಇದು ತುರುವೇಕೆರೆಗೆ ಸಂಬಂಧಪಟ್ಟ ಪ್ರಶ್ನೆ. ಈಗ ತಾವು ಹೇಳುವುದು ಸರಿ. ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ವಿದ್ಯುಚ್ಛಕ್ತಿ ವಿಚಾರದಲ್ಲಿ ಚರ್ಚೆ ಮಾಡಬೇಕೆಂದರೆ ಅದಕ್ಕೆ ನಮ್ಮ ಅಭ್ಯಂತರ ಇಲ್ಲ, 68ರ ನಿಯಮದ ಪ್ರಕಾರ ದಯಮಾಡಿ ಸೂಚನೆ ಕೊಡಿ. ಚರ್ಚೆ ಮಾಡೋಣ.

ಉಪಾಧ್ಯಕ್ಷಣಿಯವರು : ತುರುವೇಕೆರೆ ತಾಲ್ಲೂಕು ವಿಷಯ ಅವರು ಮುಗಿಸಲಿ.

(ಗೊಂದಲ)

ಶ್ರೀ ಎಸ್. ರುದ್ರಪ್ಪ : ತುರುವೇಕೆರೆ ತಾಲ್ಲೂಕಿನಲ್ಲಿ 63ಕೆ.ವಿ. ಟ್ರಾನ್ಸ್‌ಫಾರ್ಮರ್ಸ್ 18 ಸುಟ್ಟು ಹೋಗಿವೆ. 100 ಕೆ.ವಿ. ಟ್ರಾನ್ಸಫಾರ್ಮರ್ಸ್ 5 ಸುಟ್ಟು ಹೋಗಿವೆ. 25 ಕೆ.ವಿ. ಟ್ರಾನ್ಸ್‌ಫಾರ್ಮರ್ಸ್ 10ಸುಟ್ಟು ಹೋಗಿವೆ. ಹೀಗೆ ಒಟ್ಟು 35ಟ್ರಾನ್ಸ್‌ಫಾರ್ಮರ್ಸ್ ಸುಟ್ಟು ಹೋಗಿವೆ. ಹಾಲಿ 6 ಗ್ರಾಮಗಳಿಗೆ ಮಾತ್ರ ವಿದ್ಯುಚ್ಛಕ್ತಿ ಇಲ್ಲ, ಎಂದು ಮಾಹಿತಿ ಕೊಟ್ಟಿದ್ದಾರೆ. ಅಧಿಕಾರಿಗಳು ತಮಗೆ ಸುಳ್ಳು ಮಾಹಿತಿ ಕೊಟ್ಟಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ 35ಟ್ರಾನ್ಸ್‌ಫಾರ್ಮರ್ಸ್‌ನ್ನು ಯಾವಾಗ ಕೊಡುತ್ತೀರಿ ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಈ ಮಾಹಿತಿಯಲ್ಲಿ ತಪ್ಪೇನಾದರೂ ಇದ್ದರೆ ವಿಚಾರಿಸಿ ಸರಿ ಮಾಡೋಣ. ಈ 6 ಗ್ರಾಮಗಳಿಗೆ ಅದು ಏನಾಗಿದೆ ಅಂದರೆ ಬರೀ ಲೈಟಿಂಗ್ ಮಾತ್ರ ಸಪ್ಲೈ ಮಾಡುತ್ತಿದ್ದರು, ಟ್ರಾನ್ಸ್‌ಫಾರ್ಮರ್ಸ್ ಸರಿ ಇಲ್ಲದೆ ಇದ್ದ ಕಾರಣ. ಅದನ್ನು ಸರಿ ಮಾಡಿದರೆ ಸಾಧಾರಣ ಸಮರ್ಪಕವಾಗುತ್ತದೆ ಎಂದು ನಮಗೆ ಮಾಹಿತಿ ಇದೆ. ತಾವೇನು ಕೆಲವು ವರ್ತಮಾನ ಕೊಟ್ಟಿದ್ದೀರಿ,ಅದರ ಬಗ್ಗೆ ನಾನು ಪುನಃ ವಿಚಾರಿಸಿ ಯಾವುದೇ ರೀತಿಯಲ್ಲಿ ಆ ಗ್ರಾಮಗಳಿಗೆ ತೊಂದರೆಯಾಗದ ರೀತಿಯಲ್ಲಿ ಕ್ರಮ ಕೈಗೊಳ್ಳುತ್ತೇವೆ.

ಉಪಾಧ್ಯಕ್ಷಣಿಯವರು : ಮಾಧುಸ್ವಾಮಿಯವರೇ ತಾವು ಮಾತನಾಡಿ...

ಶ್ರೀ ಎಂ. ನಾರಾಯಣಸ್ವಾಮಿ : ಇದು ಟ್ರಾನ್ಸ್‌ಫಾರ್ಮರ್ಸ್ ಸುಟ್ಟು ಹೋಗಿರುವ ಸಮಸ್ಯೆ, ಇಡೀ ರಾಜ್ಯದಲ್ಲಿ ಆಗಿದೆ.....

(ಗೊಂದಲ)

ಉಪಾಧ್ಯಕ್ಷಣಿಯವರು : ಬೇರೆ ರೂಪದಲ್ಲಿ ಕಳುಹಿಸಿ ಎಂದು ಹೇಳಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ತುರುವೇಕೆರೆ ತಾಲ್ಲೂಕು ತಿಪಟೂರು ತಾಲ್ಲೂಕು,ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಲ್ಲಿ ಕನಿಷ್ಟ ಪಕ್ಷ ಒಂದೊಂದು ತಾಲ್ಲೂಕಿನಲ್ಲಿ 63 ಕೆ.ವಿ. ಟ್ರಾನ್ಸ್‌ಫಾರ್ಮರ್ಸ್ 11 ಟ್ರಾನ್ಸ್‌ಫಾರ್ಮರ್ಸ್ ಫೇಲ್ ಆಗಿವೆ. ರೈತರು ತುರುವೇಕೆರೆ ತಾಲ್ಲೂಕಿನಲ್ಲಿ ದುಡ್ಡು ಕೊಟ್ಟು ರಿಪೇರಿ ಮಾಡಿಸಿಕೊಳ್ಳುತ್ತಿದ್ದಾರೆ. ಎಂದು. ನಿಮ್ಮ ಇಲಾಖೆಯವರು ಇದನ್ನು ನೀವೇ ಹೇಳಿ ಕಳುಹಿಸಿಕೊಡುತ್ತಿದ್ದಾರೆ.

ಇದಕ್ಕೆ 304 ಸಾವಿರ ರೂಪಾಯಿಗಳನ್ನು ರೈತರು ಕೊಟ್ಟು ತುರುವೇಕೆರೆ ತಾಲ್ಲೂಕಿನಲ್ಲಿ ರಿಪೇರಿ ಮಾಡಿಸಿಕೊಳ್ಳುತ್ತಿದ್ದಾರೆ. ಇನ್ನು ಫೇಲ್ ಆಗಿರತಕ್ಕಂಥ ಟ್ರಾನ್ಸ್‌ಫಾರ್ಮರ್ಸ್‌ನ್ನು ರೆಡಿ ಮಾಡಿ ಕೊಡಲಿಕ್ಕೆ ನಿಮ್ಮ ಕೆಇಬಿ ಯವರು ಸಬೂಬು ಹೇಳುತ್ತಿದ್ದಾರೆ. ಅಲ್ಲಿ ತೆಂಗಿನ ಮರ, ಅಡಿಕೆ ಮರ ಇವೆ ಸ್ವಾಮಿ. ಇದಕ್ಕೆ ಅವರು 2-3 ತಿಂಗಳು ಸೀನಿಯಾರಿಟಿ ಫಿಕ್ಸ್ ಮಾಡುತ್ತಿದ್ದಾರೆ, ಫೇಲ್ ಆಗಿರತಕ್ಕಂಥ ಟ್ರಾನ್ಸ್‌ಫಾರ್ಮರ್ಸ್‌ನ್ನು ರೀಪ್ಲೇಸ್ ಕೊಡಲಿಕ್ಕೆ. ಕೊನೆಯ ಪಕ್ಷ ಫೇಲ್ ಆಗಿರತಕ್ಕಂಥ ಟ್ರಾನ್ಸ್‌ಫಾರ್ಮರ್ಸ್ ರಿಪ್ಲೇಸ್ ಮಾಡುವುದಕ್ಕೆ ಸಬ್‌ಡಿವಿಜನ್ ನಲ್ಲಿ ಏನಾದರೂ ಆಕ್ಷನ್ ತೆಗೆದುಕೊಳ್ಳುತ್ತೀರಾ ?

ಉಪಾಧ್ಯಕ್ಷಣಿಯವರು : ಇದು ತುರುವೇಕೆರೆ ತಾಲ್ಲೂಕಿನ ಪ್ರಶ್ನೆ.

(ಗೊಂದಲ)

ಉಪಾಧ್ಯಕ್ಷರು : 1007ನೇ ಪ್ರಶ್ನೆಯನ್ನು ಮುಂದೂಡಲಾಗಿದೆ.

ಶಾಲಾ ಕಾಲೇಜುಗಳ ಪ್ರಾರಂಭ.

81- ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಾ):ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *1992-93ನೇ ಇಸವಿಯಲ್ಲಿ ಸರ್ಕಾರ ಪ್ರಾರಂಭ ಮಾಡಿರುವ ಪದವಿ ಪೂರ್ವ ಮಹಾ ವಿದ್ಯಾಲಯಗಳು ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಸ್ಥಳಗಳ ಪಟ್ಟಿಯನ್ನು ನೀಡುವುದು)*

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು):

ಅ) 1992-93ನೇ ಸಾಲಿಗೆ 146 ಸರ್ಕಾರಿ ಪ್ರೌಢಶಾಲೆ ಹಾಗೂ 96 ಸಂಯುಕ್ತ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಬಸವರಾಜರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, 1992-93ನೇ ಸಾಲಿನಲ್ಲಿ ನಮ್ಮ ರಾಜ್ಯದಲ್ಲಿ ಹೊಸ ಸರ್ಕಾರಿ ಪ್ರೌಢಶಾಲೆಗಳು 146 ಸರ್ಕಾರಿ ಸಂಯುಕ್ತ ಪದವೀಪೂರ್ವ ಮಹಾ ವಿದ್ಯಾಲಯಗಳು 96 ಇವುಗಳ ಪ್ರಾರಂಭ ಕೂಡಲೇ ಮಾಡುವುದಾಗಿ ಉತ್ತರದಲ್ಲಿ ತಿಳಿಸಿದ್ದೀರಿ. ನಾನು ಈ ಸದನಕ್ಕೆ ನೆನಪು ಮಾಡಿ ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಾದ ವೀರಪ್ಪಮೊಯ್ಲಿಯವರು ಶಿಕ್ಷಣ ಮಂತ್ರಿಗಳಾಗಿದ್ದಾಗ ಅತ್ಯಂತ ಆಸಕ್ತಿ ವಹಿಸಿ ಈ ಒಂದು ಪ್ರೌಢ ಶಾಲೆ ಮತ್ತು ಸರ್ಕಾರಿ ಕಿರಿಯ ಮಹಾವಿದ್ಯಾಲಯ ಪ್ರಾರಂಭ ಮಾಡುವ ಬಗ್ಗೆ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಕಳೆದ ಸಲ ಹೇಳಿಕೆ ಕೊಟ್ಟಿದ್ದಾರೆ. ಇದಾದ ಮೇಲೆ ಕೆಲವು ಕಾರಣಗಳಿಂದ ಅವರು ಶಿಕ್ಷಣ ಮಂತ್ರಿಗಳಿಂದ ಮುಕ್ತಿ ಹೊಂದಿದರು. ಅದಾದ ಮೇಲೆ ಬಂಗಾರಪ್ಪನವರ ಸಚಿವ ಸಂಪುಟ ಕೂಡ ಹೊಸದಾಗಿ ಸರ್ಕಾರಿ ಪ್ರೌಢಶಾಲೆ ಮತ್ತೆ ಕಿರಿಯ ಸಂಯುಕ್ತ ಮಹಾವಿದ್ಯಾಲಯ ಪ್ರಾರಂಭ ಮಾಡುತ್ತೇವೆ. ಇವತ್ತು ಸಂಪುಟ ನಿರ್ಧಾರ ತೆಗೆದುಕೊಂಡಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳುಕೂಡ ಸಂಪುಟದ ತೀರ್ಮಾನವನ್ನು ಪತ್ರಿಕೆಗಳಲ್ಲಿ ಹೇಳಿದರು. ಇದಾದ ಮೇಲೆ ಆವತ್ತು ಶಿಕ್ಷಣ ಮಂತ್ರಿಗಳಾಗಿದ್ದವರು ಇವತ್ತು ಮುಖ್ಯಮಂತ್ರಿಗಳಾಗಿದ್ದಾರೆ. ಅವರು ಮುಖ್ಯ ಮಂತ್ರಿಗಳಾದ ಮೇಲೆ ಪ್ರಥಮ ಸಂಪುಟದಲ್ಲಿ ಅವರು ತಮ್ಮ ಹಿಂದಿನ ಶಿಕ್ಷಣ ಖಾತೆಯ ಮೇಲೆ ಅತ್ಯಂತ ಪ್ರೇಮ ಇಟ್ಟಿರುವುದರಿಂದ ಇಲ್ಲಾ

ಹಿಂದೆ ನಾನು ಏನೊಂದು ತೀರ್ಮಾನ ತೆಗೆದುಕೊಂಡಿದ್ದೆ, ಅದೇ ಪ್ರಕಾರ ಎಲ್ಲಾ ಸರ್ಕಾರಿ ಪ್ರೌಢಶಾಲೆ ಮತ್ತು ಕಿರಿಯ ಮಹಾವಿದ್ಯಾಲಯಗಳನ್ನು ಪ್ರಾರಂಭ ಮಾಡಲಿಕ್ಕೆ ಸಂಪುಟ ಒಪ್ಪಿಗೆ ಕೊಟ್ಟಿದೆ ಎಂದು ಹೇಳಿದರು.

ಆದರೆ ಈವರೆಗೂ ಸರ್ಕಾರಿ ಆಜ್ಞೆ ಆಗಿಲ್ಲ. ಈಗ ಈ ವರ್ಷ ಮುಗಿಯುತ್ತಾ ಬಂತು. ಯಾವಾಗ ಈ ಶಾಲಾ ಕಾಲೇಜುಗಳನ್ನು ಪ್ರಾರಂಭ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕು. ಏಕೆಂದರೆ, ಇದರಿಂದ ಬಹಳಷ್ಟು ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಾ ಇದೆ. ಪ್ರತಿ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿ ಆಗುತ್ತಾ ಇದೆ. ಹಳ್ಳಿಗಾಡಿನ ಪ್ರದೇಶದಲ್ಲಿ ಕನಿಷ್ಟ ಪಕ್ಷ ನಾವು ಕನ್ನಡ ಮಾಧ್ಯಮ ಪ್ರೌಢಶಾಲೆ ಕನ್ನಡ ಮಾಧ್ಯಮ ಕಿರಿಯ ಮಹಾವಿದ್ಯಾಲಯ ಕೊಡದಿದ್ದರೆ ನಮ್ಮ ಸಂವಿಧಾನಕ್ಕೆ ಅಪಚಾರ ಮಾಡಿದಂತೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಣಿಯವರೆ, 25-11-92ರಂದು ನಡೆದಂತಹ ಸಚಿವ ಸಂಪುಟ ಸಭೆಯಲ್ಲಿ ಏನು ನಾನು ಶಿಕ್ಷಣ ಮಂತ್ರಿ ಆಗಿದ್ದಾಗ ಮಂಜೂರು ಆಗಿತ್ತು, 146 ಸರ್ಕಾರಿ ಪ್ರೌಢಶಾಲೆಗಳು, 96 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳು, ಅದನ್ನು ಆ ಸಂಪುಟ ಮಂಜೂರು ಮಾಡಿದೆ. ಆದ್ದರಿಂದ ಆ ರೀತಿ ಮಂಜೂರು ಮಾಡಿದ್ದಕ್ಕೆ ಆದೇಶ ಬರಲಿಲ್ಲ ಎಂದು ಹೇಳಿದರು. ಇವತ್ತು ಅಥವಾ ನಾಳೆ ಆದೇಶ ಹೊರಡುತ್ತಿದೆ. ಅದು ಫೈನಾನ್ಸ್‌ಗೆ ಹೋಗಿದೆ.

ಶ್ರೀ ಎಂ.ವಿ. ದೇಶಪಾಂಡೆ : ಹಿಂದೆ ತಾವು ಫೈನಾನ್ಸ್‌ಗೆ ಕಳುಹಿಸಿದ್ದು ಗೊತ್ತು. ಈಗ ಅದು ಏನಾಗಿದೆ ಎಂದು ತಿಳಿಸಬೇಕು.

SRI. M.VEERAPPA MOILY : It is already approved by the Cabinet. To-day or tomorrow orders will be issued.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಈಗ ಪ್ರೌಢ ಶಾಲೆ ಪದವಿ ಪೂರ್ವ ಕಾಲೇಜು ಬಗ್ಗೆ, ಡಿಗ್ರಿ ಕಾಲೇಜು ಬಗ್ಗೆ, ಮಂಜೂರು ಕೊಟ್ಟಿದ್ದೀರಿ. ಅವು ಸಹ ಸ್ಟೇ ಆಯಿತು. ಅದರ ಬಗ್ಗೆ ತಾವು ಏನು ಮಾಡಿದಿರಿ ಎಂದು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ : ಈಗ ಅದರ ವಿವರ ಎಂದರೆ, ನಾನು ಯಾವಾಗ ಶಿಕ್ಷಣ ಸಚಿವ ಆಗಿದ್ದಾಗ ಫಸ್ಟ್ ಗ್ರೇಡ್ ಕಾಲೇಜು ಕೂಡ ಮಂಜೂರು ಆಗಿದೆ. ಅದು ಕೂಡ ಕ್ಯಾಬಿನೆಟ್ ಕ್ಲಿಯರ್ ಮಾಡಿದೆ. Degree Collage also Cabinet has cleared..

ಶ್ರೀ ಬಸವರಾಜರಾಯರೆಡ್ಡಿ : ನೀವು ಶಿಕ್ಷಣ ಪ್ರೇಮಿಗಳು. ನೀವು ಮಾಡಿರುವ ಕೆಲಸಕ್ಕೆ ನಮಗೆ ಅಭಿಮಾನ ಇದೆ. ಆದೆರ ಇವತ್ತು, ನಾಳೆ ಅಂದರೆ ಆಗುವುದಿಲ್ಲ. ನಿಗಧಿತವಾದಂತಹ ದಿನಗಳು ಏನು ? ಏಕೆಂದರೆ ಇದು ಮೂರು ಸಾರಿ ಆಯಿತು. ನೀವು ನಾಳೆ ಹೊರಡಿಸುತ್ತೇವೆ, ನಾಳೆ ಹೊರಡಿಸುತ್ತೇವೆ ಎಂದರೆ ಇದು ನಾಳೆ ಮಾತಿನ ಕತೆ ಆಗಬಾರದು.

ಶ್ರೀ ಎಂ. ವೀರಪ್ಪ ಮೊಯಿಲಿ : ಇದರಲ್ಲಿ ಗೊಂದಲ ಉಳಿದೇ ಇಲ್ಲ. ದಿನಾಂಕ 25-11-92ರಂದು ಸಂಪುಟ ಅದಕ್ಕೆ ಮಂಜೂರಾತಿ ಕೊಟ್ಟಿದೆ. it has been cleared by the Cabinet..

ಅದಕ್ಕೆ ಹೇಳಿದೆ. ಏಕೆಂದರೆ I will have to verify whether it has been issued..ಇವತ್ತು ಆದರೆ ಇವತ್ತೇ ಇಶ್ಯೂ ಮಾಡುತ್ತಾರೆ, ಇಲ್ಲ ಅಂದರೆ ನಾಳೆ ಇಶ್ಯೂ ಮಾಡುತ್ತಾರೆ.

ಉಪಾಧ್ಯಕ್ಷಣಿಯವರು : ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಮುಂದೂಡಲಾದ ಪ್ರಶ್ನೆಗಳು. ಶ್ರೀಯುತ ಯಡಿಯೂರಪ್ಪನವರೆ ತಮ್ಮ ತಡೆಹಿಡಿಯಲಾದ ಪ್ರಶ್ನೆಯನ್ನು ಕೇಳಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನು ತಮ್ಮನ್ನು ಕೇಳುತ್ತೇನೆ. ಇವತ್ತು ಕೊಶ್ಚನ್ ಅವರ್‌ನಲ್ಲಿ ಪೂರ್ಣ ಕೊಶ್ಚನ್‌ಗಳನ್ನು ಮುಗಿಸಬೇಕು ಎನ್ನುವ ದೃಷ್ಟಿಯಿಂದ ನಾವು ಯಾರೂ ಉಪಪ್ರಶ್ನೆಗಳನ್ನು ಕೇಳದೆ ಕುಳಿತುಕೊಂಡಿದ್ದೆವು. ಯಾರೋ ಕೆಲವರು ಆ ಪ್ರಶ್ನೆಗಳನ್ನು ಎತ್ತಿ ಕೇಳಿದಾಗ ನೀವು ಅವಕಾಶ ಮಾಡಿಕೊಟ್ಟಿದ್ದೀರಿ. ನಾವು ಅಪರಾಧ ಸ್ಥಾನದಲ್ಲಿ ನಿಲ್ಲುವುದಕ್ಕೆ ಆಗುವುದಿಲ್ಲ.

ಉಪಾಧ್ಯಕ್ಷಣಿಯವರು : ಈಗ ಹೆಲ್ಡ್ಓವರ್ ಕೊಶ್ಚನ್. ಶ್ರೀಯುತ ಯಡಿಯೂರಪ್ಪನವರೇ, You should co-operate with the Chair otherwise, I cannot conduct the business in this House.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಜಪಾನಿನ ಒಂದು ಕೈಗಾರಿಕೆಯಿಂದ..

ಉಪಾಧ್ಯಕ್ಷಣಿಯವರು : ಯಡಿಯೂರಪ್ಪನವರೇ, ಈಗ ಹೆಲ್ಡ್ಓವರ್ ಕೊಶ್ಚನ್ ಕೇಳಿ, ತಾವು ಕೇಳುತ್ತೀರಾ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಜಪಾನಿನವರು ಇಲ್ಲಿ ಸ್ಥಾಪನೆ ಮಾಡಿರತಕ್ಕಂತಹ ಕೈಗಾರಿಕೆಯಿಂದ ಕರ್ನಾಟಕದ ಜನತೆಗೆ ಆಗತಕ್ಕಂತಹ ತೊಂದರೆ ಬಗ್ಗೆ ಇರುವ ಪ್ರಮುಖವಾಗದಂತಹ ಪ್ರಶ್ನೆ.

ಉಪಾಧ್ಯಕ್ಷಣಿಯವರು : ಈಗ ನಿಮ್ಮ ವ್ಯಾಖ್ಯಾನ ಬೇಕಾಗಿಲ್ಲ, ಈಗ ಅವರು ಮುಂದೂಡಲಾದ ಪ್ರಶ್ನೆಯನ್ನು ಕೇಳಲಿ. ಈ ರೀತಿ ಆದರೆ ಆಗುವುದಿಲ್ಲ. I think ಎಲ್ಲ ಕೊಶ್ಚನ್ಸ್ ಲ್ಯಾಪ್ಸ್ ಆಗುತ್ತೆ. ನಾನು ಮೊದಲಿನಿಂದ ಎಲ್ಲರಿಗೂ ಹೇಳುತ್ತಾ ಇದ್ದೇನೆ. ಒಂದು ಪ್ರಶ್ನೆಗೆ ಇಬ್ಬರು, ಮೂರು ಜನ ಕೇಳಿದರೆ ಸಾಕು ಎಂದು. ಹೀಗೆ ಹತ್ತು ಹತ್ತು ಜನ ಕೇಳಿದಾಗ ನಾನು ಏನು ಮಾಡಬೇಕಾಗುತ್ತದೆ. ಈಗ ಮುಂದೂಡಲಾದ ಪ್ರಶ್ನೆಗಳು. ಶ್ರೀಯುತ ಯಡಿಯೂರಪ್ಪನವರೇ, ತಾವು ಕೇಳಿ. ತಾವು ಪ್ರಶ್ನೆಯನ್ನು ಕೇಳುವುದಿಲ್ಲವೆಂದರೆ ನಾನು ಮುಂದಿನವರನ್ನು ಕರೆಯುತ್ತೇನೆ. ಈಗ ತಾವು ಪ್ರಶ್ನೆ ಸಂಖ್ಯೆ 22 ನ್ನು ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, 139ನೇ ಪ್ರಶ್ನೆ ಕೇಳುತ್ತೇನೆ. ಈಗ ಜಪಾನಿನ ಒಂದು ಕೈಗಾರಿಕೆಯಿಂದ..

ಉಪಾಧ್ಯಕ್ಷಣೆಯವರು :ಇಲ್ಲ, ಈಗ ಮುಂದೂಡಲಾದ ಪ್ರಶ್ನೆಗಳನ್ನು ತೆಗೆದುಕೊಂಡಿದ್ದೇವೆ. ದಯವಿಟ್ಟು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 22 ಅನ್ನು ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ನನ್ನ ಕಣ್ಣ ಮುಂದೆ ಇರುವಂತಹ ಪ್ರಶ್ನೆ ಕೇಳುತ್ತಿದ್ದೇನೆ. ಅಧ್ಯಕ್ಷಣೆಯವರೆ, ನಾನು ಯಾವುದು ಕೇಳಬೇಕು.

ಉಪಾಧ್ಯಕ್ಷಣೆಯವರು : 22ನೇ ಮುಂದೂಡಲಾದ ಪ್ರಶ್ನೆಯನ್ನು ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ :ಆಯಿತು, ತಮ್ಮ ಆದೇಶದಂತೆ ನಾನು ಅದನ್ನೇ ಕೇಳುತ್ತೇನೆ. ಈಗ ಮುಂದುವರೆದಂತಹ ಪ್ರಶ್ನೆ ಕೇಳುತ್ತೇನೆ. ತಾವು ಹೇಗೆ ಹೇಳುತ್ತೀರಿ, ಅಪ್ಪಣೆ ಕೊಡುತ್ತೀರಿ, ಹಾಗೆಯೇ ಕೇಳುತ್ತೇನೆ. ತಾವು ನಮ್ಮ ರಕ್ಷಣೆಗೆ ಬರಬೇಕು. ರಾಜ್ಯದ ಜನರಿಗೆ ಸಂಬಂಧಪಟ್ಟಂತಹ ಪ್ರಶ್ನೆ ನಾನು ಕೇಳುತ್ತೇನೆ. ನಮ್ಮ ಕಡೆಯಿಂದ ಏನು ಅಪರಾಧ ಆಗಿದೆ ಹೇಳಿ.

ಉಪಾಧ್ಯಕ್ಷಣೆಯವರು :ನಾನು ಏನು ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಜಪಾನ್‌ನವರು ಕೈಗಾರಿಕೆಯನ್ನು ಸ್ಥಾಪನೆ ಮಾಡತಕ್ಕದ್ದು ಬಹಳ ಪ್ರಮುಖ್ಯವಾದ ವಿಷಯ. ಇದರಲ್ಲಿ ದ್ರೋಹ ಆಗಿದೆ. ಈ ಬಗ್ಗೆ ಸರ್ಕಾರದ ನೀತಿ ಏನು ಎಂಬುದನ್ನು ಸ್ಪಷ್ಟಪಡಿಸಬೇಕು. ಜಪಾನ್ ಕಾರ್ಖಾನೆ ಬರತಕ್ಕದ್ದು ಒಳ್ಳೆಯದಲ್ಲ.

ಉಪಾಧ್ಯಕ್ಷಣೆಯವರು : ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ನೀವು ಇದ್ದಿರಿ, ಹಾಗೂ ಎಲ್ಲಾ ನಾಯಕರೂ ಇದ್ದರು. ಆ ಮೀಟಿಂಗ್‌ನಲ್ಲಿ ಇದೇ ವಿಷಯ ಬಂತು. ನಾನು ಮೊನ್ನೆ ದಿವಸ ಏತಕ್ಕೆ ಸ್ವಲ್ಪ ಜಾಸ್ತಿ ಟೈಮ್ ಕೊಟ್ಟೆ ಎಂದರೆ, ಅವತ್ತಿನ ದಿವಸ ಬೇರೆ ಬಿಸಿನೆಸ್ ಕಡಿಮೆ ಮಾಡಿದ್ದೆವು. ಅವತ್ತು ಕಾಲಿಂಗ್ ಅಟೆನ್‌ಷನ್ ಹಾಕಿರಲಿಲ್ಲ, ನಿಯಮ 334ರ ಮೇರೆಗೆ ಬರುವ ವಿಷಯಗಳನ್ನು ಹಾಕಿರಲಿಲ್ಲ, ಹಾಗಾಗಿ ಆವತ್ತು 15-20 ನಿಮಿಷ ಜಾಸ್ತಿ ಕೊಡುವುದಕ್ಕೆ ಸಾಧ್ಯವಾಯಿತು. ಅದೇ ರೀತಿ ಪ್ರತಿ ದಿವಸ ಮಾಡಲು ಆಗುವುದಿಲ್ಲ. ಆ ರೀತಿ ಮಾಡಿದರೆ ಬೇರೆ ಬಿಸನೆಸ್‌ಗೆ ಅಫೆಕ್ಟ್ ಆಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಹಾಕಿರತಕ್ಕ ಪ್ರಶ್ನೆಯನ್ನು ಮುಂದೆ ಹಾಕುತ್ತೀರ.

ಉಪಾಧ್ಯಕ್ಷಣೆಯವರು : ಲ್ಯಾಪ್ಸ್ ಆದ ಪ್ರಶ್ನೆಗಳನ್ನು ಮತ್ತೆ ಹಾಕುವುದು ಕಷ್ಟವಾಗುತ್ತದೆ. ನೀವು ಮತ್ತೆ ಪ್ರಶ್ನೆ ಹಾಕಿ ಯಾವಾಗ ಬರುತ್ತದೆ ಎಂದು ನೋಡೋಣ. ಮಾನ್ಯ ಯಡಿಯೂರಪ್ಪನವರೇ ನೀವು ಇದ್ದೀರಿ ಒಂದು ಗಂಟೆಗಿಂತ ಜಾಸ್ತಿ ಬೇಡ ಎಂದು ತಾವೂ ಒಪ್ಪಿಕೊಂಡಿದ್ದೀರಿ. ಈಗ ಮುಂದೂಡಲಾದ ಪ್ರಶ್ನೆಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಯಾವ ಪ್ರಶ್ನೆಯನ್ನು ಕೇಳಬೇಕು.
ಉಪಾಧ್ಯಕ್ಷಣೆಯವರು :ತಡೆಹಿಡಿಯಲಾದ ಪ್ರಶ್ನೆ ಸಂಖ್ಯೆ 22(210)ಅನ್ನು ಕೇಳಿ.

ಅಬಕಾರಿ ಗುತ್ತಿಗೆದಾರರಿಂದ ಬರಬೇಕಾದ ಬಾಕಿ ಹಣ.

240-ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಬಕಾರಿ ಇಲಾಖೆಯಲ್ಲಿ ಕಂಟ್ರಾಕ್ಟರ್‌ದಾರರಿಂದ ಈ ವರ್ಷ ಗುತ್ತಿಗೆ ಹಣ ಯಾರು ಯಾರಿಂದ ಎಷ್ಟು ಹಣ ಬಾಕಿ ಇದೆ?

ಆ) ಈ ಹಿಂದೆ ಅಬಕಾರಿ ಗುತ್ತಿಗೆದಾರರಿಂದ ಬರಬೇಕಾದ ಬಡ್ಡಿಯನ್ನು ಮನ್ನಾ ಮಾಡಲಾಗಿತ್ತೆ?

ಇ) ಈ ರೀತಿ ಎಷ್ಟು ಗುತ್ತಿಗೆದಾರರಿಗೆ ಬಡ್ಡಿ ಮನ್ನಾ ಮಾಡಲಾಗಿದೆ?

ಈ) ಅವರಿಂದ ವಸೂಲಿ ಮಾಡಿರುವ ಅಸಲಿನ ಮೊತ್ತವೆಷ್ಟು?

ಶ್ರೀ ಎಂ. ವೀರಪ್ಪಮೊಯ್ಲಿ (ಮುಖ್ಯ ಮಂತ್ರಿಗಳು):

ಅನುಬಂಧ -1ರಲ್ಲಿ ನಮೂದಿಸಿದೆ.

ಆ) ಇಲ್ಲಾ

ಇ) ಉದ್ಭವಿಸುವುದಿಲ್ಲ.

ಈ) ಪ್ರಶ್ನೆ 'ಆ'ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಣಿಯವರೆ, ಇದು ಅತ್ಯಂತ ಪ್ರಾಮುಖ್ಯವಾದ ಪ್ರಶ್ನೆ. ಅಬ್ಕಾರಿ ಇಲಾಖೆಯಲ್ಲಿ ಕಂಟ್ರಾಕ್ಟರದಾರರಿಂದ....

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಉಪಾಧ್ಯಕ್ಷಣಿಯವರೆ, ತಾವು ನಮ್ಮ ಕಡೆ ನೋಡುವುದೇ ಇಲ್ಲ. ನಾವು ಕೊಶ್ಚನ್ಸ್ ಕೊಟ್ಟಿದ್ದೇವೆ. ಬೇರೆಯವರು ಕೊಟ್ಟಿದ್ದಾರೆ. ಅವರು ಯಾರೋ ಹೆಚ್ಚು ಟೈಮ್ ತೆಗೆದುಕೊಂಡರೆ ನಮ್ಮ ಪ್ರಶ್ನೆ ಗತಿ ಏನು? ಬೇರೆಯವರು ಜಾಸ್ತಿ ಟೈಮ್ ತೆಗೆದುಕೊಂಡರು ಎಂದು ನಾವು ಸುಮ್ಮನೆ ಕುಳಿತುಕೊಳ್ಳಬೇಕೆ?

ಉಪಾಧ್ಯಕ್ಷಣಿಯವರು : ಪ್ರಶ್ನೆ ಕೇಳತಕ್ಕ ಸದಸ್ಯರು ಭಾಷಣ ಮಾಡುವುದನ್ನು ಬಿಟ್ಟು ನೇರವಾಗಿ ಪ್ರಶ್ನೆ ಹಾಕಿ ಎಂದು ಪದೇ ಪದೇ ಹೇಳುತ್ತಿದ್ದೇನೆ. ಆದರೆ ಕೆಲವಾರು ಸದಸ್ಯರುಗಳು ಅದನ್ನು ಅರ್ಥ ಮಾಡಿಕೊಳ್ಳದಿದ್ದರೆ ನಾನು ಏನೂ ಮಾಡಲಾಗುವುದಿಲ್ಲ. ಈಗ ಮಾನ್ಯ ಯಡಿಯೂರಪ್ಪನವರು ತಮ್ಮ ತಡೆಹಿಡಿಯಲಾದ ಪ್ರಶ್ನೆಯನ್ನು ಮುಂದುವರಿಸಿ.

ಶ್ರೀ ಕೆ.ಹೆಚ್. ಹನುಮೇಗೌಡ : ಯಾರೋ ಮಾಡಿದ ತಪ್ಪಿಗೆ ನಾವು ಶಿಕ್ಷೆ ಅನುಭವಿಸಬೇಕೇ?

ಶ್ರೀ ಬಿ.ಎಸ್. ಯಡಿಯೂರಪ್ಪ ; ಅಕ್ಟೋಬರ್ ತಿಂಗಳಿನಲ್ಲಿ 16 ಕೋಟಿ, 75 ಲಕ್ಷ ಬಾಕಿ ಬರಬೇಕಾಗಿತ್ತು. ನವಂಬರ್ ತಿಂಗಳಿನಲ್ಲಿ 30 ಕೋಟಿ 66 ಲಕ್ಷ ಬಾಕಿ ಬರಬೇಕಾಗಿತ್ತು. ಅಂದರೆ ಒಟ್ಟು 47 ಕೋಟಿ 41 ಲಕ್ಷ ಬಾಕಿ ಬರಬೇಕಾಗಿದೆ. ಇವತ್ತು ಅಭಿವೃದ್ಧಿ ಕಾರ್ಯಗಳಿಗೆ ಹಣ ಇಲ್ಲದೇ ಇರುವ ಸಂದರ್ಭದಲ್ಲಿ ಈ ರೀತಿ 47 ಕೋಟಿ ರೂಪಾಯಿಗಳನ್ನು ಬಾಕಿ ವಸೂಲಿ ಮಾಡದೇ ಇದ್ದೀರಿ. ತಾವು ಅಧಿಕಾರಕ್ಕೆ ಬಂದು 45 ದಿವಸಗಳು ಕಳೆದುಹೋಗಿದ್ದರೂ ಸಹಾ ಈ ದಿಸೆಯಲ್ಲಿ ತಾವು ಬಾಕಿ ವಸೂಲಿ ಮಾಡದೇ ಇರಲು ಕಾರಣವೇನು? ಇದರಲ್ಲಿ ಬಹಳ ಪ್ರಾಮುಖ್ಯವಾಗಿ ಇರತಕ್ಕದ್ದು ಶ್ರೀ ರವಿಕುಮಾರ್ ಟ್ರೇಡರ್ಸ್, ಬೆಂಗಳೂರು,

ANNEXURE A

AMOUNT OF RENTALS DUE AS ON 18-12-1992 FOR THE YEAR 1992-93.

Sl. No.	Name of Contractors.	Taluk District	Rentals per month	Rental due	
				Ocother	November
1	2	3	4	5	6
1.	Ravikumar Traders, Bangalore	Bangalore Urban & Rural Dists.	74521000	73521000	74521000
2.	Sri Rama Liquors,Bangalore.	Bailahongala Belgaum Dist.	1499000	1499000	1499000
	-do-	Badami	716300	16300	716300
		Jamakhandi	2370500	2370500	2370500
		Madhol	1785000	1600000	1785000
	-do-	Mudigere Chickmagalur Dist.	900000	900000	900000
		Holalkere	1335000	985000	1335000
		Jagalur	855000	640000	855000
		Davanagere Harihara Chitradurga District	2625000	2425000	26525000
	-do-	Kodagu Dist.	5250000	2820000	5250000

	-do-	Gouribidnur	1500000	1138000	1500000
		Bangarpet Kolar Dist.	1633100	1633100	1633100
	-do-	Gundlupet	900000	900000	900000
		K.R.Nagar	1145100	1145100	1145100
		Yelandur Mysore Dist.	410000	-	410000
	-do-	Chinnagiri	2090100	2090100	2090100
		Sagar	754000	754000	754000
		Soraba Shimoga Dist.	752000	152000	752000
BELGAUM DIST.					
3.	Ashok Babu Rao Panalkar	Belgaum Taluk	35,26,000	7,36,000	35,26,000
4.	P.T. Siddappa M.S. Sharada Enterprises.	Parasgad	14,10,400	11,60,400	14,10,400
5.	S.D. Jorapurt Soundathi	Khanapur	11,11,000	-	6,11,000
6.	Manual Fernandes Uttarakannada.	Ramdurga	11,40,000	3,40,000	11,40,000
	a) -do-	Sedum, Gulbarga.	19,99,000	2,64,000	19,99,000
7.	E. Gangappa Hukkeri	Hukkeri	14,06,000	7,91,000	14,06,000
8.	S.L. Poojari Gokak	Gokak	10,60,000	-	-
9.	K.Mohan Naveenpet	Raibag	8,90,000	-	-

10.	M.J. Torgal Bijapur	Chikkodi	34,00,000	18,30,000	34,00,000
11.	A.B.Kagi Athani	Athani	12,93,000	-	-
12.	Chandrashekar	Bellary Dist.	1,90,09,000	90,70,422	1,90,09,000
		BIDAR DIST			
13.	D. Yadgir Reddy	Bidar Tq.	27,51,000	19,51,000	27,51,000
14.	M.Krishna Reddy, Hyderabad.	Balki	14,80,000	-	14,80,000
15.	M.Dayakara Reddy Hyderabad	Humnabad	23,01,000	14,80,000	23,01,000
16.	B. Raghavendra Bidar	Basavakalyana	18,11,000	14,86,000	18,11,000
	-do-	Bagalkot	3,50,100	3,50,100	3,50,100
17.	Sharada Enterprises, Arasikere.	Aurad	3,60,100	-	1,95,000
	-do-	Hassan Dist.	122,44,400	-	77,44,400
	-do-	Raichur Dist.	170,74,300	25,05,000	170,74,300
		Hosanagar Shimoga Dist.	561400	-	561,400
		BIJAPUR DIST.			
18.	M/s. Nagalingaswamy Trading Co., Bijapur.	Bijapur Taluk	19,18,000	13,68,000	19,18,000
		Bilgi	1,83,100	83,100	1,83,100
		Sorapur	20,21,000	30,00,000	20,21,000

19.	S.V. Guttedar Gulbarga	Indi	6,36,000	-	4,00,000
20.	Raju B. Guttedar Sindagi	Sindagi	6,15,000	-	4,15,000
21.	P.C. Rayabagi Hubli.	Hungund	14,61,000	14,61,000	14,61,000
22.	Shivayya K. Guttedar, Gulbarga.	Muddebihal	5,05,000	-	-
23.	P. Rajanikanth Lagakord Town Bangalore	Basavana Bagewadi	7,36,200	5,36,200	7,36,200
24.	Shivarama Shetty Volakad, Udupi.	Chikmagalur Kadur Tarikere Koppa N.R.Pura Sringeri	60,00,000	-	30,00,000
25.	Maruthi, Tumkur	Chitrdurga Taluk	18,00,000	-	18,00,000
	-do-	Hiriyur	13,51,000	-	13,51,000
26.	J. Sudhakar Gupta Rayadurga	Molakalmur	5,10,100	-	3,20,000
27.	D.O. Venkatesh Challakere	Hosadurga	10,60,000	6,60,000	10,60,000
28.	D.A. Anil Kumar Chitradurga	Challakere	12,96,600	6,46,600	12,96,600
29.	Sathi M.V. Attavar Mangalore.	Dakshina Kannada Dist.	292,13,230	292,13,230	2,92,13,230
30.	K. Sathishchandra Hegde Family Trust Udupi.	Dharwad Dist.	144,07,000	-	1,20,56,325

31.	Ashok Devayya Guttedar, Gulbarga.	Afzalpur	4,00,000	-	2,85,000
32.	M.K.Potharaju, Mysore.	Gulbarga	47,00,000	-	32,00,000
33.	Dattaraj Rukmayya Guttedar, Aland,	Aland	3,75,000	2,55,000	3,75,000
34.	Kamalakar Itegappli, Bangalore.	Jewargi	9.08,000	4.00,000	9,08,000
35.	Raju Guttedar Sindogi, Bijapur Dist.	Chittapur	46,04,000	12,00,000	46,04,000
36.	G. Narayana Gowda A.P.	Chincholi	16,20,000	-	1,44,000
37.	Basavarayappa patil, Shahapur	Shahapur	12,52,000	2.02.000	12,52,000
38.	Lingana Gowda, yadgir	Yadgir	23,54,000	-	22,28,000
39.	M. Deepak Kumar Bangalore	Kolar Malur Chintamani Srinivaspur Chikkaballapur.	50,00,000	4,47,829	14,74,048
40.	H.D. Ramachandra Bangalore.	Siddlagatta	15,12,000	6,18.000	15,12,000
41.	H.R. Gurappa Bangalore.	Bagepalli.	10,05,000	7,80,000	10.05,000
42.	K.V. Sudhimath Reddy, Ananthapur Dist. A.P.	Mulbagal	11,01,100	-Nil-	7,60,100
43.		Gudibanda	1,80,000	-	-

44.	M/s. Yellamma Enterprises Bangalore.	Mandya Dist.	1,46,50,100	67,12,000	1,27,29,600
45.	H. Ramaiah Mysore.	H.D.Kote.	9,58,400	-	9,58,400
46.	Vijayashree Liquors	Mysore.	69,06,100	-	69,06,100
	-do-	Chamarajanagar.	8,50,000	80,000	8,50,000
47.	M. Vishweswara, Tumkur.	Nanjungud.	17,36,000	-	9,36,000
48.	Cheluvaraju, Bangalore.	Kollegal.	27,75,000	12,17,000	27,75,000
	-do-	T. Narasipur	22,60,000	8,10,300	22,60,000
49.	M/s.M.K. & Sons.	Hunsur	11,18,100	-	8,68,100
	-do-	Periyapatna	9,52,500	-	7,02,500
50.	Krishnasa Bhole Harihar	Honnali	16,77,000	-	16,77,000
51.	H.E.Dada Khalandar	Thirthahalli	8,52,000	-	7,00,000
52.	P.K. Shankar Narayana Thrichur Kerala.	Shimoga Bhadravathi Shikaripura	76,11,700	10,00,000	62,11,700
53.	M/s. Ranganatha Group, Bangalore.	Tumkur Districtr.	1,50,00,000	38,98,000	1,50,00,000
54.	M.Sridhar, Malpe, Udupi.	Uttara Kannada District	65,14,000	-	62,04,000
	TOTAL		32,89,89,930	16,75,70,480	30,66,67,703

ಶ್ರೀ ರಾಮಾ ಲಿಕ್ಕರ್ಸ್ ಬೆಂಗಳೂರು, ಇವರು ಪ್ರತಿ ತಿಂಗಳು ಅವರ ಕಂತಿನ ಹಣದಲ್ಲಿ ಒಂದು ಪೈಸೆಯನ್ನು ಕಟ್ಟಿಲ್ಲ. ಈ ಪರಿಸ್ಥಿತಿ ಇರಬೇಕಾದರೆ ನಾನು ನಿಮ್ಮನ್ನು ನೇರವಾಗಿ ಕೇಳುತ್ತೇನೆ. ಈಗ 47 ಕೋಟಿ ರೂಪಾಯಿ ಬಾಕಿ ಇರಬೇಕಾದರೆ ಅವರುಗಳು 100 ಕೋಟಿ ರೂಪಾಯಿ ಲಾಭ ಪಡೆದಿರಬಹುದು. ಏತಕ್ಕೆ ಇದನ್ನು ವಸೂಲಿ ಮಾಡಿಲ್ಲ, ಬಿಗಿ ಕ್ರಮಗಳನ್ನು ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೇನು? ಇದರ ಬಗ್ಗೆ ನಾನು ನೇರವಾಗಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಲೇಟೆಸ್ಟ್ ಆಗಿ 2.1.93ಕ್ಕೆ ಆ ಒಂದು ವಿವರವನ್ನು ಕೊಡುವುದಿದ್ದರೆ ಅಕ್ಟೋಬರ್ 92ರದ್ದು ಬಾಕಿ 9 ಕೋಟಿ 58 ಲಕ್ಷ ಬರಲಿಕ್ಕೆ ಉಳಿದಿದೆ. ನವೆಂಬರ್ 92ರದ್ದು 23 ಕೋಟಿ 92 ಲಕ್ಷ, ಹಾಗೂ ಡಿಸೆಂಬರ್ 92ರದ್ದು 32 ಕೋಟಿ 40 ಲಕ್ಷ ಇದ್ದು ಲೇಟೆಸ್ಟ್ ಆಗಿ ಬಾಕಿ ಉಳಿದಿರುವುದು ಒಟ್ಟು 65 ಕೋಟಿ 90 ಲಕ್ಷ ಬಾಕಿ ಉಳಿದಿದೆ. ಇದರಲ್ಲಿ ಕೋರ್ಟ್ ಸ್ಟೇನಲ್ಲಿ 6.50 ಕೋಟಿ ಬಾಕಿ ಉಳಿದಿದೆ. ನೆಟ್ ಡ್ಯೂ 2.1.93ಕ್ಕೆ 59 ಕೋಟಿ ನಲವತ್ತು ಲಕ್ಷ ರೂಪಾಯಿಗಳು.

ಇದರಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ, ಹಿಂದೆ ಮೂರು ತಿಂಗಳು ಬ್ಯಾಂಕ್ ಗ್ಯಾರಂಟಿ ಕೊಡಬೇಕು ಮತ್ತು ಒಂದು ತಿಂಗಳು ಇ.ಎಮ್.ಡಿ. ಕೊಡಬೇಕು ಎಂದು ನಿಯಮಾವಳಿ ಇತ್ತು. ಅದನ್ನು ಇತ್ತೀಚೆಗೆ ಬದಲಾವಣೆ ಮಾಡಿದ್ದಾರೆ. ಎರಡು ತಿಂಗಳು ಬ್ಯಾಂಕ್ ಗ್ಯಾರಂಟಿ, ಒಂದು ತಿಂಗಳು ಇ.ಎಮ್.ಡಿ. ಕೊಡಬೇಕು ಎಂದು 1992-93ರ ಆರ್ಥಿಕ ಸಾಲಿನಲ್ಲಿ ತಿದ್ದುಪಡಿ ಮಾಡಿದ್ದಾರೆ. ಈ ಕಲೆಕ್ಷನ್‌ನಲ್ಲಿ ಯಾವಾಗಲೂ ಅಡ್ವಾನ್ಸ್ ಕೊಡಬೇಕು ಎಂದು ಹಿಂದೆ ಕಾನೂನು ಇತ್ತು. ಈ ಅಡ್ವಾನ್ಸ್ ನವೆಂಬರ್ ತಿಂಗಳ ಖಿಸ್ತು 10ನೇ ತಾರೀಖು ಒಳಗಾಗಿ ಕೊಡಬೇಕು ಎಂದು ನಿಯಮಾವಳಿ ಇತ್ತು ಇಲ್ಲದಿದ್ದರೆ ಅವರು ಅದರ ಮೇಲೆ 18 ಪರ್ಸೆಂಟ್ ಇನ್‌ಟ್ರೆಸ್ಟ್ ಕೊಡಬೇಕಾಗಿತ್ತು. ಈಗ ಏನಾಗಿದೆ ಎಂದರೆ, 1992-93ನೇ ಸಾಲಿನಲ್ಲಿ ಇದು ಬದಲಾವಣೆಯಾಗಿದೆ. ಈ ತಿಂಗಳ ಬಾಕಿಯನ್ನು ಬರುವ ತಿಂಗಳು ಕೊಡುವುದು. ಅದು ಈ ವರ್ಷದ ಫಸ್ಟ್‌ಗೆ ಆಗಿದೆ. ಆದುದರಿಂದ ಅದನ್ನು ಸರಿಮಾಡಿಕೊಳ್ಳಬೇಕು. 1993-94ನೇ ಸಾಲಿನಲ್ಲಿ ಹಿಂದಿನ ಪದ್ಧತಿಯನ್ನು ನಾವು ಪುನಃ ಮಾಡುತ್ತೇವೆ. ಅವರು ಮುಂದಿನ ತಿಂಗಳ ಹಣವನ್ನು ಈ ತಿಂಗಳ ಮೊದಲೇ ಕೊಡಬೇಕಾಗುತ್ತದೆ. ಎಂಬುದನ್ನು ನಾವು ಖಂಡಿತವಾಗಿ ಬದಲಾವಣೆ ಮಾಡುತ್ತೇವೆ. ಈಗ ನಮ್ಮ ಸರ್ಕಾರಕ್ಕೆ ಕೊಡಬೇಕಾದ ಬಂಡವಾಳದಲ್ಲಿ ಅಬಕಾರಿ ಗುತ್ತಿಗೆದಾರರು ವ್ಯಾಪಾರ ಮಾಡತಕ್ಕಂಥ ಪರಿಸ್ಥಿತಿ ಉದ್ಭವವಾಗಿದೆ. ಇವತ್ತು ಅದನ್ನು ತಕ್ಷಣ ನಾವು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ, 1993-94ನೇ ಸಾಲಿನಲ್ಲಿ ಹಿಂದಿನ ಪದ್ಧತಿಯನ್ನೇ ಪುನಃ ಮಾಡಿದಾಗ ಈ ರೀತಿ ಬಾಕಿ ಉಳಿಯುವುದಕ್ಕೆ ಕಾರಣ ಆಗುವುದಿಲ್ಲ, ಈಗ ಇರತಕ್ಕಂಥ ಪದ್ಧತಿಯಲ್ಲಿ ನಮಗೆ ಇಂಟರೆಸ್ಟ್ ಹೊರಟು ಹೋಗುತ್ತದೆ. ನಮ್ಮ ಸರ್ಕಾರಕ್ಕೆ ಬರಬೇಕಾದ ಹಣವನ್ನು ಗುತ್ತಿಗೆದಾರರು ಉಪಯೋಗ ಮಾಡಿಕೊಂಡು ವ್ಯಾಪಾರ ಮಾಡುವುದನ್ನು ಕೂಡ ನಾವು ನಿಲ್ಲಿಸಬೇಕಾಗುತ್ತದೆ. ಅದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ನಾವು ಈಗ ಕಟ್ಟುನಿಟ್ಟಾಗಿ ಏನು ಕಾರ್ಯಕ್ರಮ ಮಾಡಿದ್ದೇವೆ ಎಂದರೆ, ಈ

ಕಾನೂನು ಪ್ರಕಾರ ಯಾರು ಬಾಕಿ ಇದ್ದಾರೋ ಅವರಿಗೆ ಗುತ್ತಿಗೆಯನ್ನು ನಿಲ್ಲಿಸಲಿಕ್ಕೆ ನಾವು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಅದರ ಬಗ್ಗೆ ನಾವು ಕಟ್ಟುನಿಟ್ಟಾದ ಕಾರ್ಯಕ್ರಮವನ್ನು ಅನುಷ್ಠಾನ ಮಾಡಿ ಬಾಕಿ ಇರತಕ್ಕಂತಹ ಹಣವನ್ನು ವಸೂಲು ಮಾಡುತ್ತಿದ್ದೇವೆ. ಈಗಾಗಲೇ ತಮ್ಮ ಅನುಭವಕ್ಕೆ ಬಂದಿರಬಹುದು. ಅನೇಕ ಕಡೆ ನಾವು ಬ್ಯಾಂಕ್ ಅಕೌಂಟ್ ಅಟ್ಯಾಚ್ ಮಾಡುತ್ತಿದ್ದೇವೆ. ಸೇಲ್ಸ್ ಟ್ಯಾಕ್ಸ್ ಅರಿಯರ್ಸ್‌ಗೆ ಕೂಡ ಅನೇಕ ಕಡೆ ನಿಷ್ಠೂರವಾಗಿ ಬ್ಯಾಂಕ್ ಅಟ್ಯಾಚ್ ಮಾಡುತ್ತಿದ್ದೇವೆ. ಮೂವಬಲ್ ಅಂಡ್ ಇಮ್ಮೂವಬಲ್ ಪ್ರಾಪರ್ಟಿ ಕೂಡ ಅಟ್ಯಾಚ್ ಮಾಡುತ್ತೇವೆ. ಏಕೆಂದರೆ, ಸರ್ಕಾರಕ್ಕೆ ಬರಬೇಕಾದಂಥ ಹಣವನ್ನು ಅವರು ಕೊಡಲೇ ಬೇಕು. ಅಬ್ಕಾರಿಯವರು ಇರಬಹುದು, ಸೇಲ್ಸ್ ಟ್ಯಾಕ್ಸ್ ಅರಿಯರ್ಸ್ ಇರಬಹುದು, ಯಾವುದೇ ಇರಬಹುದು, ಅದನ್ನು ಕೊಡದೇ ಇದ್ದರೆ ಕಟ್ಟುನಿಟ್ಟಾದ ಕ್ರಮ ಈಗಾಗಲೇ ಪ್ರಾರಂಭವಾಗಿದೆ. ಬಹುಶಃ ಈಗಾಗಲೇ ಬಿಸಿ ತಾಗಿದ್ದರಿಂದ ಇನ್ನೂ ಹೆಚ್ಚು ಹೊತ್ತು ಬಾಕಿ ಇರಿಸಿಕೊಳ್ಳುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಭಾಧ್ಯಕ್ಷರೆ, ಬಹುಶಃ ನಮ್ಮ ರಾಜ್ಯದ ಇತಿಹಾಸದಲ್ಲಿ ಈ ರೀತಿ ನಡೆಯಲಿಕ್ಕೆ ಸಾಧ್ಯ ಇಲ್ಲ. ನಿಯಮಾವಳಿಗಳನ್ನು ಅವರಿಗೆ ಅನುಕೂಲಕರವಾಗಿ ತಿದ್ದುಪಡಿ ತಂದು ಮಾಡಿಕೊಟ್ಟಿದ್ದಾರೆ. ಈ ನಿಯಮಾವಳಿಗಳಿಗೆ ಏನು ತಿದ್ದುಪಡಿ ಮಾಡಿದ್ದಾರೆ. ಅದನ್ನು ವಾಪಸ್ ತಂದು ಈ ಅಧಿವೇಶನದಲ್ಲಿ ಮೊದಲಿನಂತೆ ಬದಲಾವಣೆ ಮಾಡುತ್ತೀರಾ? ಎರಡನೆಯ ಪ್ರಶ್ನೆಗೆ ತಾವು ಉತ್ತರ ಕೊಟ್ಟಿದ್ದೀರಿ. ಹಿಂದೆ ಅಬಕಾರಿ ಗುತ್ತಿಗೆದಾರರಿಂದ ಬರಬೇಕಾದ ಬಡ್ಡಿಯನ್ನು ಮನ್ನಾ ಮಾಡಲಾಗಿತ್ತೆ ಎಂದು ನಾನು ಕೇಳಿದ್ದೇನೆ. ತಮಗೆ ಗೊತ್ತಿದೆ. ಈ ಸರ್ಕಾರ 25-1-92ರಲ್ಲಿ ತಿದ್ದುಪಡಿ ತಂದು, ಈ ಅಸಲನ್ನು ವಸೂಲು ಮಾಡಲು ಅನುಕೂಲವಾಗಲಿ ಎಂದು ಬಡ್ಡಿಯನ್ನು ಮನ್ನಾ ಮಾಡುವಂತಹ ಒಂದು ಯೋಜನೆಯನ್ನು ಜಾರಿಗೆ ತಂದಿದೆ. ಅದು ಅಸ್ತಿತ್ವದಲ್ಲಿ ಇದೆಯೇ? ಅದನ್ನು ಏನಾದರೂ ವಾಪಸ್ಸು ತೆಗೆದುಕೊಳ್ಳುತ್ತಿರೋ, ಮತ್ತೆ ತಾವು ಕೊಟ್ಟಿರುವ ಉತ್ತರದಲ್ಲಿ ಅಕ್ಟೋಬರ್, ನವೆಂಬರ್ ತಿಂಗಳ ಬಾಕಿ ಮಾತ್ರ ಎಂದು ಹೇಳಿದ್ದೀರಿ. ಅಂದರೆ ಇನ್ನಾವುದೋ ಬಾಕಿ ಇರಲಿಲ್ಲವೇ? ಈಗ ಅದರ ಪ್ರಕಾರ ಬಡ್ಡಿಯನ್ನು ವಜಾ ಮಾಡಿಲ್ಲ ಎಂದು ಹೇಳುತ್ತೀರಿ. ಆ ಆಕ್ಟ್‌ಗೆ ಅಮೆಂಡ್‌ಮೆಂಟ್ ಏನು ತಂದಿದ್ದೀರಿ ಆ ಬಡ್ಡಿ ಮನ್ನಾ ಮಾಡಿದ್ದೀರಾ? ಅದರಿಂದ ವಸೂಲಾಗಿದೆಯೇ? ಈ ಒಂದು ಶಾಸನ ತಂದಿದ್ದರಿಂದ ಯಾವುದು ಕೋರ್ಟ್‌ನಲ್ಲಿ ಕೇಸ್ ಪೆಂಡಿಂಗ್ ಇದೆ ಅವರಿಗೆ ಅನುಕೂಲವಾಗಲಿಲ್ಲವೇ ಇದರ ಪರಿಣಾಮ ಏನಾಗಿದೆ. ಎಂದು ದಯಮಾಡಿ ತಿಳಿಸುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಬಡ್ಡಿ ಮನ್ನಾ ಮಾಡುವಂತಹ ನಿಯಮಾವಳಿ, ರೂಲ್ 15ಎ ಏನು ತಿದ್ದುಪಡಿ ಆಗಿತ್ತು ಅದು ಫೆಬ್ರವರಿ 92ರಿಂದ ಅನುಷ್ಠಾನಕ್ಕೆ ಬರಬೇಕು ಎಂದು ಇತ್ತು. ನಾವು ಏನು ಮಾಡಿದ್ದೇವೆ ಎಂದರೆ, After I took over I have repeated that rule. ಆ ರೂಲನ್ನು, ಆ ತಿದ್ದುಪಡಿಯನ್ನು ನಾವು ಹಿಂದಕ್ಕೆ ತೆಗೆದುಕೊಂಡಿದ್ದೇವೆ. That is no more available to the Abkari Contractors.

ಇನ್ನು ಇದರಲ್ಲಿ ಒಂದು ಪಾರ್ಟಿ "ರಾಜೇಶ್ವರಿ ಎಂಟರ್‌ಪ್ರೈಸಸ್" ಅವರು ಅರ್ಜಿಯನ್ನು ಹಾಕಿದ್ದರು. We are not going to give that kind of concession. We have repealed that particular amendment of the rule namely 15 A.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಕ್ಟೋಬರ್, ನವೆಂಬರ್ ತಿಂಗಳ ಬಾಕಿ ತಿಳಿಸಿದ್ದೀರಿ. ತಮಗೆ ಇಲ್ಲಿ ಮಾಹಿತಿ ತಪ್ಪು ಇರಬಹುದೆಂದು ನನಗೆ ಅನಿಸುತ್ತದೆ. ಈ ವರ್ಷ ಇನ್ನಾರೂ ಬಾಕಿದಾರರೇ ಇಲ್ಲವೇ? ಇದುವರೆಗೆ ಈ ಬಾಬಿನಲ್ಲಿ ಈ ಸರ್ಕಾರಕ್ಕೆ ಎಷ್ಟು ಬಾಕಿ ಬರಬೇಕಾಗಿತ್ತು. ಕಳೆದ 3-4-5 ವರ್ಷಗಳು ಇರಬಹುದು. ಒಟ್ಟು ಎಷ್ಟು ಬಾಕಿ ಇದೆ? ಮೊದಲು ಈ ಹೆಂಡದ ದೊರೆಗಳಿಂದ ಈ ಸರ್ಕಾರ ನಡೆಯುತ್ತಿತ್ತು. ಇವತ್ತು ನೀವು ಅಧಿಕಾರಕ್ಕೆ ಬಂದಮೇಲೆ ನಿಮ್ಮಲ್ಲಿ ಏನಾದರೂ ನೀತಿಗಳು ಬದಲಾಗಿವೆಯೇ? ಈಗ ತೆಗೆದುಕೊಂಡಿರುವ ಕ್ರಮಗಳು ನಮಗೆ ಸಮಾಧಾನ ತಂದಿದೆ. ಆದರೆ ಇನ್ನೂ ಬಿಗಿ ನಿಲುವನ್ನು ತೆಗೆದುಕೊಂಡು ಬಾಕಿ ಇರುವುದನ್ನು ವಸೂಲು ಮಾಡುತ್ತೀರಾ?

ಪ್ರತಿ ತಿಂಗಳು ಆ ತಿಂಗಳ ಕೊನೆಯಲ್ಲಿ ವಸೂಲಿ ಮಾಡುವುದಕ್ಕೆ ದಿಟ್ಟ ಕ್ರಮವನ್ನು ತೆಗೆದುಕೊಳ್ಳುತ್ತೀರಾ? ದಯಮಾಡಿ ಅದರ ಬಗ್ಗೆ ವಿವರಗಳನ್ನು ಒದಗಿಸಿಕೊಡಬೇಕು.

ಶ್ರೀ ಬಿ.ಹೆಚ್.ಬನ್ನಿಕೋಡ್ : ಮಾನ್ಯ ಉಪಾಧ್ಯಕ್ಷಣೆಯವರೇ, 120 ಕೋಟಿ ರೂಪಾಯಿ ಬಾಕಿ ಸರ್ಕಾರಕ್ಕೆ ಬರಬೇಕು. ಇಲ್ಲಿ ಕೊಟ್ಟಿರುವ ಉತ್ತರ ಸಮರ್ಪಕವಾಗಿಲ್ಲ. 120 ಕೋಟಿ ರೂಪಾಯಿಗಳು ಬರಬೇಕು. ನ್ಯಾಯಾಲಯದಲ್ಲಿ ಎಷ್ಟಿದೆ? ಮತ್ತು ಉಳಿದ ಕಡೆ ಎಷ್ಟಿದೆ? ಎಲ್ಲೆಲ್ಲಿ ಎಷ್ಟಿದೆ ಎನ್ನುವ ವಿವರ ಕೊಡಿ. ಮತ್ತು ಅದನ್ನು ವಸೂಲಿ ಮಾಡುವುದಕ್ಕೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ. ನ್ಯಾಯಾಲಯಕ್ಕೆ ಹೋಗಿದ್ದಾರೆಂದರೆ ಹತ್ತಾರು ವರ್ಷ ಹಾಗೆ ಕೂತರೆ ಹೇಗೆ? ನೀವು ಸರ್ಕಾರಿ ವಕೀಲರಿಗೆ ಹೇಳಬೇಕು. ಅದನ್ನು ಆದಷ್ಟು ಬೇಗ ಇತ್ಯರ್ಥ ಮಾಡಬೇಕು.

ಶ್ರೀ ಎಂ. ವೀರಪ್ಪ ಮೋಯಿಲಿ : ತಾವು ಏನು ಪ್ರಶ್ನೆ ಕೇಳಿದ್ದೀರಿ ಅದಕ್ಕೆ ನಾನು ವಿವರಗಳನ್ನು ಒದಗಿಸಿದ್ದೇನೆ. ಈಗ ತಾವು ಪೂರಕ ಪ್ರಶ್ನಾವಳಿಯಲ್ಲಿ ಈವೊಂದು ವಿಚಾರವನ್ನು ಕೇಳಿದ್ದೀರಿ. ಇಷ್ಟರವರೆಗೆ ಎಷ್ಟು ಬಾಕಿಯಿದೆಯೆಂದರೆ 144.21 ಕೋಟಿ ರೂಪಾಯಿಗಳು. ಅದು ಏಪ್ರಿಲ್ 1992ರವರೆಗೆ ಬಾಕಿಯಿದೆ. ಈ ಬಾಕಿ ಎಲ್ಲೆಲ್ಲಿ ಇದೆ ಅದನ್ನು ವಸೂಲಿ ಮಾಡಬೇಕು. ಅದು ಸೇಲ್ಸ್‌ಟ್ಯಾಕ್ಸ್ ಇರಬಹುದು ಅಥವಾ ಅಬಕಾರಿ ಟ್ಯಾಕ್ಸ್ ಇರಬಹುದು. ಅದು ವಸೂಲಿಯಾಗಬೇಕು. ಕೋರ್ಟ್‌ನಲ್ಲಿ ಸ್ಟೇ ಇದೆ, ಮತ್ತೊಂದು ಇದೆ, ಅದಕ್ಕೆ ಒಂದು ಸ್ಪೆಷಲ್ ಬೆಂಚ್ ಕಾನ್ಸಿಟ್ಯೂಟ್ ಮಾಡಿ, ಸರ್ಕಾರಕ್ಕೆ ಬರತಕ್ಕ ಹಣವನ್ನು ವಸೂಲಿ ಮಾಡಲಿಕ್ಕೆ ಬೇಗ ಕೆಲಸ ಮಾಡಲಿಕ್ಕೆ ಈಗಾಗಲೇ ಕರ್ನಾಟಕ ರಾಜ್ಯದ ಶ್ರೇಷ್ಠ ನ್ಯಾಯಾಧೀಶರನ್ನು ನಾನು ಕೇಳಿಕೊಂಡಿದ್ದೇನೆ. to constitute a special bench so that these cases could be disposed of expendiously. ಏಕೆಂದರೆ ಬೇರೆ ನೆವ ಹೇಳಿ ಅವರು ಸಮಯ ತೆಗೆದುಕೊಳ್ಳುತ್ತಾರೆ. ಸರ್ಕಾರದ ಕಾರ್ಯ ಕ್ರಮದಲ್ಲಿ ಅವರಿಗೆ ಒಂದು ಅವಕಾಶ ಸಿಗುವ ಹಾಗೆ ಅವರು ಕೋರ್ಟ್‌ಗೆ ಹೋಗುತ್ತಾರೆ. ಅದನ್ನೆಲ್ಲ ನಮ್ಮ ಕಡೆಯಿಂದ ಟೈಟನ್ ಮಾಡುತ್ತೇವೆ. ಎಲ್ಲಿಯಾದರೂ ಯಾವುದಾದರೂ ಅಧಿಕಾರಿಗಳು ಸ್ಟೇ ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡತಕ್ಕ ಧೋರಣೆ ಅಥವಾ ಕಾರ್ಯಕ್ರಮವನ್ನು

ತೆಗೆದುಕೊಂಡಿದ್ದರೆ I am going to identify those areas and officers and I will take necessary action against the officers...

ಆಮೇಲೆ ಕೋರ್ಟ್‌ನಲ್ಲಿ ಏನು ಬಾಕಿಯಿದೆ. ಸ್ಟೇ ಇದೆ ಅದನ್ನು ಕೂಡ ಬೇಗ ತೀರ್ಮಾನ ಮಾಡಲಿಕ್ಕೆ ಅಡ್ವೋಕೇಟ್ ಜನರಲ್ ಅವರಿಗೆ ಹೇಳಿದ್ದೇನೆ. This message can go from this House to all those people who are due to the Government and Government will not tolerate this kind of lauxity.

ಮತ್ತೆ ಈ ತರಹ ಉದಾಸೀನ ಮಾಡಿಕೊಂಡು ಜನರ ಬಂಡವಾಳದಿಂದ ವ್ಯಾಪರ ಮಾಡಬಾರದು. ನ್ಯಾಯವಾಗಿ ವ್ಯಾಪಾರ ಮಾಡಲಿಕ್ಕೆ ನಾವು ಅಡ್ಡಿ ಬರುವುದಿಲ್ಲ, ಆದರೆ ಸರ್ಕಾರದ ಬಂಡವಾಳದ ಮುಖೇನ ವ್ಯಾಪಾರ ಮಾಡುವುದು ಇನ್ನು ಮುಂದೆ ನಡೆಯುವುದಿಲ್ಲವೆಂದು ಈ ಸದನದ ಮುಖಾಂತರ ಹೇಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಸರ್ಕಾರದ ಬಂಡವಾಳದಿಂದ ವ್ಯಾಪಾರ ಮಾಡುವುದು ಇದುವರೆಗೆ ಆಯಿತು.

ಶ್ರೀ ಸಿ. ಬೈರೇಗೌಡ : ಬಡ್ಡಿ ಮನ್ನಾ ಮಾಡುವುದಿಲ್ಲವೆಂದು ಹೇಳಿದ್ದೀರಿ. ಅಂದರೆ ಈ ಎರಡು ತಿಂಗಳ ಅವಧಿಯಲ್ಲಿ ಮಾತ್ರ ಬಡ್ಡಿ ವಜಾ ಮಾಡುವುದಿಲ್ಲವೋ ಅಥವಾ ಹಿಂದೆ ಇದ್ದಂತಹ ಬಡ್ಡಿ ವಜಾ ಮಾಡುವುದಿಲ್ಲವೋ? ಯಾವುದೂ ಕೂಡ ಬಡ್ಡಿ ವಜಾ ಮಾಡಿಲ್ಲವೆಂದರೆ, ಮತ್ತೆ ಕೆಲವು ನಿಯಮಗಳನ್ನು ತಿದ್ದುಪಡಿ ಮಾಡಿದರು ಎಂದು ಹೇಳಿದ್ದಾರೆ. ಮೂರು ತಿಂಗಳಿಗೆ ಬದಲಾಗಿ ಎರಡು ತಿಂಗಳು, ಅಡ್ವಾನ್ಸ್ ಬದಲಾಗಿ ಮೊದಲೇ ಕಟ್ಟಬೇಕಾಗಿರುವುದನ್ನು ಮೊದಲೇ ಬರುವ ತಿಂಗಳು ಕಟ್ಟುವ ಹಾಗೆ ಕಾನೂನು ತಿದ್ದುಪಡಿ ಮಾಡಿದ್ದೀರಿ. ಇದು ಹರಾಜು ಆದಮೇಲೆ ಅಂದರೆ, ಪ್ರತಿ ವರ್ಷ ಜುಲೈ ತಿಂಗಳ ಒಂದನೇ ತಾರೀಖಿನಿಂದ ಹೊಸ ಎಕ್ಸೈಜ್ ಇಯರ್ ಪ್ರಾರಂಭವಾಗುತ್ತದೆ. ಹೊಸ ಎಕ್ಸೈಜ್ ಇಯರ್ ಪ್ರಾರಂಭವಾದ ಮೇಲೆ ಕೆಲವರಿಗೆ ಗುತ್ತಿಗೆಗಳನ್ನು ಕೊಟ್ಟ ಮೇಲೆ ಅವರಿಗೆ ಅನುಕೂಲವಾಗುವ ತರಹ ಕಾನೂನು ತಿದ್ದುಪಡಿ ಮಾಡಿದ್ದೀರಾ ಅಥವಾ ಹರಾಜು ಹಾಕುವುದಕ್ಕೆ ಮುಂಚೆ ಆ ಕಾನೂನುಗಳನ್ನು ತಿದ್ದುಪಡಿ ಮಾಡಿದ್ದರೆ ಆ ರೀತಿ ತಿದ್ದುಪಡಿ ಮಾಡಿದಂತಹ ಸಂದರ್ಭದಲ್ಲಿ ನಿಯಮಗಳನ್ನು ತಿದ್ದುಪಡಿ ಮಾಡಬೇಕಾದರೆ ನಮಗೆ ಗೊತ್ತಿರುವ ಹಾಗೆ ಮಂತ್ರಿಮಂಡಲದ ಸಭೆಯಲ್ಲಿ ಒಪ್ಪಿಗೆ ಕೊಡಬೇಕಾಗುತ್ತದೆ. ನೀವು ಸಹ ಅಂತಹ ಮಂತ್ರಿಮಂಡಲದ ಸಭೆಯಲ್ಲಿ ಭಾಗವಹಿಸಿದ್ದೀರಾ? ಅಥವಾ ಇಲ್ಲವೇ? ಭಾಗವಹಿಸಿದ್ದರೆ ಆ ಸಂದರ್ಭದಲ್ಲಿ ನೀವೇನು ಮಾಡಿದ್ದೀರಿ

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ದಾಸಪ್ಪ ಅಂಡ್ ಕಂಪನಿ ಮೇಲೆ, ಅವರ ಮನೆಯ ಮೇಲೆ ರೈಡ್ ಮಾಡಿ 400 ಕೋಟಿ ಸಿಕ್ಕಿದೆ ಎಂದು ತಿಳಿದು ಬಂದಿದೆ. ಈ ದುಡ್ಡು ರಾಜ್ಯ ಸರ್ಕಾರದಲ್ಲಿದೆಯೋ ಅಥವಾ ಡೆಲ್ಲಿಯಲ್ಲಿದೆಯೋ?

(ಗೊಂದಲ)

ಶ್ರೀ ಸಿ. ಬೈರೇಗೌಡ : ನಾನು ಪ್ರಮುಖವಾದ ಪ್ರಶ್ನೆಯನ್ನ ಕೇಳಿದ್ದೇನೆ. ಅವರು ಕೊಟ್ಟಿರತಕ್ಕ ಉತ್ತರಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿದ್ದೇನೆ. ದಯವಿಟ್ಟು ಉತ್ತರ ಹೇಳಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ದಾಸಪ್ಪ ಅಂಡ್ ಕಂಪನಿಯ ಮೇಲೆ ರೈಡ್ ಮಾಡಿ, 300-400 ಕೋಟಿ ಸಿಕ್ಕಿದೆ, ಈ ರೀತಿ ರೈಡ್ ಮಾಡಿರುವುದು ನಿಜವೇ? ಅಥವಾ ಅಲ್ಲವೇ? ಮತ್ತು ಈ ಹಣ ರಾಜ್ಯ ಸರ್ಕಾರದಲ್ಲಿದೆಯೋ ಅಥವಾ ಡೆಲ್ಲಿಯಲ್ಲಿದೆಯೋ?

(ಗೊಂದಲ)

ಶ್ರೀ ಸಿ. ಬೈರೇಗೌಡ ; ಕಾನೂನು ತಿದ್ದುಪಡಿ ಮಾಡಿರುವ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ದಯಮಾಡಿ ಇದಕ್ಕೆ ಉತ್ತರ ಕೊಡಲಿ. ಹರಾಜು ಆಗುವುದಕ್ಕಿಂತ ಮೊದಲೇ ಕಾನೂನು ತಿದ್ದುಪಡಿ ಆಗಿದೆಯೋ ಅಥವಾ ಹರಾಜು ಆದಮೇಲೆ ತಿದ್ದುಪಡಿ ಆಯಿತೋ ಎನ್ನುವುದಕ್ಕೆ ದಯಮಾಡಿ ಉತ್ತರ ಹೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ : ಪ್ರತ್ಯೇಕವಾದ ಪ್ರಶ್ನೆ ಕೇಳಬೇಕಾಗಿದೆ. ರೈಡ್ ವಿಚಾರ, ನನ್ನ ಅನುಭವದಲ್ಲಿ ನಮ್ಮ ಸರ್ಕಾರದಂತೂ ರೈಡ್ ಮಾಡಿದ್ದು ನನಗೆ ಗೊತ್ತಿಲ್ಲ, ನಮ್ಮ ಹತ್ತಿರ ಮಾಹಿತಿ ಇಲ್ಲ. ಮತ್ತೊಮ್ಮೆ ಪ್ರತ್ಯೇಕ ಪ್ರಶ್ನೆಕೇಳಿದರೆ, ಮಾಹಿತಿ ತರಿಸಿಕೊಡುತ್ತೇನೆ. ಸನ್ಮಾನ್ಯ ಬೈರೇಗೌಡರು ಹೇಳಿದರು, Amendment of rule does not require the approval of the Cabinet ಆದುದರಿಂದ ತಾವು ಹೇಳಿದಂಥ ಉದ್ಭವವಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ : ಹರಾಜು ಆಗುವುದಕ್ಕೆ ಮೊದಲು ಕಾನೂನು ತಿದ್ದುಪಡಿ ಆಯಿತೇ ಅಥವಾ ಹರಾಜಾದ ನಂತರ ತಿದ್ದುಪಡಿ ಆಯಿತೇ?

ಶ್ರೀ ಎಂ.ವೀರಪ್ಪ ಮೊಯಿಲಿ : ಮೊದಲೇ ಆಗಿದೆ. Notification is dated 5th February 1992.

ಶ್ರೀ ಆರ್.ವಿ. ದೇಶಪಾಂಡೆ : ತಾವು ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೀರಿ. ಸಂತೋಷ. ಹಿಂದಿನ ವಸೂಲಾತಿ ಬಗ್ಗೆ, ರಾಜ್ಯಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ಹಣದ ಬಗ್ಗೆ ತಾವು ಕೆಲವುಕ್ರಮ ತೆಗೆದುಕೊಂಡಿದ್ದೀರಿ, ಸಂತೋಷ. ಬ್ಯಾಂಕ್ ಗ್ಯಾರಂಟಿ ಕೊಡತಕ್ಕ ವಿಚಾರದಲ್ಲಿ, ತಾವು ಒಂದು ಮಾತು ಹೇಳಿದಿರಿ. 2 ತಿಂಗಳು ಬ್ಯಾಂಕ್ ಗ್ಯಾರಂಟಿ ಎಂದು ಹೇಳಿದಿರಿ. ಎರಡನೆಯದಾಗಿ ಯಾರು ಡಿ-ಫಾಲ್ಟರ್ ಇದ್ದಾರೆ, ಅವರಿಂದ ವಸೂಲಾತಿ ಬಗ್ಗೆ ಒಂದು ಮಾತು ಹೇಳಿದ್ದೀರಿ. ನಾನು ನೇರವಾಗಿ ಎರಡು ಪ್ರಶ್ನೆ ಕೇಳುತ್ತೇನೆ. ರಾಜ್ಯದ ಇತಿಹಾಸದಲ್ಲಿ ಕರಂಟ್ ಅರಿಯರ್ಸ್ 55 ಕೋಟಿ ಯಾವಾಗಲೂ ಇರಲಿಲ್ಲ, ಎಷ್ಟು ಜನ ಎಕ್ಸೈಸ್ ಕಂಟ್ರಾಕ್ಟರ್ಸ್ ಇನ್ನೂ ಬ್ಯಾಂಕಗ್ ಗ್ಯಾರಂಟಿ ಕೊಟ್ಟಿಲ್ಲ, ನಿಮ್ಮ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಕಂಟ್ರಾಕ್ಟರ್ಸ್ ಇದ್ದಾರಲ್ಲ, ಅವರಹೆಸರಿನಲ್ಲಿ ಯಾವುದೇ ಆಸ್ತಿ ಪಾಸ್ತಿ ಇಲ್ಲ, ಅವರು ಡಿ-ಫಾಲ್ಟರ್ ಇದ್ದಾರೆ ಹಾಗಾಗಿ ಅವರಿಂದ ಹಣ ಯಾವ ರೀತಿ ವಸೂಲಾತಿ ಮಾಡುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಪ್ರಶ್ನೆಗೆ ಕೂಲಂಕುಷವಾದತನಿಖೆ ಮಾಡಿ, ವರದಿಯನ್ನು ತರಿಸಿ, ಸೂಕ್ತ ಸಮಯದಲ್ಲಿ ಉತ್ತರವನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗಾರಾಜ್ : ಅಬಕಾರಿ ಇಲಾಖೆಯ ಬಗ್ಗೆ ಒಂದಲ್ಲ ಒಂದು ಗೊಂದಲದಲ್ಲಿ ಲೂಟಿಯಾಗಿದೆ. ಸರ್ಕಾರಕ್ಕೆ ಬರಬೇಕಾದ 500 ಕೋಟಿ, ಒಂದು ಸಾವಿರ ಕೋಟಿ ಅನ್ಯಾಯವಾಗಿದೆ. ಇದೊಂದು ದೊಡ್ಡ ಲಾಬಿ ಇದೆಯಲ್ಲ,

ಇದರ ಜೊತೆಗೆ ನಿಮ್ಮ ನೀತಿ ಅಂದರೆ ಪಾನನಿರೋಧವನ್ನು ಜಾರಿಗೆ ತರತಕ್ಕ ನೀತಿ ಸರ್ಕಾರಾಕ್ಕೆ ಇದೆಯೇ? ಇಲ್ಲಿ ಮಹಾತ್ಮನ ಫೋಟೋ ಇಟ್ಟುಕೊಂಡಿದ್ದೇವೆ. ನಿಮ್ಮ ಸರ್ಕಾರದ ನೀತಿ, ಪಾನನಿರೋಧವನ್ನು ಜಾರಿಗೆ ತರತಕ್ಕ ಕ್ರಮ ಇದೆಯೇ, ಇದನ್ನು ಸ್ವಲ್ಪ ಹೇಳಬೇಕು.

ಶ್ರೀ- ಎಂ. ವೀರಪ್ಪ ಮೊಯ್ಲಿ : ಪಾನನಿರೋಧದ ಬಗ್ಗೆ ಪಾನನಿರೋಧದ ಬಗ್ಗೆ ಈಗಿರತಕ್ಕ ನೀತಿ ತಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಇನ್ನು ಮುಂದೆ ಏನು ನೀತಿ ಮಾಡುತ್ತೇವೆ, ತಾವು ಏನಾದರೂ ಸೂಚನೆ ಕೊಟ್ಟರೆ, ತಮ್ಮ ಸಲಹೆ ತೆಗೆದುಕೊಂಡು, ಅದನ್ನು ಗ್ರಹಿಸಿ, ಏನು ಮಾಡಬೇಕೆಂದು ಮುಂದಿನ ಹೆಜ್ಜೆ ಇಡುತ್ತೇವೆ.

ಚನ್ನಪಟ್ಟಣ ತಾಲ್ಲೂಕಿನಲ್ಲಿ - ನೀರಾವರಿ ಕಾಮಗಾರಿ.

761 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1990-91, 1991-92 ಮತ್ತು 1992-93ರಲ್ಲಿ ಇದುವರೆವಿಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕಾಮಗಾರಿಗಳಿಗೆ ಖರ್ಚು ಮಾಡಿದ ಒಟ್ಟು ಮೊಬಲಗು ಎಷ್ಟು?*

ಆ) *ಇದರಲ್ಲಿ ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಖರ್ಚು ಮಾಡಿರುವ ಮೊಬಲಗು ಎಷ್ಟು? (ವರ್ಷಾವಾರು ವಿವರಗಳನ್ನು ಕೊಡುವುದು)*

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ವಿವರಗಳು ಕೆಳಕಂಡಂತೆ ಇರುತ್ತದೆ.

ವರ್ಷ	ಲಕ್ಷ ರೂ.ಗಳಲ್ಲಿ
1990-91	315.608
1991-92	324.607
1992-93 (ನವೆಂಬರ್ 92ರ ಅಂತ್ಯದ ವರೆವಿಗೆ)	347.505

ಆ)

ವರ್ಷ	ಖರ್ಚು ಮಾಡಿದ ಹಣ ಲಕ್ಷ ರೂ.ಗಳಲ್ಲಿ
1990-91	51.228
1991-92	57.452
1992-93 (ನವೆಂಬರ್ 1992ರ ಅಂತ್ಯದ ವರೆಗೆ)	21.279

ಶ್ರೀ ಸಾದತ್ ಅಲಿ ಖಾನ್ ; ಮಾನ್ಯ ಉಪಾಧ್ಯಕ್ಷರೇ, ಮೈನರ್ ಇರಿಗೇಷನ್ ಗೆ ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್‌ನಲ್ಲಿ, 1990-91ರಲ್ಲಿ 315.608 ಲಕ್ಷ, 1991-92ನೇ ಇಸವಿಗೆ 324.607 ಲಕ್ಷ, 1992-93ಕ್ಕೆ 347.500 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.

12.35.P.M.

ತಮ್ಮ ಚನ್ನಪಟ್ಟಣ ತಾಲ್ಲೂಕಿನಲ್ಲಿ 1990-93ನೇ 51.228 ಲಕ್ಷ, 1991-92ಕ್ಕೆ 57.452 ಲಕ್ಷ ಖರ್ಚಾಗಿದೆ. 1992-93ಕ್ಕೆ ಇಡೀ ಡಿಸ್ಟ್ರಿಕ್ಟ್‌ನಲ್ಲಿ 347.50 ಲಕ್ಷ ಖರ್ಚಾಗಿದೆ. ಅದರಲ್ಲಿ ನಮ್ಮ ತಾಲ್ಲೂಕಿಗೆ 21 ಲಕ್ಷದ 27 ಸಾವಿರದ 900 ರೂಪಾಯಿಗಳು ಖರ್ಚಾಗಿದೆ. ಆದ್ದರಿಂದ ಹೀಗಾಗಿ ನಮ್ಮ ತಾಲ್ಲೂಕಿಗೆ ಅನ್ಯಾಯ ಆಗಿದೆ. ಒಂಭತ್ತು ತಿಂಗಳಲ್ಲಿ 36 ಲಕ್ಷರೂಪಾಯಿಗಳನ್ನು ಈ ಮೈನರ್ ಇರಿಗೇಷನ್ ಬಾಬತ್ತಿನಲ್ಲಿ ಕಡಿಮೆ ಕೊಟ್ಟಿದ್ದಾರೆ. ಇದನ್ನು ಸರಿಪಡಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಚನ್ನಪಟ್ಟಣ ತಾಲ್ಲೂಕಿನಲ್ಲಿ ಏನು ಸಣ್ಣ ನೀರಾವರಿ ಕಾಮಗಾರಿಗಳು ಇವೆ, ಅವುಗಳ ಬಗ್ಗೆ ನಾನು ವಿಮರ್ಶೆ ಮಾಡಿ ಅಲ್ಲಿಗೆ ಏನಾದರೂ ಕಡಿಮೆ ಹಣ ಕೊಟ್ಟಿದ್ದರೆ ಇದೇ ಮಾರ್ಚಿ ಒಳಗಾಗಿ ಜಾಸ್ತಿ ಹಣ ಕೊಡಿಸುತ್ತೇನೆ. ಮತ್ತೆ ಮುಂದೆ ಬರತಕ್ಕ ಹಣಕಾಸಿನ ವರ್ಷದಲ್ಲಿ ಕೂಡ ಯಾವ ಯಾವ ಮೈನರ್ ಇರಿಗೇಷನ್ ವರ್ಕ್ಸ್ ಇವೆ ಅದರಲ್ಲಿ ತಮ್ಮ ತಾಲ್ಲೂಕಿಗೆ ಏನೂ ಅನ್ಯಾಯ ಆಗದ ಹಾಗೆ ಸರಿಸಮಾನವಾಗಿ ಎಲ್ಲರಿಗೂ ಕೊಡತಕ್ಕಂಥ ರೀತಿಯಲ್ಲಿ ತಮಗೂ ಕೊಡುತ್ತೇನೆ.

ಶ್ರೀ ಸಾದತ್ ಅಲಿ ಖಾನ್ : 1992-93ನೇ ಸಾಲಿನಲ್ಲಿ ಈಗಾಗಲೇ 37 ಲಕ್ಷ ರೂಪಾಯಿಗಳನ್ನು ಕಡಿಮೆ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಜಾಸ್ತಿ ಮಾಡೋಣ.

ಉಪಾಧ್ಯಕ್ಷಣಿಯವರು : ಜಾಸ್ತಿ ಮಾಡಿಕೊಡುತ್ತೇವೆಂದು ಹೇಳಿದ್ದಾರೆ.

ಕುಖ್ಯಾತ ಕಾಡಿನ ಕಳ್ಳ ವೀರಪ್ಪನ್ ಬಂಧನ.

99 - ಶ್ರೀ ಬಸವರಾಜರಾಯರೆಡ್ಡಿ (ಯಲ್ಬುರ್ಗಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಖ್ಯಾತ ಕಾಡಿನ ಕಳ್ಳ ವೀರಪ್ಪನ್‌ನನ್ನು ಬಂಧಿಸಲು ಸರ್ಕಾರವು ವಿಫಲವಾಗಿದೆ, ಎಂದು ಜನತೆಯ ಕೂಗು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಇದಕ್ಕೆ ಸರ್ಕಾರದ ಪ್ರತಿಕ್ರಿಯೆ ಏನು? ಹಾಗೂ ಈವರೆಗೆ ತೆಗೆದುಕೊಂಡು ಕ್ರಮಗಳೇನು?

ಇ) ವೀರಪ್ಪನ್‌ನನ್ನು ಹಿಡಿಯಲು ಇದುವರೆವಿಗೂ ವೆಚ್ಚ ಮಾಡಿರುವ ಹಣ ಎಷ್ಟು (ಸಂಬಂಧಿಸಿದ ಎಲ್ಲಾ ಇಲಾಖೆಗಳಿಂದ, ಹಾಗೂ ಎಷ್ಟು ಜನ ಅಧಿಕಾರಿಗಳು ಮತ್ತು ಸಾರ್ವಜನಿಕರು ಸಾವನ್ನಪ್ಪಿದ್ದಾರೆ.

ಈ) ವೀರಪ್ಪನ್‌ನನ್ನು ಹಿಡಿಯಲು ದೃಢಸಂಕಲ್ಪ ಸರ್ಕಾರಕ್ಕೆ ಇದ್ದಲ್ಲಿ ಯಾವ ದಿನಾಂಕದ ಒಳಗಾಗಿ ಅಪರಾಧಿಯನ್ನು ಹಿಡಿಯಲಾಗುವುದು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಇಲ್ಲ.

ಆ) ಅನ್ವಯಿಸುವುದಿಲ್ಲ. ವೀರಪ್ಪನ್‌ನ್ನು ಹಿಡಿಯಲು ಸರ್ಕಾರ ಎಲ್ಲ ರೀತಿಯ ಪ್ರಯತ್ನವನ್ನು ಮಾಡುತ್ತಿದೆ. ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಹುದ್ದೆಯ ಅಧಿಕಾರಿಯ ನೇತೃತ್ವದಲ್ಲಿ ಪೊಲೀಸ್ ಮತ್ತು ಅರಣ್ಯ ಅಧಿಕಾರಿಗಳನ್ನು ಹೊಂದಿರುವ ಟಾಸ್ಕ್-ಫೋರ್ಸ್‌ನ್ನು ಸರ್ಕಾರವು ರಚಿಸಿದೆ.

ಹನೂರು, ರಾಮಾಪುರ ಮತ್ತು ಮಲೈಮಹದೇಶ್ವರ ಬೆಟ್ಟದ ಪೋಲೀಸ್ ಠಾಣೆಗಳ ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಿಸಲಾಗಿದ್ದು ಈ ಮೂರು ಠಾಣೆಗಳಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ದರ್ಜೆಯ ಅಧಿಕಾರಿಗಳನ್ನು ನೇಮಿಸಲಾಗಿದೆ.

ಟಾಸ್ಕ್‌ಫೋರ್ಸ್ ಸತತ ಎಚ್ಚರಿಕೆ ಕಾರ್ಯಾಚರಣೆಯಿಂದ ವೀರಪ್ಪನ್ ಮತ್ತು ಆತನ ಸಹಚರರ ಚಟುವಟಿಕೆ ಗಣನೀಯವಾಗಿ ಕಡಿಮೆಯಾಗಿದ್ದು ಎಂ.ಎಂ.ಹಿಲ್ಸ್ ಪ್ರದೇಶದಲ್ಲಿ ಆನೆಗಳ್ಳ ದಂತ ಅಪಹರಣ ಮತ್ತು ಶ್ರೀಗಂಧದ ಕಳ್ಳಸಾಗಾಣೆಯ ಹೊಸ ಪ್ರಕರಣಗಳು ವರದಿಯಾಗಿಲ್ಲ, ವೀರಪ್ಪನ್‌ನನ್ನು ಹಿಡಿಯಲು ಸರ್ಕಾರ ನಡೆಸುತ್ತಿರುವ ಸತತ ಪ್ರಯತ್ನದ ಬಗ್ಗೆ ಸಾರ್ವಜನಿಕರಿಗೆ ತಿಳಿದಿದೆ.

ಇ) ಪೋಲೀಸ್ ಇಲಾಖೆಯಿಂದ ರೂ. 26,05,920-00 ಮತ್ತು ಅರಣ್ಯ ಇಲಾಖೆಯಿಂದ 32,63,201 ರೂ.ಗಳನ್ನು ದಿನಾಂಕ (10-12-92ರವರೆಗೆ) ವೆಚ್ಚ ಮಾಡಲಾಗಿದೆ. ವೀರಪ್ಪನ್ ಮತ್ತು ಆತನ ಸಹಚರರಿಂದ 6 ಮಂದಿ ಪೋಲೀಸ್ ಅಧಿಕಾರಿಗಳು ಮತ್ತು 9 ಮಂದಿ ಪೋಲೀಸ್ ಕಾನ್ಸ್‌ಟೇಬಲ್‌ಗಳು ಮತ್ತು ಅರಣ್ಯ ಇಲಾಖೆಯಿಂದ ಒಬ್ಬ ಅಧಿಕಾರಿ ಮತ್ತು ಒಬ್ಬ ಫಾರೆಸ್ಟ್‌ಗಾರ್ಡ್ ಹಾಗೂ 9 ಮಂದಿ ಸಾರ್ವಜನಿಕರು ಕೊಲೆಯಾಗಿದ್ದಾರೆ.

ಈ) ವೀರಪ್ಪನ್ ಮತ್ತು ಆತನ ಸಹಚರರನ್ನು ಹಿಡಿಯಲು ಸರ್ಕಾರದ ದೃಢ ಸಂಕಲ್ಪ ಹೊಂದಿದೆ, ಇದುವರೆಗೆ 110 ಮಂದಿ ಆತನ ಸಹಚರರನ್ನು ಬಂಧಿಸಲಾಗಿದ್ದು ಘರ್ಷಣೆಯಲ್ಲಿ 5 ಮಂದಿ ಅಪರಾಧಿಗಳನ್ನು ಪೋಲೀಸರು ಕೊಂದಿದ್ದಾರೆ. ಆತನನ್ನು ಬಂಧಿಸಲು ಎಲ್ಲ ಪ್ರಯತ್ನವನ್ನು ಮಾಡಲಾಗುತ್ತಿದೆ. ಇಂತಹ ಕಾರ್ಯಾಚರಣೆಯಲ್ಲಿ ಅಪರಾಧಿಯನ್ನು ಖಚಿತ ದಿನಾಂಕದಲ್ಲಿ ಅಥವಾ ನಿಗದಿತ ವೇಳೆಯೊಳಗೆ ಹಿಡಿಯಲಾಗುವುದೆಂದು ಹೇಳಲು ಸಾಧ್ಯವಾಗುವುದಿಲ್ಲ.

ಶ್ರೀ ಬಸವರಾಜರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, ಕುಖ್ಯಾತ ಗಂಧದ ಕಳ್ಳಸಾಗಾಣಿಕೆದಾರ ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಸರ್ಕಾರ ವಿಫಲವಾಗಿದೆ ಎನ್ನುವುದಕ್ಕೆ ಈಗಾಗಲೇ ಪತ್ರಿಕೆಯಲ್ಲಿ ಸಂಪಾದಕೀಯಗಳು ಬಂದಿವೆ. ವಾಚಕರವಾಣಿಯಲ್ಲಿ ಹಲವಾರು ಜನ ಪತ್ರಗಳನ್ನು ಬರೆದಿದ್ದಾರೆ. ಸಾರ್ವಜನಿಕರ ಅಭಿಪ್ರಾಯ ಕೂಡ ಇದೇ ಆಗಿದೆ. ಆದರೆ ಈ ಸಾರ್ವಜನಿಕರ ಅಭಿಪ್ರಾಯ ಗೊತ್ತೇ ಇಲ್ಲ ಎಂದು ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ತಮ್ಮ ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟ್ ಇದರ ಬಗ್ಗೆ ಏನು ಮಾಡುತ್ತಿದೆ. ಇದು ಬಹಳ ಪ್ರಮುಖವಾದಂತಹ ವಿಚಾರ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಬೇಕು. ನಿಮ್ಮ ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟ್ ಪತ್ರಿಕೆಗಳ ಸಂಪಾದಕೀಯ, ವಾಚಕರವಾಣಿ-ಇವುಗಳನ್ನು ತಮಗೆ ಕಳುಹಿಸಿಕೊಡುವುದಿಲ್ಲವೇ?

ಉಪಾಧ್ಯಕ್ಷಣೆಯವರು : ನೀವು ದಯವಿಟ್ಟು ಭಾಷಣ ಮಾಡಬೇಡಿ. ಪ್ರಶ್ನೆ ಹಾಕಿ.

ಶ್ರೀ ಬಸವರಾಜರಾಯರೆಡ್ಡಿ : ಇದಕ್ಕೆ ಸಂಬಂಧಪಟ್ಟ ಹಾಗೆ ಕೇಳುತ್ತಿದ್ದೇನೆ. ಆಗಸ್ಟ್ 15ನೇ ತಾರೀಖು ಎಸ್.ಪಿ. ಹರಿಕೃಷ್ಣ ಸತ್ತ ಮೇಲೆ ಆಗ ಶಿಕ್ಷಣ ಸಚಿವರಾಗಿದ್ದು ಈಗ ಮಾನ್ಯ ಮುಖ್ಯಮಂತ್ರಿಗಳಾಗಿರುವ ವೀರಪ್ಪ ಮೊಯಿಲಿಯವರು ಮಂಗಳೂರಿನಲ್ಲಿ ಒಂದು ಹೇಳಿಕೆಯನ್ನು ಕೊಟ್ಟರು. ಅದು ಪ್ರಜಾವಾಣಿ ಪತ್ರಿಕೆಯಲ್ಲಿ ವರದಿಯಾಗಿದೆ. ಅವರು ಏನು ಹೇಳಿದ್ದಾರೆ ಎಂದರೆ ವೀರಪ್ಪನ್‌ನನ್ನು ಸೆರೆ

ಹಿಡಿಯುವವರೆಗೆ ವಾರಕ್ಕೆ ಒಂದು ದಿವಸ ಉಪವಾಸ ಮಾಡುತ್ತೇನೆ ಎಂದು ಹೇಳಿದ್ದಾರೆ. ತಾವೇನಾದರೂ ತಮ್ಮ ತೂಕ ಕಡಿಮೆ ಮಾಡುವುದಕ್ಕೆ ಈ ರೀತಿ ಮಾಡಿಕೊಂಡಿದ್ದೀರಾ? ಅಥವಾ ಏನಾದರೂ ಕಮಿಟ್‌ಮೆಂಟ್ ಇದೆಯೇ?

ಉಪಾಧ್ಯಕ್ಷಣಿಯವರು : ಇದೇ ನಿಮ್ಮ ಪ್ರಶ್ನೆ?

ಶ್ರೀ ಬಸವರಾಜರಾಯರೆಡ್ಡಿ : ಮುಖ್ಯವಾದ ಪ್ರಶ್ನೆಗೆ ಬರುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ : ಅವರು ಉಪವಾಸದ ಬಗ್ಗೆ ಪ್ರಶ್ನೆ ಕೇಳುತ್ತಿದ್ದಾರೆ.

ಶ್ರೀ ಬಸವರಾಜರಾಯರೆಡ್ಡಿ : ಆಮೇಲೆ ಸರ್ಕಾರದವರು ತಮ್ಮ ಉತ್ತರದಲ್ಲಿ ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಸಿಬ್ಬಂದಿಗಳನ್ನು ಹೆಚ್ಚು ಮಾಡುವುದಾಗಿ ತಿಳಿಸಿದ್ದಾರೆ. ಎಷ್ಟು ಜನ ಸಿಬ್ಬಂದಿಗಳನ್ನು ಆಯಾ ಪ್ರದೇಶದಲ್ಲಿ ಬರುವ ಪೋಲೀಸ್ ಠಾಣೆಯಲ್ಲಿ ಹೆಚ್ಚು ಮಾಡಿದ್ದೀರಿ ಎಂಬುದನ್ನು ತಿಳಿಸಬೇಕು. ಇದಕ್ಕೆ ಸ್ಪೆಷಲ್ ಐ.ಜಿ.ಪಿಯಾಗಿ ಶ್ರೀ ಟಿ. ಮಡಿಯಾಳ್ ಎಂಬುವವರನ್ನು ಹಾಕಿದ್ದರು. ಅವರನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ. ಬೇರೆ ಯಾರನ್ನು ಅಲ್ಲಿಗೆ ಐ.ಜಿ.ಪಿ.ಯಾಗಿ ಪುನರ್ ನೇಮಕ ಮಾಡಿಲ್ಲ. ಅಲ್ಲಿಗೆ ಯಾರನ್ನು ಐ.ಜಿ.ಪಿ.ಯನ್ನಾಗಿ ಹಾಕಿದ್ದೀರಿ ಎಷ್ಟು ಜನ ಸಿಬ್ಬಂದಿಯನ್ನು ನೇಮಕ ಮಾಡಿದ್ದೀರಿ ಎನ್ನುವುದನ್ನು ತಿಳಿಸಬೇಕು. ಮತ್ತು ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಆಧುನಿಕವಾದ ಉಪಕರಣಗಳನ್ನು ಏನು ಕೊಟ್ಟಿದ್ದೀರಿ ಎನ್ನುವುದನ್ನು ಕೂಡ ತಿಳಿಸಬೇಕು. ಕೊನೆಯ ಮಾತನ್ನು ಹೇಳುತ್ತಿದ್ದೇನೆ. ಇಲ್ಲಿ ಸರ್ಕಾರಕ್ಕೆ ದೃಢ ಸಂಕಲ್ಪ ಇದೆ. ಇಷ್ಟರಲ್ಲೇ ಹಿಡಿಯುತ್ತೇವೆ ಎಂಬ ಉತ್ತರವನ್ನು ಯಾವಾಗಲೂ ಹೇಳುತ್ತಾರೆ. ನನಗೆ ಒಂದು ಸಂಶಯ ಬರುತ್ತದೆ ಏಕೆಂದರೆ ಸರ್ಕಾರ ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಮನಸ್ಸು ಮಾಡುತ್ತಿಲ್ಲ, ಯಾರದ್ದೋ ಒತ್ತಡ ಇದ್ದ ಹಾಗೆ ಕಾಣುತ್ತಿದೆ. ಇದು ನಿಜ ಎಂದು ನನಗೆ ಅನ್ನಿಸುತ್ತದೆ. ಮೇಲ್ಮನೆಯ ಸದಸ್ಯರಾದ ಎ.ಕೆ.ಸುಬ್ಬಯ್ಯನವರು ಒಂದು ಮಾತನ್ನು ಹೇಳಿದ್ದಾರೆ. ನಾನು ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳುತ್ತೇನೆ.

ಉಪಾಧ್ಯಕ್ಷಣಿಯವರು : ಪ್ರಶ್ನೆ ಹಾಕಿ, ಎಷ್ಟು ಹೊತ್ತು ಕೇಳುತ್ತಾ ಇದ್ದೀರಿ, ನೇರವಾಗಿ ಪ್ರಶ್ನೆ ಹಾಕಿದರೆ ಅವರು ಉತ್ತರ ಕೊಡುತ್ತಾರೆ.

ಶ್ರೀ ಬಸವರಾಜರಾಯರೆಡ್ಡಿ : ನನ್ನ ಸಂಶಯ ಏನು ಎಂದರೆ, ಈ ಸರ್ಕಾರಕ್ಕೆ ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಮನಸ್ಸು ಇಲ್ಲ, ನನ್ನ ಸಂಶಯ ನಿಜವಾಗಿದೆ. ಏಕೆಂದರೆ, ಮೇಲ್ಮನೆಯ ಸದಸ್ಯರಾಗಿರುವಂಥ ಎ.ಕೆ. ಸುಬ್ಬಯ್ಯನವರು ಅವರ ಪಕ್ಷದವರೇ ಆಗಿದ್ದಾರೆ. ಅವರು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ. ಇವತ್ತು ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಸರ್ಕಾರಕ್ಕೆ ಮನಸ್ಸು ಇಲ್ಲ. ಇದಕ್ಕೆ ಕಾರಣ ಹಿಂದಿನ ಸಂಪುಟದಲ್ಲಿದ್ದಂತಹ ಮೂವರು ಮಂತ್ರಿಗಳು ಕಾರಣಕರ್ತರಾಗಿದ್ದಾರೆಂದು ಆಪಾದನೆ ಮಾಡಿದ್ದಾರೆ. ಇದು ಪತ್ರಿಕೆಯಲ್ಲಿ ಬಂದಿದೆ.

Sri. M.VEERAPPA MOILY : Hon. Member cannot go on like this. He has to give notice.

ಉಪಾಧ್ಯಕ್ಷಣಿಯವರು : ಮೇಲ್ಮನೆ ಸದಸ್ಯರ ಹೆಸರನ್ನು ಇಲ್ಲಿ ಏತಕ್ಕೆ ಪ್ರಸ್ತಾಪ ಮಾಡುತ್ತೀರಿ? ತಮ್ಮದು ಏನಾದರೂ ಇದ್ದರೆ ಅದನ್ನು ಮಾತ್ರ ಹೇಳಿ.

(ಗೊಂದಲ)

ಶ್ರೀ ಬಸವರಾಜರಾಯರೆಡ್ಡಿ : ಪತ್ರಿಕೆಯಲ್ಲಿ ಅವರು ಹೇಳಿದ್ದಾರೆ, ಅದನ್ನು ನಾನು ಓದುತ್ತೇನೆ "ಕುಖ್ಯಾತ ದಂತ ಚೋರ ವೀರಪ್ಪನ್...."

(ಗೊಂದಲ)

ಉಪಾಧ್ಯಕ್ಷಣಿಯವರು : ತಾವು ಪ್ರಶ್ನೆ ಹಾಕಿ. ಅವರೆಲ್ಲಾ ಅದನ್ನು ಓದಿದ್ದಾರೆ. ಅವರು ಇದರ ಬಗ್ಗೆ ಏನು ಹೇಳುತ್ತಾರೋ ಕೇಳೋಣ.

(ಗೊಂದಲ)

ಶ್ರೀ ಬಸವರಾಜರಾಯರೆಡ್ಡಿ : ಹೇಳಿಕೆಯಿಂದ ನನಗೆ ಸಂಶಯ ಬರುತ್ತದೆ. ಇದರ ಹಿಂದೆ ಯಾರ ಕೈವಾಡ ಇದೆ ಎನ್ನುವುದನ್ನು ತಿಳಿಸಬೇಕು? ಇದರ ಹಿಂದೆ ಹಿಂದಿನ ಸಚಿವರಾಗಿರತಕ್ಕಂಥವರು.. 'ಕುಖ್ಯಾತ ದಂತ ಚೋರ ವೀರಪ್ಪನ್ ಜೊತೆ ನೇರ ಸಂಪರ್ಕ ಹೊಂದಿರುವ ಮೂವರು ಸಚಿವರನ್ನು ಸಂಪುಟದಿಂದ ಕೈಬಿಡುವಂತೆ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎ.ಕೆ. ಸುಬ್ಬಯ್ಯನವರು ಹೇಳಿದ್ದಾರೆ ಅದಕ್ಕೆ ನಮಗೆ ಸಂಶಯ ಬಂದಿದೆ. ಅವರು ಹೇಳಿದ್ದಾರೆ. ಕೆ.ಜೆ. ಜಾರ್ಜ್, ಎಸ್. ರಮೇಶ್ ಮತ್ತು ಡಿ.ಕೆ. ಶಿವಕುಮಾರ್ ಎಂದು ಹೆಸರುಗಳು ಸಹ ಬಂದಿದೆ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಅವರು ಸೂಚನೆ ಕೊಡದೆ ಮಾನ್ಯ ಸದಸ್ಯರ ಮೇಲೆ ಚಾರ್ಜ್ ಮಾಡುವುದು ಸರಿಯಲ್ಲ, ಅದನ್ನು ಎಕ್ಸಪಂಜ್ ಮಾಡಬೇಕು.

(ಗೊಂದಲ)

ಉಪಾಧ್ಯಕ್ಷಣಿಯವರು : ಈಗ ತಾವು ಕುಳಿತುಕೊಳ್ಳಿ ಅವರು ಉತ್ತರ ಹೇಳುತ್ತಾರೆ.

(ಗೊಂದಲ)

ಶ್ರೀ ಬಸವರಾಜರಾಯರೆಡ್ಡಿ : ಅವರ ಮೇಲೆ ಆಪಾದನೆ ಇದೆ. ನಿಮ್ಮ ಪಕ್ಷದ ಒಬ್ಬ ಮೇಲ್ಮನೆ ಸದಸ್ಯರು ಆಪಾದನೆ ಮಾಡಿದ್ದಾರೆ. ಇದರ ಬಗ್ಗೆ ತಾವು ದಯಮಾಡಿ ಉತ್ತರ ಹೇಳಬೇಕು. ಅದಕ್ಕೆ ಪೂರಕವಾಗಿ ಕೊನೆಯ ಪ್ರಶ್ನೆ ಕೇಳುತ್ತೇನೆ. ಸರ್ಕಾರಕ್ಕೆ ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಮನಸ್ಸು ಇಲ್ಲದಿದ್ದರೆ ನೀವು ಸೈನ್ಯಕ್ಕೆ ವಹಿಸಿಕೊಡುತ್ತೀರಾ? ಇದರ ಬಗ್ಗೆ ಹೇಳಿ.

ಶ್ರೀ ಬ್ಲೇಸಿಸ್ ಎಂ. ಡಿಸೌಜ : ಮಾನ್ಯ ಅಧ್ಯಕ್ಷರೇ, ನಮ್ಮ ಬಸವರಾಜರಾಯರೆಡ್ಡಿಯವರು ಏನು ಪ್ರಶ್ನೆ ಕೇಳಿದ್ದಾರೆಂದರೆ, ನಿಮ್ಮ ಸರ್ಕಾರ ವೀರಪ್ಪನ್‌ನನ್ನು ಹಿಡಿಯುವಲ್ಲಿ ವಿಫಲವಾಗಿದೆ. ಎಂದು. ಇಲ್ಲ, ಸರ್ಕಾರ ವಿಫಲವಾಗಲಿಲ್ಲ ಅದು ನಮ್ಮ ಗಮನಕ್ಕೆ ಬಂದಿಲ್ಲ,

ಶ್ರೀ ವಾಟಾಳ್ ನಾಗರಾಜ್ : ಹಿಡಿದಿಲ್ಲ ಅಷ್ಟೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ : ಅವನನ್ನು ಹಿಡಿಯುವ ಪ್ರೊಸಸ್‌ನಲ್ಲಿದ್ದೇವೆ. ಎಲ್ಲಾ ಪ್ರಯತ್ನವನ್ನು ನಡೆಸಿದ್ದೇವೆ. ಏಪ್ರಿಲ್ 19ನೇ ತಾರೀಖು ಒಂದು ಸ್ಪೆಷಲ್

ಟಾಸ್ಕ್ ಫೋರ್ಸ್ ಹಾಕಿ ಐಜಿಪಿ ಅಂಡರ್‌ನಲ್ಲಿ Ten Platoons of KSRP, 100, Civil Police, 50 Forest Department Personnel. ಇಷ್ಟು ನಾವು ಹೆಚ್ಚು ಮಾಡಿದ್ದೇವೆ. 3 ಪೋಲೀಸ್ ಸ್ಟೇಷನ್‌ಗಳಲ್ಲಿ ಅದರ ಸ್ಟ್ರೆಂತ್ ಜಾಸ್ತಿ ಮಾಡಿ ಅವರಿಗೆ 10 ಜೀಪ್‌ಗಳನ್ನು ಆಪರೇಟ್ ಮಾಡಲಿಕ್ಕೆ ಕೊಟ್ಟಿದ್ದೇವೆ. ನಾವೆಲ್ಲಾ ಪ್ರಯತ್ನವನ್ನು ಮಾಡಿದರೂ ಸಹ ಇಷ್ಟರವರೆಗೂ ನಾವು ಅವನನ್ನು ಹಿಡಿಯಲಿಕ್ಕೆ ಆಗಲಿಲ್ಲ, ತಮಗೆ ಗೊತ್ತಿರುವ ಹಾಗೆ ಅದು ಬಹಳ ಕಷ್ಟದ ಕೆಲಸ. MM Hills terrain 4000 Sq. K.Ms area. ಆ ಏರಿಯಾದಲ್ಲಿ ಅವನು ಅಡಗಿದ್ದಾನೆ. ನಾವೆಲ್ಲಾ ಪ್ರಯತ್ನ ಮಾಡಿ ಆದಷ್ಟು ಬೇಗ ಅವನನ್ನು ಹಿಡಿಯಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಈಗ ತಾವು ಒಂದು ಖಂಡಗ ಸುಳ್ಳು ಹೇಳುತ್ತಿದ್ದೀರಿ. ನೀವು ಒಂದಲ್ಲ ಎರಡಲ್ಲ ಸುಮಾರು ನಿಮ್ಮ ಸರ್ಕಾರ ಕಾಂಗ್ರೆಸ್ ಪ್ರಾರಂಭ ಆಯಿತಲ್ಲಾ, ಶ್ರೀ ವೀರೇಂದ್ರ ಪಾಟೀಲರು ಅಲ್ಲಿ ಕುಳಿತುಕೊಂಡಿದ್ದಾಗ ಇನ್ನು 40 ದಿವಸದಲ್ಲಿ ಅವನನ್ನು ಹಿಡಿಯುತ್ತೇವೆ ಎಂದು ಹೇಳಿದರು. ಬಂಗಾರಪ್ಪನವರು ಬಂದರು, ಅವರು ಇನ್ನು 30 ದಿವಸದಲ್ಲಿ ಹಿಡಿಯುತ್ತೇವೆಂದು ಹೇಳಿದರು. ತಾವು ಎಷ್ಟು ದಿವಸದಲ್ಲಿ ಹಿಡಿಯುತ್ತೀರಿ ಎಂಬುದು ನಮಗೆ ಇನ್ನೂ ಗೊತ್ತಿಲ್ಲ. ಹೋಗಲಿ ನಿಮ್ಮ ಕೈಯಲ್ಲಿ ಆಗುವುದಿಲ್ಲವೆಂದಾರೂ ಹೇಳಿಬಿಡಿ ನಮ್ಮ ಸರ್ಕಾರಕ್ಕೆ ಅವನನ್ನು ಹಿಡಿಯುವುದಕ್ಕಾಗುವುದಿಲ್ಲ ಎಂದು ಹೇಳಿ. ಅದು ಬಿಟ್ಟು ಮಾದೇಶ್ವರ ಬೆಟ್ಟ ದೊಡ್ಡ ಅರಣ್ಯ ಪ್ರದೇಶ ಅದರ ಒಳಗಡೆ ಯಾರೂ ಹೋಗುವುದಕ್ಕಾಗುವುದಿಲ್ಲ. ಈ ತರಹ ಮಾತನಾಡಬೇಡಿ. ಇದು ನಿಜವಾಗಿಯೂ ನಿಮಗೆ ಗೌರವ ಬರತಕ್ಕಂಥ ವಿಚಾರವಲ್ಲ. ನಮ್ಮ ಕೈಯಲ್ಲಿ ಈ ಕಳ್ಳನನ್ನು ಹಿಡಿಯುವುದಕ್ಕೆ ಆಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿ. ಸುಮ್ಮನೆ ಈ ಕಡೆ ಅರಣ್ಯ ಇಲಾಖೆಯ ಅಧಿಕಾರಿಗಳು ಸಾಯುತ್ತಾರೆ. ಆ ಕಡೆ ಪೋಲೀಸ್ ಇಲಾಖೆಯ ಅಧಿಕಾರಿಗಳೂ ಸಾಯುತ್ತಾರೆ. ಅವರು ಸತ್ತ ತಕ್ಷಣ ನೀವು ಏನು ಹೇಳುತ್ತೀರಿ ಎಂದರೆ ನಾವು ಸೈನ್ಯಕ್ಕೆ ಕೊಡುತ್ತೇವೆ ಸೈನ್ಯ ಬಂತು, ಅರೆ ಸೈನ್ಯ ಬಂತು ಎಂದು ಹೇಳುತ್ತೀರಿ. ರಾಜ್ಯದ ಜನತೆಗೆ ನೀವು ಎಷ್ಟು ಸಾರಿ ಸುಳ್ಳು ಹೇಳುತ್ತೀರಿ. ನಿಮಗೆ ಏನಾದದರೂ ಧೈರ್ಯ ಇದ್ದರೆ ಗಂಭೀರವಾಗಿ ಹೇಳಿ. ಇದು ಸರಿಯಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಎಲ್ಲರೂ ಸನ್ಮಾನ್ಯ ವೀರೇಂದ್ರ ಪಾಟೀಲರ ಸರ್ಕಾರವಿದ್ದಾಗ, ಸನ್ಮಾನ್ಯ ಬಂಗಾರಪ್ಪನವರ ಸರ್ಕಾರವಿದ್ದಾಗ ಅವರೆಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡುತ್ತಲೇ ಬಂದಿದ್ದಾರೆ. ಈಗ ಕಾಲ ಕಾಲಕ್ಕೆ ಪ್ರಯತ್ನವಂತೂ ನಿಂತಿಲ್ಲ. ITDP, Indo-Tibet Border Police, Border Security Force, CRPF. ಈ ಅರೆ ಮಿಲಿಟರಿ ಪಡೆಗಳನ್ನು ನಾವು ಈಗಾಗಲೇ ಸಂಪರ್ಕ ಮಾಡಿದ್ದೇವೆ. ಅವರು ನಮಗೆ ಸಹಾಯ ಮಾಡಲಿಕ್ಕೆ ಒಪ್ಪಿದ್ದಾರೆ. ಎಲ್ಲಾ ರೀತಿಯ ಪ್ರಯತ್ನ ನಡೆದಿದೆ. ಈಗಾಗಲೇ ಅರೆ ಸೈನಿಕ ಪಡೆಗಳ ಇಬ್ಬರು ಅಧಿಕಾರಿಗಳು ನಮ್ಮಲ್ಲಿಗೆ ಬಂದು ಇಲ್ಲಿಯ ಪೋಲೀಸ್ ಅಧಿಕಾರಿಗಳಿಗೆ ಅರಣ್ಯ ಯುದ್ಧದಲ್ಲಿ ತರಬೇತಿ ಕೂಡ ಕೊಟ್ಟಿದ್ದಾರೆ. ನಮ್ಮ ಕರ್ನಾಟಕ ರಾಜ್ಯದ ಒಂದು ತುಕಡಿಗೆ ಈಗಾಗಲೇ ತರಬೇತಿ ಮುಗಿದು ಮತ್ತೊಂದು ತುಕಡಿಗೆ ಶಿಕ್ಷಣ ಈಗ ಕೊಡಲಾಗುತ್ತಿದೆ. ಆಮೇಲೆ ಈ

ಟಾಸ್ಕ್‌ಫೋರ್ಸ್‌ನ ಸೂಪರ್‌ವಿಷನ್ ಅನ್ನು ಅಡಿಷನಲ್ ಡಿ.ಜಿ.ಪಿ. ಸನ್ನಾನ್ಯ ಅನಂದನ್ ಅವರಿಗೆ ಕೊಟ್ಟಿದ್ದೇವೆ. ಮತ್ತೆ ಮೈಸೂರು ಡಿ.ಐ.ಜಿ. ಅಜೈಸಿಂಗ್ ಅವರು ಟಾಸ್ಕ್‌ಫೋರ್ಸ್‌ನ ಚಾರ್ಜ್‌ನಲ್ಲಿದ್ದಾರೆ. ಒಂದು ಕಡೆ ತಮಿಳುನಾಡಿನಿಂದಲೂ ಕೂಡ ನಮಗೆ ವಿಶೇಷವಾದ they will flood the other forces ಅಲ್ಲಿಂದ ಬರಬೇಕಾಗುತ್ತದೆ. ಈಗಾಲೇ ಒಬ್ಬ ಅಧಿಕಾರಿ ಅವರೂ ಕೂಡ ಕೆಲವು ಸಮಯ ಕೆಲಸ ಅಷ್ಟು ಸಮರ್ಪಕವಾಗಿ ಮಾಡುತ್ತಿರಲಿಲ್ಲ. ಈಗ ತಮಿಳುನಾಡಿನ ಸರ್ಕಾರ ಕೂಡ ಇದಕ್ಕೆ ವಿಶೇಷವಾದ ಮುತುವರ್ಜಿ ತೆಗೆದುಕೊಳ್ಳುತ್ತಿದೆ. ಇನ್ನೂ ಹೆಚ್ಚು ಮುತುವರ್ಜಿ ತೆಗೆದುಕೊಳ್ಳಬೇಕೆಂದು ಹೇಳಿ to flood that area ಮಾಡುತ್ತಿದ್ದೇವೆ. ನಾನು ದಿನ ಕೊಡುವುದಿಲ್ಲ 30 ದಿವಸ, 40 ದಿವಸ ಎಂದು ಹೇಳುವುದು ಬೇಡ. ಈಗ ವೀರಪ್ಪನ್ ಹಿಡಿಯುವಂಥ ಜವಾಬ್ದಾರಿ ನಮ್ಮ ಸರ್ಕಾರದ್ದು. ಅದನ್ನು ಮಾಡುತ್ತೇವೆ. ಈಗ 30-40 ದಿವಸ ಎಂದು ಅಲ್ಲ. ಇದರ ಬಗ್ಗೆ ಏನು ಅರೆ ಮಿಲಿಟರಿ ಪಡೆಗಳಿವೆ ಅವುಗಳನ್ನೂ ಕೂಡ ಈಗ ಅಯೋಧ್ಯೆಯ ಬಾಬ್ರಿ ಮಸೀದಿ ಗಲಾಟೆಯಲ್ಲಿ ಅವರು ಕೊಡಲಿಕ್ಕಾಗಲಿಲ್ಲ. ಅವರ ವಿಶೇಷವಾದ ತರಬೇತಿಗೆ ಮಾತ್ರವಲ್ಲ, ಆ ವಿಶೇಷ ಪಡೆಯನ್ನೂ ಕೂಡ ತರಲಿಕ್ಕೆ ಈಗಾಗಲೇ ನಾನು ಕೇಂದ್ರದ ನಮ್ಮ ಗೃಹಮಂತ್ರಿಗಳಾದ ಶ್ರೀ ಎಸ್.ಬಿ. ಚೌವಾಣ್ ಅವರನ್ನು ಸಂಪರ್ಕಿಸಿದ್ದೇನೆ. ಅವರ ಜೊತೆಯಲ್ಲಿ ಮಾತುಕತೆ ಮಾಡಿದ್ದೇನೆ. ಸಧ್ಯದಲ್ಲೇ ಆ ಪಡೆಗಳನ್ನು ಒದಗಿಸಲಿಕ್ಕೆ ಕೂಡ ಅವರು ಒಪ್ಪಿಗೆ ಕೊಟ್ಟಿದ್ದಾರೆ. ಎಲ್ಲಾ ರೀತಿಯಾದಂಥ ನಿರಂತರವಾದಂಥ ಪ್ರಯತ್ನ ಮಾಡಲಾಗುತ್ತಿದೆ. ಈ ಮಾಹಿತಿಯನ್ನು ಅಂದರೆ ಇಂಟೆಂಜೆನ್ಸ್ ದೊರಕಿಸುವಂಥ ರೀತಿಯಲ್ಲಿ ಮತ್ತು ನಮ್ಮ ಪಡೆಗಳು ಬೇರೆ ಬೇರೆ ವ್ಯಾಪಕ ರೀತಿ ಒಂದು ಬಲೆಯನ್ನು ಹಾಕಿ ವೀರಪ್ಪನನ್ನು ಹಿಡಿಯತಕ್ಕಂಥ ರೀತಿಯಲ್ಲಿ ಎರಡು ಕಡೆಯಲ್ಲೂ ಕೂಡ ಮಾಡಲಾಗುತ್ತಿದೆ. ಒಂದು ಕಡೆ ಮಾಡಿದರೆ ಮತ್ತೊಂದು ಕಡೆ ತಪ್ಪಿಸಿಕೊಳ್ಳುತ್ತಾರೆ. ಆದ್ದರಿಂದ ಎಲ್ಲಾ ಕಡೆಯಿಂದಲೂ ಬಲೆಯನ್ನು ಹಾಕಿ ವೀರಪ್ಪನನ್ನು ಹಿಡಿಯತಕ್ಕಂಥ ಸಂಕಲ್ಪ ನಾವು ಮಾಡಿದ್ದೇವೆ. ಹಿಡಿಯುವಂಥ ಕೆಲಸವನ್ನು ಖಂಡಿತವಾಗಿ ಮಾಡುತ್ತೇವೆ. ಅದು 30 ದಿವಸಕ್ಕಿಂತ ಮೊದಲೇ ಆಗಬಹುದು, ತಾವು ವಿಶ್ವಾಸ ಇಡಬಹುದು. ಆದ್ದರಿಂದ ಹೆಚ್ಚು ವಿವರವನ್ನು ಮಾಡಿದರೆ ಅವನು ಹೊರಟುಹೋಗುತ್ತಾನೆ. ಓಡಿಹೋಗುತ್ತಾನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಎಲ್ಲಿದ್ದಾನೆ ಹೇಳಿ ಸ್ವಾಮಿ? ಎಲ್ಲಿ ಹೋಗುತ್ತಾನೆ ಸ್ವಾಮಿ? ಎಲ್ಲಿದ್ದಾನೆ ಅವನು ಓಡಿಹೋಗುವುದಕ್ಕೆ? ಓಡಿಹೋಗುತ್ತಾನೆಂದು ಹೇಳಿದ ಮೇಲೆ ಅವನು ಎಲ್ಲಿದ್ದಾನೆಂದು ತಮಗೆ ಗೊತ್ತಿರಬೇಕಲ್ಲಾ? ನಿಜವಾಗಲೂ ಸರ್ಕಾರ ಒಂದು ರೀತಿಯಲ್ಲಿ ಜನರಿಗೆ ಹೇಳಿಕೆ ಕೊಟ್ಟು ಮೋಸ ಮಾಡುತ್ತಿದೆ. ಪ್ರತಿ ಸಾರಿ ಮೋಸ. ಸರ್ಕಾರ ಮೊದಲಿಂದಲೂ ಈ ಬಗ್ಗೆ ಸರಿಯಾದ ಹೇಳಿಕೆ ಕೊಡುತ್ತಿಲ್ಲ. ಜನ ಸಾಯುತ್ತಿದ್ದಾರೆ. ಲೂಟಿಯಾಗುತ್ತಿದೆ, ಅನ್ಯಾಯ ನಡೆಯುತ್ತಿದೆ, ಜನರಿಗೆ ರಕ್ಷಣೆ ಇಲ್ಲ, ಅಧಿಕಾರಿಗಳಿಗೆ ರಕ್ಷಣೆ ಇಲ್ಲ, ಏನು ನಡೆಯುತ್ತಿದೆ ಇವತ್ತಿನ ದಿವಸ?

ಉಪಾಧ್ಯಕ್ಷಣೆಯವರು : ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಆರ್.ವಿ. ದೇಶಪಾಂಡೆ : ಹೊರಟುಹೋಗುತ್ತಾನೆಂದರೆ ಅವನು ಇರುವುದು ತಮಗೆ ಗೊತ್ತಿರುವ ಹಾಗಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ : ವೀರಪ್ಪನನ್ನು ಹಿಡಿಯುವಂಥ ತಂತ್ರದ ಎಲ್ಲಾ ವಿವರ ಹೇಳಿದರೆ we cannot catch him ಆ ಇಂಟೆನ್‌ಷನ್‌ನಲ್ಲಿ ಹೇಳಿದ್ದೆನೆಯೇ ಹೊರತು ಬೇರೆಯಲ್ಲ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮಲ್ಲಿ ಏನು ಗುಟ್ಟು ಉಳಿದಿದೆ.

ಶ್ರೀ ಆರ್.ವಿ. ದೇಶಪಾಂಡೆ : ವೀರಪ್ಪನನ್ನು ಹಿಡಿಯುವುದರಲ್ಲಿ ನೀವು ವಿಫಲರಾಗಿದ್ದೀರಿ. ಅದನ್ನು ಒಪ್ಪಿಕೊಳ್ಳಿ. ಅವನನ್ನು ಹಿಡಿಯುವುದಕ್ಕೆ ನೀವು ಏನು ಕೆಲವು ಕ್ರಮ ತೆಗೆದುಕೊಂಡಿದ್ದೀರಿ ಅದನ್ನು ಹೇಳುವುದಕ್ಕೆ ಬರುವುದಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ಹೇಳಬೇಕೆಂದು ಬಲವಂತ ಇಲ್ಲ. ಆದರೆ, ಐಪಿಎಸ್ ಆಫೀಸರ್‌ಗಳು ಸತ್ತುಹೋದರು, ಐಎಎಸ್ ಆಫೀಸರ್‌ಗಳು ಸತ್ತುಹೋದರು, ಪೋಲೀಸರು ಸತ್ತುಹೋದರು, ಜನ ಸತ್ತುಹೋದರು, ಇದು 30 ದಿವಸದಲ್ಲಿ ಆಗಬಹುದು 40 ದಿವಸದಲ್ಲಿ ಆಗಬಹುದೆಂದರೆ ಅದು ಯಾವಾಗ ಆಗುತ್ತದೆ? ಹಾಗಾಗಿ ಅದರ ಬಗ್ಗೆ ನಿರ್ದಿಷ್ಟವಾದ ಕ್ರಮ ಸರ್ಕಾರದಿಂದ ಆಗಬೇಕಾಗುತ್ತದೆ. ಎಸ್.ಬಿ. ಚೌಹಾನ್‌ರವರ ಹತ್ತಿರ ಮಾತನಾಡಿ, ಡಿ.ಜಿ.ಪಿ. ಹತ್ತಿರ ಮಾತನಾಡಿ, ಅದು ಬೇರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರಲ್ಲಿ ಅನೇಕ ಜನ ಅಧಿಕಾರಿಗಳು ಇದ್ದಾರೆ, ಅನೇಕ ಜನ ಶಾಸಕರು ಇದ್ದಾರೆಂದು ಎ.ಕೆ. ಸುಬ್ಬಯ್ಯನವರೂ ಆರೋಪ ಮಾಡಿದ್ದಾರೆ. ಅವರನ್ನು ಬಿಗಿ ಮಾಡುತ್ತೀರಾ? ಅವನಿಗೆ ಬೆಂಬಲ ಕೊಡುವಂಥ ನಿಮ್ಮ ಅಧಿಕಾರಿಗಳನ್ನು ನಿಮ್ಮ ಶಾಸಕರನ್ನು ಹತೋಟಿ ಮಾಡುತ್ತೀರಾ?

ಉಪಾಧ್ಯಕ್ಷಿಣಿಯವರು : ಸರ್ಕಾರದ ಕಡೆಯಿಂದ ಏನು ಹೇಳಬೇಕೋ ಅದನ್ನೆಲ್ಲಾ ಹೇಳಿದ್ದಾರೆ. ಬೇಕಾದರೆ ಬೇರೆ ರೂಪದಲ್ಲಿ ಇದನ್ನು ತನ್ನಿ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಈ ರೀತಿ ತಪ್ಪಿಸಿಕೊಂಡು ಹೋಗುವುದಕ್ಕಾಗುವುದಿಲ್ಲ. ನಿಜವಾಲೂ ಇದರಿಂದ ರಾಜ್ಯಕ್ಕೆ ಕೆಟ್ಟ ಹೆಸರು ಬಂದಿದೆ, ಲೂಟಿಯಾಗಿದೆ, ಜನ ಸತ್ತಿದ್ದಾರೆ ಏನು ಈ ತರಹ ಆದರೆ?

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ /ಸಚಿವರು) : ಮಾನ್ಯ ಉಪಾಧ್ಯಕ್ಷಿಣಿವರೇ ದಿನಾಂಕ 5-1-1993ರ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುತ್ತೇನೆ.

ವೈನ್ ಶಾಪ್‌ಗಳಿಗೆ ನೀಡಲಾದ ಲೈಸನ್ಸ್‌ಗಳ ಸಂಖ್ಯೆ

1059 - ಶ್ರೀ ಆರ್.ಎನ್. ಜಾಲಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1988-89, 1989-90, 1990-91, 1991-92 ಮತ್ತು *1992-93ರ ಸಾಲಿಗೆ ಇದುವರೆಗೆ ನೀಡಲಾದ ವೈನ್ ಶಾಪ್ ಲೈಸನ್ಸ್‌ಗಳ ಸಂಖ್ಯೆ ಎಷ್ಟು?*

ಆ) ಈಗ ಹಾಲಿ ಇರುವ ವೈನ್ ಶಾಪ್‌ಗಳ ಸಂಖ್ಯೆ ಎಷ್ಟು?

ಇ) ಮೇಲೆ ಹೇಳಲಾದ ವರ್ಷಗಳಲ್ಲಿ ಆಗಿರುವ ಅಬಕಾರಿ ಆದಾಯ ಎಷ್ಟು?

ಈ) ಸಾರಾಯಿ ಅಂಗಡಿಗಳಿಂದ ಮೇಲೆ ಹೇಳಲಾದ ವರ್ಷಗಳಲ್ಲಿ ಬಂದಿರುವ ಆದಾಯ ಎಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಕಳೆದ 5 ವರ್ಷಗಳಲ್ಲಿ ನೀಡಲಾದ ವೈನ್ ಶಾಪ್‌ಗಳ ಸಂಖ್ಯೆ ಈ ರೀತಿಯಾಗಿ ಇರುತ್ತದೆ (ಅಬಕಾರಿ ವರ್ಷಕ್ಕೆ)

ಸಿಎಲ್-2 (ಚಿಲ್ಲರೆ ಮದ್ಯ ಮಾರಾಟ ಅಂಗಡಿ)

1	1988-89	1,082
2	1989-90	3,166
3	1990-91	3,445
4	1991-92	3,769
5	1992-93	3,810

ಆ) 3810

ಇ) ಕೆಳಗೆ ನೀಡಿರುವ ವಿವರಗಳಂತೆ

(ಆರ್ಥಿಕ	ವರ್ಷಕ್ಕೆ)	ರೂ. ಕೋಟಿಗಳಲ್ಲಿ
1.	1988-89	258.89
2.	1989-90	327.57
3.	1990-91	429.47
4.	1991-92	510.32
5.	1992-93	237.46

(ಸೆಪ್ಟೆಂಬರ್ 92 ರವರೆಗೆ)

ಈ) ಕೆಳಗೆ ನೀಡಿರುವ ವಿವರಗಳಂತೆ

(ಆರ್ಥಿಕ ವರ್ಷಕ್ಕೆ ರೂ. ಕೋಟಿಗಳಲ್ಲಿ)

1.	1988-89	111-91
2. .	1989-90	145.56
3.	1990-91	261.00
4	1991-92	362.46
5	1992-93	140.31

(ಸೆಪ್ಟೆಂಬರ್ 92 ರವರೆಗೆ)

ನೆಲಮಂಗಲ ಮತ್ತು ತುಮಕೂರು ನಡುವೆ ಆಗುವ ಅಪಘಾತಗಳ ನಿವಾರಣೆ

78 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನೆಲಮಂಗಲ ಮತ್ತು ತುಮಕೂರು ನಡುವೆ ಪ್ರತಿ ದಿವಸ ಆಗುವ ಅಪಘಾತದ ಮರಣವನ್ನು ನಿವಾರಿಸಲು ಸಂಚಾರಿ ಆರೋಗ್ಯ ಘಟಕದ ವಾಹನ ಓಡಿಸುವ ಬಗ್ಗೆ ವಚನ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸಂಚಾರಿ ಆರೋಗ್ಯ ಘಟಕದ ವಾಹನ ಓಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಇ) ಇದಕ್ಕೆ ಬೇಕಾಗುವ ಕಾಲಮಿತಿ ಏನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಈ ಪ್ರಸ್ತಾವನೆಯು ವಿಧಾನ ಸಭೆಯಲ್ಲಿ ಚರ್ಚಿಸುವ ಸಂದರ್ಭದಲ್ಲಿ ಮಾನ್ಯ ಆರೋಗ್ಯ ಸಚಿವರು ಸರ್ಕಾರದ ಮಟ್ಟದಲ್ಲಿ ಈ ಬಗ್ಗೆ ಪರಿಶೀಲನೆ ಮಾಡಿ ಬೆಂಗಳೂರು ಸುತ್ತಾ 40 ಅಥವಾ 50 ಕಿ.ಮೀ. ವ್ಯಾಸದಲ್ಲಿ ಈ ಒಂದು ವ್ಯವಸ್ಥೆ ಮಾಡಿ ಗಾಯಾಳುಗಳಿಗೆ ತಕ್ಷಣ ಚಿಕಿತ್ಸೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ ಎಂದು ತಿಳಿಸಿರುವುದು ನಿಜ. ಆರೋಗ್ಯ ಘಟಕದ ವಾಹನ ಓಡಿಸುವ ಬಗ್ಗೆ ಏನೂ ಆಶ್ವಾಸನೆ ನೀಡಿಲ್ಲ.

ಆ) ಮೇಲ್ಕಂಡ ಆಶ್ವಾಸನೆಯಂತೆ ನೆಲಮಂಗಲದ ಆಸ್ಪತ್ರೆಯನ್ನು ತುರ್ತು ಚಿಕಿತ್ಸೆಯ ಟ್ರಾಮಾ ಕೇಂದ್ರ ಸಹಿತದ 100ಹಾಸಿಗೆ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಲಾಗಿದೆ. ಆದುದರಿಂದ ಸಂಚಾರಿ ಆರೋಗ್ಯ ಘಟಕದ ವಾಹನವನ್ನು ಓಡಿಸಲು ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಚಿತ್ರದುರ್ಗ ಜಿಲ್ಲೆಯಲ್ಲಿ ಮಾವಿನ ಬೆಳೆ ಯೋಜನೆ

80 - ಶ್ರೀ ಇಲ್ಕಲ್ ವಿಜಯಕುಮಾರ್ (ಹೊಸದುರ್ಗ) : ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಮಾವಿನ ಫಸಲು ಬೆಳೆಸಲು ಸರ್ಕಾರದಲ್ಲಿ ಯೋಜನೆಗಳಿವೆಯೇ?

ಆ) ಮಾವಿನ ಫಸಲನ್ನು ಬೆಳೆಯುವ ರೈತರು ಸುಧಾರಿತ ತಳಿಗಳನ್ನು ತರಿಸಲು ಮನವಿಯನ್ನು ಸಲ್ಲಿಸಿರುವರೇ ?

ಇ) ಹಾಗಿದ್ದಲ್ಲಿ ಹೊಸದುರ್ಗ ತಾಲ್ಲೂಕಿಗೆ ರತ್ನಗಿರಿ ಅಲ್ಫಾನ್ಸೊ ತಳಿಗಳನ್ನು ತರಿಸಲು ಮನವಿ ಸಲ್ಲಿಸಿ ಹಾಗೂ ಇದುವರೆಗೂ ಪುರಸ್ಕರಿಸದಿರಲು ಕಾರಣಗಳೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಹೌದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ನಂಜನಗೂಡಿನಲ್ಲಿ ದಳವಾಯಿ ಕಟ್ಟಡ ಹೊಸದಾಗಿ ಕಟ್ಟುವುದು

37 - ಶ್ರೀ ಎಂ. ಮಹದೇವ್ (ನಂಜನಗೂಡು) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಂಜನಗೂಡು ಟೌನ್‌ನಲ್ಲಿರುವ ದಳವಾಯಿ ಕಟ್ಟಡವನ್ನು ಕೆಡವಿ ಹೊಸ ಕಟ್ಟಡ ಕಟ್ಟಲು ಸರ್ಕಾರ 5-6 ವರ್ಷಗಳಿಂದ ಕ್ರಮ ತೆಗೆದುಕೊಳ್ಳದಿರುವುದರಿಂದ ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ದಳವಾಯಿ ಕಟ್ಟಡ ಕಟ್ಟಲು ಯಾವಾಗ ಪ್ರಾರಂಭ ಮಾಡಲಾಗುವುದು ಮತ್ತು ಕಟ್ಟಡದ ಅಂದಾಜು ವೆಚ್ಚ ಎಷ್ಟು ? ಹಾಗೂ ಬಿಡುಗಡೆ ಮಾಡಿರುವ ಹಣವೆಷ್ಟು ?

ಇ) ಕಟ್ಟಡ ಕೆಡವುದಕ್ಕೆ ಮುಂಚೆ ಇದ್ದ ಸುಮಾರು ರೂ. 10.00 ಲಕ್ಷಗಳ ಮೌಲ್ಯದ ಮರವಟ್ಟುಗಳು ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಬಂದಿದ್ದಲ್ಲಿ ತನಿಖೆ ಮಾಡಿ ತಪಿತಸ್ಥರ ಮೇಲೆ ಕ್ರಮತೆಗೆದುಕೊಳ್ಳಲಾಗುವುದೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹಳೆಯ ಕಟ್ಟಡವನ್ನು ಕೆಡವಿದೆ. ಶಾಲೆಯನ್ನು ನಡೆಸಲು ಬೇರೆ ಕಡೆ ಸ್ಥಳವನ್ನು ಒದಗಿಸಿದೆ.

ಆ) ಹೊಸ ಶಾಲಾ ಕಟ್ಟಡ ನಿರ್ಮಾಣಕ್ಕೆ ರೂ. 46.00 ಲಕ್ಷಗಳ ಅಂದಾಜು ಪಟ್ಟಿ ತಯಾರಿಸಿದೆ. ಮುಂದಿನ ಹಣಕಾಸು ವರ್ಷದಲ್ಲಿ ಅನುದಾನ ಒದಗಿಸಲು ಪ್ರಯತ್ನ ಮಾಡಲಾಗುವುದು.

ಇ) ಇಲ್ಲ

ಈ) ಪ್ರಶ್ನೆ (ಇ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸರ್ಕಾರಿ ನೌಕರರ ಪ್ರಯಾಣಭತ್ಯೆ ಹಾಗೂ ದಿನಭತ್ಯೆ.

936 - ಶ್ರೀ ಕೆ. ಸಿದ್ದಯ್ಯ (ಸಂತೆಮಾರನ ಹಳ್ಳಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರಿ ನೌಕರನ ಕುಟುಂಬದ ಐದು ಜನ ಸದಸ್ಯರಿಗೆ ಅವರು ವರ್ಗಾವಣೆಯಾದ ಸ್ಥಳಕ್ಕೆ ಪ್ರಯಾಣ ಮಾಡದಿದ್ದಾಗ್ಯೂ ಸಹ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಯನ್ನು ಕೊಡುವುದು ನಿಜವೆ ?

ಆ) ಒಂದೇ ಕುಟುಂಬದ ಸರ್ಕಾರಿ ನೌಕರರಾದ ಗಂಡ, ಹೆಂಡತಿ ಮತ್ತು ಕುಟುಂಬದ ಸದಸ್ಯರು ಒಂದೇ ಮನೆಯಲ್ಲಿ ವಾಸವಾಗಿದ್ದರೂ ಸಹ ಅವರಿಗೆಲ್ಲರಿಗೂ ಮನೆ ಬಾಡಿಗೆ ಭತ್ಯೆ ನೀಡಲಾಗುತ್ತಿದ್ದುದು ನಿಜವೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಇಲ್ಲ.

ಆ) ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 67 ಎಸ್‌ಆರ್‌ಪಿ 89 ದಿನಾಂಕ 4-5-1990ರ ಕಂಡಿಕೆ ಸಂ 34ರ ಮೇರೆಗೆ ಒಬ್ಬ ಸರ್ಕಾರಿ ನೌಕರನು-ಳು ತಿಂಗಳಿಗೆ ರೂ. 2525.00 ಅಥವಾ ಆದಕ್ಕಿಂತ ಹೆಚ್ಚು ಮೂಲ ವೇತನ ಪಡೆಯುತ್ತಿದ್ದು, ಅವನ:ಳ ಪತ್ನಿ ಗಂಡ ರಾಜ್ಯ ಸರ್ಕಾರ; ಕೇಂದ್ರ ಸರ್ಕಾರ ಕೇಂದ್ರ ಅಥವಾ ರಾಜ್ಯ ಸಾರ್ವಜನಿಕ ಉದ್ಯಮಗಳು ಸ್ಥಳೀಯ ಸಂಸ್ಥೆಗಳು: ಅರೆ ಸರ್ಕಾರಿ ಸಂಸ್ಥೆಗಳು; ಅರೆ ಸರ್ಕಾರಿ ಸಂಸ್ಥೆಗಳು; ಅನುದಾನ ಪಡೆಯುವ ಸಂಸ್ಥೆಗಳು ; ಸಹಕಾರ ಸಂಘಗಳ ನೌಕರನಾಗಿದ್ದು ತಿಂಗಳಿಗೆ ರೂ. 2525.00 ಅಥವಾ ಅದಕ್ಕಿಂತ ಹೆಚ್ಚು ಮೂಲ ವೇತನ ಪಡೆಯುತ್ತಿರುವ ಸಂದರ್ಭದಲ್ಲಿ ಅವರಲ್ಲೊಬ್ಬರಿಗೆ ಕೊಡಬಹುದಾದಂಥ ಮನೆ ಬಾಡಿಗೆ ಭತ್ಯೆಯನ್ನು ತಿಂಗಳಿಗೆ ರೂ. 2525.00 ಮೂಲ ವೇತನದ ಮೇಲೆ ದೊರೆಯಬಹುದಾದಷ್ಟು ಮೊತ್ತಕ್ಕೆ ಪರಿಮಿತಿಗೊಳಿಸತಕ್ಕದ್ದು. ದಂಪತಿಗಳಲ್ಲಿ ಇನ್ನೊಬ್ಬರು ಗೊತ್ತುಪಡಿಸಲಾದ ದರಗಳಲ್ಲಿ ಮನೆ ಬಾಡಿಗೆ ಭತ್ಯೆಯನ್ನು ಪಡೆಯಲು ಅರ್ಹರಾಗಿರತಕ್ಕುದು.

ಸಾಧನೆಯ ಸಮಾವೇಶಕ್ಕೆ ವೆಚ್ಚ ಮಾಡಿರುವ ಮೊತ್ತ

82 - ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗಾ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಿನಾಂಕ 17.10.92ರಂದು ನಡೆದ ಸರ್ಕಾರದ ಸಾಧನೆಯ ಸಮಾವೇಶಕ್ಕೆ ವೆಚ್ಚ ಮಾಡಿದ ಮೊತ್ತವೆಷ್ಟು? (ಇಲಾಖಾವಾರು ಖರ್ಚುಗಳ ಮಾಹಿತಿ ನೀಡುವುದು)?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 1,72,74,436.27 (ಇಲಾಖಾವಾರು ವೆಚ್ಚದ ಮಾಹಿತಿಯನ್ನು ಲಗತ್ತಿಸಲಾಗಿದೆ.)

ವಿಧಾನಸಭಾ ಸದಸ್ಯರಾದ ಶ್ರೀ ಬಸವರಾಜರಾಯರೆಡ್ಡಿಯವರ ಚುಕ್ಕೆ ಗುರುತಿನ ಪ್ರಶ್ನೆ 82ಕ್ಕೆ ಸಂಬಂಧಿಸಿದಂತೆ ದಿನಾಂಕ 17.10.92ರ ಸಾಧನೆಯ ಸಮಾವೇಶದ ಇಲಾಖಾವಾರು ವೆಚ್ಚದ ಪಟ್ಟಿ

ಇಲಾಖೆಗಳು	ರೂಪಾಯಿಗಳು
1. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	36,450.00
2. ಸಮಾಜಕಲ್ಯಾಣ ಮತ್ತು ಕಾರ್ಮಿಕ ಇಲಾಖೆ	52,500.00
3. ನೀರಾವರಿ ಇಲಾಖೆ	1.02,058-00
4. ಪಶುಸಂಗೋಪನೆ, ಮೀನುಗಾರಿಕೆ ಮತ್ತು ಅರಣ್ಯ ಇಲಾಖೆ	62,442.00

5.	ಒಳಾಡಳಿತ ಇಲಾಖೆ	6,98,950.00
6.	ಇಂಧನ ಇಲಾಖೆ	1,11,241.27
7.	ಕಂದಾಯ ಇಲಾಖೆ	49.000.00
8.	ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	1,24,350.00
9.	ಶಿಕ್ಷಣ ಇಲಾಖೆ	50,000.00
10.	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನಸೇವಾ ಇಲಾಖೆ	1,13,53,774.00
11.	ಲೋಕೋಪಯೋಗಿ ಇಲಾಖೆ	44,99,671.00
12.	ಆಹಾರ ಮತ್ತು ಸಾರಿಗೆ ಇಲಾಖೆ	49,500.00
13.	ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ	35,000.00
14.	ಕೃಷಿ ಮತ್ತು ತೋಟಗಾರಿಕೆ ಇಲಾಖೆ	49,500.00
	ಒಟ್ಟು	**1,72,74,436.27**

ಹೈದರಾಬಾದ್ - ಕರ್ನಾಟಕ ಅಭಿವೃದ್ಧಿ ಯೋಜನೆಗೆ ಬಿಡುಗಡೆಯಾದ ಹಣ

282 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೈದರಾಬಾದ್ ಕರ್ನಾಟಕ ಯೋಜನೆ ಅಭಿವೃದ್ಧಿ ಯೋಜನೆಗಾಗಿ ಕಳೆದೆರಡು ವರ್ಷಗಳಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ? (ವರ್ಷಾವಾರು ವಿವರಗಳನ್ನು ನೀಡುವುದು)

ಆ) ಈ ಅವಧಿಯಲ್ಲಿ ಬಿಡುಗಡೆ ಮಾಡಲಾದ ಹಣವನ್ನು ಪೂರ್ಣವಾಗಿ ಖರ್ಚು ಮಾಡಲಾಗಿದೆಯೇ?

ಇ) ಈ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಈ ವರ್ಷ ಕೈಗೊಂಡಿರುವ ಕಾಮಗಾರಿಗಳ ವಿವರಗಳೇನು? (ತಾಲ್ಲೂಕುವಾರು ವಿವರಗಳನ್ನು ನೀಡುವುದು)?

ಈ) ಈ ಕಾಮಗಾರಿಗಳು ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಈ ಕಾಮಗಾರಿಗಳನ್ನು ಕ್ಷಿಪ್ರಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ವರ್ಷಾವಾರು ಬಿಡುಗಡೆಯಾದ ಹಣ ಕೆಳಗಿನಂತಿದೆ

(ಕೋಟಿ ರೂ.ಗಳಲ್ಲಿ)

ವರ್ಷ	*ಬಿಡುಗಡೆಯಾದ ಹಣ*
1989-90	0.10
1990-91	50.00
1991-92	60.00
1992-93 (ನವೆಂಬರ್ 92ರ ಅಂತ್ಯದವರೆಗೆ)	25.00
ಒಟ್ಟು	**135.00**

ಆ) ಬಿಡುಗಡೆ ಮಾಡಿದ ಹಣ ಪೂರ್ಣ ಖರ್ಚಾಗಿದೆ.

ಇ) ತಾಲ್ಲೂಕುವಾರು ಕಾಮಗಾರಿಗಳ ವಿವರ ಕೆಳಗಿನಂತಿದೆ.

	ತಾಲ್ಲೂಕು	ಪ್ರಗತಿಯಲ್ಲಿರುವ ಕಾಮಗಾರಿಗಳು ತೆಗೆದುಕೊಂಡಿದ್ದು
1.	ಬೀದರ್	46
2.	ಔರಾದ್	108
3.	ಭಾಲ್ಕಿ	80
4.	ಬಸವಕಲ್ಯಾಣ	84
5.	ಹುಮ್ನಾಬಾದ್	66
6.	ಕೆ.ಇ.ಬಿ. (ತಾಲ್ಲೂಕ್ ವಿವರಗಳು ಲಭ್ಯವಿಲ್ಲ)	146
	ಒಟ್ಟು	530

ಈ) ಇಲ್ಲ

ಉ) ನಿರ್ದಿಷ್ಟ ಪ್ರಸಂಗಗಳು ಗಮನಕ್ಕೆ ಬಂದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಉತ್ತರ ಕನ್ನಡ ಜಿಲ್ಲೆಯ ಅಘನಾಶಿನಿ ಯೋಜನೆ ಕುರಿತು

114 - ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯ ಅಘನಾಶಿನಿ ಯೋಜನೆಯನ್ನು ಕೈಬಿಡಲು ಸರ್ಕಾರ ಆಲೋಚಿಸಿದೆಯೇ?

ಶ್ರೀ ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಇಲ್ಲ

ಹಾಲಿನ ಶೇಖರಣೆಗೆ ರಜಾ ಹಾಗೂ ಶೇಖರಣಾ ಧಾರಣೆ ಕಡಿಮೆ ಮಾಡಿರುವ ಬಗ್ಗೆ

115 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಮುಖ್ಯ ಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಇತ್ತೀಚಿನ ದಿನಗಳಲ್ಲಿ ಹಾಲಿನ ಶೇಖರಣಾ ಧಾರಣೆ ಕಡಿಮೆ ಮಾಡಿರುವುದು ಹಾಗೂ ಹಾಲು ಶೇಖರಣಾ ರಜೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದು ಯೋಜನೆಯ ಮೂಲ ರೂಪರೇಷೆಗೆ ವಿರುದ್ಧವಲ್ಲವೇ?

ಇ) ಇದರಿಂದ ರೈತರಿಗೆ ಉಂಟಾಗಿರುವ ನಷ್ಟವನ್ನು ತುಂಬಿಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ತುಮಕೂರು ಹಾಲು ಒಕ್ಕೂಟ ಮಾತ್ರ ಹಾಲು ರಜೆಯನ್ನು ಘೋಷಿಸಿದೆ.

ಆ) ಈ ಹಿಂದೆ ಹಾಲು ಉತ್ಪಾದಕರ ಹಿತದೃಷ್ಟಿಯಿಂದ ಹಾಲು ರಜೆಯನ್ನು ನೀಡಲಾಗಿದ್ದು ಇದನ್ನು ಮುಂಚಿತವಾಗಿ ಹಾಲು ಉತ್ಪಾದಕರಿಗೆ ತಿಳಿಸಲಾಗುತ್ತಿದೆ.

ಈ) ಉದ್ಭವಿಸುವುದಿಲ್ಲ.

ಜಿಲ್ಲಾ ಪರಿಷತ್ತಿನವರಿಂದ ಆರಂಭವಾದ ಕೆಲವು ಗ್ರಾಮಾಂತರ ಪಶುವೈದ್ಯ ಶಾಲೆಗಳನ್ನು ಸ್ಥಗಿತ.

117 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಿಲ್ಲಾ ಪರಿಷತ್ತಿನವರು ಗ್ರಾಮಾಂತರ ಪಶುವೈದ್ಯ ಶಾಲೆಗಳನ್ನು ಆರಂಭಿಸಿ ಅವುಗಳಲ್ಲಿ ಕೆಲವನ್ನು ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿವೆಯೇ?

ಆ) ಇದು ಅತ್ಯಂತ ಜರೂರಿ ಕಾರ್ಯಕ್ರಮವಾಗಿದ್ದು ಸ್ಥಗಿತಗೊಳಿಸಿರುವುದರಿಂದ ಜಾನುವಾರುಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಆದ್ದರಿಂದ ಮುಂದುವರಿಸಿ ಜಾನುವಾರುಗಳಿಗೆ ಸೇವೆ ಸಲ್ಲಿಸಲಾಗುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಇಲ್ಲ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಹಾಸನ ಜಿಲ್ಲೆಯ ಕಾಚೇನಹಳ್ಳಿ ಏತ ನೀರಾವರಿ ಯೋಜನೆ

156 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೇನರಸೀಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆಯ ದಂಡಿಗನ ಹಳ್ಳಿ ಹೋಬಳಿ ಕಾಚೇನಹಳ್ಳಿ ಏತನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಕರೆಯಲಾಗಿದ್ದ ಟೆಂಡರನ್ನು ರದ್ದು ಪಡಿಸಲು ಕಾರಣವೇನು?

ಆ) ನದಿ ನೀರನ್ನು ಉಪಯೋಗಿಸಲು ಸರ್ಕಾರವು ಹೆಚ್ಚು ಆಸಕ್ತಿ ವಹಿಸಿದ್ದರೂ ಕೂಡ ವಿಳಂಬ ಮಾಡುತ್ತಿರಲು ಕಾರಣವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹಾಸನ ಜಿಲ್ಲೆ ದಂಡಿಗನಹಳ್ಳಿ ಹೋಬಳಿ ಕಾಚೇನಹಳ್ಳಿ ಏತನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಕರೆಯಲಾಗಿದ್ದ ಟೆಂಡರನ್ನು ರದ್ದುಪಡಿಸಿರುವುದಿಲ್ಲ.

ಆ) ಕಾಚೇನಹಳ್ಳಿ ಏತನೀರಾವರಿ ಯೋಜನೆಯನ್ನು ಶೀಘ್ರವಾಗಿ ಕಾರ್ಯಗತಗೊಳಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ರಾಜ್ಯದಲ್ಲಿ ವಿಧಾನಸಭಾ ಕ್ಷೇತ್ರಗಳ ಪುನರ್ ವಿಂಗಡಣೆ

944 - ಶ್ರೀ ಕೆ. ಹರ್ಷಕುಮಾರಗೌಡ (ಚಾಮರಾಜ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳ ಪುನರ್ ವಿಂಗಡಣೆಯ ಕಾರ್ಯ ಕೈಗೊಳ್ಳಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದೆಯೇ?

ಆ) ಹಾಗಿದ್ದಲ್ಲಿ ಮೀಸಲು ಕ್ಷೇತ್ರಗಳನ್ನು ಬದಲಾಯಿಸಲು ಸರ್ಕಾರವು ಸೂಚಿಸಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಮೈಸೂರು ನಗರ ಕೆ.ಆರ್. ಆಸ್ಪತ್ರೆಯ ಆಧುನೀಕರಣ

946 - ಶ್ರೀ ಕೆ. ಹರ್ಷಕುಮಾರ್‌ಗೌಡ (ಚಾಮರಾಜ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದ ಕೃಷ್ಣರಾಜೇಂದ್ರ ಆಸ್ಪತ್ರೆಯನ್ನು ಆಧುನೀಕರಣಕ್ಕೆ ಸರ್ಕಾರವು ಯೋಜಿಸಿರುವ ಕಾರ್ಯಕ್ರಮವೇನು?

ಆ) 1992-93ನೇ ಸಾಲಿನಲ್ಲಿ ಆಸ್ಪತ್ರೆಯ ಅಭಿವೃದ್ಧಿಗೆ ಸರ್ಕಾರವು ಬಿಡುಗಡೆ ಮಾಡಿರುವ ಹಣವೆಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಮೈಸೂರು ನಗರದ ಕೃಷ್ಣರಾಜೇಂದ್ರ ಆಸ್ಪತ್ರೆಯ ಆಧುನೀಕರಣಕ್ಕಾಗಿ ರೂ. 1,12,63,165 ಲಕ್ಷ ಹಣವನ್ನು ಒದಗಿಸಿದೆ. ಈ ಆಸ್ಪತ್ರೆಯ ಆಧುನೀಕರಣದ ಬಗ್ಗೆ ಈ ಕೆಳಕಂಡಂತೆ ಕಾರ್ಯಕ್ರಮಗಳನ್ನು ಯೋಜಿಸಿದೆ :

1) ವಿದ್ಯುತ್ ದೋಬಿಖಾನೆಯನ್ನು ಈ ಆಸ್ಪತ್ರೆಯಲ್ಲಿ ಸ್ಥಾಪಿಸಲು ಯೋಜಿಸಲಾಗಿದ್ದು ಇದಕ್ಕಾಗಿ 50 ಲಕ್ಷ ರೂ.ಗಳ ಅನುದಾನವನ್ನು ಕೊಡಲಾಗಿದೆ.

2) ಇಲ್ಲಿ ಸುಟ್ಟಗಾಯದ ವಾರ್ಡ್‌ನ್ನು ತೆರೆಯಲು ಯೋಜಿಸಿದ್ದು ಲೋಕೋಪಯೋಗಿ ಇಲಾಖೆಯವರಿಂದ ಕಟ್ಟಡ ನಿರ್ಮಾಣದ ಬಗ್ಗೆ ಪರಿಶೀಲಿಸಲಾಗಿದ್ದು ಕಟ್ಟುವ ಅಂದಾಜು ವೆಚ್ಚ ಸುಮಾರು 95 ಲಕ್ಷ ರೂ. ತಗುಲಲಿದೆ.

3) ಈ ಆಸ್ಪತ್ರೆಯ ಆಧುನೀಕರಿಸಲು 4 ಶೈತ್ಯಾಗಾರವಿರುವ ವ್ಯವಸ್ಥಿತ ಕೊಠಡಿಗಳನ್ನು (ಶವಗಳು ಹೆಚ್ಚಿನ ಅವಧಿಯವರೆಗೆ ಕೆಡದಂತೆ ರಕ್ಷಿಸಲು) ಸ್ಥಾಪಿಸಲಾಗಿದೆ.

4) 2 ಕ್ಷ-ಕಿರಣ ಯಂತ್ರಗಳನ್ನು ಈ ಚಾಲ್ತಿ ವರ್ಷದಲ್ಲಿ ಸ್ಥಾಪಿಸಲಾಗಿದೆ.

5) ಒಂದು ಹೆಚ್.ಪಿ. ಸ್ಪೆರ್‌ಲೈಸರ್ ಅಳವಡಿಸಲಾಗಿದೆ.

6) ಹಳೆಯ ಫಾರ್ಮಸಿ ವಿಭಾಗವನ್ನು ಆಧುನೀಕರಿಸುವ ಸಲುವಾಗಿ ಕಟ್ಟಡ ನಿರ್ಮಾಣಕ್ಕೆಂದು 5 ಲಕ್ಷ ರೂ.ಗಳು ಸರ್ಕಾರದಿಂದ ಒದಗಿಸಲಾಗಿದೆ. ಕೆಲಸ ನಡೆಯುತ್ತಿದೆ.

7) ಈ ಸದರಿ ಫಾರ್ಮಸಿ ವಿಭಾಗಕ್ಕೆ ಅಗತ್ಯ ಉಪಕರಣಗಳಿಗಾಗಿ ರೂ. 10,24,465.00 ಗಳ ಮೌಲ್ಯದ ಉಪಕರಣಗಳನ್ನು ಕೊಳ್ಳಲಾಗಿದೆ.

8) ಆಸ್ಪತ್ರೆಯ ಅಭಿವೃದ್ಧಿಗಾಗಿ ಈ ಕೆಳಗಿನ ಯಂತ್ರೋಪಕರಣ ಹಾಗೂ ಸಾಮಗ್ರಿಗಳನ್ನು ಈ ಸಾಲಿನಲ್ಲಿ ಸರಬರಾಜು ಮಾಡಲಾಗಿದೆ

   1) ಬೌಲ್ಸ್ ಸ್ಪೆರ್‌ಲೈಸರ್ಸ್ 2 (ಒಂದಕ್ಕೆ ರೂ. 18,500 ಮತ್ತು ತೆರಿಗೆ)

   2) ಸೆಕ್ಷನ್ ಆಪರೇಟರ್ಸ್ 10 (ಒಂದಕ್ಕೆ ರೂ. 59,000 ಮತ್ತು ತೆರಿಗೆ)

   3) ಬಾಯಲ್ಸ್ ಅನೆಸ್ತೇಷಿಯಾ 2 (ಒಂದಕ್ಕೆ 37,500 ಮತ್ತು ತೆರಿಗೆ)

   4) ಒ.ಟಿ. ಟೇಬಲ್ಸ್ 1 (ಒಂದಕ್ಕೆ 18,500 ಮತ್ತು ತೆರಿಗೆ)

   5) ಒ.ಟಿ. ಲೈಟ್ಸ್ 2 (ಒಂದಕ್ಕೆ 2,600 ಮತ್ತು ತೆರಿಗೆ)

9) ಈ ಆಸ್ಪತ್ರೆಯ ಹೊರ ರೋಗಿಗಳ ವಿಭಾಗದ ಹೊಸ ಕಟ್ಟಡದ ನಿರ್ಮಾಣ ಕಾರ್ಯಗಳನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

10) ಈ ಆಸ್ಪತ್ರೆಗೆ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಈಗಾಗಲೇ ಔಷಧಿ ಮತ್ತು ರಾಸಾಯನಿಕಕ್ಕಾಗಿ ಹಣ ಎಂದಿನಂತೆ ಒದಗಿಸಿದೆ.

ಆ) 1992-93ನೇ ಸಾಲಿನಲ್ಲಿ ಆಸ್ಪತ್ರೆಯಲ್ಲಿ ಅಭಿವೃದ್ಧಿಗಾಗಿ ಸರ್ಕಾರವು ರೂ. 45.74,465.00 ಹಣವನ್ನು ಬಿಡುಗಡೆ ಮಾಡಿದೆ.

ರಾಜ್ಯದ ಅಧೀನದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಸಂಖ್ಯೆ

947 - ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರದ ಅಧೀನದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಸಂಖ್ಯೆಯೆಷ್ಟು?

ಆ) ಈ ಉದ್ದಿಮೆಗಳಲ್ಲಿ ಹೂಡಿರುವ ಬಂಡವಾಳವೆಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 1991-92ನೇ ಸಾಲಿನಲ್ಲಿ 68 ಉದ್ದಿಮೆಗಳಲ್ಲಿ ಮಹೋದ್ಯಮದ ವ್ಯಾಪ್ತಿಯಲ್ಲಿ ಇವೆ.

ಆ) 1990-91ರಲ್ಲಿ ಮಹೋದ್ಯಮದ ವ್ಯಾಪ್ತಿಯಲ್ಲಿ ಇದ್ದ 61 ಉದ್ದಿಮೆಗಳು ಹೂಡಿರುವ ಒಟ್ಟು ಭಂಡವಾಳ 451303.97 ಲಕ್ಷ ರೂಪಾಯಿಗಳು.

ಹಣಕಾಸು ನಿಗಮದಿಂದ ಕೈಗಾರಿಕೆಗಳ ಅಭಿವೃದ್ಧಿ ಕಾರ್ಯಗಳಿಗಾಗಿ ಬಿಡುಗಡೆಯಾದ ಸಾಲದ ಮೊತ್ತ

948 - ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಹಣಕಾಸು ನಿಗಮದಿಂದ ಕೈಗಾರಿಕೆಗಳ ಅಭಿವೃದ್ಧಿಗಾಗಿ 1992-93ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಸಾಲದ ಮೊತ್ತವೆಷ್ಟು?

ಆ) ಇದರಲ್ಲಿ ಯಾವ ಯಾವ ಕೈಗಾರಿಕೆಗಳಿಗೆ ಆದ್ಯತೆ ನೀಡಲಾಗಿದೆ?

ಇ) ಸಾಲವನ್ನು ಪಡೆದಿರುವ ಕೈಗಾರಿಕೆಗಳಿಂದ ಬರಬೇಕಾಗಿರುವ ಬಾಕಿ ಹಣವೆಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 1992-93ನೇ ಸಾಲಿನಲ್ಲಿ ಏಪ್ರಿಲ್ 1992ರಿಂದ ಸೆಪ್ಟೆಂಬರ್ 1992ರ ವರೆವಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಬಿಡುಗಡೆ ಮಾಡಿರುವ ಸಾಲದ ಮೊತ್ತ ರೂ. 136.19 ಕೋಟಿಗಳು.

ಆ) ಸಂಸ್ಥೆಯ ಧ್ಯೇಯೋದ್ದೇಶಕ್ಕೆ ಅನುಗುಣವಾಗಿ, ಅತೀ ಸಣ್ಣ ಕುಶಲ ಕರ್ಮಿ, ಗುಡಿ ಕೈಗಾರಿಕೆಗಳು ಮತ್ತು ಸಣ್ಣ ಕೈಗಾರಿಕೆಗಳಿಗೆ ಆದ್ಯತೆ ನೀಡಲಾಗಿದೆ.

ಇ) ಸಂಸ್ಥೆಯು ಸ್ಥಾಪನೆಯಾದಾಗಿನಿಂದ ದಿನಾಂಕ 30-9-1992ರ ವರೆಗೆ 222.46 ಕೋಟಿ ರೂಪಾಯಿಗಳು ಸುಸ್ತಿ ಬಾಕಿಯಾಗಿದೆ.

ರಾಜ್ಯದಲ್ಲಿರುವ ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ

21 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿರುವ ಐ.ಎ.ಎಸ್ ಅಧಿಕಾರಿಗಳ ಸಂಖ್ಯೆ ಎಷ್ಟು?

ಆ) ಇವರಲ್ಲಿ ನೇರವಾಗಿ ನೇಮಕಾತಿಯಾದವರ ಸಂಖ್ಯೆ ಎಷ್ಟು ಮತ್ತು ಬಡ್ತಿ ಮೂಲಕ ನೇಮಕವಾದವರ ಸಂಖ್ಯೆ ಎಷ್ಟು?

ಇ) ಕರ್ನಾಟಕ ರಾಜ್ಯದಲ್ಲಿರುವ ಐ.ಎ.ಎಸ್. ಅಧಿಕಾರಿಗಳಲ್ಲಿ ಕರ್ನಾಟಕದವರು ಎಷ್ಟು ಮತ್ತು ಹೊರ ರಾಜ್ಯದವರು ಕರ್ನಾಟಕ ಸೇವೆಯನ್ನು ಆಯ್ಕೆ ಮಾಡಿಕೊಂಡಿರುವವರ ಸಂಖ್ಯೆ ಎಷ್ಟು? (ಅವರುಗಳ ಜಾತಿವಾರು ವಿವರಗಳನ್ನು ಒದಗಿಸುವುದು) ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 261

ಆ) ನೇರವಾಗಿ ನೇಮಕಾತಿಯಾದವರ ಸಂಖ್ಯೆ 204

ಬಡ್ತಿ ಮೂಲಕ ನೇಮಕವಾದವರ ಸಂಖ್ಯೆ 57

ಇ) ಕರ್ನಾಟಕಕ್ಕೆ ಸೇರಿದ ಅಧಿಕಾರಿಗಳ ಸಂಖ್ಯೆ 122

ಹೊರ ರಾಜ್ಯಗಳಿಗೆ ಸೇರಿದ ಅಧಿಕಾರಿಗಳ ಸಂಖ್ಯೆ 139

ಇ) ಎಲ್ಲಾ ಅಧಿಕಾರಿಗಳ ಜಾತಿವಾರು ವಿವರಗಳು ಲಭ್ಯವಿರುವುದಿಲ್ಲ.

ರಾಜ್ಯದಲ್ಲಿರುವ ಐ.ಪಿ.ಎಸ್. ಅಧಿಕಾರಿಗಳ ಜಾತಿ.

22 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿರುವ ಐ.ಪಿ.ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು? ಮತ್ತು ಅವರು ಯಾವ ಯಾವ ಜಾತಿಗೆ ಸೇರಿದವರು?

ಆ) ಇವರಲ್ಲಿ ಐ.ಪಿ.ಎಸ್. ಪರೀಕ್ಷೆಯಲ್ಲಿ ಪಾಸಾಗಿ ನೇರ ನೇಮಕಾತಿ ಪಡೆದವರೆಷ್ಟು ಮತ್ತು ಬಡ್ತಿ ಮೂಲಕ ಐ.ಪಿ.ಎಸ್. ಪಡೆದವರೆಷ್ಟು?

ಇ) ಈ ಅಧಿಕಾರಿಗಳಲ್ಲಿ ಕರ್ನಾಟಕ ರಾಜ್ಯದವರೆಷ್ಟು ಮತ್ತು ಹೊರ ರಾಜ್ಯದವರೆಷ್ಟು? ಕರ್ನಾಟಕ ಸೇವೆಯನ್ನು ಆಯ್ಕೆ ಮಾಡಿಕೊಂಡಿರುವವರ ಸಂಖ್ಯೆ ಎಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಐ.ಪಿ.ಎಸ್. ಅಧಿಕಾರಿಗಳ ಸಂಖ್ಯೆ 123

ಜಾತಿವಾರು ವಿವರಗಳು ಲಭ್ಯವಿರುವುದಿಲ್ಲ.

ಆ)	ನೇರ ನೇಮಕಾತಿ	91
	ಬಡ್ತಿ ಮೂಲಕ	32
	ಒಟ್ಟು	123
ಇ)	ಕರ್ನಾಟಕ ರಾಜ್ಯದವರು	60
	ಹೊರ ರಾಜ್ಯದವರು	63
	ಒಟ್ಟು	123

ರಾಜ್ಯದಲ್ಲಿ ಐ.ಎಫ್.ಎಸ್ ಅಧಿಕಾರಿಗಳ ಸಂಖ್ಯೆ ಹಾಗೂ ಜಾತಿ

23 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿರುವ ಐಎಫ್‌ಎಸ್ ಅಧಿಕಾರಿಗಳ ಸಂಖ್ಯೆ ಎಷ್ಟು ಮತ್ತು ಅವರುಗಳು ಯಾವ ಯಾವ ಜಾತಿಗೆ ಸೇರಿದವರು?

ಆ) ಇವರಲ್ಲಿ ಐಎಫ್‌ಎಸ್ ಹುದ್ದೆಗೆ ನೇರವಾಗಿ ನೇಮಕಾತಿಯಾದವರ ಸಂಖ್ಯೆ ಎಷ್ಟು ಮತ್ತು ಬಡ್ತಿ ಮೂಲಕ ಐಎಫ್‌ಎಸ್ ಪಡೆದವರೆಷ್ಟು

ಇ) ಈ ಅಧಿಕಾರಿಗಳಲ್ಲಿ ಕರ್ನಾಟಕ ರಾಜ್ಯದವರೆಷ್ಟು ಮತ್ತು ಕರ್ನಾಟಕ ಸೇವೆಯನ್ನು ಆಯ್ಕೆ ಮಾಡಿಕೊಂಡ ಹೊರ ರಾಜ್ಯದವರ ಸಂಖ್ಯೆ ಎಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಒಟ್ಟು ಐಎಫ್‌ಎಸ್ ಅಧಿಕಾರಿಗಳ ಸಂಖ್ಯೆ 133

ಇವರ ಜಾತಿ ವಿವರಗಳು ಈಗ ಸದ್ಯಕ್ಕೆ ಲಭ್ಯವಿರುವುದಿಲ್ಲ.

ಆ) ನೇರವಾಗಿ ಐಎಫ್‌ಎಸ್‌ಗೆ ನೇಮಕಾತಿ ಆದವರು 97

ಬಡ್ತಿ ಮೂಲಕ ಐಎಫ್‌ಎಸ್ ಪಡೆದವರು 36

ಇ) ಕರ್ನಾಟಕ ರಾಜ್ಯ ಐಎಫ್‌ಎಸ್ ಅಧಿಕಾರಿಗಳು 88

ಇತರೆ ರಾಜ್ಯಗಳಿಂದ ಆಯ್ಕೆಯಾಗಿ ಕರ್ನಾಟಕ ರಾಜ್ಯದಲ್ಲಿ ಐಎಫ್‌ಎಸ್ ಅಧಿಕಾರಿಗಳಾಗಿರುವವರು 45

ಕಾವೇರಿ ಜಲವಿವಾದದ ಬಗ್ಗೆ

24 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾವೇರಿ ಜಲವಿವಾದದ ಬಗ್ಗೆ ಪ್ರಸ್ತುತ ರಾಜ್ಯ ಸರ್ಕಾರದ ನಿಲುವುಗಳೇನು ?

ಆ) ತಾರೀಖು 25-6-1991ರ ಮಧ್ಯಂತರ ಆಜ್ಞೆ ಮತ್ತು 3-4-1992ರ ಪುನರ್ ಪರಿಶೀಲನಾ ಅರ್ಜಿ ಆಧಾರದ ಮೂಲಕ ಬಂದ ಕಾವೇರಿ ಜಲಮಂಡಲಿಯ ತೀರ್ಪಿನ ಬಗ್ಗೆ ರಾಜ್ಯ ಸರ್ಕಾರದ ನಿಲುವು ಏನು ?

ಇ) ನ್ಯಾಯಮಂಡಲಿಯನ್ನು ಬಹಿಷ್ಕರಿಸಲು ಸರ್ಕಾರ ನಿರ್ಧರಿಸಿದೆಯೇ ?

ಈ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ನ್ಯಾಯಮಂಡಲಿಯ ಮುಂದೆ, ರಾಜ್ಯದ ವಾದದ ಸಕ್ರಿಯ ಮಂಡನೆ ಮತ್ತು ಮಾತುಕತೆಯಿಂದ ವಿವಾದ ಬಗೆಹರಿಸುವುದರಲ್ಲಿ ತೀವ್ರ ಪ್ರಯತ್ನ..

ಆ) ಪರಿಸ್ಥಿತಿಗೆ ಅನುಗುಣವಾದ ಸೂಕ್ತ ಕ್ರಮ.

ಇ) ಇಲ್ಲ.

ಈ) ನ್ಯಾಯಮಂಡಲಿಯ ಬಹಿಷ್ಕಾರಕ್ಕೆ ರಾಜ್ಯದ ಹಿತದೃಷ್ಟಿಯಿಂದ ಇದು ಸೂಕ್ತ ಸಮಯವಲ್ಲ.

ರಾಜ್ಯದಲ್ಲಿ ಖಾಸಗಿಯವರಿಂದ ವಿದ್ಯುತ್ ಉತ್ಪಾದನೆ

25 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಗೆ ಖಾಸಗಿಯವರ ಮತ್ತು ವಿದೇಶಿ ಮೂಲಕ ಬಂಡವಾಳದೊಂದಿಗೆ ಹೊಸ ಯೋಜನೆಗಳನ್ನು ಹಮ್ಮಿಕೊಳ್ಳುವುದಾಗಿ ಹಿಂದಿನ ಸರ್ಕಾರ ಪ್ರಕಟಿಸಿದ್ದು ಇಂತಹ ಎಷ್ಟು ಯೋಜನೆಗಳನ್ನು ಇದುವರೆಗೂ ಕೈಗೊಳ್ಳಲಾಗಿದೆ.

ಆ) ಈ ಯೋಜನೆಗಳಲ್ಲಿ ಅಳವಡಿಸಲಾದ ಖಾಸಗಿಯವರ ಮತ್ತು ವಿದೇಶಿ ಬಂಡವಾಳ ಎಷ್ಟು ? ಮತ್ತು ಆ ಸಂಸ್ಥೆಗಳು ಯಾವುವು ?

ಇ) ಈ ಯೋಜನೆಯಿಂದ ಉತ್ಪತ್ತಿಯಾಗುವ ಒಟ್ಟು ವಿದ್ಯುತ್ ಪ್ರಮಾಣ ಎಷ್ಟು ? (ಯೋಜನಾವಾರು ಉತ್ಪಾದನಾ ವಿವರಗಳನ್ನು ಕೊಡುವುದು) ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಖಾಸಗಿ ವ್ಯಕ್ತಿ ಸಂಸ್ಥೆಗಳಿಗೆ ವಹಿಸಿಕೊಟ್ಟ ಯೋಜನೆಗಳು ಮತ್ತು ವಿದೇಶಿ ಸಂಸ್ಥೆಗಳೊಡನೆ ಸಹಿ ಮಾಡಲ್ಪಟ್ಟ ಒಪ್ಪಂದಗಳು (ಎಂ.ಒ.ಯು) ಈ ರೀತಿ ಇವೆ.

1) ವಿದೇಶಿ ಸಂಸ್ಥೆಗಳೊಂದಿಗೆ ಸಹಿ ಮಾಡಿ ಒಪ್ಪಂದಗಳನ್ನು 4 ಜಲವಿದ್ಯುತ್ ಯೋಜನೆಗಳು 6 ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳು ಒಟ್ಟು 7 ವಿದೇಶಿ ಸಂಸ್ಥೆಗಳೊಡನೆ.

2) 25 ಕಿರು ಜಲವಿದ್ಯುತ್ ಯೋಜನೆಗಳನ್ನು ದೇಶೀಯ-ವಿದೇಶಿ ಸಂಸ್ಥೆಗಳಿಗೆ ನಿಗಧಿಪಡಿಸಲಾಗಿದೆ.

3) 3 ಒತ್ತಡ ಗಾಳಿಯ (Wind Energy) ವಿದ್ಯುತ್ ಯೋಜನೆಗಳನ್ನು ಒಟ್ಟು 6 ಭಾರತೀಯ ಸಂಸ್ಥೆಗಳಿಗೆ ವಹಿಸಿಕೊಡಲಾಗಿದೆ. ಈ ಯೋಜನಾ ಕಾರ್ಯಗಳ ಅನುಷ್ಠಾನವನ್ನು ಕೈಗೊಳ್ಳಲಾಗಿದೆ.

ಆ) ಹಣಕಾಸಿನ ಸ್ಥಿತಿಗತಿ ಪ್ರತಿಯೊಂದು ಯೋಜನೆಯ ಅವಶ್ಯಕತೆಗಳು ಮತ್ತಿತರ ವಿವರಗಳ ಚರ್ಚೆಯ ನಂತರ ಇದರಲ್ಲಿ ತೊಡಗಿಸಬೇಕಾದ ಬಂಡವಾಳವನ್ನು ತೀರ್ಮಾನಿಸಬೇಕಾಗಿದೆ.

ಇ) ಈ ಮೇಲಿನ ಯೋಜನೆಗಳು ಕಾರ್ಯಗತಗೊಂಡ ನಂತರ ಹೆಚ್ಚುವರಿ ಸ್ಥಾಪಿತ ಸಾಮರ್ಥ್ಯವು 4,267.95 ಮೆಗಾವ್ಯಾಟ್ ಆಗುತ್ತದೆ.

	ಮೆಗಾವ್ಯಾಟ್
1. ಶಾಖೋತ್ಪನ್ನ ವಿದ್ಯುತ್	3,300.00
2. ಬೃಹತ್ ಜಲವಿದ್ಯುತ್ ಯೋಜನೆಗಳಿಂದ	810.00
3. ಕಿರು ಜಲವಿದ್ಯುತ್ ಯೋಜನೆಗಳಿಂದ	133.95
4. ಒತ್ತಡ ಗಾಳಿ	24.00
	4,267.95

ಬೆಂಗಳೂರು ಜಿಲ್ಲೆಯಲ್ಲಿ ಅಬಕಾರಿ ರಕ್ಷಕರ ನೇಮಕಾತಿ

653 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ಅಬಕಾರಿ ರಕ್ಷಕರನ್ನು ನೇಮಕ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ನೇಮಕಗೊಂಡ ಅಬಕಾರಿ ರಕ್ಷಕರೆಷ್ಟು?

ಇ) ಅವರಲ್ಲಿ ಹೆಚ್ಚುವರಿಯಾಗಿ ನೇಮಕ ಕೊಂಡವರೆಷ್ಟು? ಅವರಿಗೆ ನೇಮಕಾತಿ ಆದೇಶಗಳನ್ನು ಕೊಡುವುದು ಯಾವಾಗ?

ಈ) ಈ ನೇಮಕಾತಿಯಲ್ಲಿ ಯಾವ ಯಾವ ಗುಂಪುಗಳಿಗೆ ಎಷ್ಟೆಷ್ಟು ಹುದ್ದೆಗಳನ್ನು ನೀಡಲಾಗಿದೆ (ವಿವರಗಳನ್ನೊದಗಿಸುವುದು) ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಆಯ್ಕೆಯಾದ ಅಭ್ಯರ್ಥಿಗಳಲ್ಲಿ 90 ಅಭ್ಯರ್ಥಿಗಳು ಮೊದಲ ಪಟ್ಟಿಯಲ್ಲಿ ಮತ್ತು 64 ಅಭ್ಯರ್ಥಿಗಳು ಹೆಚ್ಚುವರಿ ಪಟ್ಟಿಯಲ್ಲಿ ಇರುತ್ತಾರೆ. ಮೊದಲ ಪಟ್ಟಿಯಲ್ಲಿ ಆಯ್ಕೆಯಾದ 90 ಅಭ್ಯರ್ಥಿಗಳನ್ನು ಈಗಾಗಲೇ ನೇಮಕ ಮಾಡಿಕೊಳ್ಳಲಾಗಿದೆ.

ಇ) ಹೆಚ್ಚುವರಿ ಪಟ್ಟಿಯಲ್ಲಿರುವ ಅಭ್ಯರ್ಥಿಗಳನ್ನು ಇದುವರೆಗೆ ನೇಮಕ ಮಾಡಿಕೊಂಡಿಲ್ಲ. ಮುಂದೆ ಹುದ್ದೆಗಳು ಖಾಲಿ ಆದಾಗ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು.

ಈ) ವಿವರಗಳನ್ನು ಕೆಳಗೆ ನೀಡಲಾಗಿದೆ.

ಪರಿಶಿಷ್ಟ ಜಾತಿ 11+9 (ಬ್ಯಾಕ್‌ಲಾಗ್)	20
ಪರಿಶಿಷ್ಟ ಪಂಗಡ 3+3 (ಬ್ಯಾಕಲಾಗ್)	6
ಸಾಮಾನ್ಯ ಅರ್ಹತೆ	22
ಗ್ರೂಪ್ ಎ	4
ಗ್ರೂಪ್ ಬಿ	9
ಗ್ರೂಪ್ ಸಿ	11
ಗ್ರೂಪ್ ಡಿ	7
ಗ್ರೂಪ್ ಇ	3
ಮಾಜಿ ಸೈನಿಕರು	8
ಒಟ್ಟು	90

ಬೆಂಗಳೂರು ಕೆ.ಸಿ. ಜನರಲ್ ಆಸ್ಪತ್ರೆಗೆ ರೋಗಿಗಳ ಸಂಖ್ಯೆ

732 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆಗೆ ದಿನನಿತ್ಯ ಬರುತ್ತಿರುವ ಹೊರರೋಗಿಗಳ ಹಾಗೂ ಒಳರೋಗಿಗಳ ಸಂಖ್ಯೆ ಎಷ್ಟು?

ಆ) ಹಾಗಿದ್ದಲ್ಲಿ ಅವರುಗಳ ಚಿಕಿತ್ಸೆಯ ತಪಾಸಣೆಗಾಗಿ ಅಲ್ಲಿ ಸ್ಥಳಾವಕಾಶವಿಲ್ಲದಿರುವುದು ನಿಜವೆ?

ಇ) ಇಲ್ಲದೆ ಇದ್ದಲ್ಲಿ ಸ್ಥಳಾವಕಾಶದ ವ್ಯವಸ್ಥೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಹೊರರೋಗಿಗಳ ಸಂಖ್ಯೆ ದಿನಕ್ಕೆ ಸುಮಾರು 800 ರಿಂದ 1000 ಮತ್ತು ಒಳರೋಗಿಗಳ ಸಂಖ್ಯೆ 65 ರಿಂದ 70.

ಆ) ಸ್ವಲ್ಪ ಮಟ್ಟಿಗೆ ಇಕ್ಕಟ್ಟು ಉಂಟಾಗುತ್ತದೆ.

ಇ) ಹೆಚ್ಚಿನ ಸ್ಥಳಾವಕಾಶ ವ್ಯವಸ್ಥೆ ಮಾಡುವ ಬಗ್ಗೆ ಬೇರೆ ಬೇರೆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ರಾಜ್ಯದ ಉಚ್ಚನ್ಯಾಯಾಲಯದಲ್ಲಿ ಖಾಲಿ ಇರುವ ನ್ಯಾಯಾಧೀಶರ ಹುದ್ದೆಗಳು

734 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಖಾಲಿ ಇರುವ ನ್ಯಾಯಾಧೀಶರ ಸಂಖ್ಯೆ ಎಷ್ಟು?

ಆ) ಅವುಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಇರುವ ವಿವಾದಗಳೆಷ್ಟು? ಎರಡು, ಮೂರು, ಐದು ಮತ್ತು ಹತ್ತು ವರ್ಷಗಳ ಮೇಲ್ಪಟ್ಟು ಇತ್ಯರ್ಥವಾಗದೆ ಇರುವ ವಿವಾದಗಳೆಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 9 (ಒಂಬತ್ತು)

(1) ಖಾಯಂ ನ್ಯಾಯಾಧೀಶರ ಸಂಖ್ಯೆ 7

(2) ಹೆಚ್ಚುವರಿ ನ್ಯಾಯಾಧೀಶರ ಹುದ್ದೆ 2

ಆ) ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿಯನ್ನು ರಾಷ್ಟ್ರಪತಿಯವರು ಮಾಡುವುದರಿಂದ ಈ ಬಗ್ಗೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳುವುದು.

ಇ) 30-11-1992ರಲ್ಲಿ 1,12,874 (ಸಿವಿಲ್ ಮತ್ತು ಕ್ರಿಮಿನಲ್) ಪ್ರಕರಣಗಳು ಬಾಕಿ ಇದ್ದವು.

2 ವರ್ಷಗಳ ಮೇಲ್ಪಟ್ಟು	18,342 ವಿವಾದಗಳು
3 ವರ್ಷಗಳ ಮೇಲ್ಪಟ್ಟು	22,840 ವಿವಾದಗಳು
5 ವರ್ಷಗಳ ಮೇಲ್ಪಟ್ಟು	11,924 ವಿವಾದಗಳು
10 ವರ್ಷಗಳ ಮೇಲ್ಪಟ್ಟು	562 ವಿವಾದಗಳು

ಇತ್ಯರ್ಥವಾಗದೆ ಇರುವುದು.

ಮಲೆನಾಡು ಹೈದರಾಬಾದ್ ಮತ್ತು ಗಡಿ ಪ್ರದೇಶಗಳ ಅಭಿವೃದ್ಧಿ ಕಾರ್ಯ.

733 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಲೆನಾಡು, ಹೈದರಾಬಾದ್ ಮತ್ತು ಗಡಿ ಪ್ರದೇಶದ ಅಭಿವೃದ್ಧಿ ಪ್ರದೇಶಗಳ ಅಡಿಯಲ್ಲಿ ಬರುವ ತಾಲ್ಲೂಕುಗಳ ಹೆಸರುಗಳೇನು? (ಜಿಲ್ಲಾವಾರು ವಿವರಗಳನ್ನು ನೀಡುವುದು)

ಆ) ಹಿಂದುಳಿದ ಪ್ರದೇಶ ಅಥವಾ ತಾಲ್ಲೂಕುಗಳೆಂದು ನಿರ್ಧಾರ ತೆಗೆದುಕೊಳ್ಳಲು ಇರಬೇಕಾದ ಆಧಾರಗಳೇನು?

ಇ) ಈ ಮೇಲ್ಕಂಡ ಮೂರು ಅಭಿವೃದ್ಧಿ ಪ್ರದೇಶಗಳಲ್ಲಿ ಬರುವ ಎಲ್ಲಾ ತಾಲ್ಲೂಕುಗಳಿಗೆ 1991-92, 1992-93ನೇ ಸಾಲುಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಕೊಟ್ಟಿರುವ ಅನುದಾನವೆಷ್ಟು?

ಈ) ಈ ಮೇಲ್ಕಂಡ ಪ್ರದೇಶಗಳ ಅಡಿಯಲ್ಲಿ ಬರುವ ಪ್ರತಿಯೊಂದು ತಾಲ್ಲೂಕಿನಲ್ಲಿ 1982ರಿಂದ 1992ರ ವರೆವಿಗೆ ಪ್ರತಿ ವರ್ಷವೂ ಆದ ಸರಾಸರಿ ಮಳೆ ಎಷ್ಟು?

ಉ) ಗಡಿ ಪ್ರದೇಶ ಅಭಿವೃದ್ಧಿ ಅಡಿಯಲ್ಲಿ ಬರುವ ತಾಲ್ಲೂಕುಗಳಲ್ಲಿ ಮಳೆಯು ಅತಿ ಕಡಿಮೆಯಾಗಿದ್ದು ಮತ್ತು ಎಲ್ಲಾ ವಿಧದಲ್ಲಿಯೂ ಹಿಂದುಳಿದ

ತಾಲ್ಲೂಕುಗಳಾಗಿದ್ದರೂ ಸಹಾ ಈ ತಾಲ್ಲೂಕುಗಳ ಅಭಿವೃದ್ಧಿ ಕಾರ್ಯಗಳಿಗೆ ಅತಿ ಕಡಿಮೆ ಹಣ ಅಂದರೆ 1/9 ಭಾಗದಷ್ಟು ಕೊಡುತ್ತಿರುವುದರಿಂದ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ, 1993-94ರ ಆಯವ್ಯಯದಲ್ಲಿ ಈ ತಾರತಮ್ಯವನ್ನು ಸರಿಪಡಿಸುವರೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿ) :

ಅ) ತಾಲ್ಲೂಕುಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ಕಾರ್ಯಕ್ರಮದಿಂದ ಕಾರ್ಯಕ್ರಮಕ್ಕೆ ಆಧಾರಗಳು ಬದಲಾಗುತ್ತವೆ.

ಇ) ಲಗತ್ತಿಸಲಾದ ಪಟ್ಟಿಯಲ್ಲಿ ಅನುದಾನದ ವಿವರಗಳನ್ನು ನೀಡಿದೆ.

ಈ) ಲಗತ್ತಿಸಲಾದ ಪಟ್ಟಿಯಲ್ಲಿ ತಾಲ್ಲೂಕುವಾರು ವಾರ್ಷಿಕ ಸರಾಸರಿ ಮಳೆಯ ವಿವರಗಳನ್ನು ನೀಡಲಾಗಿದೆ.

ಉ) ಗಡೀಪ್ರದೇಶ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಗಡಿ ತಾಲ್ಲೂಕನ್ನು ಘಟ್ಟವಾಗಿ ತೆಗೆದುಕೊಳ್ಳಲಾಗಿದೆ. ಹಾಗೂ ಎಲ್ಲಾ ಗಡಿ ತಾಲ್ಲೂಕುಗಳು ಹಿಂದುಳಿದವುಗಳು ಎಂದು ಪರಿಗಣಿಸಲಾಗಿದ್ದರಿಂದ, ಎಲ್ಲಾ ಗಡಿ ತಾಲ್ಲೂಕುಗಳಿಗೆ ಸಮಾನವಾಗಿ ಅನುದಾನವನ್ನು ನೀಡಲಾಗುತ್ತಿದೆ.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಡಿಯಲ್ಲಿ ಬರುವ ತಾಲ್ಲೂಕುಗಳ ಪಟ್ಟಿ ಹಾಗೂ ವಾಡಿಕೆ ಮಳೆ

List of Taluks Coming under Malnad Area Development Board and Normal Rainfall.

Sl. No. ಕ್ರ, ಸಂ.	ಜಿಲ್ಲೆ	District	ತಾಲ್ಲೂಕು	Taluk	Normal rainfall (mms) ವಾಡಿಕೆ ಮಳೆ (ಮಿ.ಮಿ.ಗಳಲ್ಲಿ)
1.	ಬೆಳಗಾಂ	Belgaum	ಖಾನಾಪುರ	Khanapura	1780
			ಹುಕ್ಕೇರಿ	Hukkeri	730
			ಬೆಳಗಾಂ	Belgaum	1376
			ಬೈಲಹೊಂಗಲ	Bailahongal	706
			ಸೌಂದತ್ತಿ	Soundatti	629
2.	ಚಿಕ್ಕಮಗಳೂರು	Chickmaglur	ಕೊಪ್ಪ	Koppa	3038
			ಮೂಡಿಗೆರೆ	Mudigere	2379
			ಶೃಂಗೇರಿ	Shringeri	3808
			ಚಿಕ್ಕಮಗಳೂರು	Chickmaglur	922
			ಎನ್.ಆರ್.ಪುರ	N.R. Pura	1818
			ತರೀಕೆರೆ	Tarikere	916
3.	ಕೊಡಗು	Kodagu	ಮಡಿಕೇರಿ	Mercara	3287
			ಸೋಮವಾರಪೇಟೆ	Somvarpet	2206
			ವಿರಾಜಪೇಟೆ	Virajpet	2661
4.	ಹಾಸನ	Hassan	ಸಕಲೇಶಪುರ	Sakaleshpura	2316
			ಆಲೂರು	Alur	1060
			ಬೇಲೂರು	Belur	1004
			ಹಾಸನ	Hassan	856

			ಅಲಕಲಗೂಡು	Arakalagud	919
5.	ಮೈಸೂರು	Mysore	ಹೆಚ್.ಡಿ. ಕೋಟೆ	Heggadadevanakote	904
			ಗುಂಡ್ಲುಪೇಟೆ	Gudlupet	693
			ಪಿರಿಯಾಪಟ್ಟಣ	Periyapattana	858
			ಹುಣಸೂರು	Hunasur	761
			ಕೊಳ್ಳೇಗಾಲ	Kollegala	830
ಸೂಚನೆ : ಮಂಡಳಿಯು ಕಾರ್ಯಕ್ರಮಗಳ ಪಟ್ಟಿಯನ್ನು ತಯಾರಿಸಿದ ನಂತರ ಹಣವನ್ನು ಬಿಡುಗಡೆ ಮಾಡಲಾಗುವುದು. Board is being constituted. The amount will be released after the Board prepares the list of works					
6.	ಉತ್ತರ ಕನ್ನಡ	Uttara Kannada	ಅಂಕೋಲ	Ankola	3406
			ಭಟ್ಕಲ್	Bhatkal	4016
			ಹೊನ್ನಾವರ	Honnavar	3686
			ಕುಮ್ಟಾ	Kumta	3754
			ಕಾರವಾರ	Karwar	3120
			ಸಿದ್ದಾಪುರ	Siddapur	2983
			ಸಿರಸಿ	Sirsi	2535
			ಸೂಪ	Supa	2381
			ಯಲ್ಲಾಪುರ	Yellapur	2699
			ಹಳಿಯಾಳ	Haliyal	1317
			ಮುಂದಗೋಡ	Mundgod	1296
7.	ದಕ್ಷಿಣ ಕನ್ನಡ	Dakshina Kannada	ಬೆಳ್ತಂಗಡಿ	Belthangadi	4589
			ಕುಂದಾಪುರ	Coondapur	3774

			ಕಾರ್ಕಳ	Karkala	4733
			ಪುತ್ತೂರು	Puttur	3946
			ಸೂಳ್ಯ	Sullya	4096
			ಉಡುಪಿ	Udupi	3850
			ಮಂಗಳೂರು	Mangalore	3427
			ಭಂಟ್ವಾಳ್	Bantwal	3819
8.	ಶಿವಮೊಗ್ಗ	Shimoga	ಹೊಸನಗರ	Hosanagara	2962
			ತೀರ್ಥಹಳ್ಳಿ	Theerthahalli	3001
			ಸಾಗರ	Sagara	2134
			ಶಿವಮೊಗ್ಗ	Shimoga	935
			ಶಿಕಾರಿಪುರ	Shikaripura	1027
			ಸೊರಬ	Soraba	1673
			ಚನ್ನಗಿರಿ	Channagiri	803
			ಭದ್ರಾವತಿ	Bhadravathi	957
9.	ಧಾರವಾಡ	Dharwar	ಧಾರವಾಡ	Dharwar	839
			ಕಲಘಟಗಿ	Kalaghatgi	940
			ಶಿಗ್ಗಾವಿ	Shiggavi	728
			ಸವಣೂರು	Savanur	693
			ಹಾನಗಲ್	Hanagal	933
			ಬ್ಯಾಡಗಿ	Byadagi	713
			ಹಿರೆಕೆರೂರು	Hirekurur	810

ಸೂಚನೆ : ಮಂಡಳಿಯ ರಚನೆಯಾಗಿದೆ. ಮಂಡಳಿಯು ಕಾರ್ಯಕ್ರಮಗಳ ಪಟ್ಟಿಯನ್ನು ತಯಾರಿಸಿದ ನಂತರ ಹಣವನ್ನು ಬಿಡುಗಡೆ ಮಾಡಲಾಗುವುದು.

Board is being constituted. The amount will be released after the Board prepares the list of works.

ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಡಿಯಲ್ಲಿ ಬರುವ ತಾಲ್ಲೂಕುಗಳ ಪಟ್ಟಿ ಹಾಗೂ ವಾಡಿಕೆ ಮಳೆ

List of Talukas coming under Hyderbad Karnataka Area Development Board and Normal rainfall.

Sl. No. ಕ್ರ.ಸಂ.	ಜಿಲ್ಲೆ	District	ತಾಲ್ಲೂಕು	Taluk	Normal rainfall (mms) ವಾಡಿಕೆ ಮಳೆ (ಮಿ.ಮಿ.ಗಳಲ್ಲಿ)
1.	ಬಳ್ಳಾರಿ	Bellary	ಬಳ್ಳಾರಿ	Bellary	525
			ಹಡಗಲಿ	Hadagali	616
			ಹಗರಿಬೊಮ್ಮನಹಳ್ಳಿ	Hagaribommana halli	555
			ಹರಪನಹಳ್ಳಿ	Harpanahalli	657
			ಹೊಸಪೇಟೆ	Hospet	658
			ಕೂಡ್ಲಿಗಿ	Kudligi	628
			ಸಂಡೂರು	Sandur	907
			ಸಿರಗುಪ್ಪ	Siraguppa	664
2.	ಬೀದರ್	Bidar	ಔರಾದ್	Aurad	840
			ಬಸವಕಲ್ಯಾಣ	Basavakalyan	675
			ಭಾಲ್ಕಿ	Bhalki	939
			ಬೀದರ್	Bidar	941
			ಹುಮ್ನಾಬಾದ್	Humnabad	842
3.	ಗುಲ್ಬರ್ಗಾ	Gulbarga	ಅಫಜಲ್‌ಪುರ	Afzalpur	707
			ಆಳಂದ	Aland	834

			ಚಿಂಚೋಳಿ	Chincholi	880
			ಚಿತಾಪುರ	Chitapur	794
			ಗುಲ್ಬರ್ಗಾ	Gulbarga	766
			ಜೇವರ್ಗಿ	Jewargi	697
			ಸೇಡಂ	Sedam	921
			ಶಹಪುರ	Shahapur	723
			ಶೋರಾಪುರ	Shorapur	710
			ಯಾದಗಿರ್	Yadgir	733
4.	ರಾಯಚೂರು	Raichur	ದೇವದುರ್ಗ	Deodurga	632
			ಗಂಗಾವತಿ	Gangavathi	523
			ಕೊಪ್ಪಳ	Koppal	600
			ಕುಷ್ಟಗಿ	Kushtagi	571
			ಲಿಂಗಸುಗೂರು	Lingasugar	564
			ಮಾನ್ವಿ	Manvi	640
			ರಾಯಚೂರು	Raichur	688
			ಸಿಂಧನೂರು	Sindhanur	582
			ಯಲಬುರ್ಗ	Yelburga	593

ಸೂಚನೆ : ಸರ್ಕಾರವು ಹಣವನ್ನು ಬಿಡುಗಡೆ ಮಾಡುತ್ತಿದೆ ಹಾಗೂ ಮಂಡಳಿಯು ಆದ್ಯತಾ ವಲಯಗಳಲ್ಲಿ ಹಣವನ್ನು ಖರ್ಚು ಮಾಡುತ್ತಿದೆ. ತಾಲ್ಲೂಕುಗಳಿಗೆ ಪ್ರತ್ಯೇಕವಾಗಿ ಹಣವನ್ನು ಬಿಡುಗಡೆ ಮಾಡುತ್ತಿಲ್ಲ.

Government if releasing money to the Board and the Board is spending money on thrust areas. Money is not being released separately to the taluks.

ಅನುಬಂಧ

ಗಡಿ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಒಳಗೊಂಡಿರುವ ತಾಲ್ಲೂಕುಗಳ ಪಟ್ಟಿ ಮತ್ತು ಅವುಗಳ ವಾಡಿಕೆಯ ಮಳೆ ಹಾಗೂ 1991-92 ಮತ್ತು 1992-93ರಲ್ಲಿ ಬಿಡುಗಡೆಯಾದ ಹಣದ ವಿವರ.

List of taluks coming under Border Area Development Programme, their normal rainfall and amount released during 1991-92 and 1992-93.

ಜಿಲ್ಲೆ	District	ತಾಲ್ಲೂಕು	Taluk	ವಾಡಿಕೆ ಮಳೆ ಮಿ.ಮಿ.ಗಳಲ್ಲಿ Normal rainfall (mms)	ಬಿಡುಗಡೆಯಾದ ಹಣ 1991-92 (Amount released in 1991-92)	in lakhs rupees) 1992-93 (upto 31.12.92)
1		2		3	4	5
ಬೆಂಗಳೂರು ನಗರ	Bangalore (U)	ಅನೇಕಲ್	Anekal	828	25.00	12.50
ಬೆಂಗಳೂರು (ಗ್ರಾ)	Bangalore (R)	ಹೊಸಕೋಟೆ	Hoskote	750	25.00	12.50
		ಕನಕಪುರ	Kanakapura	768	25.00	12.50
ಚಿತ್ರದುರ್ಗ	Chitradurga	ಚಳ್ಳಕೆರೆ	Challakere	458	25.00	12.50
		ಹಿರಿಯೂರು	Hiriyur	524	25.00	12.50
		ಮೊಳಕಾಲ್ಮೂರು	Molakalmur	557	25.00	12.50
ಕೋಲಾರ	Kolar	ಬಾಗೇಪಲ್ಲಿ	Bagepalli	678	25.00	12.50
		ಬಂಗಾರಪೇಟೆ	Bangarpet	702	25.00	12.50
		ಚಿಂತಾಮಣಿ	Chinthamani	778	25.00	12.50
		ಗೌರಿಬಿದನೂರು	Gowribidanur	678	25.00	12.50
		ಗುಡಿಬಂಡ	Gudibanda	805	25.00	12.50

		ಮಾಲೂರು	Malur	723	25.00	12.50
		ಮುಳಬಾಗಿಲು	Mulbagil	818	25.00	12.50
		ಶ್ರೀನಿವಾಸಪುರ	Srinivasapura	722	25.00	12.50
ತುಮಕೂರು	Tumkur	ಮಧುಗಿರಿ	Madugiri	-	25.00	12.50
		ಪಾವಗಡ	Pavagada	546	25.00	12.50
		ಶಿರಾ	Sira	554	25.00	12.50
ದಕ್ಷಿಣ ಕನ್ನಡ	D. Kannada	ಭಂಟ್ವಾಳ	Bantwala	3819	25.00	12.50
		ಮಂಗಳೂರು	Mangalore	3427	25.00	12.50
		ಪುತ್ತೂರು	Puttur	3946	25.00	12.50
		ಸುಳ್ಯ	Sulya	4096	25.00	12.50
ಕೊಡಗು	Kodagu	ಮಡಿಕೇರಿ	Madikeri	3287	25.00	12.50
		ವಿರಾಜಪೇಟೆ	Virajpet	2661	25.00	12.50
ಮೈಸೂರು	Mysore	ಚಾಮರಾಜನಗರ	Chamarajnagar	689	25.00	12.50
		ಗುಂಡ್ಲುಪೇಟೆ	Gundlupet	693	25.00	12.50
		ಹೆಚ್.ಡಿ. ಕೋಟೆ	H.D. Kote	904	25.00	12.50
		ಕೊಳ್ಳೇಗಾಲ	Kollegal	830	25.00	12.50
ಬೆಳಗಾವಿ	Belgaum	ಅಥಣಿ	Athani	582	25.00	12.50
		ಬೆಳಗಾವಿ	Belgaum	1376	25.00	12.50
		ಚಿಕ್ಕೋಡಿ	Chikkodi	635	25.00	12.50
		ಹುಕ್ಕೇರಿ	Hukkeri	730	25.00	12.50
		ಖಾನಾಪುರ	Khanapura	1780	25.00	12.50
ಉತ್ತರ ಕನ್ನಡ	Uttara Kannada	ಕಾರವಾರ	Karwara	3120	25.00	12.50
		ಸೂಪಾ	Supa	2381	25.00	12.50

ಬಳ್ಳಾರಿ	Bellary	ಬಳ್ಳಾರಿ	Bellary	535	6.00	12.50
		ಸಂಡೂರು	Sandur	807	6.00	12.50
		ಸಿರಗುಪ್ಪ	Siraguppa	664	6.00	12.50
ಬೀದರ್	Bidar	ಔರಾದ್	Owrad			
		ಬಸವಕಲ್ಯಾಣ	Basavakalyan	675	6.00	12.50
		ಭಾಲ್ಕಿ	Bhalki	939	6.00	12.50
		ಬೀದರ್	Bidar	941	6.00	12.50
		ಹುಮ್ನಾಬಾದ್	Humnabad	842	6.00	12.50
ಗುಲ್ಬರ್ಗಾ	Gulbarga	ಅಫಜಲ್‌ಪುರ	Afzalpur	707	6.00	12.50
		ಆಳಂದ	Aland	834	6.00	12.50
		ಚಿಂಚೋಳಿ	Chincholi	880	10.00	12.50
		ಸೇಡಂ	Sedam	921	6.00	12.50
		ಶಹಪುರ್	Shahapur	723	6.00	12.50
		ಯಾದಗಿರ್	Yadgir	733	6.00	12.50
ರಾಯಚೂರು	Raichur	ಮಾನ್ವಿ	Manvi	640	6.00	12.50
		ರಾಯಚೂರು	Raichur	688	6.00	12.50
ಒಟ್ಟು		Total			1000.00	650.00

ಮುಳಬಾಗಿಲು ಮತ್ತು ಗೌರಿಬಿದನೂರು ತಾಲ್ಲೂಕುಗಳಲ್ಲಿ ಪ್ರಯೋಗಾರ್ಥವಾಗಿ ನೀರು ಮರು ಪೂರೈಕೆ

923 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆಯ ಮುಳಬಾಗಿಲು ಮತ್ತು ಗೌರಿಬಿದನೂರು ತಾಲ್ಲೂಕುಗಳಲ್ಲಿ ಪ್ರಯೋಗಾರ್ಥವಾಗಿ ನೀರು ಮರು ಪೂರೈಕೆ ಬಗ್ಗೆ ಕೇಂದ್ರ ಸರ್ಕಾರದಿಂದ ಏನಾದರೂ ಸಮಾಚಾರವು ಸರ್ಕಾರಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ನೀರು ಮರು ಪೂರೈಕೆ ಯೋಜನೆಯ ವಿವರಗಳು?

ಇ) ಈ ಕಾರ್ಯಕ್ರಮಕ್ಕಾಗಿ ಪ್ರತಿ ತಾಲೂಕಿಗೂ ನಿಗದಿ ಪಡಿಸಿರುವ ಒಟ್ಟು ಮೊತ್ತ?

ಈ) ಕೆಲಸವು ಯಾವಾಗ ಪ್ರಾರಂಭವಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಕೇಂದ್ರ ಸರ್ಕಾರದಿಂದ ಯಾವ ಸಮಾಚಾರವೂ ಬಂದಿರುವುದಿಲ್ಲ, ಆದರೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಬೆಂಗಳೂರಿನ ಕೇಂದ್ರ ಭೂಜಲ ಮಂಡಳಿಯ ವಲಯ ಕಛೇರಿಯಿಂದ ಈ ಯೋಜನೆಯ ಪ್ರತಿಯನ್ನು ಪಡೆದುಕೊಂಡಿದೆ.

ಆ) ಈ ಬಗ್ಗೆ ರೂಪಿಸಿದ ಚಟುವಟಿಕೆಗಳ ವಿವರವನ್ನು ಲಗತ್ತಿಸಿದೆ. ಅನುಬಂಧ-1

ಇ) ರೂ. 23,61,800-00

ಈ) ಮೊದಲ ಹಂತದ ಕ್ಷೇತ್ರ ಸಮೀಕ್ಷೆಯು ಇತ್ತೀಚೆಗೆ ಪ್ರಾರಂಭಿಸಲ್ಪಟ್ಟಿರುವುದಾಗಿ ತಿಳಿದುಬಂದಿದೆ.

ANNEXURE -I

ARTIFICAL RECHARGE

EXPLORATORY PROJECT AREAS

Sl. No.	Activity	Total Work	Unit rate (Rs)	Total amount (Rs)
1.	Construction of small diameter (5 cm) borcholes for evalutaion of bedrock configuration 20m depth -100 Nos.	2000 m	50/m	1,00,000
2.	Infiltration studies			
	a) Rugerholes 10m depth 200 nos	2000 m	40/m	80,000
	b) Surface ponds 2m x 3m x 1m-20 Nos	80 m3	22.5/m	1,800
3.	Experimental recharge facilities			
	a)Surface spreading basins 100m x 20m x 2m - 10 Nos	4000 m3	22.5/m	9,00,000
	b) Large diameter injection wells 30m to 60mm deep - 20 nos. (Optional-to be taken up after studying economic viability)	900	200/m	1,80,000
4.	Hydrogeological, hydrological, hydrochemical & geophysical surveys.	L.S.	L.S.	3,00,000
5.	Masonery works such as embankments	L.S.	L.S.	3,00,000
6.	Cost of POD, repairs & maintenance of Vehicles	L.S.	L.S.	5,00,000
				23,61,800
	For two areas cost excludes cost of land			47,23,600

ರಾಜ್ಯದಲ್ಲಿ ಗ್ರಾನೈಟ್ ಶಿಲೆ ತೆಗೆಯುವುದನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ

47 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಗ್ರಾನೈಟ್ ಶಿಲೆ ತೆಗೆಯುವುದನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ ರಾಷ್ಟ್ರೀಕರಣಕ್ಕೆ ಕಾರಣವೇನು?

ಇ) ಈ ಬಗ್ಗೆ ಸರ್ಕಾರ ಕ್ರಿಯಾ ಯೋಜನೆ ತಯಾರಿಸಿದೆಯೇ? (ವಿವರ ಒದಗಿಸುವುದು)

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ.

ವಾರಾಹಿ ನೀರಾವರಿ ಯೋಜನೆ

75 - ಶ್ರೀ ಜೆ.ಎಸ್. ಆಚಾರ್ (ಬೈಂದೂರು) : ಮಾನ್ಯ ಮುಖ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದ ರೈತರೇ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲು ಸರಕಾರವು ಯೋಜಿಸಿದ ವರಾಹಿ ನೀರಾವರಿ ಯೋಜನೆಯ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು?

ಆ) ಹತ್ತು ವರ್ಷಗಳ ಹಿಂದೆಯೇ ಅಂದಿನ ಮುಖ್ಯಮಂತ್ರಿಗಳು ಶಿಲಾನ್ಯಾಸ ಮಾಡಿದ್ದರೂ ಅದರ ಕಾಮಗಾರಿ ಆರಂಭಕ್ಕೆ ವಿಳಂಬವಾಗಲು ಕಾರಣಗಳೇನು?

ಇ) 1992-93ನೇ ವರ್ಷದಲ್ಲಿ ಈ ಸಲುವಾಗಿ ಎಷ್ಟು ಹಣವನ್ನು ವ್ಯಯಿಸಲಾಗುವುದು ಮತ್ತು ಯಾವ ಉದ್ದೇಶದಿಂದ ವೆಚ್ಚ ಮಾಡಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ವರಾಹಿ ನೀರಾವರಿ ಯೋಜನೆಯ ಕಾಮಗಾರಿಯನ್ನು 1992-93ರಲ್ಲಿ ಪ್ರಾರಂಭಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆ) ಸದರಿ ಯೋಜನೆಗೆ ಅವಶ್ಯವಿರುವ ಕಾದಿರಿಸಿದ ಅರಣ್ಯ ಪ್ರದೇಶ ಬಿಡುಗಡೆಯಾಗದಿರುವುದರಿಂದ ಆ ಕಾಮಗಾರಿ ಆರಂಭಕ್ಕೆ ವಿಳಂಬವಾಗಿದೆ.

ಇ) 1992-93ನೇ ವರ್ಷದ ಆಯವ್ಯಯದಲ್ಲಿ ವರಾಹಿ ನೀರಾವರಿ ಯೋಜನೆಗಾಗಿ 40.00ಲಕ್ಷ ರೂ.ಗಳ ಅನುದಾನವಿದೆ. ಇದನ್ನು ಪ್ರಾಥಮಿಕ ಕೆಲಸಕ್ಕೆ ಉಪಯೋಗಿಸಲು ಉದ್ದೇಶಿಸಲಾಗಿದೆ.

ಕೋಲಾರದ ಜಿಲ್ಲೆಯಲ್ಲಿ ಗ್ರಾಮಾಂತರ ಪೋಲೀಸ್ ಠಾಣೆ

76 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರದಲ್ಲಿ ಗ್ರಾಮಾಂತರ ಪೋಲೀಸ್ ಠಾಣೆಯನ್ನು ತೆರೆಯುವ ಪ್ರಸ್ತಾಪವು ಬಹಳ ಕಾಲದಿಂದಲೂ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) *ಈ ಗ್ರಾಮಾಂತರ ಪೋಲೀಸ್ ಠಾಣೆಯನ್ನು ತೆರೆಯುವ ಬಗ್ಗೆ ಸರ್ಕಾರವು ಏನು ಕ್ರಮ ಕೈಗೊಂಡಿದೆ?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಪ್ರಕರಣಗಳು

161 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಜೂನ್ 1992ರ ಅಂತ್ಯದವರೆಗೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ ಎಷ್ಟು?*

ಆ) *ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶರುಗಳ ಹುದ್ದೆಗಳು ಖಾಲಿ ಇವೆಯೆ?*

ಇ) *ಹಾಗಿದ್ದಲ್ಲಿ, ಎಷ್ಟು ಹುದ್ದೆಗಳು ಖಾಲಿ ಇವೆ?*

ಈ) *ಬಾಕಿ ಇರುವ ಪ್ರಕರಣಗಳನ್ನು ವಿಲೇವಾರು ಮಾಡಲು ಹೆಚ್ಚುವರಿ ನ್ಯಾಯಾಧೀಶರುಗಳನ್ನು ನೇಮಕ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ?*

ಉ) *ಬಾಕಿ ಇರುವ ಪ್ರಕರಣಗಳ ವಿಲೇವಾರಿಗಾಗಿ ಏನು ಕ್ರಮ ಕೈಗೊಳ್ಳಲಾಗಿದೆ?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ದಿನಾಂಕ 30-6-1992 ರಲ್ಲಿ 1,01,169 ಸಿವಿಲ್ ಪ್ರಕರಣಗಳು ಮತ್ತು 2,785 ಕ್ರಿಮಿನಲ್ ಪ್ರಕರಣಗಳು (ಒಟ್ಟು 1,03,954 ಪ್ರಕರಣಗಳು) ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದ್ದವು.

ಆ) ಹೌದು

ಇ) ಖಾಲಿ ಹುದ್ದೆಗಳು 9 (ಒಂಬತ್ತು)

(1) ಖಾಯಂ ನ್ಯಾಯಾಧೀಶರ ಹುದ್ದೆ 7

(2) ಹೆಚ್ಚುವರಿ ನ್ಯಾಯಾಧೀಶರ ಹುದ್ದೆ 2

ಈ) ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿಯನ್ನು ರಾಷ್ಟ್ರಪತಿಯವರು ಮಾಡುವುದರಿಂದ ಈ ಬಗ್ಗೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳುವುದು.

ಉ) ಉಚ್ಚ ನ್ಯಾಯಾಲಯವು ಈ ಪ್ರಶ್ನೆಗೆ ಉತ್ತರವನ್ನು ನೀಡಿರುವುದಿಲ್ಲ.

High Court Bench at Dharwad and Gulbarga

162 - Sri Ramlinga Reddy (Jayanagara) : Will the Chief Minister be pleased to State

a) Whether the Government has taken a decision to set up a Bench of Karnataka High Court at Dharwad and Gulbarga?

b) If so, the steps taken in this regard?

c) When will these Benches be set up?

d) The number of cases proposed to be decided by these Benches?

Sri M. Veerappa Moily (Chief Minister) :

a) Yes

b) The decision of the State Govt. was communicated to both Government of India and High Court of Karnataka with a request to consider the proposal early. As suggested by Government of India, concurrence of High Court of Karnataka has been sought for the proposal and high Court of Karnataka has informed that the matter would be placed before the Full Court and decision taken would be intimated to Government.

c) Decision is awaited.

d) As the proposal is still under consideration of High Court of Karnataka this does not arise.

ಬಿಡದಿ ಮತ್ತು ಸಾತನೂರು ಹತ್ತಿರ ಜಪಾನೀಸ್ ಕೈಗಾರಿಕಾ ನಗರ ಸ್ಥಾಪನೆ

163 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕದ ಬಿಡದಿ ಮತ್ತು ಸಾತನೂರು ಹತ್ತಿರ ಜಪಾನೀಸ್ ಕೈಗಾರಿಕಾ ನಗರ ಸ್ಥಾಪನೆ ಮಾಡುವ ಉದ್ದೇಶವೇನಾದರೂ ಇದೆಯೇ?

ಆ) ಹಾಗಿದ್ದಲ್ಲಿ ಈ ಉದ್ದೇಶಕ್ಕಾಗಿ ಎಷ್ಟು ಎಕರೆ ಜಮೀನುಗಳನ್ನು ಭೂ ಸ್ವಾಧೀನ ಪಡಿಸಿಕೊಳ್ಳಲಾಗುತ್ತದೆ?

ಇ) ಈ ಪ್ರದೇಶಗಳಲ್ಲಿ ಜಪಾನೀಸ್ ಕೈಗಾರಿಕಾ ನಗರ ಸ್ಥಾಪಿಸುವ ಬಗ್ಗೆ ರೈತರುಗಳ ವಿರೋಧವಿದೆಯೇ?

ಈ) ಹಾಗಿದ್ದಲ್ಲಿ ಈ ಸ್ಥಳಗಳಲ್ಲಿ ಜಪಾನೀಸ್ ಕೈಗಾರಿಕಾ ನಗರ ಸ್ಥಾಪನೆಯನ್ನು ನಿಲ್ಲಿಸುವ ಬಗ್ಗೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಬಿಡದಿ ಮತ್ತು ಸಾತನೂರು ಗ್ರಾಮಗಳಲ್ಲಿ ಅಂದಾಜು ಅನುಕ್ರಮವಾಗಿ 3000 ಎಕರೆ ಜಮೀನುಗಳು.

ಇ) ಹೌದು.

ಈ) ರಾಜ್ಯ ಸರ್ಕಾರವು ಈ ಯೋಜನೆಯ ಬಗ್ಗೆ ಸ್ಥಳೀಯರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಗಮನದಲ್ಲಿಟ್ಟು ಕೊಂಡು ಕೈಗಾರಿಕಾ ನಗರವನ್ನು ಸ್ಥಾಪಿಸಲು ಸೂಕ್ತ ಸಹಾಯವನ್ನು ಒದಗಿಸಲಾಗುವುದು.

ಸಾಧನೆಯ ಸಮಾವೇಶಕ್ಕಾಗಿ ಸರ್ಕಾರವು ಖರ್ಚು ಮಾಡಿರುವ ಹಣದ ಮೊತ್ತ

164 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನಲ್ಲಿ ನಡೆದ ಸಾಧನೆಯ ಸಮಾವೇಶಕ್ಕಾಗಿ ಸರ್ಕಾರವು ಖರ್ಚು ಮಾಡಿದ ಒಟ್ಟು ಮೊತ್ತವೆಷ್ಟು?

ಆ) ಇದರಲ್ಲಿ ವೃತ್ತಪತ್ರಿಕೆಗಳು ಹಾಗೂ ಇನ್ನಿತರ ನಿಯತಕಾಲಿಕೆಗಳಲ್ಲಿ ಜಾಹೀರಾತಿಗಾಗಿ ಖರ್ಚು ಮಾಡಿದ ಹಣವೆಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) 1,72,74,436.27

ಆ) 1,07,00,000.00

ತುಂಗಭದ್ರಾ ಅಣೆಕಟ್ಟಿನ ದುರಸ್ತಿ ಕಾರ್ಯ ಕುರಿತು

165 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಂಗಭದ್ರಾ ಅಣೆಕಟ್ಟಿನಿಂದ ನವೆಂಬರ್ 92ರಲ್ಲಿ ಅಣೆಕಟ್ಟಿನ ಕೆಳಗಿನ ಜನರಿಗೆ ಅಪಾಯದ ಮುನ್ಸೂಚನೆಯನ್ನು ನೀಡದೇ ನೀರನ್ನು ಬಿಡಲಾಗಿದೆಯೇ?

ಆ) ಹಾಗಿದ್ದಲ್ಲಿ ಅಣೆಕಟ್ಟಿನಿಂದ ಬಿಟ್ಟ ನೀರಿನ ಪ್ರಮಾಣವೆಷ್ಟು?

ಇ) ಈ ವಿಷಯಕ್ಕೆ ಸಂಬಂಧಿಸಿದ ಜವಾಬ್ದಾರಿಯುತ ವ್ಯಕ್ತಿಗಳು ಯಾರು?

ಈ) ಅಣೆಕಟ್ಟಿನಿಂದ ಹಠಾತ್ತನೆ ನೀರು ಬಿಟ್ಟಿದ್ದರಿಂದ, ಜಾನುವಾರುಗಳ ಸಾವು, ಬೆಳೆಗಳ ನಷ್ಟ ಹಾಗೂ ಮನೆಗಳ ಕುಸಿತದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದ ಪಕ್ಷದಲ್ಲಿ ವಿಚಾರಣೆ ನಡೆಸುವ ಬಗ್ಗೆ ಯಾವುದೇ ಪ್ರಸ್ತಾವನೆ ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಇಲ್ಲ.

ಕರ್ನಾಟಕ ಹಾಗೂ ಆಂಧ್ರಪ್ರದೇಶದ ಸಂಬಂಧಪಟ್ಟ ಅಧಿಕಾರಿಗಳಿಗೆ ಅಗತ್ಯ ಮುನ್ನೆಚ್ಚರಿಕೆ ಸಂದೇಶ ನೀಡಿದ ನಂತರ ತುಂಗಭದ್ರಾ ಅಣೆಕಟ್ಟಿನಿಂದ ನೀರನ್ನು ಬಿಡಲಾಗಿತ್ತು.

ಆ) ದಿನಾಂಕ 17-11-92ರ ಸಾಯಂಕಾಲ 6.00 ಗಂಟೆಗೆ 14,770 ಕ್ಯೂಸೆಕ್ಸ್‌ನಿಂದ 18-11-92ರ ಬೆಳಿಗ್ಗೆ 11.00 ಗಂಟೆಗೆ 3.69 ಲಕ್ಷ ಕ್ಯೂಸೆಕ್ಸ್ ನೀರನ್ನು ಜಲಾಶಯದಿಂದ ನಿಧಾನವಾಗಿ ಹೆಚ್ಚಿಸುತ್ತಾ ಬಿಡಲಾಯಿತು.

ಇ) (ಅ) ಮತ್ತು (ಆ)ಗಳಿಗೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ತುಂಗಭದ್ರಾ ಅಣೆಕಟ್ಟಿನಿಂದ ನೀರನ್ನು ಹಠಾತ್ತಾಗಿ ಬಿಟ್ಟಿರುವುದಿಲ್ಲ. ನಿಧಾನವಾಗಿ ಹೆಚ್ಚಿಸುತ್ತಾ ಬಿಡಲಾಗಿದೆ. ನೀರು ಬಿಟ್ಟ ಸಮಯದಲ್ಲಿ ಆ ಪ್ರದೇಶದಲ್ಲಿ ಹೆಚ್ಚು ಮಳೆ ಬಿದ್ದ ಕಾರಣ, ಜಾನುವಾರುಗಳ ಸಾವು, ಬೆಳೆಗಳ ನಷ್ಟ ಹಾಗೂ ಮನೆಗಳ ಕುಸಿತ ಉಂಟಾಗಿದೆ.

ಉ) (ಅ)ದಿಂದ (ಈ) ವರೆಗಿನ ಪ್ರಶ್ನೆಗಳಿಗೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿಗೆ ಖರ್ಚಾದ ಮೊತ್ತ

174 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಯೋಜನೆಯಲ್ಲಿ 1990-91, 1991-92 ಮತ್ತು 1992-93ನೇ ಸಾಲಿನಲ್ಲಿ ಸರ್ಕಾರದಿಂದ ಈ ವರೆಗೆ ಬಿಡುಗಡೆ ಮಾಡಿದ ಹಣವೆಷ್ಟು?

ಆ) ಹೈದ್ರಾಬಾದ್ ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಿಗೆ ಮಂಜೂರು ಮಾಡಿದ ಅಭಿವೃದ್ಧಿ ಕೆಲಸಗಳೆಷ್ಟು? (ಜಿಲ್ಲಾ ಮತ್ತು ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು)

ಇ) ಅಭಿವೃದ್ಧಿ ಕೆಲಸಗಳಿಗಾಗಿ ಮಂಜೂರಾದ ಹಣವೆಷ್ಟು ಮತ್ತು ಈವರೆಗೆ ಖರ್ಚಾದ ಹಣವೆಷ್ಟು ಹಾಗೂ ಅಭಿವೃದ್ಧಿ ಕೆಲಸಗಳು ಯಾವ ಹಂತದಲ್ಲಿವೆ? (ಎಲ್ಲಾ ಇಲಾಖಾವಾರು ಮಾಹಿತಿ ನೀಡುವುದು) ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ವರ್ಷಾವಾರು ಬಿಡುಗಡೆಯಾದ ಹಣ ಕೆಳಗಿನಂತಿದೆ.

(ಕೋಟಿ ರೂ.ಗಳಲ್ಲಿ)

ವರ್ಷ	ಬಿಡುಗಡೆಯಾದ ಹಣ
1989-90	0.10
1990-91	50.00
1991-92	60.00
1992-93 (ನವೆಂಬರ್ 92ರ ಅಂತ್ಯದ ವರೆಗೆ)	25.00
ಒಟ್ಟು	**135.10**

ಆ) ಜಿಲ್ಲಾವಾರು ಮಂಜೂರು ಮಾಡಿದ ಕಾರ್ಯಕ್ರಮಗಳ ಸಂಖ್ಯೆ ಕೆಳಗಿನಂತಿದೆ

ಜಿಲ್ಲೆ	ಮಂಜೂರಾದ ಕಾರ್ಯಕ್ರಮಗಳ ಸಂಖ್ಯೆ
ಬಳ್ಳಾರಿ	824
ಬೀದರ್	559
ಗುಲ್ಬರ್ಗಾ	1133
ರಾಯಚೂರು	1457
ಒಟ್ಟು	**3973**

ಇ) ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿಗಾಗಿ ಇಲಾಖಾವಾರು ಈವರೆಗೆ (ನವೆಂಬರ್ 1992ರ ಅಂತ್ಯದ ವರೆಗೆ) ಖರ್ಚು ಮಾಡಿದ ಹಣ ಕೆಳಗಿನಂತಿದೆ

ಇಲಾಖೆ	ಕೋಟಿ ರೂ.ಗಳಲ್ಲಿ ಖರ್ಚು (ನವೆಂಬರ್ 92ರ ಅಂತ್ಯದವರೆಗೆ)
1. ರಸ್ತೆ ಮತ್ತು ಸೇತುವೆ	23.51
2. ದೊಡ್ಡ ಮತ್ತು ಮಧ್ಯಮ ನೀರಾವರಿ	5.39
3. ಸಣ್ಣ ನೀರಾವರಿ	5.22
4. ಶಿಕ್ಷಣ	19.40
5. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್	32.24
6. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	17.94
7. ಆರೋಗ್ಯ	5.90
8. ಸಹಕಾರ	9.60
9. ಕರ್ನಾಟಕ ವಿದ್ಯುತ್ ಮಂಡಳಿ	8.94
10. ಯುವಜನ ಸೇವೆ	0.50
11. ಸಮಾಜ ಕಲ್ಯಾಣ	0.02
12. ಸಿಬ್ಬಂದಿ	0.09
ಒಟ್ಟು	128.75

ರಾಜಾಜಿನಗರ ಕ್ಷೇತ್ರದಲ್ಲಿ ವಿದ್ಯುತ್ ಲೋ ವೋಲ್ಟೇಜ್

14 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜಾಜಿನಗರ ಕ್ಷೇತ್ರಕ್ಕೆ ಸೇರಿದ ಮಂಜುನಾಥನಗರ, ಇಂದಿರಾನಗರ, ಕೊಳಗೇರಿ, ಶ್ರೀ ಕಂಠೇಶ್ವರನಗರ ಹಾಗೂ ಮಹಾಲಕ್ಷ್ಮಿ ಬಡಾವಣೆಗಳಲ್ಲಿ ಲೋ ವೋಲ್ಟೇಜ್ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಲೋ ವೋಲ್ಟೇಜ್‌ನಿಂದ ಇಲ್ಲಿನ ನಿವಾಸಿಗಳಿಗೆ ಅನಾನುಕೂಲವಾಗಿರುವುದು ನಿಜವೆ?

ಇ) ಈ ಬಗ್ಗೆ ಕೆ.ಇ.ಬಿ.ಯವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಹೌದು

ಆ) ಹೌದು

ಇ) ಮಂಜುನಾಥ್‌ನಗರ ಬಡಾವಣೆಯಲ್ಲಿ ಒಂದು ಹೆಚ್ಚುವರಿ 250 ಕೆ.ವಿ.ಎ. ಸಾಮರ್ಥ್ಯವುಳ್ಳ ಪರಿವರ್ತಕವನ್ನು ಹಾಕಲು ಮುಂಜೂರಾಗಿದ್ದು ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ. ಪರಿವರ್ತಕವನ್ನು ಅಳವಡಿಸಿದ ನಂತರ ಲೋ ವೋಲ್ಟೇಜ್ ತೊಂದರೆಯು ನಿವಾರಣೆಯಾಗುತ್ತದೆ.

ಆ) ಇಂದಿರಾನಗರ ಕೊಳಗೇರಿ ಬಡಾವಣೆಯಲ್ಲಿ ಈಗ ಹಾಲಿ ಇರುವ 2 ತಂತಿಗಳಿಗೆ ಬದಲಾಗಿ 4 ತಂತಿಗಳನ್ನು ಹಾಕಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಈ ಕೆಲಸವಾದ ನಂತರ ವೋಲ್ಟೇಜ್ ಉತ್ತಮಗೊಳ್ಳುತ್ತದೆ.

ಇ) ಮಹಾಲಕ್ಷ್ಮಿ ಬಡಾವಣೆಯಲ್ಲಿ ಒಂದು ಹೆಚ್ಚುವರಿ 250 ಕೆ.ವಿ.ಎ. ಸಾಮರ್ಥ್ಯವುಳ್ಳ ಪರಿವರ್ತಕವನ್ನು ಹಾಕಲು ಕೆಲಸ ಪ್ರಾರಂಭಿಸಿದ್ದು, ಪರಿವರ್ತಕವನ್ನು ಅಳವಡಿಸಿದ ನಂತರ ಲೋ ವೋಲ್ಟೇಜ್ ತೊಂದರೆಯು ನಿವಾರಣೆಯಾಗುತ್ತದೆ.

ಈ) ಶ್ರೀಕಂಠೇಶ್ವರ ನಗರದಲ್ಲಿ ಪರಿವರ್ತಕದಿಂದ ಅತ್ಯಂತ ದೂರವಿರುವ ಗ್ರಾಹಕರ ಸ್ಥಾವರಗಳಲ್ಲಿ ವೋಲ್ಟೇಜ್‌ನ್ನು ಅಳತೆ ಮಾಡಿ, ಅದು ಸರಿಯಿರುವುದರಿಂದ ಅಲ್ಲಿ ಲೋ ವೋಲ್ಟೇಜ್ ಸಮಸ್ಯೆ ಇಲ್ಲವೆಂದು ಕಂಡು ಬಂದಿರುತ್ತದೆ.

ನೌಕರಿ ಆಯ್ಕೆಯಲ್ಲಿ ಗ್ರಾಮಾಂತರ ಮಕ್ಕಳಿಗೆ 15 ಅಂಕಗಳ ಸೇರ್ಪಡೆ

224 ಸಿ - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರಿ ನೌಕರಿ ಆಯ್ಕೆಯಲ್ಲಿ ಗ್ರಾಮಾಂತರ ಮಕ್ಕಳಿಗೆ ಪ್ರತಿಶತ 15 ಅಂಕಗಳ ಅಥವಾ 15 ಅಂಕಗಳನ್ನು ಸೇರಿಸಲಾಗುವುದೇ?

ಆ) ಅವುಗಳಲ್ಲಿ ಆರೋಗ್ಯ ಇಲಾಖೆಯಲ್ಲಿ ಸಂದರ್ಶನ ಕೊಡುವಾಗ ಯಾವ ರೀತಿ ಪರಿಗಣಿಸಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹೌದು.

ಗ್ರಾಮಾಂತರ ಅಭ್ಯರ್ಥಿಯು ಪಡೆದ ಒಟ್ಟು ಅಂಕಗಳಿಗೆ - 15 ಅಂಕಗಳನ್ನು ಸೇರಿಸಲಾಗುವುದು.

ಆ) ಸೇವಾ ನಿಯಮಾವಳಿಗಳ ಪ್ರಕಾರ ವಿದ್ಯಾರ್ಹತೆಗಳನ್ನು ಪರಿಗಣಿಸಿ ಒಟ್ಟು ಅಂಕಗಳಿಗೆ 15 ಅಂಕಗಳನ್ನು ಕೊಟ್ಟು ಶೇಖಡವಾರು ಮಾಡಿ ಸಂದರ್ಶನವನ್ನು ಕೊಡಲಾಗಿದೆ.

ತುಮಕೂರು ಜಿಲ್ಲೆಯಲ್ಲಿ ಸಾಕ್ಷರತಾ ಯೋಜನೆ

227 - ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ಜಿಲ್ಲೆಯಲ್ಲಿ ಸಾಕ್ಷರತಾ ಕಾರ್ಯಕ್ರಮದ ಅನುಷ್ಠಾನಕ್ಕೆ ಈವರೆಗೆ ಖರ್ಚು ಮಾಡಿರುವ ಹಣವೆಷ್ಟು?

ಆ) ಈ ದಿಸೆಯಲ್ಲಿ ಸಾಧಿಸಿರುವ ಪ್ರಗತಿಗಳೇನು?

ಇ) ಯಾವ ಯಾವ ಬಾಬಿಗೆ ಎಷ್ಟು ಹಣ ಖರ್ಚಾಗಿದೆ?

ಈ) ಇದರಲ್ಲಿ ಮುದ್ರಣಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 1992 ನವೆಂಬರ್‌ವರೆಗೆ ಒಟ್ಟು ರೂ. 2,37,952.11 ವೆಚ್ಚವಾಗಿರುತ್ತದೆ.

ಆ) ರಾಷ್ಟ್ರೀಯ ಸಾಕ್ಷರತಾ ನಿಯೋಗದ ಮಾರ್ಗ ಸೂಚಿಯನ್ವಯ ದಿನಾಂಕ 24.7.91ರಂದು ತುಮಕೂರು ಜಿಲ್ಲೆಯ ಸಾಕ್ಷರತಾ ಆಂದೋಲನ ಯೋಜನೆಯ ರೂ. 2,57,51,150.00 ಗಳ ಪ್ರಸ್ತಾವನೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿತು. ಈ ದಿಸೆಯಿಂದಾಗಿ ಸಾಕ್ಷರ ಮಿತ್ರ ಎಂಬ ನೋಂದಾಯಿತ ಸಂಸ್ಥೆಯು ಅಸ್ತಿತ್ವಗೊಂಡು ಆಂದೋಲನವನ್ನು ಅನುಷ್ಠಾನಗೊಳಿಸುವ ಹೊಣೆ ಹೊತ್ತಿದೆ. ಈ

ಆಂದೋಲನವು ಜುಲೈ 1991ರಲ್ಲಿ ಪ್ರಾರಂಭವಾಗಿದ್ದು, ಸುಮಾರು 3,27,083 ಅನಕ್ಷರಸ್ಥರನ್ನು ಗುರುತಿಸಲಾಗಿದೆ.

ಆಂದೋಲನದ ಪೂರ್ವಭಾವಿಕಾರ್ಯಗಳಾದ ಕಲಿಕೆಗೆ ವಾತಾವರಣ ನಿರ್ಮಾಣ, ಪ್ರೇರಣೆ, ಗಣತಿ ಕಾರ್ಯಕಲಿಕಾ ಸಂಚಿ, ಕಲಿಕಾ ವಸ್ತು ಸ್ವಯಂ ಸೇವಕರ ಸಂಚಿಗಳ ತಯಾರಿಕೆ ಮೊದಲಾದವುಗಳನ್ನು ಹಮ್ಮಿಕ್ಕೊಳ್ಳಲಾಗಿದೆ. ಹಾಗೂ ಬೋಧನಾ ಮತ್ತು ಕಲಿಕಾ ಕಾರ್ಯಕ್ರಮಗಳು ನಡೆಯುತ್ತಿವೆ.

ಇ) ಖರ್ಚನ್ನು ಈ ಕೆಳಕಂಡಂತೆ ಮಾಡಲಾಗಿದೆ

1	ವಾತಾವರಣ ನಿರ್ಮಾಣ ಪ್ರೇರಣ	34,85,651.11
2	ತರಬೇತಿಗಾಗಿ	12,03,882.93
3	ಅನಕ್ಷರಸ್ಥರಗಣತಿ ಕಾರ್ಯ	3,19,113.29
4	ಕಲಿಕಾ ಸಂಚಿಸ್ವಯಂ ಸೇವಕರ ಸಂಚಿ ಇತ್ಯಾದಿ	129,09,212.30
5	ಆಡಳಿತ ನಿರ್ವಹಣೆ	15,99,536.21
6	ಸಾದಿಲ್ವಾರು ಮೌಲ್ಯಮಾಪನ ಡಾಕ್ಯುಮೆಂಟೇಷನ್ ಇತ್ಯಾದಿ	42,82,556.27

ರೂ. 53,94,750.00

ಅಬಕಾರಿ ಉದ್ಯಮದ ರಾಷ್ಟ್ರೀಕರಣ

230 - ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಅಬಕಾರಿ ಉದ್ಯಮವನ್ನು ಖಾಸಗಿಯವರಿಗೆ ವಹಿಸಿರುವುದರಿಂದ ಆಗಿರುವ ಅನಾಹುತಗಳು ಸರ್ಕಾರದವರ ಗಮನಕ್ಕೆ ಬಂದಿವೆಯೇ?

ಆ) ಈ ಉದ್ಯಮವನ್ನು ಖಾಸಗಿಯವರ ಕೈ ತಪ್ಪಿಸಿ ರಾಷ್ಟ್ರೀಕರಣ ಮಾಡಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಇಲ್ಲಾ

ಆ) ಪ್ರಸಕ್ತದಲ್ಲಿ ಸರ್ಕಾರದ ಮುಂದೆ ಇಂತಹ ಯಾವುದೇ ಪ್ರಸ್ತಾವನೆ ಇಲ್ಲ.

ರೈತರ ಬೇಸಾಯಕ್ಕೆ ವಿದ್ಯುಚ್ಛಕ್ತಿ

232 - ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಮಾನ್ಯ ಮುಖ್ಯ ಮಂತ್ರಿಗಳು ಈ - ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತುಮಕೂರು ಜಿಲ್ಲೆಯ ರೈತರಿಗೆ ಬೇಸಾಯಕ್ಕೆ ವಿದ್ಯುಚ್ಛಕ್ತಿ ಒದಗಿಸುವಲ್ಲಿ ವಿಫಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ವಿಫಲತೆಯಿಂದ ರಾಜ್ಯದ ರೈತರಿಗೆ ಆಗಿರುವ ತೊಂದರೆ ಹಾಗೂ ಬೆಳೆ ಕಳೆದುಕೊಂಡ ರೈತರ ಮಾನಸಿಕ ಯಾತನೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಇದನ್ನು ನಿವಾರಣೆ ಮಾಡಲು ಸರ್ಕಾರ ಕಾರ್ಯಕ್ರಮ ನಿರೂಪಿಸಿ ರೈತರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳುತ್ತಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಮತ್ತು ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತುಮಕೂರು ಜಿಲ್ಲೆಯ ರೈತರಿಗೆ ಬೇಸಾಯಕ್ಕೆ ಬೇಕಾಗುವ ವಿದ್ಯುಚ್ಛಕ್ತಿ ಒದಗಿಸುವಲ್ಲಿ ವಿಫಲವಾಗಿರುವುದಿಲ್ಲ. ರೋಸ್ಟರ್ ಪದ್ಧತಿಯನ್ನು ಅನುಸರಿಸಿ ವಿದ್ಯುಚ್ಛಕ್ತಿಯನ್ನು ಹೊಸ ಐ.ಪಿ. ಸೆಟ್‌ಗಳಿಗೆ ಕೊಡಲಾಗುತ್ತಿದೆ.

ಇ) ರಾಜ್ಯ ಸರ್ಕಾರವು ಸಾಮಾನ್ಯವಾಗಿ ನಿಗದಿ ಪಡಿಸಿರುವ 1992-93ರ ಐ.ಪಿ. ಸೆಟ್‌ನ ಗುರಿಯನ್ನು ಸಾಧಿಸಲು ಮಂಡಳಿಯು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿರುತ್ತದೆ. ಇದಕ್ಕೆ ಬೇಕಾದ ಹಲವಾರು ಪ್ರಸರಣಾ ಮಾರ್ಗ ಮತ್ತು ಸಬ್ ಸ್ಟೇಷನ್ ಕೆಲಸಗಳಲ್ಲಿ ಸುಧಾರಣೆ ಮತ್ತು ವಿಸ್ತರಣೆ ಕಾರ್ಯಕ್ರಮಗಳನ್ನು ಮಂಡಳಿಯು ಮಾಡುತ್ತಿದೆ.

ಮೂಡಬಿದರೆಯಲ್ಲಿ ತೋಟಗಾರಿಕೆಗೆ ಮಂಜೂರಾದ ಜಮೀನಿನ ವಿವರ

273 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂಡಬಿದ್ರೆಯಲ್ಲಿ ತೋಟಗಾರಿಕೆ ಇಲಾಖೆಗೆ ಮಂಜೂರಾದ ಜಮೀನೆಷ್ಟು?

ಆ) ಇದರಲ್ಲಿ ಅಭಿವೃದ್ಧಿ ಕಾರ್ಯಗಳೇನಾದರೂ ಈ ತನಕ ಆಗಿದೆಯೇ?

ಇ) ಇತರ ಅಭಿವೃದ್ಧಿಗಾಗಿ ಯೋಜನೆ ಏನಾದರೂ ತಯಾರಾಗಿದೆಯೇ (ಅದರ ವಿವರಗಳನ್ನು ಕೊಡುವುದು)?

ಈ) ಈ ಯೋಜನೆಯನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಉ) ಈ ಸ್ಥಳದಲ್ಲಿ ಅನಧಿಕೃತ ಆಕ್ರಮಣ ನಡೆದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಯವರು) :

ಅ) 8.20 ಎಕರೆ

ಆ) ಇಲ್ಲ

ಇ) ಹೌದು. ಸುಮಾರು 6.02 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಐದು ವರ್ಷಗಳ ಅವಧಿಯಲ್ಲಿ ಕಾರ್ಯಗತಗೊಳಿಸಲು ತಯಾರಿಸಿದೆ. ಈ ಯೋಜನೆಯಲ್ಲಿ 6 ಎಕರೆ ಪ್ರದೇಶದಲ್ಲಿ ವಿವಿಧ ಜಾತಿಯ ಹಣ್ಣಿನ ತೋಟವನ್ನು ನಿರ್ಮಿಸುವುದು. ಒಂದು ಎಕರೆ ಪ್ರದೇಶದಲ್ಲಿ ಉದ್ಯಾನವನ ನಿರ್ಮಾಣ ಮಾಡಲಾಗುವುದು. ಉಳಿದ ಪ್ರದೇಶದಲ್ಲಿ ಸಸ್ಯಾಭಿವೃದ್ಧಿ ಕಾರ್ಯಕ್ರಮ, ಕಾಮಗಾರಿ ಕೆಲಸಗಳಿಗೆ ಉಪಯೋಗಿಸಲು ಉದ್ದೇಶಿಸಲಾಗಿದೆ.

ಈ) ತೋಟಗಾರಿಕೆ ನಿರ್ದೇಶಕರು ಕಳುಹಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸುತ್ತಿದೆ.

ಉ) ಹೌದು. ಅತಿಕ್ರಮಣಕಾರರನ್ನು ನಿಯಮಾನುಸಾರ ಹೊರದೂಡಲು ಕ್ರಮ ಕೈಗೊಳ್ಳಲಾಗುವುದು.

ಸೇಡಂ ಕ್ಷೇತ್ರದ ಪ್ರಾಥಮಿಕ ಶಾಲೆಗಳ ಶಿಕ್ಷಕರ ಸಂಖ್ಯೆ

292 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ ಪ್ರಾಥಮಿಕ ಶಾಲೆಗಳು 4ನೇ ವರ್ಗ ಹಾಗೂ 7ನೇ ವರ್ಗದವರೆವಿಗೂ ಇದ್ದು ಆ ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ ಹಾಗೂ ಕೋಣೆಗಳ ಸಂಖ್ಯೆ ಎಷ್ಟು?

ಆ) ಪ್ರಾಥಮಿಕ ಶಾಲೆಗಳು 4ನೇ ವರ್ಗದಿಂದ 7ನೇ ವರ್ಗದವರೆವಿಗೂ ಇದ್ದು, ಅಲ್ಲಿ ಒಂದು ಎರಡು ಕೋಣೆಗಳು ಇದ್ದು ಒಬ್ಬಿಬ್ಬರು ಶಿಕ್ಷಕರು ಇದ್ದರೆ ಶಿಕ್ಷಣಕ್ಕಾಗಿ ಶಾಲೆಗಳು ಇದ್ದು ಸಹ ಇಲ್ಲದಂತಾಗಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆ ಮಾಡಿದಂತಾಗಿಲ್ಲವೆ?

ಇ) ಈ ಹೈದ್ರಾಬಾದ್ ಕರ್ನಾಟಕ ಹಿಂದುಳಿದ ಭಾಗದಲ್ಲಿ ಕೋಣೆಗಳು ಹಾಗೂ ಶಿಕ್ಷಕರ ಕೊರತೆಯನ್ನು ಸರಿಪಡಿಸಿ ವಿದ್ಯಾರ್ಥಿಗಳ ವಿದ್ಯಾಭ್ಯಾಸವನ್ನು ಯಾವಾಗ ಸುಧಾರಿಸಲಾಗುವುದು?

ಶ್ರೀ ಎಂ. ಘೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ 441

ಕೋಣೆಗಳ ಸಂಖ್ಯೆ 86

ಆ) ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆ ಆಗದಂತೆ ಅಗತ್ಯವಿರುವ ಶಾಲೆಗಳಿಗೆ ಶಿಕ್ಷಕರನ್ನು ನಿಯೋಜಿಸಲಾಗುತ್ತಿದೆ.

ಇ) ಇಲಾಖೆಯ ವತಿಯಿಂದ ಜಿಲ್ಲೆಯಲ್ಲಿ ಕೈಗೆತ್ತಿಕೊಳ್ಳುವ ಶಾಲಾ ಕಟ್ಟಡಥ ನಿರ್ಮಾಣ ಮತ್ತು ಶಿಕ್ಷಕರ ನೇಮಕಾತಿಯಲ್ಲದೇ ಹೈದ್ರಾಬಾದ್‌ಕರ್ನಾಟಕ ಅಭಿವೃದ್ಧಿ ಯೋಜನೆಯನ್ವಯವೂ ಸಹ ಶಾಲಾ ಕೋಣೆಗಳ ನಿರ್ಮಾಣ ಕಾರ್ಯ ಕೈಗೆತ್ತಿಕೊಂಡಿದೆ. ವಿಶೇಷ ನೇಮಕಾತಿ ನಿಯಮಗಳಡಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಹಿಂದುಳಿದ ವಿಭಾಗದ ಅಭಿವೃದ್ಧಿಗೋಸ್ಕರ ವಿಶೇಷ ಒತ್ತುಕೊಡಲು ಈ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಸೇಡಂ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆ ಅಧೀನದಲ್ಲಿರುವ ಕೆರೆಗಳ ದುರಸ್ತಿ

295 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿ 1989-90ನೇ ಸಾಲಿನಿಂದ ಇಲ್ಲಿಯವರೆಗೆ ಸಣ್ಣ ನೀರಾವರಿ ಇಲಾಖೆ ಅಧೀನದಲ್ಲಿರುವ ಕೆರೆಗಳ ದುರಸ್ತಿಗಾಗಿ ಖರ್ಚಾಗಿರುವ ಹಣವೆಷ್ಟು (ಕಾಮಗಾರಿವಾರು ವಿವರ ತಿಳಿಸುವುದು)

ಆ) ದುರಸ್ತಿ ಮಾಡಿಯೂ ಸಹ ನೀರಾವರಿ ಕೆರೆಗಳ ಕೆಲಸ ಪೂರ್ಣಗೊಂಡು ರೈತರಿಗೆ ಇದರ ಪ್ರಯೋಜನ ದೊರೆಯದೆ ಇರಲು ಕಾರಣಗಳೇನು?

ಇ) ಈಗಲೂ ಸಹ ಕಾನಗಡ್ಡೆ ಕೆರೆ ಕಡಲಾಪುರ ಕೆರೆ ಕಾಲುವೆ ಇತ್ಯಾದಿ ಸರಿಯಾಗಿಲ್ಲದೆ ರೈತರಿಗೆ ನೀರಾವರಿ ಬಗ್ಗೆ ತೊಂದರೆ ಉಂಟಾಗಿಲ್ಲವೆ?

ಈ) ಇವುಗಳನ್ನು ದುರಸ್ತಿ ಮಾಡಿ ರೈತರಿಗೆ ನೀರಾವರಿ ಅನುಕೂಲ ಮಾಡಿ ಕೊಡಲಾಗುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ರೂ. 3,70,820 ಗಳು ವಿವರಗಳು ಹೀಗಿವೆ

	89-90	*90-91*	*91-92*	*92-93*	ಒಟ್ಟು
ಕಾನಾಗಡ್ಡ ಕೆರೆ	6100	44634	133645	7400	191779

ಕಡಲಾಪುರ ಕೆರೆ	41531	108560	28950	-	179041
	47631	153194	162595	7400	370820

ಆ) ಕೆರೆಗಳಲ್ಲಿ ಹೂಳು ತುಂಬಿ ನೀರಿನ ಶೇಖರಣ ಸಾಮರ್ಥ್ಯ ಕಮ್ಮಿ ಆಗಿರುವುದು ಮಳೆ ಪ್ರಮಾಣ ಕಡಿಮೆಯಾಗಿ ಕೆರೆಗಳಿಗೆ ಸಾಕಷ್ಟು ನೀರು ಒದಗದಿರುವುದು ಹಾಗೂ ಕಾಲುವೆಗಳಲ್ಲಿ ಹೂಳು ತುಂಬಿಕೊಂಡಿರುವುದು ಈ ಪರಿಸ್ಥಿತಿಗೆ ಕಾರಣವಾಗಿದೆ.

ಇ) ಕಾಲುವೆಗಳು ಭಾಗಶಃ ದುಸ್ಥಿತಿಯಲ್ಲಿರುವುದರಿಂದ ಉದ್ದೇಶಿತ ಅಚ್ಚುಕಟ್ಟು ಪ್ರದೇಶಕ್ಕೆ ಪೂರ್ಣವಾಗಿ ನೀರನ್ನು ಒದಗಿಸಲಾಗದೆ ತೊಂದರೆ ಉಂಟಾಗಿದೆ.

ಈ) ಹಣದ ಲಭ್ಯತೆಯ ಮೇಲೆ ದುರಸ್ತಿ ಕಾರ್ಯವನ್ನು ಹಂತ ಹಂತವಾಗಿ ಕೈಗೊಳ್ಳುವ ಉದ್ದೇಶವಿದೆ.

ಮಂತ್ರಿಗಳಿಂದ ಆಸ್ತಿ ಘೋಷಣೆಯ ವಿವರ

544 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶ್ರೀ ವೀರೇಂದ್ರ ಪಾಟೀಲ್, ಶ್ರೀ ಬಂಗಾರಪ್ಪನವರ ಸರ್ಕಾರಗಳಲ್ಲಿ ಮತ್ತು ಶ್ರೀ ವೀರಪ್ಪ ಮೊಯಿಲಿಯವರ ಸರ್ಕಾರದಲ್ಲಿ ತಮ್ಮ ಆಸ್ತಿ ಪಾಸ್ತಿಗಳನ್ನು ಘೋಷಿಸಿರುವ ಮಂತ್ರಿಗಳಾರ್‍ಯಾರು?

ಆ) ಈ ರೀತಿ ಘೋಷಿಸಿಕೊಳ್ಳದಿರುವ ಮಂತ್ರಿಗಳು ಯಾರ್‍ಯಾರು ಮತ್ತು ಪ್ರತಿಯೊಬ್ಬರ ಆಸ್ತಿ ವಿವರಗಳೇನು?

ಇ) ತಮ್ಮ ಆಸ್ತಿ ವಿವರಗಳನ್ನು ಘೋಷಿಸಿಕೊಳ್ಳದಿರುವ ಮಂತ್ರಿಗಳ ಬಗ್ಗೆ ಸರ್ಕಾರದವರು ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) 1) ವಿವರಗಳನ್ನು ಅನುಬಂಧ-11ರಲ್ಲಿ ನೀಡಲಾಗಿದೆ

2) ಆಸ್ತಿ ವಿವರಗಳನ್ನು ಸಲ್ಲಿಸದೆ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ತಮ್ಮ ಆಸ್ತಿ ವಿವರಗಳನ್ನು ಘೋಷಿಸಿಕೊಳ್ಳದಿರುವ ಮಂತ್ರಿಗಳ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಲು ಲೋಕಾಯುಕ್ತ ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ.

ಅನುಬಂಧ-1/Annexure-I

ಆಸ್ತಿ ವಿವರಗಳನ್ನು ಘೋಷಿಸಿರುವ ಸಚಿವರುಗಳ ಹೆಸರುಗಳು:

(1) ಶ್ರೀ ವೀರೇಂದ್ರ ಪಾಟೀಲ್‌ರವರ ಸರ್ಕಾರ :

1) ಶ್ರೀ ವೀರೇಂದ್ರ ಪಾಟೀಲ್
2) ಶ್ರೀ ಕೆ.ಎಚ್. ಪಾಟೀಲ್
3) ಶ್ರೀ ಎಂ.ವೈ. ಘೋರ್ಪಡೆ
4) ಶ್ರೀ ಎಂ. ರಾಜಶೇಖರ ಮೂರ್ತಿ
5) ಶ್ರೀ ಎಂ.ಎಸ್. ಆತ್ಮಾನಂದ
6) ಶ್ರೀ ಎಂ. ವೀರಪ್ಪ ಮೊಯಿಲಿ
7) ಶ್ರೀ ಜಿ. ಪುಟ್ಟಸ್ವಾಮಿ ಗೌಡ
8) ಶ್ರೀ ಅಜೀಜ್ ಸೇಠ್
9) ಶ್ರೀಮತಿ ಮನೋರಮಾ ಮಧ್ವರಾಜ್
10) ಶ್ರೀ ಎಸ್.ಎಂ. ಯಾಹ್ಯಾ
11) ಶ್ರೀ ಬಿ. ಶಿವಣ್ಣ
12) ಶ್ರೀ ಬಿ. ಬಸವಲಿಂಗಪ್ಪ
13) ಶ್ರೀ ಕೆ.ಜೆ. ಜಾರ್ಜ್
14) ಶ್ರೀಮತಿ ಸುಮಾ ವಸಂತ್

(2) ಶ್ರೀ ಬಂಗಾರಪ್ಪನವರ ಸರ್ಕಾರ (1991ನೇ ವರ್ಷ)

1) ಶ್ರೀ ಎಸ್. ಬಂಗಾರಪ್ಪ
2) ಶ್ರೀ ಧರ್ಮ್‌ಸಿಂಗ್
3) ಶ್ರೀ ಅಜೀಜ್ ಸೇಠ್
4) ಶ್ರೀ ಎಂ. ವೀರಪ್ಪ ಮೊಯಿಲಿ
5) ಶ್ರೀ ಮಲ್ಲಿಕಾರ್ಜುನ ಖರ್ಗೆ
6) ಶ್ರೀ ಸಿ.ಎಸ್. ನಾಡಗೌಡ
7) ಶ್ರೀ ಕೆ.ಜೆ. ಜಾರ್ಜ್
8) ಶ್ರೀ ಕೆ.ಎಚ್. ಪಾಟೀಲ್
9) ಶ್ರೀ ಬಿ. ಬಸವಲಿಂಗಪ್ಪ
10) ಶ್ರೀಮತಿ ಕೆ.ಎಸ್. ನಾಗರತ್ನಮ್ಮ
11) ಶ್ರೀ ಈ.ಟಿ. ಶಂಬುನಾಥ್
12) ಶ್ರೀ ಬಿ. ಶಿವಣ್ಣ
13) ಶ್ರೀ ಎಂ.ಎಲ್. ಉಸ್ತಾದ್
14) ಶ್ರೀ ಟಿ.ಎನ್. ನರಸಿಂಹಮೂರ್ತಿ

(3) ಶ್ರೀ ಬಂಗಾರಪ್ಪನವರ ಸರ್ಕಾರ (1992ನೇ ವರ್ಷ)

1) ಶ್ರೀ ಎಸ್. ಬಂಗಾರಪ್ಪ
2) ಶ್ರೀ ಧರ್ಮಸಿಂಗ್

3) ಶ್ರೀ ಮಲ್ಲಿಕಾರ್ಜುನ ಖರ್ಗೆ
4) ಶ್ರೀ ಎಂ. ವೀರಪ್ಪ ಮೊಯಿಲಿ
5) ಶ್ರೀ ಜಿ. ಪುಟ್ಟಸ್ವಾಮಿ ಗೌಡ
6) ಶ್ರೀ ಬ್ಲೇಸಿಯಸ್ ಎಂ.ಡಿಸೋಜ
7) ಶ್ರೀ ಎಂ.ಎಸ್. ಆತ್ಮಾನಂದ
8) ಶ್ರೀ ಅಜೀಜ್ ಸೇಠ್
9) ಶ್ರೀ ಈ.ಟಿ. ಶಂಬುನಾಥ್
10) ಶ್ರೀ ಟಿ.ಎನ್. ನರಸಿಂಹಮೂರ್ತಿ

(4) ಶ್ರೀ ವೀರಪ್ಪ ಮೊಯಿಲಿಯವರ ಸರ್ಕಾರ

1) ಶ್ರೀ ಹಾರ್ನಹಳ್ಳಿ ರಾಮಸ್ವಾಮಿ

ಅನುಬಂಧ II / Annexure II

ಆಸ್ತಿ ವಿವರಗಳನ್ನು ಘೋಷಿಸದಿರುವ ಸಚಿವರುಗಳ ಹೆಸರುಗಳು

(1) ಶ್ರೀ ವೀರೇಂದ್ರ ಪಾಟೀಲ್‌ರವರ ಸರ್ಕಾರ

1) ಶ್ರೀ ಎಸ್. ಬಂಗಾರಪ್ಪ
2) ಶ್ರೀ ಟಿ.ಎನ್. ನರಸಿಂಹಮೂರ್ತಿ
3) ಶ್ರೀ ಕೆ.ಎಚ್. ರಂಗನಾಥ್
4) ಡಾ. ಎಚ್.ಆರ್. ರಾಜು

(2) ಶ್ರೀ ಎಸ್. ಬಂಗಾರಪ್ಪನವರ ಸರ್ಕಾರ (1991ನೇ ವರ್ಷ)

1) ಶ್ರೀ ಬ್ಲೇಸಿಯಸ್ ಎಂ. ಡಿಸೋಜ
2) ಶ್ರೀಮತಿ ಮನೋರಮಾ ಮಧ್ವರಾಜ್
3) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್
4) ಶ್ರೀ ಜಿ.ಎಚ್. ಅಶ್ವಥ್ ರೆಡ್ಡಿ
5) ಶ್ರೀ ಜಿ. ಪುಟ್ಟಸ್ವಾಮಿ ಗೌಡ
6) ಶ್ರೀ ಎನ್. ಚಿಕ್ಕೇಗೌಡ
7) ಶ್ರೀ ಬಿ. ಶಿವಮೂರ್ತಿ
8) ಶ್ರೀ ವಿ. ಮುನಿಯಪ್ಪ
9) ಶ್ರೀ ನಜೀರ್ ಅಹಮದ್
10) ಶ್ರೀ ಮಲ್ಲಿಕಾರ್ಜುನ ಪ್ರಸನ್ನ
11) ಶ್ರೀ ಎಸ್. ರಮೇಶ್
12) ಶ್ರೀ ಬಸವರಾಜ್ ಪಾಟೀಲ್
13) ಶ್ರೀ ಎ.ಎಂ. ಬೆಳ್ಳಿಯಪ್ಪ

14) ಶ್ರೀ ಎಂ.ಎಸ್. ಆತ್ಮಾನಂದ

15) ಶ್ರೀ ಟಿ.ಎಂ. ಮಂಜುನಾಥ್

16) ಶ್ರೀ ಡಿ.ಕೆ. ಶಿವಕುಮಾರ್

17) ಶ್ರೀ ರಾಜಾ ಅಮರೇಶ್ ನಾಯಕ್

18) ಶ್ರೀ ಎಸ್.ಆರ್. ಮೋರೆ

19) ಶ್ರೀ ಎಂ. ರಾಮಪ್ಪ

(3) ಶ್ರೀ ಎಸ್. ಬಂಗಾರಪ್ಪನವರ ಸರ್ಕಾರ (1992ನೇ ವರ್ಷ)

ಶ್ರೀಯುತರುಗಳಾದ

1) ಜಿ.ಎಚ್. ಅಶ್ವಥ ರೆಡ್ಡಿ

2) ರಾಜಾ ಅಮರೇಶ್ ನಾಯಕ್

3) ಬಸವಲಿಂಗಪ್ಪ ಬಿ.

4) ಬಸವರಾಜ್ ಪಾಟೀಲ್

5) ಎ.ಎಂ. ಬೆಳ್ಳಿಯಪ್ಪ

6) ಎನ್. ಚಿಕ್ಕೇಗೌಡ

7) ಕೆ.ಜೆ. ಜಾರ್ಜ್

8) ಮಲ್ಲಾರಿಗೌಡ ಎಸ್. ಪಾಟೀಲ್

9) ವಿ. ಮುನಿಯಪ್ಪ

10) ಮಲ್ಲಿಕಾರ್ಜುನ ಪ್ರಸನ್ನ

11) ಎಸ್.ಆರ್. ಮೋರೆ

12) ಶ್ರೀಮತಿ ಕೆ.ಎಸ್. ನಾಗರತ್ನಮ್ಮ

13) ನಜೀರ್ ಅಹಮದ್

14) ಎ.ಎಸ್. ನಾಡಗೌಡ

15) ಎಂ. ರಾಮಪ್ಪ

16) ಬಿ. ಶಿವಣ್ಣ

17) ಡಿ.ಕೆ. ಶಿವಕುಮಾರ್

18) ಎಂ.ಎಲ್. ಉಸ್ತಾದ್

19) ಶ್ರೀಮತಿ ಮನೋರಮಾ ಮಧ್ವರಾಜ್

20) ಕೆ. ಶಿವಮೂರ್ತಿ

21) ಟಿ.ಎಂ. ಮಂಜುನಾಥ್

(4) ಶ್ರೀ ಎಂ. ವೀರಪ್ಪ ಮೊಯಿಲಿಯವರ ಸರ್ಕಾರ

1) ಶ್ರೀ ಎಂ. ವೀರಪ್ಪ ಮೊಯಿಲಿ

2) ಶ್ರೀ ಎಂ. ರಾಜಶೇಖರ ಮೂರ್ತಿ

3) ಶ್ರೀ ಧರ್ಮ ಸಿಂಗ್

4) ಶ್ರೀ ಕೆ.ಎಚ್. ರಂಗನಾಥ್

5) ಶ್ರೀ ಎಸ್.ಎಂ. ಯಾಹ್ಯಾ

6) ಶ್ರೀ ಮಲ್ಲಿಕಾರ್ಜುನ ಖರ್ಗೆ

7) ಶ್ರೀ ಎಂ.ವೈ. ಘೋರ್ಪಡೆ

8) ಶ್ರೀ ಚೌಡ ರೆಡ್ಡಿ

9) ಶ್ರೀಮತಿ ಮನೋರಮಾ ಮಧ್ವರಾಜ್

10) ಶ್ರೀ ಗೋಪಿನಾಥ್ ಸಾಂಡ್ರ

11) ಶ್ರೀ ಭೀಮಣ್ಣ ಖಂಡ್ರೆ

12) ಶ್ರೀ ಬ್ಲೇಸಿಯಸ್ ಡಿಸೋಜ

13) ಶ್ರೀ ಎಸ್. ಹುಚ್ಚಮಾಸ್ತಿ ಗೌಡ

ರಾಜ್ಯದಲ್ಲಿ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ.

306 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳೆಷ್ಟು

ಆ) 1985ರಿಂದ 1992ರವರೆಗೆ (ವರ್ಷವಾರು ಸಂಖ್ಯೆ ನೀಡುವುದು) ಸರ್ಕಾರದಿಂದ ಅನುಮೋದಿಸಲ್ಪಟ್ಟ ಪ್ರವೇಶ ಸಾಮರ್ಥ್ಯದ ಒಟ್ಟು ಸಂಖ್ಯೆ ಎಷ್ಟು? ಮತ್ತು ಪ್ರತಿಯೊಂದು ಕಾಲೇಜಿನಲ್ಲಿ ಅನುಮೋದಿಸಲ್ಪಟ್ಟ ಸಂಖ್ಯೆಗೆ ಅನುಗುಣವಾಗಿ ಪ್ರವೇಶ ಮಾಡಿರುವುದೆಷ್ಟು? (ವರ್ಷವಾರು ಸಂಖ್ಯೆಯನ್ನು ನೀಡುವುದು)

ಇ) ಹೆಚ್ಚಿಗೆ ಪ್ರವೇಶದ ಬಗ್ಗೆ ಕಾರಣಗಳೇನು? ಮತ್ತು ಸರ್ಕಾರವು ಯಾವಾಗ ಈ ಹೆಚ್ಚಿನ ಪ್ರವೇಶವನ್ನು ಅನುಮೋದಿಸಿದೆ. (ವರ್ಷವಾರು ಸಂಖ್ಯೆ ನೀಡುವುದು)

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) **ವೈದ್ಯಕೀಯ ಕಾಲೇಜುಗಳು**

ಸರ್ಕಾರಿ 4 ಖಾಸಗಿ 14

ದಂತ ಕಾಲೇಜುಗಳು

ಸರ್ಕಾರಿ 1 ಖಾಸಗಿ 40

ಆ) ವೈದ್ಯಕೀಯ ಕಾಲೇಜುಗಳ ವಿವರಣೆಗಳನ್ನು ಅನುಬಂಧ 'ಎ'ನಲ್ಲಿ ಲಗತ್ತಿಸಿದೆ.

ದಂತ ಕಾಲೇಜುಗಳ ವಿವರಗಳನ್ನು ಒದಗಿಸಲಾಗುವುದು.

ಇ) ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ದಂತ ಕಾಲೇಜುಗಳಲ್ಲ ಹೆಚ್ಚುವರಿ ಪ್ರವೇಶಗಳನ್ನು ನೀಡಿರುವುದಿಲ್ಲ. ಖಾಸಗಿ ವೈದ್ಯಕೀಯ ಮತ್ತು ದಂತ ಕಾಲೇಜುಗಳಲ್ಲಿ ಹೆಚ್ಚುವರಿ ಪ್ರವೇಶ ನೀಡಿರುವ ಬಗ್ಗೆ ಪರಿಶೀಲಿಸಿ ವಿವರಗಳನ್ನು ಒದಗಿಸಲಾಗುವುದು.

ಅನುಬಂಧ 'ಎ'

1985ರಿಂದ 1992ರವರೆಗೆ ರಾಜ್ಯದ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರಥಮ ಎಂಬಿಬಿಎಸ್‌ಗೆ ಮಂಜೂರು ಮಾಡಿರುವ ಪ್ರವೇಶ ಸಾಮರ್ಥ್ಯ ಮತ್ತು ವಾಸ್ತವವಾಗಿ ಪ್ರವೇಶ ನೀಡಿರುವ ಸೀಟುಗಳ ವಿವರ

ಹೊಸ ವೈದ್ಯಕೀಯ ಕಾಲೇಜುಗಳಿಗೆ ಮಂಜೂರಾತಿ.

305ಎ - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರವು ಹೊಸ ವೈದ್ಯಕೀಯ ಕಾಲೇಜುಗಳಿಗೆ ಮಂಜೂರಾತಿ ನೀಡಲು ಯೋಚಿಸುತ್ತಿರುವುದು ನಿಜವೇ?*

ಆ) *ಹಾಗಿದ್ದಲ್ಲಿ ಎಷ್ಟು ಕಾಲೇಜುಗಳಿಗೆ ಮಂಜೂರಾತಿ ನೀಡಲಾಗುವುದು?*

ಇ) *ಮತ್ತು ಕಳೆದ 3 ವರ್ಷಗಳಿಂದ ಈ ದಿನಾಂಕದವರೆಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) 36- ವಿವರಗಳನ್ನು ಅನುಬಂಧ-ಎನಲ್ಲಿ ಲಗತ್ತಿಸಲಾಗಿದೆ.

ಅನುಬಂಧ-ಎ

ವೈದ್ಯಕೀಯ ಕಾಲೇಜು ಮಂಜೂರಾತಿ ಕೋರಿ ಬಂದಿರುವ ಅರ್ಜಿಗಳು

1. ಶ್ರೀ ಜಗದ್ಗುರು ಮುರುಘರಾಜೇಂದ್ರ ವಿದ್ಯಾಪೀಠ, ಚಿತ್ರದುರ್ಗ.
2. ಸಿದ್ಧಗಂಗಾ ಎಜುಕೇಷನ್ ಸೊಸೈಟಿ, ತುಮಕೂರು.
3. ಅಲ್ ಮಹಮದ್ ಸೊಸೈಟಿ, ಭದ್ರಾವತಿ.
4. ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್, ಸುಳ್ಯ, ದಕ್ಷಿಣ ಕನ್ನಡ.
5. ಶರಬೇಶ್ವರ ವಿದ್ಯಾಪೀಠ, ಬಳ್ಳಾರಿ.
6. ನಿಟ್ಟೆ ಎಜುಕೇಶನ್ ಟ್ರಸ್ಟ್, ಕಾರ್ಕಳ, ದಕ್ಷಿಣ ಕನ್ನಡ.
7. ಕರ್ನಾಟಕ ಲಾ ಸೊಸೈಟಿ, ಬೆಳಗಾಂ.
8. ಮಲೆನಾಡು ಮೆಡಿಕಲ್ ಕಾಲೇಜು (ಬಿ.ಆರ್. ಅಂಬೇಡ್ಕರ್ ಮಿಷನ್) ಶಿವಮೊಗ್ಗ.
9. ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ.
10. ಫಾದರ್‌ಮುಲ್ಲರ್ ಇನ್ಸ್‌ಟ್ಯೂಟ್, ಕಂಕನಾಡಿ, ಮಂಗಳೂರು.
11. ಸಹ್ಯಾದ್ರಿ ಎಜುಕೇಶನ್ ಟ್ರಸ್ಟ್, ಶಿವಮೊಗ್ಗ.
12. ಶ್ರೀ ವೀಣಾಶಾರದ ಎಜುಕೇಶನ್ ಸೊಸೈಟಿ, ಹಾಸನ.
13. ತಾರಾನಾಥ್ ಶಿಕ್ಷಣ ಸಂಸ್ಥೆ, ರಾಯಚೂರು.
14. ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ, ಬೀದರ್.
15. ಖಾಜಾ ಶಿಕ್ಷಣ ಸಂಸ್ಥೆ, ಗುಲ್ಬರ್ಗಾ.
16. ಅಲ್ ಮಹಮದ್ ವಿದ್ಯಾಸಂಸ್ಥೆ, ಶಿವಮೊಗ್ಗ.

17. ಶರಬೇಶ್ವರ್ ವಿದ್ಯಾಪೀಠ, ಬಂಡಿಪ್ರೋಟ್, ಬಳ್ಳಾರಿ.
18. ನಾನಕ್‌ಜೀರ್ ಫೌಂಡೇಶನ್, ಬೀದರ್.
19. ಜಗದ್ಗುರು ಮೂರುಸಾವಿರದ ಮಠ, ಜೆ.ಜೆ.ಸಹಕಾರ ಸಂಘ ರೂರಲ್ ಮೆಡಿಕಲ್ ಕಾಲೇಜು, ಹುಬ್ಬಳ್ಳಿ.
20. ಶ್ರೀ ವೀಣಾಶಾರದ ಎಜುಕೇಶನ್ ಸೊಸೈಟಿ, ಶಿವಮೊಗ್ಗ.
21. ಚಾಮುಂಡಿ ಮೆಡಿಕಲ್ ಫೌಂಡೇಶನ್, ಬೆಂಗಳೂರು.
22. ಕರ್ನಾಟಕ ಪೀಪಲ್ ಎಜುಕೇಶನ್ ಸೊಸೈಟಿ, ಗುಲ್ಬರ್ಗಾ.
23. ಶಾಂತಿವರ್ಧಕ ಶಿಕ್ಷಣ ಸಂಸ್ಥೆ, ಭಾಲ್ಕಿ.
24. ಇಸ್ಲಾಮಿಕ್ ಅಕಾಡೆಮಿ ಆಫ್ ಎಜುಕೇಶನ್ ಯನಾಪೋಯ, ಮಂಗಳೂರು
25. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆ, ಉಜಿರೆ ಧಾರವಾಡದಲ್ಲಿ
26. ಶ್ರೀನಿವಾಸ ಟ್ರಸ್ಟ್, ಬೆಂಗಳೂರು.
27. ಸರ್ ಎಂ. ವಿಶ್ವೇಶ್ವರಯ್ಯ ಎಜುಕೇಶನ್ ಟ್ರಸ್ಟ್, ಕೋಲಾರ.
28. ಶರಾವತಿ ಎಜುಕೇಶನ್ ಟ್ರಸ್ಟ್, ಶಿವಮೊಗ್ಗ.
29. ಶ್ರೀ ರಾಜೀವಗಾಂಧಿ ಎಜುಕೇಶನ್ ಟ್ರಸ್ಟ್, ಮೈಸೂರು.
30. ಎಲ್ಲಮ್ಮ ದಾಸಪ್ಪ ಎಜುಕೇಷನ್ ಟ್ರಸ್ಟ್, ಬೆಂಗಳೂರು.
31. ಪೀಪಲ್ಸ್ ಎಜುಕೇಷನ್ ಟ್ರಸ್ಟ್, ಮಂಡ್ಯ.
32. ಮಹಾತ್ಮಾಗಾಂಧಿ ವಿದ್ಯಾಪೀಠ ಟ್ರಸ್ಟ್, ಬೆಂಗಳೂರು.
33. ಕರ್ನಾಟಕ ಪ್ರದೇಶ ಕುರುಬರ ಸಂಘ ಶಿಕ್ಷಣ ಸಂಸ್ಥೆ, ಧಾರವಾಡ.
34. ಶ್ರೀಮತಿ ಕೆಂಪುಚೆಲುವಾಜಮ್ಮಣ್ಣಿ ಎಜುಕೇಷನ್ ಟ್ರಸ್ಟ್, ಮೈಸೂರು.
35. ಹೇಮಾವತಿ ಎಜುಕೇಷನ್ ಟ್ರಸ್ಟ್, ಹಾಸನ.
36. ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ.

Annexure 'A'

Applications received for opening of new Medical Colleges

1. Sri Jagadguru Murugharajendra Vidhya Peeta, Chitradurga.
2. Siddaganga Education Society, Tumkur.
3. Al-Mohammed Society, Bhadravathi.
4. Academy of Liberal Education Society, Sulia, Dakshina Kannada.
5. Sharabeswara Vidya Peeta, Bellary.
6. Nitte Education Trust, Karkala, Dakshina Kannada.
7. Karnataka Law Society, Belgaum.
8. Malanadu Medical College (B.R. Ambedkar Mission) Shimoga.

9. Rashtreeya Education Trust, Shimoga.

10. Fr. Mullers Institute, Kakanadi,. Mangalore.

11 Sahayadri Education Trust, Shimoga.

12 Sri Venasharadha Education Society, Hassan.

13. Taranath Education Society, Raichur.

14. Karnataka Rashtreeya Education Society, Bidar.

15. Khaja Education Society, Gulbarga.

16 Al-Mohamed Vidya Samaste, Shimoga.

17. Sharabeswara Vidya Peeta, Bandipot, Bellary.

18. Nanakjeer Foundation, Bidar.

19. Jagadguru Murusavarada Mutt, J.J. Sahakara Sangha Rural Medical College, Hubli.

20. Sri Veenasharadha Education Society, Shimoga.

21. Chamundi Medical Foundation, Bangalore.

22. Karnataka Pupil's Education Society, Gulbarga.

23. Shanthivardhak Education Society, Balki.

24. Islamic Academy of Education Yanepoya, Mangalore.

25. Sri Dharmasatala Manjunatheswara Education Samaste, Ujjare Dharwad.

26. Srinivasa Trust, Bangalore.

27. Sir. M. Visveswaraya Education Trust, Kolar.

28. Sharavathi Education Trust, Shimoga.

29. Sri Rajeevagandhi Education Trust, Mysore.

30 Yellamma Dasappa Education Trust, Bangalore.

31. Pupil's Education Trust, Mandya.

32. Mahatma Gandhi Vidya Peeta Trust, Bangalore.

33. Karnataka Pradesh Kurubara Sangha Education Trust, Dharwad.

34. Smt. Kempuchaluvajamani Education Trust, Mysore.

35. Hemavathi Education Trust, Hassan.

36. Basveswara Vidyavardakh Sangha, Baglkot.

ವೈದ್ಯಕೀಯ ಕಾಲೇಜುಗಳಲ್ಲಿ ಡಿಪ್ಲೊಮೊ ಮತ್ತು ಪದವಿ ಕೋರ್ಸ್‌ಗಳನ್ನು ಬೋಧಿಸಲು ಅನುಮತಿ.

305 ಬಿ- ಶ್ರೀ. ಸಿ. ಬೈರೇಗೌಡ (ವೇಮಗಲ್): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕೋತ್ತರ ಡಿಪ್ಲೊಮ ಮತ್ತು ಪದವಿ ಕೋರ್ಸ್‌ಗಳನ್ನು ಬೋಧಿಸಲು ಅನುಮತಿ ನೀಡಿರುವ ಸಂಖ್ಯೆ ಎಷ್ಟು? ತೆಗೆದುಕೊಂಡಿರುವ ವಿಷಯ ಮತ್ತು ಪ್ರತಿ ವಿಷಯಗಳಲ್ಲಿ ಇರುವ ಸ್ಥಾನಗಳ ಸಂಖ್ಯೆ ಎಷ್ಟು?

ಆ) ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶದ ಆಧಾರವೇನು?

ಇ) ಕೆಲವು ವಿದ್ಯಾರ್ಥಿಗಳು ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ವರ್ಗವಾಗಿರುವುದು ನಿಜವೇ?

ಈ) ಹಾಗಿದ್ದಲ್ಲಿ ಪ್ರವೇಶ ಕಾಯ್ದೆಯನ್ನು ಉಲ್ಲಂಘನೆ ಮಾಡಿದಂತಾಗುವುದಿಲ್ಲವೇ? (ಇಂತಹ ಪ್ರಕರಣಗಳ ಬಗ್ಗೆ ವಿವರ ನೀಡುವುದು)

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) 4 ಸರ್ಕಾರಿ ವೈದ್ಯಕೀಯ ಕಾಲೇಜುಗಳು 7 ಖಾಸಗಿ ವೈದ್ಯಕೀಯ ಕಾಲೇಜುಗಳು ವಿವರಗಳನ್ನು ಅನುಬಂಧ -'ಎ' ಮತ್ತು 'ಬಿ' ನಲ್ಲಿ ಲಗತ್ತಿಸಿದೆ.

ಆ) 1. ಸೇವಾನಿರತ ವೈದ್ಯರನ್ನು ಜೇಷ್ಠತೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೀಸಲಾತಿ ಹಾಗೂ ಕುಟುಂಬ ಕಲ್ಯಾಣ ಯೋಜನೆಯ ಗುರಿಸಾಧನೆಯ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತಿದೆ.

2. ಖಾಸಗಿ ವೈದ್ಯರನ್ನು ರಾಜ್ಯದ ಪ್ರವೇಶ ಪರೀಕ್ಷೆಯ ಮೂಲಕ ರ್‍ಯಾಂಕ್ ಮತ್ತು ಮೀಸಲಾತಿಯ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

3. ಖಾಸಗಿ ವೈದ್ಯರನ್ನು ಅಖಿಲ ಭಾರತ ಆಯ್ಕೆ ಪರೀಕ್ಷೆಯ ಮೂಲಕ ಸಹ ಆಯ್ಕೆ ಮಾಡಲಾಗುವುದು.

4. ಖಾಸಗಿ ಕಾಲೇಜಿನಲ್ಲಿ ಮ್ಯಾನೇಜ್‌ಮೆಂಟ್ ಸೀಟಿನ ಬಗ್ಗೆ ಆಡಳಿತ ಮಂಡಳಿಯ ವಿವೇಚನಾಧಿಕಾರಕ್ಕೆ ಬಿಟ್ಟಿರುತ್ತದೆ.

ಇ) ಹೌದು.

ಈ) ಹೌದು. ಆದರೆ ವಿಶೇಷ ಸಂದರ್ಭಗಳಲ್ಲಿ ಮತ್ತು ನ್ಯಾಯಾಲಯ ನಿರ್ದೇಶನದಂತೆ ವರ್ಗ ಮಾಡಿದೆ ವಿವರಗಳನ್ನು ಅನುಬಂಧ 'ಸಿ' ನಲ್ಲಿ ಲಗತ್ತಿಸಿದೆ.

ಅನುಬಂಧ 'ಎ'

1985ರಿಂದ 1992ರವರೆಗೆ ರಾಜ್ಯದ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರಥಮ ಎಂಬಿಬಿಎಸ್‌ಗೆ ಮಂಜೂರು ಮಾಡಿರುವ ಪ್ರವೇಶ ಸಾಮರ್ಥ್ಯ ಮತ್ತು ವಾಸ್ತವವಾಗಿ ಪ್ರವೇಶ ನೀಡಿರುವ ಸೀಟುಗಳ ವಿವರ

ಕ್ರ ಸಂ	ವೈದ್ಯಕೀಯ ಕಾಲೇಜುಗಳ ಹೆಸರು	1985-86	1986-87	1987-88	1988-89	1989-90	1990-91	1991-92
ಸರ್ಕಾರಿ ವೈದ್ಯಕೀಯ ಕಾಲೇಜುಗಳು								
1.	ಬೆಂಗಳೂರು ವೈದ್ಯಕೀಯ ಕಾಲೇಜು, ಬೆಂಗಳೂರು	155	155	155	155	200	200	200
2.	ಮೈಸೂರು ವೈದ್ಯಕೀಯ ಕಾಲೇಜು, ಮೈಸೂರು	135	135	135	135	175	175	175
3.	ಕರ್ನಾಟಕ ವೈದ್ಯಕೀಯ ಕಾಲೇಜು, ಹುಬ್ಬಳ್ಳಿ	130	130	130	130	130	130	130
4.	ಸರ್ಕಾರಿ ವೈದ್ಯಕೀಯ ಕಾಲೇಜು, ಬಳ್ಳಾರಿ	130	130	130	130	130	130	130
ಖಾಸಗಿ ವೈದ್ಯಕೀಯ ಕಾಲೇಜುಗಳು								
5.	ಕಸ್ತೂರಬಾ ವೈದ್ಯಕೀಯ ಕಾಲೇಜು, ಮಂಗಳೂರು	140	160	220	250	250	300	300
	ಕಸ್ತೂರಬಾ ವೈದ್ಯಕೀಯ ಕಾಲೇಜು, ಮಣಿಪಾಲ್		180	220	220	250	250	250
6.	ಸೆಂಟ್ ಜಾನ್ಸ್ ವೈದ್ಯಕೀಯ ಕಾಲೇಜು, ಬೆಂಗಳೂರು	60	60	60	60	60	60	60
7.	ಜೆ.ಎನ್. ವೈದ್ಯಕೀಯ ಕಾಲೇಜು, ಬೆಳಗಾಂ	130	130	175	175	155	175	195

8.	ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜು, ಬೆಂಗಳೂರು	130	183	162	100	100	100	110
9.	ಎಂ.ಆರ್. ವೈದ್ಯಕೀಯ ಕಾಲೇಜು, ಗುಲ್ಬರ್ಗಾ	115	188	180	150	150	175	185
10.	ಜೆ.ಜೆ.ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ	150	240	240	270	250	300	320
11.	ಕೆಂಪೇಗೌಡ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಂಗಳೂರು	130	182	153	50	50	100	120
12.	ಡಾ.ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ಕಾಲೇಜು, ಬೆಂಗಳೂರು.	130	130	165	100	50	100	120
13.	ಅಲ್ ಅಮೀನ್ ವೈದ್ಯಕೀಯ ಕಾಲೇಜು, ಬಿಜಾಪುರ	100	100	120	125	120	120	130
14.	ಜೆ.ಎಸ್.ಎಸ್. ವೈದ್ಯಕೀಯ ಕಾಲೇಜು, ಮೈಸೂರು.	130	175	187	150	150	200	200
15.	ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಳ್ಳೂರು.	140	150	170	150	150	150	195
16.	ಬಿ.ಎಲ್.ಡಿ.ಇ.ಎ. ವೈದ್ಯಕೀಯ ಕಾಲೇಜು, ಬಿಜಾಪುರ	-	130	130	160	130	160	180
17.	ಶ್ರೀ ದೇವರಾಜ್ ಅರಸ್ ವೈದ್ಯಕೀಯ ಕಾಲೇಜು, ಕೋಲಾರ	-	150	150	150	130	150	150
18.	ಸಿದ್ಧಾರ್ಥ ವೈದ್ಯಕೀಯ ಕಾಲೇಜು, ತುಮಕೂರು	-	-	-	150	150	175	195

ANNEXURE 'A'

THE TOTAL ADMISSION APPROVED BY THE GOVERNMENT SINCE 1985 TO 1992 AND THE ADMISSIONS MADE IN EACH COLLEGE AGAINST THE APPROVED STRENGTH

Sl. No	Name of the Medical College	1985-86	1986-87	1987-88	1988-89	1989-90	1990-91	1991-92
Government Medical Colleges								
1.	Bangalore Medical College, Bangalore	155	155	155	155	200	200	200
2.	Mysore Medical College, Mysore	135	135	135	135	175	175	175
3.	Karnataka Medical College, Hubli	130	130	130	130	130	130	130
4.	Government Medical college, Bellary	130	130	130	130	130	130	130
Private Medical Colleges								
5.	Kasturba Medical College, Mangalore	140-	160	220	250	250	300	300
	Kasturba Medical College, Manipal	-	180	220	220	250	250	350
6.	St. John's Medical College, Bangalore	60	60	60	60	60	60	60
7.	J.N. Medical College, Belgaum	130	130	175	175	155	175	195

8.	M.S. Ramaiah Medical College, Bangalore	130	183	162	100	100	100	110
9.	M.R. Medical College, Gulbarga	115	188	180	150	150	175	185
10.	J.J.M. Medical College, Davangere	150	240	240	270	250	300	320
11.	Kempegowda Institute of Medical Sciences, B'lore	130	182	153	50	50	100	120
12.	Dr. B.R. Ambedkar Medical College, Bangalore.	130	130	165	100	50	100	120
13.	Al-Ameen Medical College, Bijapur	100	100	120	125	120	120	130
14.	J.S.S. Medical College, Mysore.	130	175	187	150	150	200	200
15.	Adichunchanagiri Institute of Medical Sciences, Bellur.	140	150	170	150	150	150	195
16.	B.L.D.E.A. Medical College, Bijapur	-	130	130	160	130	160	180
17.	Sri Siddartha Medical College, Tumkur		-	-	150	150	175	195
18.	Sri Devaraj Urs Medical College, Kolar.	-	150	150	150	130	150	150

ಅನುಬಂಧ-ಎ

ಸ್ನಾತಕೋತ್ತರ ಡಿಗ್ರಿ ಸೀಟುಗಳ ಒಟ್ಟು ಸಂಖ್ಯೆ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳು

ಕ್ರ ಸಂ	ವಿಷಯ	ಸರ್ಕಾರಿ ವೈದ್ಯಕೀಯ ಕಾಲೇಜುಗಳು										ಖಾಸಗಿ ವೈದ್ಯಕೀಯ ಕಾಲೇಜುಗಳು							
		ಬಿ.ಎಂ.ಸಿ. ಬೆಂಗಳೂರು	ಎಂ.ಎಂ.ಸಿ. ಮೈಸೂರು	ಕೆ.ಎಂ.ಸಿ. ಹುಬ್ಬಳ್ಳಿ	ಎಂ.ಸಿ. ಬಳ್ಳಾರಿ	ಜೆ ಜೆ ಎಂ ಎಂ ಸಿ ದಾವಣಗೆರೆ		ಜೆ ಎನ್ ಎಂ ಸಿ ಬೆಳಗಾಂ		ಎಂ ಆರ್ ಎಂ ಸಿ ಗುಲ್ಬರ್ಗಾ		ಕೆ ಎಂ ಸಿ ಮಂಗಳೂರು		ಕೆ ಐ ಎಂ ಎಸ್ ಬೆಂಗಳೂರು		ಎಂ ಎಸ್ ಆರ್ ವೈ. ಕಾ. ಬೆಂಗಳೂರು		ಅಂಬೇಡ್ಕರ್ ವೈ. ಕಾ. ಬೆಂಗಳೂರು	
						ಆ	ಸ	ಆ	ಸ	ಆ	ಸ	ಆ	ಸ	ಆ	ಸ	ಆ	ಸ	ಆ	ಸ
1.	ಎಂಎಸ್. ಅನಾಟಮಿ	3	3	4	2	2	4	1	1	1	1	2	4	1	-	2	-	-	-
2.	ಎಂಡಿ. ಫಿಜಿಯಾಲಾಜಿ	3	1	4	2	2	4	2	1	-	-	2	4	-	-	-	-	-	-
3.	ಎಂಡಿ. ಬಯೋ-ಕೆಮಿ	3	1	-	-	2	2	-	-	-	-	7	3	-	-	2	-	-	-
4.	ಎಂಡಿ. ಫಾರಮಾಕಾಲಜಿ	1	2	1	2	3	5	1	1	1	1	3	5	1	-	-	-	-	-
5.	ಎಂಡಿ. ಪೆಥಾಲಜಿ	5	5	6	2	3	6	3	3	4	1	4	4	-	-	3	-	-	-

6.	ಎಂಡಿಮೈಕ್ರೋ ಬಯಾಲಜಿ	3	3	2	1	2	4	2	-	-	-	2	1	-	-	1	-	1	-
7.	ಎಂಡಿ.ಪಿ. ಅಂಡ್ ಎಸ್‌ಎಂ	2	3	2	1	3	3	1	1	1	1	5	-	1	-	1	-	-	-
8.	ಎಂಡಿ (ಎಫ್.ಎಂ.)	3	1	-	-	-	-	1	1	1	1	3	-	-	-	-	-	-	-
9.	ಎಂಎಸ್.ಅಪ್ತಾ.	6	3	5	2	10	1	3	-	5	1	3	-	1	-	1	-	-	-
10.	ಎಂ.ಎಸ್. ಇಎನ್‌ಟಿ	5	3	3	2	5	1	1	1	2	1	4	1	-	-	-	-	-	-
11.	ಎಂಎಸ್ ಅರ್ಥೋ	5	2	4	-	12	-	3	-	4	-	8	-	2	-	-	-	-	-
12.	ಎಂಡಿ. ಎಸ್‌ಟಿಡಿ	3	2	2	1	6	-	1	1	1	-	3	-	-	-	-	-	-	-
13.	ಎಂಡಿ. ಆರ್‌ಟಿ	2	-	-	-	-	-	-	-	-	-	5	-	-	-	-	-	-	-
14.	ಎಂಡಿ. ಅನ್ನೇಸ್ಥಿಷಿಯಾ	3	5	5	-	6	3	2	-	2	1	8	2	-	-	1	-	-	-
15.	ಎಂಡಿ. (ಫಿಡಿಯಾಟ್ರಿಕ್ಸ್)	3	4	1	2	18	-	5	-	3	-	8	1	2	-	2	-	-	-

16.	ಎಂಡಿ. (ಜನರಲ್ ಮೆಡಿಸಿನ್)	11	12	9	5	24	1	7	1	10	2	15	1	1	-	2	-	-	-
17.	ಎಂಎಸ್. ಜನರಲ್ ಸರ್ಜರಿ	13	12	11	6	22	1	6	1	10	2	12	2	1	1	2	-	-	-
18.	ಎಂಡಿ.ಒ.ಬಿಜಿ	7	9	8	4	18	1	5	-	10	1	6	-	2	-	2	-	-	-
19.	ಎಂಡಿ. ಆರ್‌ಡಿ	2	2	-	-	9	1	4	-	1	1	5	-	-	-	-	-	-	-
20.	ಎಂಡಿ. ಡಿಬಿಸಿಡಿ	1	1	-	-	-	-	-	-	-	-	-	-	-	-	-	-	-	-
21.	ಎಂಡಿ.ಸೈಕ್ಯಾಟ್ರಿಡಿ	1	-	-	-	-	-	-	-	-	-	4	-	-	-	-	-	-	-
22.	ಎಂಡಿ. (ಹಾಸ್ಪಿಟಲ್ ಅಡಿಮಿನಿ.)	-	-	-	-	-	-	-	-	-	-	2	-	-	-	-	-	-	-

ಆ: ಆಡಳಿತ ಮಂಡಳಿಯ ಪಾಲಿನ ಸೀಟುಗಳು

ಸ: ಸರ್ಕಾರದ ಪಾಲಿನ ಸೀಟುಗಳು

ANNEXURE -A

TOTAL NUMBER OF POST-GRADUAGE DEGREE AVAILABLE IN GOVERNMENT MEDICAL COLLEGE AND PRIVATE MEDICAL COLLEGES IN THE STATE.

Sl. No.	Name of the Subject	Govt. Medical Colleges				Private Medical Colleges													
		L M C B'l ore	M. M. C. My sore	K M C Hub li	M. C. Be lla ry	JJ M M C Davana gere		J M M C Belgaum		M R M C Gul barga		K. M. C. M'lore.		K I M S Bangalore		MS. Ramaih Med. College, B'lore		Ambed kar Med. Colleges Bangalore.	
						MS.	Go vt.	MS.	Go vt.	MS.	Go vt.	MS.	Govt.	MS.	Go vt.	MS.	Go vt.	M.S.	Go vt.
1.	M.S.Anatomy	3	3	4	2	2	4	1	1	1	1	2	4	1	-	2	-	-	-
2.	M.D.Physiology	3	1	4	2	2	4	2	1	-	-	2	4	-	-	-	-	-	-
3.	M.D.Bio-Chem.	3	1	-	-	2	2	-	-	-	-	7	3	-	-	2	-	-	-
4.	M.D.Pharmacology	1	2	1	2	3	5	1	1	1	1	3	5	1	-	-	-	-	-
5.	M.D.Pathlogy	5	5	6	2	3	6	3	3	4	1	4	4	-	-	3	-	-	-
6.	M.D.Microbio-logy	3	3	2	1	2	4	2	-	-	-	2	1	-	-	1	-	1	-
7.	M.D.P & SM	2	3	2	1	3	3	1	1	1	1	5	-	1	-	1	-	-	-

8.	M.D.(F.M.)	3	1	-	-	-	1	1	1	1	1	3	-	-	-	-	-	-	-
9.	M.S.Opthal	6	3	5	2	10	1	3	-	5	1	3	-	1	-	1	-	-	-
10.	M.S.E.N.T.	5	3	3	2	5	1	1	1	2	1	4	1	-	-	-	-	-	-
11.	M.S. Ortho	5	2	4	-	12	-	3	-	4	-	8	-	2	-	-	-	-	-
12.	M.D.STD	3	2	2	1	6	-	1	1	1	-	3	-	-	-	-	-	-	-
13.	M.D.RT	2	-	-	-	-	-	-	-	-	-	5	-	-	-	-	-	-	-
14.	M.D. Anaes	3	5	5	-	6	3	2	-	2	1	8	2	-	-	1	-	-	-
15.	M.D. (Paed)	3	4	1	2	18	-	5	-	3	-	8	1	2	-	2	-	-	-
16.	M.D. Gen. Med.	11	12	9	5	24	1	7	1	10	2	15	1	1	-	2	-	-	-
17.	M.D. (OBG)	7	9	8	4	18	1	-	-	10	1	6	-	2	-	2	-	-	-
18.	M.D. Gen. Surgery	13	12	11	6	22	1	6	1	10	2	12	2	1	1	2	-	-	-
19.	M.D. RD	2	2	-	-	9	1	4	-	1	1	5	-	-	-	-	-	-	-
20.	MD. TBCD	1	1	-	-	-	-	-	-	-	-	-	-	-	-	-	-	-	-
21.	M.D. Psy.	1	-	-	-	-	-	-	-	-	-	4	-	-	-	-	-	-	-
22.	M.D. (Hos. Admn)	-	-	-	-	-	-	-	-	-	-	2	-	-	-	-	-	-	-

ಅನುಬಂಧ-ಬಿ.

ಸ್ನಾತಕೋತ್ತರ ಡಿಪ್ಲೊಮೋ ಸೀಟುಗಳ ಒಟ್ಟು ಸಂಖ್ಯೆ-ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳು

ಕ್ರ. ಸಂ.	ವಿಷಯ	ಸರ್ಕಾರಿ ವೈದ್ಯಕೀಯ ಕಾಲೇಜುಗಳು				ಖಾಸಗಿ ವೈದ್ಯಕೀಯ ಕಾಲೇಜುಗಳು									
		ಬಿ.ಎಂ.ಸಿ. ಬೆಂಗಳೂರು	ಎಂ.ಎಂ.ಸಿ. ಮೈಸೂರು	ಕೆ.ಎಂ.ಸಿ. ಹುಬ್ಬಳ್ಳಿ	ಎಂ.ಸಿ. ಬಳ್ಳಾರಿ	ಎಂ.ಎಂ ಸಿ ದಾವಣಗೆರೆ		ಜೆ.ಎನ್.ಎಂ.ಸಿ. ಬೆಳಗಾಂ		ಎಂ ಆರ್ ಎಂ ಸಿ ಗುಲ್ಬರ್ಗಾ		ಕೆ ಎಂ ಸಿ ಮಂಗಳೂರು		ಕೆ ಐ ಎಂ ಎಸ್ ಮಂಗಳೂರು	
						ಆ	ಸ	ಆ	ಸ	ಆ	ಸ	ಆ	ಸ	ಆ	ಸ
1.	ಡಿ.ಜಿ.ಒ	9	12	12	8	15	1	7	1	10	2	10	2	-	-
2.	ಡಿ.ಸಿ.ಹೆಚ್.	7	8	2	2	15	1	5	1	5	1	11	1	-	-
3.	ಡಿ.ವಿ.ಡಿ.	7	4	4	2	7	5	1	1	1	1	4	2	-	-
4.	ಡಿ.ಎ.	6	10	10	-	10	2	3	1	4	2	8	4	-	-
5.	ಡಿ.ಎಂ.ಆರ್.ಡಿ.	4	4	6	2	11	1	-	-	5	1	5	3	-	-
6.	ಡಿ.ಸಿ.ಪಿ.	9	10	12	4	6	6	4	2	4	2	9	3	2	-

L.A.-Vol. I

7.	ಡಿ.ಎಫ್.ಎಂ.	6	2	-	-	2	2	2	2	4	2	5	1	-	-
8.	ಡಿ.ಒ.ಎಂ.ಎಸ್.	12	6	10	4	8	4	3	1	4	2	8	2	-	-
9.	ಡಿ. ಆರ್ಥೋ	9	4	8	6	10	2	4	-	5	1	9	3	-	
10.	ಡಿ.ಎಲ್.ಒ.	9	6	6	4	6	6	3	1	5	1	7	1	-	-
11.	ಡಿ.ಎಂ.ಆರ್.ಟಿ.	6	-	-	-	-	-	-	-	-	-	7	3	-	-
12.	ಡಿ.ಪಿ.ಹೆಚ್	4	6	4	-	-	-	2	2	4	2	6	4	-	-
13.	ಡಿ.ಐ.ಹೆಚ್.	4	-	-	-	-	-	-	-	-	-	-	-	-	-
14.	ಡಿ.ಬ್ಯಾಕ್ಟ್	8	-	-	-	-	-	-	-	-	-	-	-	-	-
15.	ಡಿ.ಟಿ.ಸಿ.ಡಿ.	-	2	-	-	-	-	-	-	-	-	-	-	-	-
16.	ಡಿ. ಮೈಕ್ರೋ	-	-	-	-	-	-	-	-	-	-	7	3	-	-
17.	ಡಿ.ಪಿ.ಎಂ.	-	-	-	-	-	-	-	-	-	-	6	2	-	-

ಆ : ಆಡಳಿತ ಮಂಡಳಿಯ ಪಾಲಿನ ಸೀಟುಗಳು

ಸ : ಸರ್ಕಾರದ ಪಾಲಿನ ಸೀಟುಗಳು

Annexure - B

TOTAL NUMBER OF POST-GRADUAGE DIPLOMA SEATS AVAILABLE IN GOVERNMENT MEDICAL COLLEGES AND PRIVATE MEDICAL COLLEGES IN THE STATE.

Sl. No.	Name of the Subject	Govt. Medical Colleges				Private Medical Colleges										
		Med. College B'lore	Med. College Mysore	Med. College Hubli	Medical College Bellary	JJM Medical College Davanagere		J.N. Medical College Belgaum		MM Med. College Gulbarga		Kasturiba Medical College. Mangalore.		Kempe Gowda Inst. Med. Science Bangalore		Ambedkar Med. College Bangalore.
						MS	Govt.	MS	Govt.	MS	Govt.	MS	Govt.	MS	Govt.	Govt.
1.	D.G.O	9	12	12	8	15	1	7	1	10	2	10	2	-	-	-
2.	D.C.H.	7	8	2	2	15	1	5	1	5	1	11	1	-	-	-
3.	D.V.D.	7	4	4	2	7	5	1	1	1	1	1	2	-	-	-
4.	D.A.	6	10	10	-	10	2	3	1	4	2	8	4	-	-	-
5.	D.M.P.D.	4	4	6	2	11	1	-	-	5	1	5	3	-	-	-
6.	D.C.P.	9	10	12	4	6	6	4	2	4	2	9	3	2	-	-

7.	DEM	6	2	-	-	2	2	2	2	4	2	5	1	-	-	-
8.	D.O.M.S.	12	6	10	4	8	4	3	1	4	2	8	2	-	-	-
9.	D.Ortho	9	4	8	6	10	2	4	-	5	1	9	3	-	-	-
10.	D.L.O.	9	6	6	4	6	6	3	1	5	1	7	1	-	-	-
11.	D.M.R.T.	6	-	-	-	-	-	-	-	-	-	7	3	-	-	-
12.	D.P.H	4	6	4	-	-	-	2	2	4	2	6	4	-	-	-
13.	D.I.H.	4	-	-	-	-	-	-	-	-	-	-	-	-	-	-
14.	D.Bact	8	-	-	-	-	-	-	-	-	-	-	-	-	-	-
15.	D.T.C.D.	-	2	-	-	-	-	-	-	-	-	-	-	-	-	-
16.	D.Micro	-	-	-	-	-	-	-	-	-	-	7	3	-	-	-
17.	D.P.M	-	-	-	-		-	-	-	-	-	6	2	-	-	-

ಅನುಬಂಧ-'ಸಿ'

ಈ ಕೆಳಗೆ ಕಾಣಿಸಿರುವ ವೈದ್ಯರುಗಳನ್ನು (ಸ್ನಾತಕೋತ್ತರ ವಿದ್ಯಾರ್ಥಿಗಳು) ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ವರ್ಗಾವಣೆ ಮಾಡಲಾಗಿದೆ.

ಕ್ರ ಸಂ	ಹೆಸರು	ವಿಷಯ	ಯಾವ ಕಾಲೇಜಿನಿಂದ	ಯಾವ ಕಾಲೇಜಿಗೆ
1.	ಡಾ. ಗೀತಾಬಾಯಿ	ಎಂ.ಡಿ.ಒಬಿಜಿ	ಜೆಜೆಎಂ ವೈದ್ಯಕೀಯ ಕಾಲೇಜು ದಾವಣಗೆರೆ	ಬೆಂಗಳೂರು ವೈದ್ಯಕೀಯ ಕಾಲೇಜು ಬೆಂಗಳೂರು
2.	ಡಾ. ಪುಷ್ಪಲತಾ	ಎಂಡಿ.ಒಬಿಜಿ	-ಅದೇ-	-ಅದೇ-
3.	ಡಾ. ಮೀರಾಮಡಿ	ಎಂಡಿ. ಒಬಿಜಿ	-ಅದೇ-	-ಅದೇ-
4.	ಡಾ. ರಶ್ಮಿ ಬಿ. ರಾಜಣ್ಣ	ಡಿ.ಜಿ.ಒ.	-ಅದೇ-	-ಅದೇ-
5.	ಡಾ.ಸಿ.ಎನ್. ರಾಜೇಶ್	ಎಂ.ಎಸ್.ಜಿಎಸ್.	-ಅದೇ-	-ಅದೇ-
6.	ಡಾ.ಎಸ್. ಬಿ. ಪುಷ್ಪ	ಎಂಡಿ (ಅನಸ್ತೇಷಿಯಾ)	ಕಸ್ತೂರಬಾ ವೈದ್ಯಕೀಯ ಕಾಲೇಜು, ಮಂಗಳೂರು	-ಅದೇ-
7.	ಡಾ. ಸುಮಾ ಚನ್ನಬಸಪ್ಪ	ಎಂಡಿ (ಒಬಿಜಿ)	ಜೆಜೆಎಂ. ವೈದ್ಯಕೀಯ ಕಾಲೇಜು, ದಾವಣಗೆರೆ	-ಅದೇ-
8.	ಡಾ.ಕೆ.ಟಿ. ರಾಜನಂದಿನಿ	ಎಂಡಿ (ಒಬಿಜಿ)	-ಅದೇ-	-ಅದೇ-
9.	ಡಾ. ರಾಜೇಶ್ವರಿ	ಡಿ.ಜಿ.ಒ.	-ಅದೇ-	-ಅದೇ-

Annexure-C

THE FOLLOWING DOCTORS (POST-GRADUATE) HAVE BEEN TRANSFERRED FROM PRIVATE MEDICAL COLLEGES TO GOVERNMENT MEDICAL COLLEGES.

Sl. No.	Name of the Candidate	Subject	College in which studying	Transferred College
1.	Dr. Geethabai	MD (OBG)	J.J.M.M.C Davanagere	B.M.C, Bangalore
2.	Dr.Pushpalatha	MD (OBG)	-do-	-do-
3.	Dr.Meera Madi	MD (OBG)	-do-	-do-
4.	Dr.Rashmi B. Rajanna	D.G.O.	-do-	-do-
5.	Dr.C.S. Rajesh	M.S.(GS)	-do-	-do-
6.	Dr.S.B. Pushpa	MD (Anaes.)	K.M.C., Mangalore	-do-
7.	Dr.Suma Chanabasappa	MD (OBG)	J.J.M.M.C., Davavagere	-do-
8.	Dr.K.T. Rajanandini	MD (OBG)	-do-	-do-
9.	Dr.Rajeswari	DGO	-do-	-do-

ತುರುವೇಕೆರೆ ತಾಲ್ಲೂಕಿನ ಅರಣ್ಯದಲ್ಲಿ ಮರಗಳನ್ನು ಕಡಿಯುತ್ತಿರುವ ಬಗ್ಗೆ

369 - ಶ್ರೀ ಎಸ್. ರುದ್ರಪ್ಪ (ತುರುವೇಕೆರೆ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನ ಸೀಗೆಹಳ್ಳಿ ಅರಣ್ಯದಲ್ಲಿ ಮರಗಳನ್ನು ಕಡಿಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಆ ಬಗ್ಗೆ ಸರ್ಕಾರವು ಯಾವ ಕ್ರಮ ತೆಗೆದುಕೊಂಡಿದೆ.

ಇ) ಅಲ್ಲಿ ಎಷ್ಟು ಎಕರೆಯಲ್ಲಿ ಅರಣ್ಯವನ್ನು ಬೆಳೆಸಲಾಗಿದೆ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು):

ಅ) ಬಂದಿರುತ್ತದೆ.

ಆ) ಅಕ್ರಮ ಕಡಿತವನ್ನು ತಡೆಯಲು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಸೀಗೆಹಳ್ಳಿ ವ್ಯಾಪ್ತಿಯಲ್ಲಿ ಬರುವ ಅರಣ್ಯವನ್ನು ರಕ್ಷಿಸಲು ಅಲ್ಲಿಗೆ ಒಬ್ಬ ರಕ್ಷಕರು ಇಬ್ಬರು ಅರಣ್ಯ ವೀಕ್ಷಕರು ಹಾಗೂ ಒಬ್ಬರು ವನಪಾಲಕರನ್ನು ನೇಮಿಸಲಾಗಿದೆ.

ಇ) 270 ಹೆಕ್ಟೇರ್.

ಬೈಲಹೊಂಗಲ ತಾಲ್ಲೂಕಿನಲ್ಲಿ ಲಿಫ್ಟ್ ಇರಿಗೇಷನ್ ಯೋಜನೆ.

375 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂದಾಜು ಸಮಿತಿಯವರು ಸೂಚಿಸಿದ ಪ್ರಕಾರ 9ನೇ ವಿಧಾನ ಸಭೆಯ 4ನೇ ವರದಿಯಲ್ಲಿ ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಪ್ರದೇಶದ ಜನರ ಅನುಕೂಲತೆಗಾಗಿ ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಪೈಕಿ ವಕ್ಕುಂದ, ದೇವಲಾಪುರ, ಸಂಗೊಳ್ಳಿ, ಅನಿಗೋಳ ಮತ್ತು ಸವದತ್ತಿ ತಾಲ್ಲೂಕ್ ಪೈಕಿ ಮಾಟೊಳ್ಳಿ, ಎಣಗಿ ಗ್ರಾಮದಲ್ಲಿ ಆಗಮೆಂಟೇಶನ್ ಆಫ್ ಲಿಫ್ಟ್ ಇರಿಗೇಷನ್ ಅಥವಾ ಹೊಸ ಏತ ನೀರಾವರಿ ಯೋಜನೆಯನ್ನು ಕೈಕೊಳ್ಳಬೇಕೆಂದು ಮಾಡಿದ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ಯೋಜನೆಗಳನ್ನು ಅಂದಾಜು ಸಮಿತಿಯವರು 3 ತಿಂಗಳೊಳಗಾಗಿ ಕೈಗೊಳ್ಳಬೇಕೆಂದು ಹಾಗೂ ಅದಕ್ಕೆ ಬೇಕಾದ ಹಣವನ್ನು ಒದಗಿಸಬೇಕೆಂದು ಶಿಫಾರಸ್ಸು ಮಾಡಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರದವರು ಅಂದಾಜು ಸಮಿತಿಯವರು ಶಿಫಾರಸು ಮಾಡಿದ ಪ್ರಕಾರ ಆಗಮೆಂಟೇಶನ್ ಆಫ್ ಲಿಫ್ಟ್ ಇರಿಗೇಷನ್ ಅಥವಾ ಹೊಸ ಏತ ನೀರಾವರಿ ಯೋಜನೆಯನ್ನು ಕೈಕೊಳ್ಳಲು ಯಾವ ಕ್ರಮ ಕೈಗೊಂಡಿರುವರು.

ಈ) ಪ್ರತಿಯೊಂದು ಏತ ನೀರಾವರಿ ಯೋಜನೆಗೆ ಎಷ್ಟು ಹಣ ಬೇಕಾಗುವುದು ಮತ್ತು ಎಷ್ಟು ಎಕರೆ ನೀರಾವರಿ ಯಾವ ಯಾವ ಗ್ರಾಮಗಳಲ್ಲಿ ಆಗುವುದು (ಸಂಪೂರ್ಣ ವಿವರ ಕೊಡುವುದು)?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) ಬಂದಿದೆ.

ಆ) ಬಂದಿದೆ.

ಇ) ಯೋಜನೆಗಳು ತಾಂತ್ರಿಕ ಪರಿಶೀಲನೆಯಲ್ಲಿ ಇದೆ.

ಈ) ತಾಂತ್ರಿಕ ಪರಿಶೀಲನೆ ಪೂರ್ಣಗೊಂಡನಂತರ ವಿವರಗಳು ತಿಳಿದು ಬರುತ್ತವೆ.

ಸರ್ಕಾರಿ ನೌಕರರಿಗೆ ನೇಮಕಾತಿ ನಿರ್ಬಂಧವನ್ನು ತೆಗೆದುಹಾಕುವುದು.

377 - ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ನೌಕರರಿಗೆ ಇರುವ ನೇಮಕಾತಿ ನಿರ್ಬಂಧವನ್ನು ತೆಗೆದುಹಾಕುವ ಬಗ್ಗೆ ಸರ್ಕಾರವು ಆಲೋಚನೆ ಮಾಡಿದೆಯೇ?

ಆ) ಹಾಗಿದ್ದಲ್ಲಿ, ಎಂದಿನಿಂದ ಆ ಆಜ್ಞೆ ಜಾರಿಗೆ ಬರುತ್ತದೆ.

ಇ) ನೇಮಕಾತಿ ನಿರ್ಬಂಧವನ್ನು ಮುಂದುವರೆಸುವುದಾದರೆ ಅದಕ್ಕೆ ಕಾರಣಗಳೇನು? (ವಿವರಗಳನ್ನು ತಿಳಿಸುವುದು)?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ರಾಜ್ಯದಲ್ಲಿ ಆರ್ಥಿಕ ಮಿತವ್ಯಯದ ಕ್ರಮಗಳು ಜಾರಿಯಲ್ಲಿರುವುದರಿಂದ ನೇರ ನೇಮಕಾತಿ ಮಾಡಲು ನಿರ್ಬಂಧವನ್ನು ವಿಧಿಸಲಾಗಿದೆ.

ಶಹಬಾದಿನಲ್ಲಿರುವ ಹೆಚ್.ಎಂ.ಪಿ. ಸಿಮೆಂಟ್ ಕಾರ್ಖಾನೆಯ ಧೂಳಿನಿಂದ ತೊಂದರೆ.

378 ಶ್ರೀ ಬಾಬುರಾವ್ ಚವಾಣ್ (ಶಹಾಬಾದ್): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಹಾಬಾದ್‌ನಲ್ಲಿ ಇರುವ ಹೆಚ್.ಎಂ.ಪಿ. ಸೀಮೆಂಟ್ ಕಾರ್ಖಾನೆಯ ಧೂಳನ್ನು ಹೊರಗೆ ಹಾಕುತ್ತಿರುವುದರಿಂದ ಅಲ್ಲಿಯ ಜನರಿಗೆ ರೋಗ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರಿಂದ ಸುತ್ತ ಮುತ್ತ ಇರುವ ಜಮೀನಿನಲ್ಲಿ ಬೆಳೆಗಳು ನಾಶವಾಗುತ್ತಿದ್ದು ಅದನ್ನು ತಡೆಯಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಬಂದಿದೆ.

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಶಹಾಬಾದ್‌ನಲ್ಲಿರುವ ಹೆಚ್.ಎಂ.ಪಿ. ಸಿಮೆಂಟ್ ಕಾರ್ಖಾನೆಯಿಂದ ಹೊರದೂಡುವ ಧೂಳು ನಿಗಧಿಪಡಿಸಿರುವ ಗುಣಮಾನಕ್ಕಿಂತ ಅತಿಯಾಗಿ ಮೀರಿರುವುದನ್ನು ಕಂಡುಬಂದ ನಂತರ ವಾಯು (ಮಾಲಿನ್ಯ ನಿವಾರಣ ಮತ್ತು ನಿಯಂತ್ರಣ) 1981 ಕಾಯ್ದೆಯ ಕಾಲಂ 31 (ಎ) ಪ್ರಕಾರ ಸದರಿ ಉದ್ದಿಮೆಯನ್ನು ಮುಚ್ಚುವಂತೆ ದಿನಾಂಕ 2-12-91ರಂದು ಆದೇಶ ನೀಡಿತು. ಈ ಆದೇಶದ ವಿರುದ್ಧ ಉದ್ದಿಮೆಯು ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಒಂದು ರಿಟ್ ಅರ್ಜಿಯನ್ನು ಸಲ್ಲಿಸಿ ತಡೆಯಾಜ್ಞೆಯನ್ನು ಪಡೆಯಿತು. ಉಚ್ಛ ನ್ಯಾಯಾಲಯವು ಈ ಅರ್ಜಿಯನ್ನು ವಿಲೇವಾರಿ ಮಾಡುತ್ತ ದಿನಾಂಕ 1-6-92 ರಂದು ಈ ಕೆಳಕಂಡ ತೀರ್ಪು ನೀಡಿತು.

"ಉದ್ದಿಮೆಯು ನ್ಯಾಯಲಯದ ತೀರ್ಪಿನ ದಿನಾಂಕದಿಂದ ಆರು ವಾರದೊಳಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಭಾರತ ಸರ್ಕಾರದ ಪರಿಸರ

ಮತ್ತು ಅರಣ್ಯ ಮಂತ್ರಾಲಯದ ದಿನಾಂಕ 17-12-91ರ ಪತ್ರದ ಪ್ರಕಾರ ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸಲು ಕಾಲಾವಕಾಶವನ್ನು ಕೋರಿ ಅರ್ಜಿ ಸಲ್ಲಿಸುವುದು ಹಾಗೂ ಮಂಡಳಿಯು ಆ ಪ್ರಸ್ತಾವನೆಯನ್ನು ನಾಲ್ಕು ವಾರದೊಳಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದು"

ಇದರಂತೆ ಉದ್ದಿಮೆಯು ಕಿಲ್ನ್‌ಗಳಿಗೆ ವಾಯು ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸುವ ಪ್ರಸ್ತಾವನೆಯನ್ನು ದಿನಾಂಕ : 30-6-92ರ ಪತ್ರದ ಜೊತೆ ಸಲ್ಲಿಸಿತ್ತು. ಆ ಪತ್ರವನ್ನು ದಿನಾಂಕ 10-7-92ರಂದು ಮಂಡಳಿಯಲ್ಲಿ ಸ್ವೀಕರಿಸಲಾಯಿತು. ಉದ್ದಿಮೆಯು ಈ ಘಟಕಗಳನ್ನು ಅಳವಡಿಸಲು ಭಾರತ ಸರ್ಕಾರದ ಪತ್ರದ ಪ್ರಕಾರ 31-12-1993ರವರೆಗೆ ಕಾಲಾವಕಾಶ ಕೋರಿತು. ಮಂಡಳಿಯು ಉದ್ದಿಮೆಯ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ದಿನಾಂಕ : 7-8-92ರಂದು ಪ್ರಸ್ತಾವನೆಗೆ ಅನುಮೋದನೆ ನೀಡಿ ನಿಗದಿಪಡಿಸಿದ ಗುಣಮಾನಕಗಳನ್ನು ಸಾಧಿಸಲು ಎಲ್ಲಾ ವಾಯು ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸಲು 31-12-93 ರವರೆಗೆ ಕಾಲಾವಕಾಶ ನೀಡಿದೆ.

ಈ ರೀತಿ ನಿಗಧಿ ಪಡಿಸಿದ ಕಾಲಮಿತಿಯೊಳಗೆ ಘಟಕಗಳನ್ನು ಅಳವಡಿಸಿದ್ದಲ್ಲಿ ಕಾನೂನಿನ ಪ್ರಕಾರ ತೆಗೆದುಕೊಳ್ಳಲಾಗುವುದೆಂದು ಉದ್ದಿಮೆಗೆ ತಿಳಿಸಲಾಗಿದೆ.

Collection of Land Revenue

379 - Sri. Shaffi Ahamed (Tumkur): Will the Hon'ble Revenue Minister be pleased to state

a) *The total demand, collection, balance of the State (District wise Particulars may be furnised);*

b) *The arrears outstanding which is more than one lakh (DistrictËwise particulars may be furnished);*

c) *The target fixed for collection per annum (District-wise details may be furnished)?*

M. Rajashekar Murthy (Revenue Minister):

a) District-wise DCB of Land Revenue is furnished in Annexure 'A' and other dues in Annexure 'B'

b) particulars furnished in annexure 'C'

c) Particulars of District-wise target fixed is furnished in Annexure 'D'.

Annexure 'A'
Land Revenue and cesses statement

Name of the District	Total demand	Total Collection	Balance
1. Bangalore (U)	331474.00	765177.00	66297.00
2. Bangalore (R)	3130170.00	2893375.00	236795.00
3. Kolar	4415246.00	2775174.00	640072.00
4. Shimoga	12815531.00	5339686.00	7475845.00
5. Tumkur	7175605.00	5060405.00	2115200.00
6. Chitradurga	5751427.00	397758.00	1774369.00
7. Mysore	11324457.00	5270932.00	5353669.00
8. Chickmagalur	9932527.00	8992180.00	940347.00
9. Hassan	7220810.00	5960912.00	1259898.00
10. Mandya	4318754.00	2466121.00	1852633.00
11. Kodagu	5501138.00	4906253.00	594885.00
12. D.Kannada	3405183.00	3303217.00	101966.00
13. Gulbarga	26369000.00	4291000.00	22078000.00
14.Raichur	36299000.00	4345000.00	31954000.00
15. Bidar	5984000.00	1680000.00	4304000.00

16. Bellary	8463000.00	3638000.00	4825000.00
17. Belgaum	5475000.00	3236000.00	2239000.00
18.Bijapur	5274000.00	3874000.00	1400000.00
19. Dharwad	9975000.00	9927000.00	48000.00
20. U. Kannada	1912000.00	1889000.00	23000.00
Total	**175573322.00**	**85590490.00**	**89982832.00**

Annexure 'B'
Othere Dues Statement

Sl. No.	Name of the District	Total Demand	Total Collection	Balance
1.	Bangalore (U)	76389136.00	64383268.00	12005868.00
2.	Bangalore (R)	12961959.00	5556617.00	7405342.00
3.	Kolar	4454423.00	1830227.00	2624196.00
4.	Shimoga	284596217.00	27312228.00	257283989.00
5.	Tumkur	17046079.00	8482472.00	8563607.00
6.	Chitradurga	79542873.00	14004675.00	65538198.00
7.	Mysore	80800170.00	12761320.00	48038850.00
8.	Chickmagalur	3881351.00	1884392.00	1996959.00

9.	Hassan	18495157.00	5195087.00	13300070.00
10.	Mandya	104532076.00	16550255.00	87981821.00
11.	Kodagu	13597577.00	1002113.00	12595464.00
12.	D. Kannada	22913708.00	2492876.00	20420832.00
13.	Gulbarga	28980000.00	3832000.00	25148000.00
14.	Raichur	478307000.00	17848000.00	469459000.00
15.	Bidar	7911000.00	479000.00	7432000.00
16.	Bellary	234750000.00	25545000.00	209206000.00
17.	Belgaum	334564000.00	34139000.00	3000425000.00
18.	Bijapur	180255000.00	23629000.00	156626000.00
19.	Dharwad	147039000.00	22163000.00	124876000.00
20.	U. Kannada	16736000.00	5295000.00	11441000.00
Total		2104042192.00	123134492.00	1980907700.00

ANNEXURE-C

STATEMENT SHOWING THE DISTRICTS WHICH ARE HAVING ARREARS MORE THAN ONE LAKH

S.N.	Name of the District	Total Demand	Total Collection	Balance
1.	Bangalore (U)	Balance in all the Districts is more than one lakh as on Ist July, 1992 except in the districts of Bangalore (U) Dharwad and Uttar, Kannada as for as only Land Revenue is concerned.		
2.	Bangalore (R)			
3.	Kolar			
4.	Shimoga			
5.	Tumkur			
6.	Chitradurga			
7.	Mysore			
8.	Chickmagalur			
9.	Hassan			
10.	Mandya			
11.	Kodagu			
12.	D. Kannada			
13.	Gulbarga			
14.	Raichur			
15.	Bidar			
16.	Bellary			
17.	Belgaum			
18.	Bijapur			
19.	Dharwad			
20.	U. Kannada			
	Total			

ANNEXURE -D
TARGET FIXED

S.N.	Name of the District	Land Revenue & Cesses	Other Dues
1.	Bangalore (U)	33148.00	6002934.00
2.	Bangalore (R)	118387.00	3702001.00
3.	Kolar	320036.00	1312098.00
4.	Shimoga	3737022.00	128641904.00
5.	Tumkur	1057600.00	4281308.00
6.	Chitradurga	887134.00	82709099.00
7.	Mysore	3026763.00	24019425.00
8.	Chickmagalur	470173.00	998479.00
9.	Hassan	629949.00	6650035.00
10.	Mandya	926316.00	4399010.00
11.	Kodagu	297442.00	6297732.00
12.	D. Kannada	50983.00	60210416.00
13.	Gulbarga	11039000.00	12574000.00
14.	Raichur	15977000.00	230229000.00
15.	Bidar	2652000.00	3716000.00
16.	Bellary	2432500.00	104602500.00
17.	Belgaum	1119500.00	150212500.00
18.	Dharwad	24000.00	62438000.00
19.	Bijapur	7450000.00	7831300.00
20.	U. Kannada	16500.00	5720500.00

ರಾಜ್ಯದಲ್ಲಿ ಪೋಲೀಸ್ ಕೊರತೆ.

942-ಶ್ರೀ ಎಸ್. ಷಫಿ ಅಹಮದ್ (ತುಮಕೂರು): ಮಾನ್ಯ ಮುಖ್ಯಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪ್ರಸ್ತುತ ಪೋಲೀಸ್ ಬಲವೇನು? (ಜಿಲ್ಲಾವಾರು ವಿವರಗಳನ್ನು ನೀಡುವುದು)

ಆ) ರಾಜ್ಯದಲ್ಲಿ ಪೋಲೀಸ್ ಬಲದ ಕೊರತೆ ಇರುವುದೆ?

ಇ) ತುಂಬಬೇಕಾದ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳನ್ನು ನೀಡುವುದು)

ಈ) ಹಾಗಾದರೆ ಅವುಗಳನ್ನು ಯಾವಾಗ ತುಂಬಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) ಮಾಹಿತಿಯನ್ನು ಅನುಬಂಧ 'ಎ' ದಲ್ಲಿ ಒದಗಿಸಲಾಗಿದೆ.

ಆ) ಹೌದು.

ಇ) ಮಾಹಿತಿಯನ್ನು ಅನುಬಂಧ 'ಬಿ' ದಲ್ಲಿ ಒದಗಿಸಲಾಗಿದೆ.

ಈ) ಪೋಲೀಸ್ ಸಬ್-ಇನ್ಸ್‌ಪೆಕ್ಟರ್ ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಪೋಲೀಸ್ ಪೇದೆಗಳ ಖಾಲಿ ಹುದ್ದೆಗಳನ್ನು ತುಂಬಲು ಜಿಲ್ಲಾ ಮಟ್ಟದಲ್ಲಿ ಕ್ರಮ ಕೈಗೊಳ್ಳಲಾಗಿದೆ.

Annexure “A”

Strength of Police Force

ಅನುಬಂಧ “ಎ”

ಪೋಲೀಸ್ ಬಲ

Sl.No.	Name of the unit/District	Civil	Armed
ಕ್ರ.ಸಂ.	ಘಟಕದ ಹೆಸರು:ಜಿಲ್ಲೆ	ಸಿವಿಲ್	ಸಶಸ್ತ್ರ ಪಡೆ
1.	Commissionerate of Police Bangalore City	7679	3490
	ಕಮೀಷನರೇಟ್ ಆಫ್ ಪೋಲೀಸ್ ಬೆಂಗಳೂರು ನಗರ		
2.	Commissionerate of police Mysore City	1014	576
	ಕಮೀಷನರೇಟ್ ಆಫ್ ಪೋಲೀಸ್ ಮೈಸೂರು ನಗರ		
3.	Commissionerate of Police Hubli-Dharawad	802	149
	ಕಮೀಷನರೇಟ್ ಆಫ್ ಪೋಲೀಸ್ ಹುಬ್ಬಳ್ಳಿ-ಧಾರವಾಡ		
4.	Bangalore Dist	1035	213
	ಬೆಂಗಳೂರು		
5.	Kolar	856	210
	ಕೋಲಾರ		
6.	K.G.F.	380	208
	ಕೆ.ಜಿ.ಎಫ್.		
7.	Tumkur	1023	232
	ತುಮಕೂರು		

8.	Hassan	995	233
	ಹಾಸನ		
9.	Kodagu	462	220
	ಕೊಡಗು		
10.	Mandya	538	222
	ಮಂಡ್ಯ		
11.	Chitradurga	1094	362
	ಚಿತ್ರದುರ್ಗ		
12.	Bidar	740	242
	ಬೀದರ್		
13.	Bellary	1067	273
	ಬಳ್ಳಾರಿ		
14.	Shimoga	1077	408
	ಶಿವಮೊಗ್ಗ		
15.	Dakshina Kannada	1195	308
	ದಕ್ಷಿಣ ಕನ್ನಡ		
16.	Uttara Kannada	993	346
	ಉತ್ತರ ಕನ್ನಡ		
17.	Chickmagalur	695	194
	ಚಿಕ್ಕಮಗಳೂರು		

18.	Belgaum	1657	523
	ಬೆಳಗಾಂ		
19.	Bijapur	1394	338
	ಬಿಜಾಪುರ		
20.	Gulbarga	1515	459
	ಗುಲ್ಬರ್ಗಾ		
21.	Raichur	1141	237
	ರಾಯಚೂರು		
22.	Mysore	972	317
	ಮೈಸೂರು		
23.	Dharwad	1198	594
	ಧಾರವಾಡ		
24.	All Other Special units DGs office & DIGs of Ranges	2595	532
	ಇತರೆ ವಿಶೇಷ ಘಟಕಗಳ, ಡಿಜಿ ರವರುಗಳ ಕಛೇರಿ ಮತ್ತು ಡಿಐಜಿ ರವರುಗಳ ವಲಯಗಳು.		
25.	K.S.R.P.	5925	
	ಕೆ.ಎಸ್.ಆರ್.ಪಿ.		
26.	Wireless	924	
	ವೈರ್‌ಲೆಸ್		

Annexure - 'B'

ಅನುಬಂಧ-ಬಿ

District-wise Vacancy position

ಜಿಲ್ಲಾವಾರು ಖಾಲಿ ಹುದ್ದೆಗಳ ಮಾಹಿತಿ

Sl. No.	Name of the Unit/District	Civil	Armed
ಕ್ರ.ಸಂ.	ಘಟಕ : ಜಿಲ್ಲೆಯ ಹೆಸರು	ಸಿವಿಲ್	ಆರ್ಮ್ಡ್
1	2	3	4
1.	Bangalore City	38	68
	ಬೆಂಗಳೂರು ನಗರ		
2.	Bangalore District	6	-
	ಬೆಂಗಳೂರು ಜಿಲ್ಲೆ		
3.	Kolar	4	2
	ಕೋಲಾರ		
4.	K.G.F.	34	1
	ಕೆ.ಜಿ.ಎಫ್.		
5.	Tumkur	10	10
	ತುಮಕೂರು		
6.	Mysore City	15	9
	ಮೈಸೂರು ನಗರ		

7.	Mysore District	68	5
	ಮೈಸೂರು ಜಿಲ್ಲೆ		
8.	Hassan	12	2
	ಹಾಸನ		
9.	Kodagu	8	7
	ಕೊಡಗು		
10.	Mandya	76	-
	ಮಂಡ್ಯ		
11.	Commissionerate of Hubli-Dharwad	21	29
	ಕಮೀಷನರೇಟ್ ಆಫ್ ಹುಬ್ಬಳ್ಳಿ -ಧಾರವಾಡ		
12.	Chitradurga	4	4
	ಚಿತ್ರದುರ್ಗ		
13.	Bellary	1	1
	ಬಳ್ಳಾರಿ		
14.	Shimoga	71	-
	ಶಿವಮೊಗ್ಗ		
15.	South Kanara	22	-
	ದಕ್ಷಿಣ ಕನ್ನಡ		
16.	North Kanara	49	14

	ಉತ್ತರ ಕನ್ನಡ		
17.	Chickmangalur	1	2
	ಚಿಕ್ಕಮಗಳೂರು		
18.	Belgaum	13	
	ಬೆಳಗಾಂ		
19.	Bijapur	22	4
	ಬಿಜಾಪುರ		
20.	Dharwad	17	16
	ಧಾರವಾಡ		
21.	Raichur	37	15
	ರಾಯಚೂರು		
22.	Gulbarga	165	1
	ಗುಲ್ಬರ್ಗಾ		
23.	Other Special Units	291	47
	ಇತರ ವಿಶೇಷ ಘಟಕಗಳು		
24.	KSRP	720	
	ಕೆಎಸ್ಆರ್‌ಪಿ		

ಹೇಮಾವತಿ ಎಡದಂಡೆ ನಾಲೆ.

380-ಶ್ರೀ ಎಸ್. ಶಫಿ ಅಹ್ಮದ್ (ತುಮಕೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಎಡದಂತೆ ನಾಲೆಯ ಕೆಲಸದ ಈಗಿನ ಹಂತ ;

ಆ) ನಾಲೆಯ ಕೆಲಸಗಳಿಗೆ ಅನುದಾನ ಒದಗಿಸಿರುವ ವಿವರಗಳು ಹಾಗೂ ಈವರೆಗೆ ಖರ್ಚು ಮಾಡಿರುವ ಮೊತ್ತ:

ಇ) ಅಡ್ಡ ಮೋರಿಗಳ ಕೆಲಸಗಳನ್ನು (ಸಿ.ಡಿ.ವರ್ಕ್ಸ್) ಹಾಗೂ ವಿತರಣಾ ನಾಲೆಗಳ ಕೆಲಸಗಳನ್ನು ಒಟ್ಟಿಗೆ ತೆಗೆದುಕೊಳ್ಳಲಾಗಿದೆಯೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು):

ಅ) ಕೆಲವು ಅಡ್ಡ ಮೋರಿಗಳ (ಸಿ.ಡಿ.) ಕೆಲಸಗಳು ಹಾಗೂ ನಾಲೆಯ ಲೈನಿಂಗ್ ಕೆಲಸಗಳ ಹೊರತಾಗಿ ನಾಲೆಯ ಕೆಲಸವು ಮುಗಿದಿರುತ್ತದೆ. ಡಿಸ್ಟ್ರಿಬ್ಯೂಟರಿ ಸಂಖ್ಯೆ 70 ರಿಂದ 72ರ ಕಾಮಗಾರಿಗಳು ವಿವಿಧ ಹಂತದಲ್ಲಿವೆ. ಬಾಗೂರು ನವಿಲೆ ಸುರಂಗದ ನಂತರದ "ವೈ" ಅಲೈನ್‌ಮೆಂಟಿನ ಸೀಳು ಆಳ ನಾಲೆ (ಡೀಪ್‌ಕಟ್ ಕೆನಾಲ್) ಕೆಲಸವು ನಡೆಯುತ್ತಿದ್ದು, ಡಿಸೆಂಬರ್ 93ರೊಳಗೆ ಪೂರ್ಣಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆ) ತುಮಕೂರು ಬ್ರ್ಯಾಂಚ್ ಕೆನಾಲ್ 131ನೇ ಕಿ.ಮೀ. ವರೆಗಿನ ಬೇರೆ ಬೇರೆ ರೀಚ್‌ಗಳ ಕೆಲಸಗಳು ಪ್ರಗತಿಯಲ್ಲಿವೆ. 132 ರಿಂದ 151 ಕಿ.ಮೀ. ವರೆಗಿನ ರೀಚ್‌ನ ಸಮೀಕ್ಷೆ ಕೆಲಸವು ಪ್ರಗತಿಯಲ್ಲಿದೆ. ನಾಗಮಂಗಲ ಬ್ರ್ಯಾಂಚ್ ಕೆನಾಲ್‌ನ 67ನೇ ಕಿ.ಮೀ. ವರೆಗಿನ ಕೆಲಸವು ಪ್ರಗತಿಯಲ್ಲದೆ. ಮತ್ತು 67ನೇ ಕಿ.ಮೀ. ನಂತರದ ಸಮೀಕ್ಷೆ ಕೆಲಸಗಳು ಪ್ರಗತಿಯಲ್ಲಿದೆ.

ಇ) ಹೇಮಾವತಿ ಯೋಜನೆಗೆ 1992-93ರ ಸಾಲಿಗೆ ರೂ. 90.00 ಕೋಟಿ ಅನುದಾನ ಒದಗಿಸಲಾಗಿದೆ. ನವೆಂಬರ್ 92ರವರೆಗೆ ರೂ. 45. 86 ಕೋಟಿಗಳನ್ನು ಖರ್ಚು ಮಾಡಲಾಗಿದೆ.

ಹೌದು.

ಬಾಗೂರು ನವಲೆ ಸುರಂಗದ ಕೆಲಸಗಳು.

380 ಎ-ಶ್ರೀ ಎಸ್. ಶಫಿ ಅಹಮದ್ (ತುಮಕೂರು): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೂರು ನವಿಲೆ ಸುರಂಗದ ಕೆಲಸಗಳು ಯಾವಾಗ ಪೂರ್ಣಗೊಳ್ಳುವುದು? ಮತ್ತು ಪ್ರಸ್ತುತ ಪ್ರಗತಿಯ ಬಗ್ಗೆ ಮಾಹಿತಿ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಬಾಗೂರು ನವಿಲೆ ಸುರಂಗದ ಕೆಲಸ ಪೂರ್ಣಗೊಂಡಿದೆ.

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಕರಡಿಲಕ್ಕನಕೆರೆಯ ಏತ ನೀರಾವರಿ ಯೋಜನೆ.

453 - ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾ ಪಟ್ಟಣ ತಾಲ್ಲೂಕಿನ ಹಾರಂಗಿ ಯೋಜನೆಯ ಅಡಿಯಲ್ಲಿ ಬರುವ ಕರಡಿಲಕ್ಕನಕೆರೆಯ ಏತ ನೀರಾವರಿ ಕಾಲುವೆ ಕೆಲಸ ಈವರೆಗೆ ಎಷ್ಟು ಕಿ.ಮೀ. ಆಗಿರುತ್ತದೆ?

ಆ) *ಈ ವರ್ಷದಲ್ಲಿ ಎಷ್ಟು ಕಿ.ಮೀ. ಕೆಲಸ ಮಾಡಲಾಗುತ್ತದೆ?*
ಇ) *ಈ ಯೋಜನೆಗೆ ಸಂಬಂಧಪಟ್ಟಂತೆ ವಿದ್ಯುಚ್ಛಕ್ತಿ ಮತ್ತು ಟ್ರಾನ್ಸ್‌ಫಾರ್ಮರ್ ಬಗ್ಗೆ ಏನೇನು ಕ್ರಮ ಕೈಗೊಂಡಿದೆ?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) ಕಾಲುವೆಯ 4 ಕಿ.ಮೀ. ಉದ್ದದ ಕೆಲಸಗಳು ಭಾಗಶಃ ಆಗಿರುತ್ತದೆ.

ಆ) ಈ ವರ್ಷದಲ್ಲಿ ಪ್ರಾರಂಭಿಸಿದ 10 ಕಿ.ಮೀ. ಉದ್ದ ಕಾಲುವೆಯ ಕೆಲಸಗಳನ್ನು ಮಾಡುವ ಕಾರ್ಯಕ್ರಮವಿದೆ.

ಇ) ಈ ಯೋಜನೆಗೆ ಬೇಕಾಗುವ ವಿದ್ಯುಚ್ಛಕ್ತಿ ಸರಬರಾಜಿಗೆ ಠೇವಣಿ ಹಣ ಪಾವತಿ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯೊಂದಿಗೆ ಪತ್ರ ವ್ಯವಹಾರ ನಡೆಸಲಾಗುತ್ತಿದೆ. ಪಂಪುಗಳು ಮತ್ತು ಟ್ರಾನ್ಸ್‌ಫಾರ್ಮರ್‌ಗಳನ್ನೊಳಗೊಂಡ ಹೆಡ್‌ವರ್ಕ್ಸ್ ಕೆಲಸಗಳಿಗಾಗಿ 16.26 ಕೋಟಿ. ರೂ. ಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಮೈಸೂರು ಜಿಲ್ಲೆಗೆ ಸಣ್ಣ ಮತ್ತು ದೊಡ್ಡ ಕೈಗಾರಿಕೆಗಳಿಗಾಗಿ ಸಬ್ಸಿಡಿ ಹಣ ಮಂಜೂರು.

452-ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1990-91 ಮತ್ತು 1991-92ನೇ ಸಾಲುಗಳಲ್ಲಿ ಮೈಸೂರು ಜಿಲ್ಲೆಗೆ ಸಣ್ಣ ಮತ್ತು ದೊಡ್ಡ ಕೈಗಾರಿಕೆಗಳಿಗಾಗಿ ಎಷ್ಟು ಸಬ್ಸಿಡಿ ಹಣ ಮಂಜೂರು ಆಗಿದೆ?*
ಆ) *ಅದರಲ್ಲಿ 1990-91ನೇ ಹಾಗೂ 1991-92ರಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?*
ಇ) *ಇನ್ನೂ ಎಷ್ಟು ಹಣ ಬಿಡುಗಡೆ ಮಾಡಬೇಕಾಗಿದೆ?*
ಈ) *ಈ ವಿತರಣೆಯನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ?*

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) 1990-91 : ರೂ. 41.60 ಲಕ್ಷಗಳು

1991-92 : ರೂ. 196.19 ಲಕ್ಷಗಳು

ಆ) 1990-91ನೇ ಸಾಲಿಗೆ ಸಂಬಂಧಿಸಿದಂತೆ ರೂ. 4010050.00ಗಳ ಸಹಾಯಧನವನ್ನು 14 ಘಟಕಗಳಿಗೆ ಬಿಡುಗಡೆ ಮಾಡಲಾಗಿದೆ. 1991-92ನೇ ಸಾಲಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಬಿಡುಗಡೆ ಮಾಡಿರುವುದಿಲ್ಲ.

ಇ) 1990-91ನೇ ಸಾಲಿಗೆ ರೂ. 149950.00 ಗಳಿಗೆ (2 ಘಟಕಗಳಿಗೆ) ಮತ್ತು 1991-92 ನೇ ಸಾಲಿಗೆ ರೂ. 196.19 ಲಕ್ಷಗಳ (113 ಘಟಕಗಳಿಗೆ)ರಾಜ್ಯ ಸಹಾಯಧನವನ್ನಾಗಿ ಬಿಡುಗಡೆ ಮಾಡಬೇಕಾಗಿದೆ.

ಈ) ಕೆಲವು ವಿಶೇಷ ಸಂದರ್ಭಗಳನ್ನು ಬಿಟ್ಟು ಇಲಾಖೆಯಿಂದ ಸಹಾಯಧನ ಮಂಜೂರಾತಿ ಪಡೆದ ದಿನಾಂಕವನ್ನು ಆಧಾರವನ್ನಾಗಿಟ್ಟುಕೊಂಡು ಹಣವನ್ನು ಬಿಡುಗಡೆ ಮಾಡಲಾಗುತ್ತದೆ.

ಧಾರವಾಡ ಜಿಲ್ಲೆಯ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ.

457 - ಶ್ರೀ ಪಿ.ಸಿ ಸಿದ್ದನಗೌಡರ್ (ಕಲಘಟಗಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ವಿವಿಧ ಗ್ರಾಮಗಳಲ್ಲಿ 5 ರಿಂದ 7ನೇ ತರಗತಿಯವರೆಗೆ ತರಗತಿಗಳು ಇಲ್ಲದ ಶಾಲೆಗಳ ಸಂಖ್ಯೆ ಎಷ್ಟು?

ಆ) ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಆ ಶಾಲೆಗಳ ಹಾಜರಾತಿಗೆ ಅನುಗುಣವಾಗಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳನ್ನಾಗಿ ಪರಿವರ್ತಿಸುವ ವಿಚಾರ ಸರ್ಕಾರಕ್ಕೆ ಇದೆಯೇ?

ಈ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಉ) ಇದರ ಬಗ್ಗೆ ಜಿಲ್ಲಾ ಪರಿಷತ್ತಿನವರು 1 ರಿಂದ 4 ರವರೆಗೆ ನಡೆಯುತ್ತಿರುವ ಪ್ರಾಥಮಿಕ ಶಾಲೆಗಳನ್ನು ಹಾಜರಾತಿಗನುಗುಣವಾಗಿ 5 ರಿಂದ 7ರವರೆಗೆ ಮುಂದುವರೆಸಲು ಕ್ರಮ ಕೈಗೊಳ್ಳುವರೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) 776.

ಆ) ಬಂದಿದೆ.

ಇ) ಇದೆ.

ಈ) ಉಪ ನಿರ್ದೇಶಕರುಗಳಿಂದ ಪ್ರಸ್ತಾವನೆಗಳು ಈ ಬಗ್ಗೆ ಬಂದರೆ ಪರಿವರ್ತಿಸಲು ನಿರ್ದೇಶಕರ ಮಟ್ಟದಲ್ಲಿಯೇ ಅನುಮತಿ ನೀಡುವಂತೆ ಆದೇಶಿಸಲಾಗಿದೆ.

ಉ) ಪ್ರಸ್ತಾವನೆಗಳು ಬಂದಲ್ಲಿ ಕ್ರಮ ಕೈಗೊಳ್ಳಲಾಗುವುದು.

ಹುಬ್ಬಳ್ಳಿ ತಾಲ್ಲೂಕಿನ ಇಲಾಮ್ ವೀರಾಪುರದ ಬೃಹತ್ ನೀರಾವರಿ ಯೋಜನೆ.

526 - ಶ್ರೀ ಪಿ.ಸಿ ಸಿದ್ದನಗೌಡರ್. (ಕಲಘಟಗಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ತಾಲ್ಲೂಕಿನ ಇಲಾಮ್ ವೀರಾಪುರದ ಬೃಹತ್ ನೀರಾವರಿ ಯೋಜನೆಯನ್ನು ಸರ್ಕಾರವು ಕೈಗೆತ್ತಿಕೊಂಡಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಈ ಮೇಲ್ಕಂಡ ನೀರಾವರಿ ಯೋಜನೆಯು ಯಾವ ಹಂತದಲ್ಲಿದೆ ಹಾಗೂ ಈಗ ಇದಕ್ಕೆ ಖರ್ಚು ಮಾಡಿರುವ ಹಣವೆಷ್ಟು?

ಇ) ಈ ಮೇಲ್ಕಂಡ ನೀರಾವರಿ ಯೋಜನೆಯಿಂದ ಯಾವ್ಯಾವ ತಾಲ್ಲೂಕುಗಳಿಗೆ ಮತ್ತು ಹಳ್ಳಿಗಳಿಗೆ ಉಪಯೋಗವಾಗುತ್ತದೆ ಮತ್ತು ಎಷ್ಟು ಎಕರೆ ಭೂಮಿಗೆ ನೀರಾವರಿಯಾಗಿರುತ್ತದೆ?

ಈ) ಈ ಮೇಲ್ಕಂಡ ಯೋಜನೆಯಿಂದ ಯಾವ ಹಳ್ಳಿಗಳಿಗೂ ಪ್ರಯೋಜನವಾಗದಿರುವುದರಿಂದ ಇದನ್ನು ಸರ್ಕಾರ ಪುನರ್ ಪರಿಶೀಲಿಸಿ ರದ್ದುಪಡಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಹುಬ್ಬಳ್ಳಿ ತಾಲ್ಲೂಕಿನ ವೀರಾಪುರ ಮಧ್ಯಮ ನೀರಾವರಿ ಯೋಜನೆ ಇನ್ನೂ ಅನ್ವೇಷಣೆಯ ಹಂತದಲ್ಲಿದೆ.

ಸರ್ಕಾರಿ ವಾಹನಗಳ ಬಳಕೆ.

474 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಎಲ್ಲಾ ಮಟ್ಟಗಳಲ್ಲಿ ಸರ್ಕಾರಿ ವಾಹನಗಳ ಬಳಕೆ ಸರಿಯಾಗಿ ಆಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) 1991-92ನೇ ಸಾಲಿನಲ್ಲಿ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿರುವ ವಾಹನಗಳ ಒಟ್ಟು ದುರಸ್ತಿ ಮತ್ತು ಇಂಧನ ವೆಚ್ಚವೆಷ್ಟು ?

ಇ) ಈ ವೆಚ್ಚ ಕಡಿಮೆ ಮಾಡಲು ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಬಂದಿದೆ.

ಆ) ರೂ. 8,09,04,282-00 (ಇನ್ನೂ ಪೂರ್ಣ ಮಾಹಿತಿಗಳು ಇಲಾಖೆಗಳಿಂದ ಬರಬೇಕಾಗಿದ್ದು, ನಂತರ ಒದಗಿಸಲಾಗುವುದು.)

ಈ ವೆಚ್ಚಗಳನ್ನು ಕಡಿಮೆಗೊಳಿಸಲು ರಾಜ್ಯ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಸೂಚಿಸಿದೆ.

1) ಸರ್ಕಾರದ ಕಾರ್ಯದರ್ಶಿಗಳಿಗೆ ಹಾಗೂ ಇಲಾಖಾ ಮುಖ್ಯಸ್ಥರಿಗೆ ಒಬ್ಬ ಸರ್ಕಾರಿ ಚಾಲಕನಿರುವ ಒಂದು ನಾಮನಿರ್ದಿಷ್ಟ ಸರ್ಕಾರಿ ವಾಹನವಿರುತ್ತದೆ. ಇದರ ಜೊತೆಗೆ ಸಚಿವಾಲಯದ ಇಲಾಖೆಯ ಹಾಗೂ ಇಲಾಖಾ ಮುಖ್ಯಸ್ಥರುಗಳಿಗೆ ಅಧಿಕಾರಿಯ ನಿಯಂತ್ರಣದಲ್ಲಿ ಸಾಮೂಹಿಕ ಬಳಕೆಗಾಗಿಯೇ (ಪೂಲ್ ವೆಹಿಕಲ್) ಒಬ್ಬ ಸರ್ಕಾರಿ ಚಾಲಕನಿರುವ ಒಂದು ವಾಹನವನ್ನು ಹೊಂದಿರುತ್ತದೆ. ಹೊಸ ವಾಹನಗಳನ್ನು ಖರೀದಿಸುವ ವಿಷಯದಲ್ಲಿ ಸ್ಥಾಯಿ ಉಪಸಮಿತಿಯ ಶಿಫಾರಸ್ಸು ಮಾಡದ ಹೊರತು ಖರೀದಿ ಮಾಡತಕ್ಕದ್ದಲ್ಲ.

2) ನಾಮನಿರ್ದಿಷ್ಟ ವಾಹನಗಳನ್ನು ಪಡೆದಿರುವ ಮತ್ತು ಅವುಗಳನ್ನು ಮನೆಯಿಂದ ಕಛೇರಿಗೆ ಮತ್ತು ಕಛೇರಿಯಿಂದ ಮನೆಗೆ ಹೋಗಲು ವಾಹನ ಬಳಸಲು ಅನುಮತಿ ಪಡೆದಿರುವ ಅಧಿಕಾರಿಗಳು ವಾಹನವನ್ನು ಇನ್ನು ಮುಂದೆ ತಮ್ಮ ನಿವಾಸದಲ್ಲಿಯೇ ಉಳಿಸಿಕೊಳ್ಳಲು ಅನುಮತಿಸಲಾಗಿದೆ. ಇದರಿಂದ ಸಂಜೆಗೆ ವಾಹನ ನಿಲುಗಡೆಗಾಗಿ ಮನೆಯಿಂದ ಸರ್ಕಾರದ ಗ್ಯಾರೇಜಿಗೆ ತೆರಸುವ ಮತ್ತು ಮರುದಿನ ಸರ್ಕಾರದ ಗ್ಯಾರೇಜಿನಿಂದ ಅಧಿಕಾರಿಯ ಮನೆಯವರೆಗೆ ಅನಾವಶ್ಯಕ ಪ್ರಯಾಣ ಕಡಿಮೆಯಾಗಿ ಅನಾವಶ್ಯಕ ಪೆಟ್ರೋಲ್‌ವ್ಯಯವನ್ನು ತಪ್ಪಿಸಿದಂತಾಗುತ್ತದೆ.

3) ರಾಜ್ಯ ಕೇಂದ್ರ ಸ್ಥಾನದಿಂದ ದೂರದ ಜಿಲ್ಲೆಗಳಿಗೆ ಅದರಲ್ಲೂ ವಿಶೇಷವಾಗಿ ರೈಲು ಬಸ್ಸು ಮೂಲಕವೇ ಮಾಡಬಹುದಾದ ದೂರದ ಪ್ರವಾಸಕ್ಕಾಗಿ ವಾಹನಗಳನ್ನು ಬಳಸತಕ್ಕುದಲ್ಲ.

4) ಇಲಾಖಾ ಮುಖ್ಯಸ್ಥರ ಆಡಳಿತ ನಿಯಂತ್ರಣದಲ್ಲಿ ಬರುವ ಅಧಿಕಾರಿಗಳು ಕೇಂದ್ರ ಕಛೇರಿಯಿಂದಾಚೆ ಕೈಗೊಳ್ಳುವ ಪ್ರವಾಸಗಳಿಗಾಗಿ, ಕಛೇರಿ ಬಳಕೆಗಾಗಿಯೇ ಇರುವ ಕಾರನ್ನು ಬಳಸುವುದಕ್ಕಾಗಿ ಇಲಾಖಾ ಮುಖ್ಯಸ್ಥರ ಅನುಮತಿಯನ್ನು ಪಡೆದಿರಬೇಕೆಂದು ಇಲಾಖಾ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿದೆ ಮತ್ತು ಸಾಮಾನ್ಯ ಸಂದರ್ಭಗಳಲ್ಲಿ ಅಂಥ ಅನುಮತಿ ನೀಡತಕ್ಕುದಲ್ಲ. ವಿಶೇಷವಾಗಿ ಇಂತಹ ಅಧಿಕಾರಿಗಳು / ಜಿಲ್ಲಾ ಕೇಂದ್ರ ಸ್ಥಾನಕ್ಕೆ ಭೇಟಿ ನೀಡಿದಾಗ ಅಲ್ಲಿರುವ ಇಲಾಖೆಯ ವಾಹನವನ್ನು ಉಪಯೋಗಿಸಬಹುದು.

5) ಜಿಲ್ಲಾಧಿಕಾರಿಗಳು, ಜಿಲ್ಲಾ ಪರಿಷತ್ತುಗಳು ಮುಖ್ಯ ಕಾರ್ಯದರ್ಶಿಗಳು ಮತ್ತು ಅವರ ಸಿಬ್ಬಂದಿ ಅಥವಾ ಅಧೀನ ಅಧಿಕಾರಿಗಳು ಸಭೆಗಳು ಇತ್ಯಾದಿಗಳಿಗೆ ಹಾಜರಾಗುವ ಸಲುವಾಗಿ ರಾಜ್ಯ ಕೇಂದ್ರ ಸ್ಥಾನಕ್ಕೆ ಬರಲು ಸರ್ಕಾರಿ ವಾಹನಗಳನ್ನು ಬಳಸಲು ಬದಲಾಗಿ ಆದಷ್ಟು ರೈಲನ್ನು ಬಳಸುವ ಪ್ರಯತ್ನಿಸತಕ್ಕದು. ಮೇಲ್ಕಂಡ ಅಧಿಕಾರಿಗಳು ಅಧಿಕೃತ ಕೆಲಸದ ಮೇಲೆ ಬೆಂಗಳೂರಿಗೆ ಬಂದಾಗ ಅವರುಗಳ ಉಪಯೋಗಕ್ಕಾಗಿ ಪುನಃ ನಿಗದಿತ ಐದು ಸಮೂಹ ವಾಹನಗಳನ್ನು ರಾಜ್ಯ ಅತಿಥೇಯ ಸಂಸ್ಥೆಯಿಂದ ಒದಗಿಸಲಾಗಿರುವುದನ್ನು ಉಪಯೋಗಿಸತಕ್ಕದ್ದು.

6) ನಿರ್ದಿಷ್ಟವಾಗಿ, ಸಚಿವರುಗಳು ಮತ್ತು ಸರ್ಕಾರದ ಅಧಿಕಾರಿಗಳು ಭಾನುವಾರಗಳಂದು ಪ್ರವಾಸಗಳನ್ನು ಕೈಗೊಳ್ಳಬಾರದೆಂದೂ ತೀರ್ಮಾನಿಸಲಾಗಿದೆ. ಹಾಗೂ, ಅತೀ ತುರ್ತು ಸಂದರ್ಭಗಳನ್ನು ಹೊರತು ಪಡಿಸಿ, ಭಾನುವಾರಗಳಂದು ಸರ್ಕಾರಿ ಮೋಟಾರು ಕಾರುಗಳನ್ನು ಉಪಯೋಗಿಸಬಾರದೆಂದು ನಿರ್ದೇಶಿಸಲಾಗಿದೆ.

7) ಸರ್ಕಾರಿ ವಾಹನಗಳ ದುರಸ್ತಿಗೆ ಸಂಬಂಧಿಸಿದಂತೆ ದಿನಾಂಕ 15-12-1992ರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 6 ಟಿಸಿಇ 87 ರಲ್ಲಿ ಮಾರ್ಗದರ್ಶನ ಸೂತ್ರಗಳನ್ನು ಸೂಚಿಸಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಕರುಗಳ ಕೊರತೆ.

475 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಕ ವಿದ್ಯಾರ್ಥಿ ಪ್ರಮಾಣ ಎಷ್ಟು?

ಆ) ಈ ಅಸಮಾನತೆ ನೀಗಲು ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ನಗರ ಪ್ರದೇಶ 1:51

ಗ್ರಾಮೀಣ ಪ್ರದೇಶ 1:54

ಆ) ನಗರ ಪ್ರದೇಶಗಳಲ್ಲಿನ ಹೆಚ್ಚುವರಿ ಶಿಕ್ಷಕರನ್ನು ಗ್ರಾಮೀಣ ಪ್ರದೇಶಗಳಿಗೆ ಅವಶ್ಯಕತೆಯಿರುವ ಕಡೆ ಹುದ್ದೆ ಸಮೇತ ಸ್ಥಳಾಂತರಿಸಲು ಸಂಬಂಧಿಸಿದ ಉಪ ನಿರ್ದೇಶಕರುಗಳಿಗೆ ಆದೇಶ ನೀಡಲಾಗಿದೆ.

ವಿದ್ಯುತ್ ನಿಲುಗಡೆಯಲ್ಲಿ ವ್ಯತ್ಯಾಸ.

476 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯುತ್ ನಿಲುಗಡೆಯಲ್ಲಿ ಸರ್ಕಾರದವರು ಪಟ್ಟಣಕ್ಕೊಂದು ನೀತಿ ಅನುಸರಿಸಲು ಕಾರಣವೇನು?

ಆ) ವಿದ್ಯುತ್ ಕೊರತೆಯಿದ್ದಲ್ಲಿ ಕೋಟಿಗಿಂತ ಹೆಚ್ಚು ಬಾಕಿ ಇರುವ ಬಾಕಿದಾರರಿಗೆ ವಿದ್ಯುತ್ ನಿಲುಗಡೆ ಮಾಡಿ ಎಲ್ಲಾ ಜನರಿಗೆ 24 ತಾಸು ವಿದ್ಯುತ್ ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು):

ಅ) ಪಟ್ಟಣದ ವಿದ್ಯುತ್ ಬೇಡಿಕೆಯು ದೊಡ್ಡ ದೊಡ್ಡ ಕೈಗಾರಿಕೆಗಳು, ನೀರು ಸರಬರಾಜು ಸ್ಥಾವರಗಳು ಸರ್ವ ವಿದ್ಯುತ್ ಗೃಹಗಳು, ದೊಡ್ಡ ಆಸ್ಪತ್ರೆಗಳು,

ಮುಂತಾದವುಗಳಿಗೆ ಇರುತ್ತದೆ. ಹಳ್ಳಿಗಳ ವಿದ್ಯುತ್ ಬೇಡಿಕೆಯು ಹೆಚ್ಚಾಗಿ ನೀರಾವರಿ ಪಂಪುಸೆಟ್‌ಗಳು ಹಾಗೂ ಕಡಿಮೆ ಸಂಖ್ಯೆಯ ಸರ್ವೆ ವಿದ್ಯುತ್ ಗೃಹ ಮತ್ತು ಸಣ್ಣ ನೀರು ಸರಬರಾಜು ಸ್ಥಾವರ ಮುಂತಾದವು ಇರುತ್ತದೆ. ಇವುಗಳನ್ನು ಗಣನೆಗೆ ತೆಗೆದುಕೊಳ್ಳದೆ ವಿದ್ಯುತ್ ನಿಲುಗಡೆ ಒಂದೇ ರೀತಿ ಅನುಸರಿಸಿದ್ದೇ ಆದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ತುಂಬಾ ಕಂದಾಯ ನಷ್ಟವಾಗುವುದರ ಜೊತೆಗೆ ಕಾರ್ಖಾನೆಗಳ ಉತ್ಪಾದನೆ ಕುಂಠಿತವಾಗಿ ಜನಜೀವನಕ್ಕೆ ತೊಂದರೆಯಾಗುವ ಸಾಧ್ಯತೆಯಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಉತ್ಪದನಾ ಸಾಮರ್ಥ್ಯಕ್ಕಿಂತ ವಿದ್ಯತ್ ಬೇಡಿಕೆಯೇ ಜಾಸ್ತಿಯಾಗಿರುತ್ತದೆ. ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುತ್ ನಿಲುಗಡೆ ಮಾಡದಿದ್ದ ಪಕ್ಷದಲ್ಲಿ ಐ.ಪಿ. ಸೆಟ್‌ಗಳ ಅಧಿಕ ಹೊರೆಯಿಂದ ಇಡೀ ವಿದ್ಯುತ್ ವ್ಯವಸ್ಥೆಯೇ ಕುಸಿಯುವ ಸಂಭವವಿರುತ್ತದೆ. ಅದಾಗ್ಯೂ ಹೆಚ್ಚಿಗೆ ಪಟ್ಟಣದಲ್ಲಿಯೇ ಇರುವ ಹೆಚ್‌ಟಿ ಗ್ರಾಹಕರಿಗೆ ವಿದ್ಯುತ್ ಕಡಿತವನ್ನು ಹಾಕಲಾಗಿದ್ದು ಇದರ ಜೊತೆಗ ಪ್ರತಿದಿವಸ ಸಂಜೆ 6 ರಿಂದ 9ರವರೆಗೆ ವಿದ್ಯುತ್ ಉಪಯೋಗಿಸಿಕೂಡದೆಂದು ತಿಳಿಸಲಾಗಿರುತ್ತದೆ. ಹಳ್ಳಿಗಳಲ್ಲಿರುವ ಐ.ಪಿ.ಸೆಟ್‌ಗಳಿಗೆ ಮೇಲೆ ತಿಳಿಸಿರುವ ವಿದ್ಯುತ್ ಕಡಿತ ಅಥವಾ ಸಂಜೆ 6 ರಿಂದ 9 ರವರೆಗೆ ವಿದ್ಯುತ್ ಉಪಯೋಗಿಸದಂತೆ ನಿರ್ಬಂಧ ಹಾಕಿರುವುದಿಲ್ಲ.

ಆ) ಒಂದು ಕೋಟಿ ರೂ. ಗಿಂತಲೂ ಹೆಚ್ಚಿಗೆ ಬಾಕಿ ಇರುವ ಕೆಲವು ಸಂಸ್ಥೆಗಳು ಈ ಬಾಕಿಗೆ ಸಂಬಂಧಪಟ್ಟಂತೆ ನ್ಯಾಯಾಲಯಕ್ಕೆ ಹೋಗಿ ಅವು ಇನ್ನೂ ನಿರ್ಧಾರವಾಗಿಲ್ಲ. ಈ ಕಾರ್ಖಾನೆಗಳು ಹೆಚ್ಚು ವಿದ್ಯುತ್ತನ್ನು ಬಳಸುತ್ತಿರುತ್ತವೆ ಮತ್ತು ಪ್ರತಿ ತಿಂಗಳ ಬಿಲ್ಲನ್ನು ಕಟ್ಟುತ್ತಿರುತ್ತವೆ. ಇವುಗಳಿಗೆ ವಿದ್ಯುತ್ತನ್ನು ನಿಲ್ಲಿಸಿದರೆ, ಉತ್ಪಾದನೆ ಕುಂಠಿತವಾಗುವುದರ ಜೊತೆಗೆ, ಮಂಡಳಿಯ ಕಂದಾಯಕ್ಕೆ ಧಕ್ಕೆಯುಂಟಾಗುತ್ತದೆ ಮತ್ತು ಕಾರ್ಮಿಕರ ಕಂದಾಯಕ್ಕೆ ಧಕ್ಕೆಯುಂಟಾಗುತ್ತದೆ. ಮತ್ತು ಕಾರ್ಮಿಕರ ಶಾಂತಿಗೆ ಭಂಗ ಬರುವ ಸಂಭವವಿರುತ್ತದೆ. ಅದಾಗ್ಯೂ ಈ ಬಾಕಿಯನ್ನು ವಸೂಲು ಮಾಡಲು ಕೆ.ಇ.ಬಿ.ಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ತುಂಗಭದ್ರಾ ಮಂಡಳಿ ರದ್ಧತಿ.

473 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) "ತುಂಗಭದ್ರಾ ಮಂಡಳಿ" ಸ್ಥಾಪನೆಯ ಉದ್ದೇಶವೇನಿತ್ತು?

ಆ) 1991-92ನೇ ಸಾಲಿಗೆ ತುಂಗಭದ್ರಾ ಮಂಡಳಿಗೆ ಸರ್ಕಾರ ವೆಚ್ಚ ಮಾಡಿದ ಹಣವೆಷ್ಟು?

ಇ) ಇದನ್ನು ರದ್ದು ಮಾಡುವುದಕ್ಕೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗಿದವೆಯೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ತುಂಗಭದ್ರಾ ಯೋಜನೆಯಡಿಯಲ್ಲಿ ಆಂಧ್ರ ಪ್ರದೇಶ ಮತ್ತು ಕರ್ನಾಟಕ ಈ ಎರಡೂ ರಾಜ್ಯಗಳ ಪರಸ್ಪರ ಹಿತಾಸಕ್ತಿಗಳಿಗೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನು ನೋಡಿಕೊಳ್ಳಲು ತುಂಗಭದ್ರಾ ಮಂಡಳಿಯನ್ನು ರಚಿಸಲಾಗಿದೆ.

ಆ) ರೂ. 395.09 ಲಕ್ಷ.

ಇ) ಹೌದು.

ಕೈಮಗ್ಗ ಅಭಿವೃದ್ಧಿ ನಿಗಮದಿಂದ ನೇಕಾರರಿಗೆ ನೂಲು ವಿತರಣೆ.

477 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ತನ್ನ ನೇಕಾರರಿಗೆ ವೇಳೆಗೆ ಸರಿಯಾಗಿ ಸಮರ್ಪಕವಾಗಿ ನೂಲು ವಿತರಣೆ ಮಾಡುವಲ್ಲಿ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಒಂದು ವೇಳೆ ಸಮರ್ಪಕವಾಗಿ ನೂಲು ಪೂರೈಕೆಯಾಗದಿದ್ದಲ್ಲಿ, ನೂಲು ಸರಿಯಾಗಿ ಪೂರೈಸಲು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಬಂದಿದೆ.

ಆ) ಕರ್ನಾಟಕ ರಾಜ್ಯದಲ್ಲಿ ಕೇವಲ 3 ಅಥವಾ 4 ನೂಲಿನ ಗಿರಣಿಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಿದ್ದು, ಈ ಗಿರಣಿಗಳು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೂಲಿನ ಪೂರ್ಣ ಅವಶ್ಯಕತೆಯನ್ನೂ ಪೂರೈಸುತ್ತಿಲ್ಲ. ಆದ್ದರಿಂದ ನಿಗಮವು ತಮಿಳುನಾಡಿನ ಸಹಕಾರ ನೂಲಿನ ಗಿರಣಿಗಳಿಂದ ನೂಲನ್ನು ಖರೀದಿಸುತ್ತಿದೆ. ಆದರೆ ನೂಲಿನ ಗಿರಣಿಗಳು ಸಾಲದ ಆಧಾರದ ಮೇಲೆ ನೂಲನ್ನು ಸರಬರಾಜು ಮಾಡಲು ನಿರಾಕರಿಸುತ್ತಿದ್ದು, ಹಣ ವಾಪತಿ ಮಾಡಿದ ನಂತರವೇ ನೂಲನ್ನು ಸರಬರಾಜು ಮಾಡುತ್ತಿವೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ದಾಸ್ತಾನು ಪ್ರಮಾಣ ಏರುತ್ತಿದ್ದು, ಜನತಾ ಬಟ್ಟೆಗಳ ಮಾರಾಟ ನಿಧಾನಗತಿಯಿಂದ ಸಾಗುತ್ತಿರುವುದರಿಂದಲೂ ಮತ್ತು ಸಗಟು ಮಾರಾಟಗಾರರಿಂದ ಹಣ ಪಾವತಿ ವಿಳಂಬವಾಗುತ್ತಿರುವುದರಿಂದ, ನಿಗಮದಲ್ಲಿ ಹಣದ ಕೊರತೆ ಉದ್ಭವವಾಗಿರುತ್ತದೆ. ನಿಗಮದವರು ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸದಿರುವುದು ಇದಕ್ಕೆ ಮುಖ್ಯ ಕಾರಣವಾಗಿದ್ದು, ಸರ್ಕಾರವು ಈಗಾಗಲೇ ಉತ್ಪಾದನಾ ಗುಣಮಟ್ಟವನ್ನು ಉತ್ತಮಗೊಳಿಸಲು ನಿಗಮಕ್ಕೆ ಸೂಚನೆ ನೀಡಿರುತ್ತದೆ. ಹಾಗೂ ಕರ್ನಾಟಕಕ್ಕೆ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ನೀಡಬೇಕಾದ ಹಣವನ್ನು ಸರ್ಕಾರ ಮುಂಗಡವಾಗಿ ನೀಡಲು ಕ್ರಮ ಕೈಗೊಳ್ಳಲಾಗಿದೆ. ಇದರಿಂದ ನಿಗಮದ ಆರ್ಥಿಕ ಪರಿಸ್ಥಿತಿ ಸುಧಾರಿಸಿ, ನೇಕಾರರಿಗೆ ನಿರಂತರವಾಗಿ ನೂಲು ಸರಬರಾಜು ಮಾಡುವ ಸಾಧ್ಯತೆ ಇರುತ್ತದೆ.

ರಾಜ್ಯದಲ್ಲಿ ಜಪಾನ್ ಕೈಗಾರಿಕಾ ಕೇಂದ್ರದ ನಿರ್ಮಾಣ.

637 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಪಾನ್ ಸರ್ಕಾರದವರು ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಇದನ್ನು ಎಲ್ಲಿ ಮತ್ತು ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಜಪಾನ್ ಮತ್ತು ಭಾರತ ಸರ್ಕಾರದ ಪರಸ್ಪರ ಸಹಯೋಗದ ಒಪ್ಪಂದದ ಮೇರೆಗೆ ಭಾರತ ದೇಶದಲ್ಲಿ ಒಂದು ಮಾದರಿ ಕೈಗಾರಿಕಾ ನಗರವನ್ನು ಸ್ಥಾಪನೆ ಮಾಡಲು ಉದ್ದೇಶಿಸಿದೆ. ಈ ಮಾದರಿ ಕೈಗಾರಿಕಾ ನಗರದ ಸ್ಥಾಪನೆಯ ಯೋಜನೆಯನ್ನು ತಯಾರಿಸಲು ಜಪಾನ್ ಸರ್ಕಾರ ಒಪ್ಪಿಕೊಂಡಿದೆ.

ಆ) ಈ ಮಾದರಿ ಕೈಗಾರಿಕಾ ನಗರ ಸ್ಥಾಪನೆಗಾಗಿ ಈಗಾಗಲೇ 4 ಸ್ಥಳಗಳನ್ನು ಗುರುತಿಸಲಾಗಿದೆ. ಅಂದರೆ :

1) ನಾಯ್ಡ ಉತ್ತರ ಪ್ರದೇಶ
2) ಗುರುಗಾಂ ಹರಿಯಾಣ
3) ಸಾತನೂರ್ ಕರ್ನಾಟಕ
4) ಬಿಡದಿ ಕರ್ನಾಟಕ

ಹಾಗೂ ಈ ಸ್ಥಳಗಳ ಪೂರ್ವಭಾವಿ ಅರ್ಹತಾ ಯೋಜನೆ ತಯಾರಿಸುವ ಕೆಲಸ ಪ್ರಾರಂಭ ಹಂತದಲ್ಲಿದೆ.

Interest Free Loans and Compensations to victims of Communal Clashes.

1053 - SRI. SADATH ALIKHAN (Channapatna): Will the Chief Minister be pleased to state ?

a) *The total number of applications that are pending for sanction of interest-free loans and compensation to the deceased families during the communal clashes during the year 1990 in Channapatna Taluk?*
b) *The total number of applications that are pending for sanction of compensation as per re-assessment in Channapatna Taluk?*
c) *The reasons for not sanctioning the same?*
d) *When it will be sanctioned?*
e) *Whether it is a fact that the compensation has not been released or deposited in the name of missing persons in Channapatna Taluk during communal clashes?*
f) *The action that has been taken by Government in this regard?*

Sri M. VEERAPPA MOILY (Chief Minister):

a) 21 Applications are pending for sanction of interest-free loans.

No applications are required for payment of compensation.

b) 20 cases. (details given in the Annexure)

c) The re-assessment of losses is being examined and opinion of the Horticulture Department is awaited.

d) Shortly.

e) There is no provision for payment of compensation for missing persons.

f) 3 persons are reported missing in Channapatna and these cases have been referred to COD for investigation. Investigation report is awaited.

ANNEXURE

Sl. No.	Name and Address of the victim	Estimated loss as per statement of the Tahsildar after the Tahsildar after re-assessment.		Ex-gratia relief already sanctioned as per G.O. dated 10-10-1990.		Balance of ex-gratia to be sanctioned.	
		Loss of House	Loss of Property	Loss of House	Loss of Property	Loss of House	Loss of Property
1	2	3	4	5	6	7	8
1.	Shukath Hussain S/0 A. Ahmed Hussain, No. 296/19, Syedwadi, Channapatna.	-	1,29,000	-	13,675	-	6,325
2.	Syed Bakshi S/o. Syed Ghouse, Channapatna		1,43,000	-	16,250	-	3,750
3.	Pilwan Syed Iqbal S/o. Abdul Satta Sukhari,Channapatna.	50,000	1,99,800		17,875	10,000	2,125
4.	H.Hydersab S/o. Hussain Sab, No. 1152, B.M.Road,Channapatna.	-	97.000	-	19,375		625

5.	Syed Nooruddin S/o Syed Yakoob, Channapatna.	55,000	97,500	10,000	10,000	10,000	7,375
6.	Hameed Khan S/o. A.M. Hussain Miya.	25,000	1,26,000	10,000	15,000	10,000	5,000
7.	Salima Banu W/o Syed Rasool, Lalghatta.	20,000	1,05,700	10,000	20,000	10,000	
8.	C.M. Akbar Sharief, S/o Mohammed Sharief, Fort.	20,000	2,00,000	10,000	20,,000	10,000	-
9.	S.A. Azeez S/o Basheer, J.C. Road.	-	99,000	-	15,250	-	4,750
10.	Narayanaswamy S/o. Nagamuthu,Peteecheri.	4,000	35,400	4,000	10,000	-	2,350
11.	N.S. Miya, Ex.Councillor, Channapatna.	40,000	74,000	10,000	12,000	10,000	800
12	Mohammed Ibrahim S/o. Mohammed Yusuf,Channapatna.	20,000	52,000	10,000	10,000	10,000	6,500
13.	Smt. Farhath W/o Late Abdul Illahi, Church Road.	500	38,000	500	10,000		3,000

14.	Usman Beig, S/o Khaji Khasim Beig, No. 839,Channapatna.	3,000	1,45,000	3,000	10,000	-	10,000
15.	K.B. Mustafa Khan S/o Beermali Khan, Extension 4th Cross, Channapatna.	-	1,10,900	-	13,185	-	6,815
16.	Md. Yusuf, S/o. Md. Jaleel.	-	37,000	-	10,000	-	2,750
17.	Javed S/o. Abdul Latheef, Photo Studio.	6,000	67,000	6,000	17,250	-	2,750
18.	Saleem Mirza S/o Burhan Beig.	-	1,30,000	-	14,750	-	5,250
19.	Basavaraj Mahadeswara Traders.	500	40,000	500	10,000	-	3,500
20.	Shanaz Banu, Channapatna.	25,000	5,600	10,000	3,800	10,000	-

Note : In respect of the Cases balance of ex-gratia relief to be sanctioned, the opinion of Horticulture Department is awaited.

ಸಕಲೇಶಪುರ ಕ್ಷೇತ್ರದ ಆರಕ್ಷಕರ ಠಾಣಗೆ ಜೀಪಿನ ಅವಶ್ಯಕತೆ.

984 - ಶ್ರೀ ಬಿ.ಆರ್. ಗುರುದೇವ (ಸಕಲೇಶಪುರ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ಕ್ಷೇತ್ರದ ವ್ಯಾಪ್ತಿಗೆ ಬರುವ ಆಲೂರು ಮತ್ತು ಯಸಳೂರು ಆರಕ್ಷಕ ಠಾಣೆಗಳು ಮಲೆನಾಡು ಪ್ರದೇಶದಲ್ಲಿದ್ದು ಅಲ್ಲಿನ ಆರಕ್ಷಕ ಠಾಣೆಗಳಿಗೆ ಜೀಪಿನ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಇ) ಹಾನು ಬಾಳ್ಳು ಮತ್ತು ಹೆತ್ತೂರು ಗ್ರಾಮಗಳಿಗೆ ಆರಕ್ಷಕ ಠಾಣೆಯ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಆಲೂರು ತಾಲ್ಲೂಕು ಕೆ. ಹೊಸಕೋಟೆ ಆರಕ್ಷಕ ಠಾಣೆಯನ್ನು ಮೇಲ್ದರ್ಜೆಗೇರಿಸುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಸರ್ಕಾರದವರು ಆ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) ಹೌದು.

ಆ) ಆದ್ಯತೆ, ಅಗತ್ಯತೆ ಅನುಸರಿಸಿ ಜೀಪುಗಳನ್ನು ಪೋಲೀಸ್ ಠಾಣೆಗಳಿಗೆ ಹಂತಹಂತವಾಗಿ ನೀಡಲಾಗುವುದು.

ಇ) ಇಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಉಚ್ಚ ನ್ಯಾಯಾಲಯ ಮತ್ತು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಸೇವಾ ನಿಯಮ ಕುರಿತು ಬಾಕಿ ಇರುವ ರಿಟ್ ಅರ್ಜಿಗಳ ಸಂಖ್ಯೆ.

767 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಸೇವಾ ವಿಷಯಗಳ ಕುರಿತು ಬಾಕಿ ಇರುವ ರಿಟ್ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಕರ್ನಾಟಕ ಉಚ್ಚ ನ್ಯಾಯಾಲಯದಿಂದ ಕರ್ನಾಟಕ ಆಡಳಿತ ನ್ಯಾಯಮಂಡಳಿಗೆ ಸೇವಾ ವಿಷಯ ಕುರಿತು ಅರ್ಜಿಗಳನ್ನು ಇತ್ಯರ್ಥಪಡಿಸಲು ವ್ಯಾಪ್ತಿಯು ವರ್ಗಾವಣೆಯಾಗಿರುವುದು ನಿಜವೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಕರ್ನಾಟಕ ಉಚ್ಚ ನ್ಯಾಯಾಲಯ ಕರ್ನಾಟಕ ಆಡಳಿತ ನ್ಯಾಯಮಂಡಳಿ

ದಿನಾಂಕ 1-1-93ರಂದು 13213 ದಿನಾಂಕ 31-12-1992 ಅಂತ್ಯದವರೆಗೆ 5276.

ಆ) ರಾಜ್ಯ ಸರ್ಕಾರಿ ನೌಕರರ ಸೇವಾ ವಿಷಯಗಳಿಗೆ ಸಂಬಂಧಿಸಿದ ವಿಷಯಗಳನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿಗೆ ವರ್ಗಾಯಿಸಲಾಗಿದೆ.

ಹುಕ್ಕೇರಿ ಕ್ಷೇತ್ರದ ಬಸ್ಸಾಪುರ ಗ್ರಾಮದಲ್ಲಿ ಜ್ಯೂನಿಯರ್ ಕಾಲೇಜಿನ ಕಟ್ಟಡ.

962 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ಕ್ಷೇತ್ರದ ಬಸ್ಸಾಪುರ ಗ್ರಾಮದಲ್ಲಿ ಜ್ಯೂನಿಯರ್ ಕಾಲೇಜಿನ ಕಟ್ಟಡ ಕಟ್ಟುವ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಬರುವ ವರ್ಷದ ಆಯವ್ಯಯದಲ್ಲಿ ಅಳವಡಿಸಲಾಗುವುದೇ?

ಇ) ಕಾಲೇಜು ಪ್ರಾರಂಭ ಮಾಡುವುದರಿಂದ ಸುತ್ತಲಿನ ಗ್ರಾಮಗಳ ಹೈಸ್ಕೂಲುಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿದ್ದು, ಸದರಿ ಪ್ರಸ್ತಾವನೆಗೆ ಸರ್ಕಾರವು ಮಂಜೂರಾತಿ ನೀಡುವುದೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು):

ಅ) ಇಲ್ಲ.

ಆ) (ಅ) ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

ಚಿಕ್ಕೋಡಿ ಉಪ ಕಾಲುವೆ ನಿರ್ಮಾಣ.

9683 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ಕ್ಷೇತ್ರದಲ್ಲಿ ಬರುವ ಚಿಕ್ಕೋಡಿ ಉಪ ಕಾಲುವೆ ಬ್ಲಾಕ್ ನಂ. 15 ಶಿರಢಾಣ, ಜಾಂಗಟಿಹಾಳ, ಗ್ರಾಮಗಳ ನೀರು ಹೋಗುವ ಕಾಲುವೆ ಪೂರ್ತಿಯಾಗದೆ ಅರ್ಧಕ್ಕೆ ನಿಂತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಯಾವ ತೊಂದರೆಗಳಿಂದ ವಿಳಂಬವಾಗಿದೆ ಹಾಗೂ ವಿಳಂಬಕ್ಕೆ ಕಾರಣವೇನು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಬಂದಿದೆ. ಸದರಿ ಗ್ರಾಮಗಳು ಉಪ ಕಾಲುವೆಯ ಬ್ಲಾಕ್ ನಂ. 16 (ಅ) ದಲ್ಲಿ ಬರುತ್ತವೆ.

ಆ) ಭೂಸ್ವಾಧೀನ ಪಡಿಸಿಕೊಳ್ಳುವಲ್ಲಿ ತೊಂದರೆ ಮತ್ತು ಸಿಡಿಮದ್ದಿನಿಂದ ಸ್ಫೋಟಿಸುವ ಕಾರ್ಯಕ್ಕೆ ಸರಹದ್ದಿನಲ್ಲಿ ಗ್ರಾಮಸ್ಥರು ತಕರಾರು ಮಾಡುತ್ತಿರುವುದರಿಂದ ಕಾಮಗಾರಿಯಲ್ಲಿ ವಿಳಂಬವಾಗಿದೆ.

ರುಸ್ತುಂಪುರ ಏತ ನೀರಾವರಿ ಯೋಜನೆ.

964 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ರುಸ್ತುಂಪುರ ಏತ ನೀರಾವರಿ ಯೋಜನೆಯು ಮಂಜೂರಾಗಿದೆಯೇ?

ಆ) ಮಂಜೂರಾಗಿದ್ದಲ್ಲಿ, ಆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಇ) ಸದರಿ ಯೋಜನೆಯಿಂದ ಎಷ್ಟು ಎಕರೆ ನೀರಾವರಿ ಆಗುವುದು?

ಈ) ಅದಕ್ಕೆ ಒದಗಿಸಲಾದ ಹಣವೆಷ್ಟು? ಹಾಗೂ ಈ ವರ್ಷ ಎಷ್ಟು ಹಣ ಬಿಡುಗಡೆ ಮಾಡಲಾಗುವುದು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ರುಸ್ತುಂಪುರ ಏತ ನೀರಾವರಿ ಯೋಜನೆಯನ್ನು ಘಟಪ್ರಭಾ ಯೋಜನೆಯ 3ನೇ ಘಟ್ಟದ ಪರಿಷ್ಕೃತ ಅಂದಾಜಿನಲ್ಲಿ ಅಳವಡಿಸಿ ಕೆಲ ನಿಬಂಧನೆಗಳೊಡನೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರವು ಜೂನ್ 1992ರಲ್ಲಿ ಅನುಮತಿ ನೀಡಿದೆ.

ಆ) ಈ ಕೆಲಸವನ್ನು 1992-93ನೇ ಸಾಲಿನಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ.

ಇ) 6800 ಎಕರೆಗಳು.

ಈ) 1992-93ನೇ ಸಾಲಿನಲ್ಲಿ ಈ ಯೋಜನೆಗಾಗಿ 10 ಲಕ್ಷ ರೂ.ಗಳ ಕಾರ್ಯಕ್ರಮವನ್ನು ಮುಖ್ಯ ಇಂಜಿನಿಯರ್‌ರವರು ಹಮ್ಮಿಕೊಂಡಿರುತ್ತಾರೆ. ಕಾಮಗಾರಿಯು ಪ್ರಾರಂಭವಾದ ನಂತರ ಬೇಕಾದ ಹಣವನ್ನು ಬಿಡುಗಡೆ ಮಾಡಲಾಗುವುದು.

ಹುಕ್ಕೇರಿ ಕ್ಷೇತ್ರದಲ್ಲಿ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳು.

965 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ಕ್ಷೇತ್ರದಲ್ಲಿ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಎಷ್ಟು? (ವಿವರಗಳನ್ನು ಒದಗಿಸುವುದು)

ಆ) ಅವುಗಳಿಗೆ ಅವಶ್ಯವಿರುವ ಸಿಬ್ಬಂದಿ ವರ್ಗ ಹಾಗೂ ಕಟ್ಟಡ ಒದಗಿಸಿದೆಯೇ?

ಇ) ಮಂಜೂರಾದ ಯಾವ ಯಾವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕಟ್ಟಲು ಈ ವರ್ಷ ಸರ್ಕಾರ ಕ್ರಮ ಕೈಗೊಳ್ಳುವುದೇ?

ಈ) ಕಟ್ಟಲು ಯೋಚಿಸಿದ್ದಲ್ಲಿ ಅವು ಯಾವ ಹಂತದಲ್ಲಿದೆ?

ಉ) ಈ ವರ್ಷದಲ್ಲಿ ಒದಗಿಸಲಾದ ಹಣವೆಷ್ಟು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಹುಕ್ಕೇರಿ ವಿಧಾನ ಸಭಾ ಕ್ಷೇತ್ರದಲ್ಲಿ ಆರು ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾಗಿದೆ.

1) ಕಬ್ಬೂರು

2) ಕರಗಾಂ

3) ಪಾಶ್ಚಾಪುರ

4) ಇಸ್ಲಾಂಪುರ

5) ಯಮಕನ ಮರಡಿ

5) ನೋಗಿನಹಾಳ್

ಆ) ವೈದ್ಯಾಧಿಕಾರಿಗಳನ್ನು ಹಾಗೂ 'ಡಿ' ದರ್ಜೆ ನೌಕರರನ್ನು ಒದಗಿಸಲಾಗಿದೆ ಹಾಗೂ ತಾತ್ಕಾಲಿಕ ಕಟ್ಟಡಗಳನ್ನು ಒದಗಿಸಲಾಗಿದೆ.

ಆ) ಬೆಳಗಾಂ ಜಿಲ್ಲಾ ಪರಿಷತ್ತು ಈ ವಿಧಾನ ಸಭಾ ಕ್ಷೇತ್ರದಲ್ಲಿ ಈ ಸಾಲಿನಲ್ಲಿ ಆರೋಗ್ಯ ಕೇಂದ್ರಗಳ ಕಟ್ಟಡಗಳನ್ನು ಕಟ್ಟಲು ಕ್ರಮ ಕೈಗೊಂಡಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳ್ಳಬಟ್ಟಿ ಪ್ರಕರಣಗಳ ತಪಾಸಣೆ.

1038 - ಶ್ರೀ ಬಿ.ಎಂ. ಇದಿನಬ್ಬ, (ಉಳ್ಳಾಲ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1990-91, 1991-92ನೇ ಸೆಪ್ಟೆಂಬರ್ ಅಂತ್ಯದವರೆಗೆ ಕಳ್ಳಭಟ್ಟಿ ತಪಾಸಣೆಯ ಎಷ್ಟು ಪ್ರಕರಣಗಳಾಗಿವೆ?

ಆ) ಆ ಪ್ರಕರಣಗಳು ಎಲ್ಲೆಲ್ಲಿ ದೊರೆತಿವೆ? ಹಾಗೂ ಎಷ್ಟು ವಾಹನ ಇನ್ನಿತರ ಸಾಮಗ್ರಿ ಸಿಕ್ಕಿವೆ ಮತ್ತು ಎಷ್ಟು ಮದ್ಯಸಾರ ನಾಶಪಡಿಸಲಾಗಿದೆ? (ವಿವರ ಒದಗಿಸುವುದು).

ಇ) ಎಷ್ಟು ದಾವೆಗಳನ್ನು ಹಾಕಲಾಗಿದೆ? ಹಾಗೂ ಅದು ಎಲ್ಲೆಲ್ಲಿ ಮತ್ತು ಎಷ್ಟು ದಸ್ತಗಿರಿ ಆಗಿದೆ?

ಈ) ಈ ಕಳ್ಳಭಟ್ಟಿ ನಿಲ್ಲಿಸಲು ಸರ್ಕಾರವು ಇನ್ನೂ ಹೆಚ್ಚಿನ ಕಾರ್ಯಕ್ರಮ ಹಾಕಿಕೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) 1990-91(ಜುಲೈ -ಜೂನ್) 1,135 ಗುನ್ಹೆಗಳು

1991-92 (ಜುಲೈ-ಸೆಪ್ಟೆಂಬರ್) 844 ಗುನ್ಹೆಗಳು

ಆ) ಅನುಬಂಧ 'ಅ' ದಲ್ಲಿ ಒದಗಿಸಲಾಗಿದೆ.

ಇ) ದಾವೆಗಳು ಅನುಬಂಧ 'ಅ' ದಲ್ಲಿ ತಿಳಿಸಿರುವ ಗ್ರಾಮಗಳಿಗೆ ಸಂಬಂಧಿಸಿದೆ. ಮತ್ತು ದಸ್ತಗಿರಿ ಆದವರ ಸಂಖ್ಯೆ ಈ ಕೆಳಗೆ ನಮೂದಿಸಿದೆ.

	ದಾವೆಗಳು	ದಸ್ತಗಿರಿ ಆದವರ ಸಂಖ್ಯೆ
1990-91	1,135	420
1991-92	844	310

ಈ) ಹೌದು.

ANNEXURE-1

1. Mangalore Taluk

a) Adam Kudru

b) Thokotlu

c) Talapady

d) Ullal (Hoige Uliya)

e) Gathe Kudru

f) Permannur

g) Nermarga

h) Gurupura

h) Maskada

j) Kavoor

k) Baikam + Baikampady

l) Permude

m) Somaitha uliya.

n) Balaunje

o) Adyar

p) Pavoor

1) Kuloor

2. Udupi Taluk

a) Shivalli

b) Mudubetlu

c) Palimar

d) Hejmady

3. Kundapur Taluk

a) Shirr + Shirror

4. Karkala Taluk

a) Harbetly

b) Mundanur

c) Palludka

5. Belthangady Taluk

a) Machina

b) Nittere

c) Nediya

d) Shishila

e) Kokhoda

f) Mithabegelu

6. Bantwal Taluk

a) Chlln

b) Padau

c) Uli

d) Panjekallur

e) Pajir

7. Puttur Taluk

a) Kathapadi

b) Noorji

8. Sullia Taluk

a) Abelphy

b) Mondakur

Years	No.of Vehicles Seized		R.S.	Molasses	IML	ID
1990-91	**Autoricksha**	**-7**	**43,400**	-	**17454**	**110641**
	cycles	-16				
	Tempo	-1				
	Cars	-6				
	Truck	-1				
	Tankers	-11				
		42				
1991-92	Cycles	-2	13,245	8647	14100	16205
	Motor Cycles	-1				
	Scotter	-1				
	Autoricksha	-1				
	Car	-2				
	Van	-1				
	Lorry	-2				
	Tanker	-5				
		15				

ದ. ಕನ್ನಡದಲ್ಲಿ ವಾಹನ ಅಪಘಾತಗಳು.

1037 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1990-91 ಹಾಗೂ 1991-92ರಲ್ಲಿ ಆಗಿರುವ ವಾಹನ ಅಪಘಾತಗಳೆಷ್ಟು?

ಆ) ಈ ಅವಧಿಯ ಅಪಘಾತಗಳಲ್ಲಿ ಹೋದ ಜೀವಗಳೆಷ್ಟು ಹಾಗೂ ಗಾಯಗೊಂಡವರೆಷ್ಟು? (ವಿವರ ಒದಗಿಸುವದು):

ಇ) ಈ ಅಪಘಾತಗಳನ್ನು ತಪ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು);

ಅ) ಈ ಮಾಹಿತಿ ಕೆಳಗಿನಂತಿದೆ.

ವರ್ಷ	ಅಪಘಾತಗಳ ಸಂಖ್ಯೆ
1990	1228
1991	1245
1992 (ನವೆಂಬರ್ 30ರವರೆಗೆ)	1369

ಆ)

ವರ್ಷ	ಮೃತಪಟ್ಟವರು	ಗಾಯಗೊಂಡವರು
1990	241	2037
1991	265	2003
1992 (30ನೇ ನವೆಂಬರ್ ಕೊನೆಯವರೆಗೆ)	287	2278

ಇ) ಈ ಅಪಘಾತಗಳನ್ನು ತಪ್ಪಿಸಲು ಸರ್ಕಾರ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ:

1. ವಾಹನ ಅಪಘಾತಗಳು ಸಂಭವಿಸಬಹುದಾದಂತಹ ಸ್ಥಳಗಳನ್ನು ಗುರ್ತಿಸಿ ಆ ಸ್ಥಳಗಳಲ್ಲಿ ಎಚ್ಚರಿಕೆ ಸಿಗ್ನಲ್‌ಗಳನ್ನು ಹಾಕಲಾಗಿದೆ. ರಸ್ತೆ ತಡೆ ಉಬ್ಬುಗಳನ್ನು ಹಾಕಲಾಗಿದೆ.
2. ಅಪಘಾತಗಳನ್ನು ಕಡಿಮೆ ಮಾಡಲು ಅತಿ ವೇಗದಿಂದ ಓಡುವ ವಾಹನಗಳು ಮತ್ತು ಮಿತಿಮೀರಿ ಲೋಡ್ ಆಗಿರುವ ವಾಹನಗಳನ್ನು ಗುರ್ತಿಸಿ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗುತ್ತದೆ.
3. ಚಾಲಕರು, ವಿದ್ಯಾರ್ಥಿಗಳು, ಪಾದಚಾರಿಗಳಿಗೆ ಸಂಚಾರ ನಿಯಮಗಳ ಬಗ್ಗೆ ತಿಳುವಳಿಕೆ ಮಾಡಿಕೊಡಲಾಗುತ್ತಿದೆ.
4. ಸಾರ್ವಜನಿಕರಿಗೆ ಸಂಚಾರಿ ನಿಯಮಗಳ ಬಗ್ಗೆ ಚಲನ ಚಿತ್ರ ಮಂದಿರಗಳಲ್ಲಿ ಸ್ಲಿಡ್ಸ್‌ಗಳನ್ನು ಪ್ರದರ್ಶಿಸಲಾಗುತ್ತಿದೆ.

ಸಕಲೇಶಪುರ ಕ್ಷೇತ್ರದ ಜೂನಿಯರ್ ಕಾಲೇಜು ಉಪನ್ಯಾಸಕರುಗಳ ನೇಮಕಾತಿ

990- ಶ್ರೀ ಬಿ.ಆರ್. ಗುರುದೇವ (ಸಕಲೇಶಪುರ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ಕ್ಷೇತ್ರದ ಜೂನಿಯರ್ ಕಾಲೇಜು, ಹೆತ್ತೂರು ಆಲೂರು ಮತ್ತು ರಾಯರಕೊಪ್ಪಲು ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರುಗಳಿಲ್ಲದೆ ವಿದ್ಯಾರ್ಥಿಗಳಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಹಾಸನ ಜಿಲ್ಲೆ ಸರ್ಕಾರಿ ಪದವಿಪೂರ್ವ ಕಾಲೇಜು, ಹೆತ್ತೂರು ಮತ್ತು ರಾಯರಕೊಪ್ಪಲು ಇಲ್ಲಿ ಆಂಗ್ಲ ಭಾಷಾ ಉಪನ್ಯಾಸಕರುಗಳ ಹುದ್ದೆಗಳು ಮಾತ್ರ ಖಾಲಿ ಇವೆ. ಆಲೂರು ಕಾಲೇಜಿನಲ್ಲಿ ಯಾವುದೇ ಹುದ್ದೆ ಖಾಲಿ ಇಲ್ಲ.

ಆ) ಖಾಲಿ ಇರುವ ಉಪನ್ಯಾಸಕರುಗಳ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇರ ನೇಮಕಾತಿ ನಿಯಮಗಳನ್ನು ಹೊರಡಿಸಿದೆ. ಅದರಂತೆ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಇ) ಅಂತಿಮ ಆಯ್ಕೆ ಪಟ್ಟಿ ರಾಜ್ಯಪತ್ರದಲ್ಲಿ ಪ್ರಕಟವಾದನಂತರ ಭರ್ತಿ ಮಾಡಲಾಗುವುದು.

ಕರ್ನಾಟಕದಿಂದ ದೆಹಲಿಗೆ ಭೇಟಿ ನೀಡಿರುವ ಸಚಿವರ ಕುರಿತು.

499 - ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಒಂದು ವರ್ಷದಿಂದೀಚೆಗೆ ಮುಖ್ಯಮಂತ್ರಿಗಳು ಮತ್ತು ಸಚಿವರುಗಳು ದೆಹಲಿಗೆ ಎಷ್ಟು ಸಾರಿ ಭೇಟಿ ನೀಡಿದ್ದಾರೆ ಹಾಗೂ ಇದರಲ್ಲಿ ಅಧಿಕೃತ ಭೇಟಿ ಎಷ್ಟು ಅಥವಾ ಪಕ್ಷದ ಕೆಲಸದ ಮೇಲೆ ಎಷ್ಟು?

ಆ) ಈ ಭೇಟಿಯಿಂದಾಗಿ ರಾಜ್ಯ ಬೊಕ್ಕಸಕ್ಕೆ ಆಗಿರುವ ವೆಚ್ಚವೆಷ್ಟು?

ಇ) ಕಳೆದ ಒಂದು ವರ್ಷದಲ್ಲಿ ಮುಖ್ಯ ಮಂತ್ರಿಗಳು ಎಷ್ಟು ಬಾರಿ ವಿದೇಶಗಳಿಗೆ ಭೇಟಿ ನೀಡಿರುತ್ತಾರೆ?

ಈ) ಇದರಲ್ಲಿ ಅಧಿಕೃತ ಭೇಟಿಯೆಷ್ಟು ಮತ್ತು ಪಕ್ಷದ ಕೆಲಸ ಎಷ್ಟು?

ಉ) ಇದರಿಂದಾಗಿರುವ ವೆಚ್ಚವೆಷ್ಟು. (ತಿಂಗಳುವಾರು ಮಾಹಿತಿ ನೀಡುವುದು):

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) 198 ಭಾರಿ ಎಲ್ಲ ಅಧಿಕೃತ ಭೇಟಿಗಳು.

ಆ) ರೂ. 18,13,288-00.

ಇ) ಒಂದು ಭಾರಿ.

ಈ) ಅಧಿಕೃತ ಭೇಟಿ.

ಉ) ಸುಮಾರು ರೂ. 2,09,000-00 (ರಾಜ್ಯ ಸರ್ಕಾರದ ಪರವಾಗಿ ಸಂಬಂಧಪಟ್ಟ ಎಂಬಸ್ಸಿಯವರು ಭರಿಸಿರುವ ವಸತಿ, ಪ್ರಾಸಂಗಿಕ ವೆಚ್ಚ, ಕ್ಯಾಷ್ ಅಲೋಯನ್ಸ್ ಇತ್ಯಾದಿಗಳನ್ನು ಹೊರತುಪಡಿಸಿ).

Expenditure Incurred During Swearing Ceremony of the Ministry

500-Sri. M. NARAYANA SWAMY (Bethamangala) : Will the Chief Minister be pleased to state

a) Number of times the Ministry expended including appointment of Chief Minister during the last three years?

b) The expenditure incurred for arranging swearing ceremony of the Chief Minister and Ministers (Separate figure) may be furnished?

Sri. M.VEERAPPA MOILY (Chief Minister) :

a) Seven times

1) 30/11/1988
Swearing-in Ceremony of Shri Veerendra Patil, Chief Minister and other Ministers. Rs. 23,432-00

2) 6/12/1989
Expansion of Ministry Rs. 25,600-00

3) 17/10/1990
Swearing-in-Ceremony of Shri S. Bangarappa, Chief Minister. Rs. 24,619-00

4) 20/10/90
Expansion of Ministry Rs. 21,040-00

5) 18/11/90
Expansion of Ministry Rs. 27,290-00

6) 27/7/91
Expansion of Ministry Rs. 22,564-00

7) 20/11/1992
Swearin-in Ceremony of Shri Veerappa Moily, Chief Minister and other Ministers. and other Ministers Rs. 33,556-00

ಕನ್ನಡ ಅಭಿವೃದ್ಧಿ ಪ್ರಾಧಿಕಾರ.

501 - ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಎಂದಿನಿಂದ ಪ್ರಾರಂಭವಾಗಿದೆ?

ಆ) ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕಾಗಿ ಇದುವರೆವಿಗೂ ಸಿಬ್ಬಂದಿ ವೇತನ, ಪ್ರವಾಸಭತ್ಯೆ, ದಿನಭತ್ಯೆ, ದೂರವಾಣಿ, ಪೆಟ್ರೋಲ್, ಇತರೆ ವೆಚ್ಚ ಎಷ್ಟು?

ಇ) ಪ್ರಾಧಿಕಾರಕ್ಕೆ ಹೆಚ್ಚಿನ ಅಧಿಕಾರ ನೀಡುವ ಉದ್ದೇಶವಿದೆಯೇ?

ಈ) ಕನ್ನಡ ಅಭಿವೃದ್ಧಿ ಪ್ರಾಧಿಕಾರವು ರೂಪಿಸಿಕೊಂಡಿರುವ ಕಾರ್ಯ ವಿಧಾನಗಳೇನು?

ಉ) 1992-93ನೇ ಸಾಲಿನಲ್ಲಿ ಪ್ರಾಧಿಕಾರವು ಖರ್ಚು ಮಾಡಲು ಉದ್ದೇಶಿಸಿರುವ ಮೊತ್ತವೆಷ್ಟು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ದಿನಾಂಕ 6.2.1992 ರಿಂದ

ಆ) ರೂ. 2,32,598-00

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಅನುಬಂಧದಲ್ಲಿ ಕೊಟ್ಟಿದೆ.

ಉ) ಸದ್ಯಕ್ಕೆ ರೂ. 11.13 ಲಕ್ಷಗಳು.

ಅನುಬಂಧ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪ್ರಕಾರ್ಯಗಳು, ಕಾರ್ಯವಿಧಾನಗಳು

1. ಪ್ರಾಧಿಕಾರದ ಪ್ರಕಾರ್ಯಗಳು:

ಎ) ಸರ್ಕಾರದ ಆಡಳಿತ ಭಾಷಾ ನೀತಿಯ ಅನುಷ್ಠಾನದ ಬಗ್ಗೆ ಬೇರೆ ಬೇರೆ ಇಲಾಖೆಗಳು ಸಾರ್ವಜನಿಕ ಉದ್ದಿಮೆಗಳು, ಎಲ್ಲ ಸಂಸ್ಥೆಗಳು ಮತ್ತು ಸ್ಥಳೀಯ ನಿಕಾಯಗಳು ಮತ್ತು ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಸಂಸ್ಥೆಗಳು ಕೈಗೊಂಡಿರುವ ಕ್ರಮಗಳ ಪರಿಶೀಲನೆ ಮಾಡುವುದು?

ಬಿ) ಸರ್ಕಾರ ಅಂಗೀಕರಿಸಿರುವ ಡಾ. ಸರೋಜಿನಿ ಮಹಿಷಿ ವರದಿಯ ಶಿಫಾರಸುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಅಗತ್ಯವಾದ ಕ್ರಮ ಕೈಗೊಳ್ಳುವುದು.

ಸಿ) ಕನ್ನಡವನ್ನು ಆಡಳಿತೇ ಭಾಷೆಯನ್ನಾಗಿ ಜಾರಿಗೆ ತರುವಲ್ಲಿ ಇರುವ ಅಡಚಣೆಗಳನ್ನು ಗುರುತಿಸಿ ಅವುಗಳ ನಿವಾರಣೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು.

ಡಿ) ಕನ್ನಡ ಪರೀಕ್ಷೆಗಳ (ಸೇವಾ ಪರೀಕ್ಷೆ) ಪದ್ಧತಿಯನ್ನು, ಕನ್ನಡ ಜ್ಞಾನವನ್ನು ತಿಳಿಯಲು ನಡೆಸಲಾಗುವ ಪರೀಕ್ಷೆಗಳನ್ನು ಈಗಿರುವ ಅಥವಾ ಮುಂದೆ ರೂಪಿಸಬಹುದಾದ ಸಂಬಂಧಪಟ್ಟ ಪಠ್ಯಕ್ರಮಗಳ ಸಹಿತವಾಗಿ ಕಾಲಕಾಲಕ್ಕೆ ಪರಿಶೀಲಿಸುವದು ಮತ್ತು ಅಗತ್ಯವೆನಿಸಿದರೆ ಇದನ್ನು ಪರಿಷ್ಕರಿಸಲು, ಮಾರ್ಪಡಿಸಲು ಅಥವಾ ನವೀಕರಿಸಲು ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು, ಕನ್ನಡ ಬೆರಳಚ್ಚು ಯಂತ್ರಗಳ ತಯಾರಿಕೆ, ಖರೀದಿ ಮತ್ತು ವಿತರಣೆ ಬಗ್ಗೆ ಕಛೇರಿ ಆಧುನೀಕರಣದಲ್ಲಿ ಬಳಸಲಾಗುವ ಕಂಪ್ಯೂಟರ್, ಟೆಲಿಪ್ರಿಂಟರ್ಸ್, ಟೆಲೆಕ್ಸ್ ಇತ್ಯಾದಿ ಆಧುನಿಕ ಉಪಕರಣಗಳಲ್ಲಿ ಕನ್ನಡವನ್ನು ಬಳಸುವ ಬಗ್ಗೆ ಅಧ್ಯಯನ ಹಾಗೂ ಸಮಾಲೋಚನೆ ನಡೆಸುವುದು, ಮತ್ತು ಈ ಸಂಬಂಧದಲ್ಲಿ ಕನ್ನಡವನ್ನೇ ಸಂಪೂರ್ಣವಾಗಿ ಬಳಸುವುದಕ್ಕೆ ಪ್ರೇರಕವಾಗಬಹುದಾದ ನಿರ್ಣಯಗಳನ್ನು ಕೈಗೊಂಡು ಅದನ್ನು ಕಾರ್ಯಗತಗೊಳಿಸುವುದು.

ಇ) ಅಧಿಕಾರಿಗಳಿಗೆ, ನೌಕರರಿಗೆ ಕನ್ನಡ ಬಳಕೆಗೆ ಅನುಕೂಲವಾದ ತರಬೇತಿ ಕಾರ್ಯಕ್ರಮ, ಶಿಬಿರ, ಪ್ರದರ್ಶನ ಮತ್ತು ವಿಚಾರ ಸಂಕಿರ್ಣಗಳನ್ನು ಏರ್ಪಡಿಸುವುದು ಮತ್ತು ಕನ್ನಡೇತರರಿಗೆ ಕನ್ನಡ ಕಲಿಕೆ ಕಾರ್ಯಕ್ರಮಗಳನ್ನು ಮತ್ತು ಆ ಸಂಬಂಧ ಪಠ್ಯಕ್ರಮ, ಸಾಹಿತ್ಯ ಸಿದ್ಧಪಡಿಸುವುದು.

ಎಫ್) ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದ ಉಪಯುಕ್ತ ಪ್ರಕಟಣೆಗಳನ್ನು ಪ್ರಕಟಿಸುವುದು. ಖರೀದಿಸುವುದು ಮತ್ತು ವಿತರಿಸುವುದು.

ಜಿ) ಕಛೇರಿಗಳಲ್ಲಿ ಬಳಸಲಾಗುವ ಎಲ್ಲಾ ನಮೂನೆಗಳು ಕನ್ನಡದಲ್ಲಿ ಮುದ್ರಣವಾಗುವಂತೆ ನೋಡಿಕೊಳ್ಳುವುದು ಹಾಗೂ ಕನ್ನಡೇತರ ಭಾಷೆಗಳಲ್ಲಿ ಇರಲೇಬೇಕಾದ ನಮೂನೆ, ಪ್ರಕಟಣೆ ಮತ್ತು ರಿಜಿಸ್ಟರುಗಳನ್ನು ಪರಿಶೀಲಿಸಿ, ಮುದ್ರಣಕ್ಕೆ ಅನುಮತಿ ನೀಡುವುದು.

ಎಚ್) ರಾಜ್ಯದಲ್ಲಿ ಹೆಚ್ಚು ಜನಸಂಪರ್ಕ ಹೊಂದಿರುವ ಕೇಂದ್ರ ಸರ್ಕಾರದ ಕಛೇರಿಗಳು, ಬ್ಯಾಂಕುಗಳು, ಅಂಚೆಕಛೇರಿಗಳು ಮತ್ತು ಮತ್ತಿತರ ಕಚೇರಿಗಳು, ಉದ್ದಿಮೆಗಳಲ್ಲಿ ದೈನಂದಿನ ಬಳಕೆಯಲ್ಲಿರುವ ನಮೂನೆ, ನೋಟೀಸು ನಾಮಫಲಕಗಳಲ್ಲಿ ಕೇಂದ್ರ ಸರ್ಕಾರದ ಭಾಷಾ ನೀತಿಗೆ ಅನುಗುಣವಾಗಿ ಪ್ರಾದೇಶಿಕ ಭಾಷೆಯನ್ನು ಬಳಸಲಾಗುತ್ತಿದೆಯೋ ಎಂಬುದನ್ನು ಪರಿಶೀಲಿಸುವುದು ಮತ್ತು ಈ ಸಂಬಂಧ ಅಂಥ ಕಛೇರಿಗಳೊಂದಿಗೆ ಪತ್ರವ್ಯವಹಾರ ಕೈಗೊಳ್ಳುವುದು.

ಐ) ಆಡಳಿತ ಪೂರಕ ಸಾಹಿತ್ಯ ರಚನೆ, ಪರಿಷ್ಕರಣೆ, ಮುದ್ರಣ ಮತ್ತು ವಿತರಣೆ ವಿಷಯಗಳಲ್ಲಿ ತೀರ್ಮಾನ ಕೈಗೊಳ್ಳುವುದು ಮತ್ತು ಈ ಕ್ಷೇತ್ರದಲ್ಲಿನ ಪ್ರಗತಿಯನ್ನು ಆಗಿಂದಾಗ್ಗೆ ಸಮೀಕ್ಷಿಸಿ ಸೂಕ್ತ ಕ್ರಮ ಸೂಚಿಸುವುದು.

2. ತಜ್ಞರ ಸೇವೆಗಳನ್ನು ಪಡೆದುಕೊಳ್ಳುವುದು

ಪ್ರಾಧಿಕಾರದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ ಪ್ರಾಧಿಕಾರವು ಅವಶ್ಯವಾದರೆ, ತಾನು ಸೂಕ್ತವೆಂದು ಭಾವಿಸಲಬಹುದಾದಂಥ ವಿಧಾನದಲ್ಲಿ ತಜ್ಞರ ಸೇವೆಗಳನ್ನು ಅಥವಾ ನೆರವನ್ನು ಪಡೆದುಕೊಳ್ಳಬಹುದು.

3. ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಸಿದ್ಧಪಡಿಸುವುದು.

ಪ್ರಾಧಿಕಾರವು ಪ್ರತಿವರ್ಷವೂ ಕನ್ನಡ ಅಭಿವೃದ್ಧಿಗಾಗಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಸಿದ್ಧಪಡಿಸಿ ಅದನ್ನು ರಾಜ್ಯ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸಬೇಕು. ರಾಜ್ಯ ಸರ್ಕಾರವು ಯೋಜನೆಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ಮಾರ್ಪಾಟುಗಳನ್ನು ಮಾಡಿ ಅಥವಾ ಮಾರ್ಪಾಟಿಲ್ಲದೆ ಅನುಮೋದಿಸಬಹುದು.

4. ಮಾಹಿತಿ ಪಡೆದುಕೊಳ್ಳುವುದು.

ಪ್ರಾಧಿಕಾರವು, ಈ ಆದೇಶದ ಉದ್ದೇಶಗಳಿಗಾಗಿ, ರಾಜ್ಯ ಸರ್ಕಾರದ ಯಾವ ಅಧಿಕಾರಿಯಿಂದಾದರೂ ಮಾಹಿತಿಯನ್ನು ಕೋರಬಹುದು ಮತ್ತು ಪಡೆದುಕೊಳ್ಳಬಹುದು. ಅಂಥ ಅಧಿಕಾರಿಯು ಪ್ರಾಧಿಕಾರವು ಕೋರಬಹುದಾದ ಮಾಹಿತಿಯನ್ನು ತಪ್ಪದೆ ಒದಗಿಸಬೇಕು.

5. ಪ್ರಾಧಿಕಾರದ ನಿರ್ದೇಶನಗಳು :

ಪ್ರಾಧಿಕಾರವು, ಈ ಆದೇಶದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ ತನ್ನ ಯೋಜನೆಯನ್ನು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಇಲಾಖೆಗಳಿಗೆ ನೀಡಬಹುದಾದ ನಿರ್ದೇಶನಗಳನ್ನು ಇಲಾಖೆಗಳು ಪಾಲಿಸಬೇಕು. (ಆದೇಶ ಸಂಖ್ಯೆ ಡಿಪಿಎಆರ್ 183 ಕೆಒಎಲ್ 92, ದಿನಾಂಕ 11ನೇ ನವೆಂಬರ್ 1992ರ ಪ್ರಕಾರ).

ಅಬಕಾರಿ ಗುಪ್ತ ದಳ ನಡೆಸಿದ ದಾಳಿ.

502 - ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ): ಮಾನ್ಯ ಮುಖ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಬಕಾರಿ ಗುಪ್ತ ದಳಗಳಿಂದ ಕಳೆದ ಒಂದು ವರ್ಷದಲ್ಲಿ, ನಡೆಸಿದ ದಾಳಿಗಳೆಷ್ಟು?

ಆ) ಇದರಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ನಡೆದ ದಾಳಿಗಳೆಷ್ಟು? (ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳ ಪ್ರತ್ಯೇಕ ಮಾಹಿತಿ ಕೊಡುವುದು):

ಇ) ಇದರಿಂದಾಗಿ ವಶಪಡಿಸಿಕೊಂಡ ವಾಹನಗಳೆಷ್ಟು; ಹಾಗೂ ಇವುಗಳನ್ನು ವಿಲೇವಾರಿ ಮಾಡುವ ಪದ್ಧತಿಯೇನು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) 35,804.

ಆ) ಬೆಂಗಳೂರು ನಗರ 4,761

ಬೆಂಗಳೂರು (ಗ್ರಾಂ) 391

ಇ) ವಶಪಡಿಸಿಕೊಂಡ ವಾಹನಗಳು 306

ವಶಪಡಿಸಿಕೊಂಡ ವಾಹನಗಳನ್ನು ಅಬಕಾರಿ ಕಾಯಿದೆ 43 (ಎ) ಪ್ರಕಾರ ಮುಟ್ಟುಗೋಲು ಹಾಕಿಕೊಂಡು ಕಾನೂನು ಪ್ರಕಾರ ಹರಾಜು ಮುಖಾಂತರ ವಿಲೇಮಾಡಲಾಗುತ್ತಿದೆ.

ರಾಜ್ಯದಾದ್ಯಂತ ನರ್ಸಿಂಗ್ ಶಾಲೆಗಳನ್ನು ಆರಂಭಿಸುವ ಬಗ್ಗೆ.

537 - ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1991-92ರ ಸಾಲಿನಲ್ಲಿ ನರ್ಸಿಂಗ್ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಜಿಲ್ಲಾವಾರು ಹೆಸರು ಮತ್ತು ವಿಳಾಸ ಇವುಗಳೊಂದಿಗೆ ವಿವರ ನೀಡುವುದು?

ಇ) ಈ ಹೊಸದಾಗಿ ನರ್ಸಿಂಗ್ ಶಾಲೆಗಳನ್ನು ಆರಂಭಿಸಲು ಕಾರಣವೇನು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಹೌದು.

ಆ)

1) ಕೃಪಾನಿಧಿ ಎಜುಕೇಷನ್ ಟ್ರಸ್ಟ್, ಕೋರಮಂಗಲ, ಬೆಂಗಳೂರು, ಬೆಂಗಳೂರು ಜಿಲ್ಲೆ.
2) ಶ್ರೀ ಆದಿಚುಂಚನಗಿರಿ ಎಜಕೇಷನ್ ಟ್ರಸ್ಟ್ ಚನ್ನರಾಯಪಟ್ಟಣ, ಹಾಸನ, ಹಾಸನ ಜಿಲ್ಲೆ.
3) ಶ್ರೀ ಆದಿಚುಂಚನಗಿರಿ, ಎಜುಕೇಷನ್ ಟ್ರಸ್ಟ್ ಬಾಲಗಂಗಾಧರನಾಥ ನಗರ, ಬೆಳ್ಳೂರು, ಮಂಡ್ಯ ಜಿಲ್ಲೆ.
4) ಹೈದ್ರಾಬಾದ್ ಕರ್ನಾಟಕ ಎಜುಕೇಷನ್ ಸೊಸೈಟಿ. ಗುಲ್ಬರ್ಗಾ, ಗುಲ್ಬರ್ಗಾ ಜಿಲ್ಲೆ
5) ಕೆ.ವಿ.ಜಿ. ಆಸ್ಪತ್ರೆ, ಸುಳ್ಯ, ದಕ್ಷಿಣ ಕನ್ನಡ ಜಿಲ್ಲೆ.

ಇ) ಸರ್ಕಾರದ ವತಿಯಿಂದ ಹೊಸ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡಲು ಕಾರಣವೇನೆಂದರೆ, ಶುಶ್ರೂಷಾ ಮಾನವಶಕ್ತಿಯನ್ನು ಹೆಚ್ಚಿಸಲು ಹಾಗೂ ರಾಜ್ಯದಲ್ಲಿನ ಆಸ್ಪತ್ರೆಗಳಿಗೆ ಅವಶ್ಯಕತೆಗಳನ್ನು ಪೂರೈಸಲು

ಕೊಡಗು ಜಿಲ್ಲೆಯಲ್ಲಿ ಕಳ್ಳ ಸಾಗಾಣಿಕೆ ಮಾಡಿರುವವರ ಸಂಖ್ಯೆ

529 - ಶ್ರೀಮತಿ ಸುಮಾ ವಸಂತ (ವೀರಾಜಪೇಟೆ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ 1990 ರಿಂದ 1992 ನವೆಂಬರ್ ತಿಂಗಳಿನವರೆಗೆ ಕಳ್ಳಸಾಗಾಣಿಕೆ ಮಾಡಿರುವವರ ಸಂಖ್ಯೆ ಎಷ್ಟು?

ಆ) ಎಷ್ಟು ಕೆ.ಜಿ. ಶ್ರೀಗಂಧ ಮರ ವಶಪಡಿಸಿಕೊಳ್ಳಲಾಗಿದೆ.

ಇ) ವಶಪಡಿಸಿಕೊಂಡಿರುವ ಗಂಧದ ಮರದ ಮೊತ್ತವೆಷ್ಟು?

ಈ) ಈ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಸರ್ಕಾರದವವು ಕೈಗೊಂಡ ಕ್ರಮ ಗಳೇನು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ)	1990-91	99 ಪ್ರಕರಣಗಳು.
	1991-92	31 ಪ್ರಕರಣಗಳು
	1992-93	131 ಪ್ರಕರಣಗಳು.
	(ನವೆಂಬರ್ ತಿಂಗಳಿನವರೆಗೆ)	

ಆ)	1990-91	17,484 ಕೆ.ಜಿ.
	1991-92	7,776ಕೆ.ಜಿ.
	1992-93	4,011 ಕೆ.ಜಿ.
	(ನವೆಂಬರ್ ತಿಂಗಳಿನವರೆಗೆ)	

ಇ)	1990-91	14,92,329-99	ರೂ.
	1991-92	4,35,356	ರೂ.
	1992-93	1,81,645-00	ರೂ.
	(ನವೆಂಬರ್ ತಿಂಗಳಿನವರೆಗೆ)		

ಈ) ಈ ಕಳ್ಳ ಸಾಗಾಣಿಕೆ ತಡೆಗಟ್ಟಲು ಸರ್ಕಾರದ ವತಿಯಿಂದ ಅನೇಕ ಯೋಜನೆಗಳನ್ನು ರೂಢಿಸಿಕೊಳ್ಳಲಾಗಿದೆ. ಅರಣ್ಯ ಸಿಬ್ಬಂದಿಗಳಿಗೆ ಅರಣ್ಯ ರಕ್ಷಣೆಗಾಗಿ ಬಂದೂಕು, ನಿಸ್ತಂತು, ವಾಕಿ, ಟಾಕಿ ಮುಂತಾದ ಸಲಕರಣೆಗಳನ್ನು ಒದಗಿಸಿ, ಅರಣ್ಯ ಪ್ರದೇಶಗಳಲ್ಲಿ ಕ್ರಮವಾಗಿ ರಾತ್ರಿ ಹಗಲು ಗಸ್ತು ತಿರುಗುವಂತೆ ಏರ್ಪಾಡು ಮಾಡಲಾಗಿದೆ. ಹೆದ್ದಾರಿಗಳಲ್ಲಿ ಅಲ್ಲಲ್ಲಿ ತನಿಖಾ ಠಾಣೆಗಳನ್ನು ನಿರ್ಮಿಸಿ ಹಾದುಹೋಗುವ ಪ್ರತಿಯೊಂದು ವಾಹನಗಳನ್ನು ಕಡ್ಡಾಯವಾಗಿ ಪರಿಶೀಲಿಸಿ ಬಿಡುವಂತೆ ಸೂಚಿಸಲಾಗಿದೆ. ಅವರಿಗೆ ಹೆಚ್ಚಿನ ದಂಡವನ್ನು ವಿಧಿಸಲಾಗಿದೆ. ಕೆಲವು ಪ್ರಕರಣಗಳನ್ನು ನ್ಯಾಯಾಲಯದಲ್ಲಿ ಮೊಕದ್ದಮೆ ಮಾಡಲಾಗಿದೆ. ಅಲ್ಲದೆ ಕಳ್ಳ ಸಾಗಾಣಿಕೆಯನ್ನು ಪತ್ತೆ ಹಚ್ಚಲು ಯಶಸ್ವಿಯಾದ ಅರಣ್ಯ ಸಿಬ್ಬಂದಿಗಳಿಗೆ ಹಾಗೂ ಸಾರ್ವಜನಿಕರಿಗೆ ಪ್ರೋತ್ಸಾಹ ಧನವನ್ನು ನೀಡಿ ಅವರನ್ನು ಉತ್ತೇಜಿಸಲಾಗಿದೆ.

ಕಳ್ಳಂಬಳ್ಳ ಕೆರೆಯ ದುರಸ್ತಿ.

558 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬಳ್ಳ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಶಿರಾ ತಾಲ್ಲೂಕ್‌ನ ಕಳ್ಳಂಬೆಳ್ಳಕೆರೆ ಏರಿಯು ಅಪಾಯದ ಅಂಚಿನಲ್ಲಿದ್ದು ಶಾಶ್ವತ ದುರಸ್ಥಿಗಾಗಿ ಇಲಾಖೆಯವರು ಅಂದಾಜು ಪಟ್ಟಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಿದ್ದು, ಅಂತಿಮ ಮಂಜೂರಾತಿ ಆಗದೆ ಇರುವುದು ನಿಜವೇ?

ಆ) ಹಾಗಿದ್ದಲ್ಲಿ ಅದರ ಅಂದಾಜಿನ ಮೊತ್ತವೆಷ್ಟು ಮತ್ತು ಮಂಜೂರಾತಿಗಾಗಿ ಸರ್ಕಾರದವರು ಕೈಗೊಂಡ ಕ್ರಮವೇನು?

ಇ) ಸಾವಿರಾರು ಕೃಷಿ ಕುಟುಂಬದ ಅಳಿವು-ಉಳಿವಿನ ಪ್ರಶ್ನೆಯಾಗಿರುವುದರಿಂದ ಸರ್ಕಾರದವರು ಅತಿ ಶೀಘ್ರವಾಗಿ ಮಂಜೂರಾತಿ ನೀಡುವರೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) ಅಂದಾಜು ಸರ್ಕಾರಕ್ಕೆ ಬಂದಿರುವುದಿಲ್ಲವಾದ್ದರಿಂದ ಮಂಜೂರಾತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಮೇಲಿನ ಉತ್ತರದಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಅಂದಾಜು ಸರ್ಕಾರಕ್ಕೆ ಬಂದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು.

ಸಾರ್ವಜನಿಕ ಉದ್ದಿಮೆಗಳು ಅನುಭವಿಸುತ್ತಿರುವ ನಷ್ಟ

562 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬಳ್ಳ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದವರ ಸ್ವಾಮ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಯ ಸಂಸ್ಥೆಗಳು ವಿಪರೀತವಾಗಿ ನಷ್ಟವನ್ನು ಅನುಭವಿಸುತ್ತಿದ್ದು, ಮೂಲ ಬಂಡವಾಳವನ್ನು ಮುಗಿಸುವ ಸ್ಥಿತಿಗೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅನಗತ್ಯವಾಗಿ ಮತ್ತು ಸತತವಾಗಿ ನಷ್ಟ ಅನುಭವಿಸುತ್ತಿರುವ ರೋಗಗ್ರಸ್ತ ಸಂಸ್ಥೆಗಳನ್ನು ಪುನಶ್ಚೇತಗೊಳಿಸಲು ಸರ್ಕಾರದವರ ಕಾರ್ಯಕ್ರಮವೇನು?

ಇ) ಯಾವುದಾದರೂ ಸಂಸ್ಥೆಗಳನ್ನು ಮುಚ್ಚಲು ಅಥವಾ ಹಸ್ತಾಂತರಿಸಲು ಸರ್ಕಾರದವರ ಯೋಚನೆಯಲ್ಲಿದೆಯೇ?

ಈ) ಹಾಗಿದ್ದಲ್ಲಿ ಆ ಸಂಸ್ಥೆಗಳಾವುವು?

ಶ್ರೀಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಸರ್ಕಾರದ ಸ್ವಾಮ್ಯದಲ್ಲಿರುವ ಕೆಲವು ಉದ್ದಿಮೆಗಳು ನಷ್ಟವನ್ನು ಅನುಭವಿಸುತ್ತಿದ್ದು ಮೂಲ ಬಂಡವಾಳವನ್ನು ಮುಗಿಸುವ ಸ್ಥಿತಿಗೆ ತಲುಪಿರುವುದು ನಿಜ.

ಆ) ರೋಗಗ್ರಸ್ಥ ಉದ್ದಿಮೆಗಳು ಸೇರಿದಂತೆ ರಾಜ್ಯ ಸರ್ಕಾರದ ಎಲ್ಲಾ ಸಾರ್ವಜನಿಕ ಉದ್ದಿಮೆಗಳ ಕಾರ್ಯ ನಿರ್ವಹಣೆಯನ್ನು ಸಚಿವ ಸಂಪುಟದ ಉಪ ಸಮಿತಿಯು ಪರಿಶೀಲಿಸಿ ಶಿಫಾರಸ್ಸು ನೀಡಿದೆ. ಇದರಂತೆ ಉದ್ದಿಮೆಗಳ ಮುಚ್ಚುವಿಕೆ, ಹಸ್ತಾಂತರಿಸುವಿಕೆ ಮತ್ತು ವಿಲೀನಿಕರಿಸುವಿಕೆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ನಾಲ್ಕು ಉದ್ದಿಮೆಗಳನ್ನು ಮುಚ್ಚಲು ಮತ್ತು ಎರಡು ಉದ್ದಿಮೆಗಳನ್ನು ಹಸ್ತಾಂತರಿಸಲು ತೀರ್ಮಾನಿಸಿದೆ.

ಈ) ಮುಚ್ಚಲು ತೀರ್ಮಾನಿಸಿದವು,

1) ಕಿಂಪ್ಕೋ

2) ಮೈಸೂರು ಕ್ರೋಮ್‌ಟ್ಯಾನಿಂಗ್ ಕಂಪನಿ

3) ಕರ್ನಾಟಕ ರಾಜ್ಯ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮ

4) ಕರ್ನಾಟಕ ಪಲ್ಪ್‌ವುಡ್ ಲಿಮಿಟೆಡ್

ಹಸ್ತಾಂತರಿಸಲು ತೀರ್ಮಾನಿಸಿರುವ ಉದ್ದಿಮೆಗಳು

1) ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ ಲಿ.

2) ಮಹದೇವ ಟೆಕ್ಸ್‌ಟೈಲ್ ಲಿಮಿಟೆಡ್

ಇರಿಗೇಷನ್ ಟ್ರಾಕ್ಟ್ ರಸ್ತೆಗಳು.

606 - ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀ ರಂಗಪಟ್ಟಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಇರಿಗೇಷನ್ ಟ್ರಾಕ್ಟ್ ರಸ್ತೆಗಳನ್ನು ನೀರಾವರಿ ಇಲಾಖೆಗೆ ಯಾವಾಗ ಹಸ್ತಾಂತರಿಸಲಾಗುವುದು ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಕರ್ನಾಟಕ ಜಿಲ್ಲಾ, ಪರಿಷತ್, ತಾಲ್ಲೂಕು ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯಿತಿಗಳ ಮತ್ತು ನ್ಯಾಯ ಪಂಚಾಯತಿಗಳ ಅಧಿನಿಯಮ 1983ರನ್ವಯ ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ವಹಿಸಿರುವಂತಹ ಇರಿಗೇಷನ್ ಟ್ರಾಕ್ಟ್ ರಸ್ತೆಗಳನ್ನು ನೀರಾವರಿ ಇಲಾಖೆಗೆ ಹಸ್ತಾಂತರಿಸುವ ಪ್ರಸ್ತಾವೆ ಸರ್ಕಾರದಲ್ಲಿರುವುದಿಲ್ಲ.

ನೆಲಮಂಗಲ ಟೌನ್ ಪೋಲೀಸ್ ಠಾಣೆಯಲ್ಲಿ ಸಿಬ್ಬಂದಿ ಕೊರತೆ

695 - ಶ್ರೀ ಅಂಜನಮೂರ್ತಿ (ನೆಲಮಂಗಲ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ಟೌನ್ ಪೋಲೀಸ್ ಠಾಣೆಯಲ್ಲಿ ಸಿಬ್ಬಂದಿ ವರ್ಗದವರು ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹೆಚ್ಚುವರಿ ಪೋಲೀಸ್ ಸಿಬ್ಬಂದಿಯನ್ನು ನೇಮಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು ?

ಶ್ರೀ ಎಂ.ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಹೌದು.

ಆ) 392 ಕಡಿಮೆ ಸಿಬ್ಬಂದಿ ಇರುವ ಪೋಲೀಸ್ ಠಾಣೆಗಳ ಸಿಬ್ಬಂದಿ ಬಲವನ್ನು ಹಂತ ಹಂತವಾಗಿ ಮೂರು ವರ್ಷಗಳಲ್ಲಿ ಹೆಚ್ಚಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ. ಅದರಂತೆ ನೆಲಮಂಗಲ ಟೌನ್ ಪೋಲೀಸ್ ಠಾಣೆಗೆ ಅಧಿಕ ಸಿಬ್ಬಂದಿ ಬಲವನ್ನು 1994-95ನೇ ಸಾಲಿನಲ್ಲಿ ಒದಗಿಸಲಾಗುವುದು.

ನೆಲಮಂಗಲ ಕ್ಷೇತ್ರಕ್ಕೆ ಸೇರಿದ ಶನಿಮಹಾತ್ಮ ಸ್ವಾಮಿ ದೇವಾಲಯವನ್ನು ಪ್ರವಾಸಿಗರ ಕೇಂದ್ರವನ್ನಾಗಿ ಮಾಡುವುದು.

697- ಶ್ರೀ ಅಂಜನಮೂರ್ತಿ (ನೆಲಮಂಗಲ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ನೆಲಮಂಗಲ ಕ್ಷೇತ್ರಕ್ಕೆ ಸೇರಿದ ದೊಡ್ಡ ಬಳ್ಳಾಪುರ ತಾಲ್ಲೂಕು, ಮಧುರೆ ಹೋಬಳಿ, ಕನಸವಾಡಿ ಹತ್ತಿರ ಶ್ರೀ ಶನಿಮಹಾತ್ಮ ಸ್ವಾಮಿ ದೇವಾಲಯವನ್ನು ಪ್ರವಾಸಿಗವ ಕೇಂದ್ರವನ್ನಾಗಿ ಮಾಡಬೇಕೆಂದು ಸರ್ಕಾರಕ್ಕೆ ಮನವಿಗಳು ಒದಗಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ಆ ಸ್ಥಳವನ್ನು ಪ್ರವಾಸಿಕೇಂದ್ರವನ್ನಾಗಿ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು):

ಅ) . ಹೌದು.

ಆ) ಕನಸವಾಡಿಯನ್ನು ಪ್ರೇಕ್ಷಣೀಯ ಸ್ಥಳವೆಂದು ಗುರುತಿಸಲಾಗಿದೆ. ಈ ಸ್ಥಳವನ್ನು ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ "ಸಿ" ಗುಂಪಿನಲ್ಲಿ ಸೇರಿಸಲಾಗಿದೆ.

ನೆಲಮಂಗಲ ಕ್ಷೇತ್ರದ ಗ್ರಾಮಗಳಿಗೆ ಪಶುಚಿಕಿತ್ಸಾಲಯ ಮಂಜೂರಾತಿ

698 - ಶ್ರೀ ಅಂಜನಮೂರ್ತಿ (ನೆಲಮಂಗಲ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ನೆಲಮಂಗಲ ಕ್ಷೇತ್ರದ ಕಸಬಾ ಹೋಬಳಿ ಶ್ರೀನಿವಾಸಪುರ ಮತ್ತು ದೊಡ್ಡ ಬಳ್ಳಾಪುರ ತಾಲ್ಲೂಕು ಮಧುರೆ ಹೋಬಳಿ ಇಸ್ತೂರು ಹಾಗೂ ರಾಮದೇವನಹಳ್ಳಿ ಗ್ರಾಮಗಳಿಗೆ ಪಶು ಚಿಕಿತ್ಸಾಲಯ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ*

ಆ) *ಹಾಗಿದ್ದಲ್ಲಿ ಇದುವರೆಗೂ ಚಿಕಿತ್ಸಾಲಯಗಳನ್ನು ತೆರೆದಿರಲು ಕಾರಣಗಳೇನು? ಹಾಗೂ ತೆರೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) 1990-91ನೇ ಸಾಲಿನಲ್ಲಿ ಇಸ್ತೂರು ಗ್ರಾಮಕ್ಕೆ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸಲು ಮಂಜೂರಾತಿ ನೀಡಿದೆ.

ಉಳಿದ ಗ್ರಾಮಗಳಿಗೆ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಪಶುಪಾಲನಾ ಇಲಾಖೆ ನಿರ್ದೇಶಕರಿಂದ ಪ್ರಸ್ತಾವನೆ ಬಂದಿಲ್ಲದೆ ಇರುವುದರಿಂದ ಮಂಜೂರಾತಿ ನೀಡಿರುವುದಿಲ್ಲ.

1992-93ನೇ ಸಾಲಿನಲ್ಲಿ ಆ ಗ್ರಾಮಗಳಿಗೆ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

ಬೆಂಗಳೂರು ನಗರದಲ್ಲಿರುವ ಪೋಲೀಸ್ ಠಾಣೆಗಳ ಸಂಖ್ಯೆ

268 - ಶ್ರೀ ಪೆರಿಕಲ್ ಮಲ್ಲಪ್ಪ (ಚಿಕ್ಕಪೇಟೆ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಬೆಂಗಳೂರು ನಗರದಲ್ಲಿರುವ ಪೋಲೀಸ್ ಠಾಣೆಗಳು ಪೋಲೀಸ್ ಔಟ್ ಪೋಸ್ಟ್‌ಗಳು ಸೇರಿದಂತೆ, ಇರುವ ಸಂಖ್ಯೆ ಎಷ್ಟು?*

ಆ) *ಈ ಪೋಲೀಸ್ ಠಾಣೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೋಲೀಸ್ ಸಿಬ್ಬಂದಿ ಎಷ್ಟು?*

ಇ) *ಈ ಪೋಲೀಸ್ ಠಾಣೆಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳೆಷ್ಟು?*

ಈ) *ಬೆಂಗಳೂರು ನಗರದಲ್ಲಿ ಹೊಸದಾಗಿ ತೆರೆಯಲು ಉದ್ದೇಶಿಸಿರುವ ಪೋಲೀಸ್ ಠಾಣೆಗಳ ಸಂಖ್ಯೆ ಎಷ್ಟು?*

ಉ) *ಈ ಹೊಸ ಪೋಲೀಸ್ ಠಾಣೆಗಳಿಗೆ ಸಿಬ್ಬಂದಿಯನ್ನು ನೇಮಕ ಮಾಡುವ ಬಗ್ಗೆ ತೆಗೆದುಕೊಳ್ಳುವ ಕ್ರಮಗಳೇನು?*

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ)	ಪೋಲೀಸ್ ಠಾಣೆಗಳು	77
	ಔಟ್ ಪೋಸ್ಟ್‌ಗಳು	5
ಆ)	4898	
ಇ)	ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು	4
	ಸಹಾಯಕ ಸಬ್ ಇನ್ಸ್‌ಪೆಕ್ಟರಗಳು	1
	ಮಹಿಳಾ ಪೇದೆಗಳು	3

ಈ) 3

ಉ) ಹೊಸ ಪೋಲೀಸ್ ಠಾಣೆಗಳಿಗೆ ಮಂಜೂರಾತಿ ನೀಡಿದ ನಂತರ ಪೋಲೀಸ್ ಸಿಬ್ಬಂದಿಯನ್ನು ನೇಮಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಹಿರೇಕೆರೂರು ತಾಲ್ಲೂಕಿನ ಮದಗಮಸೂರು ನೀರಾವರಿ ಕೆರೆಯ ಕಾಲುವೆ ನವೀಕರಣ

668 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರ್): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಹಿರೇಕೆರೂರು ತಾಲ್ಲೂಕಿನ ಮದಗ ಮಾಸೂರು ನೀರಾವರಿ ಕೆರೆಯ ಕಾಲುವೆಯ ನವೀಕರಣ ವಿಸ್ತರಣೆ ಮತ್ತು ಏತ ನೀರಾವರಿ ಯೋಜನೆಯನ್ನು ರಾಷ್ಟ್ರೀಯ ನೀರು ನಿರ್ವಹಣಾ ಯೋಜನೆಯಲ್ಲಿ (ಎನ್.ಡಬ್ಲ್ಯೂ.ಎಂ.ಪಿ) ಕಾರ್ಯಗತ ಮಾಡಲು ರಾಜ್ಯ ಸರ್ಕಾರವು ಕೇಂದ್ರದ ಮಂಜೂರಾತಿಗಾಗಿ ಅಂದಾಜು ಪಟ್ಟಿಯನ್ನು ಕಳುಹಿಸಿದೆಯೇ?

ಆ) ಕೇಂದ್ರ ಸರ್ಕಾರವು ಈ ಯೋಜನೆಗೆ ಮಂಜೂರಾತಿ ನೀಡಿದೆಯೇ? ಹಾಗಿದ್ದಲ್ಲಿ ಈ ಯೋಜನೆಗಾಗಿ ನಿಗಧಿಗೊಳಿಸಿರುವ ಹಣವೆಷ್ಟು?

ಇ) ಈ ಕಾಮಗಾರಿಗಾಗಿ 1992-93ನೇ ಸಾಲಿನಲ್ಲಿ ಒದಗಿಸಲಾದ ಹಣವೆಷ್ಟು ಹಾಗೂ ಖರ್ಚಾದ ಹಣವೆಷ್ಟು ?

ಈ) ಈ ಕಾಮಗಾರಿಯನ್ನು ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಉ) ಈ ಯೋಜನೆಯ ಬಗ್ಗೆ ಈವರೆಗೆ ಕೈಗೊಂಡ ಕ್ರಮಮಗಳೇನು ಹಾಗೂ ಮುಂದೆ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) ಹೌದು.

ಆ) ಈ ಯೋಜನೆಯ ಪೂರ್ವಬಾವಿ ವರದಿಗೆ ಕೇಂದ್ರ ಸರ್ಕಾರವು ಒಪ್ಪಿಗೆ ನೀಡಿದೆ. ಸದರಿ ಯೋಜನೆಗೆ ಕೇಂದ್ರ ಸರ್ಕಾರದ ಮಂಜೂರಾತಿ ದೊರೆತ ನಂತರ ಹಣವನ್ನು ನಿಗದಿಗೊಳಿಸಲಾಗುವುದು.

ಇ) 1992-93ನೇ ಸಾಲಿನಲ್ಲಿ ಈ ಯೋಜನೆಗೆ ಹಣವನ್ನು ಒದಗಿಸಿಲ್ಲ.

ಈ) ಈ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಿದ ನಂತರ ಮೂರು ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸುವ ಉದ್ದೇಶವಿದೆ.

ಉ) ಈ ಯೋಜನೆಯ ವರದಿಗೆ ರಾಜ್ಯ ಮಟ್ಟದ ತಾಂತ್ರಿಕ ಸಮಿತಿಯ ಒಪ್ಪಿಗೆ ದೊರೆತಿದ್ದು ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗುವುದು.

ಕರ್ನಾಟಕ ಮಹಾರಾಷ್ಟ್ರ ಗಡಿ ಸಮಸ್ಯೆ ಕುರಿತು

816 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾರಾಷ್ಟ್ರದ ಸರ್ವಪಕ್ಷಗಳ ನಿಯೋಗವು ಪ್ರಧಾನಮಂತ್ರಿಗಳನ್ನು ಹಾಗೂ ಕೇಂದ್ರಮಂತ್ರಿಗಳನ್ನು ಭೇಟಿ ಮಾಡಿ ಗಡಿಪ್ರದೇಶಗಳಲ್ಲಿ ಅಭಿಪ್ರಾಯ ಸಂಗ್ರಹಣೆ ಮಾಡಬೇಕೆಂದು ಒತ್ತಾಯಪಡಿಸಿರುವುದು ನಿಜವೇ

ಆ) ಹಾಗಿದ್ದಲ್ಲಿ ರಾಜ್ಯ ಸರ್ಕಾರವು ಸರ್ವ ಪಕ್ಷಗಳ ನಿಯೋಗವೊಂದನ್ನು ತೆಗೆದುಕೊಂಡು ಹೋಗಿ ಕರ್ನಾಟಕ-ಮಹಾರಾಷ್ಟ್ರ ಗಡಿ ಸಮಸ್ಯೆಗೆ ಮಹಾಜನ್ ಆಯೋಗದ ವರದಿಯನ್ನು ಜಾರಿಗೊಳಿಸುವ ಬಗ್ಗೆ ಒತ್ತಾಯಿಸಿದೆಯೇ?

ಇ) ಕರ್ನಾಟಕ ಮಹಾರಾಷ್ಟ್ರ ಗಡಿಸಮಸ್ಯೆಗಳಿಗೆ ಮಹಾಜನ್ ಆಯೋಗದ ವರದಿಯನ್ನು ಜಾರಿಗೊಳಿಸಲು ಒತ್ತಾಯಿಸುವ ಬಗ್ಗೆ ರಾಜ್ಯ ಸರ್ಕಾರವು ಬದ್ಧವಾಗಿದೆಯೇ?

ಈ) ಮೇಲ್ಕಂಡ ಸಮಸ್ಯೆಗಳನ್ನು ಪರಿಹರಿಸಲು ರಾಜ್ಯ ಸರ್ಕಾರವು ತೆಗೆದುಕೊಂಡ ಕ್ರಮಗಳು ಏನು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು):

ಅ) ಪತ್ರಿಕೆಗಳಲ್ಲಿ ಬಂದಿರುವ ವರದಿಯ ಪ್ರಕಾರ ಸರ್ವಪಕ್ಷಗಳ ನಿಯೋಗವು ಇತ್ತೀಚೆಗೆ ಪ್ರಧಾನ ಮಂತ್ರಿಗಳನ್ನು ಮಾತ್ರ ಭೇಟಿ ಮಾಡಿದೆ.

ಆ) ದಿನಾಂಕ 11.7.88 ರಂದು ಅಂದಿನ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ರಾಜ್ಯ ಸರ್ಕಾರದ ನಿಯೋಗವು ಅಂದಿನ ಕೇಂದ್ರ ಗೃಹಮಂತ್ರಿಯವರನ್ನು ಭೇಟಿ ಮಾಡಿ ಮಹಾಜನ್ ಆಯೋಗದ ವರದಿಯನ್ನು ಜಾರಿಗೆ ತರಲು ಒತ್ತಾಯಿಸಿದೆ.

ಇ) ಹೌದು.

ಈ) ಸರ್ಕಾರದ ಮಟ್ಟದಲ್ಲಿ ತೆಗೆದುಕೊಂಡ ಕ್ರಮಗಳು ಈ ರೀತಿ ಇವೆ.

1. ದಿ. 20.7.85, 11.9.85 ಮತ್ತು 9.10.85 ರಂದು ಅಂದಿನ ಮುಖ್ಯಮಂತ್ರಿಗಳು ಅಂದಿನ ಪ್ರಧಾನಮಂತ್ರಿಗಳಿಗೆ ಮಹಾಜನ್ ಆಯೋಗದ ವರದಿಯೇ ಅಂತಿಮವೆಂದು ತಿಳಿಸಿ ಪತ್ರ ಬರೆದಿದ್ದಾರೆ.
2. ದಿ. 20.12.67, 28.2.70 ಮತ್ತು 26.12.70ರಲ್ಲಿ ಕರ್ನಾಟಕ ವಿಧಾನ ಸಭೆಯು ಮಹಾಜನ್ ಆಯೋಗದ ವರದಿಯನ್ನು ಕಾರ್ಯಗತಗೊಳಿಸುವಂತೆ ಕೇಂದ್ರ ಸರ್ಕಾರವನ್ನು ಗೊತ್ತುವಳಿಯನ್ನು ಅಂಗೀಕರಿಸಿದೆ.
3. ದಿ. 4.12.86 ರಂದು ರಾಜ್ಯ ಸಂಸತ್ ಸದಸ್ಯರ ನಿಯೋಗವು ಅಂದಿನ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಆಯೋಗದ ವರದಿಗೆ ಸಂಸತ್ತು ಅಂತಿಮ ಅನುಮೋದನೆಯನ್ನು ನೀಡಬೇಕೆಂದು ಅರಿಕೆ ಮಾಡಿದೆ.

ಬೀದರ್ ಜಿಲ್ಲೆಯಲ್ಲಿ ಡೀಸೆಲ್ ಜನರೇಟರ್ ಪ್ರಾರಂಭ

817- ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಬೀದರ್ ಜಿಲ್ಲೆಯಲ್ಲಿ ಡೀಸೆಲ್ ಜನರೇಟರ್ ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಡೀಸೆಲ್ ಜನರೇಟರ್‌ನ್ನು ಬೀದರ್ ಜಿಲ್ಲೆಯಲ್ಲಿ ಸ್ಥಾಪಿಸಲಾಗುವುದೆಂದು ಹಿಂದಿನ ಆಯವ್ಯಯ ಅಧಿವೇಶನದಲ್ಲಿಮುಖ್ಯ ಮಂತ್ರಿಗಳು ಆಶ್ವಾಸನೆ ನೀಡಿರುವುದು ನಿಜವೇ?

ಇ) ಹಾಗಿದ್ದಲ್ಲಿ ಡೀಸೆಲ್ ಜನರೇಟರ್‌ನ್ನು ಪ್ರಾರಂಭಿಸಲು ಸರ್ಕಾರವು ಯಾವಾಗ ಕ್ರಮ ಕೈಗೊಳ್ಳುವುದು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಹೌದು.

ಆ) ಹೌದು.

ಇ) ಈ ಕೆಲಸಕ್ಕೆ ಟೆಂಡರುಗಳನ್ನು ಈಗಾಗಲೇ ಕರೆಯಲಾಗಿದೆ. ಮತ್ತು ಅವುಗಳನ್ನು ಪರಿಶೀಲಿಸಲಾಗುತ್ತಿದೆ. ಕರ್ನಾಟಕ ವಿದ್ಯುತ್ ನಿಗಮದ ನಿರ್ದೇಶಕ ಮಂಡಳಿಯ ಮತ್ತು ಭಾರತ ಸರ್ಕಾರದ ಒಪ್ಪಿಗೆ ದೊರೆತ ನಂತರ ಮಾರ್ಚ್ 1993ರ ವೇಳೆಗೆ ಉಪಕರಣಗಳ ಸರಬರಾಜಿಗೆ ಆದೇಶ ನೀಡಲು ಯೋಚಿಸಲಾಗಿದೆ. ಈಗಿನ ಪರಿಸ್ಥಿತಿಯ ಪ್ರಕಾರ ಈ ಘಟಕವನ್ನು 1994-95ರ ಅವಧಿಯಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ.

ಬಸವಕಲ್ಯಾಣ ತಾಲ್ಲೂಕಿನಲ್ಲಿ ಲೋಕೋಪಯೋಗಿ ರಸ್ತೆಗಳ ದುರಸ್ತಿ

824- ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಹೈದರಾಬಾದ್ ಕರ್ನಾಟಕ ಯೋಜನೆಯಡಿಯಲ್ಲಿ ಬಸವಕಲ್ಯಾಣ ತಾಲ್ಲೂಕಿನಲ್ಲಿ ತೆಗೆದುಕೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು?

ಆ) ಹುಲಸೂರು, ಬಸವಕಲ್ಯಾಣ, ಮುಡುಬಿರಸ್ತೆ, ಮಂದಾಳ್-ಸಲಗಾರ್ ರಸ್ತೆ, ಭಾಲ್ಕಿ- ಬಸವಕಲ್ಯಾಣ ಹಳ್ಳಿಯ ರಸ್ತೆಗಳ ನಿರ್ಮಾಣಕ್ಕಾಗಿ ವೆಚ್ಚವಾದ ಹಣವೆಷ್ಟು?

ಇ) ಈ ಕಾಮಗಾರಿ ಪೂರ್ಣಗೊಳ್ಳದೆ ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಕೈಗೊಂಡ ಕ್ರಮವೇನು? ಈ ಕಾಮಗಾರಿಯನ್ನು ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಬಸವಕಲ್ಯಾಣದಲ್ಲಿ ಬಸವೇಶ್ವರ ಪ್ರತಿಮೆ ಸ್ಥಾಪನೆ.

826- ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಬಸವಕಲ್ಯಾಣದಲ್ಲಿ ಬಸವೇಶ್ವರ ಪ್ರತಿಮೆ ಸ್ಥಾಪಿಸಲು ಉದ್ದೇಶವಿದ್ದು ಈ ಗಾಗಲೇ ಜನರಿಂದ ರೂ. 3.00 ಲಕ್ಷಗಳನ್ನು ಸಂಗ್ರಹಿಸಲಾಗಿದ್ದು, ಇನ್ನು ರೂ. 3.00 ಲಕ್ಷಗಳ ಆವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಪ್ರತಿಯಮೆಯ ಅನಾವರಣಕ್ಕಾಗಿ ಸರ್ಕಾರವು ಯಾವಾಗ ಸಹಾಯ ಧನ ನೀಡುವುದು.

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಇಲ್ಲ,

ಆ) ಉದ್ಭವಿಸುವುದಿಲ್ಲ,

ವಿಶ್ವೇಶ್ವರಯ್ಯ ನಾಲಾ ಆಧುನೀಕರಣದ ಅಂದಾಜು ವೆಚ್ಚ

821 - ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ವಿಶ್ವೇಶ್ವರಯ್ಯ ನಾಲಾ ಆಧುನೀಕರಣಕ್ಕಾಗಿ ಸರ್ಕಾರವು ಕ್ರಮ ಕೈಗೊಂಡಿದೆಯೇ?

ಆ) ಹಾಗಿದ್ದಲ್ಲಿ ಈ ಯೋಜನೆಯ ಅಂದಾಜು ಮೌಲ್ಯವೆಷ್ಟು?

ಇ) ಈವರೆಗೆ ಸದರಿ ಆಧುನೀಕರಣ ಕಾಮಗಾರಿಗೆ ಎಷ್ಟು ವೆಚ್ಚವಾಗಿದೆ.?

ಈ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ವೆಚ್ಚ ಮಾಡಲಾಗಿದೆ.?

ಉ) ಈ ಯೋಜನೆಯು ಈಗ ಯಾವ ಹಂತದಲ್ಲಿದೆ.?

ಊ) ಆಧುನೀಕರಣ ಕಾಮಗಾರಿಗಳು ಪೂರ್ಣವಾದ ಮೇಲೆ, ಈಗ ತೊಂದರೆಗೊಳಗಾಗಿರುವ ಕೆರಗೋಡುನಾಲೆ, ಶಿಂಷನಾಲೆ, ಶಿಂಷಾ ಅಣೆಕಟ್ಟು, ನಾಲಾಪ್ರದೇಶ, ಮದ್ದೂರು ನಾಲೆ ಹಾಗೂ ಕಾವೇರಿ, ಹೆಬ್ಬಕವಾಡಿ ಮತ್ತು ತುರಗನೂರು ನಾಲೆಗಳಡಿಯಲ್ಲಿ ಬರುವ ಅಚ್ಚುಕಟ್ಟಿಗೆ ಸಂಪೂರ್ಣ ಹಾಗೂ ಸಮರ್ಪಕವಾಗಿ ನೀರು ಒದಗುತ್ತದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) ಹೌದು.

ಆ) ಈ ಯೋಜನೆಯ ಈಗಿನ ಅಂದಾಜು 92.000 ಕೋಟಿ ರೂ.ಗಳು

ಇ) 36.73 ಕೋಟಿ ರೂಪಾಯಿಗಳು. (ನವೆಂಬರ್ 92ರ ಅಂತ್ಯದವರೆಗೆ)

ಈ) 1989-90ನೇ ಸಾಲಿನಲ್ಲಿ ರೂ. 3.49 ಕೋಟಿಗಳು.
1990-91ನೇ ಸಾಲಿನಲ್ಲಿ ರೂ. 3.70 ಕೋಟಿಗಳು.
1991-92ನೇ ಸಾಲಿನಲ್ಲಿ ರೂ. 9.38 ಕೋಟಿಗಳು.

ಉ) ವಿ.ಸಿ. ನಾಲೆಯ ಮೊದಲನೇ ಸೆಕ್ಷನ್ ಕಾಮಗಾರಿಗಳು ಮತ್ತು ಸಂಪರ್ಕ ಕಾಲುವೆಯ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿದೆ.

ಊ) ಆಧುನೀಕರಣ ಕಾಮಗಾರಿಗಳು, ಪೂರ್ಣಗೊಂಡ ಮೇಲೆ ಕಾವೇರಿ, ಮದ್ದೂರು, ತುರುಗನೂರು, ನಿಡಘಟ್ಟ, ಹೆಬ್ಬಕವಾಡಿ, ಕೆರಗೋಡು ಪಿಕಪ್ ನಾಲೆಗಳ ಎಲ್ಲಾ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಸರಬರಾಜನ್ನು ಸಮರ್ಪಕವಾಗಿ ಒದಗಿಸಬಹುದಾಗಿದೆ.

ಹೇಮಾವತಿ ಯೋಜನೆ ಎಡದಂಡೆ ನಾಲೆಯ ಕಾಮಗಾರಿ.

822 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ), ಶ್ರೀ ಎನ್. ತಮ್ಮಣ್ಣ (ಕೆರೆಗೋಡ್): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಯೋಜನೆ ಎಡದಂಡೆ ನಾಲೆಯ ಕಾಮಗಾರಿಯ ಅಂದಾಜು ಮೌಲ್ಯ ಎಷ್ಟು?

ಆ) ಎಡದಂಡೆ ನಾಲೆಯಿಂದ ಮಂಡ್ಯ ಜಿಲ್ಲೆಯ ಯಾವ ಯಾವ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ದೊರಕುತ್ತದೆ.

ಇ) ಎಡದಂಡೆ ನಾಲೆಯ ಕಾಮಗಾರಿಯು ಯಾವ ಹಂತದಲ್ಲಿದೆ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಹೇಮಾವತಿ ಯೋಜನೆಯ ಎಡದಂಡೆಯ ನಾಲೆಯ ಕಾಮಗಾರಿಯ ಅಂದಾಜು ಮೌಲ್ಯ 1992-93ನೇ ಸಾಲಿನ ದರಗಳ ಪ್ರಕಾರ 717.500 ಕೋಟಿಗಳು.

ಆ) ಹೇಮಾವತಿ ಯೋಜನೆಯ ಎಡದಂಡೆ ನಾಲೆಯಿಂದ ಮಂಡ್ಯ ಜಿಲ್ಲೆಯಲ್ಲಿ ಕೆ.ಆರ್. ಪೇಟೆ ತಾಲ್ಲೂಕು ಪಾಂಡವಪುರ ತಾಲ್ಲೂಕು, ನಾಗಮಂಗಲ ತಾಲ್ಲೂಕು ಹಾಗೂ ಮಂಡ್ಯ ತಾಲ್ಲೂಕಿನ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತದೆ.

ಇ) ಸದರಿ ನಾಲೆಯಲ್ಲಿ ಸಣ್ಣ ಪುಟ್ಟ ಕಾಮಗಾರಿಗಳ ಹೊರತಾಗಿ ನಾಲೆಯ ಮಣ್ಣಿನ ಅಗೆತವು ಪೂರ್ಣಗೊಂಡಿರುತ್ತದೆ. ಹಾಗೂ ನಾಲೆಗೆ ಲೈನಿಂಗ್ ಅಳವಡಿಸುವ ಕೆಲಸ ಬಾಕಿ ಇರುತ್ತದೆ.

ಮಂಡ್ಯ ತಾಲ್ಲೂಕಿನ ಸ್ಯಾನಿಟೋರಿಯಂನಲ್ಲಿ ಔಷಧಿ ಕೊರತೆ.

823 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ), ಶ್ರೀ ಎನ್. ತಮ್ಮಣ್ಣ (ಕೆರೆಗೋಡ್): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ತಾಲ್ಲೂಕಿನ ಮಹಾತ್ಮ ಗಾಂಧಿ ಸ್ಯಾನಿಟೋರಿಯಂನಲ್ಲಿ ಔಷಧಿಗಳ ಸರಬರಾಜು ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ರೋಗಗಳಿಗೆ ಔಷಧಿ ಪೂರೈಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು):

ಅ) ಸರಬರಾಜು ನಿಂತಿರುವುದಿಲ್ಲ.

ಆ) ಮಹಾತ್ಮಾ ಗಾಂಧಿ ಟಿ.ಬಿ. ಆಸ್ಪತ್ರೆ ಬಿ.ಹೊಸೂರು ಕಾಲೋನಿ ಇಲ್ಲಿಗೆ 1992-93ನೇ ಸಾಲಿನಲ್ಲಿ (ಜಿಲ್ಲಾ ಪರಿಷತ್ತಿನ ಶೇ. 40 ರಷ್ಟು ಅನುದಾನ ಹೊರತು ಪಡಿಸಿ) ಸರ್ಕಾರಿ ಔಷಧಿ ಮಳಿಗೆ, ಬೆಂಗಳೂರು ಇಲ್ಲಿಂದ ಪೂರೈಸಾದ ಔಷಧಿಗಳ ವಿವರ ಕೆಳಕಂಡಂತೆ ಇದೆ.

ನಿಗದಿಪಡಿಸಿದ ಹಣ	ರೂ. 2,94,000-00
ಔಷಧಿಗಳ ಪೂರೈಕೆ	ರೂ. 2,74,272-77

ಕೆಲವು ಕ್ಷಯ ನಿರೋಧಕ ಔಷಧಿಗಳಿಗೆ, ದರಗುತ್ತಿಗೆ ನಿಗಧಿಯಾಗಿರುವುದಿಲ್ಲದೆ ಕಾರಣ ಅಂತಹ ಔಷಧಿಗಳನ್ನು ಸರಬರಾಜು ಮಾಡಿರುವುದಿಲ್ಲ. ದರ ಗುತ್ತಿಗೆಯು ನಿಗಧಿಯಾದ ಕೂಡಲೇ ರೂ. 19,027-23 ಮೌಲ್ಯದ ಔಷಧಿಗಳನ್ನು ಖರೀದಿಸಿ ಸರಬರಾಜು ಮಾಡಲಾಗುವುದು.

ಈ ಆಸ್ಪತ್ರೆಗೆ 60:40ರ ಪ್ರಮಾಣದಲ್ಲಿ ಸರ್ಕಾರಿ ಔಷದಿ ಮಳಿಗೆ, ಬೆಂಗಳೂರು ಮತ್ತು ಜಿಲ್ಲಾ ಪರಿಷತ್ ಮಂಡ್ಯ ಇವುಗಳು ಔಷಧಿಗಳನ್ನು ಸರಬರಾಜು ಮಾಡುತ್ತವೆ. ಶೇ.40 ರಷ್ಟು ಅನುದಾನದ ಹಣದಲ್ಲಿ ಆಸ್ಪತ್ರೆಯ ಅಧೀಕ್ಷಕರು ನೇರವಾಗಿ ಖರೀದಿಸುವರು.

ವಿಶ್ವ ವಿದ್ಯಾಲಯದ ಮಟ್ಟದಲ್ಲಿ ಹೆಚ್ಚು ಅಂಕಪಡೆದ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ನೇರ ನೇಮಕಾತಿ.

831 - ಶ್ರೀ ಕರಿಯಣ್ಣ (ಹೊಳೆ ಹೊನ್ನೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಹೆಚ್ಚಿಗೆ ಅಂಕ ಪಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ 3 ಜನರಿಗೆ ನೇರವಾದ ಹುದ್ದೆಯನ್ನು ಕೊಡಬೇಕೆಂದು ಮಾಡಿದ ಕಾನೂನು ಜಾರಿಗೆ ಬಂದಿರುವುದು ನಿಜವೇ?

ಆ) ಬಂದಿದ್ದಲ್ಲಿ, 2 ನೇ ದರ್ಜೆಯ ಗೆಜೆಟೆಡ್ ಹುದ್ದೆಗಳನ್ನು ಎಷ್ಟು ಜನರಿಗೆ ನೀಡಲಾಗಿದೆ?

ಇ) ಈ ನಿಯಮವು ಜಾರಿಗೆ ಬರದಿರಲು ಕಾರಣವೇನು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿಭಾವಂತ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ವಿಶೇಷ ನೇಮಕಾತಿ ನಿಯಮಗಳು ಜಾರಿಯಲ್ಲಿವೆ.

ಆ) 27

ಇ) ಉದ್ಭವಿಸುವುದಿಲ್ಲ.

ಹಂಗಾಮಿ ನೌಕರರನ್ನು ಖಾಯಂ ಗೊಳಿಸುವುದು

830 - ಶ್ರೀ ಕರಿಯಣ್ಣ (ಹೊಳೆ ಹೊನ್ನೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಶ್ರೇಷ್ಠ ನ್ಯಾಯಾಲಯದ ಆದೇಶದ ರೀತ್ಯ ಸುಮಾರು 68,000 ಹಂಗಾಮಿ ನೌಕರರನ್ನು ಖಾಯಂ ಮಾಡಿರುವುದರಿಂದ ಮೀಸಲಾತಿಯ ಕೊರತೆಯನ್ನು ಯಾವ ರೀತಿ ತುಂಬಲಾಗುವುದು?

ಆ) ಈ ಮೀಸಲಾತಿಯ ಕೊರತೆಯನ್ನು ತುಂಬಲು ಕ್ರಮ ಕೈಗೊಳ್ಳದಿದ್ದಲ್ಲಿ ಸರ್ಕಾರವೇ ಸಂವಿಧಾನದ ಹಕ್ಕನ್ನು ಮೀರಿದಂತೆ ಆಗುವುದಿಲ್ಲವೆ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) ಧಾರವಾಡ ಜಿಲ್ಲಾ ಲೋಕೋಪಯೋಗಿ ಇಲಾಖೆಯ ದಿನಗೂಲಿ ನೌಕರರ ಸಂಘವು ಸರ್ವೋಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ : 8307-11:83ರಲ್ಲಿ ಸರ್ವೋಚ್ಛ ನ್ಯಾಯಾಲಯವು ದಿನಾಂಕ 23-2-90ರಂದು ತನ್ನ ಅಂತಿಮ ತೀರ್ಪಿನಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ 1-7-84ರಂದು ಅಥವಾ ಅದಕ್ಕಿಂತ ಮೊದಲು ನೇಮಕಗೊಂಡ ಸಾಂದರ್ಭಿಕ: ದಿನಗೂಲಿ ನೌಕರರನ್ನು ದಿನಾಂಕ 31-12-97 ರೊಳಗಡೆ ಸರ್ಕಾರಿ ಸೇವೆಯಲ್ಲಿ ವಿಲೀಸ ಗೊಳಿಸುವಂತೆ ನೀಡಿದ ಆದೇಶದ ಮೇರೆಗೆ ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 2ಎಸ್‌ಎಲ್‌ಸಿ 90,ದಿನಾಂಕ 6-8-90ರ ಆದೇಶವನ್ನು ಹೊರಡಿಸಲಾಗಿದೆ. ಸರ್ವೋನ್ನತ ನ್ಯಾಯಾಲಯವು ನೀಡಿರುವ ಆದೇಶಗಳ ಹಿನ್ನೆಲೆಯಲ್ಲಿ ಹಾಗೂ ಇವರುಗಳ ಆದೇಶಗಳ ಹಿನ್ನೆಲೆಯಲ್ಲಿ ಹಾಗೂ ಇವರುಗಳ ಸೇವೆಯನ್ನು ಯಾವುದೆ ನಿಯಮಗಳಡಿಯಲ್ಲಿ ಸಕ್ರಮಗೊಳಿಸದೆ ಇರುವುದರಿಂದಲೂ ಹಾಗೂ ಸರ್ವೋಚ್ಛ ನ್ಯಾಯಲಯವು ಸಾಮೂಹಿಕವಾಗಿ ಸಕ್ರಮಗೊಲಿಸಲು ಆದೇಶಿಸಿರುವುದರಿಂದಲೂ ಮೀಸಲಾತಿ ಆದೇಶಗಳನ್ನು (ರೋಸ್ಟರ್ ಪದ್ಧತಿ) ದಿನಗೂಲಿ ನೌಕರರಿಗೆ ಅನ್ವಯಿಸಲು ಸಾಧ್ಯವಾಗಲಾರದು.

ಶೃಂಗೇರಿ ಪೋಲೀಸ್ ಠಾಣೆಗೆ ಮಂಜೂರಾದ ಜೀಪಿನ ವಿಚಾರ

832 - ಶ್ರೀ ಯು.ಕೆ. ಶಾಮಣ್ಣ (ಶೃಂಗೇರಿ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಶೃಂಗೇರಿ ಪೋಲೀಸ್ ಠಾಣೆಗೆ ಇಲಾಖೆಯ ಮುಖೇನ ಜೀಪ್ ಮಂಜೂರಾಗಿದೆಯೇ? ಇಲ್ಲದಿದ್ದಲ್ಲಿ ಆ ಠಾಣೆಗೆ ಜೀಪಿನ ಅವಶ್ಯಕತೆ ಇಲ್ಲವೇ?

ಆ) ಇದ್ದಲ್ಲಿ ಆ ಠಾಣೆಗೆ ಎಂದು ಜೀಪನ್ನು ನೀಡಲಾಗುವುದು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಮಂಜೂರಾಗಿದೆ.

ಆ) ಉದ್ಭವಿಸುವುದಿಲ್ಲ.

ಮಲೆನಾಡು ಅಭಿವೃದ್ಧಿ ಮಂಡಳಿಯ ಕಾರ್ಯಾಚರಣೆಯಲ್ಲಿ ವಿಳಂಬ

833 - ಶ್ರೀ ಯು.ಕೆ. ಶಾಮಣ್ಣ (ಶೃಂಗೇರಿ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ಅತ್ಯಾವಶ್ಯಕವಾಗಿ ಬೇಕಾದ ಮಲೆನಾಡು ಅಭಿವೃದ್ಧಿ ಮಂಡಳಿಯ ಕಾರ್ಯಾಚರಣೆಯು ತಡವಾಗಲು ಕಾರಣವೇನು?

ಆ) ಈ ಸಾಲಿನ ಅಭಿವೃದ್ಧಿ ಕಾರ್ಯಕ್ಕೆ ಆಯವ್ಯಯದಲ್ಲಿಟ್ಟಿರುವ ಹಣವನ್ನು ಮಂಜೂರು ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು);

ಅ) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯು ಶೀಘ್ರದಲ್ಲಿ ರಚನೆಯಾಗಲಿದೆ.

ಆ) ಈ ಸಾಲಿನ ಆಯವ್ಯಯದಲ್ಲಿರುವ ಹಣವನ್ನು ಮಂಡಳಿಗೆ ಬಿಡುಗಡೆ ಮಾಡಲಾಗುತ್ತಿದೆ.

ಗಡಿ ಪ್ರದೇಶಗಳ ಅಭಿವೃದ್ಧಿ ಕಾರ್ಯನಿಮಿತ್ತ ಕೈಗೊಂಡ ಕಾಮಗಾರಿಗಳು.

1024 - ಶ್ರೀ ಮನೋಹರ ಐನಾಪುರ್, (ಬೆಳ್ಳೋಳ್ಳಿ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಗಡಿ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮದಡಿ 1989-90ನೇ ಸಾಲಿನಿಂದ ತೆಗೆದುಕೊಳ್ಳಲಾಗಿರುವ ಕಾಮಗಾರಿಗಳು

ಆ) ಗಡಿ ಕ್ಷೇತ್ರಗಳ ಅಭಿವೃದ್ಧಿಗೋಸ್ಕರ ಸರ್ಕಾರವು ಆಯವ್ಯಯದಲ್ಲಿ ಹೆಚ್ಚು ಹಣವನ್ನು ಒದಗಿಸುವ ಯೋಜನೆ ಇದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):

ಅ) ಗಡಿ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮಗಳಡಿಯಲ್ಲಿ ರಸ್ತೆ ಮತ್ತು ಸೇತುವೆಗಳು, ಶಿಕ್ಷಣ ಆರೋಗ್ಯ ಪಶುವೈದ್ಯ ಸೇವೆಗಳು, ಗ್ರಾಮೀಣ ವಿದ್ಯುದ್ದೀಕರಣ ಮತ್ತು ಗ್ರಾಮೀಣ ನೀರು ಪೂರೈಕೆ ಮತ್ತು ನೈರ್ಮಲ್ಯ ಇವೇ ಮೊದಲಾದ ಆದ್ಯತೆ ವಲಯಗಳಲ್ಲಿ 1990-91ನೇ ಸಾಲಿನಿಂದ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುತ್ತಿದೆ.ಈ ಕಾರ್ಯಕ್ರಮಗಳನ್ನು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಮುಖಾಂತರ ಕಾರ್ಯಗತಗೊಳಿಸಲಾಗುತ್ತಿದೆ.

ಆ) ಮುಂಬರುವ ಸಾಲಿನ (1993-94) ಆಯವ್ಯಯದಲ್ಲಿ ಒದಗಿಸಬಹುದಾದ ಹಣದ ಬಗ್ಗೆ ಈಗಲೇ ತಿಳಿಸುವುದು ಅನುಚಿತವಾಗುತ್ತದೆ.

ಚನ್ನಪಟ್ಟಣದಲ್ಲಿ ಅಗ್ನಿಶಾಮಕ ಠಾಣೆಯ ಮಂಜೂರು

1050 - ಶ್ರೀ ಸಾದತ್ ಅಲಿ ಖಾನ್, (ಚನ್ನಪಟ್ಟಣ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಚನ್ನಪಟ್ಟಣದಲ್ಲಿ ಒಂದು ಅಗ್ನಿಶಾಮಕ ಠಾಣೆಯು 1990-91ನೇ ಸಾಲಿನಲ್ಲಿ ಮಂಜೂರಾಗಿರುವುದು ನಿಜವೇ?

ಆ) ಹಾಗಿದ್ದಲ್ಲಿ ಚನ್ನಪಟ್ಟಣ ವ್ಯವಸಾಯ ಉತ್ಪನ್ನ ಮಾರುಕಟ್ಟೆ ಸಮಿತಿಯವರು ಅಗತ್ಯವಿರುವ ಜಮೀನನ್ನು ನೀಡಿದ್ದರೂ ಸಹ ಕಟ್ಟಡ ಕೆಲಸವನ್ನು ಪ್ರಾರಂಭ ಮಾಡದಿರುವುದಕ್ಕೆ ಕಾರಣಗಳೇನು?

ಇ) ಸದರಿ ಕಟ್ಟಡದ ಕೆಲಸವನ್ನು ಎಂದು ಪ್ರಾರಂಭ ಮಾಡಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಹೌದು.

ಆ) ಇದಕ್ಕೆ ಹಣವನ್ನು ಒದಗಿಸಿರಲಿಲ್ಲವಾದ ಕಾರಣ ಕಟ್ಟಡ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಲು ಸಾಧ್ಯವಾಗಿರಲಿಲ್ಲ.

ಇ) 1993-94ನೇ ಸಾಲಿನ ಆಯವ್ಯಯದಲ್ಲಿ ಹಣವನ್ನು ಒದಗಿಸುವ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ. ಆಯವ್ಯಯದಲ್ಲಿ ಹಣವನ್ನು ಒದಗಿಸಿದ ಕೂಡಲೇ ಕಟ್ಟಡದ, ಕಾರ್ಯವನ್ನು ತೆಗೆದುಕೊಳ್ಳಲಾಗುವುದು.

ಬಣ್ಣದ ಗ್ರಾನೈಟ್ ಕಲ್ಲುಗಳನ್ನು ಅನಧಿಕೃತವಾಗಿ ರಫ್ತು ಮಾಡುತ್ತಿರುವ ಬಗ್ಗೆ

1052 - ಶ್ರೀ *ಸಾದತ್ ಅಲಿ ಖಾನ್*, (ಚನ್ನಪಟ್ಟಣ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಬಣ್ಣದ ಗ್ರಾನೈಟ್ ಕಲ್ಲುಗಳನ್ನು ಅನಧಿಕೃತವಾಗಿ ರಾಜ್ಯದಿಂದ ರಫ್ತು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಕೆಲವು ಪ್ರಕರಣಗಳು ಗಮನಕ್ಕೆ ಬಂದಿದೆ.

ಆ) ಅನಧಿಕೃತ ಗ್ರಾನೈಟ್ ಗಣಿಗಾರಿಕೆಯನ್ನು ತಡೆಯಲು ಈ ಕೆಳಗೆ ಕಾಣಿಸಿರುವ ಕ್ರಮಗಳನ್ನು ತೆಗೆದುಕೊಂಡಿದೆ.

1) ಗ್ರಾನೈ ಕ್ವಾರಿ ಪ್ರದೇಶಗಳಲ್ಲಿ ಅನಿರೀಕ್ಷಿತತಪಾಸಣೆ ನಡೆಸುವುದು.

2) ಗ್ರಾನೈಟ್ ದಿಮ್ಮಿಗಳನ್ನು ವಶಪಡಿಸಿಕೊಳ್ಳುವುದು.

3) ಗ್ರಾನೈಟ್ ಸಾಗಿಸುವ ವಾಹನಗಳನ್ನು ತಡೆದು ತಪಾಸಣೆ ನಡೆಸುವುದು.

4) ಮತ್ತು ಇತ್ತೀಚೆಗೆ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1969ರ ನಿಯಮದಲ್ಲಿ ಗ್ರಾನೈಟ್ ಸಾಗಾಣಿಕೆಗೆ ಪರವಾನಗೆಯನ್ನು ಕಡ್ಡಾಯವಾಗಿ ಪಡೆದುಕೊಳ್ಳುವುದನ್ನು ಸೇರಿಸಿ ತಿದ್ದುಪಡಿ ತಂದಿದೆ. ಗಣಿ ಮತ್ತು ಭೂ-ವಿಜ್ಞಾನ ಇಲಾಖಾ ಅಧಿಕಾರಿಗಳಲ್ಲದೆ ಕಂದಾಯ ಪೋಲೀಸ್, ಅರಣ್ಯ ಮತ್ತು ವಾಣಿಜ್ಯ ತೆರಿಗೆ ಚೆಕ್ ಪೋಸ್ಟ್‌ಗಳಲ್ಲಿನ ಅಧಿಕಾರಿಗಳಿಗೂ ಆಯಾ ಇಲಾಖಾ ಚೆಕ್ ಪೋಸ್ಟ್‌ಗಳ ಮುಖಾಂತರ ಹಾದು ಹೋಗುವ ಗ್ರಾನೈಟ್ ಸಾಗಿಸುವ ವಾಹನಗಳನ್ನು ತಡೆದು ತಪಾಸಿಸುವ ಅಧಿಕಾರವನ್ನು ನೀಡಲಾಗಿದೆ. ಇದರೊಂದಿಗೆ ಅನಧಿಕೃತವಾಗಿ ಸಾಗಿಸುವ ಗ್ರಾನೈಟ್ ದಿಮ್ಮಿಗಳಿಗೆ ರಾಜಧನದೊಂದಿಗೆ ಹತ್ತು ಪಟ್ಟು ದಂಡವನ್ನು ವಿಧಿಸುವ ಬಗ್ಗೆಯು ನಿಯಮದಲ್ಲಿ ತಿದ್ದುಪಡಿ ತಂದು ಕ್ರಮ ಕೈಗೊಂಡಿದೆ. ದಂಡ ಕಟ್ಟಲು ತಪ್ಪಿದ್ದಲ್ಲಿ ಸದರಿ ದಿಮ್ಮಿಗಳನ್ನು ವಶಪಡಿಸಿಕೊಂಡು ಹರಾಜಿನ ಮೂಲಕ ಮಾರಾಟ ಮಾಡಲಾಗುತ್ತದೆ.

ಉಪಾಧ್ಯಕ್ಷಣಿಯವರು : ಚುಕ್ಕೆ ಗುರುತಿಲ್ಲದ ಪ್ರಶ್ನೆಗಳನ್ನು ಮಂಡಿಸಲಾಯಿತು.

ವರದಿಗಳನ್ನು ಒಪ್ಪಿಸುವುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಣೆಯವರೇ, ಮಾನ್ಯ ಸಚಿವರು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ನಮಗೆ ಈ ತರಹದ ಸುಮಾರು 7 ಪುಸ್ತಕಗಳು ಬಂದಿವೆ. ಅವುಗಳಲ್ಲಿ ಒಂದೊಂದು ಸುಮಾರು 60-60 ಪೇಜ್‌ಗಳಷ್ಟು ಇದೆ. ಆದರೆ ಯಾವ ಪ್ರಶ್ನೆಗಳಿಗೂ ನಮಗೆ ಸರಿಯಾದ ಉತ್ತರಗಳು ಬಂದಿಲ್ಲ. ಹಾಗಾದರೆ ನಾವು ಪ್ರಶ್ನೆಗಳನ್ನು ಏತಕ್ಕಾಗಿ ಕಳುಹಿಸಬೇಕು? ನಮ್ಮ ಪ್ರಶ್ನೆಗಳನ್ನು ಮತ್ತೊಮ್ಮೆ ಮುದ್ರಣ ಮಾಡಿ ನಮಗೆ ನೋಡಲು ಕೊಡುವುದಾದರೆ ಅದರಿಂದ ಏನು ಪ್ರಯೋಜನ? ಇವುಗಳು ನಮಗೆ ಬೇಕಾಗಿವೆಯೇ? ಸಭೆಯಲ್ಲಿ ನಾವುಗಳು ಏತಕ್ಕಾಗಿ ಇರಬೇಕು? ಇಂಥ ಪ್ರಶ್ನೆಗಳಿಗೆ ಉತ್ತರಗಳು ಯಾರಿಗೆ ಬೇಕಾಗಿದೆ? ಯಾರಿಗೋಸ್ಕರ ನೀವು ಪ್ರಶ್ನೆಗಳನ್ನು ಒದಗಿಸುತ್ತೀರಿ? ನಾವು ಸುಮಾರು...

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪಟ್ಟಿಯನ್ನು ಹರಿದು ಹಾಕಿದರು)

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಅದನ್ನು ಸರಕಾರದವರು ತಿಳಿದುಕೊಳ್ಳಬೇಕು. ಯಾವ ಸದಸ್ಯರೇ ಆಗಿರಲಿ ಅವರ ಪ್ರಶ್ನೆಗಳಿಗ ಉತ್ತರ ಬರಲಿಲ್ಲ ಅಂದರೆ ಅದರಿಂದ ಏನು ಪ್ರಯೋಜನ ಬಂತು? ಸದಸ್ಯರಿಗೆ ತಮ್ಮ ಪ್ರಶ್ನೆಗಳ ಬಗ್ಗೆ ಸರಕಾರದಿಂದ ಆಶ್ವಾಸನೆ ಬೇಕಾಗುತ್ತದೆ, ಅವರು ಕೇಳಿದ ಪ್ರಶ್ನೆಗಳಿಗೆ ಸೂಕ್ತ ಉತ್ತರವೂ ಬೇಕಾಗುತ್ತದೆ, ಅದನ್ನು ಬಿಟ್ಟು ಸುಮ್ಮನೆ ಅವರು ಕೊಟ್ಟ ಪ್ರಶ್ನೆಗಳನ್ನು ಮುದ್ರಿಸಿ ಕೊಟ್ಟರೆ ಏನು ಪ್ರಯೋಜನ?

ಶ್ರೀ ವಾಟಾಳ್ ನಾಗರಾಜ್ : ಎಲ್ಲಾ ಪ್ರಶ್ನೆಗಳಿಗೂ ಉತ್ತರ ಸದನದಲ್ಲಿ ಸಿಗುವುದು ಕಷ್ಟ. ಆದರೆ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸಚಿವರು ಉತ್ತರವನ್ನು ಆಯಾಯ ದಿನವೇ ಸದನದಲ್ಲಿ ಒದಗಿಸಿಕೊಡಬೇಕು. ಒಂದು ವೇಳೆ ಇಲಾಖೆಯಿಂದ ಬರಲಿಲ್ಲ ಅಂದರೆ ಸಂಬಂಧಪಟ್ಟ ಸಚಿವರು ತಮ್ಮ ಇಲಾಖೆಯ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿ ಸಕಾಲದಲ್ಲಿ ಒದಗಿಸಿಕೊಡುವಂಥ ಏರ್ಪಾಡು ಮಾಡಬೇಕು.

ಶ್ರೀ ಆರ್. ವಿ. ದೇಶಪಾಂಡೆ : ಹೀಗೆ ಆದರೆ ಸರಕಾರದವರು ಪುಲ್‌ಅಪ್ ಮಾಡುವುದು ಕಷ್ಟವಾಗಬಹುದು.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷಣೆಯವರೇ, ನಾನು ಈ ಪ್ರಸಕ್ತ ಅಧಿವೇಶನದಲ್ಲಿ ಕೊಟ್ಟ ಪ್ರಶ್ನೆಗಳು ಮಾತ್ರವಲ್ಲ, ಕಳೆದ ಮೂರು ಅಧಿವೇಶನಗಳಲ್ಲಿ ಕೊಟ್ಟ ಪ್ರಶ್ನೆಗಳಿಗೂ ಉತ್ತರವು ಬಂದಿಲ್ಲ. ವಿಧಾನಮಂಡಲದ ಪ್ರಶ್ನೆಗಳ ಶಾಖೆಗೆ ನಾನು ಹೋಗಿ ಹುಡುಕಿಸಿದ್ದೇನೆ. ಸಚಿವರು ಆಯಾ ದಿವಸ ಸದನದಲ್ಲಿ ಉತ್ತರಗಳನ್ನು ಮಂಡಿಸಿದ್ದೇನೆ ಎಂದು ಹೇಳಿದ್ದಾರೆಯೇ ವಿನಹ ನನಗೆ ಇಂದಿಗೂ ಆ ಉತ್ತರಗಳು ಬಂದಿಲ್ಲ. ಹೀಗೆ ನಮಗೆ ಉತ್ತರಗಳು ಬಂದಿಲ್ಲ ಅಂದರೆ ನಮ್ಮ ಹಕ್ಕಿಗೆ ಚ್ಯುತಿಯಾಗುತ್ತದೆ. ಈ ವಿಚಾರದಲ್ಲಿ ಸರಕಾರದವರು ತಮ್ಮ ತಪ್ಪನ್ನು ಸರಿಪಡಿಸಿಕೊಳ್ಳ ಬಹುದು ಎಂದು ನಾವು ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಲಿಲ್ಲ, ಆದರೆ ಇನ್ನೂ ಅದೇ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುತ್ತಿರುವುದು ದುರಾದೃಷ್ಟ. ರಾಜ್ಯದಲ್ಲಿ ನಡೆದಿರತಕ್ಕಂಥ ಅನೇಕ ಘಟನೆಗಳ ಬಗ್ಗೆ, ಇಲಾಖೆಗಳಲ್ಲಿನ ಲೋಪದೋಷಗಳ ಬಗ್ಗೆ, ರಾಜ್ಯದಲ್ಲಿ ಆಗುತ್ತಾ ಇರತಕ್ಕಂಥ

ಅನಾಹುತಗಳ ಬಗ್ಗೆ, ಪ್ರಶ್ನೆಗಳನ್ನು ಕೇಳಿದರೆ, 3-4 ಅಧಿವೇಶನಗಳಾದರೂ ಕೂಡ ನಮಗೆ ಉತ್ತರ ಕೊಡದಿದ್ದರೆ, ನಾವು ಇಲ್ಲಿ ಬಂದು ಏನು ಪ್ರಯೋಜನ? ನಮಗೆ ಪ್ರಶ್ನೆ ಗಳನ್ನು ಕೇಳುವ ಹಕ್ಕು ಇಲ್ಲವೆ? ನಾವು ಇಲ್ಲಿ ಕೇವಲ ಟಿಎ ಡಿಎ ತೆಗೆದುಕೊಂಡು ಹೋಗುವುದಕ್ಕೆ ಬರುತ್ತೇವೆಯೇ? ಅದಕ್ಕಾಗಿ ನಮ್ಮನ್ನು ಜನರು ಇಲ್ಲಿಗೆ ಕಳುಹಿಸಿದ್ದಾರೆಯೇ? ಪ್ರಶ್ನೆಗಳನ್ನು ಕೇಳತಕ್ಕಂಥ ಹಕ್ಕನ್ನು ನಮಗೆ ಸರಕಾರದವರು ಕೊಟ್ಟಿದ್ದಲ್ಲ, ಅದು ನಿಯಮಾವಳಿಗಳು ಮೂಲಕ ನಮಗೆ ಬಂದಿರತಕ್ಕಂಥಾದ್ದು. ಕಾನೂನು ರೀತ್ಯಾ ನಮ್ಮ ಹಕ್ಕನ್ನು ನಾವು ಚಲಾಯಿಸಲು ಸರಕಾರದವರು ಅಡ್ಡಿ ಬರುತ್ತಾರೆ ಅಂದರೆ, ಅದರ ಅರ್ಥ ಏನು? ಸರಕಾರಕ್ಕೆ ಅಧಿಕಾರ ಇದೆಯೇ? ಇದಕ್ಕೆ ಉಪಾಧ್ಯಕ್ಷಣಿಯವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಉಪಾಧ್ಯಕ್ಷಣಿಯವರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಹೀಗೆ ಎಲ್ಲರೂ ಒಮ್ಮೆಗೆ ಎದ್ದು ನಿಂತು ಮಾತನಾಡಿದರೆ ಹೇಗೆ?

ಶ್ರೀ ಶಿವಾನಂದ ಹೆಚ್. ಕೌಜಲಗಿ : ನಮ್ಮ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಗಳು ಬರುತ್ತಾ ಇಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷಿಣಿಯರೇ, ತಾವುಗಳು ಸರಕಾರಕ್ಕೆ ಛೀಮಾರಿ ಹಾಕಬೇಕು. ಅವರು ಸದಸ್ಯರ ಪ್ರಶ್ನೆಗಳಿಗೆ ಉತ್ತರ ಕೊಡದೇ ಸದಸ್ಯರ ಹಕ್ಕಿಗೆ ಚ್ಯುತಿ ತಂದಿದ್ದಾರೆ.

(ಗೊಂದಲ)

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಉಪಾಧ್ಯಕ್ಷಣಿಯವರೇ, ಒಟ್ಟು 169 ಪ್ರಶ್ನೆಗಳಲ್ಲಿ 139 ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದೇವೆ.

ಶ್ರೀ ಆರ್. ವಿ. ದೇಶಪಾಂಡೆ : ಮೊದಲು ಏನು ಸಿಸ್ಟಂ ಇತ್ತು ಎಂದರೆ ಅನ್‌ಸ್ಟಾರ್ಡ್ ಕ್ವಶ್ಚನ್ಸ್ ಇದ್ದರೂ ಕೂಡ ಅವರ ಉತ್ತರಗಳನ್ನು ಸದಸ್ಯರ ಟೇಬಲ್‌ಗಳ ಮೇಲೆ ಇಡುತ್ತಿದ್ದರು. ಈಗ ಅದನ್ನು ಕೈಬಿಟ್ಟ ಹಾಗೆ ಕಾಣುತ್ತದೆ. ಆದ್ದರಿಂದ ಇನ್ನಾದರೂ ಸದಸ್ಯರ ಟೇಬಲ್‌ಗಳ ಮೇಲೆ ಆಯಾ ದಿನದ ಉತ್ತರಗಳನ್ನು ಅಂದೇ ಇಡುವ ವ್ಯವಸ್ಥೆ ಮಾಡಿರಿ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಅನ್ ಸ್ಟಾರ್ಡ್ ಕ್ವೆಶ್ಚನ್‌ಸ್‌ಗೆ ಉತ್ತರಗಳು ಎಲ್ಲಾ ಸದಸ್ಯರಿಗೂ ತಲುಪಿಸುವ ವ್ಯವಸ್ಥೆ ಇದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮೊದಲು ಬರುತ್ತಾ ಇತ್ತು, ಈಗ ಹಾಗೆ ಬರುತ್ತಾ ಇಲ್ಲ.

Sri. Blasius M.D'Souza : All the Answers are given to the members who have put the question.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಇದರಲ್ಲಿ ಸ್ವಲ್ಪ ಕನ್‌ಫ್ಯೂಷನ್ ಇದೆ, ಏನೆಂದರೆ, ನಾವು ಏನು ಉತ್ತರ ಇವತ್ತು ಕೊಟ್ಟಿದ್ದೇವೆಂದು ಹೇಳಿದ್ದೇವೆ, ಅ

ಉತ್ತರ ಕೊಟ್ಟಿದ್ದೇವೆ, ಅದು ಪ್ರಿಂಟು ಕೂಡ ಆಗಿದೆ ಇದು ನಮ್ಮ ಕೆಲಸವಲ್ಲ, ಇದು ಸೆಕ್ರೆಟರಿಯೇಟಿನ ಕೆಲಸ. ಆದರಿಂದ ಉಪಾಧ್ಯಾಕ್ಷಣೆಯವರೇ, ದಯಮಾಡಿ ತಮ್ಮ ಸೆಕ್ರೆಟರಿಯೇಟನ್ನು ರಿಕ್ವೆಸ್ಟ್ ಮಾಡುವುದೇನೆಂದರೆ, ಸದಸ್ಯರು ಏನು ಪ್ರಶ್ನೆ ಎತ್ತಿದ್ದಾರೆ ಅದು ಪ್ರಾಮಾಣಿಕವಾಗಿದೆ. ಅದಕ್ಕೆ ತಮ್ಮ ಸೆಕ್ರೆಟರಿಯೇಟಿಗೆ ತಾವು ಆದೇಶ ಕೊಟ್ಟು ಯಾವಾಗ ಪ್ರಶ್ನೆ ಕೇಳುತ್ತಾರೋ, ಅಂದರೆ ಇಲ್ಲಿ 11 ಗಂಟೆಗೆ ಸಭೆ ಪ್ರಾರಂಭವಾಗುವುದು ಇದ್ದರೆ 11 ಗಂಟೆಗೆ ಅವರ ಟೇಬಲಿಗೆ ಕೊಡುವಂತೆ ತಾವು ಆದೇಶ ಕೊಟ್ಟರೆ ಈ ಗೊಂದಲ ಆಗುವುದಿಲ್ಲ. ನಾವು ಉತ್ತರ ಕೊಟ್ಟಿದ್ದೇವೆ, ಅದು ಪ್ರಿಂಟೂ ಆಗಿದೆ, ಪ್ರಶ್ನೆ ಏನೆಂದರೆ, ತಮ್ಮ ಟೇಬಲಿನಲ್ಲಿ ಅದು ಇರಬೇಕು. ಬಹುಶಃ ಪ್ರತಿ ಸಲ ಒಂದಾಗಬಹುದು, ತಮ್ಮ ಆಫೀಸ್ 10-30ಕ್ಕೆ ಪ್ರಾರಂಭವಾಗುತ್ತದೆ. Your secretariat takes their own time, ಅದು ಆಗಬಾರದು, ಅವರು ಹೇಳಿದ್ದು ಸಹಜವಾಗಿದೆ, ಅದನ್ನು ನಿವಾರಿಸಬೇಕಾದರೆ ತಾವು ದಯಮಾಡಿ 10-30ಕ್ಕೆ ಬರುವ ಮೊದಲು 2 ಗಂಟೆ ಮೊದಲು ಬಂದು ಅದನ್ನೆಲ್ಲ ಜೋಡಿಸಿ ಸದಸ್ಯರಿಗೆ ಕೊಟ್ಟರೆ ಈ ಗೊಂದಲ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :ನಮಗೆ ಕೊನೆಗೆ ಈ ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಉತ್ತರ ದೊರಕುತ್ತದೆ. ಅನೇಕ ಸಂದರ್ಭಗಳಲ್ಲಿ ಕಾಲಾವಕಾಶ ಇಲ್ಲವೆಂದು ಪ್ರಶ್ನೆಗಳನ್ನು ಮುಂದಕ್ಕೆ ಹಾಕುತ್ತೀರಿ. ಆದರಲ್ಲೂ ನಮಗೂ ದ್ವಂದ್ವವಾಗಿ ಕೊನೆಗೆ ನಾವು ಶಾಂತರೀತಿಗೆ ಬರುತ್ತಾ ಇದ್ದೇವೆ. ಅದು ಹೋಗಲಿ ಚುಕ್ಕೆ ಇಲ್ಲದ ಪ್ರಶ್ನೆಗಳಿಗಾದರೂ ನಮಗೆ ಉತ್ತರ ದೊರಕಬೇಕು. ನಾನು ನಿನ್ನೆ ಒಂದು ಪ್ರಶ್ನೆಗೆ ಉತ್ತರ ಕೊಡಿ ಅಂದರೆ ಇಲಾಖೆಯಿಂದಲೇ ಉತ್ತರ ಬಂದಿಲ್ಲವೆಂದು ಹೇಳಿದರು. ತಮ್ಮ ಕಾರ್ಯಾಲಯದ ಬಗ್ಗೆ ನಮ್ಮ ಆಕ್ಷೇಪಣೆಯಿಂದ ಹೆಚ್ಚಾಗಿ ಸರ್ಕಾರದಿಂದ ಉತ್ತರಗಳು ಬಂದಿಲ್ಲ, ನೀವು ಅದನ್ನು ತರಿಸಬೇಕು, ಸರ್ಕಾರಕ್ಕೆ ಛೀಮಾರಿ ಹಾಕಿ. ನಾವು ಇಲ್ಲಿ ಪಾಪ ನಿಮ್ಮ ಕಾರ್ಯಾಲಯವನ್ನು ಹಿಡಿದು ಜಗ್ಗಾಡುತ್ತಿಲ್ಲ. ಸರ್ಕಾರದಿಂದ ಉತ್ತರ ಬಂದಿಲ್ಲ, ಈ ಪುಸ್ತಕದಲ್ಲಿ ಸುಮಾರು ಜಗ್ಗಾಡುತ್ತಿಲ್ಲ. ಸರ್ಕಾರದಿಂದ ಉತ್ತರ ಬಂದಿಲ್ಲ, ಈ ಪುಸ್ತಕದಲ್ಲಿ ಸುಮಾರು 8 ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ, ಕೇಳಿದರೆ ಸರ್ಕಾರದಿಂದ ಬಂದಿಲ್ಲವೆಂದು ಹೇಳುತ್ತಾರೆ. ಸರ್ಕಾರದ ವ್ಯವಸ್ಥೆ ಹೀಗಿದೆ.

ಅನೇಕ ಸಾರಿ ಉತ್ತರ ಕೊಡುವಾಗ ಆಪ್ತ ಕಾರ್ಯದರ್ಶಿಗಳೇ ಸಹಿ ಮಾಡಿ ಕಳುಹಿಸಿಬಿಡುತ್ತಾರೆ. ನಾವು ಯಾರು ಮಂತ್ರಿಗಳು? ಅಪ್ತ ಕಾರ್ಯದರ್ಶಿಗಳೇ ಎಂಬ ಗೊಂದಲದಲ್ಲಿ ಇರುತ್ತೇವೆ. ಇದು ನನಗೆ ಬಹಳ ನೋವಾಗಿದೆ. ಸುಮ್ಮನೆ ನೀವು ಇದನ್ನು ಮುದ್ರಣ ಮಾಡಿ ಕಳಿಸಿದರೆ ಪ್ರಯೋಜನವಾಗುವುದಿಲ್ಲ, ಪ್ರಶ್ನೆಗಳ ಜೊತೆಯಲ್ಲೇ ಉತ್ತರವನ್ನೂ ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ನನ್ನದು ಒಂದು ಸಲಹೆ. ತಮ್ಮ ಕಾರ್ಯಾಲಯದಿಂದ ಉತ್ತರಗಳು ನಮಗೆ ಬಂದಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಮುಖ್ಯಮಂತ್ರಿಗಳಲ್ಲಿ ನನ್ನ ವಿನಂತಿ ತಾವು ಏನು ಉತ್ತರ ಕಳುಹಿಸುತ್ತಿದ್ದೀರಲ್ಲ, ಅದನ್ನು ಮುಂಚಿನ ದಿನ ಕಳಿಸಿರಿ ಇವತ್ತು 10-30ಗೆ, ಅವರಿಗೆ ಕಳಿಸಿದರೆ ಅವರು 11 ಗಂಟೆಯೊಳಗೆ ಹೇಗೆ ಇಲ್ಲಿಗೆ ಕಳುಹಿಸುವುದಕ್ಕೆ ಸಾಧ್ಯವಿದೆ? ಸಾಧ್ಯ ಇಲ್ಲ ಅದು. ಹಾಗಾಗಿ ನಿಮ್ಮ ರಿಟನ್ ಅನ್ಸರ್ಸ್ ಅನ್ನು ಮುಂದಿನ ದಿವಸ ಕಳಿಸಿದರೆ ಅವರಿಗೂ ಸಹ ಕಳುಹಿಸುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಯಾರ ಮೇಲೆ ಯಾರೂ ದೋಷ ಮಾಡುತ್ತಿಲ್ಲ.

ಶ್ರೀ ಸಿ. ಭೈರೇಗೌಡ : ಇವತ್ತಿಗೆ ಸಂಬಂಧಿಸಿದ್ದಂತೆ ತಾವು ಹೇಳುತ್ತಾ ಇದ್ದೀರಿ. ನಾನು ಹೇಳಿರುವುದು ಕಳೆದ ಮೂರು ಅಧಿವೇಶನಗಳಿಂದ ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಇವತ್ತು 10-30ಗಂಟೆಗೆ ಉತ್ತರ ಕಳುಹಿಸುತ್ತೇನೆ, ಇಲ್ಲಿ ಸರ್ಕ್ಯುಲೇಟ್ ಮಾಡಲು ನಿಧಾನವಾಗುತ್ತದೆ ಎಂದು ಹೇಳುತ್ತಿದ್ದೀರಿ. ಕಳೆದ ಮೂರು ಅಧಿವೇಶನಗಳಿಂದ ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ, ಅದಕ್ಕೆ ತಮ್ಮ ಉತ್ತರವೇನು? ಆದ್ದರಿಂದ ಅಧ್ಯಕ್ಷರನ್ನು ನಾವು ಕೇಳಿರುವುದು ಸರ್ಕಾರಕ್ಕೆ ಛೀಮಾರಿ ಹಾಕಬೇಕು ಎಂದು.

ಉಪಾಧ್ಯಕ್ಷಣಿಯವರು : ತಾವು ಹೇಳಿದ್ದೀರಿ.

(ಗೊಂದಲ)

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ : ಮಾನ್ಯ ಸಭಾಧ್ಯಕ್ಷಣಿಯವರೇ, ನಾಲ್ಕು ಸಾರಿ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಸರ್ಕಾರಿ ವಾಹನಗಳ ದುರ್ಬಳಕೆ ಬಗ್ಗೆ. ಈ ಸಾರಿ ಉತ್ತರ ಬಂದಿದೆ. Some more replies are to be received. It will be furnished later. ಇದು ಉತ್ತರವೇ?

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಸಭಾಧ್ಯಕ್ಷಿಣಿಯವರೆ, ಮಾನ್ಯ ಬಸವಲಿಂಗಪ್ಪನವರು ಮಂತ್ರಿಗಳಿದ್ದಾಗ ಒಂದು ಪ್ರಶ್ನೆಯನ್ನು ಹಾಕಿದ್ದೆ. ಕನಿಷ್ಟ ಎರಡು ವರ್ಷವಾಗಿದೆ. ಬೇರೆ ಬೇರೆ ಇಲಾಖೆಗೆ ಸಂಬಂಧಪಟ್ಟಂತೆ ಎರಡು ವರ್ಷದಿಂದ ಉತ್ತರ ಕೊಟ್ಟಿಲ್ಲ. ಮಾನ್ಯ ಭೈರೇಗೌಡರು ನಾವು ಒಂದು ಸಾರಿ ಗಲಾಟೆ ಮಾಡಿ ಇದರ ಬಗ್ಗೆ ಉತ್ತರ ಕೊಡಿಸಿಕೊಡುತ್ತೇನೆಂದು ಸರ್ಕಾರದಿಂದ ಒಂದು ಆಶ್ವಾಸನೆ ಸಿಕ್ಕಿತ್ತು. ಒದಗಿಸಲಾಗಿದೆ ಎಂದಾಕ್ಷಣ ಅವರ ಜವಾಬ್ದಾರಿ ಮುಗಿದು ಹೋಗುತ್ತದೆ. ನಮ್ಮ ಜವಾಬ್ದಾರಿ ಹಾಗೆಯೇ ಉಳಿಯುತ್ತದೆ. ಆದ್ದರಿಂದ ಅದನ್ನು ಕೊಡತಕ್ಕಂಥ ಕೆಲಸವು ತಮ್ಮಿಂದ ಆಗಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಉಪಾಧ್ಯಕ್ಷಣಿಯವರು : ಈಗ ತಾವೇನಾದರೂ ಹೇಳುತ್ತೀರಾ. ಇಲ್ಲ ನಾನು ಹೇಳಲೇನು.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಪ್ರಶ್ನೆ ಮತ್ತು ಅದರ ಉತ್ತರ ಬರತಕ್ಕಂಥಾದ್ದು ಅದು ಸದಸ್ಯರ ಮತ್ತು ಈ ಸದನದ ಹಕ್ಕು. ಅದಕ್ಕೆ ಯಾರು ಕೂಡ ಆತಂಕ ತೊಂದರೆ ಬರತಕ್ಕಂಥದ್ದು ಸರಿಯಲ್ಲ, ನಾನು ಪ್ರಾಮಾಣಿಕವಾಗಿ ಒಂದು ಆಶ್ವಾಸನೆಯನ್ನು ಕೊಡುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಭೈರೇಗೌಡರು ಹೇಳಿದಂಥದ್ದು ಬಹಳ ಪ್ರಾಮುಖ್ಯ ಏಕೆಂದರೆ ಎರಡು ಮೂರು ಅಧಿವೇಶನಗಳಿಂದ ಪ್ರಶ್ನೆಗಳಿಗೆ ಉತ್ತರ ಬರಲಿಲ್ಲ ಎಂದು ಹೇಳುತ್ತಾರೆ. ಅದು ಇನ್ನು ಮುಂದೆ ನಾವು ನಮ್ಮಲ್ಲಿ ಹೇಗೋ ಮಾನಿಟರಿಂಗ್ ಸೆಲ್ ಇದೆ. ಕಂಪ್ಯೂಟರ್. ನಾವು ಅದರಿಂದ ಮಾನಿಟರ್ ಮಾಡುತ್ತೇವೆ. ಅದಕ್ಕೆ ಒಂದು ಸ್ಪೆಷಲ್ ವಿಂಗ್ ಮಾಡಿ ಅದನ್ನು ಮಾನಿಟರ್ ಮಾಡಿ ಮುಂದೆ ಸಮರ್ಪಕವಾಗಿ ಸರಿಯಾದಂಥ ಕಾಲಕ್ಕೆ ಉತ್ತರ ಕೊಡುವ ಹಾಗೆ ಯಾವುದೇ ನೆವನ ನಮ್ಮ ಅಧಿಕಾರಿಗಳು ಯಾವುದೇ ಹಂತದಲ್ಲಿ

ತೆಗೆದುಕೊಳ್ಳದ ಹಾಗೆ ಒಂದು foolproof arrangement ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ ಮೇಲೆ ರೆಸಾನ್ಸಿಬಿಲಿಟಿ ಹಾಕಿ ಅವರು ಜಾರಿಬಿಟ್ಟಿದ್ದಾರೆ. ಸರ್ಕಾರದವರು ಹೇಳಬೇಕು, ಮುಂಚಿನ ದಿವಸ ಉತ್ತರಗಳನ್ನು ಕಳುಹಿಸುತ್ತೇವೆ ಎಂದು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ. ಇದು ಪ್ರಿಂಟ್ ಆಗಿ ಇಲ್ಲಿಗೆ ಬಂದಿದೆ. ಆದ್ದರಿಂದ ಇವತ್ತು ಬರುವಂಥ ಪ್ರಶ್ನೆ ಇಲ್ಲ, ನಾವು ಉತ್ತರವನ್ನು ನಿನ್ನೆ ಮೊನ್ನೆ ಕೊಟ್ಟಿದ್ದರಿಂದಲೇ ಇದು ಪ್ರಿಂಟ್ ಆಗಿ ಬಂತು. ಇಲ್ಲದಿದ್ದರೆ ಹೇಗೆ ಪ್ರಿಂಟ್ ಆಗಿ ಬರುತ್ತದೆ? ಇದು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ.

ಶ್ರೀ ವಾಟಾಳ್ ನಾಗರಾಜ್ : ತಾವು ಸಂಸದೀಯ ಸಚಿವರಾಗಿದ್ದವರು. ಸಂಸದೀಯ ಸಚಿವರಾಗಿ ಪ್ರಾಮಾಣಿಕ ಕೆಲಸವನ್ನು ಮಾಡಿದ್ದೀರಿ. ಆದರೆ ಈ ವಿಚಾರದಲ್ಲಿ ನಾವು ಇವರ ಕಾರ್ಯಾಲಯವನ್ನು ದೂಷಣೆ ಮಾಡುತ್ತಿಲ್ಲ. ನೇರವಾಗಿ ಸರ್ಕಾರವನ್ನು ದೂಷಣೆ ಮಾಡುತ್ತಿದ್ದೇವೆ. ಇವತ್ತು ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ. ಇವತ್ತಿನ ಪ್ರಶ್ನೆಗೆ ಉತ್ತರ ಬಂದಿಲ್ಲ.

ಉಪಾಧ್ಯಕ್ಷಿಣಿಯವರು : ಈಗ ಮಾನ್ಯ ಮುಖ್ಯಮಂತ್ರಿಗಳು ಅದನ್ನು ಒಪ್ಪಿಕೊಂಡಿದ್ದಾರೆ. ಬರೀ ಈ ಸಮಾವೇಶಕ್ಕಲ್ಲ, ಹಿಂದಿನ ಸಮಾವೇಶಕ್ಕೆ ಕೊಟ್ಟಂಥ ಪ್ರಶ್ನೆಗಳ ಬಗ್ಗೆಯೂ ಸಹಾ ಅವರು ಸಮರ್ಪಕವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ಕಡೆಯಿಂದ ನಾವು ಹೇಳುವುದು ಎಂದರೆ, ಹಿಂದಿನ ದಿವಸವೇ ತಮ್ಮ ಉತ್ತರಗಳು ನಮ್ಮ ಲೆಜಿಸ್ಲೇಚರ್ ಸೆಕ್ರೆಟೇರಿಯೆಟ್‌ಗೆ ಬಂದರೆ ನಾವು ಅಜೆಂಡಾ ಜೊತೆಗೆ ಅವರಿಗೆ ಹೇಗೆ ಕ್ವಶ್ಚನ್ ಲಿಸ್ಟನ್ನು ಕಳುಹಿಸುತ್ತೇವೋ ಅದೇ ತರಹ ಅನ್ಸರ್ ಲಿಸ್ಟನ್ನೂ ಕಳುಹಿಸುವುದಕಕ್ಕೆ ನಮಗೆ ಅನುಕೂಲವಾಗುತ್ತದೆ. ಆದ್ದರಿಂದ ಹಿಂದಿನ ದಿವಸವೇ ತಾವು ಕಳುಹಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ.

ವರದಿಗಳನ್ನು ಒಪ್ಪಿಸುವುದು

ಉಪಾಧ್ಯಕ್ಷಿಣಿಯವರು : ಈಗ ಅರ್ಜಿಗಳ ಸಮಿತಿಯ ಎರಡನೇ ವರದಿಯನ್ನು ನಾನು ಸಭೆಯ ಮುಂದೆ ನಾನು ಇಡುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ : ಪ್ರಶ್ನೆಗಳಿಗೆ ಉತ್ತರದ ಬಗ್ಗೆ ಹಿಂದಿನ ದಿವಸವೇ ನಾವು ಕವರ್ನಲ್ಲಿ ಹಾಕುತ್ತೇವೆ ಎಂದು ಹೇಳುತ್ತೀರಿ. ಬಹುಶಃ ಅದು ಸರಿಯಲ್ಲ, ಏಕೆಂದರೆ ಇದು ಈ ಸದನದ ಹಕ್ಕು. ಈ ಸದನದಲ್ಲಿ ಅದು ಮೊದಲು ಇಲ್ಲಿ ಗಮನಕ್ಕೆ ನಂತರ ಹೊರಗಡೆ ಹೋಗಬೇಕಾಗುತ್ತದೆ.

ಉಪಾಧ್ಯಕ್ಷಣಿಯವರು : ಹಿಂದೆ ಎಲ್ಲಾ ಅದೇ ತರಹ ಇತ್ತು.

ಶ್ರೀ ಸಿ. ಬೈರೇಗೌಡ : ಅದನ್ನು ವಿವರವಾಗಿ ನಾನು ಹೇಳುವುದಕ್ಕೆ ಹೋಗುವುದಿಲ್ಲ, ಇಲ್ಲಿ ಸದನದಲ್ಲಿ ಮಂಡನೆ ಆಗುವುದಕ್ಕಿಂತ ಮೊದಲು ಅದು ಹೊರಗಡೆ ಹೋಗುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ತಮ್ಮ ಕುರ್ಚಿಯಿಂದ

ಮಾತು ಏನು ಬಂದಿದೆ ಅದನ್ನು ರೆಕ್ಟಿಪೈ ಮಾಡುವುದು ಒಳ್ಳೆಯದು ಎಂದು ನನಗನ್ನಿಸುತ್ತದೆ.

ಉಪಾಧ್ಯಕ್ಷಿಣಿಯವರು : ಸರಿ. ನಾನು ನೋಡಿಬಿಟ್ಟು ಅದನ್ನು ಸರಿಮಾಡುತ್ತೇನೆ. ಅರ್ಜಿಗಳ ಸಮಿತಿಯ ಎರಡನೇ ವರದಿಯನ್ನು ಸಭೆಯ ಮುಂದೆ ನಾನು ಇಡುತ್ತಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ : ನನ್ನ ಹೆಸರಿನ ಮುಂದಿರುವ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ 8,9 ಮತ್ತು 10ನೇ ವರದಿಗಳನ್ನು ಸಬೆಯ ಮುಂದೆ ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷಿಣಿಯವರು : ಶ್ರೀಯುತ ಹನುಮೇಗೌಡರೇ, ಇವತ್ತು ತಾವು ಅಂದಾಜು ಸಮಿತಿಯ ವರದಿಯನ್ನು ಸಭೆಯ ಮುಂದೆ ಇಡಬೇಕು ಎಂದು ಇದೆ. ಆದರೆ ನಮಗೆ ಕಾಪೀಸ್ ಬಂದಿಲ್ಲ, ಕೇವಲ ಮೂರು ಕಾಪಿಗಳು ಮಾತ್ರ ಇವೆ. ಎಲ್ಲಾ ಮೆಂಬರ್ಸ್‌ಗೂ ನಾವು ಕೊಡಬೇಕಾಗುತ್ತದೆ. ದಯವಿಟ್ಟು ನಾಳೆ ತಾವು ಇದನ್ನು ಪ್ರೆಸೆಂಟ್ ಮಾಡಬಹುದು, ಆಫ್ಟರ್ ಸಪ್ಲೈಯಿಂಗ್ ದಿ ಕಾಪೀಸ್.

ಗಮನ ಸೆಳೆಯುವ ಸೂಚನೆಗಳು

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮೇಡಮ್ ಒಂದು ವಿಚಾರ ಇದೆ. 31.3.93 ರವರೆಗೆ ಜಂಟಿ ಪರಿಶೀಲನಾ ಸಮಿತಿ ಅವಧಿ ವಿಸ್ತರಣೆ

ಉಪಧ್ಯಾಕ್ಷರು : ಮಾನ್ಯ ಈಶ್ವರಪ್ಪನವರು, ಈಗ ಜಂಟಿ ಸಲಹಾ ಸಮಿತಿ ಒಂದು ವಿಷಯ ಇದೆ. ಮಾನ್ಯ ಮುಖ್ಯಮಂತ್ರಿಗಳು.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, 1992ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಒಪ್ಪಿಸಲು 31ನೇ ಮಾರ್ಚ್ 1993ರ ವರೆಗೆ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೋರುತ್ತೇನೆ.

ಉಪಧ್ಯಾಕ್ಷರು : ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿದ ಪ್ರಸ್ತಾವಕ್ಕೆ ಸಬೆಯು ಅನುಮತಿ ನೀಡುತ್ತದೆಯೇ?

"1992ನೇ ಸಾಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿಧೇಯಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಒಪ್ಪಿಸಲು 31ನೇ ಮಾರ್ಚ್ 1993ರ ವರೆಗೆ ಕಾಲಾವಧಿಯನ್ನು ವಿಸ್ತರಿಸಲು ಸಬೆಯು ಅನುಮೋದನೆ ನೀಡಿದೆ "ಎಂದು ಬಾವಿಸುತ್ತೇನೆ.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಬಳ್ಳಾರಿ ಜಿಲ್ಲೆಯಲ್ಲಿ ನೆರೆ ಹಾವಳಿಯಿಂದ ರೈತರಿಗೆ ಬೆಳೆ ನಾಶ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಉಪಾಧ್ಯಕ್ಷಣಿಯವರೇ ಬಳ್ಳಾರಿ ಜಿಲ್ಲೆಯಿಂದ ಮೂರ್‍ನಾಲ್ಕು ಸಾವಿರ ಜನ ರೈತರು ಇವತ್ತು ಬಂದಿದ್ದಾರೆ. ಸುಮಾರು 8-10 ಅಡಿ ನೀರು ಸಾವಿರಾರು ಎಕರೆ ಜಮೀನಿನಲ್ಲಿ ನುಗ್ಗಿದೆ.

ಅಕ್ಟೋಬರ್ ತಿಂಗಳಲ್ಲಿ ಸಾವಿರಾರು ಎಕರೆಗೆ ನೀರು ನುಗ್ಗಿರುವುದರಿಂದ ರೈತರ ಬೆಳೆ, ಹತ್ತಿ ಮತ್ತು ಇತರ ಎಲ್ಲಾ ವಸ್ತುಗಳು ನಿರ್ನಾಮವಾಗಿ ಹೋಗಿದೆ. ಇದರಿಂದ ಸಾವಿರಾರು ಜನ ರೈತರು ನಿರ್ಗತಿಕರಾಗಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಕೂಡ ಅಲ್ಲಿ ಹೋಗಿ ಹೆಲಿಕಾಪ್ಟರ್‌ನಲ್ಲಿ ನೋಡಿಕೊಂಡು ಬಂದಿದ್ದೀರಿ. ಪರಿಹಾರದ ದೃಷ್ಟಿಯಿಂದ ಅಲಿಲ ಏನೂ ಆಗಿಲ್ಲ. ಹತ್ತಿ ಅವರು ಬೆಳೆದಿದ್ದು ಏನು ಇದೆ, ಅದು ಸಂಪೂರ್ಣವಾಗಿ ನೆಲಕಚ್ಚಿ ಹೋಗಿದೆ, ಇದರಿಂದ...

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯಮಂತ್ರಿಗಳು ಇತ್ತ ಕಡೆ ಗಮನ ಹರಿಸಬೇಕು. ಮಾನ್ಯ ಮುಖ್ಯಮಂತ್ರಿಗಳೇ ಬಳ್ಳಾರಿ ಜಿಲ್ಲೆಯ ರೈತರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ತಾವು ಹೋಗಿ ಬಂದಿದ್ದೀರಿ. ಪ್ರವಾಹದಿಂದ ಯಾವ ರೀತಿ ತೊಂದರೆಯಾಗಿದೆ ಎನ್ನುವುದು ತಿಳಿದಿದೆ. ಅಕ್ಟೋಬರ್ ತಿಂಗಳಿನಲ್ಲಿ ಆದಂತಹ ಪ್ರವಾಹದಿಂದ 3-4 ದಿವಸ ಸುಮಾರು 10 ಅಡಿ ನೀರು ನುಗ್ಗಿ ಹತ್ತಾರು ಹಳ್ಳಿಗಳ ಜನ ಮುಳಗಿ ಹೋಗಿದ್ದರು. ತಾವೇ ಹೆಲಿಕಾಪ್ಟರ್‌ನಲ್ಲಿ ಅಧಿಕಾರಿಯನ್ನು ಕಳಿಸಿಕೊಟ್ಟು ಆ ಜನರನ್ನು ರಕ್ಷಣೆ ಮಾಡಿದ್ದೀರಿ. ಬೆಳೆದು ನಿಂತ ಹತ್ತಿ ಸಂಪೂರ್ಣವಾಗಿ ನಾಶವಾಗಿದೆ.

ಉಪಾಧ್ಯಕ್ಷಿಣಿಯವರು : ಅವರು ಮುಗಿಸಲಿ. ಮಾನ್ಯ ಈಶ್ವರಪ್ಪನವರು ರೈಸ್ ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮಲ್ಲಿ ಏನೂ ಗಡಿಬಿಡಿ ಇಲ್ಲ; ಬೇರೆ ಕಡೆ ಇದ್ದ ಹಾಗೆ. ನಮ್ಮ ಪ್ರಶ್ನೆ ಏನು ಬಂದಿದೆ.

ಶ್ರೀ ವಾಟಾಳ್ ನಾಗರಾಜ್ : ಇವರು ಬೇರೆಯವರಿಗೆ ಗಡಿ ಬಿಡಿ ಮಾಡುತ್ತಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲಿಗೆ ಮಾನ್ಯ ಮುಖ್ಯಮಂತ್ರಿಗಳೂ ಹೋಗಿದ್ದಾರೆ. ನಾನು ಸಹ ಅವರನ್ನು ವೈಯಕ್ತಿಕವಾಗಿ ಬೇಟಿ ಮಾಡಿದ್ದೇನೆ. ಸುಮಾರು ಮೂರು ಸಾವಿರ ಜನ ರೈತರು ತಮ್ಮ ಅಳಲನ್ನು ತೋಡಿಕೊಳ್ಳುವುದಕ್ಕೆ ಬಳ್ಳಾರಿ ಜಿಲ್ಲೆಯಿಂದ ಬೆಂಗಳೂರಿಗೆ ಬಂದಿದ್ದಾರೆ. ತಮಗೆ ಗೊತ್ತಿರುವ ಹಾಗೆ ಸಾವಿರಾರು ಎಕರೆಯಲ್ಲಿ ಬೆಳೆದು ನಿಂತಂತಹ ಹತ್ತಿ ಸಂಪೂರ್ಣವಾಗಿ ನಾಶವಾಗಿದೆ. ತಮಗೆ ಆಶ್ಚರ್ಯವಾಗಬಹುದು. ಶಿಗುಪ್ಪ ತಾಲ್ಲೂಕಿನಲ್ಲಿ ಕುರುಬ ಜನಾಂಗಕ್ಕೆ ಸೇರಿದವರೊಬ್ಬರ ನಾಲ್ಕು ಸಾವಿರ ಕುರಿಗಳು, ಜಾನುವಾರುಗಳು ಅವತ್ತೇ ತೇಲಿ ಹೋಯಿತು. ಸುಮಾರು 5-6 ದಿವಸ ಅ 8-10 ಹಳ್ಳಿಗಳಲ್ಲಿ 10 ಅಡಿ ನೀರು ಇದ್ದುದ್ದರಿಂದ ಭತ್ತ ನಾಶ ಆಗಿದೆ, ಹತ್ತಿ ಸಂಪೂರ್ಣವಾಗಿ ನಾಶವಾಗಿದೆ. ಇದುವರಿಗೆ ಅವರಿಗೆ ಸರಿಯಾದ ಪರಿಹಾರ ಕೊಟ್ಟಿಲ್ಲ. ರೈತರ ಬಗ್ಗೆ ಬೇರೆ ಸಮಯದಲ್ಲಿ ಚರ್ಚೆ ಮಾಡೋಣ. ಈಗ ನಾನು ನಿಮ್ಮಲ್ಲಿ ಒತ್ತಾಯ ಮಾಡುವಂಥಾದ್ದು ಏನೆಂದರೆ, ಬಳ್ಳಾರಿ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ರೈತರುಗಳು ಏನು ಬೆಳೆ ಬೆಳೆದಿದ್ದರು ಅದೆಲ್ಲ ಸಂಪೂರ್ಣವಾಗಿ ನಾಶ ಆಗಿದೆ. ಹೇಳದೇ ಕೇಳದೆ, ಮುನ್ಸೂಚನೆ ಕೊಡದೆ ತುಂಗಭದ್ರಾ ನದಿ ನೀರು ಬಿಟ್ಟಿರುವುದರಿಂದ ಸರ್ವನಾಶ ಆಗಿದೆ. ನಿಮ್ಮಲ್ಲಿ ಒತ್ತಾಯ ಮಾಡುವಂಥಾದ್ದು ಏನೆಹದರೆ ಮೂರು ಸಾವಿರ ಜನ ರೈತರನ್ನು ತಾವು ದಯಮಾಡಿ ಬೇಟಿ ಮಾಡಿ, ಸಾಂತ್ವನ ಹೇಳಿ.

ಆ ರೈತರ ಬೆಳೆ ಎಲ್ಲಾ ಏನು ನಾಶವಾಗಿದೆ. ಅದಕ್ಕೋಸ್ಕರ ಅವರಿಗೆ ಕೊಡುವಂತಹ ವ್ಯವಸ್ಥೆ ಮಾಡಿ. ಅವರು ಬ್ಯಾಂಕಿನಲ್ಲಿ ಸೊಸೈಟಿಯಲ್ಲಿ ಮಾಡುರುವಂತಹ ಸಾಲವನ್ನು ಮನ್ನ ಮಾಡುವಂತಹ ಪ್ರಯತ್ನ ಮಾಡಿ. ಅವರಿಗೆ ಬೀಸಿಗೆ ಬೆಳೆ ಭೆಳೆಯುವುದಕ್ಕೆ ಬೇಕಾದಂತಹ ಗೊಬ್ಬರ, ಬಿತ್ತನೆ ಬೀಜಗಳನ್ನು ಕೊಟ್ಟು ಅವರನ್ನು ರಕ್ಷಣೆ ಮಾಡುವಂತಹ ಭರವಸೆಯನ್ನು ಕೊಡಬೇಕು ಎಂದು ಹೇಳುತ್ತಿದ್ದೇನೆಯೇ ಹೊರತು, ಇದರ ಬಗ್ಗೆ ಬೇರೆ ಚರ್ಚೆ ಏನೂ ಮಾಡುವುದಿಲ್ಲ. ದಯಮಾಡಿ ಈ ಬಗ್ಗೆ ಸ್ಪಷ್ಟವಾದ ಒಂದು ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳಿಂದ ನಾವು ನಿರೀಕ್ಷೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಿಣಿಯವರೆ. ಒಂದು ನಿಮಿಷ.

ಉಪಾಧ್ಯಕ್ಷಿಣಿಯವರು : ಮಾನ್ಯ ಈಶ್ವರಪ್ಪನವರು ಮುಂದುವರೆಸಲಿ. ನೀವು ಈ ವಿಷಯ ರೈಸ್ ಮಾಡುವ ಆಗಿಲ್ಲ. ನೀವು ರೈಟಿಂಗ್ನಲ್ಲಿ ಏನೂ ಹೇಳಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನೂ ಈಶ್ವರಪ್ಪನವರೂ, ಮಾನ್ಯ ಯಡಿಯೂರಪ್ಪನವರೂ ಮೂರು ಜನ ಆ ರೈತರನ್ನು ಬೇಟಿ ಮಾಡಿದ್ದೇವೆ. ಅವರು ನಮಗೆ ಮನವಿಯನ್ನು ಕೊಟ್ಟಿದ್ದಾರೆ.

ಉಪಾಧ್ಯಕ್ಷಿಣಿಯವರು : ನೀವು ನನಗೆ ಏನೂ ಹೇಳಿಲ್ಲ, ಸುಮ್ಮನೇ ನಿಂತುಕೊಂಡು ಬಿಡುತ್ತೀರಲ್ಲ ಮಾನ್ಯ ನಾಗರಾಜ್ ಅವರೇ.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ತಾವು ಬೇಜಾರು ಮಾಡಿಕೊಳ್ಳಬಾರದು. ನಿಮ್ಮ ಬಗ್ಗೆ ನಮಗೆ ಬಹಳ ಗೌರವ ಇದೆ. ಇದು ಬಹಳ ಪ್ರಮುಖವಾದಂತಹ ಪ್ರಶ್ನೆ.

ಉಪಾಧ್ಯಕ್ಷಿಣಿಯವರು : ನಮಗೂ ನಿಮ್ಮ ಮೇಲೆ ಅಷ್ಟೇ ಗೌರವ ಇದೆ. ನೀವು ರೈಸ್ ಮಾಡಬೇಕಾದರೆ ನನ್ನ ಹತ್ತಿರ ಬಂದು ಇಂಥದ್ದು ರೈಸ್ ಮಾಡುತ್ತೇನೆ ಎಂದು ರೈಟಿಂಗ್ನಲ್ಲಾದರೂ ಕೊಡುವುದು ಬೇಡದೇ?

ಶ್ರೀ ವಾಟಾಳ್ ನಾಗರಾಜ್ : ಇದನ್ನು ನನ್ನ ಒಬ್ಬನಿಗೆ ನಾವು ಹೇಳುತ್ತಿದ್ದೀರಾ?

ಉಪಾಧ್ಯಕ್ಷಿಣಿಯವರು: ಇಲ್ಲ, ಮಾನ್ಯ ಈಶ್ವರಪ್ಪನವರು ಬಂದು ನನಗೆ ಹೇಳಿದರು, ಆಯಿತು ಮುಗಿಸುಬಿಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ಬೆಳಿಗ್ಗೆ ರೈತರು ಬಂದಿದ್ದಾರೆ ಬಹಳ ತೊಂದರೆಯಲ್ಲಿದ್ದಾರೆ. ಅವರು ನಮಗೆ ಮನವಿಯನ್ನು ಕೊಟ್ಟಿದ್ದಾರೆ. ಈ ಮನವಿಯನ್ನು ನಾವು ಸರ್ಕಾರಕ್ಕೂ ಕಳುಹಿಸುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಆ ರೈತರನ್ನು ಬೇಟಿ ಮಾಡಬೇಕು. ಜೊತೆಗೆ ಅವರಿಗೆ ಸಮಗ್ರವಾಗಿ ನಷ್ಟವಾಗಿರತಕ್ಕದ್ದರ ಬಗ್ಗೆ ಕಬಡಲೇ ಪರಿಹಾರ ಒದಗಿಸಿಕೊಡಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮುಂಚೆ ಹತ್ತಿಯನ್ನು ಹೊಸದಾಗಿ ಖರೀದಿ ಮಾಡುತ್ತಿದ್ದರು. ಆದರೆ ಇತ್ತೀಚೆಗೆ ಸಿ.ಸಿ.ಐ.ಯಿಂದ ಖರೀದಿ ಕೂಡ ಮಾಡುತ್ತಿಲ್ಲ. ದರಿಂದ ತುಂಬಾ ತೊಂದರೆಯಾಗಿದೆ. ಇದರ ಬಗ್ಗೆ ಏನು ಮಾಡಬೇಕೆಂದು ತಿಳಿಸಬೇಕು.

ಶ್ರೀ ಬಾಬಗೌಡ ರುದ್ರಗೌಡ ಪಾಟೀಲ್ : ಶೇಂಗಾ ಖರೀದಿ ಮಾಡುವುದರಲ್ಲಿಯೂ ಬಹುತೇಕ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಹತ್ತಿ ಖರೀದಿಯ ಬಗ್ಗೆ ಗಮನ ಸೆಳೆಯುವ ಸೂಚನೆ ಇದೆ.

ಉಪಾಧ್ಯಕ್ಷಿಣಿಯವರು : ಎಲ್ಲರೂ ಎದ್ದುನಿಂತುಕೊಂಡು ಮಾತನಾಡಿದರೆ ಹೇಗೆ? ಮಾನ್ಯ ಮಂತ್ರಿಗಳು ಸರ್ಕಾರದಿಂದ ಉತ್ತರವನ್ನು ಹೇಳುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಧ್ಯಾಕ್ಷಿಣಿಯವರೆ, ಮಾನ್ಯ ಈಶ್ವರಪ್ಪನವರು ಮಾನ್ಯ ಯಡಿಯೂರಪ್ಪನವರು ಮತ್ತು ನನ್ನ ಮಿತ್ರರಾದಂತಹ ಮಾನ್ಯ ವಾಟಾಳ್ ನಾಗರಾಜ್‌ರವರು ಎತ್ತಾದಂತಹ ವಿಚಾರ ನನಗೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ತಾವು ಹೇಳಿದ್ದನ್ನು ನಾನೂ ಒಪ್ಪುತ್ತೇನೆ. ಆ ಪ್ರದೇಶದ ಜನರಿಗೆ ಸಾಕಷ್ಟು ನಷ್ಟ, ಕಷ್ಟ ಆಗಿದೆ. ನಾನೂ ಕೂಡ ಅದನ್ನು ಕಣ್ಣಾರೆ ಕಂಡಿದ್ದೇನೆ. ನಮ್ಮ ಮಾನ್ಯ ಘೋರ್ಪಡೆಯವರು ಇಲ್ಲಿಯೇ ಇದ್ದಾರೆ. ಅವರು ಸಹ ಒಂದೆರಡು ಬಾರಿ ಅಲ್ಲಿಗೆ ಬೇಟಿ ಕೊಟ್ಟಿದ್ದಾರೆ. ಅವರು ರಾಯಚೂರು ಜಿಲ್ಲೆ, ಬಳ್ಳಾರಿ ಜಿಲ್ಲೆಗೆ ಬೇಟಿಯನ್ನು ಕೊಟ್ಟಿದ್ದಾರೆ. ಸ್ಥಳೀಯವಾಗಿ ನಾವು ಅವರಿಗೆ ಸಹಾಯ ಮಾಡುವ ಯೋಜನೆ ಏನಿದೆ ಅದಕ್ಕೆ ಹಣದ ಕೊರತೆ ನಾವು ಮಾಡಿಲ್ಲ, ಅದಕ್ಕೆ ತಕ್ಷಣ ಸಹಾಯವನ್ನು ಕೂಡ ಮಾಡಿದ್ದೇವೆ. ಏನೇನು ಸಹಾಯಮಾಡಿದ್ದೇವೆಂಬ ಬಗ್ಗೆ ವಿವರವನ್ನು ಕೊಟ್ಟಿದ್ದೇವೆ. ಅದೇ ಕೊನೆ ಎಂದು ನಾವು ಇಟ್ಟುಕೊಂಡಿಲ್ಲ, ಇನ್ನೂ ಅನೇಕ ರೀತಿಯ ಸಹಾಯವನ್ನು ನಾವು ಅವರಿಗೆ ಮಾಡಬೇಕಾಗಿದೆ. ಬಹುಶಃ ಪ್ರವಾಹದ ಬಗ್ಗೆ ನಾಳೆ ಚರ್ಚೆ ಇದೆ. ಏನೇನು ಮಾಡಬೇಕೆಂದು ತಾವು ಇನ್ನೂ ಬೇಕಾದರೂ ಸಲಹೆಯನ್ನು ಕೊಡಬಹುದು. ಪ್ರತ್ಯೇಕವಾಗಿಯೂ ಕೂಡ ನಾವು ಭೇಟಿಯಾಗೋಣ. ಅವರು ಮನವಿ ಏನು ಕೊಟ್ಟಿದ್ದಾರೆ ಅದನ್ನು ಕೂಡ ಕೊಡಿ. ನಾವು ಸಹಾನುಭೂತಿಯಿಂದ ಅವರ ಮನವಿಗೆ ಖಂಡಿತವಾಗಿಯೂ ಸ್ಪಂದಿಸುತ್ತೇವೆ. ಅದಕ್ಕೆ ಸೂಕ್ತವಾದಂತಹ ಸಹಾಯ ಮಾಡುವಂತಹ ಸಂಪೂರ್ಣವಾದ ವಿವರ ನಾಳೆ ಚರ್ಚೆಗೆ ಬಂದಾಗ ನಾವು ಉತ್ತರ ಕೊಡುತ್ತೇವೆ.

ಶ್ರೀ ಬಿ.ಎಸ್ ಯಡಿಯೂರಪ್ಪ : ತಾವು ಹೇಳಿದ ಉತ್ತರ ಸಾಕು. ಪ್ರಶ್ನೆ ಏನೆಂದರೆ ಇವತ್ತು ಈ ಬೇಸಿಗೆ ಬೆಳೆಯ ಕೆಲಸ ಪ್ರಾರಂಭವಾಗುತ್ತದೆ. ತಕ್ಷಣ ಉತ್ತಮವಾದ ಬಿತ್ತನೆ ಬೀಜ, ಗೊಬ್ಬರವನ್ನು ನಾವು ಕೊಡುತ್ತೇವೆ; ಲಾಸ್ ಆಗಿರುವುದನ್ನು ನಾವು ತುಂಬಿಕೊಡುತ್ತೇವೆಂದು ಬರವಸೆಯನ್ನು ಕೊಟ್ಟರೆ ಮೂರು ಸಾವಿರ ಜನ ವಾಪಸ್ಸು ಹೋಗುತ್ತಾರೆ.

ಉಪಾಧ್ಯಕ್ಷಣಿಯವರು : ನಾಳೆಯ ದಿವಸ ಈ ವಿಷಯ ಚರ್ಚೆಗೆ ಬರುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹತ್ತಿಯ ಖರೀದಿಯ ವ್ಯವಸ್ಥೆ ಮತ್ತು ಸಂಪೂರ್ಣ ನಾಶವಾಗಿರುವುದಕ್ಕೆ ಪರಿಹಾರವನ್ನು ಘೋಷಣೆಯನ್ನು ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಸದಸ್ಯರು ಎತ್ತಿರುವಂತಹ ಹತ್ತಿ ಖರೀದಿ ಮಾಡುವಂತಹ ವಿಚಾರವೂ ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ. ಅದಕ್ಕೆ ನಾವು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇನೆ. ಸಾಲ ಮನ್ನಾದ ವಿಚಾರ, ಎಲ್ಲಾ ವಿವರವನ್ನು ಕೊಟ್ಟರೆ ಸಂಪೂರ್ಣ ಸ್ವರೂಪದ ಚರ್ಚೆಯಾದರೆ ನಮಗೂ

ಸಹಾಯವಾಗುತ್ತದೆ. ಬೇಸಿಗೆ ವೇಳೆ ತಯಾರು ಮಾಡಲಿಕ್ಕೆ ಏನು ಸಿದ್ಧತೆ ಮಾಡಬೇಕೊ ಅದಕ್ಕೆ ನಾವು ಸಂಪೂರ್ಣವಾಗಿ ಸಹಾಯ ಮಾಡುತ್ತೇವೆ.

2. ತಾಲ್ಲೂಕು ಹಾಗೂ ಡಿಸ್ಟ್ರಿಕ್ಟ್ ಟ್ರೆಜರಿಗಳಿಗೆ ಸರ್ಕಾರದಿಂದ ಬ್ಯಾನ್ ಆರ್ಡರ್ ನೀಡಿರುವ ಬಗ್ಗೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಉಪಾಧ್ಯಕ್ಷಣಿಯವರೆ, ನಾನು ಒಂದು ಬಹಳ ಮಹತ್ತರವಾಗ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಕಳೆದ ಒಂದು ತಿಂಗಳಿಂದ ತಾಲ್ಲೂಕ್ ಮತ್ತು ಡಿಸ್ಟ್ರಿಕ್ಟ್ ಟ್ರೆಜರಿಗಳಿಗೆ ಸರ್ಕಾರದ ಅಧಿಕಾರಿಗಳಿಂದ ಓರಲ್ ಇನ್‌ಸ್ಟ್ರಕ್ಷನ್ಸ್ ಬಂದಿದೆ. ಟ್ರೆಜರಿ ಬ್ಯಾನ್ ಇದೆ. ಇದರಿಂದ ಏನಾಗಿದೆ ಅಂದರೆ, ಟ್ರೆಜರಿಗಳಲ್ಲಿ ಲಂಚ ಜಾಸ್ತಿಯಾಗಿದೆ. ನಾನು ಸ್ಪೆಸಿಫಿಕ್ ಆಗಿ ಒಂದು ಉದಾಹರಣೆಯನ್ನು ಕೊಡುತ್ತೇನೆ. ಈಗ ಮಂಡಲ್ ಪಂಚಾಯಿತಿಗಳವರು ಅಲ್ಲಿರತಕ್ಕ ವಾಟರ್ ಸಪ್ಲೈ ಸ್ಕೀಮ್ ಅನ್ನು ಮೇನ್‌ಟೇನ್ ಮಾಡುತ್ತಿದ್ದಾರೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಸಹಿತ ಬಲ್ಬ್‌ಅನ್ನು ಹಾಕಲಿಕ್ಕೆ ಮಂಡಲ್ ಪಂಚಾಯತಿ ಸೆಕ್ರೆಟರಿಗಳು ಮತ್ತು ನೀವು ನೇಮಕ ಮಾಡಿರತಕ್ಕಂಥ ಅಡ್ಮಿನಿಸ್ಟ್ರೇಟರ್‌ಗಳೇ ಆ ಕೆಲಸವನ್ನು ಮಾಡುತ್ತಿದ್ದಾರೆ. ಈಗ ಇದರಿಂದ ಏನಾಗುತ್ತಿದೆ ಅಂದರೆ, 2-3 ಸಾವಿರ ರೂಪಾಯಿಗಳನ್ನು ಮಂಡಲ್ ಪಂಚಾಯತಿಯ ಸೆಕ್ರೆಟರಿಗಳು ಅಡ್ಮಿನಿಸ್ಟ್ರೇಟರ್ ಅಪ್ರೂವಲ್ ತೆಗೆದುಕೊಂಡು ಬಿ.ಡಿ.ಓ. ಮೂಲಕವಾಗಿ ತಾಲ್ಲೂಕ್ ಟ್ರೆಜರಿಗಳಿಗೆ ಕೊಡುತ್ತಿದ್ದಾರೆ. ಕುಡಿಯುವ ನೀರಿಗೆ ಬೇಕಾಗಿರತಕ್ಕಂಥ ಕರೆಂಟ್ ಬಿಲ್ ಮತ್ತು ಹಳ್ಳಿಗಳಿಗೆ ಬೇಕಾಗಿರತಕ್ಕಂಥ ಬಲ್ಬ್ ಬಿಲ್‌ಗಳನ್ನು ಕಳುಹಿಸಿದರೂ ಸಹ ಅಪ್ರೂವಲ್ ಆಗುತ್ತಿಲ್ಲ. ಸರ್ಕಾರ ಇದನ್ನು ಏತಕ್ಕೆ ಮಾಡಿದೆ ಎಂದು ನನಗಂತೂ ಅರ್ಥವಾಗುತ್ತಿಲ್ಲ. ನಿಮಗೆ ಒಂದು ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಕೊಡುತ್ತೇನೆ. ನಿನ್ನೆಯ ದಿವಸ ಕನಕಪುರ ತಾಲ್ಲೂಕಿನ ಹಾರೋಹಳ್ಳಿಯಲ್ಲಿರುವ ಜೂನಿಯರ್ ಕಾಲೇಜಿನ ಪ್ರಿನ್ಸಿಪಾಲರು ನನ್ನ ಹತ್ತಿರ ಬಂದು ನೋಡಿ ಸ್ವಾಮಿ, ಸರ್ಕಾರದಿಂದ ಎರಡು ಬಿಲ್ಡಿಂಗ್ ಅನ್ನು ವೊಕೇಶನಲ್ ಜಾಬ್ ಓರಿಯೆಂಟೆಡ್ ಟೆಕ್ನಿಕಲ್ ಕೋರ್ಸ್‌ಗೆ ನೀನೇ ಎಜ್ಯುಕೇಷನ್ ಮಿನಿಸ್ಟರ್ ಆಗಿದ್ದಾಗ ಮಂಜೂರು ಮಾಡಿದ್ದೀರಿ. ಇದನ್ನು ನಡೆಸಲು ನನಗೆ ಒಂದೂವರೆ ಲಕ್ಷ ರೂಪಾಯಿ ಮಂಜೂರಾತಿಯಾಗಿದೆ ನಾನು ಟ್ರೆಜರಿಗೆ ಬಿಲ್ಲನ್ನು ಕಳುಹಿಸಿದರೆ ಕನಕಪುರ ಟ್ರೆಜರಿಯ ಆಫೀಸರ್ ರವರು ನನಗೆ ಐದು ಸಾವಿರ ರೂಪಾಯಿಯನ್ನು ಕೊಡುವವರಿಗೆ ಆ ಬಿಲ್ ಅನ್ನು ಪಾಸ್ ಮಾಡುವುದಿಲ್ಲವೆಂದು ಅವರಿಗೆ ಖಚಿತವಾಗಿ ಹೇಳಿರುತ್ತಾರೆ.

ಇದನ್ನು ನಾನು ನಂಬಲಿಲ್ಲ. I did not want to believe such small things. ಆಮೇಲೆ ಇದ್ದು ನಾನು ವೆರಿಫೈ ಮಾಡಿದೆ. ನಾನು ಅನೇಕ ತಾಲ್ಲೂಕಿನ ಜಿಲ್ಲಾಧಿಕಾರಿಗಳನ್ನು ಬಿ.ಡಿ.ಎ.ಗಳನ್ನು ಮಂಡಲ ಪಂಚಾಯಿತಿ ಕಾರ್ಯದರ್ಶಿಗಳನ್ನು ಕರೆಸಿ ಕೇಳಿದಂಥ ಸಂದರ್ಭದಲ್ಲಿ ನಿಜವಾಗಿತ್ತು. ಯಾವುದೇ ಬಿಲ್ಲನ್ನು ಪಾಸ್ ಮಾಡಬೇಡಿ ಎಂದು ಸರ್ಕಾರ ಸೂಚನೆ ಬಂದಿದೆಯೆಂದು. ಕರೆಂಟ್ ಬಿಲ್ ಗಳ ಪಾಸ್ ಆಗುತ್ತಿಲ್ಲ. ಹೀಗಾದರೆ ಮಂಡಲ ಪಂಚಾಯಿತಿಗಳು ಹೇಗೆ ಫಂಕ್ಷನ್ ಮಾಡಬೇಕು. ರೋಜಗಾರ್ ಯೋಜನೆಯಲ್ಲಿ ಬಿಲ್ಲನ್ನು ನಾವೇನು ಕಟ್ಟುತ್ತಿದ್ದೇವೆ, ಇದು ಸಹ ಆಗುತ್ತಿಲ್ಲ, ಇದಕ್ಕೆ ಕಾರಣವೇನು? ಕೇಂದ್ರ ಸರ್ಕಾರದಿಂದ ನಿಮಗೆ ಕಂತಿನ ದುಡ್ಡು ಬಂದಿಲ್ಲವೇ? ಅಥವಾ ರಾಜ್ಯ ಸರ್ಕಾರದಿಂದ ನಿಮ್ಮ ಟ್ರೆಜರಿಗಳಿಗೆ

ನೀವು ಸೂಚನೆ ಕೊಟ್ಟಿದ್ದೀರಾ? ನಿಮ್ಮ ಸರ್ಕಾರದ ಹಣಕಾಸಿನ ಪರಿಸ್ಥಿತಿ ಏನು? ಭದ್ರತೆ ಇಲ್ಲವೇ? ನೀವು ಟ್ರೆಜರಿಯನ್ನು ಏತಕ್ಕೆ ಬ್ಯಾನ್ ಮಾಡಿದ್ದೀರಿ? ಎಂಬುದರ ಬಗ್ಗೆ ತಾವು ತಿಳಿಸಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷಣಿಯವರೆ, ಉಪ ನಾಯಕರಾದ ಶ್ರೀ ಸಿಂಧ್ಯರವರು ಹೇಳಿದಂತೆ ಟ್ರೆಜರಿ ಬ್ಯಾನ್ ಎಲ್ಲಾ ಕಡೆ ಇದೆ. ಹಾಗಾಗಿ, ಇಡೀ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳೆಲ್ಲವೂ ಒಟ್ಟಾಗಿ ಸ್ಥಗಿತವಾಗಿವೆ. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ನೇರವಾಗಿ ಪ್ರಶ್ನೆ ಕೇಳುತ್ತಿದ್ದೇನೆ. ನೀವು ನಿಮ್ಮ ಸರ್ಕಾರದ ಫೈನಾನ್ಷಿಯಲ್ ಪೊಜಿಷನ್ ಬಹಳ ಚೆನ್ನಾಗಿದೆಯೆಂದು ಕೇಂದ್ರ ಸರ್ಕಾರದ ಯೋಜನಾ ಆಯೋಗದ ಮುಂದೆ ಹೋಗಿ ನಾವು ರಿಸೋರ್ಸಸ್ ಮೊಬಿಲೈಸ್ ಮಾಡಿದ್ದೇವೆಂದು ಹೇಳಿ ಮುಂದಿನ ವರ್ಷಕ್ಕೆ 3,025 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿಸಿಕೊಂಡು ಬಂದಿರಿ. ಆ ರೀತಿ ರಿಸೋರ್ಸ್ ಮೊಬಿಲೈಸ್ ಮಾಡದೇ ಇದ್ದರೆ ಟ್ರೆಜರಿ ಬ್ಯಾನ್ ಏತಕ್ಕೆ? ತಾವು ತಮ್ಮ ಸರ್ಕಾರದ ಫೈನಾನ್ಸ್ ಬಗ್ಗೆ ಈ ಸದನದಲ್ಲಿ ಒಂದು ಶ್ವೇತ ಪತ್ರವನ್ನು ಇಡುವುದಕ್ಕೆ ಸಾಧ್ಯವೇ?

ಶ್ರೀ ಎಂ. ವೀರಪ್ಪ ಮೊಯ್ಲಿ : ಮಾನ್ಯ ಉಪಾಧ್ಯಕ್ಷಣಿಯವರೇ, ಈಗ ಫೈನಾನ್ಸ್ ಬಗ್ಗೆ ಏನು ಮಾಹಿತಿ ಕೊಡಬೇಕು ಅಥವಾ ನಾವು ನಮ್ಮ ಸರ್ಕಾರದ ಬಜೆಟ್ ಅನ್ನು ಬರುವ ಫೆಬ್ರವರಿ ತಿಂಗಳ 22ನೇ ದಿನಾಂಕದಂದು ಮಂಡಿಸುತ್ತೇವೆ. It will be a s good as..

(Interruptions)

Sri. R.V. Deshpande : What is the present financial position?

(Interruptions)

ಶ್ರೀ ವಾಟಾಳ್ ನಾಗರಾಜ್: ನಿಮ್ಮ ಸರ್ಕಾರದ ಹಣಕಾಸಿನ ಪರಿಸ್ಥಿತಿ ಬಗ್ಗೆ ಹಾಗೂ ನಿಮ್ಮ ಸರ್ಕಾರದ ಮುಂದಿನ ಯೋಜನೆ ಬಗ್ಗೆ ಒಂದು ಶ್ವೇತ ಪತ್ರವನ್ನು ಹೊರಡಿಸಿ. ತಾವು ಫೆಬ್ರವರಿ ತಿಂಗಳಿನಲ್ಲಿ ಬಜೆಟ್ ಮಂಡಿಸುವುದು ನಮಗೂ ಗೊತ್ತಿದೆ. ಅದಕ್ಕೂ ಮುಂಚಿತವಾಗಿ ತಾವು ಒಂದು ಶ್ವೇತ ಪತ್ರವನ್ನು ಹೊರಡಿಸಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ : ಮಾನ್ಯ ಉಪಾಧ್ಯಕ್ಷಣಿಯವರೆ, We are presenting the Budget on 22nd February 1993. ಆದುದರಿಂದ, ಅದೇ ಶ್ವೇತ ಪತ್ರ ಆಗುತ್ತದೆ. ಅದನ್ನು ಆಗ ಕೊಡುತ್ತೇವೆ. ಈಗ ಪ್ರಶ್ನೆ ಏನೆಂದರೆ, ಅದು ತಮಗೂ ಕೂಡ ಗೊತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ಫೆಬ್ರವರಿ 22ನೇ ತಾರೀಖಿನಂದು 1993-94ನೇ ಸಾಲಿನ ಬಜೆಟ್ ಅನ್ನು ಮಂಡಿಸಿ ಮತ್ತು ರಿಸೋರ್ಸ್ ಮೊಬಿಲೈಜೇಷನ್ ಹೇಗೆ, ಮಾಡಬೇಕೆಂಬುದರ ಬಗ್ಗೆ ಮತ್ತು ಕೇಂದ್ರ ಸರ್ಕಾರದಿಂದ ಎಷ್ಟು ದುಡ್ಡು ಬರುತ್ತದೆ ಎಂಬುದು ಅವೆಲ್ಲವೂ ಒಂದು ಭಾಗ. ಆದರೆ, ನಾನು ಕೇಳುತ್ತಿರತಕ್ಕಂಥಾದ್ದು ಇಷ್ಟೇ. ಈಗ 4,000-5,000 ರೂಪಾಯಿಗಳ ಸಣ್ಣ-ಪುಟ್ಟ ಬಿಲ್ಲುಗಳನ್ನು ಟ್ರೆಜರಿಯಲ್ಲಿ ಲಿಫ್ಟ್ ಮಾಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಈಗ ಸನ್ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು, ಆರ್.ವಿ. ದೇಶಪಾಂಡೆಯವರು ಹಾಗೂ ವಾಟಾಳ್ ನಾಗರಾಜ್‌ರವರು ಸಂಪನ್ಮೂಲದ ಪ್ರಶ್ನೆ ವಿಚಾರ ಏನು ಎತ್ತಿದ್ದಾರೆ. ತಾವು ಕೂಡ ಸರ್ಕಾರದಲ್ಲಿದ್ದವರು. ಕೆಲವು ಸಲ ವೇಸ್ ಅಂಡ್ ಮೀನ್ಸ್ ಪೊಜಿಷನ್ ಇರುತ್ತದೆ. ಅವನ್ನು ನಾವು ಚಾಕಚಕ್ಯತೆಯಿಂದ ನಿಭಾಯಿಸಬೇಕಾಗುತ್ತದೆ. ಏಕೆಂದರೆ, ನಾನು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಾಗ ಟ್ರೆಜರಿಯಲ್ಲಿ 100 ಕೋಟಿ ರೂಪಾಯಿಗಳ ಬಿಲ್ ಪೆಂಡಿಂಗ್ ಇತ್ತು. ಕ್ಯಾಶ್‌ನಲ್ಲಿ 5 ಕೋಟಿ ರೂಪಾಯಿಗಳು ಇತ್ತು. With that I Started my position. ಇದು ಯಾರ ತಪ್ಪು, ಒಪ್ಪು ಎಂಬ ಪ್ರಶ್ನೆಯಲ್ಲ 100ಕೋಟಿ ರೂಪಾಯಿಯಲ್ಲಿ ಈಗಾಗಲೇ 50 ಕೋಟಿ ರೂಪಾಯಿಗಳನ್ನು ಸೆಟ್ಲ್ ಮಾಡಿದ್ದೇವೆ. ಇನ್ನೊಂದು 50 ಕೋಟಿ ರೂಪಾಯಿಗಳಿವೆ. ಅದನ್ನು ನಿಭಾಯಿಸುತ್ತೇವೆ. ಆದರಿಂದ ಉಳಿದ ಕಾರ್ಯಕ್ರಮಗಳಿಗೆ ತಡೆಯಾಗಬಾರದು. ಆದುದರಿಂದ, ನಾವೇನು ಟ್ರೆಜರಿ ಬ್ಯಾನ್‌ಗೆ ಯಾವುದೇ ಆದೇಶ ಕೊಟ್ಟಿಲ್ಲ. ಆದರೆ, ತಾವೇನು ಹೇಳಿದ್ದೀರಿ. ತಾವು ಹೇಳಿದ್ದರಲ್ಲಿ ಸ್ವಲ್ಪ ಕಾಂಟ್ರಡಿಕ್ಷನ್ ಇದೆ. ಏನೆಂದರೆ, ಕನಕಪುರದ ಟ್ರೆಜರಿ ಆಫೀಸಿನಲ್ಲಿರುವ ಒಬ್ಬ ಅಧಿಕಾರಿ ತನಗೆ 5 ಸಾವಿರ ರೂಪಾಯಿಗಳನ್ನು ಕೊಟ್ಟರೆ ನಿಮ್ಮ ಬಿಲ್ಲನ್ನು ಕ್ಲಿಯರ್ ಮಾಡುತ್ತೇನೆಂದು ಹೇಳಿದುದಾಗಿ ಹೇಳಿದ್ದೀರಿ. ಇದರ ಬಗ್ಗೆ ಕೂಡಲೇ ಮಾಹಿತಿ ತೆಗೆದುಕೊಂಡು ಸಂಜೆಯೊಳಗಾಗಿ ಸೂಕ್ತಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಸರ್ಕಾರದ ಹಣಕಾಸಿನ ಪರಿಸ್ಥಿತಿ ಬಗ್ಗೆ ಒಂದು ಶ್ವೇತ ಪತ್ರವನ್ನು ಹೊರಡಿಸುತ್ತೀರಾ?

ಶ್ರೀ ಎಂ. ವೀರಪ್ಪ ಮೊಯ್ಲಿ : ನಾನು ಈಗಾಗಲೇ ಈ ಮನೆ ಹಾಗೂ ಈ ಮನೆಯಲ್ಲಿ ಹೇಳಿಕೆ ಕೊಟ್ಟಿದ್ದೇನೆ. ಆಸ್ತಿ ಮತ್ತು ಹೊಣೆಗಳಿಗೆ ನಮ್ಮ ಸರ್ಕಾರನೇ ಉತ್ತರಾಧಿಕಾರ. ಅದಕ್ಕೆ ತೊಂದರೆ ಏನಿಲ್ಲ, ನಾವು, ನಿಭಾಯಿಸುತ್ತೇವೆ. ಈ ವರ್ಷದ ಪ್ಲಾನ್ ಪರ್‌ಫಾರ್ಮೆನ್ಸ್ ಏನಿದೆ, ಅದನ್ನು ಕೂಡ we are going to....

(Interruptions)

Sri. R.V. Deshpande : Hon. Chief Minister admitted that the financial position of the State was not good when he took over as Chief Minister.

ಶ್ರೀ ಎಂ. ವೀರಪ್ಪ ಮೊಯಿಲಿ : ಸುಮಾರು ನೂರು ಕೋಟಿ ರೂಪಾಯಿಗಳ ಬಿಲ್‌ಗಳು ಬಾಕಿ ಇತ್ತು, ಅದರಲ್ಲಿ ಈಗಾಗಲೆ 50 ಕೋಟಿ ರೂಪಾಯಿಗಳನ್ನು ನಿಭಾಯಿಸಿದ್ದೇವೆ, ಇನ್ನು ಮುಂದೆ ತಾವ್ಯಾರು ಗಾಭರಿಪಟ್ಟು ಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ, ಏನು ಟ್ರೆಜರಿ ಬ್ಯಾನ್ ಇದೆ ಅದನ್ನು ನಾವು ತೆಗೆದುಹಾಕುತ್ತೇವೆ.

ಉಪಾಧ್ಯಕ್ಷರವರು : ಎಲ್ಲರೂ ಮಾತನಾಡಿದರೆ ಹೇಗಾಗುತ್ತದೆ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ಕೆಲಸ ಮಾಡಲು ಹಣವೇ ಇಲ್ಲ, ಒಂದು ತಿಂಗಳಿನಿಂದಲೂ ಬಿಲ್ಲುಗಳು ಪಾಸ್ ಆಗಿಲ್ಲ, ಎಲ್ಲಾ ಬಿಲ್ಲುಗಳು ಪೆಂಡಿಂಗ್ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಪಿ.ಡಬ್ಲ್ಯೂ.ಡಿ. ಇಲಾಖೆ ಮತ್ತು ನೀರಾವರಿ ಇಲಾಖೆಗೆ ಎಲ್.ಓ.ಸಿ. ಯನ್ನು ಇಶ್ಯೂ ಮಾಡಿದ್ದೇವೆ. ಮಂಡಲಪಂಚಾಯತಿ ಮತ್ತು ಜಿಲ್ಲಾಪರಿಷತ್‌ಗಳ ಬಿಲ್ಲುಗಳೇನಿವೆ ಅದನ್ನೂ ಕೂಡ ಸೆಟ್ಲ್ ಮಾಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಉಪಾಧ್ಯಕ್ಷಣಿಯರೆ, ಎಲ್ಲಾ ಕೆಲಸಗಳೂ ಸ್ಥಗಿತವಾಗಿವೆ, ಎಲ್.ಓ.ಸಿ. ಇಲ್ಲದೆ ಪಿ.ಡಬ್ಲ್ಯೂ.ಡಿ. ಇಲಾಖೆಯ ಕೆಲಸಗಳು, ಕಾಮಗಾರಿಗಳು ಬಿದ್ದಿವೆ, ಎಲ್ಲಾ ಕೆಲಸಗಳು ಸಂಪೂರ್ಣವಾಗಿ ನಿಂತುಹೋಗಿವೆ. ಪಿ.ಡಬ್ಲ್ಯೂ.ಡಿ. ಇಲಾಖೆಗೆ ದಯಮಾಡಿ ಹಣವನ್ನು ಬಿಡುಗಡೆ ಮಾಡಬೇಕು.

(ಗೊಂದಲ)

ಉಪಾಧ್ಯಕ್ಷಣಿಯವರು : ಶೂನ್ಯ ವೇಳೆಯಲ್ಲಿ ಎಲ್ಲಾ ವಿಷಯಗಳನ್ನು ಮಾತನಾಡಲು ಆಗುವುದಿಲ್ಲ. ನೀವು ಕೊಟ್ಟಿರುವ ವಿಷಯದ ಬಗ್ಗೆ ಮಾತ್ರ ಮಾತನಾಡಬಹುದು. ಎಲ್ಲರೂ ಮಧ್ಯೆ ಪ್ರವೇಶಮಾಡಿದರೆ ಹೇಗಾಗುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ತಾವು ತಪ್ಪಾಗಿ ತಿಳಿದುಕೊಳ್ಳುತ್ತಿದ್ದೀರಿ, ಎಲ್ಲಾದರಲ್ಲಿಯೂ ಮಧ್ಯೆ ಪ್ರವೇಶ ಮಾಡತಕ್ಕ ಉದ್ದೇಶ ನಮ್ಮದಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಒಂದು ರಸ್ತೆಗೆ ಮಣ್ಣನ್ನು ಹಾಕಿಸಲು ಹಣವಿಲ್ಲ, ಒಂದು ರಸ್ತೆಯ ಕೆಲಸ ಮಾಡಲು ನಿಮ್ಮ ಕೈಯಲ್ಲಿ ಹಣವಿಲ್ಲ, ಎಲ್.ಓ.ಸಿ. ಇಲ್ಲ, ಕೆಲಸ ನಡೆಯುತ್ತಿಲ್ಲ.

ಉಪಾಧ್ಯಕ್ಷಣಿಯವರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಸರ್ವೆಸಾಮಾನ್ಯ ನಾವು ಇದರ ಬಗ್ಗೆ ಎಲ್ಲೆಲ್ಲಿ ಹಣವನ್ನು ಬಿಡುಗಡೆ ಮಾಡಬೇಕೋ ಅದಕ್ಕೆ ಟ್ರೆಝರಿ ಬ್ಯಾನ್ ಇಲ್ಲ, ನಾವು ಬಿಡುಗಡೆ ಮಾಡುತ್ತೇವೆ. ಅದರೆ ವಾಟಾಳ್ ನಾಗರಾಜ್‌ರವರು, ಮತ್ತೆ ಯಡಿಯೂರಪ್ಪನವರು ಏನು ಹೇಳಿದ್ದಾರೆ ಆ ಕಾಮಗಾರಿಗಳ ಹಣ ಬಿಡುಗಡೆಗೆ ಏನಾದರೂ ತೊಂದರೆಯಾಗಿದ್ದರೆ ಅದನ್ನು ನಿವಾರಿಸಿ ಹಣವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷಣಿಯವರೆ....

(ಗೊಂದಲ)

ಶ್ರೀ ಬಿ.ಎಂ. ಇದಿನಬ್ಬ : ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ಹೇಳುವಂತಿಲ್ಲ, ಈಗ ಸಮಯ ನೋಡಿ ಎಷ್ಟಾಗಿದೆ?

(ಗೊಂದಲ)

3. ನೇಕಾರರಿಗೆ ಹೆಚ್.ಡಿ.ಸಿ.ಯಿಂದ ನೂಲು ಸಿಗದೆ ತೊಂದರೆ

+ ಶ್ರೀ ಆರ್.ವಿ. ದೇಶಪಾಂಡೆ : ಸನ್ಮಾನ್ಯ ಉಪಾಧ್ಯಕ್ಷಣಿಯರೆ, ನಾನು ಮತ್ತೆ ಮಾನ್ಯ ಸಿಂಧ್ಯರವರು ತಮ್ಮ ಗಮನಕ್ಕೆ ತರಬಯಸುದೇನೆಂದರೆ, ರಾಜ್ಯದಲ್ಲಿ

ನೇಕಾರರು ಬಹಳ ಕಷ್ಟದಲ್ಲಿದ್ದಾರೆ. ಕರ್ನಾಟಕ ಹ್ಯಾಂಡ್ ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಿಂದ ನೇಕಾರರಿಗೆ ಏನು ನೂಲನ್ನು ಕೊಡುತ್ತೀರೋ ಆ ನೂಲು ಇವತ್ತು ಆ ಕಾರ್ಪೊರೇಷನ್‌ನಿಂದ ನೇಕಾರರಿಗೆ ಸಿಗುತ್ತಿಲ್ಲ, ಅದಕ್ಕೆ ಮುಖ್ಯವಾಗಿ 3-4 ಕಾರಣಗಳಿವೆ. ಒಂದನೆಯದಾಗಿ ಹೆಚ್.ಡಿ.ಸಿ.ನ ಹಣಕಾಸಿನ ಪರಿಸ್ಥಿತಿಯು ಚೆನ್ನಾಗಿಲ್ಲ, ರಾಜ್ಯ ಸರ್ಕಾರದಿಂದ ಮತ್ತು ಕೇಂದ್ರ ಸರ್ಕಾರದಿಂದ ಅದಕ್ಕೆ ಹಣ ಬರುತ್ತದೆ. ರಾಜ್ಯ ಸರ್ಕಾರದಿಂದ 4 ಕೋಟಿ ರೂಪಾಯಿಗಳು ಬರುತ್ತದೆ, ಅದರಲ್ಲಿ ಈಗಾಗಲೆ ಒಂದು ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೀರಿ, ಕೇಂದ್ರ ಸರ್ಕಾರದಿಂದ 5 ಕೋಟಿ ರೂಪಾಯಿಗಳ ಸಬ್ಸಿಡಿ ಬರುತ್ತದೆ. ಈ ಎರಡೂ ಸರ್ಕಾರಗಳಿಂದಲೂ ಹಣ ರಿಲೀಸ್ ಇಲ್ಲಿಯವರೆಗೆ ಆಗಿಲ್ಲ, ಇದರಿಂದಾಗಿ ಯಾವುದನ್ನೂ ಕೊಂಡುಕೊಳ್ಳತಕ್ಕ ಶಕ್ತಿ ಹೆಚ್.ಡಿ.ಸಿ.ಗೆ ಇಲ್ಲದಂತಾಗಿದೆ. ಇವರಿಗೆ ಸಾಲದ ಮೇಲೆ ಯಾರೂ ಸಹ ಹಣವನ್ನು ಕೊಡಲು ತಯಾರಾಗಿಲ್ಲ. ತಮಿಳುನಾಡಿನಿಂದ ಏನು ಯಾರ್ನ್ ಬರುತ್ತಿತ್ತು, ಅದನ್ನು ಅವರು ಅಲ್ಲಿ ಉಪಯೋಗಮಾಡುತ್ತಿದ್ದಾರೆ, ಪವರ್‌ಲೂಮ್ಸ್‌ನ್ನು ಪ್ರಾರಂಭ ಮಾಡುತ್ತಿದ್ದಾರೆ. ಆದ್ದರಿಂದ ಅಲ್ಲಿಂದಲೂ ಸಹ ಯಾರ್ನ್ ಕ್ರೆಡಿಟ್ ಮೇಲೆ ಬರುತ್ತಿಲ್ಲ, ಇನ್ನೂ ಕೋ-ಆಪರೇಟಿವ್ ಟೆಕ್ಸ್‌ಟೈಲ್ ಮಿಲ್ಸ್ ವಿಷಯದಲ್ಲಿ ಹೇಳಬೇಕೆಂದರೆ, ಗದಗ್‌ನ ಟೆಕ್ಸ್‌ಟೈಲ್ ಮಿಲ್ಲೊಂದನ್ನು ಬಿಟ್ಟರೆ ಬೇರೆ ಯಾವ ಟೆಕ್ಸ್‌ಟೈಲ್‌ಮಿಲ್ ಕೂಡ ಈ ಹೆಚ್.ಡಿ.ಸಿ.ಗೆ ಯಾರ್ನ್ ಕೊಡುವುದಕ್ಕೆ ಸಿದ್ಧವಿಲ್ಲ, ಆದುದರಿಂದ ನೇಕಾರರು ಬೀದಿಪಾಲಾಗಿದ್ದಾರೆ, ಉದ್ಯೋಗವಕಾಶವಿಲ್ಲ, ಬಹಳ ಕಷ್ಟದಲ್ಲಿದ್ದಾರೆ. ಸರ್ಕಾರ ತಕ್ಷಣ ಹಣವನ್ನು ಬಿಡುಗಡೆ ಮಾಡಿ ನೂಲನ್ನು ಕೊಡತಕ್ಕ ವ್ಯವಸ್ಥೆ ಮತ್ತು ಉದ್ಯೋಗವಕಾಶವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಎರಡನೆಯದಾಗಿ ನಮ್ಮ ಸರ್ಕಾರವಿದ್ದಾಗ ಸೀರೆ ಮತ್ತು ಪಂಚೆಯ ಯೋಜನೆ ಜಾರಿಯಲ್ಲಿತ್ತು. ಆ ಕಾರ್ಯಕ್ರಮದಡಿಯಲ್ಲಿ ನಿಮ್ಮ ಆದೇಶದಂತೆ ಹೆಚ್.ಡಿ.ಸಿ.ನವರು ಸುಮಾರು 8 ಕೋಟಿ ರೂಪಾಯಿಯ ನೂಲನ್ನು ತಯಾರು ಮಾಡಿಟ್ಟಿದ್ದಾರೆ. ಆದರೆ ತಾವು ಅವರಿಗೆ ನೇರವಾಗಿ ಮಾರಾಟಮಾಡಲು ಅನುಮತಿಯನ್ನು ಕೊಡುವುದಿಲ್ಲ, ನೀವು ಅವರಿಗೆ ಎಲ್ಲಿಯವರೆಗೆ ಮಾಲನ್ನು ಲಿಫ್ಟ್ ಮಾಡಲು ಅವಕಾಶ ಕೊಡುವುದಿಲ್ಲವೊ ಅಲ್ಲಿಯವರೆಗೆ ಹಣ ಸಿಗುವುದಿಲ್ಲ. ಈವತ್ತು ಸೀರೆ, ಪಂಚೆ ಕಾರ್ಯಕ್ರಮ ಬಂದ್ ಆಗಿದೆ. though they have produced the material ಹೀಗಾಗಿ ಏನು ಸರ್ಕಾರದ ಆದೇಶದಂತೆ ಸೀರೆ, ಪಂಚೆ ತಯಾರಾಗಿದೆ, ಅದನ್ನು ಹೆಚ್.ಡಿ.ಸಿ. ನಿಂದ ಲಿಫ್ಟ್ ಮಾಡಿ ವಿತರಣೆ ಮಾಡಬೇಕಾಗಿದೆ. ಆಗ ಹಣ ಸಿಗುತ್ತದೆ. ಆ ಹಣವನ್ನು ಉಪಯೋಗ ಮಾಡಿ ನೂಲನ್ನು ಖರೀದಿ ಮಾಡಬಹುದು. ಮತ್ತು ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಬರತಕ್ಕ ಕೂಡ ಬಿಡುಗಡೆಯಾಗಬೇಕು. ತಕ್ಷಣ ಇದರ ಬಗ್ಗೆ ಕ್ರಮ ತೆಗೆದುಕೊಂಡು ನೇಕಾರರಿಗೆ ಸಹಾಯ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ರಾಜ್ಯದ ನೇಕಾರರ ಪರವಾಗಿ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ನಾನು ತರುವುದೇನೆಂದರೆ, ಆ ನೇಕಾರರು ನಮಗೆ ದಾರ ಕೊಡಿ ಇಲ್ಲದಿದ್ದರೆ ನಾವು ನೇಣು ಹಾಕಿಕೊಳ್ಳಲು ಹಗ್ಗವನ್ನು ಕೊಡಿ ಎಂದು ಕೇಳುತ್ತಿರತಕ್ಕದ್ದು ಪತ್ರಿಕೆಗಳಲ್ಲಿ ಬಂದಿದೆ. ಆದ್ದರಿಂದ ತಾವು ಇದರ ಬಗ್ಗೆ ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಸುಮಾರು 3 ಲಕ್ಷ ನೇಕಾರರ ಕುಟುಂಬಗಳು ಬೀದಿ ಪಾಲಾಗುತ್ತಿವೆ. ಅವರಿಗೆ ನೂಲು ಸರಿಯಾಗಿ ಸಿಕ್ಕುತ್ತಿಲ್ಲ, ಬಣ್ಣ ಸಿಕ್ಕುತ್ತಿಲ್ಲ. ಅವರು ನೇಯ್ದ ಬಟ್ಟೆಗೆ ಸರಿಯಾದ ಬೆಲೆ ಸಿಕ್ಕುತ್ತಿಲ್ಲ. ತಕ್ಷಣದಲ್ಲಿ ಬಟ್ಟೆಯನ್ನು ಕೊಂಡು ಕೊಳ್ಳುತ್ತಿಲ್ಲ, ಈ ಪರಿಸ್ಥಿತಿ ಬಗ್ಗೆ ನಾವು ಇಲ್ಲಿ ಅನೇಕಸಾರಿ ಚರ್ಚೆ ಮಾಡಿದ್ದೇವೆ. ತಾವೂ ಕೂ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಆದರೂ ಈ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಆದುದರಿಂದ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಇದನ್ನು ಬಹಳ ಗಂಭಿರವಾಗಿ ಪರಿಗಣಿಸಿ ಅವರು ಗೌರವದಿಂದ ಜೀವನ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಇಲ್ಲದಿದ್ದರೆ ಅವರು ಉದ್ಯೋಗವಿಲ್ಲದೆ ಬೀದಿಪಾಲಾಗತಕ್ಕ ಪರಿಸ್ಥಿತಿ ಬಂದಿದೆ. ಇವತ್ತು ಈ ಇಲಾಖೆ ಕಣ್ಣುಮುಚ್ಚಿಕೊಂಡು ಕುಳಿತಿದೆ. ಆ ನೇಕಾರರಿಗೆ ನೂಲು ಕೊಡುವುದಕ್ಕಾಗುತ್ತಿಲ್ಲ, ಬಣ್ಣವನ್ನು ಕೊಡುವುತಕ್ಕಾಗುತ್ತಿಲ್ಲವೆಂದರೆ ಈ 3 ಲಕ್ಷ ಕುಟುಂಬಗಳ ಗತಿ ಏನಾಗಬೇಕು? ಸರ್ಕಾರ ಇದರ ಬಗ್ಗೆ ತೀವ್ರ ಕ್ರಮ ತೆಗೆದುಕೊಂಡು ಬಣ್ಣ, ನೂಲು ಸರಿಯಾಗಿ ಸಿಕ್ಕುವ ವ್ಯವಸ್ಥೆ ಮಾಡುತ್ತದೆಯೆ? ಅವರು ನೇಯ್ದ ಬಟ್ಟೆಗೆ ಸರಿಯಾದ ಕೂಲಿ ಕೊಟ್ಟು ಅದನ್ನು ಕೊಂಡುಕೊಳ್ಳುವ ವ್ಯವಸ್ಥೆ ಮಾಡುತ್ತದೆಯೇ? ಅವರು ಮಡಿಯುತ್ತಿದ್ದಾರೆ. ದಯವಿಟ್ಟು ಅವರ ರಕ್ಷಣೆ ಮಾಡಿದರ ಸಾಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ದೇಶಪಾಂಡೆಯವರು, ಮಾನ್ಯ ಸಿಂಧ್ಯರವರು, ಯಡಿಯೂರಪ್ಪನವರು ಇಲ್ಲಿ ಎತ್ತಿರುವ ಪ್ರಶ್ನೆ ಸಹಜವಾದುದು. ಏಕೆಂದರೆ ಕೈಮಗ್ಗ ಅಭಿವೃದ್ಧಿ ನಿಗಮ ಏನಿದೆ ಅದರ ಕಕ್ಷೆಯಲ್ಲಿ ಈ ನೇಕಾರರು ಬರುತ್ತಾರೆ. ಇವರಿಗೆ ಕೆಲಸವನ್ನು ಕೊಡತಕ್ಕ ಜವಾಬ್ದಾರಿ ನಮ್ಮ ಸರ್ಕಾರ ಮತ್ತು ನಿಗಮದ್ದೂ ಕೂಡ ಇದೆ. ಆದರೆ ಕೆಲವು ಸಾರಿ ಈ ನಿಗಮಗಳನ್ನು ನಿರ್ವಹಿಸುವಾಗ ಸ್ವಲ್ಪಮಟ್ಟಿಗೆ ಹೆಚ್ಚೂ ಕಡಿಮೆಯಾಗುತ್ತದೆ. ಈ ಹ್ಯಾಂಡ್‌ಲೂಂ ಡೆವಲಪ್‌ಮೆಂಟ್ ಕಾರ್ಪೋರೇಷನ್‌ಗೆ ಸುಮಾರು 575 ಲಕ್ಷ ರೂಪಾಯಿಗಳನ್ನು ನಮ್ಮ ಬಜೆಟ್‌ನಲ್ಲಿ ನಿಗದಿಮಾಡಿದ್ದೇವೆ. ಇದರ ಜೊತೆಗೆ ಇನ್ನೂ 500 ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಕೊಡುತ್ತಿದ್ದೇವೆ. ಈ ಸಮಸ್ಯೆಯನ್ನು ತಿಳಿದುಕೊಂಡೇ ನಾವು 100 ಲಕ್ಷ ರೂಪಾಯಿ ಗಳನ್ನು ಕಳೆದವಾರ ಬಿಡುಗಡೆ ಮಾಡಿದ್ದೇವೆ.

ಅವರಿಗೆ ಕೆಲಸವನ್ನು ಕೊಡುವುದಕ್ಕೆ ಈ ಸರ್ಕಾರ ಮತ್ತು ನಿಗಮ ಬದ್ಧವಾಗಿವೆ. ಈಗ ಅವರು ಎದುರಿಸುತ್ತಿರುವ ಸವಾಲು ಮತ್ತು ಸಮಸ್ಯೆಗಳನ್ನೂ ಕೂಡ ನಾವು ಬಗೆಹರಿಸುತ್ತೇವೆ. ಅದಕ್ಕೆ ವ್ಯಾಪಕವಾಗಿ ಕಾರ್ಯಕ್ರಮವನ್ನು ತೆಗೆದುಕೊಂಡು ತಕ್ಷಣ ಅವರಿಗೆ ನೂಲು ಒದಗಿಸುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ಕೇಂದ್ರ ಸರ್ಕಾರದಿಂದ ಈ ನಿಗಮಕ್ಕೆ ೫ ಕೋಟಿ ರೂಪಾಯಿಗಳು ಬರಬೇಕಾಗಿದೆ. ತಾವು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತಂದು ಆ ಹಣವನ್ನು ಬಿಡುಗಡೆ ಮಾಡಿಸಬೇಕು. ಸರ್ಕಾರದ ಕಾರ್ಯಕ್ರಮದ ಪ್ರಕಾರ ಅಲ್ಲಿ ೮ ಕೋಟಿ ರೂಪಾಯಿಗಳ ಸೀರೆ ಮತ್ತು ಪಂಚೆಗಳ ಮಾಲು ಸಿದ್ಧವಾಗಿವೆ. ಅದನ್ನು ನೀವು ಲಿಫ್ಟ್ ಮಾಡಬೇಕಾಗಿದೆ. ಇದರ ಬಗ್ಗೆ ನೀವು ಏನು ಹೇಳುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಈ ಬಗ್ಗೆ ಒಂದು ಸಮಗ್ರವಾದ ಯೋಜನೆಯನ್ನು ತಯಾರಿಸುವಂಥ ಚಿಂತನೆ ಏನಾದರೂ ಇದೆಯೇ? ಏಕೆಂದರೆ ಈ ಯೋಜನ ಇಲ್ಲ ಎಂದರೆ ಹೆಚ್‌ಎಂಟಿ ಸಿಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮಗೂ ಗೊತ್ತಿರಬಹುದು, ಹಿಂದೆ ನಾನು ಸಣ್ಣ ಕೈಗಾರಿಕಾ ಮಂತ್ರಿಯಾಗಿದ್ದಾಗ ಈ ಕೈಮಗ್ಗ ಅಭಿವೃದ್ಧಿ ನಿಗಮವನ್ನು ಪ್ರಾರಂಭ ಮಾಡಿದ್ದೆ. ನಾನು ಕೈಮಗ್ಗ ನಿಗಮ, ಲಿಡ್ಕರ್, ಕಿಯೋನಿಕ್ಸ್, ಬ್ಯಾಕ್‌ವರ್ಡ್ ಕ್ಲಾಸ್ ಕಾರ್ಪೋರೇಷನ್ ಇನ್ನೂ ಮುಂತಾದ ನಮಗೆ ಬಹು ಪ್ರಿಯವಾದ ಕಾರ್ಯಕ್ರಮಗಳನ್ನು ನಾವು ಮಾಡಿದೆವು.

ಶ್ರೀ ವಾಟಾಳ್ ನಾಗರಾಜ್ : ನಮಗೆ ಬಹಳ ಹೆಮ್ಮೆ. ಆದರೆ ಈ ನಿಗಮಗಳನ್ನು ಸಾಯುವುದಕ್ಕೆ ಬಿಡಬೇಡಿ. ನೀವು ಮಾಡಿರತಕ್ಕದ್ದು ಸಂತೋಷ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಪ್ರಥಮ ನಿಗಮದ ಉದ್ಘಾಟನೆಯನ್ನು ಮಾಡಿದವರು ಮಾನ್ಯ ವಿ.ಪಿ.ಸಿಂಗರು ಅವರು ನಮ್ಮ ಪಕ್ಷದಲ್ಲಿ 1975ನೇ ಇಸವಿಯಲ್ಲಿ ವಾಣಿಜ್ಯ ಉಪ ಮಂತ್ರಿಗಳಾಗಿದ್ದರು.

ಶ್ರೀ ವಾಟಾಳ್ ನಾಗರಾಜ್ : ಈ ನಿಗಮಗಳನ್ನು ಸಾಯುವುದಕ್ಕೆ ಬಿಡಬೇಡಿ. ಅವರನ್ನು ಬೀದಿಪಾಲು ಮಾಡಬೇಡಿ.

ಶ್ರೀ ಎಂ. ವೀರಪ್ಪಮೊಯಿಲಿ : ಈ ಕರ್ನಾಟಕ ರಾಜ್ಯದಲ್ಲಿರತಕ್ಕ ಎಲ್ಲ ನೇಕಾರರ ಯೋಗ ಕ್ಷೇಮವನ್ನೂ ವಿಶೇಷವಾಗಿ ನೋಡಬೇಕೆಂಬ ಆಸೆ ನನಗಿದೆ. ಅದರ ಪ್ರಕಾರ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಕೇಂದ್ರ ಸರ್ಕಾರದಿಂದ 5 ಕೋಟಿ ರೂಪಾಯಿ ಇನ್ನೂ ರಿಲೀಸ್ ಆಗಿಲ್ಲ. ಇದರ ಬಗ್ಗೆ ಏನು ಮಾಡುತ್ತೀರಿ ಎಂಬುದಕ್ಕೆ ಉತ್ತರ ಕೊಡಿ.

ಶ್ರೀ ಎಂ. ವೀರಪ್ಪಮೊಯಿಲಿ : ಈಗಾಗಲೇ 575 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ ಕೇಂದ್ರದವರು ಇನ್ನೂ ಬಿಡುಗಡೆ ಮಾಡಿಲ್ಲ, ಅದನ್ನು ಬಿಡುಗಡೆ ಮಾಡಿಸಲು ಕೇಂದ್ರಸರ್ಕಾರದ ಜೊತೆ ನಾವು ಮಾತನಾಡುತ್ತೇವೆ.

ಶ್ರೀ ಎಂ.ಎಸ್. ಪಾಟೀಲ್ : ನಾನು ನಿನ್ನೆ ನಿಯಮ 334ರ ಕೆಳಗೆ ಕಬ್ಬು ಬೆಳೆಗಾರರಿಗೆ ತೊಂದರೆಯಾಗುತ್ತಿರುವ 334ರನ್ನು ಮಾಡಿದ್ದೆ ಅದಕ್ಕೆ ಮಾನ್ಯ ಮಂತ್ರಿಗಳು ಹೇಳಿಕೆ ಕೊಡುತ್ತೇನೆಂದು ಹೇಳಿದ್ದರು.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಸಭೆ ಮುಗಿಯುವ ಮೊದಲು ಹೇಳಿಕೆ ಕೊಡುತ್ತೇನೆ.

ಗಮನ ಸೆಳೆಯುವ ಸೂಚನೆಗಳು

ವಿಷಯ : ಹತ್ತಿಯ ಬೆಲೆ ಇಳಿಕೆಯ ಬಗ್ಗೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೆ, ಹತ್ತಿಯ ಬೆಲೆ ಇಳಿತ ಹಾಗೂ ಹತ್ತಿಯನ್ನು ಖರೀದಿಸದೇ ಇರುವುದರಿಂದ ಉತ್ತರ ಕರ್ನಾಟಕದ ರೈತರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಮಾನ್ಯ ಕೃಷಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಉತ್ತರ ಕರ್ನಾಟಕದಲ್ಲಿ ಹತ್ತಿಯ ಬೆಲೆ ಕುಸಿದ ಬಗ್ಗೆ ಹಾಗೂ ಬೈಲಹೊಂಗಲ ಮತ್ತು ಸೌಂದತ್ತಿ ಮಾರ್ಕೆಟ್ ಯಾರ್ಡ್‌ನಲ್ಲಿ ಹತ್ತಿಯನ್ನು ಕೊಳ್ಳದೇ ರೈತರಿಗೆ ತೊಂದರೆಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಕರ್ನಾಟಕ ಸರ್ಕಾರದ ನಿರ್ದೇಶಕರು ಕೃಷಿ ಮಾರುಕಟ್ಟೆ ಇಲಾಖೆ, ಬೆಂಗಳೂರುವರ ವರದಿಯಂತೆ 1992 ಡಿಸೆಂಬರ್ ಕೊನೆ ವಾರದಲ್ಲಿ ಬೈಲಹೊಂಗಲ ಮಾರುಕಟ್ಟೆಗೆ ಒಟ್ಟು 10,220 ಕ್ವಿಂಟಾಲ್‌ನಷ್ಟು ಹತ್ತಿಯು ಮಾರಾಟಕ್ಕೆ ಬಂದಿದ್ದು, ಇದರಲ್ಲಿ 20,000 ಕ್ವಿಂಟಾಲ್ ಮಾರಾಟವಾಗಿ ಗರಿಷ್ಟ ದರವು ಪ್ರತಿ ಕ್ವಿಂಟಾಲ್‌ಗೆ 1969 ರೂಪಾಯಿಗಳಿಗೂ ಮಾರಾಟವಾಗಿದ್ದು 20,220ಕ್ವಿಂಟಾಲ್‌ನಷ್ಟು ಹತ್ತಿಯ ಮಾರಾಟವಾಗಿದೆ ಉಳಿದಿರುತ್ತದೆ.

ಸೌಂದತ್ತಿ ಮಾರುಕಟ್ಟೆಯಲ್ಲಿ ಒಟ್ಟು ೨೯,೨೬೧ ಕ್ವಿಂಟಾಲ್ ಹತ್ತಿಯು ಮಾರಾಟಕ್ಕೆ ಬಂದು, ಇದರಲ್ಲಿ ೨೧೫೪೧ ಕ್ವಿಂಟಾಲ್ ಹತ್ತಿಯು ಮಾರಾಟವಾಗಿದ್ದು ಪ್ರತಿ ಕ್ವಿಂಟಾಲ್ ಗರಿಷ್ಟ ದರವು ೧೯೬೩ ರೂ.ಗಳಿಗೂ ಕನಿಷ್ಟ ದರವು ೮೬೦ ರೂಪಾಯಿಗಳಿಗೂ ಮಾರಾಟವಾಗಿದೆ. ೮೭೨೦ ಕ್ವಿಂಟಾಲ್‌ನಷ್ಟು ಹತ್ತಿಯು ಮಾರಾಟವಾಗದೆ ಉಳಿದಿರುತ್ತದೆ.

ಇದರಲ್ಲಿ 1993-93ನೇ ಸಾಲಿನಲ್ಲಿ ಭಾರತೀಯ ಹತ್ತಿ ನಿಗಮದವರಿಂದ, ಬೈಲಹೊಂಗಲ ಮಾರುಕಟ್ಟೆಯಲ್ಲಿ 1100 ಕ್ವಿಂಟಾಲ್‌ನಷ್ಟು ಹತ್ತಿಯನ್ನು ಗರಿಷ್ಟ ರೂಪಾಯಿಗಳಿಗೂ, ಕನಿಷ್ಟ 1401 ರೂಪಾಯಿಗಳಿಗೂ ಕೊಳ್ಳಲಾಗಿದೆ. ಹಾಗೂ ಸೌಂದತ್ತಿ ಮಾರುಕಟ್ಟೆಯಲ್ಲಿ 13,991 ಕ್ವಿಂಟಾಲ್‌ನಷ್ಟು ಹತ್ತಿಯನ್ನು ಗರಿಷ್ಟ 1450 ರೂಪಾಯಿಗಳಿಗೂ ಕೊಳ್ಳಲಾಗಿದೆ.

ರೈತರಿಗೆ ಹತ್ತಿಯ ಉತ್ತಮ ಬೆಲೆ ದೊರಕುವ ಸಲುವಾಗಿ ಭಾರತೀಯ ಹತ್ತಿ ನಿಗಮ, ಕೇಂದ್ರ ಸರ್ಕಾರಕ್ಕೆ ತಂತಿ ಸಂದೇಶ ಹಾಗೂ ಪತ್ರಗಳ ಮೂಲಕ ಪ್ರಾರ್ಥಿಸಿ ಹೆಚ್ಚು ಹತ್ತಿಯನ್ನು ಕೊಂಡುಕೊಳ್ಳಲು ಕೋರಲಾಗಿದೆ. ಹಾಗೂ ದಿನಾಂಕ 2-1 1993ರಂದು ಭಾರತೀಯ ಹತ್ತಿ ನಿಗಮ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಹಾಗೂ ಹತ್ತಿ ನೂಲು ಗಿರಣಿಯ ಮಹಾ ಮಂಡಳಿ ಇವರೊಂದಿಗೆ ಚರ್ಚಿಸಿ ಅಧಿಕ ಹತ್ತಿಯನ್ನು ಖರೀದಿಸಲು ಒತ್ತಾಯ ಪೂರ್ವಕವಾಗಿ ಕೋರಲಾಗಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಇವತ್ತಿನ ಉತ್ತರ ಕರ್ನಾಟಕದಲ್ಲಿ ಅತಿ ಪ್ರಾಮುಖ್ಯವಾದಂತಹ ಒಂದು ಬೆಳೆ ಅಂದರೆ ಅದು ಹತ್ತಿ ಬೆಳೆ. ಈ ಹಳೇ ಮೈಸೂರಿನಲ್ಲಿ ಪ್ರಾಮುಖ್ಯವಾದ ಬೆಳೆ ಅಂದರೆ ರೇಷ್ಮೆ, ಮಡಕೇರಿ ಕಡೆಯಲ್ಲಿ ಕಾಫಿಬೆಳೆ ಹೆಚ್ಚು ಇದೆ. ಉತ್ತರ ಕರ್ನಾಟಕದಲ್ಲಿ ಕಳೆದ ವರ್ಷ ಹತ್ತಿ ಒಂದು ಕ್ವಿಂಟಾಲಿಗೆ 2,000 ದಿಂದ 2,500ಕ್ಕೆ ಮಾಡಿದ್ದೆವು ಆದರೆ ಇಂದು ಅದನ್ನು 800, 1400 ,1500ಕ್ಕೆ ಮಾರುವ ಪ್ರಸಂಗ ಬಂದಿದೆ. ಇದರಿಂದ ರೈತರಿಗೆ ಬಹಳ ಅನ್ಯಾಯವಾಗಿದೆ. ರಾಜ್ಯದಲ್ಲಿ ಅಥವಾ ರಾಷ್ಟ್ರಗಳಲ್ಲಿ ಬರಗಾಲ ಬಂದಾಗ ದನಗಳನ್ನು ಕಟುಕರಿಗೆ ಅವರು ಕೇಳಿದ್ದಷ್ಟಕ್ಕೆ 50-100 ರೂಪಾಯಿಗಳಿಗೆ ಕೊಡುತ್ತಾರೆ ಹಾಗೆ 1400 ಕ್ಕೆ ಕೊಟ್ಟಿದ್ದಾರೆ. ಅದಕ್ಕೆ ಟೋಕನ್ ತೆಗೆದುಕೊಂಡಿರುತ್ತಾರೆ. ವ್ಯಾಪಾರಸ್ಥರು

ಕೆಲವಕ್ಕೆ 1500, 1400 ರೂಪಾಯಿ ರೇಟ್ ಹಾಕುವುದು ಉಳಿದದ್ದಕ್ಕೆ 1800 ರೂಪಾಯಿಗಳಿಗೆ ಮಾರುತ್ತಾರೆ. ಹೀಗಾಗಿ ರೈತರಿಗೆ ಇವತ್ತು ಬಹಳ ನಷ್ಟವಾಗುತ್ತಿದೆ. ಸಿಸಿಐ ಏನು ಇದೆ ಅದು ನಮ್ಮ ಕರ್ನಾಟಕದಲ್ಲಿ ಮಲತಾಯಿ ಧೋರಣೆಯನ್ನು ತಾಳುವುದಕ್ಕೆ ಪ್ರಾರಂಭ ಮಾಡಿದೆ. ಸಿ.ಸಿ.ಐ.ನ ಮ್ಯಾನೇಜಿಂಗ್ ಡೈರೆಕ್ಟರ್ ಆದ ಎಂ.ಬಿ.ಲಾಲ್ ಅವರು ಪಂಜಾಬ್, ಹರಿಯಾಣ, ಯುಪಿ ತಮಿಳುನಾಡು, ಗುಜರಾತ್ ಇಲ್ಲಿನ ಹತ್ತಿ ಮಾತ್ರ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಫಾರಿನ್ ಎಕ್ಸ್‌ಪೋರ್ಟಿಗೆ ಕಳಿಸುವ ನಮ್ಮ ರಾಜ್ಯದ ಹತ್ತಿಯನ್ನು ಅವರು ತೆಗೆದುಕೊಳ್ಳುತ್ತಿಲ್ಲ, ನಮ್ಮ ಕರ್ನಾಟಕ ರಾಜ್ಯದ ಬೆಳಗಾಂ ಜಿಲ್ಲೆಯ ಬೈಲ ಹೊಂಗಲದ ಹತ್ತಿ 120 ಕೌಂಟ್ ಎಕ್ಸ್‌ಪೋರ್ಟ್ ಆಗತಕ್ಕಂತಹ ಹತ್ತಿ ಇದೆ. ಎಕ್ಸ್‌ಪೋರ್ಟ್ ಹತ್ತಿ ಏನಾದರೂ ಇದ್ದಲ್ಲಿ ಅದು ನಮ್ಮ ಕರ್ನಾಟಕ ರಾಜ್ಯದ ಹತ್ತಿಯೇ. ಇದಕ್ಕೆ ಅನುಕೂಲ ಮಾಡಿಕೊಡುವ ಸಲುವಾಗಿ ಕರ್ನಾಟಕದ ಹತ್ತಿಗೆ ಒಳ್ಳೆ ಮಾರುಕಟ್ಟೆ ಸಿಗಲು ಯಾವ ಕ್ರಮವನ್ನು ಸರಕಾರ ತೆಗೆದುಕೊಂಡಿದೆ ಮತ್ತು ಸಿಸಿಐ ನವರನ್ನು ಕರೆದು ಏನಾದರೂ ಮಾತನಾಡುತ್ತೀರಾ ಹೇಗೆ? ಕರ್ನಾಟಕದಲ್ಲಿರುವಂತಹ ಫೆಡರೇಷನ್ ಏನು ಮಾಡುತ್ತಿದೆ ಅದರ ಬಗ್ಗೆ ವಿಚಾರ ಮಾಡಬೇಕು. ಮಾನ್ಯ ಏರ್ಗೆಯವರು ರೇಟ್ ಕೊಡಿಸುವ ಪ್ರಯತ್ನ ಮಾಡಿದರು. ಅದೇ ರೀತಿ ಮಾನ್ಯ ಕೃಷಿ ಮಂತ್ರಿಗಳೇನಾದರೂ ಮಾಡುತ್ತೀರಾ? ಇನ್ನು ಮುಂದೆ ಏನು ಮಾಡುತ್ತೀರಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ : ಈ ವಿಷಯದಲ್ಲಿ ಮಾನ್ಯ ಸದಸ್ಯರು ಹೇಳಿದಹಾಗೆ, ಈ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಈ ಹತ್ತಿಯನ್ನು ಕೊಳ್ಳುವುದಕ್ಕೆ ಯಾವ ಆಸಕ್ತಿಯನ್ನೂ ತೋರುತ್ತಿಲ್ಲ. ಈಗ ಇರತಕ್ಕಂಥ ಬೆಲೆ ಮಾನ್ಯ ಸದಸ್ಯರು ಹೇಳಿದಷ್ಟು ತೀರ ಕಡಿಮೆಯಾಗಿದೆ ಎಂದು ಹೇಳುವ ಸ್ಥಿತಿಯಲ್ಲಿಲ್ಲ, ಹತ್ತಿ ಬೆಳೆಯ ವ್ಯಾಪಾರದಲ್ಲಿ ಕಳೆದ ವರ್ಷ ಮಾತ್ರ ಒಂದು ವಿಶೇಷವಾದಂಥ ವರ್ಷ ಎನ್ನುವುದನ್ನು ಅವರು ಗಮನಿಸಿದ್ದಾರೆಂದು ನಾನು ಭಾವಿಸುತ್ತೇನೆ. ಈ ವರ್ಷ ಏನಾಗಿದೆ ಎಂದರೆ, ಇವತ್ತು ಬೆಲೆ 1200 ರಿಂದ 1500 ರವರೆಗೆ ಬೆಲೆ ಇದೆ. 1800 ರವರೆಗೆ ಇದನ್ನು ಹೆಚ್ಚು ಮಾಡುವುದಕ್ಕೆ ನಾವು ಪ್ರಯತ್ನ ಮಾಡಿದರೂ ಕೂಡ ಅಲ್ಲಿ ಮಾರ್ಕೆಟ್‌ನಲ್ಲಿ ಮುಂದೆ ಬಂದು ಹತ್ತಿಯನ್ನು ಕೊಳ್ಳುತ್ತಿಲ್ಲ ಎನ್ನುವುದು ನಿಜ. ಆದರೆ ನಮ್ಮ ಮಾರ್ಕೆಟಿಂಗ್ ಫೆಡರೇಷನ್ ಮುಖಾಂತರ ಮಾತು ಕೊಳ್ಳತಕ್ಕಂಥ ವ್ಯವಸ್ಥೆ ಒಂದೇ ಇರುವುದು. ಈಗ ಇರುವ ರೀತಿಯಲ್ಲಿ ಕೊಳ್ಳತಕ್ಕಂಥ ಶಕ್ತಿ ಅವರಿಗೂ ಅಷ್ಟಾಗಿ ಇಲ್ಲ. ಆದರೆ ಅವರು ಏನು ಅಪೇಕ್ಷೆ ಮಾಡುತ್ತಾರೆಂದರೆ ಕರ್ನಾಟಕ ರಾಜ್ಯ ಸರ್ಕಾರದಿಂದಲಾದರೂ ಮುಂಗಡವಾಗಿ ಐದು ಕೋಟಿ ರೂಪಾಯಿಗಳಷ್ಟು ಹಣವನ್ನು ಕೊಟ್ಟರೆ ಅದನ್ನು ಹತ್ತಿ ವ್ಯಾಪಾರದಲ್ಲಿ ಹೆಚ್ಚು ಮೊತ್ತವನ್ನು ನಾವು ಅನುಸರಿಸಿ ಕೊಳ್ಳಬಹುದೆಂದು ಹೇಳಿ ಅವರು ಅಭಿಪ್ರಾಯ ಪಡುತ್ತಿದ್ದಾರೆ. ಇದನ್ನು ಸರ್ಕಾರ ಆಲೋಚನೆ ಮಾಡಬೇಕಾದ್ದು ಅವಶ್ಯಕತೆ ಇದೆ ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇರತಕ್ಕಂಥ ಪರಿಸ್ಥಿತಿ ಹಾಗಿದೆ. ಕಳೆದ ವರ್ಷ 2,800 ರೂಪಾಯಿಗಳವರೆಗೆ ಬೆಲೆ ಹೋಗಿತ್ತು, ಅಂದರೆ ಅದು ಒಂದು ವಿಶೇಷವಾದ ವರ್ಷವೇ. ಒಂದೇ ಸಮನೆ ಅದರ ಬೆಲೆ ಏರಿ ತುದಿಗೆ ಹೋಗಿ ಯಥಾಪ್ರಕಾರ ಕಡಿಮೆ ಬೆಲೆಗೆ ಬಂದಿದೆ ಎನ್ನುವ ಬಗ್ಗೆ ಭಿನ್ನಾಭಿಪ್ರಾಯವಿಲ್ಲ, ಈಗಿರತಕ್ಕಂಥ ಪರಿಸ್ಥಿತಿಯನ್ನು ಸಭೆಯು

ಮುಂದಿಟ್ಟಿದ್ದೇನೆ. ಮಾನ್ಯ ಸದಸ್ಯರು ಯಾವ ರೀತಿ ಸಲಹೆ ಮಾಡುತ್ತಾರೆ, ಏನು ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ಪರ್ಯಾಲೋಚನೆ ಮಾಡುವುದಕ್ಕೆ ಸರ್ಕಾರ ಸಿದ್ಧವಾಗಿದೆ ಎಂದು ತಿಳಿಸಬಯಸುತ್ತೇನೆ.

ಶ್ರೀ ಶಿವಾನಂದ ಹೆಸ್. ಕೌಜಲಗಿ : ಈಗ ಏನಾಗಿದೆ ಎಂದರೆ ತಾವು ಹೇಳಿದಿರಿ. ಹೋದ ವರ್ಷ ದರ ಇತ್ತು ಎನ್ನುವುದನ್ನು ನಾನೂ ಸಹ ಒಪ್ಪುತ್ತೇನೆ. ಅದರ ಬಗ್ಗೆ ಎರಡಿಲ್ಲ, ಆದರೆ ಇವತ್ತಿನ ದಿವಸ ತಾವು 1400 ರೂಪಾಯಿಗೆ ಮಾರುತ್ತಾರೆ. 1500 ರೂಪಾಯಿಗೆ ಮಾರುತ್ತಾರೆ ಪೇಟೆ ಒಳಗೆ ಇದೆ ಎಂದು ಹೇಳುತ್ತೀರಲ್ಲ ಒಂದು ವರ್ಷದ ತನಕ ಅವರು ಉದ್ರಿ ತೆಗೆದುಕೊಳ್ಳುತ್ತಾರೆ. ತಮಗೆ ಇದು ಗೊತ್ತಿಲ್ಲ, ಇವತ್ತಿನದಿವಸ ಮಾರ್ಕೆಟ್‌ನಲ್ಲಿ ಹೋದರೆ ಹಾರ್ಡ್ ಕ್ಯಾಶ್ ಕೊಡುವುದಿಲ್ಲ, 15 ದಿವಸಗಳಿಂದ 20 ದಿವಸಗಳವರೆಗೆ ಕೊಡುವುದಿಲ್ಲ, ಇವತ್ತಿನದಿವಸ ಪರ್ಚೇಸ್ ಮಾಡಿದಂಥ ಕಾಟನ್‌ಗೆ ಪ್ರೈಸ್ ಕೊಡುವುದು ಉದ್ರಿ ಬಿಲ್ ಪೇಮೆಂಟ್ ಮಾಡುವುದೆಂದರೆ 5-6 ತಿಂಗಳು 8 ತಿಂಗಳವರೆಗೆ ನಡೆದಿದೆ. ಅದು ಬಹಳ ಮುಖ್ಯ ಅದರ ಸಲುವಾಗಿ ರೈತರಿಗೆ ಇಷ್ಟೊಂದು ಲಾಸ್ ಆಗಿದೆಯೆಲ್ಲ, ಹೋದ ವರ್ಷಕ್ಕಿಂತಲೂ ಖರ್ಚು ಈ ವರ್ಷ ಹೆಚ್ಚು ಬಂದಿದೆ. ತಾವು ಕೂಡ ಅಗ್ರಿಕಲ್ಚರಿಸ್ಟ್ ಇದ್ದೀರಿ. ತಮಗೆ ಏನು ಕಳಕಳಿ ಇದೆ ಅದರ ಬಗ್ಗೆ ಎರಡಲ್ಲ, ಆದರೆ ಹೋದ ವರ್ಷದಲ್ಲಿ ಖರ್ಚು ಬಹಳ ಬಂದಿದೆ. ಹೋದ ವರ್ಷದ ರೇಟನ್ನು ಹೋಲಿಸಿ ನೋಡಿದಾಗ ಈ ವರ್ಷ ಬಹಳ ಕಡಿಮೆ ಇದೆ. 300 ಕ್ವಿಂಟಾಲ್ ಹತ್ತಿಯನ್ನು ಪಿ.ಸಿ.ಐನವರು ತೆಗೆದುಕೊಳ್ಳುತ್ತಾರೆ. ಆದ್ದರಿಂದ ಅವನು ಇನ್ನೊಂದು ಮಾರಬೇಕು. ಕರ್ನಾಟಕ ಗೌವರ್ನಮೆಂಟ್ ಫೆಡರೇಷನ್‌ನವರು ಏನು ಮಾಡಲಿಕ್ಕೆ ಹತ್ತಿದೆ. ತಾವು ವಿಚಾರ ಮಾಡಬೇಕು. ಅವರು ಏನು ಮಾಡಲಿಕ್ಕೆ ಹತ್ತಿದ್ದಾರೆ? ಇಲ್ಲಿಯವರೆಗೂ ಏತಕ್ಕೆ ತೆಗೆದುಕೊಂಡಿಲ್ಲ, ಅವರೆಲ್ಲರನ್ನು ತಾವು ಕೇಳಬೇಕಾಗುತ್ತದೆ. ಅದಕ್ಕಾಗಿ ದಯವಿಟ್ಟು ಒಂದು ಕಮಿಟಿ ಮಾಡಿ. ಕಮಿಟಿಯನ್ನು ಕರೆಯಿರಿ. ಪಿ.ಸಿ.ಐ. ಫೆಡರೇಷನ್ ಎಲ್ಲರನ್ನು ಕರೆಯಿರಿ. ಅವರು ಯಾವ ಪ್ರಕಾರವಾಗಿ ಹತ್ತಿಯ ಬೆಲೆಯನ್ನು ಫಿಕ್ಸ್ ಮಾಡಿದರು, ಹತ್ತಿಯ ಬಗ್ಗೆ ಪ್ರಾಬ್ಲೆಮ್ ಸಾಲ್ವ್ ಮಾಡಿದರು ಅದೇ ಪ್ರಕಾರ ಮಾಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಸದಸ್ಯರು ಸಲಹೆ ಮಾಡಿದಂತೆ ಅವರು ಯಾಗ ಯಾರ ಹೆಸರನ್ನು ಕೊಡುತ್ತಾರೋ ಆ ಸದಸ್ಯರನ್ನು ಕರೆದು ಒಂದು ಸಭೆ ಮಾಡಿ ಈ ವಿಷಯದ ಬಗ್ಗೆ ಪೂರ್ಣವಾಗಿ ಚರ್ಚೆ ಮಾಡಲು ಸರ್ಕಾರ ಸಿದ್ಧವಾಗಿದೆ. ಆದರೆ ಇವತ್ತು ಸರ್ಕಾರ 5 ಕೋಟಿ ರೂಪಾಯಿಗಳವರೆಗೆ ಅವರಿಗೆ ಸಾಲದ ರೂಪದಲ್ಲಿ ಕೊಟ್ಟರೆ ಮಾತ್ರ ಅವರು ಇನ್ನೂ ಹೆಚ್ಚು ಹತ್ತಿಯನ್ನು ಕೊಳ್ಳುವುದಕ್ಕೆ ಸಿದ್ಧವಾಗಿದ್ದಾರೆಯೇ ಹೊರತು ಇಲ್ಲದಿದ್ದರೆ ಕೊಳ್ಳುವುದಕ್ಕೆ ಸಿದ್ಧವಾಗಿಲ್ಲವೆನ್ನುವುದು ತಮಗೆ ಖಚಿತವಾಗಿ ಗೊತ್ತಿರತಕ್ಕಂಥ ವಿಚಾರ.

ಶ್ರೀ ಬಿ. ಹಂಪನಗೌಡ : ಇವತ್ತಿನ ದಿವಸ ಹತ್ತಿ ಬೆಳೆ ಬಗ್ಗೆ ಸರ್ಕಾರದ ಗಮನ ಸೆಳೆಯುವುದು ಬಹಳ ಅವಶ್ಯಕ ಇದೆ. ಈಗ ತಾನೇ ಮಾನ್ಯ ಸಚಿವರು ಉತ್ತರದಲ್ಲಿ ಹತ್ತಿ ನಿಗಮದಿಂದ ಹತ್ತಿ ಖರೀದಿ ಮಾಡುತ್ತಿವೆಂದು ಹೇಳಿದರು. ಬೈಲಹೊಂಗಲ ಕರ್ನಾಟಕದಲ್ಲಿದೆ, ಸಿಂಧನೂರು ಕರ್ನಾಟಕದಲ್ಲಿದೆ, ಬೈಲಹೊಂಗಲದಲ್ಲಿ ಹತ್ತಿ ನಿಗಮದ ವತಿಯಿಂದ ಹತ್ತಿಯನ್ನು ಖರೀದಿ ಮಾಡುತ್ತಿದ್ದಾರೆ. ಆದರೆ

ಸಿಂಧನೂರು ಎ.ಪಿ.ಎಂ.ಸಿ ಮಾರ್ಕೆಟ್‌ನಿಂದ ಖರೀದಿ ಮಾಡುತ್ತಿಲ್ಲ. ಇದಕ್ಕೆ ಕಾರಣವೇನು? ಹೋದ ವರ್ಷ ಬೆಳೆದ ಹತ್ತಿ ಬೆಳೆಯೂ ಅದೇ, ಈ ವರ್ಷದ್ದು ಅದೇ. ಹೋದ ವರ್ಷ 2 ಸಾವಿರ ರೂಪಾಯಿ ಬೆಲೆ ಏಕೆ? ಈ ವರ್ಷ 1800 ರೂಪಾಯಿ ಬೆಲೆ ಏಕೆ? ಸಿಂಧನೂರು ಕ್ಷೇತ್ರದಲ್ಲಿ ನೆರೆ ಹಾವಳಿಯಿಂದ ರೈತರಿಗೆ ಬಹಳ ಪೆಟ್ಟಾಗಿದೆ. ಸುಮಾರು ಒಂದು ಲಕ್ಷ ಎಕರೆ ನೀರಾವರಿ ಭೂಮಿಯಲ್ಲಿ 30-35 ಸಾವಿರ ಎಕರೆಯಲ್ಲಿ ಬೆಳೆದಂತೆ ಹತ್ತಿ ಬೆಳೆ ನಾಶವಾಗಿದೆ. ಆ ರೈತರಿಗೆ ಸರ್ಕಾರದ ವತಿಯಿಂದ ಏನಾದರೂ ರಸಗೊಬ್ಬರಗಳು ಸಬ್ಸಿಡಿ ರೂಪದಲ್ಲಿ ದೊರೆಯುವುದಾದರೆ ಕೊಡಿಸಿ. ಸಬ್ಸಿಡಿಗಾಗಿ ಕೇಂದ್ರ ಸರ್ಕಾರದಿಂದ 12 ಕೋಟಿ ರೂಪಾಯಿ ಕೂಡ ಖರ್ಚಾಗಿಲ್ಲವೆಂದು ನಿನ್ನೆ ಸದನದಲ್ಲಿ ಹೇಳುತ್ತಿದ್ದಿರಿ. ಆ ಧನಸಹಾಯವನ್ನು ರೈತರಿಗೆ ಒದಗಿಸುವುದಕ್ಕೆ ಸಾಧ್ಯವೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ : ಈಗಾಗಲೇ ಮಾರ್ಕೆಟಿಂಗ್ ಫೆಡರೇಷನ್ ಹತ್ತಿರ ಸುಮಾರು 10-15 ಸಾವಿರ ಬೇಲ್ ಹತ್ತಿ ಸ್ಟಾಕ್ ಇದೆ. ಅದು ವ್ಯಾಪಾರವಾಗುವ ಪರಿಸ್ಥಿತಿಯಲ್ಲಿಲ್ಲ. ಆದರೆ ರೈತರಿಗೆ ಹಿತದೃಷ್ಟಿಯಿಂದ ಇನ್ನು ಹೆಚ್ಚು ಹತ್ತಿ ಕೊಳ್ಳಬೇಕಾದ ಪರಿಸ್ಥಿತಿ ಇದೆ. ಅವರು ಎಷ್ಟರ ಮಟ್ಟಿಗೆ ಇದನ್ನು ಮಾಡುವುದಕ್ಕೆ ಸಿದ್ಧರಾಗಿದ್ದಾರೆಂಬ ಪ್ರಶ್ನೆ ಅವಲಂಬಿಸುತ್ತದೆ. ಮಾನ್ಯ ಸದಸ್ಯರು, ಹತ್ತಿ ಬೆಳೆಯತಕ್ಕ ರೈತರು ಮತ್ತು ಆಸಕ್ತಿಯುಳ್ಳ ರೈತರು ಸೇರಿ ಈ ವಿಷಯವನ್ನು ಪರ್ಯಾಲೋಚನೆ ಮಾಡಿ ಮುಂದೆ ಏನು ಮಾಡಬಹುದೆಂದು ತಿಳಿಸುವುದಕ್ಕೆ ಸಾಧ್ಯವಿದೆ.

ಶ್ರೀ ಬಿ. ಹಂಪನಗೌಡ : ನನ್ನ ಕ್ಷೇತ್ರದಲ್ಲಿ ಹತ್ತಿ ನಿಗಮದಿಂದ ಇದುವರೆಗೆ ಹತ್ತಿ ಖರೀದಿ ಮಾಡುತ್ತಿಲ್ಲ. ಯಾವಾಗ ಮಾಡಿಸುತ್ತೀರಾ?

ಶ್ರೀ ಎಸ್. ಹುಚ್ಚಮಾಸ್ತಿಗೌಡ : ಅವರ ಹತ್ತಿರ 10 ರಿಂದ 15 ಸಾವಿರ ಬೇಲ್ ಹತ್ತಿ ಸಿದ್ಧವಾಗಿದೆ. ಅದೇ ಮಾರಾಟವಾಗುತ್ತಿಲ್ಲ. ಆದುದರಿಂದ, ನೀವು ಖರಾಟ ಮಾಡಲೇಬೇಕೆಂದು ನಾವು ಒತ್ತಾಯ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಫೆಡರೇಷನ್‌ನವರು ಸ್ವತಂತ್ರವಾಗಿ ಇದನ್ನು ಕೊಳ್ಳುವುದಾಗಲಿ ಅಥವಾ ಯಾವ ರೇಟನ್ನು ಕೊಡಬೇಕೆಂಬ ವಿಷಯದಲ್ಲಾಗಲಿ ಅವರಿಗೆ ಪೂರ್ಣ ಸ್ವತಂತ್ರ್ಯ ಇದೆ. ಆದುದರಿಂದ ನಾವು ಒಂದು ಸಭೆ ಸೇರಿ ಯಾವ ರೀತಿ ಮಾಡಬೇಕೆಂದು ಸಮಾಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ.

ಶ್ರೀ ಬಿ. ಹಂಪನಗೌಡ : ಹತ್ತಿ ನಿಗಮದಲ್ಲಿ ಹತ್ತಿ ಹೆಚ್ಚಾಗಿದೆ ಎಂದು ಸಚಿವರು ಹೇಳಿದರು ಹಾಗಾದರೆ ಪರದೇಶದಿಂದ ಏತಕ್ಕೆ ಆಮದು ಮಾಡಿಕೊಳ್ಳುತ್ತಾರೆ?

ಉಪಾಧ್ಯಕ್ಷಿಣಿಯವರು : ಎಷ್ಟು ಕ್ಲಾರಿಫಿಕೇಷನ್ ಕೇಳುವುದು, ಕುಳಿತುಕೊಳ್ಳಿ.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕಂಬಳಿ ತಯಾರಿಸುವ ನೇಕಾರರಿಗೆ ಆಗಿರುವ ತೊಂದರೆ

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕಂಬಳಿ ತಯಾರಿಸುವ ನೇಕಾರರಿಗೆ ಆಗಿರುವ ತೊಂದರೆ ಬಗ್ಗೆ ವಾಣಿಜ್ಯ ಮತ್ತು ಕೈಗಾರಿಕೆ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷಿಣಿಯವರೆ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡ ಬಯಸುತ್ತೇನೆ.

(ಹೇಳಿಕೆ ಲಗತ್ತಿಸಿದೆ)

"ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕಂಬಳಿ ತಯಾರಿಕೆಯಿಂದ ಜೀವಿಸುವ ಕುಟುಂಬದವರಿಗೆ 3000 ಮಗ್ಗಗಳಿದ್ದು, ಉತ್ತಮ ದರ್ಜೆ ಹಾಗೂ 2ನೇ ದರ್ಜೆ ಬಿಳಿ ಬಣ್ಣದ ಉಣ್ಣೆ ಪರದೇಶಕ್ಕೆ ರಫ್ತಾಗುತ್ತಿರುವ ಕಾರಣ ಎಲ್ಲಾ ಮಗ್ಗಗಳೂ ಮುಚ್ಚಿದ್ದು, ಕಂಬಳಿ ತಯಾರಿಕೆಗೆ ತುಂಬಾ ತೊಂದರೆಯಾಗುತ್ತಿರುವ ಬಗ್ಗೆ ಗಮನ ಸೆಳೆದ ಬಗ್ಗೆ ಉತ್ತರ.

ಚಿಕ್ಕನಾಯಕನಹಳ್ಳಿಯಲ್ಲಿ ಒಂದು ಕಂಬಳಿ ಉತ್ಪಾದನಾ ಮತ್ತು ಮಾರಾಟ ಸಹಕಾರ ಸಂಘ ಇದ್ದು ಅದಕ್ಕೆ ಮಂಡಳಿಯು ಬಹಳ ಹಿಂದೆ ಧನಸಹಾಯವನ್ನು ನೀಡಿತ್ತು. ಆದರೆ ಸಂಸ್ಥೆಯು ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದವರು ನಿಗದಿಪಡಿಸಿರುವ ನಿಯಮಗಳಂತೆ ಉತ್ಪಾದನೆ ಮತ್ತು ಮಾರಾಟ ಮಾಡದೆ ಇದ್ದುದರಿಂದ ಮಂಡಳಿಯು ಯಾವ ಹೆಚ್ಚುವರಿ ಸಾಲವನ್ನು ನೀಡಿಲ್ಲ. ಮತ್ತು ಹಿಂದೆ ಬಿಡುಗಡೆ ಮಾಡಿದ ಸಾಲವನ್ನು ಪೂರ್ತಿಯಾಗಿ ವಸೂಲು ಮಾಡಲಾಗಿದೆ. ಸದರಿ ಸಹಕಾರ ಸಂಘ ಮೇಲಿನ ಕಾರಣಕ್ಕೋಸ್ಕರ ಮಂಡಳಿಯ ಸಂಬಂಧವನ್ನು ಕಡಿದುಕೊಂಡಿದೆ.

ಇತ್ತೀಚೆಗೆ ಸಂಸ್ಥೆಯು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮತ್ತು ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಇವರೊಡನೆ ಸಂಬಂಧ ಕಲ್ಪಿಸಲು ಇದ್ದ ನಿಯಮಾವಳಿಗಳು ರದ್ದುಪಡಿಸಿಕೊಂಡು ತಿದ್ದುಪಡಿಯನ್ನು ಮಾಡಿಕೊಂಡಿರುವುದರಿಂದ ಮಂಡಳಿಯ ಕಾರ್ಯವ್ಯಾಪ್ತಿಯಿಂದ ಆಚೆ ಉಳಿದಿದೆ.

ಸಂಸ್ಥೆಯು ಖಾದಿ ಮಂಡಳಿಯ ನಿಯಮದಂತೆ ಕೆಲಸ ಮಾಡುವದಾದರೆ ಅದಕ್ಕೆ ಮಂಡಳಿಯಿಂದ ಎಲ್ಲಾ ಸಹಾಯ ಸವಲತ್ತು ದೊರೆಯುವುವು.

ಮಂಡಳಿಯ ನಿಯಮಗಳನ್ನು ಅನುಸರಿಸುತ್ತಿರುವ ಇತರೆ ಕಂಬಳಿ ಉತ್ಪಾದನಾ ಸಹಕಾರ ಸಂಘಗಳು ನಡೆಯುತ್ತಲಿದ್ದು, ಉಣ್ಣೆ ಅಭಾವದ ಬಗ್ಗೆ ದೂರು ನೀಡಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಈಗ ಮಾನ್ಯ ಸಚಿವರು ಕೊಟ್ಟಂತಹ ಉತ್ತರದಿಂದ ನನಗಂತೂ ತೃಪ್ತಿ ಸಿಗಲಿಲ್ಲ. ನನ್ನ ಮೂಲಭೂತ ಪ್ರಶ್ನೆ ಏನೆಂದರೆ, ಇದು ಒಂದನೆಯ ಮತ್ತು ಎರಡನೆಯ ದರ್ಜೆಯ ಕಂಬಳಿ ಇದೆ, ಅದು ಹೊರದೇಶಗಳಿಗೆ ರಫ್ತಾಗುತ್ತಿರುವ ಕಾರಣ ಕಂಬಳಿ ಇಲ್ಲಿ ಸಿಗುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ ಸಿಕ್ಕತಕ್ಕ ಮೂರನೇ ದರ್ಜೆ ಏನಿದೆ ಆ ದರ್ಜೆಯ ಬೆಲೆ ಸುಮಾರು 8 ರೂಪಾಯಿ ಇರುತ್ತಿದ್ದುದು ಈಗ 20 ರೂಪಾಯಿ ಆಗಿದೆ. ಅದನ್ನು ತೆಗೆದುಕೊಂಡು ಹೋಗಿ ಕಂಬಳಿ ಮಾಡಿದರೆ ಮಾರಾಟ ಮಾಡುವುದಕ್ಕಾಗುವುದಿಲ್ಲ, ಹೀಗಾಗಿ 3 ಸಾವಿರ ಮಗ್ಗಗಳು ಮುಚ್ಚಿಹೋಗಿವೆ.

ಇವತ್ತು ಉಣ್ಣೆ ಸಿಕ್ಕದೇ ಇರುವ ಕಾರಣದಿಂದ ನಿಂತಿದೆ. ರಫ್ತು ಆಗುತ್ತಿರುವುದರಿಂದ ಮುಚ್ಚಿದೆ. ಇವತ್ತು ನೇಕಾರರ ಜೀವನ್ಮರಣದ ಪ್ರಶ್ನೆ ಇದೆ. ಸರ್ಕಾರ "ವಿಶ್ವ" ಕಾರ್ಯಕ್ರಮವನ್ನು ಜಾರಿಗೆ ತರುತ್ತಿರುವಂತಹ ಈ ಸಂದರ್ಭದಲ್ಲಿ ಇಂತಹ ಗೃಹ ಕೈಗಾರಿಕೆಗಳು ಮುಚ್ಚಿಹೋಗುತ್ತಿವೆ. ಈ ನೇಕಾರರ ದೃಷ್ಟಿಯಿಂದ ಕಾರ್ಯಕ್ರಮಗಳು ಏನು? ಕೈಗಾರಿಕೆ ಬಗ್ಗೆ ವಿಚಾರ ಒಂದು ಕಡೆ ಇರಲಿ, ಈ ನೇಕಾರರ ಜೀವನ್ಮರಣದ ಪ್ರಶ್ನೆಗೆ ಏನು ಉತ್ತರ ಎಂದು ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಸದಸ್ಯರ ಜೊತೆ ಮಾತನಾಡಿಕೊಂಡು ಇದಕ್ಕೆ ಒಂದು ಪರಿಹಾರವನ್ನು ಹುಡುಕುತ್ತೇನೆ.

ನಿಯಮ 334ರ ಮೇರೆಗೆ

ಬೆಂಗಳೂರು ನಗರದಲ್ಲಿ ರಸ್ತೆ ಅಪಘಾತಗಳನ್ನು ಹಾಗೂ ಸಂಚಾರ ವ್ಯವಸ್ಥೆಗಳನ್ನು ಉತ್ತಮಪಡಿಸಲು ಉನ್ನತಮಟ್ಟದ ಸಮಿತಿ ರಚನೆ

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಬೆಂಗಳೂರು ನಗರದಲ್ಲಿ ವಾಹನ ಅಪಘಾತಗಳು ಹೆಚ್ಚಾಗುತ್ತಿದ್ದು, ವಾಹನಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದರಿಂದ ಸಂಚಾರ ವ್ಯವಸ್ಥೆಯನ್ನು ಉತ್ತಮಪಡಿಸುವುದು ಅಗತ್ಯವಾಗಿದೆ. ಕೆಲವಾರು ಜಾಗಗಳಲ್ಲಿ ಹೊಸದಾಗಿ ಸಿಗ್ನಲ್ ದೀಪಗಳನ್ನು ಹಾಕಬೇಕಾಗಿದೆ. ಕೆಲವಾರು ರಸ್ತೆಗಳನ್ನು ಅಗಲಮಾಡಬೇಕಾಗಿದೆ ಹಾಗೂ ಕೆಲವು ರಸ್ತೆಗಳಲ್ಲಿ ಏಕಮುಖ ಮಾರ್ಗ ವಿಧಿಸಬೇಕಾಗಿದೆ. ಇದರ ಜೊತೆಗೆ ಕೆಲವು ರಸ್ತೆಗಳಲ್ಲಿ ಕೆಲವಾರು ವಾಹನಗಳ ನಿರ್ಬಂಧವನ್ನು ವಿಧಿಸಬೇಕಾಗಿದೆ. ಆಟೋರಿಕ್ಷಾ ನಿಲ್ದಾಣವನ್ನು ಹಲವಾರು ಭಾಗಗಳಲ್ಲಿ ನಿರ್ಮಿಸಬೇಕಾಗಿದೆ. ಈಗ ಬಸ್ ನಿಲ್ದಾಣಗಳ ಬಳಿಯಲ್ಲಿಯೇ ಆಟೋರಿಕ್ಷಾಗಳು ನಿಲ್ಲಿಸಿ ಬಸ್ ಹತ್ತುವ ಪ್ರಯಾಣಿಕರಿಗೆ ತೊಂದರೆಯುಂಟಾಗಿದೆ. ಆದ್ದರಿಂದ ಬೆಂಗಳೂರು ನಗರದ ರಸ್ತೆ ಸಾರಿಗೆ ವ್ಯವಸ್ಥೆಯನ್ನು ಉತ್ತಮಪಡಿಸಲು ಹಾಗೂ ಅಪಘಾತಗಳನ್ನು ತಪ್ಪಿಸಲು ಬೆಂಗಳೂರು ನಗರದ ಪೋಲೀಸ್ ಕಮೀಷನರ್ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ನೇಮಿಸಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಕೋರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಯವರು) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ಬಗ್ಗೆ ನಿನ್ನೆ ತಾನೆ ಕೆಲವು ಹೇಳಿಕೆಗಳನ್ನು ನಾನು ಕೊಟ್ಟಿದ್ದೆ. ಮೋಟಾರ್ ವೆಹಿಕಲ್ ಆಕ್ಟ್ ಪ್ರಕಾರ ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಕೆಲವು ಉನ್ನತ ಸಮಿತಿಗಳನ್ನು ನಾವು ಮಾಡುತ್ತೇವೆಂದು ಹೇಳಿದ್ದೆ. ಅದನ್ನು ಮಾಡುತ್ತಿದ್ದೇವೆ. ಇನ್ನು ಎರಡನೆಯದಾಗಿ, ಈ ಬೆಂಗಳೂರು ನಗರಕ್ಕೆ ತನ್ನದೇ ಆದ ಸೀಮಿತ ಸಮಸ್ಯೆಗಳು ಇವೆ. ಅವನ್ನು ಪರಿಹಾರ ಮಾಡುವುದಕ್ಕೆ ಮತ್ತು ಇದರ ಬಗ್ಗೆ ಎಲ್ಲಾ ಇಡೀ ಕರ್ನಾಟಕ ರಾಜ್ಯದ ಈ ಅಪಘಾತಗಳನ್ನು ತಪ್ಪಿಸುವ ಬಗ್ಗೆ ಉನ್ನತಾಧಿಕಾರಿಗಳಾದ ದಿನಕರ್‌ರವರು ವರದಿ ಕೊಟ್ಟಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿ ಇವೆ. ವರದಿಯಲ್ಲಿ ಏನು ಶಿಫಾರಸ್ಸು ಮಾಡಿದ್ದಾರೆ ಅದನ್ನು ಅನುಷ್ಠಾನ ಮಾಡುವುದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಮೈಸೂರು ಜಿಲ್ಲೆ ಕೊಳ್ಳೇಗಾಲದ ಕಸಬಾ ಹೋಬಳಿಯ ಕಬಿನಿ ನಾಲೆ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ರೈತರಿಗೆ ಹೆಚ್ಚು ನೀರಾವರಿ ತೆರಿಗೆ

ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಅಧ್ಯಕ್ಷಿಣಿಯವರೇ, ಮೈಸೂರು ಜಿಲ್ಲೆ ಕೊಳ್ಳೇಗಾಲದ ಕಸಬಾ ಹೋಬಳಿಯ ಕಬಿನಿ ನಾಲೆ ಅಚ್ಚುಕಟ್ಟು ಬರುವ ಜಮೀನುಗಳಿಗೆ ನೀರಾವರಿ ತೆರಿಗೆ ಎಕರೆ 1ಕ್ಕೆ 35-00 ರೂಪಾಯಿ ನಿಗದಿ ಮಾಡಿದ್ದರೂ ಸಹ ನೀವು ಅರೆ ಖುಷ್ಕಿ ಬೆಳೆ ಬೆಳೆಯದೆ ಭತ್ತವನ್ನು

ಬೆಳದಿರುವುದರಿಂದ ನೀವು ಶಿಕ್ಷಾರ್ಹರು ಎಂಬು ಹೇಳಿ ಹತ್ತುಪಟ್ಟು ದಂಡ ಅಂದರೆ ಎಕರೆ 1ಕ್ಕೆ ರೂ. 350-00 ದಂಡ ಹಾಕಿರುತ್ತಾರೆ. ಇದರಿಂದ ರೈತರಿಗೆ ಅನ್ಯಾಯವಾಗಿರುವುದರಿಂದಲೂ, ಜಲಾಶಯ ನಿರ್ಮಾಣ ಮಾಡುವಾಗ ಅಚ್ಚುಕಟ್ಟು ಪ್ರಾರಂಭದಿಂದ 50 ಸಾವಿರ ಎಕರೆ ಭತ್ತ ಎಂತಲೂ ಉಳಿದ ಅಚ್ಚುಕಟ್ಟು ಅರೆ ಖುಷ್ಕಿ ಬೆಳೆ ಬೆಳೆಯಬೇಕೆಂಬ ನಿಬಂಧನೆ ಇರುತ್ತದೆ. ಆದರೆ ಜಲಾಶಯದಲ್ಲಿ ಅತಿ ಹೆಚ್ಚಿನ ಪ್ರಮಾಣದ ನೀರಿರುವುದರಿಂದ ಕೇವಲ 50 ಸಾವಿರ ಎಕರೆ ಪ್ರದೇಶದಲ್ಲಿ ಮಾತ್ರ ಭತ್ತ ಬೆಳೆಯಬೇಕೆಂಬ ನಿಬಂಧನೆಯನ್ನು ಸಡಿಲಿಸುವ ಮುಖಾಂತರ ಈಗಿನ ದಂಡವನ್ನು ತಪ್ಪಿಸಬೇಕೆಂದು ಮಾನ್ಯ ಕಂದಾಯ ಸಚಿವರನ್ನು ರೈತರ ಹಿತದೃಷ್ಟಿಯಿಂದ ಆಗ್ರಹಪಡಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಕಬಿನಿ ಬಂದಂತೆ ನಾಲೆಯಲ್ಲಿ ವಿತರಣಾ ನಾಲೆ 1 ರಿಂದ 40 ರವರೆಗಿನ ಅಚ್ಚುಕಟ್ಟು ಪ್ರದೇಶದಲ್ಲಿ ಭತ್ತವನ್ನು ಬೆಳೆಯುವುದೆಂದು ಮತ್ತು ವಿತರಣಾ ನಾಲೆ 41ರಿಂದ 60ರವರೆಗೆ ಅರೆ ಖುಷ್ಕಿ ಬೆಳೆಯುವುದೆಂದು ನಿರ್ಮಾಣಿಸಿ ನಾಲೆಯ ವಿನ್ಯಾಸವನ್ನು ಇದಕ್ಕೆ ಅನುಗುಣವಾಗಿ ತಯಾರಿಸಲಾಗಿದೆ. ವಿತರಣಾ ನಾಲೆ 43ರವರೆಗೆ 1986ರಲ್ಲಿ ನೀರನ್ನು ಹಾಯಿಸಿದ್ದು, ಆ ಸಾಲಿನಿಂದ 5 ವರ್ಷಗಳವರೆಗೆ ನಿಯಮದ ಪ್ರಕಾರ ನೀರಾವರಿ ಕರವನ್ನು ವಿಧಿಸಿರುವುದಿಲ್ಲ. 1991ನೇ ಸಾಲಿನಲ್ಲಿ 42ನೇ ವಿತರಣಾ ನಾಲೆಯಲ್ಲಿ ಸೂಚನೆ (ನೋಟಿಫಿಕೇಶನ್)ಗೆ ವಿರುದ್ಧವಾಗಿ 11,800 ಎಕರೆ ಪ್ರದೇಶದಲ್ಲಿ ಭತ್ತ ಬೆಳೆಯಲಾಗಿದೆ. ಈ ಕ್ರಮವು ಅಧಿಕೃತವಾಗ ಸೂಚಿಸಿದ ನಿಯಮದ ಉಲ್ಲಂಘನೆಯಾಗಿದ್ದು, ನಿಯಮಾವಳಿ ಪ್ರಕಾರ ದಂಡ ಕರವನ್ನು ವಿಧಿಸಲಾಗಿದೆ.

ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ನೌಕರರ ಅಧಿಕಾರಿಗಳಿಗೆ ಮುಂಬಡ್ತಿ

ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಅಧ್ಯಕ್ಷಿಣಿಯವರೇ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ನೌಕರ ಅಧಿಕಾರಿಗಳನ್ನು ಅದರಲ್ಲೂ ಮುಖ್ಯವಾಗಿ ಜಂಟಿ ನಿರ್ದೇಶಕರುಗಳಿಗೆ ಮುಂಬಡ್ತಿ ನೀಡಲು ಹಾಲಿ ದರ್ಜೆ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿದ್ದರೂ ಇಲಾಖೇತರ ಸಿಬ್ಬಂದಿಯನ್ನು ಅವರವರ ಮಾತೃ ಇಲಾಖೆಗೆ ವಾಪಸ್ಸು ಕಳುಹಿಸಿ ಇಲಾಖಾ ನೌಕರರ ಅಧಿಕಾರಿಗಳಿಗೆ ಮುಂಬಡ್ತಿ ನೀಡದಿರುವುದರಿಂದ ಅವರಿಗೆ ಉಂಟಾಗುತ್ತಿರುವ ಅನ್ಯಾಯದ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೇ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 1982ರಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ ಎಸ್‌ಡಬ್ಲ್ಯುಎಲ್ 3 ಬಿಇಟಿ 78 (11)ರಲ್ಲಿ ಅನುಮೋದಿತವಾಗಿದೆ. ಈ ನಿಯಮಗಳ ಪರಿಷ್ಕರಣೆ ಸರ್ಕಾರದ ಪರಿಶೀಲನೆಯಲ್ಲಿದೆ. ಇಲಾಖಾ ಅಧಿಕಾರಿಗಳಿಗೆ ಈ ನಿಯಮಗಳ ಪರಿಷ್ಕರಣೆಯ ನಂತರ ಬಡ್ತಿ ನೀಡುವುದನ್ನ ಪರಿಗಣಿಸಲಾಗುವುದು.

ನಾಲಿ ಕರ್ನಾಟಕ ಆಡಳಿತ ಸೇವೆಯ (ಹಿರಿಯ ಶ್ರೇಣಿಯ) ಅಧಿಕಾರಿಗಳು ಜಂಟಿ ನಿರ್ದೇಶಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಆಡಳಿತ ಹಿತದೃಷ್ಟಿಯಿಂದ ಈ ಅಧಿಕಾರಿಗಳನ್ನು ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸುವವರೆಗೆ ಮುಂದುವರಿಸುವುದು ಅವಶ್ಯವಾಗಿದೆ. ಈ ಕಾರಣಗಳಿಂದ ಇಲಾಖೆಯ ಅಧಿಕಾರಿಗಳಿಗೆ ಬಡ್ತಿ ಪಡೆಯುವಲ್ಲಿ ಅನ್ಯಾಯವಾಗಿದೆ ಎನ್ನುವುದಾಗಿ ಹೇಳುವುದು ಸರಿಯಲ್ಲ.

ನಿರುದ್ಯೋಗಿ ವೈದ್ಯಕೀಯ ಪದವೀಧರರಿಗೆ ಗ್ರಾಮೀಣ ಪ್ರದೇಶದಲ್ಲಿ ನರ್ಸಿಂಗ್ ಹೋಂಗಳನ್ನು ಕಟ್ಟಲು ಕರ್ನಾಟಕ ಹಣಕಾಸು ಸಂಸ್ಥೆಯಿಂದ ಕಡಿಮೆ ಬಡ್ಡಿ ದರದಲ್ಲಿ ಸಾಲ.

SRI SADATH ALI KHAN (CHANNAPATNA) : The Hon'ble Chief Minister be pleased to state that :

a) What are the financial schemes to encourage Private practitioners and unemployed Medical Graduates to look after the health of the public in rural areas apart from government agencies;

b) Why the Nursing Homes constructed in rural areas are not getting less interest rate and subsidies, while other projects like hotels and industries are getting ;

c) The number of persons taken loan from K.S.F.C. in Bangalore Rural District and City for construction of hospitals from 8-1-91 to 9-10-91 the names and other details may be furnished ;

d) How many sanctioned projects from KSFC have refinanced from IDBI from 8-1-91 to 9-10-91 ;

e) What are the norms and duration of IDBI to refinance after the loan sanctioned by KSFC ;

f) Why Dr. B.L. Jayaram, B.J.L. Polyclinic and Nursing Home, Channapatna has not been refinanced by IDBI even after 8 months of sanctioned loan from KSFC on 13-2-91 ; the increased rate of interest applicable for fresh applicants on or after 9-10-91 ;

g) Whether it is a fact that the KSFC has not credited the amount to IDBI at the time of increasing the rate of interest ;

h) Whether it is a fact that Dr. B.L. Jayaram is not liable to pay the increased rate of interest for the sanctioned loan of KSFC which has been sanctioned on 13-2-1991.

i) Why there is no difference between rural and urban in fixing up of interest rate for sanction of loans from KSFC for construction of hospitals.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸಾದತ್ ಅಲಿಖಾನ್‌ರವರು ಹೇಳಿದಹಾಗೆ ನಿರುದ್ಯೋಗಿ

ವೈದ್ಯಕೀಯ ವಿದ್ಯಾರ್ಥಿಗಳಿಗೆ ಹೇಗೆ ಕೊಡಲಿಕ್ಕೆ ಆಗುತ್ತದೆ? ವೈದ್ಯಕೀಯ ಪದವೀಧರರ ಅಪಾಯಿಂಟ್‌ಮೆಂಟ್ ಬಗ್ಗೆ ಆಲೋಚನೆ ಮಾಡೋಣ.

ಮಂಗಳೂರಿನ ಕಂಕನಾಡಿಯಿಂದ ತಲಪಾಡಿ ಗಡಿಯವರೆಗೆ ಓಡುವ ಸಿಟಿ ಎಕ್ಸ್‌ಪ್ರೆಸ್ ಬಸ್‌ಗಳನ್ನು ನಿಲ್ಲಿಸುವುದು ಮತ್ತಿತರ ಬಸ್ಸುಗಳ ವೇಗ ಕಡಿಮೆಗೊಳಿಸುವುದು

ಶ್ರೀ ಬಿ.ಎಂ. ಇದಿನಬ್ಬ (ಉಲ್ಲಾಳ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಂಗಳೂರಿನ ಕಂಕನಾಡಿಯಿಂದ ತಲಪಾಡಿ ಗಡಿವರೆಗೆ 17 ಕಿಲೋಮೀಟರಿನಲ್ಲಿ ವಾಹನ ಸಂಚಾರಿ ಭಾರಿ ವಿಪರೀತ ಇದೆ. ತಲಪಾಡಿವರೆಗೆ 50 ಕ್ಕೂ ಮಿಕ್ಕಿ, ಕೊಣಾಜೆಗೆ 8-10ಕ್ಕೂ ಮಿಕ್ಕಿ, ಉಳ್ಳಾಲಕ್ಕೆ 10ಕ್ಕೆ ಮಿಕ್ಕಿ ಸಿಟಿಬಸ್‌ಗಳು ಓಡಾಡುತ್ತಿವೆ. ಈ ಸಿಟಿ ಬಸ್ಸುಗಳ ಮಿತಿಮೀರಿದ ವೇಗದಿಂದ ಅನೇಕ ಅಪಘಾತಗಳು ಆಗಾಗ ನಡೆದಿದೆ. ಅಲ್ಲದೆ ನಾಲ್ಕೈದು ಎಕ್ಸ್‌ಪ್ರೆಸ್ ಸಿಟಿಬಸ್ಸುಗಳು ಓಡುತ್ತಿವೆ. ಈ ಎಕ್ಸ್‌ಪ್ರೆಸ್ ಬಸ್ಸುಗಳ ತಡೆಯಿಲ್ಲದ ವೇಗದ ಓಟದಿಂದ ಅಪಘಾತಗಳಾಗಿ ಅನೇಕ ಜೀವಗಳು ಹೋಗಿವೆ. ಡಿಸೆಂಬರ್ 30ರಂದು ಉಚ್ಚಿಲದಲ್ಲಿ ಎಕ್ಸ್‌ಪ್ರೆಸ್ ಸಿಟಿಬಸ್ಸಿನಡಿಗೆ ಬಿದ್ದು ಶಾಲಾ ವಿದ್ಯಾರ್ಥಿ ತೀರಿಹೋಗಿದ್ದಾರೆ. ಈ 17 ಕಿಲೋಮೀಟರಿನಲ್ಲಿ ಸಂಖ್ಯೆಗಟ್ಟಲೆ ಶಾಲೆಗಳಿವೆ, ಮದ್ರಸಗಳಿವೆ.

ಆದಕಾರಣ ಈ ಎಕ್ಸ್‌ಪ್ರೆಸ್ ಸಿಟಿಬಸ್ಸುಗಳನ್ನು ನಿಲ್ಲಿಸಿಬಿಡುವುದು ಒಳ್ಳೆಯದು. ಉಳಿದ ಸಿಟಿಬಸ್ಸುಗಳ ವೇಗವನ್ನು ಕಡಿಮೆಗೊಳಿಸಬೇಕು. ಓವರ್‌ಲೋಡ್ ಓವರ್‌ಟೇಕ್ ಮೀತಿಮೀರಿದೆ. ಇದನ್ನು ತಸಿಖೆ ಮಾಡಬೇಕು. ಈ ಕುರಿತು ಸಾರಿಗೆ ಮಂತ್ರಿಗಳನ್ನು ಗಮನವನ್ನು ಸೆಳೆಯುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಕಾರ್ಮಿಕ ಸಚಿವರು) : ಮಾನ್ಯ ಸದಸ್ಯರು ಎತ್ತಿರತಕ್ಕ ವಿಚಾರವನ್ನು ಸಂಬಂಧಪಟ್ಟ ಸಾರಿಗೆ ಸಚಿವರಿಗೆ ತಿಳಿಸಿ ನೀವು ಹೇಳಿದಹಾಗೆ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಸೂಚಿಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕಿರಿಮಂಜೇಶ್ವರ ಗ್ರಾಮದ ಕೊಡೇರಿಗೆ ಸಮುದ್ರ ಕೊರತೆಯಿಂದಾಗುವ ಅನಾಹುತವನ್ನು ತಪ್ಪಿಸಲು ತಡೆಗೋಡೆ

ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಉಪಾಧ್ಯಕ್ಷಿಣಿಯವರೇ, ವಿಪರೀತ ಮಳೆ, ನದಿಪ್ರವಾಹ, ಸಮುದ್ರ ಕೊರೆತದಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕಿರಿಮಂಜೇಶ್ವರ ಗ್ರಾಮದ ಕೊಡೇರಿ ಎಂಬಲ್ಲಿ ಹಿರಿಯ ಪ್ರಾಥಮಿಕ ಶಾಲಾ ನಿವೇಶನ, ಆಟದ ಬಯಲು ಕೊರೆದು ಹೋಗಿ ದಾರಿ ಸಹ ತುಂಡಾಗುವ ಸಂಭವ ಇದೆ. ಕೊರೆದುಹೋದ ಪ್ರದೇಶ ತುಂಬಿಸಿ, ತಡೆಗೋಡೆ ಕಟ್ಟದಿದ್ದಲ್ಲಿ ಶಾಲೆಗೂ, ರಸ್ತೆಗೂ ಅಪಾಯ. ಸಹಸ್ರಾರು ಮೀನುಗಾರರಿರುವ ಕೊಡೇರಿ ಭಾಗ ತುಂಡಾಗ, ದ್ವೀಪವಾಗುವ ಸಂಭವ ಇದೆ. ಈ ಪ್ರಕೃತಿ ವಿಕೋಪದ ಬಗ್ಗ ತುರ್ತು ಕ್ರಮಕ್ಕಾಗಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳನ್ನು ಕೇಳಿಕೊಳ್ಳಲಾಗಿದೆ. ಸಾಕಷ್ಟು ಹಣ ಒದಗಿಸಿ, ಪರಿಹಾರ ಕಾಮಗಾರಿ ಕೂಡಲೇ ಕೈಕೊಳ್ಳುವಂತೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಮಂತ್ರಿ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚಿಸುತ್ತೇನೆ.

ವಿಟ್ಲ ವಿದ್ಯುತ್ ಸಬ್‌ಸ್ಟೇಷನ್ ಕೆಲಸವನ್ನೂ ಆದಷ್ಟು ಬೇಗ ಮುಗಿಸುವ ಬಗ್ಗೆ

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಉಪಾಧ್ಯಕ್ಷರೇ, ನನ್ನ ವಿಟ್ಲ ವಿಧಾನಸಭಾ ಕ್ಷೇತ್ರದ ವಿಟ್ಲ ವಿದ್ಯುತ್ ಸಬ್‌ಸ್ಟೇಷನ್‌ನ ಕಾಮಗಾರಿ ಕೆಲಸ ಪ್ರಾರಂಭವಾಗಿ ಸುಮಾರು ಮೂರು ವರ್ಷ ಸರಿದರೂ ಕೆಲಸ ಇನ್ನೂ ಕೂಡ ಸಂಪೂರ್ಣವಾಗಿರುವುದಿಲ್ಲ. ಈ ಬಗ್ಗೆ ವಿಧಾನಸಭೆಯಲ್ಲಿ ಎರಡು ಸಲ ಪ್ರಶ್ನೆ ಮಾಡಿದಾಗ ಒಂದು ಸಲ ಮಾರ್ಚ್ 1991ನೇ ವರ್ಷಕ್ಕೆ, ಎರಡನೇ ಪ್ರಶ್ನೆ ಮಾಡಿದಾಗ 1991ನೇ ಡಿಸೆಂಬರ್ 31ಕ್ಕೆ ಕಲಸ ಸಂಪೂರ್ಣವಾಗಿ ಪ್ರಾರಂಭವಾಗುವುದಾಗಿ ಉತ್ತರ ಕೊಟ್ಟಿದ್ದರೂ ಕಾಮಗಾರಿ ಕೆಲಸ ನಿಧಾನವಾಗಿ ಸಾಗುತ್ತಾ ಇದೆ. ಹಾಗೂ ಅದಕ್ಕೆ ಬೇಕಾದ ಸಾಮಗ್ರಿಗಳ ಒದಗಣೆ ಕೂಡ ಆಗಿಲ್ಲ. ಇದರಿಂದ ವಿಟ್ಲದ ಆಸೂಪಾಸಿನ ರೈತರು ವಿದ್ಯುತ್ ಕೊರತೆಯಿಂದಾಗಿ ತುಂಬಾ ತೊಂದರೆಯನ್ನು ಅನುಭವಿಸುತ್ತಾ ಇದ್ದಾರೆ. ಹಾಗೂ ಹೊಸ ಸ್ಕೀಮುಗಳ ಕೆಲಸ ಸ್ಥಗಿತಕೊಂಡಿದೆ. ಆದುದರಿಂದ ಸರ್ಕಾರ ಈ ದಿಕ್ಕಿನಲ್ಲಿ ಗಂಭೀರವಾಗಿ ಪರಿಗಣಿಸಿ ವಿಟ್ಲ ವಿದ್ಯುತ್ ಸಬ್ ಸ್ಟೇಷನ್ನಿನ ಕೆಲಸವನ್ನು ಆದಷ್ಟು ಬೇಗ ಮುಗಿಸಬೇಕಾಗಿ ಸರಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ) : ಮಾನ್ಯ ಉಪಾಧ್ಯಕ್ಷಣಿಯವರೇ ನನ್ನ ಹೇಳಿಕೆಯನ್ನು ಓದುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲದಲ್ಲಿ ಮಂಡಳಿಯು ಒಂದು 100 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ನಿರ್ಮಾಣ ಮಾಡುತ್ತಿದೆ. ಈ ಉಪ ವಿದ್ಯುತ್ ಕೇಂದ್ರ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚ 72.62 ಲಕ್ಷ ರೂಪಾಯಿ. ಈ ಸಾಲಿನ (1992-93)ರ ಆಯವ್ಯಯದಲ್ಲಿ ಈ ಕಾರ್ಯಕ್ಕಾಗಿ 55.0 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಸದರಿ ಉಪ ವಿದ್ಯುತ್ ಕೇಂದ್ರದಲ್ಲಿ 10 ಎಂ.ವಿ.ಎ. ಸಾಮರ್ಥ್ಯವುಳ್ಳ ಒಂದು ಪವರ್ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸಲು ಉದ್ದೇಶಿಸಿದೆ. ಈ ಉಪ ವಿದ್ಯುತ್ ಕೇಂದ್ರಕ್ಕೆ ಬೇಕಾಗುವ ಟ್ರಾನ್ಸ್‌ಫಾರ್ಮರ್ ಸ್ವಿಚ್‌ಗೇರ್, ಇತ್ಯಾದಿ ಎಲ್ಲಾ ಉಪಕರಣಗಳನ್ನು ಸರಬರಾಜು ಮಾಡಲಾಗಿದೆ.

ಸದರಿ ಉಪ ವಿದ್ಯುತ್ ಕೇಂದ್ರದ ನಿರ್ಮಾಣದಲ್ಲಿ ಉಂಟಾದ ವಿಳಂಬಕ್ಕೆ ಮುಖ್ಯ ಕಾರ್ಯಗಳು :

1. ಸ್ಥಳವು ಬಹಳ ಗಟ್ಟಿ ಮಣ್ಣಿನಿಂದ ಕೂಡಿದ್ದರಿಂದ, ಸಮತಟ್ಟು ಕಾರ್ಯಕ್ಕೆ ಹೆಚ್ಚು ಸಮಯ ವಿನಿಯೋಗವಾಯಿತು.
2. ಮಳೆಗಾಲದಲ್ಲಿ ನಿರ್ಮಾಣದ ಕಾರ್ಯವು ಕುಂಠಿತಗೊಂಡಿತು.
3. 220ಕೆ.ವಿ.ಡಿ.ಸಿ. ಟವರನ್ನು ಸರಬರಾಜು ಮಾಡುವಲ್ಲಿ ಕೆ.ಇ.ಬಿ. ಕಂಪನಿಯವರು ಮಾಡಿದ ವಿಳಂಬ.

ಈ ಉಪ ವಿದ್ಯುತ್ ಕೇಂದ್ರದ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು ಶೇಖಡ 65 ರಷ್ಟು ಕೆಲಸ ಪೂರ್ಣಗೊಂಡಿದೆ. ಮಾರ್ಚ್ 1993ರ ಅಂತ್ಯದ ವೇಳೆಗೆ ಸದರಿ ಉಪ ವಿದ್ಯುತ್ ಕೇಂದ್ರವನ್ನು ಚಾಲನೆ ಗೊಳಿಸಲು ಮಂಡಳಿಯು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ.

ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58ರಿಂದ 55ಕ್ಕೆ ಇಳಿಸುವ ಬಗ್ಗೆ ಪರಿಶೀಲನೆ

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪಾಧ್ಯಕ್ಷರೇ, ಹಿಂದಿನ ಸರ್ಕಾರವು ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58ರಿಂದ 55ಕ್ಕೆ ಇಳಿಸುವ ಬಗ್ಗೆ ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದರು. ಹೀಗಾಗಿ ನೌಕರರು ಈ ಬಗ್ಗೆ ಸರ್ಕಾರದ ದೃಢವಾದ ನಿರ್ಧಾರವನ್ನು ತಿಳಿಯಬಯಸುತ್ತಾರೆ. ಏಕೆಂದರೆ ಈ ಬಗ್ಗೆ ನೌಕರರು ಮೆರವಣಿಗೆ ಮೂಲಕ ಜಿಲ್ಲಾಧಿಕಾರಿಗಳಿಗೆ ವಯಸ್ಸನ್ನು 58ರಿಂದ 55ಕ್ಕೆ ಮಾಡಬಾರದೆಂದು ಮನವಿಯನ್ನು ಕೊಡಲಿಕ್ಕೆ ಹತ್ತಿರುತ್ತಾರೆ. ಆದಕಾರಣ, ಈ ಹೊಸ ಸರ್ಕಾರದ ನಿರ್ಧಾರವನ್ನು ಕೂಡಲೇ ಪ್ರಕಟಿಸಿ ನೌಕರರ ಮನಸ್ಸಿನಲ್ಲಿರುವ ಸಂದೇಹವನ್ನು ಹೋಗಲಾಡಿಸಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ) : ಮಾನ್ಯ ಉಪಾಧ್ಯಕ್ಷಿಣಿಯವರೇ, ನನ್ನ ಹೇಳಿಕೆಯನ್ನು ಓದಲು ತಮ್ಮ ಅಪ್ಪಣೆ ಕೋರುತ್ತೇನೆ.

ಮಾನ್ಯ ರಾಜ್ಯಪಾಲರು ಎರಡು ಸದನಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ರಾಜ್ಯದ ಆಡಳಿತದಲ್ಲಿ ಪಂಚಸೂತ್ರಗಳನ್ನು ಅಳವಡಿಸಲು ಪ್ರಸ್ತಾಪಿಸಿದ್ದು, ಅದಕ್ಕನುಗುಣವಾಗಿ ಕರ್ನಾಟಕ ಸಿವಿಲ್ ಸೇವಾ ಕಾಯ್ದೆ 1978ನ್ನು 2-4-92ರಿಂದ ಜಾರಿಗೆ ತರಲಾಗಿದೆ. ಈ ಕಾಯ್ದೆಯನ್ವಯ ರಾಜ್ಯ ಸರ್ಕಾರಿ ನೌಕರರ ಸೇವಾ ಷರತ್ತುಗಳನ್ನು ರಚಿಸಲು ಅವಕಾಶವನ್ನು ಕಲ್ಪಿಸಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಾಲ್ಕು ಜನ ಅಧಿಕಾರಿಗಳ ಒಂದು ಸಮಿತಿಯನ್ನು ನಿಯಮಗಳನ್ನು ಸರಳ ಗೊಳಿಸಲು ರಚಿಸಿದೆ. ಈ ಸಮಿತಿಯು ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 1992ನ್ನು ಸರ್ಕಾರಕ್ಕೆ ಸಲ್ಲಿಸಿತ್ತು.

ಸದರಿ ಸಮಿತಿಯು ಸಲ್ಲಿಸಿದ್ದು ಕರಡು ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ ಕಾಯ್ದೆ 1978ರ ಪ್ರಕಾರ ಅಧಿಸೂಚನೆಯ ಸಂಖ್ಯೆ ಡಿಪಿಎಆರ್ 6 ಎಸ್‌ಆರ್‌ಸಿ 92, ದಿನಾಂಕ 19-10-92ನ್ನು ಕರ್ನಾಟಕ ರಾಜ್ಯ ವಿಶೇಷ ಪತ್ರಿಕೆಯಲ್ಲಿ ದಿನಾಂಕ 4-11-92ರಂದು ಸಂಬಂಧಪಟ್ಟವರಿಂದ ಕರಡು ನಿಯಮಗಳಿಗೆ ಆಕ್ಷೇಪಣೆ ಮತ್ತು ಸಲಹೆಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿತ್ತು. ಈ ಬಗ್ಗೆ ಆಕ್ಷೇಪಣೆ ಸಲಹೆಗಳನ್ನು ಸಲ್ಲಿಸಲು ದಿನಾಂಕ 4-12-92 ಕೊನೆಯ ದಿನಾವಾಗಿತ್ತು. ಈಗ ಪ್ರಕಟಿಸಲಾಗಿದ್ದ ಕರಡು ನಿಯಮಗಳಲ್ಲಿ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮ 1977 ಮತ್ತು 11 ನಿಯಮಗಳನ್ನು ನಿರಶನಗೊಳಿಸಲು ಉದ್ದೇಶಿಸಲಾಗಿದೆ. ಈ ಕರಡು ನಿಯಮಗಳಲ್ಲಿ ಇನ್ನಿತರ ನಿಯಮಗಳ ಜೊತೆ, ಪ್ರತಿಯೊಬ್ಬ ಸರ್ಕಾರಿ ನೌಕರನು ಆತನಿಗೆ 58 ವರ್ಷ ವಯಸ್ಸು ಆದ ದಿನಾಂಕದಂದು ಅಥವಾ 33 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದಂದು ಇವುಗಳಲ್ಲಿ ಯಾವುದು ಮೊದಲೋ, ಆ ದಿನದಂದು ವಯೋನಿವೃತ್ತಿಯ ಮೇಲೆ ಸೇವೆಯಿಂದ ನಿವೃತ್ತನಾಗತಕ್ಕದ್ದು. ಮತ್ತು ವಯೋ

ನಿವೃತ್ತಿಯ ದಿನಾಂಕವು ತಿಂಗಳ ಮೊದಲನೆಯ ದಿನಾಂಕದಿಂದಲ್ಲದೆ ಬೇರೆ ದಿನಾಂಕದಂದು ಬಂದ ಸಂದರ್ಭದಲ್ಲಿ ಆತನು ಆ ತಿಂಗಳ ಕೊನೆಯ ದಿನದಂದು ಅಥವಾ ಆ ತಿಂಗಳ ಕೊನೆಯ ಕೆಲಸದ ದಿನಾಂಕದಂದು ನಿವೃತ್ತನಾಗತಕ್ಕದ್ದು ಎಂದು ಅಳವಡಿಸಲಾಗಿದೆ.

ಈ ಕಂಡು ನಿಯಮಗಳಿಗೆ ರಾಜ್ಯ ಸರ್ಕಾರಿ ನೌಕರರ ಸಂಘಗಳಿಂದ, ವಿವಿಧ ಸರ್ಕಾರಿ, ಸಾರ್ವಜನಿಕರಿಂದ ಆಕ್ಷೇಪಣೆ ಸಲಹೆಗಳು ಬಂದಿವೆ. ಶೇಕಡಾ 98ರಷ್ಟು ಆಕ್ಷೇಪಣೆಗಳು ಕಂಡು ನಿಯಮಗಳಲ್ಲಿ ಸರ್ಕಾರಿ ನೌಕರರ ಈಗ ಉದ್ದೇಶಿಸಲಾಗಿರುವ ನಿವೃತ್ತಿಯ ಮತ್ತು ಕನಿಷ್ಟ ವಯೋಮಿತಿಗೆ ಸಂಬಂಧಿಸಿದ ನಿಯಮಗಳನ್ನು ಕೈಬಿಡಬೇಕೆಂದು ಬಂದಿವೆ.

ಸರ್ಕಾರವು ಈ ಎಲ್ಲಾ ಆಕ್ಷೇಪಣೆ ಸಲಹೆಗಳನ್ನು ಸಮಗ್ರವಾಗಿ ಪರಿಶೀಲಿಸಿದ ನಂತರ ಈ ಬಗ್ಗೆ ಅಂತಿಮ ನಿರ್ಣಯ ಕೈಗೊಳ್ಳಬೇಕಾಗಿದೆ.

ವಿತ್ತೀಯ ಕಾರ್ಯಕಲಾಪಗಳು

1992-93ರ ಅನುಪೂರಕ ಅಂದಾಜುಗಳನ್ನು ಒಪ್ಪಿಸುವುದು

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, ಭಾರತದ ಸಂವಿಧಾನದ 205(1)ನೇ ಅನುಚ್ಛೇಧದ ಮೇರೆಗೆ 1992-93ನೇ ಸಾಲಿಗೆ ಸಂಬಂಧಿಸಿದಂತೆ, ಅನುಪೂರಕ ಅಂದಾಜು (ಎರಡನೇ ಕಂತು) ಗಳನ್ನೊಪ್ಪಿಸುತ್ತಿದ್ದೇನೆ.

ಉಪಾಧ್ಯಕ್ಷಿಣಿಯವರು : ಒಪ್ಪಿಸಲಾಯಿತು.

ವರದಿಗಳನ್ನೊಪ್ಪಿಸುವುದು

ಶ್ರೀ ಕೆ.ಹೆಚ್. ಹನುಮೇಗೌಡ (ಅಧ್ಯಕ್ಷರು, ಅಂದಾಜುಗಳ ಸಮಿತಿ) : ಮಾನ್ಯ ಉಪಾಧ್ಯಕ್ಷರೇ, 1992-93ನೇ ಸಾಲಿನಲ್ಲಿ ನರ್ಸಿಂಗ್ ಶಾಲೆಗಳು ಹಾಗೂ ಕಾಲೇಜುಗಳನ್ನು ಮತ್ತು ಫಾರ್ಮಸಿ ಕಾಲೇಜುಗಳು ಹಾಗೂ ಶಾಲೆಗಳ ಮಂಜೂರಾತಿಯ ಬಗ್ಗೆ ಮಧ್ಯಕಾಲೀನ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷಿಣಿಯವರು : ಈಗ ಸಭೆ ಮುಂದೂಡಲ್ಪಟ್ಟು ಮತ್ತೆ 3.00 ಗಂಟೆಗೆ ಸಮಾವೇಶಗೊಳ್ಳುವುದು.

(ಸಭೆಯು ಮಧ್ಯಾಹ್ನ 3-10ಕ್ಕೆ ಸಮಾವೇಶಗೊಂಡಿತು)

ಮಾನ್ಯ ಉಪಾಧ್ಯಕ್ಷಿಣಿಯವರು (ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿಯವರು ಪೀಠದಲ್ಲಿ ಉಪಸ್ಥಿತರಿದ್ದರು)

ಉಪಾಧ್ಯಕ್ಷಿಣಿಯವರು : ಈಗ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ.

ರಾಮಜನ್ಮಭೂಮಿ, ಬಾಬ್ರಿಮಸೀದಿ ಘಟನೆಗಳ ಬಗ್ಗೆ ನಡೆದ ಚರ್ಚೆಗಳ ಮುಖ್ಯ ಮಂತ್ರಿಯವರಿಂದ ಉತ್ತರ

+ ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷಿಣಿಯವರೆ, ಅಯೋಧ್ಯೆಯ ಬಾಬ್ರಿ ಮಸೀದಿ ಮತ್ತು ರಾಮಜನ್ಮಭೂಮಿ ಇವರ ಘಟನೆ ಬಗ್ಗೆ ದೀರ್ಘವಾದ ಚರ್ಚೆಯನ್ನು ಈ ಸದನದಲ್ಲಿ ಮಾಡಿದ್ದೇವೆ.

ಅನೇಕ ಸಸ್ವಾನ್ಯ ನಾಯಕರು, ಬೇರೆ ಬೇರೆ ಪಕ್ಷಗಳಿಗೆ ಸೇರಿದವರು ಮತ್ತು ಮಾನ್ಯ ಸದಸ್ಯರು ಈ ಬಗ್ಗೆ ನಾನಾ ಪ್ರಕಾರಗಳ ವಿಶ್ಲೇಷಣೆ ಮಾಡಿದ್ದನ್ನು ಬಹಳ ಗಮನದಿಂದ ನಮ್ಮ ಸರ್ಕಾರ ಪರಿಶೀಲನೆ ಮಾಡಿದ ಮತ್ತು ಏನು ಈ ಚರ್ಚೆ ನಡೆದಿದೆ ಇದೊಂದು ರೀತಿಯ ವೈಶಿಷ್ಟ್ಯ ಪೂರ್ಣವಾದ ಚರ್ಚೆಯಾಗಿದೆ. ಬಹುಶಃ ಒಂದು ರಾಷ್ಟ್ರೀಯ ಸಮಸ್ಯೆ ಬಗ್ಗೆ ಸ್ವತಂತ್ರ ಭಾರತದಲ್ಲಿ ಈ ರೀತಿ ಚರ್ಚೆ ಈ ಸದನದಲ್ಲಿ ಈವರೆಗೆ ಕೂಡ ನಡೆದಿಲ್ಲ, ಸ್ವತಂತ್ರ ಭಾರತದಲ್ಲಿ ಇದು ಒಂದು ಹೊಸ ಅಧ್ಯಾಯ. ಸದನದಲ್ಲಿ ಅಂಥ ಒಂದು ಚರ್ಚೆ ಪ್ರಾರಂಭವಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ, ವಿಷಯ ಖಂಡಿತವಾಗಿ ಬಹಳ ಗಂಭೀರವಾದುದಾಗಿದೆ. ಹಾಗೂ ಮಾನ್ಯ ಸದಸ್ಯರ ಕಳಕಳಿ ಕೂಡ ಅಷ್ಟೇ ಗಂಭೀರವಾಗಿದೆ. ಯಾವುದೇ ವಿಚಾರ ಭೇದ ಇರಬಹುದು. ವಿಚಾರ ಭೇದ ಇದ್ದರೂ ಸದಸ್ಯರ ಕಳಕಳಿ ಗಣನೆಗೆ ತೆಗೆದುಕೊಳ್ಳಬೇಕಾದುದಾಗಿದೆ. ಆದರೆ ಈ ಚರ್ಚೆ ಉತ್ತರ ಭಾರತದಿಂದ ವಿಂಧ್ಯಪರ್ವತದ ಕೆಳಗೆ ಇಳಿಯಲಿಲ್ಲ, ಸಾದಾರಣವಾಗಿ ಅದರ ಮೇಲುಗಡೆ ವಿಚಾರಗಳು ಬಹಳ ಚರ್ಚೆಯಾಗಿವೆ. ಈ ಚರ್ಚೆಯ ಎಲ್ಲಾ ಘಟನೆಗಳನ್ನು ನಾನು ಹೆಚ್ಚು ವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ. ಆದರ ನಮ್ಮ ಸರ್ಕಾರ ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದೆ ಎಂಬುದನ್ನು ಮೊದಲು ನಾನು ಹೇಳಿ, ಆಮೇಲೆ ಮಾನ್ಯ ಸದಸ್ಯರು ಹೇಳಿದ ವಿಚಾರಗಳಿಗೆ ಬರುತ್ತೇನೆ.

ಇಲ್ಲಿ ಡಿಸೆಂಬರ್ 6ರಿಂದ 15ರವರೆಗೆ ಏನು ಘಟನೆ ನಡೆದಿದೆ ಅದರಲ್ಲಿ ಸುಮಾರು 78 ಜನ ಪ್ರಾಣ ಕಳೆದುಕೊಂಡಿದ್ದಾರೆ. ಸುಮಾರು 606 ಸಿವಿಲಿಯನ್ಸ್, 250 ಪೋಲೀಸ್ ಪರ್ಸನಲ್ಸ್ ಗಾಯಗೊಂಡಿದ್ದಾರೆ. ಆಸ್ತಿಪಾಸ್ತಿ ನಷ್ಟ ಲೆಕ್ಕ ಹಾಕಿದ ಪ್ರಕಾರ ಸುಮಾರು 9 ಕೋಟಿ ರೂಪಾಯಿನಷ್ಟು ನಷ್ಟವಾಗಿದೆ. ಪೂಜಾ ಸ್ಥಳಗಳು, ಮಸೀದಿಗಳು ಇರಬಹುದು, ದೇವಸ್ಥಾನಗಳು ಇರಬಹುದು, ಅಲ್ಲಿ ಆದ ನಷ್ಟ ಸುಮಾರು 35 ಲಕ್ಷ ರೂಪಾಯಿಗಳು. ನಾವು ಇಲ್ಲಿಯವರೆಗೆ ಕೊಟ್ಟಂಥ ಪರಿಹಾರ ಸುಮಾರು 78 ಲಕ್ಷ ರೂಪಾಯಿಗಳು. ಯಾರು ಮರಣ ಹೊಂದಿದ್ದಾರೆ ಅವರ ಸಂಬಂಧಿಕರಿಗೆ ನಾವು ಈಗಾಗಲೇ ಪರಿಹಾರ ಕೊಟ್ಟಿದ್ದೇವೆ. ಸುಮಾರು 8 ಲಕ್ಷ ರೂಪಾಯಿಗಳನ್ನು ಗಾಯಗೊಂಡವರಿಗೆ ಕೊಟ್ಟಿದ್ದೇವೆ. ಸುಮಾರು 115 ಲಕ್ಷ ರೂಪಾಯಿಗಳನ್ನು ಎಕ್ಸ್‌ಗ್ರೇಷಿಯಾ ಆಸ್ತಿ ನಷ್ಟವಾದುದಕ್ಕೆ ವಿತರಣೆಯಾಗಿದೆ. 146 ಪೂಜಾ ಸ್ಥಳಗಳು, ದೇವಸ್ಥಾನ ಮಸೀದಿ ಎರಡೂ ಸೇರಿ ಕೆಲವು ಪಾರ್ಷಿಯಲ್ ಡ್ಯಾಮೇಜ್, ಕೆಲವು ಪೂರ್ತಿ ಡ್ಯಾಮೇಜ್ ಆಗಿವೆ. 64 ಪೂಜಾ ಸ್ಥಳಗಳನ್ನು ದುರಸ್ಥಿ ಮಾಡಿ ಯಥಾಸ್ಥಿತಿಗೆ ತಂದಿದ್ದೇವೆ.

ಒಟ್ಟು ಇದಕ್ಕೆ ಖರ್ಚಾದ ಹಣ 35 ಲಕ್ಷ ರೂಪಾಯಿಗಳು. ನಾವು ಇಲ್ಲಿಯವರೆಗೆ ಎಲ್ಲಾ ಬಾಬ್ತಿನಲ್ಲಿ ಒದಗಿಸಿದ ಒಟ್ಟು ಪರಿಹಾರದ ಹಣ 2,36,000.00 ರೂಪಾಯಿಗಳು. ಯಾರಾದರೂ ಕೋಮು ಗಲಭೆಯಲ್ಲಿ ಸತ್ತರೆ ಅವರ ಹತ್ತಿರದ ಸಂಬಂಧಿಕರಿಗೆ 50 ಸಾವಿರ ರೂಪಾಯಿ ಕೊಡಬೇಕು ಎಂದು ಏನು ಇತ್ತು ಅದನ್ನು 1 ಲಕ್ಷ ರೂಪಾಯಿಗಳಿಗೆ ಏರಿಸಿದ್ದೇವೆ. ಇದರಲ್ಲಿ ಪ್ರಧಾನಿಗಳು ಸುಮಾರು 23 ಲಕ್ಷ 50 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ.

20 ಸಾವಿರ ರೂಪಾಯಿವರೆಗೆ ಏನು ನಷ್ಟವಾಗಿರುತ್ತದೆ ಅದನ್ನು ನಗವಾಗಿ ಕೊಡುವ ವ್ಯವಸ್ಥೆ ಜಿಲ್ಲಾಧಿಕಾರಿಗಳು ಮಾಡಿದ್ದಾರೆ. 20 ಸಾವಿರಕ್ಕಿಂತ ಹೆಚ್ಚು ಆಸ್ತಿಪಾಸ್ತಿ ನಷ್ಟವಾಗಿದ್ದರೆ ನಾವು ಈಗುಗಲೇ ಎಲ್ಲಾ ಜಿಲ್ಲಾಧಿಕಾರಿಗಳು ಬ್ಯಾಂಕುಗಳವರನ್ನು ಕರೆದು ಅವರ ಜೊತೆ ಸಮಾಲೋಚನೆ ಮಾಡಿ ಅವರಿಗೆ ಸಾಲ ಕೊಡಿಸಿ ಮತ್ತು ಅದಕ್ಕೆ ಏನು ಬಡ್ಡಿ ಆಗುತ್ತದೆಯೋ ಆ ಸಂಪೂರ್ಣ ಬಡ್ಡಿಯನ್ನು ರಾಜ್ಯ ಸರ್ಕಾರ ಭರ್ತಿ ಮಾಡುವುದಕ್ಕೆ ನಾವು ಒಪ್ಪಿದ್ದೇವೆ. ಎಲ್ಲಾ ಜಿಲ್ಲೆಗಳ ಈ ಕಾರ್ಯಕ್ರಮ ನಡೆಯುತ್ತಿದೆ. ಎಲ್ಲೆಲ್ಲಿ ದುರ್ಬಲವರ್ಗದವರ ಮನೆ ಹಾಳಾಗಿದೆ ಅದನ್ನು ಕಟ್ಟಿಕೊಡುವುದಕ್ಕೆ ಮತ್ತು ಸೈಟ್ ಮುಫತ್ತಾಗಿ ಕೊಡುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇಷ್ಟು ಮಾತ್ರ ಅಲ್ಲ, ಇನ್ನೊಂದು ವಿಶೇಷ ಎಂದರೆ, ಯಾರಿಗೆ ಸಂಪೂರ್ಣ ಗಾಯ ಆಗಿ ಮುಂದೆ ಯಾವುದೇ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ, ಅವನ ಜೀವನೋಪಾಯಕ್ಕೆ ಆತ ದುಡಿಯಲು ಅಶಕ್ತನಾಗಿರತಕ್ಕ ಪ್ರಸಂಗದಲ್ಲಿ ನಾವು ಸರ್ಕಾರ ಇವತ್ತು ಘೋಷಣೆ ಮಾಡತಕ್ಕದ್ದು ಇದೆ. ಅವರು ಸಂಪೂರ್ಣವಾಗಿ ಮುಂದೆ ಕೆಲಸ ಮಾಡಲು ಆಗದಿದ್ದರೆ ಅವರಿಗೆ ಅಥವಾ ಅವರಿಗೆ ಯಾರು ಯಾರು ಹೊಂದಿಕೊಂಡಿದ್ದಾರೋ ಅವರಿಗೆ ಬೇರೆ ಸಂಪಾದನೆ ಮಾಡಿ ಬದುಕತಕ್ಕ ಅಂದರೆ ಸಂಪಾದನೆಗೆ ದಾರಿ ಇಲ್ಲದೇ ಇದ್ದರೆ 250 ರೂಪಾಯಿ ತಿಂಗಳಿಗೆ ಮಾಸಾಶನ ಕೊಡುವುದಕ್ಕೆ ನಿರ್ಣಯ ಮಾಡಿದ್ದೇವೆ.

ಇದು ಹೊಸ ಪರಿಹಾರದ ಕಾರ್ಯಕ್ರಮ. ಮತ್ತು ಯಾರಾದರೂ ತೀರಿಹೋಗಿದ್ದರೆ, ಬೇರೆ ಆದಾಯ ಇಲ್ಲದೇ ಇದ್ದರೆ ಅವರ ಸಂಬಂಧೀಕರಿಗೆ ಅಂದರೆ ತೀರಿ ಹೋದವರ ಮನೆಗೆ ಒಂದು ಕೆಲಸ ಕೊಡತಕ್ಕ ಒಂದು ನಿರ್ಣಯ ನಾವು ಸರ್ಕಾರದಿಂದ ಮಾಡಿದ್ದೇವೆ. ಇನ್ನು ಈ ಕೋಮುಗಲಭೆಯಲ್ಲಿ ಯಾರು ತೀರಿಹೋಗಿರುತ್ತಾರೆ ಅವರ ಸಂಬಂಧೀಕರಿಗೆ ಮತ್ತು ಅವರನ್ನು ಹೊಂದಿಕೊಂಡ ಮಕ್ಕಳಿಗೆ 18 ವರ್ಷದ ವಯಸ್ಸಿಗೆ ಬರುವವರೆಗೆ ತಿಂಗಳಿಗೆ 375 ರೂಪಾಯಿಗಳ ಪ್ರಕಾರ National Foundation for Communal Harmony ಎಂದು ಹೇಳಿ ಏನು ನಿಧಿಯನ್ನು ಕೇಂದ್ರ ಸರ್ಕಾರ ನಿಗದಿ ಮಾಡಿದೆ, ಅದರಿಂದ ಕೊಡಿಸುವುದಕ್ಕೆ ನಾವು ಕಾರ್ಯಕ್ರಮ ಮಾಡುತ್ತಿದ್ದೇವೆ. 18ನೇ ವಯಸ್ಸಿನವರೆಗೂ ಪ್ರತಿ ತಿಂಗಳಿಗೆ 375 ರೂಪಾಯಿ ಅವರಿಗೆ ಸಲ್ಲುತ್ತದೆ. ಆದರೆ ಇದರಲ್ಲಿ ಇನ್‌ಕಮ್ ಲಿಮಿಟ್ ಇದ್ದು 11,500 ರೂಪಾಯಿಗಳವರೆಗೆ ಆದಾಯ ಇರುವವರಿಗೆ ಮಾತ್ರ ಅನ್ವಯಿಸುತ್ತದೆ. ಈಗ ಗಲಭೆ ವಿಚಾರದಲ್ಲಿ ಯುದ್ಧೋಪಾದಿಯಲ್ಲಿ ಪರಿಹಾರ ಒದಗಿಸಬೇಕೆಂದು ಈಗಾಗಲೇ ಎಲ್ಲರಿಗೂ ಕೂಡ ಅಂದರೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಮ್ಮ ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟಿದ್ದೇವೆ. ಇನ್ನು ವಿಶೇಷವಾಗಿ ನಮ್ಮಲ್ಲಿ ಇಂತಹ ಘಟನೆಗಳು ನಡೆಯುವ ಮೊದಲು ನಾವು ಕೆಲವು ತಯಾರಿ ಮಾಡಿದ್ದೇವೆ. ರಾಜ್ಯ ಮಟ್ಟದಲ್ಲಿ ನಾನೇ ವಿರೋಧ ಪಕ್ಷದ ತಮ್ಮನ್ನೂ ಕೂಡ ಕರೆಯಿಸಿ ಮಾತನಾಡಿದೆ.

ದಿನನಿತ್ಯ ಮೈನಾರಿಟಿ ಲೀಡರ್‌ಗಳನ್ನು ಧಾರ್ಮಿಕ ಸಂಸ್ಥೆಗಳಿಗೆ ಸೇರಿದಂತಹ ಎಲ್ಲಾ ಜನರನ್ನು ಎಲ್ಲಾ ಧರ್ಮಕ್ಕೆ ಸೇರಿದಂತಹ ಎಲ್ಲಾ ಜನಗಳನ್ನು ನಾವಿಲ್ಲಿ ಕರೆಯಿಸಿ ಮಾತುಕತೆ ಮಾಡಿದ್ದೇವೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಜಿಲ್ಲಾಧಿಕಾರಿಗಳು

ತಾಲ್ಲೂಕ ಮಟ್ಟದಲ್ಲಿ ತಾಲ್ಲೂಕು ಮ್ಯಾಜಿಸ್ಟ್ರೇಟರ್ ಆ ಕೆಲಸ ಮಾಡಿದ್ದಾರೆ. ಈ ಕೆಲಸ ಒಂದು ಕಡೆ ನಡೆದಿದೆ. ಡಿಸೆಂಬರ್ 6ನೇ ತಾರೀಖು ಅಯೋಧ್ಯೆಯಲ್ಲಿ ಏನು ಘಟನೆ ನಡೆಯಿತು ಅದರ ಪರಿಣಾಮವಾಗಿ ಬಿಬಿಸಿ, ಸ್ಟಾರ್ ಟಿ.ವಿಯನ್ನು ನೋಡಿ ಕೇಳಿದ್ದರಿಂದ ಪ್ರಾಥಮಿಕವಾಗಿ ಸ್ವಲ್ಪ ಉದ್ರೇಕ ಬಂತು. ಬಹುಶಃ ಕರ್ನಾಟಕ ರಾಜ್ಯದಲ್ಲಿ ನಾವು ಕಟ್ಟುನಿಟ್ಟಾದಂತಹ ಒಂದು ಆದೇಶ ಕೊಡದಿದ್ದರೆ ಪರಿಸ್ಥಿತಿ ವಿಪರೀತ ಬಿಗಡಾಯಿಸುತ್ತಾ ಇತ್ತು. There would have been a holocaust both in Bangalore City and many other places.

ಸಾರ್ವಜನಿಕ ಸಹೃದಯ ಸಹಕಾರದಿಂದ ವಿರೋಧಪಕ್ಷದವರು ಸೇರಿದ್ದಾರೆ. ಎಲ್ಲಾ ಪಕ್ಷದವರು ಸೇರಿದ್ದಾರೆ. ಅವರೆಲ್ಲರ ಸಹಕಾರದಿಂದ ಪೋಲೀಸ್‌ನವರು ಕೆಲವು ಸಾರಿ ಆ ಸವಾಲು ಬಂದಾಗ ದಿಟ್ಟತನದಿಂದ ನಿಲ್ಲುತ್ತಾರೆನ್ನುವುದಕ್ಕೆ ಇದು ಒಂದು ಸಾಕ್ಷಿ. ಬಹುಶಃ ಎಲ್ಲಿ ಪ್ರಾರಂಭವಾಗಿದೆ We could limit that ಅಲ್ಲೆ ಸೀಮಿತಗೊಳಿಸಿ ಪರಿಹಾರವನ್ನು ಮತ್ತು ಶಾಂತಿಯನ್ನು ಸ್ಥಾಪನೆ ಮಾಡಬೇಕಾದ ಒಂದು ಕೆಲಸದಲ್ಲಿ ಸಾಕಷ್ಟು ಯಶಸ್ಸು ದೊರತಿದೆ. ಕೆಲವು ಕಡೆಗಳಲ್ಲಿ ಲೋಪದೋಷಗಳು ಇರಬಹುದು. ಏಕೆಂದರೆ ಇದ್ದ ವ್ಯವಸ್ಥೆಯಲ್ಲಿ ನಾವು ಇದನ್ನು ನಿಭಾಯಿಸಬೇಕಾಗುತ್ತದೆ. ಬಹುಶಃ ನಮ್ಮಲ್ಲಿರತಕ್ಕ 5 ಕೋಟಿ ಜನಗಳಿಗೆ ಎಷ್ಟು ಪೋಲೀಸರು ಇದ್ದಾರೆ ಎಂದು ಅದರ ಅಂಕಿಸಂಖ್ಯೆಗಳನ್ನು ನಾನು ಕೊಡಬಹುದು. ಆದರೆ ಅದನ್ನು ಹೇಳಿದರೆ ಬಹುಶಃ ನಮ್ಮ ಬಂಡವಾಳ ಹೊರಗೆ ಬರುತ್ತದೆ. ಅದಕ್ಕಾಗಿ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಸಹಕಾರ ಕೇಳಿದ್ದೀರಿ. ನಮ್ಮ ಸಹಕಾರ ಗೋಲಿಬಾರ್‌ಗಲ್ಲ. ವಿರೋಧಪಕ್ಷದವರು ಸಹಕಾರ ಕೊಟ್ಟಿದ್ದಾರೆಂದು ಹೇಳಿದಿರಲ್ಲ, ಈ ರಾಜ್ಯದಲ್ಲಿ ಶಾಂತಿಯನ್ನು ಸ್ಥಾಪನೆ ಮಾಡುವುದಕ್ಕೆ ನಮ್ಮದು ಬೆಂಬಲ ಇಲ್ಲ. ಆದರೆ ನಡೆದಿರತಕ್ಕ ಗೋಲಿಬಾರ್‌ಗೆ ನಮ್ಮ ಬೆಂಬಲ ಇದೆ. ನಮ್ಮ ರಾಜ್ಯದ ಜನಸಂಖ್ಯೆಗೆ ತಕ್ಕಂತೆ ಪೋಲೀಸ್ ಸಂಖ್ಯೆ ಇಲ್ಲವೆಂದು ಮತ್ತು ಅದರ ವ್ಯವಸ್ಥೆಯ ಬಗ್ಗೆ ನಾನು ಮಾತನಾಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಹೇಳಲೇ ಇಲ್ಲ. ತಮ್ಮ ಸಹಕಾರ ಗೋಲಿಬಾರ್‌ಗೆ ಎಂದು ನಾನು ಹೇಳಲೇ ಇಲ್ಲ. ನಮ್ಮ ಸಹಕಾರ ಕೂಡ ಗೋಲಿಬಾರ್‌ಗೆ ಅಲ್ಲ. ಆದರೆ ನಿಮ್ಮ ಸಹಕಾರ ಶಾಂತಿ ಸ್ಥಾಪನೆಗೆ ಕೊಟ್ಟಿದ್ದೀರಿ ಎಂದು ಹೇಳಿದ್ದೇನೆ. ತಮ್ಮಗಳ ಒಮ್ಮತದ ಸಹಕಾರ ಇಲ್ಲದಿದ್ದರೆ ಪರಿಸ್ಥಿತಿ ಯಾವ ದಿಕ್ಕಿಗೆ ಹೋಗುತ್ತಿತ್ತು ಎಂದು ಹೇಳುವುದಕ್ಕಾಗುವುದಿಲ್ಲ. ತಮ್ಮ ಸಹಕಾರ ಶಾಂತಿ ಸ್ಥಾಪನೆಗೆ ಸಿಕ್ಕಿದೆ. ಅದಕ್ಕಾಗಿ ತಮಗೆ ಕೃತಜ್ಞತೆಗಳನ್ನು ಮತ್ತು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ನೀವು ಅಧಿಕಾರಕ್ಕೆ ಬಂದ ತಕ್ಷಣ ಇವೆಲ್ಲ ಶುರುವಾಯಿತಲ್ಲ ಏನು ಮಾಡುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ : ಬಂದ ಸವಾಲುಗಳನ್ನು ನಾವು ಎದುರಿಸಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ಅನೇಕ ಬಾರಿ ಇಂತಹ ಕೋಮುಗಲಭೆಗಳು ಬರುತ್ತವ. ಒಂದು ಕಡೆ ಇಲ್ಲದಿದ್ದರೂ ಮತ್ತೊಂದು ಕಡೆಯಿಂದ ಬರುತ್ತವೆ.

ಆದರೆ ಇವತ್ತು ರಾಜ್ಯಕ್ಕೆ ರಾಜ್ಯ ದೇಶಕ್ಕೆ ದೇಶವೇ ಭುಗಿಲೆದ್ದು ಹೇಳತಕ್ಕ ಒಂದು ಸಂದರ್ಭದಲ್ಲಿ ತಾವು ಆಲೋಚನೆ ಮಾಡಿ. ಯಾವ ದೇಶ ಕೂಡ ಯಾವ ಸಿದ್ಧತೆಗಳನ್ನು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇಷ್ಟು ದೊಡ್ಡಗಾತ್ರದ ರಾಷ್ಟ್ರವ್ಯಾಪ್ತಿ ಅಥವಾ ರಾಜ್ಯವ್ಯಾಪ್ತಿಯಾಗಿ ಎಲ್ಲಿ ಭುಗಿಲೆಬ್ಬಿಸುತ್ತದೆ. ಎಲ್ಲಿ ಯಾವ ಕಿಡಿ ಹಾರುತ್ತದೆ ಎಂಬುದನ್ನು ಆ ಸಂದರ್ಭದಲ್ಲಿ ಹೇಳುವುದಕ್ಕಾಗುತ್ತಿರಲಿಲ್ಲ, ತಮಗೆ ಗೊತ್ತಿರಬೇಕು. ಎಲ್ಲಿ ಕಮ್ಯೂನಲಿ ಸೆನ್ಸಿಟಿವ್ ಜಾಗಗಳಿದ್ದವು ನಾವು ಗುರುತಿಸಿದಂತಹ ಜಾಗಗಳಲ್ಲಿ ಗೊಂದಲ ಆಗಲಿಲ್ಲ. ಅಲ್ಲಿ ಬಹಳ ಎಚ್ಚರಿಕೆಯನ್ನು ತೆಗೆದುಕೊಂಡಿದ್ದವು. ಮುಂಜಾಗ್ರತೆಯಾಗಿ ಅಲ್ಲಿ ಆಗಬಹುದೆಂದು ನಮ್ಮ ಇಡೀ ಆಡಳಿತವನ್ನು ಕೇಂದ್ರೀಕರಿಸಲಾಗಿತ್ತು ಎಲ್ಲಿ ಆಗಬಹುದೆಂದು ಇತ್ತೋ ಅಲ್ಲಿ ಆಗಲಿಲ್ಲ. ಆದರೆ ಎಲ್ಲಿ ಏಳಬಾರದೊ ಆ ಭಾಗದಲ್ಲಿ ಭುಗಿಲೆದ್ದಿರೆ, ಗೊಂದಲ ಉಂಟು ಮಾಡಿದೆ. ನಾವು ಅದನ್ನು we never wanted to take any risk. ಅಲ್ಲೂ ಕೂಡ ಎಲ್ಲಿಯಾದರೂ ಅಪಾಯ ಬರಬಹುದೆಂದೂ, ಅದನ್ನು ಎದುರಿಸಬೇಕೆಂದು ಪ್ರತಿಷ್ಠೆಯ ಕಣದಲ್ಲಿ ನಿಲ್ಲಲಿಲ್ಲ. ಎಲ್ಲ ಕಡೆಗೆ ಆರ್ಮಿ ತರಿಸಿದ್ದೇವೆ. ಬೀದರ್‌ಗೆ, ಗುಲ್ಬರ್ಗಾಕ್ಕೆ ಹುಬ್ಬಳ್ಳಿಗೆ, ಚಿತ್ರದುರ್ಗಕ್ಕೆ, ಬೆಂಗಳೂರಿಗೆ, ಮಂಗಳೂರಿಗೆ ಆರ್ಮಿ ತರಿಸಿ ಕಳುಹಿಸಿದ್ದೇವೆ.

ಏಕೆಂದರೆ ಒಂದು ರೀತಿಯ ವಾತಾವರಣ ಒಂದು ಸುಭದ್ರತೆಯ ಮನೋವೃತ್ತಿ ಮತ್ತು ಯಾವುದೇ ರೀತಿಯಾದಂಥ ದುಷ್ಟ ಶಕ್ತಿಗಳು ಯಾವುದೇ ಸಂದರ್ಭದಲ್ಲಿಯೂ ತಲೆಯೆತ್ತತ ರೀತಿಯಲ್ಲಿ ಮಾಡಲು ಈ ವ್ಯವಸ್ಥೆಯನ್ನು ಮಾಡಿತ್ತು ಮತ್ತು ಪ್ಯಾರಾ ಮಿಲಿಟರಿ ಫೋರ್ಸ್‌ನ್ನು ತರಿಸಿದ್ದವು. ಕೆಲವು ಪ್ಯಾರಾಮಿಲಿಟರಿ ಫೋರ್ಸ್‌ಗಳನ್ನು ಲಕ್ನೋದಿಂದ air lift ಮಾಡಿದ್ದೇವೆ. ರೈಲ್ವೆ ಫೋರ್ಸನ್ನು ಇಲ್ಲಿ ತರಿಸಿದ್ದೇವೆ. ಇವತ್ತು ಈ ಪದೆಗಳನ್ನು ತರಿಸಿದಾಗ ಯಾವುದೇ ಪ್ರೆಸ್ಟೀಜ್ ಇಲ್ಲದೆ, ಏಕೆಂದರೆ ಕೆಲವು ಸಾರಿ ಪೋಲೀಸ್ ಪ್ರೆಸ್ಟೀಜ್ ಇರುತ್ತದೆ, ಸರ್ಕಾರದ ಪ್ರೆಸ್ಟೀಜ್ ಇರುತ್ತದೆ. ಆದರೆ ಜನರ ಪ್ರಾಣದ ವಿಚಾರ ಬಂದಾಗ, ಜನರ ಆಸ್ತಿಯ ವಿಚಾರ ಬಂದಾಗ ಬಹುಶಃ ರಾಜ್ಯಸರ್ಕಾರ ಯಾವ ಪ್ರತಿಷ್ಠೆಯ ಪ್ರಶ್ನೆಯನ್ನೂ ಮುಂದೆ ಇಟ್ಟಿಲ್ಲ. ಯಾವ ಕಡೆಯಿಂದ ನಮಗೆ ಸಹಾಯ ಬರುತ್ತದೆ, ಆ ಕಡೆಯಿಂದ ತೆಗೆದುಕೊಂಡಿದ್ದೇವೆ. ತಮಿಳುನಾಡಿನಿಂದ ಪೋಲೀಸರನ್ನು ಕಳಿಸಿದ್ದಾರೆ. ಇದೆಲ್ಲ ರೀತಿಯಾದಂಥ ವ್ಯವಸ್ಥೆ ಮಾಡಿದ್ದವು. ಆಮೇಲೆ ನೋನ್ ಐಡೆಂಡಿಫೈಡ್ ಗೂಂಡಾಗಳನ್ನು, ಕಮ್ಯುನಲ್ ಸಂದರ್ಭದಲ್ಲಿ ಯಾರ್ಯಾರು ಗಲಭೆಗಳಾದಾಗ ಬೆಂಕಿ ಹಚ್ಚುತ್ತಾರೆ, ಅಂತಹ ಜನರನ್ನು ಅನೇಕ ಸಂದರ್ಭದಲ್ಲಿ Many times it is not the know goondas, sometimes all of a sudden ನಾವು ಪ್ರಿವೆಂಟಿವ್ ಕಸ್ಟಡಿಯಲ್ಲಿ ಹಾಕಿದ್ದೇವೆ. ಆದರೆ ಕ್ರಿಮಿನಲ್ ಎಂಟಿಸಿಡೆಂಟ್ಸ್ ಇಲ್ಲವಾದಲ್ಲೇ ಇವತ್ತು ಭುಗಿಲೆದ್ದಿದೆ.

ತಮಗೆ ಗೊತ್ತಿದೆ, ಮನುಷ್ಯನ ಪ್ರಕೃತಿ ಏನು ಎಂದರೆ, ಆತ ಕ್ರೂರಿಯಾದರೆ ಹುಲಿಗಿಂತಲೂ ಹೆಚ್ಚು ಕ್ರೂರಿಯಾಗುತ್ತಾನಂತೆ. ಕೆಲವು ಸಾರಿ ಇಂತಹ ಪರಿಸ್ಥಿತಿ ಅನೇಕ ಕಡೆ ಉದ್ಭವವಾದದ್ದು ಇದೆ. ಇದು ಅದ್ವಿತೀಯ. ಯಾವುದೇ ರೀತಿಯಿಂದ ನೋಡಿದರೂ ಕೂಡ, ಯಾವ ನೋಟದಿಂದ ನೋಡಿದರೂ ಕೂಡ ಗಲಭೆ ಆದಂಥ, ಗಲಭೆ ಮುಂದುವರೆದಂಥ ಮತ್ತು ಆಗಿನ ಪರಿಸ್ಥಿತಿಯನ್ನು ನೋಡಿದರೆ ಬಹುಶಃ ಯಾರ ಊಹೆಗೂ, ಯಾರ ಆಲೋಚನೆಗೂ, ಯಾರ ವಿವೇಕಕ್ಕೂ ಕೂಡ ನಿಲುಕದೇ ಇರತಕ್ಕಂಥ ಗಾತ್ರದಲ್ಲಿ ಈ ಸಮಸ್ಯೆ ಬಂದುನಿಂತಿದೆ. ಆದರೂ ಕೂಡ ಅತಿ ಕಡಿಮೆ ಸಮಯದಲ್ಲಿ ಅದನ್ನು ಹತೋಟಿಗೆ ತರುವುದಕ್ಕೆ ಸಾಧ್ಯವಾಗಿದೆ.

ಬಹಳ ವ್ಯಸನವಾಗುತ್ತದೆ. ಏಕೆಂದರೆ ಅನೇಕ ಪ್ರಾಣಗಳು ಹೋಗಿವೆ. ಕೆಲವು ಗೋಲಿಬಾರಿನಿಂದ ಕೆಲವು ಇರಿತದಿಂದ, ಗಲಭೆಯಿಂದ ಕೆಲವು ಪ್ರಾಣಗಳು ಹೋಗಿವೆ. ಇದರ ಬಗ್ಗೆ ಈ ಸದನದ ಮುಖಾಂತರ ಅವರ ಸಂಬಂಧಿಕರಿಗೆ ವಿಶೇಷವಾದಂಥ ಶ್ರದ್ಧಾಂಜಲಿಯನ್ನು ಇವತ್ತು ನಾವು ಅರ್ಪಿಸಬೇಕಾಗಿದೆ. ಏಕೆಂದರೆ ಕೆಲವು ಸಾರಿ ಗಲಭೆ ಗೊಂದಲದಲ್ಲಿ ಅಮಾಯಕರೇ ಸಾಯುತ್ತಾರೆ. ಇದು ಎಲ್ಲ ಘಟನೆಗಳಲ್ಲಿ ಆಗುವಂಥಾದ್ದು. ಏನೂ ಪಾಪ ಮಾಡಿರುವುದಿಲ್ಲ ಏನೂ ತೊಂದರೆ ಮಾಡಿರುವುದಿಲ್ಲ, ಅಂಥವರು ಈ ಗಲಭೆಯಿಂದ ಸಾಯಬಹುದು. ಅಥವಾ ಇರಿತದಿಂದ ಸಾಯಬಹುದು. ಅನೇಕ ಕಡೆ ನಾವು ನೋಡಿದ್ದೇವೆ. ಬಸ್ಸಿನಿಂದ ಇಳಿದ ಕೂಡಲೆ ಕಾಲುಗಳನ್ನೇ ಕತ್ತರಿಸಿದ್ದಾರೆ. ಮಕ್ಕಳ ಪ್ರಾಣ ಹೋಗಿದೆ. ನಾನು ಮೈಸೂರಿನಲ್ಲಿ ನೋಡಿದೆ. ಒಬ್ಬ ಇಂಜನಿಯರ್. ಆತನ ಬೆರಳುಗಳನ್ನೇ ಕತ್ತರಿಸಿಬಿಟ್ಟಿದ್ದಾರೆ.

ಇಂತಹ ಒಂದು ದಾರುಣ ಪರಿಸ್ಥಿತಿ ಇವತ್ತು ಕರ್ನಾಟಕದಲ್ಲಿ ಕೂಡ ಆಗಿದೆ. ಅಲ್ಲದೆ ರಾಷ್ಟ್ರದ ಅನೇಕ ಕಡೆ ಕೂಡ ಆಗಿದ್ದನ್ನು ತಾವು ಕಂಡಿರಬಹುದು. ಈ ಅಯೋಧ್ಯೆ ಪ್ರಕರಣದ ಬಗ್ಗೆ ಐತಿಹಾಸಿಕ ಹಿನ್ನಲೆಯನ್ನು ನಾನು ಹೇಳುವಂಥ ಅಗತ್ಯವೇನೂ ಇಲ್ಲ. ಬಹುಶಃ ಇದರ ಬಗ್ಗೆ ತಾವು ಸಾಕಷ್ಟು ವಿಶ್ಲೇಷಣೆ ಮಾಡಿದ್ದೀರಿ. ಈಗ ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಏಕೆಂದರೆ, ಇಲ್ಲಿ ಜಾತ್ಯಾತೀಕ ತತ್ವದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಶ್ರೀ ಯುಡಿಯೂರಪ್ಪನವರು ಹೇಳಿದ್ದಾರೆ. ತಾವು ಎಲ್ಲರೂ ಕೂಡ ಮಾತನಾಡಿದ್ದೀರಿ. What is secularism? ಸನ್ಮಾನ್ಯ ಯಡಿಯೂರಪ್ಪನವರು ಕಾಂಗ್ರೆಸ್‌ನವರು ಸ್ಯುಡೋ ಸೆಕ್ಯುಲರಿಸಂ ಪ್ರಾಕ್ಟೀಸ್ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ಸೆಕ್ಯುಲರಿಸಂ ಬಗ್ಗೆ ನಾವು ಸರಿಯಾಗ ಅರ್ಥವನ್ನು ತಿಳಿದುಕೊಂಡರೆ ಈ ಪ್ರಶ್ನೆ ಉದ್ಭವವಾಗುವುದಿಲ್ಲ. ಯಾರು ಸ್ಯುಡೋ ಸೆಕ್ಯುಲರಿಸಂ ಅನ್ನು ಪ್ರಾಕ್ಟೀಸ್ ಮಾಡುತ್ತಿದ್ದಾರೆ, ಯಾರು ಮಾಡುತ್ತಿಲ್ಲ ಯಾರು ಜಾತೀಯವಾದಿಗಳು, ಯಾರು ಮತೀಯ ವಾದಿಗಳು ಆಗಿದ್ದಾರೆ, ಯಾರು ಮತೀಯವಾದಿಗಳಲ್ಲ ಎಂಬುದು ಬಹುಶಃ ಈಗ ಚರ್ಚೆಗೆ ವಸ್ತು ಅಲ್ಲ. ಇದು ಸ್ಪಷ್ಟವಾಗಿ ದೇಶದ ಜನರಿಗೆ ಗೊತ್ತಾಗಿದೆ. ವಿಶ್ವದ ಜನತೆಗೆ ಗೊತ್ತಾಗಿದೆ.

ಬಹುಶಃ ನಾವು ಈ ಸೆಕ್ಯುಲರಿಸಂ ಬಗ್ಗೆ ನೋಡುವುದಾದರೆ ಸ್ವಾತಂತ್ರ್ಯ ಸಿಕ್ಕಿದ ಮೇಲೆಯಾ ಅಲ್ಲ, ಸ್ವಾತಂತ್ರ್ಯ ಸಿಕ್ಕದ ಸಂದರ್ಭದಲ್ಲಿ ಒಂದೇ ಆಲೋಚನೆ ಮಾಡಿದರೆ, ಬಹುಶಃ ಜಾತ್ಯಾತೀತ ಸಿದ್ಧಾಂತದ ಅರ್ಥ ಅಲ್ಲಿಯೇ ಆಗುತ್ತದೆ. ಏಕೆಂದರೆ ನಮ್ಮ ದೇಶ ಹುಟ್ಟಿದಾಗಲೇ 1947ನೇ ಇಸವಿಯಲ್ಲಿಯೇ ಸ್ವತಂತ್ರ ಭಾರತ ಜನಿಸಿತು. ಆಗಲೇ ಇತ್ಯರ್ಥವಾಗಿದೆ. two nations theory ಆಗಲೇ ಆಯಿತು. ಪಾಕಿಸ್ಥಾನ a theocratic State ಆಯಿತು. ಪಾಕಿಸ್ಥಾನದಂತೆ ಭಾರತ ಇರಬಾರದು ಎಂಬುದನ್ನು ಎಲ್ಲರೂ ಒಪ್ಪಬೇಕು. ಇಲ್ಲ, ಪಾಕಿಸ್ಥಾನದಂತೆ ಭಾರತ ಆಗಬೇಕೇ ಎಂಬ ಪ್ರಶ್ನೆ ಬಹುಶಃ 1947ನೇ ಇಸವಿಯಿಂದ ಮೊನ್ನೆ 6ನೇ ತಾರೀಖಿನವರೆಗೆ ಯಾರೂ ಆಲೋಚನೆ ಮಾಡಿರಲಿಲ್ಲ. ಆದರೆ 6ನೇ ತಾರೀಖು ಈ ದೇಶದಲ್ಲಿ ಆ ಚರ್ಚೆಯಾಗಿದೆ. 1947ನೇ ಇಸವಿಯಲ್ಲಿ ಪಾಕಿಸ್ಥಾನ ಏನಾಯಿತು, ಇವತ್ತು 1947ನೇ ಇಸವಿಯ ನಂತರ, ಮೊಟ್ಟಮೊದಲನೇ ಬಾರಿಗೆ 1992ನೇ ಡಿಸೆಂಬರ್ 6ಕ್ಕೆ ರಾಷ್ಟ್ರದಲ್ಲಿ ಈ ಚರ್ಚೆ ಪ್ರಾರಂಭವಾಗುವುದಕ್ಕೆ ಆಲೋಚನೆ

ಮಾಡುತ್ತಾ ಇದ್ದೇವೆ. Theocratic State ಭಾರತ ಕೂಡ ಆಗಬೇಕು ಅಥವಾ ಭಾರತ ಆಗಬೇಕೇ ಬೇಡವೇ ಈ ಚರ್ಚೆ ನಮ್ಮ ರಾಷ್ಟ್ರದ ದುರಾದೃಷ್ಟ. Pakistan adopted for a theocratic country, but India adopted for a secular country.

ಇಷ್ಟು ವರ್ಷಗಳಾದ ಮೇಲೆ ಈ ವಾದವಿವಾದಲ್ಲಿ ಹೋದರೆ, ಈ ದೇಶ ಭಾರತವಾಗಿ ಉಳಿಯುವುದಕ್ಕೆ ಸಾಧ್ಯವೇ ಎನ್ನುವ ಪ್ರಶ್ನೆ. Secularism is synonymous with India ಸೆಕ್ಯುಲರಿಸಂ ಇಲ್ಲದಿದ್ದರೆ, ಇಂಡಿಯಾ ಉಳಿಯುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಸುಮಾರು 5 ಸಾವಿರ ವರ್ಷಗಳ ಹಿಂದೆ ನಮ್ಮ ಭಾರತದ ಕಲ್ಪನೆ ನಮ್ಮ ಭಾರತೀಯರಿಗೆ ಇತ್ತು, ನಮ್ಮ ಸಂಸ್ಕೃತಿಗೆ ಇತ್ತು. ಉಪನಿಷತ್ತುಗಳಲ್ಲಿ ಹೇಳಿದೆ, ಹಿಮಾಲಯದಿಂದ, ಕನ್ಯಾಕುಮಾರಿಯವರೆಗೆ, ಮಧ್ಯೆ ಇರತಕ್ಕ ದೇಶ, ಅದು ಭಾರತ. ಅಲ್ಲಿರತಕ್ಕ ಜನ ಭಾರತೀಯರು ಅವರಿಗೆ ಪೊಲಿಟಿಕಲ್ ಸ್ಟೇಟಸ್ ಇರಲಿಲ್ಲ.

ಭಾರತೀಯ ರಾಷ್ಟ್ರೀಯತೆಯ ಭವ್ಯ ಕಲ್ಪನೆ, ನಾವು ಬ್ರಿಟೀಷರಿಂದ ಕಲಿತದ್ದು ಅಲ್ಲ, ಅಮೇರಿಕಾದಿಂದ ಕಲಿತದ್ದು ಅಲ್ಲ ಅಥವಾ ರಾಷ್ಟ್ರದ ಕಲ್ಪನೆ ಸಂವಿಧಾನ ಬಂದಮೇಲೆ ಮಾತ್ರ ಕಲಿತದ್ದು ಅಲ್ಲ. ಭಾರತೀಯ ರಾಷ್ಟ್ರದ ಕಲ್ಪನೆ 5 ಸಾವಿರ ವರ್ಷಗಳ ಹಿಂದೆ ಇದ್ದುದನ್ನು 5 ಸಾವಿರ ವರ್ಷಗಳಾದ ಮೇಲೆ 1992ನೇ ಇಸವಿಯಲ್ಲಿ 6ನೇ ಡಿಸೆಂಬರ್ we are demolishing not only the constitution given to us in 1951, but alos we are demolishing the constitution given to us by our Fore-fathers five thousand years back. These two things have happened. Two constitutions, not one constitution. Two constitutions which were given by our people were sought to be demolished on 6th December.

ಇದು ಬಹಳ ಗಂಭೀರವಾದ ವಿಚಾರ. ನಾವು ಅನಾಗರೀಕತೆಯಿಂದ ನಾಗರೀತೆಗೆ ಹೋಗುತ್ತಿದ್ದೇವೆ. This is the history of civilisation ಇವತ್ತು ನಾಗರೀಕತೆಯಿಂದ, ಅನಾಗರೀಕತೆಗೆ ಇಳಿಯತಕ್ಕ ರಾಷ್ಟ್ರದ ಸಂಸ್ಕೃತಿಗೆ ವಿರೋಧವಾದ ಕೆಲಸ ಡಿಸೆಂಬರ್ 6ನೇ ತಾರೀಖು ನಮ್ಮ ದೇಶದಲ್ಲಿ ಆಗಿದೆ. ಇದು ಅತ್ಯಂತ ದುರಾದೃಷ್ಟಕರವಾದ ವಿಚಾರ ಎಂಬುದನ್ನು ಖಂಡಿತವಾಗಿಯೂ ಮರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು, ನಮ್ಮ ದೇಶದಲ್ಲಿ ಸ್ವತಂತ್ರ ಭಾರತ ಆದಾಗ, ಒಂದು ಪದ್ಧತಿಯನ್ನು, ಒಂದು ಪ್ರಜಾಪ್ರಭುತ್ವದ ಪದ್ಧತಿಯನ್ನು ನಮಗೆ ನಾವು ಕೊಟ್ಟಿದ್ದೇವೆ. i.e., freedom of religious worship by followers of all faiths.

ಬರೀ 51ರ ಸಂವಿಧಾನದಲ್ಲಿ ಕೊಟ್ಟಿದ್ದದು ಮಾತ್ರವಲ್ಲ, ನಮ್ಮ ಧಾರ್ಮಿಕವಾದಂಥ, ಸಾಂಸ್ಕೃತಿಕವಾದಂಥ ಒಂದು ಪದ್ಧತಿ ಆಗಲೂ ನಮ್ಮ ದೇಶದಲ್ಲಿ ಇತ್ತು. ಇದನ್ನು ಯಾರೂ ಕೂಡ ಮಾಡಿರಲಿಲ್ಲ. ತಮಗೂ ಗೊತ್ತಿದೆ. Even Parsees ಅವರನ್ನು ಅವರ ದೇಶದಿಂದಲೇ ಹೊರಗೆ ಹಾಕಿದರು. ನಮ್ಮ ದೇಶ ಅವರನ್ನು ಸ್ವೀಕಾರ ಮಾಡಿದೆ. Negroes ಅವರಿಗೆ ದೇಶವೇ ಇಲ್ಲವೆಂದು ಆದಾಗ ಅವರನ್ನು ನಾವು ಕೊಚ್ಚಿನ್ ಅಲ್ಲೆಲ್ಲೂ ಸ್ವೀಕಾರ ಮಾಡಿದೆವು. ಇದು ನಮ್ಮ ದೇಶದ ಸಂಸ್ಕೃತಿ. ನಾವು ಡಿವೈಡ್ ಮಾಡುತ್ತೇವೆ. ಏಕೆಂದರೆ ಹುಟ್ಟಿದಾಗ ನಮ್ಮ ಮಕ್ಕಳಿಗೆ ಒಂದು ಹೆಸರು ಕೊಡುತ್ತೇವೆ. ನಾವು ಬೆಳೆದಹಾಗೆ ಬೇರೆ ಬೇರೆ ಹೆಸರು ಕೊಡುವುದಿಲ್ಲ, ಒಂದೇ ಹೆಸರು.

ಮಗು ಹುಟ್ಟಿದಾಗ ಹೆಸರಿಡುತ್ತೇವೆ. ಹೆಸರಿಟ್ಟಮೇಲೆ ಮತ್ತೆ ಅನುಕೂಲ ಬಂದಹಾಗೆ ಬೇರೆ ಒಂದು ಹೆಸರು ಕೊಡುವುದಿಲ್ಲ. ಈ ರೀತಿ ಒಂದೊಂದು ಹೆಸರು ಕೊಡುತ್ತಾ ಹೋಗುವುದಾದರೆ ಬೇರೆ ಬೇರೆ ತಂದೆತಾಯಿ ಆಗಬೇಕು. ಒಂದು ತಂದೆ, ಒಂದು ತಾಯಿ ಇರುವಾಗ ಒಂದು ಹೆಸರು ಇಡುತ್ತೇವೆ. ಏನಾದರೂ ಒಂದು ಪೆಟ್ ನೇಮ್ ಮಾಡಬಹುದು. ಆದರೆ ಮೊದಲಿಗೆ ಇಟ್ಟ ಹೆಸರನ್ನು ಯಾವಾಗಲೂ ಬದಲಾವಣೆ ಮಾಡುವುದಿಲ್ಲ. ಹಿಂದೂ ಎಂದರೆ ಸಿಂಧು. ಫಸ್ಟ್ ಸಿವಿಲೈಜೇಷನ್ ಸಿಂಧೂನದಿ ತೀರದಲ್ಲಿ ಆಯಿತು. ಅದಕ್ಕೆ ಸಿಂಧು ಎಂದು ಹೇಳಿದರೆ ಹಿಂದೂ ಎಂದು ಹೇಳಿದರು. ಸಿಂಧು ಹಿಂದೂ ಆಗಿ ಹೋಯಿತು. ಸಿಂಧೂ ಎಂದು ಹೇಳಿದರೆ ಅದು ಒಂದು ಜಾತಿ ಮತದ ಹೆಸರಲ್ಲ. ಈ ರಾಷ್ಟ್ರದಲ್ಲಿ ಮೂಲತಃ ಏನು ಸಂಸ್ಕೃತಿ, ನಾಗರೀಕತೆ ಪ್ರಾರಂಭವಾಯಿತು, ಆ ನಾಗರೀಕತೆಯಿಂದ ಉದ್ಭವವಾದಂಥ ದೇಶ ಇದು. ಅದರ ತಾಳಪಾಯವನ್ನು ಕಿತ್ತುಹಾಕತಕ್ಕಂಥ ಒಂದು ಕೆಲಸವನ್ನು ಇವತ್ತು ಮಾಡಿದರೆ ನಾವು ಸಿಂಧು ಅಥವಾ ಹಿಂದೂಗಳು ಆಗವುದಕ್ಕೆ ಅರ್ಹತೆ ಹೊರಟುಹೋಗುತ್ತದೆ. ನಮಗೆ ಯಾವ ಅಧಿಕಾರ ಕೂಡ ಉಳಿಯುವುದಿಲ್ಲ. ಯಾವ ತರಹ ನೀವು ದೇಶ ಕಟ್ಟುತ್ತೀರಿ? ಮೊನ್ನೆ ಎಲ್ಲೋ ಒಂದು ಕಡೆ ನಾನು ಲೆಕ್ಕ ಹಾಕಿದೆ. ಭಾರತವನ್ನು ಹಿಂದೂ ಥಿಯಾಕ್ರಟಿಕ್ ಸ್ಟೇಟ್ ಮಾಡಿದರೆ ಏನಾಗುತ್ತದೆ? ಪರಿಶಿಷ್ಟ ಜಾತಿಯ ಜನರನ್ನು ನಾವು ಹಿಂದೂಗಳು ಎಂದು ಹೇಳಿ ನಾವು ಗಣಿಸಿಲ್ಲ. ಅವರೂ ಕೂಡ ಒಪ್ಪುವುದಕ್ಕೆ ತಯಾರಾಗಿಲ್ಲ. 86 ಕೋಟಿ ಜನಸಂಖ್ಯೆಯಲ್ಲಿ ಅವರು 20-22 ಕೋಟಿ ಜನ ಇದ್ದಾರೆ. ಜೈನ್ಸ್ 6-7 ಕೋಟಿ ಇದ್ದಾರೆ. ಬುದ್ಧಿಸ್ಟ್ಸ್ 8 ಕೋಟಿ ಇದ್ದಾರೆ, ಕ್ರಿಶ್ಚಿಯನ್ಸ್ 6 ಕೋಟಿಗೆ ಕಡಿಮೆ ಇಲ್ಲ, 3 ಕೋಟಿ ಇದ್ದಾರೆ ಸಿಖ್ಸ್ ಕಡಿಮೆ ಪಕ್ಷ 4-5 ಕೋಟಿ ಇದ್ದಿರಬೇಕು. whatever it may be little less or little more. ಈಗ ವೀರಶೈವರು ಇದ್ದಾರೆ. ಹಿಂದೂ ಸಿಸ್ಟಮ್‌ಗೆ ಪ್ರೊಟೆಸ್ಟ್ ಮಾಡದವರು ವೀರಶೈವರು. ಆ ಲೆಕ್ಕ ಇಟ್ಟುಕೊಂಡರೆ ಅವರು ಹಿಂದೂಗಳಲ್ಲ.

ಶ್ರೀ ಸಿ. ಬೈರೇಗೌಡ : ವೈದಿಕ ಸಿಸ್ಟಮ್‌ಗೆ...

ಶ್ರೀ ಎಂ. ವೀರಪ್ಪ ಮೊಯಿಲಿ : ಎಲ್ಲಾ ಬಿಟ್ಟು, ಆಮೇಲೆ ಬೆಳೆದಂಥ ಮನುಸಿದ್ಧಾಂತ ತೆಗೆದುಕೊಂಡರೆ..

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಯಡಿಯೂರಪ್ಪನವರು ಹೊರಟುಹೋಗಿದ್ದಾರೆ

(Smt. Motamma in the Chair)

ಶ್ರೀ ಎಂ. ವೀರಪ್ಪ ಮೊಯ್ಲಿ : ನಾನು ಹೇಳಿದ್ದಕ್ಕೆ ಅವರು ಇಲ್ಲ ಎಂದು ಹೇಳುವುದಿಲ್ಲ. ದೇಶದ ಸಂಸ್ಕೃತಿ ಬಗ್ಗೆ ಅವರಿಗೂ ಕೂಡ ವಿಶ್ವಾಸ ಇದೆ. ನನ್ನ ಮಾತಿಗೆ ಯಾರು ಇಲ್ಲ ಎಂದು ಹೇಳುವುದಕ್ಕೆ ಆಗುತ್ತದೆ ಈಶ್ವರಪ್ಪನವರೇ, ದೇಶದ ಸಂಸ್ಕೃತಿ ಇದಲ್ಲ ಎಂದು ಹೇಳುವುದಕ್ಕೆ ಆಗುತ್ತದೆಯೇ?

ಶ್ರೀ ಕೆ.ಎಸ್. ಈಶ್ವರಪ್ಪ : ಈ ದೇಶದಲ್ಲಿ ಹುಟ್ಟಿರುವ ಪ್ರತಿಯೊಬ್ಬರೂ ಹಿಂದೂಗಳು ಎಂದು ನಾವು ಹೇಳುವುದು.

ಶ್ರೀ ಸಿ. ಬೈರೇಗೌಡ : ಅದನ್ನು ನಾನು ಒಪ್ಪುವುದಿಲ್ಲ, ಈ ದೇಶದಲ್ಲಿರತಕ್ಕಂಥ ಕೆಲವರು ಮಾತ್ರವೇ ಹಿಂದೂಗಳು, ಉಳಿದಿರತಕ್ಕಂಥವರು ಹಿಂದೂಗಳು ಅಲ್ಲವೇ ಅಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ : ಅವರ ಲೆಕ್ಕದ ಪ್ರಕಾರ ಲೆಕ್ಕ ಹಾಕಿದರೆ ಈ ದೇಶದಲ್ಲ ಹಿಂದುಗಳೇ ಅಲ್ಪ ಸಂಖ್ಯಾತರಾಗಿ ಹೋಗುತ್ತಾರೆ. ಹಿಂದೂಗಳು ಬಹುಸಂಖ್ಯಾತರಾಗಿ ಉಳಿಯುವುದಿಲ್ಲ. ಇಮತ್ತು ನಾವೆಲ್ಲರೂ ಭಾರತೀಯರು. ಬಾರತೀಯ ಸಂಸ್ಕೃತಿ ಹಿಂದೂ ಸಂಸ್ಕೃತಿ ಎಂದು ಯಾವ ವೇದ ಉಪನಿಷತ್ತುಗಳಲ್ಲಿ ಹೇಳಿಲ್ಲ. ಈಶ್ವರಪ್ಪನವರೆ, ಹಿಂದೂ ಸಂಸ್ಕೃತಿ ಎಲ್ಲಿ ಬಂತು ಪುರಾಣಗಳಲ್ಲಿ ಭಾರತೀಯರು, ಬಾರತ ಎಂದು ಬಂದಿದೆ. ಹಿಂದೂಗಳು ಎಂದು ಬಂದದ್ದು ಎಲ್ಲಿಂದ, ಇದು ಹೊಸದಾಗಿ ಎಲ್ಲಿಂದ ಬಂತು, ಆದರೆ ಇದು ಯಾವ ಸಂಸ್ಕೃತಿ? ಬಾರತೀಯ ಸಂಸ್ಕೃತಿ ಎಂದು ಕೇಳಿದ್ದೇವೆಯೊ ಹೊರತು ಹಿಂದೂ ಸಂಸ್ಕೃತಿ ಎಂದು ನಾವೂ ಕೇಳಿಲ್ಲ. ಬಹುಶಃ ನೀವು ಏನು ತತ್ವ, ಸಿದ್ಧಾಂತ ಎಂದು ಮಾತನಾಡುತ್ತೀರಿ, ಈ ತತ್ವಕ್ಕೂ ಸಿದ್ಧಾಂತಕ್ಕೂ ತಾಳಮೇಳ ಇಲ್ಲ ಎಂದು ಹೇಳಬಹುದು. ಭಾರತೀಯ ಸಂಸ್ಕೃತಿ ಎಂದು ಇದೆ. ಹಿಂದೂ ಸಂಸ್ಕೃತಿ ಎಂದು ಇಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಬಾರತೀಯ ಸಂಸ್ಕೃತಿಗೂ ಹಿಂದೂ ಸಂಸ್ಕೃತಿಗೂ ವ್ಯತ್ಯಾಸ ಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ : ಆ ಇಂಟರ್‌ಪ್ರಿಟೇಷನ್ ತಾವು ಈಗ ಮಾಡುತ್ತಿದ್ದೀರಿ, ಆದರೆ ವೇದ, ಉಪನಿಷತ್ತುಗಳು ಸಾರಿದ್ದು ಬಾರತೀಯ ಸಂಸ್ಕೃತಿಯನ್ನಲ್ಲದೆ...

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಪ್ರಶ್ನೆ ಕೆಳಿದರೆ ನಾವು ಉತ್ತರ ಕೊಡುತ್ತೇವೆ. ಆದುದರಿಂದ ಡಿಸ್ಕಷನ್ ಬೇಡ ಎನ್ನುವುದ ನಮ್ಮ ಅಬಿಪ್ರಾಯ. ಪ್ರತಿಯೊಂದಕ್ಕೂ ಹೇಳುತ್ತಾ ಹೋದರೆ ನಮ್ಮಲ್ಲಿ ಉತ್ತರ ಇದೆ, ನಾವು ಬೇಕಾದರೆ ಎಲ್ಲದಕ್ಕೂ ಉತ್ತರ ಕೊಡುತ್ತೇವೆ. ಹಿಂದೂ ಎಂಬ ವಿಚಾರ ವಿಧಾನಸಬೆಯಲ್ಲಿ ಚರ್ಚೆ ಆಗುತ್ತಿರುವುದು ನಿಜಕ್ಕೂ ನಮಗೆ ತುಂಬಾ ಆನಂದ ಆಗುತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮಗೆ ಆನಂದ ಆಗಬೇಕೆಂದೇ ನಾನು ಮಾತನಾಡುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಈ ದೇಶವನ್ನು ಪಾಕೀಸ್ಥಾನ, ಹಿಂದೂಸ್ಥಾನ ಎಂದು ಎರಡು ತುಂಡು ಮಾಡಿದಿರಿ, ಹಿಂದೂ ಸಮಾಜವನ್ನು ಜಾತಿಯ ಹೆಸರಿನಲ್ಲಿ ತುಂಡು ಮಾಡಿದಿರಿ ದಯವಿಟ್ಟು ತಾವು ಮಾತನಾಡಿ, ಮಧ್ಯೆ ಮಧ್ಯೆ ಉತ್ತರ ಬೇಕೆಂದರೆ ನಾವು ಉತ್ತರ ಕೊಡುವುದಕ್ಕೆ ಸಿದ್ಧರಾಗಿದ್ದೇವ.

ಶ್ರೀ ಎ.ಕೆ. ಅನಂತಕೃಷ್ಣ : ಇದಕ್ಕೆ ಪ್ರಚೋದನೆ ಎಲ್ಲಿಂದ ಬಂತು.

3.40 P.M.

ಶ್ರೀ ಎಂ. ವೀರಪ್ಪ ಮೊಯಿಲಿ : ಕೃಷ್ಣ ಅಲ್ಲಿ ಮದೀನದಲ್ಲಿ ಹುಟ್ಟಿದರೆ ಪೈಗಂಬರ್ ಆಗುತ್ತಿದ್ದ ಕೃಷ್ಣ ಆಗುತ್ತಿರಲಿಲ್ಲ. ಕೃಷ್ಣಾ ಇಲ್ಲಿ ಹುಟ್ಟಿದ ಅಷ್ಟೇ ವ್ಯತ್ಯಾಸ. ಜೀಸಸ್ ಕ್ರೈಸ್ತ ಇಲ್ಲಿ ಹುಟ್ಟಿದ್ದರೆ ರಾಮ ಆಗುತ್ತಿದ್ದ ಕೃಷ್ಣಾ ಆಗುತ್ತಿದ್ದ

ಅಷ್ಟೇ ವ್ಯತ್ಯಾಸ. ಒಂದು ಭೌಗೋಳಿಕವಾದಂತಹ ದೃಷ್ಟಿಕೋನ. ಇಲ್ಲಿ ಅವರೆಲ್ಲರೂ ಹೇಳತಕ್ಕಂಥ ಧರ್ಮಗಳ ಮೂಲ ಒಂದೇ. ದೇವರು ಒಂದೇ ಎಂದು ಹೇಳುತ್ತಾರೆ. ನಾವು ಅವರಿಗೆ ಬೇರೆ ಬೇರೆ ಹೆಸರು ಕೊಟ್ಟಿದ್ದೇವೆ. ಈ ಹೆಸರನ್ನು ಇಟ್ಟುಕೊಂಡು ಇವತ್ತು ತಾವು ಹೋರಾಟ ಮಾಡುತ್ತೀದ್ದೀರಲ್ಲಾ !

ಸಿಂಧ್ಯಾರವರೇ ನಾನು ಇತಿಹಾಸದ ವಿಧ್ಯಾರ್ಥಿ. ಯಾವ ಶಾಸ್ತ್ರಗಲ್ಲೂ ಕೂಡ ದೇವರು ದೇವರಿಗೆ ಜಗಳ ಆಗಿದ್ದು ಇಲ್ಲ. ಎಲ್ಲಾದರೂ ಜಗಳ ಆಡಿದ್ದು ನೋಡಿದ್ದೀರಾ ಬೈರೇಗೌಡ್ರೆ. ಜಗಳವಾದದ್ದು ಪುರಾಣದಲ್ಲೂ ಇಲ್ಲ. ರಾಮ ಆಗಲಿ, ಜೀಸಸ್ ಕ್ರೈಸ್ತ ಆಗಲಿ ಜಗಳ ಆಡಿದ್ದು ಇದೆಯೇ?

ಶ್ರೀ ಬಿ.ಎಸ್. ಜೋಶಿ : ರಾಮ ರಾವಣರಿಗೆ ಜಗಳವಾಗಿಲ್ಲವೇ

ಶ್ರೀ ಎಂ. ವೀರಪ್ಪ ಮೊಯಿಲಿ : ರಾಮ ರಾವಣರು ಜಗಳ ಮಾಡಿದ್ದಾರೆ, ದೇವರಲ್ಲ. ಆದರೆ ಇವತ್ತು ದೇವರ ಹೆಸರಿನಲ್ಲಿ ನಾವು ಜಗಳ ಮಾಡುತ್ತಿದ್ದೇವೆ. ಜಗಳವಾಗಿದೆ. ನಮ್ಮ ದೇವರು ಸ್ವಲ್ಪ ಜಗಳ ಮಾಡಿಕೊಂಡಿದ್ದಾರೆ. ನಮ್ಮಲ್ಲಿ ಜಗಳ ಗಂಟ ದೇವರು. ಆದರೆ ಮತೀಯ ಮತೀಯ ದೇವರುಗಳಲ್ಲಿ ಜಗಳ ಮಾಡಿಕೊಂಡಿದ್ದು ನನಗೆ ಯಾವ ಪುರಾಣದಲ್ಲೂ ಕಾಣಲಿಲ್ಲ ; ಯಾವ ಇತಿಹಾಸದಲ್ಲೂ ಕಾಣಲಿಲ್ಲ. ಎಲ್ಲೂ ಕಾಣಲಿಲ್ಲ. ಆದರೆ ಇವತ್ತು ಏಕೆ ಇಂತಹ ಪ್ರವೃತ್ತಿ ಬಂತು? ಬಹುಶಃ ಈ ಪ್ರವೃತ್ತಿ ನಮ್ಮ ದೇಶದಲ್ಲಿ ನಾಗರೀಕೆಗೆ, ನಮ್ಮ ಸಂಸ್ಕೃತಿಗೆ ಮಾರಕಪ್ರಾಯ ಆಗಬಹುದು. ಅರ್ನಾಲ್ಡ ಟಾನ್‌ಬಾಯ್ ಒಂದು ಮಾತು ಹೇಳಿದ್ದಾರೆ. ಅವರು ಈ ವಿಶ್ವದ 21 ಗುರುತಿಸಿದಂತಹ ನಾಗರೀಕತೆಗಳಲ್ಲಿ 19 ನಾಗರೀಕತೆಗಳ ಪರರ ಆಕ್ರಮಣದಿಂದ ನಾಶವಾಗಲಿಲ್ಲ, ಅವಸಾನವಾಗಲಿಲ್ಲ, ಹೊರತು ತಮ್ಮ ತಮ್ಮೊಳಗಿನ ಒಂದು ನೈತಿಕ ಪತನದಿಂದ, ಅಧಃಪತನದಿಂದ ನಾಶವಾಗಿದೆ. 21 ರಲ್ಲಿ 19 ನಾಗರೀಕತೆಗಳು ಈ ರೀತಿ ನಾಶವಾಗಿದೆ. ನಮ್ಮ ದೇಶದಲ್ಲಿ ಪರಿಸ್ಥಿತಿ ಆಗುತ್ತಿದೆಯೇ ಎಂಬ ಸಂದೇಹ ಬರುತ್ತಿದೆ. ನಾಗರಾಜ್‌ರವರೇ, ಹೊರದೇಶದಿಂದ ನಮ್ಮನ್ನು ಸದೆಬಡಿಯಲಿಕ್ಕೆ ಅವಸಾನ ಮಾಡಲಿಕ್ಕೆ 5 ಸಾವಿರ ವರ್ಷಗಳಿಂದ ಆಗಲೇ ಇಲ್ಲ, ಆದರೆ 6ನೇ ತಾರೀಖು ನಡೆದಂತಹ ಘಟನೆ ಬಹುಶಃ ಆ 19ಕ್ಕೆ ಇನ್ನೊಂದು ಸೇರಿ 20 ನಾಗರೀಕತೆಯ ಸಂಸ್ಕೃತಿಕ ರಾಷ್ಟ್ರ ಇವತ್ತು ನಮ್ಮಿಂದ ನಾವೇ ಅದನ್ನು ಕೆಡವುತ್ತಾ ಇದ್ದೇವೆ. ಬರೀ ಮಸೀದಿ ಕೆಡವಿದ್ದು ಅಲ್ಲ, ನಮ್ಮ ರಾಷ್ಟ್ರದ ವಿಶ್ವದ ಅತ್ಯಂತ ಉನ್ನತವಾದಂತಹ ಒಂದು ನಾಗರೀಕತೆಯ ಸೌಧವನ್ನು ಕೆಡುವುತ್ತಿದ್ದೇವೆ ಎನ್ನುವ ಭಯ ,ಶಂಕೆ ಇವತ್ತು ನಮ್ಮಲ್ಲಿ ಬರುತ್ತಿದೆ. ಆದುದರಿಂದ ಇದನ್ನು ನಾವು ಹೊಗಲಾಡಿಸತಕ್ಕಂಥ ಪ್ರಯತ್ನ ಮಾಡಬೇಕಾಗಿದೆ. 1947ರಲ್ಲಿ ಮತ್ತು 1951ನೇ ಇಸವಿಯಲ್ಲಿ ಸಂವಿಧಾನವನ್ನು ನಮಗೆ ನಾವು ಕೊಟ್ಟಿದ್ದೇವೆ. ಆಗ ನಮ್ಮ ಉದ್ದೇಶ ಏನು ಇತ್ತು ಎಂದರೆ, ನಾವು ಆಧುನಿಕವಾದಂತಹ, ವೈಜ್ಞಾನಿಕವಾದಂತಹ ಪ್ರಗತಿಪರವಾದಂತಹ ರಾಷ್ಟ್ರವನ್ನು ಕಟ್ಟುತ್ತೇವೆಂಬ ವಿಶ್ವಾಸದಿಂದ ಅಲ್ಪಸಂಖ್ಯಾತರು ಕೂಡ ನಮ್ಮ ಜೊತೆಯಲ್ಲಿ ಸೇರಿದ್ದಾರೆ. ಆ ವಿಶ್ವಾಸಕ್ಕೆ ಯಾವಾಗ ಶಿಥಿಲತೆ ಉಂಟಾಗುತ್ತದೆ ಆಗಗ ಶಂಕೆ ಬರುತ್ತದೆ. ಈ ದೇಶದ ಮಬಲ ಪ್ರವಾಹದಲ್ಲಿ ಸೇರಿಕೊಂಡೇ ತಾರಾತಕ್ರದಿಂದ ಜೀವನ ಮಾಡತಕ್ಕಂಥ ಅಲ್ಪಸಂಖ್ಯಾತರಲ್ಲಿ ನಾವು ಶಂಕೆಯನ್ನು ಹುಟ್ಟಿಸಿದಾಗ ಈ ದೇಶದಲ್ಲಿ ಯಾವ ಉದ್ದೇಶದಿಂದ ನಾವು ಸಂವಿಧಾನವನ್ನು ಮಾಡಿದ್ದೇವೆ, ಯಾವ ಉದ್ದೇಶದಿಂದ ನಾವು ಸ್ವಾತಂತ್ರ್ಯವನ್ನು ಪಡೆದಿದ್ದೇವೆ ಆ ಉದ್ದೇಶಕ್ಕೆ

ವಿರುದ್ಧವಾದಂತಹ ಕೆಲಸ ಮಾಡಿದಂತಾಗುತ್ತದೆ. ಆದ್ದರಿಂದ ನಮ್ಮ ಸೆಕ್ಯುಲರಿಸಂ ಜಾತ್ಯಾತೀತ ಸಿದ್ಧಾಂತ ಅದು ಮತೀಯ, ಸಂಸ್ಕೃತಿಕ ಒಂದು ಅಲ್ಪ ಸಂಖ್ಯಾತರ ಹಕ್ಕನ್ನು ಬೆಸೆದುಕೊಂಡು ಅದರ ಒಂದು ತಾದಾತ್ಮತೆಯಿಂದ ನಮ್ಮ ದೇಶದ ಸೆಕ್ಯುಲರಿಸಂ ಮತೀಯ ಒಂದು ಜಾತ್ಯಾತೀತದ ತತ್ವ ಮತ್ತು ಸಿದ್ಧಾಂತ, ಉಳಿದಾಗ ಮಾತ್ರ ನಮ್ಮ ರಾಷ್ಟ್ರ ಉಳಿಯುತ್ತದೆ. without the country cannot live. ಇದು ಬಾರತ ಆಗುವುದಿಲ್ಲ, ಬೇರೆ ಯಾವುದೋ ಆಗಬಹುದು. It may be at the most a glorified Nepal or something more or something else.

ನಮ್ಮ ರಾಷ್ಟ್ರ ಆಗುವುದಿಲ್ಲ, ಹಿಮಾಲಯದಿಂದ ಹಿಡಿದು ಕನ್ಯಾಕುಮಾರಿಯವರೆಗೆ ಇರತಕ್ಕಂಥ 86 ಕೋಟಿ ಜನರು ಇರತಕ್ಕಂಥ ಒಂದು ರಾಷ್ಟ್ರ ಆಗುವುದಕ್ಕೆ ಸಾಧ್ಯವಿಲ್ಲ. We will have to redefine whole India after a lapse of five thousands years; let us not divide India even after a lapse of five thousand years. ಈ ಕೆಲಸಕ್ಕೆ ನಾವು ಹೋಗುವುದು ಬೇಡ. ಬಾರತ ರಾಷ್ಟ್ರೀಯದಾಗಿ ಈ ಕೆಲಸ ಕೂಡಬಾರದು.

ಶ್ರೀ ಬಿ.ಎಸ್. ಯಾಡಿಯೂರಪ್ಪ : ಇಷ್ಟೊಂದು ಹೆಲ್ದಿ ಡಿಸ್ಕಷನ್ ಆಗಬೇಕಾದರೆ ಒಂದು ನಿಮಿಷ. ಯೀಲ್ಡ್ ಆಗಬೇಕಲ್ಲ ; ಸನ್ಮಾನ್ಯ ಅಧ್ಯಕ್ಷಣಿಯವರೆ, ತಾವು ನಿಜವಾಗಿಯೂ · ಹೇಳುತ್ತಿರುವಂಥ ಸಂಗತಿಯನ್ನು ನಾವು ಕೇಳುತ್ತಿದ್ದೇವೆ. ನಿಮ್ಮ ವಿಚಾರಗಳ ಬಗ್ಗೆ ನಮ್ಮದೇನೂ ಬಿನ್ನಬಿಪ್ರಾಯವಿಲ್ಲ. ಆದರೆ ಪ್ರಶ್ನೆ ಇರುವಂಥಾದ್ದು ಇವತ್ತು ಈ ದೇಶದಲ್ಲಿ ಕಾಶ್ಮೀರ ಸಮಸ್ಯೆ ಇರಬಹುದು. ಪಂಜಾಬ್ ಸಮಸ್ಯೆ ಇರಬಹುದು. ಅಸ್ಸಾಮ್ ಸಮಸ್ಯೆ ಇರಬಹುದು, ಇದನ್ನು ಯಾರು ಉದ್ಭವ ಮಾಡಿದ್ದಾರೆ? ಯಾರು ಇದಕ್ಕೆ ಕಾರಣ? ಇವತ್ತು ತಾವು ಇಷ್ಟು ಸಂಗತಿಗಳನ್ನು ಹೇಳುತ್ತಿದ್ದೀರಲ್ಲಾ? ಈ ಡೋಂಗಿ ಜಾತ್ಯಾತೀತದ ಬಗ್ಗೆ ನಾವು ಹೇಳುತ್ತಿದ್ದೇವೆ, ಅದನ್ನು ನೀವು ಒಪ್ಪುವುದಿಲ್ಲ ಆದರೆ ಇವತ್ತು ನಮ್ಮ ಬೇರೆ ಬೇರೆ ವಿಚಾರಗಳ ಬಗ್ಗೆ ಗೌರವ ಕೊಡಬೇಕೆಂದು ತಾವು ಅಪೇಕ್ಷೆ ಪಡುತ್ತೀರೋ ಅದೇ ಜನ ಇವತ್ತು ಪ್ರಬು ಶ್ರೀರಾಮನ ಬಗ್ಗೆ ಗೌರವ ಕೊಡಬೇಕು ಎಂದು ಹೇಳಲೇಕಾಗಿತ್ತು ತಾನೇ? ದಯಮಾಡಿ ಯಾವ ಡಿಸ್ಪ್ಯೂಟೆಡ್ ಸ್ಟ್ರಕ್ಚರ್‌ನ್ನು ಬಾಬ್ರಿ ಮಸೀದಿ ಎಂದು ಕರೆಯುವಂಥ ಪ್ರಯತ್ನ ಮಾಡುತ್ತಿದ್ದೀರಿ, ನಾನು ಅನೇಕ ದಾಖಲೆಗಳನ್ನು ಕೊಟ್ಟಿದ್ದೇನೆ. ಅದಕ್ಕೆ ತಾವು ಉತ್ತರ ಕೊಡಬೇಕಲ್ಲಾ? ಈ ದೇಶಕ್ಕೆ ಈ ರೀತಿ ಅಡ್ಡದಾರಿ ಹಿಡಿಸುವಂಥಾದ್ದು, ತಪ್ಪು ಕಲ್ಪನೆ ಉಂಟು ಮಾಡುವಂಥಾದ್ದು ಸರಿಯೇ ತಾವು ಮಾಡುತ್ತಿರುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಮ್ಮ ಯಾಡಿಯೂರಪ್ಪನವರು ಡೋಂಗಿ ಸಮಾಜವಾದ ಮತ್ತು ಡೋಂಗಿ ಜಾತ್ಯಾತೀತವಾದ ಎನ್ನತಕ್ಕಂಥ ಸೂಡೋ ಸೆಕ್ಯೂಲರಿಸಮ್ ಏನು ಹೇಳುತ್ತಿದ್ದಾರೋ,ಇದು ಹೇಗೆ ಎಂದರೆ ಒಂದು ಗಾದೆ ಇದೆ. ಬೆತ್ತಲೆ ಸಮಾಜದಲ್ಲಿ ಬಟ್ಟೆ ಹಾಕಿಕೊಂಡಿತಕ್ಕರವನೇ ದಡ್ಡನಂತೆ. ಹಾಗೆ ಅವರು ಮಾಡುತ್ತಿರುವದೇ ಇದನ್ನು, ಆದರೆ ಅವರು ನಮಗೆ ಡೋಂಗಿಗಳು ಎಂದು ಹೇಳುತ್ತಾರೆ, ಏನು ಹೇಳುವುದು ಅವರಿಗೆ? ಗೋರ್ಕಲ್ಲ ಮೇಲೆ ಮಳೆ ಸುರಿದಂತೆ. ಅವರಿಗೆ ಬದಲಾವಣೆಯಾಗುವ ಸೂಚನೆಗಳು ಕಂಡುಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಬ್ರೈನ್‌ವಾಷ್ ಮಾಡೋಣ ಎಂದು ಇದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದು ಆಗುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ಆಗುವುದಿಲ್ಲವೇ?

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಒಬ್ಬರೇ ಶ್ರೀಮಂತರಾಗಬೇಕೆಂದು ಪ್ರಯತ್ನ ಮಾಡಿದ್ದೀರಿ. ಇಡೀ ಸಮಾಜ ಬಡತನದಲ್ಲಿ ತೊಳಲಾಡುತ್ತಿರಬೇಕಾದರೆ, ಎಲ್ಲಾ ಬಡತನದಲ್ಲಿ ಬೆತ್ತಲೆ ಇರಬೇಕಾದರೆ, ಸಿಂಧ್ಯಾರವರೇ, ಸಮಾಜ ಪೂರ್ಣ ಬೆತ್ತಲೆ ಇರುವುದಕ್ಕೆ ಕಾರಣ ನೀವೇ. ಅದರಲ್ಲಿ ಬಟ್ಟೆ ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿರುವುದು ನಿವೊಬ್ಬರು ಮಾತ್ರ. ಹಡದ ದುಡ್ಡು ಹೊಡೆದು ಈ ರೀತಿ ಬಟ್ಟೆ ಹಾಕಿಕೊಳ್ಳುವಂಥ ಪ್ರಯತ್ನ ಮಾಡಿದ್ದೀರಲ್ಲಾ ಇದೇ ಇವತ್ತಿನ ಈ ಸ್ಥಿತಿಗೆ ಕಾರಣವಾಗಿರುವುದು.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಈಗ ಅದನ್ನೇ ಹೇಳುತ್ತಿದ್ದೇನೆ. ಯಾವುದು ಡೋಂಗಿ ಜಾತಿವಾದ ಅಥವಾ ಜಾತ್ಯಾತೀತ ವಾದ ಎಂದು ಇದೆಯೋ ಅದನ್ನೇ ಹೇಳುತ್ತಿದ್ದೇನೆ. ಅದನ್ನು ತಾವು ಅರಿತುಕೊಂಡರೆ ಸಾಕು. I thought I am trying to bring you to my side.

SRI B.S. YEDIYURAPPA : Definitely.

ಶ್ರೀ ಸಿ. ಬೈರೇಗೌಡ : ನಿಮ್ಮ ಅಪಾದನೆ ಅವರು ಒಪ್ಪಿದ್ದಾರೆ. ಏಕೆಂದರೆ ನೀವೂ ಅವರು ಇಬ್ಬರೂ ಸೇರಿ ಮಸೀದಿಯನ್ನು ಒಡೆಸಿದ್ದೀರಿ ನೋಡಿ ;

ಶ್ರೀ ಬಿ.ಹೆಚ್. ಬನ್ನಿಕೋಡ್ : ಯಾಡಿಯೂರಪ್ಪನವರು ಆ ಕಡೆ ಬರಬೇಕೆಂದೇ ರಾಮನ ಹೆಸರು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಈಗ ಮಸೀದಿ ಒಡೆದಿರುವುದರ ಬಗ್ಗೆ ಮತ್ತು ಈ ದೇಶದ ಸಂಸ್ಕೃತಿ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಂದ ಸುದೀರ್ಘವಾದಂಥ ಉತ್ತರ ಕೇಳುತ್ತಿದ್ದೇವೆ. ಆದರೆ ಈ ಮಸೀದಿಯನ್ನು ಒಡೆಯುವುದಕ್ಕೆ ಮುಂಚೆ ಈ ಮಸೀದಿ ರಕ್ಷಣೆ ಮಾಡತಕ್ಕಂಥ ಜವಾಬ್ದಾರಿ ಯಾರದಿತ್ತು? ಆಗ ಡೋಂಗಿ ಎನ್ನುವ ಪದ ಇದೆಯಲ್ಲಾ, ನೀವು ಡೋಂಗಿಗಳೋ ಅಥವಾ ಅವರು ಡೋಂಗಿಗಳೋ? ನಿವಿಬ್ಬರೂ ಡೋಂಗಿಗಳಾಗುತ್ತೀರಲ್ಲ, ಇದು ನಿಜವಾಗಲ್ಲೂ ದೇಶದ, ಇಡೀ ಪ್ರಪಂಚದ ಎಲ್ಲರಿಗೂ ಗೊತ್ತಾಗಿಬಿಟ್ಟಿದೆ ನಿಮ್ಮ ಹಣೆಬರಹ ಏನಾಯಿತು. ಹೊರಗಡೆ ಬಂದು ತಮಟೆ ಹೊಡೆದರೆ ಯಾರು ಹೇಳುತ್ತಾರೆ? ಇವತ್ತು ನಿಮ್ಮಿಬ್ಬರನ್ನು ನಂಬುವ ಮಟ್ಟದಲ್ಲಿ ಸಮಾಜ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾವು ಅದಕ್ಕಾಗಿಯೇ ಅಧಿಕಾರ ಕಳೆದುಕೊಂಡೆವು.

ಶ್ರೀ ವಾಟಾಳ್ ನಾಗರಾಜ್ : ನೀವು ಅಧಿಕಾರ ಏಕೆ ಕಳೆದುಕೊಂಡಿರಿ ಎಂದರೆ ಇದಕ್ಕೋಸ್ಕರ ಕಳೆದು ಕೊಂಡರೆ? ಇವರಿಗೆ ಇದೊಂದು ನೆವ ಸಿಕ್ಕಿದೆ. ನಾವು ಅಧಿಕಾರ ಕಳೆದುಕೊಂಡಿದ್ದೇವೆಂದು ಹೇಳುವುದಕ್ಕೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇಲ್ಲದಿದ್ದರೆ ನಮ್ಮ ಸರ್ಕಾರ ಹೋಗುತ್ತಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇವರು ಯಾವಾಗ ಅಧಿಕಾರ ಕಳೆದುಕೊಂಡರು ಎಂದು ಗೊತ್ತಿದೆ. ರಥಯಾತ್ರೆಯನ್ನು ಅಲ್ಲಿಯವರೆಗೂ ನೀವು ಏಕೆ ಬಿಟ್ರಿ? ರಥಯಾತ್ರೆ ಎಂದು ಇವರು ಇವತ್ತು ಹೇಳುತ್ತಾರೆ. ಇವರು ರಥಯಾತ್ರೆ ಏಕೆ

ಪ್ರಾರಂಭ ಮಾಡಿದರು ಎಂದು ಕೇಳಿ. ರಥಯಾತ್ರೆ ಬೇರೆ ರಾಜ್ಯಗಳಿಗೆ ಹೋಗುವವರೆಗೆ ಬಿಟ್ಟು ಅಮೇಲೆ ರಥಯಾತ್ರೆಯನ್ನು ತಡೆ ಹಿಡಿದಿದ್ದೀರಿ. ರಥಯಾತ್ರೆಯನ್ನು ತಡೆಯುವುದಕ್ಕೆ ಹೋಗಿಯೇ ಅವರ ಪಾರ್ಟಿ ಚೂರು ಚೂರಾಗಿದ್ದುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮಗೆ ಏನು ಹೇಳಿ ಕಳಕಳಿ ಇದೆ? ಅದನ್ನು ಕಾರ್ಯರೂಪಕ್ಕೆ ತರಲಾಗಿದೆ. ತಮಗೆ ಏನು ಇಚ್ಛೆ ಇದೆ ಅದರ ಬಗ್ಗೆ ನನಗೂ ವಿಶ್ವಾಸ ಇದೆ. ಆದರೆ ಪ್ರಶ್ನೆ ಇರುವಂಥಾದ್ದು ಏನೆಂದರೆ, ಇವತ್ತು ಸೆಕ್ಯುಲಾರಿಸಮ್ ಬಗ್ಗೆ ಮಾತನಾಡುತ್ತಿದ್ದೀರಿ. ಕೇರಳದಲ್ಲಿ ಜಾತಿ ಆಧಾರದ ಮೇಲೆ ಬೇರೆ ಮಾಡುವುದಕ್ಕೆ ಹೊರಟಿದ್ದೀರಿ. ಯಾವ ದೇಶವನ್ನು ವಿಭಜನೆ ಮಾಡಿದಂಥ ಮುಸ್ಲಿಮ್ ಲೀಗ್ ಜೊತೆ ನೀವು ಅಧಿಕಾರ ಮಾಡುವುದಕ್ಕೆ ಹೊರಟಿದ್ದೀರಿ. ನಾಗಾಲ್ಯಾಂಡ್ ನಲ್ಲಿ ಅಧಿಕಾರಕ್ಕೆ ಬಂದರೆ ಬೈಬಲ್ ಆಧಾರದ ಮೇಲೆ ನಾವು ಆಡಳಿತ ನಡೆಸುವುದಕ್ಕೆ ಸಿದ್ಧರಿಲ್ಲವೆಂದು ಘೋಷಣೆ ಮಾಡಿದ್ದೀರಿ. ಅಂದರೆ ಈ ರೀತಿ ಅನೇಕ ತಪ್ಪುಗಳಿಂದ ಇವತ್ತು ಅಲ್ಪಸಂಖ್ಯಾತರನ್ನು ಅಡ್ಡದಾರಿಗೆ ಹಿಡಿಸುವಂಥ ಪ್ರಯತ್ನ ಏನಾಗಿದೆ ಅದೇ ಕೆಲಸ ಇವತ್ತು ಮುಂದುವರಿಯುತ್ತಿದೆ. ಇವತ್ತು ಆ ಒಂದು ಡಿಸ್ಪ್ಯೂಟೆಡ್ ಸ್ಟ್ರಕ್ಚರನ್ನು ಇಡೀ ಜಗತ್ತಿಗೆ ಒಂದು ಬಾಬರ್ ಮಸೀದಿ ಎಂದು ಕರೆಯುವಂಥ ಅಕ್ಷಮ್ಯ ಅಪರಾಧ ಮಾಡುತ್ತಿದ್ದೀರಿ. ದಯಮಾಡಿ ಅದಕ್ಕೆ ಸರಿಯಾದ ಉತ್ತರ ಕೊಟ್ಟು ಮುಂದುವರಿದರೆ ಪೂರ್ಣವಾಗಿ ಮತ್ತು ಶಾಂತವಾಗಿ ನಿಮ್ಮ ಮಾತನ್ನು ನಾವು ಕೇಳುತ್ತೇವೆ. ದಯಮಾಡಿ ಉತ್ತರ ಕೊಡಿ, ಕೇಳೋಣ. ತಪ್ಪಿದ್ದರೆ ತಿದ್ದಿಕೊಳ್ಳೋಣ.

ಶ್ರೀ ಎಂ. ವೀರಪ್ಪ ಮೊಯಿಲಿ : ನಿಮ್ಮ ತಪ್ಪುಗಳನ್ನು ಸ್ವಲ್ಪ ತಿದ್ದೋಣ ಎಂದು ನಮ್ಮ ಪ್ರಯತ್ನ .....

ಛೇರ್ಮನ್ : ಮಾನ್ಯ ಮುಖ್ಯ ಮಂತ್ರಿಯವರು ಮಾತನಾಡುವ ಸಂದರ್ಭದಲ್ಲಿ ತಾವುಗಳು ಎಲ್ಲರೂ ಎದ್ದು ನಿಂತು ಮಾತನಾಡಿದರೆ, ಅವರ ಮಾತಿನ ಧಾಟಿಯೂ ಬದಲಾಗುತ್ತದೆ. ತಾವುಗಳು ಅವರು ಹೇಳುವುದನ್ನು ಕೇಳಿಕೊಂಡು ನಂತರ ಬೇಕಾದರೆ ಮಾತನಾಡಬಹುದು.

ಶ್ರೀ ವಾಟಾಳ್ ನಾಗರಾಜ್ : ಈ ತರಹದಲ್ಲಿ ಚರ್ಚೆಯಾದರೆ ಮಾತ್ರ ಚರ್ಚೆಗೆ ಒಂದು ಶಕ್ತಿ ಬರುವುದು....

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಈಶ್ವರಪ್ಪನವರು, ರುಕ್ಮಯ್ಯ ಪೂಜಾರಿಯವರು, ಯಡಿಯೂರಪ್ಪನವರು, ತಮ್ಮ ಮನಸ್ಸಿನ ಪರಿವರ್ತನೆಯನ್ನು ಮಾಡಿಕೊಂಡರೆ, ಅದರಿಂದ ಈ ದೇಶದಲ್ಲಿ ದೊಡ್ಡ ಒಂದು ಸಾಧನೆಯಾದ ಹಾಗೆ ಆಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ದೇವರ ದಯೆಯಿಂದ ನಾವು ಆರ್‌ಎಸ್‌ಎಸ್ ಕಾರ್ಯಕರ್ತರಾಗಿ ಒಬ್ಬ ಶುದ್ಧ ದೇವಬಕ್ತರಾಗಿ ಇದ್ದೇನೆ. ನಮ್ಮನ್ನು ಪರಿವರ್ತನೆ ಮಾಡುವುದಕ್ಕೆ ನಿಮ್ಮಿಂದ ಆಗುವುದಿಲ್ಲ,

ಶ್ರೀ ಎಂ. ವೀರಪ್ಪ ಮೊಯಿಲಿ : ನಿಮ್ಮ ದೇಶ ಬಕ್ತಿಯ ಪ್ರದರ್ಶನವಾಗಿದೆ. ಇಡೀ ಜಗತ್ತಿಗೇ ನಿಮ್ಮ ದೇಶಭಕ್ತಿಯು ಡಿಸೆಂಬರ್ 6 ರಂದು ಪ್ರದರ್ಶನವಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಿಮ್ಮ ವಿಷಯ ಕೂಡ ಜಗತ್ತಿಗೆ ಅಂದಿನಿಂದಲೇ ಪ್ರಚಾರವಾಗಿದೆ. ನೀವು ಎಂಥವರು ಎಂಬುದು ಕೂಡ ಜಗತ್ತಿಗೆ ಗೊತ್ತಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸೆಕ್ಯೂಲರಿಸಂ ಟೆಸ್ಟ್ ಬಂದಾಗ ಮಾತ್ರ ನೀವು ಪಾಸ್ ಆಗುತ್ತಿರೋ ಫೇಲ್ ಆಗುತ್ತೀರೋ? ಸೆಕ್ಯೂಲರಿಸಂನ ದೊಡ್ಡ ಟೆಸ್ಟ್ 6ನೇ ತಾರೀಖಿನಿಂದ ಆಗಿದೆ. ನೀವು ಫೇಲ್ ಆಗಿದ್ದೀರಿ. ಆದ್ದರಿಂದ ಸೆಕ್ಯೂಲರಿಸಂ ಬಗ್ಗೆ ನಿಮ್ಮ ಟೆಸ್ಟ್ ಬೇಡ. I can say, ಸೆಕ್ಯುಲರಿಸಂ ಟೆಸ್ಟ್, ಕಾಂಗ್ರೆಸ್‌ನವರಿಗೆ ಬಂದಿದೆ. ಜನತಾ ದಳದವರಿಗೆ ಬಂದಿದೆ. We have passed.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು 1947ನೇ ಇಸವಿಯಲ್ಲಿಯೇ ದೇಶವನ್ನು ತುಂಡು ಮಾಡಿಬಿಟ್ಟಿರಿ. ನಿಮಗೆ ಸೆಕ್ಯುಲರಿಸಂ ಬಗ್ಗೆ ಮಾತನಾಡಲು ಹಕ್ಕು ಇದೆಯೇ ಎನ್ನುವುದು ಸಂಶಯ.

ಶ್ರೀ ಎ.ಕೆ. ಅನಂತಕೃಷ್ಣ : ಗಾಂಧೀಜಿಯವರನ್ನು ಹೊಡೆದು ಹಾಕಿದಾಗಲೂ ಇದೇ ಮಾತನಾಡುತ್ತಿದ್ದಿರಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಗಾಂಧೀಜಿಯವರಿಗೆ ಗುಂಡಿಟ್ಟಂಥ ಜನ, ಇವರನ್ನು ಪರಿವರ್ತನೆ ಮಾಡಲು ಆಗುವುದಿಲ್ಲ.

(ಗೊಂದಲ)

ಶ್ರೀ ಸುಭಾಶ್ ಎ. ಜೋಶಿ : ಆರ್‌ಎಸ್‌ಎಸ್‌ನವರ ಪ್ರವೃತ್ತಿ ಗೋಡ್ಸೆಪ್ರವೃತ್ತಿ ...

ಶ್ರೀ ಬಿ.ಹೆಚ್. ಬನ್ನಿಕೋಡ್ : ರಾಜಕೀಯ ಪ್ರಚಾರಕ್ಕಾಗಿ ರಾಮನ ಹೆಸರು ತೆಗೆದುಕೊಂಡು ಹೀಗೆ ಮಾಡುತ್ತಿದ್ದೀರಿ...

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಮೆಣಸು ಹುಳುತರೂ ಖಾರ ಕಡಿಮೆ ಇಲ್ಲ ಎಂದ ಹಾಗೆ ಇವರ ಪರಿಸ್ಥಿತಿಯಾಗಿದೆ. ಇದನ್ನು ತಾವುಗಳು ಅರ್ಥಮಾಡಿಕೊಳ್ಳಬೇಕು. ನಿಮಗಿಂತ ವರ್ಸ್ಟ್ ರಾಜಕಾರಣಿಗಳು ಬೇರೆ ಯಾರೂ ಇಲ್ಲ ...

ಶ್ರೀ ಎಂ. ವೀರಪ್ಪ ಮೊಯಿಲಿ : ಇವರಿಗೆ ಮಹಾತ್ಮಾ ಗಾಂಧೀಯವರ ಸಿದ್ಧಾಂತಗಳು ಹಿಡಿಸುವುದಿಲ್ಲ, ಎಂದು ಕಾಣುತ್ತದೆ. ಅವರು ಹೇಳಿದ ಒಂದು ಪ್ರಸಕ್ತವಾದಂಥ ಮಾತನ್ನು ಇಲ್ಲಿ ಹೇಳ ಬೇಕಾಗುತ್ತದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಹಾತ್ಮಾ ಗಾಂಧೀಯವರು ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದಂಥ ಕಾಂಗ್ರೆಸ್ ಪಕ್ಷವನ್ನು ವಿಸರ್ಜನೆ ಮಾಡಬೇಕು ಎಂದು ಹೇಳಿದ್ದರು. ಅದನ್ನು ನಿಮ್ಮ ಪಕ್ಷದವರು ಮಾಡಿದ್ದಾರೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಅಂದರೆ ನಿಮಗೆ ಅಧಿಕಾರ ಬೇಕು ಎಂದು ಆಯಿತು....

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : 1947ಲ್ಲಿ ನೀವು ನಮಗೆ ಅಧಿಕಾರ ಕೊಡಿ ಎಂದು ಕೇಳ ಬೇಕಾಗಿತ್ತು.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಈ ಜನರು ಅಂದು ರಾಷ್ಟ್ರಪಿತನನ್ನು ಕೊಂದರೆ, ಈಗ ರಾಷ್ಟ್ರವನ್ನೇ ಕೊಲ್ಲುವುದಕ್ಕೆ ಹೊರಟಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ರಾಜೀವ್ ಗಾಂಧೀಯವರು ಇಲ್ಲದ ಸ್ಥಿತಿಯನ್ನು ನೋಡಿದರೆ ಮುಂದೆ ನಿಮ್ಮನ್ನು ಯಾರು ಮುಂದಕ್ಕೆ ಒಯ್ಯುತ್ತಾರೆ ಎಂದು ಗೊತ್ತಾಗುತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ರಾಷ್ಟ್ರದ ಚರಿತ್ರೆ ನೀವು ಔಟ್ ಆಫ್ ಡೇಟ್ ಈ ರಾಷ್ಟ್ರದ ಚರಿತ್ರೆ ನಿಮಗೆ ಗೊತ್ತಿಲ್ಲ. ಈ ರಾಷ್ಟ್ರದ ಪ್ರಜಾಪ್ರಭುತ್ವದ ಕಟ್ಟಡ ಏನಿದೆ ಇದನ್ನು ಕಟ್ಟಲಿಕ್ಕೆ ಬಹಳ ಜನ ಬಲಿದಾನ ಮಾಡಿದ್ದಾರೆ. ಈ ರಾಷ್ಟ್ರ ಸುಮ್ಮನೆ ನಿಮ್ಮ ಸ್ಲೋಗನ್‌ಗಳಿಂದ ರಚನೆಯಾಗಿದೆ. ಪ್ರಜಾಪ್ರಭುತ್ವ ಉಳಿದುಕೊಂಡಿದೆ ಎಂದು ತಿಳಿದುಕೊಳ್ಳಬೇಡಿ. ಈ ರಾಷ್ಟ್ರದ ಕಟ್ಟಡ ಕಟ್ಟಲಿಕ್ಕೆ ಮಹಾತ್ಮಾ ಗಾಂಧಿಯವರ ಎಲುಬನ್ನು ಕಲ್ಲಾಗಿ ಉಪಯೋಗ ಮಾಡಿಕೊಂಡಿದ್ದೇವೆ. ಇಂದಿರಾಗಾಂಧಿಯವರ ರಕ್ತವನ್ನು ನೀರಾಗಿ ಉಪಯೋಗಮಾಡಿಕೊಂಡಿದ್ದೇವೆ ರಾಜೀವಗಾಂಧಿಯವರ ಮಾಂಸಖಂಡಗಳನ್ನು ಮಣ್ಣಾಗಿ ಉಪಯೋಗ ಮಾಡಿಕೊಂಡು ರಾಷ್ಟ್ರದ ಪ್ರಜಾಪ್ರಭುತ್ವದ ಕಟ್ಟಡ ಕಟ್ಟಿದ್ದೇವೆ, ನಿಮ್ಮ ಮಾತಿನಿಂದ ಕಟ್ಟಿದ್ದೇವೆ ಎಂದು ತಿಳಿದುಕೊಳ್ಳಬೇಡಿ. ಇವರು ಮಾತ್ರವಲ್ಲ, ಅನೇಕ ಹಿರಿಯರ ಬಲಿದಾನದಿಂದ ಮಾಡಿದೆ ಈ ದೇಶಕ್ಕಾಗಿ ಬಲಿದಾನ ಮಾಡಿದ ನಿಮ್ಮ ಒಂದು ಚರಿತ್ರೆ ಕೊಡಿ. ನಮ್ಮ ಪಕ್ಷದ ಬಗ್ಗೆ ಇವತ್ತು ಮಾತನಾಡುತ್ತಿದ್ದೀರಿ. ಇವತ್ತು ನಮ್ಮ ಜಾತೀಯ ಮತೀಯ ವಿಷಾನಿಲದಿಂದ ಸಾವಿರಾರು ಜನರ ಬಲಿದಾನವಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇಂದಿರಾಗಾಂಧಿಯವರನ್ನು ಕೊಲೆ ಮಾಡಿದಾಗ 7 ಸಾವಿರ ಜನರನ್ನು ದೆಹಲಿಯಲ್ಲಿ ಕೊಲೆ ಮಾಡಿದರಲ್ಲ, ರಾಜೀವಗಾಂಧಿ ಕೊಲೆಗೆ ಕಾಂಗ್ರೆಸ್ ಪಕ್ಷವೇ ಕಾರಣ ಎಂದು ವರ್ಮಾ ಕಮಿಟಿ ರಿಪೋರ್ಟ್ ಕೊಟ್ಟಿದೆ. ಆಗ ಎಲ್ಲಿ ಹೋಗಿದ್ದೀರಿ? ಏನು ಮಾಡುತ್ತಿದ್ದಿರಿ?

(ಗೊಂದಲ)

ಚೇರ್ಮನ್ : ಈಶ್ವರಪ್ಪನವರೇ ನೀವು ಹೀಗೆ ಮಾತುಮಾತಿಗೆ ತಡೆಯೊಡ್ಡಿದ್ದರೆ ಹೇಗೆ?

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ಪ್ರಶ್ನೆ ಕೇಳಿದರೆ ಉತ್ತರ ಕೊಡಬೇಕಲ್ಲ, ಅವರ ಪ್ರಶ್ನೆಗೆ ಉತ್ತರ ಕೊಡುವ ಶಕ್ತಿ, ವಿಚಾರವಂತಿಕೆ ನಮ್ಮ ಹತ್ತಿರ ಇದೆ, ಇವರು ಎಷ್ಟೇ ಕೂಗಿದರೂ ಇದರಲ್ಲೇನೂ ಫಾಯಿದೆ ಇಲ್ಲ, ನಮಗೆ ರಾಮನ ಭಕ್ತಿ ಇದೆ, ಶಕ್ತಿ ಇದೆ, ಜನತೆಯ ಶಕ್ತಿ ಇದೆ. ಕೊನೆಗೆ ಧರ್ಮರಾಮನೇ ಗೆದ್ದಿದ್ದು ಜ್ಞಾಪಕ ಇಟ್ಟುಕೊಳ್ಳಿ, ಧರ್ಮ ಸಾಮ್ರಾಜ್ಯ ಮುಂದೆನೂ ಆಗೇ ಆಗುತ್ತದೆ.

ಶ್ರೀ ಸಿ. ಬೈರೇಗೌಡ : ಈ ದೇಶದಲ್ಲಿ, ರಾಮನ ಭಕ್ತರು ಬಹಳ ಜನರಿದ್ದಾರೆ, ಆದರೆ ಕುರ್ಚಿರಾಮನ ಭಕ್ತರು ಇದ್ದಾರಲ್ಲ ಇವರು, ಇವರ ಭಕ್ತರು ಕಡಿಮೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ಕುರ್ಚಿ ರಾಮನ ಭಕ್ತರಾದರೆ ಇವರು ಬಾಟ್ಲಿರಾಮನ ಭಕ್ತರು.

ಶ್ರೀ ಎಂ. ವೀರಪ್ಪ ಮೊಯ್ಲಿ : ಅಧ್ಯಕ್ಷಿಣಿಯವರೆ, ಹಿಟ್ಲರನ ಕಾಲದಲ್ಲಿ ಒಬ್ಬ ಐಕ್‌ಮೆನ್ ಎಂದು ಒಬ್ಬ ಇದ್ದ. ಅವ ವಿಷಾನಿಲ ಹಾಕಿ 50 ಸಾವಿರ ಜನರನ್ನು ಕೊಂದ, ಇವತ್ತು ಜಾತಿಯ ಮತೀಯ ವಿಷಾನಿಲ ಹಾಕಿ ಕೊಲ್ಲುವ ಜನರಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇಂದಿರಾಗಾಂಧಿಯವರ ಮರಣಾನಂತರ ಸಾವಿರಾರು ಜನರನ್ನು ಕೊಂದರಲ್ಲ ಅದಕ್ಕೇನು ಉತ್ತರ ಕೊಡುತ್ತೀರೋ ಕೊಡಿ.

(ಗೊಂದಲ)

ಶ್ರೀಎಂ. ವೀರಪ್ಪ ಮೊಯಿಲಿ : ನಾನು ಅವರಿಗೆ ಹೇಳಲಿಲ್ಲ, ಅವರಿಗೆ ಎಂದು ತಿಳಿದುಕೊಂಡರೆ ತಿಳಿದುಕೊಳ್ಳಲಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ರಾಜೀವ್ ಗಾಂಧಿಯವರ ಹತ್ಯೆಗೆ ನಿಮ್ಮ ಪಕ್ಷವೇ ಕಾರಣ ಎಂದು ವರ್ಮಾ ಸಮಿತಿ ಹೇಳಿದೆ. ಇದಕ್ಕೆ ನಿಮ್ಮ ಉತ್ತರವೇನು?

ಚೇರ್ಮನ್ : ಈಶ್ವರಪ್ಪನವರೇ, ಇದು ಟೂ ಮಚ್. ನಾನು ಕೊನೇಪಕ್ಷ ಡಿಸಿಪ್ಲೀನ್ ಮೇಂಟೇನ್ ಮಾಡಬೇಕು, ಪ್ರತಿಯೊಂದು ಮಾತಿಗೂ ನೀವು ಉತ್ತರ ಕೇಳುವುದಕ್ಕೆ ಹೋದರೆ ಹೇಗಾಗುತ್ತೇ? ಅವರು ಉತ್ತರ ಹೇಳಲಿಕ್ಕೆ ಬಿಡಿ. ಆಮೇಲೆ ಬೇಕಾದರೆ ಹೇಳುವಿರಂತೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಅವರ ಉತ್ತರ ಕೇಳಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ನೋಡಿ ನಮಗೆ ನಂಬಿಕೆ ಇದೆ, ಶಕ್ತಿ ಇದೆ, ಉತ್ತರ ಬೇಕಾ ಹೇಳಿ. ಇಲ್ಲವೇ ನಿಮ್ಮ 184 ಜನ ಬಂಟರು ಇದ್ದಾರಲ್ಲ ಅವರಿಗೆ ಭಾಷಣ ಮಾಡುವುದಾದರೆ ಮಾಡಿ. ಉತ್ತರ ಬೇಕಾದರೆ ಉತ್ತರ ಕೊಡುವುದಕ್ಕೆ ತಯಾರಿದ್ದೇವೆ.

ಚೇರ್ಮನ್ : ನಿಮ್ಮಿಂದ ಉತ್ತರ ಅವರು ನಿರೀಕ್ಷಿಸುತ್ತಿಲ್ಲ. ಎಲ್ಲ ಸದಸ್ಯರು ಮಾತನಾಡಿದ್ದಾರೆ ಅದಕ್ಕೆ ಅವರು ಉತ್ತರ ಕೊಡುತ್ತಿದ್ದಾರೆ. ಅದನ್ನು ನೀವು ಪೇಷನ್ಸಾಗಿ ಕೇಳಿ. ನಂತರ ನೀವು ಮಾತನಾಡಿ. ಇಲ್ಲದಿದ್ದರೆ ಇದು ಇನ್‌ಡಿಸಿಪ್ಲೀನ್ ಆಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಸನ್ಮಾನ್ಯ ಅಧ್ಯಕ್ಷಣಿಯವರೇ, ನಾನು ಈಶ್ವರಪ್ಪನವರಲ್ಲಿ ಪ್ರಶ್ನೆ ಕೇಳುತ್ತಿಲ್ಲ. ಅವರ ಪ್ರಶ್ನೆಗೆ ನನ್ನ ಉತ್ತರ. ಪ್ರಶ್ನೆ ಕೇಳುವ ಶಕ್ತಿ ಇದ್ದವರಿಗೆ ಉತ್ತರ ಕೇಳುವ ಶಕ್ತಿ ಕೂಡ ಇರಬೇಕು. ಇಲ್ಲ, ಉತ್ತರ ಕೇಳುವಂಥ ಶಕ್ತಿ ಇಲ್ಲದಿದ್ದರೆ ನಾನು ಏನು ಮಾಡಬೇಕು? ಅದಕ್ಕೆ ಬೇರೆ ಮದ್ದನ್ನು ಹುಡುಕಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಏನೇನೂ ಯದ್ವಾತದ್ವಾ ನಿಮ್ಮ ಬಾಯಿಯಿಂದ ಬರಬಾರದು ಅಷ್ಟೆ. ಅದು ರೆಕಾರ್ಡ್‌ನಲ್ಲಿ ಉಳಿಯುತ್ತದೆ. ನಾಳೆ ಕಷ್ಟವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ ; ಇಲ್ಲಿ ಕೇಳಿ ಬೇಕಾದರೆ. ನಾನು ಸುಸಂಸ್ಕೃತವಾದಂಥ, ಅತ್ಯಂತ ಉನ್ನತ ಸಜ್ಜನಿಕೆಯ ಮಾತುಗಳಿಂದಲೇ ಹೇಳುತ್ತಿದ್ದೇನೆ, ಒಂದು ಶಬ್ದ ಹುಡುಕಿ, ಏನೂ ಇಲ್ಲ, ಆದರೆ ಕೆಲವು ಸಾರಿ ನಾನು ಹೇಳುವುದೆಲ್ಲಾ ನಿಮ್ಮ ಬಗ್ಗೆಯೇ ಎಂದು ತಿಳಿದುಕೊಂಡು ಈಶ್ವರಪ್ಪನವರು ಎದ್ದುನಿಂತಿದ್ದಾರೆ. ತಾವು ಆ ಕೆಲಸವನ್ನು ಮಾಡುತ್ತಿದ್ದೀರಿ. ಏಕೆ?

ಶ್ರೀ ಬಿ.ಹೆಚ್. ಬನ್ನಿಕೋಡ್ : 'ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ' ಎನ್ನುವ ಹಾಗೆ ಈಶ್ವರಪ್ಪನವರು ಮಾತನಾಡುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ನನಗೆ ಕಳ್ಳತನ ಗೊತ್ತಿಲ್ಲ. ನಿಮ್ಮಿಗ್ಬರಿಗೇ ಗೊತ್ತಿರುವುದು. ಕುಂಬಳಕಾಯಿ ಕದ್ದಿದ್ದರೋ ಏನು ಕದ್ದಿದ್ದರೋ ಎಂದು ನಿಮಗೆ ಅದು ಗೊತ್ತು.

ಶ್ರೀ ವಾಟಾಳ್ ನಾಗರಾಜ್ : ನಮ್ಮ ಈಶ್ವರಪ್ಪ ಒಂದಾದರೂ ಒಳ್ಳೆ ಮಾತು ಹೇಳಿದರು.

(ಗೊಂದಲ)

ಛೇರ್ಮನ್ : ಬನ್ನಿಕೋಡ್‌ರವರೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಮನ ಕೈಗೆ ನೀವಿಬ್ಬರೂ ಸಿಕ್ಕಿಕೊಂಡು ಅಪ್ಪಚ್ಚಿ ಆಗುತ್ತೀರಲ್ಲಾ, ಇದನ್ನು ನೋಡಿ ನನಗೆ ಅಯೋಪಾಪ ಎನಿಸುತ್ತದೆ ನಮಗೆ ಅಷ್ಟೆ. ಏಕೆಂದರೆ, ಕಳೆದ ಐದು ದಿವಸದಿಂದ ರಾಮ, ಎಲ್ಲರನ್ನೂ ಸ್ಮರಣೆ ಮಾಡಿಕೊಂಡಿರಿ. ಜೀವನದಲ್ಲಿ ಎಂದೂ ನೀವು ಇಷ್ಟು ಸಾರಿ ರಾಮ ಎಂದು ಕರೆದಿರಲಿಲ್ಲ. ಕಡೆಯ ಪಕ್ಷ ಈಗಲಾದರೂ ಹೇಳುತ್ತೀರಲ್ಲಾ. ಅದಕ್ಕೆ ನಿಮಗೆ ಧನ್ಯವಾದಗಳನ್ನು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಆದರೆ ಈ ರಾಮ ಯಾರು ಎಂದು ನಾವು ಇನ್ನೂ ಸಂಭೋದನೆ ಮಾಡಬೇಕು? ಆ ರಾಮ ಹನುಮಂತನ ಹೃದಯದಲ್ಲಿದ್ದ. ಆದರೆ ಈ ರಾಮ ಎಲ್ಲಿದ್ದಾರೆ? ಅದೇ ಪ್ರಶ್ನೆ. ಮಹಾತ್ಮಾಗಾಂಧಿಯವರು ಒಂದು ಮಾತು ಹೇಳಿದ್ದಾರೆ. ಬಹುಶಃ ಮಹಾತ್ಮಾಗಾಂಧಿ ಸೆಕ್ಯುಲರ್ ಎಂದು ಹೇಳಿ ಅವರನ್ನು ಸುಡೋ ಸೆಕ್ಯುಲರ್ ಎಂದು ನಾನು ಹೇಳುತ್ತಿಲ್ಲ. ಅವರು ಏನು ಹೇಳಿದ್ದಾರೆ. Yes. I am a Christian and a Hindu and a Muslim and a Jain.

ಈ ಮಾತನ್ನು ಮಹಾತ್ಮಗಾಂಧಿಯವರು ಹೇಳಿದ್ದಾರೆ.

ಅವರು ಮುಂದೆ ಹೋಗಿ ಹೇಳುತ್ತಾರೆ. Turn the searchlight inward, adjudicate, negotiate, articulate otherwise one inter-religious broil or one reacelight will imediately create fuel for another and one war will generate the venomous fears and military desires which makes a second and third the more likely violence is self perpetrated.

ಬಹುಶಃ ಇದನ್ನು ಬೇಕಾದರೆ ಪ್ರಿಂಟ್ ಮಾಡಿಕೊಡುತ್ತೇನೆ. ತಮ್ಮ ಮನೆಯಲ್ಲೆಲ್ಲಾ ಹಾಕಿಕೊಳ್ಳಿ.

ಶ್ರೀ ಕೆ. ಎಸ್. ಈಶ್ವರಪ್ಪ : ನಿಮ್ಮವರಿಗೆ ಬೇಕಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನಮ್ಮವರು ನಿಮ್ಮವರು ಎಲ್ಲಾ ಸೇರಿ ಮಾಡಿದರೆ ಬಹುಶಃ...

ಒಬ್ಬ ಮಾನ್ಯ ಸದಸ್ಯರು : ಪ್ರಯೋಜನ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಪ್ರಯೋಜನ ಇದ್ದರೆ ಇದನ್ನು ಹಾಕಿಬಿಡಿ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದಲ್ಲಿ ಹಣ ಇಲ್ಲ ಎಂದು ಹೇಳುತ್ತೀರಿ; ಮುದ್ರಣ ಮಾಡುವುದಕ್ಕೆ ದುಡ್ಡೆಲ್ಲಿದೆ?

ಛೇರ್ಮನ್ : ತಾವೇ ಏನಾದರೂ ದೊಡ್ಡ ಮನಸ್ಸು ಮಾಡಿ ಎಲ್ಲರಿಗೂ ಪ್ರಿಂಟ್ ಮಾಡಿ ಹಂಚಿದರೆ it helps more ಅಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಅವರು ಕೇಳಿದರೆ ಏನಾದರೂ ಯೋಚನೆ ಮಾಡೋಣ.

ಛೇರ್ಮನ್ : ನ್ಯೂ ಇಯರ್ ಗ್ರೀಟಿಂಗ್ಸ್ ತರಹ.

ಶ್ರೀ ಎಂ. ವೀರಪ್ಪ ಮೊಯಿಲಿ : ಆದ್ದರಿಂದ ನಾನು ಸೆಕ್ಯುಲರಿಸಂ ಬಗ್ಗೆ ಈ ಎಲ್ಲಾ ರೀತಿಯ ಒಂದು ಮತೀಯ ಸ್ವಾತಂತ್ರ್ಯಕ್ಕೆ ಸಂಪೂರ್ಣವಾದಂಥ ಒಂದು ಸಂರಕ್ಷಣೆ ನಮಗೆ ಸಂವಿಧಾನ ಕೊಟ್ಟಿದೆ. ಸಂವಿಧಾನದ ಹೆಸರು ಹೇಳಿ ತಾವು ಈ ಸದನಕ್ಕೆ ಬಂದಿದ್ದೀರಿ. ಇಲ್ಲದಿದ್ದರೆ ತಾವು ಎಲೆಕ್ಟ್ ಆಗುತ್ತಿರಲಿಲ್ಲ, ಸಂವಿಧಾನಕ್ಕೆ ವಿರೋಧವಾಗಿದ್ದರೆ You are not eligible even to become a citizen of this country.

ನೀವು ಚುನಾವಣಾ ಹಕ್ಕಿಗೂ ಕೂಡ ಬರುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ, ಆರ್ಟಿಕಲ್ 25 ಮತ್ತು 26 ಅದು ಏನು ಹೇಳುತ್ತದೆ? ಏನೆಂದರೆ, Subject to public order morality and health all persons are equally entitle to freedom and functions and the right to freely profess and protect and propagate religion. ಈ ಹಕ್ಕು ಇಲ್ಲ ಎಂದು ತಾವು ಹೇಳುವುದಿಲ್ಲ, ಆರ್ಟಿಕಲ್ 29 ಏನು ಹೇಳುತ್ತದೆ ಎಂದರೆ, guarantee to minorities having distinct language, spirit and culture of its own. Right to conserve with the same. ಆರ್ಟಿಕಲ್ 30 ಏನು ಹೇಳುತ್ತದೆ ಎಂದರೆ,

All minorities based on religion or language shall have the right to establish and administer educational institutions of their choice.

ಆದ್ದರಿಂದ ಏನು ಮೈನಾರಿಟೀಸ್ ರೈಟ್ ಇದೆ, ಅದು ಅತ್ಯಂತ ಅಮೂಲ್ಯವಾದಂತಹ ಮೂಲಭೂತವಾದಂತಹ ಮೌಲ್ಯಾಧಾರಿತವಾದಂತಹ ಒಂದು ಸಂವಿದಾನಿಕ ಪಾವಿತ್ರತೆಯ ತಳಹದಿ. ಅದನ್ನು ಮೊನ್ನೆ ಆರನೇ ತಾರೀಖು ಒಡೆದಿದ್ದಾರೆ. ಆ ಪಾವಿತ್ರತೆಯ ಬುನಾದಿ ಏನು ಇದೆ ಅದನ್ನು ನೀವು ಒಡೆದಾಗ ಏನು ಪರಿಣಾಮ ಆಗುತ್ತದೆ ಎಂದು ನೀವು ಆಲೋಚನೆ ಮಾಡಿಕೊಳ್ಳಬೇಕು. ನಮ್ಮ ದೇಶ ನಾಗರೀಕತೆಯಲ್ಲಿ ಬಹಳ ಮುಂದುವರಿದ ದೇಶ.

ಇಂಗ್ಲೆಂಡ್ ಐರ್‌ಲೆಂಡ್ ಬೇರೆ ಬೇರೆ ದೇಶ ಆಗಿದೆ. ಐರ್‌ಲೆಂಡ್ ಒಂದೇ ಜನಾಂಗದವರು ethnic groups ಅವರು ಒಂದೇ ಭಾಷೆಯನ್ನು ಆಡತಕ್ಕ ಜನರು. ಆದರೂ ಕೂಡ ಎರಡು ದೇಶವಾಗಿದೆ. ಒಂದೇ ಮತವನ್ನು ಆಚರಣೆ ಮಾಡತಕ್ಕಂತಹ ಪಾಕಿಸ್ಥಾನ ಮತ್ತು ಬಾಂಗ್ಲಾದೇಶ ಒಂದೇ ethnic group ಆದರೂ ಇವತ್ತು ಎರಡು ದೇಶವಾಗಿದೆ. ಒಂದೇ ಮತ, ಒಂದೇ ಜನ, ಒಂದೇ ಭಾಷೆ, ಒಂದೇ ರೀತಿಯ ಗ್ರೂಪ್ ನವರು ಒಂದು ದೇಶವಾಗಿ ಉಳಿಯಲಿಕ್ಕೆ ಆಗಲಿಲ್ಲ, ಎರಡು ದೇಶವಾಗಿ ಹೋಯಿತು. ಮಧ್ಯ ಏಶಿಯಾದ ಅನೇಕ ರಾಷ್ಟ್ರಗಳು ಒಂದೊಂದು ದೇಶಕ್ಕೆ ಒಂದೊಂದು ಭಾಷೆಗೆ,ಒಂದೊಂದು ಜನಾಂಗಕ್ಕೆ ಒಂದೊಂದು ಮತಕ್ಕೆ ಒಂದೊಂದು ದೇಶವಾಗಿಹೋಗಿದೆ. ಈ ರೀತಿ ಇವತ್ತು ವಿಶ್ವದ ರಾಜಕೀಯದ ಚಿತ್ರ ಇದೆ. ಅಂತಹ ಪರಿಸ್ಥಿತಿ ಇರುವಾಗ ತಾವು ವಿಕೃತ ಭಾವನೆಗಳನ್ನು ಪ್ರಜಾಪ್ರಭುತ್ವ ವಿಕೃತವಾದಂತಹ ಭಾವನೆಗಳನ್ನು ಮಾಡತಕ್ಕ ರೀತಿಯಲ್ಲಿ ಮಾಡಿದ್ದೀರಿ. ನಾನು ಇವತ್ತು ಈ ಒಂದು ಪವಿತ್ರವಾದ ವೇದಿಕೆಯಲ್ಲಿ ಹೇಳುತ್ತಿದ್ದೇನೆ. ಈ ಪ್ರವೃತ್ತಿಯಲ್ಲಿ ಮುಂದುವರಿದರೆ ಒಂದೊಂದು ಭಾಷೆಗೆ ಒಂದೊಂದು ದೇಶವಾಗುತ್ತದೆ. ಒಂದೊಂದು ಜನಾಂಗಕ್ಕೆ ಒಂದೊಂದು ದೇಶವಾಗುತ್ತದೆ. ನಮ್ಮಲ್ಲಿ ಅನೇಕ ethnic group ಜನಾಂಗಗಳಿವೆ. ಒಂದೊಂದು ಜನಾಂಗಕ್ಕೆ ಒಂದೊಂದು ದೇಶ ಆಗಬಹುದು, ಒಂದೊಂದು ಮತಕ್ಕೆ, ಕೆಲವು ಜಾತಿಗಳ ಗುಂಪುಗಳಿಗೆ ಒಂದೊಂದು ದೇಶವಾಗಿ ಈ ರಾಷ್ಟ್ರ ಒಂದು ದೇಶವಾಗಿ ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ನಾವು ಉಳಿಸಿಕೊಂಡಿದ್ದರೆ ಅತ್ಯಂತ ಪವಿತ್ರವಾದಂತಹ ಭಾರತೀಯ ಪ್ರಜ್ಞೆಯ ರಾಷ್ಟ್ರೀಯಕೊಂಡಿ, ಅದುಭದ್ರವಾಗಿ ಇವತ್ತಿನವರೆಗೆ ಉಳಿದ ಕಾರಣದಿಂದ ರಾಷ್ಟ್ರದಲ್ಲಿ ಎಂತಹ ಅಪಾಯಬಂದರೂ ಕೂಡ, ಎಂತಹ ಸವಾಲು ಬಂದರೂ ಕೂಡ ಇವತ್ತು ಆ ಕೊಂಡಿ ಕಳಚಿ ಹೋಗಿಲ್ಲ, ಆ ಕೊಂಡಿಯನ್ನು ಕಳಚಿ ಹೋಗಲಿಕ್ಕೆ ಸಾಕಷ್ಟು ಸುತ್ತಿಗೆ ಪೆಟ್ಟು ಮೊನ್ನೆ 6ನೇ ತಾರೀಖು ಬಿದ್ದಿದೆ.ಇವತ್ತು ಶಿಥಿಲ್ ಆಗುವುದಕ್ಕೆ ಪ್ರಾರಂಭ ಆಗಿದೆ. ಅದು ಮತ್ತಷ್ಟು ಭದ್ರಗೊಳಿಸತಕ್ಕಂಥ ರಾಷ್ಟ್ರೀಯ ಭಾವನೆಯನ್ನು ನಾವು ಇವತ್ತು ಎಲ್ಲರೂ ಬೆಳೆಸಿಕೊಳ್ಳಬೇಕು. ಕಡಿಮೆ ಪಕ್ಷ ಪಶ್ಚಾತ್ತಾಪ ಆಗಬೇಕು. ಯಾರು ಕಾರಣೀಭೂತರಾಗಿದ್ದಾರೆ, ಮತದ ಹೆಸರಿನಲ್ಲಿ ಮತ್ತೊಂದು ಮತವನ್ನು ದ್ವೇಶಿಸತಕ್ಕ ತತ್ವ ರಾಷ್ಟ್ರಕ್ಕೆ it is foreign to our culture. ನಮ್ಮ ಸಂಸ್ಕೃತಿಗೆ ವಿರುದ್ಧವಾದಂತಹ ಆ ಒಂದು ಸಂಸ್ಕೃತಿಯನ್ನು ಮತ್ತೆ ಉಳಿಸಿಕೊಂಡು ಬರುತ್ತಿದ್ದೇವೆ. ಶಿಥಿಲವಾಗಿರತಕ್ಕಂಥ ನಮ್ಮ ಭಾರತ ರಾಷ್ಟ್ರೀಯ ಪ್ರಜ್ಞೆಯನ್ನು ಮತ್ತಷ್ಟು ಭದ್ರಗೊಳಿಸತಕ್ಕಂಥ ಸಂಕಲ್ಪ ಬಹುಶಃ ಈ ಸುದೀರ್ಘ ಚರ್ಚೆಯಿಂದ ಆದಾಗ ಈ ಚರ್ಚೆ ಮತ್ತಷ್ಟು ಹೆಚ್ಚು ಪರಿಣಾಮಕಾರಿಯಾಗುತ್ತದೆ ಎಂಬ ಒಂದು ಮಾತನ್ನು ಇವತ್ತು ಹೇಳಲಿಕ್ಕೆ ನಾನು ಇಚ್ಛೆಪಡುತ್ತಿದ್ದೇನೆ. ಯಾವಾಗಲೂ ಕೂಡ ಭಾರತದ ಇತಿಹಾಸದಲ್ಲಿ ಒಗ್ಗಟ್ಟನ್ನು ಕಳೆದುಕೊಂಡಾಗ ಗುಲಾಮರಾಗಿದ್ದೇವೆ. ಯಾವಾಗಲೂ ಒಗ್ಗಟ್ಟನ್ನು ಕಳೆದುಕೊಂಡಾಗ ಗುಲಾಮರೇ. ನಾವು ಒಗ್ಗಟ್ಟಿನಿಂದ ಹೋರಾಡಿದಾಗ ದೊಡ್ಡ ಸಾಮ್ರಾಜ್ಯವನ್ನು ಸೋಲಿಸಿದ್ದೇವೆ.ಇವತ್ತು ಇದೇ ಕೆಲಸ ಅಂದರೆ ನಾವು ಒಗ್ಗಟ್ಟು ಆಗಬೇಕಾಗಿದೆ. ದೇಶದಿಂದ ಒಗ್ಗಟ್ಟು ಮಾಡಲಿಕ್ಕೆ ಆಗುವುದಿಲ್ಲ. ಪ್ರೀತಿಯಿಂದ ಸೌಹಾರ್ದತೆಯಿಂದ, ಪರಸ್ಪರ ಮಮತೆಯಿಂದ ನಾವು ಈ ಐಕ್ಯತೆಯನ್ನು ಸಾಧನೆ ಮಾಡಲಿಕ್ಕೆ ಆಗುತ್ತದೆ.

ನಮ್ಮ ಸಂಸ್ಕೃತಿಯ ಪರಂಪರೇ ಏನಿದೆ ಅದೇ ನಮ್ಮ ಶಕ್ತಿ, ಪರಮತ ಸಹಿಷ್ಣುತೆ ಏನಿದೆ that is the real hallmark of Indian culture. ಪರಮತ ಸಹಿಷ್ಣುತೆ ಇಲ್ಲದೇ ಇದ್ದರೆ ನಮ್ಮ ಇಡೀ ಸಂಸ್ಕೃತಿಯನ್ನು ಎತ್ತಿ ಬೆಳೆಸಿದಂತಹ ಒಂದು ಆಧಾರ ಸ್ಥಂಭವೇ ಕಳಚಿಹೋಗುತ್ತದೆ.

ಈ ಕೆಲಸಕ್ಕೆ ನಾವೆಂದಿಗೂ ಕೂಡ ಕೈ ಹಾಕಬಾರದು. ಇದನ್ನು ವಿಶೇಷವಾಗಿ ಈ ಚರ್ಚೆಯ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ನಾವು ಯಾವ ರೀತಿಯಲ್ಲಿ ಜಾತ್ಯಾತೀತ ತತ್ವವನ್ನು ಭದ್ರಗೊಳಿಸುವುದಕ್ಕೇ ಸಾಧ್ಯವಾಗುತ್ತದೆ ಎಂಬುದರ ಬಗ್ಗೆ ನಾವೆಲ್ಲರೂ ಕುಳಿತುಕೊಂಡು ಆಲೋಚನೆ ಮಾಡಬೇಕಾಗುತ್ತದೆ. ಈ ದಿಸೆಯಲ್ಲಿ ವಿಶೇಷವಾಗಿ ಎಲ್ಲಾ ಪಕ್ಷಗಳು, ನಾವು ಎಲ್ಲಾ ಮತದವರು, ಎಲ್ಲಾ ಜಾತಿಯವರು ಒಗ್ಗಟ್ಟಾಗಿ ಕೆಲಸ ಮಾಡಬೇಕಾದಂತಹ ಅವಶ್ಯಕತೆ ಇದೆ.

4.10 P.M.

ಅನೇಕ ಮುಖಂಡರು, ವಿರೋಧ ಪಕ್ಷದ ನಾಯಕರು ಇಲ್ಲಿ ಮಾತನಾಡಿದ್ದೀರಿ. ಅದಕ್ಕೆ ನಾನು ಪ್ರತ್ಯೇಕವಾಗಿ ಉತ್ತರವನ್ನು ಕೊಡುವ ಅವಶ್ಯಕತೆ ಇಲ್ಲ, ಏಕೆಂದರೆ, ಈಗಾಗಲೇ ಇದಕ್ಕೆ ಉತ್ತರ ಬಂದಿದೆ. ಈಗ ನಮ್ಮ ಪ್ರಧಾನಿಯವರ ಬಗ್ಗೆಯೂ ಕೂಡ ಕೆಲವು ಮಾತುಗಳು. ಬಂದಿವೆ. ಬಹುಶಃ ನಾನು ಉತ್ತರ ಕೊಡಬೇಕಾದ ಪ್ರಶ್ನೆ ಇಲ್ಲಿ ಇರುವುದಿಲ್ಲ, ಆದರೂ ಕೂಡ ಪ್ರಸ್ತಾವಿಕವಾಗಿ ಕೆಲವು ಮಾತುಗಳನ್ನು ನಾನು ಹೇಳದೇ ಇದ್ದರೆ ಕರ್ತವ್ಯಚ್ಯುತಿ ಮಾಡಿದಹಾಗೆ ಆಗುತ್ತದೆ ಎಂಬ ಭಾವನೆಯಿಂದ ಮಾತ್ರ, ಸೀಮಿತವಾದಂತಹ ಕ್ಷೇತ್ರದಲ್ಲಿ ಮಾತ್ರ ಕೆಲವು ಮಾತುಗಳನ್ನು ನಾನು ಹೇಳುತ್ತೇನೆ. ಪ್ರಧಾನಿಯವರು ಅಧಿಕಾರವನ್ನು ತೆಗೆದುಕೊಂಡ ಮೇಲೆ ಏನು ಮಾಡಿದರು 1989-90ರಲ್ಲಿ ಯಾವ ಪರಿಸ್ಥಿತಿ ಇತ್ತು ಎನ್ನುವುದನ್ನು ನಾವು ಸ್ವಲ್ಪ ಆಲೋಚನೆ ಮಾಡಬೇಕು. ಎಲ್ಲಾ ಸಂದರ್ಭಕ್ಕೆ ಒಂದೇ ರೀತಿಯಲ್ಲಿ ಪ್ರಕ್ರಿಯೆ ಬರುವುದಿಲ್ಲ, ಒಂದೊಂದು ಆಕ್ಷನ್‌ಗೆ ಒಂದೊಂದು ರೀತಿಯ ಪ್ರತಿಕ್ರಿಯೆ ಆಯಾ ಪರಿಸ್ಥಿತಿಯನ್ನು ಹೊಂದುಕೊಂಡು ಇರುತ್ತದೆ. 1990ನೇ ಫೆಬ್ರವರಿ 14ರಲ್ಲಿ ಮಂದಿರ ನಿರ್ಮಾಣದ ಕೆಲಸವನ್ನು ನಾವು ಪ್ರಾರಂಭ ಮಾಡುತ್ತೇವೆಂದು ವಿ.ಹೆಚ್.ಪಿ. ಯವರು ಘೋಷಣೆಯನ್ನು ಕೊಟ್ಟರು. ಆಗ ಯಾರ ಸರ್ಕಾರ ಇತ್ತು? ಆಗ ಮಾನ್ಯ ವಿ.ಪಿ. ಸಿಂಗ್ ರವರು ಪ್ರಧಾನಮತ್ರಿಯಾಗಿದ್ದರು. I know very well. VP Singh is a highly Secular person. ನಾನು ಆ ದೃಷ್ಟಿಯಲ್ಲಿ ಯಾರನ್ನೂ ಟೀಕೆ ಮಾಡಲಿಕ್ಕೆ ಇಚ್ಛೆಪಡುವುದಿಲ್ಲ. ಅನಂತರ ಸೆಪ್ಟೆಂಬರ್ 30ರಲ್ಲಿ ಮಾನ್ಯ ಅಡ್ವಾನಿಯವರು ರಥಯಾತ್ರೆಯನ್ನು ಪ್ರಾರಂಭ ಮಾಡಿದರು. ಆಗಲೂ ಕೂಡ ಮಾನ್ಯ ವಿ.ಪಿ. ಸಿಂಗ್‌ರವರು ಪ್ರಧಾನ ಮಂತ್ರಿಯಾಗಿದ್ದರು. ಆ ಸಂದರ್ಭದಲ್ಲಿ ಕೇಂದ್ರದವರು ಒಂದು ಆರ್ಡಿನೆನ್ಸ್‌ನ್ನು ಪಾಸ್ ಮಾಡಿದರು. ಆ ಡಿಸ್‌ಪ್ಯೂಟೆಡ್ ಜಾಗವನ್ನು ಸ್ವಾಧೀನ ಮಾಡಿ ಅಕ್ವಿಜೇಷನ್ ಆರ್ಡರ್ ಮಾಡಿದಂತಹ ಮರುದಿವಸವೇ ಅದನ್ನು ಹಿಂದಕ್ಕೆ ತೆಗೆದುಕೊಂಡರು. ಆ ಆರ್ಡಿನೆನ್ಸ್ ಅನ್ನು ಆ ಸಂದರ್ಭದಲ್ಲಿ ಮಾಡುತ್ತಿದ್ದರೆ, ಆಗ ರಾಜ್ಯ ಸರ್ಕಾರ ನಿಮ್ಮ ಕೈಯಲ್ಲಿತ್ತು, ಕೇಂದ್ರ ಸರ್ಕಾರ ನಿಮ್ಮ ಕೈಯಲ್ಲಿತ್ತು. ಈ ಎಲ್ಲಾ ಅನಾಹುತಗಳನ್ನು ತಪ್ಪಿಸಬಹುದಿತ್ತು. ಏಕೆಂದರೆ, ಅದು ಬಹಳ ಪ್ರಾಮುಖ್ಯವಾದಂತಹ ಘಟನೆ. Ordinancee was issued. At

whose instance that was withdrawn. There was no legal problem,Constitutional problem.

ಆಗ ರಾಜ್ಯ ಸರ್ಕಾರ ಆಗಿ ನಿಮ್ಮದು ಇತ್ತು. ಕೇಂದ್ರ ಸರ್ಕಾರವೂ ನಿಮ್ಮದಿತ್ತು. If that were to be sustained, you would not have given scope to Karsevak's to demolish Masjid on that day. That would have been in the possession of Government of India.

ಇದು ಬಹಳ ಪ್ರಾಮುಖ್ಯವಾದಂತಹ ಘಟನೆ, ಬಿ.ಜೆ.ಪಿಯ ಮಾನ್ಯ ಅಡ್ವಾನಿಯವರು ಹೇಳಿದರು, ಅಥವಾ ವಾಜಪೇಯಿಯವರು ಹೇಳಿ ಈ ಆರ್ಡಿನೆನ್ಸ್ ಅನ್ನು ಹಿಂದೆ ತೆಗೆದುಕೊಂಡರು ಎಂದು ನಾನು ಆಪಾದನೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಿಜವಾಗಿಯೂ ಅಲ್ಪ ಸಂಖ್ಯಾತರ ರಕ್ಷಣೆಯನ್ನು ಮಾಡಬೇಕು, ಮಾಡಲು ಅವರನ್ನು ಯಾರೂ ಆ ಸಂದರ್ಭದಲ್ಲಿ ಕೈ ಕಟ್ಟಿರಲಿಲ್ಲ. Nobody has prevented you. ಫುಲ್ ಸಪೋರ್ಟ್ ಇತ್ತು. ನಮ್ಮ ಪಕ್ಷ ಅದಕ್ಕೆ ವಿರೋಧ ಮಾಡಿರಲಿಲ್ಲ, ಬೆಂಬಲವನ್ನು ಕೊಟ್ಟಿತ್ತು. ಆರ್ಡಿನೆನ್ಸ್ ಹೊರಡಿಸಿದ್ದಕ್ಕೆ ಅದನ್ನು ಮಾಡಿದ್ದರೆ ಈ ರಾಷ್ಟ್ರೀಯ ಅದ್ವಿತೀಯವಾದಂತಹ, ಸಂಪೂರ್ಣ ಅನಾಗರಿಕವಾದಂಥ, ಇಡೀ ರಾಷ್ಟ್ರದ ಸಂಸ್ಕೃತಿಗೆ ವಿರೋಧವಾದಂಥ ಒಂದು ಅಕೃತ್ಯ 6ನೇ ತಾರೀಖು ನಡೆಯುತ್ತಿರಲಿಲ್ಲ. It is a question of timing. ಯಾವಾಗಲೂ ನಿರ್ಣಯ ಆ ಸಂದರ್ಭಕ್ಕೆ ನಾವು ಮಾಡಿದಾಗ ಕೆಲವು ಅಚಾತುರ್ಯಗಳನ್ನು ತಪ್ಪಿಸಲಿಕ್ಕೆ ಸಾಧ್ಯವಿತ್ತು, ಇದನ್ನು ಮಾಡಬೇಕಾಗಿತ್ತು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಆರ್ಡಿನೆನ್ಸ್ ಬಗ್ಗೆ ಹೇಳಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯ್ಲಿ : ನೀವು ಆಮೇಲೆ ಮಾತನಾಡಿ You can make note of it. ನೀವು ಹೇಳಿದ ಹಾಗೆ ನಾನು ಹೇಳಬಹುದು. ಅಡ್ವಾನಿಯವರಿಗೆ ಹೆದರಿ ನೀವು ಆರ್ಡಿನೆನ್ಸ್ ಅನ್ನು ಹಿಂದೆ ತೆಗೆದುಕೊಂಡರೆಂದು ನಾನು ಹೇಳಿದ್ದೇನೆಯೇ ನಾನು ಹೇಳಬಹುದಾಗಿತ್ತು. ಹೇಳುವುದಿಲ್ಲ I am not going to say that.

(Interruptions)

ಶ್ರೀ ಬಿ.ಹೆಚ್. ಬನ್ನಿಕೋಡ್ : ಅಯೋಧ್ಯೆಯಲ್ಲಿ ಕರಸೇವೆ ಮಾಡುವುದಕ್ಕೆ ಏತಕ್ಕೆ ಅವಕಾಶ ಕೊಟ್ಟಿರಿ? ಅಲ್ಲಿ ಕೇಂದ್ರ ಸರ್ಕಾರ ಏನು ಮಾಡುತ್ತಿತ್ತು?

ಶ್ರೀ ಆರ್.ವಿ. ದೇಶಪಾಂಡೆ : ಆರ್ಡಿನೆನ್ಸ್ ಇಷ್ಯೂ ಮಾಡಿದ್ದುದು ನಿಜ, ವಿತ್‌ಡ್ರಾ ಮಾಡಿದ್ದು ನಿಜ. They are all facts which cnnot deny. ಆದರೆ, ಒಂದು ಪ್ರಶ್ನೆಯನ್ನು ತಾವು ಒಪ್ಪಿಕೊಳ್ಳಬೇಕು. ಏನೆಂದರೆ, ಈ ದೇಶದಲ್ಲಿ ಭದ್ರತೆ, ಐಕ್ಯತೆ, ಸಮಗ್ರತೆ ಹಾಗೂ ಸೆಕ್ಯುಲರಿಸಂ ಉಳಿಸಿಕೊಳ್ಳುವುದಕ್ಕೆ ಅಡ್ವಾಣಿಯವರನ್ನು ಅರೆಸ್ಟ್ ಮಾಡಿ, ಮಸೀದಿಯನ್ನು ಉಳಿಸಿ ನಾವು ಸರ್ಕಾರವನ್ನು ಕಳೆದುಕೊಂಡೆವು. ಆ ಸಮಯದಲ್ಲಿ ಬಿಜೆಪಿಯವರು ನೋ ಕಾನ್‌ಫಿಡೆನ್ಸ್ ಮೋಷನ್ ಅನ್ನು ನಮ್ಮ ಮೇಲೆ ಮೂವ್ ಮಾಡಿದಾಗ, ವಿ.ಪಿ.ಸಿಂಗ್ ರವರು ಸೆಕ್ಯುಲರ್ ಕಾಲ್ ಕೊಟ್ಟಾಗ ಆ ಕಾಲ್ ನಿಮಗೆ ಮುಟ್ಟಿಲ್ಲ, ನೀವು ಕಿವಿ ಬಂದ್ ಮಾಡಿ ಬಿಜೆಪಿ ತಂದಂಥ ನೋ ಕಾನ್‌ಫಿಡೆನ್ಸ್ ಮೋಷನ್‌ಗೆ ಬೆಂಬಲ ವ್ಯಕ್ತಪಡಿಸಿ ವಿ.ಪಿ.ಸಿಂಗ್ ಸರ್ಕಾರವನ್ನು

ತೆಗೆದಿರಿ. ಆರ್ಡಿನೆನ್ಸ್ ತಂದಂಥ ಆ ಸಮಯದಲ್ಲಿ ನೀವು ಬೆಂಬಲಿಸಲಿಲ್ಲ. ಅದೇ ಆರ್ಡಿನೆನ್ಸ್ ಅನ್ನು ನರಸಿಂಹರಾವ್‌ರವರು ಏಕೆ ಅಕ್ವೇಲ್ ಮಾಡಲಿಕ್ಕೆ ಆಗಲಿಲ್ಲ. ಆ ಆರ್ಡಿನೆನ್ಸ್ ರೈಟ್ ಡಿಸಿಷನ್ ಇದ್ದರೆ Why did Mr. Narasimha Rao was sleeping over it? What was he doing ? You can only write to Supreme Court. Why did you not pass an Ordinance and take over the land?

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹೇಳುತ್ತಿರುವುದು ಸರಿಯಾಗಿದೆ. ತಾವು ಸತ್ಯಸಂಗತಿಯಿಂದ ಹೊರಗಡೆ ಬನ್ನಿ. ಆ ಸ್ಥಳದಲ್ಲಿ ರಾಮ ಮಂದಿರ ಇರಲಿಲ್ಲ, ಅದು ಮಸೀದಿಯಾಗಿತ್ತು. ಈಗಲೂ ನಾವು ಮಸೀದಿಯನ್ನು ಕಟ್ಟುತ್ತೇವೆಂದು ಹೇಳಿ. ಏಕೆ ನೀವು ಹೇಳುವುದಿಲ್ಲ? ಮಸೀದಿಯನ್ನೂ ಕಟ್ಟುತ್ತೇವೆ ಮಂದಿರವನ್ನೂ ಕಟ್ಟುತ್ತೇವೆಂದು ಇತ್ತ ಕಡೆ ಹಾವು ಸಾಯಬಾರದು, ಕೋಲು ಮುರಿಯಬಾರದು. ಅದು ರಾಮ ಮಂದಿರ ಅಲ್ಲ, ಅದು ಬಾಬರ್‌ನ ಮಸೀದಿ. ಅದನ್ನು ಕಟ್ಟಿಸುತ್ತೇವೆ, ಉಳಿಸುತ್ತೇವೆ ಎಂದು ಜನರ ಮುಂದೆ ಬಂದು ಹೇಳಿ. ಏಕೆ ನೀವು ಈ ರೀತಿ ಹೇಳುವುದಿಲ್ಲ? ಮಂದಿರ ಹಾಗೂ ಮಸೀದಿ ಎರಡನ್ನೂ ಕಟ್ಟುತ್ತೇವೆಂದು ಹೇಳಿ ದೊಂಬರಾಟ ಆಡಿಕೊಂಡು ಜನರನ್ನು ಕಂಗಾಲಾಗಿಸುವ ನೀತಿ ಬಿಟ್ಟುಬಿಡಿ. ಯಾವ ದೇಶದಲ್ಲಿ ಒಂದು ರಾಷ್ಟ್ರಧ್ವಜವನ್ನು ಹಾರಿಸುವುದಕ್ಕೆ ಕರ್ನಾಟಕದ ಹುಬ್ಬಳ್ಳಿಯಲ್ಲಿ ಅನುಮತಿ ಕೊಡುವುದಕ್ಕೆ ಪೋಲೀಸರು ಅಡ್ಡ ಬರುತ್ತಾರೆ. ಈ ದೇಶದಲ್ಲಿ ಬಹುಸಂಖ್ಯಾತರಾದ ಹಿಂದೂಗಳು ತಮ್ಮ ದೇವರನ್ನು ಮೆರವಣಿಗೆ ತೆಗೆದುಕೊಂಡು ಹೋಗುವುದಕ್ಕೆ ಪೋಲೀಸರ ಅಪ್ಪಣೆ ಬೇಕೇ. ಇದು ಯಾರ ಅಪ್ಪನ ರಾಜ್ಯ? ಯಾವ ಅಪ್ಪನ ದೇಶ ಇದು? ನಮ್ಮ ದೇಶ ಅಲ್ಲವೇ ನಮ್ಮ ದೇಶದಲ್ಲಿಯೇ ಬಹುಸಂಖ್ಯಾತರಾದ ಹಿಂದೂಗಳು ಧೈರ್ಯವಾಗಿ ಓಡಾಡುವುದಕ್ಕೆ ನಿಮ್ಮ ಅನುಮತಿ ಬೇಕು. ನಮ್ಮ ದೇವರುಗಳನ್ನು ಮೆರವಣಿಗೆ ಮಾಡುವುದಕ್ಕೆ ನಿಮ್ಮ ಅನುಮತಿ ಬೇಕು. ಈ ದೇಶದಲ್ಲಿ ಆರ್ ಎಸ್ ಎಸ್ ಮತ್ತು ಬಿಜೆಪಿಯವರು ನಮ್ಮ ಮುಸ್ಲಿಂ ಬಾಂಧವರ ಹಬ್ಬಗಳಿಗೆ ಅಡ್ಡಿ ಮಾಡಿದರು, ವಿರೋಧ ಮಾಡಿದರು ಎನ್ನುವ ಒಂದು ಉದಾಹರಣೆ ಕೊಡಿ. ಯಾವುದಾದರೊಂದು ಮಸೀದಿಯನ್ನು ಒಡೆದುಹಾಕಿರುವುದರ ಬಗ್ಗೆ ಉದಾಹರಣೆ ಕೊಡಿ.

ಮಹಾತ್ಮಾ ಗಾಂಧೀಜಿಯವರು ಕಂಡಂಥ ರಾಮರಾಜ್ಯ ಯಾವುದು? ಆ ರಾಮ ಯಾರು? ಇವೊತ್ತು ನಾವು-ನೀವು ಸೇರಿಕೊಂಡು ಉದ್ದೇಶಪೂರ್ವಕವಾಗಿ ಅಲ್ಪಸಂಖ್ಯಾತರನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದೇವೆ. ನೀವು ಆ ಕೆಲಸ ಮಾಡುವುದನ್ನು ನಿಲ್ಲಿಸಿ ಎನ್ನುವುದು ನಮ್ಮ ಕಳಕಳಿಯ ವಿನಂತಿ. ಈಗಲಾದರೂ ಈ ದೇಶದ ಜನತೆಗೆ ಸತ್ಯ ಹೇಳಿ. ಯಾರಾದರೂ ಒಬ್ಬರು ಈ ಸದನದೊಳಗೆ ಹೇಳುತ್ತಿರತಕ್ಕಂಥ ಮಾತನ್ನು ನಿಮ್ಮ ನಿಮ್ಮ ಕ್ಷೇತ್ರಗಳಿಗೆ ಹೋಗಿ ಮಾತನಾಡಿ ವಾಪಸ್ಸು ಬನ್ನಿ ನೋಡೋಣ. You cannot come back.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಿಮ್ಮ ವಿಚಾರವನ್ನು ಯಾರು ಒಪ್ಪುತ್ತಾರೋ, ಅವರದೇ ಭಾಷಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಂಡಿಯಾ ಟುಡೇ ವಿಶ್ಲೇಷಣೆ ನೋಡಿದ್ದೀರಾ? ಇಡೀ ದೇಶದಲ್ಲಿ ಕಾಂಗ್ರೆಸ್ ಅಧಃಪತನದ ಅಂಚಿನತ್ತ ಹೋಗುತ್ತಿದೆ,

ಮುಂದೇ ಏನು ಎಂದು ಯೋಚನೆ ಮಾಡಬೇಕಾದಂಥ ಸ್ಥಿತಿ ನಿಮ್ಮದು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನನ್ನ ಮಾತಿನ ಒಟ್ಟಾರೆ ಅಭಿಪ್ರಾಯವೇನೆಂದರೆ, ಈ ದೇಶದ ಜನರಿಗೆ ಏನು ಬೇಕೋ ಅದನ್ನು ಮಾಡಿ, ಅವರು ಏನು ಒಪ್ಪುತ್ತಾರೋ ಅದನ್ನು ಮಾಡಿ. ಅದನ್ನು ಬಿಟ್ಟು ನೀವು ಏನೋ ಹೇಳಿ ಅದನ್ನು ಮಾಡುವಂಥ ಕೆಲಸ ಏನಿದೆ, ಅದು ವಿನಾಶಕ್ಕೆ ಕಾರಣವಾಗುತ್ತಿರುವಂಥಾದ್ದು. ಆದುದರಿಂದ ಸತ್ಯ ಹೇಳಿ ಹೊರಗಡೆ ಬನ್ನಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ದೇಶಕ್ಕೆ ಏನು ಸರಿಯಾಗುತ್ತದೋ, ದೇಶದ ಜನರಿಗೆ ಏನು ಸರಿಯಾಗುತ್ತದೆ. ಅದನ್ನು ಮಾಡಬೇಕೇ ಹೊರತು ನೀವು ಹೇಳುತ್ತೀರಿ ಎಂದು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಯಡಿಯೂರಪ್ಪ : ನೀವು ಹೇಳುತ್ತಿರುವುದು ಸರಿಯಾಗಿದೆ.

ಶ್ರೀ ಎ.ಎಂ. ಹಿಂಡಸಗೇರಿ : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹುಬ್ಬಳ್ಳಿಯಲ್ಲಿ ಹಿಂದೂ ಬಾಂಧವರಿಗೆ ಅಡ್ಡಾಡಲಿಕ್ಕೆ ಪೋಲೀಸರ ಅನುಮತಿ ಬೇಕೇ ಎಂದು ಈಗತಾನೇ ಹೇಳಿದರು. ಈಗಲೂ ಸ್ಟೇಟ್‌ಮೆಂಟ್ ಬರುತ್ತಿದೆ. ದೆಹಲಿಯಲ್ಲಿರುವ ಜಮಾ ಮಸೀದಿಯನ್ನು ಹಿಂದೂಗಳಿಗೆ ಬಿಟ್ಟು ಕೊಡಬೇಕೆಂದು ಹೇಳುತ್ತಿದ್ದಾರೆ. ಹುಬ್ಬಳ್ಳಿಯಲ್ಲಿ ಖಬರಸ್ಥಾನಗೆ ಗೋಡೆ ಕಟ್ಟಿದರೆ ಅಲ್ಲಿನ ಹಿಂದೂ ಬಾಂಧವರು ಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದಿದ್ದಾರೆ. ಅಲ್ಲೊಂದು ಸಣ್ಣ ದರ್ಗಾ ಇದೆ. ಅಲ್ಲಿ ಹೋಗಿ ಧ್ವಜವನ್ನು ಹಾರಿಸಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುವುದಕ್ಕೆ ಅಡ್ಡಿಯಾಯಿತು. ಬಿ.ಜೆ.ಪಿ.ಯವರ ಅಥವಾ ಕಾಂಗ್ರೆಸ್‌ನವರ ಧ್ವಜವನ್ನು ಹಾರಿಸಲು ಹೋಗಲಿಲ್ಲ, ಈ ರಾಷ್ಟ್ರದ ಧ್ವಜವನ್ನಾರಿಸಲು ಹೋಗಿದ್ದೇವಷ್ಟೇ.

(ಗೊಂದಲ)

ಶ್ರೀ ಎಂ.ಎಂ. ಹಿಂಡಸಗೇರಿ : ನಾನು ಮಾತನಾಡುತ್ತಿದ್ದೇನೆ. ಸ್ವಲ್ಪ ದಯಮಾಡಿ ಅವಕಾಶ ಕೊಡಿ. ಇಡೀ ದೇಶಕ್ಕೆ ಬೆಂಕಿಯನ್ನು ಹಚ್ಚಿ ಮತ್ತೆ ಇವರು ಮಾತನಾಡಿ ಊರೂರಿಗೆ ಬೆಂಕಿಯನ್ನು ಹಚ್ಚತಕ್ಕ ಪ್ರಯತ್ನವನ್ನು ಮಾಡುತ್ತಿದ್ದಾರೆ. ಮಾನ್ಯ ಸಿಂಧ್ಯರವರು ಮೊನ್ನೆ ಅಲ್ಪಸಂಖ್ಯಾತರ ಶೈಕ್ಷಣಿಕ, ಆರ್ಥಿಕ ಮತ್ತು ಹಕ್ಕಿನ ಶೇಕಡಾವಾರು ಎಷ್ಟಿದೆ ಎಂದು' ಹೇಳಿದ್ದಾರೆ. ಹುಬ್ಬಳ್ಳಿಯಲ್ಲಿ ಮಾತ್ರವಲ್ಲ, ಅನೇಕ ಅಲ್ಪಸಂಖ್ಯಾತರಿಗೆ ತೊಂದರೆಯನ್ನು ಕೊಡುತ್ತಿದ್ದಾರೆ. ಈ ಹೌಸ್‌ನಲ್ಲಿಯೂ ಸಹ ಅವರು ಯಾವ ರೀತಿಯಲ್ಲಿ ಮಾತನಾಡುತ್ತಾರೆ ಎಂಬ ಬಗ್ಗೆ ತಾವು ದಯಮಾಡಿ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹುಬ್ಬಳ್ಳಿಯಲ್ಲಿ ಧ್ವಜಾರೋಹಣ ಮಾಡಲು ಯಾರದೂ ತೊಂದರೆ ಇರಲಿಲ್ಲ. ಅದು ವಕ್ಫ ಪ್ರಾಪರ್ಟಿ ಇದೆ, ಈದ್‌ಗಾ ಇದೆ. ನಾವು 86 ಕೋಟಿ ಜನರೆಲ್ಲರೂ ಧ್ವಜಾರೋಹಣ ಮಾಡಲು ಗೌರವವಿದೆ., ಗೌರವರನ್ನು ಕೊಡುತ್ತೇವೆ. ಆ ಸಂಸ್ಥೆಯವರು ತಮ್ಮ ಸಂಸ್ಥೆಯ ಮೇಲೆ ಧ್ವಜಾರೋಹಣವನ್ನು ಮಾಡುತ್ತಾರೆ. ಈ ರೀತಿ ಹೊಸ ಹೊಸ ಪದ್ಧತಿಯನ್ನು

ತಂದು ಅವರು ಜಾತಿಯ ಗಲಭೆಯನ್ನು ಮಾಡಲು ಪ್ರಯತ್ನ ಮಾಡುತ್ತಾರೆ. ದಯಮಾಡಿ ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಹುಬ್ಬಳ್ಳಿಯಲ್ಲಾಗಲಿ ಅಥವಾ ನಮ್ಮ ಕರ್ನಾಟಕದಲ್ಲಾಗಲಿ ಅಂಥದ್ದಕ್ಕೆ ಅವಕಾಶ, ಆಸ್ಪದವನ್ನು ಕೊಡಬಾರದೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೈಕೋರ್ಟಿನಲ್ಲಿ ಆ ಜಾಗ ಹಿಂದೂಗಳಿಗೆ ಸೇರಿದ್ದೆಂದು ತೀರ್ಮಾನವಾಗಿದೆ. ಅವರು ಹೈಕೋರ್ಟಿನ ತೀರ್ಮಾನಕ್ಕಾದರೂ ಮನ್ನಣೆ ಕೊಡಬೇಕಲ್ಲ!

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಈಗ ಹೇಳುತ್ತಿದ್ದೆ. ಅಕ್ಟೋಬರ್ 23 ರಂದು ಬಿ.ಜೆ.ಪಿ. ಯ ನಾಯಕರಾದ ಅಡ್ವಾನಿಯವರು ಅರೆಸ್ಟ್ ಆದರು. 1989ರಲ್ಲಿ ಬಿ.ಜೆ.ಪಿ. ಬೆಂಬಲದಿಂದ ನಿಮ್ಮ ಸರ್ಕಾರ ಇತ್ತು. ಅದನ್ನು ಮಾನ್ಯ ದೇಶಪಾಂಡೆಯವರು ಒಪ್ಪಿಕೊಳ್ಳುತ್ತಾರೆ. ಆಗ ಬಿ.ಜೆ.ಪಿ.ಯವರು ತಮ್ಮ ಬೆಂಬಲವನ್ನು ಹಿಂದಕ್ಕೆ ತೆಗೆದುಕೊಂಡಮೇಲೆ ನಿಮ್ಮ ಗತಿ ಏನಾಗಬೇಕು.

I think, you will have to correct it. B.J.P had not moved the No Confidence Motion. V.P. Singh sought vote of confidence. What happened on that day is Vote of Confidence was brought by V,P.Singh. B.J.P abstained.

Sri R.V. Deshpande : You were hand in glove with B.J.P That is the history.

Sri M.Veerappa Moily : I am sorry, you are distorting the history. Let us understand the history in proper perspective. It is untrue. Everybody knows it. B.J.P. withdrew its support. ಬಿ.ಜೆ.ಪಿ. ಸಪೋರ್ಟ್ ವಿತ್ ಡ್ರಾ ಮಾಡಿದ್ದಾಗ ಕಾಂಗ್ರೆಸ್ ನಮಗೆ ಬೆಂಬಲ ಕೊಟ್ಟು ಸರ್ಕಾರ ಉಳಿಸಬೇಕು ಎಂದು ನೀವು ಹೇಳುವುದು. That is another argument.

Sri. R.V. Deshande : Which was done by left parties this time.

(Interruptions)

Sri M.Veerappa Moily : Facts are facts.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ಬಿ.ಜೆ.ಪಿ ಯವರ ಸ್ನೇಹ ಮಾಡಿದ್ದೇವೆ.

ನೀವು ಮುಸ್ಲಿಂಲೀಗ್ ನೊಂದಿಗೆ ಸ್ನೇಹ ಮಾಡಿದ್ದಿರಿ. ನಾವಿಬ್ಬರೂ ಕೂಡ ಮಾಡಿರತಕ್ಕದ್ದು ತಪ್ಪೇ ಇನ್ನು ಮುಂದೆ ಬೇರೆ ರೀತಿ ಹೋಗೋಣ.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಸಿಂಧ್ಯರವರು ಹೇಳಿದ್ದು ಸತ್ಯ, ಅದನ್ನು ನಾನು ಮೆಚ್ಚುತ್ತೇನೆ. ಅವರು ಏನು ಹೇಳುತ್ತಿದ್ದಾರೆ. ನಾನು ಒಪ್ಪುತ್ತಿದ್ದೇನೆ. ಈ ಬುದ್ದಿ 1977 ರಲ್ಲಿ ಬಂದಿದ್ದರೆ. ಅಥವಾ 89ರಲ್ಲಿ ಬಂದಿದ್ದರೆ ದೇಶಕ್ಕೆ ಈ ಗತಿ ಬರುತ್ತಿರಲಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಅವರ ಶಕ್ತಿ 1980 ರಲ್ಲಿ ಎರಡು ಇತ್ತು. 84 ರಲ್ಲಿ 4 ಇತ್ತು. ಆ ಶಕ್ತಿಯನ್ನು ಬೆಳೆಸಲಿಕ್ಕೆ ನಾವೇ ಕಾರಣ. ನಮ್ಮದು ತಪ್ಪಾಗಿದೆ. ಮಾನ್ಯ ಸಿಂಧ್ಯರವರು ಹೇಳಿದಂತೆ ಈ ಮುಸ್ಲಿಂ ಲೀಗನ್ನು ಕೇರಳದಲ್ಲಿ ಮತ್ತು ಡೆಲ್ಲಿಯಲ್ಲಿ ಏನು ಬೆಳೆಸುತ್ತಿದ್ದೀರಿ. ಅದನ್ನು ಮೊದಲು ಸುಧಾರಿಸಿಕೊಳ್ಳಿ. ನಮಗೆ ಏನು ಪಶ್ಚಾತ್ತಾಪ ಆಗಿದೆ. ಅದು ನಿಮಗೆ ಆಗುವುದು. ಬೇಡ.

ಶ್ರೀ ಕೆ.ಹೆಚ್. ರಂಗನಾಥ್ : ಅವರು ಮೊದಲು ನಗರಗಳಿಗೆ ಮಾತ್ರ ಸೀಮಿತವಾಗಿದ್ದರು. 1971 ರಲ್ಲಿ 77 ರಲ್ಲಿ 89 ರಲ್ಲಿ ತಾವು ಅವರನ್ನು ಹಳ್ಳಿಗೆ ಕರೆದುಕೊಂಡು ಹೋದಿರಿ. ಅದೇ ಈಗ ನಿಮಗೆ ಬಂದಿರುವ ತೊಂದರೆ. ಪಟ್ಟಣದಲ್ಲಿ ಅಲ್ಪಸ್ವಲ್ಪ ಗಲಾಟೆ ಮಾಡಿಕೊಂಡಿದ್ದರು...

(ಗೊಂದಲ)

ಶ್ರೀ ಅಜೀಜ್ ಸೇಟ್ : ತೊಂದರೆ ಆದುದು ಅಲ್ಪಸಂಖ್ಯಾತರಿಗೆ. ಮೊದಲು ಇದ್ದುದನ್ನು ತೆಗೆದು 80 ಎಂದು ಮಾಡಿದುದು ನೀವೇ.

(ಗೊಂದಲ)

ಶ್ರೀ ಎಂ.ವೀರಪ್ಪಮೊಯಿಲ್ಲಿ : ಇನ್ನಾದರೂ ನಿಮಗೆ ಸದ್ಬುದ್ಧಿ ಬರಲಿ ಎಂಬುದು ನಮ್ಮ ಇಚ್ಛೆ.

ಶ್ರೀ ಆರ್.ಬಿ. ದೇಶಪಾಂಡೆ : ಸುಗ್ಬುದ್ಧಿ ಬರುವುದು ಏನೂ ಉಳಿದಿಲ್ಲ. ಎಲ್ಲಾ ಬಂದಿದೆ.

ಶ್ರೀ ಎಂ. ವೀರಪ್ಪಮೊಯಿಲಿ : ಅಲ್ಲಿಗೇ ನಿಲ್ಲಿಸಿಬಿಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಂದುವರಿಸಿದರೆ ಇನ್ನೂ ಏನೇನು ಹೊರಗೆ ಬರುತ್ತದೆಯೋ ಆದ್ದರಿಂದ ಇಲ್ಲಿಗೇ ನಿಲ್ಲಿಸುವುದು ಒಳ್ಳೆಯದು.

ಶ್ರೀ ಎ.ಕೆ. ಅನಂತಕೃಷ್ಣ : ಈಗ ಭವಿಷ್ಯ ನೋಡಿ ಕೊಂಡು ಕೆಲಸ ಮಾಡತಕ್ಕ ಪರಿಸ್ಥಿತಿ ಬಂದಿದೆ.

Sri R.V. Deshpande : The opposition parties at the national level contended Thout the congress should be taken as an enemyand the refore all parties came together. ಆಗ ಇವರು ನಮಗೆ ಇಷ್ಟು ಮೋಸ ಮಾಡುತ್ತಾರೆಂದು ಗೊತ್ತಾಗಲಿಲ್ಲ. ಅವರಿಗೆ ರಾಷ್ಟ್ರದ ಬಗ್ಗೆ ಪ್ರೇಮ ಇದೆ. ಅದರಲ್ಲಿ ನಮಗೆ ಸಂಶಯ ಇಲ್ಲ. ಆದರೆ ಈ ದೇಶ ಸೆಕ್ಯುಲರಿಸಂ ಬಗ್ಗೆ ಇಷ್ಟೊಂದು ಗಧಾಪ್ರಹಾರ ಮಾಡುತ್ತಾರೆಂದು ನಮಗೆ ಗೊತ್ತಾಗಲಿಲ್ಲ. ನಮಗೆ ಈಗ ಪಶ್ಚಾತ್ತಾಪವಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಬ್ಬರೂ ನಮ್ಮನ್ನು ಬೆಳೆಸುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಈ ದೇಶದ ಜನರು ನಮ್ಮನ್ನು ಬೆಳೆಸಿದರೋ, ಅಥವಾ ನೀವು ನಮ್ಮನ್ನು ಬೆಳೆಸಿದಿರೋ? 2 ಇದ್ದುದ್ದು 80 ಆಯಿತು. ಜನ ನಮ್ಮನ್ನು ಬೆಳೆಸಿದ್ದಾರೆ. ಆದರೆ ನೀವು ನಮ್ಮನ್ನು ಬೆಳೆಸಿದಂತೆ ಮಾತನಾಡುತ್ತಿದ್ದೀರಿ.

ಶ್ರೀ ಕೆ.ಹೆಚ್. ರಂಗನಾಥ್ : ಅವರು ಕಂಬಳಿ ಎಂದು ನಿಮ್ಮನ್ನು ಅಪ್ಪಿಕೊಂಡರು. ಆದರೆ ಅನಂತರ ತಿಳಿಯಿತು. ಅದು ಕರಡಿ ಎಂದು.

ಶ್ರೀ ಆರ್. ವಿ. ದೇಶಪಾಂಡೆ : ನಮಗೆ ಕರಡಿ ನಿಜ. ಅದು ಕರಡಿ ಆಗಲಿ, ಹುಲಿ, ಆಗಲಿ ನಮಗೆ ಅನುಭವವಾಗಿದೆ. ಮಾನ್ಯ ನರಸಿಂಹರಾಯರಿಗೆ ಏನಾಯಿತು? You have to admire their intellingence.

Sri. K.H. Ranganath : Congress is always careful. Narasimha Rao is always careful.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಳೆದ 45 ವರ್ಷಗಳಿಂದ ನಿಮ್ಮಿಬ್ಬರಿಂದ ಏನು ಅನ್ಯಾಯವಾಗಿದೆ. ಅದು ಸರಿಯಲ್ಲ ಎಂದು ಜನರಿಗೆ ಬುದ್ಧಿ ಬರುತ್ತಿದೆ. ಅದನ್ನು ನೀವವು ಅಪ್ರಿಯೇಟ್ ಮಾಡಿ. ಜನರು ಈಗ ಜಾಗ್ರತರಾಗುತ್ತಿದ್ದಾರೆ. ನಿಮ್ಮ ದೃಷ್ಟಿ ಕೋನ ಅಲ್ಪಸಂಖ್ಯಾತರಿಗೆ ಈಗ ಅರ್ಥವಾಗುತ್ತಿದೆ. ಅವರು ನಿಮ್ಮನ್ನು ಕೈ ಬಿಟ್ಟು ಬಿ.ಜೆ.ಪಿ ಯ ಜೊತೆಗೆ ಬರುತ್ತಾರೆ. ನೀವು ಇದನ್ನು ಟೈ ಹಾಕಿಕೊಂಡು ಬರೆದು ಇಟ್ಟುಕೊಳ್ಳಿ. ಅಲ್ಪಸಂಖ್ಯಾತರು ನಮ್ಮ ಜೊತೆ ಬರುತ್ತಾರೆ. ಅವರ ರಕ್ಷಣೆ ಕೇವಲ ಬಹುಸಂಖ್ಯಾತ ಹಿಂದೂಗಳಿಗೆ ಮಾತ್ರ ಸಾಧ್ಯ

ಛೇರ್ಮನ್ : ಯಡಿಯೂರಪ್ಪನವರೇ ಪರೀಕ್ಷೆಗೆ ಕಾಲ ಬಹಳ ದೂರ ಇದೆ ಯಾರು ಪಾಸ್ ಆಗುತ್ತಾರೆಂದು ನೋಡೋಣ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಮಾನ್ಯ ಯಡಿಯೂರಪ್ಪನವರು ಹೇಳಿದ್ದಕ್ಕೆ ನಾನು ಕೇಳಬೇಕಾಗುತ್ತದೆ. ಅಲ್ಪಸಂಖ್ಯಾತರು ಬಿ.ಜೆ.ಪಿ. ಜೊತೆ ಬರುತ್ತಾರೆ ಎನ್ನುವುದಕ್ಕೆ ಇನ್ನು ಬಹಳ ಕಾಲ ಬೇಕಾಗುತ್ತದೆ. ಆದರೆ ಈಗಿರತಕ್ಕ ಸಿಕಂದರ್ ಭಕ್ತ್ ಎನ್ನತಕ್ಕ ಅಲ್ಪಸಂಖ್ಯಾತರು ಇವರ ಜೊತೆ ಸೇರುವುದಿಲ್ಲ ಎನ್ನತಕ್ಕದ್ದು ತೀರ್ಮಾನವಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಈಗ ನನಗೂ ದೇಶಪಾಂಡೆಯವರಿಗೂ ಈ ವಿಚಾರದ ಮೇಲೆ ಏನೂ ವಿವಾದ ಇಲ್ಲ. ನಾವು ಒಂದೇ. ಸತ್ಯಾಂಶ ಹೊರಗೆ ಬರಬೇಕು. ಆಗ ವೋಟ್ ಆಫ್ ಕಾನ್‌ಫಿಡೆನ್ಸ್ ತೆಗೆದುಕೊಂಡರು. ಬಿಜೆಪಿ. ಯವರು ಗೈರು ಹಾಜರಾದರು. We voted against, no doubt.

ಏಕೆ ಏಗೆನಿಸ್ಟ್ ಮಾಡಿದ್ದೇವೆಂದರೆ ವಿ.ಪಿ. ಸಿಂಗ್ ಮತ್ತು ಚಂದ್ರಶೇಖರರ ಗುಂಪು ಬೇರೆಯಾಯಿತು. It is because of the allapse in your own party and withdrawal of the suport by the B.J.P These two factors made V.P.Singt to resign. ಚಂದ್ರಶೇಖರ್ ಮತ್ತು ವಿ.ಪಿ.ಸಿಂಗ್ ಅವರನ್ನು ಕಾಂಗ್ರೆಸ್ ನವರು ರಾಜಿ ಮಾಡಬೇಕಿತ್ತು ರಾಜಿ ಮಾಡಿ ಆ ಮೂಲಕ ವಿ.ಪಿ.ಸಿಂಗ್ ಅವರಿಗೆ ಶಕ್ತಿ ಕೊಡಬೇಕಿತ್ತು ಎಂದರೆ ವಿಚಾರ ಬೇರೆ. ಆ ವಿಚಾರ ಬೇರೆ ಆದರೆ ಚಂದ್ರಶೇಖರ್ ಒಪ್ಪಬೇಕಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಇಬ್ಬರನ್ನೂ ಒಡೆಯುವ ಕೆಲಸ ನೀವೇ ಮಾಡಿದಿರಿ. ಚಂದ್ರಶೇಖರ್ ಮತ್ತು ವಿ.ಪಿ. ಸಿಂಗ್ ಅವರನ್ನು ಒಡೆಯುವ ಕೆಲಸ ರಾಜೀವ್‌ಗಾಂಧಿ ಮಾಡಿದರಲ್ಲವೇ?

ಶ್ರೀ ಎಂ. ವೀರಪ್ಪ ಮೊಯಿಲಿ: ಬಿ.ಜೆ.ಪಿ.ಯಾಗಲಿ ಜನತಾದಳವಾಗಲಿ ದ್ವೇಷದಿಂದ ಈ ರಾಷ್ಟ್ರವನ್ನು ಕಟ್ಟಲಿಕ್ಕಾಗುವುದಿಲ್ಲ, ಈ ತತ್ವವನ್ನು ಎಲ್ಲರೂ

ಒಪ್ಪಬೇಕು. ವಿ.ಪಿ.ಸಿಂಗ್ ಅವರು ಒಂದು ದ್ವೇಷ ಭಾಷಣೆಯಿಂದ ಕಾಂಗ್ರೆಸ್ ಮೇಲೆ ಮತ್ತು ಮಂಡಲ ಗಲಾಟೆ ಆಯಿತು. ಮತ್ತೊಂದು ಗಲಾಟೆಯಾಯಿತು. ಪ್ರೀತಿ ಯಿಂದ ಈ ದೇಶವನ್ನು ಕಟ್ಟಬೇಕೇ ಹೊರತು ವಿದ್ವೇಷದಿಂದ ಕಟ್ಟುವುದಕ್ಕೆ ಸಾಧ್ಯವಿಲ್ಲ, ಈ ಕಿವಿ ಮಾತು ನಿಮಗೂ ಬಿ.ಜೆ.ಪಿ ಯವರಿಗೂ ಸಲ್ಲುತ್ತದೆ. ಕಾಂಗ್ರೆಸ್ ಸತ್ಯ, ಅಹಿಂಸೆಯ ಬುನಾದಿ ಮೇಲೆ ಕಟ್ಟಿದಂಥ ಪಕ್ಷ, ಸತ್ಯ ಅಹಿಂಸೆಗಾಗಿ ನಾವು ನಮ್ಮನ್ನು ತ್ಯಾಗ ಮಾಡುತ್ತೇವೆ. ಈ ತತ್ವಕ್ಕಾಗಿ ನಮ್ಮ ಪಕ್ಷದ ಹಿತಾಸಕ್ತಿಯನ್ನು ಕೂಡ ನೋಡುವುದಿಲ್ಲ, ಅಧಿಕಾರ ಮುಖ್ಯವಲ್ಲ, ರಾಷ್ಟ್ರ ಮುಖ್ಯವೆಂಬ ಭಾವನೆ ನಾವು ಇಟ್ಟಿಕೊಂಡಿದ್ದೇವೆ. ಈ ಸಮಸ್ಯೆಗೆ ಪರಿಹಾರ ಹುಡುಕಲಿಕ್ಕೆ ಪ್ರಧಾನಿಯವರು, ಕೇಂದ್ರ ಸರಕಾರದವರು ಏನು ಮಾಡಿದರು ಎಂದು ತಾವು ಕೇಳಿದಿರಿ ಇದು ಸಧ್ಯ ಇರತಕ್ಕ ಪ್ರಶ್ನೆ. ಆ ಪ್ರಶ್ನೆಗೆ ಸಾಕಷ್ಟು ಉತ್ತರವನ್ನು ಮಾನ್ಯ ಪ್ರಧಾನ ಮಂತ್ರಿಗಳು ಸಮರ್ಪಕವಾಗಿ, ಪರಿಣಾಮ ಕಾರಿಯಾಗಿ ಕೊಟ್ಟಿದ್ದಾರೆ. ಅದಕ್ಕೆ ಇಲ್ಲಿ ಉತ್ತರ ಕೊಡುವಂತಹ ಯೋಗ್ಯತೆ ಕೂಡ ನನಗಿಲ್ಲ. ಅದರ ಅಗತ್ಯ ಇಲ್ಲ, ಮಾನ್ಯ ನರಸಿಂಹರಾವ್ ರವರು ಅಧಿಕಾರ ವಹಿಸಿಕೊಂಡ ನಂತರ ಈ ಸಮಸ್ಯೆಗೆ ಪರಿಹಾರ ನೀಡುವಲ್ಲಿ ಅವರು ದ್ವೇಷದಿಂದ ಸಾಧನೆ ಮಾಡಲಿಕ್ಕೆ ನೋಡಿಲಿಲ್ಲ, ಪ್ರೀತಿ ಸೌಹಾರ್ದ ದಿಂದ, ಸ್ನೇಹ ಸೌಹಾರ್ದತೆಯ ಸೇತುವೆ ಕಟ್ಟಲಿಕ್ಕೆ ಪ್ರಯತ್ನ ಪಟ್ಟರು. ಸ್ನೇಹ ಸೌಹಾರ್ದತೆಯ ಸೇತುವೆಯನ್ನು ನಮ್ಮ ಸ್ನೇಹಿತರು ಒಡೆದು ಹಾಕಿದ್ದಾರೆ. This should have been done by Mr. V.P.Singh at that time. Out Prime Minis ter referred the issue to a single judicial authority to implement the Verdict.

ಆ ಕೆಲಸ ಪ್ರಧಾನ ಮಂತ್ರಿಯವರು ಮಾಡಿದ್ದಾರೆ. ಬಹುಶಃ ವಿ.ಪಿ.ಸಿಂಗ್ ರವರು 1989 -90ರಲ್ಲಿ ಈ ಕೆಲಸ ಮಾಡಿದ್ದರೆ ಈ ಅನಾಹುತ ಆಗುತ್ತಿರಲಿಲ್ಲ. ಇದನ್ನು ಮಾಡುವ ಅವಕಾಶ ವಿ.ಪಿ. ಸಿಂಗ್ ಅವರಿಗೆ ಇತ್ತು.

He could have referred this matter to the supreme court which is done for the first time, by Sri, P.V. Narasimha Rao. He referred this issue to the supreme Court.

ಸುಪ್ರೀಂ ಕೋರ್ಟಿನಲ್ಲಿ ಕಲ್ಯಾಣ ಸಿಂಗ್ ಅವರು ಪ್ರಮಾಣ ಪತ್ರ ಕೊಟ್ಟರು, ಅಫಿಡವಿಡ್ ಕೊಟ್ಟರು. All said and done, the duly elected Chief Minister gives an affidavit to the highest court of the land. Affter all, it is an unit of the Federal State. They are part and parcel. To honour the Constitution of India, he has given an affidavit.

ಶ್ರೀ ಪಿ.ಜಿ.ಆರ್. ಸಿಂಧ್ಯ : ವಿ.ಪಿ.ಸಿಂಗ್ ಅವರು 1989 ರಲ್ಲಿ ಮಾಡಿದ್ದರೆ ಈ ಪರಿಸ್ಥಿತಿ ಉದ್ಭವಾಗುತ್ತಿರಲಿಲ್ಲವೆಂದು ಹೇಳುತ್ತಿದ್ದೀರಲ್ಲ, ಅದರ ಕಂಟೆಕ್ಸ್ಟ್‌ನಲ್ಲಿ ನಾನು ಹೇಳುತ್ತಿದ್ದೇನೆ. ಮುಲಾಯಂ ಸಿಂಗ್ ಯಾದವ್‌ರೆ ಮತ್ತು ವಿ.ಪಿ. ಸಿಂಗ್, ಅವರು 1989 ರಲ್ಲಿ ಬಾಬರಿ ಮಸೀದಿ ರಾಮ ಜನ್ಮಭೂಮಿಯಿರತಕ್ಕಂತಹ ಆವರಣ ಏನು ಇದೆ ಅದನ್ನು ಅಷ್ಟೊಂದು ಭದ್ರ ಕೋಟೆಯನ್ನು ನಿರ್ಮಾಣ ಮಾಡದೇ ಹೋಗಿದ್ದರೆ ಆವತ್ತೇ ಡೆಮಾಲಿಷ್ ಮಾಡುತ್ತಿದ್ದರು. ಆವತ್ತು ನಿಮಗೆ ಗೊತ್ತಿರಬೇಕು. ರಾಜ್ಯ ಪೋಲೀಸರು ಮತ್ತು ಆರ್ಮಿ ತೆಗೆದುಕೊಂಡು ಅದಕ್ಕೆ ಅಷ್ಟೊಂದು ಪ್ರೊಟೆಕ್ಷನ್ ಮಾಡಿದ್ದರು ಎಂದು. ನಿಮ್ಮ ನರಸಿಂಹರಾಯರು ಏಕೆ

ಮಾಡಿಸಲಿಲ್ಲ. ಅವರಿಗೆ ಗೊತ್ತಿರಲಿಲ್ಲವೋ? ಈಗ ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ ಒಪ್ಪಿಕೊಳ್ಳೋಣ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : 1984 ರಲ್ಲಿ ಅಲ್ಲಿ ಲಾಕ್ ಬ್ರೇಕ್ ಓಪನ್ ಮಾಡುವುದಕ್ಕೆ ಯಾರು ಹೇಳಿದರು. ಈ ಸಮಸ್ಯೆಗೆ Floodgates ಯಾರು ಓಪನ್ ಮಾಡಿದರು.1989ರಲ್ಲಿ ಹಿಂದೂಗಳ ಓಟು ಸಿಗಬೇಕೆಂದು ಶಿಲಾನ್ಯಾಸ ಮಾಡಬೇಕೆಂದು ಯಾರು ಆದೇಶ ಕೊಟ್ಟರು? ರಾಜೀವ್ ಗಾಂಧಿಯವರಲ್ಲ ಏಕೆ ಕೊಟ್ಟಿರಿ. ಇಲ್ಲ ಎಂದರೆ ಏನು Facts are facts.

1989 ರಲ್ಲಿ ಶಿಲಾನ್ಯಾಸಕ್ಕೆ ನೀವು ಆದೇಶ ಕೊಟ್ಟಿರಿ. ಆದಾದನಂತರ ಚುನಾವಣೆ ಆಯಿತು. ಮಾನ್ಯ ವಿ.ಪಿ. ಸಿಂಗ್ ರವರು ಬಂದರು.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಡಿಟೇಲ್ ಏನು ಇಲ್ಲ. ವಾಸ್ತವಾಂಶದ ಸಂಗತಿ ಎಂದರೆ Facts are facts. ಫ್ಯಾಕ್ಟ್ಸ್‌ನ್ನು ತಾವು ಹೇಳಬಹುದು. ನಾನು ಹೇಳಬಹುದು. it is Sri PV Narasimha Rao who proposed that reference to the Single judicial Authority, for the first time. ಬಹುಶಃ ನಾನು ಹೇಳಿದ್ದುದು ಇಷ್ಟೆ. : ವಿ.ಪಿ. ಸಿಂಗ್ ರವರು 1989-90ರಲ್ಲಿ ಈ ಕೆಲಸವನ್ನು ಮಾಡಿದ್ದರೆ ಬಹುಶಃ ನಮಗೆ ಆಗಲೇ ನಿರ್ಣಯ ಸಿಕ್ಕುತ್ತಿತ್ತು. ಈ ಅನಾಹುತವನ್ನು, ಈ ದೊಡ್ಡ ನ್ಯಾಷನಲ್ ಡಿಸಾಸ್ಟರನ್ನು ತಪ್ಪಿಸಬಹುದಾಗಿತ್ತು. Let us go by historical facts. ಇದು ಹಿಸ್ಟಾರಿಕಲ್ ಫ್ಯಾಕ್ಟ್ ಈಗ ತಮಗೆ ಗೊತ್ತಿದೆ. 43 ವರ್ಷಗಳಿಂದ ಇದ್ದಂಥ ಒಂದು ಡೆಸ್ ಪ್ಯೂಟ್ ನ್ನು ಓವರ್ ನೈಟ್ ತೀರ್ಮಾನ ಮಾಡಲಿಕ್ಕೆ ಆಗುವುದಿಲ್ಲ. ತಮಗೂ ಗೊತ್ತಿದೆ. ಈ ಬಗ್ಗೆ 73 ಕೇಸ್ ಗಳು ಕೂಡ ಪೆಂಡಿಂಗ್ ಇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮೊನ್ನೆ ತೀರ್ಮಾನವಾಗಿ ದರ್ಶನ ಕೂಡ ಆಗುತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ದರ್ಶನಕ್ಕೆ ಬರುತ್ತೇನೆ. ಅಫಿಡವಿಟ್ ಕೊಟ್ಟಿದೆ. ಯು.ಪಿ. ಗೌವರ್ನಮೆಂಟ್ ಅಂಡರ್ ಟೇಕಿಂಗ್‌ನ್ನು ಸುಪ್ರೀಂಕೋರ್ಟಿಗೆ ಕೊಟ್ಟಿದೆ. ಇನ್ನೊಂದು ವಿಚಾರ ತಾವು ಮರೆತು ಬಿಡುತ್ತೀರಿ. ಯು.ಪಿ. ಗೌವರ್ನಮೆಂಟ್ ಈ ಭೂಮಿಯನ್ನು ಅಕ್ವಯರ್ ಮಾಡಿತ್ತು. ಈ ಡಿಸ್ ಪ್ಯೂಟೆಡ್ ಸೈಟ್ ಏನಿದೆ ಅದನ್ನು ಅಕ್ವಯರ್ ಮಾಡಿತ್ತು. ಅಕ್ವಯರ್ ಮಾಡಿದ ಮೇಲೆ ಯು.ಪಿ. ಗೌವರ್ನಮೆಂಟಿನ ಸ್ವಾಧೀನದಲ್ಲಿದ್ದ ಭೂಮಿಯನ್ನು ಕೇಂದ್ರ ಸರ್ಕಾರದವರು ಏನೂ ಮಾಡುವಂತಿರಲಿಲ್ಲ. That was in the possession of the Uttar Pradesh Government. Uttar Pradesh Government belongs to B.J.P.

ಶ್ರೀ ಡಿ.ಬಿ. ಚಂದ್ರೇಗೌಡ : 2.7 ಎಕರೆ ಪ್ರದೇಶವನ್ನು ಮಾನ್ಯ ಕಲ್ಯಾಣಸಿಂಗ್ ಸರ್ಕಾರ ವಶಪಡಿಸಿಕೊಂಡಿತಲ್ಲ ಅದಕ್ಕೆ ಹೇಳಿದಂಥ ಉದ್ದೇಶ ಏನಿತ್ತು ಆ ಉದ್ದೇಶದ ವಿರುದ್ಧವಾಗಿ ಖಾಸಗಿ ರಾಮ್ ನ್ಯಾಸಕ್ಕೆ ಆ ಭೂಮಿಯನ್ನು ವರ್ಗಾವಣೆ ಮಾಡಿದರಲ್ಲ, ಆಗ ಕೇಂದ್ರ ಸರ್ಕಾರ ಏನು ಮಾಡುತ್ತಿತ್ತು? Article 352 is meant for it. Internal emergency is meant for it. ಯಾವ ಉದ್ದೇಶಕ್ಕಾಗಿ

ರಾಜ್ಯ ಸರ್ಕಾರ ಆ ಭೂಮಿಯನ್ನು ವಶಪಡಿಸಿಕೊಳ್ಳುತ್ತದೆ. ಆ ಉದ್ದೇಶದ ವಿರುದ್ಧವಾಗಿರತಕ್ಕಂಥ ಖಾಸಗಿ ಸಂಸ್ಥೆಗಳಿಗೆ ವರ್ಗ ಮಾಡಿಕೊಟ್ಟರೆ What is the relationship between the State and Centre. Why should there be Article 352 Internal Emergency?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಚಂದ್ರೇಗೌಡರೆ, ತಾವು ಕೂಡ ಮಂತ್ರಿಗಳಾಗಿ ಕೆಲಸ ಮಾಡಿದವರು. Suppose, the Central Government wants a land, it is for the State Government to acquire and give it to them. It is the basic law of the land, normally or abnormally. Even if the Central Government wants land, they have to acquire it only through the State Government and it is the State Government which has to acquire and hand it over to the Centre. That is the law of the land ಇದನ್ನು ಬದಲಾವಣೆ ಮಾಡಬೇಕು. ಆ ಸಂಗತಿ ಬೇರೆ. ಅದಕ್ಕೆ ಕಾನ್ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್ ಆಗಬೇಕು. ಇದು ಈಗ ಇರತಕ್ಕಂಥ ವ್ಯವಸ್ಥೆ. ಈಗ ಆ ಸ್ಟೇಟ್ ಗೌವರ್ನಮೆಂಟ್‌ನ ಲ್ಯಾಂಡ್ ಅಕ್ವಯರ್ ಮಾಡತಕ್ಕಂಥ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇಲ್ಲ. ಇದು ಇರತಕ್ಕಂಥ ಕಾನೂನು You cannot take it over unless you take over the Government You have to take over the Government and take over the land.

That is a different matter. ಆದರೆ ಒಂದು ಮಾತು. ಇದು ಚರ್ಚೆ ಇರುವುದು ಮಲಾಯಾಮ್ ಸಿಂಗ್ ಗೌವರ್ನಮೆಂಟ್ ಇತ್ತಲ್ಲ ಆಗ ಕೇಂದ್ರ ಸರ್ಕಾರದಲ್ಲಿ ವಿ.ಪಿ. ಸಿಂಗ್ ರವರು ಇದ್ದರು. ಮೈನಾರಿಟೀಸ್ ಬಗ್ಗೆ ನಾವೇ ಬಹಳ ಆತ್ಮೀಯರು ಎಂದು ಏನು ಹೇಳುತ್ತಿದ್ದೀರಿ. ಈ ಕೆಲಸವನ್ನು ನೀವು ಆಗ ಮಾಡಿದ್ದರೆ ನಾವು ಅದನ್ನು ಅಡ್ಮಿಟ್ ಮಾಡುತ್ತಿದ್ದೆವು.

Sri. D.B. Chandregowda : They did it.

Sri M.Veerappa Moily : I am sorry. The ordinance was withdrown immedtely.

(Interruptions)

Sri M.Veerappa Moily: State Government did not acquire. Mulayam Singh did not acquire. ಆರ್ಗ್ಯುಮೆಂಟ್ ಮಾಡಲು ಸುಲಭ, ಆದರೆ ನೀವು ಮಾಡತಕ್ಕಂಥ ಸಮಯದಲ್ಲಿ ನೀವು ಮಾಡಿಲ್ಲ.

Sri. P.G.R. Sindhia : The Union Government took over the land.

ನೀವು ತೆಗೆದುನೋಡಿ ಆರ್ಡಿನೆನ್ಸ್ ಮಾಡಿ ತೆಗೆದುಕೊಂಡಿರುತ್ತಾರೆ.

Sri M. Veerappa Moily: Ordinace was withdrawn next day.

(Interruptions)

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದಕ್ಕೆ ಕಾಂಗ್ರೆಸ್ ನವರೇ ಕಾರಣ.

ಶ್ರೀ. ಎಂ. ವೀರಪ್ಪ ಮೊಯಿಲಿ : ನೀವು ಆರ್ಡಿನೆನ್ಸ್‌ಮಾಡಿ ಆ ಆರ್ಡಿನೆನ್ಸನ್ನು ಉಳಿಸಿದ್ದಿದ್ದರೆ ಇವತ್ತು ಆ ಮಸೀದಿಯನ್ನು ಉಳಿಸುತ್ತಿದ್ದೀರಿ ಮುಲಯಾಮ್ ಸಿಂಗ್ ಇರುವಾಗ ಮುಲಯಂ ಸಿಂಗ್ ಮುಖಾಂತರ ಅದನ್ನು ಅಕ್ವಯರ್ ಮಾಡಿ ಸ್ವಾಧೀನ ಮಾಡಿದ್ದರೆ ಮಸೀದಿಯನ್ನು ಉಳಿಸುತ್ತಿದ್ದಿರಿ. ಈ ಎರಡು ಕೆಲಸಗಳನ್ನು ನೀವು ಮಾಡಲಿಲ್ಲ. You can talk on negative terms. Positively whay you Could have done, you have not done it. Negatively, you criticise the prime Minister today.

ನೆಗೆಟೀವ್ ಆಗಿ ಬಹಳ ಸುಲಭವಾಗಿ ಹೇಳಬಹುದು. ಆದರೆ ಮಾಡತಕ್ಕಂಥ ಅಧಿಕಾರವಿರುವಾಗ, ಮಾಡತಕ್ಕಂಥ ಮನಸ್ಸು ಇದ್ದರೆ ಆಗ ಬಿ.ಜೆ.ಪಿ. ಗೆ ನೀವೂ ಕೂಡ ಹೆದರಿ ಆರ್ಡಿನೆನ್ಸ್ ತೆಗೆದುಕೊಂಡಿರಿ ಎಂದು ನಾನು ಹೇಳಿದರೆ ನಿಮಗೆ ಅಪಾದನೆ ಮಾಡಿದಂತಾಗುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳುವುದಿಲ್ಲ.

4.40 P.M

ಶ್ರೀ ಡಿ.ಬಿ. ಚಂದ್ರೇಗೌಡ : ಆದುದರಿಂದ ನಿಮಗೆ ಇದ್ದ ಅಧಿಕಾರವನ್ನು ಬಳಸಿಕೊಂಡು ಮಸೀದಿಯನ್ನು ಉಳಿಸುವುದಕ್ಕೆ ಏತಕ್ಕೆ ಪ್ರಯತ್ನ ಮಾಡಲಿಲ್ಲ?

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಆಲೋಚನೆ ಮಾಡಿ ರಥಯಾತ್ರೆ ಪ್ರಾರಂಭವಾಗುವಾಗ ನಿಲ್ಲಿಸಬಹುದಿತ್ತಲ್ಲ, ಸಾವಿರಾರು ಜನರ ರಕ್ತದ ಓಕಳಿ ಹರಿದ ಮೇಲೆ, ಸಾವಿರಾರು ಜನರು ಸತ್ತ ಮೇಲೆ ಆದ್ವಾನಿಯವರನ್ನು ಅರೆಸ್ಟ್ ಮಾಡಿದರು.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಮಸೀದಿ ಒಡೆದ ಮೇಲೆ ಮಾಡಿದಿರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದಕ್ಕೆ ನಮ್ಮ ನಮ್ಮೊಳಗೆ ಜಗಳ ಬೇಡ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ನೀವು ಸೇರಿ ಯಡಿಯೂರಪ್ಪನವರನ್ನು.....

ಶ್ರೀ ಎಂ. ವೀರಪ್ಪ ಮೊಯಿಲಿ : ಸೆಕ್ಯುಲರಿಸಂ ವರ್ಸಸ್ ಕಮ್ಯುನಿಲಿಸಂ ಅಷ್ಟೆ. ನಾವು ಈ ಕಣದಲ್ಲಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ಭಕ್ತಿ ಮಂದಿರ ಕಟ್ಟಿದ್ದೇವೆ. ಭವ್ಯ ಮಂದಿರ ಕಟ್ಟುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಆಕಾಶದಲ್ಲಿ ಕಟ್ಟುವುದು ನೀವು. ಇಲ್ಲಿ ಕಟ್ಟುವುದಕ್ಕಾಗುವುದಿಲ್ಲ, ಕಟ್ಟುವುದು ನಾವು. ಮಸೀದಿ ಮತ್ತು ಮಂದಿರ ಕಟ್ಟುವುದು ನಾವು. ಅದು ಸ್ನೇಹ ಸೌಹಾರ್ದ ಮಂದಿರವಾಗುತ್ತದೆ. ನಿಮ್ಮಂತೆ ದ್ವೇಷದ ಮಂದಿರ ಆಗುವುದಿಲ್ಲ, ರಕ್ತದ ಓಕಳಿ ಮೇಲೆ ದೇವಸ್ಥಾನ ಕಟ್ಟಿದರೆ ದೇವರಿಗೆ ಶತಶತ ಪಾಪ ಮಾಡಿದ ಹಾಗೆ, ರಕ್ತದ ಮೇಲೆ ಕಟ್ಟಬೇಡಿ. ಜನರ ಬೆವರು ಸುರಿಸಿ ಸ್ನೇಹಸೌಹಾರ್ದವನ್ನು ಕಟ್ಟುವ ಪ್ರಯತ್ನ ಮಾಡಿ ಆಗ ನಾವೆಲ್ಲ ಜೊತೆಯಲ್ಲಿ ಬರುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ನೀವೆಲ್ಲ ಒಟ್ಟಿಗೆ ಸೇರಿ ಅದೇ ಸ್ಥಳದಲ್ಲಿ ಭವ್ಯ ಶ್ರೀ ರಾಮ ಮಂದಿರ ಕಟ್ಟೋಣ. ಸ್ನೇಹ ಸೌಹಾರ್ದತೆ ಶಾಂತಿ ಸುವ್ಯವಸ್ಥೆಯನ್ನು ಎಲ್ಲರೂ ಕಾಪಾಡೋಣ.

ಶ್ರೀ ಎ.ಕೆ. ಅನಂತ ಕೃಷ್ಣ : ನೀವು ನಾವು ಒಟ್ಟಿಗೆ ಸೇರುವುದು ಕನಸು ಕಾಣಬೇಕು. ಅಷ್ಟೆ.

ಶ್ರೀ ಆರ್.ಎಲ್. ಜಾಲಪ್ಪ : ಮೊದಲು ಎಲ್ಲರಿಗೂ ಇನ್ನು ಬಿಟ್ಟಿವಾಸಕ್ಕೆ ಮನೆ ಕೊಡಿ.

ಶ್ರೀ ಅಜೀಜ್ ಸೇಠ್ ಈ ವೀರಸೇನೆಗೂ ರಾಮನಿಗೂ ಏನು ಸಂಬಂಧ?

ಶ್ರೀ ಡಿ.ಬಿ. ಚಂದ್ರೇಗೌಡ. ಗೋಕಾಲಾಷ್ಟಮಿಗೂ ಅಜೀಜ್ ಸೇಠ್‌ರಿಗೂ ಎಷ್ಟು ಸಂಬಂಧವಿದೆಯೋ ಅದೇ ಸಂಬಂಧ.

ಶ್ರೀ ಎಂ. ವೀರಪ್ಪ ಮೊಯಿಲಿ : 6ನೇ ತಾರೀಖಿನ ಅಂದರೆ ಕೆಲವು ದಿನಗಳ ಹಿಂದೆ ಈ ದೇಶದಲ್ಲಿ ನಡೆದಂತಹ ವಿದ್ಯಮಾನಗಳನ್ನು ಗಮನಕ್ಕೆ ತೆಗೆದುಕೊಂಡು ಮಾತನಾಡಬೇಕಾಗುತ್ತದೆ. ಅದನ್ನು ಮರೆತು ಮಾತನಾಡಿದರೆ ಈ ವಾದಕ್ಕೆ ಪುಷ್ಟಿ ಸಿಗುತ್ತದೆ. ಅದನ್ನು ನೆನಪು ಮಾಡಿಕೊಂಡು ಮಾತನಾಡಿದರೆ ಈ ವಾದ್ಯಕ್ಕೆ ಪುಷ್ಟಿ ಸಿಗುವುದಿಲ್ಲ.

ಏಕೆಂದರೆ ಆಗ ದಿನ ಬೆಳಿಗ್ಗೆ ರಾತ್ರಿ ಸುಪ್ರೀಂ ಕೋರ್ಟಿನಲ್ಲಿ ಕೇಸ್ ಹಿಯರಿಂಗ್ ಆಗುತ್ತಿತ್ತು. ಆಗ ತಾರೀಖು 3 ಕ್ಕೆ 4ಕ್ಕೆ ಕೇಸು ಇತ್ತು For the first time in the country even on staturday and Sunday the Supreme court sat to decide over the matter. Even at late night. It never happened in the judicial history.

ಶ್ರೀ ಡಿ.ಬಿ. ಚಂದ್ರೇಗೌಡ: ಅದರ ಜೊತೆಗೆ ಈಗ ಮಸೀದಿ ನಿರ್ನಾಮವಾಗಿದೆಯೆಂಬುದನ್ನು ನೆನಪಿನಲ್ಲಿಟ್ಟುಕೊಂಡು ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಅವಸರ ಮಾಡಬೇಡಿ.ಅದನ್ನು ನಾನು ಹೇಳುತ್ತೇನೆ. ಆದರೆ ಆ ಮಸೀದಿ ನಿರ್ನಾಮವಾಗತಕ್ಕದ್ದನ್ನು ತಪ್ಪಿಸತಕ್ಕ ಅಧಿಕಾರ ಇರುವಾಗ ನೀವು ಮಾಡಲಿಲ್ಲ. ನೀವು ಓಡಿ ಬಿಟ್ಟಿರಿ, ಪಲಾಯನ ಸೂತ್ರ ಮಾಡಿದಿರಿ.

ಶ್ರೀ ಡಿ.ಬಿ. ಚಂದ್ರೇಗೌಡ :ಅವತ್ತು ವಿ.ಪಿ. ಸಿಂಗ್ ಅವರ ಸರ್ಕಾರದ ವಿರುದ್ಧ ನೋ ಕಾನ್ಫಿಡೆನ್ಸ್ ಮೋಷನ್ ತಂದಾಗ ಇದು ಇರಲಿಲ್ಲ.

Sri. M.Veerappa Moily : You have ran away from the respon sibility. Let us not discuss.

Sri. R.V. Deshpande : We have not ran away.

Sri. M.Veerappa moily : our prime Minister has stood by that.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಸೆಕ್ಯುಲರಿಸಂ ಉಳಿಸಿಕೊಳ್ಳಬೇಕು. ಅದಕ್ಕೆ ನೀವು ನಾವು ಸೇರಿ ಫೈಟ್ ಮಾಡಬೇಕೆಂದು ಈಗ ಹೇಳುತ್ತಿದ್ದೀರಿ. ನಾವು ಬಾಬ್ರಿ ಮಸೀದಿ ಒಡೆಯದೆ ಇರುವ ಹಾಗೆ ನೋಡಿಕೊಂಡು ಅಧಿಕಾರ ಬಿಟ್ಟು ಕೊಟ್ಟರೂ ನೀವು ಅದನ್ನು ಕಾಪಾಡಲಿಲ್ಲ. ಇವತ್ತು ಓಡಿಹೋದಿರಿ ಎಂದು ಹೇಳುತ್ತಿದ್ದೀರಿ. ಅವತ್ತು ಏತಕ್ಕೆ ಸೆಕ್ಯುಲರಿಸಂಗೆ ಸಪೋರ್ಟ್ ಮಾಡಿ ನಮ್ಮ ಸರ್ಕಾರವನ್ನು ಉಳಿಸಲಿಲ್ಲ?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಬಿಜೆಪಿ ಅವರ ಜೊತೆ ಸೇರಿ ಸರ್ಕಾರ ಮಾಡಿದ್ದುದು ನಿಜ. ಬಿಜೆಪಿಯವರು ರಾಮ ಮಂದಿರವನ್ನು ಕಟ್ಟುವುದಕ್ಕೆ ಬಿಡಲಿಲ್ಲವೆಂದು ನಮ್ಮ ಸರ್ಕಾರವನ್ನು ಬೀಳಿಸಿದ್ದುದು ನಿಜ. ನೀವು ಇವತ್ತು ಮಾತನಾಡುತ್ತಿದ್ದೀರಲ್ಲ, ಅವತ್ತು ಏತಕ್ಕೆ ಮಾತಾಡಲಿಲ್ಲ, ಎನ್ನುವುದು ಪ್ರಶ್ನೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಬಹುಶಃ 1987-88 ರ ಸುಮಾರಿನಲ್ಲಿ ತ್ರಿಪುರಾದಲ್ಲಿ ಚುನಾವಣೆ ನಡೆಯಿತು. ಚುನಾವಣೆ ನಡೆಯುವ ಸಂದರ್ಭದಲ್ಲಿ ಎಮರ್ಜೆನ್ಸಿಯನ್ನು ಡಿಕ್ಲೇರ್ ಮಾಡಿ ಸೈನ್ಯ ನುಗ್ಗಿಸಿ ಸೈನ್ಯದ ಜವಾಬ್ದಾರಿಯಲ್ಲಿ ಚುನಾವಣೆ ನಡೆಸಿ ಅಲ್ಲಿ ಚುನಾವಣೆಯಲ್ಲಿ ಗೆದ್ದು ಬಂದಿರಿ. ಪಂಜಾಬ್‌ಗಿಂತಾ ಮೊದಲು ತ್ರಿಪುರಾದಲ್ಲಿ ನಡೆದದ್ದು.ಅಲ್ಲಿ ನಿಮಗೆ ಅಧಿಕಾರ ಇರಲಿಲ್ಲ. ತ್ರಿಪುರಾದಲ್ಲಿ ಆಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಅಧಿಕಾರದಲ್ಲಿ ಇತ್ತು. ಆ ಚುನಾವಣೆಯಲ್ಲಿ ನೇರವಾಗಿ, ಪ್ರತ್ಯಕ್ಷವಾಗಿ ಸೈನಿಕರು ಹೋದರು. ಆದರೆ ನಿಮಗೆ ಅಧಿಕಾರ ಬೇಕಾಗಿತ್ತು ಅದಕ್ಕೋಸ್ಕರ ಆ ಕೆಲಸ ಮಾಡಿದಿರಿ. ಇಲ್ಲಿ ನೀವು ಹೇಳುತ್ತಾ ಇರುವ ಸೆಕ್ಯುಲರಿಸಂ ಅನ್ನು ಉಳಿಸಬೇಕಾಗಿದತಕ್ಕ ಅವಶ್ಯಕತೆ ನಿಮಗೆ ಇರಲಿಲ್ಲ. ನಿಮಗೂ ಕೂಡ ಆ ಮಸೀದಿ ಉರುಳಬೇಕಾಗಿತ್ತು. ಆದರಿಂದ ಇಂಟೀರಂನಲ್ಲಿ ಎಮರ್ಜೆನ್ಸಿ ತಂದು ಸ್ಥಾನವನ್ನು ಕೇಂದ್ರ ಸರ್ಕಾರದ ವಶಕ್ಕೆ ತೆಗೆದುಕೊಂಡು ಮಸೀದಿ ಉಳಿಸತಕ್ಕ ಪ್ರಯತ್ನ ನೀವು ಮಾಡಿಲ್ಲ. ಮಸೀದಿ ಉರುಳುವುದಕ್ಕೆ ಬಿಜೆಪಿಯವರು ಎಷ್ಟು ಕಾರಣ ಕರ್ತರೋ ಅಷ್ಟೇ ನೀವೂ ಕೂಡ ಕಾರಣಕರ್ತರಾಗಿದ್ದೀರಿ. ಆಗ ನಿಮಗೆ ಅಧಿಕಾರ ಬೇಕಾದ್ದರಿಂದ ಎಮರ್ಜೆನ್ಸಿ ತಂದಿರಿ. ಆದರೆ ಇಲ್ಲಿ ಮಸೀದಿ ಬೇಕಾಗಿರಲಿಲ್ಲ. ಇಲ್ಲಿ ಎಮರ್ಜೆನ್ಸಿ ತಂದು ಆ ಮಸೀದಿಯನ್ನು ನೀವು ಉಳಿಸಲಿಲ್ಲ. ಇದು ಸತ್ಯಾಂಶ.

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಅಧಿಕಾರದ ಆಸೆಯಿಂದ ಅವರಿಗೆ ಕೈ ಕೊಟ್ಟಿರಿ. ಆದಾದಮೇಲೆ. ಚಂದ್ರಶೇಖರ್ ರವರನ್ನು ಉಪಯೋಗಿಸಿಕೊಂಡಿರಿ. ನಮ್ಮನ್ನು ಕೆಡವಿದಿರಿ. ಚಂದ್ರ ಶೇಖರ್‌ರವರಿಗೂ ಕೈ ಕೊಟ್ಟಿರಿ. ಬಿಜೆಪಿಯವರು ಬೆಂಬಲ ಬೇಕಾದ್ದರಿಂದ ಲೋಕಸಭಾ ಉಪಾಧ್ಯಕ್ಷ ಸ್ಥಾನವನ್ನು ಅವರಿಗೆ ಕೊಟ್ಟಿರಿ. ಆದರೆ ಈಗ ಅವರು ನಿಮಗೆ ಕೈ ಕೊಟ್ಟರು. ನೀವಿಬ್ಬರೂ ಸೇರಿ ನಮಗೆ ಕೈ ಕೊಟ್ಟಿರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಎಲ್ಲಾ ಹೇಳುವುದಕ್ಕೆ ಹೊರಟರೆ ಉದ್ದ ಆಗುತ್ತದೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಗ್ರೇಸ್ ಫುಲಿ ಒಪ್ಪಿಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದನ್ನು ನಾವು ಒಪ್ಪಿದರೂ ಜನರು ಒಪ್ಪಿಕೊಳ್ಳಬೇಕಲ್ಲವೇ? ಬೈರೇಗೌಡರಿಗೆ ಗ್ರೇಸ್ ಫುಲಿ ಏನು ಹೇಳುವುದು? ಬಿಜೆಪಿಯವರ ಜೊತೆ ಅವರು 1971ರಿಂದ 93ರವರೆಗೆ 2 ದಶಕಗಳಿಗಿಂತಲೂ ಹೆಚ್ಚು ಕಾಲ ಸ್ನೇಹ ಮಾಡಿಕೊಂಡು ಈಗ ಕೈಕಾಲು ಮುರಿದುಕೊಂಡು ನೀವು ಬಿದ್ದು ಕೊಂಡಿದ್ದೀರಿ. ಇದನ್ನು ನಾವು ಒಪ್ಪಿಕೊಳ್ಳಬೇಕೇ? ಯಾವುದನ್ನು ಒಪ್ಪಿಕೊಳ್ಳಬೇಕು?

(Interruptions)

ಶ್ರೀ ಆರ್. ವಿ. ದೇಶಪಾಂಡೆ : ನಮ್ಮ ಅನುಭವ ನೋಡಿಯೂ ಸಹಾ ನರಸಿಂಹರಾಯರು ಬಿಜೆಪಿ ಯವರ ಜೊತೆ ಸ್ನೇಹ ಮಾಡಿ ಮಸೀದಿ ಹೊಡೆದಿರಲ್ಲಾ? ಅಧಿಕಾರ ಲಾಲಸೆ ಇಲ್ಲ ಎಂದರೆ ಮಸೀದಿ ಒಡೆಯುವುದಕ್ಕೆ ಬಿಡುತ್ತಿರಲಿಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ : ಮುಲಾಯಂ ಸಿಂಗ್ ಅವರು ಅಧಿಕಾರ ಇತ್ತು. ಆಗ ನಮಗೆ ಸೈನ್ಯ ಕಳಿಸುವುದಕ್ಕೆ ಅಧಿಕಾರ ಕೊಟ್ಟರು. ಆಗ ಸೈನ್ಯ ಸಹಾಯ ಕೊಟ್ಟು. ಮಸೀದಿಯನ್ನು ಉಳಿಸಿದ್ದು ಕೇಂದ್ರ ಸರ್ಕಾರ. ಈಗ ನಿಮ್ಮ ನಾಲ್ಕು ಜನ ಪೋಲೀಸರಿಂದ ಅಲ್ಲಿ ಮಸೀದಿ ಉಳಿಸಲು ಆಗುತ್ತಿರಲಿಲ್ಲ. Why should you talk about it? You should not forget, at that time that it was our Government. Another point . ಅದಕ್ಕೆ ಈಗ ವಾದ ಬೇಡ. ಏಕೆಂದರೆ ನಮ್ಮ ನಿಮ್ಮ ವಾದದಲ್ಲಿ ಅವರು ಮಸೀದಿ ಕೆಡವಿಬಿಟ್ಟರು. ಆ ವಾದವನ್ನು ನಿಲ್ಲಿಸಿ ಬಿಡೋಣ. They are enjoying with pleasure. ಈಗ ಪ್ರಶ್ನೆ ಏನೆಂದರೆ ಅಧ್ಯಕ್ಷರೇ,3ನೇ ತಾರೀಖು, 4ನೇ ತಾರೀಖು, ರಾತ್ರಿ ಕೂಡ ಸುಪ್ರೀಮ್ ಕೋರ್ಟ ಸಿಟ್ಟಿಂಗ್ ಇತ್ತು. ಸುಪ್ರೀಂ ಕೋರ್ಟ್‌ಗೆ ಅವರು ಅಂಡರ್ ಟೇಕಿಂಗ್ ಕೊಟ್ಟಿದ್ದರು. ಆ ಸಂದರ್ಭದಲ್ಲಿ ಸರ್ಕಾರವನ್ನು ಡಿಸಮಿಸ್ ಮಾಡಿದ್ದರೆ the Supreme Court would have said that it is sub-judice. I am sorry.

ಏಕೆಂದರೆ ಸುಪ್ರೀಮ್ ಕೋರ್ಟ್ ನಲ್ಲಿ ಅಂಡರ್ ಟೇಕಿಂಗ್ ಇದ್ದೂ ಕೂಡ ನಾವು ಡಿಸ್ ಮಿಸ್ ಮಾಡಿದ್ದರೆ. You would have called us most undemocratic. for dismissing the Government

We would have got censuring even from the Supreme Court or even from the Allahabad High Court.

ಎರಡೂ ಕಡೆ ಕೂಡ ಆ ಜಾಗದ ಸ್ವಾಧೀನದ ಬಗ್ಗೆ ಅಲಹಾಬಾದ್ ಹೈಕೋರ್ಟನಲ್ಲಿ ಕೇಸು ಇತ್ತು. ಕರಸೇವಕರು ಕೆಲಸ ಮಾಡುವ ಬಗ್ಗೆ ಸುಪ್ರೀಂಕೋರ್ಟನಲ್ಲಿ ಕೇಸು ಇತ್ತು. ಎರಡೂ ಕೇಸು ಇದ್ದಂತಹ ಸಂದರ್ಭದಲ್ಲಿ ಒಂದು ವೇಳೆ ಪ್ರಧಾನಮಂತ್ರಿಗಳಾದ ಪಿ.ವಿ. ನರಸಿಂಹರಾಯರು ಭಾರತೀಯ

ಜನತಾ ಪಾರ್ಟಿಯ ಗೌರ್ನಮೆಂಟ್ ಅನ್ನು ಡಿಸ್‌ಮಿಸ್ ಮಾಡಿಕೊಂಡು ಅಲ್ಲಿ ಸೈನ್ಯಕಳುಹಿಸಿದ್ದರೆ ಇವತ್ತು ಹೇಳುತ್ತಾ ಇದ್ದೀರಿ. ಇಡೀ ವಿಶ್ವ ಹೇಳುತ್ತಾ ಇತ್ತು ಮತ್ತೆ ಸುಪ್ರೀಂಕೋರ್ಟ್ ಕೂಡ ಸೆನ್ಸಾರ್ ಕೊಟ್ಟಿರೆ ಕೇಂದ್ರ ಸರ್ಕಾರ ಕೂಡ ಉಳಿಯುತ್ತಿರಲಿಲ್ಲ, ಪಿ.ವಿ. ನರಸಿಂಹರಾಯರು ಕೂಡ ಉಳಿಯುತ್ತಿರಲಿಲ್ಲ, ನಾವು ನೀವು ಕೂಡ ಉಳಿಯುತ್ತಿರಲಿಲ್ಲ. ಭಾರತೀಯ ಜನತಾ ಪಾರ್ಟಿ ವಿಜಯಭೇರಿ ಹೊಡೆಯುತ್ತಾ ಇತ್ತು. ಅದು ನಿಮಗೆ ಗೊತ್ತೆ? ಇವತ್ತು ದೆಹಲಿಯ ಕೆಂಪು ಕೋಟೆಯಲ್ಲಿ ಅವರ ಪತಾಕೆ ಹಾರುತ್ತಾ ಇತ್ತು ಅದನ್ನು ತಾವು ಆಲೋಚನೆ ಮಾಡಿಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮೂರು ತಿಂಗಳು ಕಾಯ್ದು ನೋಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಇವರಿಗೆ ಏನಾಗಿದೆ ಕೇಳಿ? ತೊಂದರೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಒಂದು ಕಡೆ ಬಾಬರಿ ಮಸೀದಿಯ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಿದೆ.ಮತ್ತೊಂದು ಕಡೆ ತಾವು ಇಡೀ ದೇಶದ ವಿಚಾರದ ಬಗ್ಗೆ ವಿಶ್ಲೇಷಣೆಮಾಡುತ್ತಾ ಇದ್ದೀರಿ. ಕೆಲವರು ಮುಂದೆ ನೀವು ಮಂತ್ರಿಮಂಡಲ ರಚನೆ ಮಾಡುವ ಬಗ್ಗೆ ಎದ್ದು ಎದ್ದು ನಿಮ್ಮ ಗಮನವನ್ನು ಸೆಳೆಯುತ್ತಿದ್ದಾರೆ. ಇದು ಹೇಗಿದೆ ನೋಡಿ? ನೀವು ಸಭೆಯಲ್ಲಿದ್ದಾಗ ನೀವು ಇದ್ದೀರಿಯೆಂದು ನಿಮ್ಮ ಗಮನವನ್ನು ಹೆಜ್ಜೆಹೆಜ್ಜೆಗೂ ಸೆಳೆಯುತ್ತಿದ್ದಾರೆ. ಸ್ವಲ್ಪ ನೋಡಿ ಇವರ ಹಣೆಯ ಬರಹವನ್ನು ನೀವು ಅವರನ್ನು ಎಷ್ಟು ಹಿಡಿದಿದ್ದೀರಿ. ಭೇಷ್ ನಾನು ಒಪ್ಪಿದೆ. ಇದುವರೆಗೂ ಸುದೀರ್ಘವಾಗಿ ಚರ್ಚೆ ನಡೆಯುತ್ತಿದೆ. ಅವರು ಏತಕ್ಕೆ ಮಧ್ಯೆ ಮಧ್ಯೆ ಏಳುತ್ತಾರೆ? ನಿಮ್ಮ ಚರ್ಚೆಯನ್ನು ಸಮರ್ಥನೆ ಮಾಡಿಕೊಳ್ಳಲಿಕ್ಕೆ ನೀವೇ ಶಕ್ತಿವಂತರು. ಆದರೂ ಕೂಡ ಇವರುಗಳು ನಿಮ್ಮ ಗಮನ ಸೆಳೆಯುತ್ತಿರುವುದನ್ನು ನೋಡಿ. ಮುಂದೆ 15ನೇ ತಾರೀಖು ಮಂತ್ರಿಮಂಡಲ ವಿಸ್ತರಣೆಯೆಂದು ಹೇಳುತ್ತಾರೆ. ಮುಖ್ಯಮಂತ್ರಿಗಳು ಇವರಲ್ಲಿ ನೀವು ಕೆಲವನ್ನು ಮಂತ್ರಿಮಂಡಲಕ್ಕೆ ತೆಗೆದುಕೊಳ್ಳಬಹುದು. ಅದರಲ್ಲೂ ರೈವರನ್ನಂತೂ ನೀವು ತೆಗೆದುಕೊಳ್ಳಲೇಬೇಕು. ಇವರು ಯಾರೋ ಈ ಕಡೆ ಮಾತನಾಡುತ್ತಿದ್ದಾರೆ ಅವರಿಗೆ ಕೊಡಬೇಡಿ.

ಛೇರ್‌ಮನ್ : ಈ ಪರಿಸ್ಥಿತಿಯ ಲಾಭ ನಿಮಗೆ ಎಷ್ಟರ ಮಟ್ಟಿಗೆ ಉಪಯೋಗವಾಗುತ್ತದೆ ಎನ್ನುವುದನ್ನು ನೀವು ವಿಚಾರ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಹಣೆಯ ಬರಹ ನೋಡಿ ನಾನು ಚಿಂತನೆ ಮಾಡುತ್ತಿದ್ದೇನೆ.

ಶ್ರೀ ಸಿ. ಬೈರೆಗೌಡ : ಮಾನ್ಯ ವಾಟಾಳ್ ನಾಗರಾಜ್‌ರವರು ಮಂತ್ರಿ ಪದವಿಯನ್ನು ಒಬ್ಬರಿಗೆ ಕೊಡಿಸುತ್ತೇನೆಂದು ಹೇಳುತ್ತಾರೆ. ಇನ್ನೊಬ್ಬರಿಗೆ ಕೊಡಬೇಡಿಯೆಂದು ಹೇಳುತ್ತಾರೆ ಕೊಡಿಸುವುದಕ್ಕೆ ಬಿಡುವುದಕ್ಕೆ ಇವರೇನು ಶ್ರೀ ರಾಮಚಂದ್ರರೆ?

ಶ್ರೀವಾಟಾಳ್ ನಾಗರಾಜ್ : ನನ್ನ ಪಕ್ಕದಲ್ಲಿಯೇ ಶ್ರೀ ರಾಮಚಂದ್ರ ಕುಳಿತುಕೊಂಡಿದ್ದಾರೆ. ಇನ್ನೇನಾಗಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷಣಿಯವರೆ, ಈ ತೊಂದರೆ ವಿ.ಪಿ. ಸಿಂಗ್ ರವರಿಗೆ ಆಗ ಇರಲಿಲ್ಲ, ಏಕೆಂದರೆ ಸುಪ್ರೀಂಕೋರ್ಟಿನಲ್ಲಿ ಕೇಸು ಇರಲಿಲ್ಲ, ಅಲಹಬಾದ್ ಕೋರ್ಟ ನಲ್ಲಿ ಅಕ್ವಿಜಿಶನ್ ಬಗ್ಗೆ ಕೇಸು ಇರಲಿಲ್ಲ. ಸಂವಿಧಾನದ ತೊಂದರೆ ಆಗ ವಿ.ಪಿ., ಸಿಂಗ್ ರವರಿಗೆ ಇರಲಿಲ್ಲ. ಈ ಸಂದರ್ಭದಲ್ಲಿ ಶ್ರೀ ಪಿ.ವಿ. ನರಸಿಂಹರಾಯರಿಗೆ ಈ ತೊಂದರೆಗಳು ಇತ್ತು. ಎರಡನೆಯದಾಗಿ, ಒಂದು ವೇಳೆ ನಾವು ಬಿಜೆಪಿ ಸರ್ಕಾರವನ್ನು ಡಿಸ್ ಮಿಸ್ ಮಾಡಿದ್ದರೆ, ನಾವು 2 ಲಕ್ಷ ಕರಸೇವಕರು ಇರತಕ್ಕ ಪರಿಸರಕ್ಕೆ ನಮ್ಮ ಸೈನ್ಯವನ್ನು ಕಳುಹಿಸಿದ್ದರೆ ಲಕ್ಷಾಂತರ ಮಂದಿ ಸಾಯುತ್ತಿದ್ದರು. ರಾಷ್ಟ್ರ ವೀದಿ ರಕ್ತದ ಓಕುಳಿಯಲ್ಲಿ ಹೋಗುತ್ತಿತ್ತು. Don't Forget about it. Any respondsible prime Minister would not have acted in a panicky situaion like this.

ಆಗ ನಮ್ಮ ಕಾಂಗ್ರೆಸ್ ಸರ್ಕಾರ ಹೋಗುತ್ತಿರುವುದು ಮಾತ್ರವಲ್ಲ, ಬಹುಶಃ ಇಡೀ ದೇಶದಲ್ಲಿ ಪ್ರಜಾಪ್ರಭುತ್ವವೇ ನಾಶವಾಗುತ್ತಾ ಇತ್ತು. ಅಂತಹ ಒಂದು ಫ್ಯಾನಿಕ್ ಸ್ಯುಚಿಯೇಷನ್ ನಲ್ಲಿ ಆಕ್ಟ್ ಮಾಡುತ್ತಾ ಇದ್ದರೆ ಸಂವಿಧಾನದ ಉಲ್ಲಂಘನೆಯಾಗುತ್ತಿತ್ತು ಕೇಂದ್ರ ಸರ್ಕಾರಗಿಂದ. ಬಿಜೆಪಿಯ ಉತ್ತರ ಪ್ರದೇಶ ಸರ್ಕಾರವಾಗಲಿ, ಉಳಿದ ರಾಜ್ಯಗಳಲ್ಲಿದ್ದ ಬಿಜೆಪಿ ಸರ್ಕಾರಗಳನ್ನು ಉರುಳಿಸಿ ಸಂವಿಧಾನ ಉಲ್ಲಂಘನೆ ಮಾಡಿದರು ಎಂದು ಏನು ಹೇಳುತ್ತೀರಿ, ಶ್ರೀ ಪಿ.ವಿ. ನರಸಿಂಹರಾಯರುಸಂವಿಧಾನ ಉಲ್ಲಂಘನೆ ಮಾಡುತ್ತಿದ್ದರೆ Perhaps we could not have remained in that seat of power.

ಆದ್ದರಿಂದ ಇವತ್ತು ವಿವೇಚದನೆಯಿಂದ ಮಾನ್ಯ ಪ್ರಧಾನಮಂತ್ರಿಗಳು ಕೆಲಸ ಮಾಡಿದ್ದಾರೆ. ದೀಮಂತಿಕೆಯಿಂದ ಕೆಲಸ ಮಾಡಿದ್ದಾರೆ. ದೇಶ ಮತ್ತು ಪ್ರಜಾಪ್ರಭುತ್ವ ಉಳಿದಿದೆ. ಏಕೆಂದರೆ....

ಶ್ರೀ ವಾಟಾಳ್ ನಾಗರಾಜ್ : ಸುಳ್ಳು ಹೇಳುವುದಕ್ಕೂ ಒಂದು ಮಿತಿ ಇದೆಯಪ್ಪ.....

Sri M.Veerappa Moily : This is what has happened

(Interruptions)

ಶ್ರೀ ಶಿವಾನಂದ ಎಚ್. ಕೌಜಲಗಿ : ಪ್ರಧಾನ ಮಂತ್ರಿಗಳನ್ನು ಡಿಫೆಂಡ್ ಮಾಡುತ್ತಿದ್ದೀರಿ. ಇದಕ್ಕೇನು ಹೇಳುವುದು.

ಶ್ರೀ ಎಂ. ವೀರಪ್ಪ ಮೊಯಿಲಿ : ಹೌದು. ಸುಪ್ರೀಂ ಕೋರ್ಟಿನಲ್ಲಿ ಕೇಸ್ ಇರುವಾಗ, ಹೈಕೋರ್ಟಿನಲ್ಲಿ ಕೇಸ್ ಇರುವಾಗ ನರಸಿಂಹರಾಯರು ಹೇಗೆ ಅಲ್ಲಿ ಪ್ರವೇಶ ಮಾಡುತ್ತಿದ್ದರು? Parctically it is an obstruction for us. We would not have entered Ayodhya and used our forces.

ಸಂವಿಧಾನಾತ್ಮಕವಾಗಿ ಕೆಲಸ ಮಾಡತಕ್ಕಂಥ ಪ್ರವೃತ್ತಿ ಭಾರತೀಯ ಜನತಾಪಕ್ಷಕ್ಕೆ ಇಲ್ಲವೆಂದು ಈ ದೇಶದಲ್ಲಿ, ವಿಶ್ವದಲ್ಲಿ ಸಾಬೀತಾಗಿದೆ. ಈಗ ದೇಶದ ಜನರಿಗೆ ಇದು ಗೊತ್ತಿದೆ. They cannot work within the frame work of the constitution.

They have demonstrated to the world that BJP is not in a position to work within the framework of the Constitution of this country. If that is correect, then the dismissal of the three State Government is also, Correct. If the BJP, as a principle, as a philosophy is not in a position to work in conformity with the Constitution of India, if they cannot work in up, they cannot work in Rajasthanm Madhya pradesh and Himachal Pradesh.

ಶ್ರೀ ಬಿ.ಎಸ್. ಯಡಿಯೂರಪ್ಪ : 119 ಜನ ಲೋಕಸಭಾ ಸದಸ್ಯರನ್ನು ಮಾಡಿದ್ದಾರಲ್ಲ, ಇದು ಸರಿಯೇ?

ಚೇರ್ಮನ್ : ತಾವು ಕಂಪ್ಲೀಟ್ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿ ಕೋಮು ಸೌಹಾರ್ದ ಏರ್ಪಡಿಸುವುದಕ್ಕೆ ಕೆಲವು ಹೊಸ ಕಾರ್ಯ ಕ್ರಮಗಳನ್ನು ಹಮ್ಮಿ ಕೊಂಡಿದ್ದೇವೆ. ಇದಕ್ಕೆ ತಮ್ಮ ಸಹಕಾರ ಬೇಕು. ಅಂದರೆ ರಾಜ್ಯ ಮಟ್ಟದಲ್ಲಿ ಐಕ್ಯತಾ ಸಮಿತಿಗಳನ್ನು ಪುನಶ್ಚೇತನ ಗೊಳಿಸತಕ್ಕಂಥಾದ್ದು, ಜಿಲ್ಲಾಮಟ್ಟದಲ್ಲಿ, ತಾಲ್ಲೂಕುಮಟ್ಟದಲ್ಲಿ ಮತ್ತು ಮಂಡಲ ಮಟ್ಟದಲ್ಲಿಯೂ ಕೂಡ ಇಂತಹ ಐಕ್ಯತಾ ಸಮಿತಿಗಳನ್ನು ಪುನಶ್ಚೇತನಗೊಳಿಸತಕ್ಕಂಥ ದೊಡ್ಡ ಕಾರ್ಯಕ್ರಮವನ್ನು ನಾವು ಮಾಡಬೇಕೆಂದು ಹೇಳಿ ಸಂಕಲ್ಪ ಮಾಡಿದ್ದೇವೆ.ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ, ಒಂದು ಸೌಹಾರ್ದಸೌಧ ನಿರ್ಮಾಣ ಮಾಡಬೇಕೆಂದು ಕೂಡ ನಮ್ಮ ನಿರ್ಣಯವಾಗಿದೆ.ಅದು ಒಂದು ಸಾಂಸ್ಕೃತಿಕ ಸಮುಚ್ಚಯವಾಗಿರುತ್ತದೆ. ಅದರಲ್ಲಿ ಮ್ಯೂಸಿಯಂ, ಆರ್ಟ್ ಗ್ಯಾಲರಿ, ಲೈಬ್ರರಿ, ಆಡಿಟೋರಿಯಂಗಳು ಇದ್ದು, ಡಿಬೇಟ್ ಸಿಂಪೋಸಿಯಂ ಮಾಡುವುದಕ್ಕೆ to promote inter-religious, inter-linguistic harmony and to serve as a Centre to reflect the composite culture of India.

ಇದನ್ನು ಮಾಡಬೇಕೆಂದು ನಮ್ಮ ಒಂದು ಅಪೇಕ್ಷೆ ಇದೆ.

(ಶ್ರೀ ಡಿ.ಎ. ಚಿನ್ನಪ್ಪ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ಡಿ.ಬಿ. ಚಂದ್ರೇಗೌಡ : ಅಲ್ಲಿ ಶ್ರೀ ಪಿ.ವಿ. ನರಸಿಂಹರಾವ್ ಅವರ ಒಂದು ಫೋಟೋ ಇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಿಮ್ಮ ಫೋಟೋವನ್ನು ಕೊಡಬೇಕಾದರೆ ಇಡೋಣ.

ಶ್ರೀ ವಾಟಾಳ್ ನಾಗರಾಜ್ : ಇದಕ್ಕಿಂತ ವಿಧಾನ ಸೌಧವೇ ಸಾಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಆಯಿತು. ನೋಡೋಣ. ಇಷ್ಟು ಮಾತ್ರವಲ್ಲ, ಅನೇಕ ಸಂದರ್ಭದಲ್ಲಿ ನಮ್ಮ ಪೋಲೀಸ್ ಫೋರ್ಸ್ ಇದೆ. ಏಕೆಂದರೆ, ಇಂತಹ ಕಮ್ಯುನಲ್ ಪ್ರಾಬ್ಲಮ್ ಬಂದಾಗ ಅಥವಾ ಲಿಂಗ್ವಿಸ್ಟಿಕ್ ಪ್ರಾಬ್ಲಮ್ ಬಂದಾಗ, ಇಂತಹ ಒಂದು ಅಪಾಯಕರವಾದಂಥ ಪ್ರಸಂಗ ಬಂದಾಗ ಸಮರೋಪಾದಿಯಲ್ಲಿ ಎದುರಿಸಲಿಕ್ಕೆ ಮತ್ತು ಈ ಮನೋ ಭೂಮಿಕೆಯಿಂದ

ಎದುರಿಸಲಿಕ್ಕೆ ಒಂದು ಸ್ಪೆಶಲ್ ಆಕ್ಷನ್ ಫೋರ್ಸ್ ಎಂಬ ಒಂದು ಪೋಲೀಸ್ ಪಡೆಯನ್ನು ಸಿದ್ಧಪಡಿಸಬೇಕೆಂದು ಒಂದು ನಿರ್ಣಯಮಾಡಬೇಕೆಂದು ಹೇಳಿ ನಾವು ಮಾಡಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ಇದನ್ನು ಕಂಟಿನ್ಯೂಸ್ ಆಗಿ ಮಾಡಬೇಕೆಂದು ಇದ್ದೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ : ಕಾಂಟಿನ್ಯೂಸ್ ಅಲ್ಲ, ಇದು ಬಹಳ ಲಘುವಾಗಿ ತೆಗೆದುಕೊಳ್ಳತಕ್ಕಂಥಾ ವಿಚಾರ ಅಲ್ಲ. ತಮಗೆ ಗೊತ್ತಿದೆ. ಕೇಂದ್ರ ಸರ್ಕಾರದಲ್ಲಿ ರ್‍ಯಾಪಿಡ್ ಆಕ್ಷನ್ ಫೋರ್ಸ್ ಎಂದು ಅನೇಕ ವರ್ಷಗಳಿಂದ ಇದೆ. ಇದು ನಿನ್ನೆ, ಮೊನ್ನೆ ಮಾಡಿದ್ದು ಅಲ್ಲ. ತಾವು ಕೂಡ ಗೃಹಮಂತ್ರಿಯಾಗಿದ್ದಿರಿ. ಇಂತಹ ಪರಿಸ್ಥಿತಿ ಬಂದಾಗ ಅವರಲ್ಲಿ ಆ ಓರಿಯೆಂಟೇಶನ್ ಇರುತ್ತದೆ. ಇಂತಹ ಪರಿಸ್ಥಿತಿಗಳಲ್ಲಿ ಯಾವ ರೀತಿಯಲ್ಲಿ ಕಾರ್ಯಾಚರಣೆ ಮಾಡಬೇಕೆಂದು ಇರುತ್ತದೆ.

ತಾವು ದಯಮಾಡಿ, ಇದರ ಮಹತ್ವ ತಿಳಿದುಕೊಳ್ಳಬೇಕಾಗುತ್ತದೆ. ನಾವು ಹೇಳುವುದು ಬಹಳ ಸುಲಭ. ಏಕೆಂದರೆ, ತಮಗೂ ಅನುಭವ ಇದೆ, ನಮಗೂ ಅನುಭವ ಇದೆ.

ಶ್ರೀ ಆರ್.ಎಲ್. ಜಾಲಪ್ಪ : ನಾನು ಹೇಳುವುದೇನೆಂದರೆ, ತಾವು ತರಬೇತಿ ಕೊಡುವುದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ, ಅವರಿಗೆ ಒಳ್ಳೆಯ ಎಕ್ಸರ್ ಸೈಜ್ ಕೊಡಿ. ಕರಾಟೆ ಕಲಿಸಿ, ಹೊಟ್ಟೆ ತುಂಬ ಊಟ ಕೊಡಿ, ಆರಮ್ಸ್ ಯೂಸ್ ಮಾಡುವುದನ್ನು ಹೇಳಿ, ಎಲ್ಲಾ ಮಾಡಿ ಆದರೆ, ಅದಕ್ಕೋಸ್ಕರ ಒಂದು ಫೋರ್ಸ್ ಇಟ್ಟರೆ, is it going to be a recurring incident?

ಶ್ರೀ ಎಂ. ವೀರಪ್ಪ ಮೊಯ್ಲಿ : ಹಾಗಾದರೆ,ಆಗುವುದೇ ಇಲ್ಲವೆಂದು ನೀವು ಬರೆದು ಕೊಡುತ್ತೀರಾ? ನಾವು, ನೀವು ಇಬ್ಬರೂ ಗ್ಯಾರಂಟಿ ಬರೆದುಕೊಡೋಣ. ಹಾಗಾದರೆ. ನಿಮ್ಮ ಕಾಲದಲ್ಲಿ ಯಾವುದೂ ಕೋಮುಗಲಭೆ ಆಗಲಿಲ್ಲವೇ ?

ಶ್ರೀ ಆರ್. ಎಲ್. ಜಾಲಪ್ಪ : ವೋಟಿನ ಆಸೆ ಬಿಟ್ಟು ವೋಟಿನ ಆಸೆಗಾಗಿ ಆಪಾದಿತರನ್ನು ಟ್ಯಾಂಪರ್ ಮಾಡುವುದನ್ನು ಬಿಟ್ಟರೆ, ಇಬ್ಬರೂ ಪ್ರಯತ್ನ ಮಾಡಿ....

ಶ್ರೀ ಎಂ. ವೀರಪ್ಪ ಮೊಯ್ಲಿ : ಮಾನ್ಯ ಜಾಲಪ್ಪನವರಿಗೆ ವೋಟಿನ ಕನಸು ಯಾವಾಗಲೂ ಇದೆಯೆಂಬು ನನಗೆ ಅರ್ಥವಾಗುವುದಿಲ್ಲ, ನಿಮಗೆ ಏಕೆ ವೋಟಿನ ಕನಸು. ಯಾವ ಪಕ್ಷವೂ ಇಲ್ಲ, ಏನೂ ಇಲ್ಲ. ರ್‍ಯಾಪಿಡ್ ಆಕ್ಷನ್ ಫೋರ್ಸ್ ಜನತಾ ಪಕ್ಷ ಅಧಿಕಾರದಲ್ಲಿದ್ದಾಗಲೂ ಇತ್ತು, ಈಗಲೂ ಇದೆ. ದಯಮಾಡಿ, ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳತಕ್ಕ ವಿಚಾರ ಅಲ್ಲ. ಏಕೆಂದರೆ, ಓರಿಯೆಂಟೇಷನ್ ಟ್ರೈನಿಂಗ್ ಬೇಕಾಗುತ್ತದೆ. ಈ ಕೋಮುಗಲಭೆ, ತಾವು ಇದ್ದಾಗಲೂ ಆಗಿದೆ, ಹಿಂದೆಯೂ ಆಗಿದೆ. ಮುಂದೆಯೂ ಆಗುತ್ತದೆ. ಇದು ಅಪೇಕ್ಷಿಸತಕ್ಕ ವಿಚಾರ ಅಲ್ಲ. ನಮ್ಮ ಸಮಾಜದಲ್ಲಿರತಕ್ಕ ಈ ಇಂದು ಸಂದರ್ಭದಲ್ಲಿ ಇದು ಬರೀ ಕೋಮುಗಲಭೆಗೆ ಮಾತ್ರ ಎಂದು ತಿಳಿದುಕೊಳ್ಳಬೇಡಿ. During any law and order sitution, emergent situation. ಈ ಫೋರ್ಸನ್ನು ಉಪಯೋಗ ಮಾಡುವುದಕ್ಕೆ ಬರುತ್ತದೆ. ನಾವು ಇದನ್ನು ಮಾಡುವುದಕ್ಕೆ ಅಂದಾಜು ಮಾಡಿದ್ದೇವೆ. ಭಾರತ ಇಂದು ಸಂದಿಗ್ಧ ಕಾಲವನ್ನು ಎದುರಿಸುತ್ತಿದೆ. ಇಂದಿನ ಪ್ರತ್ಯೆ, ಬರೀ

ಮಂದಿರ, ಮಸೀದಿ ಪ್ರಶ್ನೆ ಅಲ್ಲ. ಭಾರತ ಒಂದು ಜಾತ್ಯಾತೀತ ಸಮಾಜವಾಗಿ ಉಳಿಯಬೇಕೇ ಅಥವಾ ಸ್ವತಂತ್ರ ರಾಷ್ಟ್ರವಾಗಿ ಉಳಿಯಬೇಕೇ ಎನ್ನುವ ಪ್ರಶ್ನೆ ಇದೆ. ಈ ಪ್ರಶ್ನೆಗೆ ನಾವು ಸ್ಪಂದಿಸಬೇಕಾಗುತ್ತಿದೆ. ತಮಗೆ ಕೂಡ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ, ವಿಶ್ವಾಸ ಇದ್ದರೆ, ವಿಶ್ವಾಸ ಇಲ್ಲದಿದ್ದರೆ, that is a different matter. ತಮಗೆ ವಿಶ್ವಾಸ ಇದೆ ಎಂದು ನಾವು ತಿಳಿದುಕೊಂಡಿದ್ದೇವೆ. ಆದ್ದರಿಂದ, ಈ ಸಮಸ್ಯೆಯನ್ನು ಬಿಟ್ಟು, ಜಾತ್ಯಾತೀತ ರಾಷ್ಟ್ರವಾಗಿ ಬದುಕಲಿಕ್ಕೆ ಪ್ರಯತ್ನ ಮಾಡೋಣ. ಅಂತಹ ಶಕ್ತಿ ನಮ್ಮಲ್ಲಿ ಹೆಚ್ಚಾಗುವುದಕ್ಕೆ, ನಮ್ಮ ರಾಜ್ಯದಲ್ಲಿ ನಾವೆಲ್ಲರೂ ಒಂದುಗೂಡಿ ಕೆಲಸ ಮಾಡಬೇಕಾಗಿದೆ. ಇದರ ಬಗ್ಗೆ ಮಾತುಕತೆ ಮಾಡೋಣ, ನಾವೆಲ್ಲರೂ ಒಂದಾಗಿ, ಜಾತ್ಯಾತೀತ ಸಮಾಜದ ಕಲ್ಪನೆ ಮಾತ್ರ ಇದ್ದರೆ ಸಾಲದು..

(ಉಪಾಧ್ಯಕ್ಷರಾದ ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿಯವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ಡಿ.ಬಿ. ಚಂದ್ರಗೌಡ : ಒಟ್ಟು ರಾಷ್ಟ್ರೀಯ ಆಯಾಮದಲ್ಲಿ ಸ್ವಲ್ಪ ಆಳತೆ ಮಾಡಿ ನೋಡಿದರೆ, ದಕ್ಷಿಣ ರಾಜ್ಯಗಳಲ್ಲಿ ಆದ ಪರಿಣಾಮ, ಆದರಲ್ಲೂ ಕರ್ನಾಟಕ ರಾಜ್ಯ ಹೆಚ್ಚು ದುರಂತಕ್ಕೆ ಸಿಕ್ಕಿರತಕ್ಕ ರಾಜ್ಯ. ತಮಿಳುನಾಡಿನಲ್ಲಾಗಲೀ, ಕೇರಳದಲ್ಲಾಗಲಿ ಪಾಂಡಿಚೆರಿಯಲ್ಲಾಗಲಿ, ಅಥವಾ ಸ್ವಲ್ಪ ಮಟ್ಟಿಗೆ ಗೋವಾ ಭಾಗದಲ್ಲಾಗಲೀ ಇಷ್ಟು ದೊಡ್ಡ ಪ್ರಮಾಣದಲ್ಲಿ ಆಗಿಲ್ಲ. ಕಾರಣ ಕಂಡುಹಿಡಿಯುವುದಕ್ಕಾಗಿ, ಇದರ ಬಗ್ಗೆ ಏನಾದರೂ ವರದಿ ತರಿಸಿದ್ದೀರಾ? ಕರ್ನಾಟಕದಲ್ಲಿ ಏಕೆ ವಿಶೇಷವಾಗಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆಯಿತು? ಎರಡನೆಯದು, ಮುಖ್ಯವಾಗಿ ಗಮನಿಸಬೇಕಾದ್ದು, 6,7 ಮತ್ತು 8ನೇ ತಾರೀಖಿನವರೆಗೆ ಕರ್ನಾಟಕನಲ್ಲಿಸ್ತಂಭ ಶಾಂತ ಪರಿಸ್ಥಿತಿ. 9,10 ನೇ ತಾರೀಖಿನ ಮೇಲೆ ಭುಗಿಲೇಳುವುದಕ್ಕೆ ಯಾವುದಾದರೂ ಕಾಣದ ಕೈಗಳು ಕೆಲಸ ಮಾಡಿವೆಯೋ? ಇದರ ಬಗ್ಗೆ ಸರ್ಕಾರಕ್ಕೆ ಏನಾದರೂ ಮಾಹಿತಿ ಇದ್ದರೆ, ನಮಗೆ ಒದಗಿಸಿದರೆ ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯ್ಲಿ : ಈ ಸಮಸ್ಯೆ 8, 9ನೇ ತಾರೀಖು ಅಲ್ಲ, 7ನೇ ತಾರೀಖು ಪ್ರಾರಂಭವಾಗಿದೆ. 7,8,9ನೇ ತಾರೀಖಿನ ಮೇಲೆ ಆಯಿತು. ಮೈಸೂರಿನಲ್ಲಿ ಒಂದು ಕಡೆ ನಾವು ಆಡಳಿತಾತ್ಮಕವಾಗಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಂಡಿದ್ದೇವೆ. ಇದನ್ನು ವಿಮರ್ಶೆ ಮಾಡುವುದಕ್ಕೆ ಹೋದರೆ, ಬೇರೆ ಬೇರೆ ಸಮಸ್ಯೆಗಳು ಬರುತ್ತವೆ. ಅದೇ ಒಂದೆರಡು ದಿವಸ ಚರ್ಚೆ ಮಾಡಬೇಕಾಗುತ್ತದೆ ಅದು ದೊಡ್ಡ ಸಮಸ್ಯೆಯಾಗುತ್ತದೆ. ಅದಕ್ಕೆ, ನಾವು ನೀವೂ ಇಬ್ಬರೂ ಕುಳಿತುಕೊಂಡು ಮಾತನಾಡಬಹುದು. ಮಾನ್ಯ ಯಡಿಯೂರಪ್ಪನವರು ಇಲ್ಲದಿದ್ದರೆ ಸಾಕು. ಆದ್ದರಿಂದ ಈಗ ಆ ಚರ್ಚೆ ಬೇಡ.

ಶ್ರೀ ಡಿ. ಹಲಗೇಗೌಡ : ಅಯೋಧ್ಯೆಗೆ ಹೋದವರು ವಾಪಸ್ಸು ಬಂದ ಮೇಲೆ ಗಲಾಟೆ ಜಾಸ್ತಿಯಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ರೀತಿ ಬೇಜವಾಬ್ದಾರಿಯಿಂದ ಮಾತನಾಡಿದರೆ ಸುಮ್ಮನೆ ಇರಬೇಕು. ಮಾತಿಗೆ ಇತಿ ಮಿತಿ ಇರಬೇಕು. ನಾವು ಜವಾಬ್ದಾರಿ ಸ್ಥಾನದಲ್ಲಿದ್ದು ಮುಖ್ಯಮಂತ್ರಿಯಾಗಿ ಒಂದು ಸ್ಟೇಟ್ ಮೆಂಟ್

ಮಾಡಿದ್ದೀರಿ ತಾವು ಏನು ಹೇಳಬೇಕೋ ಅದನ್ನು ಹೇಳಿದ್ದೀರಿ. ಅವರು ಈ ರೀತಿ ಬೇಜವಾಬ್ದಾರಿಯಿಂದ ಮಾತನಾಡಿದರೆ, ನಾನು ಏನು ಹೇಳಬೇಕು.

ನಾನು ಶಿವಮೊಗ್ಗ ಜಿಲ್ಲೆಯವನು. ಬೇರೆ ಯಾವುದೇ ವಿಷಯಕ್ಕೆ ನಮ್ಮ ಜೊತೆಗೆ ನಿಮಗೆ ಸಂಬಂಧ ಇಲ್ಲದಿದ್ದರೆ ಬೇಡ, ನಾವು ಮೂರು ಜನ ಶಿವಮೊಗ್ಗ ಜಿಲ್ಲೆಯ ಶಾಸಕರು ಇದ್ದೇವೆ. ಅಲ್ಲಿ ಒಂದು ಸಣ್ಣ ಗಲಭೆ ಆಯಿತೇ? ನೀವೇ ಕಾಂಗ್ರೆಸ್‌ನವರು ಇರುವ ತಡೆ ಏತಕ್ಕೆ ಆಯಿತು? ಅಂದರೆ ಗಲಭೆ ಮಾಡಿ ಅದರಿಂದ ಲಾಭ ಮಾಡಿಕೊಳ್ಳುವಂತಹ ಒಂದು ಷಡ್ಯಂತ್ರದಲ್ಲಿ ನೀವು ಬದುಕಿರುವವರು. ಆದುದರಿಂದ ನೀವು ದಯವಿಟ್ಟು ನಿಮ್ಮ ಆತ್ಮಸಾಕ್ಷಿಗೆ ಪ್ರಶ್ನೆ ಕೇಳಿ ತಿದ್ದಿಕೊಳ್ಳುವಂತಹ ಪ್ರಯತ್ನ ಮಾಡಿ, ಜನರು ಗೌರವದಿಂದ, ನೆಮ್ಮದಿಯಿಂದ ಕೆಲಸ ಮಾಡುವುದಕ್ಕೆ ವ್ಯವಸ್ಥೆ ಮಾಡೋಣ. ಯಾರೇ ತಪ್ಪು ಮಾಡಿರಲಿ ತಾವು ಕ್ರಮ ತೆಗೆದುಕೊಳ್ಳಿ, ಅವರು ಯಾರೇ ಇರಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ : ಇದರ ವಿಶ್ಲೇಷಣೆ ಮಾಡುವುದಕ್ಕೆ ನಾನು ಈಗ ಹೋಗುವುದಿಲ್ಲ. ಏತಕ್ಕೆಂದರೆ ನಾವು ಏನು ಮಾಡಬೇಕೆಂದು ವಿ ಮಸ್ಟ್ ಗೀವ್ ಹೀಲಿಂಗ್ ಟಚ್. ನಾವು ಒಡೆದಂಥ ಹೃದಯಗಳನ್ನು ಒಂದುಗೂಡಿಸುವುದಕ್ಕೆ ನೋಡೋಣ. ಅದಕ್ಕೆ ನಿಮ್ಮೆಲ್ಲರ ಸಹಕಾರ. ಈ ಸದನದ ಸಹಕಾರ ನಮಗೆ ಬೇಕಾಗಿದೆ. ಮಾನ್ಯ ಸಿಂಧ್ಯಾರವರು ಒಂದು ಸೂಚನೆ ಕೊಟ್ಟರು. ಎಲ್ಲೆಂದರಲ್ಲಿ ಮಂದಿರಗಳು, ಮಸೀದಿಗಳು, ಚರ್ಚುಗಳು ಬರುತ್ತಿವೆ. ಎಂದು ಮೈಖೇಲ್ ಫರ್ನಾಂಡಿಸ್‌ರವರು ಆ ಮನೆಯಲ್ಲಿ ಹೇಳಿದರು. ತಾವು ಇಲ್ಲಿ ಸೂಚನೆ ಕೊಟ್ಟಿದ್ದೀರಿ. ಅದಕ್ಕೆ ಈಗಾಗಲೇ ಒಂದು ಬಿಲ್ ತಂದಿದ್ದೇವೆ. ಕರ್ನಾಟಕ ರಿಲಿಜಿಯಸ್ ಬಿಲ್ಡಿಂಗ್ಸ್ ಅಂಡ್ ಪ್ಲೇಸಸ್ ಬಿಲ್ ಎಂದು ಇದೆ. ಅದಕ್ಕೆ ಸ್ವಲ್ಪ ತಿದ್ದುಪಡಿ ಮಾಡಿ, ನಾವು ಪರಸ್ಪರ ಸಮಾಲೋಚನೆ ಮಾಡಿಕೊಂಡು, ನಾವು ಅದನ್ನು ಇಲ್ಲಿ ತಂದಾಗ ಮಾತ್ರ ಇಂತಹ ಪ್ರಯತ್ನಗಳನ್ನು ತಡೆಹಿಡಿಯುವುದಕ್ಕೆ ಖಂಡಿತವಾಗಿಯೂ ಸಾಧ್ಯ ಇದೆ. ಇನ್ನೊಂದು ನಾವು ಕಟ್ಟುನಿಟ್ಟಾಗಿ ಜಾರಿಗೆ ತರುತ್ತೇವೆ, ಈಗಾಗಲೇ ನಮ್ಮ ರಾಜ್ಯದ ನೌಕರರ ಸರ್ವೀಸ್ ರೂಲ್‌ನಲ್ಲಿ ಇದೆ. ಅದು ಇದುವರೆಗೆ ಸರಿಯಾಗಿ ಅನುಷ್ಠಾನಕ್ಕೆ ಬರಲಿಲ್ಲ. ಇನ್ನು ಮುಂದೆ ನಮ್ಮ ಸರಕಾರ ನೌಕರರು ಯಾವುದೇ ಪಂಥದಲ್ಲಿ ಮತೀಯ ಅಥವಾ ಜಾತಿಯ ಸಂಸ್ಥೆಗಳಿಗೆ ಹಣ ಎತ್ತತಕ್ಕದ್ದು ಅಥವಾ ಅವರ ಜೊತೆಯಲ್ಲಿ ಸಕ್ರಿಯವಾಗಿ ಭಾಗವಹಿಸತಕ್ಕದ್ದನ್ನು ನಾವು ಸಂಪೂರ್ಣವಾಗಿ ನಿಷೇಧ ಮಾಡುತ್ತೇವೆ. ಯಾರಾದರೂ ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು ಕಂಡರೆ ಅವರ ಬಗ್ಗೆ ನಾವು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಏನಾದರೂ ಸಂಬಂಧ ಇದ್ದರೆ ಇನ್ನೊಂದು 15 ದಿವಸದೊಳಗೆ ಆ ಸಂಬಂಧ ಬಿಟ್ಟು ಬಿಡಬೇಕು. ಅದು ಬಿಡದೇ ಇದ್ದರೆ 15 ದಿವಸದ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಏತಕ್ಕೆಂದರೆ, ಸೆಕ್ಯುಲರ್ ಎಂಬ ಮಾತನ್ನು ನಾವೂ ಪ್ರಾಕ್ಟೀಸ್ ಮಾಡಬೇಕು, ಅಧಿಕಾರಿಗಳೂ ಪ್ರಾಕ್ಟೀಸ್ ಮಾಡಬೇಕು. ಇದನ್ನು ನಾವು ಕಟ್ಟುನಿಟ್ಟಾಗಿ ಜಾರಿಗೆ ತಂದು ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಎಂಬ ಮಾತನ್ನು ಮಾತ್ರ ಹೇಳಿ, ಮುಂದೆ ಬರತಕ್ಕಂಥ ದಿವಸಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಸಂಪೂರ್ಣವಾಗಿ ಕೋಮು ಸೌಹಾರ್ದತೆ ನೆಲೆಸುವಂತೆ, ಈ ಸ್ನೇಹಸೇತುವೆಯನ್ನು ಭದ್ರಗೊಳಿಸುವುದಕ್ಕೆ ನಾವೆಲ್ಲಾ ಜೊತೆಯಲ್ಲಿ ಕೆಲಸ ಮಾಡೋಣ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷಣಿಯವರೆ,

ಉಪಾಧ್ಯಕ್ಷಿಣಿಯವರು : ಈಗ ಮೂರು ಘಂಟೆ ಹೊತ್ತು ಆಗಿದೆ.

ಶ್ರೀ ಆರ್. ವಿ. ದೇಶಪಾಂಡೆ : ನಾವು ಕೆಲವು ವಿಚಾರ ಪ್ರಸ್ತಾಪ ಮಾಡಿದ್ದೇವೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಏನೂ ಹೇಳಲಿಲ್ಲ. ಬೀದರ್ ನಲ್ಲಿ,ಮೈಸೂರಿನಲ್ಲಿ, ಗುಲ್ಬರ್ಗಾದಲ್ಲಿ ಮತ್ತು ಚಿತ್ರದುರ್ಗದಲ್ಲಿ ಪೋಲೀಸ್ ಮತ್ತು ಅಡ್ಮಿನಿಸ್ಟ್ರೇಷನ್ ಇನ್ ಆಕ್ಷನ್ ನಿಂದ ಕೆಲವು ಕಡೆ ಅನಾವಶ್ಯಕವಾಗಿ ಪೋಲೀಸ್ ಫೈರಿಂಗ್ ಆಗಿದೆ, ಪೋಲೀಸ್ ಎಕ್ಸೆಸ್ ಆಗಿದೆ. ಅಲ್ಲಿ ತಾವು ಜ್ಯುಡಿಷಿಯಲ್ ಎಕ್ವೈರಿ ಮಾಡಬೇಕೆಂದು ನಾವು ಒತ್ತಾಯ ಮಾಡಿ ಕೇಳಿದ್ದೇವೆ. ಅದಕ್ಕೆ ತಾವು ಏನೇನೂ ಉತ್ತರ ಕೊಡಲಿಲ್ಲ, ಅದರ ಬಗ್ಗೆ ಸರ್ಕಾರದ ನಿಲುವು ಏನು ಎಂಬುದು ನಮಗೆ ಗೊತ್ತಾಗಬೇಕು. ಎರಡನೆಯದು, ಪರಿಹಾರದ ವಿಚಾರದಲ್ಲಿ ಹೇಳುವುದಾದರೆ, ಕೆಲವು ಜನರ ಅಂಗಡಿಗಳು ಏನು ಲೂಟಿಯಾಗಿವೆ, ಬೆಂಕಿ ಹಚ್ಚಿದ್ದಾರೆ, ಅವರು ಜೀವಂತ ಇದ್ದೂ ಸತ್ತಿದ್ದಾರೆ ಅವರಿಗೆ ಕಾಂಪೆನ್ಸೇಷನ್ ಸಿಗುವುದು ಮ್ಯಾಕ್ಸಿಮಮ್ 20 ಸಾವಿರ ರೂಪಾಯಿಗಳು ಹಾಗಾಗಿ ತಮಗೆ ಸಲಹೆ ಕೊಟ್ಟಿದ್ದೆ, ಈ ಜನರಿಗೆ ಹೆಚ್ಚಿನ ಪರಿಹಾರ ಸಿಗಬೇಕಾಗುತ್ತದೆ. ಮತ್ತು ಆ ಜನರಿಗೆ ಇಂಟರೆಸ್ಟ್ ಫ್ರೀ ಲೋನ್ಸ ಸರಕಾರದಿಂದ ಕೊಡುವುದಕ್ಕೆ ವ್ಯವಸ್ಥೆ ಮಾಡಿರಿ ಎಂದು ಹೇಳಿದೆ,ಅದರ ಬಗ್ಗೆ ಏನೂ ಬೆಳಕು ಚೆಲ್ಲಲಿಲ್ಲ. ಆದ್ದರಿಂದ ಇದರ ಬಗ್ಗೆ ಸರಕಾರದ ನೀತಿಯನ್ನು ಸ್ಪಷ್ಟವಾಗಿ ತಿಳಿಯಬಯಸುತ್ತೇನೆ.

ಶ್ರೀ ಎಚ್. ಏಕಾಂತಯ್ಯ : ಮಾನ್ಯ ಮುಖ್ಯಮಂತ್ರಿಗಳು ಬಹಳ ಉತ್ತಮವಾಗಿ ಭಾಷಣ ಮಾಡಿ, ವಿರೋಧ ಪಕ್ಷದ ಮತ್ತು ಎಲ್ಲ ಸದಸ್ಯರ ಸಹಕಾರ ಬಯಸಿದರು. ಅವರಿಗೆ ಬೇಕಾದಂಥ ಸಹಕಾರವನ್ನು ಅವರ ನಿರೀಕ್ಷೆಗೂ ಮೀರಿ ಕೊಟ್ಟು, ಗಲಭೆ ಪೀಡಿತ ಪ್ರದೇಶದಲ್ಲಿ ಶಾಂತಿ ಮತ್ತು ಕೋಮು ಸೌಹಾರ್ದತೆಯನ್ನು ತರುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಆದರೆ ಸರ್ಕಾರ ಹೇಗೆ ನಡೆದುಕೊಂಡಿತು. ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಹೇಳಿ ಅವರಿಂದ ವಿವರಣೆ ಬಯಸುತ್ತೇನೆ. ಚಿತ್ರದುರ್ಗ ಕ್ಷೇತ್ರದಲ್ಲಿ, ಗಲಭೆ ಪೀಡಿತ ಪ್ರದೇಶದಲ್ಲಿ, ಗಲಭೆ ಪೀಡಿತ ಪೂರ್ತಿ ಅವಧಿಯಲ್ಲಿ ನಾನು ಇದ್ದೆ. ಅವರು ಎಲ್ಲ ವಿಧವಾದ ಸಹಕಾರವನ್ನು ಏನು ನಿರೀಕ್ಷೆ ಮಾಡಿದರು ಅದನ್ನು ನಮ್ಮ ಪಕ್ಷ, ನಾವು ಸೇರಿದಂತೆ ಅವರಿಗೆ ಕೊಟ್ಟಿದ್ದೇವೆ. ಆದರೆ ತಾವು ಏನು ಮಾಡಿದ್ದೀರಿ ಸ್ವಾಮಿ, ಪರಿಹಾರಕೊಡುವಾಗ ಅಲ್ಲಿನ ಶಾಸಕರನ್ನು ಮರೆತಿರಿ ಅಷ್ಟೇ ಅಲ್ಲ, ಅಲ್ಲಿನ ಸರಕಾರ ಅಧಿಕಾರಿಯಿಂದ ಕೊಡಿಸಿದ್ದರೆ ನಮಗೆ ನೋವು ಇರುತ್ತಿರಲಿಲ್ಲ, ಆದರೆ ತಾವು, ತಮ್ಮ ಪಕ್ಷದ ವರ್ಚಸ್ಸು ಹೋಗಿತ್ತೋ ಏನೋ ಅದಕ್ಕಾಗಿ ಪಕ್ಷದ ಅಧ್ಯಕ್ಷರನ್ನು ಕರೆದುಕೊಂಡುಹೋಗಿ ಅವರಿಂದ ಪರಿಹಾರ ನಿಧಿಯ ಚೆಕ್ ಕೊಡಿಸಿದ್ದೀರಿ. ಇದು ನಿಮಗೆ ಗೌರವ ತರುವ ವಿಷಯವೇ ಇದರಿಂದ ನಮ್ಮ ವೈಯುಕ್ತಿಕ ವರ್ಚಸ್ಸನ್ನು ಕಳೆಯುವುದಕ್ಕೆ ಸಾಧ್ಯ ಇಲ್ಲ.

5.10 ಪಿಎಂ.

ಕಳೆದು ಹೋದ ಪಕ್ಷದ ವರ್ಚಸ್ಸನ್ನು ಅಥವಾ ಸರ್ಕಾರದ ವರ್ಚಸ್ಸನ್ನು ಈ ರೀತಿ ಗಳಿಸುವುದಕ್ಕೆ ಪ್ರಯತ್ನ ಮಾಡುವಂತಹ ಜನ ಸೇವ್ಯ ವಿರೋಧಪಕ್ಷದ ಸದಸ್ಯರಿಂದ ಸಹಕಾರ ಬಯಸುವುದು ಸರಿಯೇ?

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಈ ಪರಿಹಾರ ಕೊಡುವ ವಿಚಾರದಲ್ಲಿ ಕೆಲವರು ಮಾತನಾಡಿದರು. ನಮ್ಮ ಕ್ಷೇತ್ರದಲ್ಲಿ ಆದ ಘಟನೆ ಬಗ್ಗೆ ನಾನು ಒಂದು ಚಿಕ್ಕ ಉದಾಹರಣೆ ಕೊಡುತ್ತೇನೆ. ಪರಿಹಾರ ಕೊಡುವ ವಿಚಾರದಲ್ಲಿ ದುರುಪಯೋಗ ಶುರು ಆಗಿದೆ. ಆ ಸಂದರ್ಭದಲ್ಲಿ ಯಾರೋ ವಯಸ್ಸಾಗಿ ಅಥವಾ ಏನಾದರೂ ಹೆಚ್ಚು ಕಡಿಮೆ ಆಗಿ ಸತ್ತು ಹೋಗಿದ್ದರೆ ಅಥವಾ ಮರ ಬಡಿದು ಅಥವಾ ಬಸ್ಸಿನ ಕೆಳಗೆ ಬಿದ್ದು ಸತ್ತು ಹೋಗಿದ್ದರೆ ಕೋಮು ಗಲಭೆಯಲ್ಲಿ ಸತ್ತು ಹೋದ ಎಂದು ಹೇಳಿದರೆ 2 ಲಕ್ಷ ರೂಪಾಯಿ ಪರಿಹಾರ ಕೊಡುತ್ತಾರೆಂದು ಹೇಳಿ ಅಲ್ಲಿ ಕೂಡ ದುರುಪಯೋಗ ಶುರು ಆಗಿದೆ. ಇದರ ಬಗ್ಗೆ ಸರ್ಕಾರ ಪರಿಹಾರ ಕೊಡುವ ವಿಚಾರದಲ್ಲಿ ಸರಿಯಾಗಿ ಗಮನಹರಿಸಬೇಕೆಂದು ನನ್ನ ಸಲಹೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ ಯಾವ ಗುಲ್ಬರ್ಗ ಮತ್ತು ಮೈಸೂರಿನಲ್ಲಿ ವಿಶೇಷವಾಗಿ ಕೆಲವರು ಪ್ರಮುಖ ಪಾತ್ರ ವಹಿಸಿ ಈ ಗಲಭೆಗಳನ್ನು ಮಾಡುವುದಕ್ಕೆ ಕಾರಣ ಕರ್ತರಾದರೋ ಅವರು ಪೋಲೀಸಿನವರು ಸಹ ಕೆಲಸ ಮಾಡಲಿಕ್ಕೆ ಬಿಡದೆ ತಡೆದು ಗೊಂದಲ ಉಂಟು ಮಾಡಿದರೋ ಅದರಿಂದ ಅನೇಕ ಸಾವು ನೋವು ಆಸ್ತಿ ಪಾಸ್ತಿ ನಷ್ಟವಾಯಿತೋ ಅದರ ಬಗ್ಗೆ ದಯಮಾಡಿ ಜುಡಿಷಿಯಲ್ ಎನ್‌ಕ್ವೈರಿ ಮಾಡಿಸುತ್ತೀರ ಎರಡನೆಯದು, ಗುಲ್ಬರ್ಗ ಮತ್ತು ಚಿತ್ರದುರ್ಗದಲ್ಲಿ ಹೆಣ್ಣುಮಕ್ಕಳ ಮಾನ ಹರಣ ಮಾಡಿದ್ದಾರೆ. ಅದನ್ನು ಸಹಿಸಿಕೊಳ್ಳಲಾರದ ಪರಿಸ್ಥಿತಿ ಅಲ್ಲಿದೆ. ದಯಮಾಡಿ ಯಾರು ದುಷ್ಕೃತ್ಯಕ್ಕೆ ಕಾರಣಕರ್ತರಾಗಿದ್ದಾರೆ ಅವರನ್ನು ಬಂಧಿಸಿ ಅವರ ಮೇಲೆ ಪ್ರಾಮಾಣಿಕವಾಗಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೀರ. ಮೂರನೆಯದು ಆಸ್ತಿಪಾಸ್ತಿಗಳನ್ನು ಕಳೆದುಕೊಂಡವರಿಗೆ ಭೇದಭಾವ ಮಾಡದೇ ಎಲ್ಲರಿಗೂ ಒಂದೇ ರೀತಿಯಾಗಿ ತಾವು ಇದುವರೆಗೂ ಹೇಳಿದಹಾಗೆ ಅದೇ ಧಾಟಿಯಲ್ಲಿ ಅವರಿಗೆ ಪರಿಹಾರ ಒದಗಿಸಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೀರಾ?

ಶ್ರೀ ಕೆ. ಹರ್ಷಕುಮಾರ್ ಗೌಡ : ಮಾನ್ಯ ಅಧ್ಯಕ್ಷರೇ,ಈಗ ಮೈಸೂರು ನಗರದಲ್ಲಿ 3ನೇ ಬಾರಿಗೆ ಗಲಭೆಗಳು ಆದವು ಸಾವು ನೋವುಗಳು ಆಗಿ 9 ಜನರು ಸತ್ತರು. ನೂರಾರು ಜನರಿಗೆ ಗಾಯಗಳಾದವು. ಸಾವಿರಾರು ಜನರು ಬಂಧಿತರಾದರು. ನಾನು ನನ್ನ ಕ್ಷೇತ್ರದಲ್ಲಿ ಪ್ರತಿನಿತ್ಯ ಇದ್ದು ಆ ನೋವನ್ನು ಅನುಭವಿಸಿದಂತಹ ಶಾಸಕ. ಸ್ವಲ್ಪ ಹೆಚ್ಚು ಕಡಿಮೆಯಾದರೂ ಕೂಡ ಯಾರು ಬಂದು ನಮಗೆ ಚಾಕು ಹಾಕುತ್ತಾರೆ ಎನ್ನುವುದು ಗೊತ್ತಾಗುವುದಿಲ್ಲ ಇಂತಹ ಸಂದರ್ಭದಲ್ಲಿ ಕೊನೆಗೆ ನಮ್ಮ ಕಡೆಯವರೇ ನಮಗೆ ಚಾಕು ಹಾಕಬಹುದು. ಅಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ವಿವಿಧ ರಾಜಕೀಯ ಪಕ್ಷಗಳ ನಾಯಕರುಗಳು ಬರುತ್ತಾರೆ. ಯಾವುದೇ ಪಕ್ಷದವರು ಇರಬಹುದು. ಆ ಪಕ್ಷದ ನಾಯಕರುಗಳು ಮಾಡುವ, ಕೊಡುವ ಹೇಳಿಕೆಗಳು ಪ್ರಚೋದನಕಾರಿಯಾಗಿರುತ್ತವೆ. ಆ ಮೂಲಕ, ಸುದ್ದಿ ಮಾಧ್ಯಮಗಳ ಮೂಲಕ ಇಡೀ ನಗರದಲ್ಲಿ ಜನರು ಮತ್ತೆ ಪ್ರಚೋದನೆಗೊಂಡು ಪ್ರಕೋಪಗಳಿಗೆ ಮತ್ತು ಆವೇಶಕ್ಕೆ ಒಳಗಾಗುತ್ತಾರೆ. ಇದರಿಂದ ತಿರುಗಿ ಗಲಭೆಗಳು ಆಗಬಹುದು. ಅಂತಹ ಹೇಳಿಕೆಗಳಿಂದ ಈ ಪರಿಸ್ಥಿತಿ ಕಾಣುತ್ತದೆ. ಆ ಹೇಳಿಕೆಗಳು ಜವಾಬ್ದಾರಿಯತವಾಗಿರಬಹುದು.

ಅಥವಾ ಬೇಜಾಬ್ದಾರಿಯುತವಾಗಿರಬಹುದು. ಮಾನ್ಯ ವಾಟಾಳ್ ನಾಗರಾಜ್ ಗವರು ಮೊದಲೇ ಹೇಳಿದರು. ನಾವು ಈ ಸಭೆಯಲ್ಲಿ ಕೂಡ ಚರ್ಚೆಯನ್ನು ಬಹಳ ಕಡಿಮೆ ಮಾಡಬೇಕೆಂದು ಹೇಳಿದರು ಜೊತೆಗೆ ಪರಿಹಾರ ಕೊಡುವಾಗ ನಾವು ಸ್ಥಳೀಯ ಶಾಸಕರು ಇರುತ್ತರೆ. ಜಿಲ್ಲಾಧಿಕಾರಿಗಳು ಅವರೇ ರಾಜಕೀಯ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಎಷ್ಟು ಜನರಿಗೆ ಪರಿಹಾರ ಕೊಟ್ಟರು, ಏನು ಮಾಡಿದರು ಎನ್ನುವ ವಿಚಾರ ಸ್ಥಳೀಯ ಶಾಸಕರ ಗಮನಕ್ಕೂ ಕೂಡ ತರುವುದಿಲ್ಲ, ನಮ್ಮ ಹತ್ತಿರ ಯಾರಾದರೂ ಬಂದು ನೀವು ಮೈಸೂರಿನಲ್ಲ ಇಷ್ಟು ದಿವಸದಿಂದ ಇದ್ದೀರಿ ಏನು ನಡೆಯುತ್ತಿದೆ. ಎಷ್ಟು ಜನರಿಗೆ ಪರಿಹಾರ ಕೊಟ್ಟಿದ್ದಾರೆ ಎಂದು ಕೇಳಿದರೆ ಅದರ ಬಗ್ಗೆ ಹೇಳುವಂಥ ಮಾಹಿತಿ ನಮಗೆ ಇರುವುದಿಲ್ಲ, ಇದನ್ನು ತಪ್ಪಿಸಬೇಕು. ಮೂರನೇಯದಾಗಿ, ನನ್ನ ಕ್ಷೇತ್ರದ ಬೊಂಬುಬಜಾರಿನ ಮೇಜರ್ಸ್ ಬ್ಲಾಕ್ ನಲ್ಲಿ ಸುಮಾರು 52 ಮನೆಗಳು ನಾಶವಾಗಿವೆ. ಅದು ಅಲ್ಪಸಂಖ್ಯಾತ ಬಾಂದವರು ಮನೆಗಳನ್ನು ಬಿಟ್ಟು ಬೇರೆ ಕಡೆ ಹೋಗಿ ಶೆಲ್ಟರ್ ತೆಗೆದುಕೊಂಡರು ಇವತ್ತು ಕೂಡ ಶಾದಿ ಮಹಲ್ ನಲ್ಲಿ ಸುಮಾರು 209 ಜನರು ಇದ್ದಾರೆ. ಜಿಲ್ಲಾಧಿಕಾರಿಗಳು ಅವರ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದಾರೆ. ಸರ್ಕಾರ ವ್ಯವಸ್ಥೆ ಮಾಡುತ್ತಿದೆ. ಆದರೆ ನಾವು ಮಾನ್ಯ ಮಂತ್ರಿಗಳಾದ ರಾಜಶೇಖರ ಮೂರ್ತಿಯವರನ್ನು ಕೇಳಿಕೊಂಡಿದ್ದೇವೆ. ಅವರಿಗೆ ಪುನರ್ ವಸತಿ ಮಾಡಬೇಕು. ನಾವು ಅವರಿಗೆ ಎಲ್ಲಿಗೆ ಹೋಗಬೇಕೆಂದು ಹೇಳಬೇಕಾಗುತ್ತದೆ. ಅವರಿಗೆ ಮನೆಗಳಿಗೆ ಹೋಗಿ ಎಂದರೆ ಮನೆಗಳೇ ನಾಶವಾಗಿವೆ. ಕೆಲವು ಕಡೆ ಸುಟ್ಟು ಹಾಕಿದರು. ಕೆಲವು ಕಡೆ ಅವರು ಮನೆಯಿಂದ ಹೊರಗಡೆ ಹೋದ ತಕ್ಷಣವೇ ನಾಶಮಾಡಿದರು. ಕೆಲವು ಸಾರಿ ಅವರು ಏಕೆ ಹೋದರು ಎಂದು ಹೇಳಬಹುದು. ಇವತ್ತಿನ ಸಂದರ್ಭದಲ್ಲಿ ಏನಾಗಿದೆಯೆಂದರೆ,ಅದು ಅವರ ತಪ್ಪಲ್ಲ ಅವರ ಜೀವಕ್ಕೆ ಅವರು ಭಯಪಡುತ್ತಿಲ್ಲ, ಅವರ ಹೆಣ್ಣು ಮಕ್ಕಳು ಇರುತ್ತಾರೆ. ಕುಟುಂಬದ ಮಕ್ಕಳು ಇರುತ್ತಾರೆ ಅವರನ್ನೂ ರಕ್ಷಣೆ ಮಾಡಲು ಬೇರೆ ಕಡೆ ಹೋಗಿ ಶೆಲ್ಟರ್ ತೆಗೆದುಕೊಳ್ಳುತ್ತಾರೆ. ಆದ್ದರಿಂದ ಈ ಒಂದು ಚೆಕ್ ಕೊಡುವಾಗ ಜಿಲ್ಲಾ ಧಿಕಾರಿಗಳು ಫೋಟೋ ಹೊಡೆಸಿಕೊಳ್ಳುತ್ತಾರೆ. ಮನೆಗಳನ್ನು ಕಟ್ಟಿಸಿ ಕೊಟ್ಟು ಅವರನ್ನು ಪುನರ್ ವಸತಿ ಮಾಡುವ ಕೆಲಸದಲ್ಲಿ ಅವರು ವಿಫಲರಾಗಿದ್ದಾರೆ.

ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ, ಅತ್ಯಂತ ತುರ್ತಾಗಿ ಈ ಒಂದು ಪುನರ್ ವಸತಿ ನಮಗೆ ಆಗಬೇಕು. ಆ ವ್ಯವಸ್ಥೆಗೆ ಇವತ್ತೆ ಆದೇಶ ಕೊಡಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರಯವರು : ಶ್ರೀ ಸಿ. ಬೈರೇಗೌಡ

ಶ್ರೀ ಸಿ. ಬೈರೇ ಗೌಡ : ಮುಖ್ಯಮಂತ್ರಿಗಳಿಲ್ಲ, ಅವರು ಬಂದ ಮೇಲೆ ಕೇಳುತ್ತೇನೆ ಅವರು ಬರಲಿ. ಬಂದ ಮೇಲೆ ಕೇಳೋಣ.

ಉಪಾಧ್ಯಕ್ಷರಯವರು : ಎಷ್ಟು ಜನ ಮಿನಿಸ್ಟರ್ಸ್ ಇದ್ದಾರಲ್ಲರಿ?

ಶ್ರೀ ಸಿ ಬೈರೇಗೌಡ : ಮಾನ್ಯ ಉಪಾಧ್ಯಕ್ಷರಯವರೆ, ಇಡೀ ದೇಶಾದ್ಯಂತ ಇಟ್ಟಿಗೆ ಮೆರವಣಿಗೆ ಆಯಿತು. ಕಲ್ಲು ಮೆರವಣಿಗೆ ಆಯಿತು. ಚಪ್ಪಲಿ ಮೆರವಣಿಗೆ ಆಯಿತು, ಆ ರಥ, ಈ ರಥ ಎಂದು ಎಲ್ಲಾ ರಥಗಳ ಮೆರವಣಿಗೆ ಕೂಡ

ಆಯಿತು. ಈ ಸಿವದಲ್ಲಿ ಕೋಟ್ಯಾಂತರ ರೂಪಾಯಿ ಹಣ ವಸೂಲಾಗಿದೆ. ಯಡಿಯೂರಪ್ಪನವರನ್ನು ಕೇಳಿದರೆ, ಇಲ್ಲ ನಾವು ಮಾಡಿದ್ದಲ್ಲ ವಿಶ್ವಹಿಂದೂಪರಿಷತ್ ನವರು ಮಾಡಿರತಕ್ಕಂಥಾದ್ದು ಆರ್. ಎಸ್.ಎಸ್.ನವರು ಮಾಡಿರತಕ್ಕಂಥಾದ್ದು ಎಂದು ಹೇಳುತ್ತಾರೆ. ಈಗ ನಾನು ಸರ್ಕಾರದಿಂದ ಉತ್ತರ ಬಯಸಿರತಕ್ಕಂಥಾದ್ದೇನೆಂದರೆ ಈಗ ಮೆರವಣಿಗೆಗಳಿಗೆ ಕಾರಣಕರ್ತರಾಗಿರತಕ್ಕಂಥ ಸಂಸ್ಥೆಗಳನ್ನು ತಾವು ನಿಷೇಧ ಮಾಡಿದ್ದೀರಿ. ಅವರ ಕಛೇರಿಗಳಿಗೆ ಬೀಗಮುದ್ರೆ ಹಾಕಿದ್ದೀರಿ. ಅವರ ಬ್ಯಾಂಕ್ ಅಕೌಂಟ್ ನ್ನೆಲ್ಲಾ ತಾವು ವಶಪಡಿಸಿಕೊಂಡಿದ್ದೀರಿ. ಇವತ್ತು ಸರ್ಕಾರದ ವಶದಲ್ಲಿದೆ. ಅವರ ವಿಶಿಷ್ಟವೂ ಕೂಡ ಸರ್ಕಾರದ ವಶದಲ್ಲಿ ಇದೆ. ಆದ್ದರಿಂದ......

ಉಪಾಧ್ಯಕ್ಷಣಿಯವರು : ತಾವು ಡಿಸ್ಕಷನ್ ನಲ್ಲಿ ಪಾರ್ಟಿಸಿಪೇಟ್ ಮಾಡಿದ್ದೀರಿ.

ಶ್ರೀ ಸಿ. ಬೈರೇಗೌಡ : ನಾನು ಮಾಡಿಲ್ಲಲ. ನಾನು ಮಾತನಾಡಿಲ್ಲ, ಬೇಕಾದರೆ ತಾವು ರೆಕಾರ್ಡ್ ತರಿಸಿ ನೋಡಿ.

ಉಪಾಧ್ಯಕ್ಷಣಿಯವರು : ರಾಮಯ್ಯನವರು ಮಾತಾನಾಡಿದ್ದಾರೆ.

ಶ್ರೀ ಸಿ. ಬೈರೇಗೌಡ : ಹೌದು ರಾಮಯ್ಯ ನವರು ಮಾತಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು, ಇವರ ಪಕ್ಷದವರಲ್ಲವೆಂದು ಹೇಳುತ್ತಾರೆ.

ಉಪಾಧ್ಯಾಕ್ಷಣಿಯವರು : ಅವರು ಆಗಲೇ ಉತ್ತರ ಕೊಟ್ಟಿದ್ದಾರೆ. ಆ ಉತ್ತರದ ಮೇಲೆ ಏನಾದರೂ ತಾವು ಕೇಳುವುದಿದ್ದರೆ ಕೇಳಿ.

ಶ್ರೀ ಸಿ. ಬೈರೇಗೌಡ : ಇವತ್ತು ಸಂಸ್ಥೆಗಳ ಎಲ್ಲಾ ಹಣಕಾಸಿನ ವ್ಯವಸ್ಥೆ ಮತ್ತೊಂದು ಎಲ್ಲವೂ ಸರ್ಕಾರದ ಕೈ ವಶದಲ್ಲಿದೆ. ನೀವು ಅದನ್ನು ತೆಗಿಸಬೇಕು. ಎಷ್ಟು ಹಣ ವಸೂಲಾಗಿದೆ, ಈ ಚಪ್ಪಲಿ ಮೆರವಣಿಗೆ, ಕಲ್ಲು ಮೆರವಣಿಗೆ, ಇಟ್ಟಿಗೆ ಮೆರವಣಿಗೆ, ಈ ಮೆರವಣಿಗೆ, ಆ ಮೆರೆವರಣಿಗೆಯಿಂದ ಎಷ್ಟು ಹಣ ಈ ಕರ್ನಾಟಕ ರಾಜ್ಯದಲ್ಲಿ ವಸೂಲಾಗಿದೆ? ಅವರ ಬ್ಯಾಂಕ್ ಖಾತೆಗಳಲ್ಲಿ ಎಷ್ಟು ಹಣ ಇದೆ? ಏಕೆಂದರೆ ಅವರ ಬ್ಯಾಂಕ್ ಅಕೌಂಟ್‌ನ್ನೂ ಕೂಡ ಫ್ರೀಸ್ ಮಾಡಿದ್ದೀರಿ. ನಿಮ್ಮ ವಶದಲ್ಲಿ ಇಪತ್ತಿನ ದಿವಸ ಇದೆ. ಅವರ ಎಲ್ಲಾ ಲೆಕ್ಕಗಳು ನಿಮ್ಮ ಕೈಯಲ್ಲಿದೆ. ಇದು ಹೊರಗಡೆ ಬರಬೇಕಾಗಿದೆ. ಈ ಹಣ ಎಲ್ಲಿದೆ? ಎಲ್ಲಿ ಹೋಯಿತು. ಏನಾಯಿತು. ಅನ್ನತಕ್ಕಂಥಾದ್ದರ ಬಗ್ಗೆ ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ಅವರು ಜಾತ್ಯಾತೀತತೆಯನ್ನು ಕಾಪಾಡಿಕೊಳ್ಳಬೇಕಾಗಿದ್ದರೆ, ಈ ಸಂಸ್ಥೆಗಳು ಮಾಡಿರತಕ್ಕಂಥಾದ್ದು ಏನು ಎತ್ತ ಎಂದು ನಮಗೆ ಗೊತ್ತಾಗಬೇಕಾಗಿದೆ. ಆದ್ದರಿಂದ ಎಷ್ಟು ಹಣ ವಸೂಲಾಯಿತು? ಈ ಯಾತ್ರೆಗಳು ಪ್ರಾರಂಭ ಆದಾಗಿನಿಂದ ಎಷ್ಟು ಹಣ ವಸೂಲಾಗಿದೆ? ಯಾವ ಯಾವ ಖಾತೆಯಲ್ಲಿ ಎಷ್ಟೆಷ್ಟು ಹಣ ಇದೆ? ಯಾವ ರೀತಿ ಖರ್ಚಾಯಿತು? ಯಾವ ರೀತ ಖರ್ಚು ಮಾಡಿದ್ದಾರೆ? ಈ ಸಂಸ್ಥೆಗಳಲ್ಲಿ ಎಷ್ಟು ಹಣ ಇದೆ ಎನ್ನತಕ್ಕಂಥಾದ್ದನ್ನು ತಿಳಿಸಬೇಕೆಂದು ಮಾನ್ಯ ಅಧ್ಯಕ್ಷಣಿಯವರ ಮೂಲಕ ವಿನಂತಿಸುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಉಪಾಧ್ಯಕ್ಷಣಿಯವರೆ, ಪೋಲೀಸ್ ಇಲಾಖೆಯಲ್ಲಿ ಸಾಕಷ್ಟು ಪೋಲೀಸ್ ಗಳ ಸಂಖ್ಯೆ ಇದ್ದಿದ್ದರೆ ಇಂತಹ ಪ್ರಕೋಪಕ್ಕೆ ಹೋಗುವಂಥ ಸಂದರ್ಭ ಇರಲಿಲ್ಲ, ಪೋಲೀಸಿನವರು ಶಕ್ತಿ ಮೀರಿ

ಪ್ರಯತ್ನ ಪಟ್ಟಿದ್ದಾರೆ. ಆದರೆ, 30-35 ಗ್ರಾಮಗಳಿಗೆ ಒಂದೇ ಪೋಲೀಸ್ ಠಾಣೆ ಇದ್ದರೆ, ಹಿಂದಿನ ಕಾಲದ 9 ಪೋಲೀಸೇ ಅಲ್ಲಿ ಇದ್ದರೆ ಎಲ್ಲಾ ಕಡೆಯಲ್ಲಿ ಕೋಮು ಗಲಭೆಯಾಗುವಾಗ, ನಿಜವಾಗಿ ಜನರ ರಕ್ಷಣೆ ಮಾಡಲಿಕ್ಕೆ ಎಷ್ಟು ಮಾತ್ರಕ್ಕೂ ಇದು ಸಾಧ್ಯವಾಗುವುದಿಲ್ಲ, ಆದ್ದರಿಂದ ಈ ಪೋಲೀಸರ ಪುನರ್ ಸಂಘಟನೆಯಾಗಬೇಕು. ಈ ಪೋಲೀಸ್ ಠಾಣೆಗಳ ಸಂಖ್ಯೆ ಹೆಚ್ಚು ಮಾಡಬೇಕು, ಅವರಲ್ಲಿ ಇರುವಂಥ ಸಿಬ್ಬಂದಿ ವರ್ಗದವರ ಸಂಖ್ಯೆಯನ್ನು ಸಹ ಹೆಚ್ಚು ಮಾಡುವುದಕ್ಕೆ ಸೂಕ್ತ ಕ್ರಮ ಕೂಡಲೇ ಕೈಗೊಳ್ಳಬೇಕಾಗುತ್ತದೆ. ಒಂದು ಕಾಲದಲ್ಲಿ ಪೋಲೀಸ್‌ರನ್ನು ನೋಡಿದ ಕೂಡಲೇ ಹೆದರುವ ಕಾಲ ಇತ್ತು. ಈಗ ಪೋಲೀಸರಿಗೇ ಪೆಟ್ಟು ಹೊಡೆಯುವಂಥ ಕಾಲ ಇದಗಿರುವಾಗ ನಾವು ಹಿಂದಿನ ಕಾಲದ ಸಂಖ್ಯೆಯಲ್ಲೇ ಇದ್ದರೆ ನಿಜವಾಗಿ ನಮಗೆ ಊರಿನಲ್ಲಿ ರಕ್ಷಣೆ ಖಂಡಿತಾ ಇರಲಿಕ್ಕೆ ಸಾಧ್ಯವಿಲ್ಲ, ಆದ್ದರಿಂದ, ಮುಖ್ಯ ಮಂತ್ರಿಗಳು ಈ ಪೋಲೀಸ್ ಸಂಖ್ಯೆ ಬಲಪಡಿಸುವಿಕೆಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಭಾಧ್ಯಕ್ಷಿಣಿಯವರೇ ನಾನು ಸದನದಲ್ಲಿ ಭಾಷಣ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಇರಲಿಲ್ಲ, ಆದರೆ ನಿನ್ನ ಭಾಷಣವನ್ನು ಓದಿದ್ದೇನೆ ಎಂದು ಅವರು ಹೇಳುತ್ತಿದ್ದಾರೆ. ಅವರು ಓದುವುದಕ್ಕೂ ಇಲ್ಲಿ ಮಾತನಾಡುವುದನ್ನು ಕೇಳುವುದಕ್ಕೂ ವ್ಯತ್ಯಾಸವಿದೆ.

ಉಪಾಧ್ಯಕ್ಷಿಣಿಯವರು : ತಾವುಗಳು ಪುನಃ ಭಾಷಣ ಮಾಡುತ್ತೀರಾ? ಮಾನ್ಯ ಮುಖ್ಯ ಮಂತ್ರಿಯವರು ಏನು ಉತ್ತರ ಹೇಳಿದ್ದಾರೆ, ಅವರ ಮೇಲೆ ಒಂದೆರಡು ಪ್ರಶ್ನೆಗಳನ್ನು ಕೇಳಿ.

ಶ್ರೀ ವಾಟಳ್ ನಾಗರಾಜ್ : ನಾನು ನನ್ನ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಯವರನ್ನು ಸರಕಾರವನ್ನು ಏನು ಒತ್ತಾಯ ಮಾಡಿದ್ದೇವೆ ಅಂದರೆ, ಮೊದಲನೆಯದಾಗಿ ಅವರು ಈ ಸಭೆಯನ್ನು ಕರೆದಿದ್ದಕ್ಕಾಗಿ ನಾವೆಲ್ಲರೂ ಅವರನ್ನು ಅಭಿನಂದಿಸಿದ್ದೇವೆ. ಅವರು ಬಹಳ ಪ್ರಾಮಾಣಿಕವಾಗಿ ವಿರೋಧಪಕ್ಷದವರನ್ನು ಕರೆದು ಚರ್ಚೆ ಮಾಡಿದ್ದಾರೆ, ಇಲ್ಲಿ ಸುದೀರ್ಘವಾಗಿ ಚರ್ಚೆಗೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ, ಚರ್ಚೆ ನಡೆದಿದೆ. ಇಲ್ಲಿ ಮುಖ್ಯಮಂತ್ರಿಯವರು ಕೊಟ್ಟಂಥ ಉತ್ತರ ಹಾಗೂ ಮೊದಲು ಕೊಟ್ಟಂಥ ಹೇಳಿಕೆ ಎರಡಕ್ಕೂ ಶಕ್ತಿ ಇಲ್ಲ, ಪ್ರಾರಂಭದಲ್ಲಿ ನಾಲ್ಕು ಪುಟಗಳ ಹೇಳಿಕೆಯನ್ನು ಏನು ಕೊಟ್ಟಿದ್ದಾರೆ, ಅದು ಪೋಲೀಸರ ಚಾರ್ಜ್‌ಶೀಟ್ ಇದ್ದಹಾಗೆ ಇತ್ತು. ಈಗಿನ ಮುಖ್ಯ ಮಂತ್ರಿಗಳ ಉತ್ತರದಲ್ಲಿ ಮೊದಲಿನ ಆ ಒಂದು ಶಕ್ತಿಯನ್ನು ಕಂಡ ಹಾಗೆ ಆಗಲಿಲ್ಲ, ಮಾನ್ಯ ವೀರಪ್ಪಮೊಯಿಲಿಯವರು ಯಾವಾಗಲೂ ಒಳ್ಳೆಯ ಧಾಟಿಯಲ್ಲಿ ವಿಷಯವನ್ನು ಎಳೆ ಎಳೆಯಾಗಿ ಬಿಡಿಸಿ ಚೆನ್ನಾಗಿ ಹೇಳಿದ್ದನ್ನು ನಾವೆಲ್ಲರೂ ಈ ಸಭೆಯಲ್ಲಿ ಕೇಳಿದ್ದೇವೆ. ಆದರೆ ಅವರು ಇವತ್ತು ಉತ್ತರ ಕೊಡುವಾಗ ಒಂದು ರೀತಿಯ ಹಿಡಿತ ಇದ್ದ ಹಾಗೆ ಕಂಡು ಬಂತು. ಪದಪದಗಳಿಗೂ ಅವರು ಒದ್ದಾಡುತ್ತಾ ಇದ್ದರು. ಯಾವುದೋ ಕೇಸ್‌ನ್ನು ಎಲ್ಲಿಗೋ ತೆಗೆದುಕೊಂಡು ಹೋಗಿ ಏನೋ ಮಾಡುತ್ತಾ ಇದ್ದರು. ಅವರ ಕಷ್ಟ ನಮಗೆ ಅರ್ಥವಾಗಿದೆ. ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ನಡೆದಿರತಕ್ಕಂಥ ಸಮಗ್ರ ಗೋಲೀಬಾರ್ ಬಗ್ಗೆ ನ್ಯಾಯಾಂಗ

ತನಿಖೆಯಾಗಬೇಕು. ಮತ್ತು ಇಡೀ ರಾಜ್ಯದಲ್ಲಿ ನಡೆದಿರತಕ್ಕಂಥ ಘಟನೆಗಳ ಬಗ್ಗೆ ಸರಕಾರದವರು ಶ್ವೇತಪತ್ರವನ್ನು ಹೊರಡಿಸಬೇಕು ಎಂದು ನಾನು ಒತ್ತಾಯ ಮಾಡಿದ್ದೇನೆ. ಇದರ ಜೊತೆಗೆ ಎಲ್ಲೆಲ್ಲಿ ಅಶಾಂತಿಯ ವಾತಾವರಣ ಪ್ರದೇಶಗಳು ಎಂದು ಸರಕಾರದವರು ಗುರುತಿಸಿದ್ದಾರೆ, ಯಾವ ತಾಲ್ಲೂಕುಗಳು, ಯಾವ ಜಿಲ್ಲೆಗಳು ಎಂದು ಗುರುತಿಸಿದ್ದಾರೆ, ಅದರಲ್ಲಿ ನಮ್ಮ ಕ್ಷೇತ್ರವೂ ಬರುತ್ತದೆ. ನಾನು ಅತ್ಯಂತ ಹೆಮ್ಮೆ ಮತ್ತು ಅಭಿಮಾನದಿಂದ ಹೇಳುತ್ತಾ ಇದ್ದೇನೆ, ಅಲ್ಲಿ ಈ ಸಾರಿ ಶಾಂತಿಯ ವಾತಾವರಣವನ್ನು ಕಾಪಾಡುವುದಕ್ಕೆ ಅಲ್ಲಿನ ಅಧಿಕಾರಿಗಳು, ಪೋಲೀಸ್ ಅಧಿಕಾರಿಗಳು, ಮತ್ತು ನಾನು, ಸರಿಯಾದಂಥ ಮತ್ತು ಸಮಗ್ರವಾದಂಥ ಕ್ರಮಗಳನ್ನು ತೆಗೆದುಕೊಂಡು ಶಾಂತಿ ಸ್ಥಾಪನೆ ಮಾಡುವುದಕ್ಕೆ ಶ್ರಮಿಸಿದ್ದೇನೆ. ಜನರ ಪೂರ್ಣ ಸಹಕಾರವೂ ದೊರಕಿತು. ನಮ್ಮಲ್ಲಿ ಯಾವುದೇ ಘರ್ಷಣೆಗಳು ನಡೆಯಲ್ಲ, ಹೀಗೆ ತಮ್ಮ ಕ್ಷೇತ್ರದಲ್ಲಿ ಶಾಂತಿಯನ್ನು ಪೂರ್ಣವಾಗಿ ಕಾಪಾಡಿದವರಿಗೆ ಸರಕಾರದವರು ಅಭಿವೃದ್ಧಿ ಕೆಲಸಗಳಿಗಾಗಿ 25 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಕೇಳಿಕೊಂಡಿದ್ದೆ.

ಅದಕ್ಕೆ ಆಗ ಇಲ್ಲಿ ಬಹಳ ಜನರು ನಕ್ಕರು. ಆಯಿತು, ನೀವು ಕೊಡುವುದು ಬೇಡ. ಎಲ್ಲೆಲ್ಲಿ ಶಾಂತಿ ಸೌಹಾರ್ದತೆಯನ್ನು ಕಾಪಾಡಿಕೊಂಡು ಬಂದ ಕ್ಷೇತ್ರಗಳು ಏನು ಇವೆ, ಅವುಗಳಿಗೆ ವಿಶೇಷವಾದಂಥ ಸವಲತ್ತುಗಳನ್ನಾದರೂ ಕೊಡಿ. ಅಭಿವೃದ್ಧಿಕಾರ್ಯ ಯೋಜನೆಗಳನ್ನು ಹೆಚ್ಚಿಗೆ ಕೊಡಿ. ಆ ಕೆಲಸವನ್ನಾದರೂ ತಾವು ಮಾಡಬೇಕಲ್ಲ ಏಕೆಂದರೆ ಯಾವ ಕ್ಷೇತ್ರಗಳಲ್ಲಿ ಶಾಂತಿ ಸ್ಥಾಪನೆಗೆ ಒಂದು ಒಳ್ಳೆಯ ವಾತಾವರಣ ನಿರ್ಮಾಣವಾಗಿದೆ, ಆ ಕ್ಷೇತ್ರಗಳಿಗೆ, ತಾಲ್ಲೂಕುಗಳಿಗೆ ಕನಿಷ್ಠ ಒಂದು ಕೋಟಿ ರೂಪಾಯಿಗಳ ಅಭಿವೃದ್ಧಿ ಕಾಮಗಾರಿಗಳನ್ನು ಮಂಜೂರು ಮಾಡಬೇಕು. ಇದು ನನ್ನ ಕಳಕಳಿಯ ಮನವಿಯೂ ಆಗಿದೆ. ನಮ್ಮ ಚಾಮರಾಜ ನಗರ ಪ್ರದೇಶದಲ್ಲಿ ಯಾವಾಗಲೂ ಅಲ್ಲಲ್ಲಿ ಗೋಲೀಬಾರ್, ಘರ್ಷಣೆಗಳು ಆಗುತ್ತಾ ಇದ್ದುವು. ಜನರು ಸಾಯುತ್ತಾ ಇದ್ದರು. ಆದರೆ ಈ ಸಾರಿ ಅಲ್ಲಿ ಗಲಭೆ ನಡೆಯಲು ಅಲ್ಲಿನ ಅಧಿಕಾರಿಗಳು, ಜನರು ಸೇರಿ ಬಿಡಲಿಲ್ಲ, ಶಾಂತಿಯನ್ನು ಕಾಪಾಡಿಕೊಂಡು ಬಂದರು. ನಾನು ಅಲ್ಲಿನ ಜನತೆಗೆ ಮತ್ತು ಅಧಿಕಾರಿಗಳಿಗೆ ಸದನದ ಮೂಲಕ ಅಭಿನಂದನೆಗಳನ್ನು ಸಲ್ಲಿಸಿದ್ದೇನೆ. ಆದರೆ ತಮ್ಮ ಹೇಳಿಕೆಯಲ್ಲಿ ಆ ಒಂದು ಅಭಿನಂದನೆ ಬರಬಹುದೆಂದು ನಾನು ನಿರೀಕ್ಷೆ ಮಾಡಿದ್ದೆ, ಅದು ಬರಲಿಲ್ಲ. ನಿಮಗೆ ಹಾಗೆ ಅಭಿನಂದನೆಗಳನ್ನು ಹೇಳಬಾರದು ಎಂಬ ಉದ್ದೇಶವೂ ಇರಲಿಕ್ಕಿರಲಿಲ್ಲ. ನಾನು ತಮ್ಮಲ್ಲಿ ಬಹಳ ಪ್ರಾಮಾಣಿಕವಾಗಿ ಒತ್ತಾಯ ಮಾಡುತ್ತಾ ಇದ್ದೇನೆ. ತಾವು ಉತ್ತರ ಕೊಡುವಾಗ ಹೇಳಬೇಕು. ಈ ಕ್ಷೇತ್ರಗಳಿಗೆ ಒಂದು ಕೋಟಿ ರೂಪಾಯಿಗಳ ಕಾಮಗಾರಿಗಳನ್ನು ಕೇಳಿದ್ದೇನೆ ನಾನೂ, ನೀವೂ ಸ್ವಲ್ಪ ರಾಜಿಮಾಡಿಕೊಂಡು ನೀವು ಎಷ್ಟು ಕೊಟ್ಟರೂ ಚಿಂತೆಯಿಲ್ಲ, ಅಂತೂ ನೀವು ಕೊಡಬೇಕು ಎನ್ನುವುದು ಒಂದು ಮನವಿ ಮುಂದೆ ನಮ್ಮ ರಾಜ್ಯದಲ್ಲಿ ಒಂದು ಸೌಹಾರ್ದಯುತ ವಾತಾವರಣ ಮೂಡಿ ಬರಬೇಕಾದರೆ 2-3 ಕಾರ್ಯಕ್ರಮಗಳನ್ನು ಹೇಳಿದ್ದೀರಿ. ಒಂದು ಸೌಹಾರ್ದಸೌಧ ಇದು ಕಾಲಕಾಲಕ್ಕೆ ಇಂಥ ಗಲಭೆಗಳು ಆಗತಕ್ಕಂಥ ಸಂದರ್ಭದಲ್ಲಿ ಮಾತ್ರ ಹೇಳತಕ್ಕಂಥ ಮಾತುಗಳು ಆಗಬಾರದು. ಸೌಹಾರ್ದಸೌಧಕ್ಕಿಂತಲೂ ಹೆಚ್ಚಾಗಿ ಹಿಂದಿನ ಸರಕಾರದವರು ಕೂಡ ಇಡೀ ರಾಜ್ಯದ ಮಟ್ಟದಲ್ಲಿ ಸೌಹಾರ್ದಯುತ ವಾತಾವರಣ ನಿರ್ಮಾಣವಾಗುವುದಕ್ಕೆ ಒಂದು ಸಮಿತಿಯನ್ನು ಮಾಡಿದ್ದರು. ಎಲ್ಲೋ ವರ್ಷಕ್ಕೆ ಒಂದು ಸಾರಿ ಸಮಿತಿಯನ್ನು

ಕರೆಯುವುದು, ಎಲ್ಲಾ ವರ್ಗ ಮತ್ತು ಧರ್ಮದ ಮುಖಂಡರುಗಳನ್ನು ಒಳಗೊಂಡ ಸೌಹಾರ್ದ ಸಮಿತಿಯನ್ನು ರಚನೆ ಕೂಡ ಮಾಡಿದ್ದರು. ಅದು ಇನ್ನೂ ಇರಬೇಕು. ನೂರು ಜನರ ಒಂದು ಪಟ್ಟಿ ಇದ್ದು ನಾನು ಕೂಡ 3ನೇ ಮಹಡಿಯಲ್ಲಿ ಆ ಒಂದು ಸಭೆಯಲ್ಲಿ ಭಾಗವಹಿಸಿದ್ದೆ. ಅದರ ಬಹುಶಃ ಆ ಸಭೆ ಕರೆದು ಆರು ತಿಂಗಳು ಅಥವಾ ಒಂದು ವರ್ಷ ಆಯಿತು. ಈಗ ಅದರ ಪರಿಸ್ಥಿತಿ ಏನಾಯಿತು ಎಂಬುದು ಗೊತ್ತಿಲ್ಲ, ಇದು ಕೂಡ ಹಾಗೆ ಆಗಬಾರದು. ಮತ್ತೊಂದು ವಿಚಾರ ಏನೆಂದರೆ, ಇದಕ್ಕಾಗಿ ಒಂದು ಪೋಲೀಸ್ ನಿರ್ಮಾಣ ನನಗನ್ನಿಸುತ್ತದೆ, ಇದು ನಿಮಗೆ ಸರಿಹೋಗುತ್ತದೆಯೇ? ಈಗ ನಮ್ಮಲ್ಲಿರುವ ಪಡೆ ಏನಾಗಿದೆ? ನಮ್ಮ ಪೋಲಿಸರಿಗೆ ಶಕ್ತಿ ಇಲ್ಲವೋ, ಇದಕ್ಕಾಗಿ ಹೊಸದಾಗಿ ಪಡೆಯನ್ನು ನೀವು ಕೊಡುತ್ತೀರಿ. ಹಾಗೆ ಮಾಡಿ ಅದಕ್ಕೊಬ್ಬರು ಅಧಿಕಾರಿಯನ್ನು ನೇಮಕ ಮಾಡಿದರೆ ಇದರಿಂದ ಪ್ರಯೋಜನ ಇಲ್ಲವೆಂದು ನನಗನ್ನಿಸುತ್ತದೆ. ಈಗ ನಮ್ಮಲ್ಲೇ ಅನೇಕ ಜನ ದಕ್ಷ ಅಧಿಕಾರಿಗಳಿದ್ದಾರೆ. ಕೆಲವು ಕಡೆ ದೋಷವಾಗಿದೆ. ಅದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಪಡೆಯನ್ನು ಬದಲು ಈಗಿರುವ ಪೋಲಿಸ್ ವ್ಯವಸ್ಥೆಗೆ ಹೆಚ್ಚಿನ ಶಕ್ತಿ ಕೊಟ್ಟು ಆ ವ್ಯವಸ್ಥೆಯನ್ನು ಸರಿಪಡಿಸುವುದಾದರೆ ನಮ್ಮಲ್ಲಿರುವ ಪೋಲಿಸ್ ಅಧಿಕಾರವರ್ಗ ಸಾಕಾಗುತ್ತವೆ ಎಂದು ನನಗನ್ನಿಸುತ್ತದೆ. ಮೈಸೂರಿನದು ಒಂದೇ ಪ್ರಶ್ನೆ. ಮೈಸೂರು ಪೋಲಿಸ್ ಕಮೀಷನರು ಇಡೀ ಮೈಸೂರಿನ ಎಲ್ಲಾ ಘಟನೆಗಳಿಗೆ ಅವರೇ ಕಾರಣ ಎಂದು ರಾತ್ರೋರಾತ್ರಿ 12 ಗಂಟೆಯಲ್ಲಿ ಅವರನ್ನು ಬದಲಾವಣೆ ಮಾಡಿದ್ದೀರಿ. ದಯವಿಟ್ಟು ಈ ಬದಲಾವಣೆ ಮಾಡಿರುವುದರಿಂದ ನಿಮಗೆ ಸಂತೋಷವಾಗಿದೆಯೇ? ಇದೆಲ್ಲಕ್ಕೂ ಆ ಪೋಲಿಸ್ ಅಧಿಕಾರಿಯೆ ಕಾರಣವೇ? ಎರಡನೆಯದು ಪತ್ರಿಕೆಯಲ್ಲಿ ಬಂದಿದೆ, ಜಿಲ್ಲಾಧಿಕಾರಿಗಳಿಗೂ ಪೋಲಿಸ್ ಅಧಿಕಾರಿಗಳಿಗೂ ಸಂಬಂಧ ಇಲ್ಲವೆಂದು. ಈಗ ತಮ್ಮ ಪಕ್ಷದ ಹರ್ಷ ಕುಮಾರಗೌಡರು ಹೇಳಿದರು, ಜಿಲ್ಲಾಧಿಕಾರಿಗಳು ನಮ್ಮ ಇಡೀ ಶಾಸಕರನ್ನೆಲ್ಲಾ ಕಡೆಗಾಣಿಸಿ ಪರಿಹಾರದ ಹಣ ಚೆಕ್ ಅವರೇ ಕೊಡುವುದು ಅವರೇ ರಸ್ತೆಗಳಿಗೆ ಹೋಗಿ ಶಾಂತಿ ಸಮಿತಿ ಸಭೆ ಮಾಡುವುದು, ಒಂದು ರೀತಿ ಸರ್ವಾಧಿಕಾರಿ ಮನೋಭಾವನೆ ತೋರಿಸುವುದಾದರೆ ನಮ್ಮ ಪರಿಸ್ಥಿತಿ ಏನು? ಏಕೆ ನಾವು ಶಾಸಕರಾಗಿರಬೇಕು. ಒಂದು ಕಣ್ಣಿಗೆ ಸುಣ್ಣ, ಮತ್ತೊಂದು ಕಣ್ಣಿಗೆ ಬೇರೆ ನೋಡುವಂತಹ ರೀತಿ ನಿಮ್ಮ ಆಡಳಿತ ಆಗಬಾರದು ಎಂದು ಹೇಳುತ್ತೇನೆ. ಪೋಲಿಸ್ ಕಮೀಶನರ್‌ನ್ನು ಬದಲಾವಣೆ ಮಾಡಿದಾಗಲೇ ಜಿಲ್ಲಾಧಿಕಾರಿಗಳನ್ನೂ ಬದಲಾವಣೆ ಮಾಡಬೇಕಾಗಿತ್ತು, ಜಿಲ್ಲಾಧಿಕಾರಿಗಳ ಬಗ್ಗೆ ಇಡೀ ಜಿಲ್ಲೆಯ ಅನೇಕ ಶಾಸಕರೂ ತಮಗೆ ಸಹಿ ಹಾಕಿ ಕೊಟ್ಟಿದ್ದಾರೆ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಉಪಾಧ್ಯಕ್ಷರೇ, ಮುಖ್ಯಮಂತ್ರಿಗಳು ಸದನಕ್ಕೆ ಪ್ರಾರಂಭದಲ್ಲಿ ಏನು ಸ್ಟೇಟ್‌ಮೆಂಟ್ ಕೊಟ್ಟರು ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ನನ್ನ ಭಾಷಣದ ಪ್ರಾರಂಭದಲ್ಲಿ ಬಹಳ ಕಳಕಳಿಯಿಂದ ಕೇಳಿಕೊಂಡ ಕೋಮುಗಲಭೆಗೆ ಸಂಬಂಧಪಟ್ಟಂತಹ ನಾನು ವಿಭಾಗಗಳಲ್ಲಿ ಹಿಂಸಾಚಾರ ನಡೆದಿದೆ ಎನ್ನುವ ಲಿಸ್ಟ್ ಏನು ಕೊಟ್ಟರು ಅದರಲ್ಲಿ ಶಿವಾಜಿನಗರ ಎಂದು ಕೂಡ ಅವರು ಹೇಳಿದರು. ಆಗ ನಾನು ಹೇಳಿದೆ, ಶಿವಾಜಿನಗರದಲ್ಲಿ ಕೋಮುಗಲಭೆ ಆಗಲಿಲ್ಲ.

ಕೋಮುವಾರು ಗಲಭೆಗೆ ಸಂಬಂಧಪಟ್ಟಂತೆ ಯಾವುದೇ ಹಿಂಸಾಚಾರದ ಆಗಲಿಲ್ಲ. ಆದ್ದರಿಂದ ಶಿವಾಜಿನಗರವನ್ನು ಆ ಲಿಸ್ಟ್‌ನಲ್ಲಿ ಸೇರಿಸುವುದು ಸೂಕ್ತವಲ್ಲ, ಅದನ್ನು ಕೈಬಿಡಬೇಕೆಂದು ಕೇಳಿಕೊಂಡೆ. ಮತ್ತೆ ಆ ಸಂದರ್ಭದಲ್ಲಿ ನಾನು ಒಂದು ಮಾತು ಹೇಳಿದೆ ಅಲ್ಲೇನಾದರೂ ಹೆಚ್ಚು ಗಲಭೆ ಆಗಿದ್ದರೆ ಹೊರಗಡೆಯಿಂದ ಬಂದ ಕೆಲವು ದುಷ್ಕರ್ಮಿಗಳಿಂದ ಆಗಿದೆ, ಮತ್ತು ಹೆಚ್ಚಾಗಿ ಬೇರೆ ಕಡೆಗಳಿಂದ ಬಹಳ ಪೋಲಿಸ್ ಸಿಬ್ಬಂದಿಯಿಂದ ಅಲ್ಲಿನ ನಾಗರೀಕರ ವಿರುದ್ಧ ಸಾಕಷ್ಟು ಹಾವಳಿಯಾಗಿದೆ. ಆದರಿಂದ ಸಾಕಷ್ಟು ನಷ್ಟವಾಗಿದೆ ಎಂದು ಹೇಳಿದೆ. ಅಲ್ಲಿನ ನಾಗರೀಕರು ಇವತ್ತು ಕೂಡ ಆ ಮಾತು ಹೇಳುತ್ತಾರೆ. ಈ ವಿಷಯವನ್ನೂ ಅವರು ಗಮನಕ್ಕೆ ತೆಗೆದುಕೊಳ್ಳಬೇಕು. ಮತ್ತೊಂದು ವಿಷಯ ಹೇಳಿದ್ದೇ. ಇದು ಬಹಳ ಮುಖ್ಯವಾದದ್ದು, ಮೂಲಭೂತವಾದದ್ದು. ಈ ರಾಜ್ಯದಲ್ಲಿ ಕೋಮುಗಲಭೆ ಬಹಳ ಕಡಿಮೆ ಅಂತರದಲ್ಲಿ ಇವತ್ತೇನಾಗಿದೆ ಎಂಬ ಭಾವನೆ ಇದರೆ, ಬಹಳ ಹೆಚ್ಚು ಅಂತರದಲ್ಲಿ ಆಗಲಿಲ್ಲ ಎಂದರೆ ಅದಕ್ಕೆ ಕೋಮುಸೌಹಾರ್ದದಲ್ಲಿ ಪೂರ್ಣ ನಂಬಿಕೆ ಇರುವ ಜನಸಮೂಹ ಕಾರಣ. ಸೆಕ್ಯುಲರಿಸಂ ಫೋರ್ಸಸ್ ಶೇಕಡ 90ಕ್ಕಿಂತ ಜಾಸ್ತಿ ಇದ್ದಾರೆ ಅಂತಹವರ ವಿಷಯದಲ್ಲಿ ನಮ್ಮ ಅಭಿನಂದನೆಯನ್ನು ಅರ್ಪಿಸುವುದು ನಮ್ಮ ಕರ್ತವ್ಯವಾಗಿದೆ ಅದನ್ನು ಮಾನ್ಯ ಮುಖ್ಯಮಂತ್ರಿಗಳು ಆ ಜನರ ಮನಸ್ಸಿಗೆ ಸಮಾಧಾನವಾಗುವ ರೀತಿಯಲ್ಲಿ ಅವರ ಸಹಕಾರವನ್ನು ಭವಿಷ್ಯದಲ್ಲಿ ಪೂರ್ಣವಾಗಿ ತೆಗೆದುಕೊಳ್ಳುವುದಕ್ಕಾಗಿ ಈ ರಾಜ್ಯದಲ್ಲಿ ಕೋಮುಸೌಹಾರ್ದತೆಯನ್ನು ಉಳಿಸಿಕೊಂಡು ಸಮಾಜದ ಪ್ರಗತಿಯನ್ನು ಸಾಧಿಸುವುದಕ್ಕಾಗಿ ಅಭಿನಂದನಾಪೂರಕವಾದ ವಂದನೆಯನ್ನು ಅರ್ಪಿಸಬೇಕಾದ ಅವಶ್ಯಕತೆ ಇದೆಯೆಂದು ನಾನು ಭಾವಿಸಿದ್ದೇನೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ : (ಬಸವನ ಬಾಗೇವಾಡಿ) : ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಬೀದರ್ ಮತ್ತು ಗುಲ್ಬರ್ಗದಲ್ಲಿ ನಡೆದಂಥ ಘಟನೆಯ ಬಗ್ಗೆ ಈಗಾಗಲೇ ನಮ್ಮ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ನಾನೂ ಕೂಡ ಆ ಭಾಗದ ಒಬ್ಬ ಪ್ರತಿನಿಧಿಯಾಗಿ ಹೇಳುವುದಾದರೆ ಬೀದರ್ ಮತ್ತು ಗುಲ್ಬರ್ಗ ನಗರಗಳಲ್ಲಿ ಮೊನ್ನೆ ನಡೆದಂಥ ಒಂದು ಜಾತಿಯ ಗಲಭೆಗಳಲ್ಲಿ ಸಾಕಷ್ಟು ಜನರ ಪ್ರಾಣಹಾನಿಯಾಗಿದೆ ಮತ್ತು ಸರ್ಕಾರದ ಆಸ್ತಿಪಾಸ್ತಿಗಳಿಗೆ ಸಾಕಷ್ಟು ಹಾನಿಯಾಗಿದೆ, ಖಾಸಗಿ ಆಸ್ತಿಪಾಸ್ತಿಗಳಿಗೂ ಕೂಡ ಸಾಕಷ್ಟು ಹಾನಿಯಾಗಿದೆ. ಇದರ ಬಗ್ಗೆ ಸಮಗ್ರ ತನಿಖೆಯನ್ನು ಮಾಡುವಂಥ, ದೃಷ್ಟಿಯಿಂದ ಆ ಭಾಗದ ಜನರು ನಮಗೆ ಈಗಾಗಲೇ ಹೇಳಿದ್ದಾರೆ. ನ್ಯಾಯಾಂಗ ತನಿಖೆಗೆ ತಾವು ಎರಡು ಜಿಲ್ಲೆಗಳನ್ನು ಒಳಪಡಿಸುತ್ತೀರೋ ಹೇಗೆ ಎನ್ನುವುದು ಒಂದು ಪ್ರಶ್ನೆ. ಎರಡನೆಯದು ಏನೆಂದರೆ, ಯಾವಾಗಲೂ ಶಾಂತಿಸಭೆಯನ್ನು ಮಾಡುತ್ತಿರುತ್ತೇವೆ. ಪ್ರತಿಯೊಂದು ಜಿಲ್ಲೆಯಲ್ಲೂ ಸಣ್ಣಪುಟ್ಟ ಗಲಭೆಗಳಾಗುತ್ತವೆ. ಆ ಗಲಭೆಯಾದಂಥ ಸಂದರ್ಭದಲ್ಲಿ ಪೋಲೀಸ್ ಅಧಿಕಾರಿಗಳು, ತಹಶೀಲ್ದಾರ್‌ರವರು ಒಂದು ಸಭೆಯನ್ನು ಮಾಡುತ್ತಾರೆ. ನಮ್ಮ ಮುಖ್ಯಮಂತ್ರಿಯವರಿಗೆ ನನ್ನದೊಂದು ಸೂಕ್ತವಾದಂಥ ಸಲಹೆ ಕೊಡುವುದು ಏನೆಂದರೆ, ಈ ಗಲಭೆಯಾಗುವಂಥ ಪೂರ್ವದಲ್ಲಿಯೇ ಪ್ರತಿಯೊಂದು ತಾಲ್ಲೂಕಿನಲ್ಲೂ ಯಾವ ರೀತಿಯಾಗಿ ಟ್ರಿಬ್ಯೂನಲ್ ಕಮಿಟೀಸ್ ಮಾಡುತ್ತೀರೋ ಅದೇ ಪ್ರಕಾರವಾಗಿ ಎಲ್ಲಾ ತಾಲ್ಲೂಕಿನಲ್ಲಿಯೂ ಕೂಡ ಒಂದು ಶಾಂತಿಸಮಿತಿಯನ್ನು ಮಾಡಿಕೊಂಡು ಎಲ್ಲಾ ಪಕ್ಷದ ಮುಖಂಡರುಗಳನ್ನು ಅದಕ್ಕೆ ಇನ್‌ವಾಲ್ವ್ ಮಾಡಿಕೊಂಡು ಅಲ್ಲಿರತಕ್ಕಂಥ ಪುರಸಭೆ ಅಧ್ಯಕ್ಷರು ಇರಬಹುದು, ಜಿಲ್ಲಾ ಪರಿಷತ್ತಿನ ಪ್ರಮುಖವಾದ ಸದಸ್ಯರು

ಇರಬಹುದು, ಅಂಥವರನ್ನು ಇನ್‌ಸ್ಟಾಲ್ ಮಾಡಿಕೊಂಡು ತಿಂಗಳಿಗೆ ಒಂದು ಸಾರಿಯಾದರೂ ಆ ಸಮಿತಿಗಳು ಮೀಟಿಂಗ್‌ಗಳನ್ನು ಕರೆಯುತ್ತಿರಬೇಕು. ಯಾವ ರೀತಿಯಾಗಿ ತಾಲ್ಲೂಕು ಪಂಚಾಯತಿ ಸಮಿತಿ ಮೀಟಿಂಗ್‌ಗಳನ್ನು ಕರೆಯುತ್ತೇವೋ ಅದೇ ಪ್ರಕಾರವಾಗಿ ಶಾಂತಿ ಸಮಿತಿಯನ್ನು ಕೂಡ ಪ್ರತಿಯೊಂದು ತಿಂಗಳಲ್ಲೂ ಕರೆದು ವಿಚಾರ ವಿನಿಮಯವು ಮಾಡುವುದರಿಂದ ಮುಂದೆ ಆಗಬಹುದಾದ ಅನಾಹುತಗಳನ್ನು ತಪ್ಪಿಸಬಹುದು ಎನ್ನುವುದು ನನ್ನದೊಂದು ಭಾವನೆ ಇದೆ. ಮಾನ್ಯ ಗೃಹಮಂತ್ರಿಗಳು ಕೂಡ ಪರಿಹಾರಧನ ಎರಡು ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನೂ ಹೇಳಿಲ್ಲ, ಅದರ ಬಗ್ಗೆ ವಿವರವನ್ನು ಕೊಡಬೇಕು. 6ನೇ ತಾರೀಖಿನ ದಿವಸ ಆ ಘಟನೆ ನಡೆದಂಥ ಸಂದರ್ಭದಲ್ಲಿ ನಾನು ಬಸವಕಲ್ಯಾಣದಲ್ಲಿ ಇದ್ದೆ. ಪೋಲೀಸ್ ಡಿಪಾರ್ಟ್‌ಮೆಂಟ್‌ನವರು ಮತ್ತು ಅಧಿಕಾರಿಗಳು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಮತ್ತು ಮೇಲಾದ ನಾರಾಯಣಪುರ ಎನ್ನುವ ಒಂದು ಗ್ರಾಮದಲ್ಲಿ ಹಿಂದೂಗಳು ಮಸೀದಿ ಕೆಡವಿದಂಥ ದುಷ್ಕರ್ಮಿಗಳನ್ನು ಹೋಡಿಸಿ ಮಂದಿರ ಕಟ್ಟುವ ಸಲುವಾಗಿ ಅವರುಗಳು ಪರಿಜ್ಞಾನದಿಂದ ಕೆಲಸ ಮಾಡಿದ್ದಾರೆ. ಅಂಥವರಿಗೂ ಪರಿಹಾರವನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗ ಕಾಂಪೆನ್‌ಸೇಷನ್ ಬಗ್ಗೆ ಮಾನ್ಯ ದೇಶ್‌ಪಾಂಡೆಯವರು ಹೇಳಿದರು ಮ್ಯಾಕ್ಸಿಮಮ್ 20 ಸಾವಿರ ಸಿಗುತ್ತದೆ. ಇನ್ನೂ ಹೆಚ್ಚು ಕಾಂಪೆನ್ಸೇಷನ್ ಅವರಿಗೆ ಸಿಗಬೇಕು. ಇಂಟರೆಸ್ಟ್ ಫ್ರೀ ಲೋನ್ ಕೊಡುವ ಹಾಗೆ ಮಾಡಬೇಕು ಎಂದು ಹೇಳಿದರು ಅದಕ್ಕಾಗಿಯೇ ನಾವು ಏನು ಮಾಡಿದ್ದೇವೆ ಎಂದರೆ ಸರ್ಕಾರದ ಹಣ ಕೊಡುವುದಕ್ಕಿಂತ ಬ್ಯಾಂಕಿನಿಂದ ಹಣವನ್ನು ಕೊಡ್ಸಿ ಪೂರ್ತಿ ಇಂಟರೆಸ್ಟ್‌ನ್ನು ನಾವು ಸರ್ಕಾರ ತುಂಬಿಸಿಕೊಡಬೇಕು ಎಂದು ಹೇಳಿ ನಿರ್ಣಯ ಮಾಡಿದ್ದೇವೆ. ಎಲ್ಲೆಲ್ಲಿ ಬ್ಯಾಂಕ್ ಮುಂದೆ ಬರುವುದಿಲ್ಲ, ಅದರ ಬಗ್ಗೆ ನಾವು ಹಣ ಕೊಟ್ಟು ಇಂಟರೆಸ್ಟ್ ಫ್ರೀ ಲೋನ್ ಕೊಡುತ್ತೇವೆ. Over and above Rs. 20,000/- ಆಮೇಲೆ ಒಂದು ಎರಡು-ಮೂರು ಸನ್ಮಾನ್ಯ ಸದಸ್ಯರು ಜಿಲ್ಲಾಧಿಕಾರಿಗಳು ಪರಿಹಾರವನ್ನು ಕೊಡುವಾಗ ಶಾಸಕರನ್ನು ನಿರ್ಲಕ್ಷ್ಯ ಮಾಡಿದ್ದಾರೆ ಎಂದು ಹೇಳಿದರು. ಇದು ಸರಿಯಲ್ಲ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಅಧಿಕಾರಿಗಳು ಕೆಲಸವನ್ನು ಮಾಡಬೇಕು. ನಾನು ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ನನ್ನ ಕ್ಷೇತ್ರದಲ್ಲಿ ಕಾಂಗ್ರೆಸ್ ಅಧ್ಯಕ್ಷರನ್ನು ಕರೆದುಕೊಂಡು ಹೋಗಿ ಚೆಕ್ ಕೊಡಿಸಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಗೊತ್ತಾಯಿತು.

ಶ್ರೀ ಹೆಚ್. ಏಕಾಂತಯ್ಯ : ಅದೇ ನಮ್ಮ ಅಭಿಪ್ರಾಯ.

ಶ್ರೀ ಎಂ. ವೀರಪ್ಪ ಮೊಯಿಲಿ : ಶಾಸಕರನ್ನು ನಿರ್ಲಕ್ಷ ಮಾಡಿದ್ದಾರೆ ಎಂದು ಅರ್ಥವಾಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ : ನಿರ್ಲಕ್ಷ್ಯ ಮಾಡಿದರೆ ಪರವಾಗಿಲ್ಲ, ನಾವು ಸುಧಾರಿಸಿ ಕೊಳ್ಳುತ್ತೇವೆ, ನಮಗೇನೂ ಅಂಥ ಅವಶ್ಯಕತೆ ಇಲ್ಲ. ಆದರೆ ನನ್ನನ್ನು ಬಿಟ್ಟು ಜಿಲ್ಲಾಧಿಕಾರಿ ಕೊಟ್ಟರೂ ಪರವಾಗಿಲ್ಲ, ತಾವು ಬಂದು ಕೊಟ್ಟರೂ

ಪರವಾಗಿಲ್ಲ, ನನ್ನದೇನು ಕೋಡು ಹೋಗುವುದಿಲ್ಲ, ಆದರೆ ಇಲ್ಲ, ಮಾಡಿದ್ದೇನೆ. ಇದುವರೆಗೂ ಇಷ್ಟು ದಿವಸ ಆದಮೇಲೆ ಯಾರೂ ಬರಲಿಲ್ಲ. ಪಾಪ, ಮೊಸಳೆ ಕಣ್ಣೀರನ್ನು ಸುರಿಸುವುದಕ್ಕೆ ಬಂದಂಥ ಅಧ್ಯಕ್ಷರ ಕೈಯಲ್ಲಿ ತಾವು ಚೆಕ್ಕನ್ನು ಕೊಡಿಸಿದ್ದೀರಲ್ಲಾ, ಇದು ಸರಿಯೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಇನ್ನು ಮುಂದೆ ಕೆಲವು ಅಚಾತುರ್ಯಗಳು ನಡೆಯದಂತೆ all right, it is not proper; that is what I have said. They should have taken legislators and MPs into confidence. ತಮ್ಮ ಗೌರವದ ಬಗ್ಗೆ ನಾವು ಸರ್ಕಾರ ಯಾವಾಗಲೂ ಕೂಡ ಸೌಜನ್ಯತೆಯಿಂದ ನಡೆದುಕೊಳ್ಳುತ್ತೇವೆ. ಏನಾದರೂ ಅಚಾತುರ್ಯವಾದರೆ ಅದನ್ನು ಸರಿಪಡಿಸುತ್ತೇನೆ. ಇನ್ನು ಸನ್ಮಾನ್ಯ ಶಿವಕುಮಾರ್‌ರವರು ಪರಿಹಾರ ಎಲ್ಲಿಯೋ ದುರುಪಯೋಗವಾಗಿದೆ ಎಂದು ಹೇಳಿದರು, ಅದರ ಮಾಹಿತಿಯನ್ನು ಕೊಟ್ಟರೆ ನಾನು ಅದನ್ನು ವಿಚಾರ ಮಾಡುತ್ತೇವೆ. ಇನ್ನು ಸನ್ಮಾನ್ಯ ಯಡಿಯೂರಪ್ಪನವರು ಕೆಲವು ವಿಚಾರ ಹೇಳಿದರು ಏಕೆಂದರೆ, ಚಿತ್ರದುರ್ಗದಲ್ಲಿ, ಗುಲ್ಬರ್ಗದಲ್ಲಿ ಎಲ್ಲೆಲ್ಲಿ ಏನೇನು ಅಚಾತುರ್ಯ ನಡೆದಿದೆ, ಅದರ ಬಗ್ಗೆ ನಾವು ಖಂಡಿತವಾಗಿಯೂ ತನಿಖೆಯನ್ನು ಮಾಡಿಸುತ್ತೇವೆ.

ಆಸ್ತಿ ಪಾಸ್ತಿಯನ್ನು ಕಳೆದುಕೊಂಡವರಿಗೆ ಯಾವುದೇ ಪರಿಹಾರ ಕೊಟ್ಟಿಲ್ಲ, ಎಂದು ತಾವು ಹೇಳಿದ್ದೀರಿ. ಅಂತಹ ದೂರು ಯಾವುದೂ ಬಂದಿಲ್ಲ. ತಮ್ಮ ಹತ್ತಿರ ಮಾಹಿತಿ ಇದ್ದರೆ ಕೊಟ್ಟರೆ ಖಂಡಿತವಾಗಿ ಯಾವುದೇ ಒಂದು ರೀತಿಯ ವ್ಯತ್ಯಾಸ ಇದರ ಬಗ್ಗೆ ಆಗದ ಹಾಗೆ ನೋಡಿ ಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಮೂರು ಜಿಲ್ಲೆಗಳಲ್ಲಿ ನ್ಯಾಯಾಂಗ ತನಿಖೆ ಮಾಡಿಸುತ್ತೀರಾ? ಸನ್ಮಾನ್ಯ ಮುಖ್ಯಮಂತ್ರಿಗಳು ನ್ಯಾಯಾಂಗ ತನಿಖೆ ಮಾಡಿಸುತ್ತೀರಾ? ತಾವು ಹೇಳಿದ್ದುದು ಕ್ಲಿಯರ್ ಆಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಹೇಳುತ್ತೇನೆ. ಸನ್ಮಾನ್ಯ ಹರ್ಷಕುಮಾರ್ ಗೌಡ ಅವರು ಕೆಲವು ಕಡೆ ನಾಯಕರು ಪ್ರಚೋದನಕಾರಿ ಹೇಳಿಕೆ ಕೊಡುತ್ತಾರೆ, ಇದರಿಂದ ಗಲಭೆ ಆಗಿದೆ ಎಂದು ಹೇಳಿದರು ಇಂತಹ ಸಂದರ್ಭದಲ್ಲಿ ಎಲ್ಲರೂ ಕೂಡ ಸಂಯಮದಿಂದ ಹೇಳಿಕೆ ಕೊಟ್ಟರೆ ಇಂತಹ ತೊಂದರೆಗಳು ಆಗುವುದಿಲ್ಲ. ನಾವು ಸಂಯಮ ಕಳೆದುಕೊಂಡರೆ ಅಮಾಯಕರ ಪ್ರಾಣ ಹೋಗುತ್ತದೆ ಅಷ್ಟೆ. ಈ ಪಾಪಕ್ಕೆ ನಾವು ಕೂಡ ಹೊಣೆಗಾರರು ಆಗಬೇಕಾಗುತ್ತದೆ. ಅದನ್ನು ಅದಷ್ಟು ತಪ್ಪಿಸಲಿಕ್ಕೆ ನಾವು ನೋಡಬೇಕಾಗುತ್ತದೆ. ಇನ್ನು ಮಾನ್ಯ ಅನಂತಕೃಷ್ಣ ಅವರು ಹೇಳಿದ್ದುದು ನಮ್ಮ ಗಮನಕ್ಕೆ ಬಂದಿದೆ. ಶಿವಾಜಿನಗರದಲ್ಲಿಯೂ ಕೂಡ ಒಂದು ರೀತಿಯ ಗಲಭೆ ಆಗಿದೆ, ಅದು ಕೋಮು ಗಲಭೆ ಅಲ್ಲ ಎಂದು ಹೇಳಿದ್ದೀರಿ. ಕೋಮು ಗಲಭೆ ಆಗಬಾರದು ಎನ್ನುವುದೇ ನಮ್ಮ ಇಚ್ಛೆ, ಅಪೇಕ್ಷೆ. ಅದು ಆಗದೇ ಇರಲಿ ಎಂದು ನಾವು ಬಯಸುತ್ತೇವೆ. ಇನ್ನು ಬಸವರಾಜ್ ಪಾಟೀಲ್ ಅಟ್ಟೂರ್ ಎಲ್ಲಾ ತಾಲ್ಲೂಕಿನಲ್ಲಿ ಶಾಂತಿ ಸಮಿತಿ ಮಾಡಬೇಕು ಎಂದು ಹೇಳಿದ್ದಾರೆ. ನಾನು ಈಗಾಗಲೇ ಶಾಂತಿ ಸಮಿತಿ ಮಾಡಬೇಕು ಎಂದು ಹೇಳಿದ್ದೇನೆ. ಈಗ ಅಷ್ಟು ಯಶಸ್ವಿಯಾಗಿ, ಪರಿಣಾಮಕಾರಿಯಾಗಿ ಶಾಂತಿ ಸಮಿತಿಗಳು ರಚನೆ ಕೂಡ ಆಗಲಿಲ್ಲ, ಎಲ್ಲಾ ಮಟ್ಟದಲ್ಲಿಯೂ ಕೂಡ ಅದನ್ನು ಪುನರ್ ರಚನೆ ಮಾಡಬೇಕು. ಅದಕ್ಕೆ ಇನ್ನೂ ಹೆಚ್ಚಿನ ಶಕ್ತಿ ಕೊಡುತ್ತೇವೆ. ಇನ್ನು ತನಿಖೆ ವಿಚಾರ. ಮತ್ತೊಂದು ವಿಚಾರ ಆಗ ನಾನು ಹೇಳುವಾಗ ಮರೆತು ಬಿಟ್ಟೆ.

ಶ್ರೀ ಆರ್.ವಿ. ದೇಶಪಾಂಡೆ : ತಾವು ಒಂದು ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ. ಸೆಕ್ಯುಲರಿಸಂ ವಿಚಾರದಲ್ಲಿ ಜನರಲ್ಲಿ ಸರಿಯಾದ ತಿಳುವಳಿಕೆ ಕೊಡಲಿಕ್ಕೆ ಅದರ ಮಹತ್ವ ಎತ್ತಿ ಹಿಡಿಯಲಿಕ್ಕೆ ಪೊಲಿಟಿಕಲ್ ಪಾರ್ಟೀಸ್, ವಾಲಂಟರಿ ಆರ್ಗನೈಸೇಷನ್ಸ್ ಅನ್ನು ಇನ್‌ವಾಲ್ವ್ ಮಾಡುತ್ತೇವೆ. ಸ್ಪೀಚಸ್‌ನಿಂದ ವೀಡಿಯೋನಿಂದಕ, ರೇಡಿಯೋದಿಂದ, ಬಾಕಿ ಪ್ರೋಗ್ರಾಮ್‌ಗಳಿಂದ ಅದನ್ನು ಎನ್‌ಲೈಟೆನ್ ಮಾಡುತ್ತೇವೆ, ರೂಟ್ ತನಕ ಅದನ್ನು ಮುಟ್ಟಿಸುತ್ತೇವೆ ಎಂದು ತಿಳಿಸಿದ್ದೀರಿ. ನಾನು ಮಾತನಾಡುವಾಗ ಈ ವಿಚಾರದ ಬಗ್ಗೆ ಒತ್ತಾಯ ಮಾಡಿ ಆ ಕಾರ್ಯಕ್ರಮ ಮಾಡಿ ಎಂದು ಹೇಳಿದ್ದೆ. ತಾವು ಇದರ ಬಗ್ಗೆ ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗಾಗಲೇ ಇದು ತಯಾರಾಗುತ್ತಾ ಇದೆ. ನಾವು ಕೆಲವು ಜನರನ್ನು ಹಿಡಿದು ಇದರ ಬಗ್ಗೆ ವ್ಯಾಪಕವಾದಂತಹ ಸಮಗ್ರವಾದಂತಹ ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡುತ್ತಿದ್ದೇವೆ. ಅದು ತಯಾರಾದ ಮೇಲೆ ಈ ಜಾತ್ಯಾತೀತ ತತ್ವದಲ್ಲಿ ವಿಶ್ವಾಸ ಉಳ್ಳಂಥ ಎಲ್ಲರನ್ನೂ, ತಮ್ಮನ್ನೂ ಕರೆಯಿಸಿ ಇದರ ಬಗ್ಗೆ ಅಂತಿಮ ಸ್ವರೂಪವನ್ನು ನಾವೆಲ್ಲ ಸೇರಿ ಕೊಡೋಣ. ಇದರ ಅನುಷ್ಠಾನ ಯಾವ ಯಾವ ರೀತಿಯಲ್ಲಿ, ಯಾವ ಯಾವುದರ ಮೂಲಕ ಆಗಬೇಕೋ ಅದಕ್ಕೆ ಒಂದು ಉನ್ನತ ಸಮಿತಿ ಇಟ್ಟು ನಾವು ವಿಚಾರ ಮಾಡೋಣ.

ಶ್ರೀ ಕೆ. ಹರ್ಷಕುಮಾರ್ ಗೌಡ : ಮನೆ ವಿಚಾರದಲ್ಲಿ 209 ಜನ.

ಶ್ರೀ ಎಂ. ವೀರಪ್ಪಮೊಯಿಲಿ : ಈಗ ತಾವು ಲಾ ಅಂಡ್ ಆರ್ಡರ್ ವಿಚಾರದ ಬಗ್ಗೆ ಹೇಳಿದ್ದೀರಿ. The Law and order is under the jurisdiction of Police Commissioner at Mysore. The D.C. is not incharge. ಆಡಾಳಿತಾತ್ಮಕ ದೃಷ್ಟಿಯಿಂದ ನಾವು ಪೋಲೀಸ್ ಕಮೀಷನರ್ ಅವರನ್ನು ವರ್ಗಾವಣೆ ಮಾಡಲಿಕ್ಕೆ ಆಯಿತೇ ಹೊರತು ಬೇರೆ ಅಲ್ಲ. ಮಾನ್ಯ ವಾಟಾಳ್ ನಾಗರಾಜ್ ಅವರು ಈ ಪ್ರಶ್ನೆಯನ್ನು ಎತ್ತಿದ್ದರು. ಬೇರೆ ವಿನಾಕಾರಣದಿಂದ ವರ್ಗಾವಣೆ ಆಗಿಲ್ಲ, ಯಾರ ಮೇಲೂ ದೋಷಾರೋಪಣೆ ಮಾಡಬೇಕು ಅಥವಾ ಅವರ ಮೇಲೆ ಗೂಬೆಯನ್ನು ಕೂರಿಸಬೇಕು ಎಂಬ ಉದ್ದೇಶದಿಂದ ಅಲ್ಲ, ಕೆಲವು ಸಂದರ್ಭದಲ್ಲಿ ಆಗುತ್ತದೆ. during the times of war, we have to change the General, like-wise we have changed here. That does not mean that Gegeral is bad. ಈ ತರಹ ವಿಚಾರ ಇಲ್ಲ, ನಾವು ಆಡಳಿತಾತ್ಮಕವಾಗಿ ಕೆಲವು ಸಂದರ್ಭಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕಾಗಿದೆ. ಆ ಒಂದು ಸದುದ್ದೇಶದಿಂದ ಮಾಡಿದ್ದೇವೆಯೇ ಹೊರತು ಅನ್ಯತಾ ಬೇರೆ ಅಲೋಚನೆ ನಮಗೆ ಇಲ್ಲ, ಮಾನ್ಯ ಬೈರೇಗೌಡರು ಕೆಲವು ಸಂಘಸಂಸ್ಥೆಗಳ ಮೆರವಣಿಗೆ ಮಾಡಿಕೊಂಡು ಹಣ ಎಲ್ಲಾ ಕಲೆಕ್ಟ್ ಮಾಡಿದ್ದಾರೆ ಇದರ ಬಗ್ಗೆ ಲೆಕ್ಕ ಏನು ಇದೆ ಎಂದು ಕೇಳಿದ್ದಾರೆ We have only frozen the accounts; Bank accounts. I don't have full details.

ಅದರ ಪೂರ್ಣ ಡೀಟೇಲ್ಸ್ ಇನ್ನೂ ಬಂದಿಲ್ಲ, ಅದು ಬಂದ ನಂತರ ಪ್ರತ್ಯೇಕ ಉತ್ತರ ಕೊಡುತ್ತೇನೆ. ನಮಗೆ ಡೀಟೇಲ್ಸ್ ಸಿಗಲಿಲ್ಲ.

ಶ್ರೀ ಸಿ. ಬೈರೇಗೌಡ : ನೂರಾರು ಕೋಟಿ ರೂಪಾಯಿ ವಸೂಲಿ ಆಗಿದೆ. ಬ್ಯಾಂಕ್ ಅಕೌಂಟ್ಸ್, ನಿಮ್ಮ ಕೈಲಿದೆ, ಕಛೇರಿಗಳಿಗೆ ಬೀಗ ಹಾಕಿದ್ದೀರಿ, ಸೀಲ್

ಮಾಡಿದ್ದೀರಿ. ಇವೆಲ್ಲವನ್ನೂ ಇಡಿ. ಜನರ ಹತ್ತಿರ ಹೋಗಿ ಅಮಾಯಕರನ್ನು ಐಕ್ಸಪ್ಲಾಯಟ್ ಮಾಡಿ ವಸೂಲಿ ಮಾಡಿದ್ದಾರೆ. ನೀವು ಫ್ರೀಸ್ ಮಾಡಿದ ಮೇಲೂ ಇನ್ನೂ ಬರಲಿಲ್ಲ ಎಂದರೆ ಹಣ ಏನಾಯಿತು ಎಂದು ಯಾವಾಗ ಲೆಕ್ಕ ಗೊತ್ತಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಜಿಲ್ಲಾಧಿಕಾರಿಗಳ ಹತ್ತಿರ ವಿವರ....

ಶ್ರೀ ಸಿ. ಬೈರೇಗೌಡ : ಜಿಲ್ಲೆ ಬಿಟ್ಟಿ ಬಿಡಿ. ಬೆಂಗಳೂರು ನಗರದಲ್ಲಿರತಕ್ಕ ವಿಶ್ವ ಹಿಂದೂ ಪರಿಷತ್ ಆಫೀಸ್ ಸೀಸ್ ಮಾಡಿದ್ದೀರಿ. ಆರ್‌ಎಸ್‌ಎಸ್ ಕಛೇರಿಯನ್ನು ಸೀಸ್ ಮಾಡಿದ್ದೀರಿ. ಎಲ್ಲೆಲ್ಲಿ ಏನೇನು ಇತ್ತು, ಎಷ್ಟು ಹಣ ಇತ್ತು ಅದರ ಬ್ಯಾಂಕ್ ಅಕೌಂಟ್ಸ್‌ನಲ್ಲಿ ಹಣ ಎಷ್ಟು ಇತ್ತು, ಅವರ ಟ್ರಾನ್‌ಸ್ಯಾಕ್ಷನ್ ಏನು? ಕಳೆದ ನಾಲ್ಕೈದು ವರ್ಷಗಳಿಂದ ಏನೇನು ಟ್ರಾನ್ಸ್‌ಕ್ಷನ್ಸ್ ಮಾಡಿದ್ದಾರೆ ಎನ್ನುವುದನ್ನು ದಯವಿಟ್ಟು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಇದರ ಬಗ್ಗೆ ಬೇರೆ ಬೇರೆ ಜಿಲ್ಲೆಗಳಿಂದ ಜಿಲ್ಲಾಧಿಕಾರಿಗಳು ವಿವರ ಕಳಿಸಬೇಕು ಕಳಿಸುತ್ತಾ ಇದ್ದಾರೆ. ವಿವರ ಬಂದ ನಂತರ ಹೇಳುತ್ತೇನೆ.

5-40 ಪಿ.ಎಂ

ಬೆಂಗಳೂರು ನಗರದಲ್ಲಿರುವ ಎರಡು ಸಂಸ್ಥೆಗಳ ವಿವರ ನಮ್ಮ ಹತ್ತಿರ ಇದೆ. ವಿ.ಹೆಚ್.ಪಿ. ಅದು 13 ಲಕ್ಷ ರೂಪಾಯಿ. ಜಮಾಯಿತಿ ಇಸ್ಲಾಮಿನದು ಸುಮಾರು 25 ಸಾವಿರ ರೂಪಾಯಿ. ಬೆಂಗಳೂರು ಸಿಟಿಯಲ್ಲಿ ಇಷ್ಟು ವಿವರ ಇದೆ. ಬೇರೆ ಬೇರೆ ಜಿಲ್ಲಾಧಿಕಾರಿಗಳಿಂದ ವಿವರ ಬರಬೇಕಾಗಿದೆ. ಆರ್.ಎಸ್.ಎಸ್. ಅದನ್ನು ತರಿಸುತ್ತೇವೆ. ಜಿಲ್ಲಾಧಿಕಾರಿಗಳಿಂದ ಎಲ್ಲಾ ವಿವರವನ್ನು ತರಿಸುತ್ತೇವೆ. ಸಂದರ್ಭ ಬಂದಾಗ ಅದರ ವಿವರವನ್ನು ಕೊಡುತ್ತೇವೆ. ಇನ್ನೊಂದು ವಿಚಾರವೇನೆಂದರೆ ಕೆಲವರು ಗಾಯಹೊಂದಿದ್ದಾರೆ. ಗುಂಡಿನ ಏಟು ಇರಬಹುದು ಅಥವಾ ಬೇರೆಬೇರೆ ಗಲಭೆಯಿಂದಾಗಿರಬಹುದು. ಅದಕ್ಕೆ ನಾವು ಪರಿಹಾರ 15 ಸಾವಿರ ರೂಪಾಯಿಯನ್ನು ಕೊಡುತ್ತಿದ್ದೇವೆ. ಕೆಲವರಿಗೆ ಪೂರ್ತಿಯಾಗಿ ಇನ್ನು ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ, ಅವರಿಗೆ 250 ರೂಪಾಯಿಯನ್ನು ಕೊಡುತ್ತೇವೆಂದು ಈಗಾಗಲೆ ಹೇಳಿದ್ದೇವೆ. ಇನ್ನು ತನಿಖೆ ಮಾಡುವುದರ ಬಗ್ಗೆ ಹೇಳುವುದಾದರೆ, ಎಲ್ಲೆಲ್ಲಿ ವಿಶೇಷವಾದ ಘಟನೆಗಳು ಆಗಿದೆ ಎಂದು ನಮ್ಮ ಗಮನಕ್ಕೆ ತಂದಿದ್ದೀರಿ. ಅದರ ಬಗ್ಗೆ ಸೂಕ್ತವಾದಂಥ ತನಿಖೆ ಮಾಡುತ್ತೇವೆ. ಸಿ.ಓ.ಡಿ ಮುಖಾಂತರ ಮಾಡುತ್ತೇವೆ. ಅಥವಾ ಬೇರೆ ಮಾಡುತ್ತೇವೆ. ಆದರೆ ನ್ಯಾಯಾಂಗ ತನಿಖೆ ಮಾಡುವುದು ಈ ಘಟನೆಯ ಗಾತ್ರ, ಈ ಘಟನೆಗೆ ಇರತಕ್ಕಂಥ ಹಿನ್ನೆಲೆ ಅವಲಂಭಿಸಿರುತ್ತದೆ. ನ್ಯಾಯಾಂಗ ತನಿಖೆಯ ಉದ್ದೇಶವೇನೆಂದರೆ, ತಪ್ಪಿತಸ್ಥರನ್ನು ಶಿಕ್ಷೆ ಮಾಡಬೇಕು ಎನ್ನುವುದು. ತಪ್ಪಿತಸ್ಥರು ಯಾರೇ ಇರಲಿ, ಯಾವ ವರ್ಗದವರೇ ಇರಲಿ, ನಾವು ಅವರನ್ನು ಶಿಕ್ಷೆ ಮಾಡಲಿಕ್ಕೆ ಸರಿಯಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅದೊಂದು ಭಾಗ, ನ್ಯಾಯಾಂಗ ವಿಚಾರಣೆಯ ಪ್ರಮುಖ ಉದ್ದೇಶ ಏನಿತ್ತು ಅಂದರೆ, ಇಂತಹ ಘಟನೆಗಳು ಮುಂದೆ ಬರಬಾರದು. ಈ ಗಾಯ ಏನು ಆಗಿದೆ ಅದಕ್ಕೆ ಪರಿಹಾರವನ್ನು ಹುಡುಕತಕ್ಕ ದೃಷ್ಟಿಯಲ್ಲಿ ಇದನ್ನು ಮಾಡಬೇಕು. ಇದು ಇಡೀ ರಾಷ್ಟ್ರವ್ಯಾಪಿಯಾಗಿರತಕ್ಕ ಒಂದು ಪ್ರಶ್ನೆಯಾಗಿದೆ. ಇದು ಅಯೋಧ್ಯೆಯಲ್ಲಿ ಉದ್ಭವಾದಂತಹ

ಪ್ರಶ್ನೆ. ಇದನ್ನು ಜ್ಯುಡಿಷಿಯಲ್ ಇನ್‌ಕ್ವೈರಿ ಮಾಡುವುದು ಇದು ಬರೀ ಕರ್ನಾಟಕ ರಾಜ್ಯಕ್ಕೆ ಸೀಮಿತವಾಗುವುದಿಲ್ಲ, ಇದು ಇಡೀ ರಾಷ್ಟ್ರಕ್ಕೆ ಸಿಮೀತವಾಗುತ್ತದೆ. ಇದನ್ನು ಎಷ್ಟರ ಮಟ್ಟಿಗೆ ನಾವು ರಾಜ್ಯಮಟ್ಟದಲ್ಲಿ ಮಾಡಲಿಕ್ಕೆ ಸಾಧ್ಯವಿದೆ. ಇದರ ಹಿನ್ನೆಲೆ, ಇದರ ಮೂಲ ಇದನ್ನೆಲ್ಲಾ ಎಲ್ಲಿ ಮಾಡಲಿಕ್ಕೆ ಆಗುತ್ತದೆ. ಇದರ ಪರಿಣಾಮ ಏನಾಗುತ್ತದೆ ಅಂದರೆ, ಕೋಮುಗಲಭೆ ವ್ಯಾಪಕವಾಗಿ ಆದುದರಿಂದ ಒಂದು ಸ್ಥಳದಲ್ಲಿ ಆದರೆ ಅದರ ಸಂಗತಿ ಬೇರೆ, ಇಡೀ ಎಲ್ಲಾ ಕಡೆಯಲ್ಲಿಯೂ ಆದದ್ದರಿಂದ ನಾವು ಇದನ್ನು ಹುಡುಕಲಿಕ್ಕೆ ಹೋದರೆ ನಾಳೆ ಪುನಃ ಒಂದು ಯುದ್ಧ ಅಲ್ಲಿ ಪ್ರಾರಂಭವಾಗುತ್ತದೆ. ಅಲ್ಲಿ ಸಾಕ್ಷಿ ಕೊಡುವಾಗ, ವಿಚಾರಣೆ ಮಾಡುವಾಗ ಒಡೆದಂಥ ಹೃದಯವನ್ನು ನಾವು ಒಂದು ಗೂಡಿಸಬೇಕೇ ವಿನಃ ಪುನಃ ಒಂದು ಗೂಡಿದ ಹೃದಯಗಳನ್ನು ಒಡೆಯತಕ್ಕಂಥ ಕೆಲಸವನ್ನು ಮಾಡಿದರೆ ಆದರಿಂದ ಸಮಾಜದ ನೆಮ್ಮದಿಗೆ ತೊಂದರೆ ಬರುತ್ತದೆಯೇ ಹೊರತು ಸಮಾಜದ ನೆಮ್ಮದಿಯನ್ನು ಕಾಪಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ರಾಷ್ಟ್ರ ವ್ಯಾಪಿ ಇರತಕ್ಕಂಥ ಸೂಕ್ಷ್ಮ ವಿಚಾರಗಳನ್ನು ನ್ಯಾಯಾಂಗ ವಿಚಾರಣೆಗೆ ಗುರಿಪಡಿಸುವುದು ಸೂಕ್ತ ಅಲ್ಲ ಎಂದು ತಾವು ಕೂಡ ಒಪ್ಪುತ್ತೀರೆಂದು ನಾನು ಭರವಸೆಯನ್ನು, ಸಂಕಲ್ಪವನ್ನು ಹೊಂದಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ : ಒಪ್ಪಿಕೊಳ್ಳುವಂತಹ ಪ್ರಶ್ನೆ ಅಲ್ಲ. ಎಲ್ಲೆಲ್ಲಿ ಪೋಲೀಸ್ ಇನ್‌ಆಕ್ಷನ್ ಆಗಿದೆ ಆ ಸ್ಪೆಸಿಫಿಕ್ ಇನ್‌ಸ್ಟೆನ್ಸ್‌ಸ್ ಕೊಟ್ಟಿದ್ದೇವೆ. ಇದನ್ನು ಸಿ.ಓ.ಡಿ ಯವರಿದ ಮಾಡಲಿಕ್ಕೆ ಸಾಧ್ಯವಿಲ್ಲ. ಕೆಲವು ಕಡೆ ಜಿಲ್ಲಾಧಿಕಾರಿಗಳದ್ದು ಲ್ಯಾಪ್ಸ್ ಆಗಿದೆ, ಕೆಲವು ಕಡೆ ಎಸ್.ಪಿ.ಗಳ ಲ್ಯಾಪ್ಸ್ ಅದನ್ನು ಜ್ಯುಡಿಷಿಯಲ್ ಎನ್‌ಕ್ವೈರಿಯಿಂದ ಮಾಡಲಿಕ್ಕೆ ಸಾಧ್ಯ. ಹಾಗಾಗಿ ಪರಿಹಾರ ಕೊಡುವುದರ ವಿಚಾರದಲ್ಲಾಗಲಿ, ಮತ್ತು ಜ್ಯುಡಿಷಿಯಲ್ ಎನ್‌ಕ್ವೈರಿ ತಾವು ಮಾಡುವುದಿಲ್ಲವೆಂದು ಹೇಳಿದ್ದೀರಿ, ಅದರ ಬಗ್ಗೆ ನಿಮಗೆ ನಿಜವಾದ ಸತ್ಯ ಎಲ್ಲಿ ಹೊರಬರಬೇಕು ಎಂಬ ಮನವರಿಕೆ ಇಲ್ಲ. ಹಾಗಾಗಿ ನಾವು ಈ ಸದನದಿಂದ ಬಾಯ್ ಕಾಟ್ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರು ಜನತಾ ದಳ ಪಕ್ಷದ ಸದಸ್ಯರುಗಳು ಸದನದಿಂದ ಬಾಯ್‌ಕಾಟ್ ಮಾಡಿ ಹೊರಗೆ ಹೋದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ, ಎಲ್ಲಿ ಶಾಂತಿ ನೆಲೆಸಿದೆ ಅದನ್ನು ನಾನು ಹೇಳಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನನಗೆ ನೆನಪು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.ಅದು ನನ್ನ ಅಲೋಚನೆಯಲ್ಲಿಯೂ ಇದೆ. ಎಲ್ಲಿ ಶಾಂತಿಸ್ಥಾಪನೆ ಮಾಡಿದ್ದಾರೆ. ಒಂದು ವಿಚಾರವನ್ನು ನಾನು ಖಂಡಿತವಾಗಿ ಈ ಸದನದ ಮುಖೇನ ಹೇಳಬೇಕು. ಎಷ್ಟೇ ತೊಂದರೆ ಇದ್ದರೂ, ಎಷ್ಟೇ ಸಂಕಷ್ಟದಲ್ಲಿದ್ದರೂ 10 ದಿವಸಗಳ ಕಾಲ ಇಂತಹ ರಾಷ್ಟ್ರೀಯ ಸವಾಲು ಬಂದಾಗ ತಮ್ಮ ಪ್ರಾಣದ ಹಂಗನ್ನು ಬಿಟ್ಟು ಅನ್ನ, ನೀರನ್ನು ಬಿಟ್ಟು ನಮ್ಮ ಪೋಲೀಸ್ ಇಲಾಖೆಯವರು ಎಲ್ಲಾ ಹಂತದಲ್ಲಿ ಕೆಲಸ ಮಾಡಿದ್ದಾರೆ. ಆದಕ್ಕೆ ವಿಶೇಷವಾದಂಥ ಮೆಚ್ಚುಗೆಯನ್ನು ನಾನು ಮಾಡಬೇಕು. ಆದ್ದರಿಂದ ನಮ್ಮಲ್ಲಿ 15 ಪಾಯಿಂಟ್ ಪ್ರೋಗ್ರಾಂ ಎಂದು ಮೈನಾರಿಟಿಸ್ ಬಗ್ಗೆ ಏನಿದೆ ಅದರಲ್ಲಿ ಯಾರ್ಯಾರು ಪೋಲೀಸ್ ಅಧಿಕಾರಿಗಳು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರನ್ನೆಲ್ಲಾ ಕೆಣಕಿ ಅವರ ಬಣ್ಣ ಬಯಲು ಮಾಡಿ ಅವರನ್ನು ವಾಕ್ಔಟ್ ಮಾಡುವ ಹಾಗೆ ತಾವು ಮಾಡಿದ್ದಿರಲ್ಲಾ? ಜನತಾ ದಳದ ನಮ್ಮ ಸ್ನೇಹಿತರೆಲ್ಲಾ ವಾಕ್ಔಟ್ ಮಾಡುವ ಸ್ಥಿತಿಗೆ ಬಂತು.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ತತ್ವಶಃ ವಾಟಾಳ್ ನಾಗರಾಜ್ ರವರು ಸೂಚನೆಯನ್ನು ಒಪ್ಪುತ್ತೇನೆ. ಅವಾರ್ಡ್ ಕೊಡಬೇಕು, ನಾನು ಅವಾರ್ಡ್ ಕೊಡುತ್ತೇನೆ. ಜಿಲ್ಲಾ ಮಟ್ಟದಲ್ಲಿ ಕೊಡುವುದೋ, ವಿಧಾನ-ಸಭಾ ಮಟ್ಟದಲ್ಲಿ ಕೊಡುವುದೋ, ಯಾರು ಪೋಲೀಸ್ ಅಧಿಕಾರಿಗಳು ಜಾಗ್ರತೆ ವಹಿಸಿದ್ದಾರೆ ಅದನ್ನೆಲ್ಲಾ ತೀರ್ಪು ಮಾಡಿ ಅವಾರ್ಡ್ ಕೊಡತಕ್ಕ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇನೆ.

ಅದನ್ನು ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ಅನಂತರ ನೋಡೋಣ.

ಶ್ರೀ ವಾಟಾಳ್ ನಾಗರಾಜ್ : ನನ್ನ ಕ್ಷೇತ್ರಗಳಿಗೆ ದುಡ್ಡು ಕೊಡಿ ಎಂದು ನಾನು ಹೇಳಿದರೆ ಅದನ್ನು ಬಿಟ್ಟು ನೀವು ಏನೇನೋ ಹೇಳುತ್ತಿದ್ದೀರಲ್ಲಾ.

ಶ್ರೀ ಕೆ. ಹರ್ಷಕುಮಾರಗೌಡ : ಕ್ಷೇತ್ರದಲ್ಲಿ ಸುಮಾರು 209 ಜನ ಇನ್ನೂ ಛತ್ರದಲ್ಲಿ ಊಟ ಮಾಡುತ್ತಿದ್ದಾರೆ. ಸರ್ಕಾರವೇ ಅವರ ವ್ಯವಸ್ಥೆಯನ್ನು ನೋಡೋಕೊಳ್ಳುತ್ತಿದೆ. ಅವರನ್ನು ಮನೆಗೆ ಹೋಗಿ ಎಂದರೆ ಅವರ ಮನೆಗಳೆಲ್ಲಾ ನಾಶವಾಗಿದೆ. ಸುಮಾರು 50 ಜನರ ಮನೆಗಳು ನಾಶವಾಗಿವೆ. ಅವರಿಗೆಲ್ಲಾ ಪುನರ್ವಸತಿ ಕಲ್ಪಿಸಿಕೊಡಬೇಕೆಂದು ಸರ್ಕಾರದಲ್ಲಿ ನಾನು ಕೇಳಿಕೊಂಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗಾಗಲೇ ತಾವು ಹೇಳಿದ ಪ್ರಕಾರ ಮನೆಗಳನ್ನು ಕಳೆದುಕೊಂಡವರಿಗೆ ಮನೆ ಕಟ್ಟಿಸಿಕೊಡುವುದಕ್ಕೆ ಸಂಪೂರ್ಣ ಸಹಾಯ ಮಾಡುತ್ತೇವೆ.

ಶ್ರೀ ಕೆ. ಹರ್ಷಕುಮಾರ ಗೌಡ : ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತಿರುವುದೇನೆಂದರೆ, ಅವರು 8ನೇ ತಾರೀಖಿನಿಂದ ಶಾದಿಮಹಲ್‌ನಲ್ಲಿದ್ದಾರೆ. ಅವರಿಗೆ ಊಟ, ವಸತಿ ಅಲ್ಲೇ ಆಗುತ್ತಿದೆ. ಅವರು ಬೇರೆ ಕಡೆ ಹೋಗಬೇಕೆಂದರೆ ಮನೆಗಳಿಲ್ಲವಾದ್ದರಿಂದ, ಅವರುಗಳಿಗೆ ಹೊಸದಾಗಿ ಮನೆಗಳನ್ನು ಕಟ್ಟಿಸಿಕೊಡುವ ಬದಲಾಗಿ ಮೈಸೂರು ನಗರ ಪ್ರಾಧಿಕಾರದಲ್ಲಿ ದುರ್ಬಲ ವರ್ಗಗಳವರಿಗಾಗಿ ಏನು ಮನೆಗಳಿವೆ. ಅವುಗಳನ್ನು ಇವರಿಗೆ ತುರ್ತಾಗಿ ಕೊಡಬೇಕೆಂದು ತಾವು ಆದೇಶವನ್ನು ಪ್ರಾಧಿಕಾರದ ಅಧಿಕಾರಿಗಳಿಗೆ ಹಾಗೂ ಜಿಲ್ಲಾಧಿಕಾರಿಯವರಿಗೆ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಇದರ ಬಗ್ಗೆ ವಿಚಾರ ಮಾಡೋಣ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೇ, ಸದನದ ಕಾರ್ಯ ಕಲಾಪಗಳ 233ನೇ ನಿಯಮದಡಿ ನಾನು ತಮಗೆ ಒಂದು ಪತ್ರ ಕಳುಹಿಸಿಕೊಟ್ಟಿದ್ದೇನೆ.

ಉಪಾಧ್ಯಕ್ಷಿಣಿಯವರು : ತಾವು ಕಳುಹಿಸಿಕೊಟ್ಟಿರುವ ಪತ್ರ ನನಗೆ ಬಂದಿದೆ. ಸಾಧಾರಣವಾಗಿ ವಿಧಾನಮಂಡಲದ ಸಮಿತಿಯ ವರದಿಯ ಮೇಲೆ ಸದನದಲ್ಲಿ ಚರ್ಚೆ ಮಾಡುವುದಿಲ್ಲ. ನಾಳೆ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ಇರುವುದರಿಂದ,ಆ ಸಭೆಯಲ್ಲಿ ಇಟ್ಟುಕೊಂಡು ತೀರ್ಮಾನ ಮಾಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ನಿಯಮ 233 ರ ಪ್ರಕಾರ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ.

ಉಪಾಧ್ಯಕ್ಷಿಣಿಯವರು : ಚರ್ಚೆ ಮಾಡುವುದಕ್ಕೆ ಅವಕಾಶವಿದೆ ಆದರೆ ಸಾಧಾರಣವಾಗಿ ಇದರ ಬಗ್ಗೆ ಚರ್ಚೆ ಮಾಡುವುದಿಲ್ಲ, ನಾಳೆ ದಿವಸ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಈ ವಿಷಯ ಇಟ್ಟು ತೀರ್ಮಾನ ಮಾಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಇವತ್ತು ಏನು ವರದಿ ಕೊಟ್ಟಿದ್ದಾರೋ, ಆ ವರದಿ ಸಾರ್ವಜನಿಕವಾಗಿ ಬಹಳ ಪ್ರಾಮುಖ್ಯತೆ ಪಡೆದಂಥ ವರದಿಯಾಗಿದ್ದು ಅದರಲ್ಲಿನ ಬಹುತೇಕ ಅಂಶಗಳು ಸತ್ಯಕ್ಕೆ ದೂರವಾದುವು ಮತ್ತು ದುರುದ್ದೇಶದಿಂದ ಕೂಡಿದ್ದು, ಅಲ್ಲದೆ, ವರದಿ ಕೊಡುವಾಗ ಒಂದೇ ಕಡೆಯ ಮಾಹಿತಿ ತೆಗೆದುಕೊಂಡು ಕೊಟ್ಟಿದ್ದಾರೆ. ವರದಿಯು ದೋಷಪೂರಿತವಾಗಿದ್ದು, ವರದಿಯನ್ನು ಸದನದಲ್ಲಿ ಮಂಡಿಸುವುದಕ್ಕಿಂತ ಮೊದಲೇ ಪತ್ರಿಕೆಗಳಲ್ಲಿ ಪ್ರಚಾರವಾಗಿರುವುದಲ್ಲದೆ, ಹಕ್ಕುಚ್ಯುತಿಯೂ ಆಗಿದೆ. ಈ ಎಲ್ಲ ಆಡಳಿತಾತ್ಮಕ ಮಂಜೂರಾತಿಯಾಗಿದ್ದು, ಅನುದಾನರಹಿತ ಶಾಲೆಗಳಾಗಿವೆ. ಕೇಂದ್ರ ಸರ್ಕಾರದ ಅಧಿಸೂಚನೆಯನ್ನನುಸರಿಸಿ ಸಚಿವ ಸಂಪುಟದ ಅನುಮತಿಯನ್ನೂ ಸಹ ಪಡೆದುಕೊಂಡು ನಿಯಮಗಳ ಉಲ್ಲಂಘನೆಯಾಗದ ರೀತಿ ನಾವು ಕೊಟ್ಟಿದ್ದೇವೆ. ಆದರೆ ಈ ಎಲ್ಲಾ ವಿಷಯಗಳನ್ನು ಗಾಳಿಗೆ ತೂರಿಮಾಡಿದ್ದಾರೆನ್ನತಕ್ಕಂಥ ಆಪಾದನೆಯನ್ನು ಮೇಲಿಂದ ಮೇಲೆ ನನ್ನ ಮೇಲೆ ಮಾಡುತ್ತಿದ್ದಾರೆ. ನರ್ಸಿಂಗ್ ಕಾಲೇಜು ಹಾಗೂ ಫಾರ್ಮಸಿ ಕಾಲೇಜುಗಳನ್ನು ಕೊಟ್ಟಿದ್ದಾರೆಂದು ಸತತವಾಗಿ ನಮ್ಮ ಅಂದಾಜು ಸಮಿತಿಯವರು ತಮ್ಮ ಕಾರ್ಯವ್ಯಾಪ್ತಿ ಮೀರಿ ನನಗೆ ಹಕ್ಕುಚ್ಯುತಿ ತಂದಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಿಯಮ 233ರ ಕೆಳಗೆ ತಾವು ನನಗೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷಿಣಿಯವರು : ಇದರ ಬಗ್ಗೆ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ತೀರ್ಮಾನ ಮಾಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ನನಗೆ ತಮ್ಮ ರಕ್ಷಣೆ ಬೇಕಾಗುತ್ತದೆ. ದುರುದ್ದೇಶದಿಂದ ಅಂದಾಜು ಸಮಿತಿಯವರು ನನ್ನ ಮೇಲೆ ನಾಲ್ಕು ವರದಿಗಳಲ್ಲಿ ಆಪಾದನೆ ಮಾಡಿದ್ದಾರೆ. ಅಂದಾಜು ಸಮಿತಿ ಇರುವುದು ಪುಟ್ಟಸ್ವಾಮಿ ಗೌಡರಿಗೋಸ್ಕರ ಎನ್ನುವ ಸಂಶಯ ಇವೊತ್ತು ರಾಜ್ಯದ ಜನತೆಗೆ ಬಂದಿದೆ. ಆದುದರಿಂದ ಈ ಒಂದು ದಿಸೆಯಲ್ಲಿ ಇದು ಚರ್ಚೆಗೆ ಅರ್ಹವಾದಂಥ ವಿಚಾರ. ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶಾಸನಾ ರಚನಾ ಕಾರ್ಯ ಕಲಾಪಗಳು.

1992ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ) ಮಾನ್ಯ ಉಪಾಧ್ಯಕ್ಷಿಣಿಯವರೆ, 1992 ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ಎರಡನೆ ತಿದ್ದು

ಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷಣಿಯವರು : ಪ್ರಸ್ತಾವ ಏನೆಂದರೆ "1992ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು)"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ) : ಮಾನ್ಯ ಉಪಾಧ್ಯಕ್ಷಿಣಿಯವರೇ, 1992ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷಣಿಯವ : ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ I

1993ರ ಕರ್ನಾಟಕ ಬಾಡಿಗೆ ನಿಯಂತ್ರಣ (ಪೂರ್ವಾನ್ವಯದಿಂದ ಅವಧಿ ವಿಸ್ತರಣೆ) ವಿಧೇಯಕ.

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಮಂತ್ರಿ) : ಮಾನ್ಯ ಉಪಾಧ್ಯಕ್ಷಿಣಿಯವರೆ, 1993ರ ಕರ್ನಾಟಕ ಬಾಡಿಗೆ ನಿಯಂತ್ರಣ (ಪೂರ್ವಾನ್ವಯದಿಂದ ಅವಧಿ ವಿಸ್ತರಣೆ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷಣಿಯವರು : ಪ್ರಸ್ತಾವ ಏನೆಂದರೆ, "1993ರ ಕರ್ನಾಟಕ ಬಾಡಿಗೆ ನಿಯಂತ್ರಣ (ಪೂರ್ವಾನ್ವಯದಿಂದ ಅವಧಿ ವಿಸ್ತರಣೆ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ರಾಜಶೇಖರ ಮೂರ್ತಿ : (ಕಂದಾಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷಿಣಿಯವರೆ, 1993ರ ಕರ್ನಾಟಕ ಬಾಡಿಗೆ ನಿಯಂತ್ರಣ (ಪೂರ್ವಾನ್ವಯದಿಂದ ಅವಧಿ ವಿಸ್ತರಣೆ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷಣಿಯವರು : ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ - I, II

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1992ನೇ ಸಾಲಿನ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, 1992 ನೇ ಸಾಲಿನ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಸಿ. ಬೈರೇಗೌಡ : ಬರೀ ಮಂಡನೆಯೋ ಅಥವಾ ಕನ್ಸಿಡರೇಷನ್ ಇದೆಯೋ?

ಉಪಾಧ್ಯಾಕ್ಷಣಿಯವರು : ಕನ್ಸಿಡರೇಷನ್ ಸಹ ಇದೆ.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಇದು ಬರೀ ತಾಂತ್ರಿಕವಾದಂಥ ಒಂದು ತಿದ್ದುಪಡಿ ಇದು ಕರ್ನಾಟಕ ತೆರಿಗೆ ಕಾನೂನುಗಳ ತಿದ್ದುಪಡಿ ವಿಧೇಯಕ very technical, it is a teachnical amendment ಅದೇನೆಂದರೆ, ಈಗ ವಾಣಿಜ್ಯ ತೆರಿಗೆಯ ಇಲಾಕೆಯಲ್ಲಿ ಹುದ್ದೆಗಳಳನ್ನು ಪುನರ್ನಾಮಕರಣ ಮಾಡಿದ್ದೇವೆ. ಅದರ ಪರಿಣಾಮವಾಗಿ ಸಂಬಂಧಪಟ್ಟ ತೆರೆಗಿಯ ಕಾನೂನುಗಳಲ್ಲಿ ಅದನ್ನು ಇನ್‌ಕಾರ್ಪೋರೇಟ್ ಮಾಡಬೇಕು. ರೀಡೆಸಿಗ್‌ನೇಟ್ ಮಾಡಬೇಕು. ಏಕೆಂದರೆ ಕೆಲವು ಕೇಸ್‌ನಲ್ಲಿ ಅಂದರೆ ಶಹದಾಅಲೀಸ್ ಮೊಕದ್ದಮೆಯಲ್ಲಿ ನಮ್ಮ ಉಚ್ಚನ್ಯಾಯಾಲಯದ ಪೂರ್ಣ ಪೀಠ ಜನಾರ್ದನಚಾರಿ ಮೊಕದ್ದಮೆಯಲ್ಲಿ ನಮ್ಮ ಉಚ್ಚನನ್ಯಾಯಾಲದ ವಿಭಾದ ಪೀಠದ ತೀರ್ಪನ್ನು ತಳ್ಳಿಹಾಕಿ ಅಧಿಸೂಚನೆಯ ಮೂಲಕ ಯಾವ ಸರಕುಗಳಿಗೆ ವಿನಾಯಿತಿ ನೀಡಲಾಗಿತ್ತೋ ಆ ಸರಕುಗಳ ವರ್ಗಕ್ಕೆ ಸಂಬಂಧಿಸಿದ ಯಾವುದೇ ನಮೂದನ್ನು ಸೇರಿಸುವ ಮೂಲಕ ವಿಧಿನಿಯಮದ ಸಸಂಗತ ತಿದ್ದುಪಡಿಯಾದುದರಿಂದ consequent on that ಈ ಅಧಿಸೂಚನೆಯನ್ನು ನಾವು ಸೇವ್ ಮಾಡಬೇಕಾಗುತ್ತದೆ. We have to save the clause. It is absolutely technical amendment. ಆದುದರಿಂದ ಇದರಲ್ಲಿ ಹೊಸ ತೆರಿಗೆಯ ಪ್ರಶ್ನೆಯೇ ಇಲ್ಲ, ಹೊಸ ಐಟಂಗಳು ಸೇರುವ ಪ್ರಶ್ನೆ ಇಲ್ಲ, ತಾಂತ್ರಿಕವಾದಂಥ ದೋಷವೊಂದನ್ನು ನಿವಾರಣೆ ಮಾಡುವುದಕ್ಕೆ to add the savaing clause, ಅಷ್ಟೇ ಬೇರೆ ಏನೂ ವಿಶೇಷವಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ತಾವು Section - 3 ರಲ್ಲಿ For the words " Profession" ಡೆಪ್ಯೂಟಿ ಕಮಿಷನರನ್ನು ಮಾಡುತ್ತಿದ್ದೀರಿ. ಯಾವ ಷಾವಾಲೆಸ್ ಕೇಸ್ ನಲ್ಲ ಹೈಕೋರ್ಟ ನವರು ಏನು ಆದೇಶವನ್ನು ಕೊಟ್ಟಿದ್ದಾರೆ ಅದರ ಮೇರೆಗೆ ತಾವು ತಾಂತ್ರಿಕವಾದ ತಿದ್ದುಪಡಿಯನ್ನು ತಂದಿದ್ದೀರಿ. ಅದಕ್ಕೆ ನಾನು ಕೆಲವು ಸಲಹೆಯನ್ನು ಸೂಚನೆ ಮಾಡುತ್ತಿದ್ದೇನೆ. ಇವತ್ತು ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಪೂರ್ಣವಾಗಿ ಬೆಂಗಳೂರಿನಿಂದಲೇ ನಿಯತ್ರಣ ಹೊಂದಿ ನಡೆಯುತ್ತಿದೆ. ಇಡೀ ರಾಜ್ಯದ ಜನತೆ ಈ ಇಲಾಖೆಗೆ ಸಂಬಂಧಪಟ್ಟಂತೆ ಯಾವುದೇ ಸಮಸ್ಯೆ ಇದ್ದರೂ ಸಹ ಅದಕ್ಕೆ ಬೆಂಗಳೂರಿಗೆ ಬರಬೇಕಾಗುತ್ತದೆ. ಇದಕ್ಕಾಗಿ ನಾನು ಹಿಂದೆ ಒಂದು ಸಲಹೆಯನ್ನು ಮಾಡಿದ್ದೆ ನೀವು ಜಾಯಿಂಟ್ ಕಮೀಷನರ್ ಅಥವಾ ಬೇರೆ ಯಾವ ಒಂದು ಡಿಸಿಗ್ ನೇಷನ್ ಕೊಡುತ್ತೀರಿ ಅದೇ ರೀತಿಯಲ್ಲಿ ವಿಭಾಗ ಮಟ್ಟದಲ್ಲಿ ಮಾಡಿದರೆ ಆ ಭಾಗದ ಜನರಿಗೆ ಅನುಕೂಲವಾಗುತ್ತದೆ. ಯಾವುದೇ ಒಂದು ಸಮಸ್ಯೆ ಇರಲಿ, ಅದು ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ ಯಾವುದೇ ಅಪೀಲ್ ಇರಬಹುದು. ಅಥವಾ ಕ್ಲಾರಿಫಿಕೇಷನ್ ಇರಬಹುದು. ವಿಭಾಗ ಮಟ್ಟದಲ್ಲಿ ಆ ರೀತಿ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ ಆದರೆ ಇವತ್ತು ಏನು ಮಾಡುತ್ತಿದ್ದೀರಿ ಎಂದರೆ, ಎಲ್ಲರೂ

ಬೆಂಗಳೂರಿಗೆ ಬರಬೇಕಾಗುತ್ತದೆ. ಈಗ ಧಾರವಾಡದಲ್ಲಿ ಡೆಪ್ಯೂಟಿ ಕಮಿಷನರ್ ಆಫ್ ಕಮರ್ಶಿಯಲ್ ಟ್ಯಾಕ್ಸ್ ಇದ್ದಾರೆ ಅದರ ಮೇಲೆ ಯಾವ ಒಂದು ಅಧಿಕಾರವಿಲ್ಲ. ಆದುದರಿಂದ ಒಂದು ಡಿವಿಷನ್‌ಗೆ ಅಲ್ಲದಿದ್ದರೂ ಕೂಡ 5-6 ಡಿವಿಷನ್‌ಗೆ ಒಬ್ಬರಂತೆ ಇಂಥ ಅಧಿಕಾರಿಗಳನ್ನು ನೇಮಕ ಮಾಡಿದರೆ ಆ ಇಲಾಯ ತಕರಾರುಗಳು ಬೇಗ ಡಿಸ್ ಪೋಸಲ್ ಆಗುತ್ತದೆ ಮತ್ತು ರೆವಿನ್ಯೂ ವಸೂಲಿ ಮಾಡುವ ದೃಷ್ಟಿಯಿಂದಲೂ ಸರಿಯಾದ, ಯೋಗ್ಯವಾಗಿ ಕ್ರಮತೆಗೆದುಕೊಳ್ಳಲು ಅನುಕೂಲವಾಗುತ್ತದೆ. ಆ ದೃಷ್ಟಿಯಿಂದ ಕೇವಲ ಅಧಿಕಾರಿಗಳ ಡೆಸಿಗ್‌ನೇಷನ್ ಬದಲಾವಣೆ ಮಾಡಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ.

ಇವತ್ತು ಹೈಕೋರ್ಟ್‌ನವರು ಷಾ ವಾಲೇಸ್ ಕೇಸ್‌ನಲ್ಲಿ ಒಂದು ಆದೇಶವನ್ನು ಕೊಟ್ಟಿದ್ದಾರೆ. ಆ ಪ್ರಕಾರ ತಾವು ತಾಂತ್ರಿಕವಾಗಿ ಒಂದು ತಿದ್ದುಪಡಿಯನ್ನು ತಂದಿದ್ದೀರಿ. ಅದರೆ ಡೆಸಿಗ್ನೇಷನ್ ಯಾವುದು ಇದ್ದರೂ ನಿಜವಾಗಿ ಇವತ್ತು ಕೂಡ ಕಮರ್ಷಿಯಲ್ ಟಾಕ್ಸ್ ಡಿಪಾರ್ಟ್‌ಮೆಂಟನಲ್ಲಿ ಸಾಕಷ್ಟು ಸಾಕಷ್ಟು ಭ್ರಷ್ಟಾಚಾರ ಬೆಳಿದಿದೆ. ತಮಗೆ ಉದಾಹರಣೆಯನ್ನು ಕೊಡುತ್ತೇನೆ. ಎಷ್ಟು ಹೇಳಿದರೆ ಅಷ್ಟಕ್ಕೆ ಮಾಡಿಕೊಡುತ್ತಾರೆ. ಹಣ ಹೇಗೆ ಬರುತ್ತದೆ. ಇದಕ್ಕೆ ಲಾಜಿಕ್ ಏನು? ಇದು ನಿಮ್ಮ ಕಾಲದಲ್ಲೇ ನಡೆಯುತ್ತಿದೆ ಎಂದು ನಾನು ಹೇಳುವುದಿಲ್ಲ. ನೀವು ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್ ಮೆಂಟಿಗೆ ಯಾವುದೇ ಟಾರ್ಗೆಟ್ ಕೊಟ್ಟರೂ ಅದನ್ನು ಅವರು ಪುಲ್‌ಫಿಲ್ ಮಾಡುತ್ತಾರೆ. ಅದರ ಅರ್ಥವೇನು? ಹಾಗಾಗಿ ಇವತ್ತು ಕಮರ್ಷಿಯಲ್ ಡಿಪಾರ್ಟಮೆಂಟ್‌ನಲ್ಲಿ ಏನು ಭ್ರಷ್ಟಾಚಾರ ಬೆಳೆದಿದೆ, ಲೂಪ್ ಹೋಲ್ಸ್ ಏನು ಇದೆ ಅದರ ಬಗ್ಗೆ ಕಾಂಪ್ರಹೆನ್ಸಿವ್ ಆಗಿ ತಾವು ಸ್ಟಡಿ ಮಾಡಬೇಕಾಗುತ್ತದೆ. ಕೇವಲ ಟೆಕ್ನಿಕಲ್ ಪೋಸ್ಟ್‌ಗಳನ್ನು ಮಾಡಿ ತಾವು ತಿದ್ದುಪಡಿಯನ್ನು ತಂದಿರುವುದರಿಂದಲೇ ನೀವು ಈ ಇಲಾಖೆಯಿಂದ ರೆವಿನ್ಯೂವನ್ನು ಕಲೆಕ್ಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಮತ್ತು ಜನರಿಗೂ ಅನುಕೂಲವನ್ನು ಮಾಡಿಕೊಡುವುದಕ್ಕೆ ಆಗುವುದಿಲ್ಲ. ಇವತ್ತು ಕೇವಲ ಜನರಿಗೆ ಬಹಳ ಕಿರುಕುಳ ನಡೆಯುತ್ತಿದೆ. ಭ್ರಷ್ಟಾಚಾರ ಬೆಳೆದಿದೆ. ಆದ್ದರಿಂದ ಇದರ ಬಗ್ಗೆ ಒಂದು ಕಾಂಪ್ರಹೆನ್ಸಿವ್ ಸ್ಟಡಿ ಮಾಡಿ ಕಮರ್ಷಿಯಲ್ ಆಕ್ಟ್ ಏನು ಇದೆ ಇದರ ಪ್ರಕಾರ ಇದರಲ್ಲಿ ಯಾವ ರೀತಿ ಅಡ್ಮಿನಿಸ್ಟ್ರೇಷನ್ ಇರಬೇಕು, ಯಾವ ರೀತಿ ಜನರಿಗೆ ಅನುಕೂಲವಾಗ ಬೇಕು, ಯಾವ ರೀತಿಯಲ್ಲಿ ಲೂಪ್ ಹೋಲ್ಸ್ ಇವೆ.ಏನು ಭ್ರಷ್ಟಾಚಾರ ಬೆಳೆದಿದೆ ಇದನ್ನು ತಡೆಹಿಡಿಯಬೇಕೆಂದು ಹೇಳಬಯಸುತ್ತೇನೆ. ನಾನು ಕೆಲವು ಉದಾಹರಣೆಗಳನ್ನು ಕೊಡುತ್ತೇನೆ, ಇವತ್ತು ಈ ಬಿಲ್ ಬರುತ್ತದೆಂದು ನನಗೆ ಗೊತ್ತಿರಲಿಲ್ಲ, ನಾನು ತಮಗೆ ಕೆಲವು ಉದಾಹರಣೆಗಳನ್ನು ಕಳುಹಿಸಿಕೊಡುತ್ತೇನೆ. ಹುಬ್ಬಳ್ಳಿಯಲ್ಲಿ ಒಬ್ಬ ಅಧಿಕಾರಿ ಎಲ್ಲಾ ಟ್ರೇಡ್‌ಗೆ, ಇಂಡಸ್ಟ್ರೀಸ್‌ಗೆ ಪ್ರತಿ ತಿಂಗಳು ಇನ್ಸಸ್ಟಾಲ್‌ಮೆಂಟ್ಸ್‌ನ್ನು ಮಾಡಿದ್ದಾರೆ. ನಾನು ಇದರ ಬಗ್ಗೆ ನಿನ್ನೆ ಒಂದು ಪತ್ರವನ್ನು ಬರೆದಿದ್ದೇನೆ. ಈಗ ಆ ವಿವರ ನನ್ನ ಹತ್ತಿರ ಇಲ್ಲ, ಇದೇ ರೀತಿ ಬೆಂಗಳೂರಿನಲ್ಲಿಯೂ ಕೂಡ ಅನೇಕ ಇಂತಹ ಉದಾಹರಣೆಗಳು ಇವೆ. ತಾವು ಏನು ಬಹಳ ಒಳ್ಳೆಯ ಸರ್ಕಾರವನ್ನು ಕೊಡುತ್ತೇವೆ. ಕಮರ್ಷಿಯಲ್ ಟಾಕ್ಸ್ ಇಲಾಖೆಯಲ್ಲಾಗಲಿ, ಎಕ್ಸೈಜ್ ಇಲಾಖೆಯಲ್ಲಾಗಲಿ ಟಾರ್ಗೆಟನ್ನು ಏನು ಜನರೇಟ್ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ ಅದರಲ್ಲಿ ಸಫಲವಾಗಬೇಕಾದರೆ ತಾವು ಎಲ್ಲಾ

ವಿಚಾರಗಳಲ್ಲೂ ಕಾಂಪ್ರೆಹೆನ್ಸೀವ್ ಆಗಿ ಸ್ಪಡಿ ಮಾಡಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕೇವಲ ಟೆಕ್ನಿಕಲ್ ತಿದ್ದುಪಡಿಯನ್ನು ತಂದು ಸಾಧನೆ ಮಾಡುವುದು ಸಾಧ್ಯವಿಲ್ಲವೆಂದು ನಾನು ಭಾವಿಸುತ್ತೇನೆ. He has taken them to ransom.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಹೇಳತಕ್ಕದ್ದು ಸರಿ. ಏಕೆಂದರೆ ಅಡಿಷನಲ್ ಕಮೀಷನ್‌ರ್ ಹುದ್ದೆ ಏನು ಇದೆ, ಅದು ಕೇವಲ ಬೆಂಗಳೂರಿಗೆ ಸೀಮಿತವವಾಗಿಲ್ಲ, ಬೆಂಗಳೂರು ಇಂತಹ ಎರಡು ಹುದ್ದೆಗಳಿವೆ. ಈಗಾಗಲೇ ಮೈಸೂರು, ಬೆಳಗಾಂ, ಮತ್ತು ದಾವಣಗೆರೆಯಲ್ಲಿ ಒಂದೊಂದು ಅಡಿಷನಲ್ ಕಮಿಷನರ್ ಹುದ್ದೆಗಳಿವೆ. ತಾವು ಹೇಳಿದಂತೆ ನಮ್ಮ ಆರ್ಗನೈಸೇಷನ್ನ ವರ್ಟಿಕಲ್ ಆಗಿ ಬೆಳೆಯಬಾರದು, ಹಾರಿಜಾಂಟಲ್ ಆಗಿ ಬೆಳೆಯಬೇಕಾಗುತ್ತದೆ. ಜನರಿಗೆ ನೇರವಾಗಿ ಅನುಕೂಲವಾಗುವಂತೆ ಅವರಿಗೆ ಸ್ಪಂದಿಸುವ ರೀತಿಯಲ್ಲಿ ಈ ಇಲಾಖೆಯಲ್ಲಿ ವ್ಯವಸ್ಥೆ ಇರಬೇಕಾಗುತ್ತದೆ, ರೂಪ ಇರಬೇಕಾಗುತ್ತದೆ. ತಮ್ಮ ಕೆಲವು ಸಲಹೆಗಳನ್ನು ನಾವು ಗಮನಕ್ಕೆ ತೆಗೆದುಕೊಂಡು ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

Sri. R.V.Deshpande : You have to find out. ನಮ್ಮ ಸರ್ಕಾರ ಇರಲಿ, ನಿಮ್ಮ ಸರ್ಕಾರ ಇರಲಿ ಏನು ಟಾರ್ಗೆಟ್ ಕೊಡುತ್ತೇವೆ, They have reached the target, How it is possible? 2,500 ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡಿಕೊಡಿ ಎಂದರೆ ಅಷ್ಟನ್ನು ಕಲೆಕ್ಟ್ ಮಾಡಿಕೊಡುತ್ತಾರೆ. What is the therefore you have to gind out. There is lot ofloopholes and lot of leakage ಏಕೆ ಆಗುತ್ತಿದದೆ ಎನ್ನುವುದರೆ ಬಗ್ಗೆ ತಾವು ಕಾಂಪ್ರೆಹೆನ್ಸಿವ್ ಆಗಿ ಸ್ಪಡಿ ಮಾಡಬೇಕಾಗುತ್ತದೆ. ರೀಕೇಜ್ ಏನಿದೆ ಅದನ್ನು ನಿಲ್ಲಿಸಬೇಕು.

ಉಪಾಧ್ಯಕ್ಷಣಿಯವರು : ಪ್ರಸ್ತಾವ ಏನೆಂದರೆ

1992ನೇ ಸಾಲಿನ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲಪ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 8 ರವರೆಗೆ

ಉಪಾಧ್ಯಕ್ಷಿಣಿಯವರು : ಖಂಡ 2 ರಿಂದ 8 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 8 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವನೇಂದರೆ "ಮೊದಲನೆ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿದೇಯಕಕ್ಕೆ ಸೇರಿಸಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷಣಿಯವರೇ, 1992ನೇ ಸಾಲಿನ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಣಿಯವರು : ಪ್ರಸ್ತಾವರ ಏನೆಂದರೆ 1992ನೇ ಸಾಲಿನ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಮಾಡಿರುವಂತೆ ಅಂಗೀಕರಿಸುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಉಪಾಧ್ಯಕ್ಷಣಿಯವರು : ಈಗ ಕರ್ನಾಟಕ ಅವಶ್ಯಕ ವಸ್ತುಗಳ (ನಿಯಂತ್ರಣ) ವಿಧೇಯಕ 1992

ಶ್ರೀ ಎಂ. ೀರಪ್ಪ ಮೊಯಿಲಿ :ಇದನ್ನು ನಾಳೆ ಮಾಡಬಹುದು. ಏಕೆಂದರೆ, I would like to have a relook on that 1992 ನೇ ಸಾಲಿನ ಕರ್ನಾಟಕ ಸಾರ್ವಜನಿಕ ಆ ವರಣಗಳ (ಅನಧಿಕೃತ ಆದಿಭೋಗದಾರರನ್ನು ಒಕ್ಕಲೆಬ್ಬಿಸುವ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) ಮಾನ್ಯ ಉಪಾಧ್ಯಕ್ಷಿಣಿಯವರೆ, ಇಸವಿಯ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಆಧಿಭೋಗದಾರರನ್ನು ಒಕ್ಕಲೆಬ್ಬಿಸುರ) ತಿದ್ದುಪಡಿ ವಿದೇಯಕವನ್ನು ಪರ್ಯಾಲೋಚಿಸಬೇಕೆಂದು. ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ವಾಟಾಲ್ ನಾಗರಾಜ್ : ನಾಳೆ ಇದನ್ನು ತೆಗೆದುಕೊಳ್ಳೋಣ.

ಶ್ರೀ ಆರ್. ವಿ.ದೇಶಪಾಂಡೆ : ನಿನ್ನೆ ರಾತ್ರಿ 8Ë30 ಗಂಟೆಯಾಯಿತು. ಇವತ್ತು ಇಲ್ಲೆ ಇದ್ದೇವೆ. ಆದ್ದರಿಂದ ನಾಳೆ ತೆಗೆದುಕೊಳ್ಳೋಣ. ಇವತ್ತು ಇಂಟ್ರಡ್ಯೂಸ್ ಮಾಡಲಿ. ಕೋರ್ಟ್ ಫೀಸ್ ಬಿಲ್ ತೆಗೆದುಕೊಂಡು ಮುಗಿಸೋಣ.

Sri C.Byregowda : The hon'ble Minister has already introduced. He cannot go back. It is going to be a procedural lapse.

ಶ್ರೀ ಎಂ. ರಾಜಶೇಖರ ಮೂರ್ತಿ : 1976 ರ ಕಾಯಿದೆ ಪ್ರಕಾರ ವಿಶ್ವವಿದ್ಯಾ ನಿಲಯವನ್ನು ಸ್ಥಾಪನೆ ಮಾಡಿದ್ದಾರೆ. 1963ರ ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯಗಳ ಅಡಿಯಲ್ಲಿ ಕೆಲವು ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಿದ್ದಾರರೆ. ಈ ಕಾರಣದಿಂದ ಇವುಗಳನ್ನು ಪಬ್ಲಿಕ್ ಪ್ರೆಮಿಸಸ್ ಎಂಬ ಅರ್ಥ ವ್ಯಾಪ್ತಿಯೊಳಗೆ ತರಬೇಕೆನ್ನುವ ಉದ್ದೇಶದಿಂದ ಮತ್ತು ಈ ಕಾಯಿದೆಯಿಂದ ಏನು ಪ್ರಯೋಜನವಿದೆ ಅದನ್ನು ಕೊಡಬೇಕೆಂದು ದೃಷ್ಟಿ ಯಿಂದ ತರಲಾಗಿದೆ. ಆದ್ದರಿಂದ ಇದನ್ನು ಒಪ್ಪಿಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಚರ್ಚೆ ನಾಳೆ ಇಟ್ಟುಕೊಳ್ಳೋಣ.

ಶ್ರೀ ಆರ್. ವಿ.ದೇಶಪಾಂಡೆ : ಇದರ ಬಗ್ಗೆ ಮಂತ್ರಿಗಳು ಹೇಳಿದ್ದಾರೆ. ಚರ್ಚೆ ನಾಳೆ ಮಾಡೋಣ.ಏನೂ ತೊಂದರೆಯಿಲ್ಲ.

1992ನೇ ಸಾಲಿನ ಕರ್ನಾಟಕ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮೌಲ್ಯ ನಿಗದಿ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಉಪಾಧ್ಯಕ್ಷಿಣಿಯವರೆ, 1992ನೇ ಸಾಲಿನ ಕರ್ನಾಟಕ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮೌಲ್ಯ ನಿಗದಿ (ತಿದ್ದುಪಡಿ) ವಿಧೇಯಕವನ್ನು ವಿಮರ್ಶೆಗೆ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಕ್ರಮ ಸಂಸದೀಯ ವ್ಯವಸಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಇದುವರೆವಿಗೂ ಕರ್ನಾಟಕದಲ್ಲಿ ದಾವೆಗಳ ಮೇಲೆ ಪ್ರತಿ ಶತ ಹತ್ತರಷ್ಟು ಕೋರ್ಟ್ ಫೀ ಸ್ಟಾಂಪ್‌ನ್ನು ನಾವು ಕೊಡಬೇಕಾಗಿದೆ. ಈ ವಿಷಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಪರಿಶೀಲನೆಗೆ ಬಂದು ಅವರು ಕೆಲವು ನಿಯಮಗಳನ್ನು ಹಾಕಿದ್ದಾರೆ. ಆ ನಿಯಮಗಳನ್ನು ಪ್ರತಿ ರಾಜ್ಯದವರು ಅನುಸರಿಸಬೇಕೆಂದು ಕೇಳಿ ಆದೇಶವನ್ನು ಕೊಟ್ಟಿದ್ದಾರೆ. ಅದು ಯಾವ ಆಧಾರದ ಮೇಲೆ ಕೊಟ್ಟಿದ್ದಾರೆಂದರೆ

"levy of court fee at rates reaching ten percent advaloram operates harshly and almost tends to price Justice out of the reach of mainly distressed litigants prescription of such high rates of court fee even in small claims as also without an upper limit in larger claims is perilessly close to arbitrariness and uncontitutionality.

ಇದನ್ನು ಹೇಳಿ ಅವರು ಮುಂದೆ ಗ್ರೆಡೇಷನ್ ನಿಗದಿ ಮಾಡಬೇಕೆಂದು ಹೇಳಿದ್ದಾರೆ. ಆ ಪ್ರಕಾರ ಈ ವಿಧೇಯಕದಲ್ಲಿ ನಾವು ನಿಗದಿ ಮಾಡಿದ್ದೇವೆ. ಮೊದಲನೆ 15,000ಕ್ಕೆ ಎರಡೂವರೆ ಪರ್ಸೆಂಟ್ ಮಾತ್ರ ಕೋರ್ಟ್ ಫೀ ಸ್ಟಾಂಪ್‌ನ್ನು ನಿಗದಿ ಮಾಡಿದ. 15,000ದಿಂದ 75,000ದವರೆಗೆ ಏಳೂವರೆ ಪರ್ಸೆಂಟ್ ಸುಪ್ರೀಂಕೋರ್ಟ್ ಹೇಗೆ ಹೇಳಿದೆಯೋ ಅದರಂತೆ ಮಾಡಿದೆ. ಅನಂತರ 75,000ರಿಂದ ಎರಡೂವರೆ ಲಕ್ಷದವರೆವಿಗೂ ಏಳು ಪರ್ಸೆಂಟ್ ಎರಡೂವರೆ ಲಕ್ಷದಿಂದ ಐದು ಲಕ್ಷದವರೆವಿಗೂ ಆರು ಪರ್ಸೆಂಟ್ ಐದು ಲಕ್ಷದಿಂದ ಏಳೂವರೆ, ಲಕ್ಷದವರಿಗೆ ಐದೂವರೆ ಪರ್ಸೆಂಟ್ ಹೀಗೆ ಕಡಿಮೆ ಮಾಡಿಕೊಂಡು ಬಂದು ಎಂಭತ್ತು ಲಕ್ಷದ ಮೇಲೆ ಅರ್ಧ ಪರ್ಸೆಂಟ್ ಕೋರ್ಟ್ ಫೀ ನಿಗದಿ ಮಾಡಿದೆ. ಈ ಅಧಿ ನಿಯಮದಿಂದ ಸರ್ಕಾರಕ್ಕೆ ಯಾವ ಲಾಭವು ಇಲ್ಲ, ಸರ್ಕಾರಕ್ಕೆ ಬರುತ್ತಿರುವ ಹಣ ಏಳೆಂಟು ಕೋಟಿ ಕಡಿಮೆಯಾಗುತ್ತದೆ. ಆದರೆ ಸರ್ವೋಚ್ಚ ನ್ಯಾಯಾಲಯದ ಒಂದು ಆದೇಶದಂತೆ ಮತ್ತು ಲಿಟಿಗೆಂಟ್ಸ್‌ಗೆ ಕಕ್ಷಿದಾರರುಗಳಿಗೆ ತೊಂದರೆಯಾಗದಂತೆ ಈ ಅಧಿನಿಯಮವನ್ನು ತಂದಿದೆ. ಸರ್ಕಾರಕ್ಕೆ ಸ್ವಲ್ಪ ನಷ್ಟವಾದರೂ ನ್ಯಾಯ ನಿರ್ವಹಣೆಯಲ್ಲಿ ಬೆಲೆ ಹೆಚ್ಚಬಾರದು ಎಂಬ ಸುಪ್ರೀಂಕೋರ್ಟ್

ಆದೇಶದಂತೆ ಈ ಒಂದು ತಿದ್ದುಪಡಿಯನ್ನು ತಂದಿದೆ. ಇದಕ್ಕೆ ಸಭೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಈ ಬಿಲ್ ಬಗ್ಗೆ ವಿವರವಾಗಿ ನಮ್ಮ ಸ್ನೇಹಿತರಂತಹ ಮಾನ್ಯ ಕೌಜಲಗಿಯವರು ಮಾತನಾಡುತ್ತಾರೆ. ತಾವು ಕೋರ್ಟ್ ಫೀ ರೆಡ್ಯೂಸ್ ಮಾಡಿದ್ದೀರಿ ಅದನ್ನು ನಾನು ಒಪ್ಪಿ ಕೊಳ್ಳುತ್ತೇನೆ. ಇದರಿಂದ ಸಾಕಷ್ಟು ನ್ಯಾಯ ಪಡೆಯಲಿಕ್ಕೆ ಬಡಜನರಿಗೆ ಅನುಕೂಲ ಆಗಬಹುದು ಆದರೆ ಇಲ್ಲಿ ಒಂದು ವಿಷಯವನ್ನು ತಾವು ಗಮನಿಸಬೇಕಾಗುತ್ತದೆ. ಇವತ್ತು ಕೋರ್ಟಿನಲ್ಲಿ ಫೈಲುಗಳು ಮೌಂಟ್ ಆಗುತ್ತದೆ. Justice delayed is justice divided ಇವತ್ತು ಜನ ಕೋರ್ಟಿಗೆ ಹೋಗಲಿಕ್ಕೂ ಭಯಪಡುತ್ತಿದ್ದಾರೆ. ಏತಕ್ಕೆಂದರೆ ಒಮ್ಮೆ ಕೋರ್ಟಿಗೆ ಹೋದರೆ ಇಪ್ಪತ್ತು ಮೂವತ್ತು ವರ್ಷಗಳು ವ್ಯಾಜ್ಯ ನಡೆಯುತ್ತಿರುತ್ತದೆ. ಹಾಗಾಗಿ ಕೋರ್ಟ್ ಫೀಸ್ ಕಡಿಮೆ ಮಾಡಿ ಮತ್ತೆ ಹೆಚ್ಚಿಗೆ ವ್ಯಾಜ್ಯಗಳು ನಿರ್ಮಾಣ ಆಗಬಾರದು, ದುರುಪಯೋಗವಾಗಬಾರದು. ಈ ಕೋರ್ಟ್ ಫೀ ಕಡಿಮೆಯಾಗಲಿಲ್ಲವೆಂದರೆ ಮತ್ತೊಂದು ಕೋರ್ಟಿಗೆ ಹೋಗೋಣವಂತೆ. ಹಾಗಾಗಿ ಇವತ್ತು ಅದರ ದುರುಪಯೋಗವಾಗಬಾರದು ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಯಾವ ಪ್ರಕಾರ ಕೋರ್ಟ್‌ಗಳಲ್ಲಿ ಲಿಟಿಗೇಷನ್ ಇದೆ. ಅದನ್ನು ಬಗೆಹರಿಸುವ ಕಡೆ ಗಮನಹರಿಸಬೇಕು. ಈಗ ಲೋಕ್ ಅದಾಲತ್‌ಗಳಿವೆ. other judicials ಹೆಚ್ಚು ಮಾಡಿ. ಈಗ ಬ್ಯಾಂಕ್ ಸೂಟ್‌ಗಳಲ್ಲಿ ಮಾಡಲಿಕ್ಕೆ ಆಗುವುದಿಲ್ಲ. ಏಕೆಂದರೆ ಬ್ಯಾಂಕ್‌ನವರು ಒಪ್ಪಿಕೊಳ್ಳುವುದಿಲ್ಲ. ಅಲ್ಲಿ ಹೆಚ್ಚಿನ ಕೇಸ್ ರೆಫರ್ ಮಾಡಿದರೆ ಕೋರ್ಟಿನ ಮೇಲೆ ಬರ್ಡನ್ ಕಡಿಮೆ ಬೀಳಬಹುದು. ಮತ್ತು ಅಲ್ಲಿ ಏನು ಒಂದು ಡಿಸಿಷನ್ ಆಗುತ್ತದೆ, ಅದು ಒಂದು ಸೌಹಾರ್ದತೆ ಮತ್ತು ಪ್ರೀತಿ ವಿಶ್ವಾಸದಿಂದ ಆಗುತ್ತದೆ. ಕೋರ್ಟಿನಲ್ಲಿ ಯಾವುದೇ ಪಾರ್ಟಿಯಿಂದ ಫಾರ್ ಅಂಡ್ ಎಗೆನೆಸ್ಟ್ ಡಿಸಿಷನ್ ಆದರೆ ಅದು ಹೈಕೋರ್ಟಿ ತನಕ ಸುಪ್ರೀಮ್ ಕೋರ್ಟಿ ತನಕ ಹೋಗುತ್ತದೆ. ಹಾಗಾಗಿ ಲೋಕ್ ಅದಾಲತ್ ರೋಲನ್ನು ತಾವು ಹೆಚ್ಚು ಬೆಳಸಲಿಕ್ಕೆ ಪ್ರಯತ್ನ ಮಾಡಬೇಕು. ಅದರ ಸ್ಕೋಪ್‌ನ್ನು ವೈಡನ್ ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಮತ್ತು ಲಿಟಿಗೇಷನ್ ಏನಿದೆ ಅದನ್ನು ಆದಷ್ಟು ಬೇಗನೆ ಡಿಸ್‌ಪೋಸ್ ಮಾಡಲಿಕ್ಕೆ ಮತ್ತು ಲಿಟಿಗೆಂಟ್ಸ್‌ಗೆ ಯಾವ ಪ್ರಕಾರವಾಗಿ ಆದಷ್ಟು ಬೇಗನೆ ಪರಿಹಾರ ಕೊಡಲಿಕ್ಕೆ ಸಾಧ್ಯವಿದೆ ಆ ಪ್ರಕಾರವಾಗಿ ತಾವು ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ ಶ್ರೀ ಜೆ.ಸಿ. ಮಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಲಮ್‌ಸಮ್ ಅಮೌಂಟ್ ಫಿಕ್ಸ್‌ಮಾಡಿ ಅದರಮೇಲೆ ಪರ್ಸೆಂಟೇಜ್ ಕಳೆದಿದೆಯೇ ಅಥವಾ ತಾವು ಹೇಳಿದಹಾಗೆ ಬರೀ ಪರ್ಸೆಂಟೇಜ್‌ನ್ನೇ ಈ ಬಿಲ್‌ನಲ್ಲಿ ಇಂಟ್ರಡ್ಯೂಸ್ ಮಾಡಿದ್ದೀರಾ ತಾವು ಹೇಳಬೇಕಾದರೆ ಲಿಮ್‌ಸಮ್ ಅಮೌಂಟ್ 20 ಲಕ್ಷದಿಂದ 80 ಲಕ್ಷದವರೆಗೆ ಇಷ್ಟು ಎನ್ನುವುದನ್ನು ಬಿಟ್ಟ ಹೇಳಿದ್ದೀರೆಂದು ನನ್ನ ಭಾವನೆ. ಸ್ವಲ್ಪ ತಾವು ಬಿಲ್ಲನ್ನು ಓದಿ ಹೇಳಬೇಕಾಗುತ್ತದೆ. ತಾವು 7 ಲಕ್ಷದಿಂದ 5 ಲಕ್ಷದವರೆಗೆ ಇಷ್ಟು ಪ್ಲಸ್ ಅರ್ಧ ಪರ್ಸೆಂಟ್ ಎಂದು ತಾವು ಏನು ಹೇಳಿದಿರಿ ಅದನ್ನು ತಾವು ಬ್ರಿಫಿಂಗ್‌ನಲ್ಲಿ ಹೇಳಲಿಲ್ಲ.

6.10 ಪಿ.ಎಂ

+ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಕಾನೂನು ಸಚಿವರು ಇದು ಬಡವರಿಗೆ ಭಾರವಾಗುತ್ತದೆ. ಹೆಚ್ಚಿನ ಕೋರ್ಟ್ ಫೀ ಆದರೆ ಅವರು ನ್ಯಾಯಾಲಯಗಳಿಗೆ ಹೋಗಿ ಶುಲ್ಕ ಕೊಡುವುದಕ್ಕೆ ತೊಂದರೆಯಾಗುತ್ತದೆಂದು ಸರ್ವೋಚ್ಚ ನ್ಯಾಯಾಲಯ ಆದೇಶ ಕೊಟ್ಟಿದೆ. ಆ ಪ್ರಕಾರ ತಿದ್ದುಪಡಿ ತಂದಿದ್ದೇವೆಂದು ಹೇಳಿದರು. ನಿಜ ಸರ್ವೋಚ್ಚ ನ್ಯಾಯಾಲಯ ಬಡವರಿಗೆ ಭಾರವಾಗಬಾರದು, ಅವರು ನ್ಯಾಯಾಲಯಗಳಿಗೆ ಹೋಗಿ ನ್ಯಾಯ ಪಡೆಯುವುದಕ್ಕೆ ಸಹಕಾರಿಯಾಗಬೇಕೆಂದು ಕೊಟ್ಟಂತಹ ನಿರ್ಣಯ ಆದೇಶ ಏನಿದೆ, ಆ ಆದೇಶಕ್ಕೆ ಅನುಗುಣವಾಗಿದೆಯೆಂದು ಮಾನ್ಯ ಸಚಿವರು ಹೇಳುತ್ತಾರೆ. ಆದರೆ ಆ ಆದೇಶದ ಪೂರ್ಣ ಅರ್ಥ ಬರುವ ರೀತಿಯಲ್ಲಿ ಈ ತಿದ್ದುಪಡಿ ಇಲ್ಲ ಏಕೆಂದರೆ, ಇಲ್ಲಿಯವರೆಗೆ 15,000ರೂಪಾಯಿಗಳವರೆಗೆ ಇವರು ಕಡಿಮೆ ಮಾಡಿದ್ದಾರೆ. 15,000 ರೂಪಾಯಿಗಳು ಎಂದರೆ ಇವತ್ತಿನ ಆಸ್ತಿ ಮೌಲ್ಯ ಎಷ್ಟಾಗುತ್ತದೆ? ಇವರೇ ಸಬ್‌ರಿಜಿಸ್ಟ್ರಾರ್‌ರವರ ಕಛೇರಿಯಲ್ಲಿ ಮಾಡುವುದಕ್ಕೆ ಆದೇಶ ಕೊಟ್ಟಿದ್ದಾರೆ. ಹಳ್ಳಿಗಳಲ್ಲಿ 500-600 ರೂಪಾಯಿಗಳಿಗೆ ಮಾರಾಟವಾಗತಕ್ಕ ಜಾಗವನ್ನು 10,000 ರೂಪಾಯಿ ನೋಂದಾವಣೆ ಮಾಡಿಸಬೇಕೆಂದು ಆಗುತ್ತದೆ. ಖರೀದಿ ಮಾಡಿದ್ದು ಐದು ನೂರು ರೂಪಾಯಿಗಳಿಗಾದರೆ ಸರ್ಕಾರದ ಡೈರೆಕ್ಷನ್ ಪ್ರಕಾರ 10,000 ರೂಪಾಯಿಗಳಿಗೆ ನೋಂದಾಯಿಸಲೇಬೇಕು. ಈ ರೀತಿ ಮಾಡಿದ್ದಾರೆ, ಮತ್ತೆ 15,000 ಇಟ್ಟರೆ ಆಸ್ತಿ ಮೌಲ್ಯ ಹೆಚ್ಚಾಗುತ್ತದೆ. ಕನಿಷ್ಠ ಪಕ್ಷ ಸಣ್ಣ ಪುಟ್ಟ ವ್ಯಾಜ್ಯಗಳು, ಒಂದು ಜಾಗದ ವ್ಯಾಜ್ಯ, ಸಣ್ಣಪುಟ್ಟ ಜಮೀನಿನ ವ್ಯಾಜ್ಯ ಇರಬಹುದು, ಅಂತಹವರಿಗೆ ಅನುಕೂಲವಾಗುವ ರೀತಿಯಲ್ಲಿ 15,000 ರೂಪಾಯಿಗಳು ಇರುವುದನ್ನು 40,000 ರೂಪಾಯಿಗಳಿಗೆ ಏರಿಸಿದರೆ ಮಾತ್ರ ಇದು ಅರ್ಥಪೂರ್ಣವಾಗುತ್ತದೆ. ನ್ಯಾಯಾಲಯಗಳಿಗೆ ಹೋಗಿ ಬಡವರು ನ್ಯಾಯ ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿ ಮಾಡಬೇಕು. ಎರಡನೆಯದಾಗಿ ಸಹಕಾರ ಸಂಘಗಳಲ್ಲಿ ರೈತರು, ಕೂಲಿಗಾರರು, ಬಡವರು ಐ.ಆರ್.ಡಿ.ಪಿ ಸಾಲ ತೆಗೆದುಕೊಂಡರೆ ಅಲ್ಲಿ ಕೋರ್ಟ್ ಫೀ ಇಲ್ಲ, ಅಲ್ಲಿ ಕೇವಲ 10,20 ರೂಪಾಯಿಗಳನ್ನು ಎಪಿಎಂಸಿ ಯವರು ತೋರಿಸುತ್ತಾರೆ. ಅಲ್ಲಿ ಸಾಲ ಮರುಪಾವತಿ ಮಾಡುವುದಕ್ಕೆ ಬಡವರಿಗೆ, ರೈತರಿಗೆ ಭಾರವಾಗುವುದಿಲ್ಲ. ರಾಷ್ಟ್ರೀಕೃತ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು ನ್ಯಾಯಾಲಯಗಳಿಗೆ ಹೋಗುವುದರಿಂದ 100ಕ್ಕೆ 10ರಷ್ಟು ಕೋರ್ಟ್ ಫೀ ತುಂಬಬೇಕಾಗುತ್ತದೆ ಮತ್ತು ವಕೀಲರ ಫೀಸ್ 100ಕ್ಕೆ 10ರಷ್ಟು ಕೊಡಬೇಕಾಗುತ್ತದೆ. ಐಆರ್‌ಡಿಪಿ ಸಾಲ ಪಡೆಯತಕ್ಕ ಜನರಿಗೆ, ಬಡವರಿಗೆ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ, ಸಾಲ ಪಡೆಯುವರಿಗೆ ಭಾರವಾಗದಂತೆ ಮತ್ತು ಕೃಷಿ ಕಾರ್ಮಿಕರ ಹಾಗೂ ಬಡವರ ಸಾಲಗಳಿಗೆ ಕೋರ್ಟ್ ಫೀಯನ್ನು ಇದೇ ರೀತಿ ಒಂದೆರಡು ರೂಪಾಯಿಗಳನ್ನು ನಾಮಿನಲ್ ಆಗಿ ಇಡಬೇಕು. ಈಗಿರತಕ್ಕ ಹೆಚ್ಚಿನ ಕೋರ್ಟ್ ಪೀಯನ್ನು ಕಡಿಮೆ ಮಾಡಬೇಕು. ಈ ತಿದ್ದುಪಡಿಗೆ ನಿಜವಾದ ಅರ್ಥ ಬರಬೇಕೆಂದರೆ ಈ ರೀತಿ ಮಾಡಬೇಕೆಂದು ಸಲಹೆ ಮಾಡಿ ಮಾನ್ಯ ಸಭಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಸ್.ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತಿನ ದಿವಸ ಮಾನ್ಯ ಕಾನೂನು ಸಚಿವರು ತಂದಿರತಕ್ಕಂತಹ ಮಸೂದೆ

1989ರ ಸುಪ್ರೀಕೋರ್ಟ್ ಆದೇಶದ ಪುಟ 100ಕ್ಕೆ ಅನುಗುಣವಾಗಿ ತರಲಾಗಿದೆ. ಇವತ್ತಿನ ದಿವಸ ಇಡೀ ರಾಷ್ಟ್ರದಲ್ಲಿ ಅತಿ ಹೆಚ್ಚಿನ ಕೋರ್ಟ್ ಫೀ ತುಂಬತಕ್ಕ ರಾಜ್ಯ ಅಂದರೆ ಕರ್ನಾಟಕ ರಾಜ್ಯ ಎರಡನೆಯದು ರಾಜಸ್ಥಾನ, ಮೂರನೆಯದು ಗುಜರಾತ್, ಆ ಕಾಲಕ್ಕೆ ಸುಪ್ರೀಂ ಕೋರ್ಟ್‌ನವರು ಇಡೀ ರಾಷ್ಟ್ರದಲ್ಲಿ ಹೆಚ್ಚಿಗೆ ಕೋರ್ಟ್ ಫೀಯನ್ನು ವಸೂಲು ಮಾಡುವ ರಾಜ್ಯಗಳೆಂದರೆ ಕರ್ನಾಟಕ, ರಾಜಸ್ಥಾನ, ಗುಜರಾತ್ ಎಂದು ಹೇಳಿದ್ದಾರೆ. ಗಣನೆಗೆ ತೆಗೆದುಕೊಂಡರೆ ಅವರು ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಆ ಕಾಲಕ್ಕೆ ಅವರು ಕೆಲವೊಂದು ಸಲಹೆಗಳನ್ನು ಕೊಟ್ಟಿದ್ದಾರೆ. ಏನೆಂದರೆ, ಬಡವರಿಗೆ ಉಚಿತ ಕಾನೂನು ನೆರವು ನೀಡಬೇಕೆಂದು ಸರ್ಕಾರದ ನಿಯಮ ಇದ್ದಾಗ ಹೆಚ್ಚಿಗೆ ಶುಲ್ಕ ವಿಧಿಸುವುದರಿಂದ ಅನುಕೂಲವಾಗುವುದಿಲ್ಲವೆಂಬ ಉದ್ದೇಶದಿಂದ ಅವರು ಈವತ್ತಿನ ದಿವಸ ತಮಗೆ ಕೆಲವು ಮಾರ್ಗ ಸೂಚನೆಗಳನ್ನು ಮಾಡಿದ್ದಾರೆ. ಆದಕಾರಣ ಮುಖ್ಯವಾಗಿ ನಾನು ಸಲಹೆ ಕೊಡುವುದು ಏನೆಂದರೆ, 10-15 ಸಾವಿರ ರೂಪಾಯಿಗಳವರೆಗಿನ ಯಾವುದೇ ವ್ಯವಹಾರಕ್ಕೆ ದಯಮಾಡಿ ಯಾವುದೇ ಕೋರ್ಟ್ ಫೀ ತೆಗೆದುಕೊಳ್ಳಬೇಡಿ. ಇವತ್ತಿನ ದಿವಸ ನೀವು 15,000 ಸಾವಿರ ರೂಪಾಯಿಗಳವರೆಗೆ ಕೋರ್ಟ್ ಫೀ ತೆಗದುಕೊಂಡಾಗ ಸರ್ಕಾರಕ್ಕೆ ಬರುವಂಥಾದ್ದು 375 ರೂಪಾಯಿಗಳು. ತಾವು ತಂದಂತಹ ಮಸೂದೆ ಪ್ರಕಾರ ಸರ್ಕಾರಕ್ಕೆ ಬರುವುರು 375 ರೂಪಾಯಿ ಕರ್ನಾಟಕ ರಾಜ್ಯ ಇವತ್ತಿನ ದಿವಸ ಸುಧಾರಿಸಿ ಮಾದಿರಿ ರಾಜ್ಯವಾಗಿದೆ. ಆದಕಾರಣ 10,15 ಸಾವಿರ ರೂಪಾಯಿಗಳವರೆಗೆ ಯಾವುದೇ ಕೋರ್ಟ್ ಫೀ ಇಲ್ಲವೆಂಬ ಉದ್ದೇಶದಿಂದ ತಾವು ಎಕ್ಸೆಮ್ಷನ್ ಮಾಡಬೇಕು. ಉಳಿದಿದ್ದು ಮೊದಲು 10 ಪರ್ಸೆಂಟ್ ಏನಿತ್ತು ಅದರ ಪ್ರಕಾರ ಇವತ್ತಿನ ದಿವಸ 80,000 ಇದ್ದಾಗ 8,000 ಕೊಡಬೇಕಾಗಿತ್ತು. 8 ಲಕ್ಷ ಇದ್ದಾಗ 80,000 ಕೊಡಬೇಕಾಗಿತ್ತು. ಅದನ್ನು ಕಡಿಮೆ ಮಾಡಿದ್ದೀರಿ. ನನ್ನ ಮುಖ್ಯ ಸಲಹೆ ಏನೆಂದರೆ, ಬ್ಯಾಂಕಿನ ವ್ಯವಹಾರವನ್ನು ತಾವು ನೋಡಬಹುದು.

ಹೆಚ್ಚಾಗಿ ನೋಕಾರರು, ಬಡಬಗ್ಗರೇ ಕೋರ್ಟಿಗೆ ಹೋಗುತ್ತಾರೆ. ಅವರು ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಂಡಿರುತ್ತಾರೆ. ಇವತ್ತು ಹೆಚ್ಚಾಗಿ ರಾಷ್ಟ್ರೀಕೃತ ಬ್ಯಾಂಕುಗಳ ಕೇಸುಗಳ ಪ್ರತಿಯೊಂದು ಕೋರ್ಟಿನಲ್ಲಿ ಇರುತ್ತವೆ. ಆದಕಾರಣ ಬಡವರಿಗೆ ಅನುಕೂಲ ಮಾಡುವ ಉದ್ದೇಶದಿಂದ ತಾವು 10 ಸಾವಿರದಿಂದ 15 ಸಾವಿರದವರೆಗೆ ಯಾವುದೇ ಕೋರ್ಟ್ ಫೀ ಚಾರ್ಜ್ ಮಾಡಬಾರದು. ಇನ್ನು ಉಳಿದ ವಿಚಾರಗಳು ಸುಪ್ರೀಮ್ ಕೋರ್ಟ್ ಜಡ್ಜ್ ಮೆಂಟಿಗೆ ಅನುಗುಣವಾಗಿ ಇರುವುದರಿಂದ ಅದನ್ನು ಸ್ವಾಗತ ಮಾಡಿ, ಈಗ ನಾನು ಹೇಳಿದ ವಿಚಾರಗಳ ಬಗ್ಗೆ ತಿದ್ದುಪಡಿ ತರಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್‍ನಹಳ್ಳಿ ರಾಮಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರಾದ ದೇಶಪಾಂಡೆಯವರು ಬಹಳ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಈ ನ್ಯಾಯ ನಿರ್ವಹಣೆ ಕ್ಷೇತ್ರದಲ್ಲಿ ನ್ಯಾಯ ನಿರ್ವಹಣೆ ತಡವಾಗದೆ ಇರತಕ್ಕದ್ದು ಎಲ್ಲರ ಯೋಜನೆಗಳನ್ನು ಮಾಡಿ ಫ್ಯಾಮಿಲಿ ಕೋರ್ಟ್ಸ್ ಎಂದು ಮಾಡಿದೆ. ಸಂಸಾರಕ್ಕೆ ಸಂಬಂಧಪಟ್ಟ ಹಾಗೆ ವ್ಯವಹಾರಗಳು ಬೇಗ ತೀರ್ಮಾನವಾಗಲಿ ಎಂದು ಮಾಡಿದೆ. ಅವರು ಹೇಳಿದಹಾಗೆ ಲೋಕ್ ಅದಾಲತ್ ಈಗ ಕರ್ನಾಟಕದಲ್ಲಿ ಬಹಳ ತ್ವರಿತವಾಗಿ ನಡೆಯುತ್ತಿದೆ. ನಮ್ಮಲ್ಲಿ 1 ಸಾವಿರ ಕ್ಯಾಂಪ್‌ಗಳಿಗಿಂತ ಹೆಚ್ಚಾಗಿ ನಡೆದಿದೆ. ಇದಕ್ಕೆ ಸಾಕಷ್ಟು ಬೆಂಬಲವನ್ನು ಸರ್ಕಾರ ಕೊಡುತ್ತಾ ಇದೆ. ಲೋಕ್

ಅದಾಲತ್ ಮೂಲಕ ಈಗಾಗಲೇ 30ರಿಂದ 40 ಸಾವಿರ ಕೇಸ್‌ಗಳು ತೀರ್ಮಾನವಾಗಿದೆ. ಆದ್ದರಿಂದ ಈ ಒಂದು ಮಾರ್ಗದಲ್ಲಿ ಬೇಗ ಬೇಗ ನ್ಯಾಯ ದೊರಕಬೇಕೆನ್ನುವುದು ಸರ್ಕಾರದ ಉದ್ದೇಶ. ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಶ್ರೀಮಾನ್ ಬನ್ನಿಕ್ಲೋಡ್‌ರವರು ಮತ್ತು ಕೌಜಲಗಿಯವರ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಈಗ 15 ಸಾವಿರ ರೂಪಾಯಿಗಳ ದಾವೆಗೆ 1500 ರೂಪಾಯಿ ಕೋರ್ಟ್ ಫೀ ಕೊಡಬೇಕಾಗಿತ್ತು. ಅದು 35 ರೂಪಾಯಿಗಳಿಗೆ ಇಳಿದಿದೆ. ಎಂದರೆ ನಾಲ್ಕನೇ ಒಂದು ಭಾಗಕ್ಕೆ ಇಳಿಯಿತು. ಇದು ಮೊದಲನೆ ಹೆಜ್ಜೆಯೆಂದು ತಿಳಿದುಕೊಳ್ಳಿ. ಇವತ್ತು ದಾವ ಹಾಕುವವರು ಯಾರೆಂದರೆ ಸಾಲ ಕೊಟ್ಟವರು ಹಾಕುತ್ತಾರೆ. ಬಡವರು ಸಾಲ ತೆಗೆದುಕೊಂಡಿರುತ್ತಾರೆ. ಹಣ ಉಳ್ಳವರು ಹಣ ಕೊಟ್ಟಿರುತ್ತಾರೆ. ಈ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳುವುದು ಬಹಳ ಮುಖ್ಯ. ಪ್ರೈವೇಟ್ ಲೆಂಡಿಂಗ್ ಏನಿದೆ practically it is non-existing ಈ ಡೆಟ್ ರಿಲೀಫ್ ಕಾನೂನು ಬಂದಮೇಲೆ ಖಾಸಗಿಯವರು ಸಾಲ ಕೊಡುವುದು, ತೆಗೆದುಕೊಳ್ಳುವುದು ಬಹಳ ಕಡಿಮೆಯಾಗಿದೆ. ಇವತ್ತು ಸಾಲವನ್ನು ಸಹಕಾರ ಸಂಘಗಳಲ್ಲಿ ಅಥವಾ ಬ್ಯಾಂಕುಗಳಲ್ಲಿ ತೆಗೆದುಕೊಳ್ಳಬೇಕು. ಈ ಆಫೀಸನ್ನು ಬ್ಯಾಂಕಿನವರು ಕಟ್ಟಬೇಕಾಗುತ್ತದೆ. ಸಹಕಾರ ಸಂಘದವರು ಇವತ್ತು ಪ್ರತ್ಯೇಕವಾದ ಕಾನೂನು ಪ್ರಕಾರ ಕಟ್ಟಬೇಕಾಗಿಲ್ಲ. ಆದ್ದರಿಂದ ಇದು ಜನರಿಗೆ ಹೊರೆಯಾಗುವುದಿಲ್ಲ. ಈಗ ಜನಗಳ ಮೇಲೆ ಇದ್ದಂತಹ ಹೊರೆಯನ್ನು ಕಡಿಮೆ ಮಾಡುವುದಕ್ಕೋಸ್ಕರ ಈ ಕಾನೂನನ್ನು ತೆಗೆದುಕೊಂಡು ಬಂದಿದೆ. ಇದಕ್ಕಿಂತ ಕಡಿಮೆ ಮಾಡುವುದು ಸದ್ಯಕ್ಕೆ ಸಾಧ್ಯವಾಗುವುದಿಲ್ಲ.

ಮಾನ್ಯ ಮಿತ್ರರು ಮಾತನಾಡುತ್ತಾ 7ಪರ್ಸೆಂಟ್ ಮತ್ತು 6 ಪರ್ಸೆಂಟ್ ಒಟ್ಟಾರೆ ಇದೆಯೆಂದು ಹೇಳಿದರು. ಹಾಗಲ್ಲ. ಮೊದಲ 15,000ಕ್ಕೆ 375 ರೂಪಾಯಿ ಬರುತ್ತದೆ. ಅಲ್ಲಿಂದ ಎಂದರೆ 15,000ದಿಂದ ಮುಂದೆ 75,000ವರೆಗೆ ಮಧ್ಯದಲ್ಲಿ ಏಳೂವರೆ ಪರ್ಸೆಂಟ್‌ಆಗುತ್ತದೆ. ಎಂದರೆ ಒಟ್ಟಿಗೆ 4,875 ರೂಪಾಯಿಗಳು ಆಗುತ್ತದೆ. ಹೀಗೆ ಆ ಲಿಮಿಟಿಗೆ ಎಷ್ಟು ಆಗುತ್ತದೋ ಅದರ ಜೊತೆಗೆ ಸೇರಿಸಿಕೊಂಡು ಕಡಿಮೆ ರೇಟಿನಲ್ಲಿ ತೆಗೆದುಕೊಂಡಿದೆ. ಆದ್ದರಿಂದ ಇದು ಎಲ್ಲಾ ದೃಷ್ಟಿಯಿಂದಲೂ ಉಪಯುಕ್ತವಾಗುತ್ತದೆ. ಮತ್ತು ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಇದೆ ಹಾಗೂ ಜನರ ಅಪೇಕ್ಷೆಯಂತೆ ಇದೆ. ಆದುದರಿಂದ ಇದನ್ನು ತಾವೆಲ್ಲರೂ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು : ಪ್ರಸ್ತಾಪ ಏನೆಂದರೆ "1992ನೇ ಸಾಲಿನ ಕರ್ನಾಟಕ ನ್ಯಾಯಾಲಯ ಫೀಸುಗಳ ಮತ್ತು ದಾವೆಗಳ ಮೌಲ್ಯ ನಿಗದಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ-2

ಉಪಾಧ್ಯಕ್ಷಿಣಿಯವರು : "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ 2 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ "ಮೊದಲನೆ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

(ಮೊದಲನೇ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹೀತೆಗಳನ್ನು ಈ ವಿಧೇಯಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ, 1992ನೇ ಸಾಲಿನ ಕರ್ನಾಟಕ ನ್ಯಾಯಾಲಯ ಫೀಸುಗಳ ಮತ್ತು ದಾವೆಗಳ ಮೌಲ್ಯ ನಿಗದಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ "1992ನೇ ಸಾಲಿನ ಕರ್ನಾಟಕ ನ್ಯಾಯಾಲಯ ಫೀಸುಗಳ ಮತ್ತು ದಾವೆಗಳ ಮೌಲ್ಯ ನಿಗದ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಉಪಾಧ್ಯಕ್ಷಿಣಿಯವರು : ಸಭೆ ಈಗ ಮುಕ್ತಾಯವಾಗಿ ಮತ್ತೆ ನಾಳೆ ಬೆಳಿಗ್ಗೆ 11-00 ಗಂಟೆಗೆ ಸಮವೇಶಗೊಳ್ಳುವುದು

(ಸದನವು 6 ಗಂಟೆ 22 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ 6ನೇ ಜನವರಿ ಮಾಹೆ 1993ರ ಬುಧವಾರರಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

ಅನುಬಂಧ -I

ಕರ್ನಾಟಕ ವಿಧಾನ ಸಭೆ

(ಒಂಭತ್ತನೆಯ ವಿಧಾನ ಸಭೆ)

ಎಂಟನೆಯ ಅಧಿವೇಶನ

ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ 1992

(1992ರ ವಿಧಾನ ಸಭಾ ವಿಧೇಯಕ ಸಂಖ್ಯೆ, 33)

1979ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ 1979ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮವನ್ನು (1979ರ ಕರ್ನಾಟಕ ಅಧಿನಿಯಮ 27) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಭಾರತ ಗಣರಾಜ್ಯದ ನಲವತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕುದು.

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**-(1) ಈ ಅಧಿನಿಯಮವನ್ನು, ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ಎರಡನೇ ತಿದ್ದುಪಡಿ)ಅಧಿನಿಯಮ 1992, ಎಂದು ಕರೆಯತಕ್ಕುದು.

2) ಇದು,1992ರ ಆಗಸ್ಟ್ 1ನೇ ದಿನದಿಂದ ಜಾರಿಗೆ ಬಂದಿದೆಯಾಗಿ ಭಾವಿಸತಕ್ಕುದು.

2. **3ನೇ ಪ್ರಕರಣದ ತಿದ್ದುಪಡಿ** -(ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿತವಾಗುವ 1979ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮದ (1979ರ ಕರ್ನಾಟಕ ಅಧಿನಿಯಮ 27) 3ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿಬರುವ "ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ" ಎಂಬ ಪದಗಳ ಬದಲಾಗಿ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಉತ್ತರಾನ್ವಯವಾಗಿಯಾಗಲಿ ಅಥವಾ ಪೂರ್ವಾನ್ವಯವಾಗಿಯಾಗಲಿ ವಿಧಿಸತಕ್ಕುದು ಮತ್ತು... ಬೇರೆ ಬೇರೆ ದಿನಾಂಕಗಳನ್ನು ಎಂಬ ಪದಗಳನ್ನು ಪ್ರತಿಯೋಜಿಸತಕ್ಕುದು.

3. **3ಎ ಪ್ರಕರಣದ ತಿದ್ದುಪಡಿ**- ಮೂಲ ಅಧಿನಿಯದ (1). ನೇ ಉಪಪ್ರಕರಣದಲ್ಲಿ 3ನೇ ಪ್ರಕರಣ ಎಂಬ ಪದಗಳ ಮತ್ತು ಅಂಕಿಗಳ ಬದಲಾಗಿ 3 ಅಥವಾ 5 ಸಿ ಪ್ರಕರಣದ, ಎಂಬ ಪದಗಳನ್ನು, ಅಂಕಿಗಳನ್ನು ಮತ್ತು ಅಕ್ಷರವನ್ನು ಪ್ರತಿಯೋಜಿಸತಕ್ಕುದು ಮತ್ತು ಅದು 1992ರ ಮೇ 1ನೇ ದಿನದಿಂದ ಪರಿಣಾಮಕ್ಕೆ ಬರುವಂತೆ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕುದು.

4. **5ಸಿ ಹೊಸ ಪ್ರಕರಣದ ಸೇರ್ಪಡೆ** - ಮೂಲ ಅಧಿನಿಯಮದ 5ಬಿ ಪ್ರಕರಣದ ತರುವಾಯ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕುದು

ಮತ್ತು ಅದನ್ನು 1992ರ ಮೇ ಒಂದರಂದು ಜಾರಿಗೆ ಬರುವಂತೆ ಸೇರಿಸಲಾಗದೆಯೆಂದು ಭಾವಿಸತಕ್ಕುದು, ಎಂದರೆ-

"5ಸಿ **ತೆರಿಗೆಯ ಕಾಂಪೋಸಿಷನ್** - (1) 3ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ ಆದರೆ ಈ ಪ್ರಕರಣದಲ್ಲಿ ವಿಧಿಸಲಾಗಿರುವ ಷರತ್ತುಗಳಿಗೆ ಮತ್ತು ಗೊತ್ತುಪಡಿಸಬಹುದಾದಂಥ ಇತರ ಷರತ್ತುಗಳಿಗೆ ಮತ್ತು ಅಂಥ ಸನ್ನಿವೇಶಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ತೆರಿಗೆಯನ್ನು ಸಂದಾಯ ಮಾಡಲು ಬದ್ಧನಾಗಿರುವ ಯಾವನೇ ವ್ಯಾಪಾರಿಯು, ಸದರಿ ಪ್ರಕರಣದ ಮೇರೆಗೆ ತೆರಿಗೆಯನ್ನು ಸಂದಾಯಮಾಡುವ ಬದಲು ತನ್ನ ಇಚ್ಛಾನುಸಾರವಾಗಿ ಈ ಮುಂದಿನ ದರಗಳಲ್ಲಿ ಕಾಂಪೋಸಿಷನ್ ಮೊಬಲಗನ್ನು ಸಂದಾಯಮಾಡುವ ಮೂಲಕ ಅಂಥ ತೆರಿಗೆಯನ್ನು ಸಂದಾಯ ಮಾಡಬಹುದು. ಎಂದರೇ-

ಈ ಅಧಿನಿಯಮದ ಮೇರೆಗೆ ತೆರಿಗೆಗೆ ಗುರಿಯಾಗುವ ಯಾವುದೇ ಸರಕುಗಳನ್ನು ತನ್ನ ಕಾರಣದಿಂದಾಗಲೀ ಅಥವಾ ತನ್ನ ಯಜಮಾನ ಅಥವಾ ಇತರೆ ಯಾರೇ ವ್ಯಕ್ತಿಯ ಕಾರಣದಿಂದಾಗಲೀ ಸ್ಥಳೀಯ ಪ್ರದೇಶದೊಳಗೆ ತರುವ ಅಥವಾ ತರುವಂತೆ ಮಾಡುವ ಅಥವಾ ಸ್ಥಳೀಯ ಪ್ರದೇಶದೊಳಗೆ ಮಾರಾಟಕ್ಕಾಗಿ ಅಲ್ಲಿಗೆ ಬರುವಂಥ ಸರಕುಗಳನ್ನು ಪಡೆದುಕೊಳ್ಳುವ ಅಥವಾ ಪಡೆದುಕೊಳ್ಳಲು ಹಕ್ಕುಳ್ಳ ಒಬ್ಬ ವ್ಯಾಪಾರಿಯ ಸಂದರ್ಭದಲ್ಲಿ, ಅಂಥ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಿಗೆಯನ್ನು ಸರಕುಗಳ ಮಾರಾಟದಿಂದ ಬಂದ ಒಟ್ಟು ವಹಿವಾಟಿನ ಹಣದ ಮೇಲೆ 3 ನೇ ಪ್ರಕರಣದಲ್ಲಿ ಅಧಿಸೂಚಿಸಲಾದ ದರಗಳಲ್ಲಿ ಲೆಕ್ಕ ಹಾಕತಕ್ಕುದು.

ಪರಂತು, ಸ್ಥಳೀಯ ಪ್ರದೇಶಕ್ಕೆ ತರಲಾದ ಅಥವಾ ತರುವಂತೆ ಮಾಡಲಾದ ಸರಕುಗಳು 3ನೇ ಪ್ರಕರಣದ ಮೇರೆಗೆ ಅಥವಾ ಈ ಖಂಡದ ಮೇರೆಗೆ ಆದಾಗಲೇ ತೆರಿಗೆಗೊಳಪಟ್ಟಿದ್ದಲ್ಲಿ ಅಥವಾ ಈ ಅಧಿನಿಯಮದ ಯಾವುದೇ ಉಪಬಂಧಗಳ ಮೇರೆಗೆ ಅವುಗಳಿಗೆ ತೆರಿಗೆಯಿಂದ ವಿನಾಯಿತಿ ನೀಡಲಾಗಿದ್ದರೆ, ಅಂಥ ಸರಕುಗಳ ಮೇಲೆ ತೆರಿಗೆ ಸಂದಾಯ ಮಾಡಿರುವ ಬಗ್ಗೆರುಜುವಾತು ಒದಗಿಸುವುದಕ್ಕೆ ಒಳಪಟ್ಟು ಅಂಥ ಸರಕುಗಳ ಒಟ್ಟು ವಹಿವಾಟಿನ ಹಣದ ಮೇಲೆ ಯಾವುದೇ ತೆರಿಗೆಯನ್ನು ಸಂದಾಯ ಮಾಡತಕ್ಕುದಲ್ಲ.

ಅಷ್ಟೇ ಅಲ್ಲದೆ, 1992ರ ಏಪ್ರಿಲ್ 30ನೇ ದಿನಾಂಕದಂದು ದಾಸ್ತಾನಿನಲ್ಲಿದ್ದ ಮತ್ತು ಸದರಿ ದಿನಾಂಕಕ್ಕೆ ಮುಂಚೆ ಅಧಿನಿಯಮದ ಮೇರೆಗೆ ತೆರಿಗೆಗೆ ಒಳಪಟ್ಟಿಲ್ಲದ ಸರಕುಗಳಿಗೆ ಸಂಬಂಧಪಟ್ಟ ಒಟ್ಟು ವಹಿವಾಟಿನ ಹಣದ ಮೇಲೆ ಈ ಖಂಡದ ಮೇರೆಗೆ, ಯಾವುದೇ ತೆರಿಗೆಯನ್ನು ವಿಧಿಸತಕ್ಕುದಲ್ಲ.

ವಿವರಣೆ –I. ಈ ಖಂಡದ ಉದ್ದೇಶಗಳಿಗಾಗಿ "ಒಟ್ಟು ವಹಿವಾಟು ಹಣ " ಎಂದರೆ ಯಾವುದೇ ಸರಕುಗಳ ಮಾರಾಟ, ಸರಬರಾಜು ಅಥವಾ ಹಂಚಿಕೆ ಮಾಡಿದುದಕ್ಕಾಗಿ ವ್ಯಾಪಾರಿಗೆ ಪ್ರತಿಫಲವಾಗಿ ಸಂದಾಯವಾದ ಅಥವಾ ಸಂದಾಯವಾಗಬೇಕಾದ ಒಟ್ಟು ಮೊಬಲಗಿನ ಮೊತ್ತವಾಗಿದ್ದು, ಅಂಥ ಮಾರಾಟ, ಸರಬರಾಜು ಅಥವಾ ಹಂಚಿಕೆಯು ರಾಜ್ಯದೊಳಗೆ ನಡೆದಿದ್ದಲ್ಲಿ, ಸೋಡಿಯಾಗಿ ನೀಡಲಾದ ಯಾವುದೇ ಮೊಬಲಗನ್ನು ಕಡಿತ ಮಾಡಬೇಕು. ಆದರೆ ಲೆಕ್ಕಪತ್ರದಲ್ಲಿ, ಖರೀದಿದಾರನು ಸೋಡಿಯನ್ನು ಕಡಿತಮಾಡಿ ವಧಿಸಲಾದ ಕೇವಲ ಮೂಲ ದರವನ್ನು ಮಾತ್ರವೇ ಸಂದಾಯ ಮಾಡಿರುವನೆಂಬುದನ್ನು ಮತ್ತು "ಬಾಡಿಗೆ

ವೆಚ್ಚಗಳು" ಎಂಬ ಶೀರ್ಷಿಕೆಯಡಿಯಲ್ಲಿ ಯಾವುದೇ ಮೊಬಲಗನ್ನು ವಾಸ್ತವವಾಗಿ ವೆಚ್ಚ ಮಾಡಿದ್ದು ವ್ಯಾಪಾರಿಯು ಅಂಥ ಮೊಬಲಗನ್ನು ಮಾರಾಟ ಮಾಡಲಾದ ಸರಕುಗಳ ಬೆಲೆಯಲ್ಲಿ ಸೇರಿಸದೆ ಪ್ರತ್ಯೇಕವಾಗಿ ನಮೂದಿಸಿ ಖರ್ಚು ತೋರಿಸಿದ್ದಲ್ಲಿ ಮತ್ತು ಯಾವುದೇ ಮೊಬಲಗನ್ನು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ (೧೯೫೭ರ ಕರ್ನಾಟಕ ಅಧಿನಿಯಮ ಸಂಖ್ಯೆ ೨೫) ಮೇರೆಗೆ ತೆರಿಗೆ ರೂಪದಲ್ಲಿ ಖರ್ಚುತೋರಿಸಿ ವಸೂಲು ಮಾಡಿದ್ದಲ್ಲಿ ಅದನ್ನು ಸೂಚಿಸತಕ್ಕುದು.

ವಿವರಣೆ-II. ಈ ಖಂಡದ ಮೇರೆಗೆ ತೆರಿಗೆ ವಿಧಿಸುವ ಉದ್ದೇಶಕ್ಕಾಗಿ, ೧ನೇ ವಿವರಣೆಯಡಿ ನಿರ್ಧಾರಣೆ ಮಾಡಲಾದ ಒಟ್ಟು ವಹಿವಾಟಿನ ಮೊಬಲಗಿನ ಶೇಕಡ ೧೦ರಷ್ಟಕ್ಕೆ ಸಮವಾದ ಮೊಬಲಗನ್ನು ಅಂಥ ಒಟ್ಟು ವಹಿವಾಟಿನ ಮೊಬಲಗಿನಿಂದ ಕಳೆಯತಕ್ಕುದು.

(ii) ಈ ಅಧಿನಿಯಮದ ಮೇರೆಗೆ ತೆರಿಗೆಗೊಳಪಡುವ ಯಾವುದೇ ಸರಕುಗಳ ಸ್ಥಳೀಯ ಪ್ರದೇಶದೊಳಗೆ ಬರಲು ಅಥವಾ ಬರಲು ಕಾರಣವಾಗುವ ವ್ಯಾಪಾರಿಯ ಸಂದರ್ಭದಲ್ಲಿ ತನ್ನ ಸ್ವಂತ ಕಾರಣದಿಂದಾಗಿ ಅಥವಾ ತನ್ನ ಯಜಮಾನ ಅಥವಾ ಯಾವೊಬ್ಬ ಇತರ ವ್ಯಕ್ತಿಯ ಅಥವಾ ಕಚ್ಚವಸ್ತುಗಳು, ಘಟಕಭಾಗಗಳು ಮತ್ತು ಮಧ್ಯವರ್ತಿ ಅಥವಾ ಸಿದ್ಧವಸ್ತುಗಳ ತಯಾರಿಕೆಯಲ್ಲಿ ಬಳಸಲಾಗುವ ಪರಿಕರಗಳಾಗಿ ಬಳಕೆ ಅಥವಾ ಉಪಯೋಗಕ್ಕಾಗಿ ಸ್ಥಳೀಯ ಪ್ರದೇಶಕ್ಕೆ ಬರುವಂಥ ಸರಕುಗಳನ್ನು ಪಡೆಯುವ ಅಥವಾ ಪಡೆಯಲು ಹಕ್ಕುಳ್ಳವನಾದ ವ್ಯಕ್ತಿಯ ಕಾರಣದಿಂದಾಗಿ ಅಂಥ ವ್ಯಾಪಾರಿಯು ಅಂಥ ಕಚ್ಚಾ ವಸ್ತುಗಳು,ಘಟಕಭಾಗಗಳು ಮತ್ತು ಪರಿಕರಗಳ ಮೇಲೆ ಸಂದಾಯಮಾಡಬೇಕಾದ ತೆರಿಗೆಯನ್ನು, ರಾಜ್ಯದೊಳಗೆ ಅಂಥ ಕಚ್ಚಾವಸ್ತು ಘಟಕಭಾಗ ಮತ್ತು ಪರಿಕರಗಳಿಂದ ಪೂರ್ಣವಾಗಿ ಅಥವಾ ಭಾಗಶಃವಾಗ ತಯಾರುಮಾಡಲಾದ ಸರಕುಗಳ ಮೌಲ್ಯದ ಮೇಲೆ ಶೇಕಡ ಒಂದರಷ್ಟು ದರದಂತೆ ತೆರಿಗೆಯನ್ನು ಲೆಕ್ಕ ಹಾಕತಕ್ಕುದು.

ಆದರೆ ಈ ಖಂಡದ ಉದ್ದೇಶಕ್ಕಾಗಿ,-

(i) ಸ್ಥಳೀಯ ಪ್ರದೇಶವಲ್ಲದ ಪ್ರದೇಶಕ್ಕೆ ತರಲಾದ ಮತ್ತು ಸರಕುಗಳ ತಯಾರಿಕೆಯಲ್ಲಿ ಬಳಸಲಾದ ಮತ್ತು ಉಪಯೋಗಿಸಲಾದ ಕಚ್ಚಾ ವಸ್ತುಗಳು, ಘಟಕ ಭಾಗಗಳು ಮತ್ತು ಪರಿಕರಗಳ ಮೌಲ್ಯವನ್ನು : ಮತ್ತು

(ii) 1992ರ ಮೇ ೧ನೇ ದಿನಾಂಕದಂದು ಅಥವಾ ಅನಂತರ ಆದರೆ, 1992ರ ಆಗಸ್ಟ್ ಮೊದಲನೇ ದಿನಾಂಕಕ್ಕೆ ಮೊದಲು ಖರೀದಿಸಲಾದ ಮತ್ತು ಸ್ಥಳೀಯಪ್ರದೇಶದೊಳಗೆ ತಂದ, ಆದರೆ ಸದರಿ ಅವಧಿಯಲ್ಲಿ ತೆರಿಗೆಗೆ ಗುರಿಯಾಗದ ಮತ್ತು ತಯಾರಿಸಿದ ವಸ್ತುಗಳಲ್ಲಿ ಬಳಸಿದ ಅಥವಾ ಉಪಯೋಗಿಸಿದ ಕಚ್ಚಾ ಸಾಮಗ್ರಿಗಳು, ಘಟಕ ಭಾಗಗಳು ಮತ್ತು ಪರಿಕರಗಳ ಮೌಲ್ಯವನ್ನು ತಯಾರಿಸಿದ ಸರಕುಗಳ ಮೌಲ್ಯದಿಂದ ಕಳೆಯತಕ್ಕುದು.

ವಿವರಣೆ-I. ಈ ಪ್ರಕರಣದ ಉದ್ದೇಶಗಳಿಗಾಗಿ "ತಯಾರಿಸಿದ ಸರಕುಗಳ ಮೌಲ್ಯ" ಎಂಬ ಪದವನ್ನು ಕೇಂದ್ರ ಅಬಕಾರಿ ತೆರಿಗೆ ಅಧಿನಿಯಮ, ೧985ರ (1986ರ ಕೇಂದ್ರ ಅಧಿನಿಯಮ 5) ಮೇರೆಗೆ ಅಬಕಾರಿ ತೆರಿಗೆಗಾಗಿ ನೀಡುವ "ತಯಾರಿಸಿದ ಸರಕುಗಳ ಮೌಲ್ಯ" ಎಂದು ಅರ್ಥೈಸತಕ್ಕುದು ಅಥವಾ ತಯಾರಿಸಿದ ಅಂಥ ವಸ್ತುಗಳ ಮೇಲೆ ಅಬಕಾರಿ ತೆರಿಗೆಯನ್ನು ವಿಧಿಸದಿದ್ದಲ್ಲಿ "ತಯಾರಿಸಿದ

ಸರಕುಗಳ ಮೌಲ್ಯ" ಎಂಬ ಪದವನ್ನು 'ಅಂಥ ಸರಕುಗಳ ಮಾರಾಟ ಮೌಲ್ಯ' ಎಂದು ಅರ್ಥೈಸತಕ್ಕುದು.

ವಿವರಣೆ-II. ಈ ಉಪ-ಪ್ರಕರಣದ ಮೇರೆಗೆ ತೆರಿಗೆ ವಿಧಿಸುವ ಉದ್ದೇಶಗಳಿಗಾಗಿ

(i) Iನೇ ವಿವರಣೆಯ ಮೇರೆಗೆ ನಿರ್ಧರಿಸಿದಂತೆ "ಮೌಲ್ಯ"ದ ಶೇಕಡ ನಲವತ್ತಕ್ಕೆ ಸಮನಾದ ಮೊಬಲಗನ್ನು ಅಂಥ ಮೌಲ್ಯದಿಂದ ಕಳೆಯತಕ್ಕುದು.

(ii) (ಎ) ಈ ಅಧಿನಿಮಯದ ಮೇರೆಗೆ ಕಚ್ಚಾ ಸಾಮಗ್ರಿಗಳು, ಘಟಕ ಭಾಗಗಳು ಮತ್ತು ಪರಿಕರಗಳು, ಇವುಗಳ ಮೇಲೆ ಪ್ರವೇಶ ತೆರಿಗೆಯನ್ನು ಸಂದಾಯ ಮಾಡಿದ ಅಥವಾ ಮಾರಾಟಗಾರನಿಂದ ಸಂದಾಯ ಮಾಡಬೇಕಾದಂಥ ಸರಕುಗಳು; ಮತ್ತು

(ಬಿ) ಈ ಅಧಿನಿಯಮದ ಮೇರೆಗೆ ಪ್ರವೇಶ ತೆರಿಗೆಯನ್ನು ವಿನಾಯಿತಿಗೊಳಿಸಿದ ಕಚ್ಚಾ ಸಾಮಗ್ರಿಗಳು, ಘಟಕ ಭಾಗಗಳು ಮತ್ತು ಪರಿಕರಗಳು,

ಇವುಗಳ ಖರೀದಿಗಾಗಿ ಪ್ರತಿಫಲ ಎಂಬುದಾಗಿ ಸಂದಾಯ ಮಾಡಿದ ಯಾವುದೇ ಮೊಬಲಗನ್ನು ತಯಾರಿಸಿದ ಸರಕುಗಳ ಮೇಲಿನ ಮೌಲ್ಯದಿಂದ ಕಳೆಯತಕ್ಕುದು.

(2) ಯಾವನೇ ವ್ಯಾಪಾರಿಯು, ಈ ಪ್ರಕರಣದ ಮೇರೆಗೆ ತೆರಿಗೆ ಸಂದಾಯ ಮಾಡಲು ತನಗೆ ಪರವಾನಗಿ ನೀಡಬೇಕೆಂದು ಕರನಿರ್ಧರಣಾ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಹಾಗೆ ಪರವಾನಗಿ ಪಡೆದ ನಂತರ 5ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಉಪಬಂಧಿಸಿದಂತೆ ಮುಂಗಡವಾಗಿ ಅವನು ತೆರಿಗೆ ಸಂದಾಯ ಮಾಡತಕ್ಕುದು ಮತ್ತು ಆ ಉಪ-ಪ್ರಕರಣದ ಎಲ್ಲ ಉಪಬಂಧಗಳು ಈ ಪ್ರಕರಣಕ್ಕೆ ಉಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕುದು.

(3) ಈ ಪ್ರಕರಣದ ಮೇರೆಗೆ ಸಂದಾಯ ಮಾಡಿದ ಮೊಬಲಗು ಅಂತಿಮ ಕರನಿರ್ಧರಣವು ಪೂರ್ಣಗೊಂಡ ನಂತರ ಅವಶ್ಯಕವಿರಬಹುದಾದ ಅಂಥ ಹೊಂದಾಣಿಕೆಗೆ ಒಳಪಟ್ಟಿರತಕ್ಕುದು.

4) ಕರನಿರ್ಧರಣೆ, ಮರುಕರನಿರ್ಧರಣೆಸಂದಾಯ ಮತ್ತು ಸ್ವೀಕೃತಿ, ಮರುಪಾವತಿ, ಅಪೀಲು ಮತ್ತು ಪರಿಷ್ಕರಣೆಗಳಿಗೆ ಸಂಬಂಧಪಟ್ಟಂತೆ ಮಾಡಿದ ಈ ಅಧಿನಿಯಮದ ಉಪಬಂಧುಗಳು ಮತ್ತು ನಿಯಮಗಳು ಈ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆಗೆ ಸಂಬಂಧಪಟ್ಟಂತೆ ಉಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕುದು.

(5) ಈ ಪ್ರಕರಣದಲ್ಲಿರುವ ಯಾವುದೂ,-

(i) ಸಾರಾಯಿ ಮತ್ತು ಹೆಂಡವೂ ಒಳಗೊಂಡಂತೆ ಮದ್ಯ;

(ii) ಮೋಟಾರು ವಾಹನಗಳ ಚಾಸಿಗಳನ್ನು ಒಳಗೊಂಡಂತೆ ಮೋಟಾರು ವಾಹನಗಳು (ಎಲ್ಲ ಬಗೆಯವು) ಮತ್ತು ಅವುಗಳ ಭಾಗಗಳು ಮತ್ತು ಉಪ ಸಾಧನಗಳು;

(iii) ಅಫೀಮು, ಗಾಂಜಾ ಮತ್ತು ಭಾಂಗ್:

(iv) ಪೆಟ್ರೋಲಿಯಂ ಉತ್ಪನ್ನಗಳು, ಎಂದರೆ, ಪೆಟ್ರೋಲ್, ಡೀಸಲ್ ಕಚ್ಚಾ ತೈಲ, ಮೃದು ಚಾಲನಾ ತೈಲ, ಟ್ರಾನ್ಸ್‌ಫಾರ್ಮರ್ ತೈಲ, ಬ್ರೇಕ್ ಅಥವಾ ಕ್ಲಚ್ ತೈಲ, ಬಿಟೂಮನ್ (ಅಸ್ಫಾಲ್ಟ್) ಟಾರು ಮತ್ತು ಇತರೆ,

(ಎಲ್‌ಪಿಜಿ),ಸೀಮೆಎಣ್ಣೆ ಮತ್ತು ಗೊಬ್ಬರಗಳ ತಯಾರಿಕೆಗೆ ಬಳಸುವ ನಾಫ್ತಾ ಇವುಗಳನ್ನು ಹೊರತುಪಡಿಸಿ;

(v) ಮಿಠಾಯಿ ಮತ್ತು ಅಂತಹುದೇ ವಸ್ತುಗಳ ಹೊರತು,ಸಕ್ಕರೆ;

(vi) ಗಿರಣಿಗಳಲ್ಲಿ ಅಥವಾ ವಿದ್ಯುತ್ ಮಗ್ಗಗಳಲ್ಲಿ ತಯಾರಿಸಲಾದ ರಯಾನ್ ಅಥವಾ ನೈಲಾನ್ ಮತ್ತು ಕೈಯಿಂದ ತಯಾರಿಸಿದ ಅಥವಾ ಸಿಂಥೆಟಿಕ್ ಫ್ಯಾಬ್ರಿಕ್‌ಗಳೂ ಸೇರಿದಂತೆ ಹತ್ತಿ, ಉಣ್ಣೆ ಅಥವಾ ರೇಷ್ಮೆ ಅಥವಾ ಕೃತಕ ರೇಷ್ಮೆಯ ಜವಳಿ ಮತ್ತು ಉದ್ದಳತೆಯಲ್ಲಿ ಹೊಸ್ಸೆರಿ ಬಟ್ಟೆ ಮತ್ತು ಪಿ.ವಿ.ಸಿ. ಅಥವಾ ಸೆಲ್ಯೂಲೋಸ್ ಉತ್ಪನ್ನಗಳಿಂದ (ಗಿರಣಿಗಳಲ್ಲಿ ಅಥವಾ ವಿದ್ಯುತ್ ಮಗ್ಗಗಳಲ್ಲಿ ತಯಾರಿಸಿರಲಿ ಅಥವಾ ಇಲ್ಲದಿರಲಿ) ಲೇಪಿತವಾದ ಅಥವಾ ಅವುಗಳಿಂದ ಕೂಡಿದ ಫ್ಯಾಬ್ರಿಕ್‌ಗಳನ್ನು ಒಳಗೊಂಡಿರುತ್ತದೆ.

(vii) ಬೀಡಿ, ಸಿಗರೇಟು, ಸಿಗಾರು, ಚುರೂಟ್, ನಶ್ಯ, ಜರ್ದ, ಕಿಮಾಮ್ ಇತ್ಯಾದಿಗಳೂ ಸೇರಿದಂತೆ ಎಲ್ಲಾ ಬಗೆಯ ಹೊಗೆಸೊಪ್ಪು ಉತ್ಪನ್ನಗಳು.

-ಇವುಗಳ ಮೇಲೆ ವಿಧಿಸುವ ತೆರಿಗೆಗೆ ಅನ್ವಯಿಸುವುದಿಲ್ಲ.

5. **ಅನುಸೂಚಿಯ ತಿದ್ದುಪಡಿ-** 1992ರ ಮೇ ಒಂದನೇ ದಿನಾಂಕಕ್ಕೆ ಮೊದಲು ಇದ್ದಂತೆ ಮೂಲ ಅಧಿನಿಯಮದ ಅನುಸೂಚಿಯಲ್ಲಿ-

(i) ಕ್ರಮ ಸಂಖ್ಯೆ I ಮತ್ತು ಅದಕ್ಕೆ ಸಂಬಂಧಪಟ್ಟ ನಮೂನೆಗಳ ಬದಲಾಗಿ ಈ ಮುಂದೆ ಕೊಟ್ಟಿರುವುದನ್ನು 1980ರ ಅಕ್ಟೋಬರ್ 1ನೇ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಪ್ರತಿಯೋಜಿಸತಕ್ಕುದು ಮತ್ತು ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕುದು, ಎಂದರೆ:-

"1. ಎಲ್ಲ ಬಗೆಯ ಜವಳಿಗಳು, ಎಂದರೆ, ಗಿರಣಿಗಳಲ್ಲಿ, ವಿದ್ಯುತ್ ಮಗ್ಗಗಳಲ್ಲಿ ಅಥವಾ ಕೈಮಗ್ಗಗಳಲ್ಲಿ ತಯಾರಿಸಲಾದ ರಯಾನ್ ಅಥವಾ ನೈಲಾನ್ ಸೇರಿದಂತೆ ಹತ್ತಿ, ಉಣ್ಣೆ ಅಥವಾ ಕೃತಕ ರೇಷ್ಮೆ ಮತ್ತು ಉದ್ದಳತೆಯಲ್ಲಿ ಹೊಸ್ಸೆರಿ ಬಟ್ಟೆ ಆದರೆ ಖಾದಿ, ಹತ್ತಿ ಕೈಮಗ್ಗ ಜವಳಿ, ರೇಷ್ಮೆ ಜವಳಿ ಮತ್ತು ಕೃತಕ ರೇಷ್ಮೆ ಕೈಮಗ್ಗ ಜವಳಿ ಹೊರತು."

(ii) ಹಾಗೆ ತಿದ್ದುಪಡಿಯಾದ ಕ್ರಮಸಂಖ್ಯೆ 1 ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳ ಬದಲಾಗಿ 1983ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಯಾಗುವಂತೆ ಈ ಮುಂದೆ ಕೊಟ್ಟಿರುವುದನ್ನು ಪ್ರತಿಯೋಜಿಸತಕ್ಕುದು ಮತ್ತು ಪ್ರತಿಯೋಜಿಸಿರುವುದಾಗಿ ಭಾವಿಸತಕ್ಕುದು, ಎಂದರೆ

"1. ಎಲ್ಲ ಬಗೆಯ ಜವಳಿಗಳು ಎಂದರೆ, ಗಿರಣಿಗಳಲ್ಲಿ ಅಥವಾ ವಿದ್ಯುತ್ ಮಗ್ಗಗಳಲ್ಲಿ ತಯಾರಿಸಲಾದ ರಯಾನ್ ಮತ್ತು ಕೈಯಿಂದ ತಯಾರಿಸಿದ ಅಥವಾ ಸಿಂಥೆಟಿಕ್ ಫ್ಯಾಬ್ರಿಕ್‌ಗಳೂ ಸೇರಿದಂತೆ ಹತ್ತಿ. ಉಣ್ಣೆ ಅಥವಾ ಕೃತಕ ರೇಷ್ಮೆ ಮತ್ತು ಪಿವಿಸಿ ಸೆಲ್ಯುಲೋಸ್ ಉತ್ಪನ್ನಗಳಿಂದ (ಗಿರಣಿಗಳಲ್ಲಿ ಅಥವಾ ವಿದ್ಯುತ್ ಮಗ್ಗಗಳಲ್ಲಿ ತಯಾರಿಸಲಿ ಅಥವಾ ಇಲ್ಲದಿರಲಿ) ಲೇಪಿತವಾದ ಅಥವಾ ಅವುಗಳಿಂದ ಕೂಡಿದ ಫ್ಯಾಬ್ರಿಕ್‌ಗಳೂ ಸೇರಿದಂತೆ ಉದ್ದಳತೆಯಲ್ಲಿ ಹೊಸ್ಸೆರಿ ಬಟ್ಟೆ."

(iii) ಕ್ರಮ ಸಂಖ್ಯೆ 2 ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳಿಗೆ ಬದಲಾಗಿ ಈ ಮುಂದೆ ಕೊಟ್ಟಿರುವುದನ್ನು 1980ರ ಅಕ್ಟೋಬರ್ ಒಂದನೇ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಪ್ರತಿಯೋಜಿಸತಕ್ಕುದು ಮತ್ತು ಪ್ರತಿಯೋಜಿಸಿರುವುದಾಗಿ ಭಾವಿಸತಕ್ಕುದು ಎಂದರೆ,

"2. ಹೊಗೆಸೊಪ್ಪು ಮತ್ತು ಅದರ ಎಲ್ಲ ಉತ್ಪನ್ನಗಳು"

(iv) ಹಾಗೆ ತಿದ್ದುಪಡಿಯಾದಂತೆ ಕ್ರಮಸಂಖ್ಯೆ 2 ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳಿಗೆ ಬದಲಾಗಿ ಈ ಮುಂದೆ ಕೊಟ್ಟಿರುವುದನ್ನು 1983ರ ಏಪ್ರಿಲ್ ಒಂದನೇ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಪ್ರತಿಯೋಜಿಸತಕ್ಕುದು ಮತ್ತು ಪ್ರತಿಯೋಜಿಸಿರುವುದಾಗಿ ಭಾವಿಸತಕ್ಕುದು, ಎಂದರೆ,-

"2. ಹೊಗೆಸೊಪ್ಪಿನ ಎಲ್ಲ ಉತ್ಪನ್ನಗಳು"

6. ನಿರಸನ ಮತ್ತು ಉಳಿಸುವಿಕೆಗಳು - (1) ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ಎರಡನೆ ತಿದ್ದುಪಡಿ) ಅಧ್ಯಾದೇಶ, 1992 (1992ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 13) ಈ ಮೂಲಕ ನಿರಸಿತವಾಗಿದೆ.

(2)ಹಾಗೆ ನಿರಸಿತವಾಗಿದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕುದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1992ರ ಕರ್ನಾಟಕ ಅಧಿನಿಯಮ 15 ಮತ್ತು 1992ರ ಕರ್ನಾಟಕ ಅಧ್ಯಾದೇಶ 10ರ ಮೂಲಕ ಪ್ರವೇಶ ತೆರಿಗೆಯ ವ್ಯಾಪ್ತಿಗೆ ಹಲವು ಸರಕುಗಳನ್ನು ಸೇರಿಸಿದ್ದರ ಪರಿಣಾಮವಾಗಿ, ವ್ಯಾಪಾರಿ ಸಮುದಾಯವನ್ನು; ಈ ರೀತಿ ಸೇರಿಸಿದ್ದು ತೀವ್ರ ಪರಿಣಾಮವನ್ನುಂಟುಮಾಡಿದೆಯೆಂಬ ಮತ್ತು ಲೆಕ್ಕ ಪುಸ್ತಕಗಳ ನಿರ್ವಹಣೆಯಲ್ಲಿ ಇನ್ನೂ ಹೆಚ್ಚಿನ ಹೊರೆಯನ್ನುಂಟು ಮಾಡುತ್ತದೆ ಎಂಬ ಕಾರಣದ ಮೇಲೆ ಪ್ರವೇಶ ತೆರಿಗೆಯನ್ನು ರದ್ದುಪಡಿಸಬೇಕೆಂದು ರಾಜ್ಯಾದ್ಯಂತ ಚಳವಳಿ ನಡೆಸಿತು. ಈ ಬೇಡಿಕೆಗಳು ಸರ್ಕಾರದ ರಾಜಸ್ವಕ್ಕೆ ನಷ್ಟವುಂಟು ಮಾಡುವಂಥಾದ್ದರಿಂದ ವ್ಯಾಪಾರ ಸಮುದಾಯದೊಂದಿಗೆ ಚರ್ಚೆ ನಡೆಸಿದ ನಂತರ ರಾಜಿ ರೀತಿಯ ಮೂಲಕ ಪ್ರವೇಶ ತೆರಿಗೆಯನ್ನು ಸಂದಾಯ ಮಾಡಲು ಅವಕಾಶ ಕಲ್ಪಿಸುವುದು ಅಗತ್ಯವೆಂದು ಪರಿಗಣಿಸಲಾಯಿತು.

ಹಲವು ಆನುಷಂಗಿಕ ತಿದ್ದುಪಡಿಗಳನ್ನು ಮಾಡಲು ಸಹ ಅವಕಾಶ ತೆಗೆದುಕೊಳ್ಳಲಾಯಿತು.

ವಿಷಯವು ತುರ್ತು ಸ್ವರೂಪದಾದ್ದರಿಂದ ಮತ್ತು ವಿಧಾನಮಂಡಲದ ಉಭಯ ಸದನಗಳೂ ಅಧಿವೇಶದಲ್ಲಿಲ್ಲದ್ದುದರಿಂದ 1992ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಿನ ತೆರಿಗೆ (ಎರಡನೇ ತಿದ್ದುಪಡಿ) ಅಧ್ಯಾದೇಶವನ್ನು ಪ್ರಸ್ತಾಪಿಸುವ ಮೂಲಕ ತಿದ್ದುಪಡಿಗಳನ್ನು ತರಲಾಯಿತು.

ಸದರಿ ಅಧ್ಯಾದೇಶದ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಕರ್ನಾಟಕ ರಾಜ್ಯ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ 79ನೇ ನಿಯಮದ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ

1929ರ ಕರ್ನಾಟಕ ಅಧಿನಿಯಮ 15 ಮತ್ತು 1992ರ ಕರ್ನಾಟಕ ಅದ್ಯಾದೇಶ 10ರ ಮೂಲಕ ಪ್ರವೇಶ ತೆರಿಗೆಯ ವ್ಯಾಪ್ತಿಗೆ ಹಲವು ಸರಕುಗಳನ್ನು ಸೇರಿಸಿದ್ದರ ಪರಿಣಾಮವಾಗಿ, ವ್ಯಾಪಾರಿ ಸಮುದಾಯವು, ಈ ರೀತಿ ಸೇರಿಸಿದ್ದು ತೀವ್ರ ಪರಿಣಾಮನ್ನುಂಟುಮಾಡಿದೆಯೆಂಬ ಮತ್ತು ಲೆಕ್ಕ ಪುಸ್ತಕಗಳ ನಿರ್ವಹಣೆಯಲ್ಲಿ ಇನ್ನೂ ಹೆಚ್ಚಿನ ಹೊರೆಯನ್ನುಂಟುಮಾಡುತ್ತದೆ" ಎಂಬ ಕಾರಣದ ಮೇಲೆ ಪ್ರವೇಶ ತೆರಿಗೆಯನ್ನು ರದ್ದು ಪಡಿಸಬೇಕೆಂದು ರಾಜ್ಯಾದ್ಯಂತ ಚಳವಳ ನಡೆಸಿತು. ಈ ಬೇಡಿಕೆಗಳು ಸರ್ಕಾರದ ರಾಜಸ್ವಕ್ಕೆ ನಷ್ಟವುಂಟು ಮಾಡುವಂಥಾದ್ದರಿಂದ ವ್ಯಾಪಾರ ಸಮುದಾಯದೊಂದಿಗೆ ಚರ್ಚೆ ನಡೆಸಿದ ನಂತರ ರಾಜಿ ರೀತಿಯ ಮೂಲಕ ಪ್ರವೇಶ ತೆರಿಗೆಯನ್ನು ಸಂದಾಯ ಮಾಡಲು ಅವಕಾಶ ಕಲ್ಪಿಸುವುದು ಅಗತ್ಯವೆಂದು ಪರಿಗಣಿಸಲಾಯಿತು.

ಹಲವು ಅನುಷಂಗಿಕ ತಿದ್ದುಪಡಿಗಳನ್ನು ಮಾಡಲು ಸಹ ಅವಕಾಶ ತೆಗೆದುಕೊಳ್ಳಲಾಯಿತು.

ವಿಷಯವು ತುರ್ತು ಸ್ವರೂಪದಾದ್ದರಿಂದ ಮತ್ತು ವಿಧಾನಮಂಡಲದ ಉಭಯ ಸದನಗಳೂ ಅಧಿವೇಶನದಲ್ಲಿಲ್ಲದ್ದುದರಿಂದ 1992ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ಎರಡನೇ ತಿದ್ದುಪಡಿ) ಅಧ್ಯಾದೇಶವನ್ನು ಪ್ರಖ್ಯಾಪಿಸುವ ಮೂಲಕ ತಿದ್ದುಪಡಿಗಳನ್ನು ತರಲಾಯಿತು.

ಆರ್ಥಿಕ ಜ್ಞಾಪನಾ ಪತ್ರ

ಪ್ರಸ್ತುತ ಪ್ರಸ್ತಾವಿತ ತಿದ್ದುಪಡಿಯಿಂದಾಗಿ ಸರ್ಕಾರಕ್ಕೆ ಯಾವುದೇ ಹೆಚ್ಚಿನ ವೆಚ್ಚ ತಗಲುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತ ಜ್ಞಾಪನ

ವಿಧೇಯಕದ 4ನೇ ಖಂಡವು, ಒಬ್ಬ ವ್ಯಾಪಾರಿಯು ಯಾವ ಇತರ ಷರತ್ತುಗಳ ಮತ್ತು ಸನ್ನಿವೇಶಗಳ ಮೇರೆಗೆ ರಾಜಿಯ ಮೂಲಕ ತೆರಿಗೆಯನ್ನು ಸಂದಾಯ ಮಾಡಬಹುದಾಗಿದ್ದಿತೋ ಆ ಇತರೆ ಷರತ್ತುಗಳಿಗೆ ಮತ್ತು ಸನ್ನಿವೇಶಗಳಿಗೆ ಸಂಬಂಧಪಟ್ಟ ನಿಯಮಗಳನ್ನು ರಚಿಸಲು ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಪ್ರಸ್ತಾವಿತ ಪ್ರತ್ಯಾಯೋಜಿತ ಶಾಸನ ರಚನಾಧಿಕಾರವು ಸಾಮಾನ್ಯ ಸ್ವರೂಪದ್ದಾಗಿರುತ್ತದೆ.

ಎಂ. ವೀರಪ್ಪ ಮೊಯಿಲಿ
ಮುಖ್ಯಮಂತ್ರಿಗಳು.

ಮ. ಇನ್ನಾಸಪ್ಪ
ಕಾರ್ಯದರ್ಶಿ.

ಅನುಬಂಧ

ಕರ್ನಾಟಕ ಸರಕುಗಳ ಮೇಲಣ ತೆರಿಗೆ ಅಧಿನಿಯಮ, 1979ರ ಉದ್ಧೃತ ಭಾಗ

XX XX XX

3. ತೆರಿಗೆ ವಿಧಿಸುವುದು - (ಶಿ) ಸ್ಥಳೀಯ ಪ್ರದೇಶಗಳೊಳಗೆ ಅಲ್ಲಿಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಸರಕುಗಳ ಮೌಲ್ಯದ ಶೇಕಡ ಐದರಷ್ಟನ್ನು ಮೀರದಂಥ ದರಗಳಲ್ಲಿ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ವಸೂಲು ಮಾಡತಕ್ಕದ್ದುಮತ್ತು ಬೇರೆ ಬೇರೆ ಸರಕುಗಳು ಅಥವಾ ಬೇರೆ ಬೇರೆ ವರ್ಗಗಳ ಸರಕುಗಳು ಅಥವಾ ಬೇರೆ ಬೇರೆ ಸ್ಥಳೀಯ ಪ್ರದೇಶಗಳ ಸಂಬಂಧದಲ್ಲಿ ಬೇರೆ ಬೇರೆ ದರಗಳನ್ನು ನಿರ್ದಿಷ್ಟಪಡಿಸಬಹುದು.

XX XX XX

3 ಎ. ನೋಂದಾಯಿತ ವ್ಯಾಪಾರಿಯಿಂದ ತೆರಿಗೆಯ ವಸೂಲಿ : (I) ನೋಂದಾಯಿತ ವ್ಯಾಪಾರಿಯಲ್ಲದ ಒಬ್ಬ ವ್ಯಕ್ತಿಯು ತೆರಿಗೆ ರೂಪದಲ್ಲಿ ಅಥವಾ ಈ ಅಧಿನಿಯಮದ ಮೇರೆಗೆ ತೆರಿಗೆ ಎಂದು ತಾತ್ಪರ್ಯವಾಗುವ ಯಾವುದೇ ಮೊತ್ತವನ್ನು ವಸೂಲಿ ಮಾಡತಕ್ಕುದಲ್ಲ ಅಥವಾ ನೋಂದಾಯಿತ ವ್ಯಾಪಾರಿಯು 3ನೇ ಪ್ರಕರಣದ ಮೇರೆಗೆ ನೀಡಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದರ ಅಥವಾ ದರಗಳನ್ನು ಮೀರಿದ ದರ ಅಥವಾ ದರಗಳಲ್ಲಿ, ತೆರಿಗೆಯ ರೂಪದಲ್ಲಿ ಅಥವಾ ಈ ಅಧಿನಿಯಮದ ಮೇರೆಗೆ ತೆರಿಗೆ ಎಂದು ತಾತ್ಪರ್ಯವಾಗುವ ಯಾವುದೇ ಮೊತ್ತವನ್ನು ವಸೂಲು ಮಾಡತಕ್ಕದಲ್ಲ.

XX XX XX

ಅನುಸೂಚಿ

[ಪ್ರಕರಣ 3(6) ನೋಡಿ]

ಕ್ರ.ಸಂ	*ಸರಕುಗಳ ವಿವರಣೆ*
1.	ಎಲ್ಲಾ ತಂಬಾಕು ಉತ್ಪನ್ನಗಳು
2.	ಎಣ್ಣೆ ಬೀಜಗಳನ್ನು ಹೊರತುಪಡಿಸಿ ಟೀ, ಕಾಫಿ ಮತ್ತು ಹತ್ತಿಯೂ ಬೀಜ ತೆಗೆದಿರುವ ಅಥವಾ ತೆಗೆಯದಿರುವ ಸೇರಿದಂತೆ ಕೃಷಿ ಉತ್ಪನ್ನ

XX **XX** **XX**

ಕರ್ನಾಟಕ ವಿಧಾನ ಸಭೆ

(ಒಂಭತ್ತನೆಯ ವಿಧಾನಸಭೆ)

ಎಂಟನೆಯ ಅಧಿವೇಶನ

ಕರ್ನಾಟಕ ಬಾಡಿಗೆ ನಿಯಂತ್ರಣ (ಪೂರ್ವಾನ್ವಯದಿಂದ ಅವಧಿ ವಿಸ್ತರಣೆ) ವಿಧೇಯಕ, 1993.

(1993ರ ವಿಧಾನಸಭಾ ವಿಧೇಯಕ ಸಂಖ್ಯೆ I)

1961 ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮದ ಅವಧಿಯನ್ನು ವಿಸ್ತರಿಸುವ ಒಂದು ವಿಧೇಯಕ.

ಈ ಮುಂದೆ ಹೇಳಿರುವ ಉದ್ದೇಶಗಳಿಗಾಗಿ 1961ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಮದ (1961ರ ಕರ್ನಾಟಕ ಅಧಿನಿಯಮ ಸಂಖ್ಯೆ 22) ಅವಧಿಯನ್ನು ಪೂರ್ವಾನ್ವಯದಿಂದ ಜಾರಿಗೆ ಬರುವಂತೆ ವಿಸ್ತರಿಸಲು ಉಪಬಂಧ ಕಲ್ಪಿಸುವುದು ಅಗತ್ಯವಾಗಿರುವುದರಿಂದ;

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಬಾಡಿಗೆ ನಿಯಂತ್ರಣ (ಪೂರ್ವಾನ್ವಯದಿಂದ ಅವಧಿ ವಿಸ್ತರಣೆ) ಅಧಿನಿಯಮ, 1993 ಎಂದು ಕರೆಯತಕ್ಕದ್ದು.

(2) ಇದು 1992ರ ಡಿಸೆಂಬರ್ 31ನೇ ದಿನಾಂಕದಿಂದ ಜಾರಿಗೆ ಬರುವುದಾಗಿ ಭಾವಿಸತಕ್ಕುದು.

2. **1961ರ ಕರ್ನಾಟಕ ಅಧಿನಿಯಮ 22ರ 1ನೇ ಪ್ರಕರಣದ ತಿದ್ದುಪಡಿ.-** (ಇಲ್ಲಿ ಇಸ್ನು ಮುಂದೆ ಮೂಲ ಅಧಿನಿಮಯವೆ ಎಂದು ಉಲ್ಲೇಖಿತವಾಗಿರುವ) ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮ, 1961ರ 1ನೇ ಪ್ರಕರಣದ 4ನೇ ಉಪಪ್ರಕರಣದಲ್ಲಿ "1992" ಎಂಬ ಅಂಕಿಗಳಿಗೆ ಬದಲಾಗಿ "1997" ಎಂಬ ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

3. **ಉಳಿಸುವಿಕೆಗಳು.-** ಈ ಅಧಿನಿಯಮದಲ್ಲಿರುವುದು ಯಾವುದೂ, 1993ರ ಜನವರಿ 1ನೇ ದಿನಾಂಕದಂದು ಪ್ರಾರಂಭವಾಗುವ ಮತ್ತು ಈ ಅಧಿನಿಯಮವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾಗುವ ದಿನಾಂಕವು ಕೊನೆಗೊಳ್ಳುವ ಅವಧಿಯಲ್ಲಿ ಯಾವನೇ ವ್ಯಕ್ತಿಯನ್ನು ಅವನು ಮಾಡಬಹುದಾದ ಯಾವುದೇ ಕೃತ್ಯ ಅಥವಾ ಲೋಪದ ಸಂಬಂಧದಲ್ಲಿನ, ಈ ಅಧಿನಿಯಮದ ಮೂಲಕ ಮೂಲ ಅಧಿನಿಯಮದ ಅವಧಿ ವಿಸ್ತರಣೆಯಿಂದಾಗಿ ಅಂಥ ಕೃತ್ಯ ಅಥವಾ ಲೋಪವು ಅಪರಾಧವಾಗಿರದಿದ್ದಲ್ಲಿ ಯಾವುದೇ ಅಪರಾಧದ ದೋಷಿ ಎಂದು ಪರಿಗಣಿಸತಕ್ಕದ್ದಲ್ಲ.

4. **ಸಂದೇಹ ನಿವಾರಣೆ.-** ಸಂದೇಹ ನಿವಾರಣೆಗಾಗಿ, ಮೂಲ ಅಧಿನಿಯಮವನ್ನು, ಇದು 1992ರ ಡಿಸೆಂಬರ್ 31ರಂದು ಕೊನೆಗೊಂಡಿದ್ದು, ಇದನ್ನು ಈ ಅಧಿನಿಯಮದಿಂದ, 1997ರ ಡಿಸೆಂಬರ್ 31ರ ದಿನಾಂಕದವರೆಗೆ ಮತ್ತು ಅದನ್ನೂ ಒಳಗೊಂಡಂತೆ, ಪೂರ್ವನ್ವಯವಾಗಿ ಅವಧಿ ವಿಸ್ತರಿಸಲಾಗಿದ್ದು, ಇದು ಯಾವುದೇ ಕಾಲದಲ್ಲಿ ಎಂದೂ ಕೊನೆಗೊಂಡಿರಲಿಲ್ಲವೆಂದು ಭಾವಿಸತಕ್ಕದಂದು ಮತ್ತು ಈ

ಅಧಿನಿಯಮದಿಂದ ತಿದ್ದುಪಡಿಯಾದ ಮತ್ತು ವಿಸ್ತರಿಸಲಾದ ಇದರ ಎಲ್ಲಾ ಉಪಬಂಧಗಳು, ಈ ಅಧಿನಿಯಮದ 3ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ನಿರಂತರವಾಗಿ ಜಾರಿಯಲ್ಲಿರುವುದಾಗಿ ಭಾವಿಸತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

ಉದ್ದೇಶಗಳ ಮತ್ತು ಕಾರಣಗಳ ಹೇಳಿಕೆ

1961ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮದ ಅವಧಿಯು, 1992ರ ಡಿಸೆಂಬರ್ 31ನೇ ದಿನಾಂಕದಂದು ಮುಕ್ತಾಯಗೊಂಡಿತು. ಸದರಿ ಅಧಿನಿಯಮದ ಅವಧಿಯನ್ನು ಮತ್ತೆ ಐದು ವರ್ಷಗಳವರೆಗೆ ಅಂದರೆ, 1997ರ ಡಿಸೆಂಬರ್ ಮುವತ್ತೊಂದನೇ ದಿನಾಂಕದವರೆಗೆ ವಿಸ್ತರಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕವನ್ನು ಮಂಡಿಸಲಾಗಿದೆ.

ಆರ್ಥಿಕ ಜ್ಞಾಪನ ಪತ್ರ

1961ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವ ಸಲುವಾಗಿ ತಗಲುವ ಸಿಬ್ಬಂದಿ ವೆಚ್ಚವು ವರ್ಷಕ್ಕೆ ಸುಮಾರು 10,00,000-00 ರೂಪಾಯಿಗಳಾಗಿರುತ್ತದೆ (ಹತ್ತು ಲಕ್ಷ ರೂಪಾಯಿಗಳು). ಯಾವುದೇ ಅನಾವರ್ತಕ ಖರ್ಚುಗಳು ಇರುವುದಿಲ್ಲ.

ಎಂ ರಾಜಶೇಖರ ಮೂರ್ತಿ,
ಕಂದಾಯ ಸಚಿವರು.

ಎಂ. ಇನ್ನಾಸಪ್ಪ
ಕಾರ್ಯದರ್ಶಿ.

ಅನುಬಂಧ

[1961 ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮದ (1961ರ ಕರ್ನಾಟಕ ಅಧಿನಿಯಮ 22) ಉದ್ಧೃತ ಭಾಗ]

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅವಧಿ.- ಈ ಅಧಿನಿಯಮವನ್ನು ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮ, 1961 ಎಂದು ಕರೆಯತಕ್ಕುದು.

2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುತ್ತದೆ.

4) ಇದು, 1992ರ ಡಿಸೆಂಬರ್ ಮುವತ್ತೊಂದನೇ ದಿನಾಂಕದವರೆಗೆ ಮತ್ತು ಅದನ್ನು ಒಳಗೊಂಡಂತೆ ಜಾರಿಯಲ್ಲಿರತಕ್ಕದ್ದು ಮತ್ತು ಈ ಅಧಿನಿಯಮವು ಮುಕ್ತಾಯಗೊಂಡ ತರುವಾಯ, 1899ರ ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮದ 6ನೇ ಪ್ರಕರಣವು, ಈ ಅಧಿನಿಯಮವು ಖಾಯಂ ಕರ್ನಾಟಕ ಅಧಿನಿಯಮವಾಗಿದ್ದರೆ ಹೇಗೋ ಹಾಗೆ ಮತ್ತು ಇದು ಮುಕ್ತಾಯಗೊಳ್ಳುವುದಕೆ ನಿಕಟ ಪೂರ್ವದಲ್ಲಿ ಕರ್ನಾಟಕ ಅಧಿನಿಯಮದಿಂದ ನಿರಸಿತವಾಗಿದ್ದರೆ ಹೇಗೋ ಹಾಗೆ, ಅನ್ವಯಿಸತಕ್ಕದ್ದು.

ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ ೭ನೇ ಜನವರಿ ೧೯೯೩, ಪುಷ್ಯ ೧೭, ಶಕ ೧೯೧೪

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೦೫ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : (ಶ್ರೀಮತಿ ನಾಗಮ್ಮ ಕೇಶವಮೂರ್ತಿ)ಯವರು ಪೀಠವನ್ನು

ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ರಾಜ್ಯ ರಸ್ತೆ ಸಾರಿಗೆ ಸಿಬ್ಬಂದಿ ವರ್ಗದ ಆಸ್ತಿಪಾಸ್ತಿಗಳ ತನಿಖೆ

978 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿ ವರ್ಗದವರ ಆಸ್ತಿಪಾಸ್ತಿಗಳ ತನಿಖೆ ನಡೆಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ?

ಆ) ಸಾರಿಗೆ ಇಲಾಖೆಯಲ್ಲಿ ಭ್ರಷ್ಟಾಚಾರದ ಬಗ್ಗೆ ದೂರುಗಳಿರುವುದರಿಂದ ತನಿಖೆಯ ಕ್ರಮ ಅಗತ್ಯವಲ್ಲವೇ?

ಇ) ತನಿಖೆಯಲ್ಲಿ ಸಿಕ್ಕಿ ಬಿದ್ದವರಿಗೆ ಸೂಕ್ತ ಶಿಕ್ಷೆ ವಿಧಿಸಲಾಗುವುದೆ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು.

ಆ) ಹೌದು.

ಇ) ಹೌದು.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಉಪಾಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಗೆ ಅಂದರೆ, ಮೂರು ಪ್ರಶ್ನೆಗಳಿಗೂ, ಹೌದು, ಹೌದು, ಹೌದು ಎಂದು ಹೇಳಿದ್ದಾರೆ. ಒಪ್ಪಿಕೊಂಡಿದ್ದಾರೆ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿ ವರ್ಗದವರ ಆಸ್ತಿಪಾಸ್ತಿಗಳ ತನಿಖೆ ನಡೆಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ ಎಂದು ಕೇಳುವುದಕ್ಕೆ "ಹೌದು" ಎಂದು ಹೇಳಿದ್ದಾರೆ. ಸಾರಿಗೆ ಇಲಾಖೆಯಲ್ಲಿ ಭ್ರಷ್ಟಾಚಾರದ ಬಗ್ಗೆ ದೂರುಗಳಿವೆಯೇ ಎಂದು ಕೇಳಿರುವುದಕ್ಕೂ "ಹೌದು" ಎಂದು ಉತ್ತರ ಕೊಟ್ಟಿದ್ದಾರೆ. ಹಾಗಾದರೆ, ಸಾರಿಗೆ ಸಂಸ್ಥೆಯಲ್ಲಿ ಇದ್ದವರ ಆಸ್ತಿಪಾಸ್ತಿ ತನಿಖೆ ಎಲ್ಲಿಯವರೆಗೆ ಮುಟ್ಟಿದೆ ಅಥವಾ ಭ್ರಷ್ಟಾಚಾರದ ವಿಷಯ ಎಲ್ಲಿಯವರೆಗೆ ಮುಟ್ಟಿದೆ, ಇದನ್ನು ತಾವು ಹೇಳುತ್ತೀರಾ?

SRI BHEEMANNA KHANDRE : Madam Deputy Speaker, the hon. Member has asked, (a) whether the Government would take action to conduct an inquiry into the assets and liabilities of the staff of the Karnataka State Road Transport Corporation. I have replied 'Yes' Then vide (b), he has asked, whether holding of an inquiry is not a must since there are complaints of corruption in the Transport department. I have replied 'Yes' Further for Qn. (c) whether appropriate punishment would be imposed against the staff indicted in the inquiry, I have said, 'Yes'.

ಯಾವ ಯಾವ ಕಂಪ್ಲೇಂಟ್ ಈ ಪ್ರಕಾರ ಬಂದಿದೆ. ಅದರ ಬಗ್ಗೆ ಎನ್‌ಕ್ವಯರಿ ಮಾಡುತ್ತಿದ್ದೇವೆ. ಎಷ್ಟೋ ಜನರ ವಿರುದ್ಧ ಆಕ್ಷನ್ ತೆಗೆದುಕೊಂಡಿದ್ದೇವೆ. ಈಗ ಎಲ್ಲಿ ಎನ್‌ಕ್ವಯರಿ ಬಗ್ಗೆ ಸಾಬೀತು ಆಯಿತು, ಅಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಈಗ ತಮ್ಮ ಪ್ರಶ್ನೆ ಏನು ಅಂದರೆ ಅವರೆಲ್ಲರದ್ದು ಎಷ್ಟು ಪ್ರಾಪರ್ಟಿ ಇದೆ ನೀವು ನೋಡಿದರೇನು ಎನ್ನತಕ್ಕಂಥ ಮಾತು ನಮ್ಮಲ್ಲಿ ಗವರ್ನ್‌ಮೆಂಟ್‌ನಲ್ಲಿ ಇನ್ನು ಆ ಬಗ್ಗೆ ಡಿಸೈಡ್ ಮಾಡಿಲ್ಲ. ಅದು ಡಿಸೈಡ್ ಮಾಡಿದರೆ along with these officers belonging to KSRTC.

ಇದರಲ್ಲಿ ತಗೊಂಡಿದ್ದಾರೆ. ಯಾರ್‍ಯಾರದು ಪ್ರಾಪರ್ಟಿ ಈ ದೇಶದಲ್ಲಿ 20-25 ವರ್ಷದಿಂದ ಹೆಚ್ಚಾಗಿದೆ ಪ್ರಪ್ರೋಷನೇಟ್‌ಲಿ ಅವರ ಮೇಲೆ ಆಕ್ಷನ್ ತಗೋಬೇಕು ಎನ್ನತಕ್ಕಂತ ಮಾತು ನಾವು ವಿಚಾರ ಮಾಡುತ್ತಿದ್ದೇವೆ. ಆ ಮಾತನ್ನು ವಿಚಾರ ಮಾಡೋಣ.

ಶ್ರೀ ಬಿ.ಎಂ. ಇದಿನಬ್ಬ : ಉದಾಹರಣೆಗಳು ಇದ್ದರೆ ಹೇಳಬಹುದಲ್ಲ?

ಶ್ರೀ ಭೀಮಣ್ಣ ಖಂಡ್ರೆ : ಅದರ ಬಗ್ಗೆ ತಾವು ದೀರ್ಘವಾದ ಕೊಶ್ಚನ್ ಕೇಳಿದರೆ ಅದು ಉತ್ತರ ಏನು ಎಂದು ಕೊಡುತ್ತೇನೆ. ಎಷ್ಟು ಆಗಿವೆ, ಎಷ್ಟು ಆಗುತ್ತಾ ಇವೆ, ಎಷ್ಟು ಎನ್‌ಕ್ವಯರಿಯಲ್ಲಿ ಇವೆ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಸಾರಿಗೆ ಮಂತ್ರಿಗಳ ಉತ್ತರವನ್ನು ನೋಡಿ ನನಗೆ ಆಶ್ಚರ್ಯವಾಗಿದೆ. ಸಾರಿಗೆ ಸಂಸ್ಥೆಯ ಸಿಬ್ಬಂದಿ ವರ್ಗದವರ ಆಸ್ತಿಪಾಸ್ತಿಗಳ ತನಿಖೆ ನಡೆಸಲು ಸರ್ಕಾರ ಕ್ರಮ ಕೈಗೊಳ್ಳುವುದೆ ಎಂದಿದ್ದಕ್ಕೆ ಹೌದು ಎಂದಿದ್ದಾರೆ. ಸರ್ಕಾರ ಕೈಗೊಳ್ಳುವುದಕ್ಕೆ ಅವಕಾಶವೇ ಇಲ್ಲ. ಕೆಎಸ್‌ಆರ್‌ಟಿಸಿ ಒಂದು ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರವಾಗಿ ಆರ್‌ಟಿಸಿ ಆಕ್ಟ್ ಪ್ರಕಾರವಾಗಿ ಒಂದು ಆಕ್ಟ್ ಇದೆ. ಅದಕ್ಕೆ ಒಂದು ಬೋರ್ಡ್ ಇದೆ. ಬೋರ್ಡ್ ಮೇಲೆ ಕ್ರಮ ನೀವು ತೆಗೆದುಕೊಳ್ಳಬಹುದೇ ವಿನಃ how can the Government take action? ನನಗೆ ಗೊತ್ತಿರುವ ಹಾಗೆ ನಾನು ಒಂದು ಸ್ವಲ್ಪ ತಿಂಗಳ ಕಾಲ ಅಲ್ಲಿ ಕೆಲಸ ಮಾಡಿದ್ದೇನೆ. how can the Government take any action? ನಾನು ಏಕೆ ಇದನ್ನು ಹೇಳಿದೆ ಅಂದರೆ ತಾವು ಹೊಸದಾಗಿ ಬಂದಿದ್ದೀರಿ. ಆಫೀಸರ್ಸ್ ನಿಮಗೆ ಕರೆಕ್ಟಾಗಿ ಉತ್ತರ ಕೊಡುವುದಕ್ಕೂ they don't even think about it.

ನಿಮ್ಮಿಂದ ನಾನು ಈ ಉತ್ತರ ನಿರೀಕ್ಷೆ ಮಾಡುತ್ತಾ ಇಲ್ಲ. ನಿಮ್ಮ ಎಲ್ಲಾ ಉತ್ತರಗಳನ್ನು ಅಧಿಕಾರಿಗಳೆ ಬರೆಯತಕ್ಕಂಥಾದ್ದು. ಅಧಿಕಾರಿಗಳು ಉತ್ತರವನ್ನು

ಕಳಿಸತಕ್ಕಂತಹ ಸಂದರ್ಭದಲ್ಲಿ ನಿಮ್ಮ ಅಪ್ರೂವಲ್ ಕೊಡತಕ್ಕಂತಹ ಸಂದರ್ಭದಲ್ಲಿ there is a Board, there is a disciplinary action Committee. The Board has to implement the orders of the disciplinary action committee How can the Government intervene in this?

ಶ್ರೀ ಭೀಮಣ್ಣ ಖಂಡ್ರೆ : ಇವರು ಏನು ಕೇಳಿದ್ದಾರೆ ಪ್ರಾಪರ್ಟಿ ಬಗ್ಗೆ ಕೇಳಿದ್ದಾರೆ. ಪ್ರಾಪರ್ಟಿ ಬಗ್ಗೆ ನೀವು ಹೇಳುವ ಅರ್ಥದಲ್ಲಿ ನಾನು ಹೇಳಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಪ್ರಾಪರ್ಟಿ ಬಗ್ಗೆ ಇರಬಹುದು. ಮಿಸ್‌ಅಪ್ರೋಪ್ರಿಯೋಷನ್ ಇರಬಹುದು. ಮತ್ತೊಂದು ಇರಬಹುದು. ಎಲ್ಲಾದಕ್ಕೂ ಸಹಿತ ಕೆಎಸ್‌ಆರ್‌ಟಿಸಿ ಬೋರ್ಡ್ ಸುಪ್ರೀಂ ಅಥಾರಿಟಿ ಇದೆ. KSRTC Board is the Supreme authority. Except putting the Managing Director and the Chairman and Vice Chairman and also some Directors. you have no other powers.

ಶ್ರೀ ಭೀಮಣ್ಣ ಖಂಡ್ರೆ : ಇಲ್ಲಿ ಕೊಶ್ಚನ್ ಅನ್ಸರ್‌ನಲ್ಲಿ ಅದು ಕೇಳಲ್ಲ. ಅವರು ಇಲ್ಲ ಕೇಳಿದ್ದೇನು ಪ್ರಾಪರ್ಟಿಯನ್ನು ಚೆಕ್ ಮಾಡಿದರೂ ಎಂದು ಪ್ರಶ್ನೆ ಇಲ್ಲ. ಯಾರು ಯಾರು ಕರೆಪ್ಟ್ ಇದ್ದಾರೆ ಅವರ ವಿರುದ್ಧ ಕ್ರಮ ತಗೊಂಡಿದ್ದಾರೆ ಎನ್ನುವ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಪ್ರಾಪರ್ಟಿ ಬಗ್ಗೆ ಕೇಳಿದಾಗ ನೀವು ಹೇಳಿದ್ದುದು ನಾವು ಹೇಳಿದ್ದುದು ಅರ್ಥ ಒಂದೇ ಏನೆಂದರೆ ಆ ಪ್ರಕಾರ ಯಾವುದೂ ಕಾನೂನು ಇಲ್ಲ, ಅದು ಇದ್ದರೆ ಕಾನೂನು ಪ್ರಕಾರ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ : ಈಗ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದರೆ ಇದರಲ್ಲಿ 'ಹೌದು' 'ಹೌದು' ಎಂದು ಹೇಳಿದ್ದಾರೆ. ಈಗ ಈ ರೀತಿ ಭ್ರಷ್ಟಾಚಾರ ಎಲ್ಲಾ ಅನ್ಯಾಯ ಆಗುವುದರಿಂದ ಈ ಕೆ.ಎಸ್‌ಆರ್‌ಟಿಸಿ ಸೋರಿಹೋಗಿ ನಷ್ಟದಲ್ಲಿ ಬಿದ್ದಿರುವುದನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಭೀಮಣ್ಣ ಖಂಡ್ರೆ : ಅದು ಗಮನಕ್ಕೆ ಬಂದಿದೆ. ಅದರ ಬಗ್ಗೆ ನಾವು ಆಕ್ಷನ್ ತೆಗೆದುಕೊಳ್ಳುತ್ತಿದ್ದೇವೆ. ಒಂದು ಮಾತು ತಾವು ಕೇಳಿದ್ದೀರಿ ಅದಕ್ಕೆ ಉತ್ತರ ಕೊಡುತ್ತಿದ್ದೇನೆ. 9 cases for acquisition of wealth disproportionate to the known source of income by KSRTC employees was reported out of which 6 cases have been exonerated. In 15 cases punishment has been imposed in accordance with KSRTC C&D Regulations 1971. Remaining 18 cases are in the enquiry stage.

ಉಪಾಧ್ಯಕ್ಷಿಣಿಯವರು : ನಿನ್ನೆಯ ದಿವಸ 8 ಪ್ರಶ್ನೆಗಳು ಲ್ಯಾಪ್ಸ್ ಆಗಿದ್ದಕ್ಕೆ ಸದಸ್ಯರೆಲ್ಲರಿಗೂ ಬಹಳ ಬೇಜಾರು ಆಗಿದೆ. ತಾವು ಮುಂದಿನ ಪ್ರಶ್ನೆ ಹಾಕಿ.

ಹುಮ್ನಾಬಾದ್‌ನಲ್ಲಿರುವ ಕ.ರಾ.ರ.ಸಾ. ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿಗಳ ಕಛೇರಿಯನ್ನು ಬೀದರ್ ನಗರಕ್ಕೆ ಸ್ಥಳಾಂತರಿಸುವ ಬಗ್ಗೆ

918 - ಶ್ರೀ ಗುರುಪಾದಪ್ಪ ನಾಗಮ್ಮರಪಲ್ಲಿ (ಔರಾದ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬೀದರ್ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಗಳ ಕಛೇರಿಯನ್ನು ಹುಮ್ನಾಬಾದಿನಲ್ಲಿ ಯಾವಾಗ ಪ್ರಾರಂಭಿಸಲಾಯಿತು ?

ಆ) ಬೀದರ್ ಜಿಲ್ಲೆಯ ಎಲ್ಲಾ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಛೇರಿಗಳು ಬೀದರ್ ನಗರದಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿಗಳ ಕಛೇರಿಯನ್ನು ಸಹ ಬೀದರ್ ನಗರಕ್ಕೆ ಸ್ಥಳಾಂತರಿಸುವ ಬಗ್ಗೆ ಕ್ರಮ ಕೈಗೊಳ್ಳುತ್ತದೆಯೇ ?

ಇ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ದಿನಾಂಕ 11-11-1991ರಂದು

ಆ) ಇಲ್ಲ.

ಇ) ಬೀದರ್ ನಗರದಲ್ಲಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿಗಳ ಕಛೇರಿ ಮತ್ತು ವಿಭಾಗೀಯ ಕಾರ್ಯಾಗಾರಕ್ಕಾಗಿ ಸಾಕಷ್ಟು ಜಮೀನು ಇರಲಾರದ ನಿಮಿತ್ತ ಮತ್ತು ಹುಮ್ನಾಬಾದಿನಲ್ಲಿ ಜಮೀನು ಮತ್ತು ಕಟ್ಟಡದ ವ್ಯವಸ್ಥೆ ಇದ್ದ ಕಾರಣ ಹುಮ್ನಾಬಾದ್‌ನಲ್ಲಿಯೇ ವಿಭಾಗೀಯ ಕಛೇರಿಯನ್ನು ಪ್ರಾರಂಭಿಸಲಾಯಿತು.

ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ : ಸನ್ಮಾನ್ಯ ಅಧ್ಯಕ್ಷರೆ, ಉತ್ತರ ತಾವು ಹೇಳಿದ್ದೀರಿ. ಅಲ್ಲಿ ಕಛೇರಿಯನ್ನು ಯಾವಾಗ ಸ್ಥಾಪನೆ ಮಾಡಿದರು. ಎಂದು ಡೇಟ್ ಕೊಟ್ಟಿದ್ದೀರಿ. ಆಮೇಲೆ ಬೀದರ್‌ಗೆ ಸ್ಥಳಾಂತರ ಮಾಡುತ್ತೀರ ಎಂದು ಕೇಳಿದರೆ ಇಲ್ಲ ಎಂದು ಹೇಳಿಬಿಟ್ಟಿದ್ದೀರಿ. ಏನು ಕಾರಣ ಎಂದು ಕೇಳಿದರೆ ಅಲ್ಲಿ ಜಾಗ ಇಲ್ಲ, ಸ್ಥಳ ಇಲ್ಲ ಎಂದು ಹೇಳಿದ್ದೀರಿ. ಅಂದರೆ ಮತ್ತೆ ಬೆಂಗಳೂರಿನಲ್ಲಿ ಎಲ್ಲಾ ಕಛೇರಿಗಳನ್ನು ತರುತ್ತೀರೋ ಅಥವಾ ಹಳ್ಳಿಗಳಲ್ಲಿ ಏನಾದರೂ ವ್ಯವಸ್ಥೆ ಮಾಡುತ್ತೀರೋ ? ನಿಜವಾಗಿಯೂ ನೋಡಿದರೆ ಜಿಲ್ಲೆಯಲ್ಲಿ ಇರತಕ್ಕಂತಹ ಕಛೇರಿ, ಅಲ್ಲಿ ಕಛೇರಿ ಇಲ್ಲ, ಜಾಗ ಇಲ್ಲ, ಎಂದು ಯಾವುದೋ ನೆಪ ಹೇಳಿದರೆ ಹೇಗೆ ಅಭಿವೃದ್ಧಿ ಆಗುತ್ತದೆ. ಬಸ್ಸಿನ ಮೇಲುಗಡೆ ಕೆಳಗಡೆ ಜನರು ಓಡುಡಾವುದು ತಮಗಂತೂ ಚೆನ್ನಾಗಿ ಗೊತ್ತಿದೆ. ಎಂತಹ ಪರಿಸ್ಥಿತಿ ಇದೆ ಬಸ್ಸಿಂದು. ಅಂತ ಅಂದರೆ ದೇವರೆ ಕಾಪಾಡಬೇಕು. ಒಂದು ಸಲ ಹೋಗಿಬಂದರೆ ವಾಪಸ್ಸು ಬರುವುದಕ್ಕೆ ಆಗೋದಿಲ್ಲ. ಅಂತಹ ಪರಿಸ್ಥಿತಿಯಲ್ಲೂ ಕೂಡ ಕಛೇರಿ ಮಾಡುವುದಕ್ಕೆ ತಾವು ತಯಾರು ಇಲ್ಲ ಅಂದರೆ ನಿಜವಾಗಿಯೂ ಇದು ಬಹಳ ಆಶ್ಚರ್ಯಕರವಾದಂತಹ ಸಂಗತಿ. ಅದು ಖಂಡ್ರೆಯವರ ಕಡೆಯಿಂದ ಇಂತಹ ಉತ್ತರವನ್ನು ನಿರೀಕ್ಷೆ ನಾವು ಮಾಡುವುದಿಲ್ಲ, ಇದು ಅಲ್ಲಿ ಆಗಲಿ ಎಂದು ಜಗಳ ಆಡುವವರು, ಅದು ಏಕೆ ಈ ರೀತಿ ಹೇಳಿದರೊ ಗೊತ್ತಿಲ್ಲ, ಈಗಲಾದರೂ ತಾವು ಮಾಡಬೇಕು ಎಂದು ಒಪ್ಪಿಕೊಳ್ಳಬೇಕು.

ಶ್ರೀ ಭೀಮಣ್ಣ ಖಂಡ್ರೆ : ಗುಲ್ಬರ್ಗಾ ಡಿವಿಷನ್‌ನಲ್ಲಿ ಬೀದರ್‌ನಲ್ಲಿ ಯಾವುದೇ ಪ್ರಕಾರ ಡಿವಿಷನ್ ಎಂದು ಇದಿದ್ದಿಲ್ಲ. ಈಗ ಏನು ಮಾಡಿದ್ದೇವೆ ಅದು ತಮಗೂ ಗೊತ್ತು. ಇದರಲ್ಲಿ ಹುಮ್ನಾಬಾದ್, ಅದು ಸೆಂಟರ್ ಪ್ಲೇಸ್. ಬೀದರ್‌ನಲ್ಲಿ ಕಟ್ಟಡ ಇಲ್ಲದ ಕಾರಣ ಅಲ್ಲಿ ನಾವು ಸ್ಥಾಪನೆ ಮಾಡಿದ್ದೇವೆ.

ಈಗ ಬೀದರ್‌ಗೆ ಮಾಡುವ ಪ್ರಶ್ನೆ ಬರೋದಿಲ್ಲ. ಸಧ್ಯಕ್ಕೆ ಈಗ ಬೀದರ್‌ಗೆ ಈ ಪ್ರಕಾರ ಯಾವುದಾದರೂ ಬಿಲ್ಡಿಂಗ್ ಪ್ರೊವೈಡ್ ಮಾಡಿದರೆ ಅದರ ಬಗ್ಗೆ ವಿಚಾರ ಮಾಡೋಣ. ಈಗ Humnabad is a central place and there are so many quarters and building facilities. That is why we have done. There is no question of shifting it to Bidar.

ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ : ದಯವಿಟ್ಟು ಕ್ಷಮಿಸಬೇಕು. ಅದು ಸೆಂಟರ್ ಪ್ಲೇಸ್ ಆಗಲ್ಲ, ಔರದ್ ಎಲ್ಲಿದೆ? ಭಾಲ್ಕಿ ಎಲ್ಲಿ ಇದೆ? ಹುಮ್ನಾಬಾದ್ ಒಂದು ಕಡೆ ಕೊನೆಗೆ ಆಗುತ್ತದೆ. ಅಂತದರಲ್ಲಿ ಬೀದರ್‌ನಲ್ಲಿ ಜಾಗ ಇದೆ. ತಮಗೆ ಜಾಗ ಕೊಡಿ ಬೀದರ್‌ನಲ್ಲಿ ಮಾಡುತ್ತೇವೆ ಎಂದು ಏಕೆ ಹೇಳುವುದಿಲ್ಲ. ಬೀದರ್‌ನಲ್ಲಿ ಮಾಡಿ, ಜಾಗ ಕೊಡುತ್ತೇವೆ ಜಾಗ ಇದೆ. ಅದಕ್ಕೆ ತಾವು ದಯವಿಟ್ಟು ಬೀದರ್‌ನಲ್ಲಿ ಮಾಡಬೇಕು. ತಾವು ದಯವಿಟ್ಟು ಮಾಡುತ್ತೇವೆ ಎಂದು ಒಪ್ಪಿಕೊಳ್ಳಿ.

ಶ್ರೀ ಭೀಮಣ್ಣ ಖಂಡ್ರೆ : ಈಗ ಅಲ್ಲಿ ಬಿಲ್ಡಿಂಗ್ಸ್ ಇವೆ. ಅಲ್ಲಿ ಕೆಲಸ ನಡೆಯುತ್ತಾ ಇದೆ.

ಶ್ರೀ ನಾರಾಯಣರಾವ್ ಮನಳ್ಳಿ : ಬೀದರ್‌ನಲ್ಲಿ ಜಾಗ ಇದೆ. ಅದು ಮಾನ್ಯ ಮಂತ್ರಿಯವರಿಗೆ, ಗೊತ್ತಿದೆ. ಆಮೇಲೆ ಬಿಲ್ಡಿಂಗ್ ವಿಷಯ ಹೇಳುತ್ತಿದ್ದೀರಿ. ಬಿಲ್ಡಿಂಗ್ ಹುಮ್ನಾಬಾದ್‌ನಲ್ಲಿದ್ದರೂ ಅದು ಡ್ರೈವರ್ಸ್ ಮತ್ತು ಕಂಡಕ್ಟರ್ಸ್ ಟ್ರೇನಿಂಗ್ ಬಿಲ್ಡಿಂಗ್ ಇದೆ. ಅದರೊಳಗೆ ನೀವು ವಿಭಾಗಿ ಕಛೇರಿ ಮಾಡಿದ್ದೀರಲ್ಲ, ಅದಕ್ಕೆ ತೊಂದರೆ ಇರುತ್ತದೆ. ಬೀದರ್‌ನಲ್ಲಿ ಜಾಗ ಇದ್ದು ಆ ಜಾಗದ ಲಾಭ ಪಡೆದುಕೊಳ್ಳಬೇಕು. ಅಲ್ಲಿ ವಿಭಾಗಿ ಕಛೇರಿ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ : ಜಾಗವೂ ಇಲ್ಲ ಕಟ್ಟಡವೂ ಇಲ್ಲ, ಯಾವುದೂ ಫೆಸಿಲಿಟಿಸೂ ಇಲ್ಲಾ. ಯಾವಾಗ ಇದು ಸ್ಥಾಪನೆ ಆಯಿತು, ಹೋದ ವರ್ಷ ಆವಾಗಿನಿಂದ ತಾವು ಏನು ಇಟ್ಟಿದ್ದು ಇಲ್ಲ. ಆಗ ನೀವು ಆಗ್ರಿ ಆಗಿದುದ್ದು ಕಾಣುತ್ತದೆ. ಅದು ನಮ್ಮ ಆಯ್ಕೆ ಅಲ್ಲ.

ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ : ನಾವು ಆಗ್ರಿ ಆಗಿಲ್ಲ.

ಶ್ರೀ ಭೀಮಣ್ಣ ಖಂಡ್ರೆ : ಬೀದರ್‌ನಲ್ಲಿ ಯಾವ ಜಾಗವೂ ಇಲ್ಲ. ನನಗೆ ಗೊತ್ತಿದ್ದಂತೆ ನಿಮಗೆ ಗೊತ್ತಿದ್ದಂತೆ ಜಾಗ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲಿ ಹಣದ ಪ್ರಶ್ನೆ ಇದೆ. ಕಟ್ಟಡ ತೆಗೆದುಕೊಳ್ಳಬೇಕು ಅಂದರೆ ಹಣ ಪ್ರಶ್ನೆ ಇದೆ. ಹುಮ್ನಾಬಾದ್ ಸೆಂಟ್ರಲ್ ಪ್ಲೇಸ್ ಅದಕ್ಕೆ ತಗೊಂಡಿದ್ದೇವೆ.

ರಾಜ್ಯದ ಹೋಟೆಲ್‌ಗಳಲ್ಲಿ ಹೆಚ್ಚು ಬೆಲೆಗಳು

550 - ಶ್ರೀ ಸಿ. ಬೈರೇಗೌಡ (ವೇಮಗಲ್) : ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದ್ಯಾಂತ ಹೋಟೆಲ್‌ಗಳಲ್ಲಿ ಆಹಾರ ಪದಾರ್ಥಗಳ ಬೆಲೆಗಳು ಗಗನ ಮುಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲ, ಈ ಬೆಲೆ ಏರಿಕೆಯನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಹೋಟೆಲ್‌ಗಳಲ್ಲಿ ತಿಂಡಿ ಹಾಗೂ ಊಟದ ಬೆಲೆ ಏರಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಆಗಿಂದಾಗ್ಗೆ ಹೋಟೆಲ್ ಮಾಲೀಕರ ಸಂಘದವರನ್ನು ಕರೆದು ಸಭೆ ಜರುಗಿಸಿ ಹೋಟೆಲುಗಳಲ್ಲಿನ ತಿಂಡಿ ಪದಾರ್ಥಗಳ ಬೆಲೆ ಇಳಿಸಲು ಪ್ರಯತ್ನಿಸಲಾಗುತ್ತಿದೆ. ಸರ್ಕಾರಿ ಆದೇಶ ಸಂಖ್ಯೆ ಎಫ್‌ಟಿಡಿ 40 ಡಿಐಎಂ 84 ದಿನಾಂಕ 7-7-85ರಲ್ಲಿ ಆಹಾರ ಮತ್ತು ಸಾರಿಗೆ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ಹೋಟೆಲು ತಿಂಡಿಗಳ ಬೆಲೆಗಳು ಏರಿಕೆ ಮಟ್ಟದಲ್ಲಿದ್ದಾಗ ಯಾವ ರೀತಿಯಾಗಿ ಇವುಗಳನ್ನು ಇಳಿಸಲು ಕ್ರಮ ಕೈಗೊಳ್ಳಬೇಕೆಂಬುದನ್ನು ಪರಿಗಣಿಸಲಾಗುತ್ತಿದೆ. ದಿನಾಂಕ 25-4-92ರಂದು ಹೋಟೆಲು ಮಾಲೀಕರ ಸಂಘದೊಂದಿಗೆ ಸಭೆ ಜರುಗಿಸಿ ಹೋಟೆಲುಗಳ ತಿಂಡಿ ಪದಾರ್ಥಗಳ ಬೆಲೆ ಕಡಿಮೆಗೊಳಿಸಲು ಪ್ರಯತ್ನಿಸಲಾಯಿತು. ಆದರೂ ಅಗತ್ಯವಸ್ತುಗಳ ಅಧಿನಿಯಮದಡಿಯಲ್ಲಿ ಹೋಟೆಲುಗಳಲ್ಲಿ ನೀಡಲಾದ ಆಹಾರ ಪದಾರ್ಥಗಳ ಬೆಲೆ ನಿಯಂತ್ರಿಸಲು ಅವಕಾಶವಿಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಇಲ್ಲಿ ಬೆಲೆಗಳು ಏರಿದಾಗ ಇಳಿಸಲು ಕ್ರಮ ಕೈಗೊಳ್ಳಬೇಕು ಎಂಬುದನ್ನು ಪರಿಗಣಿಸಲಾಗುತ್ತದೆ ಅನ್ನತಕ್ಕಂತಹ ಉತ್ತರ ಕೊಟ್ಟಿದ್ದಾರೆ. ಪ್ರತಿನಿತ್ಯವೂ ಕೂಡ ಈ ತಿಂಡಿ ಬೆಲೆ ಹೋಟೆಲ್‌ನಲ್ಲಿ ಏರತಕ್ಕಂಥಾದ್ದು. ಈ ವಾರ ಇದ್ದಿದ್ದು ಬೆಲೆ ಮುಂದಿನ ವಾರ ಇರುವುದಿಲ್ಲ. ಮುಂದಿನ ವಾರದ ಬೆಲೆ ಅದಕ್ಕೆ ಮುಂದೆ ಹೋಗುತ್ತದೆ. ಒಂದು ತಿಂಗಳಲ್ಲಿ ಶೇಕಡ 10ರಿಂದ 15ರಷ್ಟು ಬೆಲೆಗಳು ಪ್ರತಿ ತಿಂಗಳು ಏರುತ್ತಾ ಇದೆ. ಏರುತ್ತಿರತಕ್ಕಂತ ಪರಿಸ್ಥಿತಿಯಲ್ಲಿ ಇವರು ಪರಿಗಣಿಸಲಾಗುತ್ತಿದೆ ಎಂದು ಅಂದರೆ ಇದು ಉತ್ತರ ಎಷ್ಟರಮಟ್ಟಿಗೆ ಸಮಂಜಸ ಎನ್ನತಕ್ಕಂಥಾದ್ದು ಒಂದು. ಮತ್ತೆ 1992ರಲ್ಲಿ ಒಂದು ಸಭೆ ಸೇರಿದ್ದಾರೆ, ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. 25-4-92ರಲ್ಲಿ ಒಂದು ಸಮಿತಿ ಸಭೆ ನಡೆದದ್ದು ಅಲ್ಲಿಂದ ಇಲ್ಲಿಯವರೆಗೂ ಸುಮಾರು ಎಂಟು ತಿಂಗಳ ಕಾಲ ಸಭೆಯೇ ನಡೆದಿಲ್ಲ. ನಾನು ಹೇಳಿದ ಹಾಗೆ ಪ್ರತಿ ತಿಂಗಳು ಪ್ರತಿ ದಿವಸವೂ ಬೆಲೆ ಏರುತ್ತಾ ಇದ್ದರೆ ಇವರು ಎಂಟು ತಿಂಗಳ ಕಾಲ ಇವರು ಸಭೆ ನಡೆಸದೆ ಇದ್ದರೆ ಹೇಗೆ?

ಶ್ರೀಮತಿ ಮನೋರಮಾ ಮಧ್ವರಾಜ್ : ಮಾನ್ಯ ಅಧ್ಯಕ್ಷಣೆಯವರೆ, ಈ ಹೋಟೆಲ್ ಬೆಲೆಗಳನ್ನು ತಿಂಡಿಗಳ ಬೆಲೆಯನ್ನು ಇಳಿಸಲಿಕ್ಕೆ ಅಂದರೆ ಅವರನ್ನು ಕಂಟ್ರೋಲ್‌ನಲ್ಲಿ ಇಡಲಿಕ್ಕೆ ನಮ್ಮ ಈಗಿನ ಎಸೆನ್ಸಿಯಲ್ ಕಮೊಡಿಟಿಸ್ ಆಕ್ಟ್‌ನಲ್ಲಿ ಯಾವುದೇ ಕಂಟ್ರೋಲ್ ಮಾಡುವಂತ ಆದೇಶ ಇಲ್ಲ. ಹಾಗಾಗಿ ಆ ಅವಕಾಶ ಇಲ್ಲ ಇಲ್ಲಿ.

SRI C. BYREGOWDA : It is a state Government subject. Any time the state Government can declare under the Essential Commodities Act, any articles that are coming under the Act. ಇಷ್ಟು ಪ್ರಮಾಣದಲ್ಲಿ ಬೆಲೆ

ಏರುತ್ತಾ ಇದ್ದರೂ ಸಹ ನೀವು ಏಕೆ ಸುಮ್ಮನೆ ಕುಳಿತಿದ್ದಿರಿ. You can declare at this moment.

ತಾವು ದಯವಿಟ್ಟು ಹೇಳಿ ಈಗ. ನೀವೇ ಹೇಳುತ್ತಿದ್ದೀರಿ ಅವಕಾಶ ಇಲ್ಲ ಎಂದು. ಈಗಾಗಲೇ you can declare at this moment ಈ ನಿಮಿಷದಿಂದ ನಾನು ಡಿಕ್ಲೇರ್ ಮಾಡುತ್ತೇನೆ ಎನ್ನತಕ್ಕಂಥ ಮಾತನ್ನು ದಯವಿಟ್ಟು ಒಪ್ಪಿಕೊಳ್ಳಿ ಹಾಗಾದರೆ, ಈ ಸಮಿತಿ ಸಭೆ ಏಕೆ ನಡೆಯಲಿಲ್ಲ? 1992ರಿಂದ 1993 ಬಂದರೂ ಸಮಿತಿ ಸಭೆ ನಡೆದಿಲ್ಲ, ಅಥವಾ ಅಂತಹ ಸಮಿತಿಯನ್ನು ಏಕೆ ಇಟ್ಟುಕೊಂಡಿದ್ದೀರಿ?

ಶ್ರೀ ಮನೋರಮಾ ಮಧ್ವರಾಜ್ : ನಮ್ಮ ಆಹಾರ ಇಲಾಖೆಯ ಕಾರ್ಯದರ್ಶಿಗಳೆ ಈ ಸಮಿತಿಯ ಅಧ್ಯಕ್ಷರು. ಮಾಲೀಕರ ಸಂಘದ ಸಭೆಯನ್ನು ಕರೆಯಿಸಿ ಅವರನ್ನು ಕೇಳಲಿಕ್ಕೆ ನಾನು ಖಂಡಿತ ಕೂಡಲೇ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಹೋಟೇಲ್‌ಗಳಲ್ಲಿ ಕಾರಾಬಾತ್ ರೇಟು 7 ರೂಪಾಯಿ, ಕೇಸರಿಬಾತು 7 ರೂಪಾಯಿ. ಪೂರಿ 8 ರೂಪಾಯಿ, ಪಕೋಡ 9 ರೂಪಾಯಿ. ರಸಗುಲ್ಲ 10 ರೂಪಾಯಿ ಬಾದಾಮಿ ಹಲ್ವ 15 ರೂಪಾಯಿ.

ಉಪಾಧ್ಯಕ್ಷಿಣಿಯವರು : ಯಾವ ಹೋಟೆಲಿನಲ್ಲಿ.....

ಶ್ರೀ ವಾಟಾಳ್ ನಾಗರಾಜ್ : ಕಡುಬು 5 ರೂ. ದೋಸೆ 5 ರೂಪಾಯಿ ಕಾಫಿ 5 ರೂಪಾಯಿ. ಇವು ಎರಡು ತಾರೆ ಹೋಟೇಲ್‌ಗಳಲ್ಲಿ. 5 ಸ್ಟಾರ್ ಹೋಟೆಲ್‌ಗಳಲ್ಲಿ ಇದರ ಹತ್ತು ಪಟ್ಟು. ಆದರೆ ಅವಿನ್ಯೂ ರಸ್ತೆಯಲ್ಲಿ ಗಾಡಿಯಲ್ಲಿ ಮಾರುವಂಥ ತಿಂಡಿ ಬೆಲೆ ಇದಕ್ಕಿನ್ನ ಕಡಿಮೆ. ಈ ರೀತಿ ಹೋಟೆಲ್ ಬೆಲೆಯನ್ನು ಗಗನಕ್ಕೆ ಏರಿಸುತ್ತಾ ಇದ್ದರೂ ಇದನ್ನು ನಿಯಂತ್ರಿಸಲು ಈ ಬಗ್ಗೆ ಕಾನೂನು ಇಲ್ಲ, ಇದನ್ನು ಕಡಿಮೆ ಮಾಡುವುದಕ್ಕೆ ಕಾನೂನು ಇಲ್ಲ ಎಂದು ಹೇಳುತ್ತಿದ್ದೀರಿ. ಈ ಸಭೆಯಲ್ಲಿ ಹಿಂದೆ ಹೇಳಿದ್ದೆ ಚಿಕ್ಕ ಪೇಟೆ ಗಲ್ಲಿಯಲ್ಲಿ ಒಂದು ಮಸಾಲೆ ದೋಸೆ 35 ರೂಪಾಯಿ. ತಾವು ಕೇಳಿದ್ದೀರೋ? ಅಧ್ಯಕ್ಷರೆ ನಾನು ತಮಗೆ ಹೇಳುತ್ತಿದ್ದೇನೆ. ನಾನೇ ತಿಂದಿದ್ದೇನೆ. ಜಸ್ಟ್ ನಾನು ನೋಡೋಣ ಅಂತ ಹೋದೆ ಎಷ್ಟು ರುಚಿ. ಆದರೆ ರೇಟು ಜಾಸ್ತಿಯಾಯಿತು. ತಾವು ತಿನ್ನಬೇಕು ಎಲ್ಲಾ ಮಂತ್ರಿಗಳು ನನ್ನ ಜೊತೆ ಬರುವುದಾದರೆ ನಾನು ತೋರಿಸುತ್ತೇನೆ. ಈ ತರಹ ಆದರೆ ಈ ಬಡ ದೇಶದಲ್ಲಿ ಸಾಮಾನ್ಯ ಜನರು ಬಡವರು ಬದುಕುವುದಾದರೂ ಹೇಗೆ? ಈಗಲೇ ತಾವು ಸಭೆಯನ್ನು ಮುಂದೂಡಿ ನಾವು ಹೋಗೋಣ.

ಶ್ರೀ ಗೋಪಿನಾಥ್ ಆರ್. ಸಾಂಡ್ರ : ನೀವು ಇಷ್ಟೊಂದು ಹೇಳುತ್ತಾ ಇದ್ದೀರಲ್ಲ, ನೀವು ಹೋರಾಟ ಮಾಡಲಿಲ್ಲ, ಹೋರಾಟ ಮಾಡಬೇಕಾಗಿತ್ತು.

ಶ್ರೀ ವಾಟಾಳ್ ನಾಗರಾಜ್ : ಹೋಟೆಲ್ ತಿಂಡಿ ಬೆಲೆ ಅಂದ ತಕ್ಷಣ ಪ್ರತಿ ಸಾರಿ ಈ ಸದನದಲ್ಲಿ ನಾವು ಹೇಳಿಯೇ ಹೇಳುತ್ತಾ ಇದ್ದೇವೆ. ಹಿಂದೆ ಶ್ರೀರಾಮುಲು ಆಹಾರ ಮಂತ್ರಿಯಾಗಿದ್ದಾಗ ಸರ್ಕಾರದ ಬೆಲೆಯನ್ನು ನಿಗದಿ ಮಾಡಿದ್ದರು ವಡೆಗೆ ಇಷ್ಟು, ದೋಸೆಗೆ ಇಷ್ಟು ಕಡುಬಿಗೆ ಇಷ್ಟು ಎಂದು. ತಾವು ಇದನ್ನು ತಡೆಯುವುದಕ್ಕಾಗುತ್ತಾ ಇದೆಯೇ? ಒಂದು ಕಾನೂನು ತರುತ್ತೀರಾ?

ಈ ಬಗ್ಗೆ ಕಾನೂನು ಏಕೆ ತರುವುದಕ್ಕಾಗುವುದಿಲ್ಲ ಮತ್ತು ಬೆಲೆ ಏರದ ರೀತಿ ಮಾಡಬೇಕೆಂದು ಹೇಳುತ್ತೇನೆ. ನೀವು ನಿಷ್ಠೂರ ಆದರೂ ಚಿಂತೆ ಇಲ್ಲ ನೀವು ಸ್ವಲ್ಪ ಜನಗಳ ಪರ ಇರಿ. ಹೋಟೆಲ್ ಮಾಲೀಕರ ಪರ ಅಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್ : ಮಾನ್ಯ ಸಭಾಧ್ಯಕ್ಷಿಣಿಯವರೇ ನಾವು ಹೋಟೆಲ್ ಮಾಲೀಕರ ಪರವೂ ಇಲ್ಲ. ಹೋಟೆಲ್‌ಗೆ ಹೋಗಿ ತಿಂಡಿ ತಿನ್ನೊವುದೂ ಇಲ್ಲ, ಹಾಗೆ ಬೇಕಾದರೆ ಮನೆಯಲ್ಲಿ ತಿಂಡಿ ಮಾಡಿ ತಿಂದರೆ ಸೂಕ್ತ ಎಂದು ನನ್ನ ಭಾವನೆ ಮತ್ತು ನಮ್ಮ ನಾಗರಾಜ್ ಅವರು ಮಂತ್ರಿತರರಿಗೆ 35 ರೂಪಾಯಿ ದೊಸೆ ತಿನ್ನಲಿಕ್ಕೆ ಆಗಬಹುದು, ಅವರು ಬಹುಶಃ 5 ಸ್ಟಾರ್, ಅಥವಾ 3 ಸ್ಟಾರ್ ಹೋಟೆಲ್‌ಗೆ ಹೋಗಿರಬೇಕು.

ಶ್ರೀ ವಾಟಾಳ್ ನಾಗರಾಜ್ : ಬಳೇಪೇಟೆ ಒಂದು ಗಲ್ಲಿಯಲ್ಲಿ. ಅಂದರೆ ನಾನು ಅಲ್ಲಿ ತಿನ್ನತಕ್ಕವರನ್ನು ಬಯ್ಯುತ್ತಾ ಇಲ್ಲಾ. ಹೋಗೋಣ ಬನ್ನಿ ಈಗಲೇ ನಾನು ತೋರಿಸುತ್ತೇನೆ ನಿಮಗ್ಯಾಕೆ ಬನ್ನಿ ಹೋಗೋಣ. ಅಧ್ಯಕ್ಷರೆ ಈ ಸಭೆಯನ್ನು ಮುಂದೂಡಿ ನೋಡಿಯೇ ಬಿಡೋಣ ತೀರ್ಮಾನ ಆಗಿ ಬಿಡಲಿ.

ಶ್ರೀಮತಿ ಮನೋರಮಾ ಮಧ್ವರಾಜ್ : ಅದೇ ರೀತಿ ನಮ್ಮ ರಸ್ತೆ ಬದಿಗಳಲ್ಲಿ ಗಾಡಿ ತಳ್ಳಿಕೊಂಡು ಹೋಗುವವರಲ್ಲಿ ಎಂಟಾಣೆಗೂ ಕಾಫಿ ಸಿಗುತ್ತದ್ದೆ, ಒಂದು ರೂಪಾಯಿಗೆ ದೋಸೆ ಸಿಗುತ್ತದೆ. ಅದನ್ನು ಬೇಕಾದರೆ ತಿನ್ನಬಹುದು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷಿಣಿಯವರೇ, ನಾನು ಮೊದಲು ಕೇಳಿದ ಪ್ರಶ್ನೆಗೆ ಉತ್ತರ ಬರಲಿಲ್ಲ. ಎಸನ್‌ಷಿಯಲ್ ಕಮಾಡಿಟಿ ಆಕ್ಟ್ ಪ್ರಕಾರ ಇದು ಬರುವುದಿಲ್ಲ ಎಂದು ಹೇಳಿದ್ದಾರೆ. ನನ್ನ ಮನವಿ ಏನು ಅಂದರೆ ಇದನ್ನು ಡಿಕ್ಲೇರ್ ಮಾಡುವುದಕ್ಕೆ ನಿಮಗೆ ಇರತಕ್ಕ ಅಡೆತಡೆಗಳು ಏನು ಅಥವಾ ಯಾವ ಕಾರಣದಿಂದ ಇವನ್ನು ಡಿಕ್ಲೇರ್ ಮಾಡುವುದಕ್ಕೆ ಮಾಡುತ್ತಾ ಇಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್ : ಅದನ್ನು ಪರಿಶೀಲಿಸುತ್ತೇವೆ.

ಶ್ರೀ ಸಿ. ಬೈರೇಗೌಡ : ಪರಿಶೀಲಿಸುತ್ತೇವೆ ಎಂದು ಹೇಳಿದರೆ ಆಗುವುದಿಲ್ಲಲ. ಗಮನಕ್ಕೆ ಬರದೇ ಇದ್ದರೆ ಪರಿಶೀಲಿಸುತ್ತೇವೆ ಎಂದು ಹೇಳತಕ್ಕ ಉತ್ತರ ಸಮಂಜಸವಾಗುತ್ತಿತ್ತು. ಆದರೆ ಇದರ ಸಭೆ 92 ಏಪ್ರಿಲ್‌ನಲ್ಲಿ ನಡೆದಿರತಕ್ಕಂಥದ್ದು ಕಳೆದ 8 ತಿಂಗಳಿಂದ ಸಭೆ ನಡೆದಿಲ್ಲ, ಪರಿಶೀಲಿಸುತ್ತೇವೆ ಎಂದು ಹೇಳುವುದರಲ್ಲಿ ಅರ್ಥ ಏನು ಇದೆ.

ಎಸೆನ್‌ಷಿಯಲ್ ಕಮಾಡೆಟೀಸ್ ಆಕ್ಟ್ ಪ್ರಕಾರ ಇದನ್ನು ಡಿಕ್ಲೇರ್ ಮಾಡುತ್ತೇವೆಂದು ಹೇಳಲಿ. ಇಲ್ಲದಿದ್ದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಪ್ರಕಾರ ಹೋಟೆಲ್ ಮಾಲೀಕರ ಪರವಾಗಿ ಈ ಸರ್ಕಾರ ಇದೆ ಎಂದು ನಾವು ಆರೋಪ ಮಾಡಬೇಕಾಗುತ್ತದೆ.

ಶ್ರೀಮತಿ ಮನೋರಮ ಮಧ್ವರಾಜ್ : ಮಾನ್ಯ ಅಧ್ಯಕ್ಷಣಿಯರವರೇ, ಹೋಟೆಲ್ ಮಾಲೀಕರ ಪರವಾಗಿ ಸರ್ಕಾರವೇನೂ ಇಲ್ಲ. ಆದರೆ ಕಾನೂನು ತರಲಿಕ್ಕೆ ನಾವು ಪರಿಶೀಲಿಸುತ್ತೇವೆಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ಸಚಿವರು ಕೊಟ್ಟ ಉತ್ತರ ಸಮರ್ಪಕವಾಗಿ ಇಲ್ಲ. ಇದು ಜನಸಾಮಾನ್ಯರಿಗೆ ಸಂಬಂಧಪಟ್ಟಿರತಕ್ಕಂಥ ವಿಚಾರ. ಇದು ಒಬ್ಬರ ಪ್ರಶ್ನೆಯಲ್ಲ. ಜನಸಾಮಾನ್ಯರ ಪ್ರಶ್ನೆಯಾಗಿರುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಅಡ್ಡಿ ಆತಂಕ ಏನಿದೆ. ಪರಿಶೀಲಿಸುತ್ತೇವೆಂದರೆ ಏನು ಅರ್ಥ? ಎಂಟುತಿಂಗಳಿಂದ ಒಂದು ಸಭೆ ಕೂಡ ನಡೆದಿಲ್ಲ.

ಉಪಾಧ್ಯಕ್ಷಣಿಯವರು : ತಾವು ಇವತ್ತು ಅವರ ಗಮನಕ್ಕೆ ತಂದಿದ್ದೀರಿ. ಅವರು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ : ಅಡ್ಡಿ ಆತಂಕ ಏನಿದೆ, ಎಸೆನ್‌ಷಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ ಏನಾದರೂ ಒಂದು ಕ್ರಮ ತೆಗೆದುಕೊಳ್ಳುತ್ತೇವೆಂದು ಅದನ್ನಾದರೂ ಮಾನ್ಯ ಸಚಿವರು ಹೇಳಲಿ.

ಶ್ರೀಮತಿ ಮನೋರಮ ಮಧ್ವರಾಜ್ : ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಆದಷ್ಟು ಬೇಗ ಒಂದು ಸಭೆಯನ್ನು ಕರೆದು ಚರ್ಚೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಣಿಯವರೇ, ಇದನ್ನು ತೀವ್ರವಾಗಿ ತೆಗೆದುಕೊಳ್ಳಬೇಕು. ಏತಕ್ಕೆಂದರೆ ಲಕ್ಷಾಂತರ ಜನ ಹೋಟೆಲ್ ತಿಂಡಿಯನ್ನು ತಿಂದು ಜೀವನ ಮಾಡುತ್ತಿರುವವರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲವೆಂದರೆ ನಾವು ಇಲ್ಲಿ ಏತಕ್ಕೆ ಕುಳಿತಿರಬೇಕು.

ಉಪಾಧ್ಯಕ್ಷಣಿಯವರು : ಮಾನ್ಯ ಸಚಿವೆಯವರು ಆದಷ್ಟು ಜಾಗ್ರತೆ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ : ಸರ್ಕಾರ ಹೋಟೆಲ್ ಮಾಲೀಕರ ಪರವಾಗಿ ಇದೆ. ಸರ್ಕಾರ ಅವರ ಹಿತವನ್ನು ಕಾಪಾಡುವ ಪ್ರಯತ್ನ ಮಾಡುತ್ತಿದೆ. ಇದು ಹೋಟೆಲ್ ಮಾಲೀಕರ ಪರವಾಗಿ ಇರತಕ್ಕಂಥ ಸರ್ಕಾರ. ಈ ಸರ್ಕಾರಕ್ಕೆ ದಿಕ್ಕಾರಹಾಕಿ ನಾನು ಹೊರಗಡೆ ಹೋಗುತ್ತಿದ್ದೇನೆ. ಸರ್ಕಾರದ ನೀತಿಗೆ ಧಿಕ್ಕಾರ ಹಾಕಿ ನಾನು ಹೊರಗಡೆ ಹೋಗುತ್ತಿದ್ದೇನೆ.

(ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಸಿ.ಬೈರೇಗೌಡರು ಸರ್ಕಾರಕೆ ಧಿಕ್ಕಾರವೆಂದು ಕೂಗುತ್ತಾ ಸಭಾತ್ಯಾಗ ಮಾಡಿದರು)

ಪೆಟ್ರೋಲ್ ಕಲಬೆರಕೆ

48 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೆಟ್ರೋಲ್ ಬೆಲೆ ಏರಿಕೆಯ ತರುವಾಯ ಪೆಟ್ರೋಲ್ ಬಂಕ್‌ಗಳವರು ಪೆಟ್ರೋಲ್ ಜೊತೆಗೆ ಸೀಮೆಎಣ್ಣೆ ಬೆರೆಸುತ್ತಿರುವ ವಿಚಾರವು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅಂತವರ ಸಂಖ್ಯೆ ಎಷ್ಟು ಹಾಗೂ ಅದರ ಮೇಲೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ.

ಆ) ಈ ವರ್ಷ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ವಿವಿಧ ಪೆಟ್ರೋಲ್ ಬಂಕ್‌ಗಳಿಂದ 105 ಸ್ಯಾಂಪಲ್‌ಗಳನ್ನು ಪಡೆದು ಪರೀಕ್ಷೆಗೆ ಒಳಪಡಿಸಲಾಗಿ ಇವುಗಳಲ್ಲಿ ನಾಲ್ಕು ಕಲಬೆರಕೆ ಪ್ರಕರಣಗಳಾಗಿರುವುದು ಕಂಡು ಬಂದಿತ್ತು. (ಒಂದು ಶಿವಮೊಗ್ಗದಲ್ಲಿ ಮತ್ತು ಮೂರು ತುಮಕೂರಿನಲ್ಲಿ) 33 ಸ್ಯಾಂಪಲ್‌ಗಳಲ್ಲಿ ಕಲಬೆರಕೆ ಕಂಡು ಬಂದಿಲ್ಲ, ಮತ್ತು 68 ಸ್ಯಾಂಪಲ್‌ಗಳಿಗೆ ಸಂಬಂಧಿಸಿದಂತೆ ತಪಾಸಣಾ ವರದಿ ನಿರೀಕ್ಷಣೆಯಲ್ಲದೆ, ತಪ್ಪಿತಸ್ಥ ಡೀಲರ್‌ಗಳ ವಿರುದ್ಧ ಮೊಕದ್ದಮೆಯನ್ನು ದಾಖಲು ಮಾಡಿಕೊಂಡು ಮುಂದಿನ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಉಪಾಧ್ಯಕ್ಷಣೆಯವರೇ ಮಾನ್ಯ ಮಂತ್ರಿಗಳು ಉತ್ತರದಲ್ಲಿ ಈ ವರ್ಷ 105 ಸ್ಯಾಂಪಲ್ ಮಾತ್ರ ತೆಗೆದುಕೊಂಡಿದ್ದೇವೆಂದು ಹೇಳಿರುತ್ತಾರೆ. ಸುಮಾರು ನಮ್ಮ ರಾಜ್ಯದಲ್ಲಿ 1500 ಪೆಟ್ರೋಲ್ ಬಂಕ್ ಇರಬಹುದು. ಅಂದರೆ 105ಪೆಟ್ರೋಲ್ ಬಂಕ್‌ಗಳನ್ನು ಮಾತ್ರ ಚೆಕ್ ಮಾಡಿದ್ದಾರೆಂದು ಅರ್ಥವಾಯಿತು. ಇನ್ನು ಮುಂದಾದರೂ ಸಹ ಕೊನೆಯ ಪಕ್ಷ ಪೀರಿಯಾಡಿಕಲ್ ಚೆಕ್‌ಅಪ್ ಎಂದು ಪ್ರತಿವರ್ಷ 10-15 ಪೆಟ್ರೋಲ್ ಬಂಕ್ಸ್‌ಗಳನ್ನು ಏತಕ್ಕೆ ಚೆಕ್ ಅಪ್ ಮಾಡಬರದೆಂದು ಕೇಳುತ್ತೇನೆ.

ಶ್ರೀಮತಿ ಮನೋರಮ ಮದ್ವರಾಜ್ : ಮಾನ್ಯ ಅಧ್ಯಕ್ಷಣೆಯವರೇ, ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಇವುಗಳನ್ನು ಖಂಡಿತವಾಗಿ ನಾವು ಚೆಕ್‌ಅಪ್ ಮಾಡುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ : ಡಿಸಲ್‌ನಲ್ಲಿ ಕೆರೋಸಿನ್ ಕಲಬೆರಕೆ ಮಾಡುತ್ತಿದ್ದಾರೆಂದು ತಿಳಿದು ಬಂದಿದೆ. ಇದರ ಬಗ್ಗೆ ತಾವು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀಮತಿ ಮನೋರಮ ಮದ್ವರಾಜ್ : ಅದರಲ್ಲೂ ಕೂಡ ಸ್ಯಾಂಪಲ್ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎನ್. ಚಿಕ್ಕೇಗೌಡ : ಈ ಕಲಬೆರಕೆ ಪ್ರಕಾರ ಸರ್ಕಾರದವರು ಅಂದರೆ ಅಧಿಕಾರಿಗಳು ಕಾನೂನು ಪ್ರಕಾರ ಶಿಸ್ತಿನ ಕ್ರಮವನ್ನು ತೆಗೆದುಕೊಂಡರೆ ಅದಕ್ಕೆ ಪ್ರತಿಭಟನೆ ಮಾಡಿ ಅವರು ಸಾಂಕೇತಿಕವಾಗಿ ಮುಚ್ಚುತ್ತೇವೆಂದು ಹೇಳಿದ್ದಾರೆ. ಅವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಂಡು ಲೈಸೆನ್ಸ್‌ನ್ನು ರದ್ದು ಮಾಡಬರದು? ಈ ರೀತಿ ಶಿಸ್ತಿನ ಕ್ರಮ ತೆಗೆದುಕೊಂಡರೆ ಎಲ್ಲಾ ಗ್ರಾಹಕರಿಗೆ ಬೇಕಾದಂಥ ಪೆಟ್ರೋಲ್ ಮತ್ತು ಡಿಸಲ್ ಸಿಕ್ಕದಹಾಗೆ ಮಾಡುವುದರಿಂದ ಜನರಿಗೆ ಕಿರುಕುಳ ಕೊಟ್ಟಂತಾಯಿತು. ನೀವು ಇದನ್ನು ವಾಪಸ್ ತೆಗೆದುಕೊಳ್ಳಿ, ಇಲ್ಲವಾದರೆ ಆ ಅಧಿಕಾರಿಗಳನ್ನು ನಿಲ್ಲಿಸಿ ಎಂದು ಹೇಳುವುದರಲ್ಲಿ ಏನು ಅರ್ಥ ಇದೆ. ಹೀಗೆ ಹೇಳುವ ಆ ಪೆಟ್ರೋಲ್ ಬಂಕ್ ಮಾಲೀಕರುಗಳ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು?

ಶ್ರೀಮತಿ ಮನೋರಮ ಮದ್ವರಾಜ್ : ನಾವು ಪೆಟ್ರೋಲ್‌ಬಂಕ್‌ನ ಸಂಘದ ಅಧ್ಯಕ್ಷರ ಮೀಟಿಂಗನ್ನೂ ನನ್ನ ಚೇಂಬರ್‌ನಲ್ಲಿ 4-00 ಗಂಟೆಗೆ ಕರೆದಿದ್ದೇವೆ.

ಅವರೊಡನೆ ಮಾತನಾಡಿ ಏನು ಅವರ ಮುಂದಿನ ಕಾರ್ಯಕ್ರಮ ಎಂದು ತಿಳಿದುಕೊಂಡು ನಂತರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ.ಕೆ. ಅನಂತಕೃಷ್ಣ : ಪೆಟ್ರೋಲ್‌ಬಂಕ್ ಮಾಲೀಕರ ಕಡೆಯಿಂದ ಅನ್ಯಾಯವಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಆಟೋರಿಕ್ಷಾದವರಿಂದ ಪೊಲ್ಯೂಷನ್ ಆಗುತ್ತಿದೆ ಎಂದರೆ ಪೆಟ್ರೋಲ್ ಬಂಕ್ ಮೇಲೆ ಹೇಳುತ್ತಿದ್ದಾರೆ. ಪೊಲ್ಯೂಷನ್ ಕಂಟ್ರೋಲ್ ಮೇಲೆ ಸರ್ಕಾರ ಒಂದು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದಾಗ ಮಂತ್ರಿಗಳು ಹೋಗಬೇಕೆಂದು ಹೋರಾಟ ಮಾಡಿದರು. ಇದು ಬಹಳ ಜಟಿಲವಾದ ಪ್ರಶ್ನೆಯಾಗಿದೆ. ಆದ್ದರಿಂದ ಪೆಟ್ರೋಲ್ ಗ್ರಾಹಕರು ಯಾರಿದ್ದಾರೆ ಅವರ ಒಂದು ಸಂಘಸಂಸ್ಥೆಯೂ ಇದೆ. ಅವರನ್ನು ಬರಮಾಡಿಕೊಂಡು ಮತ್ತು ಪೆಟ್ರೋಲ್‌ಬಂಕ್ ಮಾಲೀಕರನ್ನು ಬರಮಾಡಿಕೊಂಡು ಅವರ ಮೇಲೆ ಯಾರು ನಿಯಂತ್ರಣ ಹಾಕಬೇಕೆಂದು ಇದ್ದಾರೆ, ಅವರನ್ನು ಕೂಡ ಬರಮಾಡಿಕೊಂಡು ಒಂದು ಸಮಗ್ರವಾದಂಥ ರೌಂಡ್‌ಟೇಬಲ್ ಮೀಟಿಂಗ್ ಮಾಡಿದರೆ ಮಾತ್ರ ಅನುಕೂಲವಾಗುತ್ತದೆ.

ಶ್ರೀಮತಿ ಮನೋರಮ ಮಧ್ವರಾಜ್ : ಮಾನ್ಯ ಸದಸ್ಯರ ಸಲಹೆಯಂತೆ ಮೀಟಿಂಗ್ ಕರೆಯೋಣ.

ಬೆಂಗಳೂರಿನಿಂದ ಮುಲ್ಕಿಗೆ ಸುವಿಹಾರಿ ಬಸ್

994 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಿಂದ ಮುಲ್ಕಿಗೆ ಕೆ.ಎಸ್.ಆರ್.ಟಿ.ಸಿ ಸುವಿಹಾರಿ ಬಸ್ಸು ಇಲ್ಲದೆ ಜನರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಮುಲ್ಕಿಗೆ ಫೇರ್ ಸ್ಟೇಜ್ ಇಲ್ಲದೆ ಹುಬ್ಬಳ್ಳಿ ಬೆಳಗಾಂ ಬೊಂಬಾಯಿ ಬೆಂಗಳೂರುಗಳಿಗೆ ಜನರು ಹೆಚ್ಚಿನ ಹಣ ಪಾವತಿ ಮಾಡಿ ಪ್ರಯಾಣಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಮುಲ್ಕಿ ಪುರಸಭೆಯವರು ಕೆ.ಎಸ್.ಆರ್.ಟಿ.ಸಿ ಸಂಸ್ಥೆಗೆ ಉಚಿತವಾಗಿ ಜಾಗವನ್ನು ನೀಡಿದರೂ ಸಹ ಸರ್ಕಾರದವರು ಫೇರ್ ಸ್ಟೇಜ್ ಮಾಡದಿರಲು ಕಾರಣವೇನು?

ಉ) ಮುಲ್ಕಿಯು ಪ್ರವಾಸಿ ಕೇಂದ್ರವಾಗಿದ್ದರೂ ಫೇರ್ ಸ್ಟೇಜ ಮಾಡಡಿರಲು ಕೆ.ಎಸ್.ಆರ್.ಟಿ.ಸಿಯವರು ನಿರ್ಲಕ್ಷವನ್ನು ತೋರಿಸಲು ಕಾರಣವೇನು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು.

ಆ) ಪ್ರತ್ಯೇಕವಾದ ಸಾರಿಗೆಯ ಅವಶ್ಯಕತೆ ಇರುವುದಿಲ್ಲ.

ಇ) ಎಲ್ಲಾ ಕ.ರಾ.ರ.ಸಾ. ಸಂಸ್ಥೆಯ ವಾಹನಗಳಿಗೆ ಮುಲ್ಕಿಯು ಸ್ಟೇಜ್ ಪಾಯಿಂಟ್ ಆಗಿರುತ್ತದೆ. ಹೆಚ್ಚಿನ ದರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀ ಕೆ. ಸೋಮಪ್ಪ ಸುವರ್ಣ : ಸ್ವಾಮಿ, ತಾವು ತಮ್ಮ ಉತ್ತರದಲ್ಲಿ ಮುಲ್ಕಿಗೆ ಕೆ.ಎಸ್.ಆರ್.ಟಿ.ಸಿ. ಸೂಪರ್ ಡೀಲಕ್ಸ್ ಬಸ್ ಇಲ್ಲದೆ ತೊಂದರೆಯಾಗಿದೆ ಎನ್ನುವುದನ್ನು ಒಪ್ಪಿದ್ದೀರಿ. ಆದರೆ, ಇದರ ವ್ಯವಸ್ಥೆ ಮಾಡುವುದಕ್ಕೆ ಸಧ್ಯ ಅವಶ್ಯಕತೆ ಇರುವುದಿಲ್ಲವೆಂದೂ ಹೇಳಿದ್ದೀರಿ. ಮುಲ್ಕಿ ಉಡುಪಿ ಮತ್ತು ಮಂಗಳೂರು ನಡುವಿನ ಕೇಂದ್ರಸ್ಥಳ. ಮಂಗಳೂರಿನಿಂದ ಮುಲ್ಕಿ 30ಕಿಲೋಮೀಟರ್ ಉಂಟು, ಉಡುಪಿಯಿಂದ 30 ಕಿಲೋಮೀಟರ್ ಉಂಟು. ಮಧ್ಯದಲ್ಲಿ ಒಂದು ಸ್ಟೇಜ್ ಅಗತ್ಯವಾಗಿರುವುದರಿಂದ ಅಲ್ಲಿ ಸೂಪರ್ ಡೀಲಕ್ಸ್ ಬಸ್ ಅಗತ್ಯವಾಗಿ ಬೇಕಾಗಿದೆ ಎಂದು ಕೇಳುತ್ತಿದ್ದೇನೆ. ಹಿಂದೆ ಮುಲ್ಕಿಯಿಂದಲೇ ಹೋಗುವಂಥ ಸೆಮಿ ಲಕ್ಸುರಿ ಬಸ್ ಇತ್ತು ಮತ್ತು ಕಟೀಲ್‌ನಿಂದ ಹೋಗುವಂಥ ಸೆಮಿ ಲಕ್ಸುರಿ ಬಸ್ ಸಹ ಇತ್ತು. ಈ ಎರಡು ಬಸ್ಸುಗಳೂ ಈಗ ನಿಂತಿವೆ ಇದರ ಬದಲಿಗೆ ಸೂಪರ್ ಡೀಲಕ್ಸ್ ಬಸ್ಸನ್ನು ಮುಲ್ಕಿಯಿಂದ ಕೊಟ್ಟರೆ ಅನುಕೂಲವಾಗುತ್ತದೆ ಒಂದು ವೇಳೆ ಜನ ಕಡಿಮೆಯಾದರೆ, ಮಂಗಳೂರಿನಲ್ಲಿ ಉಳಿದ ಸೀಟುಗಳನ್ನು ಭರ್ತಿ ಮಾಡುವುದಕ್ಕೆ ಸಾಧ್ಯವಿದೆ. ಈ ಬಗ್ಗೆ ಕೆಲವು ಸಾರ್ವಜನಿಕರ ಮನವಿಯನ್ನೂ ತಮಗೆ ಸಲ್ಲಿಸಿದ್ದೇವೆ. ಆದ್ದರಿಂದ ಈ ವಿಚಾರದಲ್ಲಿ ಒಂದು ನಿರ್ಧಾರವನ್ನು ನಮಗೆ ತಿಳಿಸಬೇಕು. ಇದು ಬಹಳ ಅವಶ್ಯಕವಾಗಿರುವುದು. ಇದೊಂದು ಚಾರಿತ್ರಿಕವಾದ ಸ್ಥಳ. ತಾವು ನಿರ್ಧಾರವನ್ನು ಪ್ರಕಟಿಸಬೇಕಾಗಿ ವಿನಂತಿಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ : ಮಾನ್ಯ ಸದಸ್ಯರ ಮನವಿ ಮೇಲೆ ಅಲ್ಲಿ ಸ್ಟಾಪ್ ಸ್ಥಾಪಿಸಲಾಗಿ ಪ್ರತಿಯೊಂದು ಬಸ್ ಬೆಂಗಳೂರಿಗೆ ಹೋಗುವುದು ಮತ್ತು ಬಾಂಬೆಗೆ ಹೋಗುವುದು ಅಂದರೆ Kundapur-Bangalore Super Deluxe Service leaving Kundapur at 7.00 P.M. Coondapur-Bangalore Express bus service leaving Kundapur at 8.00 a.m. At present there is no exclusive service from Mulki to Bangalore.

ಶ್ರೀ ಕೆ. ಸೋಮಪ್ಪ ಸುವರ್ಣ : ಸೆಮಿ ಲಕ್ಸುರಿ ಬಸ್ ಮಾತ್ರ ನಿಲ್ಲುತ್ತದೆ. ಸೂಪರ್ ಡೀಲಕ್ಸ್ ಬಸ್‌ನ್ನು ನಿಲ್ಲಿಸುವುದಿಲ್ಲ, ದೂರ ಪ್ರಯಾಣಕ್ಕೆ ಸೂಪರ್ ಡೀಲಕ್ಸ್ ಬಸ್ ಮುಲ್ಕಿಯಿಂದ ಬೆಂಗಳೂರಿಗೆ ವ್ಯವಸ್ಥೆ ಮಾಡಬೇಕು. ಜನ ಒಂದು ವೇಳೆ ಕಡಿಮೆಯಾದರೆ ಮಂಗಳೂರಿನಲ್ಲಿ ಭರ್ತಿ ಮಾಡಿಕೊಳ್ಳಬಹುದು. ಹಿಂದೆ ಈ ಸವಲತ್ತು ಇತ್ತು. ಸೆಮಿ ಲಕ್ಸುರಿ ಬಸ್ ಇತ್ತು. ನಮಗೆ ಡೀಲಕ್ಸ್ ಬಸ್ ಬೇಕೆಂದು ಕೇಳಿದ್ದೇವೆ. ಆದುದರಿಂದ ಇದನ್ನು ಮತ್ತೊಮ್ಮೆ ಪರಿಶೀಲಿಸಿ, ಮುಂದೆ ಮೂಲ್ಕಿಯಿಂದ ಸೂಪರ್ ಡೀಲಕ್ಸ್ ಬಸ್ ಹೊರಡುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ : ಸೂಪರ್ ಬಸ್ ಹೋಗುತ್ತಾ ಇದೆ, ಅಲ್ಲಿ ಸ್ಟಾಪ್ ಕೂಡ ಇದೆ, ಆ ಪ್ರಾವಿಷನ್ ಕೂಡ ಅಲ್ಲಿ ಮಾಡಿದ್ದೇವೆ. ಇದರ ಬಗ್ಗೆ ಸೆಕ್ರೆಟರಿಯವರಿಗೂ ತಿಳಿಸಿದ್ದೇನೆ.

ಬೆಂಗಳೂರು ನಗರದಲ್ಲಿ ಕೆಲವೊಂದು ಮಾರ್ಗಗಳನ್ನು ರಾಷ್ಟ್ರೀಕರಣಗೊಳಿಸುವ ಬಗ್ಗೆ

178 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕೆಲವೊಂದು ಮಾರ್ಗಗಳನ್ನು ಖಾಸಗೀಕರಣಗೊಳಿಸುವ ಪ್ರಸ್ತಾವನೆ ಇದೆಯೇ?

ಆ) ಹಾಗಿದ್ದಲ್ಲಿ ಅದರ ವಿವರಗಳನ್ನು ಪೂರೈಸಿ?

ಇ) ಇಲ್ಲದಿದ್ದಲ್ಲಿ ಪ್ರಯಾಣಿಕರಿಗೆ ಉತ್ತಮ ಸೇವೆ ಸಲ್ಲಿಸುವ ಸಲುವಾಗಿ ಸರ್ಕಾರ ಕೈಗೊಂಡ ಕ್ರಮಗಳು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲಾ.

ಆ) ಉದ್ಭವಿಸುವುದಿಲ್ಲ.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬೆಂಗಳೂರು ನಗರ ಸಾರಿಗೆ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸುತ್ತಿದೆ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ನಗರದಲ್ಲಿ ಬಿ.ಟಿ.ಎಸ್. ಕೆಲವು ರೋಡುಗಳನ್ನು ಖಾಸಗೀಕರಣ ಮಾಡುತ್ತೀರಾ ಎಂದು ಕೇಳಿದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಖಾಸಗೀಕರಣ ಮಾಡುತ್ತಾರೋ ಅಥವಾ ಅವರೇ ಓಡಿಸುತ್ತಾರೋ ಅದು ಸರ್ಕಾರಕ್ಕೆ ಬಿಟ್ಟಿದ್ದು. ಆದರೆ ಬೆಂಗಳೂರು ನಗರದ ನಾಗರೀಕರಿಗೆ ಬಸ್ ವ್ಯವಸ್ಥೆ ಮಾಡಿಕೊಡುವುದು ಸರ್ಕಾರದ್ದು. ಈಗಿರತಕ್ಕ ವ್ಯವಸ್ಥೆಯಲ್ಲಿ ಕಚೇರಿ ವೇಳೆಯಲ್ಲಿ ಮತ್ತು ಶಾಲಾ ವೇಳೆಯಲ್ಲಿ ಬಸ್ಸಿನ ಫುಟ್‌ಬೋರ್ಡಿನ ಮೇಲೂ ನಿಲ್ಲುವುದಕ್ಕೆ ಅವಕಾಶ ಇಲ್ಲ. ಇದು ನಗರದ ಮಧ್ಯದಲ್ಲಿ ಹೊರಗಡೆ, ಅಂದರೆ, ಜೆ.ಪಿ.ನಗರ ಮುಂತಾದ ಕಡೆಗಳಲ್ಲಿ 1 ಕಿಲೋಮೀಟರ್, 2 ಕಿಲೋಮೀಟರ್ ಬಸ್‌ಸ್ಟಾಪಿಗೆ ನಡೆದುಕೊಂಡು ಬಂದು ಬಸ್ ಹತ್ತತಕ್ಕಂಥ ಪರಿಸ್ಥಿತಿ ಇದೆ. ಬಿ.ಟಿ.ಎಸ್. ಮೂಲಕ ಒಳ್ಳೆಯ ಸೌಲಭ್ಯ ಕೊಡಿ, ಇಲ್ಲದೇ ಖಾಸಗೀಕರಣ ಮಾಡಿ. ಆದರೆ ಖಾಸಗೀಕರಣ ಮಾಡುವುದಿಲ್ಲವೆಂದು ಹೇಳಿದ್ದಾರೆ. ವಿಮಾನ ಸೌಲಭ್ಯವನ್ನು ಖಾಸಗೀಯವರಿಗೆ ಕೊಟ್ಟಿದ್ದಾರೆ. ತಾವು ಏಕೆ ಖಾಸಗೀಕರಣ ಮಾಡಬಾರದು, ಇದರಿಂದ ಜನರಿಗೆ ಅನುಕೂಲವಾಗುವುದಿಲ್ಲವೇ?

ಶ್ರೀ ಭೀಮಣ್ಣ ಖಂಡ್ರೆ : ಖಾಸಗೀಕರಣ ಮಾಡುವುದಕ್ಕೆ ಸಾಧ್ಯವಿಲ್ಲ. ತಾವು ಸೌಲಭ್ಯಗಳನ್ನು ಕೇಳಿದ್ದೀರಿ. ಮತ್ತು ಮನವಿ ಕೊಟ್ಟಿದ್ದೀರಿ. ನಾನು ಮುಖ್ಯಮಂತ್ರಿಗಳನ್ನು ಕೇಳಿದ್ದೇನೆ, ಸೌಲಭ್ಯ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ರಾಮಲಿಂಗರೆಡ್ಡಿ : ಹಾಲಿ ವ್ಯವಸ್ಥೆ ಸಮರ್ಪಕವಾಗಿಲ್ಲ. ಶಾಲಾ ಮಕ್ಕಳಿಗೆ ಅನಾನುಕೂಲವಾಗಿದೆ. ಅದರಲ್ಲೂ ಹೊರವಲಯಗಳಲ್ಲಿ ತೊಂದರೆಯಾಗುತ್ತಿದೆ.

ಉಪಾಧ್ಯಕ್ಷರು : ಕನ್‌ಸಿಡರ್ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಚಿಲ್ಲರೆ ಸೀಮೆ ಎಣ್ಣೆ ಮಾರಾಟಗಾರದಿಂದ ಸೀಮೆಎಣ್ಣೆಯ ಕಡಿಮೆ ಅಳತೆ

15 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

L. A. Vol. 1

ಅ) ನಗರದಲ್ಲಿ ಚಿಲ್ಲರೆ ಸೀಮೆಎಣ್ಣೆ ಮಾರಾಟಗಾರರು ಬಳಕೆದಾರರಿಗೆ ಕಡಿಮೆ ಅಳತೆಯಲ್ಲಿ ಸೀಮೆಎಣ್ಣೆ ನೀಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಎಷ್ಟು ಪರವಾನಗಿಗಳನ್ನು ಅಮಾನತ್ತುಗೊಳಿಸಲಾಗಿದೆ? ಹಾಗೂ ಎಷ್ಟು ಪರವಾನಗಿಗಳನ್ನು ರದ್ದು ಗೊಳಿಸಲಾಗಿದೆ?

3) ನಗರದಲ್ಲಿ ನಾಗರೀಕರಿಗೆ ಸೂಕ್ತ ರೀತಿಯಲ್ಲಿ ಅಳತೆ ಮಾಡಿ ಸೀಮೆಎಣ್ಣೆ ಸರಬರಾಜು ಮಾಡಲು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜ ಸಚಿವರು) :

ಅ) ಹಲವು ಪ್ರಕರಣಗಳಲ್ಲಿ ಬಂದಿದೆ.

ಆ) ಕರ್ತವ್ಯ ಲೋಪ ಮಾಡುವ ಲೈಸೆನ್ಸ್‌ದಾರರ ವಿರುದ್ಧ ಕ್ರಮ ಕೈಗೊಂಡು ದಿನಾಂಕ 1-4-92ರಿಂದ 30-11-92ರವರೆಗೆ 81ಪರವಾನಗಿಗಳನ್ನು ಅಮಾನತ್ತುಗೊಳಿಸಿದ್ದು, ಒಂದು ಪರವಾನಗಿಯನ್ನು ರದ್ದುಪಡಿಸಿದೆ.

ಇ) ನಾಗರೀಕರಿಗೆ ಸೂಕ್ತ ರೀತಿಯಲ್ಲಿ ಸೀಮೆಎಣ್ಣೆ ವಿತರಿಸುವ ಬಗ್ಗೆ ಲೈಸನ್ಸ್‌ದಾರರಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿ ಸೀಮೆಎಣ್ಣೆಯನ್ನು ಬ್ಯಾರಲ್‌ನಿಂದ ನೇರವಾಗಿ ಅಳತೆ ಮಾಡದೇ ಬಕೆಟ್‌ಗಳಲ್ಲಿ ತುಂಬಿಸಿ ನಂತರ ಸರಿಯಾಗಿ ಅಳತೆ ಮಾಡಿ ನೀಡಲು ಆದೇಶ ನೀಡಲಾಗಿದೆ. ತಪ್ಪಿತಸ್ಥರ ವಿರುದ್ಧ ತೀವ್ರ ಕ್ರಮ ಕೈಗೊಳ್ಳಲು ಅಧಿಕಾರಿಗಳು ತಪಾಸಣೆ ನಡೆಸುತ್ತಿದ್ದಾರೆ.

ಶ್ರೀ ಕೆ. ಲಕ್ಕಣ್ಣ : ಮಾನ್ಯ ಉಪಾಧ್ಯಕ್ಷರೇ, ಸೀಮೆಎಣ್ಣೆ ಕೊಡತಕ್ಕ ಪರವಾನಗಿ ಇರತಕ್ಕವರು, ಬಳಕೆದಾರರಿಗೆ ಅಳತೆಯಲ್ಲಿ ಕಡಿಮೆ ಎಣ್ಣೆಯನ್ನು ಕೊಡುತ್ತಿದ್ದಾರೆ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಬ್ಯಾರಲ್‌ಗಳಿಂದ ಬೇರೆ ಡಬ್ಬಗಳಿಗೆ ಸುರಿದುಕೊಂಡು, ನಂತರ, ಅಳತೆ ಮಾಡಿಕೊಡಬೇಕೆಂದು ಇದ್ದರೂ ಕೂಡ, ಯಾರೂ ಈ ಕೆಲಸ ಮಾಡುತ್ತಾ ಇಲ್ಲ. ನೇರವಾಗಿ ಬ್ಯಾರೆಲ್‌ನಿಂದಲೇ ಅಳತೆ ಮಾಡುತ್ತಿದ್ದಾರೆ. ಇವತ್ತಿನದಿವಸ 1 ಲೀಟರಿಗೆ ಮುಕ್ಕಾಲು ಲೀಟರು ಕೊಡುತ್ತಿದ್ದಾರೆ. ಇದರಿಂದ ಬಡವರಿಗೆ ಮತ್ತು ಮಧ್ಯಮವರ್ಗದವರಿಗೆ ಅನ್ಯಾಯವಾಗುತ್ತಿದೆ.

ಯಾವ ಅಧಿಕಾರಿಗಳೂ ಕೂಡಾ ತನಿಖೆ ಮಾಡುತ್ತಿಲ್ಲ. ಜಾಯಿಂಗ್ ಡೈರೆಕ್ಟರಾಗಲೀ, ಡೈರೆಕ್ಟರಾಗಲೀ ಇದನ್ನು ಇನ್ಸ್‌ಪೆಕ್ಷನ್ ಮಾಡಿದ್ದಾರೆಯೇ? ಆ ದೃಷ್ಟಿಯಿಂದಲೇ ಅವರನ್ನು ಅಮಾನತ್ತು ಮಾಡಬೇಕೆಂದು ಹೇಳುವುದು ತಮ್ಮ ಉತ್ತರದ ಪ್ರಕಾರ ಒಂದು ಪರವಾನಗಿಯನ್ನು ಮಾತ್ರ ರದ್ದುಪಡಿಸಲಾಗಿದೆ. ಇನ್ನು 81 ಪ್ರಕರಣಗಳು ಎನ್‌ಕ್ವಯರಿಯಲ್ಲಿ ಇವೆ, ಸರಿಯಾದ ಅಳತೆ ಕೊಡುವುದಕ್ಕೆ ಏನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ?

ಶ್ರೀಮತಿ ಮನೋರಮ ಮಧ್ವರಾಜ್ : ನಾನು ಉತ್ತರದಲ್ಲಿ ಕೊಟ್ಟಿರುವ ಹಾಗೆ ಪತ್ರಿಕೆಗಳಲ್ಲಿ ನಾನು ಪದೇ ಪದೇ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಈ ರೀತಿ ಸೀಮೆಎಣ್ಣೆ ಅಳತೆ ಕಡಿಮೆಯಾದರೆ ಖಂಡಿತ ಸ್ಟ್ರಿಕ್ಟ್ ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ. ಆದರೂ ಇಂತಹ ನಿರ್ದಿಷ್ಟ ಕೇಸ್‌ಗಳು

ಇದ್ದರ ಹೇಳಿ ತಕ್ಷಣ ಆಕ್ಷನ್ ತೆಗೆದುಕೊಳ್ಳುತ್ತೇವೆ. ಅಧಿಕಾರಿಗಳ ಮೇಲೂ ತಪ್ಪು ಕಂಡುಬಂದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪೆರಿಕಲ್ ಮಲ್ಲಪ್ಪ : ಸೀಮೆಎಣ್ಣೆ ಮಾರುವವರು ಯಾವ ರೀತಿ ಮೋಸ ಮಾಡುತ್ತಾರೆಂದರೆ, ಅವರು ಡಬ್ಬಕ್ಕೆ ಅಳವಸಿಕೊಂಡಿರುವ ಕೊಳಾಯಿಗಳು ಬಹಳ ಚಿಕ್ಕವು ಇದ್ದು ಅರ್ಧ ಅಡಿ ಸೋಪನ್ನು ಅಂಟಿಸಿದ್ದು ಎಣ್ಣೆ ಕೆಳಗೆ ಬೀಳುವಾಗ ಹೆಚ್ಚು ನೊರೆ ಬಂದು ಕಾಲು ಲೀಟರ್ ಸೀಮೆಎಣ್ಣೆ ಅದರಲ್ಲಿ ಕಡಿಮೆ ಇರುತ್ತದೆ. ಕೊಳಚೆಪ್ರದೇಶಗಳಲ್ಲಂತೂ ಒಂದು ಲೀಟರ್‌ಗೆ ಬದಲು ಅರ್ಧ ಲೀಟರ್ ಸೀಮೆಎಣ್ಣೆ ವಿತರಣೆ ಮಾಡುತ್ತಿದ್ದಾರೆ. ಇಲ್ಲಿ 81ಜನರ ಪರವಾನಿಗೆ ಅಮಾನತ್ತು ಮಾಡಿರುವುದಾಗಿ ಹೇಳುತ್ತೀರಿ. ತಾವು ಈ ಬಗ್ಗೆ ಎಷ್ಟು ಜನರನ್ನು ಸಸ್ಪೆಂಡ್ ಮಾಡಿದ್ದೀರಿ? ತಾವ ಒಂದಷ್ಟು ಜನರನ್ನು ಸಸ್ಪೆಂಡ್ ಮಾಡಬೇಕು. ಇಲಾಖೆಯಲ್ಲಿ ತಾವು ನೋಟೀಸ್ ಕೊಡುತ್ತೀರಿ. ಸಸ್ಪೆಂಡ್ ಆದವರು ಸ್ವಲ್ಪ ದಿನಗಳ ನಂತರ ರೀಇನ್‌ಸ್ಟೇಟ್ ಆಗಿ ಮತ್ತೆ ಅವರಿಗೇ ಲೈಸೆನ್ಸ್ ಕೊಡುತ್ತಾರೆ. ಆದ್ದರಿಂದ ಅಮಾನತ್ತು ಗೊಳಿಸಿದವರಿಗೆ ಮತ್ತೆ ಲೈಸೆನ್ಸ್ ಕೊಡದೇ ಬೇರೆಯವರಿಗೆ ಲೈಸೆನ್ಸ್ ಕೊಡುವ ವ್ಯವಸ್ಥೆ ಆಗುವವರೆಗೂ ಇದು ಹೀಗಿಯೇ ನಡೆದುಕೊಂಡು ಹೋಗುತ್ತದೆ.

ಶ್ರೀಮತಿ ಮನೋರಮ ಮಧ್ವರಾಜ್ : ನಾನು ಈಗಾಗಲೇ ಸುತ್ತೋಲೆಯನ್ನು ಕಳುಹಿಸಿದ್ದೇನೆ. ಸೀಮೆಎಣ್ಣೆಯನ್ನು ಬಕೆಟ್‌ಗೆ ಬಿಟ್ಟು ಆ ನಂತರ ಅಳತೆ ಮಾಡಿ ಕೊಡಬೇಕೆಂದು ತಿಳಿಸಿದ್ದೇವೆ. ಸಸ್ಪೆಂಡ್ ಮಾಡುವುದರಲ್ಲಿ ದಯೆ ದಾಕ್ಷಣ್ಯ ಎಂಬುದು ಇಲ್ಲ. ನಿರ್ದಿಷ್ಟ ದೂರುಗಳನ್ನು ತನ್ನಿ. ಖಂಡಿತ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ.

ಶ್ರೀ ಕೆ. ಲಕ್ಕಣ್ಣ : ಏನು ಕಡಿಮೆ ಸೀಮೆಎಣ್ಣೆ ಕೊಡುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಬದಲು ಇನ್ಸ್‌ಪೆಕ್ಟರ್ಸ್, ಡೆಪ್ಯುಟಿ ಡೈರೆಕ್ಟರುಗಳನ್ನು ತಾವು ಸಸ್ಪೆಂಡ್ ಮಾಡುತ್ತಾ ಹೋದರೆ ಅವರಿಗೂ ಭಯಬರುತ್ತದೆ. ಇದಕ್ಕೆಲ್ಲಾ ಅವರೇ ಜವಾಬ್ದಾರಿ ಹೊರಬೇಕಾಗುತ್ತದೆ. ಮಾರುವವರಿಗೆ ಶಿಕ್ಷೆ ಕೊಡುವ ಬದಲು ಇನ್ಸ್‌ಪೆಕ್ಟರ್, ಡೆಪ್ಯುಟಿ ಡೈರೆಕ್ಟರ್ ಮೇಲೆ ತಾವು ಕಾರ್ಯಕ್ರಮ ಹಾಕಿಕೊಳ್ಳಿ?

ಶ್ರೀಮತಿ ಮನೋರಮ ಮಧ್ವರಾಜ್ : ತಪ್ಪಿತಸ್ಥರು ಎಂದು ಕಂಡುಬರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ನಾವು ಹಿಂಜರಿಯುವುದಿಲ್ಲ ಅಂತಹವರ ಮೇಲೆ ಕ್ರಮ ಕೈಗೊಳ್ಳುತ್ತೇವೆ.

ರಾಜ್ಯದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ಟಾಪ್‌ಗಳ ಮೇಲೆ ಜನರ ಸಂಚಾರ

1002 - ಶ್ರೀ ಆರ್.ಎನ್. ನಾಯಕ್ (ಭಟ್ಕಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಮೇಲೆ ಕುಳಿತು ಜನರು ಸಂಚರಿಸುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಯಾವ ಜಿಲ್ಲೆಗಳಲ್ಲಿ ಅಂತಹ ಪ್ರಕರಣಗಳನ್ನು ಗುರುತಿಸಲಾಗಿದೆ?

ಇ) ಬೀದರ್ ಜಿಲ್ಲೆಯಲ್ಲಿ ಅಂತಹ ಎಷ್ಟು ಪ್ರಕರಣಗಳನ್ನು ಪೋಲೀಸರು ದಾಖಲಿಸಿಕೊಂಡಿರುವರು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು.

ಆ) ಹುಬ್ಬಳ್ಳಿ ಬೆಳಗಾವ, ವಿಜಾಪುರ, ಗುಲ್ಬರ್ಗಾ, ಬೀದರ್, ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ.

ಇ) 1992ರಲ್ಲಿ 3 ಪ್ರಕರಣಗಳನ್ನು ಪೋಲೀಸರು ದಾಖಲಿಸಿಕೊಂಡಿರುವರು.

ಶ್ರೀ ಆರ್.ಎನ್. ನಾಯಕ್ : ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ಬೆಳಗಾಂ, ವಿಜಾಪುರ, ಗುಲ್ಬರ್ಗಾ, ಭೀದರ್, ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಜನರು ಬಸ್ಸುಗಳ ಮೇಲೆ ಕುಳಿತು ಸಂಚರಿಸುವುದು ಕಂಡುಬಂದಿದೆ ಎಂದು ಸರ್ಕಾರದ ಉತ್ತರದಲ್ಲಿ ಇದೆ. ಬಸ್‌ಗಳ ಮೇಲೆ ಕುಳಿತು ಸಂಚಾರ ಮಾಡುವುದು ಕಾನೂನಿಗೆ ವಿರುದ್ಧ ಆಗಿರುವುದರಿಂದ ಎಷ್ಟು ಪ್ರಕರಣಗಳನ್ನು ದಾಖಲಿಸಿದ್ದೀರೆನ್ನುವುದಕ್ಕೆ 1992ರಲ್ಲಿ 3 ಪ್ರಕರಣಗಳು ಎಂದು ಹೇಳಿದ್ದೀರಿ. ನನ್ನ ಪ್ರಶ್ನೆ ಇಷ್ಟು. ಎಲ್ಲಾ ಕಡೆ ದಿನನಿತ್ಯ ಇಂತಹ ಪ್ರಕರಣ ನಡೆಯುತ್ತಿರುವಾಗ ಪೋಲೀಸರಿಗೆ ಕಂಡಿದ್ದು ಕೇವಲ 3 ಪ್ರಕರಣಗಳು ಮಾತ್ರವೇ? ಮಿಕ್ಕವು ಪೋಲೀಸರಿಗೆ ಕಂಡಿರಲಿಲ್ಲವೇ? ಹೆಚ್ಚು ಕಂಡಿದ್ದರೂ ಕೆ.ಎಸ್.ಆರ್.ಟಿ.ಸಿ ಸರ್ಕಾರದ ಅಂಗ ಸಂಸ್ಥೆ ಎನ್ನುವ ಕಾರಣಕ್ಕೆ ಈ ಸವಲತ್ತು ಕೊಟ್ಟುಕೊಂಡು ಬಂದಿದ್ದಾರೆಯೇ?

ಶ್ರೀ ಭೀಮಣ್ಣ ಖಂಡ್ರೆ : ಅದು ನಿಜ. ಮಾನ್ಯ ಅಧ್ಯಕ್ಷರೇ, ಈ ಪೆಟ್ರೋಲ್ ಬೆಲೆಹೆಚ್ಚು ಆದ ಕಾರಣ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಸ್ವಲ್ಪ ಹಣದ ಕೊರತೆ ಇರುವ ಕಾರಣ ಹೆಚ್ಚ್ ಬಸ್ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಆದರಿಂದಾಗಿ ಸ್ವಲ್ಪ ಜನ ಕೂಡುತ್ತಿದ್ದಾರೆ. ಅದ ಯಾವಾಗಲೂ ಅಲ್ಲ. ಲಗ್ನದ ಕಾಲದಲ್ಲಿ ಅಥವಾ ಇನ್ನಿತರೆ ಸಮಾರಂಭಗಳ ಕಾಲದಲ್ಲಿ ಪ್ರಯಾಣಿಕರು ಹೆಚ್ಚಾದಾಗ ಹಾಗೆ ಕುಳಿತುಕೊಳ್ಳುವುದು ಉಂಟು. ಇದರಲ್ಲಿ 3 ಪ್ರಕರಣದಲ್ಲಿ ಕೇಸ್ ಆಗಿದೆ. ಇದರ ಬಗ್ಗೆ ಕೆಲಸ ಮಾಡುತ್ತಿದ್ದೇವೆ. ಅವಶ್ಯಕತೆ ಇದ್ದಾಗ ಹ್ಯೂಮೊನಿಟೇರಿಯನ್ ಗ್ರೌಂಡ್ಸ್‌ನಲ್ಲಿ ಮಾಡಿದರೂ ಕೂಡ ಅದು ತಪ್ಪಾಗುವುದರಿಂದ ಪನಿಷ್‌ಮೆಂಟ್ ಆಗಲೇಬೇಕೆಂದು ಡೈರೆಕ್ಷನ್ ಕೊಟ್ಟಿದ್ದೇವೆ. ಹಾಗೆ ಮಾಡಿದಾಗ ಕೇಸ್ ಹಾಕಬೇಕೆಂದು ಹೇಳಿದ್ದೇವೆ.

ಶ್ರೀ ಭೀಮಣ್ಣ ಖಂಡ್ರೆ : ಕೇಸ್ ಹಾಕಬೇಕು ಎಂದು ನಾವು ಡೈರೆಕ್ಷನ್ ಕೊಟ್ಟಿದ್ದೇವೆ. ಆದರಂತೆ ಕೇಸ್ ಹಾಕುತ್ತಿದ್ದಾರೆ. ಸಾಧ್ಯವಾದಷ್ಟು ಹೆಚ್ಚಿಗೆ ಬಸ್ಸುಗಳನ್ನು ಬಿಡುತ್ತೇವೆ. ಮುಂದೆ ಸರಿಹೋಗುತ್ತದೆ.

ಶ್ರೀ ಬಾಬುರಾವ್ ಚೌವಣ್ : ನಾನು ಈ ಪ್ರಶ್ನೆಯನ್ನು 5 ದಿವಸಗಳ ಹಿಂದೆ ಕೇಳಿದ್ದೆ. ಅದಕ್ಕೆ ಸಂಬಂಧಪಟ್ಟ ಉತ್ತರ ಬರಲಿಲ್ಲ. ಮಂತ್ರಿಗಳು ಹೇಳುತ್ತಿರುವುದು ನಿಜ ಅಲ್ಲ. ಶ್ರೀ ನಾಯಕರ್‌ರವರ ಪ್ರಶ್ನೆಗೆ ಲಗ್ನಗಳ ವೇಳೆಯಲ್ಲಿ ಹೀಗಾಗುತ್ತದೆ, ಎಂದು ಮಂತ್ರಿಗಳು ಹೇಳಿದ್ದಾರೆ. ಆದರೆ ಇದು ನಿಜ ಅಲ್ಲ. ಏತಕ್ಕೆಂದರೆ ಗುಲ್ಬರ್ಗಾ ಜಿಲ್ಲೆಯಲ್ಲಿ ಇಡೀ ವರ್ಷದಲ್ಲಿ ಜನಗಳು ಟಾಪ್‌ಮೇಲೆ ಕುಳಿತುಕೊಂಡು ಹೋಗುತ್ತಾರೆ. ಇದು ಆಗದಂತೆ ತಡೆಯಲು ಏನು ಕ್ರಮಕೈಗೊಂಡಿದ್ದೀರಿ. ನಮ್ಮ ಪರಿಸ್ಥಿತಿ ಎಂದರೆ....

ಉಪಾಧ್ಯಕ್ಷಿಣಿಯವರು : ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಬಾಬುರಾವ್ ಚವಾಣ್ : ನಮ್ಮ ಪರಿಸ್ಥಿತಿ ಏನಾಗಿದೆ ಎಂಬುದನ್ನು ಹೇಳುತ್ತೇನೆ. ಶಾಸಕರು ಕಾರು ತೆಗೆದುಕೊಂಡು ಹಳ್ಳಿಗೆ ಹೋದರೆ ಜನರು ಟಾಪ್ ಮೇಲಿಂದ ಇಳಿದು ಶಾಸಕರನ್ನು ಹೊಡೆಯುತ್ತಾರೆ ಎಂಬ ವಾತಾವರಣ ಇದೆ. ಪರಿಸ್ಥಿತಿ ಹೀಗಿರುವಾಗ ಮಾನ್ಯ ಮಂತ್ರಿಗಳು ಯಾವ ಯಾವ ರೂಟ್‌ಗಳಲ್ಲಿ ಬಸ್ಸುಗಳ ಟಾಪ್ ಮೇಲೆ ಜನ ಕುಳಿತುಕೊಂಡು ಹೋಗುತ್ತಿದ್ದಾರೆ. ಅಂಥ ರೂಟ್‌ಗಳಲ್ಲಿ ಬಸ್ಸುಗಳನ್ನು ಓಡಿಸಲು ಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಭೀಮಣ್ಣ ಖಂಡ್ರೆ : ಎಲ್ಲಾ ಬಸ್ಸ್‌ಗಳ ರೂಫ್ ಮೇಲೆ ಜನ ಕುಳಿತುಕೊಂಡು ಹೋಗುತ್ತಾರೆ ಎಂಬುದು ಸರಿಯಲ್ಲ, ಒಂದೊಂದು ಸಾರಿ ಹೀಗಾಗುತ್ತದೆ. ಅದಕ್ಕಾಗಿ ಹೆಚ್ಚು ಬಸ್ಸುಗಳನ್ನು ಅಂತಹ ಕಡೆ ಓಡಿಸುತ್ತಿದ್ದೇವೆ. 37 ಬಸ್ಸುಗಳನ್ನು ಗುಲ್ಬರ್ಗಾ ಹಾಗೂ 32 ಬಸ್ಸುಗಳನ್ನು ಬೀದರ್‌ಗೆ ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. 31 ಮಾರ್ಚ್ ಒಳಗೆ ಹೆಚ್ಚು ಸರ್ವಿಸನ್ನು ಕೊಡುತ್ತೇವೆ. ನಾವು ಈ ಭಾಗಗಳಿಗೆ ಹೆಚ್ಚು ಬಸ್ಸುಗಳನ್ನು ಕಳುಹಿಸುತ್ತೇವೆ.

ಶ್ರೀ ಎಂ. ನಾರಾಯಣ ಸ್ವಾಮಿ : ಮಾನ್ಯ ಸಚಿವರು ಹೇಳಿರುವುದು ಸರಿಯಿಲ್ಲ ಇದು ಕೇವಲ ಹುಬ್ಬಳ್ಳಿ ಬೆಳಗಾಂ, ಬೀದರ್ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಮಾತ್ರ ಅಲ್ಲ ನಮ್ಮ ಕೋಲಾರ ಜಿಲ್ಲೆಯಲ್ಲೂ ಸಹ ಹಳ್ಳಿಗಾಡಿನಲ್ಲಿ ಜನರು ಟಾಪ್ ಮೇಲೆ ಕುಳಿತುಕೊಂಡು ಹೋಗಬೇಕಾಗಿದೆ. ಅಲ್ಲೂ ಕೂಡ ರಸ್ತೆ ಸಾರಿಗೆ ಬಸ್ಸು ಸಮಯ ತಪ್ಪಿಸಿ ಬರತಕ್ಕ ಪರಿಸ್ಥಿತಿ ಇದೆ. ಅಲ್ಲೂ ಕೂಡ ಬಸ್ಸುಗಳು ಸಮರ್ಪಕವಾಗಿ ಓಡಾಡುತ್ತಿಲ್ಲ. ಜನ ಏತಕ್ಕೆ ಬಸ್ ಟಾಪ್‌ಗಳ ಮೇಲೆ ಹೋಗುತ್ತಾರೆ ಎಂಬುದನ್ನು ಯೋಚನೆ ಮಾಡಬೇಕು ಸರಿಯಾದ ವ್ಯವಸ್ಥೆ ಇದ್ದರೆ ಜನ ಟಾಪ್ ಮೇಲೆ ಹೋಗುವುದಿಲ್ಲ. ಬರೀ ದುಡ್ಡು ದುಡ್ಡು ಎಂದು ಹೇಳುತ್ತಿದ್ದೀರಿ. ಆಗದಿದ್ದರೆ ನೀವು ಇದನ್ನು ನಿಲ್ಲಿಸಿಬಿಡಿ....

ಉಪಾಧ್ಯಕ್ಷಿಣಿಯವರು : ತಾವು ನೇರವಾಗಿ ಪ್ರಶ್ನೆಯನ್ನು ಕೇಳಿ ಈ ರೀತಿ ಪ್ರಶ್ನೆ ಕೇಳಿದರೆ ಬೇರೆ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ.

ಶ್ರೀ ಎಂ. ನಾರಾಯಣ ಸ್ವಾಮಿ : ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಸಂಚಾರ ವ್ಯವಸ್ಥೆಯನ್ನು ಸಮರ್ಪಕವಾಗಿ ನಡೆಸತಕ್ಕ ಪ್ರಶ್ನೆ ಇದರಲ್ಲಿ ಅಡಗಿದೆ.

ಶ್ರೀ ಭೀಮಣ್ಣ ಖಂಡ್ರೆ : ನಾವು ಹೆಚ್ಚು ಬಸ್ಸುಗಳನ್ನು ಪ್ರೊವೈಡ್ ಮಾಡಿದ್ದೇವೆ. ಈಗ ಏನು ತೊಂದರೆ ಇದೆ. ಇದು 31ನೇ ಮಾರ್ಚಗೆ ಮೊದಲು ನಿವಾರಣೆ ಆಗುತ್ತದೆ.

ಶ್ರೀ ಆರ್.ಎನ್. ನಾಯಕ್ : ಈ ಉತ್ತರವನ್ನು ನೋಡಿದಾಗ ಸಾರಿಗೆ ಇಲಾಖೆ ಅಥವಾ ನನ್ನ ಒಂದು ದೃಷ್ಟಿಯಲ್ಲಿ ಹೇಳುವುದಾದರೆ ಈ ಜಿಲ್ಲೆಗಳಿಗೆ ಸರ್ಕಾರ ಸರಿಯಾದ ಸಾರಿಗೆ ವ್ಯವಸ್ಥೆ ಕೊಡುವುದರಲ್ಲಿ ಸಂಪೂರ್ಣ ಸೋತು ಸುಣ್ಣವಾಗಿದೆ ಎಂಬುದು ಗೊತ್ತಾಗುತ್ತದೆ. ಹೀಗಿದ್ದಾಗ ಕೈಯಲ್ಲಿ ಆಗದೆ ಇರತಕ್ಕ ಕೆಲಸಗಳನ್ನು ಮಾಡಬಾರದು. ಮಾರ್ಚ್ 31ರಲ್ಲಿ ಎಂದು ಹೇಳುವುದಕ್ಕೆ ಬದಲಾಗಿ, ಬೇರೆ ಏನಾದರೂ ವ್ಯವಸ್ಥೆ ಮಾಡಿ ಪ್ರೈವೇಟ್‌ನವರಿಗೆ ಕೊಟ್ಟು ಜನರು ಟಾಪ್ ಮೇಲೆ ಹೋಗುವುದನ್ನು ನಿಲ್ಲಿಸಬೇಕು. ಸುಮ್ಮನೆ ಮಾಡುತ್ತೇವೆ ಎಂದರೆ ಅದು ಸಾಧ್ಯವಾಗುವುದಿಲ್ಲ, ಮಾನ್ಯ ಖಂಡ್ರೆ ಸಾಹೇಬರು ಈ ಬಗ್ಗೆ ಮನಸ್ಸು ಮಾಡುತ್ತಾರೋ ಹೇಗೆ? ಇಲ್ಲದಿದ್ದರೆ ಇದನ್ನು ಹೀಗೆ ಕಂಟಿನ್ಯೂ ಮಾಡಿ ಟಾಪ್

ಮೇಲೆ ಜನರು ಕುಳಿತುಕೊಂಡು ಹೋಗುವಂಥ ವ್ಯವಸ್ಥೆಯನ್ನು ಮುಂದುವರಿಸುವ ಬಗ್ಗೆ ಯೋಚನೆ ಮಾಡಿದ್ದಾರೆಯೇ?

ಶ್ರೀ ಭೀಮಣ್ಣ ಖಂಡ್ರೆ : 9 ಜಿಲ್ಲೆಗಳಲ್ಲಿ ಏನು ನ್ಯಾಷನಲೈಸ್ ರೂಟ್‌ಗಳಿಗೆ ಆ ರೂಟ್‌ಗಳಲ್ಲಿ ನಮ್ಮ ಬಸ್ಸುಗಳನ್ನು ಪ್ರೊವೈಡ್ ಮಾಡಿದ್ದೇವೆ ಎಲ್ಲಿ ಇಲ್ಲಾ ಅಲ್ಲಿಯೂ ಪ್ರೊವೈಡ್ ಮಾಡುತ್ತೇವೆ ಬೇರೆಯವರಿಗೆ ಕೊಟ್ಟು ಅನುಕೂಲ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ ಆದರೆ ಎಷ್ಟು ಸೌಲಭ್ಯ ಕೊಡಬಹುದೋ ಅಷ್ಟು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಆರ್.ಎನ್. ನಾಯಕ್ : ರನ್ನಿಂಗ್ ರೂಟ್ಸ್‌ಗಳನ್ನು ಸ್ಕ್ರಾಪ್ ಮಾಡಿದ್ದೀರಿ. ರಾಷ್ಟ್ರೀಕರಣ ಮಾಡುವುದನ್ನು ತೆಗೆದುಹಾಕಿ ಪ್ರೈವೇಟ್‌ನವರಿಗೆ ಕೊಡಿ.

ಶ್ರೀ ಭೀಮಣ್ಣ ಖಂಡ್ರೆ : 9 ಜಿಲ್ಲೆಗಳಲ್ಲಿ ನ್ಯಾಷನಲೈಸ್ ಆಗಿದೆ ಅಲ್ಲಿ ಪ್ರೈವೇಟ್‌ನವರಿಗೆ ಬಸ್ಸುಗಳನ್ನು ಕೊಡುವ ಪ್ರಶ್ನೆ ಇಲ್ಲ ಎಲ್ಲಿ ಪಾರ್ಶಿಯಲ್ ಇದೆ ಅಲ್ಲಿ ನಮ್ಮ ಬಸ್ಸುಗಳನ್ನು ಹೆಚ್ಚು ಮಾಡುವ ಬಗ್ಗೆ ಇಲ್ಲ, ಪ್ರಯತ್ನ ಮಾಡುತ್ತಿದ್ದೇವೆ. ಇದರ ಜೊತೆಗೆ ಪ್ರೈವೇಟ್‌ನವರಿಗೆ ಕೊಡುವ ಬಗ್ಗೆ ವಿಚಾರ ಮಾಡುತ್ತಿದ್ದೇವೆ.

ಶ್ರೀ ಎ.ಕೆ. ಅನಂತ ಕೃಷ್ಣ : ಈಗ ಟ್ರಾಫಿಕ್ ವೀಕ್ ಅಂತ ಹೇಳಿ....

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದು ಬಹಳ ಪ್ರಾಮುಖ್ಯವಾದ ವಿಚಾರ. ಇದು ಒಂದು ಜಿಲ್ಲೆ ಅಥವಾ ನಗರಕ್ಕೆ ಸಂಬಂಧಪಟ್ಟ ಪ್ರಶ್ನೆ ಅಲ್ಲ ಮಾನ್ಯ ಸಚಿವರು ಹೊಸದಾಗಿ ಈ ಇಲಾಖೆ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ, ತಾವು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೀರಿ ಎನ್ನುವ ವಿಶ್ವಾಸ ನನ್ನಲ್ಲಿದೆ. ನಾನು ಈ ಸಂದರ್ಭದಲ್ಲಿ ಪ್ರಶ್ನೆ ಕೇಳುವುದು ಏನೆಂದರೆ, ಈಗ ಹೊಸದಾಗಿ ಅಡಿಷನಲ್ ಬಸ್ಸುಗಳನ್ನು ಕೊಟ್ಟು ಟಾಪ್ ಮೇಲೆ ಪಕ್ಕದಲ್ಲಿ ಹೋಗತಕ್ಕ ಟ್ರಾಫಿಕ್ ಅನ್ನು ಕಡಿಮೆ ಮಾಡುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ? ಕಳೆದ ಮೂರು ವರ್ಷಗಳಲ್ಲಿ ನಿಮ್ಮ ಸರ್ಕಾರ ಬಂದ ಮೇಲೆ ಯಾವ ರೂಟ್‌ಗಳು ಕ್ಯಾನ್ಸಲ್ ಮಾಡಿದ್ದೀರಿ. ಆ ರೂಟ್‌ಗಳನ್ನು ಪುನರ್ ಸ್ಥಾಪನೆ ಮಾಡಿದರೆ ಇದರಲ್ಲಿ ಅರ್ಧ ಭಾಗದ ಟ್ರಾಫಿಕ್ ಬರ್ಡನ್ ಕಡಿಮೆ ಆಗುತ್ತದೆ. ಅದನ್ನು ಮಾಡಲು ಸಾಧ್ಯವೇ ಎಂಬುದನ್ನು ಹೇಳಿ.

ಶ್ರೀ ಭೀಮಣ್ಣ ಖಂಡ್ರೆ : ಅದು ಸಾಧ್ಯವಿದೆ. ನಾವು ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : 3 ತಿಂಗಳಲ್ಲಿ, 6 ತಿಂಗಳಲ್ಲಿ ಅಥವಾ ಒಂದು ವರ್ಷದಲ್ಲಿ ಮಾಡುತ್ತೀರಿ ಎಂಬುದನ್ನು ಹೇಳಿ?

ಶ್ರೀ ಭೀಮಣ್ಣ ಖಂಡ್ರೆ : ಎಷ್ಟು ಸಾಧ್ಯವೋ ಅಷ್ಟು ಬೇಗ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನ್ನ ರಿಕ್ವೆಸ್ಟ್ ಏನೆಂದರೆ ನಿಮ್ಮ ಕನ್ನಡ ನಮಗೆ ಸರಿಯಾಗಿ ಅರ್ಥ ಆಗುವುದಿಲ್ಲ? ದಯವಿಟ್ಟು ಸ್ವಲ್ಪ ನಿಧಾನವಾಗಿ ಮಾತನಾಡಿ.

ಗುಲ್ಬರ್ಗಾ ವಿಭಾಗದ ಕ.ರಾ.ರ.ಸಾ. ಸಂಸ್ಥೆಯಲ್ಲಿ ನಷ್ಟ

291 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಗುಲ್ಬರ್ಗಾ ವಿಭಾಗದ ಬಸ್ಸುಗಳು ನಡೆಸುವುದರಲ್ಲಿ 1991-92ನೇ ಸಾಲಿನಲ್ಲಿ ಬಂದಿರುವ ಲಾಭ ಅಥವಾ ನಷ್ಟವೆಷ್ಟು ?

ಆ) ಬಸ್ಸುಗಳಲ್ಲಿ ಪ್ರಯಾಣಿಕರು ಒಳಗೆ ತುಂಬುವುದಲ್ಲದೇ ಛಾವಣಿಯ ಮೇಲೆ ಸಹ ಕುಳಿತು ಪ್ರಯಾಣ ಮಾಡಿದರೂ ಸಹ ನಷ್ಟ ಉಂಟಾಗಲು ಕಾರಣವೇನು ?

ಇ) ದಿನಾಂಕ 25-2-91ರಂದು ಬಸ್ ಸಂಖ್ಯೆ 1042 ನಿರ್ವಾಹಕರ ಸಂಖ್ಯೆ 2033, ಚಾಲಕ ಸಂಖ್ಯೆ 28882 ಇದ್ದು ಗುಲ್ಬರ್ಗಾದಿಂದ ಗುರುಮಿಟಕಲ್‌ಗೆ ಹೋಗುತ್ತಿದ್ದ ಪ್ರಯಾಣಿಕರ ಬಸ್ಸಿನ ಆಂದಿನ ಆದಾಯವೆಷ್ಟು ?

ಈ) ಪರಿವೀಕ್ಷಕರು, ಬಸ್ಸುಗಳು ಮಾರ್ಗಗಳಿಗನುಗುಣವಾಗಿ ಇಲ್ಲದಿರುವುದು ನಿಜವೆ ?

ಉ) ಈ ಬಸ್ಸುಗಳ ತಪಾಸಣೆ ಮಾಡಲು ಸರಿಯಾಗಿ ವ್ಯವಸ್ಥೆ ಮಾಡಿ ತಪ್ಪಿತಸ್ಥ ನಿರ್ವಾಹಕರಿಗೆ ಶಿಕ್ಷೆ ನೀಡಿ ವ್ಯವಸ್ಥೆ ಯಾವಾಗ ಸರಿಪಡಿಸಲಾಗುವುದು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) 4.90 ಕೋಟಿ ರೂಪಾಯಿಗಳು ನಷ್ಟವುಂಟಾಯಿತು.

ಆ) ಬಸ್ಸುಗಳಲ್ಲಿ ಪ್ರಯಾಣಿಕರ ಒತ್ತಡ ಹೆಚ್ಚಾಗಿ ಕಂಡುಬರುವುದು ಬೇಡಿಕೆ ಕಾಲದಲ್ಲಿ (ಪೀಕ್ ಅವರ್) ಮತ್ತು ಬಜಾರ (ಸಂತೆಯ) ದಿವಸಗಳಲ್ಲಿ ಮಾತ್ರ. ವಿದ್ಯಾರ್ಥಿಗಳೂ ಸಹ ಪಾಸುಗಳಲ್ಲಿ ಪ್ರಯಾಣ ಮಾಡುತ್ತಾರೆ. ಹೆಚ್ಚಿನ ಸಂಖ್ಯೆಯ ಹದಗೆಟ್ಟ ರಸ್ತೆಗಳಿಂದಾಗಿ ಗುಲ್ಬರ್ಗಾ ವಿಭಾಗದ ಕಾರ್ಯಚರಣೆ ವೆಚ್ಚ ತುಂಬಾ ಹೆಚ್ಚು.

ಇ) 797 ರೂಪಾಯಿಗಳು.

ಈ) ಹೌದು.

ಉ) ಸಂಚಾರ ನಿರೀಕ್ಷಕ ಮತ್ತು ಸಹಾಯಕ ಸಂಚಾರ ನಿರೀಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಣ ಕದಿಯುವ ಪ್ರಕರಣದಲ್ಲಿ ಭಾಗಿಯಾದ ನಿರ್ವಾಹಕರನ್ನು ಶಿಕ್ಷೆಗೆ ಒಳಪಡಿಸಲಾಗುತ್ತಿದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಸಭಾಧ್ಯಕ್ಷಿಣಿಯವರೇ, ಅ ಪ್ರಶ್ನೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳು ನಡೆಸುವುದಲ್ಲಿ 1990-92ನೇ ಸಾಲಿನಲ್ಲಿ ಬಂದಿರುವ ಲಾಭ ಅಥವಾ ನಷ್ಟ ಎಷ್ಟು ಎಂದು ಕೇಳಿದ್ದಕ್ಕೆ...

ಉಪಾಧ್ಯಕ್ಷರು : ನೀವು ಪ್ರಶ್ನೆಯನ್ನು ಓದುವುದು ಬೇಡ. ಪ್ರಶ್ನೆಯನ್ನು ಹಾಕಿ ?

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಉತ್ತರದಲ್ಲಿ 4.90 ಕೋಟಿ ರೂಪಾಯಿಗಳ ನಷ್ಟವನ್ನು ತೋರಿಸಿದ್ದಾರೆ. "ಅ" ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಬಸ್ಸುಗಳ ಒಳಗೆ ತುಂಬಿ ಹೆಚ್ಚಾದ ಪ್ರಯಾಣಿಕರು ಬಸ್ಸಿನ ಮೇಲೆ ಕುಳಿತಿರುವುದನ್ನು ತಾವು ಒಪ್ಪಿಯೂ ಸಹ ಈ ನಷ್ಟವನ್ನು ತೋರಿಸಿರುವುದು ಏಕೆ?

ಶ್ರೀ ಭೀಮಣ್ಣ ಖಂಡ್ರೆ : ಜನ ಬಸ್ಸುಗಳ ಮೇಲೆ ಕುಳಿತುಕೊಳ್ಳುವ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ. ನಮ್ಮಲ್ಲಿ ಹೋದ ಸಾರಿ ಲಾಸ್ ಆಗುವುದಕ್ಕೆ ಬಸ್ಸುಗಳ ಕ್ಯಾನ್ಸಲೇಷನ್ ಹೆಚ್ಚಾಗಿದ್ದೆ ಕಾರಣ. ಬಸ್ಸುಗಳು ಇಲ್ಲದ ಕಾರಣ, ಡ್ರೈವರ್‌ಗಳು ಸಮಯಕ್ಕೆ ಸರಿಯಾಗಿ ಬಾರದ ಕಾರಣ, ಕ್ಯಾನ್ಸಲೇಷನ್ ಆಗಿದೆ. ಆ ಕ್ಯಾನ್ಸಲೇಷನ್‌ಗಳನ್ನು ದೂರ ಮಾಡಿ ಅದನ್ನು ಸರಿಮಾಡುತ್ತೇವೆ. ಅದರ ಜೊತೆಗೆ ಬಸ್‌ಗಳನ್ನು ಹೆಚ್ಚು ಮಾಡುತ್ತೇವೆ ಎಂದು ತಮಗೆ ಆಶ್ವಾಸನೆ ಕೊಡುತ್ತೇವೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : "ಇ" ಪ್ರಶ್ನೆಯಲ್ಲಿ ದಿನಾಂಕ 25-2-91ರಂದು ಬಸ್ ಸಂಖ್ಯೆ 1042 ನಿರ್ವಾಹಕರ ಸಂಖ್ಯೆ 2033, ಚಾಲಕ ಸಂಖ್ಯೆ 28882 ಇದ್ದು ಗುಲ್ಬರ್ಗಾದಿಂದ ಗುರುಮಿಟಕಲ್‌ಗೆ ಹೋಗುತ್ತಿದ್ದ ಪ್ರಯಾಣಿಕರ ಬಸ್ಸಿನ ಅಂದಿನ ಆದಾಯ ಎಷ್ಟು ಎಂದು ಕೇಳಿದರೆ ಅದಕ್ಕೆ 797 ರೂಪಾಯಿಗಳು ಎಂದು ಉತ್ತರ ಕೊಟ್ಟಿದ್ದಾರೆ. ಆ ದಿವಸ ನಾನು ಸ್ವತಃ ಹೋಗಿದ್ದಾಗ ಆ ಬಸ್ಸಿನ ಮೇಲೆ ಮತ್ತು ಬಸ್ಸಿನ ಒಳಗೆ ಒತ್ತಡವಿದ್ದು ಪ್ರಯಾಣಿಕರು ಕನಿಷ್ಠ 100 ಮಂದಿ ಇದ್ದರು. ಅವರು ಒಪ್ಪಿದಂತೆ ಗುಲ್ಬರ್ಗಾದಿಂದ ಗುರುಮಿಟಕಲ್‌ವರೆಗೆ ಇದೇ ಪ್ರಕಾರ ಒತ್ತಡವಿರುತ್ತದೆ. ಆ ವೇಳೆಯಲ್ಲಿ ಗುಲ್ಬರ್ಗಾದಿಂದ ಗುರುಮಿಟಕಲ್‌ವರೆಗೆ ಕನಿಷ್ಠ 15-16 ರೂಪಾಯಿ ಚಾರ್ಜ್ ಇತ್ತು. ಆ ಪ್ರಕಾರ ಆವತ್ತಿನ ಬಸ್ಸಿನ ಆದಾಯ 1,500 ರೂಪಾಯಿಗಳು ಆಗುವುದಿಲ್ಲವೇ? ಒಂದು ವೇಳೆ 1,500 ರೂಪಾಯಿಗಳಾದರೆ ಅದರ ಅರ್ಧ ಆದಾಯ ನಿರ್ವಾಹಕರ ಜೇಬಿಗೆ ಇಳಿದಿಲ್ಲವೇ?

ಶ್ರೀ ಭೀಮಣ್ಣ ಖಂಡ್ರೆ : ಎಲ್ಲೆಲ್ಲಿ ಈ ಪ್ರಕಾರ ಸೋರಿ ಹೋಗುತ್ತಿದೆ ಅದರ ಬಗ್ಗೆ ಆಕ್ಷನ್ ತೆಗೆದುಕೊಳ್ಳುತ್ತಿದ್ದೇವೆ. ತಾವು ಏನು ಹೇಳಿದಿರಿ ಆ ಪ್ರಕಾರ ಒಬ್ಬ ಕಂಡಕ್ಟರನ್ನು ಡಿಸ್‌ಮಿಸ್ ಮಾಡಲಾಗಿದೆ. ಪಿಲ್‌ಫರೇಜ್ ಆಗುತ್ತದೆ ಅದನ್ನು ನಾನು ಒಪ್ಪುತ್ತಿದ್ದೇನೆ. ಅದಕ್ಕೆ ಹೆಚ್ಚು ಸೂಪರ್‌ವಿಷನ್ ಬೇಕು. ಅದು ಇಲ್ಲದ ಕಾರಣ ಪಲ್‌ಫರೇಜ್ ಆಗುತ್ತಿದೆ. ಲಾಸ್ ಕಡಿಮೆ ಮಾಡುವಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಅದರ ಬಗ್ಗೆ ಸಾಧ್ಯವಾದಷ್ಟು ಕಾರ್ಯಕ್ರಮವನ್ನು ತೆಗೆದುಕೊಂಡು ಇದನ್ನು ದೂರ ಮಾಡುವ ಪ್ರಯತ್ನ ಮಾಡುತ್ತೇವೆಂದು ತಮಗೆ ಆಶ್ವಾಸನೆ ಕೊಡುತ್ತಿದ್ದೇವೆ. ಮತ್ತು ಎಲ್ಲೆಲ್ಲಿ ಬಸ್ಸುಗಳು ಕಡಿಮೆ ಇವೆ ಈ ಬಗ್ಗೆ ಪ್ರಶ್ನೆ ಬಂದಿತ್ತು. ನಾನು ಈಗ ಹೇಳಿದ್ದೇನೆ. We will provide buses to those places.

ಭದ್ರಾವತಿ ನಗರಕ್ಕೆ ಸಕ್ಕರೆ ಮತ್ತು ಸೀಮೆಎಣ್ಣೆ ವಿತರಣೆ

841 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ಭದ್ರಾವತಿ ನಗರಕ್ಕೆ ಪ್ರತಿ ತಿಂಗಳು ಸರಬರಾಜು ಮಾಡುತ್ತಿರುವ ಸೀಮೆಎಣ್ಣೆ ಮತ್ತು ಸಕ್ಕರೆಯ ಪ್ರಮಾಣವೆಷ್ಟು?

ಆ) ಭದ್ರಾವತಿ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಿಗೆ ಪ್ರತಿ ತಿಂಗಳು ಸರಬರಾಜು ಮಾಡುತ್ತಿರುವ ಸೀಮೆಎಣ್ಣೆ ಮತ್ತು ಸಕ್ಕರೆಯ ಪ್ರಮಾಣವೆಷ್ಟು?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಪ್ರತಿ ಮಾಹೆಗೆ ಸರಾಸರಿ 246.710 ಕಿಲೋ ಲೀಟರ್ ಸೀಮೆಎಣ್ಣೆ ಹಾಗೂ 86.5 ಮೆ.ಟನ್. ಲೆವಿ ಸಕ್ಕರೆಯನ್ನು ಭದ್ರಾವತಿ ನಗರಕ್ಕೆ ಸರಬರಾಜು ಮಾಡಲಾಗುತ್ತಿದೆ.

ಆ) ಭದ್ರಾವತಿ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಿಗೆ ಮಾಹೆಯಾನ ಸರಾಸರಿ 151.140 ಕಿಲೋ ಲೀಟರ್‌ನಷ್ಟು ಸೀಮೆಎಣ್ಣೆ ಮತ್ತು 60.8 ಟನ್‌ನಷ್ಟು ಲೆವಿ ಸಕ್ಕರೆಯನ್ನು ಸರಬರಾಜು ಮಾಡಲಾಗುತ್ತಿದೆ.

ಶ್ರೀ ಕರಿಯಣ್ಣ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಭದ್ರಾವತಿ ನಗರಕ್ಕೆ 246.710 ಕಿಲೋ ಲೀಟರ್ ಸೀಮೆಎಣ್ಣೆ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಅದರ ಗ್ರಾಮಾಂತರ ಪ್ರದೇಶಗಳಿಗೆ 151.140 ಕಿಲೋ ಲೀಟರ್ ಸೀಮೆಎಣ್ಣೆ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಸಕ್ಕರೆ, ನಗರ ಪ್ರದೇಶಗಳಿಗೆ 86.5 ಮೆಟ್ರಿಕ್ ಟನ್ಸ್ ಮತ್ತು ಗ್ರಾಮಾಂತರ ಪ್ರದೇಶಗಳಿಗೆ 60.8 ಮೆಟ್ರಿಕ್ ಟನ್ಸ್ ಕೊಡುತ್ತಿದ್ದೇವೆ ಎಂದು ಹೇಳಿದ್ದಾರೆ. ಆದರೆ ಗ್ರಾಮಾಂತರದವರು ಏನು ಅನ್ಯಾಯ ಮಾಡಿದರು. ನಗರದ ವಾಸಿಗಳಿಗೆ ಏಕೆ ಇಷ್ಟೊಂದು ಸವಲತ್ತು? ಮೇಲಾಗಿ ಸೀಮೆಎಣ್ಣೆ ಬೇಕಾಗಿರುವುದು ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಜನಗಳಿಗೆ, ಅವರಿಗೆ ದೀಪ ಉರಿಸುವುದಕ್ಕಾದರೂ ಸೀಮೆಎಣ್ಣೆ ಬೇಕು. ನಗರವಾಸಿಗಳಿಗೆ ಎಲೆಕ್ಟ್ರಿಸಿಟಿಯೂ ಇದೆ, ಕೆರೊಸಿನ್ ಸಹ ಜಾಸ್ತಿ ಕೊಡುತ್ತಾರೆ. ಗ್ರಾಮಾಂತರ ಪ್ರದೇಶದ ಜನರಿಗೆ ಸೀಮೆಎಣ್ಣೆಯನ್ನು ಜಾಸ್ತಿ ಕೊಡುತ್ತಿಲ್ಲ. ಇದರಿಂದ ಬಹಳ ತೊಂದರೆಯಾಗಿದೆ. ಆದ್ದರಿಂದ ಗ್ರಾಮಾಂತರ ಪ್ರದೇಶವನ್ನು ನಗರ ಪ್ರದೇಶದಂತೆ ಕಾಣುತ್ತಾರೋ ಅಥವಾ ಅದಕ್ಕೆ ಏನಾದರೂ ಮಲತಾಯಿ ಧೋರಣೆಯನ್ನು ನಮ್ಮ ಆಹಾರ ಮಂತ್ರಿಗಳು ಅನುಸರಿಸುತ್ತಿರೋ ದಯಮಾಡಿ ತಿಳಿಸಬೇಕೆಂದು ವಿನಂತಿಸುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್ : ಮಾನ್ಯ ಅಧ್ಯಕ್ಷಿಣಿಯವರೆ, ಈ ಒಂದು ತಾರತಮ್ಯ ನಾನು ಬಂದಮೇಲೆ ಮಾಡಿದ್ದಲ್ಲ, ಮೊದಲೇ ಇತ್ತು. ನಗರ ಪ್ರದೇಶಗಳಲ್ಲಿ ಕಂಟ್ರೋಲ್‌ನಲ್ಲಿ ಕೊಡುವ ಸಕ್ಕರೆ ಅಥವಾ ಇನ್ನಿತರ ಕಮಾಡಿಟೀಸ್ ಏನಿದೆ ಅದನ್ನು ಸ್ವಲ್ಪ ಜಾಸ್ತಿ ಕೊಡುತ್ತಾರೆ. ಹಳ್ಳಿಗಳಲ್ಲಿ ಫ್ಯೂಯಲ್ ಕಟ್ಟಿಗೆ ಎಲ್ಲಾ ಸಿಕ್ಕುವುದರಿಂದ ಅದನ್ನೇ ಅಡಿಗೆ ಮತ್ತು ಇತರ ಕೆಲಸಕ್ಕೋಸ್ಕರ ಹೆಚ್ಚಾಗಿ ಉಪಯೋಗ ಮಾಡುತ್ತಾರೆ.

ಅದಕ್ಕಾಗಿ ಈ ಒಂದು ತಾರತಮ್ಯ ಮಾಡಿರುತ್ತಾರೆ ಎಂದು ನನ್ನ ಅನಿಸಿಕೆ ಒಂದು ವೇಳೆ ತಮಗೆ ಇದು ಅಸಮರ್ಪಕ ಎಂದು ಕಂಡುಬಂದರೆ ನಮಗೆ ಹೆಚ್ಚು ಖೋಟಾ ಸಿಕ್ಕರೆ, ಈಗ ನಮ್ಮ ರಾಜ್ಯದವರಾಗಿರುವ ಕೇಂದ್ರದ ಪೆಟ್ರೋಲಿಯಂ ಮಂತ್ರಿಗಳನ್ನು ಈಗಾಗಲೇ ಹೆಚ್ಚಿಗೆ ಖೋಟಾ ಕೊಡಬೇಕೆಂದು ಕೇಳಿದ್ದೇನೆ. ಹೆಚ್ಚು ಖೋಟಾ ಬಂದರೆ ಹಳ್ಳಿಯವರಿಗೆ ನಾವು ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಕರಿಯಣ್ಣ : ಅಲ್ಲಿ ಸೌದೆ ಸಿಗುತ್ತದೆ. ಫ್ಯುಯಲ್ ಕನ್ವಿನೆಂಟ್ ಆಗಿ ಇರುತ್ತದೆಯಾದ್ದರಿಂದ ಕಡಿಮೆ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ನಗರಗಳಲ್ಲಿ ಸೌದೆ ಡಿಪೋಗಳನ್ನು ಮಾಡಿರುವುದು. ಹಳ್ಳಿಗಳಲ್ಲಿ ಎಲ್ಲೂ ಸೌದೆ ಡಿಪೊ ಇಲ್ಲ.

ಹಳ್ಳಿಗಳಲ್ಲಿ ಕಾಡಿಗೆ ಹೋಗಿ ಕಟ್ಟಿಗೆ ಕಡಿದುಕೊಂಡು ಬಂದರೆ ಫಾರೆಸ್ಟ್ ಗಾರ್ಡ್‌ನವರು ಹಿಡಿದು ಕೇಸ್ ಹಾಕುತ್ತಾರೆ. ನಗರವಾಸಿಗಳಿಗೆ ಯಾರೂ ಕೇಸ್ ಹಾಕುವುದಿಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಶದವರಿಗೆ ಸೀಮೆಎಣ್ಣೆ ಜಾಸ್ತಿ ಕೊಟ್ಟಿಲ್ಲವೆಂದರೆ ಅವರು ಏನೋ ಪಾಪ ಮಾಡಿದ್ದಾರೆ ಎನ್ನುವ ಭಾವನೆ ಬರುತ್ತದೆ. ಈಗ ಆಹಾರ ಮಂತ್ರಿಗಳು ಇವರು ಇರಬಹುದು, ಹಿಂದೆ ಇದ್ದವರು ಇರಬಹುದು. ಬೇರೆಯವರು ಬರಬಹುದು, ಈಗ ಸರ್ಕಾರ ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡು ಗ್ರಾಮಾಂತರ ಪ್ರದೇಶದವರನ್ನೂ ಸಹ ನಗರಪ್ರದೇಶಗಳ ಜನರಂತೆ ಕಾಣುತ್ತಾರೆಯೇ? ಏಕೆಂದರೆ ಅಲ್ಲಿ ಎಲೆಕ್ಟ್ರಿಸಿಟಿ ಬೆಳಿಗ್ಗೆ 6 ಗಂಟೆಗೆ ಕಟ್ ಮಾಡಿದರೆ ಮದ್ಯಾಹ್ನ 12 ಗಂಟೆಗೆ ಓಪನ್ ಮಾಡುತ್ತಾರೆ. ಆರು ಗಂಟೆಗೆ ಇನ್ನೂ ಕತ್ತಲೆ ಇರುತ್ತದೆ. ಹೀಗಿರುವಾಗ ಅವರಿಗೆ ಸೀಮೆಎಣ್ಣೆಯೂ ಇಲ್ಲವೆಂದರೆ ಹೇಗೆ? ಆದ್ದರಿಂದ ಗ್ರಾಮಾಂತರ ಪ್ರದೇಶಗಳಿಗೆ ಖೋಟಾ ಹೆಚ್ಚು ಬಂದರೆ ಕೊಡುತ್ತೇವೆ ಎಂದು ಹೇಳುವುದನ್ನು ಬಿಟ್ಟು, ಎರಡನ್ನೂ ಒಂದೇ ದೃಷ್ಟಿಯಿಂದ ನೋಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಡುತ್ತೀರಾ ಎಂದು ಮಾನ್ಯ ಆಹಾರ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್ : ನಾನು ಈಗಾಗಲೇ ಹೇಳಿದ ಹಾಗೆ ಹೆಚ್ಚುವರಿ ಖೋಟಾ ಬಂದರೆ ಖಂಡಿತಾ ಹಳ್ಳಿಯವರಿಗೆ ಕೊಡುತ್ತೇವೆ.

ಶ್ರೀ ಕರಿಯಣ್ಣ : ಸೀಮೆಎಣ್ಣೆ ವಿತರಣೆ ಸರಿಯಾಗಿ ಆಗುತ್ತಿಲ್ಲ. ಬೆಳಿಗ್ಗೆ ಹೊತ್ತು ನಾಲ್ಕು ಗಂಟೆಯಿಂದ ಹೆಣ್ಣುಮಕ್ಕಳು ಕ್ಯೂ ನಿಂತಿರುತ್ತಾರೆ. ಇದನ್ನು ಒಂದು ಸರಿಯಾದ ರೀತಿಯಲ್ಲಿ ವಿತರಣೆ ಮಾಡಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್ : ಸದಸ್ಯರು ಬೇರೆ ಪ್ರಶ್ನೆ ಹಾಕಬಹುದು. ಇದು ಭದ್ರಾವತಿಗೆ ಸಂಬಂಧಪಟ್ಟಿದ್ದು

ಶ್ರೀ ಕರಿಯಣ್ಣ : ಹೆಚ್ಚಿಗೆ ಕೋಟಾ ಬಂದರೆ ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ. ಹೆಚ್ಚು ಕೋಟಾ ಬರುವವರೆಗೆ ಗ್ರಾಮಾಂತರ ಪ್ರದೇಶಗಳಿಗೆ ಜನರು ಕಾಯಬೇಕೇ? ಇದು ಇಡೀ ರಾಜ್ಯದ ಪ್ರಶ್ನೆ ಇದೆ. ಕೇವಲ ಒಂದು ಉದಾಹರಣೆಯಾಗಿ ನಾನು ಭದ್ರಾವತಿ ಬಗ್ಗೆ ಪ್ರಶ್ನೆ ಹಾಕಿ ಹೇಳಿದ್ದೆ. ಇಡೀ ಕರ್ನಾಟಕ ರಾಜ್ಯದಲ್ಲಿರುವ ಗ್ರಾಮಾಂತರ ಪ್ರದೇಶಗಳನ್ನು ಸರ್ಕಾರ ಮಲತಾಯಿ ಧೋರಣೆಯನ್ನು ಕಾಣುತ್ತಿದೆ. ಸರ್ಕಾರ ದಯವಿಟ್ಟು ಆಶ್ವಾಸನೆಯನ್ನು ಕೊಟ್ಟು ಎರಡನ್ನೂ ಒಂದೇ ರೀತಿಯಲ್ಲಿ ಕಂಡು ಗ್ರಾಮಾಂತರ ಪ್ರದೇಶದವರಿಗೆ ಅನುಕೂಲ ಒದಗಿಸಿಕೊಡುತ್ತೇವೆ ಎಂದು ಹೇಳುತ್ತೀರಾ? ಅವರಿಗೆ ಸಕ್ಕರೆಯನ್ನೂ ಕೊಡುತ್ತಿಲ್ಲ. ಕಬ್ಬು ಬೆಳೆಯುವುದು ಹಳ್ಳಿಗಳಲ್ಲಿ. ಆದರೂ ಅವರಿಗೆ ಸಕ್ಕರೆ ಕೊಡುವುದಿಲ್ಲ. ಆದ್ದರಿಂದ ಸೀಮೆಣ್ಣೆ ಮತ್ತು ಸಕ್ಕರೆಯನ್ನು ಗ್ರಾಮಾಂತರ ಪ್ರದೇಶದ ಜನರಿಗೆ ಕೊಡುವುದಿಲ್ಲ ಎಂದರೆ ಹೇಗೆ? ಅದೂ ಕೂಡ ಬಹಳ ಕಡಿಮೆ ಕೊಟ್ಟಿದ್ದೀರಿ.

ಶ್ರೀಮತಿ ಮನೋರಮಾ ಮಧ್ವರಾಜ್ : ಈಗ ನಾವು ಒಂದೇ ಒಂದು ಉಪಾಯ ಮಾಡೋಣ. ಅದೇನೆಂದರೆ ಪಟ್ಟಣಗಳಲ್ಲಿ ಗ್ಯಾಸ್ ಸಿಲಿಂಡರ್ ಯಾರು ಉಪಯೋಗ ಮಾಡುತ್ತಾರೆ, ಅವರಿಗೆ ಸೀಮೆಣ್ಣೆ ಕೊಡುವುದನ್ನು ಕಟ್ ಮಾಡಿ ಹಳ್ಳಿಯವರಿಗೆ ಕೊಡುವ ಯೋಚನೆ ಮಾಡಬಹುದು.

ಬೆಳಗಾವಿಯಲ್ಲಿ ತಾಂತ್ರಿಕ ವಿಶ್ವವಿದ್ಯಾನಿಲಯದ ಸ್ಥಾಪನೆ

381 - ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿಯಲ್ಲಿ ತಾಂತ್ರಿಕ ವಿಶ್ವವಿದ್ಯಾನಿಲಯ ಪ್ರಾರಂಭಿಸುವ ಬಗ್ಗೆ ಸರ್ಕಾರದವರು ನಿರ್ಣಯ ತೆಗೆದುಕೊಂಡ ಸಂಗತಿ ನಿಜವೆ?

ಆ) ಹಾಗಿದ್ದಲ್ಲಿ ತಾಂತ್ರಿಕ ವಿಶ್ವವಿದ್ಯಾನಿಲಯ ಪ್ರಾರಂಭಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಇ) ಈಗ ಆ ವಿಶ್ವವಿದ್ಯಾನಿಲಯ ಪ್ರಾರಂಭವು ಯಾವ ಹಂತದಲ್ಲಿರುವುದು? ಇದಕ್ಕೆ ಎಷ್ಟು ಹಣ ಬೇಕಾಗುವುದು? ಮತ್ತು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಹೌದು.

ಆ) ಶ್ರೀ ಬಾಳಿಕುಂದ್ರಿಯವರ ಅಧ್ಯಕ್ಷತೆಯಲ್ಲಿ ಈ ಬಗ್ಗೆ ಏಕ ಸದಸ್ಯರ ಆಯೋಗ ರಚನೆ ಮಾಡಿದ್ದು, ಆರ್ಥಿಕ ಸಂಪನ್ಮೂಲದ ಕೊರತೆಯನ್ನು ಪರಿಗಣಿಸಿ ಸದ್ಯಕ್ಕೆ ಈ ಪ್ರಸ್ತಾವನೆಯನ್ನು ಸ್ಥಗಿತಗೊಳಿಸಲು ಸರ್ಕಾರ ನಿರ್ಣಯ ಕೈಗೊಂಡಿದೆ.

ಇ) ಆ ಪ್ರಶ್ನೆಯ ಉತ್ತರದನ್ವಯ

i) ಉದ್ಭವಿಸುವುದಿಲ್ಲ.

ii) ಏಕ ಸದಸ್ಯರ ಆಯೋಗವು ನೀಡಿರುವ ಮಾಹಿತಿಯನ್ವಯ ಮೊದಲ 8 ವರ್ಷಗಳಿಗೆ ಸುಮಾರು ರೂ. 22.15 ಕೋಟಿ ಹಣದ ಅವಶ್ಯವಿದೆ.

iii) ಉದ್ಭವಿಸುವುದಿಲ್ಲ.

ಶ್ರೀ ಶಿವಾನಂದ ಎಚ್. ಕೌಜಲಗಿ : ಬೆಳಗಾವಿಯಲ್ಲಿ ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಪ್ರಾಂಭಿಸುವುದಾಗಿ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ಆಶ್ವಾಸನೆ ಇತ್ತು. ಈ ಸಂಬಂಧವಾಗಿ ಇರುವ ಬಾಳೆಕುಂದ್ರಿ ಸಮಿತಿಯ ವರದಿ ಏನು ಮತ್ತು ಅವರು ಏನು ಶಿಫಾರಸ್ಸುಗಳನ್ನು ಮಾಡಿದ್ದಾರೆ? ಆಮೇಲೆ Whether the government has accepted the Balekundri Committee's recommedations? ಇದಲ್ಲದೆ ಇನ್ನೆಷ್ಟು ದಿವಸಗಳಲ್ಲಿ ತಾವು ಯೂನಿವರ್ಸಿಟಿಯ ಕೆಲಸ ಪ್ರಾರಂಭ ಮಾಡುತ್ತೀರಿ ಎಂದು ನಾನು ಕೇಳುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್ : ಶ್ರೀ ಎಚ್.ವಿ. ಬಾಳೇಕುಂದ್ರಿಯವರ ನೇತೃತ್ವದಲ್ಲಿ 1989ರಲ್ಲಿ ಒಂದು ಕಮಿಷನ್ ನೇಮಕವಾಗಿ ಅವರು ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ಸುಮಾರು 22.15 ಕೋಟಿ ರೂಪಾಯಿಗಳು ಮೊದಲ ಎಂಟು ವರ್ಷಗಳಿಗೆ ಖರ್ಚಾಗುತ್ತವೆ ಎಂಬ ಮಾತನ್ನು ಹೇಳಿದ್ದಾರೆ. ಇನ್ನು ಎರಡು ಕೋಟಿ ರೂಪಾಯಿಗಳಷ್ಟು ರೆಕರಿಂಗ್ ಎಕ್ಸಪೆಂಡಿಚರ್ ಆಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಮತ್ತೆ ಇದರ ವ್ಯಾಪ್ತಿಯೊಳಗೆ ತಮಗೆ ಗೊತ್ತಿರುವ ಹಾಗೆ ಸುಮಾರು 51 ಇಂಜಿನಿಯರಿಂಗ್ ಕಾಲೇಜುಗಳು ಬರುತ್ತವೆ. ಅವರು ಒಂದು

ಅಂಶವನ್ನು ಪ್ರಸ್ತಾಪ ಮಾಡಿದ್ದಾರೆ. Unitary type of University as other technical universities ಎನ್ನುವ ಒಂದು ಮಾತನ್ನು ಅಂದಿದ್ದಾರೆ.

ಈಗಾಗಲೇ ನಾವು ಸಾಕಷ್ಟು ಯುನಿವರ್ಸಿಟಿಗಳನ್ನು ಮಾಡಿದ್ದೇವೆ. ನಮಗೆ ಎಷ್ಟು ಬೇಕೋ ಅದಕ್ಕಿಂತ ಜಾಸ್ತಿಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಹೀಗಾಗಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಮಾಧ್ಯಮಿಕ ವಿಧ್ಯಾಭ್ಯಾಸಕ್ಕೆ ಮತ್ತು ಪದವಿ ಪೂರ್ವ ವಿದ್ಯಾಭ್ಯಾಸಕ್ಕೆ ನಾವು ಆದ್ಯತೆ ಕೊಡಬೇಕು. ನಮ್ಮ ಗ್ರಾಂಟ್-ಇನ್‌ಎಯಿಡ್ಸ್ ಏನು ಕೊಡಬೇಕೋ ಅದನ್ನು ಕೂಡ ಕೊಡದೇ ಸರ್ಕಾರ ಇರುವುದರಿಂದ ಇದಕ್ಕೆ ಮೊದಲು ಆದ್ಯತೆ ಕೊಡಬೇಕೆಂದು ಸರ್ಕಾರ ವಿಚಾರ ಮಾಡಿ ಸಧ್ಯಕ್ಕೆ ಟೆಕ್ನಿಕಲ್ ಯೂನಿವರ್ಸಿಟಿಗೆ ಆದ್ಯತೆ ಕಡಿಮೆ ಕೊಡತಕ್ಕಂತ ವಿಚಾರ ಸರ್ಕಾರ ಮಾಡಿದೆ, ಆದರೆ ತಾತ್ವಿಕವಾಗಿ ಈ ವಿಚಾರವನ್ನು ಸರ್ಕಾರ ಒಪ್ಪಿಕೊಂಡಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಬೆಳಗಾವಿ ಕರ್ನಾಟಕದ ಗಡಿನಾಡಿನ ಪ್ರದೇಶದಲ್ಲಿದೆ. ಗಡಿನಾಡು ಪ್ರದೇಶದಲ್ಲಿ ಒಂದು ಒಳ್ಳೆಯ ಇನ್ಸ್‌ಟಿಟ್ಯೂಷನ್ ಬರಬೇಕೆಂಬ ಉದ್ದೇಶದಿಂದ ಸರ್ಕಾರದವರು ಇಲ್ಲಿ ಒಂದು ಯೂನಿವರ್ಸಿಟಿ ಪ್ರಾರಂಭ ಮಾಡಲಿಕ್ಕೆ ಒಪ್ಪಿಕೊಂಡಿದ್ದಾರೆ. ಎಂಟು ವರ್ಷಗಳಲ್ಲಿ 22 ಕೋಟಿ ರೂಪಾಯಿ ಎಕ್ಸ್‌ಪೆಂಡಿಚರ್ ಬರುತ್ತದೆ ಎಂದು ತಾವು ಹೇಳಿದ್ದೀರಿ. ಪ್ರತಿ ವರ್ಷ ಎರಡು ಕೋಟಿ ರೂಪಾಯಿಗಳ ರೆಕರಿಂಗ್ ಎಕ್ಸ್‌ಪೆಂಡಿಚರ್ ಬರುತ್ತದೆಂದು ತಾವು ಹೇಳಿದ್ದೀರಿ. ಇದನ್ನು ನಾನು ಒಪ್ಪುತ್ತೇನೆ. ಆದರೆ ಈ ಎಕ್ಸ್‌ಪೆಂಡಿಚರ್ ಒಮ್ಮೆಗೆ ಬರುವುದಿಲ್ಲ. ಇದಕ್ಕೆ ೫೦-೫೫ ಇಂಜಿನಿಯರಿಂಗ್ ಕಾಲೇಜುಗಳು ಬರುತ್ತವೆ. ಪ್ರತಿಯೊಂದು ಇಂಜಿನಿಯರಿಂಗ್ ಕಾಲೇಜನಿಂದ ಐದು ಲಕ್ಷ ರೂಪಾಯಿ ತೆಗೆದುಕೊಂಡರೂ ಎರಡೂವರೆ ಕೋಟಿ ರೂಪಾಯಿ ಅಮೌಂಟ್ ಬರುತ್ತದೆ. ಈ ಅಮೌಂಟ್ ತೆಗೆದುಕೊಂಡು ಮೊದಲನೆಯ ವರ್ಷದ ಎಕ್ಸ್‌ಪೆಂಡಿಚರ್ ಮಾಡಿಕೊಂಡು ಈ ಯೂನಿವರ್ಸಿಟಿಯನ್ನು ಸರ್ಕಾರ ಸ್ಥಾಪನೆ ಮಾಡಲಿ. ಇದಕ್ಕೆ ಯುಜಿಸಿಯಿಂದ ಕೂಡ ರೊಕ್ಕ ಬರುತ್ತದೆ. ತಾವು ಅದನ್ನು ಮಾಡುತ್ತೀರಾ? ಎರಡನೆಯದಾಗಿ ಯೂನಿವರ್ಸಿಟಿ ಹೆಚ್ಚಾಗಿದೆ ಎಂದು ತಾವು ಹೇಳಿದ್ದೀರಿ. ಮಹಾರಾಷ್ಟ್ರದಲ್ಲಿ ತಾವು ಹೋಗಿ ನೋಡಿ. ಅಲ್ಲಿ ಪ್ರತಿಯೊಂದು 20-30 ಕಾಲೇಜುಗಳಿಗೆ ಒಂದೊಂದು ಯೂನಿವರ್ಸಿಟಿ ಇದೆ. ಇದಕ್ಕೆ ಯುಜಿಸಿಯಿಂದ ರೊಕ್ಕ ಹೆಚ್ಚು ಕೊಡುತ್ತಾರೆ. ಆ ಪ್ರಕಾರ ಸರ್ಕಾರ ಇದನ್ನು ಮಾಡುತದಯೇ ಎಂದು ಕೇಳುತ್ತೇನೆ. ತಾವು ಇದನ್ನು ಡೆಫರ್ ಮಾಡುವುದರಿಂದ ಉತ್ತರ ಕರ್ನಾಟಕದ ಜನತೆಗೆ ಅನ್ಯಾಯಮಾಡಿದಂತೆ ಆಗುವುದಿಲ್ಲವೇ ಎಂದು ನಾನು ಮತ್ತೊಮ್ಮೆ ಕೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ದಯವಿಟ್ಟು ಮಾನ್ಯ ಸದಸ್ಯರು ಉತ್ತರ ಕರ್ನಾಟಕ ದಕ್ಷಿಣ ಕರ್ನಾಟಕ ಎಂಬ ಮಾತನ್ನು ನಿಲ್ಲಿಸಿ ಬಿಡಬೇಕು. ಕರ್ನಾಟಕ ಒಂದಾಗಿ ಬಹಳ ದಿವಸಗಳು ಆಯಿತು. ನಾವೂ ಸಹ ಕರ್ನಾಟಕ ಒಂದಾಗಬೇಕೆಂದು ಸ್ವಲ್ಪ ಸಣ್ಣ ಪುಟ್ಟ ಶ್ರಮವನ್ನು ಮಾಡಿದ್ದೇವೆ. ನಾನು ಅದರಲ್ಲಿ ಇದ್ದೇನೆ. ದಯವಿಟ್ಟು ತಾವು ಆ ಮಾತನಾಡಬೇಡಿ. ಮತ್ತೆ ಪ್ರಶ್ನೆ ಏನೆಂದರೆ ಬೆಳಗಾಂ ಅಭಿವೃದ್ಧಿ ಆಗಬಾರದೆಂದು ನಮಗೇನೂ ಇಲ್ಲ, ಬೆಳಗಾಂ ಅತಿ ಜಾಗ್ರತೆಯಾಗಿ ಅಭಿವೃದ್ಧಿ ಆಗಬೇಕಾಗುತ್ತದೆ. ಬೆಳಗಾಂ ಅಭಿವೃದ್ಧಿ ಆಗದೆ ಹೋದರೆ ಅಲ್ಲಿ ಏನು ತೊಂದರೆ ಇದೆ ಎಂಬುದು ನಮಗೆ ಗೊತ್ತಾಗಿದೆ. ಮಹಾಜನ ರಿಪೋರ್ಟ್

ಪ್ರಕಾರ ಕರ್ನಾಟಕದ ಗಡಿ ಹಿಂಡಲಗದ ಹತ್ತಿರ ಬಂದುಬಿಡುತ್ತದೆ. ನಿಪ್ಪಾಣಿ ಹತ್ತಿರ ಇದ್ದದ್ದು ಇನ್ನು ಮುಂದಕ್ಕೆ ಹೋಗುತ್ತದೆ. ಇಂತಹ ಪರಿಸ್ಥಿತಿಗೆ ನಾವು ಒಳಗಾಗಿದ್ದೇವೆ. ಈಗಾಗಲೇ ಕರ್ನಾಟಕ ಯೂನಿವರ್ಸಿಟಿಯ ಪೋಸ್ಟ್ ಗ್ರಾಜುಯೇಟ್ ಸೆಂಟರ್ ಬೆಳಗಾಂನಲ್ಲಿ ಇದೆ. ಇದು ತಮಗೆ ಗೊತ್ತಿದೆ. ನಾನೇ ಹೋಗಿ ಪ್ರಾರಂಭ ಮಾಡಿ ಬಂದಿದ್ದೇನೆ. ಅದು ಇನ್ನೂ ಬೆಳೆಯಬೇಕಾಗುತ್ತದೆ. ಇವತ್ತು ಟೆಕ್ನಿಕಲ್ ಎಜುಕೇಷನ್ ಇಂಪ್ರೂವ್ ಆಗಬೇಕೆಂದು ತಾತ್ವಿಕವಾಗಿ, ಈ ಯೂನಿವರ್ಸಿಟಿ ಆಗಬೇಕೆಂದು ಸರ್ಕಾರ ಒಪ್ಪಿದೆ. ಬೆಳಗಾಂನಲ್ಲಿಯೇ ಆಗಬೇಕೆಂದು ಸರ್ಕಾರ ಒಪ್ಪಿದೆ. ಪ್ರಶ್ನೆ ಏನೆಂದರೆ ಯಾವಾಗ ಏನು ಎಂಬುದು ಮಾತ್ರ. ನಮಗೆ ಈಗ ಹದಿನಾರು ಸಾವಿರ ಪ್ರಾಥಮಿಕ ಉಪಾಧ್ಯಾಯರು ಬೇಕಾಗಿದ್ದಾರೆ. ಮಾಧ್ಯಮಿಕ ಉಪಾಧ್ಯಾಯರು ಬೇಕಾಗಿದ್ದಾರೆ. ಪಿಯುಸಿ ಕಾಲೇಜುಗಳಲ್ಲಿ ಏಳು ಎಂಟು ಸಾವಿರ ವೇಕೆನ್ಸಿಗಳು ಇವೆ. ಫಸ್ಟ್ ಗ್ರೇಡ್ ಕಾಲೇಜ್‌ಗಳಲ್ಲಿ ಲೆಕ್ಚರರ್ಸ್ ಇಲ್ಲ. ಲೆಕ್ಚರರ್ಸ್ ಎಲ್ಲಿದ್ದಾರೆ? ಕಟ್ಟಡ ಎಲ್ಲಿದೆ? ಲ್ಯಾಬೊರೇಟರಿಗಳು ಎಲ್ಲಿವೆ? ಇದೆಲ್ಲಾ ಇಲ್ಲದಿರುವಾಗ ನಾವು ಯೂನಿವರ್ಸಿಟಿ, ಯೂನಿವರ್ಸಿಟಿ ಎಂದು ಹೊರಟರೆ ಏನಾಗುತ್ತದೆ. ಈ ದೃಷ್ಟಿಯಿಂದ ಇವತ್ತು ಸರ್ಕಾರ ಇದನ್ನು ತಾತ್ವಿಕವಾಗಿ ಒಪ್ಪಿದೆ ಸ್ವಲ್ಪ ಮುಂದಕ್ಕೆ ಹಾಕಬೇಕಾಗುತ್ತದೆ. ಆರ್ಥಿಕ ಪರಿಸ್ಥಿತಿ ಸುಧಾರಣೆ ಆದತಕ್ಷಣ ಇದನ್ನು ತೆಗೆದುಕೊಳ್ಳಬೇಕೆಂದು ಇದೆ. Under the circumstances, the establishment of technical university takes a lesser priority. Government has also committed itself to give priority to elementary and adult education to remove illiteracy in the State.

ಉತ್ತರ ಕರ್ನಾಟಕಕ್ಕೆ ಅನ್ಯಾಯ ಮಾಡಬೇಕು, ಬೆಳಗಾಂಗೆ ಅನ್ಯಾಯ ಮಾಡಬೇಕೆಂಬ ದೃಷ್ಟಿಯಿಂದ ಅಲ್ಲ. ತಾವು ದಯವಿಟ್ಟು ತಮ್ಮ ಮನಸ್ಸಿನಿಂದ ಇದನ್ನು ತೆಗೆದುಹಾಕಿಬಿಡಿ. ಇನ್ನು ಕೂಡ ತಾವು ಉತರ ಕರ್ನಾಟಕ ಎಂದು ಹೇಳಿದರೆ ಹೇಗೆ?

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ ಫೈನಾನ್ಸಿಯಲ್ ಪೊಸಿಷನ್ ಯಾವಾಗ ಇಂಪ್ರೂವ್ ಆಗಬಹುದು? ಯಾವಾಗ ತೆಗೆದುಕೊಳ್ಳುತ್ತೀರಿ, ಅದನ್ನಾದರೂ ಹೇಳಿ.

ಶ್ರೀ ಕೆ.ಹೆಚ್. ರಂಗನಾಥ್ : ಅದನ್ನು ನಾನು ಹೇಳಬೇಕೆ?

ಶ್ರೀ ಕೆ.ಹೆಚ್. ಕೌಜಲಗಿ : ನಾವು ಬಂಗಾರಪ್ಪನಂಥವರನ್ನು ಮುಖ್ಯ ಮಂತ್ರಿಗಳಾಗಿ ಪಡೆದಾಗ ನಮ್ಮ ಫೈನಾನ್ಸ್ ಪ್ರಾಬ್ಲಮ್ ಚಲೋ ಆಗಬಹುದೇ ನೀವೆ ಹೇಳಿ.

ಶ್ರೀ ಕೆ.ಹೆಚ್. ರಂಗನಾಥ್ : ಏನು ಇಷ್ಟು ನಮ್ಮ ಮುಂದೆ ಇದೆಯೋ ಅದರ ಬಗ್ಗೆ ಮಾತಾಡೋಣ ಬಾಕಿ ಮಾತಾಡುವುದು ನಮಗೆ ಏಕೆ. ಮತ್ತೊಂದದು ಪ್ರಶ್ನೆ ತಾವು ಹೇಳಿದ್ದೀರಿ. 51 ಕಾಲೇಜಿನಿಂದ 5.5 ಲಕ್ಷ ರೂಪಾಯಿ ವಸೂಲು ಮಾಡಿಕೊಂಡು ಬಿಟ್ಟರೆ ಆಗುತ್ತದೆ ಎಂದು ಆ ತತ್ವವನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ ಸರ್ಕಾರ ಯುನಿವರ್ಸಿಟಿಯನ್ನು ನೀವೇ ಮಾಡಿಕೊಳ್ಳಿ ಎಂದು ಹೇಳಿ ಅವರಿಗೆ ಕೊಡತಕ್ಕಂಥ ತತ್ವವನ್ನೂ ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರ ಪ್ರಶ್ನೆಯನ್ನು ತಾತ್ವಿಕವಾಗಿ ಸರ್ಕಾರ ಒಪ್ಪಿಕೊಂಡಿದೆ ಸರ್ಕಾರ ಅದನ್ನು ಮಾಡುತ್ತದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಅಧ್ಯಾಪಕರು ಇಲ್ಲ, ಬಿಲ್ಡಿಂಗ್ ಇಲ್ಲ ಅದು ನಮ್ಮ ತಪ್ಪು ಅಲ್ಲ, ಹೌಸ್‌ನಲ್ಲಿ ಟೆಕ್ನಿಕಲ್ ಎಜುಕೇಷನ್ ಯುನಿವರ್ಸಿಟಿ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟನಂತರ ಆಶ್ವಾಸನೆ ಈಡೇರಿಸುವುದು ಸರ್ಕಾರದ ಕರ್ತವ್ಯ ಅಂತ ನಾನು ಹೇಳುತ್ತೇನೆ. ಈಗ ಪ್ರೈಮರಿ ಸ್ಕೂಲ್ ಟೀಚರ್ಸ್ ಇಲ್ಲ ಅದು ಇಲ್ಲ ಇದು ಇಲ್ಲ, ಎಂದು ನಮ್ಮನ್ನು ಕೇಳುತ್ತೀರಿ.

ಶ್ರೀ ಕೆ.ಹೆಚ್. ರಂಗನಾಥ್ : ಕೌಜಲಗಿ ಅವರನ್ನು, ದೇಶಪಾಂಡೆಯವರನ್ನು ಏಕೆ ಕೇಳುತ್ತಿದ್ದೇವೆ ಎಂದರೆ ಅವರೂ ಒಂದು 7 ವರ್ಷ ಈ ರಾಜ್ಯದ ಹೋಣೆ ಹೊತ್ತಿದ್ದರೊ ಅದಕ್ಕೋಸ್ಕರ ಕೇಳಿದೆ ಅಷ್ಟೆ.

ಶ್ರೀ ಎಸ್.ಎಚ್. ಕೌಜಲಗಿ : ಎರಡು ವರ್ಷಗಳ ಸಾಧನೆ ಸಮಾರಂಭ ಮಾಡುವುದಕ್ಕೆ ರೋಕ್ಕ ಬರುತ್ತದೆ ಇಂತಹ ಒಳ್ಳೆಯ ಕೆಲಸಕ್ಕೆ ರೊಕ್ಕ ಬರುವುದಿಲ್ಲ ಎಂದರೆ ಹೇಗೆ?

ಬಸವಕಲ್ಯಾಣ ತಾಲ್ಲೂಕಿನಲ್ಲಿರುವ ಗ್ರಾಮಗಳಲ್ಲಿ ಬಸ್‌ನಿಲ್ದಾಣ ಪ್ರಾರಂಭ

838 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ತಾಲ್ಲೂಕಿನ ರಾಜನೂರು ಮಂಠಾಳ ಗ್ರಾಮಗಳ ಜನಸಂಖ್ಯೆ, 25 ಸಾವಿರ ಇದ್ದು ಸದರೀ ಗ್ರಾಮಗಳಲ್ಲಿ ಬಸ್ ನಿಲ್ದಾಣ ಇಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದಲ್ಲಿ ಬಸ್‌ನಿಲ್ದಾಣಗಳ ಸ್ಥಾಪನೆಗೆ ಸರ್ಕಾರವು ಕೈಗೊಂಡ ಕ್ರಮವೇನು ಹಾಗೂ ಕ್ರಮ ಕೈಗೊಳ್ಳದಿದ್ದರೆ ಕಾರಣವೇನು?

ಇ) ಸದರಿ ಗ್ರಾಮಗಳಲ್ಲಿ ಬಸ್ ನಿಲ್ದಾಣಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಸವರಾಜ್ ಪಾಟಿಲ್ ಅಟ್ಟೂರ್ : ಸನ್ಮಾನ್ಯ ಅಧ್ಯಕ್ಷಣಿಯವರೇ ನಾನು ನನ್ನ ಮತಕ್ಷೇತ್ರದ ಹಳ್ಳಿಗಳಾದ ಮಂಟಾಳ್ ಮತ್ತು ರಾಜನೂರು, ಇವು ಬಸವಕಲ್ಯಾಣ ತಾಲ್ಲೂಕಿನ ಅತಿ ದೊಡ್ಡ ಗ್ರಾಮಗಳಾಗಿದ್ದು ವ್ಯಾಪಾರ ಕೇಂದ್ರಗಳು ಆಗಿವೆ. ಬಹಳ ಸಲ ಅಲ್ಲಿ ಬಸ್ ಸ್ಟ್ಯಾಂಡ್ ಆಗಬೇಕೆಂದು ಸಣ್ಣ ಪ್ರಮಾಣದಲ್ಲಿ ಆಗಬೇಕೆನ್ನುವ ಅಭಿಪ್ರಾಯದಿಂದ ಅಲ್ಲಿಯ ಜನರು ಬಹಳಷ್ಟು ಸಾರಿ ಪ್ರಯತ್ನ ಪಟ್ಟಿರು ಆಗಿಲ್ಲ. ಈ ಎಲ್.ಎ. ಕೊಶ್ಚನ್ ಮುಖಾಂತರವಾಗಿ ಕೇಳಿದರೆ ಸರ್ಕಾರದವರು ಏನಾದರೂ, ನಮ್ಮವರೆ ಮಿನಿಸ್ಟರ್ ಆಗಿದ್ದಾರೆ ನಮ್ಮ ಭಾಗದವರು ಇದ್ದಾರೆ ಇದರ ಬಗ್ಗೆ ಏನಾದರೂ ಪರಿಹಾರ ನೀಡಬಹುದು ಎಂದು ಕೇಳಿದ್ದೇನೆ. ಆದರೆ ಪ್ರಶ್ನೆ ಮುಖಾಂತರವಾಗಿ ನಿರ್ದಿಷ್ಟವಾಗಿ ಮಾಡುತ್ತೇವೆಂದು ಹೇಳಿಲ್ಲ. ಅವು ದೊಡ್ಡ ಗ್ರಾಮಗಳೇ ಆಗಿವೆ, ಮಳೆಗಾಲದಲ್ಲಿ ಮಳೆ ಬರುವಂತಹ ಸಂದರ್ಭದಲ್ಲಿ ನಿಂತು ಕೊಳ್ಳಲು ತೊಂದರೆಯಾಗುತ್ತಿದೆ. ಬೇಸಿಗೆಯಲ್ಲಿ ತೊಂದರೆ ಆಗುತ್ತಿದೆ. 20-25 ಸಾವಿರ ಜನಸಂಖ್ಯೆ ಹೊಂದಿರತಕ್ಕ ದೊಡ್ಡ ಪಟ್ಟಣ ಇದ್ದು ಸದರಿ

ಪಟ್ಟಣಗಳಿಗೆ ಬಸ್ ಸ್ಟಾಂಡ್‌ನ ಅವಶ್ಯಕತೆ ಇದೆ. ಅದರ ಸಲುವಾಗಿ ನಾನು ತಮಗೆ ಒತ್ತಾಯಪೂರ್ವಕವಾಗಿ ಕೇಳುವುದು ಏನೆಂದರೆ ಅತೀ ಶೀಘ್ರವಾಗಿ ಈ ಎರಡು ಗ್ರಾಮಗಳಿಗೆ ತಾವು ಬಸ್ ಸ್ಟೇಷನ್ ಮಾಡುತ್ತೀರೋ ಹೇಗೆ ಎನ್ನುವುದರ ಬಗ್ಗೆ ನಿರ್ದಿಷ್ಟವಾಗಿ ತಮ್ಮ ಅಭಿಪ್ರಾಯ ಹೇಳಬೇಕು.

ಶ್ರೀ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ ಸದಸ್ಯರು ಕೇಳಿದ ರಾಜನೂರು ಮತ್ತು ಮಂಟಳ ಗ್ರಾಮಗಳಲ್ಲಿ ಜನಸಂಖ್ಯೆ 25 ಸಾವಿರ ಇಲ್ಲ. ಅದರೆ ಜನಸಂಖ್ಯೆ 10 ಸಾವಿರ, 7 ಸಾವಿರ ಸಣ್ಣದಾದಂತ ವಿಲೇಜ್ ಅದಕ್ಕೆ ಬಸ್ ಸ್ಟ್ಯಾಂಡ್ ಬೇಕೆಂದು ಕೇಳಿದಿರಿ ಬಸ್ ಸ್ಟ್ಯಾಂಡ್ ಅವಶ್ಯ ಇಲ್ಲ 2 ಶೆಲ್ಟರ್ ಕೊಟ್ಟಿದ್ದೇವೆ. ಜಿಲ್ಲಾ ಪರಿಷತ್ ಕಡೆಯಿಂದ ಕಟ್ಟಿಸಿದ್ದೇವೆ. ರಾಜನೂರು ಮಂಟಾಳ್‌ದಲ್ಲಿ ಇದು ನ್ಯಾಷನಲ್ ಹೈವೆ ಇದು ಕಾರಣ ಎಷ್ಟೋ ಬಸ್ಸು ಬರುತ್ತವೆ ಹೋಗುತ್ತದೆ. ಅವರಿಗೆ ನಿಲ್ಲಲು ಜಾಗ ಇದೆ. ತಮಗೂ ಗೊತ್ತು ಅದಕ್ಕೆ ಹಿಂದುಳಿದ ಎಷ್ಟೊ ವಿಲೇಜ್ ಬಸ್ ಸ್ಟ್ಯಾಂಡ್ ಇಲ್ಲ. ಮುಂದೆ ಮಾಡೋಣ ಈಗ ಅವಶ್ಯಕತೆ ಇಲ್ಲ.

ಹಿರೇಕೆರೂರು ರಸ್ತೆ ಸಾರಿಗೆ ಘಟಕದಲ್ಲಿರುವ ಬಸ್‌ಗಳ ಸಂಖ್ಯೆ.

354 - ಶ್ರೀ ಬಿ.ಎಚ್. ಬನ್ನಿಕೋಡ್ (ಹೀರೇಕೆರೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಎಸ್.ಆರ್.ಟಿ.ಸಿ. ಹೀರೇಕೆರೂರು ಘಟಕದಲ್ಲಿ ಇರುವ ಒಟ್ಟು ಬಸ್ಸುಗಳ ಸಂಖ್ಯೆ ಎಷ್ಟು? ಅವುಗಳಲ್ಲಿ (6) ಲಕ್ಷ ಕಿ.ಮೀ.ಗಿಂತ ಹೆಚ್ಚು ಓಡಿರುವ ಬಸ್ಸುಗಳ ಸಂಖ್ಯೆ ಎಷ್ಟು? ಎಷ್ಟು ಕಿ.ಮೀ. ಓಡಿದ ನಂತರ ಹಳೆ ಬಸ್ಸುಗಳನ್ನು ಬದಲಾಯಿಸಿ ಹೊಸ ಬಸ್ಸುಗಳನ್ನು ಬದಲಾಯಿಸಿ ಹೊಸ ಬಸ್ಸುಗಳನ್ನು ಅಳವಡಿಸುವ ನೀತಿ ಇದೆ?

ಆ) 1992-93ನೇ ಸಾಲಿನಲ್ಲಿ ಹಿರೇಕೆರೂರು ಘಟಕಕ್ಕೆ ಎಷ್ಟು ಹೊಸ ಬಸ್ಸುಗಳನ್ನು ಒದಗಿಸಲಾಗಿದೆ?

ಇ) ಇನ್ನೂ ಎಷ್ಟು ಹಳೆ ಬಸ್ಸುಗಳನ್ನು ಬದಲಾಯಿಸಿ ಹೊಸ ಬಸ್ಸುಗಳನ್ನು ಪೂರೈಕೆ ಮಾಡುವ ಅವಶ್ಯಕತೆ ಇದೆ, ಈ ಬಗ್ಗೆ ತೆಗೆದುಕೊಂಡ ಹಾಗೂ ತೆಗೆದುಕೊಳ್ಳುವ ಕ್ರಮಗಳೇನು?

ಈ) ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಹಿರೇಕೆರೂರು ತಾಲ್ಲೂಕಿನಲ್ಲಿ ಸಮಯಕ್ಕೆ ಸರಿಯಾಗಿ ಸಂಚರಿಸದೆ ಇರುವುದರಿಂದ ಮತ್ತು ಆವಶ್ಯಕತೆಗೆ ಅನುಗುಣವಾಗಿ ಸಾಕಷ್ಟು ಬಸ್ಸುಗಳು ಸಂಚರಿಸದೆ ಇರುವುದರಿಂದ ಜನತೆ ಮೇಲಿಂದ ಮೇಲೆ ಬಸ್ಸುಗಳನ್ನು ತಡೆಯುವ ಸತ್ಯಾಗ್ರಹಗಳನ್ನು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಈ ಬಗ್ಗೆ ಸುವ್ಯವಸ್ಥಿತ ಹಾಗೂ ಸಾಕಷ್ಟು ಬಸ್ಸುಗಳನ್ನು ಸಕಾಲದಲ್ಲಿ ಸಂಚರಿಸಲು ಕೈಗೊಂಡ ಹಾಗೂ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) 1) ಹೀರೇಕೆರೂರ್ ಡಿಪೋದಲ್ಲಿ 109 ವಾಹನಗಳಿರುತ್ತದೆ.

2) 43 ವಾಹನಗಳು 6 ಲಕ್ಷ ಕಿ.ಮೀ.ಗಿಂತ ಹೆಚ್ಚು ಕ್ರಮಿಸಿರುತ್ತದೆ.

3) 7 ಲಕ್ಷ ಕಿ.ಮೀ.ಗಿಂತ ಹೆಚ್ಚಾಗಿ ಕ್ರಮಿಸಿದ ವಾಹನಗಳನ್ನು ಪರೀಕ್ಷಿಸಿ ಸದರಿ ವಾಹನಗಳನ್ನು ರದ್ದತಿ ಮಾಡಲು ಅನುಮತಿಯನ್ನು ಕೊಡಲಾಗಿದೆ.

ಆ) 1992-93 ನವೆಂಬರ್‌ವರವಿಗೆ 11 ಹೊಸ ವಾಹನಗಳನ್ನು ಹಿರೇಕೆರೂರ್ ಡಿಪೋಗೆ ಕೊಡಲಾಗಿದೆ.

ಇ) 3 ವಾಹನಗಳು 7 ಲಕ್ಷ ಕಿ.ಮೀ.ಗಳಿಗಿಂತ ಹೆಚ್ಚಿಗೆ ಕ್ರಮಿಸಿದ್ದು ಅವುಗಳ ಫಿಸಿಕಲ್ ಪರೀಕ್ಷೆ ಮಾಡಿ ಬದಲಾವಣೆಗಿರಿಸಿದೆ.

ಈ) ಹೌದು.

ಉ) ಕೆಲಸಕ್ಕೆ ಹಾಜರಾಗದ ಸಿಬ್ಬಂದಿ ಮೇಲೆ ಶಿಸ್ತಿನ ಕ್ರಮ, ಹೆಚ್ಚಿನ ಬಸ್ಸುಗಳ ಪೂರೈಕೆ, ಅದಕ್ಷ ಮೇಲ್ವಿಚಾರಕ ಅಧಿಕಾರಿಗಳ ಮೇಲೆ ಕ್ರಮ ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಗುವುದು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಉಪಾಧ್ಯಕ್ಷರೆ, ಹಿರೇಕೆರೂರಿನಲ್ಲಿ ಇರತಕ್ಕಂತಹ ಬಸ್ಸುಗಳ ಸಂಖ್ಯೆ 109 ಎಂದು ಮಂತ್ರಿಗಳು ಉತ್ತರದಲ್ಲಿ ಹೇಳಿದ್ದಾರೆ. ಇದರಲ್ಲಿ ಸುಮಾರು 6 ಲಕ್ಷಕ್ಕಿಂತ ಹೆಚ್ಚು ಕಿಲೋಮಿಟರ್ ಓಡಿದ ಬಸ್ಸುಗಳ ಸಂಖ್ಯೆ 43 ಎಂದು ಹೇಳಿದ್ದಾರೆ. ಇದು ಸರಿಯಲ್ಲ, ನನ್ನ ಪ್ರಕಾರ 67 ಬಸ್ಸುಗಳು 6 ಲಕ್ಷ ಕಿಲೊ ಮೀಟರ್‌ಗಳಿಗೂ ಹೆಚ್ಚು ಓಡಿವೆ. ಮತ್ತೆ 7 ಲಕ್ಷ ಕಿಲೊ ಮೀಟರ್‌ಗೂ ಹೆಚ್ಚು ಓಡಿದಂತಹ ಬಸ್ಸುಗಳ ಸಂಖ್ಯೆ 3. ಆದರೆ ಇದರಲ್ಲಿ ಮೂರು ಎಂದು ತಿಳಿಸಿದ್ದಾರೆ. ಮತ್ತೆ ಇಲ್ಲಿ.....

ಉಪಾಧ್ಯಕ್ಷಣಿಯವರು : ಪ್ರಶ್ನೆ ಕೇಳಿ ಇಲ್ಲಿ ಅದನ್ನು ಓದುವುದು ಬೇಡ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಅಲ್ಲಿ ಮೇಲಿಂದ ಮೇಲೆ ಸತ್ಯಾಗ್ರಹ ಆಗುತ್ತದೆ, ಧರಣೆ ಆಗುತ್ತದೆ. ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳಿಗೂ, ಸಾರ್ವಜನಿಕರಿಗೂ ಮೇಲಿಂದ ಮೇಲೆ ಘರ್ಷಣೆ ಆಗುತ್ತದೆ. ಅದನ್ನು ಮಂತ್ರಿಗಳು ಒಪ್ಪಿದ್ದಾರೆ. ಕಾರಣ ಅಲ್ಲಿ ಮೊದಲು ಇದ್ದಂತಹ ಬಸ್ಸುಗಳನ್ನು ತೆಗೆದಿದ್ದಾರೆ. ಬಸ್ಸುಗಳು ಸಮಯಕ್ಕೆ ಸರಿಯಾಗಿ ಓಡುವುದಿಲ್ಲ, ಇವರ ಬಸ್ಸುಗಳು ಒಂದು ದಿನಕ್ಕೆ 4-6 ಬಸ್ಸುಗಳು ಡಾಂಬರ್ ರಸ್ತೆಯಲ್ಲಿ ನಿಲ್ಲುವಂತಹ ವ್ಯವಸ್ಥೆ ಆಗಿದೆ. ಅವನ್ನು ಬದಲಾಯಿಸುತ್ತೀರಾ ಎಂದರೆ, ಬದಲಾಯಿಸುತ್ತೇವೆ ಎಂದು ಹೇಳುತ್ತಾರೆ. ಸರಿಯಾಗಿ ಹಾಜರಾತಿಯಿಲ್ಲದ ಸಿಬ್ಬಂದಿ, ಕಂಡಕ್ಟರ್ ಮತ್ತು ಡ್ರೈವರ್‌ಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ.

ಉಪಾಧ್ಯಕ್ಷಣಿಯವರು : ಒಂದೊಂದು ಪ್ರಶ್ನೆ ಕೇಳಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇದನ್ನು ಬದಲಾವಣೆ ಮಾಡಿ ಹೊಸ ಬಸ್ಸುಗಳನ್ನು ಕೊಡುವುದು ಯಾವಾಗ ಮತ್ತು ಗೈರು ಹಾಜರಾದ ಡ್ರೈವರ್ ಮತ್ತು ಕಂಡಕ್ಟರ್ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ ಯಾವಾಗ ಕ್ರಮ ತೆಗೆದುಕೊಳ್ಳುತ್ತಾರೆ. ಕಳೆದ ಎರಡು ವರ್ಷಗಳಿಂದಲೂ ಇದನ್ನೇ ಹೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷಿಣಿಯವರೇ ನಾನು ಈಗಾಗಲೇ ಸಚಿವರಿಗೆ, ಜಿಲ್ಲಾಧಿಕಾರಿಗಳಿಗೆ, ಎಸ್.ಪಿ. ಯವರಿಗೆ ಮತ್ತು ಸಂಬಧಪಟ್ಟ ಇಲಾಖೆಯವರಿಗೆ ಪತ್ರದ ಮೂಲಕ ಅನೇಕ ಸಲ ತಿಳಿಸಿದ್ದೇವೆ. ಕೊನೆಯದಾಗಿ ಹೇಳುತ್ತಿದ್ದೇನೆ. ಅಲ್ಲಿ 12.05 ಪಿ.ಎಂ.

ಲಾ ಅಂಡ್ ಆರ್ಡರ್ ಪ್ರಶ್ನೆ ಉದ್ಭವವಾಗುತ್ತದೆ ಮತ್ತು ಶಾಂತಿ ಭಂಗವಾಗುತ್ತದೆ, ಇದನ್ನು ಬೇಗ ಸರಿಪಡಿಸಬೇಕು. ಇಲ್ಲದಿದ್ದರೆ ಕೆ.ಎಸ್.ಆರ್.ಟಿ.ಸಿಯವರನ್ನು ಬಿಟ್ಟು ಬೇರೆಯವರಿಗಾದರೂ ಕೊಡಿ ಇದಕ್ಕೆ ತಾವು ಏನು ಹೇಳುತ್ತೀರಿ?

ಶ್ರೀ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ್ದುದು ಸತ್ಯ. ಬಸ್ಸುಗಳು ಏನು ಕ್ಯಾನ್ಸಲೇಷನ್ ಆಗಿದ ಅದರಿಂದ ಸ್ವಲ್ಪ ತೊಂದರೆ ಆಗಿದೆ. ಅದು ಎರಡು ವರ್ಷಗಳಿಂದ ಆಗಿರುವುದು. ನನಗೆ ಮೊದಲೆ ಗೊತ್ತಿಲ್ಲ. ಆದರೆ ಈಗ ಮಾತ್ರ ಏನು ತೊಂದರೆಯಾಗಿದೆ ಆ ಮಾತು ನಮ್ಮ ಮುಂದೆ ಇದೆ. ಅಲ್ಲಿ ಕ್ಯಾನ್ಸಲೇಷನ್ ಏನು ಆಗಿದೆ ಅದನ್ನು ಪೂರ್ಣ ಮಾಡುವ ಪ್ರಯನ್ನು ಮಾಡುತ್ತೇವೆ. ಕ್ಯಾನ್ಸಲೇಷನ್ ತೆಗೆದು ಅಲ್ಲಿ ಬಸ್ಸುಗಳು ಓಡಾಡುವಂತೆ ಮಾಡುತ್ತೇವೆ ಮತ್ತು ಸರ್ವೀಸ್ ಏನು ಇದೆ, ಈಗ ನಿಮಗೆ ತಮ್ಮ ರೆಫಿಜೆಂಟೇಷನ್ ಮೇಲೆ 11 ಬಸ್ಸುಗಳನ್ನು ಹೆಚ್ಚಿಗೆ ಕೊಟ್ಟಿದ್ದೇವೆ. ಇನ್ನೂ ಎಷ್ಟು ಬಸ್ಸ್‌ಗಳು ಬೇಕೋ ಅದನ್ನು ಕೊಡುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಕೇವಲ ಆರು ಬಸ್ಸುಗಳನ್ನು ಕೊಟ್ಟಿದ್ದಾರೆ. ಹನ್ನೊಂದು ಬಸ್ಸುಗಳನ್ನು ಕೊಟ್ಟಿದ್ದೇವೆ ಎಂದು ಹೇಳುವುದು ಸರಿಯಲ್ಲ. 67 ಬಸ್ಸುಗಳು ಕಂಡ ಆದರೆ ನೀವು 6 ಬಸ್ಸುಗಳು ಕೊಟ್ಟರೆ ಏನು ಪ್ರಯೋಜನ? ತಮಗೆ ಅಲ್ಲಿರತಕ್ಕಂತಹ ಸಮಸ್ಯೆಗಳನ್ನು ಅನೇಕ ಸಲ ಹೇಳಿದ್ದೇನೆ ಅಧಿಕಾರಿಗಳಿಗೂ ಹೇಳಿದ್ದೇವೆ. ಏನೂ ಪ್ರಯೋಜನ ಆಗಿಲ್ಲ. ನೀವು ನಿರ್ದಿಷ್ಟವಾಗಿ ಹೇಳಿ 67 ಬಸ್ಸ್‌ಗಳಿಗೆ ಕನಿಷ್ಟ 25 ಹೊಸ ಬಸ್ಸುಗಳನ್ನಾದರೂ ಕೊಡಿ. ಅಲ್ಲಿ ಗೈರು ಹಾಜರಾದವರ ಮೇಲೆ ಒಂದು ವಾರದೊಳಗೆ ಕ್ರಮ ತೆಗೆದುಕೊಂಡು ಹೊಸಬರನ್ನು ಅಲ್ಲಿ ಸೇರ್ಪಡೆ ಮಾಡುವ ವ್ಯವಸ್ಥೆ ಮಾಡಿ. ಕರ್ನಾಟಕದಲ್ಲಿ ಅತ್ಯಂತ ಲಾಭದಲ್ಲಿರುವ ಘಟಕ ಇದು. ಇಡೀ ರಾಜ್ಯದಲ್ಲಿ ಪ್ರಾಮಾಣಿಕರೆ ಪ್ರಯಾಣಿಕರಾದ ನನ್ನ ಕ್ಷೇತ್ರದ ಜನ. ಇಡೀ ರಾಜ್ಯದಲ್ಲಿ ನಮ್ಮ ಕೆ.ಎಸ್.ಆರ್.ಟಿ.ಸಿ ಇವತ್ತು ಲಾಸ್‌ನಲ್ಲಿ ಇದೆ. ನಮ್ಮ ಘಟಕದ ಕೆ.ಎಸ್.ಆರ್.ಟಿ.ಸಿ , ಮಾತ್ರ ಲಾಭದಲ್ಲಿ ಇದೆ. ನೀವು ನಮ್ಮ ಜನರಿಗೆ ಇದ್ದ ಬಸ್ಸೂ ತೆಗೆದು ಹೊಸ ಬಸ್ಸು ಕೊಡದೆ ಇದ್ದರೆ ಏನು ಇದು. ತಾವು ನಿರ್ದಿಷ್ಟವಾಗಿ ಹೇಳಬೇಕು. ಇದರ ಬಗ್ಗೆ ತಮ್ಮ ನಿಲುವು ಏನು?

ಶ್ರೀ ಭೀಮಣ್ಣ ಖಂಡ್ರೆ : ಇರುವ ಅಂಕಿ ಅಂಶವನ್ನು ತಮ್ಮ ಮುಂದಿಡುತ್ತಿದ್ದೇನೆ. ಇದರ ಬಗ್ಗೆ ಹೆಚ್ಚೂ ಕಡಿಮೆಯಿದ್ದರೆ ಮತ್ತೊಮ್ಮೆ ಪರಿಶೀಲನೆ ಮಾಡುತ್ತೇನೆ. ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಹೆಚ್ಚಿಗೆ ಬಸ್ಸುಗಳನ್ನು ಪ್ರೊವೈಡ್ ಮಾಡುವ ರೀತಿಯಲ್ಲಿ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : 15 ದಿವಸಗಳಲ್ಲಿ ನೀವು ಸರಿಮಾಡಿಸುತ್ತೀರಾ?

ಶ್ರೀ ಭೀಮಣ್ಣ ಖಂಡ್ರೆ : ದಿವಸ ಅಂತ ಇಲ್ಲ ಎಷ್ಟು ಸಾಧ್ಯವೋ ಅಷ್ಟು ಬೇಗ ಮಾಡುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ತಾವೇ ಪರಿಶೀಲನೆ ಮಾಡಿ. ನಾನು ಹೇಳಿದ್ದನ್ನು ಪರಿಶೀಲನೆ ಮಾಡಲಿ ಒಂದು ತಿಂಗಳಲ್ಲಿ ಪರಿಶೀಲನೆ ಮಾಡಿ ಪರಿಹಾರ ಒದಗಿಸುತ್ತೀರಾ?

ಉಪಾಧ್ಯಕ್ಷಿಣಿಯವರು : ಆಯಿತು ಅವರು ಅದಷ್ಟು ಜಾಗ್ರತೆ ಮಾಡಿಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಭೀಮಣ್ಣ ಖಂಡ್ರೆ : ಮಾರ್ಚಿ 31ರ ಒಳಗಾಗಿ ತೊಂದರೆಗಳನ್ನು ದೂರ ಮಾಡುತ್ತೇವೆ.

ಬಿ.ಎಡ್ ಕೋರ್ಸಿಗೆ ಪ.ಜಾ/ಪ. ವರ್ಗದ ಅಭ್ಯರ್ಥಿಗಳ ಆಯ್ಕೆ.

839 - ಶ್ರೀ ಕೆ. ಸಿದ್ದಯ್ಯ (ಸಂತೇಮಾರನ ಹಳ್ಳಿ) : ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಅಭ್ಯರ್ಥಿಗಳು ಬಿ.ಎಡ್. ಕೋರ್ಸುಗಳಿಗೆ ಪ್ರವೇಶ ಪಡೆಯಲು ಅರ್ಹದಾಯಕ ಪರೀಕ್ಷೆಯಲ್ಲಿ ಶೇಕಡ 40 ಮತ್ತು ಅದಕ್ಕಿಂತಲೂ ಹೆಚ್ಚು ಅಂಕ ಹೊಂದಿರಬೇಕೆಂಬ ಅಂಶ ಸರಿಯಾದುದಲ್ಲವೇ?

ಆ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದ ಕಡಿಮೆ ಶೇಕಡವಾರು ಅಂಕ ಪಡೆದಿರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸುವುದು ಸಮಂಜಸ ಮತ್ತು ಯೋಗ್ಯವಲ್ಲವೇ.

ಇ) ಹಾಗಿದ್ದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಬಿ.ಎಡ್. ಕೋರ್ಸುಗಳಲ್ಲಿ ಪ್ರವೇಶ ಪಡೆಯಲು ಶೇಕಡ 40ರ ಅಂಕಗಳನ್ನು ಶೇಕಡ 35ಕ್ಕೆ ಇಳಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ.

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಮಂತ್ರಿಗಳು) :

ಅ) ಹೌದು.

ಇ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ (ಸಾಮಾನ್ಯ ಅಭ್ಯರ್ಥಿಯ ಅರ್ಹತಾ ಅಂಕ ಶೇಕಡ 45) ಈಗಾಗಲೇ ಶೇಕಡ 5 ರಷ್ಟು ಅಂಕಗಳ ರಿಯಾಯತಿ ನೀಡಲಾಗಿದೆ. ಶೈಕ್ಷಣಿಕ ಗುಣಮಟ್ಟವನ್ನು ಕಾಯುವ ದೃಷ್ಟಿಯಲ್ಲಿ, ಮತ್ತಷ್ಟು ಸಡಿಲಗೊಳಿಸುವ ಅಗತ್ಯವಿಲ್ಲ.

ಇ) ಇಲ್ಲ.

ಶ್ರೀ ಕೆ. ಸಿದ್ದಯ್ಯ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು, ಬಿ.ಎಡ್. ಕೋರ್ಸ್‌ಗೆ ಅಡ್‌ಮಿಷನ್ ಕೊಡಬೇಕಾದರೆ ಹಿಂದುಳಿದ ವರ್ಗಗಳಿಗೆ, ಎಸ್.ಸಿ-ಎಸ್.ಟಿಗೆ ಶೇಕಡ 40 ಜನರಲ್ ಮೆರಿಟ್‌ಗೆ ಶೇಕಡ 45 ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಅದಕ್ಕಿಂತ ಕಡಿಮೆ ಷೆಡ್ಯೂಲ್ ಕ್ಯಾಸ್ಟ್‌ರವರಿಗೆ ಸೀಟು ಕೊಡುವುದನ್ನು ಇಳಿಸುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದೀರಿ. ಇದರಲ್ಲಿ ತಾವು ಹೇಳಿದ ರೀತಿಯಲ್ಲಿ ಮಾರ್ಕ್ಸ್‌ನ ಮೇಲೆ ಮೆರಿಟ್ ಎಂದು ಹೇಳಿದರೆ ಮೆರಿಟ್ ಎಂದರೆ ಅರ್ಥ ಏನು ಎಂದು ಸ್ವಲ್ಪ ಕ್ಲಾರಿಫೈ ಆಗಬೇಕು. ಜೊತೆಗೆ ನಿಮ್ಮ ಪ್ರಕಾರ ಉತ್ತರದಲ್ಲಿ ಕೊಟ್ಟಿರುವ ರೀತಿಯಲ್ಲಿ, what is the standard to judge the merit? Whether/to judge the merit on the basis of marks obtained in the qualifying examination?

SRI K.H. RANGANATH (On behalf of Minister for Education) : The marks obtained in the examination are the criteria for eligibility.

ಶ್ರೀ ಕೆ. ಸಿದ್ದಯ್ಯ : ಇದರಲ್ಲಿ ಎಪ್ಲೋ ಮಾರ್ಕ್ಸ್ ತೆಗೆಯಬೇಕಾಗಿದ್ದರೆ, ಇದರಿಂದ ಅನುಕೂಲವಾಗುತ್ತದೆ ಎಂದು ತಿಳಿದುಕೊಂಡ ಮೇಲೆ ಜನಗಳು ಇದಲ್ಲಿ ಏನು ಮಾಡುತ್ತಾರೆ ಎಂದರೆ ಅನೇಕ ಅವ್ಯವಹಾರ, ಭ್ರಷ್ಟಾಚಾರ, ಫೇವರಿಟಿಸಂ ಇದೆಲ್ಲ ಮಾಡಿ ಮಾರ್ಕ್ಸ್ ತೆಗೆಯಲು ಹೋಗುತ್ತಾರೆ. ಜೊತೆಗೆ ಕೆಲವು ಒಳ್ಳೆಯ ಸ್ಥಿತಿಗತಿಯಲ್ಲಿರ ತಕ್ಕ ಜನ ಹೆಚ್ಚಿಗೆ ಮಾರ್ಕ್ಸ್ ಎಷ್ಟೇಷ್ಟು ಬೇಕೋ ಆ ಪ್ರಯತ್ನಗಳನ್ನೆಲ್ಲ ಅವ್ಯವಹಾರದ ರೀತಿಯಲ್ಲಿ ನಡೆಸುತ್ತಾರೆ. ಇದರಿಂದ ಭ್ರಷ್ಟಾಚಾರ ಆಗುತ್ತದೆ. ಬಡವರಿಗೆ ಮತ್ತು ಇಗ್ನೋರೆಂಟ್ ಪೀಪಲ್‌ಗೆ ಇದರಿಂದ ಹಾನಿಯಾಗುತ್ತದೆ.

ಇದನ್ನು ಕೂಲಂಕಷವಾಗಿ ಎಕ್ಸಾಮಿನ್ ಮಾಡಬೇಕಾದರೆ ಸರ್ಕಾರ ಒಂದು ಕಮಿಟಿಯನ್ನು ರಚನೆ ಮಾಡುತ್ತದೆಯೇ ಅಪಾರವಾಗಿ ಭ್ರಷ್ಟಾಚಾರವಾಗುತ್ತಿದೆ. ಇದರಿಂದ ಸರ್ಕಾರಿ ನೌಕರರಿಗೆ ಮತ್ತು ಬಡವರಿಗೆ ದೊಡ್ಡ ಫ್ರಾಡ್ ಆಗಿದೆ.

ಶ್ರೀ ಕೆ.ಹೆಚ್. ರಂಗನಾಥ್ : ಭ್ರಷ್ಟಾಚಾರ ವೈಗೆರೆ ಆಗುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

Construction of new KSRTC depot at Nipani.

548 - SRI. SUBHASH JOSHI (NIPANI) : will the Hon'ble Minister for Transport be pleased to state:

a) *Whether the construction of new KSRTC Depot has been started at Nippani?*

b) *The total cost of the construction of New Depot at Nippani?*

SRI. BHEEMANA KHANDRE (Minister for Transport) :

a) YES.

b) Rs. 50.00 Lakhs.

SRI SUBHASH JOSHI : This year what is the budget for custructur of new unit at nippam if and if the work is started, when it will be completed? Alongwith the depot, whether construction of new bus stand will be started?

SRI BHIMANNA KHANDRE: The question is whether the construction of new KSRTC depot has been started at Nippani. The answer is, it is started. The total cost of the construction of new depot is Rs.50 lakhs. Regarding details, the work is expected to be completed within 18 months.

ರಾಜ್ಯದಲ್ಲಿ ಆಹಾರ ಪದಾರ್ಥಗಳ ವಿತರಣೆಯಲ್ಲಿ ಕಾಳಸಂತೆ.

617 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಅನೇಕ ಕಡೆಗಳಲ್ಲಿ ಆಹಾರ ವಿತರಣೆ ಮಾಡಲು ಪರವಾನಗೆ ಪಡೆದಿರುವ ಕೆಲವು ವ್ಯಕ್ತಿಗಳು ಹಾಗೂ ಕೆಲವು ಸಹಕಾರ ಸಂಘಗಳು

ಆಹಾರ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಅಂತಹ ವ್ಯಕ್ತಿಗಳ ಹಾಗೂ ಸಹಕಾರ ಸಂಘಗಳ ಮೇಲೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಹೌದು.

ಆ) ಕಾಳಸಂತೆ ಮಾರಾಟ ಪ್ರಕರಣದಲ್ಲಿ ಬಾಗಿಯಾಗಿರುವ ವ್ಯಕ್ತಿಗಳ ಹಾಗೂ ಸಹಕಾರ ಸಂಘಗಳ ಮೇಲೆ ಕ್ರಮ ಕೈಗೊಂಡು ಜನವರಿ 1992ರಿಂದ ಇಲ್ಲಿಯವರೆಗೆ 217 ಲೈಸನ್ಸ್‌ಗಳನ್ನು ರದ್ದುಗೊಳಿಸಿದ್ದು, 211 ಲೈಸೆನ್ಸ್‌ಗಳನ್ನು ಅಮಾನತ್ತಿನಲ್ಲಿಡಲಾಗಿದೆ.

ಶ್ರೀ ಅಂಜನಮೂರ್ತಿ : ನನ್ನ ಪ್ರಶ್ನೆಗೆ ಉತ್ತರವಾಗಿ 217 ಜನರ ಲೈಸನ್ಸ್‌ಗಳನ್ನು ವಜಾ ಮಾಡಿದ್ದೇವೆಂದು ಹೇಳಿದ್ದಾರೆ. ಈ ಇಲಾಖೆವತಿಯಿಂದ ಏನು ಆಹಾರ ವಿತರಣೆ ಮಾಡುತ್ತಾರೆ ಅದರಲ್ಲಿ ವಿಶೇಷವಾಗಿ ಎಣ್ಣೆ ಅಕ್ಕಿ, ಗೋಧಿ, ಇವು ಎಷ್ಟು ದುರ್ನಾತದಿಂದ ಕೂಡಿವೆ ಅಷ್ಟೇ ಈ ಇಲಾಖೆ ಕೂಡ ದುರ್ನಾಥದಿಂದ ಕೂಡಿದೆ ಇದು ಸತ್ಯ ಮತ್ತು ಎಲ್ಲಾರಿಗೂ ಗೊತ್ತಿರುವ ವಿಷಯ. ಈ ಇಲಾಖೆಯಿಂದ ಲೈಸನ್ಸ್ ಪಡೆದವರು ವಿತ್ತರಣೆ ಜಾಗದಲ್ಲೇ ಆಹಾರ ಪದಾರ್ಥಗಳನ್ನು ಬೇರೆಯವರಿಗೆ ಮಾರಾಟ ಮಾಡುತ್ತಿರುವುದದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಇದನ್ನು ನಿಂಯತ್ರಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀಮತಿ ಮನೋರಮ ಮಧ್ವರಾಜ್ : ಕಂಟ್ರೋಲ್ ಆರ್ಟಿಕಲ್ಸ್‌ನ್ನು ತೆಗೆದುಕೊಂಡು ಜಾಗದಲ್ಲೇ ಮಾರುವಂಥ ನಿದರ್ಶನ ಇದ್ದರೆ, ಅದನ್ನು ನಮ್ಮ ಗಮನಕ್ಕೆ ತಂದರೆ ಖಂಡಿತ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಶ್ರೀ ಅಂಜನಮೂರ್ತಿ : ಆಹಾರ ವಿತರಣಾ ಕಾರ್ಯಕ್ಕೆ ಎಷ್ಟು ಸೊಸೈಟಿಗಳು ಸೇರಿವೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರ ವಿತರಣೆ ಮಾಡುವುದಕ್ಕೆ ಎಷ್ಟು ಜನರಿದ್ದಾರೆ? ಕೆಲವು ವಿತರಕರು ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರ ಪದಾರ್ಥಗಳನ್ನುಒಂದು ದಿವಸ ತಂದು ಮಾರಾಟ ಮಾಡಿ ಮರುದಿನ ಬಂದವರಿಗೆ ಆಗಿಹೋಯಿತು ಎಂದು ಹೇಳುತ್ತಾರೆ. ಅಂಥವರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ಇದರಿಂದ ಬಡವರಿಗೆ ಬಹಳ ಅನ್ಯಾಯವಾಗುತ್ತಿದೆ. ಇದರ ಬಗ್ಗೆ ಸರ್ಕಾರ ಗಮನ ಕೊಡುತ್ತದೆಯೇ?

ಶ್ರೀಮತಿ ಮನೋರಮ ಮಧ್ವರಾಜ್ : ತಪ್ಪಿತಸ್ಥ ಅಧಿಕಾರಿಗಳ ಮತ್ತು ಸೊಸೈಟಿಗಳ ಮೇಲೆ ಕ್ರಮ ತೆಗೆದುಕೊಂಡು ಮುಂದೆ ಜನರಿಗೆ ಆಹಾರ ಪದಾರ್ಥಗಳು ಸರಿಯಾಗಿ ವಿತರಣೆ ಆಗುವ ರೀತಿಯಲ್ಲಿ ನೋಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಉಪಾಧ್ಯಕ್ಷಣೆಯವರು : ಈಗ ತಡೆಹಿಡಿಯಲಾದ ಪ್ರಶ್ನೆಗಳು.

LOSS SUSTAINED BY KSRTC

318 - SRI. P.G.R. SINDHYA (KANAKAPRA): Will the Hon'ble Minister for Transport be pleased to state :

a) *What is quantum of loss suffered by the KSRTC during the year 91-92.*

b) *What is the estimated loss during the year 92-93.*

c) *During the year 1991-92 and 1992-93 how many persons are appointed out of which how many are temporary posts. (Furnish Categorywise)*

d) *How many persons were promoted to various categories, during the year 91-92 and 92-93 in the Corporation.*

e) *Whether all these promotions are accorded in confirmity with the Rules,*

SRI. BHEEMANA KHANDRE (Minister for Transport) :

a) Rs. 19.09 Crores.

b) Rs. 78 to 80 Crores.

c) Appointment made during the year 1991-92and 1992-93 in KSRTC.

Sl. No.	*Category*	*1991-92* *Permanent*	*Temporary*	*1992-93* *Permanent*	*Temporary*
1.	Drivesrs	418	-	-	2879
2.	Conductors	226	-	-	1980
3.	Jr. Assistant	17	-	-	-
4.	Artisan	19	-	-	-
5.	Asst. Aritisan	18	-	-	-
6.	Helper'B'	29	-	213	-
7.	Security Guard	1	-	-	-
8.	Asst. Security Inspector.	1	-	-	-
9.	Store Keeper	2	-	-	-
10.	Jr. Steno	2	-	-	-
11.	Supervisor (Acct)	3	-	-	-
12.	Asst. Drughtsman	11	-	-	-
13.	Asst. Accountant	-	-	-	-
14.	Jr. Engineer	-	-	18	-
	Total	749	-	231	4859

ABSTRACT YEAR	1991-92	1992-93
Regular	749	231
Temporary	-	4859

d) During the year 91-92 224

During the year 92-93 280

Total 504

Persons were promoted to various Categories in KSRTC.

e) No.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸಾರಿಗೆ ಸಂಸ್ಥೆಗೆ 1991-92ರಲ್ಲಿ 19.09 ಕೋಟಿ ಅಂದರೆ 20 ಕೋಟಿ ಲುಕ್ಸಾನು ಆಗಿದೆ. ಎಂದು ಉತ್ತರದಲ್ಲಿ ಹೇಳಿದ್ದಾರೆ. 92-93ರಲ್ಲಿ 80 ಕೋಟಿ ಲುಕ್ಸಾನ್ ಆಗುತ್ತದೆ ಎಂದು ಹೇಳಿದ್ದಾರೆ. 80 ಕೋಟಿ ಎಂದರೆ ನಾನು ಸಾರಿಗೆ ಸಚಿವರನ್ನು ಕೇಳತಕ್ಕದ್ದು ಏನೆಂದರೆ, ಇದು ಒಂದು ಹೊಸ ದಾಖಲೆ ಅಲ್ಲವೆ? It is a new record in the history of 30 years of KSRTC. i.e., making a loss of 80 crores.

ಎರಡನೆಯದಾಗಿ ಇದು ದೀವಾಳಿ ಆಗಿದೆ ಅಲ್ಲವೆ ? ಈ ತಿಂಗಲು 60 ಸಾವಿರ ಕೆ.ಎಸ್.ಆರ್.ಟಿ.ಸಿ. ಕಾರ್ಮಿಕರಿಗೆ ಸಂಬಳ ಕೊಡಲು ದುಡ್ಡು ಇಲ್ಲ ಎಂಬುದು ನಿಜವೇ ? ಇದು ನನ್ನ 3ನೇ ಪ್ರಶ್ನೆ. ಈ ಪ್ರಶ್ನೆಗಳಿಗೆ ತಾವು ಉತ್ತರವನ್ನು ಕೊಡಬೇಕು. ಇದನ್ನು ಸರಿಪಡಿಸಲು ಸಾಧ್ಯವೇ ಎಂಬುದನ್ನು ಹೇಳಿ. 504 ಜನ ಅಧಿಕಾರಿಗಳಿಗೆ ಪ್ರೊಮೋಷನ್ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. He is admitted . Whether all these promotions are accorded in confirmity with the Rules ಎಂದು ಕೇಳಿದರೆ ಅದಕ್ಕೆ 'No' ಎಂದು ಉತ್ತರ ಹೇಳಿದ್ದಾರೆ ಹಾಗಾದರೆ ನೀವು ಅಧಿಕಾರಕ್ಕೆ ಬಂದು 1 ತಿಂಗಳು ಆಯಿತು, ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಇನ್ನೂ 5000 ಟೆಂಪರರಿ ಅಪಾಯಿಂಟ್‌ಮೆಂಟ್‌ಗಳನ್ನು ಮಾಡಿಕೊಂಡಿದ್ದೀರಿ. ಟೆಂಪರರಿ ಅಪಾಯಿಂಟ್‌ಮೆಂಟ್‌ಗಳಿಗೆ ಪ್ರಾವಿಷನ್ ಇಲ್ಲ ಬರೀ ಜಾತ್ರೆ ಸಂದರ್ಭದಲ್ಲಿ ಅಥವಾ ಮತ್ತೊಂದು ಸಂದರ್ಭದಲ್ಲಿ ಟೆಂಪರರಿ ಅಪಾಯಿಂಟ್‌ಮೆಂಟ್‌ಗಳನ್ನು ಮಾಡಿಕೊಳ್ಳಲು ನಿಮಗೆ ಅವಕಾಶವಿದೆ. ಈ ರೀತಿ ಟೆಂಪರರಿ ಅಪಾಯಿಂಟ್‌ಮೆಂಟ್ ಮಾಡಿಕೊಂಡಿರುವ ಸಂದರ್ಭದಲ್ಲಿ ಸಾರಿಗೆ ಇಲಾಖೆ ಕಾರ್ಯದರ್ಶಿಯವರು ಏನು ಮಾಡುತ್ತಿದ್ದರು.. 3000 ಜನ ಕಂಡಕ್ಟರ್ ಡ್ರೈವರ್‌ಗಳನ್ನು ಅಪಾಯಿಂಟ್ ಮಾಡಿಕೊಂಡಿದ್ದೀರಿ. ಆಕ್ಸಿಡೆಂಟ್ ಜಾಸ್ತಿ ಆಗಲು ಇದೊಂದು ಕಾರಣವಾಗಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ದಯವಿಟ್ಟು ಹೇಳಿ.

ಶ್ರೀ ಭೀಮಣ್ಣ ಖಂಡ್ರೆ : ಲಾಸ್ ಆಗಿದೆ ಎನ್ನತಕ್ಕ ಮಾತನ್ನು ಮಾನ್ಯ ಸಿಂಧ್ಯಾರವರು ಹೇಳಿದರು. ಅದು ನೀವಿದ್ದಾಗಲೂ ಆಗಿದೆ. ಈಗಲೂ ಆಗುತ್ತಾ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಇದ್ದಾಗ ಏನು ಆಗಿದೆ ಎಂಬುದನ್ನು ಡಿಬೆಟ್ ಮಾಡೋಣ. ದಯವಿಟ್ಟು ನೀವೇನು ಮಾಡಿದ್ದೀರಿ ಎಂಬುದನ್ನು ಹೇಳಿ?

ಶ್ರೀ ಭೀಮಣ್ಣ ಖಂಡ್ರೆ : ಕೆ.ಎಸ್.ಆರ್.ಟಿ.ಸಿ. ಯಲ್ಲಿ ಏನಾಗಿದೆ ಎನ್ನತಕ್ಕದ್ದು ಇಡಿ ಪ್ರಪಂಚಕ್ಕೆ ಗೊತ್ತಿರತಕ್ಕ ವಿಚಾರ. ಕೆ.ಎಸ್.ಆರ್.ಟಿ.ಸಿ. ಯಲ್ಲಿ ಮೊದಲಿಂದ ಇವತ್ತಿನವರೆಗೂ ಲಾಸ್ ಆಗುತ್ತಾ ಇದೆ ಇದು ಪ್ರಪಂಚಕ್ಕೆ ಗೊತ್ತು. ನಾವು ಬಂದು ಒಂದು ತಿಂಗಳು ಆಯಿತು. ಎಷ್ಟು ಮಟ್ಟಿಗೆ ಮಾಡಬೇಕೋ ಅಷ್ಟು ಮಟ್ಟಿಗೆ ಮಾಡಿದ್ದೇವೆ. ಲಾಸ್ ಎಲ್ಲಾ ಕಾಲದಲ್ಲೂ ಆಗುತ್ತಾ ಇದೆ. ಈ 78 ಕೋಟಿಯಲ್ಲಿ ಕೆಲವು ಭಾಗ ಕನ್ಸೀಷನ್‌ಗಳಿಗೆ ಹೋಗುತ್ತಾ ಇದೆ. ಸರ್ಕಾರದವರು ಇದಕ್ಕಾಗಿ ಹಣ ಕೊಡಬೇಕು. ಹೋದ ಸಾರಿ 18 ಕೋಟಿ ರೂಪಾಯಿ ಕೊಟ್ಟಿತ್ತು. ಸುಮಾರು 40 ಕೋಟಿ ರೂಪಾಯಿಗಳು ಈ ಕನ್ಸೀಷನ್‌ಗೆ ಹೋಗುತ್ತದೆ. ಈ ಲಾಸ್ ಅನ್ನು ಸರ್ಕಾರ ಕಾಂಪನ್ಸೇಟ್ ಮಾಡಬೇಕು. ಏತಕ್ಕೆಂದರೆ ಇವು ಸರ್ಕಾರದ ಸ್ಕೀಮ್‌ಗಳು ಸರ್ಕಾರದ ಪಾಲಿಸಿ ಪ್ರಕಾರ ಯಾರು ಯಾರಿಗೆ ಕನ್ಸೀಷನ್ ಕೊಡಬೇಕೋ ಅವುಗಳನ್ನು ಕೊಡಲೇಬೇಕಾಗುತ್ತದೆ. ಈ ಕನ್ಸೀಷನ್‌ಗಳಿಗಾಗಿ ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ ಬೇರೆ ರಾಜ್ಯದಲ್ಲೂ ಕೂಡ ಸರ್ಕಾರ ಸಹಾಯ ಮಾಡಬೇಕಾಗುತ್ತದೆ. ಕರ್ನಾಟಕ ಸರ್ಕಾರ ಕೂಡ ಸಬ್ಸಿಡಿ ಎಂದು ಈ ಬಾಬ್ತಿಗಾಗಿ ಕೊಡುತ್ತಿದ್ದಾರೆ. ಆದ್ದರಿಂದ ನಮ್ಮ ಲಾಸ್ 40 ಕೋಟಿ ಆಗಬಹುದು. 78 ಕೋಟಿ ಅಲ್ಲ. ಈ ಲಾಸ್ಸು ಕಡಿಮೆ ಮಾಡಲು ಡೈರೆಕ್ಷನ್ ಕೊಟ್ಟಿದ್ದೇವೆ. ಇನ್ನು ರೊಕ್ಕ ಕೊಡಲಿಕ್ಕೆ ಹಣ ಇಲ್ಲ ಎಂಬ ಮಾತು ಹೇಳಿದ್ದಾರೆ. ಸರ್ಕಾರದಿಂದ ಅವರಿಗೆ ಹಣ ಬರಬೇಕಾದರೆ ಬಸ್‌ಗಳ ಬಾಡಿ ಕಟ್ಟುವ ಸಲುವಾಗಿ ಸ್ವಲ್ಪ ಹಣ ಖರ್ಚು ಮಾಡಿದ್ದಾರೆ. ಸರ್ಕಾರದಿಂದ ಹಾಗೂ ಬ್ಯಾಂಕುಗಳಿಂದ ಹಣ ಪಡೆದುಕೊಡುತ್ತಾರೆ. ಅದು ಬಂದರೆ ನೌಕರರುಗಳಿಗೆ ಸಂಬಳ ಕೊಡಲು ತೊಂದರೆ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ತಿಂಗಳು ಸಂಬಳ ಕೊಡಲು ತೊಂದರೆ ಇದೆ ಎಂಬುದು ನಿಜ ತಾನೆ?

ಶ್ರೀ ಭೀಮಣ್ಣ ಖಂಡ್ರೆ : ತೊಂದರೆ ಇದೆ. ಅದನ್ನು ಸರಿಪಡಿಸುತ್ತೇವೆ. ನಾವು ಹೇಗೆ ಕೊಡುತ್ತೇವೆ, ಅದನ್ನು ನಾವು ಕೊಟ್ಟ ನಂತರ ನೋಡಿ. ಪೇಮೆಂಟ್ ಏನು ನಮ್ಮ ಸ್ಟ್ಯಾಫ್‌ಗೆ ಕೊಡುತ್ತೇವೆ ಅದನ್ನು ಎಂದೂ ನಿಲ್ಲಿಸುವುದಿಲ್ಲ. ಈಗ ಸ್ಟಾಪ್ ಮಾಡುವುದಿಲ್ಲ. ಸ್ಯಾಲರಿ ಕೊಡಲಿಕ್ಕೆ ಹಣವಿದೆ. ಅದನ್ನು ಕೊಡಲಿಕ್ಕೆ ಅಡ್ಡಿಯಿಲ್ಲ. ತೊಂದರೆ ಇಲ್ಲವೇ ಇಲ್ಲವೆಂದಲ್ಲ. ತೊಂದರೆ ಪ್ರತಿಯೊಂದು ಸಾರಿ ಇರುತ್ತದೆ. ಅದನ್ನು ಸಾಲ್ವ್ ಮಾಡುತ್ತಿದ್ದೇವೆ. ಮಾನ್ಯ ಸಿಂಧ್ಯಾರವರು ಅಪಾಯಿಂಟ್‌ಮೆಂಟ್ ಬಗ್ಗೆ ತಾವೇನು ಹೇಳಿದ್ದೀರಿ ಅದನ್ನು ಮತ್ತೊಮ್ಮೆ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಏನು ಕೇಳಿದ್ದೇನೆಂದರೆ, 5 ಸಾವಿರ ಜನಗಳನ್ನು ಅಪಾಯಿಂಟ್ ಮಾಡಿಕೊಂಡಿದ್ದೀರಿ. ಟೆಂಪರರಿಯಾಗಿ ಯಾವಾಗ ತೆಗೆದುಕೊಳ್ಳಬೇಕು, ನಿಮ್ಮ ಕಡೆಯಲ್ಲಿ ಎಲ್ಲಮ್ಮನ ಜಾತ್ರೆ ಮತ್ತೊಂದು ಜಾತ್ರೆಯಾಗುತ್ತದೆ. ಅಂತಹ ಸಂದರ್ಭದಲ್ಲಿ ನೀವು 100-200 ಜನಗಳನ್ನು 1 ತಿಂಗಳು ಅಥವಾ 15 ದಿವಸಗಳ ಮಟ್ಟಿಗೆ ತಕ್ಷಣಕ್ಕೆ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಲಿಕ್ಕೆ ಪ್ರಾವಿಜನ್ ಇದೆ. ಆದರೆ ಟೆಂಪರರಿಯಾಗಿ 5 ಸಾವಿರ ಜನರನ್ನು ಅಪಾಯಿಂಟ್‌ಮೆಂಟ್ ಮಾಡಿಕೊಂಡಿದ್ದೀರಿ. 3 ಸಾವಿರ ಜನ ಡ್ರೈವರ್ಸ್‌ಗಳನ್ನು ಏನು ಅಪಾಯಿಂಟ್‌ಮೆಂಟ್ ಮಾಡಿಕೊಂಡಿದ್ದೀರಿ ಅವರು ಅನ್‌ಟ್ರೈನ್ಡ್ ಫೆಲೋಸ್, ಆದ್ದರಿಂದ ಅಕ್ಸಿಡೆಂಟ್ ಜಾಸ್ತಿಯಾಗಿವೆ. ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಹಿಂದಿನ ಸರ್ಕಾರ ಮಾಡಿದ ತಪ್ಪನ್ನು ಸರಿಪಡಿಸುತ್ತೇವೆಂದು ತಾವು ಅಧಿಕಾರಕ್ಕೆ ಬಂದು ಮತ್ತೆ ಇವತ್ತು ಕಾನೂನು ಬಾಹಿರವಾಗಿ ಆಗಿದ್ದರೆ ಅದನ್ನು ತಕ್ಷಣ ರದ್ದು ಮಾಡದಿದ್ದರೆ, ಸ್ವಾಮಿ ನಾಯಕತ್ವ ಬದಲಾವಣೆಯಾದರೆ ಜನ ನಿಮ್ಮಲ್ಲಿ ವಿಶ್ವಾಸ ಇಟ್ಟುಕೊಳ್ಳುತ್ತಾರೆಯೇ?

ಉಪಾಧ್ಯಕ್ಷರು : ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಾನೂನು ಬಾಹಿರವಾಗಿ ನೇಮಕವಾಗಿದ್ದರೆ ಯಡಿಯೂರಪ್ಪನವರೇ ಅದು ತಪ್ಪಾಗಿದೆ ಮಾನ್ಯ ಸಿಂಧ್ಯಾರವರೇ ತಪ್ಪಾಗಿದೆ ಅದನ್ನು ರದ್ದು ಮಾಡುತ್ತೇವೆಂದು ಹೇಳಿ. ಯಾರ್‍ಯಾರು ತಿಂದು ಅಪಾಯಿಂಟ್‌ಮೆಂಟ್ ಮಾಡಿದ್ದಾರೆ ಅದನ್ನು ರದ್ದು ಮಾಡುತ್ತೇವೆಂದು ಧೈರ್ಯವಾಗಿ ಹೇಳಿ. ಪ್ರಾರಂಭದಲ್ಲಿ ಹೇಳಿದಂತಹವರು ಈಗ ಏತಕ್ಕೆ ವಾಪಸ್ಸು ಹೋಗುತ್ತಾ ಇದ್ದೀರಿ?

ಶ್ರೀ ಡಿ.ಬಿ. ಚಂದ್ರೇಗೌಡ : ಈಗ ಮಾನ್ಯ ಸಿಂಧ್ಯಾರವರು ಕೇಳಿದ ಹಾಗೆ ತಾತ್ಕಾಲಿಕವಾಗಿ ನೇಮಕಾತಿ ಏನು ಮಾಡಿಕೊಂಡಿದ್ದೀರಿ ಅದು ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಅವರನ್ನು ಖಾಯಂಗೊಳಿಸಬೇಕಾಗುತ್ತದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಲುಕ್ಸಾನು ಆಗುತ್ತಿದೆಯೆಂದು ಗೊತ್ತಿದ್ದರೂ ಟೆಂಪರರಿ ನೇಮಕ ಮಾಡಿಕೊಂಡ ಉದ್ದೇಶವೇನು? ಹಿಂದಿನ ಸರ್ಕಾರ ಡೀನ್ಯಾಷನಲೈಸ್ ಮಾಡತಕ್ಕ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದರು. ಡೀನ್ಯಾಷನಲೈಸ್‌ಗೆ ಕಾರಣ ಹುಡುಕುವುದಕ್ಕೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಲುಕ್ಸಾನು ಏನಾದರೂ ಆಗುತ್ತೆ?

ಶ್ರೀ ಭೀಮಣ್ಣ ಖಂಡ್ರೆ : ಒಟ್ಟು 4859 ಜನರನ್ನು ಅಪಾಯಿಂಟ್‌ಮೆಂಟ್ ಮಾಡಿದ್ದೇವೆ. ಡ್ರೈವರ್ಸ್ ಮತ್ತು ಕಂಡೆಕ್ಟರ್‌ಗಳು ಟ್ರೈನ್ಡ್ ಆದವರು ಇದ್ದಾರೆ. ಅನ್‌ಟ್ರೈನ್ಡ್ ಯಾರೂ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ : 4859 ಜನರನ್ನು ತಾತ್ಕಾಲಿಕವಾಗಿ ಅಪಾಯಿಂಟಮೆಂಟ್ ಮಾಡಿದ್ದೀರಿ. ಸಿಂಧ್ಯಾರವರು ಹೇಳಿದ ಹಾಗೆ ಮೊದಲನೆಯ ಪ್ರಶ್ನೆ ಟೆಂಪರರಿ ಅಪಾಯಿಂಟ್‌ಮೆಂಟ್ ಮಾಡಲಿಕ್ಕೆ ಪ್ರಾವಿಜನ್ ಇದೆಯೇ? ಎರಡನೆಯದು ಅದರೊಳಗೆ ರೋಸ್ಟರ್ ಸಿಸ್ಟಮ್ ಫಾಲೋ ಮಾಡಿದ್ದೀರಾ? ಮೂರನೆಯದು ಅದರ ಅವಶ್ಯಕತೆಯೇನು?

ಶ್ರೀ ಭೀಮಣ್ಣ ಖಂಡ್ರೆ : ಸ್ವಲ್ಪ ತಾಳ್ಮೆಯಿಂದ ಇರಬೇಕು. ನಾನು ಹೇಳುವುದಕ್ಕೆ ನಿಂತಿದ್ದೇನೆ. ನೀವು ಮಧ್ಯೆ ಹೇಳಿದರೆ ಏನೂ ಮಾಡುವುದಕ್ಕಾಗುವುದಿಲ್ಲ. ನಾನು ಉತ್ತರ ಕೊಟ್ಟ ನಂತರ ಸಮಾಧಾನವಾಗಲಿಲ್ಲವೆಂದರೆ ನೀವು ಕೇಳಿ ನಾನು ಹೇಳುತ್ತೇನೆ.

ಶ್ರೀ ಎಂ. ಮಹದೇವ್ : ಮಾನ್ಯ ಮಂತ್ರಿಗಳ ಮಾತನ್ನು ನಾವು ಅರ್ಥ ಮಾಡಿಕೊಳ್ಳಬೇಕಾದರೆ ನಮಗೆ ಒಬ್ಬರ ಸಹಾಯ ಬೇಕು. ಅವರು ಏನು ಮಾತನಾಡುತ್ತಾರೆ ನಮಗೆ ಅರ್ಥವಾಗುವುದಿಲ್ಲ. ಜೊತೆಗೆ ಅವರು ಸ್ಪೀಡಾಗಿ ಮಾತನಾಡುತ್ತಾರೆ.

ಶ್ರೀ ಸಿ. ಭೈರೇಗೌಡ : ಸಾರಿಗೆ ಸಂಸ್ಥೆ ಬಸ್ಸಿಗೆ ಬ್ರೇಕ್ ಇರುವುದಿಲ್ಲ. ಅದು ಸ್ಪೀಡಾಗಿ ಹೋಗುತ್ತದೆ. ಅದೇ ರೀತಿ ಮಂತ್ರಿಗಳು ಸಹ, ಏನೂ ಮಾಡುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು : ಮಂತ್ರಿಗಳು ತಾವು ಉತ್ತರ ಕೊಡಿ ನಾನು ಪ್ರಶ್ನೋತ್ತರ ವೇಳೆ ಮುಗಿಸುತ್ತೇನೆ.

SRI BHEEMANNA KHANDRE : There is a provision in the rules to recruit persons on temporary basis. It is provided in the rules of KSRTC. ನಮಗೆ ಅವಶ್ಯಕತೆ ಇದೆ. ಗೌರ್ನಮೆಂಟ್ ಬ್ಯಾನ್ ಮಾಡಿದ ಕಾರಣ ರಿಕ್ರೂಟ್‌ಮೆಂಟ್ ಆಗಿ ಅಪಾಯಿಂಟ್‌ಮೆಂಟ್ ಆಗಿಲ್ಲ, ಟೆಂಪರರಿಯಾಗಿ ಬೇಕಾಗಿದೆಯೆಂದು ಅಪಾಯಿಂಟ್‌ಮೆಂಟ್ ಮಾಡಿದ್ದಾರೆ. ಅವರೆಲ್ಲರೂ ಟ್ರೈನ್ಡ್ ಇದ್ದಾರೆ. ಯಾರೂ ಅನ್‌ಟ್ರೈನ್ಡ್ ಇಲ್ಲ. ಮಾನ್ಯ ಚಂದ್ರೇಗೌಡರು ಸುಪ್ರೀಂ ಕೋರ್ಟ್ ಆಜ್ಞೆ ಪ್ರಕಾರ ಅವರನ್ನು ಪರ್ಮನೆಂಟ್ ಮಾಡಬೇಕಾಗುತ್ತದೆಂದು ಹೇಳಿದರು. ಅದಕ್ಕೆ ಕೆಲವು ಕಂಡಿಷನ್‌ಗಳು ಇವೆ. 90 ದಿವಸ ಪೂರ್ಣವಾಗಿದ್ದು ಆಮೇಲೆ 180 ದಿವಸ ಆಗಿದ್ದರೆ ಸುಪ್ರೀಂ ಕೋರ್ಟ್ ಜಡ್ಜಮೆಂಟ್ ಪ್ರಕಾರ ಅವರಿಗೆ ಪರ್ಮನೆಂಟ್ ಮಾಡುವ ಪ್ರಸಂಗ ಇದೆ. ಅದರೊಳಗೆ ಅಡ್ಜೆಸ್ಟ್‌ಮೆಂಟ್ ಮಾಡಿಕೊಂಡಿದ್ದೇವೆ. ಅವರನ್ನು ಪರ್ಮನೆಂಟ್ ಮಾಡಲಿಕ್ಕೆ ಏನೂ ತೊಂದರೆಯಾಗುವುದಿಲ್ಲ. ಅವರನ್ನು 90 ದಿವಸದೊಳಗೆ ತೆಗೆದರೂ ತೊಂದರೆಯಾಗುವುದಿಲ್ಲ. ಆ ದೃಷ್ಟಿಯಿಂದ ಸಧ್ಯದಲ್ಲಿ ಅವರ ಅವಶ್ಯಕತೆ ಇದ್ದ ಕಾರಣ ನಿಯಮದ ಪ್ರಕಾರ ನಾವು ಅಪಾಯಿಂಟ್‌ಮೆಂಟ್ ಮಾಡಿದ್ದೇವೆ. ಅವರನ್ನು ಟೆಂಪರರಿ ಇಟ್ಟಿದ್ದೇವೆ. ಅವಶ್ಯಕತೆ ಇದ್ದಾಗ ತೆಗೆದುಕೊಳ್ಳುತ್ತೇವೆ, ಇಲ್ಲದಿದ್ದರೆ ಬಿಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಮಗೆ ಉತ್ತರ ಬರದಿದ್ದರೆ ನಾವು ಪ್ರಶ್ನೆಯನ್ನು ಏತಕ್ಕೆ ಕೇಳಿಸಬೇಕು. ನಾನು ಕೇಳಿದ್ದೇನೆ, ಹಿಂದಿನ ಸರ್ಕಾರ ಕೆಲವು ಭಾಗಗಳಲ್ಲಿ ಡೀಸ್ಯಾಷನಲೈಸೇಷನ್ ಮಾಡತಕ್ಕಂತ ಕಾರ್ಯಕ್ರಮ ಹಾಕಿಕೊಂಡಿದ್ದರ ಉದ್ದೇಶ ಪೂರ್ಣ ಆಗುವುದಕ್ಕೆ ಬೇಕಾದಂಥ ಮಾಹಿತಿಯನ್ನು ಒದಗಿಸುವುದಕ್ಕಾಗಿ ಅಪಾಯಿಂಟ್‌ಮೆಂಟನ್ನು ಮಾಡಿಕೊಂಡಿದ್ದಾರೆ. ಆದರ ಡೀಸೆಂಟ್ರಲೈಸೇಷನ್ ಬಗ್ಗೆ ಈ ಸರ್ಕಾರದ ನಿಲುವು ಏನು? ಇದು ಮೂಲಭೂತವಾದ ಪ್ರಶ್ನೆ. ಇದಕ್ಕೆ ಉತ್ತರ ಹೇಳದಿದ್ದರೆ ಹೇಗೆ?

ಗೊಂದಲ

ಶ್ರೀ ಬಿ. ಎಸ್. ಯಡಿಯೂರಪ್ಪ : ಎರಡನೆಯದಾಗಿ ಈ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಬೇಕಾದರೆ 25 ಸಾವಿರದಿಂದ ಒಂದು ಲಕ್ಷ ರೂಪಾಯಿಯವರೆಗೆ ಲಂಚ ತೆಗೆದುಕೊಂಡಿದ್ದಾರೆಂದು ಲಿಖಿತ ಮೂಲಕ ಕಂಪ್ಲೆಂಟ್ ಬಂದಿದೆ. ಇದು ನಿಮ್ಮ ಗಮನಕ್ಕೆ ಬಂದಿದೆಯೇ? ಇದನ್ನು ನೀವು ಒಪ್ಪುತ್ತೀರಾ?

ಶ್ರೀ ಭೀಮಣ್ಣ ಖಂಡ್ರೆ : ಕಂಪ್ಲೇಟ್ ಬಂದಾಗ ಎನ್‌ಕ್ವೈರಿ ಮಾಡಬಹುದು. ಯಾ ವ ರೀತಿಯ ರಿಟನ್ ಕಂಪ್ಲೇಟ್ ಸಹ ನಮಗೆ ಬಂದಿಲ್ಲ. ಯಾರು ಬರೆದಿದ್ದಾರೆಂದು ನಾವು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಒಂದು ಮಾತನ್ನು ಹೇಳಬಹುದು. ಯಾರೋ ಏನೋ ಹೇಳುತ್ತಿದ್ದಾರೆಂದರೆ ಅದನ್ನು ನಾವು ಎನ್‌ಕ್ವೈರಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಸಾರ್ವತ್ರಿಕವಾಗಿ ಡೀಸ್ಯಾಷನಲೈಸ್ ಮಾಡತಕ್ಕಂತದ್ದರ ಬಗ್ಗೆ ನಿಮ್ಮ ಸರ್ಕಾರದ ನೀತಿ ಏನು?

ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾ ಇದನ್ನು ಸಪರೇಟ್ ಮಾಡುತ್ತೇವೆ ವಿಭಾಗವಾಗಿ ಮಾಡುತ್ತಿದ್ದೇವೆಂದು ಹೇಳಿದ್ದರು. ಇದರ ಬಗ್ಗೆ ಸರ್ಕಾರದ ನಿಲುವು ಏನು?

ಶ್ರೀ ಭೀಮಣ್ಣ ಖಂಡ್ರೆ : ಅದನ್ನು ಇನ್ನು ಪರಿಶೀಲನೆ ಮಾಡುತ್ತಾ ಇದ್ದೇವೆ.

ಶ್ರೀ ಸಿ. ಬೈರೇಗೌಡ : ಹೆಚ್ಚು ಹಣ ಕೊಟ್ಟಿರುವುದರಿಂದ ಸುಮಾರು 79 ಕೋಟಿ ರೂಪಾಯಿ ಹಣ ನಷ್ಟ ಆಗುವುದಕ್ಕೆ ಕಾರಣ ಆಗಿಲ್ಲವೆ? ನಿಮ್ಮ ರಿಜನಲ್ ವರ್ಕ ಷಾಪಿನಲ್ಲಿ ಬಾಡಿ ಬಿಲ್ಡ್ ಮಾಡಿದ್ದರೆ ಎಷ್ಟು ಆಗುತ್ತಿತ್ತು? ಹೊರಗಡೆ ಎಷ್ಟು ಕೊಡುತ್ತಿದ್ದೀರಿ?

ಶ್ರೀ ಭೀಮಣ್ಣ ಖಂಡ್ರೆ : ನಿಮಗೆ ಸ್ಯಾಟಿಸ್ ಫೈ ಆಗದಿದ್ದರೆ ನಾನು ಏನು ಮಾಡುವುದಕ್ಕಾಗುವುದಿಲ್ಲ. ನಿಮಗೆ ಸ್ಯಾಟಿಸ್ ಫೈ ಆಗುವಂತೆ ಉತ್ತರ ಕೊಟ್ಟಿದ್ದೇನೆ ಎಂದು ಅಂದುಕೊಂಡು ಕೊಟ್ಟಿದ್ದೇನೆ. ನೀವು ಏನು ಕೇಳಿದ್ದೀರಿ ಅದಕ್ಕೆ ಉತ್ತರ ಕೊಟ್ಟಿದ್ದೇನೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಸಾರ್ವಜನಿಕ ಸಾರಿಗೆ ಖಾಸಗೀಕರಣ

480 - ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಚಟುವಟಿಕೆಗಳಲ್ಲಿ ಭಾಗಶಃ ಖಾಸಗೀಕರಣದ ತೀರ್ಮಾನವನ್ನು ಸರ್ಕಾರವು ಕೈಗೊಂಡಿದೆಯೇ?

ಆ) ಪರ್ಯಾಯವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಅನ್ವಯಿಸುವಂತೆ ಖಾಸಗಿ ಕ್ಷೇತ್ರದ ಸೇವಾ ನಿಯಮಗಳನ್ನು ಅಳವಡಿಸುವ ಆಲೋಚನೆ ಸರ್ಕಾರಕ್ಕೆ ಇದೆಯೆನ್ನುವುದು ನಿಜವೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಚನ್ನಪಟ್ಟಣದಲ್ಲಿ ಬಸ್ ನಿಲ್ದಾಣ ಹಾಗೂ ತಂಗು ದಾಣಗಳನ್ನು ನಿರ್ಮಾಣ

1072 - ಶ್ರೀ ಸಾದತ್ ಅಲಿಖಾನ್ (ಚೆನ್ನಪಟ್ಟಣ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚನ್ನಪಟ್ಟಣ ಟೌನ್ ನಲ್ಲಿ ಸ್ವಾಧೀನಪಡಿಸಿಕೊಂಡಿರುವ ಭೂಮಿಯಲ್ಲಿ ಕ.ರಾ.ರ.ಸಾ. ಸಂಸ್ಥೆಯ ಆಧುನಿಕ ಬಸ್ ನಿಲ್ದಾಣವನ್ನು ನಿರ್ಮಿಸಬೇಕಾಗಿರುವುದು ನಿಜವೇ?

ಆ) ಬಸ್ ನಿಲ್ದಾಣ ಕಟ್ಟಡ ನಿರ್ಮಾಣದ ಅಂದಾಜಿನ ಒಟ್ಟು ಮೊತ್ತವೆಷ್ಟು?

ಇ) ಕಟ್ಟಡದ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಈ) ಕಳೆದ ಎರಡು ವರ್ಷಗಳಿಂದ ಚೆನ್ನಪಟ್ಟಣದ ಸಿ.ಎಸ್.ಎಸ್. ಮಿಲ್ ಮತ್ತು ಮಹಾದೇವಿ ಚೌಕದ ಬಳಿ ಎರಡು ಬಸ್ ತಂಗುದಾಣಗಳ ಕಟ್ಟಡ ಕೆಲಸಗಳನ್ನು ಕೈಗೆತ್ತಿ ಕೊಳ್ಳದಿರುವುದು ನಿಜವೇ?

ಉ) ಇದುವರೆವಿಗೂ ಕಟ್ಟಡದ ಕೆಲಸಗಳನ್ನು ಕೈಗೆತ್ತಿಕೊಳ್ಳದಿರಲು ಕಾರಣಗಳು

ಊ) ಇವುಗಳನ್ನು ಯಾವಾಗ ನಿರ್ಮಿಸಲಾಗುವುದು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು.

ಆ) ಅಂದಾಜುಗಳನ್ನು ಇನ್ನು ತಯಾರು ಮಾಡಬೇಕಾಗಿದೆ.

ಇ) ಅಂದಾಜುಗಳನ್ನು ಪೂರ್ಣಗೊಳಿಸಿದ ನಂತರ.

ಈ) ಹೌದು

ಉ) ಬೇಕಾಗಿದ್ದ ಭೂಮಿಯ ಕ.ರಾ.ರ.ಸಾ. ಸಂಸ್ಥೆಯ ಒಡೆತನದಲ್ಲಿರಲಿಲ್ಲ. ಚೆನ್ನಪಟ್ಟಣ ಪುರಸಭೆಯು ದಿನಾಂಕ : 16-4-1992ರಂದು ಬೇಕಾಗಿರುವ ಭೂಮಿಯನ್ನು ಒದಗಿಸಿದೆ.

ಊ) ಜನವರಿ 93ರಿಂದ ಕೆಲಸವನ್ನು ಪ್ರಾರಂಭಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೇ 8ನೇ ಪಟ್ಟಿಯಲ್ಲಿರುವ 46 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 85, 482, 834, 549, 6, 837, 836, ಮತ್ತು 1071 ಪ್ರಶ್ನೆಗಳನ್ನು ಹೊರತು ಪಡಿಸಿ ಇನ್ನುಳಿದ 40 ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ. ,

ದಕ್ಷಿಣ ಕನ್ನಡದ ಸಹಕಾರಿ ಅಕ್ಕಿ ಗಿರಣಿಗಳಿಗೆ ಭತ್ತ ಪೂರೈಕೆ

84 - ಶ್ರೀ ಜಿ.ಎನ್. ಆಚಾರ್ (ಬೈಂದೂರು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ದಕ್ಷಿಣ ಕನ್ನಡ ಜಿಲ್ಲೆಗೆ ಪ್ರತಿ ವರ್ಷ ಸಾರ್ವಜನಿಕ ವಿತರಣಾ ವ್ಯವಸ್ಥೆ ಮೂಲಕ ಗ್ರಾಹಕರಿಗೆ ವಿತರಿಸಲು ಹೊರ ಜಿಲ್ಲೆಗಳಿಂದ ಎಷ್ಟು ಪ್ರಮಾಣದ ಅಕ್ಕಿಯನ್ನು ಕರ್ನಾಟಕ ಆಹಾರ ಮತ್ತು ನಗರೀಕ ಸರಬರಾಜು ನಿಗಮ ಒದಗಿಸುತ್ತದೆ?

2) ಸರ್ಕಾರದಿಂದ ಲಕ್ಷಾಂತರ ರೂಪಾಯಿಗಳ ನೆರವು ನೀಡಿ ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕು ಕೃಷಿ ಉತ್ಪನ್ನ ಸಹಕಾರಿ ಮಾರಾಟ ಸಂಘಗಳಲ್ಲಿ ಅಕ್ಕಿ ಗಿರಣಿ ಸ್ಥಾಪಿಸಿದ್ದು, ಅಲ್ಲಿ ಭತ್ತವಿಲ್ಲದೆ ಕೆಲಸ ಕುಂಠಿತವಾಗಿದ್ದು ಸರ್ಕಾರದ ಗಮನಕ್ಕೆ ಬಂದಿರುವುದೇ?

3) ಇತರ ಜಿಲ್ಲೆಗಳ ಖಾಸಗೀ ಅಕ್ಕಿ ಗಿರಣಿಗಳಲ್ಲಿ ಅಕ್ಕಿ ತಯಾರಿಸಿ ದಕ್ಷಿಣ ಕನ್ನಡ ಜಿಲ್ಲೆಗೆ ಪೂರೈಸುವ ಬದಲು ಜಿಲ್ಲೆಯ ಸಹಕಾರಿ ಅಕ್ಕಿ ಗಿರಣಿಗಳಿಗೆ ಹೊರ ಜಿಲ್ಲೆಗಳಿಂದ ಭತ್ತ ಒದಗಿಸಿ ಸ್ಥಳೀಯವಾಗಿ ಉತ್ತಮ ಅಕ್ಕಿ ತಯಾರಿಸಿ, ಸಾರ್ವಜನಿಕ ವಿತರಣೆ ವ್ಯವಸ್ಥೆಗೆ ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ, ದಕ್ಷಿಣ ಕನ್ನಡ ಜಿಲ್ಲೆಗೆ ಸಾರ್ವಜನಿಕ ವಿತರಣೆಗೆ ಅಕ್ಕಿಯನ್ನು ಒದಗಿಸುವುದಿಲ್ಲ. ಬದಲಾಗಿ ಈ ಜಿಲ್ಲೆಗೆ ಭಾರತ ಆಹಾರ ನಿಗಮದಿಂದ ಸಾರ್ವಜನಿಕ ವಿತರಣೆಗಾಗಿ 14,973 ಎಂ.ಟಿ. ಅಕ್ಕಿಯನ್ನು ವಾರ್ಷಿಕವಾಗಿ ಸರಬರಾಜು ಮಾಡಲಾಗುತ್ತಿದೆ.

ಆ) ಇಲ್ಲ.

ಇ) ಕರ್ನಾಟಕ ಆಹಾರ ನೀತಿಯ ಪ್ರಕಾರ ಭತ್ತವು ಅಂತರ ಜಿಲ್ಲೆಯಲ್ಲಿ ಸಾಗಾಣಿಕೆಗೆ ಮುಕ್ತವಾಗಿದೆ. ರಾಜ್ಯ ಸರ್ಕಾರವು ಲೆವಿ ಆದೇಶದಡಿಯಲ್ಲಿ ಅಕ್ಕಿಯನ್ನು ಮಾತ್ರ ಲೆವಿಯನ್ನಾಗಿ ಸಂಗ್ರಹಿಸುತ್ತಿದೆಯೇ ಹೊರತು ಭತ್ತವನ್ನು ಸಂಗ್ರಹಿಸುವುದಿಲ್ಲ. ಹಾಗೂ ಕೇಂದ್ರದಿಂದ ಅಕ್ಕಿಯನ್ನು ಹಂಚಿಕೆ ಪಡೆದು ಸಾರ್ವಜನಿಕ ವಿತರಣೆ ವ್ಯವಸ್ಥೆಯಲ್ಲಿ ವಿತರಿಸಲಾಗುತ್ತಿದೆ. ಆದ್ದರಿಂದ ಭತ್ತವನ್ನು ಬೇರೆ ಜಿಲ್ಲೆಗಳಿಂದ ಪಡೆದು ದಕ್ಷಿಣ ಕನ್ನಡ ಜಿಲ್ಲೆಯ ಗಿರಣಿಗಳಲ್ಲಿ ಮಿಲ್ ಮಾಡಿಸಿ, ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ವಿತರಣೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ನೆಲಮಂಗಲದಲ್ಲಿ ದೊಡ್ಡ ಬಸ್ ನಿಲ್ದಾಣ ನಿರ್ಮಾಣ

701 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನೆಲಮಂಗಲವು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4ರಲ್ಲಿದ್ದು , ಅಲ್ಲಿನ ಬಸ್ ನಿಲ್ದಾಣ ಅತಿ ಚಿಕ್ಕದಾಗಿರುವುದರಿಂದ ಸಾರ್ವಜನಿಕರಿಗೆ ಹಾಗೂ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸೂಕ್ತ ಜಾಗವನ್ನು ಸ್ವಾಧೀನಪಡಿಸಿಕೊಂಡು ದೊಡ್ಡ ಬಸ್ ನಿಲ್ದಾಣವನನ್ನು ನಿರ್ಮಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು

ಆ) ಹೌದು

ಬೆಂಗಳೂರು ನಗರದಲ್ಲಿ ಕಳಪೆ ಅಕ್ಕಿ ಸರಬರಾಜು

177 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಬೆಂಗಳೂರು ನಗರದಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಕಳಪೆ ಗುಣ ಮಟ್ಟದ ಅಕ್ಕಿಯನ್ನು ಸರಬರಾಜು ಮಾಡಲಾಗುತ್ತಿದ್ದುದು ಸರ್ಕಾರದ ಗಮನಕ್ಕೆ ಬಂದಿದೆ?*

2) *ಹಾಗಿದ್ದಲ್ಲಿ ಈ ಕಳಪೆ ದರ್ಜೆಯ ಅಕ್ಕಿಯನ್ನು ಭಾರತ ಆಹಾರ ನಿಗಮಕ್ಕೆ ಹಿಂದುರಿಗಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು?*

3) *ನ್ಯಾಯಬೆಲೆ ಅಂಗಡಿಗಳ ಮೂಲಕ ಒಳ್ಳೆ ಗುಣ ಮಟ್ಟದ ಅಕ್ಕಿಯನ್ನು ವಿತರಿಸಲು ಕೈಗೊಂಡ ಕ್ರಮಗಳಾವುವು?*

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ಸಾಗರೀಕ ಸರಬರಾಜು ಸಚಿವರು) :

ಅ) ಭಾರತ ಆಹಾರ ನಿಗಮವು ಪಂಜಾಬು ರಾಜ್ಯದಿಂದ ಪಡೆದ ಅಕ್ಕಿಯನ್ನು ಸರಬರಾಜು ಮಾಡುತ್ತಿದೆ ಒಮ್ಮೊಮ್ಮೆ ಈ ಅಕ್ಕಿಯ ಗುಣಮಟ್ಟ ಕಳಪೆಯಾಗಿರುತ್ತದೆ.

ಆ) ಈ ಅಕ್ಕಿಯು ಮಾನವ ಬಳಕೆಗೆ ಯೋಗ್ಯವಾಗಿಲ್ಲದಿದ್ದಕ್ಕೆ ಇದನ್ನು ಹಿಂದಿರುಗಿಸಿ ಒಳ್ಳೆಯ ಗುಣಮಟ್ಟದ ಅಕ್ಕಿಯನ್ನು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸಾರ್ವಜನಿಕ ವಿತರಣೆಗೆ ಒಳ್ಳೆಯ ಗುಣ ಮಟ್ಟದ ಅಕ್ಕಿಯನ್ನು ಸರಬರಾಜು ಮಾಡಲು ಭಾರತ ಆಹಾರವನ್ನು ನಿಗಮವನ್ನು ಕೋರಲಾಗಿದೆ. ಉಪಯೋಗಿಸಲು ಯೋಗ್ಯವಾಗಿಲ್ಲದ ಅಕ್ಕಿಯನ್ನು ಅಂಗೀಕರಿಸಲಾಗುತ್ತಿಲ್ಲ. ಮತ್ತು ಬಾರತ ಆಹಾರ ನಿಗಮದಿಂದ ಇದನ್ನು ಬದಲಾಯಿಸಲು ಕ್ರಮ ಕೈಗೊಳ್ಳಲಾಗಿದೆ.

ಬೆಂಗಳೂರು ಸಿಟಿಯಲ್ಲಿ ಸೂಪರ್ ಡಿಲಕ್ಸ್ ಬಸ್

176 - ಶ್ರೀ ರಾಮಲಿಂಗರೆಡ್ಡಿ, (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಬೆಂಗಳೂರು ನಗರ ಸಾರಿಗೆಯಿಂದ ಸುವಿಹಾರಿ ಬಸ್ಸುಗಳನ್ನು ಬೆಂಗಳೂರು ನಗರದಲ್ಲಿ ಓಡಿಸುತ್ತಿದ್ದಾರಾ?*

ಆ) *ಹಾಗಿಲ್ಲದ ಪಕ್ಷದಲ್ಲಿ ಸರ್ಕಾರ ಸುವಿಹಾರಿ ಬಸ್ಸುಗಳನ್ನು ವಿಶೇಷ ದರಗಳಲ್ಲಿ ಅತಿ ಜನಸಂದಣಿ ಇರುವಂತ ಮಾರ್ಗಗಳಲ್ಲಿ ಕ್ರಮ ತೆಗೆದುಕೊಳ್ಳುವುದೇ?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲ

ಆ) ಸದ್ಯದ ಪರಿಸ್ಥಿತಿಯಲ್ಲಿ ಬೆಂಗಳೂರು ನಗರದಲ್ಲಿ ಸುವಿಹಾರಿ ಬಸ್ಸುಗಳು ಓಡಿಸುವ ಯಾವುದೇ ರೀತಿಯ ಪ್ರಸ್ತಾವನೆ ಇರುವುದಿಲ್ಲ.

ಆಡುಗೋಡಿಯಿಂದ ಯಶವಂತಪುರಕ್ಕೆ ನೇರ ಬಸ್ ಸೌಲಭ್ಯ

882 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆಡುಗೋಡಿಯಿಂದ ಯಶವಂತಪುರಕ್ಕೆ ನೇರವಾದ ಬಿ.ಟಿ.ಎಸ್. ಬಸ್ಸು ಸೌಲಭ್ಯ ಇಲ್ಲದಿರುವುದು ನಿಜವೇ?*

ಆ) *ಹಾಗಿದ್ದಲ್ಲಿ ಸರ್ಕಾರವು ಮಾರ್ಗ ಸಂಖ್ಯೆ 171-ಬಿ ಬಸ್ಸನ್ನು ಹೊಂಬೇಗೌಡನಗರ, ನಿಮಾಖಿನ್ಸ್, ಬೆಂಗಳೂರು ಡೈರಿ, ಹೊಸೂರು ರಸ್ತೆ ಚೆಕ್ ಪೋಸ್ಟ್*

ಕೋರ ಮಂಗಲ, ಆಡುಗೋಡಿ ಮತ್ತು ಮೈಕೋ ಲೇ ಔಟ್ ಮೂಲಕ ಹಾದು ಹೋಗುವಂತೆ ರಿಂಗ್ ರೂಟ್ ಆಗಿ ಪರಿವರ್ತಿಸಲು ಕ್ರಮ ಕೈಗೊಳ್ಳುವುದೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು.

ಆ) ಸೂಕ್ತವಲ್ಲ

ನಿಲುಗಡೆ ಮಾಡಲಾಗಿರುವ ಔರಾದ್ ಬೆಂಗಳೂರು ಸೂಪರ್ ಡಿಲಕ್ಸ್ ಬಸ್ಸಿನ ಮರು ಸಂಚಾರ ಪ್ರಾರಂಭ

919 - ಶ್ರೀ ಗುರುಪಾದಪ್ಪಾ ನಾಗ್ಮಾರಪಲ್ಲಿ (ಔರದ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) *ಔರದ್-ಬೆಂಗಳೂರು ನಗರ ಸೂಪರ್ ಡಿಲಕ್ಸ್ ಬಸ್ಸಿನ ಸಂಚಾರವನ್ನು ಯಾವಾಗ ಪ್ರಾರಂಭಿಸಲಾಯಿತು ಮತ್ತು ಆ ಬಸ್ಸು ಯಾವ ಮಾರ್ಗಗಳ ಮೂಲಕ ಬೆಂಗಳೂರು ತಲುಪುತ್ತಿತ್ತು ?*

ಆ) *ಆ ಬಸ್ಸು ಎಷ್ಟು ದಿನ ಈ ಮಾರ್ಗದಲ್ಲಿ ಸಂಚಾರ ಮಾಡಿರುತ್ತದೆ ?*

ಇ) *ಯಾವುದೇ ಕಾರಣಗಳನ್ನು ನೀಡದೆ ಆ ಮಾರ್ಗದ ಬಸ್ ಸಂಚಾರವನ್ನು ಹಠಾತ್ತನೇ ನಿಲ್ಲಿಸಲು ಕಾರಣಗಳೇನು ?*

ಈ) *ಒಂದು ವೇಳೆ ಗಳಿಕೆ ಇಲ್ಲದೆಯೋ ಅಥವಾ ಪ್ರಯಾಣಿಕರಿಲ್ಲದೆಯೋ ಆ ಬಸ್ಸಿನ ಸಂಚಾರವನ್ನು ನಿಲ್ಲಿಸಿದ್ದಲ್ಲಿ ಪುನಃ ಈ ಬಸ್ಸಿನ ಸಂಚಾರವನ್ನು ಔರಾದ್ -ಬೀದರ್-ಹೈದರಾಬಾದ್ ಮೂಲಕವಾಗಿ ಬೆಂಗಳೂರಿಗೆ ತಲುಪುವಂತೆ ಸಂಚಾರವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ ?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಔರದ್-ಬೆಂಗಳೂರು ಸುಖಾಸೀನ ಸಾರಿಗೆಯನ್ನು ತಾ. 17-5-1992ರಂದು ಪ್ರಾರಂಭಿಸಲಾಯಿತು. ಮತ್ತು ಸಹ ಸಾರಿಗೆಯನ್ನು ಭಾಲ್ಕಿ, ಹುಮ್ನಾಬಾದ್, ಗುಲ್ಬರ್ಗ, ಜೇವರ್ಗಿ, ಶಹಾಪುರ, ಸುರಪುರ, ಲಿಂಗಸೂಗೂರು, ಸಿಂಧನೂರು, ಸಿರುಗುಪ್ಪ, ಬಳ್ಳಾರಿ, ಚಳ್ಳಕೆರೆ, ಹಿರಿಯೂರು, ಸಿರಾ ಮತ್ತು ತುಮಕೂರು ಮಾರ್ಗವಾಗಿ ಬೆಂಗಳೂರು ತಲುಪುತ್ತಿತ್ತು.

ಆ) 88 ದಿವಸಗಳು.

ಇ) ಪ್ರಯಾಣಿಕರ ಬೆಂಬಲ ಪಡೆಯಲು ವಿಫಲವಾಗಿದ್ದರಿಂದ.

ಈ) ಆಂಧ್ರ ಪ್ರದೇಶ ಸರ್ಕಾರದೊಡನೆ ಮುಂದಿನ ಅಂತರ ರಾಜ್ಯ ಸಾರಿಗೆ ಒಪ್ಪಂದದ ಸಮಯದಲ್ಲಿ ಇದನ್ನು ಪರಿಶೀಲಿಸಲಾಗುವುದು.

ಆಹಾರ ಇಲಾಖೆಯ ವತಿಯಿಂದ ಸಂಚಾರಿ ನ್ಯಾಯಬೆಲೆ ಅಂಗಡಿ

284 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ, (ಔರದ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯವರು ಗುಡ್ಡಗಾಡು ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಬಡ ಜನರಿಗೆ ಸಂಚಾರಿ ನ್ಯಾಯ ಬೆಲೆ ಅಂಗಡಿಗಳ ಮೂಲಕ ಪಡಿತರ ವಸ್ತುಗಳನ್ನು ವಿತರಣೆ ಮಾಡಲು ವಾಹನಗಳನ್ನು ಖರೀದಿಸಿರುವುದು ನಿಜವೇ?

ಆ) ಹಾಗಿದ್ದಲ್ಲಿ ಇದಕ್ಕಾಗಿ ಎಷ್ಟು ವಾಹನಗಳನ್ನು ಖರೀದಿಸಲಾಗಿದೆ. ಹಾಗೂ ಪ್ರತಿಯೊಂದು ವಾಹನಕ್ಕೂ ತಗಲಿರುವ ವೆಚ್ಚವೆಷ್ಟು?

ಇ) ಈ ವಾಹನಗಳನ್ನು ಖರೀದಿಸುವಾಗ ನಿಯಮಾನುಸಾರವಾಗಿ ಟೆಂಡರ್ ಗಳನ್ನು ಕರೆಯಲಾಗಿದೆಯೇ? ಹಾಗೂ ಯಾವ ಯಾವ ಸಂಸ್ಥೆಗಳಿಂದ ಈ ವಾಹನಗಳನ್ನು ಖರೀದಿಸಲಾಗಿದೆ.

ಈ) ಬೀದರ್ ಜಿಲ್ಲೆಗೆ ಇಂತಹ ಎಷ್ಟು ವಾಹನಗಳನ್ನು ನೀಡಲಾಗಿದೆ? (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಉ) ಈ ವಾಹನಗಳ ಖರೀದಿಯಲ್ಲಿ ಅವ್ಯವಹಾರಗಳೇನಾದರೂ ನಡೆದಿದೆಯೇ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ನಿಜ

ಆ) 13 ವಾಹನಗಳನ್ನು ಖರೀದಿಸಲಾಗಿದೆ. ತಗುಲಿದ ಒಟ್ಟು ಮೊತ್ತ ರೂಪಾಯಿಗಳು 51,02,905-86 ಆಗಿರುತ್ತದೆ. ಪ್ರತಿಯೊಂದು ವಾಹನಕ್ಕೆ ತಗುಲಿದ ವೆಚ್ಚ 3,92,531-22 ಮಾತ್ರ.

ಇ) ವಾಹನಗಳನ್ನು ಖರೀದಿಸುವಾಗ ಅಧಿಕೃತ ಡೀಲರ್ ಗಳಿಂದ ಭಾರತ ಸರ್ಕಾರದ ಡಿ.ಜಿ.ಎಸ್. ಅಂಡ್ ಡಿ. ಅಂಗೀಕೃತ ದರಪಟ್ಟಿಗಳನ್ನು ಬೇರೆ ಬೇರೆ ವಾಹನಗಳ ಸಂಬಂಧಪಟ್ಟ ಕಂಪನಿಗಳಿಂದ ಬೆಲೆಗಳ ಪಟ್ಟಿಗಳನ್ನು ತರಿಸಿ ಪರಿಶೀಲಿಸಲಾಗಿದೆ. 13 ಸ್ವರಾಜ್ ಮಜ್ದಾ ವಾಹನಗಳನ್ನು ಕೆ.ಹೆಚ್.ಟಿ. ಏಜನ್ಸೀಸ್ ಪಿ. ಲಿಮಿಟೆಡ್, ಬೆಂಗಳೂರು ಇವರಿಂದ ಖರೀದಿಸಲಾಗಿದೆ.

ಈ) ಇಲ್ಲ.

ಉ) ಇಲ್ಲ.

ಗುಲ್ಬರ್ಗಾ ವಿಭಾಗದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅವ್ಯವಹಾರ.

507 - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಗುಲ್ಬರ್ಗಾ ವಿಭಾಗದಲ್ಲಿ ಬಸ್ಸುಗಳು ನಿಗಧಿತ ವೇಳೆಯಲ್ಲಿ ಸಂಚರಿಸದೆ ಪ್ರಯಾಣಿಕರಿಗೆ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಉದಾ : ಸೇಡಂದಿಂದ ಮುಂಜಾನೆ 7-30 ಗಂಟೆಗೆ ಗುರುಮಿಟ್ ಕಲ್ಲಿಗೆ ಹೋಗುವ ಬಸ್ಸು ದಿನಾಂಕ :4-1-1992, 13-1-92, 17-1-92, 20-1-1992, 22-1-92, 25-1-1992, 27-1-1992, 28-1-1992, 29-1-1992, 31-1-1992 ದಿನಗಳಲ್ಲಿ ಸಂಚರಿಸಿಲ್ಲದಿರುವುದು ನಿಜವೇ?

ಇ) ಸಕಾಲದಲ್ಲಿ ಬಸ್ಸುಗಳಿಲ್ಲದೆ ಪ್ರಯಾಣಿಕರಿಗೆ ತೊಂದರೆಯುಂಟಾಗಿ ಅವರ ಮುಖ್ಯವಾದ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಇದೇ ಬಸ್ಸಿನಿಂದ ಪ್ರತಿ ನಿತ್ಯ ಟಪಾಲು ಸಹ ಬರುವುದು ತಪ್ಪಿ ಅತ್ಯಾವಶ್ಯಕದ ಸಂದೇಶ ಮುಟ್ಟದೇ ನಾಗರೀಕರಿಗೆ ತೊಂದರೆ ಉಂಟಾಗಿರುವುದು ನಿಜವೇ?

ಉ) ಸಂಬಂಧಪಟ್ಟ ಬೇಜವಾಬ್ದಾರಿ ಅಧಿಕಾರಿಗಳ ಮೇಲೆ ಕೈಗೊಳ್ಳುವ ಕ್ರಮವೇನು?

ಊ) ಆ ಭಾಗದ ನಾಗರೀಕರಿಗೆ ಅನುಕೂಲಕ್ಕಾಗಿ ಬಸ್ಸಿನ ವ್ಯವಸ್ಥೆಯನ್ನು ಸರ್ಕಾರವು ಸಮರ್ಪಕವಾಗಿ ಮಾಡಿಕೊಡುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು.

ಆ) ದಿನಾಂಕ : 4-1-92, 13-1-92, 17-1-92, 20-1-92, 25-1-92, 27-1-92 ಮತ್ತು 31-1-92ರಂದು ಕಾರ್ಯಾಚರಣೆಯ್ಯಾಗಿರುವುದಿಲ್ಲ. ಈ ಸಾರಿಗೆಯು ದಿನಾಂಕ: 22-1-92 28-1-92 ಮತ್ತು 29-1-1992 ರಂದು ಕಾರ್ಯಾಚರಣೆಯಾಗಿರುತ್ತದೆ.

ಇ) ಹೌದು.

ಈ) ಹೌದು.

ಉ) ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಊ) ಸಂಬಂಧಪಟ್ಟ ಅಧಿಕಾರಿಗೆ ನಿಗದಿತ ವೇಳೆಗೆ ಸರಿಯಾಗಿ ಸಾರಿಗೆ ವ್ಯವಸ್ಥೆ ಮಾಡಲು ನಿರ್ದೇಶಿಸಲಾಗಿದೆ. ಸೇಡಂ ತಾಲ್ಲೂಕಿನ ಮಾರ್ಗಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದು ವಾಹನಗಳ ಕಾರ್ಯಾಚರಣೆಗೆ ತೊಡಕುಂಟಾಗಿರುತ್ತದೆ. ಆದಾಗ್ಯೂ ಸಾರ್ವಜನಿಕರ ಹಿತ ದೃಷ್ಟಿಯಿಂದ 37 ಅಧಿಕ ಅನುಸೂಚಿಗಳನ್ನು 1992-93ರಲ್ಲಿ ಹೆಚ್ಚಿಸಲು ಯೋಚಿಸಿದೆ.

ರಾಜ್ಯದ ಪಟ್ಟಣ ಪ್ರದೇಶಗಳಲ್ಲಿ ತ್ರೀವರ್ಣ ಪಡಿತರ ಚೀಟಿ

312 - ಶ್ರೀ ಎಸ್. ಶಫಿ. ಅಹ್ಮದ್ (ತುಮಕೂರು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಟ್ಟಣ ಪ್ರದೇಶದಲ್ಲಿ ತ್ರಿವರ್ಣ ಪಡಿತರ ಚೀಟಿಗಳನ್ನು ವಿತರಿಸಲು ಸರ್ಕಾರ ಅನುಸರಿಸುತ್ತಿರುವ ಪದ್ಧತಿಯಾವುದು?

ಆ) ಘೋಷಿತ ಕೊಳಚೆ ಪ್ರದೇಶಗಳಲ್ಲಿ ವಾಸಿಸದೇ ಇರುವ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಇತರ ಜಾತಿಯವರಿಗೆ ತ್ರಿವರ್ಣ ಪಡಿತರ ಚೀಟಿ ನೀಡುವ ಅವಕಾಶ ಕಾಯ್ದಿರಿಸಲಾಗಿದೆಯೇ?

ಇ) ಪಡಿತರ ಚೀಟಿ ನೀಡಲು ಗ್ರಾಮಾಂತರ ಪ್ರದೇಶಗಳಲ್ಲಿ ಪುನರ್ ಸಮೀಕ್ಷೆ ಪ್ರಾರಂಭಿಸಲಾಗಿದೆಯೇ? ತುಮಕೂರು ಪಟ್ಟಣದಲ್ಲಿ ಹೊಸ ನ್ಯಾಯ ಬೆಲೆ ಅಂಗಡಿಗಳನ್ನು ಮಂಜೂರು ಮಾಡಲು ಯಾವ ಪದ್ಧತಿಯನ್ನು ಅನುಸರಿಸಲಾಗಿದೆ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಸರ್ಕಾರಿ ಆದೇಶ ಸಂಖ್ಯೆ : ಎಫ್.ಟಿಡಿ 212 ಡಿಆರ್ ಎ 92 ದಿನಾಂಕ 21.5.92ರ ಪ್ರಕಾರ ಪಟ್ಟಣ ಪ್ರದೇಶಗಳ ಘೋಷಿತ ಕೊಳಚೆ ಪ್ರದೇಶದವರಿಗೆ ಮಾತ್ರ ತ್ರಿವರ್ಣ ಪಡಿತರ ಚೀಟಿಗಳನ್ನು ವಿತರಿಸಲಾಗುತ್ತಿದೆ.

ಆ) ಇಲ್ಲ

ಇ) ಗ್ರಾಮಾಂತರ ಪ್ರದೇಶಗಳಲ್ಲಿ ಸಮೀಕ್ಷಾ ಕಾರ್ಯವು ಪ್ರಗತಿಯಲ್ಲಿದ್ದು ಈ ಕಾರ್ಯ ಪೂರ್ತಿಯಾದ ತಕ್ಷಣ ತ್ರಿವರ್ಣ ಪಡಿತರ ಚೀಟಿಗಳನ್ನು ವಿತರಿಸಲಾಗುವುದು.

ಈ) ನ್ಯಾಯ ಬೆಲೆ ಅಂಗಡಿಗಳನ್ನು ಮಂಜೂರು ಮಾಡುವಲ್ಲಿ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ, ಸಹಕಾರ ಸಂಘಗಳಿಗೆ ಆದ್ಯತೆ ನೀಡಲಾಗುತ್ತಿದೆ. ಒಂದು ವೇಳೆ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವಾಗಲೀ, ಸಹಕಾರಿ ಸಂಘಗಳಾಗಲೀ ಮುಂದೆ ಬರದಿದ್ದಲ್ಲಿ ನಗರ ಪ್ರದೇಶ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಹೊಸ ನ್ಯಾಯ ಬೆಲೆ ಅಂಗಡಿ ತೆರೆಯಲು ಖಾಸಗಿ ವ್ಯಕ್ತಿಗಳನ್ನು ಆದ್ಯತೆಯ ಮೇರೆಗೆ ಪರಿಗಣಿಸಲಾಗುವುದು. ಇತ್ತೀಚೆಗೆ ಸರ್ಕಾರವು ಕರ್ನಾಟಕ ಅಗತ್ಯ ವಸ್ತುಗಳು (ಸಾರ್ವಜನಿಕ ವಿತರಣಾ ವ್ಯವಸ್ಥೆ) ನಿಯಂತ್ರಣ ಆದೇಶ 1992ನ್ನು ಹೊರಡಿಸಿದ್ದು ಇದರಂತೆ ಹೊಸ ನ್ಯಾಯ ಬೆಲೆ ಅಂಗಡಿಗಳ ಮಂಜೂರಾತಿಯನ್ನು ಕ್ರಮ ಬದ್ಧಗೊಳಿಸಲಾಗುತ್ತಿದೆ.

ಬೆಳಗಾವಿಯಲ್ಲಿ ಯೂನಿವರ್ಸಿಟಿ ಕ್ಯಾಂಪಸ್‌ನ ನಿರ್ಮಾಣದ ಬಗ್ಗೆ

382 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿಯಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದವರು ಕ್ಯಾಂಪಸ್ ಕಟ್ಟಲು ಸ್ಥಳವನ್ನು ವಶಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯೂನಿವರ್ಸಿಟಿ ಕ್ಯಾಂಪಸ್ ಕಟ್ಟಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು?

ಇ) ಈ ಕ್ಯಾಂಪಸನ್ನು ಕಟ್ಟಲು ಎಷ್ಟು ಹಣ ಬೇಕಾಗುವುದು ಮತ್ತು ಇದಕ್ಕೆ ಹಣ ಒದಗಿಸಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು?

ಶ್ರೀ ಎಸ್. ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) ಸರ್ಕಾರವು ಕರ್ನಾಟಕ ವಿಶ್ವವಿದ್ಯಾಲಯಕ್ಕೆ 178 ಎಕರೆ 14 ಗುಂಟೆ ಜಮೀನನ್ನು ಬಿಡುಗಡೆ ಮಾಡಿದೆ. ಅದಕ್ಕೆ ವಿಶ್ವವಿದ್ಯಾಲಯವು ರೂ. 11.06 ಲಕ್ಷವನ್ನು ಭರಿಸಿದೆ.

ಇ) ಈ ಕ್ಯಾಂಪಸ್‌ನ್ನು ಕಟ್ಟಲು ಒಟ್ಟು ರೂ. 10 ಕೋಟಿ ಬೇಕಾಗುವುದು ಈ ಬಗ್ಗೆ ವಿಶ್ವವಿದ್ಯಾಲಯದಿಂದ ಪ್ರಸ್ತಾವನೆ ಬಂದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಅನುದಾನವನ್ನು ಬಿಡುಗಡೆ ಮಾಡುವ ವಿಷಯವನ್ನು ಸರಕಾರವು ಪರಿಶೀಲಿಸುವುದು

ಬೆಳಗಾಂ ಜಿಲ್ಲೆ ಬೈಲಹೊಂಗಲದಲ್ಲಿ ಕವರ್ಡ್ ಶೆಲ್ಟರ್ ಹಾಗೂ ಬಸ್ ಶೆಲ್ಟರ್ ಮತ್ತು ಕೆಲಸಗಾರರಿಗೆ ಮನೆಗಳನ್ನು ಕಟ್ಟುವ ಬಗ್ಗೆ

383 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಲಹೊಂಗಲ ಬಸ್ ಸ್ಟ್ಯಾಂಡಿನಲ್ಲಿ ಕವರ್ಡ್ ಶೆಲ್ಟರ್ ಮತ್ತು ಬಸ್ ಶೆಲ್ಟರ್ ಕಟ್ಟಲು ಯಾವ ಕ್ರಮ ಕೈಗೊಳ್ಳಲಾಗಿದೆ? (ಎಕ್ಸ್‌ಟೆನ್ ಷನ್ ಆಫ್ ಬಸ್ ಶೆಲ್ಟರ್)

ಆ) ಕಾರ್ಮಿಕರಿಗೆ, ವಾಸಿಸಲು ಮನೆಗಳನ್ನು ಕಟ್ಟಲು ಯಾವ ಕ್ರಮ ಕೈಗೊಳ್ಳಲಾಗಿದೆ ಮತ್ತು ಅವರಿಗಾಗಿ ಮನೆಗಳನ್ನು ಕಟ್ಟಲು ಜಾಗವನ್ನು ವಶಪಡಿಸಿಕೊಂಡಿರುವ ಸಂಗತಿ ನಿಜವೇ

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) .

ಅ) ಯಾವ ಕ್ರಮ ಕೈಗೊಂಡಿರುವುದಿಲ್ಲ.

ಆ) 1) ಯಾವ ಕ್ರಮ ಕೈಗೊಂಡಿರುವುದಿಲ್ಲ.

2) ನಿಜ, ಜಾಗವು ಸ್ವಾಧೀನದಲ್ಲಿದೆ.

ಕೆ.ಎಸ್. ಆರ್.ಟಿ.ಸಿ. ಬಸ್ ದರಗಳನ್ನು ಏರಿಸುವ ಪ್ರಸ್ತಾಪ

384 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೆ. ಎಸ್. ಆರ್.ಟಿ.ಸಿ. ಬಸ್ ದರಗಳನ್ನು ಏರಿಸುವ ಪ್ರಸ್ತಾಪವು ಸರ್ಕಾರದ ಮುಂದೆ ಇದೆಯೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) .

ಅ) ಹೌದು.

ಗುಲ್ಬರ್ಗಾ ಜಿಲ್ಲೆಯಲ್ಲಿಯ ನ್ಯಾಯ ಬೆಲೆ ಅಂಗಡಿಗಳ ಸಂಖ್ಯೆ

386 - ಶ್ರೀ ಬಾಬುರಾವ್ ಚವಾಣ್ (ಶಹಾಬಾದ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1991ರಿಂದ ಗುಲ್ಬರ್ಗಾ ಜಿಲ್ಲೆಯಲ್ಲಿ ನ್ಯಾಯ ಬೆಲೆ ಅಂಗಡಿ ಸಲುವಾಗಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಇಲ್ಲಿಯವರೆಗೆ ಎಷ್ಟು ನ್ಯಾಯ ಬೆಲೆ ಅಂಗಡಿಗಳಿಗೆ ಪರವಾನಿಗೆ ಕೊಡಲಾಗಿದೆ?

ಇ) ಕೊಡದೇ ಇರುವುದಕ್ಕೆ ಕಾರಣಗಳೇನು?

ಈ) ಇದರಲ್ಲಿ ಶೇ. 18ರಷ್ಟು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಕೊಟ್ಟಿರುವ ಪರವಾನಿಗೆ ಸಂಖ್ಯೆ ಎಷ್ಟು?

ಉ) ಇನ್ನೂ ನ್ಯಾಯ ಬೆಲೆ ಅಂಗಡಿಗಳನ್ನು ಹೆಚ್ಚಿಗೆ ಕೊಡುವಲ್ಲಿ ಸರ್ಕಾರದ ಉತ್ತರವೇನು?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) 705

ಆ)

ಕ್ರ ಸಂ	ತಾಲ್ಲೂಕಿನ ಹೆಸರು	ಮಂಜೂರಾತಿ ಕೊಟ್ಟಿರುವ ಸಂಖ್ಯೆ	ಮಂಜೂರಾತಿ ಕೊಡದೆ ಇರುವ ಸಂಖ್ಯೆ
1)	ಗುಲ್ಬರ್ಗಾ	23	130
2)	ಅಫ್‌ಜಲ್‌ಪುರ	40	50
3)	ಅಲಂದ್	13	45
4)	ಜೀವರ್ಗಿ	36	52
5)	ಸೇಡಂ	06	18
6)	ಚಿತ್ತಾಪುರ	17	42
7)	ಜಂಪ್ಪೋಳಿ	10	30
8)	ಯಾದಗಿರಿ	27	67
9)	ಶಹಪುರ	12	37
10)	ಕೋಐಾಪುರ	20	30
	ಒಟ್ಟು	204	501

ಇ) ಪಟ್ಟಣ ಪ್ರದೇಶದಲ್ಲಿ ಕನಿಷ್ಟ ಮಿತಿ 500 ಪಡಿತರ ಚೀಟಿಗಳು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕನಿಷ್ಠ ಮಿತಿ 300 ಪಡಿತರ ಚೀಟಿಗಳು ಲಭ್ಯವಿದ್ದಲ್ಲಿ ಮಾತ್ರ ನ್ಯಾಯ ಬೆಲೆ ಅಂಗಡಿ ಮಂಜೂರಾತಿ ನೀಡಲು ಅವಕಾಶವಿದೆ. ಸರ್ಕಾರ ರೂಪಿಸಿದ ನಿಯಮಗಳ ಪ್ರಕಾರ ಆದ್ಯತೆಯ ಮೇರೆಗೆ ಅಂದರೆ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ, ಸಹಕಾರಿ ಸಂಘ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಇತ್ಯಾದಿಗಳಿಗೆ ಪ್ರಾಧಿಕಾರ ನೀಡಬೇಕಾಗುತ್ತಿದೆ. ಈ ನಿಯಮಗಳನ್ನು ಪಾಲಿಸಿದಾಗ ನ್ಯಾಯ ಬೆಲೆ ಅಂಗಡಿಗಾಗಿ ಕೋರಿ ಬಂದ ಎಲ್ಲಾ ಅರ್ಜಿಗಳನ್ನು ಪರಿಗಣಿಸಲು ಸಾಧ್ಯವಿಲ್ಲವಾಗಿರುತ್ತದೆ.

ಈ) ಸರ್ಕಾರದ ಆದೇಶ ಸಂಖ್ಯೆ : ಎಫ್.ಟಿಡಿ. 338 . ಡಿಆರ್‌ಎ. 91 ದಿ. 19-3-92ರ ಆದೇಶದಲ್ಲಿ ತಿಳಿಸಿರುವಂತೆ ಹರಿಜನ ಮತ್ತು ಗಿರಿಜನರಿಗೆ ಶೇ. 20ರಂತೆ ಪ್ರಾಧಿಕಾರ ನೀಡಬೇಕಾಗಿದ್ದು, ಏಪ್ರಿಲ್ 1992ರಿಂದ ಈ ವರೆವಿಗೂ ಒಟ್ಟು 52 ನ್ಯಾಯ ಬೆಲೆ ಅಂಗಡಿ ಮಂಜೂರಾತಿ ಮಂಜೂರು ಮಾಡಲಾಗಿದ್ದು ಇದರಲ್ಲಿ 14 ನ್ಯಾಯ ಬೆಲೆ ಅಂಗಡಿಗಳನ್ನು ಹರಿಜನ ಗಿರಿಜನರಿಗೆ ಮಂಜೂರು ಮಾಡಲಾಗಿದೆ.

ಉ) ಲಭ್ಯವಿರುವ ಹಾಗೂ ಹೆಚ್ಚುವರಿಯಾದ ಪಡಿತರ ಚೀಟಿಗಳ ಆಧಾರದ ಮೇಲೆ ಹೊಸ ನ್ಯಾಯ ಬೆಲೆ ಅಂಗಡಿಯ ಮಂಜೂರಾತಿ ನೀಡಬೇಕಾಗುತ್ತದೆ.

ಬಸ್ ಪ್ರಯಾಣದ ದರವನ್ನು ಇಳಿಸುವ ಬಗ್ಗೆ

390 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) ಈಗಿರುವ ಬಸ್ ಪ್ರಯಾಣ ದರವನ್ನು ಕಡಿಮೆ ಮಾಡಲು ಸರ್ಕಾರವು ನಿರ್ಧರಿಸಿದೆಯೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಆ) ಇಲ್ಲ

ಸಾರಿಗೆ ಇಲಾಖೆ ಚುರುಕುಗೊಳಿಸುವಲ್ಲಿ ತೆಗೆದುಕೊಂಡ ಕ್ರಮ

391 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಾರಿಗೆ ಇಲಾಖೆಯನ್ನು ಚುರುಕುಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) 1) ಕೌಂಟರ್ ಪದ್ಧತಿಯನ್ನು ಎಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಹಾಗೂ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳ್ಲಲಿ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ಜಾರಿಗೆ ತರಲಾಗಿದೆ.

2) ಪ್ರತಿಯೊಂದು ಕಛೇರಿಗೆ ಬರುವ ಸಾರ್ವಜನಿಕರಿಗೆ ಸೂಕ್ತ ಮಾರ್ಗದರ್ಶನ ನೀಡಲು ಸ್ವಾಗತಕಾರರನ್ನು ನಿಯೋಜಿಸಲಾಗಿದೆ.

3) ತೆರಿಗೆ ಪಾವತಿಸುವುದನ್ನು ತಪ್ಪಿಸಿಕೊಳ್ಳುವವರ ವಿರುದ್ಧ ಕ್ರಮ ಕೈಗೊಳ್ಳಲು ಹಾಗೂ ಮೋಟಾರು ವಾಹನ ಕಾಯ್ದೆ 1988 ಮತ್ತು ನಿಯಮಾವಳಿಗಳನ್ನು ಜಾರಿಗೆ ತರುವ ಸಲುವಾಗಿ ಇನ್ನೂ ಹೆಚ್ಚಿನ ತಪಾಸಣಾ ಕೇಂದ್ರಗಳನ್ನು ತೆರೆಯಲಾಗಿದೆ.

4) ಕಲಿಕೆ ಅನುಜ್ಞಾ ಪತ್ರಗಳನ್ನು ನೀಡುವ ಸಲುವಾಗಿ ಬೆಂಗಳೂರಿನಲ್ಲಿರುವ ಉತ್ತರ, ದಕ್ಷಿಣ, ಪೂರ್ವ ಕೇಂದ್ರ ಕಛೇರಿಗಳಲ್ಲಿ ಮತ್ತು ಧಾರವಾಡ, ಮೈಸೂರು ಮಂಗಳೂರು ಕಚೇರಿಗಳಲ್ಲಿ ಗಣಕ ಯಂತ್ರಗಳನ್ನು ಪ್ರಾರಂಭಿಸಲಾಗಿದೆ.

5) ಮೋಟಾರು ವಾಹನ ಕಾಯ್ದೆ ಹಾಗೂ ನಿಯಮಗಳನ್ನು ಜಾರಿಗೆ ತರಲು ರಾಜ್ಯದ ಸಾರಿಗೆ ಇಲಾಖೆಯನ್ನು ಉತ್ತರ ಹಾಗೂ ದಕ್ಷಿಣ ಎಂಬ ಎರಡು ವಲಯಗಳನ್ನಾಗಿ ವಿಂಗಡಿಸಲಾಗಿದೆ. ಜಂಟಿ ಸಾರಿಗೆ ಆಯುಕ್ತರು (ಉತ್ತರ) ಹಾಗೂ ಜಂಟಿ ಸಾರಿಗೆ ಆಯುಕ್ತರು (ದಕ್ಷಿಣ) ಎಂಬ ಎರಡು ಹುದ್ದೆಗಳನ್ನು ಸೃಷ್ಟಿಸಿ ಪ್ರವರ್ತನ ಕೆಲಸವನ್ನು ಇವರಿಗೆ ವಹಿಸಲಾಗಿದೆ.

6) ಕಳೆದ ವರ್ಷ ಸರ್ಕಾರವು ಹೆಚ್ಚಿಗೆ ಕಾರ್ಯಕಾರಿ ಹಾಗೂ ಲಿಪಿಕ ನೌಕರರ ನೇಮಕಾತಿಗೆ ಮಂಜೂರಾತಿ ನೀಡಿದೆ. ಇದರಿಂದಾಗಿ ತ್ವರಿತವಾಗಿ ದಕ್ಷತೆ ಯಿಂದ ಇಲಾಖೆಯ ಕೆಲಸಗಳನ್ನು ಸಾಗಲು ಅನುಕೂಲವಾಗಿದೆ.

7) ತಾಲ್ಲೂಕು ಕೇಂದ್ರ ಸ್ಥಳಗಳಲ್ಲಿ ವಾಹನಗಳ ತಪಾಸಣೆ ನಡೆಸಿ ವಾಹನದ ಅರ್ಹತಾ ಪತ್ರಗಳನ್ನು ನೀಡಲು ಹಾಗೂ ವಾಹನ ಚಾಲಕರ ಅನುಜ್ಞಾ ಪತ್ರಗಳ ಬಗ್ಗೆ ಪರೀಕ್ಷೆ ನಡೆಸಲು ನಿಗಧಿತ ದಿನಗಳಂದು ಕಾರ್ಯಕಾರಿ ಸಿಬ್ಬಂದಿಯನ್ನು ತಾಲ್ಲೂಕು ಕೇಂದ್ರಗಳಿಗೆ ಕಳುಹಿಸುವಂತೆ ಎಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಹಾಗೂ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

ಆಹಾರ ಪದಾರ್ಥಗಳ ಬೆಲೆಗಳ ನಿಯಂತ್ರಣ

392 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆಹಾರ ಪದಾರ್ಥಗಳ ಬೆಲೆ ನಿಯಂತ್ರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಸಚಿವರು) :

ಅ) ಆಹಾರ ಪದಾರ್ಥಗಳ ಬೆಲೆಗಳನ್ನು ನಿಯಂತ್ರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ (ಪಿ.ಡಿ.ಎಸ್.) ಆಹಾರ ಧಾನ್ಯಗಳನ್ನು ಮುಕ್ತ ಮಾರುಕಟ್ಟೆಯ ಬೆಲೆಗಿಂತ ಕಡಿಮೆ ದರದಲ್ಲಿ ಆಹಾರ ಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿದೆ.

2) ಮುಕ್ತ ಮಾರುಕಟ್ಟೆಯ ಸಗಟು ವ್ಯಾಪಾರಿಗಳು ದಾಸ್ತಾನು ಮಿತಿಗಿಂತ ಅಕ್ರಮವಾಗಿ ಹೆಚ್ಚಿಗೆ ದಾಸ್ತಾನು ಮಾಡಿದ್ದಲ್ಲಿ ಹಾಗೂ ಕಾಳಸಂತೆ ಕೋರರು ಮತ್ತು ಅಕ್ರಮ ದಾಸ್ತಾನು ಗಾರರ ಮೇಲೆ ಅವಶ್ಯಕ ವಸ್ತುಗಳ ಕಾಯಿದೆಯನ್ವಯ ದಾಳಿಗಳನ್ನು ಮಾಡಿ ಆಹಾರ ಧಾನ್ಯಗಳ ಬೆಲೆಗಳನ್ನು ನಿಯಂತ್ರಿಸಲಾಗುತ್ತಿದೆ.

ಗ್ರಾಮಾಂತರ ಬಡವರಿಗೆ ತ್ರಿವರ್ಣ ಪಡಿತರ ಚೀಟಿ ಕುರಿತು

179 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮಾಂತರ ಬಡವರಿಗೆ ಹಾಗೂ ನಗರಗಳ ಕೊಳಚೆ ಪ್ರದೇಶದ ನಿವಾಸಿಗಳಿಗೆ ತ್ರಿವರ್ಣ ಪಡಿತರ ಚೀಟಿಗಳ ವಿತರಣೆ ಸಮರ್ಪಕವಾಗಿ ಆಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿಲ್ಲದಿದ್ದರೆ ತ್ರಿವರ್ಣ ಪಡಿತರ ಚೀಟಿಗಳ ವಿತರಣೆಗೆ ಕಾಲಮಿತಿಗೊಳಪಡಿಸಿ ಒದಗಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಇಲ್ಲ

ಆ) ಈಗಾಗಲೇ 12,98,059 ಗುರುತಿಸಿ ತ್ರಿವರ್ಣ ಪಡಿತರ ಚೀಟಿಗಳನ್ನು ಹಂಚಿಕೆ ಮಾಡಲಾಗಿದ್ದು ಉಳಿದ ಫಲಾನುಭವಿಗಳನ್ನು ಗುರುತಿಸಿ ಶೀಘ್ರವಾಗಿ ತ್ರಿವರ್ಣ ಪಡಿತರ ಚೀಟಿಯನ್ನು ನೀಡುವಂತೆ ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ.

ಖಾಸಗಿ ಕಾಲೇಜುಗಳಲ್ಲಿ ಶಿಕ್ಷಣದ ವ್ಯಾಪಾರ.

484 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರ ನೇಮಕಾತಿ ಸಮಯದಲ್ಲಿ ಸಂಸ್ಥೆಗೆ ವಂತಿಗೆ ಹಣವನ್ನು ನೀಡುವಂತೆ ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರಿಂದ ಶಿಕ್ಷಣ ರಂಗದಲ್ಲಿ ಪ್ರತಿಭಾವಂತರಿಗೆ ಅವಕಾಶ ತಪ್ಪಿ ಕೇವಲ ಸಿರಿವಂತ ದಡ್ಡರೇ ಪ್ರಾಧ್ಯಾಪಕರಾದರೆ ಶಿಕ್ಷಣ ಮಟ್ಟ ಪಾತಾಳಕ್ಕಿಳಿದು ಮುಂಬರುವ ಪೀಳಿಗೆಯನ್ನು ಹಾಳು ಮಾಡಿದಂತಾಗುವುದಿಲ್ಲವೆ?

ಇ) ಈ ವ್ಯವಸ್ಥೆಯನ್ನು ತಪ್ಪಿಸಲು ಸರ್ಕಾರದವರು ಏನಾದರೂ ಕ್ರಮ ಕೈಗೊಳ್ಳುವರೆ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸಹಕಾರಿ ಸಂಚಾರಿ ವಾಹನ ಮುಖಾಂತರ ಚಿಮಣಿ ಎಣ್ಣೆ ವಿತರಣೆ

483 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೀಮೆಎಣ್ಣೆ ಸರಬರಾಜು ಸರಿಯಾಗಿ ವಿತರಣೆಯಾಗುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಸರ್ಕಾರವೇ ಸಂಚಾರಿ ವಾಹನ ಮಖಾಂತರ ನಿಗಧಿತ ತಾರೀಖಿನಿಂದ ಪ್ರತಿ ಹಳ್ಳಿಗೆ ಹೋಗಿ ಸೀಮೆಎಣ್ಣೆ ವಿತರಿಸಲಿಕ್ಕೆ ಇರುವ ತೊಂದರೆಗಳೇನು?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಹಂಚಿಕೆಯಾಗುತ್ತಿರುವ ಸೀಮೆಎಣ್ಣೆಯನ್ನು ಸಮರ್ಪಕವಾಗಿ ಪಡಿತರ ಚೀಟಿದಾರರಿಗೆ ವಿತರಣೆ ಮಾಡಲಾಗುತ್ತಿದೆ.

ಆ) ರಾಜ್ಯಕ್ಕೆ ಹಂಚಿಕೆಯಾದ ಸೀಮೆಎಣ್ಣೆಯನ್ನು ಸಮರ್ಪಕವಾಗಿ ವಿತರಣೆ ಮಾಡಲಾಗುತ್ತಿರುವುದರಿಂದ ಸಂಚಾರಿ ವಾಹನಗಳ ಮೂಲಕ ಸೀಮೆಎಣ್ಣೆಯನ್ನು ವಿತರಿಸುವ ಅವಶ್ಯಕತೆ ಇರುವುದಿಲ್ಲ.

ಕೆ.ಎಸ್.ಆರ್.ಟಿ.ಸಿ. ವಿಕೇಂದ್ರಿಕರಣ

482 - ಶ್ರೀ ಬಾಬಾ ಗೌಡ ಪಾಟೀಲ್ (ಕಿತ್ತೂರು) . ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಒಟ್ಟು ಕೆ.ಎಸ್.ಆರ್.ಟಿ.ಸಿ ಬಸ್ಸುಗಳ ಸಂಖ್ಯೆ ಎಷ್ಟು ಹಾಗೂ ಇವುಗಳಲ್ಲಿ ಚಾಲ್ತಿ ಮತ್ತು ನಾದುರಸ್ತಿ ಬಸ್ಸುಗಳೆಷ್ಟು?

ಆ) ಎಷ್ಟು ಜನಸಂಖ್ಯೆಗೊಂದು ನಗರ ಸಾರಿಗೆ ಬಸ್ಸು ಒದಗಿಸಲಾಗುವುದು, ಅದರಂತೆ ಎಷ್ಟು ಜನಸಂಖ್ಯೆಗೊಂದು ಹಳ್ಳಿ ಸಾರಿಗೆ ಬಸ್ಸು ಓಡಿಸಲಾಗುವುದು.

ಇ) ಸರಾಸರಿ ಒಂದು ನಗರ ಬಸ್ಸಿನ ವಾರ್ಷಿಕ ನಷ್ಟವೆಷ್ಟು? ಅದರಂತೆ ಸರಾಸರಿ ಒಂದು ಹಳ್ಳಿ ಬಸ್ಸಿನ ವಾರ್ಷಿಕ ನಷ್ಟವೆಷ್ಟು?

ಈ) ಕೆ.ಎಸ್.ಆರ್.ಟಿ.ಸಿ. ಯನ್ನು ಜಿಲ್ಲಾ ಮಟ್ಟದಲ್ಲಿ ವಿಕೇಂದ್ರಿಕರಣ ಮಾಡಿ ನಷ್ಟ ತಪ್ಪಿಸಲು ಪ್ರಯತ್ನಮಾಡಲಾಗುವುದೆ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) 12-12-1992ಕ್ಕೆ 9361 ವಾಹನಗಳ ಚಾಲ್ತಿಯಲ್ಲಿ 8596 ನಾದುರಸ್ತಿಯಲ್ಲಿ 649.

ಆ) ಪ್ರಸ್ತುತ ಜನಸಂಖ್ಯೆಯ ಅನುಪಾತಕ್ಕನುಗುಣವಾಗಿ ನಗರದಲ್ಲಿ 2588 ಜನಕ್ಕೆ ಒಂದರಂತೆ (ಬಿಟಿಎಸ್) ಮತ್ತು ಹಳ್ಳಿಗಳಿಗೆ 4891 ಜನಕ್ಕೆ ಒಂದರಂತೆ ಬಸ್ಸುಗಳನ್ನು ಓಡಿಸಲಾಗುವುದು.

ಇ)1991-92ರಲ್ಲಿ ಸರಾಸರಿ ನಗರ ಬಸ್ಸಿಗೆ ರೂ. 1,57,000 ಹಳ್ಳಿ ಬಸ್ಸಿಗೆ ರೂ. 126. ವಾರ್ಷಿಕ ನಷ್ಟವಾಗಿರುತ್ತದೆ.

ಈ) ಪರಿಶೀಲಿಸಲಾಗುತ್ತಿದೆ.

ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರ್ ಹುದ್ದೆಗಳ ಸಂಖ್ಯೆ

503 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಸಹಾಯಕ ಸಂಚಾರ ವ್ಯವಸ್ಥಾಪಕ ಹುದ್ದೆಗಳ ಸಂಖ್ಯೆ

ಆ) ಅದರಲ್ಲಿ ಅಕ್ಟೋಬರ್-ನವೆಂಬರ್ 92ರಲ್ಲಿ ಹೊಸದಾಗಿ ಎಷ್ಟು ಹುದ್ದೆಗಳನ್ನು ಸೃಷ್ಟಿಸಲಾಗಿದೆ?

ಇ) ಈ ಹುದ್ದೆಗಳನ್ನು ಸೃಷ್ಟಿಸಲು ಕಾರಣಗಳು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) 57.

ಆ) ಮೂರು ತಿಂಗಳ ಅವಧಿಯವರೆಗೆ ತಾತ್ಕಾಲಿಕವಾಗಿ 8 ಹೊಸ ಹುದ್ದೆಗಳನ್ನು ಸೃಷ್ಟಿಸಲಾಗಿದೆ.

ಇ) ಆರು ಸಹಾಯಕ ಸಂಚಾರ ಅಧೀಕ್ಷಕರ ಹುದ್ದೆಗಳನ್ನು ಹಿಂದಕ್ಕೆ ತೆಗೆದುಕೊಂಡು, ಆರು ಸಹಾಯಕ ಸಂಚಾರ ವ್ಯವಸ್ಥಾಪಕ ಹುದ್ದೆಗಳನ್ನು ಹೊಸದಾಗಿ ಪ್ರಾರಂಭವಾದ ಬೆಂಗಳೂರು ನಗರ ಸಾರಿಗೆ, ಉತ್ತರ ವಿಭಾಗ, ಬೆಂಗಳೂರು ಗ್ರಾಮಾಂತರ ವಿಭಾಗ, ದಾವಣಗೆರೆ ಬಾಗಲಕೋಟೆ, ಗದಗ್ ಮತ್ತು ಬೀದರ್ ವಿಭಾಗಗಳಿಗೆ ಮಾರ್ಗತನಿಖಾ ಚಟುವಟಿಕೆಗಳ ಸಲುವಾಗಿ ಹಾಗೂ ಮೈಸೂರು ಮತ್ತು ಶಿವಮೊಗ್ಗ ಬಸ್ ನಿಲ್ದಾಣಗಳಿಗೆ ಒಂದೊಂದು ಸಹಾಯಕ ಸಂಚಾರ ವ್ಯವಸ್ಥಾಪಕ ಹುದ್ದೆಗಳನ್ನು ಹೊಸದಾಗಿ ಸೃಷ್ಟಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರುವ ಕಾಲೇಜುಗಳ ಸಂಖ್ಯೆ

835 - ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ) : ಮಾನ್ಯ ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳ ಸಂಖ್ಯೆ.

ಆ) ಈ ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ.

ಇ) ಈ ಎಲ್ಲಾ ಕಾಲೇಜುಗಳ ಮೇಲ್ವಿಚಾರಣೆಯನ್ನು ಪರಿಣಾಕಾರಿಯಾಗಿ ನಿರ್ವಹಿಸಲು ವಿಶ್ವವಿದ್ಯಾಲಯಕ್ಕೆ ಸಾಧ್ಯವಾಗುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬೆಂಗಳೂರು (ಗ್ರಾಮಾಂತರ) ಕೋಲಾರ ಮತ್ತು ತುಮಕೂರು ಜಿಲ್ಲೆಗಳಿಗೆ ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು):

ಅ) 241.

ಆ) 1.35 ಲಕ್ಷ (1991-92ನೇ ಶೈಕ್ಷಣಿಕ ಸಾಲಿನದು)

ಇ) ಇಲ್ಲ.

ಈ) ಇಲ್ಲ.

ನೆಲಮಂಗಲ ತಾಲ್ಲೋಕಿನಲ್ಲಿ ಪ್ರಥಮದರ್ಜೆ ಕಾಲೇಜು ತೆರೆಯಲು ಮನವಿ.

702 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಶಿಕ್ಷಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ತಾಲ್ಲೂಕಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದೆ ಇರುವುದರಿಂದ ಸಾವಿರಾರು ವಿದ್ಯಾರ್ಥಿನಿಯರ ಹೆಚ್ಚಿನ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ನೆಲಮಂಗಲ ಟೌನ್‌ನಲ್ಲಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ ಮನವಿಗಳು ಬಂದಿದೆಯೇ?

ಆ) ಹಾಗಿದ್ದಲ್ಲಿ ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರು) :

ಅ) ಬಂದಿದೆ.

ಆ) ಸರ್ಕಾರವು ಸದ್ಯಕ್ಕೆ ಕಾಲೇಜನ್ನು ಪ್ರಾರಂಭಿಸಲು ಪ್ರಸ್ತಾವಿಸುವುದಿಲ್ಲ.

ಸಾರಿಗೆ ಸಂಸ್ಥೆಯಲ್ಲಿ ಬಸ್ಸುಗಳ ಕೊರತೆ

632 - ಶ್ರೀ ಕೆ.ಹೆಚ್. ಕುರಡಿಗಿ (ಮುಂಡರಗಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ದಿವಸ ಓಡಾಡುವ ಬಸ್ಸುಗಳ ಸಂಖ್ಯೆ ಎಷ್ಟು? ಈ ವಿಭಾಗದಲ್ಲಿ ಬಸ್ಸುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು?

ಆ) ಗದಗ ವಿಭಾಗದಲ್ಲಿ ಸಾರಿಗೆ ಸಂಸ್ಥೆಯ ಕಾರ್ಯಾಗಾರವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಯಾವಾಗ ಪ್ರಾರಂಭ ಮಾಡಲಾಗುವುದು.

ಇ) ಮುಂಡರಗಿಯಲ್ಲಿ ಡಿಪೋದ ಆವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ದಿನಾಂಕ 5-12-92ಕ್ಕೆ ಸರಿಯಾಗಿ ಗದಗ ವಿಭಾಗದಲ್ಲಿ 331 ಅನುಸೂಚಿಗಳಿಗೆ 372 ವಾಹನಗಳಿರುತ್ತವೆ . ಬಸ್ಸುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಹೌದು. ಈಗಾಗಲೇ ಪ್ರಾರಂಭಿಕ ಹಂತದಲ್ಲಿದೆ.

ಇ) ಹೌದು. ಡಿಪೋ ನಿರ್ಮಾಣದ ಉದ್ದೇಶಕ್ಕಾಗಿ ಬೇಕಾಗಿರುವ ಭೂಮಿಯನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ.

ಖಾಸಗಿಯವರಿಗೆ ರಾಷ್ಟ್ರೀಕೃತ ಬಸ್ ಮಾರ್ಗಗಳು.

1065 - ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರಾಷ್ಟ್ರೀಕೃತ ಬಸ್ ಮಾರ್ಗಗಳನ್ನು ಖಾಸಗಿಯವರಿಗೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ರಾಜ್ಯದಲ್ಲಿ ಸಾರಿಗೆ ಬಸ್‌ಗಳ ರಾಷ್ಟ್ರೀಕರಣವನ್ನು ಸರ್ಕಾರವು ಮುಂದುವರೆಸುತ್ತಿದೆಯೆ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲಾ.

ಆ) ಪರಿಶೀಲನೆಯಲ್ಲಿದೆ.

ಮಾಜಿ ಶಾಸಕರು ಉಚಿತವಾಗಿ ಬಸ್ಸುಗಳಲ್ಲಿ ಪ್ರಯಾಣಕ್ಕೆ ಮನವಿ

656ಎ - ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಜಿ ಶಾಸಕರು ಉಚಿತವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಸಲು ಮನವಿ ಅರ್ಪಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಆ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು.

ಆ) ಮಾಜಿ ಶಾಸಕರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಎಕ್ಸ್‌ಪ್ರೆಸ್ ವಾಹನಗಳಲ್ಲಿ ವರ್ಷದಲ್ಲಿ 12 ಬಾರಿ ಅವರು ವಾಸವಾಗಿರುವ ಸ್ಥಳದಿಂದ ಬೆಂಗಳೂರಿಗೆ ಮತ್ತು ವಾಪಸ್ಸು ಉಚಿತವಾಗಿ ಪ್ರಯಾಣ ಮಾಡಲು ಅವರಿಗೆ ನೀಡಲಾಗುವ ಮುದ್ರಿತ ಕೂಪನ್ನುಗಳ ಆಧಾರದ ಮೇಲೆ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ.

ಮಾಜಿ ಶಾಸಕರುಗಳಿಗೆ ಕಲ್ಪಿಸಲಾಗಿರುವ ಉಚಿತ ಪ್ರಯಾಣಕ್ಕೆ ಆಗುವ ವೆಚ್ಚವನ್ನು ಪ್ರತಿ ವರ್ಷ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಮರುಪಾವತಿ ಮಾಡಲಾಗುತ್ತಿದೆ.

ಹುಕ್ಕೇರಿ ಪಟ್ಟಣದಲ್ಲಿ ರಾಜ್ಯ ರಸ್ತೆ ಸಾರಿಗೆಯ ಬಸ್ ಡಿಪ್ಪೋ ನಿರ್ಮಾಣ

968 - ಶ್ರೀ ಉಮೇಶ ವಿ.ಕತ್ತಿ (ಹುಕ್ಕೇರಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ಪಟ್ಟಣದಲ್ಲಿ ರಾಜ್ಯ ರಸ್ತೆ ಸಾರಿಗೆಯ ಬಸ್ಸು ಡಿಪ್ಪೋ ಒಂದನ್ನು ನಿರ್ಮಿಸುವ ವಿಚಾರವು ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದರೆ ಈ ವರ್ಷ ನಿರ್ಮಿಸಲಾಗುವುದೆ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲಾ.

ಆ) ಉದ್ಭವಿಸುವುದಿಲ್ಲ.

ಬೆಲ್ಲದ ಬಾಗೇವಾಡಿ ಗ್ರಾಮಕ್ಕೆ ಬಸ್ ಸ್ಟ್ಯಾಂಡ್ ನಿರ್ಮಾಣ

969 - ಶ್ರೀ ಉಮೇಶ ವಿ. ಕತ್ತಿ (ಹುಕ್ಕೇರಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ಕ್ಷೇತದ ಬೆಲ್ಲದ ಬಾಗೇವಾಡಿ ಗ್ರಾಮಕ್ಕೆ ಬಸ್ಸು ನಿಲ್ದಾಣವು ಮಂಜೂರಾಗಿದೆಯೇ?

ಆ) ಹಾಗಿದ್ದಲ್ಲಿ, ಯಾವ ವರ್ಷದಲ್ಲಿ ಮಂಜೂರು ಮಾಡಲಾಗಿದೆ.

ಇ) ನಿಲ್ದಾಣಕ್ಕಾಗಿ ಗ್ರಾಮದವರನ್ನು ಸ್ಥಳವನ್ನು ಒದಗಿಸಿದ್ದಾರೆಯೇ, ಒದಗಿಸಲಾಗಿದ್ದರೆ ಯಾವಾಗ

ಈ) ಬಸ್ ನಿಲ್ದಾಣದ ಕಟ್ಟಡವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲಾ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲಾ.

ಈ) ಬೇಕಾಗುವ ಭೂಮಿಯನ್ನು ಒದಗಿಸಿದ ನಂತರ ಪರಿಶೀಲಿಸಲಾಗುವುದು.

ಆಲೂರಿನಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಬಗ್ಗೆ

989 - ಶ್ರೀ ಬಿ.ಆರ್. ಗುರುದೇವ (ಸಕಲೇಶಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲೂರಿನಲ್ಲಿರುವ ಬಸ್ ನಿಲ್ದಾಣವು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿದ್ದು ಚಿಕ್ಕದಾಗಿದ್ದು ಹಾಗೂ ಶಿಥಿಲಗೊಂಡಿರುವುದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

ಆ) ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಆ ಬಸ್ ನಿಲ್ದಾಣದ ನಿರ್ಮಾಣ ಕಾರ್ಯವನ್ನು ಸರ್ಕಾರದವರು ಯಾವಾಗ ಪ್ರಾರಂಭಿಸುವರು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಹೌದು.

ಆ) ಸದರಿ ಬಸ್ ನಿಲ್ದಾಣವು ಮಂಡಲ ಪಂಚಾಯಿತಿಗೆ ಸೇರಿರುತ್ತದೆ. ಕ.ರಾ.ರ.ಸಾ. ಸಂಸ್ಥೆಯು ಮಂಡಲ ಪಂಚಾಯಿತಿಯಿಂದ ಬಸ್ ನಿಲ್ದಾಣದ ಜಾಗ ಹಾಗೂ ಕಟ್ಟಡವನ್ನು ಖರೀದಿಸಲು ಯೋಚಿಸಿದೆ.

ಇ) ಲೋಕೋಪಯೋಗಿ ಇಲಾಖೆಯವರಿಂದ ಬಸ್ ನಿಲ್ದಾಣ ಜಾಗದ ಮೌಲ್ಯದ ವಿವರ ದೊರೆತ ನಂತರ ಖರೀದಿಯ ಬಗ್ಗೆ ಅನುಸರಿಸಬೇಕಾದ ಕ್ರಮಗಳು ಮುಗಿದ ತಕ್ಷಣ ಬಸ್ ನಿಲ್ದಾಣ ನಿರ್ಮಾಣದ ಕಾರ್ಯವನ್ನು ತೆಗೆದುಕೊಳ್ಳಲಾಗುವುದು.

ನಿಪ್ಪಾಣಿಯಲ್ಲಿ ಕೆಎಸ್ ಆರ್ ಟಿಸಿ ಡಿಪೋ

1040 - ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿಪ್ಪಾಣಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೂತನ ಬಸ್ ಘಟಕದ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಆ) ಹೊಸ ಬಸ್ ಘಟಕ ನಿರ್ಮಾಣ ಕಾರ್ಯದ ಒಟ್ಟು ಮೊತ್ತವೆಷ್ಟು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಕೆಲಸ ಈಗಾಗಲೇ ಪ್ರಾರಂಭವಾಗಿದೆ.

ಆ) ಅಂದಾಜು ಪಟ್ಟಿಯ ಮೊತ್ತ ರೂ. 50.00 ಲಕ್ಷಗಳು

(ಗೊಂದಲ)

ಉಪಾಧ್ಯಕ್ಷಣೆಯವರು : ತಾವು ಕುಳಿತುಕೊಂಡರೆ ಹೇಳುತ್ತೇನೆ. ಈ ಪ್ರಶ್ನೆಗೆ 7-8 ಜನ ಸಪ್ಲಿಮೆಂಟರಿ ಪ್ರಶ್ನೆ ಕೇಳುವುದಕ್ಕೆ ನಾನು ಅವಕಾಶ ಮಾಡಿಕೊಟ್ಟಿದ್ದೇನೆ. ಅವರ ಉತ್ತರದಲ್ಲಿ ಸಮಾಧಾನ ಆಗದಿದ್ದರೆ ಬೇರೆ ರೂಪದಲ್ಲಿ ನನಗೆ ಈ ವಿಷಯವನ್ನು ಕಳುಹಿಸಿದರೆ ಅದನ್ನು ನಾನು ಅಲೋ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ ಜಿಲ್ಲಾ ಪರಿಷತ್ ಚುನಾವಣೆ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ : ಒಂದು ಕಡೆ ಚುನಾವಣೆಗಳನ್ನು ಮುಂದೂಡುತ್ತೇವೆನ್ನುವ ಮಾತನ್ನು ಹೇಳುತ್ತೀರಿ. ಜಿಲ್ಲಾ ಪರಿಷತ್‌ಗೆ ನಾಮಕರಣ ಮಾಡುತ್ತೇವೆಂದು ಹೇಳುತ್ತಾರೆ.

(ಗೊಂದಲ)

ಉಪಾಧ್ಯಕ್ಷಣಿಯವರು : ಈಗ ಒಬ್ಬೊಬ್ಬರು ಮಾತನಾಡಿದರೆ ಏನು ಎಂದು ಕೇಳಬಹುದು ಎಲ್ಲರೂ ನಿಂತುಕೊಂಡು ಒಟ್ಟಿಗೆ ಮಾತನಾಡಿದರೆ ಏನು ಮಾಡುವುದು? I request the leader to bring the members under control.

(ಗೊಂದಲ)

ಉಪಾಧ್ಯಕ್ಷಿಣಿಯವರು : ದಯವಿಟ್ಟು ಒಬೊಬ್ಬಾಗಿ ಮಾತನಾಡಿ.

ಉಪಾಧ್ಯಕ್ಷರು : ನಾನು ನಿಂತಿದ್ದೇನೆ, ದಯವಿಟ್ಟು ತಾವು ಕುಳಿತುಕೊಳ್ಳಿ

ಶ್ರೀ ವಾಟಾಳ್ ನಾಗರಾಜ್ : ಜಿಲ್ಲಾ ಪರಿಷತ್ತಿಗೆ ನಾಮಕರಣ ಮಾಡಿ ಪ್ರಜಾಪ್ರಭುತ್ವದ ಕೊಲೆ ಮಾಡತಕ್ಕಂಥ ಸರಕಾರದ ವಿರುದ್ಧ ನಾವು ಪ್ರತಿಭಟನೆ ಮಾಡುತ್ತೇವೆ.

(ಗೊಂದಲ)

ಉಪಾಧ್ಯಕ್ಷರು : ಈಗ ನಾನು ಎದ್ದು ನಿಂತಿದ್ದೇನೆ, ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷರು : ತಾವೂ ಏಕೆ ಹೀಗೆ ಮಾಡುತ್ತೀರಿ?

(ಗೊಂದಲ)

ಉಪಾಧ್ಯಕ್ಷರು : ಈಗ ಈ ವಿಷಯದ ಬಗ್ಗೆ ಬೆಳಿಗ್ಗೆ ಮಾನ್ಯ ಸಿಂಧ್ಯಾರವರು ಯಡಿಯೂರಪ್ಪನವರು ಬಂದು ನನ್ನ ಹತ್ತಿರ ಮಾತನಾಡಿದ್ದಾರೆ, ಶ್ರೀಯುತ ವಾಟಾಳ್ ನಾಗರಾಜ್ ಅವರೂ ಮಾತನಾಡಿದ್ದಾರೆ. ನಮ್ಮ ದೇಶಪಾಂಡೆಯವರು ಸಹ ನನ್ನ ಹತ್ತಿರ ಮಾತನಾಡಿದ್ದಾರೆ. ಇದರ ಬಗ್ಗೆ ರೈಸ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಈಗ ನೀವು ಒಬ್ಬೊಬ್ಬರಾಗಿ ನಿಂತುಕೊಂಡು ಏನು ವಿಷಯ ಎಂದು ಹೇಳಿದರೆ ನಾವು ಅದಕ್ಕೆ ಏನು ಎಂದು ತೀರ್ಮಾನ ಮಾಡಬಹುದು. ಶ್ರೀಯುತ ಸಿಂಧ್ಯಾರವರೇ,

ಶ್ರೀ ವಾಟಾಳ್ ನಾಗರಾಜ್ : ನನಗೂ ಅವಕಾಶ ಕೊಡಬೇಕು.

(ಗೊಂದಲ)

ಉಪಾಧ್ಯಕ್ಷರು : ನಿಮ್ಮನ್ನೂ ಕರೆಯುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ ಸಿಂಧ್ಯಾರವರು ಬೆಳಿಗ್ಗೆ ಬಂದು ಹೇಳಿದ್ದಾರೆ. ನೀವು ಹೇಳಿದ್ದೂ ನನ್ನ ಗಮನಕ್ಕೆ ಬಂದಿದೆ. ನಿಮಗೂ ಅವಕಾಶ ಕೊಡುತ್ತೇನೆ. ಈಗ ಅವರನ್ನು ಕರೆದಿದ್ದೇನೆ. ಕುಳಿತುಕೊಳ್ಳಿ. ನಾನು ಬೆಳಿಗ್ಗೆ ಆಫೀಸಿಗೆ ಬಂದ ತಕ್ಷಣ ಬಂದು ಹೇಳಿದರು, ಅವರದ್ದು ಆದ ತಕ್ಷಣ ನಿಮಗೂ ಅವಕಾಶ ಕೊಡುತ್ತೇನೆ. ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಮಕರಣ ಮಾಡಿ ಹಿಂಬಾಗಿಲಿನಿಂದ ಬರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದು ನಾಚಿಕೆಗೇಡು, ಈ ಸರಕಾರಕ್ಕೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಂಬಿಕೆ ಇದೆಯೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಪ್ರಜಾಪ್ರಭುತ್ವದ ಕೊಲೆ ಮಾಡುತ್ತಿದ್ದಾರೆ. ಜಿಲ್ಲಾ ಪರಿಷತ್ ವ್ಯವಸ್ಥೆಯನ್ನು ನಾಶ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೇ, ಈ ಸದನದಲ್ಲಿ ಜಿಲ್ಲಾ ಪರಿಷತ್...

ಶ್ರೀ ಎಂ. ವೀರಪ್ಪ ಮೊಯ್ಲಿ : ಇಷ್ಟು ಸಮಯ ಮಾತನಾಡುವುದಕ್ಕೆ ಅವಕಾಶವೇ ಇಲ್ಲ. If you can yield for a while. ಸನ್ಮಾನ್ಯ ಉಪಾಧ್ಯಕ್ಷರೇ, ಜಿಲ್ಲಾ ಪರಿಷತ್, ಮಂಡಲ್ ಪಂಚಾಯತ್ ಬಗ್ಗೆ ಅವರು ಮಾತನಾಡುತ್ತಿದ್ದಾರೆಂದರೆ ಇಲ್ಲಿ ವಿವಾದಕ್ಕೆ ಆಸ್ಪದ ಇಲ್ಲ, ನಾವು ಏನು ಮಾಡುವುದು ಇದ್ದರೂ ವಿರೋಧ ಪಕ್ಷದ ನಾಯಕರ ಹತ್ತಿರ ಸಮಾಲೋಚನೆ ಮಾಡಿದಮೇಲೆ ನಿರ್ಣಯ ತೆಗೆದುಕೊಳ್ಳುತ್ತೇವೆ, ಅನ್ಯಥಾ ಮಾಡುವುದಿಲ್ಲ. ಪಕ್ಷದ ವೇದಿಕೆಯಲ್ಲಿ ಇದು ಚರ್ಚೆಗೆ ಬಂದಿದೆ. ಅಲ್ಲಿಯೂ ಫಾರ್ ಅಂಡ್ ಎಗೆನೆಸ್ಟ್ ಇದೆ. ನಮ್ಮ ಪಕ್ಷದಲ್ಲೂ ವಿಚಾರ ಮಾಡುತ್ತೇನೆ. that does not mean that we are going to take a decision.

ಏನೇ ನಾವು ಡಿಸಿಷನ್ ತೆಗೆದುಕೊಳ್ಳುವುದು ಇದ್ದರೂ ನಿಮ್ಮ ಜೊತೆ ಸಮಾಲೋಚನೆ ಮಾಡಿ ತೆಗೆದುಕೊಳ್ಳುತ್ತೇವೆ. ಏನಾದರೂ ನಾವು ಡಿಸಿಷನ್ ತೆಗೆದುಕೊಂಡಿದ್ದರೆ ತಾವು ಆಕ್ಷೇಪಣೆ ಮಾಡಿ. ಇದು ಸದ್ಯಕ್ಕೆ ವಿವಾದಾಸ್ಪದವಾಗಿಲ್ಲ. Our decision is also to consult the Leaders of Opposition as to what to do. Suppose all of us decide including you, that we should go for election, we will go for election in June. As it is, we have to go for election in June only. ಸುಪ್ರೀಂ ಕೋರ್ಟ್ ಡಿಸಿಷನ್ ಪ್ರಕಾರ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವಧಿ ವಿಸ್ತರಣೆ ಮಾಡಿ ಎಂದು ತಾವು ಸುಪ್ರೀ ಕೋರ್ಟಿಗೆ ಹೋಗಿದ್ದೀರಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾಮಿನೇಷನ್ ಮಾಡುವುದಿಲ್ಲ ಎಂದು ಹೇಳಬೇಕು.

(ಗೊಂದಲ)

ಉಪಾಧ್ಯಕ್ಷರು : ಅವರು ಏನು ಉತ್ತರ ಹೇಳುತ್ತಾರೆ ಅದನ್ನ ಕೇಳಿಬಿಟ್ಟು ಆಮೇಲೆ ಮಾತನಾಡಿ, ಉತ್ತರ ಹೇಳಿದಮೇಲೆ ಮಾತನಾಡಿ.

(ಗೊಂದಲ)

ಉಪಾಧ್ಯಕ್ಷರು : ಚೀಫ್ ಮಿನಿಸ್ಟರ್ ಈಲ್ಡ್ ಆಗಿಲ್ಲ.. ದಯವಿಟ್ಟು ಕುಳಿತು ಕೊಳ್ಳಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ರೂರಲ್ ಡೆವೆಲಪ್‌ಮೆಂಟ್ ಮಿನಿಸ್ಟರ್‌ರವರು ಹೇಳಿದರು ಚುನಾವಣೆ ಮಾಡುವುದಕ್ಕೆ ಸಾಧ್ಯ ಇಲ್ಲ, ಸುಪ್ರೀಂ ಕೋರ್ಟಿಗೆ ಅರ್ಜಿ ಹಾಕುತ್ತೇವೆ, ಡಿಸೆಂಬರ್‌ಗೆ ಚುನಾವಣೆ ಮಾಡುತ್ತೇವೆ ಎಂದು ಹೇಳಿದರು ಎಂದು ಹೇಳಿದ್ದಾರೆ. ಅದಕ್ಕಾಗಿ ಸಸ್ಪಿಷನ್ ಇದೆ, ಇವತ್ತು ಪೇಪರ್‌ನಲ್ಲಿ ಬಂದಿದೆ.

Madam Deputy Speaker :Let him say what he wants to say.

(Interruptions)

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಆಶ್ವಾಸನೆ ಕೊಟ್ಟ ಹಾಗೆ, ಜೂನ್ ಒಳಗೆ ಚುನಾವಣೆ ಮಾಡುತ್ತೀರಾ? ಆ ರೀತಿ ಆಶ್ವಾಸನೆ ಕೊಡಿರಿ. ಆದರೆ ನೀವು ಒಟ್ಟಿಗೆ ಅವಧಿ ವಿಸ್ತರಣೆ ಮಾಡಿ ಸುಪ್ರೀಂಕೋರ್ಟಿಗೆ ಎಂದು ಹೋಗಿದ್ದೀರಿ,

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ : ನಾನು ಹೇಳುತ್ತೇನೆ.

(ಗೊಂದಲ)

ಉಪಾಧ್ಯಕ್ಷರು : ಅವರು ನಿಂತಿದ್ದಾರೆ. ಮಾತನಾಡುತ್ತಿದ್ದಾರೆ, ಮುಖ್ಯಮಂತ್ರಿಗಳು ಏನೋ ಹೇಳುತ್ತಿದ್ದಾರೆ, ಕೌಜಲಗಿ ಅವರೇ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೇ,

ಉಪಾಧ್ಯಕ್ಷರು : ಮುಖ್ಯಮಂತ್ರಿಗಳು ಏನೋ ಹೇಳುತ್ತಿದ್ದಾರೆ, ಅವರು ಹೇಳಿದ ಮೇಲೆ ತಾವು ಮಾತನಾಡಬಹುದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಸದನ ನಡೆಯುತ್ತಿರಬೇಕಾದರೆ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಜೂನ್‌ಗೆ ಚುನಾವಣೆ ಮಾಡಲು ಆಗುವುದಿಲ್ಲ. ಅವಧಿ ಮುಂದುವರಿಸಿ ಎಂದು ಏತಕ್ಕೆ ಹೋದಿರಿ, ನೀವು ಸುಪ್ರೀಂಕೋರ್ಟಿಗೆ ಅರ್ಜಿ ಹಾಕಿದ್ದೀರಿ, ನಮ್ಮನ್ನು * ಗೆ ತೆಗೆದುಕೊಳ್ಳಬಹುದಾಗಿತ್ತು, ತಾವು ಅರ್ಜಿ ಹಾಕಿದ್ದೀರಿ, Please come out.

(ಗೊಂದಲ)

ಉಪಾಧ್ಯಕ್ಷರು : ಏನ್ರೀ ಎಲ್ಲರೂ ನಿಂತುಕೊಂಡು ಈ ರೀತಿ ಮಾತನಾಡಿದರೆ ದಯವಿಟ್ಟು ಕುಳಿತುಕೊಳ್ಳಿ.

Sri. R.V. Deshpande : You please hold the elections immediately.

12.35 ಪಿ.ಎಂ.

ಶ್ರೀ ಕೆ.ಎಸ್. ಈಶ್ವರಪ್ಪ : ನಾಮಕರಣ ಮಾಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಸದನ ನಡೆಯಬೇಕಾದರೆ ನಮ್ಮ ವಿಶ್ವಾಸವನ್ನು ತೆಗೆದುಕೊಳ್ಳದೆ ಅದರ ಬಗ್ಗೆ ಚರ್ಚೆ ಮಾಡದೆ ಜೂನ್‌ನಿಂದ ಅವಧಿಯನ್ನು ಮುಂದುವರಿಸಲು ಸುಪ್ರೀಂ ಕೋರ್ಟ್ ಮುಂದೆ ಅರ್ಜಿ ಹಾಕಿದ್ದೀರಿ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ತಾವು ಸುಪ್ರೀಂ ಕೋರ್ಟ್‌ಗೆ ಹೋಗುವುದಕ್ಕಿಂತ ಮುಂಚೆ ನಮ್ಮನ್ನು ಕೇಳಲಿಲ್ಲ. ಚುನಾವಣೆ ಮುಂದಕ್ಕೆ ಹಾಕುವ ಬಗ್ಗೆ ನಮ್ಮನ್ನು ಕೇಳಲಿಲ್ಲ. ಇದಕ್ಕಿದ್ದ ಹಾಗೆ ನಾಮಕರಣ ಮಾಡಲು ಹೊರಟಿದ್ದೀರಿ.ಇದು ಪ್ರಜಾತಂತ್ರವೇ? ಈ ರೀತಿ ನೀವು ಮಾಡುತ್ತೀರಿ ಎಂದು ನಾವು ತಿಳಿದುಕೊಂಡಿರಲಿಲ್ಲ ನಿಮ್ಮ ಸರ್ಕಾರದಲ್ಲಿ ಈ ರೀತಿ ಆಗುತ್ತದೆಂದು ನಾವು ನಂಬಿರಲಿಲ್ಲ. ತಾವು ನಾಮಕರಣ ಮಾಡುವುದಿಲ್ಲವೆಂದು ಹೇಳಿ. ಇಲ್ಲ ನಾಮಕರಣ ಮಾಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿ...

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಚಿವರುಉತ್ತರ ಕೊಡಬೇಕಾದರೆ...

(ಗೊಂದಲ)

ಉಪಾಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷಣೆಯವರು : please take your seat. ಬೈರೇಗೌಡರೇ, ನಾನು ನಿಂತಿದ್ದೇನೆ.ತಾವು ನಿಂತುಕೊಳ್ಳುತ್ತೀರಾ ದಯವಿಟ್ಟು ತಾವೆಲ್ಲಾ ಕುಳಿತುಕೊಳ್ಳಿ. ಈ ವಿಷಯವನ್ನು ತಾವು ಪ್ರಸ್ತಾಪ ಮಾಡುವುದಕ್ಕಿಂತ ಮುಂಚೆ ಮಾನ್ಯ ಮುಖ್ಯಮಂತ್ರಿಗಳು ಪೂರಾ ಹೇಳುವುದಕ್ಕಿಂತ ಮುಂಚೆ ಈ ವಿಷಯದ ಬಗ್ಗೆ ಏನೋ ವಿವರಣೆ ಕೊಡಬೇಕೆಂದು ಎದ್ದು ನಿಂತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈ ವ್ಯವಸ್ಥೆಯಲ್ಲಿ ನಿಮಗೆ ವಿಶ್ವಾಸ ಇಲ್ಲವೆ?

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ನಾಮಕರಣ ಮಾಡುವ ಬಗ್ಗೆ ನಮ್ಮ ವಿರೋಧ ಇದೆ. ನಾವು ಸ್ಪಷ್ಟವಾಗಿ ಹೇಳುತ್ತೇವೆ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಏನೋ ಹೇಳಲು ಹೊರಟಿದ್ದಾರೆ. ಅವರು ಹೇಳಿದ ಮೇಲೆ ಮಾತನಾಡಿ..

(ಗೊಂದಲ)

ಶ್ರೀ ಸಿ. ಬೈರೇಗೌಡ : ಒಂದು ನಿಮಿಷ. ದಿನಾಂಕ 4-1-93ರಲ್ಲಿ ಮಾನ್ಯ ಮಂತ್ರಿಗಳು ಈ ಸದನಗಲ್ಲಿ ಉತ್ತರ ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ರಾಮಯ್ಯನವರು ಸರ್ಕಾರ ಸಲಹಾ ಸಮಿತಿಗಳನ್ನು ನೇಮಕ ಮಾಡುವ ಉದ್ದೇಶ ಇದೆಯೇ ಎಂದು \ಕೇಳಿದಕ್ಕೆ 'ಇಲ್ಲ' ಎನ್ನತಕ್ಕಂಥ ಉತ್ತರ ಕೊಟ್ಟಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ. ದಯಮಾಡಿ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಮಕರಣ ಮಾಡುವುದಿಲ್ಲ ಎಂದು ಉತ್ತರ ಕೊಡಲಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ನಮ್ಮ ವಿರೋಧ ಇಲ್ಲ.

ಉಪಸಭಾಧ್ಯಕ್ಷರು : ಅವರು ನಿಂತಿದ್ದಾರೆ. ತಾವು ನಿಂತಿದ್ದೀರಿ. ಈ ರೀತಿ ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ : ಮಾನ್ಯ ಸಭಾಧ್ಯಕ್ಷರೇ ಇಷ್ಟು ವಿವಾದಗ್ರಸ್ತ ವಿಚಾರ ಅಲ್ಲ ಇದು. ಇಲ್ಲಿ ಚರ್ಚೆಗೆ ಆಸ್ಪದವೇ ಇಲ್ಲ. ನಾನು ಈಗ ಹೇಳುತ್ತೇನೆ. ಸುಪ್ರೀಂ ಕೋರ್ಟ್‌ನ ನಿರ್ಣಯ ಇದೆ. ಜೂನ್‌ನಲ್ಲಿ ಚುನಾವಣೆ ಮಾಡಬೇಕು. ಸುಪ್ರೀಂ ಕೋರ್ಟ್ ಆಜ್ಞೆ ಪ್ರಕಾರ ಚುನಾವಣೆ ಮಾಡುವುದಿಲ್ಲವೆಂದು ಹೇಳುವುದಕ್ಕಾಗುತ್ತದೆಯೇ? We cannot say. We will be hauled up on contempt. ಚುನಾವಣೆಗೆ ಈಗ ನಮಗೆ ಧೈರ್ಯ ಇದೆ. ನಿಮಗೂ ಧೈರ್ಯ ಇದೆ. ನಾಳೆ ಚುನಾವಣೆ ಮಾಡಿದರೂ ಕಾಂಗ್ರೆಸ್ ಪಕ್ಷ ಗೆದ್ದು ಬರುತ್ತದೆ..

(ಗೊಂದಲ)

ಶ್ರೀ ಎಸ್. ಎಸ್.ಕೌಜಲಗಿ : ಚುನಾವಣೆ ಡಿಕ್ಲೇರ್ ಮಾಡಿ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ : ಯಾರೂ ಚುನಾವಣೆಗೆ ಹೆದರಿ ಹೋಗುವುದಿಲ್ಲ. ಚುನಾವಣೆ ಎಂದು ನಾಳೆ ಡಿಕ್ಲೇರ್ ಮಾಡುವುದಕ್ಕಾಗುತ್ತದೆಯೇ?ಸ್ವಲ್ಪ ಸಮಾಧಾನವಾಗಿ ಇರಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ : ಧೈರ್ಯ ಇದ್ದವರು ಈ ತರಹ ಮಾತನಾಡುವುದಿಲ್ಲ. ಚುನಾವಣೆಗೆ ಯಾವಾಗಲೂ ಧೈರ್ಯ ಇರಬೇಕು. ಕಾಂಗ್ರೆಸ್ ಎಂದೂ ಚುನಾವಣೆಯನ್ನು ಎದುರಿಸಲಿಕ್ಕೆ ಸಿದ್ದವಿದೆ. ನಾವು ಜೂನ್ ತಿಂಗಳಿನಲ್ಲೂ ಎದುರಿಸಲಿಕ್ಕೂ ತಯಾರಿದ್ದೇವೆ. ಅಥವಾ ಏಪ್ರಿಲ್‌ನಲ್ಲೂ ಚುನಾವಣೆಯನ್ನು ಎದುರಿಸಲಿಕ್ಕೆ ಸಿದ್ಧರಿದ್ದೇವೆ. ಏನೂ ಹೆದರಿಕೆ ಇಲ್ಲ ನಮಗೆ. We are prepared.

ಶ್ರೀ ಸಿ. ಬೈರೇಗೌಡ : ನೀವು ಸದನಕ್ಕೆ ಕೊಟ್ಟಿರತಕ್ಕಂಥ ಉತ್ತರ ನನ್ನ ಹತ್ತಿರ ಇದೆ. 4ನೇ ತಾರೀಖು ಉತ್ತರ ಕೊಟ್ಟಿದ್ದೀರಿ. ಅಧ್ಯಕ್ಷರ ಗಮನಕ್ಕೆ

ಇದನ್ನು ತಂದಿದ್ದೇನೆ. ಸರ್ಕಾರದಿಂದ ಬಂದಿರತಕ್ಕ ಉತ್ತರವನ್ನು ದಯವಿಟ್ಟು ಅದರ ಅಂಶವನ್ನು ಓದಿ ಹೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ : ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಇದರಲ್ಲಿ ರಾಜಕೀಯ ನಾವು ಮಾಡುವುದಿಲ್ಲ, ತಾವೂ ಮಾಡಬೇಕಾದ ಅವಶ್ಯಕತೆ ಇಲ್ಲ. ಏಕೆಂದರೆ, ನಾವು ಜೂನ್‌ನಲ್ಲಿ ಚುನಾವಣೆ ಮಾಡಬೇಕೆಂದು ಸುಪ್ರೀಂ ಕೋರ್ಟ್‌ನ ಆದೇಶ ಇದೆ. ನಾವು ಸುಪ್ರೀಂ ಕೋರ್ಟ್‌ಗೆ ಯಾವ ರಿವ್ಯೂ ಪಿಟೀಷನ್‌ಅನ್ನು ಚುನಾವಣಾ ದಿನಾಂಕವನ್ನು ಮುಂದುವರಿಸಬೇಕೆಂದು ಇದುವರೆಗೆ ಹಾಕಿಲ್ಲ, ಕ್ಯಾಬಿನೆಟ್ ನಿರ್ಣಯ ಮಾಡಿಲ್ಲ. Where is the question? ನಾವುಇನ್ ಫಾರ್ಮಲ್ ಆಗಿ ಏನು ನಿರ್ಣಯ ಮಾಡಿದ್ದೇವೆಂದರೆ Let us discuss with the Opposition Leaders on this issue. ಏಕೆ ಹೀಗೆ ಮಾಡುತ್ತೀರಿ I am going to discuss.. ಜಾಲಪ್ಪನವರು ಏಕೆ ಹೀಗೆ ಮಾಡುತ್ತೀರಿ? How can you say?

ಶ್ರೀ ಆರ್.ಎಲ್. ಜಾಲಪ್ಪ : ಸುಪ್ರೀಂ ಕೋರ್ಟ್‌ನ ಬಗ್ಗೆ ಇರುವ ಗೌರವ ಹೈಕೋರ್ಟ್ ಕೊಟ್ಟ ತೀರ್ಪಿನ ಬಗ್ಗೆ ಏಕೆ ಇರಲಿಲ್ಲ?

ಉಪಾಧ್ಯಕ್ಷಣಿಯವರು : ಜಾಲಪ್ಪನವರೆ, ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಆರ್. ಎಲ್. ಜಾಲಪ್ಪ : ನಾವು ಚುನಾವಣೆಯಲ್ಲಿ ಪಾರ್ಟಿಸಿಪೇಟ್ ಮಾಡುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ : ನೀವು ಪಾರ್ಟಿಸಿಪೇಟ್ ಮಾಡುವುದಿಲ್ಲವೆಂದರೆ ಅದು ಸರ್ವಾಧಿಕಾರಿ ಮನೋವೃತ್ತಿಯಾಯಿತು ನಿಮ್ಮದು.

(ಗೊಂದಲ)

Sri. M. Veerappa Moily : I am on my legs.

ಉಪಾಧ್ಯಕ್ಷಣಿಯವರು : ದಯವಿಟ್ಟು ತಾವು ಕೋ-ಆಪರೇಟ್ ಮಾಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಈಗ ಮಾನ್ಯ ಶ್ರೀ ಮೊಯಿಲಿಯವರು, ಮುಖ್ಯಮಂತ್ರಿಯಾದ ನಂತರ ಚುನಾವಣೆ ಮಾಡುತ್ತೇವೆಂದು ಹೇಳಿದ್ದಾರೆ ಸ್ಪಷ್ಟವಾಗಿ ಹೇಳಿ.

ನಮಗೂ ಸಂತೋಷ. ನಾವು ಅದನ್ನು ಸ್ವಾಗತ ಮಾಡಿದ್ದೇವೆ. ರೂರಲ್ ಡೆವಲಪ್ ಮೆಂಟ್ ಮಿನಿಸ್ಟರ್ ಅದೇ ಮಾತನ್ನು ಹೇಳಿದರು. ತದನಂತರ ಕೆಲವು ದಿವಸದ ಹಿಂದೆ ತಾವು ವಿರೋಧ ಪಕ್ಷದ ನಾಯಕರ ಜೊತೆ ಇದರ ಬಗ್ಗೆ ಡಿಸ್ಕಸ್ ಮಾಡುತ್ತೇನೆ ಎಂದು ಹೇಳಿದ್ದೀರಿ. ಅಂದರೆ ತಮ್ಮ ಸ್ಟ್ಯಾಂಡ್‌ನಲ್ಲಿ ಬದಲಾವಣೆಯಾಗಿದೆ. 3 ದಿವಸದ ಹಿಂದೆ ಮಾನ್ಯ ಸಿಂಧ್ಯಾರವರು ಪ್ರಶ್ನೆಗೆ ಉತ್ತರ ಕೊಡುವಾಗ ಮಾನ್ಯ ಘೋರ್ಪಡೆಯವರು ಏನು ಹೇಳಿದ್ದಾರೆಂದರೆ ...... One minute....

ಶ್ರೀ ವೈ.ಕೆ. ರಾಮಯ್ಯ : ದಯಮಾಡಿ ಒಂದು ನಿಮಿಷ ಯೀಲ್ಡ್ ಆಗಬೇಕು. ಶ್ರೀ ಆರ್. ವಿ.ದೇಶಪಾಂಡೆ : ಚುನಾವಣೆಗಳನ್ನು ಸುಪ್ರೀಂಕೋರ್ಟ್‌ನ ಆದೇಶದ ಪ್ರಕಾರ ಮಾಡಬೇಕು. ನಿಜ. ಆದರೆ ಡಿ-ಲಿಮಿಟೇಷನ್ ಮಾಡಲಿಕ್ಕೆ ಆಗುವುದಿಲ್ಲ, ತ್ರೀ ಟೈರ್ ಸಿಸ್ಟಂ ಇನ್ನು ರ್ಯಾಟಿಫೈ ಆಗಬೇಕು. ಅಮೆಂಡ್

ಮೆಂಡ್ ಅದರೊಳಗೆ ಆಗುವುದಿಲ್ಲ. ಹೀಗಾಗಿ ಟೆಕ್ನಿಕಲ್ ಡಿಫಿಕಲ್ಟೀಸ್ ಇದೆ. You have to approach the Supreme Court. ಚುನಾವಣೆ ನವಂಬರ್, ಡಿಸಂಬರ್ ತಿಂಗಳಿಗೆ ಹೋಗತಕ್ಕಂಥ ಒಂದು ಮಾತು ಹೇಳಿದರು. ಆದರೆ ನೀವು ಜೂನ್‌ನಲ್ಲಿ ಮಾಡತಕ್ಕಂಥ ಮಾತನ್ನು ಹೇಳುತ್ತೀರಿ. ತಾವು ಪುನಃ ಹೇಳುತ್ತಿದ್ದೀರಿ ಜೂನ್ ಒಳಗೆ ಮಾಡುತ್ತೇವೆಂದು. ಸುಪ್ರೀಮ್ ಕೋರ್ಟ್ ಗೆ ಹೋಗುವ ಪ್ರಶ್ನೆ ಇಲ್ಲವೆಂದು ಹೇಳಿದ್ದೀರಿ. ಅವರು ಸುಪ್ರೀಮ್ ಕೋರ್ಟ್‌ಗೆ ಹೋಗುತ್ತೇವೆಂದು ಹೇಳಿದ್ದಾರೆ. ಘೋಷ್ಪಡೆ ಹೇಳಿದ್ದಾರೆ. It is on record. ನಿಮ್ಮ ಗೌರ್ನಮೆಂಟ್ ಸರ್ಕ್ಯುಲರ್ ಇದೆ. ನಿಮ್ಮ ಗೌರ್ನಮೆಂಟ್ ಸ್ಟ್ಯಾಂಡ್ ಸರಿಯಿಲ್ಲ. ಗೌರ್ನಮೆಂಟ್ ಸ್ಟ್ಯಾಂಡ್ ಒಂದೇ ರೀತಿ ಇದ್ದರೆ ನಾವು ಸರಿಯಾಗಿ ತಿಳಿದುಕೊಳ್ಳುವುದಕ್ಕೆ ಸಾಧ್ಯತೆ ಇತ್ತು. ತಾವು ಒಂದು ಹೇಳುತ್ತೀರಿ, ರೂರಲ್ ಡೆವಲಪ್ ಮೆಂಟ್ ಮಿನಿಸ್ಟರ್ ಒಂದು ಹೇಳಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡುವ ಪ್ರಶ್ನೆ ನಮಗೆ ಇಲ್ಲ. ಜೂನ್ ಒಳಗೆ ಚುನಾವಣೆಯಾಗಬೇಕಾಗಿದೆ. ತಾವು ಸ್ಪಷ್ಟವಾಗಿ ಹೇಳಿ. ಈ ವ್ಯವಸ್ಥೆಯಲ್ಲಿ ನಿಮಗೆ ವಿಶ್ವಾಸ ಇದೆಯೋ ಇಲ್ಲವೋ? ಈ ವ್ಯವಸ್ಥೆಯಲ್ಲಿ ನಿಮಗೆ ವಿಶ್ವಾಸ ಇದ್ದರೆ, ಸುಪ್ರೀಕೋರ್ಟಿನ ಆದೇಶದ ಪ್ರಕಾರ ತಾವು ಚುನಾವಣೆ ಯಾವಾಗ ಮಾಡುತ್ತೀರಿ? ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಮಕರಣ ಮಾಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕು.

(ಗೊಂದಲ)

Sri R.V. Deshpande : By back door entry you are trying to destroy the democratic in stitutions. ಸದಸ್ಯರ ಪ್ರಶ್ನೆಗೆ ನಾಮಕರಣ ಮಾಡುವುದಿಲ್ಲವೆಂದು 4ನೇ ತಾರೀಖು ಉತ್ತರ ಕೊಟ್ಟಿದ್ದೀರಿ. ನಿಮ್ಮ ನಿಲುವು ಸ್ಪಷ್ಟ ಇಲ್ಲ. ಹಾಗಾಗಿ ಜಾಲಪ್ಪನವರಾಗಲಿ, ಬಾಕಿ ಮಿತ್ರರಾಗಲಿ ಸ್ಪಷ್ಟವಾಗಿ ಕೇಳುತ್ತಿದ್ದಾರೆ. ತಮ್ಮ ನಿಲುವು ಏನು? ಸ್ಪಷ್ಟವಾಗಿ ನಮಗೆ ಗೊತ್ತಾಗಬೇಕು. ಆದರಿಂದ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ವೈ.ಕೆ. ರಾಮಯ್ಯ : ಸದನದಲ್ಲಿ ಚರ್ಚೆ ಕೇವಲ ಕೆಲವರ ಸ್ವತ್ತಾಗಿದೆ. ಸದನದ ಚರ್ಚೆ ಕೆಲವರು ಸ್ವತ್ತಾಗುವುದು ಬೇಡ.

ಉಪಾಧ್ಯಕ್ಷಿಣಿಯವರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಎಲ್ಲರಿಗೂ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನೋಟೀಸ್ ಬರೆದು ಕಳುಹಿಸಿದರೂ ಕೇಳುವುದಿಲ್ಲ.. ಇದು ಕೆಲವರು ಸ್ವತ್ತು...

ಶ್ರೀ ವೈ.ಕೆ. ರಾಮಯ್ಯ : ನಾನು ಮಂಡಳ ಪಂಚಾಯತ್‌ಗಳಿಗೆ ಮತ್ತು ಜಿಲ್ಲಾ ಪರಿಷತ್‌ಗಳಿಗೆ ನಾಮಕರಣ ಮಾಡುವ ಉದ್ದೇಶ ಸರಕಾರಕ್ಕೆ ಇದೆಯೇ ಎರಡು ಪ್ರಶ್ನೆಯನ್ನು ಸರಕಾರಕ್ಕೆ ಕೇಳಿದ್ದೇನೆ. ಅದಕ್ಕೆ 4ನೇ ತಾರೀಖು ಸರಕಾರದ ಪರವಾಗಿ 218ನೇ ಪ್ರಶ್ನೆಗೆ ಮಾನ್ಯ ಸಚಿವರು ಮುಖ್ಯಮಂತ್ರಿಯವರು ಈ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ, ನಾವು ಪಕ್ಷದಲ್ಲಿ ಈ ಬಗ್ಗೆ ಚರ್ಚೆ ಮಾಡುತ್ತಾ ಇದ್ದೇವೆ, ಎಂದು ಹೇಳುತ್ತಾ ಇದ್ದಾರೆ.ಆದರೆ ಪ್ರಶ್ನೆಗೆ ಬಂದ

ಉತ್ತರದಲ್ಲಿ ನಾವು ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ, ನಾಮಕರಣ ಮಾಡುವುದಿಲ್ಲ ಎನ್ನುವಂಥ ಉತ್ತರವು ಸರಕಾರದ ವತಿಯಿಂದ ಈ ಸನದಕ್ಕೆ ಬಂದಿದೆ. ಈ ಉತ್ತರವನ್ನು ಕೊಟ್ಟಿರುವಂಥ ಸರಕಾರವು ತಾನು ಕೊಟ್ಟಿರತಕ್ಕಂಥ ಉತ್ತರಕ್ಕೆ ಬದ್ಧವಾಗಿದೆಯೇ ಇಲ್ಲವೇ ಎಂಬುದು ಒಂದು ಪ್ರಶ್ನೆ. ಹೀಗೆ ಕೊಟ್ಟಿರತಕ್ಕಂಥ ಉತ್ತರಕ್ಕೆ ಸರಕಾರವು ಬದ್ಧವಾಗಿದೆಯೇ ಇಲ್ಲವೇ ಎಂಬುದನ್ನು ಸ್ಪಷ್ಟಪಡಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷಣಿಯವರೇ, ಅನೇಕ ಸಾರಿ ತಾವುಗಳು ಎದ್ದು ನಿಂತಾಗ ನಾವು ನಮ್ಮ ಉತ್ಸಾಹದಲ್ಲಿ ತಮಗೆ ನೋವು ಮಾಡಿರತಕ್ಕಂಥ ಪ್ರಸಂಗಗಳು ಇರಬಹುದು. ಆ ಬಗ್ಗೆ ನಮ್ಮನ್ನು ತಾವು ಕ್ಷಮಿಸಬೇಕು. ಇಂಥ ತಪ್ಪುಗಳು ನಮ್ಮಲ್ಲಿ ಅನೇಕರಿಂದ ಆಗಿರಬಹುದು. ಇದರಿಂದ ತಮಗೆ ತೊಂದರೆ ಕೊಡಬೇಕೆಂಬ ಉದ್ದೇಶವು ನಮ್ಮದ್ದು ಅಲ್ಲ. ನಮಗೆಲ್ಲರಿಗೂ ನೋವು ಆಗಿರತಕ್ಕಂಥ ವಿಷಯ ಏನೆಂದರೆ, ಪತ್ರಿಕೆಗಳಲ್ಲಿ ನೋಡಿದ ತತ್ ಕ್ಷಣ ! ಒಂದು ವಿಚಾರ ವೇದ್ಯವಾಯಿತು. 4ನೇ ತಾರೀಖಿಗೆ ಒಂದು ಪ್ರಶ್ನೆಗೆ ಸದನದಲ್ಲಿ ಸರಕಾರದವರು ನಾವು ನಾಮಕರಣ ಪದ್ಧತಿಯನ್ನು ಮಾಡುವುದಿಲ್ಲ ಎಂದು ಹೇಳಿದ್ದಾರೆ. ನಾಮಕರಣ ಮಾಡುವುದಿಲ್ಲ ಎಂಬುದು ಸರಕಾರದ ಸ್ಪಷ್ಟವಾದ ನಿಲುವು ಕೂಡ ಇದೆ. ಆದರೆ ಇವೊತ್ತು ಪುನಃ ಸರಕಾರದವವು ನಾಮಕರಣ ಮಾಡುತ್ತಾರೆ ಎಂಬ ಸುದ್ದಿಯು ಬಂದಾಗ ನಮಗೆ ತುಂಬಾ ನೋವು ಆಯಿತು. ಹಾಗಾದರೆ ಸರಕಾರದ ನಿಲುವು ಏನು ? ಒಂದು ಕಡೆ ಜೂನ್ ತಿಂಗಳಲ್ಲಿ ಚುನಾವಣೆ ಆಗಬೇಕೆಂದು ಹೇಳುತ್ತಾರೆ, ಆ ಬಗ್ಗೆ ಸುಪ್ರೀಂ ಕೋರ್ಟ್ ಸಮಗ್ರ ತೀರ್ಪನ್ನು ಹೇಳಿದೆ. ಆ ತೀರ್ಪನ್ನು ಸರಕಾರದವರು ಮನ್ನಿಸಬೇಕು. ಮೊನ್ನೆ ಇಲ್ಲಿ ಮಾನ್ಯ ಪಂಚಾಯತ್ ರಾಜ್ ಸಚಿವರು ಡಿಸೆಂಬರ್ ನಲ್ಲಿ ಚುನಾವಣೆ ಮಾಡಬೇಕಾದರೆ ಸುಪ್ರೀಂ ಕೋರ್ಟ್‌ನವರಿಗೆ ಮತ್ತೆ ಮನವಿ ಸಲ್ಲಿಸಿ, ಮುಂದುವರಿಸಬಹುದೆಂದು ಹೇಳಿದ್ದಾರೆ. ಇದು ಒಂದು ರೀತಿಯಲ್ಲಿ ದ್ವಂದ್ವಕ್ಕೆ ಕಾರಣವಾಗಿದೆ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಾಮಕರಣ ಪದ್ಧತಿಯನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ. ಯಾವ ಕಾರಣಕ್ಕಾಗಿ ನಾಮಕರಣವನ್ನು ಮಾಡುತ್ತಿದ್ದೀರಿ ಎಂಬ ಬಗ್ಗೆ ತಿಳಿಯಲಿಚ್ಛಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಣಿಯವರೇ ಇದರಲ್ಲಿ ಎರಡು ವಿಚಾರಗಳು. ಇವೆ. ಚುನಾವಣೆಗಳ ಬಗ್ಗೆ ಈಗಾಗಲೇ ಸರಕಾರದವರು ಒಂದು ಮಾತನ್ನು ಹೇಳಿದ್ದಾರೆ. ಇವೊತ್ತು ಪತ್ರಿಕೆಗಳಲ್ಲಿ ಬಂದಿರುವ ಪ್ರಕಾರ ಬೇರೆ ವಿಚಾರ ಇದೆ. ನಮ್ಮ ಅಜೆಂಡ ಪ್ರಕಾರ ಸದನವು 8ನೇ ತಾರೀಖಿಗೆ ಮುಗಿಯಬೇಕು. ಪುನಃ ನಾವು ಫೆಬ್ರವರಿ 12 ರಿಂದ ಸೇರುತ್ತೇವೆ. ಬಜೆಟ್‌ನ್ನು 22ಕ್ಕೆ ಪ್ರೆಸೆಂಟ್ ಮಾಡುತ್ತಾರೆ ಎಂಬ ಬಗ್ಗೆಯೂ ತಿಳಿದುಬಂದಿದೆ. ಈಗ ಇರತಕ್ಕಂಥ ಮಂಡಲ ಪಂಚಾಯತಿ ಮತ್ತು ಜಿಲ್ಲಾ ಪರಿಷತ್ ಆಕ್ಟ್ ಪ್ರಕಾರ ನಾಮಕರಣಕ್ಕೆ ಪ್ರಾವಿಶನ್ ಇಲ್ಲ. ಅಧಿವೇಶನ ಮುಗಿದ ಮೇಲೆ ಆರ್ಡಿನೆನ್ಸ್ ಮಾಡುವಾಗ ಇದನ್ನು ಮಾಡುತ್ತೇವೆ ಎಂಬ ವಿಚಾರವು ನಮಗೆ ಬಂದಿದೆ. ಆದ್ದರಿಂದ ಇದನ್ನು ಆರ್ಡಿನೆನ್ಸ್ ಮೂಲಕ ಮಾಡುವುದಿಲ್ಲ,ಕೊನೆಪಕ್ಷ ಇದನ್ನು ಚರ್ಚೆ ಮಾಡಿ ಮಾಡುತ್ತೇವೆ ಎಂಬ ಭರವಸೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಪಂಚಾಯತ್ ರಾಜ್ ಮಸೂದೆಗೆ ಕೇಂದ್ರ ಸರ್ಕಾರದವರು ತಿದ್ದುಪಡಿಯನ್ನು ತಂದಿದ್ದಾರೆ. ನಾವು ಸರಕಾರದ ಜೊತೆಗೆ

ಸಹಕಾರ ಕೊಡುವುದಕ್ಕೆ ಸಿದ್ಧರಿದ್ದೇವೆ. ಇನ್ನೂ 8-10 ದಿನಗಳ ಕಾಲ ಸದನವನ್ನು ಮುಂದೂಡಿ ಚರ್ಚೆ ಮಾಡಿ ಯಾವ ತಿದ್ದುಪಡಿಯನ್ನು ಬೇಕಾದರೂ ತನ್ನಿ. ತಾವುಗಳು ಮುಖ್ಯಮಂತ್ರಿಯಾದ ತತ್‌ಕ್ಷಣ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಜೂನ್ ತಿಂಗಳಲ್ಲಿ ಚುನಾವಣೆಯನ್ನು ಮಾಡುತ್ತೇವೆ ಎಂದು ಹೇಳಿದ್ದೀರಿ. ಆದ್ದರಿಂದ ದಯಮಾಡಿ ನಾಮಕರಣವನ್ನು ಮಾಡುವಂಥ ಯೋಚನೆಯನ್ನು ಏನು ತಾವು ಮಾಡುತ್ತಾ ಇದ್ದೀರಿ, ಅದನ್ನು ಕೈಬಿಡಬೇಕು ಎಂದು ಕೇಳುತ್ತಾ, 4ನೇ ತಾರೀಖಿಗೆ ಸಂಬಂಧಪಟ್ಟ ಸಚಿವರು ನಾಮಕರಣ ಮಾಡುವುದಿಲ್ಲ ಎಂದು ಹೇಳಿದ್ದಾರೆ, ಅದೇ ರೀತಿಯಲ್ಲಿ ಸುಪ್ರೀಂ ಕೋರ್ಟ್‌ಗೆ ಅರ್ಜಿಹಾಕಿಲ್ಲ ಎಂಬ ಮಾತನ್ನು ಕೂಡ ಹೇಳಿದ್ದೀರಿ. ಈಗ ವಿರೋಧ ಪಕ್ಷದವರನ್ನು ಕರೆದು ಚರ್ಚೆ ಮಾಡುವ ಅವಶ್ಯಕತೆ ಇಲ್ಲ, ಜೂನ್ ತಿಂಗಳಲ್ಲಿ ಚುನಾವಣೆ ಮಾಡುತ್ತೇವೆ, ಬೇಕಾದರೆ ತಿದ್ದುಪಡಿ ತರುತ್ತೇವೆ, ನಾಮಕರಣ ಮಾಡುವುದಿಲ್ಲ ಎಂಬ ಆಶ್ವಾಸನೆ ಕೊಡಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯರು ವಿರೋಧ ಪಕ್ಷದ ಜೊತೆಗೆ ಸಮಾಲೋಚನೆ ಮಾಡುತ್ತೇವೆ, ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ನಿಮ್ಮ ಮೊದಲೇ ನಿಲುವಿಗೂ ಈಗಿನ ನಿಲುವಿಗೂ ತುಂಬಾ ವ್ಯತ್ಯಾಸವಿದೆ. 4ನೇ ತಾರೀಖು ಕೊಟ್ಟಂಥ ಉತ್ತರದಲ್ಲಿ ಸ್ಪಷ್ಟವಾಗಿ ನಾಮಕರಣ ಮಾಡುವ ಉದ್ದೇಶ ಸಹಕಾರಕ್ಕೆ ಇಲ್ಲ ಎಂದು ಹೇಳಿದ್ದೀರಿ. 4 ಮತ್ತು 5ನೇ ತಾರೀಖಿಗೂ ಕೇವಲ ಒಂದು ದಿವಸದ ಅಂತರದಲ್ಲಿ ಸರ್ಕಾರದ ನಿಲುವು ಬದಲಾವಣೆ ಆಗಿರುವುದು ಆಶ್ಚರ್ಯವಾಗಿದೆ. ಮೊದಲು ನೀವು 4ನೇ ತಾರೀಖು ಉತ್ತರ ಕೊಟ್ಟಿದ್ದೀರಿ ಅದಕ್ಕೆ ತಾವು ಸ್ಟಿಕ್ ಆನ್ ಆಗಬೇಕು ಅದರಿಂದ ಮುಂದಕ್ಕೆ ನಾವು ಹೋಗೋದಿಲ್ಲ ಎನ್ನುವ ಕ್ಯಾಟಗಾರಿಕಲ್ ಉತ್ತರವನ್ನು ಮುಖ್ಯ ಮಂತ್ರಿಗಳು ಇವತ್ತು ಕೊಡಬೇಕು. ಇಲ್ಲದಿದ್ದರೆ ನಾವಂತೂ ಇದನ್ನು ಸಹಿಸಿಕೊಂಡು ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಈಗ ಸುಪ್ರೀಂ ಕೋರ್ಟ್‌ನವರು ಬಹಳ ಕ್ಲಿಯರಾಗಿ ಹೇಳಿದ್ದಾರೆ ನೀವು ಜೂನ್ ಒಳಗೆ ಎಲೆಕ್ಷನ್ ಮಾಡಿ ಎಂದು. ಈಗಾಗಿರುವುದಾದರೂ ಏನು ಎಲ್ಲಾ ಜಿಲ್ಲಾ ಪರಿಷತ್‌ಗಳಲ್ಲಿ ನಿಮ್ಮ ಶಾಸಕರೇ ಮೆಜಾರಿಟಿಯಲ್ಲಿದ್ದಾರೆ. ಹಾಗಾದರೆ ನಿಮ್ಮ ಶಾಸಕರಿಗೆ ಮೂರು ಕಾಸಿನ ಬೆಲೆ ಇಲ್ಲವೇನು ? ಈ ನಾಮಿನೇಶನ್ ಮಾಡಿ ಕಮಿಟಿ ಮಾಡುವುದರಿಂದ ಈ ಶಾಸಕರು ಅಪ್ರಯೋಜಕರು ಅಂದ ಹಾಗಾಯಿತು. ಬೆಂಗಳೂರಿನಲ್ಲಿ ಇಬ್ಬರನ್ನು ಬಿಟ್ಟರೆ ಎಲ್ಲಾ ನಿಮ್ಮ ಪಕ್ಷದವರು, ಮೈಸೂರಲ್ಲಿ ಇಬ್ಬರನ್ನು ಬಿಟ್ಟರೆ ಎಲ್ಲ ನಿಮ್ಮ ಪಕ್ಷದವರು, ಬೇರೆ ಏಳೆಂಟು ಜಿಲ್ಲೆಗಳಲ್ಲೂ ನಿಮ್ಮ ಪಕ್ಷದವರೇ ಇದ್ದಾರೆ ನೀವು ಎಲೆಕ್ಷನ್‌ಗೆ ಧೈರ್ಯ ಮಾಡಿ ಬನ್ನಿ, ನಿಮಗೆ ಅಧೈರ್ಯ ಏನಿದೆ, ಎಲೆಕ್ಷನ್‌ಗೆ ಹೋದರೆ ನಿಮ್ಮ ಕೈಗೆ ಅಧಿಕಾರ ಬರೋದಿಲ್ಲ ಎಂದು ತಾನೇ ? ಸ್ವಾಮಿ ಯಾರಾದರೂ ಬರಲಿ, ಪ್ರಜಾತಾಂತ್ರಿಕ ಸಂಸ್ಥೆಗಳನ್ನು ಬೆಳೆಸಿಕೊಂಡು ಹೋಗೋಣ, ನಾವೂ ನೀವೂ ಏನು ಗ್ಯಾರಂಟಿಯಾಗಿ ಸಾವಿರ ವರ್ಷ ಇರೋದಿಲ್ಲ, ನೀವು ಜೂನ್ ಒಳಗೆ ನಾವು ಎಲೆಕ್ಷನ್ ಮಾಡ್ತೀವಿ ಎನ್ನುವ ಭರವಸೆ ನಾವು ನಿರೀಕ್ಷೆ ಮಾಡ್ತೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಈ ವಿವಾದ ನಮ್ಮ ಸಿಎಲ್‌ಪಿಯಲ್ಲಿ ನಡೆದ ಚರ್ಚೆ ಪತ್ರಿಕೆಯಲ್ಲಿ ಬಂದದ್ದಕ್ಕೆ

ಉದ್ಭವವಾಗಿರಬೇಕು ಅಷ್ಟೇ. May be, Academically he has answered. I know it. He has informed me also. He academically answered. What exactly the decision today is, that we must hold the elections by June according to the Supreme Court decision and we are not going to disobey the Supreme Court decision.

ನಾನು ಏನು ಹೇಳಿದೆ ಎಂದರೆ ಚುನಾವಣೆ ದಿನಾಂಕ ಗೊತ್ತು ಮಾಡುವುದು ಸುಪ್ರೀಂ ಕೋರ್ಟ್ ಡಿಸಿಶನ್ ಪ್ರಕಾರವೇ ಆಗುತ್ತದೆ. ಇನ್ನು ಇಂಟರ್‌ಪ್ರಿಟ್ ಮಾಡುವುದೇ ಹೋದರೆ ಜಾಲಪ್ಪನವರೇ, ಅಧ್ಯಕ್ಷಣೆಯವರೇ, ಜಾಲಪ್ಪನವರು ಬಹಳ ಚೆನ್ನಾಗಿದ್ದರು ಏಕೆ ಈ ಸಂಶಯ ಪ್ರವೃತ್ತಿ ಅವರಿಗೆ ಬಂದಿದೆ ಎಂದು ನನಗರ್ಥವಾಗುತ್ತಿಲ್ಲ.

(ಗೊಂದಲ)

ತಾವು ಹಿರಿಯೂರು, ನಿಮ್ಮ ಪರೀಕ್ಷೆಯ ಮಟ್ಟಕ್ಕಿಂತಲೂ ನಿಮ್ಮ ಆಶೀರ್ವಾದದಿಂದ, ನಾನು ಮೇಲೆ ಹೋಗ್ತೇನೆ, ನಿಮ್ಮ ನಿರೀಕ್ಷೆಗಿಂತ ಕೆಳಗೆ ಬರೋದಿಲ್ಲ ಹೆದರಬೇಡಿ. ಈಗಾಗಲೇ ನಾವು ಸರ್ಕಾರದ ಪರವಾಗಿ ಒಂದು ಹೇಳಿಕೆ ಕೊಟ್ಟಿದ್ದೇವೆ, ನಮ್ಮದು ಮುಕ್ತ ಸರ್ಕಾರ, ಏನನ್ನೂ ಅಡಗಿಸುವ ಪ್ರಶ್ನೆ ಇಲ್ಲ, ಅದಕ್ಕೇ ಹೇಳಿದೆ ನಾನು, ಮೊದಲಾಗಿ ವಿರೋಧಪಕ್ಷದ ನಾಯಕರನ್ನು ಭೇಟಿ ಮಾಡಿದಾಗ ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದ್ದೇನೆ, ಏನು ಮಾಡುವುದಿದ್ದರೂ ವಿರೋಧ ಪಕ್ಷದ ಫ್ಲೋರ್ ಲೀಡರ್ಸ್ ಜೊತೆ ಸಮಾಲೋಚನೆ ಮಾಡಿಕೊಂಡೇ ಈ ವಿಷಯದಲ್ಲಿ ಮುಂದೆ ಹೋಗುತ್ತೇವೆ. ಆ ದೃಷ್ಟಿಯಿಂದ ಹೇಳಿದೆನೆ ಹೊರತು ಯಾವುದಕ್ಕೂ ವಿರೋಧ ಪಕ್ಷದ ನಾಯಕರೊಡನೆ ಸಮಾಲೋಚಿಸುವ ಅಗತ್ಯವೇ ಇಲ್ಲವೆಂದು ನಾವು ನಿಂತು ಬಿಟ್ಟರೆ, ಏಕೆ ನೀವು ಈ ಸಜ್ಜನಿಕೆಯ ಆಹ್ವಾನಕ್ಕೆ ಸ್ಪಂದಿಸಬಾರದು? ನನಗಂತೂ ಅರ್ಥವಾಗುವುದಿಲ್ಲೇ. ಸನ್ಮಾನ್ಯ ಬೈರೇಗೌಡರು ನಿಮ್ಮ ಪರವಾಗಿ ಈ ತರಹದ ಸಜ್ಜನಿಕೆ ಮುಖ್ಯಮಂತ್ರಿಗಳು ಇಟ್ಟುಕೊಳ್ಳುವ ಅವಶ್ಯಕತೆ ಇಲ್ಲವೆಂದು ಹೇಳಿದರೂ ನಾನು ಈ ಸಜ್ಜನಿಕೆಯನ್ನು ಉಳಿಸಿಕೊಂಡು ಹೋಗಲೇಬೇಕು.

ಶ್ರೀ ಸಿ. ಬೈರೇಗೌಡ : ನಾನು ಸ್ಪಷ್ಟವಾಗಿ ಹೇಳಿದೆ ಈ ವಿಚಾರದಲ್ಲಿ ಅಗತ್ಯ ಇಲ್ಲ ಎಂದು...

ಶ್ರೀ ಎಂ. ವೀರಪ್ಪ ಮೊಯ್ಲಿ : ಏಕೆ ಅಗತ್ಯವಿಲ್ಲ, ಬೈರೇಗೌಡರೇ, ಜೂನ್‌ನಲ್ಲಿ ಒಂದು ಸೂಕ್ತ ದಿನಾಂಕ ನಿಷ್ಕರ್ಷೆ ಮಾಡುವುದು ವಿರೋಧಪಕ್ಷದ ನಾಯಕರ ಜೊತೆ ಸಮಾಲೋಚನೆ ಮಾಡುವ ಅಗತ್ಯ ಇದ್ದರೆ ಅದನ್ನು ಏಕೆ ಬೇಡಾಂತೀರಾ?

ಶ್ರೀ ಬಿ.ಎಸ್. ಬನ್ನಿಕೋಡ್ : ಚುನಾವಣೆ ಬಗ್ಗೆ ಚರ್ಚೆ ಅಗತ್ಯ ಇಲ್ಲಾ ಎಂದು ನಾವು ಹೇಳಲಿಲ್ಲ, ನಾಮಕರಣದ ಬಗ್ಗೆ ಚರ್ಚೆ ಅಗತ್ಯ ಇಲ್ಲಾ ಎಂದು ಹೇಳುತ್ತೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಸನ್ಮಾನ್ಯ ಬೈರೇಗೌಡರು ಮತ್ತು ವೈ.ಕೆ. ರಾಮಯ್ಯನವರು 4-1-93ರಂದು ಮಾನ್ಯ ಸಚಿವರು ಕೊಟ್ಟಿರುವ ಉತ್ತರಗಳನ್ನು ಇಲ್ಲಿ ಒಪ್ಪಿಸಿದ್ದಾರೆ. ಏನು ಹೇಳಿದ್ದಾರೆ ಕರ್ನಾಟಕದಲ್ಲಿ ಜಿಲ್ಲಾ ಪರಿಷತ್ ಮತ್ತು

ಮಂಡಲ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳ ಕಾಲಾವಧಿ ಮುಗಿದ ಮೇಲೆ ಈ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಮಾಡದಿರಲು ಕಾರಣವೇನು? ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಸಂಸ್ಥೆಗಳಿಗೆ ಸಲಹಾ ಸಮಿತಿಗಳನ್ನು ನೇಮಿಸುವುದು ಸರ್ಕಾರಕ್ಕೆ ಉದ್ದೇಶವಿದೆಯೇ, ಇಲ್ಲ, ಇದರಲ್ಲಿ ಬದಲಾವಣೆ ಇಲ್ಲ.

ಶ್ರೀ ವೈ.ಕೆ. ರಾಮಯ್ಯ : ಆ ಉತ್ತರಕ್ಕೆ ತಾವು ಬದ್ಧರಾಗಿದ್ದರೆ ಮುಂದೆ ಚರ್ಚೆ ಇಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ: ಇದರಲ್ಲಿ ಈ ಕ್ರಮ ಜನತಂತ್ರ ವಿರೋಧಿ ಕ್ರಮ ಎಂದು ಸರ್ಕಾರಕ್ಕೆ ತಿಳಿದಿಲ್ಲವೇ? 'ಉದ್ಭವಿಸುವುದಿಲ್ಲ' ಅಂಥ ಸಲಹಾ ಸಮಿತಿಯನ್ನು ನೇಮಿಸುವಂಥದ್ದನ್ನು ಕೈಬಿಟ್ಟು ಸರ್ವೋಚ್ಚ ನ್ಯಾಯಾಲಯದ ತೀರ್ಮಾನದ ಪ್ರಕಾರ ಈ ಸಂಸ್ಥೆ ಗಳಲ್ಲಿ ಯಾವ ದಿನಾಂಕದಂದು ಚುನಾವಣೆಯನ್ನು ನಡೆಸಲಾಗುವುದು. ಇದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಇದರಲ್ಲಿ ಏನು ವ್ಯತ್ಯಾಸ ಇದೆ? This is the reply which stands today. Why should we...

ಗಮನ ಸೆಳೆಯುವ ಸೂಚನೆಗಳು

ಆಶ್ರಯ ಯೋಜನೆಯಲ್ಲಿ ಉಚಿತ ನಿವೇಶನಗಳ ವಿತರಣೆ

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷಣಿಯವರೇ, "ರಾಜ್ಯದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಉಚಿತ ನಿವೇಶನಗಳನ್ನು ವಿತರಣೆ ಮಾಡುವ ಬಗ್ಗೆ ನಾನು ಮಾನ್ಯ ವಸತಿ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

+ಶ್ರೀ ಗೋಪಿನಾಥ ಆರ್ ಸಾಂಡ್ರಾ (ವಸತಿ ಸಚಿವರು) : ಮಾನ್ಯ ಉಪಾಧ್ಯಕ್ಷಣಿಯವರೇ, ನಿಯಮ 72ರ ಅಡಿಯಲ್ಲಿ ಶಾಸಕರಾದ ಶ್ರೀ ಆರ್. ವಿ. ದೇಶಪಾಂಡೆ, ಶ್ರೀ ಟಿ.ಜಿ.ಆರ್. ಸಿಂಧ್ಯಾ ಮತ್ತು ಶ್ರೀ ಶಿವಾನಂದ ಕೌಜಲಗಿಯವರು ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ನನ್ನ ಉತ್ತರ ಈ ರೀತಿ ಇದೆ.

ರಾಜ್ಯದಲ್ಲಿ ವಸತಿ ಹೀನ / ದುರ್ಬಲ ವರ್ಗದ ಕುಟುಂಬಗಳಿಗೆ ವಸತಿ ನಿವೇಶನ ಹಾಗೂ ವಸತಿ ಸೌಕರ್ಯ ಒದಗಿಸಲು ಸರ್ಕಾರ 1991-92ರಲ್ಲಿ "ಆಶ್ರಯ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದೆ. ಯೋಜನೆಯ ರೂಪುರೇಷೆಗಳು ಶಾಸಕರುಗಳಿಗೆ ತಿಳಿದ ವಿಷಯ. ಕುಟುಂಬದ ವಾರ್ಷಿಕ ವರಮಾನ ರೂ. 8,400-00ಕ್ಕೆ ಮೀರದಿರುವ ವಸತಿ ಹೀನ ಕುಟುಂಬಗಳು ಗ್ರಾಮಾಂತರ ಪ್ರದೇಶದಲ್ಲಿ 30x40 ಅಡಿ ಅಳತೆ ನಿವೇಶನವನ್ನು ಉಚಿತವಾಗಿಯೂ, ಬೆಂಗಳೂರು ಮಹಾನಗರ ಹೊರತುಪಡಿಸಿ ರಾಜ್ಯದ ಉಳಿದ ನಗರ ಪ್ರದೇಶಗಳಲ್ಲಿ 20x30 ಅಡಿ ಅಳತೆಯ ನಿವೇಶನದ ಶೇಕಡ 50 ಭಾಗ / ದರದಲ್ಲಿ ಪಡೆಯಲು ಅರ್ಹರಿರುತ್ತಾರೆ. ನಗರ ಪ್ರದೇಶಗಳಿಗೆ ಅನವಶ್ಯ ವಲಸೆ ತಪ್ಪಿಸಲು ಫಲಾನುಭವಿಗಳು ಕನಿಷ್ಠ ಹತ್ತು ವರ್ಷಗಳಿಯಾ ಪಟ್ಟಣದ ನಿವಾಸಿಯಾಗಿರಬೇಕೆಂದು ಕೂಡ ಸೂಚಿಸಿದೆ. ಸದರಿ ಯೋಜನೆ 1992-93ಕ್ಕೂ ವಿಸ್ತರಿಸಿದೆ.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು, ಯೋಜನೆಯ ಅನುಷ್ಠಾನದ ಮೇಲ್ವಿಚಾರಕರಾಗಿದ್ದು, ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿನ ನಾಲ್ಕು ಜನ ಅಧಿಕಾರೇತರ ಮತ್ತು ಅಧಿಕಾರಿ ಸದಸ್ಯರನ್ನೊಳಗೊಂಡ ಟ್ಯಾಸ್ಕ್ ಫೋರ್ಸ್ ಸಮಿತಿ ರಚಿಸಿದೆ. ಸದರಿ ಸಮಿತಿ ನಿವೇಶನ ರಚನೆಗೆ ಬೇಕಾದ ಭೂಮಿಯನ್ನು ಆಯ್ಕೆ ಮಾಡುವ ಅಧಿಕಾರ ಹೊಂದಿರುತ್ತಾರೆ. ಈ ಯೋಜನೆಯ ಅನುಷ್ಠಾನದಿಂದ ರಾಜ್ಯದಲ್ಲಿ ನವೆಂಬರ್ 1992ರ ಅಂತ್ಯದ ವರೆಗೆ 5,26,975 ನಿವೇಶನಗಳನ್ನು ಹಂಚಲಾಗಿದೆ.

ಮಾನ್ಯ ಸದಸ್ಯರು ಈ ಯೋಜನೆಯಡಿ ನಿವೇಶನದ ಹಂಚುವಲ್ಲಿ ಅವ್ಯವಹಾರವಾಗಿದೆ ಎಂದು, ಅದರಲ್ಲೂ ವರ್ತೂರು ಮತ ಕ್ಷೇತ್ರದಲ್ಲಿ ಅವ್ಯವಹಾರದ ಬಗ್ಗೆ ಪ್ರಸ್ತಾಪಿಸಿದ್ದಾರೆ. ವರ್ತೂರು ಮತ ಕ್ಷೇತ್ರಕ್ಕೆ ದಿನಾಂಕ 17-2-92ರ ಸರ್ಕಾರಿ ಆದೇಶದಲ್ಲಿ ಶಾಸಕರನ್ನೊಳಗೊಂಡಂತೆ ನಾಲ್ಕು ಜನ ಅಧಿಕಾರೇತರ ಸದಸ್ಯರನ್ನು ನಾಮಕರಣ ಮಾಡಿದೆ. ಸದರಿ ಕ್ಷೇತ್ರದ ಸಮಿತಿ ನವೆಂಬರ್ 92ರ ಅಂತ್ಯದವರೆಗೆ ಗ್ರಾಮೀಣ ಪ್ರದೇಶದಲ್ಲಿ 1437 ನಿವೇಶನಗಳನ್ನು ನಗರ ಪ್ರದೇಶದಲ್ಲಿ 304 ನಿವೇಶನಗಳನ್ನು ಫಲಾನುಭವಿಗಳಿಗೆ ಹಂಚಿದೆ.

ಈ ಹಿಂದೆ ಕೃಷ್ಣರಾಜಪುರ ಹೋಬಳಿ ಹೂಡಿ ಗ್ರಾಮದಲ್ಲಿ ಸ್ಥಳೀಯ ಶಾಸಕರು ಜಿಲ್ಲಾಧಿಕಾರಿಗಳೊಡನೆ ಶಾಮೀಲಾಗಿ, ಸುಮಾರು 1500 ನಿವೇಶನಗಳನ್ನು ತರಾತುರಿಯಿಂದ ದಿನಾಂಕ 4-10-1992 ರಂದು ಭಾನುವಾರ ಹಂಚಿಕೆಮಾಡಲು ಪ್ರಯತ್ನ ನಡೆಸಿರುತ್ತಾರೆ. ಹಾಗೂ ಸರ್ವೇ ನಂ. 145,149,150, 151,154 ಇವುಗಳಲ್ಲಿ ಕಳೆದ ನಲವತ್ತು ವರ್ಷಗಳಿಂದ ಸ್ಥಳೀಯ ಹರಿಜನರು ಮತ್ತು ಇತರೆ ಕಡು ಬಡವರು ಒಕ್ಕಲು ಮಾಡುತ್ತಿದ್ದರು. ಇವರುಗಳಿಗೆ ಜಮೀನು ಮಂಜೂರು ಮಾಡದೇ ಅವರನ್ನು ಒಕಲೆಬ್ಬಿಸಿ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆಂದು ಆರೋಪಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು.

ಸದರಿ ಮನವಿಯ ಆಧಾರದ ಮೇಲೆ ಸರ್ಕಾರ ದಿನಾಂಕ 2-11-92 ರಂದು ಆದೇಶ ಹೊರಡಿಸಿ ವರ್ತೂರು ಕ್ಷೇತ್ರದ ಅನುಷ್ಠಾನ ಸಮಿತಿಯು ಯಾವುದೇ ನಿವೇಶನಗಳನ್ನು ಹಂಚದೇ ತಡೆಯಾಜ್ಞೆ ನೀಡಿ ಬೆಂಗಳೂರು ವಿಭಾಗಾಧಿಕಾರಿಗಳು ವಿಚಾರಣೆ ನಡೆಸಲು ನಿರ್ದೇಶನ ನೀಡಿತ್ತು.

ದಿನಾಂಕ 30-11-92ರಂದು ಸ್ಥಳೀಯ ಶಾಸಕರು ವಿನಂತಿ ಮೇರೆಗೆ ಪ್ರಕರಣ ಪುನರ್ ಪರಿಶೀಲಿಸಿ ಈ ಹಿಂದೆ ನೀಡಿದ್ದ ಆಜ್ಞೆಯನ್ನು ದಿನಾಂಕ 8-12-92ರಂದು ತೆರವು ಮಾಡಿದೆ.

ಯಾವುದೇ ಮತ ಕ್ಷೇತ್ರದಲ್ಲಿ ನಿವೇಶನ ಹಂಚಿಕೆಯಲ್ಲಿ ನಿಯಮ ಉಲ್ಲಂಘನೆ ಮಾಡಿರುವು ಸರ್ಕಾರಕ್ಕೆ ಕಂಡು ಬಂದರೆ ಅವುಗಳನ್ನು ವಿಚಾರಣೆಗೆ ಒಳಪಡಿಸಿ ಕಾಯಿದೆ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು.

+ಶ್ರೀ. ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ಸಚಿವರು ಈ ಉತ್ತರದಲ್ಲಿ ಪ್ರೊಸೀಜರ್ ಅನ್ನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ರಾಜ್ಯದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಬಡ ಜನರಿಗೆ ಪರಿಶಿಷ್ಟ ಜಾತಿ ಜನರಿಗೆ, ಜನಾಂಗದವರಿಗೆ

ನಿವೇಶನ ಕೊಡುವುದು ಒಳ್ಳೆಯ ಯೋಜನೆ. ನಾನು ಈಗಾಗಲೇ ಹೇಳಿದ ಹಾಗೆ ಬೆಂಗಳೂರು ನಾರ್ತ್ ತಾಲ್ಲೂಕಿನಲ್ಲಿ, ವರ್ತೂರು ಮತ ಕ್ಷೇತ್ರದಲ್ಲಿ ಬೆಂಗಳೂರು ಸೌತ್ ತಾಲ್ಲೂಕಿನ ಹೂಡಿ ವಿಲೇಜ ಸರ್ವೆ ನಂಬರ್ 145 ಮತ್ತು 155 ಬಗ್ಗೆ ತಾವು ಹೇಳಿದ್ದೀರಿ. 2.11.92ರ ದಿನ ವಿಚಾರಣೆಗೆ ಆದೇಶ ಕೊಟ್ಟರಿ. ಅದರಿಂದ ಪುನಃ ಸ್ಥಳೀಯ ಶಾಸಕರ ವಿನಂತಿ ಮೇರೆಗೆ ಏನು ಅವವು ಮುಂಚೆ ಮಾಡಿದ್ದರು ಅದನ್ನು ಒಪ್ಪಿಕೊಂಡು ಬಿಟ್ಟರಿ, ನಿವೇಶನ ಕೊಡುವುದರ ವಿರುದ್ಧ ನಾವು ಇಲ್ಲ. ನಿವೇಶನ ಹಂಚಲಿಕ್ಕೆ ಕೇಂದ್ರ ಸಚಿವರಾದ ಶ್ರೀ ಜಾಫರ್ ಷರೀಫ್‌ಅವರು ಹೋದಾಗ ಅಲ್ಲಿ ಗಲಾಟೆ ನಡೆಯಿತು. ಪೋಲೀಸ್ ಲಾಠಿ ಛಾರ್ಜ್ ಆಯಿತು. ಹಾಗಾಗಿ ಆ ದಿನ ಸೈಟ್ಸ್ ವಿತರಣೆ ಮಾಡುವುದಕ್ಕೆ ಆಗಲಿಲ್ಲ. ಅದರ ನಂತರ ಸ್ಥಳೀಯ ಹಿಂದುಳಿದ ಜನಾಂಗದವರ, ಪರಿಶಿಷ್ಟ ಜನಾಂಗದವರ ಮನವಿ ಮೇರೆಗೆ ಮಾನ್ಯ ಬಂಗಾರಪ್ಪನವರು ವಿಚಾರಣೆಗೆ ಆದೇಶ ಕೊಟ್ಟರು. ಡಿವಿಜನಲ್ ಕಮೀಷನರ್ ಅವರು ವಿಚಾರಣಾ ಅಧಿಕಾರಿ ಎಂದು ಅಪಾಯಿಂಟ್ ಆದರು. ಆದರೆ ಅವರು ಸ್ಥಳೀಯ ಜನರನ್ನು ವಿಚಾರಣೆ ಮಾಡದೇ ಅಥವಾ ಯಾರ ಅಭಿಪ್ರಾಯವನ್ನೂ ಕೇಳದೇ ನಿಮಗೆ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಆ ರಿಪೋರ್ಟನ್ನು ಪುನಃ ಅಕ್ಸೆಪ್ಟ್ ಮಾಡಿದ್ದೀರಿ ಹಾಗಾಗಿ ನೇರವಾಗಿ ನಿಮಗೆ ಸ್ಪಷ್ಟವಾಗಿ ಕೇಳುತ್ತಿದ್ದೇನೆ. ಯಾರಿಗೆ ಅರ್ಹತೆ ಇದೆ, ಅವರಿಗೆ ಕೊಡಿ. ಅದರ ವಿರುದ್ಧ ನಾವು ಇಲ್ಲ. ಸ್ಥಳೀಯ ಜನರಿಗೆ ಕೊಡುವುದರ ವಿರುದ್ಧ ನಾವು ಇಲ್ಲ. ಆದರೆ ಸ್ಥಳೀಯ ಜನರಿಗೆ ನೀವು ಕೊಟ್ಟಿಲ್ಲ. ಹೊರಗಿನ ಜನರಿಗೆ ಕೊಟ್ಟಿದ್ದರೆ ತಾವು ರದ್ದು ಮಾಡುತ್ತೀರಾ? ಯಾರಿಗೆ ಅರ್ಹತೆ ಇಲ್ಲ ಅಂತಹ ಜನರಿಗೆ ಕೊಟ್ಟಿದ್ದರೆ ಅದನ್ನು ರದ್ದು ಮಾಡುತ್ತೀರಾ? ಈ ಎರಡು ಪ್ರಶ್ನೆಯನ್ನು ನೇರವಾಗಿ ಕೇಳುತ್ತಿದ್ದೇನೆ. ಈ ಎರಡು ಪ್ರಶ್ನೆಗಳಿಗೆ ತಾವು ಹೌದು ಎಂದು ಹೇಳುವುದಾದರೆ ತಾವು ರದ್ದು ಮಾಡುತ್ತೇವೆಂದು ಹೇಳಬೇಕಾದರೆ ಇದರ ಬಗ್ಗೆ ಪುನಃ ವಿಚಾರಣೆಯನ್ನು ಮಾಡಬೇಕಾಗುತ್ತದೆ. ಏಕೆಂದರೆ ಈ ಹಳ್ಳಿ ಎಂದರೆ ಬೆಂಗಳೂರು ನಗರದಲ್ಲಿ ಇದ್ದ ಹಾಗೆಯೇ 10 ಕಿಲೋ ಮೀಟರ್ ದೂರದಲ್ಲಿದೆ. ನನಗೆ ದೂರು ಬಂದಿದೆ. 15 ಸಾವಿರ 20 ಸಾವಿರ 30 ಸಾವಿರ ತೆಗೆದುಕೊಂಡು ಹೋದವರಿಗೆ ಸೈಟ್ ಕೊಟ್ಟಿದ್ದಾರೆ. ಹೀಗಾಗಿ ಇದರ ಬಗ್ಗೆ ತಾವು ವಿಚಾರಣೆ ಮಾಡಬೇಕಾಗುತ್ತದೆ. ವಿಚಾರಣೆ ಮಾಡಿ ಸತ್ಯದ ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕಾಗುತ್ತದೆ. ಅರ್ಹತೆ ಮೇರೆಗೆ ಪರಿಶಿಷ್ಟ ಜಾತಿ, ಹಿಂದುಳಿದೇ ಜನಾಂಗ ಯಾರಿಗೆ ಅವರಿಗೆ ನೀವು ಪ್ರಾಧಾನ್ಯತೆಯ ಮೇಲೆ ಕೊಡಬೇಕಾಗುತ್ತದೆ. ಸ್ಥಳೀಯ ಜನರಿಗೆ ಕೊಡಬೇಕಾಗುತ್ತದೆ. ಇದೇ ಪ್ರಕಾರ ರಾಜ್ಯದ ಬೇರೆ ಬೇರೆ ಭಾಗದಲ್ಲಿ ಇದೆ. ಬೆಳಗಾಂ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಗ್ರಾಮದಲ್ಲಿ ಇಂತಹ ಅಕ್ರಮ ಆಗಿದೆ. ಈ ಒಂದು ವಿಷಯ ನನ್ನ ಗಮನಕ್ಕೆ ಬಂದಿದೆ. ತಮ್ಮ ಗಮನಕ್ಕೂ ಬಂದಿರಬಹುದು. ನನಗೆ ಗೊತ್ತಿಲ್ಲ. ಹಾಗಾಗಿ ಎಲ್ಲೆಲ್ಲಿ ಇಂತಹ ಅಕ್ರಮಗಳು ಆಗಿದ್ದಾವೆ,ಎಲ್ಲೆಲ್ಲಿ ಅರ್ಹತೆ ಇಲ್ಲದ ಜನರಿಗೆ ಸಿಕ್ಕಿದೆ, ಅಲ್ಲಿ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಿಮ್ಮ ಕಡೆಯಿಂದ ಉತ್ತರವನ್ನು ಅಪೇಕ್ಷೆ ಪಡುತ್ತೇನೆ.

ಶ್ರೀ ಆರ್. ಗೋಪಿನಾಥ ಸಾಂಡ್ರ (ನಗರಾಭಿವೃದ್ಧಿ ಸಚಿವರು): ಸನ್ಮಾನ್ಯ ಅಧ್ಯಕ್ಷಣೆಯವರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಎಲ್ಲೂ ನಡೆದಿಲ್ಲ. ವರ್ತೂರು ಶಾಸಕರು ತಮ್ಮ ಮನವಿಯನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ನನಗೆ ಬೇಡಿಕೆಯನ್ನು ಇಟ್ಟರು. ಆ ಬೇಡಿಕೆ ನಂತರ ನಾನು

ಕೂಲುಕುಷವಾಗಿ ಪರಿಶೀಲನೆ ಮಾಡಿ ಹಿಂದೆ ಏನು ಆಜ್ಞೆ ಮಾಡಿದ್ದರು ಅದು ಪ್ರೈಮಾಫೇಸಿ ಇಲ್ಲ, ಅದು ಕೇವಲ ರಾಜಕೀಯ ದೃಷ್ಟಿಯಿಂದ ಮಾಡಿದ್ದಾರೆ ಎಂದು ಒಂದು ನಿರ್ಣಯಕ್ಕೆ ಬಂದೆ. ಆ ನಿರ್ಣಯಕ್ಕೆ ಬರುವಾಗೇ ಮಾನ್ಯ ದೇಶಪಾಂಡೆಯವರು ಹೂಡಿ ಗ್ರಾಮದ ಜನರ ವಿಷಯದಲ್ಲಿ ಪತ್ರ ಬರೆದರು. ಅವರು ಒಂದು ಸ್ಟೇಡ್ ಮಾತ್ರ ಕೇಳಿಕೊಂಡು ಪತ್ರವನ್ನು ಬರೆದಿದ್ದಾರೆ. ನಾನು ಆ ಪತ್ರವನ್ನು ಎದುರಿಗೆ ಇಟ್ಟುಕೊಂಡು ಈ ವಿಷಯವನ್ನು ಪುನರ್ ಪರಿಶೀಲನೆ ಮಾಡಿದಾಗ ಈ ಒಂದು ಉತ್ತರವನ್ನು ನಾನು ಕೊಡಬಲ್ಲೆ. ಈಗ ಹೂಡಿ ಗ್ರಾಮದಲ್ಲಿ ಜನ ಏನು ಇದ್ದಾರೆ, ಆ ಗ್ರಾಮದ ಜನರ ಬೇಡಿಕೆ ಏನು ಇತ್ತು? ಅವರ ಬೇಡಿಕೆ ಏನು ಇತ್ತು ಎಂದರೆ ನಾವು ಕಲ್ಟಿವೇಷನ್ ಮಾಡುತ್ತೇವೆ, ಅದನ್ನು ನಮಗೆ ಕೊಡಬೇಕು ಎಂದು ಇತ್ತು. ಕಲ್ಟಿವೇಷನ್ ಮಾಡಿದರೆ ಕೊಡಬೇಕು. ಅದು ಅಕ್ರಮವೋ ಸಕ್ರಮವೋ ಆ ಬಗ್ಗೆ ಕಮಿಟಿಗೆ ಹೋಗುತ್ತದೆ.

1.05 ಪಿ.ಎಂ.

ಒಂದು ಕಾನೂನು ನಮ್ಮಲ್ಲಿ ಇದೆ. 18 ಕಿ.ಮೀ. ಒಳಗಡೆ ಇದ್ದ ಜಮೀನನ್ನು ಕಲ್ಟಿವೇಷನ್ ಮಾಡಲಿಕ್ಕೆ ಅದು ಕಾರ್ಪೊರೇಷನ್ ಏರಿಯಾ ಬರುವುದಿಲ್ಲ. ಹೂಡಿ ಜನರು ಯಾವ ಕಾರಣದಿಂದ ಟ್ರೈ ಮಾಡುತ್ತಿದ್ದಾರೆ ಅದು ರೆಕಾರ್ಡ್ಸ್‌ನಲ್ಲಿ ಎಳ್ಳಷ್ಟು ಇಲ್ಲ. ಏರಿಯಾ ಡೆವಲಪ್‌ಮೆಂಟ್ ಇಂಡಸ್ಟ್ರಿಯಲ್ ಕಾರ್ಪೊರೇಷನ್‌ನವರು ಕೂಡ ಈ ಜಮೀನು ನಮಗೆ ಬೇಕೆಂದು ಪಬ್ಲಿಕೇಷನ್ ಮಾಡಿದರು. ಆದರೂ ಹೂಡಿಯ ಜನ ಈ ನಿರ್ಣಯವನ್ನು ಹಿಂದೆ ತೆಗೆದುಕೊಂಡಿದ್ದೇನೆ. ಇದರ ಜೊತೆಗೆ ವರ್ತೂರು ಕ್ಷೇತ್ರದಲ್ಲಿ 1383 ಫಲಾನುಭವಿಗಳು ಇದ್ದಾರೆ. ಇದರಲ್ಲಿ ಎಸ್.ಸಿ, ಎಸ್.ಟಿ.ಯವರು 409 ಎಂದು ಕೊಟ್ಟಿದ್ದಾರೆ. ಬ್ಯಾಕ್ ವರ್ಡ್ ಕ್ಲಾಸ್ 675 ಅಂತ ಕೊಟ್ಟಿದ್ದಾರೆ. ಮೈನಾರಿಟಿಯವರಿಗೆ 93 ಕೊಟ್ಟಿದ್ದಾರೆ. ಬೇರೆ 206 ಜನರಿಗೆ ಕೊಟ್ಟಿದ್ದಾರೆ. ಇದಲ್ಲದೆ ಅಂಗವಿಕಲರಿಗೆ 850 ಜನರಿಗೆ ಕೊಟ್ಟಿದ್ದಾರೆ. ಅತ್ಯಂತ ಕಡುಬಡವರಿಗೆ 750 ಸೈಟುಗಳನ್ನು ಕೊಟ್ಟಿದ್ದಾರೆ. ಇದಲ್ಲದೆ ಹೂಡಿ ಗ್ರಾಮದಲ್ಲಿ 190 ಸೈಟುಗಳನ್ನು ಕೊಟ್ಟಿದ್ದಾರೆ. ಗರುಡಾಚಾರ್ ಪಾಳ್ಯದಲ್ಲಿ 46 ಸೈಟುಗಳನ್ನು ಕೊಟ್ಟಿದ್ದಾರೆ. ದೇವಸಂದ್ರದಲ್ಲಿ 68 ಸೈಟುಗಳನ್ನು ಕೊಟ್ಟಿದ್ದಾರೆ. ಸೀತಾರಾಮ ಪಾಳ್ಯದಲ್ಲಿ 21 ಸೈಟುಗಳನ್ನು ಕೊಟ್ಟಿದ್ದಾರೆ. ಸದರಮಂಗಲದಲ್ಲಿ 8 ಸೈಟುಗಳನ್ನು ಕೊಟ್ಟಿದ್ದಾರೆ. ಕೆ.ಆರ್.ಪುರಂನಲ್ಲಿ 60 ಸೈಟುಗಳನ್ನು ಕೊಟ್ಟಿದ್ದಾರೆ. ಇದಲ್ಲದೆ ಬಾರ್ಬರ್ಸ್ ಮತ್ತು ದೋಬಿಯವರಿಗೂ ಕೊಟ್ಟಿದ್ದಾರೆ. ಇಂತಹ ಒಳ್ಳೆ ಯ ಕೆಲಸವನ್ನು ಮಾಡಿದಾಗ ಮತ್ತು ಅವರಿಗೆ ಕೊಟ್ಟಿದ್ದುದು ಸರಿಯೆಂದು ನನಗೆ ಅನ್ನಿಸಿದೆ. ಯಾವುದಾದರೂ ನಿಮಗೆ ದೂರು ಇದ್ದರೆ, ಅಲಿಗೇಷನ್ ಇದ್ದರೆ ಅದಕ್ಕೆ ಸರಿಯಾದ ಡಾಕ್ಯುಮೆಂಟ್ಸ್ ಕೊಡಿ, ಪ್ರೂಫ್ಸ್ ಕೊಡಿ, ಅದನ್ನು ವಿಚಾರ ಮಾಡಲಿಕ್ಕೆ ಬರುತ್ತದೆಂದು ನಾನು ಅವರಿಗೆ ಹೇಳಿದೆ. ಇವತ್ತಿನವರೆಗೂ ಅವರು ನಮಗೆ ಮುಖವನ್ನು ತೋರಿಸಿಲ್ಲ. ಇವರು ಭೂಮಿಯನ್ನು ನಾನು ಕಲ್ಟಿವೇಷನ್ ಮಾಡುತ್ತಿದೆ ಎಂದು 148 ಕಮಿಟಿ ಮುಂದೆ ಇದನ್ನು ರಿಜೆಕ್ಟ್ ಮಾಡಿ ಕಳುಹಿಸಿದೆ. ಇವೆಲ್ಲಾ ಕಾರಣಗಳನ್ನು ನೋಡಿಕೊಂಡು ನಾನು ಈ ನಿರ್ಣಯವನ್ನು ತೆಗೆದುಕೊಂಡಿದ್ದೇನೆಂದು ತಿಳಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಮಾನ್ಯ ಸಚಿವರಿಗೆ ನೇರವಾಗಿ ಎರಡು ಪ್ರಶ್ನೆಗಳನ್ನು ಕೇಳಿದ್ದೇನೆ. ಅದಕ್ಕೆ ಅವರು ಉತ್ತರ ಕೊಟ್ಟಿಲ್ಲ.ಕಡುಬಡವರಿಗೆ

ಅಂಗವಿಕಲರಿಗೆ ಕೊಡಿ ನನಗೆ ಸಂತೋಷವಾಗುತ್ತದೆ, ಅದನ್ನು ನಾನು ಅಭಿನಂದಿಸುತ್ತೇನೆ. ಪ್ರಶ್ನೆ ಏನಿದೆ ಅಂದರೆ ನೇರವಾದಂತಹ ದೂರು ಏನಿದೆ ಅಂದರೆ, ಸ್ಥಳೀಯ ಜನರಿಗೆ ಕೊಟ್ಟಿಲ್ಲವೆಂದು ದೂರು ಇದೆ. ಅರ್ಹತೆ ಇರುವ ಜನರಿಗೆ ಕೊಟ್ಟಿಲ್ಲ, ಹಾಗಾಗಿ ನಾನು ನಿಮಗೆ ಏನು ಕೇಳುತ್ತಿದ್ದೇನೆಂದರೆ ಇದರ ಬಗ್ಗೆ ತನಿಖೆ ಮಾಡುವುದಕ್ಕೆ ನಿಮಗೆ ಏನು ಭಯ? ನೀವು ಯಾರಿಗೆ ನಿವೇಶನವನ್ನು ಕೊಟ್ಟಿದ್ದೀರಿ ಅದರ ಪಟ್ಟಿಯನ್ನು ನಮಗೆ ಕೊಡುವುದಕ್ಕೆ ನೀವು ಸಿದ್ಧರಿದ್ದೀರಾ ಸಿದ್ಧರಿದ್ದೀರೆಂದು ನಾನು ಹೇಳುತ್ತೇನೆ. ತಾವು ಹೇಳಿದ ಹಾಗೆ ಸರಿ ಇದ್ದರೆ ನಿಮಗೆ ಏನು ಭಯ ಆಗಬಾರದು. ಹಾಗಾಗಿ ಈ ಪಟ್ಟಿಯನ್ನು ಇವತ್ತೇ ಇಡಬೇಕೆಂದು ಅಲ್ಲ, ಇದರ ಬಗ್ಗೆ ತನಿಖೆಯಾಗಬೇಕೆಂದು ನಾನು ಹೇಳುತ್ತೇನೆ. ರೈತರ ಬಗ್ಗೆಹೇಳಿರುವುದು ಬೇರೆ ವಿಚಾರ. ಅವರಿಗೆ ಕಾಂಪನ್‌ಸೇಷನ್ ಕೊಟ್ಟು.

ಶ್ರೀ ಗೋಪಿನಾಥ ಆರ್. ಸಾಂಡ್ರ : ಕೊಡುವುದಕ್ಕೆ ಬರುವುದಿಲ್ಲ, ಅಕ್ರಮವಾಗಿ ಅವರು ಹೊಂದಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ ಬಗರ್ ಹುಕುಂ ಸಾಗುವಳಿಯ ಕಾಯಿದೆಯನ್ನು ಇವತ್ತು ತೆಗೆದುಕೊಂಡು ಬಂದಿದ್ದೀರಿ.

ಶ್ರೀ ಗೋಪಿನಾಥ ಆರ್. ಸಾಂಡ್ರ : ಆ ಕಾನೂನು ಎಲ್ಲಿಗೆ ಅನ್ವಯಿಸುತ್ತದೆ ಅದನ್ನು ನೋಡಿಕೊಳ್ಳಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಸಿಟಿ ಪರಿಧಿಯಾ 10 ಕಿ.ಮೀ. ಬಂದಿದಿದ್ದರೂ ಸಹ You have to consider sympathetically if they were cultivating the land.

Sri. Gopinath R. Sandra : There is no record at all.

ಶ್ರೀ ಆರ್.ವಿ. ದೇಶಪಾಂಡೆ : ಆ ವಿಷಯ ದೊಡ್ಡದಲ್ಲ. ನೀವು ತನಿಖೆ ಮಾಡುತ್ತೀರೋ ಇಲ್ಲವೋ ಎಂದು ಕೇಳುತ್ತಿದ್ದೇನೆ. ಎರಡನೆಯದು ನೀವು ನನಗೆ ಪಟ್ಟಿಕೊಡಲಿಕ್ಕೆ ಸಿದ್ಧರಿದ್ದಿರೋ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಗೋಪಿನಾಥ ಆರ್. ಸಾಂಡ್ರ : ಎಲೆಲ್ಲಿ ನಿಯಮಗಳನ್ನು ಉಲ್ಲಂಘಿಸಿದಾಗೇ ಯಾರು ಉಲ್ಲಂಘಿಸಿದ್ದಾರೆ ಅಂತಹ ದೂರು ಬಂದಾಗ ನಾವುಪರಿಶೀಲಿಸಿ ಯಾರು ನಿಯಮಗಳನ್ನು ಉಲ್ಲಂಘಿಸಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಉಪಾಧ್ಯಕ್ಷಣಿಯವರೇ, ಈ ರಾಜ್ಯದಲ್ಲಿ 'ಆಶ್ರಯ' ಯೋಜನೆಯಲ್ಲಿ ನಿವೇಶನಗಳನ್ನು ಹಂಚತಕ್ಕಂಥಾದ್ದು ಮತ್ತು ಮನೆಗಳನ್ನು ಕಟ್ಟಿಸಿಕೊಡತಕ್ಕಂಥಾದ್ದರ ಬಗ್ಗೆ ಕೆಲವು ದೂರುಗಳು ಬಂದಿರುವುದರ ಬಗ್ಗೆ ಮತ್ತು ಸರ್ಕಾರದ ಆಡಳಿತ ಯಂತ್ರದಲ್ಲಿ ಅಧಿಕಾರಿಗಳು ಮಾಡಿರತಕ್ಕಂಥ ಗೊಂದಲವನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಸವಿಸ್ತಾರವಾಗಿ ಮಾತನಾಡಿದ್ದಾರೆ. ನಾನೂ ಕೂಡ ಅದರ ಬಗ್ಗೆ ಒಂದೆರಡು ವಿವರಣೆಗಳನ್ನು ನಿಮ್ಮ ಮುಂದೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಅದಕ್ಕಿಂತ ಮುಂಚಿತವಾಗಿ ಈ 'ಆಶ್ರಯ' ಕಾರ್ಯಕ್ರಮ ನಿಮ್ಮ ಸರ್ಕಾರ ಮಾಡಿರತಕ್ಕಂಥ ಒಂದು ಒಳ್ಳೆಯ ಕೆಲಸವಾಗಿದೆ. ಬಡವರಿಗೋಸ್ಕರ, ನಿರ್ಗತಿಕರಿಗೋಸ್ಕರ 1971ರಲ್ಲಿ

ಪ್ರಾರಂಭವಾದರಂಥ ಈ ಕಾರ್ಯಕ್ರಮ ಸ್ವಲ್ಪ ಕುಂಠಿತವಾಗಿದೆ. ಆದುದರಿಂದ ಇದಕ್ಕೊಂದು ಹೊಸ ಚಾಲನೆ ಕೊಡಬೇಕಾಗಿರುತ್ತದೆ. ಯಾರು ನಿರ್ಗತಿಕರಾಗಿ ಸೂರು ಇಲ್ಲದೇ ಇರತಕ್ಕಂಥ ಜನರಿದ್ದಾರೋ, ಅವರು ಇನ್ನೂ ಹೆಚ್ಚಾಗುತ್ತಾ ಹೋಗುತ್ತಾರೆ. ಏಕೆಂದರೆ, ಹಳ್ಳಿಗಳಲ್ಲಿ ಸಾಮಾನ್ಯವಾಗಿ ತಮಗೆ ಗೊತ್ತಿರುವ ಹಾಗೆ ರೈತ ಕುಟುಂಬಗಳಲ್ಲಿ ವೃತ್ತಿನವರೆವಿಗೂ ಸಹ 4-5 ವರ್ಷಗೊಂದು ಸಲ ಬೇರೆ ಬೇರೆಯಾಗುತ್ತಾರೆ. ಆ ರೀತಿ ಬೇರೆಯಾದಂಥ ಸಂದರ್ಭದಲ್ಲಿ ಅವರುಗಳಿಗೆ ನಿವೇಶನಗಳು ಬೇಕಾಗುತ್ತದೆ. ಅವರಿಗೆ 15-20 ನಿವೇಶನಗಳನ್ನು ಕೊಟ್ಟಿರತಕ್ಕಂಥ ಸಂದರ್ಭದಲ್ಲಿ ಇನ್ನೂಹೆಚ್ಚು ನಿವೇಶನಗಳನ್ನು ಕೊಡತಕ್ಕಂಥ ಕಾರ್ಯಕ್ರಮವೂ ಆಗಿದೆ. ಆದರೆ, ಈಗ ನಾಯಕತ್ವ ಬದಲಾಗಿರುವುದರಿಂದ, ಈ ಆಶ್ರಯ ಯೋಜನೆಯನ್ನು ಮುಂದುವರಿಸುತ್ತೀರಾ? ಎರಡನೆಯದಾಗಿ,ಈಗಾಗಲೇ ಅರಣ್ಯ ಭೂಮಿಯಲ್ಲಿ ಕೆಲವು ಕಡೆಗಳಲ್ಲಿ ಈ ಯೋಜನೆಯಡಿ ನಿವೇಶನಗಳನ್ನು ಹಂಚಿದ್ದಾರೆ. ತಮಗೆ ಗೊತ್ತಿರುವ ಹಾಗೆ ಕೇಂದ್ರ ಸರ್ಕಾರದವವು ಈಗಾಗಲೇ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಎಲ್ಲಿ ಅರಣ್ಯ ಭೂಮಿಯಲ್ಲಿ ನಿವೇಶನಗಳನ್ನು ಹಂಚಿದ್ದೀರಿ, ಅದನ್ನು ಹಂಚದೆ ವಾಪಸ್ಸು ಅರಣ್ಯ ಇಲಾಖೆಗೆ ಕೊಡಬೇಕೆಂದು ಸೂಚನೆ ಕೊಟ್ಟಿದ್ದಾರೆ. ಇದು ನಮಗೂ ತಿಳಿದು ಬಂದಿದೆ. ಈ ಕುರಿತು ಸರ್ಕಾರದ ನಿಲುವು ಏನು? ಅಲ್ಲದೆ, ಡಿಎಫ್‌ಓ ಮತ್ತು ಆರ್‌ಎಫ್‌ಓಗಳು ಬಿಡಿಓ ಮತ್ತು ಮಂಡಲ ಪಂಚಾಯಿತಿಯ ಕಾರ್ಯದರ್ಶಿಯವರಿಗೆ ನೋಟೀಸ್ ಕೊಟ್ಟು ನೀವು ಹಂಚುತ್ತಿರತಕ್ಕಂಥಾದ್ದು ಅರಣ್ಯ ಭೂಮಿಯಾಗಿದ್ದು, ಅದು ರೆವಿನ್ಯೂ ಲ್ಯಾಂಡ್ ಅಥವಾ ಗೋಮಾಳ ಅಲ್ಲ, ಆದುದರಿಂದ, ಹಂಚಿರುವಂಥ ನಿವೇಶನಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಆ ಜಾಗದಲ್ಲಿ ಬಡವರು ನಿವೇಶನಗಳನ್ನು ತೆಗೆದುಕೊಂಡು ಅಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ. ಆದುದರಿಂದ, ಇದರ ಬಗ್ಗೆ ವಿವರಣೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ, ಒಂದು ಸಾವಿರ ಮನೆಗಳನ್ನು ಒಂದು ವಿಧಾನ ಸಭಾ ಕ್ಷೇತ್ರದಲ್ಲಿ ಕಟ್ಟಿದ್ದೇವೆ ಎನ್ನತಕ್ಕಂಥ ಆಶ್ವಾಸನೆ ಈ ಸರ್ಕಾರ ಕೊಟ್ಟಿದೆ. ಈಗ ಮಾನ್ಯ ಮುಖ್ಯ ಮಂತ್ರಿಗಳು ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಐನೂರು ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಜಿಲ್ಲಾಧಿಕಾರಿಗಳ ಮತ್ತು ವಿಭಾಗಾಧಿಕಾರಿಗಳ ಸಭೆಗಳಲ್ಲಿಯೂ ತಿಳಿಸಿ, ಹೌಸಿಂಗ್ ಬೋರ್ಡ್ ಬಗ್ಗೆ ಅನೇಕ ಪತ್ರಿಕಾ ಹೇಳಿಕೆಗಳನ್ನು ಕೊಟ್ಟಿದ್ದಾರೆ. ತಾವು ಕೊಟ್ಟಿರತಕ್ಕಂಥ ಪತ್ರಿಕಾ ಹೇಳಿಕೆಗಳನ್ನು ನಾವು ಕತ್ತರಿಸಿ ಇಟ್ಟುಕೊಳ್ಳುತ್ತಿದ್ದೇವೆ. ಏಕೆಂದರೆ, ನಿಮಗೆ ಒಂದು ವರ್ಷಗಳ ಕಾಲ ಸಮಯ ಕೊಟ್ಟು ನೋಡುತ್ತೇವೆ. ತಾವು ಏನೇನು ಪತ್ರಿಕಾ ಹೇಳಿಕೆಗಳನ್ನು ಕೊಟ್ಟಿದ್ದೀರೆಂಬುದನ್ನು ನಾನು ತೋರಿಸುತ್ತೇನೆ. ಏನೆಂದರೆ, ಹೌಸಿಂಗ್ ಬೋರ್ಡಿನಿಂದ ಕೊಟ್ಟಿರತಕ್ಕಂಥ ಎಲ್ಲಾ ಮನೆಗಳನ್ನು ವಾಪಸ್ಸು ತೆಗೆದುಕೊಂಡು ಬಿಟ್ಟಿದ್ದೇವೆ, ಹೌಸಿಂಗ್ ಬೋರ್ಡ್ ಕೊಟ್ಟಿರತಕ್ಕಂಥಾದ್ದು ಬಹಳ ಅಕ್ರಮವಾಗಿದ್ದು, ಈ ಅಕ್ರಮಗಳನ್ನು ಬಯಲಿಗೆ ಎಳೆಯುತ್ತೇವೆ, ಇದರಲ್ಲಿ ಸಾವಿರಾರು ಕೋಟಿ ರೂಪಾಯಿಗಳ ದುಡ್ಡನ್ನು ಹಂಚಲಾಗಿದೆಯೆಂಬುದಾಗಿ ಹೇಳಿದೀರಿ. ಅಲ್ಲದೆ, 500 ಮನೆಗಳನ್ನು ಕಟ್ಟುವುದಕ್ಕೆ ದುಡ್ಡನ್ನು ಕೊಡಲಾಗಿದೆಯೆಂದು ಹೇಳಿದ್ದೀರಿ. ಇದಕ್ಕೆ ಸಂಬಂಧಪಟ್ಟಂಥ ಅಧಿಕಾರಿಯನ್ನು ನಾನು ಕೇಳಿದೆ. 500 ಮನೆಗಳಿಗೆ ಸರ್ಕಾರ ದುಡ್ಡು ಕೊಟ್ಟಿದೆಯೇ? ಕೊಟ್ಟಿದ್ದರೆ ಎಷ್ಟು ಕೊಟ್ಟಿದೆ? ಎಂದಾಗ ಆ ಅಧಿಕಾರಿ ಇನ್ನೂ ದುಡ್ಡು ಬಂದಿಲ್ಲ, ಎಂದು ಹೇಳುತ್ತಾರೆ. ಹೌಸಿಂಗ್ ಬೋರ್ಡ್ ಅಧಿಕಾರಿಗಳನ್ನು ಕೇಳಿದಾಗ ನಮಗೆ ಯಾವುದೇ

ಸೂಚನೆ ಬಂದಿಲ್ಲ, ದುಡ್ಡನ್ನು ವಸೂಲು ಮಾಡುತ್ತಿದ್ದಾರೆ, ಎಂದು ಹೇಳುತ್ತಾರೆ. ಆದುದರಿಂದ, ನಿಮಗೆ ಇನ್ನು ಎರಡು ತಿಂಗಳು ಉಳಿದಿರುವುದರಿಂದ ಇದರ ಬಗ್ಗೆ ಸ್ಪಷ್ಟವಾಗಿ ತಿಳಿಸಬೇಕು. ಈ ಜನವರಿ ತಿಂಗಳು ಮುಗಿಯಿತೆಂದರೆ, ಫೆಬ್ರವರಿ -ಮಾರ್ಚಿನಲ್ಲಿ ಕುಳಿತುಕೊಂಡು 1993-94ರ ಬಜೆಟ್ ಮಾಡುತ್ತೇವೆ. ಆದ್ದರಿಂದ, ದಯವಿಟ್ಟು ಈ ಮೂರು ವಿಚಾರಗಳ ಬಗ್ಗೆ ವಿವರಣೆ ಕೊಡಬೇಕೆಂದು ಹೊಸದಾಗಿ ಖಾತೆ ವಹಿಸಿಕೊಂಡಿರುವ ವಸತಿ ಖಾತೆ ಸಚಿವರಾದ ಶ್ರೀ ಗೋಪಿನಾಥ ಸಾಂಡ್ರಾ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ವಸತಿ ಸಚಿವರು): ಸನ್ಮಾನ್ಯ ಸಿಂಧ್ಯರವರು ಕೇಳಿದಂಥ ಮೂರು ಪ್ರಶ್ನೆಗಳಿಗೂ ನಾನು ಉತ್ತರ ಕೊಡುತ್ತೇನೆ. ಮೊದಲನೆಯದಾಗಿ, ಈ 'ಆಶ್ರಯ' ಯೋಜನೆಯನ್ನು ಮುಂದುವರಿಸುತ್ತೇವೆ. ಎರಡನೆಯದಾಗಿ, ಟಾಸ್ಕ್‌ಫೋರ್ಸ್ ಕಮಿಟಿಯವರು ಫಾರೆಸ್ಟ್ ಲ್ಯಾಂಡ್‌ನಲ್ಲಿ ಕೆಲವು ನಿವೇಶನಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಸಕ್ರಮ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ. ಮೂರನೆಯದಾಗಿ, 500 ಪ್ರಶ್ನ ಗಳನ್ನು ಕಟ್ಟಿಸಿಕೊಡುವಂಥ ಒಂದು ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. 1000 ಮನೆಗಳನ್ನು ಕಟ್ಟಬೇಕೆನ್ನುವ ಯೋಜನೆ ಹಿಂದೆ ಇತ್ತು. ಆದರೆ, ಅದು ಪ್ರಾಕ್ಟಿಕಲ್ ಆಗುವುದಿಲ್ಲವೆನ್ನುವ ದೃಷ್ಟಿಯಿಂದ ಯಾವುದು ನಮ್ಮಿಂದ ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಆ ಒಂದು ಸಂಖ್ಯೆಯನ್ನಿಟ್ಟುಕೊಂಡು 500 ಮನೆಗಳನ್ನು ಕಟ್ಟಿಸಿಕೊಡುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಮನೆಗಳನ್ನು ಮಾರ್ಚಿಯೊಳಗೆ ಕಟ್ಟಿಸಿಕೊಡಬೇಕೆಂದು ತೀರ್ಮಾನಿಸಲಾಗಿದೆ. ಕೆ.ಹೆಚ್.ಬಿ. ಯಿಂದ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಆಗುತ್ತದೆಯೋ ಇಲ್ಲವೋ ಎನ್ನುವ ಸಂಶಯ ಬಂದಿದ್ದರಿಂದ ಡಿ.ಸಿ.ಯವರ ಮುಖಾಂತರ ಆ ಮನೆಗಳನ್ನು ಕಟ್ಟಿಸಿಕೊಡಲಾಗುತ್ತದೆ.

ಸರ್ಕಾರ ಈಗಾಗಲೇ ಕ್ಯಾಬಿನೆಟ್‌ನಲ್ಲಿ 50 ಕೋಟಿ ರೂಪಾಯಿಗಳನ್ನು ಡಿ.ಸಿ. ಅವರಿಗೆ ಕೊಡಲು ಅವಕಾಶ ಮಾಡಿಕೊಟ್ಟಿದೆ. ಶ್ರೀ ಹೆಚ್. ಏಕಾಂತಯ್ಯ: ಹಣ ಕೊಡಲು ಅವಕಾಶವಾಗಿದೆ. ಆದರೆ ಅದು ಬಿಡುಗಡೆ ಆಗಿದೆಯೋ ಇಲ್ಲವೋ?

ಶ್ರೀ ವಾಟಾಳ್ ನಾಗರಾಜ್ : ಹುದ್ದೆ ಇಲ್ಲ ಸರ್ಕಾರದಲ್ಲಿ.

ಶ್ರೀ ಗೋಪಿನಾಥ್ ಆರ್. ಸಾಂಡ್ರ : ಇನ್ನು 2-3 ದಿನಗಳಲ್ಲಿ ಬಿಡುಗಡೆ ಮಾಡುತ್ತೇವೆ. ಅದರ ಬಗ್ಗೆ ಡಿ.ಸಿ.ಯವರಿಗೆ ಈಗಾಗಲೇ ಸುತ್ತೋಲೆಯನ್ನು ಕಳಿಸಿಕೊಟ್ಟಿದ್ದೇವೆ. ಒಂದು ವಾರ ಅಥವಾ 8-10 ದಿನಗಳೊಳಗೆ ಅದನ್ನು ಬಿಡುಗಡೆ ಮಾಡುತ್ತೇವೆ. ನಾವು ಏನು 500 ಮನೆಗಳನ್ನು ಕಟ್ಟಬೇಕೆನ್ನುವ ಕಾರ್ಯವನ್ನು ಹಾಕಿಕೊಂಡಿದ್ದೇವೆ ಅದನ್ನು ಕಾರ್ಯಗತ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಉಪಸಭಾಧ್ಯಕ್ಷಣಿಯವರೆ, ನಾನು ಮುಖ್ಯಮಂತ್ರಿಗಳಲ್ಲಿ ಕೇಳುತ್ತಿದ್ದೇನೆ. ದಯಮಾಡಿ ಅವರು ಈ ವಿಚಾರದಲ್ಲಿ ಪ್ರವೇಶ ಮಾಡಬೇಕು ನಾನು ಅನೇಕ ಜನ ಡಿ.ಸಿ.ಗಳನ್ನು ಕೇಳಿದ್ದೇನೆ ಅವರು ಏನೂ ಹಣ ಬಂದಿಲ್ಲ, ಹೇಗೆ ಸೂಚನೆಗಳನ್ನು ಕೊಡಲು ಸಾಧ್ಯವಾಗುತ್ತದೆ, ಹಣವೂ ಬಂದಿಲ್ಲ, ಸೂಚನೆಯೂ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಎರಡನೆಯದಾಗಿ ಫಾರೆಸ್ಟ್ ಲ್ಯಾಂಡ್ ಡಿಸ್ಟ್ರಿಬ್ಯೂಷನ್ ಆಗಿರುವುದರಿಂದ ಏನಾದರೂ ಅಬ್ಜೆಕ್ಷನ್ ಕೇಂದ್ರ ಸರ್ಕಾರದಿಂದ ತಮಗೆ ಬಂದಿದೆಯೇ ದಯಮಾಡಿ ಅದರ ಬಗ್ಗೆ ತಿಳಿಸಿ.

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು): ಈಗ ಆಶ್ರಯ ಕಾರ್ಯಕ್ರಮವು ಬಹಳ ಪ್ರಮುಖವಾದಂಥದ್ದು ಮತ್ತು ದುರ್ಬಲವರ್ಗದವರಿಗೆ ಅನುಕೂಲವಾದಂಥ ಕಾರ್ಯಕ್ರಮ ಅದನ್ನು ನಾವು ಬಹಳ ಪರಿಣಾಮಕಾರಿಯಾಗಿ ಮುಂದುವರಿಸಿಕೊಂಡು ಹೋಗುತ್ತೇವೆ. ಎರಡನೆಯದಾಗಿ ನಾವು ಅದನ್ನು ರಿವ್ಯೂ ಮಾಡಿದ್ದೇವೆ. ಏಕೆಂದರೆ ಬಡವರಿಗೆ ಮನೆಯನ್ನು ಕೊಡಬೇಕು ಮತ್ತೆ ಅದನ್ನು ಜಾಗ್ರತೆಯಾಗಿ ಕೊಡಬೇಕು. ಆದ್ದರಿಂದ ಅದನ್ನ * ಕೊಟ್ರಾಕ್ಟಿಂಗ್ ಸಿಸ್ಟಂಗ್ ಹೌಸಿಂಗ್ - ಬೋರ್ಡ್‌ನ ಮುಖಾಂತರ ರಿವ್ಯೂ ಮಾಡಿದಮೇಲೆ ಮಾಡುತ್ತೇವೆ. ನಮಗೆ ಮನೆಗಳನ್ನು ಕಟ್ಟುವುದರಲ್ಲಿ ತಡಮಾಡಬಾರದೆಂದು ಅನ್ನಿಸಿದೆ. ಎಷ್ಟೆಷ್ಟು ಮನೆಗಳನ್ನು ಕಟ್ಟಲು ಗುತ್ತಿಗೇದಾರರು ಕೆ.ಹೆಚ್.ಬಿ.ಯಿಂದ ಟ್ಯಾಕಲ್ ಮಾಡಿದ್ದಾರೆ. ಅವುಗಳನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ಅವರಿಗೆ ಎಷ್ಟು ಹಣಬೇಕೋ ಅದನ್ನು ಕೊಡುತ್ತೇವೆ. ಆದಷ್ಟು ಜಾಗ್ರತೆಯಾಗಿ ಮನೆಗಳನ್ನು ಕಟ್ಟಬೇಕು. ಏಕೆಂದರೆ ನಾವು ಸ್ವಲ್ಪವಾದರೂ ಗುರಿಯಕಡೆ ತಲುಪಬೇಕಲ್ಲ, ಆದುದರಿಂದ ಗುತ್ತಿಗೆದಾರರು ಕೆ.ಹೆಚ್.ಬಿ. ಯ ಮುಖಾಂತರ ಎಷ್ಟು ಮನೆಗಳನ್ನು ಕಟ್ಟುತ್ತಾರೋ ಅದನ್ನು ಕಟ್ಟುತ್ತಾರೆ. ಕಡೆಯ ಪಕ್ಷ ಅದಕ್ಕೆ ಪೂರಕವಾಗಿ ಸೌಕರ್ಯ ಮಾಡಿದ್ದೇವೆ.

ಮನೆಗಳನ್ನು ಮಾರ್ಚ್‌ನೊಳಗೆ ಕಟ್ಟಬೇಕೆಂದು ತೀರ್ಮಾನವನ್ನು ಮಾಡಿದ್ದೇವೆ. ಅದಕ್ಕೆ ಎಷ್ಟು ಹಣ ಬೇಕೋ ಅದನ್ನು ನಾವು ಬಿಡುಗಡೆ ಮಾಡಲು ನಿರ್ಣಯ ಮಾಡಿದ್ದೇವೆ. ಇದರ ರಿವ್ಯೂ ಆದಮೇಲೆ ಆಶ್ರಯ ಯೋಜನೆಗೆ ಹೋಗೋಣ ಅದನ್ನು ಯಾವ ರೀತಿ ಮಾಡಬೇಕು. We have asked the HUD to work out methodology. ಡಿ.ಸಿ.ಯವರು ಅದನ್ನು ಯಾವ ರೀತಿ ಹಂಚಬೇಕು instalment ಯಾವ ರೀತಿ ಮಾಡಬೇಕು ಯಾವ ರೀತಿ ಮನೆಯನ್ನು ಕಟ್ಟಬೇಕು. That was given by for some time for 2 years. We have finalised the Cabinet Note.

ಆದುದರಿಂದ ಸರಿಯಾದ ಮಾರ್ಗ ದರ್ಶನವನ್ನು ಕೊಡಬೇಕೆಂದು ಈಗಾಗಲೇ ಕ್ಯಾಬಿನೆಟ್‌ನಲ್ಲಿ ಇದರ ಬಗ್ಗೆ ತೀರ್ಮಾನ ಮಾಡಿದ್ದೇವೆ. ಇದು ಸಂಜೆ ಕ್ಯಾಬಿನೆಟ್ ನಡೆಯುತ್ತದೆ. That guidelines will be finalised today. That means by 10th or 11th, the first instalment will be released to all the DCs. They have been informed accordingly, Within a week work will be commenced in all the districtss.

ಶ್ರೀ ಆರ್. ವಿ. ದೇಶಪಾಂಡೆ : ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಮನೆಯನ್ನು ಕಟ್ಟತಕ್ಕ ವಿಚಾರದಲ್ಲಿ ಹಣವನ್ನು ಬಿಡುಗಡೆ ಮಾಡುವ ಬಗ್ಗೆ ಹೇಳಿದ್ದಾರೆ. ಬಹಳ ಸಂತೋಷ. ಮತ್ತೆ ಹೆಚ್.ಡಿ.ಬಿ.ಯಿಂದ ಕೆಲವು ಗುತ್ತಿಗೆದಾರರಿಗೆ ಮುಂಗಡವಾಗಿ ಹಣವನ್ನು ಕೊಟ್ಟಿದ್ದಾರೆ. ಉದಾಹರಣೆಗೆ ತೀರ್ಥಹಳ್ಳಿಯಲ್ಲಿ ನಾಗರಾಜ್ ಎಂಬುವವರಿಗೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಮುಂಗಡವಾಗಿ ಕೊಟ್ಟಿದ್ದಾರೆ. ಅವರಿಂದ ಯಾವ ಬ್ಯಾಂಕಿನ ಗ್ಯಾರಂಟಿಯನ್ನೂ ತೆಗೆದುಕೊಂಡಿಲ್ಲ. He is not a registered contractor. He has purchased six cars and a bunglow in Shimoga. What action you are going to take to recover this money and what action you are going to take against the officers and non-officials who are responsible for this?

Sri. M. Veerappa Moily :- We will not spare them. Whoever it may be. That is one point.

ಎರಡನೆಯದಾಗಿ ನಾವು ಅಲ್ಲಿಗೆ ಈಗ ಹೊಸದಾಗಿ ಕಮೀಷನರನ್ನು ನೇಮಕ ಮಾಡಿದ್ದೇವೆ. We have told the new Housing Commissionr to make investigation.

ಅವರು ವಿಚಾರ ಮಾಡಿ ಒಂದು ವರದಿಯನ್ನು ತಕ್ಷಣ ಕೊಡಬೇಕೆಂದು ಹೇಳಿದ್ದೇವೆ. ಆ ವರದಿಯ ಆಧಾರದ ಮೇಲೆ ಮುಂದಿನ ಹೆಜ್ಜೆಯನ್ನು ಇಡುತ್ತೇವೆ. ಇನ್ನು ಫಾರೆಸ್ಟ್ ಲ್ಯಾಂಡಿನ ಬಗ್ಗೆ ತಮಗೆ ಗೊತ್ತಿರುವ ಹಾಗೆ ಕೇಂದ್ರದಿಂದ ಸೂಚನೆ ಬರಬೇಕಾಗಿದೆ. ಇದು ಹೊಸದೇನಲ್ಲ. It is a constant dialogue between the Goverment.

ಈ ದುರ್ಬಲ ವರ್ಗದವರಿಗೆ ನಿವೇಶವನ್ನು ಕೊಡತಕ್ಕ ವಿಚಾರವೇನಿದೆ ಅದನ್ನು ಈ ಸದನದಲ್ಲಿ ಹೇಳುವ ಬದಲು ಫಾರೆಸ್ಟ್ ಲ್ಯಾಂಡಿನ ಬಗ್ಗೆ ಏನು ವ್ಯವಹರಿಸಬೇಕೋ ಅದನ್ನು ನಾವು ನೋಡಿಕೊಳ್ಳುತ್ತೇವೆ. Let us not enter into a dialogue.

ಶ್ರೀ ಆರ್. ವಿ. ದೇಶಪಾಂಡೆ : ನಮ್ಮ ಜಿಲ್ಲೆಯಲ್ಲಿ ರೆವಿನ್ಯೂ ಲ್ಯಾಂಡೇ ಇಲ್ಲ.

ಶ್ರೀ ಎಸ್.ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷಣಿಯವರೆ, ಇದು ಸಂತೋಷದ ಸುದ್ದಿ. ಹೊಸ ಸರ್ಕಾರ ಬಂದ ಮೇಲೆ ಶಸ್ತ್ರ ಕ್ರಿಯೆಯನ್ನು ಪ್ರಾರಂಭ ಮಾಡಿದವರು ಎಂದರೆ ಮಾನ್ಯ ಗೋಪಿನಾಥ ಸಾಂದ್ರರವರು. ಅವರು ತಾ. 25-12-92ರಂದು ಹೊಸ ಸರ್ಕಾರ ಬಂದಮೇಲೆ ಈ ಶಸ್ತ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದಾರೆ. ಇದನ್ನು ಬಹಳ ಒಳ್ಳೆಯ ಉದ್ದೇಶದಿಂದ ಮಾಡಿದ್ದಾರೆ. ಆಶ್ರಯ ಯೋಜನೆಯಲ್ಲಿ ಏನೇನು ತಪ್ಪುಗಳಾಗಿವೆ ಎನ್ನುವಂಥ ಎಲ್ಲಾ ಪೂರ್ಣವಿವರಗಳನ್ನೂ ಸಾರ್ವಜನಿಕರಿಗೆ ಪತ್ರಿಕೆಯ ಮುಖಾಂತರ ಕೊಟ್ಟರು ನಿಜವಾಗಿಯೂ ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ.

ಮೊದಲನೆಯದಾಗಿ ನಾನು ಕೇಳುವುದೇನೆಂದರೆ, ಕರ್ನಾಟಕ ಹೌಸಿಂಗ್ ಬೋರ್ಡ್‌ನವರು ಬಹಳ ತಪ್ಪು ಮಾಡಿದ್ದಾರೆ. ಆಶ್ರಯ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ. ಸರ್ಕಾರದವರು ಕೂಡಲೇ ಹೌಸಿಂಗ್ ಬೋರ್ಡ್‌ನಮೇಲೆ ಕ್ರಮ ತೆಗೆದುಕೊಳ್ಳುತ್ತಾರೆಯೇ? ಯಾರ್‍ಯಾರು ತಪ್ಪು ಮಾಡಿದ್ದಾರೆ ಅವರೆಲ್ಲರ ಮೇಲೂ...

ಉಪಾಧ್ಯಕ್ಷಣಿಯವರು : ಈಗ ತಾನೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ...

ಶ್ರೀ ಎಸ್.ಹೆಚ್. ಕೌಜಲಗಿ : ಈಗ ತಾನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ ಇದನ್ನು ನಾವು ಕೇಳಬಾರದೆ? 600 ಮನೆಗಳನ್ನು ಕಟ್ಟುವುದಕ್ಕೆ ಹಣವನ್ನು ಕೊಟ್ಟಿದ್ದಾರೆ. ಇದನ್ನೆಲ್ಲಾ ಪ್ರಸ್ತಾಪ ಮಾಡದೆ ನಾನು ಸುಮ್ಮನೆ ಕುಳಿತುಕೊಳ್ಳಬೇಕೆ? ಹಾಗಾದರೆ ನೀವಾದರೂ ಇಲ್ಲಿ ಏತಕ್ಕೆ ಇರಬೇಕು.

(ಗೊಂದಲ)

ಉಪಾಧ್ಯಕ್ಷಣಿಯವರು : ಈಗಾಗಲೇ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಿದ್ದಾರೆ.

ಶ್ರೀ ಎಸ್.ಹೆಚ್. ಕೌಜಲಗಿ : ಅದು ನಮಗೂ ತಿಳಿಯುತ್ತದೆ. ನಾನು ಹೇಳುವುದನ್ನು ದಯವಿಟ್ಟು ಕೇಳಿ. ನಾನು ಒಂದೆರಡು ನಿಮಿಷದಲ್ಲಿ ಮುಗಿಸುತ್ತೇನೆ. ಸರ್ಕಾರದವರು ಹೌಸಿಂಗ್ ಬೋರ್ಡ್ ಅಧಿಕಾರಿಗಳ ವಿರುದ್ಧ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದಾರೆಯೇ?

ಉಪಾಧ್ಯಕ್ಷಣಿಯವರು : ನೀವು ಬೇರೆ ರೂಪದಲ್ಲಿ ಕೇಳಿ.

ಶ್ರೀ ಎಸ್.ಹೆಚ್. ಕೌಜಲಗಿ : ಆ ಅಧಿಕಾರಿಗಳ ವಿರುದ್ಧ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಬೋಗಸ್ ಕಂಟ್ರ್ಯಾಕ್ಟರ್‌ಗಳು 10 ಜನರಿದ್ದಾರೆ. ಅವರಿಂದ ಹಣವನ್ನು ವಸೂಲ್ಮಾಡುವುದಕ್ಕೆ ಸರ್ಕಾರವರು ಏನು ಕ್ರಮ ತೆಗೆದುಕೊಂಡಿದ್ದಾರೆ. ಈಗಾಗಲೇ ಆಶ್ರಯ ಯೋಜನೆಯಲ್ಲಿ ಒಂದು ಪಕ್ಷದ ಆಧಾರದ ಮೇಲೆ ಸೈಟುಗಳನ್ನು ಹಂಚಿದ್ದಾರೆ. ಅವರ ಮೇಲೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇನ್ನೊಂದು ವಿಚಾರ. ಎಂದರೆ ಒಂದು ಪಕ್ಷದ ಆಧಾರದ ಮೇಲೆ ಈ ಸಸಮಿತಿಗಳಾಗಿವೆ. ಇದು ತಪ್ಪು. ಫಲಾನುಭವಿಗಳಿಗೆ ಅನುಕೂಲವಾಗುವಂತೆ ಮಾಡಬೇಕು. ಈಗಾಗಲೇ ಆಶ್ರಯ ಯೋಜನೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಮತ್ತು ಎಷ್ಟು ಹಣ ಖರ್ಚಾಗಿದೆ ಒಂದು ವೇಳೆ ಹಣ ಖರ್ಚಾಗಿದಿದ್ದರೆ ಅದಕ್ಕೆ ಕಾರಣರಾರು? ಅಂಥವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಗೋಪಿನಾಥ ಆರ್. ಸಾಂದ್ರ : ಅಲಿಗೇಷನ್ಸ್ ನಮ್ಮ ಹತ್ತಿರ ಬಂದಿವೆ. ಅವುಗಳನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ. ತಪ್ಪಿತಸ್ಥರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು : ಕಾಲಿಂಗ್ ಅಲಿಗೇಷನ್ಸ್ ನಮ್ಮ ಹತ್ತಿರ ಬಂದಿದೆ. ಅವುಗಳನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ. ತಪ್ಪಿತಸ್ಥರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು : ಕಾಲಿಂಗ್ ಅಟೆನ್‌ಷನ್‌ಗೆ ಯಾರು ಸಹಿ ಹಾಕಿರುತ್ತಾರೆ ಅವರು ಮಾತ್ರ ಮಾತನಾಡುವುದಕ್ಕೆ ಅವಕಾಶ ಇದೆ.

ಶ್ರೀ ಗೋಪಿನಾಥ ಆರ್. ಸಾಂದ್ರ : ಮಾನ್ಯ ಸಭಾಧ್ಯಕ್ಷಿಣಿಯವರೆ, ಪರಿಶೀಲನೆ ಮಾಡಿ ಅದು ಪ್ರೈಮಾಫೀಸಿಆಗಿದ್ದರೆ...

ಶ್ರೀ ಎಸ್.ಎಚ್. ಕೌಜಲಗಿ : ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ? ಸಿ.ಬಿ.ಐ. ಎನ್‌ಕ್ವೈರಿ ಮಾಡಿಸುತ್ತೀರಾ? ಅಥವಾ ಲೋಕಾಯುಕ್ತಕ್ಕೆ ವಹಿಸುತ್ತೀರಾ? ಏಕೆಂದರೆ ಇಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗಿದೆ. ಇದು ತಮಗೂ ಗೊತ್ತಿದೆ? ಇದನ್ನು ತಾವೇ ಹೇಳಿದ್ದೀರಿ.

ಶ್ರೀ ಗೋಪಿನಾಥ ಆರ್. ಸಾಂಡ್ರ : ಪತ್ರಿಕೆಗಳಲ್ಲಿ ಬಂದಿದೆ, ತಾವೂ ಹೇಳಿದ್ದೀರಿ. ಇದನ್ನು ನಾವು ಪರಿಶೀಲಿಸಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಅವರು ದೊಡ್ಡವರಿರಲಿ, ಸಣ್ಣವರಿರಲಿ, ಅಧಿಕಾರಿಗಳಿರಲಿ, ಬೇರೆ ಯಾರೇ ಆಗಿರಲಿ...

ಶ್ರೀ ಆರ್.ವಿ. ದೇಶಪಾಂಡೆ : ಹೌಸಿಂಗ್ ಬೋರ್ಡ್‌ನಲ್ಲಿ ಕಂಟ್ರಾಕ್ಟರ್‌ಗಳಿಗೆ ಹಣವನ್ನು ಕೊಡುವುದರಲ್ಲಿ ದುರುಪಯೋಗವಾಗಿದೆ. ಇದನ್ನು ನೀವು ಮತ್ತು ಮಾನ್ಯ ಮುಖ್ಯ ಮಂತ್ರಿಗಳೂ ಹೇಳಿದ್ದೀರಿ. ನಾವು ಹೇಳಿಲ್ಲ.

ಶ್ರೀ ಗೋಪಿನಾಥ ಆರ್. ಸಾಂಡ್ರ : ಹೌಸಿಂಗ್ ಬೋರ್ಡ್‌ನಲ್ಲಿ ಕೆಲವು ಕಂಟ್ರಾಕ್ಟರ್‌ಗಳಿಗೆ ಅಡ್ವಾನ್ಸ್ ಆಗಿ ಹಣವನ್ನು ಕೊಟ್ಟಿದ್ದಾರೆ. ಅದನ್ನು ನಾವು ಪರಿಶೀಲಿಸುತ್ತೇವೆ. ಕೆಲವು ಕಂಟ್ರಾಕ್ಟರ್‌ಗಳಿಗೆ ಬ್ಯಾಂಕ್ ಗ್ಯಾರಂಟಿ ಮೇಲೆ ಕೊಟ್ಟಿದ್ದಾರೆ. 2-3 ಜನ ಕಂಟ್ರಾಕ್ಟರ್ ಗಳು ಬ್ಯಾಂಕ್ ಗ್ಯಾರಂಟಿ ಕೊಟ್ಟಿಲ್ಲ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ನಾವು ಯೋಚನೆ ಮಾಡುತ್ತಿದ್ದೇವೆ. ಒಮ್ಮೆಲೇ ದುಡುಕಿ ನಾವು ಕ್ರಮ ತೆಗೆದುಕೊಳ್ಳುವುದು ಸರಿಯಲ್ಲ. ಎಲ್ಲವನ್ನೂ ವಿಚಾರ ಮಾಡಿ ಪರಿಶೀಲನೆ ಮಾಡಿ ನಂತರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ಸಂಬಂಧ ಪಟ್ಟವರ ಆಸ್ತಿಯನ್ನು ನೀವು ಅಟ್ಯಾಚ್ ಮಾಡಿ ಹಾಗೆ ಮಾಡಿದರೆ ಹಣ ವಸೂಲಾಗುತ್ತದೆ.

(2) ತಿಪ್ಪಸಂದ್ರ ಮತ್ತು ಮಾಳಿಗಾನ ಹಳ್ಳಿಯಲ್ಲಿ ಗ್ರಾಮಸ್ಥರು ಹಣ ಕಟ್ಟಿದ್ದರೂ ಆರೋಗ್ಯ ಕೇಂದ್ರಗಳನ್ನು ತೆರೆಯದಿರುವುದು

ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಪಿ.ಹೆಚ್.ಯು ಕೇಂದ್ರಗಳನ್ನು ತೆರೆಯಲು ಭೂಮಿ ಮತ್ತು ಹಣವನ್ನು ಅಲ್ಲಿನ ಗ್ರಾಮಸ್ಥರು ಕೊಟ್ಟಿದ್ದರೂ ಈ ಆಸ್ಪತ್ರೆಗಳನ್ನು ತೆರೆಯಲು ಸರ್ಕಾರದವರು ಯಾವುದೇ ಕ್ರಮವನ್ನೂ ತೆಗೆದುಕೊಳ್ಳದೇ ಇರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ.

+ ಶ್ರೀ ಎಂ. ವೀರಪ್ಪ ಮೊಯ್ಲಿ : ಮಾನ್ಯ ಉಪಾಧ್ಯಕ್ಷಣಿಯವರೆ, ಮಾಗಡಿ ತಾಲ್ಲೂಕು ಮಾಳಿಗಾನಹಳ್ಳಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಘಟಕ ಕೇಂದ್ರ ಮಂಜೂರಾತಿಗಾಗಿ ಗ್ರಾಮಸ್ಥರು ದಿನಾಂಕ 18-2-88ರಂದು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕುದೂರು ಶಾಖೆ, ಮಾಗಡಿ ತಾಲ್ಲೂಕು, ಇಲ್ಲಿ ರೂ. 28,782-00ಗಳನ್ನು ಠೇವಣಿ ಇಟ್ಟಿದ್ದು, ಕಟ್ಟಡ ಕಟ್ಟಲು 2 ಎಕರೆ ಭೂಮಿಯನ್ನು ನೀಡುತ್ತೇವೆ ಎಂದು ಆಶ್ವಾಸನೆಯನ್ನು ಸದರಿ ಗ್ರಾಮದವರು ಕೊಟ್ಟಿದ್ದರೂ, ಈ ಬಗ್ಗೆ 3-6-88ರಲ್ಲಿ ಸರ್ಕಾರಕ್ಕೆ ಜಿಲ್ಲಾ ಪರಿಷತ್ತಿನವರು ಬರೆದಿರುವುದೂ ನಿಜ.

ಹಾಗೆಯೇ ದಿನಾಂಕ 5-3-92ರಂದು ಆ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀ ಹೆಚ್.ಎಂ. ರೇವಣ್ಣನವರಿಗೆ ತಿಪ್ಪಸಂದ್ರ ಗ್ರಾಮಸ್ಥರು ಒಂದು ಅರ್ಜಿಯನ್ನು ಸಲ್ಲಿಸಿದ್ದು ಮಾನ್ಯ ಶಾಸಕರು ಮಾಗಡಿ ತಾಲ್ಲೂಕು ತಿಪ್ಪಸಂದ್ರ ಗ್ರಾಮದ ಆರೋಗ್ಯ ಸಮಿತಿಯವರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ತಿಪ್ಪಸಂದ್ರ ಶಾಖೆಯಲ್ಲಿ ರೂ. 26,000ಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಠೇವಣಿ ಇರಿಸಿದ್ದು ಜೊತೆಗೆ ಕಟ್ಟಡ ಕಟ್ಟಲು 2 ಎಕರೆ ಜಮೀನನ್ನು ಬಿಟ್ಟು ಕೊಡಲೂ ಸಹಮುಂದೆ ಬಂದಿರುತ್ತಾರೆ. ಈ ಹಾಲಿ ತಿಪ್ಪಸಂದ್ರದ ಹಾಜುಬಾಜಿನ ಗ್ರಾಮಗಳಲ್ಲಿ ಯಾವುದೇ ಆಸ್ಪತ್ರೆ ಇಲ್ಲದಿರುವ ಕಾರಣ ಈ ಗ್ರಾಮಕ್ಕೆ ಒಂದು ಪ್ರಾಥಮಿಕ

ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಬೇಕೆಂದು ತಮ್ಮ ದಿನಾಂಕ 11-3-92ರ ಪತ್ರದಲ್ಲಿ ಆ ಗ್ರಾಮಸ್ಥರ ಅರ್ಜಿಯನ್ನು ಜೊತೆಗಿರಿಸಿ ಸರ್ಕಾರವನ್ನು ಕೋರಿರುವುದು ನಿಜ.

ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮಂಜೂರು ಮಾಡುವುದನ್ನು ತಾ. 11-5-87ರಿಂದ ನಿಲ್ಲಿಸಲ್ಪಟ್ಟಿರುವ ಕಾರಣ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಈ ಎರಡು ಗ್ರಾಮಗಳಿಗೆ ಮಂಜೂರು ಮಾಡುವ ಸಾಧ್ಯತೆ ಇರಲಿಲ್ಲ.

ರಾಜ್ಯದಲ್ಲಿ ಒಂದು ವರ್ಷಕ್ಕೆ ಬರೇ 50 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಅವಕಾಶಗಳಿದ್ದು, ಈ 50 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಪ್ರತಿ ಜಿಲ್ಲೆಗೆ ಅಲ್ಲಿಯ ಜನಸಂಖ್ಯೆ, ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಆಧರಿಸಿ, ಒಂದು,ಎರಡು ಮೂರು ಅಥವಾ ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಂಚಲ್ಪಡುತ್ತವೆ. ಒಂದು ಜಿಲ್ಲೆಗೆ ಎರಡು ಅಥವಾ ಮೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹಂಚುವ ಗುರಿ ಇರುವುದರಿಂದ, ಆ ಜಿಲ್ಲೆಗಳಿಂದ ಬರುವ ಎಲ್ಲಾ ಬೇಡಿಕೆಗಳನ್ನೂ ಮನ್ನಿಸಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಸಾಧ್ಯವಾಗುತ್ತಿಲ್ಲ, ಆದುದರಿಂದ, ಆದ್ಯತೆಯ ಮೇರೆಗೆ ಆಯಾ ಜಿಲ್ಲೆಗೆ ನಿಗದಿಪಡಿಸಿದ ಗುರಿಯಂತೆ ಪ್ರತಿ ವರ್ಷ ಒಂದು, ಎರಡು ಅಥವಾ ಮೂರು ಕೇಂದ್ರಗಳನ್ನು ಮಂಜೂರು ಮಾಡಲಾಗುತ್ತಿದೆ.

ಆದರೂ, ಈ ಎರಡು ಗ್ರಾಮದ ಜನರು ಹಣವನ್ನು ಠೇವಣಿ ಇಟ್ಟು, ಜಮೀನನ್ನು ಕೊಡಲು ಮುಂದೆ ಬಂದಿರುವುದರಿಂದ, ಮುಂದಿನ ಸಾಲುಗಳಲ್ಲಿ ಈ ಗ್ರಾಮಗಳಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪಾಲಿಗೆ ಬರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಹಂಚಿಕೆಯನ್ನು ಆಧರಿಸಿ, ಆದ್ಯತೆಯ ಮೇರೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವ ವಿಷಯವನ್ನು ಖಂಡಿತವಾಗಿಯೂ ಪರಿಶೀಲಿಸಲಾಗುವುದು.

ಶ್ರೀ ಹೆಚ್.ಎಂ. ರೇವಣ್ಣ : ಜನಸಂಖ್ಯಾ ಆಧಾರದ ಮೇಲೆ ಆರೋಗ್ಯ ಘಟಕಗಳನ್ನು ಕೊಡತಕ್ಕಂಥಾದ್ದು ಸ್ವಾಗತಾರ್ಹ. ಆದರೆ ಮೊನ್ನೆ 50 ಆರೋಗ್ಯ ಘಟಕಗಳನ್ನು ಸರಕಾರದವರು ನೀಡುವಾಗ 5 ವರ್ಷದ ಹಿಂದೆ ಹಣ, ಜಮೀನು ಕೊಟ್ಟಿದ್ದರೂ ಅದನ್ನು ಇದರಲ್ಲಿ ಸೇರಿಸದೆ ಅದನ್ನು ಕೈ ಬಿಡುವ ಮೂಲಕ ಮಾಗಡಿ ತಾಲ್ಲೂಕಿಗೆ ತಾರತಮ್ಯ ಮಾಡಲಾಗಿದೆ. ಈ ವರ್ಷದಲ್ಲಿ ಸಾರಾಸಗಟು ಸರಕಾರದವರು ಮಂಜೂರು ಮಾಡಿರತಕ್ಕಂತಹ 50 ಘಟಕಗಳಿಗೆ ಬೇರೆ ಜನರು ಹಣ, ಜಮೀನು ಕೊಟ್ಟಿದ್ದಾರೆಯೇ ಇಲ್ಲವೇ ಸರಕಾರವೇ ಇದನ್ನು ಮಂಜೂರು ಮಾಡಿದೆಯೇ? ಮತ್ತು ಮುಂದಿನ ವರ್ಷದಲ್ಲಿ ಆದ್ಯತೆ ಮೇಲೆ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಈ ವರ್ಷ ಒಂದನ್ನಾದರೂ ಕೊಟ್ಟು ಮುಂದಿನ ವರ್ಷ ಇನ್ನೊಂದನ್ನು ಕೊಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ನನ್ನ ಕ್ಷೇತ್ರಕ್ಕೆ ಬಂದಿದ್ದಾಗ ಸುಗ್ಗೇನ ಹಳ್ಳಿಯಲ್ಲಿ ಅಮೇರಿಕಾವಾಸಿ ರಾಜಣ್ಣನವರು 6 ಲಕ್ಷ ರೂಪಾಯಿಯ ಕಟ್ಟಡವನ್ನು ಕಟ್ಟಿಸಿಕೊಡಲು ಮುಂದೆ ಬಂದಿದ್ದಾರೆ. ಆ ಕಟ್ಟಡ ಕೆಲಸ ನಡೆಯುತ್ತಿದೆ. ಅದು ಮಂಜೂರಾಗಿದೆಯೋ ಇಲ್ಲವೋ ಎಂದು ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ತಮ್ಮ ಮಾತನ್ನು ಒಪ್ಪುತ್ತೇನೆ ಎಲ್ಲಿ ಸ್ಥಳೀಯ ಗ್ರಾಮಸ್ಥರು ಹಣ ದೇಣಿಗೆ ಕೊಡುತ್ತಾರೆ, ಕಟ್ಟಡ ಕೊಡುತ್ತಾರೆ ಅದಕ್ಕೆ

ಆದ್ಯತೆ ಕೊಡೋಣ. ಮುಂದೆ ಬರತಕ್ಕಂತಹ ವರ್ಷಗಳಲ್ಲಿ ಅಂತಹ ಆದ್ಯತೆಗಳಿಗೆ ಗಮನ ಕೊಡಲಾಗುವುದು. ಗ್ರಾಮಸ್ಥರು ಹಣ ಕಟ್ಟಡ ಕೊಡಲಿಕ್ಕೆ ಮುಂದೆ ಬಂದಾಗ ಅವರಿಗೆ ಪ್ರಾಶಸ್ತ್ಯ ಕೊಡತಕ್ಕಂತಹ ವ್ಯವಸ್ಥಿತವಾದ ಪದ್ಧತಿಯನ್ನು ಮುಂದೆ ಬರತಕ್ಕಂತಹ ಹಣಕಾಸು ವರ್ಷದಲ್ಲಿ ಮಾಡುತ್ತೇವೆ. ಮಾನ್ಯ ಸದಸ್ಯರು ದೂರು ನ್ಯಾಯವಾಗಿದೆ. 2 ಕಡೆಯಲ್ಲಿ 88ರಲ್ಲಿ ಹಣ ದೇಣಿಗೆ ಕೊಡಲು ಮುಂದೆ ಬಂದಿದ್ದೇವೆ. ಗ್ರಾಮಸ್ಥರು ತಮ್ಮ ಕಾಣಿಕೆಗಳನ್ನು ಸಲ್ಲಿಸಿದ್ದಾರೆ. ಆದರೂ 50 ಘಟಕಗಳಲ್ಲಿ ಇಲ್ಲಿಗೂ ಕೊಡಬೇಕಾಗಿತ್ತು 92-93ರಲ್ಲಿ ಕೊಡಬೇಕಾಗಿತ್ತು. ಆದರೆ ನಮಗೆ ಕೊಡದೇ ಮಾಡಿದ್ದಾರೆ. ಎಂದು ಹೇಳಿದರು. ಇದಕ್ಕೆ ಸರಕಾರ ದಂಡ ತೆರಬೇಕಾಗುತ್ತದೆ. ಒಂದನ್ನು ಈ ವರ್ಷದಲ್ಲಿ ಮಾಡುತ್ತೇವೆ ಇನ್ನೊಂದು ಬರುವ ವರ್ಷ ಮಾಡುತ್ತೇವೆ.

ನಿಯಮ 334ರ ಮೇರೆಗೆ

Dissolving Elected Board of Halsidnath Sahakari Sugar Factory Nippani.

Sri. Subash Joshi : It is learnt that Government is going to Dissolve Elected Board of Shri Halsidnath Sahakari Sugar Factory Ltd., Nippani for political reasons.

I request the Hon'ble Co-operation Minister to answer whether it is a fact.

ಶ್ರೀ ಧರ್ಮಸಿಂಗ್ : ಮಾನ್ಯ ಉಪಾಧ್ಯಕ್ಷಣಿಯವರೇ ಮಾನ್ಯ ಸಹಕಾರ ಮಂತ್ರಿಗಳ ಪರವಾಗಿ ಉತ್ತರ ಕೊಡುತ್ತೇನೆ.

ಸರ್ಕಾರವು ಕೇವಲ ರಾಜಕೀಯ ಕಾರಣಕ್ಕಾಗಿ ಯಾವುದೇ ಸಹಕಾರ ಸಂಸ್ಥೆಯ ಆಡಳಿತ ಮಂಡಳಿಯನ್ನು ರದ್ದುಗೊಳಿಸುವುದಿಲ್ಲ. ಅದಾಗ್ಯೂ ಸರ್ಕಾರವು ಯಾವುದೇ ಸಹಕಾರ ಸಂಸ್ಥೆಯಲ್ಲಿ 1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಅಡಿಯಲ್ಲಿ ರೂಪಿಸಿರತಕ್ಕ ನಿಯಮಗಳು ಹಾಗೂ ಅಂತಹ ಸಂಘಗಳ ಕಾಯ್ದೆ ಅಡಿಯಲ್ಲಿ ರೂಪಿಸಿರತಕ್ಕ ನಿಯಮಗಳು ಹಾಗೂ ಅಂತಹ ಸಂಘಗಳ ಬೈಲಾ ನಿಯಮಗಳನ್ನು ಉಲ್ಲಂಘಿಸಿ ಗುರುತರವಾದ ಅಕ್ರಮಗಳನ್ನು ನಡೆಸಿರುವುದು ಕಂಡು ಬಂದಂಥ ಸಂದರ್ಭದಲ್ಲಿ ಅಂತಹ ಸಂಘದ ಆಡಳಿತ ಮಂಡಳಿಯನ್ನು 1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 30(1) ಅಥವಾ 30-ಎ ಅಡಿಯಲ್ಲಿ ರದ್ದುಗೊಳಿಸಿ ಸಂಘದ ವ್ಯವಹಾರಗಳನ್ನು ನೋಡಿಕೊಳ್ಳುವ ಸಲುವಾಗಿ ಸಂದರ್ಭಕ್ಕನುಸಾರವಾಗಿ ಆಡಳಿತಾಧಿಕಾರಿಯಾ ವಿಶೇಷಾಧಿಕಾರಿಗಳನ್ನು ನೇಮಕ ಮಾಡುವುದನ್ನು ಪರಿಶೀಲಿಸಬಹುದು.

ಪ್ರಸ್ತುತ ಬೆಳಗಾಂ ಜಿಲ್ಲೆಯ ನಿಪ್ಪಾಣಿಯಲ್ಲಿರುವ ಶ್ರೀ ಹಾಲಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆ(ನಿ)ಯ ಚುನಾಯಿತ ಮಂಡಳಿಯನ್ನು ರದ್ದು ಗೊಳಿಸುವ ವಿಚಾರ ಸರ್ಕಾರಕ್ಕಿಲ್ಲ. ಆದಾಗ್ಯೂ ಮೇಲೆ ಹೇಳಿದಂತೆ ಈ ಸಕ್ಕರೆ ಕಾರ್ಖಾನೆಯ ವ್ಯವಹಾರಗಳಲ್ಲಿ ಯಾವುದೇ ಗುರುತರವಾದ ಅಕ್ರಮಗಳು ಕಂಡು ಬಂದಲ್ಲಿ ಸರ್ಕಾರವು 1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು 1960ರ

ಕರ್ನಾಟಕ ಸಹಕಾರಸಂಘಗಳ ನಿಯಮಾವಳಿ ಇವುಗಳ ಅಡಿಯಲ್ಲಿ ಸಂಘದ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಪರಿಶೀಲಿಸುವುದು.

ಹಿರಿಯ ಕೆಲಸ ಪರಿವೀಕ್ಷಕರ ಪದನಾಮವನ್ನು ಜೂನಿಯರ್ ಇಂಜಿನಿಯರ್ ಎಂದು ಬದಲಾವಣೆ ಮಾಡುವುದು.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷಣಿಯವರೇ ಮೂರು ವರ್ಷ ಡಿಪ್ಲೋಮಾ ವಿದ್ಯಾರ್ಹತೆ ಹೊಂದಿರುವ, ಹಿರಿಯ ಕೆಲಸ ಪರಿವೀಕ್ಷಕರನ್ನು ಜೂನಿಯರ್ ಇಂಜಿನಿಯರ್ ಹುದ್ದೆಗೆ ಪದನಾಮ ಬದಲಾವಣೆ ಮಾಡಬೇಕೆಂದು ಮತ್ತು ಜೇಷ್ಠತಾ ಪಟ್ಟಿಯಲ್ಲಿ ಸೇರಿಸಬೇಕೆಂದು ಸರ್ಕಾರದ ಆದೇಶ ಸಂಖ್ಯೆ ಪಿ.ಡಬ್ಲ್ಯೂ.ಡಿ. 484 ಎಸ್ ಪಿಎಸ್ 85 ಬೆಂಗಳೂರು ದಿನಾಂಕ 12-2-1988ರಲ್ಲಿ ಆದೇಶವಾಗಿರುರವರು, ಸರ್ಕಾರದ ಕಾರ್ಯದರ್ಶಿಯವರು, ಲೋಕೋಪಯೋಗಿ ಮತ್ತು ಕಾಡಾ ಇಲಾಖೆ ಬಹುಮಟ್ಟಿಗೆ ಕಟ್ಟಡ ಬೆಂಗಳೂರು ಇವರಿಗೆ ದಿನಾಂಕ 15.9.1989ರಂದ ಜನಅ: ಸಿ4:ಸಿಇವ: 107:88-89ರಲ್ಲಿ ಪತ್ರ ಬರೆದು ಈ ಕೆಳಕಂಡ ಹಿರಿಯ ಕೆಲಸ ನಿರೀಕ್ಷಕರುಗಳನ್ನು ಜೂನಿಯರ್ ಇಂಜಿನಿಯರ್ ಹುದ್ದೆಗೆ ಪದನಾಮ ಬದಲಾವಣೆ ಮಾಡಿ, ಆ ಹುದ್ದೆಯಲ್ಲಿ ನಿಯುಕ್ತಿ ಗೊಳಿಸುವ ಬಗ್ಗೆ ಸ್ಪಷ್ಟೀಕರಣವನ್ನು ಕೋರಿದ್ದರೂ ಸಹ, ಇದುವರೆಗೂ ತೀರ್ಮಾನ ಕೈಗೊಳ್ಳದೆ ಸದರಿ ಮೂರು ಜನ ಹಿರಿಯ ಕೆಲಸ ನಿರೀಕ್ಷಕರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಸರಿಪಡಿಸಲು ಸರ್ಕಾರ ಶೀಘ್ರ ಕ್ರಮ ಕೈಗೊಳ್ಳುವುದೇ ಎಂದು ತಿಳಿಯ ಬಯಸುತ್ತೇನೆ?

1. ಶ್ರೀ ಹೆಚ್. ಶಾಂತಮಲ್ಲಪ್ಪ, ಹಿ.ಕೆ.ಪ. ನಂ. 2. ಗೇಜಿಂಗ್ ಉಪ ವಿಭಾಗ, ಶಿವಮೊಗ್ಗ.

2. ಶ್ರೀ ಇ. ಶ್ರೀನಿವಾಸಮೂರ್ತಿ ಹಿ.ಕೆ.ಪ. ನಂ. 2. ಗೇಜಿಂಗ್ ಉಪ ವಿಭಾಗ -ಶಿವಮೊಗ್ಗ.

3. ಶ್ರೀ ಈರೇಗೌಡ ಹಿ.ಕೆ.ಪ. ನಂ. 2. ಗೇಜಿಂಗ್ ಉಪ ವಿಭಾಗ -ಹಾಸನ.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು): ಮಾನ್ಯ ಸಭಾಧ್ಯಕ್ಷಣಿಯವರೇ,

ಮುಖ್ಯ ಅಭಿಯಂತರರು, ಜನ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರು ತಮ್ಮ ದಿನಾಂಕ :15.4.91ರ ಪತ್ರ ಸಂಖ್ಯೆ : ಜಸಅ:ಸಿ-4:ಪಿವಾಇ: 107:88-89ರ ಪತ್ರದಲ್ಲಿ ಹಿರಿಯ ಕೆಲಸ ನಿರೀಕ್ಷಕರಾದ ಶ್ರೀ ಹೆಚ್. ಶಾಂತಮಲ್ಲಪ್ಪ, ಶ್ರೀ ಆರ್. ಶ್ರೀನಿವಾಸ ಮೂರ್ತಿ ಮತ್ತು ಶ್ರೀ ಈರೇಗೌಡರವರಿಗೆ ಈಗಾಗಲೇ ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 484 ಎಸ್‌ಪಿಎಸ್ 85 ದಿನಾಂಕ 12.2.88ರ ಪ್ರಕಾರ ಕಿರಿಯ ಇಂಜಿನಿಯರ್‌ಗಳ ವೇತನ ಶ್ರೇಣಿಗೆ ಸಮಾನಾಂತರ ವೇತನವನ್ನು ನೀಡಲಾಗುತ್ತಿದೆಯೆಂದೂ ಆದರೆಈ ಹಿರಿಯ ಕೆಲಸ ನಿರೀಕ್ಷಕರನ್ನು ಕಿರಿಯ ಇಂಜಿನಿಯರ್ ಹುದ್ದೆಗೆ ಪದನಾಮ ಬದಲಾವಣೆ ಮಾಡಿ ಆ ಹುದ್ದೆಯಲ್ಲಿ ನಿಯುಕ್ತಿಗೊಳಿಸುವ ಬಗ್ಗೆ ಸರ್ಕಾರದ ಸ್ಪಷ್ಟೀಕರಣವನ್ನು ಕೋರಿದ್ದರು.

ಸರ್ಕಾರದ ಆದೇಶ ಸಂಖ್ಯೆ : ಪಿಡಬ್ಲ್ಯೂಡಿ 484 ಎಸ್‌ಪಿಎಸ್ 85 ದಿನಾಂಕ 12.2.88ರ ಆದೇಶದಲ್ಲಿ ಪತ್ರಾಂಕಿತವಲ್ಲದ ಕೆಲಸ ನಿರೀಕ್ಷಕರ (ವರ್ಕ್‌ಇನ್ಸ್‌ಪೆಕ್ಟರ್)

ಹುದ್ದೆಗಳನ್ನು ಕಿರಿಯ ಅಭಿಯಂತರರ ಹುದ್ದೆಗೆ ಸಮಾನಾಂತರಗೊಳಿಸುವ ಬಗ್ಗೆ ಪರಿಶೀಲಿಸಿ 3 ವರ್ಷಗಳ ಡಿಪ್ಲೊಮೋ ಪಡೆದಿರುವ ಕೆಲಸ ನಿರೀಕ್ಷಕರನ್ನು ದಿನಾಂಕ 11.3.63ರ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 9 ಎಸ್ ಎಡಿ 61ರ ಸೌಲಭ್ಯವನ್ನು ಪಡೆಯಲು ಅರ್ಹರೆಂದು ಆದೇಶಿಸಿತ್ತು.

ಹಿರಿಯ ಕೆಲಸ ನಿರೀಕ್ಷಕರ ಹುದ್ದೆಗಳು ಸೂಪರ್ ನ್ಯೂಮರಿ ಹುದ್ದೆಗಳಾಗಿರುತ್ತವೆ. ಈ ಹುದ್ದೆಗಳು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯ ವ್ಯಾಪ್ತಿಯಲ್ಲಿ ಬರುವುದಿಲ್ಲ. ಈ ಕಾರಣದಿಂದಾಗಿಯೇ ಇವರಿಗೆ ಕಿರಿಯ ಅಭಿಯಂತರರ ಸಮಾನಾಂತರ ವೇತನವನ್ನು ಮಾತ್ರ ನೀಡಲಾಗಿತ್ತು. ಈ ರೀತಿಯ ಕೆಲವು ಕೆಲಸ ನಿರೀಕ್ಷಕರುಗಳಿಂದ ತಮ್ಮನ್ನು ಕಿರಿಯ ಅಭಿಯಂತರರ ವೃಂದಕ್ಕೆ ಸೇರಿಸಬೇಕೆಂದು ಮನವಿಗಳು ಬಂದಿವೆ.

ಕುಷ್ಠರೋಗ ವಿಭಾಗದ ಫಿಸಿಯೋಥೆರಫಿಸ್ಟ್‌ಗಳಿಗೆ ಮುಂಬಡ್ತಿ.

ಶ್ರೀ ವೆಂಕಟರಮಣ : ಮಾನ್ಯ ಅಧ್ಯಕ್ಷಣಿಯವರೇ, ಸರ್ಕಾರದ ಆರೋಗ್ಯ ಇಲಾಖೆಯಲ್ಲಿ ಕುಷ್ಠರೋಗ ವಿಭಾಗ ಆರಂಭಿಸಿ 35 ವರ್ಷಗಳಾದರೂ ಕೂಡ ಆ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಫಿಸಿಯೋ-ಥೆರಾಪಿಸ್ಟ್, ಅವರುಗಳಿಗೆ ಇನ್ನೂ ಪ್ರಮೋಷನ್ ಕೊಡಲಾಗದೆ, ಈ ವಿಷಯವನ್ನು ಕಳೆದ 10 ವರ್ಷಗಳವರೆಗೆ ಪರಿಶೀಲನೆಯಲ್ಲಿ ಇಟ್ಟುಕೊಂಡು ತೀರ್ಮಾನವಾಗದೆ ಏಕೆ ಇನ್ನೂ ಸರ್ಕಾರದ ಆರೋಗ್ಯ ಕಾರ್ಯದರ್ಶಿಯವರು ತಮ್ಮ ಕಛೇರಿಯಲ್ಲಿ ಫೈಲ್ ನಂ ಹೆಚ್‌ಎಫ್‌ಡಬ್ಲ್ಯೂ: 107 : ಸಿಜಿಇ: 91 ಇಟ್ಟುಕೊಂಡಿರುತ್ತಾರೆ.

ಅನೇಕ ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಸುಮಾರು 30 ಫಿಸಿಯೋ-ಥೆರಾಪಿಸ್ಟ್ ಹುದ್ದೆಗಳು ಖಾಲಿ ಇರುತ್ತವೆ. ಖಾಲಿ ಹುದ್ದೆಗಳನ್ನು ಏಕೆ ಇನ್ನೂ ಭರ್ತಿ ಮಾಡಲಿಲ್ಲ? ಅಥವಾ ಆ ಖಾಲಿ ಹುದ್ದೆಗಳನ್ನು ಅಬಾಲಿಷ್-ಇಲ್ಲದ ಹಾಗೆ ಮಾಡಬಾರದು? ಅದರ ಮೂಲಕ ಏಕೆ ಸರ್ಕಾರದ ಹಣವನ್ನು ಉಳಿಸಬಾರದು? ಎಂಬುದನ್ನು ಮಾನ್ಯ ಆರೋಗ್ಯ ಮಂತ್ರಿಗಳು ಈ ಸಬೆಯಲ್ಲಿ ಉತ್ತರ ನೀಡಲು ಕೋರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು): ಮಾನ್ಯ ಸಭಾಧ್ಯಕ್ಷಣಿಯವರೇ,

1. ಕುಷ್ಠ ರೋಗ ವಿಭಾಗದ ಕಾರ್ಯಕ್ರಮದಡಿಯಲ್ಲಿ 58 ಫಿಸಿಯೋತೆರಪಿಸ್ಟ್‌ಹುದ್ದೆಗಳು ಮಂಜೂರಾಗಿದ್ದು ಈ ಪೈಕಿ 28 ಜನ ಪಿರಿಯೋತೆರಪಿಸ್ಟ್‌ರು ಕೆಲಸ ಮಾಡುತ್ತಿದ್ದಾರೆ. ಇದರ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಮುಂದಿನ ಯಾವ ಬಡ್ತಿಗೂ ಅವಕಾಶವಿಲ್ಲ. ಆದರೆ 10 ವರ್ಷ ಸೇವೆ ಸಲ್ಲಿಸಿದ ನೌಕರರಿಗೆ ಕಾಲಬದ್ಧ ಪ್ರಗತಿ ವೇತನ ಕೊಡಲಾಗಿದೆ. ಅಲ್ಲದೆ ಇತ್ತೀಚಿನ ಸರ್ಕಾರಿ ಆದೇಶದಂತೆ ಒಂದೇ ಹುದ್ದೆಯಲ್ಲಿ 15 ವರ್ಷ ಸೇವೆ ಸಲ್ಲಿಸಿದ ನೌಕರರಿಗೆ ಸ್ವಯಂ ಚಾಲಿತ ವಿಶೇಷ ಪದೋನ್ನತಿಯನ್ನು ನೀಡಲಾಗಿದೆ. ಈ ನೌಕರರ ವಿಷಯವನ್ನು ಪರಿಶೀಲಿಸಲಾಗಿ ಮಿತವ್ಯಯ ಆದೇಶದ ಪ್ರಸ್ತಾವನೆಯನ್ನು ಒಮ್ಮೆ ಕೈಬಿಡಲಾಗಿತ್ತು. ಆದರೆ ಮತ್ತೆ ಸಂಘದ ಒತ್ತಾಯದಿಂದ ವಿಷಯವನ್ನು ಪುನಃ ಪರಿಶೀಲನೆಗೆ ತೆಗೆದುಕೊಳ್ಳಲಾಗಿದೆ. ಮತ್ತು ಕಡತವು ಆರ್ಥಿಕ ಇಲಾಖೆಯ ಸಹಮತಿಗೆ ಹೋಗುವ ಹಂತದಲ್ಲಿದೆ.
2. 30 ಫಿಸಿಯೋತೆರಪಿಸ್ಟ್ ಹುದ್ದೆಗಳು ಖಾಲಿ ಇವೆ. ಮೇಲೆ ತಿಳಿಸಿದಂತೆ ಆರ್ಥಿ ಮಿತವ್ಯಯ ಆದೇಶಗಳ ಹಿನ್ನೆಲೆಯಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲಿಲ್ಲ. ಈಗ ಆರ್ಥಿಕ ಇಲಾಖೆಯು ಕೆಲವು ಶರತ್ತುಗೊಳಗೊಂಡು ಈ ಹುದ್ದೆಗಳನ್ನು

ಭರ್ತಿಮಾಡುಲು ಅನುಮತಿ ನೀಡಿರುವುದರಿಂದ, ಸದ್ಯದಲ್ಲಿಯೇ ಈ ಹುದ್ದೆಗಳನ್ನು ಭರ್ತಿ ಮಾಡುವ ಕ್ರಮ ಕೈಗೊಳ್ಳಲಾಗುವುದು.ಈಹುದ್ದೆಗಳನ್ನು ಅಬಾಲಿಷ್ ಮಾಡುವ ಪ್ರಸ್ತಾವನೆ ಇಲ್ಲ.

4. ಉತ್ತರ ಕನ್ನಡ ಜಿಲ್ಲೆಗಳಿಗಾಗಿ ಬಯಲುಸೀಮೆ ಅಭಿವೃದ್ಧಿ ಮಂಡಳಿ ರಚನೆ.

1.35. ಪಿ.ಎಂ.

ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಉಪಾಧ್ಯಕ್ಷಣಿಯವರೆ, ಉತ್ತರ ಕರ್ನಾಟಕದ ಜಿಲ್ಲೆಗಳಿಗಾಗಿ ಬಯಲುಸೀಮೆ ಅಭಿವೃದ್ಧಿ ಮಂಡಳಿ ರಚನೆ ಮಾಡುವ ಕುರಿತು-ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳು ಶೈಕ್ಷಣಿಕವಾಗಿ, ಕೃಷಿ, ಕೈಗಾರಿಕೆ, ನೀರಾವರಿ, ಗ್ರಾಮೀಣ ಅಭಿವೃದ್ಧಿ ಮುಂತಾದ ಕ್ಷೇತ್ರಗಳಲ್ಲಿ ಸಾಕಷ್ಟು ಅಭಿವೃದ್ಧಿಯಾಗದೇ ಬಹಳ ಹಿಂದುಳಿದಿರುತ್ತದೆ. ಇಲ್ಲಿನ ಅನೇಕ ಅಭಿವೃದ್ಧಿ ಕಾರ್ಯಗಳು ಅರ್ಧವಾಗಿ ಉಳಿದಿದ್ದು ಯೋಜನೆಗಳು ಕಾರ್ಯಗತಗೊಳ್ಳದೆ ಹಾಗೆ ಉಳಿದಿರುತ್ತದೆ. ಅಲ್ಲದೆ ಇಲ್ಲಿನ ಸಾರ್ವಜನಿಕರ ಪ್ರಮುಖ ಬೇಡಕೆಗಳಲ್ಲಿ ಇದೊಂದು ಸಹ ಮುಖ್ಯವಾದ ಬೇಡಿಕೆಯಾಗಿರುತ್ತದೆ. ಆದಕಾರಣ, ಈ ಭಾಗದ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಒಂದು ಬಯಲುಸೀಮೆ ಅಭಿವೃದ್ಧಿ ಮಂಡಳಿ ರಚಿಸಿ 1993-94ನೇ ಸಾಲಿನ ಆಯವ್ಯ ಪತ್ರದಲ್ಲಿ ನೂರು ಕೋಟಿ ರೂಪಾಯಿ ಮೀಸಲಿಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀಎಂ. ವೀರಪ್ಪ ಮೋಯ್ಲಿ (ಮುಖ್ಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷಣಿಯವರೇ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡ ಬಯಸುತ್ತೇನೆ.

ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಗುಲ್ಬರ್ಗಾ, ಹಾಗೂ ಮಲೆನಾಡು ಅಭಿವೃದ್ಧಿ ಮಂಡಳಿ ಶಿವಮೊಗ್ಗ, ಇವುಗಳು ಇತ್ತೀಚೆಗೆ ಅಸ್ತಿತ್ವಕ್ಕೆ ಬಂದಿದೆ. ಯಾವುದೇ ಹೆಚ್ಚಿನ ಪ್ರದೇಶಾಭಿವೃದ್ಧಿ ಮಂಡಳಿಗಳು ರಚನೆಯ ಬಗ್ಗೆ ವಿಚಾರಿಸುವುದಕ್ಕಿಂತ ಮೊದಲು ಈಗಾಗಲೇ ಸ್ಥಾಪಿತವಾಗಿರುವ ಪ್ರದೇಶಾಭಿವೃದ್ಧಿ ಮಂಡಳಿಗಳ ಕಾರ್ಯ ವೈಖರಿಯನ್ನು ವೀಕ್ಷಿಸುವುದು ಸೂಕ್ತ.

ಬ್ರಹ್ಮಾವರ ಪೋಲೀಸ್ ಠಾಣೆಯ ವ್ಯಾಪ್ತಿಯ ವಾರಂಬಳ್ಳಿಗ್ರಾಮದಲ್ಲಿ ವಿವಿಯನ್ ಡಿಸಿಲ್ವ ಎನ್ನುವವರ ಕೊಲೆ.

ಶ್ರೀ ಸಿ.ಪಿ. ಬಸವರಾಜ್ (ಬ್ರಹ್ಮಾವರ): ಮಾನ್ಯ ಉಪಾಧ್ಯಕ್ಷಣಿಯವರೆ, ದಿನಾಂಕ 29-12-1992ರ ರಾತ್ರಿ 10-30 ಗಂಟೆಗೆ ಬ್ರಹ್ಮಾವರ ಪೋಲೀಸ್ ಠಾಣೆಯ ವ್ಯಾಪ್ತಿಯ ವಾರಂಬಳ್ಳಿ ಗ್ರಾಮದಲ್ಲಿ ಕೆಲವು ಯುವಕರು ವಿವಿಯನ್ ಡಿಸಿಲ್ವ ಎನ್ನುವ ಯುವಕನನ್ನು ತಿವಿದು ಕೊಂದು ಅದೇ ವ್ಯಕ್ತಿಯ ಸಂಬಂಧಿಗಳನ್ನು ಮರಣಾಂತಿಕವಾಗಿ ತಿವಿದಿರುತ್ತಾರೆ. ಈ ಘಟನೆ ನಡೆದ ಹತ್ತೇ ನಿಮಿಷಗಳಲ್ಲಿ ಸಾರ್ವಜನಿಕರು ದೂರವಾಣಿ ಮೂಲಕ ಬ್ರಹ್ಮಾವರ ಪೋಲೀಸ್ ಠಾಣೆಯಲ್ಲಿ ಆ ವೇಳೆಯಲ್ಲಿ ಉಪಸ್ಥಿತರಿದ್ದ ಹೆಡ್ ಕಾನ್‌ಸ್ಟಬಲ್ ಮತ್ತು ಠಾಣೆಯ ರೈಟರ್‌ರವರಿಗೆ ಆರೋಪಿಗಳ ಹೆಸರು, ಬಳಸಿದ ವಾಹನಗಳ ವಿವರ ನೀಡಿದ್ದಾಗ್ಯೂ ಪೋಲೀಸರು ಒಂದೂವರೆ ಕಿಲೋ ಮೀಟರ್ ದೂರದ ಈ ಘಟನಾ ಸ್ಥಳಕ್ಕೆ ಮೂರು ಗಂಟೆ ತಡವಾಗಿ ಬಂದು ಆರೋಪಿಗಳು ತಪ್ಪಿಸಿಕೊಳ್ಳುವಲ್ಲಿ ಸಹಕರಿಸಿರುತ್ತಾರೆ.

ಮೇಲೆ ತಿಳಿಸಿದಂತೆ ಹೊಟ್ಟೆಯ ಕೊಯಿತದ ಮರಣಾಂತಿಕ ಗಾಯಗಳಿಂದ ಮಣಿಪಾಲದ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಸೇರಲು ಹೊರಟ ಮೃತರ ಸಂಬಂಧಿಯನ್ನು ಸ್ಥಳ ಪರಿಶೀಲಿಸಲು ಬಲಾತ್ಕಾರವಾಗಿ ಕರೆ ತರುವ ಅಮಾನವೀಯ ವರ್ತನೆಯನ್ನು ಪೋಲೀಸರು ಪ್ರದರ್ಶಿಸಿದ್ದು ಸಾರ್ವಜನಿಕ ಆಕ್ರೋಶಕ್ಕೆ ಕಾರಣವಾಗಿದೆ.

ನನ್ನ ಕ್ಷೇತ್ರದಲ್ಲಿ ಇತ್ತೀಚೆಗಿನ ಈ ಘಟನೆ ಅಲ್ಲದೆ,ಈ ಹಿಂದೆ ಇದೇ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದ ಒಂದು ಸಂಶಯಾಸ್ಪದ ಕೊಲೆ, ಬ್ಯಾಂಕ್ ದರೋಡೆ, ಅಲ್ಲದೆ ಪ್ರಮುಖ ಸರ್ಕಾರಿ ಕ್ಷೇತ್ರದ ಸಕ್ಕರೆ ಕಾರ್ಖಾನೆಯಲ್ಲಿ ನಡೆದ ಕಳ್ಳತನ ಕುರಿತಂತೆ ಎಲ್ಲಾ ಪ್ರಕರಣ ಆರೋಪಿಗಳ ಖಚಿತ ಸುಳಿವು ಸಾರ್ವಜನಿಕರು ನೀಡಿದ್ದಾಗ್ಯೂ ಪೋಲೀಸರು ತಮ್ಮ ದಿವ್ಯ ನಿರ್ಲಕ್ಷ್ಯದಿಂದ ಆರೋಪಿಗಳನ್ನು ಹಿಡಿಯಲು ನಿರಾಸಕ್ತರಾಗಿದ್ದು ಪದೇ ಪದೇ ಕರ್ತವ್ಯ ಲೋಪ ಎಸಗುತ್ತಿದ್ದಾರೆ.

ಈ ಘಟನೆ ಕುರಿತಂತೆ ನಿರ್ಲಕ್ಷ ತೋರಿ ಸಾರ್ವಜನಿಕ ಮನದಲ್ಲಿ ಪೋಲೀಸರ ವಿಶ್ವಾಸಾರ್ಹತೆ ಕುರಿತಂತೆ ಸಂಶಯ ಬಲಗೊಳ್ಳಲು ಕಾರಣರಾದ ಪೋಲೀಸರನ್ನು ಅಮಾನತ್ತುಗೊಳಿಸಿ ಮತ್ತೆ ಮೇಲೆ ತಿಳಿಸಿದ ಎಲ್ಲಾ ಪ್ರಕರಣಗಳನ್ನು ಸಿ.ಒ.ಡಿ. ತನಿಖೆಗೆ ಒಪ್ಪಿಸಬೇಕೆನ್ನುವ ಸಾರ್ವಜನಿಕರ ಒಟ್ಟಾರೆ ಅಭಿಪ್ರಾಯವನ್ನು ಕಳಕಳಿಯಿಂದ ಈ ಸದನದ ಮೂಲಕ ಮುಖ್ಯ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷಣಿಯವರೆ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ದಿನಾಂಕ : 29-12-92ರ ರಾತ್ರಿ 10 ಘಂಟೆ 30 ನಿಮಿಷಗಳ ಸುಮಾರಿಗೆ ಬ್ರಹ್ಮಾವರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ ವಿವಿಯನ್ ಡಿಸಿಲ್ವ ಎಂಬ ವ್ಯಕ್ತಿಯನ್ನು ಕೆಲವು ವ್ಯಕ್ತಿಗಳು ತಿವಿದುಕೊಂದು ಅದೇ ವ್ಯಕ್ತಿ ಸಂಬಂಧಿಗಳನ್ನು ತಿವಿದು ತೀವ್ರವಾಗಿ ಗಾಯಗೊಳಿಸಿರುವುದು ನಿಜ. ಈ ಬಗ್ಗೆ ಗಾಯಗೊಡ ಶ್ರೀ ಜಾರ್ಜ ಡಯೂಜ ಇವರು ದಿನಾಂಕ : 29-12-92ರಂದು ರಾತ್ರಿ 11 ಘಂಟೆಗೆ ಬ್ರಹ್ಮಾವರ ಪೋಲೀಸ್ ಠಾಣೆಗೆ ನೀಡಿದ ದೂರಿನ ಆಧಾರೇದ ಮೇಲೆ ಬ್ರಹ್ಮಾವರ ಪೋಲೀಸ್ ಠಾಣೆ ಅಪರಾಧ ಸಂಖ್ಯೆ 80-92 ರಲ್ಲಿ ಕೊಲೆ ಮತ್ತು ಕೊಲೆಗೆ ಪ್ರಯತ್ನದ ಪ್ರಕರಣ ಒಂದನ್ನು ದಾಖಲು ಮಾಡಿಕೊಂಡು ತನಿಖೆ ಮಾಡಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯ ಎಸ್.ಪಿ. ಮತ್ತು ಉಡುಪಿಯ ಡಿ.ವೈ.ಎಸ್.ಪಿ. ಗಳ ಮಾರ್ಗದರ್ಶನದಲ್ಲಿ ತನಿಖೆಯ ನಡೆಯುತ್ತಿದೆ. 8 ಜನ ಅಪರಾಧಿಗಳನ್ನು ಗುರುತಿಸಲಾಗಿದ್ದುಅವರನ್ನು ಪತ್ತೆ ಹಚ್ಚಿ ಬಂಧಿಸಲು ತೀವ್ರ ಕ್ರಮ ಪ್ರಗತಿಯಲ್ಲಿದೆ. ಅಪರಾಧಿಗಳನ್ನು ಬೇಗನೆ ಬಂಧಿಸುವ ನಿರೀಕ್ಷೆ ಇದೆ.

ಈ ಕೃತ್ಯ ನಡೆದ 10ನಿಮಿಷಗಳಲ್ಲಿ ಅಪರಾಧಿಗಳ ಹೆಸರುಗಳನ್ನು ಸಾರ್ವಜನಿಕರು ಪೋಲೀಸ್ ಠಾಣೆಯ ಹೆಡ್ ಕಾನ್ಸ್ಟೇಬಲ್ ಮತ್ತು ಠಾಣಾ ಬರಹಗಾರರಿಗೆ ತಿಳಿಸದರೂ ಸಹಿತ ಅವರು ಏನೂ ಕ್ರಮಕೊಳ್ಳದೆ ಅಪರಾಧಿಗಳು ತಪ್ಪಿಸಿಕೊಳ್ಳಲು ಸಹಾಯ ಮಾಡಿದರು ಎಂಬುದು ನಿಜವಲ್ಲ. ಠಾಣಾಬರಹಗಾರ ಪೋಲೀಸ್ ಕಾನ್ಸ್ಟೇಬಲ್ ವಾಸನ್ ಇವರು 28-12-92ಮತ್ತು 20-12-92ರಂದು ರಜೆಯಮೇಲಿದ್ದರು ಮತ್ತು ಊರಿನಲ್ಲಿರಲಿಲ್ಲ. ಪೋಲೀಸರು ಸ್ಥಳಕ್ಕೆ 3 ಘಂಟೆಗಳ ಕಾಲ ತಡವಾಗಿ ಬಂದರೆಂಬುದು ನಿಜವಲ್ಲ. ಪೋಲೀಸರು ತೀವ್ರ ಗಾಯಗೊಂಡ ಮೃತ ವ್ಯಕ್ತಿಯ

ಸಂಬಂಧಿಕರನ್ನು ಕೃತ್ಯ ನಡೆದ ಸ್ಥಳವನ್ನು ತೋರಿಸಲು ಅಮಾನವೀಯ ರೀತಿಯಲ್ಲಿ ಮಣಿಪಾಲ ಆಸ್ಪತ್ರೆಯಿಂದ ಕರೆದುಕೊಂಡು ಹೋದರು ಎಂಬುದು ಸರಿಯಲ್ಲ.

ಪೋಲೀಸರು ಅಪರಾಧಿಗಳಿಗೆ ಸಂಬಂಧಪಟ್ಟ ಒಂದು ಸ್ಕೂಟರ್ ಮತ್ತು ಒಂದು ಮೋಟರ್ ಸೈಕಲ್ಲನ್ನು ಈಗಾಗಲೇ ವಶಪಡಿಸಿಕೊಂಡಿದ್ದಾರೆ. ಈ ಪ್ರಕರಣದ ತನಿಖೆಯನ್ನು ಹೆಚ್ಚಿನ ಮುತವರ್ಜಿ ವಹಿಸಿ ನಿರ್ವಹಿಸುವಂತೆ ದಕ್ಷಿಣ ಕನ್ನಡ ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ಆದೇಶಿಸಿದೆ.

ಈ ಪ್ರಕರಣ ತನಿಖೆಯಲ್ಲಿ ಯಾವುದೇ ಲೋಪದೋಷವಾಗಿದ್ದು ಅದರ ಬಗ್ಗೆ ವಿಚಾರಣೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಾದ ಶಿಸ್ತಿನ ಕ್ರಮ ಕೈಗೊಳ್ಳಲು ಅವರಿಗೆ ಸೂಚಿಸಿದೆ.

ಮಾನ್ಯ ಸದಸ್ಯರು ಸೂಚಿಸಿದ ಒಂದು ಸಂಶಯಾಸ್ಪದ ಕೊಲೆ, ಬ್ಯಾಂಕ್, ದರೋಡೆ, ಸಕ್ಕರೆ ಕಾರಖಾನೆಗಳಲ್ಲಿ ನಡೆದ ಕಳ್ಳತನದ ಪ್ರಕರಣಗಳ ಬಗ್ಗೆ ತನಿಖೆಯಲ್ಲಾಗಲೀ ಅಥವಾ ಇತರ ಪೋಲೀಸ್ ಕಾರ್ಯನಿರ್ವಹಣೆಯಲ್ಲಾಗಲೀ ಯಾವದೇ ನ್ಯೂನತೆಗಳು ಬ್ರಹ್ಮಾವರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದಿವೆಯೇ ಎಂಬುದನ್ನು ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿ 15 ದಿನಗಳಲ್ಲಿ ವರದಿ ಮಾಡಲು ಪಶ್ಚಿಮ ವಲಯ ಡಿ.ಐ.ಜಿ.ಯವರಿಗೆ ಆದೇಶಿಸಿದೆ.

ಮಂಡ್ಯ ನಗರದ ಮಧ್ಯೆ ಹಾದುಹೋಗುವ ಬೆಂಗಳೂರು-ಮೈಸೂರು ರಸ್ತೆಯ ಮಧ್ಯೆ ಇರುವ ಮೀಡಿಯಮ್ ಕುರಿತು

ಶ್ರೀ ಎಂ. ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರದ ಮಧ್ಯೆ ಹಾದು ಹೋಗುವ ಬೆಂಗಳೂರು-ಮೈಸೂರು ರಸ್ತೆಯನ್ನು ಎರಡು ಭಾಗವಾಗಿ ಮಾಡಿ ಮೀಡಿಯಮ್ ಅನ್ನು ಹಾಕಲಾಗಿದ್ದು, ಈ ಮೀಡಿಯಮ್ ಹಾಕಿದ ನಂತರ ಜೋಡಿ ರಸ್ತೆಗಳು ಎರಡೂ ಸಹ ತುಂಬಾ ಹಾಳಾಗಿದ್ದು, ವಾಹನ ಸಂಚಾರಕ್ಕೆ ಸುಸ್ಥಿತಿಯಲ್ಲಿರುವುದಿಲ್ಲ. ಈ ರಸ್ತೆಗಳಲ್ಲಿ ಅಲ್ಲಲ್ಲಿ ಹಳ್ಳಗಳಾಗಿದ್ದು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲದೆ, ತುಂಬಾ ತೊಂದರೆಯಾಗುತ್ತಿದೆ. ಹಾಗೂ ಜೋಡಿರಸ್ತೆಗಳಲ್ಲಿ ಬೀದಿ ದೀಪಗಳಿಲ್ಲದೆ, ವಾಹನಗಳು ಜೋಡಿ ರಸ್ತೆ ಮಧ್ಯೆ ಇರುವ ಮೀಡಿಯನ್‌ಗೆ ಡಿಕ್ಕಿ ಹೊಡೆಯುತ್ತಾ ಇದ್ದು, ದಿನಕ್ಕೊಂದು ಅಪಘಾತವು (ಆಕ್ಸಿಡೆಂಟ್) ಸರ್ವೆ ಸಾಮಾನ್ಯವಾಗಿದೆ. ಪ್ರಯಾಣಿಕರು ತುಂಬಾ ಭಯಗ್ರಸ್ಥರಾಗಿದ್ದಾರೆ. ಈ ಜೋಡಿರಸ್ತೆ ನಿರ್ಮಾಣ ಕಾಮಗಾರಿ ಪೂರ್ಣವಾಗಿರುವುದಿಲ್ಲ. ಈ ಜೋಡಿ ದುರಸ್ತಿಗಳನ್ನು ದುರಸ್ತಿ ಮಾಡುವ ಕಾರ್ಯವನ್ನು, ಹಾಗೂ ಜೋಡಿ ರಸ್ತೆಯಲ್ಲಿ ಆಗುವ ಅಪಘಾತವನ್ನು ತಪ್ಪಿಸಲು ಪರಿಹಾರೋಪಾಯಗಳನ್ನು ಕೈಗೊಳ್ಳಬೇಕೆಂದು ಆಗ್ರಹ ಪೂರ್ವಕವಾಗಿ ಒತ್ತಾಯಪಡಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು): ಮಾನ್ಯ ಉಪಾಧ್ಯಕ್ಷಣಿಯವರೇ,

ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿಯು ಮಂಡ್ಯ ನಗರ ಪ್ರದೇಶ ವ್ಯಾಪ್ತಿಯಲ್ಲಿ ಸುಮಾರು 4 ಕಿ.ಮೀ.ನಷ್ಟು ಹಾದು ಹೋಗುತ್ತದೆ. ಈ ಭಾಗವು, ಅತ್ಯಂತ ಜನನಿಬಿಡ ಹಾಗೂ ವಾಹನ ಸಂಚಾರ ದಟ್ಟಣೆ ಹೆಚ್ಚಿರುವುದರಿಂದ,

ಈ ಭಾಗದ ರಸ್ತೆಯನ್ನು ಜೋಡಿ ರಸ್ತೆಯನ್ನಾಗಿ ಮಾರ್ಪಡಿಸುವ ಕಾಮಗಾರಿಯನ್ನು 45 ಲಕ್ಷ ರೂ. ಗಳ ಅಂದಾಜಿನಲ್ಲಿ ಡಿಸೆಂಬರ್ 1986ರಲ್ಲಿ ತೆಗೆದುಕೊಳ್ಳಲಾಯಿತು.

ಈ ಕಾಮಗಾರಿಯಲ್ಲಿ ಮಂಡ್ಯ ನಗರದಲ್ಲಿ 4 ಕಿ.ಮೀ. ರಸ್ತೆಯನ್ನು ಮಧ್ಯದಲ್ಲಿ ಒಂದು ಮೀಟರ್ ಅಗಲದ ವಿಭಾಜಕವನ್ನು (Median) ಮಾಡಿ, ಎರಡು ಬದಿಯ ರಸ್ತೆಗಳನ್ನು ಅಗಲಪಡಿಸಿ, ಒಟ್ಟು ನಾಲ್ಕು ಪಥದ ಸಂಚಾರಕ್ಕೆ ಅನುವು ಮಾಡಿಕೊಡುವ ವ್ಯವಸ್ಥೆ ಮಾಡಲಾಗಿದೆ. ಬಹುತೇಕ ಕಾಮಗಾರಿಯು ಮುಗಿದಿದ್ದು ಈಗಾಗಲೇ 51 ಲಕ್ಷ ರೂ.ಗಳ ವೆಚ್ಚವಾಗಿದೆ. ಇತ್ತೀಚಿನ ಮಳೆಗಾಲದಲ್ಲಿ, ಹಾಗೂ ಕುಡಿಯುವ ನೀರಿನ ಸರಬರಾಜು ಕೊಳವೆಗಳು ಅಲ್ಲಲ್ಲಿ ಹಾನಿಗೊಳಗಾಗಿ ಸೋರು ನೀರಿನಿಂದ ರಸ್ತೆಯಲ್ಲಿ ಗುಂಡಿಗಳಾಗಿದ್ದು ಈಗ ದುರಸ್ಥಿ ಪಡಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

ಈ ಭಾಗದ ರಸ್ತೆಗೆ ಪೂರ್ಣವಾಗಿ ಡಾಂಬರು ಹಾಕುವ ಮುಂಚೆ ನೀರು ಸರಬರಾಜು ಕೊಳವೆಗಳನ್ನು ಸ್ಥಳಾಂತರಿಸಬೇಕಿದ್ದು ಸಂಬಂಧಪಟ್ಟವರೊಡನೆ ಶೀಘ್ರ ಕ್ರಮಕ್ಕಾಗಿ ಒತ್ತಾಯಿಸಲಾಗುತ್ತಿದೆ.

ಅಪಘಾತಗಳನ್ನು ತಡೆಯುವ ಸಲುವಾಗಿ ಸೂಕ್ತ ಎಚ್ಚರಿಕೆ ಫಲಕಗಳು, ಪ್ರತಿಫಲನ ಬಣ್ಣದಿಂದ ಗುರುತುಗಳನ್ನು (Reflectors) ಹಾಕಲಾಗಿದೆ. ಮಂಡ್ಯ ನಗರಪೋಲೀಸ್ ಇಲಾಖೆಯ ವರದಿ ಪ್ರಕಾರ, ರಸ್ತೆಯಲ್ಲಿ, ವಿಭಾಜಕವನ್ನು ಹಾಕಿ ಜೋಡಿ ರಸ್ತೆ ಮಾಡಿದ ಬಳಿಕ ಅಪಘಾತಗಳು ಕಮ್ಮಿಯಾಗಿದೆ ಎಂದು ತಿಳಿದು ಬಂದಿದೆ. ಇದು ಸಂತೋಷದ ವಿಷಯ ಮತ್ತು ಕೆಲಸ ಫಲದಾಯಕ.

ನಗರ ಪ್ರದೇಶದಲ್ಲಿ ರಸ್ತೆ ದೀಪಗಳನ್ನು ಒದಗಿಸುವ ಹಾಗೂ ನಿರ್ವಹಿಸುವ ವಿಚಾರವು ಮಂಡ್ಯ ನಗರ ಸಭೆಯ ವ್ಯಾಪ್ತಿಗೆ ಬರುವುದರಿಂದ, ಲೋಕೋಪಯೋಗಿ ಇಲಾಖೆಯ ವತಿಯಿಂದ ರಸ್ತೆ ದೀಪಗಳನ್ನು ಅಳವಡಿಸುವ ವಿಷಯವು ಪ್ರಸ್ತಾಪದಲ್ಲಿ ಇರುವುದಿಲ್ಲ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳು ಸಮಪದಗಳೆಂದು ಪರಿಗಣಿಸುವ ಸಮಿತಿಯ ಕಾರ್ಯವೈಖರಿ.

ಡಾ. ಆರ್.ಬಿ. ಚೌಧುರಿ : ಮಾನ್ಯ ಉಪಾಧ್ಯಕ್ಷಣೆಯವರೇ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಳ ಸಮಪದಗಳೆಂದು ಪರಿಗಣಿಸುವ ಸಮಿತಿಯನ್ನು ರಚಿಸಿ ಎರಡು ವರ್ಷಗಳಾದರೂ ಈ ಸಮಿತಿಯು ಇನ್ನೂವರೆವಿಗೂ ಕಾರ್ಯವನ್ನು ಮುಗಿಸಿಲ್ಲ, ಹಾಗೂ ಸುಮಾರು 1 ವರ್ಷದಿಂದ ಸಮಿತಿ ಸಭೆಗಳನ್ನೇ ನಡೆಸಿಲ್ಲ. ಇದಲ್ಲದೆ ಮೂರು ಉಪಸಮಿತಿಗಳನ್ನು ಮಲೇರು-ಮಾಲೇರು,ಜಾತಿಗಳ ಬಗ್ಗೆ ಒಂದು ಸಮಿತಿ, ಜೇನು ಕುರುಬ, ಕಾಡು ಕುರುಬ, ಜಾತಿಗಳ ಬಗ್ಗೆ ಒಂದು ಸಮಿತಿ, ಹಾಗೂ ಇತರೇ ಜಾತಿಗಳ ಬಗ್ಗೆ ಒಂದು ಸಮಿತಿ-ಹೀಗೆ ಮೂರು ಉಪಸಮತಿಗಳನ್ನು ರಚಿಸಿ ದಿನಾಂಕ 28 -2-91ರೊಳಗೆ ಮುಖ್ಯ ಸಮಿತಿಗೆ ವರದಿ ಸಲ್ಲಿಸಬೇಕೆಂದು ತೀರ್ಮಾನಿಸಲಾಗಿದ್ದು, ಈ ಮೂರು ಉಪಸಮಿತಿಗಳು ತಮ್ಮ ವರದಿಗಳನ್ನು ಸಲ್ಲಿಸಿದ ಯಾವುದೇ ಮಾಹಿತಿ ಇಲ್ಲ. ಹಾಗೂ ಮುಖ್ಯ ಸಮಿತಿ ಕೂಡ 1991ನೇ ಮೇ ತಿಂಗಳಲ್ಲೇ ಈ ಕಾರ್ಯವನ್ನು ಪೂರ್ತಿಗೊಳಿಸುವುದೆಂದು ತೀರ್ಮಾನಿಸಲಾಗಿತ್ತು. ಆದರೆ ಈವರೆಗೂ ಈ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಆದ್ದರಿಂದ ಸರಕಾರ ಈ ಸಮಿತಿಯ ಸಭೆಯನ್ನು ಕರೆಯಲಾಗಿಲ್ಲ. ಆದ್ದರಿಂದ

ಸರಕಾರ ಈ ಸಮಿತಿಯ ಕಾರ್ಯವನ್ನು ಪೂರೈಸುವುದೇ? ಪೂರೈಸುವುದಾದರೆ ಯಾವಾಗ? ಇಲ್ಲವೆ ಪೂರ್ತಿಯಾಗಿ ಕೈಬಿಡಲಾಗಿದೆಯೇ? ಯಾವುದಕ್ಕೂ ಸರಕಾರ ಸರಿಯಾದ ಹೇಳಿಕೆಯನ್ನು ನೀಡಬೇಕೆಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು): ಮಾನ್ಯ ಉಪಾಧ್ಯಕ್ಷಣಿಯವರೇ,

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂದು ಅಥವಾ ಈಗಾಗಲೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಲ್ಲಿ ಇರುವ ಜಾತಿಗಳ ಸಮಾನ ಜಾತಿಯೆಂದು ಪರಿಗಣಿಸಬೇಕೆಂದು, ಕೋರಿ ಹಲವಾರು ಜಾತಿಗೆ ಸೇರಿದೆ ಜನರು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಹಾಗೂ, ಇನ್ನೂ ಸಲ್ಲಿಸುತ್ತಲೂ ಇದ್ದಾರೆ. ಈ ಮನವಿಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ನೇಮಿಸಿದ ಸಮಿತಿಯನ್ನು ದಿನಾಂಕ 5-1-91ರಲ್ಲಿ ಆಗಿನ ಕಾನೂನು ಸದಸ್ಯರು, ವಿಧಾನ ಸಭಾ ಮತ್ತು ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಇತರ ಗಣ್ಯ ವ್ಯಕ್ತಿಗಳನ್ನು ಒಳಗೊಂಡಂತೆ ಪುನರ್ ರಚಿಸಲಾಯಿತು. ಈ ಸಮಿತಿಗೆ ಪೂರಕವಾಗಿ 3 ಉಪ ಸಮಿತಿಗಳನ್ನು ರಚಿಸಲಾಗಿದೆ. ಮಾಲೆಯರು ಮತ್ತು ಮಲೆಯರು ಜಾತಿ ಬಗ್ಗೆ ಶ್ರೀ ಕಾಗೋಡು ತಿಮ್ಮಪ್ಪ ಇವರ ಅಧ್ಯಕ್ಷತೆಯಲ್ಲಿಯೂ, ಕುರುಬ, ಜೇನು ಕುರುಬ, ಕಾಡುಕುರುಬ ಜಾತಿ ಬಗ್ಗೆ ಶ್ರೀ ಶ್ರೀನಿವಾಸಪ್ರಸಾದ್, ಲೋಕಸಭಾ ಸದಸ್ಯರು ಇವರ ಅಧ್ಯಕ್ಷತೆಯಲ್ಲಿಯೂ ಹಾಗೂ ಇತರ ಜಾತಿಗಳ ಬಗ್ಗೆ ಶ್ರೀ ಡಿ.ಕೆ. ನಾಯ್ಕರ್, ಲೋಕಸಭಾ ಸದಸ್ಯರು, ಇವರ ಅಧ್ಯಕ್ಷತೆಯಲ್ಲಿಯೂ, ಕ್ರಮವಾಗಿ ಮೂರು ಉಪ ಸಮಿತಿಗಳನ್ನು ರಚಿಸಲಾಗಿದೆ.

ಈ ಮೂರು ಉಪ ಸಮಿತಿಗಳನ್ನು ವಿವಿಧ ಜಾತಿ ಮತ್ತು ಪಂಗಡಗಳು ಪ್ರಮುಖವಾಗಿ ನೆಲೆಸಿರುವ ಸ್ಥಳಗಳಿಗೆ ಭೇಟಿ ಮಾಡಿ, ಮಾಹಿತಿ ಸಂಗ್ರಹಿಸಿ, ಕೂಲಂಕುಷ ಅಧ್ಯಯನ ನಡೆಸಿ, ಶೀಘ್ರವಾಗಿ ಒಂದು ವರದಿಯನ್ನು ಮುಖ್ಯ ಸಮಿತಿಗೆ ಸಲ್ಲಿಸಲು ಕೋರಲಾಗಿತ್ತು. ಈ ಬಗ್ಗೆ ಶ್ರೀ ಡಿ.ಕೆ. ನಾಯ್ಕರ್ ಅವರ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯು ದಿನಾಂಕ 19-4-92ರಂದು ತನ್ನ ವರದಿಯನ್ನು ಸಲ್ಲಿಸಿದೆ. ಇನ್ನೆರಡು ಉಪ ಸಮಿತಿಗಳು ತಮ್ಮ ವರದಿಗಳನ್ನು ಸಲ್ಲಿಸಿಲ್ಲ. ಕಳೆದ 2 ವರ್ಷಗಳಲ್ಲಿ ಮುಖ್ಯ ಸಮಿತಿಯು ಮೂರು ಬಾರಿ ಸಭೆ ಸೇರಿದ್ದು, ಉಪ ಸಮಿತಿಗಳು 7 ಬಾರಿ ಸಭೆಸೇರಿವೆ. ಮತ್ತು ಈ ಸಮಿತಿಯ ಸಮಿತಿಗಳ ಮುಂದೆ ಸುಮಾರು 80 ಜಾತಿಗಳವರು ತಮ್ಮನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮನವಿಯನ್ನು ಸಲ್ಲಿಸಿರುತ್ತಾರೆ. ಈಗ ಹೊಸ ಮಂತ್ರಿ ಮಂಡಲ ರಚಿತವಾಗಿರುವುದರಿಂದ, ಈ ಸಮಿತಿಯನ್ನು ಪುನರ್ ರಚಿಸಬೇಕಾಗಿದೆ. ಆದುದರಿಂದ, ಈ ಸಮಿತಿಯನ್ನು ಪುನರ್ ರಚಿಸಿ, ಸಮಿತಿಯ ಸಭೆ ಯನ್ನು ಕೂಡಲೇ ಕರೆಯುವ ಏರ್ಪಾಡು ಮಾಡಿ, ಸರ್ಕಾರಕ್ಕೆ ವರದಿ ಸಲ್ಲಿಸಲು ಕೋರಲಾಗುವುದು. ಸಮಿತಿಯುಸರ್ಕಾರಕ್ಕೆ ಸಲ್ಲಿಸುವ ವರದಿಯನ್ನು ಪರಿಶೀಲಿಸಿ, ಅರ್ಹವೆಂದು ಕಂಡು ಬಂದ ಜಾತಿಗಳನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳೆಂದು ಪರಿಗಣಿಸಲು ಕೇಂದ್ರ ಸರ್ಕಾರಕ್ಕೆಪ್ರಸ್ತಾವನೆ ಕಳುಹಿಸಿಕೊಡಲಾಗುವುದು.

8. ಗಂಗೊಳ್ಳಿ ಮೀನುಗಾರಿಕಾ ಸಹಕಾರಿ ಸಂಘದಿಂದ ಸೀಮೆ ಎಣ್ಣೆ ವಿತರಣೆಗೆ ಒತ್ತಾಯ

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಉಪಾಧ್ಯಕ್ಷಣೆಯವರೆ, ಜೀವದ ಹಂಗು ತೊರೆದು ಕಡಲಲ್ಲಿ ಮೀನು ಹಿಡಿಯುವ ಬಡ ಮೀನುಗಾರರು ಸಾಲಮಾಡಿ ನಾಡ ದೋಣಿ ಪಡೆದರು. ಬದುಕಿಗಾಗಿ ಕಷ್ಟಪಟ್ಟು ದುಡಿದರು. ನಾಡದೋಣಿಗಳಿಗೆ ಕಡಿಮೆ ದರದಲ್ಲಿ ಸೀಮೆಎಣ್ಣೆ ಸರ್ಕಾರ ಸಾಕಷ್ಟು ನೀಡುತ್ತಿತ್ತು. ಇದರಿಂದ ಬಡವರ ಕಸುಬಿಗೆ ಉಪಕಾರವಾಗುತ್ತಿತ್ತು. ನನ್ನ ಕ್ಷೇತ್ರದ ನೂರಿನ್ನೂರು ದೋಣಿಗಳಿಗೆ ವರ್ಷವಿಡೀ ಗಂಗೊಳ್ಳಿ ಮೀನುಗಾರಿಕಾ ಸಹಕಾರಿ ಸಂಘದಿಂದ ಸಾಕಷ್ಟು ಎಣ್ಣೆ ದೊರಕುತ್ತಿತ್ತು. ಈ ಸವಲತ್ತು ಇತ್ತೀಚೆಗೆ ರದ್ದು, ಇದರಿಂದಾಗಿ ಬಡ ಮೀನುಗಾರರ ಹೊಟ್ಟೆಗೇ ಗುದ್ದು, ಕಸುಬಿಗೇ ಕುತ್ತು, ಬದುಕಿಗೇ ಆಪತ್ತು, ಅದಕ್ಕಾಗಿ ನನ್ನ ಒತ್ತಾಯ ಈ ಹೊತ್ತು- ಮರಳಿ ಒದಗಿಸಲು ಸದರಿ ಸವಲತ್ತು.

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) : ಮಾನ್ಯ ಉಪಾಧ್ಯಕ್ಷಣೆಯವರೇ,

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಡದೋಣಿಗಳಿಂದ ಮೀನುಗಾರರ ಕಾರ್ಯಚಟುವಟಿಕೆಗಳು ವರ್ಷದಲ್ಲಿ ಆಗಸ್ಟ್ ತಿಂಗಳಿನಿಂದ ನವೆಂಬರ್ ತಿಂಗಳವರೆಗೆ ವ್ಯಾಪಕವಾಗಿ ನಡೆಯುತ್ತದೆ. ಡಿಸೆಂಬರ್ ತಿಂಗಳಿಂದ ಇವರ ಕಾರ್ಯ ಚಟುವಟಿಕೆಗಳು ಅಲ್ಪ ಪ್ರಮಾಣದಲ್ಲಿ ನಡೆಯುತ್ತವೆ. ಜಿಲ್ಲೆಗೆ ಆಗಸ್ಟ್ ತಿಂಗಳಿಂದ ನವೆಂಬರ್ 92 ಮಾಹೆಯವರೆಗೆ ಪ್ರತಿ ತಿಂಗಳೂ 160 ಕಿಲೋ ಲೀಟರ್ ಸೀಮೆ ಎಣ್ಣೆಯನ್ನು ಮೀನುಗಾರಿಕೆಗೆ ಬಿಡುಗಡೆ ಮಾಡಿದ್ದು ಇದರಲ್ಲಿ 48ಕಿಲೋ ಲೀಟರ್ ಸೀಮೆಎಣ್ಣೆಯನ್ನು ಗಂಗೊಳ್ಳಿ ಮೀನುಗಾರರ ಸಹಕಾರ ಸಂಘಕ್ಕೆ ಮೀನುಗಾರರ ನಾಡದೋಣಿಗಳಿಗೆ ಗೃಹ ಬಳಕೆ ದರದಲ್ಲಿ ಹಂಚಿಕೆ ಮಾಡಲು ನೀಡಿದೆ. ಡಿಸೆಂಬರ್ 92ರಿಂದ ಜಿಲ್ಲೆಗೆ 60ಕಿಲೋ ಲೀಟರ್ ಸೀಮೆಎಣ್ಣೆಯನ್ನು ಮೀನುಗಾರಿಕೆಗೆ ಹಂಚಿಕೆ ಮಾಡಿದ್ದು ಇದರಲ್ಲಿ 36ಕಿಲೋ ಲೀಟರ್ ಸೀಮೆಎಣ್ಣೆಯನ್ನು ಮೀನುಗಾರರ ನಾಡದೋಣಿಗೆ ಹಂಚಲು ಗಂಗೋಳ್ಳಿ ಮೀನುಗಾರರ ಸಹಕಾರ ಸಂಘಕ್ಕೆ ಹಂಚಿಕೆ ಮಾಡಿದೆ. ಡಿಸೆಂಬರ್ 92ರಿಂದ ಮೀನುಗಾರರ ಕಾರ್ಯ ಚಟುವಟಿಕೆಗಳು ಅಲ್ಪ ಪ್ರಮಾಣದಲ್ ನಡೆಯುವುದರಿಂದ ಕಡಿಮೆ ಪ್ರಮಾಣದ ಸೀಮೆಎಣ್ಣೆಯನ್ನು ಬಿಡುಗಡೆ ಮಾಡಲಾಗಿದೆ ವಿನಃ ಪೂರ್ತಿಯಾಗಿ ರದ್ದು ಮಾಡಿರುವುದಿಲ್ಲ.

9. ಶಹಾಪುರ ತಾಲ್ಲೂಕಿಗೆ ವಿದ್ಯುತ್ ಟ್ರಾನ್ಸ್‌ಫಾರ್ಮ್‌ಗಳ ಸರಬರಾಜಿಗೆ ಒತ್ತಾಯ

ಶ್ರೀ. ಶಿವಶೇಖರಗೌಡ ಶೀರ್ವಾಳ್ : ಮಾನ್ಯ ಉಪಾಧ್ಯಕ್ಷಣೆಯವರೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವವು ಕಳೆದ ಹಲವಾರು ತಿಂಗಳುಗಳಿಂದ ಗುಲ್ಬರ್ಗಾ ಜಿಲ್ಲೆಗೆ ಅದರಲ್ಲೂ ವಿಶೇಷವಾಗಿ ಶಹಾಪುರ ತಾಲ್ಲೂಕಿಗೆ ಟ್ರಾನ್ಸ್‌ಫಾರ್ಮರ್‌ಗಳನ್ನು ಸರಬರಾಜು ಮಾಡಿರುವುದಿಲ್ಲ. ಈಗ ಹೈದರಾಬಾದ್ ಕರ್ನಾಟಕ ಅ ಭಿವೃದ್ಧಿ ಮಂಡಲಿಯವರು ತಾಂಡಾಗಳಿಗೆ ರೈತರಿಗೆ ಹಾಗೂ ನೀರು ಸರಬರಾಜು ಘಟಕಗಳಿಗೆ ವಿದ್ಯುತ್ತೀಕರಣವನ್ನು ಮಂಜೂರ್ಮಾಡಿದ್ದಾಗ್ಯೂ ಟ್ರಾನ್ಸ್‌ಫಾರ್ಮರ್‌ಗಳಿಲ್ಲದಿರುವ ಕಾರಣದಿಂದಾಗಿ ಮಂಜೂರಾಗಿರವ ಕೆಲಸಗಳನ್ನುಕೈಗೊಳ್ಳಲಾಗುತ್ತಿಲ್ಲ. ಇದಲ್ಲದೆ ಈ ಜಿಲ್ಲೆಯಲ್ಲಿ ಎಲ್ಲಿಯಾದರೂ ಟ್ರಾನ್ಸ್‌ಫಾರ್ಮರುಗಳು ಸುಟ್ಟರೆ ವಿದ್ಯುಚ್ಛಕ್ತಿ ಸರಬರಾಜಿಲ್ಲದೆ ರೈತರಿಗೂ ತಾಂಡಾದವರಿಗೂ ಬಹಳ ತೊಂದರೆಯಾಗುತ್ತಿದೆ.

ಆದ್ದರಿಂದ ಸರ್ಕಾರದವರು ಕೂಡಲೇ ಟ್ರಾನ್ಸ್‌ಫಾರ್ಮರುಗಳನ್ನು ಗುಲ್ಬರ್ಗಾ ಜಿಲ್ಲೆಗೆ ಸರಬರಾಜು ಮಾಡುವಂತೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರಿಗೆ ಆದೇಶಿಸಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷಣಿಯವರೇ, ಪ್ರಸಕ್ತ (1992-93)ರ ಸಾಲಿನಲ್ಲಿ ಗುಲ್ಬರ್ಗ ಜಿಲ್ಲೆಯಲ್ಲಿ 80 ತಾಂಡಾಗಳನ್ನು ಮತ್ತು 2100 ನೀರಾವರಿ ಪಂಪುಸೆಟ್ಟುಗಳನ್ನು ವಿದ್ಯುದ್ದೀಕರರಿಸಲು ಗುರಿ ನಿಗದಿ ಪಡಿಸಿದ್ದು, ಡಿಸೆಂಬರ್ 92ರ ಅಂತ್ಯದವರೆಗೆ 39 ತಾಂಡಾಗಳನ್ನು ಮತ್ತು 1379 ನೀರಾವರಿ ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಿಸಲಾಗಿದೆ. ಈ ಜಿಲ್ಲೆಯ ಷಹಾಪುರ ತಾಲ್ಲೂಕಿನಲ್ಲಿ ಪ್ರಸಕ್ತ ಸಾಲಿನಲ್ಲಿ 10 ತಾಂಡಾಗಳನ್ನು ಮತ್ತು 75 ನೀರಾವರಿ ಪಂಪು ಸೆಟ್ಟುಗಳನ್ನು ವಿದ್ಯುದ್ದೀಕರಿಸಲು ಗುರಿ ನಿಗದಿ ಪಡಿಸಲಾಗಿದ್ದು ಡಿಸೆಂಬರ್ 92ರ ಅಂತ್ಯದವರೆಗೆ 3 ತಾಂಡಾಗಳನ್ನು ಮತ್ತು 54 ನೀರಾವರಿ ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಿಸಲಾಗಿದೆ. ಅಲ್ಲದೇ ಆರು ನೀರು ಸರಬರಾಜು ಘಟಕಗಳಿಗೆ ವಿದ್ಯುತ್ ಪೂರೈಕೆ ಮಾಡಿದೆ. ಪ್ರಸಕ್ತ ಸಾಲಿನ ಪ್ರಾರಂಭದ ತಿಂಗಳುಗಳಲ್ಲಿ ಸಾಮಗ್ರಿಗಳ ಸರಬರಾಜಿನಲ್ಲಿ ಉಂಟಾದ ಸ್ವಲ್ಪ ಮಟ್ಟಿನ ವಿಳಂಬದಿಂದಾಗಿ ವಿದ್ಯುದ್ದೀಕರಣ ಸಾಧನೆಯಲ್ಲಿ ಸ್ವಲ್ಪ ಮಟ್ಟಿಗೆ ಇಳಿಮುಖ ಉಂಟಾಗಿದ್ದು, ಅಗತ್ಯವಿರುವ ಸಾಮಗ್ರಿಗಳನ್ನು ಈಗ ಸರಬರಾಜು ಮಾಡಲಾಗುತ್ತಿದ್ದು, ವಿದ್ಯುದ್ದೀಕರಣ ಸಾಧನೆಯಲ್ಲಿ ಸ್ವಲ್ಪ ಮಟ್ಟಿಗೆ ಇಳಿಮುಖ ಉಂಟಾಗಿದ್ದು, ಅಗತ್ಯವಿರುವ ಸಾಮಗ್ರಿಗಳನ್ನು ಈಗ ಸರಬರಾಜು ಮಾಡಲಾಗುತ್ತಿದ್ದು, ವಿದ್ಯುದ್ದೀಕರಣದ ಕಾರ್ಯವನ್ನು ಚುರುಕುಗೊಳಿಸಲಾಗುತ್ತಿದೆ. ಮತ್ತು ಈ ಜಿಲ್ಲೆಗೆ ಮತ್ತುಷಹಾಪುರ ತಾಲ್ಲೂಕಿಗೆ ನಿಗದಿ ಪಡಿಸಿರುವ ವಾರ್ಷಿಕ ಗುರಿಯನ್ನು ಸಾಧಿಸಲು ಮಂಡಳಿಯು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಹೈದರಾಬಾದ್ -ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ತಾಂಡಾಗಳ ಹರರಿಜನ ಬಸ್ತಿಗಳ ವಿದ್ಯುದ್ದೀಕರಣಕ್ಕೆ ನಿಗದಿ ಪಡಿಸಿರುವ ಗುರಿಯನ್ನು ಸಾಧಿಸಲು ಕ್ರಮ ಕೈಗೊಂಡಿದ್ದು, ಮಾರ್ಚ್ 93ರ ಅಂತ್ಯಕ್ಕೆ ನಿಗದಿ ಪಡಿಸಿರುವ ಗುರಿಯನ್ನು ಸಾಧಿಸಿ ತೀವ್ರ ಕ್ರಮಕೈಗೊಳ್ಳುತ್ತಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ 31.10.1992ರ ಅಂತ್ಯದವರೆಗೆ ವಿವಿಧ ಸಾಮರ್ಥ್ಯದ 3832 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳಿದ್ದುವು. ಪ್ರಸಕ್ತ ಸಾಲಿನಲ್ಲಿ ಡಿಸೆಂಬರ್ 92ರ ಅಂತ್ಯದವರೆಗೆ ಒಟ್ಟು 264ವಿವಿಧ ಸಾಮರ್ಥ್ಯದ ಹೊಸ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಗುಲ್ಬರ್ಗಾ ಜಿಲ್ಲೆಗೆ ಸರಬರಾಜು ಮಾಡಲಾಗಿದೆ.

ಅಲ್ಲದೆ ಈ ಜಿಲ್ಲೆಯಲ್ಲಿ ವಿಫಲಗೊಂಡಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಈ ಜಿಲ್ಲೆಯಲ್ಲಿ 1.4.1992ರಿಂದ 31.10.1992ರ ಅವಧಿಯಲ್ಲಿ ಸುಮಾರು 600 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಗುಲ್ಬರ್ಗಾದಲ್ಲೇ ಎರಡು ಏಜನ್ಸಿಗಳ ಮೂಲಕ ದುರಸ್ತಿಗೊಳಿಸಲು ಕ್ರಮ ಕೈಗೊಂಡಿದ್ದು, ಟ್ರಾನ್ಸ್‌ಫಾರ್ಮರ್ ಎಣ್ಣೆಯ ಪೂರೈಕೆಯಲ್ಲಿ ಸ್ವಲ್ಪ ವಿಳಂಬ ಉಂಟಾದುದುರಿಂದ ದುರಸ್ತಿ ಕಾರ್ಯವು ಸ್ವಲ್ಪ ಮಟ್ಟಿಗೆ ಸ್ಥಗಿತಗೊಂಡಿತ್ತು. ಈಗ ಟ್ರಾನ್ಸ್‌ಫಾರ್ಮರ್ ಎಣ್ಣೆಯನ್ನು ಸರಬರಾಜು ಮಾಡಲು ಕ್ರಮ ಕೈಗೊಂಡಿದ್ದು, ದುರಸ್ತಿ ಕಾರ್ಯಗಳನ್ನು ಚುರುಕುಗೊಳಿಸಿ, ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಒದಗಿಸಲಾಗುತ್ತಿದೆ. ವಿತರಣಾ ಟ್ರಾನ್ಸ್ ಫಾರ್ಮರ್‌ಗಳ ದುರ್ಸಿತಗೆ ಬೇಕಾಗಿರುವ ಹಣವನ್ನೂ ಸಹಾ ಬಿಡುಗಡೆ ಮಾಡಲಾಗುತ್ತಿದೆ. ಈ ಜಿಲ್ಲೆಗೆ ತಾಂಡಾ ಮತ್ತು ನೀರಾವವಿ ಪಂಪುಸೆಟ್ಟುಗಳ ವಿದ್ಯುದ್ದೀಕರಣಕ್ಕಾಗಿ ಬೇಕಾಗುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು,

ವಿದ್ಯುತ್ ತಂತಿಗಳು ಇತ್ಯಾದಿ ಸಾಮಗ್ರಿಗಳನ್ನು ಸರಬರಾಜು ಮಾಡಲಾಗುತ್ತಿದೆ ಮತ್ತು ವಿಫಲವಾಗಿರುವ ವಿತರಣಾ ಟ್ರಾನ್ಸ್‌ಫಾರ್ಮರ್ ಗಳನ್ನು ಉತ್ತಮ ಗುಣ ಮಟ್ಟದ ಟ್ರಾನ್ಸ್‌ಫಾರ್ಮರ್ ಗಳ ಮೂಲಕ ಬದಲಾಯಿಸಲು ತೀವ್ರ ಕ್ರಮ ಕೈಗೊಳ್ಳಲಾಗುತ್ತಿದೆ.

+ ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ): ನಾನು ಐದು ನಿಮಿಷ ಮಾತನಾಡುತ್ತೇನೆ. ಆಮೇಲೆ ಶ್ರೀ ಏಕಾಂತಯ್ಯನವರು ಮತ್ತು ಜಾಲಪ್ಪನವರು ಮಾತನಾಡುತ್ತಾರೆ. ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನ ಎರಡನೇ ಇನ್‌ಸ್ಟಾಲ್‌ಮೆಂಟ್ ಇವತ್ತು ಸದನದ ಮುಂದೆ ಚರ್ಚೆಗೆ ಬಂದಿದೆ. ಕಳೆದ ವರ್ಷ ಬಜೆಟ್ ಪ್ರೆಸೆಂಟ್ ಆದನಂತರ ಮೂರು ತಿಂಗಳ ಒಳಗಾಗಿ ಫಸ್ಟ್ ಇನ್‌ಸ್ಟಾಲ್‌ಮೆಂಟ್‌ನ್ನು ತಾವು ಪ್ರೆಸಂಟ್ ಮಾಡಿ ಮಾನ್ಯತೆ ತಗೆದುಕೊಂಡಿರಿ. ಈಗ ಇದು ಎರಡನೇಯದ್ದು ಬಂದಿದೆ ಮತ್ತು ತಾವು ಫೆಬ್ರವರಿ 22ರಂದು ಬಜೆಟ್ ಮಂಡನೆ ಮಾಡುತ್ತೇನೆ ಎಂದು ಹೇಳಿದ್ದೀರಿ. ಅದಕ್ಕೆ ಮುಂಚೆ ಮತ್ತೊಂದು ಮೂರನೇ ಇನ್‌ಸ್ಟಾಲ್‌ಮೆಂಟ್ ಬರುವುದರಲ್ಲಿ ಯಾವುದೇ ಸಂದೇಹ ಇಲ್ಲವೆಂದು ನಾನು ಹೇಳುತ್ತೇನೆ. ಇದು ಸರಿ ಏನು ಎಂದು ಸರ್ಕಾರ ಇವತ್ತು ವಿಚಾರ ಮಾಡಬೇಕಾಗುತ್ತದೆ. ಮೊನ್ನೆ ತಾವು ಹೇಳಿದ್ದೀರಿ. ನಾನು ಮುಖ್ಯಮಂತ್ರಿಯಾದಾಗ 100 ಕೋಟಿ ರೂಪಾಯಿ ಬಿಲ್ ಪೇಯಮೆಂಟ್ಸ್ ಇದ್ದವು ಎಂದು. ಹಣ ಇದ್ದಿಲ್ಲವೆಂದು ಹೇಳಿದ್ದೀರಿ. ಇದರಿಂಧ ಏನು ಸ್ಪಷ್ಟವಾಗುತ್ತದೆ? ನೀವು ಸರಿಯಾದ ಫೈನಾನ್ಶಿಯಲ್ ಡಿಸಿಪ್ಲೀನ್ ಇಟ್ಟುಕೊಂಡಿಲ್ಲ. ಅದೇ ಪ್ರಕಾರ ನಿಮ್ಮ ಬಜೆಟ್‌ನಲ್ಲಿ ಎಕ್ಸರ್‌ಸೈಸಸ್ ಸರಿಯಾಗುವುದಿಲ್ಲ. ಸರಿಯಾದ ಬಜೆಟ್ ಎಕ್ಸ್‌ರ್‌ಸೈಸ್ ಅದರ ಈ ಪ್ರಕಾರವಾದ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಬರುವುದಕ್ಕೆ ಸಾಧ್ಯ ಇಲ್ಲ. ಈ ಒಂದು ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನಲ್ಲಿ 85 ಪರ್ಸೆಂಟ್ ಹಣ ಏನಿದೆ, ಅದು ರೆವಿನ್ಯೂ ಎಕ್ಸ್‌ಪೆಂಡಿಚರ್. ಇನ್ನು ಕೇವಲ 15 ಪರ್ಸೆಂಟ್ expenditure is on capital expenditure and on loans- ಇದು ಸರಿಯೇನು? ರೆವಿನ್ಯೂ ಎಕ್ಸ್‌ಪೆಂಡಿಚರ್ ಎಂದರೆ ತಮಗೆ ಗೊತ್ತು salaries, TA, DA,s Contingencies..

ಒಂದು ಕಡೆ ತಾವೇ ಹೇಳಿದ್ದೀರಿ ಏನೆಂದರೆ ರೆವಿನ್ಯೂ ಎಕ್ಸ್‌ಪೆಂಡಿಂಚರ್ ಕಡಿಮೆ ಮಾಡುತ್ತೇವೆ ಎಂದು. ಇನ್‌ಫ್ರಾಸ್ಟ್ರಕ್ಚರ್ ಸಲುವಾಗಿ ಹೆಚ್ಚಿಗೆ ಹಣ ಕೊಡುತ್ತೇವೆ ಎಂದು ಹೇಳಿದ್ದೀರಿ. Power projects, irrigationಗೆ ನಾವು ಹೆಚ್ಚಿಗೆ ಕೊಡುತ್ತೇವೆ, ಎಂದು, ಹಾಗಾದರೆ 85 ಪರ್ಸೆಂಟ್ ಹಣ ರೆವಿನ್ಯೂ ಎಕ್ಸ್‌ಪೆಂಡಿಚರ್ ಮಾಡುವುದಕ್ಕೆ ಕಾರಣ ಏನು?

ಇದರಲ್ಲಿ ತಾವು 15 ಕೋಟಿ ರೂಪಾಯಿ ಈ ನೆರೆಹಾವಳಿ ಪರಿಹಾರ ಮತ್ತು ಸ್ವಲ್ಪ ಹಣ ಅಯೋಧ್ಯೆಗಾಗಿ ಇಟ್ಟೆರಿ. It is unforseen ಆಯಿತು. ಬಾಕಿ ಎಲ್ಲ ಎಕ್ಸ್‌ಪೆಂಡಿಚರ್ was forseen- What was the difficulty for you to provide all these monies in the budget? This shows that proper bugetary exercises are not being done..

ಸರಿಯಾದ requlation of expenditure ಆಗುತ್ತಾ ಇಲ್ಲ, ಹಾಗಾಗಿ, ಇದೇ ಪ್ರಕಾರವಾಗಿ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಕೊಡುತ್ತಾ ಹೋದರೆ, ಅದನ್ನು ಮಂಜೂರ್ಮಾಡಬೇಕೇ ಬೇಡವೇ ಎಂದು ಸದನ ವಿಚಾರ ಮಾಡಬೇಕಾಗುತ್ತದೆ.

ಇದರಲ್ಲಿ 3 ಕೋಟಿ ರೂಪಾಯಿ ಸಾಲ ಕೊಟ್ಟಿದ್ದೀರಿ. ಯಾರಿಗೆ ಕೊಟ್ಟಿದ್ದೀರಿ. ಶಿವಮೊಗ್ಗ-ಭದ್ರಾವತಿ ಕಾರ್ಪೊರೇಷನ್‌ಗೆ ಕೊಟ್ಟಿದ್ದೀರಿ. ಅಲ್ಲಿಗೆ ಕೊಡುವಂಥ ಅವಶ್ಯಕತೆ ಏನಿತ್ತು? ನಿಮ್ಮ ಕಡೆ ಹಣ ಇಲ್ಲವೆಂದು ಹೇಳುತ್ತೀರಿ. You have given out of contingency. ways and means position. ಸರಿ ಇಲ್ಲ. hand to mouth to run the Government ಟ್ರೆಜರಿಗೆ ಬ್ಯಾನ್ ಹಾಕಿದಿರಿ. ಆದರೂ ಇಲ್ಲಿ 3 ಕೋಟಿ ಕೊಡುತ್ತಿದ್ದೀರಿ. ಏಕೆಂದರೆ, ಮುಂಚೆ ಇದ್ದ ಮುಖ್ಯಮಂತ್ರಿಯವರು ಶಿವಮೊಗ್ಗದವರು ಎಂದೇ because of that he wanted to give 3 crores...

ಬೆಂಗಳೂರು ಸಿಟಿ ಕಾರ್ಪೊರೇಷನ್‌ನಲ್ಲಿಯೂ ಸಾಕಷ್ಟು ಸಮಸ್ಯೆಗಳು ಇವೆ. ಹಾಗಾದರೆ, ಬೆಂಗಳೂರು ಸಿಟಿ ಕಾರ್ಪೋರೇಷನ್‌ಗೆ ಏಕೆ ಹಣ ಕೊಟ್ಟಿಲ್ಲ? ಅದೇರೀತಿ ಬೆಳಗಾಂನಲ್ಲಿ ಸಮಸ್ಯೆ ಇದೆ, ಗುಲ್ಬರ್ಗಾದಲ್ಲೂ ಇದೆ. What is the rationale, logic? ನಿಮ್ಮ ಲಾಜಿಕ್ ಏನು? ಇಂತಹ ಪರಿಸ್ಥಿತಿ ಇರುವಾಗ, ತಾವು ಯಾವ ರೀತಿ ಕೊಟ್ಟಿದ್ದೀರಿ ಎಂಬುದಕ್ಕೆ ನಮಗೆ ಸ್ಪಷ್ಟೀಕರಣ ಕೊಡಬೇಕು. ಸಾದಿಲ್ವಾರು ಫಂಡಿನಿಂದ ಹಣ ತೆಗೆದುಕೊಳ್ಳತಕ್ಕ ಅವಶ್ಯಕತೆ ಏನಿತ್ತು. ಮಾನ್ಯ ಸಭಾನಾಯಕರು ಇದರ ಸ್ಪಷ್ಟೀಕರಣ ಮಾಡಬೇಕಾಗುತ್ತದೆ.ಅದೇ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರಿ ಸಕ್ಕರೆ ಕಾರ್ಖಾನೆ, it is a sinking ship... ಅಲ್ಲಿ ಕಬ್ಬು ಇಲ್ಲ, ಷುಗರ್ ಕೇಸ್ ಇಲ್ಲ. ನಮ್ಮ ಕಡೆ ಷುಗರ್ ಕೇನ್ ಟ್ರಾಕ್ಟರುಗಳಲ್ಲಿ ಹೋಗುತ್ತದೆ. ಟ್ರಕ್‌ಗಳಲ್ಲಿ ಹೋಗುತ್ತವೆ. ಲಾರಿಗಳಲ್ಲಿ ಹೋಗುತ್ತವೆ. ಬ್ರಹ್ಮಾವರದಲ್ಲಿ ಷುಗರ್ ಕೇನ್ ಗಾಡಿಗಳಲ್ಲಿ ಬರುವುದಿಲ್ಲ. It is also a sinking ship. 88 lakhs you have given loan... ಇದು ಏನು, ಯಾರ ಹಣ? Whims and fancies... ಪ್ರಕಾರ ಹಣ ಕೊಡುತ್ತೀರೋ ಅಥವಾ ಏನಾದರೂ ಡಿಸಿಪ್ಲೀನ್ ಇದೆಯೋ if you are spending this way we cannot permit you; we have to oppose this. What was the necessity.. ಏನು ನಿಮಗೆ ಗ್ಯಾರಂಟಿ ಇದೆ. 85 ಲಕ್ಷ ಕೊಟ್ಟ ನಂತರ, can you give a categorical assurance..ತಾವು ಭರವಸೆ ಕೊಡಿ. 85 ಲಕ್ಷ ಕೊಟ್ಟರೆ ಷುಗರ್ ಫ್ಯಾಕ್ಟರಿ ಸರಿಯಾಗಿ ನಡೆಯುತ್ತದೆಯೇ? ರೈತರ ಹಿತದೃಷ್ಟಿಯಿಂದ ಕೊಟ್ಟಿದ್ದೀರಿ, ಆದರೆ, ಇದರಿಂದ ರೈತರಿಗೆ ಅನುಕೂಲವಾಗುತ್ತದೆಯೇ?

ಪೇಮೆಂಟ್ ಸರಿಯಾಗಿ ಆಗುತ್ತದೆಯೇ? ಅದೇ ಪ್ರಕಾರವಾಗಿ ಮಿನರ್ವ ಮಿಲ್ಲಿಗೆ ನಿಮ್ಮ ಬ್ಯಾಂಕ್ ಗ್ಯಾರಂಟಿ ಇತ್ತು. ಸರ್ಕಾರ ನೂರಾರು ಬ್ಯಾಂಕ್ ಗ್ಯಾರಂಟಿ ಕೊಡುತ್ತದೆ. ಏಕೆ, properties, loans ಮಾಡುವುದಕ್ಕೆ ಬ್ಯಾಂಕ್ ಗ್ಯಾರಂಟಿ ಕೊಟ್ಟರಿ, ಏನು ಅವಶ್ಯಕತೆ ಇತ್ತು, ಮಿನರ್ವ್ ಮಿಲ್ ಸಿಕ್ ಇದ್ದರೆ, ಅವರ ಪ್ರಾಪರ್ಟಿ ಇದೆ, ಅವರ ಲ್ಯಾಂಡ್ ಇದೆ. ಅವರಿಗೆ ಹೇಳಬೇಕಾಗಿತ್ತು, ನೀವು ಲ್ಯಾಂಡ್ ಮಾರಾಟ ಮಾಡಿ ಹಣ ತುಂಬಿ ಎಂದು ಹೇಳಬೇಕಾಗಿತ್ತು. Why do you become a party to their liabilities...

ಮಿನರ್ವ ಮಿಲ್ಲಿಗೆ ತಾವು ಟ್ರೀಟ್‌ಮೆಂಟ್ ಕೊಟ್ಟರಲ್ಲ, ಅದೇ ಟ್ರೀಟ್‌ಮೆಂಟ್ ಎಲ್ಲಾ ಮಿಲ್ಲುಗಳಿಗೂ ಕೊಟ್ಟಿದ್ದೀರಾ? ಎಲ್ಲೆಲ್ಲಿ ಬ್ಯಾಂಕ್ ಗ್ಯಾರಂಟಿ ಕೊಟ್ಟಿದ್ದೀರಿ, ಅಲ್ಲೆಲ್ಲಾ ಕೊಟ್ಟಿದ್ದೀರಾ? ಇವತ್ತು ನಮಗೆ ಸ್ಪಷ್ಟೀಕರಣ ಬೇಕಾಗಿದೆ. There was no necessity to give money to the Minerva Mills... ಬ್ಯಾಂಕ್ ಗ್ಯಾರಂಟಿ ಇದ್ದರೂ ಸಹ ಅವಶ್ಯಕತೆ ಇರಲಿಲ್ಲ. ನಾನು ಏನನ್ನು ಕೇಳುತ್ತಿದ್ದೇನೆಂದರೆ, ಬ್ಯಾಂಕ್

ಗ್ಯಾರಂಟಿ ಸರ್ಕಾರ ಕೊಡಬೇಕಾಗುತ್ತದೆ. ಆದರೆ ಒಂದು ಕಡೆ ಈ ಪ್ರಕಾರ ಬ್ಯಾಂಕ್ ಗ್ಯಾರಂಟಿ, there will be not limit.. ಕೊಡುವುದಕ್ಕೆ ಶುರುವಾದರೆ, ಇದಕ್ಕೆ ಲಿಮಿಟ್ಟೇ ಇಲ್ಲ, then you will have a policy on this issue..

ನಿಮ್ಮ ಸರ್ಕಾರದ ನೀತಿ ಏನು, ಯಾವ ರೀತಿ ಬ್ಯಾಂಕ್ ಗ್ಯಾರಂಟಿ ಎನ್‌ಕ್ಯಾಷ್ ಮಾಡುವುದಕ್ಕೆ ಕೊಡುತ್ತೀರಿ. ನೀವು ಮಿನರ್ವ ಮಿಲ್‌ಗೆ ಕೊಡಿ ಅಥವಾ ಬೇರೆ ಕಡೆ ಕೊಡಿ. ಅದಕ್ಕೆ ಪ್ರಾಪರ್ಟಿ ಇದೆ. ಅಥವಾ ಅಸೆಟ್ಸ್ ಇದೆ. You should attach their properties, you should tell them to sell their properties. why should you give this money? ಅದೇ ಪ್ರಕಾರ ನಿಮ್ಮ ಪಬ್ಲಿಕ್ ಸೆಕ್ಟಾರ್ ಅಂಡರ್ ಟೇಕಿಂಗ್ಸ್, ಮೈಸೂರು ಮಿನರಲ್ಸ್‌ಗೆ ಮೈಸೂರು ಎಲೆಕ್ಟ್ರಿಕಲ್ ಕಂಪನಿಗೆ ಹಣ ಕೊಟ್ಟಿದ್ದೀರಿ. ಏನು ಅವಶ್ಯಕತೆ ಇತ್ತು. ಒಂದು ಕಡೆ ಹೇಳುತ್ತೀರಿ, ಪಬ್ಲಿಕ್ ಅಂಡರ್ ಟೇಂಕಿಂಗ್ಸ್, viable ಆಗಬೇಕು,ಅವರ ಕಾಲ ಮೇಲೆ ನಿಲ್ಲಬೇಕೆಂದು ಹೇಳುತ್ತೀರಿ. ಇನ್ನೊಂದು ಕಡೆ, you are giving money for what? ಇದರಿಂದ ಏನು ಸ್ಪಷ್ಟ ಕಾಣುತ್ತದೆ ಎಂದರೆ, ನಿಮ್ಮ ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ ಸರಿಯಲ್ಲ, ನಿಮ್ಮ ಸರ್ಕಾರದಲ್ಲಿ ಸರಿಯಾದ, ಸ್ಪಷ್ಟವಾದ ಆರ್ಥಿಕ ನೀತಿ ಇಲ್ಲ. ಹಾಗಾಗಿ, ಇಂತಹ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಬರುತ್ತಿದೆ. ನಿಮ್ಮ

ಸರ್ಕಾರದಲ್ಲಿ ಸ್ಪಷ್ಟಾವಾದ ನೀತಿ ಇದ್ದರೆ, ಈ ರೀತಿಯ ಎಸ್ಟಿಮೇಟ್ಸ್ ಬರುತ್ತಿರಲಿಲ್ಲ. ಇವತ್ತು ರಿಸೋರ್ಸಸ್ ಕಷ್ಟ ಇದೆ ನನಗೆ ಗೊತ್ತು, ರಿಸೋರ್ಸಸ್ ಇಷ್ಟು ಕಷ್ಟ ಇದ್ದಾಗ, ways and means position ಸಹ ಸರಿ ಇಲ್ಲ. ಇಂತಹ ಸಂದರ್ಭದಲ್ಲಿ ಯಾವ ಪ್ರಕಾರ ಹಣಕಾಸಿನ ಡಿಸಿಪ್ಲೀನ್ ಇಟ್ಟುಕೊಳ್ಳಬೇಕು. ಯಾವ ಪ್ರಕಾರ ಹಣ ಖರ್ಚು ಮಾಡಬೇಕು ಎಂಬುದನ್ನು ನೋಡಬೇಕಾಗುತ್ತದೆ. ಮತ್ತು ನೀವು ಯಾವುದಕ್ಕೆ ಪ್ರಿಯಾರಿಟಿ ಕೊಡಬೇಕೋ ಅಲ್ಲಿಗೆ ಕೊಡುವುದಿಲ್ಲ, 85% is being spent on salaries, TA and DA and other contingency.

There is infrastructure development. There is no capital expenditure. Is it not so? Out of Rs. 136 crores, I think about Rs 12.65 crores is the capital expenditure and Rs 4.65 crores is the loan. Is this right.

ಇದೇ ಪ್ರಕಾರ ಅಲಿಟ್ಯೂಡ್ ಇಟ್ಟುಕೊಂಡು ಇದೇ ಪ್ರಕಾರ ಎಕ್ಸ್‌ಪೆಂಡಿಚರ್ ಮಾಡುತ್ತಾ ಹೋದರೆ ಫೈನಾನ್ಷಿಯಲ್ ಡಿಸಿಪ್ಲೀನ್ ಹೋಗಿಬಿಟ್ಟಿದೆ. ಸರಕಾರ ಸಂಪೂರ್ಣವಾಗಿ ದಿವಾಳಿ ತೆಗೆಯುವ ಹಂತದಲ್ಲಿದೆ ಎಂದು ನಾನು ಹೇಳಬೇಕಾಗುತ್ತದೆ. ಹೀಗಾಗ ಇದಕ್ಕೆ ನಮ್ಮ ವಿರೋಧ ಇದೆ. ಈ ತರಹ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ತಮ್ಮ ವಿಮ್ಸ್ ಅಂಡ್ ಫ್ಯಾನ್ಸೀಸ್ ಪ್ರಕಾರ ತರಬರಾದು. ಬಜೆಟರಿ ಎಕ್ಸರ್‌ಸೈಸ್ ಮಾಡುತ್ತೀರಲ್ಲ, ಆಗ ಸರಿಯಾದ ಅಲೋಕೇಷನ್ಸ್ ಮಾಡಬೇಕಾಗುತ್ತದೆ. ಸರಿಯಾಗಿ ಫೋರ್ ಸೈಟ್ ಇಟ್ಟುಕೊಂಡು ಮಾಡಬೇಕಾಗುತ್ತದೆ. ಅಯೋಧ್ಯ ಬಗ್ಗೆ ಹೇಳಿದ್ದೀರಿ. ಅದು ಅನ್‌ಫೋರ್‌ಸೀನ್ ಇದೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಅಲ್ಲೂ ಪ್ರಾವಿಜನ್ 15 ಕೋಟಿ ಮಾತ್ರ ಮಾಡಿದ್ದೀರಿ. ಇದರಿಂದ ಏನು ಮಾಡುವುದಕ್ಕೆ ಬರುತ್ತದೆ. ಇವತ್ತು ಜನರಿಗೆ ಏನು ಕಷ್ಟ ಆಗಿದೆ, ನೆರೆಹಾವಳಿಯಿಂದ ಏನಾಗಿದೆ, ಅದು ಅನ್‌ಪ್ರಿಸಿಡೆಂಟೆಡ್ ಈ ರೀತಿ ಇತಿಹಾಸದಲ್ಲಿ ಆಗಿಲ್ಲ, ಇಂತಹ

ಅನ್‌ಪ್ರಿಸಿಡೆಂಟೆಡ್ ನೆರೆಹಾವಳಿ ಆಗಿಲ್ಲ. ಲಕ್ಷಾವಧಿ ರೈತರು ಕಷ್ಟದಲ್ಲಿದ್ದಾರೆ. ಲಕ್ಷಾವಧಿ ಮನೆಗಳು ಬಿದ್ದು ಹೋಗಿವೆ. ಡ್ಯಾಮೇಜ್ ಆಗಿದೆ, 15 ಕೋಟಿ ರೂಪಾಯಿಗಳಲ್ಲಿ ಏನು ಮಾಡುವುದಕ್ಕೆ ಸಾಧ್ಯ ಇದೆ? ನಾನು ನಿಮಗೆ ಸಜೆಷನ್ ಕೊಡುತ್ತೇನೆ. You should have approached the World bank.

ಯಾವ ರೀತಿಯಾಗಿ ಆಂಧ್ರಪ್ರದೇಶದಲ್ಲಿ 1990ರಲ್ಲಿ ಸೈಕ್ಲೋನ್ ಆಯಿತು ಅದಕ್ಕೆ ಸ್ಟೇಟ್ ಗೌರ್ನಮೆಂಟ್ ಏನೂ ಮಾಡುವುದಕ್ಕೆ ಆಗಲಿಲ್ಲ, ಇವತ್ತು ನಾವು ಅಲ್ಲಿದ್ದರೂ ಸಹ It should have been difficult for us to tackle such a situation because State Governments have limited resources.

ಸೆಂಟ್ರಲ್ ಗೌರ್ನಮೆಂಟ್‌ನಿಂದ ಏನೂ ಬರುವುದಿಲ್ಲ ಸ್ಪೆಷಲ್ ಅಸಿಸ್ಟೆನ್ಸ್‌ನಲ್ಲಿ ದುಡ್ಡು ಬಂದಿಲ್ಲ, therefore, best course for you is to approach the World Bank. The Andhrapradesh Government did it in the year 1990. They did create infrastructural facilities like raods and bridges.

15 ಕೋಟಿ ರೂಪಾಯಿನ್ನಲ್ಲಿ ಏನೂ ಮಾಡುವುದಕ್ಕೆ ಸಾಧ್ಯ ಇಲ್ಲ. ಯಾರಿಗೂ ಪರಿಹಾರ ಕೊಡುವುದಕ್ಕೆ ಸಾಧ್ಯ ಆಗುವುದಿಲ್ಲ. ಹಾಗಾಗಿ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಏನು ಇದೆ. ಸರಿಯಾಗಿ ವಿಚಾರ ಮಾಡಿ ನೀವು ಇದನ್ನು ಮಂಡಿಸಿರುವುದಿಲ್ಲ. ಇದಕ್ಕೆ ನನ್ನ ವಿರೋಧ ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಲಂಚ್ ಬ್ರೇಕ್‌ಗೆ ಅಡೆಜರ್ನ್ ಮಾಡಿ ಪುನಃ ಮೂರು ಗಂಟೆಗೆ ಸೇರೋಣ

ಸದನವು ಮಧ್ಯಾಹ್ನ 2 ಗಂಟೆ 2 ನಿಮಿಷಕ್ಕೆ ಅಡ್‌ಜರ್ನ್ ಆಗಿ ಪುನಃ 3Ë00 ಗಂಟೆಗೆ ಸೇರಲು ತೀರ್ಮಾನಿಸಿತು.

(ಸದನವು ಪುನಃ 3.15ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರಾದ ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

+ಶ್ರೀ ಹೆಚ್. ಏಕಾಂತಯ್ಯ : (ಚಿತ್ರದುರ್ಗ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಅರ್ಥ ಸಚಿವರು ಈ ಸಭೆಯ ಅನುಮೋದನೆಗಾಗಿ ಮಂಡಿಸುವ ಪೂರಕ ಅಂದಾಜುಗಳ ಎರಡನೆಯ ಕಂತಿನ ವರದಿಯ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ತಮಗೆ ಗೊತ್ತಿರುವ ಹಾಗೆ ನಮ್ಮ ಅಯವ್ಯಯದಲ್ಲಿ ಸುಮಾರು 8151 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿಕ್ಕೆ ಈ ಸದನ ಈಗಾಗಲೇ ಮಂಜೂರಾತಿಯನ್ನು ಕೊಟ್ಟಿದೆ. ತದನಂತರ 1992ನೇ ಇಸವಿ ಜುಲೈನಲ್ಲಿ ಮೊದಲನೇ ಕಂತಿನ ಪೂರಕ ಅಂದಾಜುಗಳ ಬಾಬತ್ತು ಸುಮಾರು 117 ಕೋಟಿ ರೂಪಾಯಿಗಳನ್ನು ನಾವು ಮಂಜೂರು ಮಾಡಿ ಕೊಟ್ಟಿದ್ದೇವೆ. ಅದು ಸುಮಾರು 20 ಬೇಡಿಕೆಗಳಿಗೆ ಸಂಬಂಧಪಟ್ಟಿದ್ದು ಆಗಿರುತ್ತದೆ. ಪುನಃ ಇಂದು 131 ಕೋಟಿ ರೂಪಯಿಗಳ ಪೂರಕ ಅಂದಾಜುಗಳ ಪಟ್ಟಿ ಇದೆ. ಅದು 26ಬೇಡಿಕೆ ಬಾಬ್ತು ಈ ಸದನದ ಪರಿಶೀಲನೆಗಾಗಿ ಮಾನ್ಯ ಮುಖ್ಯಮಂತ್ರಿಗಳೂ ಅರ್ಥ ಸಚಿವರು ಸಭೆಯ ಮುಂದಿಟ್ಟಿದ್ದಾರೆ. ಈ ವಿಚಾರವನ್ನು ಪ್ರಸ್ತಾಪ

ಮಾಡುವುದಕ್ಕೆ ಮೊದಲು ಈ ಹಣವನ್ನು ಅವರು ಸಾಧಿಲ್ವಾರು ನಿಧಿಯಿಂದ ಪಡೆದಿದ್ದಾರೆ ಅದಕ್ಕೊಂದು ಅನುಬಂಧವನ್ನು ಸಹ ಕೊಟ್ಟಿದ್ದಾರೆ. 1957ನೇ ಇಸವಿಯಲ್ಲಿ ನಾಲ್ಕು ಕೋಟಿ ಇದ್ದಂತಹ ಈ ಸಾದಿಲ್ವಾರು ನಿಧಿ 1985ರಲ್ಲಿ 80 ಕೋಟಿಗೆ ಏರಿತು. ಈ ಸಾದಿಲ್ವಾರು ನಿಧಿಯನ್ನು ನಾವು ಸಂವಿಧಾನದ ವಿಧಿ 267(2) ಉಪಕರಣದ ಪ್ರಕಾರ ಸ್ಥಾಪನೆ ಮಾಡಿಕೊಂಡಿದ್ದೇವೆ. ಇದರ ಮುಖ್ಯವಾದ ಉದ್ದೇಶವೇನೆಂದರೆ ಅನ್‌ಫೋರ್ಸೀನ್ ಎಕ್ಸ್‌ಪೆಂಡಿಚರ್, ನಮಗೆ ನಿರೀಕ್ಷೆ ಮಾಡದಂತಹ ಖರ್ಚಿಗೋಸ್ಕರ ಹಣ ಬೇಕಾದಾಗ ಅಂತಹ ಸಾಧಿಲ್ವಾರು ನಿಧಿಯಿಂದ ಹಣವನ್ನು ನಾವು ಉಪಯೋಗಿಸಿಕೊಳ್ಳಬೇಕಾಗಿದೆ. ಅನಿರೀಕ್ಷಿತವಾದ ಖರ್ಚುಗಳನ್ನು ನಮ್ಮ ಸರ್ಕಾರ ಮಾಡಬೇಕಾದರೆ ಈ ನಿಧಿಯಿಂದ ಪಡೆಯಬಹುದಾಗಿದೆ.

(ಶ್ರೀ ಡಿ.ಎ. ಚಿನ್ನಪ್ಪನವರು ಅಧ್ಯಕ್ಷ ಪೀಠದಲ್ಲಿದ್ದರು)

ಸಾಧಿಲ್ವಾರು ನಿಧಿ 80 ಕೋಟಿ ಇದ್ದದನ್ನು 200 ಕೋಟಿ ರೂಪಾಯಿಗಳಿಗೆ 1991ನೇ ಇಸವಿಯಲ್ಲಿ ಒಂದು ಸುಗ್ರೀವಾಜ್ಞೆಯ ಮುಖಾಂತರ ಹೆಚ್ಚಳ ಮಾಡಿಕೊಂಡಿತು. ತದನಂತರ ಅದನ್ನು 500 ಕೋಟಿ ರೂಪಾಯಿಗಳಿಗೆ ಈವೊಂದು ಸಾದಿಲ್ವಾರು ನಿಧಿಯಿಂದ ಖರ್ಚುಮಾಡುವಂತಹ ಮೊತ್ತವನ್ನು ಹೆಚ್ಚಿಸಿಕೊಂಡಿತು. ಅದರ ಬಗ್ಗೆ ಮಾತನಾಡಲಿಕ್ಕೆ ಅವಕಾಶವಿಲ್ಲದ ರೀತಿಯಲ್ಲಿ ಅದರ ಅವಶ್ಯಕತೆ ಇದ್ದಕ್ಕಿದ್ದ ಹಾಗೆ ಹೋಗುತ್ತದೆ. ಈವೊಂದು ಅದ್ಯಾದೇಶವನ್ನು ಕಾನೂನು ಮಾಡುವುದಕ್ಕೆ ಪ್ರಯತ್ನ ಮಾಡದೆ ಇದನ್ನು ಲ್ಯಾಪ್ಸ್ ಆಗುವುದಕ್ಕೆ ಬಿಗುತ್ತಾರೆ. ಈ ಮಾತನ್ನು ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ, ಅನಿರೀಕ್ಷಿತ ಖರ್ಚಿಗೋಸ್ಕರರೇ ಕಾನೂನು ಮಾಡಿಕೊಂಡಿದ್ದಾರೆ. ಅದರ ಉದ್ದೇಶವೇನೆಂದರೆ, ಯಾವುದೇ ಹಣವನ್ನು ವಿಶೇಷ ಕಾರಣಗಳು ಇಲ್ಲದೆ ಈ ಸದನದ ಒಪ್ಪಿಗೆ ಇಲ್ಲದೆ ಯಾವುದೇ ಸರ್ಕಾರ ಖರ್ಚು ಮಾಡಬಾರದೆಂದು ನಾವು ಸಂವಿಧಾನದಲ್ಲಿ ಹೇಳಿಕೊಂಡಿದ್ದೇವೆ. ಆದರೂ ಸಹ ಅನಿರೀಕ್ಷಿತ ಕಾರಣಗಳಿಗೋಸ್ಕರ ಅವಶ್ಯಕತೆ ಕಂಡುಬಂದರೆ, ಉದಾಹರಣೆ ನೆರೆಹಾವಳಿ ಆಯಿತು ಕೋಮುಗಲಭೆಯಾಯಿತು, ಇಂತಹ ಪ್ರಕರಣಗಳಿಗೆ ಹಣ ಬೇಕಾದರೆ ಆ ಹಣವನ್ನು ಸಾದಿಲ್ವಾರು ನಿಧಿಯಿಂದ ಪಡೆಯುವುದಕ್ಕೆ ಸರ್ಕಾರಕ್ಕೆ ಅವಕಾಶವಿರಲಿ ಎನ್ನುವ ದೃಷ್ಟಿಯಿಂದ ಈ ನಿಯಮಗಳನ್ನು ಸರ್ಕಾರದವರು ಗಾಳಿಗೆ ತೂರಿದ್ದಾರೆ. ತಮಗೆ ಇಷ್ಟಬಂದಹಾಗೆ ಹಣವನ್ನು ಖರ್ಚು ಮಾಡಿದ್ದಾರೆ. ಈ ಪೂರಕ ಅಂದಾಜುಗಳನ್ನು ಏನು ಸಭೆಯ ಮುಂದಿಟ್ಟಿದ್ದಾರೆ ಅವುಗಳನ್ನು ಪರಿಶೀಲನೆ ಮಾಡಿದರೆ ಆ ವಿಚಾರ ಗೊತ್ತಾಗುತ್ತದೆ. ಈ ವಿಚಾರದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಹಣಕಾಸಿನ ಮಂತ್ರಿಗಳು ಇಲ್ಲ, ಇರುವಂತಹ ಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರೂ ಸಹ ಹಿಂದೆ ಹಣಕಾಸಿನ ಮಂತ್ರಿಗಳಾಗಿದ್ದವರು. ಪೂರಕ ಅಂದಾಜುಗಳ ಬಾಬ್ತು ತಾವೇನು ಸಭೆಯ ಮುಂದೆ ಮಂಜೂರಾತಿಗಾಗಿ ಇಟ್ಟಿದ್ದೀರಿ ಇದು ಕೇವಲ ಈ ವರ್ಷದಲ್ಲಿ ಖರ್ಚು ಮಾಡುವಂತಹ ಹಣವೆ? ಅಥವಾ ಈ ವರ್ಷದಲ್ಲಿ ಖರ್ಚು ಮಾಡಬೇಕೆಂದು ತಾವೇನಾದರೂ ಭಾವಿಸಿ ಅದರ ಅವಶ್ಯಕತೆಯಿದೆಯೆಂದು ತಿಳಿದುಕೊಂಡು ಹಣವನ್ನು ಖರ್ಚುಮಾಡಲು ಒಪ್ಪಿಗೆ ಕೊಡಬೇಕೆಂದು ಸಭೆಯ ಮುಂದೆ ಇಟ್ಟಿದ್ದೀರಾ? ಉತ್ತರ ಹೇಳುತ್ತೀರಾ? ಉತ್ತರ ಇಲ್ಲ ನಾನು ಹೇಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಅರ್ಥಸಚಿವರಾಗಿದ್ದರು. ಈಗಲೂ ಸಹ ಮುಖ್ಯಮಂತ್ರಿಗಳೇ ಹಣಕಾಸಿನ ಸಚಿವರು ಆಗಿದ್ದಾರೆ. ಈ ವರ್ಷ ಖರ್ಚು ಮಾಡುವಂತಹ ಹಣವಿದ್ದರೆ ಸಾದಿಲ್ವಾರು

ನಿಧಿಯಿಂದ ಹಣವನ್ನು ತೆಗೆದುಕೊಂಡರೆ ಅದನ್ನು ಮರುಪಾವತಿ ಮಾಡಲು ತಾವು ಒಪ್ಪಿಗೆ ಪಡೆಯುವುದಕ್ಕೆ ಸಾಧ್ಯತೆ ಇದೆ. ಹಿಂದಿನ ಸಾಲುಗಳಲ್ಲಿ ಖರ್ಚು ಮಾಡಿದಂತಹ ಹಣವನ್ನು ಈವೊಂದು ಪೂರಕ ಅಂದಾಜುಗಳ ಮುಖಾಂತರ ಒಪ್ಪಿಗೆ ಪಡೆಯಲಿಕ್ಕೆ ಈ ಸರ್ಕಾರ ಮನಸ್ಸು ಮಾಡಿದೆ. ಇದುವರೆಗೂ ಯಾವುದೇ ಸರ್ಕಾರ ಮಾಡಿರದಂತಹ ರೀತಿಯಲ್ಲಿ ಈ ಸರ್ಕಾರ ಮಾಡುತ್ತಿದೆಯೆಂದು ನಾನು ಆರೋಪ ಮಾಡಲಿಕ್ಕೆ ಇಷ್ಟಪಡುತ್ತೇನೆ.

ಈ ಪೂರಕ ಅಂದಾಜಿನಲ್ಲಿ ಒಂದೆರಡು ವಿಚಾರಗಳನ್ನು ನಾನು ಹೇಳುತ್ತೇನೆ. ಅನೇಕ ಸಂದರ್ಭದಲ್ಲಿ ಅವರು ಹೇಳಿದ್ದಾರೆ. ವಿವರಣೆಯನ್ನು ಕೊಟ್ಟಿದ್ದಾರೆ. ಆ ವಿವರಣೆಯಲ್ಲಿ ಹಿಂದೆ ಬಾಕಿ ಬಿಲ್ಲುಗಳ ಹಣ ಕೊಡಬೇಕಾಗಿತ್ತು. ಅದಕ್ಕೋಸ್ಕರ ನಾವು ಹಣವನ್ನು ಸಾದಿಲ್ವಾರು ನಿಧಿಯಿಂದ ಬಿಡುಗಡೆ ಮಾಡಿದ್ದೇವೆ ಎನ್ನುವ ಮಾತನ್ನು ಹೇಳುತ್ತಾರೆ. ಮತ್ತು ಹೊಸದಾಗಿ ಕೊಡಬೇಕಾಗಿದೆ. ಅದಕ್ಕೋಸ್ಕರ ಸಪ್ಲಿಮೆಂಟರಿ ಅಂದಾಜುಗಳ ಮುಖಾಂತರ ಹಣ ಕೊಡಬೇಕಾಗಿದೆ ಮತ್ತು ಇದಕ್ಕೆ ತಮ್ಮ ಒಪ್ಪಿಗೆ ಬೇಕು ಎಂ ಹೇಳುತ್ತಾರೆ. ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಮ್ಮ ಜಾರಿಯಲ್ಲಿರುವಂಥ ನಿಯಮಗಳ ಪ್ರಕಾರ, ಸಂವಿಧಾನದ ಪ್ರಕಾರ ಪೂರಕ ಅಂದಾಜಿನಲ್ಲಿ ಹಿಂದಿನ ಸಾಲಿನಲ್ಲಿ ಖರ್ಚು ಮಾಡಿದ ಹಣವನ್ನು ಮಂಜೂರು ಮಾಡುವುದಕ್ಕೆ ಈ ಮುಖಾಂತರ ಸಾಧ್ಯವಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರದಂದ ನಿರ್ಧಿಷ್ಟವಾದ ಉತ್ತರ ಬರಬೇಕಾಗಿದೆ. ಮತ್ತು ಇದರ ಬಗ್ಗೆ ವಿತರಣೆಯನ್ನು ಸಹ ಕೊಡಬೇಕಾಗಿದೆ. ಒಂದೊಂದಾಗಿ 26 ಬೇಡಿಕೆಗಳ ಬಾವತ್ತು 131 ಕೋಟಿ ರೂಪಾಯಿಗಳನ್ನು ಒಪ್ಪಿಗೆಗೋಸ್ಕರ ಇಟ್ಟಿದ್ದಾರೆ. ಅದರಲ್ಲಿ ಕೆಲವು ಬೇಡಿಕೆಗಳ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಇಚ್ಚೆಪಡುತ್ತೇನೆ. ಬೇಡಿಕೆ 1 ಮತ್ತು 2 ಈ ಬೇಡಿಕೆಗಳ ಬಾಬತ್ತು ಕೆಲವು ಹಣವನ್ನು ನಮ್ಮ ಒಪ್ಪಿಗೆಗೋಸ್ಕರ ಇಟ್ಟಿದ್ದಾರೆ. ಕೇಂದ್ರ ಸರ್ಕಾರ ಹೊಸದಾಗಿ ರಸಾಯನಿಕ ಗೊಬ್ಬರದ ಸಬ್ಸಿಡಿ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯನ್ನು ಜಾರಿಗೆ ತರುವುದಕ್ಕೆ ಸುಮಾರು 17 ಕೋಟಿ 35 ಲಕ್ಷ ರೂಪಾಯಿ ಬೇಕಾಗಿದೆ ಎಂಬ ಮಾತನ್ನು ಹೇಳಿದ್ದಾರೆ. ಅದೇ ರೀತಿಯಾಗಿ ಸಣ್ಣ ಮತ್ತು ಮಧ್ಯಮ ರೈತರಿಗೆ ವಿಶೇಷವಾದಂಥ ಕೇಂದ್ರ ಸರ್ಕಾರದ ಸಹಾಯದ ಯೋಜನೆ ಇದೆ. ಇದರಲ್ಲಿ ಅವರು ಸುಮಾರು 36.90 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಒಪ್ಪಿಕೊಂಡು ಕೇಂದ್ರಸರ್ಕಾರ ಇವತ್ತಿನದಿವಸ ಅದಕ್ಕೆ ಅನುಮೋದನೆ ನೀಡಿದೆ. ಆದರೆ ನಮ್ಮ ಸರ್ಕಾರ ಏನು ಮಾಡಿದೆ? ಇದರಲ್ಲಿ ಕೇವಲ 15.70 ಕೋಟಿ ರೂಪಾಯಿ ಮಾತ್ರ ಬಿಡುಗಡೆ ಮಾಡಿದೆ. ಉಳಿದ ಹಣವನ್ನು ಬಿಡುಗಡೆ ಮಾಡಲಿಕ್ಕೆ ಯಾವುದೇ ಪ್ರಸ್ತಾವನೆಯನ್ನೂ ಸಭೆಯ ಮುಂದೆ ಇಟ್ಟಿಲ್ಲ. ಇದರ ಅರ್ಥ ಏನು? ಈ ರಾಜ್ಯದಲ್ಲಿರುವ ಸಣ್ಣ ಮತ್ತು ಮಧ್ಯಮ ರೈತರು ಏನಿದ್ದಾರೆ. ಅವರಿಗೆ ಬೇಕಾದಂಥ ವಿಶೇಷ ಯೋಜನೆ ಕೇಂದ್ರ ಸರ್ಕಾರಿಂದ ಮಂಜೂರಾದರೂ ಕೂಡ ಆ ಯೋಜನೆಯನ್ನು ಜಾರಿಗೆ ತರುವುದಕ್ಕೆ ಬೇಕಾದಂಥ 36.90 ಕೋಟಿ ರೂಪಾಯಿಗಳ ಬದಲಿಗೆ ಕೇವಲ 15.70 ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ಇದಕ್ಕೆ ನಾನು ಅವರಿಂದ ಕಾರಣವನ್ನು ತಿಳಿಯಬಯಸುತ್ತೇನೆ. ಅನೇಕ ಸಂದರ್ಭದಲ್ಲಿ ನಾನು ರೈತರ ಪರಿಶ್ರಮವನ್ನು ಅನುಭವಿಸುತ್ತೇವೆ, ಅವರ ಹಿತ ಕಾಪಾಡುವುದಕ್ಕೆ ನಾವು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎನ್ನುವ ಮಾತನ್ನು ಹೇಳುತ್ತೀರಿ.

ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಅನೇಕ ದೇಶಗಳಲ್ಲಿ ರೈತರಿಗೆ ಪರಿಹಾರ ಧನವನ್ನು ಕೊಡುವುದನ್ನು ನಾವು ಕಂಡಿದ್ದೇವೆ. ಆದರೆ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ರಾಜ್ಯದಲ್ಲಿ ಈ ವಿಚಾರದಲ್ಲಿ ನಾವು ಹಿಂದೆ ಬಿದ್ದಿದ್ದೇವೆ. ನಾನು ಕೆಲವು ಅಂಕಿ-ಅಂಶಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಸಹಾಯಧನದ ಪ್ರಮಾಣ ಏನಿದೆ, ಇದು ಕೇವಲ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಿಗೆ ಮಾತ್ರ ಸೀಮಿತವಾಗಿಲ್ಲ, ಕೇವಲ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ಯಾವ ರಾಷ್ಟ್ರಗಳು ಅಭಿವೃದ್ಧಿಯನ್ನು ಈಗಾಗಲೇ ಹೊಂದಿವೆ, ಅದು ಅಮೇರಿಕಾ ಇರಬಹುದು, ಜಪಾನ್ ಇರಬಹುದು, ಇಂತಹ ದೇಶಗಳಲ್ಲಿಯೂ ಸಹ ಅಲ್ಲಿಯ ರೈತರಿಗೆ ಸಹಾಯಧನ ಕೊಡುವುದನ್ನು ನಾವು ಕಂಡಿದ್ದೇವೆ. ಇವತ್ತಿನದಿವಸ ಅಂತಹ ಸಹಾಯಧನ ಕೊಡಬಾರದು ಎಂದು ಬೇರೆ ಬೇರೆ ಮಾರ್ಗಗಳ ಮುಖಾಂತರ ಇರಬಹುದು ಅಥವಾ ಬೇರೆ ಬೇರೆ ಪ್ರಸ್ತಾವನೆಗಳು ಆಗಿರಬಹುದು.

ಅದರ ಮುಖಾಂತರ ನಮ್ಮ ಸರ್ಕಾರಗಳು ವಾದ ಮಾಡುವುದನ್ನು ನಾವು ನೋಡುತ್ತಿದ್ದೇವೆ. ಇದನ್ನೆಲ್ಲಾ ನೋಡಿದಾಗ, ನನಗನ್ನಿಸುವುದು ಏನೆಂದರೆ, ನಾವೆಲ್ಲರೂ ಸಹ ಇದರ ಮುಖಾಂತರ ಶೋಷಣೆಗೆ ಜನರನ್ನು ಒಳಪಡಿಸುತ್ತಿದ್ದೇವೆ ಎಂದರೆ ತಪ್ಪಾಗಲಿಕ್ಕಿಲ್ಲ, ಏತಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಭಾರತದಲ್ಲಿ ಒಟ್ಟು ಪ್ರಮಾಣದಲ್ಲಿ 2.33 ರಷ್ಟು ಮಾತ್ರ ಸಾಹಯಧನವನ್ನು ಕೊಡುತ್ತಿದ್ದೇವೆ. ಆದರೆ ಮುಂದುವರೆದಂತ ರಾಷ್ಟ್ರಗಳು ಏನಿವೆ, ಜಪಾನ್‌ನಲ್ಲಿ ಈ ವ್ಯವಸಾಯ ಉತ್ಪಾದನೆಯನ್ನು ಗಣನೆಗೆ ತೆಗೆದುಕೊಂಡಾಗ ಶೇಕಡ 72ಕ್ಕಿಂತ ಹೆಚ್ಚಾದ ಸಹಾಯಧನವನ್ನು ಕೊಡುತ್ತಿದ್ದಾರೆ. ಅದೇ ರೀತಿ ಸೌತ್ ಕೋರಿಯಾದಲ್ಲಿ ಶೇಕಡ 60 ರಷ್ಟು, ಯುರೋಪ್ ರಾಷ್ಟ್ರಗಳಲ್ಲಿ ಶೇಕಡ 37ರಷ್ಟು, ಅಮೇರಿಕಾದಲ್ಲಿ ಶೇಕಡ 26 ರಷ್ಟು, ಸೋವಿಯತ್ ಯೂನಿಯನ್ ಎಂದು ಏನಿತ್ತು, ಅಲ್ಲಿ ಶೇಕಡ 25ರಷ್ಟು ಮತ್ತು ಪಾಕಿಸ್ಥಾನದಲ್ಲಿಯೂ ಕೂಡ ಶೇಕಡ 21ರಷ್ಟನ್ನು ಈ ರೀತಿಯಾಗಿ ಕೊಡುತ್ತಿದ್ದಾರೆ. ಆದರೆ ಭಾರತದಲ್ಲಿ ಕೊಡುತ್ತಾ ಇರುವುದು ಕೇವಲ ಶೇಕಡ 2.33 ರಷ್ಟು ಮಾತ್ರ. ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಈ ಒಂದು ಸಣ್ಣ ಪ್ರಮಾಣದ ಸಹಾಯಧನವನ್ನು ನಮ್ಮ ರೈತರಿಗೆ ಕೊಡುತ್ತಾ ಇದ್ದವೆ.

ನಮ್ಮ ರಾಷ್ಟ್ರದ ಆದಾಯದಲ್ಲಿ ಕೃಷಿ ಸಂಪತ್ತನ್ನು ಹೆಚ್ಚಳ ಮಾಡಬೇಕೆಂಬ ಜನ ನಾವೇನಿದ್ದೇವೆ, ನಾವೆಲ್ಲರೂ ಸಹ ಕೃಷಿ ಸಂಪತ್ತನ್ನು ಹೆಚ್ಚುಮಾಡುವಂಥ ರೀತಿಯಲ್ಲಿ ರೈತರಿಗೆ ಬೇಕಾದ ಸಹಾಯಧನವನ್ನು ಕೊಡುವುದಕ್ಕೆ ಹಿಂದೆ ಮುಂದೆ ನೋಡುತ್ತೇವೆ. ಇಂತಹ ಸಹಾಯಧನವನ್ನು ಕೈಗಾರಿಕೆಗೆ ಕೊಡುವುದನ್ನು ನೋಡಿದ್ದೇವೆ, ಬೇರೆ ಬೇರೆ ವರ್ಗದ ಜನರಿಗೆ ಕೊಡುವುದನ್ನು ನೋಡಿದ್ದೇವೆ. ಈ ದೇಶದ ರೈತನಿಗೆ, ಇಂತಹ ಸಣ್ಣ ಸಣ್ಣ ಯೋಜನೆಗಳ ಮುಖಾಂತರ, ಇವತ್ತಿನ ದಿವಸ ಏನು ಸಹಾಯ ಕೊಡಬೇಕೋ ಆ ಸಹಾಯಧನಕ್ಕೆ ಬೇಕಾದ ಹಣವನ್ನು ಬಜೆಟ್‌ನಲ್ಲಿ ಅಳವಡಿಸಿಕೊಳ್ಳದೇ ಇರುವುದರ ಜೊತೆಯಲ್ಲಿ ಇವತ್ತಿನದಿವಸ ಏನು ಪೂರಕ ಅಂದಾಜುಗಳನ್ನು ಇಟ್ಟಿದ್ದಾರೆ. ಅದರಲ್ಲಿ ಇದನ್ನು ಹೇಳುವುದಕ್ಕೂ ಸಹ ಅವರು ವಿಫಲರಾಗಿದ್ದಾರೆ. ಮಾನ್ಯ ಯಡಿಯೂರಪ್ಪನವರು ರೈತರ ಪರ ಎಂದು ಹೇಳುತ್ತಾರೆ. ಅವರು ಹೇಳಿದಹಾಗೆ ನಾವು ಹೇಳುತ್ತೇವೆ. ಆ ಕಡೆಯವರು, ಈ ಕಡೆಯವರು ನಾವೆಲ್ಲರೂ ರೈತರ ಪರ ಎಂದು ಹೇಳುತ್ತೇವೆ. ಆದರೆ, ಇಂತಹ

ಸಣ್ಣ ಸಣ್ಣ ಯೋಜನೆಗಳನ್ನು ಜಾರಿಗೆ ತರುವಾಗಲೂ ಸಹ ಬೇಕಾದಷ್ಟು ಹಣವನ್ನು ಇಡುವುದಕ್ಕೆ ಮನ್‌ಸ್ಥೈರ್ಯ ಅಥವಾ ರೈತರಿಗೆ ಸಹಾಯ ಮಾಡುವಂಥ ಬುದ್ಧಿ ನಮಗೆ ಇಲ್ಲವೆಂದು ಹೇಳಿದರೆ ಇನ್ನೇನು ಹೇಳಬೇಕಾಗುತ್ತದೆ? ನಾನು ಇದರ ಬಗ್ಗೆ ಹೆಚ್ಚು ಹೇಳಬೇಕಾದ ಅವಶ್ಯಕತೆ ಇಲ್ಲವೆಂದು ಭಾವಿಸಿದ್ದೇನ. ಅಷ್ಟೇ ಅಲ್ಲ, ಇವತ್ತಿನದಿವಸ ಇನ್ನೊಂದು ತೋಟಗಾರಿಕೆಯಲ್ಲಿ ಡ್ರಿಪ್ ಇರಿಗೇಷನ್ ಇದೆ. ಈ ಹನಿ ನೀರಾವರಿಗೆ ಒಂದು ಕೋಟಿ ರೂಪಾಯಿ ಇಟ್ಟಿದ್ದಾರೆ. ಆದರೆ ನಾವು ಡಿಮ್ಯಾಂಡ್ ನಂ.5 ಅಭಿಯಾಚನಾ ಸಂಖ್ಯೆ 5ಕ್ಕೆ ಬಂದಾಗ, ಅಲ್ಲಿ ಮಾತ್ರ ನಾವು ಕಡಿಮೆ ಇಡುವುದಕ್ಕೆ ಸಾಧ್ಯವಿಲ್ಲ. 12 ಕೋಟಿಗಿಂತ ಹೆಚ್ಚು ಹಣವನ್ನು ಇಟ್ಟಿದ್ದೇವೆ. ಈ ಹಣ ಏನಿದೆ, ಇದು ಬೇರೆ ಬೇರೆ ಕೈಗಾರಿಕೆಗಳಿಗೆ ಕೊಡುವುದಕ್ಕೆ ಇಟ್ಟಿದ್ದೇವೆ. ಅದರಲ್ಲಿಯೂ ಸಹ ನಾನು ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಕೊಡಬಾರದು ಎನ್ನುವ ಮಾತನ್ನು ಹೇಳುತ್ತಿಲ್ಲ. ಆದರೆ, ಸರ್ಕಾರದವರು ಒಂದು ನೀತಿಯನ್ನು ಅನುಸರಿಸಬೇಕಾಗುತ್ತದೆ. ಒಂದು ಸಹಕಾರಿ ಸಕ್ಕರೆ ಕಾರ್ಖಾನೆಗೆ ಏನು ಸಹಾಯಧನ ಕೊಡಬೇಕಾಗಿದೆ ಅಥವಾ ಸಾಲವನ್ನು ಮನಗಂಡಿರಲಿಲ್ಲವೇ? ಅಥವಾ ಈ ರಾಜ್ಯದ ಸಹಕಾರ ಇಲಾಖೆಯವರು ಇದನ್ನು ಮೊದಲು ಮನಗಂಡಿರಲಿಲ್ಲವೇ? ಏತಕ್ಕೋಸ್ಕರ ಈ ವಿವರಗಳಿಗೆ ಅಥವಾ ಈ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಬೇಕಾದ ಹಣದ ಅವಶ್ಯಕತೆ ಬಗ್ಗೆ ಹಣಕಾಸಿನ ಇಲಾಖೆಯವರನ್ನು ಕೇಳದೆ, ಅವರ ಒಪ್ಪಿಗೆಯನ್ನು ಪಡೆದು, ಏತಕ್ಕೋಸ್ಕರ ಆಯವ್ಯಯದಲ್ಲಿ ಇಡಲಿಲ್ಲ, ಎನ್ನುವ ಬಗ್ಗೆ ಅವರು ಉತ್ತರ ಕೊಡಬೇಕಾಗಿದೆ. ಅದೇ ರೀತಿ ಈಗಾಗಲೇ ಹೇಳಿದೆ, ಅಭಿಯಾಚನಾ ಸಂಖ್ಯೆ 7ರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಕೆ.ಹೆಚ್.ಡಿ.ಸಿ.ಯವರಿಗೆ ನಾವು ಹಣವನ್ನು ಕೊಡಬೇಕು, ನಾವೇನೂ ಬೇಡ ಎಂದು ಹೇಳುವುದಿಲ್ಲ.

ಆದರೆ, ಈ ಹಣ ಏನಿದೆ, ಅದು ಬಾಕಿ ಇತ್ತಂತೆ. ಅವರ ಪದವನ್ನು ನಾನು ಒಪ್ಪುತ್ತೇನೆ. ಸಗಟು ವ್ಯಾಪಾರ ಮತ್ತು ಚಿಲ್ಲರೆ ವ್ಯಾಪಾರಿಗಳ ಕಮೀಷನ್ ಇವುಗಳನ್ನು ಪುರಸ್ಕರಿಲಾಯಿತು ಹಾಗೂ ಕೆ.ಹೆಚ್.ಡಿ.ಸಿ. ಗಿರಿಣಿಯವರಿಗೆ ಉಳಿಸಿಕೊಂಡಿರುವ ಬಾಕಿಯನ್ನು ತೀರಿಸಬೇಕಾಗಿ ಬಂತು. ಈ ಒಂದು ವಾಕ್ಯವನ್ನು ಮತ್ತೊಮ್ಮೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೆ.ಹೆಚ್.ಡಿ.ಸಿ.ಯವರ ಗಿರಿಣಿಯವರಿಗೆ ಉಳಿಸಿಕೊಂಡಿರುವ ಬಾಕಿಯನ್ನು ತೀರಿಸಬೇಕಾಗಿ ಬಂತು ಈ ಒಂದು ಬಾಕಿಯನ್ನು ತೀರಿಸಬೇಕಾದರೆ ಅದಕ್ಕೆ ಈ ಪೂರಕ ಅಂದಾಜಿನ ಅವಶ್ಯಕತೆ ಇದೆಯೇ, ಪೂರಕ ಅಂದಾಜಿನಲ್ಲಿ ಇಂತಹ ಬಾಕಿಯನ್ನು ತೀರಿಸುವುದಕ್ಕೆ ಯಾವುದೇ ಸರ್ಕಾರ ಪ್ರಯತ್ನಪಟ್ಟರೆ, ಹಣಕಾಸಿನ ನಿರ್ವಹಣೆಯಲ್ಲಿ ಯಾವುದೇ ನಂಬಿಕೆ ಇಲ್ಲ ತಮಗೆ ಇಷ್ಟಬಂದಹಾಗೆ ಹಣಕಾಸಿನ ನಿರ್ವಹಣೆ ಮಾಡಿದ್ದಾರೆಂದ ಹೇಳುವುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಇಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ಪ್ರಾಥಮಿಕ ಶಿಕ್ಷಣ ನಿಧಿಯಿಂದ ಸಹ ಅವರು ಹೇಳುತ್ತಾರೆ. 153 ಲಕ್ಷ ರೂಪಾಯಿಗಳನ್ನು ಸಾದಿಲ್ವಾರು ನಿಧಿಯಿಂದ ಬಿಡುಗಡೆ ಮಾಡಬೇಕಾಗಿದೆ. ಮೊದಲು ತಮಗೆ ಇದು ಗೊತ್ತಿರಲಿಲ್ಲವೇ? ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದ ವಿದ್ಯಾರ್ಥಿಗಳಿಗೆ ಹಾಗೂ ಗ್ರಾಮೀಣ ಪ್ರದೇಶದ ಹಸಿರು ಕಾರ್ಡ್ ಹೊಂದಿರುವಂಥ ಕುಟುಂಬದಲ್ಲಿ ಮತ್ತು ನಗರಪ್ರದೇಶದ ಕೊಳಚೆ ಪ್ರದೇಶದಲ್ಲಿ ವಾಸಿಸುವಂಥ ಕುಟುಂಬದಲ್ಲಿ ಇರುವಂಥ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ನೀಡಲಾಗುತ್ತದೆ ಎಂಬ ಮಾತನ್ನು ಹೇಳುತ್ತಾರೆ. ಇದಕ್ಕೆ

ಕೇವಲ 352 ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟು ಕೊಂಡಿದ್ದಾರೆ. ಆದರೆ ಇದಕ್ಕೆ ಹೆಚ್ಚು ಹಣ ಕೊಡಬೇಕಾಗಿ ಬಂತು, ಬಿಲ್ಲುಗಳೂ ಇದ್ದವು. ಬಿಲ್ಲುಗಳ ಬಾಬ್ತು 153 ಲಕ್ಷ ರೂಪಾಯಿಗಳನ್ನು ಸಾದಿಲ್ವಾರು ನಿಧಿಯಿಂದ ಬಿಡುಗಡೆ ಮಾಡಲಾಯಿತು. ಈ ರೀತಿಯಾಗಿ ಸಾದಿಲ್ವಾರು ನಿಧಿಯಿಂದ ತಮಗೆ ಇಷ್ಟಬಂದಹಾಗೆ ಯಾವ ಉದ್ದೇಶಕ್ಕಾಗಿ ಸಂವಿಧಾನದ ಅಡಿಯಲ್ಲಿ ರಚನೆ ಮಾಡಿಕೊಂಡಿದ್ದೇವೆಯೋ ಅದಕ್ಕೆ ವಿರುದ್ಧವಾಗಿ ಸರ್ಕಾರ ಸಾದಿಲ್ವಾರು ನಿಧಿಯಿಂದ ಹಣ ಬಿಡುಗಡೆ ಮಾಡಿದೆ ಮತ್ತು ಉಪಯೋಗ ಮಾಡಿಕೊಂಡಿದೆ. ಇದಕ್ಕೆ ಉತ್ತರವನ್ನು ಹೇಳಬೇಕಾಗಿದೆ.

ಅದೇ ರೀತಿಯಾಗಿ ಇನ್ನೂ ಅನೇಕ ಯೋಜನೆಗಳಿಗೂ ಸಹ ಸಾದಿಲ್ವಾರು ನಿಧಿಯಿಂದ ಹಣ ಉಪಯೋಗಿಸಿಕೊಂಡಿದ್ದಾರೆ. ನಾನು ಸರಕಾರದ ಸಾದಿಲ್ವರು ನಿಧಿಯಿಂದ 1991-92, 1992-93ರಲ್ಲಿ ಎಷ್ಟು ಕೋಟಿ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೀರಿ ಅದರ ಪಟ್ಟಿಯನ್ನು ಕೊಡಿ ಎಂದು ಕೇಳುತ್ತೇನೆ. ಇದರಲ್ಲಿ ತಾವು ಏನು ಹೇಳಿದ್ದೀರಿ ಕೇವಲ ಈ ಪೂರಕ ಅಂದಾಜುಗಳಲ್ಲಿ ಎಲ್ಲಾ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ತಾವು ಒಂದು ಪಟ್ಟಿಯನ್ನು ನಮ್ಮ ಮುಂದೆ ಕೊಟ್ಟಿದ್ದೀರಿ. ನಾನು ತಮಗೆ ಕೇಳಬಯಸುತ್ತೇನೆ, 80 ಕೋಟಿ ರೂಪಾಯಿಗಳಿಂದ 500 ಕೋಟಿ ರೂಪಾಯಿಗಳಿಗೆ ಹೋಗಿದ್ದೀರಲ್ಲ, 500 ಕೋಟಿ ರೂಪಾಯಿಗಳಿಗೆ ಹೆಚ್ಚು ಮಾಡಿದ್ದು ಏತಕ್ಕೋಸ್ಕರ, ಯಾರಿಗೋ ಹಣ ಕೊಡುವ ಉದ್ದೇಶದಿಂದ, ಯಾರಿಗೋ ಸಹಾಯ ಮಾಡುವ ಉದ್ದೇಶದಿಂದ ಸಾದಿಲ್ವಾರು ನಿಧಿಯನ್ನು 500 ಕೋಟಿ ರೂಪಾಯಿಗಳಿಗೆ ಹೆಚ್ಚು ಮಾಡಿಕೊಂಡು ಇವತ್ತಿನ ದಿವಸ ಹಣವನ್ನು ಬಿಡುಗಡೆ ಮಾಡಿದ್ದೀರಿ. ಅದರ ಬಗ್ಗೆ ವಿವರಗಳನ್ನು ಕೊಡಬೇಕೆಂಬ ಮಾತನ್ನು ಆಗ್ರಹಪೂರ್ವಕವಾಗಿ ಹೇಳುತ್ತೇನೆ. ಏತಕ್ಕೆಂದರೆ ಅನೇಕ ಸಂದರ್ಭದಲ್ಲಿ ಸಾದಿಲ್ವಾರು ನಿಧಿಯನ್ನು ದುರುಪಯೋಗ ಪಡಿಸಿಕೊಂಡು ತಮಗೆ ಬೇಕಾದಂಥವರಿಗೆ ಬೇಕಾದ ರೀತಿಯಲ್ಲಿ ಎಲ್ಲಾ ನಿಯಮಗಳನ್ನು ಉಲ್ಲಂಘನೆ ಮಾಡಿ ಕೊಡುವುದಕ್ಕೆ ಅವಕಾಶವಾಗಿದೆ ಎಂಬ ಭಾವನೆ ಬರುವುದಕ್ಕೆ ಸಾಧ್ಯ ಇದೆ. ಏತಕ್ಕೆಂದರೆ 80 ಕೋಟಿ ರೂಪಾಯಿಗಳಿಂದ ಒಂದು ತಿಂಗಳಿನಲ್ಲಿ 200 ಕೋಟಿ ರೂಪಾಯಿಗೆ ತಂದಿರಿ, ಇದು ಏತಕ್ಕೆ ಬೇಕಾಯಿತು. ಆದರೆ ತದನಂತರ ಬಹಳ ದಿವಸ ಅಲ್ಲ, ಕೇವಲ 31ನೇ ಆಕ್ಟೋಬರ್‌ನಲ್ಲಿ ಒಂದು ಆರ್ಡಿನೆನ್ಸ್ ಉಪಯೋಗಿಸಿ 80 ಕೋಟಿ ರೂಪಾಯಿಗಳು ಇದ್ದ ಸಾದಿಲ್ವಾರು ನಿಧಿಯನ್ನು 200 ಕೋಟಿ ರೂಪಾಯಿಗೆ ಹೆಚ್ಚು ಮಾಡಿಕೊಂಡಿರಿ. ಇದು ಸಾಕಾಗಿಲಿಲ್ಲ ನಿಮ್ಮ ವಹಿವಾಟಿಗೆ ಎಂದು ಕಬಡಲೇ ತಾವು ಏನು ಮಾಡಿದಿರಿ. 31ನೇ ಡಿಸೆಂಬರ್‌ನಲ್ಲಿ ಒಂದು ಆರ್ಡಿನೆಸ ಉಪಯೋಗಿಸಿ ಇದನ್ನು 500 ಕೋಟಿ ರೂಪಾಯಿಗೆ ಹೆಚ್ಚಿಸಿ ಕೊಂಡಿದ್ದೀರಿ. ಇದಕ್ಕೆ ಅವಶ್ಯಕತೆ ಇತ್ತೇ, ಇದರ ಬಗ್ಗೆ ಚರ್ಚೆ ಆಗುವುದಕ್ಕೆ ಅವರು ಅವಕಾಶ ಕೊಡಲಿಲ್ಲ, ಏತಕ್ಕೆ ಕೊಡಲಿಲ್ಲ ಎಂದರೆ ಇದನ್ನು ಲ್ಯಾಸ ಮಾಡಿದರು. ಈ ಒಹದು ಅನುಮಾನ ನಮಗೆ ಏತಕ್ಕೋಸ್ಕರ ಬರುತ್ತಿದೆ ಎಂದರೆ ಈ ರೀತಿ ಮಾಡುವುದರ ಮುಖಾಂತರ ಹಣವನ್ನು ಎಷ್ಟರಮಟ್ಟಿಗೆ ಸಾದಿಲ್ವಾರು ನಿಧಿಯಿಂದ ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡಿದ್ದೀರೋ, ಇಲ್ಲವೋ ಎಂಬುದರ ಬಗ್ಗೆ ವಿವರಣೆ ಕೊಡಬೇಕಾಗುತ್ತದೆ. ಮತ್ತೊಂದು ಮುಖ್ಯವಾದ ಖರ್ಚು ಇದು ಬಹಳ ಅರ್ಜೆಂಟ್ ಇತ್ತೇ? ಅಧ್ಯಕ್ಷರೇ ದೇಶದಲ್ಲಿರುವ ನಾವೆಲ್ಲಾ ಬಾಬಾಗಳ ಹತ್ತಿರ ಹೋಗಬೇಕಾಗಿದೆ.

ಈ ದೇಶದ ಸಾಮಾನ್ಯ ಜನರನ್ನು ನೋಡುವುದಕ್ಕೆ ಇಲ್ಲ, ದೊಡ್ಡ ದೊಡ್ಡ ಬಾಬಾಗಳಿಗೆ ಬೇಕಾದಂಥ ಹಣವನ್ನು ನಾನು ಸಾದಿಲ್ವಾರು ನಿಧಿಯಿಂದ ಬಿಡುಗಡೆ ಮಾಡುತ್ತೇವೆ. ಅಷ್ಟೊಂದು ಅರ್ಜೆನ್ಸಿ ಇತ್ತೇ, ಪುಟ್ಟಪರ್ತಿಯಲ್ಲಿ ಬಡ ಜನರಿಗೆ ಉಚಿತ ವೈದ್ಯಕೀಯ ನೆರವನ್ನು ನೀಡುವುದಕ್ಕೆ 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಯಿತು. ಈ ಹಣವನ್ನು ಈ ಸಂಸ್ಥೆಗೆ ಕೊಡುವುದಕ್ಕೆ ಸಾದಿಲ್ವಾರು ನಿಧಿಯಿಂದ ಹಣ ಪಡೆಯಬೇಕೇ? ತದನಂತರ ಕೊಡಬಹುದಾಗಿತ್ತಲ್ಲ? ಏನು ಅಷ್ಟೊಂದು ಅರ್ಜೆನ್ಸಿ ಇತ್ತು, ಬಹಳ ಅರ್ಜೆಂಟಾಗಿ ಅವರ ಆಶೀರ್ವಾದ ಪಡೆಯುವುದು ಅವಶ್ಯಕವಾಗಿತ್ತೇ. ವೈಯಕ್ತಿಕವಆಗಿ ಇಂತಹ ಕೆಲವು ವ್ಯಕ್ತಿಗಳಿಗೆ ಸಂಘ ಸಂಸ್ಥೆಗಳಿಗೆ ಬೇಕಾದಂಥ ಸಹಾಯ ಮಾಡುವುದಕ್ಕೆ ಸಾದಿಲ್ವಾರು ನಿಧಿಯಿಂದ ಹಣ ಬಿಡುಗಡೆ ಮಾಡಿದ್ದೀರಿ. ಇದು ಕೇವಲ ಒಂದು ಉದಾಹರಣೆ. ಮತ್ತೊಂದರಲ್ಲಿ ಅವರು ಹೇಳುತ್ತಾರೆ, ಬಡ ಜನರಿಗೆ ಬೇಕಾದಂಥ ಆಸ್ಪತ್ರೆಯನ್ನು ಕಟ್ಟುವುದಕ್ಕೆ ಇವತ್ತಿನ ದಿವಸ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ, ಇದಕ್ಕೂ ಸಹ ಸಾದಿಲ್ವಾರು ನಿಧಿಯಿಂದ ಬಿಡುಗಡೆ ಮಾಡಬೇಕೇ? ಸಾದಿಲ್ವಾರು ನಿಧಿಯಿಂದ ಹಣ ಬಿಡುಗಡೆ ಮಾಡುವುದಕಕ್ ಇನ್ನೊದು ಇಲ್ಲಿ ಬಂದಿದೆ. ಅಯೋಧ್ಯೆಯ ಗಲಬೆಯಿಂದ ನೊಂದಂಥರರಿಗೆ ಹಣವನ್ನು ಕೊಡುವುದಕ್ಕೆ ನಮ್ಮ ವಿರೋಧ ಇಲ್ಲ. ನೆರೆಹಾವಳಿಯಿಂದ ಏನು ಅನಾಹುತ ಆಗಿದೆ, ಆ ಅನಾಹುತದಿಂದ ನೊಂದವರಿಗೆ ಬೇಕಾದಂಥ ಹಣವನ್ನು ಕೊಡುವುದಕ್ಕೆ ನಮ್ಮ ವಿರೋಧ ಇಲ್ಲ. ಆದರೆ ಈ ಹಣವನ್ನು ಅಂತಹ ಜನಗಳಿಗೆ ಉಪಯೋಗಿಸುವುದಕ್ಕೆ ಬದಲಾಗಿ ಇವತ್ತಿನ ದಿವಸ ಹಣವನ್ನು ಏತಕ್ಕೆ ಉಪಯೋಗಿಸಿದ್ದಾರೆ ಎಂದು ನಮ್ಮ ನಾಯಕರು ಹೇಳಿದರು, ಶಿವಮೊಗ್ಗ ಪುರಸಭೆಗೆ ಮೂರು ಕೋಟಿ ರೂಪಾಯಿಗಳನ್ನು ಇವರು ಸಾಲವಾಗಿ ಕೊಟ್ಟಿದ್ದಾರೆ. ಈ ದೇಶದಲ್ಲಿ ಬೇರೆ ಎಲ್ಲಾ ಪುರಸಭೆಗಳು, ನಗರಸಭೆಗಳು ಏನಿವೆ ಅವುಗಳು ಸಾಲ ಕೇಳಿಲ್ಲವೇ? ಒಂದು ಪಕ್ಷ ನಿಮಗೆ ಕೊಡುವುದಕ್ಕೆ ಇಷ್ಟ ಇದ್ದರೆ ಏತಕ್ಕೋಸ್ಕರ ಬಜೆಟ್‌ನಲ್ಲಿ ಹಣವನ್ನು ತಾವು ಅವಕಾಶ ಮಾಡಿಕೊಳ್ಳಲಿಲ್ಲ, ತಮಗೆ ಬೇಕಾದಂಥ ರೀತಿಯಲ್ಲಿ ಸ್ವೇಚ್ಛಾಚಾರದಿಂದ ಎಂದರೆ ತಪ್ಪಾಗಲಿಕ್ಕಿಲ್ಲ, ಹಣವನ್ನು ಬೇಕಾದವರಿಗೆ ಕೊಡುವುದಕ್ಕೆ ಉಪಯೋಗಿಸಿಕೊಂಡಿದ್ದಾರೆ, ಇದು ಸಾದಿಲ್ವಾರುನಿಧಿಯ ದುರುಪಯೋಗ ಅಲ್ಲವೇ? ಆದಕ್ಕಿಂತ ಹೆಚ್ಚಾಗಿ ಒಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಬಯಸುತ್ತೇನೆ. ಸಾದಿಲ್ವಾರು ನಿಧಿ ಹಣವನ್ನು ಈ ರೀತಿ ಏನು ಖರ್ಚು ಮಾಡಿದ್ದಾರೆ. ಅದಕ್ಕೆ ನಿಮ್ಮ ಹಣಕಾಸಿನ ಇಲ್ಖೆ ಕಾರ್ಯದರ್ಶಿಯವರು ಏನಿದ್ದಾರೆ, ಅಧಿಕಾರಿಗಳು ಏನಿದ್ದಾರೆ ಅವರು ಇದರ ಬಗ್ಗೆ ಏನು ಅಭಿಪ್ರಾಯ ಕೊಟ್ಟಿದ್ದಾರೆ, ನಿಜವಾಗಿ ಈ ರೀತಿ ಕೊಡುವುದು ಸೂಕ್ತ, ಹಣಕಾಸಿನ ನಿರ್ವಹಣೆ ದೃಷ್ಟಿಯಿಂದ, ಆರ್ಥಿಕ ಸ್ಥಿತಿಯನ್ನು ಸರಿಯಾಗಿ ಇಡುವ ದೃಷ್ಟಯಿಂದ ಇಂತಹ ಹಣವನ್ನು ಕೊಡುವುದು ಸರಿಯೇ ತಪ್ಪೇ ಎಂಬುದರ ಬಗ್ಗೆ ಅವರು ತಮ್ಮ ಹೇಳಿಕೆಯಲ್ಲಿ ಟಿಪ್ಪಣಿಯಲ್ಲಿ ಏನಾದರೂ ಹೇಳಿದ್ದಾರೆಯೇ? ಒಂದು ಪಕ್ಷ ತಮ್ಮ ಟಿಪ್ಪಣಿಯಲ್ಲಿ ಈ ರೀತಿ ಹಣವನ್ನು ಸೂಕ್ತ ಎಂದು ಹೇಳಿದ್ದರೆ, ಅಂತಹ ಅಧಿಕಾರಿಗಳು, ಅಧಿಕಾರಿಗಳಾಗಿ ಉಳಿಯುವುದಕ್ಕೆ ಅರ್ಹರೇ ಎಂಬ ಮಾತನ್ನು ಹೇಳಬಯಸುತ್ತೇನೆ. ಒಂದು ಪಕ್ಷ ಕೊಡುವುದಕಕ್ ಸಾಧ್ಯ, ಸೂಕ್ತ ಎಂದು ಹೇಳಿದದ್ರೆ ಅವರ ಮೇಲೆ ಕಾನೂನು ಬದ್ಧ ಕ್ರಮ ತೆಗೆದುಕೊಳ್ಳಬೇಕು, ಒಂದು ಪಕ್ಷ ಅವರ ಹೇಳಿಕೆಗೆ ವಿರುದ್ಧವಾಗಿ ಟಿಪ್ಪಣಿಗೆ ವಿರುದ್ಧವಾಗಿ ಯಾವುದೇ ಮಂತ್ರಿ ಕೆಲಸ ಮಾಡಿದ್ದರೆ, ಅಂತಹ ಮಂತ್ರಿಗಳ

ಮೇಲೆ, ಮಿಸ್ ಕಾಂಡಟ್ ಆಫ್ ದಿ ಮಿನಿಸ್ಟರ್ ಎಂದು ಪರಿಗಣನೆ ಮಾಡಿ, ಅಂತಹವರ ಬಗ್ಗೆ ವಿಚಾರಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳದಿದ್ದರೆ ನಾವು ಇಲ್ಲಿ ಎಷ್ಟೇ ಬಾಯಿ ಬಡಿದುಕೊಂಡರೂ ಉಪಯೋಗವಾಗುವುದಿಲ್ಲ. ಅಂತಹವರ ಬಗ್ಗೆ ನಿರ್ದಿಷ್ಟವಾದ ನೀತಿಯನ್ನು ಸರಕಾರ ಅನುಸರಿಸಬೇಕಾಗುತ್ತದೆ.

ಇದರ ಬಗ್ಗೆ ನಿರ್ದಿಷ್ಟವಾದ ನೀತಿಯನ್ನು ಸರ್ಕಾರ ಅನುಸರಿಸಿದೆಯೇ? ನಿಜವಾಗಿಯೂ ಹಣವನ್ನು ಕೊಡುವ ಅಧಿಕಾರ ಇದೆ ಎಂದು ಹೇಳಿ ಬಾಯಿಗೆ ಬಂದ ಹಾಗೆ ಕೈಗೆ ಬಂದ ಹಾಗೆ ಬರೆದುಕೊಡುವುದಾದರೆ ಈ ರಾಜ್ಯದ ಪ್ರತಿನಿಧಿಗಳಾಗಿ ತಾವು ಉಳಿಯುವುದಕ್ಕೆ ಅರ್ಹರೇ ಎಂದು ಹೇಳುವ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಅದನ್ನು ಆಲೋಚನೆ ಮಾಡುವಾಗ ನಾವು ಯಾವುದೇ ಒಂದು ವ್ಯಕ್ತಿಯನ್ನು ಗಮನದಲ್ಲಿಟ್ಟುಕೊಂಡು ಯಾವುದೇ ಒಂದು ಪಕ್ಷವನ್ನು ಜ್ಞಾಪಕದಲ್ಲಿಟ್ಟುಕೊಂಡು ಮಾಡುವುದು ಅಲ್ಲ, ಇದು ಇಡೀ ರಾಜ್ಯದ ಸಮಸ್ಯೆ. ಅದರಲ್ಲಿ ಸಹ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ದೃಷ್ಟಿಯಿಂದ ಇದರ ಬಗ್ಗೆ ತಾವು ಆಲೋಚನೆ ಮಾಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿಯಾಗಿ ಇನ್ನೂ ಅನೇಕ ವಿಚಾರಗಳನ್ನು ಇಲ್ಲಿ ತಾವು ಹೇಳಿದ್ದೀರಿ. ಬೇಡಿಕೆ 41ರಲ್ಲಿ ಬಹಳ ಚೆನ್ನಾಗಿ ಇದೆ. 41 ಲಕ್ಷ ರೂಪಾಯಿಗಳನ್ನು ನೀವು ಅತಿಥಿ ಗೃಹದ ಖರ್ಚಿಗೆ ಕೊಟ್ಟಿದ್ದೀರಿ. ನವದೆಹಲಿಯಲ್ಲಿರತಕ್ಕಂಥ ಕರ್ನಾಟಕ ಭವನದಲ್ಲಿ ತಾವು ಹೋದಾಗ ರಾಜವೈಭವದಿಂದ ಇರಲಿಕ್ಕೆ, ರಿಪೇರಿ ನವೀಕರಣ ಮುಂತಾದ ಕೆಲಸಗಳನ್ನು ಮಾಡಿಸಿದ್ದೀರಿ, ನೀರು ವಿದ್ಯುಚ್ಛಕ್ತಿ ಟೆಲಿಫೋನ್ ಬಿಲ್ ಬಾಕಿ ಬಿಲ್ಗಳ ಪಾವತಿ ಮಾಡಲು ಅಧಿಕ ವೆಚ್ಚ ಮಾಡಿದ್ದೀರಿ. ಇದಕ್ಕಿಂತ ಮಾನಗೆಟ್ಟ ಹೇಳಿಕೆಯನ್ನು ನಾನು ಎಲ್ಲೂ ನೋಡಿಲ್ಲ. ಈ ಹಣವನ್ನು ನೀವು ಸಾಧಿಲ್ವಾರ್ ನಿಧಿಯಿಂದ ಮತ್ತು ಪೂರಕ ಅಂದಾಜು ಎಂದು ಏನು ಮಾಡಿ ಕೊಂಡಿದ್ದೇವೆ ಅದರಿಂದ ತಾವು ಇದನ್ನು ಪಡೆಯಬೇಕೇ? ಇದರ ಅರ್ಥ ಏನು? ನಿಜವಾಗಿಯೂ ಸಹ ಈ ದೇಶದಸರ್ಕಾರ ಆಗಲಿ ಅಥವಾ ಯಾವುದೇ ಮಂತ್ರಿಗಳಾಗಿರಲಿ ನಿಜವಾಗಿ ಜನಸಾಮಾನ್ಯರ ಹಿತವನ್ನು ಕಾಪಾಡುವ ಉದ್ದೇಶದಿಂದ ಕೊಟ್ಟಿದ್ದರೆ ಅಂಥ ಖರ್ಚುಗಳ ಬಾಬತ್ತುಗಳಿಗೆ ಈ ರೀತಿಯಾಗಿ ಪೂರಕ ಅಂದಾಜಿನಲಲ್ ಬರುತ್ತದೆ. ಅದನ್ನು ನಾವು ಮಾಡಿದ್ದೀರಾ? ಬಜೆಟ್ನಲ್ಲಿ ಅಂಥದ್ದರ ಬಗ್ಗೆ ಮಾಡುವುದಿಲ್ಲ. 1-2-3 ಬಾಬುಗಳಲ್ಲಿ ಹಣವನ್ನು ನೀವು ಈಗಾಗಲೇ ಕೂಡಿಸಬೇಕಾಗಿದೆ, ರೂಡಿಸಬೇಕಾಗಿದೆ. ಔಟಲೇ ಮಾಡಿಕೊಂಡಿದ್ದರೆ ಅದರ ಬಾಬ್ತು ಹಣ ಖರ್ಚು ಮಾಡುವುದು ಮತ್ತು ಅದಕ್ಕೆ ಬದಲಾಗಿ 41 ಲಕ್ಷ ರೂಪಾಯಿಗಳನ್ನು ಇವತ್ತಿನ ದಿವಸ ಖರ್ಚು ಮಾಡಿ ಪೂರಕ ಅಂದಾಜಿನಲ್ಲಿ ಇದನ್ನು ತರುವುದಾದರೆ ಇದಕ್ಕಿಂತ ನಾಚಿಕೆಯಾದ ವರ್ತನೆ ವೈಯಕ್ತಿಕ ಸಹಾಯ ಮಾಡಲಿಕ್ಕೆ ಹೇಗೆ ಅಧಿಕಾರ ದುರುಪಯೋಗಪಡಿಸಿಕೊಂಡಿದ್ದೀರಿ ಹೇಗೆ ವರ್ತನೆ ಮಾಡಿದ್ದೀರಿ ಎನ್ನುವ ಬಗ್ಗೆ ನಾವು ಕ್ರಮಾಂಕ 47ರ ಬೇಡಿಕೆಯನ್ನು ನೋಡಿದರೆ ಗೊತ್ತಾಗುತ್ತದೆ. ಡೀಜಲ್ ಬಳಕೆ ಕ್ಯಾಪ್ಟೀವ್ ವಿದ್ಯುತ್ ಉತ್ಪಾದನೆ, ಮಾರಾಟ ತೆರಿಗೆ ಮರುಪಾವತಿ ಮಾಡಲು ಕಿರ್ಲೋಸ್ಕರ್ ಕಂಪನಿಗೆ 36 ಲಕ್ಷ ರೂಪಾಯಿಗಳನ್ನು ಪಾವತ್ ಮಾಡಬೇಕಾಗಿತ್ತು ಏತಕ್ಕೆ ಸ್ವಾಮಿ, ಮೊದಲು ತಮಗೆ ಗೊತ್ತಿಲ್ಲವೇ? ಪಾವತಿ ಮಾಡಬೇಕು ಎಂದು ಹೇಳಿ. ಈ, ಹಣವನ್ನು ಆಯುವ್ಯಯದಲ್ಲಿ ಒದಗಿಸಿಲ್ಲ. ತಾವು ಏನು ಮಾಡಿದಿರಿ, ಸಾಧಿಲ್ವಾರು ನಿಧಿಯಿಂದ ಹಣವನ್ನು ಬಿಡುಗಡೆ ಮಾಡಿದ್ದೀರಿ. ಇಂತಹ ಹೊಣೆರಹಿತ ಸರ್ಕಾರ ಏನು ಇದೆ, ಇದು ಹೊಣೆ ರಹಿತ ಸರ್ಕಾರದ ಕಾರ್ಯನಿರ್ವಹಣೆಯ

ಮಾದರಿ ಎಂದು ನಾನು ಬಾವಿಸುತ್ತೇನೆ. ಸನ್ಮಾನ್ಯ ಸಬಾಧ್ಯಕ್ಷರೇ ಒಬ್ಬ ವ್ಯಕ್ತಿಗೆ ಬೇಕಾದಂತಹ ಹಣವನ್ನು ಕೊಡಲಿಕ್ಕೆ ಸಾಧಿಲ್ವಾರು ನಿಧಿಯಿಂದ ಹಣವನ್ನು ಬಿಡುಗಡೆ ಮಾಡಬೇಕೇ? ಅದರ ಅವಶ್ಯಕತೆ ಇತ್ತೇ? ಸಂವಿಧಾನವನ್ನು ನಾವು ಇಟ್ಟುಕೊಂಡು ಅದರಲ್ಲಿ ಹೇಳಿ ಇಂತಹ ಎಸಪೆಂಡೀಬಸ ಇದು ಅಗುತ್ತದೆಯೇ? ಎಲ್ಲಾ ನಿಯಮಗಳನ್ನು ಗಾಳಿಗೆ ಸೂರಿ ತಮಗೆ ಇಷ್ಟಬಂದಂತೆಹ ರೀತಿಯಲ್ಲಿ ಸರ್ಕಾರ ಕೆಲಸ ಮಾಡುವುದಾರೆ ಇದಕ್ಕಿಂತ ಬೇರೆ ಉದಾಹರಣೆ ಬೇಕಾಗಿಲ್ಲವೆಂದು ನಾನು ಬಾವಿಸುತ್ತೇನೆ. ಅದೇ ರೀತಿಯಾಗಿ ಬೇರೆ ಬೇರೆ ಪ್ರಕರಣಗಳಲ್ಲಿ ಖರ್ಚು ಇವತ್ತು ಏನು ಮಾಡಿದ್ದಾರೆ? ಏಕೆಂದರೆ ಸಹಕಾರ ಇಲಾಖೆಯಿಂದ ಹಣ ಖರ್ಚು ಮಾಡಿದ್ದಾರೆ. ನಾನು ಈಗಾಗಲೇ ಹೇಳಿದ ಹಾಗೆ ರೈತರ ಬಗ್ಗೆ ಪ್ರೋತ್ಸಾಹ ಯೋಜನೆಯನ್ನು ನೀವು ತಂದಿದ್ದೀರಿ. ನಮ್ಮ ಸರ್ಕಾರ ಮೊಸಳೆ ಕಣ್ಣೀರು ರೈತರ ಬಗ್ಗೆ ಹೇಗೆ ಸುರಿಸುತ್ತದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕಾಗಿಲ್ಲ. ದಿನಾಂಕ 31-7-92ರಲ್ಲಿ ಏನು ಪ್ರೋತ್ಸಾಹ ಯೋಜನೆ ಇತ್ತು ಅದಕ್ಕೆ ಬೇಕಾದಂತಹ ಹಣವನ್ನು ಮಾಡಿಕೊಂಡಿಲ್ಲ. ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಪ್ರೋತ್ಸಾಹ ಯೋಜನೆ ಕೇವಲ ಕೆಲವು ದಿವಸಗಳಿಗೆ ಮಾತ್ರ ಸೀಮಿತವಾಗಬಾರದು. ತಾವು ಹೇಳುತ್ತೀರಿ ಇತ್ತೀಚೆಗೆ ಸಬ್ಸಿಡಿ ತೆಗೆದಿದ್ದರಿಂದ ಗೊಬ್ಬರದ ಬೆಲೆ ಹೆಚ್ಚು ಮಾಡಿದ್ದರಿಂದ ಗೊಬ್ಬರದ ಮೇಲಿನ ಹೆಚ್ಚಿನ ಬೆಲೆಯನ್ನು ನಾವು ಸಬ್ಸೀಡಿ ರೂಪದಲ್ಲಿ ಕೊಟ್ಟಿದ್ದೇವೆ ಎಂದು.ಹೆಚ್ಚಿಸಲಾದ ಗೊಬ್ಬರದ ಬೆಲೆಗೆ ಸರಿಸಮಾನವಾದ ಸಬ್ಸೀಡಿ ಕೊಟ್ಟಿಲ್ಲ. ಇವತ್ತಿನದಿವಸ ಯಾರು ಬಾಕಿ ಸಾಲವನ್ನು ತೀರುವಳಿ ಮಾದಿರುತ್ತಾರೆ ಅಂತಹವರಿಗೆ 5 ಪರ್ಸೆಂಟ್ ಹಣ ಕೊಡುವಂತಹ ಪ್ರೋತ್ಸಾಹ ಯೋಜನೆ ಜಾರಿಯಲ್ಲಿದೆ. ಇದೆಯೇ? ಇವತ್ತಿನ ದಿವಸ ಆ ಯೋಜನೆ ಜಾರಿಯಲ್ಲಿ ಇಲ್ಲ. ಕೇವಲ ಈ ಹಿಂದೆ ಇದ್ದಂಥ ಯೋಜನೆ ಪ್ರಕಾರ ಖರ್ಚುಮಾಡಿದಂತಹ ಹಣವನ್ನು ಇವತ್ತಿನ ದಿವಸ ಪೂರಕ ಅಂದಾಜಿನಲ್ಲಿ ಸೇರಿಸಿದ್ದೀರಿ. ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ನಿಡವಾಗಿಯೂ ಸಹ ರೈತನ ಬಗ್ಗೆ ನಿಮಗೆ ಏನಾದರೂ ಸಹಾಯ ಇದ್ದರೆ ನಿಜವಾಗಿಯೂ ಕೃಷಿ ಉತ್ಪಾದಕರು ಈ ರಾಜ್ಯದಲ್ಲಿ ಕುಂಠಿತರಾಗಬಾರದು ಎಂದು ಇದ್ದರೆ ಅವರಿಗೆ ಕಡಿಮೆ ಬೆಲೆಯ ಸಾಲದ ನೀತಿಯನ್ನು ರೂಪಿಸಿ ಪ್ರೋತ್ಸಾಹ ಯೋಜನೆ ಮುಂದುವರಿಸಬೇಕಾಗುತ್ತದೆಂದು ಹೇಳುತ್ತೇನೆ. ನಮ್ಮಲ್ಲಿ ಜಾರಿಯಲ್ಲಿರತಕ್ಕಹಥ ಯೋಜನೆಗಳು ನಿಯಮಗಳೂ ಸಹ ಕೃಷಿ ಉತ್ಪಾದಕರಿಗೆ ಕೃಷಿ ಕಾರ್ಮಿಕರಿಗೆ ಯಾರು ದುಡಿಯುವ ವರ್ಗ ಇದ್ದಾರೆ ಅವರ ವಿರುದ್ಧವಾಗಿ ಇವೆ ಎಂದರೆ ತಪ್ಪಾಗುವುದಿಲ್ಲ. ಒಂದು ಉದಾಹರಣೆಯನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ರಿಜವ ಬ್ಯಾಂಕ್ ಏನು ಇದೆ ಆದರೂ ಸಹ ನಮ್ಮ ಪರವಾಗಿ ಇರುವಂತಹ ಜನರು ಅಲ್ಲ. ಅವರೂ ಸಹ ಈ ದೇಶದಲ್ಲಿ ದುಡಿಯುವ ವರ್ಗದ ವಿರುದ್ಧವಾಗಿ ಇರುವಂತಹ ಜನ ಅಂದರೆ ತಪ್ಪಾಗುವುದಿಲ್ಲ, ಅವರು ಒಂದು ಔಟ್ಲೇ ಪ್ರೋಗ್ರಾಂ, ಗುರಿ ಹಾಕಿಕೊಳ್ಳುತ್ತಾರೆ. ಆ ಗುರಿ ಕರ್ನಾಟಕ ರಾಜ್ಯದಲ್ಲಿ ಯಾವ ಜಿಲ್ಲೆಗೆ ಅದರೂ ಇಷ್ಟು ಕೋಟಿ ರೂಪಾಯಿಗಳ ಸಾಲ ಕೊಡಬೇಕು ಎಂದು ಗುರಿ ಹಾಕಿಕೊಳ್ಳುವುದು.

ಕೃಷಿ ಉತ್ಪನ್ನಕ್ಕೆ, ಕೈಗಾರಿಕಾ ಉತ್ಪನ್ನಕ್ಕೆ ಅಥವಾ ಕೈಗಾರಿಕೆ ಸಲುವಾಗಿ ಎಷ್ಟು ಹಣವನ್ನು ಕೊಡಬೇಕು? ಇದರಲ್ಲಿ ಎರಡು ವ್ಯತ್ಯಾಸ ನಿಮಗೆ ಹೇಳುತ್ತೇನೆ. ಕೃಷಿಕ ಏನಿದ್ದಾನೆ ಅವನು ಸಾಲವನ್ನು ತೆಗೆದುಕೊಳ್ಳುವುದಾದರೆ ಮೊದಲು ತೆಗೆದುಕೊಂಡಿದ್ದ ಸಾಲವನ್ನು ಅವನು ವಾಪಸ್ ಕೊಟ್ಟಿರಬೇಕು. ಕೇವಲ ಅವನು

ಕೊಟ್ಟಿದ್ದರೆ ಸಾಕು ಸನ್ಮಾನ್ಯ ಅಧ್ಯಕ್ಷರೆ. ಅವನು ಯಾವ ಬ್ಯಾಂಕ್ ನಿಂದ ಹಣ ತೆಗೆದುಕೊಂಡಿದ್ದ? ಆ ಬ್ಯಾಂಕ್ ನವರು ಅಪೆಕ್ಸ್ ಬ್ಯಾಂಕ್ ಗೆ, ಅಪೆಕ್ಸ್ ಬ್ಯಾಂಕ್ ನವರು ರಿಸರ್ವ್ ಬ್ಯಾಂಕಿಗೆ ಕೊಟ್ಟಿದ್ದರೆ, ಆಗ ಈ ಕೃಷಿಕನಿಗೆ ಸಾಲ ಕೊಡುವಂಥ ಪದ್ಧತಿ ನಮ್ಮಲ್ಲಿ ಬೆಳೆದು ಬಂದಿದೆ. ಇದು ಬದಲಾಗಿಲ್ಲ.

ವೈಸ್ ಛೇರ್ಮನ್ : ತಾವು ಇನ್ನು ಎಷ್ಟು ಹೊತ್ತು ತೆಗೆದುಕೊಳ್ಳುತ್ತೀರಿ? 35 ನಿಮಿಷ ಆಯಿತು.

ಶ್ರೀ ಹೆಚ್. ಏಕಾಂತಯ್ಯ : ಆಗಲಿ. ತಾವು ಬೇಡ ಎಂದರೆ ನನ್ನದೇನೂ ತಕರಾರಿಲ್ಲ, ಇನ್ನು 15 ನಿಮಿಷ. ಸನ್ಮಾನ್ಯ ಅಧ್ಯಕ್ಷರೆ, ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ಕೃಷಿಕನು ಸಾಲವನ್ನು ಪುನಃ ತೆಗೆದುಕೊಳ್ಳಲಿಕ್ಕೆ ಮೊದಲು ತೆಗೆದುಕೊಂಡಿದ್ದ ಸಾಲವನ್ನು ಸಂಬಂಧಪಟ್ಟ ಸಹಕಾರ ಸಂಸ್ಥೆಗೆ ತೀರಿಸಬೇಕು. ಹಣವನ್ನು ಬಿಡುಗಡೆ ಮಾಡುವುದಕ್ಕೆ ರಿಸರ್ವ ಬ್ಯಾಂಕ್ ಅನುಸರಿಸುವಂಥ ನೀತಿ, ನಬಾರ್ಡ್ ಅನುಸರಿಸುವಂಥ ನೀತಿ ಇದು. ಆದರೆ ಕೈಗಾರಿಕಾ ವಿಭಾಗಕ್ಕೆ ಏನು ಹಣವನ್ನು ಇಲ್ಲಿ ಗುರಿ ಇಟ್ಟುಕೊಂಡಿರುತ್ತಾರೋ ಅದರ ಪ್ರಕಾರ ಹಣವನ್ನು ಯಾವುದೇ ಕಾರಣ ಇಲ್ಲದೆ ಯಾರು ಕೈಗಾರಿಕೆ ಮಾಡುತ್ತಾರೋ ಅವರಿಗೆ, ಸಾಲ ಮಂಜೂರು ಮಾಡಬಹುದು ಸನ್ಮಾನ್ಯ ಅಧ್ಯಕ್ಷರೆ. ಸಾಲ ತೆಗೆದುಕೊಂಡವನು ಕೊಡದೇ ಇದ್ದರೂ ಪರವಾಗಿಲ್ಲ, ಅವನು ಊರಾಗೆ ಇಲ್ಲದೇ ಇದ್ದರೂ ಪರವಾಗಿಲ್ಲ, ಅವನು ಏನಾದರೂ ಪರವಾಗಿಲ್ಲ, ಅದನ್ನು ಮಾತ್ರ ಎಷ್ಟು ಮರುಪಾವತಿಯಾಗಿದೆ ಎಂದು ಕೇಳುವಂಥ ಒಂದು ವ್ಯವಸ್ಥೆ ಈ ದೇಶದಲ್ಲಿ ಇಲ್ಲ, ಈ ರಾಜ್ಯದಲ್ಲಿ ಇಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಅರ್ಥ ಏನೆಂದರೆ, ಕೃಷಿಕ, ಯಾರು ದುಡಿಯುತ್ತಾರೋ ಅವರಿಗೆ ಮಾತ್ರ ಎಲ್ಲಾ ನಿಬಂಧನೆಗಳನ್ನು ಹಾಕುತ್ತಾರೆ. ಅವನಿಗೆ ಶೋಷಣೆ ಮಾಡಲಿಕ್ಕೆ ಬೇಕಾದ ಎಲ್ಲಾ ಕಾನೂನುಗಳನ್ನು ಮಾಡಿ ಕೊಂಡಿದ್ದಾರೆ. ಆದರೆ, ಯಾರು ಬಂಡವಾಳಗಾರರು ಇದ್ದಾರೆ, ಯಾರು ಕೈಗಾರಿಕಾ ಉದ್ಯಮಿ ಇದ್ದಾರೆ ಅವರಿಗೆ ಬೇಕಾದಂಥ ಸಹಾಯ ಮತ್ತು ಸಹಕಾರ ಕೊಡಲಿಕ್ಕೆ ಯಾವುದೇ ನಿಬಂಧನೆಗಳು ಅಡ್ಡಿಬರುವುದಿಲ್ಲ. ಯಾವುದೇ ರಾಜ್ಯ ಸರ್ಕಾರ. ಕೇಂದ್ರ ಸರ್ಕಾರವಾಗಲಿ, ನಬಾರ್ಡ್ ಆಗಲಿ, ಅರ್.ಬಿ.ಐ.ಆಗಲೀ ಇದಕ್ಕೆ ಹೊರತಲ್ಲ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಸನ್ಮಾನ್ಯ ಅಧ್ಯಕ್ಷರೆ. ಇಂಥಾ ಒಂದು ಪರಿಸ್ಥಿತಿಯಲ್ಲಿ ಏನು ಉತ್ಪಾದನೆ ಇದೆ ಈ ಉತ್ಪಾದನೆ ನಮಗೆ ಲಾಭದಿಂದ ಕೂಡಿದಂಥ ಉತ್ಪದನೆಯಾಗಬೇಕು. ಇವತ್ತಿನ ದಿವಸ ಈ ದೇಶದಲ್ಲಿ, ರಾಜ್ಯದಲ್ಲಿ, ತಮಗೆ ಈಗಾಗಲೇ ಗೊತ್ತಿದೆ, 173 ದಶಲಕ್ಷ ಟನ್ ಉತ್ಪಾದನೆ ಕೃಷಿ ಸಂಪತ್ತು ಎಂದು ಹೇಳುತ್ತಾರೆ. ಇವತ್ತು ಇದು ಕುಂಠಿತವಾಗುತ್ತದೆ ಎಂಬ ಮಾತನ್ನು ಪ್ರಧಾನ ಮಂತ್ರಿಗಳಿಂದ ಹಿಡಿದು ಎಲ್ಲರೂ ಹೇಳುತ್ತಾರೆ. ಅದಕ್ಕೆ ಕಾರಣ ಏನು? ಲಾಭದಾಯಕವಲ್ಲದ ಕೃಷಿಯನ್ನು ಯಾರು ಮಾಡಲಿಕ್ಕೆ ಹೋಗುತ್ತಾರೆ? ಗೊಬ್ಬರಕ್ಕೆ ಖರ್ಚು ಮಾಡುತ್ತಾರೆ, ಕೂಲಿಗೋಸ್ಕರ ಖರ್ಚು ಮಾಡುತ್ತಾರೆ, ಅಥವಾ ಬೇರೆ ಬೇರೆ ಬಾಬುಗಳಿಗೆ ಖರ್ಚು ಮಾಡಿ, ವ್ಯವಸಾಯದ ಉತ್ಪನ್ನದ ಬೆಲೆ ಏನಿದೆ ಬೆಲೆ ಲಾಭದಾಯಕವಾಗದಿದ್ದರೆ ಏತಕ್ಕೋಸ್ಕರ ಈ ದೇಶದ ರೈತ ಇದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತಾನೆ? ಈ ದಿಸೆಯಲ್ಲಿ ಇವತ್ತಿನ ದಿವಸ ದೇಶದ ಕೃಷಿ ಸಂಪತ್ತು ಕಡಿಮೆಯಾದರೆ ನಮಗೆ ನಿಮಗೆ ತಿನ್ನಲಿಕ್ಕೆ ಅನ್ನ ಇರಲಿಕ್ಕೆ ಸಾಧ್ಯವೆ ಸನ್ಮಾನ್ಯ ಅಧ್ಯಕ್ಷರೆ? ಪುನಃ

ನಾವು ಡಂಕಲ್ ಪ್ರಪೋಸಲ್ ಒಪ್ಪಿಕೊಂಡು ಅಮೇರಿಕಾದಲ್ಲೋ, ಜಪಾನ್ನಲ್ಲೋ ಯಾರೋ ಒಬ್ಬರ ದಾಸರಾಗಿ ಉಳಿಯುವಂಥ ಪರಿಸ್ಥಿತಿ ಬಂದೀತು. ಈ ದಿಸೆಯಲ್ಲಾದರೂ ಸಹ ನಮ್ಮ ರಾಜ್ಯ ಸರ್ಕಾರ ಕೆಲವು ಯೋಜನೆಗನ್ನು ಜಾರಿಗೆತ್ತರುವುದರ ಮೂಲಕ ಕೃಷಿಕನಿಗೆ ಸಹಾಯ ಧನ ಕೊಡಲಿಕ್ಕೆ ಇಂಥ ಕಾನೂನುಗಳನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ಮಾತನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಅದೇ ರೀತಿಯಾಗಿ ಬೇರೆ ಬೇರೆ ಏನು ಇವತ್ತಿನ ದಿವಸ ಈ ಸಾದಿಲ್ವಾರು ನಿಧಿಯಿಂದ ಹಣವನ್ನು ಖರ್ಚು ಮಾಡಿದ್ದಾರೆ ಅದರ ಬಗ್ಗೆ ಒಂದು ಶ್ವೇತ ಪತ್ರವನ್ನು ಅವರು ಹೊರಡಿಸಬೇಕು. 80 ಕೋಟಿಯಿಂದ 200 ಕೋಟಿಗೆ ಹೋಗಿ 200 ಕೋಟಿಯಿಂದ 500 ಕೋಟಿಗೆ ಹೋಗಿ ಈ ದು ಮೊತ್ತವನ್ನು ಸಾದಿಲ್ವಾರು ನಿಧಿ (ಅನ್ ಫೋರ್ಸೀನ್ ಎಸಪೆಂಡೀಚರ್) ಬಿಟ್ಟು ಎಷ್ಟು ಹಣವನ್ನು ಯಾರು ಯಾರಿಗೆ ಕೊಟ್ಟಿದ್ದಾರೆ ಎಂಬುದನ್ನು ಬಯಲು ಮಾಡುವ ದೃಷ್ಟಿಯಿಂದ ಇವತ್ತಿನ ದಿವಸ ಮುಖ್ಯ ಮಂತ್ರಿಗಳು ಏನಿದ್ದಾರೆ, ಅವರು ಏನಿದೆ ಇದನ್ನು ಬಿಡುಗಡೆ ಮಾಡಬೇಕು. ಯಾವುದೇ ವ್ಯಕ್ತಿ ದ್ವೇಷದಿಂದ ಹೇಳುವಂಥ ಮಾತಲ್ಲ ಇದು. ಈ ದೇಶದಲ್ಲಿ ಆಗಬೇಕಾದರೆ ಈ ಕೆಲಸವನ್ನು ಅವರು ಮಾಡಬೇಕಾಗಿದೆ. ಆ ಕೆಲಸವನ್ನು ಮಾಡಲಿ ಎಂಬ ಮಾತನ್ನು ಹೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಮವಸ ಈ ಪೂರಕ ಅಂದಾಜುಗಳು ಏನಿವೆ ಅದು ಅನೇಕ ಸಂದರ್ಭಗಳಲ್ಲಿ ಒಂದೆರಡು ವಿಚಾರಗಳನ್ನು ಹೊರತುಪಡಿಸಿ ಮಿಕ್ಕೆಲ್ಲಾ ವೈಯಕ್ತಿಕ ಹಿತಗಳನ್ನು ಸಾಧನೆ ಮಾಡುವುದಕ್ಕೆ ಮತ್ತು ರಾಜಕೀಯ ಮಾಡಲಿಕ್ಕೆ ಹಣವನ್ನು ದುರುಪಯೋಗ ಮಾಡಿದ್ದಾರೆ. ಅಧಿಕಾರವನ್ನು ದುರುಪಯೋಗ ಮಾಡಿದ್ದಾರೆ. ಆದ್ದರಿಂದ, ಈ ಎಲ್ಲಾ ಪೂರಕ ಅಂದಾಜುಗಳನ್ನು ವಿರೋಧ ಮಾಡುತ್ತೇನೆ ಎಂಬ ಮಾತನ್ನು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾಡುಗಳನ್ನು ಮುಗಿಸುತ್ತೇನೆ.

+ ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) : ಸನ್ಮಾನ್ಯ ಅಧ್ಯಕ್ಷರೆ, ನನ್ನ ಸ್ನೇಹಿತರು ಈಗಾಗಲೇ ಬಹಳಷ್ಟು ಈ ಬಗ್ಗೆ ಹೇಳಿ ಇದನ್ನು ವಿರೋಧಿಸಿದ್ದಾರೆ. ಅವರ ಜೊತೆಗೆ ನಾನೂ ಕೂಡ ಧ್ವನಿಗೂಡಿಸಿ ಕೇವಲ ಕೆಲವು ವಿಷಯಗಳನ್ನು ಸದನದ ಗಮನಕ್ಕೆ ತಂದು ಇದನ್ನು ವಿರೋಧ ಮಾಡಲು ಪ್ರಯತ್ನಪಡುತ್ತಿದ್ದೇನೆ. ಡಿಮ್ಯಾಂಡ್ 43 ರಲ್ಲಿ ಜಿಲ್ಲಾಪರಿಷತ್ತುಗಳ ಕಟ್ಟಡಗಳ ರಿಪೇರಿ, ಅದಕ್ಕೋಸ್ಕರ 446 ಲಕ್ಷ ರೂಪಾಯಿಗಳನ್ನು ಈ ಕಂಟಿನ್ಜೆನ್ಸಿ ಫಂಡ್ನಿಂದ ತಾವು ಕೇಳಿದ್ದೀರಿ. ಅಧ್ಯಕ್ಷರೆ. ಜಿಲ್ಲಾಪರಿಷತ್ತುಗಳನ್ನು ಟೇಕ್ ಓವರ್ ಮಾಡಿದ ಮೇಲೆ ಈ ಜಿಲ್ಲಾಪರಿಷತ್ತಿನಲಿಲ್ಲರುವ ಮರಾಮತ್ ಇಲಾಖೆಯ ಅಧಿಕಾರಿಗಳಿಗೆ ಹಬ್ಬ. ಬಹಳಷ್ಟು ಕಡೆ ಕೆಲಸಗಳು ಆಗದೆ ಬಿಲ್ಗಳನ್ನು ತೆಗೆದುಕೊಂಡಿದ್ದಾರೆ. ನನ್ನದೇ ತಾಲ್ಲೂಕಿನಲ್ಲಿ ಅಂಥ ಕೆಲಸಗಳು ಆಗಿವೆ.

3.45 ಪಿ.ಎಂ.

ಮೊನ್ನೆ ಕೋಲಾರಕ್ಕೆ ಹೋದಾಗ ಮಾನ್ಯ ಬೈರೇಗೌಡರೂ ಕೂಡ ಇದರ ಬಗ್ಗೆ ಹೇಳುತ್ತಾ ಇದ್ದರು. ಇದರ ಜೊತೆಗೆ ಕುಡಿಯುವ ನೀರಿಗೋಸ್ಕರವಾಗಿ ಕಂಟೆಂಜೆನ್ಸಿಫಂಡ್ನಿಂದ ಹಣ ಪ್ರೊವೈಡ್ ಮಾಡುತ್ತಾ ಇಲ್ಲ, ಕಳೆದ ವರ್ಷ ಮಳೆ ಅಧಿಕವಾಗಿ ರಸ್ತೆಗಳು ಹಾಳಾಗಿವೆ, ಅವುಗಳ ರಿಪೇರಿಗೋಸ್ಕರವಾಗಿ ಕಂಟೆಂಜೆನ್ಸಿ ಫಂಡ್ನಿಂದ ಹಣ ಕೊಡುತ್ತಿಲ್ಲ, ಅದಲ್ಲವನ್ನೂ ಬಿಟ್ಟು ಬಿಲ್ಡಿಂಗ್ ರಿಪೇರಿಗಳಿಗಾಗಿ ಎಂದು ಕಂಟೆಂಜೆನ್ಸಿ ಫಂಡ್‌ನಿಂದ

ಯೂನ್ ಮಾಡಿ ಶೇಕಡ 90ರಷ್ಟು ಹಣವನ್ನು ದುರುಪಯೋಗ ಮಾಡುವುದಕ್ಕೆ 446 ಲಕ್ಷ ರೂಪಾಯಿಗಳನ್ನು ಒದಗಿಸುತ್ತಿದ್ದೀರಿ? ಇದರಿಂದ ಯಾವ ಸಾಧನೆಯೂ ಆಗುವುದಿಲ್ಲ. ಕೇವಲ ಹಣದ ವ್ಯಯ ಮಾತ್ರ ಆಗಬಹುದು. ಅದರ ಬದಲು ಮೊಟ್ಟಮೊದಲನೆಯದಾಗಿ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಈ ಹಣವನ್ನು ಉಪಯೋಗಿಸಿಕೊಳ್ಳಿ, ಹಾಳಾದ ರಸ್ತೆಗಳನ್ನು ರಿಪೇರಿ ಮಾಡಲು ಗಮನಕೊಡಿ, ಹಾಳಾದ ರಸ್ತೆಗಳಲ್ಲಿ ಮನುಷ್ಯರಾದವರು ಓಡಾಡುವುದು ಕಷ್ಟವಾಗಿದೆ, ತಾಲ್ಲೂಕು ಅಭಿವೃದ್ಧಿ ಮಂಡಳಿಯವರು ಇದ್ದಾಗ ಏನು ರಸ್ತೆಗಳನ್ನು ಮಾಡಿದ್ದರು. ಅದಕ್ಕೆ ಒಂದು ಚಮಚೆ ಮಣ್ಣನ್ನು ಕೂಡ ಹಾಕುವುದರ ಕೆಲಸವನ್ನು ಇವರು ಮಾಡುತ್ತಾ ಇಲ್ಲ. ಶಾಲಾ ಕಟ್ಟಡಗಳ ದುರಸ್ತಿ ಕೂಡ ಆಗಿಲ್ಲ, ಅದೆಲ್ಲವನ್ನೂ ಬಿಟ್ಟು ಬರೀ ಕಟ್ಟಡಗಳ ರಿಪೇರಿಗಾಗಿ ಇಷ್ಟು ಹಣವನ್ನು ಉಪಯೋಗ ಮಾಡಿಕೊಳ್ಳುತ್ತೇವೆ ಅಂದರೆ ಅದಕ್ಕೆ ನಮ್ಮ ಸಂಪೂರ್ಣವಾದ ವಿರೋಧಇರಿಥೆ. ಎರಡನೆಯದಾಗಿ ನೈಸರ್ಗಿಕ ವಿಕೋಪದಿಂದುಂಟಾದ ಪರಿಹಾರ ಕಾಮಗಾರಿಕೆಗಳಿಗಾಗಿ 15 ಕೋಟಿ ರೂಪಾಯಿಗಳನ್ನು ಕೇಳಿದ್ದೀರಿ. ಇದು ಅಗತ್ಯವಾಗಿ ಬೇಕಾದ ವಿಚಾರ. ಆದರೆ ಪರಿಹಾರ ಕಾಮಗಾರಿಕೆಗಳನ್ನು ಕೇವಲ ಆಳುವ ಪಕ್ಷದ ಶಾಸಕರು ಇರುವ ಕಡೆಗಳಲ್ಲಿ ಮಾತ್ರ ಮಾಡುತ್ತೀರೋ ಅಥವಾ ವಿರೋಧ ಪಕ್ಷದ ಸದಸ್ಯರು ಇರುವ ಕಡೆಗಳಲ್ಲಿಯೂ ಮಾಡುತ್ತೀರೋ? 1991-92ರ ಅಕ್ಟೋಬರ್, ನವೆಂಬರ್ ಮಾಹೆಗಳಲ್ಲಿ ಹೆಚ್ಚಿನ ಮಳೆಯಿಂದಾಗಿ ನಮ್ಮ ತಾಲ್ಲೂಕಿನಲ್ಲಿ ಸುಮಾರು 12ವರೆ ಸಾವಿರ ಮನೆಗಳು ಹಾಳಾಗಿ ಹೋದವು. ಅದರಲ್ಲಿ ಸರಕಾರಿ ಲೆಕ್ಕದ ಪ್ರಕಾರ 6-7 ಸಾವಿರ ಮನೆಗಳು ಸಂಪೂರ್ಣವಾಗಿ ನಾಶವಾಗಿದೆ, ಇನ್ನುಳಿದ ಅರ್ಧಾಂಶದಷ್ಟು ಮನೆಗಳು ಬಿದ್ದಿವೆ. ಅದರಲ್ಲಿ ಅರ್ಧ ಬಿದ್ದ ಮನೆಗಳು ಕೂಡ 80-100 ವರ್ಷಗಳಷ್ಟು ಹಳೆಯ ಕಾಲದ ಮನೆಗಳಾಗಿತ್ತೆ. ಅದರ ಮಣ್ಣನ್ನು ಕೂಡ ಉಪಯೋಗಿಸುವುದಕ್ಕಾಗುವುದಿಲ್ಲ, ಎಲ್ಲಾದರೂ ಗದ್ದೆಗಳಿಗೆ ಹೊಡೆದರೆ ಗೊಬ್ಬರವಾದೀತು. ನಮ್ಮ ತಾಲ್ಲೂಕಿಗೆ ರಿಲೀಫ್ ಕಮಿಶನರ್ ನಾಚಕ್ರವರು, ಜಿಲ್ಲಾಧಿಕಾರಿಯವರು, ಬಂದು ನೋಡಿಕೊಂಡು ಹೋಗಿದ್ದಾರೆ, ಮಾನ್ಯ ಸಚಿವರುಗಳಾದ ಚಿಕ್ಕೇಗೌಡರು, ಖರ್ಗೆಯವರು ಕೂಡ ನೋಡಿಕೊಂಡು ಹೋಗಿದ್ದಾರೆ. ಅವರುಗಳ ಹಿಂದೆ ನನ್ನ ಸ್ವಂತ ಕಾರ್‌ನಲ್ಲಿ ಪೆಟ್ರೋಲ್ ನಾನೇ ಹಾಕಿಸಿಕೊಂಡು ಓಡಾಡಿದ್ದೇನೆ. ಆದರೆ ನಮ್ಮ ಕ್ಷೇತ್ರದಲ್ಲಿ ಒಂದೇ ಒಂದು ಮನೆಯು ಕೂಡ ಈವರೆಗೆ ಆಗಲಿಲ್ಲ, ಅಲ್ಲಿರುವವರು ಜನರಲ್ಲ ಎಂದು ತಾವುಗಳು ತಿಳಿದುಕೊಂಡಿದ್ದೀರಾ? ನಾವುಗಳು ಕರ್ನಾಟಕ ರಾಜ್ಯದವರು ಅಲ್ಲವೆಂದು ತಿಳಿದುಕೊಂಡಿದ್ದೀರಾ? ನಮ್ಮ ಕ್ಷೇತ್ರಕ್ಕೆ ಅನ್ಯಾಯ ಏಕೆ ಆಯಿಗು? ಅದೇ ನಮ್ಮ ಪಕ್ಕದ ತಾಲ್ಲೂಕಿನಲ್ಲಿ ಗೌರಿಬಿದನೂರಿನಲ್ಲಿ 5 ಸಾವಿರ ಮನೆಗಳನ್ನು ಮಂಜೂರು ಮಾಡಿದ್ದಾರೆ. ಅಷ್ಟೇ ಅಲ್ಲದೆ ಈ ಕಾಮಗಾರಿಕೆಯನ್ನು ಐದು ಜನ ನಿಮ್ಮವರೇ ಆದ ಕಂಟ್ರಾಕ್ಟರ್‌ಗಳಿಗೆ ಕೊಟ್ಟಿದ್ದೀರಿ. ಅದರಲ್ಲಿ ಒಬ್ಬರು ಕಂಟ್ರಾಕ್ಟರ್ ಸಬ್ಜೆಕ್ಟ್ ಟು ಕರೆಕ್ಷನ್, ಆ ಪ್ರಾಂತ್ಯದ ಎಂಪಿ.ಯವರ ಮಗ ಎಂದು ತಿಳಿದು ಬರುತ್ತದೆ. ಈ ಬಗ್ಗೆ ಆ ತಾಲ್ಲೂಕಿನ ಜನರು ಮನವಿಯನ್ನು ಮಾನ್ಯ ಸಚಿವರಾದ ಸಾಂಡ್ರರವರಿಗೆ ಕೊಟ್ಟಿದ್ದಾರೆ. ಕಂಟ್ರಾಕ್ಟನ್ನು ಯಾರಿಗಾದರೂ ಕೊಡಲಿ, ಎಂಪಿಗಳ ಮಗ ಎಂದಾಕ್ಷಣವೇ ಕಂಟ್ರಾಕ್ಟ ಕೆಲಸವನ್ನು ಮಾಡಬಾರದು ಎಂದು ನಾನು ಹೇಳುವವನು ಅಲ್ಲ. ಆದರೆ ಈ ಐದು ಜನ ಹೊಸ ಕಂಟ್ರಾಕ್ಟರ್ಸ್ ಏನು ಇದ್ದಾರೆ, ಇದನ್ನು ನೀವುಗಳು ಹೊಸದಾಗಿ ಕ್ರಿಯೇಟ್ ಮಾಡಿಕೊಂಡಿದ್ದೀರಿ. ಇದರಿಂದ ನಮ್ಮ ಪಕ್ಷಕ್ಕೆ ಕೆಟ್ಟ ಹೆಸರು ಬರುತ್ತದೆ. ಇದನ್ನು ಸಿಓಡಿಯವರು ಹೋಗಿ ನೋಡಿಕೊಂಡು ಬರಬೇಕು. ಅಲ್ಲಿ

ಕಂಟ್ರಾಕ್ಟರ್‌ಗಳು ಏನು ಮಾಡಿದ್ದಾರೆ ಎಂಬ ವಿವರಗಳನ್ನು ಪಡೆದುಕೊಳ್ಳಬೇಕು. ಕಂಟ್ರಾಕ್ಟರ್‌ಗೆ ಅಲ್ಲಿ ಅವರು ಏನು ಮಾಡುತ್ತಿದ್ದಾರೆ ಅಂದರೆ, ಎರಡು ಸಾವಿರ ರೂ.ಗಳ ಬೆನಿಫೀಶಿಯರಿ ಕೊಡಬೇಕು, ಇಲ್ಲದಿದ್ದರೆ ಪಾಯದಿಂದ ಫೌಂಡೇಶನ್‌ವರೆಗೆ ನಾವೇ ಕಟ್ಟಿಕೊಡಬೇಕು - ಇದು ಅವರ ಷರತ್ತು. ಇದು ಯಾವ ನ್ಯಾಯ ಸ್ವಾಮಿ? ನಾನು ಯಾರು ಹೇಳಿದ ಮಾತನ್ನು ಹೇಳುತ್ತಾ ಇಲ್ಲ. ನಾನು ಇರುವುದು ಅಲ್ಲೀಪುರ, ಗೌರಿಬಿದನೂರು ತಾಲ್ಲೂಕಿನಲ್ಲಿ. ಇಲ್ಲಿಯ ಜನರೇ ಬಂದು ನನಗೆ ಹೇಳಿದ್ದಾರೆ. ಇದು ನಿಜ ಎಂದು ನನಗೆ ತಿಳಿದು ಬಂದಿದೆ. ಆ ವಿಚಾರಗಳನ್ನೆಲ್ಲಾ ಅಲ್ಲಿಯ ಮುಖಂಡರುಗಳು ಮಾನ್ಯ ಸಚಿವರಾದ ಸ್ವಾಂಡ್ರರವರ ಗಮನಕ್ಕೆ ತಂದು ಮನವಿಯನ್ನು ಕೂಡ ಕೊಟ್ಟಿದ್ದಾರೆ. ಅದನ್ನು ಅನುಸರಿಸಿ ಕಂಟ್ರಾಕ್ಟನ್ನು ರದ್ದು ಮಾಡಬೇಕೆಂದು ಆದೇಶವನ್ನು ಕೂಡ ಕೊಟ್ಟಿದ್ದಾರೆ ಎಂದು ತಿಳಿದು ಬಂದಿದ್ದು, ಅದು ಅಫೆಕ್ಟ್ ಆದುದು ಇನ್ನೂ ಕಂಡು ಬಂದಿಲ್ಲ. ಒಟ್ಟಿನಲ್ಲಿ ಈ ಕಂಟ್ರಾಕ್ಟರ್ಗಳು ಎರಡು ಸಾವಿರ ರೂಪಾಯಿಗಳನ್ನು ಜನರಿಂದ ಏಕೆ ತೆಗೆದುಕೊಳ್ಳುತ್ತಿದ್ದಾರೆ? ಹೀಗೆ 5 ಸಾವಿರ ಮನೆಗಳಿಗೆ ತಲಾ ಎರಡು ಸಾವಿರ ರೂಪಾಯಿಗಳು ಅಂದರೆ ಎಷ್ಟು ಹಣ ಒಟ್ಟಾಯಿತು? ಒಂದು ಕೋಟಿ ರೂಪಾಯಿಗಳು ಅವರಿಗೆ ಬಂತು. ಹೋಗಲಿ ಅದರಲ್ಲಿ ಅರ್ಧ ಅಂದರೂ ಕೂಡ 50 ಲಕ್ಷ ರೂಪಾಯಿಗಳು—ಬಂದವು. ತಲಾ 10 ಲಕ್ಷ ರೂಪಾಯಿಗಳು ಕಂಟ್ರಾಕ್ಟರ್ಗೆ ಸಿಕ್ಕಿದರೂ ಏನು ಕಡಿಮೆಯಾಯಿತು? ಇದಕ್ಕಿಂತ ಹೆಚ್ಚಿಗೆ ಉಪಕಾರವನ್ನು ನಿಮ್ಮ ಪಕ್ಷದವರಿಗೆ ನೀವೇನು ಮಾಡಲು ಸಾಧ್ಯ? ನನ್ನ ತಾಲ್ಲೂಕಿನಲ್ಲಿ 12 ಸಾವಿರ ಮನೆಗಳು ಹೋದರೂ ಒಂದು ಮನೆಯನ್ನು ಕೂಡ ಕಟ್ಟಲಿಲ್ಲ, ಪಕ್ಕದ ತಾಲ್ಲೂಕಿನಲ್ಲಿ 5 ಸಾವಿರ ಮನೆಗಳನ್ನು ಮಂಜೂರು ಮಾಡಿದ್ದೀರಿ, ಇಂಥ ನಿಮ್ಮ ಅನ್ಯಾಯದ, ತಾರತಮ್ಯದ ಕೆಲಸಗಳಿಗಾಗಿ ನಾವು ಕಂಟಿಜೆನ್ಸಿ ಕೊಡಬೇಕೆ? ಹೀಗೆ ನಿಮ್ಮ ಪಕ್ಷದವರಿಗೆ ಮಾತ್ರ ಸಹಾಯ ಮಾಡಲು ಕೊಡುವುದಾದರೆ, 15 ಕೋಟಿ ರೂಪಾಯಿಗಳ ಈ ಬಾಬಿಗೆ ನಾವು ಏಕೆ ಅಪ್ರೂವಲ್ ಕೊಡಬೇಕು?

ಶ್ರೀ ಆರ್.ಎಲ್. ಜಾಲಪ್ಪ : ದಯಮಾಡಿ ಇದರ ವಿವರ ಕೊಡಬೇಕಾಗುತ್ತದೆ, ವಿವರ ಕೊಡದೇ ಇದ್ದರೆ ನೀವು ನಮಗೆ ಮೋಸ ಮಾಡುತ್ತಿದ್ದೀರಿ, ನೀವು ರಾಜಕೀಯ ಮಾಡಿ ನನ್ನ ತಾಲೂಕಿಗೆ ಬಿದ್ದುಹೋಗಿರುವ ಮನೆಗಳಿಗೆ ಕಟ್ಟುವುದಕ್ಕೆ ಮುಂದೆ ಬಂದಿಲ್ಲ ಎಂದು, ನಾನು ಘಂಟಾಘೋಷವಾಗಿ ಹೇಳಬೇಕಾಗುತ್ತದೆ ಮತ್ತು ಅಂತಹ ಒಂದು ಮೋಸ ನಡೆಯುತ್ತಿದ್ದರೆ ನೀವು ಈ ಸ್ಥಾನದಲ್ಲಿರೋಕೆ ಲಾಯಕ್ಕಲ್ಲ ಎಂದು ನಾನು ಘಂಟಾಘೋಷವಾಗಿ ಹೇಳಬೇಕಾಗುತ್ತದೆ. ಇದಕ್ಕೆ ಉತ್ತರ ತಾವು ಕೊಡಬೇಕು. ಇನ್ನು ಕೋ-ಅಪರೇಷನ್ ಬಗ್ಗೆ ಸ್ವಲ್ಪ ಹೇಳಿದ್ದೀರಿ. ಈ ಐದು ಪರ್ಸೆಂಟನ್ನು ನೇರವಾಗಿ ಇಂಟರೆಸ್ಟ್ ರಿಬೇಟ್ ಎಂದು ಕೊಡುವುದಕ್ಕಾಗುವುದಿಲ್ಲ, ನಬಾರ್ಡ್‌ನವರು ಅಬ್ಜೆಕ್ಷನ್ ಮಾಡ್ತಾರೆ ಎಂದು ಹೇಳಿ, ಇನ್ವೆರೆಟ ವೇನಲ್ಲಿ ಸಹಾಯ ಮಾಡುವುದಕ್ಕೆ ಹೊರಟಿದ್ದೀರಿ ಸಂತೋಷ. ಹಣ ಕಟ್ಟಿದವರು 5 ಪರ್ಸೆಂಟ್ ಬರುತ್ತದೆಂದು ಬಹಳ ವರ್ಷಗಳಿಂದ ಕಾಯ್ದಿದ್ದಾರೆ, ಸುಮಾರು 6 ತಿಂಗಳು 9 ತಿಂಗಳಾದರೂ ಇವತ್ತಿನವರೆಗೂ ಅದು ಬರಲಿಲ್ಲ. ಇದರ ಜೊತೆಗೆ ಮುಖ್ಯವಾಗಿ ರಾಜ್ಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಎಂದು ಒಂದಿದೆ, 27 ಕೋಟಿ ರೂಗಳಷ್ಟು ಸರ್ಕಾರದಿಂದ ಈ ಬ್ಯಾಂಕಿಗೆ ಸಹಾಯ ಇದೆ, ಅದು ಬಡ್ಡಿ ಸಬ್ಸಿಡಿ ಇರಬಹುದು, ಬೇರೆ ಬಾಬುಗಳಲ್ಲಿ 27 ಕೋಟಿ ಕೊಡಬೇಕು. ಈ ಬ್ಯಾಂಕ್ ಇವತ್ತು ಡಿಬೆಂಚರ್ ಪ್ರೊಟೆಕ್ಷನ್ ಏನು ಕೊಡ್ತಾರೆ ಅದನ್ನು ವಾಪಸ್ಸು ಕೊಡಬೇಕಲ್ಲ ವರ್ಷವರ್ಷಕ್ಕೆ ಕಂತುಗಳ ಮೂಲಕ,

ಆ ಕಂತು ಕೊಡೋಕಾಗಲಿಲ್ಲ, ಡಿಫಾಲ್ಟರ್ ಆಗಬೇಕಾಗಿತ್ತು. ಡಿಫಾಲ್ಟರ್ ಆದರೆ ಬ್ಯಾಂಕಿನ ಕ್ರೆಡಿಬಿಲಿಟಿ ಏನು? ಮತ್ತು ಈ ಬ್ಯಾಂಕಿನಿಂದ ಪ್ರಾಥಮಿಕ ಬೂ ಅಬಿವೃದ್ಧಿ ಬ್ಯಾಂಕ್‌ಗಳಿಗೆ ಮತ್ತು ಅದನ್ನು ನಂಬಿಕೊಂಡಿರುವ ರೈತರಿಗೆ ನು ಸೌಲಭ್ಯ ಸಿಗಬಹುದೆಂದು ಅದರ ಬಗ್ಗೆ ತಾವು ಏಕೆ ಯೋಚನೆ ಮಾಡಲಿಲ್ಲ? ಈ ಹಣವನ್ನು ಯಾವಾಗ ತೀರಿಸ್ತೀರಿ ನೀವು? ಹೇಗಿದ್ದರೂ ಕನ್ವೆನ್ಷನ್ಸಿ ಫಂಢ್‌ನಿಂದ 500-800 ಕೋಟಿಯನ್ನೊ ಮಾಡಿಕೊಂಡು ಇನ್ನೊಂದು 200 ಕೋಟಿ ಮಾಡಿ ಕೊಂಡುಬಿಡಿ, ಅದರಿಂದ ಇಂತಹ ಉಪಯುಕ್ತ ಕೆಲಸಕ್ಕೆ ಉಪಯೋಗಿಸ್ತೀರಿ ಅಂತ ನಾನು ಅಂದುಕೊಂಡಿದ್ದೇನೆ. ಇದನ್ನು ತಾವು ಮಾಡಲೇಬೇಕು. ಇನ್ನೊಂದು ವಿಷಯ. ಪೋಲೀಸ್ ಇಲಾಖೆ ಬಗ್ಗೆ 5 ಕೋಟಿ ರೂಗಳನ್ನು ಮೊನ್ನೆ ಅಯೋಧ್ಯೆ ಗಲಬೆ ಅದಾಗ ಪೀಡಿತರಿಗೆ ಕೊಡಬೇಕೆಂದು. ಇದನ್ನು ನಾನು ಸ್ವಾಗತಿಸುತ್ತೇನೆ. ಇದರಲ್ಲಿ ರಾಜಕೀಯ ಮಾಡುವುದಕ್ಕೆ ಹೋಗೋದು ಬೇಡ ಅಷ್ಟೇನೆ. ಅವರು ಯಾವುದೇ ಪಕ್ಷದವರಾಗಿರಗಿ, ಯಾವುದೇ ಜಾತಿಯಾಗಲಿ ಯಾರ್‍ಯಾರಿಗೆ ತೊಂದರೆಯಾಗಿದೆ ಅವರಿಗೆ ನೇರವಾಗಿ ತಲುಪಿಸುವ ವ್ಯವಸ್ಥೆ, ದಳ್ಳಾಳಿಗಳ ಮೂಲಕ ಹೋಗದೇ ಇರುವ ಒಂದು ವ್ಯವಸ್ಥೆಯನ್ನು ತಾವು ಮಾಡಿದರೆ ನಾವು ಇಲ್ಲಿ ಒಪ್ಪಿಗೆ ಕೊಡೋದ್ರಲ್ಲೂ ಅರ್ಥ ಇದೆ. ಜೊತೆಗೆ ಈ ಇಲಾಖೆಯ ಕೆಲಸಗಳ ಬಗ್ಗೆ ಒಂದು ಹೇಳಬೇಕು. ಮಾನ್ಯ ಮುತ್ರಿಗಳು ಇಲ್ಲಿಲ್ಲ, ಗೃಹಮಂತ್ರಿಗಳು ಇಲ್ಲಿರಬೇಕಾಗಿತ್ತು ಸ್ವಾಮಿ ಹೋದವರ್ಷ ನಾನು ಬಜೆಟ್ ಬಾಷಣದಲ್ಲಿ ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೆ. 5-9-91ರಂದು, ಅದೇನೆಹದರೆ, ರಾಜಕೀಯದ ಇಂಟರ್‍ಪ್ರಿಯರೆಸ ಎಷ್ಟರಮಟ್ಟಿಗೆ ರಾಜಕಾರಣಿಗಳ ಗೌರವ ಕಳೀತಿದೆ ಮತ್ತು ಅಧಿಕಾರಿಗಳನ್ನು ದುಷ್ಟರನ್ನಾಗಿ ಪರಿವರ್ತಿಸುತ್ತಿದೆ ಎಂದು ಒಂದು ಉದಾಹರಣೆ ಕೊಟ್ಟಿದ್ದೆ. ಗೌರಿಬಿದನೂರು ತಾಲ್ಲೂಕಿನಲ್ಲಿ ಕೃಷ್ಣಪ್ಪ ಅಂತ ಒಬ್ಬ ಸಬ್‌ಇನ್ಸ್‌ಪೆಕ್ಟರ್. ಈ ಮನುಷ್ಯ ಮುಳಬಾಗಿಲಿನವನು. ಇದನ್ನು ಹಿಂದೆ ಹೇಳಿದ್ದೇನೆ, ಆದರೆ ಈಗ ವಿಧಿಯಿಲ್ಲದೆ ಹೇಳಬೇಕಾಗಿದೆ. ಏಕೆಂದರೆ ಆ ರಾಕ್ಷಸನ ಕಾಟವನ್ನು ಆ ತಾಲ್ಲೂಕಿನಲ್ಲಿ ತಡೆಯೊಕಾಗಲ್ಲ, ಅದಕ್ಕಾಗಿ ನಿಮ್ಮ ಗಮನಕ್ಕೆ ಈಗ ತರುತ್ತಾ ಇದ್ದೇನೆ. ಈ ಮನುಷ್ಯನಿಗೆ ಮೈಲಾರಶಾಸ್ತ್ರ ಅಂತ ಒಬ್ಬ ಹೇಗೋ ಗಂಟುಬಿದ್ದ ಮುಳಬಾಗಿಲಿನವನು, ಇವರು ಮೂರ್‍ನಾಲ್ಕು ಜನ ಅಣ್ಣತಮ್ಮಂದಿರು. ಆತ ಹೇಳಿದ ನಮ್ಮ ಜಮಿನಿನಲ್ಲಿ ಬಂಗಾರ ಇದೆ, ನೀವು ನಿಮ್ಮ ಡಿಜಿಗಿಂತ ಹೆಚ್ಚಾಗಿ ಸುಖವಾಗಿಬಹುದು, ಕೆಲವು ಶಾಸ್ತ್ರ ಪೂಜೆ ಮಾಡಿದರೆ ನಿಮಗೆ ಬಂಗಾರ ಸಿಗುತ್ತೆ ಅಂತ. ಈ ಕೃಷ್ಣಪ್ಪನನ್ನು ಕರೆದುಕೊಂಡು ಹೋಗಿ ಎಲ್ಲಾ ನದೀಲಿ ಮುಳುಗಿಸಿದ ಈ ರಾಜ್ಯದಲ್ಲಿ, ಮತ್ತು ಸಮುದ್ರದಲ್ಲೂ ಕೂಡ ಸ್ನಾನ ಮಾಡಿಸಿದ ಮಂಗಳೂರು ಹತ್ತಿರ, ಉಡುಪಿ ಪೂಜೆಗಳಲ್ಲಿ ಮಾಡಸಿದ. ಒಂದು ರಾತ್ರಿ ಭೂಮಿ ಅಗೆಯೋವಾಗ ಹೇಗೋ ಜನಕ್ಕೆ ಗೊತ್ತಾಯಿತು ಎಲ್ಲ ಓಡಿಬಂದ್ರು ಇವನು ತಪ್ಪಿಸಿಕೊಂಡು ಹೊರಟುಹೋದ. ಈ ಮೈಲಾರಶಾಸ್ತ್ರಿ ಹೇಳಿದ್ದ ನಾನು ಗೌರಿಬಿದನೂರು ತಾಲೂಕಿನವನು, ವೈಚುಕುರಲಳ್ಳಿಯವನು ಅಂತ. ಗೌರಿಬಿದನೂರಿಗೆ ಟ್ರಾನ್ಸ್‌ಫರ್ ಮಾಡಿಸಿಕೊಂಡು ಬಂದ ಈ ಸಬ್‌ಇನ್‌ಸ್ಪೆಕ್ಟರ್, 8 ದಿವಸಕ್ಕೇ ಅವನ ತಂದೆ ಮತ್ತು ಅಣ್ಣನನ್ನು ಹಿಡಿದು ತರಿಸಿದ. ಅವರ ತಂದೆ ಅವರ ಅಣ್ಣ ಸುಣ್ಣಕಲ್ಲಿನವರು ಅಂತ, ಸುಣ್ಣಕಲ್ಲು ಸುಡೋ ಜಾಗ, 18 ಗಂಟೆ ಜಮೀನೂ, ಕೂಲಿ ಮಾಡಿದರೆ ಜೀವನ ಇಲ್ಲದಿದ್ದರೆ ಇಲ್ಲ, ಅವನ್ನು ಕರ್ಕೊಂಡುಬಂದು 5 ದಿವಸ ಸ್ಟೇಷನ್‌ನಲ್ಲಿ ಹಾಕಿ ಚಚ್ಚಿದ, ನಿನ್ನ ಮಗ ಎಲ್ಲಿದ್ದಾನೆ ಹೇಳಿ ಅಂತ. ಅವರಿಗೂ ಗೊತ್ತಿಲ್ಲ, ಅವನಿಗೆ 8 ವರ್ಷ ಇದ್ದಾಗ ತಪ್ಪಿಸಿಕೊಂಡು ಹೋಗಿದ್ದವನು ಅವನು.

ಕಡೆಗೆ ಮಧ್ಯೆ ಅಲ್ಲಿನ ಜಿಲ್ಲಾಪರಿಷತ್ತಿನ ಸದಸ್ಯರಾದ ಜ್ಯೋತಿರೆಡ್ಡಿಯವರು ಮತ್ತು ಬೇರೆಯವರ ಮಧ್ಯೆ ಪ್ರವೇಶ ಮಾಡಿ ಕೋರ್ಟಿಗೆ ಕೇಸನ್ನು ಹಾಕಿದರು. ಅವರ ಮೇಲೆ ಸಬ್‌ಇನ್ಸ್‌ಪೆಕ್ಟರ್ ಮೇಲೆ ಕೇಸನ್ನು ಹಾಕಿದರು.

ಆಗ ಅವನು ಒಂದು ಖಾಲಿ ಬಾಂಡ್ ಪೇಪರ್ ಮೇಲೆ ಸೈನ್ ಹಾಕಿಕೊಂಡು ಅವರ ತಂದೆ ಹತ್ತಿರ ಅವರಿಬ್ಬರನ್ನೂ ಬಿಡುಗಡೆ ಮಾಡಿ. ಅವರನ್ನು ಆಚೆಗೆ ಕಳುಹಿಸಿದಿರಿ. ಕಳುಹಿಸಿ ಮತ್ತೆ ಎಂಟು ದಿವಸಕ್ಕೇ ಅವರ ಅಣ್ಣನನ್ನು ಕರೆಸಿರಿ. ಅವರ ಅಣ್ಣ ಹೋದವರು, ಅವರು ಹನುಮಂತರಾಯಪ್ಪ ಎನ್ನತಕ್ಕಂಥವರು, ಇವತ್ತಿನವರೆಗೂ ಅವರು ಪತ್ತೆ ಇಲ್ಲ, ಅದೆಲ್ಲಿ ಹೋದರೋ ಗೊತ್ತಿಲ್ಲ, ಸುಮಾರು ಎರಡು ವರ್ಷವಾಯಿತು. ಆ ಖಾಲಿಬಾಂಡ್ ಪೇಪರ್ ಮೇಲೆ ಸಹಿ ಹಾಕಿಸಿಕೊಂಡು ಅದರಲ್ಲಿ ಅವರ ಜಮೀನನ್ನು ಬರೆಸಿಕೊಂಡ. ಬೇರೆ ಸ್ಟ್ಯಾಂಪ್ ವೆಂಡಾರ್ ಅವರ ಹತ್ತಿರ ಜಮೀನನ್ನು ಬರೆಸಿಕೊಂಡ. ಇದರ ಬಗ್ಗೆ ಕೋರ್ಟ್‌ನಲ್ಲಿ ಕೇಸ್ ಆಯಿತು. ಕಳೆದ ಬಾರಿ ನಾನು ಈ ವಿಷಯವನ್ನು ಸದನದಲ್ಲಿ ಹೇಳಿದ್ದೆ. ಇದೇನಾದರೂ ಸುಳ್ಳು ಎಂದಾದರೆ ಈ ಕೇಸು ಸುಳ್ಳು ಎಂದಾದರೆ ನಾನು ರಾಜೀನಾಮೆಯನ್ನು ಕೊಡುತ್ತೇನೆ ಎಂದು ಹೇಳಿದ್ದೆ. ಸ್ವಾಮಿ ನಾನೊಬ್ಬ ಶಾಸಕನಾಗಿ ನಾನು ಜವಾಬ್ದಾರಿ ಇರತಕ್ಕಂಥವನಾಗಿ, ಒಬ್ಬ ಮಾಜಿ ಗೃಹಮಂತ್ರಿ ಆದ ನಾನು ಈ ಸದನದಲ್ಲಿ ಇದನ್ನು ಹೇಳಿದಾಗ ಎಷ್ಟರಮಟ್ಟಿನ ಒಂದು ತೀಕ್ಷ್ಣತೆಯನ್ನು ತೆಗೆದುಕೊಳ್ಳಬೇಕೋ ಅದನ್ನು ತಾವು ತೆಗೆದುಕೊಂಡಿದ್ದೀರಾ? ನಿಮಗೆ ಅಲ್ಲಿ ಇರುವುದಕ್ಕೆ ನೈತಿಕ ಹಕ್ಕು ಇದೆಯೇ? ಸಿ.ಓ.ಡಿ.ಗೆ ರೆಫರ್ ಮಾಡಿದರು. ಅದು ಹತ್ತು ಸಾರಿ ಅತ್ತು ಕರೆದಮೇಲೆ ಸಿ.ಓ.ಡಿ. ರೆಫರ್ ಮಾಡಿದರೆ. ಸಿ.ಓ.ಡಿ ಅವರು ಒಂದು ರಿಪೋರ್ಟ್‌ನ್ನು ಕಳುಹಿಸಿದ್ದಾರೆ. ಏನು ಬಂದಿದೆ, ಅದೆಲ್ಲಾ ನಿಜ ಎಂದು ಬಂದಿದೆ. ಇದರ ಬಗ್ಗೆ ಏನು ಆಕ್ಷನ್ ತೆಗೆದುಕೊಂಡಿದ್ದೀರಿ? ಅವರ ಮೇಲೆ. ಮೂರು ವರ್ಷಗಳಿಂದ ಅಲ್ಲಿಯೇ ಇಟ್ಟಿದ್ದೀರಿ. ಅವನನ್ನು ಸಸ್ಪೆಂಡೋ ಅಥವಾ ಡಿಸ್‌ಮಿಸ್ ಮಾಡಬೇಕಾಗಿತ್ತು ನ್ಯಾಯವಾಗಿ. ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ನಾಚಿಕೆಯಾಗುವುದಿಲ್ಲವೇ ಸ್ವಾಮಿ ಗೃಹಮಂತ್ರಿ ಎಂದು ಅನಿಸಿಕೊಳ್ಳುವುದಕ್ಕೆ ನಿಮಗೆ ನಾಚಿಕೆ ಇಲ್ಲವೇ? ನಾನು ಹಿಂದಿನ ಗೃಹಮಂತ್ರಿಗಳಿಗೂ ಹಲವಾರು ಸಾರಿ ಹೇಳಿದ್ದೇನೆ. ಈ ಒತ್ತಡಕ್ಕೆ ಬಲಿಯಾಗಿ ಅಲ್ಲಿ ಶಾಸಕರಿಗೆ ಅಲ್ಲಿ ಪಾರ್ಲಿಮೆಂಟ್ ಸದಸ್ಯರ ಒತ್ತಡಕ್ಕೆ ಬಲಿಯಾಗಿ ಜನರನ್ನು ಬಲಿಕೊಡುತ್ತೀರಾ? ಈ ಅಡ್ಮಿನಿಸ್ಟ್ರೇಷನ್ ಈ ಸಿವಿಲ್ ಸರ್ವೀಸ್‌ನ್ನು ನೀವು ಹಾಳು ಮಾಡುತ್ತಿದ್ದೀರಿ. ಇದಕ್ಕೆ ಸರಿಯಾದ ಉತ್ತರ ಬೇಕು. ಜನತೆಗೆ ಇದು ಗೊತ್ತಾಗಬೇಕು. ನಾನೊಂದು ಛಾಲೆಂಜ್ ಮಾಡಿ ಇಲ್ಲಿ ನಾನು ರಾಜೀನಾಮೆಯನ್ನು ಕೊಡುತ್ತೇನೆ ಎಂದು ಹೇಳಿದರೆ ಅದನ್ನು ತೀಕ್ಷ್ಣವಾಗಿ ತೆಗೆದುಕೊಳ್ಳದಿದ್ದರೆ ನಿಮಗೆ ಯಾವ ನೈತಿಕ ಹಕ್ಕು ಇದೆ? ಅಲ್ಲಿ ಕುಳಿತುಕೊಂಡು ನೀವು ಬೇರೆಯವರಿಗೆ ಉಪದೇಶವನ್ನು ಮಾಡುವುದಕ್ಕೆ ಯಾವ ನೈತಿಕ ಹಕ್ಕು ಇದೆ? ಮತ್ತು ಹೀಗಾದರೆ ಕೇಸ್ ಎಷ್ಟರಮಟ್ಟಿಗೆ ಹದಗೆಡುತ್ತದೆ, ಎಷ್ಟರಮಟ್ಟಿಗೆ ಜನತೆಯನ್ನು ಸುಲಿಗೆ ಮಾಡುತ್ತಾರೆ ಎನ್ನುವುದು ನಿಮಗೆ ಗೊತ್ತೇನು? ಅದೇ ಒಬ್ಬ ಸಬ್ ಇನ್ಸ್‌ಪೆಕ್ಟರ್ ಒಬ್ಬರ ಮೇಲೆ 307 ಕೇಸನ್ನು ಹಾಕಿದ. ಅದು ವೀರೇಂದ್ರ ಪಾಟೀಲರ ಕಾಲದಲ್ಲಿ ಎಂದು ಕಾಣುತ್ತದೆ. ಇಲ್ಲಿ ಬಂದು ಕೇಳಿಕೊಂಡ. ಸ್ವಾಮಿ ನನ್ನನ್ನೇ ಹೊಡೆದು ನನ್ನ ಮೇಲೆ 307 ಕೇಸನ್ನು ಹಾಕಿದ್ದಾರೆ ಎಂದು. ಅದನ್ನೂ ಸಿ.ಓ.ಡಿ.ಗೆ ಕಳುಹಿಸಿದರು. ಸಿ.ಓ.ಡಿ. ಯಿಂದ ರಿಪೋರ್ಟ್ ಬಂದಿದೆ. ಇದು ಸುಳ್ಳು, ಗಂಗಾಧರಪ್ಪ ಎನ್ನುವವರ ಮೇಲೆ ಸುಳ್ಳು ಕೇಸನ್ನು 307ನ್ನು ಹಾಕಿದ್ದಾರೆ ಎಂದು.

ಸಬ್ ಇನ್ಸ್ಪೆಕ್ಟರ್‌ರು ತಪ್ಪು ಎಂದು ಹೇಳಿ ಸಿ.ಓ.ಡಿ. ರಿಪೋರ್ಟ್ ಬಂದಿದೆ. ಏನು ಮಾಡುತ್ತಿದ್ದೀರಿ? ಅವರ ಮೇಲೆ ಏನು ಮಾಡುವುದಕ್ಕೆ ನಿಮಗೆ ಧೈರ್ಯ ಇಲ್ಲ, ತಾಕತ್ತು ಇಲ್ಲ. ಏನು ಸಮಾಚಾರ? ಮೂರನೆಯದಾಗಿ ಕಳೆದ 16ನೇ ತಾರೀಖು ಅಲ್ಲಿನ ಅಡ್ವೋಕೇಟ್‌ಗಳು ಕೋರ್ಟ್‌ಗೆ ಹೋಗದೆ ಪ್ರೊಟೆಸ್ಟ್ ಮಾಡಿದ್ದಾರೆ. ಅಲ್ಲಿ ಒಬ್ಬ ಅಪರಾಧದ ಮೇಲೆ ಕಂಪ್ಲೇಂಟ್ ಬಂತು. ಆ ಕಂಪ್ಲೇಂಟ್ ಮೇಲೆ ಕೆಲವು ಕೇಸ್‌ಗಳನ್ನು ಸಬ್ ಇನ್ಸ್‌ಪೆಕ್ಟರ್ ಹಾಕಿದರು ಅವನು ಹೇಳಿದ, ಜಾಮೀನು ತೆಗೆದುಕೊಂಡು ಬಂದ. ಜಾಮೀನು ತೆಗೆದುಕೊಂಡ ಬಂದ ಎಂದು ಹೇಳಿ ಹೊಟ್ಟೆಉರಿಗೆ ಅವನನ್ನು ಕರೆದುಕೊಂಡು ಹೋಗಿ 15ನೇ ತಾರೀಖಿನ ದಿವಸ ಸ್ಟೇಷನ್‌ನಲ್ಲಿ ಹಾಕಿ ಚೆನ್ನಾಗಿ ಚಚ್ಚಿಬಿಟ್ಟ. ಚಚ್ಚಿದ ಎಂದರೆ ಕೈಕಾಲು ಮುರಿಯುವ ಹಾಗೆ ಚಚ್ಚಿಬಿಟ್ಟ. ಅವನನ್ನು ಪ್ರೊಡ್ಯೂಸ್ ಮಾಡಬೇಕು ಎಂದು ಅಡ್ವೋಕೇಟ್‌ಗಳೆಲ್ಲಾ ಪ್ರೊಟೆಸ್ಟ್ ಮಾಡಿದರು. ಆಗ ಅವರು ಹೇಳಿದರು, ಎರಡು ಟೈಮನ್ನು ತೆಗೆದುಕೊಂಡರು, ಒಂದು ಮೂರು ಗಂಟೆ, ಮೂರು ಗಂಟೆ ಆದಮೇಲೆ ಕಡೆಗೆ ಐದೂವರೆ ಗಂಟೆ ಅಷ್ಟರಒಳಗಾಗಿ ಅವನನ್ನು ಕೋರ್ಟ್‌ನಲ್ಲಿ ಪ್ರೊಡ್ಯೂಸ್ ಮಾಡಲಿಲ್ಲ. ಕಡೆಗೆ ಐದೂವರೆ ಗಂಟೆಗೆ ಹೋಗಿ 107 ಐಪಿಸಿ ಪ್ರಕಾರ ಅವನನ್ನು ಅರೆಸ್ಟ್ ಮಾಡಿದ್ದೇವೆ ಎಂದು ಹೇಳಿ ಅಮೇಲೆ ಬಿಟ್ಟುಬಿಟ್ಟಿದ್ದೇನೆ ಎಂದು ಹೇಳಿದ. ಕೋರ್ಟ್‌ಗೆ ಪ್ರೊಡ್ಯೂಸ್ ಮಾಡಲಿಲ್ಲ. ಇದನ್ನು ಪ್ರತಿಭಟಿಸಿ ಅಡ್ವೋಕೇಟ್‌ಗಳೆಲ್ಲಾ ಪ್ರತಿಭಟನೆ ಮಾಡಿದರು ಕಳೆದ 16ನೇ ತಾರೀಖಿನ ದಿವಸ. ಸರ್ಕಾರಕ್ಕೆ ರೆಪ್ರೆಸೆಂಟೇಷನನ್ನು ಕೊಟ್ಟಿದ್ದಾರೆ. ಅವರ ಮೇಲೆ ನೀವು ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಏತಕ್ಕೆ ಇದು ಆಗಲಿಲ್ಲ? ಹೇಳಬೇಕು. ನೀವು ಇದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ಸ್ವಾಮಿ ಇನ್ನೊಂದು ದೊಡ್ಡ ತಮಾಷೆ ಎಂದರೆ ನಮ್ಮ ತಾಲ್ಲೂಕಿನಲ್ಲಿ ಒಬ್ಬ ಇನ್ಸ್‌ಪೆಕ್ಟರ್ ರೆಪ್ರೆಸೆಂಟೇಷನನ್ನು ಕೊಟ್ಟಿದ್ದಾರೆ. ಅವನ ಮೇಲೆ ನೀವು ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಏತಕ್ಕೆ ಇದು ಆಗಲಿಲ್ಲ? ಹೇಳಬೇಕು. ನೀವು ಇದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ಸ್ವಾಮಿ ಇನ್ನೊಂದು ದೊಡ್ಡ ತಮಾಷೆ ನಮ್ಮ ತಾಲ್ಲೂಕಿನಲ್ಲಿ ಒಬ್ಬ ಇನ್ಸ್‌ಪೆಕ್ಟರನ್ನು ಹಾಕಿದರು. ಅವರು ಕೆ.ಎನ್.ಎ. ರೆಡ್ಡಿ ಎಂದು ಗೃಹ ಮಂತ್ರಿಯಾಗಿದ್ದಾಗ ದಯಮಾಡಿ ಕೇಳಿಸಿಕೊಳ್ಳಬೇಕು. ಇರುವವರು ಒಬ್ಬರೇ ಮಂತ್ರಿಗಳು. ದಯಮಾಡಿ ಕೇಳಿಸಿಕೊಳ್ಳಿ. ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ನಿಮ್ಮ ಪಾಡಿಗೆ ನೀವು ಮಾತನಾಡುತ್ತಿದ್ದರೆ ಏತಕ್ಕೆ ಅರಣ್ಯ ರೋಧನ ಮಾಡಿಕೊಳ್ಳಬೇಕು? ನ್ಯಾಯವಾಗಿ ಮುಖ್ಯಮಂತ್ರಿಗಳು ಇರಬೇಕು. ಹೋಗಲಿ, ತಾವು ಸೀನಿಯರ್ ಮಂತ್ರಿಗಳು ಇದ್ದೀರಿ, ತಾವಾದರೂ ಗುರುತು ಹಾಕಿಕೊಂಡು ಅವರ ಗಮನಕ್ಕೆ ತೆಗೆದುಕೊಂಡು ಬನ್ನಿ ಎಂದು ಕೇಳಿ ತಮ್ಮಲ್ಲಿ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ. ನನ್ನ ತಾಲ್ಲೂಕಿಗೆ ಒಬ್ಬ ಕೆ.ಎನ್.ಎ. ರೆಡ್ಡಿ ಎಂದು ಸಬ್‌ಇನ್ಸ್‌ಪೆಕ್ಟರನ್ನು ಹಾಕಿದರು. ಆಗ ನಾನು ಹೇಳಿದೆ ಸ್ವಾಮಿ ಅವರ ಚರಿತ್ರೆ ನನಗೆ ಸ್ವಲ್ಪ ಗೊತ್ತಿದೆ ದಯಮಾಡಿ ನನ್ನ ತಾಲ್ಲೂಕಿಗೆ ಇವರನ್ನು ಹಾಕಬೇಡಿ ಎಂದು ಹೇಳಿದೆ. ಆಮೇಲೆ ಕೆಲವು ವಿಷಯಗಳನ್ನು ಹೇಳಿದೆ. ಸರಿ ಆಯಿತು ಎಂದು ಹೇಳಿ ಛೇಂಜ್ ಮಾಡಿದರು. ಆದರೆ ಅವರು ಹೋಗಲಿಲ್ಲ ಸ್ವಾಮಿ.

ಅಲ್ಲಿ ಎರಡು ತಿಂಗಳು ವಾಸವಾಗಿದ್ದು ತಿರುಗಿ ಅದೇ ಅಲ್ಲಿನ ಬಂಗಾರಪ್ಪನವರ ಗಲಾಟೆ ಇತ್ತಲ್ಲ, ಯಾರು ಈ ಕಡೆನೋ ಯಾರು ಆ ಕಡೆನೋ, ಏನೋ ರಾತ್ರಿ ಒಂದು ಕಡೆ, ಬೆಳಿಗ್ಗೆ ಒಂದು ಗೊತ್ತಾಗುತ್ತಿಲ್ಲ. ಆಗ ಅವನನ್ನು ಎದುರಿಸಿದರು. ಯಾರು ಎಂದರೆ ಆ ಭಾಗದ ಪ್ರಾಂತ್ಯದ ಎಂ.ಪಿ. ಸಾಹೇಬರು ಎದುರಿಸಿ ಕಡೆಗೆ

ಅಲ್ಲೇ ಇಳಿಸಿದರು. ಅವರು ಸರಿ ಎಂದ ಗ್ರಾಮದವರು ತಿಳಿದುಕೊಂಡರು. ಅಲ್ಲಿ ಪಕ್ಕದ ಭಾಗದ ಹಳ್ಳಿಯವರು ಅವನನ್ನು ಹಾಕಿಸಿದರು. ಸರಿ ಹಾಕಿದರೆ ಹಾಕಿಕೊಳ್ಳುತ್ತಾರೆ ಅವರ ಸರ್ಕಾರ ಇದೆ ಹಾಕಿಕೊಳ್ಳುತ್ತಾರೆ ನನಗೆ ಏನು ಎಂದು ಸುಮ್ಮನೆ ಅದೆ. ನವೆಂಬರ್ 28ನೇ ತಾರೀಖು ಒಂದು ಲಾರಿ ಗಂಧ ಶ್ರೀನಿವಾಸಪುರ ಲೋಡ್‌ನಲ್ಲಿ ಪೂನಾಕ್ಕೆ ಹೋಗುತ್ತಿತ್ತಂತೆ. ಇದು ಇರುವುದು ದೊಡ್ಡಬಳ್ಳಾಪುರದಲ್ಲಿ. ಕೋಲಾರ ಪಕ್ಕದಲ್ಲಿ ಶ್ರೀನಿವಾಸಪುರ ಅಲ್ಲಿಂದ ಹೋಗುತ್ತಾ ಇದ್ದಾಗ ಅಲ್ಲಿ ಹೋಗಿ ಒಂದು ಲಾರಿಯನ್ನು ಹಿಡಿದುಕೊಂಡು ಬಂದರು 29ನೇ ತಾರೀಖು ಎಲ್ಲಾ ವ್ಯಾಪಾರ ನಡೆಯಿತು. 30ನೇ ತಾರೀಖಿನ ದಿವಸ ನನ್ನ ತಾಲ್ಲೂಕಿನ ಒಂದು ಹಳ್ಳಿ ಹುಲಿಕುಂಟೆ ಎಂಬ ಒಂದು ಗ್ರಾಮ ಇದೆ. ಆ ಹುಲಿಕುಂಟೆ ಗ್ರಾಮದ ರಂಗಸ್ವಾಮಿ ಎನ್ನುವವರ ಒಂದು ಎಸ್ಟೇಟಿಗೆ ತೆಗೆದುಕೊಂಡು ಹೋಗಿ ಬಿಟ್ಟರು ಈ ಬಾರಿಯಲ್ಲಿ ಬೆಳಿಗ್ಗೆ ಮಫ್ತಿಯಲ್ಲಿ ಪ್ರೈವೇಟ್ ಕಾರಿನಲ್ಲಿ ಹೋದರು. ಆ ಬಾವಿಯನ್ನೂ ತೆಗೆದುಕೊಂಡು ಹೋಗಿ ಬಿಟ್ಟರು. ಲಾರಿಯನ್ನು ಅಲ್ಲಿ ಬಿಟ್ಟು ಮಧ್ಯೆ ಎರಡು ಮೂರು ಸಾರಿ ಇವರು ಓಡಾಡಿದರು. ಸುತ್ತಮುತ್ತಲ ಜನಕ್ಕೆ ಅನುಮಾನ ಬಂತು. ಏನು ಇದೆ, ಏಕೆ ಲಾರಿಯನ್ನು ತೆಗೆದುಕೊಂಡು ಬಂದು ಬಿಟ್ಟು ಹೀಗೆ ಓಡಾಡುತ್ತಿದ್ದಾನೆ ಎಂದು. ಸಣ್ಣ ಸಣ್ಣ ಹುಡುಗರನ್ನು ಕಳಿಸಿದರು ಅಲ್ಲಿ ಏನಾಗುತ್ತಿದೆ ನೋಡಿಕೊಂಡು ಬಾ ಲಾರಿ ಹತ್ತಿರ. ಅವನು ಹೋದ, ಅಲ್ಲಿ ಗಂಧ ಎಂದು ವಾಸನೆ ಬರುತ್ತಿತ್ತು. ಅಣ್ಣ ಗಂಧ ಇದ್ದ ಹಾಗೆ ಐತೆ ಎಂದು. ರಾತ್ರಿ 8.30 ಗಂಟೆಗೆ ಈ ಲಾರಿಯನ್ನು ಹಿಂದೆ ಬಿಟ್ಟುಕೊಂಡು ಮಫ್ತಿಯಲ್ಲಿ ನಾಲ್ಕು ಜನ ಪೋಲೀಸರು ಕುಳಿತುಕೊಂಡು ಇವರು ಡ್ರೆಸ್ ಹಾಕಿಕೊಂಡು ವ್ಯಾನ್ ಮುಂದೆ ಲಾರಿ ಹಿಂದೆ ಬಂತು. ಐದು ಜನ ಹುಡುಗರು ಅವರು ಯಾರಿಗೂ ಮದುವೆ ಆಗಿಲ್ಲ, ಅವರು ಅಡ್ಡ ಬಂದು ನಿಂತು ಕೊಂಡುಬಿಟ್ಟರು. ನಾವು ಬಿಡುವುದಿಲ್ಲ, ಲಾರಿಯನ್ನು ಎಂದು ಕಲ್ಲು ಇಟ್ಟರು. ಏಕೆ ಎಂದು ಇಳಿದು ಕೇಳಿದ. ನೀನು ಇದರಲ್ಲಿ ಗಂಧ ಸಾಗಿಸುತ್ತಿದ್ದೀಯಾ, ನೀನೂ ಇದರಲ್ಲಿ ಸೇರಿಕೊಂಡಿದ್ದೀಯ. ಇದು ರಾತ್ರಿ ಪೋಲೀಸ್‌ನವರು ಬರಬೇಕು, ಎಸ್‌ಪಿ ಅವರು ಬರಬೇಕು. ಇಲ್ಲಿ ಮಹಜರ್ ಮಾಡಬೇಕು. ಮಹಜರ್ ಮಾಡಿದ ಮೇಲೆ ಗಾಡಿಯನ್ನು ಮುಂದಕ್ಕೆ ಬಿಡುತ್ತೇವೆ ಇಲ್ಲದಿದ್ದರೆ ಬಿಡುವುದಿಲ್ಲ ಎಂದರು. ಆಗಲಿ ಬಿಡಿ ಸ್ವಾಮಿ, ಪ್ರಪಂಚ ಏನೂ ಮುಳುಗಿ ಹೋಗುವುದಿಲ್ಲ. ಯಾರಿಗೂ ಅಷ್ಟು ಇಂಟರೆಸ್ಟ್ ಇದ್ದ ಹಾಗೆ ಕಾಣಲಿಲ್ಲ. ಇನ್ನು ಐದು ನಿಮಿಷ ಆದರೂ ಪರವಾಗಿಲ್ಲ.

ಛೇರ್ಮನ್ : ಇನ್ನೂ ಮಾತನಾಡುವವರು ಇದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಈ ರೀತಿ ಯಾವಾಗ ಹೇಳಿದರು. ಏಯ್ ಇವರನ್ನು ಚಚ್ಚಿರೋ ಎಂದರು. ನಾಲ್ಕು ಜನ ಪೋಲೀಸ್‌ನವರು ಮಫ್ತಿಯಲ್ಲಿ ಇಳಿದರು, ಚಚ್ಚಿದರು. ಇವನು ಹೇಳಿದ, ಕಲ್ಲು ಎತ್ತಿ ಆಚೆ ಬಿಸಾಕಿದ. ಅಚೆಗೆ ಬಿಸಾಕಿದ ಮೇಲೆ ಲಾರಿ ಮುಂದೆ ಹೋಯಿತು. ಜೀಪ್‌ನಲ್ಲಿ ನಾಲ್ಕು ಜನ ಕುಳಿತುಕೊಂಡರು. ಇನ್‌ಸ್ಪೆಕ್ಟರ್ ಕುಳಿತುಕೊಳ್ಳುವಾಗ ಬಿಡಲಿಲ್ಲ, ಆ ಊರಿನ ಜನ ಎಳೆದುಕೊಂಡರು ಬಿಟ್ಟರು. ಎಳೆದುಕೊಂಡರೂ ರಾತ್ರಿ 4 ಗಂಟೆಯವರೆಗೆ ಅಲ್ಲೇ ಊರಿನಲ್ಲಿ ಇಟ್ಟಿದ್ದರು. ಈ ಮಧ್ಯೆ ಏನಾಯಿತು ಎಂದರೆ ಈ ಪೋಲೀಸ್‌ನವರು ಭಯ ಪಟ್ಟು ವ್ಯಾನನ್ನು ಲಾರಿಯನ್ನು ಪೋಲೀಸ್ ಸ್ಟೇಷನ್ ಹತ್ತಿರ ಬಿಟ್ಟರು. ಬೆಳಗೆ ರಾತ್ರಿ ಒಂದು ಗಂಟೆಗೆ ಎಸ್ಪಿಗೆ ಫೋನ್ ಮಾಡಿದರು. I have to compliment Mr. Jayaprakash, who is S.P. of Bangalore Rural District. He immediately

took prompt action. He went there and found out the truth. Then this Inspector is kept under subpension.

ಬರೀ ಸಸ್ಪೆನ್ಷನ್ ಅಲ್ಲ ಸ್ವಾಮಿ. ವ್ಯಾಪಾರ ಮಾಡಿಕೊಂಡಿದ್ದನಂತೆ ಅದು ಲಕ್ಷಕ್ಕೆ ನಮಗೆ ಇದು ವರ್ತಮಾನ ಬಂತು. ಐದು ಲಕ್ಷ ರೂಪಾಯಿ ಅಡ್ವಾನ್ಸ್ ತೆಗೆದುಕೊಂಡಿದ್ದನಂತೆ. ಡಾಬಸ್ಪೇಟೆ ಹತ್ತಿರ ಹೈವೇಗೆ ಬಿಡುವುದು ಅಲ್ಲಿ ಮಿಕ್ಕ ದುಡ್ಡು ತೆಗೆದುಕೊಂಡು ಬರುವುದು ಎಂದು ಹೇಳಿ ವ್ಯವಹಾರ ಆಗಿತ್ತಂತೆ. ಇದು ಅವರೆಲ್ಲರಿಗೆ ಗೊತ್ತಾಗಿದೆ. ತಕ್ಷಣವೇ ಸಾಯಂಕಾಲ ಡಿ.ಜಿ. ಅವರು ಕೂಡ ಸಸ್ಪೆನ್ಷನ್ ಆರ್ಡರ್ ಪಾಸ್ ಮಾಡಿ ಅವನನ್ನು ಸಸ್ಪೆನ್ಷನ್ನಲ್ಲಿ ಇಟ್ಟಿದ್ದಾರೆ. ನನ್ನ ಪ್ರಶ್ನೆ ಇಷ್ಟೇನೇ. ಅವರ ಮೇಲೆ ಏಕೆ ಕೇಸ್ ಹಾಕಲಿಲ್ಲ? ಏಕೆ ಅವರ ಮೇಲೆ ನೀವು ಕೇಸ್ ಹಾಕಲಿಲ್ಲ? ರಾಜಕೀಯ ಒತ್ತಡ ಬಂತೆ ನಿಮ್ಮ ಮೇಲೆ? ಅಂತಹ ಆಫೀಸರ್ ಈ ಡಿಪಾರ್ಟ್ಮೆಂಟ್ನಲ್ಲಿದ್ದರೆ ಈ ಡಿಪಾರ್ಟ್ಮೆಂಟಿನ ಯಾವ ಮಾರ್ಯಾದೆ ಏನು? ಅಂತಹ ಡಿಪಾರ್ಟ್ಮೆಂಟಿಗೆ ಮಂತ್ರಿಗಳು ಎಂದು ನೀವು ಹೇಗೆ ಇರುತ್ತೀರಿ? ಇದರ ಬಗ್ಗೆ ನೀವು ದೀರ್ಘವಾಗಿ ಯೋಚನೆ ಮಾಡಬೇಕಾಗುತ್ತದೆ. ಈ ರಂಗಸ್ವಾಮಿಗೂ ಇವರಿಗೂ ಏನು ಸಂಬಂಧ? ಅವರ ಎಸ್ಟೇಟಿನಲ್ಲಿ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಇರಬೇಕಾದರೆ ಅವರಿಗೂ ಏನು ಸಂಬಂಧ? ಅಲ್ಲಿ ಸೇಫ್ ಆಗಿ ಇರುತ್ತದೆ ಎಂದು ಇರಬೇಕಾದರೆ ಅವರಿಗೂ ಇವನಿಗೂ ಏನು ಸಂಬಂಧ ಎಂದು ಏನಾದರೂ ಕಂಡು ಹಿಡಿಯುವುದಕ್ಕೆ ಪ್ರಯತ್ನ ಪಟ್ಟಿದ್ದೀರಾ ನೀನು? ಜೊತೆಗೆ ಇವನ ಇನ್ಫಾರ್ಮ್ ಯಾರು? ಇವನು ಇನ್ಫರ್ಮೇಷನ್ ಕೊಡುತ್ತಿದ್ದವನು ಯಾವತ್ತಿನಿಂದ ಇನ್ಫರ್ಮೇಷನ್ ಕೊಡುತ್ತಿದ್ದ? ಯಾವಾಗನಿಂದ ಈ ಕೆಲಸವನ್ನು ಇವರು ಕೊಡುತ್ತಿದ್ದರು. ಇದರ ಬಗ್ಗೆ ನೀವು ಏನಾದರೂ ಯೋಜನೆ ಮಾಡಿದ್ದೀರಾ, ಇದರ ಬಗ್ಗೆ ನೀವು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಇದರ ಬಗ್ಗೆ ನಮಗೆ ಆಶ್ವಾಸನೆ ಬೇಕಾಗುತ್ತದೆ ದಯಮಾಡಿ ಈ ಸಭೆಗೆ ಆಶ್ವಾಸನೆ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಮತ್ತು ಈ ಏನು ಡಿಮ್ಯಾಂಡ್ ಇಟ್ಟಿದ್ದಾರೆ. ಈ ಅಡಿಷನಲ್ ಡಿಮಾಂಡ್ಸ್ ಏನು ತಾವು ಕೇಳಿದ್ದೀರಿ. ನೀವು ಈ ಹಣವನ್ನು ಸರಿಯಾಗಿ ಉಪಯೋಗಿಸುವುದಿಲ್ಲ ಇದರಿಂದ ಉಪಯೋಗಿಸಿಲ್ಲ, ಮುಂದೆಯೂ ಉಪಯೋಗಿಸುವುದಿಲ್ಲ. ಇದು ನಿಮ್ಮ ರಾಜಕಾರಣವನ್ನು ಬಲ ಮಾಡಿಕೊಳ್ಳುವುದಕ್ಕೆ ಮತ್ತು ಆಫೀಸರ್ಗಳನ್ನು ಅವರ ಒಂದು ಕೆಲಸವನ್ನು ಅವರು ನಿಷ್ಪೂರದಿಂದ ಕೆಲಸ ಮಾಡಬೇಕೆಂದು ಇದ್ದಾರೆ. ಅದನ್ನು ಹಾಳು ಮಾಡುವುದಕ್ಕೆ ಈ ಹಣವನ್ನು ಉಪಯೋಗಿಸುತ್ತಿದ್ದೀರಿ. ಈ ಕಾರಣದಿಂದ ನಾನು ಇದನ್ನು ವಿರೋಧ ಮಾಡುತ್ತೇನೆ. ನನಗೆ ಸಮಯ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಉಪಾಧ್ಯಕ್ಷಣಿಯವರೆ ಪೂರಕ ಅಂದಾಜುಗಳನ್ನು ಇಂದು ಈ ಸರ್ಕಾರ ತಂದಿದೆ. ಎರಡನೆಯ ಕಂತನ್ನು ತರುವಂಥ ವ್ಯವಸ್ಥೆ ಇದು ಕಾನೂನು ಪ್ರಕಾರ ಏನೋ ನಿಮಗೆ ಅವಕಾಶ ಇದ್ದಿತು. ಆದರೆ ಸಿಕ್ಕಿರುವಂತಹ ಅವಕಾಶವನ್ನೇ ಸಂಪೂರ್ಣ ದುರುಪಯೋಗ ಮಾಡಿಕೊಳ್ಳುತ್ತೀರಿ ಎನ್ನುವ ಅಂಶ ಈ ಪೂರಕ ಅಂದಾಜುಗಳಲ್ಲಿ ಕಾಣುತ್ತಿದೆ. ಒಂದು ಉದಾಹರಣೆಯನ್ನು ತಮಗೆ ಕೊಡಬೇಕೆಂದರೆ ನಾನು ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದಿಂದ ಗೆದ್ದು ಬಂದಿದ್ದೇನೆ. ಶಿವಮೊಗ್ಗ ಭದ್ರಾವತಿಯ ನಗರ ಕಾರ್ಪೋರೇಷನ್ ಮಾಡಿ, 3 ಕೋಟಿ

ರೂಪಾಯಿಯಷ್ಟು ಅದಕ್ಕೆ ಸಾಲ ಬಿಡುಗಡೆ ಮಾಡಿದ್ದು ಅದು ಈ ಅಂದಾಜು ಪಟ್ಟಿಯಲ್ಲಿಯೂ ಇದೆ. ನಾನು ತಮ್ಮ ಮುಖಾಂತರ ಈ ಸರ್ಕಾರಕ್ಕೆ ಕೇಳುವುದೇನೆಂದರೆ ಮೂಲವಾಗಿ ಈ ಕಾರ್ಪೊರೇಷನ್ ಹೇಗೆ ಹುಟ್ಟಿಕೊಂಡಿತು, ಮತ್ತು ಮೂರು ಕೋಟಿ ರೂಪಾಯಿ ಹಣ ಇಲ್ಲಿ ಏತಕ್ಕೆ ಬಂತು? ಶಿವಮೊಗ್ಗ ನಗರ ಸಭೆ ಜನತೆಯಿಂದ ಆರಿಸಿದಂತಹ ನಗರ ಸಭೆಯಾಗಿತ್ತು ಭಾರತೀಯ ಜನತಾ ಪಕ್ಷದ ಅಧ್ಯಕ್ಷರು ಶಿವಮೊಗ್ಗ ನಗರಸಬೆಯ ಅಧ್ಯಕ್ಷರು ಕೂಡ ಆಗಿದ್ದರು. ಪ್ರಾಮಾಣಿಕವಾಗಿ ಜನತೆಯ ಅಪೇಕ್ಷೆಗೆ ತಕ್ಕಂತೆ ನಗರ ಸಭೆ ಸ್ಪಂದಿಸುತ್ತಿತ್ತು. ಆ ಸಂದರ್ಭದಲ್ಲಿ ಅನೇಕ ತೊಂದರೆ ಇತ್ತು, ಹಣ ಮುಗ್ಗಟ್ಟು ಇತ್ತು. ಹಿಂದಿನ ಮುಖ್ಯಮಂತ್ರಿಗಳು ಶಿವಮೊಗ್ಗಕ್ಕೆ ಬಂದಂಥ ಸಂಪದರ್ಭದಲ್ಲಿ ಅವರಿಗೆ ಒಂದು ಮನವಿಕೂಡಾ ಕೊಡಲಾಗಿತ್ತು. ಶಿವಮೊಗ್ಗ ರಸ್ತೆಗಳಲ್ಲಿ ಸಾಕಷ್ಟು ಗುಂಡಿಗಳಿದ್ದು ರಸ್ತೆಗಳಲ್ಲಿ ಓಡಾಡಲು ತುಂಬಾ ತೊಂದರೆಯಾಗಿದೆ. ನಗರಸಭೆಗೆ ಬರುತ್ತಿರತಕ್ಕ ಆದಾಯದಿಂದ ಇವುಗಳನ್ನು ರಿಪೇರಿ ಮಾಡಲು ಅದಕ್ಕೆ ಒಂದು ಕೋಟಿ ರೂಪಾಯಿಯನ್ನು ಕೊಡಿ ಎಂದು ಬೇಡಿಕೊಂಡೆವು. ಅವತ್ತು ಹಣ ಬಿಡುಗಡೆ ಮಾಡಲಿಲ್ಲ. ಹಣ ತೊಂದರೆ ಇದೆ ಎಂದು ಹೇಳಿದರು. ನಾನು ಎರಡು ವರ್ಷದ ಕೆಳಗಿನ ಮಾತನ್ನು ಹೇಳುತ್ತಿರುವುದು. ಅದರೆ ಅವತ್ತು ಹಣ ಬಿಡುಗಡೆ ಮಾಡಲಿಲ್ಲ. ಇರುವ ಫಂಡ್ನಲ್ಲಿ ವ್ಯವಸ್ಥೆಯನ್ನು ಮಾಡಿಕೊಂಡು ಹೋದೆವು. ಸಾಕಷ್ಟು ರಸ್ತೆಗಳಲ್ಲಿ ಟಾರ್ ಆಯಿತು. ಆದರೆ ಸರ್ಕಾರದ ಗಮನ ರಾಜಕೀಯವಾಗಿ ಇತ್ತೇ ವಿನಹ ಜನತೆಯ ಅಭಿವೃದ್ಧಿಯ ಬಗ್ಗೆ ಇರಲಿಲ್ಲ. ನಗರದ ಅಭಿವೃದ್ಧಿಯ ಬಗ್ಗೆ ಇರಲಿಲ್ಲ. ಸಂಪೂರ್ಣ ರಾಜಕೀಯ ಇತ್ತು. ಬಿ.ಜೆ.ಪಿ. ಆಡಳಿತದಲ್ಲಿದ್ದ ನಗರಸಭೆಯನ್ನು ದೇವೆಗೌಡರೂ ಮಾಡಿ ರದ್ದು ಮಾಡಬೇಕೆಂದು ರಾತೋರಾತ್ರಿ ತೆಗೆದು ಬೆಳಗಿನ ಜಾಗ 6 ಗಂಟೆಗೆ ಒಬ್ಬ ಕಾಂಗ್ರೆಸ್ ಕಾರ್ಯಕರ್ತನಿಗೆ ಜಿಲ್ಲಾ ಕಾಂಗ್ರೆಸ್(ಐ) ಅಧ್ಯಕ್ಷ ಅದವರಿಗೆ ಮೇಯರ್ ಮಾಡಿದರು. ಇದು ಯಾರಿಗೂ ಗೊತ್ತಿಲ್ಲ. ಇದು ಬೆಳಗಿನ ಜಾವ ಪೋಲೀಸರ ರಕ್ಷಣೆಯಲ್ಲಿ ನಡೆದುಹೋಯಿತು, ಜಿಲ್ಲಾಧಿಕಾರಿಯವರ ಮುಖಾಂತರ ಕಾರ್ಪೊರೇಷನ್‌ನವರು ಅಧಿಕಾರವನ್ನು ತೆಗೆದುಕೊಂಡರು. ಕಾರ್ಪೊರೇಷನ್ ಬರುತ್ತಿದ್ದಹಾಗೆ ಇದ್ದಕ್ಕಿದ್ದಹಾಗೆ 3 ಕೋಟಿ ರೂಪಾಯಿಯ ಸಾಲ ಹೊರಟುಹೋಯಿತು. 2 ವರ್ಷದ ಕೆಲಗೆ ಈ ಸರ್ಕಾರಕ್ಕೆ ಒಂದು ಕೋಟಿ ರೂಪಾಯಿ ಹಣವನ್ನು ಕೊಡುವುದಕ್ಕೆ ಶಕ್ತಿ ಇರಲಿಲ್ಲ. ಇಡೀ ಕರ್ನಾಟಕ ರಾಜ್ಯದ ಖಜಾನೆ ಖಾಲಿಯಾಗಿ ಹೋಗುತ್ತಿರತಕ್ಕ ಸಂದರ್ಭದಲ್ಲಿ 3 ಕೋಟಿ ರೂಪಾಯಿಯನ್ನು ಇದ್ದಕ್ಕಿದ್ದಹಾಗೆ 3 ಕೋಟಿ ರೂಪಾಯಿಯ ಸಾಲ ಹೊರಟುಹೋಯಿತು. 2 ವರ್ಷದ ಕೆಳಗೆ ಈ ಸರ್ಕಾರಕ್ಕೆ ಒಂದು ಕೋಟಿ ರೂಪಾಯಿ ಹಣವನ್ನು ಕೊಡುವುದಕ್ಕೆ ಶಕ್ತಿ ಇರಲ್ಲಿಲ್ಲ. ಇಡೀ ಕರ್ನಾಟಕ ರಾಜ್ಯದ ಖಜಾನೆ ಖಾಲಿಯಾಗಿ ಹೋಗುತ್ತಿರತಕ್ಕ ಸಂದರ್ಭದಲ್ಲಿ 3 ಕೋಟಿ ರೂಪಾಯಿಯನ್ನು ಇದ್ದಕ್ಕಿದ್ದಹಾಗೆ ಆ ಕಾರ್ಪೊರೇಷನ್ನಿಗೆ ಹಣವನ್ನು ಬಿಡುಗಡೆ ಮಾಡಿದರು. ಈ ಪೂರಕ ಅಂದಾಜಿನ ವ್ಯವಸ್ಥೆ ಇದ್ದುದನ್ನು ದುರುಪಯೋಗ ಮಾಡಿಕೊಂಡಂತಹ ಸಂಪೂರ್ಣ ಸಾಕ್ಷಿ ನಿಮಗೆ ಇದನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಪ್ರಜಾಪ್ರಭುತ್ವದ ಮುಖಾಂತರ ಆರಿಸಿ ಜನತೆಯು ತೊಂದರೆಯನ್ನು ಅನುಭವಿಸುತ್ತಿದ್ದಾರೆ, ಜನತೆಗೆ ಅನುಕೂಲ ಮಾಡಿಕೊಡಬೇಕು ಈ ದೃಷ್ಟಿಯಲ್ಲಿ 3 ಕೋಟಿ ರೂಪಾಯಿಯನ್ನು ಹಣವನ್ನು ಬಿಡುಗಡೆ ಮಾಡಿದ್ದರೆ ನಿಜಕ್ಕೂ ತುಂಬಾ ಸಂತೋಷಪಡುತ್ತಿದ್ದೆ ಮತ್ತು ಸರ್ಕಾರವನ್ನು ನಾನು ಮೆಚ್ಚುತ್ತಿದೆ. ಅಲ್ಲಿರುವ ನಗರಸಭೆಗೆ ವಿರೋಧ ಪಕ್ಷದ ಕಾರ್ಯಕರ್ತರು ಇಲ್ಲ. ಶಿವಮೊಗ್ಗ ಭದ್ರಾವತಿ ಅಷ್ಟು ಜನರೂ ಸಂಪೂರ್ಣವಾಗಿ ಆಡಳಿತ ಪಕ್ಷಕ್ಕೆ ಸೇರಿದವರಾಗಿದ್ದಾರೆ. ಅಲ್ಲಿ ಏನೇನೋ ನಡೆಯುತ್ತಿದೆ ಏನೇನು ಅನ್ಯಾಯವಾಗುತ್ತದೆ.

ಏನೇನು ಭ್ರಷ್ಟಾಚಾರವಾಗುತ್ತದೆ ಅದರ ಬಗ್ಗೆ ವರದಿಯನ್ನು ತರಿಸಿಕೊಳ್ಳಿದ್ದಾರೋ ಏನೋ ನನಗಂತೂ ಗೊತ್ತಿಲ್ಲ. ನಾನು ಏತಕ್ಕೆ ಈ ಅಂಶವನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇವೆಂದರೆ ಕೇಳರ ಸಿಕ್ಕಿರುವಂತಹ ವ್ಯವಸ್ಥೆ ಕಾನೂನಿನಲ್ಲಿ ಸಿಕ್ಕಿರುವಂತಹ ಅವಕಾಶವನ್ನು ಎಷ್ಟರಮಟ್ಟಿಗೆ ಇವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆಂದು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಹೇಳುತ್ತಿದ್ದೇನೆ. ಪ್ರಜಾಪ್ರಭುತ್ವದಲ್ಲಿ ಖಂಡಿತ ಇದು ಒಳ್ಳೆಯದಲ್ಲ. ಚುನಾವಣೆ ಸ್ಪರ್ಧೆ ಮಾಡಬೇಕು ಚುನಾವಣೆಯಲ್ಲಿ ಗೆಲ್ಲಬೇಕು, ಆಡಳಿತವನ್ನು ನಡೆಸಬೇಕು ಅದರ ಮುಖಾಂತರ ನಗರವನ್ನು ಅಭಿವೃದ್ಧಿ ಪಡಿಸುವಂತಹ ಪ್ರಯತ್ನ ಮಾಡಬೇಕು. ಅದರ ಮುಖಾಂತರ ಅಧಿಕಾರವನ್ನು ಹಿಡಿಯಬೇಕು. ಅದು ಅಲ್ಲ ಎಲ್ಲೆಲ್ಲೆ ಮೂಲೆಯಲ್ಲಿರುವವರು ಚುನಾವಣೆಯಲ್ಲಿ ನಿಂತರೆ ಎರಡು ಓಟುಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಅಂತಹವರೆಲ್ಲ ಕಾರ್ಪೋರೇಟರ್ಸ್ ಆಗಿದ್ದಾರೆ. ಅವರಿಗೆ ಹಣ ಬಿಡುಗಡೆ ಮಾಡಿದ್ದಾರೆ. ಕೊನೆಗೆ ಇವರಿಗೆ ಸ್ಥಿತಿ ಎಲ್ಲಿಗೆ ಬಂದಿದೆ ಅಂದರೆ ಅವರು ಬಿಡುಗಡೆ ಮಾಡಿದಂತಹ 3 ಕೋಟಿ ಹಣದ ಬಗ್ಗೆ ಇವರಿಗೆ ಅನುಮಾನ ಬಂದು ಆ ಮೂರು ಕೋಟಿ ರೂಪಾಯಿ ಸಂಪೂರ್ಣ ದುರುಪಯೋಗವಾಗುತ್ತದೆ ಅನ್ಯಾಯ ಮಾಡುತ್ತಿದ್ದಾರೆ ಲೂಟಿ ಮಾಡುತ್ತಿದ್ದಾರೆ ಎಂದು ಗೊತ್ತಾದ ತಕ್ಷಣ ಆ ಮೂರು ಕೋಟಿ ರೂಪಾಯಿ ಹಣವನ್ನು ವಿನಿಯೋಗ ಮಾಡಬೇಡಿ ಎಂದು ಸರ್ಕಾರದಿಂದ ಸ್ಟೇ ಕಳುಹಿಸಿದ್ದಾರೆ. ಇದು ತೀರಾ ನಾಚಿಕೆಗೇಡಿನ ಅಂಶವಾಗಿದೆ. ಸರ್ಕಾರ ಈ ದಿಕ್ಕಿನಲ್ಲಿ ಯೋಚನೆ ಮಾಡಲಿ. ಹಣ ಬಿಡುಗಡೆ ಈಗಾಗಲೇ ಆಗಿದೆ. ಅದನ್ನು ಯಾವ ರೂಪದಲ್ಲಿ ನಗರದ ಜನತೆಗೆ ಅನುಕೂಲ ಮಾಡಬೇಕು ಅದನ್ನು ಮಾಡಲು ಪ್ರಾಮಾಣಿಕವಾದ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ.

ಅವರ ಮುಖಾಂತರ ಮಾಡಿ. ನೀವು ನಾಮಕರಣ ಮಾಡಿರುವಂಥ ಕಾರ್ಪೊರೇಟರುಗಳ ಮೇಲೆ ನಿಮಗೆ ನಂಬಿಕೆಯಿಲ್ಲ, ನಮಗೂ ನಂಬಿಕೆಯಿಲ್ಲ, ಸಂತೋಷ. ಆದುದರಿಂದ, ಅಲ್ಲಿಗೆ ಪ್ರಾಮಾಣಿಕ ಅಧಿಕಾರಿಗಳನ್ನು ಕಳುಹಿಸಿ, ಈ 3 ಕೋಟಿ ರೂಪಾಯಿಗಳೇನಿದೆ, ಅದು ಸದ್ವಿನಿಯೋಗವಾಗುವ ದಿಕ್ಕಿನಲ್ಲಿ ಸರ್ಕಾರ ಈಗಲಾದರೂ ಪ್ರಯತ್ನ ಮಾಡಲಿ. ಈ ರೀತಿ ಪೂರಕ ಅಂದಾಜುಗಳ ಮುಖಾಂತರ ಹಣ ಉಪಯೋಗಿಕೊಂಡರೆ ಸಾರ್ಥಕವಾಗುತ್ತದೆ ಎನ್ನುವ ಭಾವನೆ ಇಟ್ಟುಕೊಂಡು ಈ ದಿಸೆಯಲ್ಲಿ ಸರ್ಕಾರ ಯೋಚನೆ ಮಾಡಬೇಕೆಂದು ಅಪೇಕ್ಷಿಸುತ್ತೇನೆ.

ಶ್ರೀ ಟಿ.ಎಂ. ಮಂಜುನಾಥ : ನಿಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ಆಗಿಲ್ಲವೆಂದು ಸರ್ಕಾರ ತಮ್ಮ ಮೇಲೆ ಪೂರ್ಣ ನಂಬಿಕೆಯಿಟ್ಟು ತಮಗೋಸ್ಕರ 3 ಕೋಟಿ ರೂಪಾಯಿಗಳನ್ನು ವಿಶೇಷವಾಗಿ ಕೊಟ್ಟಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇನ್ನು ಈ ಪೂರಕ ಅಂದಾಜಿನಲ್ಲಿ ಸಾಮಾನ್ಯ ಜನತೆಗೆ ಅನುಕೂಲವಾಗುವಂಥ ವ್ಯವಸ್ಥೆ ಮಾಡಿಕೊಂಡಿದ್ದರೆ ಸರಿಯಾಗಿರುತ್ತಿತ್ತು ಎಂಬುದು ನನ್ನ ಭಾವನೆ. ಬಗರ್ ಹುಕುಂ ಸಾಗುವಳಿ ಖಾಯಂ ಮಾಡಬೇಕೆನ್ನುವ ಉದ್ದೇಶದಿಂದ ಸರ್ಕಾರ ಶಾಸಕರುಗಳ ನೇತೃತ್ವದಲ್ಲಿ ಸಮಿತಿಗಳನ್ನು ಮಾಡಿದೆ. ಆ ಸಮಿತಿಗಳು ಬಡವರಿಗೆ ಅರ್ಧ ಎಕರೆ, ಒಂದು ಎಕರೆ, ಕಾಲು ಎಕರೆ ಜಮೀನು ಕೊಟ್ಟು ಅವರಿಗೆ ಉಪಯೋಗಬೇಕೆನ್ನುವ ದೃಷ್ಟಿಯಿಟ್ಟುಕೊಂಡು ಕೆಲಸ ಮಾಡುತ್ತಿದೆ. ನನ್ನ ಕ್ಷೇತ್ರವಾದ ಶಿವಮೊಗ್ಗ ತಾಲ್ಲೂಕಿನಲ್ಲಿ ಎರಡು ಕ್ಷೇತ್ರಗಳು ಬರುತ್ತವೆ. ಒಂದು ಶಿವಮೊಗ್ಗ ಮತ್ತೊಂದು ಹೊಸನಗರ. ಒಂದು ಕಡೆ ಸಾವಿರಾರು ಎಕರೆಗಳು ಈ ರೀತಿಯ ಬಗರ್ ಹುಕಂ ಜಮೀನುಗಳಾಗಿವೆ, ಇನ್ನೊಂದು ಕಡೆ ಸಾವಿರಾರು ಜನ

ರೈತರುಗಳಿದ್ದಾರೆ. ಆದರೆ, ಆ ರೈತರಿಗೆ ಜಮೀನು ಕೊಡುವ ಪ್ರಯತ್ನ ಮಾಡುತ್ತಿಲ್ಲ. ಏತಕ್ಕೆ ಎಂದು ನಿಮಗೆ ಆಶ್ಚರ್ಯವಾಗಬಹುದು. ಇಡೀ ತಾಲ್ಲೂಕಿನಲ್ಲಿರುವ ಸಾವಿರಾರು ಎಕರೆ ಜಮೀನುಗಳಿಗೆ ಸರ್ವೆಯರ್ಸ್ ಎಷ್ಟು ಜನ ಇದ್ದಾರೆಂದು ನಿಮಗೆ ಗೊತ್ತೇ? ಬರೀ ಇಬ್ಬರು ಮಾತ್ರ. ಇವರು ಎಷ್ಟು ವರ್ಷಗಳಿಗೆ ಖಾಯಂ ಆಗುತ್ತಾರೆಂದು ಯೋಚನೆ ಮಾಡಿ. ಇನ್ನಷ್ಟು ಸರ್ವೆಯರ್ಸ್ ತೆಗೆದುಕೊಳ್ಳಬಹುದಿತ್ತು. ಜಿಲ್ಲಾಧಿಕಾರಿಗಳನ್ನು ಹೋಗಿ ಕೇಳಿದರೆ, ಸರ್ವೆಯರ್ಸ್ ತೆಗೆದುಕೊಳ್ಳುವ ಬಗ್ಗೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ತಿಳಿಸಿದ್ದೇವೆಂದು ಹೇಳುತ್ತಾರೆ. ಪರಿಸ್ಥಿತಿ ಹೀಗಿರುವಾಗ ಇನ್ನಷ್ಟು ಜನ ಸರ್ವೆಯರ್ಸ್ ಬೇಕೆಂದು ನೀವು ಜಿಲ್ಲಾಧಿಕಾರಿಗಳನ್ನು ಕೇಳಿ. ಎಲ್ಲಾ ತಾಲ್ಲೂಕು ವಿಧಾನಸಭಾ ಕ್ಷೇತ್ರಗಳಿಗೂ ಸರ್ವೆಯರ್ಸ್ ಕೊಟ್ಟರೆ ಅವರು ಸರ್ವೆ ಮಾಡಿ 15 ದಿವಸಗಳಲ್ಲಿ ವಿಧಾನ ಸಭೆಯ ಕ್ಷೇತ್ರಗಳಲ್ಲಿ ಜಮೀನಿನ ಸಮೀಕ್ಷೆ ಮಾಡಿ ಮುಗಿಸುತ್ತಾರೆ. ಅವರಿಗೆ ನೀವು ಸಾಗುವಳಿ ಚೀಟಿ ಕೊಟ್ಟಿದ್ದರೆ ಎಷ್ಟು ಆನಂದ ಪಡುತ್ತಿದ್ದರೋ. ಅದನ್ನು ಯೋಚನೆ ಮಾಡದೆ, ಏನೋ ಒಂದು ಅವಕಾಶ ಇದೆ, ಎಲ್ಲೆಲ್ಲಿ ದುಡ್ಡನ್ನು ಲೂಟಿ ಮಾಡುವುದಕ್ಕೆ ಅವಕಾಶವಿದೆಯೋ, ಅಲ್ಲೆಲ್ಲಾ ಲೂಟಿ ಮಾಡುತ್ತಾರೆ. ಅಷ್ಟನ್ನು ಬಿಟ್ಟರೆ ಇದರಲ್ಲಿ ಯಾವುದೇ ರೀತಿಯ ಅನುಕೂಲವಾಗುತ್ತಿಲ್ಲ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಸಿಕ್ಕಿರುವಂಥ ಅವಕಾಶವನ್ನು ಸಂಪೂರ್ಣವಾಗಿ ದುರುಪಯೋಗದ ಕಡೆ ಮಾಡುತ್ತಿದ್ದಾರೆಯೇ ಹೊರತು ಅನುಕೂಲವಾಗುವ ಕಡೆ ಮಾಡುತ್ತಿಲ್ಲ. ಶಿವಮೊಗ್ಗದ ಹೃದಯ ಭಾಗದಲ್ಲಿರುವ ಬಸ್ ಸ್ಟ್ಯಾಂಡ್ ಎದುರಿಗೆ ಒಂದೆರಡು ಎಕರೆ ಜಮೀನು ಇದೆ. ಆ ಎರಡು ಎಕರೆ ಜಮೀನನ್ನು ಒಬ್ಬ ವ್ಯಕ್ತಿಯಿಂದ ಬೇರೊಬ್ಬರಿಗೆ ಮಾರಾಟ ಮಾಡಿದ್ದಾರೆ. ಜಮೀನನ್ನು ಮಾರಾಟ ಮಾಡುವ ಸಮಯದಲ್ಲಿ ಎಷ್ಟು ರೂಪಾಯಿಗಳ ಸ್ಟಾಂಪ್ ಡ್ಯೂಟಿ ಕೊಡಬೇಕೆಂದು ಎಲ್ಲರಿಗೂ ಗೊತ್ತಿದೆ. ಅಲ್ಲದೆ ಯಾವ್ಯಾವ ವ್ಯವಹಾರಗಳಿಗೆ ಎಷ್ಟೆಷ್ಟು ಸ್ಟಾಂಪ್ ಡ್ಯೂಟಿ ಕೊಡಬೇಕೆಂದು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಆ ಸ್ಟಾಂಪ್ ಡ್ಯೂಟಿ ರೇಟ್ ಕೂಡ ಹಾಕಿರುತ್ತಾರೆ. ಇವೆಲ್ಲವನ್ನೂ ಮೂಲೆಗುಂಪು ಮಾಡಿರುವಂಥ ಪ್ರಭಾವಿ ವ್ಯಕ್ತಿಗಳವರು. ಇದರ ಬಗ್ಗೆ ನಾನು ತುಂಬಾ ನೊಂದು ಹೇಳುತ್ತಿದ್ದೇನೆ. 500 ರೂಪಾಯಿ ಚದರ ಅಡಿ ಇರತಕ್ಕಂಥ ಜಮೀನನ್ನು 5 ರೂಪಾಯಿಯಂತೆ ಚದರ ಅಡಿಗೆ ಮಾರಾಟ ಮಾಡಿದ್ದಾರೆ. 500 ರೂಪಾಯಿ ಚದರ ಅಡಿಯ ಸ್ಟಾಂಪ್ ಡ್ಯೂಟಿ ಕಟ್ಟುವ ಬದಲಾಗಿ 5 ರೂಪಾಯಿಯ ಚದರ ಅಡಿ ಸ್ಟಾಂಪ್ ಡ್ಯೂಟಿ ಕಟ್ಟಿದ್ದಾರೆ. ಅಲ್ಲದೆ, ಇವರು ಸಬ್ ರಿಜಿಸ್ಟ್ರಾರ್ ಆಫೀಸಿಗೂ ಕೂಡ ಹೋಗಲಿಲ್ಲ. ಡಿಸ್ಟ್ರಿಕ್ ರಿಜಿಸ್ಟ್ರಾರ್ ಮುಂದೆ ಒಂದೇ ಸಲ ಹೋದರು. ಆ ಡಿಸ್ಟ್ರಿಕ್ ರಿಜಿಸ್ಟ್ರಾರ್ ಸಹ ಅವರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಸ್ಟಾಂಪ್ ಡ್ಯೂಟಿ ಕೊಟ್ಟಿದ್ದರೆ? ಬಿಟ್ಟಿದ್ದರೇ? ಎಂಬುದೂ ಸಹ ಕೇಳಲಿಲ್ಲ. ಸ್ಥಳದಲ್ಲಿಯೇ ರಿಜಿಸ್ಟ್ರಾರ್ ಮುಂದೆ ಕರೆಯಿಸಿ ಕಳುಹಿಸಿಬಿಟ್ಟರು. ಸರ್ಕಾರದ ಬೊಕ್ಕಸಕ್ಕೆ ಇದರಿಂದಾಗುವ ಒಟ್ಟು ನಷ್ಟ 92 ಲಕ್ಷ ರೂಪಾಯಿಗಳು. ಇದೊಂದು ಯೋಜನೆಯಿಂದ ಸರ್ಕಾರದ ಬೊಕ್ಕಸಕ್ಕೆ 92 ಲಕ್ಷ ರೂಪಾಯಿಗಳ ಸ್ಟಾಂಪ್ ಡ್ಯೂಟಿ ಬರಬೇಕಾಗಿತ್ತು. ಇದೊಂದೇ ರಿಜಿಸ್ಟ್ರೇಷನ್ನಿಂದ ಬರಬೇಕಾಗಿತ್ತು. ಈ ವಿಷಯ ಶಿವಮೊಗ್ಗ ನಗರದಲ್ಲಿ ಮನೆಮಾತಾಯಿತು, ಪತ್ರಿಕೆಗಳಲ್ಲಿ ಪ್ರಚಾರವಾಯಿತು, ಈ ವಿಷಯ ರಾಜ್ಯದ ಎಲ್ಲಾ ಪತ್ರಿಕೆಗಳಲ್ಲಿಯೂ ಬಂದಿತು. ಇದರ ಬಗ್ಗೆ ಶಾಸಕನಾಗಿ ನಾನು ಸರ್ಕಾರದ ಖಜಾನೆಗೆ ಬರತಕ್ಕಂಥ 92 ಲಕ್ಷ ರೂಪಾಯಿಗಳು ಅನ್ಯಾಯವಾಗಿದೆ, ಇದಕ್ಕೆ ಸಂಬಂಧಪಟ್ಟಂಥ ಅಧಿಕಾರಿಗಳನ್ನು ಹಿಡಿಯಿರಿ ಎಂದು ರಾಜ್ಯಪಾಲರಿಗೆ ಒಂದು ಮನವಿಯನ್ನು ಕೊಟ್ಟೆ. ರಾಜ್ಯಪಾಲರಿಂದ ಇವೊತ್ತಿನವರೆವಿಗೂ ನನಗೆ ಯಾವುದೇ ಉತ್ತರ ಬಂದಿಲ್ಲ. ಇದರ ಬಗ್ಗೆ ಸಂಬಂಧಪಟ್ಟಂಥ ಕಾರ್ಯದರ್ಶಿಗಳಿಗೆ

ಬರೆದರೂ ಉತ್ತರವಿಲ್ಲ. ರಾಜ್ಯಪಾಲರಿಂದ ಶಾಸಕನಾಗಿರುವ ನನಗೆ ಇವೊತ್ತಿನವರೆವಿಗೂ ಯಾವುದೇ ಉತ್ತರ ಬರಲಿಲ್ಲವೆಂದರೆ ಸರ್ಕಾರ ಇನ್ನು ಯಾವುದರ ಕಡೆ ಗಮನ ಕೊಡುತ್ತದೆಂಬುದನ್ನು ಯೋಚನೆ ಮಾಡಬೇಕು.

4.15 ಪಿ.ಎಂ

ಇದನ್ನು ನಾವು ಏನೆಂದು ತಿಳಿದುಕೊಳ್ಳಬೇಕು? ಈ ಹಣದಲ್ಲಿ ಸರ್ಕಾರದ ಪಾಲೇನಾದರೂ ಇದೆಯೆ? ಸರ್ಕಾರದ ಪಾಲು ಎಂದರೆ ಮಂತ್ರಿಗಳಿಗಾಗಲಿ ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗಾಗಲಿ ಅವರ ಜೇಬನ್ನು ತುಂಬಿಕೊಡುವುದಕ್ಕಾಗಲಿ ಪಾಲು ಇದೆಯೆ? ಇನ್ನೂ ಅದನ್ನು ಬಿಚ್ಚಿ ಬಿಚ್ಚಿ ಹೇಳುವುದು ಬೇಡ. ಏಕೆ ಈ ಅಂಶಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ, ಅವರುಗಳಿಗೆ ಅವಕಾಶ ಸಿಕ್ಕಿದೆ, ಖಂಡಿತಾ ಸಿಕ್ಕಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ, ಆದರೆ ಸಿಕ್ಕಿರತಕ್ಕಂಥ ಅವಕಾಶವನ್ನು ಜನರ ಉಪಯೋಗಕ್ಕಾಗಿ ಮಾಡಬೇಕು, ಸರ್ಕಾರದ ಖಜಾನೆಗೆ ಲಾಭವಾಗತಕ್ಕ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕೆ ವಿನಹ ಸ್ವತಃ ಜೇಬನ್ನು ಭರ್ತಿ ಮಾಡತಕ್ಕ ಕಾರ್ಯಗಳು ನಡೆಯುತ್ತಿವೆ. ಅದಕ್ಕೋಸ್ಕರ ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇವೆ, ಸಿಕ್ಕಿರತಕ್ಕ ಪೂರ್ಣ ಅವಕಾಶವನ್ನು ಲಾಭಮಾಡಿಕೊಳ್ಳಿ, ಜನತೆಗೆ ಅನುಕೂಲ ಮಾಡತಕ್ಕ ಪ್ರಯತ್ನ ಮಾಡಿ ಆಗ ಮಾತ್ರ ಈ ರೀತಿ ಅಂದಾಜುಪಟ್ಟಿಯಿಂದ ಸಿಕ್ಕಿರತಕ್ಕ ಅವಕಾಶ ಸದುಪಯೋಗ ಮಾಡಿಕೊಳ್ಳಲು ಅರ್ಥವಾಗುತ್ತದೆ. ಆದುದರಿಂದ ಈಗ ತಂದಿರತಕ್ಕಂಥದ್ದು ಸಂಪೂರ್ಣವಾಗಿ ರಾಜಕೀಯವಾದ ಲಾಭವನ್ನು ಮಾಡಿಕೊಳ್ಳಲು ಅವಕಾಶವಿದೆ. ಆದುದರಿಂದ ಇದನ್ನು ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸನ್ಮಾನ್ಯ ಉಪಾಧ್ಯಕ್ಷಣಿಯರೆ, ಸರ್ಕಾರವು ಸಪ್ಲಿಮೆಂಟರಿ ಎಸ್ಟಿಮೇಟನ್ನು ಈ ಸಭೆಯ ಮುಂದೆ ಅದಕ್ಕೆ ಸಭೆಯ ಒಪ್ಪಿಗೆಯನ್ನು ಪಡೆಯಬೇಕೆಂದು ಮಂಡನೆ ಮಾಡಿದೆ. ನಾನು ಅದಕ್ಕೆ ಸಂಪೂರ್ಣವಾಗಿ ವಿರೋಧವನ್ನು ಮಾಡಿ ಎರಡು ಸೂಚನೆಗಳನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಮೊದಲನೆಯದಾಗಿ ಕಂದಾಯ ಸಚಿವರು ಹಿಂದೆ ಹಣಕಾಸಿನ ಸಚಿವರಾಗಿದ್ದರು, ಬಹುಶಃ ಅವರಿಗೆ ಒಂದು ವಿಚಾರ ಗಮನಕ್ಕೆ ಬಂದಿರಬಹುದು. ಸಾರಿಗೆ ಸಂಸ್ಥೆಯಲ್ಲಿ ನಾವು ಟೋಟಲ್ ಟ್ರಾಫಿಕ್ ರೆವಿನ್ಯೂ ಮೇಲೆ 17 ಪರ್ಸೆಂಟ್ ಮೋಟಾರ್ ವೆಹಿಕಲ್ ಟ್ಯಾಕ್ಸನ್ನು ಕಟ್ಟಬೇಕೆನ್ನುವ ಒಂದು ಕಾನೂನನ್ನು, ನಾನು ಸಾರಿಗೆ ಇಲಾಖೆಯ ಮಂತ್ರಿಯಾಗಿದ್ದಾಗ ಮಾನ್ಯ ರಾಮಕೃಷ್ಣ ಹೆಗಡೆಯವರು ಅರ್ಥ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿದ್ದಂಥ ಸಂದರ್ಭದಲ್ಲಿ ಕಾನೂನನ್ನು ಜಾರಿಗೆ ತಂದೆವು. ಅದನ್ನು ಏಕೆ ತಂದೆವೆಂದರೆ ಅನೇಕ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಫಿಟ್ನೆಸ್ ಸರ್ಟಿಫಿಕೇಟನ್ನು ಪಡೆಯತಕ್ಕಂಥ ಸಂದರ್ಭದಲ್ಲಿ ಮೋಟಾರ್ ಇನ್‌ಸ್ಪೆಕ್ಟರ್‌ಗಳಿಗೆ ಏನೂ ಸಿಗುವುದಿಲ್ಲ ಅವರುಗಳಿಗೆ ಏನೂ ಆದಾಯವಿಲ್ಲ, ಆದುದರಿಂದ 15-20 ದಿನಗಳವರೆಗೆ ಬಸ್ಸುಗಳು ರೋಡ್ಡ ಪಕ್ಕದಲ್ಲಿ ಸುಮ್ಮನೆ ನಿಂತಿರುತ್ತವೆ. 15-20ದಿನಗಳು ಅವು ಉಪಯೋಗವಾಗುವುದಿಲ್ಲ ಇದು ಮೊದಲನೆಯದು. ಎರಡನೆಯದಾಗಿ ಪ್ರೈವೇಟ್ ಬಸ್ಸಿನವರು ಏನು ಮಾಡುತ್ತಾರೆಂದರೆ ತಮಗೆ ಗೊತ್ತಿರುವಹಾಗೆ ಫಿಟ್ನೆಸ್ ಸರ್ಟಿಫೀಕೇಟ್ನು ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ 32 ಇಲ್ಲವೆ 40 ಸೀಟ್ ಎಂದು ಹಾಕಿ ಸರ್ಟಿಫೀಕೇಟನ್ನು ಪಡೆಯುತ್ತಾರೆ. ಅನಂತರ ಅದನ್ನು 50-60 ಸೀಟುಗಳೆಂದು ಮಾಡಿಕೊಂಡು ಅದಕ್ಕೆ ತಕ್ಕಂತೆ ಹಣವನ್ನು ಕೊಡುತ್ತಾರೆ.

ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರಕ್ಕೆ ಆದಾಯ ಬರಬೇಕು ಎನ್ನತಕ್ಕ ದೃಷ್ಟಿಯನ್ನು ಇಟ್ಟುಕೊಂಡು ಟೋಟಲ್ ಟ್ರಾಫಿಕ್ ರೆವಿನ್ಯೂ ಏನು ಕಲೆಕ್ಟ್ ಆಗುತ್ತದೆ ಅದರ ಮೇಲೆ 17 ಪರ್ಸೆಂಟ್ ಮೋಟಾರ್ ವೆಹಿಕಲ್ ಟ್ಯಾಕ್ಸನ್ನು ಕೊಡಬೇಕೆಂದು ಮಾಡಿದ್ದೆವು. ಅದರೆ ಮೊನ್ನೆ ದಿನ ಮಾನ್ಯ ಸಾರಿಗೆ ಸಚಿವರು ಒಂದು ಹೇಳಿಕೆಯನ್ನು ಕೊಟ್ಟು ಖಾಸಗಿ ಬಸ್ಸ್‌ನವರಿಂದ ಪರ್‌ಹೆಡ್ ಪರ್‌ಸೀಟ್, ಪರ್ ಇಯರ್ ಏನು ತೆಗೆದುಕೊಳ್ಳುತ್ತೇವೆ ಆ ರೀತಿಯಲ್ಲಿ ತೆಗೆದುಕೊಳ್ಳತಕ್ಕಂಥ ಕಾನೂನನ್ನು ಮಾಡುತ್ತೇವೆಂದು ಹೇಳಿದ್ದಾರೆ. ಇದರಿಂದಾಗಿ ಸರ್ಕಾರಕ್ಕೆ ಬರತಕ್ಕಂಥ ಆದಾಯ ಕಡಿಮೆಯಾಗುತ್ತಿದೆ ಎನ್ನತಕ್ಕದ್ದನ್ನು ಈ ಸಂಧರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರಲ್ಲಿ ಯಾವುದೇ ಕಾರಣವಿಲ್ಲದರುವುದರಿಂದ ಅದನ್ನು ಮಾಡಲು ಹೋಗಬೇಡಿ. ನಾವು ಹಿಂದೆ ಮಾಡಿರತಕ್ಕದ್ದು ಒಂದು ಒಳ್ಳೆಯ ಕಾನೂನು. ಬೇರೆ ರಾಜ್ಯದವರು ನಮ್ಮ ರಾಜ್ಯದಲ್ಲಿರತಕ್ಕ ಪದ್ಧತಿಯನ್ನು ಸ್ವಾಗತ ಮಾಡಿ ತಮ್ಮ ರಾಜ್ಯಗಳಲ್ಲಿಯೂ ಕೂಡ ಅದನ್ನು ಅನುಸರಿಸಲು ಹೊರಟಿರುವಾಗ ಇವರು ಯಾವ ಉತ್ಸಾಹದಲ್ಲಿ ಆ ರೀತಿ ಹೇಳಿದ್ದಾರೋ, ಏನೂ ವಿಷಯವನ್ನು ತಿಳಿದುಕೊಳ್ಳಕೊಳ್ಳದೇ ಹೇಳಿದ್ದಾರೋ ಅಥವಾ ಮುಖ್ಯಮಂತ್ರಿಗಳನ್ನು ಕೇಳದೆ ಮಾಡಿದ್ದಾರೋ ನನಗೆ ಗೊತ್ತಿಲ್ಲವೆಂದು ನನಗೆ ಆಶ್ಚರ್ಯವಾಗುತ್ತದೆ. ಎರಡನೆಯದಾಗಿ ನೇರವಾಗಿ ನೀರಾವರಿ ಇಲಾಖೆಗೆ ಸಂಬಂಧಪಟ್ಟಂತೆ ಏನೂ ಸಹಿತ ಸಪ್ಲಿಮೆಂಟರಿ ಎಸ್ಟಿಮೇಟ್ ಇಲ್ಲಿ ಇಲ್ಲ, ಆದರೂ ಸಹಿತ ಆ ವ್ಯಾಪ್ತಿಯನ್ನು ಮೀರಿ ಸರ್ಕಾರದ ಗಮನಕ್ಕೆ ಒಂದು ವಿಷಯವನ್ನು ತರುತ್ತಿದ್ದೇನೆ ಅವರು ಬಹಳ ದಕ್ಷವಾದಂಥ, ಪ್ರಾಮಾಣಿಕಾದಂಥ ಸರ್ಕಾರವನ್ನು ಕೊಡುತ್ತೇವೆ, ಎಲ್ಲೇ ಆಗಲಿ ಸೋರಿಕೆ ಇದ್ದರೂ ಸಹ ನಾವು ನಿಲ್ಲಿಸುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ತಾವು ನಿಜವಾಗಿಯೂ ಪ್ರಾಮಾಣಿಕತೆಯಿಂದ ಇದ್ದರೆ ನೀವು ನಾಳೇ ದಿನವೇ ಒಂದು ವಿಚಾರಣೆಗೆ ನೇಮಕ ಮಾಡಿ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರತಕ್ಕ ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳು ಅಥವಾ ನನ್ನ ಕ್ಷೇತ್ರವನ್ನೇ ತೆಗೆದುಕೊಳ್ಳಿ. ಅವರು ಕಳೆದ ನವೆಂಬರ್ ಮತ್ತೆ ಡಿಸೆಂಬರ್‌ನಲ್ಲಿ ನನ್ನ ಕ್ಷೇತ್ರಕ್ಕೆ ಎಷ್ಟು ಹಣವನ್ನು ಡ್ರಾ ಮಾಡಿದ್ದಾರೆ ಆ ಡ್ರಾ ಮಾಡಿರತಕ್ಕಂಥ ಹಣದಷ್ಟು ಕೆಲಸವನ್ನು ಅವರು ಮಾಡಿದ್ದಾರೋ ಇಲ್ಲವೊ ಎಂಬುದನ್ನು ನಾಳೇ ದಿನವೆ ಹೋಗಿ ನೋಡಿ. ನಾನು ನಿರ್ದಿಷ್ಟವಾಗಿ ಈ ಮಾತನ್ನು ಹೇಳುತ್ತಿದ್ದೇನೆ. 4-5 ವಿಶ್ವ ಬ್ಯಾಂಕ್ನ ಪ್ರಾಜೆಕ್ಟ್‌ಗಳನ್ನು ನಾನು ಹೇಳುತ್ತಿದ್ದೇನೆ. ಆದರಲ್ಲಿ ರಾವುತನ ಹಳ್ಳ ಪ್ರಾಜೆಕ್ಟ್, ತಟಗುಪ್ಪೆ ಪ್ರಾಜೆಕ್ಟ್, ಮುನಿನಗರ ಪ್ರಾಜೆಕ್ಟ್ ಮೇನ ಮಾರನಹಳ್ಳಿ ಪ್ರಾಜೆಕ್ಟ್ ಇವೆಲ್ಲಾ ಸೇರಿ ಸುಮಾರು 15 ಕೋಟಿ ರೂ.ಗಳ ಪ್ರಾಜೆಕ್ಟ್‌ಗಳು. ಅಲ್ಲಿ 10 ಸಾವಿರ ಎಕರೆ ಭೂಮಿಗೆ ನೀರು ಕೊಡಬಹುದು. ಇದಕ್ಕೆ ಸಂಬಂಧಪಟ್ಟ ಧಿಕಾರಿಗಳು ಡಿಸೆಂಬರ್ 31ನೇ ತಾರೀಖು ರಿಟೈರ್ ಆಗಿದ್ದಾರೆ. ಅವರು 17 ಲಕ್ಷ ರೂ. ಗಳನ್ನು ಒಂದು ಪರ್ಟಿಕ್ಯುಲರ್ ಐಟಂನಲ್ಲಿ ಡ್ರಾ ಮಾಡಿ ತೆಗೆದುಕೊಂಡು ಹೋದರು. ಅಷ್ಟೇ ಅಲ್ಲ ಅವರು ರಿಟೈರ್ ಕೂಡ ಆದರು. ನಾನು ಈ ಸಂಧರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನೂ ಕೂಡ ಬರೆದಿದ್ದೇನೆ. ಆದರೆ ಇದುವರೆಗೂ ಅವರು ಯಾವುದೇ ಕ್ರಮವನ್ನೂ ಈ ಅಧಿಕಾರಿಯ ವಿರುದ್ಧ ತೆಗೆದುಕೊಂಡಿಲ್ಲ, ನಾನು ಈಗ ಮಾನ್ಯ ಕಂದಾಯ ಮಂತ್ರಿಗಳಲ್ಲಿ ಒತ್ತಾಯಮಾಡಿ ಹೇಳುತ್ತಿದ್ದೇನೆ. ತಾವು ಮಾನ್ಯ

ಮುಖ್ಯಮಂತ್ರಿಗಳಿಗೆ ಇದನ್ನು ತಿಳಿಸಿ. ನಾನು ಈ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನೀವು ಇವತ್ತೇ ಇದರ ಬಗ್ಗೆ ವಿಚಾರಣೆಗೆ ಕಳುಹಿಸಿದರೆ ಬಹುಶಃ 15-20 ದಿವಸದಲ್ಲಿ ನೀವು ಒಂದು ಕ್ರಮವನ್ನು ತೆಗೆದುಕೊಂಡರೆ ಒಂದು ತೀರ್ಮಾನವಾಗುತ್ತದೆ. ನೀವು ಖರ್ಚುಮಾಡತಕ್ಕ ಸಂಧರ್ಭದಲ್ಲಿ ಏನು ಹಣವನ್ನು ಅಲಾಟ್‌ಮೆಂಟ್ ಮಾಡುತ್ತೀರಿ ಅದರಲ್ಲಿ ಎಷ್ಟು ಖರ್ಚಾಗಿದೆ, ಎಷ್ಟು ಕೆಲಸವಾಗಿದೆ ಎಂಬುದನ್ನು ಲೆಕ್ಕ ಹಾಕಬೇಕು. ನಾನು ಇದರ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ, ಎಲ್ಲಾ ವಿಷಯಗಳನ್ನು ನಾನು ತರಿಸಿಕೊಳ್ಳುತ್ತಿದ್ದೇನೆ. ಹೇಮವತಿ ಪ್ರಾಜೆಕ್ಟ್‌ಗೆ ಸಂಬಂಧಪಟ್ಟಂತೆ ಇರಬಹುದು. ಕೃಷ್ಣಾ ಪ್ರಾಜೆಕ್ಟ್‌ಗೆ ಸಂಬಂಧಪಟ್ಟಂತೆ ಇರಬಹುದು ಇವರು ಏನು ಫೈನಾನ್‌ಷಿಯಲ್ ಟಾರ್ಗೆಟ್‌ನ್ನು ಇಟ್ಟುಕೊಂಡು ಖರ್ಚುಮಾಡಿದ್ದೇವೆಂದು ಹೇಳುತ್ತಿದ್ದಾರೆ. ಅದನ್ನು ಫಿಸಿಕಲ್ ಆಗಿ ಖಂಡಿತ ರೀಚ್ ಆಗಿಲ್ಲ. ಅಷ್ಟೂ ಬೇಡ ಕೇವಲ 50 ಪರ್ಸೆಂಟ್ ಕೂಡ ರೀಜ್ ಆಗಿಲ್ಲ. ಆದರೆ ಹಣ ಖರ್ಚಾಗಿದೆ ಎಂದು ಬರೆದುಕೊಳ್ಳುತ್ತಾರೆ. ರೀ ಎಸ್ಟಿಮೇಟನ್ನು ಮಾಡಿಕೊಂಡು ಹೋಗುತ್ತಲೇ ಇರುತ್ತಾರೆ. ದುಡ್ಡನ್ನು ಡ್ರಾ ಮಾಡುತ್ತಾರೆ, ಖರ್ಚು ಮಾಡಿರುತ್ತಾರೆ, ಆದಾದ ಮೇಲೆ ಮತ್ತೆ ಎಸ್ಟಿಮೇಟ್ ಮಾಡಿ ಅಪ್ರೂವ್ ಮಾಡಿಕೊಳ್ಳುತ್ತಾರೆ. ಇವರು ಇನ್ನೊಂದು ಕೆಲಸ ಏನು ಹೇಳುತ್ತಾರೆಂದರೆ, ಡಿಪಾರ್ಟ್‌ಮೆಂಟಲ್ ವರ್ಕ್ ಎಂದು ಹೇಳುತ್ತಾರೆ. ಯಾವುದು ಈ ಡಿಪಾರ್ಟ್‌ಮೆಂಟಲ್ ವರ್ಕ್? ಈ ಡಿಪಾರ್ಟ್‌ಮೆಂಟಲ್ ವರ್ಕ್ಸ್‌ನ್ನು ಜೂನಿಯರ್ ಇಂಜಿನಿಯರ್‌ಗಳು, ಅಸಿಸ್ಟೆಂಟ್ ಇಂಜಿನಿಯರ್‌ಗಳೇ ನೇರವಾಗಿ ಕಾಂಟ್ರ್ಯಾಕ್ಟ್ ಮಾಡುತ್ತಿದ್ದಾರೆ. ಬೇರೆ ಪಕ್ಷದವರಿಗೆ, ಅಥವಾ ಪಕ್ಷದ ಕಾರ್ಯಕರ್ತರಿಗೆ, ಪೊಲಿಟಿಕಲ್ ಪಾರ್ಟಿ ಕಾರ್ಯಕರ್ತರಿಗೆ, ಅಥವಾ ಎಂ.ಎಲ್.ಎ. ಹೇಳತಕ್ಕ ಕಾರ್ಯಕರ್ತರಿಗೆ, ಕೊಡುವುದು ಬೇಡ. ಸ್ವತಃ ಅಸಿಸ್ಟೆಂಟ್ ಇಂಜಿನಿಯರ್‌ಗಳು, ಜೂನಿಯರ್ ಇಂಜಿನಿಯರ್‌ಗಳು, ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳು, ಎಕ್ಸಿಕ್ಯುಟಿವ್ ಇಂಜಿನಿಯರಗಳು ತಮ್ಮ ಹೆಸರಿನಲ್ಲೇ ಕಾಂಟ್ರ್ಯಾಕ್ಟ್ ಮಾಡುತ್ತಿದ್ದಾರೆ. ನಾನು ಈಗ ಹೇಳತಕ್ಕ ಪ್ರಾಜೆಕ್ಟ್‌ಗಳಿಗೆ ತಾವು ಒಂದು ಸ್ಕ್ವಾಡನ್ನು ಕಳುಹಿಸಿಕೊಡಿ. ಫೈನಾನ್ಸ ಡಿಪಾರ್ಟ್‌ಮೆಂಟ್‌ನಿಂದ ಇರಿಗೇಷನ್ ಡಿಪಾರ್ಟ್‌ಮೆಂಟ್‌ನಿಂದ ಒಂದು ಸ್ಕ್ವಾಡನ್ನು ಕಳುಹಿಸಿಕೊಡಿ. ವಾಸ್ತವ ವಿಚಾರ ಏನೆಂಬುದನ್ನು ತಾವು ತಿಳಿದುಕೊಳ್ಳಿ. ಈಗ ನಮ್ಮ ಸರ್ಕಾರ ಪ್ರಮಾಣಿಕವಾಗಿ ಏನೋ ಮಾಡುತ್ತದೆ, ಒಳ್ಳೆಯ ಆಡಳಿತವನ್ನು ಕೊಡುತ್ತದೆಂದು ಹೇಳಿಕೊಂಡು ಹೊರಟಿರುವ ನಿಮಗೆ ಒಳ್ಳೆಯದಾಗಲಿ. ತಾವು ದಯವಿಟ್ಟು ಸರಿಯಾಗಿ ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ಒತ್ತಾಯಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಉಪಾಧ್ಯಕ್ಷಣಿಯವರೆ, ತೆಲುಗಿನಲ್ಲಿ ಒಂದು ಗಾದೆ ಇದೆ. ಮಿ ಸಮ್ಮು ಮಾಡೇ, ಮಾ ಸಮ್ಮು ಮಾಡೇ ಅಂತ. ಅಂದರೆ ಒಟ್ಟಿನಲ್ಲಿ ಮೋಸ ಎಂದು. ಹೇಗೆಂದಥೆ, ಎಸ್ಟಿಮೇಟನ್ನು ಮಾಡುವವರೂ ಇವರೇ, ಕೆಲಸವನ್ನು ಮಾಡುವವರೂ ಇವರೇ, ಬಿಲ್ ಮಾಡತಕ್ಕವರೂ ಇವರೇ, ಹಣವನ್ನು ತೆಗೆದುಕೊಳುವವರೂ ಕೂಡ ಇವರೇ. ನಾನು ಇಲಾಖೆಯ ಬಗ್ಗೆ ಹೇಳುತ್ತಿದ್ದೇನೆ, ಮಂಡಲ ಪಂಚಾಯಿತಿ ಬಗ್ಗೆ ಹೇಳುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸರ್ಕಾರ ಖರ್ಚುಮಾಡತಕ್ಕ ವಿಚಾರದಲ್ಲಿ ಒಂದು ಮಾತನ್ನು ಹೇಳುವುದಾದರೆ ಏನು ಹಣ ಖರ್ಚಾಗಿದೆ ಅದಕ್ಕೆ ಸರಿಯಾಗಿ ಕೆಲಸವಾಗಿದೆಯೇ, ಇಲ್ಲವೇ ಎಂಬುದನ್ನು ನೋಡಬೇಕು. ಕಳೆದ 2-3 ವರ್ಷಗಳಲ್ಲಿ

ನಡೆದಿರುವುದನ್ನು ನೋಡಿದರೆ ಬಹಳ ನೋವು ಆಗುತ್ತದೆ. ಈ ನಿಮ್ಮ ಇಲಾಖೆಯ ಅಧಿಕಾರಿಗಳು ಕೇವಲ ಖರ್ಚುಗಳನ್ನು ತೋರಿಸಿಕೊಂಡು ಹೋಗುತ್ತಿದ್ದಾರೆಯೇ ಹೊರತು ಪಿಸಿಕಲ್ ಟಾರ್ಗೆಟ್‌ನ್ನು ಅಚೀವ್ ಮಾಡುವುದಕ್ಕೆ ಸಾಧ್ಯವೇ ಆಗುತ್ತಿಲ್ಲ. ರೀ ಎಸ್ಟಿಮೇಟ್‌ಗಳನ್ನು ಮಾಡಿಕೊಳ್ಳುತ್ತಾರೆ, ಕಾಟ ಆಫ್ ಎಸ್ಕಲೇಷನ್ ಜಾಸ್ತಿಯಾಗಿದೆ ಎಂದು ಹೇಳಿಕೊಳ್ಳುತ್ತಾರೆ; ಅರ್ಧಕ್ಕರ್ಧ ದುಡ್ಡನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ದನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಒತ್ತಾಯ ಮಾಡಿ ನನ್ನ ಈ ಕೆಲವು ಸಲಹೆಗಳನ್ನು ಕೊಟ್ಟು ನೀವು ಮಂಡಿಸಿರತಕ್ಕ ಸಪ್ಲಿಮೆಂಟರಿ ಎಸ್ಟಿಮೇಟ್‌ನ್ನು ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಸ್.ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪಾಧ್ಯಕ್ಷಣಿಯವರೆ, ಮಾನ್ಯ ಆರ್ಥಿಕ ಮಂತ್ರಿಗಳು ಮಂಡಿಸಿರುವ ಈ ಪೂರಕ ಬಜೆಟ್‌ನ್ನು ನಾನು ವಿರೋಧಿಸುತ್ತಾ ಒಂದೆರಡು ಮಾತನಾಡ ಬಯಸುತ್ತೇನೆ. ಇಲ್ಲಿ ಮಂಡಿಸಿರತಕ್ಕ ಈ ಪೂರಕ ಬೇಡಿಕೆ ಏನಿದೆ ಇದು ಈ ವರ್ಷದಲ್ಲಿ 2ನೇ ಸಾರಿ. ಇದು ಏನಾಗಿದೆ ಎಂದರೆ ನಾವು ಖರ್ಚು ಮಾಡುತ್ತಾ ಹೋಗೋಣ, ಹೇಗಾದರೂ ಇವರು ಇದನ್ನು ಅಪ್ರೂವ್ ಮಾಡಿಯೇ ಮಾಡುತ್ತಾರೆಂಬ ಬಾವನೆ ಇಲಾಖೆಯ ಅಧಿಕಾರಿಗಳಲ್ಲಿ ಬೆಳಿದಿದೆ. ಪ್ಲಾನ್‌ನಲ್ಲಿ ಇರತಕ್ಕ ಹಣ ಖರ್ಚಾಗುತ್ತಿಲ್ಲ. ಆದರೆ ನಾನ್ ಪ್ಲಾನ್ ಖರ್ಚು ಬಹಳ ಹೆಚ್ಚಾಗಿ ಆಗುತ್ತಿದೆ. ಇದಕ್ಕೆ ಕಾರಣವೇನೆಂದರೆ ಚೀಪ್ ಪಾಪ್ಯುಲಾರಿಟಿ ಪ್ರೊಗ್ರಾಂಸ್ ಅನ್ನು ಏನು ತರುವುದಕ್ಕೆ ಹತ್ತಿದ್ದಾರೆ, ಅದಕ್ಕೇನು ಪ್ರಯತ್ನ ಮಾಡಿದ್ದೀರಿ ಆ ಉದ್ದೇಶದಿಂದ ನಾನ್ ಪ್ಲಾನ್ ಅಮೌಂಟ್ ಜಾಸ್ತಿಯಾಗಿದೆ. ಎಲ್ಲಿಯವರೆಗೆ ನಾನ್ ಪ್ಲಾನ್ ಅಮೌಂಟ್ ಹೆಚ್ಚು ಖರ್ಚು ಮಾಡುವುದನ್ನು ಕಟ್ ಮಾಡುತ್ತೇವೆ ಅಲ್ಲಿಯವರೆಗೆ ಹಣಕಾಸು ಇಲಾಖೆ ಒಳ್ಳೆಯ ರೀತಿಯಿಂದ ಕೆಲಸ ಮಾಡುವುದಿಲ್ಲ. ಲೋಕೋಪಯೋಗಿ ಇಲಾಖೆಯವರು ಇವತ್ತಿನ ದಿವಸ 446 ಲಕ್ಷ ರೂಪಾಯಿಗಳನ್ನು ಮತ್ತೆ ಪೂರಕವಾಗಿ ಕೇಳಿದ್ದಾರೆ. ಪೆಂಡಿಂಗ್ ಬಿಲ್ ಅನ್ನು ಅವರು ತೋರಿಸುತ್ತಾರೆ. ಏಕೆ ಪೆಂಡಿಂಗ್ ಬಿಲ್ ತೋರಿಸುತ್ತಾರೆಂದರೆ ಕೆಲಸಕ್ಕಿಂತ ಹೆಚ್ಚು ಎಸ್ಟಿಮೇಟ್ ಮಾಡಿ ರಿವೈಸ್ ಮಾಡಿ ಹೆಚ್ಚಿಗೆ ಹಣವನ್ನು ಕೇಳುತ್ತಿದ್ದಾರೆ. ಅಮೌಂಟ್ ಆದ್ದರಿಂದ ಹೆಚ್ಚಾಗುತ್ತದೆ. ಆಗ ನಾವು ಅದಕ್ಕೆ ಒಪ್ಪಿಗೆ ಕೊಡಲೇ ಬೇಕಾದಂತಹ ಪ್ರಸಂಗ ಬರುತ್ತದೆ. ಹಿಂದಿನ ಮುಖ್ಯ ಮಂತ್ರಿಗಳು ಪುಟ್ಟಪರ್ತಿಗೆ ಹೋದರು 1 ಕೋಟಿ ಅವರು ಕೇಳಿದ ಕೂಡಲೇ ಆಗಲೀ ಎಂದು ಹೇಳಿ 50 ಲಕ್ಷ ರೂಪಾಯಿ ತಥಾಸ್ತು ಎಂದು ಹೇಳಿದರು ತಥಾಸ್ತು ಎನ್ನುವುದು ಅವರ ಕೈಯ್ಯಲ್ಲಿ ಇದೆ ಹೇಳಿದರು, ಇಲ್ಲಿ ಬಂದು ಅಲೆಗ್ಸಾಂಡರ್‌ಗೆ ಹೇಳಿದರು ಅವರೂ ತಥಾಸ್ತು ಎಂದು ಹೇಳಿದರು. ಒಬ್ಬರೊಬ್ಬರಿಗೆ ತಥಾಸ್ತು ಅಂದರೆ ಇವತ್ತಿನ ದಿವಸ ನಾವು ಇಲ್ಲಿ ತಥಾಸ್ತು ಎಂದು ಹೇಳುವುದಕ್ಕೆ ಹತ್ತಿದ್ದೇವೆ. ಅವರು ಅಲ್ಲಿ ತಥಾಸ್ತು ಅಂದರೆ ಅಲೆಗ್ಸಾಂಡರ್ ಇಲ್ಲಿ ತಥಾಸ್ತು ಅಂದರೆ ನಾವು ಇಲ್ಲಿ ತಥಾಸ್ತು ಎಂದು ಹೇಳುವುದಕ್ಕೆ ಹತ್ತಿದ್ದೇವೆ. ಇದರ ಉದ್ದೇಶ ಇಷ್ಟೇ ಇದನ್ನು ಕೊಡಲಿಕ್ಕೆ ಯಾರೂ ಬೇಡವೆಂದು ಹೇಳುವುದಿಲ್ಲ ಆದರೆ ಆ ಅಮೌಂಟನ್ನು ಬಜಟ್ಟಿನಲ್ಲಿ ಪ್ರಾವಿಜನ್ ಮಾಡಿಕೊಡಲಿ ಬೇಡವೆಂದು ಹೇಳುವುದಿಲ್ಲ. ಯಾವ ಹಣ ಯಾವುದಕ್ಕೆ ಅವಶ್ಯಕತೆ ಅತಿ ಇದೆ ಅದಕ್ಕೆ ಹಣಕಾಸು ಇಲಾಖೆಯವರು ಒಪ್ಪುವುದಿಲ್ಲ. ದೊಡ್ಡವಾಡದಲ್ಲಿ ಒಂದು ಜೂನಿಯರ್ ಕಾಲೇಜು ಕಟ್ಟಿದ್ದೇವೆ ಆ ಕಟ್ಟಡಕ್ಕೆ ಹೊಸದಾಗಿ ಜೆಂಟ್ಸ್, ಮಹಿಳೆಯರಿಗೆ ಯೂರಿನಲ್ಸ್

ಇಲ್ಲ ಅದಕ್ಕೆ 1,20,000 ಬೇಕಾಗುತ್ತದೆಂದು ಎಸ್ಟಿಮೇಟ್ ಕೊಟ್ಟರೆ ಅದು ಬಡ್ಜೆಟ್‌ನಲ್ಲಿಲ್ಲವೆಂದು ವಾಪಸ್ಸು ಕಳುಹಿಸಿದ್ದಾರೆ. ಇಂತಹ ಅವಶ್ಯಕ ಇರುವ ಕೆಲಸಕ್ಕೆ ಕಂಟಿನ್ಜೆನ್ಸಿ ಬಡ್ಜೆಟ್ಟಿಲ್ಲಿ ಸೇರಿಸಿ ಕಳಿಸುವಂತಹ ಪ್ರವೃತ್ತಿ ಸರಕಾರದಲ್ಲಿಲ್ಲ. ಆದರೆ ಅದನ್ನು ವಾಪಸ್ಸು ಕಳಿಸಿದರೆ ಏನಾಗುತ್ತದೆ? ಇನ್ನೊಂದು ಸಲ ಮೂರು ಕೋಣೆಯ ಶಾಲೆ ಮಂಜೂರಾಗಿತ್ತು ಆ ಕಾಲಕ್ಕೆ ಹೈಸ್ಕೂಲ್ ಬಿಲ್ಡಿಂಗ್ ಎಸ್ಟಿಮೇಟ್ ಮಾಡಿದರೆ 3,20,000 ಆಯಿತು, ಆಗ ಬಡ್ಜೆಟ್ಟಿನಲ್ಲಿ 3 ಲಕ್ಷ ಇತ್ತು ಪ್ಲಾನ್ ಎಸ್ಟಿಮೇಟ್ 20,000 ಹೆಚ್ಚು ಆಗಿದೆ ಎಂದು ಅದರ ಸಲುವಾಗಿ ಹಣಕಾಸು ಇಲಾಖೆಗೆ ಇಲ್ಲ ಸಾಗುವಾನಿ ಕಟ್ಟಿಗೆ ಉಪಯೋಗ ಮಾಡಿದ್ದಾರೆ ಜಂಗಲ್ ಕಟ್ಟಿಗೆ ಉಪಯೋಗ ಮಾಡಬೇಕಾಗಿತ್ತು ಅದರ ಸಲುವಾಗಿ ಮತ್ತೆ ಕಳಿಸಿಕೊಡುತ್ತೇನೆಂದು ಹೇಳಿದರು. ಹಣಕಾಸು ಕಾರ್ಯದರ್ಶಿ-2 ಅವರಿಗೆ ನಾನೇ ಹೋಗಿ ಹೇಳಿದೆ. ಅದನ್ನು ವಾಪಸ್ ಕಳುಹಿಸಬೇಡಿ ಅದು ಬರಲು 6-9 ತಿಂಗಳಾಗುತ್ತದೆ ಬೇಡವೆಂದು ಹೇಳಿದೆ. ಆದರೂ ಅದನ್ನು ಮತ್ತೆ ಕಳುಹಿಸಿದರು. ನಮಗೆ 15 ಪರ್ಸೆಂಟ್ ಹೆಚ್ಚು ಕಾಸ್ಟ್ ಆಯಿತು ಜಂಗಲಿ ಕಟ್ಟಿಗೆ ಉಪಯೋಗ ಮಾಡಿದ್ದಕ್ಕೆ 45,000 ಹೆಚ್ಚಿಗೆ ಖರ್ಚು ಮಾಡುವಂತಹ ಪ್ರಸಂಗ ಬಂತು. ಯಾವುದಕ್ಕೆ ಅವಶ್ಯಕ ಇದೆ ಅದಕ್ಕೆ ಈ ಅಧಿಕಾರಿಗಳು ಖರ್ಚು ಮಾಡುವುದಿಲ್ಲ ಅನಾವಶ್ಯಕವಿರುವುದಕ್ಕೆ ಖರ್ಚು ಮಾಡುತ್ತಾರೆ. ಗ್ರ್ಯಾಂಟ್ ಇನ್ ಏಡ್ ಜೂನಿಯರ್ ಕಾಲೇಜುಗಳಲ್ಲಿ 7-7 ವರ್ಷದ ತನಕ ಕೆಲಸ ಮಾಡುತ್ತಾರೆ 7 ವರ್ಷ ದುಡಿಯುತ್ತಾರೆ. ಅದು ಸರ್ಕಾರಕ್ಕೆ ಬಂದರೆ ಗ್ರ್ಯಾಂಟ್ ಕೊಡಲಿಕ್ಕೆ ~~ಅಂಥಾದ್ದಕ್ಕೆ~~ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಹಣ ಇರುವುದಿಲ್ಲ, 7 ವರ್ಷದ ತನಕ ದುಡಿದದ್ದಕ್ಕೆ ಅಂತಹ ಒಳ್ಳೆಯ ಕೆಲಸಕ್ಕೆ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಕೊಡಲಿಕ್ಕೆ ಬರುವುದಿಲ್ಲ. ಪ್ರತಿಯೊಂದು ಕೆಲಸದ ಬಗ್ಗೆಯೂ ನಾವು ವಿಚಾರ ಮಾಡಿ ಮಾಡಬೇಕಾಗುತ್ತದೆ. ಷುಗರ್ ಕಾರ್ಖಾನೆಗೆ ಹಣ ಕೊಟ್ಟರೂ ಅದು ಒಳ್ಳೆಯ ಕೆಲಸ ಮಾಡಬೇಡವೆಂದು ಹೇಳುವುದಿಲ್ಲ, ಮಹಾರಾಷ್ಟ್ರದಲ್ಲಿ ಸಕ್ಕರೆ ಕಾರ್ಖಾನೆಯಲ್ಲಿ 400 ರೂಪಾಯಿ ರೈಗರಿಗೆ ಕೊಡುತ್ತಾರೆ. ಆ 400 ಕ್ಕಿಂತ ಹೆಚ್ಚಿಗೆ ಇದ್ದುದನ್ನು ಡೆಪಾಸಿಟ್ ಇಟ್ಟುಕೊಂಡು ಆ ಉಳಿದುದನ್ನು ಸಕ್ಕರೆ ಕಾರ್ಖಾನೆಗೆ ಕೊಡುತ್ತಾರೆ. ಹಾಗೆ ಒಳ್ಳೆಯ ಕೆಲಸ ಮಾಡಿದರೆ ಸರ್ಕಾರಕ್ಕೆ ಸೋರ್ಸಸ್ ಆಗುತ್ತದೆ. ಅನಂತರ ಒಳ್ಳೆಯ ಕೆಲಸ ಮಾಡುವುದಕ್ಕೆ ಆಗುತ್ತದೆ. ಲೋಕೋಪಯೋಗಿ ಇಲಾಖೆಯಲ್ಲಿ ಅನೇಕ ರೀತಿಯಲ್ಲಿ ಬೋಗಸ್ ಬಿಲ್ ಮಾಡಿರುತ್ತಾರೆ, ಅವರು ಖರ್ಚು ಮಾಡಿರುವುದಿಲ್ಲ. ಹಳೇ ಮೈಸೂರಿನಲ್ಲಿ ಪೆಂಡಿಂಗ್ ಬಿಲ್ಸ್ ಎಷ್ಟು ಇರುತ್ತದೆ ಎಂದರೆ 40 ಲಕ್ಷ ರೂಪಾಯಿ, 60 ಲಕ್ಷ ರೂಪಾಯಿ ಮಾಡಿ ಬರೀ ಲಕ್ಷ ಗಟ್ಟಲೆ ಹಾಗೆಯೇ ಕೂರಿಸುತ್ತಾರೆ. ಮುಂದೆ 50 ಪರ್ಸೆಟ್ ರಿಲೀಸ್ ಮಾಡುತ್ತಾರೆ. ಆದರೆ ನಮ್ಮ ಧಾರವಾಡದಲ್ಲಿ ಎಕ್ಸಾಕ್ಟ್ ಫಿಗರ್ಸ್ ಕೊಡುತ್ತಾರೆ, ಆದ್ದರಿಂದ ಹಣ ಬರುವುದಿಲ್ಲ, ಇಲ್ಲಿ ಇವರು ಬೋಗಸ್ ಫಿಗರ್ಸ್ ಕೊಟ್ಟಿದ್ದಾರೆ, ಇದು ಸರಿಯಾಗಿದೆಯೇ? ಇದರ ಬಗ್ಗೆ ವಿಚಾರ ಮಾಡಬೇಕು. ಇನ್ನೊಂದು ತಿಂಗಳಿಗೆ 3 ನೇ ಪೂರಕ ಬಡ್ಜೆಟ್ ಬರುತ್ತದೆ. ಅದಕ್ಕೆ ನಾವು ಅಪ್ರೂವೆಲ್ ಕೊಡುವ ಪ್ರಸಂಗ ಬರುತ್ತದೆ. ಮತ್ತೊಂದು ಪೂರಕ ಬಡ್ಜೆಟ್ ಇರಲೇಬೇಕು. ಇಂಥ ಪ್ರವೃತ್ತಿ ಏನು ಇದೆ ಇದನ್ನು ನಾವು ಕಟ್ ಮಾಡಬೇಕು. ಸರಕಾರದವರು ಇದನ್ನು ಕಟ್ಟನಿಟ್ಟಾಗಿ ಮಾಡಬೇಕು ಮತ್ತು ಒಳ್ಳೆಯ ಕೆಲಸಕ್ಕೆ ಬಡ್ಜೆಟ್ಟಿನಲ್ಲಿ ಕೊಡಬೇಕು. ಕೆಲವೊಂದು ರೋಡ್, ವರ್ಕ್ ಬಡ್ಜೆಟ್ಟಿನಲ್ಲಿ ಬಂದಿದೆ.

ಅದಕ್ಕೆ ಟೋಕನ್ ಗ್ರಾಂಟ್ ಎಂದು ಬಜೆಟ್ನಲ್ಲಿ ಇಟ್ಟಿದ್ದಾರೆ. ಲಕ್ಷ ರೂಪಾಯಿಗಳದು ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಡಿರಿ ಎಂದರೆ ಅದಕ್ಕೆ ಟೋಕನ್ ಗ್ರಾಂಟ್ ಇದೆ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. 30 ಪರ್ಸೆಂಟ್ ಮಿನಿಮಮ್ ಮಾಡಬೇಕೆಂದು ಹೇಳುತ್ತಾರೆ. ಆದರೆ ಇಂಥದಕ್ಕೆ 30 ಪರ್ಸೆಂಟ್ ಎನ್ನುವ ವಿಚಾರವಿಲ್ಲ. ಯಾವುದೇ ವಿಚಾರವಿರುವುದಿಲ್ಲ. ಆದ ಕಾರಣ ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ಸರ್ಕಾರದವರು ಯಾವ ಹಣವನ್ನು ಖರ್ಚುಮಾಡುವುದಕ್ಕೆ ಮೊದಲು ಒಂದು ಒಳ್ಳೆಯ ರೀತಿಯಲ್ಲಿ ಉಪಯೋಗವಾಗುವಂಥ ಕೆಲಸ ಮಾಡಬೇಕು. ಆದರೆ ಹೆಚ್ಚಿಗೆ ಸಿಕ್ಕುತ್ತದೆಂದು ಹೇಳಿ ಅದನ್ನು ಖರ್ಚುಮಾಡಲಿಕ್ಕೆ ಅವಕಾಶವನ್ನು ಕೊಡಬಾರದು. ಆದಕಾರಣ ತಾವು ಇಷ್ಟು ವೇಳೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದಕ್ಕಾಗಿ ತಮಗೆ ಅಬಿನಂದಿಸಿ ನಾನು ಇದನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಸನ್ಮಾನ್ಯ ಅಧ್ಯಕ್ಷರೇ ಈ ಸದನದ ಮುಂದೆ ಸರ್ಕಾರ ತಂದಿರುವಂಥ ಈ ಪೂರಕ ಅಂದಾಜು ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ನನಗೆ ಅವಕಾಶ ಕೊಟ್ಟಿದಕ್ಕಾಗಿ ತಮ್ಮನ್ನು ಅಬಿನಂದಿಸಿ ಬೊಕ್ಕಸಕ್ಕೆ ಬರುವಂಥ ಹಣವನ್ನು ಸರ್ಕಾರದವರು ಹೇಗೆ ಖರ್ಚುಮಾಡಬೇಕು, ಎಷ್ಟನ್ನು ಖರ್ಚುಮಾಡಬೇಕೆನ್ನುವ ವಿಷಯವನ್ನು ಸಂವಿಧಾನದ ಚೌಕಟ್ಟಿನಲ್ಲಿ ತಂದಿದ್ದಾರೆ. ಅದಕ್ಕಾಗಿ ಪ್ರತಿವರ್ಷ ಸರ್ಕಾರದ ಬಜೆಟ್ ಅಥವಾ ಅಂದಾಜು ತಯಾರು ಮಾಡುತ್ತಾರೆ. ಎಷ್ಟು ಬೊಕ್ಕಸಕ್ಕೆ ಹಣ ಬರುತ್ತದೆ, ಈ ಬೊಕ್ಕಸಕ್ಕೆ ಬಂದ ಹಣವನ್ನು ಅಷ್ಟಷ್ಟಕ್ಕೆ ಖರ್ಚುಮಾಡಬೇಕಾಗುತ್ತದೆ. ಇದರ ಉದ್ದೇಶ ಇಷ್ಟೇ ಈ ಹಣವನ್ನು ಸಂವಿಧಾನದ ಚೌಕಟ್ಟಿನಲ್ಲಿ ತರುವಂಥ ಉದ್ದೇಶವೇನೆಂದರೆ public Representatives are expected to be the trustees of the Public fund. ಈ ಒಂದು ಗುರುತರವಾದ ಜವಾಬ್ದಾರಿಯ ಕರ್ತವ್ಯವನ್ನು ನಮ್ಮ ಹೆಗಲಮೇಲೆ ಜನರು ಹಾಕಿದ್ದಾರೆ. ಯಾವುದಾದರೂ ಹಂತದಲ್ಲಿ ಇದರಲ್ಲಿ ದುರುಪಯೋಗವಾಗುತ್ತದೆ ಎಂದು ಹೇಳಿಬಿಟ್ಟು ಈ ಹಣವನ್ನು ಖರ್ಚುಮಾಡುವಂಥ ಅವಕಾಶವನ್ನು ಸಂವಿಧಾನದಲ್ಲಿ ತಂದಿದ್ದಾರೆ. ಈ ಸಂವಿಧಾನದ ಚೌಕಟ್ಟಿನಲ್ಲಿ ತಯಾರು ಮಾಡುವಂಥ ಬಜೆಟ್ ಏನಿದೆ ಅದರೊಳಗೆ ಆ ವರ್ಷಕ್ಕೆ ಎಷ್ಟು ಹಣವನ್ನು ಖರ್ಚುಮಾಡಬೇಕಾಗುತ್ತದೆನ್ನುವುದನ್ನು ಸರ್ಕಾರ ನಮೂದಿಸಬೇಕಾಗುತ್ತದೆ. ನಮೂದು ಮಾಡುವಾಗ ಏನಾದರೂ ತಪ್ಪು ಒಪ್ಪುಗಳಿದ್ದರೆ ಅಥವಾ ಹೊಸದಾಗಿ ಯಾವುದಾದರೂ ಸೇವೆಗೆ ಹಣಬೇಕಾದರೆ ಅಂಥ ಸಂದರ್ಭದಲ್ಲಿ ಸರ್ಕಾರ ಪೂರಕವಾದಂಥ ಒಂದು ಅಂದಾಜನ್ನು ಸದನದ ಮುಂದೆ, ಸದನದ ಒಪ್ಪಿಗೆ ಪಡೆದು, ಹಣವನ್ನು ಖರ್ಚುಮಾಡಬೇಕೆನ್ನುವಂಥ ನಿಭಂಧನೆ ಯಾವಾಗ ಅಂದರೆ... It is only under two definite specific circumstances. ಇದು ಒಂದು ಪೂರಕ ಬೇಡಿಕೆ ಆಗಲಿಕ್ಕೆ ಸಾಧ್ಯವಿಲ್ಲ. ಇದು ಒಂದು ಸಾಮಾನ್ಯ ನಡವಳಿಕೆಯಾಗಲಿಕ್ಕೆ ಸಾಧ್ಯವಿಲ್ಲ. ಬೊಕ್ಕಸದ ಹಣವನ್ನು ರಕ್ಷಣೆ ಮಾಡುವಂಥ ಗುರುತರವಾದಂಥ ಜವಾಬ್ದಾರಿಯನ್ನು ಹೊತ್ತಿರತಕ್ಕ ಈ ಸದನ ಇಂಥ ನಡವಳಿಕೆಯನ್ನು ಎರಡು ಸಂದರ್ಭದಲ್ಲಿ ಮಾಡಬೇಕಾಗುತ್ತದೆ. ಒಂದು ಸಂದರ್ಭ, ವಿಶಿಷ್ಟ ಸೇವೆಗೆ ವೆಚ್ಚಮಾಡತಕ್ಕಂಥ ಮೊಬಲಗು ಪ್ರತಿವರ್ಷದ ಉದ್ದೇಶಕ್ಕೆ ಸಾಕಾಗದೆ ಇದ್ದಾಗ ....

ಎರಡನೆಯ ಸಂದರ್ಭ ಯಾವಾಗ ಪೂರಕವಾದಂಥ ಒಂದು ಅಂದಾಜನ್ನು ತರಬೇಕಾಗುತ್ತದೆ ಸದನದ ಮುಂದೆ ಎಂದರೆ ಈ ವರ್ಷದ ವಾರ್ಷಿಕ ನಿರೂಪಣೆಯಲ್ಲಿ ಹೇಳಿರುವ ಹೊಸ ಸೇವೆಗಾಗಿ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಪೂರಕ ಅಥವಾ ಹೆಚ್ಚಿನ ವೆಚ್ಚದ ಅವಶ್ಯಕತೆ ಉಂಟಾದಾಗ. ಈ ಎರಡು ಸಂದರ್ಭಗಳಲ್ಲಿ ಪೂರಕವಾದಂಥ ಅಂದಾಜನ್ನು ಸದನದ ಮುಂದೆ ತರಬೇಕಾಗುತ್ತದೆ.....

It is only under these two specific definite circumstances. ಈಗ ನಾನು ಹೇಳಿರುವಂತೆ ವೆಚ್ಚವನ್ನು ಎರಡರಲ್ಲಿ ಯಾವುದಾದರೂ ಒಂದರಲ್ಲಿ ಬಾರದಿದ್ದುದು ಯಾವುದಾದರೂ ಇದ್ದರೆ ಈ ಡೆಪನೇಷನ್‌ನಲ್ಲಿ ಅಂಥತನ್ನು ಸನ್ಮಾನ್ಯ ಸಚಿವರು ವಾಪಸ್ ತೆಗೆದುಕೊಳ್ಳಬೇಕೆಂದು ನನ್ನ ಪ್ರಾರ್ಥನೆ. because we are covered under the constitutional Provision. It is clearly stated under Article 205 of the constitution, under which circumstances, this Government can bring a supplementary estimate, when current year's budget is found to be insufficient. ಇವೆರಡರಲ್ಲಿ ಬಾರದೆ ಇರುವ ವೆಚ್ಚವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಾ ನೀತಿಯ ದೃಷ್ಟಿಯಿಂದ, ಸಂವಿಧಾನಕ್ಕೆ ಬದ್ಧರಾಗುವ ದೃಷ್ಟಿಯಿಂದ, ಸಂವಿಧಾನದ ಚೌಕಟ್ಟಿನಲ್ಲಿ ಕೆಲಸ ಮಾಡುವ ನಾವು ಅಪಚಾರ ಮಾಡಬಾರದೆಂಬ ದೃಷ್ಟಿಯಿಂದ ಈ ಎರಡು ಡೆಪನಿಷನ್‌ಗಳಲ್ಲಿ ಬಾರದೆ ಇರುವ ವೆಚ್ಚಗಳನ್ನು ದಯಮಾಡಿ ಪೂರಕ ಅಂದಾಜು ವೆಚ್ಚದಿಂದ ಕೈಬಿಡಬೇಕೆಂದು ಸರ್ಕಾರದಲ್ಲಿ ನಾನು ಪ್ರಾರ್ಥಿಸುತ್ತೇನೆ. ಇಲ್ಲಿ ಕೆಲವು ವೆಚ್ಚಗಳನ್ನು ಅವರು ಕೊಟ್ಟಿದ್ದಾರೆ. ಈಗ ತಾನೇ ಮಾನ್ಯ ಸ್ನೇಹಿತರು ಒಂದು ವೆಚ್ಚದ ಬಗ್ಗೆ ಹೇಳಿದರು. ಆಂಧ್ರಪ್ರದೇಶದಲ್ಲಿರುವ ಪುಟ್ಟಪರ್ತಿ ಸಾಯಿಬಾಬಾಗೆ 50 ಲಕ್ಷ ರೂಪಾಯಿಗಳನ್ನು ಕೊಟ್ಟಿರುವ ವೆಚ್ಚ ಇವೆರಡರ ಪೈಕಿ ಯಾವುದರಲ್ಲಿ ಇದು ಬರುತ್ತದೆಂಬುದನ್ನು ತಿಳಿಸಬೇಕು ಮಾನ್ಯ ಮಂತ್ರಿಗಳು. ಈ ರಾಜ್ಯದ ಆಸ್ಪತ್ರೆಗಳಲ್ಲಿ ಔಷಧಿ ಇಲ್ಲ. ಈ ರಾಜ್ಯದಲ್ಲಿ ಆಸ್ಪತ್ರೆಗಳನ್ನು ಮಾಡಿದರೆ ಅವುಗಳ ಖರ್ಚಿಗೆ ದುಡ್ಡಿಲ್ಲ. ಹೀಗಿರುವಾಗ ಪುಟ್ಟಪರ್ತಿ ಸಾಯಿಬಾಬಾ ಅವರಿಗೆ ದಾನ ಕೊಡುವ ಅವಶ್ಯಕತೆ ಏನಿತ್ತು? ಸಾರ್ವಜನಿಕ ಸ್ಥಳಗಳಲ್ಲಿ ಜನರು ಮಾಡನಾಡುತ್ತಾರೆ. ಯಾರೋ ಮುಖ್ಯ ಮಂತ್ರಿಗಳು ದಾನ ಮಾಡಿ ಸಾಯಿಬಾಬಾ ಅವರ ಆಶೀರ್ವಾದ ಪಡೆಯುವುದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಡುವ ಪರಿಸ್ಥಿತಿ ಬಂತು. ಇದು ನಿಜವೋ ಸುಳ್ಳೋ ಅದರ ವ್ಯಾಖ್ಯಾನ ಬೇಕಾಗಿಲ್ಲ. ಆದರೆ ಪೂರಕ ಅಂದಾಜುಗಳನ್ನು ತರುವ ಎರಡು ಸಂದರ್ಭಗಳಲ್ಲಿ ಯಾವ ಸಂದರ್ಭಕ್ಕೂ ಇದು ಹೊಂದುವುದಿಲ್ಲ. ಆದುದರಿಂದ ಈ ಪುಟ್ಟಭರ್ತಿ ಸಾಯಿಬಾಬಾ ಅವರಿಗೆ ಹಣ ಕೊಡುವುದು ಸರ್ಕಾರದ ತೀರ್ಮಾನವೋ, ಮುಖ್ಯ ಮಂತ್ರಿಗಳ ತೀರ್ಮಾನವೋ ಅಥವಾ ಸ್ನೇಹಿತರು ಹೇಳಿದ ಹಾಗೆ ಮುಖ್ಯ ಕಾರ್ಯದರ್ಶಿಯವರ ತೀರ್ಮಾನವೋ ಅದು ಯಾವ ರೀತಿಯ ತೀರ್ಮಾನವೇ ಆಗಿರಲಿ, ರಾಜ್ಯದ ಜನತೆಗೆ ಹಣ ಕೊರತೆ ಇರುವಾಗ, ಅವಶ್ಯಕ ಕೆಲಸಕ್ಕೆ ಹಣದ ಕೊರತೆ ಇರುವಾಗ, ದುರ್ಭಿಕ್ಷ ಕಾಲದಲ್ಲಿ ಅಧಿಕ ಮಾಸ ಬಂದ ಹಾಗೆ ಹೊರ ರಾಜ್ಯದಲ್ಲಿರುವ ಆರೋಗ್ಯ ಸಂಸ್ಥೆಗೆ ಒಂದು ಕೋಟಿ ರೂಪಾಯಿ ವಾಗ್ದಾನ ಮಾಡಿ 50 ಲಕ್ಷ ರೂಪಾಯಿಗಳನ್ನು ಪೂರಕ ಅಂದಾಜಿನ ಮೂಲಕ ಕೊಡುವ ಸರ್ಕಾರದ ತೀರ್ಮಾನ ಯಾವುದೇ ದೃಷ್ಟಿಯಿಂದ ಸಹಜವಾದುದಲ್ಲ.

ದಯಮಾಡಿ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಪ್ರಾರ್ಥಿಸುತ್ತೇನೆ. ಪೂರಕ ಅಂದಾಜಿನಲ್ಲಿ ಇನ್ನೂ ಎರಡು ಖರ್ಚನ್ನು ತೋರಿಸಿದ್ದಾರೆ. 5 ಕೋಟಿ ರೂಪಾಯಿಗಳನ್ನು ಅಯೋಧ್ಯೆ ವಿವಾದದ ಸಂಧರ್ಭದಲ್ಲಿ ನಡೆಸಿದ ಗಲಾಟೆಗೆ ಖರ್ಚು ಮಾಡುವುದಕ್ಕೆ ಮತ್ತು ಕಾವೇರಿ ನೀರಿನ ಗಲಾಟೆ ಸಂದರ್ಭದಲ್ಲಿ ಖರ್ಚು ಮಾಡುವುದಕ್ಕೆ ಒಂದು ಕೋಟಿ 15 ಲಕ್ಷ ರೂಪಾಯಿಗಳು ಎಂದು ಇಲ್ಲಿ ನಮೂದಿಸಿದ್ದಾರೆ. ಈ ಖರ್ಚಿನ ಅವಶ್ಯಕತೆ ಇದೆಯೇ ಇಲ್ಲವೇ, ಮಾಡಬೇಕೇ ಬೇಡವೇ ಎಂದು ಹೇಳುವುದಕ್ಕೆ ಬದಲಾಗಿ ಸರ್ಕಾರದಲ್ಲಿ ಪ್ರಾರ್ಥಿಸುತ್ತೇನೆ, ಈ ಪರಿಹಾರವನ್ನು ಈ ಪದ್ಧತಿಯನ್ನು ದಯಮಾಡಿ ಕೈಬಿಡಿ. ಈ ರಾಜ್ಯದಲ್ಲಿ, ರಾಷ್ಟ್ರದಲ್ಲಿ ನಡೆಯುವಂಥ ಇವತ್ತಿನ ವ್ಯವಸ್ಥೆಯಲ್ಲಿ ಒಂದಲ್ಲ ಒಂದು ವಿಧವಾದ ಗಲಾಟೆ ನಡೆಯುತ್ತಿದೆ. ಅಯೋಧ್ಯೆ ಗಲಾಟೆಯಲ್ಲಿ 50 ಕೋಟಿ ರೂಪಾಯಿ ಖರ್ಚು ಮಾಡಿದರೆ ನಾಳೆ ಇನ್ನು ಯಾವ ಗಲಾಟೆ ಬರುತ್ತದೆಯೋ ನಮ್ಮ ಸ್ನೇಹಿತರು ನಾಳೆ ಇನ್ನು ಯಾವ ಗಲಾಟೆ ಶುರು ಮಾಡುತ್ತಾರೋ? ಅದಕ್ಕೆ ನಾಳೆ ಹತ್ತು ಕೋಟಿ ರೂಪಾಯಿ ಕೊಡಬೇಕಾಗುತ್ತದೆ. ಪೂಜಾ ಸ್ಥಳಗಳನ್ನು ದುರಸ್ತಿ ಮಾಡಿಸುವುದಕ್ಕೆ ಒಂದು ಕೋಟಿ 15 ಲಕ್ಷ, ಎರಡು ಕೋಟಿ ರೂಪಾಯಿ ಖರ್ಚು ಮಾಡಿದರೆ ನಾಳೆ ಮಾರಮ್ಮನ ಗುಡಿಯಲ್ಲಿ ಖರ್ಚು ಮಾಡುವ ಆಬ್ಲಿಗೇಟರಿ ಡ್ಯೂಟಿಯನ್ನು ಸರ್ಕಾರ ಮಾಡಬೇಕಾಗುತ್ತದೆ. ಆದುದರಿಂದ ಸರ್ಕಾರದಲ್ಲಿ ಮನವಿ, ಇಂಥದ್ದಕ್ಕೆ ಹಣ ಖರ್ಚು ಮಾಡುವ ಪರಿಪಾಠ ಪದ್ಧತಿ ಏನಿದೆ ಇದನ್ನು ಕೈಬಿಡಬೇಕು. ಇದಕ್ಕೆ ಮತ್ತೊಂದು ಕಾರಣ ಇದೆ. ಈ ಪರಿಪಾಠ ಪದ್ಧತಿ ಅಳವಡಿಸಿಕೊಳ್ಳುವುದರಿಂದ we are encouraging the miscreants. ಅದು ನನ್ನ ಭಯ ಇದೆ. ಅದು ನಿಮಗೆ ಸರಿ ಎನಿಸಿದರೆ ದಯಮಾಡಿ ಈ ರೀತಿ ವೆಚ್ಚ ಮಾಡುವುದು ಕೈಬಿಡಿ ಎಂದು ನಾನು ಕೋರುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಪೂರಕ ಅಂದಾಜನ್ನು ಪಕ್ಷಪಾತದಿಂದ ಕೂಡಿದ್ದುದು ಎಂದು ಹೇಳಲೇಬೇಕಾಗುತ್ತದೆ. ಕೆಲವು ವೆಚ್ಚಗಳನ್ನು ನಾನು ಮಾಡಬಾರದು ಎಂದು ಹೇಳುವುದಿಲ್ಲ, ಈ ವೆಚ್ಚ ಮಾಡುವುದು ತಪ್ಪು ಎಂದು ಹೇಳುವುದಿಲ್ಲ, ಈ ವೆಚ್ಚಗಳು ಅನಾವಶ್ಯಕ ಎಂದು ಹೇಳುವುದಿಲ್ಲ. ಆದರೆ ಈ ವೆಚ್ಚ ಮಾಡುವ ಸಂದರ್ಭದಲ್ಲಿ ಸರ್ಕಾರ ಪಕ್ಷಪಾತ ಮಾಡಿದೆ. ಹೇಗೆ? ಶಿವಮೊಗ್ಗದಲ್ಲಿ, ಮೇಯರ್ ಯಾವತ್ತು ಬಂದರು, ಅಲ್ಲಿಯ ಕಾರ್ಪೋರೇಷನ್ ಹೇಗೆ ಬಂತು, ಅದು ನ್ಯಾಯವಾಗಿ ಬಂದಿದೆಯೇ ಇಲ್ಲ ಅನ್ಯಾಯವಾಗಿ ಬಂದಿದೆಯೇ, ಕಾನೂನು ಚೌಕಟ್ಟಿನಲ್ಲಿ ಬಂದಿದೆಯೇ ಎಂದು ಪ್ರಶ್ನೆ ಅಲ್ಲ. ಶಿವಮೊಗ್ಗ ಕ್ಷೇತ್ರದಿಂದ ಬಂದಿರುವ ಶಾಸಕರಾದಿಯಾಗಿ ಈ ಹಣವನ್ನು ಕೊಟ್ಟಿದ್ದು ಸರಿಯಲ್ಲ ಎನ್ನುವುದಾದರೆ ಈ ಸರ್ಕಾರಕ್ಕೆ ಈ ಹಣ ಖರ್ಚು ಮಾಡುವ ತೆವಲು ಏನಿತ್ತು? ಈ ಸರ್ಕಾರಕ್ಕೆ ಕಂಟಿಂಜೆನ್ಸಿ ಫಂಡ್, ಸಪ್ಲಿಮೆಂಟರಿ ಬಡ್ಜೆಟ್‌ನಿಂದ ಶಿವಮೊಗ್ಗಕ್ಕೆ ಕೊಡುವ ಅವಶ್ಯಕತೆ ಏನಿತ್ತು? I am not opposing it. People representing those people are saying it.

ಶ್ರೀ ಕೆ.ಎಸ್. ಈಶ್ವರಪ್ಪ : 3 ಕೋಟಿ ರೂಪಾಯಿ ಹಣ ಕೊಟ್ಟಿದ್ದಕ್ಕೆ ಈಗಿನ ಮುಖ್ಯಮಂತ್ರಿಗಳೇ ವಿರೋಧ ಮಾಡಿಲ್ಲ, ಹಿಂದೆ ನಮ್ಮ ನಗರಸಭೆಯಲ್ಲಿ ಬಿಜೆಪಿ ಪಕ್ಷ ಆಡಳಿತದಲ್ಲಿ ಇದ್ದಾಗ ರಸ್ತೆ ಕೆಟ್ಟಿವೆ, ಗುಂಡಿ ಬಿದ್ದಿವೆ ಹಣ ಕೊಡಿ ಎಂದಾಗ ಹಣ ಕೊಡಲಿಲ್ಲ, ನಿಮಗೆ ಬೇಕಾದವರನ್ನು ಮೇಯರ್ ಮಾಡಿಕೊಂಡು 3 ಕೋಟಿ ರೂಪಾಯಿ ರಿಲೀಸ್ ಮಾಡಿದ್ದೀರಿ. ಇದು ಸರಿಯಲ್ಲ

ಎಂದು ಹೇಳಿದೆ. 3 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೀರಿ. ಮತ್ತೆ ರಾಜಕೀಯ ಶುರುವಾಯಿತು. ಅದನ್ನು ಸ್ಟೇ ಮಾಡುವುದಕ್ಕಿಂತ ಪ್ರಾಮಾಣಿಕ ಅಧಿಕಾರಿಗಳನ್ನು ಕಳುಹಿಸಿ ಆ 3 ಕೋಟಿ ರೂಪಾಯಿ ಸದ್ವಿನಿಯೋಗ ಆಗುವ ದಾರಿಯಲ್ಲಿ ನಡೆಯಲಿ ಎಂದು ಹೇಳಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ : ಶಿವಮೊಗ್ಗಕ್ಕೆ 3 ಕೋಟಿ ರೂಪಾಯಿ ಕೊಟ್ಟಿದ್ದಕ್ಕೆ ನನ್ನದು ಏನೂ ಹೊಟ್ಟೆಕಿಚ್ಚು ಇಲ್ಲ. ಅದೇ ಔದಾರ್ಯವನ್ನು ದಯಮಾಡಿ ಸಣ್ಣ ಮುನಿಸಿಪಾಲಿಟಿಗಳಿಂದ ಹಿಡಿದು ಎಲ್ಲಾ ಕಾರ್ಪೊರೇಷನ್‌ಗಳಿಗೆ ತೋರಿಸಲು ಈ ಸರ್ಕಾರಕ್ಕೆ ಸಾಧ್ಯವೇ? ಸನ್ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ಕೊಡಬೇಕು. 3 ಕೋಟಿ ರೂಪಾಯಿಗಳು ಬೇಡ, 30 ಲಕ್ಷ ರೂಪಾಯಿ ಒಂದೊಂದು ಮುನಿಸಿಪಾಲಿಟಿಗಳಿಗೆ ಕೊಡುವ ಔದಾರ್ಯವನ್ನು ತೋರಿ. ತೋರಿಸುವುದಕ್ಕೆ ಆಗುವುದಿಲ್ಲ ಎನ್ನುವ ಹಾಗೆ ಹೇಳುವುದಾದರೆ ಇದು ಪಕ್ಷಾತೀತ ಎಂದು ನಾನು ಹೇಳುತ್ತೇನೆ. ಮಾಜಿ ಮುಖ್ಯಮಂತ್ರಿಗಳು ಆ ಜಿಲ್ಲೆಯವರು ಎಂದೇ? I don't find any other better reason than this. ತುಮಕೂರು ಮುನಿಸಿಪಾಲಿಟಿಗೆ 3 ಕೋಟಿ ರೂಪಾಯಿ ಕೊಡಬೇಕಾದರೆ ಶ್ರೀಯುತ ಶಫೀ ಅಹಮದ್ ಅವರು ಮುಖ್ಯಮಂತ್ರಿಗಳಾಗಬೇಕೇ? ಆದುದರಿಂದ it is a clear case of discrimination. I came to know that the Government has taken a decision and communicated to the concerned not to spend the money. It that is so, I humbly request the government to withhold this amount and if possible distribute to all small municipalities. ಅದಕ್ಕಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಈಗಾಗಲೇ ಸರ್ಕಾರದಿಂದ ಈ ಹಣವನ್ನು ಖರ್ಚು ಮಾಡಬಾರದು ಎನ್ನುವ ಸೂಚನೆ ಹೋಗಿದೆಯೇಂದು ನನ್ನ ಗಮನಕ್ಕೆ ಬಂದಿದೆ. ಆ ಶಾಸಕರು ಅದನ್ನು ಗಮನಕ್ಕೆ ತಂದಿದ್ದಾರೆ. ರಾಜಕೀಯ ಉದ್ದೇಶಕ್ಕೆ ತೆಗೆದುಕೊಂಡ ತೀರ್ಮಾನವನ್ನು, ಹಣವನ್ನು ಖರ್ಚು ಮಾಡಬಾರದು ಎಂದು ಸರ್ಕಾರದವರೇ ಹೇಳಿರುವ ಸಂದರ್ಭದಲ್ಲಿ ದಯಮಾಡಿ ಈ ಹಣವನ್ನು ಬಿಡುಗಡೆ ಮಾಡಬೇಡಿ.

4.45 ಪಿ.ಎಂ

ಇದು ಪಕ್ಷಾತೀತದಿಂದ ಕೂಡಿದ್ದುದು ಎಂದು ಹೇಳಲಿಕ್ಕೆ ಅನೇಕ ಸಂದರ್ಭಗಳಿವೆ. ಹುಲಿಕೋಟೆಯ ಯಾವುದೋ ಒಂದು ಸಂಸ್ಥೆಗೆ 20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ ಆಸ್ಪತ್ರೆ ಕೊಡಬೇಕೆಂದು 25 ಸಾವಿರ ರೂಪಾಯಿಗಳನ್ನು ಕಟ್ಟಿ 10 ವರ್ಷಗಳಾಯಿತು. ನಾನು ಮೊದಲನೆಯ ಸಾರಿ 1984ರಲ್ಲಿ ಶಾಸಕನಾದಾಗ ಕಟ್ಟಿದ್ದೇವೆ. ಇವತ್ತಿನವರೆಗೆ ಆ ಆಸ್ಪತ್ರೆ ಮಾಡಲಿಕ್ಕೆ ಆಗಿಲ್ಲ ಈ ಸರ್ಕಾರಕ್ಕೆ. ನಮ್ಮ ಸರ್ಕಾರದಿಂದಲೂ ಆಗಿಲ್ಲ, ನಾನು ಯಾವುದೇ ಒಂದು ಸರ್ಕಾರವೆಂದು ಜವಾಬ್ದಾರಿ ಮಾಡುತ್ತಿಲ್ಲ, ನನ್ನನ್ನು ಸೇರಿಸಿ ಹೇಳಿ ಕೊಳ್ಳುತ್ತಿದ್ದೇನೆ. ಅದೇ ರೀತಿ ಬೇರೆ ಆರೋಗ್ಯ ಕರ್ತವ್ಯ ನಿರ್ವಹಣೆಗೆ ನೀವು ಎಲ್ಲರಿಗೂ ಕೊಡುವುದಾದರೆ ನನ್ನ ಅಭ್ಯಂತರವಿಲ್ಲ, ಹುಲಕೋಟೆಗೆ ಔದಾರ್ಯವನ್ನು ತೋರುವಂತಹ ಸರ್ಕಾರದ ನೀತಿ, ಒಂದಕ್ಕೆ ಕೊಡುವಂಥದ್ದು ಪಕ್ಷಾತೀತದಿಂದ ಕೂಡಿದ್ದುದು ಎಂದು ನಾನು ಬಾವಿಸಿಕೊಳ್ಳುತ್ತೇನೆ. ಇಷ್ಟಕ್ಕೆ ನಿಲ್ಲಲಿಲ್ಲ, ಕೆಲವು ಕಾರ್ಖಾನೆಗಳನ್ನು ರೋಗಗ್ರಸ್ತ ಆರ್ಥಿಕವಾಗಿ ಶಕ್ತಿ ತುಂಬುವಂತಹ ಉತ್ತಮ ಕೆಲಸವನ್ನು ಮಾಡಿದ್ದಾರೆ. ಅದನ್ನು

ಮಾಡದೆ ಪಕ್ಷಾತೀತವಾಗಿ ಕೆಲವು ಮಿತ್ರರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಎರಡು ಸಕ್ಕರೆ ಕಾರ್ಖಾನೆಗಳಿಗೆ ಹಣ ಕೊಟ್ಟಿದ್ದಾರೆ. I don't attribute motive in it. ಈಗಿನ ಮುಖ್ಯಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಯವರು ಆದರಿಂದ ಕೊಟ್ಟಿದ್ದಾರೆಂದು ನಾನು ಅಟ್ರಿಬ್ಯೂಟ್ ಮಾಡುವುದಿಲ್ಲ. it may be a co-incidence. ಶಿವಮೊಗ್ಗ ಜಿಲ್ಲೆಯವರು ಮುಖ್ಯ ಮಂತ್ರಿಗಳಾದರು ಅವರು ಶಿವಮೊಗ್ಗ ಮುನಿಸಿಪಾಲಿಟಿಗೆ 3 ಕೋಟಿ ರೂಪಾಯಿ ಕೊಟ್ಟರು. ಈಗ ದಕ್ಷಿಣ ಕನ್ನಡ ಜಿಲ್ಲೆಯವರು ಮುಖ್ಯಮಂತ್ರಿಗಳಾಗಿದ್ದಾರೆ ಅವರು ದಕ್ಷಿಣ ಕನ್ನಡ ಜಿಲ್ಲೆಯ ಸಿಕ್ ಕಾರ್ಖಾನೆಗಳಿಗೆ ಹಣವನ್ನು ಕೊಟ್ಟಿದ್ದಾರೆಂದಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಮುಖ್ಯಮಂತ್ರಿಯಾಗುವುದಕ್ಕೆ ಮುಂಚೆಯೇ ಕೊಟ್ಟಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ : ಪೂರಕ ಅಂದಾಜನ್ನು ತಾವು ತಂದಿದ್ದೀರಿ. ತೀರ್ಮಾನಯಾರದೆಂದು ನನಗೆ ಗೊತ್ತಿಲ್ಲ. ಈ ಹಣವನ್ನು ಖರ್ಚುಮಾಡಿರುವುದು ಇದು ಒಂದು ತಪ್ಪು ಇದೊಂದು ಅಪರಾಧ ಅಥವಾ ಅನಾವಶ್ಯಕವೆಂದು ನಾನು ಕೂಡ ಹೇಳುವುದಿಲ್ಲ. ನನ್ನ ಪ್ರಾರ್ಥನೆ ಇಷ್ಟೆ, ಈವೊಂದು ಕಾರ್ಖಾನೆಗಳಿಗೆ ಪುನರ್ವಸತಿ ಅವುಗಳಿಗೆ ಆರೋಗ್ಯಶಕ್ತಿಯನ್ನು ತುಂಬುವುದಕ್ಕೆ ನೀವೇನು ತೀರ್ಮಾನ ತೆಗೆದುಕೊಂಡಿದ್ದೀರಿ, ಆ ತೀರ್ಮಾನವನ್ನು ಬೇರೆ ಕಾರ್ಖಾನೆಗಳಿಗೆ ಎಕ್ಸ್‌ಟೆಂಡ್ ಮಾಡಿ. ಅದು ಆಗದಿದ್ದರೆ ಡಿಸ್ಕ್ರಿಮಿನೇಷನ್ ಆಗುತ್ತದೆ ದಯಮಾಡಿ ಇಂಥಾದ್ದನ್ನು ವಾಪಸ್ಸು ತೆಗೆದುಕೊಳ್ಳಿ. ಇಲ್ಲ ಮತ್ತೊಂದು ಪ್ರಮುಖವಾದ ವಿಷಯವಿದೆ. ಪುಟ-19ರಲ್ಲಿ ದಿನಾಂಕ 17-10-92ಕ್ಕೆ ಸಾಧನೆಯ ಸಮಾವೇಶಕ್ಕೆ, ಯಾವುದು ಅದು ಸಮಾವೇಶ ಬಾರತೀಯ ರೈಲ್ವೆಗೆ ಮುಂಗಡವಾಗಿ ಪಾವತಿ ಮಾಡಲು 28 ಲಕ್ಷ ರೂಪಾಯಿಗಳನ್ನು ಸಾದಲ್ವಾರು ನಿಧಿಯಿಂದ ಬಿಡುಗಡೆ ಮಾಡಲಾಯಿತು. ಇದಕ್ಕಿಂತ ದೊಡ್ಡ ಅಪರಾಧವನ್ನು ಮತ್ತೊಂದು ಯಾವ ಸರ್ಕಾರ ಮಾಡಲಿಕ್ಕೆ ಸಾಧ್ಯವಿಲ್ಲ, ವ್ಯಕ್ತಿಯ ಪ್ರತಿಷ್ಠೆಯ ಪ್ರದರ್ಶನಕ್ಕಾಗಿ ಒಂದು ಪಕ್ಷದ ವರ್ಚಸ್ಸು ಬಲವರ್ಧನೆಗಾಗಿ ಈ ರಾಜ್ಯದ ಬೊಕ್ಕಸದ ದುಡ್ಡನ್ನು ಖರ್ಚು ಮಾಡುವಂತಹ ಕೃತ್ಯ ಇದೆಯಲ್ಲ ಅದನ್ನು ಯಾರೂ ಕ್ಷಮಿಸುವುದಿಲ್ಲ, ದಯಮಾಡಿ ಅದನ್ನು ವಾಪಸ್ಸು ತೆಗೆದುಕೊಳ್ಳಿ. 28 ಲಕ್ಷ ರೂಪಾಯಿಗಳನ್ನು ರೈಲ್ವೆಗೆ ಮುಂಗಡವಾಗಿ ಕೊಡದಿರುವುದರಿಂದ ಅದು ವಾಪಸ್ಸು ಬರುತ್ತದೆ. ಇವರು ಖರ್ಚೆಂದು ತೋರಿಸಿದ್ದಾರೆ. ಈ ವಿಷಯದಲ್ಲಿ ನನ್ನ ವಾದವನ್ನು ಲಂಬಿಸಲಿಕ್ಕೆ ಇಷ್ಟವಿಲ್ಲ. ಯಾವುದೋ ಒಬ್ಬ ವ್ಯಕ್ತಿಯ ಪ್ರತಿಷ್ಠೆಗೆ ನಡೆಯುವಂತಹ ಪ್ರದರ್ಶನಗಳಿಗೆ ಒಂದು ಪಕ್ಷದ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುವಂತಹ ಕಾರ್ಯಕ್ರಮಗಳಿಗೆ ಈ ಸರ್ಕಾರದ ಬೊಕ್ಕಸದ ದುಡ್ಡನ್ನು ಖರ್ಚುಮಾಡುವುದಕ್ಕೆ ತೆಗೆದುಕೊಂಡಂತಹ ತೀರ್ಮಾನ that itself is a crime to me. It is an offence. It is against all the established norms of the financial discipline of the state. ಅದು ಯಾರು? ಯಾವ ಪುಣ್ಯಾತ್ಮರು ತೆಗೆದುಕೊಂಡರು. ಅದು ಹಿಂದೆ ಒಂದು ದಿವಸ ಚರ್ಚೆಗೆ ಬಂದಿದೆ. ಮುಂದೆ ಚರ್ಚೆಗೆ ಬರುತ್ತದೆ. ಆದ್ದರಿಂದ ದಯಮಾಡಿ ಕಂಟಿನ್‌ಜೆನ್ಸಿ ಹಣವನ್ನು ಕೊಡುವುದನ್ನು ನಿಲ್ಲಿಸಬೇಕು. ನಾನು ಆಗಲೇ ಒಂದು ವಿಷಯವನ್ನು ಹೇಳಿದ್ದೇನೆ. ಸಂವಿಧಾನದ 205ರಲ್ಲಿ ನಮೂದಿಸಿರುವಂತೆ ಕರ್ನಾಟಕ ರಾಜ್ಯಗಳಾದರೆ ನನ್ನ ಅಭ್ಯಂತರವಿಲ್ಲ. ನಾನು ಅತ್ಯಂತ ನೋವಿನಿಂದ ಒಂದು ವಿಷಯವನ್ನು ಹೇಳಬೇಕಾಗುತ್ತದೆ. ನಮ್ಮ ಜಿಲ್ಲೆಯ

ಶಾಸಕರು ಇದ್ದಾರೋ ಏನೋ ಗೊತ್ತಿಲ್ಲ. ನನ್ನ ಕ್ಷೇತ್ರದಲ್ಲಿ 250 ಜನ ಪ್ರಾಥಮಿಕಶಾಲಾ ಉಪಾಧ್ಯಾಯರು ಇಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ; ನನ್ನ ಒಂದೇ ಒಂದು ಕುಣಿಗಲ್ ತಾಲ್ಲೂಕಿನಲ್ಲಿ, ಮಾನ್ಯ ಮಂತ್ರಿಗಳ ಕ್ಷೇತ್ರವೂ ಸೇರಿದಂತೆ 250 ಜನ ಪ್ರಾಥಮಿಕ ಶಾಲಾ ಉಪಾಧ್ಯಾಯರ ವೆಕೇಂಟ್ ಆಗಿವೆ. ನನ್ನ ಸ್ನೇಹಿತರು ಹೇಳಿದರು, ನೀವು ಮಂತ್ರಿಯಾಗಬೇಕು ಎಂದು. ನಾನು ಮಂತ್ರಿಯಾಗಿರಲಿ, ಉಪಮುಖ್ಯಮಂತ್ರಿಯಾಗಿರಲಿ, ಇದು ಆಳುವಂಥ ಯಾರಿಗೂ ಮರ್ಯಾದೆ ತರುವಂಥ ವಿಷಯ ಅಲ್ಲ, ಸನ್ಮಾನ್ಯ ಉಪಧ್ಯಕ್ಷರೇ ಹತ್ತು ವರ್ಷಗಳ ಹಿಂದೆ ತೂಬಿನವರೆಗೆ, ಕೋಡಿವರೆಗೆ ಸಂಪೂರ್ಣವಾಗಿ ಕೆಲಸವಾಗಿ ಇನ್ನು ಕೇವಲ ಹತ್ತುಸಾವಿರ, ಹದಿನೈದು ಸಾವಿರ, ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಸಂಪೂರ್ಣವಾಗುವಂತಹ ಒಂಭತ್ತು ಕೆರೆಗಳ ಕೆಲಸ, 1985ರಿಂದ ಇವತ್ತಿನವರೆಗೂ ಹಾಗೆಯೇ ಬಿದ್ದಿದೆ. ಜಿಲ್ಲಾ ಪರಿಷತ್ ಕಾರ್ಯದರ್ಶಿಗಳು ಅದಕ್ಕೆ ನಮ್ಮ ಹತ್ತಿರ ಹಣ ಇಲ್ಲವೆಂದು ಹೇಳುತ್ತಾರೆ. ಡಿ.ಡಿ.ಪಿ.ಐ. ಅವರು ಹೇಳುತ್ತಾರೆ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ, ನನ್ನ ಕೈಯಲ್ಲಿ ಸಾಧ್ಯ ಇಲ್ಲವೆಂದು. ಹಾಗಾದರೆ ಯಾವುದಕ್ಕೆ ನಿಮ್ಮ ಆದ್ಯತೆ? ವಿದ್ಯುಚ್ಛಕ್ತಿ ಅಭಾವದಿಂದ ಒಣಗಿದ ಬೆಳೆ ಹಾಗೂ ಪ್ರತಿತಿಂಗಳೂ ಸುಡುವಂಥ ನೀರಾವರಿ ಪಂಪುಗಳ ಮೋಟಾರುಗಳನ್ನು ನೋಡಿದಾಗ ನಮ್ಮ ಕಣ್ಣಲ್ಲಿ ನೀರು ಬರುತ್ತದೆ, ರಕ್ತ ಬರುತ್ತದೆ. ಡೆಲ್ಲಿಯಲ್ಲಿ ಇರುವ ಕರ್ನಾಟಕ ಭವನ ನಿಮ್ಮ ಕಣ್ಣಿಗೆ ಬೀಳುತ್ತದೆ. ಇನ್ನು ಹತ್ತು ಸಾವಿರ ಖರ್ಚು ಮಾಡುವುದರಿಂದ ನೂರು ಎಕರೆ ಜಮಿನಿಗೆ ನೀರು ಸಿಗುತ್ತದೆ, ಕೆರೆ ಪೂರ್ಣವಾಗುತ್ತದೆ ಎಂಬುದು ನಿಮ್ಮ ಗಮನಕ್ಕೆ ಬರುವುದಿಲ್ಲವೇನು? ಇಲ್ಲಿ ನೋಡಿ, ಕರ್ನಾಟಕ ಭವನದ ದುರಸ್ತಿಗೆ- Is this an occasion, is this an istance on which we can spend out of the contingency fund particularly to which approval is sought by Supplementary Estimates?

250 ಜನ ಪ್ರಾಥಮಿಕ ಶಾಲೆ ಉಪಾಧ್ಯಾಯರನ್ನು ಕೊಡಲು ಸಾಧ್ಯವಿಲ್ಲದೇ ಇರುವಂಥ ಯಾವುದೇ ಒಂದು ಸರ್ಕಾರ, ಡೆಲ್ಲಿಯಲ್ಲಿರುವ ವೈಭವೀಕರಣಕ್ಕಾಗಿ 51 ಲಕ್ಷ 73 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತದೆ. ನಾನು ಮುಖ್ಯಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ. ಈಗಲಾದರೂ ತಾವು ಸ್ವಲ್ಪ ಗಂಬೀರವಾಗಿ ಈ ವಿಷಯಗಳನ್ನು ಪರಿಶೀಲನೆ ಮಾಡಬೇಕು. ಹತ್ತು ವರ್ಷಗಳಿಂದ ಕೆಲವು ವಿಷಯಗಳಲ್ಲಿ ಅವರ ಅಪ್ರೋಚ್ ಏನು ಎಂದು ತಿಳಿದುಕೊಂಡು ನಾನು ಪ್ರಾರ್ಥನೆ ಮಾಡುತ್ತಿದ್ದೇನೆ, ದಯಮಾಡಿ ಇಂಥಾದ್ದನ್ನು ಕೈಬಿಡಿ.

ಚೇರ್ಮನ್ : ತಾವು 20 ನಿಮಿಷ ತೆಗೆದುಕೊಂಡಿದ್ದೀರಿ.

ಶ್ರೀ ವೈ.ಕೆ. ರಾಮಯ್ಯ : ಈ ವರ್ಷಕ್ಕಾದರೂ ಇದನ್ನು ಕೈಬಿಡಿ. ಇದನ್ನು ಮುಂದಿನ ವರ್ಷ ಬೇಕಾದರೆ ಮಾಡಿ. ದಯವಿಟ್ಟು ಸ್ಕೂಲ್ ಮೇಷ್ಟ್ರನ್ನು ಕೊಡಿ. ನಾನು ವ್ಯಾಪ್ತಿಯನ್ನು ಮೀರಿ ಹೋಗ್ತಾ ಇದ್ದೀನೇನೋ. ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನ್ಯಾಯಾಲಯಗಳ ತೀರ್ಪಿನ ಫಲವಾಗಿ ಈ ರಾಜ್ಯದ ಕಣ್ವಾದ ಎರಡು ನದಿಗಳ ನೀರನ್ನು ಉಪಯೋಗ ಮಾಡಿಕೊಳ್ಳುವಂಥ ಕೆಲಸದಲ್ಲಿ ನಾವು ಯಾವ ಹಂತದಲ್ಲಿದ್ದೇವೆ ಎನ್ನುವುದು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ

ಅರಿವು ಇದೆ. ಅದಕ್ಕೆ ನೀವು ನೂರು ಕೋಟಿ ರೂಪಾಯಿಗಳನ್ನಾದರೂ ಕೊಟ್ಟಿದ್ದಿದ್ದರೆ ನಿಮಗೆ ಈ ರಾಜ್ಯದ ಜನ ನಮಸ್ಕಾರ ಮಾಡುತ್ತಿದ್ದರು. ಅದಕ್ಕಾಗಿ ಒಂದು ರೂಪಾಯಿ ಕೂಡ ಇಲ್ಲ. The Tribunal and the Highest Court of this country, I am afraid, to ask the State Government to restrict your irrigation potentiality to 10 or 11 or 12 lakhs acres. That is the situation which we are living to-day. Does this government taken it seriously and given some money to complete the Hemavathi project, or Harangi Project or Narayanapura dam?

ನಾನು ಈ ವಿಷಯವನ್ನು ಏಕೆ ಇಷ್ಟೊಂದು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ, ನಮ್ಮ ಆದ್ಯತೆ ಯಾವುದು? ಡೆಲ್ಲಿಯ ಕರ್ನಾಟಕ ಭವನದ ವೈಭವೀಕರಣಕ್ಕೆ ನಿಮ್ಮ ಆದ್ಯತೆ ಇದ್ದರೆ ನನ್ನ ಅಭ್ಯಂತರ ಇಲ್ಲ. ಆದರೆ ರಾಜ್ಯದಲ್ಲಿರುವಂಥ ಸರ್ಕಾರಿ ಪ್ರೈಮರಿ ಶಾಲೆಗಳಿಗೆ ಉಪಾಧ್ಯಾಯರುಗಳನ್ನು ಕೊಡುವುದಕ್ಕೆ ನಿಮ್ಮ ಆದ್ಯತೆ ಇದ್ದರೆ, ದಯವಿಟ್ಟು ಈ ವಿಚಾರವನ್ನು ನಿಲ್ಲಿಸಿ ಉಪಾಧ್ಯಾಯರನ್ನು ಅಪಾಯಿಂಟ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನಾನು ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, 24ನೇ ಪುಟದಲ್ಲಿ ಬಾಕಿ ಸಾಲ ವಸೂಲಿಗಾಗಿ, ಬ್ಯಾಂಕುಗಳಿಗೆ ಸಹಾಯ ಮಾಡಲು ಸರ್ಕಾರವು ರಾಜ್ಯದ ಆರು ಜಿಲ್ಲೆಗಳಲ್ಲಿ ವಿಶೇಷ ವಸೂಲಾತಿ ಘಟಕಗಳನ್ನು ಸ್ಥಾಪಿಸಿದೆ. ಅದರ ಖರ್ಚಿಗಾಗಿ 13.50 ಲಕ್ಷ ರೂಪಾಯಿ ಹಣವನ್ನು ಕೇಳಿದ್ದಾರೆ. ಇದು ಹಣ ಕಡಿಮೆಯಾಗಿದ್ದರೂ ಕೂಡ ತಾತ್ವಿಕವಾಗಿ ಇದನ್ನು ಮಾಡುವ ಅವಶ್ಯಕತೆ ಇದೆಯೇ? ಬ್ಯಾಂಕಿಗೆ ಕೇವಲ ಬಡ್ಡಿ ವಸೂಲಿ ಮಾಡುವ ಕೆಲಸ ಅಷ್ಟೆ ಅಲ್ಲ, ಅದರಲ್ಲೂ ಇತ್ತೀಚಿನ ದಶಕಗಳಲ್ಲಿ ಸರ್ಕಾರಕ್ಕೆ ಇರುವಷ್ಟೇ ಸಾಮಾಜಿಕವಾದಂಥ ಕಾರ್ಯನಿರ್ವಹಣೆ ಹೊರೆ ಬ್ಯಾಂಕುಗಳಿಗೂ ಕೂಡ ಇದೆ.

ಆದರಿಂದ, ಆ ನಿರ್ವಹಣೆಯನ್ನು ನಿರ್ವಹಿಸುವ ದಿಸೆಯಲ್ಲಿ, ಈ ಖರ್ಚನ್ನು ಬ್ಯಾಂಕುಗಳಿಗೆ ಹೊರುವುದಕ್ಕೆ ಬಿಟ್ಟು, ಸರ್ಕಾರದವರು ಈ ಕೆಲಸಕ್ಕೆ ಕೈ ಹಾಕುವುದು ಬೇಡ ಎಂದು ಪ್ರಾರ್ಥನೆ ಮಾಡಿಕೊಂಡು ಒಂದು ವಿವರಣೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಕೇವಲ ಆರು ಜಿಲ್ಲೆಗಳಿಗೆ ಮಾತ್ರ, ಈ ವಸೂಲಾತಿ ಮಾಡುವ ಘಟಕಗಳ ಸ್ಥಾಪನೆ ಮಾಡಿರುವಂಥ ಉದ್ದೇಶ ಏನು, ಬೇರೆ ಜಿಲ್ಲೆಗಳಿಗೆ ಇದನ್ನು ಮಾಡದೇ ಇರುವುದು ಏಕೆ ಎನ್ನುವುದಕ್ಕೆ ನಾನು ವಿವರಣೆಯನ್ನು ಕೇಳುವುದಕ್ಕೆ ಬಯಸುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೆ,

ಉಪಾಧ್ಯಕ್ಷರು : ತಾವು ಇನ್ನು ಎಷ್ಟು ಹೊತ್ತು ತೆಗೆದುಕೊಳ್ಳುತ್ತೀರಿ?

ಶ್ರೀ ವೈ. ಕೆ. ರಾಮಯ್ಯ : ಇನ್ನು ಐದು ನಿಮಿಷ. ನೀವು ನಾನು ಹೇಳುವುದು ನಿರುಪಯುಕ್ತವಾದುದು ಎಂದು ಹೇಳಿದರೆ ಕುಳಿತುಕೊಳ್ಳುತ್ತೇನೆ. 28ನೇ ಪೇಜಿನಲ್ಲಿ ಇದೊಂದು ಉತ್ತಮವಾದ ಕೆಲಸಕ್ಕೆ ಹಣ ಕೇಳಿದ್ದಾರೆ. ಇದಕ್ಕೆ ಇನ್ನೂ ಕೇಳಿದರೂ ಕೊಡೋಣ. ಇನ್ನೂ ಖರ್ಚು ಮಾಡಿ ಎಂದು ಇವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದು ಏಕೆ ಎಂದರೆ, ಜನತಾ ಪಕ್ಷದ...

ಶ್ರೀ ಹೆಚ್. ಏಕಾಂತಯ್ಯ : ಖರ್ಚು ಮಾಡುವುದಕ್ಕೆ ಈ ಕಾನೂನು ಈಗ ಅಸ್ತಿತ್ವದಲ್ಲಿ ಇಲ್ಲ.

ಶ್ರೀ ವೈ.ಕೆ. ರಾಮಯ್ಯ : ಮುಂದುವರಿಸುವುದಕ್ಕೆ ಹೇಳುತ್ತೇನೆ. ಅಡಿಷನಲ್ ಅಮೌಂಟ್ ಬೇಕಾದರೆ ಕೊಡುತ್ತೇವೆ, ಮುಂದುವರಿಸಿ ಎಂದು ಕೇಳಿಕೊಳ್ಳುತ್ತೇನೆ. ಜನತಾ ಪಕ್ಷದ ಸರ್ಕಾರ ಅಸ್ತಿತ್ವದಲ್ಲಿ ಇದ್ದಾಗ, ಗ್ರಾಮೀಣ ಬ್ಯಾಂಕುಗಳಲ್ಲಿ ತೆಗೆದುಕೊಂಡ ಸಾಲಗಳಿಗೆ 7 ಭಾಗವನ್ನು ಸಾಲಗಾರ ಕೊಡುವುದು, ಉಳಿದ ಭಾಗವನ್ನು ಸರ್ಕಾರ ಕೊಡುವುದು ಎಂದು ತೀರ್ಮಾನ ಆಗಿದೆ. ಇದನ್ನು ಕಾಂಗ್ರೆಸ್ ಸರ್ಕಾರ 1989ರಲ್ಲಿ ಬಂದಾಗ, ಮುಂದುವರಿಸದೇ ಇದ್ದಂಥ ಸಂದರ್ಭದಲ್ಲಿ ಒತ್ತಾಯೇ ಬಂದು ಮತ್ತೆ ಮುಂದುವರಿಸಿದ್ದೀರಿ. ಎಲ್ಲಿಯವರೆಗೆ ಮುಂದುವರಿಸಿದ್ದೀರಿ ಎಂದರೆ, 31-7-92ರ ವರೆಗೆ ಈ ಸವಲತ್ತನ್ನು ರೈತರಿಗೆ ಒದಗಿಸಿಕೊಡುವಂಥ ವ್ಯವಸ್ಥೆಯನ್ನು ಮುಂದುವರಿಸಿದ್ದೀರಿ. 9 ಕೋಟಿ ರೂಪಾಯಿಗಳಾಗುತ್ತದೆ ಎಂದು ಆ ವ್ಯವಸ್ಥೆಗಾಗಿ ಖರ್ಚಾಗಿದ್ದ ಹಣವನ್ನು ಕೇಳಿದ್ದೀರಿ. ಇದಕ್ಕೆ ನಮ್ಮದು ಯಾರದೂ ಅಭ್ಯಂತರ ಇಲ್ಲ. ಆದರೆ ಮುಖ್ಯ ಮಂತ್ರಿಗಳಲ್ಲಿ, ಈ ಸದನದಲ್ಲಿ ರಾಜ್ಯದ ರೈತರ ಪರವಾಗಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಸವಲತ್ತನ್ನು 31-7-92ಕ್ಕೆ ಮುಂದಕ್ಕೆ ಕೂಡ ದಯಮಾಡಿ ಮುಂದುವರಿಸಿಕೊಡಿ ಎಂದು. ಅದಕ್ಕೆ ಆಗುವಂಥ ಖರ್ಚನ್ನು 9 ಕೋಟಿ ಇಲ್ಲದಿದ್ದರೆ, 18 ಕೋಟಿಗೆ ನೀವು ಹೆಚ್ಚು ಮಾಡಿ, ನಾವು ರೈತರ ಪರವಾಗಿ ಒಪ್ಪಿಕೊಂಡು ನಿಮಗೆ ಈ ಸದನದಲ್ಲಿ ಒಪ್ಪಿಗೆಯನ್ನು ಕೊಡುತ್ತೇವೆ. ಮತ್ತೊಮ್ಮೆ ಒತ್ತಾಯ ಪೂರ್ವಕವಾಗಿ ಕೇಳಕೊಳ್ಳುತ್ತಿದ್ದೇನೆ, It may be extended even after 31-7-1992.

ಸನ್ಮಾನ್ಯ ಉಪಾಧ್ಯಕ್ಷರೇ, ಪ್ರವಾಹ ತೊಂದರೆಗೊಳಗಾದ ರಾಜ್ಯದ 10 ಜಿಲ್ಲೆಗಳಲ್ಲಿ ಪರಿಹಾರಕ್ಕಾಗಿ 15 ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ಈಗ ಮೂರು ದಿವಸದ ಹಿಂದೆ ನನ್ನ ಜಿಲ್ಲೆಯಲ್ಲಿ ಸಭೆ ನಡೆಯಿತು. ಕೃಷಿ ಮಂತ್ರಿಗಳು ಅದರ ಅಧ್ಯಕ್ಷತೆಯನ್ನು ವಹಿಸಿದ್ದರು. ಆ ಸಭೆಯಲ್ಲಿ ಜಿಲ್ಲಾಧಿಕಾರಿಗಳು ನಮಗೆ ತಿಳಿಸಿದರು. ಸರ್ಕಾರ ಮೊದಲು ಆಶ್ರಯ ನಮೂನೆಯ ಮನೆಗಳನ್ನು ಈ ಪ್ರವಾಹದಲ್ಲಿ ಹಾಳಾಗಿರುವಂಥವರಿಗೂ ಕಟ್ಟಿಕೊಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿದ್ದರು. ಆದರೆ, ಆ ತೀರ್ಮಾನವನ್ನು ಸರ್ಕಾರ ಈಗ ಕೈಬಿಟ್ಟಿದೆ. ಸರ್ಕಾರ ಕೈಬಿಟ್ಟಮೇಲೆ, ಅಂತಹ ಫಲಾನುಭವಿಗಳಿಗೆ 4 ಸಾವಿರದ ಐದುನೂರು ರೂಪಾಯಿಗಳ ಹಣವನ್ನು ಕೊಡಬೇಕು ಎಂದು ಪ್ರಸ್ತಾವನೆ ಇತ್ತು. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುತ್ತದೆಂದು ಸರ್ಕಾರದವರು ಅದನ್ನೂ ಕೂಡ ಕೈಬಿಟ್ಟಿದ್ದಾರೆಂದು ಜಿಲ್ಲಾಧಿಕಾರಿಗಳು ನಮಗೆ ತಿಳಿಸಿದ್ದಾರೆ. ಅಂದರೆ, ನೆರೆ ಹಾವಳಿಯಿಂದ ಮನೆಯನ್ನು ಕಳೆದುಕೊಂಡಂಥವರಿಗೆ ಯಾವುದೇ ವಿದವಾದ ಪರಿಹಾರವನ್ನು ಕೊಡುವಂಥ ವ್ಯವಸ್ಥೆ ಸರ್ಕಾರದಲ್ಲಿ ಇಲ್ಲವೆಂದು ನಮಗೆ ತಿಳಿಸಿದ್ದಾರೆ. ಮಂತ್ರಿಗಳು ಇಲ್ಲ, ತುಮಕೂರು ಜಿಲ್ಲೆಯ ಶಾಸಕರು ಇದ್ದರೆಂದು ಕಾಣುತ್ತದೆ. ತುಮಕೂರಿನ ಜಿಲ್ಲಾಧಿಕಾರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ನೆರೆ ಹಾವಳಿಯಿಂದ ಮನೆಯನ್ನು ಕಳೆದುಕೊಂಡಂಥವರಿಗೆ ಯಾವ ವಿಧವಾದ ಪರಿಹಾರವನ್ನು ಕೊಡುವಂಥ ಯೋಜನೆ ಸರ್ಕಾರದ ಮುಂದೆ ಇಲ್ಲ ಎಂದು. ಮತ್ತೆ ಏಕೆ ಇದು. ಇಲ್ಲ, ಸರ್ಕಾರದ ಅಧಿಕಾರಿಗಳ ಮಾತು ಸರಿ ಇಲ್ಲದೇ ಇರಬಹುದು, ನಾನು ಸುಳ್ಳು ಎಂದು ಹೇಳುವುದಿಲ್ಲ. ಅಥವಾ ಇಲ್ಲಿ ತಂದಿರುವಂಥಾದ್ದು ಸರಿ ಇಲ್ಲದೇ ಇರಬಹುದು. ಎರಡರಲ್ಲಿ ಯಾವುದಾದರೊಂದು ಸರಿ ಇಲ್ಲದೇ ಇರಬಹುದು.

ಇಲ್ಲ ನಾವು ಈ ಹಣವನ್ನು ಬಿಡುಗಡೆ ಮಾಡುವುದರಿಂದ ಮನೆಗಳನ್ನು ಕಟ್ಟಿ ಕೊಡುತ್ತೇವೆ ಎಂಬುದು ಸರಕಾರದ ಗಮನದಲ್ಲಿರುವುದಾದರೆ ಈ ವಿಶೇಷ ಯೋಜನೆಯನ್ನು ಅನುಷ್ಠಾನಕ್ಕೆ ತರುವುದರಲ್ಲಿ ಇರುವ ಒಂದು ಸಣ್ಣ ಸಮಸ್ಯೆಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಯೋಜನೆಗಳನ್ನು ರೂಪಿಸುವುದು, ಹಣವನ್ನು ಕೊಡುವುದು ಸರಕಾರದ ಕೆಲಸ ಆದರೆ ಯೋಜನೆಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರುವ ನಮ್ಮ ಸರಕಾರದ ಅಧಿಕಾರಿಗಳು ಏನಿದ್ದಾರೆ ಅವರು ಒಂದು ಮಾತನ್ನು ಹೇಳಿದ್ದಾರೆ. ಮನೆ ಕುಸಿದು ಬಿದ್ದು ಹೋಗಿದೆಯಲ್ಲ ಅದರ ಅವಶೇಷವನ್ನು ಎತ್ತುವುದಕ್ಕೆ ಯಾರೂ ಹಣ ಕೊಡುತ್ತಿಲ್ಲ, ಫಲಾನುಭವಿಗಳು ಹೇಳುತ್ತಿದ್ದಾರೆ ನಾವು ಎತ್ತಿ ಹಾಕುವುದಕ್ಕೆ ಆಗುವುದಿಲ್ಲ, ನೀವು ಅದಕ್ಕೂ ದುಡ್ಡು ಕೊಡಿ ಎಂದು ಹೇಳುತ್ತಾರೆ. ಇದು ಮೊನ್ನೆ ಸಭೆಯಲ್ಲಿ ಒಂದು ಚರ್ಚೆ ನಡೆದ ವಿಷಯ. ಅವಶೇಷಗಳನ್ನು ಎತ್ತುವುದಕ್ಕೆ ಸರಕಾರ ದುಡ್ಡು ಕೊಡುವುದಿಲ್ಲ, ಫಲಾನುಭವಿಗಳು ಎತ್ತಿ ಹಾಕುವುದಕ್ಕೆ ಸಿದ್ಧ ಇಲ್ಲವಂತೆ, ಅದಕ್ಕೆ ದುಡ್ಡು ಕೊಡುವುದಕ್ಕೆ ಸರಕಾರ ಸಿದ್ಧ ಇಲ್ಲದೆ, ಈ ಕಾರ್ಯಕ್ರಮದ ಅನುಷ್ಠಾನಕ್ಕೆ ತೊಂದರೆಯಾಗಿದೆ. ಇದನ್ನು ಹೇಗೆ ಬಗೆಹರಿಸಬೇಕು, ಸರಕಾರ ಇದಕ್ಕೂ ದುಡ್ಡು ಕೊಡುತ್ತದೆಯೇ, ಅಥವಾ ಫಲಾನುಭವಿಗಳ ಮುಖಾಂತರ ಅವಶೇಷಗಳನ್ನು ಎತ್ತಿಸಿ ಮನೆ ಕಟ್ಟಿಸಿಕೊಡುತ್ತದೆಯೇ ಎಂಬುದಕ್ಕೆ ಸರಕಾರ ವಿವರಣೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಹನಿ ನೀರಾವರಿಗಾಗಿ ಹಣ ಕೇಳಿದ್ದಾರೆ. ಅದಕ್ಕೆ ನಾವು ಯಾರೂ, ನಾನಂತೂ ವಿರೋಧ ಮಾಡುವುದಕ್ಕೆ ಸಾಧ್ಯ ಇಲ್ಲ. ಅದಕ್ಕೆ ಇನ್ನಷ್ಟು ಹಣ ಖರ್ಚು ಮಾಡುವುದಾದರೆ ನಮ್ಮ ಅಭ್ಯಂತರ ಇಲ್ಲ.

ಸಾಕ್ಷರತಾ ಯೋಜನೆಗೆ ಕೋಟ್ಯಾಂತರ ರೂಪಾಯಿಗಳನ್ನು ಆಯವ್ಯಯದಲ್ಲಿಯೂ ಸೇರಿಸಿಕೊಂಡಿದ್ದಾರೆ. ನಾನು ವೈಯಕ್ತಿಕವಾಗಿ ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡುವಾಗ, ಇಲ್ಲ ನಿಮಗೆ ಅದರ ಒಿನ್ನೆಲೆ ಗೊತ್ತಿಲ್ಲ, ಇದು ಬಹಳ ಅತ್ಯುತ್ತಮವಾದ ಕಾರ್ಯಕ್ರಮ ಎಂದು ಯಾವುದೋ ಒಂದು ಸಂದರ್ಭದಲ್ಲಿ ಹೇಳಿದರು. ಈ ದೇಶದಲ್ಲಿ ಅನಕ್ಷರತೆಯ ನಿವಾರಣೆಗೆ ಇನ್ನೂ ಕಾರ್ಯಕ್ರಮ ಹಾಕಿಕೊಳ್ಳುತ್ತಿದ್ದೇವೆ ಎಂದು ಹೇಳಿದರೆ ಇಷ್ಟು ದಿವಸ ಆಡಳಿತ ನಡೆಸಿದಂಥ ನಾವೆಲ್ಲರೂ ನಾಚಿಕೆ ಪಟ್ಟುಕೊಳ್ಳಬೇಕು. ಇದು ನಾಗರೀಕ ಸಮಾಜಕ್ಕೆ ಕಳಂಕ ತರುವಂತದ್ದು. ಆದರೆ ನನ್ನ ಪ್ರಾರ್ಥನೆ ಎಂದರೆ ಮತ್ತೆ ಅಲ್ಲಿಗೇ ಹೋಗಬೇಕಾಗುತ್ತದೆ. ಎಲ್ಲಿ ಪ್ರೈಮರಿ ಶಾಲೆ ಇಲ್ಲವೋ, ಇರುವಂತಹ ಪ್ರೈಮರಿ ಶಾಲೆಯಲ್ಲಿ ಪಾಠ ಮಾಡುವಂತಹ ಉಪಾಧ್ಯಾಯರು ಇಲ್ಲವೋ, ಈ ಕಾರ್ಯಕ್ರಮಗಳಿಗೆ ಹಣ ಖರ್ಚು ಮಾಡುವುದಕ್ಕೆ ನಾವು ಸಮರ್ಥರಿಲ್ಲ ಎಂಬ ಪರಿಸ್ಥಿತಿ ಇರುವಾಗ ಈ ಸಾಕ್ಷರತಾ ಕಾರ್ಯಕ್ರಮದಲ್ಲಿ

ಯಾರು ಯಾರಿಗೋ ಎಷ್ಟೆಷ್ಟೋ ಹಣ ಕೊಡುತ್ತೇವೆ, ನಂಬಿಕೆ ಇದೆಯೋ ಇಲ್ಲವೋ ನನಗಂತೂ ಗೊತ್ತಿಲ್ಲ, ಆದರೆ ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ನೀವು ನಂಬಿಕೊಂಡಿರುವಂತಹ ರೀತಿ, ನೀವು ನಿರೀಕ್ಷೆ ಮಾಡಿದ ರೀತಿಯಲ್ಲಿ, ಆಸೆ ಪಟ್ಟಂತಹ ರೀತಿಯಲ್ಲಿ ಈ ಕಾರ್ಯಕ್ರಮ ಸಫಲವಾಗುತ್ತಿಲ್ಲ, ಬೀದಿಯಲ್ಲಿ ನಾಟಕ ಆಡುತ್ತಾರೆ, ಅದೇನೋ ಭಜನೆ ಮಾಡುತ್ತಾರೆ, ಸೈಕಲ್ ಜಾಥಾ ಮಾಡುತ್ತಾರೆ, ಅದು ಏನು ಮಾಡುತ್ತಿದ್ದಾರೋ ನನಗಂತೂ ಗೊತ್ತಿಲ್ಲ, ಶಾಸಕರಾಗಿ ಆರು ತಿಂಗಳಾಯಿತು ಯಾರೂ ನಮ್ಮನ್ನು ಕರೆದು ಇಂತಹದೊಂದು ಸಾಕ್ಷರತಾ

ಕಾರ್ಯಕ್ರಮ ಮಾಡುತ್ತಿದ್ದೇವೆ, ಇದರಲ್ಲಿ ನೀವು ಭಾಗವಹಿಸಿ ಎಂದು ನಮ್ಮ ಜಿಲ್ಲೆಯಲ್ಲಿ ನನ್ನಂತೂ ಯಾರೂ ಇಲ್ಲಿಯವರೆಗೆ ಕರೆದು ಹೇಳಲಿಲ್ಲ. ಇದು ನನ್ನ ಗ್ರೀವಿಯನ್ಸ್ ಅಲ್ಲ, ಆದರಿಂದ ಈ ಕಾರ್ಯಕ್ರಮ ಸಫಲವಾಗುವುದಾದರೆ I am the first person to congradulate them. ನನಗೆ ಏನನ್ನಿಸುತ್ತದೆ. ಎಂದರೆ ಸಾಕ್ಷರತಾ ಯೋಜನೆ ಕೇಂದ್ರ ಸರಕಾರದ ಯೋಜನೆ, ಕೇಂದ್ರದ ಹಣವನ್ನೂ ಖರ್ಚು ಮಾಡುತ್ತಿದ್ದೇವೆ, ಕಾರ್ಯಕ್ರಮ ನಡೆಯುತ್ತಿದೆ. ಅದರ ಬಗ್ಗೆ ನನ್ನ ಅಭ್ಯಂತರ ಇಲ್ಲ. ಆದರೆ ಖರ್ಚು ಮಾಡಿದ ಹಣಕ್ಕೆ ತಕ್ಕಹಾಗೆ, ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ನಿರೀಕ್ಷೆ ಮಾಡಿದಷ್ಟುರಮಟ್ಟಿಗೆ ಈ ಕಾರ್ಯಕ್ರಮ ಸಫಲವಾಗುತ್ತಿಲ್ಲ ಎಂದು ನನ್ನ ಭಾವನೆ. ಆದುದರಿಂದ ಹಣವನ್ನು ಬಿಡುಗಡೆ ಮಾಡುವಂತಹ ಸಂದರ್ಭದಲ್ಲಿ ಇದನ್ನು ಸಫಲಗೊಳಿಸುವ ರೀತಿಯಲ್ಲಿ ಕಾರ್ಯಕ್ರಮವನ್ನು ರೂಪಿಸಿಕೊಳ್ಳುವುದಕ್ಕೆ ಮತ್ತು ನಮಗೂ ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕೆ ದಯವಿಟ್ಟು ಅಧಿಕಾರಿಗಳಿಗೆ ಸೂಚನೆ ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ದೆಹಲಿಯ ಕರ್ನಾಟಕ ಭವನದ ವೈಭವೀಕರಣಕ್ಕಾಗಿ ಹಣ ವೆಚ್ಚ ಮಾಡುವುದನ್ನು ಕೈಬಿಡುವುದರ ಜೊತೆಗೆ ಪ್ರವಾಸೋದ್ಯಮಕ್ಕೆ ಹಣವನ್ನು ಕೇಳಿದ್ದಾರೆ. ಇದು ಅನ್‌ಫೋರ್‌ಸೀನ್ ಅಲ್ಲ. ಪ್ರವಾಸೋದ್ಯಮಕ್ಕಾಗಿ ಕೇಳಿರುವಂತಹ 44 ಲಕ್ಷ ರೂಪಾಯಿಗಳನ್ನು ತಾವು ಕೈಬಿಟ್ಟರೆ ಒಳ್ಳೆಯದೆಂದು ನನ್ನ ಭಾವನೆ.

ಕಾನೂನು ಸಂಶೋಧನೆಗೆ ಹಣ ಕೇಳಿದ್ದಾರೆ. ಮತ್ತೆ ನಾನು ಅದನ್ನೇ ಹೇಳುತ್ತೇನೆ. ಕಾನೂನು ಸಂಶೋಧನೆಗೆ ಬೇಡ ಎಂದು ನಾನು ಹೇಳುವುದಕ್ಕಾಗುವುದಿಲ್ಲ. ನಾನು ಒಬ್ಬ ವಕೀಲನಾಗಿ, ಕಾನೂನಿನಲ್ಲಿ ಏನೇನು ಒಳ್ಳೆಯದು ಆಗಬೇಕು ಅದನ್ನೆಲ್ಲಾ ಮಾಡಬೇಕೆನ್ನುವುದು ನನ್ನ ಭಾವನೆ. ಮತ್ತೆ ನಾನು ಹೇಳಿದ್ದನ್ನೆ ಒತ್ತಿ ಹೇಳುತ್ತೇನೆ ಆದ್ಯತೆ ಮೇಲೆ ಪ್ರಾಥಮಿಕ ಶಾಲೆಗಳು ಕೊಡುವುದಕ್ಕೆ ವೆಚ್ಚ ಮಾಡಿ ಉಪಾಧ್ಯಾಯರನ್ನು ನೇಮಕ ಮಾಡಬೇಕು ಎಂದು ಇಷ್ಟು ಹೇಳಿ ಮಾನ್ಯ ಅಧ್ಯಕ್ಷರೇ ಪೂರಕ ಅಂದಾಜಿನಲ್ಲಿ ಸರ್ಕಾರದವರು ವೆಚ್ಚಕ್ಕಾಗಿ ಕೇಳಿರುವಂತಹ ಉಪಯುಕ್ತವಾದ ಕಾನೂನು ಚೌಕಟ್ಟಿನಲ್ಲಿ ಬರತಕ್ಕಂಥ ಖರ್ಚಿಗೆ ನನ್ನ ಒಪ್ಪಿಗೆ ಕೊಟ್ಟು ಅವಶ್ಯಕತೆ ಇಲ್ಲದೆ ಇರತಕ್ಕಂಥ ಮತ್ತು ಆದ್ಯತೆಗೆ ಒಳಪಡದೆ ಇರತಕ್ಕಂಥ ಖರ್ಚುಗಳನ್ನು ಕೈ ಬಿಟ್ಟು ಪಕ್ಷಾತೀತವಾದ ಮನೇಭಾವನೆಯಿಂದ ಖರ್ಚು ಮಾಡಿರತಕ್ಕಂಥ ಹಣವನ್ನು ವಿರೋಧ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಜೆ.ಸಿ. ಮಾಧು ಸ್ವಾಮಿ (ಚಿಕ್ಕನಾಯ್ಕನಹಳ್ಳಿ) : ಮಾನ್ಯ ಅಧ್ಯಕ್ಷರೇ ಈ ಅಂದಾಜಿನಲ್ಲಿ ಸರ್ಕಾರ ಆದ್ಯತೆ ಬಗ್ಗೆ ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕಂಥ ನಾವೆಲ್ಲಾ ನಾಚಿಕೆ ಪಟ್ಟುಕೊಳ್ಳಬೇಕಾದಂತಹ ಕಾಲ ಬಂದಿದೆ ಅದಕ್ಕಾಗಿ ನಾನು ಈ ಸಭೆಯಲ್ಲಿ ಒಂದು ಮಾತನ್ನು ಹೇಳಲೇಬೇಕಾಗಿದೆ. ನಮಗೆ ಕ್ರಿಮಿನಾಶಕಗಳು ಕೀಟನಾಶಕಗಳು ನಿಗಧಿ ಮಾಡಿದ ಪ್ರಮಾಣದಲ್ಲಿ ಸಪ್ಲೈ ಮಾಡಿ ಎಂದು ಕೇಳಿದರೆ ಬಜೆಟ್ ಪ್ರಾವಿಜನ್ ಇಲ್ಲ ಎಂದು ಹೇಳುತ್ತಾರೆ. ಕಿಟ್ಸ್ ಕೊಡುತ್ತೇವೆಂದು ಮಾಡಿದ್ದವು ಸ್ವಾಮಿ. ಆ ಕಿಟ್ಸ್‌ನಲ್ಲಿ ಬೀಜ ಗೊಬ್ಬರ ಕೊಡುತ್ತಾರೆ. ರೈತರಿಗೆ ಅದೇ ಮಟ್ಟದ ಕಿಟ್ಸ್ ಕೊಡಿ ಅಂತ ಕೇಳಿದರೆ ಬಜೆಟ್ ಪ್ರಾವಿಜನ್ ಇಲ್ಲ ಎಂದು ಹೇಳುತ್ತೀರಿ. ನಮಗೆ ಸ್ಪ್ರಿಂಕ್‌ಲರ್ ಸ್ಪ್ರೇಯಿಂಗ್ ಪಂಪ್ಸ್ ಕೊಡಿ

ಅಂತ ಕೇಳಿದರೆ ಪ್ರಾವಿಜನ್, ಇಲ್ಲ ಇರುವುದೇ ಇಷ್ಟಕ್ಕೆ ಪ್ರಾವಿಜನ್ ಇದರಲ್ಲೇ ನಾವು ಇಳಿತಾ ಮಾಡುತ್ತಾ ಹೋಗುತ್ತೇವೆ ನಿಮಗೆ ಕೊಡುವಂತಹ ಬೆನ್‌ಫಿಟ್ಸ್‌ನ್ನು ಇಳಿತಾ ಮಾಡುತ್ತಾ ಹೋಗುತ್ತೇವೆ ಎಂದು ಹೇಳುವಂತಹ ಸರ್ಕಾರ, ಇವತ್ತು ಈ ಸಪ್ಲಿಮೆಂಟರಿ ಡಿಮ್ಯಾಂಡ್ ತಂದಿರುವುದಕ್ಕೆ ನಾಚಿಕೆ ಪಟ್ಟುಕೊಳ್ಳಬೇಕಾಗಿದೆ. ಮತ್ತು ಇದನ್ನು ವಿರೋಧ ಮಾಡದೇ ಗತ್ಯಂತರ ಇಲ್ಲ, ತಾವು ಅರ್ಥಮಾಡಿಕೊಳ್ಳಬೇಕಾಗಿದೆ. ಸನ್ಮಾನ್ಯ ಆತ್ಮಾನಂದರವರು ಮಂತ್ರಿಗಳಾಗಿದ್ದಾಗ 2 ವರ್ಷಗಳ ಹಿಂದೆ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಪರೋಪಜೀವಿ ಎನ್ನುವ ಒಂದು ಲ್ಯಾಬ್ ಕಟ್ಟಿದರು. ಅದಕ್ಕೆ ಬಜೆಟ್ ಪ್ರಾವಿಷನ್ ಇಲ್ಲ ಅಂತ ನನ್ನ ತಾಲ್ಲೂಕಿನ ಇಬ್ಬರು ಯುವಕರು ಆ ಕೆಲಸ ಮಾಡಿದ್ದರು ಅವರಿಗೆ ಇನ್ನೂ ಪೇಮೆಂಟ್ ಮಾಡಿಲ್ಲ.

ಇದು ಸಪ್ಲಿಮೆಂಟರಿ ಬಜೆಟ್ ಮೇಲೆ ರಿಫ್ಲೆಕ್ಟ್ ಆಗುವುದಿಲ್ಲವೇ? ಎರಡನೆಯದಾಗಿ ನಮ್ಮ ಕೆರೆಗಳಲ್ಲಿ ಸ್ವಲ್ಪ ನೀರು ತೆಗೆದುಕೊಳ್ಳುವ ಶಕ್ತಿ ಇಲ್ಲ. ಕೃಷ್ಣದೇವರಾಯನ ಕಾಲದಲ್ಲಿ ಆದಂತಹ ಕೆರೆಗಳು. ಆ ಕೆರೆಗಳಿಗೆ ಸುಮಾರು 80-90 ವರ್ಷ ಆಗಿದೆ. ಸುಮಾರು 10 ಸಾವಿರ ಕೆರೆಗಳಿಗೆ ಜೇಡಿ ಮಣ್ಣು ಮಾಡಿಸಬೇಕು ಅಂದ್ರೆ 20 ಸಾವಿರ ರೂಪಾಯಿ ಖರ್ಚು ಮಾಡಿ ಕೊಡಿ ರಿಪೇರಿ ಮಾಡಿಸಬೇಕು ತೂಬು ರಿಪೇರಿ ಮಾಡಿಸಬೇಕು ಅಂದರೆ ನೀವು ಹಣ ಇಲ್ಲ ಅಂತೀರಿ. ನಮ್ಮ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಜಿಲ್ಲಾಪರಿಷತ್ತಿಗೆ ಕೆರೆಗಳನ್ನು ವರ್ಗ ಮಾಡಿದರು ಆದರೆ ಅದಕ್ಕೆ ಸಮಾನವಾದ ದುಡ್ಡು ವರ್ಗಾವಣೆ ಆಗಿಲ್ಲ. ಯಾವ ಕೆರೆಗಳ ದುರಸ್ತಿ ಆಗಿಲ್ಲ. ಅಲ್ಪಸ್ವಲ್ಪ ಬಂದ ನೀರು ನಿಲ್ಲದೆ ಹೋಗುತ್ತವೆ. ಇನ್ನು ವಾಟರ್ ಶೆಡ್ ಪ್ರೋಗ್ರಾಂ ಹಾಕುತ್ತೀರಿ. ಅದು ಇಳಿತಕ್ಕೆ ಬಂದಿದೆ. 25 ಸಾವಿರ ರೂಪಾಯಿಗಳಲ್ಲಿ ಒಂದು ಬಂದ್ ಹಾಕಬೇಕು. ಛೆಕ್ ಅಪ್‌ಗೆ 25ಸಾವಿರ ರೂಪಾಯಿಗೆ ಸೀಮಿತ ಮಾಡಬೇಕು. ನಾಲಾ ಬಂದ್‌ಗಳಿಗೆ 50 ಸಾವಿರ ರೂಪಾಯಿಗಳಿಗೆ ಸೀಮಿತ ಮಾಡಿ ಸರ್ಕಾರ ತೀರ್ಮಾನ ತೆಗೆದುಕೊಂಡು ಈ ಸರ್ಕಾರವೇ ಪುಟಪರ್ತಿಗೆ 50 ಲಕ್ಷ ರೂಪಾಯಿ ಕೊಡುತ್ತದೆ. ಕರ್ನಾಟಕ ಭವನದ ರಿಪೇರಿಗೆ 50 ಲಕ್ಷ ರೂಪಾಯಿ ಕೊಡುತ್ತದೆ. ಅಲ್ಲಿನ ರೆಸಿಡೆನ್ಸ್ ಕಮೀಷನರ್ ಟಿಎ ಡಿಎಗೆ ಲಕ್ಷ ಜಾಸ್ತಿ ಮಾಡುತ್ತದೆ. ಅಲ್ಲಿಗೆ ಹೋಗುವ ಆಫೀಸರ್ಸ್‌ನ್ನು ಏರ್‌ಪೋರ್ಟಿನಿಂದ ಡ್ರಾಫ್ ಮಾಡುವುದಕ್ಕೆ 3 ಹೊಸ ಕಾರುಗಳನ್ನು ಕೊಂಡುಕೊಳ್ಳುವುದಕ್ಕೆ ದುಡ್ಡು ಕೊಡುತ್ತಾರೆ. ಎಂಎಲ್‌ಎಗಳಿಗೆ ಇಲ್ಲ, ಇದು ನಾಚಿಕೆ ಪಡುವಂತಹ ವಿಷಯ. ನಾನೂ ಸಹ ಒಬ್ಬ ಸದಸ್ಯನಾಗಿ ಬಂದಿದ್ದೇನೆ. ನನಗೆ ವಿಚಾರ ಚೆನ್ನಾಗಿ ಗೊತ್ತು. ಒಂದು ಸಲ ಮಾನ್ಯ ಕೃಷಿ ಮಂತ್ರಿಗಳು ಹೇಳಿದರು ನಮ್ಮ ತೊಗರಿ ಬೆಳೆಗೆ ಕೆಮಿಕಲ್ಸ್ ಸಿಕ್ಕಿಲ್ಲ ಕಾರಣ ನೀವು ಅವರಿಗೆ ಸೀಮಿತವಾದ ಹಣ ಕೊಟ್ಟಿದ್ದೀರಿ ಅದಕ್ಕಿಂತ ಜಾಸ್ತಿ ಹಣ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಖರ್ಚು ಮಾಡುವುದಕ್ಕೆ ತಯಾರಾಗಿಲ್ಲ ಏಕೆಂದರೆ ಅದಕ್ಕೆ ಸಪ್ಲಿಮೆಂಟರಿ ಪ್ರಾವಿಜನ್ ಇಲ್ಲ ನಾನು ಮೊದಲೇ ಹೇಳಿದಹಾಗೆ ನಮ್ಮ ಬಾಳೆಗಿಡ ನಾಶವಾಗಿದೆ ಏನಾದರೂ ಕೊಡಿ ಅಂದರೆ ಪ್ರಾವಿಜನ್ ಇಲ್ಲ ಅಂತೀರಿ. ಮತ್ತು ತೆಂಗಿನ ಗಿಡ ನಾಶವಾಗಿದೆ. ಅದಕ್ಕೆ ಕಪ್ಪು ತಲೆ ಹುಳ ಬಂದಿದೆ ಕ್ರಿಮಿನಾಶಕಗಳನ್ನು ಕೊಡಿ ಪರೋಪಜೀವಿಗಳನ್ನು ಕೊಡಿ ಅಂದರೆ ಪ್ರಾವಿಜನ್ ಇಲ್ಲ ಅಂತಾರೆ. ಡ್ರಿಪ್ ಇರಿಗೇಶನ್ ಬಂದಿದೆ. ನನ್ನ ತಾಲ್ಲೂಕಿನಲ್ಲಿ, ಸ್ವಾಮಿ ಕೊಟ್ಟಿರುವುದು 2-3. 50 ಸಾವಿರ ಸ್ಪ್ರಿಂಕಲರ್ ಬಗ್ಗೆ ನಾನು ತಮಗೆ ಒಂದು ಮಾತು ಹೇಳುತ್ತೇನೆ ಪರಿಶಿಷ್ಟ ಜಾತಿಯವರಿಗೆ

75 ಪರ್ಸೆಂಟ್ ಸಣ್ಣ ರೈತರಿಗೆ 50 ಪರ್ಸೆಂಟ್. ಬೇರೆಯವರಿಗೆ 25 ಪರ್ಸೆಂಟ್ ರೂಲ್ಸ್ ಮಾಡಿದ್ದಾರೆ. ಎಲ್ಲರಿಗೂ 40 ಸಾವಿರ. ಪರಿಶಿಷ್ಟ ಜಾತಿಯವರಿಗೆ ಕೊಡಬೇಕಾದರೆ ಲಿಮಿಟ್ ಮಾಡಿದ್ದಾರೆ 10 ಸಾವಿರ ರೂಪಾಯಿಗಳಿಗೆ ಇನ್ನು 10 ಸಾವಿರ ರೂಪಾಯಿ ಕೊಡುವುದು. ದೊಡ್ಡ ರೈತನಿಗೆ 10 ಸಾವಿರಕ್ಕೆ 40 ಸಾವಿರ ಅದರಲ್ಲಿ 10 ಸಾವಿರ ಸಬ್ಸಿಡಿ. ಎಲ್ಲರಿಗೂ ಒಂದೇ. ಇನ್ನು ಆಸ್ಪತ್ರೆಗಳ ಬಗ್ಗೆ ಬಿಡಿ. ಗೌರ್ನಮೆಂಟ್ ಮೆಡಿಕಲ್ ಸ್ಟೋರ್ಸ್‌ಗಳಲ್ಲಿ ಔಷಧಿಗಳ ಸಪ್ಲೈ ಮಾಡುತ್ತಾ ಇಲ್ಲ. ಜೀವ ಉಳಿಸತಕ್ಕಂಥ ಔಷಧಿ ಇಲ್ಲ. ಡಾಕ್ಟರ್ ಕೊಂಡುಕೊಳ್ಳಲಿಕ್ಕೆ ಹೇಳುತ್ತಾರೆ. ಕೇಳಿದರೆ ಬಜೆಟ್ ಪ್ರಾವಿಜನ್ ಲಿಮಿಟ್ ಮಾಡಿ ಕೊಟ್ಟಿರುತ್ತೀರಿ. ಡಾಕ್ಟರ್ ಕೊಂಡುಕೊಳ್ಳುವುದಕ್ಕಾಗುವುದಿಲ್ಲ. ಒಂದು ಸಿಪ್ರಾನ್ ಮಾತ್ರೆ 25 ರೂಪಾಯಿ. ಟೈಫಾಯ್ಡ್ ಬಂದರೆ 6 ದಿವಸ ಕೊಡಬೇಕಾಗುತ್ತದೆ ಯಾರು ತಂದು ಕೊಡುತ್ತಾರೆ ಇದಕ್ಕೆಲ್ಲ ಇಲ್ಲ. ಪುಟಪರ್ತಿಗೆ 50 ಲಕ್ಷ ಕೊಡುತ್ತಾರೆ ಯೋರದೊ ತೆವಲು ತೀರಿಸಿಕೊಳ್ಳುವುದಕ್ಕೆ. ನಮ್ಮ ಊರಿನಲ್ಲಿ ಬಡವ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುತ್ತಾನೆ ಹರಿಜನ ಅವನು ಪುಟಪರ್ತಿಗೆ ಹೋಗುತ್ತಾನೆ ನಮ್ಮ ಸರಕಾರ 50 ಲಕ್ಷ ಕೊಟ್ಟಿದೆ ಪುಕ್ಕಟೆಯಾಗಿ ನನ್ನ ಮಗನಿಗೆ ಓಪನ್ ಹಾರ್ಟ್ ಸರ್ಜರಿ ಮಾಡಿಸಿ ಎಂದು. ಅವರು ಕಾಗದ ಬರೆದು ಕಳುಹಿಸಿದ್ದಾರೆ. ನೀವು ಜಯದೇವ ಹೃದ್ರೋಗ ಚಿಕಿತ್ಸಾಲಯಕ್ಕೆ ಹೋಗಿ ಇಲ್ಲಿ ಆಗುವುದಿಲ್ಲವೆಂದು ಅದನ್ನು ಬೇಕಾದರೆ ನಾನು ತಂದು ತಮ್ಮ ಮುಂದೆ ಇಡುತ್ತೇನೆ. ಅಂತಹವರಿಗೆ ಹಣ ಕೊಡುತ್ತೀರಿ ನಿಮಗೆ ನಮ್ಮ ವಿಕ್ಟೋರಿಯಾ ಆಸ್ಪತ್ರೆ ಕಾಣುವುದಿಲ್ಲ. ಜಯದೇವ ಹೃದ್ರೋಗ ಆಸ್ಪತ್ರೆ ಕಾಣುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಆಸ್ಪತ್ರೆಗಳು ಕಾಣುವುದಿಲ್ಲ.

ಯಾರೋ ಪಾಪ ಬೀಡಿ ಸೇದುವಾಗಲೋ, ಸೋಪು ಹಚ್ಚಿಕೊಳ್ಳುವಾಗಲೋ 4 ಆಣೆ 8 ಆಣೆ ಟ್ಯಾಕ್ಸ್ ಕೊಡುವವನ ದುಡ್ಡಿನಲ್ಲಿ ಮೋಸ ಮಾಡುತ್ತಾ ಹೋದರೆ ಈ ಸಪ್ಲಿಮೆಟರಿ ಬಜೆಟ್‌ನ್ನು ಅಪ್ರೂವ್ ಮಾಡಬೇಕೇ? ತಾವು ಕೇಳಲಿಕ್ಕೆ ಏನಾದರೂ ಅರ್ಹತೆ ಇದೆಯೇ? ಎಂದು ಪ್ರಶ್ನೆ ಮಾಡಬೇಕಾಗುತ್ತದೆ ಅಧ್ಯಕ್ಷರೆ, ಏಕೆ? ಯಾರಿಗೋಸ್ಕರ ಈ ಸಪ್ಲಿಮೆಂಟರಿ ಡಿಮ್ಯಾಂಡ್? ನಮ್ಮ ನಾಯಕರು ಹೇಳಿದರು, 70 ಭಾಗ 80 ಭಾಗ ಸರ್ಕಾರಿ ಸೇವೆಯಲ್ಲಿ ಇರುವವರಿಗೆ ಆಗುತ್ತದೆ ಎಂದು. ಒಂದು ಕ್ಷಣ ಯೋಚನೆ ಮಾಡಿ, ಅದರ ಜೀವನಕ್ಕೂ ಹಳ್ಳಿಯಲ್ಲಿರುವ ರೈತನ ಜೀವನಕ್ಕೂ ಹೋಲಿಸಿ ನೋಡಿ ನಾವು ಯಾವ ಸ್ಥಿತಿಯಲ್ಲಿ ಬದುಕಿದ್ದೇವೆಂದು ಹೇಳಿ. ಅದೇ ಮಾರ್ಕೆಟ್ಟಿನಲ್ಲಿ ಅವರು ಕೊಳ್ಳುವ ಸಾಮಗ್ರಿಯನ್ನೇ ನಾನೂ ಕೊಳ್ಳಬೇಕು. ನಾನೂ ಹೇಗೆ ಬದುಕಬೇಕು ಈ ಸಮಾಜದಲ್ಲಿ. ಒಂದು ವರ್ಷಕ್ಕೆ 5 ಡಿಎ, ಒಂದೊಂದು ಸ್ಪೆಷಲ್ ಇಂಕ್ರಿಮೆಂಟ್, ಜೊತೆಗೆ ಅವರಿಗೆ ಎಲ್ಲವೂ ಜಾಸ್ತಿ. ಪೆಟ್ರೋಲ್ ಜಾಸ್ತಿ ಆಯಿತು, ಡೀಸಲ್ ಜಾಸ್ತಿ ಆಯಿತು, ಟಿಎ ಜಾಸ್ತಿ ಆಯಿತು, ಡಿಎ ಜಾಸ್ತಿ ಆಯಿತು, ನಮ್ಮ ಸ್ಥಿತಿ ಏನಂಥ ಯೋಚನೆ ಮಾಡಿದ್ದೀರಾ? ಕೃಷೀದು ಒಂದೇ ಒಂದು ಡಿಮ್ಯಾಂಡ್ ಮೇಲೆ ಒಂದು ಡ್ರಿಫ್ ಇರಿಗೇಷನ್ ಹಾರ್ಟಿಕಲ್ಚರ್ ಮೇಲೆ ತಂದಿರುವುದು ಬಿಟ್ರೆ, ಇದು ಏನೋ ಗೌರ್ನಮೆಂಟ್ ಆಫ್ ಇಂಡಿಯಾದವರು ರೀಯಂಬರ್ಸ್‌ಮೆಂಟ್ ಮಾಡುತ್ತಾರೆ, ನಾವು ಇವತ್ತು ಕೊಡಬೇಕು ನಾಳೆ ತೂಗೋತ್ತೇವೆ ಎಂದು ತಾವು ಹೇಳಿ 50 ಪರ್ಸೆಂಟ್ ಸಬ್ಸೀಡಿಯನ್ನು ಬಿಟ್ರೆ ಇನ್ನೇನಾದರೂ ಒಂದರ ಮೇಲೆ ತಂದಿದ್ದೀರಾ? ಕೆಮಿಕಲ್ ರೇಟ್ ಜಾಸ್ತಿಯಾಗಿದೆ. ಇದರಿಂದಾಗಿ ಪೆಸ್ಟಿಸೈಡ್ಸ್ ಜಾಸ್ತಿಯಾಗಿದೆ. ನಮಗೆ ಕೊಡುತ್ತಿದ್ದ

ಪೈಪ್‌ಗೆ ರೇಟ್ ಜಾಸ್ತಿಯಾಗಿದೆ. 5 ಸ್ಪ್ರಿಂಕ್ಲರ್ಸ್ ಕೊಡುತ್ತಿದ್ದ ಕಡೆ 3 ಸ್ಪ್ರಂಕ್ಲರ್ಸ್ ಅನ್ನು ಇಲಾಖೆಯವರು ಕೊಡುವುದಕ್ಕಾಗುತ್ತಿಲ್ಲ. ಈ ಒಂದು ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ರೈತನಿಗೋಸ್ಕರ ತಾವು ಏನಾದರೂ ಕೇಳಿದ್ದೀರಾ? ಎಂದು ಪ್ರಶ್ನೆ ಮಾಡಬೇಕಾಗುತ್ತದೆ. ಎರಡನೆಯದು ಗ್ರಾಮೀಣ ಪ್ರದೇಶದಲ್ಲಿ ತಾವು ಕೊಡುತ್ತಿದ್ದ ಮಿನಿ ವಾಟರ್ ಸ್ಕೀಮ್‌ಗೆ ಒಂದು ಲಕ್ಷದ ಮೇಲೆ ಅಪ್ರೂವ್ ಕೊಡುವ ಹಾಗಿಲ್ಲ. ಚೀಫ್ ಇಂಜಿನಿಯರ್‌ರವರು ಯೂನಿಟ್ ಕಾಸ್ಟ್ ಫಿಕ್ಸ್ ಮಾಡಿಬಿಟ್ಟಿದ್ದಾರೆ. 50 ಮೀಟಟರ್ 60 ಮೀಟರ್ ಪೈಪ್‌ಲೈನ್ ಅವಶ್ಯಕತೆ ಇದ್ದರೆ ಕೊಡುವುದಿಲ್ಲ. ಏಕೆ ಬಜೆಟ್ ಇಲ್ಲ? ಕೊಟ್ಟರೂ ಒಂದು ಲಕ್ಷ ಮೀರುವ ಹಾಗಿಲ್ಲ. ಓವರ್ ಹೆಡ್ ಟ್ಯಾಂಕ್ ಸ್ಕೀಮ್ ಮಾಡಿದ್ದೀರಿ ಸ್ವಾಮಿ. ಅದು 25 ಸಾವಿರ ಲೀಟರ್‌ಗೆ ಲಿಮಿಟ್ ಮಾಡಿರುವುದು. ಊರಿನಲ್ಲಿ ಇರುವ ಕೆರೆ ಎಷ್ಟು, ಕಟ್ಟೆ ಎಷ್ಟು, ಬಾವಿ ಎಷ್ಟು, ಹ್ಯಾಂಡ್ ಪಂಪ್ ಎಷ್ಟು, ಮಿನಿ ವಾಟರ್ ಸ್ಕೀಮ್ ಎಷ್ಟು, ಅದರಲ್ಲಿ ಫೂಲ್ ಆಗುವ ವಾಟರ್ ಎಷ್ಟು ಎಂದು ನೋಡಿ ಟ್ಯಾಂಕ್ ಕೊಡುತ್ತಾರೆ. ಈ ಯೋಜನೆಗಳು ಸಮಯಕ್ಕೆ ಸರಿಯಾಗಿ ಆಗದೆ ಎಸ್ಕಲೇಷನ್ ಆಗುವುದಿಲ್ಲವೇ ನಮ್ಮಲ್ಲಿ ಇದಕ್ಕೆ ಸಪ್ಲಿಮೆಂಟರಿ ಪ್ರಾವಿಷನ್ ಮಾಡುವುದಕ್ಕಾಗುವುದಿಲ್ಲ ಅಲಾಟ್‌ಮೆಂಟ್ ಮಾಡುವುದಕ್ಕಾಗುವುದಿಲ್ಲ, ಸರ್ಕಾರಿ ನೌಕರರಿಗೆ, ಬೆಂಗಳೂರು ಸಿಟಿಯಲ್ಲಿ

(ಶ್ರೀಮತಿ ಮೋಟಮ್ಮನವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ವಾಸ ಮಾಡುವವರಿಗೆ, ಕರ್ನಾಟಕ ಭವನದಲ್ಲಿ ವಾಸ ಮಾಡತಕ್ಕವರಿಗೆ, ಪುಟಪರ್ತಿ, ಸಾಯಿಬಾಬಾ ಆಶೀರ್ವಾದ ಬೇಕಾಗಿರುವವರಿಗೆ ತಾವು ಇವತ್ತು ಸಪ್ಲಿಮೆಂಟರಿ ಡಿಮ್ಯಾಂಡ್ ಕೇಳುವುದು ಬಹುಶಃ ನಾಚಿಕೆಕೇಡಿನ ವಿಷಯ ಎಂದು ಹೇಳಿ ಈ ಸಪ್ಲಿಮೆಂಟರಿ ಡಿಮ್ಯಾಂಡನ್ನು ನಾನು ನೂರಕ್ಕೆ ನೂರು ವಿರೋಧ ಮಾಡುತ್ತೇನೆ ಸ್ವಾಮಿ.

+ಶ್ರೀ ಎ.ಬಿ. ಜಕನೂರ್ (ಅಥಣಿ) : ಮಾನ್ಯ ಅಧ್ಯಕ್ಷಣಿಯವರೇ, ಸನ್ಮಾನ್ಯ ಮಂತ್ರಿಗಳು ತಂದಂಥ motion for demands of supplementary estimates 1992-93 ಇದು ಯೋಗ್ಯ ಕಾರಣ ಸಲುವಾಗಿ ಇದೆ. ಯೋಗ್ಯ ಇದೆ. ಆದ್ದರಿಂದ ಅದನ್ನು ಅಪ್ರೂವ್ ಮಾಡುತ್ತೇನೆ. ಆದರೆಒಂದು ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಇಲ್ಲಿ ಹೇಳಬಯಸುತ್ತೇನೆ. ಹೋದ ವರ್ಷ ಬಜೆಟ್ ಸೆಷನ್‌ನಲ್ಲಿ ಮಹಾರಾಷ್ಟ್ರಕ್ಕೆ ಹೋಗುವ ಕಬ್ಬಿನ ಮೇಲಿನ ಪರ್ಚೇಸ್ ಟ್ಯಾಕ್ಸ್‌ನ್ನು ಎಕ್ಸಂಟ್ ಮಾಡಿದ್ದೀರಿ. ಆದರೆ, ನಡುವೆ ಏನಾಗಿದೆ? ಮೊನ್ನೆ 20-11-92ರಂದು ಈ ಸದನಕ್ಕೆ ಗೊತ್ತಿಲ್ಲದೆ, ಯಾವುದೇ ಎಂಎಲ್‌ಎ ಗಳಿಗೂ ಗೊತ್ತಿಲ್ಲದೆ ಮತ್ತೆ ಅದನ್ನು ರೀ-ಇಂಟ್ರಡ್ಯೂಸ್ ಮಾಡಿದ್ದಾರೆ. ಗೋವಾಕ್ಕೆ ಮಾತ್ರ ಹಾಗೇ ಇಟ್ಟಿದ್ದಾರೆ. ಮಹಾರಾಷ್ಟ್ರಕ್ಕೆ ಹೋಗುವುದಕ್ಕೆ ಮಾತ್ರ ಇಂಟ್ರಡ್ಯೂಸ್ ಮಾಡಿದ್ದಾರೆ. ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳು ಗಮನಿಸಬೇಕು. ಮೊನ್ನೆ ಈ ಪಾಯಿಂಟ್ ರೈಸ್ ಮಾಡಿದ್ದೇನೆ. ತಾವು ಡಿಸೀಷನ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇವತ್ತೇ ಈ ಸದನದಲ್ಲಿ ಅನೌನ್ಸ್ ಮಾಡ್ಬಬೇಕೆಂದು ಕೇಳಿಕೊಂಡು ನಾನು ಇದನ್ನು ಸ್ವಾಗತ ಮಾಡುತ್ತೇನೆ.

+ಶ್ರೀ ಎ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಅಧ್ಯಕ್ಷಣಿಯವರೆ, ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರವೆಂದು 15 ಕೋಟಿ ರೂಪಾಯಿ ಈ

ಅಂದಾಜಿನ ಮೂಲಕ ಕೇಳಿದ್ದಾರೆ. ಸುಮಾರು 10 ಜಿಲ್ಲೆಗಳಲ್ಲಿ ಈ ವರ್ಷ ಎಂದೂ ಇಲ್ಲದಂಥ ಮಳೆ ಬಂದಿದ್ದರಿಂದ ಅವರು ಕೊಡುವುದು ನ್ಯಾಯವೇ. ಇನ್ನೂ ಜಾಸ್ತಿ ಕೊಡಬೇಕು. ಸುಮಾರು 140 ಕೋಟಿ ರೂಪಾಯಿ ನಷ್ಟ ಎಂದು ಹೇಳಿದ್ದಾರೆ. ಅದಕ್ಕೆ ಯಾರ ಅಭ್ಯಂತರವೂ ಇಲ್ಲ. ಆದರೆ, ಹೋದ ವರ್ಷ 91ನೇ ಇಸವಿಯಲ್ಲಿ ಸುಮಾರು 5 ಜಿಲ್ಲೆಗಳಲ್ಲಿ, ಕೋಲಾರ, ಬೆಂಗಳೂರು ರೂರಲ್, ಬೆಂಗಳೂರು ಸಿಟಿ, ಚಿತ್ರದುರ್ಗ ಮತ್ತು ತುಮಕೂರು ಈ 5 ಜಿಲ್ಲೆಗಳಲ್ಲಿ ಸುಮಾರು 100 ವರ್ಷದಿಂದ ಆ ತರಹ ಮಳೆ ಬಿದ್ದೇ ಇಲ್ಲ. ನಮ್ಮ ಕೋಲಾರ ಜಿಲ್ಲೆ ಉದಾಹರಣೆ ಹೇಳಬೇಕೆಂದರೆ, ಹನ್ನೆರಡೂವರೆ ಕೋಟಿ ರೂಪಾಯಿಗೆ ನಾವು ಡಿಮ್ಯಾಂಡ್ ಮಾಡಿದ್ದೆವು. ಸುಮಾರು ನಾಲ್ಕೂವರೆ ಕೋಟಿ ಕೊಟ್ಟಿದ್ದಾರೆ. ಇನ್ನೂ ಸುಮಾರು ಐದೂವರೆ, ಆರೂವರೆ ಕೋಟಿ ಕೊಡದೆ ಇವತ್ತಿನ ದಿವಸ ಏನಾಗಿದೆ ಎಂದರೆ ನಮ್ಮ ಜಿಲ್ಲೆಯಲ್ಲಿ ಪ್ರೈಮರಿ ಸ್ಕೂಲ್ ಬಿಲ್ಡಿಂಗ್ ಎಲ್ಲಾ ಸೋರುತ್ತಿವೆ. ನಾವು ಹಳ್ಳಿಗಳಕಡೆ ಟೂರ್ ಹೋದಾಗ ನೋಡಿ ಸ್ವಾಮಿ ನೀರು ಸೋರುತ್ತಿದೆ, ಹೇಗೆ ಮಕ್ಕಳನ್ನು ಅಲ್ಲಿ ಕೂರಿಸುವುದು ಎನ್ನುವ ರೀತಿಯಲ್ಲಿ ಮಾತನಾಡುತ್ತಾರೆ. ದೇವಸ್ಥಾನಗಳು ಕೂಡ, ಇವತ್ತು ದೇವಸ್ಥಾನಗಳಿಗೆ ಹೋಗುವುದಕ್ಕಾಗುವುದಿಲ್ಲ, ಪಾಪ ಹಳೇ ಕಾಲದಲ್ಲಿ ಚೋಳ ರಾಜನ ಕಾಲದಲ್ಲಿ ಅಥವಾ ಬೇರೆ ರಾಜರ ಕಾಲದಲ್ಲಿ ಕಟ್ಟಿರುವಂಥ ಆ ದೇವಸ್ಥಾನಗಳು. ಪ್ರಕೃತಿ ವಿಕೋಪಕ್ಕೆ ತುತ್ತಾಗಿ ಇವತ್ತು ಅನೇಕ ದೇವಸ್ಥಾನಗಳ ಛಾವಣಿಗಳು ಸೋರುತ್ತಿದೆ.

5.15 ಪಿ.ಎಂ.

ದೇವಸ್ಥಾನಗಳನ್ನು ರಿಪೇರಿ ಮಾಡುವುದಕ್ಕೆ ಮತ್ತು ಎಲ್ಲೆಲ್ಲಿ ಪ್ರೈಮರಿ ಸ್ಕೂಲ್‌ಗಳ ಕಟ್ಟಡ ಹಾಳಾಗಿದೆ. ಎಲ್ಲೆಲ್ಲಿ ರಸ್ತೆಗಳು ಹಾಳಾಗಿವೆ, ಅವುಗಳನ್ನು ರಿಪೇರಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ನಾವುಗಳು ಕೇಳಿದರೆ ಏನೋ ಒಂದಿಷ್ಟು ಕೊಡುತ್ತೀರಿ, ಡಿಮ್ಯಾಂಡ್ ಪ್ರಕಾರ ಸಿಗುತ್ತಾ ಇಲ್ಲ. ನಮ್ಮ ಜಿಲ್ಲೆಗೆ ನಾಲ್ಕೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದಕ್ಕೋಸ್ಕರವಾಗಿ ನನ್ನ ಒಂದು ಪ್ರಾರ್ಥನೆ ಏನೆಂದರೆ, ಕಳೆದ 1991ರ ಅಕ್ಟೋಬರ್, ನವೆಂಬರ್‌ನಲ್ಲಿ ಏನು ಪ್ರಕೃತಿ ವಿಕೋಪಕ್ಕೆ ಕೋಲಾರ ಜಿಲ್ಲೆ ಒಳಗಾಯಿತು, ಅದರ ಪರಿಹಾರ ಕಾಮಗಾರಿಗಾಗಿ ನಮ್ಮ ಜಿಲ್ಲೆಯವರು ಎಷ್ಟು ಹಣವನ್ನು ಕೇಳುತ್ತಾರೆ ಅಷ್ಟನ್ನು ಕೊಡುವುದು ಉತ್ತಮ. ಅದು ಸರಕಾರದ ಕರ್ತವ್ಯ ಆಗಿದೆ. ಇನ್ನು ನಮ್ಮ ಭಾಗದಲ್ಲಿ ಪ್ರವಾಸೋದ್ಯಮ ಇಲಾಖೆಯವರು ಪ್ರವಾಸಿಗಳನ್ನು ಆಕರ್ಷಿಸಲು ಒಂದು ಹೋಟೆಲ್‌ನ್ನು ರಾಷ್ಟ್ರೀಯ ಹೆದ್ದಾರಿಯ ಬಳಿ ಮಾಡಿದ್ದಾರೆ. ವಿಶೇಷತಃ ವಿದೇಶಿ ಪ್ರವಾಸಿಗರನ್ನು ಆಕರ್ಷಿಸಿ ವಿದೇಶಿ ವಿನಿಮಯ ಗಳಿಸುವ ಉದ್ದೇಶವು ಕೂಡ ಒಳ್ಳೆಯದೇ ಆಗಿದೆ. ಅಲ್ಲಿ ಸುಮಾರು 70 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಆ ಹೋಟೆಲ್‌ನ್ನು ಕಟ್ಟಿದ್ದಾರೆ. ನನ್ನ ಕ್ಷೇತ್ರವಾದ ಮುಳಬಾಗಿಲಿನಲ್ಲಿ ಎನ್ ಹೆಚ್-4 ನಲ್ಲಿ 12 ಬೆಡ್ ರೂಂಗಳ ಹೋಟೆಲ್ ಸಿದ್ಧವಾಗಿ ಎರಡು ವರ್ಷಗಳು ಆಗಿವೆ. ಆದರೆ ಇನ್ನೂ ಪ್ರಾರಂಭಮಾಡಿಲ್ಲ, ಅಲ್ಲಿ ಎಲ್ಲಾ ಅರೇಂಜ್‌ಮೆಂಟ್ಸ್ ಇದ್ದರೂ ಕೂಡ ಕೇವಲ ಫರ್ನೀಚರ್ ಕೆಲಸ ಮಾತ್ರಾ ಬಾಕಿ ಇದ್ದು ಅದಕ್ಕಾಗಿ ಅದರ ಪ್ರಾರಂಭವು ನಿಂತಿದೆ ಎಂದು ತಿಳಿದು ಬರುತ್ತದೆ. ಫರ್ನೀಚರ್ ಕಂಟ್ರಾಕ್ಟರ್‌ಗು ಇಲಾಖೆಗೆ ಇರುವ ಯಾವುದೋ ತೊಂದರೆಯ ಕಾರಣದಿಂದಾಗಿ ಅದು ನಿಂತಿದೆ ಎಂದು ಹೇಳುತ್ತಾರೆ. ಈ ಹೋಟೆಲ್ ಮದ್ರಾಸ್ ಬೆಂಗಳೂರು

ಮಧ್ಯೆ ಬರುತ್ತದೆ. ಬೆಂಗಳೂರಿನಿಂದ ತಿರುಪತಿ, ವಿಜಯವಾಡ ಹಾಗೂ ಮದ್ರಾಸ್‌ಗೆ ಹೋಗುವವರಿಗೆ, ಬರುವರಿಗೆ ಇದರ ಅಗತ್ಯವು ಇರುತ್ತದೆ. ಇದನ್ನೆಲ್ಲಾ ಗಮನಿಸಿ ಹೊಟೆಲ್ ಕಾರ್ಯವನ್ನು ಪೂರ್ಣಗೊಳಿಸಿ ಬೇಗನೆ ಪ್ರಾರಂಭ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

+ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು) : ಮಾನ್ಯ ಸಭಾಧ್ಯಕ್ಷಣಿಯವರೇ, ಈ ಪೂರಕ ಆಯ-ವ್ಯಯ ಏನಿದೆ, ಅದರ ಮೇಲೆ ಬಹಳ ಒಳ್ಳೆಯ ಚರ್ಚೆ ನಡೆದಿದೆ. ಸುಮಾರು 10 ಜನ ಮಾನ್ಯ ಸದಸ್ಯರುಗಳು ಈ ವಿಚಾರಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ರಚನಾತ್ಮಕವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಟೀಕಾಸ್ತ್ರಗಳನ್ನು ಕೂಡ ಬಿಟ್ಟಿದ್ದಾರೆ. ಒಂದು ಬಹಳ ಸಂತೋಷದ ವಿಚಾರ ಎಂದರೆ, ಮಾನ್ಯ ಸದಸ್ಯರುಗಳು ಅಂದಾಜನ್ನು ಅಭ್ಯಾಸ ಮಾಡಿ ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರುಗಳು ಕೊಟ್ಟಂಥ ಸಲಹೆಗಳನ್ನು, ಮಾಡಿದಂಥ ಟೀಕೆಗಳನ್ನು ಸ್ವೀಕಾರ ಮಾಡಿ ಅವುಗಳ ಬಗ್ಗೆ ಕೆಲವು ವಿಶ್ಲೇಷಣೆಗಳನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ.

ಈಗ ನಾವು ಏನು ಪೂರಕ ಆಯವ್ಯಯವನ್ನು ಕೇಳಿದ್ದೇವೆ, ಇದು ಸಾಮಾನ್ಯವಾಗಿ ಪ್ರತಿವರ್ಷವೂ ಕೂಡ ಇಂಥ ಪೂರಕ ಅಂದಾಜು, ಆಯವ್ಯಯ, ಈ ಸರಕಾರಕ್ಕೆ ಬರುವಂಥದ್ದು. ಇದನ್ನು ನಾವು ಹೊಸದಾಗಿ ಈ ಸದನದಲ್ಲಿ ಪ್ರಾರಂಭ ಮಾಡಿಲ್ಲ.

ಆದರೂ ಕೂಡ ಒಂದು ಮೂಲ ಸಿದ್ಧಾಂತವನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಪೂರಕ ಡಿಮ್ಯಾಂಡ್‌ನ ನೆವದಲ್ಲಿ ನಮ್ಮ ಒಟ್ಟು ಜವಾಬ್ದಾರಿಯಿಂದ, ಈ ಸದನದಲ್ಲಿ ಏನು ಬೇಡಿಕೆಗಳನ್ನು, ಆಯವ್ಯಯಗಳನ್ನು ಏನು ಮಂಜೂರು ಮಾಡಿದ್ದೇವೆ, ಅದನ್ನು ವಿಕೃತಗೊಳಿಸಬಾರದು. ಏಕೆಂದರೆ ಅದು ಅನೇಕ ಬಾರಿ ಆದರ ಮೇಲೆ ನಾವು ಇಲ್ಲಿ ಸಾಕಷ್ಟು ಚರ್ಚೆ ಮಾಡಿ ಅದಕ್ಕೆ ಅನುಮತಿಯನ್ನು ಸದನವು ಇಲ್ಲಿ ಕೊಟ್ಟಮೇಲೆ ಎಷ್ಟು ಅವಶ್ಯಕವಿದೆಯೋ ಮತ್ತು ಬೇರೆ ಉಪಾಯವಿಲ್ಲದೆ ಇರತಕ್ಕಂಥ ಯಾವ ಬಾಬುಗಳು ಇವೆ, ಅವುಗಳನ್ನು ಮಾತ್ರ ಪೂರಕ ಬೇಡಿಕೆಗಳಲ್ಲಿ ಸೇರಿಸತಕ್ಕಂಥಾದ್ದು ಯೋಗ್ಯವಾದುದು ಎಂಬ ಒಂದು ಧಾಟಿಯಲ್ಲಿ ಇಲ್ಲಿ ಚರ್ಚೆ ನಡೆದಿದೆ.

ತಾವು ಸ್ವಲ್ಪ ಈ ಪೂರಕ ಬೇಡಿಕೆಗಳ ಬಗ್ಗೆ ಹಿಂದಿನ ವರ್ಷಗಳ ನಡವಳಿಕೆಗಳನ್ನು ಪರಾಂಬರಿಸಿದರೆ ಇವತ್ತಿನವರೆಗೆ ಒಂದನೇ ಕಂತು, ಇದು ಎರಡನೇ ಕಂತು ಮೂರನೇ ಕಂತು ಇದ್ದೇ ಇರುತ್ತದೆ, ಸ್ವಲ್ಪ ಕಡಿಮೆ ಅಥವಾ ಹೆಚ್ಚು ಹಣ ಇರಬಹುದು, ಆದರೆ ಆದಷ್ಟು ಕಡಿಮೆ ನಿಯಂತ್ರಣದಲ್ಲೇ ನಾವು ತರುತ್ತಿದ್ದೇವೆ. ಆದರೆ ಮೂರನೇ ಕಂತು ಬರುವುದೇ ಇಲ್ಲ ಎಂದು ಯಾರೂ ಕೂಡ, ತಾವು ಇಲ್ಲಿ ಕುಳಿತರೂ ಯಾರು ಕುಳಿತರು, ಏಕಾಂತಯ್ಯನವರನ್ನು ಹಣಕಾಸಿ ಸಚಿವರನ್ನಾಗಿ ಮಾಡಿದರೂ ಕೂಡ ಅದನ್ನು ಅವಾಯ್ಡ್ ಮಾಡುವುದಕ್ಕೆ ಆಗುವುದಿಲ್ಲ, ಆದರೆ ಎಷ್ಟು ಕನಿಷ್ಟ ಪ್ರಯೋಗ ನೀವು ಮಾಡುತ್ತೀರಿ ಅದರಲ್ಲಿ ಜಾಣ್ಮೆಯಿದೆ, ಅದನ್ನು ನಾನು ಒಪ್ಪುತ್ತೇನೆ.

ಶ್ರೀ ಎಚ್. ಏಕಾಂತಯ್ಯ : ನೀವು ಹೇಳೋದೆಲ್ಲ ಒಪ್ಪಿದ್ದೇವೆ. ನಮ್ಮ ಮುಖ್ಯ ಆಕ್ಷೇಪ ಏನೆಂದರೆ ಈ ಸಾದಿಲ್ವಾರು ನಿಧಿಯಿಂದ ತಾವು ಏನು ಹಣ

ಬಿಡುಗಡೆ ಮಾಡಿದ್ದೀರಿ, ಇದನ್ನು ಎಂತಹ ಸಂದರ್ಭದಲ್ಲಿ ಬಿಡುಗಡೆ ಮಾಡಬೇಕಾಗಿತ್ತೋ ಆಗ ಮಾಡದೆ ಇರುವಂತಹ ನಿಯಮಗಳನ್ನು ಉಲ್ಲಂಘಿಸಿ ತಾವು ಹಣ ಬಿಡುಗಡೆ ಮಾಡಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯ್ಲಿ : ಇಲ್ಲಿಯವರೆಗೆ ತಮ್ಮ ಮತ್ತು ನಮ್ಮ ವಿಚಾರಗಳಲ್ಲಿ ಮೂಲಭೂತ ವ್ಯತ್ಯಾಸ ಇಲ್ಲ ಒಂದನೇ ಮತ್ತು ಎರಡನೇ ಕಂತು ಒಟ್ಟು ಸೇರಿ ಮೂಲ ಆಯವ್ಯಯದ ಶೇಕಡ 3 ಅಷ್ಟೇ. ನನಗನ್ನಿಸುತ್ತದೆ ಇದೆಲ್ಲ ಪರಿಸ್ಥಿತಿ ನೋಡಿದಾಗ 91-92ರಲ್ಲಿ ಇದು 13.41 ಪರ್ಸೆಂಟಾಗಿತ್ತು 90-91ರಲ್ಲಿ 8.97 ಆಗಿತ್ತು. 84-85ಕ್ಕೆ ಹಿಂದಕ್ಕೆ ಹೋದರೆ 11.18 ಪರ್ಸೆಂಟ್, 83-84ರಲ್ಲಿ 27 ಪರ್ಸೆಂಟ್ ಹೋಗಿದೆ. ಏಕಾಂತಯ್ಯನವರೇ, 83-84 ತಮ್ಮ ವರ್ಷವೇ. 82-83 ನನ್ನ ವರ್ಷ. 84-85 11 ಪರ್ಸೆಂಟಾಗಿತ್ತು, ಇದು ಸುಮ್ಮನೆ ಅಕೆಡೆಮಿಕ್ ಡಿಸ್ಕಷನ್ ಅಷ್ಟೆ. ಪರಿಸ್ಥಿತಿ ಯಾವ ರೀತಿ ಹೋಗಿದೆ ಎಂಬುದಕ್ಕೆ ಉದಾಹರಣೆ ಹೇಳಿದೆನೆ ಹೊರತು ಸಮರ್ಥನೆಗಲ್ಲ. ಒಂದು ನಿದರ್ಶನ ಯಾವ ತರಹ ಪರ್ಸೆಂಟೇಜ್ ಒಂದು ಒರಿಜಿನಲ್ ಬಜೆಟಿಗೆ, ಇದು 3 ಪರ್ಸೆಂಟು, ಸಪ್ಪೋಸ್ ನಾನು ಇನ್ನೂ 2 ಪರ್ಸೆಂಟ್ ಮೇಲಕ್ಕೆ ಹೋದರೆ ಅದು 5 ಪರ್ಸೆಂಟ್ ಬಹಳ ಜಾಸ್ತಿಯಾಗುತ್ತದೆ.

ಶ್ರೀ ಎಚ್. ಏಕಾಂತಯ್ಯ : ಸ್ವಾಮಿ ನೀವು 15 ಪರ್ಸೆಂಟಿಗೆ ಹೋಗಿ ನಾವು ಬೇಡ ಅನ್ನುವುದಿಲ್ಲ ಆದರೆ ಅದರ ಅವಶ್ಯಕತೆ ಇದ್ದಾಗ ಮಾಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ : ಕರೆಕ್ಟ್, ಅದು ಡೀಟೆಲಿನ ವಿಷಯ, ಅದಕ್ಕೆ ನಾನು ಬರುತ್ತೇನೆ. ಒಟ್ಟು ಈ ಪೂರಕ ಬೇಡಿಕೆಗಳು ಎಷ್ಟು ಕೇಳಿದ್ದುದು ಎಂದರೆ 131.93 ಕೋಟಿ ಅದರಲ್ಲಿ ಕೇಂದ್ರದ ಸಹಾಯ ಬರುತ್ತದೆ 49.43 ಕೋಟಿ ಅದನ್ನು ಮೈನಸ್ ಮಾಡಬೇಕು. ನಮಗೆ ಬರಬೇಕಾದದ್ದು ಅಜೆಸ್ಟ್‌ಮೆಂಟ್ ಮಾಡಬೇಕಾದದ್ದು 8.63 ಕೋಟಿ ಆಮೇಲೆ ನಮಗೆ ನೆಟ್ ಔಟ್‌ಗೋ ಫ್ರಂ ದಿ ಕ್ಯಾಷ್ ಎಷ್ಟೆಂದರೆ 73.71 ಕೋಟಿ 131.93 ಕೋಟಿಯಲ್ಲ. ಅದೆಲ್ಲ ಬುಕ್ ಅಜೆಸ್ಟ್‌ಮೆಂಟ್ ಬರುವುದು ಅದನ್ನು ಹಾಕಿದ್ದೇವೆ. ಇದರಲ್ಲಿ ಯೋಜನೆಗೆ ಸಂಬಂಧಿಸಿದ್ದುದು 131.93 ಕೋಟಿಯಲ್ಲಿ 78.84 ಕೋಟಿ. ಯೋಜನೇತರ 52.09 ಕೋಟಿ ಆದರೆ ಇದರಲ್ಲಿ 78.89 ಕ್ರೋರ್ಸ್‌ನಲ್ಲಿ ಬ್ರೇಕ್ ಅಪ್ ಯೋಜನೆ ಮತ್ತು ಯೋಜನೇತರ.

ಅದರಲ್ಲಿ ಯೋಜನೆ 22.20ಕೋಟಿ ರೂಪಾಯಿ. ನಾನ್ ಪ್ಲಾನ್ ಯೋಜನೇತರ 51.67 ಕೋಟಿ ರೂಪಾಯಿ. ಇವು ಇರತಕ್ಕಂಥ ವಿವರಗಳು. ಈಗ ಬಹಳ ದೊಡ್ಡ ಮೊತ್ತ ಎಲ್ಲಿ ಹೋಗಿದೆ? ಏನು ಒಂದು ಕ್ಯಾಷ್ ಅಥವಾ ಔಟ್‌ಗೋ ನಲ್ಲಿ ಈ ಮೇಜರ್ ಅಮೌಂಟ್ ಅದು ಮುಖ್ಯ ನಮಗೆ. ಏಕೆಂದರೆ ಬೇರೆ ಚಿಲ್ಲರೆ ತೆಗೆದು ನಾವು ಹೈಲೈಟ್ ಮಾಡುವುದಕ್ಕಿಂತಲೂ ಪ್ರಮುಖವಾದಂಥ ಬಾಬೂ ಎಲ್ಲಿಗೆ ಹೋಗಿದೆ. ಇದು ಬಹಳ ಪ್ರಾಮುಖ್ಯ. ಈ ಪ್ರವಾಹ ಪೀಡಿತ ಪ್ರದೇಶಕ್ಕೆ ಪರಿಹಾರ ಕೊಡುವುದಕ್ಕೆ 15 ಕೋಟಿ ರೂಪಾಯಿ ಹೋಗಿದೆ. ಅಯೋಧ್ಯೆ ಅದರ ಪರಿಣಾಮವಾಗಿ ಏನು ದೊಂಬಿಯಾಯಿತು, ಕ್ಷೋಭೆಯಾಯಿತು. ಅದಕ್ಕೆ ಐದು ಕೋಟಿ ರೂಪಾಯಿ ಹೋಗಿದೆ. ಇನ್ನು ಪ್ರೊಡಕ್ಷನ್ ಇನ್‌ಸೆಂಟೀವ್ ಸ್ಕೀಮ್ ರೈತರಿಗೆ ಅದಕ್ಕೆ 19.89 ಕೋಟಿ ಹೋಗಿದೆ. ಫರ್ಟಿಲೈಸರ್ಸ್ ಇದು

ರೈತರಿಗೆ ಸಂಬಂಧಪಟ್ಟಿದ್ದು 17.53 ಕೋಟಿ ಹೋಗಿದೆ. ಆಮೇಲೆ ಸ್ಪೆಷಲ್ ಪ್ರೋಗ್ರಾಮ್ ಆಫ್ ಅಸಿಸ್ಟೆನ್ಸ್ ಸ್ಮಾಲ್ ಅಂಡ್ ಮಾರ್ಜಿನಲ್ ಇದು ರೈತರಿಗೆ ಸಂಬಂಧಪಟ್ಟಿರತಕ್ಕಂಥದ್ದು ಅದು 15.70 ಕೋಟಿ ಹೋಗಿದೆ. ಸೆಂಟ್ರಲ್ ಫಾರ್ ಷೆಡ್ಯೂಲ್ಡ್ ಕ್ಯಾಸ್ಟ್ ಪರಿಶಿಷ್ಟ ವರ್ಗದವರಿಗೆ ಅದು 12.18 ಕೋಟಿ ಹೋಗಿದೆ. ಸಬ್ಸಿಡಿ ಪಾರ್ ಸ್ಯಾರೀಸ್ ಅಂಡ್ ಧೋತೀಸ್ ಅದೂ ಕೂಡ ಬಡವರಿಗೆ ದುರ್ಬಲದವರಿಗೆ ಅನ್ವಯವಾಗುವಂಥ ಕಾರ್ಯಕ್ರಮ, ಅದಕ್ಕೆ ಐದು ಕೋಟಿ ರೂಪಾಯಿ ಹೋಗಿದೆ. ಅಂದರೆ 131.93 ಕೋಟಿ ರೂಪಾಯಿಯಲ್ಲಿ ಮೇಜರ್ ಅಮೌಂಟ್ ಅತಿ ದೊಡ್ಡ ಅಮೌಂಟ್ ಎಲ್ಲಿಗೆ ಹೋಗಿದೆ ಎಂದು ಹೇಳಿದರೆ ಅದು ಎಷ್ಟು ಎಂದು ಹೇಳಿದರೆ 90.30 ಕೋಟಿ ರೂಪಾಯಿ. ಇದಿಷ್ಟೂ ಹಣ ಕೂಡ ಅದೇನು ಬೇರೆ ದಾರಿಗೆ ಹೋಗಿಲ್ಲ, ಇನ್ ಎವಿಟೆಬಲ್ ಎಕ್ಸ್‌ಪೆನ್ಸಸ್ ಮತ್ತು ಅದು ಸರಿಯಾದ ದಾರಿಗೆ ಹೋಗಿದೆ. ಬಹುಶಃ ಯಾರೂ ಅದರ ಬಗ್ಗೆ ವಾದ ಮಾಡುವ ಹಾಗೆ ಇಲ್ಲ ಎಂದು ಹೇಳಿ ನಾನು ಒಪ್ಪುತ್ತೇನೆ. Let us narrow down the difference between you and me.

ಸುಮಾರು 40 ಕೋಟಿ ರೂಪಾಯಿ ಈಗ ನಾನು ನಿಮಗೆ ಎಕ್ಸ್‌ಪ್ಲನೇಷನನ್ನು ಕೊಡಬೇಕು. ಉಳಿದದ್ದಕ್ಕೆ ಅದಕ್ಕೆ ನಾವ್ಯಾರು ಚರ್ಚೆ ಮಾಡುವ ಹಾಗೆಯೇ ಇಲ್ಲ. ಅದನ್ನು ಚರ್ಚೆಯಿಂದ ಹೊರಗಿಡೋಣ. ಉಳಿದದ್ದೆಷ್ಟ ಎಂದರೆ ಸುಮಾರು 40 ಕೋಟಿ ರೂಪಾಯಿ. ಇದಕ್ಕೆ ಚರ್ಚೆ ಮಾಡೋಣ.

ಶ್ರೀ ಶಿವಾನಂದ ಎಚ್. ಕೌಜಲಗಿ : ಇಷ್ಟು ಮೊದಲೇ ಹೇಳಿದ್ದರೆ ನಾವು ಒಪ್ಪಿಬಿಡುತ್ತಿದ್ದೆವು. ಸುಮ್ಮನೆ ಏತಕ್ಕೆ ತ್ರಾಸ್ ತೆಗೆದುಕೊಳ್ಳುತ್ತೀರಿ?

ಶ್ರೀ ಹೆಚ್. ಏಕಾಂತಯ್ಯ : ನಮ್ಮದು, ಮುಖ್ಯವಾದಂಥ ಆಕ್ಷೇಪ ಏನೆಂದರೆ....

ಶ್ರೀ ಎಂ. ವೀರಪ್ಪ ಮೊಯಿಲಿ : ಅದಕ್ಕೆಲ್ಲಾ ಪೂರ್ತಿ ಪಟ್ಟಿ ಇದೆ. ತಾವೇನು ಮಾತನಾಡಿದ್ದೀರಿ, ಅದಕ್ಕೆಲ್ಲಾ ಉತ್ತರ ಕೊಡುತ್ತೇನೆ.

ಶ್ರೀ ಹೆಚ್, ಏಕಾಂತಯ್ಯ : ಉತ್ತರ ಬರಲಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ : ಬರುತ್ತಿದ್ದೇನೆ. ಮೊದಲು ಇಷ್ಟು ಹೇಳೋಣ. ತಾವು ವಕೀಲರು ಇದ್ದೀರಿ, ನಾವು ವಕೀಲರು ಇದ್ದೇವೆ. ನಾನ್ ಇಸ್ಯೂ ಎಲ್ಲಿದೆ, ಅದನ್ನು ಒಂದು ಕಡೆ ಇಡೋಣ. 40 ಕೋಟಿ ರೂಪಾಯಿಗೆ ನಾನು ಎಕ್ಸ್‌ಪ್ಲನೇಷನ್ ಕೊಡಬೇಕು.

ಶ್ರೀ ವೈ.ಕೆ. ರಾಮಯ್ಯ : ಮುಖ್ಯ ಮಂತ್ರಿಗಳಲ್ಲಿ ನಮ್ಮ ದೊಡ್ಡ ತಕರಾರು ಯಾವುದೆಂದರೆ ಎಷ್ಟು ಖರ್ಚು ಮಾಡುತ್ತೀರಿ ಎಂದು ನಾವ್ಯಾರೂ ತಕರಾರು ಮಾಡುತ್ತಿಲ್ಲ, ಯಾವುದಕ್ಕೆ ಖರ್ಚು ಮಾಡುತ್ತಿದ್ದೀರಿ ಎನ್ನುವುದಕ್ಕೆ ನಮ್ಮ ತಕರಾರು.

ಶ್ರೀ ಎಂ. ವೀರಪ್ಪ ಮೊಯ್ಲಿ : ಅದನ್ನೇ ಈಗ ಹೇಳಿದೆ. ಯಾವುದಕ್ಕೆ ಖರ್ಚು ಮಾಡಿದ್ದೇನೆ, ಅಯೋಧ್ಯೆ ರಾಯಿಟ್ ಆಗುತ್ತದೆ ಎಂದು ಹೇಳಿ ಯಾರಾದರೂ ಗ್ರಹಿಸಿದ್ದರಾ? ನಾವಂತೂ ಗ್ರಹಿಸಿರಲಿಲ್ಲ, ಯಡಿಯೂರಪ್ಪನವರು ಗ್ರಹಿಸಿದ್ದರೋ ಏನೋ ಗೊತ್ತಿಲ್ಲ, ಲೆಕ್ಕಾಚಾರ ಹಾಕಿದ್ದರೋ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರು ಸುಮ್ಮನೆ ಗಂಭೀರವಾಗಿ ಕುಳಿತಿದ್ದಾರೆ. ನೀವು ಅವರನ್ನು ಕೆಣಕುತ್ತಿದ್ದೀರಿ. ಏನೋ ಶಾಂತವಾಗಿ ಕುಳಿತಿದ್ದಾರೆ. ಏನಾಗಬೇಕು ಎಂದು ಮಾಡಿದ್ದೀರಿ ನೀವು.

ಶ್ರೀ ಹೆಚ್. ಏಕಾಂತಯ್ಯ : ಇಲ್ಲಿ ಮುಖ್ಯವಾದಂಥ ಆಕ್ಷೇಪ ನಾವು ಏನು ಮಾಡಿದ್ದೇವೆ ನೀವು ಹೇಳಿದಂಥ ಕೆಲವು ವಿಚಾರಗಳಲ್ಲಿ ನಮ್ಮದೇನೂ ಅಭ್ಯಂತರವಿರಲಿಲ್ಲ, ಆದರೆ ನಮ್ಮ ಮುಖ್ಯವಾದ ಆಕ್ಷೇಪ ಏನೆಂದರೆ ಸಾದಿಲ್ವಾರು ನಿಧಿಯಿಂದ ಹ್ಯಾಂಡ್ ಲೂಂ ಡೆವಲಪ್ ಮೆಂಟ್ ಕಾರ್ಪೊರೇಷನ್ ಎನ್ನತಕ್ಕಂಥ ಮಾತನ್ನು ಹೇಳಿದಿರಿ, 1991-92ರಲ್ಲಿ ಏನು ತಾವು ಖರ್ಚು ಮಾಡಿದಿರಿ, ಆ ಹಣವನ್ನು ಈಪೂರಕ ಅಂದಾಜುಗಳಲ್ಲಿ ಸೇರಿಸಿ ತಾವು ಪಡೆಯುವುದಕ್ಕೆ ಅವಕಾಶ ಇದೆಯೇ? ಇಲ್ಲ, ಅದರ ಬಗ್ಗೆ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಹೇಳುತ್ತೇನೆ, ಈಗ ಎಲ್ಲಿ ಮೇಜರ್ ಕಾಂಟ್ರವರ್ಸಿ ಅದು ಆಯಿತಲ್ಲಾ, ನಾನು ಎಷ್ಟು ಎಂದು ಹೇಳಿ 40 ಕೋಟಿ ರೂಪಾಯಿಗೆ ಬಂದುಬಿಡುತ್ತೇನೆ. ತಾವೂ ಆಮೇಲೆ ತಮ್ಮ ಪಾಯಿಂಟ್‌ಗೆ ತಾವು ಏನೇನು ವಿಚಾರವನ್ನು ಎತ್ತಿದ್ದೀರಿ, ಅದಕ್ಕೆ ಒಂದೊಂದೇ ಬರುತ್ತೇನೆ. ಮುಖ್ಯ ವಿವಾದಸ್ಪದವಾದಂಥ ತಾವು ಚರ್ಚೆ ಮಾಡಿದಂಥದ್ದು ಒಟ್ಟು ಸಾರಾಂಶ ಇಷ್ಟು. 40 ಕೋಟಿ ರೂಪಾಯಿ ಬಗ್ಗೆ ಒಂದು ಸಾರಾಂಶ ಇಷ್ಟು ಎಂದು ಹೇಳಿದರೆ 50 ಲಕ್ಷ ರೂಪಾಯಿಗಳನ್ನು ಸಾಯಿಬಾಬಾ ಟ್ರಸ್ಟ್‌ಗೆ ಅದನ್ನು ಕೊಟ್ಟಿದ್ದೇವೆ ಎಂದು ಹೇಳಿ. ಅದು ಒಂದು ವಿಚಾರ. ಏಕೆಂದರೆ ಬಹುಶಃ ಈ ದೇಶದಲ್ಲಿ ನಾವು ವರ್ತಮಾನ ತಿಳಿದುಕೊಂಡ ಹಾಗೆ ದೇಶದಲ್ಲಿ ಅಂಥ ಒಂದು ದೊಡ್ಡ ಆಸ್ಪತ್ರೆ, ಸುಸಜ್ಜಿತವಾದಂಥದ್ದು ಅದು ಎಲ್ಲಯೂ ಇಲ್ಲ ಎಂದು ಎಲ್ಲರಿಗೂ ತಿಳಿದಂಥ ಮಾತು.

ಅದಕ್ಕೆ ನಮ್ಮ ಕಿಂಚಿತ್ ಸೇವೆ ಎಂದು 50 ಲಕ್ಷ ರೂಪಾಯಿ ಕೊಟ್ಟರೆ ಅದೊಂದು ವಾದದ ವಸ್ತು ಆಗುತ್ತದೆಯೇ ಇಲ್ಲವೋ ಅದು ತಮಗೆ ಬಿಟ್ಟಿದ್ದುದು.

ಶ್ರೀ ಹೆಚ್. ಏಕಾಂತಯ್ಯ : ತಾವು ತಪ್ಪು ತಿಳಿದುಕೊಂಡಿದ್ದೀರಿ. 50 ಲಕ್ಷ ರೂಪಾಯಿಗಳನ್ನು ಕೊಟ್ಟ ವಿಚಾರ ಬೇರೆ. ಆದರೆ 50 ಲಕ್ಷ ರೂಪಾಯಿಗಳನ್ನು ಕೊಟ್ಟಂತಹ ರೀತಿಯಿದೆಯಲ್ಲಾ ಅದು ಸರಿಯಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಣಿಪಾಲ್ ಆಸ್ಪತ್ರೆಗೂ ಕೊಡಿ, ವಾರ್ಡ್ ಆಸ್ಪತ್ರೆಗೂ ಕೊಡಿ, ಮಲ್ಯ ಆಸ್ಪತ್ರೆಗೂ ಕೊಡಿ, ಅವೆಲ್ಲಾ ಒಳ್ಳೆಯ ಆಸ್ಪತ್ರೆಗಳು. ವಿಜಯ ಮಲ್ಯ ಆಸ್ಪತ್ರೆಗೆ ಕೊಡಿ. ಪುಟ್ಟಪರ್ತಿಗೆ ಹೋಗಿ ಕೊಡುವುದು ಏಕೆ?

ಉಪಾಧ್ಯಕ್ಷರು : ಅಲ್ಲಿ ಎಲ್ಲಾ ಟ್ರೀಟ್‌ಮೆಂಟ್ ಇದೆ. ಇನ್‌ಕ್ಲೂಡಿಂಗ್ ಹಾರ್ಟ್ ಅಪರೇಷನ್ಸ್, ಎಲ್ಲಾ ಫ್ರೀ ಕೊಡುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕಾಗದ ಬರೆದು ಕಳಿಸಿದ್ದಾರೆ. ಜಯದೇವ ಕಾರ್ಯಿಯಾಲಜಿ ಹೋಗಿ ಎಂದು, ಅದನ್ನು ತಮಗೆ ಕೊಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ನನ್ನ ಮುಖ್ಯವಾದಂತಹ ಆಕ್ಷೇಪ ಏನೆಂದರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನಿಮ್ಮ ವಾದಕ್ಕೆ ನಿಮ್ಮ ಅಕ್ಷೇಪಕ್ಕೂ ಬರುತ್ತಿದ್ದೇನೆ. ತಮ್ಮ ಅಕ್ಷೇಪಣೆಗಳನ್ನು ಮನಸ್ಸಿನಲ್ಲಿ ಗ್ರಹಿಸಿಕೊಂಡೇ / ನನ್ನ ವಾದ ತಾವು ಸ್ವಲ್ಪ ಕಾಯಬೇಕು, ಹೇಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಎಲ್ಲಾ ಆದ ಮೇಲೆ?

ಶ್ರೀ ಎಂ. ವೀರಪ್ಪಮೊಯಿಲಿ : ಈಗ 50 ಲಕ್ಷ ರೂಪಾಯಿ ಬಿಟ್ಟು ಬಿಡಿ ಅದು ಒಪ್ಪಿದ ಹಾಗೆ ಆಯಿತು.

ಶ್ರೀ ಎಚ್.ಏಕಾಂತಯ್ಯ : ಒಪ್ಪಲಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ಒಪ್ಪಲಿಲ್ಲವೇ?

ಶ್ರೀ ಜೆ.ಸಿ. ಮಾಧುಸ್ವಾಮಿ : ಯಾರನ್ನೋ ಒಲೈಸುವುದಕ್ಕೆ ಕೊಟ್ಟಂತಹ ಮದ್ದು ಅದು. ಸರ್ವೀಸ್‌ಗೆ ಅಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ವಿವಾದದ ವಸ್ತು ಅಲ್ಲ ಎಂದು ಹೇಳಿಬಿಡಿ. ಒಪ್ಪುವುದು ಬೇಡ. ಅದೊಂದು ವಿವಾದದ ವಸ್ತು ಅಲ್ಲ ಎಂದು ಹೇಳಿ.

ಶ್ರೀ ವೈ.ಕೆ. ರಾಮಯ್ಯ : ಆಶೀರ್ವಾದಕ್ಕಾಗಿ ಕೊಟ್ಟಂತಹ ಹಣ.

ಶ್ರೀ ಎಚ್. ಏಕಾಂತಯ್ಯ : ನಮ್ಮ ಊರಿನಲ್ಲಿ ಇರತಕ್ಕಂಥ ಜಿಲ್ಲಾ ಆಸ್ಪತ್ರೆಯಲ್ಲಿ ಬ್ಯಾಂಡೇಜ್ ಇಲ್ಲ. ಅಲ್ಲಿ ಕೊಟ್ಟಿದ್ದರೆ ನಾವು ಅದನ್ನು ಒಪ್ಪಬಹುದಿತ್ತು. ಇಲ್ಲಿಯವರೆಗೆ ಬಿಟ್ಟು ಅಲ್ಲಿ ಹೋಗಿ ಕೊಟ್ಟಿದ್ದೀರಲ್ಲ ಅಲ್ಲಿ ತಾವು ಏನು ಸ್ಥಾಪನೆ ಮಾಡಿದ್ದೀರಿ ಸ್ವಾಮಿ.

ಶ್ರೀ ವೈ.ಕೆ. ರಾಮಯ್ಯ : ಆಶೀರ್ವಾದಕ್ಕಾಗಿ ಕೊಟ್ಟಂತಹ ದಕ್ಷಿಣೆ ಎಂದು ಜನ ಮಾತನಾಡುತ್ತಿದ್ದಾರೆ ಸ್ವಾಮಿ.

ಶ್ರೀ ಆರ್.ವಿ. ದೇಶಪಾಂಡೆ : ಆಶೀರ್ವಾದ ಮೊಯಿಲಿಗೆ ಆಯಿತು. ಯಾರಿಗೆ ಆಗಬೇಕಿತ್ತೋ ಅವರಿಗೆ ಆಗಲಿಲ್ಲ. ಅದು ನಿಮಗೆ ಆಯಿತು

ಶ್ರೀ ಎಂ. ವೀರಪ್ಪ ಮೊಯಿಲಿ : ನನಗೆ ಮಾತ್ರ ಅಲ್ಲ. ಇಡೀ ಕರ್ನಾಟಕದ ಜನರಿಗೆ ಆಶೀರ್ವಾದ ಬಂತು ಎಂದು ಏಕೆ ಹೇಳಬಾರದು? ಅದನ್ನು ಹಾಗೆ ತೆಗೆದುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ರೀತಿಯಲ್ಲಿ ಅದು ಸರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಒಳ್ಳೆಯ ಸ್ಥಳಕ್ಕೆ ಹಣ ಕೊಟ್ಟರೆ ಅದರಿಂದ ಒಳ್ಳೆಯ ಆಶೀರ್ವಾದ ಬರುತ್ತದೆ. ಅದು ಜನರಿಗೆ ಕಲ್ಯಾಣ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಒಂದೊಂದು ಆಶೀರ್ವಾದ ಒಂದೊಂದು ರೇಟ್ ಇರುತ್ತದೆ. ಮುಖ್ಯಮಂತ್ರಿಯಾದರೆ ಎಷ್ಟು, ಮಂತ್ರಿಯಾದರೆ ಎಷ್ಟು ಎಂದು ಇರುತ್ತದೆಯೇ? ಆ ರೇಟ್ ಎಷ್ಟೆಷ್ಟು ಎಂದು ಹೇಳಿದರೆ, ಆ ತರಹ ನಾವು ತೀರ್ಮಾನ ತೆಗೆದುಕೊಳ್ಳೋಣ, ಶಾಸಕರಾಗಬೇಕಾದರೆ ಎಷ್ಟು ಎಂದು. ಮಂತ್ರಿ ಆಗಬೇಕಾದರೆ ಎಷ್ಟು ಮುಖ್ಯಮಂತ್ರಿ ಆಗಬೇಕಾದರೆ ಎಷ್ಟು ಎಂದು.

ಶ್ರೀ ಆರ್.ವಿ. ದೇಶಪಾಂಡೆ : ಯಾರಿಗೆ ಆಶೀರ್ವಾದ ಆಗಬೇಕಾಗಿತ್ತೋ ಅವರಿಗೆ ಆಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ದೇಶಪಾಂಡೆಯವರೆ, ಚಪಾದ ಕಾಣಿಕೆ ಕೊಡಬೇಕಾದರೆ ಇವರು ೫೦ ಲಕ್ಷ ರೂಪಾಯಿ ಕೊಟ್ಟರು. ನನ್ನದು ತಕರಾರು ಇಲ್ಲ. ಕೊಟ್ಟಾಗ ಈಗ ನಮ್ಮ ಏಕಾಂತಯ್ಯನವರು ಹೇಳಿದರೆ, ಆಶೀರ್ವಾದ ನಿಮಗೆ ಆಯಿತು ಎಂದು. ಆ ರೇಟ್ ಎಷ್ಟು. ಮುಖ್ಯಮಂತ್ರಿಗಳಿಗೆ ಒಂದು ಆಶೀರ್ವಾದ ೫೦ ಲಕ್ಷ ರೂಪಾಯಿ ಮಂತ್ರಿ ಆಗಬೇಕಾದರೆ ಎಷ್ಟು, ಶಾಸಕರಾಗಬೇಕಾದರೆ ಎಷ್ಟು ಹೇಳಿ. ಸ್ವಲ್ಪ ರೇಟ್ ಇದ್ದರೆ ನಾವು ಹೋಗಲು ಒಂದು ತೀರ್ಮಾನ ತೆಗೆದುಕೊಳ್ಳೋಣ. ಇಂತಹ ಒಂದು ತೀರ್ಮಾನಕ್ಕೆ ಬಂದು ಬಿಡೋಣ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮೊಯಿಲಿಯವರೆ, ತಾವು ಹೇಳಿದಿರಲ್ಲ, ಬಹಳ ಸಂತೋಷ. ಎಲ್ಲರಿಗೂ ಆಶೀರ್ವಾದ ಆಗಲಿ. ಪ್ರಶ್ನೆ ಏನು ಎಂದರೆ ಯಾರು ತನಗೆ ಆಶೀರ್ವಾದ ಆಗಬೇಕು ಎಂದು ಹಣ ಕೊಟ್ಟಿರಲ್ಲ ಅವರಿಗೆ ಆಗಲಿಲ್ಲ, ಅದು ನಿಮಗೆ ಹೇಗೆ ಆಯಿತು? ಅದನ್ನು ಸ್ವಲ್ಪ ತಾವು ಹೇಳಿ, ಆ ಸಿಕ್ರೆಟ್ ನಮಗೆ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ವಿಷಯ ಇಷ್ಟೇ. ಆ ಹಣಸಕ್ಕೋಸ್ಕರ ಬೊಕ್ಕಸದಿಂದ ಕೊಟ್ಟಿದುದ್ದು. ವೈಯಕ್ತಿಕವಾಗಿ ಕೊಟ್ಟಿದುದ್ದು ಅಲ್ಲ. ಸರ್ಕಾರ ಕೊಟ್ಟಾಗ ಅದು ಇಡೀ ರಾಜ್ಯದ ಜನರ ಪರವಾಗಿ ಕೊಟ್ಟಿರತಕ್ಕ ಹಣ. ರಾಜ್ಯದ ಕಲ್ಯಾಣ ಆಗುತ್ತದೆ. ಏಕೆ ಆಗಬಾರದು? ಆಗಿದೆಯೋ ಇಲ್ಲವೋ ಆತರ್ಕ ನೀವು ಮಾಡಬೇಕು. ಆಗಿದೆಯೋ ಇಲ್ಲವೋ ಹೇಳಿ.

ಶ್ರೀ ಹೆಚ್. ಏಕಾಂತಯ್ಯ : ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಆಗಿದೆಯಲ್ಲಾ, ಹಾಗಾದರೆ 50 ಲಕ್ಷ ರೂಪಾಯಿ ಬಗ್ಗೆ ವಾದ ಇಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಯಾರಿಗೆ ಕಲ್ಯಾಣ ಆಗಬೇಕಿತ್ತೋ ಅವರಿಗೆ ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಎರಡನೆಯ ಬಹಳ ವಿವಾದಾಸ್ಪದ 4 ದೊಡ್ಡ ಐಟಂ ಅದು 28 ಲಕ್ಷ ರೂಪಾಯಿ ರೈಲ್ವೆಗೆ ಕೊಟ್ಟಿದುದ್ದು. ಅದು ಹೊರಟು ಹೋಯಿತು. ಏಕೆಂದರೆ ಅದು ವಾಪಸ್ ಬರುತ್ತದೆ. ಆ 28 ಲಕ್ಷ ರೂಪಾಯಿ ಹೊರಟು ಹೋಯಿತು. ಅದು ದೊಡ್ಡ ವಿವಾದ ಅಲ್ಲ.

SRI Y.K. RAMAIAH : I have not raised the question of money. I have raised the question of propriety.

ಶ್ರೀ ಎಂ. ವೀರಪ್ಪ ಮೊಯಿಲಿ : ಅದನ್ನು ನೀವು ಹೇಳಿದ್ದೀರಿ.

SRI Y.K. RAMAIAH : I have asked about the propriety and not about money.

ಇಂತಹ ತೀರ್ಮಾನ ತೆಗೆದುಕೊಂಡಿರುವ ಬಗ್ಗೆ ಅದನ್ನು ನೀವು ಸರಿ ಎಂದು ಒಪ್ಪಿಕೊಳ್ಳುತ್ತೀರಾ? ಈ ಹಣ ಸರ್ಕಾರದ ಬೊಕ್ಕಸದಿಂದ ಒಬ್ಬ ವ್ಯಕ್ತಿಯ ವರ್ಚಸ್ಸನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಒಬ್ಬ ವ್ಯಕ್ತಿಯ ಪ್ರತಿಷ್ಠೆ ಪ್ರದರ್ಶನಕ್ಕಾಗಿ ಈ ಹಣ ಖರ್ಚು ಮಾಡಲಾಗಿದೆ. ಇಂಥ ತೀರ್ಮಾನ ತೆಗೆದುಕೊಂಡಾಗ ನಿಮ್ಮ ಪಕ್ಷದ ಸರ್ಕಾರ ಇತ್ತು. ನೀವು ನಾಯಕರಾಗಿರಲಿಲ್ಲ, ಬೇರೆಯವರು ನಾಯಕರಾಗಿದ್ದರು. ಎಂದರೆ ನಿಮ್ಮ ಪ್ರಕಾರ ಇದು ಸರೀಯೇ?

ಶ್ರೀ ಎಂ. ವೀರಪ್ಪ ಮೊಯಿಲಿ : ನಿಮ್ಮ ವಾದಕ್ಕೆ ಪುಷ್ಟಿ ಸಿಕ್ಕಿತಲ್ಲ. ಈ ಹಣ ಯಾರಿಂದ ಬಂತು ಎಂದು.

ಶ್ರೀ ವೈ.ಕೆ. ರಾಮಯ್ಯ : ಈ ತೀರ್ಮಾನ ಸರೀಯೆ? ನಾನು ಮಾನ್ಯ ಅಧ್ಯಕ್ಷಣಿಯವರ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸರ್ಕಾರ ತೆಗೆದುಕೊಂಡಿರತಕ್ಕ ತೀರ್ಮಾನದ ಪ್ರಕಾರ ಆ ಹಣ ಖರ್ಚು ಮಾಡಿರುವುದನ್ನು ನೀವು ಸಬ್ಸ್ಟಾನ್ಷಿಯೇಟ್ ಮಾಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಅದು ಹೈಕೋರ್ಟಿನಲ್ಲಿದೆ. ಆ ಬಗ್ಗೆ ಅಲ್ಲಿ ವಾದ ಇದೆ. ಅದನ್ನು ಅಲ್ಲಿ ನೋಡೋಣ. ಇನ್ನು ಸುಮಾರು 3 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು. ಅದು ಶಿವಮೊಗ್ಗ ಭದ್ರಾವತಿ ಮುನ್ಸಿಪಲ್ ಕಾರ್ಪೊರೇಷನ್ ಹೊಸದಾಗಿ ಪ್ರಾರಂಭ ಆಗಿರುವುದು, ಅಲ್ಲಿಗೆ ಮೂರು ಕೋಟಿ ರೂಪಾಯಿ ಕೊಟ್ಟಿದ್ದೇವೆ. ಅದನ್ನು ನಾವು ಕೊಡಲೇ ಬೇಕಾಗಿತ್ತು. ನಾವು ಒಂದು ಕೋಟಿ ರೂಪಾಯಿ ಆಗಲೇ ಕೇಳಿದ್ದೆವು. ಇದರ ಬಗ್ಗೆ ಮೂರು ಕೋಟಿ ರೂಪಾಯಿ ಕೊಟ್ಟಿದ್ದೀರಿ ಎಂದು ಮಾನ್ಯ ಈಶ್ವರಪ್ಪನವರು ಹೇಳಿದರು. ಇದರ ಬಗ್ಗೆ ನಾವು ಹೆಚ್ಚು ಮಾತನಾಡಿದರೆ, ಅದು ಹಕ್ಕು ಚ್ಯುತಿ ಆಗುತ್ತದೆ. ಮಾನ್ಯ ಈಶ್ವರಪ್ಪನವರ ಕ್ಷೇತ್ರ, ಇದರ ಬಗ್ಗೆ ನಾವು ಚರ್ಚೆ ಮಾಡುವುದಕ್ಕೆ ತೆಗೆದುಕೊಂಡರೆ ಈಶ್ವರಪ್ಪನವರಿಗೆ ಖಂಡಿತವಾಗಿ ಸಿಟ್ಟು ಬರುತ್ತದೆ. ಆದ್ದರಿಂದ ಇದರ ಬಗ್ಗೆ ವಾದ ಮಾಡುವುದು ಬೇಡ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕಾರ್ಪೊರೇಷನ್‌ಗೆ ಕೊಟ್ಟಿದ್ದುದು ಏಕೆ ಎಂಬ ಬಗ್ಗೆ ತೊಂದರೆ ಇಲ್ಲ, ಆದರೆ ಬೇರೆ ಕಡೆ ಏಕೆ ಕೊಡಲಿಲ್ಲ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಮೂರು ಕೋಟಿ ರೂಪಾಯಿ ಕೊಟ್ಟಿದ್ದೀರಲ್ಲ, ಇಡೀ ಅರ್ಬನ್ ಡೆವಲಪ್ಮೆಂಟ್ ಡಿಪಾರ್ಟ್ಮೆಂಟಿಗೆ. ಮುನಿಸಿಪಾಲಿಟಿ, ಸಿಟಿ ಮುನಿಸಿಪಾಲಿಟಿ ಕಾರ್ಪೊರೇಷನ್ಗೆ ಡೆವಲಪ್ಮೆಂಟ್ ಗ್ರಾಂಟ್ ಪ್ರಾವಿಜನ್ ಇತ್ತಲ್ಲ, ಒಂದೂವರೆ ಕೋಟಿ ರೂಪಾಯಿ ಅಷ್ಟನ್ನು ಕೊಟ್ಟಿಲ್ಲ ಮಾನ್ಯ ಸಚಿವರೇ.

ಅಲ್ಲಿ ಪಗಾರ ಕೊಡಲಿಕ್ಕೆ ಹಣ ಇಲ್ಲ, ವಿದ್ಯುಚ್ಛಕ್ತಿ ಬಿಲ್ ಅನ್ನು ಕೊಡಲಿಕ್ಕೆ ಹಣ ಇಲ್ಲ, ಒಂದು ಕಾರ್ಪೊರೇಷನ್ಗೆ ನೀವು 3-3 ಕೋಟಿ ಕೊಡುತ್ತೇವೆಂದರೆ ಅದು ಯಾವ ಲೆಕ್ಕ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷಣಿಯವರು ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ನಾನು ಮುಖ್ಯಮಂತ್ರಿಯಾದ ಮೇಲೆ ಕೊಟ್ಟಿದ್ದಲ್ಲ ಮೊದಲು ಕೊಟ್ಟಿದ್ದಾರೆ. ಆದರೂ ತಾವು ಒಂದು ವಿಚಾರವನ್ನು ತಿಳಿದುಕೊಳ್ಳಬೇಕು.

ಅಂಕಿಅಂಶವನ್ನು ನೋಡಿದರೆ 90-91ರಲ್ಲಿ ಬರೀ 26 ಸಾವಿರ ಟನ್, 1991-92ಲ್ಲಿ 46 ಸಾವಿರ ಟನ್, 1992-93ರಲ್ಲಿ 70ಸಾವಿರ ಟನ್, 1993-94ಸಾಲಿಗೆ 1 ಲಕ್ಷ ಟನ್ ಆಗುತ್ತಿದೆ. ಸಕ್ಕರೆ ಕಾರ್ಖಾನೆ ಮೇಲಕ್ಕೆ ಬರುತ್ತಿದೆ. ಅಕ್ಯುಮಿಲೆಟ್ಗೆ ಲಾಸ್ ಇರಬಹುದು. ಆದರೆ ಅದು ಇಂಪ್ರೂವ್ ಆಗುತ್ತದೆಯೇ ಇಲ್ಲವೇ ಎನ್ನುವುದು ಇದೆ ಮತ್ತು ಇದು ಅಲ್ಲಿಯ ರೈತರ ಪ್ರಶ್ನೆ ಇದೆ. ಏಕೆಂದರೆ ಸಕ್ಕರೆ ಕಾರ್ಖಾನೆಗೆ ಕೊಟ್ಟರೆ ಅದು ಇಂಪ್ರೂವ್ ಆಗುದಿದ್ದರೆ ಹೇಗೆ? ಒಂದು ಸಕ್ಕರೆ ಕಾರ್ಖಾನೆ ಇದೆ, ಅದನ್ನು ಮುಚ್ಚಬೇಕೇ ಅಥವಾ ಅದನ್ನು ನಾವು ಅಭಿವೃದ್ಧಿ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆ ಇಷ್ಟು ಪ್ರಶ್ನೆ ಇರತಕ್ಕದ್ದು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಆ ರೀತಿ ಹಾನಿಯಲ್ಲಿರತಕ್ಕ ಎಲ್ಲಾ ಸಕ್ಕರೆ ಕಾರ್ಖಾನೆಗಳನ್ನು ಒಂದೇ ದೃಷ್ಟಿಯಿಂದ ನೋಡಿದರೆ ಸರಿ. ಮಲತಾಯಿ ಧೋರಣೆ ಮಾಡಿ, ಒಂದಕ್ಕೆ ಕೊಡುವುದು 'ಒಂದಕ್ಕೆ ಬಿಡುವುದು ಮಾಡುವುದು ಸರಿಯಲ್ಲ ಎನ್ನುವುದು ನನ್ನವಾದ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಪ್ರಶ್ನೆ ಪ್ರತ್ಯೇಕ. ಆದರೆ ಒಂದು ಸಕ್ಕರೆ ಕಾರ್ಖಾನೆ ಇವತ್ತು ಚೇತರಿಸಿಕೊಳ್ಳುವುದಕ್ಕೆ ಸಾಧ್ಯ ಇದ್ದರೆ ಅದು ಕೋ ಅಪರೇಟಿವ್ ಸೆಕ್ಟರ್ನಲ್ಲಿ ಇರುವುದು ಇದು ಖಾಸಗಿಯಾಗಿರತಕ್ಕಂಥ ಸಕ್ಕರೆ ಕಾರ್ಖಾನೆ ಅಲ್ಲ. ಏಕೆ ಆಗಲಿಲ್ಲ ಎಂದರೆ ವಾರಾಹಿ ನೀರಾವರಿ ಯೋಜನೆ, ಇದು ಜೊತೆಯಲ್ಲಿ ಬರಬೇಕೆಂದು ಯೋಜನೆ ಮಾಡಿ ಪ್ರಾರಂಭ ಮಾಡಿದ್ದುದು. ಅನೇಕ ಕಾರಣಗಳಿಂದ ಆಗಿಲ್ಲ ಅದಕ್ಕೆ ರಾಜಕೀಯ ಕಾರಣ ಎಂದು ಹೇಳುವುದಿಲ್ಲ. 1983-89ರವರೆಗೆ ಆ ನೀರಾವರಿ ಯೋಜನೆಯ ಬಗ್ಗೆ ನಾವು ನಿರ್ಣಯವನ್ನು ತೆಗೆದುಕೊಳ್ಳದೆ ಇದ್ದುದ್ದರಿಂದ ಸಕ್ಕರೆ ಕಾರ್ಖಾನೆ ಈ ಪರಿಸ್ಥಿತಿಗೆ ಬಂತು. ಆದ್ದರಿಂದ ವಾರಾಹಿ ನೀರಾವರಿ ಯೋಜನೆ ಮತ್ತು ಸಕ್ಕರೆ ಕಾರ್ಖಾನೆ ಜೊತೆಜೊತೆಯಲ್ಲಿ ಬರುತ್ತಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ. ಆದ್ದರಿಂದ ಈ ಸಕ್ಕರೆ ಕಾರ್ಖಾನೆಯನ್ನು ಕೊಟ್ಟಿದ್ದು ಅದು ರೈತರಿಗೆ ಪ್ರಯೋಜನವಾಗಿ ಆ ಕಡೆಯ ಜನ ಇವತ್ತು ಸಂತೋಷವಾಗಿದ್ದಾರೆ.

ಆ ಭಾಗದ ರೈತರಿಗೆ ಈ ಹಣವನ್ನು ಕೊಟ್ಟಿದ್ದರಿಂದ ಅವರು ಕ್ಷೇಮವಾಗಿದ್ದಾರೆ. ಇದು ತಮ್ಮಗೆ ಗೊತ್ತಿರಬೇಕು. ಹಣ ಇದೆ ಏತಕ್ಕೆ ಎತ್ತಿ ಕೊಟ್ಟಿರಿ, ಈ ಪ್ರಶ್ನೆ ಅಲ್ಲ, ಅದರೆ ಆ ಪ್ರದೇಶದ ರೈತರು ಇದರಿಂದ ಸಂತೋಷ ದಿಂದಿದ್ದು ನೆಮ್ಮದಿಯನ್ನು ಕೊಡಲಿಕ್ಕೆ ಸಾಧ್ಯ ಇದ್ದರೆ ಈ ಸದನ ಅದಕ್ಕೆ ಒಪ್ಪಿಗೆ ಕೊಡಬೇಕೇ ಹೊರತು ಈ ಸದನ ಇವತ್ತು ಟೀಕೆ ಮಾಡಿದರೆ ಆ ಜನರ ಮನಸ್ಸಿಗೆ ನೋವಾಗುತ್ತದೆ. ಇದು ಒಬ್ಬರ, ಇಬ್ಬರ ಪ್ರಶ್ನೆ ಅಲ್ಲ. ಯಾರ ಒಬ್ಬ ಪ್ರತಿಷ್ಠೆಯ ಪ್ರಶ್ನೆ ಅಲ್ಲ, ಒಟ್ಟು ಈ ಪರಿಸ್ಥಿತಿ ಇದೆ. ಮಾನ್ಯ ಏಕಾಂತಯ್ಯನವರ ಒಂದು ವಿಚಾರವನ್ನು ಮೆಚ್ಚಬೇಕು. ಏಕೆಂದರೆ ತಾವು ಇದನ್ನು ಯಾವಾಗಲೂ ಹೇಳುತ್ತಿದ್ದೀರಿ. corpus of the contingency fund ಅದನ್ನು ಏರಿಸಬಾರದು. ಅದನ್ನು ಏರಿಸಿದ ಕೂಡಲೆ indiscipline in the financial sector will get in. However, I can give a commitment on the floor of this house that so far as I remain in seat, I will not increase the corpus of the contingency fund. This I can give assurance. ಈಗ 80 ಕೋಟಿ ಮಾತ್ರ ಇದೆ. 500 ಕೋಟಿ ಅಲ್ಲ. It is not Rs. 500 crores.

ಶ್ರೀ ಹೆಚ್. ಏಕಾಂತಯ್ಯ : 80 ಕೋಟಿಯಿಂದ 200 ಕೋಟಿಗೆ ಹೋಗಿ, 200 ಕೋಟಿಯಿಂದ 500 ಕೋಟಿಯನ್ನು ಮುಟ್ಟಿ ಪುನಃ ವಾಪ್ಸು, 80 ಕೋಟಿ ರೂಪಾಯಿಗೆ ಬಂದಿದ್ದೀರಿ.

SRI M. VEERAPPA MOILY : Ceiling is not Rs. 500 crores. Ceiling, accordingg to Act is Rs. 80 crores. I will not increase the ceiling. I will confine to that assurance. Then only I am accountable to this House, otherwise, accountability will be only a myth.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ಡಿಸಿಪ್ಲಿನನ್ನು ಬಿಟ್ಟು ಹೋದವರಿಗೆ ತಾವು ಏನು ಮಾಡುತ್ತೀರಿ? ತಾವು ಫೈನಾನ್ಶಿಯಲ್ ಶಿಸ್ತನ್ನು ಇಡಬೇಕು, ಇಡುತ್ತೇವೆಂದು ಹೇಳಿದಿರಿ, ಈ ಶಿಸ್ತನ್ನು ಬಿಟ್ಟು ಹೋಗಿರುವುದಕ್ಕೆ ಏನು ಹೇಳುತ್ತೀರಿ?

ಈಗ ಹೆಚ್ಚು ರೆವೆನ್ಯೂ ಎಕ್ಸ್‌ಪೆಂಡಿಚರ್ ಆಗಿದೆ ಎನ್ನುವ ಒಂದು ವಾದ ಈ ಸದನದಲ್ಲಿ ಬಂದಿದೆ. ಒಟ್ಟು 131.93 ಕೋಟಿ ರೂಪಾಯಿಗಳಲ್ಲಿ ಸಪ್ಲಿಮೆಂಟ್ 111.84 ಕೋಟಿ ರೂಪಾಯಿಗಳನ್ನು ರೆವಿನ್ಯೂ ಎಕ್ಸ್‌ಪೆಂಡಿಚರ್ ಎಂದು ನಾವು ರಾಜಸ್ವ ಖಾತೆಯಲ್ಲಿ ಕ್ಲಾಸಿಫೈ ಮಾಡಿದ್ದೇವೆ. ಆದರೆ, ಯಾವುದಕ್ಕೆ ಎಕ್ಸ್‌ಪೆಂಡಿಚರ್ ಎಂದು ನಾವು ರಾಜಸ್ವ ಖಾತೆಯಲ್ಲಿ ಕ್ಲಾಸಿಫೈ ಮಾಡಿದ್ದೇವೆ. ಆದರೆ, ಯಾವುದಕ್ಕೆ ಎಕ್ಸ್‌ಪೆಂಡಿಚರ್ ಆಗಿದೆ ಎನ್ನುವುದು ಮುಖ್ಯ. ಕೆಲವು ಸಲ ರೆವಿನ್ಯೂ ಎಕ್ಸ್‌ಪೆಂಡಿಚರ್ ಸಂಬಳಕ್ಕೆ ಹೋಗಿದೆ, ಡಿ.ಎ.ಗೆ ಹೋಗಿದೆ, ಟಿ.ಎ.ಗೆ ಹೋಗಿದೆ ಎನ್ನತಕ್ಕಂಥಾದ್ದು ಮಾಮೂಲು ರೂಢಿಯ ಉತ್ತರವಾಗುತ್ತದೆ. ರೆವಿನ್ಯೂ ಎಕ್ಸ್‌ಪೆಂಡಿಚರ್ ಎಂದರೆ ಅದು ಬರೀ ಸಂಬಳಕ್ಕೆ, ಟಿ.ಎ.ಗೆ, ಡಿ.ಎ.ಗೆ ಮತ್ತು ಅನುತ್ಪಾದಕ ವ್ಯವಸ್ಥೆಗೆ ಇಷ್ಟಿಷ್ಟು ಹೋಗಿದೆಯೆಂದು ಸಾಮಾನ್ಯ ಜನರು ಆ ತೀರ್ಮಾನಕ್ಕೆ ಕೂಡಲೇ ಬಂದು ಬಿಡುತ್ತಾರೆ. ಆದರೆ, ಇದು ಸರಿಯಲ್ಲ, 111.84 ಕೋಟಿ ರೂಪಾಯಿಗಳು ನಿಜವಾಗಿ ಸಂಬಳಕ್ಕಾಗಲಿ, ಟಿ.ಎ.ಗಾಗಲಿ, ಡಿ.ಎ.ಗಾಗಲಿ ಖರ್ಚಾಗಿಲ್ಲ, ಇವುಗಳಿಗೆ ಖರ್ಚು ಮಾಡಿರುವಂಥಾದ್ದು ಬಹಳ ಕಡಿಮೆ ಹಣವಾಗಿದೆ. ಇದು ಕನಿಷ್ಠ ಅಂಶ. ಅಲ್ಲದೆ, ಕೇಂದ್ರ ಸರ್ಕಾರ ಏನು 49 ಕೋಟಿ ರೂಪಾಯಿಗಳನ್ನು ಕೊಟ್ಟಿದೆ, ಅದು ಸಣ್ಣ ಮತ್ತು ಅತಿ ಸಣ್ಣ ರೈತರುಗಳಿಗೆ ರಸಗೊಬ್ಬರ ಸಾಲವೆಂದು ಮತ್ತು ಅವರ ಅಭಿವೃದ್ಧಿಗೆಂದು ಕೊಟ್ಟಿವೆ. ಅಥವಾ ಆ ಹಣ ಪರಿಶಿಷ್ಟ ಜಾತಿ ಮತ್ತು ವರ್ಗಗಳವರ ಅಭಿವೃದ್ಧಿ ಕಲ್ಯಾಣ ಯೋಜನಗೆ ಹೋಗಿದೆ. ಈ 111.84 ಕೋಟಿ ರೂಪಾಯಿಗಳಲ್ಲಿ ಖರ್ಚಾಗಿರುವ ಹಣ ಶೇಕಡ 44ರಷ್ಟಾಗುತ್ತದೆ. ಇದಲ್ಲದೆ, ಉಳಿದಂಥ 40 ಕೋಟಿ ರೂಪಾಯಿಗಳು ಕ್ಯಲಾಮಿಟಿಸ್ ರಿಲೀಫ್ ಫಂಡ್ಗೆ ಹೋಗಿದೆ. ಅಂದರೆ, 111.84 ಕೋಟಿ ರೂಪಾಯಿಗಳಲ್ಲಿ ಒಂದು 49 ಕೋಟಿ ಮತ್ತೊಂದು 40 ಕೋಟಿ ರೂಪಾಯಿಗಳು ಒಟ್ಟು 89 ಕೋಟಿ ರೂಪಾಯಿಗಳು ಇಂತಹ ವ್ಯವಸ್ಥೆಗಳಿಗೆ ಖರ್ಚಾಗಿದೆ. ಇದನ್ನು ನಾವು ಅನುತ್ಪಾದಕವೆಂದು ಹೇಳುವುದಕ್ಕಾಗುವುದಿಲ್ಲ, ಅಥವಾ ಇದರ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕೆಂಬ ಒಂದು ಪರಿಸ್ಥಿತಿಯೂ ಸಹ ಇತ್ತು. ಏಕೆಂದರೆ, ನಮಗೆ ರಸಗೊಬ್ಬರದ ಸಾಲ ಅನಂತರ ಸಾಲ ಅನಂತರ ಬಂದಿತು, ಅದು ಕೇಂದ್ರದ ರಿ-ಅಜಸ್ಟ್‌ಮೆಂಟ್‌ಗೆ ಹೋಗುತ್ತದೆ. ಆದುದರಿಂದ, ಹಣವೆಲ್ಲಾ ಇಂತಹ ಅನುತ್ಪಾದಕ ವ್ಯವಸ್ಥೆಗೆ ಹೋಗಿದೆಯೆಂಬ

ವಾದ ಖಂಡಿತಾ ಸರಿಯಲ್ಲ. ಇನ್ನು ಮಿನರ್ವ ಮಿಲ್ಸ್‌ಗೆ ಹಣ ಏಕೆ ಕೊಟ್ಟಿದ್ದೀರಿ? ಎನ್ನುವ ಪ್ರಶ್ನೆ ಉದ್ಭವವಾಗಿದೆ. ಆ ಮಿಲ್ಸ್‌ನವರು ಬ್ಯಾಂಕ್ ಗ್ಯಾರಂಟಿ ಕೊಟ್ಟಿದ್ದರು. ಹೈಕೋರ್ಟ್‌ನವರು ಈ ಮಿಲ್ಸ್‌ಗೆ ಪೇಮೆಂಟ್ ಮಾಡಬೇಕೆಂದು ಹೇಳಿದ ನಂತರ ನಾವು ಪೇಮೆಂಟ್ ಮಾಡಬೇಕು, ಇಲ್ಲದಿದ್ದರೆ, ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದಂತಾಗುತ್ತದೆ. ಇಲ್ಲವೇ ಜೈಲಿಗೆ ಹೋಗಬೇಕಾಗುತ್ತದೆ ಎನ್ನುವ ಪರಿಸ್ಥಿತಿ ಬಂತು. ಅವರ ಹತ್ತಿರ ಆಸ್ತಿಗಳಿರುವುದು ಸರಿ. ರಾಜ್ಯ ಸರ್ಕಾರದಿಂದ ಅವರಿಗೆ ಈ ರೀತಿ ಹಣ ಕೊಡಬೇಕಾಯಿತು.

ಶ್ರೀ ಆರ್.ವಿ. ದೇಶಪಾಂಡೆ : ಸರ್ಕಾರವೆಂದರೆ ಧರ್ಮಶಾಲೆಯೇ? This cannot be. ಅವರ ಹತ್ತಿರ ಲ್ಯಾಂಡ್ ಇದೆ, ಪ್ರಾಪರ್ಟಿ ಇದೆ. Your advocates have to orgue before the court that they have the land and other property.

ಶ್ರೀ ಎಂ. ವೀರಪ್ಪ ಮೊಯಿಲಿ : ಅದರ ಬಗ್ಗೆ ತಮಗೂ ಗೊತ್ತಿದೆ. ತೀರ್ಪು ಬರುವುದು ಯಾವಾಗ? ಅಡ್ವೊಕೇಟ್‌ಗಳೆಲ್ಲರೂ ಆರ್ಗ್ಯುಮೆಂಟ್ ಮಾಡಿದ ನಂತರ ತೀರ್ಪು ಬರುವುದು. ಅದಕ್ಕಿಂತ ಮುಂಚಿತವಾಗಿ ಹೇಗೆ ತೀರ್ಪು ಬರುತ್ತದೆ? ಅದಾದ ನಂತರವೇ ತೀರ್ಪು ಕೊಟ್ಟಿದ್ದಾರೆ. ಆ ತೀರ್ಪಿನ ಆದೇಶಕ್ಕೆ ನಾವು ತಲೆ ಬಾಗಿಸಬೇಕಾಗುತ್ತದೆ. ಇದರಿಂದ ತಪ್ಪಿಸಿಕೊಳ್ಳುವುದಕ್ಕೆ ಹೇಗೆ ಸಾಧ್ಯ? ಇನ್ನು ಎಸ್.ಜಿ.ಇ.ಎಫ್.ಗೆ ರಾಜ್ಯ ಸರ್ಕಾರ 7.74 ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ ಕೊಟ್ಟಿದ್ದೇವು.

ಶ್ರೀ ಎಚ್. ಏಕಾಂತಯ್ಯ : ನಾವು ಒಪ್ಪಿಕೊಳ್ಳುತ್ತೇವೆನ್ನುವ ವಿಚಾರಗಳನ್ನು ಮಾತ್ರ ನೀವು ಪ್ರಸ್ತಾಪ ಮಾಡುತ್ತಿದ್ದೀರಿ, ಇದರ ಬಗ್ಗೆ ನಾನು ಅನಂತರ ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಒಪ್ಪಿಕೊಳ್ಳುವ ವಿಷಯ ಅನಂತರ ಉಳಿಯುತ್ತದೆ. ನಾವು ಮತ್ತು ನೀವು ಒಪ್ಪಿಕೊಳ್ಳಬೇಕಾದಂಥ ವಿಷಯಗಳು ಬಹಳಷ್ಟಿವೆ. very narrow area. ಬಹುಶಃ ಅದರ ಬಗ್ಗೆ ನಾವು ಒಪ್ಪಂದ ಮಾಡಿಕೊಳ್ಳೋಣ.

ಶ್ರೀ ವಾಟಳ್ ನಾಗರಾಜ್ : ಈಗ ನೀವಿಬ್ಬರೂ ಒಪ್ಪಂದಕ್ಕೆ ತಯಾರಾಗಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನನಗೂ, ಏಕಾಂತಯ್ಯನವರಿಗೂ ಯಾವಾಗಲೂ ಒಪ್ಪಂದ ಇದೆ.

ಶ್ರೀ ವಾಟಾಳ್ ನಾಗರಾಜ್ : ಇದು ಬಹಳ ರಹಸ್ಯ. ಅವರ ಹೆಸರು ಏಕಾಂತಯ್ಯ ಇವರಿಬ್ಬರ ಮಧ್ಯೆ ಏನಾದರೂ ವಿಚಾರ ತೀರ್ಮಾನವಾಗಿರಬೇಕು. ಆ ವಿಚಾರ ನಮಗೆ ಅರ್ಥವಾಗಬೇಕು. ಅದೇನೆಂದು ಸಭೆಯಲ್ಲಿ ಹೇಳಿ, ಅನಂತರ ನೀವು ಕಾರ್ಯಾಲಯದಲ್ಲಿ ಕುಳಿತುಕೊಂಡು ಮಾತನಾಡಿ.

ಶ್ರೀ ಎಚ್. ಏಕಾಂತಯ್ಯ : ನಮ್ಮದು ಏಕಾಂತ ಬೇಟಿ ಅಲ್ಲ, ಸಾರ್ವಜನಿಕ ಬೇಟಿ. ಅದರಲ್ಲಿ ಏನೂ ವ್ಯತ್ಯಾಸವಿಲ್ಲ.

5.45 ಪಿ.ಎಂ

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಏಕಾಂತಯ್ಯನವರು ಜೀವನದಲ್ಲಿ ತೆರೆದ ಹೃದಯದವರು ಎಂದು ಸರ್ಟಿಫಿಕೇಟ್ ಕೊಡಬಹುದು. That I can certify. ಅದರಲ್ಲಿ ಬೇಕೆಂದು ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಅದನ್ನು ಹೇಳಲಿಲ್ಲ. ಅವರನ್ನು ಟೀಕೆ ಮಾಡಲಿಲ್ಲ. ನಿಮ್ಮಗಳಲ್ಲಾಗಿರುವ ರಹಸ್ಯದ ಒಪ್ಪಂದವನ್ನು ಕೇಳಿದೆನೇ ಹೊರತು ಅವರಲ್ಲಿ ನನಗೆ ಗೌರವವಿದೆ, ನಿಮ್ಮ ಬಗ್ಗೆಯೂ ಕೂಡ ನನಗೆ ಗೌರವವಿದೆ. ತಾವು ಏನು ಒಪ್ಪಂದ ಮಾಡಿಕೊಂಡಿದ್ದೀರಿ ಅದನ್ನು ಈಗ ಹೇಳಿ. ಆ ಒಪ್ಪಂದದ ಬಗ್ಗೆ ಈ ಸಭೆಗೆ ಹೇಳಿದಿರಿ, ಒಂದು ಸಲ ಈ ಸಭೆಗೆ ಹೇಳಿದ ಮೇಲೆ ಅದನ್ನು ಬಹಿರಂಗ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳೇನು ಹೇಳಿದ್ದಾರೆಂದರೆ ನಮಗೂ ಏಕಾಂತಯ್ಯನವರಿಗೂ ಒಂದು ಒಪ್ಪಂದವಾಗಿದೆ, ಬೇಕಾದರೆ ಅದನ್ನು ಕಡತ ತೆಗೆದು ನೋಡಬಹುದು, ನಿಮ್ಮ ಒಪ್ಪಂದ ಏನು ಅದು ಗೊತ್ತಾಗಬೇಕು. ನಿಮ್ಮ ಕಛೇರಿಗೆ ಅಥವಾ ನಾನು ಎಲ್ಲಾದರು ಹೋಗಿ ಬರುತ್ತಿರಬೇಕಾದರೆ ನಿಮ್ಮಿಬ್ಬರಿಗೂ ಒಪ್ಪಂದವಾಗಿದ್ದರೆ ಅದು ಬೇರೆ ಬಿಡಿ, ಆದರೆ ಇದು ಈ ಸಭೆಯ ಗಮನಕ್ಕೆ ಬಂದಿದೆ, ಈ ದೇಶದ ಗಮನಕ್ಕೆ ಬಂದಿದೆ. ಆದುದರಿಂದ ನಿಮ್ಮ ಆ ಒಪ್ಪಂದವೇನು ಎನ್ನುವುದನ್ನು ಬಯಲು ಮಾಡಿದರೆ ನಮಗೆ ಸಂತೋಷವಾಗುತ್ತದೆ. ಅಷ್ಟು ಬಿಟ್ಟರೆ ಬೇರೆ ಏನೂ ಇಲ್ಲ.

ಶ್ರೀ ಎಂ.ವಿ. ವೆಂಕಟಪ್ಪ : ಸಾರ್ವಜನಿಕರ ಹಿತದೃಷ್ಟಿಯಿಂದ ಆಗಿರತಕ್ಕ ಒಪ್ಪಂದ ಅದು.

ಶ್ರೀ ಎಂ. ವೀರಪ್ಪ ಮೊಯಿಲಿ : ಆ ಒಪ್ಪಂದವನ್ನು ನಿಮ್ಮ ಜೊತೆಯಲ್ಲಿ ಮಾತನಾಡೋಣ. ಇಲ್ಲಿ ಬೇಡ. ಅಮೇಲೆ ಶಿವಮೊಗ್ಗ ಮತ್ತು ಭದ್ರಾವತಿಯ ವಿಚಾರವಾಗಿ ನಾವು ಈಗಾಗಲೆ ಹೇಳಿದ್ದೇನೆ. ಏಕೆಂದರೆ ಎನ್.ಜಿ.ಇ.ಎಫ್. It is not cash outgo.

ಅದು ಲೋನ್ ಇತ್ತು. ಅದನ್ನು ಈಕ್ವಿಟಿಯಾಗಿ ಇಟ್ಟಿದ್ದೇವೆ. ಆ ಈಕ್ವಿಟಿಯ ಸಟ್ರೆಂಗ್ತನ್ನು ವೈಡನ್ ಮಾಡಿದಾಗ ಇದು ಉದ್ಭವವಾಗಿದೆ. ಆದರೆ ಎನ್.ಜಿ.ಇ.ಎಫ್ ಸಂಸ್ಥೆಗೆ ಲೋನ್ ರೀಪೇಮೆಂಟ್ನು ಯಾವ ರೀತಿ ವಸೂಲಿ ಮಾಡಬೇಕು ಎನ್ನತಕ್ಕದ್ದು ಇಲ್ಲಿ ಪ್ರಶ್ನೆಯಲ್ಲ. ಅದು ನಮ್ಮ ಕಂಪೆನಿಯಾಗಿದೆ, ಅದರ ಈಕ್ವಿಟಿ ಬೇಸಿಸ್ನು ಹೆಚ್ಚು ಮಾಡುವುದನ್ನು ಬಿಟ್ಟರೆ ಅವರ ಹತ್ತಿರ ಒಂದು ನಯಾಪೈಸೆ ಕೂಡ ಹೆಚ್ಚು ಕೊಟ್ಟಿದ್ದುದು ಇಲ್ಲ.

ಶ್ರೀ ಸಿ. ಭೈರೇಗೌಡ : ಮಾನ್ಯ ಉಪಾಧ್ಯಕ್ಷಣಿಯರೆ, ತಾವು ಕೈಗಾರಿಕಾ ಮಂತ್ರಿಗಳಾಗಿದ್ದಾಗ ಈ ಸದನದಲ್ಲಿ ಎನ್.ಜಿ.ಎಫ್.ನ ಟಾರ್ಪೆಡೋ ಡೀಲಿಂಗ್ಸ್ಗೆ ಕಮೀಷನ್ ಬರಬೇಕಾದ ಬಗ್ಗೆ ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಿರಿ, ಮತ್ತು ಕೌನ್ಸಿಲ್ನಲ್ಲಿಯೂ ಕೊಟ್ಟಿದ್ದಿರಿ, ಆ ವಿಚಾರದಲ್ಲಿ ನಾನು ಇಲ್ಲಿ ಮಾತನಾಡಲು ಆಗಲಿಲ್ಲ. ಆದುದರಿಂದ ನಾನು ಒಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಅಲ್ಲಿ ಇದ್ದಂಥ ಕೆಲವು ಅಧಿಕಾರಿಗಳು ವಿಧಾನಸಭೆಗೆ ಹಕ್ಕುಚ್ಯುತಿಯನ್ನು ಮಾಡಿದ್ದಾರೆ, ಅವರಿಗೆ ಏನು ಮನಸ್ಸಿಗೆ ತೋಚುತ್ತದೆಯೋ ಆ ರೀತಿಯಲ್ಲಾ ಮಾಡಲು ಪ್ರಯತ್ನ ಮಾಡಿ ಇವತ್ತು ಆ ಸಂಸ್ಥೆಗೆ ಸರ್ಕಾರದಿಂದ ಹಣವನ್ನು ಕೊಡತಕ್ಕಂಥ ಪರಿಸ್ಥಿತಿ ಬಂದಿದೆ. ಅದರ ಬಗ್ಗೆ ಸಾರ್ವಜನಿಕ ಉದ್ದಿಮೆಗಳ ಸಮಿತಿಯು ಕೂಡ ವರದಿಯನ್ನು

ಕೊಟ್ಟಿದೆ. ಇದಿಂಥವರ ಮೇಲೆ ಈ ಕಾರಣಕ್ಕಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಅದ್ದಲ್ಲದೆ ಸಿವಿಲ್ ಮತ್ತು ಕ್ರಿಮಿನಲ್ ಎರಡೂ ರೀತಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡಿ ವರದಿಯನ್ನು ಕೊಟ್ಟಿತ್ತು. ಆದರೆ ತಾವು ಆ ವರದಿಯನ್ನು ನೋಡದೆ ಸಾರಾಸಗಟಾಗಿ ಕ್ಯಾಶ್ಫ್ಲೋ ಏನೂ ಇಲ್ಲ ಆ ಕಾರಣಕ್ಕೋಸ್ಕರ ಇದನ್ನು ಒಪ್ಪಿಕೊಂಡೆವು ಎಂದರೆ ಅದು ಯಾವ ರೀತಿಯಾದ ಲಾಜಿಕೆ? ಅದು ಯಾವರೀತಿಯಾಗಿಯೂ ವ್ಯವಸ್ಥಿತವಾಗಿ ನಡೆಯದಿದ್ದರೂ ಕೂಡ ಕ್ಯಾಶ್ ಸೋರಸ್ಸ್ ಇಲ್ಲವೆಂದು ನಾವು ಒಪ್ಪಿಕೊಳ್ಳಬೇಕಾಯಿತು ಎಂದರೆ ನಾವು ಅದನ್ನು ಹೇಗೆ ಒಪ್ಪಿಕೊಳ್ಳಬೇಕಾಗುತ್ತದೆ? ದಯಮಾಡಿ ಹೇಳಿ? ತಾವು ಬೇಕಾದರೆ ಸಮಿತಿಯ ವರದಿಯನ್ನು ತರಿಸಿಕೊಂಡು ನೋಡಬಹುದು, ನೀವು ಉತ್ತರವನ್ನು ಕೊಟ್ಟಿದ್ದೀರಿ, ನೀವು ಕೈಗಾರಿಕಾ ಮಂತ್ರಿಗಳಾಗಿದ್ದಾಗಲೂ ಕೂಡ ಸಭೆಯನ್ನು ನಡೆಸಿದ್ದೀರಿ, ಕೌನ್ಸಿಲ್ನಲ್ಲಿ ಹೇಳಿದ್ದೀರಿ, ನನ್ನ ಪ್ರಶ್ನೆಗೆ ಇಲ್ಲಿಯೇ ಅಂದು ಉತ್ತರವನ್ನು ಕೊಟ್ಟಿದ್ದೀರಿ, ಅಲ್ಲಿರುವ ಅಧಿಕಾರಿಗಳು ನಿಮ್ಮನ್ನು ಕೂಡ ಗಣನೆಗೆ ತೆಗೆದುಕೊಂಡಿಲ್ಲ, ಆ ರೀತಿಯಲ್ಲಿ ಅಲ್ಲಿ ಆಡಳಿತದ ವ್ಯವಸ್ಥೆ ನಡೆಯುತ್ತಿದೆ. ಅಂಥ ಅಧಿಕಾರಿಗಳ ಮೇಲೆ ಅದರಲ್ಲಿಯೂ ನಿಮ್ಮ ಸರ್ಕಾರ ಕಾರ್ಯದರ್ಶಿಗಳಾಗಿರತಕ್ಕಂಥ ಅಧಿಕಾರಿಗಳು, ಅವರುಗಳು ಅಷ್ಟೊಂದು ದುರ್ವ್ಯವಹಾರ ನಡೆಸಿದಮೇಲೂ ಕೂಡ, ಈ ಸದನದ ಒಂದು ಸಮಿತಿಯು ಅದರ ಬಗ್ಗೆ ವರದಿಯನ್ನು ಕೊಟ್ಟ ಮೇಲೂ ಸಹ ನೀವು ಅದನ್ನು ಗಣನೆಗೆ ತೆಗೆದುಕೊಂಡಿಲ್ಲ. ಅದಕ್ಕೆ ಹಣವನ್ನು ಕೊಡುತ್ತೇವೆಂದು ಇವತ್ತಿನದಿವಸ ಹೇಳಿ ಅದನ್ನು ಒಪ್ಪಿಕೊಳ್ಳಿ ಎಂದು ಹೇಳುತ್ತಿದ್ದೀರಿ.

ಉಪಾಧ್ಯಕ್ಷಣಿಯರು : ಮಾನ್ಯ ಮುಖ್ಯಮಂತ್ರಿಯವರು ಪೂರ್ಣ ಉತ್ತರವನ್ನು ಕೊಟ್ಟುಬಿಡಲಿ ಅನಂತರ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಬೈರೇಗೌಡರು ಒಂದು ಹೊಸ ವಿಚಾರಕ್ಕೆ ಬಂದಿದ್ದಾರೆ. ತಾವು ಎನ್.ಜಿ.ಇ.ಎಫ್ ನಲ್ಲಿನ ಅವ್ಯವಹಾರಗಳ ಬಗ್ಗೆ ಏನು ಹೇಳಿದ್ದೀರಿ ಅದಕ್ಕೆ ಪ್ರತ್ಯೇಕವಾದ ಡಿಮ್ಯಾಂಡ್ ಬರುತ್ತದೆ, ಇನ್ನು ಮುಂದೆ ಬರತಕ್ಕ ದಿವಸಗಳಲ್ಲಿ ತಾವು ಅದರ ಬಗ್ಗೆ ಎತ್ತಬಹುದು, ತಾವು ಎತ್ತದಿದ್ದರೂ ತಪ್ಪಿತಸ್ಥರು ನಮ್ಮ ಕಣ್ಣತಪ್ಪಿಸಲು ಸಾಧ್ಯವಿಲ್ಲ. ಅದನ್ನು ನಮ್ಮ ಕಣ್ಣಿನಿಂದ ಪ್ರತ್ಯೇಕವಾಗಿ ನೋಡುತ್ತೇವೆ.

ಶ್ರೀ ಸಿ. ಬ್ಯರೇಗೌಡ : ವರದಿಯನ್ನು ಕೊಟ್ಟು 6 ತಿಂಗಳಾಯಿತು. ಇನ್ನೂ ಏಕೆ ಕ್ರಮ ತೆಗೆದುಕೊಂಡಿಲ್ಲ?

ಶ್ರೀ ಎಂ. ವೀರಪ್ಪ ಮೊಯಿಲಿ : 6 ತಿಂಗಳಾಗಲಿ ಒಂದು ವರ್ಷವಾಗಲಿ ಅದರ ಬಗ್ಗೆ ಪ್ರತ್ಯೇಕವಾಗಿ ವಿಷಯವನ್ನು ಗ್ರಹಿಸಿ ಗಮನಕೊಡುವುದು ಮಾತ್ರವಲ್ಲ ಕ್ರಮವನ್ನೂ ಕೂಡ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ತಮ್ಮ ಕಣ್ಣಿನಿಂದ ಯಾರು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ಆದರೆ ತಮ್ಮ ಕೈಯಿಂದ ತಪ್ಪಿಸಿಕೊಂಡು ಬಿಟ್ಟೀತೆಂದು ಅನುಮಾನ.

ಶ್ರೀ ಎಂ. ವೀರಪ್ಪ ಮೊಯಿಲಿ : ಸರ್ಕಾರದ ಕೈ ಬಹಳ ಉದ್ದವಾಗಿದೆ. ಅದು ಎಲ್ಲಿದ್ದರೂ ಕೂಡ ಹಿಡಿಯುತ್ತದೆ. ಆದುದರಿಂದ ಮಾನ್ಯ ಬನ್ನಿಕೋಡ್ರವರು ಗಾಬರಿ ಆಗಬೇಕಾದ ಅವಶ್ಯಕತೆ ಇಲ್ಲ, ಯಾರೂ ಕೂಡ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ತಮ್ಮ ಆಶಯಕ್ಕೆ ನಾವು ಸ್ಪಂದಿಸುತ್ತೇವೆ. ಈ ಸಾಲವನ್ನು ಇವತ್ತು ಕೊಟ್ಟಿದ್ದಲ್ಲ,

ಅಥವಾ 91-92 ರಲ್ಲಿ ಕೊಟ್ಟಿದ್ದೂ ಅಲ್ಲ. ಎಸ್.ಜಿ.ಇ.ಎಫ್.ಗೆ ಬಹಳ ಹಿಂದೆ ಕೊಟ್ಟಿರತಕ್ಕದ್ದು. ಇತ್ತೀಚೆಗೆ ಸಾಲವನ್ನು ಕೊಡುತ್ತಿಲ್ಲ. ಹಿಂದೆ ಇದನ್ನು ಕೊಟ್ಟಿದ್ದುದರಿಂದ ಈಗ ಇದನ್ನು ಈಕ್ವಿಟಿ ಎಂದು ನಾವು ಟ್ರೀಟ್ ಮಾಡಿದ್ದೇವೆ ಅಷ್ಟೆ.

ಇನ್ನೊಂದು ವಿಚಾರ ಎಂದರೆ ಕರ್ನಾಟಕ ಕೈಮಗ್ಗ ನೇಕಾರರ ವಿಚಾರ. ತಮಗೆ ಗೊತ್ತಿರುವಂತೆ ಈ ಕೈಮಗ್ಗ ನಿಗಮದವರು ಬಹಳ ಬವಣೆ ಪಡುತ್ತಿದ್ದಾರೆ. ಅದನ್ನು ನೋಡಿ ನಾವು ಅವರಿಗೆ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ನಾವು ಹಣವನ್ನು ಕೊಡದೇ ಇದ್ದಿದ್ದರೆ ಅವರಿಗೆ ಏನೂ ಕೆಲಸವಿಲ್ಲದೆ ಬೀದಿಪಾಲು ಆಗುತ್ತಿದ್ದರು. ಆದುದರಿಂದ 5 ಕೋಟಿ ರೂ. ಕೊಟ್ಟಿದ್ದೇವೆ. ಇದಕ್ಕೆಲ್ಲಾ ನೀವು ಏತಕ್ಕೆ ಪ್ರಶ್ನೆ ಹಾಕುತ್ತೀರಿ? ಮಾನ್ಯ ಮಾಧುಸ್ವಾಮಿಯವರು ಬಹಳ ಫೋರ್ಸಿಬಲ್ ಆಗಿ ವಾದಮಾಡಿದ್ದಾರೆ. ಎಲ್ಲಾ ವಿವರಗಳನ್ನೂ ಹೇಳಿದೆ.

ಶ್ರೀ ಜೆ.ಸಿ. ಮಾದುಸ್ವಾಮಿ : ನಾನು ಆರ್ಗ್ಯೂಮಾಡಿದ್ದುದು ನಮಗೆ ಕೊಡತಕ್ಕ....

ಶ್ರೀ ಸಿ. ಭೈರೇಗೌಡ : ನಾವು ಯಾವುದನ್ನು ಕೇಳುತ್ತೇವೆ ಅದನ್ನು ನೀವು ಬಿಡುತ್ತೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ವಿಚಾರದಲ್ಲಿ ತಮ್ಮ ಜೊತೆ ನನ್ನ ಸಹಮತ ಕೂಡ ಇದೆ. ಕರ್ನಾಟಕ ಭವನವನ್ನು ಸ್ವಲ್ಪಮಟ್ಟಿಗೆ ದುರಸ್ತಿ ಮಾಡಬೇಕಾಗಿದೆ. ಆದರೆ ಅದು ವೈಭವೀಕರಣ ಆಗಬಾರದು. ವೈಭವೀಕರಣವಾಗಲಿ, ನವೀಕರಣವಾಗಲಿ ಎಷ್ಟು ಆಗಬೇಕೋ ಅಷ್ಟು ಆಗಬೇಕು. ಅನಾವಶ್ಯಕವಾಗಿ ಆಗಬಾರದು. ಅದರ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ಇನ್ನು ಮುಂದೆ ಇಂಥ ಅನವಶ್ಯಕ ಖರ್ಚುಗಳಾಗದಂತೆ ನಾವು ನೋಡುತ್ತೇವೆಂದು ಭರವಸೆ ಕೊಡುತ್ತೇನೆ. ಅಲ್ಲಿ ಏನಾದರೂ ಅನಾವಶ್ಯಕ ಖರ್ಚಾಗದಿದ್ದರೆ ಅದರ ಬಗ್ಗೆ ನಾನು ತನಿಖೆ ಮಾಡಿಸುತ್ತೇನೆಂದು ಅಷ್ಟು ಮಾತ್ರ ಹೇಳಬಯಸುತ್ತೇನೆ.

ಶ್ರೀ ಸಿ. ಭೈರೇಗೌಡ : ಕರ್ನಾಟಕ ಭವನದಲ್ಲಿ ಟೆಲಿಫೋನನ್ನು ಅನಾವಶ್ಯಕವಾಗಿ ಉಪಯೋಗಿಸಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಟೆಲಿಫೋನನ್ನು ಅನಾವಶ್ಯಕವಾಗಿ ಉಪಯೋಗಿಸಿದ್ದಾರೆಂದು ಕಂಡುಬಂದರೆ ಅದಕ್ಕೆ ಒಬ್ಬ ಉನ್ನತಾಧಿಕಾರಿಯಿಂದ ತನಿಖೆ ಮಾಡಿಸುತ್ತೇನೆ. ಕರ್ನಾಟಕ ಭವನದ ಖರ್ಚುವೆಚ್ಚ ಸ್ವಲ್ಪಮಟ್ಟಿಗೆ ಜಾಸ್ತಿಯಾಗಿದೆಎಂದು ನನಗನಿಸುತ್ತದೆ. ಆದ್ದರಿಂದ ಒಬ್ಬ ಉನ್ನತಾಧಿಕಾರಿಯನ್ನು ಕಳುಹಿಸಿ ಅದರ ಬಗ್ಗೆ.....

ಶ್ರೀ ಸಿ. ಭೈರೇಗೌಡ : ಅಲ್ಲಿ ಎಸ್.ಟಿ.ಡಿ. ಮತ್ತು ಐ.ಎಸ್.ಡಿ. ಇರತಕ್ಕ ಟೆಲಿಫೋನನ್ನು ನೀವು ಹಾಕಿದ್ದೀರಿ. ಅದು ಯಾವರೀತಿ ಬಳಕೆಯಾಗಿದೆ, ಎಷ್ಟು ಹಣವನ್ನು ಕಟ್ಟಬೇಕೆಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಂ. ವೀರಪ್ಪಮೊಯಿಲಿ : ಆದುದರಿಂದಲೇ ನಾನು ಹೇಳುತ್ತಿದ್ದೇನೆ. ಅದು ಟೆಲಿಫೋನ್ ಇರಬಹುದು, ಅನಾವಶ್ಯಕ ಖರ್ಚು ಇರಬಹುದು ಇದರ ಬಗ್ಗೆ ಅಡಿಷನಲ್ ಚೀಫ್ ಸೆಕ್ರೆಟರಿಯವನ್ನು ಕಳುಹಿಸಿ ತನಿಖೆ ಮಾಡಿಸುತ್ತೇನೆ. ಅಲ್ಲಿ ಏನಾದರೂ ವ್ಯತ್ಯಾಸವಾಗಿದ್ದರೆ ಸಂಬಂಧ ಪಟ್ಟವರ ವಿರುದ್ಧ ಕ್ರಮತೆಗೆದುಕೊಳ್ಳುತ್ತೇನೆ. ಮಾನ್ಯ ರಾಮಯ್ಯನವರಿಗೆ, ಮಾನ್ಯ ಏಕಾಂತಯ್ಯನವರಿಗೆ ನಾನು ಹೇಳುತ್ತಿದ್ದೇನೆ.

I am telling you. ಬಾಕಿ ಎಲ್ಲಾ ಒಪ್ಪಿದಮೇಲೆ ಈ ಸಣ್ಣ ವಿಚಾರಗಳಿಗೆ ನೀವು ಏತಕ್ಕೆ ಚರ್ಚೆಮಾಡಬೇಕು? Let us narrow down. ಮೈಸೂರು ಕಿರ್ಲೋಸ್ಕರ್‌ಗೆ ನಾವು ಇಲ್ಲಿ ಪ್ರೋವೈಡ್ ಮಾಡಿದ್ದುದು ಏತಕ್ಕೆಂದರೆ ಇದಕ್ಕೆ ಹೈಕೋರ್ಟ್ ಆರ್ಡರ್ ಇತ್ತು. ಕಿರ್ಲೋಸ್ಕರ್‌ದು ಸ್ವಲ್ಪ ಹಣ ಇದೆ. ಹೈ ಕೋರ್ಟ್ನ ಆರ್ಡರ್ ಇದ್ದುದರಿಂದ...

ಶ್ರೀ ಹೆಚ್. ಏಕಾಂತಯ್ಯ : ಹೈ ಕೋರ್ಟ್‌ನಲ್ಲಿ ಯಾವತ್ತು ಆರ್ಡರ್ ಆಗಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ : ಅದನ್ನು ನೋಡೋಣ.

ಶ್ರೀ ಹೆಚ್. ಏಕಾಂತಯ್ಯ : ಇದು ಬಹಳ ಮುಖ್ಯ ಹೈಕೋರ್ಟ್‌ನಲ್ಲಿ ಆರ್ಡರ್ ಆಗಿದ್ದರೆ ಅದು ಯಾವತ್ತು ಆಗಿದೆ ಎಂಬುದನ್ನು ಹೇಳಿದರೆ ಸಾಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಇನ್ನು ಮಾನ್ಯ ಜಾಲಪ್ಪನವರು ಎತ್ತಿದ್ದಂಥ ಪ್ರಶ್ನೆ 4.46 ಕೋಟಿ ರೂಪಾಯಿಗೆ ಸಂಬಂಧಪಟ್ಟ maintenance of the PWD buildings under the Zilla Parished. I don't think this is a misuse. when maintenance become inevitable ಆಗ ನಾವು ಇದನ್ನು ಮಾಡಬೇಕಾಗುತ್ತದೆ. ಅದನ್ನು ನಾವು ಕಂಟಂಜೆನ್ಸಿ ಫಂಡ್ನಿಂದ ಪ್ರೊಪೋಸ್ ಮಾಡಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಕೆಲವು ಎಸ್.ಐ.ಗಳ ಬಗ್ಗೆ ಜಾಲಪ್ಪನವರು ಪ್ರಶ್ನೆ ಎತ್ತಿದರು. ಅದರ ಬಗ್ಗೆ ವಿವರ ಕೊಡಿ ಪ್ರತ್ಯೇಕವಾಗಿ ನೋಡೋಣ ಆದರೆ ಇದರಲ್ಲಿ ಅದು ಪೂರಕ ಡಿಮಾಂಡಿನಲ್ಲಿ ಎಕೆ ಬಂತೋ?

ಶ್ರೀ ಆರ್.ಎಲ್. ಜಾಲಪ್ಪ : ಪ್ರಕೃತ ಅಲ್ಲದಿದ್ದರೂ ಕೂಡ ಹೇಳಬೇಕಾಗುತ್ತದೆ. ನಮ್ಮ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 92ರ ಅಕ್ಟೋಬರ್ ನವೆಂಬರ್ ನಲ್ಲಿ ಮಳೆ ಬಂದು 12,000 ಮನೆಗಳು ಬಿದ್ದು ಹೋಯಿತು. ಮಾನ್ಯ ವೆಂಕಟಪ್ಪನವರೂ ಕೂಡ ಹೇಳಿದರು. ಅದಕ್ಕೆ ತಮ್ಮ ಉತ್ತರ ಎನು? ನಮ್ಮಲ್ಲಿ ಯಾವತ್ತು ಮಳೆ ಬಂತೋ ಅಂದೇ ಗೌರಿಬಿದನೂರಿನಲ್ಲಿ ಮಳೆ ಬಂದು ಮನೆಗಳು ಬಿದ್ದು ಹೋದವು ಅಲ್ಲಿ 5 ಸಾವಿರ ಮನೆಗಳನ್ನು ತೆಗೆದು ಕೊಂಡಿದ್ದೀರಿ ಆದರೆ ಇಲ್ಲಿ ಒಂದು ಮನೆಯನ್ನೂ ತೆಗೆದುಕೊಂಡಿಲ್ಲ ಇದಕ್ಕೆ ಕಾರಣವೇನು?

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಈಗ ಹೇಳುತ್ತೇನೆ ತಾವು ಎತ್ತಿದ್ದೀರಿ. 91ರಲ್ಲಿ ನೆರೆ ಹಾವಳಿ ಬಂತು ನೂರಾರು ಮನೆಗಳು ಕೋಲಾರ, ತುಮಕೂರು,ಬೆಂಗಳೂರಿನಲ್ಲಿ ಬಿದ್ದು ಹೋಗವು. ಮನೆ ಕಟ್ಟುವುದಕ್ಕೆ ಹೌಸಿಂಗ್ ಬೋರ್ಡಿಂಗ್ ಕರೊಟ್ಟರು ಆದರೆ ದುರದೃಷ್ಟವಶಾತ್ ಆ ಮನೆಗಳನ್ನು ಕಟ್ಟಿ ಕೊಡಲಿಕ್ಕಾಗಲಿಲ್ಲ ಅದನ್ನು ನಾವು ವಿಮರ್ಶೆ ಮಾಡಿ ಅಲ್ಲಿಂದ ತೆಗೆದು ನೇರವಾಗಿ ಜಿಲ್ಲಾದಿಕಾರಿಗಳಿಗೆ ಈ ಹಣವನ್ನು ಬಿಡುಗಡೆ ಮಾಡಿ ತಕ್ಷಣ ಮನೆ ಕಟ್ಟಿಕೊಡಲಿಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ತಡವಾಗಿದೆ ಅದನ್ನು ಒಪ್ಪುತ್ತೇನೆ. ತಾವು ಹೇಳಿದ್ದೀರಿ ಶಾಲಾ ಕೊಠಡಿಗಳು, ದೇವಸ್ಥಾನಗಳು ಇದಕ್ಕೆ ಆಗಲೇ ಹಣ ಕೊಡಬೇಕಾಗಿತ್ತು. ಇಂತಹ ಪ್ರವಾಹ ಬಂದಾಗ ಅವಘಡ ಬಂದಾಗ ಸಮರೋಪಾಯದಲ್ಲಿ ಕೆಲಸ ಮಾಡಬೇಕು. there has been some laps on the part of the Government ನಾವು ಆ ಲ್ಯಾಪ್ಸ್ ಅನ್ನು ಪೂರ್ತಿ ಮಾಡುತ್ತೇವೆ. ನಮ್ಮ ಮೂರು ದಿನಗಳ

ಕಾರ್ಯಕ್ರಮದಲ್ಲಿ ಏನು ನಮೂದಿಸಿದ್ದೇವೆ ಮಾರ್ಚ್ ತಿಂಗಳ ಒಳಗೆ ಮನೆ ಕಟ್ಟಿ ಕೊಡುತ್ತೇವೆ. ಅದು ರಿಪೇರಿ, ದೇವಸ್ಥಾನ ಮತ್ತು ಪ್ರೈಮರಿ ಶಾಲೆಗಳ ಕಟ್ಟಡಗಳು ಇರಬಹುದು. we are directly taking it up.

ಜಿಲ್ಲಾಧಿಕಾರಿಗಳಿಗೆ ಕೊಟ್ಟು ತಾವೆಲ್ಲಾ ಶಾಸಕರು ಜವಾಬ್ದಾರಿ ತೆಗೆದುಕೊಂಡು ಇದನ್ನು ಆದಷ್ಟು ಶೀಘ್ರವಾಗಿ ಮಾಡಿದರೆ ಹಣವನ್ನು ಒದಗಿಸತಕ್ಕಂತಹ ಕೆಲಸ ನಾನು ಮಾಡುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ನಮ್ಮಲ್ಲಿ ಅಂದರೆ ದೊಡ್ಡಬಳ್ಳಾಪುರದಲ್ಲಿ ಮತ್ತು ಗೌರಿಬಿದನೂರಿನಲ್ಲಿ 4-5 ದಿವಸ ಒಂದೇ ಸಲ ಮಳೆ ಬಿತ್ತು. ಗೌರಿಬಿದನೂರಿನಲ್ಲಿ 5ಸಾವಿರ ಮನೆಗಳು ಮಂಜೂರಾಗಿವೆ ಕೆಲಸ ನಡೆಯುತ್ತಿದೆ ನಮಗೆ ಒಂದೂ ಮಂಜೂರಾಗಿಲ್ಲ. ಈ ಮನೆಗಳನ್ನು ಕಟ್ಟಲು ಗೌರಿಬಿದನೂರು ತಾಲ್ಲೂಕಿನಲ್ಲಿ 5-6 ಜನ ಕಂಟ್ರಾಕ್ಟರರಿಗೆ ಕೊಟ್ಟಿದ್ದೀರಿ ಆದರೆ ಆ ಕಂಟ್ರಾಕ್ಟರ್ ದಾರರು ಫಲಾನುಭವಿಗಳಿಂದ 2 ಸಾವಿರ ರೂಪಾಯಿಗಳನ್ನು ಕಲೆಕ್ಟ ಮಾಡುತ್ತಿದ್ದಾರೆ, ಇಲ್ಲವೇ ತಮ್ಮ ಸ್ವಂತ ಖರ್ಚಿನಿಂದ ಫೌಂಡೇಷನ್ ಹಾಕಿ ಕೊಡಬೇಕು ಅಂತಹವರಿಗೆ ಮನೆ ಕಟ್ಟಿ ಕೊಡುತ್ತಾರೆ. ಇದನ್ನು ಸಿ.ಓ.ಡಿ.ಗೆ ರೆಫರ್ ಮಾಡಿ. ಸರಕಾರ ಒಂದು ಮನೆಗೆ 15 ಸಾವಿರ ಕೊಡುತ್ತಿದೆ ಆದರೆ ಅವರು ಈ ಕೆಲಸ ಅಲ್ಲಿ ಮಾಡುತ್ತಿದ್ದಾರೆ. ಕೆಲವರು 2ಸಾವಿರ ಕೊಟ್ಟಿದ್ದಾರೆ ಇನ್ನೂ ಕೆಲವರು ಫೌಂಡೇಷನ್ ಹಾಕಿ ಕೊಟ್ಟಿದ್ದಾರೆ. ಇದನ್ನು ನಾನು ಮಾನ್ಯ ಸಾಂಡ್ರಾ ಅವರ ಗಮನಕ್ಕೂ ತಂದಿದ್ದೇನೆ. ಸಂಬಂಧ ಪಟ್ಟವರು ಬಂದು ಆ ತಾಲ್ಲೂಕನ್ನು ರೆಪ್ರಸಂಟ್ ಮಾಡಿದ್ದಾರೆ. ಇದನ್ನು ವಿಚಾರಣೆ ಮಾಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಆ ಕಂಟ್ರಾಕ್ಟರ್ ಇಲ್-ಲೀಗಲ್ ಆಗಿ 2 ಸಾವಿರ ತೆಗೆದುಕೊಂಡಿದ್ದರೆ, ನಾವೆಲ್ಲಾ ಹಣವನ್ನು ಭರ್ತಿ ಮಾಡಿಕೊಡುತ್ತೇವೆಂದು ಕಂಡೀಶನ್ ಇದ್ದರೆ, ನಾನು ಖಂಡಿತವಾಗಿ ಇದರ ಬಗ್ಗೆ ತನಿಖೆ ಮಾಡಿಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ನಾನು ಹೇಳಿದ್ದು ತಮಗೆ ಅರ್ಥವಾಗಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ: ಗೊತ್ತಾಯಿತು 2ಸಾವಿರ ರೂಪಾಯಿ ಫಲಾನುಭವಿಗಳಿಂದ ಕಂಟ್ರಾಕ್ಟರ್ ತೆಗೆದು ಕೊಂಡಿದ್ದಾನೆ.

ಶ್ರೀ ಆರ್.ಎಲ್. ಜಾಲಪ್ಪ : ಇಲ್ಲದಿದ್ದರೆ ಫಲಾನುಭವಿಗಳು ಅವರ ಸ್ವಂತ ಖರ್ಚಿನಲ್ಲಿ ಫೌಂಡೇಷನ್ ಹಾಕಿಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಅದರ ಬಗ್ಗೆ ತನಿಖೆ ಮಾಡುತ್ತೇನೆ. ಮಾನ್ಯ ಈಶ್ವರಪ್ಪನವರು ಒಂದು ವಿಚಾರ ಹೇಳಿದರು. ಭದ್ರಾವತಿಗೆ ಹಣ ಜೋಡಿಸಿಯಾಗಿದೆ ಸರಿಯಾದ್ದಂತಹ ತಾಂತ್ರಿಕ ಅಧಿಕಾರಿಗಳನ್ನು ಕೊಟ್ಟ ಮೇಲೆ ಆ ಕೆಲಸ ಮುಂದುವರಿಸಬೇಕೆಂದು ಈಗಾಗಲೇ ನಮ್ಮ ಸಚಿವರು ಆದೇಶ ಕೊಟ್ಟಿದ್ದಾರೆ. ಶಿವಮೊಗ್ಗ ಭದ್ರಾವತಿ ನಗರಸಭೆಯಲ್ಲಿ ಇನ್ನು ಮುಂದೆ ಮಿಸ್‌ಯೂಸ್ ಆಗದ ಹಾಗೆ ನೋಡಿಕೊಳ್ಳುತ್ತೇವೆ.

ಇನ್ನು ಸನ್ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ಕೆಲವು ವಿಚಾರಗಳನ್ನು ಹೇಳಿದರು ಅದೇನೆಂದರೆ ಸಣ್ಣ ನೀರಾವರಿಗಾಗಿ ಹಣವನ್ನು ಬಿಡುಗಡೆ ಮಾಡಿದ್ದೀರಿ. ಆದರೆ ಹಣ ಬಿಡುಗಡೆ ಮಾಡಿರುವುದಕ್ಕೂ ಮತ್ತು ಅಲ್ಲಿ ಕೆಲಸ ಕಾಮಗಾರಿಗಳು

ಆಗಿರುವುದಕ್ಕೂ ಸರಿಯಾದ ಸಮತೂಕವಿಲ್ಲ. ತಾಳೆ ಮಾಡಿಲ್ಲವೆಂದು ಹೇಳಿದರು. ಆದ್ದರಿಂದ ಅಲ್ಲಿ ಮಿಸ್‌ಯೂಸ್ ಆಗಿದೆ ಎಂದು ಹೇಳಿದರು. ಅದು ಯಾವ ಐಟಮ್ ಎಂದು ಹೇಳಿದರೆ, ಮಾನ್ಯ ಸಿಂಧ್ಯರವರು ಆ ಮಾಹಿತಿಯನ್ನು ಕೊಟ್ಟರೆ ಅದಕ್ಕೆ ತನಿಖೆ ಖಂಡಿತವಾಗಿಯೂ ಮಾಡುತ್ತೇವೆ. ಮಾನ್ಯ ಶಿವಾನಂದ ಕೌಜಲಗಿಯವರು ಚೀಪ್ ಪಾಪ್ಯು ಲಾರದಿ ಸ್ಕೀಮ್, ಇದನ್ನು ನೀವು ಮಾಡಿದ್ದೀರಿ ಎಂದು ಹೇಳಿದರು, ಅದೇನೆ ವಿಚಾರ ಭೇಧಗಳು ಇರಬಹುದು ಆದರೆ ಒಂದು ನಾನು ಆಶ್ವಾಸನೆಯನ್ನು ಕೊಡುತ್ತೇನೆ. ಯಾವುದೇ ಇನ್ನು ಮುಂದೆ ಬರತಕ್ಕಂಥ ಪೂರಕಬೇಡಿಕೆಗಳಾಗಲಿ, ಪೂರಕವಾದಂಥ ಖರ್ಚು ನಾವು ಮಾಡುವುದಾಗಲಿ ಈ ಪಾಪ್ಯುಲರ್ ಸ್ಕೀಮ್ ಅಥವಾ ನಮ್ಮ ವೈಯಕ್ತಿಕವಾದಂಥ ಪ್ರಭಾವವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಒಂದು ನಯಾಪೈಸೆಯನ್ನೂ ಕೂಡ ನಾವು ಖರ್ಚುಮಾಡುವುದಿಲ್ಲ ಎಂದು ಹೇಳುವುದಕ್ಕೆ ಈ ಸಂದರ್ಭದಲ್ಲಿ ಕೊಡಲಿಕ್ಕೆ ಇಚ್ಛಿಪಡುತ್ತೇನೆ.

ಸನ್ಮಾನ್ಯ ವೈ.ಕೆ.ರಾಮಯ್ಯನವರು ಕೆಲವು ಮೂಲಭೂತವಾದ ಪ್ರಶ್ನೆಗಳನ್ನು ಎತ್ತಿದ್ದಾರೆ. ಅದಕ್ಕೆ ಈಗಾಗಲೇ ಉತ್ತರವನ್ನು ಕೂಡ ಕೊಟ್ಟಿದ್ದೇವೆ. ಮುಖ್ಯವಾಗಿ ಆಯೋದ್ಯ ರೇಡ್ ಮತ್ತು ಕಾವೇರಿ ರೇಡ್ ಇದರ ಬಗ್ಗೆಯೂ ಕೂಡ ಇಂಥದಕ್ಕೆಲ್ಲ ಕಾಂಪನ್‌ಸೇಷನ್, ಪರಿಹಾರ ಎತಕ್ಕೆ ಕೊಡುತ್ತೀರಿ, ಇಂಥದ್ದೆಲ್ಲಾ ಅವರು ಪ್ರಶ್ನೆ ಹಾಕಿದರು. ಆದರೆ ಇದು ತರ್ಕಕ್ಕೆ ಸಿಕ್ಕಂಥ ವಿಚಾರವಲ್ಲ. ಇದು ಒಂದು ಮಾನವೀಯತೆಯ ಪ್ರಶ್ನೆ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಯಡಿಯೂರಪ್ಪನವರು ನಾಳೆ ಮಧುರ ಗಲಾಟೆಗೂ ಕೂಡ ಕೇಳಬಹುದು, ಯಾರಿಗೆ ಗೊತ್ತಿದೆ. ಇದನ್ನು ರಿಪೀಟ್ ಮಾಡಿಕೊಂಡು ಹೋದರೆ ಬೊಕ್ಕಸಕ್ಕೆ ದುಡ್ಡೆಲ್ಲಿಂದ ಬರಬೇಕು, ಬೊಕ್ಕಸದ ದುಡ್ಡೆಲ್ಲ ಅದಕ್ಕೆ ಆಗಿಹೋಗುತ್ತದೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಇದೊಂದು ಮಾನವೀಯತೆಯ ಪ್ರಶ್ನೆ. ಮಾನವೀಯತೆ ಪ್ರಶ್ನೆ ಬಂದಾಗ ಕೆಲವು ಸಾರಿ ಅದು ತರ್ಕಕ್ಕೆ ನಿಲುಕುವುದಿಲ್ಲ. ಎತಕ್ಕೆಂದರೆ ರೇಡ್ನಲ್ಲಿ ತೀರಿಹೋಗಿದ್ದಾರೆ. ಮನೆಗಳನ್ನು ಕಳೆದುಕೊಂಡಿದ್ದಾರೆ ಆಸ್ತಿಪಾಸ್ತಿಗಳನ್ನು ಕಳೆದುಕೊಂಡಿದ್ದಾರೆ. ನಾವು ತಿಳಿದು ಕೊಂಡಿರುವುದೇನೆಂದರೆ ಇದು ಒಂದು ಮಾನವೀಯತೆಯ ಪ್ರಶ್ನೆ ಎಂದು. ನಾವು ಸಮರೋಪಾದಿಯಲ್ಲಿ ಅವರಿಗೆ ಸಹಾಯವನ್ನು ಮಾಡಿ ಅವರಿಗೆ ಆದಂಥ ಗಾಯಬಹುಶಃ ಬೌದ್ಧಿಕ ಮೆಚ್ಚುಗೆ ಮಾಡಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಮಾನಸಿಕವಾಗಿ ಯಾರೂ ಕೂಡ ಅವರಿಗೆ ಆದಂಥ ಗಾಯವನ್ನು ತೆಗೆದುಹಾಕಬೇಕೆನ್ನುವ ದೃಷ್ಟಿಯಿಂದ ಮಾಡಿದ್ದೇವೆಯೇ ಹೊರತು ಬೇರೆ ಎನೂ ಇಲ್ಲ.

ಇನ್ನು ಸಾಕ್ಷರತಾ ಆಂದೋಳನದ ಬಗ್ಗೆ ಸನ್ಮಾನ್ಯ ರಾಮಯ್ಯನವರು ಹೇಳಿದರು, ಬಹುಶಃ ಕೆಲವು ಕಡೆ ಆ ಸಾಕ್ಷರತಾ ಆಂದೋಳನದ ಬಗ್ಗೆ ಬಹಳ ಹೊತ್ತು ಮಾತನಾಡಿದರು. ಅದರ ಬಗ್ಗೆ ನಾನು ಮಾತನಾಡುವುದಾದರೆ ಬಹಳ ಜಾಸ್ತಿ ಮಾತನಾಡುತ್ತೇನೆ. ಅದಕ್ಕೋಸ್ಕರ ಆ ಸಂದರ್ಭ ಬಂದಾಗ ಮಾತನಾಡುತ್ತೇನೆ. ಅದು ತಮಗೆ ತೊತ್ತಿದೆ. 1991ನೇ ಇಸವಿಯಲ್ಲಿ ನಮ್ಮ ಭಾರತದಲ್ಲಿ ಸಾಕ್ಷರತೆ ಎಷ್ಟಿತ್ತು ಎಂದರೆ 3.67 ಪರ್ಸೆಂಟ್, 1947ನೇ ಇಸವಿಯಲ್ಲಿ ಅದು 16 ಪರ್ಸೆಂಟ್ ಆಯಿತು. ಇವತ್ತಿಗೂ ಬಹುಶಃ 1981 ಸ್ಟಾಟಿಸ್ಟಿಕ್ ಪ್ರಕಾರ 52ಪರ್ಸೆಂಟ್ ಆಯಿತು.

1991ರ ಸೆನ್ಸಸ್ ಪ್ರಕಾರ ಸ್ವಲ್ಪ ಜಾಸ್ತಿ ಬೆಳೆದಿದೆಯೋ ಏನೋ. ಇದೇರೀತಿ ನಮ್ಮ ದೇಶದಲ್ಲಿ ಸಾಕ್ಷರತೆ ಆದರೆ ಇನ್ನು ಒಂದು ಶತಮಾನಹಾಗುತ್ತದೆ. ಈ ಸಾಕ್ಷರತಾ ಆಂಧೋಳನದಿಂದ ಬಹುಶಃ ನಾವು 100ಕ್ಕೆ ಹೋದತಕ್ಕಂಥ ಅನುಭವ, ಬರೆಯತಕ್ಕಂಥ ಅನುಭವ ಜಾಸ್ತಿ ಇಲ್ಲ. ಆದರೆ ಅದರ ಸೈಕಲಾಜಿಕಲ್ ಪರಿಣಾಮ ಏನಾಗುತ್ತದೆಂದು ಹೇಳಿ ತಾವು ಆಲೋಚನೆ ಮಾಡಬೇಕಾಗುತ್ತದೆ. ಇದು ಮಾನಸಿಕವಾಗಿ ಯಾರು ಹೆತ್ತವರು ಇದ್ದಾರೆ ಅವರು ಬಹುಶಃ ಮುಂದೆ ಬರತಕ್ಕಂಥ ದಿವಸಗಳಲ್ಲಿ ಸುಧಾರಣೆಯನ್ನು ಶಿಕ್ಷಣ ನೋಡಿಸಬಹುದು. ನಮ್ಮಲ್ಲಿ ಅನೇಕ ಶಾಲಾ ಕಾಲೇಜುಗಳನ್ನು ಮಾಡುತ್ತೀವೆ, ಅಲ್ಲಿ ಕೆಪಾಸಿಟಿ ಪೂರ್ತಿ ಯೂಟಿಲೈಸ್ ಆಗುವುದು ಇದೆ, ಇಲ್ಲ ದುರುಪಯೋಗವಾಗುವುದು ಇರುತ್ತದೆ. ಶಿಕ್ಷಣದ ಮಹತ್ವ ತಿಳಿಯದಿರತಕ್ಕಂಥ ಪೇರೆಂಟ್ಸ್ ಎನಿದ್ದಾರೆ ಅವರಿಗೆ ಮಕ್ಕಳನ್ನು ಶಾಲೆಗೆ ಕಳುಹಿಸತಕ್ಕಂಥ ಮಾನಸಿಕವಾದಂಥ ಸಿದ್ದತೆ ಇರುವುದಿಲ್ಲ. This will have a chain effect. ಇದರಿಂದ ಬಹಳ ಒಳ್ಳೆಯ ಪರಿಣಾಮವಾಗುತ್ತದೆ. ಇದರ ಬಗ್ಗೆ ಪ್ರತ್ಯೇಕವಾಗಿ ಮಾತನಾಡಲಿಕ್ಕೆ ಇಚ್ಚಿಪಡುವುದಿಲ್ಲ. ಆದರೆ ನಾವು ಆಲೋಚನೆ ಮಾಡಿ ಒಂದೊಂದು ಜಿಲ್ಲೆಗೆ ಪೂರ್ತಿ ಸಾಕ್ಷರತೆ ಆಗಲಿಕ್ಕೆ ಬಹುಶಃ ಎರಡುಕೋಟಿ ಮೂರುಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡುತ್ತಿದ್ದೇವೆ. ಆದರೆ ಕೆಲವು ಕಡೆಗಳಲ್ಲಿ ಅದರ ಪ್ರಮಾಣ 4ಕೋಟಿ ರೂಪಾಯಿಗಳು ಆಗಬಹುದು. ಮುಂದೆ ಇದರ ಒಂದು ಗಾತ್ರ ಎಷ್ಟೆಂದು ಹೇಳಿದರೆ ಒಂದು ಸಾವಿರ ಕೋಟಿ ಸಾಕು. ಎತಕ್ಕೆಂದರೆ ಒಂದು ಶತಮಾನದಲ್ಲಿ ನಾವು ಅಷ್ಟು ಖರ್ಚುಮಾಡಿರಬಹುದು. ಇವತ್ತು ಇನ್ನೊಂದು 48 ಪರ್ಸಂಟ್ ನಮ್ಮ ಸಾಕ್ಷರತೆಯನ್ನು ಮಾಡಲು ಬಹುಶಃ ಒಂದೊಂದು ಜಿಲ್ಲೆಗೆ 4 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಈಗ ಕೇರಳದಲ್ಲಿ ಪೂರ್ತಿ ಸಾಕ್ಷತೆ ಪಡೆದಂಥ ರಾಜ್ಯವಾಗಿದೆ. ನಮಗೆ ಗೊತ್ತಿದೆ ಕೇರಳಕ್ಕೆ ಹೋಗಿ ತಾವು ನೋಡಬೇಕು, ಏನು ಪ್ರಯತ್ನವಾಗಿದೆ ಎಂದು. ಈಗ ಅಲ್ಲಿ ಆರ್ಥಿಕವಾಗಿ ಅಭಿವೃದ್ಧಿ ಪ್ರಾರಂಭವಾಗಿದೆ. ತಮಗೆ ಗೊತ್ತಿರುವ ಹಾಗೆ ಕೃಷಿ ಕಾರ್ಮಿಕ ಕೈಗಾರಿಕಾ ಕಾರ್ಮಿಕ ಏನಿದ್ದಾನೆ ಅವನು ಪ್ರಾಥಮಿಕವಾಗಿ ಏನೂ ಕಲಿಯಬೇಕಾಗಿಲ್ಲ. ಸಾಕ್ಷರತೆ ಪರಿಜ್ಞಾನ ಬಂದರೆ ವಿಶ್ವ ಸಂಸ್ಥೆಯ ಅಧ್ಯಯನ ಪ್ರಕಾರ 25-30 ಪರ್ಸೆಂಟ್ ಅವನ ಸಂಪಾದನೆ ಶಕ್ತಿ ಜಾಸ್ತಿಯಾಗುತ್ತದೆ. ಇದು ಅಧ್ಯಯನದ ಮಾಡಿ ಹೇಳಿರತಕ್ಕದ್ದು. ಆ ವಿವರಕ್ಕೆ ನಾನು ಈಗ ಹೋಗುವುದಿಲ್ಲ. ಆದರೆ ಸಾಕ್ಷರತೆ ಬಗ್ಗೆ ಒಂದು ಮಾತು ಒಪ್ಪಿದ್ದೇನೆ. ಇದರಲ್ಲಿ ಎಲ್ಲಾ ಶಾಸಕರನ್ನು, ಜನರ ಪ್ರತಿನಿಧಿಗಳನ್ನು ಇನ್ವಾಲ್ವ್ ಮಾಡಬೇಕು. ಅದು ಕೆಲವು ಕಡೆ ಆಗುತ್ತಿಲ್ಲ. ಅಧಿಕಾರಿಗಳು ಆಂಧೋಳನ ಮಾಡುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಅದು ಆಗದಂತೆ ನೋಡಿಕೊಳ್ಳೋಣ. ನಾವು ಈ ಜವಾಬ್ದಾರಿ ತೆಗೆದುಕೊಳ್ಳಬೇಕು. ಜನರ ಪ್ರತಿನಿಧಿಗಳು ಜವಾಬ್ದಾರಿ ತೆಗೆದುಕೊಳ್ಳಬೇಕು. ಜವಾಬ್ದಾರಿ ತೆಗೆದುಕೊಳ್ಳಬೇಕಾದರೆ ವಿಶ್ವಾಸ ಬೇಕು. ವಿಶ್ವಾಸ ಶಿಥಿಲವಾದರೆ ಇಂಥ ಚಳುವಳಿ ಯಶಸ್ವಿಯಾಗುವುದಿಲ್ಲ. ಅದರ ಬಗ್ಗೆ ಪ್ರಯತ್ನ ಮಾಡೋಣ. ನನಗೆ ಡಿಸಂಬರ್ 1993ರಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ ಸಂಪೂರ್ಣ ಸಾಕ್ಷರತೆಯ ಆಗಬೇಕೆಂಬ ಆಸೆ ಇತ್ತು. ಆದರೆ 6-8 ತಿಂಗಳು ಹೆಚ್ಚು ಕಡಿಮೆಯಾಗಿದೆ. ಇದಕ್ಕೆ ಬಾಲಗ್ರಹ ಬಂದಿದೆ. ಡಿಸೆಂಬರ್ 1994ರ ಮೊದಲಾದರೂ ಇಡೀ ಕರ್ನಾಟಕ ರಾಜ್ಯ ಸಾಕ್ಷರತೆಯ ರಾಜ್ಯವಾಗತಕ್ಕ ಕನಸು ಅಲ್ಲ, ಆ ಕನಸು ನನಸಾಗತಕ್ಕ ವಿಶ್ವಾಸವನ್ನು

ಪಡೆದುಕೊಳ್ಳೋಣ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಜಕನೂರ್ ರವರು ಒಂದು ಪ್ರಶ್ನೆಯನ್ನು ಎತ್ತಿದರು. ಅದೇನೆಂದರೆ, ಮೊನ್ನೆ 21-11-92ರವರಗೆ ಗೋವಾ ಮತ್ತು ಮಹಾರಾಷ್ಟ್ರಕ್ಕೆ ಹೋಗತಕ್ಕ ಕಬ್ಬು ಏನಿದೆ ಅದಕ್ಕೆ ಪರ್ಚೇಸ್ ಟ್ಯಾಕ್ಸ್ ಎಕ್ಸೆಮ್‌ಷನ್ ಇತ್ತು. ಅದರಲ್ಲಿ ಗೋವಾಕ್ಕೆ ಎಕ್ಸೆಮ್‌ಷನ್ ಕಂಟಿನ್ಯೂ ಮಾಡಿದ್ದೀರಿ, ಮಹಾರಾಷ್ಟ್ರಕ್ಕೆ ಮಾಡಿಲ್ಲ, ಅದನ್ನು ಟರ್ಮಿನೇಟ್ ಮಾಡಿದ್ದೀರಿ ಎಂಬ ಮಿಚಾರವನ್ನು ಅವರು ಎತ್ತಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಎತ್ತಿದ್ದಾರೆ. ಆ ಭಾಗದಿಂದ ಬಂದ ಎಲ್ಲಾ ಮಾನ್ಯ ಸದಸ್ಯರು ಈ ವಿಚಾರವನ್ನು ಎತ್ತಿ ಒತ್ತಾಯ ಮಾಡಿದ್ದಾರೆ. ಅದನ್ನು ಮುಂದುವರಿಸಬೇಕೆಂದು ಹೇಳಿದ್ದಾರೆ. ನಮಗೆ ಒಂದು ವರದಿ ಬಂದಿದೆ. ಅದರ ಪ್ರಕಾರ ಅಲ್ಲಿ ಬೆಳೆ ಕಡಿಮೆ ಇದೆ, ಈ ಸಾರಿ ಹೆಚ್ಚು ಕಬ್ಬು ಬೆಳೆದಿಲ್ಲ, ಮತ್ತು ನಮ್ಮ ಕಾರ್ಖಾನೆಗೆ ತೊಂದರೆಯಾಗಬಹುದೆಂಬ ಶಂಕೆ ವ್ಯಕ್ತಪಡಿಸಿದ್ದರಿಂದ ಅದರ ಬಗ್ಗೆ ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಆದರೆ ಪುನಃ ಅಧ್ಯಯನ ಮಾಡಿ ವಿಚಾರ ಸಂಗ್ರಹ ಮಾಡಿದ ಮೇಲೆ 21-11-92ರವರೆಗೆ ಏನು ಪರ್ಚೇಸ್ ಟ್ಯಾಕ್ಸ್‌ಎಕ್ಸಮ್‌ಷನ್ ಮಹಾರಾಷ್ಟ್ರದ ಕಡೆಗೆ ಹೋಗುವುದಕ್ಕೆ ಇತ್ತು ಅದನ್ನು ಮುಂದುವರಿಸಿಸುವುದಕ್ಕೆ ನಿರ್ಣಯ ಮಾಡಿದ್ದೇವೆ. ಮಾನ್ಯ ವೆಂಕಟಪ್ಪನವರು ಮೋಟೆಲ್ ಮಾಡಿದ್ದರ ಬಗ್ಗೆ ಹೇಳಿದರು. ನಾನು ಪ್ರವಾಸೋದ್ಯಮ ಸಚಿವನಾಗಿ 1980-83ರ ಅವಧಿಯಲ್ಲಿದ್ದಾಗ ಆ ಭಾಗಕ್ಕೆ ಅದನ್ನು ಮಾಡಬೇಕೆಂದು ಯೋಚನೆ ಮಾಡಿ ಈಗ ಪೂರ್ತಿಯಾಗಿದೆ. ಫರ್ನಿಚರ್ ಕೊಟ್ಟು ಪ್ರಾರಂಭ ಮಾಡಬೇಕೆಂದು ಹೇಳಿದ್ದೆವು, ತಕ್ಷಣ ಮಾಡುತ್ತೇವೆ. ನಾನು ಸ್ವಲ್ಪ ಹೆಚ್ಚು ಸಮಯ ತೆಗೆದುಕೊಂಡೆ, ಮಾನ್ಯ ಸದಸ್ಯರೆಲ್ಲರೂ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಏನು ಟೀಕೆ ಮಾಡಿದ್ದರೂ ಅದನ್ನು ಆಶೀರ್ವಾದ ರೂಪದಲ್ಲಿ ಸ್ವೀಕರಿಸಿ ಮುಂದೆ ಬರತಕ್ಕ ದಿನಗಳಲ್ಲಿ ಅವರ ಸಲಹೆಗಳನ್ನು ಪ್ರಮಾಣಿಕವಾಗಿ ಅನುಷ್ಠಾನ ಮಾಡಲಿಕ್ಕೆ ಎಲ್ಲಾ ಪ್ರಯತ್ನ ಮಾಡುತ್ತೇನೆಂದು ಹೇಳಿ ತಮ್ಮ ಮೂಲಕ ಮಾನ್ಯ ಸದಸ್ಯರು ಸಹೃದಯದಿಂದ ಈ ಮೂಲಕ ಬೇಡಿಕೆಗಳನ್ನು ಮಂಜೂರೂ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಹೆಜ್ಜೆ ಹೆಜ್ಜೆಗೆ ಆಶೀರ್ವಾದ ಕೇಳುತ್ತಿದ್ದಾರೆ. ಈ ಸದನದಲ್ಲಿ ಸುಮಾರು 10-20 ಸಾರಿ ಕೇಳಿದ್ದಾರೆ. ನಾವು ಆಶೀರ್ವಾದ ಮಾಡುತ್ತಾ ಹೋದರೆ ನಿಮಗೆ ತೊಂದರೆಯಾಗಬಾರದು. ಆದುದರಿಂದ ಸ್ವಲ್ಪ ಕಡಿಮೆ ಆಶೀರ್ವಾದ ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈಗ ಕನ್ನಡ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಿದೆ. ಅದಕ್ಕೆ ಹಣ 11.13 ಲಕ್ಷ ಕೇಳಿದ್ದೀರಿ. ಡಾ॥ ಸರೋಜಿನಿ ಮಹಿಷಿಯವರ ವರದಿಯನ್ನು ಅನುಷ್ಠಾನ ಮಾಡುವ ಅಧಿಕಾರವನ್ನು ಸಂಪೂರ್ಣವಾಗಿ ಈ ಪ್ರಾಧಿಕಾರಕ್ಕೆ ಅಧಿಕಾರ ಕೊಡುತ್ತಿದ್ದೀರಿ. ಅದಕ್ಕೆ ಆಗತಕ್ಕ ಖರ್ಚು ಹೇಳಿದ್ದೀರಿ. ನನಗನಿಸುತ್ತದೆ, ಮಾನ್ಯ ಮುಖ್ಯಮಂತ್ರಿಗಳು ಮೊದಲಿನಿಂದಲೂ ಅವರು ಕನ್ನಡದ ಬಗ್ಗೆ, ಕನ್ನಡ ಪ್ರಾಧಿಕಾರದ ಬಗ್ಗೆ, ಕನ್ನಡ ಅಕೆಡಮಿಗಳ ಬಗ್ಗೆ ಅಪಾರವಾದ ಕಾಳಜಿಯನ್ನು ಅವರು ಹಿಂದೆ ಮಂತ್ರಿಗಳಾಗಿದ್ದ ಸಮಯದಿಂದಲೂ ಇಟ್ಟುಕೊಂಡು ಬಂದಿರುವಂತಹವರಾಗಿದ್ದಾರೆ.

ಡಾ|| ಸರೋಜಿನಿ ಮಹಿಷಿ ವರದಿಯನ್ನು ಸರ್ಕಾರ ಮೊದಲು ತಾತ್ವಿಕವಾಗಿ ಒಪ್ಪಿದೆಯೇ? ಒಪ್ಪಿದ್ದರೆ ಎಷ್ಟು ವರ್ಷಗಳಲ್ಲಿ ಈ ವರದಿಯನ್ನು ಜಾರಿಗೊಳಿಸುತ್ತೀರಿ ಎನ್ನುವುದ 2ನೇ ಪ್ರಶ್ನೆ. ಈಗಾಗಲೇ ಸರೋಜಿನಿ ಮಹಿಷಿಯವರ ವರದಿ ಬಗ್ಗೆ ಅನುಮಾನಗಳ ಮೇಲೆ ಅನುಮಾನಗಳು ಉದ್ಭವವಾಗಿದೆ. ಇವತ್ತಿನವರೆಗೂ ಈ ವರದಿ ಮೂಲೆ ಗುಂಪಾಗಿದೆ. ಸುಮ್ಮನೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಎಂದು ಹೇಳಿ ಹೆಸರು ಇಟ್ಟು ಅದಕ್ಕೆ ಕೈ ಇಲ್ಲ, ಕಾಲೂ ಇಲ್ಲ, ಹೃದಯ ಇಲ್ಲದಂತಾಗಿದೆ. ಒಂದು ಕಾರು, ಒಂದು ಆಫೀಸು,ಒಂದು ವ್ಯವಸ್ಥೆಗಾಗಿ ಇದ್ದಂತೆ ಇದೆ. ಇದರ ಮೂಲ ಉದ್ದೇಶ ಸರೋಜಿನಿ ಮಹಿಷಿಯವರ ವರದಿಯನ್ನು ಜಾರಿಗೆ ತರತಕ್ಕದ್ದು, ಪ್ರಾಮಾಣಿಕವಾಗಿ ಜಾರಿಗೆ ತರತಕ್ಕದ್ದು ಕಾರ್ಯಕ್ರಮ ಏನು ಹಾಕಿದ್ದೀರಿ? ಈ ವರದಿ ಕೊಟ್ಟು ಸುಮಾರು 6 ವರ್ಷಗಳೇ ಆಗಿವೆ. 3 ವರ್ಷವೇ ಎಂದು ಇಟ್ಟುಕೊಳ್ಳೋಣ. ಈ 3 ವರ್ಷಗಳಲ್ಲಿ ಪ್ರತಿ ಸರ್ಕಾರಗಳು ಈ ವರದಿಯನ್ನು ಒಪ್ಪಿದ್ದೇವೆ, ಅನುಷ್ಠಾನಕ್ಕೆ ತರುತ್ತಿದ್ದೇನೆ ಎಂದು ಹೇಳುತ್ತಲೇ ಇವೆ. ಪ್ರಾಮಾಣಿಕವಾಗಿ ಇದನ್ನು ಯಾವಾಗ ಅನುಷ್ಠಾನಕ್ಕೆ ತರುತ್ತೀರಿ? ಅನುಷ್ಠಾನವನ್ನು ಕಾರ್ಯಗತಗೊಳಿಸತಕ್ಕ ವಿಚಾರ ಏನು, ವ್ಯವಸ್ಥೆ ಏನು ಇದೆ? ಈ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೀರಾ ತಿಳಿಸಿ. ಡಾ|| ಸರೋಜಿನಿ ಮಹಿಷಿ ವರದಿ ಬಂದ ತಕ್ಷಣ ಹಿಂದಿನ ಸರ್ಕಾರ ಮತ್ತೊಂದು ಸಮಿತಿಯನ್ನು ರಚನೆ ಮಾಡುತ್ತೇವೆಂದು ಹೇಳಿತ್ತು. ಅದರಿಂದಾಗಿ ನಮಗೆ ಅನುಮಾನ ಬಂದಿದೆ. ಈ ವರದಿಯನ್ನು ನಿಮ್ಮ ಕೈಯಲ್ಲಿ, ಜಾರಿಗೆ ತರುತ್ತೀರೋ ಇಲ್ಲವೋ ಎಂದು ಅನುಮಾನ.

ಇನ್ನು ಎರಡನೆಯದಾಗಿ, ಶಿವಮೊಗ್ಗ ಮತ್ತು ಭದ್ರಾವತಿಗೆ 3 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದುದು ಸಂತೋಷ. ಮಹಾನಗರಪಾಲಿಕೆಗಳು ನಡೆಯುವುದಕ್ಕೆ ಹಣದ ಕೊರತೆ ಇದೆ. ಕರ್ನಾಟಕ ರಾಜ್ಯದಲ್ಲಿ 100ಕ್ಕೆ 90 ಪುರಸಭೆಗಳು ಶಕ್ತಿಹೀನವಾಗಿ, ಪೊರಕೆಯನ್ನು ಕೂಡ ಖರೀದಿ ಮಾಡುವುದಕ್ಕೆ ದುಡ್ಡು ಇಲ್ಲದ ಪರಿಸ್ಥಿತಿಯಲ್ಲಿ, ನೌಕರರಿಗೆ ಸಂಬಳ ಕೊಡಲು ಹಣ ಇಲ್ಲದ ಪರಿಸ್ಥಿತಿಯಲ್ಲಿ ಇದೆ. ಇವುಗಳ ಉತ್ಪಾದನೆಯನ್ನು ಹೆಚ್ಚು ಮಾಡುವುದಕ್ಕೆ, ಈ ಪುರಸಭೆಗಳಿಗೆ ಹೆಚ್ಚಿನ ಹಣವನ್ನು ಒದಗಿಸುವುದಕ್ಕೆ ತಮ್ಮ ಸರ್ಕಾರದಲ್ಲಿ ಒಂದು ಹೊಸ ಯೋಜನೆಯನ್ನು ಏನಾದರೂ ತಯಾರು ಮಾಡಿದ್ದೀರಾ?

ಇನ್ನು ಮೂರನೆಯದಾಗಿ, ದೆಹಲಿಯಲ್ಲಿ ಕರ್ನಾಟಕ ಭವನ ಇದೆ. ನಾವು ಕರ್ನಾಟಕ ಭವನಕ್ಕೆ ಹೋಗುತ್ತಿರುತ್ತೇವೆ. ಅದು ಕರ್ನಾಟಕ ಭವನವೋ, ಗುಜರಾತ್ ಭವನವೋ ಅಥವಾ ಆಂಧ್ರ ಭವನವೋ ಅಥವಾ ಮಹಾರಾಷ್ಟ್ರ ಭವನವೋ ಅಥವಾ ಅದು ಸರ್ವ ರಾಜ್ಯಗಳ ಭವನವೋ ಎಂದು ಗೊತ್ತಾಗುತ್ತಿಲ್ಲ. ಅದು ಕರ್ನಾಟಕ ಭವನ ಅಲ್ಲ, ಎಲ್ಲಾ ರಾಜ್ಯಗಳ ಕೆಲಸಗಾರರು ಅಲ್ಲಿ ಇದ್ದಾರೆ. ಕರ್ನಾಟಕ ಭವನ ಅದು ಅಲ್ಲ ಅಲ್ಲಿ ಎಲ್ಲಾ ರಾಜ್ಯಗಳ ಕೆಲಸಗಾರರಿದ್ದಾರೆ. ನಾವು ಅಲ್ಲಿಗೆ ಹೋದಾಗ ಆ ಭಾಷೆಗಳನ್ನು ಕಲೆತುಕೊಂಡು ಹೋಗಬೇಕು. ಬಹಳ ಕಷ್ಟ ಆಗಿದೆ. ಅವರ ಜೊತೆ ನಾವು ಕೈ ಬಾಯಿ ಸನ್ನೆ ಮಾಡಿ ಊಟ ಕೊಡಿ ಎಂದು ಹೇಳಬೇಕು. ದೋಸೆ ಕೇಳಿದರೆ ಪೂರಿ ಕೊಡುತ್ತಾರೆ. ಹೀಗಾಗಿ ನಮ್ಮ ಪರಿಸ್ಥಿತಿ ಗೊಂದಲದಲ್ಲಿ ಇದೆ.

ನಿಜವಾಗಿಯೂ ಅಲ್ಲಿ ಕನ್ನಡದ ನೌಕರರಿಗೆ ಮತ್ತು ಕರ್ನಾಟಕ ಭವನಕ್ಕೆ ಆ ಹೆಸರಿಗೆ ಚ್ಯುತಿ ಬರದ ರೀತಿಯಲ್ಲಿ ವ್ಯವಸ್ಥೆ ಮಾಡುವ ಚಿಂತನೆ ತಮಗೆ ಇದೆಯೇ? ಕರ್ನಾಟಕ ಭವನಕ್ಕೆ ನಾವು ಹೋದಾಗ, ಕರ್ನಾಟಕ ಭವನಕ್ಕೆ ಹೋದಂತೆ ಅನಿಸುವುದಿಲ್ಲ. ಗುಜರಾತ್ ಭವನಕ್ಕೆ ನಾವು ಹೋದಾಗ ಏನು ಪರಿಸ್ಥಿತಿ ಇರುತ್ತದೆಯೋ ಅದೇ ಪರಿಸ್ಥಿತಿ ಇಲ್ಲೂ ಆಗುತ್ತದೆ.

ಬಹಳ ಅತ್ಯಂತ ಶೋಚನೀಯ ಸ್ಥಿತಿಯಲ್ಲಿ ಕರ್ನಾಟಕ ಭವನ ಇದೆ. ಪ್ರಾರಂಭದಿಂದ ಹೀಗೆಯೇ ಆಗಿದೆ. ನಮ್ಮ ಕರ್ನಾಟಕ ಭವನದ ಪಕ್ಕದಲ್ಲಿ ಉತ್ತರಪ್ರದೇಶದ ಭವನ, ಆಮೇಲೆ ಜಮ್ಮುಕಾಶ್ಮೀರದ ಭವನ. ಕರ್ನಾಕ ಭವನವನ್ನು ಪ್ರಾಮಾಣಿಕವಾಗಿ ಕರ್ನಾಟಕ ಭವನ ಮಾಡಲಿಕ್ಕೆ ಏನಾದರೂ ವ್ಯವಸ್ಥೆ ಇದೆಯೇ? ಅಲ್ಲ ಬೇರೆಯವರು ಬಂದಿದ್ದರೆ ಕನ್ನಡ ಕಲಿತಿದ್ದಾರೆಯೇ? ಅವರು ಕನ್ನಡ ಕಲಿತಿಲ್ಲ. ಅಲ್ಲಿರತಕ್ಕವರಿಗೆ ನೂರಕ್ಕೆ 88 ಜನರಿಗೆ ಕನ್ನಡ ಗೊತ್ತಿಲ್ಲ. ಅಲ್ಲಿ ನಾವು ಗೊಂದಲಕ್ಕೆ ಸಿಕ್ಕಿದ್ದೇವೆ. ಈ ಗೊಂದಲ ಪರಿಹಾರ ಮಾಡಬೇಕಾದರೆ ಕರ್ನಾಟಕ ಭವನ ಎನ್ನತಕ್ಕ ಅನ್ವರ್ಥನಾಮ ಉಳಿಯಬೇಕಾದರೆ ತಾವು ಏನಾದರೂ ಮಾಡುತ್ತೀರಾ ಅದರ ಬಗ್ಗೆ ದಯಮಾಡಿ ತಿಳಿಸಬೇಕು. ನಾನು ಪ್ರಮುಖವಾಗಿ ಮುರ್‍ನಾಲ್ಕು ಪ್ರಶ್ನೆಗಳನ್ನು ಎತ್ತಿದ್ದೇನೆ. ಮೂಲಭೂತವಾಗಿ ತಾವು ಅದಕ್ಕೆ ಉತ್ತರ ಹೇಳಲಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ : ಡಾ|| ಸರೋಜಿನಿ ಮಹಿಷಿ ವರದಿಯ ಬಗ್ಗೆ ಕನ್ನಡಕ್ಕೆ ಅಗ್ರಪೀಠ ಕರ್ನಾಟಕದಲ್ಲಿ, ನಾನೇ ಕ್ಯಾಬಿನೇಟ್ ಉಪಸಮಿತಿಯ ಅಧ್ಯಕ್ಷನಾಗಿದ್ದೆ. ಅಧ್ಯಕ್ಷನಾಗಿ ಕನ್ನಡ ಅನುಷ್ಠಾನವನ್ನು ಯಾವ ರೀತಿಯಲ್ಲಿ ಮಾಡಬೇಕು ಕನ್ನಡ ಯಾವ್ಯಾವ ಕ್ಷೇತ್ರದಲ್ಲಿ ಇರಬೇಕೆಂದು ಈಗಾಗಲೇ ವರದಿಯನ್ನು ಕೊಟ್ಟ್ಟಿ ಅದರಲ್ಲಿ ಕೆಲವು ಅಂಶಗಳನ್ನು ಇದರಲ್ಲಿ ಅನುಷ್ಠಾನಕ್ಕೆ ತರಲಾಗಿದೆ. ಯಾವ ವಿಚಾರ ಅನುಷ್ಠಾನವಾಗಿಲ್ಲ ಅದನ್ನು ನಾವು ಖಂಡಿತಾ ಪರಿಶೀಲನೆ ಮಾಡಿ ತಮಗೆ ಕನ್ನಡದ ಬಗ್ಗೆ ಮತ್ತು ನಮ್ಮ ಮೇಲೆ ನಿಮಗೆ ಏನು ವಿಶ್ವಾಸವಿದೆ ಆ ವಿಶ್ವಾಸಕ್ಕೆ ಸರಿಯಾಗಿ ನಾವು ಕನ್ನಡ ಅಭಿವೃದ್ಧಿ ಬಗ್ಗೆ ಅದರ ಪೂರೋಭಿವೃದ್ಧಿ ಬಗ್ಗೆ ಖಂಡಿತವಾಗಿ ಕೆಲಸ ಮಾಡುತ್ತೇವೆ. ಇದರಲ್ಲಿ ಯಾವ್ಯಾವ ಅಂಶ ಅನುಷ್ಠಾನವಾಗಿದೆ ಯಾವುದು ಆಗಿಲ್ಲ ಅದರ ಬಗ್ಗೆ ಪ್ರತ್ಯೇಕವಾಗಿ ಸದನದಲ್ಲಿ ಉತ್ತರ ಕೊಡುತ್ತೇನೆ. ಅವರು ಹೇಳಿದ್ದುದು ಸರಿ ಪುರಸಭೆಗಳು ಪುನರ್ ವ್ಯವಸ್ಥೆಯಾಗಬೇಕು. ತಮಗೆ ಗೊತ್ತಿದೆ ಪ್ರವೇಶ ತೆರಿಗೆಯ ಕಾನೂನು ತಿದ್ದುಪಡಿ ಮಾಡುವುದು ಇದು ಒಂದು ಉದ್ದೇಶ. ಏಕೆಂದರೆ ಈಗಿರತಕ್ಕ ಪುರಸಭೆಗಳ ವ್ಯವಸ್ಥೆಗೆ ಹೆಚ್ಚು ಸಂಪನ್ಮೂಲ ಒದಗಿಸಬೇಕು ಎಂಬ ಉದ್ದೇಶದಿಂದ ನಾವು ಪ್ರವೇಶ ತೆರಿಗೆ ಕಾನೂನು ತಿದ್ದುಪಡಿ ಮಾಡಿದ್ದೇವೆ. ನಾವು ಕೊಡತಕ್ಕ ಸಹಾಯದ ದಾಮಾಷಃ ಹೆಚ್ಚುವರಿ ಮಾಡತಕ್ಕ ವಿಚಾರ ಸರ್ಕಾರದ ಮುಂದಿದೆ. ಆಗ ಬಹುಶಃ ಪುರಸಭೆಗಳಿಗೆ ಹೆಚ್ಚಿನ ಸಂಪನ್ಮೂಲ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಕರ್ನಾಟಕ ಭವನದ ಬಗ್ಗೆ ಹೇಳಿದ್ದಾರೆ. ಕರ್ನಾಟಕ ಭವನವೆಂಬ ಅನ್ವರ್ಥನಾಮಕ್ಕೆ ಅಲ್ಲಿ ಕನ್ನಡ ಬರುವ ಹಾಗೆ ಕನ್ನಡದ ಸಮಗ್ರತೆ ಮೊಳಗುವ ಹಾಗೆ ಏನು ವ್ಯವಸ್ಥೆ ಮಾಡಬೇಕೋ ಅದನ್ನು ನಾನು ಮಾಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ನಾನು ಮಾತನಾಡುವಾಗ ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲಿರಲಿಲ್ಲ. ನಾನು ಅಂದುಕೊಂಡಂತೆ ನಾವು ಯಾವ್ಯಾವ ವಿಚಾರಗಳನ್ನು ಒಪ್ಪಬಹುದು ಅಷ್ಟು ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆ.

ನಾನು ನಾಲ್ಕೈದು ವಿಚಾರಗಳನ್ನು ಬಹುಮುಖ್ಯವಾಗಿ ಪ್ರಸ್ತಾಪ ಮಾಡಿದ್ದೇವೆ. ಮೊದಲನೆಯದಾಗಿ ಸಾದಿಲ್ವಾರು ನಿಧಿ ಆ ನಿಧಿಯ ನಿಯಮಗಳಿಗೆ ವಿರುದ್ಧವಾಗಿ ತಾವು ಹಣವನ್ನು ಬಿಡುಗಡೆ ಮಾಡಿದ್ದೀರಿ. ಅನ್ ಫೋರ್ಸೀನ್ ಎಕ್ಸಿಪೆಂಡಿಚರ್‌ನ್ನು ಯಾವ ಸಂದರ್ಭದಲ್ಲಿ ಮಾಡಬೇಕು ಅದಕ್ಕೆ ಮಾಡುವುದಕ್ಕೆ ನಾವು ಒಪ್ಪಿಕೊಂಡಿದ್ದೇವೆ. ನೆರೆಹಾವಳಿ, ಗಲಭೆಪೀಡಿತ ಪ್ರದೇಶ, ರೈತರಿಗೆ ಕೊಡಬೇಕಾದ ಸಹಾಯಾರ್ಥ ಯೋಜನೆಗಳು ಅಂತಹ ಕಾರ್ಯಕ್ರಮಗಳಿಗೆ ಕೊಡುವುದು ತಪ್ಪು ಎನ್ನುವ ಮಾತನ್ನು ನಾನು ಹೇಳಲಿಲ್ಲ, ಕೇಂದ್ರ ಸರ್ಕಾರಕ್ಕೆ ಕೊಡಬೇಕಾದ ಹಣವನ್ನು ಕೊಡಲಿಕ್ಕೆ ಬಿಡುಗಡೆ ಮಾಡಿದ್ದು ತಪ್ಪೆಂದು ಹೇಳಲಿಲ್ಲ ಅನೇಕ ಸಂದರ್ಭಗಳಲ್ಲಿ ತಾವೇನು ಹಣವನ್ನು ಬಿಡುಗಡೆ ಮಾಡಿದ್ದೀರಿ ಅದರ ಬಗ್ಗೆ ನಾನು ತಮ್ಮನ್ನು ಕೇಳುತ್ತಿದ್ದೇನೆ, ನಮ್ಮ ರಾಜ್ಯದ ಹಣಕಾಸಿನ ಇಲಾಖೆಯ ಶಿಸ್ತು ಏನಿದೆ ಆ ಶಿಸ್ತನ್ನು ಉಳಿಸದಿದ್ದರೆ ಇದು ಅನ್ಯಾಯವಾಗತ್ತದೆ. ಅದಕ್ಕೆ ಅನೇಕ ಉದಾಹರಣೆಗಳನ್ನು ವಿವರಣೆಗಳನ್ನು ಕೊಡಬಲ್ಲೆ. ಆ ಕೆಲಸವನ್ನು ಈಗ ಮಾಡುವುದಿಲ್ಲ ಬೇರೆ ಸಂದರ್ಭವನ್ನು ಉಪಯೋಗಿಸಿಕೊಳ್ಳುತ್ತೇನೆ. ನಮ್ಮ ಸಾದಿಲ್ವಾರು ನಿಧಿಯಿಂದ ಅನ್‌ಫೋರ್ಸೀನ್ ಎಕ್ಸ್‌ಪೆಂಡಿಚರ್ ಏನಿದೆ ಅದಕ್ಕೆ ಹಣವನ್ನು ಬಿಡುಗಡೆ ಮಾಡುವಂತಹ ಕೆಲಸಕ್ಕೆ ನಿಮ್ಮ ಇಲಾಖೆ ಇದೆಯೇ? ಆದರೆ ಅನೇಕ ಸಂದರ್ಭಗಳಲ್ಲಿ ಏನೊಂದು ನಿಯಮವಿದೆ ಆ ನಿಯಮಗಳ ಅಡಿಯಲ್ಲಿ ಹಣವನ್ನು ಬಿಡುಗಡೆ ಮಾಡಿಲ್ಲ. ತಮಗೆ ಇಷ್ಟ ಬಂದ ರೀತಿಯಲ್ಲಿ ತಮಗೆ ಬೇಕಾದವರಿಗೆ ಸಹಾಯ ಮಾಡಲಿಕ್ಕೆ ನೀವು ಹಣವನ್ನು ಬಿಡುಗಡೆ ಮಾಡಿರುವುದಕ್ಕೆ ನಾನು ಅನೇಕ ಉದಾಹರಣೆಗಳನ್ನು ಈಗಾಗಲೇ ಕೊಟ್ಟಿದ್ದೇನೆ.ಅದಕ್ಕೆ ತಮ್ಮಿಂದ ಉತ್ತರ ಬರಲಿಲ್ಲ. ಈ ವಿಚಾರವಾಗಿ ನಿಮ್ಮ ಹಣಕಾಸಿನ ಇಲಾಖೆಯ ಕಾರ್ಯದರ್ಶಿಗಳಾಗಿರಬಹುದು ಅಲ್ಲಿಯ ಅಧಿಕಾರಿಗಳಿರಬಹುದು ಈವೊಂದು ನಿಯಮಗಳಿಗೆ ವಿರುದ್ಧವಾಗಿ ಹಣವನ್ನು ಬಿಡುಗಡೆ ಮಾಡಬಾರದೆಂದು ಏನಾದರೂ ಟಿಪ್ಪಣಿ ಕೊಟ್ಟಿದ್ದಾರೆಯೇ? ಆ ರೀತಿಯ ಟಿಪ್ಪಣಿ ಕೊಡದಿದ್ದರೆ ಅವರು ಅಶಿಸ್ತಿನ ಕ್ರಮಕ್ಕೆ ಒಳಗಾಗಬೇಡವೇ? ಹಾಗೆ ಕೊಟ್ಟಿದ್ದರೂ ಸಹ ಮಂತ್ರಿಗಳಾದವರು ಈ ಹಣವನ್ನು ಯಾವ ರೀತಿ ಬಿಡುಗಡೆ ಮಾಡಿದಿರಿ Whether it amounts to misconduct of a Minister? ಎಂದು ವಿಚಾರ ಮಾಡಬೇಕಾಗುತ್ತದೆ. ಏತಕ್ಕೋಸ್ಕರ ವಿಚಾರ ಮಾಡಬೇಕಾಗುತ್ತದೆಂದರೆ ನೀವು ಅಧಿಕಾರದಲ್ಲಿದ್ದಾಗ ಶಿಸ್ತನ್ನು ಬೆಳೆಸಿ ನೀವು ಇಷ್ಟಬಂದ ಹಾಗೆ ಮಾಡುವುದಾದರೆ, ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ. ಮುಂದೆ ಸರಿಯಾಗುತ್ತದೆಂದರೆ, ಮುಂದೆ ಬಂದವರೂ ಸಹ ಇದೇ ಮಾತನ್ನು ಹೇಳಬಹುದು. ಆ ದೃಷ್ಟಿಯಿಂದ ನಾನು ಹೇಳುತ್ತೇನೆ. ಹಣಕಾಸಿನ ಇಲಾಖೆಯ ಹಿರಿಯ ಅಧಿಕಾರಿಗಳು ಏನಿದ್ದಾರೆ ಅವರು ಇವುಗಳ ಬಗ್ಗೆ ನಿರ್ದಿಷ್ಟವಾದ ರೀತಿಯಲ್ಲಿ ಕೆಲಸ ಮಾಡದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಆಮೇಲೆ ಸಾದಿಲ್ವಾರು ನಿಧಿಯಿಂದ ಅವರೇನು ಹಣವನ್ನು ಕೊಟ್ಟಿದ್ದಾರೆ ಅದರಲ್ಲಿ ಕೆಲವನ್ನು ನಾವು ಒಪ್ಪಿದ್ದೇವೆ. ನಮ್ಮ ಕಡೆಯವರು ಒಪ್ಪಿದ್ದಾರೆ ನಿಮ್ಮ ಕಡೆಯವರು ಒಪ್ಪಿದ್ದಾರೆ. ಕಿರ್ಲೋಸ್ಕರ್ ಕಂಪನಿಗೆ ಕೊಟ್ಟಿದ್ದುದು ಆಗಲಿ ಅಥವಾ ಬೇರೆ ಬೇರೆ ಕೊಟ್ಟಿರುವುದನ್ನು ನಾನು ಹೇಳಿದ್ದೇನೆ.

ಅಲ್ಲಿ ಅರ್ಜೆನ್ಸಿ ಇರಬೇಕು. ಆದರೆ ಅವಶ್ಯಕತೆ ಇಲ್ಲದೇ ಇದ್ದರೂ ಕೂಡ ಕೊಟ್ಟಿದ್ದರೆ ತಪ್ಪಲ್ಲವೆ? ಅದಕ್ಕಾಗಿ ಇನ್ನೊಂದು ವಿಚಾರವನ್ನು ಕೇಳುತ್ತೇನೆ. 1991-92ನೇ ಸಾಲಿನಲ್ಲಿ ಮಾಡಿರುವ ಖರ್ಚನ್ನು ಈ ಒಂದು ಪೂರಕ ಅಂದಾಜಿನ ಅಡಿಯಲ್ಲಿ

ತಂದು ಒಪ್ಪಿಗೆ ಪಡೆಯುವುದು ಕಾನೂನು ಮತ್ತು ನಿಯಮಕ್ಕೆ ಅನುಗುಣವಾಗಿ ಆಗಿದೆಯೇ? ಮಾನ್ಯ ಮುಖ್ಯಮಂತ್ರಿಗಳು ಆಗ ಇರಲಿಲ್ಲ, ಈಗ ನಾನು ಹೇಳುತ್ತೇನೆ-

Demands or monies spend in excess of the voted grant are not made by way of supplementary grants but in the form of excess over grant.

ನಾನು ತಮಗೆ ಹೇಳಬೇಕಾಗಿಲ್ಲ, ತಾವು ಮುಖ್ಯ ಮಂತ್ರಿಗಳಾಗಿದ್ದೀರಿ, ಹಣಕಾಸಿನ ಮಂತ್ರಿಗಳಾಗಿದ್ದೀರಿ. ತಮಗೆ ಇದರ ಪರಿಚಯ ಇದೆಯೆಂದು ನನಗೆ ಗೊತ್ತಿದೆ.

Expenditure incurred during the previous financial year cannot be regularised by Parliament, by suppliementary demands for grants for the current year.

ನೀವು ಏನು ಮಾಡಬೇಕಿತ್ತು? ಹಿಂದಿನ ವರ್ಷ ಏನಾದರೂ ಹಣ ಖರ್ಚಾಗಿದ್ದರೆ excess over grant ಎಂದು ಪರಿಗಣನೆ ಮಾಡಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸ್ಸು ಬಂದ ಮೇಲೆ ಸಭೆಯ ಅನುಮೋದನೆಗಾಗಿ ಬೇಕಾಗಿತ್ತು. ಅದು ಬಿಟ್ಟು ಪೂರಕ ಅಂದಾಜುಗಳ ಮೂಲಕ 1991-92ನೇ ಸಾಲಿನಲ್ಲಿ ಮಾಡಿದಂಥ ಖರ್ಚುಗಳನ್ನು ಅನುಮೋದನೆಗಾಗಿ ಇಟ್ಟಿದ್ದೀರಿ. ಇದು ಕಾನೂನು ಮತ್ತು ನಿಯಮಗಳಿಗೆ ವಿರುದ್ಧವಲ್ಲವೆ? ಆಮೇಲೆ ನೀವು ರೈತರ ಪರ ಎನ್ನುವ ಮಾತನ್ನು ಹೇಳಿದ್ದೀರಿ. ಒಂದು ವಿಶೇಷವಾದ ಯೋಜನೆಯಲ್ಲಿ 36.96 ಕೋಟಿ ರೂಪಾಯಿಗಳಿಗೆ ಕೇಂದ್ರ ಸರ್ಕಾರ ಅನುಮೋದನೆ ಮಾಡಿದ್ದರೂ ಸಹ ಪೂರಾ ಹಣವನ್ನು ಇಟ್ಟಿಲ್ಲೇ. ಅದಕ್ಕೆ ಬದಲಾಗಿ 15.78 ಕೋಟಿ ಮಾತ್ರ ಇಟ್ಟಿದ್ದೀರಿ ಏಕೆ? ಈ ಯೋಜನೆಯಿಂದ ರೈತರಿಗೆ ಉಪಕಾರವಾಗುತ್ತದೆ. ಅನುಕೂಲವಾಗುತ್ತದೆ ಎಂದು ತಿಳಿದುಕೊಂಡು ಇದನ್ನು ಜಾರಿ ಮಾಡುವುದಕ್ಕೆ ಮನಸ್ಸು ಸರ್ಕಾರಕ್ಕೆ ಇಲ್ಲವೆ? ಇದಾದಮೇಲೆ ಪ್ರೋತ್ಸಾಹಕ ಯೋಜನೆಯ ಅಡಿಯಲ್ಲಿ ಏನು ಹಣ ಕೊಟ್ಟಿದ್ದೀರಿ, ಇದು 31.7.1992ಕ್ಕೆ ಮಾತ್ರ ಸೀಮಿತವಾಗಿದೆ. ನಾನು ತಮ್ಮನ್ನು ಕೇಳಿದ್ದೆ, ಈ ಯೋಜನೆ ಅತ್ಯಂತ ಅವಶ್ಯಕವಾಗಿದೆ. ಯಾವ ಸಬ್ಸಿಡಿ ಕೇಂದ್ರ ಸರ್ಕಾರದಿಂದ ಬರುತ್ತಿತ್ತೋ, ಆ ಒಂದು ಆಧಾರದ ಹಿನ್ನೆಲೆಯಲ್ಲಿ ಇವತ್ತಿನ ದಿವಸ ಒಂದು ಪರಿಹಾರ ಯೋಜನೆಯನ್ನು ರಾಜ್ಯ ಸರ್ಕಾರ ಮುಂದುವರೆಸಬೇಕಾದದ್ದು ಅಗತ್ಯವಿದೆ.

ಇದನ್ನು ಮುಂದುವರಿಸುತ್ತೀರಾ ಇಲ್ಲವೆ?

ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಮಾನ್ಯ ಉಪಾಧ್ಯಕ್ಷರೇ, ಮೂಲಭೂತವಾಗಿ ನನ್ನ ಮಿತ್ರರಾದ ಶ್ರೀ ಏಕಾಂತಯ್ಯ ಅವರು ಕೇಳಿದ ಒಂದು ಪ್ರಶ್ನೆಗೆ ನಾನೂ ಧ್ವನಿಗೂಡಿಸುವುದಕ್ಕೆ ಇಚ್ಛೆಪಡುತ್ತೇನೆ. ಈ ಪೂರಕ ಅಂದಾಜಿನಲ್ಲಿ ಹಣ ಖರ್ಚು ಮಾಡುವುದಕ್ಕೆ ಸದನದಲ್ಲಿ ಯಾವ ಸಂದರ್ಭದಲ್ಲಿ ತರಬಹುದು ಎನ್ನುವುದಕ್ಕೆ ವಿಶಿಷ್ಟ ಸೇವೆಗಳಿಗೆ ಏನಾದರೂ ನಿಗದಿ ಮಾಡಿದಂಥ ಹಣ ಕಡಿಮೆಯಾದಂಥ ಮತ್ತು ಹೊಸಸೇವೆಗಳಿಗೆ-ಈ ಎರಡು ಸಂದರ್ಭಗಳಲ್ಲಿ ಮಾತ್ರ ತರಬಹುದು ಎಂದು ಸ್ಪಷ್ಟವಾಗಿ ಸಂವಿಧಾನದ 205ನೇ ವಿಧಿ ನಿರ್ಬಂಧ ಹಾಕಿದೆ. ಪುಟ

8ರಲ್ಲಿ ನನ್ನ ಮಿತ್ರರು ಹೇಳಿದ ವಾದಕ್ಕೆ ನಾನು ಪುಷ್ಟೀಕರಿಸುತ್ತೇನೆ. ಸುಮಾರು 153 ಲಕ್ಷ ರೂಪಾಯಿಗಳು1991-92ನೇ ಸಾಲಿನಲ್ಲಿ ಖರ್ಚು ಮಾಡಿದಂಥ ಹಣವನ್ನು ಈ ಪೂರಕ ಅಂದಾಜಿನ ಮುಖಾಂತರ ಒಪ್ಪಿಗೆ ಪಡೆಯುವ ಪ್ರಯತ್ನವನ್ನು ಸದನದ ಮುಂದೆ ತಂದು ತಾವು ಮಾಡಿದ್ದೀರಿ. ನಾನು ಒಂದು ವಾಕ್ಯವನ್ನು ಮಾತ್ರ ಓದುತ್ತೇನೆ.

"...1991-92ನೇ ಸಾಲಿನಲ್ಲಿ ಬಾಕಿ ಇರುವ ಬಿಲ್ಲುಗಳಿಗೆ 1991-92ನೇ ಸಾಲಿನಲ್ಲಿ ಪಾವತಿ ಮಾಡಬೇಕಾಗಿ ಬಂದಿದ್ದರಿಂದ ಆಯವ್ಯಯದಲ್ಲಿ ಒದಗಿಸಲಾದ ಮೊಬಲಗು ಸಾಕಾಗುತ್ತಿರಲಿಲ್ಲವಾದ ಕಾರಣ 153 ಲಕ್ಷ ರೂಪಾಯಿಗಳು ಸಾದಿಲ್ವಾರು ನಿಧಿಯಿಂದ ಬಿಡುಗಡೆಯಾಗಿದೆ...

ಸನ್ಮಾನ್ಯ ಉಪಾಧ್ಯಕ್ಷರೇ, ಅವರು ಸಾಕಷ್ಟು ಬಜೆಟ್‌ಗಳನ್ನು ಸದನದ ಮುಂದಿಟ್ಟಿದ್ದಾರೆ. ನನಗೆ ಗೊತ್ತಿದ್ದ ಹಾಗೆ ನನಗಿಂತಲೂ ಹಣಕಾಸಿನ ವಿಷಯದಲ್ಲಿ ಅವರಿಗೆ ಹೆಚ್ಚಿನ ಆಳವಾದಂಥ ಅನುಭವ ಇದೆ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ನೇರವಾಗಿ ಪ್ರಶ್ನೆಕೇಳುತ್ತೇನೆ. 91-92ರ 153 ಲಕ್ಷ ರೂಪಾಯಿಗಳ ಖರ್ಚನ್ನು ಪೂರಕ ಅಂದಾಜು ಮುಖಾಂತರ ಸದನದಲ್ಲಿ ನೀವು ಒಪ್ಪಿಗೆ ಪಡೆಯತಕ್ಕದ್ದು ಕಾನೂನಿಗೆ ಮತ್ತು ನಾವು ನಂಬಿರುವಂಥ ನಂಬಿಕೆಗಳಿಗೆ, ಪ್ರಾಕ್ಟೀಸಸ್‌ಗೆ ಎಲ್ಲದಕ್ಕೂ ವಿರೋಧವಾಗಿದೆ. ದಯವಿಟ್ಟು ಇದನ್ನು ಕೈಬಿಡಬೇಕು. ಇನ್ನು ದಕ್ಷಿಣ ಕನ್ನಡದ ಸಕ್ಕರೆ ಕಾರ್ಖಾನೆಗಳಿಗೆ ಹಣ ಕೊಟ್ಟ ಬಗ್ಗೆ ಟೀಕೆ ಮಾಡಿದ್ದೇನೆ ಎಂದು ಹೇಳಿದರು. ನನ್ನ ದೃಷ್ಟಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಷ್ಟೇ ಅಲ್ಲ, ಮಂಡ್ಯ, ಮೈಸೂರು ಕೋಲಾರ ಆದಿಯಾಗಿ ಇಡೀ ವಿಶ್ವದಲ್ಲೇ ಇರುವಂಥ ಯಾವ ರೈತನಿಗೂ ಯಾವ ಸವಲತ್ತು ಒದಗಿಸಿಕೊಟ್ಟರೂ ನಾನು ಸಂತೋಷಪಡುವವನು. ನನ್ನ ವಾದ, ಏಕೆ ಕೊಟ್ಟಿರಿ ಅಂತ ಅಲ್ಲ, ಅವರಿಗೆ ಕೊಟ್ಟಿರುವ ಸವಲತ್ತುಗಳನ್ನು ಬೇರೆಯವರಿಗೆ ಏಕೆ ಕೊಡಲಿಲ್ಲ ಎನ್ನುವುದು. ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಸವಲತ್ತು ಒದಗಿಸಿಕೊಟ್ಟಿದ್ದಕ್ಕಾಗಿ ನಾನು ಟೀಕೆ ಮಾಡಿಲ್ಲ. ಎರಡನೇಯದು, ಸಾಕ್ಷರತಾ ಯೋಜನೆ ಕಾರ್ಯಕ್ರಮದ ಬಗ್ಗೆ ನಾನು ಆಗಲೇ ಹೇಳಿದ್ದೇನೆ. ಇದೊಂದೇ ಅಲ್ಲ, ಈ ರಾಷ್ಟ್ರದಲ್ಲಿ ಇರುವಂಥ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವ ಯಾವುದೇ ಯೋಜನೆ ಸ್ವಾಗತಾರ್ಹವಾದದ್ದು.

ನನ್ನ ತಕರಾರು ಇದ್ದದ್ದು, ಈ ಒಂದು ಸ್ವಾಗತಾರ್ಹವಾದಂಥ ಯೋಜನೆಯನ್ನು ಅನುಷ್ಠಾನಕ್ಕೆ ತರುವಂಥ ಸಂದರ್ಭದಲ್ಲಿ ಇರುವಂಥ ತೊಡಕುಗಳ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇನೆ. ಇಷ್ಟು ನನ್ನ ಅಭಿಪ್ರಾಯ.

ಶ್ರೀ ಬಿ.ಹೆಚ್. ಬನ್ನಿಕೋಡ್ : ತಾವು ಸಕ್ಕರೆ ಕಾರ್ಖಾನೆ ಬಗ್ಗೆ ಹೇಳಿದಿರಿ. ರೈತರಿಗೆ ಕೊಟ್ಟಿದ್ದೇವೆ ಎಂದು. ಆದರೆ, ಅಲ್ಲಿ ರೈತರಿಗೆ ಕೊಟ್ಟಂತ ಇನ್ನೂ ಅನೇಕ ಸಕ್ಕರೆ ಕಾರ್ಖಾನೆಗಳು ಹಾನಿಯಲ್ಲಿವೆ. ಉದಾಹರಣೆಗೆ, ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ, ನಮ್ಮ ಸಂಗೂರಿನಲ್ಲಿರತಕ್ಕಂತಾದ್ದು, ಹಾವೇರಿಯದು. ಅದು ಸುಮಾರು 4 ಕೋಟಿ ರೂಪಾಯಿಗಳ ಹಾನಿಯನ್ನು ಅನುಭವಿಸುತ್ತಿದೆ. ರೈತರ ಕಬ್ಬಿಗೆ ಅಲ್ಲಿ ಬೆಲೆ ಸಿಕ್ಕುತ್ತಾ ಇಲ್ಲ. ಅದನ್ನು ಈಗಾಗಲೇ ಕಾರ್ಖಾನೆಯವರು ಹಾಗೂ ಅಲ್ಲಿಯ ರೈತರು ಪ್ರತಿನಿಧಿಗಳು ಒಂದು ಸರ್ಕಾರಕ್ಕೆ ಬರಬೇಕಾದಂಥ ಸಾಲವನ್ನುಮನ್ನಾ ಮಾಡುವುದಕ್ಕೆ ಕೇಳುತ್ತಿದ್ದಾರೆ. ಅದು ಆಗದೇ ಇದ್ದರೂ ಕನಿಷ್ಟಪಕ್ಷ

ಸರ್ಕಾರಕ್ಕೆ ಬರಬೇಕಾದ ಬಡ್ಡಿಯನ್ನಾದರೂ ಮನ್ನಾ ಮಾಡುವುದಕ್ಕೆ ಕೇಳುತ್ತಿದ್ದೇನೆ. ತಾವು ದಯವಿಟ್ಟು ಅದನ್ನು ಪರಿಶೀಲನೆ ಮಾಡಿ, ಸಕ್ಕರೆ ಕಾರ್ಖಾನೆ, ಸಂಗೂರು ಸಕ್ಕರೆ ಕಾರ್ಖಾನೆಗೆ ತಮಗೆ ಬರಬೇಕಾದ ಬಡ್ಡಿಯನ್ನಾದರೂ ಮನ್ನಾ ಮಾಡಿ ರೈತರಿಗೆ, ಅದು ಹೊಸ ಕಾರ್ಖಾನೆ, ಹೆಚ್ಚಿನ ಬೆಲೆ ಸಿಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷರೇ,ಈಗ ಸಾದಿಲ್ವಾರು ಖರ್ಚಿನ ಶಿಸ್ತು, ಶಿಷ್ಟಾಚಾರದ ಮೂಲಭೂತ ಪ್ರಶ್ನೆಯನ್ನು ಸನ್ಮಾನ್ಯ ಏಕಾಂತಯ್ಯನವರು ಮತ್ತು ಮಾನ್ಯ ವೈ.ಕೆ. ರಾಮಯ್ಯನವರು ಎತ್ತಿದ್ದಾರೆ. ಬಹಳ ಮುಖ್ಯವಾದ ಪ್ರಶ್ನೆ. ಆರ್ಟಿಕಲ್ 205ರ ಪ್ರಕಾರ, ಇದು ಯಾವತರಹ ಸ್ಕೋಪ್ ಇದೆ, ಇದನ್ನು ಯಾವ ತರಹ ಖರ್ಚು ಮಾಡಬೇಕು, ಏಕೆಂದರೆ, ಯಾವುದೇ ರೀತಿಯಾದಂಥ, ಸಾಮಾನ್ಯವಾದ ಖರ್ಚಿಗೆ ಇದನ್ನು ಉಪಯೋಗ ಮಾಡಬೇಕು. ಅದರಲ್ಲಿ ಯಾವ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳಬೇಕೆಂಬ ವಿಚಾರದಲ್ಲಿ ತಾವು ಮೂಲಭೂತ ಪ್ರಶ್ನೆಯನ್ನು ಎತ್ತಿದ್ದೀರಿ. ನನಗೆ ನೆನಪಿತ್ತು. ಆದರೆ, ನಾನು ಉತ್ತರ ಕೊಡುವುದಕ್ಕೆ ಹೋಗಲಿಲ್ಲ. ಏಕೆಂದರೆ, ಈ ಚರ್ಚೆ ಕೆಂಪು ಬಿಲ್ಡಿಂಗ್‌ನಲ್ಲಿ ಆಗುತ್ತಾ ಇದೆ. ನಾನು ಇವತ್ತು ಏನಾದರೂ ಅದಕ್ಕೆ ಉತ್ತರ ಕೊಡಲಿಕ್ಕೆ ಹೋದರೆ, it is a very interesting question, Very debatable question.

ಅಲ್ಲಿ ಜಡ್ಜ್‌ಮೆಂಟ್ ಕೊಟ್ಟಮೇಲೆ ಬೇಕಾದರೆ, I can argue for two or three hours.

ಅದು ಸಬ್ ಜುಡೀಸ್ ಆಗುವುದರಿಂದ ನಾನು ಏನಾದರೂ ಆ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. Because tomorrow I may be accused of either by the High court or by somebody. As a finance Minister, as a Chief Minister.

ಇಲ್ಲಿ ನಿಂತುಕೊಂಡು ಆ ವ್ಯಾಖ್ಯೆಯನ್ನು ಮಾಡುವುದಕ್ಕೆ ಹೋದರೆ, ಬಹುಶಃ ನ್ಯಾಯಾಂಗದ ತೀರ್ಪಿನ ದೃಷ್ಟಿಯಿಂದ ಇದು ಸರಿಯಲ್ಲ, ಅದು ಸಬ್ ಜುಡೀಸ್ ಆಗುತ್ತದೆ ಎನ್ನುವ ವಿಚಾರದಲ್ಲಿ ಮಾತ್ರ ನಾನು ಅದನ್ನು ಬಿಟ್ಟುಬಿಟ್ಟೆ.

ಶ್ರೀ ಬಿ.ಎಸ್. ಬನ್ನಿಕೋಡ್ : ತಾವು ಹೈಕೋರ್ಟ್ ವಿಚಾರ ಹೇಳಿದಿರಿ. ಒಂದು ಮಾತ್ರ ತಾವು ಒಪ್ಪಬೇಕಾದದ್ದು ಇದೆ. ಈ ಹಿಂದೆ ಯಾವ ಬಜೆಟ್‌ನಲ್ಲಿ ಯಾವ ಯೋಜನೆಗಳ ಪ್ರಶ್ನೆ ಇರಲಿಲ್ಲ, ಅಂತಹವುಗಳನ್ನು ಯೋಜನೆಗಳನ್ನು ಮಾಡಿ, ಕಾರ್ಯರೂಪದಲ್ಲಿ ಮಾಡಿ ಹಣವನ್ನು ಏನು ಕೊಟ್ಟಿದ್ದಾರೆ, ಅಂತಹವನ್ನು ಒಪ್ಪಬೇಕಾಗುತ್ತದೆ. ಈ ಹಿಂದೆ ಅದನ್ನು ಮಾಡಿದ್ದಾರೆ. ಸಾಕಷ್ಟು ಆಗಿವೆ. ಹಣವನ್ನು ಸಹಿತ ಬಜೆಟ್‌ನಲ್ಲಿ ಕೊಟ್ಟಿದ್ದಾರೆ. ಇಲ್ಲದಿದ್ದರೆ ಒಂದು ಪೈಸೆಯನ್ನೂ ಬಿಡುಗಡೆ ಮಾಡುವುದಕ್ಕೆ ಬರುವುದಿಲ್ಲ, ಇಂತಹ ತಪ್ಪುಗಳಾಗಿವೆ. ತಾವು ಒಪ್ಪಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಅದು ಪ್ರತ್ಯೇಕ. ಆದರೆ ಮತ್ತೊಂದು ವಿಚಾರ ತಾವು ಹೇಳಿದಿರಿ. ನಾನು ಒಪ್ಪುತ್ತೇನೆ. ಏಕೆಂದರೆ, ಪಿ.ಎ.ಸಿ.ನಲ್ಲಿ ತಾವೂ ಅಧ್ಯಕ್ಷರಾಗಿದ್ದೀರಿ. ನಾನೂ ಮೂರು ಬಾರಿ ಅಧ್ಯಕ್ಷನಾಗಿದ್ದೆನು. ನಾನಾದ ಮೇಲೆ ತಾವಾಗಿದ್ದೀರಿ, ಬಹಳ ಒಳ್ಳೆಯ ಕೆಲಸ ಮಾಡುತ್ತಾ ಇದ್ದೀರಿ, ಪಿ.ಎ.ಸಿ. ಚೇರ್ಮನ್ ಆಗಿ. ಈಗ ಅದರಲ್ಲಿ ಸರಿ, ಆ ಎಕ್ಸ್‌ಪೆಂಡೀಚರ್ ಎಲ್ಲಿ ಬರುತ್ತದೆಂದರೆ, ಈಗ

ಒಂದು ಐಟಂ ತಾವು ಹೇಳುತ್ತಿದ್ದೀರಿ, ಅದು ನನಗೆ ಗೊತ್ತಿದೆ. 18-7-91ರಂದು ಆದು ಹೈಕೋರ್ಟ್ ಜಡ್ಜ್‌ಮೆಂಟ್ ಆಯಿತು. ಮೈಸೂರು ಕಿರ್ಲೋಸ್ಕರ್‌ಗೆ ಸಂಬಂಧಪಟ್ಟಂತೆ. ನಾವು ಪೇಮೆಂಟ್ ಮಾಡಿದ್ದು, ಸರ್ಕಾರಿ ಆದೇಶದ ಪ್ರಕಾರ, 30-6-92ರಂದು. ಕಮಿಟ್‌ಮೆಂಟ್ ಅರ್ಲಿಯರ್ ಆಗಿರಬಹುದು. Property is perfectly alright. 1991-92ರಲ್ಲಿ ಪೇಮೆಂಟ್ ಆಗಿದ್ದರೆ, ಸಾದಿಲ್ವಾರಿನಲ್ಲಿ, ಪೂರಕ ಬಜೆಟ್‌ನಲ್ಲಿ ತಂದರೆ ತಪ್ಪಾಗುತ್ತದೆ. ಆದರೆ, ಪೇಮೆಂಟ್ ಈ ವರ್ಷವೇ ಆಗಿದ್ದರೆ, ಅದು ಈ ವರ್ಷದ ಪೂರಕ ಬಜೆಟ್‌ನಲ್ಲೇ ಬರುತ್ತದೆ.

ಶ್ರೀ ಹೆಚ್. ಏಕಾಂತಯ್ಯ : ನಾನು ಅದನ್ನು ಹೇಳುವುದಿಲ್ಲ, ನಿಮ್ಮ ಹಣಕಾಸಿನ ಅಧಿಕಾರಿಗಳೇ ಆಗಲಿ, ಅಥವಾ ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಗಳೇ ಆಗಲಿ, ಈ ವಿಚಾರವನ್ನು ಪ್ರಸ್ತಾಪ ಮಾಡಿ, ಬಜೆಟ್‌ನಲ್ಲಿ ಏತಕ್ಕೋಸ್ಕರ ಸೇರಿಸಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ ; ಅನೇಕ ಹೈಕೋರ್ಟ್ ಜಡ್ಜ್‌ಮೆಂಟ್‌ಗಳಿವೆ, ಕೋರ್ಟ್ ಡಿಕ್ರಿಗಳಿವೆ.

ಶ್ರೀ ಹೆಚ್. ಏಕಾಂತಯ್ಯ : ಅಧಿಕಾರಗಳ ಬಗ್ಗೆ ನೀವು ಸಮರ್ಥನೆ ಮಾಡಿಕೊಳ್ಳಬೇಡಿ. ಸಂಬಂಧಪಟ್ಟವರು ಈ ವಿಚಾರವನ್ನು, ಮರುಪಾವತಿ ಮಾಡಬೇಕೆಂದು ಅವರಿಗೆ ಗೊತ್ತಿದ್ದರೆ, ಅವರು ಏತಕ್ಕೋಸ್ಕರ ಬಜೆಟ್‌ನಲ್ಲಿ ಸೇರಿಸುವಂಥ ಪ್ರಯತ್ನ ಮಾಡಲಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ : ಅಧ್ಯಕ್ಷರೇ ತಮಗೆ ಗೊತ್ತಿದೆ, ಎಷ್ಟೋ ಡಿಕ್ರಿಗಳು ಸರಕಾರದ ಮೇಲಿದೆ. ಕೋರ್ಟ್ ಡಿಕ್ರಿಗಳು, ಹೈಕೋರ್ಟ್ ಡಿಕ್ರಿಗಳು ಇದೆ. ಅದನ್ನೆಲ್ಲಾ ಪೇಮೆಂಟ್ ಮಾಡುವುದಕ್ಕೆ ಕುಳಿತುಕೊಂಡರೆ ನಮ್ಮ ಅಭಿವೃದ್ಧಿ ಕೆಲಸ ಒಂದೂ ಆಗುವುದಿಲ್ಲ. It may run into thousands of crores. ಅದಕ್ಕೆ ಬಜೆಟ್ ಪ್ರಾವಿಜನ್ ಮಾಡಲು ಆಗುವುದಿಲ್ಲ. ಯಾವಾಗ ಕಂಟೆಪ್ಟ್ ಬರುತ್ತದೆ. ಯಾವಾಗ ಡಿಕ್ರಿ ತರುತ್ತಾರೆ ಆಗ ನಾವು ಕೊಡಬೇಕಾಗುತ್ತದೆ. ಏನು ಮಾಡುತ್ತೀರಿ?

ಶ್ರೀ ಎಚ್. ಏಕಾಂತಯ್ಯ : ಆ ವರ್ಷದ ಅವಧಿಯಲ್ಲಿ ಆದರೆ ನೀವು ಹೇಳಿದ ಮಾತನ್ನು ಒಪ್ಪಬೇಕಾಗುತ್ತದೆ. ಇದು ಆ ವರ್ಷ ಆಗಲಿಲ್ಲ, ಹಿಂದಿನ ವರ್ಷ ಇದು ಆರ್ಡರ್ ಆಗಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ : ಆಗ ಪೇಮೆಂಟ್ ಮಾಡಬಹುದಾಗಿತ್ತು.

ಶ್ರೀ. ಎಚ್. ಏಕಾಂತಯ್ಯ : ನೀವು ಅದನ್ನು ಸಮರ್ಥನೆ ಮಾಡದೇ ಉಳಿದುದನ್ನು ಹೇಳಿರಿ.

ಶ್ರೀ ಎಂ. ವೀರಪ್ಪ ಮೊಯ್ಲಿ : ಡಿಫೆಂಡ್ ಮಾಡುವ ಪ್ರಶ್ನೆ ಅಲ್ಲ, ಪ್ರಶ್ನೆ ಏನೆಂದರೆ already so much of money is pending on decree.

ಅದನ್ನೆಲ್ಲಾ ನಾವು 93-94ರ ಬಜೆಟ್‌ನಲ್ಲಿ ಸೇರಿಸಿದರೆ ನಮಗೆ ಆಯವ್ಯಯದಲ್ಲಿ ಬೇರೆ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅದನ್ನು ಪೇಮೆಂಟ್ ಮಾಡಿಕೊಳ್ಳುತ್ತಾ ಕುಳಿತುಕೊಳ್ಳಬೇಕು. ಸಾಲ ಮನುಷ್ಯನಿಗಾಗಲೀ,

ಸಂಸ್ಥೆಗಳಿಗಾಗಲೀ, ಸರಕಾರಕ್ಕಾಗಲೀ, ಅದು ಏನು ಸಾಲ ಕೊಡುವುದಕ್ಕೆ ಹೋದರೆ ಮನುಷ್ಯ ಬದುಕಬೇಕಲ್ಲ.

ಶ್ರೀ ಎಚ್. ಏಕಾಂತಯ್ಯ : ಇದರ ಬಗ್ಗೆ ಬೇಕಾದರೆ ತನಿಖೆ ಮಾಡಿ, ನೀವು ಇದರ ಜರೂರಿನ ಬಗ್ಗೆ, ಅವಶ್ಯಕತೆ ಬಗ್ಗೆ ತನಿಖೆ ಮಾಡಿ, ನಿಮಗೆ ಸಮಾಧಾನವಾದರೆ ಸರಿ. ನೀವು ಹೇಳಿದ ರೀತಿಯಲ್ಲಿ ಆಗಿಲ್ಲ. ಅದು ಬೇರೆ ರೀತಿಯಲ್ಲಿ ಆಗಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಬೇರೆ ಏನೂ ಇಲ್ಲ, ಡೇಟ್ ಆಫ್ ಹೈಕೋರ್ಡ್ ಆರ್ಡರ್ ಇದೆ.

ಶ್ರೀ ಎಚ್. ಏಕಾಂತಯ್ಯ : ಡಿಕ್ರೀ ಆಗಿತ್ತು, ಎಕ್ಸಿಕ್ಯೂಷನ್‌ಗೆ ಹಾಕಿದ್ದೀರಾ, ಅಟ್ಯಾಚ್‌ಮೆಂಟ್‌ಗೆ ಬಂದಿದೆಯೇ?

ಶ್ರೀ ಎಂ. ವೀರಪ್ಪ ಮೊಯ್ಲಿ : ನಾಳೆ ಕಂಟೆಂಪ್ಟ್ ಬರಬಹುದು.

ಶ್ರೀ ಎಚ್. ಏಕಾಂತಯ್ಯ : ಸ್ವಾಮಿ ನೀವು ಅದನ್ನೆಲ್ಲಾ ಮುಂದೆ ನಿರೀಕ್ಷೆ ಮಾಡಿ ಕೊಡುತ್ತೀರಾ? ಹಾಗಾದರೆ ಆ ರೀತಿ ಎಲ್ಲರಿಗೂ ಹಣ ಕೊಡುತ್ತೀರಾ? It is not correct.

ಡಿಕ್ರೀ ಆದ ತಕ್ಷಣ ಸಾದಿಲ್ವಾರು ನಿಧಿಯಿಂದ ಹಣವನ್ನು ಬಿಡುಗಡೆ ಮಾಡುತ್ತೀರಾ? ಅಂತಹ ಡಿಕ್ರಿ ಹಣ ಕೊಡುವ ಪ್ರಯತ್ನವನ್ನು ಯಾವುದೇ ಸರಕಾರ ಇದುವರೆಗೆ ಮಾಡಿದೆಯೇ?

ಶ್ರೀಎಂ. ವೀರಪ್ಪ ಮೊಯ್ಲಿ : ಅದನ್ನು ನೋಡೋಣ. that depends on item to item.

ಯಾವ ಪರಿಸ್ಥಿತಿಯಲ್ಲಿ ಕೊಟ್ಟರು ನೋಡೋಣ.

ಶ್ರೀ ಹೆಚ್. ಏಕಾಂತಯ್ಯ : 36 ಲಕ್ಷ ರೂಪಾಯಿಗಳನ್ನು ಒಬ್ಬನಿಗೆ ಅಡ್ವಾನ್ಸ್ ಆಗಿ ಕೊಡುವುದಕ್ಕೆ ಔಟ್ ಆಫ್ ದಿ ವೇ ಹೋಗಿ ಬೇರೆಯವರಿಗೆ ಕೊಡುವಂತಹ ರೀತಿಯಲ್ಲಿ ಕೊಟ್ಟಿದ್ದೇವೆ ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಅದು ಪ್ರತ್ಯೇಕೀ. ಪೇಮೆಂಟ್ ಮಾಡಿದುದರಲ್ಲಿ There is no constitutional impropriety. ಅಷ್ಟನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಪೇಮೆಂಟ್ ಮಾಡಿದ್ದುದು ಸರಿಯೇ ತಪ್ಪೇ ಆ ವಿಚಾರ ನಾನು ಮಾಡುತ್ತಿಲ್ಲ. ತಾವು ಇನ್ನೊಂದು ಹೇಳಿದ್ದೀರಿ. ಸ್ಮಾಲ್ ಮತ್ತು ಮಾರ್ಜಿನಲ್ ಫಾರ್ಮರ್ಸ್‌ಗೆ ಕೊಡತಕ್ಕಂಥಾದ್ದು ಕೇಂದ್ರ ಸರಕಾರ, ಇದು ನಿಮಗೆ ಗೊತ್ತಿದೆ. 36.90ಕೋಟಿ ಕೊಟ್ಟಿರುತ್ತಾರೆ. ಆದರೆ ಬಿಡುಗಡೆ ಮಾಡಿದಂಥ ಹಣ 15.07 ಕೋಟಿ ಮಾತ್ರ. ಇನ್ನೂ ಅದರ ವಿಸ್ತರಣೆ ಮಾಡಬೇಕೆಂದು ಹೇಳಿದ್ದೇವೆ. ಇನ್ನೊಂದು ಕಂತು ಕೇಂದ್ರ ಸರಕಾರ ಕೊಟ್ಟಾಗ ನಾವು ಪುನಃ ಅದನ್ನು ವಿಸ್ತರಣೆ ಮಾಡುತ್ತೇವೆ ಅಲ್ಲಿಯವರೆಗೆ ಆಗುವುದಿಲ್ಲ.

ಶ್ರೀ ಎಚ್. ಏಕಾಂತಯ್ಯ : ಇನ್ನೊಂದು ಯೋಜನೆ ಇದೆ, ಸಹಕಾರ ಇಲಾಖೆ ಅಡಿಯಲ್ಲಿ ಏನು ಒಂದು ಡಿಮ್ಯಾಂಡ್ ಇದೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಇನ್‌ಸೆಂಟೀವ್ ಪ್ರೊಡಕ್ಷನ್, ಅದರ ವಿಚಾರ ಮಾಡುತ್ತೇವೆ. ಒಂದು ಮಾತು ಏಕಾಂತಯ್ಯನವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸಂವಿಧಾನದ ಹಣಕಾಸಿನ ವ್ಯವಸ್ಥೆಯ ಚೌಕಟ್ಟು ಏನಿದೆ, ಅದನ್ನು ಭದ್ರವಾಗಿ, ಶಿಥಿಲ ಆಗದ ಹಾಗೆ ಕಾಪಾಡಿ ಕೊಳ್ಳಲಿಕ್ಕೆ ಸರಕಾರ ಖಂಡಿತವಾಗಿ ಇನ್ನು ಮುಂದೆ ನಡೆಸಿಕೊಂಡು ಹೋಗುತ್ತದೆ.

ಶ್ರೀ ಬಿ.ಎಸ್. ಬನ್ನಿಕೋಡ್ : ನಾನು ಕೇಳಿದಂಥ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಏನೂ ಹೇಳಲಿಲ್ಲ. ಹಾವೇರಿ ಸಹಕಾರಿ ಸಕ್ಕರೆ ಕಾರ್ಖಾನೆ ರೈತರದ್ದು, ಸರಕಾರಕ್ಕೆ ಬರಬೇಕಾದ ಬಡ್ಡಿಹಣವನ್ನು ಮನ್ನಾ ಮಾಡಿ. ಉಳಿದ ಸಕ್ಕರೆ ಕಾರ್ಖಾನೆಗಳಿಗೆ ಲಕ್ಷಾಂತರ ರೂಪಾಯಿ ಹಣವನ್ನು ಕೊಡುತ್ತೀರಿ, ಎಂದು ಕೇಳಿದೆ ಅದಕ್ಕೆ ಅವರು ಏನೂ ಹೇಳಲಿಲ್ಲ. ಉಳಿದ ಸಹಕಾರ ಸಕ್ಕರೆ ಕಾರ್ಖಾನೆಗಳಿಗೆ ಲಕ್ಷಾಂತರ ರೂಪಾಯಿ ಹಣ ಕೊಟ್ಟಿದ್ದೀರಿ. ಹಾವೇರಿ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಸರಕಾರಕ್ಕೆ ಬರಬೇಕಾದ ಬಡ್ಡಿಯನ್ನು ವೇವ್ ಆಫ್ ಮಾಡಬೇಕೆಂದು ಮನವಿ ಮಾಡಿದ್ದೇನೆ. ಅದನ್ನು ಬಿಡಬೇಕು. ಅದೂ ರೈತರ ಕಾರ್ಖಾನೆ. ಇದು ಕೇವಲ ಸಿಂಬಲ್‌ಗಳಿಂದ ಆಗುವುದಿಲ್ಲ. ಅದು ಹೊರಕ್ಕೆ ಬರಬೇಕು. ಅಂತರಾಳದಿಂದ ದಯವಿಟ್ಟು ಹೇಳಬೇಕು. ಬಡ್ಡಿ ಮನ್ನಾ ಮಾಡಿ, ಸಾಲ ಬೇಡ.

ಶ್ರೀ ಎಂ. ವೀರಪ್ಪ ಮೊಯ್ಲಿ : ಅಂತರಾಳದಿಂದಲೇ ಹೇಳುತ್ತಿದ್ದೇನೆ. ತಾವು ಕೊಟ್ಟ ಸೂಚನೆಯನ್ನು ಬಹಳ ಗಂಭೀರವಾಗಿ ಪರಿಶೀಲನೆ ಮಾಡುತ್ತೇನೆ.

1992-93ನೆಯ ಆರ್ಥಿಕ ವರ್ಷದಲ್ಲಿ ಪೂರಕ ಬೇಡಿಕೆಗಳ ಬಗ್ಗೆ ಪ್ರಸ್ತಾವ

ಅಂಗೀಕಾರ ಪ್ರಸ್ತಾವ

ಮೇಡಂ ಚೇರ್ಮನ್ (ಶ್ರೀಮತಿ ದಮಯಂತಿ ಬೋರೇಗೌಡ) : ಪ್ರಸ್ತಾಪ ಏನೆಂದರೆ "31.3.1993ರ ಅಂತ್ಯದೊಳಗೆ ದೊರಕಲಿರುವ ಪೂರಕ ಅಂದಾಜುಗಳ ಎರಡನೆಯ ಕಂತಿನ ಬೇಡಿಕೆಗಳ ಸಂಖ್ಯೆ 1, 2, 5, 7, 13, 14, 15, 19, 20, 25, 27, 29, 31, 36, 39, 41, 43, 47, 48, 49 ಮತ್ತು 50 ಈ ಬೇಡಿಕೆಗಳಿಗೆ ಸಂಬಂಧಿಸಿದಂತೆ ವೆಚ್ಚವನ್ನು ಸಂದಾಯ ಮಾಡಲು ಸರಕಾರಕ್ಕೆ ಅನುಕೂಲವಾಗುವಂತೆ ಪೂರಕ ಅಂದಾಜುಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಮಂಜೂರು ಮಾಡುವುದು"

(ಪ್ರಸ್ತಾವಕ್ಕೆ ಅನುಮೋದನೆ ದೊರಕಿತು ಮತ್ತು ಪೂರಕ ಬೇಡಿಕೆಗಳನ್ನು ಮಂಜೂರು ಮಾಡಲಾಯಿತು)

ಮೇಡಂ ಛೇರ್ಮನ್ : ಈಗ ನಿಯಮ 68ರ ಮೇರೆಗೆ ಒಂದು ಮಹತ್ತರವಾದ ಹಾಗೂ ಜರೂರು ವಿಷಯದ ಬಗ್ಗೆ ಅಲ್ಪಕಾಲಾವದಿ ಚರ್ಚೆ ಇದೆ. ಅದನ್ನು ದಯಮಾಡಿ ನಾಳೆ ತೆಗೆದುಕೊಳ್ಳೋಣ.

ಶ್ರೀ ಆರ್.ವಿ. ದೇಶಪಾಂಡೆ : ಆಗಬಹುದು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಸಮಯ 6-45 ನಿಮಿಷ ಆಗಿದೆ. ನಾವು ಬೆಳಿಗ್ಗೆ 11 ಗಂಟೆಗೆ ಬಂದಿದ್ದೇವೆ. ಇಲ್ಲಿ ಈಗ ಕಣ್ಣು ಮುಚ್ಚಿಕೊಂಡು ಕುಳಿತಿರಬೇಕಾಗಿದೆ. ನಾಳೆ ತೆಗೆದುಕೊಳ್ಳಿ.

ಮೇಡಂ ಛೇರ್ಮನ್ : ಒಂದು ಪ್ರಕಟಣೆ ಇದೆ.

ಪ್ರಕಟಣೆ

ಮೇಡಂ ಚೇರ್‌ಮನ್: ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 5-1-1993 ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.

1. ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 1992.
2. ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 1992.

ಮಾನ್ಯ ಸದಸ್ಯರ ಗೈರು ಹಾಜರಿಗೆ ಅನುಮತಿ ಕೋರಿಕೆ

ಮೇಡಂ ಚೇರ್‌ಮನ್

ಎರಡನೆಯದು

ವಿಧಾನ ಸಭಾ ಸದಸ್ಯರಾದ ಶ್ರೀ ವೀರೇಂದ್ರ ಪಾಟೀಲರು ದಿನಾಂಕ 1-1-1993ರಂದು ಬರೆದ ಪತ್ರದಲ್ಲಿ ತಮ್ಮ ಈಗಿನ ಆರೋಗ್ಯ ಪರಿಸ್ಥಿತಿಯಿಂದಾಗಿ ದಿನಾಂಕ 29-12-1992ರನ್ನೊರತು ಪಡಿಸಿ, 28-12-1992ರಿಂದ ಪ್ರಾರಂಭವಾದ ಪ್ರಸಕ್ತ ಅಧಿವೇಶನ ಮುಕ್ತಾಯಗೊಳ್ಳುವವರಗೂ ಗೈರು ಹಾಜರಾಗಲು ಅನುಮತಿಯನ್ನು ಕೋರಿರುತ್ತಾರೆ.

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

(ಮಾನ್ಯ ಸದಸ್ಯರಾದ ಶ್ರೀ ವೀರೇಂದ್ರ ಪಾಟೀಲರಿಗೆ ದಿನಾಂಕ 29-12-1992ರನ್ನೊರತುಪಡಿಸಿ ಗೈರು ಹಾಜರಾಗಲು ಅನುಮತಿಯನ್ನು ನೀಡಲಾಯಿತು.)

ಮೇಡಂ ಛೇರ್ಮನ್ : ಸಭೆಯನ್ನು ಈಗ ಮುಂದೂಡಲ್ಪಟ್ಟು ನಾಳೆ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು 6-40 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ ಗುರುವಾರ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳುವಂತೆ ನಿಶ್ಚಯಿಸಲಾಯಿತು)

+(ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ ೭ನೇ ಜನವರಿ ೧೯೯೩, ಪುಷ್ಯ ೧೭, ಶಕ ೧೯೧೪

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೦೦ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : **(ಶ್ರೀಮತಿ ನಾಗಮ್ಮ ಕೇಶವಮೂರ್ತಿ)** ಅವರು

ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಕರ್ನಾಟಕದಲ್ಲಿರುವ ಉಪ ನೋಂದಣಿ ಕಛೇರಿಗಳ ಸಂಖ್ಯೆ

504 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ರಾಜ್ಯದಲ್ಲಿರುವ ಉಪ ನೋಂದಣಾಧಿಕಾರಿಗಳ ಕಛೇರಿಗಳೆಷ್ಟು?

ಆ) ಇವುಗಳಲ್ಲಿ ಬೆಂಗಳೂರು ಜಿಲ್ಲೆಯಲ್ಲಿರುವ ಕಛೇರಿಗಳೆಷ್ಟು? (ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ಬಗ್ಗೆ ಪ್ರತ್ಯೇಕ ವಿವರ ನೀಡುವುದು)

ಇ) ಜಿಲ್ಲೆಯ ಹಾಗೂ ನಗರ ಕಛೇರಿಗಳಿಗೆ ದೂರವಾಣಿ ಸೌಕರ್ಯ ಕಲ್ಪಿಸುವ ಪ್ರಸ್ತಾವನೆ ಇದೆಯೇ?

ಈ) ಕಳೆದ ಒಂದು ವರ್ಷದಲ್ಲಿ ಬೆಂಗಳೂರು ನಗರದಲ್ಲಿ ಮುದ್ರಾಂಕ ಶುಲ್ಕ ಹಾಗೂ ನೋಂದಣಿ ವತಿಯಿಂದ ಬಂದಿರುವ ಆದಾಯವೆಷ್ಟು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) 198

ಆ)	1.	ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಕಛೇರಿಗಳು	12
	2.	ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಕಛೇರಿಗಳು	8
		ಒಟ್ಟು	20

ಇ) ಬೀದರ್ ಮತ್ತು ಕಾರವಾರ ಜಿಲ್ಲೆಗಳ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಗಳನ್ನು ಹೊರತು ಪಡಿಸಿ ಬೇರೆ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಗಳಿಗೆ ದೂರವಾಣಿ ಸೌಕರ್ಯವನ್ನು ಒದಗಿಸಲಾಗಿದೆ. ಆದರೆ ಯಾವ ಉಪ

ನೋಂದಣಾಧಿಕಾರಿಗಳ ಕಛೇರಿಗಳಿಗೂ ದೂರವಾಣಿ ಸೌಲಭ್ಯ ಕಲ್ಪಿಸಿಲ್ಲ. ಇದನ್ನು ಅನುದಾನದ ಲಭ್ಯತೆಯ ಮೇರೆಗೆ ಪರಿಶೀಲಿಸಲಾಗುವುದು.

ಈ) 1982-83 ಕೋಟಿ ರೂಪಾಯಿಗಳು. (ನವೆಂಬರ್, 1991 ರಿಂದ ಅಕ್ಟೋಬರ್ 1992)

ಶ್ರೀ ಎಂ. ನಾರಾಯಣ ಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಈ ಸ್ಟಾಂಪ್ ಡ್ಯೂಟಿಯಲ್ಲಿ ನಾನು ಕೇಳಿರತಕ್ಕ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಆದರೆ, ಬೆಂಗಳೂರು ಮಟ್ಟಿಗೆ ಮಾತ್ರ ಸ್ಟಾಂಪ್ ಪೇಪರ್ ಸಿಕ್ಕತಕ್ಕಂಥ ಕೆಲಸ ಆಗುತ್ತಿದೆ. ಬೇರೆ ಪಟ್ಟಣದಲ್ಲಿ ಸ್ಟಾಂಪ್ ಪೇಪರ್ ಸ್ಟಾಕ್ ಇಲ್ಲವೆಂದು ಹೇಳುತ್ತಿದ್ದಾರೆ. ಜೊತೆಗೆ, 10 ಸಾವಿರ ಮಟ್ಟಿಗೆ ಸ್ಟಾಂಪ್ ಡ್ಯೂಟಿ ಸಿಕ್ಕುತ್ತಾ ಇದೆ. ಅದರ ಮೇಲೆ ಕೊಡತಕ್ಕಂಥಾದ್ದನ್ನು, ಡೇಟ್ಸ್ ಕೊಟ್ಟು ಕೊಡುತ್ತಿದ್ದಾರೆ ಇದನ್ನು ಸರಿಪಡಿಸತಕ್ಕ ಕೆಲಸ ಮಾಡುವುದಕ್ಕಾಗುತ್ತದೆಯೇ? ಎರಡನೆಯದಾಗಿ, ಗ್ರಾಮಾಂತರ ಪ್ರದೇಶದಲ್ಲಿ, ಏರಿಯಾವೈಸ್‌ಸ್ಟಾಂಪ್ ಡ್ಯೂಟಿಯನ್ನು ಏನು ನಿಗದಿ ಮಾಡಿದ್ದಾರೆ, ಅದು ಸರಿಯಾಗಿಲ್ಲ. ಬಹಳ ಏರಪೇರು ಇದೆ. ಯಾವುದೋ ಒಂದು ಸಂಬಂದಪಟ್ಟ ಸರ್ವೆ ನಂಬರ್ ಇದನ್ನೂ ಸರಿಪಡಿಸತಕ್ಕ ಕೆಲಸ ಮಾಡುತ್ತೀರಾ?

ಶ್ರೀ ಎಂ. ರಾಜಶೇಖರಮೂರ್ತಿ : ಈ ಪ್ರಶ್ನೆ ಇರುವುದು ಎಷ್ಟು ಸಬ್ ರಿಜಿಸ್ಟ್ರಾರ್ ಆಫೀಸುಗಳಿವೆ. ಅವುಗಳಿಗೆ ಟೆಲಿಫೋನ್ ಸಂಪರ್ಕ ಇದೆಯೋ ಇಲ್ಲವೇ ಎಂದು. ಸ್ಟಾಂಪ್ ಪೇಪರ್ ಬಗ್ಗೆ ಸ್ಕೇರ್‌ಸಿಟಿ ಇದೆ. ಅದಕ್ಕೆ ಪ್ರತ್ಯೇಕ ಪ್ರಶ್ನೆ ಹಾಕಿದರೆ, ಉತ್ತರ ಕೊಡುತ್ತೇನೆ.

ಶ್ರೀ ಎಂ. ನಾರಾಯಣ ಸ್ವಾಮಿ : ನಾನು ಕೇಳಿರತಕ್ಕ ಪ್ರಶ್ನೆ, ಬೆಂಗಳೂರಿಗೆ ಸೀಮಿತವಾಗಿದೆ. ಆದರೂ ಕೂಡ ಇದರಲ್ಲಿ, ಉಪ ಪ್ರಶ್ನೆಯನ್ನು ಕೇಳತಕ್ಕ ಅವಶ್ಯಕತೆ ಇದೆ. ದಯಮಾಡಿ, ಉತ್ತರ ಕೊಡತಕ್ಕ ಕೆಲಸ ಆಗಬೇಕು.

ಉಪಾಧ್ಯಕ್ಷರು : ತಾವು ಏನು ಕೇಳುತ್ತೀರಿ, ಈ ಪ್ರಶ್ನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ, ತಾವು ಬೇರೆ ಪ್ರಶ್ನೆ ಕೇಳಿ, ಅದಕ್ಕೆ ಉತ್ತರ ಕೊಡುತ್ತಾರೆ.

ಬಗರ್ ಹುಕುಂ ಸಾಗುವಳಿಗೆ ಅರ್ಜಿ ಸಲ್ಲಿಸಲು ಕಾಲಾವಕಾಶ

88 - ಶ್ರೀ ಇಲ್ಕಲ್ ವಿಜಯಕುಮಾರ್ (ಹೊಸದುರ್ಗ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ನಡೆಸಲು ಅರ್ಜಿ ಸಲ್ಲಿಸಿರುವ ಸಂಖ್ಯೆ ಎಷ್ಟು?

ಆ) ಸರ್ಕಾರ ಈ ಹಿಂದೆ ಬಗರ್‌ಹುಕುಂ ಸಾಗುವಳಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕದ ಪ್ರಚಾರವಿಲ್ಲದೆ ಗ್ರಾಮಾಂತರ ಜನತೆಯ ಗಮನಕ್ಕೆ ಬಾರದಿರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಸರ್ಕಾರದವರು ಅಂತಹ ರೈತರಿಗೆ ಪುನಃ ಅರ್ಜಿಸಲ್ಲಿಸಲು ಕಾಲಾವಕಾಶ ನೀಡುವರೆ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು) :

ಅ) 10,86,826

ಆ) ಇಲ್ಲ, ಸಾಕಷ್ಟು ಪ್ರಚಾರವನ್ನು ಕೊಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಇಳ್ಕಲ್ ವಿಜಯಕುಮಾರ್ : ಮಾನ್ಯ ಉಪಾಧ್ಯಕ್ಷರೇ, ಬಗರ್ ಹುಕುಂ ಸಾಗುವಳಿ ಮಾಡತಕ್ಕ ರೈತರು ಅರ್ಜಿ ಸಲ್ಲಿಸುವುದಕ್ಕೆ ಕಾಲಾವಕಾಶವನ್ನು ನನ್ನ ಪ್ರಶ್ನೆಯಲ್ಲಿ ಕೇಳಿದ್ದೇನೆ. ಆದರೆ, ಅದು ಉದ್ಭವಿಸುವುದಿಲ್ಲವೆಂದು ಮಂತ್ರಿಗಳು ಉತ್ತರ ನೀಡಿದ್ದಾರೆ. ಸಾಮಾನ್ಯವಾಗಿ, ಬಗರ್ ಹುಕುಂ ಸಾಗುವಳಿ ಮಾಡಿದಂಥ ಜನ, ಅನಕ್ಷರಸ್ಥರು, ವಿಷಯ ತಿಳಿಯದೇ ಇರತಕ್ಕ ಜನ ಇದು ವ್ಯಾಪಕವಾದ ಪ್ರಚಾರ ಇಲ್ಲದೇ ಇರುವುದರಿಂದ, ಅನೇಕ ಜನ ಅರ್ಜಿ ಸಲ್ಲಿಸುವುದಕ್ಕೆ ಸಾಧ್ಯವಾಗಿಲ್ಲ, ಕಾಲಾವಕಾಶವನ್ನು ಮುಂದುವರಿಸಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ : ಮಾನ್ಯ ಉಪಾಧ್ಯಕ್ಷರೇ, ಇದಕ್ಕೆ ಸಾಕಷ್ಟು ಪ್ರಚಾರ ಕೊಟ್ಟಿತ್ತು. ಈಗಾಗಲೇ ಪ್ರಚಾರ ಕೊಟ್ಟಾಗಿನಿಂದ, ತಾಲ್ಲೂಕು ಆಫೀಸುಗಳಿಗೆ ತಿಳಿಸಿದೆ. ಪೇಪರಿನಲ್ಲೆಲ್ಲಾ ಬಂದಿದೆ ಮತ್ತು ಅದಕ್ಕನುಗುಣವಾಗಿ ಆರು ತಿಂಗಳು ಟೈಮ್ ಬೇರೆ ಕೊಟ್ಟಿದ್ದೇವೆ. ಒಟ್ಟು ಸುಮಾರು 10 ಲಕ್ಷ 86 ಸಾವಿರ ಅರ್ಜಿಗಳು ಬಂದಿದೆ. 25.8 ಲಕ್ಷ ಎಕರೆಯನ್ನು ಕವರ್ ಮಾಡುತ್ತದೆ. ಈಗ ಆ ಕಾಲ ಮುಗಿದ ನಂತರ ಸುಮಾರು 28,723 ಅರ್ಜಿಗಳು ಬಂದಿದೆ. ಇದಕ್ಕೆ ಟೈಮ್ ಮುಂದುವರಿಸಬೇಕೆಂದು ಕೇಳುತ್ತಾರೆ. ಟೈಮ್ ಮುಂದುವರಿಸುವುದಕ್ಕಾಗುವುದಿಲ್ಲ.

ಶ್ರೀ ಎಸ್. ರುದ್ರಪ್ಪ : ಮಾನ್ಯ ಅಧ್ಯಕ್ಷರೆ, ಏನು ಅವಧಿ ವಿಸ್ತರಣೆ ಕೊಟ್ಟಿದ್ದರು ಆ ಅವಧಿ ಮುಗಿದ ಮೇಲೂ ಸಹ ಅದು, ಎಷ್ಟೋ ಜನ ರೈತರಿಗೆ, ಗ್ರಾಮಾಂತರ ಪ್ರದೇಶದ ರೈತರು, ಬಡವರಿಗೆ ಗೊತ್ತಿಲ್ಲ, ನಮ್ಮ ತಾಲ್ಲೂಕಿನಲ್ಲೇ ಒಂದೂ ಒಂದೂವರೆ ಸಾವಿರ ಅರ್ಜಿಗಳು ಈಗ ಬಂದಿವೆ. ಆದುದರಿಂದ ಅವಧಿಯನ್ನು ಎಕ್ಸ್‌ಟೆಂಡ್ ಮಾಡುವುದು ಒಳ್ಳೆಯದು. ಇದರಿಂದ ಬಡ ರೈತರಿಗೆ ಅನುಕೂಲವಾಗುತ್ತದೆ ಒಳ್ಳೆಯದಾಗುತ್ತದೆ, ಎಕ್ಸ್‌ಟೆಂಡ್ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ.

ಉಪಾಧ್ಯಕ್ಷರು : ಅದಕ್ಕೆ ಆಗಲೇ ಉತ್ತರ ಹೇಳಿದ್ದಾರೆ.

ಶ್ರೀ ಪಿ.ಸಿ. ಸಿದ್ದನಗೌಡರ್ : ಫಾರೆಸ್ಟ್ ಲ್ಯಾಂಡ್ ಮತ್ತು ಹುಲ್ಲುಗಾವಲು ಇರತಕ್ಕಂಥ ಜಮಿನಿನಲ್ಲಿ ಸಾಗುವಳಿ ಮಾಡಿರತಕ್ಕ ಅನೇಕ ಜನ ಅರ್ಜಿ ಕೊಟ್ಟಿದ್ದಾರೆ. ಅದರ ಬಗ್ಗೆ ಏನು ಹೇಳಬೇಕು. ಎರಡನೆಯ ಪಾಯಿಂಟ್, ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ಟೆನೆನ್ಸಿ ಪ್ರಕಾರ ಯಾವ ರೀತಿ ಅಪ್ಲಿಕೇಷನ್ ಕೊಡುವುದಕ್ಕೆ ಸರಕಾರ ಅವಕಾಶ ಕೊಟ್ಟಿದ್ದಾರೆ. ನಮ್ಮ ಸ್ನೇಹಿತರು ಹೇಳಿದ ಹಾಗೆ ಸಿ ಅಂಡ್ ಡಿ ಲ್ಯಾಂಡ್, ಎಸ್.ಸಿ.\ಎಸ್.ಟಿ. ಬ್ಯಾಕ್‌ವರ್ಡ್‌ಕ್ಲಾಸಸ್, ಗೊತ್ತಿಲ್ಲದವರು, ತಿಳುವಳಿಕೆ ಇಲ್ಲದವರು ಕೊಟ್ಟಿಲ್ಲ, ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ : ಟೈಮ್ ಎಕ್‌ಸಟೆನ್‌ಷನ್ ಕೊಡುವುದಕ್ಕೆ ಸಾಧ್ಯ ಇಲ್ಲ ಎಂದು ಹೇಳುತ್ತೇನೆ.

ಶ್ರೀ ಇಲ್ಕಲ್ ವಿಜಯಕುಮಾರ್ : ಈ ಒಂದು ಕಾರ್ಯಕ್ರಮ ಬಡವರ ಕಲ್ಯಾಣ ಕಾರ್ಯಕ್ರಮ ಆಗಿದೆ. ಇದರ ಬಗ್ಗೆ ಕಂದಾಯ ಮಂತ್ರಿಗಳು ಹೆಚ್ಚಿನ ಆಸಕ್ತಿಯನ್ನು ತಾಳಿ ಮುಂದೆ ಹೆಚ್ಚಿನ ಕಾಲಾವಕಾಶ ಕೊಡಬೇಕು. ಅವಧಿ

ಮುಗಿದಮೇಲೆ 28ಸಾವಿರ ಅರ್ಜಿಗಳನ್ನು ರಿಸೀವ್ ಮಾಡಿರುತ್ತೇವೆಂದು ಹೇಳುತ್ತಿದ್ದಾರೆ. ಅದರಂತೆ ಬಾಕಿ ಅರ್ಜಿಗಳಿಗೂ ಕಾಲಾವಕಾಶ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟು ಈ ಕಲ್ಯಾಣ ಕಾರ್ಯಕ್ರಮದಲ್ಲಿ ಆಸಕ್ತಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

SRI M. RAJASHEKARA MURTHY : I have already replied that time cannot be extended.

ಮಳೆಯ ಅಭಾವದಿಂದ ನೊಂದವರಿಗೆ ಪರಿಹಾರ

119 - ಶ್ರೀ ಗೋಪಾಲ ಎಂ. ಕಾನಡೆ (ಸಿರ್ಸಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿರ್ಸಿ-ಸಿದ್ದಾಪುರ ತಾಲ್ಲೂಕಿನಲ್ಲಿ ಮಳೆಯ ಹಾನಿಯಿಂದ ಉಂಟಾದ ನಷ್ಟವೆಷ್ಟು? (ನಷ್ಟದ ವಿವರ ನೀಡುವುದು)

ಆ) ಹಾಗಿದ್ದಲ್ಲಿ ಎಷ್ಟು ರೈತರಿಗೆ ಪರಿಹಾರ ನೀಡಲಾಗಿದೆ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಸಿರ್ಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಮಳೆಯ ಹಾನಿಯಿಂದ ನಷ್ಟದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ :

ತಾಲ್ಲೂಕಿನ ಹೆಸರು	ಖಾಸಗಿ ಆಸ್ತಿಗೆ ಹಾನಿ					
	ಜಾನುವಾರು ಹಾನಿ		ಮನೆಗಳ ಹಾನಿ		ಬೆಳೆ ನಷ್ಟ	
	ಸಂಖ್ಯೆ	ನಷ್ಟ (ರೂ. ಗಳಲ್ಲಿ)	ಸಂಖ್ಯೆ (ಬಾಗಶಃ)	ಹಾನಿ (ರೂ. ಗಳಲ್ಲಿ)	ಹೆಕ್ಟೇರ್	ನಷ್ಟ (ರೂ. ಗಳಲ್ಲಿ)
1. ಶಿರ್ಸಿ	1(ದನ)	3000	47	1.00,000	1645	874000
2. ಸಿದ್ದಾಪುರ	-	-	11	25,000	2580	769000

ತಾಲ್ಲೂಕಿನ ಹೆಸರು	ಖಾಸಗಿ ಆಸ್ತಿಗೆ ಹಾನಿ					
	ರಸ್ತೆ		ಸೇತುವೆ		ಸಣ್ಣ ನೀರಾವರಿ ಕೆರೆ	
	ಸಂಖ್ಯೆ	ನಷ್ಟ (ರೂ. ಗಳಲ್ಲಿ)	ಸಂಖ್ಯೆ	ನಷ್ಟ (ರೂ. ಗಳಲ್ಲಿ)	ಸಂಖ್ಯೆ	ನಷ್ಟ (ರೂ. ಗಳಲ್ಲಿ)
1. ಶಿರ್ಸಿ	25	30,35,000	2	2,75,000	8	595000
2. ಸಿದ್ದಾಪುರ	23	5,60,000	1,1,00,000			
ಒಟ್ಟು ಹಾನಿ ಖಾಸಗಿ ಆಸ್ತಿಗೆ ರೂ.				17,71,000.0		
ಸಾರ್ವಜನಿಕ ಆಸ್ತಿಗೆ ರೂ.				45,65,000.00		
ಒಟ್ಟು ರೂ.				63,36.000.00		

ಆ) ಶಿರ್ಶಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಅನುಕ್ರಮವಾಗಿ 1,656 ಮತ್ತು 1,772 ರೈತರಿಗೆ ಪರಿಹಾರ ನೀಡಲಾಗಿದೆ.

ಶ್ರೀ ಗೋಪಾಲ ಮುಕುಂದ ಕಾನಡೆ : ಈ ಪರಿಹಾರ ಕೊಡುವ ಟೈಮ್‌ನಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ. ಕೆಲವು ರೈತರಿಗೆ ಸರಿಯಾದ ಪರಿಹಾರ ಸಿಕ್ಕಿಲ್ಲ, ಪುನಃ ಯಾರಾದರೂ ಅರ್ಜಿ ತೆಗೆದುಕೊಂಡು ಬಂದರೆ ಅವರಿಗೆ ಸಹಾಯ ಮಾಡುತ್ತೀರಾ? ಶಿರಸಿ, ಮತ್ತು ಸಿದ್ದಾ ಪುರ ತಾಲ್ಲೂಕಿನಲ್ಲಿ ಮಳೆ ಹಾನಿಯಿಂದ ಪರಿಹಾರ ಕೊಡುವಾಗ ಸ್ವಲ್ಪ ವ್ಯತ್ಯಾಸ ಆಗಿದೆ. ಕೆಲವು ಮಂದಿ ಹೆಸರು ತಪ್ಪಿದೆ. ಅವರು ಅರ್ಜಿ ಕೊಡುತ್ತಿದ್ದಾರೆ, ತಾವು ಏನಾದರೂ ಸಹಾಯ ಮಾಡುತ್ತೀರಾ?

ಶ್ರೀ ಎಂ. ರಾಜಶೇಖರ ಮೂರ್ತಿ : ಯಾರು ಯಾರಿಗೆ ತೊಂದರೆಯಾಗಿದೆ ಪರಿಹಾರ ಸಿಕ್ಕಿಲ್ಲ ಅವರು ಏನಾದರೂ ಸಿಕ್ಕಿಲ್ಲ ಎಂದು ಅಪ್ಲಿಕೇಷನ್ ಕೊಟ್ಟರೆ ಅದನ್ನು ಕನ್ಸಿಡರ್ ಮಾಡುತ್ತೇವೆ.

ಶ್ರೀ ಪಿ.ಸಿ. ಸಿದ್ದನಗೌಡರ್ : ಈ ವಿಚಾರದಲ್ಲಿ ಧಾರವಾಡ ಜಿಲ್ಲೆಗೆ ಹಣ ಕೊಟ್ಟಿಲ್ಲ, ಡಿ.ಸಿ. ಅವರು ಗ್ರಾಂಟ್ಸ್ ಇಲ್ಲ ಎಂದು ಹೇಳುತಿದ್ದಾರೆ. ಬೆಳೆ ಹಾನಿ ಏನಾಯಿತು ಅದರಲ್ಲಿ ಧಾರವಾಡ ಜಿಲ್ಲೆಗೆ ಒಂದು ಪೈಸೆ ಕೊಟ್ಟಿಲ್ಲ. ಡಿ.ಸಿ.ಯವರನ್ನು ಕೇಳಿದರೆ ದುಡ್ಡಿಲ್ಲ ಎಂದು ಹೇಳುತ್ತಾರೆ, ತಾವು ದಯವಿಟ್ಟು ಇದರ ಬಗ್ಗೆ ಸದನಕ್ಕೆ ತಿಳಿಸಬೇಕು.

ಶ್ರೀ ಎಂ. ರಾಜಶೇಖರ ಮೂರ್ತಿ : ಡಿ ಸಿ ಯವರು ದುಡ್ಡು ಬೇಕೆಂದು ನಮಗೆ ಹೇಳಿದರೆ ಅವರಿಗೆ ದುಡ್ಡು ಕೊಡುತ್ತೇವೆ.

ಶಿರಾ ತಾಲ್ಲೂಕು ಬ್ರಹ್ಮಸಂದ್ರ ಗೇಟು ಬಳಿ ಉಪಕೃಷಿ ಮಾರುಕಟ್ಟೆಯ ಸ್ಥಾಪನೆ

596 - ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಿರಾ ತಾಲ್ಲೂಕು, ಬ್ರಹ್ಮಸಂದ್ರ ಗೇಟಿನ ಬಳಿ ಉಪ-ವ್ಯವಸಾಯೋತ್ಪನ್ನ ಮಾರುಕಟ್ಟೆಯ ಅವಶ್ಯಕತೆಯಿದ್ದು ಅದನ್ನು ಸ್ಥಾಪಿಸಲು ಸಾರ್ವಜನಿಕರಿಂದ ಮತ್ತು ಶಾಸಕರಿಂದ ಮನವಿಗಳು ಬಂದಿರುವುದು ಸರ್ಕಾರಕ್ಕೆ ತಿಳಿದಿದೆಯೆ;

ಆ) ಹಾಗಿದ್ದಲ್ಲಿ ಮಾರುಕಟ್ಟೆಯನ್ನು ಸ್ಥಾಪಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಹೌದು

ಆ) ಇದರ ಸಾಧ್ಯ ಸಾಧ್ಯತೆಯನ್ನು ಪರಿಶೀಲಿಸಲಾಗುವುದು.

ಶ್ರೀ ಟಿ.ಬಿ. ಜಯಚಂದ್ರ : ನನ್ನ ಪ್ರಶ್ನೆಗೆ ಹೌದು ಎಂದು ಉತ್ತರ ಕೊಟ್ಟಿದ್ದೀರಿ. ಇನ್ನೊಂದಕ್ಕೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಅರ್ಜಿ ಬಂದಿರುವುದು ಯಾವಾಗ ಸರಕಾರಕ್ಕೆ ಶಾಸಕರಿಂದ ಅಥವಾ ಸಾರ್ವಜನಿಕರಿಂದ ಬಂದಾಗ ಅದನ್ನು ಪರಿಶೀಲನೆ ಮಾಡಿ ಅಂತಿಮ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಎಷ್ಟುದಿನ ಬೇಕೆಂದು ಸಚಿವರು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, vide representation dt. 28.9.1991 there has been a request for the establishment of sub-market either at Kallambella or Brahmasandra gate in Sira Taluk for orderly marketing the agricultural produce grown at Bakkapatna, Kallambella.

90-91ರಲ್ಲಿ ಅರ್ಜಿ ಬಂದಿದೆ. ಅದರ ಸರ್ವೆ ರಿಪೋರ್ಟ್ ನಾವು ಈಗಾಗಲೇ ತರಿಸಿದ್ದೇವೆ. ಸರ್ವೆ ರಿಪೋರ್ಟ್ ಪ್ರಕಾರ ಕಳ್ಳಂಬೆಳ್ಳದಲ್ಲಿ ಸಬ್ ಮಾರ್ಕೆಟ್ ಯಾರ್ಡ್ ಮಾಡಬಹುದೆಂದು ಇದೆ. ಆದರೆ ತಾವು ಬ್ರಹ್ಮಸಂದ್ರ ಗೇಟ್ ಹತ್ತಿರ ಮಾಡಬೇಕೆಂದು ಕೇಳುತ್ತಿದ್ದೀರಿ. ಅಲ್ಲಿ ಸಂತೆ ಮಾಡಬಹುದು, ಸಬ್‌ಮಾರ್ಕೆಟ್ ಯಾರ್ಡ್ ಮಾಡುವುದಕ್ಕೆ ಫೆಸಿಲಿಟೀಸ್ ಇಲ್ಲ. ಏತಕ್ಕೆಂದರೆ ಪೊಲೀಸ್ ಸ್ಟೇಷನ್, ಹೈಸ್ಕೂಲ್, ಕೆ.ಇ.ಬಿ. ಆಫೀಸ್, ಕೆನರಾಬ್ಯಾಂಕ್, ಪ್ರಾಥಮಿಕ ಆರೋಗ್ಯ ಕೇಂದ್ರ. ಪಶುವೈದ್ಯಶಾಲೆ ಇವೆಲ್ಲ ವ್ಯವಸ್ಥೆ ಇರತಕ್ಕಂಥಾದ್ದು ಕಳ್ಳಂಬೆಳ್ಳದ ಹತ್ತಿರ. ಅದಕ್ಕೆ ಇದನ್ನು ಅಲ್ಲಿ ಮಾಡ ತಕ್ಕದ್ದು ಸೂಕ್ತ ಎಂಬ ಮಾತನ್ನು ನಮ್ಮ ಅಧಿಕಾರಿಗಳು ಹೇಳುತ್ತಿದ್ದಾರೆ. ಈಗ ಏನು ರಿಪೋರ್ಟ್ ಬಂದಿದೆ ಅದರ ಆಧಾರದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಈಗ ಕಳ್ಳಂಬೆಳ್ಳಕ್ಕೆ ಸೂಕ್ತವಾದಂಥ ಜಾಗೆ ಎಂದು ಹೇಳಿ ತಾವು ತೀರ್ಮಾನ ಮಾಡಿರುವುದರಲ್ಲಿ ನನ್ನ ಅಭ್ಯಂತರ ಏನೂ ಇಲ್ಲ, ಅದು ಸೂಕ್ತವಾಗಿರತಕ್ಕಂಥಾದ್ದು. ಆದರೆ ನನ್ನ ತೊಂದರೆ ಏನು ಅಂದರೆ ಬ್ರಹ್ಮಸಂದ್ರ ಗೇಟಿನಲ್ಲಿ ಮಾಡಿದಾಗ ಸಾಕಷ್ಟು ಸರ್ಕಾರಿ ಜಮೀನು ಸಿಕ್ಕುತ್ತಾ ಇತ್ತು. ಕಳ್ಳಂಬೆಳ್ಳದಲ್ಲಿ ಸಿಗುವುದು ಕಷ್ಟ ಎನ್ನತಕ್ಕಂಥ ಒಂದು ಭಾವನೆಯಿಂದ ನಾನು ಅದನ್ನು ಬ್ರಹ್ಮಸಂದ್ರ ಗೇಟಿಗೆ ಬೇಕು ಎಂದು ಹೇಳಿದೆ. ಈಗ ಕಳ್ಳಂಬೆಳ್ಳದಲ್ಲಿ ನೀವು ಮಾಡೋದಾದರೆ ಖಂಡಿತವಾಗಿ ನನ್ನ ಅಭ್ಯಂತರವಿಲ್ಲ. ಅದನ್ನು ಕಳ್ಳಂಬೆಳ್ಳದಲ್ಲಿ ಸ್ಥಾಪನೆ ಮಾಡಿ ಆದರೆ ನಾನು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ಮನವಿಯನ್ನು ಸಲ್ಲಿಸಿರತಕ್ಕಂಥಾದ್ದು ಕಳ್ಳಂಬೆಳ್ಳ ಮತ್ತು ಬೆಳಗಾವಿ ಜಾಗದಲ್ಲಿ ಬರತಕ್ಕಂಥಾದ್ದರಲ್ಲಿ ಅಲ್ಲಿ ಸಾಕಷ್ಟು ಜನ ಅಡಿಕೆ ಬೆಳೆಯತಕ್ಕಂಥಾವರು. ಆ ಅಡಿಕೆಯನ್ನು ತೆಗೆದುಕೊಂಡು ಎಲ್ಲಿ ಹೋಗುತ್ತಾರೆಂದರೆ ಚಿತ್ರದುರ್ಗ, ಸಭಾಧ್ಯಕ್ಷಣಿಯವರ ಕ್ಷೇತ್ರಕ್ಕೆ ಹೋಗಬೇಕಾಗುತ್ತದೆ. ಅಂದರೆ ಭೀಮಸಮುದ್ರಕ್ಕೆ ಹೋಗಬೇಕಾಗುತ್ತದೆ, ಇಲ್ಲ ಶಿವಮೊಗ್ಗಕ್ಕೆ ಹೋಗಬೇಕಾಗುತ್ತದೆ. ಅಲ್ಲಿ ಅಡಿಕೆಯ ಮಾರ್ಕೆಟ್‌ನ್ನು ಮಾಡುವುದಕ್ಕೆ ಒಳ್ಳೆಯ ಜಾಗ ಆಗುತ್ತದೆ. ಅದಕ್ಕೋಸ್ಕರ ತ್ವರಿತವಾಗಿ ಕೆಲವೇ ದಿವಸದಲ್ಲಿ ನೀವು ಕಾರ್ಯಕ್ರಮವನ್ನು ಹಾಕಿಕೊಂಡು ಕಳ್ಳಂಬೆಳ್ಳದಲ್ಲಿ ಸ್ಥಾಪನೆ ಮಾಡುತ್ತೀರಿ ಎನ್ನತಕ್ಕಂಥ ಆಶ್ವಾಸನೆಯನ್ನು ತಾವು ದಯವಿಟ್ಟು ಈ ಸದನದಲ್ಲಿ ಕೊಡಬೇಕಾತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನಾವು ಸರ್ವೆ ರಿಪೋರ್ಟ್ ತರಿಸಿಕೊಂಡೆ ಈ ಮಾತನ್ನು ಹೇಳುತ್ತಿದ್ದೇವೆ. ತಾವು ಕೇಳಿದ್ದುದು ಬೇರೆ ಜಾಗ ಇದ್ದರೂ – ಕೂಡ ಈ ಜಾಗದಲ್ಲಿ ಸೂಕ್ತ ಇದೆ ಎಂತ ಅನ್ನತಕ್ಕಂಥಾದ್ದನ್ನು ನಾನೇ ಹೇಳುತ್ತಿದ್ದೇನೆ. ಆದರೆ ದಯವಿಟ್ಟು ತಾವು ಕೂಡ ಅಲ್ಲಿ ಸ್ವಲ್ಪ ಜಮೀನು ಕೊಡಿಸಿಕೊಟ್ಟರೆ ಅದಷ್ಟುಬೇಗನೆ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತದೆ. ಏಕೆಂದರೆ ನಾವು ಲ್ಯಾಂಡ್ ಅಕ್ವಿಸಿಷನ್‌ಗೆ ಹೋದರೆ ಸ್ಟೇ ತರುವುದು, ಅದು

ಮಾಡೋದು, ಇಂಥದ್ದೆಲ್ಲಾ ಕೂಡ ಇರುತ್ತದೆ. ಅದಕ್ಕಾಗಿ ಅಲ್ಲಿ ಯಾವುದೇ ಒಂದು ಪ್ರೈವೇಟ್ ಲ್ಯಾಂಡ್ ಆಗಲಿ ಅಥವಾ ದಾನಿಗಳು ಮುಂದು ಬಂದರೆ....

ಶ್ರೀ ಟಿ.ಬಿ. ಜಯಚಂದ್ರ : ಲ್ಯಾಂಡನ್ನು ಹದಿನೈದು ದಿವಸದಲ್ಲಿ ಕೊಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಸ್ವಲ್ಪ ರೀಸನೆಬಲ್ ರೇಟ್‌ನಲ್ಲಿ ಕೊಡಿಸಿದರೆ ನಾವು ಅದನ್ನು ಈಗಾಗಲೇ ಹೇಳಿದ ಹಾಗೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ರಾಜ್ಯದಲ್ಲಿ ತಂಬಾಕು ಬೆಳೆಗಾರರಿಗೆ ಉಂಟಾಗಿರುವ ತೊಂದರೆ

641 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ತಂಬಾಕು ಬೆಳೆಗಾರರಿಗೆ ಆಗಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಪರಿಹಾರಕ್ಕಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಸ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಹೌದು.

ಭಾರತ ಸರ್ಕಾರದ ತಂಬಾಕು ಮಂಡಲಿಯು ದೇಶದಲ್ಲಿ ವಿ.ಎಫ್.ಸಿ. ತಂಬಾಕು ಬೆಳೆಯ ಉತ್ಪಾದನೆ ಮತ್ತು ಮಾರುಕಟ್ಟೆಯನ್ನು ವ್ಯವಸ್ಥಿತ ರೀತಿಯಲ್ಲಿ ನಿಯಂತ್ರಿಸುತ್ತದೆ. 1992-93ನೇ ಸಾಲಿನಲ್ಲಿ 21 ಮಿಲಿಯನ್ ಕೆ.ಜಿ. ತಂಬಾಕು ಬೆಳೆಯ ಉತ್ಪಾದನೆಯನ್ನು ನಿರೀಕ್ಷಿಸಲಾಗಿತ್ತು. ಆದರೆ ಈ ವರ್ಷದಲ್ಲಿ 28.42 ಮಿಲಿಯನ್ ಕೆ.ಜಿ ಉತ್ಪಾದನೆಯಾಗಿರುತ್ತದೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ತಂಬಾಕು ಬೇಡಿಕೆ ಕುಸಿದಿರುತ್ತದೆ. ಅತಿಯಾದ ಮಳೆಯ ಕಾರಣದಿಂದ ಗುಣಮಟ್ಟ ಕಡಿಮೆಯಾಗಿದ್ದು ಹಾಗೂ ಹೆಚ್ಚುವರಿ ತಂಬಾಕು ಉತ್ಪಾದನೆಯ ಪ್ರಯುಕ್ತ ತಂಬಾಕು ಬೆಳೆಯು ಹಿಂದಿನ ಸರಾಸರಿ ಬೆಲೆ ಪ್ರತಿ ಕೆ.ಜಿ.ಗೆ 42.12 ರೂ. ಇದ್ದದ್ದು ಈ ವರ್ಷದಲ್ಲಿ ಪ್ರತಿ ಕೆ.ಜಿ.ಗೆ 25-00 ರೂ.ಗಳಿಗೆ ಇಳಿದಿರುತ್ತದೆ.

ಈ ಮೇಲ್ಕಂಡ ತೊಂದರೆಯನ್ನು ಕರ್ನಾಟಕ ಸರ್ಕಾರವು ಗಮನಿಸಿ ತಂಬಾಕು ಬೆಳೆಯುವ ಕ್ಷೇತ್ರದ ಶಾಸಕರ ಮತ್ತು ರೈತರ ಪ್ರತಿನಿಧಿಗಳ ಸಭೆಯನ್ನು ದಿನಾಂಕ 10-11-1992ರಂದು ಕರೆದು, ತಂಬಾಕು ಬೆಳೆಗಾರರ ತೊಂದರೆಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು. ಇದರ ಬಗ್ಗೆ ಮಾನ್ಯ ಶ್ರೀ ಸಾಲೋಮಾನ್ ಖುರ್ಷಿದ್, ವಾಣಿಜ್ಯ ಮಂತ್ರಿಗಳು ಇವರಿಗೆ ಪತ್ರವನ್ನು ಬರೆದು ಮೇಲ್ಕಂಡ ತೊಂದರೆಗಳನ್ನು ಸರಿಪಡಿಸಿ ರೈತರಿಗೆ ಹೆಚ್ಚಿನ ಬೆಲೆಯನ್ನು ನೀಡುವಂತೆ ತಂಬಾಕು ಮಂಡಳಿಗೆ ತಿಳುವಳಿಕೆ ನೀಡಬೇಕೆಂದು ವಿನಂತಿಸಿಕೊಳ್ಳಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ವರ್ಷ ನಮ್ಮ ರಾಜ್ಯದಲ್ಲಿ ತಂಬಾಕು ಬೆಳೆಗಾರರಿಗೆ ಬಹಳ ತೊಂದರೆ ಆಗಿದೆ. ಸರ್ಕಾರದವರು ಬಹಳ ಸುಲಭವಾಗಿ ಕೇಂದ್ರದ ಮಂತ್ರಿಗಳಿಗೆ ಒಂದು ಪತ್ರ ಬರೆದಿದ್ದೇವೆ ಎಂದು ಹೇಳಿ ಅವರು ಜವಾಬ್ದಾರಿಯಿಂದ ಇಷ್ಟೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಈಗ ತಮಗೆ ಗೊತ್ತಿರುವ ಹಾಗೆ ಈ ವರ್ಷ ಆವರೇಜ್, ಕಳೆದ ವರ್ಷ 42-45 ರೂಪಾಯಿ ಇದ್ದಿದ್ದು ಈ ವರ್ಷ 18 ರೂಪಾಯಿಗೆ ಕೆ.ಜಿ. ಆಗಿದೆ.

ಕೆಲವು ಕಡೆ ಎಲ್ಲ ಆವೇರೆಜ್ ತೆಗೊಂಡಾಗ 18 ಆಗುತ್ತದೆ. 8-9ಕ್ಕೆ ಸಹಿತ ಇಳಿದಿರತಕ್ಕಂಥಾದ್ದು ಇದೆ. ಒಂದು ಸಾರಿ ಆಂಧ್ರಪ್ರದೇಶದಲ್ಲಿ ಇದೇ ರೀತಿ ಆದಾಗ ಎಸ್‌ಟಿಸಿಯವರಿಗೆ ಪರ್ಚೇಸ್ ಮಾಡಲಿಕ್ಕೆ 50 ಕೋಟಿ ರೂಪಾಯಿಯನ್ನು ಕೊಡಿಸಿ, ಅವರು ಪರ್ಚೇಸ್ ಮಾಡಿರತಕ್ಕಂಥಾದ್ದು ತಮಗೆ ಗೊತ್ತಿದೆ. ಈಗ 25 ರೂಪಾಯಿಗೆ ಮಾರಿದರೂ ರೈತರಿಗೆ ಏನು ಉಳಿಯುವುದಿಲ್ಲ. ಆದರಿಂದ ರಾಜ್ಯಸರ್ಕಾರದವರು ಈ ಬೆಳೆಗಾರರಿಗೆ ತಾವು ಕೊಂಡುಕೊಳ್ಳುವುದು ಮೂಲಕವಾಗಿ ಅವರಿಗೆ ಸಹಾಯ ಮಾಡಲಿಕ್ಕೆ ಸಾಧ್ಯವೇ? ಇದು ಒಂದು. ಎರಡನೆಯದಾಗಿ ಈಗ ರಷ್ಯಾದವರು ಒಂದು ಕನ್‌ಸೈನ್‌ಮೆಂಟ್ ತೆಗೆದುಕೊಂಡು 60 ಕೋಟಿ ರೂಪಾಯಿ ಬಾಕಿ ಇದೆಯಂತೆ, ರಷ್ಯಾ ಸರ್ಕಾರದವರು ನಮಗೆ ಕೊಡಬೇಕಾಗಿರೋದು, ಅದು ಬರದೇ ಈ ಪರ್ಚೇಸ್ ಮಾಡುವವರಿಗೂ ಬಹಳ ತೊಂದರೆ ಆಗಿದೆ. ಅದನ್ನು ಸಾಲದ ರೂಪದಲ್ಲಿ ಕೊಡಿಸಿ. ಸರ್ಕಾರ ಅವರ ಜವಾಬ್ದಾರಿ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇಲ್ಲವೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಈಗ ರಷ್ಯಾ ದೇಶದವರು ಕೊಡಬೇಕಾಗಿತಕ್ಕಂತಹ ದುಡ್ಡಿಗೆ ವ್ಯವಹಾರ ಮಾಡತಕ್ಕಂತಹ ಕೆಲಸ ಮಾಡಬಹುದು. ನಮ್ಮ ಕೇಂದ್ರ ಸರ್ಕಾರದ ಮುಖಾಂತರ ಇನ್ನು ಈ ಬೆಲೆಯನ್ನು ಹೆಚ್ಚು ಮಾಡುವುದು ಎಲ್ಲಾ ರೈತರಿಗೆ ಹೆಚ್ಚು ಬೆಲೆ ಸಿಕ್ಕವುದು ಅವಶ್ಯಕ. ಇಲ್ಲದೆ ಇದ್ದರೆ ಅವರು ಖರ್ಚನ್ನು ಸರಿದೂಗಿಸುವುದಕ್ಕೆ ಆಗುವುದಿಲ್ಲ ಎನ್ನುವ ವಿಷಯ ಸರ್ಕಾರಕ್ಕೆ ಗೊತ್ತಿದ್ದರೂ ಕೂಡ ಹೇಗೆ ಇದನ್ನು ಹತೋಟಿಗೆ ತರುವುದು, ಬೆಲೆ ಹೆಚ್ಚು ಮಾಡುವುದು ಎನ್ನುವುದನ್ನು ನಾವು ಹೇಳುವುದಕ್ಕೆ ಸ್ವಲ್ಪ ಕಷ್ಟ ಆಗಿದೆ. ಮಾನ್ಯ ಸಿಂಧ್ಯರವರು ಟೊಬ್ಯಾಕೊ ಬೆಳೆಯತಕ್ಕಂತ ರೈತರ ಕಷ್ಟಗಳನ್ನು ಯೋಚನೆ ಮಾಡಿದಾಗ ರೈತ ಇಷ್ಟೆ ಎಕರೆಯಲ್ಲಿ ಬೆಳೆಯಬೇಕು ಎಂದು ಹೇಳಿದರೂ ಕೂಡ, ಬೆಳೆಯುವುದು ಹೆಚ್ಚು ಭಾಗ ಬೆಳೆದು ಬಿಡುತ್ತಾನೆ. ಆದರೆ ಅದನ್ನು ಮಾರುವಾಗ ಅವನಿಗೆ ಬೆಲೆ ಸಿಕ್ಕದೆ ಇದ್ದರೆ ಆಗ ಕಷ್ಟ, ನಾನು ಮಾಡಿದ್ದು ತಪ್ಪು ಎನ್ನುವ ಹಾಗೆ ಆಗುತ್ತದೆ. ಆದರೂ ಕೂಡ ಇದನ್ನು ಬೆಲೆ ಏರಿದಾಗ ಹೆಚ್ಚು ಬೆಳೆಯುತ್ತಾರೆ. ಹೆಚ್ಚು ಬೆಳೆ ಬೆಳೆದಮೇಲೆ ಧಾರಣೆ ಕಡಿಮೆ ಆಗುತ್ತದೆ. ಇದು ಸಾಮಾನ್ಯವಾಗಿ ರೈತನಿಗೆ ಇರತಕ್ಕಂತಹ ಕಷ್ಟ. ಇದನ್ನು ಅರಿತುಕೊಂಡು ಯಾವರೀತಿ ಮಾಡಬೇಕು ಎಂದು ಹೇಳಿ ಈಗಾಗಲೇ ಒಂದು ಸಭೆ ಕರೆದು ಮೊನ್ನೆತಾನೇ ಹೊಗೆಸೊಪ್ಪು ಬೆಳೆಯತಕ್ಕಂತಹ ಜನಗಳನ್ನೆಲ್ಲಾ ಸೇರಿಸಿ ಮುಖಂಡರುಗಳನ್ನು ಸೇರಿಸಿ, ಅವರ ಜೊತೆ ಸಮಾಲೋಚನೆ ಮಾಡಿದ್ದಾರೆ. ಈಗ 5-6 ಡಿಸ್ಟ್ರಿಕ್ಟ್‌ಗಳಲ್ಲಿ 12 ತಾಲ್ಲೂಕಿನಲ್ಲಿ ಹೊಗೆಸೊಪ್ಪು ಬೆಳೆಯುತ್ತಿದ್ದೇವೆ. ಅದಕ್ಕೆ ಸಮಾಲೋಚನೆ ಮಾಡಿ ಯಾವರೀತಿ ಮಾಡಬೇಕು ಎನ್ನೋದಕ್ಕೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಚಿಕ್ಕೇಗೌಡ : ಮಾನ್ಯ ಉಪಾಧ್ಯಕ್ಷರೇ, ಇಂಡಿಯಾ ಟೊಬ್ಯಾಕೋ ಬೋರ್ಡ್ ಏನಿದೆ ಆ ಬೋರ್ಡ್‌ನವರು ಬೆಳೆ ಹೆಚ್ಚು ಹೆಚ್ಚು ಮಳೆ ಆಗಿದೆ ಬೆಳೆ ಬೆಳೆದಿದ್ದಾರೆಂದೂ ಆದ್ದರಿಂದ ಬೆಲೆ ಬಿತ್ತು ಎಂದು ಉತ್ತರದಲ್ಲಿ ಹೇಳಿದ್ದಾರೆ. ನಾನು ಹಿಂದೆ ಕೃಷಿ ಸಚಿವನಾಗಿದ್ದಾಗ 10.11.92ರಲ್ಲಿ ಸಬೆ ಕರೆದು ಶಾಸಕರ, ಅಧಿಕಾರಿಗಳ ಮತ್ತು ಸಂಬಂಧಪಟ್ಟ ಬೋರ್ಡ್ ಒಳಗೊಂಡಂತೆ ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದೇನೆ.ಮತ್ತು ಕೇಂದ್ರ ಸರ್ಕಾರಕ್ಕೂ ಪತ್ರ ಬರೆದಿದ್ದೇನೆ. ಈ ವಿಚಾರದಲ್ಲಿ ಪಾರ್ಲಿಮೆಂಟ್‌ನಲ್ಲೂ ಕೂಡ ನಮ್ಮ ರಾಜ್ಯದ ಸದಸ್ಯರು ಪ್ರಸ್ತಾಪ

ಮಾಡಿದ್ದಾರೆ. ಈ ಬೆಳೆಗಾರರಿಂದ ಸುಗ್ಗಿ ಕಾಲದಲ್ಲಿ ಕಡಿಮೆ ಬೆಲೆಯಲ್ಲಿ ಕೊಂಡು ಬೇಡಿಕೆ ಹೆಚ್ಚಾದಾಗ ಹೆಚ್ಚು ಬೆಲೆಗೆ ಮಾರುತ್ತಾರೆ. ಇದು ಮಾರುಕಟ್ಟೆಯಲ್ಲಿ ನಡೆಯುತ್ತಾ ಇದೆ. ಈ ಬಗ್ಗೆ ಖುರ್ಶೀದ್ ಅಲಂ ಖಾನ್ ಅವರಿಗೆ ಪತ್ರ ಬರೆದಿದ್ದು ಆ ಬಗ್ಗೆ ಅವರಿಂದ ಏನು ಉತ್ತರ ಬಂದಿದೆ ಎಂದು ತಿಳಿಸಬೇಕು. ಹಾಗೂ ಮುಂದಿನ ತಮ್ಮ ಕಾರ್ಯಕ್ರಮಗಳು ಏನೆಂದು ತಾವು ತಿಳಿಸಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಇಲ್ಲಿಯವರೆಗೆ ಅವರಿಂದ ಯಾವ ಕಾಗದವೂ ಬಂದಿಲ್ಲ. ಈ ಶಾಸನಸಭೆ ಮುಗಿದ ಮೇಲೆ ಸಾಧ್ಯವಾದರೆ ಬೆಳೆಗಾರರ ಪ್ರತಿನಿಧಿಗಳನ್ನು ಕರೆದುಕೊಂಡು ಹೋಗಿ ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ, ಸಾಧ್ಯವಾದರೆ ಡೆಲ್ಲಿಗೆ ಹೋಗಿ ಈ ಕಷ್ಟವನ್ನು ಕೇಂದ್ರ ಸಚಿವರಿಗೆ ತಿಳಿಸಿ ಮುಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ತೀರ್ಮಾನ ಮಾಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ತಂಬಾಕು ಬೆಳೆಗಾರರಿಗೆ ನಷ್ಟ ತುಂಬುವುದಕ್ಕೆ ಕರ್ನಾಟಕ ಸರ್ಕಾರ ಏನಾದರೂ ಸಹಾಯಧನ ಕೊಡುತ್ತದೆಯೇ? ತಂಬಾಕು ಬೆಳೆಗಾರರ ನಷ್ಟದ ಬಗ್ಗೆ ಚರ್ಚೆ ಮಾಡಲು ಪ್ರತಿನಿಧಿಗಳನ್ನು ದೆಹಲಿಗೆ ಕರೆದುಕೊಂಡು ಹೋಗೋಣ ಎಂದು ಹೇಳಿದ್ದೀರಿ. ಆದರೆ ಈ ಬಗ್ಗೆ ತಮ್ಮ ಸ್ಪಷ್ಟ ನಿಲುವು ಏನೆಂದು ಹೇಳಿ. ತಂಬಾಕು ರೈತ ಪ್ರತಿನಿಧಿಗಳು, ವಿರೋಧ ಪಕ್ಷದ ಮುಖಂಡರನ್ನು ಈ ಬಗ್ಗೆ ದೆಹಲಿಗೆ ಕರೆದುಕೊಂಡು ಹೋಗಿ ಕೇಂದ್ರ ಸರ್ಕಾರಕ್ಕೆ ಒತ್ತಾಯ ತಂದು ಆ ಮೂಲಕ ಸಹಾಯ ಮಾಡುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಈಗಾಗಲೇ ನಾನು ಉತ್ತರ ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ತಂಬಾಕು ಬೆಳೆಗಾರರಿಗೆ ನಷ್ಟವಾಗಿರುವುದಕ್ಕೆ ಸಹಾಯಧನ ಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮೊನ್ನೆ 10ನೇ ತಾರೀಖು ಸಭೆ ಮಾಡಿದ್ದನ್ನು ಹಿಂದಿನ ಕೃಷಿ ಸಚಿವರು ತಿಳಿಸಿದ್ದಾರೆ. ಆದರ ಮೇಲೆ ಏನು ಹೇಳಿದೆ ಎಂದರೆ ಮತ್ತೆ ಈ ಬೆಳೆ ಆಗಿಂದಾಗ್ಗೆ ಹೆಚ್ಚು ಕಡಿಮೆ ಆಗುವುದು ಸಾಮಾನ್ಯವಾಗುತ್ತಾ ಇದೆ. ಹೆಚ್ಚು ಬೆಳೆ ಬೆಳೆದರೆ ಕಡಿಮೆ ಬೆಲೆ ಆಗುತ್ತದೆ. ಕಡಿಮೆ ಬೆಳೆದರೆ ಬೆಲೆ ಹೆಚ್ಚು ಆಗುತ್ತದೆ. ಸಹಾಯಧನ ಯಾವ ರೀತಿ ಮಾಡಬೇಕು. ಕೇಂದ್ರ ಸರ್ಕಾರದ ಸಹಾಯ ಸಿಗುತ್ತದೆಯೋ ಇಲ್ಲವೋ ಇದನ್ನೆಲ್ಲಾ ಸಮಾಲೋಚನೆ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕೇಂದ್ರ ಸರ್ಕಾರಕ್ಕೆ ಹಿಂದಿನ ಕೃಷಿ ಸಚಿವರು ಕಾಗದ ಬರೆದು ಪ್ರತಿನಿಧಿಗಳನ್ನು ಕರೆಯಿರಿ ಮಾತನಾಡತಕ್ಕ ಕೆಲಸ ಮಾಡಿದ್ದಾರೆ. ಆದರೆ ಕೇಂದ್ರ ಸರ್ಕಾರದವರು ಇದುವರೆವಿಗೂ ರಾಜ್ಯ ಸರ್ಕಾರ ಬರೆದಿರತಕ್ಕ ಪತ್ರಕ್ಕೆ ಯಾವುದೇ ರೀತಿಯ ಉತ್ತರವನ್ನು ಕೊಟ್ಟಿಲ್ಲ ಎಂದರೆ ಇದು ಖಂಡನೀಯ ವಿಚಾರ. ಕೇಂದ್ರ ಸರ್ಕಾರ ರಾಜ್ಯದ ಬಗ್ಗೆ ನಿರ್ಲಕ್ಷ್ಯ ತೋರಿಸಿದೆ. ಇದು ತಮಗೂ ಗೊತ್ತಿದೆ. ಇವತ್ತು ಮೈಸೂರು ಮತ್ತ ಹಾಸನ ಜಿಲ್ಲೆಯ ಸಾವಿರಾರು ಜನ ರೈತರು ತೊಂದರೆಗೀಡಾಗಿದ್ದಾರೆ. ಇಂತಹ ಸ್ಥಿತಿಯಲ್ಲಿ ರಾಜ್ಯದಲ್ಲಿ ಯಾವು ಯಾವುದಕ್ಕೋ ಹಣ ಖರ್ಚು ಮಾಡುತ್ತೀರಿ? ಇವರಿಗೆ 50 ಲಕ್ಷವೋ, 1

ಕೋಟಿಯನ್ನೋ ಕೊಡುವುದಕ್ಕೆ ಏನು ತೊಂದರೆ? 2 ಕೋಟಿ ರೂಪಾಯಿ ಸಹಾಯಧನವಾಗಿ ಬಡ್ಡಿ ರಹಿತವಾಗಿ ಸಾಲ ಕೊಡಿ. ಇಲ್ಲದಿದ್ದರೆ ಅವರು ಬದುಕುವುದಕ್ಕೆ ಕಷ್ಟ ಇದೆ. ಡೆಲ್ಲಿಗೆ ಹೋಗಿ ನಾವು ಏನು ಮಾಡುವುದು? ಅನೇಕ ವಿಚಾರಗಳ ಬಗ್ಗೆ ನಾವು ಡೆಲ್ಲಿಗೆ ಹೋಗಿದ್ದೇವೆ. ಅಧಿಕಾರಿಗಳೂ ಹೋಗಿದ್ದಾರೆ. ಹೋಗಿ ಕರ್ನಾಟಕ ಭವನದಲ್ಲಿದ್ದು ಬರಬೇಕು. ಕೇಂದ್ರ ಸರ್ಕಾರದಲ್ಲಿ ಇರುವವರು ನಮ್ಮ ರಾಜ್ಯದ ಗೋಳನ್ನು ಕೇಳುವುದಕ್ಕೆ ತಯಾರು ಇಲ್ಲ, ಎಲ್ಲದಕ್ಕೂ ಡೆಲಿಗೇಷನ್ ಹೋಗುತ್ತೇವೆ ಎಂದರೆ ಸಮಾಧಾನವಾಗುವುದಿಲ್ಲ, ರಾಜ್ಯ ಸರ್ಕಾರದವರು ಈ ರೈತರಿಗೆ ಸಹಾಯಧನ ಕೊಡುವುದಕ್ಕೆ ತೊಂದರೆ ಏನಿದೆ? ಆ ರೈತರಿಗೆ 2 ಕೋಟಿ ರೂಪಾಯಿ ಕೊಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಯಾವ ರೀತಿ ಸಹಾಯ ಕೊಡಬೇಕು ಈಗ ಇರತಕ್ಕಂಥ ಕಷ್ಟವನ್ನು ಬಗೆಹರಿಸಬಹುದೇ ಎಂದು ತೀರ್ಮಾನಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸಹಾಯ ಕೊಡುವುದನ್ನು, ಅವರು ಒಪ್ಪಿಕೊಳ್ಳಬೇಕು. ಮೊದಲು ಸಹಾಯ ಕೊಡುತ್ತೇವೆ ಎನ್ನುವುದು ಸರ್ಕಾರ ತೀರ್ಮಾನ ಮಾಡಲಿ ಆಮೇಲೆ ಯಾವ ರೀತಿ ಕೊಡಬೇಕು ಎನ್ನುವುದನ್ನು ನಾವು ಯೋಚನೆ ಮಾಡೋಣ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಸಮಾಲೋಚನೆ ಮಾಡಿ ಆಮೇಲೆ ನಾನು ಮುಂದೆ ಉತ್ತರ ಹೇಳಬೇಕಾಗುತ್ತದೆ. ಈಗಲೇ ಸಹಾಯ ಕೊಡುತ್ತೇವೆ ಎಂದು ಹೇಳುವುದಕ್ಕೆ ಆಗುವುದಿಲ್ಲ.

ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ ಸರ್ವೆ ನಂ 33ರಲ್ಲಿ ರಕ್ಷಣಾ ಇಲಾಖೆಯವರಿಂದ ಭೂ ಸ್ವಾಧೀನ

628 - ಶ್ರೀ ಎಸ್. ಚಿಕ್ಕಮಾದು (ಹುಣಸೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ ಕುಪ್ಪೆ-ಕೊಳಗಟ್ಟ ಸರ್ವೆ ನಂ 33ರಲ್ಲಿ ಸುಮಾರು 1000 ಕುಟುಂಬಗಳಿಗೆ ಸೇರಿದ 1200 ಎಕರೆ ಜಮೀನನ್ನು ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯ ವಾರಫೇರ್ ರೇಂಜ್‌ಗಾಗಿ ಸ್ವಾಧೀನ ಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಜಮೀನಿಗೆ ಬದಲಾಗಿ ಬೇರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರವು ಕ್ರಮ ಕೈಗೊಳ್ಳುವುದೆ?*

ಇ) *ಸ್ವಾಧೀನ ಪಡಿಸಿಕೊಳ್ಳುವುದು ಖಚಿತವಾಗಿದ್ದಲ್ಲಿ ಈ ಜಮೀನನ್ನೇ ನಂಬಿ ಜೀವನ ನಡೆಸುತ್ತಿರುವ 1000 ಕುಟುಂಬಗಳಿಗೆ ಸರ್ಕಾರವು ಕೈಗೊಳ್ಳಲಿರುವ ಬದಲಿ ವ್ಯವಸ್ಥೆಯೇನು?*

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಮಂತ್ರಿಗಳು) :

ಅ) ಬಂದಿದೆ.

ಆ) ಇಲ್ಲ.

ಇ) ಕಾಯಿದೆಯಂತೆ ಸೂಕ್ತ ಪರಿಹಾರ ನೀಡಲಾಗುವುದು.

ಶ್ರೀ ಎಸ್. ಚಿಕ್ಕಮಾಧು : ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ಕೇಳಿದ್ದೇನೆ. ಏನು ಈ 1200 ಎಕರೆ ಜಮೀನನ್ನು ತಾವು ಸ್ವಾಧೀನ ಪಡಿಸಿಕೊಳ್ಳುತ್ತಾ ಇದ್ದೀರಿ. ಈ ಜಮೀನಿಗೆ ಬದಲಿ ಜಮೀನನ್ನು ಏತಕ್ಕೆ ಸ್ವಾಧೀನ ಪಡಿಸಿಕೊಳ್ಳಬಾರದು. ಆದರೆ ಉತ್ತರದಲ್ಲಿ ಇಲ್ಲ ಎಂದು ಹೇಳುತ್ತಾರೆ. ಇದರ ಉದ್ದೇಶ ಏನು ಎಂದು ಹೇಳಿದರೆ 1919ರಲ್ಲಿ ಕನ್ನಂಬಾಡಿ ಕಟ್ಟೆ ವ್ಯಾಪ್ತಿಯಲ್ಲಿ ಇದ್ದಂಥ ವಸ್ರಂಬಳ್ಳಿ ಗ್ರಾಮವನ್ನು ಕೃಷ್ಣರಾಜ ಸಾಗರ ಅಣೆಕಟ್ಟು ಕಟ್ಟಬೇಕು ಎನ್ನುವ ದೃಷ್ಟಿಯಿಂದ ಹುಣಸೂರು ತಾಲ್ಲೂಕಿಗೆ ಅವರನ್ನು ಸ್ಥಳಾಂತರಿಸಿದ್ದರು. ಈಗ ಅದೇ ರೈತರನ್ನು ಕೇಂದ್ರ ಸರ್ಕಾರದ ವಾರ್‌ಫೇರ್ ರೇಂಜ್‌ಗೆ ಬೇಕು ಎಂದು ಹೇಳಿ ಅದೇ 1200ಎಕರೆ ಅಕ್ವೈರ್ ಮಾಡಿಕೊಂಡು ಇವತ್ತು ಅಲ್ಲಿಂದಲೂ ಕೂಡ ಸ್ಥಳಾಂತರಿಸುತ್ತಿದ್ದೀರಿ. ಅದಕ್ಕಾಗಿ ಕೇಳುತ್ತಿದ್ದೇನೆ. ಒಂದು ಸಾರಿ ರಾಜ್ಯದ ಹಿತದೃಷ್ಟಿಯಿಂದ ಒಕ್ಕಲು ಎಬ್ಬಿಸಿದ ಮೇಲೆ ಮತ್ತೆ ಇನ್ನೊಂದು ಕಡೆ ಒಕ್ಕಲು ಎಬ್ಬಿಸುತ್ತಾ ಇದ್ದೀರಲ್ಲ ಅದರಲ್ಲಿ ಅರ್ಥ ಏನು ಇದೆ. ಈ ಜಮೀನು ಬದಲಿಗೆ ಸರ್ಕಾರ ಬೇರೆ ಜಮೀನು ಏಕೆ ಕೊಡಬಾರದು.

ಶ್ರೀ ಎಂ. ರಾಜಶೇಖರ ಮೂರ್ತಿ : ಇದು ಸೆಂಟ್ರಲ್ ಗೌರ್ನಮೆಂಟ್ ಪ್ರಾಜೆಕ್ಟ್ ಅವರು ಅದೇ ಜಾಗ ಬೇಕು ಎಂದು ಕೇಳುತ್ತಿದ್ದಾರೆ ಅದೇ ಜಾಗ ಬೇಕು ಅಂದರೆ ನಾವು ಅಕ್ವೈರ್ ಮಾಡಕೊಡಬೇಕಾಗುತ್ತದೆ. ಅಕಸ್ಮಾತ್ ಬೇರೆ ಕಡೆ ಆ ವೇಳೆಯಲ್ಲಿ ಜಮೀನು ಇದ್ದರೆ ಅದನ್ನು ಅವರಿಗೆ ಕೊಡಬಹುದು ಕಾಂಪನ್‌ಸೇಷನ್ ಕೊಡುತ್ತೇವೆ ಕೊಡುವುದರ ಜೊತೆಗೆ ಜಮೀನು ಇದ್ದರೆ ಅದನ್ನೂ ಸಹಾ ಕೊಡುತ್ತೇವೆ.

ಶ್ರೀ ಎಸ್. ಚಿಕ್ಕಮಾದು : ಮಾನ್ಯ ಮಂತ್ರಿಗಳು ಹೇಳಿದ್ದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಪರಿಹಾರಕ್ಕೆ ತಾವು ಜಮೀನು ಬದಲಾಗಿ ಹುಣಸೂರು ತಾಲ್ಲೂಕಿನಲ್ಲಿ ಸಾಕಷ್ಟು ಅರಣ್ಯ ಇಲಾಖೆಗೆ ವ್ಯಾಪ್ತಿಗೆ ಬರತಕ್ಕಂಥ ಜಮೀನಿನಲ್ಲಿ ಎಷ್ಟು ಜನ ಎಷ್ಟು ಎಕರೆ ಜಮೀನು ಕಳೆದುಕೊಳ್ಳುತ್ತಾರೆ ಅಷ್ಟು ಎಕರೆ ಜಮೀನನ್ನು ಕೂಡ ತಾವು ಮಂಜೂರು ಮಾಡಿಕೊಡತಕ್ಕಂಥ ವಿಚಾರ ಸ್ವಾಗತಾರ್ಹ, ಆದರೆ ಪರಿಹಾರ ತಾವು ಏನು ಕೊಡುತ್ತೀರಿ. ತಮಗೆ ನಿಜವಾದ ಸಂಗತಿ ಹೇಳುತ್ತೇನೆ. 1919ರಿಂದ ಸ್ಥಳಾಂತರಿಸಿದಾಗ ಅಲ್ಲಿಂದ ಇವತ್ತಿನವರೆಗೆ ಅವರು ಸ್ವಂತ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಆಗದೆ ಅವತ್ತು ಫಾರೆಸ್ಟ್ ಇಲಾಖೆ ಕೊಟ್ಟಂಥ 1200 ಎಕರೆಯನ್ನು ಅವರು ಕಾಡುಗಳನ್ನು ಕಡಿದು ಹಸನು ಮಾಡಿ ಅವತ್ತು ಕೊಟ್ಟಿದ್ದರು. ಅದಕ್ಕೆ ತಕ್ಕಂಥ ಪರಿಹಾರವನ್ನು ಕೊಡಬೇಕು. ಸೂಕ್ತ ಪರಿಹಾರ ಕೊಡುತ್ತೇವೆ ಎಂದು ಮಂತ್ರಿಗಳು ಏನು ಹೇಳಿದ್ದಾರೆ. ಅಂದರೆ ಮಾನ್ಯ ಅಧ್ಯಕ್ಷಣಿಯವರೇ ಸಬ್ ರಿಜಿಸ್ಟಾರ್ ಕಛೇರಿಯಲ್ಲಿ ಆ ಜಾಗದಲ್ಲಿ ಏನು ಆ ಜಮೀನು ನೊಂದಣಿ ಆಗಿದೆ ಅದರ ಒಂದು ಸರಾಸರಿ ಮೇಲೆ ನಾವು ಪರಿಹಾರ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ ಇವತ್ತು ಏನಾಗಿದೆ ಎಂದರೆ ತಮಗೂ ಗೊತ್ತಿದೆ ರಾಜ್ಯಕ್ಕೂ ಗೊತ್ತು ಇದು ಮಾರ್ಕೆಟ್ ಬೆಲೆ ಏನಾಗಿದೆ ಎಂದರೆ 50 ಸಾವಿರ ರೂಪಾಯಿ ಎಕರೆ ನಡೆದಿದ್ದರೂ ಕೂಡ ರಿಜಿಸ್ಟರ್ ಆಗತಕ್ಕಂಥ ವೇಳೆಯಲ್ಲಿ 20 ಸಾವಿರ ರೂಪಾಯಿ ಎಂದು ರಿಜಿಸ್ಟರ್ ಆಗಿರುವ ಅನೇಕ ನಿದರ್ಶನಗಳನ್ನು ನಾವು ಕಂಡಿದ್ದೇವೆ. ಅದಕ್ಕೆ ಮಾನವೀಯತೆ ದೃಷ್ಟಿಯಿಂದ ಏನಾದರೂ ಪರಿಹಾರ ಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ : ಅವರು ಹೇಳಿದರು ಸಬ್ ರಿಜಿಸ್ಟರ್ ಆಫೀಸಿನಲ್ಲಿ ಯಾವ ರೇಟು ನಿಗದಿ ಆಗಿದೆ ಅದನ್ನು ತೆಗೆದುಕೊಂಡರೆ ಇವರಿಗೆ ಬಹಳ ನಷ್ಟವಾಗುತ್ತದೆ ಏಕೆಂದರೆ ಸಬ್ ರಿಜಿಸ್ಟರ್ ಆಪೀಸಿನಲ್ಲಿ ಅಂಡರ್ ವ್ಯಾಲುವೇಶನ್ ಆಗಿರುವುದರಿಂದ ಅದೇ ರೀತಿಯಲ್ಲಿ ಅಷ್ಟೆ ಮಾಡಬೇಕು ಎಂದರೆ ತೊಂದರೆ ಆಗುತ್ತದೆ ಎಂದು ಹೇಳುವುದನ್ನು ಒಪ್ಪಬಹುದು. ಈಗ ಅಲ್ಲಿರತಕ್ಕಂಥ ರೈತರು ತಾವೇ ಮುಂದಾಗಿ ಬಂದಿದ್ದಾರೆ ನಾವು ಕೊಡುತ್ತೇವೆ ಎಂದು. ನೆಗೋಷಿಯೇಷನ್ ಮಾಡುತ್ತೇವೆ . ನೆಗೋಷಿಯೇಟ್ ಮಾಡುವಂಥ ಕಾಲದಲ್ಲಿ ಸ್ವಲ್ಪ ಏನು ಬೆಲೆ ಇದೆ ಅದಕ್ಕಿಂತ ಉತ್ತಮವಾದ ಬೆಲೆ ಕೊಡುತ್ತೇವೆ.

ಹೊಳೇನರಸೀಪುರ ತಾಲ್ಲೂಕಿನಲ್ಲಿ ತಾಳೆಎಣ್ಣೆ ಅಭಿವೃದ್ಧಿ ಯೋಜನೆ

180 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೇನರಸೀಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಳೇನರಸೀಪುರ ತಾಲ್ಲೂಕಿನ ಗುಂಬೇವು ಗ್ರಾಮದ ಶ್ರೀ ಮಠಕಾವತ ಜಮೀನಿನಲ್ಲಿ ತಾಳೆ ಎಣ್ಣೆ ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿತ್ತೇ?

ಆ) ಹಾಗಿದ್ದಲ್ಲಿ ಸದರಿ ಯೋಜನೆಯನ್ನು ಪ್ರಾರಂಭಿಸದಿರಲು ಕಾರಣವೇನು?

ಇ) ತಾಳೆ ಎಣ್ಣೆ ಅಭಿವೃದ್ಧಿ ಯೋಜನೆಯನ್ನು ಸರ್ಕಾರವು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಹೌದು

ಆ) ತಾಳೆ ಎಣ್ಣೆ ಸಸ್ಯಗಾರದ ಪೂರ್ವಬಾವಿ ಕೆಲಸಗಳನ್ನು ಪ್ರಾರಂಭಿಸಲಾಗಿದೆ.

ಇ) ಈ ಪ್ರದೇಶದಲ್ಲಿ ತಾಳೆ ಸಸ್ಯಗಾರಕ್ಕಾಗಿ ಬೇಕಾದ ದಾಸ್ತಾನು ಮಳಿಗೆ ಮತ್ತು ಕಾವಲು ವ್ಯವಸ್ಥೆಗಾಗಿ ಕಟ್ಟಡ ಕಟ್ಟಲು ಪ್ರಾರಂಭಿಸಲಾಗಿದೆ. ಬೇಲಿ ಮತ್ತು ನೀರಾವರಿ ವ್ಯವಸ್ಥೆ ಮಾಡಲಾಗುತ್ತಿದೆ. ಮೊಳೆತ ತಾಳೆ ಬೀಜಗಳು ಹೊರದೇಶದಿಂದ ಜನವರಿ 93ರ ಅಂತ್ಯಕ್ಕೆ ಬರಲಿದ್ದು, ಈ ಬೀಜಗಳನ್ನು ನಾಟಿಮಾಡಿ, ತಾಳೆ ಸಸಿಗಳನ್ನು ಅಕ್ಟೋಬರ್ ನವೆಂಬರ್ 93ರ ಹೊತ್ತಿಗೆ ರೈತರಿಗೆ ವಿತರಿಸಲಾಗುವುದು.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಉಪಾಧ್ಯಕ್ಷಿಣಿಯವರೇ ಈಗ 93ರ ಹೊತ್ತಿಗೆ ತಾಳೆ ಸಸಿಗಳನ್ನು ರೈತರಿಗೆ ಹಂಚುತ್ತೇವೆ ಎಂದು ಹೇಳಿ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈ ಯೋಜನೆಗೆ ತಗಲತಕ್ಕ ವೆಚ್ಚ ಎಷ್ಟು? ಈ ವರ್ಷದಲ್ಲಿ ಎಷ್ಟು ಹಣ ವೆಚ್ಚ ಮಾಡಲಿದ್ದೀರಿ. ಪೂರಾ ಹಣ ಖರ್ಚಾಗಲಿಕ್ಕೆ ಎಷ್ಟು ದಿನ ಬೇಕಾಗುತ್ತದೆ. ಈ ಸಂದರ್ಭದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆಯೇ? ತಾವು ರೈತರಿಗೆ ಕೊಡತಕ್ಕಂಥ ಆ ಇನ್ಸೆಂಟೀವ್ ಸಹಾಯಧನ ಎಷ್ಟು ದಯಮಾಡಿ ತಿಳಿಸುತ್ತೀರಾ?

ಶ್ರೀ ಎಸ್. ಹುಚ್ಚಮಾಸ್ತಿ ಗೌಡ : ಮಾನ್ಯ ಅಧ್ಯಕ್ಷರೇ, ಈ ಉಪ ಪ್ರಶ್ನೆ ವಿಷಯದಲ್ಲಿ ಸರ್ಕಾರ ಇಲ್ಲಿಯವರೆಗೆ ಆಲೋಚನೆ ಮಾಡಿಲ್ಲ ಎಂದು ಹೇಳಿಬೇಕಾಗುತ್ತದೆ. ಏಕೆಂದರೆ ಆ ಮೊಳಕೆ ಬೀಜಗಳು ಹೊರ ದೇಶದಿಂದ ಬರಬೇಕು ಎಂಬುದು ಪ್ರಶ್ನೆ ಹಾಕಿದಂಥ ಸ್ನೇಹಿತರಿಗೆ ಗೊತ್ತಿದೆ, ಆದರೆ ಈಗ ಬೊಂಬಾಯಿಗೆ ಮೊಳಕೆ

ಬೀಜಗಳು ಬಂದಿವೆ ಎಂದು ನನಗೆ ಇವತ್ತು ತಾನೇ ವರ್ತಮಾನ ಬಂದಿದೆ. ಬೀಜ ಉಪಯೋಗಿಸಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುವುದು. ಮತ್ತು ಇನ್ನು ಬೇರೆ ಬೀಜಗಳು ಪರದೇಶದಿಂದ ಬರುವುದಿದೆ. ಅದನ್ನು ಉಪಯೋಗಿಸಿ ಆಮೇಲೆ ಏನೇನು ಕಾರ್ಯಕ್ರಮ ತೆಗದುಕೊಳ್ಳಬೇಕು ಅದನ್ನೆಲ್ಲಾ ಸರ್ಕಾರ ತೀರ್ಮಾನ ಮಾಡುತ್ತದೆ. ಈಗ ಬಂದ ಮೊಳಕೆ ಬೀಜವನ್ನು ಎಲ್ಲಿಗೆ ಕಳುಹಿಸಬೇಕು. ಯಾವ ರೀತಿ ಮಾಡಬೇಕೆಂಬ ಆಲೋಚನೆ ನಡೆದಿದೆ. ಇದು ತೀರ ಹೆಚ್ಚು ಸಮರ್ಪಕವಾಗಿ ಈಗಾಗಲೇ....

ಉಪಾಧ್ಯಕ್ಷಣಿಯವರು : ಮಾನ್ಯ ಸದಸ್ಯರು ಶಿವಮೊಗ್ಗದ ಪ್ರಶ್ನೆಯನ್ನು ಕೇಳುತ್ತಿದ್ದಾರೆ.

ಶ್ರೀ ಎಸ್. ಹುಚ್ಚಮಾಸ್ತಿ ಗೌಡ : ಶಿವಮೊಗ್ಗದಲ್ಲಿಯೇ ಆಗಲಿ ಒಳ್ಳೆಯ ತಾಳೆ ಬೀಜ ಇದೆಯಲ್ಲ ಆ ಬೀಜಗಳನ್ನು ತರಿಸಿ ಮಾಡಬೇಕಾದ ಕ್ರಮ ಹೊಸದಾಗಿರುತ್ತದೆ. ಆದುದರಿಂದ ಇದನ್ನೆಲ್ಲಾ ಅಲೋಚನೆ ಮಾಡಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಸಂಖ್ಯೆ

396 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಸಂಖ್ಯೆ?

ಆ) ಅವುಗಳಲ್ಲಿ ರಾಜ್ಯ ಸಹಕಾರ ಬ್ಯಾಂಕಿನಿಂದ ಸಾಲ ಪಡೆದವುಗಳ ಸಂಖ್ಯೆ?

ಇ) ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ರಾಜ್ಯ ಸಹಕಾರ ಬ್ಯಾಂಕಿನಿಂದ ಸಾಲ ಪಡೆಯಲು ಅರ್ಹವಿಲ್ಲದಿರುವುದರ ಪ್ರಯುಕ್ತ ರೈತರು ತುಂಬಾ ತೊಂದರೆಗೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಅಪೆಕ್ಸ್ ಬ್ಯಾಂಕನಿಂದ ಸಾಲ ಪಡೆಯಲು ಅನರ್ಹವಾದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಯಾವುವು?

ಉ) ಸರ್ಕಾರ ರೈತರಿಗೆ ಸಾಲ ಒದಗಿಸಲು ಮಾಡಿರುವ ವ್ಯವಸ್ಥೆ?

ಊ) ಪುನರ್ಧನ ಪಡೆಯಲು ಅನರ್ಹವಿದ್ದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಬಗ್ಗೆ ವಿಶೇಷ ಪ್ರಕರಣಗಳೆಂದು ಸಾಲ ನೀಡಲು ಸರ್ಕಾರ ನಬಾರ್ಡ್‌ನೊಡನೆ ಸಮಾಲೋಚಿಸಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) 19.

ಆ) 19.

ಇ) ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ. ಯಾಕೆಂದರೆ ರಾಜ್ಯದಲ್ಲಿ ಯಾವುದೇ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು ಅಪೆಕ್ಸ್ ಬ್ಯಾಂಕನಿಂದ ಸಾಲ ಪಡೆಯಲು ಅನರ್ಹವಾಗಿರುವುದಿಲ್ಲ. ಆದಾಗ್ಯೂ 4 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಾದ ಹಾಸನ, ಮಂಡ್ಯ, ಚಿತ್ರದುರ್ಗ ಮತ್ತು ಶಿವಮೊಗ್ಗ ಇವು ನಬಾರ್ಡ್‌ನಿಂದ ಪತ್ತು ಮಿತಿಯನ್ನು ಪಡೆಯಲು ಅನರ್ಹವಾಗಿರುತ್ತವೆ.

ಉ) ನಬಾರ್ಡ್‌ನಿಂದ ಪತ್ತು ಮಿತಿಯನ್ನು ಪಡೆಯಲು ಅನರ್ಹವಾದ ಈ ನಾಲ್ಕು ಬ್ಯಾಂಕುಗಳ ಕಾರ್ಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ರೈತರ ಸಾಲದ ಬೇಡಿಕೆಯನ್ನು ಆಯಾ ಬ್ಯಾಂಕುಗಳ ಸ್ವಂತ ಬಂಡವಾಳದಿಂದ ಪೂರೈಸಲಾಗಿದೆ. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಕೂಡ ಈ ಬ್ಯಾಂಕ್‌ಗಳ ಸಾಲದ ಅವಶ್ಯಕತೆಯನ್ನು ಪೂರೈಸಲು ಮಧ್ಯಂತರ ಮಿತಿಯನ್ನು ಮಂಜೂರು ಮಾಡಿರುತ್ತದೆ.

ಊ) ಹೌದು.

ಶ್ರೀ ಎಸ್.ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷಣಿಯವರೇ, ಈ ರಾಜ್ಯದಲ್ಲಿರುವ ಕಲವು ಡಿ.ಸಿ.ಸಿ. ಬ್ಯಾಂಕ್‌ಗಳು ನಬಾರ್ಡ್‌ನಿಂದ ಅನರ್ಹತೆ ಪಡೆದ ಕಾರಣ ಸಾಲ ಪಡೆಯುವುದಕ್ಕಾಗುತ್ತಿಲ್ಲ, ಅದರ ಸಲುವಾಗಿ ನಾನು ಕೇಳಿದ ಪ್ರಶ್ನೆಗೆ ಈ ಎಲ್ಲಾ ಬ್ಯಾಂಕ್‌ಗಳು ಅಪೆಕ್ಸ್ ಬ್ಯಾಂಕ್‌ಗಳ ಮೂಲಕ ಸಾಲ ಪಡೆಯುತ್ತಿವೆ ಎಂದು ತಾವು ಉತ್ತರವನ್ನು ಕೊಟ್ಟಿದ್ದೀರಿ. ತಾವು ಕೊಟ್ಟಂಥ ಉತ್ತರ ಸರಿಯಿಲ್ಲ, ಏಕೆಂದರೆ ನಾಲ್ಕು ಬ್ಯಾಂಕ್‌ಗಳು ನಬಾರ್ಡ್‌ನಿಂದ ಅನರ್ಹವಾದ ಕಾರಣದಿಂದ ಇವತ್ತು ಸಾಲ ಪಡೆಯುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಇವತ್ತು ನಾನು ಕೇಳುತ್ತಿರುವುದೇನೆಂದರೆ ನಬಾರ್ಡ್ ಸಾಲ ಪಡೆಯುವ ಸಲುವಾಗಿ 40 ಪರ್ಸೆಂಟ್ ರಿಕವರಿಯನ್ನು ರಿಲ್ಯಾಕ್ಸ್ ಮಾಡಲಿಕ್ಕೆ ನಮ್ಮ ಸರ್ಕಾರದವರು ಯಾವ ಕ್ರಮ ತೆಗೆದುಕೊಂಡಿದ್ದಾರೆ? ಇದರಲ್ಲಿ ನಬಾರ್ಡ್‌ದಿಂದ ಎಷ್ಟು ಬ್ಯಾಂಕುಗಳು ಅನರ್ಹವಾಗಿವೆ ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ಅವರು ಕೇಳಿದ ಪ್ರಶ್ನೆಗೆ ನೇರವಾಗಿ ಉತ್ತರ ಕೊಟ್ಟಿದ್ದೇನೆ. ಆದರೂ ಅವರು ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಮತ್ತೊಮ್ಮೆ ಹೇಳುತ್ತೇನೆ. Number of Dist. Central Cooperative banks in the State ಎಷ್ಟೆಂದು ಕೇಳಿದ್ದಿರಿ. ಅದು 19. The number of them have taken loans from the Karnataka State Cooperative Banks 19. Whether it has come to the notice of the Government that the farmers have been put to great hardship due to the fact that some of the D.C.C. Banks have become ineligible to borrow loans from Apex Bank. "Answer is , no. "If so, the names of the D.C.C. Banks which have become ineligible to get loan from Apex Bank" does not arise as no DCC Bank in the State has become ineligible to get loans from Apex Bank. However, for DCC Banks Vix, Hassan, Mandya, Chitradurga, Shimoga have become ineligible to obtain loan from NABARD. ಇದರಲ್ಲಿ ನಾಲ್ಕು ಬ್ಯಾಂಕ್‌ಗಳು ಏನಿದ್ದಾವೆ ಇವು ಮಾತ್ರ ನಬಾರ್ಡ್‌ನಿಂದ ಸಾಲ ಕ್ರೆಡಿಟ್ ಲಿಮಿಟ್‌ನ್ನು ತೆಗೆದುಕೊಳ್ಳತಕ್ಕಂಥ ಅರ್ಹತೆ ಇಲ್ಲ, ಉಳಿದ 15 ಬ್ಯಾಂಕ್ ಸಾಲ ನಬಾರ್ಡ್‌ನಿಂದ ಪಡೆಯುತ್ತಿವೆ. ಏಕೆಂದರೆ 40 ಪರ್ಸೆಂಟ್‌ಗೆ ಮೇಲ್ಪಟ್ಟು ಸಾಲ ರಿಕವರಿ ಆಗಿದೆ. ಅದಕ್ಕಾಗಿ ನಾನು ಮಾಹಿತಿಯನ್ನು ಒದಗಿಸಿಲ್ಲವೆನ್ನತಕ್ಕಂಥದ್ದು ಸರಿಯಲ್ಲ, ಅದಕ್ಕೆ ಈ ವರ್ಷ ಹೆಚ್ಚು ಕಡಿಮೆ ಸ್ವಲ್ಪ ಇಂಪ್ರೂವ್‌ಮೆಂಟ್ ಇದೆ. because of that incentive scheme. ಉಳಿದಂತವುಗಳನ್ನು ಹೋದ ಸಲಕ್ಕೆ ಕಂಪೇರ್ ಮಾಡಿದರೆ ಸುಮಾರು 8 ಬ್ಯಾಂಕ್ ಮಾತ್ರ ಎಲಿಜಿಬಲ್ ಇದೆ. ಇವತ್ತು 15ಕ್ಕೆ ಆಗಿದೆ. ಅದಕ್ಕೆ ಸ್ವಲ್ಪ ಎಲ್ಲಾದರೂ ಪ್ರಯತ್ನ ಮಾಡಿ ರಿಕವರಿ ಮಾಡಿದರೆ ಎಲ್ಲಾ ಬ್ಯಾಂಕ್‌ನವರೂ ಕೂಡ ಸರಿಯಾದ ಲೋನಿಗೆ ಅರ್ಹರಾಗುತ್ತಾರೆ.

ಶ್ರೀ ಎಸ್.ಹೆಚ್. ಕೌಜಲಗಿ : ಇನ್‌ವೆಸ್ಟ್ ಮಾಡಲಿಕ್ಕೆ ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳುವುದಕ್ಕೆ ತಾವು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳುತ್ತೀರಿ? ಎರಡನೆಯದಾಗಿ ಇವತ್ತಿನ ದಿವಸ ರಾಜ್ಯದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಆಗಿರುವ ತೊಂದರೆಯಿಂದಾಗಿ ಸರ್ಕಾರಕ್ಕೆ ಲೋನ್ ಕೊಡಲಿಕ್ಕೆ ಅಲ್ಲಿ ರೈತರಿಗೆ ಆಗುತ್ತಿಲ್ಲ. ಆದಕಾರಣ ಬಡ್ಡಿ ಮತ್ತು ಅಸಲನ್ನು ಕನ್‌ವರ್ಟ್ ಮಾಡಿಕೊಡುತ್ತೀರಾ ಹೇಗೆ? ಇದು ಬಹಳ ಮಹತ್ವದ ವಿಚಾರ. ಏತಕ್ಕೆಂದರೆ ಇವತ್ತಿನ ದಿವಸ ಎಲ್ಲಾ ಕಡೆ ನಮ್ಮಲ್ಲಿ ಅತಿವೃಷ್ಟಿ ಅನಾವೃಷ್ಟಿ ಆದುದರಿಂದ ಅವರು ತೆಗೆದುಕೊಂಡು ಲೋನ್ ಅಮೌಂಟ್ ಕೊಡುವ ಸ್ಥಿತಿಯಲ್ಲಿಲ್ಲ. ಅದಕ್ಕಾಗಿ ಅಸಲು ಮತ್ತು ಬಡ್ಡಿ ಇದನ್ನು ಕನ್‌ವರ್ಷನ್ ಮಾಡಿಕೊಡುತ್ತೀರಾ ಎಂದು ಕೇಳುತ್ತೇನೆ.

11.30 ಎ.ಎಂ

ಅನಂತರ ಸರ್ಕಾರದಿಂದ ತಾವು ಏನಾದರೂ ಹೆಚ್ಚಿಗೆ ಸಹಾಯ ಈ ಬ್ಯಾಂಕುಗಳಿಗೆ ಕೊಡುತ್ತೀರ? ಅಪೆಕ್ಸ್ ಬ್ಯಾಂಕಿನಿಂದ 50 ಲಕ್ಷ ರೂಪಾಯಿ ಬ್ಯಾಂಕುಗಳಿಗೆ ಕೊಡುತ್ತಾರೆ. ನೀವು ಸರ್ಕಾರದಿಂದ ಏನಾದರೂ ಕೊಡಲಿಕ್ಕೆ ಸಾಧ್ಯ ಇದೆಯೇ ಹೇಗೆ ಹೇಳಿ?

(ಶ್ರೀಮತಿ ದಮಯಂತಿ ಬೋರೇಗೌಡ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಇರತಕ್ಕಂಥ ವ್ಯವಸ್ಥೆ ತಮಗೆ ಗೊತ್ತಿದೆ. ಈಗ ಅದನ್ನು ಅಪೆಕ್ಸ್ ಬ್ಯಾಂಕಿನವರು ಕೊಡುತ್ತಿದ್ದಾರೆ. ಈಗ ಇದು ಆದಮೇಲೆ ನಾರಾಯಣರಾವ್ ಮನಹಳ್ಳಿಯವರದ್ದು ಒಂದು ಪ್ರಶ್ನೆ ಇದೆ. ಏಕೆಂದರೆ ಅದು ಸುಮಾರು 134 ಕೋಟಿಯಲ್ಲಿ ನಮಗೆ 100 ಕೋಟಿ ರೂಪಾಯಿ ಅಡ್ಜಸ್ಟ್ ಆಗಿದುದ್ದು. ಇನ್ನು 34 ಕೋಟಿ ರೂಪಾಯಿ ಅಡ್ಜೆಸ್ಟ್ ಆಗಿಲ್ಲ. ಬಹುಶಃ ಆ ಹಣ ಆದರೂ ಬಂದರೆ ಬಹಳಷ್ಟು ಬ್ಯಾಂಕುಗಳು ಎಲಿಜೆಬಲ್ ಆಗುತ್ತವೆ. ಆಗ ನಾವು ಏನಾದರೂ ಮಾಡಬಹುದು. ಇನ್ನೊಂದು ತಾವು ಹೇಳಿದಿರಿ. ಷಾರ್ಟ್ ಟರ್ಮ್ ಲೋನ್‌ನ್ನು ಕನ್‌ವರ್ಟ್ ಮಾಡಿ, ಅದನ್ನು ಲಾಂಗ್ ಟರ್ಮ್ ಅಥವಾ ಮೀಡಿಯಂ ಟರ್ಮ್ ಎಂದು ಮಾಡುತ್ತೀರಾ ಎಂದು ಕೇಳಿದಿರಿ. ಆ ಪ್ರಶ್ನೆಗೆ ಈಗಾಗಲೇ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ರೆವಿನ್ಯೂ ಮಂತ್ರಿಗಳು ಹೇಳಿದ್ದಾರೆ. ಎಲ್ಲೆಲ್ಲಿ ಇಂತಹ ತೊಂದರೆಗೆ ಈಡಾದಂಥ ಪ್ರದೇಶಗಳು ಇವೆ ಅಲ್ಲಿ ಷಾರ್ಟ್ ಟರ್ಮ್ ಲೋನನ್ನು ಮೀಡಿಯಂ ಟರ್ಮ್ ಎಂದು ಹೇಳಿ ಕನ್‌ವರ್ಟ್ ಮಾಡಬೇಕು ಎನ್ನತಕ್ಕಂಥಾದ್ದು ಪರಿಶೀಲನೆಯಲ್ಲಿದೆ. ಬಹುಶಃ ಇದರ ಬಗ್ಗೆ ಒಂದು ಗವರ್ನ್‌ಮೆಂಟ್ ಆರ್ಡರ್ ಹೊರಡಿಸಬಹುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ : ನೀವು ಕನ್‌ವರ್ಷನ್ ಮಾಡುವ ಕಾಲಕ್ಕೆ ಡೆಪ್ಯುಟಿ ಕಮಿಷನ್‌ರವರು ಅಣೆವಾರಿ ಕಳುಹಿಸಬೇಕು. ಅಣೆವಾರಿ ಕಳುಹಿಸುವ ತನಕ ತಮಗೆ ಕನ್‌ವರ್ಷನ್ ಮಾಡಲಿಕ್ಕೆ ಬರುವುದಿಲ್ಲ. ಅದರ ಸಲುವಾಗಿ ಇಲ್ಲಿಯವರೆಗೂ ಈ ಅತಿವೃಷ್ಟಿ ಅನಾವೃಷ್ಟಿ ಆದರೂ ಸಹಿತ ಡೆಪ್ಯುಟಿ ಕಮಿಷನ್‌ರವರು ಸರ್ಕಾರಕ್ಕೆ ಯವುದೇ ಅಣೆವಾರಿಯನ್ನು ಕಳುಹಿಸಿಕೊಟ್ಟಿಲ್ಲ. ಅದು ಕಳುಹಿಸಿಕೊಡದೇ ಇದ್ದ ಸಲುವಾಗಿ ತಾವು ಅದನ್ನು ಮಾಡಲಿಕ್ಕೆ ಸಾಧ್ಯವೇ? ಆದ್ದರಿಂದ ಸರ್ಕಾರದವರು ಕೂಡಲೇ ಅಣೆವಾರಿ ತರಿಸಿಕೊಂಡು ಈ ಕನ್‌ವರ್ಷನ್ ಬಡ್ಡಿ ಮತ್ತು ಅಸಲನ್ನು ಮನ್ನಾ ಮಾಡುತ್ತೀರ, ಹೇಗೆ? ಇದು ಬಹಳ

ಮಹತ್ವದ್ದು. ದಯಮಾಡಿ ತಾವು ತಪ್ಪು ತಿಳಿದುಕೊಳ್ಳಬಾರದು ಈ ವರ್ಷ ಯಾರೂ they are not in a position to repay the loan amount.

ಹತ್ತಿ ಬೆಲೆ ಇಳಿದಿದೆ. ಕಬ್ಬಿನದು ಇವತ್ತಿನ ದಿವಸ ಬಹಳ ತ್ರಾಸಾಗಿದೆ. ಈ ಕಾರಣದಿಂದ ಲೋನ್ ಕನ್‌ವರ್ಷನ್ ಮಾಡೋದು ಬಹಳ ಅತಿ ಅವಶ್ಯ ಇದೆ. ಆದಕಾರಣ ತಾವು ಡೆಪ್ಯೂಟಿ ಕಮಿಷನ್‌ರವರ ಕಡೆಯಿಂದ ಸರ್ಕಾರದವರು ಆದಷ್ಟು ಬೇಗ ಆಣೆವಾರಿ ತರಿಸಿಕೊಂಡು ಒಂದು ಡಿಸಿಷನ್ ಕೂಡಲೇ ತೆಗೆದುಕೊಳ್ಳಬೇಕೆಂದು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಹೇಳಿದ ಹಾಗೆ ಸ್ವಲ್ಪ ನಿಧಾನವಾಗಿದೆ. ಅದು ಯಾವ್ಯಾವ ಭಾಗದಲ್ಲಿ ಎಂದು ನೇರವಾಗಿ ಡೆಪ್ಯೂಟಿ ಕಮಿಷನರ್‌ನಿಂದ ತರಿಸಿಕೊಳ್ಳತಕ್ಕಂಥಾದ್ದು ಬಹಳ ಉತ್ತಮ. ನಾನೂ ಕೂಡ ರೆವಿನ್ಯೂ ಡಿಪಾರ್ಟ್ಮೆಂಟ್‌ನವರಿಗೆ ಕನ್‌ಸಲ್ಟ್ ಮಾಡಿ ಬರೆದು ಆದಷ್ಟು ಬೇಗನೆ ಸಂಬಂಧಪಟ್ಟಂಥ ಜಿಲ್ಲಾಧಿಕಾರಿಗಳಿಂದ ಈ ಅಣೆವಾರಿಯನ್ನು ತರಿಸಿಕೊಂಡು ಎಲ್ಲೆಲ್ಲಿ ಅವಶ್ಯಕ ಇದೆ ಅಲ್ಲಿ ಕನ್‌ವರ್ಷನ್ ಮಾಡುವ ಬಗ್ಗೆ ಪರಿಶೀಲಿಸುತ್ತೇನೆ. ಮತ್ತು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಮೊನ್ನೆತಾನೆ ಹೇಳಿರುವುದರಿಂದ ಪುನಃ ಅದನ್ನು ನಾನು ಹೇಳಬೇಕಾಗಿಲ್ಲ. ಅದಷ್ಟು ಬೇಗೆ ಜಿಲ್ಲಾಧಿಕಾರಿಗಳಿಂದ ಅಣೆವಾರಿ ತರಿಸಿಕೊಂಡು ನಾವು ಬೇಗನೆ ಮಾಡುತ್ತೇವೆ.

ಶ್ರೀ ಗುರುಪಾದಪ್ಪ ನಾಗ್ಮರಪಲ್ಲಿ : ನಾನು ಏನು ಕೇಳುತ್ತೇನೆಂದು ತಿಳಿದುಕೊಂಡು ತಾವು ಹೇಳಿದ ಉತ್ತರ ಸರಿಯಾಗಿದೆ. ತಪ್ಪಿಲ್ಲ. ಆದರೆ ಅಣೆವಾರಿ ಬಗ್ಗೆ ಈ ಸರ್ಕಾರದವರು ಬೇಗ ಸರಿಯಾಗಿ ಕೊಡುತ್ತಾ ಇಲ್ಲ. ಡೆಪ್ಯೂಟಿ ಕಮಿಷನರ್‌ವರು ಬೇಗ ಕೆಲಸ ಮಾಡುತ್ತಾ ಇಲ್ಲ. ಇದರಿಂದ ಕನ್‌ವರ್ಷನ್ ಮಾಡುವುದಕ್ಕೆ ತೊಂದರೆ ಆಗುತ್ತಾ ಇದೆ. ಎರಡನೆಯ ಪ್ರಶ್ನೆ ಏನೆಂದರೆ ಈಗ 40 ಪರ್ಸೆಂಟ್ ಎಲಿಜಬಿಲಿಟಿ ಬರಲಿಲ್ಲ. ಅಥವಾ ನಾವು ನೋಡೋವುದಕ್ಕೆ ಬರಲಿಲ್ಲ ಅಂದರೆ ಇದು ನಿಮ್ಮ ಸರ್ಕಾರದ ನೀತಿಯೂ ಅಲ್ಲ ನೀವು ನಬಾರ್ಡ್‌ನವರಿಗೆ ಹೇಳಿ ಏನಾದರೂ ಪ್ರಯತ್ನ ಮಾಡಿ, ರಿಲ್ಯಾಕ್ಸ್ ಮಾಡಿ ಬೇರೆ ಸಾಲ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವೋ? ಅದು ಒಂದು ಮಹತ್ವದ್ದು ಇದೆ. ಅದನ್ನು ಏನಾದರೂ ವ್ಯವಸ್ಥೆ ಮಾಡುತ್ತೀರ? ನಮ್ಮ ಕಡೆಯಿಂದ ನಾವು 50 ಲಕ್ಷ ರೂ. ಸಾಲ ಕೊಡುತ್ತಿದ್ದೇವೆ. ಸೀನಿಯಾರಿಟಿ ಏನು ಬರಲಿಲ್ಲ ಅಂಥಾದ್ದನ್ನು ನಬಾರ್ಡ್ ಕಡೆಯಿಂದ ತಾವು ರಿಲ್ಯಾಕ್ಸ್ ಮಾಡುತ್ತಿರೋ ಎಂದು ತಮ್ಮನ್ನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೆ ಗೊತ್ತಿದೆ. ಇದು ರಿಲ್ಯಾಕ್ಸ್ ಆಗುತ್ತದೆ. ಅಂದರೆ ನಾವು ನೀವು ಹೋಗಿ ಪ್ರಯತ್ನ ಮಾಡೋಣ. Throughout the country ಇದು ಎಲ್ಲರಿಗೂ ಒಂದೇ ಹಾಕುತ್ತಾರೆ. ಇನ್ನೊಂದು ಲೆಟರ್ ಬರೆಯೋಣ. ಬೇಕಾದರೆ ಹೋಗಿ ಬರೋಣ. ಅಥವಾ ನಮ್ಮ ಅಧಿಕಾರಿಗಳನ್ನು ಕಳಿಸುತ್ತೇನೆ. ಇದರ ಬಗ್ಗೆ ಪ್ರಯತ್ನ ಮಾಡೋಣ. ಆದರೆ ಫಾರಿನ್ ಕಂಟ್ರೀಸ್‌ನಲ್ಲಿ ಹೆಚ್ಚು ಕಡಿಮೆ ಒಂದೇ ನಾರಂಸ್ ಇರುವುದರಿಂದ ಈ ತಾಪತ್ರಯ ಇದೆ. ಬಹುಶಃ ನಾವು ಪ್ರಯತ್ನ ಮಾಡೋಣ. ಇದು ಆದರೆ ಎಲ್ಲಾ ರೈತರಿಗೂ ಅನುಕೂಲ ಆಗುತ್ತದೆ. ಮತ್ತು ಬೇರೆ ಬ್ಯಾಂಕುಗಳು ಕೂಡ ಎಲಿಜಬಲ್ ಆಗುತ್ತದೆ. ಆದರೆ ನನ್ನ ಮನವಿ ಏನೆಂದರೆ ಇದು ಒಂದು ಕಡೆ ಇರಲಿ,

ಎರಡನೆಯದಾಗಿ ತಾವು ಎಲ್ಲರೂ ಕೂಡ ಹೆಚ್ಚಿನ ಆಸಕ್ತಿ ವಹಿಸಿ ಸ್ವಲ್ಪ ರಿಕವರಿ ಮಾಡಿಕೊಟ್ಟರೆ ಬಹಳಷ್ಟು ರೈತರಿಗೆ, ಇದು ಅನುಕೂಲ ಆಗುತ್ತದೆ. ದಯವಿಟ್ಟು ಅದಕ್ಕೆ ತಾವು ಸಹಕಾರ ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಎಂ. ಮಹದೇವ್ : ಕೊಟ್ಟವರಿಗೆ ಮಾತ್ರ ಸಾಲ ಹೊಸಬರಿಗೆ ಇಲ್ಲ ಅಂತ ಇದೆ. ಈ ತರಹ ಏತಕ್ಕೆ ತಾರತಮ್ಯ? ಇದರಿಂದ ರೈತರಿಗೆ ತೊಂದರೆ ಆಗುವುದಿಲ್ಲವೇ? ಎರಡನೆಯದು ಎಲ್ಲಾ ಜಿಲ್ಲಾ ಕೇಂದ್ರ ಬ್ಯಾಂಕ್‌ಗಳಲ್ಲಿ ಈ ತಿಂಗಳು ಚುನಾವಣೆ ಮಾಡುತ್ತೀರಾ?

ಮೇಡಂ ಛೇರ್ಮನ್ : ಬಾಬಾಗೌಡ ಪಾಟೀಲ್...

ಶ್ರೀ ಎಂ. ಮಹದೇವ್ : ನನ್ನ ಪ್ರಶ್ನೆಗೆ ಮಂತ್ರಿಗಳಿಂದ ಉತ್ತರ ಬರಬೇಡವೇ?

(ಗೊಂದಲ)

ಶ್ರೀ ಪಿ.ಸಿ. ಸಿದ್ದನಗೌಡರ್ : ಮಾನ್ಯ ಅಧ್ಯಕ್ಷರೇ ಧಾರವಾಡ ಡಿ.ಸಿ.ಸಿ. ಬ್ಯಾಂಕ್‌ಗೆ ಅಡ್ಮಿನಿಸ್ಟ್ರೇಟರ್ಸ್‌ನ್ನು ನೇಮಕ ಮಾಡಿ 3 ವರ್ಷ ಆಯಿತು. ಚುನಾವಣೆ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಅದನ್ನೇ ಕೇಳುತ್ತಿದ್ದಾರೆ. ತಾವು ಅದನ್ನೇ ಕೇಳುತ್ತಿದ್ದೀರಿ? ಪ್ರಕೃತಿ ವಿಕೋಪದಿಂದ ರೈತರಿಗೆ ಹಾನಿಯಾದ ಕಾರಣ ಈಗಾಗಲೇ ತಮ್ಮೆಲ್ಲರ ಬೇಡಿಕೆ ಮೇಲೆ 31ರ ಜನವರಿವರೆಗೂ ಟೈಮ್ ಕೊಟ್ಟಿದ್ದೇವೆ. ಈಗಾಗಲೇ ಬಹಳಷ್ಟು ಕಡೆ ಚುನಾವಣೆಗಳು ಆಗಿವೆ ಇಲ್ಲ ಅಂತ ಇಲ್ಲ, ಕೆಲವು ಮಾತ್ರ ಉಳಿದಿವೆ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಿ ಚುನಾವಣೆ ಮಾಡಿಸತಕ್ಕಂಥ ಪ್ರಯತ್ನ ಮಾಡೋಣ.

ಶ್ರೀ ಎಂ. ಮಹದೇವ್ : ಇಂತಹ ಕಡೆ ಮಾಡುತ್ತೇವೆ ಇಂತಹ ಕಡೆ ಇಲ್ಲ ಎಂದು ಹೇಳಿಬಿಡಿ. ಒಂದು ಯೂನಿಫಾರಮ್ ಪಾಲಿಸಿ ಮೇಲೆ ಮಾಡಿ. ಕೆಲವು ಕಡೆ ಮಾಡುತ್ತೇವೆ ಅಂದರೆ ಇದು ಅಸ್ಪಷ್ಟ ಉತ್ತರ. ಸರ್ಕಾರ ಕೊಡುವಂತಹ ಉತ್ತರ ಅಲ್ಲ ಇದು. ಇಲ್ಲಾ ಪಾಲಿಸಿ ಮೇಲೆ ಮಾತನಾಡಬೇಕು ಇಲ್ಲಾ 31ನೇ ತಾರೀಖು ಜನವರಿಯಲ್ಲಿ ಚುನಾವಣೆ ಮಾಡುತ್ತೇವೆ, ಇಲ್ಲ ಮುಂದೂಡುತ್ತೇವೆ, ಇಲ್ಲ ಏನಾದರೂ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಬೇಕು. ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಮಾಡುತ್ತೇವೆ ಇಲ್ಲ ಬಿಡುತ್ತೇವೆ ಎಂದು ಹೇಳಿದರೆ ಇದು ಎಂತಾದ್ದು ಇದು ಸರ್ಕಾರದ ನೀತಿಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ ಬೇಕಾದರೆ ಎಲೆಕ್ಷನ್ ಯಾವಾಗ ಮಾಡುತ್ತಾರೆ ಯಾವಾಗ ಬಿಡುತ್ತಾರೆ ಅಂತ ಸಪರೇಟ್ ಕ್ವಶ್ಚನ್ ಕೇಳಲಿ ನಾನು ಉತ್ತರ ಕೊಡುತ್ತೇನೆ.

ತುಮಕೂರು ಜಿಲ್ಲೆಯಲ್ಲಿ ಬಗರ್ ಹುಕುಂ ಸಾಗುವಳಿಯನ್ನು ಸಂಕ್ರಮಿಕರಿಸುವ ಬಗ್ಗೆ.

848 - ಶ್ರೀ ಆರ್. ನಾರಾಯಣ (ಬೆಳ್ಳಾವಿ) ಶ್ರೀ ಶಫೀ ಅಹಮದ್ (ತುಮಕೂರು): ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಅನಧಿಕೃತ ಅತಿಕ್ರಮಣದಡಿಯಲ್ಲಿನ ಭೂಮಿಯ ವಿಸ್ತೀರ್ಣ ಎಷ್ಟು? (ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು);

ಆ) ತುಮಕೂರು ಜಿಲ್ಲೆಯಲ್ಲಿ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ಸ್ವೀಕರಿಸಿದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು);

ಇ) ತುಮಕೂರು ಜಿಲ್ಲೆಯಲ್ಲಿ ವಿಲೇವಾರಿ ಮಾಡಿದ ಅರ್ಜಿಗಳ ಸಂಖ್ಯೆ? (ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು)

ಈ) ಅನಧಿಕೃತ ಅತಿಕ್ರಮಣ ಮಾಡಿದ್ದು, ಭೂ ಮಂಜೂರಾತಿಗೆ ಅರ್ಹರಾಗಿರುವ ಹಲವಾರು ಜನರು ಸಂಬಂಧಪಟ್ಟ ತಹಶೀಲ್ದಾರರುಗಳಿಗೆ ಸಕಾಲದಲ್ಲಿ ಬರವಣಿಗೆಯಲ್ಲಿ ಅರ್ಜಿಗಳನ್ನು ಸಲ್ಲಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಅಂತಹ ಅರ್ಹ ವ್ಯಕ್ತಿಗಳಿಗೆ ಕಾಲಮಿತಿಯನ್ನು ವಿಸ್ತರಿಸುವ ಮೂಲಕ ಅರ್ಜಿಗಳನ್ನು ಸಲ್ಲಿಸಲು ಸರ್ಕಾರವು ಅವಕಾಶ ನೀಡುವುದೇ?

ಊ) ಹಲವಾರು ವ್ಯಕ್ತಿಗಳು ಭೂಮಿಯ ಅನಧಿಕೃತ ಅತಿಕ್ರಮಣದಲ್ಲಿರುವುದು ಹಾಗೂ ಭೂ ಮಂಜೂರಾತಿಗೆ ಅರ್ಹರಲ್ಲದವರು ಅನಧಿಕೃತವಾಗಿ ಸಾಗುವಳಿಯನ್ನು ಮುಂದುವರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಋ) ಹಾಗಿದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮವೇನು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಕರ್ನಾಟಕ ಭೂಕಂದಾಯ ಕಾಯ್ದೆ 94ಎ ಅಡಿಯಲ್ಲಿ, ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ಅರ್ಜಿಗಳನ್ನು ಸ್ವೀಕರಿಸಲು ದಿನಾಂಕಕ 19.9.1991ನ್ನು ಕೊನೆಯ ದಿನವೆಂದು ನಿಗದಿಗೊಳಿಸಲಾಗಿದ್ದು, ಒಟ್ಟು 2,14,610-12 ಎಕರೆ ವಿಸ್ತೀರ್ಣಕ್ಕಾಗಿ 90,206 ಜನರಿಂದ ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಸ್ವೀಕರಿಸಲಾಗಿದೆ. (ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ).

ಇ) 5458 (ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ)

ಈ) ಹೌದು, ಅಂದರೆ ಅಂತಹ ವ್ಯಕ್ತಿಗಳು ವಾಸ್ತವಿಕವಾಗಿ ಅನಧಿಕೃತ ಅಧಿಭೋಗದಲ್ಲಿದ್ದಾರೆಯೇ ಹಾಗೂ ಅವರು ಭೂ ಮಂಜೂರಾತಿಗೆ ಅರ್ಹರಾಗಿದ್ದರೆಯೇ ಎಂಬುದನ್ನು ಪರಿಶೀಲನೆಯ ನಂತರವೇ ತಿಳಿಯಬಹುದು.

ಉ) ಇಲ್ಲ.

ಊ) ಇದುವರೆಗೂ ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಒಂದು ವೇಳೆ ಅಂತಹ

ಋ) ಇದುವರೆಗೂ ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಒಂದು ವೇಳೆ ಅಂತಹ ಪ್ರಕರಣಗಳು ಇದ್ದಲ್ಲಿ ಸಂಬಂಧಪಟ್ಟ ತಹಶೀಲ್ದಾರರು ಕಾನೂನು ರೀತ್ಯಾ ಉಚ್ಚಾಟಿಸಲು ಕ್ರಮಕೈಗೊಳ್ಳುವ ಅಧಿಕಾರ ಹೊಂದಿದವರಾಗಿದ್ದಾರೆ.

Annexure-1

NUMBER OF CASES OF REGULARISATION OF UN-AUTHORISED CULTIVATION OF LANDS IN TUMKUR DISTRICT

Sl. No.	NAME OF THE TALUK.	APPLICATIONS RECEIVED UPTO 19.9.1991					
		SC/ST		OTHERS		TOTAL	
		NUMBER	EXTENT	NUMBER	EXTENT	NUMBER	EXTENT
1.	Tumkur	1643	2841-28	2743	3889-06	4386	6730-34
2.	Gubbi	3879	10149-13	8203	20074-12	12082	30223-25
3.	Kunigal	1748	3340-10	6705	14344-12	8453	17684-22
4.	Tiptur	1859	3121-00	5500	11093-00	7359	14214-00
5.	Turuvekere	2276	3579-30	9313	16245-20	11589	19825-10
6.	Chikkanayakanahalli	6538	18220-04	9441	23724-25	15979	41944-29
7.	Madhugiri	3604	8518-17	4776	13962-18	8380	22480-35
8.	Koratagere	1530	3829-00	2633	6854-07	4163	10683-07
9.	Sira	5577	16731-00	8108	24324-00	13685	41055-00
10.	Pavagada	2763	6448-08	1367	3320-20	4130	9768-10
	TOTAL	31417	76778-30	58789	137831-22	90206	214610-12

Annexure - 2

PROGRESS OF DISPOSAL OF CASES OF REGULARISATION OF UN-AUTHORISED CULTIVATION OF LAND IN TUMKUR DIST

Sl. No	Name of The Taluk.	CUMULATIVE OF GRANTED AND REJECTED CASES					
		SC/ST		OTHERS		TOTAL	
		NUMBER	EXTENT	NUMBER	EXTENT	NUMBER	EXTENT
1.	Tumkur	139	142-12	216	248-12	355	390--24
2.	Gubbi	164	293-32	555	812-21$\frac{3}{4}$	719	1106-13$\frac{3}{4}$
3.	Kunigal	133	252-06	492	814-36	625	1067-02
4.	Tiptur	183	452-29	528	1277-33	711	1730-22
5.	Turuvekere	250	282-29	1118	1617-34	1368	1900-21
6.	Chikkanayakanahalli	487	1348-27	534	1145-08	1021	2493-35
7.	Madhugiri	11	33-04	-	-	11	33-04
8.	Koratagere	166	285-36	193	349-15	359	635-11
9.	Sira	-	-	-	-	-	-
10.	Pavagada	156	375-28	133	286-36	289	662-24
	TOTAL	1689	3467-01	3769	6552-35$\frac{3}{4}$	5458	10019-36$\frac{3}{4}$

ಶ್ರೀ ಆರ್. ನಾರಾಯಣ್ : ಮಾನ್ಯ ಅಧ್ಯಕ್ಷಣಿಯವರೇ ಮಾನ್ಯ ಕಂದಾಯ ಸಚಿವರಲ್ಲಿ ನನ್ನ ವಿನಂತಿ. ಈ ಉತ್ತರದಿಂದ ನಾನು 3-4 ವಿಷಯಗಳ ಬಗ್ಗೆ ಕೆಲವು ಸಮಜಾಯಿಷಿಗಳನ್ನು ಮಾನ್ಯ ಕಂದಾಯ ಸಚಿವರಿಂದ ಅಪೇಕ್ಷೆ ಪಡುತ್ತೇನೆ. ಈಗ ನಮ್ಮ ತುಮಕೂರು ಜಿಲ್ಲೆಗೆ ಸೀಮಿತವಾಗಿ ಮಾತನಾಡುವುದಾದರೆ 90 ಸಾವಿರ ಅರ್ಜಿಗಳು ಬಂದಿವೆ. ಅದರಲ್ಲಿ ಇದುವರೆಗೆ 5400 ಚಿಲ್ಲರೆ ಅರ್ಜಿಗಳು ವಿಲೇ ಆಗಿದೆ ಎಂದು ಹೇಳುತ್ತಾರೆ. ಇದನ್ನು ನೋಡಿದರೆ ಇನ್ನು ಉಳಿದಿರತಕ್ಕಂಥ 95 ಸಾವಿರ ಅರ್ಜಿಗಳನ್ನು ವಿಲೆ ಮಾಡುವುದಕ್ಕೆ ಬಹಳ ಕಾಲ ವಿಳಂಬವಾಗುತ್ತಿದೆ. ನಮಗೆ ತಿಳಿದಿರುವ ಮಾಹಿತಿ ಪ್ರಕಾರ ಅರ್ಜಿಗಳು ಬಹಳ ತ್ವರಿತ ಗತಿಯಲ್ಲಿ ವಿಲೇ ಆಗುವುದಕ್ಕೆ ಅಲ್ಲಿ ಸಾಕಷ್ಟು ಸರ್ವೆಯರ್ಸ್ ಕೊರತೆ ಇದೆ ಅದನ್ನು ಯಾವ ರೀತಿ ತುರ್ತಾಗಿ ವಿಲೆ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೀರಿ. ಇವತ್ತು ಅನೇಕ ಕಡೆ ಬಗರ್ ಹುಕ್ಕುಂ ಸಾಗುವಳಿ ಮಾಡಿ ಸಕಾಲದಲ್ಲಿ ಅರ್ಜಿ ಹಾಕದೆ ಇರುವುದರಿಂದ ಅದನ್ನು ಪರಿಶೀಲನೆ ಮಾಡಿದ್ದಾರೋ? ಇಲ್ಲವೋ ಎನ್ನುವುದು ಗೊತ್ತಾಗುತ್ತದೆ. ಆ ಪರಿಶೀಲನೆ ಯಾವಾಗ ಮಾಡಿಸುತ್ತೀರಾ? ಮತ್ತು ಯಾರಿಂದ ಮಾಡಿಸುತ್ತೀರಾ ಎನ್ನುವ ಬಗ್ಗೆ ನನಗೆ ವಿವರಣೆ ಬೇಕಾಗಿದೆ. ಬಹಳ ಜನ ಇವತ್ತು ಬಗರ್ ಹುಕ್ಕುಂ ಮಾಡುತ್ತಿದ್ದಾರೆ. ಅದರೆ ಅಕ್ರಮಸಾಗುವಳಿಯಲ್ಲಿ ಕಾನೂನು ರೀತ್ಯ ಸಕ್ರಮಗೊಳಿಸಲು ಅರ್ಹರು ಅಲ್ಲ ಅವರು ಬಹಳ ಹೆಚ್ಚಿನ ರೀತಿಯಲ್ಲಿ ಅಕ್ರಮಮಾಡಿ ಬಹಳ ವರ್ಷಗಳಿಂದ ಅನುಭವಮಾಡಿಕೊಂಡು ಬಂದಿದ್ದರೂ ಕೂಡ ಅದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳುತ್ತಾರೆ. ಬಂದರೆ ಅದನ್ನು ಎವಿಕ್ಷನ್ ಮಾಡುವುದಕ್ಕೆ ತಹಶೀಲ್ದಾರ್‌ಗೆ ಅಧಿಕಾರ ಇದೆ ಎಂದು ಹೇಳುತ್ತಾರೆ. ಮಾಡುವುದಕ್ಕೆ ಬರುವುದಿಲ್ಲ ವಾಸ್ತವಿಕವಾಗಿ, ನನಗೆ ತಿಳಿದ ಪ್ರಕಾರ 10 ಎಕರೆ 20 ಎಕರೆ 10-15 ವರ್ಷಗಳಿಂದ ಬೇಕಾದಷ್ಟು ತೋಟಗಳನ್ನೆಲ್ಲಾ ಮಾಡಿ ಅನ್‌ಆಥರೈಜ್ಡ ಆಗಿ ಅನುಭವ ಮಾಡಿಕೊಂಡು ಬಂದಿದ್ದಾರೆ. ಈಗ ಇರತಕ್ಕಂಥ ಕಾನೂನು ಪ್ರಕಾರ ತಹಶೀಲ್ದಾರ್ ಅವರು ಎವಿಕ್ಷನ್ ಮಾಡಬಹುದು. ಮಾಡಲಿಕ್ಕೆ ಹೋದರೆ ಬಹಳ ಕಷ್ಟ ಆಗುತ್ತದೆ. ಅದಕೋಸ್ಕರ ಅವರ ಡೆವಲಪ್ ಮೆಂಟ್ ಚಾರ್ಜಸ್ ನೋಡಿ ಅವರ ಹೋಲ್ಡಿಂಗ್ಸ್ ಮತ್ತೊಂದು ನೋಡಿ ಯಾವ ರೀತಿ ಸರ್ಕಾರ ಎವಿಕ್ಷನ್ ಮಾಡಿ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಎನ್ನುವ ಬಗ್ಗೆ ಮಾಹಿತಿ ಕೊಡಬೇಕಾಗುತ್ತದೆ. ಇವತ್ತು ಕಡೆಯದಾಗಿ ಒಂದು ಪ್ರಶ್ನೆ ಏನೆಂದರೆ ನಮ್ಮ ಸಿ ಅಂಡ್ ದಿ ಲ್ಯಾಂಡ್ ಮತ್ತು ಎಕ್ಸೈಜ್ ಲ್ಯಾಂಡ್ ಫಾರೆಸ್ಟ್ ಲ್ಯಾಂಡ್ ನಲ್ಲಿ ಅಮೃತಮಹಲ್ ಕಾವಲ್‌ನಲ್ಲಿ ಬಹಳಷ್ಟು ಅಕ್ರಮ ಸಾಗುವಳಿ ಆಗುತ್ತದೆ. ಆ ಜಮೀನುನಲ್ಲಿ ಅಕ್ರಮ ಸಾಗುವಳಿ ಮಾಡಿರುವಂತಹವರಿಗೆ ಸಕ್ರಮ ಗೊಳಿಸುತ್ತೀರಾ? ಈ ಬಗ್ಗೆ ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ : ಮಾನ್ಯ ಅಧ್ಯಕ್ಷರೇ ಇಂತಹ ತಾರೀಖಿನೊಳಗೆ ಅಂದರೆ 19-9-91 ರ ಒಳಗೆ ಅರ್ಜಿ ಸಲ್ಲಿಸಬೇಕೆಂದು ನಿಗಧಿ ಆಗಿತ್ತು. ಆ ಪ್ರಕಾರ ಬಹಳ ಜನ ಕೊಟ್ಟಿದ್ದಾರೆ. ಇನ್ನೂ 28 ಸಾವಿರ ಜನ ಅವರು ಹಾಕಿರಲಿಲ್ಲ ಟೈಮ್ ಎಕ್ಸ್ಟೆಟೆನ್‌ಷನ್ ಮಾಡುವುದಕ್ಕಾಗುವುದಿಲ್ಲ. ಎರಡನೆಯದು ಇದು ಬಹಳ ನಿಧಾನ ಆಗುತ್ತದೆ. ಪ್ರಾಬ್ಲಂ ಇದೆ. ಅಂತ ಎಲ್ಲರೂ ಹೇಳುತ್ತಾರೆ. ಸರ್ವೆಯರ್ಸ್ ರಿಕ್ರೂಟ್ ಮೆಂಟ್ ಮಾಡಿಕೊಳ್ಳಬೇಕೆಂದು ಪ್ರಯತ್ನ ಪಡುತ್ತಿದ್ದೇವೆ

ರಿಕ್ರೂಟ್‌ಮೆಂಟ್ ಆದ ಮೇಲೆ ಆ ಸರ್ವೆಯರ್ಸ್ ಪ್ರಾಬ್ಲಂ ಸಾಲ್ವ್ ಆಗುತ್ತದೆ ತುಮಕೂರು ಜಿಲ್ಲೆಯಲ್ಲಿ ಅರ್ಜಿಗಳು ಜಾಸ್ತಿ ಇರುವುದರಿಂದ ಅಲ್ಲಿಗೆ ಸರ್ವೆಯರ್ಸ್‌ನ್ನು ಡೆಪ್ಯುಟ್ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಇನ್ನೂ ಕೆಲವು ಜನರು ಬಹಳಹೆಚ್ಚಿನ ರೀತಿಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಜಮೀನುನಲ್ಲಿ ಅದನ್ನು ಸಕ್ರಮಗೊಳಿಸುತ್ತೀರಾ ಎಂದು ಕೇಳಿದ್ದಾರೆ.ಈಗ ನಾವು ಕೊಡಬೇಕಾದುದು ಎರಡು ಹೆಕ್ಟೇರ್ ಅಕ್ರಮ ಸಾಗುವಳಿ ಮಾಡುತ್ತಿದ್ದರೆ ಅದನ್ನು ಸಕ್ರಮಗೊಳಿಬೇಕೆಂದು ಇದೆ ಅದಕ್ಕಿಂತ ಜಾಸ್ತಿ ಇದ್ದರೆ ಅದನ್ನು ಮಾಡುವುದಕ್ಕಾಗುವುದಿಲ್ಲ. ಆದಾದ ಮೇಲೆ ಅವರೇನಾದರೂ ಜಾಸ್ತಿ ಮಾಡುತ್ತಿದ್ದರೆ ನಾವು ಎವಿಕ್ಷನ್ ಗೆ ಕ್ರಮತೆಗೆದುಕೊಳ್ಳುತ್ತೇವೆ.

ಶ್ರೀ ಶಫಿ ಅಹಮದ್ : ಸಭಾಧ್ಯಕ್ಷಿಣಿಯವರೇ, ಸನ್ಮಾನ್ಯ ಸಚಿವರು ಈಗತಾನೆ ಉತ್ತರ ಹೇಳುವಾಗ -ಈ ಸರ್ವೆಯರ್ಸ್ - ಬಗ್ಗೆ ಅದಷ್ಟು ಬೇಗನೆ ನೇಮಕಾತಿ ಮಾಡಿಕೊಡುತ್ತೇವೆ. ಎಂದು ಹೇಳುತ್ತಿದ್ದಾರೆ. ಆದರೆ ಮೊನ್ನೆ ತಾನೆ ಸಂದರ್ಶನ ಸಹಾ ಮಾಡಿದ್ದಾರೆ. ಅದನ್ನು ಡೆಫರ್ ಮಾಡಿದ್ದಾರೆ. ನಾವು, ಸನ್ಮಾನ್ಯ ಸಚಿವರಿಂದ ಸ್ಪೆಸಿಫಿಕ್ ರಿಪ್ಲೈ ಅನ್ನು ಬಯಸುತ್ತೇವೆ. ಎಷ್ಟು ದಿವಸಗಳಲ್ಲಿ ತಾವು ಇದನ್ನು ಮಾಡಿಕೊಡುತ್ತೀರಿ ಏಕೆಂದರೆ ನಮ್ಮ ಜಿಲ್ಲೆಯಲ್ಲಿ ಸುಮಾರು 2 ಲಕ್ಷದ 14 ಸಾವಿರ ಎಕರೆಯಷ್ಟು ವಿತರಣೆ ಮಾಡುವುದು ಪೆಂಡಿಂಗ್ ಇದೆ. ಆದರೆ ಜಿಲ್ಲಾಧಿಕಾರಿಗಳು ಮತ್ತು ತಹಶಿಲ್ದಾರ್ ರವರುಸರ್ವೇಯರ್ಸ್ ಇಲ್ಲದೆ ಕೆಲಸ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ಅದೇ ರೀತಿಯಾಗಿ ನಮ್ಮ ಪ್ರಶ್ನೆ (ಈ) ನಲ್ಲಿ ತಾವು ಇಲ್ಲ, ಎನ್ನತಕ್ಕ ಉತ್ತರ ಕೊಟ್ಟಿದ್ದೀರಿ. ಇವತ್ತು ಏನಾಗಿದೆ ಎಂದರೆ, ಅಲ್ಲಿ ಅಕ್ರಮವಾಗಿ ಭೂಮಾಲೀಕರು ಉಳುಮೆ ಮಾಡುತ್ತಿದ್ದಾರೆ. ಟಿ.ಟಿ. ಕಟ್ಟಿಕೊಂಡು ಬಂದಿದ್ದಾರೆ. ಅವರು ಕಾಲಕ್ಕೆ ಸರಿಯಾಗಿ ಅರ್ಜಿಗಳನ್ನು ಸಲ್ಲಿಸುವುದಕ್ಕೆ ಆಗಲಿಲ್ಲ, ಆಧ್ದರಿಂದ ಅವರಿಗೆ ತಾವು ಟಾಸ್ಕ ಫೋರ್ಸ್‌ಕಮಿಟಿ ಅವರಿಗೆ ಅಧಿಕಾರವನ್ನು ಕೊಟ್ಟು ಪುನರ್ ಪರಿಶೀಲನೆ ಮಾಡಿ ಅವರ ಅರ್ಜಿಗಳನ್ನು ಸ್ವೀಕರಿಸಿದರೆ ಬಹಳ ಒಳ್ಳೆಯದು. ಆದ್ದರಿಂದ ತಾವು ಅವರ ಬಗ್ಗೆ ಒಂದು ಮಾಹಿತಿ ಕೊಡುತ್ತೀರಾ ಎಂದು ಹೇಳುತ್ತಿದ್ದೇನೆ. ಫಾರೆಸ್ಟ್ ಮತ್ತು ಎಕ್ಸೈಸ್ ಲ್ಯಾಂಡ್ಸ್ ಅಮೃತಮಹಲ್ ಕಾವಲಗಳದು, ಇವತ್ತು ಅಕ್ರಮವಾಗಿ ಎಲ್ಲಾ ಸಾಗುವಳಿ ಮಾಡಿ ಕೊಂಡಿದ್ದಾರೆ. ತೆಂಗಿನ ತೋಟಗಳನ್ನು ಮಾಡಿಕೊಂಡಿದ್ದಾರೆ. ಅವರನ್ನು ಸರ್ಕಾರದವರು ಏನಾದರೂ ರೆಗ್ಯುಲರೈಸ್ ಮಾಡುವುದಕ್ಕೆ ತಾವು ಏನು ಲ್ಯಾಂಡ್ ಕೌಂಪನ್ಸೇಷನ್ ಹಾಕಿ ಬಿಟ್ಟು ಅವರನ್ನು ಸಕ್ರಮಗೊಳಿಸಿಬಿಟ್ಟರೆ.ಸರ್ಕಾರಕ್ಕೂ ರೆವಿನ್ಯೂ ಬಂದಹಾಗೆ ಆಗುತ್ತದೆ. ಮತ್ತು ಭೂಮಾಲಿಕರಿಗೂ ಉತ್ತೇಜವಾಗುತ್ತದೆ ಎಂದು ಈ ಪ್ರಶ್ನೆ ಕೇಳುತ್ತಿದ್ದೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ : ಯಾವ ಲ್ಯಾಂಡ್ ಸಂಕ್ರಮ ಮಾಡಬೇಕು, ಯಾವುದನ್ನು ಸಕ್ರಮ ಮಾಡ ಕೂಡದೆಂದು ಆಗಲೇ ನಿಗದಿ ಆಗಿದೆ. ಸಕ್ರಮ ಮಾಡತಕ್ಕ ಲ್ಯಾಂಡುಗಳು ಯಾವುವು ಎಂದರೆ ಗೌರ್ನಮೆಂಟ್ ರೆವಿನ್ಯೂ ಲ್ಯಾಂಡ್ಸ್ ಮತ್ತು ಸಿ ಅಂಡ್ ಡಿ ಲ್ಯಾಂಡ್ಸ್ ಮತ್ತು ಗೋಮಾಳ ಲ್ಯಾಂಡ್ಸ್, ಇಷ್ಟು ಮಾತ್ರ ಸಕ್ರಮ ಮಾಡಬಹುದು. ಯಾವುದನ್ನು ಮಾಡಬಾರದು ಎಂದು ಹೇಳಿದೆ ಎಂದರೆ, lands assigned for public purposess, plantation lands, privileged lands, forest lands and other similarly placed lands will not be regularised.

ಶ್ರೀ ಟಿ.ಬಿ. ಜಯಚಂದ್ರ : ಸಭಾಧ್ಯಕ್ಷಿಣಿಯವರೇ, ನಾವು 3 ಜನ ಸೇರಿ ಪ್ರಶ್ನೆ ಹಾಕಿದ್ದರೂ ಸ್ಪಷ್ಟವಾದಂತ ಉತ್ತರ ಬರಲಿಲ್ಲ. ಒಂದು ಉತ್ತರ ಏನು ಅಂದರೆ,ನಮಗೆ ಕ್ಲಾರಿಫಿಕೇಶನ್ ಬೇಕು. ಏಕೆಂದರೆ ಇದು ರಾಜ್ಯದ ಎಲ್ಲಾ ಜನರಿಗೂ ಗೊತ್ತಾಗಬೇಕಾಗಿದೆ. ಈಗ ಎಲ್ಲಾ ಶಾಸಕರು ಕೂಡ ಸಮಿತಿ ಸದಸ್ಯರಾಗಿರುತ್ತಾರೆ. 3 ನೂರು ಎಕರೆ ಜಮೀನನ್ನು ಹಂಚತಕ್ಕಂಥ ಸಂದರ್ಭದಲ್ಲಿ, 80 ಎಕರೆ ಮಾತ್ರ ನಾವು ಕೊಡಬಹುದು. ಇನ್ನು 20 ಎಕರೆ ಕೊಡುವುದಕ್ಕೆ ಬರುವುದಿಲ್ಲ, ಅರ್ಜಿಗಳನ್ನು ಹಾಕಿರುವುದಿಲ್ಲ. ಅವರು ಸಾಗುವಳಿ ಮಾಡುತ್ತಿದ್ದಾರೆ. ಈಗ ಅವರನ್ನು ಒಕ್ಕಲು ಎಬ್ಬಿಸುವುದಕ್ಕೆ ಸಾಧ್ಯವೇ? ಅದು ಸಾಧ್ಯವಿಲ್ಲ, ಮಾನವೀಯತೆ ದೃಷ್ಟಿಯಿಂದ ನೀವು ಮಾಡಲ್ಲ, ಯಾರೂ ಮಾಡುವುದಿಲ್ಲ. ಇಂಥ ಸಂದರ್ಭದಲ್ಲಿ ಅವರಿಗೆ ಯಾವ ರೀತಿಯಾದ ಪರಿಹಾರವನ್ನು ನೀವು ಕೊಡುತ್ತೀರಿ ಎನ್ನತಕ್ಕದ್ದು ಒಂದು ಪ್ರಶ್ನೆ. ಅವರಿಗೆ ಏನಾದರೂ ಮಾಡಬೇಕು, ವಿಶೇಷವಾಗಿ ಇದೇ ಕಮೀಟಿಗೆ ಏನಾದರೂ ವಿಶೇಷವಾದ ಆಜ್ಞೆಯನ್ನು ಕೊಟ್ಟು ಅಥವಾ ಪವರ್ಸ್‌ನ್ನು ಕೊಟ್ಟು, ಈ ಕೆಲಸ ಮಾಡುವುದಕ್ಕೆ ಸಾಧ್ಯವೇ? ಅದರ ಬಗ್ಗೆ ಏಕೆ ಯೋಚನೆ ಮಾಡಬಾರದು ಎಂದು ಎನ್ನತಕ್ಕಂತದ್ದು ಮತ್ತು ಹತ್ತಾರು ವರ್ಷಗಳಿಂದ 20-30 ವರ್ಷಗಳಿಂದ ನಮ್ಮಲ್ಲಿ ತೆಂಗು ಬೆಳೆಯುತ್ತಾ ಇರತಕ್ಕಂತವರು 30-40 ವರ್ಷಗಳಿಂದ ತೆಂಗಿನ ಫಸಲು ತಿನ್ನುತ್ತಾ ಇದ್ದಾರೆ. ಅವರಿಂದ ಸರ್ಕಾರಕ್ಕೆ ಯಾವ ರೀತಿಯಾದ ವರಮಾನವೂ ಇಲ್ಲ, ಒಂದು ಕಂದಾಯವನ್ನೂ ಕಟ್ಟುವುದಿಲ್ಲ ಇವತ್ತು ಅವರನ್ನು ಎವಿಕ್ಷನ್ ಮಾಡುವುದಕ್ಕೆ ನಿಮ್ಮ ಪ್ರೊಸಿಡಿಂಗ್ಸ್‌ನಲ್ಲಿ ಅವಕಾಶ ಇದೆ. ನಿಮ್ಮ ಲ್ಯಾಂಡ್ ರೆವಿನ್ಯೂ ಅಕ್ಟ್ ಪ್ರಕಾರ ಒಂದು ನೋಟಿಸ್ ಕೊಟ್ಟು ಬಿಟ್ಟರೆ ಹೈಕೋರ್ಟ್‌ಗೆ ಹೋಗಿ ಸ್ಟೇ ಮಾಡಿಸುತ್ತಾರೆ. 10 ವರ್ಷಗಳಾದರೂ ಅದು ಇತ್ಯಾರ್ಥವಾಗುವುದಿಲ್ಲ. ಇದರಿಂದ ಪ್ರಯೋಜನ ಏನಾಯಿತು. ಅವನ್ನು ಅಪ್ ಸೆಟ್ ಪ್ರೈಸ್‌ಗೆ ಕೊಡೊ ಮಟ್ಟಕ್ಕೆ ಏಕೆ ಯೋಚನೆ ಮಾಡಬಾರದು ರೆವಿನ್ಯೂ ಲ್ಯಾಂಡ್ ಕೇಳುತ್ತಿರುವುದು, ಫಾರೆಸ್ಟ್ ಲ್ಯಾಂಡ್ ಅಲ್ಲ.

Sri. M. Raja shakar Murthi : This will be examined.

ಉಪಾಧ್ಯಕ್ಷಿಣಿಯವರು : ಪ್ರಶ್ನೆ 173 (429)ಕ್ಕೆ ಉತ್ತರವನ್ನು ರೂರಲ್ ಡೆವಲಪ್ ಮೆಂಟ್ ಮಂತ್ರಿಗಳು ಕೊಡಬೇಕಾಗಿದೆ. ಅವರಿಗೆ ಇದು ಟ್ರಾನ್ಸ್ ಫರ್ ಆಗಿದೆ. ಮುಂದೆ ತೆಗೆದುಕೊಳ್ಳುತ್ತೇವೆ.

Sub Grants given Temples for Repairs/Renovations.

174 Sir. Peraikal M. Mallappa (Chikpet): Will the Hon'ble Minister for Revenue be pleased to State.

A) *The names of the temple in Bangalore City given grants for repairs / renovation Bangalore City curing 1991-92 and 92-93 (up to the end of October 92)*

B) *The amount of grant given to each Temple.*

M. Rajashakara Murthy (Revenue Minister):

1.	Sri. Durgaparameshwari temple Jayanagar, 7th Block Bangalore	Rs.25,000-00
2.	Sri. Vinayaka Venkataramana Temple, Railway Colony Banglaore	Rs. 10,000-00
3.	Sri. Vidyaganapathi Temple Hosvagaor extensions Bangalore.	Rs. 20,000-00
4.	Sri. Kodanda Ramaswamy temple Egipura, Bangalore	Rs. 20,000-00
5.	Sri, Doddamma & Magadamma Koramangala Bangalore	Rs 20,000-00
6.	Sri. Doddamma & Mugadamma Sri. Bhuwaneshwari, Kannada Yuvaka Sangha Koramangala, Bangalore.	Rs 15,000-00
7.	Sri. Balasubramanyaswamy Temple, T.C.M Rayan Road, Bangalore.	Rs. 10,000-00
	Total	Rs. 1,20,000-00

1992-93

1.	Sri. Solur Thimmarayappa Pharmachatra, Magadi Main Road, Bangalore	Rs. 20,000-00
2.	Sri. Navagraha & Ashwatha Katte 9th Block, Jayanagar, Bangalore.	Rs. 15,000-00
		Rs. 35,000-00

Replied in "A"

ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಸನ್ಮಾನ್ಯ ಅಧ್ಯಕ್ಷಿಣಿಯವರೇ, ಬೆಂಗಳೂರು ಮಹಾನಗರದಲ್ಲಿ 260 ದೇವಸ್ಥಾನಗಳು ಇದ್ದು ಅವು ಕಂದಾಯ ಇಲಾಖೆಯ ಮುಜರಾಯಿಗೆ ಬರುತ್ತವೆ. 91-92ನೇ ಸಾಲಿನಲ್ಲಿ ಕೇವಲ ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳನ್ನು ಬೆಂಗಳೂರಿನ 260 ದೇವಸ್ಥಾನಗಳಿಗೆ ನೀಡಿದೆ. ಕೆಲವು ದೇವಸ್ಥಾನಗಳನ್ನು ಐನೂರು ಆರುನೂರು ವರ್ಷಗಳಾಗಿವೆ. ಕೆಲವು ದೇವಸ್ಥಾನಗಳಲ್ಲಿ ಕುಡಿಯಲು ನೀರಿನ ಕೊಳಾಯಿ ಕೂಡ ಇಲ್ಲ. ಅಷ್ಟು ಅವ್ಯವಸ್ಥೆ ಇಲ್ಲಿದೆ. ಈ ದೇವಸ್ಥಾನಗಳನ್ನೂ ದುರಸ್ತಿ ಮಾಡಬೇಕಾಗುತ್ತದೆ ಅದಕ್ಕೆ ಸರ್ಕಾರದವರು ಹಣವನ್ನು ಇನ್ನೂ ಹೆಚ್ಚಾಗಿ ಕೊಡಬೇಕಾಗುತ್ತದೆ. 10 ಸಾವಿರದಿಂದ 20 ಸಾವಿರ ರೂಪಾಯಿ ಕೊಟ್ಟರೆ ಅದು ಸುಣ್ಣ ಬಣ್ಣ ಬಳಿಯುವುದಕ್ಕೆ ಕೂಡ ಆಗುವುದಿಲ್ಲ. ಆರ್ಕೆಯಲಾಜಿಕಲ್ ಡಿಪಾರ್ಟ್‌ಮೆಂಟ್‌ನವರು ಈ ದೇವಸ್ಥಾನಗಳನ್ನು ಪ್ರಿಸರ್ವ ಮಾಡಬೇಕಾಗುತ್ತದೆ. ಏಕೆಂದರೆ ಇವುಗಳಿಗೆ ನಾನೂರು ಐನೂರು ವರ್ಷಗಳ ಮೇಲೆ ಆಗಿದೆ. ಆದ್ದರಿಂದ 1992-93ನೇ ಸಾಲಿನಲ್ಲಿ ಕೇವಲ 35 ಸಾವಿರ ರೂಪಾಯಿ ಖರ್ಚು ಮಾಡಿದ್ದೀರಿ. ಇನ್ನೂರು ಮುನ್ನೂರು ದೇವಸ್ಥಾನಗಳು ಬೆಂಗಳೂರಿನಲ್ಲಿ ಇದ್ದು ಅದಕ್ಕೆ ಕೇವಲ 35 ಸಾವಿರ ರೂಪಾಯಿಗಳನ್ನು ಮಾತ್ರ

ಖರ್ಚು ಮಾಡಿದ್ದರೆ ಯಾವ ದೇವಸ್ಥಾನಕ್ಕೆ ಏನು ಮಾಡುವುದಕ್ಕಾಗುತ್ತದೆ? ದಯಮಾಡಿಕಂದಾಯ ಮಂತ್ರಿಗಳು ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ ದೇವಸ್ಥಾನಕ್ಕೆ ಜಾಸ್ತಿ ದುಡ್ಡು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri M. Rajashekhara Murthy : His request would be considered.

ನಿಯಂತ್ರಿತ ಮಾರುಕಟ್ಟೆಯಲ್ಲಿ ದಲ್ಲಾಳಿಯನ್ನು ಕಾನೂನು ಬಾಹಿರವಾಗಿ ವಸೂಲಿ ಮಾಡುವುದು.

478 - ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಿಯಂತ್ರಿತ ಮಾರುಕಟ್ಟೆಯಲ್ಲಿ ರೈತರಿಂದ ದಲಾಲಿ ವಸೂಲಿ ಮಾಡಬಾರದೆಂದು ಕಾನೂನು ಮಾಡಲಾಗಿದ್ದರೂ ರೈತರಿಂದ ಅಕ್ರಮವಾಗಿ ದಲಾಲಿ ವಸೂಲಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

ಆ) ಹಾಗಿದ್ದಲ್ಲಿ ರೈತರಿಂದ ಅಕ್ರಮ ದಲಾಲಿ ವಸೂಲಿ ನಿಲ್ಲಿಸಲು ಸರ್ಕಾರವು ಕೈಗೊಳ್ಳುವ ಕ್ರಮಗಳೇನು?

ಇ) ನಿಯಂತ್ರಿತ ಮಾರುಕಟ್ಟೆಯಲ್ಲಿ ರೈತರ ಮಾಲು ಮಾರಾಟವಾದ ನಂತರ ಹಣಪಾವತಿಯಲ್ಲಿ ಬಹಳ ವಿಳಂಬ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ

ಈ) ಹಾಗಿದ್ದಲ್ಲಿ, ರೈತರಿಗೆ ಮಾಲು ಮಾರಾಟವಾದ ತಕ್ಷಣ ಅವರ ಹಣ ಪಾವತಿ ಮಾಡುವಂತೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು)

ಅ) ಬಂದಿದೆ

ಆ) 1966ರ ಕೃಷಿ ಉತ್ಪನ್ನ ಮಾರಾಟ(ನಿಯಂತ್ರಣ) ಕಾಯ್ದೆ ಅಡಿಯಲ್ಲಿ ಮಾರಾಟಗಾರರಿಂದ ದಲ್ಲಾಲಿ ವಸೂಲು ಮಾಡಲು ನಿರ್ಬಂಧ ಇರುವ ಬಗ್ಗೆ ರೈತರಲ್ಲಿ ಅರಿವು ಮೂಡಿಸಲು ಮಾರುಕಟ್ಟೆ ಸಮಿತಿಗಳು ಕರಪತ್ರಗಳ ಮೂಲಕ, ಪೋಸ್ಟರುಗಳ ಮೂಲಕ ಧ್ವನಿವರ್ದಕಗಳ ಮೂಲಕ ಮಾರುಕಟ್ಟೆ ಪ್ರಾಂಗಣಗಳಲ್ಲಿ ಹೋರ್ಡಿಂಗ್‌ಗಳನ್ನು ಸ್ಥಾಪಿಸುವ ಮೂಲಕ ವ್ಯಾಪಕ ಪ್ರಚಾರ ಕೈಗೊಂಡಿದೆ. ಆಕಾಶವಾಣಿ ಸಹಯೋಗದೊಂದಿಗೆ ಬಾನುಲಿ ಪಾಠಗಳ್ನು ನಡೆಸಲಾಗುತ್ತಿದೆ. ಕಾನೂನು ಬಾಹಿರವಾಗಿ ದಲ್ಲಾಲಿಯನ್ನು ಪಡೆದ ಪ್ರಕರಣಗಳು ಕಂಡು ಬಂದಲ್ಲಿ ತಪ್ಪಿತಸ್ಥ ದಲ್ಲಾಲಿ ವ್ಯಾಪಾರಿಗಳ ಲೈಸೆನ್ಸ್ ರದ್ದು ಮಾಡಲು ಹಾಗೂ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಮಾರುಕಟ್ಟೆ ಸಮಿತಿಗಳಿಗೆ ಅಧಿಕಾರವಿದೆ.

ಇ) ಇಂತ ಕೆಲವು ಪ್ರಕರಣಗಳು ಗಮನಕ್ಕೆ ಬಂದಿರುತ್ತದೆ.

ಈ) ಸಕಾಲದಲ್ಲಿ ದಲ್ಲಾಲಿಗಳು ಹಣ ಪಾವತಿ ಮಾಡದಿದ್ದ ಪಕ್ಷದಲ್ಲಿ ಅಂತಹವರ ಲೈಸನ್ಸ್‌ನ್ನು ಅಮಾನತ್ತು ರದ್ದುಗೊಳಿಸಲು ಕಾಯ್ದೆಯಲ್ಲಿ ಅವಕಾಶ ಇದೆ. ಇದಲ್ಲದೆ. ಇಂತಹ ಪ್ರಕರಣಗಳಲ್ಲಿ ದಲ್ಲಾಲಿಗಳು: ವರ್ತಕರು ಮಾರುಕಟ್ಟೆ ಸಮಿತಿಯಲ್ಲಿ ನೀಡಿರುವ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಆ ಹಣವನ್ನು ರೈತ ಮಾರಾಟಗಾರರಿಗೆ ಕೃಷಿ ಉತ್ಪನ್ನ ಹಣವನ್ನು ಪಾವತಿಸಲು ಕಾಯ್ದೆಯಲ್ಲಿ ಅವಕಾಶ ಇದೆ.ಹಾಗೂ ಸಮಿತಿಯ ಅಧ್ಯಕ್ಷರುಗಳು ಇಂತಹ

ಪ್ರಕರಣದಲ್ಲಿ ದಂಡ ವಿಧಿಸಲು ಅವಕಾಶವಿದೆ. ಇದಲ್ಲದೆ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕ್ಕದ್ದಮೆ ಹೂಡಲು ಸಹ ಅವಕಾಶವಿದೆ.ಇವುಗಳನ್ನು ಕಟ್ಟು ನಿಟ್ಟಾಗಿ ಅನುಸರಿಸಲಾಗುವುದು.

ಶ್ರೀ ಡಿ.ಆರ್. ಪಾಟೀಲ್ : ಈ ಉತ್ತರದಲ್ಲಿ ರೈತರಿಂದ ದಲ್ಲಾಳಿ ವಸೂಲಿ ಮಾಡತಕ್ಕದ್ದು ಗೈರು ಕಾನೂನು ಆಗಿದ್ದರೂ ದಲ್ಲಾಳರು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಎಂದು ತಿಳಿಸಿದ್ದಾರೆ. ಆದರೆ ಇದಕ್ಕೆ ಎಪಿಎಂಸಿ ಯವರು ಏನು ಮಾಡಬೇಕೆಂದು ಮುಂದಿನ ಪ್ರಶ್ನೆಯಲ್ಲಿ ಉತ್ತರಿಸಿದ್ದಾರೆ. ದಲ್ಲಾಳರ ವಿರುದ್ಧ ಎ.ಪಿ.ಎಂ.ಸಿ.ಗೆ ರೈತರ ಕಂಪ್ಲೇಂಟ್ ಕೊಡುವುದಿಲ್ಲ ಅವರಿಗೆ ಹೆದರುತ್ತಾರೆ. ಆದುದರಿಂದ ಇದಕ್ಕೆ ಸರ್ಕಾರ ದಲ್ಲಾಳಿ ತೆಗೆದುಕೊಳ್ಳುವುದನ್ನು ತಪ್ಪಿಸುವದಕ್ಕೋಸ್ಕರ, ದಲ್ಲಾಳರು ರೈತರಿಗೆ ನೇರನಾಗಿ ಹಣ ಕೊಡದೆ ಎಪಿಎಂಸಿ ಮುಖಾಂತರ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಎ ಪಿಎಂಸಿ ಮುಖಾಂತರ ಹಣ ಕೊಡುವುದಕ್ಕೆ ಏನಾಗುತ್ತದೆ. ಎಂದರೆ ಅಷ್ಟು ಸಾಧ್ಯವಾಗುವುದಿಲ್ಲ.

ಏಕೆಂದರೆ ಡೈರೆಕ್ಟ್‌ಲಿ ಎಂ.ಪಿ.ಎಂ.ಸಿಯಿಂದ ಹಣ ಕೊಡುವ ವ್ಯವಸ್ಥೆ ಇದೆಯೇ ಎಂದು ನಾನು ವಿಚಾರಿಸಿದೆ. ಮದ್ರಾಸ್ ನಲ್ಲಿ ಒಂದು ಸ್ಮಾಲ್ ಮಾರ್ಕೆಟ್ ಬಿಟ್ಟರೆ ಈ ಬೇರೆ ಕಡೆ ವ್ಯವಸ್ಥೆ ಇಲ್ಲ. ಈ ಒಂದು ಕಡೆ ಬಿಟ್ಟರೆ ಬೇರೆ ಎಲ್ಲೂ ಕೂಡ ಈ ವ್ಯವಸ್ಥೆ ಇಲ್ಲ.

ಅಷ್ಟೂ ಹಣ ಕೂಡ ಎ.ಪಿ.ಎಂ.ಸಿ ಹತ್ತಿರ ಇರುವುದಿಲ್ಲ. ಆದುದರಿಂದ ಸಧ್ಯಕ್ಕೆ ಇದರ ಸಾಧ್ಯತೆ ಇಲ್ಲ.

ಶ್ರೀ ಡಿ.ಆರ್. ಪಾಟೀಲ್ : ತಮಿಳುನಾಡಿನ ಸರ್ಕಾರದಲ್ಲಿರುವುದು ನೇರವಾದ ಮಾರಾಟ ವ್ಯವಸ್ಥೆ. ಅಲ್ಲಿ ದಳ್ಳಾಳರು ವ್ಯವಸ್ಥೆ ಅಸ್ತಿತ್ವದಲ್ಲಿಲ್ಲ. ದಲ್ಲಾಳರು ರೈತರಿಗೆ ಏನು ಹಣ ಕೊಡುತ್ತಾರೆ ಅದನ್ನು ನೇರವಾಗಿ ಅವರಿಗೆ ಕೊಡುವ ಬದಲು ಅದನ್ನು ಎಪಿಎಂಸಿ ಮುಖಾಂತರ ಕೊಡಿಸಿದರೆ ಅವರು ದಲ್ಲಾಳಿಯನ್ನು ಮುರಿದು ಕೊಳ್ಳುವುದುಕ್ಕೆ ಸಾಧ್ಯವಾಗುವುದಿಲ್ಲ. ಎಪಿಎಂಸಿ ಹಣ ರೈತರಿಗೆ ಕೊಡುವುದಕ್ಕೆ ಆಗುವುದಿಲ್ಲ. ದಲ್ಲಾಳರು ಕೊಡತಕ್ಕಂಥ ಹಣವನ್ನು ಎ.ಪಿ.ಎಂ.ಸಿ ಮುಖಾಂತರ ಕೊಡಿಸತಕ್ಕದ್ದನ್ನು ಮಾಡಬೇಕು. ಇದರಿಂದ ದಳ್ಳಾಳಿ ಮುರಿದುಕೊಳ್ಳುವುದಕ್ಕೆ ಅವಕಾಶ ಇರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದನ್ನು ಅದರ ಜೊತೆ ಚರ್ಚೆ ಮಾಡಿ ಪರಿಶೀಲನೆ ಮಾಡುತ್ತೇನೆ. ಇದರ ಬಗ್ಗೆ ಅನೇಕ ಸಲ ಮಾತನಾಡಿದಾಗ ಈ ಸಿಸ್ಟಮ್ ಒಂದು ಕಡೆಮಾತ್ರ ತಮಿಳುನಾಡಿನಲ್ಲಿದೆಯೇ ಹೊರತಾಗಿ ಬೇರೆ ಎಲ್ಲೂ ಇಲ್ಲ ಎಂದು ನನ್ನ ಗಮನಕ್ಕೆ ಬಂದಿದೆ. ನಮ್ಮ ಅಧಿಕಾರಿಗಳು ಇದನ್ನು ಹೇಳಿದರು. ನೀವು ಹೇಳುವ ಪ್ರಕಾರ ತಮಿಳುನಾಡಿನಲ್ಲಿ ಎಲ್ಲಾ ಕಡೆ ಈ ಸಿಸ್ಟಮ್ ಇದೆ ಎಂದು ಹೇಳಿದರೆ ತಮ್ಮ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ.

ಇದು ಯಾವ ರೀತಿ ಫಂಕ್ಷನ್ ಆಗುತ್ತಿದೆ. ಯಾರು ಹಣ ಕೊಡುತ್ತಿದ್ದಾರೆ. ಅದನ್ನು ನೋಡೋಣ. ಏತಕ್ಕೆಂದರೆ ಅನೇಕ ಸಲ ಇಲ್ಲಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಆಗುತ್ತಿದೆ. ಅಷ್ಟು ಹಣವನ್ನು ಕೊಡುವ ಶಕ್ತಿ ಎ.ಪಿ.ಎಂ.ಸಿ.ಗೆ ಇದೆಯೋ ಇಲ್ಲವೋ ಎನ್ನುವುದನ್ನು ಪರೀಶಿಲಿಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ ತಮ್ಮ ಮುಖಾಂತರ ನಾನು ನೇರವಾಗಿ ಪ್ರಶ್ನೆ ಕೇಳುತ್ತಿದ್ದೇನೆ. ಉತ್ತರದಲ್ಲಿ ಎ.ಪಿ.ಎಂ.ಸಿ. ಸಮಿತಿಗಳಿಗೆ ಅಧಿಕಾರ ಇದೆಯೆಂದು ಹೇಳಿದ್ದಾರೆ. ಎ.ಪಿ.ಎಂ.ಸಿ ಗಳಲ್ಲಿ ಚುನಾಯಿತ ಸಮಿತಿಗಳು ಇಲ್ಲ, ಅಧಿಕಾರೇತರ ಅಧ್ಯಕ್ಷರು ಇಲ್ಲ. ಎಲ್ಲಾ ಅಧಿಕಾರಿಗಳು ಇದ್ದಾರೆ.ಕೆಲವು ಕಡೆ ತಶೀಲ್ದಾರರು ಇದ್ದಾರೆ. ಕೆಲವು ಕಡೆ ಡಿ.ಸಿ.ಗಳು ಇದ್ದಾರೆ. ಕೆಲವು ಕಡೆ ಅಸಿಸ್ಟೆಂಟ್ ಕಮಿಷನರ್ ಗಳು ಛೇರ್ ಮನ್ ರಾಗಿದ್ದಾರೆ. ಇವರೇ ಆಡಳಿತಾಧಿಕಾರಿಗಳು. ಇವರು ಸರ್ಕಾರಿ ನೌಕರರುಗಳಾಗಿದ್ದು ಸರ್ಕಾರಿ ನೇರವಾಗಿ ಇದಕ್ಕೆ ಜವಾಬ್ದಾರಿಯಾಗಿದೆ. ಅದಕ್ಕಾಗಿ ಅವರ ಮೇಲೆ ಏತಕ್ಕೆ ನೀವು ಕ್ರಮ ತೆಗೆದುಕೊಳ್ಳಬಾರದು? ಬಹಳಷ್ಟು ನಮ್ಮ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ದಲ್ಲಾಳರು ಹಣ ತೆಗೆದುಕೊಂಡಿದ್ದಾರೆ. ಎಂದು ಒಂದು ಕಡೆ ಹೇಳುತ್ತೀರಿ, ಇನ್ನೊಂದು ಕಡೆ ಸಮಿತಿ ಇದೆಯೆಂದು ಹೇಳುತ್ತೀರಿ. ಈ ಸಮಿತಿಗಳು ಸರ್ಕಾರದ ಅಧೀನದಲ್ಲಿಯೇ ಇದೆ.

ಶ್ರೀ ಆರ್. ಎಸ್. ನಾಯ್ಕ : ಇದುವರೆಗೆ ಅವರು ಕ್ವೋಸ್ಚನ್ನ ಕೇಳಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಎರಡನೆಯದಾಗಿ ಎಪಿ ಎಂಸಿಗೆ ಚುನಾವಣೆ ನಡೆದು 3 ವರ್ಷ ಆಗಿದೆ. ಎಪಿಎಂಸಿ ಚುನಾವಣೆಗಳು ನಡೆಯದೆ ಇರುವುದರಿಂದ ಅಲ್ಲಿ ಅಕ್ರಮಗಳು ಅವ್ಯವಹಾರಗಳು ಆಗುತ್ತಿವೆ. ಚುನಾವಣೆ ಆದರೆ ಅಧಿಕಾರೇತರರು ಅಧ್ಯಕ್ಷರಾಗಿ, ಸದಸ್ಯರಾಗಿ ಬರುತ್ತಾರೆ. ಹೀಗಾಗಿ ಭ್ರಷ್ಟಾಚಾರ ಕಡಿಮೆಯಾಗುತ್ತದೆ. ಆದಕ್ಕಾಗಿ ಚುನಾವಣೆ ನಡೆಸಬೇಕು. ಚುನಾವಣೆಗೂ ಭ್ರಷ್ಟಾಚಾರಕ್ಕೂ ಸಂಬಂಧವಿದೆ. ಇದರ ಬಗ್ಗೆ ಸಮಗ್ರವಾಗಿ ಹೇಳಿಕೆ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಹೇಳಿದ ಹಾಗೆ ಡಿಟೆಕ್ಟ್ ಮಾಡಿಲ್ಲ ಎಂದೇನೂ ಇಲ್ಲ. ನಮ್ಮ ಅಧಿಕಾರಿಗಳು ಡಿಟೆಕ್ಟ್ ಮಾಡಿ ಕೇಸ್‌ಗಳನ್ನು ಹಾಕಿದ್ದಾರೆ. ಉದಾಹರಣೆಗಾಗಿ ಬೆಂಗಳೂರು ಡಿವಿಷನ್‌ಗಳಲ್ಲಿ ಸುಮಾರರು 144 ಪ್ರಕರಣಗಳಲ್ಲಿ 1,5,462 ರೂಪಾಯಿಗಳನ್ನು ಅನಧಿಕೃತವಾಗಿ ದಳ್ಳಾಳಿಯಾಗಿ ವಸೂಲು ಮಾಡಿದ್ದುದು ಕಂಡು ಬಂದಿದೆ. ಮೈಸೂರಿನಲ್ಲಿ 79 ಪ್ರಕರಣಗಳಲ್ಲಿ 45,162 ರೂಪಾಯಿ ಬೆಳಗಾಂನಲ್ಲಿ 86 ಪ್ರಕರಣಗಳಲ್ಲಿ ಸುಮಾರು 6.520 ರೂಪಾಯಿ ಗುಲಬರ್ಗ ಡಿವಿಜನ್ 56 ಪ್ರಕರಣದಲ್ಲಿ 1.79.495 ರೂಪಾಯಿಗಳು ಅನಧಿಕೃತವಾಗಿ ದಳ್ಳಾಳಿ ವಸೂಲಿ ಮಾಡಿದ್ದು, ಕಂಡು ಬಂದಿದೆ. ಇದರಲ್ಲಿ ಸುಮಾರು 26 ಕೇಸಸ್ ಕೋರ್ಟಿನಲ್ಲಿವೆ. ಮತ್ತು ಟೋಟಲ್ ಅಮೌಂಟ್ 3.14.649 ರೂಪಾಯಿ ಇಷ್ಟು ಹಣವನ್ನು ಅನಧಿಕೃತವಾಗಿ ರೈತರಿಂದ ವಸೂಲು ಮಾಡಿದಂಥಾದ್ದು ಅಧಿಕಾರಿಗಳು ಗಮನಕ್ಕೆ ಬಂದಿದೆ.

ಈ ಹಣವನ್ನು ವಸೂಲು ಮಾಡುತ್ತಿದ್ದಾರೆ, ಮತ್ತು ರೈತರಿಗೆ ವಾಪಸ್ಸು ಕೂಡ ಕೊಡಿಸುತ್ತಿದ್ದಾರೆ. ತಾವು ಹೇಳಿದ ಹಾಗೆ ಅದರಲ್ಲಿ ಒಂದು - ವಾಸ್ತವಾಂಶ ಅಂದರೆ ಅನೇಕ ಅಧಿಕಾರಿಗಳು ಇದರಲ್ಲಿ ಇಂಟರೆಸ್ಟ್ ತೆಗೆದುಕೊಳ್ಳುವುದಿಲ್ಲ. ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಅಂತಹದ್ದು ನನಗೆ ಕಂಡುಬಂದರೆ ಅಥವಾ ಅವರಿಗೆ ಗೊತ್ತಾದರೆ ತಕ್ಷಣ ಕ್ರಮವನ್ನು ಅವರ ಮೇಲೆ ಜರುಗಿಸೋಣ. ಏಕೆಂದರೆ ಯಾರ್ಯಾರು ಕಮಿಷನ್ ಏಜೆಂಟ್ಸ್ ಅಥವಾ ಟ್ರೇಡರ್ಸ್ ತೊಂದರೆ ಕೊಡುತ್ತಾರೋ ಮತ್ತು ನಮ್ಮ ಸೆಲ್ಲರ್ಸ್ ಹತ್ತಿರ ಹಣ ತೆಗೆದುಕೊಳ್ಳುತ್ತಾರೋ ಅವರ ಲೈಸೆನ್ಸ್ ಫೋರ್ ಫಿಟ್ ಮಾಡಬೇಕು ಮತ್ತುಸೆಕ್ಯುರಿಟಿ ಡೆಪಾಸಿಟ್ ಫೋರ್ ಫಿಟ್ ಮಾಡಬೇಕು, ಪನಿಷ್‌ಮೆಂಟ್ ಕೊಡಬೇಕು. ಎನ್ನತಕ್ಕಂಥಾದ್ದು ಎಲ್ಲವನ್ನು

ಕೂಡ ಕಾನೂನಿನಲ್ಲಿ ಅಳವಡಿಸಿಕೊಂಡಿದ್ದೇವೆ. ಆ ಅಧಿಕಾರ ಸಂಪೂರ್ಣವಾಗಿ ಅಡ್ಮಿನಿಸ್ಟ್ರೇಟರ್ ಗಳಿಗೆ ಇದೆ. ಈ ಕಾನೂನು ಪ್ರಕಾರ ಅಡ್ಮಿನಿಸ್ಟ್ರೇಟರ್ಸ್ ಅಧಿಕಾರವನ್ನೂ ಚಲಾಯಿಸುತ್ತಾರೆ. ತಮ್ಮ ಗಮನಕ್ಕೆ ಎಲ್ಲಾದರೂ ಇಂತಹ ಕೇಸಸ್ ಕಂಡು ಬಂದರೆ ನನ್ನ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ (ಅಧಿಕಾರಿಗಳ ಕಡೆಯಿಂದ ಭ್ರಷ್ಟಾಚಾರ ಹೆಚ್ಚು ಹೆಚ್ಚು ಆಗುತ್ತಾ ಇದೆ. ಚುನಾವಣೆ ನಡೆದು ನಾಲ್ಕು ವರ್ಷ ಆಯಿತು. ಚುನಾವಣೆ ನಡೆದರೆ ಭ್ರಷ್ಟಾಚಾರ ಕಡಿಮೆ ಆಗುತ್ತದೆ. ಏಕೆಂದರೆ ರೈತರ ಪ್ರತಿನಿಧಿಗಳು ಅಲ್ಲಿ ಇರುತ್ತಾರೆ. ಅವರ ಬಗ್ಗೆ ಹೇಳಲಿ ಅವರು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಇದು ಸಂಬಂಧಪಟ್ಟ ವಿಷಯ ಅಲ್ಲ ಅಂದರೆ ಹೇಗೆ ? ಭ್ರಷ್ಟಾಚಾರಕ್ಕೂ ಚುನಾವಣೆಗೂ ಬಹಳ ಸಂಬಂಧ ಇದೆ. ಆದ್ದರಿಂದ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಹಲಗೇಗೌಡ :ಪುನಃ ಈ ದಲ್ಲಾಳಿಗಳ ಕೈವಾಡವೇ ಅಲ್ಲಿ ನಡೆಯುತ್ತಿರುವಾಗ ಈ ಎಪಿಎಂಸಿ ಇದ್ದೂ ಕೂಡ ಪ್ರಯೋಜನ ಆಗುತ್ತಾ ಇಲ್ಲ. ಆದುದರಿಂದ ಈ ಕಮಿಷನ್ ಕೊಡಬೇಕಾದರೆ ರೈತರಿಗೆ ಹಣವನ್ನು ಕೊಡಬೇಕಾದರೆ ಎಪಿಎಂಸಿ ಮುಖಾಂತರವೇ ಕೊಟ್ಟರೆ ಈ ಕಿರುಕುಳವನ್ನು ತಪ್ಪಿಸಬಹುದು. ನಷ್ಟವನ್ನು ತಪ್ಪಿಸಬಹುದು ಎನ್ನತಕ್ಕಂಥ ಒಂದು ನೀತಿ ಇರುವುದರಿಂದ ದಯಮಾಡಿ ಇನ್ನು ಮುಂದಾದರೂ ಎಪಿಎಂಸಿ ಮುಖಾಂತರವೆ ಕಮಿಷನ್ ಕೊಡಲು ವ್ಯವಸ್ಥೆ ಮಾಡುತ್ತೀರಾ ?

(ಗೊಂದಲ)

ಛೇರ್ಮನ್ : ಅವರು ಕೊಡುತ್ತಾರೆ. ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಸವರಾಜ್ ರಾಯರೆಡ್ಡಿ : ಯಾವುದಾದರೂ ತಾವು ಹೇಳಿ. ಚುನಾವಣೆ ನಡೆಸುತ್ತೇವೆ. ಎಂದು ಹೇಳಲಿ ಅಥವಾ ನಡೆಸೋದಿಲ್ಲ ಎಂದು ಹೇಳಲಿ. ಎಪಿಎಂಸಿ ಚುನಾವಣೆ ಬಗ್ಗೆ ದಯವಿಟ್ಟು ಹೇಳಬೇಕು ತಾವು.

ಛೇರ್ಮನ್ : ಅವರು ನಿಮ್ಮ ಸಹಪಾಠಿಗಳ ಪ್ರಶ್ನೆಗೆ ಉತ್ತರ ಕೊಡಬೇಕೋ ಬೇಡವೋ. ಅನಂತರ ನಿಮಗೂ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದರಲ್ಲಿ ಚುನಾವಣೆ ಪ್ರಶ್ನೆ ಇರುವುದರಿಂದ ತಾವು ದಯವಿಟ್ಟು ಬೇರೆ ಪ್ರಶ್ನೆ ಹಾಕಿದರೆ, ಏಕೆ ಆಗೋದಿಲ್ಲ, ಏಕೆ ಆಗುತ್ತದೆ ಎನ್ನುವುದನ್ನು ನಾನು ಹೇಳಬಹುದು.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷಿಣಿಯವರೆ,.....

ಛೇರ್ಮನ್ : ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ನಮಗೆ ಅವಕಾಶ ಕೊಡದಿದ್ದರೆ ನಾವು ಈ ಸಭೆಗೆ ಏತಕ್ಕಾದರೂ ಬರಬೇಕು. ಅಧ್ಯಕ್ಷರೆ ನಾನು ಕೇಳುವುದು ಇಷ್ಟೇ ಚುನಾವಣೆಗೂ ಇದಕ್ಕೂ ಏನು ಸಂಬಂಧ ಎಂದು ನಾನು ಹೇಳಿದ್ದೇನೆ. ಅಧಿಕಾರೇತರ ಸದಸ್ಯರು ಎಂದರೆ ಭ್ರಷ್ಟಾಚಾರ ಕಡಿಮೆ ಆಗುತ್ತದೆ. ಚುನಾಯಿತ ಅಧಿಕಾರಿ ಇರುತ್ತಾರೆ, ರೈತ ಪ್ರತಿನಿಧಿಗಳು ಅಲ್ಲಿ ಇರುತ್ತಾರೆ. ಆದ್ದರಿಂದ ಚುನಾವಣೆ ನಡೆಸುತ್ತಾರೋ ಅಥವಾ ಇಲ್ಲವೋ ಎಂದು ನಾನು ಕೇಳುತ್ತಿದ್ದೇನೆ.

ಛೇರ್ಮನ್‌ನವರು : ಚುನಾವಣೆ ನಡೆಸುತ್ತೀರೋ ಇಲ್ಲವೋ ಎಂದು ಬೇರೆ ಕೊಶ್ಚನ್ ಹಾಕಿ.

ಶ್ರೀ ಬಸವರಾಯರೆಡ್ಡಿ : ಚುನಾವಣೆಗೂ ಮತ್ತು ಭ್ರಷ್ಟಾಚಾರಕ್ಕೂ ಯಾವ ಸಂಬಂಧ ಇದೆ ಅನ್ನೋದರ ಬಗ್ಗೆ ನಾನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಬಸವರಾಜ ರಾಯರಡ್ಡಿ : ಅಧ್ಯಕ್ಷರೆ, ಇದಕ್ಕೆ ಸ್ಪೆಸಿಫಿಕ್ ಅನ್ಸರನ್ನು ದಟವಿಟ್ಟು ಕೊಡಿಸಿ ಇದನ್ನು ನೋಡಿದರೆ ಚುನಾವಣೆ ನಡೆಸಲು ಇವರಿಗೆ ಮನಸ್ಸಿಲ್ಲ ಎಂದು ಕಾಣಿಸುತ್ತದೆ.

ಛೇರ್ಮನ್ : ಬೇರೆ ಪ್ರಶ್ನೆ ಹಾಕಿ. ಈಗ ಡಿ.ಆರ್. ಪಾಟೀಲ್ ಅವರಿಗೆ ಅವಕಾಶ ಕೊಟ್ಟಿದ್ದೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಬಸವರಾಜ ರಾಯರೆಡ್ಡಿ : ಬೇರೆ ಪ್ರಶ್ನೆ ಏಕೆ ಹಾಕಬೇಕು ಹೇಳಿ? ಅವರು ಉತ್ತರ ಕೊಡಲಿ, ಚುನಾವಣೆ ನಡೆಸಲಿಕ್ಕೆ ಆಗಲಿಲ್ಲ ಎಂದು ಹೇಳಲಿ.

ಶ್ರೀ ಡಿ.ಆರ್. ಪಾಟೀಲ್ : ದಲ್ಲಾಳಿಯವರು ಅಕ್ರಮವಾಗಿ ವಸೂಲು ಮಾಡಿದ್ದ ಸುಮಾರರು 3 ಲಕ್ಷ ರೂಪಾಯಿ ಮರಳಿ ಕೊಡಿಸುತ್ತೇವೆ. ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈಗ ನಮ್ಮ ರಾಜ್ಯದಲ್ಲಿ ಬಹುತೇಕ ಎಲ್ಲಾ ಮಾರುಕಟ್ಟೆಗಳಲ್ಲಿ ಪ್ರತಿಶತಃ 2 ರಿಂದ 10 ರವರೆಗೆ ರೈತನಿಂದ ಗೈರು ಕಾನೂನಾಗಿ ದಲ್ಲಾಳಿ ವಸೂಲು ಆಗುತ್ತಾ ಇದೆ. ಇದು ಸುಮಾರು ಒಂದು ನೂರು ಕೋಟಿ ರೂಪಾಯಿ ಒಂದು ವರ್ಷಕ್ಕೆ ಆಗುತ್ತದೆ. ಇದನ್ನು ತಪ್ಪಿಸಲಿಕ್ಕೆ ಎಪಿಎಂಸಿ ಯವರು ದುಡ್ಡು ಕೊಡಬೇಕಾಗಿಲ್ಲ, ದಲ್ಲಾಳಿಯವರು ರೈತರಿಗೆ ಕೊಡತಕ್ಕಂಥ ಹಣವನ್ನು ರೈತರಿಗೆ ನೇರವಾಗಿ ಕೊಡದೆ, ಎಪಿಎಂಸಿ ಮುಖಾಂತರ ಅದು ರೂಟ್ ಆಯಿತು ಎಂದರೆ ಅವರು 1 ದಲ್ಲಾಳಿ ಮುರಿದುಕೊಳ್ಳುವುದಕ್ಕೆ ಆಗಲ್ಲ. ಬಹಳ ಸರಳವಾದ ಕೆಲಸ. ಸೆಕ್ಷನ್ 126(ಎ) ಎಪಿಎಂಗೆ ಡೈರೆಕ್ಷನ್ ಮಾಡಲಿಕ್ಕೆ ತಮಗೆ ಅವಕಾಶ ಇದೆ. ಆ ಡೈರೆಕ್ಷನ್ ಕೊಟ್ಟು ಬಿಟ್ಟರೆ ದಲ್ಲಾಳಿ ಮುರಿದುಕೊಳ್ಳೋದು ಮತ್ತು ಪೇಮೆಂಟ್ ಸಹಿತ ನಿಯಮಿತವಾಗಿ ಆಗುವಂಥ ಒಂದು ವ್ಯವಸ್ಥೆ ಆಗುತ್ತದೆ. ಅದನ್ನು ತಾವು ಮಾಡುತ್ತೀರ? ಎಂದು ನಾನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ನಾನು ಅದರ ಬಗ್ಗೆ ಹೇಳಿದ್ದೇನೆ. ಅದನ್ನು ಸ್ಪಷ್ಟವಾಗಿ ಪರಿಶೀಲನೆ ಮಾಡುತ್ತೇವೆ. ಸಾಧ್ಯ ಇದ್ದರೆ ಡೈರೆಕ್ಷನ್ ಕೊಡುತ್ತೇವೆ. ಗದಗ್ ನಿಂದಲೇ ಪ್ರಾರಂಭ ಮಾಡೋಣ. ನೋಡೋಣ. ಈ ಎಕ್‌ಪೆರಿಮೆಂಟ್ ಸಕ್ಸಸ್ ಆದರೆ ಬೇರೆ ಕಡೆ ಉಪಯೋಗ ಮಾಡೋಣ.

ಶ್ರೀ ಬಸವರಾಜ ರಾಯರೆಡ್ಡಿ : ಈ ಚುನಾವಣೆ ಬಗ್ಗೆ ಉತ್ತರ ಹೇಳಬೇಕು. ಇಲ್ಲ ಅಂದರೆ ನಾವು ಧರಣೆ ಕುಳಿತು ಕೊಳ್ಳ ಬೇಕಾಗುತ್ತದೆ.

ಛೇರ್ಮನ್ : ಬೇರೆ ಪ್ರಶ್ನೆ ಕೇಳಿ ಎಂದು ಹೇಳಲಿಲ್ಲವೆ?

(ಮಾನ್ಯ ಸದಸ್ಯರಾದ ಶ್ರೀ ಬಸವರಾಜ ರಾಯರೆಡ್ಡಿಯವರು ಅಧ್ಯಕ್ಷ ಪೀಠದ ಇರುವ ಮೆಟ್ಟಲಿನ ಮೇಲೆ ಬಂದು ಕುಳಿತರು)

ಶ್ರೀ ಆರ್.ಎನ್. ನಾಯಕ್ : ಅವರನ್ನು ಹೊರಗೆ ಕಳುಹಿಸಿ, ಕೊಶ್ಚನ್ ಅವರ್‌ನಲ್ಲಿ ಹೀಗೆ ಮಾಡಬಹುದೆ? ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕು ಮೇಡಂ.

Sri. Basavaraja Raya Reddy : Let him say yes or no,

(ಗೊಂದಲ)

ಛೇರ್ಮನ್ : ನಿಮ್ಮ ಕೊಶ್ಚನ್ ಲ್ಯಾಪ್ಸ್ ಆಯಿತು.

ಛೇರ್ಮನ್ : ಯಂಕನಾಯ್ಕರವರು ಹೇಳುವುದಲ್ಲದೆ ಬೇರೆ ಯಾವುದೂ ರೆಕಾರ್ಡ್ ಆಗುವುದು ಬೇಡ.

(ಗೊಂದಲ)

ಛೇರ್ಮನ್ : ನೀವು ನಿಮ್ಮ ಸಹಪಾಠಿಗಳ ಕ್ವಶ್ಚನ್ ಕೇಳುವುಕ್ಕೆ ಅವಕಾಶ ಕೊಡಬೇಕು. ಇಲ್ಲದಿದ್ದರೆ ಸಭೆ ಹೇಗೆ ನಡೆಸುವುದು?

ಶ್ರೀ ಡಿ.ಎ. ಚಿನ್ನಪ್ಪ : ಅಧ್ಯಕ್ಷರೇ, ಅವರು ಅಪೊಜಿಷನ್ ವಿಫ್. ಅವರು ಏಕೆ ಇಲ್ಲಿ ಬಂದು ಕುಳಿತಿದ್ದಾರೆ.

ಛೇರ್ಮನ್ : ಹೋಗಲಿ ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

(ಶ್ರೀ ಬಸವರಾಜ್ ರಾಯರೆಡ್ಡಿಯವರನ್ನು ಇತರ ಸದಸ್ಯರು ಅವರ ಸ್ಥಾನಕ್ಕೆ ಕರೆದೊಯ್ದರು)

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಚುನಾವಣೆ ಮಾಡುವುದಾದರೆ ಮಾಡುತ್ತೇವೆಂದು ಹೇಳಿ, ಇಲ್ಲದಿದ್ದರೆ ಇಲ್ಲವೆಂದು ಹೇಳಿ ಏಕೆ ಸುಮ್ಮನೆ ಕಿರಿಕಿರಿ.

ಛೇರ್ಮನ್ : ಗುರುಪಾದಪ್ಪನವರಿಗೆ, ನೀವು ಇಂಥ ಸೀನಿಯರ್ ಮೆಂಬರ್ ಏಕೆ ಗದ್ದಲ ಮಾಡುತ್ತೀರಿ?

ಹರಪ್ಪನ ಹಳ್ಳಿ ತಾಲ್ಲೂಕಿನ ಹರಿಜನ ಮತ್ತು ಲಂಬಾಣಿ ತಾಂಡಗಳಲ್ಲಿ ಹಾನಿಯಾದ ದೇವಸ್ಥಾನಗಳ ಸಂಖ್ಯೆ

724 - ಶ್ರೀ ಬಿ.ಹೆಚ್. ಯಂಕಾನಾಯ್ಕ : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೇ?

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ಹರಿಜನ ಮತ್ತು ಲಂಬಾಣಿ ತಂಡಗಳಲ್ಲಿ ಮತ್ತು ಇತರ ಹಳ್ಳಿಗಳಲ್ಲಿ ಹಾನಿಗೊಂಡ ಪೂಜಾ ಸ್ಥಾನಗಳ ಸಂಖ್ಯೆ ಎಷ್ಟು?

ಆ) ಈ ದೇವಸ್ಥಾನಗಳ ದುರಸ್ತಿ ಕಾರ್ಯವನ್ನು ಸರಕಾರದ ವತಿಯಿಂದ ಮಾಡಿಸಲು ಕೂಡಲೇ ಕ್ರಮ ಕೈಗೊಳ್ಳುವರೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಮಂತ್ರಿಗಳು):

ಅ) ಹರಿಜನ ದೇವಸ್ಥಾನ	50
ಲಂಬಾಣಿ ತಂಡ	39
ಇತರ ದೇವಸ್ಥಾನಗಳು	186
	275

ಆ) ಪರಿಶೀಲಿಸಲಾಗುವುದು.

ಶ್ರೀ ಬಿ.ಹೆಚ್. ಯಂಕಾನಾಯ್ಕ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಮೊದಲನೆಯ ಪ್ರಶ್ನೆಗೆ ಪರಿಶೀಲನೆ ಮಾಡಲಾಗುವುದು ಎಂದು ಉತ್ತರ ಕೊಟ್ಟಿದ್ದಾರೆ. ಅವರು ಯಾವಾಗ ಪರಿಶೀಲನೆ ಮಾಡುತ್ತಾರೆ. ಮೊನ್ನೆ ಮಳೆ, ನೆರೆಹಾವಳಿಯಿಂದ ಬಿದ್ದ ಮನೆಗಳು ಇವು, ಹರಿಜನ ಕೇರಿಯಲ್ಲಿ 50 ಲಂಬಾಣಿ ತಾಂಡದಲ್ಲಿ, 39, ಮತ್ತು ಇತರೇ 186 ಒಟ್ಟು 275ದೇವಸ್ಥಾನಗಳು ನಾಶವಾಗಿರುವುದರಿಂದ ಇವನ್ನು ಸರ್ಕಾರದ ವತಿಯಿಂದ - ಪರಿಶೀಲನೆ ಮಾಡಲಾಗುವುದೆಂದು ತಿಳಿಸಿದ್ದಾರೆ. ಜಾಗ್ರತೆಯಾಗಿ ಸರ್ಕಾರದ ವತಿಯಿಂದ ಈ ಕಾರ್ಯಕ್ರಮವನ್ನು ಕೈಗೊಳ್ಳುವಿರಾ, ಎಂದು ಕೇಳುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ : ಮಾನ್ಯ ಅಧ್ಯಕ್ಷರೆ, ಸುಮಾರು 275 ದೇವಸ್ಥಾನಗಳು ಈ ನೆರೆಹಾವಳಿಯಿಂದ ನಷ್ಟಕ್ಕೀಡಾಗಿವೆ ಈಗಾಗಲೇ ತಹಶೀಲ್ದಾರರು ಒಂದು ರಫ್ ಎಸ್ಟಿಮೆಂಟನ್ನು ತಯಾರು ಮಾಡಿದ್ದಾರೆ. ಅದು ಮೂವತ್ತೇಳು ಲಕ್ಷದ ಎಪ್ಪತ್ತೇಂಟು ಸಾವಿರದ ಐನ್ನೂರಕ್ಕೆ ಮಾಡಿದ್ದಾರೆ. ಈ ಎಸ್ಟಿಮೆಂಟ್ ಬಂದ ಮೇಲೆ ಅದನ್ನು ಪರಿಶೀಲನೆ ಮಾಡಿ ಫ್ಲಡ್ ರಿಲೀಫ್ ಫಂಡ್ ನಿಂದ ಈ ದೇವಸ್ಥಾನಗಳ ದುರಸ್ಥಿಯನ್ನು ತೆಗೆದುಕೊಳ್ಳುತ್ತೇವೆನ್ನುವ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಬಿ.ಹೆಚ್. ಯಂಕಾನಾಯ್ಕ : ಆಯಿತು.

ಶ್ರೀ ಎಸ್. ರಮೇಶ್ : ಇದೇ ಸಂದರ್ಭದಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ.

ಮೊನ್ನೆ ಎಲ್ಲಾ ಕಡೆ 150 ದೇವಸ್ಥಾನಗಳ ಬಗ್ಗೆ ಗಲಾಟೆಯಾಯಿತು. ಆ ಸಂದರ್ಭದಲ್ಲಿ ಕೆಲವು ದೇವಸ್ಥಾನಗಳಿಗೆ ಏಟು ಬಿದ್ದಿದೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಸುಮಾರು 7-8 ದೇವಸ್ಥಾನಗಳಿಗೆ ಏಟು ಬಿದ್ದಿದೆ. ಸರ್ಕಾರವತಿಯಿಂದ ಏನಾದರೂ ರಿಪೇರಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ?

ಛರ್ಮನ್ : ನಿಮ್ಮ ಕ್ಷೇತ್ರದ ಪ್ರಶ್ನೆ ಕೇಳಿ.

ಶ್ರೀ ಎಸ್. ರಮೇಶ್ : ಈ ಮೊನ್ನೆ ಅಯೋಧ್ಯೆ ಗಲಭೆಯ ಸಂದರ್ಭದಲ್ಲಿ ದೇವಸ್ಥಾನಗಳಿಗೆ ಏಟು ಬಿದ್ದಿದೆ.

ಭಟ್ಕಳ ಸರ್ಕಾರಿ ಆಸ್ಪತ್ರೆಯ ಹೆಸರಿಗೆ ಮಂಜೂರಾದ ಜಮೀನು.

1003 ಶ್ರೀ ಆರ್. ಎನ್. ನಾಯ್ಕ (ಭಟ್ಕಳ) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ಸರ್ಕಾರಿ ಆಸ್ಪತ್ರೆಯ ಹೆಸರಿಗೆ ಎಷ್ಟು ಜಮೀನನ್ನು ಮಂಜೂರು ಮಾಡಲಾಗಿದೆ ಮತ್ತು ಯಾವಾಗ ಮಂಜೂರು ಮಾಡಲಾಯಿತು.

ಆ) ಸರ್ಕಾರಿ ಆಸ್ಪತ್ರೆಯ ಈ ಜಮೀನಿನಲ್ಲಿ ಖಾಸಗಿಯವರು ಅತಿಕ್ರಮಿಸಿ ಮನೆ ಕಟ್ಟುವ ಮತ್ತು ಸಾರಾಯಿ ಅಂಗಡಿ ಗ್ಯಾರೇಜ್ ನಡೆಸುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ

ಇ) ಈ ಬಗ್ಗೆ ಸ್ಥಳೀಯ ಶಾಸಕರು ಸರ್ಕಾರದವರಿಗೆ ದೂರು ನೀಡಿರುವುದು ನಿಜವೇ?

ಶ್ರೀ ಎಂ. ರಾಜಶೇಖರ ಮೂರ್ತಿ(ಕಂದಾಯ ಸಚಿವರು)

ಅ) ಭಟ್ಕಳ ತಾಲ್ಲೂಕು ಸೂಸಗಡಿ ಹಳ್ಳಿಯ ಸಂ. ನಂ.353ಎ: 18ನ 13 ಎಕರೆ 9ಗುಂಟೆ ಜಮೀನನ್ನು ಭಟ್ಕಳದ ಸರ್ಕಾರಿ ಆಸ್ಪತ್ರೆಗಾಗಿ 1960 ರಲ್ಲಿ ಕಾಯ್ದಿರಿಸಲಾಯಿತು.

ಆ) ಹಾದು.

ಇ) ಹೌದು. ಸ್ಥಳೀಯ ಶಾಸಕರು ಈ ಅನಧಿಕೃತ ಒತ್ತುವರಿ ವಿಷಯವನ್ನು ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಯವರ ಗಮನಕ್ಕೆ ತಂದಿರುತ್ತಾರೆ.

ಶ್ರೀ ಆರ್.ಎನ್. ನಾಯ್ಕ : ಉತ್ತರದಲ್ಲಿ ಸರ್ಕಾರಿ ಆಸ್ಪತ್ರೆ ಸ್ಥಳವನ್ನು ಅತಿಕ್ರಮಿಸಿ ಮನೆ ಕಟ್ಟಿಕೊಂಡಿದ್ದು ಅಲ್ಲದೆ, ಆ ಸ್ಥಳದಲ್ಲಿ ಸಾರಾಯಿ ಅಂಗಡಿ ಮತ್ತು ಗ್ಯಾರೇಜು ನಡೆಸುತ್ತೀರುವುದು ನಿಜವೆಂದು ಸರ್ಕಾರ ಒಪ್ಪಿಕೊಂಡಿದೆ. ಅಲ್ಲಿ ಈ ಸಾರಾಯಿ ಅಂಗಡಿಯನ್ನು ನಡೆಸುವ ವ್ಯಕ್ತಿ ಏನಿದ್ದಾರೆ ಅವರು ಇವರ ಅಧಿಕಾರ ಇದ್ದ ಕಾಲಕ್ಕೆ ಅಂಗಡಿಗಳನ್ನು ಕಟ್ಟಿಕೊಂಡಿದ್ದಾರೆ.

12.00 ಪಿ.ಎಂ

ಶ್ರೀ ಶಿವಾನಂದ ಹೆಚ್. ಕೌಜಲಗಿ : ನೀವು ನೇರವಾಗಿ ಪ್ರಶ್ನೆಯನ್ನು ಕೇಳಿ.

(ಗೊಂದಲ)

ಡಾ.ವೈ ನಾಗಪ್ಪ : ಅವರು ಪ್ರಶ್ನೆಯನ್ನು ಕೇಳಲು ಇನ್ನೂ ಶುರು ಮಾಡಿಲ್ಲ, ನೇರವಾಗಿ ಪ್ರಶ್ನೆ ಕೇಳಿ ಎಂದರೆ ಹೇಗೆ.

(ಗೊಂದಲ)

ಡಾ. ವೈ. ನಾಗಪ್ಪ : ದುರ್ವ್ಯವಹಾರ ಹೊರಗೆ ಬರುತ್ತದೆ.ಎಂದು ಹೆದರಿಕೆಯೇ?

ಶ್ರೀ ಆರ್. ಎನ್. ನಾಯ್ಕು : ಈ ಸರ್ಕಾರಿ ಆಸ್ಪತ್ರೆ ಸ್ಥಳವನ್ನು ಯಾರ್ಯಾರು ಅತಿಕ್ರಮ ವಹಿಸಿ ಕೊಂಡಿದ್ದಾರೆ. ಅವರನ್ನು ಕಿತ್ತು ಹಾಕಲು ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದಯೇ?

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಶ್ರೀ ನಾಯಕ್‌ರವರು ದೇಶಪಾಂಡೆಯವರ ಮೇಲೆ ಹೇಳಿರುವುದನ್ನು ವಾಪಸ್ ತೆಗೆದುಕೊಳ್ಳಬೇಕು.

Mr. Chairman : ಆಗಬಹುದು. I will manage. Please resume your seat.

(ಗೊಂದಲ)

Sri R.V. Deshpande : He may be may friend or may be my enemy. It he has done a mistake,you hang him.

ಛೇರ್ ಮನ್ : ಸಾರಾಯಿ ಅಂಗಡಿಗೂ ಜಮೀನಿಗೂ ಏನು ಸಂಬಂಧ? Your leader is on his legs.Please resume your seats.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ವಿರೋಧಪಕ್ಷದ ನಾಯಕರ ಮೇಲೆ ಆಪಾದನೆ ಮಾಡಿದ್ದಾರೆ....

(ಗೊಂದಲ)

ಛೇರ್‌ಮನ್ : ನಿಮ್ಮ ಲೀಡರ್‌ಗೆ ಮಾತಾಡಲು ಅವಕಾಶ ಕೊಡಿ You please resume your seat.

ಶ್ರೀ ಆರ್. ವಿ. ದೇಶಪಾಂಡೆ.: ನನ್ನ ಮಿತ್ರರಾದ, ಶ್ರೀ ಆರ್.ಎನ್.ನಾಯ್ಕ ಅವರು ಒಂದು ಪ್ರಶ್ನೆಯನ್ನು ಹಾಕಿದ್ದಾರೆ. ಅದೇನೆಂದರೆ " the extent of land that has been sanctioned in the name of Government hospital at Bhatkal".

ನನಗೇನೂ ಗೊತ್ತಿಲ್ಲ. ಯಾರು ಆ ಸಾರಾಯಿ ಅಂಗಡಿಯನ್ನು ಹಾಕಿದ್ದಾರೆಂಬುದು ನೇರವಾಗಿ ದೇಶಪಾಂಡೆಯವರ ಫ್ರೆಂಡ್ ಅಂತ ಹೇಳಿದಾಗ ಇವರ ಹತ್ತಿರ ಏನು ಪುರಾವೆ ಇದೆ. ನನ್ನ ಫ್ರೆಂಡ್ ಅಂತ ಹೇಳೋದಿಕ್ಕೆ ಎರಡನೇದಾಗಿ ಈ ಸದನಲ್ಲಿ ಯಾರೇ ಶಾಸಕರಿರಲಿ ಮಂತ್ರಿಗಳಿರಲಿ ಅವರ ಫ್ರೆಂಡ್ ಯಾರೇಇರಲಿ ಅಂಥ ಎನಮಿಯೇ ಇರಲಿ, ಅವರು ಎಷ್ಟೇ ದೊಡ್ಡವರಿಲಿ ಸರ್ಕಾರ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಆಗೋದಿಲ್ಲ.ಮುಖ್ಯಮಂತ್ರಿಗಳ ಫ್ರೆಂಡಾಗಿದ್ದರೂ ಅದು ಇಲ್ಲಿಗಲ್ ಆಗಿದ್ದರೆ ಕ್ರಮ ತೆಗೆದುಕೊಳ್ಳಬಹುದು. ನನ್ನ ಫ್ರೆಂಡ್ ಆದರೂ ಇಲ್ಲೀಗಲ್ ಆಗಿದ್ದರೆಕ್ರಮ ತೆಗೆದುಕೊಳ್ಳಬಹುದು. ಆದರೆ ಇವರು ನನ್ನ ಬಗ್ಗೆ ಬೇಜಾವಾಬ್ದಾರಿಯಿಂದ ಮಾತನಾಡಿದ್ದಾರೆ. ಸಂಬಂಧವಿಲ್ಲದೆ ಅವರು ಅಪಾದನೆಯನ್ನು ಮಾಡಿದ್ದಾರೆ. ಈ ರೀತಿ ಮಾಡಿದರೆ ಈ ಮನೆಯನ್ನು ನಡೆಸಲು ಆಗುವುದಿಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನಾನು ಒಂದು ವೇಳೆ ನಮ್ಮ ಜಿಲ್ಲಾಧಿಕಾರಿಗಳಿಗಾಗಲಿ, ಎಕ್ಸೈಸ್ ಕಮಿಷನರ್ ಗಾಗಲೀ ಮುಖ್ಯಮಂತ್ರಿಗಳಿಗೆ, ಅಥವಾ ಎಕ್ಸೈಸ್ ಮಿನಿಸ್ಟರ್ ಗೆ ಹೇಳಿ ಇಂಥಹವರಿಗೆ ಪ್ರೊಟೆಕ್ಷನ್ ಕೊಟ್ಟಿದ್ದೇವೆ ಎಂದು ಹೇಳಿದರೆ ನಾನು ಒಪ್ಪ ಬಹುದಾಗಿತ್ತು. ಆದರೆ ಏನೂ ಇಲ್ಲ. ಸಂಬಂಧ ಇಲ್ಲ ಪರಿಚಯ ಇಲ್ಲ.ಆದರೂ ನೀವು ಅಪಾದನೆ ಮಾಡಿದರೆ ನಿಮ್ಮ ಸ್ಟೇಟಸ್

ಏನಾಗುತ್ತದೆ.You are insulting yourselves. It is an insult to the electorate of your constituency. I Want an apology from the member for dragging my name.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮಾನ್ಯ ವಿರೋಧಪಕ್ಷದ ನಾಯಕರು ಸಭೆಯಲ್ಲಿ ವೈಯಕ್ತಿಕ ಆರೋಪಣೆ ಮಾಡುವುದು ಅಷ್ಟು ಸರಿಯಲ್ಲ. ಮಾನ್ಯ ಮಿತ್ರರು ಆ ಮಾತನ್ನು ವಾಪಸ್ಸು ತೆಗೆದೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಸ್. ನಾಯ್ಕ್ : ನನಗೆ ಮಾತನಾಡುವುದಕ್ಕೆ ಬಿಡುವುದಿಲ್ಲವೇ?

ನಾನು ಪ್ರಶ್ನೆ ಕೇಳುವುದಕ್ಕೆ ಪ್ರಾರಂಭ ಮಾಡಿಅರ್ಧ ಪ್ರಶ್ನೇ ಕೇಳಬೇಕಾದ ಗದ್ದಲ ಮಾಡಿದೀರಿ. ನಾನು ಸತ್ಯಾಂಶವನ್ನು ಸಭೆಯ ಮುಂದೆ ಇಟ್ಟಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ : ಇದು ಒಬ್ಬರ ಮೇಲೆ ಒಬ್ಬರು ಆರೋಪಣೆ ಮಾಡತಕ್ಕ ಉದ್ದೇಶ ಮಾಡುವುದಾದರೆ ಈ ಸದನದಲ್ಲಿ ನಾವು ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇವರು ಉದ್ದೇಶಪೂರ್ವಕವಾಗಿ ಈ ರೀತಿ ಮಾಡುತ್ತಾ ಇದ್ದಾರೆ. ಅವರು ಯಾರ ಸ್ನೇಹಿತರೇ ಇರಲಿ ಸರ್ಕಾರಕ್ಕೆ ಅಧಿಕಾರ ಇದೆ ಅವರ ಅಧಿಕಾರ ಇದೆ ಅವರನ್ನು ಏನು ಬೇಕಾದರೂ ಮಾಡಲಿ ಶಿಕ್ಷೆ ಕೊಡಲಿ. ಆದರೆ ಇಂತಹವರು ಸ್ನೇಹಿತರು ಎಂದು ಹೇಳತಕ್ಕವಾದ ಉದ್ದೇಶಪೂರ್ವಕವಾಗಿ ಮಾಡತಕ್ಕವಾದ. ಅವರು ಹೇಳಿರುವ ಮಾತನ್ನು ಹಿಂದೆ ತೆಗೆದುಕೊಳ್ಳುವುದರಿಂಧ ಅಂದರೆ ನಾವೆಲ್ಲರೂ ಕುಳಿತುಕೊಂಡು ಸದನದ ಗೌರವಕ್ಕೋಸ್ಕರ ಧರಣೀ ಮಾಡಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಣೀಯವರೇ ಸಂಸಧೀಯ ವ್ಯವಹಾರಗಳ ಸಚಿವರು ಮಾನ್ಯ ವಿರೋಧಪಕ್ಷದ ನಾಯಕರಿಗೆ ಮತ್ತು ಅವರ ಸ್ಥಾನಕ್ಕೆ ಗೌರವ ಕೊಟ್ಟು.....

ಛೇರ್‌ಮನ್ : Please be brief.

Sri. P.G.R. Sindhia : I have not opened my mouth Madam Chairman : you have opened. Everbody has seen.

Sri. P.G.R.Sindia : If you don't want me to speak, I will not speak.

ಛೇರ್‌ಮನ್ ಕೊಶ್ಚನ್ ಲ್ಯಾಪ್ಸ್ ಆಗಬಾರದು....

ಶ್ರೀ ವಾಟಾಳ್ ನಾಗರಾಜ್ : ಶಾಸನಸಭೆಯಲ್ಲಿ ಅಧ್ಯಕ್ಷರೆ ಜಾಸ್ತಿ ಮಾತಾನಾಡುತ್ತಿದ್ದಾರೆ. ತಾವು ಜಾಸ್ತಿ ಮಾತನಾಡಬಾರದೆಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಹೀಗೆ ಮಾತನಾಡಬೇಕೆಂದು ರೂಲ್ ಇದೆಯೇ

ಛೇರ್ ಮನ್ : ಎಲ್ಲರೂ ಸೇರಿ ಕಾನೂನು ಚೌಕಟ್ಟು ಮಾಡಿದ್ದೀರಿ ಕೋಶ್ಚನ್ ಅವರ್ ಒಂದು ಗಂಟೆ ಎಂದು ಮಾಡಿದ್ದೀರಿ. ಬೇಕಾದರೆ ಮೂರು ಗಂಟೆ ಎಂದು ಮಾಡಿ.

ಶ್ರೀ ಸಿ. ಭೈರೇಗೌಡ : ಆರ್.ಎಸ್. ನಾಯ್ಕರವರು ಈ ಸದನದ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ಯಾರ್ಯಾರನ್ನೂ ಸಂಬಂಧ ಇಲ್ಲದೆ ಇದ್ದವರನ್ನು ಸಂಬಂಧ ಇದೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ಮಂತ್ರಿಗಳು ಅವರಿಗೆ ಬುದ್ಧಿವಾದ ಹೇಳಬೇಕು.

ಶ್ರೀ ಆರ್.ಎಸ್. ನಾಯ್ಕ: ಮಂತ್ರಿಗಳು ಹೇಳಿದ್ದನ್ನೂ ಕೇಳಲಿಲ್ಲ ವೆಂದು ನಿಮಗೆ ಯಾರು ಹೇಳಿದರು ?

(ಉಪಾಧ್ಯಕ್ಷಿಣಿಯವರು ಪೀಠವನ್ನು ಅಲಂಕರಿಸಿದರು)

ಶ್ರೀ ಸಿ. ಭೈರೇಗೌಡ : ಈ ಸದನದಲ್ಲಿ ಯಾರು ಇಲ್ಲವೋ ಅವರನ್ನು ಕುರಿತು ಹೇಳುವುದಾದರೆ ಸದನದ ಹಕ್ಕನ್ನು ಅವರು ದುರುಪಯೋಗ ಪಡಿಸಿಕೊಂಡಿದ್ದಾರೆ. ವೈಯಕ್ತಿಕವಾಗಿ ನಾಯ್ಕರವರು ವಿರೋಧಪಕ್ಷದ ನಾಯಕರ ಮೇಲೆ ಹೇಳಿದ್ದಾರೆ. ನಾಳೆ ಮತ್ತೊಬ್ಬರ ಮೇಲೆ ಹೇಳುತ್ತಾರೆ. ಇದು ಸರಿಯಲ್ಲ. ಅವರು ಅಪಾಲಜಿ ಕೇಳಬೇಕೆಂದು ಹೇಳುತ್ತೇನೆ

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅವರು ಅಪಾಲಜಿ ಕೇಳಲಿ, ಇಲ್ಲದಿದ್ದರೆ ನಾವು ಧರಣಿ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಇದು ವಿರೋಧ ಪಕ್ಷದ ನಾಯಕರ ಗೌರವದ ಪ್ರಶ್ನೆ ಮಾತ್ರವಲ್ಲ ಇಡೀ ಸನದಕ್ಕೆ ಅಗೌರವ ತರತಕ್ಕದ್ದಾಗಿದೆ.

ಉಪಾಧ್ಯಕ್ಷಿಣಿಯವರು : ದಯವಿಟ್ಟು ಕುಳಿತುಕೊಳ್ಳಿ.

ಪಾರ್ಲಿಮೆಂಟರಿ ಮಿನಿಸ್ಟರ್ ಏನು ಹೇಳುತ್ತಿದ್ದಾರೆ. ಕೇಳಿ.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಧರಣಿ ಹೂಡಿದರು).

Sri R.V. Deshpande : If he proves I will resingn otherwise he has to resign. I will challenge. Not only he has alleged...

(Interruptions)

(ಈ ಹಂತದಲ್ಲಿ ಜನತಾದಳ, ಸಮಾಜವಾದಿ ಜನತಾ ಪಕ್ಷ, ಭಾರತೀಯ ಜನತಾ ಪಕ್ಷದ ಎಲ್ಲ ಸದಸ್ಯರುಗಳು ಬಾವಿಯೊಳಗೆ ಬಂದರು).

ಉಪಾಧ್ಯಕ್ಷರು : ಮಾನ್ಯ ಸಂಸದೀಯ ವ್ಯವಹಾರ ಮಂತ್ರಿಗಳು ಏನು ಹೇಳುತ್ತಾರೆ ಕೇಳೋಣ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಅವರು ಈ ಸಭೆಯಲ್ಲಿ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ನಾವು ಸಭೆ ನಡೆಸುವುದಕ್ಕೆ ಬಿಡುವುದಿಲ್ಲ. ಇದು ಬೇಜವಾಬ್ದಾರಿತನ ಬಾಯಿಗೆ ಬಂದಹಾಗೆ ಮಾತನಾಡುವುದು. ಇದು ಈ ಸದನದ ಗೌರವಕ್ಕೆ ಚ್ಯುತಿಯಾಗಿದೆ. ಈ ಸದನದ ಸದಸ್ಯರು ಗೌರವಾಗಿ ನಡೆದುಕೊಂಡಿಲ್ಲ. ಮತ್ತು ಕೆಲವು ಕಾಂಗ್ರೆಸ್ ಸದಸ್ಯರು ಈ ಸಭೆಯಲ್ಲಿ ಗೂಂಡಾಗಿರಿ ಮಾಡುತ್ತಿದ್ದಾರೇನು ?

ಉಪಾಧ್ಯಕ್ಷರು : ಈಗ ಸಂಸದೀಯ ವ್ಯವಹಾರಗಳ ಮಂತ್ರಿಗಳು ಏನೋ ಹೇಳುತ್ತಿದ್ದಾರೆ ಅದನ್ನು ಕೇಳೋಣ. ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷಣೆಯವರೆ...

ಶ್ರೀ ವಾಟಾಳ್ ನಾಗರಾಜ್ ; ಇದು ನಮ್ಮ ಹಕ್ಕಿಗೆ ಚ್ಯುತಿಯಾಗಿದೆ. ನಮ್ಮ ಹಕ್ಕಿಗೆ ಅಗೌರವವಾಗಿದೆ.

(ಈ ಹಂತದಲ್ಲಿ ಸದಸ್ಯರು ಓಹೋ ಎಂದು ಕೂಗುತ್ತಿದ್ದರು)

ಉಪಾಧ್ಯಕ್ಷರು : ಎಲ್ಲರೂ ಸುಮ್ಮನಿರಿ. ಮಾನ್ಯ ಸಿಂಧ್ಯಾರವರು ಏನೋ ಹೇಳುತ್ತಿದ್ದಾರೆ ಕೇಳೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ : ಕಾಂಗ್ರೆಸ್ ಸದಸ್ಯರು ನಮಗೆ ಬಹುಮತವಿದೆ ನಾವು ಏನು ಬೇಕಾದರೂ ಮಾಡಬಹುದೆಂದು ಮರೆಯುತ್ತಿದ್ದಾರೆ.ಹಿಂದಿನ ಸರ್ಕಾರದಲ್ಲಿ ಯಾವ ವರ್ತನೆಯಿತ್ತು ಅದು ಮುಂದುವರಿಯುತ್ತಾ ಇದೆ. ಅಧಿಕಾರ ಕಳೆದುಕೊಂಡರೂ ನಾಯಕತ್ವ ಕಳೆದುಕೊಂಡರು ಇವರಿಗೆ ಸ್ವಲ್ಪ ಬುದ್ಧಿ ಬಂದಿದೆ. ಎಂದು ತಿಳಿದಿದೆವು. ಇವರಿಗೆ ಇನ್ನೂ ಒಳ್ಳೆಯ ಬುದ್ಧಿ ಬಂದಿಲ್ಲ.

ಉಪಾಧ್ಯಕ್ಷರು : ಈಗ ಮಾನ್ಯ ಸಿಂಧ್ಯಾರವರು ಮಾತನಾಡುತ್ತಾರೆ. ಬೇರೆಯವರು ಯಾರು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ, ಈಗ ಎಲ್ಲರೂ ಸುಮ್ಮನಿದ್ದಾರೆ, ತಾವು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಣೆಯವರೇ, ತಮ್ಮ ಗೈರುಹಾಜರಿಯಲ್ಲಿ ಪ್ರಶ್ನೋತ್ತರವೇಳೆ ಸಂದರ್ಭದಲ್ಲಿ ಮಾನ್ಯ ಗೌರವಾನ್ವಿತ ಸದಸ್ಯರಾದ ಆರ್.ಎನ್. ನಾಯಕರವರು ಮಂತ್ರಿಗಳಿಂದ ಉತ್ತರ ಪಡೆಯುತ್ತಿದ್ದ ಸಂದರ್ಭದಲ್ಲಿ...

ಶ್ರೀ ಬಿ. ಸ್ವಾಮಿರಾವ್ : ನಮಗೆ ನೀತಿ ಹೇಳುವವರು ನೀತಿಯನ್ನು ಮೊದಲು ಕಲಿತುಕೊಂಡಿರಬೇಕು.

ಉಪಾಧ್ಯಕ್ಷರು : ನಾನು ಈಗ ಮಾತನಾಡಲಿಕ್ಕೆ ಮಾನ್ಯ ಸಿಂಧ್ಯಾರವರನ್ನು ಕರೆದಿದ್ದೇನೆ. ಸದಸ್ಯರು ಛೇರ್‌ಗೆ ಅಡ್ರಸ್ ಮಾಡಿ ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡತಕ್ಕಂತಹ ಸಂದರ್ಭಧಲ್ಲಿ ಮಾನ್ಯ ಆರ್. ಎನ್. ನಾಯಕ್ ರವರು ಮಾನ್ಯ ವಿರೋಧ ಪಕ್ಷದ ನಾಯಕರ ಮೇಲೆ ಗುರುತರವಾದ ಆಪಾದನೆ ಮಾಡಿದ್ದಾರೆ. ಸರ್ಕಾರಿ ಆಸ್ಪತ್ರೆಯ 13 ಎಕರೆ 9 ಕುಂಟೆ ಜಮೀನನ್ನು ಯಾರೋ ಅಕ್ರಮವಾಗಿ ತೆಗೆದುಕೊಂಡಿದ್ದಾರೆ. ಅದರಲ್ಲಿ ಒಂದು ಸಾರಾಯಿ ಅಂಗಡಿ ನಡೆಯುತ್ತಿದೆ. ಆ ಸಾರಾಯಿ ಅಂಗಡಿಯನ್ನು ನಡೆಸತಕ್ಕವರು ದೇಶಪಾಂಡೆಯವರ ಸ್ನೇಹಿತರು, ಎಂದು ಹೇಳಿದ್ದಾರೆ. ಇದರಿಂದ ಏನು ಅರ್ಥ ಬರುತ್ತದೆ ಎಂದರೆ ದೇಶಪಾಂಡೆಯವರ ಸಹಾಯ,ಕುಮ್ಮಕ್ಕಿನಿಂದ 13 ಎಕರೆ ಜಮೀನನ್ನು ಅತಿಕ್ರಮಣವಾಗಿದೆ ಮತ್ತು ಅಲ್ಲಿ ಅನ್ಯಾಯವಾಗಿ ಸಾರಾಯಿ ಅಂಗಡಿ ನಡೆಸಲಿಕ್ಕೆ ಇವರ ಸಹಾಯ ಇದೆ ಎಂಬ ಅರ್ಥ ಬರುತ್ತದೆ. ಇದನ್ನು ತಿಳಿದುಕೊಂಡು ಸಂಸದೀಯ ವ್ಯವಹಾರ ಮಂತ್ರಿಗಳು ಇದಕ್ಕೆ ಅಪಾಲಜಿ ಮಾಡಬೇಕು ಎಂದು ಹೇಳುತ್ತೇನೆ. ಈ ರೀತಿ ಮಾಡನಾಡತಕ್ಕದ್ದೆ ಅಪರಾಧ. ಅವರ ಮೇಲೆ ಅಪಾದನೆ ಏನೆಂದರೆ ಅವರು ಜಿಲ್ಲಾ ಪರಿಷತ್ತಿನ ಸದಸ್ಯರಾಗಿದ್ದರು ಎನ್ನುವುದು ಬೇರೆ ವಿಚಾರ ಅದು. ಈಗ

ಮಾನ್ಯ ದೇಶಪಾಂಡೆಯವರು ಏನು ಹೇಳಿದ್ದಾರೆ ಅವರು ಏನಾದರೂ ನನ್ನ ಸ್ನೇಹಿತರು ಆಗಿದ್ದರೆ ಅವರು ಅಕ್ರಮ ಮಾಡಿದ್ದರೆ ಅದಕ್ಕೆ ಏನಾದರೂ ಸಾಕ್ಷಿ ಇದ್ದರೆ ನಾನು ಈ ಸ್ಥಾನಕ್ಕೆ ರಾಜಿನಾಮೆ ಕೊಡುತ್ತೇನೆ. ಅದಕ್ಕೆ ಮಾನ್ಯ ಆರ್.ಎನ್. ನಾಯಕ್ ತಯಾರು ಇದ್ದಾರೆಯೇ? ನಮಗೆ ಸಭೆ ನಡೆಯಬೇಕು, ಸಭೆಯಲ್ಲಿ ಎಲ್ಲಾ ವಿಷಯಗಳ ಬಗ್ಗೆ ಚರ್ಚೆ ಆಗಬೇಕು ಎನ್ನುವುದು ನಮ್ಮ ವಾದ. ಮಾನ್ಯ ಆರ್. ಎನ್. ನಾಯಕ್‌ರು ಮಾನ್ಯ ದೇಶಪಾಂಡೆಯವರು ಒಂದೇ ಜಿಲ್ಲೆಯವರು. ಅವರು ನಮ್ಮ ಸ್ನೇಹಿತರೇ ಆಗಿಯೇ ಇರುತ್ತಾರೆ. ಅವರು ಮಾತನಾಡತಕ್ಕ ಅನೇಕ ಸಂದರ್ಭದಲ್ಲಿ ಅದು ಏನು ಆವೇಶದಿಂದ ಮಾತನಾಡುತ್ತಾರೋ, ಯಾವಕಾರಣದಿಂದ ಮಾತನಾಡುತ್ತಾರೋ ಏನೋ ನಮ್ಮ ಮನಸ್ಸಿಗೆ ಬಹಳ ನೋವಾಗಿದೆ. ಬಹಳ ದುಃಖದಿಂದ ಈ ಮಾತನ್ನು ಹೇಳುತ್ತಾ ಇದ್ದೇವೆ. ಇಲ್ಲಿ ನಾವು ಧರಣಿ ಮಾಡತಕ್ಕ ಎಕ್ಸ್‌ಟ್ರಿಮ್ ಪೊಸಿಷನ್‌ಗೆ ಹೋಗಬೇಕಾದರೆ ನಮ್ಮ ಮನಸ್ಸು ನೊಂದಿದೆ. ಇದರಿಂದ ಯಾರು ಸ್ನೇಹಿತರು ಎಂದು ತೆಗೆದುಕೊಂಡು ಹೋದರೆ ಬಹಳ ದೂರಕ್ಕೆ ಹೋಗುತ್ತದೆ. ಮಾನ್ಯ ದೇಶಪಾಂಡೆಯವರು ನಾನು ರಾಜೀನಾಮೆ ಕೊಡುತ್ತೇನೆ. ಎಂದು ಏನು ಛಾಲೆಂಜ್ ಕೊಟ್ಟಿದ್ದಾರೆ. ಅದನ್ನು ನಾಯಕ್ ರು ಒಪ್ಪಿಕೊಳ್ಳಬೇಕು. ಇಲ್ಲದೆ ಹೋದರೆ ಈ ಕ್ಷಣದಲ್ಲಿ ಎದ್ದು ನಿಂತುಕೊಂಡು ನನ್ನದು ತಪ್ಪಾಗಿದೆ ಕ್ಷಮೆ ಯಾಚಿಸುತ್ತೇನೆ ಎಂದು ಹೇಳುವವರೆಗೂ ನಾವು ಈ ಧರಣಿಯನ್ನು ಮುಂದುವರೆಸುತ್ತೇವೆ.

(ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ವೆಲ್‌ಗೆ ಬಂದರು)

ಉಪ ಸಭಾಧ್ಯಕ್ಷರು : ಮಾನ್ಯ ಸಂಸದೀಯ ಸಚಿವರು ...

ವಾಟಾಳ್ ನಾಗರಾಜ್ ; ಸಂದೀಯ ಸಚಿವರು ಹೇಳುವುದಕ್ಕೆ ಮುಂಚಿತವಾಗಿ ಮಾನ್ಯ ನಾಯಕ್‌ರವರು ಹೇಳುವುದಕ್ಕೆ ಉಳಿದಿರುವುದು ಏನು ಇಲ್ಲ? ಈ ಕೂಡಲೇ ಈ ಸದನಕ್ಕೆ ಕ್ಷಮೆಯನ್ನು ಕೇಳುವುದು ಒಂದೇ ಉಳಿದಿರುವುದು.

(ಗೊಂದಲ)

ಉಪಸಭಾದ್ಯಕ್ಷರು : ಈಗ ತಾವು ಏನು ಹೇಳುತ್ತೀರೋ ಹೇಳಿ.

(ಗೊಂದಲ)

ಡಾ. ಎನ್.ಬಿ. ನಂಜಪ್ಪ : ಮಾನ್ಯ ನಾಯಕ್ ರವರಿಗೆ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಶ್ರೀ ಎಂ. ಮಹದೇವ್ : ನಾನು ಪಾಯಿಂಟ್ ಆಫ್ ಆರ್ಡರ್ ಪ್ರಕಾರ ಎತ್ತಿದ್ದೇನೆ. ಈ ಸಭೆ ಆರ್ಡರ್ ನಲ್ಲಿ ಇಲ್ಲ, ಆದ್ದರಿಂದ ಅವರು ಯಾವ ಸ್ಟೇಟ್‌ಮೆಂಟ್‌ನ್ನು ಕೊಡುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷಣೆಯವರು : ವೆಲ್ ನಲ್ಲಿ ಕುಳಿತಿರುವವರು ಏನು ಮಾತನಾಡಿದರು ಅದು ರೆಕಾರ್ಡಿಗೆ ಹೋಗುವುದಿಲ್ಲ, ನೀವು ಮಾತನಾಡಬಹುದು.

ಶ್ರೀ ಎಂ. ಮಹದೇವ್ : ನನ್ನ ಕ್ರಿಯಾಲೋಪ ಏನು ಅಂದರೆ, ಈ ಸಭೆ ಈಗ ಆರ್ಡರ್‌ನಲ್ಲಿ ಇಲ್ಲ, ಈಗ ಅವರು ಹೇಗೆ ಸ್ಟೇಟ್ ಮೆಂಟ್

ಕೊಡುವುದಕ್ಕೆ ಆಗುತ್ತದೆ? ಅವರು ಅವರವರ ಸ್ಥಾನಗಳಿಗೆ ಹೋಗಿ ಕೂತುಕೊಂಡಾಗ ಇವರು ಸ್ಟೇಟ್‌ಮೆಂಟ್ ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಉಪಾಧ್ಯಕ್ಷಣಿಯವರು : ಆಯಿತು ತಾವು ಕುಳಿತುಕೊಳ್ಳಿ.

ಶ್ರೀಆರ್. ಎಸ್. ನಾಯ್ಕ : ತಾವು ಕಡಿತ ತೆಗೆಸಿ ನೋಡಿ ನಾನು ಏನು ಮಾತನಾಡಿದ್ದೇನೆ ಎಷ್ಟು ಟೈಮ್ ಮಾತನಾಡಿದ್ದೇನೆ ಎಂಬುದನ್ನು ದಯಮಾಡ ನೋಡಿ. ನೀವು ಒಂದೇ ಸಮನೇ ಬಂದು ಈ ತರಹ ಒತ್ತಡವನ್ನು ಅಂದರೆ ವಿರೋಧಪಕ್ಷದವರು ತಂದರೆ ಬಹಳ ಕಷ್ಟ ನಾನು ಬಹಳ ವೀಕ್ ಆಗಿದ್ದೇನೆ. ನನಗೇನಾದರೂ ಹೆಚ್ಚು ಕಡಿಮೆ ಆದರೆ...

ಉಪಾಧ್ಯಕ್ಷಣಿಯವರು : ಅದನ್ನು ಗಮನಿಸಲೇ ಬೇಕು.

ಶ್ರೀ ಆರ್.ಎಸ್. ನಾಯ್ಕ : ನಾನು ಏನು ಹೇಳಿದ್ದೇನೆ. ಅದನ್ನು ದಯಮಾಡಿ ನೋಡಿ. ನನ್ನ ದೃಷ್ಟಿಯಲ್ಲಿ ಸಾಕಷ್ಟು ಅನುಭವಸ್ಥರು ಇದ್ದಾರೆ...

(ಗೊಂದಲ)

(ಶ್ರೀ ವಾಟಾಳ್ ನಾಗರಾಜ್ ರವರು ವೆಲ್‌ನಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಉಪಾಧ್ಯಕ್ಷಣಿಯವರು : ಶ್ರೀ ವಾಟಾಳ್ ನಾಗರಾಜ್ ರವರೇ ನೀವು ಆ ಕಡೆ ತಿರುಗಿ ಮಾತನಾಡಬೇಡಿ.

ಶ್ರೀ ಆರ್.ಎಸ್. ನಾಯ್ಕ : ಒಂದು ವೇಳೆ ನಾನು ತಪ್ಪು ಮಾಡಿದ್ದರೆ, ತಪ್ಪು ಅಲ್ಲ ಎಂದು ಹೇಳತಕ್ಕ ಮೂರ್ಖ ನಾನಲ್ಲ. ಮಾನ್ಯ ದೇಶಪಾಂಡೆಯವರು, ಮಾನ್ಯ ಸಿಂಧ್ಯಾರವರನ್ನು ನಾನು ಇವತ್ತು ನೋಡುತ್ತಿಲ್ಲ, ಮಾನ್ಯ ದೇಶಪಾಂಡೆಯವರು ಯಾವಾಗ ಈ ಸಭೆಗೆ ಬಂದರೋ ನಾನೂ ಅದೇ ತಾರೀಖು ಬಂದಿದ್ದೇನೆ. ವಿಷಯ ಏನಿದೆ ಎಂಬುದನ್ನು ತಿಳಿದುಕೊಳ್ಳಬೇಕು. ನಾನು ಒಂದು ಪ್ರಶ್ನೆಯನ್ನು.....

ಉಪಾಧ್ಯಕ್ಷಣಿಯವರು : ಆ ಪ್ರಶ್ನೆಯನ್ನು ಹೇಳಬೇಡಿ.

ಶ್ರೀ ಆರ್.ಎಸ್. ನಾಯ್ಕ : ನಾನು ಹೇಳಿದೆ, ನಾನು ತಪ್ಪು ಮಾಡಿದ್ದರೆ, ಕ್ಷಮೆ ಕೇಳದೆ ಇರತಕ್ಕ ಮೂರ್ಖ ನಾನಲ್ಲ ಸ್ವಲ್ಪ ನಾನು ಏನು ಹೇಳುತ್ತೇನೆ ಎಂಬುದಕ್ಕೆ ದಯಮಾಡಿ ಅವಕಾಶ ಮಾಡಿಕೊಡಿ. ನಾನು ಒಂದು ಪ್ರಶ್ನೆಯನ್ನು ಕೇಳಿದೆ. ಅದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಈ ಆಸ್ಪತ್ರೆ ಸ್ಥಳವನ್ನು ಯಾರ್‍ಯಾರು ಅತಿಕ್ರಮಣ ಮಾಡಿದ್ದಾರೆ. ಅದರಲ್ಲಿ ಒಂದು ಸಾರಾಯಿ ಅಂಗಡಿ ಕಟ್ಟಿದ್ದಾರೆ. ಇದು ನಿಜವಲ್ಲವೆ ಎಂದು ಕೇಳಿದ್ದೇನೆ. ಅಲ್ಲಿ ಸಾರಾಯಿ ಅಂಗಡಿ ಕಟ್ಟಿರುವುದು ನನ್ನ ಮನಸ್ಸಿಗೂ ನೋವಾಗಿದೆ. ಹಿಂದಿನ ಯಾವ ಸರ್ಕಾರವೂ ಅದನ್ನು ಕಿತ್ತು ಹಾಕಲು ಸಹಾಯ ಮಾಡಲಿಲ್ಲ. ಆದ್ದರಿಂದ ಇದನ್ನು ಕಿತ್ತು ಹಾಕಿಸಲು ಪ್ರಯತ್ನ ಮಾಡುವ ದಿಸೆಯಲ್ಲಿ ನಾನು ನಿಂತಿದ್ದೇನೆ. ನಾನು ಇನ್ನೂ ಪ್ರಶ್ನೆಯನ್ನು ಕೇಳಿಯೇ ಇರಲಿಲ್ಲ, ಆದರೆ ಆ ಮಟ್ಟದಲ್ಲಿ ನಮ್ಮ ವಿರೋಧ ಪಕ್ಷದ ಎಲ್ಲಾ ಸದಸ್ಯರೂ ಎದ್ದು ನಿಂತು ನನಗೆ ತಡೆ ಒಡ್ಡಿದರು ಅದಕ್ಕೆ ನಾನು ಬೇಸರ ಪಡಲಿಲ್ಲ, ಆಮೇಲೆ ಮಾನ್ಯ ದೇಶಪಾಂಡೆಯವರು ಒಳಗೆ

ಬಂದರು ಬಂದ ಕೂಡಲೇ ಸಹಜವಾಗಿ ಸತ್ಯವನ್ನು ಹೇಳಿದ್ದೇನೆ. ಈ ಸಾರಾಯಿ ಅಂಗಡಿಯನ್ನು ಅಲ್ಲಿ ನಡೆಸತಕ್ಕವರು...

(ಗೊಂದಲ)

ಶ್ರೀ ಆರ್.ಎನ್. ನಾಯ್ಕ : ಒಂದು ಸಲ ಅಲ್ಲ ಎರಡು ಸಲ ನಾನು ಅಪಾಲಜಿಯನ್ನು ಕೇಳಲು ತಯಾರಿದ್ದೇನೆ. ಆದರೆ ದಯಮಾಡಿ ನಾನು ಏನು ಹೇಳಿದ್ದೇನೆ ಎಂಬುದನ್ನು ಕೇಳಬೇಕು ಅಲ್ಲಿ ಸಾರಾಯಿ ಅಂಗಡಿ ನಡೆಸುತ್ತಿರುವುದನ್ನು ಸರ್ಕಾರ ತೆಗೆಸಿ ಹಾಕುತ್ತದೆಯೇ ಎಂಬುದನ್ನು ಕೇಳಿದ್ದೇನೆ. ಅಷ್ಟರಲ್ಲಿ ಶ್ರೀ ದೇಶಪಾಂಡೆಯವರು ಹಾಗೂ ಎಲ್ಲರೂ ಪ್ರಾರಂಭಮಾಡಿದರು. ನಾನು ಏನು ಹೇಳಿದೆ....

(ಗೊಂದಲ)

ಉಪಾಧ್ಯಕ್ಷಣಿಯವರು : ಅವರ ಕಡೆಯಿಂದ ಏನು ಹೇಳುತ್ತಾರೆ ಹೇಳಲಿ.

ಶ್ರೀ ಆರ್.ಎನ್. ನಾಯ್ಕ : ನಾನು ಹೇಳಲು ಸ್ವತಂತ್ರ ಇದೆಯೋ ಇಲ್ಲವೋ? ನಾನು ಆಮೇಲೆ ಹೇಳಿದೆ? ಅಲ್ಲಿ ಯಾರು ಸಾರಾಯಿ ಅಂಗಡಿ ಕಟ್ಟಿ ನಡೆಸುತ್ತಿದ್ದಾರೆ? ಅಧ್ಯಕ್ಷರ ಆದೇಶದ ಮೇರೆಗೆ ತೆಗೆದುಹಾಕಲಾಗಿದೆ?

ಅವರು ಮಾಜಿ ಜಿಲ್ಲಾ ಪರಿಷತ್ ಸದಸ್ಯರೂ ಆಗಿದ್ದಾರೆ ಎಂದು. ಇದೆಷ್ಟು ಸತ್ಯ. ಇದನ್ನೇ ನಾನು ಹೇಳಿರುವುದು. In good faith ನಾನು ನಂಬಿಕೆಯಿಂದ ಹೇಳಿದೆ. ನನಗೆ ಸ್ವಲ್ಪ ಅವಕಾಶ ಕೊಡಿ.

(ಗೊಂದಲ)

ಉಪಾಧ್ಯಕ್ಷರು : ಅವರು ಮುಗಿಸಿಬಿಡಲಿ.

Sri. R.N. Naik : In good faith ನನಗೆ ದೊರೆತ ಮಾಹಿತಿ ಪ್ರಕಾರ, ನಾನು ಕಣ್ಣಾರೆ ನೋಡಿದ ಪ್ರಕಾರ ಮಾಜಿ ಜಿಲ್ಲಾ ಪರಿಷತ್ ಸದಸ್ಯರು ಮತ್ತು ಶ್ರೀ ದೇಶಪಾಂಡೆಯವರು ಸ್ನೇಹಿತರು. ನಾವು ಕೂಡ ಸ್ನೇಹಿತರೇ. ಇಲ್ಲಿ ಪಕ್ಷದ ಪ್ರಶ್ನೆ ಬೇಡ. ಈ ಕಾರಣಕ್ಕಾಗಿ ನಾನು ಸ್ನೇಹಿತರು ಎಂದೆ. ಈಗ ಸ್ನೇಹಿತರು ಅಲ್ಲ ಎಂದರೆ ನಾನು ಅಧ್ಯಕ್ಷರ ಆದೇಶದಮೇರೆಗೆ ತೆಗೆದುಹಾಕಲಾಗಿದೆ. ಇನ್ನೇನು ಮಾಡಲಿ ನಾನು? ದಯವಿಟ್ಟು ಅವರು ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಲಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : (ತಮ್ಮ ಜಾಗಕ್ಕೆ ಮರಳಿದ ನಂತರ) ಈಗ ಆರ್.ಎನ್. ನಾಯಕ್ ಅವರು....

ಉಪಾಧ್ಯಕ್ಷರು : ಈಗ ಇದನ್ನು ಕ್ಲೋಸ್ ಮಾಡೋಣ.

Sri.R.V. Deshpande : I have got to speak.

ಶ್ರೀ ಆರ್.ಎನ್. ನಾಯಕ್ : ನಾನು ಇನ್ನೊಂದು ಸಲ ಹೇಳುತ್ತೇನೆ. ಇಲ್ಲಿ ಸಭೆ ನಡೆಯುವ ಪ್ರತಿ ನಿಮಿಷಕ್ಕೆ ಸಾವಿರಗಟ್ಟಲೆ ಖರ್ಚಾಗುತ್ತದೆ. ಅದಕ್ಕಾಗಿ ನನಗೆ ದುಃಖ ಇದೆ. ನಾನು ಸಮಯ ಹಾಳು ಮಾಡುವುದಕ್ಕೆ ತಯಾರಿಲ್ಲ.

ನೀವು ಯಾವರೀತಿ ಕ್ಷಮೆ ಕೇಳಬೇಕೆಂದು ಬರೆದುಕೊಡಿ, ಹಾಗೆ ನಾನು ಓದಿಬಿಡುತ್ತೇನೆ.

ಉಪಾಧ್ಯಕ್ಷರು : ಅವರು ಹೇಳಿದ್ದು ಆಯಿತು. ದೇಶಪಾಂಡೆಯವರೇ....

ಶ್ರೀ ಹಾರ್ನಳ್ಳಿ ರಾಮಸ್ವಾಮಿ: ಮಾನ್ಯ ಸದಸ್ಯರು ಯಾವ ರೀತಿ ಬರೆದುಕೊಡುತ್ತೀರಿ, ಹಾಗೆಯೇ ಓದುತ್ತೇನೆ. ಎಂದು ಹೇಳಿದ್ದಾರೆ. Don't take it as prestige.

(ಸಭೆಯಲ್ಲಿ ಗೊಂದಲ. ಧರಣಿ ಕುಳಿತಿದ್ದ ಸದಸ್ಯರು ಮಾತನಾಡಲು ಪ್ರಾರಂಭಿಸಿದರು)

ಉಪಾಧ್ಯಕ್ಷರು : ಈಗ ನಾನು ಹೇಳಿಬಿಡುತ್ತೇನೆ. ತಾವೆಲ್ಲ ತಮ್ಮ ತಮ್ಮ ಸ್ಥಳಗಳಿಗೆ ಬನ್ನಿ. Please resume your seats.

ಶ್ರೀ ಆರ್.ವಿ. ದೇಶಪಾಂಡೆ : ಈಗ ಪ್ರಶ್ನೆ ಏನಿದೆ ಎಂದರೆ, ಶ್ರೀ ಆರ್.ಎನ್. ನಾಯಕ್ ಅವರು ನನ್ನ ಆತ್ಮೀಯ ಮಿತ್ರರು. ಅವರು ನಾನು ಕೂಡಿ ಒಮ್ಮೆ ಜನತಾಪಾರ್ಟಿಯಿಂದ ಆರಿಸಿಬಂದಿದ್ದೇವೆ. ಇಲ್ಲಿ ಕೂಡಿ ಕೆಲಸ ಮಾಡಿದ್ದೇವೆ. ಭಿನ್ನಾಭಿಪ್ರಾಯ ಬಂದು ಅವರು ಅಲ್ಲಿಗೆ ಹೋಗಿದ್ದಾರೆ. ನಾನು ಇಲ್ಲೇ ಉಳಿದಿದ್ದೇನೆ. ನನಗೆ ಬಹಳ ಜನ ಸ್ನೇಹಿತರು ಇರುತ್ತಾರೆ ಇವತ್ತು ಅವರು ಏನು ಹೇಳಿದ್ದಾರೆ? ಹಾಸ್ಪಿಟಲ್ ಜಾಗದ ಅತಿಕ್ರಮಣ ಸಮಸ್ಯೆ ಇದ್ದು, ಅಲ್ಲಿ ಯಾರೋ ಒಂದು ಸಾರಾಯಿ ಅಂಗಡಿಯನ್ನು ನಡೆಸುತ್ತಿದ್ದಾರೆಂದು ಹೇಳಿದ್ದಾರೆ. ಅದು ಅಲ್ಲಿ ಯಾರು ಸಾರಾಯಿ ಅಂಗಡಿಯನ್ನು ನಡೆಸುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರಲ್ಲಿ ಹೆಚ್ಚಿನ ಮಾಹಿತಿ ಇರಬಹುದು, ಅವರು ಆ ಕ್ಷೇತ್ರದಿಂದ ಬರುತ್ತಾರೆ. ಪ್ರಶ್ನೆ ಏನಿದೆ ಈಗ? ಇವತ್ತು ಈ ಅಂಗಡಿ ನಡೆಸಲಿಕ್ಕೆ ಅಥವಾ ಅವರಿಗೆ ಅಲ್ಲಿ ಸಂರಕ್ಷಣೆ ಕೊಡುವುದಕ್ಕೆ ಅಥವಾ ಅವರಿಗೆ ಲೈಸೆನ್ಸ್ ಕೊಡುವುದಕ್ಕೆ ಅಥವಾ ಜಾಗ ಅತಿಕ್ರಮಣ ಮಾಡುವುದಕ್ಕೆ ಸರ್ಕಾರ ಅವರದ್ದು ಇದೆ.

(ಗೊಂದಲ. ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಉಪಾಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಆರ್. ವಿ. ದೇಶಪಾಂಡೆ : ಸರ್ಕಾರ ಅವರದ್ದು ಇದೆ. ಅವರ ಹತ್ತಿರ ಎಲ್ಲಾ ಕಡತಗಳು ಇವೆ, ಅವರ ಕೈಯಲ್ಲಿ ಎಲ್ಲ ಮಾಹಿತಿಗಳೂ ಇವೆ. ಎಕ್ಸೈಸ್ ಕಮೀಷನರ್ ಅವರಿಗೆ ಆಗಲಿ, ಎಕ್ಸೈಸ್ ಡಿ.ಸಿ.ಯವರಿಗೆ ಆಗಲೀ, ಮಂತ್ರಿಗಳಿಗೆ ಆಗಲಿ ನಾನು ಈ ಒಂದು ಸರಾಯಿ ಅಂಗಡಿಗೆ ಜಾಗ ಕೊಡಿ, ಸಂರಕ್ಷಣೆ ಕೊಡಿ, ಸಹಾಯ ಮಾಡಿರಿ ಎಂದು ಹೇಳಿದ್ದರೆ, ಒಂದು ಟೆಲಿಫೋನ್ ಮುಖಾಂತರ ಹೇಳಿದ್ದರೂ ಸಹ ನಾನು ಇಲ್ಲಿ ವಿರೋಧಪಕ್ಷದ ನಾಯಕನಾಗಿ ಇರುವುದಕ್ಕೆ ನನಗೆ ಅಧಿಕಾರ ಇಲ್ಲ.

12.30 ಪಿ.ಎಂ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಟೆಲಿಫೋನ್ ಮೂಲಕ ಆದರೂ ನಾನುಹೇಳಿದಂತೆ ವಿರೋಧಪಕ್ಷದ ನಾಯಕನಾಗಿ ನಾನು ಇರುವುದಕ್ಕೆ ಅಧಿಕಾರ ಇಲ್ಲ...

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಎರಡನೆಯದಾಗಿ ಅಲ್ಲಿ ಏನು ಜಾಗ ಅತಿಕ್ರಮಣ ಆಗಿದೆ ಅದಕ್ಕೆ ನಾನೇನಾದರೂ ಕಾರಣನಾಗಿದ್ದರೆ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ...

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್ : ಮಾನ್ಯ ಅಧ್ಯಕ್ಷರೇ ಅವರು ಅಪಾಲಜಿ ಕೇಳಿದ್ದಾರೆ. ಮಾನ್ಯ ವಿರೋಧ ಪಕ್ಷಧ ನಾಯಕರು ಏನು ಹೇಳುತ್ತಿದ್ದಾರೆ ಆ ತರಹ ಅವರು ಹೇಳಲೇ ಇಲ್ಲ....

ಶ್ರೀ ಆರ್. ವಿ. ದೇಶಪಾಂಡೆ : ಅವರು ನನ್ನ ಹೆಸರು ಏತಕ್ಕೆ ಹೇಳಬೇಕಾಗಿತ್ತು... ತಾವು ಬೇಕಾದರೆ ಆ ಬಗ್ಗೆ ಎನ್‌ಕ್ವೈರಿ ಮಾಡಿಸಿ....

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಅವರು ಬೇಜವಾಬ್ದಾರಿಯಾಗಿ ಹೇಳಬಾರದು. ಅವರುಜಿಲ್ಲಾ ಪರಿಷತ್ತಿನ ಮಾಜಿ ಸದಸ್ಯರು ಅವರು ನನ್ನ ಸ್ನೇಹಿತರು ಹೇಗೆ ಆಗುತ್ತಾರೆ. ಈಗ ನಾರ್ತ್ ಕೆನರಾ ಜಿಲ್ಲೆಯಿಂದ 29 ಜನ ಸದಸ್ಯರಲ್ಲಿ 22 ಜನ ಆರಿಸಿ ಬಂದಿದ್ದಾರೆ. ಅವರೆಲ್ಲಾ ನನ್ನ ಸ್ನೇಹಿತರಾಗುವುದಕ್ಕೆ ಸಾಧ್ಯವೇ? ನನ್ನ ಸೀನಿಯಾರಿಟಿ ಏನು ಅಲ್ಲಿ ಯಾರಿದ್ದಾರೆ ಅವರ ಸೀನಿಯಾರಿಟಿ ಏನು? ವಿಚಾರ ಮಾಡಬೇಕಲ್ಲ ತಾವು? ಏನು ಅವರೆಲ್ಲಾ ಮಂಡಲ ಪಂಚಾಯಿತಿ ಸದಸ್ಯರು ಇದ್ದಾರೆ ಅವರೆಲ್ಲಾ ನನ್ನ ಸ್ನೇಹಿತರೇನು? ಅವರು ಬೇಜವಾಬ್ದಾರಿಯಿಂದ ಆಪಾದನೆ ಮಾಡುತ್ತಿದ್ದಾರೆ. ಅಲ್ಲಿ ಅಂಗಡಿ ಯಾರು ಇಟ್ಟಿದ್ದಾರೆ ಅವರು ನಮ್ಮ ಪಕ್ಷದವರು ಎಂದು ಬೇಕಾದರೆ ಹೇಳಲಿ. ಆದರೆ ಅವರು ನನ್ನ ಸ್ನೇಹಿತರು ಅಂತ ನಿಮಗೆ ಹೇಗೆ ಗೊತ್ತಾಯಿತು? ನೇರವಾದ ಆಪಾದನೆ ಮಾಡಿದ್ದಾರೆ. ಆದ್ದರಿಂದ ಬೇಷರತ್ತು ಅಪೋಲಜಿ ಕೇಳಬೇಕು. ಇದು ಸರಿಯಲ್ಲ.

(ಗೊಂದಲ)

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಆ ಕಡೆ ಮುಖ್ಯಮಂತ್ರಿಗಳ ಸ್ಥಾನದಲ್ಲಿ ಇದ್ದಂತೆ. ಆ ಸ್ಥಾನದಲ್ಲಿ ಅಂತಹ ಒಂದು ಜಾಗದಲ್ಲಿರುವವರು. ಅವರು ಹೇಳಿದ್ದು ತಪ್ಪಾಗುತ್ತದೆ. ಅವರು ಹೇಳಿದ್ದನ್ನು ವಾಪಸ್ಸು ತೆಗೆದುಕೊಂಡಿದ್ದೇನೆ ಅಂತ. ಎರಡೆರಡು ಸಾರಿ ಹೇಳಿದರು. ಅಪೋಲಜಿ ಕೇಳುತ್ತೇನೆ ಅಂತ. ಮತ್ತೂ ನೀವು ಹೇಗೆ ಬರೆದುಕೊಡುತ್ತೀರೋ ಹಾಗೆ ಓದುತ್ತೇನೆ ಅಂತ ಕೂಡ ಹೇಳಿದರು. ಅಷ್ಟು ಹೇಳಿದ ಮೇಲೂ ನಾವು ಅವರನ್ನು ಪರ್‌ಸಿಸ್ಟ್ ಮಾಡುವುದು ಸರಿಯಲ್ಲ. ತಾವು ತಮ್ಮ ದೊಡ್ಡತನವನ್ನು ತೋರಿಸಿ ಮೊದಲು ತಮ್ಮ ತಮ್ಮ ಸ್ಥಾನಗಳಿಗೆ ಬರಬೇಕು. ಸಣ್ಣದ್ದನ್ನೆಲ್ಲಾ ದೊಡ್ಡದು ಮಾಡಬಾರದು. ಮಾನ್ಯ ನಾಯಕರು ಇನ್ನೂ ಚಿಕ್ಕವರು. ತಾವು ವಯಸ್ಸಾಗಿರುವವರು ಸ್ವಲ್ಪ ತಾಳ್ಮೆಯಿಂದ ಇರಬೇಕು. ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ತಾವು ತಮ್ಮ ತಮ್ಮ ಜಾಗಗಳಿಗೆ ಬನ್ನಿ.

ಉಪಾಧ್ಯಕ್ಷರು : ಈಗ ಮಾನ್ಯ ನಾಯಕ್‌ರವರು ಏನು ಮಾತನಾಡಿದ್ದಾರೆ ಅದನ್ನು ನಾನು ಕೇಳಿದ್ದೇನೆ. ಈಗಮಾನ್ಯ ವಿರೋಧ ಪಕ್ಷದ ನಾಯಕರು ಏನು

ಮಾತನಾಡಿದ್ದಾರೆ ಅದನ್ನು ನಾನು ಕೇಳಿದ್ದೇನೆ. ನಾನು ರೆಕಾರ್ಡ್ ತರಿಸಿ ನೋಡಿ ಅಂತಾದ್ದು ಏನಾದರೂ ಡ್ಯಾಮ್ಯಾಜಿಂಗ್ ಆಗಿ ಹೇಳಿದ್ದರೆ ಮತ್ತು ತಮ್ಮ ವೈಯಕ್ತಿಕ ಮಟ್ಟಕ್ಕೆ ಏನಾದರೂ ಧಕ್ಕೆ ಆಗಿದ್ದರೆ ನಾನು ಅದನ್ನು ಎಕ್ಸ್‌ಪಂಜ್ ಮಾಡುತ್ತೇನೆ. ದಯವಿಟ್ಟು ತಾವು ತಮ್ಮ ತಮ್ಮ ಸ್ಥಾನಗಳಿಗೆ ಬನ್ನಿ...

(ಗೊಂದಲ)

ಶ್ರೀವಾಟಾಳ್ ನಾಗರಾಜ್ : ತಾವು ಸದನವನ್ನು 10 ನಿಮಿಷ ಮುಂದಕ್ಕೆ ಹಾಕಿ. ಮತ್ತೆ ಕರೆಯಿರಿ. ಮಾತನಾಡೋಣ. ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್ : ನನ್ನ ಪ್ರಾರ್ಥನೆ ಇಷ್ಟೇ, ಪ್ರಶ್ನೋತ್ತರ ಕಾಲದಲ್ಲಿ ಮತ್ತು ಡಿಬೇಟ್ ಆಗುವಂತಹ ಕಾಲದಲ್ಲಿ ಅನೇಕ ಸಂದರ್ಭಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಮಂತ್ರಿಗಳನ್ನು ಕುರಿತು ವಿರೋಧಪಕ್ಷದ ನಾಯಕರು ನಿಮ್ಮ ಸ್ನೇಹಿತರು ಎನ್ನತಕ್ಕಂಥ ಪದಗಳನ್ನು ಅನೇಕ ಭಾರಿ ತಾವು ಹೇಳಿದ್ದೀರಿ...

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್ : ಸ್ವಲ್ಪ ತಾಳಿ, ದೇಶಪಾಂಡೆಯವರು ಏನು ಹೇಳಿದರು ಅದನ್ನು ಮಾನ್ಯ ನಾಯಕ್‌ರವರು ಹೇಳಲೇ ಇಲ್ಲ. ಅಲ್ಲಿ ಕೊಟ್ಟಿರತಕ್ಕಂಥ ಸಾರಾಯಿ ಅಂಗಡಿ ಅಲ್ಲಿ ಮಾರಾಟ ಮಾಡತಕ್ಕಂಥ ಜನ ಮಾಜಿ ಜಿಲ್ಲಾ ಪರಿಷತ್ತಿನ ಸದಸ್ಯರು ಅವರು ನಿಮ್ಮ ಸ್ನೇಹಿತರು ಅಂತ ಹೇಳಿದರು. ಅವರು ನಿಮ್ಮ ಸ್ನೇಹಿತರು ಅಲ್ಲದಿದ್ದರೆ ಇಲ್ಲ ಎಂದು ಹೇಳಿ. ಅದರಲ್ಲಿ ತಪ್ಪೇನು ಇದೆ. ನಿಮ್ಮ ಸ್ನೇಹಿತರು ಅಂತ ನೀವು ನಮಗೆ ಅನೇಕ ಬಾರಿ ಹೇಳಿದ್ದೀರಿ. ಅದನ್ನು ನಾವು ವಿರೋಧ ಮಾಡಿದ ಮೇಲೆ ಮುಗಿಯಿತು. ಆ ತರಹದ ಆಪಾದನೆ ಅವರು ನಿಮ್ಮ ಮೇಲೆ ಮಾಡಲೇ ಇಲ್ಲ. ಆದ್ದರಿಂದ ಆ ಪ್ರಶ್ನೆ ಉದ್ಭವಿಸುವುದೇ ಇಲ್ಲ. ದಯಮಾಡಿ ತಾವು ಕಡತ ತರಿಸಿ ನೋಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ತಾವು ಸದನವನ್ನು 10 ನಿಮಿಷ ಮುಂದಕ್ಕೆ ಹಾಕಿ. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಗೊಂದಲ)

ಉಪಾಧ್ಯಕ್ಷರು : ಈಗ ಇನ್ನು 2 ಪ್ರಶ್ನೆಗಳು ಇವೆ. ತಡೆಹಿಡಿಯಲಾದ ಪ್ರಶ್ನೆಗಳು 4 ಇವೆ. ಆ ಪ್ರಶ್ನೆಗಳೆಲ್ಲಾ ಹೋಗುತ್ತವೆ. ದಯವಿಟ್ಟು ಬನ್ನಿ... ಕೋ ಅಪರೇಟ್ ಮಾಡಿ..

ಶ್ರೀ ವಾಟಾಳ್ ನಾಗರಾಜ್ : ಈ ಸಮಸ್ಯೆ ಬಗೆಹರಿಸಬೇಕಾದರೆ ಸದನವನ್ನು 10 ನಿಮಿಷ ಮುಂದಕ್ಕೆ ಹಾಕ ಕುಳಿತು ಮಾತಾಡೋಣ.

ಉಪಾಧ್ಯಕ್ಷಣಿಯವರು : ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀವಾಟಾಳ್ ನಾಗರಾಜ್ : ಸದನವನ್ನು ಮುಂದೂಡಿ.

ಶ್ರೀ ಆರ್.ಎನ್. ನಾಯಕ್ : ನನಗೆ ಅವಕಾಶ ಕೊಡಿ, ಇನ್ನೂ ಸರಿಯಾಗಿ ಹೇಳುತ್ತೇನೆ. ನಾನು ಹೇಳಿದ್ದೆ ಸರಿ ಎನ್ನುವಂಥ ಪ್ರವೃತ್ತಿ ನನ್ನದಲ್ಲ.

ಉಪಾಧ್ಯಕ್ಷಣಿಯವರು : ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸಭೆಯು 12.36 ನಿಮಿಷದಲ್ಲಿ 10 ನಿಮಿಷಗಳ ಕಾಲ ಮುಂದೂಡಲಾಯಿತು.)

(ಸಭೆಯು ಪುನಃ 12.58ಕ್ಕೆ ಸಮಾವೇಶಗೊಂಡಿತು)

(ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ ಅವರು ಅಧ್ಯಕ್ಷ ಪೀಠದಲ್ಲಿದ್ದರು)

ಉಪಾಧ್ಯಕ್ಷರು : ಮಾನ್ಯ ನಾಯಕ್‌ರವರೇ ತಾವು ಏನಾದರೂ ಹೇಳುವುದು ಇದೆಯೇ ?

ಶ್ರೀ ಆರ್. ಎನ್. ನಾಯಕ್ : ಸನ್ಮಾನ್ಯ ಅಧ್ಯಕ್ಷಣಿಯವರೆ, ಒಬ್ಬ ಕಾನೂನು ಬಾಹಿರ ವ್ಯಕ್ತಿ, ಅಲ್ಲಿ ಆಸ್ಪತ್ರೆಯಲ್ಲಿ ಎನ್‌ಕ್ರೋಚ್ ಮೆಂಟ್ ಮಾಡಿದಂತಹ ವ್ಯಕ್ತಿಯನ್ನು ನಾನು ಬಾಯಿ ತಪ್ಪಿ ವಿರೋಧ ಪಕ್ಷದ ನಾಯಕರ ಫ್ರೆಂಡ್ ಎಂದು ಹೇಳಿದ್ದೆ. ಇದರ ಬಗ್ಗೆ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ.

ಉಪಾಧ್ಯಕ್ಷರು : ತಾವು ತಮ್ಮ ಪ್ರಶ್ನೆಯನ್ನು ಹಾಕಿ. ಬಹಳ ಟೈಮ್‌ಆಗಿದೆ. ಉಪ ಪ್ರಶ್ನೆ ಕೇಳಿ.

ಶ್ರೀ ಆರ್.ಎನ್. ನಾಯಕ್ : ಭಟ್ಕಳ ಆಸ್ಪತ್ರೆಯಲ್ಲಿನ ಜಮೀನಿನಲ್ಲಿ ಸುಮಾರು 8 ಜನ ಖಾಸಗಿಯವರಿಗೆ ಹಾಗೂ ಇನ್ನು ಎರಡು ಜನ ರಾಜಕೀಯ ವ್ಯಕ್ತಿಗಳು ಅತಿಕ್ರಮಣ ಮಾಡಿದ್ದಕ್ಕೆ ಪ್ರಶ್ನೆ ಕೇಳಲಾಗಿ ಹೌದು ಎಂದು ಉತ್ತರವನ್ನು 'ಅ'ನಲ್ಲಿ ತಿಳಿಸಲಾಗಿದೆ. ಆದ್ದರಿಂದ ಕಾನೂನು ಬದ್ಧವಾಗಿ ಅಲ್ಲಿನ ಅವರ ಅತಿಕ್ರಮಣವನ್ನು ಕಿತ್ತು ಹಾಕುತ್ತಾರೆಯೇ ಎಂದು ಕೇಳುತ್ತೇನೆ. ಹಾಗೆ ಕಿತ್ತು ಹಾಕುವುದಾದರೆ ಎಷ್ಟು ದಿವಸದಲ್ಲಿ ಕಿತ್ತು ಹಾಕುತ್ತೀರೆಂದು ಮಾನ್ಯ ಸದಸ್ಯರು ತಿಳಿಸಬೇಕು.

ಶ್ರೀ ಎಂ. ರಾಜಶೇಖರ ಮೂರ್ತಿ : ಮಾನ್ಯ ಅಧ್ಯಕ್ಷಣಿಯವರೇ, 1960ರಲ್ಲಿ ಆಸ್ಪತ್ರೆಗೋಸ್ಕರವೆಂದು ಹೇಳಿ 13 ಎಕರೆ 9 ಗುಂಟೆ ಜಮೀನು ಕೊಟ್ಟಿದ್ದು. ಅದಕ್ಕೆ ಕಾಂಪೌಂಡ್ ಇಲ್ಲ. ಖಾಲಿ ಜಾಗ ಇತ್ತು ಎಂದು ಅನೇಕ ಜನ ಅಲ್ಲಿ ಅಕ್ಯುಪೈ ಮಾಡಿಕೊಂಡಿದ್ದಾರೆ. 38 ಗುಂಟೆ ಮಾತ್ರ ಆಕ್ಯುಪೈ ಮಾಡಿಕೊಂಡಿದ್ದಾರೆ. ಅದು ನನ್ನ ಗಮನಕ್ಕೆ ಬಂತು. ಆ ಬಗ್ಗೆ ನಾನು ಅಸಿಸ್ಟೆಂಟ್ ಕಮೀಷನರ್‌ರವರಿಗೆ ಈ ಅನ್‌ಅಥರೈಸ್ಡ್ ಅಕ್ಯುಪೇಷನ್ ಕಾಯಿದೆ ಪ್ರಕಾರ ಅದನ್ನು ಎಲ್ಲಾ ವೆಕೇಟ್ ಮಾಡಬೇಕು ಎಂದು ಆದೇಶ ಕೊಟ್ಟಿದ್ದೇನೆ. ಒಬ್ಬರು ಕಟ್ಟುತ್ತಿದ್ದರು, ತಡೆ ಕೊಟ್ಟಿದ್ದೇವೆ. ಇನ್ನು ಉಳಿದುದನ್ನು ವೆಕೇಟ್ ಮಾಡಿಸುವುದಕ್ಕೆ ಆದೇಶ ಕೊಟ್ಟಿದ್ದೇವೆ. ಆದಷ್ಟು ಬೇಗ ಕೆಲಸ ಮಾಡಿಕೊಡುತ್ತೇವೆ.

ಉಪಾಧ್ಯಕ್ಷರು : ಮಾಡಿಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷಣಿಯವರೆ, ಇದು ಸಾರ್ವಜನಿಕರ' ಜಾಗ. ಅದನ್ನು ಕಾನೂನು ರೀತಿ ಮಾಡಬೇಕಾದ ಅತೀ ಅವಶ್ಯಕತೆ ಇದೆ. ಆದರಿಂದ ಯಾವುದೇ ಪ್ರಬಾವಿ ವ್ಯಕ್ತಿ ಇರಲಿ, ಈ ಅನಧಿಕೃತ ಮಾಡಿರಲಿ,

ಯಾವುದೇ ಪಕ್ಷ ಇರಲಿ. ಆ ಪಕ್ಷ ಈ ಪಕ್ಷ ಎಂದು ಮಾಡುವುದು ಬೇಡ. ಆದಷ್ಟು ಬೇಗ ಎಂದು ಹೇಳುವ ಬದಲು ತಮ್ಮ ಸ್ಟ್ಯಾಚುಟರಿ ರೂಲ್ಸ್ ಪ್ರಕಾರ ಒಂದು ನಿರ್ದಿಷ್ಟ ಅವಧಿಯಲ್ಲಿ ರೂಲ್ಸ್ ಕೊಡಬೇಕಾಗಿದೆ. ಆ ಅವಧಿಯೊಳಗೆ ತಾವು ದಯಮಾಡಿ ಮಾಡಿರತಕ್ಕ ಒತ್ತುವರಿಯನ್ನು ಬಿಡಿಸುತ್ತೀರಾ ಎಂದು ತಿಳಿಸಿ.

ಶ್ರೀ ಎಂ. ರಾಜಶೇಖರ ಮೂರ್ತಿ : ಇದು ಬಹಳ ಮುಖ್ಯವಾದಂತಹ ವಿಚಾರ ಎಂದು ಗೊತ್ತಾಗಿದೆ. ಇವತ್ತು ನಡೆದ ಘಟನೆಯನ್ನು ನೋಡಿದರೆ ಬಹಳ ಮುಖ್ಯವಾದದ್ದು ಎಂದು ಗೊತ್ತಾಗಿದೆ. ಅದು ನಮ್ಮ ಮನಸ್ಸಿಗೆ ಗೊತ್ತಿದೆ ಆದಷ್ಟು ಜಾಗ್ರತೆ ನಾನು ಮಾಡುತ್ತೇನೆ.

ಶ್ರೀ ಆರ್.ಎನ್. ನಾಯಕ್ : ಆಸ್ಪತ್ರೆಗೆ ಇರುವಂತಹ ಸ್ಥಳದಲ್ಲಿ ಕಾಂಪೌಂಡ್ ಇದೆ ಕೆಲವು ಜಾಗದಲ್ಲಿ ಮಾತ್ರ ಕಾಂಪೌಂಟ್ ಇಲ್ಲ. ಅವರ ಮಾಹಿತಿ ಸ್ವಲ್ಪ ತಪ್ಪಾಗಿದೆ. ಆಸ್ಪತ್ರೆ ಇರುವಂತಹ ಸ್ಥಳದಲ್ಲಿ ಅತಿಕ್ರಮಣ ಮಾಡಿ ಲಿಕ್ಕರ್ ಷಾಪ್ ಅನ್ನು ಇಟ್ಟುಕೊಂಡಿದ್ದಾರೆ. ತಕ್ಷಣ ಆ ಲೈಸೆನ್ಸ್ ಅನ್ನು ರದ್ದು ಮಾಡಿ, ಆ ಅಂಗಡಿಯನ್ನು ನಾಳೆಯೊಳಗೆ ಕಿತ್ತೊಗೆಯುತ್ತೀರೋ ಹೇಗೆ ಎನ್ನುವುದನ್ನು ನನಗೆ ತಿಳಿಸಬೇಕು. ಹಾಗೂ ಈ ವಿಷಯವನ್ನು ನಾನು ಹತ್ತಾರು ವರ್ಷಗಳಿಂದ ಸರ್ಕಾರಕ್ಕೆ ಕೇಳಿದ್ದೆ. ಬೇರೆ ಬೇರೆ ಪಕ್ಷಗಳ ಸರ್ಕಾರಗಳು ಇದ್ದಾಗಲಿಂದಲೂ ಬರೆಯುತ್ತಿದ್ದೇನೆ. ಇಲ್ಲಿಯವರೆಗೂ ನಿಸ್ಸೀಮ ನಿರ್ಲಕ್ಷ್ಯ ತೋರಿಸಿದ್ದಾರೆ. ಆದ್ದರಿಂದ ನಿಸ್ಸೀಮ ನಿರ್ಲಕ್ಷಕ್ಕೆ ಕಾರಣವೇನು, ವಿರೋಧ ಪಕ್ಷದ ನಾಯಕರು ಆಗೇ ಜಿಲ್ಲಾ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿಯೂ ನಾನು ಅದನ್ನು ಬರೆದಿದ್ದೇನೆ. ಈಗಲೂ ಸಹ ನಾನು ಹೇಳುತ್ತಿದ್ದೇವೆ. ಈ ನಿಸ್ಸೀಮ ಸರ್ಕಾರ ನಿರ್ಲಕ್ಷ್ಯ ವಹಿಸಿದ್ದಕ್ಕೆ ಯಾರ್‍ಯಾರು ಕ್ಷಮೆಯನ್ನು ಕೇಳುವುರಿದ್ದರೆ ಕೇಳುತ್ತೀರೋ ಹೇಗೆ ಅನ್ನುವುದನ್ನು ದಯಮಾಡಿ ತಿಳಿಸಬೇಕು. ನಮ್ಮ ವಿರೋಧ ಪಕ್ಷದ ನಾಯಕರು ನಾನು ಹೇಳಿದ್ದನ್ನು ಕೇಳಬೇಕು.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ನಾಯಕರು ಏನೋ ಹೊಸ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ಆರ್. ಎನ್. ನಾಯಕ್ : ನಾನು 10 ವರ್ಷಗಳಿಂದ ಅನ್ಯಾಯವನ್ನು ನೋಡುತ್ತಿದ್ದೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮುಗಿದು ಹೋದ ಕಥೆಯನ್ನು ಮತ್ತೆ ಹೇಳುತ್ತಿದ್ದೀರಿ.

ಶ್ರೀ ಆರ್.ಎನ್. ನಾಯಕ್ : ಅನ್ಯಾಯವನ್ನು ಪ್ರತಿಭಟಿಸುತ್ತಾ ಬಂದಿದ್ದೇನೆ. 1983ನೇ ಇಸವಿಯಿಂದ ಇಲ್ಲಿಯವರೆಗೆ ಪ್ರತಿಭಟನೆಯನ್ನು ಮಾಡುತ್ತಾ ಬಂದಿದ್ದೇನೆ. ನಮ್ಮ ದೇಶಪಾಂಡೆಯವರು ಆಗ ಜಿಲ್ಲಾ ಮಂತ್ರಿಯವರಾಗಿದ್ದರು, ಅಂತಹ ಕಾಲದಲ್ಲಿಯೂ ಸಹ ಸರ್ಕಾರಕ್ಕೆ ನಾನು ಬರೆದಿದ್ದೇನೆ. ಅದರ ಕಡತವನ್ನು ತೆಗೆಸಿ ನೋಡಬಹುದು. ಅಂದಿನಿಂದ ಇದು ಮುಂದುವರಿದಿದೆ. ಈ ತಪ್ಪಿಗೆ ಯಾರು ಲಕ್ಷ್ಯ ಕೊಡದೇ ಇರುವಂತಹ ತಪ್ಪಿಗೆ ಕ್ಷಮೆ ಯಾರು ಕೇಳಬೇಕು ಎನ್ನುವುದನ್ನು ತಿಳಿದು ಯಾರಾದರೂ ಇಲ್ಲಿ ಕ್ಷಮೆ ಕೇಳುವವರಿದ್ದರೆ ಕೇಳಿಬಿಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ : ಸುಮಾರು 8 ಜನರು ಇಲ್ಲ ಅನಾಥರೈಸ್ಡ್ ಆಗಿ ಆಕ್ಯುಪೈ ಮಾಡಿಕೊಂಡಿದ್ದಾರೆ. ಅದರಲ್ಲಿ ಲಿಕ್ಕರ್ ಶಾಪ್‌ನವರು ಒಬ್ಬರಾಗಿದ್ದಾರೆ. ಯಾರ್‍ಯಾರು ಅನಾಥರೈಸ್ಡ್ ಆಕ್ಯುಪೇಷನ್ ಮಾಡಿಕೊಂಡಿದ್ದಾರೆ ಅವರದೆಲ್ಲವನ್ನು ಎಕ್ಟ್ ಮಾಡಿಸುತ್ತೇವೆ ಎಂದು ನಾನು ಆಗಲೇ ಉತ್ತರ ಕೊಟ್ಟಿದ್ದೇನೆ. ಅದರಲ್ಲಿ ಅವರೂ ಒಬ್ಬರು ಸೇರಿದ್ದಾರೆ.

ಉಪಾಧ್ಯಕ್ಷಣಿಯವರು : ಸಂಖ್ಯೆ 381 ಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ, ಈಗ ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ. ಪುನಃ ಅವರು ಬಂದಮೇಲೆ ನಿಮ್ಮನ್ನು ಕರೆಯುತ್ತೇನೆ.

ಕೃಷಿ ಗ್ರಾಮೀಣ ಪತ್ತು ವಿಮೋಚನಾ ಸೌಲಭ್ಯದ ಮೊತ್ತ.

981 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೃಷಿ ಮತ್ತು ಗ್ರಾಮೀಣ ಪತ್ತು ವಿಮೋಚನಾ ಯೋಜನೆಯ ಪ್ರಕಾರ ಸರ್ಕಾರವು ಸಹಕಾರ ಸಂಸ್ಥೆಗಳಿಗೆ ನೀಡಿದ ಸೌಲಭ್ಯದ ಮೊತ್ತವೆಷ್ಟು?*

ಆ) *ಸರ್ಕಾರವು ಮೊತ್ತವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಿದೆಯೇ?*

ಇ) *ಇಲ್ಲದಿದ್ದಲ್ಲಿ ಬಿಡುಗಡೆ ಮಾಡಲು ಬಾಕಿ ಇರುವ ಮೊತ್ತವೆಷ್ಟು? ಮತ್ತು ಬಿಡುಗಡೆಯಾಗಲು ಬಾಕಿ ಇರುವ ಮೊತ್ತದ ಮೇಲೆ ಬಡ್ಡಿಯನ್ನು ಯಾರು ಭರಿಸುತ್ತಾರೆ. ಮತ್ತು ಇದನ್ನು ಬಡ್ಡಿಯೊಂದಿಗೆ ಸಂಪೂರ್ಣವಾಗಿ ಎಂದು ಪಾವತಿಸಲಾಗುವುದು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಕೃಷಿ ಮತ್ತು ಗ್ರಾಮೀಣ ಪತ್ತು ವಿಮೋಚನಾ ಯೋಜನೆ ಪ್ರಕಾರ ನೀಡಲಾದ ಸೌಲಭ್ಯದ ಮೊತ್ತ ರೂ.134.05 ಕೋಟಿಗಳಾಗಿರುತ್ತದೆ.

ಆ) ಇಲ್ಲ.

ಇ) ಬಿಡುಗಡೆಯಾಗಲು ಬಾಕಿ ಇರುವ ಮೊತ್ತ ರೂ. 34.60ಕೋಟಿಗಳಾಗಿರುತ್ತದೆ. ಸದರಿ ಬಾಕಿ ಇರುವ ಮೊತ್ತವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ಎಂಬುದನ್ನು ಕೇಂದ್ರ ಸರ್ಕಾರ ನಬಾರ್ಡ್ ತಿಳಿಸಿರುವುದಿಲ್ಲ. ಸರ್ಕಾರವು ಪತ್ರ ಸಂಖ್ಯೆ ಸಿಎಂಡಬ್ಲ್ಯೂ 276 ಸಿಎಲ್‌ಎನ್ 91, ದಿನಾಂಕ: 1-10-1992ರಲ್ಲಿ ಬಾಕಿ ಇರುವ ಮೊತ್ತವನ್ನು ಜರೂರು ಬಿಡುಗಡೆ ಮಾಡಲು ಕೋರಿರುತ್ತದೆ. ಕೃಷಿ ಮತ್ತು ಗ್ರಾಮೀಣ ಮತ್ತು ವಿಮೋಚನಾ ಯೋಜನೆಯಲ್ಲಿ ಬಡ್ಡಿಯನ್ನು ಭರಿಸುವ ಬಗ್ಗೆ ಉಲ್ಲೇಖ ಇರುವುದಿಲ್ಲ.

ಶ್ರೀ ನಾರಾಯಣರಾವ್ ಮನಹಳ್ಳಿ : ಈ ಉತ್ತರದಲ್ಲಿ ಇನ್ನು 34 ಕೋಟಿ ರೂಪಾಯಿಗಳನ್ನು ನಾವು ಬ್ಯಾಂಕ್‌ಗಳಿಗೆ ಕೊಡಬೇಕೆಂದು ಹೇಳಿದ್ದಾರೆ. ಸುಮಾರು 3 ವರ್ಷವಾಯಿತು. ಕೇಂದ್ರ ಸರ್ಕಾರದಿಂದ ಈ ಹಣ ಬಂದಿದೆಯೋ ಇಲ್ಲವೋ ಇದರ ಬಗ್ಗೆ ನಮ್ಮಲ್ಲಿ ಮಾಹಿತಿ ಇಲ್ಲ. ಮೂರು ವರ್ಷಗಳಿಂದ ರಾಜ್ಯ ಸರ್ಕಾರದವರು ಬ್ಯಾಂಕ್‌ಗಳಿಗೆ ಹಣವನ್ನು ಬಿಡುಗಡೆ ಮಾಡಿಲ್ಲ. ಆ ಮೂರು

ವರ್ಷದ ಇಂಟರೆಸ್ಟ್ ಮತ್ತು ಹಣವನ್ನು ಸರ್ಕಾರದವರು ಯಾವಾಗ ಬಿಡುಗಡೆ ಮಾಡುತ್ತಾರೆ ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಕೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಸ್ಕೀಮ್ ಫಾರ್ಮುಲೇಟ್ ಆಗಿದ್ದುದು 13-3-90 ರಲ್ಲಿ ಆಮೇಲೆ ಕರ್ನಾಟಕ ಅಗ್ರಿಕಲ್ಚರಲ್ ಅಂಡ್ ರೂರಲ್ ಡೆಟ್ ರಿಲೀಫ್ ಸ್ಕೀಮ್ 1990ರಲ್ಲಿ 10 ಸಾವಿರ ಒಳಗೆ ಸಾಲದ ಲಿಮಿಟ್ ಅವರಿಗೆ ವೇವ್ ಮಾಡುತ್ತೇವೆ ಎನ್ನತಕ್ಕ ಯೋಜನೆ ಕೇಂದ್ರ ಸರ್ಕಾರವರು ಹಾಕಿಕೊಂಡಿದ್ದರು. ಅದರ ಪ್ರಕಾರ ಈಗಾಗಲೇ ನಮಗೆ 134ಕೋಟಿ ರೂಪಾಯಿಯಲ್ಲಿ 100 ಕೋಟಿ ಬಂದಿದೆ. ಇನ್ನು 34 ಕೋಟಿ 60 ಲಕ್ಷ ರೂಪಾಯಿ ಬರಬೇಕಾಗಿದೆ. ಇದರಲ್ಲಿ ಕರ್ನಾಟಕ ಸ್ಟೇಟ್ ಕೋ ಅಪರೇಟಿವ್ ಅಪೆಕ್ಸ್ ಬ್ಯಾಂಕ್‌ಗೆ 24 ಕೋಟಿ 47 ಲಕ್ಷ ಮತ್ತು ಲ್ಯಾಂಡ್ ಡೆವಲಪ್‌ಮೆಂಟ್‌ಗೆ ಸುಮಾರು 10 ಕೋಟಿ 13 ಲಕ್ಷ ಕೇಂದ್ರ ಸರ್ಕಾರಕ್ಕೆ ನಾವು ಬರೆದಿದ್ದೇವೆ. ಅದು ಬಂದಕೂಡಲೇ ಎಲ್ಲಾ ಬ್ಯಾಂಕಿಗೆ ಅದೇ ರೀತಿಯಲ್ಲಿ ಹಣವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ನಾರಾಯಣರಾವ್ ಮನಹಳ್ಳಿ : ನೀವು ಒಂದು ತಾರೀಖು ಹೇಳಬಹುದು ತಾರೀಖು ಹೇಳಿದರೆ ಸ್ವಲ್ಪ ಅನುಕೂಲವಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಕೇಂದ್ರ ಸರ್ಕಾರದವರು 34 ಕೋಟಿಯನ್ನು ಕೊಟ್ಟಮೇಲೆ ನಾವು ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಈ ಸರ್ಕಾರದವರು ಅರ್ಧ ಭಾಗ ಕೇಂದ್ರ ಸರ್ಕಾರದವರು ಅರ್ಧ ಭಾಗ ಅದರಲ್ಲಿ ಕೊಡಬೇಕು. ತಮ್ಮ ಸರ್ಕಾರದವರು ಅರ್ಧ ಭಾಗವನ್ನು ಕೊಡುವುದಕ್ಕಾದರೂ ತಯಾರಾಗಿದ್ದೀರಾ?

ಇಷ್ಟು ದಿವಸ ಕೊಡುವುದಿಲ್ಲವೆಂದರೆ, ಬಡ್ಡಿಗಳಿಂದ ಎಲ್ಲಸಂಘ ಸಂಸ್ಥೆಗಳು, ಬ್ಯಾಂಕುಗಳು ಮುಳುಗಿ ಹೋಗುತ್ತಿವೆ ಎಂದು ತಾವೇ ಪ್ರಶ್ನೆ ಹೇಳುವಾಗ ಮೊದಲು ಹೇಳಿದ್ದೀರಿ. ಆದುದರಿಂದ, ದಯವಿಟ್ಟು, ತಮ್ಮ ಭಾಗಕ್ಕೆ ಏನು ಶೇಕಡ 50 ರಷ್ಟು ಹಣ ಬರುತ್ತದೆ, ಅದನ್ನು ಕೊಡುವುದಕ್ಕೆ ತಾವು ತಯಾರಿದ್ದೀರಾ? ಇದಕ್ಕೆ ಬಡ್ಡಿ ಯಾರು ಕೊಡಬೇಕೆಂಬುದರ ಬಗ್ಗೆಯೂ ತಾವು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷಣಿಯವರೇ, ನಾನು ಮುಂಚೆ ಇದ್ದಂಥ ಯೋಜನೆಯನ್ನು ಏನು ಅಳವಡಿಸಿಕೊಂಡು ಬಂದಿದ್ದೇವೆಯೋ ಅದರ ಪ್ರಕಾರ ನಾವುಮಾಡಬೇಕಾಗುತ್ತದೆಯೇ ಹೊರತು ಬೇರೆ ಯೋಜನೆ ಇದರಲ್ಲಿ ಮಾಡುವುದಕ್ಕಾಗುವುದಿಲ್ಲ, ತಮಗೆ ಈಗಾಗಲೇ ಗೊತ್ತಿರುವ ಹಾಗೆ ರಾಜ್ಯ ಸರ್ಕಾರಕ್ಕೆ ಭಾರತ ಸರ್ಕಾರ ಶೇಕಡ 50 ರಷ್ಟು ಹಣವನ್ನು ಗ್ರಾಂಟ್ ರೂಪದಲ್ಲಿ ಮತ್ತು ಶೇಕಡ 50 ರಷ್ಟು ಹಣವನ್ನು ಸಾಲದ ರೂಪದಲ್ಲಿ ಕೊಟ್ಟಿದೆ. ಸಾಲದ ರೂಪದಲ್ಲಿ ಕೊಡತಕ್ಕಂಥ ಹಣವನ್ನು ಮೂರು ಕಂತುಗಳಲ್ಲಿ ವಾಪಸ್ಸು ಕೊಡಬೇಕೆಂದು ಷರತ್ತು ವಿಧಿಸಿದ್ದಾರೆ. ಅದನ್ನು ಕೊಡುವುದೇ ಸರ್ಕಾರಕ್ಕೆ ಒಂದು ದೊಡ್ಡ ಸಮಸ್ಯೆಯಾಗಿದೆ. ಉಳಿದ ಬಡ್ಡಿಯ ಹಣವನ್ನು ನಾವು ಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕಾಗುವುದಿಲ್ಲ, ಆದರೆ, ಬರತಕ್ಕಂಥ 34 ಕೋಟಿ ರೂಪಾಯಿಗಗಳು ಏನಿದೆ, ಅದನ್ನು ಮಾತ್ರ ಕೊಡಿಸುವ ಬಗ್ಗೆ ಪ್ರಯತ್ನ ಮಾಡಲಾಗುತ್ತದೆ.

ತಡೆ ಹಿಡಿಯಲಾದ ಪ್ರಶ್ನೋತ್ತರಗಳು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷಣಿಯವರೇ, ಸದರಿ ವಿಷಯದ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಂಡಿದ್ದಾರೆ. ಈ ವಿಷಯದ ಬಗ್ಗೆ ಹೇಳಿಕೆಯನ್ನು ಇವೊತ್ತು ಮಧ್ಯಾಹ್ನ ಅಥವಾ ನಾಳೆ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಡುವುದಕ್ಕಿಂತ ಮುಂಚಿತವಾಗಿ ನಾವು ಪ್ರಶ್ನೆ ಕೇಳುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷಣಿಯವರು : ಆಯಿತು. ಆಗ ಒಂದೆರಡು ನಿಮಿಷ ಮಾತನಾಡುವುದಕ್ಕೆ ತಮಗೆ ಅವಕಾಶ ಮಾಡಿಕೊಡುತ್ತೇನೆ.

ಉಪಾಧ್ಯಕ್ಷಣಿಯವರು : ಮಾನ್ಯ ಯು.ಕೆ. ಶಾಮಣ್ಣನವರೇ, ನಿಮ್ಮ ಪ್ರಶ್ನೆಯನ್ನು ವಿತ್ ಹೆಲ್ಡ್ ಮಾಡುತ್ತೇನೆ. ಏಕೆಂದರೆ, ಸದನದಲ್ಲಿ ಉತ್ತರ ಕೊಡುವುದಕ್ಕೆ ಮಾನ್ಯ ಮಂತ್ರಿಗಳು ಇಲ್ಲದಿರುವುದರಿಂದ ಇದನ್ನು ಮುಂದೆ ತೆಗೆದುಕೊಳ್ಳುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರ ಸಚಿವರು): ಮಾನ್ಯ ಉಪಾಧ್ಯಕ್ಷಣಿಯವರೇ, ದಿನಾಂಕ 7.1.93ರ ಲಿಖಿತ ಮೂಲಕ ಉತ್ತರಿಸುವ 9ನೇ ಪಟ್ಟಿಯಲ್ಲಿರುವ 71 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 49, 87, 849, 938, 998, 398, 621, 505, 506, 619, 633, 1036, 1043, 737, 1061, 1067 ಮತ್ತು 1070 ಪ್ರಶ್ನೆಗಳನ್ನು ಹೊರತುಪಡಿಸಿ, ಇನ್ನುಳಿದ 54 ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಮೈಸೂರು ಜಿಲ್ಲೆಯ ಚಾಮರಾಜನಗರ ಮತ್ತು ನಂಜನಗೂಡು ತಾಲ್ಲೂಕಿನಲ್ಲಿ ವೃದ್ಧಾಪ್ಯವೇತನ ಪಡೆದವರ ಸಂಖ್ಯೆ

95 - ಶ್ರೀ ಸಿದ್ಧಯ್ಯ ಕೆ. (ಸಂತೇಮಾರನ ಹಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯ ಚಾಮರಾಜನಗರ ಮತ್ತು ನಂಜನಗೂಡು ತಾಲ್ಲೂಕಿನಲ್ಲಿ ವೃದ್ಧಾಪ್ಯವೇತನ ಮಂಜೂರು ಮಾಡಲಾದ ವ್ಯಕ್ತಿಗಳ ಹೆಸರು ಮತ್ತು ವಿಳಾಸವನ್ನು ತಿಳಿಸಿ (ಪಟ್ಟಿ ಒದಗಿಸುವುದು).

ಆ) ಸರ್ಕಾರಿ ಸೇವೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕುಟುಂಬದಲ್ಲಿರುವವರಿಗೆ ಹಾಗೂ ಅನುಕೂಲಸ್ಥರಿಗೆ ವೃದ್ಧಾಪ್ಯ ವೇತವನ್ನು ನೀಡುತ್ತಿದ್ದು, ಆದರೆ ಬಡವರು ಹಾಗೂ ಅರ್ಹರಾದವರಿಗೆ ವೃದ್ಧಾಪ್ಯ ವೇತನವನ್ನು ನಿಲ್ಲಿಸಿರುವ ವಿಚಾರವು ಸಂಬಂಧಪಟ್ಟ ತಹಶೀಲ್ದಾರರಿಗೆ ಹಾಗೂ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಡವರು ಹಾಗೂ ಅರ್ಹರಿಗೆ ನ್ಯಾಯ ಒದಗಿಸಲು ಈ ವಿಷಯವನ್ನು ಸಂಬಂಧಪಟ್ಟ ಮಂಡಲ ಪಂಚಾಯ್ತಿಗಳಿಂದ ತನಿಖೆ ನಡೆಸಿ ಅದನ್ನು ತಾಲ್ಲೂಕು ಪಂಚಾಯ್ತಿ ಸಮಿತಿ ಮುಂದೆ ಪರಿಷ್ಕರಣೆಗಾಗಿ ಇಡಲು

ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರರಿಗೆ ಸೂಚನೆಗಳನ್ನು ನೀಡಲು ಸರ್ಕಾರವು ಉದ್ದೇಶಿಸಿದೆಯೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) 1992ನೇ ನವೆಂಬರ್ ತಿಂಗಳಿಗೆ ಅಂತ್ಯವಾದಂತೆ ಚಾಮರಾಜನಗರ ತಾಲ್ಲೂಕಿನಲ್ಲಿ 12769 ಪ್ರಕರಣಗಳಲ್ಲಿ ಮತ್ತು ನಂಜನಗೂಡು ತಾಲ್ಲೂಕಿನಲ್ಲಿ 7155 ಫಲಾನುಭವಿಗಳಿಗೆ ವೃದ್ಧಾಪ್ಯ ವೇತನವನ್ನು ಮಂಜೂರು ಮಾಡಲಾಗಿದೆ. ಫಲಾನುಭವಿಗಳ ಪಟ್ಟಿಯನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.

ಆ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಅನರ್ಹ ವ್ಯಕ್ತಿಗಳಿಗೆ ವೃದ್ಧಾಪ್ಯ ವೇತನವನ್ನು ಮಂಜೂರು ಮಾಡಿರುವ ಪ್ರಕರಣಗಳನ್ನು ಸಂಬಂಧ ಪಟ್ಟ ತಹಶೀಲ್ದಾರರು ಪತ್ತೆ ಮಾಡಿ ಅಂತಹವುಗಳನ್ನುರದ್ದುಪಡಿಸುವರು. ಈ ಸಂಬಂಧವಾಗಿ ಬಂದು ಅರ್ಜಿಗಳನ್ನು ಪರಿಶೀಲಿಸಲು ತಹಶೀಲ್ದಾರರಿಗೆ ನಿರ್ದೇಶನ ನೀಡಲಾಗುವುದು.

ಇ) ಅರ್ಹ ವ್ಯಕ್ತಿಗಳಿಗೆ ವೃದ್ಧಾಪ್ಯ ವೇತನವನ್ನು ವಿನಾಕಾರಣ ರದ್ದುಪಡಿಸಿರುವ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಸಹಾಯಕ ಆಯುಕ್ತರಿಂದ ತನಿಖೆಯನ್ನು ನಡೆಸಿ ಅರ್ಹರೆಂದು ಕಂಡುಬಂದಲ್ಲಿ ಅವರಿಗೆ ವೃದ್ಧಾಪ್ಯ ವೇತನವನ್ನು ಪುನಃ ನೀಡಲು ಕ್ರಮ ಕೈಗೊಳ್ಳಲಾಗುವುದು. ಈ ಸಂಬಂಧವಾಗಿ ಮಂಡಲ ಪಂಚಾಯ್ತಿಗಳಿಂದ ತನಿಖೆ ನಡೆಸಿ ಅದರ ಮಂಡಲ ಪಂಚಾಯ್ತಿಗಳಿಂದ ತನಿಖೆ ನಡೆಸಿ ಅದರ ವರದಿಯನ್ನು ತಾಲ್ಲೂಕು ಪಂಚಾಯ್ತಿ ಸಮಿತಿ ಮುಂದೆ ಇಡಲು ಸಾಕಷ್ಟು ಕಾಲಾವಕಾಶ ಬೇಕಾಗಿರುವುದರಿಂದ, ಈ ಪದ್ಧತಿಯನ್ನು ಅನುಸರಿಸುವುದು ಸೂಕ್ತವಾಗಿರಲಾರದು.

ಶಿಕಾರಿಪುರ ತಾಲ್ಲೂಕಿನಲ್ಲಿ ಭಾರಿ ಮಳೆಯಿಂದಾಗಿ ಒಡೆದ ಕೆರೆಗಳ ಹಾಗೂ ಅದರ ಪರಿಣಾಮ.

233 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶಿಕಾರಿಪುರ ತಾಲ್ಲೂಕಿನಲ್ಲಿ ನವೆಂಬರ್ 17,18 ರಂದು ಭಾರಿ ಮಳೆಯಿಂದ ಒಡೆದು ಹೋದ ಕೆರೆಗಳೆಷ್ಟು?*

ಆ) *ಹಾಗಿದ್ದಲ್ಲಿ, ಕೊಚ್ಚಿಕೊಂಡು ಹೋಗಿರುವ ಪ್ರಮುಖ ರಸ್ತೆಗಳ ಸೇತುವೆಗಳ ಸಂಖ್ಯೆ ಎಷ್ಟು?*

ಇ) *ಈ ಬಗ್ಗೆ ಸರ್ಕಾರದ ಈವರೆವಿಗೂ ತೆಗೆದುಕೊಂಡಿರುವ ಕ್ರಮಗಳೇನು ಹಾಗೂ ಪರಿಹಾರ ಕಾರ್ಯಗಳಾವುವು?*

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ) 105 ಸಣ್ಣ ನೀರಾವರಿ ಕೆರೆಗಳು ಒಡೆದು ಹೋಗಿರುತ್ತದೆ.

ಆ) ರಸ್ತೆಗಳು 65 (ಸಂಖ್ಯೆ) ಅತ್ಯಧಿಕ

ಸೇತುವೆಗಳು 9 (ಸಂಖ್ಯೆ) ಮಳೆಯಿಂದ ಹಾನಿಗೊಂಡಿದೆ.

ಅಡಿಗಾಲುವೆ.

ಇ) ಜಿಲ್ಲಾಧಿಕಾರಿಯವರು 1992ನೇ ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಉಂಟಾದ ಹಾನಿಯ ದುರಸ್ತಿ ಸಲುವಾಗಿ ಕೆಳಕಾಣಿಸಿದ ಇಲಾಖೆಗಳಿಗೆ ಹಣವನ್ನು ಈ ತಾಲ್ಲೂಕಿಗೆ ಬಿಡುಗಡೆ ಮಾಡಲಾಗಿದೆ.

	(ರೂ. ಲಕ್ಷಗಳಲ್ಲಿ)
1) ಜಿಲ್ಲಾ ಪರಿಷತ್ತು	- 2.00
2) ಲೋಕೋಪಯೋಗಿ ಇಲಾಖೆ	- 2.05
3) ಸಣ್ಣ ನೀರಾವರಿ ಇಲಾಖೆ	- 7.00
ಒಟ್ಟು	11.05 ಲಕ್ಷ

ತುಮಕೂರು ಜಿಲ್ಲೆಯಲ್ಲಿ ಅಕ್ರಮ ಜಮೀನನ್ನು ಸಕ್ರಮಗೊಳಿಸುವ ಬಗ್ಗೆ.

618 - ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಅಕ್ರಮ ಸಾಗುವಳಿ ಮಾಡುತ್ತಿರುವವರಸಂಖ್ಯೆ ಎಷ್ಟು?

ಆ) ಹಾಗಿದ್ದಲ್ಲಿ, ಸದರಿ ಜಮೀನನ್ನು ಈ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಸಕ್ರಮಗೊಳಿಸಿದೆಯೇ?

ಇ) ಹಾಗಿದ್ದಲ್ಲಿ, ಎಷ್ಟ ಜನರಿಗೆ ಹಕ್ಕುಪತ್ರ ವಿತರಿಸಲಾಗಿದೆ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) 90,206

ಆ) ಹೌದು. ದಿನಾಂಕ 30 -11-1992ರವರೆಗೆ 2,616 ಅರ್ಜಿಗಳನ್ನು ಸಕ್ರಮಗೊಳಿಸಲಾಗಿದೆ.

ಇ) 195

ಸರ್ಕಾರಿ ನೌಕರಿ ಆಯ್ಕೆಯಲ್ಲಿ ಗ್ರಾಮಾಂತರ ಮಕ್ಕಳಿಗೆ ಹೆಚ್ಚು ಅಂಕಗಳು.

224(ಬಿ)-ಶ್ರೀ ಬಿ. ಶಿವರಾಮು (ಗಂಡಸಿ): ಮಾನ್ಯಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರಿ ನೌಕರಿ ಆಯ್ಕೆಯಲ್ಲಿ ಗ್ರಾಮಾಂತರ ಮಕ್ಕಳಿಗೆ ಪ್ರತಿ ಶತ 15 ಅಂಕಗಳ ಅಥವಾ 15 ಅಂಕಗಳನ್ನು ಸೇರಿಸಲಾಗುವುದೇ?

ಆ) ಅವುಗಳಲ್ಲಿ ಸರ್ವೇಯರ್ ಹುದ್ದೆಯಲ್ಲಿ ಕಂದಾಯ ಇಲಾಖೆಯಲ್ಲಿ ಯಾವ ರೀತಿ ಸೇರಿಸಲಾಗಿದೆ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ರಾಜ್ಯ ಸರ್ಕಾರಿ ನೌಕರಿ ಆಯ್ಕೆಯಲ್ಲಿ ಗ್ರಾಮಾಂತರ ಅಭ್ಯರ್ಥಿಗಳಿಗೆ ಒಟ್ಟು 15 ಅಂಕಗಳನ್ನು ಮಾತ್ರಸೇರಿಸಲಾಗುವುದು.

ಆ) ನಿಗಧಿಪಡಿಸಿರುವ ವಿದ್ಯಾರ್ಹತೆಯಲ್ಲಿ ಅಭ್ಯರ್ಥಿಗಳು ಶೇಕಡಾವಾರು ಪಡೆದಿರುವ ಅಂಕಗಳ ಶೇಕಡಾ 80ಅಂಕಗಳನ್ನು ಮತ್ತು ಸಂದರ್ಶನದಲ್ಲಿ ಪಡೆದಿರುವ ಗರಿಷ್ಠ 20 ಅಂಕಗಳವರೆಗೆ ಹಾಗೂ ಗ್ರಾಮಾಂತರ ಅಭ್ಯರ್ಥಿಯಾದಲ್ಲಿ ಅರ್ಹವಿರುವ ಮಾನ್ಯತೆಯ 15 ಅಂಕಗಳನ್ನು ಸೇರಿಸಲಾಗಿದೆ.

ಪ್ರಾಥಮಿಕ ಕೃ. ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ರೈತರ ಸಾಲ ಮನ್ನಾ ಮಾಡುವ ವಿಚಾರ.

235 - ಶ್ರೀ ಬಿ. ಶಿವರಾಮು (ಗಂಡಸಿ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನೀರು ಬರದ ಮತ್ತು ನೀರು ಬಂದು ಬತ್ತಿಹೋದ ಬಾವಿಗಳ ಸಾಲ ಮನ್ನಾ ಮಾಡಲು ರೈತರಿಂದ ಕರ್ನಾಟಕ ಭೂ ಅಭಿವೃದ್ಧಿ ಬ್ಯಾಂಕ್ ನಿ, ಬೆಂಗಳೂರುರವರಿಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಅವುಗಳ ಪೈಕಿ ಮನ್ನಾ ಮಾಡಲ್ಪಟ್ಟಿರುವ ಹಾಗೂ ಮನ್ನಾ ಮಾಡಲು ಇರುವ ಬಾವಿಗಳ ಅರ್ಜಿಗಳ ಸಂಖ್ಯೆ ಎಷ್ಟು?

(1989-90, 90-91,91-92 ವಿವರ ಒದಗಿಸುವುದು)

ಇ) 1991Ë92 ಮತ್ತು 1992-93ರಲ್ಲಿ ಅದಕ್ಕಾಗಿ ಆಯವ್ಯಯದಲ್ಲಿ ಒದಗಿಸಿರುವ ಹಣವೆಷ್ಟು?

ಶ್ರೀಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಬಾವಿಗಳ ಸಾಲ ಮನ್ನಾ ಮಾಡಲು ರೈತರಿಂದ ಕರ್ನಾಟಕ ಭೂ ಅಭಿವೃದ್ಧಿ ಬ್ಯಾಂಕ್ ನಿ, ಬೆಂಗಳೂರು ರವರಿಗೆ ದಿನಾಂಕ: 31-3-92ರ ವರೆಗೆ ಒಟ್ಟು 28,571 ಅರ್ಜಿಗಳು ಬಂದಿರುತ್ತದೆ

ಆ) ಅವುಗಳ ಪೈಕಿ ಮನ್ನಾ ಮಾಡಿರುವ ಪ್ರಕರಣಗಳು 23,747 ಇರುತ್ತವೆ. ಮನ್ನಾ ಮಾಡಬೇಕಾಗಿರುವ ಪ್ರಕರಣಗಳು 4824 ಇರುತ್ತವೆ.

ವರ್ಷವಾರು ವಿವರ ಈ ಕೆಳಕಂಡಂತೆ ಇರುತ್ತದೆ.

1)	1989-90	1095
2)	1990-91	1081
3)	1991-92	2648
	ಒಟ್ಟು	**4824**

ಇ) ಈ ಬಗ್ಗೆ ಆಯವ್ಯಯದಲ್ಲಿ ಈ ಕೆಳಗಿನಂತೆ ಹಣ ಒದಗಿಸಿದೆ.

1991-92	ರಾಜ್ಯ ಸರ್ಕಾರದ	ರೂ. 100.00 ಲಕ್ಷ
	ಕೇಂದ್ರ ಸರ್ಕಾರದ	ರೂ. 100.00 ಲಕ್ಷ
	ಒಟ್ಟು	**ರೂ. 200.00 ಲಕ್ಷ**
1990-93	ರಾಜ್ಯ ಸರ್ಕಾರದ	ರೂ. 62.50 ಲಕ್ಷ
	ಕೇಂದ್ರ ಸರ್ಕಾರದ	ರೂ. 62.50 ಲಕ್ಷ
	ಒಟ್ಟು	**ರೂ. 125.00 ಲಕ್ಷ**

ಮುಲ್ಕಿ ಸಬ್-ರಿಜಿಸ್ಟ್ರಾರ್ ಕಛೇರಿಯ ಸ್ಥಳಾಂತರ.

275-ಶ್ರೀ ಕೆ.ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿಯ ಸಬ್-ರಿಜಿಸ್ಟ್ರಾರ್ ಕಛೇರಿಯನ್ನು ಸ್ಥಳಾಂತರಿಸಲು ಕಾರಣವೇನು?

ಆ) ಈಗಿನ ಕಛೇರಿಗೆ ಕೊಡಲಾಗುತ್ತಿರುವ ಬಾಡಿಗೆ ಹಣವೆಷ್ಟು?

ಇ) ಈ ಕಟ್ಟಡದ ದುರಸ್ಥಿಗೆ ತಗುಲುತ್ತಿರುವ ಹಣವೆಷ್ಟು?

ಈ) ಇಲ್ಲಿ ಬೇರೆ ಕಟ್ಟಡ ಕಟ್ಟಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಉ) ಹಾಗಿದ್ದಲ್ಲಿ, ಈ ಯೋಜನೆಗಾಗಿ ತಗಲುವ ಹಣವೆಷ್ಟು?

ಊ)ಈ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಕಟ್ಟಡವು ಹಳೆಯದಾಗಿದ್ದು, ಬೀಳುವ ಸ್ಥಿತಿಯಲ್ಲಿದ್ದು ಉಪಯೋಗಿಸಲು ಯೋಗ್ಯವಿಲ್ಲದಿರುವ ಕಾರಣ.

ಆ) ಮಾಹೆಯಾನ ರೂ. 2,089-00 .

ಇ) ದುರಸ್ಥಿ ಮಾಡಲು ಅಸಾಧ್ಯ.

ಈ) ಹೌದು.

ಉ) ಲೋಕೋಪಯೋಗಿ ಇಲಾಖೆಯಿಂದ ನಕ್ಷೆ ಮತ್ತು ಅಂದಾಜು ಪಟ್ಟಿಗಳನ್ನು ಕರೆಯಲಾಗಿದೆ.

ಊ) ನಕ್ಷೆ ಮತ್ತು ಅಂದಾಜು ಪಟ್ಟಿಗಳನ್ನು ಅನುಮೋದಿಸಿದ ನಂತರ.

ಕಾರಂಜಿ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಸೇರಿದ ಜಮೀನನ್ನು ಬಿ.ಎಂ.ಎಸ್. ಮಹಿಳಾ ಕಾಲೇಜಿಗೆ ಗುತ್ತಿಗೆ.

992- ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ?

ಅ) ಶ್ರೀ ಕಾರಂಜಿ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಸೇರಿದ ಜಮೀನನ್ನು ಬಿ.ಎಂ.ಎಸ್. ಮಹಿಳಾ ಕಾಲೇಜಿಗೆ ಗುತ್ತಿಗೆಗೆ ನೀಡಲಾಗಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸಚಿವ ಸಂಪುಟದ ತೀರ್ಮಾನವನ್ನು ಕೈಗೊಳ್ಳಲಾಗಿತ್ತೆ?

ಇ) ಸರ್ಕಾರವು ಬಿ.ಎಂ.ಎಸ್. ಮಹಿಳಾ ಕಾಲೇಜಿನ ಜಮೀನನ್ನು ವಿನಿಮಯ ಆಧಾರದೇ ಮೇರೆಗೆ ತೆಗೆದುಕೊಂಡ ನಂತರ ಸದರಿ ಸಂಸ್ಥೆಗೆ ವಿನಿಮಯದಿಂದ ಬಂದ ಜಮೀನನ್ನು ಗುತ್ತಿಗೆಗೆ ನೀಡಲಾಗಿದೆ ಎಂಬ ವಿಷಯವು ನಿಜವೇ?

ಈ) ಗುತ್ತಿಗೆ ಅವಧಿ?

ಉ) ಜಮೀನನ್ನು ಗುತ್ತಿಗೆಗೆ ನೀಡಲಾಗಿರುವ ಉದ್ದೇಶ

ಊ)ಗುತ್ತಿಗೆ ನೀಡಲಾಗಿರುವ ಜಮೀನಿನಲ್ಲಿ ಕೆಲವು ಅನಧಿಕೃತ ಕಟ್ಟಡಗಳ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಋ)ಸರ್ಕಾರವು ಈಗ ನೀಡಲಾಗಿರುವ ಗುತ್ತಿಗೆಯನ್ನು ರದ್ದುಗೊಳಿಸಿ ಸದರಿ ಜಮೀನನ್ನು ದೇವಾಲಯದ ಉಪಯೋಗಕ್ಕೆ ಮೀಸಲಿರಿಸುವ ದಿಸೆಯಲ್ಲಿ ಕ್ರಮವನ್ನು ಕೈಗೊಳ್ಳುವುದೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಹೌದು.

ಆ) ಇಲ್ಲ.

ಇ) ಹೌದು.

ಈ) 5 ವರ್ಷಗಳು

ಉ) ಬಿ.ಎಂ.ಎಸ್. ಟ್ರಸ್ಟ್‌ರವರು ವಿನಿಮಯ ಮಾಡಲಾಗಿರುವ ಜಮೀನಿನ ಆವರಣದಲ್ಲಿ ಕಾಲೇಜನ್ನು ನಡೆಸುತ್ತಿದ್ದು ದೇವಾಲಯದ ಜಮೀನು ಖಾಲಿ ಇದ್ದು ಸದರಿ ನಿವೇಶನದಲ್ಲಿ ಕಾಲೇಜಿನ ಕಟ್ಟಡ ಪೂರ್ಣ ಆಗುವವರೆಗೂ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ಸದರಿ ಜಮೀನನ್ನು ಗುತ್ತಿಗೆಗೆ ನೀಡಲಾಗಿದೆ.

ಊ) ಇಲ್ಲ.

ಋ) ಪ್ರಶ್ನೆ ಉದ್ಭವಿಸುವುದಿಲ್ಲ.

ಹಂಪಿ ಶ್ರೀ ವಿರೂಪಾಕ್ಷ ದೇವಸ್ಥಾನದಲ್ಲಿ ನಡೆದಿರುವ ಅವ್ಯವಹಾರ

993 - ಶ್ರೀ ಸೋಮಪ್ಪ ಸುವರ್ಣ (ಮುಡಬಿದರೆ): ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ವಿಷಯಗಳನ್ನು ತಿಳಿಸುವರೆ?

ಅ) ಹಂಪಿಯ ಶ್ರೀ ವಿರೂಪಾಕ್ಷಸ್ವಾಮಿ ದೇವಸ್ಥಾನವು ಮುಜರಾಯಿ ಇಲಾಖೆಗೆ ಸೇರಿರುವುದೆ?

ಆ) ಆ ದೇವಸ್ಥಾನದ ವಿಗ್ರಹಗಳ ಪುನರ್ ಪ್ರತಿಷ್ಠಾಪನೆ ನಡೆದಿರುವುದು ನಿಜವೇ?

ಇ) ಹಾಗಿದ್ದಲ್ಲಿ ಸರ್ಕಾರದ ಅನುಮತಿ ಪಡೆಯಲಾಗಿತ್ತೆ?

ಈ) ದೇವರ ವಿಗ್ರಹಗಳನ್ನು ಪುನರ್ ಪ್ರತಿಷ್ಠಾಪನೆ ಮಾಡುವ ಸಂದರ್ಭದಲ್ಲಿ ವಿಗ್ರಹಗಳ ಕೆಳಗೆ ಇದ್ದ ನಿಧಿ ಕಣ್ಮರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿರುತ್ತದೆಯೇ?

ಉ) ಈ ಬಗ್ಗೆ ಸರ್ಕಾರವು ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ ಸಿ.ಒ.ಡಿ. ತನಿಖೆಯನ್ನು ಆರಂಭಿಸಲಾಗಿದೆಯೇ? ಹಾಗಿದ್ದ ಪಕ್ಷದಲ್ಲಿ ತನಿಖೆಯು ಯಾವ ಹಂತದಲ್ಲಿದೆ?

ಊ) ತನಿಖೆಯನ್ನು ಕೈಗೊಳ್ಳದಿದ್ದ ಪಕ್ಷದಲ್ಲಿ ಅದಕ್ಕೆ ಕಾರಣವೇನು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಹೌದು.

ಆ) ಹೌದು.

ಇ) ಇಲ್ಲ.

ಈ) ನಿಧಿ ಕಣ್ಮರೆಯಾದ ಬಗ್ಗೆ ತಕರಾರು ಅರ್ಜಿ ಹಾಗೂ ಪತ್ರಿಕಾ ವರದಿ ಬಂದಿರುತ್ತದೆ.

ಉ) ಈಗ ತಾನೇ ಸಿ.ಒ.ಡಿ. ತನಿಖೆಗೆ ಒಪ್ಪಿಸಲಾಗಿದೆ.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

ಅತಿವೃಷ್ಟಿಯಿಂದ ಹಾನಿಯಾದ ಬೆಳೆಗೆ ಪರಿಹಾರ ಧನ

355-ಶ್ರೀ ಬಿ.ಹೆಚ್. ಬನ್ನೀಕೋಡ್ (ಹಿರೇಕೆರೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅತಿವೃಷ್ಟಿಯಿಂದ ಹಾನಿಗೊಳಗಾದ ರೈತರ ಬೆಳೆಗೆ ಸರ್ಕಾರವು ಪ್ರತಿ ಹೆಕ್ಟೇರಿಗೆ ನಿಗಧಿ ಮಾಡಿರುವ ಸಹಾಯ ಧನದ ಮೊತ್ತವೆಷ್ಟು ?

ಆ) ಹಾಗಿದ್ದಲ್ಲಿ, ಈಗಿನ ರಾಸಾಯನಿಕ ಗೊಬ್ಬರದ ಅತೀವ ಬೆಲೆ ಏರಿಕೆ ಮತ್ತು ಮಿತಿಮೀರಿದ ವ್ಯವಸಾಯದ ಖರ್ಚನ್ನು ಸರ್ಕಾರವು ಗಮನಿಸಿದೆಯೇ ?

ಇ) ಹಾಗಿದ್ದಲ್ಲಿ, ಸರ್ಕಾರವು ಅತಿವೃಷ್ಟಿಯಿಂದ ಹಾನಗೊಳಗಾದ ರೈತರ ಬೆಳೆಗೆ ಸೂಕ್ತ ಸಹಾಯ ಒದಗಿಸಿ ಪರಿಹಾರ ಧನ ಹೆಚ್ಚಿಸಲು ಕ್ರಮ ಕೈಗೊಳ್ಳುವುದೇ ?

ಈ) ಈ ಬಗ್ಗೆ ಸರ್ಕಾರದ ಕ್ರಮಗಳೇನು ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಹಾನಿಗೊಳಗಾದ ಪ್ರತಿ ಹೆಕ್ಟೇರ್ ಬೆಳೆಗೆ 500.00 ರೂಪಾಯಿಗಳ ಬೆಲೆಯ ವ್ಯವಸಾಯದ ಸಾಮಗ್ರಿಗಳನ್ನು ರೈತರಿಗೆ ನೀಡಲಾಗುತ್ತಿದೆ.

ಆ) ಗಮನಿಸಿದೆ.

ಇ) ಈಗಾಗಲೇ ಸರ್ಕಾರವು ಹಾನಿಗೊಳಗಾದ ಪ್ರತಿ ಹೆಕ್ಟೇರ್ ಬೆಳೆಗೆ ವ್ಯವಸಾಯ ಸಾಮಗ್ರಿಗಳ ರೂಪದಲ್ಲಿ ನೀಡುವ ಪರಿಹಾರವನ್ನು ರೂ.300 ದಿಂದ ರೂ. 500 ಕ್ಕೆ ದಿನಾಂಕ 4.12.92ರಿಂದ ಏರಿಸಲಾಗಿದೆ.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರತಿ ಹಳ್ಳಿಗಳಲ್ಲೂ ಸ್ಮಶಾನಕ್ಕೆ ಜಾಗ ನಿಗಧಿ.

387- ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರತಿ ಹಳ್ಳಿಗಳಲ್ಲಿ ಸ್ಮಶಾನಕ್ಕೆ ಜಾಗ ನಿಗಧಿ ಮಾಡಲು ಸರ್ಕಾರವು ಕ್ರಮ ಕೈಗೊಂಡಿದೆಯೇ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಸರ್ಕಾರವು ಈ ಹಿಂದೆ ಎಲ್ಲಾ ಕೋಮಿನ ಜನಾಂಗದವರಿಗೂ ಸ್ಮಶಾನಕ್ಕಾಗಿ ಸಾಕಷ್ಟು ಜಮೀನನ್ನು ದೊರಕಿಸಿ ಕೊಡಲು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಸೂಚನೆ ನೀಡಿರುತ್ತದೆ. ಇತ್ತೀಚೆಗೆ ಅಂದರೆ ಆಗಸ್ಟ್ 1992ರಲ್ಲಿ, ಸರ್ಕಾರಿ ಜಮೀನಿನಲ್ಲಿ ಸ್ಮಶಾನದ ಸ್ಥಳಗಳಿಗೆ ಜಮೀನನ್ನು ಒದಗಿಸಲು ಸರ್ಕಾರವು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿರುತ್ತದೆ. ಒಂದು ವೇಳೆ ಎಲ್ಲಾ ಕೋಮಿನ ಜನಾಂಗದವರಿಗೂ ಸ್ಮಶಾನಕ್ಕಾಗಿ ಸರ್ಕಾರಿ ಜಮೀನು ಯಾವುದೇ ಗ್ರಾಮದಲ್ಲಿ ಲಭ್ಯವಿಲ್ಲದಿದ್ದರೆ ಅಂತಹ ಪ್ರಸಂಗಗಳಲ್ಲಿ ಖಾಸಗಿ ಜಮೀನನ್ನು ಸದರಿ ಉದ್ದೇಶಕ್ಕೆ ಖರೀದಿಸಲು ಸೂಚಿಸಿರುತ್ತದೆ. ಖಾಸಗಿ ಜಮೀನು ಖರೀದಿಸಲು ಸರ್ಕಾರವು ಒಂದು ಕೋಟಿ ರೂಪಾಯಿ ಹಣವನ್ನು ಮೀಸಲಿಟ್ಟಿದೆ.

ವಿಭಾಗಾಧಿಕಾರಿಗಳ ಹುದ್ದೆಯ ರದ್ದತಿ.

398 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಮಿತವ್ಯಯದ ಅಂಗವಾಗಿ ವಿಭಾಗಾಧಿಕಾರಿಗಳ ಹುದ್ದೆಯನ್ನು ರದ್ದುಪಡಿಸಿರುವುದು ನಿಜವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಇಲ್ಲ.

ಪಟ್ ಭೂಮಿಯಲ್ಲಿ ಗ್ರಾನೈಟ್ ತೆಗೆಯುವ ನಿಷೇಧಕ್ಕೆ ಕಾನೂನು.

399 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಪಟ್ಟಾ ಭೂಮಿಯಲ್ಲಿ ಗ್ರಾನೈಟ್ ತೆಗೆಯುವುದನ್ನು ನಿಷೇಧಿಸುವ ಕಾನೂನನ್ನು ಸರ್ಕಾರವು ತರಬಾರದೇಕೆ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ) ಪಟ್ಟಾ ಭೂಮಿಯಲ್ಲಿ ಗ್ರಾನೈಟ್ ಮತ್ತಿತರ ಬೆಲೆಬಾಳುವ ಗಣಿ ಸಂಪತ್ತು ತೆಗೆಯುವುದನ್ನು ನಿಷೇಧಿಸುವ ಸಲುವಾಗಿ ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 70ಕ್ಕೆ ಸೂಕ್ತ ತಿದ್ದುಪಡಿಯನ್ನು ತರಲು ಸರ್ಕಾರ ಈಗಾಗಲೇ ಕ್ರಮ ತೆಗೆದುಕೊಂಡಿರುತ್ತದೆ. ತಿದ್ದುಪಡಿ ಬಿಲ್‌ನ್ನು ಸಧ್ಯದಲ್ಲಿಯೇ ಶಾಸಕಾಂಗದ ಮುಂದೆ ಮಂಡಿಸಲು ಉದ್ದೇಶಿಸಲಾಗಿದೆ.

ಭೂ ನ್ಯಾಯ ಮಂಡಲಿಗಳಲ್ಲಿ ಇತ್ಯರ್ಥವಾಗಬೇಕಾಗಿರುವ ಮೊಕದ್ದಮೆಗಳು.

400 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ರಾಜ್ಯದ ವಿವಿಧ ಭೂ ನ್ಯಾಯ ಮಂಡಳಿಗಳಲ್ಲಿ ಇನ್ನೂ ಇತ್ಯರ್ಥವಾಗ ಬೇಕಾಗಿರುವ ಮೊಕದ್ದಮೆಗಳ ಸಂಖ್ಯೆ ಎಷ್ಟು?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

34607 ಮೊಕದ್ದಮೆಗಳು.

ರಸಗೊಬ್ಬರವನ್ನು ಕಡಿಮೆ ದರದಲ್ಲಿ ಹಂಚಲು ಸರ್ಕಾರದ ನಿರ್ಧಾರ.

401 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ರಸಗೊಬ್ಬರಗಳನ್ನು ಕಡಿಮೆ ದರದಲ್ಲಿ ರೈತರಿಗೆ ಹಂಚಲು ಸರ್ಕಾರವು ಸಬ್ಸಿಡಿ ನೀಡಲು ತೀರ್ಮಾನಿಸಿದೆಯೇ?

ಶ್ರೀ ಎನ್. ಚಿಕ್ಕೆಗೌಡ (ಕೃಷಿ ಸಚಿವರು):

ಅ) ಹೌದು.

ರಂಜಕ, ಪೊಟ್ಯಾಷ್ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರಗಳನ್ನು ಅನಿಯಂತ್ರಣಗೊಳಿಸಿದ ಮೇಲೆ ಉದ್ಭವಿಸಿರುವ ರಸಗೊಬ್ಬರಗಳ ಬೆಲೆ ಏರಿಕೆಯ ಹೊರೆಯನ್ನು ಕಡಿಮೆ ಮಾಡಲು ಕೇಂದ್ರ ಸರ್ಕಾರ ನೀಡಿರುವ 17.53 ಕೋಟಿ ರೂಪಾಯಿಗಳನ್ನು ಬಳಸಿಕೊಂಡು 2,39,900 ಟನ್ ರಸಗೊಬ್ಬರಗಳನ್ನು ಸಬ್ಸಿಡಿ ದರದಲ್ಲಿ ರೈತರಿಗೆ ಹಂಚುವ ಯೋಜನೆಯನ್ನು ಈ ಹಿಂಗಾರಿನಲ್ಲಿ ಜಾರಿಗೊಳಿಸಲಾಗಿದೆ.

ಇದಲ್ಲದೆ ಕೇಂದ್ರ ಸರ್ಕಾರವು ರೂಪಿಸಿರುವ ವಿಶೇಷ ಯೊಜನೆಯಡಿಯಲ್ಲಿ 1993ನೇ ಸಾಲಿನಲ್ಲಿ (ಜನವರಿಯಿಂದ-ಡಿಸೆಂಬರ್‌ವರೆವಿಗೂ) ರಂಜಕ, ಪೊಟಾಸ್ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರಗಳ 36.66 ಲಕ್ಷ ಚೀಲಗಳನ್ನು, ಪ್ರತಿ ಚೀಲಕ್ಕೆ

75 ರೂಪಾಯಿಗಳ ಸಬ್ಸಿಡಿ ನೀಡಿ ಕಡಿಮೆ ದರದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹಂಚಲು 27.50 ಕೋಟಿ ರೂಪಾಯಿಗಳನ್ನು ಒದಗಿಸಿ ಯೋಜನೆಯನ್ನು ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿರುವ ಸಹಕಾರಿ ನೂಲಿನ ಗಿರಣಿಗಳ ಸಂಖ್ಯೆ.

394 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವಿರೆ?

ಅ) ರಾಜ್ಯದಲ್ಲಿರುವ ಸಹಕಾರಿ ನೂಲಿನ ಗಿರಣಿಗಳ ಸಂಖ್ಯೆ ಎಷ್ಟು?

ಆ) ಈ ಪೈಕಿ ಲಾಭದಲ್ಲಿ ನಡೆಯುತ್ತಿರುವ ಗಿರಣಿಗಳು ಮತ್ತು ನಷ್ಟದಲ್ಲಿ ನಡೆಯುತ್ತಿರುವ ಗಿರಣಿಗಳೆಷ್ಟು? (ಈ ಎಲ್ಲಾ ಗಿರಣಿಗಳ ಹೆಸರುಗಳನ್ನು ನೀಡುವುದು) ;

ಇ) ನಷ್ಟದಲ್ಲಿರುವ ಘಟಕಗಳನ್ನು ಲಾಭದಾಯಕವಾಗಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳಾವುವು ?

ಈ) ಮುಚ್ಚಲಾಗಿದ್ದ ನೂಲಿನ ಗಿರಣಿಗಭ ಸಂಖ್ಯೆ ಎಷ್ಟು ?

ಉ) ಸರ್ಕಾರ ಈ ಘಟಕಗಳನ್ನು ಪುನರುಜ್ಜೀವನಗೊಳಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ 18 ಸಹಕಾರಿ ನೂಲಿನ ಗಿರಣಿಗಳು ನೋಂದಾಯಿತವಾಗಿದ್ದು ಅವುಗಳ ವಿವರ ಈ ಕೆಳಗಿನಂತಿವೆ :

1) ಕಾರ್ಯನಿರ್ವಹಿಸುತ್ತಿರುವ ಗಿರಣಿಗಳು	11
2) ಸ್ಥಾಪನೆ ಹಂತದಲ್ಲಿರುವ ಗಿರಣಿಗಳು	1
3) ಉಳಿದ ಗಿರಣಿಗಳು (ಸ್ಥಾಪನೆಯಾಗಬೇಕಾದುದು)	6
ಒಟ್ಟು	18

ಆ) ಲಾಭದಲ್ಲಿ ನಡೆಯುತ್ತಿರುವ ಗಿರಣಿಗಳು :

1) ಬನಹಟ್ಟಿ ಸಹಕಾರಿ ನೂಲಿನ ಗಿರಣಿ, ಬನಹಟ್ಟಿ, ಬಿಜಾಪುರ ಜಿಲ್ಲೆ.
2) ಗದಗ ಸಹಕಾರ ಜವಳಿ ನೂಲಿನ ಗಿರಣಿ, ಹುಲಿಕೋಟೆ, ಧಾರವಾಡ ಜಿಲ್ಲೆ.

ನಷ್ಟದಲ್ಲಿರುವ ಗಿರಣಿಗಳು

1) ರೈತರ ಸಹಕಾರಿ ನೂಲಿನ ಗಿರಣಿ, ಹುಲಿಕೋಟೆ, ಧಾರವಾಡ ಜಿಲ್ಲೆ.
2) ಬೆಳಗಾಮ್ ಸಹಕಾರಿ ನೂಲಿನ ಗಿರಣಿ, ಪಂತ್ ಬಾಳೆಕುಂದ್ರಿ, ಬೆಳಗಾಂ.
3) ಮಲಪ್ರಬಾ ಸಹಕಾರಿ ನೂಲಿನ ಗಿರಣಿ, ಸೌಂದತ್ತಿ, ಬೆಳಗಾಂ ಜಿಲ್ಲೆ.
4) ತುಂಗಭದ್ರ ರೈತರ ಸಹಕಾರಿ ನೂಲಿನ ಗಿರಣಿ, ರಾಣೆಬನ್ನೂರು.
5) ಸೋಮೇಶ್ವರ ರೈತರ ಸಹಕಾರಿ ನೂಲಿನ ಗಿರಣಿ, ಲಕ್ಮೇಶ್ವರ.
6) ಬಿಜಾಪುರ ಸಹಕಾರಿ ನೂಲಿನ ಗಿರಣಿ, ಬಿಜಾಪುರ.
7) ಬಾಗಲಕೋಟೆ ಸಹಕಾರಿ ನೂಲಿನ ಗಿರಣಿ, ಬಾಗಲಕೋಟೆ.
8) ರಾಯಚೂರು ಸಹಕಾರಿ ನೂಲಿನ ಗಿರಣಿ, ರಾಯಚೂರು.
9) ವೆಂಕಟೇಶ್ ಸಹಕಾರಿ ನೂಲಿನ ಗಿರಣಿ, ಅಣ್ಣಿಗೇರಿ, ಧಾರವಾಡ ಜಿಲ್ಲೆ.

ಇ) ಕೈಮಗ್ಗ ಮತ್ತು ಜವಳಿ ನಿರ್ದೇಶನಾಲಯದ ಕಾಲ ಕಾಲಕ್ಕೆ ಈ ನೂಲಿನ ಗಿರಣಿಗಳ ಪ್ರಗತಿಯನ್ನು ಪರಿಶೀಲನೆ ಮಾಡಿ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಲು ಅಗತ್ಯ ಸಲಹೆ ಹಾಗೂ ಸೂಕ್ತ ನಿರ್ದೇಶನ ನೀಡುತ್ತದೆ. ಇದು ಅಲ್ಲದೆ ಕರ್ನಾಟಕ ರಾಜ್ಯ ಸಹಕಾರಿ ನೂಲಿನ ಗಿರಣಿಗಳ ಮಹಾ ಮಂಡಲವು ಸಹಾ ಅಗತ್ಯ ತಾಂತ್ರಿಕ ಮಾರ್ಗದರ್ಶನ ನೀಡುತ್ತದೆ.

ಈ) ಮೂರು.

ಉ) ಮುಚ್ಚಲಾಗಿದ್ದ ಮೂರು ಗಿರಣಿಗಳಾದ ಬಾಗಲಕೋಟೆ, ಬಿಜಾಪುರ ಮತ್ತು ರಾಯಚೂರು ಸಹಕಾರಿ ನೂಲಿನ ಗಿರಣಿಗಳನ್ನು ಗುತ್ತಿಗೆ ಆಧಾರದ ಮೇಲೆ ವಹಿಸಿಕೊಂಡು ನಡೆಸುವ ಸಲುವಾಗಿ ಅನುಕ್ರಮವಾಗಿ ಗದಗ ಸಹಕಾರಿ ನೂಲಿನ ಗಿರಣಿ, ಬನಹಟ್ಟಿ ಸಹಕಾರಿ ನೂಲಿನ ಗಿರಣಿ ಹಾಗೂ ಕರ್ನಾಟಕ ರಾಜ್ಯ ಸಹಕಾರಿ ಮಾರುಕಟ್ಟೆ ಮಹಾ ಮಂಡಳಿ ಇವುಗಳಿಗೆ ವಹಿಸಿಕೊಡಲಾಗಿದೆ. ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ, ನವದೆಹಲಿ ಹಾಗೂ ರಾಜ್ಯ ಸರ್ಕಾರಗಳು ಪ್ರತಿ ಗಿರಣಿಗೆ ಅನುಕ್ರಮವಾಗಿ ರೂ. 75.00 ಲಕ್ಷ ಮತ್ತು ರೂ.25.00 ಲಕ್ಷ ಆರ್ಥಿಕ ನೆರವು ಒದಗಿಸಿವೆ. ಇದೂ ಅಲ್ಲದೆ ಗುತ್ತಿಗೆಗೆ ಪಡೆದ ಗಿರಣಿ ಮಹಾ ಮಂಡಲಗಳು ತಲಾ ರೂ. 10.00 ಲಕ್ಷ ಆರ್ಥಿಕ ನೆರವು ನೀಡಿರುತ್ತವೆ.

ಕೃಷಿ ವಿಶ್ವವಿದ್ಯಾನಿಲಯ ಧಾರವಾಡಕ್ಕೆ ಮಂಜೂರಾದ ಹಣದ ಬಗ್ಗೆ

395 - ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಕೃಷಿ ವಿಶ್ವವಿದ್ಯಾನಿಲಯ ಧಾರವಾಡಕ್ಕೆ 1990-91 ಮತ್ತು 1991-92ನೇ ಸಾಲಿನಲ್ಲಿ ನಿಗದಿಪಡಿಸಲಾದ ಒಟ್ಟು ಅನುದಾನವೆಷ್ಟು?

ಆ) ಮೇಲಿನ ಅವಧಿಯಲ್ಲಿ ಸದರಿ ಕೃಷಿ ವಿಶ್ವ ವಿದ್ಯಾನಿಲಯವು ಕೇಂದ್ರದಿಂದ ಪಡೆದ ಅನುದಾನವೆಷ್ಟು?

ಇ) ಕೇಂದ್ರದ ಸಹಾಯಾನುದಾನದಿಂದ ಸದರಿ ಕೃಷಿ ವಿಶ್ವವಿದ್ಯಾನಿಲಯವು ನಡೆಸುತ್ತಿರುವ ಕಾರ್ಯಕ್ರಮಗಳು : ವ್ಯಾಸಂಗಗಳು ಯಾವುವು?

ಈ) ಧಾರವಾಡ ಕೃಷಿ ವಿಶ್ವವಿದ್ಯಾನಿಲಯವು ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಆರ್ಥಿಕ ಬಿಕ್ಕಟ್ಟು ನಿವಾರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು)

ಅ) 1990-91 1991-92

(ಲಕ್ಷಗಳಲ್ಲಿ)

ರೂ. 631.35 ರೂ.869.25

ಆ) ರೂ. 218.54 ರೂ.116.08

ಇ) ಲಗತ್ತಿಸಿರುವ ಪಟ್ಟಿಯಲ್ಲಿರುವ ಪ್ರಕಾರ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

SCHEMES

RESEARCH SCHEMES SPONSORED BY OTHER AGENCIES :

1. AICRP on wind Power for Farm Operation.
2. AICRP on Use of Susbania Rostrate Nitrogen Substitution in Rice Cultivation., Dharwad.
3. AICRP on Cess Fund on Farm Research in Annual Oilseed Crops Soyabean, Bailhongal.
4. AICRP on Cess Fund on Farm Research in Annual Oilseed Crops, Dharwad.
5. AICRP on Cess Fund on Farm Research in Annual Oilseed Crops, Safflower, Annigeri.
6. AICRP on Cess Fund on Farm Research in Annual Oilseed Crops, Raichur.
7. AICRP on Bioecology of natural enemies of Groundnut leaf, minor and their utillization in the integrated Management of the pest, Dharwad.
8. AICRP on Investigation of the nature inheritance of Characters conferring Multiple pest tolerance in cotton (G. Hirsutum L).
9. AICRP on Research and Development Effortsoon Hybrids in selected Crops-Sorghaum, Bijapur.
10. AICRP on Research and Development Effortsoon Hybrids in selected Crops-Sorghaum, DWD.
11. AICRP on Research land Development in Hybrids in selected Crops-Maize , Arabhavi.
12. AICRP on Research and Development Efforts in Hybrids in selected Crops-Dharwad.
13. AICRP on Research and Development Efforts in Hybrids in selected Crops-Sunflower, Dharwad.
14. AICRP on Research and Development Efforts on Hybrids in selected Crops-Caster, Raichur.
15. Management of Parasitic Weeds, AC Dharwad.
16. Studies on Colonal Multiplication of Sappota.
17. Biecology and Management of Plan Feeding Millepedes in Karnataka.
18. Biecology of Natural Enemies of Mythimma separata walkar with particular reference to NPV and their utilization in the integrated management of the post on cereals.
19. First Line oilseed demonstration programme (Rabi/Kharif)
20. First Line Demonstration of Major Pulses crops in India.
21. On Farm Demonstration in oil Annual oilseeds crops.

22. Project on Demonstration and popularisation of improved Implements and Machinery through KVKs.

23. Comparision of Selection and mating Systems in breeding foliar disease resistant produt\ctive populations in Groundnut (Arachis Hypogaea L.)

24. Adhoc Scheme on strengthening of Wheat Germplasm Evaluation Documentation and maintenance.

25. Effects of the Hydrophilic Polymer (Jayashakti) on Fire Wood, Fruit, and Flower plantations in Sandy Soils, ARS, Hagari.

26. Live Bunding (Financed by World Neighours)

27. USDA Project on Rabi Sorhum Germplasm enhancement and drought tolerance. ARS,., Bijapur (PL-480)

28. On PL-480 Project Research on Mechanisation of Dryland Agriculture, Raichur.

29. On PL-480 Project Research on Mechanisation of Dryland Agriculture, Raichures.

30. On Western Ghat Region Entitled Intigrated Control of Eupatorium Odoratum L Weed in Western Ghat, Dharwad.

31. Use of Induced Mutations for improving combining ability in Sorghum, Dharwad.

32. Insectcidal of some of the Plant Extracts Against Castor, Semilooper **achaea Janata** L.Dharwad.

33. Genetic Resources and Exploitation of some sommercial Tree Species.

34. Evoluation of Tree Plantation for control of Salinity and Water Table

ICAR SEHEMES

35. AICRP on Oil Seeds. Raichur (Groundnut, Castor & Niger)

36. AICRP on Oil Seeds. Dharwad.

37. AICRP on Cotton Improvement Project, Dharwad.

38. AICRP on Cotton Improvement Project, Arabhavi.

39. AICRP on Cotton Improvement Project, Siruguppa.

40. AICRP on Tobacoo, Nippani.

41. AICRP on Maize Improvement Project, Arabhavi.

42. AICRP on Wheat improvement Project , Dharwad.

43. AICRP on Rice Improvement Project, Sirguppa.

44. AICRP RiceËBlack Cotton Soil, Mugad.

45. AICRP on Sorghum Improvement Project, Dharwad.

46. AICRP on Sorghum Improvement Project, Bijapur.

47. AICRP on Pearl Millet Improvement Project, Bijapur.
48. AICRP on Soyabean, Dharwad.
49. AICRP on Intensification on the improvement of Pulses, Gulbarga.
50. AICRP on Species and Cashewnut Improvement Project on Pepper and Condiments, Sirasi.
51. AICRP on Water Management, Belvatagi.
52. AICRP on Water Management, Zonal Co-ordinating Unit.
53. AICRP on Cropping Research at Siraguppa.
54. AICRP on Agronomic Research Experiments on Cultivation Fields, Bellary (Hagari).
55. AICRP on Dryland Agriculture, Bijapur.
56. AICRP on Oilseeds Safflower, Annigeri.
57. AICRP on Management of Salt affected soils and Use of saline Water in Agriculture, Gangavati.
58. AICRP for investigation on the parasites and predaters of Jower earhead Midge and their Utilisation in the control of Midge, Dharwad.
59. AICRP on Advence Centre for Research on Black Cotton Soil of Karnataka.
60. AICRP on Bio gas, Dharwad.
61. AICRP on Child Development, Dharwad.
62. AICRP on Home Science, Project on Home & Farm Management, Dharwad.
63. AICRP on Agro-Forestry, A.R.S., Prabhunagar, Dharwad.
64. AICRP on Phase III Programme under CidaËBijapur.
65. AICRP on Palms, Gangavathi.
66. AICRP on Adaptive Research on sugarcane, Sankeshwar.
67. AICRP on Housing & Management of Buffaloes, Dharwad.
68. AICRP on Increased Utilisation of Animal energy in enhanced system of Efficiency, Agricultural Engg. College, Raichur.
69. AICRP on National Demonstration on Major Food Crops; Bheemarayangudi
70. AICRP on Krishi Vignana Kendra, Hanumanamatti.
71. AICRP on Krishi Vignana Kendra, Bidar.
72. AICRP on Groundnut and Soyabeen Seed Production Centre, Dharwad
73. AICRP on Sunflower seed Production, Raichur.
74. AICRP on Breeder Seed Production NSP II Dharwad.
75. CADA Upper Krishna Project Establishment of Agricultural Complex, Bheemarayanagudi.
76. CADA Upper Krishna Project at Kawadimatti.

77. CADA Upper Krishna Project on Reclamation of water logged Area at Islamapur.

ಧಾರವಾಡ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವ ಕಾರ್ಯಕ್ರಮಗಳು.

393 - ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಲಭ್ಯವಿರುವ ಕಾರ್ಯಕ್ರಮಗಳಾವುವು?

ಆ) ಧಾರವಾಡ, ಬೆಳಗಾಂ ಮತ್ತು ಇತರೆ ಉತ್ತರ ಭಾಗದಲ್ಲಿ ವಾಸಿಸುವ ವಿದ್ಯಾರ್ಥಿಗಳಿಗೆ ಪ್ರವೇಶದಲ್ಲಿ ಆದ್ಯತೆ ನೀಡಲಾಗುವುದೇ?

ಇ) ಸದರಿ ವಿಶ್ವವಿದ್ಯಾನಿಲಯದಲ್ಲಿ ಪ್ರತಿಯೊಂದು ಶಿಕ್ಷಣಕ್ಕೆ ನೀಡಲಾಗುವ ಪ್ರವೇಶ ಸಂಖ್ಯೆ?

ಈ) ವಿವಿಧ ಶಿಕ್ಷಣಕ್ಕೆ ಪ್ರವೇಶ ನೀಡುವಾಗ ಉತ್ತರ ಕರ್ನಾಟಕ ಭಾಗದ ಪ್ರತಿ ಜಿಲ್ಲೆಯ ವಿದ್ಯಾರ್ಥಿಗಳಿಗೆ ಕೋಟಾ ನಿಗದಿಪಡಿಸಲಾಗಿದೆಯೇ?

ಉ) ಹಾಗಿದ್ದಲ್ಲಿ ಸದರಿ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಶಿಕ್ಷಣಕ್ಕೆ ಬೆಳಗಾವಿ ಜಿಲ್ಲೆಯಿಂದ ಸೇರಿಸಿಕೊಂಡ ಅಭ್ಯರ್ಥಿಗಳ ಸಂಖ್ಯೆ ಎಷ್ಟು?

ಶ್ರೀ ಎನ್. ಹುಚ್ಚ ಮಾಸ್ತಿ ಗೌಡ (ಕೃಷಿ ಸಚಿವರು) :

ಅ) ಪದವಿ ಶಿಕ್ಷಣ

1) ಬಿ. ಎಸ್ಸಿ. (ಕೃಷಿ)

2) ಪಶು ವೈದ್ಯಕೀಯ ವಿಜ್ಞಾನ.

3) ಬಿ. ಎಸ್ಸಿ. (ಅರಣ್ಯ)

4) ಬಿ.ಎಸ್ಸಿ. (ಕೃಷಿ ಮಾರುಕಟ್ಟೆ ಮತ್ತು ಸಹಕಾರ)

5) ಗೃಹ ವಿಜ್ಞಾನ.

6) ಕೃಷಿ ಇಂಜಿನಿಯರಿಂಗ್.

ಸ್ನಾತಕೋತ್ತರ ಶಿಕ್ಷಣ (ಪಿ.ಹೆಚ್.ಡಿ)

1) ಬೇಸಾಯ ಶಾಸ್ತ್ರ 2) ಸಸ್ಯ ತಳಿ ಅಭಿವೃದ್ಧಿ ಶಾಸ್ತ್ರ 3) ಸಸ್ಯ ಶರೀರ ಕ್ರಿಯಾ ಶಾಸ್ತ್ರ 4) ಮಣ್ಣು ವಿಜ್ಞಾನ 5) ಸಸ್ಯರೋಗ ಶಾಸ್ತ್ರ 6) ತೋಟಗಾರಿಕೆ 7) ಕೃಷಿ ಸೂಕ್ಷ್ಮಜೀವಿ ಶಾಸ್ತ್ರ 8) ಕೃಷಿ ಕೀಟ ಶಾಸ್ತ್ರ 9) ಕೃಷಿ ವಿಸ್ತರಣೆ 10) ಕೃಷಿ ಅರ್ಥ ಶಾಸ್ತ್ರ 11) ಆಹಾರ ಮತ್ತು ಪೋಷಕತೆ.

ಎಂ. ಎಸ್ಸಿ. (ಕೃಷಿ)

1) ಬೇಸಾಯ ಶಾಸ್ತ್ರ 2) ಸಸ್ಯ ತಳಿ ಅಭಿವೃದ್ಧಿ ಶಾಸ್ತ್ರ 3) ಸಸ್ಯ ಶರೀರ ಕ್ರಿಯಾ ಶಾಸ್ತ್ರ 4) ಮಣ್ಣು ವಿಜ್ಞಾನ 5) ಸಸ್ಯರೋಗ ಶಾಸ್ತ್ರ 6) ತೋಟಗಾರಿಕೆ, 7) ಕೃಷಿ ಕೀಟ ಶಾಸ್ತ್ರ 8) ಬೀಜ ತಾಂತ್ರಿಕತೆ, 9) ಮಣ್ಣು ಮತ್ತು ನೀರು ಸಂರಕ್ಷಣೆ ಇಂಜಿನಿಯರಿಂಗ್.

ಎಂ.ಎಸ್ಸಿ

ಎಂ.ಎಚ್.ಎಸ್ಸಿ.

ಮಕ್ಕಳ ವಿಕಾಸ ಮತ್ತು ಕೌಟುಂಬಿಕ ಭಾಂಧವ್ಯಗಳು.

ಆ) ಇಲ್ಲ

ಇ) ಪದವಿ ಶಿಕ್ಷಣ

ಬಿ. ಎಸ್ಸಿ (ಕೃಷಿ)	-	200
ಪಶು ವೈದ್ಯಕೀಯ	-	32
ಬಿ.ಎಸ್ಸಿ. (ಕೃಷಿ ಮಾರುಕಟ್ಟೆ)	-	26
ಬಿ.ಎಸ್ಸಿ (ಅರಣ್ಯ)	-	26
ಕೃಷಿ ಇಂಜನಿಯರಿಂಗ್	-	23
ಗೃಹ ವಿಜ್ಞಾನ	-	42

ಸ್ನಾತಕೋತ್ತರ ಶಿಕ್ಷಣ :

ಸ್ನಾತಕೋತ್ತರ ಶಿಕ್ಷಣಕ್ಕೆ ಲಭ್ಯವಿರುವ ಸಿಬ್ಬಂದಿ ಮತ್ತು ಪ್ರಯೋಗ ಶಾಲೆ ಸೌಲಭ್ಯಗಳನ್ನು ಆಧರಿಸಿ, ಅಂದಾಜು 10ರಿಂದ 15 ವಿದ್ಯಾರ್ಥಿಗಳನ್ನು ಪ್ರತಿ ವಿಭಾಗಕ್ಕೆ ಸೇರಿಸಿಕೊಳ್ಳಲಾಗುತ್ತಿದೆ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಕಂದಾಯ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರು

397 - ಶ್ರೀ ಭಾಬುರಾವ್ ಚವಾಣ್ (ಶಹಾಬಾದ್) ; ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಕ್ಷಣ ಇಲಾಖೆಯಲ್ಲಿ ನೀಡಿರುವಂತೆ 15 ವರ್ಷಗಳ ಸತತ ಸೇವೆ ಸಲ್ಲಿಸಿರುವ ಕಂದಾಯ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರಿಗೆ ಮೊದಲನೆಯ ದರ್ಜೆ ಸಹಾಯಕರ ಹುದ್ದೆಗೆ ಸ್ವಯಂಚಾಲಿತ ಬಡ್ತಿಯನ್ನು ನೀಡಲಾಗಿದೆಯೇ?

ಆ) ಇಲ್ಲದಿದ್ದಲ್ಲಿ ಒಂದೇ ಸರ್ಕಾರದ ಎರಡು ಇಲಾಖೆಗಳಲ್ಲಿ ದ್ವಿಮುಖ ನೀತಿ ಜಾರಿಯಲ್ಲಿರಲು ಕಾರಣಗಳೇನು?

ಇ) ಗ್ರಾಮ ಲೆಕ್ಕಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು ದ್ವಿತೀಯ ದರ್ಜೆ ಸಹಾಯಕರುಗಳ ಸಂಖ್ಯೆ ತುಲನಾತ್ಮಕವಾಗಿ ಕಡಿಮೆ ಇರುವ ಹಿನ್ನೆಲೆಯಲ್ಲಿ ಪದೋನ್ನತಿ ಅವಕಾಶ ದ್ವಿತೀಯ ದರ್ಜೆ ಸಹಾಯಕರುಗಳಿಗೆ ಕಡಿಮೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಇದನ್ನು ನಿವಾರಿಸಲು ಸರ್ಕಾರದವರು ದ್ವಿತೀಯ ದರ್ಜೆಯ ಸಹಾಯಕರುಗಳಿಗೆ ಶಿಕ್ಷಣ ಇಲಾಖೆಯಲ್ಲಿ ವಿಶೇಷ ಪ್ರಾಶಸ್ತ್ಯ ನೀಡಿರುವಂತೆ ಕಂದಾಯ ಇಲಾಖೆಯಲ್ಲಿಯೂ ಕ್ರಮ ಕೈಗೊಳ್ಳಲು ನಿರ್ಧರಿಸಿದೆಯೇ?

ಉ) ಹಾಗಿದ್ದಲ್ಲಿ ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಇಲ್ಲ.

ಅ) ಹಿಂದೆ ಇದ್ದ ಸರ್ಕಾರ 29-12-1986ರಲ್ಲಿ ಶಿಕ್ಷಣ ಇಲಾಖೆಯ ನೌಕರರ ಬೇಡಿಕೆಗಳ ಮೇಲೆ ಆ ಇಲಾಕೆಯಲ್ಲಿ 15 ವರ್ಷಗಳ ಕ್ರಮಬದ್ಧ ಸೇವೆ ಸಲ್ಲಿಸಿದ ಎರಡನೇ ದರ್ಜೆಯ ಸಹಾಯಕರು ಮೊದಲನೇ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ಪಡೆಯಲು ನೆರವಾಗುವಂತೆ ಅಷ್ಟು ಸಂಖ್ಯೆಯ ಎರಡನೇ ದರ್ಜೆ ಸಹಾಯಕರ ಹುದ್ದೆಗಳನ್ನು ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಾಗಿ ಮೇಲ್ದರ್ಜೆಗೆ ಏರಿಸಲು ಆದೇಶ ನೀಡಿದೆ. ಈ ಸವಲತ್ತನ್ನು ಕಂದಾಯ ಇಲಾಖಾ ನೌಕರರಿಗೆ ಆ ವೇಳೆಯಲ್ಲಿ ನೀಡಿಲ್ಲ.

1991 ರಿಂದೀಚೆಗೆ ಕಂದಾಯ ಇಲಾಖೆಯ ಎರಡನೇ ದರ್ಜೆ ಸಹಾಯಕರಿಗೆ ಕರ್ನಾಟಕ ನಾಗರೀಕ ಸೇವೆಗಳು (ಹಿರಿಯ ಕಾಲಿಕ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಬಡ್ತಿ) 1991ರ ನಿಯಮಗಳ ಅನ್ವಯ ಅದೇ ಹುದ್ದೆಯಲ್ಲಿ 15 ವರ್ಷ ಸೇವ ಸಲ್ಲಿಸಿದ ನಂತರ ಹಿರಿಯ ಕಾಲಿಕ ವೇತನ ಶ್ರೇಣಿಗೆ ಸ್ವಯಂಚಾಲಿತ ಬಡ್ತಿಯನ್ನು ನೀಡಲಾಗುತ್ತಿದೆ.

ಇ) ಗ್ರಾಮ ಲೆಕ್ಕಿಗರ ಹುದ್ದೆಗಳು 9213 ಮತ್ತು ಎರಡನೇ ದರ್ಜೆ ಸಹಾಯಕರ ಹುದ್ದೆಗಳು 2768 ಇವೆ. ಗ್ರಾಮ ಲೆಕ್ಕಿಗರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಮೊದಲನೆ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ಕೊಡುವಾಗ ಕೆಳಕಂಡಂತೆ ಕೊಡಲಾಗುತ್ತಿದೆ.

ಗ್ರಾಮ ಲೆಕ್ಕಿಗರಿಂದ ಶೇಕಡ 40 ಎರಡನೇ ದರ್ಜೆ ಸಹಾಯಕರಿಂದ ಶೇ.30. ಆದುದರಿಂದ, ಎರಡನೇ ದರ್ಜೆ ಸಹಾಯಕರುಗಳಿಗೆ ಬಡ್ತಿ ಹೊಂದುವ ಅವಕಾಶಗಳು ಕಡಿಮೆ ಇರುವುದಿಲ್ಲ.

ಈ) ಇಲ್ಲ.

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಸಗೊಬ್ಬರ ಇಲ್ಲದೆ ತಳಿ ಸುಧಾರಣೆಯ ಸಂಶೋಧನೆ.

487 - ಶ್ರೀ ಬಾಬಾಗೌಡ (ಶಹಾಬಾದ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹಸಿರು ಕ್ರಾಂತಿ ಮಾಡಲಿಕ್ಕೆ ಹೆಚ್ಚು ಆಹಾರ ಅಂದರೆ ಗೊಬ್ಬರ ಸೇವಿಸಿ ಹೆಚ್ಚು ಇಳುವರಿ ಕೊಡುವ ತಳಿಗಳನ್ನು ಶೋಧಿಸಿದಂತೆ ರಸಗೊಬ್ಬರ ಇಲ್ಲದೇ ಕಡಿಮೆ ನೀರು ಬಳಸಿ ಸಾಧಾರಣ ಮಟ್ಟಿಗೆ ಇಳುವರಿ ಕೊಡುವ ತಳಿಗಳ ಸಂಶೋಧನೆ ಮಾಡಲು ಸರ್ಕಾರವು ಪ್ರಯತ್ನಿಸುತ್ತಿದೆಯೇ?

ಆ) ಕೃಷಿ ಲಾಭದಾಯಕವಾಗುವಂತೆ ವಿದ್ಯುತ್ ಮತ್ತು ಇಂಧನ ಬಳಸದೇ ಕೃಷಿ ಉಪಕರಣಗಳನ್ನು ತಯಾರಿಸುವ ದಿಕ್ಕಿನಲ್ಲಿ ತಂತ್ರಜ್ಞಾನ ಬೆಳೆಸಲು ಯೋಜಿಸಲಾಗಿದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ವಿವಿಧ ಹವಾಮಾನಗಳು ಮತ್ತು ಮಣ್ಣಿನ ಗುಣಗಳಿಗೆ ಹೊಂದಿಕೊಂಡು ಉತ್ತಮ ಇಳುವರಿಯನ್ನು ಕೊಡತಕ್ಕ ಬೆಳೆ ತಳಿಗಳನ್ನು ಅಬಿವೃದ್ಧಿಪಡಿಸುವ ದಿಕ್ಕಿನಲ್ಲಿ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಸತತವಾಗಿ ಶ್ರಮಿಸುತ್ತಿದೆ. ಕಡಮೆ ನೀರನ್ನು ಬಳಸಿ ಹೆಚ್ಚು ಇಳುವರಿಯನ್ನು ಕೊಡತಕ್ಕ ಬೆಳೆ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಇವುಗಳಲ್ಲಿ ಮುಖ್ಯವಾದುವು 1) ಎಂಆರ್-1 ಮತ್ತುಪಿಆರ್-202 ರಾಗಿ ತಳಿಗಳು 2) ಡಿ.ಹೆಚ್-8 ಶೇಂಗಾ ತಳಿ 3) ಟಿವಿಎಕ್ಸ- ಅಲಸಂದ ತಳಿ ಮುಂತಾದವುಗಳು. ಹಾಗೆಯೇ ಪ್ರತಿ ಪ್ರಮಾಣ ರಾಸಾಯನಿಕ ಗೊಬ್ಬರಕ್ಕೆ ಹೆಚ್ಚು ಫಲಿತಾಂಶವನ್ನು ಕೊಡಬಲ್ಲ ಬೆಳೆ ತಳಿಗಳನ್ನು ಎಲ್ಲಾ ಬೆಳೆಗಳಲ್ಲಿಯೂ ಅಭಿವೃದ್ಧಿಪಡಿಸಲಾಗುತ್ತಿದೆ. ಇಂತಹ ಕಡಿಮೆ ಪ್ರಮಾಣದ ಸಾಮಾಗ್ರಿಗಳನ್ನು ಬಳಸುವ ತಂತ್ರ ಜ್ಞಾನಗಳು ರಾಸಾಯನಿಕಗಳ ಒಟ್ಟು ಬಳಕೆ ಆಧಾರದ ಮೇಲೆ ಹೆಚ್ಚು ಇಳುವರಿಯನ್ನು ಪಡೆಯಲು ಸಾಧ್ಯವಾಗಿದೆ. ಆದರೆ ರಾಸಾಯನಿಕಗಳ ಬಳಕೆಯೇ ಇಲ್ಲದೇ ಕೃಷಿ ಉತ್ಪಾದನೆಯನ್ನು ಪಡೆಯುವ ದಿಶೆಯಲ್ಲಿ ಯಾವ ಸಂಶೋಧನೆಯು ನಡೆಯುತ್ತಿಲ್ಲ.

ಆ) ಹೌದು, ಈ ದಿಶೆಯಲ್ಲಿ ಕಾರ್ಯಕ್ರಮಗಳು ನಡೆಯುತ್ತಿವೆ.

ಚಿಕ್ಕ ರೈತರಿಗೆ ಸಬ್ಸಿಡಿ ರಸಗೊಬ್ಬರ ವಿತರಣೆ.

488 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ:

ಅ) 1991ರಲ್ಲಿ ಚಿಕ್ಕ ರೈತರಿಗೆ ಸಬ್ಸಿಡಿ ಧಾರಣೆಯಲ್ಲಿ ರಸಗೊಬ್ಬರ ಕೊಡುತ್ತೇವೆಂದು ಹೇಳಿದ್ದು ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಸಬ್ಸಿಡಿ ಗೊಬ್ಬರದ ವಿತರಣೆ ಮಾಡಿದ ವಿವರ ಕೊಡಲಾಗುವುದೇ?

ಇ) 1990-91 ಹಾಗೂ 1991-92ನೇ ಸಾಲಿನಲ್ಲಿ ರಸಗೊಬ್ಬರ ಸಬ್ಸಿಡಿ ಹಣ ವಿತರಣೆ ಹೇಗಾಯಿತೆಂಬುದನ್ನು ತಿಳಿಸಲಾಗುವುದೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಗಮನದಲ್ಲಿದೆ, ಆದರೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಲಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) 1990-91ನೇ ಸಾಲಿಗೆ ಸಬ್ಸಿಡಿ ಯೋಜನೆ ಜಾರಿಯಲ್ಲಿರಲಿಲ್ಲ, 1991-92ನೇ ಸಾಲಿನಲ್ಲಿ ಜಾರಿಗೊಳಿಸಲಾಗಲಿಲ್ಲ.

ಭೂಮಿಯ ವರ್ಗೀಕರಣ ಆಧಾರದ ಮೇಲೆ ನೊಂದಣಿ ಶುಲ್ಕ.

489 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ಜಮಿನಿನ ಕಿಮ್ಮತ್ತಿನ ಆಧಾರದ ಮೇಲೆ ನೋಂದಣಿ ಶುಲ್ಕ ಆಕರಿಸುವ ಕಾರಣ ಭ್ರಷ್ಟಾಚಾರ ಹೆಚ್ಚಲಿಕ್ಕೆ ಕಾರಣವೆಂಬುದು ಸರ್ಕಾರಕ್ಕೆ ತಿಳಿದಿದೆಯೇ?

ಆ) ಜಮೀನು ಧಾರಣೆ ನಿರ್ಧಾರ ಮಾಡಲಿಕ್ಕೆ ಸರ್ಕಾರದ ಅಳತೆಗೋಲು ಯಾವುದು

ಇ) ಭೂಮಿಯ ವರ್ಗೀಕರಣದ ಆಧಾರದ ಮೇಲೆ ನಿಗಧಿ ನೋಂದಣಿ ಶುಲ್ಕ ಆಕರಣೆಮಾಡಿ ಈ ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿಯ ಭ್ರಷ್ಟಾಚಾರವನ್ನು ತಡೆಯಲು ಸರ್ಕಾರ ಪ್ರಯತ್ನಿಸುವುದೆ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಇಲ್ಲಾ

ಜಮಿನಿನ ಕಿಮ್ಮತ್ತನ್ನು ನಿರ್ಧರಿಸುವುದಕ್ಕೆ ನಿರ್ದಿಷ್ಟ ಮಾರ್ಗದರ್ಶನಗಳಿದ್ದು, ಅವುಗಳ ಆಧಾರದ ಮೇಲೆ ಬೆಲೆ ನಿಷ್ಕರ್ಷೆ ಮಾಡಿ ನೋಂದಣೆ ಶುಲ್ಕ ಆಕರಣೆ ಮಾಡುವುದರಿಂದಲೇ ಭಷ್ಟಾಚಾರಕ್ಕೆ ಎಡೆಯಾಗಿದೆ ಎಂದು ಹೇಳಲು ಬರುವುದಿಲ್ಲ.

ಆ) ಊರಿನ ಸಾಮಿಪ್ಯ ವರ್ಗೀಕರಣ, ಜಮಿನಿನ ಪಲವತ್ತತೆ, ನೀರಿನ ಸೌಲಭ್ಯದ ಆಧಾರದ ಮೇಲೆ ಕೃಷಿ ಭೂಮಿಯ ಬೆಲೆಯನ್ನು ಮತ್ತು ನಗರ ವ್ಯಾಪ್ತಿಯ ಜಮಿನಿನ ಬಗ್ಗೆ ಅವುಗಳು ಇರುವ ಸ್ಥಳ ದೊರೆಯುತ್ತಿರುವ ನಾಗೀಕ ಸೌಲಭ್ಯಗಳನ್ನು ಅಳತೆಗೋಲು ಮಾಡಿಕೊಂಡು ಬೆಲೆ ನಿರ್ಧರಿಸಲಾಗುವುದು.

ಇ) ರಾಜ್ಯದ ಎಲ್ಲಾ ಆಸ್ತಿಗಳ ಅಂದಾಜು ಮಾರುಕಟ್ಟೆ ಬೆಲೆಯ್ನನು ನಿಷ್ಕರ್ಷೆ ಮಾಡುವ ಸಲುವಾಗಿ ನಿಯಮಗಳ ಪ್ರಕಾರ ಮಾರ್ಕೆಟ್ ವ್ಯಾಲ್ಯೂ ಎಷ್ಟಿಮೇಟ್ ಕಮಿಟಿಗಳನ್ನು ತಾಲ್ಲೂಕು ಮಟ್ಟದಲ್ಲಿ ರಚಿಸಲಾಗಿದೆ. ಈ ಸಮಿತಿಗಳಲ್ಲಿ ಸಂಬಂಧಪಟ್ಟ ತಹಸೀಲ್ದಾರ್ ಉಪ ನೋಂದಣಾಧಿಕಾರಿ, ಇಂಜನಿಯರ್, ಹಾಗೂ ಸರ್ವೇಯರ್, ಇವರುಗಳ ಇದ್ದು ಸದರಿ ಸಮಿತಿಗಳು ಸಧ್ಯದಲ್ಲಿಯೇ ಕಾರ್ಯ ಪ್ರವೃತ್ತವಾಗಲಿವೆ. ಆಗ ಭ್ರಷ್ಟಾಚಾರ ಕಡಿಮೆಯಾಗುವುದೆಂದು ನಿರೀಕ್ಷಿಸಲಾಗಿದೆ.

ಹತ್ತಿಯ ವರ್ಗೀಕರಣ ಯಂತ್ರಗಳು.

491 - ಶ್ರೀ ಎಂ.ಡಿ. ನಂಜುಂಡಸ್ವಾಮಿ (ಧಾರವಾಡ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ:

ಅ) ಹತ್ತಿಯ ಎಳೆಯನ್ನು ಅಳತೆ ಮಾಡಿ ಅದರ ಗುಣವನ್ನು ವರ್ಗೀಕರಿಸುವ ಯಂತ್ರಗಳನ್ನು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು ಖರೀದಿಸಿವೆಯೆ;

ಆ) ಖರೀದಿಸದಿದ್ದರೆ ಅದಕ್ಕೆ ಕಾರಣಗಳೇನು ?

ಶ್ರೀ ಎಹ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) : ಅ) ರಾಯಚೂರು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘ (ನಿ) ರಾಯಚೂರು ಈ ಸಂಘವು ಮಾತ್ರ ಈ ಯಂತ್ರವನ್ನು ಖರೀದಿಸಿದ್ದು ಉಳಿದ ಸಂಘಗಳು ಖರೀದಿಸಿರುವುದಿಲ್ಲ.

ಆ) ಉಳಿದ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು ಈ ಯಂತ್ರವನ್ನು ಖರೀದಿಸದಿರಲು ಈ ಕೆಳಕಂಡ ಕಾರಣಗಳಿವೆ.

1) ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳ ಆರ್ಥಿಕ ಪರಿಸ್ಥಿತಿ ಚೆನ್ನಾಗಿರುವುದಿಲ್ಲದಿರುವುದರಿಂದ ;

2) ಸಂಘಗಳು ಸಂಸ್ಕರಣ ಘಟಕಗಳನ್ನು ಹೊಂದಿರದೇ ಇರುವುದರಿಂದ ;

3) ಹೆಚ್ಚಿನ ಸಂಘಗಳು ಹತ್ತಿ ಖರೀದಿಸುವ ಮತ್ತು ಮಾರಾಟ ಮಾಡುವ ವ್ಯವಹಾರವನ್ನು ಕೈಗೊಳ್ಳದೇ ಇರುವುದರಿಂದ ;

4) ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ಹಾಗೂ ಕೇಂದ್ರ ಸರ್ಕಾರದ ಜವಳಿ ನಿಗಮದವರ ಪರವಾಗಿ ಹತ್ತಿಯನ್ನು ಈ ಸಂಘದವರು ಕೊಂಡುಕೊಳ್ಳತ್ತಿರುವುದರಿಂದ.

ಕೋಲಾರ ಜಿಲ್ಲೆಯಲ್ಲಿ ಬರಗಾಲಕ್ಕೆ ಒಳಗಾದ ಪ್ರದೇಶಗಳು

552 - ಶ್ರೀಎಂ. ನಾರಾಯಣ ಸ್ವಾಮಿ (ಬೇತಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ:

ಅ) 1992ರಲ್ಲಿ ಕೋಲಾರ ಜಿಲ್ಲೆಯಲ್ಲಿ ಬಲಗಾಲಕ್ಕೆ ತುತ್ತಾದ ಪ್ರದೇಶಗಳು ಯಾವ್ಯಾವು ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ;

ಆ) 1991ರ ಆಕ್ಟೋಬರ್-ನವೆಂಬರ್ ತಿಂಗಳಲ್ಲಿ ಮಳೆ ಹಾನಿಯಿಂದ ತೊಂದರೆಗೊಳಗಾದ ಜಿಲ್ಲೆಗಳಾವುವು, ಮಳೆ ಹಾನಿಯಿಂದಾದ ನಷ್ಟದ ವಿವರಗಳೇನು (ರಸ್ತೆ, ಕೆರೆ, ಮನೆ, ಸೇತುವೆ, ಪಂಪುಸೆಟ್ಟು, ಧನಕರುಗಳು ಇತ್ಯಾದಿ-ತಾಲ್ಲೂಕು ಹಾಗೂ ಜಿಲ್ಲಾವಾರು ವಿವರ ನೀಡುವುದು) ;

ಇ) ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು, ರಸ್ತೆ, ಸೇತುವೆ, ಮನೆ, ಬೆಳೆ ನಾಶಕ್ಕೆ ಸರ್ಕಾರದಿಂದ ಬಿಡುಗಡೆಯಾಗಿರುವ ಮೊತ್ತವೆಷ್ಟು (ತಾಲ್ಲೂಕುವಾರು ವಿವರಣೆ ನೀಡುವುದು) ;

ಈ) ಹಣ ಬಿಡುಗಡೆ ಮಾಡದಿದ್ದರೆ ಯಾವಾಗ ಮಾಡಲಾಗುವುದು ;

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು) :

ಅ) ಕೋಲಾರ ಜಿಲ್ಲೆಯಲ್ಲಿ ಮಾಲೂರು ತಾಲ್ಲೂಕನ್ನು ಬಿಟ್ಟು ಉಳಿದ ಎಲ್ಲಾ ತಾಲ್ಲೂಕುಗಳ ಪ್ರದೇಶಗಳಲ್ಲಿ ಬರ ಪರಿಸ್ಥಿತಿಯಿತ್ತು. ಇದರಿಂದಾಗಿ 1,619 ಗ್ರಾಮಾಗಳಲ್ಲಿ ಅಬಾರ ಪರಿಸ್ಥಿತಿ ಉಂಟಾಗಿದ್ದು, ಈ ಪೈಕಿ 567 ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ತಲೆದೋರಿತ್ತು. ಸರ್ಕಾರವು ಅಭಾವಕ್ಕೆ ಒಳಗಾದ ಪ್ರದೇಶಗಳಲ್ಲಿ ಉದ್ಯೋಗ ಒದಗಿಸಲು 25.00ಲಕ್ಷ ರೂ.ಗಳನ್ನು ಮತ್ತು ಕುಡಿಯುವ ನೀರು ಪೂರೈಕೆಗೆ 25.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ ಅಬಾರ ಪರಿಹಾರ ಕಾಮಗಾರಿಗಳನ್ನು ಮತ್ತು ಕುಡಿಯುವ ನೀರು ಪೂರೈಸಲು ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಆ) 1991ರ ಅಕ್ಟೋಬರ್-ನವೆಂಬರ್ ತಿಂಗಳುಗಳಲ್ಲಿ ಮಳೆಹಾನಿಯಿಂದ ತೊಂದರೆಗೊಳಗಾದ ಜಿಲ್ಲೆಗಳು ಈ ಕೆಳಕಂಡಂತಿವೆ :

1) ಬೆಂಗಳೂರು (ನಗರ)

2) ತುಮಕೂರು

3) ಕೋಲಾರ

4) ಮೈಸೂರು

5) ಬೆಂಗಳೂರು (ಗ್ರಾಮಾಂತರ)

ಮಳೆ ಹಾನಿಯಿಂದಾದ ನಷ್ಟದ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ಅನುಬಂಧ 'ಅ'ನಲ್ಲಿ ನಮೂದಿಸಿದೆ.

ಇ) ಅತೀವೃಷ್ಟಿಯಿಂದ ಉಂಟಾದ ಖಾಸಗಿ ಆಸ್ತಿ-ಪಾಸ್ತಿಗಳ ಹಾನಿಗೆ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 167

ಟಿಎನ್‌ಆರ್ 88, ದಿನಾಂಕ 6.4.1991ರ ಪ್ರಕಾರ ಪರಿಹಾರವನ್ನು ನೊಂದವರಿಗೆ ಜಿಲ್ಲಾಧಿಕಾರಿಗಳ ಮುಖಾಂತರ ನೀಡಿದೆ.

ಅಲ್ಲದೆ, ಸಾರ್ವಜನಿಕ ಆಸ್ತಿ-ಪಾಸ್ತಿಗಳಾದ ರಸ್ತೆ, ಸೇತುವೆ, ಕಟ್ಟಡ, ಕೆರೆ ಮತ್ತು ಕಾಲುವೆಗಳ ರಿಪೇರಿಗೆ ಮತ್ತು ಜಖಂಗೊಂಡ ಮನೆಗಳಿಗೆ ಮತ್ತು ಹಾನಿಗೊಳಗಾದ ಕೃಷ್ ಬೆಳೆಗೆ 1991-92 ಮತ್ತು 1992- 93ನೇ ಸಾಲಿನಲ್ಲಿ ಈ ಕೆಳಕಂಡಂತೆ, ಈ ಮೇಲ್ಕಂಡ ಜಿಲ್ಲೆಗಳಿಗೆ ಹಣ ಬಿಡುಗಡೆ ಮಾಡಿದೆ.

(ರೂಪಾಯಿ ಲಕ್ಷಗಳಲ್ಲಿ)

ಕ್ರ ಸಂ	ಜಿಲ್ಲೆಯ ಹೆಸರು	ವರ್ಷ	ಹಾನಿಗೊಳಗಾದ ಬೆಳೆ ಹಾಗೂ ಮನೆಗಳಿಗೆ ಪರಿಹಾರಕ್ಕಾಗಿ	ರಸ್ತೆ ಸೇತುವೆ ಕಟ್ಟಡಗಳ ದುರಸ್ತಿಗಾಗಿ	ಒಟ್ಟು
1.	ಬೆಂಗಳೂರು (ನಗರ)	1991-92 1992-93	135.00 10.15	105.00 5.00	240.00 15.15
2.	ಬೆಂಗಳೂರು (ಗ್ರಾಮಾಂತರ)	1991-92 1992-93	215.00 75.00	35.00 20.00	250.00 95.00
3.	ತುಮಕೂರು	1991-92 1992-93	320.00 85.00	45.00 30.00	365.00 115.00
4.	ಕೋಲಾರ	1991-92 1992-93	305.00 180.00	60.00 40.00	365.00 220.00
5.	ಮೈಸೂರು	1991-92 1992-93	105.00 52.87	95.00 10.00	200.00 62.87

ತಾಲ್ಲೂಕುವಾರು ವಿವರಗಳನ್ನು ಅನುಬಂಧ 'ಅ'ನಲ್ಲಿ ನೀಡಲಾಗಿದೆ.

ಈ) ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ 'ಅ'

1991ರ ಅಕ್ಟೋಬರ್-ನವೆಂಬರ್ ತಿಂಗಳುಗಳಲ್ಲಿ ಮಳೆ ಹಾನಿಯಿಂದ ಉಂಟಾದ ನಷ್ಟದ ವಿವರಗಳ ತಃಖ್ತೆ- (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳು)

1. ರೂ. ಲಕ್ಷಗಳಲ್ಲಿ
2. ವಿಸ್ತೀರ್ಣ-ಹೆಕ್ಟೇರ್‌ನಲ್ಲಿ

ಕ್ರ ಸಂ.	ತಾಲ್ಲೂಕಿನ ಹೆಸರು		ನಷ್ಟದ ವಿವರಗಳು												
		ರಸ್ತೆ ಮತ್ತು ಸೇತುವೆಗಳು		ಕೆರೆಗಳು		ಕಟ್ಟಡಗಳು		ಮನೆಗಳು		ಜಾನುವಾರುಗಳ ಹಾನಿ		ಜೀವ ಹಾನಿ		ಕೃಷಿ ಬೆಳೆಗಳು	
		ಸಂಖ್ಯೆ	ನಷ್ಟ ರೂ.	ಸಂಖ್ಯೆ	ನಷ್ಟ ರೂ.	ಸಂಖ್ಯೆ	ನಷ್ಟ ರೂ.	ಸಂಖ್ಯೆ	ನಷ್ಟ ರೂ.	ಸಂಖ್ಯೆ	ನಷ್ಟ ರೂ.	ಸಂಖ್ಯೆ	ನಷ್ಟ ರೂ.	ಸಂಖ್ಯೆ	ನಷ್ಟ ರೂ.
1	2	3	4	5	6	7	8	9	10	11	12	13	14	15	16
ಬೆಂಗಳೂರು (ನಗರ) ಜಿಲ್ಲೆ															
1.	ಬೆಂಗಳೂರು (ಉತ್ತರ)	55	32.40	15	7.19	20	5.52	6560	128.89	-	-	10	0.80	-	-
2.	ಬೆಂಗಳೂರು (ದಕ್ಷಿಣ)	144	96.07	26	14.90	101	23.61	7094	118.13	-	-	2	-	0.44	0.025
3.	ಅನೇಕಲ್	61	51.60	10	14.80	27	8.35	1573	14.66	-	-	-	-	1.58	0.100
	ಒಟ್ಟು	260	180.07	51	36.89	148	37.48	15227	261.68	-	-	12	0.80	2.02	0.125
ತುಮಕೂರು ಜಿಲ್ಲೆ															
1.	ತುಮಕೂರು	-	27.97	-	26.65	-	-	-	90.00	-	0.075	-	0.08	-	5.34

2.	ಕುಣಿಗಲ್	-	14.00	-	14.45	-	-	-	6.60	-	0.002	-	0.16	-	-
3.	ಗುಬ್ಬಿ	-	12.45	-	10.50	-	-	-	56.83	-	0.552	-	-	-	-
4.	ತಿಪಟೂರು	-	10.65	-	11.30	-	-	-	4.50	-	-	-	-	-	-
5.	ತುರುವೆಕೆರೆ	-	3.20	-	4.75	-	-	-	9.40	-	-	-	-	-	-
6.	ಚಿಕ್ಕನಾಯಕನ ಹಳ್ಳಿ	-	26.10	-	11.55	-	1.00	-	4.63	-	0.215	-	-	-	-
7.	ಮಧುಗಿರಿ	-	102.75	-	73.20	-	7.50	-	273.80	-	1.178	-	0.40	-	75.69
8.	ಕೊರಟಗೆರೆ	-	21.30	-	20.00	-	1.68	-	89.53	-	0.007	-	0.08	-	19.642
9.	ಶಿರಾ	-	10.00	-	13.75	-	1.01	-	91.97	-	1.875	-	-	-	21.320
10.	ಪಾವಗಡ	-	-	-	9.00	-	0.90	-	31.30	-	-	-	-	-	-
	ಒಟ್ಟು	-	228.45	-	195.45	-	12.09	-	658.56	-	3.904	8	0.72	-	128.752
ಕೋಲಾರ ಜಿಲ್ಲೆ															
1.	ಕೋಲಾರ	86	59.170	61	43.00	73	25.604	5178	26.519	-	-	-	-	-	-
2..	ಮಾಲೂರು	90	39.900	113	70.00	126	12.628	3013	11.550	-	-	-	-	-	-

3.	ಬಂಗಾರಪೇಟೆ	73	61.470	78	60.00	76	10.045	7662	58.876	-	-	-	-	-	-
4.	ಮುಳಬಾಗಿಲು	75	28.700	139	75.000	128	6.173	3691	99.097	-	-	-	-	-	-
5.	ಶ್ರೀನಿವಾಸಪುರ	51	23.030	79	55.000	19	2.170	6050	29.190	-	-	-	-	-	-
6.	ಚಿಕ್ಕಬಳ್ಳಾಪುರ	56	32.590	23	15.000	95	5.950	5487	106.010	-	-	-	-	-	-
7.	ಚಿಂತಾಮಣಿ	29	18.100	46	50.000	42	7.500	4485	82.300	-	-	-	-	-	-
8.	ಶಿಡ್ಲಘಟ್ಟ	67	27.400	48	30.000	51	4.400	4463	166.000	-	-	-	-	-	-
9.	ಗೌರಿಬಿದನೂರು	52	31.710	43	25.000	35	8.390	14738	328.568	-	-	-	-	-	-
10.	ಬಾಗೇಪಲ್ಲಿ	38	15.350	34	20.000	51	4.570	7677	36.920	-	-	-	-	-	-
11.	ಗುಡಿಬಂಡೆ	14	3.750	15	1.770	71	3.890	1371	23.480	-	-	-	-	-	-
ಒಟ್ಟು		631	341.170	679	444.770	776	98.770	598.15	968.510	-	-	20	1.60	-	-
ಮೈಸೂರು ಜಿಲ್ಲೆ															
1.	ಯಳಂದೂರು ಸೇತುವೆ ರಸ್ತೆ (ಕಿ.ಮಿ.)	2 26	-	7	-	-	-	1799	-	-	-	2	-	2049 ಎಕರೆ	-

2.	ಚಾಮರಾಜನಗರ ಸೇತುವೆ ರಸ್ತೆ (ಕಿ.ಮೀ.)	4 40	-	-	-	-	-	2447	-	10	-	-	-	3475 ಎಕರೆ	-
3.	ಗುಂಡ್ಲುಪೇಟೆ	-	-	-	-	-	-	1406	-	-	-	-	-	-	-
	ಒಟ್ಟು ಸೇತುವೆ ರಸ್ತೆ (ಕಿ.ಮೀ.)	6 66	-	7	-	-	-	5652	-	10	-	2	-	5529	-
ಬೆಂಗಳೂರು ಗ್ರಾಮಾಂತರ															
1.	ನೆಲಮಂಗಲ	-	89.82	-	-	-	-	-	50.79	-	0.09	-	-	-	-
2.	ಮಾಗಡಿ	-	33.60	-	-	-	-	-	60.82	-	0.05	-	-	-	-
3.	ರಾಮನಗರ	-	85.99	-	-	-	-	-	8.25	-	0.13	-	0.08	-	-
4.	ಚನ್ನಪಟ್ಟಣ	-	57.20	-	-	-	-	-	25.00	-	-	-	-	-	-
5.	ಕನಕಪುರ	-	79.50	-	-	-	-	-	22.24	-	0.10	-	0.08	-	-
6.	ಹೊಸಕೋಟೆ	-	102.74	-	-	-	-	-	34.29	-	-	-	-	-	-
7.	ದೊಡ್ಡಬಳ್ಳಾಪುರ	-	89.17	-	-	-	-	-	293.04	-	-	-	0.08	-	-
8.	ದೇವನಹಳ್ಳಿ	-	90.24	-	-	-	-	-	77.67	-	0.12	-	0.40	-	-
	ಒಟ್ಟು	-	628.26	-	-	-	-	-	572.10	-	0.49	-	0.64	-	-

* ಇದರಲ್ಲಿ ಕೃಷಿ ಬೆಲೆ ನಷ್ಟದ ವಿವರವೂ ಸಹ ಸೇರಿರುತ್ತದೆ.

ಅನುಬಂಧ-ಆ

1991ನೇ ಅಕ್ಟೋಬರ್-ನವೆಂಬರ್ ತಿಂಗಳಲ್ಲಿ ಮಳೆ ಹಾನಿಯಿಂದ ತೊಂದರೆಗೊಳಗಾದ ರಸ್ತೆ, ಸೇತುವೆ, ಕೃಷಿ ಬೆಳೆ, ಮನೆಗಳಿಗೆ ಪರಿಹಾರಕ್ಕಾಗಿ ಬಿಡುಗಡೆ ಮಾಡಿದ ಮೊಬಲಗು (ತಾಲ್ಲೂಕುವಾರು ವಿವರಗಳು)

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಜಿಲ್ಲೆಯ ಹೆಸರು	ತಾಲ್ಲೂಕಿನ ಹೆಸರು	ಪರಿಹಾರಕ್ಕಾಗಿ ಬಿಡುಗಡೆ ಮಾಡಿದ ಮೊಬಲಗು			
			ಮನೆಗಳಿಗಾಗಿ	ರಸ್ತೆ, ಸೇತುವೆ, ಕೆರೆ, ಕಟ್ಟಡ ಇತ್ಯಾದಿಗಳ ರಿಪೇರಿ	ಕೃಷಿ ಬೆಳೆಗಾಗಿ	ಜೀವಹಾನಿಗೆ ಪರಿಹಾರಕ್ಕಾಗಿ
1	2	3	4	5	6	7
1.	ಬೆಂಗಳೂರು (ನ)	ಬೆಂಗಳೂರು ಉತ್ತರ ಬೆಂಗಳೂರು ದಕ್ಷಿಣ ಅನೇಕಲ್ ಬೆಂಗಳೂರು ಸಿಟಿ ನಗರಪಾಲಿಕೆ	22.135 38.775 7.770 30.000	150.50 ಗಳನ್ನು ಸಂಬಂಧಪಟ್ಟ ತಾಲ್ಲೂಕಿನ ಅಭಿಯಂತರರಿಗೆ ಬಿಡುಗಡೆ ಮಾಡಿದೆ.	- 0.05 0.10	1.410
		ಒಟ್ಟು	**98.680**	**150.50**	**0.15**	**1.040**
2.	ತುಮಕೂರು	ತುಮಕೂರು	19.61	32.57	1.12	0.08
		ಕುಣಿಗಲ್	11.00	18.78	-	0.16
		ಗುಬ್ಬಿ	13.70	15.32	-	-
		ತಿಪಟೂರು	5.74	29.51	-	-

		ತುರುವೇಕೆರೆ	8.30	12.59	-	-
		ಚಿಕ್ಕನಾಯಕನಹಳ್ಳಿ	6.47	6.00	-	-
		ಮಧುಗಿರಿ	43.34	59.00	2.05	0.40
		ಕೊರಟಗೆರೆ	25.99	42.97	2.19	0.08
		ಶಿರಾ	21.77	36.92	6.07	-
		ಪಾವಗಡ	9.59	37.55	3.56	-
		ಒಟ್ಟು	**165.51**	**291.21**	**14.99**	**0.72**
3.	ಕೋಲಾರ	ಕೋಲಾರ	17.573	23.500		
		ಮಾಲೂರು	15.689	15.920		
		ಬಂಗಾರಪೇಟೆ	27.437	29.330		
		ಮುಳಬಾಗಿಲು	10.390	20.070		
		ಶ್ರೀನಿವಾಸಪುರ	13.986	14.280		
		ಚಿಕ್ಕಬಳ್ಳಾಪುರ	24.304	9.500		
		ಚಿಂತಾಮಣಿ	16.790	18.930		
		ಶಿಡ್ಲಘಟ್ಟ	17.479	12.910		
		ಗೌರಿಬಿದನೂರು	88.132	15.780		
		ಬಾಗೇಪಲ್ಲಿ	18.000	10.260		
		ಗುಡಿಬಂಡೆ	5.764	1.500		
		ಒಟ್ಟು	**255.544**	**170.480**		

ನೆರೆ ಹಾವಳಿಯ ಪುನರ್‌ವಸತಿಗೆ ಮಾಡಿದ ವೆಚ್ಚ

842- ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ನೆರೆ ಹಾವಳಿ ಪುನರ್ವಸತಿ ಕಾರ್ಯಕ್ರಮಗಳಿಗೆ ಈವರೆಗೆ ರಾಜ್ಯ ಸರ್ಕಾರವು ಮಾಡಿರುವ ಒಟ್ಟು ವೆಚ್ಚದ ಮೊಬಲಗೆಷ್ಟು?

ಆ) ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಮೊಬಲಗೆಷ್ಟು?

ಇ) ಪ್ರತಿ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ರಾಜ್ಯ ಸರ್ಕಾರವು ವೆಚ್ಚ ಮಾಡಿರುವ ಮೊತ್ತ ಎಷ್ಟು?

ಈ) ನೆರೆಹಾವಳಿಯಿಂದ ಒಟ್ಟು ಮರಣಹೊಂದಿರುವ ಜನರೆಷ್ಟು ಮತ್ತು ಅವರಿಗೆ ನೀಡಲಾದ ಪರಿಹಾರ ಧನ.

ಉ) ಭಾರಿ ಮಳೆಯಿಂದ ಹಾನಿಗೀಡಾದ ಮನೆಗಳ ಸಂಖ್ಯೆ ಎಷ್ಟು ಹಾಗೂ ಈ ಮನೆಗಳ ಪುನರ್ನಿರ್ಮಾಣಕ್ಕಾಗಿ ಬಿಡುಗಡೆ ಮಾಡಲಾದ ಹಣವೆಷ್ಟು?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ) ರಾಜ್ಯ ಸರ್ಕಾರವು ನೆರೆ ಹಾವಳಿಯ ಪುನರ್ ವಸತಿ ಕಾರ್ಯಕ್ರಮಗಳಿಗೆ ಈವರೆಗೆ ಅಂದರೆ ದಿನಾಂಕ 1.4.92. ರಿಂದ 31.12.92ರ ವರೆಗೆ ರೂ. 3199.39 ಲಕ್ಷ ಖರ್ಚು ಮಾಡಿದೆ.

ಆ) ಕೇಂದ್ರ ಸರ್ಕಾರವು ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಿದೆ-

	ಕೋಟಿ ರೂ.ಗಳಲ್ಲಿ
1) 1992-93ನೇ ಸಾಲಿಗೆ ಕೇಂದ್ರ ಸರ್ಕಾರವು ತನ್ನ ಪಾಲಿನ ವಂತಿಗೆ ಹಣವನ್ನು 'ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ಬಿಡುಗಡೆ ಮಾಡಿರುವ ಮೊಬಲಗು	20.25
2) 1993-94ನೇ ಸಾಲಿಗೆ ಕೇಂದ್ರ ಸರ್ಕಾರವು ತನ್ನ ಪಾಲಿನ ಹಣವನ್ನು ಮುಂಗಡವಾಗಿ 1 ಮತ್ತು 2ನೇ ಕಂತುಗಳ ವಂತಿಗೆ ಹಣವನ್ನು ರಾಜ್ಯ ಸರ್ಕಾರದ 'ಪ್ರಕೃತಿ ವಿಕೋಪ ಪರಿಹಾರ ನಿಧಿ'ಗೆ ಬಿಡುಗಡೆ ಮಾಡಿರುವ ಮೊಬಲಗು	10.12
ಒಟ್ಟು	**30.37**

ಇ) ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ಪರಿಹಾರ ಕಾರ್ಯಗಳಿಗಾಗಿ 1992-93ನೇ ಸಾಲಿನಲ್ಲಿ ದಿನಾಂಕ 1.4.92 ರಿಂದ 31.12.92ರ ವರೆಗೆ ಕೆಳಕಂಡಂತೆ ಹಣವನ್ನು ವೆಚ್ಚ ಮಾಡಲಾಗಿದೆ-

	ಜಿಲ್ಲೆಯ ಹೆಸರು	ಲಕ್ಷ ರೂ.ಗಳಲ್ಲಿ
1.	ಬೆಂಗಳೂರು (ನಗರ)	109.81
2.	ಬೆಂಗಳೂರು (ಗ್ರಾ)	58.84
3.	ಕೋಲಾರ	96.09
4.	ತುಮಕೂರು	20.85
5.	ಚಿತ್ರದುರ್ಗ	201.56

6.	ಶಿವಮೊಗ್ಗ	128.56
7.	ಮೈಸೂರು	9.03
8.	ಮಂಡ್ಯ	13.94
9.	ಚಿಕ್ಕಮಗಳೂರು	17.47
10.	ಹಾಸನ	134.96
11.	ಕೊಡಗು	26.90
12.	ದಕ್ಷಿಣ ಕನ್ನಡ	85.39
13.	ಗುಲ್ಬರ್ಗಾ	167.83
14.	ಬೀದರ್	14.25
15.	ರಾಯಚೂರು	875.46
16.	ಬಳ್ಳಾರಿ	517.46
17.	ಬೆಳಗಾಂ	0.94
18.	ಬಿಜಾಪುರ	38.08
19.	ಧಾರವಾಡ	621.76
20.	ಉತ್ತರ ಕನ್ನಡ	16.03
	ಒಟ್ಟು	**3199.39**

ಈ) ನೆರೆಹಾವಳಿಯಿಂದ ಮರಣ ಹೊಂದಿದ ಜನ 115

ಪರಿಹಾರ ನೀಡಿದ ಪ್ರಕರಣಗಳ ಸಂಖ್ಯೆ 110

ಮೊಬಲಗು ರೂ. 44.00 ಲಕ್ಷ

(20,000.00 ರೂ.ಗಳನ್ನು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಮತ್ತು 20,000.00 ರೂ.ಗಳನ್ನು ಪ್ರಧಾನ ಮಂತ್ರಿಯವರ ಪರಿಹಾರ ನಿಧಿಯಿಂದ, ಹೀಗೆ ಒಟ್ಟು 40,000.00 ರೂ.ಗಳ ಪರಿಹಾರ ಧನವನ್ನು ಮೃತರ ವಾರಸುದಾರರಿಗೆ ಮಂಜೂರು ಮಾಡಲಾಗಿದೆ)

ಉ) ಪೂರ್ಣ ಹಾನಿಗೊಂಡ ಮನೆಗಳು 56471

ಭಾಗಶಃ ಹಾನಿಗೊಂಡ ಮನೆಗಳು 221569

ಒಟ್ಟು **278040**

ಭಾಗಶಃ ಹಾನಿಗೊಳಗಾದ ಮನೆಗಳ ದುರಸ್ಥಿಗೆ ಮತ್ತು ಪೂರ್ಣ ಹಾನಿಗೊಳಗಾದ ಮನೆಗಳ ನಿರ್ಮಾಣಕ್ಕೆ, ನೊಂದವರಿಗೆ ಪರಿಹಾರ ನೀಡಲು ಈವರೆಗೆ 23.18 ಕೋಟಿ ರೂ.ಗಳನ್ನು ಸರ್ಕಾರದಿಂದ ಬಿಡುಗಡೆ ಮಾಡಿದೆ.

ನ್ಯಾಷನಲ್ ಸಹಕಾರ ಬ್ಯಾಂಕಿನ ನೌಕರರು ಮತ್ತು ಅಧಿಕಾರಿಗಳ ಸಂಖ್ಯೆ.

995 - ಶ್ರೀಮತಿ ಸುಮಾವಸಂತ (ವೀರಾಜಪೇಟೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಎ. *ನ್ಯಾಷನಲ್ ಸಹಕಾರ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿರುವ ನೌಕರರು ಮತ್ತು ಅಧಿಕಾರಗಳ ಸಂಖ್ಯೆ?*

ಬಿ. *ನೇಮಕಾತಿ ಸಮಯದಲ್ಲಿ ರೋಸ್ಟರ್ ಪದ್ಧತಿ (ವರದಿಪಟ್ಟಿ)ಯನ್ನು ಅನುಸರಿಸಲಾಗಿದೆಯೇ?*

ಸಿ) ಒಟ್ಟು ಸಿಬ್ಬಂದಿ ವರ್ಗದವರಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ : ವರ್ಗ ಮತ್ತು ಹಿಂದುಳಿದ ಜಾರಿಗೆ ಸೇರಿರುವುದು?

ಡಿ) ಸದರಿ ಬ್ಯಾಂಕಿನ ಸಿಬ್ಬಂದಿ ನೇಮಕಾತಿ ಸಮಯದಲ್ಲಿ ಪರಿಶಿಷ್ಟ ಜಾತಿ : ವರ್ಗ ಹಾಗೂ ಹಿಂದುಳಿದ ಜಾತಿ : ವರ್ಗಕ್ಕಾಗಿ ಮೀಸಲಾತಿ ನಿಯಮಗಳನ್ನು ಅನುಸರಿಸಿರುವುದಿಲ್ಲ. ಎಂಬುದು ನಿಜವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಎ. ಅಧಿಕಾರಿಗಳು 12

ಸಿಬ್ಬಂದಿ 90

ಜವಾನರು 19

ಒಟ್ಟು 121

ಬಿ. ಇಲ್ಲ.

ಸಿ. ಇಬ್ಬರು ನೌಕರರು ಪರಿಶಿಷ್ಟ ಜಾತಿ : ವರ್ಗದ ನೌಕರರು ಇರುತ್ತಾರೆ.

ಡಿ. ಹೌದು.

ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಜಾಗವನ್ನು ಖಾಸಗಿಯವರಿಗೆ ಗುತ್ತಿಗೆ.

995- ಶ್ರೀಮತಿ ಸುಮಾವಸಂತ (ವೀರಾಜಪೇಟೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ:

ಅ) ಬೆಂಗಳೂರಿನಲ್ಲಿ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಜಾಗವನ್ನು ಖಾಸಗಿಯವರಿಗೆ ಗುತ್ತಿಗೆಗೆ ಕೊಟ್ಟಿದ್ದು, ಆ ಜಾಗದಲ್ಲಿ ಸರ್ಕಾರವು ತಿಳಿಸಿರುವ ಹಾಗೆ ಕಟ್ಟಡ ಕಟ್ಟಲಾಗಿದೆಯೇ?

ಆ) ಇಲ್ಲದಿದ್ದಲ್ಲಿ ಕಟ್ಟಡವನ್ನು ಕಟ್ಟದಿರಲು ಕಾರಣವೇನು?

ಇ) ಅದರ ಬಗ್ಗೆ ಇಲಾಖೆಯವರು ಏನು ಕ್ರಮ ತೆಗೆದುಕೊಂಡಿರುವರು?

ಈ) ಅದಕ್ಕಾಗಿ ಇನ್ನೂ ಎಷ್ಟು ಸಮಯ ಬೇಕಾಗಬಹುದು?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು) :

ಅ) ಮುಜರಾಯಿ ಇಲಾಖೆಗೆ ಸಂಬಂಧಿಸಿದ ಜಮೀನನ್ನು 22 ಸಂಸ್ಥೆಗಳಿಗೆ ಗುತ್ತಿಗೆಗೆ ನೀಡಲಾಗಿದ್ದು ಕೇವಲ ಮೂರು ಸಂಸ್ಥೆಗಳು ಮಾತ್ರ ಕಟ್ಟಡ ಪೂರ್ಣವಾಗಿ ಕಟ್ಟಿರುವುದಿಲ್ಲ.

ಆ) ಮೇಲ್ಕಂಡ ಮೂರು ಪ್ರಕರಣಗಳಲ್ಲಿ ಕಟ್ಟಡ ಕಟ್ಟಲು ಇನ್ನೂ ಕಾಲಾವಕಾಶವಿರುತ್ತದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಂಗಳೂರಿನ ದೊಡ್ಡ ಬಸವಣ್ಣ ದೇವಸ್ಥಾನದ ಕಡ್ಲೆ ಪರಸೆ ಜಾತ್ರೆ ಆಗುವ ಜಾಗವನ್ನು ಖಾಸಗಿಯವರಿಗೆ ಗುತ್ತಿಗೆ

554 - ಶ್ರೀಮತಿ ಸುಮಾವಸಂತ (ವೀರಾಜಪೇಟೆ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವಿರೇ?

ಅ) ಬೆಂಗಳೂರಿನ ದೊಡ್ಡ ಬಸವಣ್ಣ ದೇವಸ್ಥಾನ ಕಡ್ಲೆ ಪರಸೆ ಜಾತ್ರೆ ಆಗುವ ಜಾಗವನ್ನು ಖಾಸಗಿಯವರಿಗೆ ಗುತ್ತಿಗೆಗೆ ಕೊಡಲಾಗಿದೆಯೇ?

ಆ) ಹಾಗಿದ್ದಲ್ಲಿ ಸಾರ್ವಜನಿಕರಿಂದ ಈ ಬಗ್ಗೆ ಆಕ್ಷೇಪಣೆಗಳು ಬಂದಿದೆಯೇ?

ಇ) ಜಾಗ ಕೊಡುವಾಗ ಸರ್ಕಾರದವರು ನೀತಿ ನಿಯಮ ಪಾಲಿಸಿರುವರೇ?

ಈ) ಇಲ್ಲದಿದ್ದರೆ ಯಾವ ಕ್ರಮ ಅನುಸರಿಸಿಕೊಂಡು ಆ ಜಾಗವನ್ನು ಕೊಡಲಾಗಿದೆ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಪರಶೆಯ ಸಮಯದಲ್ಲಿ ಮಾರಾಟಗಾರರು ಉಪಯೋಗಿಸುವ ಒಂದು ಸಣ್ಣ ಬಾಗವನ್ನು ಖಾಸಗಿಯವರಿಗೆ ಗುತ್ತಿಗೆಗೆ ಕೊಡಲಾಗಿದೆ.

ಆ) ಕೆಲವು ಆಕ್ಷೇಪಣೆಗಳನ್ನು ಧಾರ್ಮಿಕದತ್ತಿ ಆಯುಕ್ತರವರಲ್ಲಿ ಮೌಖಿಕವಾಗಿ ಸಲ್ಲಿಸಲಾಗಿತ್ತು. ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಜಮೀನು ಗುತ್ತಿಗೆ ನೀಡುವ ವಿರುದ್ಧವಾಗಿ ರಿಟ್ ಅರ್ಜಿ ಸಲ್ಲಿಸಿ ತದನಂತರ ಅರ್ಜಿದಾರರು ಹಿಂದಕ್ಕೆ ಪಡೆದಿರುವರು.

ಇ) ದೇವಸ್ಥಾನದ ಹಿತದೃಷ್ಟಿಯಿಂದ ಕೆಲವು ನಿಯಮಗಳನ್ನು ಸಡಿಸಲಾಗಿದೆ.

ಈ) ದೇವಸ್ಥಾನದ ಹಿತದೃಷ್ಟಿಯಿಂದ ಹೊಲಸಿಗೆ ಗುರಿಯಾಗಿದ್ದ ಮತ್ತು ಅತಿಕ್ರಮಣಕ್ಕೆ ಒಳಗಾಗಿದ್ದ ಜಮೀನನ್ನು ಮತ್ತು ಇಂತಹ ಅಕ್ರಮಗಳು ಮುಂದುವರೆಯುವುದನ್ನು ತಪ್ಪಿಸಲು ಸಾಕಷ್ಟು ಗುಡವಿಲ್ ಹಣವನ್ನು ಪಡೆದು ಆಸ್ಪತ್ರೆ ಕಟ್ಟುವಂತಹ ಸಾರ್ವಜನಿಕ ಹಿತಾಸಕ್ತಿ ಕಾರ್ಯಗಳಿಗಾಗಿ ಗುತ್ತಿಗೆಗೆ ನೀಡಲಾಗಿದೆ.

ಬೆಂಗಳೂರು ನ್ಯಾಷನಲ್ ಕೊ-ಆಪರೇಟಿವ್ ಬ್ಯಾಂಕ್ ಸದಸ್ಯರ ಸಂಖ್ಯೆ

997 - ಶ್ರೀಮತಿ ಸುಮಾರು ವಸಂತ (ವೀರಾಜ ಪೇಟೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ನಿ. ಬೆಂಗಳೂರು ಇದರಲ್ಲಿರುವ ಒಟ್ಟು ಸದಸ್ಯರ ಸಂಖ್ಯೆ ಎಷ್ಟು?

ಆ) 1991-92ನೇ ಸಾಲಿನಲ್ಲಿ ತನ್ನ ಸದಸ್ಯರಿಗೆ ಮಂಜೂರು ಮಾಡಿರುವ ಸಾಲದ ಮೊತ್ತವೆಷ್ಟು? ವಿವಿಧ ವರ್ಗದ ಸಾಲ)

ಇ) 1992-93ನೇ ಸಾಲಿನಲ್ಲಿ ಎಷ್ಟು ಸಾಲದ ಮೊತ್ತವನ್ನು ವಜಾ ಮಾಡಲಾಗಿದೆಯೇ?

ಈ) ಸಾಲವನ್ನು ರದ್ದು ಮಾಡಬೇಕಾದಲ್ಲಿ ಅನುಸರಿಸಬೇಕಾದ ವಿಧಾನಗಳು?

ಉ) ಬ್ಯಾಂಕಿನ ನಿರ್ದೇಶಕರ ಸಂಬಂಧಿಗಳಿಗೆ ನೀಡಿರುವ ಸಾಲವನ್ನು ರದ್ದು ಮಾಡಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ .(ಸಹಕಾರ ಸಚಿವರು) :

ಅ) ಬ್ಯಾಂಕಿನಲ್ಲಿ ದಿನಾಂಕ 3-09- 1992ರ ವರೆಗೆ 11,156 ಸದಸ್ಯರಿದ್ದಾರೆ.

ಆ) 1991-92ನೇ ಸಾಲಿನಲ್ಲಿ ಬ್ಯಾಂಕು ಈ ಕೆಳಕಂಡ ಸಾಲಗಳನ್ನು ಮಂಜೂರು ಮಾಡಿರುತ್ತದೆ.

1) ಚಿನ್ನಾಭರಣ ಸಾಲ	77.00
2) ನಗದು ಸಾಲ	117.75
3) ಯಂತ್ರೋಪಕರಣಗಳ ಮತ್ತು ಸಲಕರಣೆಗಳ ಸಾಲ	30.85
4) ವಾಹನಗಳ ಸಾಲ	48.35
5) ಜಮೀನಿನ ಸಾಲ	244.46
6) ಚಿರಾಸ್ತಿಗಳ ಮೇಲಿನ ಸಾಲ	96.17
ಒಟ್ಟು	**614.58**

ಇ) ಇಲ್ಲಿಯವರೆಗೆ ಯಾವುದೇ ರೀತಿಯ ಸಾಲವನ್ನು ಬ್ಯಾಂಕು ವಜಾ ಮಾಡಿರುವುದಿಲ್ಲ.

ಈ) ಪ್ರಶ್ನೆಯೇ ಉದ್ಭವಿಸುವಿದಿಲ್ಲ.

ಉ) ಪ್ರಶ್ನೆಯೇ ಉದ್ಭವಿಸುವುದಿಲ್ಲ.

ನಿಪ್ಪಾಣಿಯಲ್ಲಲಿರುವ ಹೆಚ್.ಎಸ್.ಎಸ್.ಕೆ. ಸಕ್ಕರೆ ಕಾರ್ಖಾನೆಯಲ್ಲಿನ ಗೋಣಿಚೀಲದ ಖರೀದಿ.

553 - ಶ್ರೀ ಸುಭಾಶ್ ಜೋಷಿ (ನಿಪ್ಪಾಣಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿಪ್ಪಾಣಿಯಲ್ಲಿರುವ ಹೆಚ್.ಎಸ್.ಎಸ್.ಕೆ ಸಕ್ಕರೆ ಕಾರ್ಖಾನೆಯಲ್ಲಿ ಕಳೆದ ವರ್ಷ ಗೋಣಿಚೀಲಗಳ ಖರೀದಿಯಲ್ಲಿ ಅಕ್ರಮಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸಹಕಾರಿ ಕಾಯ್ದೆ ಕಲಂ 64ರ ಅಡಿಯಲ್ಲಿ ವಿಚಾರಣೆ ನಡೆಸುವಂತೆ ಸಕ್ಕರೆ ನಿರ್ದೇಶಕರನ್ನು ಈಗಿನ ನಿರ್ದೇಶಕರ ಮಂಡಳಿಯವರು ಒತ್ತಾಯಿಸಿದ್ದಾರೆಯೇ?

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಹೌದು.

ಆ) ಹೌದು

ಇ) ಸಕ್ಕರೆ ನಿರ್ದೇಶಕರು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959ರ ಕಲಲಂ 64ರ ಅಡಿಯಲ್ಲಿ ತನಿಖೆ ನಡೆಸಲು ಬೆಳಗಾವಿ ಜಿಲ್ಲೆಯ ಸಹಕಾರಿ ಸಂಘಗಳ ಉಪ ನಿಬಂಧಕರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿ ಆದೇಶ ಹೊರಡಿಸಿದ್ದಾರೆ.

ರೈತರಿಗೆ ಸಹಕಾರ ಸಂಸ್ಥೆಗಳ ಮತ್ತು ವಾಣಿಜ್ಯ ಬ್ಯಾಂಕುಗಳ ಮೂಲಕ ನೀಡಲಾದ ಸಾಲ.

555 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ರೈತರಿಗೆ ಸಹಕಾರ ಸಂಸ್ಥೆಗಳ ಮತ್ತು ವಾಣಿಜ್ಯ ಬ್ಯಾಂಕುಗಳ ಮೂಲಕ ನೀಡಲಾದ ವಿವಿಧ ಸಾಲಗಳ ಮೊತ್ತವೆಷ್ಟು? (ವಲಯವಾರು ಅಂಕ ಅಂಶ ನೀಡುವುದು)

ಆ) ವಸೂಲು ಮಾಡಬೇಕಾಗಿರುವ ಮೊತ್ತ (ವಲಯವಾರು ಮೊತ್ತ ಕೊಡುವುದು)?

ಇ) ಈ ಸಾಲಗಳನ್ನು ಮನ್ನಾ ಮಾಡಲು ಸರಕಾರ ಯೋಜಿಸುತ್ತಿದೆಯೇ?

ಈ) ಸರ್ಕಾರ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಒಂದು ಸಮಯದ ರಿಯಾಯಿತಿ ಎಂದು ಮನ್ನಾ ಮಾಡಲು ಆಲೋಚಿಸುತ್ತಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ರೂಪಾಯಿ ಕೋಟಿಗಳಲ್ಲಿ

ಸಹಕಾರಿ ಕ್ಷೇತ್ರದಲ್ಲಿ	1340.97
ವಾಣಿಜ್ಯ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳು	3471.87
ಆ) ಸಹಕಾರಿ ಕ್ಷೇತ್ರದಲ್ಲಿ	292.01
ವಾಣಿಜ್ಯ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳು	1205.71

ಇ) ಇಲ್ಲ.

ಈ) ಇಲ್ಲ.

ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಮಳೆಯಿಂದಾಗಿ ರೈತರು ಬೆಳೆದ ಬೆಳೆಗಳಿಗೆ ಹಾನಿ

595 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಇತ್ತೀಚಿನ ಮಳೆಯಿಂದಾಗಿ ಕಳ್ಳಂಬೆಳ್ಳ ಕ್ಷೇತ್ರದಲ್ಲಿ ರೈತರು ಬೆಳೆದ ಬೆಳೆಗಳು ಮತ್ತು ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ರೈತರ ಬೆಳೆಯಿಂದ ಮತ್ತು ರಸ್ತೆಗಳ ಹಾನಿಯಿಂದಾಗಿರುವ ನಷ್ಟವೆಷ್ಟು?

ಇ) ಇಲ್ಲಿಯವರೆಗೂ ಕ್ಷೇತ್ರಕ್ಕೆ ಪ್ರವಾಹ ಹಾನಿಯಲ್ಲಿ ಬಿಡುಗಡೆಯಾದ ಹಣವೆಷ್ಟು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಹೌದು

ಆ)	ಬೆಳೆಗಳಿಗಾಗಿರುವ ಹಾನಿ	ರೂ. 250.00 ಲಕ್ಷಗಳು
	ರಸ್ತೆಗಳಿಗೆ ಆಗಿರುವ ಹಾನಿ	ರೂ. 38.00 ಲಕ್ಷಗಳು
		ರೂ. 288.00 ಲಕ್ಷಗಳು

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಆರಾಧನಾ ಯೋಜನೆಯಡಿಯಲ್ಲಿ ಬಿಡುಗಡೆ ಆದ ಹಣ

705 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಆರಾಧನಾ ಯೋಜನೆಯಡಿಯಲ್ಲಿ ಇದುವರೆಗೂ ಸರ್ಕಾರವು ಬಿಡುಗಡೆ ಮಾಡಿದ ಹಣವಷ್ಟು?

ಆ) ಅದರಲ್ಲಿ ದೇವಸ್ಥಾನಗಳ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಿದ ಹಣವೆಷ್ಟು? (ತಾಲ್ಲೂಕು ಹೋಬಳಿ ಮತ್ತು ಗ್ರಾಮವಾರು ಮಾಹಿತಿಯನ್ನೊದಗಿಸುವುದು)

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಮಂತ್ರಿಗಳು) :

ಅ) ರೂ. 28,92,850-00

ಆ) ರೂ. 14,37,500-00 ಪಟ್ಟಿ ಲಗತ್ತಿಸಿದೆ.

ಬೆಂಗಳೂರು (ಗ್ರಾಮಾಂತರ) ಜಿಲ್ಲೆಯಲ್ಲಿ ಆರಾಧನಾ ಯೋಜನೆಯಡಿ ದೇವಾಲಯಗಳ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಿದ ಅನುದಾನದ ವಿವರ ಈ ಕೆಳಕಂಡಂತೆ ಇದೆ.

1) ರಾಮನಗರಂ ತಾಲ್ಲೂಕು

1) ಶ್ರೀ ಅಂಜನೇಯಸ್ವಾಮಿ ದೇವಾಲಯ (ಕಸಬಾ ಹೋಬಳಿ) ಬೋವಿ ಬೀದಿ, ರಾಮನಗರ ಟೌನ್		ರೂ. 15,000
2) ಶ್ರೀ ರಾಮ ಭಜನ ಮಂದಿರ, ರಾಮನಗರಂ ಟೌನ್, (ಕಸಬಾ ಹೋಬಳಿ)		15,000
3) ಶ್ರೀ ನಾರಾಯಣಸ್ವಾಮಿ ದೇವಸ್ಥಾನ, ಕೋಡಿಯಾಲ ತೇರಿನಹಳ್ಳಿ, (ಬಿಡದಿ ಹೋಬಳಿ)		15,000
4) ಶ್ರೀ ಮಾರಮ್ಮ, ಜಾಲಮಂಗಲ (ಕೂಟಗಲ್ ಹೋಬಳಿ)		20,000
5) ಶ್ರೀ ವರದರಾಜಸ್ವಾಮಿ, ಅಂಜೀಪುರ, (ಬಿಡದಿ ಹೋಬಳಿ)		25,000
6) ಶ್ರೀ ಮಂಟೇಸ್ವಾಮಿ, ಅಣ್ಣಹಳ್ಳಿ (ಕೈಲಂಚ ಹೋಬಳಿ)	25,000	
7) ಶ್ರೀ ಆದಿಶಕ್ತಮ್ಮ ದೇವರು, ಮಾಯಗಾನಹಳ್ಳಿ (ಕಸಬಾ ಹೋಬಳಿ)	20,000	
	ರೂ. 1,35,000	

2) ದೊಡ್ಡಬಳ್ಳಾಪುರ ತಾಲ್ಲೂಕು :

1) ಶ್ರೀ ಮಾರಮ್ಮ ದೇವರು, ಉಜ್ಜನಿ (ಸಾಸಲು ಹೋಬಳಿ)	50,000
2) ಶ್ರೀ ಮಾರಮ್ಮ ದೇವರು, ಆರೂಡಿ, (ಸಾಸಲು ಹೋಬಳಿ)	50,000
3) ಶ್ರೀ ಮುತ್ತಲಮ್ಮ ದೇವಾಲಯ, ಬಾಶೆಟ್ಟಿಹಳ್ಳಿ (ಕಸಬಾ ಹೋಬಳಿ)	15,000
4) ಶ್ರೀ ಪೂಜಮ್ಮ ದೇವಾಲಯ, ಓಟದೇವನಹಳ್ಳಿ (ಕಸಬಾ ಹೋಬಳಿ)	20,000
5) ಶ್ರೀ ಮದ್ದೂರಮ್ಮ ದೇವಾಲಯ, ಹಾದ್ರಿಪುರ (ದೊಡ್ಡಬೆಳವಂಗಲ ಹೋಬಳಿ)	15,000
6) ಶ್ರೀ ಚಿಕ್ಕಮಾರಮ್ಮ ದೇವಾಲಯ ಕಂ ಪ್ರಾರ್ಥನಾ ಮಂದಿರ, ಕೊಲಗೆರೆ (ದೊಡ್ಡ ಬೆಳವಂಗಲ ಹೋಬಳಿ)	50,000
	ರೂ. 2,00,000

3) ಮಾಗಡಿ ತಾಲ್ಲೂಕು

1) ಶ್ರೀ ವಿನಾಯಕ ದೇವರು, ಶಾಂತಿಗ್ರಾಮ (ಕಸಬಾ ಹೋಬಳಿ)	50,000

2) ಶ್ರೀ ಸೇವಾಬಾಯಿ ಭಜನ ಹಾಗೂ ರಾಮಮಂದಿರ ಕರ್ಲಹಳ್ಳಿ (ಮಾಡಬಾಳು ಹೋಬಳಿ)	50,000
3) ಶ್ರೀ ಯಲ್ಲಮ್ಮ ದೇವರು, ಮುಮ್ಮನಹಳ್ಳಿ (ಸೋಲೂರು ಹೋಬಳಿ)	20,000
ರೂ.	**1,40,000**

4) ಕರಕಪುರ ತಾಲ್ಲೂಕು

1) ಶ್ರೀ ಕ್ಯಾತಮ್ಮ ದೇವಾಲಯ, ಶಿವನಹಳ್ಳಿ (ಕಸಬಾ ಹೋಬಳಿ)	50,000
2) ಶ್ರೀ ಯಲ್ಲಮ್ಮ ದೇವಾಲಯ, ಗುರುಮೂರ್ತಿ, ಕುರಪೇಟೆ (ಕಸಬಾ ಹೋಬಳಿ)	50,000
3) ಶ್ರೀ ಅಣ್ಣಮ್ಮ ದೇವರು, ಚಾಮುಂಡಿಪುರ, (ಕೊಡಿಹಳ್ಳಿ ಹೋಬಳಿ)	50,000
4) ಶ್ರೀ ಸೊಲ್ಲಪುರದಮ್ಮ ದೊಡ್ಡಕಬ್ಬಾಳು (ಕೊಡಿಹಳ್ಳಿ ಹೋಬಳಿ)	10,000
5) ಶ್ರೀ ಯಲ್ಲಮ್ಮ ದೇವರು, ರಾಮಸಾಗರ (ಹಾರೊಹಳ್ಳಿ ಹೋಬಳಿ)	12,500
6) ಶ್ರೀ ಮುತ್ತರಾಯ ಬಂಡೆ, ಬಸಪ್ಪನದೊಡ್ಡಿ (ಕಸಬಾ ಹೋಬಳಿ)	12,500
7) ಶ್ರೀ ಆರಾಧನಾ ಮಂದಿರ ಕಂ-ದೇವಾಲಯ ದೆಂಡಗೊಂಡ್ಲು (ಉಯ್ಯಂಬಳ್ಳಿ ಹೋಬಳಿ)	12,500
8) ಶ್ರೀ ಆರಾಧನಾ ಮಂದಿರ-ಕಂ-ದೇವಾಲಯ, ತಾಡಶಿವನಹಳ್ಳಿ, ದೊಡ್ಡಿ, (ಉಯ್ಯಂಬಳ್ಳಿ ಹೋಬಳಿ)	12,500
9) ಪ್ರಾರ್ಥನಾ ಮಂದಿರ-ಕಂ-ದೇವಾಲಯ, ಯಲವಳ್ಳಿ, (ಸಾತನೂರ ಹೋಬಳಿ)	12,500
	2,22,500

5) ಹೊಸಕೋಟೆ ತಾಲ್ಲೂಕು

1) ಶ್ರೀ ಶನಿದೇವರು, ಶಿವನಾಪುರ (ನಂದಿಗುಡಿ ಹೋಬಳಿ)	50,000
2) ಶ್ರೀ ವೇಣುಗೋಪಾಲಸ್ವಾಮಿ ಹೆಡಕಸಹಳ್ಳಿ (ನಂದಿಗುಡಿ ಹೋಬಳಿ)	50,000
3) ಶ್ರೀ ಪಟಾಲಮ್ಮ ದೇವರು, ಸರ್ಕಾರ ಗುಟ್ಟಹಳ್ಳಿ (ಕಸಬಾ ಹೋಬಳಿ)	10,000
4) ಶ್ರೀ ಪೂಜಮ್ಮ ಮಹೇಶ್ವರಮ್ಮ ಗಿಡ್ಡಪ್ಪನಹಳ್ಳಿ ಸೂಲಿಬೆಲೆ ಹೋಬಳಿ	10,000
5) ಶ್ರೀ ಮುನೇಶ್ವರ ಅನುಪಹಳ್ಳಿ (ಕಸಬಾ ಹೋಬಳಿ)	10,000
6) ಶ್ರೀ ಮುನೇಶ್ವರ ಚೊಕ್ಕನಹಳ್ಳಿ	10,000
7) ಶ್ರೀ ಪಟಾಲಮ್ಮ ತಾವರೆಕೆರೆ (ನಂದಿಗುಡಿ ಹೋಬಳಿ) ರೂ.	10,000

8) ಶ್ರೀ ಮುತ್ಯಾಲಮ್ಮ ಹಸಿಗಾಳ (ಸೂಲಿಬೆಲೆ ಹೋಬಳಿ)	10,000
9) ಶ್ರೀ ಬಸವಣ್ಣ ದೆಂಡಿಗಾನಹಳ್ಳಿ	20,000
10) ಶ್ರೀ ಕೃಷ್ಣಸ್ವಾಮಿ, ಕರಪನಹಳ್ಳಿ (ನಂದಿಗುಡಿ ಹೋಬಳಿ)	20,000
11) ಶ್ರೀ ಚೌಡೇಶ್ವರಿ, ಕರಪನಹಳ್ಳಿ (ನಂದಿಗುಡಿ ಹೋಬಳಿ)	10,000
	2,10,000

6) ಚನ್ನಪಟ್ಟಣ ತಾಲ್ಲೂಕು :

1) ಶ್ರೀ ಕೊಲ್ಲಪುರದಮ್ಮ ದೇವರು ಹಬ್ಬೂರು ಹರಿಜನ ಕಾಲೋನಿ, ಕಸಬಾ ಹೋಬಳಿ	10,000
2) ಶ್ರೀ ಕೆಂಪಮ್ಮ ದೇವರು ನಾಮಂದಿಪುರ, ವಿ. ಪುರ ಹೋಬಳಿ	10,000
3) ಶ್ರೀ ಚಾಮುಂಡೇಶ್ವರಿ, ಕೋಟಮಾರನಹಳ್ಳಿ ಮಳೂರು ಹೋ.	10,000
4) ಶ್ರೀ ಉಚ್ಚಮ್ಮ ದೇವಾಲಯ ಸಂತೇಮಾಗೇನಹಳ್ಳಿ, ಕಸಬಾ ಹೋ.	10,000
5) ಶ್ರೀ ಉಚ್ಚಮ್ಮ ಹೊನ್ನರಥಮ್ಮ ಮುದಗೆರೆ, ಮಳೂರು ಹೋ.	10,000
6) ಶ್ರೀ ಆದಿಶಕ್ತಮ್ಮ ಶೆಟ್ಟಿಹಳ್ಳಿ ಟೌನ್	10,000
7) ಶ್ರೀ ರಾಮಮಂದಿರ ದೇವಾಲಯ, ಅವ್ವೇರಳ್ಳಿ ವಿ.ಪುರ ಹೋ.	10,000
8) ಶ್ರೀ ಉಚ್ಚಮ್ಮ ದೇವಾಲಯ, ಕೊರ್ಣಗೆರೆ, ಮಳೂರು ಹೋಬಳಿ	10,000
9) ಶ್ರೀ ಹುಲಿಯಮ್ಮ ದೇವಾಲಯ ಕಟ್ಟೆದುಡ್ಡಿ, ವಿ.ಪುರ ಹೋಬಳಿ	10,000
10) ಶ್ರೀ ಲಕ್ಷ್ಮಿದ್ದೇವರು ಯಲಿಯೂರು, ವಿ.ಪುರ ಹೋಬಳಿ	33,000
11) ಶ್ರೀ ಮಾರಮ್ಮ ದೇವರು ನೇರಳೂರು ವಿ.ಪುರ ಹೋಬಳಿ	33,000
12) ಶ್ರೀ ಹುಚ್ಚಮ್ಮ ಮಚ್ಚಮ್ಮ-ಕಂ-ಪ್ರಾರ್ಥನಾ ಮಂದಿರ, ಹರಿಸಂದ್ರ, ಕಸಬಾ ಹೋಬಳಿ	33,000
13) ಶ್ರೀ ಮಾರಮ್ಮ ದೇವಾಲಯ, ಕೆಂಚಯ್ಯನದೊಡ್ಡಿ ಕಸಬಾ ಹೋ	31,000
ರೂ.	2,20,000

7) ನೆಲಮಂಗಲ ತಾಲ್ಲೂಕು :

1) ಶ್ರೀ ಮಹೇಶ್ವರ ಮಾರಮ್ಮ ದೇವಾಲಯ ವಿಶ್ವೇಶ್ವರಪುರ, ಕಸಬಾ ಹೋಬಳಿ	30,000
2) ಶ್ರೀ ದುರ್ಗಾದೇವಿ ದೇವಾಲಯ, ಯಳಚಗೆರೆ ಕಸಬಾ ಹೋಬಳಿ	30,000

3) ಶ್ರೀ ದುರ್ಗಮ್ಮ ತ್ಯಾಮಗೊಂಡು (ತ್ಯಾಮಗೊಂಡ್ಲು ಹೋ)		25,000
4) ಶ್ರೀ ಪೂಜಮ್ಮ ದಾಳಮ್ಮ ದೊಡ್ಡೇರಿ, ತ್ಯಾಮಗೊಂಡ್ಲು ಹೊ		25,000
		1,10,000

8)ದೇವನಹಳ್ಳಿ ತಾಲ್ಲೂಕು

1) ಶ್ರೀ ಅಂಜನೇಯಸ್ವಾಮಿ, ದೊಡ್ಡಕುರುಬರಹಳ್ಳಿ ಕಸಬಾ ಹೋಬಳಿ		15,000
2) ಶ್ರೀ ಸಣ್ಣಮುನೇಶ್ವರ ಸ್ವಾಮಿ, ಕನ್ನಮಂಗಲ ಕಸಬಾ ಹೋಬಳಿ		15,000
3) ಶ್ರೀ ಮುನೇಶ್ವರ ದೇವನಹಳ್ಳಿ, ಕಸಬಾ ಹೋಬಳಿ		20,000
4) ಶ್ರೀ ಮದ್ದೂರಮ್ಮ ದೇವಸ್ಥಾನ, ಅರದೇಶನಹಳ್ಳಿ ಕುಂದಾಣ ಹೋಬಳಿ		18,000
5) ಶ್ರೀ ದುರ್ಗಮ್ಮ ದೇವಸ್ಥಆನ, ಬ್ಯಾಡರಹಳ್ಳಿ, ಕುಂದಾಣ ಹೋಬಳಿ		16,000
6) ಶ್ರೀ ಮದ್ದೂರಮ್ಮ ದೇವಸ್ಥಆನ, ವಿಶ್ವನಾಥಪುರ	"	16,000
7) ಶ್ರೀ ಪಟಾಲಮ್ಮ ದೇವಸ್ವಾನ, ಕಬ್ಬನ್‌ಹಳ್ಳಿ	"	16,000
8) ಶ್ರೀ ಮಾರಮ್ಮ ದೇವರು, ಬೆಟ್ಟನಹಳ್ಳಿ	"	16,000
9) ಶ್ರೀ ಮುತ್ಯಾಲಮ್ಮ ಸುಣ್ಣಘಟ್ಟ	"	16,000
10) ಶ್ರೀ ತಳೀತಿಮ್ಮ ದೇವಸ್ಥಾನ, ಸಿಂಗ್ರಹಳ್ಳಿ	"	16,000
11) ಶ್ರೀ ಅಂಜನೇಯಸ್ವಾಮಿ, ಬೈರಾಪುರ, ವಿಜಯಪುರ	ಹೋಬಳಿ	16,000
12) ಶ್ರೀ ಮುತ್ಯಾಲಮ್ಮ ಹಾರೋಹಳ್ಳಿ	"	10,000
13) ಶ್ರೀ ಅಂಜನೇಯ, ಹಾರೋಹಳ್ಳಿ		10,000
		2,00,000

ಮಂಚನ ಬೆಲೆ ಯೋಜನೆಯಡಿ ನಿರಾಶ್ರಿತ ಕುಟುಂಬಗಳಿಗೆ ಜಮೀನು ಮತ್ತು ಪುನರ್ವಸತಿ.

618 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಚನಬೆಲೆ ಅಣೆಕಟ್ಟೆಗಾಗಿ ಸ್ವಾಧೀನ ಪಡಿಸಿಕೊಂಡ ಭೂಮಿಯ ವಿಸ್ತೀರ್ಣವೆಷ್ಟು?

ಆ) ಈ ಅಣೆಕಟ್ಟೆಗಾಗಿ ಜಮೀನನ್ನು ಕಳೆದುಕೊಂಡಿರುವ ಕುಟುಂಬಗಳೆಷ್ಟು?

ಇ) ಇವರಲ್ಲಿ ನೆಲಮಂಗಲಕ್ಕೆ ಸೇರಿದ ದಾಸನಪುರ ಹೋಬಳಿ ಕಡಬಗೆರೆ ಗ್ರಾಮದ ಕುಟುಂಬಗಳೆಷ್ಟು?

ಈ) ಈ ಮೇಲ್ಕಂಡ ಯೋಜನಯಿಂದ ಜಮೀನು ಕಳೆದುಕೊಂಡ ಕುಟುಂಬಗಳಿಗೆ ಸರ್ಕಾರವು ಪುನರ್ವಸತಿ ಹಾಗೂ ಜಮೀನನ್ನು ಮಂಜೂಮಾಡಲಾಗಿದೆಯೇ? (ವಿವರವನ್ನೊದಗಿಸುವುದು)

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಈ ಅಣೆಕಟ್ಟೆಗಾಗಿ 434ಎಕರೆ 16ಗುಂಟೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ.

ಆ) ಈ ಅಣೆಕಟ್ಟೆಗಾಗಿ 192 ಕುಟುಂಬಗಳು ಜಮೀನನ್ನು ಕಳೆದುಕೊಂಡಿರುತ್ತಾರೆ.

ಇ) ಇಲ್ಲ

ಈ) ಈ ಯೋಜನೆಯಿಂದ ಜಮೀನು ಕಳೆದುಕೊಂಡ ಕುಟುಂಬಗಳಿಗೆ ಸರ್ಕಾರವು ಪುನರ್ವಸತಿ ಹಾಗೂ ಜಮೀನನ್ನು ಮಂಜೂರು ಮಾಡಲಾಗಿದ್ದು, ಇದಕ್ಕೆ ಸಂಬಂಧಪಟ್ಟ ಪೂರ್ಣ ವಿವರಗಳು ಈ ಕೆಳಕಂಡಂತಿರುತ್ತೆ.

ಮುಳುಗಡೆಯಾದ ಗ್ರಾಮದ ಹೆಸರು	ಒಟ್ಟು ನಿರಾಶ್ರಿತ ಕುಟುಂಬಗಳ ಸಂಖ್ಯೆ	ಮಂಜೂರಾದ ಒಟ್ಟು ಜಮೀನು	ಯಾವ ಗ್ರಾಮದಲ್ಲಿ ಮಂಜೂರಾಗಿದೆ
1. ವಾಡಳ್ಳಿ	50	125-00	ಚೋಳನಾಯ್ಕನಹಳ್ಳಿ
2. ಅವ್ವೇರಹಳ್ಳಿ	23	43-00	ಅವ್ವೇರಹಳ್ಳಿ
	16	24-00	ವರ್ತೂರು
	17	28-00	ಕಡಬಗೆರೆ
	79	122-00	ಕೋಲೂರು
3. ವೀರಾಪುರ	30	49-30	ಕಡಬಗೆರೆ

ಸೈಟುಗಳ ವಿಂಗಡಣೆ

1. ಅವ್ವೇರಹಳ್ಳಿ	65	ಕೋಲೂರು
	14	ವರ್ತೂರು
	14	ಕಡಬಗೆರೆ
	61	ಅವ್ವೇರಹಳ್ಳಿ
2 ವೀರಾಪುರ	27	ಕಡಬಗೆರೆ

ರಾಜ್ಯದಲ್ಲಿ ಅರಣ್ಯಕ್ಕೆ ಸೇರಿದ ಜಮೀನುಗಳ ಒತ್ತುವರಿ

652 - ಶ್ರೀ ಅಂಜನಾಮೂರ್ತಿ (ನೆಲಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅರಣ್ಯಕ್ಕೆ ಸೇರಿದ ಭೂಮಿಯನ್ನು ಇದುವರೆವಿಗೂ ಒತ್ತುವರಿ ಮಾಡಿದ ವಿಸ್ತೀರ್ಣ ಎಷ್ಟು, ಇದರಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಜನಾಂಗದವರ ಭೂಮಿಯೆಷ್ಟು?

ಆ) ನೆಲಮಂಗಲ ಕ್ಷೇತ್ರದ ಅರಣ್ಯ ಹಾಗೂ ಕೆರೆ ಅಂಗಳಕ್ಕೆ ಸೇರಿದ ಎಷ್ಟು ಎಕರೆ ಪ್ರದೇಶವನ್ನು ಸಾರ್ವಜನಿಕರು ಒತ್ತುವರಿ ಮಾಡಿರುತ್ತಾರೆ?

ಇ) ಅದರಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಜನಾಂಗದವರು ಉಳುಮೆ ಮಾಡುತ್ತಿರುವ ಭೂಮಿಯ ವಿಸ್ತೀರ್ಣವೆಷ್ಟು?

ಈ) ಹಾಗಿದ್ದಲ್ಲಿ, ಈ ಜನರು ಉಳುಮೆ ಮಾಡುತ್ತಿರುವ ಜಮೀನನ್ನು ಸಕ್ರಮಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) 1,63,777-34 ಎಕರೆಗಳು

ಪರಿಶಿಷ್ಟ ಜಾತಿ 57510-06 ಎಕರೆಗಳು

ಪರಿಶಿಷ್ಟ ವರ್ಗ

ಆ) ಅರಣ್ಯ ಭೂಮಿ 29-00 ಎಕರೆಗಳು

ಕೆರೆ ಅಂಗಳ 19-17 ಎಕರೆಗಳು

ಇ) ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ

ಅರಣ್ಯ ಭೂಮಿ 22-00 ಎಕರೆಗಳು

ಕೆರೆ ಅಂಗಳ 2-00 ಎಕರೆಗಳು

ಈ) ಇಲ್ಲ, ಅರಣ್ಯ ಮತ್ತು ಕೆರೆ ಅಂಗಳ ಪ್ರದೇಶಗಳಲ್ಲಿನ ಅನಧಿಕೃತ ಸಾಗುವಳಿಯನ್ನು ಸಕ್ರಮಿಕರಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

ಬಗರ್‌ಹುಕುಂ ಜಮೀನನ್ನು ಸಕ್ರಮಗೊಳಿಸಲು ನಿಗಧಿತ ವೇಳೆಯಲ್ಲಿ ಅರ್ಜಿ ಸಲ್ಲಿಸದೆ ಇರುವವರಿಗೆ ಕ್ರಮ.

654 - ಶ್ರೀ ಎಸ್. ಚಿಕ್ಕಮಾಧು, (ಹುಣಸೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಜಮೀನನ್ನು ಅನಧಿಕೃತವಾಗಿ ಹಲವಾರು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದು, ಕಾರಣಾಂತರಗಳಿಂದ ನಿಗಧಿತ ವೇಳೆಯಲ್ ಅರ್ಜಿ ಸಲ್ಲಿಸದೆ ಇರುವವರಿಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಆ) ಸರ್ಕಾರಿ ಗೋಮಾಳ ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಕ್ರಮಗೊಳಿಸು ಸರ್ಕಾರವು ಕೈಗೊಂಡ ಕ್ರಮಗಳಾವುವು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ನಿಗಧಿಪಡಿಸ್ಸಿದ ದಿನಾಂಕವಾದ 19-9-1991ರ ನಂತರ ಬಂದ ಅರ್ಜಿಗಳನ್ನು ಸಕ್ರಮಗೊಳಿಸುವ ಬಗ್ಗೆ ಪರಿಗಣಿಸಲು ಸಾಧ್ಯವಾಗುವುದಿಲ್ಲ, ಆದ್ದರಿಂದ ಅವುಗಳನ್ನು ಸಂಬಂಧಿಸಿದ ತಹಶೀಲ್ದಾರರು ವಿಲೇ ಮಾಡಿರುತ್ತಾರೆ.

ಆ) ನಿಯಮಾವಳಿಯನ್ನು ಸೂಕ್ತ ತಿದ್ದುಪಡಿ ಮಾಡಿ ಗೋಮಾಳ ಜಮೀನಿನ ಅಕ್ರಮ ಸಾಗುವಳಿಯನ್ನು ಸಕ್ರಮೀಕರಿಸಲು ಅವಕಾಶವನ್ನು ಕಲ್ಪಸಲಾಗಿದೆ.

ಮುಂಡರಗಿ ತಾಲ್ಲೂಕಿನಲ್ಲಿ ಚಂಡ ಮಾರುತದಿಂದಾದ ಹಾನಿಯ ಅಂದಾಜು.

633 - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿನಲ್ಲಿ ಚಂಡಮಾರುತದಿಂದ ಬಿದ್ದ ಮನೆಗಳೆಷ್ಟು? ಹಾನಿಗೊಳಗಾದ ಪ್ರದೇಶದಲ್ಲಿ ಆಸ್ತಿ ಪಾಸ್ತಿಗಳಿಗಾದ ನಷ್ಟದ ಅಂದಾಜೆಷ್ಟು? ಹಾನಿಗೊಳಗಾದವರಿಗೆ ಸರ್ಕಾರವು ನೀಡಿರುವ ಪರಿಹಾರ ಧನವೆಷ್ಟು?

ಆ) ಮುಂಡರಗಿ ತಾಲ್ಲೂಕಿನ ಕಿಂಗಟಾಲೂರು, ಗುಮ್ಮಗೋಳ, ಹಮ್ಮಿಗಿ, ದಂಗಾಪುರ, ಕೊರ್ಲಹಳ್ಳಿ ಹಾಗೂ ಬದರಹಳ್ಳಿ ಗ್ರಾಮಗಳು ಪೂರ್ತಿ ನಾಶವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಆ ಗ್ರಾಮಗಳ ಪುನರ್ವಸತಿಗಳಿಗಾಗಿ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ರಾಜಶೇರಮೂರ್ತಿ (ಕಂದಾಯ ಸಚಿವರು) :

ಅ) ಪೂರ್ಣ ಹಾನಿಯಾಗಿರುವ ಮನೆಗಳ ಸಂಖ್ಯೆ 1425
ಭಾಗಶಃ ಹಾನಿಯಾಗಿರುವ ಮನೆಗಳ ಸಂಖ್ಯೆ 6651
ಒಟ್ಟು **8076**
ಹಾನಿಗೊಳಗಾದ ಆಸ್ತಿ-ಪಾಸ್ತಿಗಳ ಅಂದಾಜು
ನಷ್ಟು ರೂ. 168.38 ಲಕ್ಷ
ಸರ್ಕಾರದಿಂದ ನೀಡಿರುವ ಪರಿಹಾರದ
ಮೊತ್ತ ರೂ. 64.56 ಲಕ್ಷ

ಆ) ಕಿಂಗಟಾಲೂರು ಗ್ರಾಮ ಮತ್ತು ಪೂರ್ಣ ಹಾನಿಗೊಳಗಾಗಿದ್ದು ಇತರೇ ಐದು ಹಳ್ಳಿಗಳು ಭಾಗಶಃ ಹಾನಿಗೊಳಗಾಗಿವೆ.

ಇ) ಕಿಂಗಟಾಲೂರು, ದಂಗಾಪುರ ಮತ್ತು ಕೊರ್ಲಹಳ್ಳಿ ಗ್ರಾಮಗಳ ಪುನರ್ವಸತಿಗೆ ಸ್ವಾಧೀನಪಡಿಸಿಕೊಂಡಿರುವ ಭೂಮಿ ಲಭ್ಯವಿದೆ. ಬಿಡಂಹಳ್ಳಿ ಗ್ರಾಮದ ಪುನರ್ವಸತಿಗಾಗಿ ಖಾಸಗಿ ಭೂಮಿಯನ್ನು ಸ್ವಾಧೀನಿಪಡಿಸಿಕೊಳ್ಳಲು ಕ್ರಮ ಕೈಗೊಂಡಿದೆ. ಗುಮ್ಮಗೋಳ ಮತ್ತು ಹಮ್ಮಿಗಿ ಗ್ರಾಮಗಳ ಪುನರ್ವಸತಿ ಅವಶ್ಯವಿರುವುದಿಲ್ಲ.

ನೆರೆ ಪರಿಹಾರಗೆ ಬಿಡುಗಡೆಯಾದ ಹಣ.

103 - ಶ್ರೀ ಪಿ.ಜಿ.ಆರ್. ಸಿಂಧ್ಯ, (ಕನಕಪುರ ವಿಧಾನಸಭಾ ಕ್ಷೇತ್ರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1992ರ ಅಕ್ಟೋಬರ್-ನವೆಂಬರ್ ತಿಂಗಳುಗಳಲ್ಲಿ ರಾಜ್ಯದಲ್ಲಿ ವಿಪರೀತ ಮಳೆಯ ಹಾನಿಯಿಂದಾಗಿರುವ ನಷ್ಟಕ್ಕೆ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆ ಆಗಿರುವ ಹಣವೆಷ್ಟು?

ಆ) ರಾಜ್ಯ ಸರ್ಕಾರದಿಂದ ಬಿಡುಗಡೆ ಆಗಿರುವ ಹಣವೆಷ್ಟು ಹಾಗೂ ಬಿಡುಗಡೆಯಾದ ಹಣವು ವೆಚ್ಚವಾಗಿದೆಯೇ (ಜಿಲ್ಲಾವಾರು ವಿವರಗಳನ್ನು ನೀಡುವುದು) ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಕೇಂದ್ರ ಸರ್ಕಾರವು ಈ ಕೆಳಕಂಡಂತೆ ನೆರವನ್ನು ಒದಗಿಸಿದೆ
(ಕೋಟಿ ರೂ.ಗಳಲ್ಲಿ)

(1) 1992-93ನೇ ಸಾಲಿನಲ್ಲಿ ಕೇಂದ್ರದಿಂದ ರಾಜ್ಯ ಪ್ರಕೃತಿ ವಿಕೋಪ ನಿಧಿಗೆ ವಂತಿಗೆ 20.25
(2) 1993-94ನೇ ಸಾಲಿಗೆ 1 ಮತ್ತು 2ನೇ ಕಂತಿನ ಮುಂಗಡ ವಂತಿಗೆ ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ 10.12
ಒಟ್ಟು **30.37**

ಆ) ರಾಜ್ಯ ಸರ್ಕಾರವು 1992-93ನೇ ಸಾಲಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ರೂ. 6.75 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ.

ಸರ್ಕಾರವು ನೆರೆ ಪರಿಹಾರಕ್ಕಾಗಿ ಪ್ರವಾಹ ಪೀಡಿತ ಜಿಲ್ಲೆಗಳಿಗೆ ದಿನಾಂಕ 17.11.1992ರಿಂದ 30.12.1992ರವರೆಗೆ ಈ ಕೆಳಕಂಡಂತೆ ಹಣವನ್ನು ಬಿಡುಗಡೆ ಮಾಡಿದೆ (ಜಿಲ್ಲಾವಾರು)

ಜಿಲ್ಲೆಯ ಹೆಸರು	ಲಕ್ಷ ರೂ.ಗಳಲ್ಲಿ
1. ರಾಯಚೂರು	1292.15
2. ಬಳ್ಳಾರಿ	897.60
3. ಧಾರವಾಡ	647.70
4. ಚಿತ್ರದುರ್ಗ	389.10
5. ಶಿವಮೊಗ್ಗ	186.10
6. ಚಿಕ್ಕಮಗಳೂರು	132.15
7. ಮೈಸೂರು	52.87
8. ದಕ್ಷಿಣ ಕನ್ನಡ	87.15
9. ಉತ್ತರ ಕನ್ನಡ	99.87
10. ಹಾಸನ	47.25
11. ಬೆಳಗಾಂ	6.50
12. ಬಿಜಾಪುರ	1.50
13. ಬೀದರ್	0.75
ಒಟ್ಟು	**3841.54**

ದಿನಾಂಕ 17.11.1992ರಂದು 30.12.1992ರವರೆಗೆ ನೆರೆ ಪರಿಹಾರಕ್ಕಾಗಿ ವೆಚ್ಚಮಾಡಿರುವ ಹಣ.

ಜಿಲ್ಲೆಯ ಹೆಸರು	ಲಕ್ಷ ರೂ.ಗಳಲ್ಲಿ
1) ರಾಯಚೂರು	875.64
2) ಬಳ್ಳಾರಿ	517.46
3) ಧಾರವಾಡ	621.76
4) ಚಿತ್ರದುರ್ಗ	201.56
5) ಶಿವಮೊಗ್ಗ	128.56
6) ಚಿಕ್ಕಮಗಳೂರು	17.47
7) ಮೈಸೂರು	9.03
8) ದಕ್ಷಿಣ ಕನ್ನಡ	85.39
9) ಉತ್ತರ ಕನ್ನಡ	60.03
10) ಹಾಸನ	134.96
11) ಬೆಳಗಾಂ	0.94
12) ಬಿಜಾಪುರ	38.08
13) ಬೀದರ್	14.25
ಒಟ್ಟು	**2705.13**

ವಾರ್ಷಿಕ ಮಹಾಸಭೆ ನಡೆಸದೆ ಇರುವ ಸಂಘಗಳ ಸಂಖ್ಯೆ

643 - ಶ್ರೀ ಪೆರಿಕಲ್ ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಸಹಕಾರ ಸಂಘಗಳ ಕಾಯಿದೆ ಅನ್ವಯ ಬೆಂಗಳೂರು ನಗರದಲ್ಲಿ ನೊಂದಾಯಿಸಲ್ಪಟ್ಟಿರುವ ಸಹಕಾರ ಸಂಘಗಳ ಪೈಕಿ ಎರಡು ವರ್ಷಗಳಿಗೂ ಮೇಲ್ಪಟ್ಟು ವಾರ್ಷಿಕ ಮಹಾಸಭೆಗಳನ್ನು ನಡೆಸದೆ ಇರುವ ಸಂಘಗಳ ಸಂಖ್ಯೆ ಎಷ್ಟು?

ಆ) ಸಹಕಾರ ಸಂಘಗಳ ಕಾಯಿದೆಯ ಪ್ರಕಾರ ನೊಂದಾಯಿಸಿದ ಸಂಘಗಳ ವಾರ್ಷಿಕ ಮಹಾಸಭೆಗಳನ್ನು ನಡೆಸಲು ತೆಗೆದುಕೊಂಡ ಕ್ರಮ?

ಇ) ವಾರ್ಷಿಕ ಮಹಾಸಭೆಯನ್ನು ಪ್ರತಿ ವರ್ಷ ನಡೆಸದೆ ಇರುವ ಸಹಕಾರ ಸಂಘಗಳ ನೊಂದಣಿಯನ್ನು ತಾನಾಗಿಯೇ ರದ್ದು ಮಾಡುವ ಬಗ್ಗೆ ಮೇಲ್ಕಂಡ ಕಾಯಿದೆಯನ್ನು ತಿದ್ದುಪಡಿ ಮಾಡುವ ಪ್ರಸ್ತಾವ ಏನಾದರೂ ಇದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) 120 ಸಹಕಾರ ಸಂಘಗಳು

ಆ) ವಾರ್ಷಿಕ ಮಹಾಸಭೆಗಳನ್ನು ನಡೆಸಲು ನಿರ್ದೇಶನಗಳನ್ನು ನೀಡಿ ಸರ್ಕಾರದಿಂದ ಕಾಲಕಾಲಕ್ಕೆ ಆದೇಶಗಳನ್ನು ನೀಡಲಾಗುತ್ತದೆ.

ಇ) ಇಲ್ಲ

ವಾರಣಾಸಿಯಲ್ಲಿ ಕರ್ನಾಟಕ ಛತ್ರ

645 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಕರ್ನಾಟಕದಿಂದ ಹೋಗುವ ಯಾತ್ರಾರ್ಥಿಗಳ ವಸತಿ ಸೌಕರ್ಯಕ್ಕಾಗಿ ವಾರಣಾಸಿಯಲ್ಲಿ ಕರ್ನಾಟಕ ಛತ್ರವಿದೆಯೇ?

ಆ) ಇದ್ದರೆ, ಈಗಿರುವ ಛತ್ರದಲ್ಲಿ ಎಷ್ಟು ಮಂದಿಗೆ ವಸತಿ ಸೌಕರ್ಯ ಏರ್ಪಾಡಿಸಬಹುದು?

ಇ) ಈ ಛತ್ರವು ಜೀರ್ಣಾವಸ್ಥೆಯಲ್ಲಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಯಾತ್ರಾರ್ಥಿಗಳಿಗೆ ಉತ್ತಮವಾದ ಸೌಲಭ್ಯ ಕಲ್ಪಿಸಲು ಹೊಸ ಕರ್ನಾಟಕ ಛತ್ರ ನಿರ್ಮಿಸುವ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾವನೆ ಇದೆಯೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಇದೆ.

ಆ) ಈ ಛತ್ರದಲ್ಲಿ ಹನ್ನೊಂದು ಕೊಠಡಿಗಳಿವೆ. ಪ್ರತಿಯೊಂದು ಕೊಠಡಿಯಲ್ಲಿ 4ರಂತೆ 44 ಜನರಿಗೆ ವಸತಿ ಕಲ್ಪಿಸಬಹುದಾಗಿದೆ.

ಇ) ಬಂದಿದೆ.

ಈ) ಪರಿಶೀಲನೆಯಲ್ಲಿದೆ.

ತಿರುಪತಿಯಲ್ಲಿ ಕರ್ನಾಟಕ ರಾಜ್ಯ ಛತ್ರದಲ್ಲಿನ ಕೊಠಡಿಗಳು ಮತ್ತು ಕಾಟೇಜು

646 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಕರ್ನಾಟಕ ರಾಜ್ಯ ಛತ್ರದಲ್ಲಿನ ಕೊಠಡಿಗಳು ಮತ್ತು ಕಾಲೇಜುಗಳ ವಿವರವೇನು ?

ಆ) ಈ ಕೊಠಡಿಗಳು ಮತ್ತು ಕಾಟೇಜುಗಳಿಗೆ ಬೆಂಗಳೂರಿನಲ್ಲಿ ಸ್ಥಳ ಕಾದಿರಿಸಲಾಗುವುದೇ ?

ಇ) ಇಲ್ಲದಿದ್ದರೆ ಈ ರೀತಿ ಸ್ಥಳ ಕಾದಿರಿಸುವ ಸೌಕರ್ಯವನ್ನು ಬೆಂಗಳೂರಿನಲ್ಲಿ ಏರ್ಪಡಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ತಿರುಪತಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರದಲ್ಲಿ ಲಭ್ಯವಿರುವ ವಸತಿ ಸೌಕರ್ಯಗಳ ವಿವರ ಕೆಳಗೆ ಸೂಚಿಸಿರುವಂತೆ :

1)	ಕರ್ನಾಟಕ ಪ್ರವಾಸಿ ಸೌಧ	50 ಕೊಠಡಿಗಳು
2)	ಕರ್ನಾಟಕ ಕಲ್ಯಾಣ ಮಂಟಪ	24 ಕೊಠಡಿಗಳು
3)	ಕಾಟೇಜ್	37
4)	ಅತಥಿಗೃಹ	8 ಕೊಠಡಿಗಳು
5)	ನಿರೀಕ್ಷಣ ಭವನ	2 ಕೊಠಡಿಗಳು

ಆ) ಇಲ್ಲ, ದರ್ಶನಾರ್ಥಿಗಳು ತಿರುಮಲದಲ್ಲಿ ವಸತಿಗಾಗಿ ಕೋರಿದಲ್ಲಿ ಸ್ಥಳಾವಕಾಶ ಲಭ್ಯತೆಯ ಮೇರೆಗೆ ವಸತಿ ದೊರಕಿಸುವಂತೆ ವಿಶೇಷಾಧಿಕಾರಿಗಳಿಗೆ ತಿಳಿಸಲಾಗುವುದು.

ಇ) ವ್ಯವಹಾರಿಕ ದೃಷ್ಟಿಯಿಂದ ಸೂಕ್ತವೂ ಅಲ್ಲ ಮತ್ತು ಶಕ್ಯವೂ ಅಲ್ಲ.

ಆಣೆವಾರಿ ಪದ್ಧತಿ ಬಗ್ಗೆ

678 - ಶ್ರೀ ಎಂ.ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಕರ್ನಾಟಕ ರಾಜ್ಯದಲ್ಲಿ ಆಣೆವಾರಿ ಮಾಡಲು ಅನುಸರಿಸುವ ಪದ್ಧತಿಗಳು ಯಾವುವು ?

ಆ) ಸದರಿ ಪದ್ಧತಿಯಿಂದ ರೈತ ಸಮುದಾಯಕ್ಕೆ ಆಗಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ರೈತ ಸಮುದಾಯಕ್ಕೆ ತೊಂದರೆ ತಪ್ಪಿಸಲು ಆಣೆವಾರಿ ಪದ್ಧತಿ ಬಗ್ಗೆ ಸರಳೀಕರಣಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಬೆಳೆ ಕಟಾವು ಪ್ರಯೋಗಗಳ ಮೂಲಕ ಆಣೆವಾರಿ ನಿರ್ಧರಿಸಲಾಗುತ್ತಿದೆ.

ಆ) ಸದರಿ ಪದ್ಧತಿ ಅನುಸರಿಸುತ್ತಿರುವುದರಿಂದ ರೈತರ ಸಮುದಾಯಕ್ಕೆ ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆ.

ಇ) ರೈತ ಸಮುದಾಯಕ್ಕೆ ಆಗುತ್ತಿರುವ ತೊಂದರೆ ತಪ್ಪಿಸಲು ಆಣೆವಾರಿ ಪದ್ಧತಿ ಸರಳೀಕರಣ ಗೊಳಿಸು ಪರಿಶೀಲಿಸಲಾಗುತ್ತಿದೆ.

ಡ್ಯಾನಿಡಾ ಸ್ಕೀಮ್‌ಗೆ ಖರ್ಚಾದ ಹಣ

679 - ಶ್ರೀ ಎಂ.ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ರಾಜ್ಯದಲ್ಲಿ ಡ್ಯಾನಿಡಾ ಸ್ಕೀಂಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ಹಾಗೂ ವಿವಿಧ ಪ್ರದೇಶಗಳಲ್ಲಿ ನಿಗಧಿಪಡಿರುವ ಕೆಲಸಗಳೆಷ್ಟು?

ಆ) ರಾಜ್ಯದಲ್ಲಿ ತುಂಗಭದ್ರಾ ರಿವರ್‌ವ್ಯಾಲಿ ಪ್ರಾಜೆಕ್ಟ್‌ಗೆ (ಎನ್‌ಸಿ) ಎಷ್ಟು ಪ್ರದೇಶ ಅಳವಡಿಸಿಕೊಳ್ಳಲಾಗಿದೆ?

ಇ) ಈವರೆಗೆ ಎಷ್ಟು ಕೆಲಸವನ್ನು ಯಾವ ಯಾವ ಪ್ರದೇಶದಲ್ಲಿ ಮಾಡಲಾಗಿದೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ ರೈತರ ಮಹಿಳೆ ಮತ್ತು ಯುವಕ ತರಬೇತಿ ವಿಸ್ತರಣಾ ಯೋಜನೆ ಮತ್ತು ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆಗಳು ಡ್ಯಾನಿಡಾ ನೆರವಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಗಳ ಪ್ರಾರಂಭದಿಂದ ಈವರೆಗೆ 838.078 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ರೈತರ ಮಹಿಳೆ ಮತ್ತು ಯುವಕ ತರಬೇತಿ ವಿಸ್ತರಣಾ ಯೋಜನೆ ರಾಜ್ಯದ 15 ತರಬೇತಿ ಕೇಂದ್ರಗಳ ಮೂಲಕ ಹಾಗೂ 170 (ಬೀದರ್‌ಜಿಲ್ಲೆ ಹೊರತು) ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

4920 ರೈತರ ಮಹಿಳೆಯರಿಗಾಗಿ 10 ದಿನಗಳ ತರಬೇತಿ 4730 ಯುವಕ ರೈತರಿಗೆ 14 ದಿನಗಳ ಅವಧಿ ತರಬೇತಿ, ರೈತ ಮಹಿಳೆಯರಿಗಾಗಿ 2 ದಿನಗಳ ಗ್ರಾಮಾಣಾಧಾರಿತ 110 ಕ್ಯಾಂಪ್‌ಗಳು ಮತ್ತು 5 ದಿನಗಳ 1500 ರೈತರ ಮಹಿಳೆಯರಿಗೆ ಸಂಪರ್ಕ ಕಾರ್ಯಕರ್ತೆಯರ ತರಬೇತಿ.

ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆಯನ್ನು ರಾಜ್ಯದ ಧಾರವಾಡ, ಉತ್ತರ ಕನ್ನಡ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಅನುಷ್ಠಾನ ಗೊಳಸಲಾಗುತ್ತಿದೆ. ಸದರಿ ಯೋಜನೆಯಲ್ಲಿ ನಿಗದಿ ಪಡಿಸಿರುವ ಕಾರ್ಯಕ್ರಮಗಳೆಂದರೆ 29439 ಹೆ.ನಲ್ಲಿ ಭೂ ಅಭಿವೃದ್ಧಿ ಮತ್ತು ಭೂಸಾರ ಸಂರಕ್ಷಣೆ ಕಾಮಗಾರಿಗಳು 3480 ಹರಿದು ಹೋಗುವ ನೀರು ಸಂಗ್ರಹಣಾ ವಿನ್ಯಾಸಗಳ ರಚನೆ 4455 ಹೆಕ್ಟೇರ್‌ನಲ್ಲಿ ಸುಧಾರಿತ ಬೆಳೆ ಅಭಿವೃದ್ಧಿ ಕಾರ್ಯಕ್ರಮ 345 ಕೃಷಿ ಉಪಕರಣಗಳ ವಿತರಣೆ 20875 ಹೆಕ್ಟೇರ್‌ನಲ್ಲಿ ಕೃಷಿ ಅರಣ್ಯ ಅಭಿವೃದ್ಧಿ ಪಡಿಸುವುದು 340 ಹೆಕ್ಟೇರ್‌ನಲ್ಲಿ ತೋಟಗಾರಿಗಾ ಬೆಳೆ ಅಭಿವೃದ್ಧಿ ಮತ್ತು ಶಾಲೆಯ ಆವರಣ ತೋಟ ಮತ್ತು ನೀರು ಸಂಗ್ರಹಣ ವಿನ್ಯಾಸಗಳ ರಕ್ಷಣೆಗಾಗಿ 50960 ಸಸಿಗಳ ನಾಟಿ ಕಾರ್ಯಕ್ರಮ.

ಆ) ತುಂಗಭದ್ರಾ ನದಿ ಕಣಿವೆ ಯೋಜನೆ ಒಟ್ಟು ಜಲಾನಯನ ಪ್ರದೇಶದಲ್ಲಿ ಮಣ್ಣಿನ ಸವಕಳಿಗೆ ಹೆಚ್ಚಾಗಿ ತುತ್ತಾಗಿರುವಂತಹ 8.72 ಲಕ್ಷ ಹೆಕ್ಟೇರು ಪ್ರದೇಶವನ್ನು ಆಯ್ಕೆ ಮಾಡಿದ್ದು ಹಂತ ಹಂತವಾಗಿ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ.

ಇ) ತುಂಗಭದ್ರಾ ನದಿ ಕಣಿವೆ ಯೋಜನೆಯ ಅಭಿವೃದ್ಧಿ ಕೆಲಸಗಳು 1963-64ನೇ ಸಾಲಿನಿಂದ ಪ್ರಾರಂಭವಾಗಿದ್ದು ಮಾರ್ಚ್ 1992ರ ವರೆಗೆ ಯೋಜಿತ 8.72 ಲಕ್ಷ ಹೆಕ್ಟೇರು ಪ್ರದೇಶದಲ್ಲಿ ಬಳ್ಳಾರಿ, ರಾಜಚೂರು ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಇಲ್ಲಿಯವರೆಗೆ 2.35ಲಕ್ಷ ಹೆಕ್ಟೇರು ಪ್ರದೇಶವನ್ನು ಅಭಿವೃದ್ಧಿ ಪಡಿಸಲಾಗಿದೆ.

ಹೊಸದಾಗಿ ಸ್ಪಿನ್ನಿಂಗ್ ಮಿಲ್ಲುಗಳು ತೆರೆಯಲು ಅನುಮತಿ

680 - ಶ್ರೀ ಎಂ.ಸಿ. ಕುಸ್ನೂರ್ (ಶಿಗ್ಗಾಂವ ಸವಣೂರ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ರಾಜ್ಯದಲ್ಲಿ 1991-92ನೇ ಸಾಲಿನಲ್ಲಿ ಎಷ್ಟು ಸ್ಪಿನ್ನಿಂಗ್ ಮಿಲ್‌ಗಳು ಹೊಸದಾಗಿ ಪ್ರಾರಂಭಿಸಲು ಸರ್ಕಾರದಿಂದ ಪರವಾನಿಗೆ ನೀಡಲಾಗಿದೆ?

ಆ) ಸದರಿ ಸ್ಪಿನಿಂಗ್ ಮಿಲ್ಲುಗಳ ಹೆಸರು ಮತ್ತು ವಿಳಾಸಗಳನ್ನು ನೀಡುವುದು?

ಇ) ಹೊಸದಾಗಿ ಸ್ಪಿನಿಂಗ್ ಮಿಲ್ ತೆರೆಯಲು ಸರ್ಕಾರದ ನಿಯಮಾವಳಿಗಳೇನು?

ಈ) ಸದರಿ ನಿಯಮಾವಳಿಗಳಿಂದ ರೈತರ ಬಾಂಧವರಿಗೆ ತೊಂದರೆ ಹಾಗೂ ಸದರಿ ಕ್ಷೇತ್ರಕ್ಕೆ ಉತ್ತೇಜನ ನೀಡಲು ಅಡ್ಡಿಯಾಗುವುದಿಲ್ಲವೇ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಸಹಕಾರ ರಂಗದಲ್ಲಿ ಅಂತಹ ಯಾವುದೇ ಅನುಮತಿ ನೀಡಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಸಹಕಾರ ರಂಗದಲ್ಲಿ ನೂಲ ಗಿರಣಿಗಳನ್ನು ಸ್ಥಾಪಿಸುವ ಸಂಬಂಧದಲ್ಲಿ ರೈತರ ಬೆಳೆಗಾರರು 50 ಲಕ್ಷ ರೂಪಗಳನ್ನು ಸಂಗ್ರಹಿಸಿದ ಪ್ರಕರಣಗಳಲ್ಲಿ ಮಾತ್ರ ಮುಖ್ಯ ಪ್ರವರ್ತಕರನ್ನು ನೇಮಿಸಲು ಅನುಮತಿ ಹಾಗೂ ಶೇರು ಬಂಡವಾಳವನ್ನು ಸಂಗ್ರಹಿಸಲು ಮತ್ತು ನೋಂದಣಿ ಮಾಡಲು ಅನುಮತಿ ನೀಡಲಾಗುವುದೆಂದು ಆದೇಶಿಸಲಾಗಿದೆ. 100 ಲಕ್ಷ ರೂ.ಗಳನ್ನು ಬೆಳೆಗಾರರ ಸಂಘವು ಸಂಗ್ರಹಿಸಿದ ಪ್ರಕರಣಗಳಲ್ಲಿ ಮಾತ್ರ ರಾಜ್ಯಸರ್ಕಾರವು ಗಿರಣಿ ಸ್ಥಾಪನೆಗೆ ಶಿಫಾರಸ್ಸು ಮಾಡಲಾಗುವುದೆಂದೂ ತಿಳಿಯಪಡಿಸಿದೆ.

ಈ) ಮತ್ತು ಉ) ಸಹಕಾರಿ ಕ್ಷೇತ್ರದಲ್ಲಿ ಗಿರಣಿ ಸ್ಥಾಪಿಸಲು ಆಸಕ್ತಿಯುಳ್ಳವರಿಗೆ ತೊಂದರೆಯಾಗುವುದಿಲ್ಲ.

ಹರಪನಹಳ್ಳಿ ತಾಲ್ಲೂಕಿನಲ್ಲಿ ನೆರೆಹಾವಳಿಯಿಂದ ದಿನಾಂಕ 15,16,17 ಮತ್ತು 18 ನವೆಂಬರ್ 92ರಲ್ಲಿ ಆಗಿರುವ ಹಾನಿ ಬಗ್ಗೆ ಪರಿಹಾರ.

726 - ಶ್ರೀ ಬಿ.ಹೆಚ್. ಯಂಕಾನಾಯಕ್ (ಹರಪನಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಪನಹಳ್ಳಿ ಕ್ಷೇತ್ರಕ್ಕೆ ಸೇರಿದ ಎಂಟು ಗ್ರಾಮಗಳಾದ 1) ವಟ್ಲಳ್ಳಿ, 2) ಕಡತಿ, 3) ನಂದ್ಯಾಲ 4) ನಿಟ್ಟೂರು 5) ನಿಟ್ಟೂರುಬಸಾಪುರ 6) ತಾವರೆಗುಂದಿ 7) ಹಲವಾಗಲು 8) ಗರ್ಭಗುಡಿಗಳಿಗೆ ನೆರೆಹಾವಳಿಯಿಂದ ಹಾನಿಗೊಳಗಾಗಿದ್ದು ಆ ಗ್ರಾಮಗಳಲ್ಲಿರುವ ಕುಟುಂಬಗಳಿಗೆ ಪರಿಹಾರವನ್ನು ಒದಗಿಸಲಾಗಿದೆಯೇ?

ಆ) ಇಲ್ಲದಿದ್ದಲ್ಲಿ, ಸರ್ಕಾರದವರು ಕೂಡಲೇ ಪರಿಹಾರ ಒದಗಿಸಿ ಮನೆ ಕಳೆದುಕೊಂಡವರಿಗೆ ಹೊಸ ಮನೆ ಕಟ್ಟಿಕೊಡಲು ಕ್ರಮ ಕೈಗೊಳ್ಳುವರೆ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಹೌದು. ಒದಗಿಸಲಾಗಿದೆ. ಈ ಗ್ರಾಮದಲ್ಲಿ ಉಂಟಾದ ನಷ್ಟ ಮತ್ತು ನೀಡಿದ ಪರಿಹಾರ ಈ ಕೆಳಕಂಡಂತೆ ಇವೆ :

(ಲಕ್ಷ ರೂಪಾಯಿಗಳಲ್ಲಿ)

ಪ್ರಶ್ನೆ					ಉತ್ತರ				
ಗ್ರಾಮದ ಹೆಸರು	ಮನೆಗಳಿಗೆ ಹಾನಿ			ಜಾನುವಾರು ಹಾನಿ			ಬೆಳೆಗಳ ನಾಶ		
	ಪೂರ್ಣ	ನಷ್ಟ	ಭಾಗಶಃ	ನಷ್ಟ	ಸಂಖ್ಯೆ	ನಷ್ಟ	ಹೆಕ್ಟೇರ್	ನಷ್ಟ	ಒಟ್ಟು
1. ಕಡತಿ	122	18.70	260	70.10	1.27	0.86	1.25	2.20	91.86
2. ವಟ್ಲಳ್ಳಿ	124	5.63	-	-	-	-	-	-	5.63
3. ನಂದ್ಯಾಲ	92	18.00	49	5.50	-	-	-	-	23.50
4. ನಿಟ್ಟೂರು	90	8.70	129	1.80	10	0.08	134	6.38	16.96
5. ನಿಟ್ಟೂರು ಬಸಾಪುರ	73	17.50	15	1.00	425	1.27	60	1.08	20.85
6. ಹಲವಾಗಲು	90	27.50	431	41.00	30	0.16	434	2.13	70.79
7. ಗರ್ಭಗುಡಿ	64	1.60	62	6.65	-	-	-	-	8.25
8. ತವರೆಗುಂದಿ	76	13.20	77	4.20	3	0.06	106	5.30	22.76
ಒಟ್ಟು	**731**	**110.83**	**1043**	**130.25**	**595**	**2.43**	**860**	**17.09**	**260.60**

ಪೂರ್ಣವಾಗಿ ಮನೆಗಳಿಗೆ ಹಾನಿಗೊಳಗಾದ ಪರಿಹಾರ

	ಸಂಗ್ರಾಮಗಳ ಹೆಸರು	*ಮನೆಗಳ ಸಂಖ್ಯೆ*	*ನೀಡಲಾದ ಪರಿಹಾರ*
1	ಕಡತಿ	122	2.44
2	ವಟ್ಲಳ್ಳಿ	124	2.48
3	ನಂದ್ಯಾಲ	92	1.84
4	ನಿಟ್ಟೂರು	90	1.80
5	ನಿಟ್ಟೂರು ಬಸಾಪುರ	73	1.46
6	ಹಲವಾಗಲು	90	1.80
7	ಗರ್ಭಗುಡಿ	64	1.28
8	ತಾವರೆಗುಂಡಿ	76	1.52
	ಒಟ್ಟು	731	14.62

ಮೇಲೆ ಸೂಚಿಸಿರುವ ಹಳ್ಳಿಗಳಲ್ಲಿ ಪೂರ್ಣವಾಗಿ ಹಾನಿಗೊಳಗಾದ ಮನೆಗಳಿಗೆ ತಲಾ 2,000.00 ರೂ.ಗಳಂತೆ ಪರಿಹಾರವನ್ನು ಮಂಜೂರು ಮಾಡಿದೆ. ಪೂರ್ಣ ಹಾನಿಗೊಳಗಾಗಿರುವ ಮನೆಗಳಿಗೆ ತಲಾ 3,000.00 ರೂ. ಮೌಲ್ಯದ ಕಟ್ಟಡ ಸಾಮಗ್ರಿಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಭಾಗಶಃ ಹಾನಿಗೊಳಗಾಗಿರುವ ಮನೆಗಳಿಗೆ ನಗದು ಪರಿಹಾರ ನೀಡುವ ಕಾರ್ಯ ಪ್ರಗತಿಯಲ್ಲಿದೆ.

ಆ) ಮೇ (ಅ) ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬೀದರ್ ಜಿಲ್ಲೆಯಲ್ಲಿರುವ ಸಹಕಾರಿ ಕ್ಷೇತ್ರದ ಸಕ್ಕರೆ ಕಾರ್ಖಾನೆಗಳ ಸಂಖ್ಯೆ

846 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಬೀದರ್ ಜಿಲ್ಲೆಯಲ್ಲಿರುವ ಸಹಕಾರಿ ಕ್ಷೇತ್ರದ ಸಕ್ಕರೆ ಕಾರ್ಖಾನೆಗಳೆಷ್ಟು?

ಆ) ನಾರಂಜ ಮತ್ತು ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಎಷ್ಟು ಟನ್ ಕಬ್ಬು ಅರೆಯುವ ಸಾಮರ್ಥ್ಯವಿದೆ?

ಇ) ಈ ಕಾರ್ಖಾನೆಗಳ ಬಗ್ಗೆ ಡಿಸ್ಟಲರಿ ಅಳವಡಿಸು ಆಲೋಚನೆ ಇದೆಯೇ ಇದ್ದರೆ ಯಾವಾಗ ಅಳವಡಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ಸಹಕಾರಿ ಕ್ಷೇತ್ರದಲ್ಲಿ ಒಂದು ಸಕ್ಕರೆ ಕಾರ್ಖಾನೆ ಕಾರ್ಯನಿರ್ವಹಿಸುತ್ತಿದ್ದು ಇನ್ನೊಂದು ಕಾರ್ಖಾನೆಯ ಸ್ಥಾಪನೆಗೆ ಭಾರತ ಸರ್ಕಾರ ಉದ್ದೇಶಿತ ಪತ್ರ ನೀಡಿದೆ.

ಆ) ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯ 2500 ಟಿಸಿಡಿ.ಗಳು (ಈ ಕಾರ್ಖಾನೆ ಇನ್ನು ಸ್ಥಾಪಿತವಾಗಬೇಕಾದರೆ) ಪ್ರಸ್ತುತ ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯ 2000 ಟಿಸಿಡಿಗಳು.

ಇ) ಸದ್ಯಕ್ಕೆ ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಬೀದರ್ ಜಿಲ್ಲೆಯ ರೈತರು ಹೊರ ರಾಜ್ಯಕ್ಕೆ ಕಬ್ಬನ್ನು ಸಾಗಿಸುವುದು ಕುರಿತು

847 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ (ಬಸವಕಲ್ಯಾಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ರೈತರು ಕಬ್ಬನ್ನು ಮಹಾರಾಷ್ಟ್ರಕ್ಕೆ ಸಾಗಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ನಮ್ಮಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಗಳಿದ್ದರೂ ಸಹ ಹೊರ ರಾಜ್ಯಕ್ಕೆ ಕಬ್ಬನ್ನು ಸಾಗಿಸುವುದಕ್ಕೆ ಕಾರಣವೇನು? (ವಿವರವಾದ ವಿವರಣೆ ನೀಡುವುದು)

ಇ) ಹೊರ ರಾಜ್ಯಕ್ಕೆ ಕಬ್ಬನ್ನು ಸಾಗಿಸುತ್ತಿರುವುದರಿಂದ ಬೀದರ್‌ನಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಯು ನಷ್ಟದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ನಷ್ಟವನ್ನು ಸರಿದೂಗಿಸಲು ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಹೌದು.

ಆ) ಹೊರ ರಾಜ್ಯಕ್ಕೆ ಕಬ್ಬನ್ನು ಸಾಗಿಸುವುದಕ್ಕೆ ಕಾರಣಗಳು ಈ ಕೆಳಕಂಡಂತೆ ಇರುತ್ತವೆ

1) ನೆರೆ ರಾಜ್ಯವಾದ ಮಹಾರಾಷ್ಟ್ರದಲ್ಲಿ ಕಳೆದ ವರ್ಷ ಮಳೆ ಅಭಾವದಿಂದ ಕಬ್ಬಿನ ಕ್ಷೇತ್ರ ಕಡಿಮೆಯಾಗಿ ಗಣನೀಯವಾಗಿ ಕಬ್ಬಿನ ಉತ್ಪನ್ನವೂ ಕಡಿಮೆಯಾಗಿರುತ್ತದೆ. ಇದರಿಂದ ಮಹಾರಾಷ್ಟ್ರ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು ತಾವು ಅಗತ್ಯ ಕಬ್ಬು ಪೂರೈಕವಾಗಿ ನಮ್ಮ ರಾಜ್ಯದ ಕಡೆ ಗಮನ ಹರಿಸಿವೆ (ಬೀದರ್ ಜಿಲ್ಲೆಯೂ ಸೇರಿ)

2) ಮಹಾರಾಷ್ಟ್ರ ರಾಜ್ಯದ ಸಕ್ಕರೆ ಕಾರ್ಖಾನೆಗಳು ನಮ್ಮ ರಾಜ್ಯದಿಂದ ಪಡೆದ ಕಬ್ಬಿಗೆ ಟನ್ ಒಂದಕ್ಕೆ ರೂ. 400 ಹಸ್ತ ನೀಡುತ್ತಿವೆ.

3) ನೈಸರ್ಗಿಕ ಅಭಾವವಾದ ಮಳೆಯ ಕೊರತೆಯಿಂದ ಬೀದರ್ ಜಿಲ್ಲೆಯ ಭಾವಿಗಳಲ್ಲಿ ನೀರಿನ ಅಭಾವದಿಂದ ಈಗಿರುವ ಕಬ್ಬು ಜನವರಿ ಫೆಬ್ರವರಿ 93ರ ವರೆಗೆ ಉಳಿಸುವ ಸಾಧ್ಯತೆ ಇರುವುದಿಲ್ಲ ಮತ್ತು ಕಬ್ಬು ಒಣಗಿ ಹೋಗುವುದೆಂಬ ಭಯದಿಂದ ಅಲ್ಲದೆ ಕಾರ್ಖಾನೆಗೆ ಕಬ್ಬು ಸರಬರಾಜಾಗುವ ಪದ್ಧತಿ ಕಬ್ಬು ನಾಟಿ ಮಾಡಿರುವ ದಿನಾಂಕವನ್ನಾಧರಿಸಿರುವುದರಿಂದ ಕಬ್ಬು ಸರಬರಾಜಿಗೆ ತಡವಾಗುವುದೆಂದು ಕಬ್ಬು ಹೊರ ಹೋಗಲು ಕಾರಣವಾಗಿರುತ್ತದೆ.

4) ಕಾರ್ಖಾನೆಯು ಕಬ್ಬು ಸರಬರಾಜುದಾರರಾದ ರೈತರ ಕಬ್ಬಿನ ಬಿಲ್ಲುಗಳಿಂದ ಸಹಕಾರಿ ಕ್ಷೇತ್ರದ ಸಾಲಗಳನ್ನು ವಸೂಲಿ ಮಾಡುತ್ತಿರುವುದು ಕೂಡಾ ಕಬ್ಬು ಬೀದರ್ ಜಿಲ್ಲೆಯಿಂದ ಹೊರ ರಾಜ್ಯಕ್ಕೆ ಹೋಗುತ್ತಿರುವುದು ಒಂದು ಮುಖ್ಯ ಕಾರಣವಾಗಿರುತ್ತದೆ.

ಇ) ಸದ್ಯಕ್ಕೆ ಕಾರ್ಖಾನೆಗೆ ದಿನಂಪ್ರತಿ ಬೇಕಾಗುವಷ್ಟು ಕಬ್ಬು ದೊರೆಯುತ್ತಿದೆ. ಈ ಹಂಗಾಮಿನಲ್ಲಿ ಕಾರ್ಖಾನೆಯು ಸುಮಾರು 3.60 ಲಕ್ಷ ಮೆಟ್ರಿಕ್ ಟನ್

ಕಬ್ಬು ಅರೆಯಬೇಕಾಗಿರುತ್ತದೆ. ಮಹಾರಾಷ್ಟ್ರ ರಾಜ್ಯಕ್ಕೆ ಹೋಗುತ್ತಿರುವ ಕಬ್ಬು ಇದೇ ರೀತಿ ಮುಂದುವರೆದಲ್ಲಿ ಕಾರ್ಖಾನೆಗೆ ಫೆಬ್ರವರಿ ತಿಂಗಳ ನಂತರ ಕಬ್ಬಿನ ಕೊರತೆ ಉಂಟಾಗಬಹುದು. ಒಂದು ವೇಳೆ ಹೀಗೆ ಕೊರತೆ ಉಂಟಾದಲ್ಲಿ ಪೂರ್ಣ ಸಾಮರ್ಥ್ಯ ಬಳಕೆಯಾಗದ ಕಾರಣವೂ ಸಹ ನಷ್ಟ ಉಂಟು ಮಾಡುವುದು. ಆದ್ದರಿಂದ ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಗೆ ಅಗತ್ಯ ಕಬ್ಬು ಪೂರೈಕೆಯಾಗಬೇಕೆಂಬ ದೃಷ್ಟಿಯಿಂದ ಹೊರಗಡೆ ಹೋಗುವ ಕಬ್ಬನ್ನು ತಡೆಗಟ್ಟುವ ಬಗ್ಗೆ ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ.

ಸಹಕಾರ ಇಲಾಖೆ ಅಧ್ಯಕ್ಷರ ವಾರ್ಷಿಕ ಅವಧಿ ವಿಚಾರ.

850 - ಶ್ರೀ ಕೆ. ಶಾಮಣ್ಣ (ಶೃಂಗೇರಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಸಹಕಾರ ಇಲಾಖೆಯ ಕಾಯಿದೆಯ ಪ್ರಕಾರ ವಾರ್ಷಿಕ ಆಡಳಿತ ಮಂಡಳಿಯ ಅಧ್ಯಕ್ಷರ ಅವಧಿಯು ಯಾವಾಗ ಮುಕ್ತಾಯವಾಗುವುದು?

ಆ) ಹಾಗಿದ್ದಲ್ಲಿ ಜನರಲ್ ಬಾಡಿಯಿಂದ ಮತ್ತೊಂದು ಜನರಲ್ ಬಾಡಿಯವರೆಗೆ ಅವಧಿ ಎಷ್ಟು?

ಇ) ಕೊಪ್ಪ ತಾಲ್ಲೂಕು ಕರೀಮನೆ ಭೂ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷರು ಮುಂದುವರಿಯುತ್ತಿರುವುದಕ್ಕೆ ಕಾರಣವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯ ಪ್ರಕಾರ ಪ್ರತಿ ವರ್ಷ ಅಧ್ಯಕ್ಷರ ಚುನಾವಣೆ ನಡೆಯಬೇಕಾಗಿರುತ್ತದೆ.

ಆ) ಒಂದು ಸಹಕಾರಿ ವರ್ಷ

ಇ) ದಿನಾಂಕ 29-12-1992ರಂದು ಕರೀಮನೆಯ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಲ್ಲಿ ಹೊಸ ಅಧ್ಯಕ್ಷರ ಚುನಾವಣೆ ನಡೆದಿರುತ್ತದೆ.

ಗುಲ್ಬರ್ಗಾ ಜಿಲ್ಲೆಯ ವ್ಯವಸಾಯ ಸೇವಾ ಸಹಕಾರ ಸಂಘದಿಂದ ಗೊಬ್ಬರದ ವಿತರಣೆಯಲ್ಲಿ ಅವ್ಯವಹಾರ.

866 - ಶ್ರೀ ಬಸವಂತರೆಡ್ಡಿ, ಮೋತಕಪಲ್ಲಿ (ಸೇಡಂ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಗುಲ್ಬರ್ಗಾ ಜಿಲ್ಲೆಯ ವ್ಯವಸಾಯ ಸೇವಾ ಸಹಕಾರ ಸಂಘದವರು ಸಾಲ ಮಂಜೂರಾದ ಸದಸ್ಯರುಗಳಿಗೆ ರಸಗೊಬ್ಬರಗಳನ್ನು ವಿತರಣೆ ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರಸಗೊಬ್ಬ ವಿತರಣೆಯಲ್ಲಿ ಅವ್ಯವಹಾರ ನಡೆದಿರುವುದು ನಿಜವೆ?

ಇ) ಹಾಗಿದ್ದಲ್ಲಿ ಸಂಬಂಧಪಟ್ಟವ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು?

ಈ) ರಸಗೊಬ್ಬರಗಳನ್ನು ಸಂಘದ ಸದಸ್ಯರುಗಳಿಗೆ ವಿತರಣೆ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯ ವ್ಯವಸಾಯ ಸೇವಾ ಸಹಕಾರ ಸಂಘಗಳ ಪೈಕಿ ಎರಡು ಸಹಕಾರ ಸಂಘಗಳಾದ ಒಳಪಟ್ಟಿ ಮತ್ತು ಅಂದೋಲಾ ಇವುಗಳು

ರೈತರಿಗೆ ರಸಗೊಬ್ಬರಗಳನ್ನು ಸಮರ್ಪಕವಾಗಿ ವಿತರಣೆ ಮಾಡಿಲ್ಲವೆಂಬುದಾಗಿ ದೂರುಗಳು ಬಂದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ.

ಆ) ಮೇಲ್ಕಂಡ ಎರಡು ಸಹಕಾರ ಸಂಘಗಳ ಪೈಕಿ ಒಂದು ಸಂಘದ ಪ್ರಕರಣದಲ್ಲಿ ವಿಚಾರಣೆ ನಡೆದಿದ್ದು, ವಿವರವಾದ ವಿಚಾರಣೆ ನಡೆದಿಲ್ಲ. ವಿವರವಾದ ವಿಚಾರಣೆ ನಡೆಸಿ ವರದಿ ತರಿಸಿಕೊಳ್ಳಲಾಗುವುದು. ಇನ್ನೊಂದು ಸಂಘದ ಬಗ್ಗೆ ದೂರು ಇತ್ತೀಚೆಗೆ ಬಂದಿದ್ದು ವಿಚಾರಣೆ ಆಗಬೇಕಾಗಿದೆ.

ಇ) ವಿಚಾರಣಾ ಹಂತದಲ್ಲಿರುವುದರಿಂದ ಯಾವುದೇ ಕ್ರಮ ಕೈಗೊಳ್ಳಲಾಗುವುದಿಲ್ಲ.

ಈ) ಕೈಗೊಂಡಿದೆ.

ಸರ್ಕಾರದಿಂದ ಸಹಕಾರ ಸಂಘಗಳಿಗೆ ನೀಡಲಾದ ಉತ್ಪಾದನಾ ಉತ್ತೇಜಕರ ಮೊತ್ತ.

981 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದಿಂದ ಸಹಕಾರ ಸಂಘಗಳಿಗೆ ನೀಡಲಾದ ಉತ್ಪಾದನಾ ಉತ್ತೇಜಕರ ಮೊತ್ತವೆಷ್ಟು?

ಆ) ಸರ್ಕಾರವು ಈ ಮೊತ್ತವನ್ನು ಪೂರ್ಣವಾಗಿ ಬಿಡುಗಡೆ ಮಾಡಿದೆಯೆ?

ಇ) ಇಲ್ಲದಿದ್ದರೆ ಬಿಡುಗಡೆ ಮಾಡಲು ಬಾಕಿ ಇರುವ ಮೊತ್ತವೆಷ್ಟು ಮತ್ತು ಎಂದು ಸಂಪೂರ್ಣವಾಗಿ ಪಾವತಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ರೂ. 27.74 ಕೋಟಿ.

ಆ) ಇಲ್ಲ.

ಇ) ಸರ್ಕಾರ ಇನ್ನೂ ರೂ. 10.00 ಗಳನ್ನು ಈ ಬಾಬಿಗೆ ಬಿಡುಗಡೆ ಮಾಡಬೇಕಾಗಿರುತ್ತದೆ. ಈ ಮೊತ್ತವನ್ನು ಸರ್ಕಾರ ಸದ್ಯದಲ್ಲಿಯೇ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ನೆರೆ ಹಾವಳಿಗೀಡಾದ ಪ್ರದೇಶಗಳಲ್ಲಿ ಸಾಲ ವಸೂಲಾತಿಗೆ ಕ್ರಮ.

950 - ಶ್ರೀ ಕೆ. ಹರ್ಷಕುಮಾರ ಗೌಡ, (ಚಾಮರಾಜ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ನೆರೆ ಹಾರಳಿಗೀಡಾದ ಪ್ರದೇಶದಲ್ಲಿ ಸಾಲ ವಸೂಲಿ ಮಾಡುವ ನಿಟ್ಟಿನಲ್ಲಿ ಸರ್ಕಾರವು ಅನುಸರಿಸುತ್ತಿರುವ ಕ್ರಮವೇನು?

ಆ) ನೆರೆ ಹಾವಳಿಯಿಂದ ಸಾಲ ಪಡೆದ ರೈತರು ನಷ್ಟಕ್ಕೊಳಗಾಗಿರುವುದರಿಂದ ಸರ್ಕಾರದವರು ಅಂತಹವರಿಗೆ ನೀಡುವ ರಿಯಾಯಿತಿಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಅಂತಹ ಪ್ರದೇಶದಲ್ಲಿನ ರೈತರ ಸಹಕಾರ ಸಂಘಗಳಿಂದ ಪಡೆದುಕೊಂಡಂತಹ ಅಲ್ಪಾವಧಿ ಬೆಳೆ ಸಾಲಗಳನ್ನು ನಬಾರ್ಡ್ ಭಾರತೀಯ ರಿಜರ್ವ್ ಬ್ಯಾಂಕು ವಿಧಿಸಿರುವ ಷರತ್ತುಗಳನ್ನನುಸರಿಸಿ ಮಧ್ಯಮಾವಧಿ ಸಾಲಗಳನ್ನಾಗಿ ಪರಿವರ್ತಿಸಲಾಗುವುದು.

ತನ್ಮೂಲಕ ರೈತ ಸದಸ್ಯರು ಆ ಸಾಲಗಳನ್ನು ಮೂರು ವಾರ್ಷಿಕ ಸಮ ಕಂತುಗಳಲ್ಲಿ ಮರು ಪಾವತಿ ಮಾಡಬಹುದಾದ ಸೌಲಭ್ಯಗಳನ್ನು ಕಲ್ಪಿಸಲಾಗುವುದು.

ಆ) ಅಂತಹ ಪ್ರದೇಶಗಳಲ್ಲಿನ ರೈತರ ಬೆಳೆ ಇಳುವರಿ 6 ಆಣೆಗಿಂತ ಕಡಿಮೆ ಎಂಬುದಾಗಿ ಕಂದಾಯ ಇಲಾಖೆಯು ಆಣೆವಾರಿಯನ್ನು ಘೋಷಿಸಿದ್ದಲ್ಲಿ, ಸಹಕಾರ ಸಂಘಗಳಿಂದ ರೈತರು ಪಡೆದುಕೊಂಡಂತಹ ಅಲ್ಪಾವಧಿ ಬೆಳೆ ಸಾಲಗಳನ್ನು ನಬಾರ್ಡ್ ವಿಧಿಸಿರುವ ಷರತ್ತುಗಳ ರೀತ್ಯಾ ಮಧ್ಯಮಾವಧಿ ಸಾಲಗಳನ್ನಾಗಿ ಪರಿವರ್ತಿಸಲಾಗುವುದು.

ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಬಡ್ಡಿ ರಿಯಾಯಿತಿ.

925 - ಶ್ರೀ ಅಲ್ಲಂ ವೀರಭದ್ರಪ್ಪ (ಕೆರೆಗೊಡು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಸಾಕಷ್ಟು ಬೆಳೆಗಳು ಹಾನಿಯಾಗಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಆ ಪ್ರದೇಶಗಳ ರೈತರು ಕೊಡಬೇಕಾದ ಭೂ ಕಂದಾಯ ತೆರಿಗೆ ಹಾಗೂಸಹಕಾರ ಸಂಘಗಳ ಸಾಲದ ಹಣಕ್ಕೆ ಸರ್ಕಾರವು ಬಡ್ಡಿ ರಿಯಾಯಿತಿ ನೀಡುವುದೇ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಹೌದು.

ಆ) ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ಭೂ ಕಂದಾಯ ತೆರಿಗೆ ಮನ್ನಾ ಮಾಡಲು, ಭೂ ಕಂದಾಯ ಕಾಯಿದೆ 1964ರ ಕಾಲಂ 194 ಮತ್ತು ನಿಯಮ 147 ರ ಪ್ರಕಾರ ಜಿಲ್ಲೆಯ ಜಿಲ್ಲಾಧಿಕಾರಿಗಳು, ಬೆಳೆ ಅಣೆವಾರಿ ನಿರ್ಧರಿಸಿ ಕ್ರಮ ಕೈಗೊಳ್ಳಲು ಸರ್ಕಾರವು ಆದೇಶಿಸಿದೆ.

ಆದರೆ ಸಹಕಾರ ಸಂಘದಿಂದ ರೈತರು ಪಡೆದಿರುವ ಸಾಲದ ಮೇಲಿರುವ ಬಡ್ಡಿಯನ್ನು ರಿಯಾಯಿತಿ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿಲ್ಲ.

ದಕ್ಷಿಣ ಕನ್ನಡದ ಭೂ ನ್ಯಾಯ ಮಂಡಳಿ ಪ್ರಕರಣಗಳು

1039 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ನ್ಯಾಯ ಮಂಡಲಿಗಳಲ್ಲಿ ಇತ್ಯರ್ಥಕ್ಕೊಳಗಾಗಿರುವ ಪ್ರಕರಣಗಳೆಷ್ಟು ?

ಆ) ಜಿಲ್ಲೆಯ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟಿವೆ (ವಿವರ ನೀಡುವುದು)

ಇ) ಈ ಅರ್ಜಿಗಳ ಇತ್ಯರ್ಥಕ್ಕೆ ಇನ್ನೆಷ್ಟು ಕಾಲ ಬೇಕಾಗಬಹುದು ? ಎಲ್ಲೆಲ್ಲಿ ಭೂ ನ್ಯಾಯ ಮಂಡಳಿಗಳಿವೆ ? ಅವ್ಯವಹಾರ ನಡೆಸುವ ಭೂ ನ್ಯಾಯ ಮಂಡಳಿಗಳ ಬಗ್ಗೆ ದೂರುಗಳಿವೆಯೇ ?

ಈ) ಭೂ ನ್ಯಾಯ ಮಂಡಳಿಗಳಿಗೆ ಅತ್ಯಂತ ಅರ್ಹರನ್ನು ನೇಮಕ ಮಾಡಲಾಗುವುದೇ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) 3414 ಪ್ರಕರಣಗಳು

ಆ) ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳ ವಿವರಗಳು (ತಾಲ್ಲೂಕುವಾರು)

1) ಕುಂದಾಪುರ	387
2) ಉಡುಪಿ	759
3) ಕಾರ್ಕಳ	450
4) ಮಂಗಳೂರು	1039
5) ಭಂಟ್ವಾಳ	739
6) ಪುತ್ತೂರು	17
7) ಬೆಳ್ತಂಗಡಿ	16
8) ಸೂಳ್ಯ	7
ಒಟ್ಟು	3414

ಆ) ಪ್ರಕರಣಗಳು ಭೂ ನ್ಯಾಯ ಮಂಡಲಿಗಳಲ್ಲಿ ಇತ್ಯರ್ಥಕ್ಕೆ ಬಾಕಿ ಇರುವುದರಿಂದ ಇಂತಿಷ್ಟೇ ಸಮಯದಲ್ಲಿ ಪ್ರಕರಣಗಳನ್ನು ಇಯರ್ಥಗೊಳಿಸಸಲಾಗುವುದೆಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿ ಒಂದೊಂದು ಭೂ ನ್ಯಾಯ ಮಂಡಲಿ ಇರುತ್ತದೆ. ಸರ್ಕಾರದ ಆದೇಶದ ಸಂಖ್ಯೆ ಆರ್ ಡಿ 17ಎಲ್ ಆರ್ ಇ 88 (ಪಿ) ದಿನಾಂಕ : 22:25-5-92ರಲ್ಲಿ ಮಂಗಳೂರು, ಬಂಟ್ವಾಳ ಉಡುಪಿ ಮತ್ತು ಕಾರ್ಕಳ ತಾಲ್ಲೂಕಿನಲ್ಲಿ ಒಂದೊಂದು ಹೆಚ್ಚುವರಿ ಭೂ ನ್ಯಾಯ ಮಂಡಳಿಯನ್ನು ಮಂಜೂರು ಮಾಡಲಾಗಿದೆ.

ಭೂ ನ್ಯಾಯ ಮಂಡಲಿಗಳು ಅವ್ಯವಹಾರ ನಡೆಸುವ ಬಗ್ಗೆ ದೂರುಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಭೂ ನ್ಯಾಯ ಮಂಡಲಿಗೆ ಅಧ್ಯಕ್ಷರನ್ನು ಮತ್ತು ಸದಸ್ಯರುಗಳನ್ನು ಕಾನೂನು ಚೌಕಟ್ಟಿನಲ್ಲಿ ಅರ್ಹತೆ ಮೇಲೆಯೇ ನೇಮಕ ಮಾಡಲಾಗುವುದು.

ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿ ನೆರೆ ಹಾವಳಿ ಪರಿಹಾರ ಕಾರ್ಯಕ್ಕೆ ಖರ್ಚಾದ ಹಣ.

1060 - ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡ ಬಳ್ಳಾಪುರ ಕ್ಷೇತ್ರದಲ್ಲಿ 1991ರ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಉಂಟಾದ ಅತಿವೃಷ್ಟಿಯ ಪರಿಣಾಮವಾಗಿ, ರಸ್ತೆಗಳು, ಚರಂಡಿಗಳು, ಕೆರೆಗಳು ಮತ್ತು ಇತರೆ ದುರಸ್ತಿಗೋಸ್ಕರ ಬಿಡುಗಡೆ ಮಾಡಿದ ಹಣದ ಮೊತ್ತವೆಷ್ಟು?

ಆ) ಇಲ್ಲಿಯವರೆಗೆ ಖರ್ಚು ಮಾಡಲಾದ ಹಣವೆಷ್ಟು?
(ವಾರ್ಷಿಕ ಅಂಕಿ ಅಂಶಗಳನ್ನೊದಗಿಸುವುದು)

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಈ ದುರಸ್ತಿಗೋಸ್ಕರ ಬಿಡುಗಡೆ ಮಾಡಿದ ಮೊತ್ತ ರೂ. 6,04,634.00

ಆ) ಇಲ್ಲಿಯವರೆಗೆ ಖರ್ಚು ಮಾಡಲಾದ ಹಣದ ವಿವರ ಈ ಕೆಳಗಿನಂತಿದೆ.

1991-92	ರೂ.	218978.00
1992-93	ರೂ.	385656.00
ಒಟ್ಟು ಮೊತ್ತ	**ರೂ.**	**604634.00**

ಭಾರಿ ಮಳೆಯಿಂದ ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ಮನೆಗಳಿಗೆ ಆಗಿರುವ ಹಾನಿ.

1062 - ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991ರ ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಬಿದ್ದ ಭಾರೀ ಮಳೆಯಿಂದಾಗಿ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಹಾನಿಗೊಳಗಾದ ಮನೆಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ ಪೂರ್ಣ ಹಾಗೂ ಭಾಗಶಃ ಹಾನಿಗೊಳಗಾಗಿರುವ ಮನೆಗಳೆಷ್ಟು?

ಇ) ಅಂತಹ ಮನೆಗಳ ಪೈಕಿ ಸರ್ಕಾರವು ಪುನರ್ ನಿರ್ಮಾಣ ಮಾಡಿರುವ ಮನೆಗಳ ಸಂಖ್ಯೆ ಎಷ್ಟು?

ಈ) ಇದುವರೆಗೂ ನೀಡಿರುವ ಪರಿಹಾರದ ಮೊತ್ತವೆಷ್ಟು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಹಾನಿಳಗಾದ ಒಟ್ಟು ಮನೆಗಳು 12630.

ಆ)

1) ಪೂರ್ಣ ಹಾನಿಯಾಗಿರುವ ಮನೆಗಳ ಸಂಖ್ಯೆ	3307
2) ಭಾಗಶಃ ಹಾನಿಗೊಳಗಾಗಿರುವ ಮನೆಗಳ ಸಂಖ್ಯೆ	9323
ಒಟ್ಟು	12630

ಇ) ಇಲ್ಲ, ಆದರೆ, ಆಶ್ರಯ ಮಾದರಿ ಮನೆಗಳನ್ನು ನಿರ್ಮಾಣ ಮಾಡಲು, ಈ ತಾಲ್ಲೂಕಿನಿಂದ 2243 ಮನೆಗಳನ್ನು ನಿರ್ಮಿಸುವ ಪ್ರಸ್ತಾವನೆಯನ್ನು ಕರ್ನಾಟಕ ಗೃಹ ಮಂಡಲಿಗೆ ಸಲ್ಲಿಸಲಾಗಿದೆ.

ಈ) ಈವರೆಗೆ ರೂ. 95.00 ಲಕ್ಷಗಳನ್ನು ಪರಿಹಾರವಾಗಿ ನೀಡಿದೆ.

ರಾಜ್ಯದಲ್ಲಿ ವಿವಿಧ ಮೂಲಗಳಿಂದ ನೀರಾವರಿಯಾಗುತ್ತಿರುವ ಸಾಗುವಳಿ ಪ್ರದೇಶ.

1068 - ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿವಿಧ ಮೂಲಗಳಿಂದ ನೀರಾವರಿಯಾಗುತ್ತಿರುವ ಸಾಗುವಳಿ ಪ್ರದೇಶ.

ಆ) ಕರ್ನಾಟಕ ರಾಜ್ಯಕ್ಕೆ ಕೃಷಿ ಸಾಗುವಳಿ ಮಾಡಲು ಬೇಕಾಗುವ ಪ್ರಮಾಣವೆಷ್ಟು?

ಇ) ಇದರಲ್ಲಿ ಚೆನ್ನಪಟ್ಟಣ ತಾಲ್ಲೂಕಿಗೆ ಕೃಷಿ ಸಾಗುವಳಿಗೆ ಬೇಕಾಗುವ ಬಿತ್ತನೆ ಬೀಜಗಳ ಪ್ರಮಾಣವೆಷ್ಟು?

ಈ) ಸರ್ಕಾರವು ಬೆಂಗಳೂರು ಗ್ರಾಮೀಣ ಜಿಲ್ಲೆಯಲ್ಲಿ ಶೇಕಡಾವಾರು ವಿತರಣೆ ಮಾಡಿರುವ ಅಧಿಕ ಇಳುವರಿತಳಿಗಳ ಬಿತ್ತನೆ ಬೀಜದ ಪ್ರಮಾಣವೆಷ್ಟು?

(ತಾಲ್ಲೂಕುವಾರು ವರ್ಷವಾರು ಅಂದರೆ 1989-90 90-91, 91-92ರಿಂದ ಇಂದಿನವರೆಗಿನ ಪ್ರಗತಿ)

ಶ್ರೀ ಎಸ್. ಹುಚ್ಚೆಮಾಸ್ತಿಗೌಡ (ಕೃಷಿ ಸಚಿವರು):

ಅ) 1990-91ನೇ ಸಾಲಿನಲ್ಲಿ ಒಟ್ಟು ನೀರಾವರಿಯಾಗಿದ್ದ ವಿಸ್ತೀರ್ಣ 25.98 ಲಕ್ಷ ಹೆಕ್ಟೇರ್‌ಗಳು (ಇದರ 117.59 ಲಕ್ಷ ಹೆಕ್ಟೇರ್ ಸಾಗುವಳಿ ವಿಸ್ತೀರ್ಣದ ಶೇ.22 ಇರುತ್ತದೆ) ವಿವಿಧ ನೀರಾವರಿ ಮೂಲಗಳಿಂದ ನೀರಾವರಿ ಹೊಂದುತ್ತಿರುವ ವಿಸ್ತೀರ್ಣ ಈ ಕೆಳಕಂಡಂತೆ ಇದೆ.

1. ಕಾಲುವೆಗಳು	10.92 ಲಕ್ಷ	ಹೆಕ್ಟೇರ್
2. ಕೆರೆಗಳು	2.68	”
3. ಬಾವಿಗಳು	6.70	”
4. ಕೊಳವೆ ಬಾವಿಗಳು	2.25	”
5. ಏತ ನೀರಾವರಿ	1.43	”
6. ಇತರೆ	2.00	”
ಒಟ್ಟು	**25.92**	”

ಆ) 1992-93ನೇ ಸಾಲಿಗೆ, ವಿವಿಧ ಕೃಷಿ ಬೆಳೆಗಳಿಗೆ ನಿಗದಿಪಡಿಸಿರುವ ಬೀಜ ಬದಲಿಕೆ ಪ್ರಮಾಣಕ್ಕನುಸಾರವಾಗಿ ಒಟ್ಟು 4,29,810 ಕ್ವಿಂಟಾಲ್ ಪ್ರಮಾಣಿತ : ಉತ್ತಮ ಗುಣಮಟ್ಟದ ಬೀಜಗಳು ವಿತರಣೆಗೆ ಬೇಕಾಗುತ್ತದೆ.

ಇ) 1992-93ನೇ ಸಾಲಿಗೆ, ಚೆನ್ನಪಟ್ಟಣ ತಾಲ್ಲೂಕಿಗೆ ಒಟ್ಟು 953.40ಕ್ವಿಂಟಾಲ್ ಬಿತ್ತನೆ ಬೀಜಗಳು ಬೇಕಾಗುತ್ತದೆ.

ಈ) ರಾಜ್ಯದಲ್ಲಿ ಅಧಿಕ ಇಳುವಳಿ ಕೊಡುವ (ಹೈಬ್ರಿಡ್ ಸೇರಿದಂತೆ) ಪ್ರಮಾಣಿತ ಉತ್ತಮ ಗುಣಮಟ್ಟದ ಬೀಜಗಳನ್ನು ಸರ್ಕಾರಿ ಸ್ವಾಮ್ಯದ ಹಾಗೂ ಖಾಸಗಿ ಸಂಸ್ಥೆಗಳನ್ನೊಳಗೊಂಡಂತೆ ವಿವಿಧ ಬೀಜ ವಿತರಣಾ ಸಂಸ್ಥೆಗಳು ಬಿತ್ತನೆ ಬೀಜಗಳನ್ನು ಪೂರೈಸುತ್ತದೆ. ಬೆಂಗಳೂರು ಗ್ರಾಮೀಣ ಜಿಲ್ಲೆಯಲ್ಲಿ ಶೇಕಡಾವಾರು ಬಿತ್ತನೆ ಬೀಜ ವಿತರಣೆಯಲ್ಲಿ ಸಾಧಿಸಿದ ಪ್ರಗತಿ ಕೆಳಕಂಡಂತಿದೆ.

ವರ್ಷ	ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವಿತರಿಸಿದ ಬೀಜದ ಪ್ರಮಾಣ (ಕ್ವಿಂಟಾಲುಗಳಲ್ಲಿ)		
	ಗುರಿ	ಸಾಧನೆ	ಶೇ.ಪ್ರಗತಿ
89-90	6846	3159	16
90-91	7019	3518	50
91-92	7153	3327	51
92-93(ಈವರೆಗೆ)	7879	2786	87

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 1989-90ರಿಂದ ಈವರೆಗೆ ಸಾಧಿಸಸಿದ ಬೀಜ ವಿತರಣಾ ಪ್ರಗತಿಯನ್ನು (ತಾಲ್ಲೂಕುವಾರು, ಬೆಳೆವಾರು ಮತ್ತು ವರ್ಷಾವಾರು) ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ತೋರಿಸಿದೆ.

STATEMENT SHOWING THE CROPWISE, TALUK WISE, YEAR-WISE SEED DISTRIBUTIOSN IN BANGALORE RURAL DISTRICT FROM 1989-90 TO 1992 -93 (TILL-DATE)

(Quantity in Quintals)

S. N.	Crop	Channapatana				Devanahalli				Hosakote				Doddaballapura			
		89-90	90-91	91-92	92-93	89-90	90-91	91-92	92-93	89-90	90-91	91-92	92-93	89-90	90-91	91-92	92-93
1.	Paddy	169	175	165	145	90	90	89	60	165	180	215	155	185	130	110	110
2.	Ragi	125	130	140	90	88	98	98	89	135	116	115	95	105	160	120	115
3.	Maize	21	23	25	30	60	65	80	60	65	80	90	100	180	260	240	245
Total Cereals		315	328	330	265	238	243	267	209	365	376	420	350	470	550	470	470
4.	Red gram	16	18	18	14	14	18	20	14	17	22	25	24	20	18	18	14
5.	Cow pea	08	09	08	08	08	10	10	08	08	07	10	08	10	12	12	10
6.	Avare	10	12	14	16	10	12	10	08	10	12	08	10	15	12	14	10

7.	Black gram	0.5	0,5	0.5	0.4	0.25	0.3	0..3	0.15	0.5	0.5	0.5	0,5	1.0	0.1	0.5	0.5
8.	Green gram	0.4	0.45	0.4	0.45	0.15	0.2	0.15	0.15	0.5	0.5	0.5	0.5	0.5	0.5	1.5	0.75
TOTAL PULSES		34.9	39.95	40.9	44.85	32.40	40.5	40.45	30.30	36.0	42.0	44.0	43.0	46.5	43.5	46.0	35.25
9.	Ground nut	75	90	78	86	30	25	35	25	40	50	55	35	70	70	60	45
TOTAL OIL SEEDS		75	90	78	86	30	25	35	25	40	50	55	35	70	70	60	45
GRAND TOTAL		424.90	457.95	448.90	39585	300.40	308.50	342.45	264.30	441.00	468.00	468.00	418.00	581.06	663.50	576.00	550.25

STATEMENT SHOWING THE CROPWISE, TALUK WISE, YEAR-WISE SEED DISTRIBUTIOSN IN BANGALORE RURAL DISTRICT FROM 1989-90 TO 1992-93 (TILL-DATE)

(Quantity in Quintals)

S. N.	Crop	Kanakapura				Magadi				Nelamangala				Ramanagar				Total			
		89-90	90-91	91-92	92-93	89-90	90-91	91-92	92-93	89-90	90-91	91-92	92-93	89-90	90-91	91-92	92-93	89-90	90-91	91-92	92-93
1.	Paddy	130	140	130	110	120	110	115	80	90	95	100	65	85	80	80	60	1034	1000	1004	785
2.	Ragi	100	135	150	115	105	130	115	90	95	110	100	60	85	70	80	45	838	930	918	699
3.	Maize	25	35	36	25	25	35	33	25	30	32	38	30	28	31	32	31	434	561	574	546
Total Cereals.		255	310	316	250	250	275	263	195	215	247	238	155	198	181	192	136	2306	2500	2496	2030
4.	Red gram	10	14	16	18	18	22	24	17	11	14	17	12	8	14	16	10	114	140	164	129
5.	Cow pea	8	10	12	10	7	10	10	8	5	6	6	4	6	8	6	4	60	72	74	60
6.	Avare	10	12	16	8	10	14	14	8	10	12	14	8	6	8	6	6	81	94	106	74

7.	Black gram	0.5	0.5	1	0.5	0.5	0.5	0.5	0.5	0.5	0.5	0.5	0.5	0.5	0.5	0.5	0.5	4.25	4.30	4.30	3.55
8.	Green gram	0.5	0.5	1	0.5	0.5	0.5	0.5	0.5	0.5	0.5	0.5	0.5	0.5	0.5	0.5	0.5	3.55	3.65	5.05	3.85
Total Pulses		29	37	46	37	36	47	49	34	27	33	38	25	21	31	29	21	262.8	313.95	333.35	270.4
9.	Groundnut	200	240	300	120	60	60	80	40	45	70	70	35	70	100	120	50	590	705	798	436
Total Oilseeds		200	240	300	120	60	60	80	40	45	70	70	35	70	100	120	50	590	705	798	436
Grand total		484	587	662	407	346	382	392	269	287	350	346	561	289	312	341	207	3158.80	3518	3627.35	2736

ಚನ್ನಪಟ್ಟಣ ತಾಲ್ಲೂಕಿನ ಸಿ ಮತ್ತು ಡಿ ವರ್ಗದ ಜಮೀನಿನ ಬಗ್ಗೆ

1069-ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣ ತಾಲ್ಲೂಕಿನಲ್ಲಿ ಎಷ್ಟು ಎಕರೆ ಸಿ ಮತ್ತು ಡಿ ವರ್ಗದ ಜಮೀನು ಕಂದಾಯ ಇಲಾಖೆಗೆ ಸೇರಿರುತ್ತದೆ (ಸರ್ವೆ ನಂ. ವಿಸ್ತೀರ್ಣ ಮತ್ತು ಗ್ರಾಮದ ಹೆಸರುಗಳನ್ನು ನೀಡುವುದು):

ಆ) ಸಿ ಮತ್ತು ಡಿ ವರ್ಗದ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆಯೇ?

ಇ) ಆಗಿದ್ದಲ್ಲಿ ಅಂತಹ ಜಮೀನುಗಳ ವಿಸ್ತೀರ್ಣ, ಸರ್ವೆ ನಂಬರ್‌ಗಳ ವಿವರ ನೀಡುವುದು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) 10397 ಎಕರೆ 30 ಗುಂಟೆಗಳು (ವಿವರಗಳ ಅನುಬಂಧ ನೀಡಲಾಗಿದೆ)

ಆ) ಅರಣ್ಯ ಇಲಾಖೆಗೆ ಕಾದಿರಿಸಿ ಅದಿಸೂಚಿತವಾದ ಜಮೀನನ್ನು ಹೊರತುಪಡಿಸಿ ಉಳಿದ ಜಮೀನನ್ನು ದಿನಾಂಕ 3-1-91 ರಲ್ಲಿ ಕಂದಾಯ ಇಲಾಖೆಗೆ ವಾಪಸ್ಸು ಪಡೆಯಲಾಗಿದೆ.

ಇ) ಮೇಲಿನ (ಅ)ನಲ್ಲಿರುವಂತೆ.

ಲಂಬಾಣಿ ತಾಂಡಗಳನ್ನು: ಹ್ಯಾಮ್ ಲೆಟ್ ಗೊಲ್ಲರ ಹಟ್ಟಿ ಮುಂತಾದವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ.

485-ಆರ್. ನಾರಾಯಣ (ಬೆಳ್ಳಾವಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಂಬಾಣಿ ತಾಂಡಗಳು ಗೊಲ್ಲರ ಹಟ್ಟಿಗಳು ಹ್ಯಾಮ್‌ಲೆಟ್‌ಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಯಾವುದಾದರೂ ಆಳತೆಗೋಲುಗಳನ್ನು ರೂಪಿಸಲಾಗಿದೆಯೆ?

ಆ) ತುಮಕೂರು ಜಿಲ್ಲೆಯಲ್ಲಿ ಇದುವರೆವಿಗೆ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಲಂಬಾಣಿ ತಾಂಡಗಳು ಗೊಲ್ಲರ ಹಟ್ಟಿಗಳು, ಹ್ಯಾಮ್‌ಲೆಟ್‌ಗಳ ಸಂಖ್ಯೆ ಎಷ್ಟು?

ಇ) ಹೆಚ್ಚು ಲಂಬಾಣಿ ತಾಂಡಗಳು, ಗೊಲ್ಲರ ಹಟ್ಟಿಗಳು ಹ್ಯಾಮ್‌ಲೆಟ್ ಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸುಗಮ ವಾಗುವಂತೆ ಲಂಬಾಣಿ ತಾಂಡಗಳು ಗೊಲ್ಲರ ಹಟ್ಟಿಗಳು ಮತ್ತು ಹ್ಯಾಮಲೆಟ್ ಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಪ್ರಸ್ತುತ ಇರುವ ಅಳತೆ ಗೋಲನ್ನು ಸರ್ಕಾರವು ಸಡಿಲಗೊಳಿಸುವುದೇ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ) ಹೌದು.

ಆ) ಆಕ್ಷೇಪಣೆಗಳನ್ನು ಕರೆದಿರುವ 5ಕರಡು ಅಧಿಸೂಚನೆಗಳನ್ನು ಹೊರಡಿಸಲಾಗಿದೆ.

ಇ) ಹೌದು. ಇದು ಪರಿಶೀಲನೆಯಲ್ಲಿದೆ.

ಉಪಾಧ್ಯಕ್ಷಣಿಯವರು : ಸಭೆಯ ಮುಂದೆ ಮಂಡಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿ) ಮಾನ್ಯ ಅಧ್ಯಕ್ಷರೆ, 1964ನೇ ಸಾಲಿನ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ನೇ ಕಲಮಿನ ಮೇರೆಗೆ

1. ಅಧಿಸೂಚನೆ ಸಂಖ್ಯೆ : ಹೆಚ್ ಡಿ 202: ಸಿಎನ್ಎ : 92, ದಿನಾಂಕ : 04-11-1992 ಚನ್ನಪಟ್ಟಣ ತಾಲ್ಲೂಕು ನಾಗಾವಾರದ ಶ್ರೀ ನಿಶಾಂತ ಸಂಚಾರಿ ಚಿತ್ರಮಂದಿರವನ್ನು ಟೆಂಪರರಿ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಬಗ್ಗೆ.
2. ಅಧಿಸೂಚನೆ ಸಂಖ್ಯೆ : ಹೆಚ್‌ಡಿ : 210 : ಸಿಎನ್ಎ : 92, ದಿನಾಂಕ: 17-12-1992 ತುಮಕೂರು ಜಿಲ್ಲೆ ಗುಬ್ಬಿಯ ಸ್ಟೇಟ್ ನಂ. 290 :2260ನಲ್ಲಿ ಖಾಯಂ ಚಿತ್ರ ಮಂದಿರ ನಿರ್ಮಿಸಲು ನೀಡಿದ ನಿರಾಕ್ಷೇಪಣಾ ಪತ್ರದ ಅವಧಿಯನ್ನು ವಿಸ್ತರಿಸುವ ಬಗ್ಗೆ
3. ಅಧಿಸೂಚನೆ ಸಂಖ್ಯೆ : ಹೆಚ್ ಡಿ: 228:ಸಿಎನ್ಎ:92, ದಿನಾಂಕ : 17-12-1992 ಧಾರವಾಡ ಜಿಲ್ಲೆ ಹಿರೇಕೆರೂರಿನ ಶ್ರೀ ಕುಮಾರೇಶ್ವರ ಸಂಚಾರಿ ಚಿತ್ರಮಂದಿರವನ್ನು ಅರೆ ಖಾಯಂ ಚಿತ್ರಮಂದಿರವನ್ನಾಗಿ ಪರಿವರ್ತಿಸುವ ಅಧಿಸೂಚನೆಗಳನ್ನು ಸಭೆಯ ಮುಂದಿಡುತ್ತೇನೆ.

1951ನೇ ಇಸವಿಯ ರಾಜ್ಯ ಹಣಕಾಸು ನಿಗಮದ ಅಧಿನಿಯಮ 38(3)ನೇ ಕಲಮಿನ ಮೇರೆಗೆ :

4. 1991-92ನೇ ಸಾಲಿನ ಕರ್ನಾಟಕ ರಾಜ್ಯ ಹಣಕಾಸು ನಿಗಮದ 33ನೇ ವಾರ್ಷಿಕ ವರದಿ.

1951ನೇ ಇಸವಿಯ ರಾಜ್ಯ ಹಣಕಾಸು ನಿಗಮದ ಅಧಿನಿಯಮ 37(7)ನೇ ಕಲಮಿನ ಮೇರೆಗೆ:

5. 31ನೇ ಮಾರ್ಚ್ 1991ನೇ ಸಾಲಿಗೆ ಅಂತ್ಯಗೊಂಡ ಕರ್ನಾಟಕ ರಾಜ್ಯ ಹಣಕಾಸು ನಿಗಮದ ಲೆಕ್ಕದ ಮೇಲಿನ ಲೆಕ್ಕ ಪರಿಶೋಧನಾ ವರದಿ.

1956ನೇ ಇಸವಿಯ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ:

6. 1990-91ನೇ ಸಾಲಿನ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಯಮಿತದ 27ನೇ ವಾರ್ಷಿಕ ವರದಿ.
7. 1991-92ನೇ ಸಾಲಿನ ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ ನಿಯಮಿತದ 7ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

II. ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಮಂತ್ರಿ) ಮಾನ್ಯ ಅಧ್ಯಕ್ಷರೆ,

1987ನೇ ಇಸವಿಯ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5)ನೇ ಕಲಮಿನ ಮೇರೆಗೆ.

1990-91ನೇ ಸಾಲಿನ ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

III. ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ)

ಮಾನ್ಯ ಅಧ್ಯಕ್ಷರೆ, 1971ನೇ ಇಸವಿಯ ನಿಯಂತ್ರಕ ಮಹಾ ಲೇಖಾ ಪರೀಕ್ಷಕರ (ಕರ್ತವ್ಯಗಳು, ಅಧಿಕಾರ ಮತ್ತು ಸೇವಾ ಷರತ್ತುಗಳು) ಅಧಿನಿಯಮ 19(ಎ) ಕಲಮಿನ ಮೇರೆಗೆ.

1987-88ನೇ ಸಾಲಿನ ಗುಲ್ಬರ್ಗಾ ಮತ್ತು ದಕ್ಷಿಣ ಕನ್ನಡ (ಮಂಗಳೂರು) ಜಿಲ್ಲಾ ಪರಿಷತ್ತುಗಳು ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

IV. ಶ್ರೀ ಹಾರ್‍ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) : ಮಾನ್ಯ ಅಧ್ಯಕ್ಷರೇ,

1986ನೇ ಇಸವಿಯ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಅಧಿನಿಯಮದ 26(2)ನೇ ಕಲಮಿನ ಮೇರೆಗೆ:

1990-91 ಮತ್ತು 1991-92ನೇ ಸಾಲುಗಳ ರಾಷ್ಟ್ರೀಯ ಕಾನೂನು ಶಾಲಾ ಭಾರತೀಯ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಗಳನ್ನು ಜನರಲ್ ಕೌನ್ಸಿಲ್ ನ ನಿರ್ಣಯದೊಂದಿಗೆ ಸಭೆಯ ಮುಂದಿಡುತ್ತೇನೆ.

V. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಮಂತ್ರಿ) ಮಾನ್ಯ ಅಧ್ಯಕ್ಷರೆ,

1959ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ 130ನೇ ಕಲಮಿನ ಮೇರೆಗೆ

1. 1959ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯ 29ಡಿ(1)ರ ಕಲಮಿನ ಕಾರ್ಯಾಚರಣೆಯಿಂದ ಉಡುಪಿ ಸಹಕಾರ ಬ್ಯಾಂಕ್ ನಿಯಮಿತವನ್ನು ವಿನಾಯಿತಿಗೊಳಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ : 07-10-1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ 343: ಸಿಎಲ್‌ಎಂ: 92ರ ಕ್ರಮಾಂಕದ ಆದೇಶ.
2. ಮಡಿಕೇರಿಯಲ್ಲಿರುವ ಕೊಡಗು ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತದ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ : 29-10-1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ : 362:ಸಿಎಲ್‌ಎಂ :92ರ ಕ್ರಮಾಂಕದ ಆದೇಶ.
3. 1960ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯ 54 ಹಾಗೂ 56ನೇ ನಿಯಮದ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ : 12-09-1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ: 64 : ಸಿಎಲ್‌ಎಂ: 91ರ ಕ್ರಮಾಂಕದ ಅಧಿಸೂಚನೆ.
4. ಚಿಕ್ಕಮಗಳೂರಿನಲ್ಲಿರುವ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಮುಂದೂಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ: 13-10-1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ: 320 :ಸಿಎಲ್‌ಎಂ :92ರ ಕ್ರಮಾಂಕದ ಆದೇಶ.
5. ಗುಂಡಸಂದ್ರ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ಗುಂಡಸಂದ್ರ ಹಾಗೂ ಮಾಗಡಿ ಟಿ.ಎ.ಪಿ.ಸಿ.ಎಂ.ಎಸ್.ಲಿ.ನ ಚುನಾವಣೆಯನ್ನು ಮುಂದೂಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ: 30-10-1992 ಹೊರಡಿಸಲಾದ ಸಿಎಂಡಬ್ಲ್ಯೂ : 363:ಸಿಎಲ್‌ಎಂ: 92ರ ಕ್ರಮಾಂಕದ ಆದೇಶ.

6. ಸಹಕಾರ ಸಂಘಗಳ ಚುನಾವಣೆಯನ್ನು ಮುಂದೂಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ : 11-12-1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ : 409: ಸಿಎಲ್‌ಎಂ: 92ರ ಕ್ರಮಾಂಕದ ಆದೇಶ.
7. ಬೆಂಗಳೂರು ಜಿಲ್ಲಾ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಹಕಾರ ಬ್ಯಾಂಕ್ ನಿಯಮಿತದ ವಾರ್ಷಿಕ ಸರ್ವಸದಸ್ಯರ ಸಭೆಗೆ ಸಂಬಂಧಿಸಿದಂತೆ ದಿನಾಂಕ : 20-08-1992ರಂದು ಹೊರಡಿಸಲಾದ ಸಿಎಂಡಬ್ಲ್ಯೂ: 216: ಸಿಎಲ್ ಎಂ: 92ರ ಕ್ರಮಾಂಕದ ಆದೇಶಗಳನ್ನು ಸಭೆಯ ಮುಂದಿಡುತ್ತೇನೆ.

VI. ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಮಂತ್ರಿ): ಮಾನ್ಯ ಅಧ್ಯಕ್ಷರೆ, 1957ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ ಅಧಿನಿಯಮದ 9(2)ನೇ ಕಲಮಿನ ಮೇರೆಗೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಅಮಲ್ದಾರಿ ಮಾಡಿದ ದಸ್ತಾವೇಜುಗಳ ಸಂಬಂಧದಲ್ಲಿ 1957ನೇ ಕರ್ನಾಟಕ ಸ್ಟ್ಯಾಂಪ್ ಕಾಯಿದೆಯಡಿಯಲ್ಲಿ ವಸೂಲಿ ಮಾಡಬಲ್ಲ ರೂ. 25,000-00 ಸಾಲದ ಮೊಬಲಗಿನ ಮೇಲಿನ ಸ್ಟ್ಯಾಂಪ್ ಶುಲ್ಕವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ : 02-12-1992ರಂದು ಹೊರಡಿಸಲಾದ ಆರ್ ಡಿ : 314: ಇಎಸ್‌ಆರ್ :90ರ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುತ್ತೇನೆ.

ಉಪಾಧ್ಯಕ್ಷಣಿಯವರು : ಕಾಗದ ಪತ್ರಗಳನ್ನು ಮಂಡಿಸಲಾಯಿತು.

ನಿಲುವಳಿ ಸೂಚನೆಯ ಪ್ರಸ್ತಾವ.

ಶ್ರೀ ಎಸ್. ಬಂಗಾರಪ್ಪನವರ ಆಡಳಿತದಲ್ಲಿ ರಾಜ್ಯದ ಬೊಕ್ಕಸಕ್ಕೆ ಆದ ಹಾನಿ ಬಗ್ಗೆ

ಉಪಾಧ್ಯಕ್ಷಣಿಯವರು : ನಿಮ್ಮ ನಿಲುವಳಿ ಸೂಚನೆಯು ಬಂದಿದೆ, ಆಮೇಲೆ ತಮ್ಮನ್ನು ಕರೆಯುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಲುವಳಿ ಸೂಚನೆಯನ್ನು ಕಳುಹಿಸಿದಾಗ ಮೊದಲು ಅದಕ್ಕೆ ಆದ್ಯತೆಯನ್ನು ಕೊಡಬೇಕಾಗುತ್ತದೆ. ನಾನು ಅತ್ಯಂತ ಪ್ರಮುಖವಾದಂಥ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಬಂಗಾರಪ್ಪನವರು ತಮ್ಮ ಸ್ಥಾನಕ್ಕೆ ರಾಜಿನಾಮೆಯನ್ನು ಕೊಡಬೇಕಾಗಿ ಬಂತು, ಆದ್ದರಿಂದ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಇದರ ಪರಿಣಾಮವಾಗಿ ರಾಜ್ಯದ ಜನತೆಯ ಮೇಲೆ ಏನಾಗಿದೆ, ರಾಜ್ಯದ ಹಣಕಾಸಿನ ಬೊಕ್ಕಸಕ್ಕೆ ಏನಾಗಿದೆ ಎನ್ನುವ ಬಗ್ಗೆ ಚರ್ಚೆಯಾಗಬೇಕಾಗಿದೆ. ಅದಕ್ಕೋಸ್ಕರ ನಿಲುವಳಿ ಸೂಚನೆಯ ಮೂಲಕ ಇದನ್ನು ಪ್ರಸ್ತಾಪ ಮಾಡಿದ್ದೆ, ಈ ಸರ್ಕಾರದ ಬೊಕ್ಕಸಕ್ಕೆ ಆಗಿರತಕ್ಕ ಅವ್ಯವಹಾರ ಅವುಗಳ ಬಗ್ಗೆ ಎಲ್ಲವನ್ನು ಸಿ.ಬಿ.ಐ. ತನಿಖೆಗೆ ಒಳಪಡಿಸಬೇಕೆಂದು ನಾವು ಮತ್ತು ಅನೇಕ ರಾಜಕೀಯ ಪಕ್ಷಗಳವರು ಒತ್ತಾಯ ಮಾಡಿದ್ದಾರೆ. ಸ್ವತಃ ಅವರ ಪಕ್ಷದವರೇ ಅನೇಕ ಭ್ರಷ್ಟಾಚಾರದ ಹಗರಣಗಳ ಬಗ್ಗೆ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಪಟ್ಟಿಯನ್ನು ಕೊಟ್ಟು ಅದರ ಆಧಾರದ ಮೇಲೆ ಶ್ರೀಮಾನ್ ಬಂಗಾರಪ್ಪನವರು ರಾಜಿನಾಮೆಯನ್ನು ಕೊಡಬೇಕಾಯಿತು. ಇಡೀ ರಾಜ್ಯ ಇದನ್ನು ತಿಳಿದುಕೊಳ್ಳಬೇಕೆಂದಿದ್ದರೆ ಅದಕ್ಕೋಸ್ಕರ ಇದು ಪ್ರಮುಖವಾದ ವಿಚಾರವೆಂದು ಪ್ರಾಮಾಣಿಕವಾಗಿ ನಾವೆಲ್ಲರೂ ಪೂರ್ಣವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಉಪಾಧ್ಯಕ್ಷಣಿಯವರು: ಮತ್ತೊಮ್ಮೆ ನಿಮ್ಮನ್ನು ಕರೆಯುತ್ತೇನೆ.

+ ಶ್ರೀ ಆರ್.ವಿ. ದೇಶಪಾಂಡೆ : ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ನಾವು ಮತ್ತೆ ಎಸ್.ಜಿ.ಪಿ.ಯವರುಇಬ್ಬರೂ ಸೇರಿ ಇವತ್ತು ನಮ್ಮ ಮಿತ್ರರಾದ ಯಡಿಯೂರಪ್ಪನವರು ಏನು ವಿಷಯವನ್ನು ನಿಲುವಳಿ ಸೂಚನೆಗೆ ಕೊಟ್ಟಿದ್ದಾರೆ ಅದನ್ನು ನಾವುಗಳು 29-20ನೇ ತಾರೀಖಿನಂದೇ ನಿಯಮ 68ರ ಕೆಳಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ವಿವರಣೆಯ ಸಹಿತ ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದೇವೆ. ತಾವೂ ಸಹ ಈ ಸದನದಲ್ಲಿ ಅದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದಿರಿ, ಆ ವಿಷಯವು ಎರಡು ಬಾರಿ ಬಿಸಿನೆಸ್ ಅಡ್ವೈಸರಿ ಸಮಿತಿಯಲ್ಲಿ ಬಂದಿದೆ, ಆದರೂ ಅದರ ಬಗ್ಗೆ ಯಾವ ನಿರ್ಣಯವಾಗಿಲ್ಲ. ಹಾಗಾಗಿ ಇವರಿಗೆ ನಿಲುವಳಿ ಸೂಚನೆಯಲ್ಲಿ ಏನು ಸಬ್‌ಮಿಷನ್‌ಗೆ ಅವಕಾಶ ಮಾಡಿಕೊಡುತ್ತೀರಿ ಅದನ್ನು ಮಾಡುವುದಕ್ಕೆ ಮೊದಲು ನಾವು ಅದೇ ವಿಷಯದಲ್ಲಿ ಮೊದಲೇ ಡೀಟೇಲ್ ಆಗಿ ಕೊಟ್ಟಿದ್ದೇವೆ. ತಾವು ಅದರ ಬಗ್ಗೆ ನಿರ್ಣಯ ಮೊದಲು ಕೊಡಬೇಕು. ನಾವು ಅವರಿಗಿಂತ ಮೊದಲು ಸಬ್ ಮಿಷನ್ ಮಾಡಿದ್ದೇವೆ. ನಮಗೆ ಮೊದಲು ಅವಕಾಶ ಮಾಡಿಕೊಟ್ಟು ಅನಂತರ ಅವರಿಗೆ ಕೊಡಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಏನೆಂದರೆ ಯಾವುದೇ ನಿಲುವಳಿ ಸೂಚನೆಯನ್ನು ಯಾರೇ ಕಳುಹಿಸಿದ್ದರೂ ಸಹ, ಯಾರು ನಿಲುವಳಿ ಸೂಚನೆಯನ್ನು ಕಳಿಹಿಸಿದ್ದಾರೆ ಅದಕ್ಕೆ ಆದ್ಯತೆಯನ್ನು ಕೊಡಬೇಕೆ ಹೊರುತು ಯಾವತ್ತೋ ಕೊಟ್ಟಿದ್ದನ್ನು ಇವೊತ್ತು ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ, ಅದಕ್ಕೋಸ್ಕರ ಸದನದ ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸಿ ರಾಜ್ಯದಲ್ಲಿ ಮೊದಲ ಬಾರಿ ಜನರ ಮೇಲೆ ಏನು ದುಷ್ಪರಿಣಾಮವಾಗಿದೆ, ಎರಡು ವರ್ಷದ ಆಡಳಿತದ ವೈಖರಿಯಿಂದ ಏನಾಗಿದೆ ಇದರ ಬಗ್ಗೆ ಚರ್ಚೆಯಾಗಬೇಕೆಂದು ಬಹಳ ಕೇಳಿದ್ದೆ, ಅವಕಾಶ ಸಿಗಿಲಲ್ಲ. ಅದಕ್ಕೋಸ್ಕರ ಇವತ್ತು ನಿಲುವಳಿ ಸೂಚನೆಯ ಮೂಲಕ ಎಲ್ಲಾ ಬೇರೆ ಕೆಲಸವನ್ನು ಬದಿಗೊತ್ತಿ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಮತ್ತು ಜನರ ಮೇಲೆ ಇದರಿಂದ ಕೆಟ್ಟ ಪರಿಣಾಮವಾಗಿದೆ. ಈ ಎಲ್ಲಾ ಅವ್ಯವಹಾರಗಳ ಬಗ್ಗೆ ಸಿ.ಬಿ.ಐ.ಗೆ ತನಿಖೆಗೆ ಒಪ್ಪಿಸಬೇಕು.

ಉಪಾಧ್ಯಕ್ಷಣಿಯವರು : ಮಾನ್ಯ ಹರ್ಷಕುಮಾರ್ ಗೌಡರವರೆ ನೀವು ಒಂದು ಕಾಗದವನ್ನು ಈಗ ಕಳುಹಿಸಿ ಅದನ್ನು ರೈಸ್ ಮಾಡುವುದಕ್ಕೆ ಅವಕಾಶ ಕೇಳಿದರೆ ಆಗುವುದಿಲ್ಲ, ತಾವು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಯಾವಾಗ ನಾವು ಅಯೋಧ್ಯೆಯ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿದೆವೋ-ಆಗ ಅವರು ನೆರೆ ಹಾವಳಿಯ ವಿಷಯವಾಗಿ ಹೇಳಿದರು, ನಾವು ಬಂಗಾರಪ್ಪನವರ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿದಾಗ ಅವರು ನೆರೆಹಾವಳಿಯ ವಿಚಾರವಾಗಿ ಚರ್ಚೆಯಾಗಬೇಕೆಂದರು, ನಾವು ನೆರೆಹಾವಳಿಯ

ಬಗ್ಗೆ ಈಗ ಚರ್ಚೆಯಾಗಬೇಕೆಂದರೆ ಅವರು ಬಂಗಾರಪ್ಪನವರ ಬಗ್ಗೆ ಅವರ ದುರಾಡಳಿತದ ಬಗ್ಗೆ, ಭ್ರಷ್ಟಾಚಾರದ ಬಗ್ಗೆ ತಮಗೆ ನೋಟೀಸನ್ನು ಕೊಡುತ್ತಾರೆ. ಒಂದು ವಾರದ ಹಿಂದೆಯೇ ಈ ವಿಷಯ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಬಂದಿದೆ. ಆ ವಿಷಯವನ್ನು ಸಾಕಷ್ಟು ಸದಸನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮೊದಲು ನಾವು ಕಳಿಸಿಕೊಟ್ಟಿದ್ದ ಸೂಚನೆಯ ಬಗ್ಗೆ ನಿರ್ಣಯವಾಗಬೇಕು.

(ಗೊಂದಲ)

+ ಶ್ರೀ ಸಿ. ಬೈರೇಗೌಡ : ಸನ್ಮಾನ್ಯ ಉಪಾಧ್ಯಕ್ಷಣಿಯರೆ, ಚರ್ಚೆಯಾಗಬೇಕು ಎನ್ನತಕ್ಕದ್ದಕ್ಕೆ ಕಾಲವನ್ನು ನಿಗದಿ ಮಾಡಬೇಕೆಂದು ನಿಯಮದಲ್ಲಿದೆ. ಈ ಸಭೆಯ ಮುಂದೆ ಯಾವ ವಿಷಯವಿದೆ ಅದು ಈಗಾಗಲೇ ತಮ್ಮ ಗಮನಕ್ಕೆ ಬಂದಿದೆ, ನಾವು ಅದರ ಬಗ್ಗೆ ಈಗಾಗಲೇ ನೋಟೀಸನ್ನು ಕೊಟ್ಟಿದ್ದೇವೆ ಅದರ ಬಗ್ಗೆ ನಾವು ಈ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇವೆ, ಮಾನ್ಯ ದೇಶಪಾಂಡೆಯವರು ಮತ್ತು ನಾನು ಇಬ್ಬರೂ ಪ್ರಸ್ತಾಪ ಮಾಡಿದ್ದೇವೆ. This House is seized of the matter.

ಆದುದರಿಂದ ಮೊದಲು ಅದನ್ನು ತೆಗೆದುಕೊಳ್ಳಬೇಕೇ ವಿನಃ ಬೇರೆ ವಿಷಯವನ್ನು ತೆಗೆದುಕೊಳ್ಳಲು ಅವಕಾಶವಿಲ್ಲ. ಅದನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ದೇಶಪಾಂಡೆಯವರು ಹೇಳಿದಂತೆ ದೇಶಕ್ಕೆ ಅತೀ ಮುಖ್ಯವಾದ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಅವರು ಮತ್ತೊಂದನ್ನು ಪ್ರಸ್ತಾಪ ಮಾಡಿದರು. ರೈತರು ನಾಶವಾಗಿಹೋಗುತ್ತಿದ್ದಾಗ ಇವರೆಲ್ಲಿದ್ದರು? ನೆರೆಹಾವಳಿಯಿಂದ ರಾಜ್ಯದಲ್ಲಿರತಕ್ಕ 4-5 ಜಿಲ್ಲೆಗಳು ನಾಶವಾಗಿದ್ದಾಗ ಎಲ್ಲಿದ್ದರು ಇವರು?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಎಲ್ಲಿದ್ದೆ ಎಂಬುದನ್ನು ಇವರಿಂದ ನಾನು ಕೇಳಿಸಿಕೊಳ್ಳಬೇಕಾಗಿಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಇದು ದುರುಪಯೋಗವಾಗುತ್ತಿದೆ. ತಾವು ತಮ್ಮ ರಕ್ಷಣೆಗೆ ಬರಬೇಕು.

(ಗೊಂದಲ)

ಉಪಾಧ್ಯಕ್ಷಣಿಯವರು : ತಮ್ಮ ಮಾತನ್ನು ತಾವು ಹೇಳಿದ್ದೀರಿ.

ಶ್ರೀ ಸಿ. ಬೈರೇಗೌಡ: ನಾನು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಕೋಟ್ಯಾಂತರ ರೂಪಾಯಿಗಳು ಲೂಟಿಯಾಗಿರುವ ವಿಚಾರದಲ್ಲಿ ಚರ್ಚೆ ಮಾಡಿದರೆ ಕಾಲಹರಣ ಹೇಗಾಗುತ್ತದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಪ್ರವಾಹ ಬಂದು ದೇಶದಲ್ಲಿ ಜನ ತೊಂದರೆ ಪಡುತ್ತಿರುವಾಗ ಇವರು ದೇಶದಲ್ಲಿ ಬೆಂಕಿ ಇಡತಕ್ಕ ಕೆಲಸವನ್ನು ಮಾಡುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷಣಿಯವರು : ಈಗ ಮಾನ್ಯ ಯಡಿಯೂರಪ್ಪನವರು ಎದ್ದು ನಿಂತಿದ್ದಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕರಿಯಣ್ಣ : ಏಜೆಂಟರು ಎಂದು ಹೇಳುತ್ತಿದ್ದಾರೆ. ಇದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಹೇಳಿದೆ ಎಂದರೆ,ಇಂಥ ವಿಚಾರಗಳನ್ನು ಪ್ರಸ್ತಾಪ ಮಾಡುವಾಗ ಯಾರಾದರೂ ತಡೆಯುವುದಕ್ಕೆ ಬಂದಾಗ ಅವರ ಪರವಾಗಿರತಕ್ಕ ಏಜೆಂಟರು ಎಂದು ಈ ರಾಜ್ಯದ ಜನರು ತಿಳಿದುಕೊಳ್ಳುತ್ತಾರೆ. ಅಂಥ ತಪ್ಪು ಅಭಿಪ್ರಾಯಕ್ಕೆ ದಯವಿಟ್ಟು ಅವಕಾಶ ಕೊಡಬೇಡಿ. ಎಂದು ಹೇಳಿದೆ.

ಶ್ರೀ ಸಿ. ಬೈರೇಗೌಡ : ನೀವು ಆ ರೀತಿ ಹೇಳಲಿಲ್ಲ. ನಾನು ಪಕ್ಕದಲ್ಲೇ ಕುಳಿತು ಕೇಳಿಸಿಕೊಳ್ಳುತ್ತಿದ್ದೇನೆ. ನೀವು ಆ ರೀತಿ ಹೇಳಲಿಲ್ಲ.

(ಗೊಂದಲ)

ಉಪಾಧ್ಯಕ್ಷಣಿಯವರು : ಎಲ್ಲರೂ ಈ ರೀತಿ ಮಾತನಾಡಿದರೆ ಯಾವುದೂ ಕೂಡ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷಣಿಯವರು : ಏನೋ ಒಂದು ಗಹನವಾದ ವಿಷಯವನ್ನು ಮಾನಾಡಬೇಕೆಂದು ನೀವೆಲ್ಲರೂ ನಿಂತಿದ್ದೀರಿ. ಆದರೆ ಎಲ್ಲರೂ ಹೀಗೆ ಒಟ್ಟಿಗೇ ನಿಂತು ಮಾತನಾಡಿದರೆ ಯಾರದ್ದು ರೆಕಾರ್ಡ್‌ಗೆ ಹೋಗುವುದಕ್ಕೆ ಸಾಧ್ಯ? ನೀವು ಇಷ್ಟೊಂದು ಜನರು ನಿಂತು ಮಾತನಾಡಿದ್ದುದು ಏನು ಎಂದು ನನಗಂತೂ ಅರ್ಥವಾಗಲಿಲ್ಲ. ಒಬ್ಬೊಬ್ಬರೇ ನಿಂತು ತಮ್ಮ ತಮ್ಮ ವಿಷಯಗಳನ್ನು ಪ್ರಸ್ತಾಪ ಮಾಡಿ. ನಾನು ಎಲ್ಲರನ್ನೂ ಕರೆಯುತ್ತೇನೆ. ಬೈರೇಗೌಡರೇ ತಾವ ಏನು ಹೇಳಬೇಕೋ ಹೇಳಿ.

ಶ್ರೀ ಸಿ. ಬೈರೇಗೌಡ : ನಾವು ಈ ಸದನಕ್ಕಾಗಲಿ, ತಮಗಾಗಲಿ ಅಥವಾ ಯಾರ ಮನಸ್ಸಿನಗಾಗಲಿ ಬೇಸರ ಮಾಡಬೇಕೆಂದಾಗಲಿ, ಮನಸ್ಸನ್ನು ನೋಯಿಸಬೇಕೆಂದು ಆಗಲಿ ಉದ್ದೇಶವಿಲ್ಲ. ಮಾನ್ಯ ಯಡಿಯೂರಪ್ಪನವರು ಮಾತನಾಡುವಾಗ ಪ್ರತಿಯೊಂದು ಸಂದರ್ಭದಲ್ಲೂ ಏನಾದರೊಂದು ಮಾಡುತ್ತಲೇ ಇರುತ್ತಾರೆ. ಮೊದಲನೇಯ ದಿವಸ ಈ ದೇಶದ ಪರಿಸ್ಥಿತಿಯ ಬಗ್ಗೆ ಮಾನಾಡತಕ್ಕ ವಿಚಾರದಲ್ಲಿ ನಾವು ಒಂದು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ತಂದಾಗ ಇವರು ಪ್ರವಾಹದ್ದು ಎತ್ತಿದರು. ಅವರಿಗೆ ಈ ವಿಚಾರವನ್ನು ಎತ್ತಲು ಅವಕಾಶವಿಲ್ಲವೆಂದು ನಾನು ಹೇಳುವುದಿಲ್ಲ. ಅವರಿಗೆ ಅಧಿಕಾರವಿದೆ. ಆದರೆ ಗಹನವಾದ ವಿಚಾರ ಯಾವುದೆಂಬುದನ್ನು ಅವರು ಅರ್ಥಮಾಡಿಕೊಳ್ಳಬೇಕು. ಅದೇ ರೀತಿ ನಾವೂ ಕೂಡ ಅರ್ಥಮಾಡಿಕೊಳ್ಳಬೇಕು. ಇವತ್ತು ನಾವು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ತಂದೆವು. ಈಗಾಗಲೇ ನಾವು ತಮಗೆ ಒಂದು ನೋಟೀಸ್‌ನ್ನು ಕೊಟ್ಟಿದ್ದೇವೆ. ಹಿಂದಿನ ಸರ್ಕಾರದಲ್ಲಿ ನಡೆದಿರತಕ್ಕ ಬ್ರಷ್ಟಾಚಾರ, ಸ್ವಜನ ಪಕ್ಷಪಾತ ಇನ್ನೂ ಏನೇನು ನಡೆದಿದೆ ಅದರ ಬಗ್ಗೆ ಪ್ರಸ್ತಾಪ ಮಾಡಲು ಅವಕಾಶ ಕೊಡಬೇಕೆಂದು ಕೊಟ್ಟಿದ್ದೇವೆ. ಈ ವಿಚಾರವನ್ನು

ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅದಕ್ಕೆ ಸಮಯವನ್ನು ನಿಗದಿ ಮಾಡಬೇಕೆಂಬುದಕ್ಕೆ ತಮ್ಮ ಅಭಿಪ್ರಾಯ ಇದೆ ಎಂದು ನಾವು ಅಂದುಕೊಂಡಿದ್ದೇವೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲೂ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ನಾವು ಕೊಟ್ಟಿರತಕ್ಕ ನೋಟೀಸ್ ಏನಿದೆ This House is seized of the matter ನೀವು ಅಡ್ಜರ್ನ್‌ಮೆಂಟ್ ಮೋಷನ್ನನ್ನು ತೆಗೆದುಕೊಳ್ಳಬೇಕಾದರೂ ಕೂಡ ಅದು ಈ ಹಿಂದೆ ಚರ್ಚೆಯಾಗಿರಬಾರದು. ಈ ಸದನದ ಮುಂದೆ ಅದು ಇರಬಾರದು. ಅಂಥ ವಿಚಾರಗಳನ್ನು ಅಡ್ಜರ್ನ್‌ಮೆಂಟ್ ಮೋಷನ್ ಆಗಿ ಇಲ್ಲಿ ತರುವುದಕ್ಕೆ ಅವಕಾಶವಿದೆಯೇ ಹೊರತು ಬೇರೆ ವಿಚಾರಗಳಿಗೆ ಅವಕಾಶವಿಲ್ಲ ಎನ್ನತಕ್ಕದ್ದು ನನ್ನ ಭಾವನೆ.ಪ್ರತಿಯೊಂದು ಸಂದರ್ಭದಲ್ಲೂ ಮಾನ್ಯ ಯಡಿಯೂರಪ್ಪನವರು ಏನು ಮಾಡುತ್ತಾರೆ, ನಾವು ಏನಾದರೂ ಒಂದು ವಿಷಯವನ್ನು ತರಬೇಕೆಂದು ಹೊರಟರೆ ಅದನ್ನು ಅಡ್ಡದಾರಿ ಹಿಡಿಸುವಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆದುದರಿಂದ ಇವರು ಏನು ನಡೆಸುತ್ತಿದ್ದಾರೆ, ಏನಾಗುತ್ತಿದೆ ಎಂಬುದನ್ನು ನಾವು ಹೇಳಬೇಕಾಗುತ್ತದೆ.

ನಮ್ಮನ್ನು ಹೊರಗಿನ ಜನ ಪ್ರಶ್ನೆ ಮಾಡತಕ್ಕಂಥ ಸಂದರ್ಭ ಬಂದಿದೆ. ಬಂಗಾರಪ್ಪನವರು ಮಾಡಿರತಕ್ಕಂತಹ ಅವರ ಸರಕಾರದಲ್ಲಾಗಿರತಕ್ಕಂತಹ ಅವ್ಯವಹಾರಗಳ ಬಗ್ಗೆ ಭ್ರಷ್ಟಾಚಾರದ ಬಗ್ಗೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ನಾವು ಯಾರೂ ಯಡಿಯೂರಪ್ಪನವರಿಗಿಂತ ಹಿಂದೆ ಖಂಡಿತ ಇಲ್ಲ ಇನ್ನೂ ಮುಂದಿದ್ದೇವೆ. ಪರಿಸ್ಥಿತಿ ಹಾಗಿರುವಾಗ. ನೀವು ನಮ್ಮ ಬಗ್ಗೆ ಆರೋಪಧ ರೀತಿಯಲ್ಲಿ ಮಾತನಾಡಿದ್ದೀರೋ ಇಲ್ಲವೇ ಎಂಬುದನ್ನು ತಾವು ಕಡತದಲ್ಲಿರುವುದನ್ನು ತರಿಸಿ ನೋಡಬೇಕು. ನಮಗೆ ಮಸಿ ಬಳಿಯತಕ್ಕಂತಹ ರೀತಿಯಲ್ಲಿ ಒಂದು ಮಾತು ಅವರ ಬಾಯಿಂದ ಬಂದರೆ ನಾವು ಇಲ್ಲಿ ಕುಳಿತುಕೊಂಡು ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಹೊರಗಿನಿಂದ ಜನ ನಮ್ಮನ್ನು ಪ್ರಶ್ನೆ ಮಾಡುತ್ತಾರೆ. ದಯವಿಟ್ಟು ನಮ್ಮ ನೋಟೀಸ್ ಏನು ಇದೆ ಅದನ್ನು ತರಿಸಿಕೊಡಿ. This House is already seized of the matter.ಈ ಸಭೆಯ ಗಮನದಲ್ಲಿ ಅದು ಇರುವುದರಿಂದ ಬೇರೆ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲ ಎನ್ನುವುದನ್ನು ವಿನಯದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಇವರು ನನ್ನ ಬಗ್ಗೆ ಹೇಳಿದರು. ನಾನು...

ಶ್ರೀ ಕೆ.ಹೆಚ್. ರಂಗನಾಥ್ : ಬೈರೇಗೌಡರು ನೋಟೀಸನ್ನು ತಮ್ಮ ಕಚೇರಿಗೆ ಕಳುಹಿಸಿರಬಹುದು. ಅದು ಆ ಸ್ಟೇಜಿನಲ್ಲಿ ಇರಬಹುದು. But, the House is not seized of the matter. ತಾವು ಅಪ್ಪಣೆ ಕೊಟ್ಟು ಡಿಸ್ಕಷನ್‌ಗೆ ಬಂದಾಗ then the House is seized of the matter.

ಶ್ರೀ ಸಿ. ಬೈರೇಗೌಡ : ನಾವು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಚರ್ಚೆ ಮಾಡೋಣ ಎನ್ನುವುದು ಅಧ್ಯಕ್ಷರ ಬಾಯಿಂದ ಕೂಡ ಬಂದಿದೆ ಆದ್ದರಿಂದ ನಾನು ಈ ಮಾತನ್ನೇಳಿದ್ದೇನೆ. ಅಷ್ಟೇ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬೈರೇಗೌಡರು ಮಾತನಾಡುವಾಗ ಯಾವುದೇ ಪ್ರಾಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೋದರೆ ಯಡಿಯೂರಪ್ಪನವರು ಅಡ್ಡಗಾಲು ಹಾಕುವಂತಹ ಪ್ರಯತ್ನ ಮಾಡುತ್ತಾರೆಂದು ಹೇಳಿದರು .ನಿಜ. ಬಿಜಿನೆಸ್

ಅಡ್ವೈಸರಿ ಸಮಿತಿಯಲ್ಲಿ ಮುಖ್ಯ ಮಂತ್ರಿಗಳು ಸಭೆ ಕರೆದಾಗ ಇರಬಹುದು ಏನು ಪ್ರಬಲವಾಗಿ ನಾನು ನಂಬಿಕೊಂಡು ಬಂದಿರತಕ್ಕಂತಹ ಮತ್ತು ಯಾವುದಕ್ಕೆ ಆದ್ಯತೆ ಕೊಡಬೇಕೋ ಅದಕ್ಕೆ ಕೊಡಬೇಕೆಂದು ಹೇಳುವ ಅಧಿಕಾರ ನನಗೆ ಇದೆ. ಅದನ್ನಾರೂ ಕಿತ್ತುಕೊಳ್ಳುವುದಕ್ಕಾಗುವುದಿಲ್ಲ.

ಅಯೋಧ್ಯೆ ಬಗ್ಗೆ ಚರ್ಚೆಮಾಡಬೇಕೆಂದು ಹೇಳಿದರು. ನಾನು ಸ್ಪಷ್ಟವಾಗಿ ಹೇಳಿದೆ ಈ ರಾಜ್ಯದ ರೈತರು ಅತಿವೃಷ್ಟಿಗೆ ಸಿಕ್ಕಿ ಕಂಗಾಲಾಗಿದ್ದಾರೆ ಅವರ ಬಗ್ಗೆ ಹೆಚ್ಚು ಪ್ರಾಮುಖ್ಯತೆ ಸಿಗಬೇಕು ಅದಕ್ಕಿಂತ ಮಿಗಿಲಾಗಿ ಕಳೆದ 2 ವರ್ಷಗಳಿಂದ ಅವರು ಬೀದಿ ಪಾಲಾಗಿದ್ದಾರೆ. ಅನೇಕ ಭ್ರಷ್ಟಾಚಾರದ ಹಗರಣಗಳು ನಡೆದಿವೆ. ಆ ಕಾರಣದಿಂದ ಹಿಂದಿನ ಮುಖ್ಯ ಮಂತ್ರಿಗಳಾದ ಮಾನ್ಯ ಬಂಗಾರಪ್ಪನವರು ರಾಜೀನಾಮೆ ಕೊಡುವ ಪ್ರಸಂಗ ಬಂತೋ ಇದರ ಬಗ್ಗೆ ರಾಜ್ಯದ ಜನ ತಿಳಿದುಕೊಳ್ಳಬೇಕೆಂದಿದ್ದಾರೆ ಇದು ಚರ್ಚೆ ಆಗಬೇಕೆಂದು ನಿಲುವಳಿ ಸೂಚನೆಯನ್ನು ಆವತ್ತೇ ಕಳಿಸಿಕೊಟ್ಟೆ. ಆದರೆ ಅದು ಆಗಲಿಲ್ಲ. ಈಗ ನಿಯಮ 68ರ ಪ್ರಕಾರವಾಗಿ ರೈತರ ಪ್ರಮುಖ ವಿಚಾರದ ಬಗ್ಗೆ ಚರ್ಚೆಯಾಗುವುದಿದೆ ನಾಳೆ ಸ್ವಲ್ಪ ಹೆಚ್ಚೂ ಕಡಿಮೆ ಸದನದ ಕಾರ್ಯಕ್ರಮಗಳು ಮುಗಿಯುವ ಹಂತಕ್ಕೆ ಬಂದಿವೆ. 2 ವರ್ಷಗಳಿಂದ ಅನೇಕ ಭ್ರಷ್ಟಾಚಾರಗಳು ನಡೆಯಿತು ಆಡಳಿತ ಪಕ್ಷದ ಸದಸ್ಯರು ಆರೋಪ ಮಾಡಿ ಚಾರ್ಜ್ ಷೀಟ್ ಮಾಡಿರಬೇಕಾದರೆ, ನಾವು ಏನು ನಿಲುವಳಿ ಸೂಚನೆಯನ್ನು ಕಳಿಸಿದ್ದೇವೆ ಅದಕ್ಕೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಅದು ಸರಿಯೋ ತಪ್ಪೋ ಅಗತ್ಯ ಇದೆಯೋ ಇಲ್ಲವೋ ಎಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಆದರೆ ಯಾವುದಕ್ಕೆ ನೇರವಾಗಿ ಆದ್ಯತೆ ಕೊಡಬೇಕೆಂದು ಹೇಳುವುದಕ್ಕೆ ನಿಮಗೆ ಅಧಿಕಾರ ಇದೆ. ನೀವು ಹೇಳಿ. ದೇಶದ ಇತಿಹಾಸದಲ್ಲಿ ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ ಒಬ್ಬ ಮುಖ್ಯ ಮಂತ್ರಿಯವರಿಗೆ ಪ್ರಧಾನಮಂತ್ರಿಯವರೇ ಒಂದು ನೋಟೀಸು ಕೊಟ್ಟು ನೀವು ರಾಜೀನಾಮೆ ಕೊಡಬೇಕೆಂದು ಹೇಳುವಂತಹ ಪ್ರಸಂಗ ಒದಗಿ ಬಂತೋ, ಎ.ಐ.ಸಿ.ಸಿ.ಸದಸ್ಯರುಗಳು ಒಂದು ರೀತಿಯ ಕೋರ್ಟ್ ಮಾರ್ಷಲ್ ಮಾಡಿದಂತೆ ಪ್ರತಿಯೊಬ್ಬ ಶಾಸಕರನ್ನು, ಮಂತ್ರಿಗಳನ್ನು ಕರೆಯಿಸಿ ಲೋಕಸಭಾ ಸದಸ್ಯರನ್ನು ಕರೆಯಿಸಿ ಅವರುಗಳ ಅಭಿಪ್ರಾಯ ಪಡೆದ ನಂತರ ಭ್ರಷ್ಟಾಚಾರದ ಹಗರಣದ ಮೇಲೆ ಬಂಗಾರಪ್ಪನವರು ರಾಜೀನಾಮೆ ಕೊಡಬೇಕಾಗಿ ಬಂತೋ ಅಂತಹ ಪ್ರಾಮುಖ್ಯವಾದ ವಿಷಯದ ಬಗ್ಗೆ, ಮತ್ತು ನೂರಾರು ಕೋಟಿ ರೂಪಾಯಿ ಸರ್ಕಾರದ ಹಣ ಲೂಟಿಯಾಗಿರಬೇಕಾದರೆ ಅದರ ಬಗ್ಗೆ ಎಲ್ಲರೂ ವಿಚಾರ ಮಾಡಬೇಕಾಗುತ್ತದೆ. ನನ್ನ ಹತ್ತಿರ ಅನೇಕ ದಾಖಲೆಗಳು ಇವೆ. ಅದನ್ನು ಕೊಟ್ಟು ಚರ್ಚೆ ಮಾಡಬೇಕಾಗಿದೆ. ಇದನ್ನು ಸಿಬಿಐ ತನಿಖೆಗೆ ಒಳಪಡಿಸಬೇಕಾಗಿದೆ. ಮುಖ್ಯ ಮಂತ್ರಿಗಳ ನಾಯಕತ್ವ ಬದಲಾದ ತಕ್ಷಣ ಅಜೀರ್ಣವಾಗಿರುವಷ್ಟು ತಿಂದು ತೇಗಿದಂಥಾದ್ದನ್ನು ನಾವು ಮರೆಯುವುದಕ್ಕಾಗುವುದಿಲ್ಲ. ಇದು ಜನರ ಮೇಲೆ ರಾಜ್ಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಇದರ ಬಗ್ಗೆ ಚರ್ಚೆಯಾಗಬೇಕು.

ಉಪಾಧ್ಯಕ್ಷಣಿಯವರು : ಅದನ್ನು ಅಡ್ಮಿಟ್ ಮಾಡಬೇಕೊ ಬಿಡಬೇಕೋ ಎಂಬ ಸ್ಟೇಜಿಗೆ ಬಂದಾಗ ತಾವು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರಿಲಿಮಿನರಿ ಸಬ್‌ಮಿಷನ್ ಗೆ ಅವಕಾಶ ಮಾಡಿಕೊಡಿ. ಇದು ಅಗತ್ಯ ಇದೆ ಎಂದು ಅಧ್ಯಕ್ಷರಿಗೆ ಅನ್ನಿಸಿದರೆ ಇದು

ಚರ್ಚೆಯಾಗಬೇಕೆಂದು ತಾವು ಅಭಿಪ್ರಾಯ ಪಟ್ಟರೆ ಚರ್ಚೆಯನ್ನು ಮುಂದುವರೆಸೋಣ. ನನ್ನ ಹೆಸರನ್ನು ತಾವು ಕರೆದಿದ್ದೀರಿ. ಇದರ ಬಗ್ಗೆ ಯಾರಿಗೂ ಆಸಕ್ತಿ ಇಲ್ಲವೆಂದು ನಾನು ಹೇಳುತ್ತಿಲ್ಲ. ಮಾನ್ಯ ದೇಶಪಾಂಡೆಯವರು ಹೇಳಿದರು ಹಿಂದೆಯೂ ಕೂಡ ನೋಟೀಸ್ ಕೊಟ್ಟಿದ್ದೀರಿ ಅತ್ಯಂತ ಅಗತ್ಯವಿರುವಂತಹ ಈ ನಿಲುವಳಿ ಸೂಚನೆ ಬಗ್ಗೆ ನನಗೆ ಪ್ರಿಲಿಮಿನರಿ ಸಬ್ ಮಿಷನ್‌ಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಯಡಿಯೂರಪ್ಪನವರು ಅಡ್ಜರ್ನ್‌ಮೆಂಟ್ ಮೋಷನ್ ಕಳಿಸಿದ್ದಾರೆ. ಆ ವಿಷಯ ಚರ್ಚೆ ಮಾಡಬಾರದೆಂದು ನಮ್ಮ ವಿರೋಧ ಇಲ್ಲ. ಆ ವಿಷಯ ಚರ್ಚೆ ಮಾಡಬೇಕೆಂದು ನಾವು ಎಸ್.ಜೆ.ಪಿ. ಯವರೂ ಕೂಡ ಹಿಂದೆಯೇ ನೋಟೀಸ್ ಕೊಟ್ಟಿದ್ದೇವೆ. ಯಾವ ಒಂದು ಮ್ಯಾಟರ್‌ಗೆ ಅರ್ಜೆನ್ಸಿ ಇದೆ ಯಾವಾಗ ಕೊಡಬೇಕೋ ಆ ಸಮಯದಲ್ಲಿ ಇವರು ಕೊಟ್ಟಿಲ್ಲ.

1.25 ಪಿ.ಎಂ

ಮಾನ್ಯ ಬೈರೇಗೌಡರು ಹೇಳಿದ ಹಾಗೆ ಯಾವ ಸಮಯದಲ್ಲಿ ಅಯೋಧ್ಯೆಯ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳುತ್ತೇವೆಯೋ ಆಗೇ ನೆರೆಹಾವಳಿ ಎಂದು ಹೇಳಿದರು. ನಾವು ನೆರೆಹಾವಳಿ ಚರ್ಚೆಯಾಗಬೇಕೆಂದು ಅದು ಇನ್ನು ಶುರು ಆಗಿಲ್ಲ, ಇವತ್ತು ನೆರೆಹಾವಳಿ ಅಜೆಂಡದಲ್ಲಿ ಇದೆ, ಆದರೂ ಇವರು ಮಾನ್ಯ ಬಂಗಾರಪ್ಪನವರು ವಿಷಯವನ್ನು ತೆಗೆದುಕೊಂಡು ಬಂದಿದ್ದಾರೆ. ಅದಕ್ಕೆ ನಮ್ಮದೇನೂ ವಿರೋಧವಿಲ್ಲ, ಅದು ಚರ್ಚೆಯಾಗಲೇಬೇಕು. ಪ್ರಶ್ನೆ ಏನೆಂದರೆ ಇವತ್ತು ಅದರ ಸೀರಿಯಸ್ ನೆಸ್ ಏನು, ಯಾವ ಸೀರಿಯಸ್‌ನೆಸ್‌ನಲ್ಲಿ ಜನತಾದಳದವರು ಮಾನ್ಯ ಬಂಗಾರಪ್ಪನವರ ವಿಚಾರದಲ್ಲಿ ಚರ್ಚೆಯಾಗಬೇಕೆಂದಿದ್ದಾರೋ ಆ ಸೀರಿಯಸ್‌ನೆಸ್ ಇವರಿಗೆ ಇಲ್ಲ. ಅವರಿಗೆ ಸೀರಿಯಸ್‌ನೆಸ್ ಇದ್ದಿದ್ದರೆ 28-29ನಲ್ಲಿಯೇ ನೋಟಿಸ್ ಕೊಡಬೇಕಾಗಿತ್ತು. 28-29ರಂದು ನೋಟೀಸ್ ಕೊಟ್ಟಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ವಿರೋಧಪಕ್ಷದ ನಾಯಕರು ಆ ಸ್ಥಾನಕ್ಕೆ ಅಗೌರವ ಬರುವ ರೀತಿಯಲ್ಲಿ ಮಾತನಾಡಿದರೆ I am sorry Mr. Deshpande. ನೀವು ಈ ರೀತಿ ಮಾತನಾಡುತ್ತೀರೆಂದು ನಾನು ನಿಮ್ಮಿಂದ ನಿರೀಕ್ಷೆ ಮಾಡಿರಲಿಲ್ಲ. ನೀವು ಏನನ್ನು ಹೇಳಬೇಕೆಂದಿರುವಿರೋ ಅದನ್ನು ಹೇಳಿ. ಆದರೆ ಇನ್ನೊಬ್ಬರ ಮೇಲೆ ಆರೋಪ ಮಾಡುವುದು ಇದು ನಿಮ್ಮ ಗೌರವಕ್ಕೆ ಚ್ಯುತಿ ತರುತ್ತೇವೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀಆರ್.ವಿ. ದೇಶಪಾಂಡೆ : ನಾನು ಇಷ್ಟೇ ಹೇಳುವುದು. ಮಾನ್ಯ ಬಂಗಾರಪ್ಪನವರ ವಿಚಾರದಲ್ಲಿ ಚರ್ಚೆಯಾಗಬೇಕೆಂದು ಅವರು ಹೇಳುತ್ತಾರೆ, ನಾವು ಚರ್ಚೆಯಾಗಬೇಕೆಂದು ಹೇಳುತ್ತೇವೆ. ಅದರಂತೆ ನಾವು ಮುಂಚೆ ನೋಟೀಸ್‌ನ್ನು ಕೊಟ್ಟಿದ್ದೇವೆ. ಈಗಾಗಲೇ ಮಾನ್ಯ ಬೈರೇಗೌಡರು ಸಬ್ ಮಿಷನ್ ಮಾಡಿದ್ದಾರೆ. ಇದರ ಬಗ್ಗೆ ತಾವು ನಿರ್ಣಯ ಕೊಡಬೇಕು. ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆಂದು ತಾವು ಹೇಳಿದ್ದೀರಿ. ಎರಡು ಬಾರಿ ಬಿಸಿನೆಸ್ ಅಡ್ವೈಸರಿ ಕಮಿಟಿಯ ಮುಂದೆ ಇದು ಬಂದಿದೆ. ಅವರೂ ಕೂಡ ಆ ಸಂದರ್ಭದಲ್ಲಿ ಪ್ರಸೆಂಟ್ ಇದ್ದರು. ಅಂದು ಅವರು ಕೊಟ್ಟಿದ್ದರೆ ಅದನ್ನು ತೆಗೆದುಕೊಳ್ಳಿ. ಅವರ ರೈಟ್. ಆದರೆ ಇವತ್ತು ನಮ್ಮ ವಿಷಯ ಇಂಪಾರ್ಟೆಂಟ್ ಇದೆ, ಅದೇ ರೀತಿಯಲ್ಲಿ ನಾವು ಮುಂಚೆಯೇ ಕೊಟ್ಟಿದ್ದೇವೆ. ಅದರ ಬಗ್ಗೆ ನಿರ್ಣಯ ಮಾಡಬೇಕಾಗುತ್ತದೆ. ಒಂದು,

ಎರಡನೆಯದು, ನೆರೆ ಹಾವಳಿ ಇಡಿ ರಾಜ್ಯದಲ್ಲಿ ಅನ್‌ಪ್ರೆಸಿಡೆಂಟೆಡ್ ರಾಜ್ಯದಲ್ಲಿ ನೆರೆಹಾವಳಿ ಆಗಿದೆ. ಎಷ್ಟೋ ಲಕ್ಷಾವಧಿ ರೈತರು ಕಷ್ಟದಲ್ಲಿದ್ದಾರೆ. ಅದರ ಬಗ್ಗೆ ಚರ್ಚೆಯಾಗಬೇಕೆಂದು ಅವರೇ ಹೇಳಿದರು, ಅದರ ಬಗ್ಗೆಯೂ ಏನು ಅವರು ಮಾತನಾಡುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯೇ ಅಧ್ಯಕ್ಷಣಿಯವರೇ ಸಮಸ್ಯೆ ಉದ್ಭವವಾಗಿರತಕ್ಕಂಥದ್ದು ನಾವು ನಾವೇ ನಮ್ಮದ್ದೆಷ್ಟು ನಮ್ಮದ್ದೆಷ್ಟು ಎಂದು ಹೇಳಿ ಚರ್ಚೆ ಮಾಡುವುದರಿಂದ ಇದರಿಂದ ಒಂದು ರೀತಿ ನಮ್ಮ ಮನಸ್ಸಿಗೆ ಬಹಳ ನೋವಾಗುತ್ತದೆ. ಇಲ್ಲಿಗೆ ಬಂದಿರತಕ್ಕಂಥ ಮಾನ್ಯ ದೇಶಪಾಂಡೆಯವರೇ ಆಗಲಿ, ಮಾನ್ಯ ಬೈರೇಗೌಡರೇ ಆಗಲಿ, ಮಾನ್ಯ ಯಡಿಯೂರಪ್ಪನವರೇ ಆಗಲಿ ರಾಜ್ಯದ ಜನತೆಯ ಹಿತವನ್ನು ಕಾಪಾಡುವಲ್ಲಿ, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಬಂದಿರತಕ್ಕಂಥಾದ್ದು. ಯಾರು ಒಬ್ಬರಿಗೊಬ್ಬರು ನಾವು ಸರಿಯಲ್ಲ, ನೀವು ಸರಿಯಲ್ಲವೆಂದು ಹೇಳತಕ್ಕಂಥದ್ದಕ್ಕೆ ಅಲ್ಲ. ಅವರೂ ನೋಟೀಸ್ ಕಳುಹಿಸಿದ್ದಾರೆ. ಇವರೂ ನೋಟೀಸ್ ಕಳುಹಿಸಿದ್ದಾರೆ. ನಾವು ಕಳುಹಿಸದೆ ಇದ್ದರೂ ಕೂಡ ಅದರ ಬಗ್ಗೆ ಮಾತನಾಡತಕ್ಕಂಥ ಹಕ್ಕು ನಮಗೂ ಇದೆ. ಈಗ ಸಹಿ ಹಾಕಿರುವವರು ನಾಲ್ಕು ಜನ ಎಂದು ಹೇಳುತ್ತಾರೆ. ಈ ರೇಸ್ ಮಧ್ಯೆ ನಾವು ಸಿಕ್ಕಿದ್ದೇವೆ. ಆದ್ದರಿಂದ ತಮಗೆ ನಾನು ಹೇಳುತ್ತೇನೆ ಮಾನ್ಯ ಯಡಿಯೂರಪ್ಪನವರು ತಂದಿರತಕ್ಕಂಥ ಪ್ರಶ್ನೆ ಏನಿದೆ ಅದನ್ನೆಲ್ಲಾರೂ ಒಪ್ಪಿದ್ದಾರೆ. ಮಾನ್ಯ ದೇಶಪಾಂಡೆಯವರು ಒಪ್ಪಿದ್ದಾರೆ, ಮಾನ್ಯ ಬೈರೇಗೌಡರು ಒಪ್ಪಿದ್ದಾರೆ, ಮಾನ್ಯ ಸಿಂಧ್ಯಾರವರು ಒಪ್ಪಿದ್ದಾರೆ. ಅದಕ್ಕೆ ತಾವು ಹಿಂದೆ ಮುಂದೆ ಏನೂ ನೋಡಬೇಕಾಗಿಲ್ಲ. ಯಾರ ಪ್ರಶ್ನೆ ಯಾವಾಗ ತೆಗೆದುಕೊಳ್ಳಬೇಕೆನ್ನುವುದು ಅದನ್ನು ತಾವು ತೀರ್ಮಾನ ಮಾಡತಕ್ಕಂಥವರು, ನಿಮಗೆ ಅವಕಾಶವಿದೆ. ಈಗ ರೈತರ ಬಗ್ಗೆಯಾಗಲಿ, ನೆರೆಹಾವಳಿ ಬಗ್ಗೆಯಾಗಲಿ, ಒಬ್ಬರಿಗೊಬ್ಬರಿಗೆ ನಾನು ಮುಂದು ತಾನು ಮುಂದು ಎಂದು ವಾದ ನಡೆದಿದೆ. ಹಿಂದಿನ ಸರ್ಕಾರದ ಬಗ್ಗೆ ಎರಡು ನಿಲುವಳಿ ಸೂಚನೆಗಳು ಬಂದಿವೆ. ಆ ಎರಡು ನಿಲುವಳಿ ಸೂಚನೆಗಳನ್ನು ತಾವು ಒಪ್ಪಿ.

ಉಪಾಧ್ಯಕ್ಷಣಿಯವರು : ಇಲ್ಲ, ನಿಲುವಳಿ ಸೂಚನೆ ರೂಲ್ 68ರ ಪ್ರಕಾರ ಕೊಟ್ಟಿರುವುದು.

ಶ್ರೀ ವಾಟಾಳ್ ನಾಗರಾಜ್ : ಈಗ ನಿಯಮ 68ರ ಪ್ರಕಾರವೇ ತಾವು, ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಒಟ್ಟಿಗೆ ಎರಡನ್ನು ತೆಗೆದುಕೊಳ್ಳಿ. ಮಾನ್ಯ ಯಡಿಯೂರಪ್ಪನವರು ಮಾತನಾಡಬೇಕಾದರೆ ಅವರೇ ಮಾತನಾಡಲಿ, ಆಮೇಲೆ ಮಾನ್ಯ ದೇಶಪಾಂಡೆಯವರು ಎಲ್ಲರೂ ಮಾತನಾಡೋಣ. ಇದರಲ್ಲಿ ನಾವೇನು ದೊಡ್ಡ ಯುದ್ಧವನ್ನು ಮಾಡತಕ್ಕಂಥ ಪ್ರಶ್ನೆ ಇಲ್ಲ, ಇದು ಒಂದು ಪ್ರಮುಖವಾದ ಪ್ರಶ್ನೆಯಾಗಿದೆ. ಆದ್ದರಿಂದ ಇದು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಒಂದು ಅಮೂಲ್ಯವಾದ ವಸ್ತುವಾಗಿದೆ. ಜನ ಬಹಳ ಕಾತುರರಾಗಿದ್ದಾರೆ. ಆದ್ದರಿಂದ ದಯವಿಟ್ಟು ಇದಕ್ಕೆ ನೀವು ಅವಕಾಶವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಡಾ. ವೈ. ನಾಗಪ್ಪ : ಮಾನ್ಯ ಉಪಾಧ್ಯಕ್ಷಣಿಯವರೇ ನನಗೆ ಎಷ್ಟು ದುಃಖವಾಗುತ್ತಿದೆ ಎಂದರೆ ಈಗ ಮೂರು ದಿವಸಗಳಿಂದ ಈ ಮನೆಯಲ್ಲಿ ಮಾನ್ಯ ಯಡಿಯೂರಪ್ಪನವರು ಸಾಲಮನ್ನ, ಸಾಲಮನ್ನ ಎಂದು ಹೊಯ್ದುಕೊಳ್ಳುತ್ತಿದ್ದರು.

ಈಗ ಏತಕ್ಕೆ ರೈತರ ಬಗ್ಗೆ ಕಾಳಜಿ ಕಡಿಮೆಯಾಗಿದೆಯೋ ನನಗೆ ಗೊತ್ತಿಲ್ಲ. ಇಷ್ಟೆ ನನ್ನ ವ್ಯಥೆ, ರೈತರನ್ನು ಇಷ್ಟೊಂದು ಹಗುರವಾಗಿ ಏತಕ್ಕೆ ಇವರು ಮರೆತುಬಿಟ್ಟಿದ್ದಾರೆಂದು ಕೇಳುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಣಿಯವರೆ, ಸರ್ಕಾರದ ಗಮನಕ್ಕೆ ಒಂದು ಮಹತ್ವವಾದ ವಿಚಾರವನ್ನು ತರಬೇಕೆಂದು ನಿಂತಿದ್ದೇನೆ. ನನಗೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ತಮಗೆ ವಂದನೆಗಳು. ಬೆಂಗಳೂರು ವಿಶ್ವವಿದ್ಯಾನಿಲಯದ ವಿಷಯದಲ್ಲಿ....

ಶ್ರೀ ಬಿ.ಎಸ್. ಯಡಿಯೂರಪ್ಪ : ಭ್ರಷ್ಟಾಚಾರದ ಹಗರಣದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ, ಜನರಿಗೆ ಮುಖ ತೋರಿಸುವುಕ್ಕೆ ಆಗುವುದಿಲ್ಲ. ಇವರೂ ಸರ್ಕಾರದ ಜೊತೆ ಶಾಮೀಲಾಗಿದ್ದಾರೆಂಬ ಭಾವನೆ ಜನರಲ್ಲಿ ಬರಬಹುದು. ಭ್ರಷ್ಟಾಚಾರ, ಸ್ವಜನ ಪಕ್ಷಪಾತದಿಂದಾಗಿ ಬಂಗಾರಪ್ಪನವರು ರಾಜೀನಾಮೆ ಕೊಡಬೇಕಾಗಿ ಬಂತು. ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಸಾವಿರಾರು ಕೋಟಿ ರೂಪಾಯಿ ಹಣ ಸರ್ಕಾರದ ಬೊಕ್ಕಸದಿಂದ ಲೂಟಿಯಾಗಿದೆ. ಇದರ ಬಗ್ಗೆ ಸಿಬಿಐ ತನಿಖೆಯಾಗಬೇಕಾಗಿದೆ. ಮುಖ್ಯ ಮಂತ್ರಿಗಳ ಬದಲಾವಣೆಯಿಂದ ಎಲ್ಲವೂ ಆಗುವುದಿಲ್ಲ. ದಯವಿಟ್ಟು ಆದ್ಯತೆ ಮೇರೆಗೆ ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಮಾನ್ಯ ದೇಶಪಾಂಡೆಯವರು ಹೇಳಿದ್ದಕ್ಕೆ ನನ್ನ ವಿರೋಧ ಇಲ್ಲ...

ಉಪಾಧ್ಯಕ್ಷಣಿಯವರು : ಬೇರೆಯವರು ಯಾವ ವಿಷಯದ ಬಗ್ಗೆ ಮಾತನಾಡಿದರು. ಅದರ ಬಗ್ಗೆ ತಾವು ಮಾತನಾಡುತ್ತೀರೋ ಏನೋ ಏನು ಅಂದುಕೊಂಡೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು, ಶಿವಾನಂದ ಕೌಜಲಗಿಯವರು, ದೇಶಪಾಂಡೆಯವರು ಏನು ತಮಗೆ ಪತ್ರ ಬರೆದಿದ್ದೇವೆ ಅದರ ಬಗ್ಗೆ ಮಾತನಾಡಬೇಕೆಂದು ಎದ್ದು ನಿಂತಿದ್ದೇನೆ. ನನಗೆ ತಾವು ಅವಕಾಶ ಕೊಟ್ಟಿದ್ದೀರಿ.........

ಶ್ರೀ ವಾಟಾಳ್ ನಾಗರಾಜ್ : ನಿಲುವಳಿ ಸೂಚನೆಯನ್ನು ಒಪ್ಪಿದ್ದೀರಾ? ಪ್ರಪ್ರಥಮವಾಗಿ ತಾವು ಅದನ್ನು ಹೇಳಿದರೆ ನಂತರ ಬೇರೆ..

ಉಪಾಧ್ಯಕ್ಷಣಿಯವರು : ಈಗ ಏನು ಚರ್ಚೆ ನಡೆಯುತ್ತಿದೆ ಆ ವಿಚಾರದಲ್ಲಿ ಏನಾದರೂ ಇದ್ದರೆ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಬೆಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಾ? ಈ ಅಧಿವೇಶನ ಪ್ರಾರಂಭವಾದ ದಿವಸ ನಾವು, ದೇಶಪಾಂಡೆಯವರು, ಏಕಾಂತಯ್ಯನವರು, ಗುರುಪಾದಪ್ಪನವರು, ಬೈರೇಗೌಡರು ಎಲ್ಲಾ ಸೇರಿ ಎರಡು ವರ್ಷಗಳ ಕಾಲದಲ್ಲಿ ಸರ್ಕಾರದ ಆಡಳಿತದ ಯಂತ್ರದಲ್ಲಿ ಆಗಿರತಕ್ಕ ಲೋಪದೋಷಗಳ ಬಗ್ಗೆ ಮತ್ತು ಅದರಿಂದ ಸರ್ಕಾರದ ಖಜಾನೆಗೆ ಆಗಿರತಕ್ಕ ನಷ್ಟ. ಇವುಗಳ ಬಗ್ಗೆ ಮಾತನಾಡಬೇಕು, ಚರ್ಚೆಯಲ್ಲಿ ಭಾಗವಹಿಸಬೇಕು, ಈ ಬಗ್ಗೆ ಕೇಳಲಿಕ್ಕೆ ರಾಜ್ಯದ ಜನರು ಕಾತುರರಾಗಿದ್ದಾರೆ ಎಂಬ ದೃಷ್ಟಿಯಿಂದ ತಮ್ಮಲ್ಲಿ ಪ್ರಾರ್ಥಿಸಿಕೊಂಡೆವು. ತಾವು ಒಪ್ಪಿದಿರಿ. ಸರ್ಕಾರದವರು ಒಂದು ರೀತಿಯಲ್ಲಿ ತಮ್ಮ ಒಪ್ಪಿಗೆಯನ್ನು ವ್ಯಕ್ತ ಮಾಡಿದರು. ಯಾವುದಾದರೂ ರೂಪದಲ್ಲಿ ಚರ್ಚೆ ಮಾಡೋಣವೆಂದರು. ತಮ್ಮ ಕಾರ್ಯಾಲಯದವರು ಬಿಸಿನೆಸ್

ಅಡ್ವೈಸರಿ ಕಮಿಟಿ ಮೀಟಿಂಗ್‌ನ ಅಜೆಂಡಾದಲ್ಲಿ 3 ಸಾರಿ ಈ ವಿಷಯವನ್ನು ಸೇರಿಸಿದ್ದರು. ರೂಲ್ 68ರ ಕೆಳಗೆ ಇದನ್ನು ಚರ್ಚೆ ಮಾಡೋಣವೆಂದು ನಿನ್ನೆಯ ಬಿಎಸಿ ಅಜೆಂಡಾದಲ್ಲಿಯೂ ಕೂಡ ಇದೆ. ಹೀಗಿರತಕ್ಕ ಸಂದರ್ಭದಲ್ಲಿ ಯಡಿಯೂರಪ್ಪನವರು ಎಷ್ಟೊಂದು ಕಾತುರರಾಗಿದ್ದಾರೆ ನಾವು ಕೂಡ ಕಾತುರರಾಗಿದ್ದೇವೆ. ಬೆಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ವಿಷಯವನ್ನು ಬೇರೆ ಕಡೆ ತೆಗೆದುಕೊಂಡು ಹೋಗಲಿಕ್ಕೆ ಪ್ರಯತ್ನ ಮಾಡಿದ್ದಾರೆಂದು ಭಾವಿಸುವುದಕ್ಕೆ ಹೋಗಬೇಡಿ. ತಾವು ಮಾತನಾಡುವುದಕ್ಕೆ ಮುಂಚೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಆಗಬಹುದೆಂದು ಹೇಳಿದ್ದರು. ಅದಕ್ಕೋಸ್ಕರ ಪ್ರಸ್ತಾಪ ಮಾಡಿದೆ. ನಾವು ಒತ್ತಾಯ ಮಾಡತಕ್ಕದ್ದು ಇಷ್ಟೆ. ನಿನ್ನೆಯ ದಿವಸ ಬಿ.ಎ.ಸಿ. ನಡೆದಂಥ ಸಂದರ್ಭದಲ್ಲಿ ಇದರ ಬಗ್ಗೆ ಯಾವುದಾದರೂ ಒಂದು ಸ್ವರೂಪದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡೋಣವೆಂದು ಸರ್ಕಾರದವರು ಕೂಡ ಒಪ್ಪಿಗೆ ಕೊಟ್ಟಿದ್ದಾರೆ. ಇದೊಂದು ಮಹತ್ತರ ವಿಚಾರ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ನಾವು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಧಿಕೃತ ವಿರೋಧ ಪಕ್ಷದವರು. ನಮ್ಮನ್ನು ರೆಕಗ್ನೈಸ್ ಮಾಡಿದ್ದೀರಿ ಇಲ್ಲದಿದ್ದರೆ ನಮ್ಮನ್ನು ಇಲ್ಲಿ ಕೂರಿಸುತ್ತಿರಲಿಲ್ಲ. 24 ಜನ ಶಾಸಕರು ಇರುವುದರಿಂದ ದೇಶ ಪಾಂಡೆಯವರನ್ನು ವಿರೋದ ಪಕ್ಷದ ನಾಯಕರು ಎಂದು ಕರೆಯುತ್ತಿದ್ದೀರಿ. ಇಲ್ಲದಿದ್ದರೆ ಅವರು ಪಕ್ಷದ ನಾಯಕರು ಎಂದು ಹೇಳುತ್ತಿದ್ದರು. ಆದುದರಿಂದ ಅವರು ಕೊಡತಕ್ಕ ಪತ್ರಕ್ಕೆ ವಿಚಾರಗಳಿಗೆ ಆದ್ಯತೆ ಕೊಡಲೇಬೇಕಾಗುತ್ತದೆ. ಇದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಿರ್ಧಾರವಾಗಿರತಕ್ಕದ್ದು. ಆದುದರಿಂದ ನಾನು ಒತ್ತಾಯಮಾಡುವುದೇನೆಂದರೆ...

ಶ್ರೀ ವಾಟಾಳ್ ನಾಗರಾಜ್ : ಇದು ಇವರ ವೈಯಕ್ತಿಕ ಅಭಿಪ್ರಾಯ. ಇದಕ್ಕೆ ವಿರೋಧ ಪಕ್ಷದವರ ಬೆಂಬಲ ಬೇಕು. ಈಗ ಎಲ್ಲರ ಬೆಂಬಲ ಬೇಕು. ಇಲ್ಲದಿದ್ದರೆ ತೆರೆಮರೆಯಲ್ಲಿ...

ಶ್ರೀ ಪಿ.ಜಿ. ಆರ್. ಸಿಂಧ್ಯ : ಬಿಜೆಪಿ. ಬೆಂಬಲ ಬೇಕಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಏತಕ್ಕೆ ಬೆಂಬಲ ಕೊಡೋಣ?

ಶ್ರೀ ಕೆ.ಎಸ್. ಈಶ್ವರಪ್ಪ : ರಾತ್ರಿ ಕಂಡ ಬಾವಿಯಲ್ಲಿ ಹಗಲು ಬೀಳುತ್ತಾರೆಯೇ? ನಿಮ್ಮನ್ನು ತುಳಿಯುವುದಕ್ಕೆ ನಾವು ಇರುವುದು, ಬೆಂಬಲ ಕೊಡುವುದಕ್ಕೆ ಅಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇವರ ಭಾರೀಬೆಂಬಲವನ್ನು ತೆಗೆದುಕೊಂಡು, ನಾವು ಈ ದೇಶದಲ್ಲಿ ಹಿಂದೂ ರಾಷ್ಟ್ರ ಕಟ್ಟುವುದಕ್ಕೆ ಹೋಗುವುದಿಲ್ಲ ಎಲ್ಲಾ ಜಾತಿಯವರ ರಾಷ್ಟ್ರ ಕಟ್ಟುವುದಕ್ಕೆ ನಾವು ಹೋಗಿದ್ದೇವೆ.

(ಗೊಂದಲ)

ಉಪಾಧ್ಯಕ್ಷರು : ಅವರು ಈಲ್ಡ್ ಆಗಿಲ್ಲ. ತಾವೆಲ್ಲಾ ಏಕೆ ಮಾತನಾಡುತ್ತೀರಿ?

ಶ್ರೀ ಪಿ.ಜಿ.ಆರ್.ಸಿಂಧ್ಯ : ನನಗೆ ಅವರು ....

(ಗೊಂದಲ)

ಉಪಾಧ್ಯಕ್ಷರು : ದೇಶಪಾಂಡೆಯವರು ಏನೋ ಮಾತನಾಡುವವರಿದ್ದಾರೆ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಣೆಯವರೇ, ನಮ್ಮ ಬಗ್ಗೆ ಅವರು ಹೇಳುತ್ತಾರೆ. ನೀವು (ಬಿಜೆಪಿ ಪಕ್ಷ) ಉಪಾಧ್ಯಕ್ಷರ ಸ್ಥಾನ ತೆಗೆದುಕೊಳ್ಳುವುದಕ್ಕೆ ಕಾಂಗ್ರೆಸ್ ಜೊತೆ ಸೇರಿಲ್ಲವೇನ್ರಿ, ಲೋಕಸಭೆಯಲ್ಲಿ, ಕಳೆದ ಒಂದೂವರೆ ವರ್ಷದಲ್ಲಿ ಯಾವ ರೀತಿ ನಿಮ್ಮ ನಡವಳಿಕೆ ನಡೆದಿದೆ ಎಂದು ಗೊತ್ತಿರಲಿ. ನಾವು ಹಿಂದುಳಿದ ವರ್ಗಗದವರಿಗೆ, ಅಲ್ಪಸಂಖ್ಯಾತರಿಗೆ, ಬಡವರಿಗೆ ಸಹಾಯ ಮಾಡಬೇಕೆಂದು ಹೋರಾಟ ಮಾಡಿ. .. ಇವರು ಜನರನ್ನು ಉದ್ರಿಕ್ತಗೊಳಿಸಿ... (ಗೊಂದಲ)... ಇವರು ಹೇಳುವುದನ್ನು ಕೇಳುವುದಕ್ಕಾಗುವುದಿಲ್ಲ. ನಾವು ಅಧಿಕೃತ ಪಕ್ಷ, ವಿರೋಧ ಪಕ್ಷದವರು. ಆದುದರಿಂದ ನಮ್ಮ ನಾಯಕರು ಹೇಳಿದ ನಿಲುವಳಿ ಸೂಚನೆ ಯಾವುದೇ ರೀತಿ ಇದ್ದರೂ ನಮಗೆ ಆದ್ಯತೆಯನ್ನು ಕೊಡಬೇಕೆಂದು ನಾನು ಹೇಳುತ್ತಿದ್ದೇನೆ.. (ಗೊಂದಲ)... ಅವರು 4 ಜನ ಇದ್ದಾರೆ. ಅವರು ಈ ರೀತಿ ನನ್ನ ಮಾತಿಗೆ ಅಡ್ಡಿಪಡಿಸಬೇಕೆಂದು ಅವರು ನಿಂತು ಬರುವುದಾದಲ್ಲಿ ನೀವು ನಮಗೆ ಪ್ರೊಟಕ್ಷನ್ ಕೊಡದೇಹೋದರೆ... ಈ 4 ಜನ ಸದಸ್ಯರೂ ಎದ್ದು ನಿಂತು ಈ ರೀತಿ ಅಡ್ಡಿಪಡಿಸುತ್ತಿದ್ದು... (ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ನಾಲ್ಕು ಜನ...

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಯಡಿಯೂರಪ್ಪನವರು ಮಾತನಾಡುವಾಗ, ಮನಾಳಿಯವರು ಮಾತನಾಡುವಾಗ, ಈಶ್ವರಪ್ಪನವರು ಮಾತನಾಡುವಾಗ, ಬೇರೆಯವರು ಮಾತಾನಾಡುವಾಗ ಆದಷ್ಟು ಸುಮ್ಮನೆ ಕುಳಿತಿರುತ್ತೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇವರು ಮಾತನಾಡುವಾಗ ಇಬ್ಬರು ಅಡ್ಡಿ ಬರಲಿಲ್ಲವೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮೂರು ವಿಚಾರಗಳ ಬಗ್ಗೆ ಚರ್ಚೆ ಆಗಬೇಕೆಂದು ಆಗಿದೆ. ನೆರೆ ಹಾವಳಿ ಮತ್ತು ರಸಗೊಬ್ಬರದ ವಿಚಾರ ಹಾಗೂ ಕಳೆದ 2 ವರ್ಷಗಳ ಸರ್ಕಾರದ ಆಡಳಿತದ ಕಾಲದಲ್ಲಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಆಗಿರತಕ್ಕ ನಷ್ಟದ ಬಗ್ಗೆ, ಅನೇಕ ಹಗರಣಗಳ ಬಗ್ಗೆ ಚರ್ಚೆ ಮಾಡಬೇಕೆಂದು ಒಪ್ಪಿದ್ದೇವೆ. ಆ ಮೂರಕ್ಕೆ ನಾವು ನಿಗದಿ ಮಾಡಿದ್ದೇವೆ. ಅಯೋಧ್ಯೆ ವಿಚಾರ ಆಗದೇ ಇದ್ದಿದ್ದರೆ, ಬಾಬರಿ ಮಸೀದಿಯನ್ನು ಈ ಜನ ಒಡೆಯದೆ ಹೋಗಿದ್ದರೆ ಅವತ್ತೇ ನೆರೆ ಹಾವಳಿ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿದ್ದೆವು...

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ನೋಡಿ. ತಾವು ಯಾವ ವಿಚಾರದ ಬಗ್ಗೆ ಮಾತನಾಡುತ್ತಿದ್ದೀರೋ ಆ ಬಗ್ಗೆ ನ್ಯಾಯಾಧೀಶರು ಕೊಟ್ಟಿರತಕ್ಕ ತೀರ್ಪನ್ನು ನೋಡಿ. ನಾವು ಮಸೀದಿ ಒಡೆದದ್ದು ಎಂದು ಹೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಒಡೆದಿರಿ ಎಂದು ಹೇಳಿದ್ದೇನೇ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷಣಿಯವರೆ, ಈ ದೇಶದ ಗೌರೀಶಂಕರ ಶಿಖರದ ಮೇಲೆ ನಿಂತು ಅಯೋಧ್ಯೆಯಲ್ಲಿ ಡಿಸೆಂಬರ್ 6ನೇ ತಾರೀಖು ಲಾಲಾ ಕೃಷ್ಣ ಅಡ್ವಾನಿಯವರು, ಮುರಳೀಮನೋಹರ ಜೋಶಿಯವರು, ಸಾಧ್ವಿ ರೀತಾಂಬರಿ ಅವರು ಇವರುಗಳ ನಾಯಕತ್ವದಲ್ಲಿ ಬಾಬರಿ ಮಸೀದಿಯನ್ನು ಒಡೆದಿದ್ದೀರಿ ಎನ್ನುವುದನ್ನು ಒಂದು ಸಾವಿರ ಸಾರಿ ಹೇಳುತ್ತೇನೆ,ಒಂದು ಲಕ್ಷ ಸಾರಿ ಹೇಳುತ್ತೇನೆ. ಕೋಟಿ ಕೋಟಿ ಸಾರಿ ಹೇಳುತ್ತೇನೆ. ಇದಕ್ಕೆ ಅವರು ರೆಸ್ಪಾನ್ಸಿಬಲ್. ಇವರ ಮಾತಿಗೆ ಬಗ್ಗುವುದಕ್ಕಾಗುವುದಿಲ್ಲ, ಇವರು 4ಜನರ ಜೋರು ಮಾಡಿದರು ಎಂದು ಉಳಿದ 220 ಜನ ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಈ ದೇಶ ಉಳಿಸುವುದಕ್ಕೆ ರಕ್ತವನ್ನು ಕೊಟ್ಟು ಹೋರಾಟ ಮಾಡುತ್ತೇವೆ. ಮರ್ಯಾದೆ ಇಲ್ಲ ಈ ಜನಕ್ಕೆ. ಇವರಿಗೆ ನಾಚಿಕೆಯಾಗಬೇಕು. ಇವರು ಹಿಂದೂ ವಿರೋಧಿಗಳು, ಅಲ್ಪಸಂಖ್ಯಾತರ ವಿರೋಧಿಗಳು... ಇವರ ಬೆದರಿಕೆಗೆ ನಾವು ಹೆದರುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಸಿಂಧ್ಯಾರವರು ತಾವು ಬೇಗ ಮುಗಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಣಿಯವರೆ ನಾನು ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಮಾನ್ಯ ಸದಸ್ಯರು ಮಾತನಾಡತಕ್ಕ ಸಂದರ್ಭದಲ್ಲಿ ಏನೋ ಅವರೊಬ್ಬರೇ ಈ ಸದನದಲ್ಲಿ ಗುತ್ತಿಗೆ ತರಹ, ಪ್ರಮಾಣಿಕತನ ಎನ್ನತಕ್ಕದ್ದು, ದೇಶಪ್ರೇಮ ಎನ್ನತಕ್ಕದ್ದನ್ನು ತೋರ್ಪಡಿಸುತ್ತಿದ್ದಾರೆ. ಬಾಕಿ ಯಾರಿಗೂ ಸಹಿತ ದೇಶಪ್ರೇಮ ಇಲ್ಲವೇ ಇಲ್ಲ ಎನ್ನುವ ಅರ್ಥದಲ್ಲಿ ಮಾತನಾಡುತ್ತಿದ್ದಾರೆ. ಇನ್ನೊಂದು ಸಾರಿ ಹೇಳುತ್ತಿದ್ದೇನೆ. ಪತ್ರಿಕೆಗಳಲ್ಲಿ ದೂರದರ್ಶನದಲ್ಲಿ ಮತ್ತು ಆಕಾಶವಾಣಿಯಲ್ಲಿ ಪ್ರಚಾರವನ್ನು ಪಡೆಯುವ ದೃಷ್ಟಿಯಿಂದ ಈ ಕೆಲಸವನ್ನು ಮಾಡುತ್ತಿದ್ದಾರೆ. ಇದರಲ್ಲಿ ಯಾವುದೇ ರೀತಿ ಎಳ್ಳಷ್ಟು ಸಂಶಯವಿಲ್ಲ. ಇದನ್ನು ನಾನು ನೂರಕ್ಕೆ ನೂರು ಸಾರಿ ಅಲ್ಲ ಹಲವಾರು ಬಾರಿ ಹೇಳಬಲ್ಲೆ. ನಾವು ಅಧಿಕೃತ ವಿರೋಧಪಕ್ಷದವರು. ಯಾರಾದರೂ ಇಲ್ಲವೆಂದರೆ ನೀವು ಒಪ್ಪುತ್ತೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ದೇಶಪಾಂಡೆಯವರದು ಒಂದು ಪಾರ್ಟಿ, ಹೆಗಡೆಯವರದು ಒಂದು ಪಾರ್ಟಿ, ಚಂದ್ರೇಗೌಡರದು ಒಂದು ಪಾರ್ಟಿ ಸಿಂಧ್ಯಾರವರದು ಒಂದು ಪಾರ್ಟಿ, ವಿರೋಧಪಕ್ಷಕ್ಕೆ ಇದ್ದಂತಹ ಮರ್ಯಾದೆಯನ್ನು ಹಾಳು ಮಾಡಿದವರು ನೀವು. ಇಲ್ಲಿ ಕುಳಿಕುಕೊಂಡು ಸರಿಯಾಗಿ ವಿರೋಧಪಕ್ಷದ ಕೆಲಸವನ್ನು ಮಾಡಿದ್ದರೆ ಬಂಗಾರಪ್ಪನವರ ಪದಚ್ಯುತಿಯಾಗುತ್ತಿರಲಿಲ್ಲ. ನಿಮ್ಮ ಕರ್ತವ್ಯಲೋಪದಿಂದ ನಮ್ಮ ರಾಜ್ಯ ಈ ಸ್ಥಿತಿಗೆ ಬಂದಿದೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಣಿಯವರೆ, ಮಾನ್ಯ ಯಡಿಯೂರಪ್ಪನವರು ಮಾಡಿರತಕ್ಕ ಆಪಾದನೆ ಸತ್ಯ. ನಮ್ಮ ಬಗ್ಗೆ ಏನು ಹೇಳಿದ್ದಾರೆ ಅದು ಸತ್ಯ. ನಮ್ಮಲ್ಲಿ ಭಿನ್ನಾಭಿಪ್ರಾಯಗಳು ಇದೆಯೆನ್ನ ತಕ್ಕ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ನಮ್ಮಲ್ಲಿ ಭಿನ್ನಾಭಿಪ್ರಾಯಗಳಿವೆ. ವೈಚಾರಿಕವಾದ ಭಿನ್ನಾಭಿಪ್ರಾಯಗಳು ಇವೆ.ನಮಗೆ ವೈಯಕ್ತಿತವಾದ ಭಿನ್ನಾಭಿಪ್ರಾಯಗಳು ಇಲ್ಲ. ಈ

ದೇಶದಲ್ಲಿ ಪ್ರಜಾತಂತ್ರದಲ್ಲಿ ಬಹಳ ಮುಖ್ಯವಾಗಿರತಕ್ಕ ನ್ಯಾಯಾಲಯದ ತೀರ್ಪನ್ನು ಒಪ್ಪತಕ್ಕ ಜನ ನಾವು, ಕಾರ್ಯಾಂಗವನ್ನು ಒಪ್ಪತಕ್ಕ ಜನ ನಾವು. ಎಲ್ಲಾ ಜಾತಿಯ ಜನರನ್ನು ಸಮಾನವಾಗಿ ಒಪ್ಪತಕ್ಕ ಜನ ನಾವು. ಇದರ ಬಗ್ಗೆ ನಮಗೆ ಭಿನ್ನಾಭಿಪ್ರಾಯಗಳಿವೆ. ಸರ್ದಾರ್ ವಲ್ಲಭಾಯ್ ಪಟೇಲ್‌ರವರಿಗೆ ಸುಭಾಷ್‌ಚಂದ್ರ ಬೋಸ್‌ರವರಿಗೆ ಮತ್ತು ಮಹಾತ್ಮಾಗಾಂಧೀಜಿಯವರ ಮಧ್ಯೆ ಭಿನ್ನಾಭಿಪ್ರಾಯಗಳು ಇದ್ದವು. ನಮ್ಮಲ್ಲಿ ಭಿನ್ನಾಭಿಪ್ರಾಯಗಳಿವೆ. ಏತಕ್ಕೆ ಇರಬಾರದು? ನಾವು ಪ್ರಜಾತಂತ್ರದ ವ್ಯವಸ್ಥೆಯನ್ನು ಒಪ್ಪುತ್ತೇವೆ.ನಿಮ್ಮ ಹಾಗೆ ಎಲ್ಲಿಂದಲೋ ಸೂಚನೆ ಪಡೆಯುವುದಿಲ್ಲ. ನಾವು ಸಾಧುಸಂತರಲ್ಲ, ಅದನ್ನು ನೀವು ಒಪ್ಪಿಕೊಳ್ಳಬೇಕು. ನನಗೆ ಎಲ್ಲಾ ಗೊತ್ತಿದೆ, ನಿಮಗೆ ಎಲ್ಲಿಂದ ಸೂಚನೆ ಬರುತ್ತವೆ, ಸೂಚನೆ ಅಂದರೇನು? ಬೈಠಕ್ ಅಂದರೇನು? ಆದೇಶ ಅಂದರೇನು? ಇದರಲ್ಲಿ ಏನು ವ್ಯತ್ಯಾಸವಿರುತ್ತದೆ ಇವೆಲ್ಲ ನನಗೆ ಗೊತ್ತಿರತಕ್ಕ ವಿಚಾರ. ಆದ್ದರಿಂದ ದಯಮಾಡಿ ಏನೋ ಚಂದ್ರೇಗೌಡರ ಮೇಲೆ ದೇಶಪಾಂಡೆಯವರಲ್ಲಿ ಸಿಂಧ್ಯಾರವರಲ್ಲಿ ಏನೋ ಭಿನ್ನಾಭಿಪ್ರಾಯವೆಂದು ಹೇಳುವುದು ಸರಿಯಲ್ಲ. ನಾವು ಈ ದೇಶವನ್ನು ಆಳಿದ್ದೇವೆ. ನಮಗೆ ಅದರ ಬಗ್ಗೆ ಹೆಮ್ಮೆಯಿದೆ. ಮುಂದೆ ನಾವೇ ಆಳತಕ್ಕವರು ಅದರ ಬಗ್ಗೆ ನೀವೇನು ಸಂಶಯವಿಟ್ಟುಕೊಳ್ಳಬೇಡಿ. ಸುಮ್ಮನೆ ಏನೋ ನೀವೇ ಗುತ್ತಿಗೆ ತೆಗೆದುಕೊಂಡಹಾಗೆ ಮಾತನಾಡುವುದಕ್ಕೆ ಹೋಗಬೇಡಿ. ನೀವು ನಾಲ್ಕು ಜನ ಸದಸ್ಯರುಗಳನ್ನು ಯಾವ ಕಂಟಿಕಟ್ಸ್‌ನಲ್ಲಿ ಜನ ಆರಿಸಿದರು ನೀವು ನಾಲ್ಕು ಜನ ಇಷ್ಟು ಧ್ವನಿ ಮಾಡಬಹುದೆಂದರೆ ಇನ್ನು 220 ಜನ ಎಷ್ಟೊಂದು ಧ್ವನಿ ಮಾಡಬಹುದು, ನಾವು 22 ಜನ ಎಷ್ಟೊಂದು ಧ್ವನಿ ಮಾಡಬಹುದು ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಿ. ನಿಮ್ಮ ಪ್ರಾಮಾಣಿಕತೆ ನಿಮ್ಮ ದೇಶಪ್ರೇಮ ನಿಮ್ಮ ನಿಷ್ಠೆ ನಿಮ್ಮ ರಾಮನ, ಆಂಜನೇಯನ, ಭರತನ ಅಡ್ವಾನಿಯವರ ಭಕ್ತಿ ಅದರ ಬಗ್ಗೆ ನಾವು ಯಾರೂ ಕೊಶ್ಚನ್ ಮಾಡುವುದಿಲ್ಲ, ನಿಮ್ಮ ಭಕ್ತಿ ಈ ದೇಶದ ಜನತೆಗಲ್ಲ, ನಿಮ್ಮ ಸಂಘಟನೆ ಅದನ್ನು ಮೊದಲು ಬಿಟ್ಟರೆ ಎಲ್ಲಾ ಸರಿಹೋಗುತ್ತದೆ. ಅದನ್ನು ಬಿಡುವುದಿಲ್ಲ. ಹೀಗೆ ನೀವು. ಇವತ್ತು ನಾಲ್ಕು ಜನ ಆಗಿದ್ದೀರಿ. ಮತ್ತೆ ಎರಡು ಆಗುತ್ತೀರಿ ಆಮೇಲೆ ಸೊನ್ನೆಯಾಗುತ್ತೀರಿ. ಬಂಗಾರಪ್ಪನವರ ಸರ್ಕಾರಕ್ಕೆ ಬೆಂಬಲ ಕೊಟ್ಟಿದ್ದರೆ, ಅವರು ಮಾಡತಕ್ಕ ಎಲ್ಲ ಭ್ರಷ್ಟಾಚಾರಕ್ಕೆ ಬೆಂಬಲ ಕೊಟ್ಟಿದ್ದರೆ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿ ಮುಂದುವರಿಯುತ್ತಿದ್ದರು ಅಂದರೆ ಅವರು ಮುಂದುವರಿಯುವುದು ನಿಮಗೆ ಆಸೆಯೇ? ಬಂಗಾರಪ್ಪನವರು ಮುಂದುವರಿಯಬೇಕು ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾಗಬಾರದೆನ್ನುವುದು ನಿಮ್ಮ ಮಾತಿನ ಅರ್ಥವೇ? ನೀವು ಬಾಬರಿ ಮಸೀದಿ ಒಡೆಯಲಿಕ್ಕೆ ಡಿಸೆಂಬರ್ 6ನೇ ತಾರೀಖು ಕರಸೇವೆ ಮಾಡುವುದಕ್ಕೆ ಸೇರದಿದ್ದರೆ ಬಾಬರಿ ಮಸೀದಿ ಏತಕ್ಕೆ ಒಡೆಯುತ್ತಿತ್ತು? ಕೋಟ್ಯಾಂತರ ರೂಪಾಯಿಗಳು ಏತಕ್ಕೆ ನಷ್ಟವಾಗಿರುವುದು? ಸಾವಿರಾರು ಜನರು ಅಲ್ಲಿ ಏತಕ್ಕೆ ಸಾಯುತ್ತಿದ್ದರು? ಆದ್ದರಿಂದ ನೀವು ಜೇನುಗೂಡಿಗೆ ಕೈಹಾಕಿ ಕಲುಷಿತ ಮಾಡುವುದಕ್ಕೆ ಹೋಗಬೇಡಿ. ಅಲ್ಲಿ ಜೇನುಹುಳಗಳು ಕಚ್ಚುತ್ತವೆ.

ತಾವು ಯಾವ ವಿಚಾರಕ್ಕೆ ಆದ್ಯತೆ ಕೊಡಬೇಕೋ ಕೊಡಿ. ಈ ರಾಜ್ಯದ ರೈತರ, ಬಡವರ, ಕಾರ್ಮಿಕರ, ಹಿಂದುಳಿದ ವರ್ಗಳ ಇತ್ಯಾದಿ ಸಮಸ್ಯೆಗಳ ಬಗ್ಗೆ ಆದ್ಯತೆ ಕೊಡಬೇಕೋ ತಾವು ನೋಡಿ. ನಮ್ಮ ರಾಜ್ಯದ 45 ವರ್ಷಗಳ

ಇತಿಹಾಸದಲ್ಲಿ ಇಷ್ಟೊಂದು ಮಳೆಬಿದ್ದು ಮೂರೂವರೆ ಲಕ್ಷ ಮನೆಗಳು ಸಂಪೂರ್ಣವಾಗಿ ನಾಶವಾಗಿದ್ದು ಹಿಂದೆಂದೂ ಆಗಿರಲಿಲ್ಲ. There is no parallel disaster in history... ಇಂತಹ ವಿಚಾರದ ಬಗ್ಗೆ ನಾವು ಚರ್ಚೆ ಮಾಡಬೇಕು. ಜನ ಪ್ರಾಣ ಕಳೆದುಕೊಂಡಿದ್ದಾರೆ. ಕಾಲರಾ ಬಂದಿದೆ. ಅನೇಕ ರೋಗಗಳು ಬಂದಿವೆ. ಅವರಿಗೆಲ್ಲಾ ದುಡ್ಡು ಎಲ್ಲಿಂದ ತರತಕ್ಕದ್ದು? ಕೇಂದ್ರ ಸರ್ಕಾರ ದುಡ್ಡು ಕಳಿಸಿಲ್ಲ. ಕೇಂದ್ರದ ಸಹಾಯ ಇದುವರೆಗೂ ಬಂದಿಲ್ಲ. ಅದಕ್ಕೆ ಏನು ಕಾರಣ? ಇದರ ಬಗ್ಗೆ ನಾವು ಚರ್ಚೆ ಮಾಡಬೇಕಾಗಿದೆ. ಪ್ರಧಾನ ಮಂತ್ರಿಗಳು ತಮಿಳುನಾಡಿಗೆ, ಕೇರಳಕ್ಕೆ ಹೋಗಿಬರುತ್ತಾರೆ. ನಮ್ಮ ರಾಜ್ಯಕ್ಕೆ ಬರುವುದಕ್ಕೆ ಅವರಿಗೆ ಟೈಮ್ ಇಲ್ಲ. ಇಂತಹ ವಿಚಾರಗಳ ಬಗ್ಗೆ ಚರ್ಚೆ ಮಾಡೋಣ. ಇದಾದಮೇಲೆ ರಾಸಾಯನಿಕ ಗೊಬ್ಬರ ಬೆಲೆಗಳು. ರೈತರಿಗೆ ಎಷ್ಟು ತೊಂದರೆಯಾಗಿದೆ? ತಮ್ಮನ್ನೂ ಸೇರಿಸಿ, ಶ್ರೀ ಈಶ್ವರಪ್ಪನವರನ್ನೂ ಸೇರಿಸಿ, ನಾವು ನೂರಕ್ಕೆ ತೊಂಭತ್ತು ಭಾಗ ರೈತರ ಮಕ್ಕಳು ಇದ್ದೇವೆ. ಇದರ ಬಗ್ಗೆ ಚರ್ಚೆ ಮಾಡೋಣ ಎಂದರೆ, ನೀವು ಆದ್ಯತೆ ನಮಗೇ ಕೊಡಬೇಕು ಎನ್ನತಕ್ಕದ್ದು ಏನಿದೆ, ಅದು ಈ ಸಮಯದಲ್ಲಿ ಸರಿಯಲ್ಲ. ನಾನು ಹೇಳುತ್ತೇನೆ ನಮಗೇ ಆದ್ಯತೆ ಸಿಗಬೇಕು. ನಾನು ಇಷ್ಟೆಲ್ಲ ಪ್ರಸ್ತಾಪ ಮಾಡುವುದಕ್ಕೂ ಹೋಗುತ್ತಿರಲಿಲ್ಲ. ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ನಿಮಗೆ ಆದ್ಯತೆ ಸಿಗಲಿ, ನಮ್ಮದೇನೂ ತಕರಾರು ಇಲ್ಲ. ಅಥವಾ ಶ್ರೀ ದೇಶಪಾಂಡೆಯವರು ವಿರೋಧ ಪಕ್ಷದ ನಾಯಕರು, ಅಂತ ಹೇಳಿ ಆದ್ಯತೆ ಕೊಡಬೇಕು ಎಂದೇನೂ ಹೇಳುವುದಿಲ್ಲ. ನಾಳೆ ಬರತಕ್ಕಂಥ ಚುನಾವಣೆಯಲ್ಲಿ ಜನ ನಿಮಗೆ ಮೆಜಾರಿಟಿ ಕೊಟ್ಟು ಮುಖ್ಯ ಮಂತ್ರಿಗಳನ್ನಾಗಿ ಮಾಡಿದರೆ ನಾವು ಮುಖ್ಯ ಮಂತ್ರಿ ಯಡಿಯೂರಪ್ಪನವರು ಎಂದು ಕರೆಯುತ್ತೇವೆ. ಇದರ ಬಗ್ಗೆ ಏನೂ ಸಂಶಯ ಇಟ್ಟುಕೊಳ್ಳಬೇಡಿ. ಅಥವಾ ನಿಮ್ಮನ್ನು ಸದನಕ್ಕೆ ಆರಿಸಿ ಕಳಿಸದೆ ಹೋದರೆ ನಾನು ಮಾಜಿ ಶಾಸಕರು ಯಡಿಯೂರಪ್ಪನವರು ಅಂತ ಹೇಳಬೇಕಾಗುತ್ತದೆ. ಆದ್ದರಿಂದ ತಾವು ದಯವಿಟ್ಟು ಈ ತರಹ ನಮ್ಮನ್ನು ಸುಮ್ಮನೆ ಕೆಣಕತಕ್ಕಂಥ ಕೆಲಸ ಮಾಡಬೇಡಿ. ನಾನು ಬಹಳ ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಈ ವಿಚಾರದ ಬಗ್ಗೆ ಯಾವುದೇ ಸ್ವರೂಪದಲ್ಲಿ ಆಗಬಹುದು. ಚರ್ಚೆಗೆ ಅವಕಾಶ ಮಾಡಿಕೊಡಿ. ಶ್ರೀ ಯಡಿಯೂರಪ್ಪನವರು, ಬೈರೇಗೌಡರು, ನಾಗರಾಜ್, ದೇಶಪಾಂಡೆಯವರು ಎಲ್ಲರೂ ಭಾಗವಹಿಸೋಣ. ತಾವು ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ನನ್ನ ಸಬ್‌ಮಿಶನ್ ಅನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ಮಾತು. ದಯವಿಟ್ಟು.....

ಶ್ರೀ ಆರ್.ವಿ. ದೇಶಪಾಂಡೆ : ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಈಗ ಶ್ರೀ ಸಿಂಧ್ಯ ಅವರು ಹೇಳಿದಹಾಗೆ ಯಾವ ಒಂದು ವಿಷಯದ ಬಗ್ಗೆ ನಾವು 68ರಲ್ಲಿ ನೋಟೀಸ್ ಕೊಟ್ಟಿದ್ದೇವೆ. ಬಂಗಾರಪ್ಪನವರ ಆಡಳಿತದಲ್ಲಿ ಭ್ರಷ್ಟಾಚಾರದ ಬಗ್ಗೆ ಯಡಿಯೂರಪ್ಪನವರೂ ಕೊಟ್ಟಿದ್ದಾರೆ. ಅದಕ್ಕೆ ಚರ್ಚೆ ಆಗಲೇಬೇಕಾಗುತ್ತದೆ. ಅದಕ್ಕೂ ಪ್ರಾಧಾನ್ಯತೆ ಇದೆ. ಅವರ ಅಡ್ಜರ್ನ್‌ಮೆಂಟ್ ಮೋಶನ್ ಮೇಲೆ ನನ್ನ ಪಾಯಿಂಟ್ ಆಫ್ ಆರ್ಡರ್ ಇದೆ. ತಾವು ನಿರ್ಣಯ ಮಾಡಬೇಕಾಗುತ್ತದೆ. ನೆರೆಹಾವಳಿ ಬಗ್ಗೆ ಚರ್ಚೆ ಮಾಡುತ್ತೀರೋ, ಬಂಗಾರಪ್ಪನವರ ಬಗ್ಗೆ ಚರ್ಚೆ ಮಾಡುತ್ತೀರೋ? ತಾವು ನಿರ್ಣಯ ಮಾಡಬೇಕು.

ಪ್ರಶ್ನೆ ಏನಿದೆ ಎಂದರೆ ಶ್ರೀ ಯಡಿಯೂರಪ್ಪನವರು ಅಡ್ಜರ್ನ್‌ಮೆಂಟ್ ಮೋಶನ್‌ಗೆ ನೋಟೀಸ್ ಕೊಟ್ಟಿದ್ದಾರೆ. ಯಾವಾಗ ಕೊಟ್ಟಿದ್ದಾರೆ? ಅವರು ಇದೇ ವಿಷಯದ ಮೇಲೆ ಮತ್ತೊಂದು ಅಡ್ಜರ್ನ್‌ಮೆಂಟ್ ಮೋಶನ್‌ಗೆ ನೋಟೀಸನ್ನು 31ನೇ ತಾರೀಖಿಗೆ ಕೊಟ್ಟಿದ್ದರು. ಇವತ್ತು ಪುನಃ 7ನೇ ತಾರೀಖಿಗೆ ಮತ್ತೊಂದು ಕೊಟ್ಟಿದ್ದಾರೆ. ನಾನು ನಿಯಮ 68ನ್ನು ಓದಿ ಹೇಳುತ್ತೇನೆ.

61(i) Not more than one such motion shall be made at the same sitting...

He has already made a motion on 31st and it has been rejected and not taken up before the House. Now whether on the same subject in the same session another motion could be raised to-day. Here section 61(i) is very clear it says no motions can be raised. So, automatically under sub-section (i) of Section 61 it falls.....

ಹಾಗಾಗಿ ಚರ್ಚೆಯ ಗಾಂಭೀರ್ಯ ಕಡಿಮೆ ಮಾಡುತ್ತಾ ಇಲ್ಲ. ಚರ್ಚೆ ಆಗಬೇಕಾಗುತ್ತದೆ. ಆದರೆ ನಾವು ಏನು ನೋಟೀಸ್ ಕೊಟ್ಟಿದ್ದೇವೆ. ಅದರ ಮೇಲೆ ಆಗಬೇಕಾಗುತ್ತದೆ. ಇಷ್ಟೇ ನನ್ನ ಪಾಯಿಂಟ್ ಆಫ್ ಆರ್ಡರ್. ಮತ್ತೊಂದು ಮಾತನ್ನು ಹೇಳಬೇಕಾಗುತ್ತದೆ. ನಾವೆಲ್ಲರೂ ಒಂದೇ ಪಾರ್ಟಿಯಲ್ಲಿದ್ದೇವೆ. ಶ್ರೀ ಸಿಂಧ್ಯ ಅವರು ಹೇಳಿದಹಾಗೆ ಪ್ರಜಾಪ್ರಭುತ್ವದಲ್ಲಿ ಡಿಫರೆನ್ಸ್ ಇರುತ್ತವೆ. ನಮ್ಮ ಪಕ್ಷದಲ್ಲಿದೆ, ಯಾವ ಪಕ್ಷವಾದರೂ ಕೂಡ ಅಲ್ಲಿ ಡಿಫರೆನ್ಸ್ ಇರುತ್ತದೆ. ಪ್ರಜಾಪ್ರಭುತ್ವದಲ್ಲಿ ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಶ್ರೀಮಾನ್ ಸಿಂಧ್ಯರವರು ಮಾತನಾಡುವಾಗ ಹೇಳಿದರು. ಇದನ್ನು ಚರ್ಚೆ ಮಾಡುವುದಕ್ಕೆ ಅಭ್ಯಂತರವಿಲ್ಲವೆಂದೂ, ಬಿ.ಎ.ಸಿ.ನಲ್ಲಿ ಮಾತನಾಡಿದ್ದೇವೆಂದೂ ಹೇಳಿದರು. ಬಿ.ಎ.ಸಿ.ನಲ್ಲಿ ಮಾತಾಗಿರುವುದು, ಚರ್ಚೆಗೆ ಅವಕಾಶ ಇಲ್ಲವೆಂದಲ್ಲ, ಅವಕಾಶ ಇದೆ. ಆದರೆ, ನಿರ್ದಿಷ್ಟವಾದ ಅಂಶಗಳನ್ನು ಸಭೆಯ ಮುಂದೆ ತಂದರೆ, ಇದನ್ನು ಚರ್ಚೆ ಮಾಡಬಹುದು ಎಂದು. ಇಲ್ಲಿ ಕೊಟ್ಟಿರತಕ್ಕಂತಾದ್ದು ಅಮ್ನಿ ಬಸ್, ಆಮ್ನಿ ಬಸ್ ಒಂದಾಗಿದೆ. It is not specific. ಎರಡನೆಯದು, 3-4 ತಿಂಗಳುಗಳ ಹಿಂದೆ ನಡೆದಿರತಕ್ಕ ವಿಷಯ, ಇದು ಬೇರೆ ವಿಷಯ. ಇದನ್ನು ರೂಲ್ 58-59ಕ್ಕೆ ಆಗದೇಹೋದರೂ, ನಿಯಮ 60ಕ್ಕೆ ತೆಗೆದುಕೊಳ್ಳಬಹುದು. If it is raised in the House, the Government has no objection.

ರಾಜ್ಯದಲ್ಲಿ ಕಳೆದ 2 ವರ್ಷಗಳ ಆಡಳಿತದ ಅವಧಿಯಲ್ಲಿ ನಡೆದಿರುವ ಭ್ರಷ್ಟಾಚಾರ ಅದಕ್ಕೆ sky is the limit. Anything can be said. All these can be discussed at the time of Budget.

ಆದ್ದರಿಂದ ಈ ಒಂದು ದೋಷ, ರೂಲ್ 50ರೊಳಗೆ ಬರುವುದಿಲ್ಲಲ. 68ರಲ್ಲಿಯೂ ಬರುವುದಿಲ್ಲ, ಈಗಲೂ ಕೂಡ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು, specific mallegation about any particular matter. That is what our Chief Minister has said.

ಇನ್ನೊಂದು ಪಾಯಿಂಟ್ ನನಗೆ ಅರ್ಥವಾಗಲಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರಾದ ದೇಶಪಾಂಡೆಯವರು ಮತ್ತು ಇತರೆ ಸ್ನೇಹಿತರು ರೂಲ್ 68ರ ಪ್ರಕಾರ ನೋಟೀಸ್ ಕೊಟ್ಟಿದ್ದಾರೆ. I think it is not adjournment Motion.

(INTERRUPTIONS)

SRI R.V. DESHPANDE : I am going a step forward. We want discussion on that issue. If there is any other provision, we have no objection. We have raised it earlier.

SRI HARNALLI RAMASWAMY : There is no objection if specific points are raised. As it is, there is no specific matter before the House.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಉಪಾಧ್ಯಕ್ಷರೇ, ನಮ್ಮ ಸ್ನೇಹಿತರಾದ ಸಿಂಧ್ಯರವರು ಏನು ಹೇಳಿದ್ದಾರೆ. ಅವರು ನಮ್ಮ ಆತ್ಮೀಯ ಸ್ನೇಹಿತರು ಇದ್ದಾರೆ. ಆದರೆ ಸ್ವಲ್ಪ ಬೇರೆ ಬೇರೆ ಕಾರಣಕ್ಕಾಗಿ ಅವರು ಗೊಂದಲದಲ್ಲಿರುವುದರಿಂದ, ಮಾತನಾಡುವುದಕ್ಕೆ ಮತ್ತು ಅವರ ಮಾತನ್ನೇ ಜಸ್ಟಿಫೈ ಮಾಡಿಕೊಳ್ಳುವುದಕ್ಕೆ ಕಷ್ಟವಾಗಿ ಸ್ವಲ್ಪ ಆ ಕಡೆ, ಈ ಕಡೆ ಹೋಗುತ್ತಿದ್ದಾರೆ. ಅವರ ಪರಿಸ್ಥಿತಿ ಹಾಗಿರುವುದರಿಂದ ನಾವು ಅದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಆದರೆ ಸಿಂಧ್ಯರವರು ಹೇಳಿರುವುದಕ್ಕೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ರಾಜ್ಯದ ರೈತನ ಬಗ್ಗೆ ನಮಗೆ ಕಳಕಳಿ ಇಲ್ಲವೆಂದು ಹೇಳಿದರು.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿ ಈ ಸದನದ ಒಳಗಡೆ ಬಂದತಕ್ಷಣ ಈ ರಾಜ್ಯದ ರೈತರಿಗೆ ಏನು ಆಶ್ವಾಸನೆ ಕೊಟ್ಟಿದ್ದೀರಿ. ಅವರ ಸಾಲ ಮನ್ನಾ ಮಾಡಬೇಕೆಂದು ಹೋರಾಟ ಮಾಡಿ, ಲಕ್ಷಾಂತರ ಜನರನ್ನು ಇಲ್ಲಿಗೆ ಕರೆದುಕೊಂಡು ಬಂದಾಗ, ರೈತರನ್ನು ಬಿಟ್ಟರೆ ನಿಮಗೆ ಇನ್ನೇನೂ ಇಲ್ಲವೆಂದು ಕೂಗಿ, ಎಲ್ಲಾ ಸೇರಿ, ನನ್ನನ್ನು ಬಾಯಿ ಮುಚ್ಚಿಸುವಂಥ ಪ್ರಯತ್ನ ಮಾಡಿದಿರಿ. ನಿಜ, ನಾವು ನಾಲ್ಕು ಜನರೇ ಇರಬಹುದು. ನಾನು ಹೇಳಿದ್ದೇ ನಡೆಯಬೇಕೆಂದು ನಾನು ಹೇಳುತ್ತಾ ಇಲ್ಲ. ಈ ರಾಜ್ಯದ ಜನ ನೋಡುತ್ತಾರೆ. ಇಲ್ಲಿ ಒಂದು ಅಧಿಕೃತ ವಿರೋಧಪಕ್ಷ ಇದ್ದರೂ ಸಹ, ಆಡಳಿತ ಪಕ್ಷದವರು ಅವತ್ತು ಇದ್ದಂಥ ಸರ್ಕಾರ, ಆ ಮಂತ್ರಿಮಂಡಲದ ಮೇಲೆ ಆರೋಪ ಮಾಡಿ, ಆ ನಾಯಕತ್ವವನ್ನು ಬದಲಾವಣೆ ಮಾಡತಕ್ಕ ಪ್ರಯತ್ನ ಮಾಡಿದಾಗ, ಈ ಯಡಿಯೂರಪ್ಪನವರು, ಈ ಬಿ.ಜೆ.ಪಿ.ಯವರು ಇಡೀ ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ, ಭ್ರಷ್ಟಾಚಾರದ ಹಗರಣಗಳ ಬಗ್ಗೆ ಚಾರ್ಜಷೀಟನ್ನು ಹಾಕಿ, ನಾಡಿನ ಉದ್ದಗಲಕ್ಕೂ ತೆಗೆದುಕೊಂಡು ಹೋದೆವು, ಪ್ರಧಾನ ಮಂತ್ರಿಗಳಿಗೆ ಕೊಟ್ಟೆವು. ಅದರ ಆಧಾರದ ಮೇಲೆಯೇ ತನಿಕೆಯಾಯಿತು. ಎ.ಐ.ಸಿ.ಸಿ. ಸದಸ್ಯರಿಂದ ವಿಚಾರಣೆಯಾಯಿತು. ಮುಂದೆ ಏನಾಯಿತು ಎನ್ನುವ ವಿಚಾರಕ್ಕೆ ಹೋಗುವುದಿಲ್ಲ. ಬಿ.ಜೆ.ಪಿ. ಯಾವತ್ತು ಬೇಕಾಗಿತ್ತು. ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ನಾವು 18 ಜನ ಬೇಕಾಗಿತ್ತು. ಅವತ್ತು ನಾವು ಬೇಡವಾಗಲಿಲ್ಲ. ನಾವು ಅದರ ಬಗ್ಗೆ ಚಿಂತೆ ಮಾಡುತ್ತಾ ಇಲ್ಲ. ನಿಮ್ಮ ಪಾರ್ಟಿಯಲ್ಲಿ ಭಿನ್ನಾಭಿಪ್ರಾಯ ಇದೆ, ಗೊಂದಲ ಇದೆ. ಅದರ ಬಗ್ಗೆ ಚಿಂತನೆ ಮಾಡುತ್ತಾ ಇಲ್ಲಲ. ಪ್ರಭು ಶ್ರೀ

ರಾಮಚಂದ್ರನ ಜನ್ಮಸ್ಥಾನ ಅಯೋಧ್ಯೆಯಲ್ಲಿ ಮಂದಿರ ಇದ್ದುದನ್ನು ಮಸೀದಿ ಎಂದು ಕರೆದರು. ದೇಶದಲ್ಲಿ ಇಂತಹ ಗಲಾಟೆಗೆ ತಾವು ಕಾರಣಕರ್ತರಾದಿರಿ. ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಇವತ್ತು ಹೇಳಿದಂತಹ ಸಂಗತಿ ಏನೆಂದರೆ.....

(ಗೊಂದಲ)

ಶ್ರೀ ಎ.ಕೆ. ಅನಂತಕೃಷ್ಣ : ನಾವು ಅವರವರ ವಾದ ವಿವಾದ ಏನಿದೆ, ಪರಸ್ಪರ ಜಗಳ ಏನಿದೆ, ಅದನ್ನೇ ಕೇಳುವುದಕ್ಕೆ ಬಂದಿರುವುದು? ತಾವು ದಯವಿಟ್ಟು ಒಂದು ತೀರ್ಮಾನ ಕೊಡಿ.

1.55 ಪಿ.ಎಂ

ನಾನು ಏನು ಹೇಳುತ್ತಿದ್ದೇನೆ ಎಂದರೆ ಕಳೆದ ಎರಡು ವರ್ಷ ಅಧಿಕಾರದಲ್ಲಿದ್ದಂಥ ಸನ್ಮಾನ್ಯ ಬಂಗಾರಪ್ಪನವರ ಮಂತ್ರಿಮಂಡಲದ ಮೇಲೆ ಹಾಗೂ ಅವರ ಮೇಲೆ ಏನು ಭ್ರಷ್ಟಾಚಾರದ ಆರೋಪ ಇದೆ, ಸ್ವಜನಪಕ್ಷಪಾತದ ಆರೋಪ ಇದೆ ಅದಕ್ಕೆ ಪ್ರೂಫ್ ಇದೆ. ಕೆಲವು ಸಾರಿ ಪ್ರೂಫ್ ಕೇಳುತ್ತಾರೆ. ಇಂಡಿಯಾ ಟ್ಯು ಡೇ ಕೊಟ್ಟಿರುವಂತಹ ನವೆಂಬರ್ ತಿಂಗಳ ನ್ಯೂಸ್ ಟ್ರಾಕ್‌ನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾಗಿರುವ ವೀರಪ್ಪ ಮೊಯಿಲಿಯವರು ಏನು ಹೇಳಿದ್ದಾರೆ. ಆ ಸರಕಾರದಲ್ಲಿ ಯಾವ ರೀತಿ ಅನೇಕ ಅವ್ಯವಹಾರಗಳನ್ನು ಹಿಂದಿನ ಮುಖ್ಯಮಂತ್ರಿಗಳು ಮಾಡಿದ್ದಾರೆ. ಆ ದಾಖಲೆಗಳು ಈ ಕ್ಯಾಸೆಟ್‌ನಲ್ಲಿ ಇದೆ, ಸದನದಲ್ಲಿ ಈ ಕ್ಯಾಸೆಟ್‌ನ್ನು ಇವತ್ತು ಹಾಕಬೇಕಾಗುತ್ತದೆ.

ಉಪಾಧ್ಯಕ್ಷರು : ಅಡ್‌ಜರ್ನ್‌ಮೆಂಟ್ ಮೋಷನ್ ಬಗ್ಗೆ ತಾವು ಶುರು ಮಾಡಿಬಿಟ್ಟಿದ್ದೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲ ಮಾಡಿಲ್ಲ. ನಾನು ವಿವರಕ್ಕೆ ಹೋಗುತ್ತಿಲ್ಲ. ನವೆಂಬರ್ ತಿಂಗಳ ಇಂಡಿಯಾ ಟು ಡೆ ನ್ಯೂಸ್ ಟ್ರ್ಯಾಕ್‌ನಲ್ಲಿ.....

ಉಪಾಧ್ಯಕ್ಷರು : ಸಿಂಧ್ಯಾರವರು ಮಾಡನಾಡಿದ್ದಾರೆ. ಆ ವಿಚಾರದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ ಎಂದು ಹೇಳಿದ್ದೀರಿ. ದಯವಿಟ್ಟು ಅದಕ್ಕೆ ತಾವು ಕನ್‌ಫೈನ್ ಆಗಿಬಿಡಿ, ಅನಂತರ ನಾನು ನನ್ನ ರೂಲಿಂಗ್‌ನ್ನು ಕೊಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ಈ ನ್ಯೂಸ್ ಟ್ರ್ಯಾಕ್‌ನಲ್ಲಿ ಹಿಂದಿನ ಮುಖ್ಯಮಂತ್ರಿಗಳ ಬಗ್ಗೆ ಈಗಿನ ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿಯವರು ಏನು ಹೇಳಿದ್ದಾರೆ ಎಂಬುದು ಇದೆ, ಅನೇಕ ಶಾಸಕರು, ಸಚಿವರೂ ಹೇಳಿದ್ದಾರೆ. ಇದರ ಬಗ್ಗೆ ಚರ್ಚೆ ಆಗಬೇಕಾಗುತ್ತದೆ. ಇದರ ಆಧಾರದ ಮೇಲೆ ಸಿಬಿಐ ತನಿಖೆ ಆಗಬೇಕಾಗುತ್ತದೆ. ನೂರಾರು ಕೋಟಿ ರೂಪಾಯಿ ಹಗರಣದ ದಾಖಲೆಗಳು ಇವೆ. ನಾನು ಅದನ್ನು ಕಳುಹಿಸಿಕೊಡುತ್ತೇನೆ. ಮಾನ್ಯ ಹಾರನಹಳ್ಳಿ ರಾಮಸ್ವಾಮಿಯವರು ಸ್ಪೆಸಿಫಿಕ್ ಆಗಿ ಇಲ್ಲ ಎಂದು ಹೇಳಿದರು. ಒಂದು ಸಾವಿರ ದಾಖಲೆಗಳು ನನ್ನ ಹತ್ತಿರ ಇವೆ. ನನ್ನ ಹತ್ತಿರ ಇರುವ ಆರೋಪ ಪಟ್ಟಿಯಲ್ಲಿ ಯಾವುದನ್ನು ಹೇಳಲಿ. ಕಂಪ್ಯೂಟರ್ ಹಗರಣದ ಬಗ್ಗೆ ಹೇಳಲೇ ರೆಕ್ಟಿಫೈಡ್ ಸ್ಪಿರಿಟ್ ಬಗ್ಗೆ ಹೇಳಲೇ ಬಿ.ಡಿ.ಎ.ನಲ್ಲಿ ನೂರಾರು ಸೈಟುಗಳನ್ನು ಲೂಟಿ ಮಾಡಿದುದರ ಬಗ್ಗೆ ಹೇಳಲೇ ತುಂಗಭದ್ರಾ

ಶುಗರ್ ಫ್ಯಾಕ್ಟರಿಗೆ ಫೇವರ್ ಮಾಡಿ 75 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದರ ಬಗ್ಗೆ ಹೇಳಲೇ ಶರಾವತಿ ಎಜುಕೇಶನ್ ಟ್ರಸ್ಟ್ ಬಗ್ಗೆ ಹೇಳಲೇ ಈ ರೀತಿ ಅನೇಕ ಭ್ರಷ್ಟಾಚಾರ ಹಗರಣಗಳು ಇರುತ್ತವೆ ಇರುವುದರಿಂದ ಇದರಿಂದ ಕನಿಷ್ಠ ಒಂದು ಸಾವಿರ ಕೋಟಿ ರೂಪಾಯಿ ಸರಕಾರದ ಬೊಕ್ಕಸಕ್ಕೆ ಬರುವುದು ಲೂಟಿಯಾಗಿದೆ, ಅದಕ್ಕೋಸ್ಕರ ನಿಲುವಳಿ ಸೂಚನೆಯ ಮೂಲಕ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಈಲ್ಡ್ ಆಗಿಲ್ಲ, ನನ್ನನ್ನು ಕರೆದಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ನಾನು ರೂಲಿಂಗ್ ಕೊಟ್ಟಮೇಲೆ ತಮ್ಮನ್ನು ಕರೆಯುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ರೈತರ ಬಗ್ಗೆ 68ನೇ ನಿಯಮದ ಪ್ರಕಾರ ಚರ್ಚೆ ಆಗಬೇಕೆಂದು ಹೇಳುತ್ತಿದ್ದಾರೆ. ರೈತರ ಬಗ್ಗೆ ಇವರಿಗೆ ಕಳಕಳಿ ಇಲ್ಲ. ರೈತರ ಸಾಲ ಮನ್ನಾ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟು ಅವರು ಇವತ್ತು ಭಿಕ್ಷುಕರಂತೆ ಅಲೆಯುವುದಕ್ಕೆ ಜನತಾದಳದವರೇ ಕಾರಣ ವಿ.ಪಿ. ಸಿಂಗ್ ಇದ್ದಂಥ ಕಾಲದಲ್ಲಿ ಮಾಡಿದರು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ರಾಜ್ಯದ ಜನರ ಮೇಲೆ ಇವತ್ತು ಯಾವ ರೀತಿಯಲ್ಲಿ ದುಷ್ಪರಿಣಾಮವಾಗಿದೆ, ಎನ್ನುವುದರ ಬಗ್ಗೆ ಚರ್ಚೆ ಆಗಬೇಕಾಗಿದೆ. ನಿಲುವಳಿ ಸೂಚನೆ ಮೂಲಕ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಬೇರೆ ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಬೇಕು. ವಿರೋಧ ಪಕ್ಷದ ನಾಯಕರಾದ ದೇಶಪಾಂಡೆಯವರು ಮನಸ್ಸಿನಲ್ಲಿ ಏನಿದೆ ಎನ್ನುವುದು ನನಗೆ ಗೊತ್ತು, ಯಾವುದೇ ಕಾರಣಕ್ಕಾಗಿ ಈ ಚರ್ಚೆ ಆಗಬಾರದು, ಇವತ್ತು ಕಾಂಗ್ರೆಸ್ ಪರವಾಗಿ ಇಲ್ಲಿ ನಿಂತುಕೊಂಡು ಅವರ ಎಲ್ಲಾ ಭ್ರಷ್ಟಾಚಾರವನ್ನು ಮುಚ್ಚಿ ಹಾಕುವಂತಹ ವ್ಯವಸ್ಥಿತವಾದ ಷಡ್ಯಂತ್ರ ಜನತಾದಳದವರು ಕಾಂಗ್ರೆಸ್ ಮುಖಂಡರ ಜೊತೆಗೆ ಶಾಮೀಲಾಗಿ ಇದನ್ನು ಮುಚ್ಚಿಹಾಕುವ ಪ್ರಯತ್ನ ಮಾಡುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ಅವರು ಏನು ಹೇಳುತ್ತಾರೆ ಹೇಳಿಬಿಡಲಿ, ಆಮೇಲೆ...

(ಗೊಂದಲ)

ಉಪಾಧ್ಯಕ್ಷರು : ಬೈರೇಗೌಡರೇ, ತಾವೂ ನಿಂತುಕೊಂಡು ಬಿಟ್ಟಿರಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಇವತ್ತು ಸಿ.ಬಿ.ಐ. ತನಿಖೆ ಮಾಡಿಸಲಿ, ಜನತಾದಳವರು ಕಾಂಗ್ರೆಸ್(ಐ)ನವರು ಶಾಮೀಲಾಗಿದ್ದಾರೆ ಎಂದು ಗೊತ್ತಾಗುತ್ತದೆ.

(ಗೊಂದಲ)

ಉಪಾಧ್ಯಕ್ಷರು : ಇದನ್ನು ತೆಗೆದುಕೊಳ್ಳಬೇಕೆಂದು ತಾವು ಹೇಳುತ್ತಿದ್ದೀರಿ. ಆಯಿತಲ್ಲ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಪ್ರಧಾನಿಯವರ ಕೈಗೊಂಬೆಯಾಗಿ ಕುಳಿತಿರತಕ್ಕಂಥ ಜನ ನೀವು

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ತಮ್ಮನ್ನು ಪ್ರಾರ್ಥನೆ ಮಾಡುತ್ತೇನೆ, ದಯವಿಟ್ಟು ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಇಲ್ಲದಿದ್ದರೆ ರಾಜ್ಯದ ಜನ ನಮ್ಮನ್ನು ಕ್ಷಮಿಸುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು : ಈಗ ಸಭೆಯನ್ನು ಮುಂದೂಡಲಾಗಿದೆ. ಪುನಃ ಮಧ್ಯಾಹ್ನ 3 ಗಂಟೆಗೆ ಸಭೆ ಸೇರುತ್ತದೆ.

(ಸಭೆಯು 2.00 ಗಂಟೆಗೆ ಮುಂದೂಡಲ್ಪಟ್ಟು ಪುನಃ 3.00 ಗಂಟೆಗೆ ಸೇರಲು ತೀರ್ಮಾನಿಸಿತು)

ಸದನವು ಮತ್ತೆ 3-20ಕ್ಕೆ ಸಮಾವೇಶಗೊಂಡಿತು

(ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಉಪಾಧ್ಯಕ್ಷರು : ಈಗ ತಾವೇನು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದೀರಿ. "Not more than one such motion shall be made at the same sitting" ಸಿಟಿಂಗ್ ಎಂದರೆ ಬರೀ ಒಂದು ದಿವಸಕ್ಕೆ ಬರುತ್ತದೆ.

ಆದ್ದರಿಂದ ಆ ಪಾಯಿಂಟ್ ಆಫ್ ಆರ್ಡರನ್ನು ನಾನು ತಳ್ಳಿ ಹಾಕಿದ್ದೇನೆ. ಆಮೇಲೆ 29ನೇ ತಾರೀಖು ರೂಲ್ ನಂ. 68ರ ಪ್ರಕಾರ, ಜನತಾ ದಳ ಮತ್ತು ಎಸ್.ಜೆ.ಪಿ. ಎರಡು ಪಾರ್ಟಿಯವರ ಕಡೆಯಿಂದ ಈ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಒಂದು ಪತ್ರ ಬಂದಿದೆ. ಅದನ್ನು ಡಿಸೈಡ್ ಮಾಡಬೇಕಾದರೆ ಸಭಾ ನಾಯಕರನ್ನು ಕನ್‌ಸಲ್ಟ್ ಮಾಡಿ ಮಾಡಬೇಕಾಗುತ್ತದೆ. ಇವತ್ತು ಬೆಳಿಗ್ಗೆ ಯಡಿಯೂರಪ್ಪನವರು ಮತ್ತು ಅವರ ಇನ್ನೂ 4 ಜನ, ಈ ಒಂದು ಭ್ರಷ್ಟಾಚಾರದ ನಿಲುವಳಿ ಸೂಚನೆಯನ್ನು ನನ್ನ ಮುಂದೆ ತಂದಿದ್ದಾರೆ. ಈಗ ನಾವು ನಿಲುವಳಿ ಸೂಚನೆಯನ್ನು ಅಡ್ಮಿಟ್ ಮಾಡಬೇಕೇ ಬೇಡವೇ ಎನ್ನುವ ಸ್ಟೇಜ್‌ನಲ್ಲಿದ್ದೇವೆ. ಈಗ ಮಾನ್ಯ ಯಡಿಯೂರಪ್ಪನವರು ಈ ದಿವಸ ಹಾಕಿರತಕ್ಕ ಅಜೆಂಡ ಪ್ರಕಾರ, ನೆರೆ ಹಾವಳಿ ಬಗ್ಗೆ ಹಾಗೂ ಅದರಿಂದ ಆಗಿರತಕ್ಕ ದುರಂತಗಳ ಬಗ್ಗೆ ಚರ್ಚೆ ನಡೆಯಬೇಕೆಂದು ಇವತ್ತಿನ ಅಜೆಂಡಾದಲ್ಲಿ ಹಾಕಿದೆ. ತಾವೂ ಸಹ ಇದನ್ನು ಒಪ್ಪಿದ್ದೀರಿ. ಇದು ಮಹತ್ವದ ವಿಷಯ, ಮೊದಲನೆಯ ದಿವಸವೇ ತೆಗೆದುಕೊಳ್ಳಬೇಕೆನ್ನುವುದು ಈ ಸಭೆಯ ಮುಂದೆ ಬಂತು. ಈಗ ನಾನು ತಮಗೆ ನೇರವಾಗಿ ಕೇಳುತ್ತಿದ್ದೇನೆ. ತಾವು ನನಗೆ ಏನು ಕನ್‌ವೀನ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಿ. ಯಾವುದನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೀರಿ.

ನಿಯಮ 68ರ ಮೇರೆಗೆ

ರಾಜ್ಯದಲ್ಲಿ ಇತ್ತೀಚೆಗೆ ಉಂಟಾದ ನೆರೆ ಹಾವಳಿ

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಉಪಾಧ್ಯಕ್ಷರೇ, ತಾವು ಹೇಳಿದಂತೆ ರೂಲ್ 68ರ ಪ್ರಕಾರ ನೆರೆ ಹಾವಳಿಯಿಂದ ರೈತರಿಗೆ ಅಗಾಧವಾದ ತೊಂದರೆಯಾಗಿದೆ. ಇದು ಕೂಡ ತುಂಬಾ ಪ್ರಮುಖವಾದ ವಿಷಯ. ಇದರ ಬಗ್ಗೆ ಚರ್ಚೆಯಾಗಲೇಬೇಕು. ಇದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲರೇ ಇಲ್ಲ. ಈಗ ನಾವು, ಯಾವ ಸ್ಟೇಜ್‌ನಲ್ಲಿದ್ದೇವೆಂದರೆ ನಾವು ಯಾವ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ, ಅದರಿಂದಲೂ ಸಹ, ನೆರೆ ಹಾವಳಿ ಮತ್ತು ಅದರಿಂದ ನೊಂದಿರತಕ್ಕ ರೈತರ ಬಗ್ಗೆ.....

ಉಪಾಧ್ಯಕ್ಷರು : ಇದನ್ನು ತೆಗೆದುಕೊಳ್ಳಬೇಕೋ ಅಥವಾ ನಿಲುವಳಿ ಸೂಚನೆ ತೆಗೆದುಕೊಳ್ಳಬೇಕೋ....

ಶ್ರೀ ಬಿ.ಎಸ್. ಯಡಿಯೂರಪ್ಪ : ಮೊದಲು ನಿಲುವಳಿ ಸೂಚನೆಯ ಪ್ರಿಲಿಮನರಿ ಸಬ್‌ಮಿಷನ್‌ಗೆ ಅವಕಾಶ ಮಾಡಿಕೊಡಿ. ಇದಾದ ನಂತರ ಆದ್ಯತೆಯಿಂದ ಇದನ್ನು ತೆಗೆದುಕೊಳ್ಳಬಹುದು. ನಿಲುವಳಿ ಸೂಚನೆ ಕೊಟ್ಟಿರತಕ್ಕ ಒಂದೇ ಒಂದು ಉದ್ದೇಶ ಏನೆಂದರೆ, ಇವತ್ತು ಯಾರ ಬಗ್ಗೆ, ಯಾರೂ ಆರೋಪ ಮಾಡಬೇಕೆಂದು ಅಲ್ಲ.....

ಉಪಾಧ್ಯಕ್ಷರು : ಮಾನ್ಯ ದೇಶಪಾಂಡೆಯವರೇ, ನೀವೂ ಇದರ ಬಗ್ಗೆ ಮಾತನಾಡುತ್ತೀರಾ?

ಶ್ರೀ ಆರ್.ವಿ. ದೇಶಪಾಂಡೆ : ನಾನು ಒಂದು ಮಾತನ್ನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ನೆರೆ ಹಾವಳಿ ವಿಷಯ ಅಜೆಂಡಾದಲ್ಲಿದೆ. ನಾವು ಅಜೆಂಡಾ ಪ್ರಕಾರ ಹೋಗಬೇಕಾಗುತ್ತದೆ. ಏಕೆಂದೆ ಈ ನೆರೆ ಹಾವಳಿ ಬಗ್ಗೆ ಚರ್ಚೆ ಮಾಡಬೇಕೆಂದು ಅವರೂ, ನಾವೂ ಒತ್ತಾಯ ಮಾಡಿಕೊಂಡೇ ಬಂದಿದ್ದೇವೆ. ಮೊದಲನೆಯ ದಿವಸವೇ ಇದನ್ನು ತೆಗೆದುಕೊಳ್ಳಬೇಕೆಂದು ಅವರು ಹೇಳಿದ್ದರು. ಈಗ ಅವರು ಏನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಬಂಗಾರಪ್ಪನವರ ಆಡಳಿತಾದಲ್ಲಾದ ಭ್ರಷ್ಟಾಚಾರ ಮತ್ತೊಂದು, ಇದನ್ನು ನಾವೂ ಕೂಡ ರೈಸ್ ಮಾಡಿದ್ದೇವೆ. ಇವತ್ತು ತಾವು ಒಂದು ಮಾತು ಹೇಳಿದಿರಿ. ದಯವಿಟ್ಟು ತಪ್ಪು ತಿಳಿದುಕೊಳ್ಳಬಾರದು. ರೂಲ್ 68ರ ಪ್ರಕಾರ ನೋಟೀಸ್ ಕೊಟ್ಟಿದ್ದೇವೆ. ಇದರ ಬಗ್ಗೆ ಸಭಾನಾಯಕರ ಕಡೆ ನಾವು ಕೊಟ್ಟಿಲ್ಲ, ರೂಲ್ 68ರಲ್ಲಿ ಯಾವುದೇ ಒಂದು ನೋಟೀಸ್ ಕೊಟ್ಟನಂತರ ನಾವು ಸಬ್‌ಮಿಷನ್ ಮಾಡಿದಾಗ, ಕನ್‌ಸಿಡರ್ ಮಾಡುತ್ತೇವೆಂದು, ತಾವು ಸದನದಲ್ಲಿಯೇ ಹೇಳಿದ್ದೀರಿ. ಎರಡು ಬಾರಿ ಬಿ.ಎ.ಸಿ.ನಲ್ಲೂ ಬಂದಿದೆ.

ಹೀಗಾಗಿ ಡಿಸಿಷನ್ ತಾವು ತೆಗೆದುಕೊಳ್ಳಬೇಕಾಗುತ್ತದೆ. ಹಾಗೆ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಕನ್‌ಸರ್ನ್ಡ್ ಮಿನಿಸ್ಟರ್ ಮತ್ತು ಯಾರು ನೋಟೀಸ್ ಕೊಟ್ಟಿದ್ದಾರೆ ಅವರ ಅಭಿಪ್ರಾಯ ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ನಾನು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಅವರ ಕನ್‌ಸೆಂಟ್ ಇರಬೇಕಾಗಿಲ್ಲ, It is your choice. You have to take a decision.

ಚೀಫ್ ಮಿನಿಸ್ಟರ್ ಏತಕ್ಕೆ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಚೀಫ್ ಮಿನಿಸ್ಟರ್ ಬೇಡ ಎಂದು ಹೇಳುತ್ತಾರೆ. ಸಭಾನಾಯಕರೂ ಬೇಡ ಎಂದು ಹೇಳಬಹುದು. ಆದುದರಿಂದ........

ಉಪಾಧ್ಯಕ್ಷರು : ಕನ್‌ಸಲ್ಟ್ ಎನ್ನುವುದನ್ನು ಕನ್‌ಸೆಂಟ್ ಎಂದು ಹೇಳಿದೆ ಎಂದು ಕಾಣುತ್ತದೆ. I think there is the difference.

ಶ್ರೀ ಆರ್.ವಿ. ದೇಶಪಾಂಡೆ : ಮಿನಿಸ್ಟರ್ ಕನ್‌ಸರ್ನ್ಡ್ ಹಾಗೂ ಅವರು, ಎಸ್.ಜೆ.ಪಿ.ಯವರು ಏನು ನೋಟೀಸ್ ಕೊಟ್ಟಿದ್ದಾರೆ. ಅವರ ಅಭಿಪ್ರಾಯ ತೆಗೆದುಕೊಂಡು ತಾವು ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆ. ಆದರೆ ಇವತ್ತು ಇದು ಅಡ್ಮಿಟ್ ಆದ ನಂತರ ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಇದೇ ವಿಷಯ 29ನೇ ತಾರೀಖು ನಾವು ಎಸ್.ಜೆ.ಪಿ. ಯವರು ನೋಟೀಸ್ ಕೊಟ್ಟಿದ್ದೇವೆ. ಅಡ್‌ಜರ್ನ್‌ಮೆಂಟ್ ಮೋಷನ್‌ನಲ್ಲಿ ಈ ವಿಷಯವನ್ನು ಇವತ್ತು ಚರ್ಚೆಗೆ ತೆಗೆದುಕೊಂಡರೆ ತಾವು ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಮಾಡಿಕೊಡಬೇಕು. ಇದೇ ಒಂದೆರಡು ದಿನ ನಡೆದರೆ ನಾವು ಕೊಟ್ಟ ರೂಲ್ 68ರ ನೋಟೀಸ್ ಫೇಟ್ ಏನು? ವಿಷಯ ಅದೇ ಇದೆ, ವಿಷಯ ಬೇರೆ ಇಲ್ಲ, ನಾವು ರೂಲ್ 68 ಕೊಟ್ಟಿದ್ದೇವೆ. ಅವರು ಅಡಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದಾರೆ. ಆದರ ಫೇಟ್ ಏನು? ಹಾಗಾಗಿ ಇವತ್ತು ತಾವು ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ನಮ್ಮದೇನೂ ತಕರಾರು ಇಲ್ಲ. ನಮ್ಮ ರಿಕ್ವೆಸ್ಟ್ ಏನು ಎಂದರೆ ನೆರೆಹಾವಳಿ ಅಜೆಂಡಾದಲ್ಲಿ ಇದೆ. ಆ ಪ್ರಕಾರ ತಾವು ಹೋಗಬೇಕಾಗುತ್ತದೆ. ಎಲ್ಲರಿಗೂ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿರಿ. ನಾವೂ ಮಾತನಾಡಬಹುದು, ಬಿಜೆಪಿಯವರು, ಎಸ್‌ಜೆಪಿ ಯವರು ಮಾತನಾಡಬಹುದು, ರೂಲಿಂಗ್ ಪಾರ್ಟಿ ಮೆಂಬರ್ಸ್ ಸಹ ಮಾತನಾಡಬಹುದು, ಅವರೂ ಆಪಾದನೆ ಮಾಡಿದ್ದಾರೆ. ಅವರಿಗೂ ಅವಕಾಶ ಕೊಡಿರಿ, ಡಿಸ್ಕಷನ್‌ಗೆ ಅವಕಾಶ ಕೊಡಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂದರೆ ಕಳೆದ ಅನೇಕ ವರ್ಷಗಳಿಂದ ಈ ಸದನದ ಕಾರ್ಯಕಲಾಪವನ್ನು ತಾವು ತೆಗೆದು ನೋಡಿದಾಗ ನಿಲುವಳಿ ಸೂಚನೆ ಯಾರು ಪ್ರಸ್ತಾಪ ಮಾಡುತ್ತಾರೆ, ಜೀರೋ ಅವರ್‌ನಲ್ಲಿ

ಬೇರೆ ಎಲ್ಲಾ ನಿಶ್ಚಿತವಾದ ಕಾರ್ಯಕ್ರಮವನ್ನು ಬದಿಗೊತ್ತಿ ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು, ನಾವು ಪ್ರಿಲಿಮಿನರಿ ಸಬ್‌ಮಿಷನ್ ಮಾಡಲು ತಾವು ಅವಕಾಶ ಮಾಡಿಕೊಟ್ಟು, ನಾವು ತಮಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದಮೇಲೆ, ತಾವು ಇದನ್ನು ತೆಗೆದುಕೊಳ್ಳಬೇಕೋ, ಬಿಡಬೇಕೋ ಎಂಬುದನ್ನು ಹೇಳುವುದು ನಡೆದುಕೊಂಡು ಬಂದಿರುರ ಪದ್ಧತಿ. ಅಧ್ಯಕ್ಷರಾಗಿ ತಾವು ಅಲ್ಲಿ ಕುಳಿತು, ಇಂತಹ ಪ್ರಮುಖವಾದ ವಿಷಯಗಳು ಬಂದಾಗ ರೂಲ್ 68ನಲ್ಲಿ ಯಾರು ಏನು ಕಳುಹಿಸಿಕೊಟ್ಟರೂ ಸಹ, ಯಾರು ನಿಲುವಳಿ ಸೂಚನೆ ಕೊಟ್ಟಿದ್ದಾರೆ ಅದಕ್ಕೆ ಮೊದಲು ಆದ್ಯತೆ ಕೊಡುವ ಪದ್ಧತಿ ಇದೆ. ಅದು ಆದಮೇಲೆ ಬೇರೆ ವಿಷಯಗಳನ್ನು ತೆಗೆದುಕೊಳ್ಳಬಹುದು. ಇಲ್ಲದಿದ್ದರೆ ಇದರ ಇಂಪಾರ್ಟೆನ್ಸ್ ಹೊರಟು ಹೋಗುತ್ತದೆ. ಅದಕ್ಕೋಸ್ಕರವಾಗಿ ನಾನು ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುವುದು, ಈ ಸದನದಲ್ಲಿರುವಂತಹ ಆ ಕಡೆ ಇರುವಂತಹವರು, ಈ ಕಡೆ ಇರುವಂತಹವರು

ಎಲ್ಲರಿಗೂ ಸಹ ಕಳೆದ ಎರಡು ವಿಷಯಗಲ್ಲಿ ಆಗಿರುವಂತಹ ಹಗರಣಗಳ ಬಗ್ಗೆ ಕಳಕಳಿ ಇದೆ. ಯಾರನ್ನೂ ಆರೋಪಿ ಸ್ಥಾನದಲ್ಲಿ ಕೂರಿಸುವುದಕ್ಕೆ ಆಗುವುದಿಲ್ಲ, ಈ ಬಗ್ಗೆ ಚರ್ಚೆ ಪ್ರಾರಂಭ ಆದಾಗ ಅರ್ಥ ಕೇವಲ ಆಡಳಿತ ಪಕ್ಷದಲ್ಲಿರುವವರು. ಆ ಕಡೆಯವರು ಮಾತ್ರ ಇದಕ್ಕೆ ಜವಾಬ್ದಾರರು ಎಂದು ಹೇಳುವುದಕ್ಕೆ ನಾನು ಇಚ್ಛೆಪಡುವುದಿಲ್ಲ. ಎರಡು ವರ್ಷಗಳಲ್ಲಿ ಅನೇಕ ಅವ್ಯವಹಾರಕ್ಕೆ ರಾಜಕೀಯ ಅಸ್ಥಿರತೆಗೆ, ವ್ಯಾಪಕ ಭ್ರಷ್ಟಾಚಾರಕ್ಕೆ ಗೊತ್ತಿದ್ದೋ, ಗೊತ್ತಿಲ್ಲದೆಯೋ ಈ ಕಡೆ ಇರುವವರೂ ಸಹಕಾರ ಕೊಟ್ಟಿರಬಹುದು, ಒಂದು ಸಾರಿ ರಾಜಕೀಯ ಅಪರಾಧಗಳಿಗೆ ಶಿಕ್ಷೆ ಆಗದೇ ಇದ್ದರೆ ಇದರ ಬಗ್ಗೆ ಸರಿಯಾದ ತನಿಖೆ ಆಗದೇ ಇದ್ದರೆ, ಬಹುಶಃ ಪ್ರಜಾತಂತ್ರ ವ್ಯವಸ್ಥೆ ಉಳಿಯುವುದಿಲ್ಲ. ಅದಕ್ಕಾಗಿ ಇದು ಅತ್ಯಂತ ಪ್ರಮುಖವಾದ ವಿಷಯ ಎಂದು ನಾನು ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಅವರು ಯಾರೇ ಇರಬಹುದು, ಎಷ್ಟೇ ದೊಡ್ಡವರು ಇರಬಹುದು, ಮಂತ್ರಿ ಇರಬಹುದು, ಶಾಸಕರು ಇರಬಹುದು, ಮುಖ್ಯಮಂತ್ರಿಗಳು ಇರಬಹುದು, ಇವತ್ತು ಇಂತಹ ಒಂದು ದೊಡ್ಡ ಅಪರಾಧಗಳಿಗೆ ಸಿಬಿಐ ತನಿಖೆಯಾಗಿ ರಾಜಕೀಯ ಪಕ್ಷಕ್ಕೆ ಶಿಕ್ಷೆ ಆಗದೇ ಇದ್ದರೆ

(ಗೊಂದಲ)

ಉಪಾಧ್ಯಕ್ಷಿಣಿಯವರು : ನೀವು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳಿದಿರಿ ಏನು ನಿಮ್ಮ ಪಾಯಿಂಟ್ ಆಫ್ ಆರ್ಡರ್.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಸಬ್‌ಜೆಕ್ಟ್‌ಗೆ ಹೋಗಿಯೇ ಇಲ್ಲ. ತಮ್ಮನ್ನು ಇದರ ಬಗ್ಗೆ ಕನ್‌ವಿನ್ಸ್ ಮಾಡಬೇಕಾದರೆ ನನ್ನ ಹತ್ತಿರ ದಾಖಲೆಗಳು ಇದೆ, ಕೊಡುತ್ತೇನೆ.

ಉಪಾಧ್ಯಕ್ಷರು : ಅವರು ಮಾತನಾಡಬೇಕಾದರೆ ತಾವು ಒಂದು ಪಾಯಿಂಟ್ ಆಫ್ ಆರ್ಡರ್ ಎತ್ತಿದಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲರಿಗೂ ಅವಕಾಶ ಮಾಡಿಕೊಟ್ಟು ಚರ್ಚೆಗೆ ಎತ್ತಿಕೊಂಡರೆ ಒಳ್ಳೆಯದು, ನನ್ನದು ಏನು ಎಂದರೆ, ಯಡಿಯೂರಪ್ಪ ಇದ್ದಾನೆ ನಾವು ನಾಲ್ಕು ಜನ ಇದ್ದೇವೆ ಎಂದು.....

ಶ್ರೀ ಬಿ.ಹೆಚ್. ಬನ್ನಿಕೋಡ್ : ಪಾಯಿಂಟ್ ಆಫ್ ಆರ್ಡರ್, ಅವರು ಬೇರೆ ವಿಷಯಕ್ಕೆ ಹೋಗುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬೇರೆ ವಿಷಯಕ್ಕೆ ಹೋಗುತ್ತಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಪಾಯಿಂಟ್ ಆಫ್ ಆರ್ಡರ್ ಇಷ್ಟೇ, ನಿಲುವಳಿ ಸೂಚನೆಗೆ ಆದ್ಯತೆ ಕೊಡಬೇಕಾಗುತ್ತದೆ. ರೈತರದ್ದೂ ಅಷ್ಟೇ ಪ್ರಾಮುಖ್ಯವಾದ ವಿಷಯ. 68ರ ಪ್ರಕಾರ ಆಗಬೇಕೆಂದು ಹೇಳಿದ್ದಾರೆ. ಮೊದಲನೆಯ ದಿವಸವೇ ಇದು ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಆಗಬೇಕೆಂದು ಹೇಳಿದವನು ನಾನು.

ಅಂತಾದ್ದಕ್ಕೆ ಯಡಿಯೂರಪ್ಪ ಅಡ್ಡಿ ಮಾಡುವುದಿಲ್ಲ. ಅದಕ್ಕೆ ಬದ್ಲಾಗಿ ರೈತರ ಬಗ್ಗೆ ಈ ಸದನದಲ್ಲಿ ಚರ್ಚೆ ಆಗಬೇಕು ಅನೇಕ ಸಲ ರೈತರ ಬಗ್ಗೆ ಹೋರಾಟ ಮಾಡಿದವನು ನಾನು ನನಗೆ ರೈತರ ಬಗ್ಗೆ ಕಳಕಳಿ ಇದೆ.

(ಗೊಂದಲ)

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ನಿಲುವಳಿ ಸೂಚನೆ ಎಂದು ಏನು ಕೊಟ್ಟಿದ್ದಾರೆ ಅವರನ್ನು ಕೇಳಿದ ನಂತರ ತಮ್ಮ ತೀರ್ಮಾನ ಕೊಡಬೇಕೆಂದು ಎಂದು ಏನೂ ಇಲ್ಲ. ತಾವು ನಿಲುವಳಿ ಸೂಚನೆಯನ್ನು ನೋಡಿ ಅದು ನಿಯಮದ ಪ್ರಕಾರ ಇಲ್ಲದಿದ್ದರೆ You can dismiss it inlimini. ಪ್ರಾರಂಭದಲ್ಲೇ ಅದನ್ನು ವಜಾ ಮಾಡಬಹುದು. ಅದರಲ್ಲಿ ಸ್ಪೆಸಿಫಿಕ್ ರೀಜನ್ ಇರಬೇಕು. It should be on an urgent matter of public importance of definite nature. ಅಲ್ಲ ಅದು definite nature ಆಗಿಲ್ಲ ಮತ್ತು ಅರ್ಜೆಂಟ್ ಸಹ ಇಲ್ಲ. 4 ತಿಂಗಳ ಹಿಂದೆ 2 ವರ್ಷಗಳ ಹಿಂದೆ ನಡೆದಿರತಕ್ಕಂಥಾದ್ದು ಎಂದು ಹೇಳಿದ್ದಾರೆ. ಆದ್ದರಿಂದ ಇದು ಚರ್ಚೆಯ ವಿಷಯ ಅಲ್ಲ. Even for submission you can say that it is not admissible.

ಮೇಲ್ನೋಟಕ್ಕೆ ಇದು ತಮಗೆ ಸಾಬೀತಾಗಬೇಕಾಗಿದೆ. ಇದು ಚರ್ಚೆಗೆ ಲಾಯಕ್ಕಾದ ವಿಷಯ ಅಲ್ಲ. 68ರ ನಿಯಮದ ಪ್ರಕಾರ ಒಂದು ನಿಲುವಳಿ ಸೂಚನೆ ಕೊಟ್ಟಿದ್ದಾರೆ ಅದರ ಕೆಳಗೆ ಶ್ರೀಮಾನ್ ಬಿ ಎಸ್. ಯಡಿಯೂರಪ್ಪನವರು ಮತ್ತು ಅವರ ಮಿತ್ರರು ಮಾತನಾಡಬಹುದು. ಎಷ್ಟು ಹೊತ್ತು ಚರ್ಚೆ ಮಾಡಿದರೂ ಕೊನೆಗೆ ಬರತಕ್ಕಂಥಾದ್ದು ವಜಾ ಆಗುತ್ತದೆ. ವಿಷಯದ ಚರ್ಚೆಗೆ ಯಾರೂ ವಿರೋಧ ಮಾಡುತ್ತಿಲ್ಲ. ನಾವು ಇಲ್ಲಿ ಹೇಳಿದುದ್ದು ಬಿಎಸಿ ಯಲ್ಲಿ ಹೇಳಿದುದ್ದು ಎಲ್ಲರೂ ಹೇಳತಕ್ಕಂಥಾದ್ದು ಏನೆಂದರೆ ಪ್ರತ್ಯೇಕವಾಗಿ ಯಾವುದಾದರೊಂದು ವಿಷಯ ಇದ್ದರೆ ಅದನ್ನು ಸ್ಪಷ್ಟವಾಗಿ ಇರತಕ್ಕಂಥ ವಿಚಾರವನ್ನು ಹೇಳಬೇಕು. ಇಲ್ಲಿ ಎರಡು ವರ್ಷಗಳಿಂದ ನಡೆದಿರತಕ್ಕಂಥದ್ದು ಎಂದು ಹೇಳಿದ್ದಾರೆ. ಆದ್ದರಿಂದ ಇದು ಚರ್ಚೆಗೆ ಬೇಕಾದ ವಿಷಯ ಆಗುವುದಿಲ್ಲವೆಂದು ನಾನು ಹೇಳುತ್ತೇನೆ. ತಾವು ಇದರ ಬಗ್ಗೆ ತೀರ್ಮಾನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ ಈಗ ಎರಡು ಸೂಚನೆಗಳು ತಮ್ಮ ಮುಂದೆ ಇವೆ. ಒಂದು ನಿಯಮ 68, ಮತ್ತು ನಿಲುವಳಿ ಸೂಚನೆ ಎಂದು ಇವೆ. ಈ ಎರಡೂ ಒಟ್ಟಾರೆ ಒಂದೇ ಅಭಿಪ್ರಾಯ. ಈಗ ಎರಡೂ ಸೂಚನೆಗಳು ತಮ್ಮಲ್ಲಿ ಇವೆ. ಇದರಲ್ಲಿ ನಿಲುವಳಿ ಸೂಚನೆ ಎನ್ನತಕ್ಕಂಥಾದ್ದು ಎಲ್ಲಾ ಕಾರ್ಯಕ್ರಮಗಳನ್ನು ಬದಿಗೊತ್ತಿ ಅದನ್ನು ತಕ್ಷಣ ತೆಗೆದುಕೊಳ್ಳಬೇಕೆನ್ನುವುದು ನಿಲುವಳಿ ಸೂಚನೆಯಲ್ಲಿರತಕ್ಕಂಥಾದ್ದು. ನಮ್ಮ ಸಂಸದೀಯ ವ್ಯವಹಾರಗಳ ಸಚಿವರು ಹೇಳಿದರು ಈಗ ಏನು ನಡೆದಿದೆ ಅದು 4 ತಿಂಗಳ ಹಿಂದೆ ನಡೆದಿರತಕ್ಕಂಥಾದ್ದು ಅದನ್ನು ಈಗ ಚರ್ಚೆ ಮಾಡತಕ್ಕಂಥಾದ್ದು ಅಲ್ಲ ಎಂದು ಅದನ್ನು ಇನ್ನು 6 ತಿಂಗಳು ಆದ ಮೇಲೂ ಚರ್ಚೆ ಮಾಡಬಹುದು. ಆ ಎರಡು ವರ್ಷಗಳಲ್ಲಿ ನಡೆದಿರತಕ್ಕಂಥ ಹಗರಣವನ್ನು ಇನ್ನು 6 ತಿಂಗಳ ಮೇಲೆ ಚರ್ಚೆ ಮಾಡಿದರೂ ಅದು ತಕ್ಷಣ ಬಂದಂತಹ ಸುದ್ದಿ ಆಗುತ್ತದೆ. ಹಳೆಯ ಪ್ರಶ್ನೆ ಇಲ್ಲ, ಆದ್ದರಿಂದ ತಾವು ದಯವಿಟ್ಟು ನಿಲುವಳಿ ಸೂಚನೆ ತೆಗೆದುಕೊಳ್ಳಬೇಕೋ ಅಥವಾ ಯಾವುದನ್ನು

ತೆಗೆದುಕೊಳ್ಳಬೇಕೆನ್ನುವ ತೀರ್ಮಾನ ತಾವು ಮಾಡತಕ್ಕಂಥಾದ್ದು ಈ ಸದನದಲ್ಲಿ ನಿಲುವಳಿ ಸೂಚನೆ ಎಂದರೆ ಬಹಳ ಪ್ರಾಮುಖ್ಯವಾದುದು ಎಲ್ಲಾ ಕಾರ್ಯಕಲಾಪಗಳನ್ನು ರದ್ದು ಮಾಡಿ ತೆಗೆದುಕೊಳ್ಳಬೇಕು. ಆದರಲ್ಲಿ ಮೊದಲು ತಾವು ಯಾವುದನ್ನು ತೆಗೆದುಕೊಳ್ಳುತ್ತೀರೋ ತೀರ್ಮಾನ ಮಾಡಬೇಕು. ತೀರ್ಮಾನ ಕೊಟ್ಟ ನಂತರ ಯಾವುದೇ ಸೂಚನೆ ಬಂದರೂ ಎಲ್ಲರಿಗೂ ಭಾಗವಹಿಸತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಿಕೊಡಬೇಕೆಂದು ನಾನು ಕಳಕಳಿಯಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಉಪಾಧ್ಯಕ್ಷರೇ, ಹಿಂದಿನ ಸರ್ಕಾರದಲ್ಲಿ ನಡೆದಿರತಕ್ಕಂಥ ಅವ್ಯವಹಾರ ಭ್ರಷ್ಟಚಾರ ಇದರ ಬಗ್ಗೆ ಚರ್ಚೆ ಆಗಬೇಕು ಎಂದು ಮಾನ್ಯ ಯಡಿಯೂರಪ್ಪನವರಿಗೆ ಎಷ್ಟು ಕಾತುರ ಇದೆ ಅಷ್ಟೇ ಕಾತುರ ನಮಗೂ ಇದೆ. ಅದು ನಮ್ಮ ವೈಯುಕ್ತಿಕವಾದ ಕಾರಣದಿಂದ ಅಲ್ಲ. ಇದರಲ್ಲಿ ಮಾನ್ಯ ಯಡಿಯೂರಪ್ಪನವರ ವೈಯಕ್ತಿಕ ಆಗಲಿ ನನ್ನ ವೈಯುಕ್ತಿಕ ಕಾರಣ ಆಗಲಿ ಆ ಕಡೆಯ ಈ ಕಡೆಯ ಮಾನ್ಯ ಸದಸ್ಯರ ವೈಯುಕ್ತಿಕ ಕಾರಣದಿಂದ ಅಲ್ಲ, ಇದು ಇಡೀ ರಾಜ್ಯದ ಹಿತದೃಷ್ಟಿಯಿಂದ ತಂದಿರತಕ್ಕಂಥ ವಿಚಾರ. ಈ ರಾಜ್ಯದಲ್ಲಿ ಆಡಳಿತ ಯಾವ ರೀತಿ ನಡೆದಿದೆ ಏನಾಗಿದೆ ಸರ್ಕಾರದ ಬೊಕ್ಕಸಕ್ಕೆ ಬರತಕ್ಕಂಥ ಹಣ ಯಾವ ರೀತಿಯಲ್ಲಿ ಎಲ್ಲೆಲ್ಲಿ ಹೋಗಿದೆ ಮತ್ತು ಅವ್ಯವಹಾರ ನಡೆದಿರತಕ್ಕದ್ದಕ್ಕೆ ಕಾರಣರ್ಯಾರು? ಯಾರ ಕರ್ತವ್ಯ ಲೋಪದಿಂದ? ರಾಜ್ಯದ ಹಿತದೃಷ್ಟಿಯಿಂದ ಇದನ್ನು ಚರ್ಚೆ ಮಾಡಬೇಕಾಗಿರತಕ್ಕಂಥಾದ್ದು ಇದೆ. ಅದ್ದರಿಂದ ಇದರ ಅವಶ್ಯಕತೆ ಜರೂರಾಗಿ ಇದೆ. ಇದರ ಬಗ್ಗೆ ನಿರ್ಣೀವಾದ, ಎಲ್ಲಗೂ ಒಪ್ಪಿದ್ದಾರೆ. ಈಗ ಇರತಕ್ಕಂಥ ಪ್ರಶ್ನೆ ಏನೆಂದರೆ ಮಾನ್ಯ ಮಂತ್ರಿಗಳು ಹೇಳುವ ರೀತಿಯಲ್ಲಿ ಇದನ್ನು ಟೆಕ್ನಿಕಾಲಿಟಿಸ್ ಮೇಲೆ ಡಿಫೆಂಡ್ ಮಾಡುವುದಿಲ್ಲ. ಇದನ್ನು ನಿಲುವಳಿ ಸೂಚನೆ ಮೂಲಕ ಚರ್ಚೆ ಮಾಡಬೇಕೆಂದರೆ ನೀವು ಟೆಕ್ನಿಕ್ಯಾಲಿಟಿಸ್ ಮೇಲೆ ಢಿಫೆಂಡ್ ಆಗುವ ಅವಶ್ಯಕಚೆ ಇಲ್ಲ, ಒಟ್ಟಿನಲ್ಲಿ ಚರ್ಚೆ ಆಗಬೇಕು. ನಾವೆಲ್ಲಾ ಈ ಸದನದಲ್ಲಿ ಪ್ರಸ್ತಾಪ ಮಾಡಬೇಕೆಂದು ಮೊದಲೇ ಸೂಚನೆ ಕೊಟ್ಟಿದ್ದೇವೆ. ಮತ್ತೆ ಬಿಎಸಿನಲ್ಲೂ ಇದರ ಬಗ್ಗೆ ಚರ್ಚೆ ಆಗಿದೆ ಚರ್ಚೆ ಆಗಬೇಕೆಂದು ಕಾಲ ನಿಗಧಿ ಪಡಿಸಿಕೊಳ್ಳಬೇಕು ಎನ್ನತಕ್ಕಂಥಾದ್ದು ಅಭಿಪ್ರಾಯದಲ್ಲಿದೆ. ನಾವು ಕೊಟ್ಟಿರತಕ್ಕಂಥ ಸೂಚನೆಯನ್ನು ಯಾರೂ ಕೂಡ ತಳ್ಳಿ ಹಾಕಿಲ್ಲ. ಆ ಕಾರಣ ನಾವು ಇದನ್ನು ನಿಯಮದ ಪ್ರಕಾರ ಅವಕಾಶ ಕೊಡಬೇಕು ಎಂದು. ನಾನು ಒತ್ತಾಯ ಮಾಡುತ್ತೇನೆ.

ಮಾನ್ಯ ಮಂತ್ರಿಗಳು ಹೇಳುವುದನ್ನು ನೋಡಿ ನನಗೆ ಆಶ್ಚರ್ಯವಾಗಿದೆ. ಇದು ಯಾವಾಗಲೋ ನಡೆದಿದೆ, 6 ತಿಂಗಳ ಹಿಂದೆ ನಡೆದಿದೆ, 2 ತಿಂಗಳ ಹಿಂದೆ ನಡೆದಿದೆ ಎನ್ನತಕ್ಕಂಥಾದ್ದನ್ನು ಮಾನ್ಯ ರಾಮಸ್ವಾಮಿಯವರು ಅದನ್ನು ಈಗ ಚರ್ಚೆ ಮಾಡತಕ್ಕಂಥಾದ್ದು ಪ್ರಕೃತವಾಗುವುದಿಲ್ಲ ಅನ್ನತಕ್ಕಂಥದು ಮತ್ತೊಂದು ಇದು ಅಡ್ಜರ್ನ್‌ಮೆಂಟ್ ಮೋಷನ್ ಮೂಲಕ ಹೀಗೆ ಚರ್ಚೆ ಮಾಡುವುದಕ್ಕಾಗುತ್ತದೆ. ಎನ್ನುವ ಮಾತನ್ನು ಹೇಳಿದ್ದಾರೆ. ಸ್ವಾಮಿ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ನೀವು ಕೊಟ್ಟ ಆ ಮೆಮೊರಾಂಡಂ ನನ್ನ ಹತ್ತಿರ ಇದೆ. ಇವತ್ತು ಈ ವಿಚಾರ ಪ್ರಸ್ತಾಪವಾಗುತ್ತದೆಂದು ನನಗೆ ಮೊದಲೇ ಗೊತ್ತಿದ್ದರೆ ಖಂಡಿತವಾಗಲೂ ನಾನು ಅದನ್ನು ತಂದು ನಿಮಗೆ ಹೇಳುತ್ತಿದ್ದೆ. ಸ್ವಾಮಿ, ಇದೆಲ್ಲಾ ನೀವು ಹೇಳಿದ್ದೀರಾ?

ಎಂದು ಕೇಳುತ್ತಿದ್ದೆ. ನಿಮ್ಮ ಮುಖಕ್ಕೆ ಕನ್ನಡಿ ಹಿಡಿಯುತ್ತಿದ್ದೆ. ಆಗ ನೀವು ಏನು ಉತ್ತರ ಕೊಡುತ್ತೀರೋ ನೋಡೋಣ. ಅಲ್ಲಿಯವರಿಗೂ ಸ್ವಲ್ಪ ಕಾಯಿರಿ.

ಶ್ರೀ ವಾಟಾಳ್ ನಾಗರಾಜ್ : ಏನಿಲ್ಲ, ನೀವು ಹೇಳಿರುವುದನ್ನು ಒಂದು ಓದಿದರೆ ಸಾಕು. ಬರೀ ಓದುವುದು ಅಷ್ಟೇ.

ಶ್ರೀ ಬೈರೇಗೌಡ : ನಿಮ್ಮ ಅಮೃತ ವಾಕ್ಯ, ಅಮೃತ ವಾಣಿ,

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಸ್ಪೆಸಿಫಿಕ್ ಇಶ್ಯೂ ರೈಸ್ ಮಾಡಿ. ಎರಡು ವರ್ಷಗಳಿಂದ ಏನೇನಾಯಿತು ಅಂದುಬಿಟ್ಟರೆ ಅರ್ಥವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಸುಮಾರಾಗಿ ಒಂದು ಮಹಾಭಾರತವನ್ನೇ ಕೊಟ್ಟಿದ್ದೀರಿ.

ಶ್ರೀ ಸಿ. ಬೈರೇಗೌಡ : ನಾವು ಸಾಕಷ್ಟು ಹೇಳಿದ್ದೇವೆ. ನಾವು ಏನಾದರೂ ಹೇಳಿದರೆ ಇವರು ರಾಜಕೀಯಕ್ಕೋಸ್ಕರ ಹೇಳುತ್ತಾರೆ ಎಂದು ನೀವು ಹೇಳಬಹುದು. ನೀವು ಏನು ಹೇಳಿದ್ದೀರಿ. ಅಷ್ಟು ಹೇಳಿದರೆ ಸಾಕು. ಅದಕ್ಕಿಂಥ ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮಲ್ಲಿ ಹೇಳಬೇಕಾದುದು ಸಾಕಷ್ಟು ಇದೆ. ಹಿಮಾಲಯ ಪರ್ವತದಷ್ಟಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದರ ಲಾಭ ಪಡೆದು ಮಂತ್ರಿಗಳಾಗಿ ಇಲ್ಲಿ ಕುಳಿತಿದ್ದೇವೆ. ಇದೆಲ್ಲಾ ಮುಗಿದ ಕಥೆಯೆಂದು ಅವರು ಹೇಳುತ್ತಾರೆ.

ಶ್ರೀ ಸಿ. ಬೈರೇಗೌಡ :—ಆದ್ದರಿಂದ, ಆ ಹಿಮಾಲಯ ಪರ್ವತದಲ್ಲಿ ಎಷ್ಟಿದೆಯೋ? ಅಷ್ಟನ್ನೂ ನಾವು ಹೇಳುವುದಕ್ಕೋಗುವುದಿಲ್ಲ. ನೀವು ನಿಮ್ಮ ಮೆಮೊರಾಂಡಮ್‌ನಲ್ಲಿ ಏನು ಹೇಳಿದ್ದೀರಿ. ಅಷ್ಟು ಮಾತ್ರ ಹೇಳುವವರಿದ್ದೇವೆ. ಅದರಿಂದ ನಮಗೆ, ಈ ಟೆಕ್ನಿಕಾಲಿಟಿ ಮೇಲೆ ಅದು ಸರಿಯಲ್ಲ, ಇದು ಸರಿಯಿಲ್ಲ ಎನ್ನತಕ್ಕಂಥದ್ದನ್ನು ನೀವು ದಯವಿಟ್ಟು ಹೇಳುವುದಕ್ಕೆ ಹೋಗಬೇಡಿ. ಇದಕ್ಕೆ ಚರ್ಚೆ ಮಾಡುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕು. ಮತ್ತೆ ಮಾನ್ಯ ಯಡಿಯೂರಪ್ಪನವರು ಎಲ್ಲರಿಗೂ ಅವಕಾಶ ಇರಬೇಕೆಂದು ಹೇಳಿದರು. ಹೌದು. ಎಲ್ಲರಿಗೂ ಅವಕಾಶ ಖಂಡಿತಾ ಕೂಡ ಇರಬೇಕು. ಇದು ಮುಕ್ತ ಚರ್ಚೆಯಾಗಬೇಕು. ಅಲ್ಲದೆ ಮಾನ್ಯ ಯಡಿಯೂರಪ್ಪನವರು ಮೊದಲನೆಯ ದಿವಸವೇ ಅಲ್ಲಿ ನೆರೆ ಹಾವಳಿಯಿಂದ ಆಗಿರತಕ್ಕಂಥ ಅನಾಹುತ ಏನಿದೆ ಅದನ್ನು ಚರ್ಚೆ ಮಾಡಬೇಕೆಂದು ಏನು ಹೇಳುವುದಕ್ಕೆ ಹೊರಟಿದ್ದರೋ ಅದೇ ಕೆಲಸವನ್ನು ಮಾಡುವುದಕ್ಕೆ ನಾವೂ ಹೊರಟ್ಟಿದ್ದೇವೆ. ಅವರು ಹೇಳಿದಾಗ ಅದು ಪವಿತ್ರವಾಗುತ್ತವೆ. ಅವರು ಹೇಳಿದ್ದನ್ನೇ ನಾವು ಮಾಡೋಣವೆಂದಾಗ ಅದು ಪವಿತ್ರತೆ ಕಳೆದುಕೊಳ್ಳುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ನಿಮಿಷ ಯೀಲ್ಡ್ ಆದರೆ, ಸುಮಾರು 1 ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಭ್ರಷ್ಟಾಚಾರದ ಹಗರಣದಿಂದ ಸರ್ಕಾರದ ಖಜಾನೆ ಲೂಟಿಯಾಗಿದೆಯೋ ಅದಕ್ಕೆ ಸಿಬಿಐ ತನಿಖೆ ಮಾಡಿ ಆ ಹಣ ವಾಪಸ್ ಬಂದರೆ ರೈತನ ಸಾಲ ಮನ್ನಾ ಮಾಡಬಹುದು. ಪರಿಹಾರ ಒದಗಿಸಿಕೊಡಬಹುದು. ಕೆರೆ, ಕಟ್ಟೆ ಕಟ್ಟಬಹುದು. ಅದಕ್ಕೆ ಆದ್ಯತೆ ಕೊಟ್ಟು ಆ ದುಡ್ಡೆಲ್ಲಾ ವಾಪಸ್ ನಮ್ಮ ಖಜಾನೆಗೆ ತಂದರೆ ಅದರಿಂದ ಉಪಯೋಗವಾಗುತ್ತದೆಂದು ಅದರ ಬಗ್ಗೆ ನಾನು ಪ್ರಸ್ತಾಪ ಮಾಡಿದೆ.

ಶ್ರೀ ಸಿ. ಬೈರೇಗೌಡ : ಸರ್ಕಾರದ ಖಜಾನೆಗೆ ಸೇರಬೇಕಾಗಿರತಕ್ಕಂಥ ಹಣ ಏನಿದೆ? ಆ ಹಣ ವಾಪಸ್ ಪಡೆಯುವುದರಲ್ಲಿ ಯಡಿಯೂರಪ್ಪನವಾಗಲೀ, ಮಾನ್ಯ ಸಿಂಧ್ಯರವವಾಗಲಿ ವಾಟಾಳ್ ನಾಗರಾಜ್‌ರವಾಗಲೀ ಅಥವಾ ಮಾನ್ಯ ರಾಮಸ್ವಾಮಿಯವರಾ.

ಶ್ರೀ ವಾಟಾಳ್ ನಾಗರಾಜ್ : ನಾನು ಗಂಭೀರವಾಗಿ ಕುಳಿತಿದ್ದೇನೆ. ಬಿಜೆಪಿಯವರು ಮತ್ತು ಎಸ್‌ಜೆಪಿಯವರು ಮತ್ತು ಜನತಾದಳದವರದ್ದು ಯುದ್ಧ ನಡೆಯುತ್ತಿರುವುದು. ಇವರ ಯುದ್ಧ ನೋಡಿ ನನಗೆ ನಾಚಿಕೆಯಾಗಿ ಗಂಭೀರವಾಗಿ ಏನು ಹೇಗೆ ನಡೆಯುತ್ತಿದೆ? ಎಂದು ಸುಮ್ಮನೆ ಕುಳಿತಿದ್ದೇನೆ.

ಶ್ರೀ ಸಿ. ಬೈರೇಗೌಡ : ನನ್ನ ಅಭ್ಯಂತರವೇನೂ ಇಲ್ಲ. ತಾವು ಒಂದು ತೀರ್ಮಾನ ತೆಗೆದುಕೊಳ್ಳಿ. ಎರಡಲ್ಲಿ ಯಾವುವು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಚರ್ಚೆಗೆ ಅವಕಾಶ ಕೊಡಿ.

ಉಪಾಧ್ಯಕ್ಷಣಿಯವರು : ಏನು ಹೇಳುತ್ತಾರೆಯೋ ಅದನ್ನು ಹೇಳಲಿ ಬಿಟ್ಟುಬಿಡಿ.

ಶ್ರೀ ಸಿ. ಬೈರೇಗೌಡ : ಈ ಹಣ ವಾಪಸ್ ಪಡೆಯುವುದರಲ್ಲಿ ಬಹುಶಃ ನಮಗಿಂಥ ಮಾನ್ಯ ರಾಮಸ್ವಾಮಿಯವರು ವಿಚಾರ ಮಾಡಬೇಕು. ಅವರು ಆ ಕೆಲಸ ಮಾಡಿದರೆ ನಮ್ಮ ಬೆಂಬಲ ಅವರಿಗೆ ಇದೆ. ಅದೇ ರೀತಿ ಮಾನ್ಯ ಯಡಿಯೂರಪ್ಪನವರು ಮಾಡಿದರೂ ಅವರಿಗೂ ನಮ್ಮ ಬೆಂಬಲ ಉಂಟು. ಆದ್ದರಿಂದ ನಾವು ಇವತ್ತಿನ ದಿವಸ ಮಾನ್ಯ ಯಡಿಯೂರಪ್ಪನವರು ಈ ಸಭೆ ಪ್ರಾರಂಭ ಆದ ದಿವಸದಿಂದ ಏನೆಲ್ಲಾ ಮಾಡಬೇಕೆಂದು ಹೇಳಿದ್ದಾರೋ ಅದನ್ನು ಮಾಡಬೇಕು ಎನ್ನತಕ್ಕಂಥ ತೀರ್ಮಾನವಾಗಿದೆ. ಅದರ ಪ್ರಕಾರ ಇವತ್ತಿನ ದಿವಸ ಹೋಗೋಣ. ಚರ್ಚೆ ಆಗಲೇಬೇಕಾದ ಅವಶ್ಯಕತೆ ಇದೆ. ಭ್ರಷ್ಟಾಚಾರದ ಬಗ್ಗೆ ಕಾಲವನ್ನು ನಿಗದಿ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಪ್ರಭಾಕರ್ ಎಸ್. ರಾಣೆ : ಮಾನ್ಯ ಸದಸ್ಯರು ಚರ್ಚೆ ಮಾಡುತ್ತಿರುವುದನ್ನು ನೋಡಿದಾಗ ಒಂದು ಸಂತೋಷ ಉಂಟಾಗುತ್ತದೆ. ಕೊನೆಯ ಪಕ್ಷ ಕಳೆದ ಎರಡು ವರ್ಷಗಳಿಂದ ಗಾಢ ನಿದ್ದೆಯಲ್ಲಿ ಇದ್ದಂಥ ನೀವು ಇವತ್ತಾದರೂ ಎಚ್ಚರವಾಗಿದ್ದೀರಲ್ಲಾ.

ಶ್ರೀ ವಾಟಾಳ್ ನಾಗರಾಜ್ : ನಿಮಗೆ ಪದ್ಮಶ್ರೀ ಪದ್ಮಭೂಷಣ ಎರಡೂ ಪ್ರಶಸ್ತಿಗಳನ್ನು ಒಟ್ಟಿಗೇ ಕೊಡಿಸೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸಚಿವ ಸಂಪುಟದ ವಿಸ್ತರಣೆಯಾದ ಮೇಲೆ ನಿಮ್ಮ ಅಭಿಪ್ರಾಯವನ್ನು ನಾವು ಕಾಯುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ಸದನದಲ್ಲಿ ಇವೊತ್ತಿನ ದಿವಸ ಏನು ನಡೆಯುತ್ತಾ ಇದೆ, ಅದು ಅಯೋಧ್ಯೆಯ ವಿಷಯವಾಗಿರಬಹುದು, ರೈತರ ವಿಷಯವಾಗಿರ ಬಹುದು, ಭ್ರಷ್ಟಾಚಾರದ ವಿಷಯ ಇರಬಹುದು, ಯಾವುದೇ ವಿಷಯವನ್ನು ರಾಜ್ಯದ ಜನತೆಗೆ ಬಹಿರಂಗ ಪಡಿಸತಕ್ಕಂಥ ಮಹತ್ವದ ವಿಷಯಗಳು ಆಗಿವೆ. ಆದರೆ ಯಾವುದು ಮೊದಲು, ಯಾವುದು ನಂತರ ಎಂದು ನೋಡಬೇಕು. ಇಲ್ಲಿ ಎಲ್ಲವನ್ನೂ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ. ತಾವುಗಳು ಅವಕಾಶ ಕೊಟ್ಟ ಪ್ರಕಾರ ತಾವು ನಿರ್ಣಯವನ್ನು ತೆಗೆದುಕೊಳ್ಳುತ್ತೀರಿ. ಬಿಎಸಿಯಲ್ಲಿ ಈ

ಬಗ್ಗೆ ಚರ್ಚೆ ಮಾಡುವಾಗ ಹಿರಿಯ ನಾಯಕರು ಬಂದಿರುತ್ತಾರೆ. ಅಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡಾಗ ಇಲ್ಲಿ ಸದನದ ಅಮೂಲ್ಯವಾದಂಥ ಸಮಯವನ್ನು ಹಾಳುಮಾಡುವಂತಿಲ್ಲ. ರಾಜ್ಯದ ಜನತೆಯ ಹಣವನ್ನು ಈ ಕಾರ್ಯಕ್ಕಾಗಿ ವಿನಿಯೋಗ ಮಾಡುತ್ತಾ ಇದ್ದೇವೆ. ಪ್ರತಿಯೊಂದಕ್ಕೂ ಸಾರ್ವಜನಿಕರ ಹಣವು ವ್ಯಯವಾಗುತ್ತಾ ಇದೆ. ಯಾವ ವಿಷಯವನ್ನು ಮೊದಲು ತೆಗೆದುಕೊಳ್ಳಬೇಕು ಎಷ್ಟು ಸಮಯವನ್ನು ಅದಕ್ಕೆ ನಿಗದಿಪಡಿಸಬೇಕು ಎನ್ನುವ ಬಗ್ಗೆ ನಾವುಗಳು ಇಲ್ಲಿ ನಾನು ಮೇಲೋ ನೀನು ಮೇಲೋ ಎನ್ನುವ ಅವಶ್ಯಕತೆ ಇಲ್ಲ. ಬಿಎಸಿಯಲ್ಲಿ ಏನು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಅದರ ಪ್ರಕಾರ ನಡೆಯಲ್ಲಿ ಎಂಬ ಬಗ್ಗೆ ನನ್ನ ವಿಚಾರವನ್ನು ಹೇಳಿದ್ದೇನೆ. ಅದನ್ನು ಬಿಟ್ಟು ಭ್ರಷ್ಟಚಾರದ ಬಗ್ಗೆ ನನಗೆ ಹೆಚ್ಚು ಕಾಳಜಿ ಇದೆ, ಅಯೋಧ್ಯೆಯ ಬಗ್ಗೆ ನನಗೆ ಹೆಚ್ಚು ಕಾಳಜಿ ಇದೆ ಎಂದು ಮಾತನಾಡುತ್ತಾ ಹೋದರೆ ಅದೊಂದು ರೀತಿಯಲ್ಲಿ ಚುನಾವಣ ಪ್ರಚಾರದ ಭಾಷಣವಾದಂತಾಗುತ್ತದೆ. ಆದ್ದರಿಂದ ಈ ಘನ ಸಭೆ ಅದಕ್ಕೆ ವೇದಿಕೆ ಆಗಬಾರದು. ಈ ಸದನದಲ್ಲಿ ಸದನದ, ನಿಯಮಗಳ ಚೌಕಟ್ಟಿನ ಅಡಿಯಲ್ಲಿಯೇ ಚರ್ಚೆ ಆಗಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸದಸ್ಯರು ಹೇಳಿದ ಹಾಗೆ ನನಗೆ ಪೈಪೋಟಿಯಾಗಿ ಮಾನ್ಯ ದೇಶಪಾಂಡೆಯವರೇ ಈ ಚರ್ಚೆಯನ್ನು ಪ್ರಾರಂಭ ಮಾಡಲಿ. ಆ ಮೇಲೆ ನಾವು ಚರ್ಚೆಯಲ್ಲಿ ಭಾಗವಹಿಸುತ್ತೇವೆ. ಅದಕ್ಕೆ ನಮ್ಮ ಯಾವುದೇ ವಿರೋಧವಿಲ್ಲ. ಹಾಗೆಯೇ ಅವರನ್ನು ಕನ್ವಿನ್ಸ್ ಮಾಡುವ ಕೆಲಸವನ್ನು ಕೂಡ ದೇಶಪಾಂಡೆಯವರೇ ಮಾಡಲಿ. ಅನಂತರ ನಾವು ಅವಕಾಶವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ತಾವು ಈಗಾಗಲೇ ಚರ್ಚೆಗೆ ಅವಕಾಶ ಕೊಡುವುದಕ್ಕೆ ಒಪ್ಪಿಕೊಂಡಿರಿ ಅದಕ್ಕಾಗಿ ಯಾವ ರೀತಿಯಲ್ಲಿ ಚರ್ಚೆ ನಡೆಯಬೇಕೆಂಬುದನ್ನು ಮಾಡಬೇಕು. ರೈತರ ಬಗ್ಗೆ ಯಾರಿಗೆ ಹೆಚ್ಚು ಕಳಕಳಿ ಇದೆ, ಹಿಂದುಳಿದವರ ಬಗ್ಗೆ ಯಾರಿಗೆ ಹೆಚ್ಚು ಕಳಕಳಿ ಇದೆ ಎಂದು ಇಲ್ಲಿ ಹೇಳಿದರೆ ಆಗುವುದಿಲ್ಲ. ಮಾತಿನಲ್ಲಿ ಯಡಿಯೂರಪ್ಪನವರು ಮೋಡಿ ಹಾಕಿದರೆ ಅದನ್ನು ಯಾರು ಒಪ್ಪುತ್ತಾರೆ.

(ಗೊಂದಲ)

ಉಪಸಭಾಪತಿಗಳು : ಈಗ ಅವರೇನೋ ಪಾಯಿಂಟ್ ಆಫ್ ಆರ್ಡರ್, ಎತ್ತಿದ್ದಾರೆ ಕೇಳಿ.

ಶ್ರೀ ಎ.ಕೆ. ಅನಂತಕೃಷ್ಣ : ಉಪಾಧ್ಯಕ್ಷರೇ, ರೂಲ್ 68ರ ಪ್ರಕಾರ ತಮಗೆ ಪ್ರಾರಂಭದಲ್ಲಿ ಏನು ಸೂಚನೆ ಕೊಟ್ಟಿದ್ದಾರೆ ಅದನ್ನು ಗಮನಿಸಿದ್ದೀರಿ. ತದನಂತರ ನಿಲುವಳಿ ಸೂಚನೆ ವಿಷಯವಾಗಿ ತಾವು ಶ್ರೀ ಯಡಿಯೂರಪ್ಪನವರಿಗೆ ಅವರ ನಿಲುವೇನಿದೆ ಅದನ್ನು ಕನ್ವಿನ್ಸ್ ಮಾಡಿ ಎಂದು ಅವರಿಗೆ ಅವಕಾಶ ಕೊಟ್ಟಿರಿ. ಕನ್ವಿನ್ಸ್ ಮಾಡುವ ವಿಷಯ ಬಿಟ್ಟು ರೂಲ್ 68ರೊಳಗೆ ಮಿಕ್ಸ್‌ಅಪ್ ಮಾಡಿ ಅವರದೇ ಒಂದು ವ್ಯಾಖ್ಯಾನ ಯಾವ ಕಾರಣಕ್ಕಾಗಿ ನಿಲುವಳಿ ಸೂಚನೆ ಕೊಟ್ಟಿದ್ದಾರೋ ಅದನ್ನೇ ಪ್ರಸ್ತಾಪ ಮಾಡಲಿಕ್ಕೆ ಹೊರಟಿದ್ದಾರೆ. ಮೊದಲು ತಮ್ಮನ್ನು ಏನು ಕನ್ವಿನ್ಸ್ ಮಾಡಬೇಕಾಗಿತ್ತೋ ಅದನ್ನು ಅವರು ಮಾಡಿಲ್ಲ, ಮಾಡದೆ, ನಮ್ಮ ಮಂತ್ರಿಗಳಾದ ರಾಮಸ್ವಾಮಿಯವರು ಹೇಳಿದರು ಸ್ಪೆಸಿಫಿಕ್ ಚಾರ್ಜಸ್ ಇದ್ದು ರಿಸೆಂಟ್ ಅಕರೆನ್ಸ್ ಇದ್ದರೆ ಮಾತ್ರ ಅದಕ್ಕೆ ಅವಕಾಶ ಮಾಡುವುದಕ್ಕಾಗುತ್ತದೆ.

ಇಲ್ಲದಿದ್ದರೆ ಇಲ್ಲ ಎಂದು. ಮಾನ್ಯ ದೇಶಪಾಂಡೆಯವರ ಅಭಿಪ್ರಾಯವೂ ತಮ್ಮ ಮುಂದೆ ಮುಂದಿದೆ. ಶ್ರೀ ಯಡಿಯೂರಪ್ಪನವರೂ ಕೂಡ ತಮ್ಮ ನಿಲುವನ್ನು ಹೇಳಿದ್ದಾರೆ. ವಾಟಾಳ್ ನಾಗರಾಜ್‌ರವರು ಒಂದು ತೀರ್ಮಾನ ಕೊಡಿ ಎಂದು ಪದೇ ಪದೇ ಹೇಳುತ್ತಿದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ ಒಂದು ತೀರ್ಮಾನ ಕೊಡಿ. ಇಲ್ಲದಿದ್ದರೆ ಬರೀ ಚರ್ಚೆ ನಡೆಯುತ್ತಿರುತ್ತದೆ. ಇದರಿಂದಾಗಿ ನಾವು ಅಂತಿಮ ಘಟ್ಟ ಮುಟ್ಟಲು ಸಾಧ್ಯವಾಗುವುದಿಲ್ಲ.

ಉಪಾಧ್ಯಕ್ಷಿಣಿಯವರು : ಅವರೊಂದು ಅಬ್ಜೆಕ್ಷನ್ ರೈಸ್ ಮಾಡಿದ್ದಾರೆ ಅದರ ಬಗ್ಗೆ ನಾನು ಸ್ವಲ್ಪ ವಿವರಣೆ ಕೊಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳುವುದಿಷ್ಟೆ. ತಾವು ಅವಕಾಶ ಕೊಟ್ಟರೆ ನಾವು ಮುಂದೆ ಹೋಗುತ್ತೇವೆ ಇಲ್ಲದಿದ್ದರೆ ಹೋಗುವುದಿಲ್ಲ ಇಲ್ಲೇನಾಗಿದೆ ಈ ಕಡೆ ಕುಳಿತಿರುವ ಜನತಾದಳದವರ ಮನಸಿನಲ್ಲಿ ಏನಿದೆ ಗೊತ್ತೆ, ನಾನೀಗ ಗ್ರಾನೈಟ್ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಸಿಂಧ್ಯಾ ಅವರು ಸೇರಿ ಅವರ ಕಡೆಯ ಅನೇಕ ಜನ ಈ ಹಗರಣದಲ್ಲಿ ಸಿಕ್ಕೊಂಡು ನಾಳೆ ತನಿಖೆ ಆಗಿದೆ ನಮ್ಮ ಬಣ್ಣ ಬಯಲಾಗುತ್ತದೆಂಬ ಭಯ ಇದೆಯೇನೋ ಗೊತ್ತಿಲ್ಲ. It is too much.

ಶ್ರೀ ಬಿ.ಎಸ್. ಯಡಿಯೂರಪ್ಪ : ನೋ ನೋ, ನೀವ್ಯಾರು ತಡಿಯೋಕೆ, ಇದರರ್ಥವೇ ಈ ಭ್ರಷ್ಟಾಚಾರ ಹಗರಣದಲ್ಲಿ ನೀವೆಲ್ಲ ಪಾಲುದಾರರು ಎನ್ನೋದನ್ನು ಒಪ್ಪಿಕೊಂಡು ಹಾಗಾಗುತ್ತದೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ನೀವಿಬ್ಬರೂ ಹೀಗೆ ಮಾತನಾಡುತ್ತಾ ನಿಂತುಬಿಟ್ಟರೆ ನಾವು ಹೌಸ್ ನಡೆಸುವುದು ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರಿಗೆ ಅದನ್ನು ಹೇಳಿ, ತಾವು ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಮೇಲೆ ಇವರು ಮಾತಾಡುವುದಕ್ಕೆ ಬಿಡುವುದಿಲ್ಲ ಅಂದರೆ ಇವರು ಪೈಲ್ವಾನರೇನು? ವಿರೋದಪಕ್ಷದಲ್ಲಿರುವ ನಿಮಗೆ ಕರ್ತವ್ಯದ ಅರಿವಿಲ್ಲವೇನು?

ಶ್ರೀ ವಾಟಾಳ್ ನಾಗರಾಜ್ : ಯಾರಾದರೂ ಮಾತಾಡೊವುದಕ್ಕೆ ಎದ್ದಾಗ ಅವರಿಗೆ ಅವಕಾಶ ಕೊಡಬೇಕಾದ್ದು ನಿಮ್ಮ ಕರ್ತವ್ಯ ಮಾನ್ಯ ಬನ್ನಿಕೋಡ್ ಅವರು ಆ ರೀತಿ ಬಂದು ಒಬ್ಬರನ್ನು ತಡೆಹಿಡಿತ್ತೇವೆ. ಅಂದರೆ ಇದು ಗರಡಿ ಮನೆಯಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆ ಸಿಬಿಐ ತನಿಖೆಯಾದರೆ ನಮ್ಮ ಬಣ್ಣ ಬಯಲಾಗುತ್ತದೆ. ಎನ್ನುವ ಭಯ ಅವರಿಗೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ತಾವು ದಯವಿಟ್ಟು ಎಲ್ಲ ಕುಳಿತುಕೊಳ್ಳಿ. ಈಗ ಮಾನ್ಯ ಮಂತ್ರಿಗಳು ಅವರು ಎತ್ತಿರುವ ವಿಷಯ ಸ್ಪೆಸಿಫಿಕ್ಕಾಗಿ ಮತ್ತು ರ್ಜೆಲ್ಸಯಾಗಿರಬೇಕೆಂಬ ಎರಡು ಮಾತುಗಳನ್ನು ಎತ್ತಿದ್ದಾರೆ. ಅವರು ಹೇಳಿರೊವುದು

ಸರಿ ಅನಿಸಿದರೂ ಕೂಡ ಕೌಲ್ ಅಂಡ್ ಶಕ್ಧರ್ 461 ಅಲ್ಲಿ ಒಂದು ಪ್ಯಾರಗ್ರಾಫ್ ತಮ್ಮ ಮುಂದೆ ಇಡಲಿಕ್ಕೆ ಇಷ್ಟಪಡುತ್ತೇನೆ.

3.50 ಪಿ.ಎಂ

ಉಪಾಧ್ಯಕ್ಷರು : "Where however the speaker is satisfied that the Notice of an Adjournment Motion is prima facie in admissible, he refuses his consent without bringing the matter before the House".

That is what the Hon.Minister mentioned in his reply.

".... and the Member concerned is informed of the speaker's decision."

ಬೇಕಾದರೆ ಅವರು ನನಗೆ ಏನು ನೋಟೀಸನ್ನು ಕಳುಹಿಸಿದ್ದಾರೆ, ಇಲ್ಲಿ ನೀವು ಮಾತನಾಡುವುದಕ್ಕೂ ಸಹ ಅವಕಾಶವನ್ನು ಕೊಡದೆ ನಾನು ಬೇಕಾದರೆ ಅದನ್ನು ರಿಜೆಕ್ಟ್ ಮಾಡಬಹುದು. That is the Speaker's decision.

ಶ್ರೀ ಬಿ.ಎಸ್. ಯಡಿಯೂರಪ್ಪ : ಖಂಡಿತ

ಉಪಾಧ್ಯಕ್ಷರು : ಅದು ಸ್ಪೀಕರ್ ಡಿಸಿಷನ್‌ಗೆ ಬಿಟ್ಟಿರುವುದು. ಆದರೆ

"Where it is border line case or the Speaker is not in possession of the full facts to decide the admissibility of a Notice, he may mention in the House, the receipt of the Motion."

ಈಗ ಅದನ್ನು ನಾನು ಮಾಡಿದ್ದೇನೆ.

"....and after hearing a brief statement from the Member and for the Minister concerned where the matter sought to be raised is within the rules, give his decision on merit."

ಎಂದು ಹೇಳಿದ್ದಾರೆ. ಇದು ನನಗೆ ಬಿಟ್ಟಿರುವುದು. ತಾವು ಹೇಳಿರುವುದು ನಿಜ. ಆದರೆ ನನಗೆ ಏನು ಅನಿಸುತ್ತದೆ ಎಂದರೆ ತಾವು ನೋಟೀಸ್ ಕಳುಹಿಸಿರುವುದು ನನಗೆ ಸೇರಿದೆ. ಆ ವಿಷಯವನ್ನು ನಾನು ಈಗಾಗಲೇ ಹೇಳಿದ್ದೇನೆ ಸಭೆಯಲ್ಲಿ, ಈಗ ಅದರಲ್ಲಿ ಆ ಒಂದು ವಿಷಯವನ್ನು ತಮಗೆ ಅಂದರೆ ಕೆಲವರು ಇನ್ನು ಯಾರು ಮಾತನಾಡುವುದಕ್ಕೆ ಇಷ್ಟಪಡುತ್ತಾರೆ. ಅವರಿಗೆ ಒಂದು ಅವಕಾಶವನ್ನು ಕೊಟ್ಟು ಇದರ ಅಡ್ಮಿಸ್ಸಿಬಿಲಿಟಿ ಬಗ್ಗೆ ನಾನು ಅಮೇಲಿಂದ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ. This is my ruling. ಇಲ್ಲಿ ನಾನು ಅದಕ್ಕೇ ಎರಡು ಮೂರು ಸಲ ಹೇಳಿದ್ದೇನೆ. ಬ್ರೀಫ್ ಎನ್ನತಕ್ಕಂಥ ಪದವನ್ನು ಉಪಯೋಗಿಸಿದ್ದೇನೆ. You have to be very brief.

+ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಭಾಧ್ಯಕ್ಷಿಣಿಯವರೇ, ಇವತ್ತು ಯಾವ ನಿಲುವಳಿ ಸೂಚನೆಯನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ ಅದರ ವಿವರಕ್ಕೆ ಹೋಗುವುದಕ್ಕೆ ಮುಂಚೆ ಒಂದು ಮಾತನ್ನು ತಮ್ಮ ಮೂಲಕ ಎರಡೂ ಕಡೆ ಇರತಕ್ಕಂಥ ನಮ್ಮ ಸ್ನೇಹಿತರಿಗೆ ವಿನಂತಿ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ವೈಯಕ್ತಿಕವಾಗಿ ಯಾರ ಮೇಲೂ ನನಗೆ ದ್ವೇಷ ಇಲ್ಲ, ಜನತೆಯ ಪ್ರತಿನಿಧಿಗಳಾಗಿ ಜನತೆಗೆ ನ್ಯಾಯವನ್ನು ಒದಗಿಸಿಕೊಡುವ

ದೃಷ್ಟಿಯಿಂದ ನಾವು ಇಲ್ಲಿ ಬಂದಿದ್ದೇವೆ. ಅನೇಕ ಲೋಪದೋಷಗಳು, ಭ್ರಷ್ಟಾಚಾರದ ಹಗರಣಗಳು ಬಯಲಿಗೆ ಬರುತ್ತಿವೆ. ಜನ ಸಂಶಯದಿಂದ ನಮ್ಮನ್ನು ನೋಡುತ್ತಿದ್ದಾರೆ ಎಂದು ಅನಿಸಿದಾಗ ಆ ಸಂಶಯವನ್ನು ನಿವಾರಣೆ ಮಾಡಿಕೊಳ್ಳಬೇಕಾದಂಥದ್ದು ಆ ಕಡೆ, ಈ ಕಡೆ ಕುಳಿತಿರತಕ್ಕಂಥ ನಮ್ಮೆಲ್ಲರ ಕರ್ತವ್ಯ. ಬಹುಶಃ ಇದು ಇಡೀ ಜಗತ್ತಿಗೆ ಗೊತ್ತಿದೆ. ಯಾವ ಎರಡು ವರ್ಷದ ಭ್ರಷ್ಟಾಚಾರದ ಹಗರಣಗಳ ಹಿನ್ನೆಲೆಯಲ್ಲಿ ಸ್ವಜನಪಕ್ಷಪಾತದ ಹಿನ್ನೆಲೆಯಲ್ಲಿ ಇವತ್ತು ಮಾಜಿ ಮುಖ್ಯಮಂತ್ರಿಗಳು ಸನ್ಮಾನ್ಯ ಬಂಗಾರಪ್ಪನವರು ತಮ್ಮ ಅಧಿಕಾರವನ್ನು ಕಳೆದುಕೊಳ್ಳಬೇಕಾಗಿ ಬಂತೋ, ಅದು ಎಲ್ಲರಿಗೂ ಗೊತ್ತಿರುವಂಥ ಸಂಗತಿ. ಆ ಕಡೆ ಕುಳಿತಿರತಕ್ಕಂಥ ಹಾರ್ನಳ್ಳಿ ರಾಮಸ್ವಾಮಿ ಅವರೂ ಕೂಡ ಸೇರಿದಂತೆ ಅನೇಕ ಜನ ನಮ್ಮ ಕಾಂಗ್ರೆಸ್ ಪಕ್ಷದ ಶಾಸಕರು, ಪಕ್ಷದ ಅವರ ಅಧ್ಯಕ್ಷರಿಗೆ, ಈ ದೇಶದ ಪ್ರಧಾನಿಯವರಿಗೆ ಅನೇಕ ಭ್ರಷ್ಟಾಚಾರದ ಹಗರಣಗಳ ಆರೋಪದ ಪಟ್ಟಿಯನ್ನು ತಾವು ಕೊಟ್ಟಿರಿ. ನಾಯಕತ್ವ ಬದಲಾವಣೆಯಾಗಬೇಕು ಎನ್ನತಕ್ಕಂಥ ಒತ್ತಡ ತಂದಿರತಕ್ಕಂಥದ್ದು ನಮಗೂ ಗೊತ್ತಿರುವಂಥ ಸಂಗತಿ ಮತ್ತೆ ಇಡೀ ಜಗತ್ತಿಗೆ ಗೊತ್ತಿದೆ. ಅದೇ ಹಿನ್ನೆಲೆಯಲ್ಲಿ ಕೇಂದ್ರದ ವರಿಷ್ಠರು ಇಲ್ಲಿಗೆ ಬಂದು ಬಹಿರಂಗವಾಗಿ ಶಾಸಕರನ್ನು ಮಂತ್ರಿಗಳನ್ನು ಲೋಕಸಭಾ ಸದಸ್ಯರನ್ನು ಕರೆಯಿಸಿ ಹಿಂದಿನ ಸರ್ಕಾರ ಮಾಡಿದಂಥ ಭ್ರಷ್ಟಚಾರದ ಹಗರಣಗಳನ್ನು ವಿವರವಾಗಿ ತಮ್ಮಲ್ಲಿ ಕೇಳಿ ಅದರಿಂದ ಕನ್‌ವಿನ್ಸ್ ಆಗಿ ಪ್ರಧಾನಿಯವರಿಗೆ ರಿಪೋರ್ಟನ್ನು ಕೊಟ್ಟು ಅದರ ಆಧಾರದ ಮೇಲೆ ಸನ್ಮಾನ್ಯ ಬಂಗಾರಪ್ಪನವರು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡಬೇಕಾಗಿ ಬಂತು ಎನ್ನತಕ್ಕಂಥದ್ದು ಸಹಾ ಎಲ್ಲರಿಗೂ ಗೊತ್ತಿರುವಂಥ ಸಂಗತಿ. ನಾವೂ ಸಹ ಇವತ್ತು ಮಾತ್ರ ಆರೋಪ ಮಾಡುತ್ತಿಲ್ಲ. ನಿಜವಾಗಿಯೂ ಈ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ವಿರೋಧಪಕ್ಷದಲ್ಲಿ ಈ ಕಡೆ ಕುಳಿತಿರತಕ್ಕಂಥ ಸದಸ್ಯರು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡಿದ್ದರೆ ಆ ಸರ್ಕಾರ ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಒಂದು ಹೆಜ್ಜೆ ಆ ಕಡೆ ಈ ಕಡೆ ತಪ್ಪು ಇಡದಂತೆ ನೋಡಿಕೊಳ್ಳುವಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಿದ್ದರೆ ಇವತ್ತು ಹಿಂದಿನ ಮುಖ್ಯಮಂತ್ರಿಗಳು ಇಷ್ಟೊಂದು ಅವ್ಯವಹಾರಗಳನ್ನು, ಭ್ರಷ್ಟಾಚಾರಗಳನ್ನು ಮಾಡುವುದಕ್ಕೆ ಆಗುತ್ತಿರಲಿಲ್ಲ.

ಈ ಕಡೆ ಕುಳಿತಕ್ಕಂಥ ವಿರೋಧಪಕ್ಷವೆಂದು ಕರೆಯಿಸಿಕೊಳ್ಳುವಂತಹ ಮುಖಂಡರುಗಳು ಈ ಕರ್ತವ್ಯವನ್ನು ಮಾಡುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿ, ಈ ಸರ್ಕಾರವನ್ನು ಜಾಗೃತವಾಗಿ ಇರುವಂತಹ ಕೆಲಸವನ್ನು ಏನು ಮಾಡಬೇಕಾಗಿತ್ತು ಅದನ್ನು ಮಾಡದೇ ಇವತ್ತು ಈ ನಾಡಿನ ಜನ, ರೈತ, ಕೂಲಿ ಕಾರ್ಮಿಕ, ನಿರುದ್ಯೋಗಿ ಯುವಕರನ್ನು ಪರಿಗಣಿಸದೆ ಇದ್ದು ಎಲ್ಲಾ ಅಭಿವೃದ್ಧಿ ಕಾರ್ಯಗಳೂ ಸ್ಥಗಿತವಾಗಿವೆ. ಜನರ ಪಾಲಿಗೆ ಎರಡು ವರ್ಷಗಳಿಂದ ಸರ್ಕಾರ ಸತ್ತಿದೆ ಎನ್ನುವ ಒಂದು ರೀತಿಯ ಭಾವನೆ ಮೂಡಿ ಜನ ಭಿಕ್ಷೆ ಬೇಡುವಂತಹ ಸ್ಥಿತಿ ಬಂದಿದ್ದು ನಮಗೆಲ್ಲರಿಗೂ ಗೊತ್ತಿರುವಂತಹ ಸಂಗತಿ ಆಗಿದೆ.

ಶ್ರೀ ಎ.ಕೆ. ಅನಂತಕೃಷ್ಣ : ಮತ್ತೆ ನಾನು ಒಂದು ಪಾಯಿಂಟ್ ಆಫ್ ಆರ್ಡರ್ ಮೇಲೆ ನಿಂತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಒಂದು ಸಂಗತಿಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಚೆಪಡುತ್ತೇನೆ.

SRI A.K. ANANTHA KRISHNA : I rise to a point of order.

(ಗೊಂದಲ)

SRI A.K. ANANTHAKRISHNA : There is a limit for anything. You have been kind enough to consider the views of all the members raised on various points. You have given your decision, one on Rule 63 and as far as this Adjournment Motion is concerned, you have said that you have kept quiet for a decision later. With that, the hon.member Sri Yediyurappa must put an end for his further persistence on the subject that he has been raising. Instead he is again talking up on merits and continues to discuss and worst than anything, he is raising internal matterts of our party for which he has no right. He shall not discuss that matter. We did not enter into their portals when they were quarreling between themselves. We kept ourselves aloof. I appeal to you to see that they put an end to that kind of quarrel and let us also be participants in the debate on the issue that are there on the agenda. That is how we were interested. We never talked about their internal Party matter.

ಶ್ರೀ ಸಿ. ಬೈರೇಗೌಡ : ಅನಂತಕೃಷ್ಣ ಅವರಿಂದ ನಾವು ಏನೂ ಪಾಠವನ್ನು ಕಲಿಯಬೇಕಿಲ್ಲ. ಇಲ್ಲಿ ವಿರೋಧ ಪಕ್ಷದಲ್ಲಿ ಇದ್ದುಕೊಂಡ ನಾವು ನಮ್ಮ ಸ್ಥಾನದಲ್ಲಿ ಕುಳಿತುಕೊಂಡು ಯಾವ ರೀತಿ ಕೆಲಸ ಮಾಡಬೇಕೆಂಬ ಜ್ಞಾನ ನಮಗೆ ಇದೆ, ಅದರ ಅರಿವು ಕೂಡ ಇದೆ. ಮಾನ್ಯ ಅನಂತ ಕೃಷ್ಣ ಅವರಿಂದ ನಾವೇನೂ ಪಾಠ ಕಲಿಯಬೇಕಾಗಿಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ : ನಮಗೆ ಪಾಠ ಹೇಳಿಕೊಡುವುದಕ್ಕೆ ಇವರು ಯಾರು ?

ಉಪಾಧ್ಯಕ್ಷರು : ನೀವು ಯಾರು ಮಧ್ಯೆ ಮಧ್ಯ ಮಾತನಾಡಬೇಡಿ. ಅವರು ಹೇಳುತ್ತಾ ಇರುವುದು......

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾಜಿ ವಿರೋದ ಪಕ್ಷದ ಹಾಲಿ ಕಾಂಗ್ರೆಸ್‌ನ ಅನಂತಕೃಷ್ಣ ಅವರು ವಿರೋಧ ಪಕ್ಷದ ಬಗ್ಗೆ ಮಾತನಾಡುವುದು ಬೇಕಾಗಿಲ್ಲ.

ಶ್ರೀ ಎ.ಕೆ. ಅನಂತ ಕೃಷ್ಣ : ಕಾಂಡಕ್ಟ್ ಎಂದರೆ ಮಿಸ್ ಕಂಡಕ್ಟ್.....

ಉಪಾಧ್ಯಕ್ಷರು : ಪಾರ್ಟಿ ವಿಷಯದಲ್ಲಿ ನೀವು ರಿಸ್ಟ್ರಿಕ್ಟ್ ಮಾಡಿಕೊಳ್ಳಿ

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾನ್ಯ ಅನಂತಕೃಷ್ಣ ಅವರನ್ನು ವಿನಂತಿ ಮಾಡುತ್ತೇನೆ. ನಾನು ಇಂಟರ್‌ನಲ್ ಪಾರ್ಟಿ ಮ್ಯಾಟರ್‌ನ್ನು ಎಲ್ಲಿ ತಂದಿದ್ದೇನೆ ? ನಾನು ಹೇಳುತ್ತಿರುವಂತಹದು ಸಮಗ್ರ ಕನ್ನಡ ನಾಡಿನ ನಾಲ್ಕು ಕೋಟಿ ಜನರ ಬಗ್ಗೆ....

ಶ್ರೀ ಎ.ಕೆ. ಅನಂತಕೃಷ್ಣ : ಅದಲ್ಲ ನಮ್ಮ ವರಿಷ್ಠ ಮಂಡಳಿಯವರು ಎಂಎಲ್‌ಎಗಳ ಜೊತೆ ಮಾತನಾಡಿದರು, ಎಂಪಿಗಳ ಜೊತೆ ಮಾತನಾಡಿದರು. ಮಂತ್ರಿಗಳ ಜೊತೆ ಮಾತನಾಡಿದರು.

(ಗೊಂದಲ)

ಉಪಾಧ್ಯಕ್ಷರು : ತಾವು ಜನರಲ್ ಆಗಿ ಮಾತನಾಡಿ. I told you to be very brief. ನಾನು ಇದನ್ನು ಅಡ್ಮಿಟ್ ಮಾಡಿದ ಮೇಲೆ ನೀವು ಡೀಟೇಲ್ಸ್ ಆಗಿ ಮುಂದೆ ಹೋಗುವ ಪ್ರಶ್ನೆ ಬರುತ್ತದೆ. Please don't go into the details ಇವೆಲ್ಲ ಏಕೆ ತೆಗೆದುಕೊಳ್ಳುತ್ತೀರಿ? ಮೇನ್ ಪಾಯಿಂಟ್ಸ್ ಹೇಳಿ ಮುಗಿಸಿಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ವಾದ ಬೇರೆ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ. ಇವತ್ತು ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಆ ಮಂತ್ರಿಮಂಡಲದ ಸದಸ್ಯರು ಅಜೀಜ್ ಸೇಠ್ ಇರಬಹುದು, ಮಾನ್ಯ ಮೊಯಿಲಿ ಅವರು ಇರಬಹುದು. ಆತ್ಮಾನಂದ ಇರಬಹುದು. ಬೇರೆ ನಮ್ಮ ಮಂತ್ರಿಗಳು ಯಾವ ಕಾರಣಕ್ಕೋಸ್ಕರ ರಾಜೀನಾಮೆ ಕೊಟ್ಟರು? ಇದು ನಿಮ್ಮ ಪಾರ್ಟಿಗೆ ಸೀಮಿತವಾಗಿರುವಂತಹ ಸಂಗತಿ ಅಲ್ಲ. ಬಹುಶಃ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಅಥವಾ ಈ ದೇಶದ ಇತಿಹಾಸದಲ್ಲಿ ಮೊದಲ ಬಾರಿಗೆ ಆಡಳಿತ ಪಕ್ಷದ ಸದಸ್ಯರೇ ಕರ್ನಾಟಕ ರಾಜ್ಯದಲ್ಲಿ ಇದೇ ರೀತಿ ಆಡಳಿತ ಮುಂದುವರಿದರೆ ನಾವು ನಿರ್ನಾಮ ಆಗುತ್ತೇವೆ. ಆದ್ದರಿಂದ ತಕ್ಷಣ ನಾಯಕತ್ವ ಬದಲಾವಣೆ ಮಾಡಬೇಕೆಂದು ಹೇಳಿ ಆರೋಪದ ಪಟ್ಟಿಯನ್ನು ತೆಗೆದುಕೊಂಡು ಹೋಗಿ ಈ ದೇಶದ ಪ್ರಧಾನಿಯವರಿಗೆ ಅಥವಾ ಈ ಕಾಂಗ್ರೆಸ್ ಪಕ್ಷದ ಅಖಿಲ ಭಾರತ ಅಧ್ಯಕ್ಷರಿಗೆ ಕೊಟ್ಟಿದ್ದು ಸುಳ್ಳೆ? ಅಥವಾ ನಾಲ್ಕಾರು ಜನ ಸಚಿವರು ಮಂತ್ರಿಮಂಡಲದಲ್ಲಿ ಇದ್ದಾಗಲೇ ಆ ನಾಯಕತ್ವದ ಬಗ್ಗೆ, ಬಂಗಾರಪ್ಪನವರ ಬಗ್ಗೆ ಸಿಡಿದೆದ್ದು ಅದೇ ಮಂತ್ರಿಮಂಡಲದಲ್ಲಿ ಮುಂದುವರಿದು ಭ್ರಷ್ಟಾಚಾರ ಹಗರಣಗಳ ಬಗ್ಗೆ ಬಯಲು ಮಾಡಿದ್ದು ಸುಳ್ಳೆ? ಇವತ್ತು ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತಿರುವಂತಹ ಸನ್ಮಾನ್ಯ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಅವರು ಇದಕ್ಕೆ ಒಂದು ಮೇಜರ್ ಸರ್ಜರಿ ಆಗಬೇಕಾಗುತ್ತದೆ. ಅಪರೇಷನ್ ಆಗಬೇಕಾಗುತ್ತದೆ ಇಲ್ಲದೇ ಹೋದರೆ ಇದು ಉಳಿಯುವುದಿಲ್ಲ. ಎಂದು ಹೇಳಿದ್ದು ಸುಳ್ಳೆ? ಏಕೆ ಈ ಮಾತನ್ನು ಹೇಳಿದಿರಿ?

ಕರ್ನಾಟಕ ರಾಜ್ಯದಲ್ಲಿ ಕಳೆದ ಎರಡು ವರ್ಷಗಳಿಂದ ನಡೆದಂತಹ ರಾಜಕೀಯ ಅಸ್ಥಿರತೆ ವ್ಯಾಪಕ ಭ್ರಷ್ಟಾಚಾರದ ಆರ್ಥಿಕ ದಿವಾಳಿತನದಿಂದ ಈ ನಾಡಿನ ಜನ ಕಣ್ಣೀರಲ್ಲಿ ಕೈತೊಳೆಯುವಂತಹ ಪರಿಸ್ಥಿತಿ ಬಂತು. ಏತಕ್ಕೆ ಈ ನಿಲುವಳಿ ಸೂಚನೆಯ ಮುಖಾಂತರ ಈ ವಿಚಾರ ಪ್ರಸ್ತಾಪವಾಗಬೇಕೆಂದರೆ ಮಾನ್ಯ ಹಾರ್‍ನಳ್ಳಿ ರಾಮಸ್ವಾಮಿಯವರು ವಿಷಯ ಸ್ಪೆಸಿಫಿಕ್ ಇರಬೇಕೆಂದು ಹೇಳಿದರು. ತಾವು ಹಿರಿಯರಾಗಿದ್ದೀರಿ ತಮಗೆ ಗೌರವದಿಂದ ಈ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಎಲ್ಲಿ ಕೈಹಾಕಿದರೂ ಕೂಡ ಹತ್ತಾರು ಕೋಟಿ ರೂಪಾಯಿ....

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅವರು ಮೆರಿಟ್‌ಗೆ ಹೋಗುತ್ತಿದ್ದಾರೆ. ತಾವು ಅವರಿಗೆ ಅಲೋ ಮಾಡಿಲ್ಲ....

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವ ಹುತ್ತದಲ್ಲಿ ಕೈಹಾಕಿದರೆ ಯಾವ ಹಾವು ಇದೆಯೋ ಎನ್ನುವ ಅನುಮಾನ ಬರುವ ರೀತಿಯಲ್ಲಿ ನಿಮ್ಮ ಸರ್ಕಾರ......

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ತಾವು ಅವರಿಗೆ ಡಿಟೇಲಾಗಿ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಾ? ಅವರು ಡಿಟೈಲ್ ಆಗಿ ಹೋಗುತ್ತಿದ್ದಾರೆ.

ಉಪಾಧ್ಯಕ್ಷಣಿಯವರು : ನೀವು ಇದು ಡಿಸ್‌ಕಷನ್‌ಗೆ ಬಂದಾಗ ಡೀಟೈಲ್‌ಗೆ ಹೋಗಿ. ಈಗ ಬ್ರಾಡ್ ಔಟ್‌ಲೈನ್ ತಾವು ಏನು ಹೇಳುಬೇಕು ಅನ್ನುತ್ತೀರಿ ಅದನ್ನು ತಾವು ಹೇಳಿ ನಾನು ನಮ್ಮ ಡಿಸಿಷಿನ್ ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಇಂಡಿಯಾ ಟುಡೆಯವರು ಹೊರತಂದಿರುವಂತಹ ನವೆಂಬರ್ ತಿಂಗಳ ನ್ಯೂಸ್ ಟ್ರಾಕ್ ವಿಡಿಯೋ ಕ್ಯಾಸೆಟ್ ಏನಿದೆ ಇದನ್ನು ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಈ ಸಂದರ್ಶನದಲ್ಲಿ ಹಾಲಿ ಮುಖ್ಯಮಂತ್ರಿಗಳು ಮಾನ್ಯ ವೀರಪ್ಪ ಮೊಯಿಲಿಯವರು ಹಿಂದೆ ಮಾನ್ಯ ಬಂಗಾರಪ್ಪನವರು ನೇತೃತ್ವದ ಅವರ ಅವ್ಯವಹಾರಗಳ ಬಗ್ಗೆ ಮಾತನಾಡುತ್ತಾ, ಸುಮಾರು 80 ಕೋಟಿ ರೂಪಾಯಿ ಕಂಟ್ರಾಕ್ಟರ್‌ದಾರರಿಗೆ ಕಾನೂನು ಬಾಹಿರವಾಗಿ ಕೊಡಲಾಗಿದೆ. ಆಶ್ರಯ ಯೋಜನೆ scandal ಎಂದು ಹೇಳಿರುಂತಹ ಮಾತು ಇದರಲ್ಲಿ ಇದೆ.

SRI R.V. DESHPANDE : "Scandal of the Century"

ಆಶ್ರಯ ಯೋಜನೆಯ ಬಗ್ಗೆ ಮಾತನಾಡುತ್ತಾ ಹೇಳಿದ್ದಾರೆ. ಇದು ಗುಟ್ಟಾಗಿದೆಯೇ? ನಾನು ಮಾನ್ಯ ಹಿರಿಯ ಮಂತ್ರಿಗಳಾದಂತ ಮಾನ್ಯ ರಾಮಸ್ವಾಮಿಯವರಿಗೆ ನಾನು ಏನು ಹೇಳಲಿಕ್ಕೆ ಇಚ್ಛೆಪಡುತ್ತೇನೆಂದರೆ ನಮಗೆ ಈ ಘಟನೆಗಳ ಬಗ್ಗೆ ದುಃಖ ಇಲ್ಲ ಇಡೀ ಜಗತ್ತಿನಲ್ಲಿ ಕ್ಯಾಸೆಟ್ ಹಾಕಿಕೊಂಡು ನೋಡುತ್ತಾರೆ. ಕರ್ನಾಟಕ ರಾಜ್ಯದ ಜನ ಅಪರಾಧಿಗಳೆಂದು ನೀವು ಮಾಡಿದಂತಹ ತಪ್ಪಿಗೆ ಅವರು ತಲೆತಗ್ಗಿಸುವಂತಹ ಪರಿಸ್ಥಿತಿಯನ್ನು ಈ ಕ್ಯಾಸೆಟ್ ಅನ್ನು ನೋಡಿದವರಿಗೆ ಅನ್ನಿಸುವುದಿಲ್ಲವೇ? ಈ ಭಾಗದಲ್ಲಿ ವಿರೋಧ ಪಕ್ಷ ಇದ್ದುಕೊಂಡೂ ಸಹ ಈ ರೀತಿಯ ಹಗಲು ದರೋಡೆಯಾಗುವುದಕ್ಕೋಸ್ಕರ ಈ ಕಡೆಯವರನ್ನು ಬಿಟ್ಟರು ಎನ್ನುವಂತಹ ಘಟನೆ ನಡೆದಿಲ್ಲವೇ? ಈ ಕ್ಯಾಸೆಟ್ ಅನ್ನು ಈ ಸದನದೊಳಗೆ ಹಾಕಿ. ಬೇರೆ ಆಧಾರ ಯಾವುದು ಬೇಕು?

ಶ್ರೀ ಹಾರ್‍ನಳ್ಳಿ ರಾಮಸ್ವಾಮಿ : ಮಾನ್ಯ ಯಡಿಯೂರಪ್ಪನವರಿಗೆ ಎಲ್ಲಾ ವಿಷಯಗಳನ್ನು ಹೇವುದಕ್ಕೆ ಅವರಿಗೆ ಅಧಿಕಾರ ಇದೆ. ಯಾವಾಗ ಅಂದರೆ ಎರಡು ಅಂಶಗಳನ್ನು ತಮಗೆ ರುಜುವಾತು ಮಾಡಿಕೊಡುವುದು. The matter relates to a specific issue. Admissibility of Motion.

ಇವೆರಡರ ಮೇಲೆ ಮಾತ್ರ ಅವರು ಮಾತನಾಡಲಿಕ್ಕೆ ಅಡ್ಮಿಜಿಬಿಲಿಟಿ ಆಫ್ ದಿ ಮೋಷನ್ ಕ್ಯಾಸೆಟ್ ಅದು ಇದೆ. ತಮಗೆ ಪರ್ಮಿಷನ್ ಸಿಕ್ಕಿದರೆ ಅದೆಲ್ಲ ಮಾತನಾಡಿ ಬೇಡ ಅನ್ನುವುದಿಲ್ಲ, ಪರ್ಮಿಷನ್ ಸಿಕ್ಕಿಲ್ಲ, ನೀವು ಮೆರಿಟ್‌ಗೆ ಹೋದರೆ ನಮ್ಮ ಕಡೆಯವರೆಲ್ಲ ಮಾತನಾಡುತ್ತಾರೆ. ಗದ್ದಲ ಆಗುತ್ತದೆ.

ಉಪಾಧ್ಯಕ್ಷಣಿಯವರು : ತಾವು ಅವರು ಹೇಳಿದ್ದನ್ನು ಗಮನದಲ್ಲಿಟ್ಟುಕೊಳ್ಳಿ ಅರ್ಜೆನ್ಸಿ ಮತ್ತು ಸ್ಪೆಸಿಫಿಕ್ ಆಗಿ....

ಶ್ರೀ ಬಿ.ಎಸ್. ಯಡಿಯೂರಪ್ಪ : ಅರ್ಜೆನ್ಸಿ ಏನು ಅಂದರೆ.....

ಶ್ರೀ ಕೆ. ಹರ್ಷಕುಮಾರ್ ಗೌಡ : ಬಂಗಾರಪ್ಪನವರು ಇದ್ದಾಗ ನೀವು ಏತಕ್ಕೆ ಮಾತನಾಡಲಿಲ್ಲ. ಇವತ್ತು ಮಾತನಾಡುತ್ತಿದ್ದೀರಿ. ಇದ್ದಾಗ ಮಾತನಾಡಲಿಲ್ಲ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ಕಡೆ ಇರುವಂತಹ ನಮ್ಮ ಸ್ನೇಹಿತರು ಇಷ್ಟೊಂದು ಏತಕ್ಕೆ ಆಕ್ರೋಶವನ್ನು ವ್ಯಕ್ತಪಡಿಸುತ್ತಾರೋ ಗೊತ್ತಿಲ್ಲ.

ಉಪಾಧ್ಯಕ್ಷಣಿಯವರು : ಮಾನ್ಯ ಮಂತ್ರಿಗಳು ಹೇಳಿದುದ್ದು ಎರಡನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿಮ್ಮ ಸಹಾಯಕ್ಕೆ ಬರುತ್ತಿದ್ದೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಬಿ.ಜೆ.ಪಿಯವರಿಂದ ಕಾಂಗ್ರೆಸ್ಸಿನವರಿಗೆ ಸಹಾಯ ಬೇಕಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅನಂತಕೃಷ್ಣರವರು, ಯಡಿಯೂರಪ್ಪನವರೇ ಮಾನ್ಯ ಬಂಗಾರಪ್ಪನವರು ಪದಚ್ಯುತರಾದುದು ಬಿ.ಜೆ.ಪಿ.ಯಿಂದ ಅಲ್ಲ, ನಮ್ಮಿಂದಲೇ ಎಂದು ಹೇಳುತ್ತಿದ್ದಾರೆ. ಅದನ್ನು ನಾನು ಒಪ್ಪಿಕೊಂಡಿದ್ದೇವೆ. ನಾನು ಅದನ್ನು ಎಂದೂ ಡಿಸ್‌ಪ್ಯೂಟ್ ಮಾಡಿಲ್ಲ. ಆದರೆ ನಾನೇನು ಹೇಳುವುದಕ್ಕೆ ಹೊರಟಿದ್ದೇನೆಂದರೆ ನೀವು ಮಾಡಿದಂಥ ಮಹಾ ಅಪರಾಧ ಏನು ಎಂದರೆ ಎರಡು ವರ್ಷ ಬಂಗಾರಪ್ಪನವರ ಜೊತೆಗೆ ಇದ್ದು ಮಾಡಬಾರದ್ದನ್ನು ಮಾಡುವುದನ್ನು ನೋಡಿಕೊಂಡು ಇದ್ದು ಆದರಲ್ಲಿ ಬಂದಂತಹ ಲಾಭವನ್ನು ಭರ್ತಿ ಮಾಡಿಕೊಂಡು ಆಮೇಲೆ ಅವರನ್ನು....

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಇದು ಸರಿಯಲ್ಲ. ಏನು ಲಾಭ ಮಾಡಿಕೊಂಡಿದ್ದಾರೆ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ತೆರಿಗೆಯನ್ನು ಲೂಟಿ ಮಾಡಿದುದ್ದು ಸುಳ್ಳೆ? ಗ್ರಾನೈಟ್ ಕಲ್ಲಿಗೆ ಲೈಸೆನ್ಸ್ ಕೊಟ್ಟು ಹಗಲು ದರೋಡೆ ಮಾಡಿದ್ದು ಸುಳ್ಳೆ? ಬಿ.ಡಿ.ಎ. ಸಾವಿರಾರು ಸೈಟುಗಳನ್ನು ಮಾರಿದ್ದು ಸುಳ್ಳೆ? ಮಂತ್ರಿ ಮಂಡಲದ ಒಪ್ಪಿಗೆ ಪಡೆಯದೆ 100 ಆ್ಯಪಲ್ ಮ್ಯಾಕಿಂಟೋಷ್ ಕಂಪ್ಯೂಟರ್‌ಗಳನ್ನು ಕೊಳ್ಳಲು ಬೇನಾಮಿ ಕಂಪನಿಗೆ ದುಡ್ಡು ಕೊಟ್ಟು ಹಣವನ್ನು ಲೂಟಿ ಮಾಡಿದುದ್ದು ಸುಳ್ಳೆ? ಯಾವುದು ಸತ್ಯ? ಇವೆಲ್ಲಾ ಅವ್ಯವಹಾರಗಳ ಬಗ್ಗೆ ನನ್ನ ಹತ್ತಿರ ದಾಖಲೆಗಳಿವೆ. ಕೆಲವು ಪಿಡಬ್ಲ್ಯೂಡಿ ಕಂಟ್ರಾಕ್ಟರುಗಳು ಷರತ್ತಿನ ಪ್ರಕಾರ ಕೆಲಸ ಮಾಡದೆ ಇದ್ದರೂ ಸಹ......

(ಗೊಂದಲ)

Madam Deputy Speaker : Will you please resume your seat?

ನಾನು ಮೊದಲೇ ತಮಗೆ ಹೇಳಿದೆ. ತಮ್ಮ ಮಾತು ಏನೇ ಇದ್ದರೂ ಅದು ನನ್ನನ್ನು ಕನ್‌ವಿನ್ಸ್ ಮಾಡುವುದಕ್ಕಷ್ಟೆ ಸೀಮಿತವಾಗಿರಬೇಕು. ನೀವು ಈಗ ವಿವರಗಳಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಮೊದಲನೆಯ ಅಂಶ ಇದು. ಎರಡನೆಯದಾಗಿ, ಮಾನ್ಯ ಮಂತ್ರಿಗಳು ಹೇಳಿರುವ ಪ್ರಕಾರ ಸ್ಪೆಸಿಫಿಕ್ಕಾಗಿ ಅರ್ಜೆನ್ಸಿ

ಇರುವ ವಿಷಯಗಳನ್ನು ಮಾತ್ರ ತೆಗೆದುಕೊಂಡು ಇನ್ನು 5-10 ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಗಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಚರ್ಚೆ ಮಾಡುವುದು ಬೇಡವೆಂದರೆ ನಾನು ನಿಲ್ಲಿಸಿ ಬಿಡುತ್ತೇನೆ. ಇದರ ಬಗ್ಗೆ ನಿಮಗೆಲ್ಲರಿಗೂ ವಿರೋಧವಿದೆ. ನಿಮ್ಮ ನಿಜವಾದ ಬಣ್ಣ ಬಯಲಾಗುತ್ತದೆಂದು ನಿಮಗೆ ಭಯವಿದೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಎಲ್ಲರೂ ನಿಂತು ಒಟ್ಟಿಗೆ ಮಾತನಾಡಿದರೆ ಏನೂ ಕೇಳಿಸುವುದಿಲ್ಲ. ಆದುದರಿಂದ ಯಾವ ಸದಸ್ಯರು ಮಾತನಾಡಬೇಕೆಂದು ಅಪೇಕ್ಷೆ ಪಡುತ್ತಾರೋ, ಅವರು ನನ್ನ ಅನುಮತಿ ಪಡೆದುಕೊಂಡು ನಾನು ಅಪ್ಪಣೆ ಕೊಟ್ಟಾಗ ಮಾತನಾಡಬೇಕು. Then only it will go on record. If everyone of you stand up and speak, nothing will go on record.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಲುವಳಿ ಸೂಚನೆ ಬಗ್ಗೆ ಚರ್ಚೆಯಾದಂಥ ಸಂದರ್ಭದಲ್ಲಿ ಚೇರ್ ಅನ್ನು ಕನ್‌ವಿನ್ಸ್ ಮಾಡುವುದಕ್ಕೋಸ್ಕರ.......

ಉಪಾಧ್ಯಕ್ಷಿಣಿಯವರು : ನನ್ನನ್ನು ಕನ್‌ವಿನ್ಸ್ ಮಾಡುವುದಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಮಾತನಾಡುವುದಕ್ಕೆ ಸೀಮಿತವಾಗಿರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿಮ್ಮನ್ನು ಕನ್‌ವಿನ್ಸ್ ಮಾಡುವಂಥ ಪ್ರಯತ್ನ ಏತಕ್ಕೆ ಮಾಡುತ್ತಿದ್ದೇನೆಂದರೆ, ಅಲ್ಲಿರುವಂಥವರೆಲ್ಲರೂ ಸಹ ಏನೇನು ಅವ್ಯವಹಾರಗಳು ನಡೆದಿದೆಯೆಂಬುದುನ್ನು ತಿಳಿಸುವುದಕ್ಕೆ ಪ್ರಯತ್ನಿಸುತ್ತಿದ್ದೇನೆಯೇ ಹೊರತು ನಾನು ಯಾರ ಮೇಲೂ ಆರೋಪ ಮಾಡುತ್ತಿಲ್ಲ. ನಾನು ವಿವರಗಳಿಗೆ ಹೋಗುವುದಿಲ್ಲ, ನನ್ನ ಆರೋಪ ಇಷ್ಟೆ. ಇವೊತ್ತು ಈ ಸರ್ಕಾರವನ್ನು ಅಡ್ಡದಾರಿಗೆ ಇಳಿಸುವಂಥ ಪ್ರಯತ್ನವನ್ನು ಅಧಿಕಾರಿಗಳು ಮಾಡಿದ್ದಾರೆ. ಈ ರಾಜ್ಯದ ಒಬ್ಬ ಮುಖ್ಯ ಕಾರ್ಯದರ್ಶಿಯಾಗಿ ಉನ್ನತ ಹುದ್ದೆಯನ್ನು ಅಲಂಕರಿಸಿರುವವರು ಕಾನೂನು ಬಾಹಿರವಾಗಿ ಸರ್ಕಾರ ನಡೆಯುವಂತೆ ಮಾಡಿ ನೂರಾರು ಕೋಟಿ ರೂಪಾಯಿಗಳನ್ನು ಲೂಟಿ ಮಾಡುವುದರಲ್ಲಿ ಶಾಮೀಲಾಗಿದ್ದಾರೆನ್ನುವುದಕ್ಕೆ ನನ್ನಹತ್ತಿರ ದಾಖಲೆಗಳಿವೆ. ಇದರ ಬಗ್ಗೆ ಸಿ.ಓ.ಡಿ. ತನಿಖೆಯಾಗಿರುವುದನ್ನು ಮುಚ್ಚಿಹಾಕಿ, ಈ ಅಧಿಕಾರಿಗೆ ರಕ್ಷಣೆ ಕೊಡುವ ಮೂಲಕ ಉನ್ನತಸ್ಥಾನದಲ್ಲಿರುವ ಈ ಭ್ರಷ್ಟ ಅಧಿಕಾರಿ ಹಣವನ್ನು ಲೂಟಿ ಮಾಡಿರುವ ಅನೇಕ ಹಗರಣಗಳು ಇವೆ.

ಉಪಾಧ್ಯಕ್ಷಿಣಿಯವರು : ತಾವು ಏನೇ ಆರೋಪ ಮಾಡಿದರೂ ಅವರುಗಳ ಹೆಸರುಗಳು ಬೇಕಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೆಸರು ಹೇಳಲಿಲ್ಲ, ಮುಖ್ಯ ಕಾರ್ಯದರ್ಶಿ ಎಂದು ಹೇಳಿದೆ.

ಉಪಾಧ್ಯಕ್ಷಿಣಿಯವರು : ಈಗ ಸ್ವಾಮಿರಾವ್ ರವರು ಒಂದು ಪಾಯಿಂಟ್ ಆಫ್ ಆರ್ಡರ್ ತಂದಿದ್ದಾರೆ.ಏನೆಂದು ಕೇಳೋಣ.

ಶ್ರೀ ಬಿ. ಸ್ವಾಮಿರಾವ್ : ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗ ಈ ವಿಧಾನಸಭೆ ಒಂಧು ತರಹ ಸಂತೆಯಾಗಿರುವುದು ನನಗೆ ಬಹಳ ವಿಷಾದವಾಗುತ್ತದೆ. ಏಕೆಂದರೆ, ಈ ಕಡೆ ನಮ್ಮ ಪಕ್ಷದ ನಾಯಕರು ನಮಗೆ ನೀವು ಏನೂ

ಮಾತನಾಡಬಾರದು, ಗಲಾಟೆ ಮಾಡಬಾರದು. ಎಂದು ಹೇಳಿದ ಪ್ರಕಾರ ನಾನು ಸುಮ್ಮನೆ ಕುಳಿತಿದ್ದರೆ ಅವರು ಏನೇನೋ ಮಾಡಿ ಧಾಳಿ ಮಾಡಿದ್ದಾರೆ. ಅಧ್ಯಕ್ಷರಿಗೆ ಕೂಡ ಬೆಳಿಗ್ಗೆ ಹೇಳಿದ ಮಾತು ತಮಗೆ ಕೇಳಿಸಿತೇ? ಇಲ್ಲವೇ ಗೊತ್ತಿಲ್ಲ. ತಮಗೆ ಅವಮಾನವಾಗತಕ್ಕಂಥ ಮಾತನ್ನು ಅವರು ಆಡಿದ್ದಾರೆ. ಈಗಲಾದರೂ ನಾವು ಸುಮ್ಮನೆ ಕುಳಿತರೆ ಅವರು ಇನ್ನು ಏನೇನು ಮಾಡನಾಡುತ್ತಾರೋ ಗೊತ್ತಿಲ್ಲ. ಅವರು ಮಾತನಾಡುತ್ತಿರತಕ್ಕಂಥ ವಿಚಾರದ ಬಗ್ಗೆ ಆ ಕಡೆ ಕುಳಿತಿರತಕ್ಕಂಥ ನಾಯಕರು, ಉಪನಾಯಕರು, ಸದಸ್ಯರುಗಳೆಲ್ಲರೂ ಕೇಳಿ ವಿಚಾರ ಮಾಡಬೇಕು. ಅವರ ಮಾತಿಗೆ ಹತೋಟಿ ಇಲ್ಲವೇ? ಗಡಿಯ ಮಿತಿ ಇಲ್ಲವೇ? ಈ ವಿಧಾನ ಸಭೆ ಸಂತೆಯೇ? ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ತಮ್ಮ ನೀತಿ-ನಿಯಮಗಳನ್ನು ಪಾಲಿಸುವುದಕ್ಕೆ ಇಲ್ಲಿ ಅವಕಾಶ ಕೊಡುವುದಾದರೆ ಕೊಡಿ, ಇಲ್ಲದಿದ್ದರೆ, ನಾವು ಇಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ನಮಗೂ ರಕ್ಷಣೆ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇಲಿ ಲೂಟಿಯಾಗಿದೆ, ಆದರೆ ಅವರು ಈಗ ನೀತಿನಿಯಮಗಳ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಬಿ. ಸ್ವಾಮಿರಾವ್ : ತಾವು ನಮಗೆ ರಕ್ಷಣೆಯನ್ನು ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಅವರು ಗಲಾಟೆ ಮಾಡುವುದರಿಂದ ನಾವೂ ಕೂಡ ಗಲಾಟೆ ಮಾಡಬೇಕಾಗುತ್ತದೆ.

(ಗೊಂದಲ)

ಉಪಾಧ್ಯಕ್ಷಣೆಯವರು : ಅವರು ಇನ್ನು 5-10 ನಿಮಿಷದಲ್ಲಿ ಮುಗಿಸುತ್ತಾರೆ.

ಶ್ರೀ ಬಿ. ಸ್ವಾಮಿರಾವ್ : ಸ್ವಚ್ಛ ಸರ್ಕಾರವಲ್ಲ, ನೀಚ ಸರ್ಕಾರ, ಮರ್ಯಾದೆ ಇಲ್ಲದ ಸರ್ಕಾರವೆಂದು ಹೇಳಿದರು ನಾವು ಅದನ್ನು ಕೇಳಿಕೊಂಡು ಸುಮ್ಮನೆ ಇರಬೇಕೆ?

(ಗೊಂದಲ)

ಉಪಾಧ್ಯಕ್ಷಣೆಯವರು : ಸ್ವಾಮಿರಾವ್ ರವರೆ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಸ್ವಾಮಿರಾವ್ : ಇವರು ರೈತರು, ರೈತರೆಂದು ಹೇಳಿಕೊಳ್ಳುತ್ತಾರೆ. ಆದರೆ ಅವರು ಗುತ್ತಿಗೆಯನ್ನು ಕೊಟ್ಟಿದ್ದಾರೆ, ಇವರು ರೈತರೆ, ಅವರು ಮಾಡಿದ್ದುದು ಸಿ.ಬಿ.ಐಗೆ ಹೋಗಲಿ ಸಿ.ಡಿ.ಗೆ ಹೋಗಲಿ.

ಉಪಾಧ್ಯಕ್ಷಣೆಯವರು : ಪ್ರತಿಯೊಬ್ಬರು ನಿಂತು ಮಾತನಾಡಿದರೆ ಸಭೆಯನ್ನು ನಡೆಸಲು ಕಷ್ಟವಾಗುತ್ತದೆ. ದಯಮಾಡಿ ಎಲ್ಲರೂ ಸಹ ಕುಳಿತುಕೊಳ್ಳಿ.ಎಲ್ಲರೂ ಅವರವರ ಜವಾಬ್ದಾರಿಯನ್ನರಿತು; ಯಾವುದೇ ಹೆಸರನ್ನು ಹೇಳಬೇಡಿ, ಅವರು ಇನ್ನು 5-10 ನಿಮಿಷದಲ್ಲಿ ಮುಗಿಸುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ನಾನು ಶಾಸಕನಾಗಿ ಅನೇಕ ವಿಷಯಗಳನ್ನು ಇಲ್ಲಿ ಎತ್ತಿದ್ದೇನೆ ಅದು ನನ್ನ ಕರ್ತವ್ಯ.

ಸದಸ್ಯರೊಬ್ಬರು : ಯಾವ ಕರ್ತವ್ಯ ಅದು?

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಎರಡು ವರ್ಷಗಳಿಂದ ಸುಮ್ಮನೆ ಕುಳಿತಿದ್ದು ಈಗ ಮಾತನಾಡುತ್ತಿದ್ದೀರಿ. ಏಕೆ ಇಷ್ಟು ದಿನ ಸುಮ್ಮನಿದ್ದಿರಿ?

(ಗೊಂದಲ)

ಉಪಾಧ್ಯಕ್ಷಣಿಯವರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ : 380 ಎಕರೆ ವಿಚಾರವೆಲ್ಲ ಎಲ್ಲಿ ಹೊರಗೆ ಬರುತ್ತದೆಯೋ ಎಂದು ಕೂಗಿಕೊಳ್ಳುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ರೀತಿಯಾದರೆ ನನ್ನ ಕರ್ತವ್ಯವನ್ನು ನಿರ್ವಹಿಸುವು ಹೇಗೆ? ನೀವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ.

ಉಪಾಧ್ಯಕ್ಷಣಿಯವರು : ಅವರು ನಿಲುವಳಿ ಸೂಚನೆಯನ್ನು ಅಡ್ಮಿಟ್ ಮಾಡಬೇಕೋ ಅಥವಾ ಇಲ್ಲವೋ ಎನ್ನುವುದನ್ನು ಕೇಳುತ್ತಿದ್ದಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಸಮಾನ್ಯ ಉಪಾಧ್ಯಕ್ಷಣಿಯರೆ ತಾವು ಮಾನ್ಯ ಸದಸ್ಯರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿರುವ ಉದ್ದೇಶವೇನೆಂದರೆ to convince as to how it is admissible. Whether, it is a specific matter, whether it is an urgent are

ಅವರು ಏನು ಮಾಡುತ್ತಾರೆಂದರೆ ಮೆರಿಟ್ ಮೇಲೆ ಹೇಳುವುದರಿಂದ ನಾವೆಲ್ಲರಿಗೂ ಅದರ ಮೇಲೆ ತೀರ್ವವಾದಂಥ ಆಕ್ಷೇಪಣೆಯನ್ನು ಮಾಡಬೇಕಾಗುತ್ತದೆ.

ಉಪಾಧ್ಯಕ್ಷಣಿಯವರು : ನನಗೆ ಕನ್‌ಸೆನ್ಸ್ ಮಾಡುವುದಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಹೇಳುವುದಕ್ಕೆ ಕನ್‌ಫೈನ್ ಮಾಡಿಕೊಳ್ಳಿ. ವಿವರವಾಗಿ ಹೋಗಬೇಡಿ Please don't go into the details.

ಶ್ರೀ ಎ.ಕೆ. ಅನಂತಕೃಷ್ಣ : ತಾವು ಯಡಿಯೂರಪ್ಪನವರು ಮಾತನಾಡಲು ಏನು ತೀರ್ಮಾನವನ್ನು ಕೊಟ್ಟಿದ್ದೀರಿ. ಆ ತೀರ್ಮಾನವೇನಾಯಿತೆಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಆಗಾಗಲೆ ಮಾನ್ಯ ವಿರೋಧ ಪಕ್ಷದ ನಾಯಕರಾದ ದೇಶಪಾಂಡೆಯವರು. ಪಾಯಿಂಟ್ ಆಫ್ ಆರ್ಡರನ್ನು ರೈಸ್ ಮಾಡಿದ್ದಾರೆ, ಅದರ ಮೇಲೆ ನೀವು ರೂಲಿಂಗ್ ಕೊಟ್ಟಿದ್ದರೆ ಅದು ಕ್ಲೋಸ್ ಆಗುತ್ತದೆ. ರೂಲಿಂಗ್‌ನ್ನು ಕೊಟ್ಟಮೇಲೂ ಕೂಡ ಪುನಃ ಒಂದರ ಅಡಿಯಲ್ಲಿ ಚರ್ಚೆಗೆ ಪ್ರಾರಂಭ ಮಾಡುವುದಾದರೆ ಮಾಡಲಿ, ಆದರೆ ನಿಲುವಳಿ ಸೂಚನೆಯನ್ನು ತಂದು ಇದರಲ್ಲಿ ಮೊದಲೇ ಪ್ರಿಲಿಮಿನರಿ

ಮೇಲೆ, ಮೆರಿಟ್, ಡೀಮೆರಿಟ್, ಅದು, ಇದು ಮುಂತಾದವು ಬೇಡ. ಅವರಿಗೆ ಹಿಂದಿನ ಸರ್ಕಾರದ ಬಗ್ಗೆ ಏನಾದರೂ ಚಾರ್ಜ್ ಸನ್ನು ಮಾಡುವುದಾದರೆ ಪಟ್ಟಿಯನ್ನು ಕೊಡಲಿ, ಅದನ್ನು ಸರ್ಕಾರ ಸಿ.ಬಿ.ಐ.ಗೆ ರೆಫರ್ ಮಾಡುತ್ತದೋ ಅಥವಾ ಕೊಡುತ್ತದೋ ಏನೇನು ಮಾಡುತ್ತದೆ ಅದನ್ನು ಮಾಡುತ್ತದೆ.

ಅದು ಬೇರೆ ವಿಷಯ ಆದರೆ ನೀವು ಮೊದಲೇ ಏನೇನು ಹೇಳಬೇಕೋ ಅದನ್ನೆಲ್ಲಾ ಹೇಳಿ ಅನಂತರ ಅದಕ್ಕೆ ಮಹತ್ವವನ್ನು ತಂದುಕೊಂಡು ಪ್ರೆಸ್‌ಗೆ ಕೊಟ್ಟು ಅಷ್ಟಕ್ಕೇ ತೃಪ್ತಿ ಪಟ್ಟುಕೊಳ್ಳುವುದಾದರೆ ಅದು ಬೇರೆ ವಿಷಯ. ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ತಾವು ಮೆರಿಟ್ ಮೇಲೆ ಹೋಗಿದೆ. ಇದು ಪಬ್ಲಿಕ್ ಇಂಪಾರ್ಟೆನ್ಸ್, ಅರ್ಜೆಂಟ್ ಮ್ಯಾಟರ್ ಮತ್ತು ಇವತ್ತೇ ಇದು ಆಗಬೇಕೆಂದು ಏನಾದರೂ ಇದ್ದರೆ ಆಗಬಹುದು. ಇದು ಹತ್ತಾರು ತಿಂಗಳಿಂದ ನಡೆಯುತ್ತಾ ಬಂದಿದೆ. ಆದರೆ ಇವತ್ತೇ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿಲ್ಲ. ಇದನ್ನು ನಾಳೆ ತೆಗೆದುಕೊಳ್ಳಬಹುದು. ನಾಡಿದ್ದು ತೆಗೆದುಕೊಳ್ಳಬಹುದು. ಅಥವಾ ಸೋಮವಾರ ಕೂಡ ತೆಗೆದುಕೊಳ್ಳಬಹುದು. ಇದು ಪಬ್ಲಿಕ್ ಇಂಪಾರ್ಟೆನ್ಸ್ ಅಲ್ಲ ಒಪ್ಪಿಕೊಳ್ಳೋಣ. ಆದರೆ ಇದು ಅರ್ಜೆಂಟ್ ಇದೆಯೇ? ಈಗಲೇ ಆಗಬೇಕೆ? ಅಥವಾ ನಿರ್ದಿಷ್ಟವಾಗಿ ಹೇಳಿದ್ದೀರಾ? ಅಥವಾ 1,2,3,4 ಎಂದು ಛಾರ್ಜ್‌ಸ್ ಇವೆಯೇ? ಆ ರೀತಿ ಏನಾದರೂ ಇದ್ದರೆ ಇದಕ್ಕೆ ಒಂದು ಅರ್ಥ ಇರುತ್ತದೆ. ಪ್ರತಿಯೊಂದು ಸಾರಿಯೂ ತಮಗೆ ಜೋರಾದ ಧ್ವನಿ ಇದೆ ಎಂದು ಮಾಡನಾಡುವುದಾದರೆ ಅನ್ಯಾಯವಾಗುತ್ತದೆ. ಇದರಿಂದ ಏನಾಗುತ್ತದೆಂದರೆ ಮಾತನಾಡುವವರು ಜೋರಿದ್ದಾರೆ. ಉಳಿದವರು ಸುಮ್ಮನೆ ಕುಳಿತಿರುವವರು ತಪ್ಪು ಮಾಡಿಕೊಂಡು ಸಹಿಸಿಕೊಂಡು ಕುಳಿತಿದ್ದಾರೆ. ಆದ್ದರಿಂದ ನಾನು ಮಾತನಾಡಬಹುದೆಂಬ ಭಾವನೆ ಬರಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಖಾರ್ಗೆಯವರ ಮಾತಿನ ಬಗ್ಗೆ ಗೌರವ ನನಗಿದೆ. ನಾನು ಇಲ್ಲಿ ಯಾರನ್ನೂ ಕೆರಳಿಸಲು ಇಷ್ಟವಿಲ್ಲ. ಮಾನ್ಯ ಅನಂತ ಕೃಷ್ಣರದವರು ಒಂದು ಮಾತನ್ನು ಹೇಳಿದರು. ಇಷ್ಟೆಲ್ಲಾ ಭ್ರಷ್ಟಾಚಾರ ನಡೆಯುತ್ತಿದೆ. ಎಂಬುದು ನಿಮಗೆ ಗೊತ್ತಾದಮೇಲೂ ಏತಕ್ಕೆ ಬಾಯಿ ಮುಚ್ಚಿ ಕೊಂಡು ಕುಳಿತಿದ್ದೀರಿ ಎಂದು. ನಾನಾದರೂ ಮಾನ್ಯ ಅನಂತಕೃಷ್ಣರವರಿಗೆ ಒಂದು ಮಾತನ್ನು ಹೇಳಬಯುಸುತ್ತೇನೆ. ಬಹುಶಃ ಬಿ.ಜೆ.ಪಿ. ಯವರು ಮೊದಲನೇ ಸಾರಿಗೆ 8 ತಿಂಗಳ ಹಿಂದೆ ಈ ಸರ್ಕಾರ ಮಾಡಿದಂಥ ಭ್ರಷ್ಟಾಚಾರದ ಹಗರಣಗಳ 12 ಆಪಾದನೆಗಳ ಬಗ್ಗೆ ದಾಖಲೆಗಳ ಸಹಿತ ಪುಸ್ತಕವನ್ನು ಸಹಿತಿ ಪುಸ್ತಕವನ್ನು ಪ್ರಿಂಟ್ ಮಾಡಿಸಿ ಈ ದೇಶದ ಮಾನ್ಯ ಪ್ರಧಾನಿಯವರಿಗೆ, ಎಲ್ಲಾ ಲೋಕಸಭಾ ಸದಸ್ಯರಿಗೆ ಸುಮಾರು 10 ಲಕ್ಷ ಪುಸ್ತಕಗಳನ್ನು ಹಂಚಿದ್ದೇವೆ. ನಾನು ಇನ್ನೂ ವಿವರಕ್ಕೆ ಹೋಗಿಲ್ಲ. ಮಾನ್ಯ ಉಪಾಧ್ಯಕ್ಷಣಿಯವರು ನಾನು ಹೇಳಿದ್ದರ ಬಗ್ಗೆ ಕನ್ವಿನ್ಸ್ ಆಗಿದ್ದಾರೆಂದು ತಿಳಿದುಕೊಂಡಿದ್ದೇನೆ. ನಾನು ಪ್ರಿಲಿಮಿಟನರಿ ಸಬ್ಮಿಷನ್ ಮುಖ್ಯಾಂತರ ಏನು ಒತ್ತಾಯ ಮಾಡುತ್ತಿದ್ದೇನೆಂದರೆ ಮೊದಲನೆಯದಾಗಿ ನಾನು ಇಲ್ಲಿ

ಒಂದು ಕ್ಯಾಸೆಟ್ ಕೊಟ್ಟೆ. ಇದರಲ್ಲಿ ಅನೇಕ ವಿವರಗಳಿವೆ ಎಂದು ಹೇಳಿದೆ. ಅದರ ಆಧಾರದ ಮೇಲೆ ಆ ಕಡೆಯಲ್ಲಿ ಕುಳಿತಿರತಕ್ಕ ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರೂ ಸೇರಿದಂತೆ ಇನ್ನೂ ಅನೇಕ ಜನರು ಮಾನ್ಯ ಪ್ರಧಾನಿಯವರಿಗೆ

ಈ ದೇಶದ ಕಾಂಗ್ರೆಸ್ ಪಕ್ಷದ ಮಾನ್ಯ ಅಧ್ಯಕ್ಷರಿಗೆ ಏನೂ ಆರೋಪದ ಒಂದು ಪಟ್ಟಿಯನ್ನು ಕೊಟ್ಟಿದ್ದೀರಿ, ಬಿ.ಜೆ.ಪಿ.ಯವರು ಏನು ಛಾರ್ಜ್ ಶೀಟ್ ಕೊಟ್ಟಿದ್ದೇವೆ. ಮಂತ್ರಿಗಳಾಗಲಿ ಮುಖ್ಯ ಮಂತ್ರಿಗಳಾಗಳಿ, ಶಾಸಕರಾಗಲಿ ಅಥವಾ ಬೇರೆ ಯಾವುದೇ ವ್ಯಕ್ತಿ ಆಗಲಿ ಹಗಲು ದರೋಡೆ ಮಾಡಿ, ಲೂಟಿ ಮಾಡಿ, ಇವತ್ತು ನನ್ನನ್ನು ಯಾರೂ ಏನೂ ಕೇಳುವುದಿಲ್ಲ ಎನ್ನತಕ್ಕ ಭಾವನೆ ಬರಬಾರದು. ಅದು ನಮ್ಮ ಪ್ರಜಾತಂತ್ರ ವ್ಯವಸ್ಥೆಗೇ ಒಂದು ಘೋರ ಅಪರಾಧವನ್ನು ಮಾಡಿದಂತಾಗುತ್ತದೆ. ಈ ರಾಜ್ಯದ ಸರ್ವಸ್ವವನ್ನೂ ರಕ್ಷಣೆ ಮಾಡಬೇಕಾದವರೇ ಇವತ್ತು ರಾಜ್ಯದ ಬೊಕ್ಕಸವನ್ನು ಲೂಟಿ ಮಾಡಿ, ಭಕ್ಷಣೆ ಮಾಡುತ್ತಾ ತಲೆತಗ್ಗಿಸುವ ಕೆಲಸವನ್ನು ಕಳೆದ 2 ವರ್ಷಗಳಿಂದ ಮಾಡಿಕೊಂಡು ಬಂದಿರುವುದು ಸರಿಯಲ್ಲ. ಇದೇ ರೀತಿ ತಾವು ಇನ್ನೊಂದು ಭಾಗವನ್ನೂ ನೋಡಬೇಕು. ನಾವು ಸಿ.ಬಿ.ಎ. ಎನ್‌ಕ್ವೈರಿಗೆ ಒತ್ತಾಯ ಮಾಡುತ್ತಿದ್ದೇವೆಂದರೆ, ಇವತ್ತು ಮಾಜಿ ಮಾನ್ಯ ಮಂತ್ರಿಗಳಾದ ಬಂಗಾರಪ್ಪನವರೂ ಕೂಡ ಇವತ್ತಿನ ಈ ಸಭೆಯಲ್ಲಿ ಭಾಗವಹಿಸಿದ್ದರೆ ಚೆನಾಗಿರುತ್ತಿತ್ತು. ಏಕೆಂದರೆ, ಅವರೇ ಹೇಳಿ ಕೊಂಡಿದ್ದಾರೆ. ನಾನು ಭ್ರಷ್ಟನಲ್ಲ, ನನ್ನನ್ನು ಕಾಂಗ್ರೆಸ್ ಮುಖಂಡರೆಲ್ಲಾ ಸೇರಿಕೊಂಡು ಭ್ರಷ್ಟನಘ್ನಾಗಿ ಮಾಡಿದರು. ಪಂಜಾಬ್ ಚುನಾವಣೆಗೆ 14 ಕೋಟಿ ರೂಪಾಯಿಗಳನ್ನು ಕೊಟ್ಟೆ ಎನ್ನತಕ್ಕ ಮಾತನ್ನು ಅವರು ಹೇಳಿಲ್ಲ, ಇದು ಇವತ್ತಿನ ವಾರಪತ್ರಿಕೆಯಲ್ಲಿ ಬಂದಿದೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಆ ರೀತಿ ಅಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಆಸೆ ಏನೆಂದರೆ ಇದು ಸಿ.ಬಿ.ಐ ನಿಂದ ತನಿಖೆ ಆದರೆ ಸತ್ಯ ಏನೆಂಬುದು ಹೊರಗೆ ಬರುತ್ತದೆ.

ಶ್ರೀ ಎ.ಕೆ. ಅನಂತಕೃಷ್ಣ : ಈಗಾಗಲೇ ತೀರ್ಮಾನ ಆಗಿಹೋಗಿದೆ.

ಉಪಾಧ್ಯಕ್ಷಣಿಯವರು : ಯಡಿಯೂರಪ್ಪನವರೇ, ತಾವು ಹೇಳಬೇಕಾದ್ದನ್ನೆಲ್ಲಾ ಹೇಳಿ ಮುಗಿಸಿದ್ದೀರೆಂದು ನಾನು ತಿಳಿದುಕೊಳ್ಳಬೇಕಾಗುತ್ತದೆ. ನಾನು ತಮಗೆ ಮೊದಲೇ ಹೇಳಿದ್ದೆ, ನೀವು ಬಹಳ ಬ್ರೀಫ್ ಆಗಿರಬೇಕೆಂದು. ಈಗಾಗಲೇ 15 ನಿಮಿಷವಾಯಿತು. ದಯವಿಟ್ಟು ಬೇಗ ಮುಗಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಕೊನೆಯದಾಗಿ ತಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಈ ರಾಜ್ಯದ ಮುಖ್ಯಮಂತ್ರಿಗಳ ಮೇಲೆ ನಾನು ಆರೋಪ ಮಾಡುತ್ತಿಲ್ಲ. ಅವರ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿದ್ದ ಅವರ ಸಹೋದ್ಯೋಗಿಗಳೂ ಕೂಡ ಈ ರೀತಿಯ ಅನೇಕ ಅವ್ಯವಹಾರಗಳಲ್ಲಿ ಭಾಗಿಯಾಗಿರತಕ್ಕ ದಾಖಲೆಯಗಳು ನನ್ನ ಹತ್ತಿರ ಇವೆ.ಆದುದರಿಂದ ತಾವು ಸಿ.ಬಿ.ಐ. ತನಿಖೆಗೆ ಇದನ್ನು ಒಳಪಡಿಸಿದರೆ ಈ ಸರ್ಕಾರ ತಾನು ಸತ್ಯಹರಿಶ್ಚಂದ್ರ ಎಂದು ಏನು ಹೇಳಿಕೊಳ್ಳುತ್ತಿದೆ. ಇದರ ಬಣ್ಣ ಬಯಲಾಗಬೇಕಾದರೆ ಸಿ.ಬಿ.ಐ. ತನಿಖೆ ಆಗಬೇಕು. ನಾನು ಶಸ್ತ್ರ ಚಿಕಿತ್ಸೆ ಮಾಡುತ್ತೇನೆ. ಸ್ವಚ್ಛ ಆಡಳಿತವನ್ನು ರಾಜ್ಯದ ಜನತೆಗೆ ಕೊಡುತ್ತೇನೆಂದು ಹೇಳಿಕೊಡು ಬಂದಿರುವ ಮಾನ್ಯ ವೀರಪ್ಪಮೊಯ್ಲಿಯವರ ಬಗ್ಗೆ ನಮಗೆ ಅಪಾರ ನಂಬಿಕೆ ಇದೆ.ಆದ್ದರಿಂದ ನಾನು ಅವರನ್ನು ಒತ್ತಾಯ ಮಾಡುತ್ತೇನೆ. ಕಳೆದ 3 ವರ್ಷದ ಅವಧಿಯಲ್ಲಿ ನಡೆದಿರತಕ್ಕ ಮತ್ತು ಮಾಡಿರತಕ್ಕ ನಿಮ್ಮ ಪಾಪಕ್ಕೆ ಪ್ರಾಯಶ್ಚಿತ್ತ

ಮಾಡಿಕೊಳ್ಳಬೇಕೆಂದಿದ್ದರೆ ದಯವಿಟ್ಟು ಈ ಎಲ್ಲಾ ಆರೋಪಗಳನ್ನೂ ತಾವು ಸಿ.ಬಿ.ಐ.ಗೆ ವಹಿಸಿ

4.20 ಪಿ.ಎಂ

ಅನೇಕ ಜನ ಅಧಿಕಾರಿಗಳು ದೊಡ್ಡ ದೊಡ್ಡ ಉನ್ನತ ಸ್ಥಾನದಲ್ಲಿದ್ದಂತಹವರು ಲೂಟಿ ಮಾಡಿ ನೂರಾರು ಕೋಟಿ ರೂಪಾಯಿಗಳ ವ್ಯವಹಾರ ಮಾಡಿರುವಂಥಾದ್ದು ಬಯಲಿಗೆ ಬರುತ್ತದೆ. ಇಷ್ಟು ಮಾತನಾಡುತ್ತಾ ತಾವು ಕನ್‌ವಿನ್ಸ್ ಆಗಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಆ ವಿಶ್ವಾಸ ನನಗೆ ಇದೆ. ನಿಮ್ಮನ್ನು ಕನ್ವಿನ್ಸ್ ಮಾಡುವ ದೃಷ್ಟಿಯಿಂದ ಮಾನ್ಯ ಈಶ್ವರಪ್ಪನವರು ಕೆಲವು ವಿವರಗಳನ್ನು ಒದಗಿಸುವವರಿದ್ದಾರೆ. ಮಾನ್ಯ ದೇಶಪಾಂಡೆಯವರು ಕಳಕಳಿಯಿಂದ ಇದಕ್ಕೆ ಸಹಕಾರ ಕೊಡುವುದಕ್ಕೋಸ್ಕರ ಕೆಲವು ಮಾಹಿತಿಗಳನ್ನು ನಿಲುವಳಿ ಸೂಚನೆ ಮೂಲಕ ಅವಕಾಶ ಕೂಡ ಮಾಡಿಕೊಟ್ಟು ಈ ನಿಲುವಳಿ ಸೂಚನೆ ಮೂಲಕ 2 ವರ್ಷದಿಂದ ಹಗಲು ದರೋಡೆ ಮಾಡಿರುವುದನ್ನು ಬಯಲಿಗೆಳೆಯಲು ಅವಕಾಶ ಮಾಡಿಕೊಡಬೇಕು. ಈ ಚರ್ಚೆಯಿಂದ ಅನೇಕ ಹಗರಣಗಳು ಬಯಲಿಗೆ ಬರುವ ದೃಷ್ಟಿಯಿಂದ ಜನ ನೆಮ್ಮದಿಯಿಂದ ಜೀವನ ಮಾಡುವ ದೃಷ್ಟಿಯಿಂದ ತಾವು ಇದನ್ನು ನಿಲುವಳಿ ಸೂಚನೆ ಮೂಲಕ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರೆಂದು ಭಾವಿಸಿ ಆ ನಂಬಿಕೆ ಇಟ್ಟುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಬಂಗಾರಪ್ಪ ಸರಕಾರದ ಆಡಳಿತ ಅಲ್ಲಿ ನಡೆದ ಭ್ರಷ್ಟಾಚಾರದ ಬಗ್ಗೆ ಅಡ್ಜರ್ನ್‌ಮೆಂಟ್ ಮೂಲಕ ಕೆಲವು ವಿಚಾರ ಪ್ರಸ್ತಾಪ ಮಾಡಿದ್ದಾರೆ.ಮತ್ತು ತಮ್ಮ ಕನ್‌ಸೆಂಟ್ ಕೇಳಿದ್ದಾರೆ.ಈ ವಿಷಯ ಚರ್ಚೆಯಾಗಬೇಕು. ವಿರೋಧ ಪಕ್ಷದಲ್ಲಿ ನಾವೇನು ಕುಳಿತಿದ್ದೇವೆ ಇದನ್ನು ಯಾರೂ ಇಲ್ಲವೆಂದು ಹೇಳುವುದಿಲ್ಲ ಚರ್ಚೆಯಾಗಲೇ ಬೇಕು. ಈ ದೇಶದಲ್ಲಿ ಇಂತಹ ಭ್ರಷ್ಟ ಸರಕಾರ ಎಂದೂ ಇರಲಿಲ್ಲ. ಬಹುಶಃ ಇನ್ನು ಮುಂದೆ ಪ್ರಯತ್ನ ಮಾಡಿದರೂ ಕೂಡ ಆಗಿಲಿಕ್ಕಿಲ್ಲ. ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಆದರೆ ಇವತ್ತು...

ಡಾ|| ವೈ. ನಾಗಪ್ಪ : ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.ವಿರೋಧ ಪಕ್ಷದ ನಾಯಕರು ಇಷ್ಟೊಂದು ಭ್ರಷ್ಟಾಚರದ ಬಗ್ಗೆ ಹೇಳುತ್ತಿದ್ದಾರೆ. ಕಳೆದ 91-92ರ ಬಜೆಟ್ ಅಧಿವೇಶನದಲ್ಲಿ ಏಕೆ ಬಾಯ್ ಕಟ್ ಮಾಡಿದರೂ ಇವರು ಯಾವ ಕಾರಣಕ್ಕಾಗಿ? ಇವರೂ ಏನಾದರೂ ಶಾಮೀಲಾಗಿದ್ದರಾ? Why you have boycotted the Assembly? You have deceived the people of Karnataka.

(ಗೊಂದಲ)

ಉಪಾಧ್ಯಕ್ಷರು : ಇದು ಪಾಯಿಂಟ್ ಆಫ್ ಆರ್ಡರಿಗೆ ಬರುವುದಿಲ್ಲ.

ಶ್ರೀ ಬಿ.ಎಚ್. ಬನ್ನಿಕೋಡ್ : ನಿಮಗೆ ಮಾನವೀಯತೆ ಇಲ್ಲ, ನಮ್ಮನ್ನು ಹೊರಗಿಟ್ಟು ಸದನ ನಡೆಸಿಕೊಂಡಿರಿ ಮಾನ ಮರ್ಯಾದೆ ಇಲ್ಲ.

DR.Y. NAGAPPA : You had every right to discuss the issues in the Assembly. Instead of that, you have boyocotted the Assembly. You have deceived the people of Karnataka.

(INTERRUPTIONS)

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ ಕಾಲದಲ್ಲಿ ಒಳ್ಳೆಯ ಕೆಲಸ ಮಾಡಿದ್ದೀರಿ ದೇವರು ನಿಮಗೆ ಒಳ್ಳೆಯದು ಮಾಡಲಿ ಮುಂದಿನ ಬಾರಿ ಆರಿಸಿ ಬನ್ನಿ ಗೊತ್ತಾಗುತ್ತದೆ. ಈ ವಿಷಯ ಚರ್ಚೆಯಾಗಬೇಕು ಇದರ ಬಗ್ಗೆ ಸಮಗ್ರ ಚರ್ಚೆಯಾಗಬೇಕು. ನಾಡಿನ ಜನ ಕಳೆದ 2ವರ್ಷದಿಂದ ವಿರೋಧ ಪಕ್ಷದವರು,ಆಡಳಿತ ಪಕ್ಷದವರು ಸರಕಾರದ ಮೇಲೆ ಆಪಾದನೆ ಮಾಡುತ್ತಲೇ ಬಂದಿದ್ದಾರೆ. ಅವರದ್ದೇ ಆದ ಬೈಬಲ್ ನನ್ನ ಹತ್ತಿರ ಇದೆ. ಅವರು ಪ್ರಧಾನ ಮಂತ್ರಿಗಳಿಗೆ ಏನು ಮೆಮೊರ್‍ಯಾಂಡ ಕೊಟ್ಟಿದ್ದಾರೆ ಅದೂ ನನ್ನ ಕೈಲಿ ಇದೆ. ನೀವು ಇದಕ್ಕೆ ಕನ್‌ಸೆಂಟ್ ಕೊಡುವುದಕ್ಕಿಂತ ಮುಂಚೆ ಪ್ರಿಲಿಮಿನರಿ ಸಬ್ ಮಿಷನ್ ಮಾಡಿ ಎಂದು ಹೇಳುತ್ತಿದ್ದೀರಿ. ಪ್ರಿಲಿಮಿನರಿ ಸಬ್ ಮಿಷನ್ ನಲ್ಲಿ ನನಗೆ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ, ಎಲ್ಲಿಯ ತನಕ ಸುದೀರ್ಘವಾಗಿ ಚರ್ಚೆ ಮಾಡುವುದಿಲ್ಲ ಅಲ್ಲಿಯ ತನಕ ಸರಕಾರದ ಮೇಲೆ ಒತ್ತಯ ಮಾಡಿ ಸಿಬಿಐ ವಿಚಾರಣೆಗೆ ಹಾಕಿ ಎಂದು ಹೇಳಲಿಕ್ಕೆ ಕಷ್ಟವಾಗುತ್ತದೆ. ನಮ್ಮ ನಾಡಿನ ಜನ ನಮ್ಮ ಕಡೆ ನೋಡುತ್ತಿದ್ದಾರೆ. ಯಡಿಯೂರಪ್ಪನವರು ಪ್ರಿಲಿಮಿನಿರಿ ಸಬ್ ಮಿಷನ್ ಮಾಡಿದ್ದಾರೆ.

SRI A.K. ANANTHAKRISHANA : Is he supporting the contention of Mr. Yediyurappa or his own 68?

SRI R.V. DESHAPANDE : please wait.

SRI A.K. ANANTHAKRISHNA : I have values for our discussion. I am aware of the Rules of Procedure.

SRI R.V. DESHAPANDE : Under per preliminary submission. there are restrictions.

MR. YEDIYURAPPA : Suppose, I also utilise the oportunity even on my submission on, there will be lot of restirictions.

ಮಾನ್ಯ ಯಡಿಯೂರಪ್ಪನವರು ಏನು ಹೇಳಿದರು ಅದೆಲ್ಲಾ ಪತ್ರಿಕೆಯಲ್ಲಿ ಬಂದಿದೆ. I cannot Convince the chair. ಸುದೀರ್ಘವಾಗಿ ವಿವರವಾಗಿ ಚರ್ಚೆಯಾಗಬೇಕಾದರೆ ಒಂದೊಂದು ವಿಷಯ ತೆಗೆದುಕೊಂಡು ನಾವು ಚರ್ಚೆ ಮಾಡಬೇಕಾಗುತ್ತದೆ. Detailed discussion on has to take place.ನೋಡೋಣ, ಜನರು ನೋಡುತ್ತಿದ್ದಾರೆ. ಇವತ್ತು ತಮಗೆ ಅದು ಗೊತ್ತು. ನಾವೂ ಕೂಡ ಆಪಾದನೆ ಮಾಡಿದ್ದೇವೆ. ರೂಲಿಂಗ್ ಪಾರ್ಟಿ ಜನರು ಕೂಡ ಮಾಡಿದ್ದಾರೆ. ಆ ಅಪಾದನೆಯೊಳಗೆ ಹುರುಳು ಎಷ್ಟಿದೆ, ಸತ್ಯ ಎಷ್ಟಿದೆ ಅದನ್ನು ತಿಳಿದುಕೊಳ್ಳಬೇಕಾದರೆ ಸುದೀರ್ಘವಾದ ಚರ್ಚೆ ನಡೆಯಬೇಕಾಗುತ್ತದೆ. ಇಲ್ಲವಾದರೆ ಪ್ರಿಲಿಮಿನರಿ ಸಬ್ ಮಿಷನ್‌ನಿಂದ ನಮಗೆ ಅದನ್ನು ಕನ್‌ವಿನ್ಸ್ ಮಾಡಲಿಕ್ಕೆ ಸಾಧ್ಯವಿಲ್ಲ, ಏತಕ್ಕೆಂದರೆ

ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ಕೆಲಸವು ಸಮಸ್ಯೆಗಳು ಇವೆ. ಡಿಟೇಲ್ಸ್ ಹೇಳುವುದಕ್ಕೆ ತಾವು ಅವಕಾಶ ಕೊಡುವುದಿಲ್ಲ, ಯಾವಾಗ ಡಿಟೇಲ್ಸ್‌ಗೆ ಅವಕಾಶ ತಾವು ಕೊಡುವುದಿಲ್ಲ. How can I convince the Government? How can I convince the Chief Minister to order for a C.B.I., enquiry or a judical enquiry? It is very difficult for me to convince him in the preliminary submission.

ಆದ್ದರಿಂದ ತಮಗೆ ಏನು ಹೇಳುತ್ತಿದ್ದೇನೆಂದರೆ ಅಡ್ಜರ್ನ್‌ಮೆಂಟ್ ಮೋಷನ್‌ಗೆ ತಾವು ಅಲೋ ಮಾಡಿದ್ದರೆ ನಾನು ಪ್ರಿಲಿಮಿನರಿ ಸಬ್‌ಮಿಷನ್ ಮಾಡಿದ್ದೇನೆಂದಲ್ಲ, ನಾನು ಏನು ಹೇಳುತ್ತಿದ್ದೇನೆಂದರೆ ಅಡ್ಜರ್ನ್‌ಮೆಂಟ್ ಮೋಷ್‌ಗೆ ತಾವು ಅಲೋ ಮಾಡಿದ್ದೀರಿ. ಅದರ ಸಬ್ ಮಿಷನ್ ಮೇಲೆ ನಿಮಗೆ ಕನ್‌ವಿನ್ಸ್ ಆಗಿದ್ದರೆ ಸದನದ ಎಲ್ಲಾ ಸದಸ್ಯರಿಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಿ. ಸಪ್ಪೋಸ್ ನೀವು ಕನ್‌ವಿನ್ಸ್ ಅಲ್ಲವೆಂದರೆ, ಇಲ್ಲಿ ಅವರು ಅಡಿರತಕ್ಕಂಥ ಪ್ರಿಲಿಮಿನರಿ ಸಬ್ ಮಿಷನ್‌ಗೆ ನಾನು ಕನ್‌ವಿನ್ಸ್ ಆಗಿಲ್ಲವೆಂದು ತಾವು ರಿಜೆಕ್ಟ್ ಮಾಡಿದರೆ ನಾನು ರೂಲ್ ನಂಬರ್ 68 ರ ಪ್ರಕಾರ ಡಿಟೇಲ್ ಆಗಿ ಏನು ನೋಟೀಸ್ ಕೊಟ್ಟಿದ್ದೇನೆ ಅದನ್ನು ನೇರವಾಗಿ ಬಹಳ ಸ್ಪಷ್ಟವಾಗಿ ಬರೆದಿದ್ದೇನೆ...

ಉಪಾಧ್ಯಕ್ಷಣಿಯವರು : ಅದು ಬೇಡ ಈಗ.

ಶ್ರೀ ಆರ್.ವಿ. ದೇಶಪಾಂಡೆ : ಕ್ಲಾಸಿಕ್ ಬಗ್ಗೆಯಾಗಲಿ, ಗ್ರಾನೈಟ್ ಬಗ್ಗೆಯಾಗಲಿ, ಆಶ್ರಯ ಬಗ್ಗೆ ಯಾಗಲಿ, ಹಲವಾರು ಸಮಸ್ಯೆಗಳನ್ನು ಎತ್ತಿದ್ದೇವೆ. ನಮ್ಮ ಎಸ್.ಜೆ.ಪಿ. ಪಕ್ಷದವರು ನಾವು ನೋಟೀಸ್ ಕೊಟ್ಟಿದ್ದೇವೆ. ಅದಕ್ಕೆ ಅವಕಾಶ ಮಾಡಿಕೊಟ್ಟು ಸುದೀರ್ಘವಾದ ಚರ್ಚೆಗೆ ರಾಜ್ಯದ ಹಿತದೃಷ್ಟಿಯಿಂದ, ರಾಜ್ಯದ ಪಕ್ಷದ ಹಿತದೃಷ್ಟಿಯಿಂದ ಈ ರಾಜ್ಯದಲ್ಲಿ ಒಂದು ಒಳ್ಳೆಯ ಆಡಳಿತವನ್ನು ನೀಡಬೇಕು. ಆದೃಷ್ಟಿಯಿಂದ, ಹೊಸ ಮುಖ್ಯಮಂತ್ರಿಗಳು ನಾನು ಮೇಜರ್ ಸರ್ಜರಿ ಮಾಡುತ್ತೇನೆ. ಪ್ರಾಮಾಣಿಕವಾದ ಸರ್ಕಾರ, ಒಳ್ಳೆಯ ಸರ್ಕಾರ ಕೊಡುತ್ತೇನೆಂದು ಏನುಹೇಳಿದ್ದಾರೆ. ಆ ಮಾತನ್ನು ಜನರು ನಂಬಬೇಕಾದರೆ ಈ ಚರ್ಚೆ ಈ ಸದನದಲ್ಲಿ ಆಗಬೇಕು. ಅಡ್ಜರ್ನ್‌ಮೆಂಟ್ ಮೋಷನ್ ಅದರ ಫ್ರಿಲಿನರಿ ಸಬ್‌ಮಿಷನ್‌ಗೆ ಕನ್‌ವಿನ್ಸ್ ಆಗಿದ್ದರೆ ತಾವು ಅಲೋ ಮಾಡಬೇಕು. ರೂಲ್ 68 ಅದನ್ನು ತಾವು ಬೇಕಾದರೆ ಮುಂದೆ ತೆಗೆದುಕೊಳ್ಳಬಹುದು, ಅಥವಾ ನಾಳೆಯೇ ತೆಗೆದುಕೊಂಡು ಚರ್ಚೆಗೆ ಅವಕಾಶ ಮಾಡಿಕೊಡಿ, ಅಷ್ಟೇ ನಾನು ಹೇಳುವುದು.

ಶ್ರೀ ಸಿ ಭೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷಣೆಯವರೇ, ಮಾನ್ಯ ಯಡಿಯೂರಪ್ಪನವರು ತಮ್ಮ ಫ್ರಿಲಿಮನರಿ ಸಬ್ ಮಿಷನ್ ಏನು ಮಾಡಿದ್ದಾರೆ ಅದರ ಬಗ್ಗೆ ನಾನು ಮೊದಲೇ ಸ್ಪಷ್ಟಪಡಿಸಿದ್ದೇನೆ. ಕಳೆದ ಎರಡು ವರ್ಷಗಳಲ್ಲಿ ನಡೆದಿರತಕ್ಕಂಥ ಅವ್ಯವಹಾರಗಳ ಬಗ್ಗೆ ಆಳವಾದಂಥ ಚರ್ಚೆ ಇಲ್ಲಿ ಆಗಬೇಕಾಗಿರತಕ್ಕಂಥದ್ದು ಬಹಳ ಅವಶ್ಯಕತೆ ಇದೆ.ಈಗ ಅವರು ಮಾಡಿರತಕ್ಕಂಥ ಪ್ರಾಸ್ತಾವಿಕೆಯಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಹೋದರೆ ಆ ಕಡೆಯ ಸದಸ್ಯರು ಏನು ಹೇಳಿದರೆಂದರೆ ನೀವು ಫ್ರಿಲಿಮನರಿ ಸಬ್ ಮಿಷನಲ್ಲಿಯೇ ಹೋಗಬೇಕೆ ವಿನಹಃ ನೀವು ಅದಕ್ಕಿಂತ ಮುಂದೆ ಹೋಗಬಾರದು.ಎಂದು ಹೇಳಿದರು. ನಾನು ಅದರ ವಿವರಕ್ಕೆ ಹೋಗುವುದಿಲ್ಲ, ಆದ್ದರಿಂದ ಅದಕ್ಕೆ ತಾವು ಅಲೋ ಮಾಡಬಾರದೆನ್ನತಕ್ಕಂಥನ್ನು ಆ ಕಡೆಯ ಸದಸ್ಯರು ಹೇಳಿದ್ದಾರೆ. ನಮಗೆ ಏನು ಆತಂಕವಾಗಿದೆ. ಎಂದರೆ ಅದು ವಿವರವಾದ ಚರ್ಚೆಗೆ ಅವಕಾಶವಾಗುವುದಿಲ್ಲ ಏತಕ್ಕೆಂದರೆ ಅವರ ಸಂಖ್ಯಾಬಲ

ಆ ಕಡೆ ಎಷ್ಟಿದೆ ನಮ್ಮ ಸಂಖ್ಯಾಬಲ ಎಷ್ಟಿದೆ ಎನ್ನುವುದು ನಮಗೂ ಕೂಡ ಗೊತ್ತಿದೆ. ಈ ಸಂಖ್ಯಾಬಲದ ಆಧಾರದ ಮೇಲೆ ಕೊನೆಗೆ ಇದು ತೀರ್ಮಾನವಾಗುತ್ತದೆ. ತೀರ್ಮಾನವಾಗತಕ್ಕಂಥ ಸಂದರ್ಭದಲ್ಲಿ ನಾವು ಹೇಳಬೇಕಾಗಿರುವಂಥದ್ದನ್ನು ನಾವು ಹೇಳಬೇಕಾಗುತ್ತದೆ. ಕೊನೆಗೆ ತೀರ್ಮಾನ ಅವರದೇ ಇರುತ್ತದೆ. ಆದರೆ ನಾವು ಹೇಳುವುದಕ್ಕೂ ಕೂಡ ಅವಕಾಶವಿಲ್ಲ. ಮಾನ್ಯ ಯಡಿಯೂರಪ್ಪನವರೂ ಸಹ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದಾಗ ಏನು ಬಂದಿತು ಎಂದರೆ ವಿವರಕ್ಕೆ ಹೋಗಬಾರದೆನ್ನುವ ಉತ್ತರ ಬಂದಿತು. ಅಲ್ಲಿಗೆ ಇದು ಏನಾಗುತ್ತದೆಂದರೆ ನಾವು ಇಲ್ಲಿ ಗಿಳಿ ಪಾಟವನ್ನು ಒಪ್ಪಿಸಿದಂತಾಗುತ್ತದೆ. ಈ ವಿಚಾರದಲ್ಲಿ ಆ ಗಿಳಿ ಪಾಠವನ್ನು ಕರ್ನಾಟಕದ ರಾಜ್ಯದ ಜನತೆ ಒಪ್ಪುವುದಿಲ್ಲ. ಗಿಳಿಪಾಠವಲ್ಲ ಅವರಿಗೆ ಬೇಕಾಗಿರುವುದು. ರಾಜ್ಯದಲ್ಲಿ ಏನು ನಡೆದಿದೆ. ಏನಾಗಿದೆ ಎನ್ನತಕ್ಕಂಥದ್ದು ಜನರಿಗೆ ಬೇಕಾಗಿರತಕ್ಕಂಥದ್ದು. ಅದಕ್ಕಾಗಿ ಇವತ್ತಿನ ದಿವಸ ಈ ವಿಷಯದಲ್ಲಿ ನಾನು ನಿಯಮಾವಳಿ 68 ರ ಪ್ರಕಾರ ಸೂಚನೆಯನ್ನು ಕೊಟ್ಟಿರತಕ್ಕಂಥದ್ದು. ಆದ್ದರಿಂದ ತಾವು ಮಾನ್ಯ ಯಡಿಯೂರಪ್ಪನವರು ಕೇಳಿರತಕ್ಕಂಥದ್ದನ್ನು ತಮ್ಮ ಮನಸ್ಸಿಗೆ ಒಪ್ಪಿಗೆ ಯಾಗಿದ್ದರೆ ಅದರ ಪ್ರಕಾರವಾಗಿಯಾಗಲಿ, ನಿಮಗೆ ಯಾವುದೇ ಪ್ರಕಾರವಾಗಿಯಾಗಲಿ ಇದಕ್ಕೆ ಚರ್ಚೆಗೆ ಅವಕಾಶ ಕೊಡಬೇಕು ಎಂದು ಹೇಳಿ ನನ್ನ ಒತ್ತಾಯ. ಮತ್ತೆ ಇನ್ನೊಂದು ವಿಚಾರ, ನಾನು ಇಲ್ಲಿ ಪ್ರಸ್ತಾಪ ಮಾಡಿದರೆ ಬಹುಶಃ ಮಾನ್ಯ ಯಡಿಯೂರಪ್ಪನವರಿಗೆ ಸಿಟ್ಟು ಬರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಪ್ಪ ಇಲ್ಲ.

ಉಪಾಧ್ಯಕ್ಷಣೆಯವರು : ಈಗ ಇದಕ್ಕೆ ಸೀಮಿತ ಮಾಡಿಕೊಂಡುಬಿಡಿ.

ಶ್ರೀ ಸಿ. ಬೈರೇಗೌಡ : ಆಯಿತು. ಆಯಿತು ಏನೋ ಸ್ನೇಹಿತರು ಹೇಳುತ್ತಿದ್ದಾರೆ. ಆಯಿತು. ಆದ್ದರಿಂದ ಈ ಹಂತದಲ್ಲಿ ಇಷ್ಟಕ್ಕೆ ನಾನೂ ನಿಲ್ಲಿಸಿ ನಮಗೆ ಇಲ್ಲಿ ಯಾವುದೇ ನಿಯಮಾವಳಿಯ ಪ್ರಕಾರವಾಗಲಿ ಅದನ್ನು ದೀರ್ಘವಾದಂಥ ಮತ್ತು ಆಳವಾದಂಥ ಚರ್ಚೆಗೆ ತಾವು ದಯವಿಟ್ಟು ಅವಕಾಶ ಮಾಡಿಕೊಡಬೇಕೆಂದು ಹೇಳಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ : ಚರ್ಚೆಗೆ ವಿರುದ್ಧವಾಗಿ ನಾವು ಮಾತನಾಡಲಿಲ್ಲ. ಚರ್ಚೆಯಾಗಬಾರದೆಂದು ಹೇಳಲಿಲ್ಲ. ನಮ್ಮ ನಿಲುವು ಏನೆಂದರೆ ತಾವು ನಿಲುವಳಿ ಸೂಚನೆ ಕೊಟ್ಟಿದ್ದೀರಿ, ಅಧ್ಯಕ್ಷಣೆಯವರು ಒಪ್ಪಿದರೆ ಚರ್ಚೆಗೆ ಅವಕಾಶ ಮಾಡಿಕೊಟ್ಟಮೇಲೆ ಎಷ್ಟು ಬೇಕಾದರೂ ಚರ್ಚೆ ಮಾಡಿ ಎಂದು ಹೇಳಿದ್ದಾರೆ. ಅದಕ್ಕೆ ಮೊದಲು ಅನಾವಶ್ಯಕವಾಗಿ ಗೊಂದಲದ ರೀತಿಯಲ್ಲಿ ಚರ್ಚೆ ಮಾಡುವುದು ಬೇಡ.

ಶ್ರೀ ಬಿ.ಎಸ್. ಎಡಿಯೂರಪ್ಪ : ಕನ್‌ವಿನ್ಸ್ ಮಾಡುವುದಕ್ಕೆ ಎದ್ದುನಿಂತಾಗ ಅವಕಾಶ ಕೊಡಲಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ : ಸರ್ಕಾರದ ಮೇಲೆ ಆರೋಪ ಮಾಡಿ ನೀವು ಮಂತ್ರಿಗಳಾಗಬೇಕಾಗಿತ್ತು, ನಿಮಗೆ ಸ್ಥಾನಮಾನ ಬೇಕಾಗಿತ್ತು. ಭ್ರಷ್ಟಾಚಾರದ ವಿರುದ್ಧ ಅಲ್ಲ ನಿಮ್ಮ ಆರೋಪ.

ಉಪಾಧ್ಯಕ್ಷಣೆಯವರು : ಅಟೆನ್‌ಷನ್ ಡೈವರ್ಟ್ ಮಾಡಬೇಡಿ.

ಶ್ರೀ ಎ.ಕೆ. ಅನಂತಕೃಷ್ಣ : ದಯವಿಟ್ಟು ತೀರ್ಮಾನ ಕೊಡಿ. ಮೇಲೆ ಚರ್ಚೆಯಾಗಲಿ.

ಶ್ರೀ ವಾಟಾಳ್ ನಾಗರಾಜ್ ; ಮತ್ತೊಮ್ಮೆ ತಮಗೆ ಮನವಿ ಮಾಡುತ್ತಿದ್ದೇನೆ. ಇಲ್ಲಿ ಎರಡು ವಿಚಾರಗಳು ಬಂದಿವೆ. ಒಂದು ರೂಲ್-68 ಮತ್ತೊಂದು ನಿಲುವಳಿ ಸೂಚನೆ. ನಿಲುವಳಿ ಸೂಚನೆಯನ್ನು ಒಪ್ಪಬೇಕೇ ಬಿಡಬೇಕೇ ಎಂಬ ಬಗ್ಗೆ ನಿಮ್ಮ ವಾದವನ್ನು ಮಂಡಿಸಿ ಎಂದು ಹೇಳಿದ್ದೀರಿ. ಅದರಲ್ಲಿ ಜಾಸ್ತಿ ನಿಲುವಳಿ ಸೂಚನೆಯ ಒಳಹೊಕ್ಕು ತೀವ್ರವಾದ ವಿಚಾರಕ್ಕೆ ಹೋಗಬಾರದೆಂಬ ನಿಬಂಧನೆ ಕೂಡ ಇದೆ. ನಿಲುವಳಿ ಸೂಚನೆಯನ್ನು ಒಪ್ಪಿ ಚರ್ಚೆಗೆ ಅವಕಾಶ ಕೊಡುವವರೆಗೂ ನಾವು ಸುದೀರ್ಘವಾಗಿ ಹೋಗತಕ್ಕ ಅವಕಾಶ ಇಲ್ಲ. ನಿಜ ಬಹಳ ಹತ್ತಿರದಲ್ಲಿ ನಡೆದಿರತಕ್ಕ ಘಟನೆಗಳು ಆಗಿರಬೇಕೆಂದು ನಿಮ್ಮ ಪ್ರಮುಖವಾದ ನಿಲುವಳಿ ಸೂಚನೆಯ ಹಿನ್ನೆಲೆ. ಹತ್ತಿರವಾದ ಘಟನೆ ಏನು? ಅದಕ್ಕೆ ನೂರೆಂಟು ಹೇಳಬೇಕಾಗಿಲ್ಲ. ಸರ್ಕಾರವನ್ನು ಬದಲಾವಣೆ ಮಾಡಿದ್ದೇ ಘಟನೆ. ಬಂಗಾರಪ್ಪನವರ ಸರ್ಕಾರವನ್ನು ತೆಗೆಯುವುದಕ್ಕೆ ಏನು ಕಾರಣ ಇತ್ತು? ಇದು ಒಂದೇ ಸಾಕು. ಬಂಗಾರಪ್ಪನವರು ಮಾಡಿರತಕ್ಕ ಅನೇಕ ವಿಚಾರಗಳು ಬೇಕಾಗಿಲ್ಲ. ಬಂಗಾರಪ್ಪನವರ ಸರ್ಕಾರ ಬದಲಾವಣೆಯಾಗಬೇಕಾದರೆ ಕಾರಣವೇನು ?

ಇದು ಒಂದರ ಮೇಲೆ ನಿಲುವಳಿ ಸೂಚನೆಯನ್ನು ಒಪ್ಪಿ ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗುತ್ತದೆ. ರಾಜ್ಯದ ಜನತೆ ಇದರ ಬಗ್ಗೆ ಏನೂ ಚರ್ಚೆ ನಡೆಯಲಿಲ್ಲ. ಎಂಬ ಗೊಂದಲಕ್ಕೆ ಸಿಕ್ಕಬಾರದು. ತಾವು ಅಧ್ಯಕ್ಷಿಣಿಯವರಾಗಿದ್ದೀರಿ. ತಾವು ಸಮಗ್ರವಾಗಿ ಚರ್ಚೆಗೆ ಅವಕಾಶ ಕೊಡಬೇಕಾದರೆ ಎರಡರಲ್ಲಿ ಒಂದನ್ನು ಒಪ್ಪಲೇಬೇಕು. ಅನೇಕ ಸಾರಿ ಏನಾಗುತ್ತದೆಂದರೆ ಇಂಥ ವಿಚಾರಗಳಲ್ಲಿ ನಮ್ಮನ್ನು ಕೇಳಿ, ಕೊನೆಯಲ್ಲಿ ತಮ್ಮ ತೀರ್ಪನ್ನು ಕೊಡಿ. ತಮ್ಮ ತೀರ್ಪನ್ನು ನಾವು ಪ್ರಶ್ನೆ ಮಾಡುವುದಿಲ್ಲ. ಆದರೆ ಕೊನೆಯಲ್ಲಿ ತಳ್ಳಿ ಹಾಕಿದ್ದೇನೆಂದರೆ ಪ್ರಯೋಜನವಾಗುವುದಿಲ್ಲ. ತಾವು ರೂಲ್ 68ರ ಪ್ರಕಾರ ಸಮಗ್ರ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು. ಎಳೆಎಳೆಯಾಗಿ ಬಿಡಿಸಿ ಸಮಗ್ರವಾಗಿ ಚರ್ಚಿಸಬಹುದು. ನಿಲುವಳಿ ಸೂಚನೆಯಲ್ಲಿ ಅವಕಾಶ ಕೊಟ್ಟರೆ ಇವತ್ತು ಚರ್ಚೆಗೆ ಅವಕಾಶವಾಗುತ್ತದೆ. ನಾವು ಸಿದ್ಧರಾಗಿದ್ದೇವೆ. ದಯವಿಟ್ಟು ತಾವು ಚರ್ಚೆಗೆ ಅಡ್ಡಿ ಮಾಡುವುದಿಲ್ಲ ಅಂದು ಕೊಂಡಿದ್ದೇನೆ. ಅದು ಆಗಬಾರದು. ಅನಂತರ ಕೃಷ್ಣ ಅವರು ಹೇಳಿದರು ನಾವು ಚರ್ಚೆಗೆ ಅಡ್ಡಿಪಡಿಸುವುದಿಲ್ಲ ಎಂದು. ಅಧ್ಯಕ್ಷರು ಅವಕಾಶ ಕೊಟ್ಟರೆ ಚರ್ಚಿಸಿ ಎಂದರು. ಅದು ಈಗ ತಮ್ಮ ನ್ಯಾಯಾಲಯಕ್ಕೆ ಬಂದಿದೆ. ದಯವಿಟ್ಟು ತಾವು ಇದಕ್ಕೆ ಅವಕಾಶ ಕೊಡಲೇಬೇಕು. ಅವಕಾಶ ಕೊಡಲಿಲ್ಲವೆಂದರೆ ನಿಮ್ಮ ವಿರುದ್ಧ ಧರಣಿ ಸಭಾತ್ಯಾಗ ಮಾಡುತ್ತೇವೆಂದು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಹಕ್ಕಿಗೆ ಹೋರಾಟ ನಡೆಸಬೇಕಾಗುತ್ತದೆ. ಆ ಹೋರಾಟಕ್ಕೆ ಅವಕಾಶ ಕೊಡಬಾರದೆಂದು ಮನವಿ ಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೆ ಇದು ಇಡೀ ಕರ್ನಾಟಕ ರಾಜ್ಯದ, ಇಡೀ ದೇಶದ ಮನೆ ಮನೆ ಮಾತಾಗಿರತಕ್ಕ ವಿಚಾರ. ಎರಡು ವರ್ಷದ ಸರ್ಕಾರ ಭ್ರಷ್ಟಚಾರದ ಸರ್ಕಾರ ಎಂಬುದು ಜನರಿಗೆ ಗೊತ್ತಿರುವ ವಿಷಯ. ಆದರೆ ಸ್ಪಷ್ಟವಾಗಿ ಇದರ ಬಗ್ಗೆ ಸಾಕ್ಷಿ ಬೇಕೆಂದರೆ ಮುಖ್ಯ ಮಂತ್ರಿ ಸ್ಥಾನದಲ್ಲಿ ಕುಳಿತಿರತಕ್ಕ ವೀರಪ್ಪ ಮೊಯಿಲಿಯವರೇ ಸಾಕ್ಷಿ. ಬಂಗಾರಪ್ಪನವರು

ಮುಖ್ಯ ಮಂತ್ರಿ ಸ್ಥಾನದಿಂದ ನಿರ್ಗಮಿಸಿರುವುದೇ ಸಾಕ್ಷಿ. ಕೇಂದ್ರ ಸರ್ಕಾರ ಅವರನ್ನು ತಮ್ಮ ಸ್ಥಾನ ತೆರವು ಮಾಡುವುದಕ್ಕೆ ಸೂಚಿಸಿದ್ದೇ ಪ್ರಮುಖವಾದ ಸಾಕ್ಷಿ.

ಒಬ್ಬ ಮಾನ್ಯ ಸದಸ್ಯರು : ನಮ ನಮಗೆ ಏತಕ್ಕೆ ಜಗಳ ತರುತ್ತೀರಿ?

ಶ್ರೀ ಕೆ.ಎಸ್. ಈಶ್ವರಪ್ಪ : ಕೇವಲ 3 ವರ್ಷಗಳ ಅವಧಿಯಲ್ಲಿ 3 ಜನ ಮುಖ್ಯ ಮಂತ್ರಿಗಳಾದರು.

ಸನ್ಮಾನ್ಯ ಹಿಂದಿನ ಮುಖ್ಯಮಂತ್ರಿಗಳಾದ ವೀರೇಂದ್ರಪಾಟೀಲರೇ ಹೇಳಿದರು, ಇಂತಹ ಭ್ರಷ್ಟಾಚಾರದ ಸರ್ಕಾರವನ್ನು ಎಂದೂ ಕಂಡಿಲ್ಲ ಎಂದು. ದಾಸಪ್ಪ ಅಂಡ್ ಕಂಪೆನಿ ಹತ್ತಿರ 400 ಕೋಟಿ ರೂಪಾಯಿ.....

(ಗೊಂದಲ)

ಈ 400 ಕೋಟಿ ಎಲ್ಲಿದೆ? ಪಕ್ಷಕ್ಕೆ ಬಂದಿದೆಯೇ? ... ಇದನ್ನು ನೋಡಬೇಕಾಗಿದೆ.

ಉಪಾಧ್ಯಕ್ಷರು : ವಿವರಕ್ಕೆ ಹೋಗುವುದು ಬೇಡ. ಚರ್ಚೆಗೆ ಅವಕಾಶ ಕೊಟ್ಟಾಗ ಚರ್ಚೆಮಾಡಿ. ರೆಕಾರ್ಡ್ಸ್ ತೆಗೆದುಕೊಂಡು ಚರ್ಚೆಮಾಡಿ.

ಶ್ರೀ ವಾಟಾಳ್ ನಾಗರಾಜ್ : ದಾಖಲೆಗಳು ಕರ್ನಾಟಕದ ಪ್ರತಿ ಅಂಗಡಿಯಲ್ಲಿ ಸಿಗುತ್ತವೆ. ಹೊಸದಾಗಿ ದಾಖಲೆ ಕೇಳಬೇಕಾಗಿಲ್ಲ. ಎಲ್ಲಾ ಕಡೆ ಸಿಗುತ್ತವೆ. ಬೀದಿಬೀದಿಯಲ್ಲಿ ದಾಖಲೆ ಮಾಡುತ್ತಿದ್ದಾರೆ. ದಯಮಾಡಿ ಚರ್ಚೆಗೆ ಅವಕಾಶ ಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಪ್ರಜಾಪ್ರಭುತ್ವದಲ್ಲಿ ಕೋಟ್ಯಾಂತರ ರೂಪಾಯಿಗಳು ಲೂಟಿ ಆಗಿರುವುದನ್ನು ಮತ್ತೆ ಹೇಗಾದರೂ ಮಾಡಿ ವಾಪಾಸ್ ತರುವುದಕ್ಕೆ ಅವಕಾಶ ಆಗಬೇಕು. ಇದರ ಬಗ್ಗೆ ತನಿಖೆ ಆಗಬೇಕು. ಸನ್ಮಾನ್ಯ ಚಂದೂಲಾಲ್ ಚಂದ್ರಾರ್ ಕರ್‌ರವರು ಹೇಳುತ್ತಾರೆ, ನಿರ್ಗಮನ ರಾಜಕಾರಣಿ ಒಬ್ಬ ತೆರಬೇಕಾದ ಅತ್ಯಂತ ದುಬಾರಿ ದಂಡ, ಅದು ತೆರವಾಗಿದೆ ಎಂದು. ಯಾವುದಾದರೂ ಒಬ್ಬ ವ್ಯಕ್ತಿ ಒಂದು ಸ್ಥಾನಕ್ಕೆ ಹೋಗಿ ಎಷ್ಟು ಬೇಕಾದಷ್ಟೂ ಲೂಟಿ ಮಾಡಿಕೊಂಡ ಆ ಸ್ಥಾನ ಕಳೆದುಕೊಂಡು ಹೋದರೆ ಈ ದೇಶದಲ್ಲಿ ಆ ಬಗ್ಗೆ ತನಿಖೆ ಇಲ್ಲವೇ? ಕೋಟ್ಯಾಂತ ರೂಪಾಯಿಗಳ ಲೂಟಿಯಾದರೂ ಚಿಂತೆ ಇಲ್ಲ, ಇನ್ನೊಬ್ಬ ಮುಖ್ಯ ಮಂತ್ರಿಗಳನ್ನು ಕೂರಿಸಿದ್ದೇವೆನ್ನುವುದಾದರೆ, ಇಷ್ಟು ಸಾಕು ಎನ್ನುವ ತೀರ್ಮಾನಕ್ಕೆ ಬರುವುದಾದರೆ ಇಡೀ ರಾಜ್ಯದ ಜನತೆಗೆ ದ್ರೋಹ ಮಾಡಿದ ಹಾಗೆ ಆಗುತ್ತದೆ. ಚರ್ಚೆ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಬೇಕು. ಸ್ವಚ್ಛ ಆಡಳಿತ ಕೊಡುತ್ತೇವೆಂದು ಹೇಳಿ ಅಧಿಕಾರಕ್ಕೆ ಬಂದಿರಿ. ತಮಗೆ 184 ಸ್ಥಾನಗಳು ಸಿಕ್ಕವು. ಇದೆಲ್ಲಾ ಚರ್ಚೆಯಾಗಬೇಕು. ಮತ್ತೊಂದು ವಿಷಯ ಎಂದರೆ ಶಬರಿ ಎಜ್ಯುಕೇಷನ್ ಟ್ರಸ್ಟ್ ಎಂದು ಶಿವಮೊಗ್ಗದಲ್ಲಿ ಆಗಿದೆ. ಇದರ ಮೂಲಕ 250 ಎಕರೆ ಲೂಟಿಯಾಗಿದೆ. ಕಾನೂನು ಬಾಹಿರ ಕೆಲಸ ಆಗಿದೆ. ಒಂದೇ ಒಂದು ಪತ್ರವನ್ನು ಯಾವುದೋ ಒಬ್ಬ ವ್ಯಕ್ತಿ ಶಿವಮೊಗ್ಗ ಸಿಐಟಿಬಿಗೆ ಕೊಟ್ಟಾಗ ಅದನ್ನು ಸ್ಯಾಂಕ್ಷನ್ ಮಾಡುವ ಸ್ಥಿತಿ ಈ ರಾಜ್ಯದಲ್ಲಿ ಬಂದಿದೆ. 100 ಕೋಟಿಗಳಿಂತಲೂ

ಹೆಚ್ಚು ಲೂಟಿಯಾಗಿದೆ. ಇಂತಹ ವಿಚಾರದ ಬಗ್ಗೆ ಚರ್ಚೆ ಮಾಡುವ ದೃಷ್ಟಿಯಿಂದ ಸಮಯ ಇಲ್ಲ, ವಿವರ ಬೇಡ ಎಂದು ಹೇಳುತ್ತಿದ್ದೀರಿ. ಈ ಬಗ್ಗೆ ಸಿ.ಬಿ.ಐ ತನಿಖೆ ಮಾಡಿದರೆ ಮಾತ್ರ ಸಾಧ್ಯವೇ ಹೊರತು ಈ ಬಗ್ಗೆ ನಿಲುವಳಿ ಸೂಚನೆ ಮುಖಾಂತರ ಚರ್ಚೆ ಮಾಡುವುದಕ್ಕೆ ಅವಕಾಶಕೊಟ್ಟರೆ ಮಾತ್ರ ಇಡೀ ಸಮಾಜಕ್ಕೆ ಇದು ಸ್ಪಷ್ಟವಾಗುತ್ತದೆ. ಭ್ರಷ್ಟಾಚಾರ ಮಾಡಿದ ವ್ಯಕ್ತಿಗೆ ಶಿಕ್ಷೆಯಾಗಬೇಕು. ಆ ದಿಕ್ಕಿನಲ್ಲಿ ಸಹಕಾರ ಕೊಟ್ಟರೆ ಪ್ರಜಾಪ್ರಭುತ್ವಕ್ಕೆ ಜಯವಾಗುವುದರಿಂದ ಈ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಧಾನಸಭೆಗೆ ಒಳ್ಳೆಯ ಇತಿಹಾಸ ಇದೆ. ಒಳ್ಳೆಯ ಸಂಪ್ರದಾಯವನ್ನು ಅನುಸರಿಸಿಕೊಂಡು ಬಂದಿದ್ದೇವೆ. ಇಡೀ ರಾಷ್ಟ್ರದಲ್ಲಿ ಒಳ್ಳೆಯ ಹೆಸರು ಇದೆ. ಏನಾದರೂ ಮಾಡಬೇಕಾದರೆ ಸಂಪ್ರದಾಯವನ್ನು ಬಿಡದೇ ಸಂಪ್ರದಾಯವನ್ನು ಅನುಸರಿಸಿಕೊಂಡು ಬರಬೇಕು. ಏನಾದರೂ ಒಂದು ಹೊಸ ಪದ್ಧತಿ ಮಾಡಿದರೆ ಅದು ನಾನ್ನು ಮುಂದೆ ಅನುಸರಿಸಬೇಕಾದ ಪರಿಸ್ಥಿತಿ ಬಂದು ಅನೇಕ ಕಾರಣಗಳಿಗೆ ಒಳಗಾಗಬೇಕಾಗುತ್ತದೆ. ಈ ನಿಯಾಮಾವಳಿಗಳಿಂದ ನಮಗೆ ನಾವೇ ಬಂಧನ ಹಾಕಿಕೊಂಡಿದ್ದೇವೆ. ಈ ನಿಯಮಾವಳಿ ಅನುಸರಿಸಿ ಎಲ್ಲಾ ಸ್ವತಂತ್ರವಹಿಸಿ ಕೆಲಸ ಮಾಡಬೇಕಾಗುತ್ತದೆ. ನಿಯಮಾವಳಿ ಪ್ರಕಾರ ತಾವು ಅವಕಾಶ ಕೊಟ್ಟರೆ ಹೇಗೆ ಅರ್ಜೆಂಟ್ ಎಂದು, ಸ್ಪೆಸಿಫಿಕ್ ಮ್ಯಾಟರ್ ಎಂದು ಅವರು ತಿಳಿಸಬೇಕು. ಅದು ಇದ್ದರೆ ತಾನೇ ಇದು ಬರಬೇಕು. ಅಮ ಎರಡೂ ವಿಷಯ ಬಿಟ್ಟು ಬೇರೆ ಎಲ್ಲಾ ವಿಷಯವನ್ನೂ ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ತಾವು ಈಗ ಈ ಸದನದಲ್ಲಿ ಮಂತ್ರಿಗಳಾಗಿ ಇರುವುದೇ ಸಾಕ್ಷಿ, ನಿಲುವಳಿ ಸೂಚನೆಗೆ ರಾಮಸ್ವಾಮಿಯವರು ಮಂತ್ರಿಗಳಾಗಿರುವುದೇ ಸಾಕ್ಷಿ, ತಾವು ಹೇಗೆ ಮಂತ್ರಿಗಳಾಗಿದಿರಿ? ತಮ್ಮ ಬಗ್ಗೆ ನನಗೆ ಅಪಾರ ಗೌರವ ಇದೆ.

ಉಪಾಧ್ಯಕ್ಷರು : ತಾವು ಹೇಳಿದ್ದನ್ನು ಅವರು ಕೇಳಿದ್ದಾರೆ. ಅವರು ಮಾತನಾಡುವುದಕ್ಕೆ ಬಿಡಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ವಿಷಯ ಮಂಥನ ಬಂದಾಗ ಮಾಡೋಣ. ನಿಲುವಳಿ ಸೂಚನೆ ರೂಪದಲ್ಲಿ ತಾವು ಸಭಾಧ್ಯಕ್ಷರಿಗೆ ಒಪ್ಪಿಸುವುದಕ್ಕೆ ಸಾಕಷ್ಟು ಮೆಟೀರಿಯಲ್ ಆಧಾರಗಳನ್ನು ತಮಗೆ ಕೊಡದೇ ಇರುವುದರಿಂದ ನಿಲುವಳಿ ಸೂಚನೆಯನ್ನು ವಜಾ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರು ತಾವು ರೂಲಿಂಗ್ ಕೊಡುವುದಕ್ಕೆ ಮುಂಚೆ ಒಂದು ಮಾತು. 10-12 ದಿವಸಗಳಿಂದ ಸದನದ ಎಲ್ಲಾ ಕಾರ್ಯಕಲಾಪಗಳಲ್ಲಿ ನಾವು ಸಹಕಾರ ಕೊಟ್ಟುಕೊಂಡು ಬಂದಿದ್ದೇವೆ. ಯಾರನ್ನಾದರೂ ಇಕ್ಕಟ್ಟಿಗೆ ಸಿಕ್ಕಿಸಬೇಕೆಂದು ಈ ಕಡೆ ಕುಳಿತಿರುವವರಾಗಲಿ ಆ ಕಡೆ ಕುಳಿತಿರಿವವರಾಗಲಿ ಇಲ್ಲ, ಆಡಳಿತದಲ್ಲಿ ಏನಾದರೂ ಅನ್ಯಾಯಗಳು ಆಗಿದ್ದರೆ ಅದು ಬಹಿರಂಗವಾಗಬಾರದು ಅದರ ತನಿಖೆಯಾಗಬಾರದು ಎನ್ನುವ ಅಭಿಪ್ರಾಯವಿದೆಯೆಂದು ನಾನು ತಿಳಿದುಕೊಂಡಿಲ್ಲ, ಆದರೆ ನೀವು ಪ್ರಮಾಣಿಕವಾಗಿದ್ದರೆ ನಿಲುವಳಿ ಸೂಚನೆಯ ಮುಖಾಂತರ ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ಅನುಕೂಲ

ಮಾಡಿಕೊಡಿಯೆಂದು ತಾವು ಕೇಳಬೇಕಿತ್ತು. ತಾವೇನು ಹೋರಾಟ ಮಾಡಿಕೊಂಡು ಅಧಿಕಾರಕ್ಕೆ ಬಂದಿದ್ದೀರಿ, ಕೇವಲ ಕುರ್ಚಿಗಾಗಿ ಹೋರಾಟ ಮಾಡಿದ್ದೀರಿ ಇದರಲ್ಲಿ ಜನರ ಹಿತ ಇಲ್ಲವೆಂದು ತಿಳಿದುಕೊಳ್ಳುತ್ತೇವೆ. ಸತ್‌ಸಂಪ್ರದಾಯದ ಬಗ್ಗೆ ಮಾನ್ಯ ಮಂತ್ರಿಗಳು ಮಾತನಾಡಿದರು. ನಿಯಮಗಳ ಅಡಿಯಲ್ಲಿ ಈ ರಾಜ್ಯದಲ್ಲಿ ಆಗಿರುವಂತಹ ಅವ್ಯವಹಾರಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲದಿದ್ದರೆ ಬಹುಶಃ ನಿಯಮಗಳ ಬಗ್ಗೆ ನಾವು ಯೋಚನೆ ಮಾಡುವಂತಹ ಕಾಲ ಬರಬಹುದು. ನಾನು ವಿನಂತಿ ಮಾಡುತ್ತೇನೆ, ಸರ್ಕಾರ ಈಗ ಮುಂದೆ ಬಂದು, ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಇಲ್ಲದಿದ್ದರೆ ಜನ ನಮಗೆ ಏನು ಈ ಸ್ಥಾನದಲ್ಲಿ ಕೂರಿಸಿದ್ದಾರೆ...

ಉಪಾಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ತಾವು ಮಾತನಾಡಿದ್ದೀರಿ ದಯವಿಟ್ಟು ಕುಳಿತುಕೊಳ್ಳಿ. I reserve my ruling on this Adjournment Motion and go to the next subject.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನದು ಒಂದೇ ಒಂದು ಮಾತು. ನಮ್ಮ ಜನತಾದಳದ ಸ್ನೇಹಿತರು ನಿಯಮ ೬೮ರಡಿಯಲ್ಲಿ ಚರ್ಚೆ ಮಾಡುತ್ತೇವೆಂದು ನೆಪ ಮಾಡಿ ಕೊಂಡು ಭ್ರಷ್ಟಚಾರದ ಹಗರಣಗಳಲ್ಲಿ ಶಾಮೀಲಾಗಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಉದ್ದೇಶ ಪೂರ್ವಕವಾಗಿ ಚರ್ಚೆಗೆ ಅಡ್ಡಿ ಮಾಡಿಕೊಂಡು ಸಿಬಿಐ ಅಥವಾ ಇನ್ನಾವುದೇ ತನಿಖೆಯಾದರೆ ಎಲ್ಲಾ ಬಯಲಿಗೆ ಬರುತ್ತದೆಂದು ಹೇಳಿ ಹೀಗೆ ಮಾಡಿದ್ದಾರೆ ಈ ತರಹ ಜನತಾದಳದ ಮುಖಂಡರ ನಡವಳಿಕೆಯನ್ನು ನಾನು ಧಿಕ್ಕರಿಸಿ ಸಭಾತ್ಯಾಗ ಮಾಡುತ್ತೇನೆ.

MEDAM DEPUTY SPEAKER: I reserve my ruling.

(ಗೊಂದಲ)

(ಈ ಹಂತದಲ್ಲಿ ಭಾರತೀಯ ಜನತ ಪಾರ್ಟಿಯ ಸದಸ್ಯರು ಸಭಾತ್ಯಾಗ ಮಾಡಿದರು.)

ಉಪಾಧ್ಯಕ್ಷರು : ಏತಕ್ಕೆ ವಾಕ್ ಔಟ್ ಮಾಡುತ್ತೀರಿ? You participate in the debate. (ಈ ಸಂದರ್ಭದಲ್ಲಿ ಯಡಿಯೂರಪ್ಪನವರು ತಮ್ಮ ಪೀಠದಿಂದ ದೂರ ನಿಂತು ಮಾತನಾಡುತ್ತಿದ್ದರು.)

ಉಪಾಧ್ಯಕ್ಷರು : ಈ ತರಹ ಮಾತನಾಡಿದರೆ ಹೇಗೆ? ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಭಾತತೀಯ ಜನತಾಪಾರ್ಟಿಯವರ ಆಟ ಏನನೆಂದರೆ, ನಿಲುವಳಿ ಸೂಚನೆ ಮಾಡಿದರೆ ವಿವರವಾಗಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲವೆಂದು ಇವರಿಗೆ ಗೊತ್ತು. ನಿಯಮ 68ರ ಪ್ರಕಾರ ವಿವರವಾಗಿ ಚರ್ಚೆ ಮಾಡಲಿಕ್ಕೆ ಅವಕಾಶವಿದೆ. ಹಾಗಾಗಿ ವಿವರವಾಗಿ ಚರ್ಚೆ ಮಾಡಿದರೆ ಅಲ್ಲಿರುವ ಜನ ಹಾಗೂ ಮಾನ್ಯ ಬಂಗಾರಪ್ಪನವರಿಗೆ ಮತ್ತು ಕೆಲವರಿಗೆ ಕಷ್ಟ ಆಗಬಹುದು ಕೆಲವು ಅಧಿಕಾರಗಳಿಗೆ ಕಷ್ಟ ಬರಬಾರದೆಂದು ತಿಳಿದು ಇವರು ಸಹ ಶಾಮೀಲಾಗಿ ಚರ್ಚೆಗೆ ಅವಕಾಶವಾಗಬಾರದೆಂದು ನಿಲುವಳಿ ಸೂಚನೆ ಮೂವ್ ಮಾಡಿದ್ದಾರೆಂದು ನಾನು ಅವರ ಮೇಲೆ ಚಾರ್ಜ್ ಮಾಡುತ್ತೀದ್ದೇನೆ.

ಇವರು ಶಾಮೀಲಾಗಿದ್ದಾರೆ. ನಾವು ಶಾಮೀಲಾಗಿಲ್ಲ. ಇವರು ನಾಟಕಮಾಡಿ ಇಲ್ಲಿ ವಾಕೌಟ್ ಮಾಡುತ್ತಾರೆ. ಇವರಿಗೆ ಧೈರ್ಯವಿದ್ದರೆ ಡೇಬೆಟ್ ಮೂಲಕ ಚರ್ಚೆ ಮಾಡುವುದಕ್ಕೆ ರೆಡಿಯಾಗಬೇಕಿತ್ತು. ನೇರವಾಗಿ ಆಪಾದನೆ ಮಾಡಬೇಕಿತ್ತು, ಸರ್ಕಾರಕ್ಕೆ ಕನ್ವೀನ್ಸ್ ಮಾಡಬೇಕಾಗಿತ್ತು. ನಿಲುವಳಿ ಸೂಚನೆ ಮೂವ್ ಮಾಡಿ ಅದು ಚರ್ಚೆಯಾಗಬಾರದು, ಪ್ರೆಸ್‌ನಲ್ಲಿ ಬರಬೇಕು ಇದು ಚರ್ಚೆಯಾಗಬಾರದು ಮತ್ತು ಕಾಂಗ್ರೆಸ್‌ನವರ ಜೊತೆ ಶಾಮೀಲಾಗಿ ಹೀಗೆ ಸುಖವಾಗಿ ಸಭೆಯಿಂದ ಹೊರಗೆ ಹೋಗುವುದು. ಹೀಗೆ ಮಾಡಿದರೆ ಅದನ್ನು ನಾನು ಖಂಡಿಸುತ್ತೇನೆ. ನಮ್ಮ ಮೇಲೆ ಚಾರ್ಜ್ ಮಾಡಿದ್ದಾರೆ ಅದು ಸತ್ಯಕ್ಕೆ ದೂರವಾದುದು ಅದಕ್ಕೆ ಏನೂ ಆಧಾರವಿಲ್ಲ, ಭಾರತೀಯ ಜನತಾ ಪಾರ್ಟಿಯವರು ಶಾಮೀಲಾಗಿ ಈ ಮಟ್ಟಕ್ಕೆ ಬಂದಿದ್ದಾರೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಭಾರತೀಯ ಜನತಾಪಾರ್ಟಿಯವರ ಸದಸ್ಯರು ಏನೊಂದು ಆರೋಪವನ್ನು ಹೊರಿಸಿ ಸಭೆಯಿಂದ ಹೊರಗೆ ಹೋಗಿದ್ದಾರ. ಅವರ ಆರೋಪ ಏನೆಂದರೆ...

MADAM DEPUTY SPEAKER : I have given my rulling. I have reserved my ruling on this matter. So, there is no need to explain anything.

ಶ್ರೀ ಸಿ. ಬೈರೇಗೌಡ : ನಾನು ಅದನ್ನು ಪ್ರಶ್ನೆ ಮಾಡುತ್ತಿಲ್ಲ. ಇವತ್ತು ಬಿಜೆಪಿ ಸದಸ್ಯರು ನಡೆದುಕೊಂಡ ವರ್ತನೆ ಬಗ್ಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ದೇಶದಲ್ಲಿ ಭ್ರಷ್ಟಾಚಾರ ಮುಗಿಲು ಮುಟ್ಟಿದೆ. ಅದಕ್ಕೆ ಮಿತಿಯಿಲ್ಲ. ನಾನು ಅದರ ವಿವರಕ್ಕೆ ಹೋಗುವುದಿಲ್ಲ. ಅದನ್ನು ಮರೆ ಮಾಚುವುದಕ್ಕೆ ದೇಶವನ್ನು ತಪ್ಪುದಾರಿಗೆ ಎಳೆಯತಕ್ಕ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮತ್ತು ಬಿಜೆಪಿಯವರು ಬಾಬರಿ ಮಸೀದಿಯನ್ನು ಉರುಳಿಸಿ ಇಡೀ ಜನತೆಯನ್ನು ಬೀದಿಗೆ ಎಳೆದರು. ರಾಜ್ಯಮಟ್ಟದಲ್ಲೂ.

ಉಪಾಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ನಾನು ಮಾತನಾಡುವುದಕ್ಕೆ ಬಿಡುವುದಿಲ್ಲ, ಈಗ ಯಾರು ಮಾತನಾಡಿದರೂ ರೆಕಾರ್ಡ ಆಗುವುಲ್ಲ ಕುಳಿತುಕೊಳ್ಳಿ. ದಯವಿಟ್ಟು ತಾವು ಕುಳಿತುಕೊಳ್ಳಿ. I have reserved my rulling, nothing will go on record ತಾವು ಮಾತನಾಡುವುದಕ್ಕೆ ಬಿಡುವುದಿಲ್ಲ

(ಗೊಂದಲ)

ಶಾಸನ ರಚನಾ ಕಾರ್ಯಕಲಾಪಗಳು.

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ವಿಧೇಯಕ 1992

ಪರ್ಯಾಲೋಚನಾ ಪ್ರಸ್ತಾಪ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ...

ಉಪಾಧ್ಯಕ್ಷರು : ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈ ವಿಚಾರ ಅಲ್ಲ, ತಾವು ತೀರ್ಪು ಕೊಟ್ಟನಂತರ...

ಉಪಾಧ್ಯಕ್ಷರು : ತೀರ್ಪು ಎಂದರೆ I have reserved my rulling ನಾನು ಯಾವುದೇ ತೀರ್ಪು ಕೊಟ್ಟಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಾವು ತೀರ್ಪು ಕಾದಿರಿಸಿದ್ದೀರಿ. ಅದರ ಬಗ್ಗೆ ನಮ್ಮಲ್ಲಿ ಚಕಾರ ಇಲ್ಲ. ನಮ್ಮ ವಿರೋಧ ಪಕ್ಷದಲ್ಲಿ, ಬೆಳಗ್ಗೆಯಿಂದ ನಡೆದಿರತಕ್ಕಂಥ ಈ ಪರಿಸ್ಥಿತಿ ನೋಡಿದಾಗ, ಇದು ಅತ್ಯಂತ ನೋವಿನ ಪ್ರಸಂಗವಾಗಿದೆ. ಜನತಾದಳದವರು ಬಿ.ಜೆ.ಪಿ. ಯವರನ್ನು ಜನತಾದಳದವರನ್ನು..... ವಿರೋಧ ಪಕ್ಷದವರು ಒಗ್ಗಟ್ಟಾಗಿ ಇರಬೇಕೆಂದು ಹೇಳುತ್ತೇವೆ. ನಿಜವಾಗಿ ರಾಜ್ಯದಲ್ಲಿ...

ಉಪಾಧ್ಯಕ್ಷರು : ಶ್ರೀ ವಾಟಾಳ್ ನಾಗರಾಜ್‌ರವರೇ, ತಾವು ಏನು ಹೇಳುತ್ತಿದ್ದೀರಿ, ಅದು ನನಗೆ ಅಥವಾ ಈ ಹೌಸ್‌ಗೆ ಸಂಬಂಧ ಪಟ್ಟ ವಿಷಯವಲ್ಲ. ದಯವಿಟ್ಟು.. ನೀವು ಅವರಿಬ್ಬರ ಜೊತೆ ಮಾತನಾಡಿ. ನಾನೇನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ರಾಜ್ಯಸರ್ಕಾರದ ಭ್ರಷ್ಟಾಚಾರವನ್ನು ಬಯಲಿಗೆಳೆಯ ಬೇಕಾದರೆ ನಾವೆಲ್ಲರೂ ಒಮ್ಮತದಿಂದ ನಡೆಯಬೇಕಾಗಿದೆ. ನಮ್ಮನಮ್ಮಲ್ಲಿ ಭಿನ್ನಾಭಿಪ್ರಾಯ ಬಂದು ಈ ಪರಿಸ್ಥಿತಿ ಬಂದಿರುವುದು ದುರ್ದೈವ ಎಂದು ನಾನು ಭಾವಿಸುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷಣಿಯವರೆ, ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ವಿಧೇಯಕ 1992 ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಉಪಾಧ್ಯಕ್ಷರು : ಈಗ ಬಿಲ್ ಬಗ್ಗೆ ಚರ್ಚೆ ಪ್ರಾರಂಭವಾಗುತ್ತದೆ. ಈ ಎರಡೂ ಬಿಲ್‌ಗಳು ಇಲ್ಲಿಂದ ಪಾಸ್ ಆಗಿ ಮೇಲ್ಮನೆಗೆ ಹೋಗಬೇಕಾಗಿದೆ. ಬಿಲ್ ಬಗ್ಗೆ ಯಾರು ಮಾತನಾಡುತ್ತೀರಿ? ಶ್ರೀ ದೇಶಪಾಂಡೆಯವರೇ, ನೀವು ಮಾತನಾಡುತ್ತೀರಾ?

ಶ್ರೀ ಆರ್.ವಿ. ದೇಶಪಾಂಡೆ : ನನ್ನದು ಒಂದು ಮುಂದೂಡಲ್ಪಟ್ಟಂಥ ಪ್ರಶ್ನೆ ಇದೆ. ಮುಖ್ಯಮಂತ್ರಿಗಳು ಬಂದಮೇಲೆ....

ಉಪಾಧ್ಯಕ್ಷರು : ಈಗ ಎರಡು ಬಿಲ್‌ಗಳನ್ನು ಪಾಸ್ ಮಾಡಿಕೊಡಬೇಕು. ಅವರು ಬಂದಮೇಲೆ ತಾವು ಹೇಳಬಹುದು.

ಶ್ರೀ ವಾಟಾಳ್ ನಾಗರಾಜ್ : ನನ್ನ ಪ್ರಶ್ನೆ ಕಥೆ ಏನಾಯಿತು?

ಉಪಾಧ್ಯಕ್ಷರು : ಯಾವ ಪ್ರಶ್ನೆ?

ಶ್ರೀ ವಾಟಾಳ್ ನಾಗರಾಜ್ : ಮುಂದುವರೆದ ಪ್ರಶ್ನೆ. ತಾವು ಹೇಳಿದ್ದೀರಿ, ಮುಖ್ಯಮಂತ್ರಿಗಳು ಬಂದತಕ್ಷಣ ನೀವು ಪ್ರಶ್ನೆ ಹಾಕಿ ಎಂದು. ಈಗ ಯಾವ ಪ್ರಶ್ನೆ ಎಂದರೆ ನಾನು ಏನು ಮಾಡಬೇಕು?

ಉಪಾಧ್ಯಕ್ಷರು : ಅವರು ಸ್ಟೇಟ್‌ಮೆಂಟ್ ಮಾಡುವ ಮುಂಚೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೆ. ಅವರು ಬಂದಮೇಲೆ ಕೇಳಿ. ಶ್ರೀ ದೇಶಪಾಂಡೆಯವರೇ ಮಾತನಾಡಿ. I think we should go as per agenda..

ಎರಡು ಬಿಲ್‌ಗಳನ್ನು ಪಾಸ್ ಮಾಡಿಕೊಡದೇ ಇದ್ದರೆ ಅಲ್ಲೇನೂ ಬಿಸಿನೆಸ್ ಇರುವುದಿಲ್ಲ.

(ಗೊಂದಲ)

+ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ವಿಧೇಯಕ, 1992ಅನ್ನು ಮಾನ್ಯ ಕಂದಾಯಸಚಿವರು ಕನ್ಸಿಡರೇಶನ್‌ಗೆ ತಂದಿದ್ದಾರೆ. ಇಲ್ಲಿ ಮುಖ್ಯವಾಗಿ ಯೂನಿವರ್ಸಿಟಿ ಇರಬಹುದು ನಮ್ಮ ಯೂನಿವರ್ಸಿಟಿ ಎಸ್ಟಾಬ್ಲಿಶ್‌ಮೆಂಟ್ಸ್ ಇರಬಹುದು. ಅದೇ ಪ್ರಕಾರ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತಿ ಇವೆಲ್ಲಾ, ಈ ಬಿಲ್‌ನ ವ್ಯಾಪ್ತಿಯಲ್ಲಿ ತರುವುದಕ್ಕೆ ಒಂದು ಪ್ರಯತ್ನ ಮಾಡುತ್ತಿದ್ದಾರೆ. ನನಗೆ ಏನು ಭಯ ಇದೆ ಎಂದರೆ, ಈ ಗವರ್ನಮೆಂಟ್ ಪ್ರಾಪರ್ಟೀಸ್ ಮತ್ತು ಪಬ್ಲಿಕ್ ಪ್ರಾಪರ್ಟೀಸ್, ಅದು ಪ್ರೊಟೆಕ್ಟ್ ಆಗಲೇಬೇಕು. ಅದರಲ್ಲಿ ಯಾವ ಸಂದೇಹವೂ ಇಲ್ಲ. ಎವಿಕ್ಷನ್ ಆದರೆ, ಕೋರ್ಟಿಗೆ ಹೋಗಿ, ಅವರನ್ನು ಎವಿಕ್ಟ ಮಾಡಬೇಕಾದರೂ ಕಷ್ಟವಾಗುತ್ತದೆ. Question of time is there. ಹಾಗಾಗಿ, ಸಾರ್ವಜನಿಕ ಆಸ್ತಿಗಳ ದುರುಪಯೋಗವಾಗತಕ್ಕ ಸಂಭವ ಇದೆ. ಎವಿಕ್ಷನ್ ಮಾಡಬೇಕಾದರೆ ಸ್ವಲ್ಪ ಕಷ್ಟವಾಗುತ್ತದೆ. ಕೋರ್ಟಿಗೆ ಹೋಗಿ ಮಾಡಬೇಕಾಗುತ್ತದೆ. ಗವರ್ನಮೆಂಟ್ ಪ್ರಾಪರ್ಟೀಸ್ ವಿಚಾರದಲ್ಲಿ ಕೋರ್ಟಿಗೆ ಹೋಗಿ ಮಾಡಬೇಕಾದರೆ ಕಷ್ಟವಾಗುತ್ತದೆ. ತಾವು ಇವತ್ತು ಈ ಆಕ್ಟ್ ಅಧೀನದಲ್ಲಿ ಎಲ್ಲಾ ಆಸ್ತಿಗಳನ್ನು ತಂದಿದ್ದೀರಿ. ಒಂದು ವೇಳೆ ಯಾರಾದರೂ ಈ ಪ್ರಾಪರ್ಟೀಸ್ ಎನಿಕ್ರೋಚ್ ಮಾಡಿದರೆ ಅವರಿಗೆ, bar of jurisidiction ಇದೆ. ಅವರು ಸೆಕ್ಷನ್ 16 ಪ್ರಕಾರ ಕೋರ್ಟಿಗೆ ಹೋಗುವುದಕ್ಕಾಗುವುದಿಲ್ಲ. Supose you evit them they cannot gett preotection.

ಆಫೀಸರಿಗೆ ರಕ್ಷಣೆ ಇದೆ. ಯಾವ ಆಫೀಸರ್ ಈ ಕಾಯಿದೆ ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾನೋ, ಅವರಿಗೆ ಸೆಕ್ಷನ್ 17ರ ಪ್ರಕಾರ ಪ್ರೊಟೆಕ್ಷನ್ ಇದೆ. ಇದು ಇರಬೇಕಾಗುತ್ತದೆ. ಆದರೆ, ನನಗೇನು ಭಯ ಇದೆ ಎಂದರೆ, ಎವಿಕ್ಷನ್ ಸರ್ಕಾರಿ ಆಸ್ತಿಮೇಲಾಗಲೀ, ಯೂನಿವರ್ಸಿಟಿ ಪ್ರಾಪರ್ಟಿ ಇರಬಹುದು, ಜಿಲ್ಲಾ ಪರಿಷತ್ತು ಪ್ರಾಪರ್ಟಿ ಇರಬಹುದು, ಇದನ್ನು ಎನ್ ಕ್ರೋಚ್ ಮಾಡಿದರೆ, ಅವಿಕ್ಷನ್ ಆಗಬೇಕು. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. Because you have to protect them from misuses. ಮಿಸ್ ಯೂಸ್ ಬಹಳ ಜನ ಮಾಡಬಹುದು. ಆದರೆ ಎಷ್ಟೋ ಬಡ ಜನ ನಮ್ಮಲ್ಲಿ ಇದ್ದಾರೆ. ಯಾರಿಗೆ ನಿವೇಶನ ಇಲ್ಲ, ಅಂತಹ ಜನರು ಇವತ್ತು ಜಿಲ್ಲಾ ಪರಿಷತ್ತು ಪ್ರಾಪರ್ಟೀಸ್, ಮಂಡಲ್ ಪಂಚಾಯತ್ ಪ್ರಾಪರ್ಟೀಸ್ ನಲ್ಲಿ, ಹಳ್ಳಿಯಲ್ಲಿ 20-30 ವರ್ಷಗಳಿಂದ ಎನ್ ಕ್ರೋಚ್ ಮಾಡಿ, ಮನೆ ಕಟ್ಟಿ, ಟ್ಯಾಕ್ಸ್ ಕೊಡುತ್ತಾ ಬಂದಿದ್ದಾರೆ. ಅವರಿಗೆ ರೆಗ್ಯುಲರೈಸೇಷನ್ ಇನ್ನೂ ಆಗಿಲ್ಲ. ಇವರ ಪರಿಸ್ಥಿತಿ ಏನಾಗಬಹುದು ಇದೊಂದು ಬ್ಲಾಂಕೆಟ್ ಚೆಕ್ ಆಗಿ, ಅಧಿಕಾರಿಗಳು, ನಾಳೆ ಈ ಸರ್ಕಾರ ಹೋದ ನಂತರ,

ಎವಿಕ್ಷನ್ ಶುರುವಾಗಬಹುದು..ಯಾರು ಇನ್ ಫ್ಲುಯೆನ್ಸ್ ಜನ ಇದ್ದಾರೆ, ಯಾರು ಆರ್ಥಿಕವಾಗಿ ಸಂಪನ್ನರಾಗಿದ್ದಾರೆ. ನೀವು ಎವಿಕ್ಟ್ ಮಾಡಿಸಿದರೆ ನನಗೆ ಬೇಜಾರು ಇಲ್ಲ. ಅಥವಾ ಇವರ ಮುಂದೆ prospective effect ಇಲ್ಲ. It is retrospective. ಮುಂದೆ ಯಾರಾದರೂ ಈ ಪ್ರಾಪರ್ಟೀಸ್ ಎನ್ ಕ್ರೋಚ್ ಮಾಡಿದರೆ ಅವರಿಗೆ ಎವಿಕ್ಟ್ ಮಾಡಿ.

But, those poor people who are landless, homeless if they are on these properties for the last 20 years-10 years, 5 years what will be their fate?

ಜಿಲ್ಲಾ ಪರಿಷತ್, ಮಂಡಲ್ ಪಂಚಾಯಿತಿಗೆ This will be a good handle to throw them out. ಹಾಗಾಗಿ ಈ ಬಿಲ್ ತಂದಿರತಕ್ಕ ಉದ್ದೇಶ ಒಳ್ಳೆಯದಿರಬಹುದು. ಗವರ್ನಮೆಂಟ್ ಪ್ರಾಪರ್ಟೀಸ್, ಪಬ್ಲಿಕ್ ಪ್ರಾಪರ್ಟೀಸ್, ಜಿಲ್ಲಾ ಪರಿಷತ್ ಪ್ರಾಪರ್ಟೀಸ್ ಪ್ರೊಟೆಕ್ಷನ್ ಮಾಡುವುದಕ್ಕೆ ತಂದಿರಬಹುದು. ಆದರೆ, ಇದರ ದುರ್ಲಾಭ ತೆಗೆದುಕೊಂಡು, ಹಳ್ಳಿಯಲ್ಲಿ ಯಾವ ಬಡ ಜನ ಸುಖವಾಗಿ ಉಳಿದಿದ್ದಾರೆ. ಅವರಿಗೆ ತೊಂದರೆಯಾಗಬಹುದು. ಒಂದು ಕಡೆ ಸರ್ಕಾರ ಏನು ಹೇಳುತ್ತದೆ, ಹಳೆಯ ಎನ್ ಕ್ರೋಚ್ ಮೆಂಟ್ ಏನಿದೆ, ಅವುಗಳನ್ನು ರೆಗ್ಯುಲರೈಸ್ ಮಾಡುತ್ತೇವೆಂದು, ಮತ್ತೊಂದು ಕಡೆ ಈ ಆಕ್ಟ್ ತಂದಿದ್ದೀರಿ. ಇದರಿಂದ ಒಂದು ನೋಟೀಸು ಕೊಟ್ಟು You can throw them out, there is a bar to to to Court against the action taken by the officer, that is also protected.

ಹಾಗಾಗಿ ಇದರಲ್ಲಿ ಜನರ ಸಂಬಿಕೆ ಏನು? ನನಗೆ ಒಂದೇ ಒಂದು ಸಂಶಯ ಏನೆಂದರೆ, ಯಾರದು ಜೆನಿಯನ್ ಕೇಸ್ ಇದೆ. ಅಲ್ಲಿ ಏನು ಮಾಡುತ್ತೀರಿ? ಇವತ್ತು ಮುಂಜಾನೆ ನಮ್ಮ ಭಟ್ಕಳ ಸಮಸ್ಯೆಯನ್ನು ಮಾನ್ಯ ಆರ್.ಎಸ್. ನಾಯ್ಕರವರು ರೈಸ್ ಮಾಡಿದರು. ಎವಿಕ್ಷನ್ ಮಾಡುವ ವಿಚಾರದಲ್ಲಿ ನಾವು ಒಂದು ನಿರ್ಧಾರಕ್ಕೆ ಬರಬೇಕಾಗುತ್ತದೆ. ಯಾವತರಹದ ಎವಿಕ್ಷನ್ ಮಾಡಬೇಕು. ಆ ನಿರ್ಧಾರಕ್ಕೆ ಬರಬೇಕಾದರೆ, ಸರ್ಕಾರದವರ ನೀತಿ ಏನು? ಗವರ್ನಮೆಂಟ್ ಪ್ರಾಪರ್ಟೀಸ್, ಜಿಲ್ಲಾ ಪರಿಷತ್, ಮಂಡಲ್ ಪಂಚಾಯಿತಿ ಪ್ರಾಪರ್ಟೀಸ್, ರೆವಿನ್ಯೂ ಪ್ರಾಪರ್ಟೀಸ್, ಇಲ್ಲಿರತಕ್ಕ ಎಲ್ಲರಿಗೂ ಎವಿಕ್ಟ್ ಮಾಡುತ್ತೀರೋ ಹೇಗೆ? ಬಡ ಜನರಿಗೆ ಏನು ಸಂರಕ್ಷಣೆ ಕೊಡುತ್ತೀರಿ? ಅಥವಾ ರೋಡ್ ಮಧ್ಯದಲ್ಲಿ ಒಂದು ಎನ್ ಕ್ರೋಚ್ ಮೆಂಟ್ ಬರುತ್ತದೆ. ಅದನ್ನು ತೆಗೆದುಕೊಂಡು ಅದಕ್ಕೆ ಆಲ್ಟರ್‌ನೇಟಿವ್ ಆಗಿ ಬೇರೆ ಕಡೆ ಕೊಡಿ. ಯಾರು ಬಡವ ಇದ್ದಾನೆ, ಮನೆ ಇಲ್ಲದವರು ಇದ್ದಾರೆ, ಜಮೀನು ಇಲ್ಲದವರು ಇದ್ದಾರೆ, ಅವರಿಗೆ ನೀವು ಯಾವ ರೀತಿಯ ಸಂರಕ್ಷಣೆ ಕೊಡುತ್ತೀರಿ, ಇದರ ಬಗ್ಗೆ ಸರ್ಕಾರದವರ ನೀತಿ ನಮಗೆ ಗೊತ್ತಾಗಬೇಕು. ಇಲ್ಲದೇ ಹೋದರೆ, ಈ ಬಿಲ್ ಒಂದು ಹರ್‌ದಲ್ ಆಗಿ, everybody will be go down. ಎಷ್ಟೋ ಹಳ್ಳಿಗಳಲ್ಲಿ ಬಡ ಜನರು ಇದ್ದಾರೆ. ಇವತ್ತು ನಿಮ್ಮ ಮಂಡಲ್ ಪಂಚಾಯಿತಿ, ಜಿಲ್ಲಾ ಪರಿಷತ್ ಆಸ್ತಿಯಲ್ಲಿ ಮನೆಗಳನ್ನು ಕಟ್ಟಿಕೊಂಡು ಉಳಿದಿದ್ದಾರೆ.

ಹೀಗಾಗಿ ಅದರ ದುರುಪಯೋಗ ಆಗಬಾರದು. ಇದು ದುರುಪಯೋಗವಾಗುವ ಭಯ ಇದೆ.ಎಂದು ಈ ಬಿಲ್ ನ್ನು ವಿರೋಧ ಮಾಡುತ್ತಿದ್ದೇನೆ. ಈ ಕಾರಣದಿಂದ ತಾವು ಇದನ್ನು ಪುನರ್ ಪರಿಶೀಲನೆ ಮಾಡಬೇಕು. ಸರ್ಕಾರದ

ನೀತಿ ಏನಿದೆ, ಯಾರಿಗೆ ಇದರಿಂದ ಅಫೆಕ್ಟ್ ಆಗುವುದಿಲ್ಲ, ಯಾರಿಗೆ ಆಗುತ್ತದೆ, ಎಲ್ಲಾ ಬಡಜನರಿಗೆ ಪ್ರೊಟೆಕ್ಷನ್ ಕೊಡುತ್ತೇವೆ ಎಂದು ಹೇಳಿದರೆ, ಯಾವ ಪ್ರಕಾರ ಪ್ರೊಟೆಕ್ಷನ್ ಕೊಡುತ್ತೀರಿ ಎಂದು ಹೇಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ಇಂದು ಮಾನ್ಯ ಕಂದಾಯ ಮಂತ್ರಿಗಳು ನನ್ನ ಅಭಿಪ್ರಾಯದಲ್ಲಿ ಒಂದು ಒಳ್ಳೆಯ ಕೆಲಸ ಮಾಡುವುದಕ್ಕೆ ಕೈ ಹಾಕಿದ್ದಾರೆ ಎಂದು ನಾನಾದರೂ ಭಾವಿಸುತ್ತೇನೆ. ಕಾರಣ ಏನೆಂದರೆ ಸಾರ್ವಜನಿಕ ಸ್ವತ್ತುಗಳ ಆಸ್ತಿಗಳು, ಕೆರೆಗಳು, ಕೆರೆಗಳಿಗೆ ನೀರು ಹೋಗತಕ್ಕಂಥ ಕಾಲುವೆಗಳು ಎಲ್ಲಾ ಹಳ್ಳಗಳು ಮತ್ತೆ ಗ್ರಾಮಾಂತರ ಪ್ರದೇಶದಲ್ಲಿ ಸಾರ್ವಜನಿಕ ಉಪಯೋಗಕ್ಕೆ ಇಟ್ಟಿರತಕ್ಕಂಥ ಪ್ರದೇಶಗಳು ಇವತ್ತು ಯಾವುವು ಉಳಿದಿಲ್ಲ. ಎಲ್ಲವೂ ಕೂಡಾ ಎನ್ ಕ್ರೋಚ್ ಆಗಿವೆ, ಮಾನ್ಯ ದೇಶಪಾಂಡೆಯವರು ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಅವರು ಕೊಟ್ಟಂಥ ಉದಾಹರಣೆಗಳ ನೆಪದಲ್ಲಿ ನೂರಾರು ಕೆರೆಗಳು ಇವತ್ತಿನ ದಿವಸ ಪತ್ತೆ ಇಲ್ಲ. ನಮ್ಮ ಕೋಲಾರ ಜಿಲ್ಲೆಯಲ್ಲಿ ಒಂದಲ್ಲ ಎರಡಲ್ಲ ಸುಮಾರು ಐದುನೂರು ಕೆರೆಗೇಳು ಪತ್ತೆ ಇಲ್ಲ. ನೀರು ನಿಲ್ಲತಕ್ಕಂಥ ಕೆರೆಗಳಲ್ಲಿಯೂ ಸಹ ಗದ್ದೆಗೆ ನೀರು ಬಿಡತಕ್ಕಂಥ ತೂಬು ಇವೆಲ್ಲಾ ಎನ್‌ಕ್ರೋಚ್ ಆಗಿವೆ. ತೂಬಿನವರಿಗೆ ಉಳುಮೆ ಆಗಿರತಕ್ಕಂಥದ್ದು ನನ್ನ ಕ್ಷೇತ್ರದಲ್ಲಿ ನಾನೇ ನೋಡಿದ್ದೇನೆ. ನಾನು ಅವರನ್ನು ವೈಯಕ್ತಿಕವಾಗಿ ಕರೆದು ನೇರವಾಗಿ ಹೆದರಿಸಿದ್ದೂ ಕೂಡ ಆಯಿತು. ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರದ ಮೇಲೆ ಪತ್ರ ಬರೆದದ್ದೂ ಆಯಿತು. ಕೆರೆಗಳನ್ನು ರಸ್ತೆಗಳನ್ನು ರಕ್ಷಣೆ ಮಾಡಿ ಎಂದು ಬರೆದೆ. ಯಾವ ಅಧಿಕಾರಿಯೂ ಕೂಡ ಅದನ್ನು ರಕ್ಷಣೆ ಮಾಡತಕ್ಕ ಕೆಲಸ ಮಾಡಲಿಲ್ಲ. ಒಂದು ಸಾರಿ ಕೋಲಾರಕ್ಕೆ ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾಗಿದ್ದಂಥ ಅಶ್ವತ್ಥರೆಡ್ಡಿಯವರು ಬಂದಿದ್ದರು. ಅವರಿಗೆ ನಾನು ಸ್ಪಷ್ಟವಾಗಿ ಒಂದು ಮಾತನ್ನು ಕೇಳಿದೆ. ಸರಕಾರ ಇದೆಯೋ ಇಲ್ಲವೋ, ಲೋಕೋಪಯೋಗಿ ಇಲಾಖೆಯ ವಶದಲ್ಲಿರತಕ್ಕಂಥ ರಸ್ತೆಗಳು, ಕೆರೆಗಳನ್ನು ನೋಡಿಕೊಳ್ಳುತ್ತೀರೋ ಇಲ್ಲವೋ ಇದನ್ನು ನೀವು ರಕ್ಷಣೆ ಮಾಡುತ್ತೀರೋ ಇಲ್ಲವೋ ಎಂಬುದನ್ನು ಹೇಳಬೇಕೆಂದು ಮಾನ್ಯ ಮಂತ್ರಿಗಳಿಗೆ ಸಭೆಯಲ್ಲಿ ಕೇಳಿದೆ. ಕೊನೆಗೆ ಅವರಿಂದ ಸಮರ್ಪಕವಾದ ಉತ್ತರ ಬರಲಿಲ್ಲ. ಈ ಎವಿಕ್ಷನ್ ಆಫ್ ಪಬ್ಲಿಕ್ ಪ್ರಿಮೈಸೆಸ್ ಆಕ್ಟ್ ಪ್ರಕಾರ ಆಥರೈಸ್ಡ್ ಆಫೀಸರ್ ಎಂದು ಒಬ್ಬನನ್ನು ನಾಮಿನೇಟ್ ಮಾಡಿದ್ದೀರಿ. ಸಬ್ ಡಿವಿಜನ್ ಲೆವೆಲ್‌ನಲ್ಲಿ ಇರತಕ್ಕಂಥ ಸಬ್‌ಡಿವಿಜನಲ್ ಆಫೀಸರ್, ಅಸಿಸ್ಟೆಂಟ್ ಕಮೀಷನರನ್ನು ಆಫೀಸರ್‌ನ್ನಾಗಿ ಮಾಡಿದ್ದೀರಿ. ನಮ್ಮ ಪ್ರದೇಶಕ್ಕೆ ಬರತಕ್ಕಂಥ ಎರಡು ಸಬ್‌ಡಿವಿಜನಲ್ ಆಫೀಸರ್ಸ್ ಏನಿದ್ದಾರೆ ನಾನು ಅವರಿಗೆ ಪತ್ರ ಬರೆದೆ. ಇಂತಹ ಕಡೆ ಇಂತಹ ರಸ್ತೆ ಹೇಗೆ ಹಾಳಾಗಿದೆ, ರಸ್ತೆಯನ್ನು ಹೇಗೆ ಎನ್‌ಕ್ರೋಚ್ ಮಾಡಿದ್ದಾರೆ ಇಂತಿಂಥ ಕಡೆ ಹೀಗೆ ಆಗಿದೆ, ಇದನ್ನು ತೆಗೆಸಿ ಎಂದು ಪತ್ರ ಬರೆದೆ ಅವರೂ ಕೂಡ ಏನೂ ಕ್ರಮ ತೆಗೆದುಕೊಳ್ಳಲಿಲ್ಲ, ಸಾವಿರಾರು ವರ್ಷಗಳ ಹಿಂದೆ ಕಟ್ಟಿರತಕ್ಕಂಥ ಕೆರೆಗಳು ಇವೆ. ನೂರಾರು ವರ್ಷಗಳ ಹಿಂದೆ ರಸ್ತೆ ಕಟ್ಟಿರತಕ್ಕಂಥ ಕೆರೆಗಳು ಇವೆ, ರಸ್ತೆಗಳು ಇವೆ, ನೂರಾರು ವರ್ಷಗಳ ಹಿಂದೆ ರಸ್ತೆ ಸಂಪರ್ಕ ಇಲ್ಲದಿರತಕ್ಕಂಥ ಕಾಲದಲ್ಲಿ ಮಾಡಿಸಿರತಕ್ಕ ರಸ್ತೆಗಳು ಇವೆ. ಆಗಿನಿಂದಲೂ ಇರತಕ್ಕಂಥ ರಸ್ತೆಗಳು ಇವೆ. ಇದನ್ನೆಲ್ಲಾ ಏತಕ್ಕೆ ಮಾಡಿದ್ದಾರೆ

ಹಿಂದಿನ ಕಾಲದಲ್ಲಿ ಅವತ್ತು ಯಾರು ಬದುಕಿದ್ದರು ಕೇವಲ ಅವರ ಸುಖಕ್ಕಾಗಿ ಮಾಡಿರತಕ್ಕದ್ದಲ್ಲ. ಮುಂದಿನ ಪೀಳಿಗೆಗೆ ಮುಂದಿನ ಸಂತತಿಗೆ ಇವರ ಪ್ರಯೋಜನ ಆಗಬೇಕೆಂಬುದು ಅವರ ಉದ್ದೇಶ. ಇವತ್ತು ವಿಧಾನಸೌಧ ಕಟ್ಟಿಸಿದ್ದಾರೆ. ಹನುಮಂತಯ್ಯನವರು ಅವರು ಇಲ್ಲಿ ಕುಳಿತುಕೊಂಡು ಅಧಿಕಾರ ಮಾಡಬೇಕು, ನನ್ನ ಅಧಿಕಾರದ ಅವಧಿಯಲ್ಲಿ ಮಾತ್ರ ವಿಧಾನಸೌಧ ಇರಲಿ ಎಂಬ ದೃಷ್ಟಿಯಿಂದ ಅವರು ವಿಧಾನಸೌಧವನ್ನು ಕಟ್ಟಿಸಿಲ್ಲ. ಈ ಕಟ್ಟಡ ಸಾರೋದ್ಧಾರವಾಗಿ ಇರಬೇಕು, ಸಾರ್ವಜನಿಕರ ಉಪಯೋಗಕ್ಕೆ ಬರಬೇಕೆಂಬ ದೃಷ್ಟಿಯಿಂದ ಕಟ್ಟಿಸಿದ್ದಾರೆ. ನೂರಾರು ವರ್ಷಗಳ ಹಿಂದೆ ಕೆರೆಗಳನ್ನು ಸಾರ್ವಜನಿಕರಿಗೆ ಉಪಯೋಗ ಆಗಬೇಕು, ಇದರಿಂದ ನೀರಾವರಿ ಆಗಬೇಕು, ರಾಜ್ಯದ ದೇಶದ ಜನ ಬದುಕಬೇಕು ಇದರಿಂದ ಸಮಾಜ ಮುಂದುವರಿಯ ಬೇಕು ಎನ್ನತಕ್ಕಂಥ ಧ್ಯೇಯವನ್ನು ಇಟ್ಟುಕೊಂಡು ಕಟ್ಟಿಸಿದ್ದಾರೆ. ಇವತ್ತು ನಾವು ಏನು ಮಾಡುತ್ತಿದ್ದೇವೆ?

ಕೆರೆಗಳನ್ನು ನಾಶ ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ 500 ಕೆರೆಗಳು ನಾಶವಾಗಿವೆ. ಈ ಕೆರೆಗಳನ್ನು ಇವತ್ತಿನದಿವಸ ನಾವು ದೀಪ ಹಾಕಿಕೊಂಡು ಹುಡುಕಬೇಕು. ಅನೇಕ ಕಡೆ ಅಪಘಾತಗಳಾಗುತ್ತಿವೆ ಕಾರಣವೇನು? ರಸ್ತೆಗಳನ್ನು ವಿಶಾಲವಾಗಿ ಮಾಡುವುದಕ್ಕೆ ಆಗಿಲ್ಲ, ಜನಸಂಖ್ಯೆ ಜಾಸ್ತಿಯಾಗಿ ವಾಹನಗಳ ಸಂಖ್ಯೆ ಜಾಸ್ತಿ ಆದ ಹಾಗೆ ರಸ್ತೆಗಳನ್ನು ಕೂಡ ವಿಶಾಲ ಮಾಡಬೇಕು. ರಸ್ತೆಗಳನ್ನು ವಿಶಾಲ ಮಾಡುವುದಕ್ಕಾಗಿಲ್ಲ. ಕಿರಿದಾದಂತಹ ರಸ್ತೆಗಳಲ್ಲಿ ಎಷ್ಟು ವಾಹನಗಳು ಓಡಾಡಬೇಕು? ಅದಕ್ಕಿಂತ ಹೆಚ್ಚು ವಾಹನಗಳು ಓಡಾಡುತ್ತಿವೆ. ಇದರಿಂದ ಅಪಘಾತಗಳು ಆಗುತ್ತಿವೆ. ನೂರಾರು ಜನರು ಸಾಯುತ್ತಿದ್ದಾರೆ ಕಾರಣವೇನು? ಕೆಲವು ಕಡೆ ಉದ್ದೇಶಪೂರ್ವಕವಾಗಿ ಕೆಲವು ನಾಯಕರುಗಳು ಎಂದು ಅನಿಸಿಕೊಂಡವರು ಕೆಲವು ರಾಜಕೀಯ ಪಕ್ಷಗಳು ಅದೇ ಕೆಲಸ ಮಾಡುತ್ತಿವೆ. ಕೆಲವು ಪ್ರದೇಶಗಳಲ್ಲಿ ಸಾರ್ವಜನಿಕ ಸ್ವತ್ತುಗಳನ್ನು ಅಕ್ರಮಣ ಮಾಡಿಸತಕ್ಕಂಥ ಕೆಲಸ ಮಾಡಿದ್ದಾರೆ. ಅದರಿಂದ ಅವರು ಪ್ರಯೋಜನ ಕೂಡ ಪಡೆದುಕೊಂಡಿದ್ದಾರೆ. ಸಾರ್ವಜನಿಕ ಸ್ವತ್ತುಗಳನ್ನು ಹಾಳು ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ ಕೋಲಾರ ನಗರದಲ್ಲಿ ನಾನು ಹುಟ್ಟಿ ಬೆಳೆದಿರತಕ್ಕಂಥದ್ದು. ನಗರದಲ್ಲಿ ಹೊಸದಾಗಿ ಬಸ್ ನಿಲ್ದಾಣ ಆಗಿದೆ. ಆ ಬಸ್ ನಿಲ್ದಾಣದ ಎದುರಿಗೆ ಒಂದು ಸ್ಥಳ ಇತ್ತು. ಅಲ್ಲಿ ಒಂದು ಬಾವಿ ಕೂಡ ಇತ್ತು. ಅದಕ್ಕೆ ನಾವು ಎಳು ಚಕ್ರದ ಭಾವಿ ಎಂದು ಹೆಸರು ಕೊಟ್ಟಿದ್ದೆವು. ಅಲ್ಲಿ ನಾನು ಚಿಕ್ಕಂದಿನಿಂದ ನೋಡಿದ್ದೇನೆ. ಅಲ್ಲಿ ಏನೂ ಇಲ್ಲ. ಇರುವೆ ಕೂಡ ಓಡಾಡುತ್ತಿರಲಿಲ್ಲ, ಅಷ್ಟೊಂದು ನೆಗ್ನೆಲ್ಕ್ಟ್‌ರ್ ಪ್ಲೇಸ್ ಅದು. ಅಂತಹ ಕಡೆ ಹೊಸದಾಗಿ ಬಸ್‌ನಿಲ್ದಾಣ ಆಯಿತು. ಅಂಥ ಕಡೆ ಕೂಡಲೇ ರಾತ್ರೋರಾತ್ರಿ ಕಟ್ಟಡಗಳು ಬಂದವು. 2-3 ಅಂತಸ್ತಿನ ಕಟ್ಟಡಗಳು ಬಂದಿವೆ. ನಮ್ಮ ಪಕ್ಷದವರು ಕೂಡ ಆ ಕೆಲಸವನ್ನು ಮಾಡಿದ್ದಾರೆ. ಅದು ಒಂದೇ ಪಕ್ಷದ ಗುತ್ತಿಗೆ ಅಲ್ಲ, ಆ ಪಕ್ಷ ಈ ಪಕ್ಷ ಎಂದು ನಾನು ಹೇಳುವುದಿಲ್ಲ ಎಲ್ಲಾ ಪಕ್ಷದವರು ಕೂಡ ಅದನ್ನೇ ಮಾಡಿದ್ದಾರೆ. ರಾತ್ರೋರಾತ್ರಿ ಕಟ್ಟಡಗಳು ಬಂದಿವೆ. ಅದಕ್ಕೆ ಬೇಕಾದ ದಾಖಲೆಗಳನ್ನು ಮುನಿಸಿಪಾಲಿಟಿಯಲ್ಲಿ ತಿದ್ದತಕ್ಕಂಥಾದ್ದು ಆಯಿತು. ನಾನು ಸರ್ಕಾರ ಇಲಾಖೆಗಳಲ್ಲಿರತಕ್ಕಂಥ ಜಿಲ್ಲಾಧಿಕಾರಿಗಳಿಗೆ ಬರೆದೆ. ಜಿಲ್ಲಾ ಪೋಲೀಸ್ ಎಸ್.ಪಿ.ಗೆ ಬರೆದೆ. ನೀವು ಬನ್ನಿ. ಒಂದು ಸಾರಿ ಹೋಗೋಣ. ಅಲ್ಲಿ ಏನಾಗಿದೆ ನೋಡೋಣವೆಂದು ಹೇಳಿದೆ ನನ್ನ ಜೊತೆಯಲ್ಲಿ ಯಾರೂ ಬರಲಿಲ್ಲ. ಯಾವ ಕ್ರಮವನ್ನೂ ಕೂಡ ತೆಗೆದುಕೊಂಡಿಲ್ಲ, ಅನೇಕ

ಕೆರೆಗಳು ಹೋಗಿದ್ದರೂ ಯಾರೂ ಬಂದು ನೋಡಲಿಲ್ಲ. ಯಾವ ಅಧಿಕಾರಿಗಳೂ ಕೂಡ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸತಕ್ಕಂಥ ಕೆಲಸ ಮಾಡಲಿಲ್ಲ. ನಾನು ಮೊದಲೇ ಹೇಳಿದ ಹಾಗೆ ನಮ್ಮ ಮುಂದಿನ ಸಂತತಿ ಈ ಭೂಮಿ ಮೇಲೆ ಬದುಕಬೇಕು ಎನ್ನುವ ದೃಷ್ಟಿಯಿಂದ ಹಿರಿಯರು ಇದನ್ನು ಬಿಟ್ಟು ಹೋಗಿರತಕ್ಕಂಥಾದ್ದನ್ನು ಸರ್ವ ನಾಶದ ಅಂಚಿಗೆ ತಂದಿದ್ದಾರೆ. ಕೆರೆಗಳು ನಾಶವಾಗಿವೆ, ರಸ್ತೆಗಳನ್ನು ನಾಶ ಮಾಡಿದ್ದಾರೆ, ಎನ್ನತಕ್ಕಂಥಾದ್ದು ಅಲ್ಲ ಇಡೀ ನಮ್ಮ ಸಂಸ್ಕೃತಿ ನಾಶವಾಗಿದೆ. ಇವತ್ತು ಅನೇಕ ಕಡೆ ಎಲ್ಲಿ ಏನು ಸಿಕ್ಕಿದರೂ ಕೂಡ ಅದನ್ನು ಬಿಡದೆ ವಶ ಪಡಿಸಿಕೊಳ್ಳತಕ್ಕಂಥ ಕೆಲಸ ಆಗಿದೆ. ಪ್ರಶ್ನೋತ್ತರ ವೇಳೆಯಲ್ಲಿ ಒಂದು ಉತ್ತರ ಕೊಟ್ಟಿದ್ದೀರಿ. ಅದೇ ಇದಕ್ಕೆ ಉದಾಹರಣೆ. ಆಸ್ಪತ್ರೆ ಜಾಗದಲ್ಲಿ ಅನಾಥರೈಜ್ಡ್ ಆಗಿ ಮನೆ ಕಟ್ಟಿದ್ದಾರೆ ಅಲ್ಲಿ ಸಾರಾಯಿ ಅಂಗಡಿ ನಡೆಸುತ್ತಿದ್ದಾರೆ ಇದನ್ನು ಯಾರೇ ಮಾಡಿರಬಹುದು ಯಾರೇ ಆಗಿರಬಹುದು ಇದು ಅಕ್ಷಮ್ಯ ಅಪರಾಧ ಎನ್ನುವುದನ್ನು ಮನಗಾಣಬೇಕು. ಪ್ರತ್ಯೇಕವಾಗಿ ಪರೋಕ್ಷವಾಗಿ ಎಲ್ಲರೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಕೆಲವರನ್ನು ಬಿಟ್ಟರೆ ಎಲ್ಲರೂ ಶಾಮೀಲಾಗಿದ್ದಾರೆ ಎನ್ನತಕ್ಕಂಥಾದ್ದು ಇದೆ.

ಇವತ್ತು ಕೆರೆಗಳು ಉಳಿದಿಲ್ಲ. ರಸ್ತೆಗಳು ಉಳಿದಿಲ್ಲ. ಇವತ್ತು ಮಂಡಲ ಪಂಚಾಯತಿಗಳಲ್ಲಿಯೂ ಅನೇಕ ಕಡೆ ಇದೆ ಕೆಲಸ ನಡೆಯುತ್ತಿದೆ. ಏನೂ ಮಾಡದೆ ಇರತಕ್ಕಂಥ ಪರಿಸ್ಥಿತಿ ಬಂದಿದೆ. ಆರ್.ಸಿ.ಸಿ. ಮನೆಗಳು ಕಟ್ಟಿದ್ದಾರೆ. ರಸ್ತೆಗಳನ್ನು ಕಡಿದು ಎಷ್ಟು ಸಿಟ್ಟು ಬರುತ್ತದೆ ಅಂದರೆ ನಾವು ಇಲ್ಲಿ ಕಾಡಿಬೇಡಿ ಸರ್ಕಾರದಿಂದ ಹಣ ಕೊಟ್ಟು ಟಾರ್ ರಸ್ತೆಗೆ ಹಾಕಿ ಅಂತ ಹೇಳಿ ಹಾಕಿಸಿದರೆ ಎಲ್ಲಿಯವರೆಗೆ ಟಾರ್ ಮಾಡಿದ್ದಾರೋ ಅಲ್ಲಿಯವರೆಗೂ ರಸ್ತೆಗಳನ್ನು ಕತ್ತರಿಸಿ ಸಾಗು ಮಾಡಿದ್ದಾರೆ. ನಮ್ಮ ಕಡೆ ಅನೇಕ ಬೋರ್‌ವೆಲ್‌ಗಳನ್ನು ಹಾಕುತ್ತಾರೆ. ನೀರು ಬಿಟ್ಟು ಕೊಳ್ಳುವುದಕ್ಕೆ ಮಣ್ಣಿನಲ್ಲಿ ಟ್ಯಾಂಕ್ ತರಹ ಮಾಡಿಕೊಳ್ಳುತ್ತಾರೆ. ರಸ್ತೆಗಳನ್ನು ಕತ್ತರಿಸಿ ಮಾಡಿರತಕ್ಕಂಥ ನಿದರ್ಶನಗಳು ಇವೆ. ನಾನು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳನ್ನು ಕರೆದು ತೀವ್ರವಾಗಿ ಹೇಳಿದ್ದೇನೆ ಯಾವ ಅಧಿಕಾರಿ ಏನೂ ಮಾಡಿಲ್ಲ. ಈ ಸ್ವತ್ತುಗಳನ್ನು ಉಳಿಸಬೇಕಾದರೆ ನಾಳೆ ನಮ್ಮ ಮಕ್ಕಳು, ಮರಿಗಳು ಭೂಮಿ ಮೇಲೆ ಬದುಕಬೇಕು, ಬಾಳಬೇಕು. ಯಾವ ರೀತಿ ಹಿಂದೆ ಕೆರೆಗಳನ್ನು ಕಟ್ಟಿಸಿ ಬಿಟ್ಟು ಹೋಗಿದ್ದಾರೆ? ಕೊನೆಯ ಪಕ್ಷ ನಾವು ಕಟ್ಟಿಸದೇ ಇದ್ದರೂ ಸಹಾ ಆ ಕೆರೆಗಳು ಉಳಿಯಬೇಕು. ಅವುಗಳನ್ನು ಉಳಿಸುವಂಥ ಕೆಲಸವನ್ನು ನಾವು ಮಾಡಬೇಕು. ಇದು ಕಾಗದದ ಮೇಲಿದ್ದರೆ ಏನೂ ಆಗುವುದಿಲ್ಲ. ನಾನು ಒಂದು ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಕಾನೂನು ಇದೆ. ಆ ಕಾನೂನಿನಲ್ಲಿ ಇಲ್ಲದೇ ಇರತಕ್ಕಂಥ ಅವಕಾಶಗಳನ್ನು ಇವತ್ತು ಪಡೆಯುವುದಕ್ಕೆ ಹೊರಟಿದ್ದೀರಿ ಸಂತೋಷ. ತಾವು ಪಡೆಯಿರಿ. ಆದರೆ, ಇಲ್ಲಿಯವರೆಗೂ ಈ ಕಾನೂನನ್ನು ಅನುಸರಿಸಿ ಎಲ್ಲೆಲ್ಲಿ ಏನೇನನ್ನು ಎಫೆಕ್ಟೀವ್ ಮಾಡಿಸಿದ್ದೀರಿ? ಎಷ್ಟು ಕೆರೆಯನ್ನು ಉಳಿಸಿದ್ದೀರಿ? ಎಷ್ಟು ರಸ್ತೆಯನ್ನು ಉಳಿಸಿದ್ದೀರಿ? ಇಲ್ಲ, ಈ ಕಾಗದದ ಮೇಲಿರತಕ್ಕಂಥ ಕಾನೂನನ್ನು ಏಕೆ ಈ ರೀತಿ ಮಾಡುವುದು? ಬರೀ ಕಾಗದದ ಮೇಲೆ ಇರುವುದಕ್ಕೋಸ್ಕರ ಕಾನೂನು ಮಾಡುವುದೇ? ಕಾನೂನು ಬರೀ ಕಾಗದದ ಮೇಲೆ ಉಳಿಯುವುದಕ್ಕೆ ಮಾತ್ರ ಸೀಮಿತವಾಗಿದ್ದರೆ ಈ ಸದನದ ಸಮಯ ಏಕೆ ಹಾಳಾಗಬೇಕು? ಅದು ಯಾವುದೇ ಸರ್ಕಾರ ಇರಲಿ ನಾನು ಇದನ್ನು

ಕೇಳುವುದಕ್ಕೆ ಇಷ್ಟಪಡುತ್ತೇನೆ. ಆದರಿಂದ ಮಾನ್ಯ ಕಂದಾಯ ಮಂತ್ರಿಗಳಲ್ಲಿ ವಿನಂತಿಸುವುದೇನೆಂದರೆ, ಈ ಕಾನೂನನ್ನು ಮಾಡಿ ನಾವು ಒಳ್ಳೆಯದು ಮಾಡಿದ್ದೇವೆಂದು ಹೇಳಿ ಇದನ್ನು ತೆಗೆದುಕೊಂಡು ಎಲ್ಲೋ ಇಟ್ಟು ಪೂಜೆ ಮಾಡುವುದಕ್ಕಲ್ಲ. ಈ ಕಾನೂನು ತಂದಿದ್ದೀರಿ, ತಕ್ಷಣ ನಿರ್ಧಾಕ್ಷಿಣ್ಯವಾಗಿ, ಯಾರೇ ಇರಲಿ, ಎಷ್ಟೇ ಪ್ರಭಾವಶಾಲಿಗಳಾಗಿರಲಿ, ಇದನ್ನು ಜಾರಿಗೆ ಕೊಡಬೇಕಾಗಿರತಕ್ಕಂಥಾದ್ದು ಅವಶ್ಯಕತೆ ಇದೆ. ತೀವ್ರವಾದ, ಕಠಿಣವಾದ ರೀತಿಯಲ್ಲಿ ತಾವು ವರ್ತಿಸಬೇಕಾದ ಅವಶ್ಯಕತೆ ಇದೆ. ಈ ಸಂದರ್ಭದಲ್ಲಿ ಒಂದನ್ನು ಜ್ಞಾಪಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷಣೆಯವರೆ, ಎಮರ್ಜನ್ಸಿ ಬಂತು. ನಾನು ಅದರ ಕಡು ವಿರೋದಿ. ಅಂಥಾ ಎಮರ್ಜನ್ಸಿ ಸಂದರ್ಭದಲ್ಲೂ ಕೆಲವು ಒಳ್ಳೆಯ ಕೆಲಸಗಳಾವುವು. ಅನೇಕ ಎನ್‌ಕ್ರೋಜ್‌ಮೆಂಟ್ಸ್ ಏನಿತ್ತು? ರಸ್ತೆ ಭಾಗದಲ್ಲಿರತಕ್ಕಂಥದನ್ನು ಅಟೋಮೆಟಿಕ್ ಆಗಿ ತೆಗೆಸಿದರು. ಎಮರ್ಜನ್ಸಿ ಇದ್ದಾಗ ಇದು ಕೂಡ ಇತ್ತು. ಆದರೆ ಈ ಕಾನೂನು ಮೂಲಕ ತೆಗೆಯಲಿಲ್ಲ. ಆದರೆ, ಸರ್ಕಾರ ಆವತ್ತಿನ ದಿವಸ ಮಾಡಬೇಕೆಂದು ಇಚ್ಛೆ ಇದ್ದುದರಿಂದ ಅದನ್ನು ತೆಗೆಸುವುದಕ್ಕೆ ಸಾಧ್ಯವಾಯಿತು. ನೋಟೀಸ್ ಕೊಡಲಿಲ್ಲ. ಪ್ರಿಸ್ಕ್ರೇಬ್ಡ್ ಆಫೀಸರ್ ಎಂದು ಏನಿದೆ? ಆ ಪ್ರಿಸ್ಕ್ರೆಬ್ಡ್ ಆಫೀಸರ್‌ರವರಿಂದ ನೋಟೀಸ್ ಹೋಗಲಿಲ್ಲ. ಕೆಲವು ಅಧಿಕಾರಿಗಳು ಹೋದರು ಇಂಥಾ ಕಡೆ ಇಷ್ಟು ತೆಗೆಯಬೇಕೆಂದು ಹೇಳಿದರು. ಅನೇಕ ಕಡೆಯ ರಸ್ತೆಗಳನ್ನು ರಕ್ಷಣೆ ಆಯಿತು. ಆದರೆ ಎಮರ್ಜನ್ಸಿ ಹೋದ ಮೇಲೆ ಆ ಕೆಲಸ ಇವತ್ತಿನ ದಿವಸ ಆಗಲಿಲ್ಲ

ಆದ್ದರಿಂದ, ನಾನು ಸರ್ಕಾರದಲ್ಲಿ ವಿನಂತಿಸುವುದೇನೆಂದರೆ, ನೀವು ಒಳ್ಳೆಯ ಕಾನೂನು ತಂದಿದ್ದೀರಿ. ಕಾನೂನು ಚೆನ್ನಾಗಿದೆ ಎನ್ನತಕ್ಕಂಥಾದ್ದು ಎಂದು ಹೇಳಿ ನೀವು ಸುಮ್ಮನೆ ಕುಳಿತುಕೊಳ್ಳಂಥಾದ್ದಲ್ಲ, ಪ್ರಮುಖವಾಗಿ ರಸ್ತೆಗಳು ಮತ್ತು ಕೆರೆಗಳು, ಮತ್ತೆ ಕೆರೆಗಳಿಗೆ ನೀರು ಹೋಗತಕ್ಕಂಥ ಹಳ್ಳ. ಆ ಹಳ್ಳವನ್ನು ಕೂಡ ಇವತ್ತಿನ ದಿವಸ ಹಾಳು ಮಾಡಿದ್ದಾರೆ. ಇದನ್ನು ಉಳಿಸತಕ್ಕಂಥ ಕೆಲಸ ನಮ್ಮ ಮುಂದಿನ ಪೀಳಿಗೆಯ ದೃಷ್ಟಿಯಿಂದ ಅತಿ ಜಾಗ್ರತೆ ಮಾಡಬೇಕಾಗಿರತಕ್ಕಂಥಾದ್ದು. ಆದ್ದರಿಂದ, ಈ ಕಾನೂನಿಗೆ ತಂದಿರತಕ್ಕ ತಿದ್ದುಪಡಿಗೆ ನನ್ನ ಸಂಪೂರ್ಣ ಬೆಂಬಲ ಸೂಚಿಸುತ್ತೇನೆ. ನೀವು ಈ ಕಾನೂನಿನಲ್ಲಿರುವಂಥ ಕಠಿಣ ಕ್ರಮವನ್ನು ತೆಗೆದುಕೊಳ್ಳುತ್ತೀರಾ? ತೆಗೆದುಕೊಂಡರೆ ನನಗೆ ಸಂತೋಷ ಉಂಟಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಸನ್ಮಾನ್ಯ ಅಧ್ಯಕ್ಷಣೆಯವರೆ, ಇವತ್ತಿನ ದಿವಸ ಕಂದಾಯ ಮಂತ್ರಿಗಳು ತಂದಂಥ ಈ ಒಂದು ಮಸೂದೆಯನ್ನು ನಾನು ಸ್ವಾಗತಿಸುತ್ತಾ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ನಿಜವಾಗಿಯೂ ಕಂದಾಯ ಮಂತ್ರಿಗಳು ತಂದಂಥ ಈ ಒಂದು ಬಿಲ್ ಬಹಳ ಒಳ್ಳೆಯದಿದೆ. ಇದನ್ನು ತರಲಿಕ್ಕೆ ಕಾರಣವೇನೆಂದರೆ, ವಿಧಾನ ಪರಿಷತ್ತಿನಲ್ಲಿ ಶ್ರೀಮಾನ್ ನಾಣಯ್ಯನವರು ಕೆಲವು ಉದಾಹರಣೆಗಳನ್ನು ಕೊಟ್ಟು ಈ ಪ್ರಕಾರ ಸರ್ಕಾರಿ ಆಸ್ತಿ ಹಾಳಾಗಲಿಕ್ಕೆ ಹತ್ತಿದೆ ಆದಕಾರಣ ತಾವು ಸರ್ಕಾರಿ ಆಸ್ತಿಯನ್ನು ಉಳಿಸುವ ಸಲುವಾಗಿ ಕೂಡಲೇ ಆಕ್ಟನ್ನು ಅಮೆಂಡ್‌ಮಾಡಲು ಆ ಕಾಲಕ್ಕೆ ಸೂಚನೆ ಕೊಟ್ಟಿದ್ದರು. ಆ ಸೂಚನೆಗೆ ಅನುಗುಣವಾಗಿ ಇವತ್ತಿನ ದಿವಸ ಸರ್ಕಾರದವರು ಈ ಬಿಲ್ಲನ್ನು ತಂದಿದ್ದಾರೆ. ಇದು ಒಳ್ಳೆಯದಿದೆ.

ಯಾವುದೇ ಯೂನಿವರ್ಸಿಟಿ ಪ್ರಾಪರ್ಟಿಯಾಗಲಿ, ಯಾವುದೇ ಜಿಲ್ಲಾಪರಿಷತ್ತು ಪ್ರಾಪರ್ಟಿಯಾಗಲೀ, ಯಾವುದೇ ಮಂಡಲ ಪಂಚಾಯತಿ ಪ್ರಾಪರ್ಟಿಯಾಗಲೀ, ಯಾವುದೇ ಮುನಿಸಿಪಾಲಿಟಿ ಪ್ರಾಪರ್ಟಿಯಾಗಲೀ ಅತಿಕ್ರಮಣವಾದುದನ್ನು ಆ ಕಾಲಕ್ಕೆ ಬಿಡಿಸಬೇಕಾದರೆ ಕೆಲವೊಂದು ತೊಂದರೆಗಳು ಮೊದಲಿನ ಕಾಯಿದೆಯಲ್ಲಿ ಇದ್ದವು. ಆದರೆ, ಈ ಅಮೆಂಡ್‌ಮೆಂಟ್‌ನಲ್ಲಿ ಅವುಗಳನ್ನು ಅಳವಡಿಸಿರುವುದರಿಂದ ಒಳ್ಳೆಯ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ತಮಗೆ ಒಂದು ಉದಾಹರಣೆಯನ್ನು ಕೊಡಬೇಕಾದರೆ, ಬೆಳಗಾವಿಯಲ್ಲಿ ಕೋರ್ಟ್ ಆವರಣದಲ್ಲಿ 25 ಗುಡಿಸಲುಗಳು ರಾತ್ರಿ ಬೆಳಗಾಗುವುದರೊಳಗೆ ಬಂದುಬಿಟ್ಟವು. ಆ ಬಗ್ಗೆ ಡಿಸ್ಟ್ರಿಕ್ಟ್ ಜಡ್ಜ್‌ರವರು ಹೈಕೋರ್ಟಿಗೆ ಲೆಟರ್ ಬರೆಯುತ್ತೇವೆ ಎಂದರು. ಪೋಲೀಸರು ಫಿರ್ಯಾದು ಕೊಟ್ಟರೂ ಕೂಡ ನಮ್ಮಿಂದ ಅವರನ್ನು ಬಿಡಿಸುವುದಕ್ಕೆ ಬರುವುದಿಲ್ಲ ಎಂದು ಹೇಳಿದರು. ಅಂದರೆ ಯಾವ ಪ್ರಕಾರವಾಗಿ ಸಾರ್ವಜನಿಕ ಸ್ಥಳಗಳಲ್ಲಿ ರಾತ್ರೋರಾತ್ರಿ ಯಾರಾದರೂ ಅನ್‌ಅಥರೈಸ್ಡ್ ಅಕ್ಯುಪೇಶನ್ ಮಾಡಿದರೆ, ಅದನ್ನು ಬಿಡಿಸುವುದಕ್ಕೆ ಈ ಮೊದಲಿನ ಕಾನೂನಿನಲ್ಲಿ ಅವಕಾಶ ಇರಲಿಲ್ಲ. ಅದೇ ಪ್ರಕಾರ ಮಂಡಲಪಂಚಾಯತ್ ಹದ್ದಿನಲ್ಲಿ ಕೆಲವೊಂದು ಸಾರ್ವಜನಿಕವಾಗಿ ಇಟ್ಟಂಥ ಸ್ಥಳಗಳು ಏನಿವೆ, ಬಸ್‌ಶೆಲ್ಟರ್, ಗಾರ್ಡನ್ ಮುಂತಾದುವುಗಳಿಗೆ ಮೀಸಲಾಗಿಟ್ಟ ಸ್ಥಳಗಳು ಏನಿವೆ, ಅಂಥ ಸ್ಥಳಗಳಲ್ಲಿಯೂ ಕೂಡ ಎನ್‌ಕ್ರೋಚ್ ಮಾಡಿ ಕೆಲವರು ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಆದ್ದರಿಂದ ಇಂಥ ಅತಿಕ್ರಮಣವನ್ನು ತಡೆಯಲು ಮಾನ್ಯ ಕಂದಾಯ ಸಚಿವರು ತಂದಂಥ ಈ ಮಸೂದೆಯ ಬಹಳ ಯೋಗ್ಯವಾದ ಮಸೂದೆ ಎಂದು ನಾನು ಸ್ವಾಗತ ಮಾಡುತ್ತೇನೆ. ಇಂಥ ಒಂದು ಕಾನೂನು ಮೊದಲೇ ಬರಬೇಕಾಗಿತ್ತು. ರಾಜ್ಯದಲ್ಲಿನ ಗೋಮಾಳಗಳು, ಕೆರೆದಂಡೆಗಳು ಮುಂತಾಗಿ ಸರಕಾರಿ ಜಾಗವನ್ನು ಕಾಪಾಡುವುದು ಈ ಬಿಲ್‌ನ ಮೂಲಕ ಸಾಧ್ಯವಾಗುತ್ತದೆ. ಆದರೆ ಇದನ್ನು ನ್ಯಾಯಸಮ್ಮತವಾದ ರೀತಿಯಲ್ಲಿ ಉಪಯೋಗ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಬೇಕು. ಏಕೆಂದರೆ ನಾವು ಇವೊತ್ತು ಹಳ್ಳಿಗಳಲ್ಲಿ ಒಬ್ಬ ಅಂಗವಿಕಲ ಒಂದು ಡಬ್ಬಿಯನ್ನು ಇಟ್ಟುಕೊಂಡು ಜೀವನೋಪಾಯ ಮಾಡುತ್ತಿದ್ದರೆ ಅಂಥಾದ್ದನ್ನು ತೆಗೆಸುವುದಕ್ಕೆ ಹೋಗಬಾರದು. ಅದೇ ರೀತಿಯಲ್ಲಿ ಸಾರ್ವಜನಿಕರಿಗೆ ಕಷ್ಟವಾಗುವಂಥ ಯಾವುದೇ ಪರಿಸ್ಥಿತಿಯಲ್ಲಿ ಅದನ್ನು ಉಪಯೋಗ ಮಾಡುವಲ್ಲಿ ಜಾಗ್ರತೆ ವಹಿಸಬೇಕು. ಸಾರ್ವಜನಿಕರಿಗೆ ತೊಂದರೆಯಾಗದ ಹಾಗೆ ಇದನ್ನು ಉಪಯೋಗಿಸಬೇಕು. ಆದ್ದರಿಂದ ಇನ್ನೊಮ್ಮೆ ಮಾನ್ಯ ಸಚಿವರು ತಂದಂಥ ಈ ವಿಧೇಯಕವನ್ನು ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎ. ಕೃಷ್ಣಪ್ಪ (ವರ್ತೂರು) : ಮಾನ್ಯ ಅಧ್ಯಕ್ಷಣೆಯವರೇ, ಮಾನ್ಯ ಕಂದಾಯ ಸಚಿವರು ತಂದಿರತಕ್ಕಂಥ ಈ ಬಿಲ್‌ನ್ನು ಬಹಳ ಸಂತೋಷದಿಂದ ನಾನು ಸ್ವಾಗತ ಮಾಡುತ್ತೇನೆ. ಕಾರಣ, ರಾಜ್ಯದಲ್ಲಿ ಯಾವ ಭಾಗದಲ್ಲಿ ಈ ಸಮಸ್ಯೆಗೆ ನಮ್ಮ ಸರಕಾರ ಗುರಿಯಾಗಿದೆಯೋ ಅದು ನನಗೆ ಗೊತ್ತಿಲ್ಲ. ನಮ್ಮ ಬೆಂಗಳೂರು ದಕ್ಷಿಣ ತಾಲ್ಲೂಕಿಗೆ ಇದು ಒಂದು ರೀತಿಯಲ್ಲಿ ವಜ್ರ ಕವಚವಾದಂತೆ ಆಗಿದೆ. ಭಹುಶಃ ನಮ್ಮ ಕಂದಾಯ ಸಚಿವ ಗಮನಕ್ಕೆ ಬಂದಿದೆಯೋ ಇಲ್ಲವೋ ತಿಳಿಯದು. ಆದರೆ ನಮ್ಮ ಅರ್ಬನ್ ಸಚಿವರ ಗಮನಕ್ಕೆ ಈ ವಿಷಯ ಬಂದಿದೆ. ಈ ಒಂದು ಕಾಯಿದೆ ಮೂಲಕ ನಾವು ಸರಕಾರದ ಜಾಗವನ್ನು ಗುರುತಿಸಿ

ಸೂಕ್ತ ಕ್ರಮ ತೆಗೆದುಕೊಂಡರೆ ಒಂದು ಸಾವಿರ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಬೆಂಗಳೂರು ದಕ್ಷಿಣ ತಾಲ್ಲೂಕು ಒಂದರಲ್ಲಿಯೇ ಸರಕಾರಕ್ಕೆ ಆದಾಯ ಬರುತ್ತದೆ. ಆ ಕೆಲಸವನ್ನು ಈ ಕಾಯಿದೆ ತಂದು 24 ಗಂಟೆಯೊಳಗಾಗಿ ವಶಕ್ಕೆ ತೆಗೆದುಕೊಳ್ಳಬಹುದು. ಕೆರೆಗಳು ಇವೆ, ಗೋಮಾಳಗಳು ಇವೆ, ಅರಣ್ಯ ಇಲಾಖೆಗೆ ಸೇರಿದ ಜಾಗಗಳು ಇವೆ, ಇದರ ಜೊತೆಗೆ ಸರಕಾರಿ ಸ್ವಾಮ್ಯದಲ್ಲಿರತಕ್ಕಂಥ ಹಲವಾರು ಜಾಗಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳಷ್ಟು ಬೆಳೆ ಬಾಳುವ ಜಾಗಗಳು ಇಂದು ಪರಭಾರೆಯಾಗಿ ಇವೆ. ಜನರು ಅದನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಈ ಒಂದು ವಿಧೇಯಕವನ್ನು ಮಾನ್ಯ ಕಂದಾಯ ಸಚಿವರು ತಂದು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅವರಿಗೆ ನಿಜವಾಗಿಯೂ ಈ ಬಗ್ಗೆ ಅಭಿನಂದನೆಗಳನ್ನು ಸಲ್ಲಿಸಬೇಕು. ಒಂದು ಗುಂಟೆ ಜಾಗವನ್ನು ಸರಕಾರಿ ಕೆಲಸಕ್ಕೆ, ಆಸ್ಪತ್ರೆಗೆ, ಸಮುದಾಯ ಭವನಕ್ಕೆ, ಹೈಸ್ಕೂಲ್‌ಗಳಿಗೆ, ರಸ್ತೆಗಳ ವಿಸ್ತರಣೆಗೆ, ಹೀಗೆ ಜನಹಿತ ಕಾರ್ಯಕ್ಕಾಗಿ ಮಾಡಲು ಸರಕಾರಿ ಯಂತ್ರ ಹೋದಾಗ ಮಾತು ಎತ್ತಿದರೆ, ಸ್ಟೇ ಆರ್ಡರ್, ಇಂಜಂಕ್ಷನ್ ಎಂದು ತರುತ್ತಾರೆ. ಅದಕ್ಕೂ ಮೇಲಾಗಿ ಜಬರ್‌ದಸ್ತು ಮಾಡುವ ವಾತಾವರಣವನ್ನು ಸೃಷ್ಟಿ ಮಾಡಿ ಸರಕಾರದ ಸ್ವಾಮ್ಯದ ಜಾಗವನ್ನು ಅತಿಕ್ರಮಣ ಮಾಡಿಕೊಂಡಿದ್ದಾರೆ. ನಾನು ಸರಕಾರದ ಅಧಿಕಾರಿಗಳಿಗೆ ಅನೇಕ ಭಾರಿ ಹೇಳಿದ್ದೇನೆ. ಪ್ರಾಪರ್ಟಿ ರಿಜಿಸ್ಟರ್ ಮ್ಯೆಂಟೈನ್ ಮಾಡಬೇಕೆಂದು ಒತ್ತಾಯಿಸಿದ್ದೇನೆ. ಪಂಚಾಯತ್‌ಗಳಲ್ಲಿ, ಮುನ್ಸಿಪಾಲಿಟಿಗಳಲ್ಲಿ, ನಗರ ಸಭೆಗಳಲ್ಲಿ, ಹೀಗೆ ಎಲ್ಲಾ ಕಡೆಗಳಲ್ಲಿ ನೋಟೀಸ್ ಬೋರ್ಡ್‌ಗಳಲ್ಲಿ ಸರಕಾರದ ಆಸ್ತಿಯ ಬಗ್ಗೆ ವಿವರಣೆಗಳನ್ನು ನೀಡಬೇಕು. ಯಾವ ಯಾವ ಸರ್ವೇ ನಂಬರ್‌ನಲ್ಲಿ ಎಷ್ಟೆಷ್ಟು ಗುಂಟೆ ಸ್ಥಳಗಳು ಈ ಸರಕಾರದ ಭೂಮಿಯಾಗಿ ಇದೆ ಎಂಬುದನ್ನು ತಿಳಿಸಬೇಕು. ಸರಕಾರದ ಜಮೀನಿನ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ಇರಬೇಕು. ಆ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು. ಯಾರೂ ಸರಕಾರಿ ಜಮೀನನ್ನು ವಶಪಡಿಸಿಕೊಂಡಿದ್ದಾರೆ, ಅಲ್ಲಿ ನೋಟೀಸ್ ಬೋರ್ಡ್‌ನ್ನು ಹಾಕಬೇಕು. ಈ ಬಗ್ಗೆ ಸರಕಾರದವರು ಸಕಾಲಿಕ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಕೂಡಲೇ ನಮ್ಮ ಮಾನ್ಯ ಮಂತ್ರಿಗಳು ಇಂಥ ಆ ದೇಶವನ್ನು ಕೊಡಬೇಕು ಪ್ರಾಪರ್ಟಿ ರಿಜಿಸ್ಟರನ್ನು ಅವರು ಘೋಷಣೆ ಮಾಡಬೇಕು ಎಲ್ಲಾ ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಟ್ಟು ರೆವಿನ್ಯೂ ಇಲಾಖೆಯಿಂದ ಮುನಿಸಿಪಲ್ ಡೈರೆಕ್ಟರೇಟಿಂದ ಕಡ್ಡಾಯವಾದ ಮ್ಯಾಂಡೇಟ್ ಮಾಡುವ ಮೂಲಕ ಈ ಹೊಸ ಕಾರ್ಯಕ್ಕೆ ಹೆಚ್ಚು ಚೈತನ್ಯ ತುಂಬುವಂತಹ ಪ್ರಯತ್ನ ರೆವಿನ್ಯೂ ಸಚಿವರು ಮಾಡಿದ್ದಾರೆ ಬಹಳ ಸಂತೋಷ ಪಡುವಂಥಾದ್ದು ಉದಾಹರಣೆಗೆ ಹೇಳಬೇಕಾದರೆ ನಿನ್ನೆ ಈ ಮನೆಯಲ್ಲಿ ನಮ್ಮ ವಿರೋಧಪಕ್ಷದ ನಾಯಕರಾದ ಶ್ರೀ ದೇಶಪಾಂಡೆಯವರ ಆಶ್ರಯ ಯೋಜನೆಯಲ್ಲಿ ದುರುಪಯೋಗ ಆಗಿದೆ ಎನ್ನುವ ಸಂಬಂಧದಲ್ಲಿ ಚರ್ಚೆಯಾಯಿತು. 284 ಎಕರೆ ಜಮೀನು ಸರ್ಕಾರದ ವಶದಲ್ಲಿದ್ದು ಸುಮಾರು 50 ವರ್ಷಗಳ ಕಾಲ ಯಾವುದೇ ಒಂದು ಮಂಜೂರಾತಿ ಇಲ್ಲದೆ ದುರುಪಯೋಗ ಮಾಡಿಕೊಂಡಿದ್ದ ಜಮೀನು, ಈ 40 ವರ್ಷಗಳಲ್ಲಿ ನಾನು ಉದ್ದಿಮೆ ಮಾಡುತ್ತಿದ್ದೇನೆ. ಜೀವನ ಮಾಡುತ್ತಿದ್ದೇನೆ, ನನಗೆ ಸಕ್ರಮ ಮಾಡಿಕೊಡಿ ಎನ್ನುವ ಮಾತು ಕೇಳಿ ಬರುತ್ತಿತ್ತು, ಸರ್ಕಾರಕ್ಕೆ ಅರ್ಜಿ ಹಾಕಿರಲಿಲ್ಲ ಆದರೆ ಸರ್ಕಾರ ಆಶ್ರಯ ಯೋಜನೆ ತಂದಾಗ ಸರ್ಕಾರಕ್ಕೆ ನಾನು ಒಂದು

ಪತ್ರ ಬರೆದಿದ್ದೆ. ಬೆಂಗಳೂರು ಮಹಾನಗರದ 20 ಕಿ.ಮೀ ವಿಸ್ತೀರ್ಣದಲ್ಲಿ ಆಶ್ರಯ ಯೋಜನೆಯಲ್ಲಿ ನಾವು ನಿವೇಶನಗಳನ್ನು ಕೊಡಬೇಕಾದರೆ ಗ್ರೀಸ್‌ಬೆಲ್ಟ್ ಕಾಯಿದೆ ಅಡ್ಡ ಬರುತ್ತಿದೆ, ಇದಕ್ಕೆ ನೀವು ರಿಯಾಯತಿ ಕೊಡಬೇಕು ಎಂದು ಆಗ ಹಿಂದಿನ ಮುಖ್ಯಮಂತ್ರಿಗಳು ಅದಕ್ಕೆ ರಿಯಾಯತಿ ಕೊಟ್ಟರು. ಹಾಗಾಗಿ ಯಾವ ಜಮೀನು ಬೇರೆಯವರ ಪಾಲಾಗಿತ್ತು ಆಸ್ತಿಯನ್ನು ನಾವು ಮೊಟಕುಮಾಡಿಕೊಳ್ಳುವ ಮುಖೇನ 92 ಎಕರೆ ಜಮೀನಿನಲ್ಲಿ 1381 ಸೈಟ್ ಮಾಡಿ ಅದರಲ್ಲಿ 681 ಸೈಟ್‌ಗಳನ್ನು ಕುರುಡರು, ಕುಂಟರು ಅಂಗವಿಕಲರು, ಮೂಗರು ಇವರಿಗೆ ವಿತರಣೆ ಮಾಡಿ ಸರ್ಕಾರದ ಯೋಜನೆಯನ್ನು ಸಾರ್ಥಕ ಮಾಡಿದ್ದೇವೆ.

ಆ ಜಾಗದಲ್ಲಿ ಇನ್ನು 150 ಎಕರೆ ಜಮೀನು ಇವತ್ತು ಪರರ ಕೈಲಿದೆ, ಅಲ್ಲಿ ಒಂದು ಎಕರೆಯ ಬೆಲೆ ಏನೆಂದು ತಾವು ಕೇಳೋವುದಾದರೆ ವೈಟ್‌ಫೀಲ್ಡ್ ಮುಖ್ಯರಸ್ತೆಯಲ್ಲಿ 10 ಲಕ್ಷ ರೂ.ಇದೆ. ರೆವಿನ್ಯೂ ಹಿರಿಯ ಅಧಿಕಾರಿಗಳು ಇಲ್ಲಿ ಉಪಸ್ಥಿತರಿದ್ದಾರೆ ನಾನು ಅವರ ಗಮನಕ್ಕೆ ತರುತ್ತಿದ್ದೇನೆ. 10 ಲಕ್ಷ ರೂ. ಕೊಡುತ್ತೇವೆಂದು ಹೇಳಿದರೆ ಆ ಭಾಗದಲ್ಲಿ ಜಾಗ ಸಿಗುವುದಿಲ್ಲ. ಅಂಥ ನೂರಾರು ಎಕರೆ ಜಮೀನು ಇವತ್ತು ಅಲ್ಲಿ ದುರುಪಯೋಗವಾಗಿದೆ. ಇದು ಸರ್ಕಾರದ ಕೆಲಸಕ್ಕಾಗಿ ಉಪಯೋಗವಾಗಿ ಕುರುಡರಿಗೆ ಕುಂಟರಿಗೆ ಒಂದು ಹೊಸ ಚೈತನ್ಯ ಚಾಲನೆ ಕೊಡುವಂತಾಗಿ ಮತ್ತು ಅವಶ್ಯ ಆರ್ಥಿಕ ಸಹಾಯಕ್ಕಾಗಿ ಕೆಎಸ್‌ಎಫ್‌ಸಿಯಿಂದ ಸಹಾಯ ಮಾಡುವುದರ ಜೊತೆಗೆ ಅರಣ್ಯ ಇಲಾಖೆ ಬಿಡಿಓ ಇಲಾಖೆಯವರು ಬೋರ್‌ವೆಲ್ ಕುಡಿಯುವ ನೀರಿನ ಯೋಜನೆಗಳು ಪಾಠಶಾಲೆಗಳನ್ನು ಸಮಗ್ರವಾಗಿ ನಮ್ಮ ಅಂಗವಿಕಲರಿಗೆ ಕೊಡೋಣ ಎಂದು ಮಾಡಿದಾಗ ಇದನ್ನು ರಾಜಕೀಯ ದುರುದ್ದೇಶದಿಂದ ಕೂಡಿದೆ ಎಂದು ಹೇಳಿದರು. ನಮ್ಮ ಮಂತ್ರಿಗಳು ಬಹಳ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ. ನಾನು ಪ್ರೆಸ್ ಕಾನ್‌ಫೆರೆನ್ಸ್‌ನಲ್ಲೂ ಹೇಳಿದ್ದೇನೆ ಸೆಲ್ಫ್ ಆಡಿಟ್ ಇಸ್ ನೆಸಸರಿ ಎಂದು, ಮತ್ತು ಇದನ್ನು ಸಿಬಿಐ ಮೂಲಕ ತನಿಖೆ ಮಾಡಿಸಲಿ ಎಂದು ಹೇಳಿದ್ದೇನೆ. ನಾವು ನೈತಿಕವಾಗಿ ಸರಿ ಇದ್ದೇವೆ. ಮಾನ್ಯ ರೆವಿನ್ಯೂ ಸಚಿವರು ನಾಳೆಯೇ ಅಧಿಕಾರಿಗಳನ್ನು ಕಳಿಸಲಿ ದುರುಪಯೋಗವಾಗಿದ್ದರೆ ಆ ಶಿಕ್ಷೆಗೆ ನಾನು ತಯಾರಿದ್ದೇನೆ. ಜೊತೆಗೆ ಮಂತ್ರಿಗಳು ತೀರ್ಮಾನ ತೆಗೆದುಕೊಳ್ಳಬೇಕು, ಲಕ್ಷೋಪಲಕ್ಷ 10 ಕೋಟಿ ಬೆಲೆಬಾಳುವ ಜಾಗಗಳು ಇವತ್ತು ಪರರ ಕೈಗೆ ಬಿದ್ದಿವೆ ಅದನ್ನು ಅವರು ಬಿಡಿಸುವ ಒಂದು ಪ್ರಯತ್ನ ಮಾಡಿದರೆ ಸರ್ಕಾರಕ್ಕೆ ಸಾರ್ಥಕವಾಗುತ್ತವೆ. ರೆವಿನ್ಯೂ ಅಧಿಕಾರಿಗಳಿಗೆ ಗೊತ್ತಿದೆ, ನೂರು ಕೋಟಿ ರೂಪಾಯಿಗಳಿಗೂ ಮಿಗಿಲಾದ ಜಮೀನುಗಳನ್ನು ಇವತ್ತು ಸರ್ಕಾರದ ವಶಕ್ಕೆ ತೆಗೆದುಕೊಂಡಿದ್ದೇವೆ ಇದನ್ನು ನಾನು ಬಹಳ ಸಂತೋಷದಿಂದ ಸ್ವಾಗತ ಮಾಡುತ್ತೇವೆ ಯಾರು ದಳ್ಳಾಳಿಗಳು ಪುಡಾರಿಗಳಿದ್ದರು ಬಡವರ ಹೆಸರಿನಲ್ಲಿ ಯಾರು ಸರ್ಕಾರದ ಜಮೀನನ್ನು ಮಾಡುವ ಮೂಲಕ ರಾಜಕೀಯದ ಹೆಸರಿನಲ್ಲಿ ಲಾಭ ಪಡೆಯಲು ಪ್ರಯತ್ನಿಸಿದ್ದಾರೆ ಅದನ್ನು ಮೊಟಕು ಮಾಡುವ ಒಂದು ದಿಟ್ಟತನವನ್ನು ನಮ್ಮ ಸಚಿವರು ತೋರಿಸಿದ್ದಾರೆ. ಇದರಲ್ಲಿ ಒಂದು ಸಲಹೆ ನಾನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಇಬ್ಬರು ಬಹಳ ಬ್ರಾಡ್ ಆಗಿ ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್, ಬೇರೆ ಬೇರೆ ಸಿಐಟಿಬಿಗಳು ಕಾರ್ಪೊರೇಷನ್ಸ್, ತಾಲ್ಲೂಕು ಅಭಿವೃದ್ಧಿ ಮಂಡಲಿಗಳನ್ನು ಹೇಳಿದ್ದಾರೆ. ತಮ್ಮ ಗಮನಕ್ಕೆ ಬರದೇ ಇರುವ ಇನ್ನೂ ಕೆಲವೆಂದರೆ ಕರ್ನಾಟಕ ಸರ್ಕಾರ ಮುನಿಸಿಪಲ್ ಕಾಯಿದೆ 1964ರಡಿಯಲ್ಲಿ ನಾವು ಐಟಿಐ

ನೋಟಿಫೈಡ್ ಏರಿಯಾ ಎಂದು ಇಟ್ಟಿದ್ದೇವೆ, ಎಚ್‌ಎಎಲ್ ಸ್ಯಾನಿಟರಿ ಬೋರ್ಡ್ ಎಂದು ಇಟ್ಟಿದ್ದೇವೆ. ಇಂತಹ ಬೋರ್ಡ್‌ಗಳನ್ನು ಮುನಿಸಿಪಲ್ ಕಾಯಿದೆ ಅಡಿಯಲ್ಲಿ ಭದ್ರಾವತಿ ಕೆಜಿಎಫ್ ಹೆಚ್‌ಎಎಲ್ ಐಟಿಐ ಸಂಸ್ಥೆಗಳಿವೆ, ಅಲ್ಲೂ ಕೂಡ ಇವನ್ನು ಅನ್ವಯಿಸುವ ಕೆಲಸ ಮಾಡಬೇಕು. ಜೊತೆಗೆ ಸರ್ಕಾರಿ ಹೈಸ್ಕೂಲುಗಳು ಆಸ್ಪತ್ರೆಗಳು, ಯಾವುದೇ ಬಾಗದಲ್ಲೂ ಕೂಡ, ಕೃಷ್ಣರಾಜಪುರದಲ್ಲಿ......

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸದಸ್ಯರು ಬಿಲ್ ಮೇಲೆ ಮಾತಾಡುತ್ತಿದ್ದಾರೋ ಅಥವಾ ತಮ್ಮ ವಿವರಣೆ ಕೊಡುತ್ತಿದ್ದಾರೋ ನನಗೆ ಗೊತ್ತಾಗಲಿಲ್ಲ, ನಾನು ಗಮನ ಸೆಳೆಯುವ ಸೂಚನೆ ಎತ್ತಿದ್ದು ನಿಜ, ಬಿಲ್ ಇದ್ದದ್ದು ಜಿಲ್ಲಾಪರಿಷತ್ ಮಂಡಲ ಪಂಚಾಯತಿ ಯೂನಿವರ್ಸಿಟಿ ಪ್ರಾಪರ್ಟಿಗಳ ಎನ್‌ಕ್ರೋಚ್‌ಮೆಂಟ್. ಪ್ರೈವೇಟ್ ಕೃಷಿ ಜಮೀನಿನ ಮೇಲೆ ಬಿಲ್ಲಿಲ್ಲ ಹಾಗಾಗಿ ನನಗೆ ಬಹಳ ಸಂತೋಷ, ಅವರು ಪಾಪ ಹೇಳಿದರು ನಾನೇನೂ ಮಾಡಿಲ್ಲ, ಅದರ ಬಗ್ಗೆ ವಿಚಾರಣೆ ಮಾಡಿರಿ ಎಂದು.

5.20 ಪಿ.ಎಂ.

ನನಗೆ ಬಹಳ ಆಶ್ಚರ್ಯವಾಗುತ್ತದೆ. ಸಚಿವರು ವಿಚಾರಣೆಗೆ ರೆಡಿಯಾಗಿಲ್ಲ, ಸ್ವಾಮಿ, ನಾನು ಅವರನ್ನು ಬಹಳ ಅಭಿನಂದಿಸುತ್ತೇನೆ. ಅವರು ವಿಚಾರಣೆಗೆ ಕೇಳಿದ್ದಾರೆ. ಹಾಗಾಗಿ ಈ ನಮ್ಮ ವರ್ತೂರು ಮತ್ತು ಉತ್ತರಹಳ್ಳಿ ಎರಡೂ ಕ್ಷೇತ್ರದಲ್ಲಿ ಆಶ್ರಯ ಯೋಜನೆಯಲ್ಲಿ ಏನು ನಿವೇಶನ ಹಂಚುವಲ್ಲಿ ದುರುಪಯೋಗವಾಗಿದೆ ಅಥವಾ ಅಕ್ರಮವಾಗಿದೆ, ಅದರ ಬಗ್ಗೆ ಒಂದು ಸಿ.ಓ.ಡಿ. ಎನ್‌ಕ್ವೈರಿಯನ್ನು ಮಾಡಿಬಿಡೋಣ. ಅವರು ಪಾಪ ಒಪ್ಪಿಕೊಂಡು ಬಿಟ್ಟಿದ್ದಾರೆ. ಹಾಗಾಗಿ ಇದನ್ನು ಸರ್ಕಾರ ಒಪ್ಪಿಕೊಂಡರೆ ಬಹಳ ಒಳ್ಳೆಯದಾಗಬಹುದು ಎಂದು ಹೇಳುತ್ತೇವೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸಬಾಧ್ಯಕ್ಷಿಣಿಯವರೇ, ವಿರೋಧ ಪಕ್ಷದ ನಾಯಕರಿಗೆ ನಾನು ಹೇಳುವುದೇನೆಂದರೆ ಯಾವ ಜಾಗಗಳು ಮತ್ತು ಆಸ್ತಿಗಳ ಬಗ್ಗೆ ಈ ಬಿಲ್ಲಿನಲ್ಲಿ ನಮೂದು ಮಾಡಿದ್ದಾರೆ. ಅವು ಬೆಂಗಳೂರು ನಗರ ಜಿಲ್ಲೆಯಲ್ಲಿ ಮಂಡಲಪಂಚಾಯತಿಗಳು, ಜಿಲ್ಲಾ ಪರಿಷತ್ತುಗಳಲ್ಲಿ ಇಲ್ಲ, ಹಾಗಾಗಿ ಆ ಆಸ್ತಿಗಳನ್ನು ರಕ್ಷಣೆ ಮಾಡಬೇಕಾದರೆ ಜಿಲ್ಲಾದಿಕಾರಿಗಳು ಅವರು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಅಧ್ಯಕ್ಷರಾಗಿದ್ದಾರೆ. ಮಂಡಲಪಂಚಾಯತಿಗಳು, ಜಿಲ್ಲಾ ಪರಿಷತ್ತುಗಳು ಇಲ್ಲದ ಕಾರಣ ಇವತ್ತು ನೇರವಾಗಿ ಈ ಒಂದು ರಕ್ಷಣೆ ಮಾಡುವ ಕೆಲಸ ಇದರ ಮುಖೇನ ಆಗಬೇಕು ಎನ್ನುವ ಕಾರಣಕ್ಕೆ ನಾನು ಹೇಳಿದ್ದೇನೆ. ಅದು ಆಸ್ತಿ ಎಂದರೆ ಸರ್ಕಾರದ್ದು. ಯಾವ ಹೆಸರು ಇಡುತ್ತೀರೋ ಅದಲ್ಲ ಮುಖ್ಯ. ನಮಗೆ ಆಸ್ತಿಯನ್ನು ಉಳಿಸುವುದಕ್ಕೆ ಇವತ್ತು ಹೊಸ ಚೈತನ್ಯವನ್ನು ತುಂಬುವಂಥ ಒಂದು ಬಿಲ್ಲನ್ನು ಮಾನ್ಯ ಮಂತ್ರಿಗಳು ತಂದಿದ್ದಾರೆ. ಅದಕ್ಕಾಗಿ ನಾನು ಇದನ್ನು ಪ್ರಸ್ತಾಪ ಮಾಡಿದ್ದೇನೆ. ಆದ್ದರಿಂದ ಈ ಆಸ್ತಿಗಳನ್ನು ಉಳಿಸುವಂಥ ಸಮಯದಲ್ಲಿ ಬಹಳ ಕಡೆ ನಮ್ಮ ಸರ್ಕಾರಿ ಜಮೀನುಗಳು ಆಸ್ಪತ್ರೆಗಳ ಆವರಣದಲ್ಲಿಯೂ ಬನಶಂಕರಿ ಹತ್ತಿರ ತಾವು ನೋಡಿರಬಹುದು ಅಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿದೆ ಎಂದು ಎಲ್ಲರೂ ಹೇಳುತ್ತಾರೆ. ಎನ್‌ಕ್ರೋಚ್‌ಮೆಂಟನ್ನು ತೆಗೆಸುವುದಕ್ಕೆ ಅಥವಾ ಆಸ್ತಿಯನ್ನು ಉಳಿಸಿಕೊಳ್ಳುವಂಥ ಪ್ರಯತ್ನವನ್ನು ಯಾರೂ ಮಾಡಲಿಲ್ಲ. ಆದರೆ ಆ ಜಾಗ ಇವತ್ತು ಕಾರ್ಪೊರೇಷನ್ ಮಿತಿಯಲ್ಲಿ ಇದೆ.

ಆದ್ದರಿಂದ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದುದು ಸರಿ ಇದೆ. ಸಿ.ಓ.ಡಿ.ಗೆ ಹೋಗಬಹುದು ಎನ್ನುವ ಮಾತನ್ನು ನೇರವಾಗಿ ನಾನು ಸಾರ್ವಜನಿಕರ ಗಮನಕ್ಕೆ ಹೋಗಲಿ ಎನ್ನುವ ಮಾತನ್ನು ಹೇಳಿದ್ದೆ. ಇವತ್ತು ಇದನ್ನು ನಾನು ಬಹಳ ಸಂತೋಷದಿಂದ ಸ್ವಾಗತ ಮಾಡುವುದರ ಜೊತೆಗೆ ನಾನು ಮಾಡಿದ ಈ ಮೂರು ನಾಲ್ಕು ಸಲಹೆಗಳನ್ನು ಮಾನ್ಯ ಮಂತ್ರಿಗಳು ಇದರಲ್ಲಿ ಅಳವಡಿಸುವುದರ ಮುಖೇನ ಏನು ಇವತ್ತು ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ಸುತ್ತಮುತ್ತ ಇರತಕ್ಕಂಥ ಪ್ರದೇಶ ಬಹಳ ಬೆಲೆ ಬಳತಕ್ಕಂಥ ಪ್ರದೇಶ ಇದೆ ಅದು. ಚಿನ್ನಕ್ಕೂ ಜಾಸ್ತಿ ಬೆಲೆ ಇರುವಂಥ ಜಾಗವಾಗಿದೆ. ಆ ಜಾಗಗಳನ್ನು ರಕ್ಷಣೆ ಮಾಡುವುದಕ್ಕೆ ಅವಕಾಶ ಮಾಡಬೇಕು. ಈ ನೋಟಿಫೈಡ್ ಏರಿಯಾ ಹೆಚ್ಎಎಲ್ ಸ್ಯಾನಿಟರಿ ಬೋರ್ಡ್ಸ್ ಎಂದು ಹೇಳಿ ಬೋರ್ಡ್ಸ್ ಎಂದು ಹೇಳಿ. ಮುನಿಸಿಪಲ್ ಕಾಯಿದೆಯಲ್ಲಿ ಏನು ಕಾರ್ಯವನ್ನು ನಡೆಸುತ್ತಿವೆ ಆ ಸಂಸ್ಥೆಗಳ ಮಿತಿಯಲ್ಲಿರುವಂಥ ಆಸ್ತಿಗಳೂ ಕೂಡ ರಕ್ಷಣೆಯಾಗುವಂಥ ಒಂದು ಕ್ರಮವನ್ನು ಈ ಬಿಲ್ಲಿನ ಮುಖೇನ ತಾವು ತೆಗೆದುಕೊಳ್ಳಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನಮಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ತಾವು ವಿಚಾರಣೆಗೆ ಒಪ್ಪಿಕೊಳ್ಳುತ್ತೀರಾ ಮಾನ್ಯ ಸಚಿವರೇ, ಈಗ ಅವರು ಪಾಪ ವಿಚಾರಣೆ ಮಾಡಲಿ ಎಂದು ಹೇಳಿದ್ದಾರೆ. ವಿಚಾರಣೆಯಾದರೆ ಪಾಪ ಅವರು ಇನೋಸೆಂಟ್ ಇದ್ದಾರೆ, ಅವರಿಗೂ ಗೌರವ ಬರುತ್ತದೆ. ಆ ದೃಷ್ಟಿಯಿಂದ ತಾವು ವಿಚಾರಣೆಗೆ ಒಪ್ಪಿಕೊಂಡರೆ ಬಹಳ ಒಳ್ಳೆಯದಾಗುತ್ತದೆ. ಈಗ ಅವರು ವಿಚಾರಣೆಗೆ ಒತ್ತಾಯ ಮಾಡಿದ್ದಾರೆ.

ಶ್ರಿ ಎ. ಕೃಷ್ಣಪ್ಪ : ಮಾನ್ಯ ದೇಶಪಾಂಡೆಯವರೇ, 780 ಜನರಿಗೆ ಕುರುಡರಿಗೆ ಪುಂಡರಿಗೆ ಕೊಟ್ಟಿದ್ದು ಅವತ್ತೇ ಹೇಳಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಿಮ್ಮ ಹೇಳಿಕೆಗೆ ನಾನು ಸಪೋರ್ಟ್ ಮಾಡಿದ್ದೇನೆ. ವಿಚಾರಣೆ ಮಾಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ : ಆದರೆ ಇಲ್ಲಿ ಸತ್ಯದ ಸಂಗತಿ ಏನಿತ್ತು ಎಂದು ನಿನ್ನೆ ಹೇಳುವುದಕ್ಕೆ ನನಗೆ ಅವಕಾಶವಿರಲಿಲ್ಲ, ನನಗೆ ನೈತಿಕಬಲ ಇತ್ತು. ಪತ್ರಿಕಾ ಹೇಳಿಕೆ ಹೇಳಿದ್ದೇನೆ. ನನಗೆ ಹೇಳುವುದಕ್ಕೆ ನಿನ್ನೆ ಅವಕಾಶ ಸಿಗಲಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ನಿಮಗೆ ನಾನು ಸಪೋರ್ಟ್ ಮಾಡಿದ್ದೇನೆ. ನೀವು ಏನು ಹೇಳಿದ್ದೀರಿ ವಿಚಾರಣೆ ಮಾಡಿ ಎಂದು. ಅದಕ್ಕೆ ನಾನು ಸಪೋರ್ಟ್ ಮಾಡಿ ಮಾತನಾಡುತ್ತಿದ್ದೇನೆ. ನಾನೆಲ್ಲಿ ನಿಮಗೆ ವಿರೋಧ ಮಾಡುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ : ಇಲ್ಲ, ಇಲ್ಲ, ಅದಕ್ಕೇ ಹೇಳಿದ್ದುದು.

+ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಭಾಧ್ಯಕ್ಷರೇ, ಕಂದಾಯ ಸಚಿವರು ತಂದಿರತಕ್ಕಂಥ ತಿದ್ದುಪಡಿ ಕಾನೂನು ಸ್ವಾಗತ ಮಾಡತಕ್ಕಂಥದ್ದು, ಸ್ವಾಗತ ಮಾಡುತ್ತಿದ್ದೇವೆ. ಆದರೆ ಇಲ್ಲಿ ಸಾರ್ವಜನಿಕ ಹಳ್ಳಿಯಲ್ಲಿರಬಹುದು, ಪಟ್ಟಣದಲ್ಲಿರಬಹುದು, ಷಹರ್‌ನಲ್ಲಿರಬಹುದು, ರಾಜ್ಯದ ಯಾವುದೇ ಸ್ಥಾನಿಕ ಸಂಸ್ಥೆಗಳ ಅಥವಾ ಸರ್ಕಾರಿ ಆಸ್ತಿ ಅಥವಾ ಸಂಘ ಸಂಸ್ಥೆಗಳ ಸಾರ್ವಜನಿಕ ಆಸ್ತಿಯನ್ನು ಅತಿಕ್ರಮಣ ಮಾಡಿ ಬಡವರಿಗಿಂತ ಹೆಚ್ಚು ಉಳ್ಳವರು ಇದನ್ನು ಹೆಚ್ಚಿಗೆ ದುರುಪಯೋಗ ಮಾಡಿಕೊಂಡಿದ್ದಾರೆ. ಆ ಕಾನೂನು ಇವತ್ತು ಜಾರಿಯಲ್ಲಿಬರಬೇಕು.

ಸಾರ್ವಜನಿಕ ಆಸ್ತಿಗಳನ್ನು ಇವತ್ತು ಸಾರ್ವಜನಿಕರಿಗೆ ಮುಕ್ತವಾಗಿಡಬೇಕು. ವೈಯಕ್ತಿಕ ಲಾಭಕ್ಕಾಗಿ ಯಾರೂ ಬಳಸಿಕೊಳ್ಳಬಾರದು ಎನ್ನತಕ್ಕಂಥ ಉದ್ದೇಶ ತೀವ್ರ ಕಾನೂನನ್ನು ತೀವ್ರ ರೀತಿಯಿಂದ ಆಚರಣೆಯಲ್ಲಿ ತರಬೇಕು ಎಂದು ತಂದಿದ್ದಾರೆ.

ಇದು ಸ್ವಾಗತಾರ್ಹವಾದುದು ಆದರೂ ಸಹಿತ ನಾವು ಅನೇಕ ಕಾನೂನುಗಳನ್ನು ಇವತ್ತು ತಂದಿದ್ದೇವೆ. ಈ ಕಾನೂನು ನಿಜವಾದ ಅರ್ಥದಲ್ಲಿ ಜಾರಿಯಲ್ಲಿ ಬರಬೇಕಾದರೆ ಅಷ್ಟೇ ಕಠೋರವಾದ ಕ್ರಮಗಳನ್ನು ಜರುಗಿಸಬೇಕಾಗುತ್ತದೆ. ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶಗಳನ್ನು ಕೊಡಬೇಕಾಗುತ್ತದೆ. ಶಾಸಕರು, ರಾಜಕಾರಣಿಗಳು ಇದರಲ್ಲಿ ಹಸ್ತಕ್ಷೇಪ ಮಾಡದಂತೆ ಸಾರ್ವಜನಿಕರ, ಸಮಾಜದ ಹಿತಕ್ಕಾಗಿ ನಾವೆಲ್ಲಾ ಹಸ್ತಕ್ಷೇಪ ಮಾಡದಂತೆ ದೂರುಗಳು ಇಲ್ಲದಂತೆ ಅವರು, ಸರ್ಕಾರದಿಂದ ಮಾನ್ಯ ಸಚಿವರು ಮಾಡಬೇಕಾಗುತ್ತದೆ. ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ನನ್ನ ತಾಲ್ಲೂಕಿನ ಹಿರೇಕೆರೂರಿನ ಇಂಗಳಗೊಂಡಿ ಮಂಡಲ್ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮದ ಅಗಸಿ ಎಂದು ಏನು ಹೇಳುತ್ತೇವೆ. ಅಲ್ಲಿ ಒಬ್ಬ ಒಂದು ಹೋಟೆಲ್ ಹಾಕಿದ್ದಾನೆ. ಎಂಟ್ರೆನ್ಸ್ ಆಫ್ ದಿ ವಿಲೇಜ್. ಆರು ವರ್ಷಗಳಿಂದ ಮಂಡಲ ಪಂಚಾಯತಿಯವರು ಇದು ಊರಿನ ಅಗಸಿಯಲ್ಲಿದೆ, ಊರಿನೊಳಗೆ ಹೋಗಲು ತೊಂದರೆಯಾಗುತ್ತದೆ ಎಂದು ಹೇಳಿ ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ ಮಾಡುತ್ತಾನೆ ಎಂದು ಹೇಳಿ ಮಂಡಲದವರು ಸರ್ವಾನುಮತದಿಂದ ಠರಾವನ್ನು ಮಾಡಿ ಅದನ್ನು ತೆಗೆಸಲಿಕ್ಕೆ ಹೊರಟರು. ಆ ಮಂಡಲ ಪಂಚಾಯತಿ ಕಾನೂನು ಪ್ರಕಾರ ಜಿಲ್ಲಾ ಪರಿಷತ್ತಿನ ಅಧಿಕಾರಿಗೆ ಅಪೀಲ್ ಮಾಡುವುದಕ್ಕೆ ಅವಕಾಶ ಇದೆ. ಕಳೆದ ಆರು ವರ್ಷಗಳಿಂದ ಅಪೀಲು ಮಾಡಿ ಸ್ಟೇ ಕೊಟ್ಟಿದ್ದಾರೆ ಈಗ ಇರತಕ್ಕ ಕಾನೂನಿನಲ್ಲಿ. ಏನು ಪ್ರಯೋಜನ ಇಂತಹ ಕಾನೂನಿನಿಂದ? ಅಧಿಕಾರಿಗಳು ಸಾರ್ವಜನಿಕರ ಹಿತದ ವಿರುದ್ಧ, ಸರ್ಕಾರದ ಕಾನೂನಿಗೆ ವ್ಯತಿರಿಕ್ತ ನೀವು ಸಮಯವನ್ನು ಅಧಿಕಾರಿಗಳಿಗೆ ನಿಗದಿ ಮಾಡಬೇಕು. ಸಮಯವನ್ನು ನಿಗದಿ ಮಾಡಿ ಇಂತಹ ಪ್ರಕರಣಗಳನ್ನು ಇತ್ಯರ್ಥ ಮಾಡದೇ ಹೋದರೆ ಈ ಕಾನೂನಿಗೆ ಅರ್ಥವೇ ಇಲ್ಲ. ಸ್ವಾರ್ಥ ಅಧಿಕಾರಿಗಳು, ಲಾಭ ಬಡುಕ ಅಧಿಕಾರಿಗಳು ಇದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಇಲ್ಲದೇ ಹೋದರೆ ಇದರ ಜಾರಿ ಅರ್ಥ ಭರಿತವಾಗಿ ಆಗುವುದಿಲ್ಲ. ಮಾನ್ಯ ಅಧ್ಯಕ್ಷರೇ ಆರು ವರ್ಷಗಳಿಂದ ಸಾರ್ವಜನಿರೆಲ್ಲಾ ವಿನಂತಿ ಮಾಡಿಕೊಂಡರು. ಮಂಡಲದವರು ಠರಾವನ್ನು ಮಾಡಿದರು, ತಾಲ್ಲೂಕು ಪಂಚಾಯತಿ ಸಮಿತಿಯಲ್ಲಿ ಸರ್ವಾಮತದಿಂದ ಠರಾವನ್ನು ಮಾಡಿದರು. ಸಾರ್ವಜನಿಕ ಆಸ್ತಿ, ಊರ ಜನರಿಗೆ, ಹೊರಗೆ ಹೋಗಲಿಕ್ಕೆ ಪ್ರವೇಶಕ್ಕೆ ದಾರಿ ಇಲ್ಲದಂತೆ ಅವನು ಹೋಟೆಲ್ ಕಟ್ಟಿದ್ದಾನೆ. ಅದನ್ನು ವಿಚಾರಣೆ ಮಾಡಿ ಎಂದು ಹೇಳಿದರು. ನೀವು ಅವನ ಪರವಾಗಿ ಅದರೂ ಕಾನೂನು ಇದ್ದರೆ ಮಾಡಿ, ಇಲ್ಲ ವಿರೋಧವಾಗಿಯಾದರೂ ಮಾಡಿ ಎಂದರೆ ಮಾಡುತ್ತಾ ಇಲ್ಲ, ಮೇಲಿನ ನ್ಯಾಯಾಲಯಗಳಿಗೆ ಹೋಗಬಹುದು. ಈ ರೀತಿ ಅಧಿಕಾರಿಗಳು ನಾವು ಇಲ್ಲಿ ಸದುದ್ದೇಶದಿಂದ ತಂದಂತಹ ಕಾನೂನನ್ನು ದುರುದ್ದೇಶದಿಂದ ತಮ್ಮ ಅಧಿಕಾರದ ದೌರ್ಜನ್ಯವನ್ನು ನಡೆಸಿ ದುರ್ಬಳಕೆ ಮಾಡುವುದಾದರೆ ಇಂತಹ ಕಾನೂನುಗಳು ಇರಬೇಕಾಗುತ್ತದೆಯೇ? ಅಂತಹ ಅಧಿಕಾರಿಗಳ ಬಗ್ಗೆ ತಾವು ರಾಜ್ಯಮಟ್ಟದಲ್ಲಿ ಸಭೆಯನ್ನು ಕರೆಯಬೇಕು. ರಾಜ್ಯ ಮಟ್ಟದ ಅಧಿಕಾರಿಗಳಿಂದ ಹಿಡಿದು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸ್ಪಷ್ಟವಾದ ಆದೇಶಗಳನ್ನು ಕೊಟ್ಟು ನಿರ್ದಿಷ್ಟವಾದ ಅವಧಿಯಲ್ಲಿ ಯಾರು ಅಕ್ರಮ ಮಾಡುತ್ತಾರೆ.

ಅವುಗಳನ್ನು ವಿಚಾರಣೆ ಮಾಡಬೇಕು, ತೆಗೆದು ಹಾಕಬೇಕು ಎಂದು ಸಮರೋಪಾದಿಯಲ್ಲಿ ಇದನ್ನು ಹೊಂದಿಕೊಂಡರೆ ಸಾರ್ವಜನಿಕರಿಗೆ ಇದರ ಸದುಪಯೋಗ ಆಗುತ್ತದೆ. ಅದಕ್ಕೂ ಪೂರ್ವದಲ್ಲಿ ತಾವು ಆದೇಶ ಕೊಡಬೇಕು. ಪ್ರತಿ ಒಂದು ಹಳ್ಳಿಯಿಂದ ತಾಲ್ಲೂಕಿನಲ್ಲಿ, ಶಹರಿನಲ್ಲಿ ಎಲ್ಲೆಲ್ಲಿ ಇಂತಹ ಸಾರ್ವಜನಿಕ ಆಸ್ತಿಗಳ ಮೇಲೆ ತಾವು ಇದರಲ್ಲಿ ಕೊಟ್ಟಿರುವಂತೆ ಪಂಚಾಯತಿ ಇರಬಹುದು, ತಾಲ್ಲೂಕು ಪಂಚಾಯತಿ, ಶಾಲೆ, ಎಪಿಎಂಸಿ ಕಾಲೇಜು ಈ ರೀತಿ ಅಕ್ರಮವಾಗಿದೆ ಮೊದಲು ಒಂದು ಯಾದಿಯನ್ನು ತರಿಸಿಕೊಳ್ಳಿರಿ. ಇಡೀ ರಾಜ್ಯದಲ್ಲಿ ಹಳ್ಳಿ, ಶಹರ ನಗರಗಳಲ್ಲಿರತಕ್ಕಂಥ ಅತಿಕ್ರಮಣಗಳ ಬಗ್ಗೆ ಒಂದು ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ತರಿಸಿಕೊಳ್ಳಿರಿ. ಅವರು ತಪ್ಪಿದಲ್ಲಿ ಶಾಸಕರಿಂದ, ಸಾರ್ವಜನಿಕರಿಂದ ಬರತಕ್ಕ ಮನವಿಗಳನ್ನು ತರಿಸಿಕೊಳ್ಳಿ, ಅದು ಅತಿಕ್ರಮಣ ಆಗಿಲ್ಲ ಎಂದು ಮೇಲು ನೋಟಿಕ್ಕೆ ಬರೆದರೆ ಸರ್ವೆ ನಡೆಯಲಿ. ಆ ನಂತರ ಯಾವಾಗ ಅದು ಸ್ಥಿರಪಡುತ್ತದೆ. ಮೇಲು ನೋಟಕ್ಕೆ ಇದು ಅತಿಕ್ರಮಣ ಆಗಿದೆ ಈ ಅತಿಕ್ರಮಣದಲ್ಲಿರತಕ್ಕಂಥ ಮನುಷ್ಯ ಅವನು ಮಾಲೀಕನು ಅಲ್ಲ, ಅವನು ಯಾವುದೇ ಹಕ್ಕಿಲ್ಲದ ಈ ಆಸ್ತಿಯಲ್ಲಿ ಇದ್ದಾನೆ ಎಂದು ಕಂಡು ಬಂದರೆ ನಿರ್ದಿಷ್ಟ ಅವಧಿಯಲ್ಲಿ ಇವುಗಳನ್ನು ತೆಗೆದುಹಾಕಿತಕ್ಕಂಥಹ ಕೆಲಸವನ್ನು ಮಾಡಿದರೆ ಮಾತ್ರ ಇದು ಪ್ರಯೋಜನವಾಗುತ್ತದೆ. ಇವತ್ತು ಹಳ್ಳಿಗಳಲ್ಲಿ ರಸ್ತೆಗಳು, ಷಹರುಗಳಲ್ಲಿ ರಸ್ತೆಗಳ ಬದಿಗೆ ಮೊದಲು ಒಂದು ಶೆಡ್ ಇಡುತ್ತಿದ್ದಾರೆ. ಆ ಶೆಡ್ ಇಟ್ಟು ಆ ನಂತರ ಗೋಡೆಗೆಗಳನ್ನು ಕಟ್ಟಿ ಶಾಶ್ವತವಾದ ಕಟ್ಟಡಗಳನ್ನು ಕಟ್ಟಿಕೊಂಡು ಬಿಡುತ್ತಾರೆ. ಅನೇಕ ಕಡೆ, ಅಲ್ಲಿ ಇಲ್ಲಿ ಎಂದು ಹೇಳುವುದಕ್ಕಿಂತ ಬಹುತೇಕ ಎಲ್ಲಾ ನಗರಗಳಲ್ಲಿ, ಪಟ್ಟಣಗಳಲ್ಲಿ ಈ ರೀತಿ ಮಾಡುತ್ತಿದ್ದಾರೆ. ಇದನ್ನು ತುರ್ತು ಪರಿಸ್ಥಿತಿಯ ಕಾಲದಲ್ಲಿ ಪ್ರಾರಂಭ ಮಾಡಿದರು. ಅಲ್ಲಲ್ಲಿ ಇದ್ದಂತಹ ಈ ಅತಿಕ್ರಮಣ ಕಟ್ಟಡಗಳನ್ನು ಸಾರ್ವಜನಿಕ ಆಸ್ತಿಗಳನ್ನು ಕಟ್ಟಿರುವಂತಹ ಕಡೆ ತೆಗೆದು ಹಾಕಲಿಕ್ಕೆ ಪ್ರಯತ್ನ ನಡೆದು ಕೆಲಸವನ್ನು ತೆಗೆದು ಹಾಕಿದರು. ದನಕರುಗಳು ನೀರನ್ನು ಕುಡಿಸುವುದಕ್ಕೆ ಹೊಂಡಗಳು ಇಲ್ಲ, ಅವುಗಳನ್ನೆಲ್ಲಾ ಅತಿಕ್ರಮಣ ಮಾಡಿದ್ದಾರೆ. ನೀರಾವರಿ ಕೆರೆಗಳನ್ನು ಅತಿಕ್ರಮಣ ಮಾಡಿದ್ದಾರೆ. ಎ.ಪಿ.ಎಂ.ಸಿ. ಯಾರ್ಡ್‌ಗಳಲ್ಲಿ ಅತಿಕ್ರಮಣವನ್ನು ಮಾಡಿದ್ದಾರೆ. ನಾವು ಇದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯನ್ನು ಮಾಡಿದ್ದೇವೆ. ಧರ್ಮದ ಹೆಸರಿನಲ್ಲಿ ರಸ್ತೆಗಳ ಬದಿಗೆ ಕಟ್ಟತಕ್ಕ ಮಸೀದಿ ಮತ್ತು ದೇವಸ್ಥಾನಗಳನ್ನು ನೋಡಿದ್ದೇವೆ.

ಈ ಬಗ್ಗೆ ತಾವು ಕೂಲಂಕುಷವಾಗಿ ವಿಚಾರಮಾಡಬೇಕಾಗುತ್ತದೆ. ಅವು ಅನಧಿಕೃತವಾಗಿದೆ. ಅವರ ಆಸ್ತಿಗಳೆಲ್ಲಾ ಭಕ್ತರ ಆಸ್ತಿಗಳನ್ನೆಲ್ಲಾ ಮಸೀದಿ ಆಸ್ತಿಗಳೆಲ್ಲಾ ಸಾರ್ವಜನಿಕ ರಸ್ತೆಗಳ ಮೇಲೆ ಕ್ರೀಡಾಂಗಣದಲ್ಲಿ ಬಸ್ ನಿಲ್ದಾಣಗಳಲ್ಲಿ, ರೈಲ್ವೆ ಸ್ಟೇಷನ್ನಿನ ಪಕ್ಕದಲ್ಲಿ ಇಂತಹದ್ದನ್ನು ಮಾಡಿದ್ದಾರೆ. ಇವುಗಳ ಬಗ್ಗೆ ಅತಿಕ್ರಮಣ ಎಲ್ಲೆಲ್ಲಿ ಆಗಿದೆ ಅವುಗಳ ಬಗ್ಗೆ ಕೂಲಂಕುಷವಾಗಿ ವಿಚಾರಮಾಡಬೇಕು. ಇದು ಸೂಕ್ಷ್ಮವಾದ ವಿಚಾರ. ನನ್ನ ದೃಷ್ಟಿಯಲ್ಲಿ ಯಾವುದೇ ಮಸೀದಿ ಇರಲಿ, ಚರ್ಚ್ ಇರಲಿ, ದೇವಸ್ಥಾನ ಇರಲಿ, ದೇವರ ಹೆಸರಿನಲ್ಲಿ ಈ ರೀತಿ ಅತಿಕ್ರಮಣವನ್ನು ಯಾವ ದೇವರು ಮಾಡು ಎಂದು ಹೇಳಿಲ್ಲ. ಇವುಗಳ ಬಗ್ಗೆ ನಿಜವಾದ ವಿಚಾರವನ್ನು ಮಾಡಿ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಸದನದ ಎಲ್ಲಾ ಸದಸ್ಯರ ವಿಶ್ವಾಸವನ್ನು ಇಟ್ಟುಕೊಂಡು ಕಾರ್ಯರೂಪಕ್ಕೆ ತಂದರೆ ಇದು ಸಮಾನತೆ

ಆಗುತ್ತದೆಂದು ನನಗೆ ಅನ್ನಿಸುತ್ತದೆ. ರಾಜ್ಯದಲ್ಲಿ ರಾಷ್ಟ್ರದಲ್ಲಿರತಕ್ಕಂಥ ಅಸಮಾನತೆಯೂ ಇದಕ್ಕೆ ಕಾರಣವಾಗಿದೆ. ಇದನ್ನು ಯಾವ ರೀತಿ ಪರಿಹಾರವನ್ನು ಮಾಡಬೇಕೆಂದು ನೋಡಿ ಈ ಕಾನೂನನ್ನು ಜಾರಿಗೆ ತಂದು ಸಾರ್ವಜನಿಕರ ನೆಮ್ಮದಿಗೆ ತಾವು ಸಹಾಯ ಆಗಬೇಕೆಂದು ಹೇಳಿ ಇದನ್ನು ಸ್ವಾಗತಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷಣಿಯವರೆ, ನಾನು ಮಾನ್ಯ ಕಂದಾಯ ಸಚಿವರು ತಂದಿರುವಂಥಹ ತಿದ್ದುಪಡಿ ವಿಧೇಯಕವನ್ನು ಸ್ವಾಗತಿಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಈ ತರಹ ಒತ್ತುವರಿ ಇರತಕ್ಕಂಥ ಅಕ್ರಮವಾಗಿ ಇರತಕ್ಕಂಥ ಜಾಗಗಳು ಎಷ್ಟಿದೆ ಎನ್ನತಕ್ಕದ್ದನ್ನು ಸರ್ಕಾರ ಮೊದಲು ಒಂದು ಅಂಕಿ ಅಂಶಗಳನ್ನು ತಯಾರು ಮಾಡಬೇಕು. ಇದು ಅತಿ ಅವಶ್ಯಕವಾಗಿ ಆಗಬೇಕಾದಂತಹದ್ದು. ಇಡೀ ಕರ್ನಾಟಕದ ಎಲ್ಲಾ ಜಿಲ್ಲೆ, ತಾಲ್ಲೂಕುಗಳು ಎಲ್ಲಾ ಕಡೆಯೂ ಎಷ್ಟು ನಮ್ಮ ಸರ್ಕಾರಿ ಜಾಗ, ಸಾರ್ವಜನಿಕ ಜಾಗ ಇದೆ. ಎನ್ನತಕ್ಕದ್ದನ್ನು ಮೊದಲು ಸರ್ಕಾರ ಅಂದಾಜು ಮಾಡಿಕೊಳ್ಳಬೇಕು. ಇದು ನಿಜವಾಗಿಯೂ ಇಂತಹ ಮಸೂದೆ ಬಹಳ ಮೊದಲೆ ಬಂದಿದ್ದರೂ ಇಷ್ಟೊಂದು ಪರಿಣಾಮಕಾರಿಯಾಗಿ ಇತ್ತು ಎಂದು ನಾನು ಅಂದುಕೊಂಡಿರಲಿಲ್ಲ ಅದು ಬಹಳ ಪರಿಣಾಮಕಾರಿಯಾಗಿದೆ. ನನಗೆ ಜ್ಞಾಪಕ ಇರುವ ಹಾಗೆ ಅಕ್ರಮ ಮನೆಗಳನ್ನು ಸಕ್ರಮ ಮಾಡುತ್ತೇವೆ ಎಂದು ಹೇಳಿ ಒಂದು ಕಡೆ ಬಂದಿತ್ತು. ಅಕ್ರಮವಾಗಿ ಕಟ್ಟಿರತಕ್ಕಂಥ ಮನೆಗಳನ್ನು ಸಕ್ರಮ ಮಾಡುತ್ತೇವೆಂದು ತಾವು ಹೇಳಿದ್ದೀರಿ. ಮತ್ತೊಂದು ಸಾರ್ವಜನಿಕ ಜಾಗಗಳಲ್ಲಿ ಇಂತಹ ಜಾಗದಲ್ಲಿ ಯಾರಾದರೂ ಮನೆಗಳನ್ನು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಯಾರಾದೋ ಒಬ್ಬರ ಆಶೀರ್ವಾದದಿಂದ ಜಾಗಪಡೆದು ಅಲ್ಲಿ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿದ್ದರೆ ಈ ಮನೆಗಳ ಪರಿಸ್ಥಿತಿ ಏನು ಈ ಮನೆಗಳಿಗೆ ರಕ್ಷಣೆ ಏನು? ಅಥವಾ ಈ ಮನೆಗಳನ್ನು ಹೊಡೆದು ಹಾಕಿಸುತ್ತೀರಾ? ಅಥವಾ ಈ ಮನೆಗಳ ಮೇಲೆ ತಾವು ಏನು ಕ್ರಮ ಕೈಗೊಳ್ಳುತ್ತೀರಾ? ಎನ್ನತಕ್ಕದ್ದು ಸರ್ಕಾರದ ಸ್ಪಷ್ಟ ನಿರ್ದೇಶನ ಇರಬೇಕು. ಏಕೆಂದರೆ ಇಂತಹವು ಕರ್ನಾಟಕದ ಅನೇಕ ಮೂಲೆ ಮೂಲೆಯಲ್ಲಿ ಇದೆ. ಇದರ ಬಗ್ಗೆ ಒಂದು ಸಾರಿ ಅನೇಕ ಜನ ನಿಯೋಗ ಬರುತ್ತಾರೆ. ನಮಗೆ ಬಹಳ ತೊಂದರೆಯಾಗಿದೆ. ಈಗ ಮನೆಗಳನ್ನು ಕಟ್ಟಿದ್ದೇವೆ. ನೀವೇನಾದರೂ ಮಾಡಿ ನಮ್ಮ ಮನೆಯನ್ನು ಉಳಿಸಬೇಕು ಬಹಳ ತೊಂದರೆಯಾಗಿದೆ ಎಂದು ಬರುತ್ತಾರೆ. ಕರ್ನಾಟಕ ಅನೇಕ ಕಡೆ ಇಂತಹ, ನಿಯೋಗಗಳು ಇಂತಹ ಸಂಘ ಸಂಸ್ಥೆಗಳು ಅಕ್ರಮವಾಗಿ ಕಟ್ಟಿರತಕ್ಕಂಥ ಮನೆಗಳಿಗೆ ಬೇರೆ ಬೇರೆ ಗುತ್ತಿದಾರರು ಇದ್ದಾರೆ. ದಳ್ಳಾಳಿಗಳು ಇದ್ದಾರೆ. ಇದು ಸಾರೋದ್ಧಾರವಾಗಿ ಕರ್ನಾಟಕದ ಮೂಲೆ ಮೂಲೆಯಲ್ಲಿಯೂ ನಡೆಯುತ್ತಿದೆ. ತಾವು ಈ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ಎನ್ನುವುದನ್ನು ಈ ಸಭೆಗೆ ಸ್ಪಷ್ಟಪಡಿಸಬೇಕು. ತಾವು ತಂದಿರತಕ್ಕ ತಿದ್ದುಪಡಿ ನಿಜವಾಗಿಯೂ ಸ್ವಾಗತ ಮಾಡತಕ್ಕದ್ದು. ನಿಮ್ಮ ಬಗ್ಗೆ ನಮಗೆ ಬಹಳ ಗೌರವವಿದೆ. ತಾವು ಶಕ್ತಿಯಿಂದ ಕೆಲಸ ಮಾಡುತ್ತೀರಿ ಅನ್ನತಕ್ಕ ನಂಬಿಕೆಯೂ ಇದೆ. ತಾವು ಹಿಂದೆ ಅಬಕಾರಿ ಸಚಿವರಾಗಿ ಒಳ್ಳೆಯ ಹೆಸರನ್ನು ಪಡೆದುಕೊಂಡಿದ್ದೀರಿ. ತಾವು ಕೆಳಗೆ ಇಳಿದ ತಕ್ಷಣ ಬಾರ್‌ಗಳಲ್ಲಿ ಪಟಾಕಿ ಹೊಡೆದುಕೊಂಡು ಜಯಕಾರವನ್ನು ಹಾಕಿಬಿಟ್ಟರು. ತಾವು ಹಣಕಾಸು ಸಚಿವರಾಗಿ ಮತ್ತು ಅಬಕಾರಿ ಸಚಿವರಾಗಿದ್ದಾಗ,

ಅಧಿಕಾರವನ್ನು ಕಳೆದುಕೊಂಡುದು ಅಂತ ಇಡೀ ರಾತ್ರಿ 12 ಗಂಟೆಯವರೆಗೂ ಹಬ್ಬ ಅನೇಕ ಕಡೆ ನಡೆಯಿತು. ನೀವು ಕಂದಾಯ ಸಚಿವರಾಗಿ ಬಂದಿದ್ದೀರಿ ಸ್ವಲ್ಪ ಚುರುಕು ಬರುತ್ತಿದೆ. ಇನ್ನೂ ಸ್ವಲ್ಪ ಚುರುಕನ್ನು ತರುತ್ತೀರೆಂದು ನಂಬಿಕೆ ಇದೆ.

ಶ್ರೀ ಆರ್. ವಿ. ದೇಶಪಾಂಡೆ : ಸಚಿವರು ಈ ವಯಸ್ಸಿನಲ್ಲಿ ಇಷ್ಟೊಂದು ಚುರುಕಾಗಿದ್ದಾರೆ. ನಿಮ್ಮನ್ನು ಕಂಪೇರ್ ಮಾಡಿದರೆ ನೀವೇ ಚುರುಕಾಗಬೇಕಲ್ಲ!

ಛೇರ್ಮನ್ : ಅವರಿಗಿಂತ ಜಾಸ್ತಿ ಚುರುಕಾಗಬೇಕು ಇವರು.

ಶ್ರೀ ವಾಟಾಳ್ ನಾಗರಾಜ್ : ನೀವು ಕೆಲಸ ಮಾಡುತ್ತೀರಿ ಎಂದು ನನಗೆ ಬಹಳ ನಂಬಿಕೆ ಇದೆ. ಆದರೆ ನನಗನಿಸುತ್ತದೆ. ಒಂದು ಪರಿಸ್ಥಿತಿಯಲ್ಲಿ ತಾವು ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳಬೇಕಾಗುತ್ತದೆ. ನಮ್ಮ ಆಸ್ತಿ ಎಷ್ಟಿದೆ ಎನ್ನತಕ್ಕಂಥ ಲೆಕ್ಕಾಚಾರವನ್ನೂ ಸಹ ಮೊದಲು ನಾವು ಇಟ್ಟುಕೊಳ್ಳಬೇಕು. ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಈ ವಿಧೇಯಕವನ್ನು ತಂದನಂತರ, ಈ ಹಿಂದೆ ಅಕ್ರಮವಾಗಿ ಕೊಟ್ಟಿರತಕ್ಕಂಥ ಜಾಗಗಳ ಬಗ್ಗೆ ತಾವು ಸ್ವಲ್ಪ ತನಿಖೆ ಮಾಡಬೇಕು. ಇಡೀ ರಾಜ್ಯದಲ್ಲಿ ಇದರ ಬಗ್ಗೆ ಎಂತೆಂತಹ ಚಿತ್ರಗಳು ಬರುತ್ತದಲ್ಲದೆ, ಇದರ ಹಿಂದೆ ಎಂತೆಂಥ ತಿಮಿಂಗಲಗಳು ಇವೆ ಎನ್ನತಕ್ಕಂಥಾದ್ದು ನಿಮಗೆ ಸಿಗುತ್ತದೆ. ನೀವು ಇದಕ್ಕೆ ಕೈ ಹಾಕುವುದಕ್ಕೆ ಹೋದಾಗ ನಿಮ್ಮಕಾಲು ಹಿಡಿದು ಎಳೆಯತಕ್ಕಂಥ ಪ್ರಸಂಗವೂ ಬರುತ್ತದೆ. ಆದುದರಿಂದ, ಧೈರ್ಯವಾಗಿ ನಿಂತು ಕೆಲಸ ಮಾಡಬೇಕೆಂದು, ತಾವು ತಂದಿರತಕ್ಕಂಥ ವಿಧೇಯಕವನ್ನು ಸ್ವಾಗತಿಸಿ ನಾನು ತಮಗೆ ಬೆಂಬಲ ಕೊಡುತ್ತಿದ್ದೇನೆ. ಈ ರಾಜ್ಯದ ಪ್ರತಿ ಜಿಲ್ಲೆ, ತಾಲ್ಲೂಕುಗಳಲ್ಲಿಯೂ ಒಂದು ತರಹ ಸಾರೋಧ್ಧಾರವಾಗಿ ಯಾರದೋ ಆಸ್ತಿಯನ್ನು ಯಾರಿಗೋ ಬರೆದು ಕೊಟ್ಟು ಬಿಡುವುದು ನಡೆದಿದೆ. ಅನಂತರ, ನೀವು ನೋಂದಾವಣಿ ಮಾಡುವ ರಿಜಿಸ್ಟ್ರಾರ್ ಆಫೀಸಿಗೆ ಹೋಗಿ ಬಿಡುವುದು ನೋಡಬೇಕು. ಅಲ್ಲಿ ಒಂದೊಂದು ಆಸ್ತಿಯನ್ನು 12 ಜನರಿಗೆ ಮಾಡುತ್ತಾರೆ. ಇದು ನಡೆದಿರತಕ್ಕಂಥ ವಿಚಾರ. ಮೊನ್ನೆ ದಿವಸ ಮೈಸೂರಿನಲ್ಲಿ ಒಬ್ಬ ಅಧಿಕಾರಿ ಈ ತರಹ ಮಾಡಿದ್ದಕ್ಕೆ ಆತನನ್ನು ಮನೆಗೆ ಕಳುಹಿಸಿದ್ದಾರೆ. ಅವನು ಸಬ್ ರಿಜಿಸ್ಟ್ರಾರ್ ಆಗಿದುಕೊಂಡು ಈ ತರಹದ ಅವ್ಯವಹಾರ ಮಾಡಿದ್ದಾನೆ. ಸಬ್ ರಿಜಿಸ್ಟ್ರಾರ್ ಆಫೀಸ್ ಒಂದು ದೊಡ್ಡ ಕರ್ಮಕಾಂಡವಾಗಿದೆ. ಇದರ ಬಗ್ಗೆ ಬೆಂಗಳೂರಿನ ಒಂದು ನಿದರ್ಶನವನ್ನು ತಮಗೆ ಹೇಳುತ್ತೇನೆ. ಇಡೀ ಬೆಂಗಳೂರಿನ ಸುತ್ತ-ಮುತ್ತಲಿರುವ ಕೆರೆಗಳು, ಧಾರ್ಮಿಕ ಸ್ಥಳಗಳು, ಸಾರ್ವಜನಿಕ ಸ್ಥಳಗಳು, ಉದ್ಯಾನವನಗಳು, ಇವೆಲ್ಲವುಗಳನ್ನು ಯಾರಿಗೋ ಬರೆದು ಕೊಟ್ಟಿದ್ದಾರೆ. ನಗರ ಪ್ರದೇಶಗಳಲ್ಲಿ ಮತ್ತು ಹಳ್ಳಿಗಾಡಿನ ಪ್ರದೇಶಗಳಲ್ಲಿ ಈ ರೀತಿ ನಡೆದಿರತಕ್ಕಂಥ ಅವ್ಯವಹಾರಗಳನ್ನು ತಾವು ಪತ್ತೆ ಹಚ್ಚಿದರೆ, ನನ್ನ ಅಂದಾಜಿನ ಪ್ರಕಾರ ಸರ್ಕಾರಕ್ಕೆ 10,000 ಕೋಟಿ ರೂಪಾಯಿಗಳ ಆಸ್ತಿ ಸಿಗಬಹುದು. ಇಂತಹ ಅಕ್ರಮವನ್ನು ತಾವು ಪತ್ತೆ ಹಚ್ಚುತ್ತೀರೆಂಬ ನಂಬಿಕೆ ನನಗಿದೆ. ಆದುದರಿಂದ, ಈ ವಿಧೇಯಕವನ್ನು ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೇ, ಇದು ಮೊದಲು ಆರ್ಡಿನೆನ್ಸ್ ಆಗಿ ಅನಂತರ ಬಿಲ್ ಆಗಿದೆ. ಇದರಲ್ಲಿ ಕೆಲವು ಸಂಸ್ಥೆಗಳು ಬಿಟ್ಟಿಹೋಗಿವೆ. ಒರಿಜಿನಲ್ ಆಕ್ಟ್ ಎನಾಕ್ಟ್ ಆಗಿದ್ದ ದಿವಸ ಅದನ್ನು ಸೇರಿಸುವ ಉದ್ದೇಶದಿಂದ ಈ ರೀತಿ ಮಾಡಿದ್ದಾರೆಂದು ನಾನು ಭಾವಿಸುತ್ತೇನೆ.

ಮತ್ತು ಅಥಾರಿಟಿಗೆ ಇದ್ದ ಅಧಿಕಾರವನ್ನು ವರ್ಗಾಯಿಸುವುದಕ್ಕೋಸ್ಕರ ಈ ಬಿಲ್ ಇಂಟ್ರಡ್ಯೂಸ್ ಆಗಿದೆ ಎನ್ನುವುದು ಭಾವಿಸುವುದು ಬಿಟ್ಟರೆ ಇದು ಮೊದಲು ಇರಲಿಲ್ಲ, ಇದರಕೆಳಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಯಾರಿಗೂ ಕೂಡ ಅಧಿಕಾರ ಇರಲಿಲ್ಲವೆಂದು ಭಾವಿಸುವುದಕ್ಕಾಗುವುದಿಲ್ಲ, ಅಧಿಕಾರ ಈ ಕಾಯಿದೆ ಕೆಳಗೆ ಮೊದಲಿನಿಂದಲೂ ಇತ್ತು. ಆದರೆ, ಅದರ ಬಳಕೆ ಸಮರ್ಪಕವಾಗಿ ಆಗಿರಲಿಲ್ಲವೆನ್ನತಕ್ಕಂಥ ಒಂದು ಮಾತನ್ನು ತಮಗೆ ಹೇಳುತ್ತೇನೆ. ತಮಗೆ ಏನು ಅಧಿಕಾರ ಕೊಟ್ಟಿದ್ದರು, ಅದನ್ನು ದುರುಪಯೋಗಪಡಿಸಿಕೊಂಡಿರುವುದರ ಬಗ್ಗೆ ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಮಂಡಲ ಪಂಚಾಯಿತಿ ಒಂದು ರೆಸಲ್ಯೂಷನ್ ಮಾಡಿ ಪೆಟ್ಟಿಗೆ ಅಂಗಡಿ ಇಡುವುದರ ಬದಲು ಗ್ರೌಂಡ್ ರೆಂಟ್ ಫಿಕ್ಸ್ ಮಾಡಿದ ನಿದರ್ಶನಗಳಿವೆ. ಮುನಿಸಿಪಾಲಿಟಿಯವರು ಮೇನ್ ರೋಡಿನಲ್ಲಿ ಪೆಟ್ಟಿಗೆ ಅಂಗಡಿಗಳನ್ನು ಇಡಿಸಿ, ಅವರುಗಳಿಂದ ತಿಂಗಳಿಗೆ 60 ರೂಪಾಯಿಯಂತೆ, ದಿವಸಕ್ಕೆ 2 ರೂಪಾಯಿಯನ್ನು ಕೊಡಿ ಎಂದು ಕೇಳಿರುವ ನಿದರ್ಶನಗಳಿವೆ. ನೀವು ಯಾರಿಗೆ ಅಧಿಕಾರ ಕೊಡುತ್ತಾ ಹೋಗುತ್ತೀರೋ, ಒಂದು ಕಡೆ ಇದನ್ನು ಬಳಕೆ ಮಾಡಿಕೊಂಡು ಸಾರ್ವಜನಿಕ ಆಸ್ತಿ ಉಳಿಸುತ್ತೇವೆಂದು ರೆಸಲ್ಯೂಷನ್ ಮಾಡುವುದು, ಇನ್ನೊಂದು ಕಡೆಯಿಂದ ಅದರ ದುರುಪಯೋಗ ಆಗುತ್ತಿದೆ. ಇದನ್ನು ತಪ್ಪಿಸುವುದಕ್ಕೆ ತಾವೇನಾದರೂ ಕಾರ್ಯಕ್ರಮ ಹಾಕಿಕೊಳ್ಳಬೇಕು. ಈಗ ಅಧಿಕಾರಿಗಳ ಕೈಗೆ ಅಧಿಕಾರವನ್ನು ವರ್ಗಾವಣೆ ಮಾಡುತ್ತೇವೆಂದು ಲೋಕಲ್ ಅಥಾರಿಟಿ ಹೇಳಿದರೆ ಕಣ್ಣುಮುಚ್ಚಿಕೊಂಡು ಓಡಾಡುತ್ತಿರುತ್ತಾರೆ. ರಸ್ತೆ ಪಕ್ಕದಲ್ಲಿ ಒಂದು ಅಂಗಡಿ ಇದೆಯೆಂದು ಏನಾದರೂ ಅಪೀಲ್ ಬರದೇ ಇದ್ದರೆ, ಯಾರೂ ಅರ್ಜಿ ಕೊಡದೆ ಇದ್ದರೆ, ಯಾರೇನು ಕೆಲಸ ಮಾಡುವುದಿಲ್ಲವೆಂದು ನಿಮ್ಮ ಸಬ್ ಡಿವಿಜನ್ ಆಫೀಸರ್, ಡಿ.ಸಿ. ಚೀಫ್ ಸೆಕ್ರೆಟರಿ ಅಥವಾ ಡೆಪ್ಯೂಟಿ ಸೆಕ್ರೆಟರಿಯವರು ತಿಳಿದುಕೊಳ್ಳುತ್ತಾರೆ. ಅವರು ಏನಾದರೂ ಸೂ-ಮೋಟೋ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಅವರ ಕಣ್ಣೆದುರಿಗೆ ರಸ್ತೆ ಪಕ್ಕದಲ್ಲಿ ಒಂದು ಪೆಟ್ಟಿಗೆ ಅಂಗಡಿ, ಹೋಟೆಲ್ ಇಟ್ಟಿದ್ದರೆ, ಏಕೆ ಇಲ್ಲಿ ಇಟ್ಟಿದ್ದೀರಿ, ಇದರಿಂದ ಸಾರ್ವಜನಿಕರಿಗೆ ಓಡಾಡುವುದಕ್ಕೆ ತೊಂದರೆಯಾಗುತ್ತದೆ. ಎಂದು ಹೇಳುವ ಅಧಿಕಾರಿಗಳನ್ನು ನಾನು ಇದುವರೆವಿಗೂ ನೋಡಿಲ್ಲ, ಪಿಡಬ್ಲ್ಯೂಡಿ ಇಂಜಿನಿಯರ್ ಯಾರಾದರೂ ಹೋಗಿ ಕೆರೆಯನ್ನು ಏತಕ್ಕೆ ಒತ್ತು ನಿಲ್ಲಿಸಿದ್ದಾರೆಂದು ಕೇಳಿಲ್ಲ, ಇದರ ಬಗ್ಗೆ ಕೇಳಿದರೆ ತಹಶೀಲ್ದಾರ್ ಅಳತೆ ಮಾಡಬೇಕೆಂದು ಹೇಳುತ್ತಾರೆ. ತಹಶೀಲ್ದಾರರ ಹತ್ತಿರ ಹೋಗಿ ಕೇಳಿದರೆ, ಅವರು ನಮ್ಮ ಹತ್ತಿರ ಸರ್ವೆಯರ್ಸ್ ಇಲ್ಲವೆಂದು ಹೇಳುತ್ತಾರೆ. ಆದುದರಿಂದ, ಈ ಕಾಯಿದೆ ಮೊದಲಿನಿಂದಲೂ ಇತ್ತು. ಇದರಲ್ಲಿ ಕೆಲವು ಅಮೆಂಡ್‌ಮೆಂಟ್ ಮಾಡಿ ವರ್ಗಾವಣೆ ಮಾಡಿಕೊಂಡಿದ್ದೀರಿ. ಜಿಲ್ಲಾ ಪರಿಷತ್ ಇದರಲ್ಲಿ ಸೇರಿರಲಿಲ್ಲ, ಮಂಡಲ ಪಂಚಾಯಿತಿಯೂ ಸೇರಿರಲಿಲ್ಲ ಮತ್ತು ನಿಮ್ಮ 'ಬಿ'ಗ್ರೂಫ್ ಆಫೀಸರ್ಸ್ ಇದರಲ್ಲಿ ಸೇರಿರಲಿಲ್ಲವೆನ್ನುವುದು ಬಿಟ್ಟರೆ ಬೇರೇನೂ ಇಲ್ಲ, ಇದಾದ ನಂತರ ಪ್ರಪಂಚದಲ್ಲಿ ಅಲ್ಲೋಲ ಕಲ್ಲೋಲವಾಗುತ್ತದೆಂದು ಭಾವಿಸುವುದಕ್ಕೆ ನಾನು ತಯಾರಿಲ್ಲ, ಏಕೆಂದರೆ, ಆರ್ಡಿನೆನ್ಸ್ ಆದ ದಿವಸದಿಂದ ಇವೊತ್ತಿನವರೆವಿಗೂ ಏನಾಗಿದೆಯೆಂದು ನಾವು ತಮಗೆ ಕೇಳಬೇಕಾಗುತ್ತದೆ. ಇದು ಹೊಸದಾಗಿ ಇಂಟ್ರಡ್ಯೂಸ್ ಆಗಿಲ್ಲ, ಆರ್ಡಿನೆನ್ಸ್ ಆಗಿದ್ದನ್ನು ಬಿಲ್ ಆಗಿ ಪರಿವರ್ತಿಸಿ ನಮ್ಮ ಮುಂದೆ ತಂದಿದ್ದೀರಿ. ತಾವು ದಯಮಾಡಿ ತಮ್ಮ ಗೊಂದಲ ನೀತಿಯನ್ನು ಬಿಟ್ಟು ಬಿಡಬೇಕು.

ಒಂದು ಕಡೆ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಅಥವಾ ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ರೆಗ್ಯುಲೈಸ್ ಮಾಡುತ್ತೇವೆಂದು ಹೇಳುತ್ತಾರೆ. ಇನ್ನೊಂದು ಕಡೆ ಬಗರ್ ಹುಕುಂ ಕನ್‌ಫರ್ಮ್ ಮಾಡುತ್ತೇವೆಂದು ಮತ್ತೊಂದು ಕಡೆ ಎವಿಕ್ಷನ್ ಕಡ್ಡಾಯವಾಗಿ ತರುತ್ತೇವೆನ್ನುವ ಗೊಂದಲ ನೀತಿಯನ್ನು ಬಿಟ್ಟು ಬಿಡಬೇಕು. ದ್ವಂದ್ವ ನೀತಿಗಳನ್ನು ನೀವು ಅನುಸರಿಸುವ ಮೊದಲು ಸನ್ಮಾನ್ಯ ಸಚಿವರು ಯೋಚನೆ ಮಾಡಬೇಕು. ನಿಮ್ಮ ನೀತಿಯಾದರೂ ಏನು?

ಮತ್ತೆ ಅದನ್ನು ರಾಜಕೀಯವಾಗಿ ಬಳಸಬಾರದು. ಇದನ್ನ ಏಕೆ ಹೇಳುತ್ತಿದ್ದೇನೆಂದರೆ ಯಾರೋ ನಮಗೆ ಬೇಕಾದವರು ಇಟ್ಟುಕೊಳ್ಳುವುದನ್ನು ಮಂಡಲದವರು ಒಂದೊಂದ ಸಾರಿ ಒಪ್ಪುತ್ತಾರೆ. ಒಂದು ಮಾತನ್ನು ಹೇಳುತ್ತೇನೆ, ತಾವು ಲೈಸನ್ಸ್ ಕೊಟ್ಟಿರತಕ್ಕ ಒಬ್ಬನೇ ಒಬ್ಬ ಮಂಡಲ ಕಾರ್ಯದರ್ಶಿಯೂ ಸಹ ಸ್ಥಳಪರೀಕ್ಷೆಯನ್ನು ಮಾಡುತ್ತಿಲ್ಲ, ಸೈಟನ್ನು ನೋಡುತ್ತಿಲ್ಲ. ನೀವು ಲೈಸೆನ್ಸ್ ಮೈನ್ ರೋಡಿನಿಂದ 5 ಅಡಿ ಹಿಂದಕ್ಕೆ ಕಟ್ಟಬೇಕೆಂದು ಪ್ರಿಂಟ್ ಮಾಡಿಸಿರುತ್ತೀರಿ. ಸತ್ಯವಾಗಿ ಒಂದು ಮಾತನ್ನು ಹೇಳುತ್ತೇನೆ ಒಂದೇ ಒಂದು ಹಳ್ಳಿಯಲ್ಲಿಯೂ 5 ಅಡಿಯನ್ನು ಬಿಟ್ಟು ಯಾರೂ ಕೂಡಾ ಮನೆಗಳನ್ನು ಕಟ್ಟಿಸಿಲ್ಲ, ಅವರ ಪಕ್ಕದ ಮನೆಗೆ 2 ಅಡಿ ಜಾಗವಿರಬೇಕೆಂದು ಕಾನೂನನ್ನು ಮಾಡಿದ್ದೀರಿ, ಆದರೆ ಯಾರೂ ಕೂಡ 2 ಅಡಿಯನ್ನು ಬಿಟ್ಟು ಕಟ್ಟುತ್ತಿಲ್ಲ. ಕಾರ್ಯದರ್ಶಿಯ ಲೈಸೆನ್ಸ್ ಬರೆದು ಕೊಡಬೇಕಾದರೆ, ಬೌಂಡರಿಯನ್ನು ಫಿಕ್ಸ್ ಮಾಡಬೇಕಾದರೆ ಪಕ್ಕದ ಮನೆಯ ಗೋಡೆಯವರೆಗೆ ಎಂದು ಬರೆದು ಕೊಡುತ್ತಾನೆ. ಇಂಥ ಕಾರ್ಯದರ್ಶಿಗಳನ್ನು ಇಂಥ ಅಧಿಕಾರಿಗಳನ್ನು ಇಟ್ಟುಕೊಂಡು ಬರೀ ಬಿಲ್ಲನ್ನು ಅಮೆಂಡ್ ಮಾಡುವುದರಿಂದ ಸಾಧನೆಯಾಗುತ್ತದೆಂದು ನಾವು ಭಾವಿಸುವುದಕ್ಕೆ ಆಗುವುದಿಲ್ಲ. ಈ ಬಿಲ್ಲನ್ನು ಸ್ವಾಗತಿಸುತ್ತೇನೆ. ಇದರ ಜೊತೆಗೆ ತಾವು ಅಧಿಕಾರಿಗಳನ್ನು ನಿಗಧಿ ಮಾಡಬೇಕು. ಅಧಿಕಾರಿಗಳನ್ನು ಗುರುತು ಮಾಡಬೇಕು. ನಾವು ಯಾರಾದರೂ ಕಾರ್ಯದರ್ಶಿಗಳಿಗೆ ಯಾವುದೇ ವಿಷಯದಲ್ಲಿ ಕಂಪ್ಲೇಟ್‌ನ್ನು ಮಾಡಲು, ಅಥವಾ ಏಕೆ ಲೈಸೆನ್ಸ್‌ನ್ನು ಕೊಟ್ಟಿದ್ದೀರಿ, ಎನ್ನುವ ಬಗ್ಗೆ, ಕ್ರಮ ತೆಗೆದುಕೊಳ್ಳದೇ ಇರುವ ಕಾರ್ಯದರ್ಶಿಯ ಬಗ್ಗೆ ಏನಾದರೂ ಶಿಕ್ಷೆ ಮಾಡುವ ಅವಕಾಶವನ್ನು ಕಾನೂನಿನ ಕೆಳಗೆ ಮಾಡಿದರೆ ಇದು ಬಹಳ ಒಳ್ಳೆಯ ಬಿಲ್ ಆಗುತ್ತದೆ. ತಾವು ಇದನ್ನು ಅನುಷ್ಠಾನಕ್ಕೆ ಸ್ಪಷ್ಟವಾಗಿ ಮತ್ತು ಶಿಸ್ತಾಗಿ ತರುತ್ತೀರಿ ಎಂದು ಹೇಳುತ್ತ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಸನ್ಮಾನ್ಯ ಉಪಾಧ್ಯಕ್ಷಣಿಯರೆ, ನಾನು ಈ ಬಿಲ್ಲನ್ನು ಸ್ವಾಗತ ಮಾಡಿ ಮಾನ್ಯ ರಾಜಶೇಖರಮೂರ್ತಿಯವರಿಗೆ ಮತ್ತು ಹಿಂದಿನ ಕಂದಾಯ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಬರೀ ಅಮೆಂಡ್ ಮಾಡುವುದರಿಂದ ಆಕ್ಟ್ ಮಾಡಿ ಅಧಿಕಾರಿಗಳಿಗೆ ಅಧಿಕಾರ ಕೊಡುವುದರಿಂದ ಸಾಕಾಗುವುದಿಲ್ಲ. ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರತಕ್ಕಂಥ ಕೆಲಸವಾಗಬೇಕು. ಏಕೆಂದರೆ ಅನೇಕ ಸಲ ಇದು ಅಧಿಕಾರದ ಚೌಕಟ್ಟಿನಲ್ಲಿದ್ದರೂ ಕೂಡ ಅಧಿಕಾರಿಗಳು ಅದನ್ನು ಮಾಡದೆ ಇರತಕ್ಕ ಪ್ರಕರಣಗಳಿವೆ. ಉದಾಹರಣೆಗೆ ನನ್ನ ತಾಲ್ಲೂಕಿನಲ್ಲಿ ಮಡಿವಾಳವೆಂಬ ಒಂದು ಕೆರೆಯ ಅಂಗಳವನ್ನು ಒತ್ತುವರಿ ಮಾಡಿದ್ದಾರೆ ಎಂದು ಈ ವಿಧಾನಸಭೆಯಲ್ಲಿ ಪ್ರಶ್ನೆಯನ್ನು ಕೇಳಿದ್ದೆ, ಉತ್ತರದಲ್ಲಿ ಮಾಡಿದ್ದೇವೆಂದು ಹೇಳಿದರು. ಆದರೆ ಫೀಸಿಕಲ್

ಆಗಿ ಅಲ್ಲೇ ಇತ್ತು. ಇಂಥ ಕಾರಣಗಳು ಬೇಕಾದಷ್ಟು ನಡೆಯುತ್ತಿವೆ. ನಂತರ ಬಂಗಾರಪೇಟೆಯಲ್ಲಿ ಸುಮಾರು 80 ಲಕ್ಷ ರೂ. ಬೆಲೆ ಬಾಳತಕ್ಕ ಜಾಗದಲ್ಲಿ ಬಸ್ ಸ್ಟ್ಯಾಂಡ್ ಮಾಡಲು ಲೈಸೆನ್ಸ್‌ನ್ನೂ ಹೆಚ್'ಯುಡಿಯವರು ಆದೇಶವನ್ನು ಕೊಟ್ಟರು, ಆದರೆ ಅದನ್ನು ತಡೆಹಿಡಿಯುವ ಕೆಲಸ ಕೂಡ ಆಗಿದೆ. ಬಂಗಾರಪೇಟೆಯಲ್ಲಿನ ಹೊಸಕೆರೆಯಲ್ಲಿನ ಜಾಗವು ಸಹ ಇದೇ ರೀತಿಯಾಗಿದೆ. ಈ ರೀತಿಯಾಗಿ 20ರಿಂದ 30, 40 ಗುಂಟೆ ಭೂಮಿ ಅತಿಕ್ರಮಣವಾಗಿದೆ. ಆದರೆ ಈ ಅಧಿಕಾರಿಗಳು ಏನೂ ಕೆಲಸ ಮಾಡದೆ ಬರೀ ಸರ್ಕಾರಕ್ಕೆ ಮಾಹಿತಿಗಳನ್ನು ಕೊಡತಕ್ಕ ಕೆಲಸಗಳನ್ನು ಮಾಡುತ್ತಿದ್ದಾರೆ. ಆದುದರಿಂದ ತಾವು ಈ ಸಂದರ್ಭದಲ್ಲಿ ಯಾವ ಒಂದು ಬಿಲ್ಲನ್ನು ತಂದಿದ್ದೀರೋ ಅದು ಪಾಸ್ ಆದಮೇಲೆ ಅದು ಈ ವಿಧಾನಸಭೆಯಲ್ಲಿ ಮಾತ್ರ ಕುಳಿತುಕೊಳ್ಳದೆ ಕಟ್ಟುನಿಟ್ಟಾಗಿ ಜಾರಿಗೆ ಬಂದು ಹಳ್ಳಿಗಳಲ್ಲಿ ಕೂಡ ಕೆಲಸವಾಗತಕ್ಕ ರೀತಿಯಲ್ಲಾಗಬೇಕು. ತಮಗೆ ಗೊತ್ತಿರುವ ಹಾಗೆ ಹಳ್ಳಿಗಳಲ್ಲಿ ಹೊಲಕ್ಕೆ, ಗದ್ದೆಗೆ ಹೋಗತಕ್ಕ ದಾರಿಯನ್ನು ಸಹ ಬಿಟ್ಟಿರುವುದಿಲ್ಲ. ಅನೇಕ ಘರ್ಷಣೆಗಳಿವೆ. ಅದು ನನ್ನಪಕ್ಷವಿರಬಹುದು, ಅಥವಾ ಬೇರೆ ಪಕ್ಷದವರಿರಬಹುದು? ಎಲ್ಲರಿಗೂ ಸೇರುತ್ತದೆ. ಅದಕ್ಕೆ ಕೂಡ ತಾವು ಆರ್ಡಿನೆನ್ಸ್ ಪಾಸ್ ಮಾಡಬೇಕು. ಹೊಸ ನಕಾಶೆಯನ್ನು ಮಾಡಿ ಜಮೀನುಗಳನ್ನು ಗುರುತಿಸಿ ದಾರಿಯನ್ನು ಬಿಡತಕ್ಕ ಕೆಲಸವಾಗಬೇಕು. ಎಲ್ಲೆಲ್ಲಿ ಈಗಾಗಲೇ ದಾರಿ ಬಿಟ್ಟಿದೆ. ಅದನ್ನು ಅನೇಕ ಕಡೆಗಳಲ್ಲಿ ಅಡ್ಡಗಟ್ಟಿ ನಿಲ್ಲಿಸತಕ್ಕಂಥ ಕೆಲಸವಾಗುತ್ತಿದೆ. ಅದನ್ನೂ ಕೂಡ ನಿಲ್ಲಿಸತಕ್ಕ ಕೆಲಸವಾಗಬೇಕೆಂದು ಹೇಳಿ ಈ ಬಿಲ್ಲನ್ನು ಸ್ವಾಗತಿಸುತ್ತೇನೆ.

+ ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಸನ್ಮಾನ್ಯ ಉಪಾಧ್ಯಕ್ಷಣೆಯವರೆ, ಮಾನ್ಯ ಕಂದಾಯಮಂತ್ರಿಗಳು ತಂದಿರತಕ್ಕ ವಿಧೇಯಕವು ಅತ್ಯಂತ ಉತ್ತಮವಾದುದು. ಅದನ್ನು ನಾನು ಸ್ವಾಗತಿಸುತ್ತಿದ್ದೇನೆ. ಏಕೆಂದರೆ, ಈ ಅತಿಕ್ರಮಣ ಎಲ್ಲಿಯವರೆಗೆ ಹೋಗಿದೆ ಎಂದರೆ ತೋಪುಗಳನ್ನು, ಹಳ್ಳಗಳನ್ನೂ ಕೂಡ ಸ್ವಾಧೀನ ಮಾಡಿಕೊಂಡು ಜನರು ಉಳುಮೆ ಮಾಡತಕ್ಕದ್ದನ್ನು ಕಾಣುತ್ತಿದ್ದೇವೆ. ಅದು ಮಾತ್ರವಲ್ಲ ಎಷ್ಟೋ ದಲ್ಲಾಳಿಗಳು ಭೂಮಿಯನ್ನು ಆಚೆ ಈಚೆ ಮಾಡುವುದರಲ್ಲಿ ಹಣವನ್ನು ಮಾಡತಕ್ಕದ್ದು ಬೇಕಾದಷ್ಟಿದೆ. ಇಂಥ ಎಷ್ಟೋ ಜನ ತಿಮಿಂಗಲಗಳು ಕೆಲಸ ಮಾಡುತ್ತಿದ್ದಾರೆ. ಅದನ್ನು ಬಗ್ಗುಬಡಿಯಲು ಕಂದಾಯ ಮಂತ್ರಿಗಳು ಈ ಒಂದು ಕಾರ್ಯಕ್ರಮವನ್ನು ತಂದಿದ್ದಾರೆಂದು ನಾನು ಭಾವಿಸುತ್ತೇನೆ. ಅದು ಮಾತ್ರವಲ್ಲ, ಕಂದಾಯ ಮಂತ್ರಿಗಳು ಕಟ್ಟುನಿಟ್ಟಾಗಿ ಕೆಲಸವನ್ನು ಮಾಡತಕ್ಕ ಸಾಮರ್ಥ್ಯವನ್ನು ಹೊಂದಿದವರು. ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಇಷ್ಟೇ ಸಮಯದೊಳಗೆ ಅದನ್ನು ಪೂರ್ಣಗೊಳಿಸಬೇಕೆಂದು ಹೇಳತಕ್ಕಂಥ ರೀತಿಯಲ್ಲಿ ವ್ಯವಸ್ಥೆ ಮಾಡಿದರೆ ಖಂಡಿತ ಅನುಕೂಲವಾಗುತ್ತದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟೋ ಕಡೆ ಅತಿಕ್ರಮಣವಾಗಿ ಬಹಳ ಬೆಲೆ ಇದ್ದ ಭೂಮಿಗೆ ದಲ್ಲಾಳಿಗಳು ಸೇರಿಕೊಂಡು ದರ್ಬಾರು ಮಾಡುತ್ತಿದ್ದಾರೆ. ಅಂಥ ದರ್ಬಾರನ್ನು ಪುಡಿ ಮಾಡತಕ್ಕ ಕೆಲಸವನ್ನು ಮಾನ್ಯ ಕಂದಾಯ ಮಂತ್ರಿಗಳು ಮಾಡುತ್ತಾರೆ ಎನ್ನುವ ನಂಬಿಕೆ ನನಗೆ ಇದೆ. ಇವರ ಬಗ್ಗೆ ನಮಗೆ ಅಭಿಮಾನವಿದೆ. ಇವರು ಒಂದು ಕೆಲಸವನ್ನಿಡಿದರೆಂದರೆ ಒಳ್ಳೆಯ ರೀತಿಯಲ್ಲಿ ಅದನ್ನು ಮುಗಿಸತಕ್ಕ ಶಕ್ತಿಯಿದ್ದವರು. ಆ ರೀತಿಯಲ್ಲಿರುವವರು ತಂದಿದ್ದಾರೆ ವಿಧೇಯಕವನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡಿ, ಇದರಿಂದ ನಿಜವಾಗಿಯೂ ನಮ್ಮ ಕರ್ನಾಟಕಕ್ಕೆ

ಎಷ್ಟೋ ಸಾವಿರ ಕೋಟಿ ರೂಪಾಯಿಗಳ ಆದಾಯವಾಗುತ್ತದೆ ಎನ್ನತಕ್ಕ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ವಿಧೇಯಕದ ಮೇಲೆ ಅನೇಕ ಜನ ಮಾನ್ಯ ಸದಸ್ಯರು ಭಾಗವಹಿಸಿ ಉತ್ತಮ ಸಲಹೆಗಳನ್ನು ನೀಡಿದ್ದಾರೆ. ಕೆಲವರು ಸ್ವಲ್ಪ ಶಂಕೆಯನ್ನೂ ಕೂಡ ವ್ಯಕ್ತಪಡಿಸಿದ್ದಾರೆ. ಅವರೆಲ್ಲರಿಗೂ ನಾನು ಮನಸಾರೆ ವಂದಿಸುತ್ತೇನೆ. ಕೆಲವರು ಮಾತನಾಡಿದ್ದು ಯಾವ ರೀತಿ ಇತ್ತು ಎಂದರೆ ಇದು ಹೊಸ ಕಾನೂನು ಎನ್ನತಕ್ಕ ರೀತಿಯಲ್ಲಿ ಇಡೀ ಆಕ್ಟ್ ಬಗ್ಗೆ ಮಾತನಾಡಿದ್ದಾರೆ. ನಾನಾದರೂ ಹೇಳುತ್ತೇನೆ, ಇದು ಹೊಸ ಕಾನೂನು ಅಲ್ಲ, ಇದು 1974ರಲ್ಲಿ ಆದಂಥ ಕಾನೂನು ಅಲ್ಲಿಂದೀಚೆಗೆ ಸ್ವಲ್ಪ ಮಟ್ಟಿಗೆ ಬದಲಾವಣೆಯಾಯಿತು. ಆಗ ತಾಲೂಕು ಬೋರ್ಡ್ ಪಂಚಾಯತ್ ಬೋರ್ಡ್ ಮತ್ತು ಪಂಚಾಯಿತಿ ಎಂದು ಇತ್ತು. ಈಗ ಜಿಲ್ಲಾ ಪರಿಷತ್ತು ಆದ ಮೇಲೆ ಅದರ ಸ್ವರೂಪ ಸ್ವಲ್ಪ ಬದಲಾವಣೆಯಾಗಿದೆ. ಸ್ಥಳೀಯ ಪ್ರಾಧಿಕಾರ ಎನ್ನುವ ಬಗ್ಗೆ ಅರ್ಥ ವಿವರಣೆ ಕೊಡುವಾಗ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯಿತಿ, ಮಂಡಲ ಪಂಚಾಯಿತ, ನ್ಯಾಯ ಪಂಚಾಯಿತಿ ಎಂದು ಬದಲಾವಣೆ ಮಾಡಿಕೊಂಡಿದ್ದೇವೆ. ಆದುದರಿಂದ ಇದು ಹೊಸದೇನೂ ಅಲ್ಲ, ಹೆಸರನ್ನು ಮಾತ್ರ ಬದಲಾವಣೆ ಮಾಡಿಕೊಂಡಿದ್ದೇವೆ. ಇನ್ನೊಂದು ವಿಚಾರ ಎಂದರೆ ಸಾರ್ವಜನಿಕ ಎನ್ನತಕ್ಕ ಪದವನ್ನು ವಿಸ್ತರಣೆ ಮಾಡಿದ್ದೇವೆ. ಅದರ ವ್ಯಾಪ್ತಿಗೆ ಕೆಲವು ಸಂಸ್ಥೆಗಳು ಬರತಕ್ಕ ರೀತಿಯಲ್ಲಿ ಮಾಡಿದ್ದೇವೆ. ಅದು ಯಾವುದೆಂದರೆ, ಕರ್ನಾಟಕ ಸ್ಟೇಟ್ ಯೂನಿವರ್ಸಿಟೀಸ್ ಆಕ್ಟ್ ಪ್ರಕಾರ ಏನೇನು ವಿಶ್ವ ವಿದ್ಯಾನಿಲಯಗಳು ಸ್ಥಾಪಿತವಾಗಿವೆ ಅವುಗಳನ್ನು ಇದರ ಪರಿಮಿತಿಯಲ್ಲಿ ತಂದಿದ್ದೇವೆ. ಯೂನಿವರ್ಸಿಟಿ ಆಕ್ಟ್‌ನ ಕೆಳಗೆ ಅಗ್ರಿಕಲ್ಚರ್ ಯೂನಿವರ್ಸಿಟಿಯನ್ನೂ ಕೂಡ ಒಳಪಡಿಸಿದ್ದೇವೆ. ನಾವು ಇಷ್ಟೆಲ್ಲಾ ಮಾಡಿದ್ದೇವೆ ಆದರೆ ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು ಮಾನ್ಯ ಸದಸ್ಯರು ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ. ಅವುಗಳನ್ನೆಲ್ಲಾ ನಾವು ಸ್ವಾಗತಿಸಬೇಕಾಗುತ್ತದೆ. ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು ನೀವು ಮಾಡತಕ್ಕದ್ದು ಸರಿ ಆಗಲೇ ಬಹಳ ವರ್ಷಗಳಿಂದ ಆಸ್ತಿ ಪಾಸ್ತಿಗಳನ್ನು ಅನಧಿಕೃತವಾಗಿ ವಶಮಾಡಿಕೊಂಡು ಅಲ್ಲಿ ವಾಸ ಮಾಡುತ್ತಿದ್ದಾರೆ. ಅವರಿಗೆ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳಬೇಕೆನ್ನುವ ಅರ್ಥದಲ್ಲಿ ಹೇಳಿದರು. ನಾನಾದರೂ ಹೇಳುತ್ತೇನೆ, ಇದಕ್ಕೆ ಒಂದು ಹೊಸ ಕಾನೂನೇ ಇದೆ ಅದು ಕರ್ನಾಟಕ ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ ಇನ್ ಅರ್ಬನ್ ಏರಿಯಾಸ್ ಎಂದು. ರೂರಲ್ ಏರಿಯಾಸ್‌ಗೆ ಸಂಬಂಧಪಟ್ಟಂತೆ ಈ ಪ್ರಾವಿಷನ್ ಇಲ್ಲ, ಅಲ್ಲಿ ಅವರಿಗೆ ತೊಂದರೆ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ. ಮಾನ್ಯ ಕೃಷ್ಣಪ್ಪನವರು ಮಾತನಾಡುತ್ತಾ 3 ವಿಚಾರಗಳ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದಾರೆ.

ಮೊದಲನೆಯದಾಗಿ ಪ್ರಾಪರ್ಟಿ ರಿಜಿಸ್ಟರನ್ನು ಮೇಂಟೇನ್ ಮಾಡಬೇಕೆಂದು ಹೇಳಿದರು. ಇದು ಬಹಳ ಒಳ್ಳೆಯದು ಮತ್ತು ಮುಖ್ಯವಾದುದು. ಈ ರೀತಿ ಪ್ರಾಪರ್ಟಿ ರಿಜಿಸ್ಟರನ್ನು ಮೇಂನ್‌ಟೇನ್ ಮಾಡದೇ ಇರುವುದರಿಂದ ಬಹಳ ದೊಡ್ಡ ಅನಾಹುತವಾಗಿದೆ. ಉದಾಹರಣೆಗೆ ಹೇಳುವುದಾದರೆ ಬಿ.ಡಿ.ಎ.ನವರು ಒಂದೇ ಸೈಟನ್ನು 3-4 ಜನರಿಗೆ ಅಲಾಟ್‌ಮೆಂಟ್ ಮಾಡಿರತಕ್ಕದ್ದು. ಇದಕ್ಕೆ ಅವರು ಪ್ರಾಪರ್ಟಿ

ಲಿಸ್ಟನ್ನು ಮೇಂಟೇನ್ ಮಾಡಿಲ್ಲದಿರುವುದೇ ಕಾರಣ. ಆ ರೀತಿ ಅವರು ಮೇಂಟೇನ್ ಮಾಡಿದ್ದಿದ್ದರೆ ಯಾವ ಯಾವ ಸೈಟನ್ನು ಯಾರ್ಯಾರಿಗೆ ಕೊಟ್ಟಿದೆ ಎಂಬುದು ಗೊತ್ತಾಗುತ್ತಿತ್ತು. ಇನ್ನು ಸ್ಯಾನಿಟರಿ ಬೋರ್ಡ್ ಎನ್ನತಕ್ಕದ್ದನ್ನು ಇದರಲ್ಲಿ ಸೇರಿಸಬೇಕೆಂದು ಮಾನ್ಯ ಕೃಷ್ಣಪ್ಪನವರು ಸಲಹೆ ಮಾಡಿದ್ದಾರೆ. ಸ್ಯಾನಿಟರಿ ಬೋರ್ಡ್ ಎನ್ನತಕ್ಕದ್ದು ಮುನಿಸಿಪಲ್ ಆಕ್ಟ್‌ಪ್ರಕಾರ ಬರುತ್ತದೆ. ಆದುದರಿಂದ ಅದು ಮುನಿಸಿಪಾಲಿಟಿಗೆ ಸೇರುತ್ತದೆ.

ಮೂರನೆಯದಾಗಿ ಇನ್ನೊಂದು ವಿಚಾರವನ್ನು ಅವರು ಏನು ಸಲಹೆ ಮಾಡಿದರೆಂದರೆ ಬಹಳಷ್ಟು ಆಸ್ತಿಪಾಸ್ತಿಗಳು ನಗರ ಪ್ರದೇಶದಲ್ಲಿ ಅಕ್ರಮವಾಗಿ ಪರ ಭಾರೆ ಆಗಿದ್ದು ಖಾಸಗಿಯವರ ಕೈಗೆ ಹೋಗಿವೆ. ಲಕ್ಷಾಂತರ ರೂಪಾಯಿಗಳು ಬೆಲೆ ಬಾಳುವಂಥ ಆಸ್ತಿಗಳು ಇವು ಆಗಿರುವುದರಿಂದ ಇದರ ಬಗ್ಗೆ ಸಿ.ಒ.ಡಿ.ಯವರಿಂದಾಗಲಿ, ಸಿ.ಬಿ.ಐ. ನವರಿಂದಾಗಲೀ ತನಿಖೆ ಮಾಡಿಸಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ನನಗೆ ಅನೇಕ ಕಡೆಗಳಿಂದ ದೂರುಗಳು ಬರುತ್ತಿವೆ. ಅವುಗಳನ್ನೆಲ್ಲಾ ಸಂಗ್ರಹಿಸಿಕೊಂಡು ಕೊನೆಯಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈ ವಿಚಾರದಲ್ಲಿ ನಾನು ಈಗಲೇ ಏನನ್ನೂ ಹೇಳುವುದಕ್ಕೆ ತಯಾರಿಲ್ಲ.

ಇನ್ನೂ ಕೆಲವು ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಏನು ಕೊಟ್ಟಿದ್ದಾರೆಂದರೆ, ಕೆರೆ ಅಂಗಳವನ್ನು ಆಕ್ರಮಣ ಮಾಡಿಕೊಂಡಿರತಕ್ಕದ್ದು, ರಸ್ತೆಗಳನ್ನು ಆಕ್ರಮಣ ಮಾಡಿಕೊಂಡಿರತಕ್ಕದ್ದು, ಇನ್ನೂ ಮುಂತಾದ ರೀತಿಯಲ್ಲಿ ಆಕ್ರಮಣಗಳನ್ನು ಮಾಡಿಕೊಂಡಿರುವ ಬಗ್ಗೆ ಸರ್ಕಾರ ಎಚ್ಚರಿಕೆ ವಹಿಸಬೇಕು. ಏಕೆಂದರೆ ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಅದನ್ನೂ ಕೂಡ ನಾನು ನೋಟ್ ಮಾಡಿಕೊಂಡಿದ್ದೇನೆ.

5.50 ಪಿ.ಎಂ.

ಶ್ರೀ ಎಂ. ರಾಜಶೇಖರಮೂರ್ತಿ : ತಾವು ಹೇಳಿದ್ದನ್ನು ನೋಟ್ ಮಾಡಿಕೊಂಡಿದ್ದೇನೆ. ಕೊನೆಯದಾಗಿ ಎಲ್ಲರೂ ಒಂದು ವಿಚಾರ ಹೇಳಿದ್ದಾರೆ. ಈ ಕಾನೂನು ಮಾಡುವುದು ಮುಖ್ಯವಲ್ಲ, ಕಟ್ಟು ನಿಟ್ಟಾಗಿ ಅದನ್ನು ಜಾರಿಗೆ ತರಬೇಕೆಂದು ಹೇಳಿದ್ದಾರೆ. ಅದು ಬಹಳ ಮುಖ್ಯವಾದುದು. ಅನೇಕ ಕಾನೂನುಗಳನ್ನು ನಾವು ಮಾಡಿದ್ದೇವೆ. ಆದರೆ ಎಷ್ಟು ಮಾಡಿದ್ದೇವೆನ್ನುವುದು ನಮ್ಮಗಳಿಗೆ ಗೊತ್ತಿರುವುದಿಲ್ಲ. ಅವುಗಳು ಲೈಬ್ರರಿಗಳಲ್ಲಿ ಮಾತ್ರ ಇವೆ. ಕಾನೂನು ಮಾಡಿದ ಮೇಲೆ ನಿಷ್ಠೆಯಿಂದ ಅದನ್ನು ಜಾರಿಗೆ ಕೊಡುವುದು ಸೂಕ್ತ, ಈ ಕೆಲಸ ಮಾಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ತಮಗೆ ನಿರಾಶೆ ಮಾಡುವುದಿಲ್ಲ, ಕಟ್ಟು ನಿಟ್ಟಾಗಿ ಜಾರಿಗೆ ಕೊಡುತ್ತೇನೆ ಈ ಮಸೂದೆಯನ್ನು ಅಂಗೀಕಾರ ಮಾಡಬೇಕೆಂದು ವಿನಂತಿಸುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 1992ನೇ ಸಾಲಿನ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2ರಿಂದ 4ರವರೆಗೆ

ಉಪಾಧ್ಯಕ್ಷರು : ಖಂಡ 2ರಿಂದ 4ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(ಖಂಡ 2ರಿಂದ 4ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವವೇನೆಂದರೆ ಮೊದಲನೆಯ ಖಂಡ ದೀರ್ಘ ಶೀರ್ಷಿಕೆ,

ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) : 1992ನೇ ಸಾಲಿನ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವವೇನೆಂದರೆ 1992ನೇ ಸಾಲಿನ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿ ಭೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

5.50 ಪಿ.ಎಂ

ಕರ್ನಾಟಕ ಬಾಡಿಗೆ ನಿಯಂತ್ರಣ ಪೂರ್ವಾನ್ವಯದಿಂದ ಅವಧಿ ವಿಸ್ತರಣೆ) ವಿಧೇಯಕ 1993

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಬಾಡಿಗೆ ನಿಯಂತ್ರಣ (ಪೂರ್ವಾನ್ವಯದಿಂದ ಅವಧಿ ವಿಸ್ತರಣೆ) ವಿಧೇಯಕ 1993ನ್ನು ಪರ್ಯಾಲೋಚಿಸಬೇಕೆಂದು ಈ ಸಭೆಯನ್ನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಂ. ರಾಜಶೇಖರ್ ಮೂರ್ತಿ : ಈ ರೆಂಟ್ ಕಂಟ್ರೋಲ್ ಆಕ್ಟ್ ಪರ್ಮನೆಂಟ್ ಆಕ್ಟ್ ಅಲ್ಲ, ಟೆಂಪ್ರೊರರಿ ಆಕ್ಟ್ ಅದನ್ನು ಎಕ್ಸ್‌ಟೆಂಡ್ ಮಾಡಿಕೊಂಡು ಬರುತ್ತಿದ್ದೇವೆ. 92ನೇ ಡಿಸೆಂಬರಿಗೆ ಇದು ಮುಗಿಯಿತು. ಇದರ ಪೀರಿಯಡ್

ಮುಗಿದ ಮೇಲೆ ಮತ್ತೊಮ್ಮೆ ಎಕ್ಸಟೆಂಡ್ ಮಾಡಬೇಕಾಯಿತು. 82ರಲ್ಲಿ ಮುಗಿಯಿತು. ಆಗಲೂ 10 ವರ್ಷ ಎಕ್ಸ್‌ಟೆಂಡ್ ಮಾಡಿದೆವು. ಆಕ್ಷೇಪಣೆಗಳನ್ನು ಎತ್ತಿದರು. ನಾನು ಒಂದು ಹೇಳಿಕೆ ಸಹ ಮಾಡಿದ್ದೇನೆ. ಆ ಹೇಳಿಕೆಯಲ್ಲಿ ಮಾಡಿರತಕ್ಕಂತಹ ವಿಚಾರ ಸನ್ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ. 92ನೇ ಡಿಸೆಂಬರ್ 31ಕ್ಕಿಂತ ಮೊದಲು ಈ ಬಿಲ್ ಬರಬೇಕಾಗಿತ್ತು ಈ ಆರ್ಡಿನೆನ್ಸ್ ಬರಬೇಕಾಗಿತ್ತು.ಆದರೆ ಇಲ್ಲಿ ಏನಾಗಿದೆ ಎಂದರೆ ಸ್ವಲ್ಪ ಗ್ಯಾಪ್ ಬಂದಿದೆ ಎಂದು ಹೇಳುತ್ತಾರೆ. ಗ್ಯಾಪ್ ಬರುತ್ತಿರುವುದು ನಿಜ. ಆದರೆ ಆರ್ಡಿನೆನ್ಸ್ ಹೊರಡಿಸಲಿಕ್ಕೆ ಸಾಧ್ಯವಾಗಲಿಲ್ಲ. ಡಿಸೆಂಬರ್ ನಾಲ್ಕನೆಯ ತಾರೀಖು ನಾವು ಸಭೆಯನ್ನು ಕರೆಯಬೇಕೆಂದು ತೀರ್ಮಾನ ಮಾಡಿದ ಮೇಲೆ, ಸಮನ್ಸ್ ಕೊಟ್ಟ ಮೇಲೆ ಆರ್ಡಿನೆನ್ಸ್ ಮಾಡಲಿಕ್ಕೆ ಬರುವುದಿಲ್ಲ. ಆರ್ಡಿನೆನ್ಸ್ ಮಾಡಲಿಕ್ಕೆ ಅವರಿಗೆ ಬರಲಿಕ್ಕಾಗುವುದಿಲ್ಲ. ಮತ್ತೆ ಸಭೆ 18ನೇ ತಾರೀಖು ಸೇರಿ 28ಕ್ಕೆ ಮುಗಿಯಬೇಕೆಂದಾಯಿತು. ಆ ಸಭೆ 18ಕ್ಕೆ ಸೇರಿ 28ಕ್ಕೆ ಮುಗಿದಿದ್ದರೆ 29-30-31ಕ್ಕೆ ಆರ್ಡಿನೆನ್ಸ್ ಮಾಡಬಹುದಾಗಿತ್ತು. ಆದರೆ ಸಭೆಯನ್ನು ಮುಂದುವರಿಸಲಾಯಿತು. 18ಕ್ಕೆ ಇದ್ದುದ್ದನ್ನು 28ಕ್ಕೆ ಮುಂದೂಡಲಾಯಿತು. ಆದ್ದರಿಂದ ಆರ್ಡಿನೆನ್ಸ್ ತರಲಿಕ್ಕೆ ಆಗಲಿಲ್ಲ. ಇದನ್ನು ಒಂದು ಬಿಲ್ ಮುಖಾಂತರ ತರಬೇಕಾಗಿ ಬಂದಿತು. ಆದ್ದರಿಂದ ಸ್ವಲ್ಪ ದಿವಸ ಗ್ಯಾಪ್ ಬರುತ್ತದೆ. ಗ್ಯಾಪ್ ಬಂದರೂ ಕೂಡ ಇದರಿಂದ ಏನೂ ಅನಾಹುತವಾಗುವುದಿಲ್ಲ. ಏತಕ್ಕಾಗುವುದಿಲ್ಲವೆಂದರೆ ಆಕ್ಟ್ ರೆಂಟ್ ಕಂಟ್ರೋಲ್ ಆಕ್ಟ್‌ನಲ್ಲಿ ಸೆಕ್ಷನ್ 1ರಲ್ಲಿ ಸಬ್ ಸೆಕ್ಷನ್ 4ರಲ್ಲಿ ಇದು ಹೇಳಿದೆ. ಜನರಲ್ ಕ್ಲಾಸ್ ಆಕ್ಟ್ ವಿಲ್ ಅಪ್ಲೈ ಎಂದು. ಆ ಜನರಲ್ ಕ್ಲಾಸ್ ಅಪ್ಲೈಯಾದರೆ ಆ ಪ್ರಕಾರ ಏನಿದೆ ಎಂದರೆ ಸೆಕ್ಷನ್ 1(4) ಅದರ ಪ್ರಕಾರ ಸೆಕ್ಷನ್....

"Section 6 of the Karnataka General Clauses Act, 1899, shall apply if this Act were a Permanent Karnataka Act..."

Even thought this Rent Control Act has expired on 31st December, one can go to the Civil Court under the Transfer of Property Act. So nothing precldes. The Pending proceedings before the Rent Control Act are not goint to be vitiated. There is another instance. ಇದು ಒಂದೇ ಕಡೆಯಲ್ಲಿ ನಮಗೆ ಮಹಾರಾಷ್ಟ್ರದಲ್ಲಿಯೂ ಕೂಡ ಇಂಥದ್ದೇ ಇನ್‌ಸಿಡೆಂಟ್ ಆಯಿತು. ಯಾವಾಗ ಅಂದರೆ 1990ರಲ್ಲಿ, to extend the duration of 'Maharashtra Raw Cotton Procurement, Processing & Marketing Act, 1971, 'with retrospective effect

ಅಲ್ಲಿಯೂ ಕೂಡ ಟೆಂಪರರಿಯಾಗಿ ಯಾವಾಗ ಆಕ್ಟ್ ಮಾಡುತ್ತಾರೆ ಆವಾಗ ಅದನ್ನು re-validate ಮಾಡಿಕೊಂಡು ಹೋಗುತ್ತಿರಬಹುದು. ಏನಾದರೂ ಕೆಲವು ಅನಾನುಕೂಲಗಳು ಇದ್ದರೆ ಅದರಲ್ಲಿ revalidation ಸ್ವಲ್ಪ ನಿಧಾನವಾಗುತ್ತದೆ. ಆಗ ಜನರಲ್ ಕ್ಲಾಸ್ ಆಕ್ಟ್ ಅಪ್ಲೈಯಾಗುತ್ತದೆ. ಅಲ್ಲಿಯೂ ಕೂಡ ಇದೇ ರೀತಿ ರಿಟ್ರಾಸ್ಪೆಕ್ಟೀವ್ ಎಫೆಕ್ಟ್‌ಗೆ ಮಾಡಿದ್ದಾರೆ. ಆದ್ದರಿಂದ ಇದು ಏನೂ ಹೊಸ ಆಕ್ಟ್

ಅಲ್ಲ, ಹಳೆಯ ಆಕ್ಟ್ ಜಾರಿಗೆ ಕೊಡಬೇಕು. ಆದ್ದರಿಂದ ದಯವಿಟ್ಟು ಇದನ್ನು ತಾವು ಅಂಗೀಕಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ANNOUNCEMENT

MADAM DEPUTY SPEAKER : I want to make an Announcement. I am happy to announce that two Members of Paliament of Jordan are here with us: Dr. Mohammad Al Hajee and Dr. Abdul Azeez Jaffer. I welcome these two Members of Parliament. Thak you very much.

ಶಾಸನ ರಚನಾ ಕಾರ್ಯಕಲಾಪಗಳು

ಕರ್ನಾಟಕ ಬಾಡಿಗೆ ನಿಯಂತ್ರಣ (ಪೂರ್ವಾನ್ವಯದಿಂದ ಅವಧಿ ವಿಸ್ತರಣೆ) ವಿಧೇಯಕ 1993 ಪರ್ಯಾಲೋಚನಾ ಪ್ರಸ್ತಾವ

SRI. R.V. DESHPANDE (Leader of Opposition) : The Hon'ble Revenue Minister has introduced the Karnataka Rent Control (Retrospective Extension of Duration) Bill, 1993. The Hon'ble Minister has tried to cover up the lapse of either getting the extension or bringing an Ordinance before 31st December, 1992. The reasonings given are not sound nor are they convincing. If only shows the negligence on the part of the Officers. It also shows the Government's lapse. Of course, I understand the Difficulty of the Minister. It is difficult for a Minister to knows which Bill lapses on what date. But What about your Law Department? What about your Revenue Department? The senior Officers, the competent officers, what were they doing? The reasoning given by you is that after 4th December because the Assembly was summoned, this Bill cound not have been brought. What happened to do it before the 4th? Nobody stopped you. There was no estoppel. It only shows that the Government machinery is still not functioning in the right direction. I would have been very happy if the Hon'ble Minister would have pulled up the officers, taken action againt them and then intorduced this Bill. I would have admired him because this should not be a certificate to the officers or this should not be a precedent. Tomorrow there may be a lapse of other Bill and hence the officers will take protection.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ವಿರೋಧ ಪಕ್ಷದ ನಾಯಕರು ಕನ್ನಡದಲ್ಲಿ ಮಾತನಾಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ತಾವು ಸಂಬಂಧಪಟ್ಟ ಅಧಿಕಾರಿ ಮೇಲೆ ಕ್ರಮ ತೆಗೆದು ಇದು, ಲ್ಯಾಪ್ಸ್ ಆಗಿದೆ ಎಂದು ಬಿಲ್ಲನ್ನು ಇಂಟ್ರಡ್ಯೂಸ್ ಮಾಡಬೇಕಾಗಿತ್ತು.

This should not set a bad precedent. Tomorrow another Bill will lapse and again you will come with the same excuse. Why such a machinery we should have? There is no necessity. Therefore, I request you to bring a discipline. you have to bring responsibility. There is no commitment on the part of officers. Let it happen, what happens if another six years go, they may think. You are in power. You are responsible. I am sure, a man of your stature, a man of your integrity and hardworking, will not be convinced with the reasoning you have given. What I am telling is, the reasoning you have given has not itself convinced you. Because it has to come before the Assembly and you have to give the reasoning, you have given it, but from the bottom of your heart I laso know that you are not convinced. Yes, ಹೌದು, ತಪ್ಪಾಗಿದೆ. ಕಾಂಪಿಟೆಂಟ್ ರೆವಿನ್ಯೂ ಮಿನಿಸ್ಟರ್ ಇದ್ದಾಗ ಇಂಥ ಲ್ಯಾಪ್ಸ್ ಆಗಬಾರದೆಂದು ತಮ್ಮ ಮನಸ್ಸಿನಲ್ಲಿದೆ. ಆದನ್ನು ತಾವು ಒಪ್ಪುತ್ತೀರಿ. ಹಾಗಾಗಿ ಗವರ್ನಮೆಂಟ್ ವತಿಯಿಂದ ಲ್ಯಾಪ್ಸ್ ಆಗಿದೆ ಎಂದು ವಿರೋಧ ಮಾಡುವುದಕ್ಕಾಗುವುದಿಲ್ಲ. This is not a new Bill. ಈ ಸಂದರ್ಭದಲ್ಲಿ ನಾನು ಎರಡು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಏನು ಹೇಳಿದಿರಿ, ಲೇಟ್ ಆಗಿ ಬಿಲ್ ಇಂಟ್ರಡ್ಯೂಸ್ ಮಾಡದರೂ ಏನು ತೊಂದರೆಯಾಗುವುದಿಲ್ಲ, ಕಷ್ಟವಾಗುವುದಿಲ್ಲ ಎಂದಿರಿ.

Yes. in Section 2, Clause 4 the Karnataka General Clauses Act 1899, Section 6 gives protection. I agree. This is the legal position. But here the problem comes because of Section 4. It will not be able to protect. What does Section 4 Say?

"Intimation of vacancy by land-lords : "Ever Land-lord shall, within 15 days after the building becomes vacant by ceasing to occupy it or by the termination of tenancy or by eviction of tenant or by the lease of the building from requisition or otherwise, give intimation in the pre cribed form, by Registered Post, to the Controller."

So there is this mandatory provision on the Land-lords. Where a building becomes vacant, in the prescribed form he has to give intimation. From the first of January till this Bill gets the assent of the President of India, he is not bound to inform. suppose the Government wants some buildings. You will not get it. You cannot get it. You will not be able to save this. Hundreds of houses may fall vacant.They can just giveto anybody. you cannot stop it. What may happen? Suppose my house falls vacant. If I give that house to Shri. Vatal Nagaraj, what could be challenged? If I take Rs. 10,000/- rent, you can challengs. To that extent I agree. Fair rent should be there. Suppose the rent between me and him is not fair, you can question it. You can say, "the fair rent should be fixed." But

you cannot challenge the tenancy. You cannot do anything about the tenancy that has been created.

From the first of January, all the houses that fall vacant, those landlords are not now bound to inform the Rent Controller. If they give their houses on lease or tenancy to anybody, you will not be able to question it. You will be able to question only the fair rent. If the rent fixed between the landlord and the tenant is not correct, you can say, the rent is not correct and you fix a fair rent. But you cannot question the tenancy. This is the only problem which you will face. Otherwise the other sections will protect. I do concede. How are you going now to save this situation where new buildings are vacant? Naturally buildings will be vacant and buildings will be given on lease and you will not be able to change this situation. That is why this is a very important lapse. Now you cannot do anything. a similar situation had also arisen once long back in 1982. So what I would suggest is, now at least it should be a warning to the Government. In future such lapses should not take place. You will have to pull up the officers and take action against the officers who have done this.

ಈಗ ಮನೆಗಳು ಖಾಲಿಯಾಗುತ್ತಾ ಇವೆ. ಎಷ್ಟೋ ಜಂರು ಅರ್ಜಿಯನ್ನು ಕೊಟ್ಟಿರುತ್ತಾರೆ. ಆದರೆ ಮನೆ ಮಾಲೀಕರು ಖಾಲಿಯಿಗಿರುವ ಬಗ್ಗೆ ಇಂಟಿಮೇಂಟ್ ಮಾಡುವುದಿಲ್ಲ, ಆದ್ದರಿಂದ ಆ ಜನರಿಗೂ ಮನೆ ಸಿಗುವುದಿಲ್ಲ. ಈಗ ಪರಿಸ್ಥಿತಿ ಏನು? ಈ ಸಮಸ್ಯೆಯನ್ನು ಹೇಗೆ ಬಿಡಿಸುತ್ತೀರಿ? ಇದೊಂದು ಸಮಸ್ಯೆಯಾದರೆ, ಮತ್ತೊಂದು ವಿಚಾರ ಚಂದ್ರೇಗೌಡರು ರೈಸ್ ಮಾಡಿದಾಗ ಒಂದು ಮಾತನ್ನು ಹೇಳಿದಿರಿ. ಆಗ 3 ವರ್ಷ ಮಾತ್ರ ಆಕ್ಟ್ ಎಕ್ಸ್‌ಟೆಂಡ್ ಮಾಡುತ್ತೇವೆಂದು ಹೇಳಿದಿರಿ. ಅದಕ್ಕೆ 5 ವರ್ಷಕ್ಕೆ ವಿಸ್ತರಿಸಿದ್ದೀರಿ. 3 ವರ್ಷ, 5 ವರ್ಷ ಎಂದು ಏಕೆ ಹೇಳುತ್ತಿದ್ದೇನೆ, ಈ ಆಕ್ಟ್ ತುಂಬಾ ಹಳೆಯ ಆಕ್ಟ್. ಈಗ ಕಾಲ ಬದಲಾವಣೆ ಆಗಿದೆ. ಆದ್ದರಿಂದ ತಾವು ಇದಕ್ಕೆ ಹೊಸ ರೂಪ ಕೊಡಬೇಕು. ಹೊಸ ಬೆಳಕು ಚೆಲ್ಲಬೇಕು. ಮೊದಲು 1961ರಲ್ಲಿ ಈ ಆಕ್ಟ್ ಬಂದಾಗ ಏನು ಇದು ಪಾಸ್ ಆಯಿತು ಆಗ ಸಮಸ್ಯೆಗಳೆ ಬೇರೆ ರೀತಿ ಇದ್ದವು. ಇವತ್ತಿನ ದಿವಸ ಬೇರೆ ಇದೆ. ಆಗ ಇಷ್ಟು ಮನೆಗಳೂ ಇರಲಿಲ್ಲ, ಇಷ್ಟು ಕನ್‌ಸ್ಟ್ರಕ್ಷನ್ ಆಕ್ಟಿವಿಟೀಸ್ ಕೂಡ ಇರಲಿಲ್ಲ, ಇನ್ನೂ ಕೆಲವು ಲೋಪದೋಷಗಳು ಉಳಿದಿದೆ. ಕೆಲವು ಜನರಲ್ಲಿ ಹಣ ಇದೆ, ಆದರೆ ಮನೆಗಳನ್ನು ಕಟ್ಟಲು ಮುಂದೆ ಬರುವುದಿಲ್ಲ. ಏಕೆಂದರೆ, ರೆಂಟ್‌ಗೆ ಕೊಟ್ಟರೆ ರೆಂಟ್ ಕಂಟ್ರೋಲ್‌ದು ಕಷ್ಟ ಆಗಬಹುದು. ಈಗ ಬಹಳ ಜನರಿಗೆ ಮನೆ ಬೇಕಾಗಿದೆ. ಇದು ಸೀರಿಯಸ್ ಪ್ರಾಬ್ಲಮ್ ಕೂಡ ಇದೆ. ಮನೆಗಳೂ ಬೇಕಾಗಿದೆ. ಆದ್ದರಿಂದ ಈ ಆಕ್ಟಿನಲ್ಲಿ ಹೊಸ ದೃಷ್ಟಿ, ಹೊಸ ಚಿಂತನೆ ಮಾಡಬೇಕು. ಬರೀ ಇದೇ ಆಕ್ಟ್ ಇಟ್ಟುಕೊಂಡು ಹತ್ತಾರು ವರ್ಷ, ನೂರಾರು ವರ್ಷ ಹೀಗೇ ಹೋಗುವುದಲ್ಲ. ನೀವು 5 ವರ್ಷ ಕೇಳಿರುವುದು

ನನಗೆ ಆಶ್ಚರ್ಯ ಆಗುತ್ತದೆ. ತಾವು ಒಂದು ವರ್ಷವೋ, ಎರಡು ವರ್ಷವೋ ವಿಸ್ತರಣೆ ಕೇಳಿ ಮುಂದೆ ತಾವು ಕಾಂಪ್ರಹೆನ್ಸೀವ್ ನ್ಯೂ ಬಿಲ್ ತೆಗೆದುಕೊಂಡು ಬರಬೇಕಾಗಿತ್ತು. ಈಗ ಇರುವುದರಲ್ಲಿ ಬಹಳ ಸೆಕ್ಷನ್‌ಗಳು ಇರ್‌ರೆಲೆವೆಂಟ್ ಆಗಿವೆ. ಅವು ಅರ್ಥವನ್ನೇ ಕಳೆದುಕೊಂಡಿವೆ. ಈ ಆಕ್ಟ್ 61ರಲ್ಲಿ ಬಂದಿದ್ದು ನಾವು ಈಗ 93ರಲ್ಲಿ ಇದ್ದೇವೆ. ಸಂವಿಧಾನಕ್ಕೆ ನಾವು 72, 73, ಅಮೆಂಡ್‌ಮೆಂಟ್ ಮಾಡಿದ್ದೇವೆ. ಇವತ್ತು ಈ ಆಕ್ಟ್ ಬಂದು 30 ವರ್ಷ ಆಯಿತು. ಈ ಆಕ್ಟ್ ಪ್ರಕಾರ ನಾವು ಇವತ್ತು ಸಾರ್ವಜನಿಕರಿಗೆ, ಜನಸಾಮಾನ್ಯರಿಗೆ ಯಾವ ಪ್ರಕಾರ ಅನುಕೂಲ ಮಾಡುವುದಕ್ಕೆ ಸಾಧ್ಯ? ಯಾವ ಪ್ರಕಾರ ಬಿಲ್ಡಿಂಗ್ ಆಕ್ಟಿವಿಟೀಸ್ ಹೆಚ್ಚಾಗಿ ಕಟ್ಟಡಗಳು ಹೆಚ್ಚು ಆಗುವುದಕ್ಕೆ ಸಾಧ್ಯ, ಯಾವ ಪ್ರಕಾರ ಎಷ್ಟೋ ಜನರಿಗೆ ಮನೆ ನಿವೇಶನ ಇಲ್ಲ ಅವರಿಗೆ ಪ್ರಾಬ್ಲಮ್ ಹೇಗೆ ಸಾಲ್ವ್ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನೆಲ್ಲಾ ಕಾಂಪ್ರಹೆನ್ಸೀವ್ ಆಗಿ ವಿಚಾರ ಮಾಡಬೇಕಾಗಿದೆ. ಎವಿಕ್ಷನ್ ಪ್ರೊಸೀಡಿಂಗ್ಸ್ ಇವೆ, ಅಲ್ಲಿಯೂ ಸಾಕಷ್ಟು ಹರ್ಡಲ್ಸ್ ಇವೆ. ನಾವು ಎಷ್ಟೋ ಮನೆಗಳು ಬೋನೋಫೈಡ್ ಎಂದು ಹೇಳುತ್ತೇವೆ, ಹೊಸ ಕನ್‌ಸ್ಟ್ರಕ್ಷನ್ಸ್ ಆಗಬೇಕು, ಹೊಸ ಬಿಲ್ಡಿಂಗ್ಸ್ ಡೆವಲಪ್‌ಮೆಂಟ್ ಆಗಿದೆ ಎಂದು ಹೇಳುತ್ತೇನೆ. ಇದೆಲ್ಲಾ ವಿಚಾರಗಳಿಗೆ ನಾವು ಹೊಸ ದೃಷ್ಟಿ ಹರಿಸಬೇಕಾಗುತ್ತದೆ. ಇದನ್ನೆಲ್ಲಾ ವಿಚಾರ ಮಾಡಿ ಹೊಸದಾಗಿ ಕಾಂಪ್ರಹೆನ್ಸೀವ್ ಬಿಲ್ ಆದಷ್ಟು ಬೇಗ ತರಬೇಕಾಗುತ್ತದೆ. ಮತ್ತು ಈ ಎಕ್ಸ್‌ಟೆನ್‌ಷನ್ ಏನು ಕೇಳಿದ್ದೀರಿ ಅದನ್ನು 3 ವರ್ಷ ಅಥವಾ 2 ವರ್ಷಗಳಿಗೆ ಸೀಮಿತ ಮಾಡಿದರೆ ಒಳ್ಳೆಯದು ಆಗುತ್ತಿತ್ತು ಎಂದು ನನ್ನ ಅಭಿಪ್ರಾಯ. ಇಷ್ಟೆಲ್ಲಾ ಹೇಳಿ ಎವಿಕ್ಷನ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಅದೇನೂ ಅಂಥ ತೊಂದರೆ ಎಂದು ನನಗನ್ನಿಸುವುದಿಲ್ಲ. ಒಂದು ಎವಿಕ್ಷನ್ ಆರ್ಡರ್ ಆಗಿದೆ. ಇದೇ ಡಿಸೆಂಬರ್ 9ನೇ ತಾರೀಖಿಗೋ ಅಥವಾ 10ನೇ ತಾರೀಖಿಗೊ ಕೋರ್ಟ್‌ನವರು 30 ದಿನ ಟೈಮ್ ಕೊಟ್ಟಿದ್ದಾರೆ. ಅದರಲ್ಲಿ ಜನವರಿ 5ನೇ ತಾರೀಖಿನವರೆಗೆ ಅದು ನಿನ್ನ ಪೊಸಿಷನ್ ನಲ್ಲಿ ಇರತಕ್ಕದ್ದು, ಆ ನಂತರ ಅದನ್ನು ಹ್ಯಾಂಡ್ ಓವರ್ ಮಾಡಬೇಕೆಂದು ಹೇಳಿದ್ದಾರೆ.

What happens to that? Till the assent comes neither the landlord will be able to move under the Rent Control Act nor he could go in appeal, till this gets the assent. I have suspicion whether it will protect or not. I am not sure about this point. So these are the problems. How are you going to solve it? I would request you to please enlighten us. With these words, ತಾವೇನು ಬಿಲ್ ತಂದಿದ್ದೀರಿ ಅದಕ್ಕೆ ನನ್ನ ವಿರೋಧ ಇಲ್ಲ. ಇದೊಂದು ಹಳೆಯದು ಇದೆ. ಹಾಗಾಗಿ ಲ್ಯಾಪ್ಸ್ ಆಗಿದೆ ಅದರ ಬಗ್ಗೆ ತಾವು ಮತ್ತೊಮ್ಮೆ ಕ್ರಮ ತೆಗೆದುಕೊಳ್ಳಬೇಕು. I am not confident as an Advocate that Section 4 will be able to do anything to the tenancies which will be created from first till the date on which it gets the assent. ಆ ದೃಷ್ಟಿಯಿಂದ ಮಾಡಿ. ಇಂತಹ ಲ್ಯಾಪ್ಸ್ ಮುಂದೆ ಆಗಬಾರದೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಕಂದಾಯ ಸಚಿವರು ಬಾಡಿಗೆ ನಿಯಂತ್ರಣ ವಿಧೇಯಕ 1993 ಇಲ್ಲಿ ತಂದಿರುವುದನ್ನು ನಾನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಇದು ಮೊದಲು ಇದ್ದಂಥ ಕಾನೂನು. ಸುಮಾರು ಐದು ವರ್ಷಗಳವರೆಗೆ 1997ರವರೆಗೆ ಬಾಡಿಗೆದಾರರಿಗೆ ಅನುಕೂಲವಾಗುವಂಥ ಒಂದು ಕಾನೂನು ತಂದಿರುವುದು ಬಹಳ ಸೂಕ್ತವಾದುದು ಎಂದು ಒಂದು ಅಭಿಪ್ರಾಯ. ಈಗ ನಗರ ಪ್ರದೇಶಗಳಲ್ಲಿ ಪಟ್ಟಣಗಳಲ್ಲಿರತಕ್ಕ ಅನೇಕ ಬಾಡಿಗದಾರರಿಗೆ ಅನುಕೂಲವಾಗತಕ್ಕ ಒಂದು ಕಾನೂನು ಇದೆ. ಈವೊಂದು ಕಾನೂನಿನ ಕೆಳಗಡೆ ಇವತ್ತು ಅಧಿಕಾರ ವರ್ಗದವರೂ ಕೂಡ ಉತ್ತಮವಾದ ಕೆಲಸವನ್ನು ಮಾಡಿ ಅರ್ಹರಾದಂತಹ ಫಲಾನುಭವಿಗಳಿಗೆ ಮನೆ ಕೊಡುವಂತಹ ಕೆಲಸವನ್ನು ನೀವು ಮಾಡಿದ್ದುದು ಖಂಡಿತವಾಗಿಯೂ ಈ ಕಾನೂನು ಪರಿಣಾಮಕಾರಿಯಾಗಿ ಸಾರ್ವಜನಿಕರಿಗೆ ಉಪಯೋಗವಾಗುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆಂದು ನನ್ನ ಒಂದು ವೈಯಕ್ತಿಕ ಅನುಭವ. ಕಳೆದ ವರ್ಷ ನಾನು ರೆಂಟ್ ಕಂಟ್ರೋಲರ್ ಮೂಲಕ ಒಂದು ಮನೆಯನ್ನು ಪಡೆಯಲು, ಅದೂ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಒಂದು ಅರ್ಜಿಯನ್ನು ಕೊಟ್ಟಿದ್ದೆ. ವಯ್ಯಾಲಿಕಾವಲ್‌ನಲ್ಲಿ ಮನೆ ಬೇಕೆಂದು ಅರ್ಜಿ ಕೊಟ್ಟಿದ್ದೆ. ಅದಕ್ಕೆ ಬೇರೆ ಯಾರೂ ಅರ್ಜಿದಾರರು ಇರಲಿಲ್ಲ. ಅಂತಹ ಒಂದು ಸಂದರ್ಭದಲ್ಲಿ ರೆಂಟ್ ಕಂಟ್ರೋಲರ್ ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಈ ಮನೆ ಬೀಳತಕ್ಕ ಪರಿಸ್ಥಿತಿಯಿದೆ ಅದಕ್ಕೆ ಕೊಡಲಿಕ್ಕೆ ಆಗುವುದಿಲ್ಲವೆಂದು ಅರ್ಜಿಯನ್ನು ಕೂಡ ಕಿತ್ತು ಹಾಕಿದಂತಹ ಸಂದರ್ಭವನ್ನು ನಾನು ಮನಗಂಡಿದ್ದೇನೆ. ಹೀಗಾಗಿ ನನ್ನ ಒಂದು ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ ಅಷ್ಟೆ. ಇದು ಜನ ಸಾಮಾನ್ಯರಿಗೆ ಉಪಯೋಗವಾಗುವಂತಹ ಕಾನೂನು. ಅಧಿಕಾರಿಗಳು ಒಳ್ಳೆಯ ಕೆಲಸವನ್ನು ಮಾಡಬೇಕೆಂದು ಆವೊಂದು ವಿಚಾರವನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಒಟ್ಟಾರೆ ಈ ಕಾನೂನು ಅನೇಕ ಜನರಿಗೆ ಉಪಯುಕ್ತ ಇದೆ. ಇದು ಸಮಗ್ರವಾಗಿ ಎಲ್ಲರಿಗೂ ಹೆಚ್ಚು ಉಪಯೋಗವಾಗಲಿ ಎನ್ನುವ ವಿಚಾರವನ್ನು ಹೇಳಿ ಈ ಕಾನೂನನ್ನು ಸ್ವಾಗತಿಸಿ ತಾವು ನಾನು ಮಾತನಾಡಲು ಸಮಯ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಹೆಚ್.ಎಸ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತಿನ ದಿವಸ ಕಂದಾಯ ಮಂತ್ರಿಗಳು ತಂದಂತಹ ಈವೊಂದು ಬಿಲ್ಲು, ನಿಜವಾಗಲೂ ಸಹ ಸರಿಯಾಗಿಲ್ಲ. ದಿನಾಂಕ 31-12-92ಕ್ಕೆ ಇದು ಮುಗಿಯುತ್ತಾ ಇದೆ ಎಂದು ಮಾನ್ಯ ಕಂದಾಯ ಮಂತ್ರಿಗಳು ಕೊಟ್ಟಂತಹ ಎಕ್ಸ್‌ಪ್ಲನೇಷನ್ ಅದು ಸಮರ್ಪಕವಿಲ್ಲವೆಂದು ನಾನು ಹೇಳುತ್ತಿದ್ದೇನೆ. ಏಕೆಂದರೆ ಅವರು ಹೇಳಿದರು ಮಹಾರಾಷ್ಟ್ರದಲ್ಲಿ ಈ ಪ್ರಕಾರ ಆಗಿತ್ತು. ನಮ್ಮ ಕರ್ನಾಟಕದಲ್ಲಿಯೂ ಸಹ ಈ ಪ್ರಕಾರ ಒಮ್ಮೆ ಆಗಿದೆ. ಒಮ್ಮೆ ಆಗಿದೆ ಅಂದರೆ ಮುಂದ ಆಗಬಾರದು ಎಂದಲ್ಲ. ಹಿಂದೆ ಆದ ಹಾಗೆ ಇವತ್ತಿನ ದಿವಸ ಅಧಿಕಾರಿಗಳು ಆಗದ ಹಾಗೆ ನೋಡಿಕೊಳ್ಳುವುದು ಅವರ ಕರ್ತವ್ಯ. ಈ ಬಿಲ್ ನ ಬಗ್ಗೆ ನಾನು ಎರಡು ಸಲಹೆಗಳನ್ನು ಹೇಳುತ್ತಿದ್ದೇನೆ. 1961ನೇ ಇಸವಿಯಲ್ಲಿ ತಂದಂತಹ ಬಿಲ್

ಮಹಾರಾಷ್ಟ್ರದಲ್ಲಿ ಇದ್ದಂಥ ಬಿಲ್ ಇದು ಉತ್ತಮವಾದ ಬಿಲ್ ಯೆಂದು ನಾನು ಹೆಮ್ಮೆಯಿಂದ ಹೇಳುತ್ತಿದ್ದೇನೆ. ಈ ಬಿಲ್ ಬಾಂಬೆ ರೆಂಟ್ ಕಂಟ್ರೋಲ್ ಆಕ್ಟ್ ಅದಕ್ಕನುಗುಣವಾಗಿ ಕರ್ನಾಟಕ ರೆಂಟ್ ಕಂಟ್ರೋಲ್ ಆಕ್ಟ್ ಬಂತೆಂದು ಹೇಳಬಹುದು. ಈಗಾಗಲೇ ವಿರೋಧ ಪಕ್ಷದ ನಾಯಕರು ಹೇಳಿದ ಪ್ರಕಾರ ಕಾಂಪ್ರಹೆನ್ಸೀವ್ ಬಿಲ್ಲನ್ನು ತರಬೇಕಾಗಿತ್ತು, ಏಕೆಂದರೆ ಹಿಂದಿನ ಕಂದಾಯ ಮಂತ್ರಿಗಳಾದ ಶ್ರೀಮಾನ್ ಎಸ್. ಆರ್. ಬೊಮ್ಮಾಯಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ನೇಮಕ ಮಾಡಲಾಗಿತ್ತು. ಆ ಕಮಿಟಿಯಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೆ. ನಾವು ಆ ಬಿಲ್ಲನ್ನು ಪ್ರೆಸೆಂಟ್ ಮಾಡುವ ಕಾಲಕ್ಕೆ ಅವರು ಮುಖ್ಯ ಮಂತ್ರಿಗಳಾದರು. ಆದರಿಂದ ಈ ಬಿಲ್ಲನ್ನು ಅಸೆಂಬ್ಲಿಯಲ್ಲಿ ಮುಂದೆ ತರುವುದಕ್ಕೆ ಆಗಲಿಲ್ಲವೆಂದು ನನಗೆ ತಿಳಿದು ಬಂತು.

ಇವತ್ತಿನ ದಿವಸ ನಾವು ವಿಚಾರ ಮಾಡಬಹುದು. ಎಷ್ಟೋ ಜನ ಓನರ್ಸ್‌ಗೆ ಬಹಳ ತೊಂದರೆ ಇದೆ. ಒಂದು ಮನೆಯನ್ನು ರೆಂಟ್‌ಗೆ ಕೊಟ್ಟ ನಂತರ ಈ ರೆಂಟನ್ನು ಎನ್ ಹ್ಯಾನ್ಸ್ ಮಾಡಬೇಕಾದರೆ ಈ ಆಕ್ಟ್‌ನಲ್ಲಿ ಬಹಳ ತೊಂದರೆ ಇದೆ. ಪ್ರತಿ ವರ್ಷ 5 ಪರ್ಸೆಂಟ್ ಅಥವಾ 10 ಪರ್ಸೆಂಟ್ ಆಟೋಮ್ಯಾಟಿಕ್ ಆಗಿ ಎನ್ ಹ್ಯಾನ್ಸ್ ಆದರೆ ಏನಾಗುತ್ತದೆ ಎಂದರೆ, ಯಾರು ಬಾಡಿಗೆ ಉತ್ಪನ್ನದ ಮೇಲಿರುತ್ತಾರೆ ಅವರಿಗೆ ಅನುಕೂಲವಾಗಬಹುದು. ಏಕೆಂದರೆ ನಾವು ನೋಡಬಹುದು, ಯಾರೋ ವಿಧವೆ ಇರುತ್ತಾರೆ, ಅವರು ತಮ್ಮ ಆಸ್ತಿ ಪಾಲನ್ನು ತೆಗೆದುಕೊಂಡು ಬ್ಯಾಂಕಿನಲ್ಲಿ ಇಡುವುದಕ್ಕಿಂತ ಒಂದು ಮನೆಯನ್ನು ತೆಗೆದುಕೊಂಡು ಅದನ್ನು ಬಾಡಿಗೆಗೆ ಕೊಡುತ್ತಾರೆ. ಬಾಡಿಗೆಗೆ ಕೊಟ್ಟರೆ ಒಮ್ಮೆ ರೆಂಟ್ ಫಿಕ್ಸ್ ಮಾಡಿದನಂತರ ಹೆಚ್ಚಿಗೆ ಮಾಡಬೇಕಾದರೆ ಕೋರ್ಟಿಗೆ ಹೋಗಬೇಕು. ಅಂದ ಮೇಲೆ ಬಹಳ ತ್ರಾಸ್ ಇದೆ. ಎರಡನೆಯದಾಗಿ ಕೆಲವೊಂದು ಆಫೀಸರ್ಸ್ ಇರುತ್ತಾರೆ, ಅವರ ನೌಕರಿ ಅವಧಿ ಮುಗಿದು ನಿವೃತ್ತಿಯಾದನಂತರ ಒಂದು ವರ್ಷದೊಳಗೆ ಒಂದು ಅಪ್ಲಿಕೇಷನ್ ಕೊಟ್ಟರೆ ಸಾಕು, ಆತನಿಗೆ ಮನೆ ಬಿಡಬೇಕಾಗುತ್ತದೆ. ತಾವು ವಿಚಾರ ಮಾಡಬಹುದು. ಇವತ್ತಿನ ದಿವಸ ಒಂದು ಇವಿಕ್ಷನ್ ಪ್ರೊಸಿಡಿಂಗ್ಸ್ ಮಾಡಿ ಕೋರ್ಟಿಗೆ ಹಾಕಿ ಕಬ್ಜ ತೆಗೆದುಕೊಳ್ಳಬೇಕಾದರ ಆತ ಸತ್ತು ಹೋಗಿರುತ್ತಾನೆ. ನಾವು ಏನು ವಿಚಾರ ಮಾಡಿದ್ದೆವು ಆ ಕಾಲಕ್ಕೆ ಎಂದರೆ, ಅವನು ರಿಟೈರ್ ಆಗುವುದಕ್ಕೆ ಮುಂಚೆ ಒಂದು ವರ್ಷ ಮೊದಲೇ ಅಪ್ಲಿಕೇಷನ್ ಕೊಟ್ಟರೆ, ರಿಟೈರ್ ಆಗುವುದಕ್ಕೆ ಮೊದಲೇ ಕೊಟ್ಟಲ್ಲಿ ಅವನಿಗೆ ಪೊಸಿಷನ್ ಯಾವುದೇ ಪ್ರೋಸ್ಟ್‌ನಲ್ಲಿದ್ದರೂ ಕೊಡಬೇಕೆಂದು ಇತ್ತು. ರೆಂಟ್ ಕಂಟ್ರೋಲ್ ಆಕ್ಟ್ ಪ್ರಕಾರ ಹತ್ತು ವರ್ಷ ಹೊಸ ಬಿಲ್ಡಿಂಗ್‌ಗೆ ಅಪ್ಲೈ ಆಗಬಾರದು ಎಂದು ಇತ್ತು. ಇವತ್ತಿನ ದಿವಸ ಯಾರು ಅಮೌಂಟ್ ಇನ್ವೆಸ್ಟ್ ಮೆಂಟ್ ಮಾಡಿ ಬಿಲ್ಡಿಂಗ್ ಮಾಡಿದರೆ ಮೊದಲು ಹತ್ತು ವರ್ಷ ಈ ಆಕ್ಟ್ ಲಾಗೂ ಆಗದೇ ಇದ್ದರೆ ಅವರಿಗೆ ಅನುಕೂಲವಾಗುತ್ತದೆ. ಇಂತಹ ವಿಚಾರಗಳನ್ನು ತಾವು ತರಬಹುದಿತ್ತು. ಅದೂ ಅಲ್ಲದೆ ಲ್ಯಾಂಡ್ ಲಾರ್ಡ್, ಬಿಲ್ಡಿಂಗ್ ರಿಪೇರಿ ಮಾಡದೇ ಇದ್ದರೆ, ಆತನಿಗೆ ನೋಟೀಸ್ ಕೊಟ್ಟು ಟೆನೆಂಟ್‌ನೇ ರಿಪೇರಿ ಮಾಡಿದರೆ ಹಣ ಕೊಡಿಸುವ ಬಗ್ಗೆ ಯಾವುದೇ ಒಂದು ಪ್ರಾವಿಷನ್ ಇಲ್ಲ. ಇಂತಹ ಹಲವು ವಿಷಯಗಳನ್ನು ತಾವು ಸವಿಸ್ತಾರವಾಗಿ ತರಬೇಕಿತ್ತು ಎಂದು ನನ್ನ ಅನಿಸಿಕೆ. ಇದೂ ಅಲ್ಲದೆ ತಾವು ಐದು ವರ್ಷ ಎಕ್ಸ್‌ಟೆನ್‌ಷನ್ ತೆಗೆದುಕೊಂಡಿರುವುದು

ಬೇಕಾಗಿರಲಿಲ್ಲ. ಒಂದು ವರ್ಷ ಹೆಚ್ಚಿಗೆ ಎಕ್ಸಟೆನಶನ್ ತೆಗೆದುಕೊಂಡು ತೆಗೆದುಕೊಂಡು ಒಂದು ಕಂಪ್ಲೀಟ್ ಆಟ ಕಾಂಪ್ರ ಹೆನ್ಸೀವ್ ಆಕ್ಟನ್ನು ತಾವು ತಂದು ಈಗಾಗಲೇ ಹಿಂದೆ ನೇಮಿಸಿದ್ದಂಥ ಎಸ್. ಆರ್. ಬೊಮ್ಮಾಯಿ ಕಮಿಟಿಯ ಶಿಫಾರಸ್ಸುಗಳಿಗೆ ಪ್ರೋತ್ಸಾಹ ಕೊಟ್ಟು, ಅವರು ಕೊಟ್ಟಿರುವ ಸಲಹೆಗಳನ್ನು ಕ್ರೋಢೀಕರಿಸಿ ತಾವು ಮಾಡಬೇಕೆಂದು ಹೇಳಿ ನಾನು ಈ ಬಿಲ್ಲನ್ನು ಸ್ವಾಗತಿಸಬೇಕಾಗುತ್ತದೆ. ಏಕೆಂದರೆ ಬೇರೆ ಬೇರೆ ರಾಜ್ಯಗಳಿಗಿಂತ ಇದು ಉತ್ತಮವಾದ ಬಿಲ್. ಆ ಕಾಲಕ್ಕೆ ನಾವು ಮಹಾರಾಷ್ಟ್ರ, ಮದ್ರಾಸ್, ಡೆಲ್ಲಿಗೆ ಹೋಗಿ ನೋಡಿದ್ದೆವು. ಆದರೆ ಇಷ್ಟೊಂದು ಉತ್ತಮವಾದ ಬಿಲ್ ಬೇರೆ ಯಾವ ರಾಜ್ಯದಲ್ಲೂ ಇಲ್ಲ. ಆದ್ದರಿಂದ ಕಾಂಪ್ರಹೆನ್ಸೀವ್ ಬಿಲ್ ತರಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) : ಒಂದು ಮಾತು. ಮಾನ್ಯ ಮಂತ್ರಿಗಳು ಏನು ಈ ಬಿಲ್‌ನ್ನು ತಂದಿದ್ದಾರೆ ಇದನ್ನು ನಾನು ಸ್ವಾಗತಿಸುತ್ತೇನೆ. ನನ್ನ ಅಭಿನಂದನೆ ಸಲ್ಲಿಸುತ್ತೇನೆ. ಇದನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಸಲುವಾಗಿ ಅವರು ಪ್ರಯತ್ನ ಪಡಬೇಕು. ಮಾನ್ಯ ಶ್ರೀ ಕೌಜಲಗಿಯವರು ಹೇಳಿದ ಹಾಗೆ ಬೊಮ್ಮಾಯಿ ಕಮಿಟಿಯವರು ಏನು ವಿಚಾರಗಳನ್ನು ಹೇಳಿದ್ದಾರೆ, ಅದನ್ನು ಗಮನಕ್ಕೆ ತೆಗೆದುಕೊಂಡು ಜನರಿಗೆ ಅನುಕೂಲವಾಗಬೇಕು ಮತ್ತು ಬೇರೆಯವರಿಗೆ ತೊಂದರೆ ಕೂಡ ಆಗಬಾರದು. ಆದ್ದರಿಂದ ನಾನು ಇದನ್ನು ಸ್ವಾಗತಿಸಬಯಸುತ್ತೇನೆ.

6.20 ಪಿ.ಎಂ.

SRI M. RAJASHEKARA MURTHY : Madam, the Leader of Opposition has raised some important question. The first question he has raised is as to why there should not be a comprehensive bill. When this Act was passed as early as 1961, when it has become outmoded, taking into consideration the present situation prevailing in the country, a new Act is inevitable. That is his opinion. I agree with him. Already the Government of India has sent a model Rent control Bill for the consideration of the states. They have circulated it to all the states in the country. In addition to that, you are aware that Pramila Committee report is also available.

ಶ್ರೀ ವಾಟಾಳ್ ನಾಗರಾಜ್ : ಅದನ್ನು ತಾವು ಒಪ್ಪುತ್ತೀರಾ? ನೀವು ಒಪ್ಪುವುದಾದರೆ ನೇರವಾಗಿ ಹೇಳಿಬಿಡಿ. ಸುಮ್ಮನೆ ವರದಿ ತಯಾರು ಮಾಡುವುದಕ್ಕೆ ಕೊಟ್ಟು ಅದು ಮೂಲೆ ಗುಂಪಾಗಿ ಕಸದ ಬುಟ್ಟಿಯಲ್ಲಿದೆ.

ಶ್ರೀ ಎಂ. ರಾಜಶೇಖರ ಮೂರ್ತಿ : ನಾನು ಒಪ್ಪುತ್ತೇನೆಂದು ಹೇಳಲಿಲ್ಲ. ಮಾಡೆಲ್ ರೆಂಟ್ ಕಂಟ್ರೋಲ್ ಬಿಲ್ ಎನ್ನುವುದನ್ನು ಎಲ್ಲಾ ಕಡೆಗೂ ಸರ್ಕ್ಯುಲೇಟ್ ಮಾಡಿದ್ದಾರೆ. ಅದರಲ್ಲಿಯೂ ಗೈಡ್ ಲೈನ್ಸ್ ಕೊಟ್ಟಿದ್ದಾರೆ. ಹಾಗೆಯೇ ನಮ್ಮಲ್ಲಿ ಹಿಂದೆ ಕಮಿಟಿ ರಚನೆಯಾಗಿ ಆ ಕಮಿಟಿ ರಿಪೋರ್ಟ್ ಕೂಡ ಇದೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಮತ್ತೆ ರೀಪೀಲ್ ಕೊಡಬೇಕಾಗುತ್ತದೆ. ನಂತರ ಬಿಲ್ಲನ್ನು ಈ ಸಭೆಯ ಮುಂದೆ ತರಬೇಕಾಗುತ್ತದೆ. ಇದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಇದು ಸರ್ಕಾರದ ಆಲೋಚನೆಯಲ್ಲಿದೆ, ಇಲ್ಲ ಎಂದು ನಾನು ಹೇಳುವುದಿಲ್ಲ.

ತಾವು ಹೇಳಿದ್ದುದು ಎರಡನೇ ವಿಚಾರ. Regarding Section 4, part(2) of the Rent Control Act, the reporting of vacancy cannot be done, because there is not liability cast on the owner of the property to report the vacancy. ಇದು ಒಂದು ಮಾತ್ರ ನಡೆಯಲಿಲ್ಲ. ಆದರೆ ಇದರ ಬಗ್ಗೆ ಹೆಚ್ಚಿಗೆ ತಲೆ ಕೆಡಿಸಿ ಕೊಳ್ಳಬೇಕಾದುದು ಇಲ್ಲ. ನಿಮಗೆ ಗೊತ್ತಿಲ್ಲ, ಅನೇಕ ಕಡೆ ರೆಂಟ್ ಕಂಟ್ರೋಲ್ ಮೇಲೆ ಮನೆಗಳು ಖಾಲಿ ಬರುತ್ತವೆ. ಈ ರೀತಿ ಮನ ಖಾಲಿ ಬಂದರೆ ಬಹಳ ಮಟ್ಟಿಗೆ ರಿಪೋರ್ಟ್ ಆಗುವುದಿಲ್ಲ. ನಾನು ಇದರ ಬಗ್ಗೆ ವಿವರಕ್ಕೆ ಹೋಗುವುದಿಲ್ಲ. ಹೊಸ ಬಿಲ್ ಬಂದಾಗ ಹೇಳುತ್ತೇನೆ. ರೆಂಟ್ ಕಂಟ್ರೋಲ್‌ಗೆ ಪ್ರತಿ ದಿನ ಎಷ್ಟು ರಿಪೋರ್ಟ್ ಆಗುತ್ತವೆ, ಎಷ್ಟು ಕೇಸಸ್ ತೀರ್ಮಾನವಾಗುತ್ತವೆ ಎಂಬ ವಿಷಯಗಳು ನಿಮಗೆ ಏನಾದರೂ ಗೊತ್ತಾದರೆ, ಈ ರೆಂಟ್ ಕಂಟ್ರೋಲ್ ಆಕ್ಟ್ ಬೇಡ ಎಂದು ನೀವೇ ಹೇಳುತ್ತೀರಿ. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನೀವು ಹೇಳಿದ ಹಾಗೆ ಮಾಡೆಲ್ ರೆಂಟ್ ಕಂಟ್ರೋಲ್ ಬಿಲ್ ಕೇಂದ್ರ ಸರ್ಕಾರದಿಂದ ಬಂದಿದೆ. ಇದನ್ನೂ ಬೇಸಿಸ್ ಆಗಿ ಇಟ್ಟುಕೊಂಡು ನಮ್ಮ ಹತ್ತಿರ ಇರತಕ್ಕ ರಿಪೋರ್ಟ್ ಇಟ್ಟುಕೊಂಡು ಮತ್ತೆ ಇನ್ನೂ ಕೆಲವು ಸಲಹೆಗಳು ಬಂದರೆ, ಇದನ್ನೆಲ್ಲಾ ಸೇರಿಸಿ, ಒಂದು ಬಿಲ್ಲನ್ನು ತಯಾರು ಮಾಡಿ, ಈ ಸಭೆಯ ಮುಂದೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಎರಡನೆಯದಾಗಿ ಎವಿಕ್ಷನ್ ವಿಚಾರ ಹೇಳಿದ್ದಾರೆ.

What is going to happen for an eviction order passed with regard to the property under the rent Control Act?

According to the legal version, eviction order passed under the expired Act is saved. But, against any eviction, no revision can be filed. It stands. It is saved. But, no revision, because it comes under the gap period. But, the earlier one when he passed the order, he passed the order when he had filed an application earlier. So, all pending procedure are saved because the law is going to be enacted with retrospective effect. In the year 1982 when the similar situation arose, when the ordinance was given the retrospective effect, a case was filed in the High Court. The case is relating to Mohammad Ayath V/s Adinarayana. It was held under the Constitution, the Union and State Legislature have plenary powers of legislation on any topic of legislation which is within their legislative competency and power to make a law includes the power to make a law both prospectively as well as retrospectively. So all these procedures are going to be saved with retrospective effect. That is also held valid. There are similar such situations. We may not go into those details. Now, I request the Hon.ble Members to give their accord for the Bill.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ " ಕರ್ನಾಟಕ ಬಾಡಿಗೆ ನಿಯಂತ್ರಣ (ಪೂರ್ವಾನ್ವಯದಿಂದ ಅವಧಿ ವಿಸ್ತರಣೆ) ವಿಧೇಯಕ 1993ನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 4ರವರೆಗೆ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 2ರಿಂದ 4ರವರೆಗೆ ಎರಡೂ ಸೇರಿದಂತೆ ವಿಧೇಯಕರ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2ರಿಂದ 4ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಮೊದಲನೆಯ ಖಂಡ ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ " ಮೇಲ್ಕಂಡ ವಿಧೇಯಕದ ಮೊದಲನೆಯ ಖಂಡ, ಹೆಸರು ಆವತರಣಿಕೆ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ರಾಜಶೇಖರ ಮೂರ್ತಿ(ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, 1993ನೇ ಸಾಲಿನ ಕರ್ನಾಟಕ ಬಾಡಿಗೆ ನಿಯಂತ್ರಣ (ಪೂರ್ವಾನ್ವಯದಿಂದ ಅವಧಿ ವಿಸ್ತರಣೆ) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ."

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, " 1993ನೇ ಸಾಲಿನ ಕರ್ನಾಟಕ ಬಾಡಿಗೆ ನಿಯಂತ್ರಣ (ಪೂರ್ವಾನ್ವಯದಿಂದ ಅವಧಿ ವಿಸ್ತರಣೆ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಪ್ರಕಟಣೆಗಳು

ಉಪಾಧ್ಯಕ್ಷರು : ಸಣ್ಣ ಖನಿಜ ಸಂಪತ್ತಿನ ನೀತಿಯನ್ನು ಸೂಕ್ತವಾಗಿ ರೂಪಿಸುವುದನ್ನು ಖಚಿತ ಪಡಿಸಿಕೊಳ್ಳುವುದಕಾಗಿ ಸರಕಾರಕ್ಕೆ ಸಲಹೆ ನೀಡಲು ರಚಿಸಲಾದ ಉಭಯ ಸದನಗಳ ಜಂಟಿ ಸಮಿತಿಗೆ ಸಂಬಂಧಿಸಿದಂತೆ ಸಮಿತಿಯ ವರದಿಯನ್ನು ಒಪ್ಪಿಸಲು 1993ರ ಮಾರ್ಚ್ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಈ ಸಮಿತಿ ಏನು ಮಾಡಿದ್ದೀರಿ, ಇದಕ್ಕೆ ಅಧ್ಯಕ್ಷರೇ ಇಲ್ಲ.

ಉಪಾಧ್ಯಕ್ಷರು : ಮೊದಲು ಇದಕ್ಕೆ ಯಾರು ಅಧ್ಯಕ್ಷರಾಗಿದ್ದರು ?

ಶ್ರೀ ವಾಟಾಳ್ ನಾಗರಾಜ್ : ಮೊದಲು ನಮ್ಮ ಉಸ್ತಾದ್ ರವರು ಅಧ್ಯಕ್ಷರಾಗಿದ್ದರು.

ಉಪಾಧ್ಯಕ್ಷರು : ಈಗ ಯಾರು ಸಂಬಂಧಪಟ್ಟ ಇಲಾಖೆ ಮಂತ್ರಿಗಳಾಗಿದ್ದಾರೆ ಅವರೆ ಅಧ್ಯಕ್ಷರಾಗಿರುತ್ತಾರೆ.

ಪ್ರಕಟಣೆ -2

ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯ ತೀರ್ಮಾನಗಳು

ಉಪಾಧ್ಯಕ್ಷರು : ದಿನಾಂಕ 6.1.93ರಂದು ಬುಧವಾದ ನಡೆದ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಸದನದ ಉಪವೇಶನವನ್ನು 12ನೇ ಜನವರಿ 93ರವರೆಗೆ ವಿಸ್ತರಿಸಿ ನಿಯತ ಕಾರ್ಯಕ್ರಮಗಳನ್ನು ಒಳಗೊಂಡಂತೆ ಈ ಕೆಳಕಂಡ ಕಾರ್ಯಕ್ರಮಗಳನ್ನು ನಡೆಸಲು ತೀರ್ಮಾನಿಸಲಾಗಿದೆ.

8.1.93 ಶುಕ್ರವಾರ ಸರಕಾರಿ ಕಾರ್ಯಕಲಾಪ, ನೆರೆ ಹಾವಳಿ ಮೇಲೆ ಚರ್ಚೆ

11.1.93 ಸೋಮವಾರ ರಸಗೊಬ್ಬರದ ನೀತಿಯ ಮೇಲೆ ಚರ್ಚೆ

12.1.93 ಮಂಗಳವಾರ ಸರಕಾರಿ ಕಾರ್ಯ ಕಲಾಪ

ಉಪಾಧ್ಯಕ್ಷರು : ಈಗ ಸಭೆಯು ಮುಕ್ತಾಯವಾಗಿ ಮತ್ತೆ ನಾಳೆ ಬೆಳಗ್ಗೆ 9 ಗಂಟೆಗೆ ಸೇರುತ್ತದೆ.

(ಸದನವು 6 ಘಂಟೆ 30 ನಿಮಿಷಕ್ಕೆ ಮುಕ್ತಾಯಗೊಂಡ ಮತ್ತೆ ದಿನಾಂಕ 8.1.93ನೇ ಶುಕ್ರವಾರ ಬೆಳಗ್ಗೆ 9.00 ಗಂಟೆಗೆ ಸೇರಲು ತೀರ್ಮಾನಿಸಿತು.)

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

BLANK PAGE

ಶುಕ್ರವಾರ ೮ನೇ ಜನವರಿ ೧೯೯೩, ಪುಷ್ಯ ೧೮, ಶಕ ೧೯೧೪

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯.೨೦ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು (ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ) ಅವರು

ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ದಾವಣಗೆರೆ ನಗರ ಸಭೆಯನ್ನು ನಗರಪಾಲಿಕೆಯಾಗಿ ಪರಿವರ್ತನೆ.

1090-ಶ್ರೀ ಎಂ.ವೈ. ವೀರಣ್ಣ (ದಾವಣಗೆರೆ) : ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ಪುರಸಭೆಯನ್ನು ನಗರಪಾಲಿಕೆಯನ್ನಾಗಿ ಮಾಡುವ ಯೋಚನೆ ಸರ್ಕಾರಕ್ಕಿದೆಯೇ?

ಆ) ಇದ್ದಲ್ಲಿ ಆ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇದೆ.

ಆ) ಈ ಬಗ್ಗೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಪೌರಾಡಳಿತ ನಿರ್ದೇಶಕರು, ಬೆಂಗಳೂರು ಇವರನ್ನು ಕೋರಲಾಗಿದೆ. ಪ್ರಸ್ತಾವನೆ ಬಂದ ನಂತರ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ವೈ.ಎಂ.ವೀರಣ್ಣ :ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ದಾವಣಗೆರೆ ಪುರಸಭೆಯನ್ನು ನಗರಪಾಲಿಕೆಯಾಗಿ ಪರಿವರ್ತಿಸುವ ಕ್ರಮ ಇದೆ ಎಂದು ತಿಳಿಸಿದ್ದಾರೆ ಆದರೆ ಅದನ್ನು ಎಷ್ಟು ಅವಧಿಯೊಳಗೆ ಮಾಡಲು ಕ್ರಮ ತೆಗೆದುಕೊಳ್ಳುತ್ತಾರೆಂದು ತಿಳಿಸಬೇಕು. ಕಾರಣ ಈಗಾಗಲೇ ಅಲ್ಲಿಯ ಜನಸಂಖ್ಯೆ 2 ಲಕ್ಷಕ್ಕೂ ಹೆಚ್ಚು ಇದೆ. ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಆಕ್ಟ್ 76: ಸೆಕ್ಷನ್ 3 ರ ಪ್ರಕಾರ ನಗರಪಾಲಿಕೆ ಮಾಡುವುದಕ್ಕೆ ಎಲ್ಲಾ ರೀತಿಯ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಾ? ಅದು ಬಹು ದಿವಸಗಳ ಬೇಡಿಕೆ, ಅದರ ಬಗ್ಗೆ ಸೂಕ್ತ ನಿರ್ಧಾರ ತಿಳಿಸಿದರೆ ಒಳ್ಳೆಯದಾಗುತ್ತದೆ.

ಶ್ರೀ ಚೌಡರೆಡ್ಡಿ : ಮಾನ್ಯ ಸದಸ್ಯರು ಆ ಸೆಕ್ಷನ್, ಎಲ್ಲಾ ವಿಚಾರಗಳನ್ನು ಆಗಲೇ ಹೇಳಿದ್ದಾರೆ, 2 ಲಕ್ಷ ಪಾಪ್ಯುಲೇಷನ್ ಇದೆ, 1 ಕೋಟಿಗಿಂತ ಹೆಚ್ಚಾಗಿ ವರಮಾನ ಇದೆ, ಅಲ್ಲಿ ನಾವು ಸಿಟಿ ಮುನಿಸಿಪಾಲಿಟಿಯನ್ನು ಕಾರ್ಪೋರೇಷನಾಗಿ

ಕನ್‌ವರ್ಟ್ ಮಾಡಬಹುದು ಎಂದು ಹೇಳಿದ್ದಾರೆ. ಪ್ರಸ್ತಾವನೆಯ ಜೊತೆಗೆ ತುಮಕೂರು, ಬಳ್ಳಾರಿ, ಕೂಡ ಸೇರಿದೆ. ಇದನ್ನು 24-8-92ರಲ್ಲಿ ಡಿ.ಸಿ.ಯವರಿಗೆ ಕಳುಹಿಸಿದ್ದೇವೆ, ಅವರು ಎಲ್ಲಾ ಫಾರ್ಮಾಲಿಟೀಸ್ ಮುಗಿಸಿ ಕಳಿಸಿಕೊಡಲಿ.

ಶ್ರೀ ವೈ.ಎಂ. ವೀರಣ್ಣ : ಪ್ರಸ್ತಾವನೆಯನ್ನು ಕಳಿಸಿಕೊಟ್ಟ ತಕ್ಷಣ ಕ್ರಮ ಕೈಗೊಳ್ಳುತ್ತಾರೇನು?

ಶ್ರೀ ಚೌಡರೆಡ್ಡಿ : ನಗರಸಭೆಯವರದೂ ಕೆಲವು ಫಾರ್ಮಾಲಿಟೀಸ್ ಇದೆ, ಅದನ್ನು ಎಷ್ಟು ಬೇಗ ಕಳಿಸಿದರೆ ನಮ್ಮ ಕಡೆಯಿಂದಂತೂ ನಿಧಾನವಾಗುವುದಿಲ್ಲ.

ಶ್ರೀ ವೈ.ಎಂ. ವೀರಣ್ಣ : ಸರ್ವಾನುಮತದಿಂದ ಠರಾವು ಮಾಡಿ ನಗರಪಾಲಿಕೆ ಮಾಡಬೇಕೆಂದು ತಮಗೆ ವಿನಂತಿಸಿಕೊಂಡಿದ್ದಾರೆ ಅದು ತಮಗೆ ಮುಟ್ಟಿದ ತಕ್ಷಣ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಚೌಡರೆಡ್ಡಿ : ಮುಟ್ಟಿದ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ.

ಕೊಡಗು ಜಿಲ್ಲೆಯಲ್ಲಿ ತೆರೆದ ಅಂಗನವಾಡಿ ಕೇಂದ್ರಗಳ ಸಂಖ್ಯೆ

655- ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ತೆರೆಯಲಾಗಿರುವ ಅಂಗನವಾಡಿ ಕೇಂದ್ರಗಳೆಷ್ಟು?
(ತಾಲ್ಲೂಕುವಾರು ವಿವರ ಕೊಡುವುದು)

ಆ) ಇದಕ್ಕಾಗಿ ಬಿಡುಗಡೆಯಾಗಿರುವ ಅನುದಾನವೆಷ್ಟು?

ಇ) ಅಂಗನವಾಡಿಗಳಿಗೆ ಸ್ವಂತ ಕಟ್ಟಗಳಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಸರ್ಕಾರವು ಸ್ವಂತ ಕಟ್ಟಡಗಳನ್ನು ಕಟ್ಟಿಸುವ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

ಅ) 559 ಅಂಗನವಾಡಿ ಕೇಂದ್ರಗಳು.

1) ಪೊನ್ನಂಪೇಟೆ	257	ಅಂಗನವಾಡಿ ಕೇಂದ್ರಗಳು
2) ಮಡಿಕೇರಿ	202	ಅಂಗನವಾಡಿ ಕೇಂದ್ರಗಳು
3) ಸೋಮವಾರಪೇಟೆ	100	ಅಂಗನವಾಡಿ ಕೇಂದ್ರಗಳು
ಒಟ್ಟು	559	ಅಂಗನವಾಡಿ ಕೇಂದ್ರಗಳು

ಆ) ರೂ. 130.80 ಲಕ್ಷಗಳು

ಇ) ಹೌದು.

ಈ) ಸ್ವಂತ ಕಟ್ಟಡಗಳನ್ನು ಕಟ್ಟಿಸಲು ಈ ಜಿಲ್ಲೆಗೆ 1992È93 ನೇ ಸಾಲಿನಲ್ಲಿ ರೂ. 10ಲಕ್ಷವನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಲಭ್ಯವಾಗುವ ಸಂಪನ್ಮೂಲಗಳನ್ನು ಅನುಸರಿಸಿ ಕಟ್ಟಡಗಳನ್ನು ಹಂತ ಹಂತವಾಗಿ ಕಟ್ಟಿಸಲು ಸಾಧ್ಯವಾಗುವುದು.

ಶ್ರೀಮತಿ ಸುಮಾ ವಸಂತ್ : ಪೊನ್ನಂಪೇಟೆ ಅಂದರೆ ಅದು ವಿರಾಜಪೇಟೆ ಕ್ಷೇತ್ರಕ್ಕೆ ಬರುತ್ತದೆ. 257 ಅಂಗನವಾಡಿ ಕೇಂದ್ರಗಳಿವೆ ಎಂದಿದ್ದಾರೆ. ಇವುಗಳಲ್ಲಿ

ಎಷ್ಟಕ್ಕೆ ಸ್ವಂತ ಕಟ್ಟಡ ಇವೆ, ಎಷ್ಟು ಕಟ್ಟಡ ಇಲ್ಲದೆ ನಡೆಯುತ್ತಿವೆ ಮತ್ತು ರಾಜ್ಯ ಸರ್ಕಾರದಿಂದ ಎಷ್ಟು ಕೇಂದ್ರ ಸರ್ಕಾರದಿಂದ ಎಷ್ಟು ಅಂಗನವಾಡಿ ಕೇಂದ್ರಗಳು ನಡೆಯುತ್ತಿದೆ ಎಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ : ಸಭಾಧ್ಯಕ್ಷಣಿಯವರೆ, ಅಂಗನವಾಡಿ ಕೇಂದ್ರಗಳ ಬಗ್ಗೆ ತಾಲ್ಲೂಕುವಾರು ಉತ್ತರ ಒದಗಿಸಲಾಗಿದೆ. ಒಟ್ಟು ಮಡಿಕೇರಿಯಲ್ಲಿ 559 ಅಂಗನವಾಡಿ ಕೇಂದ್ರಗಳಿವೆ, ಇದರಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕೂಡಿ ಮಾಡುತ್ತಿದ್ದೇವೆ. ಕಟ್ಟಗಳಿಗೆಂದು ಈ ವರ್ಷ 10 ಲಕ್ಷ ಒದಗಿಸಿಕೊಟ್ಟಿದ್ದೇವೆ. 33 ಕಟ್ಟಡಗಳನ್ನು ತೆಗೆದುಕೊಳ್ಳುವುದು ಸರ್ಕಾರದ ಮುಂದಿದೆ. ಈಗಾಗಲೇ 163 ಅಂಗನವಾಡಿ ಕಟ್ಟಡಕ್ಕಾಗಿ 35 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ಅದರಲ್ಲಿ 26 ಲಕ್ಷ ರೂಪಾಯಿ ಖರ್ಚಾಗಿದೆ. ಇನ್ನೂ 19 ಬಿಲ್ಡಿಂಗ್ ಮಾಡಬೇಕಾಗಿದೆ.

ಶ್ರೀಮತಿ ಸುಮಾ ವಸಂತ : ಇದರಲ್ಲಿ ಕೇಂದ್ರ ಸರ್ಕಾರದವತಿಯಿಂದ ಎಷ್ಟು ಅಂಗನವಾಡಿಗಳು ನಡೆಯುತ್ತಿವೆ ಎಂದು ಕೇಳುತ್ತಿದ್ದೇನೆ. ಮತ್ತು 10 ಲಕ್ಷ ರೂಪಾಯಿಗಳನ್ನು ಏನು ಬಿಡುಗಡೆ ಮಾಡಿದ್ದಾರೆ, ಅದರಲ್ಲಿ ಒಂದೊಂದು ತಾಲ್ಲೂಕಿಗೆ ಮಾತ್ರ ಬಂದು ಕೇವಲ 6 ಅಂಗನವಾಡಿ ಕೇಂದ್ರ ನಡೆಯಲಿಕ್ಕೆ ಸಾಧ್ಯವಿದೆ. ಈ ಸಾಲಿನಲ್ಲೇನಾದರೂ ಹೆಚ್ಚಿಗೆ ಹಣ ಬಿಡುಗಡೆ ಮಾಡುತ್ತೀರಾ? ಎಂದು ಕೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಇವರ ಉದ್ದೇಶ ಇಷ್ಟೇ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಬಡವರಿಗೆ ಮಕ್ಕಳಿಗೆ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುದಾಗಿದೆ. ಇದಕ್ಕೆ ಕಟ್ಟಡ ಬೇಕೆ ಎಂದರೆ, ಇಲ್ಲ, ಇದನ್ನು ಬೇರೆ ಕಡೆ , ಕಮ್ಯುನಿಟಿ ಹಾಲ್ ಮುಂತಾದ ಕಡೆ ಮಾಡಬಹುದು.

ಆದರೂ ಕೂಡ ಈ ಕಟ್ಟಡಗಳನ್ನು ಕಟ್ಟಲು 30 ಸಾವಿರ ರೂಪಾಯಿ ವೆಚ್ಚವನ್ನು ಎಲ್ಲಾ ಕಡೆಗೂ ಕೊಡುತ್ತಿದ್ದೇವೆ. ಕೊಟ್ಟಂಥ ಹಣ ಬಹಳ ಕಡಿಮೆ ಇದೆ ಎಂದು ಹೇಳಿದ್ದಾರೆ. ಒಂದೊಂದು ತಾಲ್ಲೂಕಿಗೆ 3 ಲಕ್ಷಬರುತ್ತದೆ. ಎನ್ನುವುದು ಇದೆ. ಅದನ್ನು ಹೆಚ್ಚು ಮಾಡಬೇಕೆನ್ನುವುದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀಮತಿ ಸುಮಾ ವಸಂತ : ಇದಕ್ಕೆ ಕಟ್ಟಡದ ಅವಶ್ಯಕತೆ ಬೇಡ ಎಂದು ಹೇಳುತ್ತಾರೆ. ನಮ್ಮದು ಮಲೆನಾಡು ಪ್ರದೇಶವಾಗಿರುವುದರಿಂದ ನಾವು ಅಲ್ಲಿ ಹೇಗೆ ಅಂಗನವಾಡಿ ಕೇಂದ್ರವನ್ನು ನಡೆಸುವುದು? ಇವರು ಏನು ಆಹಾರ ಪದಾರ್ಥಗಳನ್ನು ಕೊಡುತ್ತಾರೆ ಅದನ್ನು ಅಲ್ಲಿ ಇಟ್ಟು ಕೊಳ್ಳಬೇಕಾಗುತ್ತದೆ. ಕಟ್ಟಡ ಇಲ್ಲದಿದ್ದರೆ ಹೇಗೆ ನಡೆಸುವುದಕ್ಕೆ ಸಾಧ್ಯವಾಗುತ್ತದೆ ಹೇಳಿ. ಈ ಕಾರ್ಯಕ್ರಮ ಹೆಂಗಸರು ಮತ್ತು ಮಕ್ಕಳ ಕಾರ್ಯಕ್ರಮವಾಗಿದೆ. ಇದಕ್ಕೆ ಏಕೆ ಕಾಳಜಿಯನ್ನು ವಹಿಸುತ್ತಿಲ್ಲ ಎಂದು ಕೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಇದು ಅವಶ್ಯಕತೆ ಇಲ್ಲ ಎನ್ನತಕ್ಕ ಮಾತನ್ನು ಹೇಳಲಿಲ್ಲ, ಬೇರೆ ಕಡೆಯೂ ಮಾಡಬೇಕಾಗಿರುವುದು ಇದೆ. ಈಗ ಇದನ್ನು ತಾತ್ಕಾಲಿಕವಾಗಿ ಮಾಡಬಹುದು. ಕಟ್ಟಡ ಕಟ್ಟುವ ಬಗ್ಗೆ ಸರ್ಕಾರ ತೀವ್ರವಾಗಿ ವಿಚಾರ ಮಾಡುತ್ತದೆ.

ಶ್ರೀಮತಿ ದಮಯಂತಿ ಬೋರೇಗೌಡ : ಈ ಕೇಂದ್ರಗಳನ್ನು ಮಾರಿಗುಡಿ, ರಾಮಮಂದಿರ, ದೇವಸ್ಥಾನಗಳಲ್ಲಿ ನಡೆಸುವುದಕ್ಕೆ ಆಗುವುದಿಲ್ಲ, ಮತ್ತು ಸಾಮಾನಗಳನ್ನು ಇಟ್ಟುಕೊಳ್ಳಲು ಆಗುವುದಿಲ್ಲ. ಇದಕ್ಕೆ ಘನ ಸರ್ಕಾರದವರು ಆದ್ಯತೆಯನ್ನು ಕೊಟ್ಟು ಹೆಚ್ಚಿನ ರೀತಿಯಲ್ಲಿ ಅನುದಾನವನ್ನು ಮಂಜೂರು ಮಾಡುತ್ತೀರಾ?

ಶ್ರೀ ಧರ್ಮಸಿಂಗ್ : ಸರ್ಕಾರ ಇದರ ಬಗ್ಗೆ ಈಗಾಗಲೇ ಪರಿಶೀಲನೆ ಮಾಡಿದೆ. ಈಗಾಗಲೇ ನಾನು ಸಂಬಂಧಪಟ್ಟ ಕಾರ್ಯದರ್ಶಿಗಳು ಮತ್ತು ಅಧಿಕಾರಿಗಳ ಜೊತೆಯಲ್ಲಿಯೂ ಮಾತನಾಡಿ ಸ್ವಂತ ಕಟ್ಟಡವನ್ನು ಒದಗಿಸಲು ಹಣವನ್ನು ಕೊಡುತ್ತಿದ್ದೇವೆ. ಇನ್ನು ಹೆಚ್ಚಿಗೆ ಹಣವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಬೆಳಗಾವಿಯ ಹುಕ್ಕೇರಿಯಲ್ಲಿ ರಂಗಮಂದಿರ ನಿರ್ಮಾಣ

975-ಶ್ರೀ ಉಮೇಶ್ ವಿ. ಕತ್ತಿ(ಹುಕ್ಕೇರಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ಪಟ್ಟಣದಲ್ಲ ಪ್ರಾರಂಭಿಸಲಾದ ರಂಗಮಂದಿರ ಕಟ್ಟಡ ನಿರ್ಮಾಣವು ಅರ್ಧಕ್ಕೆ ನಿಂತಿದ್ದು, ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಅದನ್ನು ಪೂರ್ತಿಗೊಳಿಸಲು ಯಾವಾಗ ಹಣ ಬಿಡುಗಡೆ ಮಾಡಲಾಗುವುದು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು):

ಅ) ಹೌದು.

ಆ) ರೂ. 50,000-00 ಹಣ ಬಿಡುಗಡೆ ಮಾಡಲಾಗಿದೆ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಉಪಾಧ್ಯಕ್ಷಣೆಯವರೆ, ಬೆಳಗಾವಿ ಜಿಲ್ಲೆಯ ಹುಕ್ಕೇರಿ ಪಟ್ಟಣದಲ್ಲಿ ಪ್ರಾರಂಭಿಸಲಾದ ರಂಗಮಂದಿರಕಟ್ಟಡ ನಿರ್ಮಾಣವು ಅರ್ಧಕ್ಕೆ ನಿಂತಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಹೇಳುತ್ತೀರಿ, ಅದನ್ನು ಪೂರ್ತಿಗೊಳಿಸಲು 50,000 ರೂಪಾಯಿ ಹಣ ಬಿಡುಗಡೆ ಮಾಡಲಾಗಿದೆ. ಎಂದು ಹೇಳುತ್ತೀರಿ, 50 ಸಾವಿರ ರೂಪಾಯಿಯಲ್ಲಿ ಈ ಕೆಲಸ ಮುಗಿಯುವುದಿಲ್ಲ. ಅದನ್ನು ಮುಗಿಸುವ ಕಾರ್ಯಕ್ರಮವನ್ನು ಸರ್ಕಾರ ಈ ವರ್ಷ ಹಾಕಿಕೊಳ್ಳುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳ ಪರವಾಗಿ) : ನಾವು ಈಗಾಗಲೇ ಅದಕ್ಕೆ 50 ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. 50 ಸಾವಿರ ರೂಪಾಯಿಯಲ್ಲಿ ಆಗುವುದಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆ. ಏಕೆಂದರೆ ಮೊದಲು ಎಸ್ಟಿಮೇಟ್ ಮಾಡಿದ್ದಕ್ಕಿಂತ ಈಗ ಬೆಲೆಗಳು ಜಾಸ್ತಿಯಾಗಿವೆ. ಅದಕ್ಕೆ ಹೆಚ್ಚು ಹಣವನ್ನು ಕೊಡತಕ್ಕ ಪ್ರಯತ್ನ ಸರ್ಕಾರ ಮಾಡುತ್ತದೆ.

ಶ್ರೀ ಉಮೇಶ್ ವಿ. ಕತ್ತಿ: ಅದಕ್ಕೆ ಬೇಕಾದಷ್ಟು ಹಣವನ್ನು ಕೊಟ್ಟು ಈ ವರ್ಷದಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ : 50 ಸಾವಿರ ರೂಪಾಯಿ ಸಾಕಾಗುತ್ತಿಲ್ಲ. ಹೆಚ್ಚು ಹಣವನ್ನು ಕೊಡುವುದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ರಾಜ್ಯದಲ್ಲಿನ ಹೊಸದಾಗಿ ಸ್ಥಾಪಿಸಲಾದ ಐ.ಟಿ.ಐ. ಕೇಂದ್ರಗಳು

727-ಶ್ರೀ ಮಂಜುನಾಥ್ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಎಷ್ಟು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಕೇಂದ್ರಗಳನ್ನು ಪ್ರಾರಂಬಿಸಲಾಗಿದೆ.

ಆ) ಕೊಪ್ಪಳ ತಾಲ್ಲೂಕಿನಿಂದ ಕುಕ್ಕನೂರಿಗೆ ಐ.ಟಿ.ಐ. ಟ್ರೇಡ್ಸ್ ಶಿಫ್ಟ್ ಮಾಡಲಾಗಿದೆಯೇ?

ಇ) ಅದೇ ಮಾದರಿಯಲ್ಲಿ ಶಿಗ್ಗಾಂವು ಪಟ್ಟಣಕ್ಕೆ ಹೊಸದಾಗಿ ಹುಬ್ಬಳ್ಳಿಯಿಂದ ಐ.ಟಿ.ಐ. ಟ್ರೇಡ್ ಶಿಫ್ಟ್ ಮಾಡಲಾಗುವುದೆ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು):

ಅ) 1992-93ರಲ್ಲಿ ಐದು (5)

ಆ) ಇಲ್ಲ

ಇ) ಇಲ್ಲ

ಶ್ರೀ ಮಂಜುನಾಥ ಸಿ. ಕುನ್ನೂರ್ : ಮಾನ್ಯ ಉಪಾಧ್ಯಕ್ಷಣೆಯವರೆ, ಉತ್ತರದಲ್ಲಿ ರಾಜ್ಯದಲ್ಲಿ ಒಟ್ಟು ಎಷ್ಟು ಕೈಗಾರಿಕಾ ತರಬೇತಿ ಕೇಂದ್ರಗಳನ್ನು ತೆಗೆಯಲಾಗಿದೆ ಎಂದು ಕೇಳಿದ್ದಕ್ಕೆ '5' ಎಂದು ಉತ್ತರ ಕೊಟ್ಟಿದ್ದಾರೆ. ಕೊಪ್ಪಳ ತಾಲ್ಲೂಕಿನಿಂದ ಕುಕ್ಕುನೂರಿಗೆ ಐ.ಟಿ.ಐ. ಟ್ರೇಡ್ಸ್ ಶಿಫ್ಟ್ ಮಾಡಲಾಗಿದೆಯೇ ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ಕೊಪ್ಪಳ ತಾಲ್ಲೂಕಿನ ಕುಕ್ಕೂನೂರಿನಲ್ಲಿ ಹುಬ್ಬಳ್ಳಿಯಿಂದ ಶಿಫ್ಟ್ ಮಾಡಿರುವುದೇ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆ. ಕೊಪ್ಪಳ ತಾಲ್ಲೂಕಿನಿಂದ ಕುಕ್ಕೂನೂರಿಗೆ ಆಗಿದೆ. ಕಾರಣ ಅಲ್ಲಿಗೆ ಟ್ರೇಡ್ಸ್ ಈಗಾಗಲೇ ಶಿಫ್ಟ್ ಮಾಡಲಾಗಿದ . ನಮ್ಮ ಮಾನ್ಯ ಮಿತ್ರರಾದಂತಹ ಶಿವನಂದ ಕೌಜಲಗಿಯವರು ಪ್ರಶ್ನೆಯನ್ನು ಕೇಳಿದ ಪ್ರಕಾರ ನಮ್ಮ ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ. ಪಾಸಾದವರು 9,16,493 ಜನ ನಿರುದ್ಯೋಗಿಗಳು ಇದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಮುಖ್ಯವಾಗಿ ಜಾಬ್ ಓರಿಯಟೆಂಟ್ ಕೋರ್ಸ್‌ಗಳಾದಂತಹ ಐ.ಟಿ.ಐ. ಗಳನ್ನು ತೆಗೆಯುವುದು ಬಹಳ ಅವಶ್ಯಕತೆ ಇದೆ. ನನ್ನ ಮತಕ್ಷೇತ್ರದಲ್ಲಿ ಎರಡು ತಾಲ್ಲೂಕುಗಳು ಬರುತ್ತಿದ್ದು ಅಲ್ಲಿ ಪ್ರೈವೇಟ್ ಐ.ಟಿ.ಐ. ನೂ ಇಲ್ಲ, ಸರ್ಕಾರಿ ಐ.ಟಿ.ಐ. ನೂ ಇಲ್ಲ, ಅದಕ್ಕಾಗಿ ಹೆಚ್ಚು ಆದ್ಯತೆ ಕೊಟ್ಟು ಐ.ಟಿ.ಐ. ಕೇಂದ್ರಗಳನ್ನು ತೆರೆಯಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಮಾನ್ಯ ಸದಸ್ಯರು ಅವರ ಪ್ರಶ್ನೆಯನ್ನು ತಿದ್ದುಪಡಿ ಮಾಡಿದ್ದಾರೆ. ಅವರು ಕೇಳಿದ ಪ್ರಕಾರ ಕೊಪ್ಪಳ ತಾಲ್ಲೂಕಿನಿಂದ ಕುಕ್ಕುನೂರಿಗೆ ಯಾವುದು ಶಿಫ್ಟ್ ಆಗಿಲ್ಲ, ಐ.ಟಿ.ಐ. ತೆರೆಯುವ ಬಗ್ಗೆ ವಿಚಾರ ಮಾಡುವಾಗ ಇದನ್ನು ಗಮನದಲ್ಲಟ್ಟು ಮಾಡಬೇಕೆಂದು ಆಲೋಚನೆ ಮಾಡಿ ಮಾಡುತ್ತೇವೆ.

ಶ್ರೀ ಮಂಜುನಾಥ ಸಿ. ಕುನ್ನೂರ್ : ಕೊಪ್ಪಳ ತಾಲ್ಲೂಕಿನ ಕುಕ್ಕುನೂರಿಗೆ ಐ.ಟಿ.ಐ. ಟ್ರೇಡ್ಸ್ ಶಿಫ್ಟ್ ಮಾಡಿಲ್ಲ ಅಂತ ಹೇಳುತ್ತಿದ್ದಾರೆ. ಕುಕ್ಕನೂರು

ರಾಯಚೂರು ಜಿಲ್ಲೆಗೆ ಬರುತ್ತದೆ. ಹುಬ್ಬಳ್ಳಿ ಧಾರವಾಡ ಜಿಲ್ಲೆಗೆ ಬರುತ್ತದೆ. ಧಾರವಾಡ ಜಿಲ್ಲೆಯಿಂದ ರಾಯಚೂರು ಜಿಲ್ಲೆಗೆ ಅವರು ಟ್ರೇಡ್‌ಗಳನ್ನು ಶಿಫ್ಟ್ ಮಾಡಿದಾಗ ಕೇವಲ 40 ಕಿ.ಮೀ. ಇರತಕ್ಕ ಧಾರವಾಡ ಜಿಲ್ಲೆಯಲ್ಲಿರತಕ್ಕ ಶಿಗ್ಗಾವ್ ಪ್ರದೇಶ ಹುಬ್ಬಳ್ಳಿಗೆ ಬಹಳ ಹತ್ತಿರವಾಗುತ್ತದೆ. ಅದಕ್ಕೆ ಅದ ಮಾರ್ದಿಯೊಳಗೆ ಕೇವಲ ಒಂದೆರಡು ಟ್ರೇಡ್‌ಗಳನ್ನಾದರೂ ಶಿಫ್ಟ್ ಮಾಡಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ : ಬೇರೆ ಐ.ಟಿ.ಐ.ಗಳನ್ನು ನಾವು ಟ್ರೇಡ್‌ಗಳನ್ನು ಶಿಫ್ಟ್ ಮಾಡಿಬಿಟ್ಟರೆ ತೊಂದರೆಯಾಗುತ್ತದೆ. ನಾವುಎಲ್ಲಿಂದ ಶಿಫ್ಟ್ ಮಾಡುತ್ತೇವೆ ಅಲ್ಲಿ ಕ್ಲೋಸ್ ಮಾಡಬೇಕಾಗುತ್ತದೆ. ಟ್ರೇಡ್‌ಗಳನ್ನು ಶಿಫ್ಟ್ ಮಾಡುವಾಗ ಬಹಳ ಆಲೋಚನೆಯಿಂದ ಮಾಡಬೇಕಾಗುತ್ತದೆ.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ಹುಬ್ಬಳ್ಳಿಯಲ್ಲಿ ಐ.ಟಿ.ಐ. ಕಾಲೇಜು ಇದೆ. ಅಲ್ಲಿ ಅನೇಕ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಆ ಕಾರಣದಿಂದಲೇ ಕಳೆದ ಎರಡು ವರ್ಷಗಳ ಹಿಂದೆ ಕುಕನೂರಿಗೆ ಶಿಫ್ಟ್ ಮಾಡಿಬಿಟ್ಟಿದ್ದೀರಿ, ಈಗಲೂ ಅಲ್ಲಿದ್ದ ಅಧಿಕಾರಿಗಳನ್ನು ಪ್ರಿನ್ಸಿಪಾಲನ್ನು ನಾನು ಭೇಟಿಯಾದಾಗ ಶಿಗ್ಗಾವಿಗೆ ಮಾಡೋಕೆ ಏನೂ ತೊಂದರೆ ಇಲ್ಲ, ಸರ್ಕಾರ ಆದೇಶ ಮಾಡಿದರೆಮಾಡಿಕೊಡುತ್ತೇವೆ ಎಂದರು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಎರಡು ಟ್ರೇಡ್‌ಗಳನ್ನು ಶಿಫ್ಟ್ ಮಾಡಿದರೆ ಯಾವುದೇ ತೊಂದರೆ ಸರ್ಕಾರಕ್ಕಾಗುವುದಿಲ್ಲ, ಇದರಿಂದ ಹಣಕಾಸಿನ ತೊಂದರೆಯೂ ಆಗುವುದಿಲ್ಲ, ಆ ಕಾರಣದಿಂದ ಇದಕ್ಕೆ ಹೆಚ್ಚಿನ ಮಹತ್ವ ಕೊಟ್ಟು ಹುಬ್ಬಳ್ಳಿಯಿಂದ ಶಿಗ್ಗಾವಿಗೆ ಒಂದರೆಡು ಟ್ರೇಡ್‌ಗಳನ್ನು ಶಿಫ್ಟ್ ಮಾಡಿ ಕೊಡಬೇಕೆಂದು ವಿನಂತಿ ಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ : ಸನ್ಮಾನ್ಯ ಸದಸ್ಯರು ಹುಬ್ಬಳ್ಳಿಯಲ್ಲಿ ಸ್ಥಳ ಇಲ್ಲಾಂತ ಹೇಳಿದ್ದಾರೆ. ಅದನ್ನು ನಾವು ಗಮನದಲ್ಲಿಟ್ಟು ಸರಿಯಾಗಿ ಸ್ಥಳ ಒದಗಿಸುತ್ತೇವೆ. ಹೊಸ ಐ.ಟಿ.ಐ. ಆಲೋಚನೆ ಮಾಡುವಾಗ ಇದನ್ನೂ ಗಮನದಲ್ಲಿಡುತ್ತೇವೆ.

ಆಶ್ರಯ ಯೋಜನೆಯಡಿ ದೊಡ್ಡಬಳ್ಳಾಪುರಕ್ಕೆ ಮಂಜೂರಾದ ಮನೆಗಳು

1063-ಶ್ರೀ ಆರ್.ಎಲ್.ಜಾಲಪ್ಪ (ದೊಡ್ಡಬಳ್ಳಾಪುರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಯ ಯೋಜನೆಯಡಿ ದೊಡ್ಡಬಳ್ಳಾಪುರ ಕ್ಷೇತ್ರಕ್ಕೆ ಮಂಜೂರು ಮಾಡಿರುವ ಮನೆಗಳು ಎಷ್ಟು?

ಆ) ಎಷ್ಟು ಮನೆಗಳು ನಿರ್ಮಾಣ ಹಂತದಲ್ಲಿವ ?

ಇ) ಎಷ್ಟು ಮನೆಗಳು ಪೂರ್ಣಗೊಂಡಿವೆ?

ಶ್ರೀ ಗೋಪಿನಾಥ ಆರ್. ಸಾಂಡ್ರ (ವಸತಿ ಸಚಿವರು):

ಅ) 1,000 ಮನೆಗಳು.

ಆ) 35 ಮನೆಗಳು.

ಇ) ಇಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷಣೆಯವರೇ, 91-92-93ರಲ್ಲಿ ಸರ್ಕಾರದ ಹೇಳಿಕೆ ಪ್ರಕಾರ 2000 ಮನೆಗಳು ನನ್ನ ಕ್ಷೇತ್ರದಲ್ಲಾಗಬೇಕಾಗಿತ್ತು. ಈ 2000 ಮನೆಗಳನ್ನು ಏಕೆ ಮಂಜೂರು ಮಾಡಿಲ್ಲ. ತಮ್ಮ ಉತ್ತರದಲ್ಲಿ ಕೇವಲ 1000 ಮನೆಗಳನ್ನು ಮಂಜೂರು ಮಾಡಿದ್ದೇವೆ ಎಂದಿದ್ದೀರಿ. ಎರಡನೆಯದಾಗಿ ಈಗ ಮಂಜೂರುರಾಗಿರುವ 1000 ಮನೆಗಳಿಗೆ ಏಜೆನ್ಸಿಗಳನ್ನು ಆಗಲೇ ಫಿಕ್ಸ್ ಮಾಡಿದ್ದೀರಾ ಮತ್ತು ಎಷ್ಟು ದಿವಸದಲ್ಲಿ ಈ ಮನೆಗಳನ್ನು ನಿರ್ಮಾಣ ಮಾಡಿಸಿಕೊಡುತ್ತೀರಿ?

ಶ್ರೀ ಗೋಪಿನಾಥ ಆರ್. ಸಾಂಡ್ರ : 90-91,91-92, ಸಾಲುಗಳಲ್ಲಿ ಒಂದೊಂದು ಸಾವಿರದ ಮನೆಗಳನ್ನು ಕಟ್ಟುವ ಟಾರ್ಗೆಟ್ ನಮಗಿತ್ತು. ಕಾರಣಾಂತರಗಳಿಂದ ಆಗಲಿಲ್ಲ, ಏಕೆ ಆಗಲಿಲ್ಲ ಎಂದರೆ ಅಲ್ಲಿ ಟಾಸ್ಕ್ ಫೋರ್ಸ್ ಕಮಿಟಿಯವರು ನಮಗೆ ನಿವೇಶನ ಕೊಡಲಿಲ್ಲ, ಏಕೆ ಆಗಲಿಲ್ಲ ಎಂದರೆ ಅಲ್ಲಿ ಟಾಸ್ಕ್ ಫೋರ್ಸ್ ಕಮಿಟಿಯವರು ನಮಗೆ ನಿವೇಶನ ಕೊಡಲಿಲ್ಲ. ಎರಡನೆಯದು , ನಮ್ಮಲ್ಲಿ ಸ್ವಪ ಆಶ್ರಯ ಸ್ಕೀಂ ಅಸ್ತವ್ಯಸ್ತ ಆಗಿದ್ದರಿಂದ ಸರಿಯಾಗಿ ಅದನ್ನು ಸಾದರಪಡಿಸಲಿಕ್ಕಾಗಲಿಲ್ಲ. ಈಗ ಅದನ್ನು ನಾವುಮಾಡುತ್ತೇವೆ.

ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಮಂತ್ರಿಗಳಿಂದ ಈ ಉತ್ತರ ನಿರೀಕ್ಷಣೆ ಮಾಡಿರಲಿಲ್ಲ. ಟಾಸ್ಕ್‌ಫೋರ್ಸ್ ಕಮಿಟಿ ಅಧ್ಯಕ್ಷ ನಾನುದುರದೃಷ್ಟದಿಂದ. ಸುಮಾರು 1800 ಚಿಲ್ಲರೆ ನಿವೇಶನಗಳನ್ನು ಮತ್ತು ಫಲಾನುಭವಿಗಳ ಲಿಸ್ಟನ್ನು ಸಹ ತಮಗೆ ಕಳುಹಿಸಿ ಬಹಳ ದಿವಸವಾಯಿತು. ಅದರಲ್ಲಿ ಬಂದಿಲ್ಲ ಎಂದು ಹೇಳುವುದು ಸತ್ಯಕ್ಕೆ ಅಷ್ಟೇನೂ ಹತ್ತಿರವಾಗಿಲ್ಲ. ದಯವಿಟ್ಟು ಅದನ್ನು ಪರಿಶೀಲನೆ ಮಾಡಿನೋಡಿ.

ಶ್ರೀ ಗೋಪಿನಾಥ ಆರ್. ಸಾಂಡ್ರ : ನಾವು ಒಟ್ಟು 1000 ಮನೆಗಳನ್ನು ಮಾಡಬೇಕೆಂದಿದ್ದೆವು ಅದರಲ್ಲಿ 915 ಮನೆಗಳನ್ನು ರೂರಲ್ ಏರಿಯಾದಲ್ಲಿ ಹಾಗೂ 85 ಮನೆಗಳನ್ನು ಅರ್ಬನ್ ಏರಿಯಾದಲ್ಲಿ ಮಾಡಬೇಕೆಂದು ಟಾರ್ಗೆಟಿತ್ತು ಈವರೆಗೆ ಮೂವತ್ತೈದು ನೆಗಳು ಅಂಡರ್ ಕನ್‌ಸ್ಟ್ರಕ್ಷನ್ ಇವೆ. ನಮ್ಮ ಆಫೀಸಿನ ರೆಕಾರ್ಡ್ಸ್ ಪ್ರಕಾರ 256 ನಿವೇಶನಗಳನ್ನು ನಮಗೆ ತಾಬಾಕು ಕೊಟ್ಟಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಅದು ಸರಿಯಲ್ಲ, ಜಿಲ್ಲಾಧಿಕಾರಿಗಳು 1800 ಫಲಾನುಭವಿಗಳ ಲಿಸ್ಟ್‌ನ್ನು ಆಗಲೇ ತಮಗೆ ಕಳಿಸಿ ನಾಲ್ಕೈದು ತಿಂಗಳ ಮೇಲಾಗಿದೆ.

ಶ್ರೀ ಗೋಪಿನಾಥ ಆರ್. ಸಾಂಡ್ರ : ಅದನ್ನು ಪುನರ್ ಪರಿಶೀಲನೆ ಮಾಡಿ ಯೋಗ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಆರ್.ಎಲ್.ಜಾಲಪ್ಪ : 910 ಅಕ್ಟೋಬರ್ ನವೆಂಬರ್‌ಗಳಲ್ಲಿ 11,600 ಮನೆಗಳು ಬಿದ್ದುಹೋದುವು, ಒಂದು ಮನೆಯನ್ನು ಇವತ್ತಿನವರೆಗೂ ಕಟ್ಟಲಿಲ್ಲ ಆಶ್ರಯ ಯೋಜನೆಯಲ್ಲಾದರೂ ಅವರಿಗೆ ಆಶ್ರಯ ಸಿಗಲಿಲ್ಲ, ಹಾಗಾಗಿ ನಿಮ್ಮನ್ನು ನಂಬಿಕೊಂಡಿರುವವರ ಗತಿಯೇನು ಸ್ವಾಮಿ? ಬರಿ ಬಾಯಿಮಾತೇ ಆಯಿತೇ ಅಥವಾ ಇದನ್ನು ಏನಾದರೂ ಕಾರ್ಯರೂಪಕ್ಕೆ ತರುವುದಕ್ಕೆ ನಿಮಗೆ ಶಕ್ತಿ ಇದೆಯಾ? ಸುಮ್ಮನೆ ಏಕೆ ಆಸೆ ಹುಟ್ಟಿಸಿ ಆಶ್ವಾಸನೆ ಕೊಡುತ್ತಿದ್ದೀರಿ?

ಶ್ರೀ ಗೋಪಿನಾಥ್ ಆರ್. ಸಾಂಡ್ರ : ಸರ್ಕಾರದ ಕಾರ್ಯಕ್ರಮಗಳನ್ನು ಶೀಘ್ರಗತಿಯಿಂದ ನಾವು ಜಾರಿ ಮಾಡುತ್ತೇವೆ. ಈಗಾಗಲೇ 256 ನಿವೇಶನ

ನಮಗೇನು ಕೊಟ್ಟಿದ್ದರು ಅವುಗಳಲ್ಲಿ 35 ಮನೆಗಳನ್ನು ಮಾಡಿದ್ದೇವು. ಅದು ತಡವಾಗಿಯಾಗಿದೆ. ಅದು ನಿಜ, ಆದರೆ ಈ ಸಲ 150 ಮನೆಗಳನ್ನು ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿ 93 ಮಾರ್ಚಿಯೊಳಗೆ ಮಾಡುತ್ತೇವೆ. ನಿನ್ನೆಯಲ್ಲ ಮೊನ್ನೆ ಕ್ಯಾಬಿನೆಟ್ ನಲ್ಲಿ ಒಂದು ನಿರ್ಣಯವಾಗಿದೆ.

ಬೆಂಗಳೂರು ಮಹಾನಗರ ಪಾಲಿಕೆಯುವರಿಂದ ಸರ್ಕಾರಿ ಆದೇಶವನ್ನು ಧಿಕ್ಕರಿಸಿ ಖಾಲಿ ಜಾಗಗಳನ್ನು ವಿಲೇವಾರಿ.

1075- ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರದೇ ಆದೇಶಗಳನ್ನು ಧಿಕ್ಕರಿಸಿ ಬೆಂಗಳೂರು ಮಹಾನಗರ ಪಾಲಿಕೆಯು ಖಾಲಿ ಇರುವ ಸ್ಥಳಗಳು ಮತ್ತು ಕಟ್ಟಡಗಳ ಭಾಗಗಳನ್ನು ವಿಲೇವಾರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಇಂತಹ ವಿಲೇವಾರಿ ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮವೇನು?*

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಉಪಾಧ್ಯಕ್ಷಣೆಯವರೆ, ಇದು ಜವಾಬ್ದಾರಿಯುತವಾಗಿ ಕೊಟ್ಟಂತಹ ಉತ್ತರವೋ ಅಥವಾ ಬೇಜವಾಬ್ದಾರಿಯಿಂದ ಕೊಟ್ಟ ಉತ್ತರವೋ ಎಂದು ನಾನು ಹೇಳಬೇಕಾಗುತ್ತದೆ. ಇದನ್ನು ನಾನುಬಹಳ ತೀವ್ರವಾಗಿ ಪ್ರತಿಭಟಿಸಬೇಕಾಗುತ್ತದೆ. ಅವರಿಗೆ ಯಾವಾಗ ನೇರವಾಗಿ ಉತ್ತರವನ್ನು ಕೊಡುವುದಕ್ಕೆ ಇಷ್ಟವಿರುವುದಿಲ್ಲೇ ಆಗ ಈ ತರಹ ಜವಾಬನ್ನು ಕೊಡುತ್ತಾರೆ. ನಾನೇ ಸಾಕಷ್ಟು ಕಾಗದವನ್ನು ನಗರಾಭಿವೃದ್ಧಿ ಮಂತ್ರಿಗಳಿಗೆ ಬರೆದಿದ್ದೇನೆ. ಕೆಲವು ಕಡೆ ಸ್ಟೇ ಕೊಟ್ಟಿದ್ದಾರೆ. ಅದು ಹಾಗೆಯೇ ಉಳಿದುಕೊಂಡಿದೆ. ಬೆಂಗಳೂರು ನಗರದಲ್ಲಿ ಈ ತರಹ ಅಕ್ರಮಗಳು ಬೆಂಗಳೂರು ಕಾರ್ಪೊರೇಷನ್ ನಿಂದ ಬಹಳ ನಡೆಯುತ್ತಿದೆ ಎಂದು ಗೊತ್ತಿದೆ ಗೊತ್ತಿದ್ದರೂ ಕೂಡ ಇದು ಗಮನಕ್ಕೆ ಬಂದಿಲ್ಲ, ಉತ್ತರ ಕೊಡುವುದು ಉದ್ಭವಿಸುವುದಿಲ್ಲವೆಂದರೆ ಅದಕ್ಕೆ ಈ ಸದನ ಏತಕ್ಕೆ ಇರಬೇಕು? ಅದಕ್ಕೆ ಒಬ್ಬರು ಏತಕ್ಕೆ ಮಂತ್ರಿಗಳು ಇರಬೇಕು. ಹೌಸಿಂಗ್ ಸೆಕ್ರೆಟರಿ ಏತಕ್ಕೆ ಇರಬೇಕು? ಕಳ್ಳತನವನ್ನು ಅಕ್ರಮವನ್ನು ಮುಚ್ಚಿರುವುದಕ್ಕೆ ಮಾಡುತ್ತಿದ್ದಾರೆಯೇ? ಈ ತರಹ ಜವಾಬನ್ನು ಏತಕ್ಕೆ ಕೊಡುತ್ತಿದ್ದಾರೆ. ನಾನು ಕಮೀಷನರ್ ರವರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ, ಡೆಪ್ಯೂಟಿ ಕಮೀಷನರ್‌ರವರನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ.

ಉಪಾಧ್ಯಕ್ಷಣೆಯವರು : ತಾವು ನೇರವಾಗಿ ಪ್ರಶ್ನೆಯನ್ನು ಕೇಳಿ?

ಶ್ರೀ ಎ.ಕೆ. ಅನಂತಕೃಷ್ಣ : ಏನೂ ಇಲ್ಲ ಎಂದು ಉತ್ತರ ಕೊಟ್ಟಮೇಲೆ ಏನು ಮಾಡುವುದು. ಶಿವಾಜಿನಗರದ ಸ್ಟೇಡಿಯಂನಲ್ಲಿ ಗೇಟ್ ಕೊಟ್ಟಿದ್ದಾರೆ. ಟಿಕೇಟ್ ಕೌಂಟರನ ಜಾಗವನ್ನು ಕೊಟ್ಟಿದ್ದಾರೆ. ಅಲ್ಲಿ ಎರಡು ಟಾಯ್‌ಲೆಟ್ ಅನ್ನು ಕೊಟ್ಟಿದ್ದಾರೆ. ಮೂರು ಅಂಗಡಿಗಳು ಆಗಿ ಬಿಟ್ಟು ಇನ್ನೊಂದು ಕಡೆ ಒಂದು ಅಂಗಡಿಯನ್ನು ಹಾಕುತ್ತಿದ್ದಾರೆ. ಮಾಡಬಾರದೆಲ್ಲವನ್ನು ಮಾಡುತ್ತಿದ್ದಾರೆ ಎಂದು ನಾನು

ಪದೇ ಪದೇ ಹೇಳುತ್ತಿದ್ದರೂ ಆ ಕಮೀಷನರ್‌ಗೆ ಇದನ್ನು ತಡೆಹಿಡಿಯುವುದಕ್ಕೆ ಶಕ್ತಿ ಇಲ್ಲ. ಉಳಿದ ಅಧಿಕಾರಿಗಳಿಗೆ ಯಾವ ಶಕ್ತಿಯೂ ಇಲ್ಲ. ಕಳ್ಳತನ ಅಯೋಗ್ಯತನ ಅಕ್ರಮ ನಡೆಯುತ್ತಿರುವು ಮುಚ್ಚಿಸುವುದಕ್ಕಾಗಿಲ್ಲ?

ಶ್ರೀ ಚೌಡರೆಡ್ಡಿ : ಮಾನ್ಯ ಉಪಾಧ್ಯಕ್ಷಣಿಯವರೇ, ಅವರು ಪ್ರಶ್ನೆಯನ್ನು ಕೇಳಿರುವುದು ಇರುವ ಸ್ಥಳಗಳನ್ನು ಮತ್ತು ಕಟ್ಟಡ ಭಾಗಗಳನ್ನು ವಿಲೇವಾರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಇದರಲ್ಲಿ 176(6) ಆಫ್ ದಿ ಕೆ.ಎಂ.ಸಿ.ಆಕ್ಟ್ ಪ್ರಕಾರ Commissioner can lease the immovable property for 11 months, Standing Committee up to 3 years, Council up to 5 years. Government can lease the immovable property above 5 years. ಎಂದು ಇದೆ. ನಮಗೆ ಅವರು ಹೇಳಿದ ಪ್ರಕಾರ, ಅದು ನಮ್ಮ ಗಮನಕ್ಕೆ ಬಂದಿಲ್ಲ. ಮಾನ್ಯ ಅನಂತಕೃಷ್ಣ ರವರು ಮೊದಲು ಮೇಯರ್ ಆಗಿದ್ದರು. ಅವರು ಬಹಳ ಬಹಳ ವಿಚಾರಗಳನ್ನು ತಿಳಿದುಕೊಂಡಿದ್ದಾರೆ. ಕೆಲವೊಂದು ವರ್ಕ್ಸ್ ಬಗ್ಗೆ ಬರೆದಿದ್ದಾರೆ. ಪೀಸ್‌ವರ್ಕ್ ಸಿಸ್ಟಂನಲ್ಲಿ ಕಾನೂನು ಬಿಟ್ಟು ಮಾಡುತ್ತಿದ್ದಾರೆಂದು ಬರೆದಿದ್ದಾರೆ. ಅದಕ್ಕೆ ಈಗಾಗಲೇ ಹಿಂದೆ ಇದ್ದಂತಹ ಮಿನಿಸ್ಟರ್ ಕೂಡ ಸ್ಟೇ ಮಾಡಿದ್ದಾರೆ. ಗೌರ್ನಮೆಂಟ್ ಆರ್ಡರ್ ಕೂಡ ಪೀಸ್‌ವರ್ಕ್ ಸಿಸ್ಟಂನಲ್ಲಿ ಮಾಡಬಾರದೆಂದು ಇದೆ.

ಶ್ರೀ ಎ.ಕೆ. ಅನಂತಕೃಷ್ಣ : ಅದನ್ನು ನಾನು ತೆಗೆದುಕೊಳ್ಳುತ್ತೇನೆ. ಈ ಪ್ರಶ್ನೆಯನ್ನು ಇಲ್ಲಿ ಎತ್ತಿರುವುದರಿಂದ ಆ ವಿಷಯವನ್ನು ಕೂಡ ಇಲ್ಲಿ ಚರ್ಚೆ ಮಾಬೇಕಾದದ್ದು. ಅತ್ಯಾವಶ್ಯಕವಾಗಿದೆ. ಬೆಂಗಳೂರು ನಗರ ಪಾಲಿಕೆಯವರಿಗೆ ಸರ್ಕಾರದ ಆದೇಶ ಇದೆ. ಪಾರ್ಕ್‌ಗಳಲ್ಲಿ, ಆಟದ ಮೈದಾನಗಳಲ್ಲಿ ಯಾವುದೇ ಭಾಗವನ್ನು ಯಾರಿಗೋ ಕೊಡಬಾರದೆಂದು ಆದೇಶ ಇದೆ. ಆ ಆದೇಶದ ತದ್ವಿರುದ್ಧವಾಗಿ ಸ್ಟ್ಯಾಂಡಿಂಗ್ ಕಮಿಟಿಯವರು ಕೊಟ್ಟರೆ ಇಡೀ ಕಾರ್ಪೊರೇಷನ್ ಕೌನ್ಸಿಲ್ ನಿಂದ ಆದೇಶ ಉಲ್ಲಂಘನೆ ಆದ ಹಾಗೆ ಆಯಿತು?

Madam Deputy Speaker : Please allow the Minister to say what he wants to say.

ಶ್ರೀ ಚೌಡರೆಡ್ಡಿ : ಈ ಕಾನೂನು ಪ್ರಕಾರ ಬಿಲ್ಡಿಂಗ್‌ನಲ್ಲಿ 70 ಕೇಸಸ್‌ನಲ್ಲಿ ಕೊಟ್ಟಿದ್ದಾರೆ. ಅದು ಯಾವುದೆಂದರೆ ಆಸ್ಪತ್ರೆ, ಡಿಸ್‌ಪೆನ್ಸಸರಿಸ್, ರೀಡಿಂಗ್ ರೂಮ್ಸ್ ಅಂಡ್ ಕಲ್ಚರಲ್ ಹಾಲ್ಸ್ ಇದಕ್ಕೆ ಮೊದಲಿನಿಂದಲೂ ಕೊಟ್ಟಕೊಂಡು ಬಂದಿದ್ದಾರೆ. ವೇಕೆಂಟ್ ಲ್ಯಾಂಡ್ ನ್ನು 842 ಕೇಸಸ್‌ನಲ್ಲಿ ಮಾತ್ರ ಕೊಟ್ಟಿದ್ದಾರೆ. ಇದು ನಮ್ಮ ಸರ್ಕಾರದ ಗಮನಕ್ಕೆ ಬಂದಿದೆ. ಇನ್ನು ಏನಾದರೂ ಸ್ಪೆಸಿಫಿಕ್ ಆಗಿ ಕೊಟ್ಟರೆ ಅದನ್ನು ಯಾವ ರೀತಿ ಕಾನೂನು ಪ್ರಕಾರ ಆಕ್ಷನ್ ತೆಗೆದುಕೊಳ್ಳಬೇಕೋ ಅದನ್ನು ನಿರ್ಧಾಕ್ಷಿಣ್ಯವಾಗಿ ಆಕ್ಷನ್ ತೆಗೆದುಕೊಳ್ಳುತ್ತೇವೆ.

ಶ್ರೀ ಎ.ಕೆ. ಅನಂತಕೃಷ್ಣ : ನನ್ನ ಪ್ರಶ್ನೆಗೆ ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಇದಕ್ಕೆ ತದ್ವಿರುದ್ಧವಾಗಿ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ನಾನು ಹೇಳುತ್ತಿರುವುದೇನೆಂದರೆ, ಶಿವಾಜಿನಗರದ ಕಾರ್ಪೊರೇಷನ್ ಸ್ಟೇಡಿಯಂ ಏನಿದೆ, ಆ ಸ್ಟೇಡಿಯಂ ಗೇಟ್‌ನಿಂದ ಹಿಡಿದು ಒಳಾಂಗಣವೆಲ್ಲವೂ ಆಟದ ಮೈದಾನದ ಸ್ಟೇಡಿಯಂ ಆಗಿದೆ. ಗೇಟಿನ ಒಂದು ಭಾಗದಲ್ಲಿ 30x60 ಅಳತೆಯ ಜಾಗವನ್ನು

ಕೊಟ್ಟಿದ್ದಾರೆ. ಟಿಕೇಟ್ ಕೌಂಟರ್ ಅನ್ನು ಸಹ ಕೊಟ್ಟಿದ್ದಾರೆ. ಜನರು ಆಟದ ಮೈದಾನದಲ್ಲಿ ಆಟವಾಡಿ ಹೊರಗಡೆ ಬರಬೇಕಾದರೆ ಇದ್ದ ಗೇಟನ್ನೂ ಸಹ ಕೊಟ್ಟಿದ್ದಾರೆ. ಅಲ್ಲಿನ ಪ್ಯಾಸೇಜ್ ಎಲ್ಲವನ್ನೂ ಕೊಟ್ಟಿದ್ದಾರೆ. ಎರಡು ಭಾಗದಲ್ಲಿದ್ದಂಥ ಟಿಕೇಟ್ ಕೌಂಟರ್ ಅನ್ನು ಕೊಟ್ಟಿದ್ದಾರೆ. ಆಟವಾಡುವ ಮಕ್ಕಳಿಗೆಂದು ಇದ್ದ ಎರಡು ಟಾಯ್ಲೆಟ್ ಅನ್ನು ಸೇರಿಸಿ ಕೊಟ್ಟಿದ್ದಾರೆ. ಇವೆಲ್ಲವುಗಳನ್ನು ಅಕ್ರಮವಾಗಿ ಕಟ್ಟಿದ್ದಾರೆ. ಸರ್ಕಾರದೇ ಆದೇಶಕ್ಕೆ ತದ್ವಿರುದ್ಧವಾಗಿ ಉಲ್ಲಂಘನೆ ಮಾಡಿ ಕೊಟ್ಟಿದ್ದಾರೆ. ಅಲ್ಲದೆ, ಆ ಜಾಗದಲ್ಲಿ ಕಟ್ಟಡವನ್ನು ಕೊಡಬೇಕಾದರೆ, ಆ ಕಟ್ಟಡವನ್ನು ದುರಸ್ತಿ ಮಾಡಿ, ರಿನೋವೇಟ್ ಮಾಡಿ ಅಂಗಡಿಗಳನ್ನು ಬದಲಾಯಿಸಿಕೊಂಡಿದ್ದಾರೆ. ಕಾರ್ಪೊರೇಷನನ್ನಿಂದ ಲೈಸೆನ್ಸ್ ಪಡೆಯದೆ ಕಾನೂನು ಉಲ್ಲಂಘಿಸಿದ್ದಾರೆ. ಮೇಯೋ ಹಾಲ್ ಕಾಂಪೌಂಡಿನಲ್ಲಿ ಹೋಟೆಲ್‌ಗೆ ಜಾಗಕೊಟ್ಟಿದ್ದಾರೆ. ಈ ರೀತಿ ಬಿಟ್ಟರೆ ನಾಳೆ ದಿವಸ ಬೆಂಗಳೂರಿನಲ್ಲಿರತಕ್ಕ ಕಾರ್ಪೊರೇಷನ್ ಹೆಡ್ ಆಫೀಸ್ ಸಹ ಕೊಟ್ಟು ಬಿಡುತ್ತಾರೆ.

ಶ್ರೀ ಚೌಡರೆಡ್ಡಿ : ಕಾರ್ಪೊರೇಷನ್‌ಗೆ ಲಂಗು ಲಗಾಮು ಏನೂ ಇಲ್ಲ. ಇದರ ಬಗ್ಗೆ ತಾವು ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಕೊಡುವುದಾದರೆ ಖಂಡಿತವಾಗಿಯೂ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆಂದು ತಮಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀಎ.ಕೆ. ಅನಂತಕೃಷ್ಣ : ಮಾನ್ಯ ಸಚಿವರು ಕಾರ್ಪೊರೇಷನ್ ಗೆ ಲಂಗು ಲಗಾಮು ಇಲ್ಲವೆನ್ನುವ ಮಾತನ್ನು ಹೇಳಿದರು. ಈ ಮಾತನ್ನು ಹೇಳಿದ ನಂತರ, ಈ ವಿಚಾರವನ್ನು ಸದನದಲ್ಲಿ ಅಷ್ಟಕ್ಕೆ ಬಿಡುವುದು ಸರಿಯಲ್ಲ. ಕಾರ್ಪೊರೇಷನ್ ಗೆ ಲಂಗು ಲಗಾಮು ಇಲ್ಲದಿದ್ದರೆ ಅದನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುವ ಶಕ್ತಿ ಸರ್ಕಾರಕ್ಕಿಲ್ಲವೇ?

ಉಪಾಧ್ಯಕ್ಷಣಿಯವರು : ಇದು ಪ್ರಶ್ನೋತ್ತರ ಕಾಲವಾದ್ದರಿಂದ ತಮಗೆ ಹೆಚ್ಚು ಸಮಯ ಕೊಟ್ಟರೆ ಇತರ ಸದಸ್ಯರುಗಳು ಇದರ ಬಗ್ಗೆ ಆಕ್ಷೇಪಣೆ ಮಾಡುತ್ತಾರೆ. ಆದುದರಿಂದ ಈ ವಿಷಯವನ್ನು ಬೇರೆ ರೂಪದಲ್ಲಿ ಕಳುಹಿಸಿಕೊಟ್ಟರೆ ವಿಚಾರ ಮಾಡಬಹುದು.

ಶ್ರೀ ಎ.ಕೆ. ಅನಂತಕೃಷ್ಣ ಅವರಿಗೆ ಕಾನೂನು ಉಲ್ಲಂಘನೆ ಮಾಡಿ ಕೊಟ್ಟಿರತಕ್ಕಂಥ ಲೀಸ್ ಅನ್ನು ಕ್ಯಾನ್ಸಲ್ ಮಾಡುತ್ತಾರೆಯೇ? ಆರು ಅಕ್ರಮವಾಗಿ ಕೊಟ್ಟಿದ್ದಾರೆ, ಅವರ ಮೇಲೆ ಕ್ರಮ ತೆಗದುಕೊಳ್ಳುತ್ತಾರೆಯೇ ಎಂಬುದನ್ನು ತಿಳಿಸಬೇಕು.

ಉಪಾಧ್ಯಕ್ಷಣಿಯವರು : ಸಂಬಂಧಪಟ್ಟವರರ ಮೇಲೆ ನಿರ್ಧಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯಗಳಲ್ಲಿ ಊಟದ ವೆಚ್ಚದ ಮೊತ್ತದ ಹೆಚ್ಚಳ.

706-ಶ್ರೀ ಅಂಜನ ಮೂರ್ತಿ (ನೆಲಮಂಗಲ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿದ್ಯಾರ್ಥಿನಿಲಯಗಳಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ತುಂಬಾ ಕಡಿಮೆಯೆಂಬುದು ಸರ್ಕಾರವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಈಗಿನ ಜೀವನ ವೆಚ್ಚಕ್ಕೆ ಅನುಗುಣವಾಗಿ ಕೊಡುತ್ತಿರುವ ಊಟದ ಭತ್ಯೆಯನ್ನು ಹೆಚ್ಚಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಈಗಿನ ಜೀವನ ವೆಚ್ಚಕ್ಕೆ ಅನುಗುಣವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ದಿನಾಂಕ 1-12-92ರಿಂದ ಜಾರಿಗೆ ಬರುವಂತೆ ಊಟದ ಭತ್ಯೆಯನ್ನು ಹೆಚ್ಚಿಸಲಾಗಿದೆ (ವಿವರ ಕೆಳಕಂಡಂತಿದೆ)

	(ರೂ.ಗಳಲ್ಲಿ)
1) ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದ ಒಬ್ಬ ವಿದ್ಯಾರ್ಥಿಗೆ ಪ್ರತಿ ಮಾಹೆಯಾನ	250
2) ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯದ ಒಬ್ಬ ವಿದ್ಯಾರ್ಥಿಗೆ ಪ್ರತಿ ಮಾಹೆಯಾನ	300

ಶ್ರೀ ಅಂಜನಮೂರ್ತಿ : ಮಾನ್ಯ ಉಪಾಧ್ಯಕ್ಷಣಿಯವರೇ, ರಾಜ್ಯದಲ್ಲಿರತಕ್ಕಂಥ ಪರಿಶಿಷ್ಟ ಜಾತಿ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ಓದುತ್ತಿರತಕ್ಕಂಥ ವಿದ್ಯಾರ್ಥಿಗಳಲ್ಲಿ ಪ್ರತಿ ವಿದ್ಯಾರ್ಥಿಗೆ ತಿಂಗಳೊಂದಕ್ಕೆ ಊಟಕ್ಕಾಗಿ 150ರೂಪಾಯಿಗಳನ್ನು ಕೊಡುತ್ತಿದ್ದರು. ಈಗ ಉತ್ತರದಲ್ಲಿ ತಿಳಿಸಿರುವಂತೆ, ದಿನಾಂಕ 1.12.92ರಿಂದ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ 250 ರೂಪಾಯಿಗಳೆಂದು, ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 350 ರೂಪಾಯಿಗಳನ್ನು ಮಂಜೂರು ಮಾಡಲಾಗಿದೆಯೆಂದು ಹೇಳಿದ್ದಾರೆ. ಸರ್ಕಾರದ ಆದೇಶದ ಪ್ರಕಾರ ವಿದ್ಯಾರ್ಥಿ ನಿಲಯಗಳಲ್ಲಿ ಓದುತ್ತಿರತಕ್ಕಂಥ ಮಕ್ಕಳಿಗೆ ಪೌಷ್ಠಿಕಾಂಶವುಳ್ಳ ಆಹಾರ ದಿನವೊಂದಕ್ಕೆ ಎರಡು ಊಟ ಒಂದು ಉಪಹಾರ ಕೊಡಬೇಕೆಂದು ಜೊತೆಗೆ ಅವರ ಉಡುಪುಗಳನ್ನು ಒಗೆಯುವುದಕ್ಕೆ ಸಾಬೂನು, ತಲೆಗೆ ಹಚ್ಚಿಕೊಳ್ಳುವುದಕ್ಕೆ ಎಣ್ಣೆ ಮತ್ತು ಇತರ ಸಾಧನಗಳನ್ನು ಕೊಡಬೇಕೆಂದು ಇದೆ. ಆದರೆ, ಈಗ ತಿಂಗಳಿಗೆ ಕೊಡುತ್ತಿರತಕ್ಕಂಥ 250 ರೂಪಾಯಿಗಳಲ್ಲಿ ಲೆಕ್ಕ ಹಾಕಿದರೆ ಒಂದು ಊಟಕ್ಕೆ ಆರೂವರೆ ರೂಪಾಯಿಯಿಂದ ಏಳು ರೂಪಾಯಿಗಳವರೆಗೆ ಆಗುತ್ತದೆ. ಇದು ಪ್ರತಿಯೊಬ್ಬರಿಗೂ ಗೊತ್ತಿದೆ. ಸರ್ಕಾರದವರಿಗೆ ಈ ನತದೃಷ್ಟ ಮಕ್ಕಳ ಬಗ್ಗೆ ಕರುಣೆ ಇಲ್ಲ, ಈ ತರಹ ಮಾಡಿದರೆ ಬಹಳ ಕಷ್ಟವಾಗುತ್ತದೆ. ತಾವು ಮಕ್ಕಳ ಭವಿಷ್ಯದ ಬಗ್ಗೆ ಯೋಚನೆ ಮಾಡಬೇಕು. ಈಗಿನ ಪರಿಸ್ಥಿತಿಯಲ್ಲಿ ಒಂದು ಕೆ.ಜಿ. ತೊಗರಿಬೇಳೆ 18 ರೂಪಾಯಿಗಳಿಂದ 25 ರೂಪಾಯಿಗಳಾಗುತ್ತದೆ. ಒಂದು ಟನ್ ಸೌದೆಗೆ 1000 ರೂಪಾಯಿಗಳಾಗುತ್ತದೆ. ನಾನು ಕೇಳುವುದೇನೆಂದರೆ, ಸರ್ಕಾರ ಕೊಡುತ್ತಿರುವ ಹಣ ಸಾಲವಾಗಿದ್ದು, ಇನ್ನು ಜಾಸ್ತಿ ಕೊಡಬೇಕು. ಈಗ ಮೆಟ್ರಿಕ್ ಪೂರ್ವ ಓದುತ್ತಿರುವ ವಿದ್ಯಾರ್ಥಿಗೆ ತಿಂಗಳೊಂದಕ್ಕೆ ಕೊಡುತ್ತಿರುವ 250 ರೂಪಾಯಿಗಳ ಬದಲಾಗಿ 400 ರೂಪಾಯಿಗಳನ್ನು, ಮತ್ತು ಮೆಟ್ರಿಕ್ ನಂತರದ ಪ್ರತಿ ವಿದ್ಯಾರ್ಥಿಗೆ ಕೊಡುತ್ತಿರುವ 300 ರೂಪಾಯಿಗಳಿಗೆ ಬದಲಾಗಿ 500 ರೂಪಾಯಿಗಳನ್ನು ಕೊಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಧರ್ಮಸಿಂಗ್ : ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಈಗಾಗಲೇ ಬೋರ್ಡಿಂಗ್ ಛಾರ್ಜ್ ಎಂದು ಕೊಡಲಾಗುತ್ತಿರುವ 150 ರೂಪಾಯಿಗಳಿಗೆ ಇನ್ನು 100 ರೂಪಾಯಿಗಳನ್ನು ಹೆಚ್ಚಿಗೆ ಮಾಡಬೇಕೆನ್ನುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿತ್ತು. ಇದರ ಬಗ್ಗೆ ಸರ್ಕಾರ ಈಗಾಗಲೇ ಕ್ರಮ ತೆಗೆದುಕೊಂಡಿದೆ. ಎಲ್ಲಿಪರಿಶಿಷ್ಟ ಜಾತಿ ವರ್ಗಗಳ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ಓದುತ್ತಿದ್ದಾರೋ ಅವರಿಗೆ ಕೊಡುತ್ತಿರುವುದಕ್ಕಿಂತ ಇನ್ನು 100 ರೂಪಾಯಿಗಳನ್ನು ಹೆಚ್ಚಿಸುವ ದಿಸೆಯಲ್ಲಿ ಸರ್ಕಾರ ಕ್ರಮ ತೆಗೆದುಕೊಂಡಿದೆ. ಆದುದರಿಂದ, 150ರೂಪಾಯಿ ಕೊಡುತ್ತಿರುವುದನ್ನು 250 ರೂಪಾಯಿಗಳಿಗ ಏರಿಸಲಾಗಿದ್ದು, 200 ರೂಪಾಯಿಗಳಿದ್ದುದು 300 ರೂಪಾಯಿಗಳಿಗೆ ಏರಿಸಿದ್ದೇವೆ. ಇದರ ಬಗ್ಗೆ ದಿನಾಂಕ 1.2.92ರಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಲಾಗಿದೆ.

ಈಗ ಒಟ್ಟಾರೆಯಾಗಿ ಆ ರೀತಿ ಹೆಚ್ಚು ಮಾಡಿರತಕ್ಕದ್ದಕ್ಕೆ ತಗಲತಕ್ಕ ವೆಚ್ಚ 12.91 ಕೋಟಿಗಳು. ಈಗ ಆದೇಶವನ್ನು ಕಳಿಸಿದ್ದೇವೆ. ಜಿಲ್ಲಾಪರಿಷತ್ತಿನವರಿಗೆ ಸಹ ಆದೇಶವನ್ನು ಕಳಿಸಿದ್ದೇವೆ ಅದರ ಜೊತೆಗ ಔಟ್ ಆಫ್ ಸೇವಿಂಗ್ ಮಾಡಬೇಕೆಂದು ಸಹ ಹೇಳಿದ್ದೇವೆ. ಅದು ಈಗಾಗಲೇ ಕಾರ್ಯಪ್ರಗತಿಯಲ್ಲಿಯೂ ಕೂಡ ಇದೆ.

ಶ್ರೀ ಆರ್.ವಿ. ದೇಶಪಾಂಡೆ: ಔಟ್ ಆಫ್ ಸೇವಿಂಗ್ ಎಂದು ಹೇಳಿದ್ದೀರಿ. ಸೇವಿಂಗೆ ಎಬಿಲಿಟಿ ಇಲ್ಲದಿದ್ದ ಮೇಲೆ ಏನು ಮಾಡುತ್ತಾರೆ ಹೇಳಿ?

ಶ್ರೀ ಧರ್ಮಸಿಂಗ್ : ಸರ್ಕಾರದ ಆಜ್ಞೆ ಕ್ಲಿಯರ್ ಆಗಿದೆ. ನಾಲ್ಕು ತಿಂಗಳಿಗೆ 5 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. ಹಣಕಾಸಿನ ಇಲಾಖೆಯವರೂ ಕೂಡ ಇದಕ್ಕೆ ಒಪ್ಪಿಗೆಯನ್ನು ನೀಡಿದ್ದಾರೆ. ಇದರ ಜೊತೆಯಲ್ಲಿ ಔಟ್ ಆಫ್ ಸೇವಿಂಗ್ ಸಹ ಮಾಡಬೇಕೆಂದು ಹೇಳಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಉಪಾಧ್ಯಕ್ಷಣಿಯವರೆ, ಶ್ರೀಮಾನ್ ಬಂಗಾರಪ್ಪನವರ ಸರ್ಕಾರವಿದ್ದಾಗ ಈ ಆಜ್ಞೆಯನ್ನು ಮಾಡಿದ್ದುದು. ಅವರು ರಾಜೀನಾಮೆಯನ್ನು ಕೊಡಬೇಕೆಂದಾಗ ಅದು ಪ್ರಕಟಣೆಯಾಯಿತು.ಆದರೆ ಈಗ ವೀರಪ್ಪ ಮೊಯ್ಲಿಯವರ ಸರ್ಕಾರ ಬಂದಮೇಲೆ ಇದನ್ನು ಮುಂದುರೆಸಿಕೊಂಡು ಹೋಗುತ್ತೇವೆಂದು ಹೇಳಲಿಲ್ಲ. ಪಾಪ ಧರ್ಮಸಿಂಗ್ ರವರು ಎರಡೂ ಸರ್ಕಾರದಲ್ಲಿಯೂ ಮಂತ್ರಿಗಳಾಗಿದ್ದರು, ಅವರಿಗೆ ಈ ಒಂದು ವರ್ಗದ ಮೇಲೆ ಕಳಕಳಿಯಿದೆ. ಆದರೆ ಜಿಲ್ಲಾ ಪರಿಷತ್ತಿನವರಿಗೆ ಅವರ ಸೇವಿಂಗ್ಸ್‌ನ ಮೂಲಕ ಇದಕ್ಕೆ ಹಣವನ್ನು ಕೊಡಬೇಕೆಂದು ಹೇಳಿದ್ದೀರಿ. ಅಲ್ಲಿ ಸೇವಿಂಗ್ಸ್‌ಸೇ ಇಲ್ಲ. In to this has not come into effect. My question is, why don't you release additional money for this?

ಶ್ರೀ ಧರ್ಮಸಿಂಗ್ : ನಾನು ಮಾನ್ಯ ಸಿಂಧ್ಯರವರ ಮಾತನ್ನು ಒಪ್ಪಿಕೊಳ್ಳುತ್ತೇನೆ. ಬಂಗಾರಪ್ಪನವರ ಸರ್ಕಾರವು ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡಿತು. ಆದರೆ ಪ್ರಸ್ತುತ ಮುಖ್ಯಮಂತ್ರಿಗಳೂ ಸಹ ಆ ನಿರ್ಣಯಕ್ಕೆ ಬದ್ಧರಾಗಿದ್ದಾರೆ ಎನ್ನತಕ್ಕ ವಿಚಾರವು ಸಂಪುಟದಲ್ಲಿ ಚರ್ಚೆಯಾಗಿ ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಹಣಕಾಸಿನ ಕಮೀಷನರ್ ರವರಿಗೆ 4 ತಿಂಗಳಿಗಾಗಿ 5 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದೇನೆ. ಅದನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಅಂಜನಮೂರ್ತಿ : ಪೇಪರ್‌ನಲ್ಲಿ ಈ ಕಲ್ಯಾಣ ಯೋಜನೆಗೋಸ್ಕರ ಸಾವಿರಾರು ಕೋಟಿ ರೂಪಾಯಿಗಳನ್ನು ಬಜೆಟಿನಲ್ಲಿ ಉಪಯೋಗ ಮಾಡುತ್ತೇವೆ ಎಂದಿರುತ್ತದೆ. ತಮಗೆ ಗೊತ್ತಿರುವ ಹಾಗೆ ಕೋಟ್ಯಿಗಟ್ಟಲೆಯಷ್ಟು ಹಣ ಇದರಲ್ಲಿ ಲ್ಯಾಪ್ಸ್ ಆಗುತ್ತದೆ. ಅದಕ್ಕೆ ಬದಲಾಗಿ ಇಂಥ ವಿದ್ಯಾರ್ಥಿಗಳಿಗೆ ಹೆಚ್ಚು ಹಣ ಕೊಡಬೇಕು. ಮೆಟ್ರಿಕ್ ಪೂರ್ವದ ವಿದ್ಯಾರ್ಥಿಗಳಿಗೆ 400 ರೂಪಾಯಿಗಳನ್ನು, ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 500 ರೂಪಾಯಿಗಳನ್ನು ಕೊಡತಕ್ಕ ಆದೇಶವನ್ನು ಮಾಡುವ ಬಗ್ಗೆ ಈ ಸದನದಲ್ಲಿ ಮಾನ್ಯ ಸಚಿವರಿಂದ ಉತ್ತರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಧರ್ಮಸಿಂಗ್ : ಈಗಾಗಲೇ 100ರೂ.ಗಳನ್ನು ಹೆಚ್ಚು ಮಾಡಿದ್ದೇವೆ. ಮತ್ತೆ ಈ ರೀತಿ ಹೆಚ್ಚು ಮಾಡಿದ್ದಕ್ಕೆ ತಗಲತಕ್ಕ ಒಟ್ಟಾರೆ ವೆಚ್ಚವನ್ನು ಸಹ ಹೇಳಿದ್ದೇವೆ. 4 ತಿಂಗಳಿಗೆ 5 ಕೋಟಿ ಕೊಟ್ಟಿದ್ದೇವೆ (ಗೊಂದಲ)

ಶ್ರೀ ಅಂಜನಮೂರ್ತಿ : ಎರಡು ಹೊತ್ತು ಊಟ ಒಂದು ಹೊತ್ತು ಉಪವಾಸವಿರಬೇಕೆ, ಪೇಪರ್‌ನಲ್ಲಿ ಮಾತ್ರ ಬಿರಿಯಾನಿ ತಿನ್ನಿಸುತ್ತೇನೆ, ಇಷ್ಟು ಕೋಟಿ ಅಷ್ಟು ಕೋಟಿ ಖರ್ಚು ಮಾಡುತ್ತೇವೆಂದು ಕೊಡುತ್ತಾರೆ..

ಶ್ರೀ ಧರ್ಮಸಿಂಗ್ : ಬೇರೆ ಬೇರೆ ಇಲಾಖೆಯವರು ಇದರ ಸಲುವಾಗಿ 18 ಪರ್ಸೆಂಟ್ ಹಣವನ್ನು ಖರ್ಚು ಮಾಡುತ್ತಿಲ್ಲ. ಆ ಹಣವನ್ನು ತೆಗೆದುಕೊಂಡು ವಿದ್ಯಾರ್ಥಿಗಳಿಗೆ ಖರ್ಚು ಮಾಡಬಾರದೇಕೆ ಎಂದು ಅವರು ಕೇಳಿದ್ದಾರೆ. ಆ ರೀತಿ 18 ಪರ್ಸೆಂಟ್ ಹಣವನ್ನು ಖರ್ಚು ಮಾಡಿದವರಿಗೂ ಕೂಡ ಸೂಚನೆ ಮಾಡಿದ್ದೇವೆ. ಆದರೆ 400 ರಿಂದ 500ಕ್ಕೆ ಒಮ್ಮೊಂದೊಮ್ಮೆಗೆ ಮಾಡಲು ಆಗುವುದಿಲ್ಲ. ಅದನ್ನು ಸ್ವಲ್ಪ ನೋಡಬೇಕಾಗುತ್ತದೆ.

Sri. Blasius D'Souza : Question No. 190 (951) is transferred to the Chief Minister as it comes under DPAR.

ಉಪಾಧ್ಯಕ್ಷಣಿಯವರು : ಅದನ್ನು ವಿತ್ ಹೆಲ್ಡ್ ಮಾಡಿದ್ದೇವೆ. ಅದಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗಿದೆ. ಆದುದರಿಂದ ಅದನ್ನು ತಡೆಹಿಡಿಯಲಾಗಿದೆ.

ಮುಳುಬಾಗಿಲು ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ

869-ಶ್ರೀ ಎಂ.ವಿ. ವೆಂಕಟಪ್ಪ (ಮುಳುಬಾಗಿಲು): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳುಬಾಗಿಲು ಪಟ್ಟಣಕ್ಕೆ ನೀರುಸರಬರಾಜು ಮಾಡಲು ಸರ್ಕಾರದವರು ಮಂಜೂರು ಮಾಡಿರುವ ಯೋಜನೆಯು ಸುಮಾರು ಎರಡು ವರ್ಷಗಳಾದರೂ ಸಹ ಪೂರ್ಣಗೊಳಿಸದಿರಲು (ಅತಿ ನಿಧಾನವಾಗಿ ಮುಂದುವರಿಸಲು) ಕಾರಣವೇನು?

ಆ) ಸದರಿ ಯೋಜನೆ ಕೆಲಸ ಕಾರ್ಯಗಳು ಯಾವ ಹಂತದಲ್ಲಿದೆ?

ಇ) ಸದರಿ ಯೋಜನೆಗಳು ಕೆಲವು ಅತ್ಯವಶ್ಯಕ ಮಾರ್ಪಾಡುಗಳಿಗೆ ತಗಲುವ ಅಂದಾಜುಹೆಚ್ಚುವರಿ ಹಣವೆಷ್ಟು? ಹಾಗಿದ್ದಲ್ಲಿ ಒಟ್ಟು ಯೋಜನೆಯ ವೆಚ್ಚವೆಷ್ಟು?

ಈ) ಮುಳಬಾಗಿಲು ಪಟ್ಟಣದಲ್ಲಿ ದಿನಂಪ್ರತಿ ಸರಬರಾಜು ಆಗುತ್ತಿರುವ ನೀರಿನ ಪ್ರಮಾಣವೆಷ್ಟು?

ಉ) ಈ ಮೇಲ್ಕಂಡ ಯೋಜನೆ ಪೂರ್ಣ ಗೊಂಡಾಗ ಸರಬರಾಜು ಆಗುವ ನೀರಿನ ಪ್ರಮಾಣವೆಷ್ಟು?

ಊ) ಸುಮಾರು 40,000 ಪ್ರಜಾ ಸಂಖ್ಯೆಯುಳ್ಳ ಪಟ್ಟಣಕ್ಕೆ 1993ನೇ ಮಾರ್ಚ್ ಕೊನೆಯೊಳಗೆ ಸದರಿಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಚೌಡಾ ರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಈ ಯೋಜನೆಯು ಸೆಪ್ಟೆಂಬರ್ 1991ರಲ್ಲಿ ಆಡಳಿತಾತ್ಮಕವಾಗಿ ಮಂಜೂರಾಗಿದೆ. ಉದ್ದೇಶಿತ ಸ್ಥಳದಲ್ಲಿ ಕೊಳವೆ ಬಾವಿ ಕೊರೆಯಲು ರೈತರಿಂದ ಆಡಚಣೆ ಉಂಟಾದುದರಿಂದ ಈ ಕೆಲಸ ಪೂರ್ಣಗೊಳಿಸಲು ವಿಳಂಬವಾಗಿದೆ.

ಆ) 12 ಕೊರೆದ ಕೊಳವೆ ಬಾವಿಗಳಲ್ಲಿ 10 ಫಲಪ್ರದವಾಗಿವೆ. ಸಂಪು ತೊಟ್ಟಿಯನ್ನು ಕಟ್ಟುವ ಕೆಲಸ ಪೂರ್ತಿಗೊಳ್ಳುವ ಹಂತದಲ್ಲಿದೆ. ಪಂಪು ಮನೆ ಕಟ್ಟುವ ಕೆಲಸ ಮುಗಿದಿದೆ. ಕೊಳವೆ ಬಾವಿಗಳಿಂದ ಸಂಪು ಟ್ಯಾಂಕಿಗೆ ನೀರನ್ನು ಹಾಯಿಸಲು ಬೇಕಾಗುವ ಪಿ.ವಿ.ಸಿ. ಕೊಳವೆ ಹಾಕಲಾಗಿದೆ. ಸಂಪು ಟ್ಯಾಂಕಿನಿಂದ ಮೇಲ್ಮಟ್ಟದ ಟ್ಯಾಂಕಿಗೆ ನೀರನ್ನು ಹಾಯಿಸಲು ಬೇಕಾಗುವ ಬೀಡು ಕಬ್ಬಿಣದ ಕೊಳವೆಯನ್ನು ಖರೀದಿಸಲು ಕ್ರಮ ತೆಗೆದುಕೊಳ್ಳಲಾಗಿದೆ. 5 ಲಕ್ಷ ಲೀಟರ್ ಮೇಲ್ಮಟ್ಟದ ಆರ್.ಸಿ.ಸಿ. ಟ್ಯಾಂಕನ್ನು ನಿರ್ಮಿಸಲು ಸ್ಥಳ ಇತ್ಯರ್ಥವಾಗಿದ್ದು, ಕೆಲಸಕ್ಕೆ ಗುತ್ತಿಗೆದಾರರನ್ನು ನೇಮಿಸಲು ಟೆಂಡರು ಕರೆಯಲಾಗುತ್ತಿದೆ.

ಇ) ಹೆಚ್ಚುವರಿ ಹಣ ಸುಮಾರು ರೂ. 38.20 ಲಕ್ಷ ರೂಪಾಯಿಗಳಾಗಲಿದೆ. ಒಟ್ಟು ಯೋಜನಾ ವೆಚ್ಚವು ಸುಮಾರು 67.00 ಲಕ್ಷ ರೂ.ಗಳಾಗಬಹುದು.

ಈ) ದಿನಂಪ್ರತಿ ತಲಾ 50 ಲೀಟರ್ ಆಗಿದೆ.

ಉ) ದಿನಂಪ್ರತಿ ತಲಾ 100 ಲೀಟರ್ ನೀರನ್ನು ಒದಗಿಸಬಹುದು.

ಊ) ಈ ಯೋಜನೆಯನ್ನು ಹಾಲಿ ಇರುವ ಮೇಲ್ಮಟ್ಟದ ಆರ್.ಸಿ.ಸಿ. ಟ್ಯಾಂಕಿಗೆ ಕೊಳವೆ ಬಾವಿಗಳಿಂದ ನೀರನ್ನು ಪಂಪು ಮಾಡಿ 1993ನೇ ಇಸವಿ ಮಾರ್ಚ್ ಅಂತ್ಯದೊಳಗೆ ಪಟ್ಟಣಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡಲು ಉದ್ದೇಶಿಸಿದೆ.

ಶ್ರೀ ಎಂ.ವಿ. ವೆಂಕಟಪ್ಪ : ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಉತ್ತರದಲ್ಲಿ 10 ಬೋರ್ ವೆಲ್‌ಗಳಲ್ಲಿ ನೀರು ಸಿಕ್ಕಿದೆ ಎಂದು ಹೇಳಿದ್ದಾರೆ. ಅದರಲ್ಲಿ ಒಟ್ಟಾರೆ ಎಷ್ಟು ಗ್ಯಾಲನ್ ನೀರು ಸಿಕ್ಕಿದೆ ಎಂಬ ಬಗ್ಗೆ ಮಾಹಿತಿ ಇದ್ದರೆ ಹೇಳುತ್ತೀರ?

ಶ್ರೀ ಚೌಡರೆಡ್ಡಿ : ಸನ್ಮಾನ್ಯ ಉಪಾಧ್ಯಕ್ಷಣಿಯವರೆ, 1991ರಲ್ಲಿ ವಾಟರ್ ಸಪ್ಲೈಗೋಸ್ಕರ 28.8 ಲಕ್ಷ ರೂಪಾಯಿಗಳು ಮಂಜೂರಾತಿಯಾಗಿದೆ. ನಂತರ ಮಾನ್ಯ ಸದಸ್ಯರಿಗೆ ಗೊತ್ತಿರುವಾಗೆ ನಾವು ಬೋರ್‌ವೆಲ್‌ಗಳನ್ನು ಅಲ್ಲಿ ತೆಗೆಯಲು ಹೋದಾಗ ಬಹಳ ತೊಂದರೆಯಾಯಿತು. ಅಲ್ಲಿನ ರೈತರು ಗಲಾಟೆ ಮಾಡಿ ಬೋರ್‌ವೆಲ್ ಹಾಕಲು ಬಿಡಲಿಲ್ಲ, ತದನನಂತರ ಅವರೇ ಬಂದು ಸಮಸ್ಯೆಯನ್ನು ಬಗೆಹರಿಸಿ, ಈಗ ಅಲ್ಲಿ ಬೋರ್ ವೆಲ್‌ನ್ನು ಹಾಕಿದ್ದೇವೆ. ಅಲ್ಲಿ ಈಗ ಬೇಕಾದಷ್ಟು ನೀರು ಸಿಗುತ್ತಿದೆ.

9.50 ಪಿ.ಎಂ.

ಮೊದಲು ವಾಟರ್ ಟ್ಯಾಂಕ್ ಕೆಪ್ಯಾಸಿಟಿ 2.5 ಲಕ್ಷ ಲೀಟರ್ ಇರಬೇಕೆಂದು ತೀರ್ಮಾನವಾಗಿತ್ತು. ಅನಂತರ ಅದನ್ನು 5 ಲಕ್ಷ ಲೀಟರ್‌ಗೆ ಪರಿವರ್ತನೆ ಮಾಡಿದ್ದರಿಂದ ಸ್ವಲ್ಪಮಟ್ಟಿಗೆ ತಡವಾಗುತ್ತಿದೆ. ಆದರೂ ಇದನ್ನು ಬೇಗ ಮಾಡಿಸಿಕೊಡುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ : 1993ನೇ ಇಸವಿಯ ಮಾರ್ಚಿ ಅಂತ್ಯದೊಳಗೆ ಎಂದು ಹೇಳಿದ್ದೀರಿ. ಮಾರ್ಚಿ 24ನೇ ತಾರೀಖು ಯುಗಾದಿ ಹಬ್ಬ ಬರುತ್ತದೆ. ಆದ್ದರಿಂದ ಕೊನೆಯ ಪಕ್ಷ ಯುಗಾದಿ ಹಬ್ಬದ ದಿವಸವಾದರೂ ಅಲ್ಲಿಂದ ನೀರನ್ನು ಕೊಡುತ್ತಾರಾ? ನೋಡುತ್ತೇವೆಂದು ಹೇಳುವುದು ಬೇಡ. ಖಂಡಿತವಾಗಿಯೂ ಕೊಡಲೇಬೇಕು.

ಶ್ರೀ ಚೌಡರೆಡ್ಡಿ : ಖಂಡಿತವಾಗಿ ಕೊಡುತ್ತೇವೆ.

ದ.ಕನ್ನಡ ಜಿಲ್ಲೆಯಲ್ಲಿ ಆಶ್ರಯ ಯೋಜನೆಯ ಮನೆಗಳು.

980Ëಶ್ರೀ ಬಿ.ಎಂ. ಇದಿನಬ್ಬ (ಉಲ್ಲಾಳ): ಮಾನ್ಯ ವಸತಿ ಸಚಿವವು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಎಷ್ಟು ಮನೆಗಳನ್ನು ಕಟ್ಟಲಾಗಿದೆ?

ಆ) ಅವುಗಳಲ್ಲಿ ಪೂರ್ತಿಯಾದದ್ದು ಎಷ್ಟು? ಹಾಗೂ ಅರ್ಧಾಂಶ ಆದದ್ದು ಎಷ್ಟು?

ಇ) ಈ ಮನೆಗಳನ್ನು ಕಟ್ಟಲು ಯಾರಿಗೆ ಗುತ್ತಿಗೆಯನ್ನು ಕೊಡಲಾಗಿದೆ (ಅವರ ವಿವರವನ್ನು ಒದಗಿಸುವುದು)

ಈ) ಜಿಲ್ಲೆಯಲ್ಲಿ ನಿಗದಿಯಾದ ಮನೆಗಳೆಷ್ಟು? ಹಾಗೂ ಅವುಗಳನ್ನು ಯಾವಾಗ ಕಟ್ಟಿ ಪೂರೈಸಲಾಗುವುದು.

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು):

ಅ) 407 ಮನೆಗಳ ಕಾಮಗಾರಿ ಕೆಲಸಗಳು ವಿವಿಧ ಹಂತಗಳಲ್ಲಿವೆ.

ಆ) ಯಾವ ಮನೆಯು ಪೂರ್ಣಗೊಂಡಿಲ್ಲ, 40 ಮನೆಗಳು ಅರ್ಧಾಂಶದಲ್ಲಿದೆ.

ಇ) ಐದು ಜನ ಗುತ್ತಿಗೆದಾರರಿಗೆ ಕೊಟ್ಟಿದ್ದು, ಅವರುಗಳ ವಿವರಗಳನ್ನು ಅನುಸೂಚಿ 'ಅ' ದಲ್ಲಿ ಒದಗಿಸಿದೆ.

ಈ) 15,000 ಅವುಗಳಲ್ಲಿ ಪ್ರಗತಿಯಲ್ಲಿರುವ 407 ಮನೆಗಳನ್ನು ಮಾರ್ಚ್ 93ರ ವೇಳೆಗೆ ಪೂರ್ಣಗೊಳಿಸಲಾಗುವುದು.

ANNEXURE-A

LIST OF CONTRACTORS ENTRUSTED WITH CONSTRUCTION OF 'ASHRAYA' HOUSES IN DAKSHINA KANNADA DISTRICT.

Sl. No.	Name & Address of the Contractor		No. & Name of the Constituencies
1.	Sri. Manikayaraj pandiwal, Barike House P.O.Volalu, Puttur Tg.D.K.	1	Puttur
2.	K.A. Abdul Raiman, Class I Contractor SSarfar Cottage, Kana Surthkal, D.K.	2	Karkal & Modabidri
3.	K.H. Abdul Raiman, Contractor Panja Houuse, Soorinni, Mangalore, D.K.	2	Suratkal & Kap
4.	M/S. Nava Jeevana Tiles (P)Ltd., Santhaa Katte Post, Udupi Taluk, D.K	4	Coondapur, Udupi Brahmavar & Baindur.
5.	M/S. Anchor Lines Pvt. Ltd., kerala Samaja Complex, K.S. Rao Road, Mangalore.	6	Sathia, vittal, Bethangadi, Bahtwal, Mangalore & Ullal
	Total	15.	

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಉಪಾಧ್ಯಕ್ಷಣೆಯವರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಎಷ್ಟು ಮನೆಗಳ ನಿರ್ಮಾಣವಾಗಿದೆ ಎಂದು ನಾನು ಕೇಳಿರುವುದಕಕ್ 407 ಮನೆಗಳ ಕಾಮಗಾರಿ ಕೆಲಸಗಳು ವಿವಿಧ ಹಂತದಲ್ಲಿವೆ ಎಂದು ಹೇಳಿದಿರಿ. ಆ ಮನೆಗಳು ಯಾವುವೂ ಕೂಡ ಪೂರ್ತಿಯಾಗಿಲ್ಲ. ಕೆಲವು ಕಡೆ ಅರ್ಧ ಕೂಡ ಆಗಿಲ್ಲ. ಒಳ್ಳೆಯ ಮನಸ್ಸಿನಿಂದ ಈ ಮನೆಗಳನ್ನು ಕಟ್ಟಿಸಿಬೇಕೆಂದಿದ್ದರೆ ಈ ರೀತಿ ಆಗಿರುವುದಕಕ್ . ಕಾರಣವೇನು?

ಶ್ರೀ ಗೋಪಿನಾಥ ಆರ್. ಸಾಂದ್ರ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾವು ಅಂದುಕೊಂಡಂತೆ ಮನೆಗಳು ಪೂರ್ತಿ ಆಗಲಿಲ್ಲ. ನಿಮ್ಮ ವಿಧಾನ ಸಬಾ ಕ್ಷೇತ್ರದಲ್ಲಿ 1500 ಮನೆಗಳನ್ನು ಕಟ್ಟಬೇಕೆಂದು ಯೋಜನೆ ಮಾಡಲಾಗಿತ್ತು. ಇದುವರೆಗೆ 407 ಮನೆಗಳ ಕಾಮಗಾರಿ ವಿವಿಧ ಹಂತಗಳಲ್ಲಿವೆ. ಕೆಲವು ಮನೆಗಳು ಪೂರ್ತಿಯಾಗಿಲ್ಲ. ಪ್ರಾರಂಬಿಸುರುವ 225 ಮನೆಗಳು ತಳಪಾಯ ಹಂತದಲ್ಲಿದೆ. 112 ಮನೆಗಳು ಪಾಯದ ಹಂತದಲ್ಲಿದೆ, 40 ಮನೆಗಳು ಬಾಗಿಲು ಹಂತದಲ್ಲಿವೆ. ಇದು ವಾಸ್ತವಾಂಶ. ಈ ಮನೆಗಳನ್ನು ಪೂರ್ಣ ಕಟ್ಟಲು ಸಾಧ್ಯವಾಗಿಲ್ಲ. ಇದನ್ನು ಮುಂದಿನ 3-4 ತಿಂಗಳೊಳಗೆ ಅಂದರೆ ಮಾರ್ಚಿ ತಿದಗಳ ಅಂತ್ಯದೊಳಗೆ ಕಟ್ಟಿಸಿಕೊಡುತ್ತೇವೆ.

ಶ್ರೀ ಬಿ.ಎಂ. ಇದಿನಬ್ಬ : ಈ ಮನೆಗಳನ್ನು ಕಟ್ಟಿಸುವುದಕ್ಕೆ ಇಷ್ಟು ತಡವಾಗಲು ಕಾರಣವೇನು? 5ಜನ ಗುತ್ತಿಗೆದಾರರಿಗೆ ನೀವು ಗುತ್ತಿಗೆ ಕೊಟ್ಟಿದ್ದೀರೆಂದು ತಿಳಿದು ಬಂದಿದೆ. ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲವೆ? ಹಾಗೆ ಮಾಡದಿದ್ದರೆ ಅವರನ್ನು ತೆಗೆದು ಒಳ್ಳೆಯ ಚುರುಕಾದ ಗುತ್ತಿಗೆದಾರರನ್ನು ಗೊತ್ತು ಮಾಡಿ ಅದಷ್ಟು ಬೇಗ ಈ ಮನೆಗಳನ್ನು ಮುಗಿಸಬಹುದಲ್ಲವೆ?

ಶ್ರೀ ಗೋಪಿನಾಥ ಆರ್. ಸಾಂಡ್ರ : ಇದನ್ನೆಲ್ಲಾ ವಿಚಾರ ಮಾಡಿ ಪರಿಶೀಲನೆ ಮಾಡಿ ನಾವು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. 5 ಜನ ಕಂಟ್ರ್ಯಾಕ್ಟರ್‌ಗಳಿಗೆ ನಾವು ಏನು ಈ ಕೆಲಸವನ್ನು ಕೊಟ್ಟಿದ್ದೇವೆ ಅರರು ಸರಿಯಾಗಿ ಕೆಲಸ ಮಾಡಲಿಲ್ಲ. ಒಬ್ಬ ಕಂಟ್ರ್ಯಾಕ್ಟರ್ ಬಹಳಷ್ಟು ಹಣವನ್ನು ತೆಗೆದುಕೊಂಡಿದ್ದು ಕೆಲಸವನ್ನು ಮಾಡಲಿಲ್ಲ. ಅವನ ಗುತ್ತಿಗೆಯನ್ನು ರದ್ದುಮಾಡಿ ಅವನಿಂದ ನಮಗೆ ಬರಬೇಕಾದ ಹಣದ ಬಗ್ಗೆ ಬ್ಯಾಂಕ್ ಗ್ಯಾರಂಟಿಯ್ನನು ಹಿಂದಕ್ಕೆ ತೆಗೆದುಕೊಂಡಿದ್ದೇವೆ. 5 ಜಿಲ್ಲೆಗಳಲ್ಲಿ ಕಾಂಟ್ರ್ಯಾಕ್‌ಟನ್ ತೆಗೆದುಕೊಂಡು 4 ಜಿಲ್ಲೆಗಳನ್ನು ಬಿಟ್ಟು ಈ ಜಿಲ್ಲೆಯಲ್ಲಿ ಅರ್ಧಂಬರ್ಧ ಕೆಲಸಮಾಡಿ ಬಿಟ್ಟಿದ್ದಾರೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ವ್ಯವಸ್ಥೆ ಮಾಡುತ್ತಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ಆಶ್ರಯ ಯೋಜನೆ ಒಳ್ಳೆಯ ಯೋಜನೆ ಎಂದು ನಾವು ಇದನ್ನು ಸ್ವಾಗತ ಮಾಡಿದ್ದೆವು. ಈ ಯೋಜನೆಯ ಸಲುವಾಗಿ ಸುಮಾರು 2.40 ಲಕ್ಷ ಮನೆಗಳನ್ನು ರಾಜ್ಯದಲ್ಲಿ ಕಟ್ಟಬೇಕಾಗಿತ್ತು. ಆದರೆ ಕಳೆದ ಸುಮಾರು 2 ವರ್ಷದಲ್ಲಿ 1000 ಮನೆಗಳನ್ನು ಕೂಡ ಪೂರ್ಣವಾಗಿ ಕಟ್ಟುವುದಕ್ಕೆ ಸಾಧ್ಯವಾಗಿಲ್ಲ. ಇದನ್ನು ತಾವೇ ಒಪ್ಪಿಕೊಂಡಿದ್ದೀರಿ. ಸಾಧಾರಣವಾಗಿ ಸರ್ಕಾರದಿಂದ ಸುಮಾರು 30 ಕೋಟಿ ರೂಪಾಯಿ ಹಣ ಈ ಯೋಜನೆಗೆ ಬಿಡುಗಡೆಯಾಗಿತ್ತು. ಕೆಲವು ಕಂಟ್ರ್ಯಾಕ್ಟರಗಳು, ವ್ಯವಹಾರದ ಬಗ್ಗೆ, ಅವರ ಕೆಲಸದ ಬಗ್ಗೆ ತಾವು ಹೇಳಿದಿರಿ. ಇಲ್ಲಿ ಒಬ್ಬ ಕಂಟ್ರ್ಯಾಕ್ಟರ್‌ಗೆ ಅಂದರೆ ನಾಗರಾಜು ಎನ್ನುವವರಿಗೆ ಅನ್ ಸೆಕ್ಯೂರ್ಡ್ ಅಡ್ವಾನ್‌ಸ 5.5 ಕೋಟಿ ರೂಗಳನ್ನು ಕೊಟ್ಟಿದ್ದಾರೆ. ಇದೇ ರೀತಿ ಬಾಕಿ ಜಿಲ್ಲೆಗಳಲ್ಲೂ ಅಲ್ಲಿನ ಕಂಟ್ರ್ಯಾಕ್ಟರ್‌ಗಳಿಗೆ ಅಡ್ವಾನ್‌ಯ ಕೊಟ್ಟಿದೆ. ಆ ಕಂಟ್ರ್ಯಾಕ್ಯರ್‌ಗಳು ಸರಿಯಾಗಿ ಕೆಲಸ ಮಾಡಿಲ್ಲ, ಕೆಲಸ ನಿಧಾನವಾಗಿದೆ ಎಂದು ನೀವೇ ಒಪ್ಪಿಕೊಂಡಿದ್ದೀರಿ. ನಾನು ನಿಮ್ಮನ್ನು ನೇರವಾಗಿ ಎರಡು ಪ್ರಶ್ನೆಗಳನ್ನು ಕೇಳುತ್ತಿದ್ದೇನೆ. ಈ ಯೋಜನೆಯಲ್ಲಿ ದುರ್ವ್ಯವಹಾರ ಆಗಿರತಕ್ಕದ್ದನ್ನು ತಾವು ಒಪ್ಪಿಕೊಳ್ಳುತ್ತೀರಾ? ದುರ್ವ್ಯವಹಾರ ಆಗಿದ್ದರೆ ಆ ಹಣವನ್ನು ಮಸೂಲ್ಮಾಡುವುದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇದಕ್ಕೆ ಯಾರು ಜವಾಬ್ದಾರರು? ಅವರು ಅಫಿಷಿಯಲ್‌ಸ ಆಗಲಿ, ನಾನ್ ಅಫಿಷಿಯಲ್‌ಸ ಆಗಲಿ ಅವರ ವಿರುದ್ಧ ಸಿ.ಬಿ.ಐ. ನಿಂದ ತನಿಖೆ ಮಾಡಿಸುತ್ತೀರಾ?

ಶ್ರೀ ಗೋಪಿನಾಥ ಆರ್. ಸಾಂಡ್ರ : ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ದುರ್ವವ್ಯವಹಾರವಾಗಿದೆಯೇ ಎಂದು ಕೇಳಿದ್ದಾರೆ. ಇದನ್ನು ವಿಚಾರ ಮಾಡಿ ಪರಿಶೀಲನೆ ಮಾಡಿ ಒಂದು ಹಂತಕ್ಕೆ ಬರಬೇಕಾಗಿದೆ. ಪ್ರೈಮಾ ಪೇಸಿ ಇದರಲ್ಲಿ ಹಣ ಕೊಟ್ಟಂತಹವರೂ ತಪ್ಪು ಮಾಡಿದ್ದಾರೆಂದು ನಮಗೆ ಅನಿಸಿದೆ. ಅದನ್ನು ಯೋಗ್ಯವಿಚಾರಣೆ ಮಾಡಿ ಅದರಲ್ಲಿ ಪ್ರೈಮಾಪೇಸ್ ತಪ್ಪೆಂದು ಆದರೆ ಯಾವುದೇ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಹಿಂಜರಿಯುವುದಿಲ್ಲ.

ಶ್ರೀ ಬಿ.ಎಂ. ಇದ್ದಿನಬ್ಬ : ಈ ಗುತ್ತಿಗೆದಾರರನ್ನು ನಂಬಿ ಮೋಸದಲ್ಲಿ ಬಿದ್ದ ಹಾಗಾಯಿತು. ಆದ್ದರಿಂದ ಕರ್ನಾಟಕ ಸ್ಟೇಟ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್, ಲ್ಯಾಂಡ್ ಆರ್ಮಿ ಅಂತಹವರಿಗೆ ಇದನ್ನು ಕೊಡಿ ಅವರು ಕೆಲಸವಿಲ್ಲದೆ ಇದ್ದಾರೆ. ಇದನ್ನು ಬೇಗ ಆಗುವ ಹಾಗೆ ಮಾಡಬೇಕು. ಉತ್ಸಾಹಿಗಳಾದಂತಹ ಮಂತ್ರಿಗಳು ಬಂದಿದ್ದೀರಿ ನಿಮ್ಮ ಕಾಲದಲ್ಲಿ ಇಂತಹ ಕೆಟ್ಟ ಹೆಸರು ಬರದ ಹಾಗೆ ನೋಡಿಕೊಳ್ಳಬೇಕು. ನಮ್ಮ ಜಿಲ್ಲೆಯಲ್ಲಿ 15,000 ಮನೆಗಳನ್ನು ಬರುವ ಒಂದು ವರ್ಷದೊಳಗೆ ಕಟ್ಟಿಕೊಡುವ ಪ್ರಯತ್ನ ಮಾಡುತ್ತೀರಾ?

ಶ್ರೀ ಗೋಪಿನಾಥ ಆರ್. ಸಾಂಡ್ರ : ಈಗಾಗಲೇ ಇದೆಲ್ಲವನ್ನು ಅಭ್ಯಾಸ ಮಾಡಿದ ನಂತರ ನಿರ್ಣಯಕ್ಕೆ ಬಂದಿದ್ದೇವೆ. ಮಾರ್ಚ್ 31ರೊಳಗೆ ಪ್ರತಿಯೊಂದು ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ 500 ಮನೆಗಳನ್ನು ಕಟ್ಟಬೇಕೆಂದು ನಿರ್ಧಾರ ಮಾಡಿದ್ದೇವೆ. ಅದನ್ನು ಕಟ್ಟಿಯೇ ತೀರುತ್ತೇವೆ. ಯಾವುದೇ ಆತಂಕ ಬಂದರೂ ನಾವು ಕೇಳುವುದಿಲ್ಲ. 500 ಮನೆಗಳನ್ನು ಕೊಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಚಿವರು ಯೀಲ್ಡ ಆಗಿದ್ದಾರೆ. ನಾನು ಹೇಳುವುದೇನೆಂದರೆ.....

(ಗೊಂದಲ)

ಉಪಧ್ಯಕ್ಷರು : ಈ ಪ್ರಶ್ನೆ ಇಲ್ಲಿಗೆ ಮುಗಿಯಿತು.

ಬೆಳಗಾವಿ ಜಿಲ್ಲೆಯಲ್ಲಿ ದೇವದಾಸಿಯರಾಗಿ ಸಮರ್ಪಿಸಿಕೊಂಡವರ ಸಂಖ್ಯೆ.

1042-ಶ್ರೀ ಸುಬಾಷ್ ಜೋಶಿ (ನಿಪ್ಪಾಣಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವಿರೆ.

1) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಜನ ಮಹಿಳೆಯರು ದೇವದಾಸಿಯರಾಗಿ ಸಮರ್ಪಿತರಾದರು.

2) ಬೆಳಗಾವಿ ಜಿಲ್ಲೆಯಲ್ಲಿ ದೇವದಾಸಿಯರ ಕಲ್ಯಾಣಕ್ಕಾಗಿ ಕೈಗೆತ್ತಿಕೊಳ್ಳಲಾದ ಸಮಾಜ ಕಲ್ಯಾಣ ಯೋಜನೆಗಳ ಸಂಖ್ಯೆ ಎಷ್ಟು?

3) ಈ ಸಮಸ್ಯೆಯ್ನನು ಪರಿಹರಿಸಲು ಮಹಾರಾಷ್ಟ್ರ ರಾಜ್ಯದ ಸಮಾಜ ಕಲ್ಯಾಣ ಸಚಿವರೊಡನೆ ಯಾವುದೇ ಸಬೆ ನಡೆಸಲಾಗಿತ್ತೇ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :

1) 29

2) 19 (7 ಯೋಜನೆಗಳನ್ನು ಮಹಿಳಾ ಮತ್ತು ಮಕ್ಕಳ ಅಬಿವೃದ್ಧಿ ಇಲಾಖೆಯವರು ಹಾಗೂ 12ಯೋಜನೆಗಳನ್ನು ಕರ್ನಾಟಕ ರಾಜ್ಯ ಮಹಿಳಾ ಅಬಿವೃದ್ಧಿ ನಿಗಮದವರು ಕಾರ್ಯಗತ ಗೊಳಿಸುತ್ತಿದ್ದಾರೆ.)

3) ಹೌದು.

SRI SUBHASH S. JOSHI : Madam Speaker I want to ask the Hon'ble Minister as what action the government has taken to stop this dedication that is taking place. Then how many cases were filed against the persons who are responsible for this dedication, what is the amount spent for the

welfare of Devadasis and lastly, whether the meeting held with the Social Welfare Minister of Maharashtra has yielded any result.

ಶ್ರೀ ಧರ್ಮಸಿಂಗ್ : ಅವರು ಬೆಳಗಾಂ ಜಿಲ್ಲೆಗೆ ಸೀಮಿತವಾದಂಥ ಪ್ರಶ್ನೆ ಕೇಳಿದ್ದಾರೆ. ಸವದತ್ತಿ ಎಲ್ಲಮ್ಮ ಜಾತ್ರೆಯಲ್ಲಿ ಪೋಲೀಸರು ಡೆಡಿಕೇಷನ್ ಮಾಡತಕ್ಕಂಥ ರೀತಿಯಲ್ಲಿ ಸುಮಾರು 26 ಜನರಿಗೆ ಮಾಡಿದ್ದಾರೆ. ಸುಮಾರು 26 ಜನರಿಗೆ ಮನವಳ್ಳಿ ಕೋ ಅಪರೇಟಿವ್ ಸೊಸೈಟಿ ವತಿಯಿಂದ ಮ್ಯಾಡೇಜ್ ಮಾಡತಕ್ಕಂಥ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದಾರೆ. ಬೆಳಗಾಂ ಜಿಲ್ಲೆಯಲ್ಲಿ 3850 ದೇವದಾಸಿಯರು ಇದ್ದಾರೆಂದು ಗುರುತಿಸಿದ್ದೇವೆ. There are 19 development programmes for Devadasis. The women Development Corporation has taken up 12 programmes and the Women & Children Welfare Department has taken up 7 programmes. Already the Women Development Corporation has spent Rs.48 lakhs and the Women & Children Welfare Department has spent Rs.23 Lakhs. Altogether in Belgaum district both this Women Development Corporation and the Woman and Children Welfare Department have spent Rs. 7.35 lakhs. Recently, the then Social Welfare Minister had a metting with the Social Welfare Minister of Maharashtra. Maharashtra is also hving the big problem of Devadasis because they have identified 3 lakh devadasis there. That was only an informal meeting to exchange views the Social Welfare Secretary and the Minister had a meeting with Maharashtra.

ಶ್ರೀ ಎಂ.ಎಸ್. ಪಾಟೀಲ್ : ಸಮಾಜ ಕಲ್ಯಾಣ ಮಂತ್ರಿಗಳು ದೇವದಾಸಿಯರ ಬಗ್ಗೆ ಹೇಳಿತ್ತಿದ್ದಾರೆ. ಇದರಲ್ಲಿ ಮುಖ್ಯವಾಗಿ ನಮ್ಮ ಬಾಗದಲ್ಲಿರತಕ್ಕಂಥ ದೇವದಾಸಿಯರ ಸಮಸ್ಯೆ ಅಷ್ಟೇ ಅಲ್ಲ ಇಡೀ ರಾಜ್ಯದಲ್ಲಿರತಕ್ಕಂಥ ಈ ಕೆಟ್ಟ ಪಿಡುಗನ್ನು ಹೋಗಲಾಡಿಸಬೇಕಾಗಿದೆ. ಇದರಲ್ಲಿ ಮುಖ್ಯವಾಗಿ ದೇವದಾಸಿಯರು ವೇಶ್ಯಾವೃತ್ತಿಗೆ ಹೋಗತಕ್ಕಂತಹ ಸ್ಥಿತಿ ಹೆಚ್ಚು ಇದೆ. ಕ್ಷಮಿಸಬೇಕು ತಾವು ಚೇರ್‌ನಲ್ಲಿದ್ದಾಗ ನಾವು ಈ ರೀತಿ ಮಾತನಾಡುವುದು ಸರಿಯಲ್ಲ. ಇದರಿಂದ ಏಡ್ಸ್ ಜಾಸ್ತಿಯಾಗಿದೆ. ಇದನ್ನು ತಡೆಯುವುದಕ್ಕೆ ಯಾವ ಕಾರ್‍ಯಕ್ರಮ ತೆಗೆದು ಕೊಂಡಿದ್ದೀರಿ. 5-6 ವರ್ಷಗಳ ಹಿಂದೆ ನಾನು ವಿರೋಧ ಪಕ್ಷದಲ್ಲಿದ್ದಾಗ ಚಂದ್ರಗುತ್ತಿಯಲ್ಲಿ ನಡೆದಂತಹ ಘಟನೆ ಬಗ್ಗೆ ಪ್ರಸ್ತಾಪ ಮಾಡಿದ್ದೆ.

ಈ ಸಮಸ್ಯೆಟನ್ನು ಮಾನವಿಯತೆಯ ದೃಷ್ಟಿಯಿಂದ ಬಗೆಹರಿಸಲಿಕ್ಕೆ ಯಾವ ಕ್ರಮ ಕೈಗೊಳ್ಳುತ್ತೀರಿ? 12 ವರ್ಷದಿಂದ 14 ವರ್ಷದ ಒಳಗಡೆ ಇರತಕ್ಕಂಥ ಸಾಮಾನ್ಯ ಬಡಕುಟುಂಬದ ಹೆಣ್ಣು ಮಕ್ಕಳನ್ನು ಗುರುತಿಸಿ ಅವರನ್ನು ಆ ವೃತ್ತಿಯಿಂದ ಬೇರೆ ಕಡೆಗೆ ವರ್ಗಾವಣೆ ಮಾಡಿ ಅವರಿಗೆ ವಿಶೇಷವಾದಂಥ ಆರ್ಥಿಕ ಹಿನ್ನೆಲೆಯನ್ನು ಕೊಡುವ ಒಂದು ಕಾರ್ಯಕ್ರಮವನ್ನೇನಾದರೂ ಮಾಡುತ್ತೀರಾ ಎಂದು ಹೇಳುತ್ತೇನೆ?

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷಣಿಯವರೇ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಬೆಳಗಾಂ ಜಿಲ್ಲೆಯಲ್ಲಿ ಅಷ್ಟೇ ಅಲ್ಲ, ಕರ್ನಾಟಕದ ಎಲ್ಲಾ ಕಡೆಯೂ ಈ

ಪಿಡುಗು ಹತ್ತಿರತಕ್ಕಂಥದ್ದು ಇದೆ. In Karnataka, already we have identified 21,862 Devadasis.

ಹೆಚ್ಚಿಗೆ ಅಂದರೆ ಬೆಳಗಾಂ, ರಾಯಚೂರು, ಬಿಜಾಪುರ ಎಲ್ಲಾ ಕಡೆಗೂ ಇದೆ. ಇದಕ್ಕೆ ರಿಹ್ಯಾಬಿಲಿಟೇಷನ್ ಸ್ಕೀಮ್ ಮಾಡತಕ್ಕಂಥ ರೀತಿಯಲ್ಲಿ ಈಗಾಗಲೇ ಹೇಳಿದ ಹಾಗೆ ಉಮೆನ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮತ್ತೆ ಎಸ್‌ಸಿಎಸ್‌ಟಿ ಕಾರ್ಪೊರೇಷನ್ ಅವರಿಗೆ, ಮತ್ತು ಆಶ್ರಯ ಸ್ಕೀಮ್ ಇದರಲ್ಲಿ ಬೇರೆ ಬೇರೆ ಕೆಲಸಗಳಲ್ಲಿ ಒದಗಿಸತಕ್ಕಂಥ ಹಲವಾರು ಕಾರ್ಯಕ್ರಮಗಳನ್ನು ಕೂಡ ಹಾಕಿಕೊಂಡಿದ್ದೇವೆ. ಇದಕ್ಕೆ ಹೆಚ್ಚಿನ ರೀತಿಯಲ್ಲಿ already we are having an Act. In Maharastra, they don't have the Act. ಮಹಾರಾಷ್ಟ್ರದಲ್ಲಿ ಎಷ್ಟೋಜನ ದೇವದಾಸಿಗಳಿದ್ದರೂ ಕೂಡ ಅಲ್ಲಿ ಯಾವುದೇ ಆಕ್ಟ ಇಲ್ಲ. ಕರ್ನಾಟಕ ರಾಜ್ಯದಲ್ಲಿ ದೇವದಾಸಿ 1984 ಆಕ್ ಕೂಡ ಇದೆ. ಇದರಿಂದ ಆದಷ್ಟು ಮಟ್ಟಿಗೆ ನಾವು ಅದನ್ನು ಹತೋಟಿಲ್ಲಿಟ್ಟಿದ್ದೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷಣೆಯವರೇ ಇದು ಒಂದು ವಿಶೇಷವಾದಂಥ ಪ್ರಶ್ನೆ ಅವರು ಹಾಕಿದ್ದಕ್ಕೆ ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇವೆ. ಏತಕ್ಕೆಂದರೆ ಇದು ಸಾಮಾನ್ಯ ವಿಷಯವಲ್ಲ, ವಿಶೇಷವಾಗಿ ಸಮಾಜಕಲ್ಯಾಣಕ್ಕೆ ಸಂಬಂಧಪಟ್ಟ ವಿಷಯ. ಆದ್ದರಿಂದ ಇದಕ್ಕೆ ಯಾವುದಾದರೂ ಒಂದು ಸಂದರ್ಭದಲ್ಲಿ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುಕೊಳ್ಳುತ್ತೇನೆ.

SRI SUBHASH S. JOSHI : I want one information. Whether the Government is serious about this problem? Because I have asked one specific question, ie, whether any case is filed against the a better or against a person who is responsible for this dedication. When the Hon'ble Minister is telling that 29 cases have detected (Devadasis), what action the Police have taken? There is a law. Whether according to that law cases have been filed? Sri. M.S. Patil, the hon'ble Member has also raised raised few points regarding prevention of AIDS among Devadasis. In this regard, whether the Government is going to have a survey among Devadasis and their conditions. Whether the Government is going to start hospitals exclusively for the purpose for their rehabilitation? I think the Government is not serious about the problems of Devadasis.

SRI DHARAM SINGH : Already we have identified 1458 persons who are having AIDS on 28/1/1992 we have identified 29 persons during Yellamma Jathre and on 1Ë2Ë1992 our police have filed cases. We have taken up cases because we were active there and police were there. Police have taken action and we have filed 3 cases.

SRI SUBHASH S. JOSHI : Why dedication was not stopped?

SRI DHARAM SINGH : Because that is social problem. With all that, whenever our police came to know, there, we have taken action.

ಆಶ್ರಯ ಯೋಜನೆ

1064- ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಆಶ್ರಯ ಯೋಜನೆಯನ್ನು ಸರ್ಕಾರವು ಮುಂದುವರಿಸುವುದೇ?

ಆ) ಹಾಗಿದ್ದಲ್ಲಿ ಯಾವ ರೀತಿಯಲ್ಲಿ ಮುಂದುವರಿಸಲಾಗುವುದು?

ಶ್ರೀ ಗೋಪಿನಾಥ ಆರ್ ಸಂದ್ರ, (ವಸತಿ ಸಚಿವರು) :

ಅ) ಹೌದು.

ಆ) ಸರ್ಕಾರಿ ಆದೇಶ ಸಂಖ್ಯೆ ಹೆಚ್‌ಯುಡಿ 352 ಕೆಹೆಚ್‌ಬಿ 92, ದಿನಾಂಕ 15-12-92 ರ ಪ್ರಕಾರ ಕರ್ನಾಟಕ ಗೃಹ ಮಂಡಳಿ ಗುತ್ತಿಗೆದಾರರಿಗೆ ಮುಂಗಡವಾಗಿ ನೀಡಿರುವ ಮೊತ್ತಕ್ಕೆ ಸೀಮಿತವಾಗಿ ಆಶ್ರಯ ಮನೆಗಳನ್ನು ಪೂರ್ತಿ ಮಾಡುವಂತೆಯೂ ಮತ್ತು ಉಳಿದವುಗಳನ್ನು ಜಿಲ್ಲಾಧಿಕಾರಿಗಳ ಮೂಲಕ ನಿರ್ಮಿಸಲು ಸರ್ಕಾರ ನಿರ್ಧರಿಸಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಣೆಯವರೇ ನಾನು ಮಾನ್ಯ ವಸತಿ ಮಂತ್ರಿಗಳವರು ಹೇಳಿರತಕ್ಕಂಥ ಉತ್ತರದಿಂದ ಉದ್ಭವಿಸಿರತಕ್ಕಂಥ 4 ಉಪಪ್ರಶ್ನೆಗಳನ್ನು ಅವರ ಮುಂದಿಡ ಬಯಸುತ್ತೇನೆ. ಮೊದಲನೆಯದಾಗಿ ಹೌಸಿಂಗ್ ಬೋರ್ಡ್‌ಗಳಿಗೆ ನೀವು ಎಷ್ಟು ಮನೆಗಳನ್ನು ಕಟ್ಟಬೇಕೆಂದು ಹೇಳಿ ಹೋದವರ್ಷ ಹಣ ಕೊಟ್ಟಿದ್ದೀರಿ? ಎಷ್ಟು ದುಡ್ಡು ಅದಕ್ಕೋಸ್ಕರವಾಗಿ ರಿಲೀಸ್ ಮಾಡಿದ್ದೀರಿ? ಎರಡನೆಯದಾಗಿ ಈಗ ಡೆಪ್ಯೂಟಿ ಕಮಿಷನರ್‌ರವರೇ ಕನ್‌ಸ್ಟ್ರಕ್ಟ ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆಂದು ಹೇಳಿ ಆದೇಶದ ಕ್ರಮ ಸಂಖ್ಯೆ ಹೇಳಿದ್ದೀರಿ. ಡಿ.ಸಿ.ಯವರು ಇದನ್ನು ಯಾವ ಏಜೆನ್ಸಿಯ ಮೂಲಕ ಕಟ್ಟಿಸುತ್ತಾರೆ? ಮೂರನೇಯದಾಗಿ ಎಕ್ಸಿಸ್ಟಿಂಗ್ ಕಮಿಟೀಸ್, ಮತ್ತೆ ಆಶ್ರಯ ಯೋಜನೆಯಡಿಯಲ್ಲಿ ಬರತಕ್ಕಂಥ ಕಮಿಟಿಗಳು ಅವುಗಳನ್ನು ಮುಂದುವರಿಸುತ್ತೀರಾ ಇಲ್ಲವೇ ಅದನ್ನು ಹೇಳಬೇಕು ಮತ್ತು ಅದಕ್ಕಾಗಿ 500 ಮನೆಗಳನ್ನು ಎರಡು ತಿಂಗಳಲ್ಲಿ ಕೊಡುತ್ತೇವೆಂದು ಹೇಳಿದ್ದೀರಿ, ಅಷ್ಟು ಕಟ್ಟುವುದಕ್ಕೆ ಆಗುತ್ತದೆಯೇ? 60 ದಿವಸಗಳಲ್ಲಿ 2 ಮನೆಗಳನ್ನು ಕಟ್ಟಲಿಕ್ಕೆ ಸಾಧ್ಯವೇ? ಅದಕ್ಕೆ ಪರ್ಯಾಯವಾದ ಸಲಹೆಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಈಗ ಹಿಂದೆ ಬಿ.ಡಿ.ಓ ಗಳಿಗೆ ಯಾವರೀತಿ ಅಧಿಕಾರ ಕೊಟ್ಟಿದ್ದಿರಿ. ಆ ರೀತಿ ಈಗ ಕೊಡಲಿಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಶ್ರೀ ಗೋಪಿನಾಥ ಆರ್. ಸಾಂಡ್ರ : ಎರಡು ಗಕ್ಷದ 41 ಸಾವಿರ ಮನೆಗಳನ್ನು ಕಟ್ಟಬೇಕೆಂದು ನಾವು ಏನು ಟಾರ್ಗೆಟ್ ಫಿಕ್ಸ್ ಮಾಡಿದ್ದೇವೆ ಅವೆಲ್ಲವನ್ನು ಹೌಸಿಂಗ್ ಬೋರ್ಡ್‌ನವರು ಕಟ್ಟಬೇಕಾಗಿದೆ. ಅವರಿಗೆ ಆ ಕೆಲಸವನ್ನು ವಹಿಸಲಾಗಿತ್ತು. ಹೌಸಿಂಗ್ ಬೋರ್ಡ್‌ದಿಂದ ಸಮಾಧಾನಕರವಾಗಿ ಕೆಲಸ ಆಗಿಲ್ಲವೆಂದು ಈಗಿನ ಸರ್ಕಾರಕ್ಕೆ ಕಂಡುಬಂದಿದೆ. ಆದರೆ ಮಾನ್ಯ ಉಪ ನಾಯಕರು ಹೇಳಿದ ಹಾಗೆ 3 ತಿಂಗಳಲ್ಲಿ ಎರಡು ಲಕ್ಷ ಮನೆಗಳನ್ನು ಕಟ್ಟುವುದಕ್ಕಾಗುವುದಿಲ್ಲ, ಒಂದು ಲಕ್ಷ ಮನೆಗಳಲ್ಲೂ ಕಟ್ಟುವುದಕ್ಕಾಗುವುದಿಲ್ಲ. ಪ್ರತಿಯೊಂದು ಕ್ಷೇತ್ರಕ್ಕೆ 500 ಮನೆಗಳನ್ನು

ಕಟ್ಟುವುದಕ್ಕೆ ಆಗಬಹುದೆಂದು ವಿಚಾರ ಮಾಡಿ ಒಂದು ನಿರ್ಣಯಕ್ಕೆ ಬಂದಿದ್ದೇವೆ. ಆದುದರಿಂದ ಒಂದು ಲಕ್ಷದ 6 ಸಾವಿರ ಮನೆಗಳನ್ನು ನಾವು ಇಡೀ ಕರ್ನಾಟಕ ರಾಜ್ಯದಲ್ಲಿ ಕಟ್ಟುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದ್ದನು ಯಾವ ರೀತಿ ಕಟ್ಟಬೇಕೆಂದರೆ, ಯಾರು ಈಗಾಗಲೇ ಹೌಸಿಂಗ್ ಬೋರ್ಡ್‌ನಿಂದ ಕಾಂಟ್ರಾಕ್ಟ ತೆಗೆದುಕೊಂಡು, ಹಣ ತೆಗೆದು ಕೊಂಡಿದ್ದಾರೆ ಅವರಿಂದ ಕೆಲಸ ತೆಗೆದುಕೊಳ್ಳಬೇಕು. ಉಳಿದ ಮನೆಗಳು ಯಾವುದು ಕಟ್ಟಲಿಕ್ಕೆ ಸಾಧ್ಯವಿದೆ ಅದನ್ನು ಡಿ.ಸಿ. ಯವರಿಗೆ ಅಧಿಕಾರ ಕೊಟ್ಟಿದ್ದೇವೆ. ಅವರು ಬಿಡಿಒ. ಮೂಲಕ, ಹಿಂದೆ ಏನು ಒಂದು ಕಾರ್ಯಕ್ರಮ ಇತ್ತು ಅದನ್ನು ಮುಂದುವರಿಸಬೇಕೆಂದು ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಏಜೆನ್ಸಿ ಅಂದರೆ ನಾನು ಹೇಳಿದೆ ಡಿ.ಸಿ.ಯವರು ಬಿಡಿಒ. ಮೂಲಕ ಕೆಲಸ ಮಾಡಿಸುತ್ತಾರೆ. ಜೊತೆಗೆ ಟಾಸ್ಕ ಫೋರ್ಸ ಕಮಿಟಿ ಇದೆ. ಯಾರ ವಿರುದದ್ ದೂರುಗಳು ಬಂದಿವೆ, ಯಾರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಅಂಥವರನ್ನು ಬದಲು ಮಾಡತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ದೂರು ಯಾರಿಗೆ ಕೊಡಬೇಕು?

ಶ್ರೀ ಗೋಪಿನಾಥ ಅರ್ ಸಾಂಡ್ರ : ಮಂತ್ರಿಗಳಿಗೆ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಆಶ್ರಯ ಯೋಜನೆಯನ್ನು ತಾವು ಮುಂದುವರಿಸುತ್ತೀರಿ ಎಂಬ ನಂಬಿಕೆ ಬರುತ್ತಿಲ್ಲ. ಇದ್ದನು ಮುಂದುವರಿಸುತ್ತೀರಾ? ಆನೇಕ ಜಿಲ್ಲೆಗಳಲ್ಲಿ ಈ ಆಶ್ರಯ ಯೋಜನೆ ಅಡಿಯಲ್ಲಿ ಹಂಚತಕ್ಕ ನಿವೇಶನಗಳಿಗೆ ಹಣ ಇಲ್ಲವೆಂದು 3 ತಿಂಗಳಿಂದ ಆನೇಕ ಜಿಲ್ಲಾಧಿಕಾರಿಗಳು, ನಾವು ಇಂಥಿಂಥ ನಿವೇಶನಗಳನ್ನು ಹಂಚಬೇಕೆಂದು ಜಿಲ್ಲಾಧಿಕಾರಿಗಳಿಗೆ ಬರೆದರೂ ಹಣ ಇಲ್ಲವೆಂದು ಹೇಳುತ್ತಾರೆ. ಆಶ್ರಯ ಯೋಜನೆಯಲ್ಲಿ ಹಾಗೆ ಮಾಡುತ್ತೇವೆಂದು ಆಕಾಶ ತೋರಿಸುತ್ತಿದ್ದೀರಿ. ಈ ಯೋಜನೆಯನ್ನು ಸಂಪೂರ್ಣವಾಗಿ ಮುಂದುವರಿಸುತ್ತೀರಾ? ಎಲ್ಲೆಲ್ಲಿ ಜಿಲ್ಲಾಧಿಕಾರಿಗಳಿಗೆ ಹಣ ಬೇಕಾಗಿದೆ ಅಲ್ಲಿ ಬಿಡುಗಡೆ ಮಾಡುತ್ತೀರಾ?

ಶ್ರೀ ಗೋಪಿನಾಥ ಅರ್ ಸಾಂಡ್ರ : ಶ್ರೀ ವಾಟಾಳ್ ನಾಗರಾಜ್‌ರವರು ಕೇಳಿದ ಮೊದಲ ಪ್ರಶ್ನೆಗೆ ಹೇಳುವುದಾದರೆ ಆಶ್ರಯ ಯೋಜನೆ ಬಹಳ ಒಳ್ಳೆಯ ಯೋಜನೆ, ಅದನ್ನು ಮುಂದುವರಿಸುತ್ತೇವೆ. ತಾವು ಯಾರೂ ಆದರ ಬಗ್ಗೆ ಸಂಶಯಪಡಬೇಕಾಗಿಲ್ಲ. ಅದು ಮುಂದುವರಿಯುವುದಿಲ್ಲವೆಂಬ ಬಾವನೆ ನಿಮ್ಮ ತಲೆಯಲ್ಲಿದ್ದರೆ ಅದನ್ನು ತೆಗೆದುಹಾಕಿ. ಎರಡನೆಯದಾಗಿ ಹಣದ ಕೊರತೆ ನಮಗೆ ಇಲ್ಲ, ಈಗಾಗಲೇ ನೂರು ಕೋಟಿ ರೂಪಾಯಿಗಳ ವ್ಯವಸ್ಥೆ ಮಾಡಿ ಅದರಲ್ಲಿ 50 ಕೋಟಿ ರೂಪಾಯಿಗಳನ್ನು ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲ, ಇಲ್ಲ, ಮೈಸೂರಿನ ಜಿಲ್ಲಾಧಿಕಾರಿಗಳ ಹತ್ತಿರ ಹಣ ಇಲ್ಲ.

ಶ್ರೀ ಗೋಪಿನಾಥ ಅರ್ ಸಾಂಡ್ರ : ಇನ್ನು ಎರಡು ದಿನಗಳಲ್ಲಿ, ಕ್ಯಾಬಿನೆಟ್‌ನಲ್ಲಿ ಅಂತಿಮ ನಿರ್ಣಯ ತೆಗೆದುಕೊಂಡು 50 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡುವಂತೆ ಹಣಕಾಸಿನ ಇಲಾಖೆಯವರಿಗೆ ಹೇಳಿದ್ದೇವೆ. ಹಣಕಾಸಿನ ಇಲಾಖೆಯಿಂದ ಇವತ್ತು ನಾಳೆಯಲ್ಲಿ ಜಿಲ್ಲಾಧಿಕಾರಿಗಳಿಗೆ ಹಣ ಹೋಗುತ್ತದೆ. ಟಾಸ್ಕ್ ಫೋರ್ಸ್ ಕಮಿಟಿಯವರಿಗೆ ಕೂಡ ಕೇಳಿಕೊಂಡಿದ್ದೇವೆ. ಅವರು ಬೆನಿಫಿಷರೀಸ್‌ಗೆ ರಿಲೀಸ್ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮನೆಗಳ ಜೊತೆಗೆ ನಿವೇಶನಗಳಿಗೆ ದುಡ್ಡಿಲ್ಲವೆಂದು ಹೇಳುತ್ತಿದ್ದಾರೆ. ಆಶ್ರಯ ಕಮಿಟಿಯವರು ಜಮಿನು ಕೊಂಡುಕೊಂಡು ಉಚಿತ ನಿವೇಶನ ಹಂಚುತ್ತೀರಾ?

ಶ್ರೀ ಗೋಪಿನಾಥ ಆರ್ ಸಾಂಡ್ರ : ನಮ್ಮ ಹತ್ತಿರ ಜಮೀನಿಗೆ ಕೊಡಲಿಕ್ಕೆ ಕೂಡ ಹಣ ಇದೆ. ಯಾವಾಗ ಕೇಳುತ್ತಾರೆ ಆಗ ಜಿಲ್ಲಾಧಿಕಾರಿಗಳಿಗೆ ಹಣ ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ. ತಾವು ಮೊನ್ನೆ ಕೇಳಿದ್ದಕ್ಕೆ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನೇರವಾಗಿ ಕೇಳುತ್ತೇನೆ. ಆಶ್ರಯ ಯೋಜನೆ ಅಡಿಯಲ್ಲಿ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಬಡವರಿಗೆ ಸೈಟು ಕೊಡುವುದಕ್ಕೆ ಬೇಕಾದ ಜಮೀನು ಕೊಂಡುಕೊಳ್ಳುವುದಕ್ಕೆ ಡಿ.ಸಿ.ಯವರಿಗೆ ಅಧಿಕಾರ ಕೊಟ್ಟಿದ್ದೀರಿ. ಆದರಿಂದ ವರ್ಷಗಟ್ಟಲೆ ಡಿಲೇ ಆಗುತ್ತದೆ. ನಮ್ಮ ಅಧ್ಯಕ್ಷತೆಯಲ್ಲಿ ಮಾಡಿರುವ ಕಮಿಟಿ ಮತಿಯಿಂದ ಸಾವಿರ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಏನು ಹೇಳಿದ್ದೀರಿ, ದಯವಿಟ್ಟು ಈ ಸಾವಿರ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಮೊದಲು ವ್ಯವಸ್ಥೆ ಮಾಡಿ. ಆಮೇಲೆ ಬೇಕಾದರೆ ಈ ಆಶ್ರಯ ಯೋಜನೆಯನ್ನು ನಿಲ್ಲಿಸಿ. ಈಗಾಗಲೇ ಸಾವಿರ ಮನೆಗಳನ್ನು ಕೊಡಲಾಗುವುದು ಎಂದು ಏನು ಆಶ್ವಾಸನೆ ಕೊಟ್ಟಿದ್ದೇವೆ ಆದರಲ್ಲಿ 500 ಮನೆಗಳ ಪಟ್ಟಿ ಮಾಡುವುದು ಹೇಗೆ? ಆ ಒಂದು ಕಮಿಟ್‌ಮೆಂಟ್‌ನಂತೆ ನಡೆದುಕೊಳ್ಳಿ.

ಶ್ರೀ ಗೋಪಿನಾಥ ಆರ್ ಸಾಂಡ್ರ : ಈಗಾಗಲೇ ನಾವು ಸರಿಯಾದ ಕೆಲಸ ಮಾಡಿಲ್ಲ ಎನ್ನುವುದು ಒಪ್ಪಿಕೊಳ್ಳತಕ್ಕ ಮಾತು. ಒಂದು ಸಾವಿರ ಮನೆಗಳನ್ನು ಕೊಡುತ್ತೇವೆಂದು ಹೇಳಿ 100 ಮನೆಗಳನ್ನು ಕೊಟ್ಟರೆ ಅಬ್ಯಾಸ ಆಗುತ್ತದೆ. ಆದ್ದರಿಹದ ಪ್ರಾಕ್ಟಿಕಲ್ಲಾಗಿ ನಾವು 500 ಮನೆಗಳನ್ನು ಕೊಡುತ್ತೇವೆ. ಅದರಲ್ಲಿ 200 ಮನೆಗಳನ್ನು ಹೌಸಿಂಗ್ ಬೋರ್ಡ್‌ನವರು ಕಟ್ಟಬೇಕು. ಉಳಿದ 300 ಮನೆಗಳನ್ನು ಡಿ.ಸಿ. ಅವರ ಮುಖಾಂತರ ಕಾರ್ಯಗತ ಮಾಡಬೇಕು.

(ಗೊಂದಲ)

ಉಪಾಧ್ಯಕ್ಷರು : ಆಶ್ರಯ ಯೋಜನೆ ಬಗ್ಗೆ ಬೇರೆ ರೂಪದಲ್ಲಿ ಕೇಳಿದರೆ ಅದಕ್ಕೆ ಉತ್ತರ ಕೊಡಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಇದು ಬಹಳ ಮಹತ್ವದ ವಿಷಯ ಇದೆ. ಎಲ್ಲಾ ಸದಸ್ಯರು ಚರ್ಚೆಮಾಡಬೇಕು. ಆಶ್ರಯ ಮನೆಗಳು ಆಗಿಲ್ಲ ಎನ್ನುವ ಚಿಂತನೆ ಇದೆ. ಬೇಕಾದರೆ ಸೋಮವಾರ ಇದರ ಬಗ್ಗೆ ನಿಯಮ 68ರ ಕೆಳಗೆ ಚರ್ಚೆ ಆಗಲಿ.

ಉಪಾಧ್ಯಕ್ಷರು : ತಾವು ಬರೆದು ಕಳುಹಿಸಿಕೊಡಿ. (ಗೊಂದಲ) ಈ ಪ್ರಶ್ನೆಗೆ ನಾನು 8 ನಿಮಿಷ ಅವಕಾಶ ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಒಂದೇ ಒಂದಕ್ಕೆ ಅವರು ಉತ್ತರ ಕೊಡಲಿ.

ಉಪಾಧ್ಯಕ್ಷರು : ತಮ್ಮ ಒಬ್ಬರಿಗೆ ಅಲ್ಲ, ಈ ಕಡೆಯು ಜನರೂ ಎದ್ದು ನಿಂತಿದ್ದಾರೆ. ತಮಗೊಬ್ಬರಿಗೆ ಕೊಟ್ಟರೆ ಎಲ್ಲರಿಗೂ ಅವಕಾಶ ಕೊಡಬೇಕಾಗುತ್ತದೆ. ದಯಮಾಡಿ ಸಹಕಾರ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ಜಿಲ್ಲಾದಿಕಾರಿಗಳಿಗೆ ಅವಕಾಶ ಕೊಡುವುದು ಬೇಡ. ಆ ಬಗ್ಗೆ ನಮಗೆ ಉತ್ತರ ಬೇಕು.

ಶ್ರೀ ಗೋಪಿನಾಥ ಅರ್ ಸಾಂಡ್ರ : ಮಾನ್ಯ ಅಧ್ಯಕ್ಷಣೆಯವರೇ, ಜಿಲ್ಲಾಧಿಕಾರಿಗಳಿಗೆ ಹಣ ಕೊಟ್ಟು ಅವರು ಬಿಡಿಒ ಜಿಲ್ಲಾಪರಿಷತ್ ಏಜೆನ್ಸಿ ಫಿಕ್ಸ್ ಮಾಡುತ್ತಾರೆ. ಆ ಮುಖಾಂತರ ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಫಲಾನುಭವಿಗಳನ್ನು ನಿರ್ಧರಿಸುವುದು, ಲ್ಯಾಂಡ್ ಖರೀದಿ ಮಾಡುವುದು, ಸೈಟ್ ಮಾಡುವಂತಹ ಸಂಪೂರ್ಣ ಅಧಿಕಾರವನ್ನು ನಾವು ಈಗಾಗಲೇ ಟಾಸ್ಕ್ ಫೋರ್ಸ್ ಕಮಿಟಿಗೆ ಕೊಟ್ಟಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಆ ಅಧಿಕಾರವನ್ನು ಸರ್ಕಾರ ಪಡೆದುಕೊಂಡಿದೆ.

ಶ್ರೀ ಗೋಪಿನಾಥ ಅರ್ ಸಾಂಡ್ರ : ಟಾಸ್ಕ್ ಫೋರ್ಸ್ ಸಮಿತಿ ಇದೆ. ಅದು ಮುಂದುವರಿಯುತ್ತದೆ.

ಉಪಾಧ್ಯಕ್ಷರು : ಶ್ರೀ ಸಾದತ್ ಆಲಿ ಖಾನ್ ಅವರ ಪ್ರಶ್ನೆ ನಂಬರ್....ಗೆ ಮಾನ್ಯ ಮಂತ್ರಿಗಳು ಕಾಲಾವಕಾಶ ಕೇಳಿದ್ದಾರೆ. ಅದನ್ನು ಆನಂತರ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿ ನಿರುದ್ಯೋಗಿಗಳ ನೋಂದಾವಣೆ.

1080-ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಕಾರ್ಮಿಕ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವಿರೆ?

ಅ) ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ. ಪಾಸ್ ಆದವರು,ಹಾಗೂ ಪದವೀಧರರು ಮತ್ತು ಎಸ್.ಎಸ್.ಎಲ್.ಸಿ. ಪಾಸ್ ಆಗದೆ ಇರುವ ನಿರುದ್ಯೋಗಿಗಳ ಸಂಖ್ಯೆ ಎಷ್ಟು?

ಆ) ಈ ನಿರುದ್ಯೋಗಿಗಳಲ್ಲಿ ಯಾವ್ಯಾವ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ಎಷ್ಟೆಷ್ಟು ಜನರು ಹೆಸರನ್ನು ನೋಂದಾಯಿಸಿದ್ದಾರೆ. ಆ ಜನರಿಗೆ ಉದ್ಯೋಗ ಕೊಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳಾವುವು?

ಶ್ರೀ. ಬ್ಲೇಸಿಯನ್ ಎಂ. ಡಿಸೋಜ (ಕಾರ್ಮಿಕ ಸಚಿವರು):

ಅ) ಸೆಪ್ಟೆಂಬರ್ 1992ರ ಅಂತ್ಯಕ್ಕೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿರುವವರ ಸಂಖ್ಯೆ ಹೀಗಿವೆ.

ಎಸ್.ಎಸ್.ಎಲ್.ಸಿ. ಪಾಸಾದವರು	9,16,493
ಪದವೀಧರರು	1,41,537
ಎಸ್.ಎಸ್.ಎಲ್.ಸಿ. ಪಾಸಾಗದೆ ಇರುವವರು	3,62,177

ಆ) ಮಾಹಿತಿ ಲಭ್ಯವಿರುವುದಿಲ್ಲ, ಆದರೆ, 1992ನೇ ಸೆಪ್ಟೆಂಬರ್ ಅಂತ್ಯದಲ್ಲಿ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ದಾವಲೆಯಲ್ಲಿದ್ದ ಅಭ್ಯರ್ಥಿಗಳ ಕಛೇರಿವಾರು ಮಾಹಿತಿಯನ್ನು ಅನುಬಂಧದಲ್ಲಿ ಕೊಡಲಾಗಿದೆ.

ವಿವಿಧ ನೇಮಕಾತಿ ಪ್ರಾಧಿಕಾರಿಗಳು ಆಯ್ಕೆ ಮಾಡಿ ನೇಮಕಾತಿ ಮಾಡಿಕೊಳ್ಳುವ ಸಲುವಾಗಿ ಅಭ್ಯರ್ಥಿಗಳ ಪಟ್ಟಿಯನ್ನು ಕೋರಿದಾಗ ಅರ್ಹ ಅಬ್ಯರ್ಥಿಗಳ ಹೆಸರುಗಳನ್ನು ಉದ್ಯೋಗ ವಿನಿಮಯ ಕೇಂದ್ರಗು ಸೂಚಿಸುತ್ತವೆ. ಉದ್ಯೋಗಾವಕಾಶವನ್ನು ಕಲ್ಪಿಸುವುದು ಉದ್ಯೋಗ ವಿನಿಮಯ ಕೇಂದ್ರಗಳ ಕಾರ್ಯವ್ಯಾಪ್ತಿಗೆ ಬರುವುದಿಲ್ಲ.

ಅನುಬಂಧ

ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಯಲ್ಲಿ 1992ನೇ ಸೆಪ್ಟಂಬರ್ ಅಭ್ಯರ್ಥಿಗಳ ಕಛೇರಿವಾರು ಮಾಹಿತಿ.

ಕ್ರ ಸಂ	ಉದ್ಯೋಗ ವಿನಿಮಯ ಕಚೇರಿಯ ಹೆಸರು	ದಾಖಲೆಯಲ್ಲಿ ಅಭ್ಯರ್ಥಿಗಳ ಸಂಖ್ಯೆ		
		ಪುರುಷರು	ಮಹಿಳೆಯರು	ಒಟ್ಟು
1	2	3	4	5
1	ಉಪ ಪ್ರಾ.ಉ.ವಿ. ಕೇಂದ್ರ, ಬೆಂಗಳೂರು.	178624	73996	252620
2.	ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ (ಸಾ), ಬೆಂಗಳೂರು.	72611	12320	84931
3.	ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ (ತಾ), ಬೆಂಗಳೂರು.	58939	4720	63659
4.	ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಬೆಳಗಾಂ	82796	13253	96049
5	- ” - ಭೆಳಗಾಂ.	40482	7640	48122
6.	- ” - ಬೀದರೆ.	35750	40862	5112
7.	- ” - ಬಿಜಾಪುರ.	59605	9330	68935
8	- ” - ಚಿಕ್ಕಮಗಳೂರು.	23089	7863	30952
9.	- ” - ಚಿತ್ರದುರ್ಗ.	43420	11093	54513
10.	- ” - ಗುಲ್ಬರ್ಗ.	48343	8178	56516
11.	- ” - ಹಾಸನ.	35044	6858	41902
12.	- ” - ಹುಬ್ಬಳ್ಳಿ.	80960	17675	98635
13.	- ” - ಕೋಲಾರ.	40232	9185	49417
14.	- ” - ಮಡಿಕೇರಿ.	8962	5071	14033
15.	- ” - ಮಂಡ್ಯ.	29279	9005	38284
16.	- ” - ಮಂಗಳೂರು.	45730	26273	72003
17.	- “ - ಮೈಸೂರು.	70604	19298	89902
18.	- ” - ರಾಯಚೂರು.	38018	6030	44048
19.	- “ - ಶಿವಮೊಗ್ಗ	45730	14461	60448

20.	- ” - ತುಮಕೂರು	62446	17874	80320
21.	ನಗರ ಉದ್ಯೋಗ ವಿನಿಮಯ ಕಚೇರಿ, ಬಾಗಲಕೋಟೆ	1565	290	1855
22.	- ” - ಭದ್ರಾವತಿ.	4019	407	4426
23.	- ” - ಕುಂದಾಪುರ.	3135	812	3947
24.	- ” - ದಾಂಡೇಲಿ.	1582	208	1790
25.	- ” - ದಾವಣಗೆರೆ.	3447	974	4421
26.	- ” - ಗದಗ್-ಬೆಟಗೇರಿ.	4587	267	4854
27.	- ” - ಹೊಸಪೇಟೆ.	1772	214	1986
28.	- “ - ಕೆ.ಜಿ.ಎಫ್.	3646	342	3988
29.	ಯೋಜನೆ ಉ.ವಿ.ಕ, ಕಾರವಾರ.	31681	12890	44571
30.	ಅಂಗವಿಕಲರ ವಿಶೇಷ ಉ.ವಿ.ಕ, ಬೆಂಗಳೂರು.	44252	1254	5506
31.	ವಿಶಿಷ್ಟ ವೃತ್ತಿ ಕಾರ್ಯನಿರ್ವಾಹಕ ಉದ್ಯೋಗ ವಿನಿಮಯ ಕಚೇರಿ, ಬೆಂಗಳೂರು.	25537	6100	31637
	ಒಟ್ಟು	1186144	308988	1495132

ಶ್ರೀ ಶಿವಾನಂದ ಹೆಚ್ ಕೌಜಲಗಿ : ಮಾನ್ಯ ಉಪಾಧ್ಯಕ್ಷಣಿಯವರೇ, ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ ಹಾಗೂ ಪದವೀಧರರಾಗಿದ್ದು ನಿರುದ್ಯೋಗಿಗಳಾಗಿರುವವರ ಸಂಖ್ಯೆಯನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಇವರಲ್ಲಿ ಪ್ರತಿ ವರ್ಷ ಎಷ್ಟು ಜನರಿಗೆ ಉದ್ಯೋಗಾವಕಾಶವನ್ನು ಸರ್ಕಾರ ಕೊಡುತ್ತಿದೆ? ಮತ್ತು ಅವರಿಗೆ ನೌಕರಿ ಕೊಡುವ ಸಲುವಾಗಿ ಯಾವ ಯಾವ ವಿಶೇಷ ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಳ್ಳಲಾಗಿದೆ. ಮತ್ತು ಇವರೆಲ್ಲರಿಗೂ ಇನ್ನು ಎಷ್ಟು ವರ್ಷದೊಳಗೆ ತಾವು ನೌಕರಿಯನ್ನು ಕೊಡುತ್ತೀರಿ? ಸಹಕಾರಿ ನೌಕರಿ ಅಲ್ಲದೇ ಬೇರೆ ರೀತಿಯ ನೌಕರಿ ಕೊಡುವುದಕ್ಕೆ ಸರ್ಕಾರ ಕಾರ್ಯಕ್ರಮ ಹಾಕಿದ್ದೆಯೇ?

ಶ್ರೀ ಬೇಸ್ಲಿಯಸ್ ಎಂ. ಡಿಸೋಜ : ಸನ್ಮಾನ್ಯ ಅಧ್ಯಕ್ಷಣಿಯವರೇ, ಉದ್ಯೋಗ ವಿನಿಮಯ ಕಛೇರಿಯಲ್ಲಿ ಯಾರಿಗೆ ಉದ್ಯೋಗ ಬೇಕೋ, ಯಾರಿಗೆ ಕೆಲಸ ಇಲ್ಲವೋ ಅವರು ತಮ್ಮ ಹೆಸರುಗಳನ್ನು ನೋಂದಣಿ ಮಾಡಿಕೊಳ್ಳುತ್ತಾರೆ. ಸರ್ಕಾರದಿಂದಾಗಲೀ, ಪ್ರವೇಟ್ ಏಜೆನ್ಸಿಯವರಾಗಲೀ ತಮಗೆ ತಮಗೆ ಎಷ್ಟು ವಿದ್ಯಾರ್ಹತೆಯುಳ್ಳ ಎಂತಹ ಅಭ್ಯರ್ಥಿಗಳು ಬೇಕು ಎಂದು ನಮಗೆ ಸೂಚಿಸಿದರೆ, ಉದ್ಯೋಗ ವಿನಿಮಯ ಕಛೇರಿ ಅಂತಹವರ ಹೆಸರುಗಳನ್ನು ಕಳುಹಿಸಿಕೊಡುತ್ತದೆ.

ಎಂಪ್ಲಾಯಿಮೆಂಟ್ ಎಕ್ಸೆಚೇಂಜ್‌ನವರು ಯಾವ ರೀತಿಯಲ್ಲೂ ಎಂಪ್ಲಾಯಿಮೆಂಟ್ ಕೊಡುವ ಕೆಲಸ ಮಾಡುವುದಿಲ್ಲ. ಆದರೆ ನಮ್ಮ ಸರ್ಕಾರದಲ್ಲಿ ಬೇರೆ ಬೇರೆ

ಕಾರ್ಯಕ್ರಮಗಳಿವೆ. ಐಆರ್‌ಡಿಪಿ ಮತ್ತು ಜನಪಥ್‌ರೋಜ್‌ಗಾರ್ ಯೋಜನೆ ಈ ತರಹ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಯುವಕ ಯುವತಿಯರಿಗೆ ಕೆಲಸ ಕೊಡುವುದು ಮಾತ್ರವಲ್ಲ, ತರಬೇತಿ ಕೊಡುವ ಒಂದು ಕಾರ್ಯಕ್ರಮವಿದೆ. ಅಪ್ರೆಂಟಿಸ್ ತರಬೇತಿಯನ್ನು ಕೊಡುತ್ತೇವೆ. ಹಿಂದೆ 6 ಸಾವಿರ ಯುವಕ ಯುವತಿಯರು ಅಪ್ರೆಂಟಿಸ್ ತರಬೇತಿಯನ್ನು ಮಾಡುತ್ತಿದ್ದರು. ಈ ಸಲ 23 ಸಾವಿರ ಜನರನ್ನು ಗುರುತಿಸಿ ಇದೇ ಜೂನ್ ಒಳಗೆ ಎಂಪ್ಲಾಯ್‌ಮೆಂಟ್ ಎಕ್ಸೇಂಜ್‌ಗೆ ಎಸ್.ಎಸ್.ಎಲ್.ಸಿ. ಪಾಸಾದವರು ಮತ್ತು ಫೇಲಾದವರು ಅರ್ಜಿ ಕೊಟ್ಟರೆ ಬೇರೆ ಬೇರೆ ಕಡೆಯಲ್ಲಿ ಯಾವುದು ಅಪ್ರೆಂಟಿಸ್ ಟ್ರೈನಿಂಗ್ ಇದೆ ಅದಕ್ಕೆ ಯಾರು ಅರ್ಹರಿದ್ದಾರೆ ಅವರಿಗೆ ನಾವು ಟ್ರೈನಿಂಗ್ ಕೊಡಿಸುತ್ತೇವೆ. ಇದು ಎಂಪ್ಲಾಯಿಮೆಂಟ್ ಎಕ್‌ಸೇಂಜ್‌ನಿಂದ ಅಲ್ಲ. ಇದು ಅಪ್ರೆಂಟಿಸ್ ಟ್ರೈನಿಂಗ್. ಹೋದವರ್ಷ ಎಂಪ್ಲಾಯಿಮೆಂಟ್ ಎಕ್‌ಸಚೇಂಜಿನಿಂದ 14,084 ಜನರಿಗೆ ಕೆಲಸ ಒದಗಿಸಿದ್ದೇವೆ. ಅಂದರೆ ಹೆಸರು ಕಳುಹಿಸಿ ಅವರು ಅಲ್ಲಿ ಕೆಲಸ ಪಡೆದುಕೊಂಡಿದ್ದಾರೆ. ಅದರಲ್ಲಿ ಷೆಡ್ಯೂಲ್‌ಡ ಕಾಸ್‌ಟನವರು 2608. ಷೆಡ್ಯೂಲ್‌ಡಟ್ರೈಬ್ 567. ಅದೇ ರೀತಿಯಲ್ಲಿ ನಾನು ಹೇಳಿದ ಹಾಗೆ ಬೇರೆ ಬೇರೆ ಸೆಲ್‌ಫ ಎಂಪ್ಲಾಯಿಮೆಂಟ್ ಎಜೆನ್ಸಿಗಳ ಮುಖಾಂತರ ಅಂದರೆ ಕೆ.ಎಸ್.ಎಫ್.ಸಿ., ಕೆ.ಎಸ್.ಐ.ಡಿ.ಸಿ. ಅವುಗಳ ಮುಖಾಂತರ ಸಹ ಯುವಕ ಯುವತಿಯರಿಗೆ ಸ್ವಂತ ಉದ್ಯೋಗ ಶುರು ಮಾಡಲಿಕ್ಕೆ ಸಹಾಯ ಮಾಡಿಕೊಡುತ್ತೇವೆ.

ಶ್ರೀ ಎಸ್.ಹೆಚ್. ಕೌಜಲಗಿ : ಮಾನ್ಯ ಉಪಾಧ್ಯಕ್ಷಿಣಿಯವರೇ, ಹೋದವರ್ಷ 15 ಸಾವಿರ ಡಂರಿಗೆ ಎಂಪ್ಲಾಯಿಮೆಂಟ್ ಕೊಟ್ಟಿದ್ದೇವೆಂದು ಕೊಟ್ಟಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇವತ್ತಿನ ದಿವಸ ಎಂಪ್ಲಾಯಿಮೆಂಟ್ ಎಕ್ಸೇಂಜ್‌ನಲ್ಲಿ ರಿಜಿಸ್ಟರ್ ಮಾಡಿಸಿದವವರು 15 ಲಕ್ಷ. ಎಲ್ಲರಿಗೂ ಕೆಲಸ ಸಿಗಬೇಕಾದರೆ ಎಷ್ಟು ವರ್ಷಗಳಾಗುತ್ತದೆ? ತಾವು ಅದನ್ನು ವಿಚಾರ ಮಾಡಬೇಕು. ಯಾರು ನಿರುದ್ಯೋಗಿಗಳಾಗಿದ್ದಾರೆ ಅವರಿಗೆ ಒಂದು ಸ್ಪೆಷಲ್ ಕಾರ್ಯಕ್ರಮವನ್ನು ಹಾಕಿ ಕೊಳ್ಳಬೇಕು. 15 ಸಾವಿರ ಜನರಿಗೆ ಕೊಟ್ಟಿದ್ದೇವೆಂದರೆ ಅದರಿಂದ ಏನು ಆಗುವುದಿಲ್ಲ. ನೀವು 15 ಸಾವಿರ ಜನರಿಗೆ ಕೊಟ್ಟರೆ 20 ಸಾವಿರ ಜನ ರಿಜಿಸ್ಟರ್ ಮಾಡಿಸಿರುತ್ತಾರೆ. ಹೀಗಾಗಿ ಬ್ಯಾಕ್‌ಲಾಗ್ ತುಂಬುವ ಸಲುವಾಗಿ ತಾವೇನು ಕಾರ್ಯಕ್ರಮ ಹಾಕಿಕೊಂಡಿದ್ದಿರಿ? ಅದು ಬಹಳ ಮಹತ್ವದ್ದು ಇದೆ. ನಿರುದ್ಯೋಗಿ ಸಮಸ್ಯೆಯನ್ನು ಹೋಗಲಾಡಿಸಲಿಕ್ಕೆ ಯಾವುದಾದರೂ ಸ್ಪೆಷಲ್ ಕಾರ್ಯಕ್ರಮ ಹಾಕಿಕೊಂಡು ಬ್ಯಾಕ್‌ಲಾಗ್ ತುಂಬುತ್ತೀರಾ ಎಂದು ಮತ್ತೊಮ್ಮೆ ಕೇಳುತ್ತೇನೆ?

ಶ್ರೀ ಬ್ಲೇಸಿಯಸ್ ಎಂ. ಡಿಸೌಜ : ಮಾನ್ಯ ಉಪಾಧ್ಯಕ್ಷಿಣಿಯವರೆ, 14,084 ಜನರಿಗೆ ನಾವು ಉದ್ಯೋಗ ಕೊಟ್ಟಿದ್ದಲ್ಲ, ನಮ್ಮಲ್ಲಿ ಬಂದು ಅರ್ಜಿಕೊಟ್ಟು ಅವರ ಹೆಸರು ಕಳುಹಿಸಿದ ಮೇಲೆ ಅಲ್ಲಿ ಉದ್ಯೋಗ ಸಿಕ್ಕಿದೆ. ಆದರೆ ಸರ್ಕಾರದ ಬೇರೆ ಬೇರೆ ಕಾರ್ಯಕ್ರಮಗಳ ಬಗ್ಗೆ ಹೇಳುವುದಾದರೆ ಸೆಲ್‌ಫ ಎಂಪ್ಲಾಯಿಮೆಂಟ್ ಸ್ಕೀಮ್‌ನಿಂದ ನೆಹರೂ ರೋಜ್‌ಗಾರ್ ಯೋಜನೆಗಳಿಂದ ಎಂಪ್ಲಾಯಿಮೆಂಟ್ ಸಿಗುತ್ತದೆ. ಕೆ.ಎಸ್.ಎಫ್.ಸಿ. ಯಿಂದ ಲೋನ್ ಸಿಕ್ಕಿದೆ. 'ವಿಶ್ವ' ಕಾರ್ಯಕ್ರಮದ ಪ್ರಕಾರ ಸೆಲ್‌ಫ ಎಂಪ್ಲಾಯಿಮೆಂಟ್ ಸ್ಕೀಮ್ ಇದೆ. ಬಹಳಷ್ಟು ಜನರು ಸೆಲ್‌ಫ ಎಂಪ್ಲಾಯ್ಡ್ ಆಗಿದ್ದಾರೆ. ಬೇರೆ ಬೇರೆ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಇಟ್ಟಿದೆ. ಅಪ್ರೆಂಟಿಸ್ ಟ್ರೈನಿಂಗ್ ಆದ ನಂತರ ಕೆಲಸ ಸುಲಭದಲ್ಲಿ ಸಿಗುತ್ತದೆ. ಈ ಸಲ

23 ಸಾವಿರ ಐಡೆಂಟಿಪೈ ಮಾಡಬೇಕು. ಎಸ್.ಎಸ್.ಎಲ್.ಸಿ. ಪಾಸಾದವರು ಮತ್ತು ಫೇಲಾದವರು ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ಮುಖಾಂತರ ಅರ್ಜಿ ಕೊಟ್ಟು ಓವರಿಗೆ ಇಂಟರ್ವ್ಯೂವ್ಯೂ ಬಂದು ಸೆಲೆಕ್ಟ ಆದಮೇಗೆ ಅವರಿಗೆ ನಾವು ಅಪ್ರೆಂಟಿಸ್ ಟ್ರೈನಿಂಗ್ ಕೊಡಿಸುತ್ತೇವೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಗಂಗಾ ಕಲ್ಯಾಣ ಯೋಜನೆ ಮೂಲಕ ಸೌಲಭ್ಯ.

709- ಶ್ರೀ ಬಿ. ಶಿವರಾಮು (ಗಂಡಸಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಹಾಸನ ಜಿಲ್ಲೆಗೆ ಗಂಗಾ ಕಲ್ಯಾಣ ಯೋಜನೆ ಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಾಂಗಕ್ಕಾಗಿ 1991-92 1992-93ನೇ ಸಾಲಿನಲ್ಲಿ ಒದಗಿಸಿರುವ ಹಣ ಮತ್ತು ಖರ್ಚು ಮಾಡಿರುವ ಹಣವೆಷ್ಟು? ಹಾಗೂ ತೆಗೆದುಕೊಡಿರುವ ಯೋಜನೆಗಳೆಷ್ಟು?

ಆ) ಈ ಯೋಜನೆಯ ಅನುಷ್ಠಾನಕ್ಕಾಗಿರುವ ನಿಬಂಧನೆಗಳೇನು? ಮತ್ತು ಅವುಗಳು ಸಮರ್ಪಕವಾಗಿವೆಯೇ?

ಇ) 1991-92ನೇ ಸಾಲಿನ ಅನುಷ್ಠಾನಕ್ಕೂ ಮತ್ತು ಈಗಿನ ಅನುಷ್ಠಾನಕ್ಕೂ ಇರುವ ವ್ಯತ್ಯಾಸವೇನು?

ಶ್ರೀ. ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :

ವರ್ಷ ರೂ. ಲಕ್ಷಗಳಲ್ಲಿ	ಒದಗಿಸಿರುವ ಹಣ	ಖರ್ಚಾಗಿರುವ ಹಣ
1991-92	4.50	-
1992-93	7.49	-

1991-92,1992-93ನೇ ಸಾಲಿನಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾದ ಹಾಸನ ಜಿಲ್ಲಾ ಪರಿಷತ್ತು ಈ ಯೋಜನೆಯನ್ನು ಜಾರಿಗೊಳಿಸಿರುವುದಿಲ್ಲ.

ಆ) ಈ ಯೋಜನೆಯ ಅನುಷ್ಠಾನಕ್ಕಾಗಿ ಸುಮಾರು 14 ನಿಬಂಧನೆಗಳಿದ್ದು, ಮುಖ್ಯವಾದವುಗಳು ಈ ಕೆಳಗಿನಂತಿವೆ.

1) ಈ ಯೋಜನೆಯಲ್ಲಿ ಶೇ.75 ಸಹಾಯಧನ ಶೇ. 25 ಬ್ಯಾಂಕ್ ಸಾಲ.

2) ಈ ಯೋಜನೆಗೆ 15 ಎಕರೆಗೆ ಕಡಿಮೆಯಿಲ್ಲದಂತೆ ಒಟ್ಟು ಜಮಿನು ಒಳಗೊಂಡಿರಬೇಕು.

3) ಖರ್ಚು ಪ್ರತಿ ಎಕರೆಗೆ ರೂ. 7,000ಕ್ಕೆ ಮೀರದಂತೆ ಇರಬೇಕು.

4)ಪೂರ್ಣಗೊಂಡ ಯೋಜನೆಯ್ನನು ಫಲಾನುಭವಿಗಳು ಸದಸ್ಯರಾಗಿ ಒಳಗೊಂಡಂತೆ ನೊಂದಾಯಿಸಲಾದ ಸಂಸ್ಥೆಗೆ ಹಸ್ತಾಂತರ ಮಾಡಲಾಗುವುದು.

ನಿಬಂಧನೆಗಳು ಸಮರ್ಪಕವಾಗಿದ್ದರೂ ಸಹ ನೊಂದಾಯಿತ ಸಂಸ್ಥೆಗಳು ಯಶಸ್ವಿಯಾಗಿ ನಿರ್ವಹಿಸುತ್ತಿರುವುಧು ಕಂಡು ಬಂದಿಲ್ಲ.

ಇ) 1991-92ಕ್ಕೆ ಈ ಸಾಮೂಹಿಕ ನೀರಾವರಿ ಯೋಜನೆಯನ್ನು ಸಣ್ಣ ನೀರಾವರಿ ಇಲಾಖೆಯು ಜಿಲ್ಲಾ ಪರಿಷತ್‌ಗಳ ಮುಖಾಂತರ ಕೈಗೊಳ್ಳುತ್ತಿತ್ತು. ಆದರೆ

1992-93ನೇ ಸಾಲಿನಿಂದ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳವರಿಗೆ ಸಂಬಂಧಿಸಿದಂತೆ ಈ ಯೋಜನೆಯನ್ನು ವೈಯಕ್ತಿಕ ನೀರಾವರಿ ಕೊಳವೆಬಾವಿ ಕಾರ್ಯಕ್ರಮವಾಗಿ ಪರಿವರ್ತಿಸಲು ಅವಕಾಶ ಮಾಡಿಕೊಟ್ಟು ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಅನುಷ್ಠಾನಗೊಳಿಸಲು ವಹಿಸಲಾಗಿದೆ.

ಶ್ರೀ ಬಿ. ಶಿವರಾಂ : ಮಾನ್ಯ ಉಪಾಧ್ಯಕ್ಷಿಣಿಯವರೆ, ನನ್ನ ಮೊದಲನೆಯ ಪ್ರಶ್ನೆಗೆ 1991-92ರಲ್ಲಿ ನಾಲ್ಕೂವರೆ ಲಕ್ಷ, 1992-93 ರಲ್ಲಿ 7.49 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆಂದು ಹೇಳಿದ್ದಾರೆ. ಆದರೆ ಹಾಸನ ಜಿಲ್ಲಾಪರಿಷತ್‌ನವರು ಅಪೆಂಡಿಕ್ಸ (ಸಿ) ನಲ್ಲಿ ನನಗೆ ಗೊತ್ತಿರುವ ಹಾಗೆ 10 ಅಥವಾ 11 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಬಹುಶಃ ಇದು ತಪ್ಪು ಮಾಹಿತಿಯೆಂದು ನಾನು ತಿಳಿದಿದ್ದೇನೆ.

10.20 ಎ.ಎಂ.

ಆದರೂ ಹಣ ಖರ್ಚುಮಾಡಿಲ್ಲವೆಂದು ಹೇಳಿದ್ದಾರೆ. ಕಾರಣ ಏನು ಎನ್ನತಕ್ಕದ್ದು ಮೊದಲನೆಯ ಪ್ರಶ್ನೆ. ಎರಡನೆಯದ್ದು, ಯೋಜನೆಯ್ನನು ಅನುಷ್ಠಾನಕ್ಕೆ ತರಲು 14 ನಿಬಂಧನೆಗಳಿವೆ ಎಂದು ಹೇಳಿದ್ದಾರೆ. ಯಾವುದಾದರೂ ಬೇಡಿಕೆ, ಪರಿಶಿಷ್ಟ ಜಾತಿ, ವರ್ಗದವರಿಂದ ಸಾಮೂಹಿಕ ನೀರಾವರಿ, ಗಂಗಾಕಲ್ಯಾಣ ಯೋಜನೆಗೆ ಬಂದಿದೆಯೇ ಬಂದಿದ್ದರೆ ಸಂಘಗಳನ್ನು ನೊಂದಾಯಿಸಿಕೊಳ್ಳತಕ್ಕಂತ ಅಥವಾ ಸೈಟ್‌ಗಳನ್ನು ಐಡೆಂಟಿಫೈ ಮಾಡತಕ್ಕಂಥ ಕೆಲಸ, ವಾಟರ್ ಸೋರ್ಸ್ಸನು ಹುಡುಕುವ ಕೆಲಸವನ್ನು ಇಲಾಖೆಯ ವತಿಯಿಂದ ಎರಡು ವರ್ಷಗಳಿಂದ ಮಾಡಿದ್ದೀರಾ? ಮೂರನೆಯದ್ದು, 91-92ರಲ್ಲಿ ಇದ್ದನು ಜಿಲ್ಲಾಪರಿಷತ್ತಿನಿಂದ ಅನುಷ್ಠಾನಕ್ಕೆ ತಂದಿದ್ದಾರೆ. ಇದ್ದನು 92-93ರಲ್ಲಿ ಎಸ್‌ಸಿ\ಎಸ್‌ಟಿ ಕಾರ್ಪೊರೇಷನ್ ಮೂಲಕ ತರುತ್ತೇವೆ ಎನ್ನತಕ್ಕಂಥ ವಿಚಾರ ಹೇಳಿದ್ದಾರೆ. ಹಾಗೆಯೇ ಎಸ್‌ಸಿ\ಎಸ್‌ಟಿ ಕಾರ್ಪೊರೇಷನ್‌ನವರು ಈಗಾಗಲೇ ಚರ್ಚೆ ಮಾಡಿದ್ದಕ್ಕೆ ಉತ್ತರ ಕಳುಹಿಸಿದ್ದಾರೆ ಏನೆಂದರೆ,

"We are given to understand that there is a feeling in the District level that the Ganga Kalyan Scheme has been transferred to the Corporation. The Ganga Kalyan Scheme has not been transferred to the Corporation."

ಉಪಾಧ್ಯಕ್ಷರು : ಹೇಳಿ. ಅದ್ದನು ಏಕೆ ಓದುತ್ತೀರಿ?

ಶ್ರೀ ಬಿ. ಶಿವರಾಮು : ಎರಡು ವರ್ಷಗಳಿಂದ ಕೆಲಸ ಆಗಿಲ್ಲ. ಅದ್ದನು ಅವರ ಗಮನಕ್ಕೆ ತರದೇ ಇದ್ದರೆ ಹೇಗೆ? ಏನಬ ಕೆಲಸ ಆಗಿಲ್ಲ. ಅದಕ್ಕಾಗಿ ಅವರ ಗಮನ ಸೆಳೆಯಬೇಕು. ಅದಕ್ಕೋಸ್ಕರ ನಾವು ಮಾಹಿತಿಗಳನ್ನು ತಂದಿದ್ದೇವೆ. ಯಾವ ಯಾವುದಕ್ಕೆ ತಾವು ಅವಕಾಶ ಕೊಡುತ್ತೀರಿ. ಇದಕ್ಕೆ ಕೊಡಿ. ನಾನು ಪೂರ್ತಿ ಪತ್ರವನ್ನು ಓದುತ್ತೇನೆ-

"But, the Government has released Rs. 274.00 lakhs to revice the defunct Ganga Kalyan Scheme wells and to hand over them to the individual beneficiaries concerned on whose land the well is located. a copy of the G.O.is enclosed for the information of the District Managers. They may clarify these points in the district level Meetings and to the

Zilla parishads, So theat, they should not carry an impression that the Ganga Kalyan Scheme has been transferred to the Corporation and the Corporation could not implement the programme." ಕಾರ್ಪೊರೇಷನ್‌ನವರು ಇಷ್ಟು ಹೇಳಿದ್ದಾರೆ. ಅದಕ್ಕೆ ಮಾಹಿತಿ ಬೇಕು ನಮಗೆ.

ಶ್ರೀ ಧರ್ಮಸಿಂಗ್ : ಮಾನ್ಯ ಶಾಸಕರಾದ ತಾವು ಕೂಡ ಜಿಲ್ಲಾ ಪರಿಷತ್ತಿನ ಆಗುಹೋಗುಗಳ ಬಗ್ಗೆ ಬಾಗವಹಿಸುತ್ತಿದ್ದೀರಿ. ಗಂಗಾಕಲ್ಯಾಣ ಯೋಜನೆಯನ್ನು 1984-85ರಲ್ಲಿ ಆಗಿನ ಸರ್ಕಾರ ತೆಗೆದುಕೊಂಡಿರುವಂಥಾದ್ದು. ಸ್ಪೆಶಲ್ ಕಾಂಪೋನೆಂಟ್‌ನಲ್ಲಿ ಎಲ್ಲಾ ಹರಿಜನ-ಗಿರಿಜನರಿಗೆ ಇದೊಂದು ಕಮ್ಯುನಿಟಿ ಇರಿಗೇಶನ್ ಸ್ಕೀಮ್ ಎಂದು ತೆಗೆದುಕೊಂಡು ಬಂದರು. ಇದು ಸಫಲವಾಗಿದೆಯೇ ಎಂದು ಅವರು ಕೇಳಿದ್ದಾರೆ. ಆದರೆ ಜಿಲ್ಲಾ ಪರಿಷತ್‌ನವರು ಏಳುತಿಂಗಳಲ್ಲಿ ಇದನ್ನು ಅನುಷ್ಠಾನಕ್ಕೆ ತರಲಿಲ್ಲ. ಅದಕ್ಕೆ ನಿರ್ಬಂಧನೆಗಳು ಏನಿವೆ ಎಂದರೆ, ಯಾವರೀತಿಯಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು ಎನ್ನುವ ಬಗ್ಗೆ, 14 ನಿಬಂಧನೆಗಳನ್ನು ಅದರಲ್ಲಿ ಕೊಟ್ಟಿದ್ದಾರೆ. ಕಮ್ಯುನಿಟಿ ಇರಿಗೇಶನ್‌ನಲ್ಲಿ ಒಟ್ಟಾರೆ ಕೆಲಸ ಮಾಡತಕ್ಕಂಥ ಒಳ್ಳೆಯ ಮನಸ್ಸು ಬೇಕು. ಅದು ಬರುತ್ತಿಲ್ಲವೆಂದು ಅನುಭವಕ್ಕೆ ಬಂದಾಗ ಈಗ ಹಣ ಕೂಡ 91-92 ಮತ್ತು 92-93ರಲ್ಲಿ ಒಟ್ಟು 11 ಲಕ್ಷ ಒದಗಿಸಿದ್ದರೂ ಒಂದು ದುಡ್ಡು ಕೂಡ ಜಿಲ್ಲಾಪರಿಷಚ್‌ನವರು ಖರ್ಚುಮಾಡಲಿಲ್ಲ. ಈಗ ರಾಜ್ಯಮಟ್ಟದಲ್ಲಿ ಎಸ್‌ಸಿ\ಎಸ್‌ಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಕಬಡ ಇದೆ. ವೈಯಕ್ತಿಕವಾಗಿ ಯಾರಾದರೂ ಇವತ್ತು ಬಾವಿಗೆ ಬೇಕು ಎಂದು ರೈತರು, ಮಾರ್ಜಿನಲ್ ಫಾರ್ಮರ್‌ಸ ಬಂದಾಗ ಅವರಿಗೆ ಹಣ ಕೊಡ ತಕ್ಕದ್ದು, ಈ ಕಾರ್ಪೊರೇಷನ್ ಕಡೆಯಿಂದ ನಾವು ಮಾಡುತ್ತಿದ್ದೇವೆ. ಅದಕ್ಕೆ 4.9.92ರಲ್ಲಿ ಜಿಲ್ಲಾಪರಿಷತ್ ವತಿಯಿಂದ ಈ ಕೆಲಸ ಆಗದೆ, ಹಣ ಲ್ಯಾಪ್ಸ್ ಆಗಬಾರದೆ ಎಸ್‌ಸಿ\ಎಸ್‌ಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ವಹಿಸಿದ್ದಾರೆ. ಅದರ ವತಿಯಿಂದ 91-92 ಮತ್ತು 92-93ನೇ ಸಾಲಿನಲ್ಲಿ ಎಷ್ಟು ಹಣ ಖರ್ಚಾಗಬೇಕಾಗಿತ್ತು ಅದನ್ನು ಎಸ್‌ಸಿ\ಎಸ್‌ಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಿಂದ ತೆಗೆದುಕೊಂಡಿದ್ದಾರೆ.

ಶ್ರೀ ಬಿ. ಶಿವರಾಮಿ : ಈ ಸಾಮೂಹಿಕ ಗಂಗಾಕಲ್ಯಾಣ ಯೋಜನೆ ಇರುತ್ತದೆಯೇ ಇಲ್ಲವೇ ಎನ್ನತಕ್ಕಂಥಾದ್ದು ಒಂದು ಪ್ರಶ್ನೆ. ಈಗ ಜಿ.ಒ.ಏನು ಹೇಳಿದರು...

ಉಪಾಧ್ಯಕ್ಷರು : ತಿರುಗಿ ಓದುವುದು ಬೇಡ.

ಶ್ರೀ ಬಿ. ಶಿವರಾಮು : ಇರತಕ್ಕಂಥ ವಿಚಾರವನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಅದಕ್ಕೆ ಅವಕಾಶ ಕೊಡಿ. 4.9.92ಕ್ಕೆ 274 ಲಕ್ಷ ರೂಪಾಯಿಗಳನ್ನು ಎಸ್‌ಸಿ\ಎಸ್‌ಟಿ ಕಾರ್ಪೊರೇಷನ್‌ಗೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಅದರಲ್ಲಿ ಹಾಸನ ಜಿಲ್ಲೆಗೆ ಎಷ್ಟು ಕೊಟ್ಟಿದ್ದಾರೆ? ಅಮೇಲೆ ಅವರು ಏನು ಹೇಳಿದ್ದಾರೆ ಎಂದರೆ, 274ಲಕ್ಷ ರೂಪಾಯಿಗಳನ್ನು ಗಂಗಾಕಲ್ಯಾಣ ಯೋಜನೆಗಳನ್ನು ಮಾಡುವುದಕ್ಕೆ ಒದಗಿಸಿರತಕ್ಕಂಥದ್ದು ಅಲ್ಲ, ಅವರು ಏನು ಹೇಳುತ್ತಿದ್ದಾರೆ ಎಂದರೆ,

"Ganga Kalyan Scheme will be converted as individual irrigation wells in which the owner of the land in whose land the well is located."

ಎಸ್‌ಸಿ\ಎಸ್‌ಟಿ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನವರು ಸ್ಪಷ್ಟವಾಗಿ ಪತ್ರ ಬರೆದಿದ್ದಾರೆ. ಕೊಟ್ಟಿರತಕ್ಕಂಥ ಹಣವನ್ನು ಸಾಮೂಹಿಕ ಗಂಗಾಕಲ್ಯಾಣ ಯೋಜನೆ ಏನಿದೆ, ಅದನ್ನು ಇಂಡಿವಿಜ್ಯುಯಲ್ ವೆಲ್ ಆಗಿ ಕನ್ವರ್ಟ್ ಮಾಡುವುದಕ್ಕೆ, ಡಿಪಂಕ್, ವೆಲ್‌ಸ ರಿಪೇರಿ ಮಾಡುವುದಕ್ಕೆ ಅಷ್ಟೇ ಒದಗಿಸಿದ್ದಾರೆ ಎಂದು ಸ್ಪಷ್ಟವಾಗಿ ಪತ್ರ ಬರೆದಿದ್ದಾರೆ.

ಇಲ್ಲಿ ಜಿಜ್ಞಾಸೆ ಏನಾಗಿದೆ ಎಂದರೆ, ತಾವು ಎಸ್.ಸಿ., ಎಸ್.ಟಿ.ಗಳ ವಿಚಾರದಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವಲ್ಲ. ಈ ವಿಚಾರವನ್ನು ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಉಪಾಧ್ಯಕ್ಷರು : ಇನ್ನೂ ಮೂರು ಪ್ರಶ್ನೆಗಳು ಇವೆ, ತಾವು ಬೇಗ ಮುಗಿಸಿ. ಆ ಮೂರು ಪ್ರಶ್ನೆಗಳನ್ನು ತೆಗೆದುಕೊಳ್ಳದೇ ಹೋದರೆ, ಅವರಿಗೂ ಬೇಸರವಾಗುತ್ತದೆ.

ಶ್ರೀ ಬಿ. ಶಿವರಾಮು : ಎರಡು ವರ್ಷಗಳಿಂದ ಮಾಡಿಲ್ಲ, ಉತ್ತರ ಸಕಾಲದಲ್ಲಿ ಸಿಕ್ಕಿಲ್ಲ. ವೆಲ್‌ಫೇರ್ ಡೈರೆಕ್ಟರು, ಸೆಕ್ರೆಟರಿಯವರು ಎಲ್ಲರೂ ಎಸ್.ಸಿ., ಎಸ್.ಟಿ ಕಾರ್ಪೋರೇಷನ್‌ಗೆ ತಿರುಗಿದ್ದೇವೆ. ಈ ವಿಚಾರದಲ್ಲಿ ಇನ್ನೂ ಒಂದೂ ಚೂರು ಕೂಡ ಅನುಷ್ಠಾನಕ್ಕೆ ಬರಲಿಲ್ಲ. ಅದಕ್ಕೋಸ್ಕರ ಹೇಳುತ್ತೇನೆ. ಎಸ್.ಸಿ ಎಸ್.ಟಿ ಕಾರ್ಪೋರೇಷನ್‌ನವರು ಸ್ಪಷ್ಟವಾಗಿ ಉತ್ತರ ಬರೆದಿದ್ದಾರೆ. ಸರ್ಕಾರಿ ಆದೇಶದ ಪ್ರಕಾರ, 274 ಲಕ್ಷ ರೂಪಾಯಿಗಳಲ್ಲಿ ಹಾಸನಕ್ಕೆ ಎಷ್ಟು ಒದಗಿದೆಯೋ ಗೊತ್ತಿಲ್ಲ. ಆದರೆ ಹಣವನ್ನು ಖರ್ಚು ಮಾಡತಕ್ಕ ದಿಸೆಯಲ್ಲಿ ಯಾರೂ ಕೆಲಸ ಮಾಡಿಲ್ಲ. ಇಲ್ಲಿಯವರೆಗೆ ಈ ಜಿಲ್ಲೆಯಲ್ಲಿ ಕೆಲಸ ಆಗಿಲ್ಲ. ಎರಡು ವರ್ಷದಿಂದ ಒಂದೇ ಒಂದು ಗಂಗಾ ಕಲ್ಯಾಣ ಯೋಜನೆಯೂ ಅನುಷ್ಠಾನಕ್ಕೆ ಬಂದಿಲ್ಲ. 1992-93ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ತಿಗೆ 21 ಲಕ್ಷ ರೂಪಾಯಿಗಳನ್ನು ಹಾಕಲಾಗಿದೆ. ಈ ಹಣದಲ್ಲಿ ಸಾಮೂಹಿಕ ಗಂಗಾ ಕಲ್ಯಾಣ ಯೋಜನೆಯನ್ನು ಮಾಡುತ್ತೀರೋ ಇಲ್ಲವೋ ಗೊತ್ತಿಲ್ಲ.

ಇಲ್ಲಿಯವರೆಗೂ ಒಂದೇ ಒಂದು ರೆಕಾರ್ಡನ್ನು ಕೂಡ ಬಿಲ್ಡ್ ಅಪ್ ಮಾಡಿಲ್ಲ. ನೀವು ಅವರಿಗೆ ಸಂಘ ಎಂದು ಏನು ರಿಜಿಸ್ಟರ್ ಮಾಡಬೇಕೆಂದು ಹೇಳಿದ್ದೀರಿ. ಯಾವ ಕೆಲಸವನ್ನೂ ಅವರು ಮಾಡಿಲ್ಲ. ಗಂಗಾ ಕಲ್ಯಾಣ ಯೋಜನೆ ಇರುತ್ತದೆಯೋ ಇಲ್ಲವೋ? ತಾವು ಜಿಲ್ಲಾಪರಿಷತ್ತಿನ ಮುಖಾಂತರ ಅನುಷ್ಠಾನಕ್ಕೆ ತರುತ್ತೀರೋ ಇಲ್ಲವೋ. ಎಸ್.ಸಿ. ಎಸ್.ಟಿ. ಕಾರ್ಪೋರೇಷನ್ ನವರ ನಿಜವಾದ ಕೆಲಸ ಏನು, ಅವರ ಪಾತ್ರ ಏನು ಎನ್ನುವುದನ್ನು ಹೇಳಬೇಕು.

ಶ್ರೀ ಧರ್ಮಸಿಂಗ್ : ಈಗಾಗಲೇ ಹೇಳಿದ್ದೇನೆ. ಏಕೆಂದರೆ, ಕಮ್ಯುನಿಟಿ ಇರಿಗೇಷನ್‌ಗೆ ಜನರು ಹೆಚ್ಚಿನ ಒಲವು ತೋರಿಸುತ್ತಾ ಇಲ್ಲ ಎನ್ನುವ ರೀತಿಯಲ್ಲಿ ಪ್ರತ್ಯೇಕವಾದ ಲೋನ್ ಬಾವಿಗೆ ಕೊಡಬೇಕು ಎಂದು, ಎಸ್.ಸಿ. ಎಸ್.ಟಿ. ಕಾರ್ಪೋರೇಷನ್‌ಗೆ ಒದಗಿಸಲಾಗಿದೆ. 2 ವರ್ಷಗಳ ಅವಧಿಯಲ್ಲಿ, ಹಾಸನ ಜಿಲ್ಲೆಗೆ ಏನೂ ಆಗಿಲ್ಲವೆಂದು ಶಾಸಕರ ಕಳಕಳಿ ಇದೆ. ಎಸ್.ಸಿ., ಎಸ್‌ಟಿ. ಕಾರ್ಪೋರೇಷನ್

ನಿಂದ ಪ್ರತ್ಯೇಕವಾದ ಲೋನ್ ಕೊಡತಕ್ಕ ಕೆಲಸವನ್ನು ಮಾಡಿ ಶೀಘ್ರವಾಗಿ ಕೆಲಸ ಪ್ರಾರಂಭ ಮಾಡುತ್ತೇವೆ.

(ಗೊಂದಲ)

ಉಪಾಧ್ಯಕ್ಷರು : ತಾವು ಇದನ್ನು ಬೇರೆ ರೂಪದಲ್ಲಿ ಕಳುಹಿಸಿ, ಚರ್ಚೆ ಮಾಡೋಣ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ.

ಬೆಂಗಳೂರು ಮಹಾ ನಗರಪಾಲಿಕೆಯ ಜಮೀನಿನ ಅನಧಿಕೃತ ಸ್ವಾಧೀನ

926E ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬನ್ನೇರುಘಟ್ಟ ರಸ್ತೆಯ ಸರ್ವೆ ನಂ. 84:2 ರಸ್ತೆಯ ಮಹಾನಗರಪಾಲಿಕೆಯ ಭೂಮಿಯನ್ನು ಅನಧಿಕೃತವಾಗಿ ಆಕ್ರಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಅನಧಿಕೃತವಾಗಿ ಆಕ್ರಮಿಸಿ ಕೊಂಡಿರುವ ಭೂಮಿಯ ವಿಸ್ತೀರ್ಣವೆಷ್ಟು?*

ಇ) *ಅನಧಿಕೃತವಾಗಿ ಆಕ್ರಮಿಸಿಕೊಂಡಿರುವ ಭೂಮಿಯನ್ನು ತೆರವು ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?*

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಕೇಳಿದಂಥ ಮೂಲ ಪ್ರಶ್ನೆಯೇ ಬೇರೆ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಪ್ರಶ್ನೆಯೇ ಬೇರೆ ಇದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ನಾನು ಬಯಸುತ್ತಿದ್ದೇನೆ. ಬೆಂಗಳೂರಿನಲ್ಲಿರತಕ್ಕ ಬನ್ನೇರುಘಟ್ಟ ಸರ್ವೆ ನಂ 82ರಲ್ಲಿ ಬಹಳ ಫಲವತ್ತಾದೇ ಮತ್ತು ಬೆಲೆ ಬಾಳುವಂಥ ಜಮೀನು ಏನಿದೆ, ಅದನ್ನು ಒಬ್ಬ ಖಾಸಗಿ ಕಾರ್ಪೋರೇಟರ್ ಅವರು ಸ್ವಾಧೀನಪಡಿಸಿಕೊಂಡಿದ್ದಾರೆ. ಆ ಸರ್ವೆ ನಂಬರಿನಲ್ಲಿ, ಬೆಂಗಳೂರು ಡೈರಿ ಎಂಪ್ಲಾಯ್‌ಮೆಂಟ್ ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ ಸಲುವಾಗಿ 1990ರಲ್ಲಿ ಕಾರ್ಪೋರೇಷನ್‌ನವರು 26 ಗುಂಟೆ ಜಮೀನು ಈ ಬೆಂಗಳೂರು ಡೈರಿ ಹೌಸಿಂಗ್ ಸೊಸೈಟಿಯವರಿಗೆ ಕೊಟ್ಟಿದ್ದಾರೆ. ಉಳಿದ 16 ಗುಂಟೆ ಜಮೀನು ಏನಿದೆ, ಅದು ಬೆಂಗಳೂರಿನಲ್ಲಿರತಕ್ಕ ಒಂದು ಫಲವತ್ತಾದ ಭೂಮಿ, ಕಾರ್ಪೋರೇಷನ್‌ಗೆ ಸಂಬಂಧಪಟ್ಟಂಥ ಭೂಮಿ, ಬೇರೆ ಯಾರೋ ಒಬ್ಬರು ಖಾಸಗಿ ವ್ಯಕ್ತಿಗಳು ಕೈವಾಡದಿಂದ ಫಲವತ್ತಾದ ಒಂದು ಕೋಟಿ ರೂಪಾಯಿ ಬೆಲೆ ಬಾಳುವಂಥ ಭೂಮಿಯನ್ನು ಒಬ್ಬ ಕಾರ್ಪೋರೇಟರ್‌ರವರು ನುಂಗುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಚೌಡರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ಸರ್ವೆ ನಂ. 8402, ಇದು ಕಾರ್ಪೊರೇಷನ್ ಲ್ಯಾಂಡ್ ಆಗುತ್ತದೆ. ಇದು 11,882.5 ಸ್ಕೇರ್ ಫೀಟ್ ಇದೆ. ಇಲ್ಲಿ ಸ್ವಲ್ಪ ಲೋ ಲೆವೆಲ್ ಇದೆ. ಅಲ್ಲಿ ಅವರು, ಇವರು ಅನೇಕ ಜನ ಅನ್ ಐಡೆಂಟಿಫೈಡ್ ಲಾರಿ ವೋನರ್ಸ್ ಸ್ವಲ್ಪ ಜಲ್ಲಿ, ಕಲ್ಲು ಲೋಡ್ ಮಾಡುತ್ತಿದ್ದರು. ಈಗ ಅದನ್ನೆಲ್ಲಾ ತೆಗೆಸಿದ್ದೇವೆ. ಈಗ ಅದನ್ನು ಕಾರ್ಪೊರೇಷನ್ ನಲ್ಲೇ ಇಟ್ಟುಕೊಂಡಿದ್ದೇವೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ಮಾನ್ಯ ಅಧ್ಯಕ್ಷಣೆಯವರೆ, ಸರ್ವೆ ನಂಬರ್ 84ಕ್ಕೆ ಸಂಬಂಧಪಟ್ಟಂತೆ ಹೇಳುತ್ತಿದ್ದಾರೆ. ಸರ್ವೆ ನಂಬರ್ 82ರಲ್ಲಿ ಇರತಕ್ಕಂತಹ ಪ್ರಶ್ನೆಯಲ್ಲಿ ಫಲವತ್ತಾದಂಥ ಈ ಜಮೀನು ಏನು ಇದೆ. ಇದಕ್ಕೆ ಪಟ್ಟಾ ಮಾಡಿಕೊಳ್ಳುವಂಥ ಪ್ರಯತ್ನವನ್ನು ಒಬ್ಬ ಕಾರ್ಪೊರೇಟರ್ ರವರು ಮಾಡುತ್ತಿದ್ದಾರೆ. ಈಗಾಗಲೇ ಆ ಸ್ಥಳೀಯ ಶಾಸಕರಾದಂತಹ ಶ್ರೀಮಾನ್ ರಾಮಲಿಂಗರೆಡ್ಡಿಯವರು ಕೂಡಾ ಅದರ ಬಗ್ಗೆ ಕಾರ್ಪೊರೇಷನ್ನಿನ ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡ ಹೇಳಿದ್ದಾರೆ. ಇದು ಕಾರ್ಪೊರೇಷನ್ ಗೆ ಸಂಬಂಧಪಟ್ಟ ಫಲವತ್ತಾದ ಜಮೀನು. ಆದುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಅತಿಕ್ರಮವಾಗಿ ಅವರು ಈ ಸರ್ವೆ ನಂಬರ್ ನ್ನು ಕಬಳಿಸುತ್ತಿದ್ದಾರೆ? ಸರ್ವೆ ನಂಬರ್ 82 ಕ್ಕೆ ಸಂಬಂಧಪಟ್ಟಂತ ನಾನು ಕೇಳುತ್ತಿದ್ದೇನೆ. ತಾವು ಸರ್ವೆ ನಂಬರ್ 84ಕ್ಕೆ ಸಂಬಂಧಪಟ್ಟಂತೆ ಹೇಳುತ್ತಿದ್ದೀರಿ.

ಶ್ರೀ ಚೌಡರೆಡ್ಡಿ : ಇಲ್ಲಿ ಅವರು ಪ್ರಶ್ನೆ ಹಾಕಿರುವ ಕಡೆ ಸರ್ವೆ ನಂಬರ್ 84Ë2 ಎಂದು ಇದೆ. ಆದರೆ 82 ಅನ್ನುತ್ತಾ ಹೇಳುತ್ತಿದ್ದೀರಿ. ನೀವು ಬೇರೆ ಪ್ರಶ್ನೆ ಕಳಿಸಿ, ಬೇರೆ ಉತ್ತರ ಕಳುಹಿಸುತ್ತೇನೆ. ನೀವೇ ಸ್ಪೆಸಿಫಿಕ್ ಆಗಿ ಬರೆದಿದ್ದೀರಿ. ಸರ್ವೆ ನಂಬರ್ 84Ë2 ಎಂದು ಇದೆ.

ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಜನ ಅಭಿವೃದ್ಧಿಗಾಗಿ ವಿಶೇಷ ಯೋಜನೆಗಳು

941Ëಶ್ರೀ ಕೆ. ಸಿದ್ಧಯ್ಯ (ಸಂತೇಮಾರನ ಹಳ್ಳಿ : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿಗಳ ಆರ್ಥಿಕ ಅಭಿವೃದ್ಧಿಗೆ ಹಮ್ಮಿಕೊಳ್ಳಲಾದ ಯೋಜನೆಯಲ್ಲಿ ಒದಗಿಸಲಾದ ಎತ್ತು ಚಕ್ಕಡಿಗಳ ಪೂರೈಕೆ ಜೊತೆ ಎತ್ತುಗಳು ಹಾಗೂ ಕೃಷಿ ಉಪಕರಣಗಳನ್ನು ಫಲಾನುಭವಿಗಳು ಸರಿಯಾಗಿ ಉಪಯೋಗಿಸಿಕೊಳ್ಳದೇ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸರ್ಕಾರವು ಈ ಸವಲತ್ತುಗಳು ಸರಿಯಾದ ಉಪಯೋಗದ ಬಗ್ಗೆ ಹಾಗೂ ಒದಗಿಸಿದ ಸೌಲಭ್ಯಗಳು ನಿಜವಾಗಿಯೂ ಫಲಾನುಭವಿಗಳ ಅಭಿವೃದ್ಧಿಗೆ ಅನುಗುಣವಾಗಿವೆಯೇ ಎಂಬುದನ್ನು ತಿಳಿಯಲು ಮೌಲ್ಯ ನಿರ್ಣಯ: ಅಧ್ಯಯನ ನಡೆಸಲು ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

ಅ) ಎತ್ತು, ಎತ್ತಿನ ಗಾಡಿ ಹಗೂ ವ್ಯವಸಾಯ ಉಪಕರಣಗಳನ್ನು ಫಲಾನುಭವಿಗಳು ಕೆಲವು ಪ್ರಕರಣಗಳಲ್ಲಿ ಸದುಪಯೋಗಪಡಿಸಿಕೊಳ್ಳದೇ ಇರುವುದು

ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಒಟ್ಟಿನಲ್ಲಿ ಈ ಯೋಜನೆಗಳು ಫಲಾನುಭವಿಗಳ ಜೀವನ ಮಟ್ಟವನ್ನು ಉತ್ತಮಪಡಿಸುವುದರಲ್ಲಿ ಸಹಾಯವಾಗಿದೆ.

ಆ) ಒಂದು ಒಳ್ಳೆಯ ಸಂಸ್ಥೆಯ ಮೂಲಕ ಸರ್ವೆ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಸಿದ್ದಯ್ಯ : ಇಲ್ಲಿ ನನ್ನ ಎರಡನೇಯ ಪ್ರಶ್ನೆಗೆ, ಒಂದು ಒಳ್ಳೆಯ ಸಂಸ್ಥೆ ಮೂಲಕ ಸರ್ವೆ ಮಾಡಿಸುತ್ತೇವೆ ಎಂದು ತಾವು ಹೇಳಿದ್ದೀರಿ. ಇದುವರೆಗೆ ಯಾವುದಾದರೂ ಒಂದು ಒಳ್ಳೆಯ ಸಂಸ್ಥೆಯನ್ನು ಪತ್ತೆ ಹಚ್ಚಿದ್ದೀರಾ? ಹಾಗೆ ಹಚ್ಚಿದ್ದರೆ ಯಾವುದು ಒಂದು ವೇಲೆ ಹಚ್ಚಿದ್ದರೆ ಇನ್ನು 1-2 ತಿಂಗಳಲ್ಲಿ ಸರ್ವೆ ಮಾಡುವುದಕ್ಕೆ ಅವರಿಗೆ ಏನೇನು ಬೇಕೋ ಅದನ್ನು ಒದಗಿಸಿಕೊಡುತ್ತೀರಾ? ಜೊತೆಗೆ ಈಗಾಗಲೇ ಒಂದೊಂದು ತಾಲ್ಲೂಕುಗಳಲ್ಲಿ ಸಹ ಒಂದು ರೆವ್ಯೂ ಕಮಿಟಿ ಇದೆ. ಆ ಕಮಿಟಿ ಮೂಲಕ ಇರತಕ್ಕಂಥ ರೆವ್ಯೂ ಫಿಗರ್ಸ್‌ನ್ನು ಸಪ್ಲೈ ಮಾಡಿಕೊಡುತ್ತೀರಾ?

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷಣಿಯವರೆ, ಈಗಾಗಲೇ ಎರಡನೆಯ ಪ್ರಶ್ನೆಗೆ ಮಾನ್ಯ ಸದಸ್ಯರು ಕೇಳಿದ ಹಾಗೆ ನಾವು ಇನ್ಸ್‌ಟಿಟ್ಯೂಟ್ ಆಫ್ ಸೋಷಿಯೋ ಎಕಾನಮಿಕ್ ಛೇಂಜಸ್, ಇದರಲ್ಲಿ ಬಡವರಿಗೆ 10 ಸಾವಿರ ರೂಪಾಯಿ ಕೊಡುತ್ತಿದ್ದೇವೆ. ನಿಜಾವಾಗಿಯೂ ಇದು ಕೂಡ ಅವರಿಗೆ ಮುಟ್ಟುತ್ತಾ ಇದೆಯೇ ಅಥವಾ ಇಲ್ಲವೇ?

ಅದನ್ನು ಯಾವ ರೀತಿಯಾಗಿ ಮಾಡಬೇಕು ಎಂಬ ಬಗ್ಗೆ ನಾವು ಆ ಸಂಸ್ಥೆಗೆ ವಹಿಸಿಕೊಟ್ಟಿದ್ದೇವೆ. ರಿಪೋರ್ಟ್ ಬಂದಮೇಲೆ ಅದರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಕೆ. ಸಿದ್ಧಯ್ಯ : ಅವರು ಮಾಡಿರತಕ್ಕಂಥಾದ್ದು ಸ್ವಾಗತಾರ್ಹ. ಒಂದೆರಡು ತಿಂಗಳಲ್ಲಿ ಇದು ಕಾರ್ಯೋನ್ಮುಖಿ ಆಗುವ ಹಾಗೆ ಅವರಿಗೆ ಏನೇನು ಸೌಲಭ್ಯಗಳು ಬೇಕೋ ಅದನ್ನು ಒದಗಿಸಿಕೊಟ್ಟು ಕೆಲಸ ಮಾಡುವುದಕ್ಕೆ ಅವಕಾಶ ಕೊಡುತ್ತೀರಾ? ಜೊತೆಗೆ ಅದಕ್ಕಿಂತ ಮುಂಚೆ ಈಗಾಗಲೇ ಪ್ರತಿಯೊಂದು ತಾಲ್ಲೂಕು ಲೆವೆಲ್‌ನಲ್ಲೂ ರೆವ್ಯೂ ಕಮಿಟಿಗಳು ಇವೆ. ತಾಲ್ಲೂಕು ಪಂಚಾಯಿತಿ ಕಮಿಟಿಗಳು ಇವೆ. ಅವು ರೆವ್ಯೂ ಮಾಡಿರುವ ಫಿಗರ್ಸ್‌ನ ಸಪ್ಲೈ ಮಾಡಿಸಿಕೊಡುತ್ತೀರ? ಕೊನೆಯ ಪಕ್ಷ ನಮ್ಮ ಚಾಮರಾಜ ನಗರದಲ್ಲಿ ತಾಲ್ಲೂಕಿನಲ್ಲಿ ಇರುವ ರೆವ್ಯೂ ಕಮಿಟಿ ಫಿಗರ್ ಗಳನ್ನು ಕೊಡಿಸಿಕೊಡುತ್ತೀರ?

ಶ್ರೀ ಧರ್ಮಸಿಂಗ್ : ನಾನು ಮೊನ್ನೆ ರಾಜ್ಯಮಟ್ಟದಲ್ಲಿ ಕೂಡ ರೆವ್ಯೂ ಮಾಡಿದ್ದೇನೆ. I have given direction to all t he Zilla Parishad Chief Secretaries, implementing agenciess.

ಅವರ ಕೇತ್ರಕ್ಕೆ ಸಂಬಂಧಪಟ್ಟಂತೆ ಬೇರೆ ಕಡೆ ಕೂಡ ರೆವ್ಯೂ ಮಾಡಿದ್ದರ, ಅಂಕಿ ಅಂಶಗಳನ್ನು ಕೊಡುತ್ತೇನೆ.

ಬೆಂಗಳೂರಿನ ಜಯನಗರದಲ್ಲಿ ಸಮುದಾಯ ಭವನ ನಿರ್ಮಾಣ

888-ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರಪಾಲಿಕೆಯಿಂದ 1983ರಲ್ಲಿ ಜಯನಗರ 5ನೇ ಬ್ಲಾಕ್ ನಲ್ಲಿ ಸಮುದಾಯ ಭವನ ಮಂಜೂರಾಗಿರುವುದು ನಿಜವೇ?

ಆ) ಹಾಗಿದ್ದಲ್ಲಿ ಜಯನಗರ 5ನೇ ಬ್ಲಾಕ್‌ನಲ್ಲಿ ಸಮುದಾಯಭವನ ನಿರ್ಮಾಣಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆಯೇ?

ಇ) ಹಾಗಿದ್ದಲ್ಲಿ ಅದಕ್ಕೆ ಸಕಾರಣಗಳೇನು?

ಈ) ಮೇಲಿನ ಕೆಲಸವನ್ನು ಯಾವಾಗ ತೆಗೆದುಕೊಳ್ಳಲಾಗುವುದು.

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಹೌದು

ಆ) ಇಲ್ಲ

ಇ) ಜಯನಗರ 5ನೇ ಬ್ಲಾಕ್‌ನ ನಿವಾಸಿಗಳು ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಡಬ್ಲ್ಯೂ ಪಿ.ನ. 7710:84, ದಿನಾಂಕ 7-5-84ರಂದು ತಂದ ಪ್ರಯುಕ್ತ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದಿಲ್ಲ.

ಈ) ಮೇಲೆ ತಿಳಿಸಿದ ತಡೆಯಾಜ್ಞೆಯ 24-4-90ರಂದು ತೆರವಾಗಿದೆ. ಕಾಮಗಾರಿ ಪ್ರಾರಂಭಿಸಲು ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ರಾಮಲಿಂಗಾರೆಡ್ಡಿ : 1983ರಲ್ಲಿ ಜಯನಗರ 5ನೇ ಬ್ಲಾಕಿನಲ್ಲಿ ಕಮ್ಯೂನಿಟಿ ಹಾಲ್ ಕಟ್ಟಬೇಕು ಎಂದು ಆಯಿತು. ಅಲ್ಲಿ ಲೋಕಲ್ ರೆಸಿಡೆನ್ಸಿ ಎಲ್ಲಾ ಕೋರ್ಟಿಗೆ ಹೋಗಿ ಒಂದು ಸ್ಟೇ ತಂದರು. 1989ರಲ್ಲಿ ಅದು ಸ್ಟೇ ವೆಕೇಂಟ್ ಆಯಿತು. ಸ್ಟೇ ವೆಕೇಂಟ್ ಆಗಿ ಎರಡು ವರ್ಷ ಆಗಿದ್ದರೂ ಇನ್ನು ಕಮ್ಯುನಿಟಿ ಹಾಲ್ ಕಟ್ಟುವುದಕ್ಕೆ ಆಗಿಲ್ಲ. ಕಾರ್ಪೊರೇಷನಿನ್ನವರು ಯಾವಾಗ ಇದನ್ನು ಪ್ರಾರಂಭ ಮಾಡುತ್ತಾರೆ?

ಶ್ರೀ ಚೌಡರೆಡ್ಡಿ : ಸನ್ಮಾನ್ಯ ಅಧ್ಯಕ್ಷರೇ, 1982-83ನೇ ಇಸವಿಯಲ್ಲಿ ಈ ಕಮ್ಯುನಿಟಿ ಹಾಲ್ ಕಟ್ಟಬೇಕು ಎಂದು 9.75 ಲಕ್ಷ ಎಸ್ಟಿಮೇಟ್‌ನ್ನು ಮಾಡಿದರು. ಅದು ಅಪ್ರೂವ್ ಆಯಿತು. ಈ ಮಧ್ಯೆ 7-8-94ರಲ್ಲಿ ಒಬ್ಬರು ರಿಟ್ ಪಿಟಿಷನ್ ಹೈಕೋರ್ಟಿನಲ್ಲಿ ಹಾಕಿ ಅದು ಸ್ಟೇ ಆಗಿ ಆ ರಿಟ್ ಪಿಟಿಷನ್ 24-10-90ರಲ್ಲಿ ವೇಕೆಂಟ್ ಆಗಿದೆ. ಅದು ಡಿಸ್ ಪೋಸ್ ಆಗಿಬಿಟ್ಟಿದೆ. ಈಗ 92-93ರಲ್ಲಿ ವರ್ಕ್ಸ್ ಕಮಿಟಿಯಲ್ಲಿ ಇದನ್ನು ಅಪ್ರೂವ್ ಮಾಡಿದ್ದಾರೆ. ಅದನ್ನು ಬೇಗ ಮಾಡಿಸುತ್ತೇನೆ.

ಶ್ರೀ ರಾಮಲಿಂಗರೆಡ್ಡಿ : ಹೈಕೋರ್ಟಿನಲ್ಲಿ ಸ್ಟೇ ಇತ್ತು, ಸ್ಟೇ ವೇಕೆಂಟ್ ಆಗಿ ಎರಡು ವರ್ಷ ಆಗಿದೆ. ಆದರೂ ಪ್ರಾರಂಭ ಮಾಡಿಲ್ಲ. ಯಾವಾಗ ಪ್ರಾರಂಭ ಮಾಡುತ್ತಾರೆ ಅದನ್ನು ಹೇಳಬೇಕು.

ಶ್ರೀ ಚೌಡರೆಡ್ಡಿ : ಇದು ವರ್ಕ್ಸ್ ಕಮಿಟಿಯಲ್ಲಿ 1992-93ರಲ್ಲಿ 21ಲಕ್ಷಕ್ಕೆ ಅಪ್ರೂವ್ ಆಗಿದೆ. ಮಂಜೂರು ಮಾಡಿದ್ದಾರೆ. ಬೇಗ ತೆಗೆದುಕೊಳ್ಳುತ್ತೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ವ್ಯವಸಾಯದ ಭೂಮಿಯ ಭೂ ಸ್ವಾಧೀನ.

711-ಶ್ರೀ ಬಿ.ಐ. ಪಾಟೀಲ್ (ಉಚಾಗಾಂವ್): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರವು ಫಲವತ್ತಾದ ವ್ಯವಸಾಯದ ಭೂಮಿಯನ್ನು ನಗರಾಭಿವೃದ್ಧಿ ಪ್ರಾಧಿಕಾರ ಭೂ ಸ್ವಾಧೀನ ಮಾಡಿದೆಯೇ?

ಆ) ಈ ಬಗ್ಗೆ ಸರ್ಕಾರದ ನೀತಿ ಏನು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಖಾಸಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಸತಿನಿಲಯದ ನಿರ್ಮಾಣದ ಬಗ್ಗೆ

1032-ಶ್ರೀ ಮನೋಹರ ಐನಾಪುರ (ಬೆಳ್ಗೊಳ್ಳಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ವಿದ್ಯಾಸಂಸ್ಥೆಯವರು ನಡೆಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅನುದಾನಿತ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕಾಗಿ ಎಷ್ಟು ಹಣ ಒದಗಿಸಲಾಗಿದೆ?

ಆ) ಹಾಗಾದರೆ, 1992-93ನೇ ಸಾಲಿನಲ್ಲಿ ಎಷ್ಟು ವಿದ್ಯಾರ್ಥಿನಿಲಯಗಳನ್ನು ಸರ್ಕಾರವು ಮಂಜೂರು ಮಾಡಲಾಗಿದೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

ಅ) 1992-93ನೇ ಸಾಲಿನಲ್ಲಿ ರೂ. 20,000 ಲಕ್ಷ ಒದಗಿಸಲಾಗಿದೆ.

ಆ) 1992-93ನೇ ಸಾಲಿನಲ್ಲಿ ಇದುವರೆಗೆ ಒಂದು ಅನುದಾನಿತ ವಿದ್ಯಾರ್ಥಿನಿಲಯಕ್ಕೆ ರೂ. 75,500 ಗಳ ಧನಸಹಾಯ ನೀಡಲಾಗಿದೆ. ಪ್ರಸ್ತಾವನೆಗಳು ಬಂದ ಹಾಗೆ, ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಪ. ಜಾತಿ, ಪ.ವರ್ಗದ ವಿದ್ಯಾರ್ಥಿನಿಯರ ವಿದ್ಯಾರ್ಥಿ ನಿಲಯಗಳ ದುರಸ್ತಿ.

707- ಶ್ರೀ ಅಂಜನಾಮೂರ್ತಿ (ನೆಲಮಂಗಲ): ಮಾನ್ಯ ಸಮಾಜ ಕಲ್ಯಾಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಾದ್ಯಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) *ಕೆಲವು ಕಡೆ ವಿದ್ಯಾರ್ಥಿಗಳು ಊಟ ಮಾಡುವುದು ಒಂದು ಕಡೆ ವಾಸ್ತವ್ಯ ವಿರುವುದು ಮತ್ತೊಂದು ಕಡೆ ಎಂಬುದು ಸರ್ಕಾರದ, ಗಮನಕ್ಕೆ ಬಂದಿದೆಯೇ ?*

ಇ) *ಹಾಗಿದ್ದಲ್ಲಿ, ವಿದ್ಯಾರ್ಥಿನಿಲಯಗಳ ದುರಸ್ತಿಗಾಗಿ ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು ?*

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

ಅ) ಕೆಲವು ವಿದ್ಯಾರ್ಥಿನಿಲಯಗಳಿಗೆ ಮಾತ್ರ ತುರ್ತಾಗಿ ದುರಸ್ತಿ ಮತ್ತು ನವೀಕರಣಗೊಳಿಸುವ ಅಗತ್ಯವಿದೆ.

ಆ) ಸರ್ಕಾರವು ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಇಂತಹ ಪರಿಸ್ಥಿತಿ ಇರುವುದಿಲ್ಲ. ಸಾಕಷ್ಟು ಸ್ಥಳಾವಕಾಶ ಒಂದೇ ಕಟ್ಟಡದಲ್ಲಿ ಇಲ್ಲದೇ ಇರುವ ಕಾರಣ, ಕೆಲವು ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿ ಊಟದ ವ್ಯವಸ್ಥೆ ಒಂದು ಕಡೆ, ಮತ್ತೆ ವಸತಿ ಮತ್ತೊಂದು ಕಡೆ ಒದಗಿಸಲಾಗಿದೆ. ಅಂತಹ ಖಾಸಗಿ ಸಂಸ್ಥೆಗಳಿಗೆ ಎಲ್ಲಾ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ಒಂದೇ ಸ್ಥಳದಲ್ಲಿ ಆದಷ್ಟು ಬೇಗ ಒದಗಿಸುವಂತೆ ಸೂಚನೆಗಳನ್ನು ನೀಡಲಾಗಿದೆ.

ಇ) ಸರ್ಕಾರವು ಈಗಾಗಲೇ ಹಾಲಿ ಇರುವ ವಿದ್ಯಾರ್ಥಿನಿಲಯಗಳಿಗೆ ದುರಸ್ತಿ ಮತ್ತು ನವೀಕರಣ ಕಾರ್ಯವನ್ನು ಕೈಗೊಂಡಿದೆ. ಇದಕ್ಕಾಗಿ 3.00 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ.

ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಜನಾಂಗದವರ ಪಂಪ್ ಸೆಟ್‌ಗಳಿಗೆ ವಿದ್ಯುತ್.

708- ಶ್ರೀ ಅಂಜನಾಮೂರ್ತಿ (ನೆಲಮಂಗಲ): ಮಾನ್ಯ ಸಮಾಜ ಕಲ್ಯಾಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ನೆಲಮಂಗಲ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಜನಾಂಗಕ್ಕೆ ಸೇರಿದ ನೀರಾವರಿ ಪಂಪ್ ಸೆಟ್ ಗಳೆಷ್ಟು ?*

ಆ) *ಅವುಗಳಲ್ಲಿ ವಿದ್ಯುತ್ ಸೌಕರ್ಯಗಳನ್ನು ಒದಗಿಸಿರುವ ಪಂಪ್‌ಸೆಟ್‌ಗಳೆಷ್ಟು ?*

ಇ) *ಆ ಜನಾಂಗಕ್ಕೆ ಸೇರಿದ ಪಂಪ್‌ಸೆಟ್‌ಗಳೆಲ್ಲವಕ್ಕೂ ವಿದ್ಯುತ್ ಸೌಕರ್ಯವನ್ನು ಒದಗಿಸಲಾಗಿದೆಯೇ ?*

ಈ) *ಇಲ್ಲದಿದ್ದಲ್ಲಿ ವಿದ್ಯುತ್ ಸೌಕರ್ಯವನ್ನು ಒದಗಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು ?*

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

ಅ) ನೆಲಮಂಗಲ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಕ್ಕೆ ಸೇರಿದ ನೀರಾವರಿ ಪಂಪ್‌ಸೆಟ್‌ಗಳ ಸಂಖ್ಯೆ ಒಟ್ಟು 150

ಆ) 124

ಇ) ಇಲ್ಲ.

ಈ) ಉಳಿದ 26 ನೀರಾವರಿ ಪಂಪ್‌ಸೆಟ್‌ಗಳ ಪೈಕಿ 8 ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಒದಗಿಸುವ ಕೆಲಸ ಕಾರ್ಯ ಪ್ರಗತಿಯಲ್ಲಿರುತ್ತದೆ. 8 ಪಂಪ್ ಸೆಟ್‌ಗಳಿಗೆ ವಿದ್ಯುತ್ ಮಂಜೂರಾಗಿರುತ್ತದೆ. 10 ನೀರಾವರಿ ಪಂಪ್‌ಸೆಟ್‌ಗಳ ವಿದ್ಯುದ್ದೀಕರಣದ ಅಂದಾಜು ವೆಚ್ಚ ತಯಾರಿಸಬೇಕಾಗಿರುತ್ತದೆ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಭೂ ಸ್ವಾಧೀನಕ್ಕೆ ಪರಿಹಾರ.

712-ಶ್ರೀ ಬಿ.ಐ. ಪಾಟೀಲ್ (ಉಚಂಗಾವ್): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿಯು ವಸತಿ ನಿವೇಶನಗಳ ಬಗ್ಗೆ ಜಮೀನು ಭೂಸ್ವಾದೀನ ಮಾಡಿಕೊಂಡಿದ್ದರ ಬಗ್ಗೆ ಭೂ ಪರಿಹಾರ ಧನ ಕೊಡುವುದರಲ್ಲಿ ಬಹಳ ವಿಳಂಬವಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ವಿಳಂಬವಾಗಿದ್ದಲ್ಲಿ ಇದರ ಬಗ್ಗೆ ಪರಿಹಾರ ಧನ ಕೊಡಲು ಸರ್ಕಾರವು ಯಾವ ಕ್ರಮ ತೆಗದುಕೊಳ್ಳಲಾಗಿದೆ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶಿಗ್ಗಾಂವ್ ನಗರದಲ್ಲಿ ಅಂಗನವಾಡಿ ಕೇಂದ್ರ ಪ್ರಾರಂಭ

728- ಶಿಗ್ಗಾಂವ್ ಸಿ. ಕುನ್ನೂರ (ಶಿಗ್ಗಾಂವ್): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರವನ್ನು ಪ್ರಾರಂಭಿಸಲು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದಿಂದ ಅನುಮತಿ ನೀಡಲಾಗಿದೆಯೆ?

ಆ) ಹಾಗಿದ್ದಲ್ಲಿ, ಇನ್ನೂ ಎಷ್ಟು ದಿನಗಳಲ್ಲಿ ಸದರಿ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

ಅ) ಕೇಂದ್ರ ಸರ್ಕಾರವು ಅನುಮತಿ ನೀಡಿದೆ.

ಆ) ರಾಜ್ಯ ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ಹಣಕಾಸು ಇಲಾಖೆ ಮತ್ತು ಯೋಜನಾ ಇಲಾಖೆಗಳೊಂದಿಗೆ ಪರಿಶೀಲಿಸಿ, ತ್ವರಿತವಾಗಿ ಜಾರಿಯಲ್ಲಿ ತರಲಾಗುವುದು.

ಶಿಗ್ಗಾಂವ್ ಸವಣೂರು ನಗರ ಸಭೆಯ ಅಭಿವೃದ್ಧಿ.

729- ಶ್ರೀಮಂಜುನಾಥ ಪಿ. ಕುನ್ನೂರ (ಶಿಗ್ಗಾಂವ್): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ್ ಅಥವಾ ಸವಣೂರು ಪಟ್ಟಣಗಳನ್ನು ಐ.ಡಿ.ಎಸ್.ಎಂ.ಟಿ. ಸ್ಕೀಮಿನಲ್ಲಿ ಅಳವಡಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಅವುಗಳನ್ನು ಎಷ್ಟು ದಿವಸಗಳಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) ಮೇಲೆ (ಅ)ಗೆ ಕೊಟ್ಟಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

1992-93ಸಾಲಿನ ಮಂಜೂರಾದ ವಸತಿ ಸೌಲಭ್ಯ

730- ಶ್ರೀ ಮಂಜುನಾಥ್ ಪಿ. ಕುನ್ನೂರ (ಶಿಗ್ಗಾಂವ್): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1992-93ನೇ ಸಾಲಿನಲ್ಲಿ ಎಷ್ಟು ಜನರಿಗೆ ವಸತಿ ವ್ಯವಸ್ಥೆ ಮಾಡಲಾಗಿದೆ?

ಆ) ಅದಕ್ಕಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ?

ಶ್ರೀ ಗೋಪಿನಾಥ್ ಸಾಂಡ್ರ(ವಸತಿ ಸಚಿವರು):

ಅ) ಕರ್ನಾಟಕ ಗೃಹ ಮಂಡಳಿ 1992-93ನೇ ಸಾಲಿನಲ್ಲಿ ರಾಜ್ಯದಲ್ಲಿ ನವೆಂಬರ್ ಅಂತ್ಯದವರೆಗೆ 3644 ಮನೆಗಳನ್ನು ನಿರ್ಮಿಸಿದೆ.

ಆ) 28.03 ಕೋಟಿ ರೂ.ಗಳು.

ವರದಾ ನದಿಯಿಂದ ಸಂಯುಕ್ತ ಕುಡಿಯುವ ನೀರಿನ ಯೋಜನೆ

731- ಶ್ರೀ ಮಂಜುನಾಥ ಪಿ. ಕುನ್ನೂರ (ಶಿಗ್ಗಾಂವ್): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವರದಾ ನದಿಯಿಂದ ಸವಣೂರು, ಶಿಗ್ಗಾಂವ್ ಬಂಕಾಪುರ ಸಂಯುಕ್ತ ಕುಡಿಯುವ ನೀರಿನ ಯೋಜನೆ ಎಂದು ಮಂಜೂರಾಗಿದೆ.

ಆ) ಸದರಿ ಯೋಜನೆಯನ್ನು ಎಷ್ಟು ದಿವಸಗಳಲ್ಲಿ ಪ್ರಾರಂಭಿಸಲಾಗುವುದು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಆದೇಶ ಸಂ: ಹೆಚ್‌ಯುಡಿ:61:ಯುಡಬ್ಲ್ಯುಎಸ್: 91,ದಿನಾಂಕ:9Ë10Ë91ರಂದು ಮಂಜೂರಾಗಿದೆ.

ಆ) ನಾಗನೂರು ಕೆರೆಯ ಅಭಿವೃದ್ಧಿ ಕೆಲಸವನ್ನು ಕರ್ನಾಟಕ ರಾಜ್ಯ ನಿರ್ಮಾಣನಿಗಮ ಇವರಿಗೆ ವಹಿಸಿಕೊಡಲಾಗಿದೆ. ಶಿಗ್ಗಾಂವ್ ಬಳಿಯ ನಾಗನೂರು ಕೆರೆಯು ಸಣ್ಣ ನೀರಾವರಿ ಇಲಾಖೆಯಿಂದ ಜಲ ಮಂಡಳಿಗೆ ಹಸ್ತಾಂತರಗೊಂಡಿಲ್ಲದಿರುವುದರಿಂದ ಕೆಲಸವನ್ನು ಪ್ರಾರಂಭಿಸಿರುವುದಿಲ್ಲ. ಉಳಿದ ಕೆಲಸಗಳಿಗೆ ಟೆಂಡರ್‌ಗಳನ್ನು ಇನ್ನು ಒಂದು ತಿಂಗಳಲ್ಲಿ ಕರೆದು, ಕೆಲಸಗಳನ್ನು ಗುತ್ತಿಗೆದಾರರಿಗೆ ವಹಿಸಿಕೊಟ್ಟು, ನಂತರ ಕೆಲಸಗಳನ್ನು ಪ್ರಾರಂಭಿಸಲಾಗುವುದು.

ಅಂಗವಿಕಲರಿಗೆ ಮಾಷಾಶನ

852-ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಅಂಗವಿಕಲರಿಗೆ ಮಾಸಿಕ ಭತ್ಯೆಯನ್ನು ಕೊಡುತ್ತಿದೆಯೇ?

ಆ) ಹಾಗಿದ್ದಲ್ಲಿ ಅಂಗವಿಕಲರಿಗೆ ಹಾಲಿ ಕೊಡುತ್ತಿರುವ ಮಾಸಿಕ ಭತ್ಯೆ ಎಷ್ಟು?

ಇ) ಈವರೆಗೆ ಎಷ್ಟು ಫಲಾನುಭವಿಗಳಿಗೆ ಮಾಸಿಕ ಭತ್ಯೆಯನ್ನು ಮಂಜೂರು ಮಾಡಲಾಗಿದೆ?

(ಜಿಲ್ಲಾವಾರು ವಿವರಗಳನ್ನು ಕೊಡುವುದು)

ಈ) ಸದರಿ ಮಾಸಿಕ ಭತ್ಯೆಯನ್ನು ಕನಿಷ್ಠ 200 ರೂ.ಗಳಿಗೆ ಹೆಚ್ಚಿಸುವ ಯಾವುದೇ ಪ್ರಸ್ತಾವನೆಯು ಇದೆಯೇ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) ಮಾಸಿಕ ಭತ್ಯೆ ರೂ. 50-00

ಇ) ಅಕ್ಟೋಬರ್ 1992ಕ್ಕೆ, 2,63,919 ಮಂದಿಗೆ ಮಾಸಿಕ ಭತ್ಯೆಯನ್ನುಮಂಜೂರು ಮಾಡಲಾಗಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೋಡಬಹುದು)

ಈ) ಇಲ್ಲ, ಆದರೆ ಅಂಗವಿಕಲರ ಮಾಸಿಕ ಭತ್ಯೆಯನ್ನು ಮಾಹೆಯಾನ ರೂ. 50 ರಿಂದ 75ಕ್ಕೆ ಹೆಚ್ಚಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಅನುಬಂಧ

ಅಕ್ಟೋಬರ್ 92ಕ್ಕೆ, ಅಂಗವಿಕಲರ ಮಾಶಾಸನಗಳ ಜಿಲ್ಲಾವಾರು ವಿವರಗಳು.

ಕ್ರ. ಸಂ.	*ಜಿಲ್ಲೆಯ ಹೆಸರು*	*ಫಲಾನುಭವಿಗಳ ಸಂಖ್ಯೆ*
1.	ಬೆಂಗಳೂರು (ನಗರ)	12,473
2.	ಬೆಂಗಳೂರು (ಗ್ರಾಮಾಂತರ)	42,776
3.	ಬಳ್ಳಾರಿ	8,321
4.	ಕೋಲಾರ	15,385
5.	ತುಮಕೂರು	16,001
6.	ಚಿತ್ರದುರ್ಗಾ	8,309
7.	ಮೈಸೂರು	4,592
8.	ಮಂಗಳೂರು	14,611
9.	ಮಂಡ್ಯ	14,683
10.	ಕೊಡಗು	2,670
11.	ಚಿಕ್ಕಮಗಳೂರು	5,796
12.	ಶಿವಮೊಗ್ಗ	12,865
13.	ಹಾಸನ	11,936
14.	ಬೆಳಗಾವಿ	18,019
15.	ಕಾರವಾರ	6,988
16.	ಧಾರವಾಡ	26,748
17.	ವಿಜಾಪುರ	16,113
18.	ಗುಲ್ಬರ್ಗಾ	13,048
19.	ರಾಯಚೂರು	9,306
20.	ಬೀದರ್	7,699
	ಒಟ್ಟು ಫಲಾನುಭವಿಗಳು	*2,63,919*

ಲಕ್ಕ ಸಂದ್ರದ ಲಾಲಾಜಿನಗರದ ಪಕ್ಕದಲ್ಲಿರುವ ಶ್ರೀ ರಾಮಯ್ಯ ರಸ್ತೆಯಲ್ಲಿ ಅನಧಿಕೃತ ಮನೆಗಳು

894- ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ನಗರಾಭಿವೃಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಕ್ಕಸಂದ್ರದ ಲಾಲಾಜಿನಗರದ ಪಕ್ಕದಲ್ಲಿರುವ ಶ್ರೀ ರಾಮಯ್ಯ ರಸ್ತೆಯಲ್ಲಿ ಹಲವಾರು ಅನಧಿಕೃತ ಮನೆಗಳನ್ನು ಕಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ರಸ್ತೆಯ ಮೇಲ್ಭಾಗದಲ್ಲಿ ಬಂದಿರುವ ಅನಧಿಕೃವಾಗಿ ಕಟ್ಟಿದ ಮನೆಗಳ ಸಂಖ್ಯೆ ಎಷ್ಟು?

ಇ) ಈ ಅನಧಿಕೃತ ಕಟ್ಟಡಗಳನ್ನು ತೆಗೆದುಹಾಕಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮವೇನು?

ಈ) ರಸ್ತೆಯ ಮೇಲ್ಭಾಗದಲ್ಲಿ ಕಟ್ಟಿರುವ ಅನಧಿಕೃತ ಮನೆಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ

ಆ) ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇದೇ

ಈ) ಅದೇ

ಅನುಮತಿಯಿಲ್ಲದೆ ಬಿಸಿ ಮಿಶ್ರಣ ಯಂತ್ರವನ್ನು ನಡೆಸುತ್ತಿರುವ ಬಗ್ಗೆ

895-ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ನಗರಾಭಿವೃಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ವ್ಯಕ್ತಿಯೊಬ್ಬರು ಬೆಂಗಳೂರು ನಗರಪಾಲಿಕೆಯ ಅನುಮತಿ ಪಡೆಯದೇ ಬಿಸಿ ಮಿಶ್ರಣ ಯಂತ್ರವನ್ನು ಜಯನಗರ ಕ್ಷೇತ್ರದ ಸುದ್ದಗುಂಟೆ ಪಾಳ್ಯಕೆರೆಯಲ್ಲಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಬಿಸಿಮಿಶ್ರಣ ಯಂತ್ರವನ್ನು ನಡೆಸುತ್ತಿರುವವರು ಯಾರು?

ಇ) ಈ ಯಂತ್ರದಿಂದ ಹೊಸಬರುವ ಹೊಗೆಯ ಪರಿಸರವನ್ನು ಕಲುಷಿತಗೊಳಿಸುವುದಲ್ಲದೆ ಆ ಸುತ್ತಮುತ್ತಲಿನ ಜನರಿಗೆ ಹೊಸತರವಾದ ರೋಗಗಳು ಹರಡುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಈ ಕಾನೂನು ಬಾಹಿರ ಯಂತ್ರಸ್ಥಾವರವನ್ನು ತೆಗೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಹೌದು

ಆ) ನಗರಸಭೆಯಲ್ಲಿ ನೋಂದಾಯಿತ ಗುತ್ತಿಗೆದಾರರಾದ ಶ್ರೀ ಚಂದ್ರಶೇಖರ್ ಎಂಬುವವರು ಈ ಬಿಸಿ ಮಿಶ್ರಣ ಯಂತ್ರವನ್ನು ನಡೆಸುತ್ತಿದ್ದರು.

ಇ) ಹೌದು.

ಈ) ಈ ಬಿಸಿ ಮಿಶ್ರಣ ಯಂತ್ರವು ಒಂದು ವರ್ಷದಿಂದ ಈ ಸ್ಥಳದಲ್ಲಿರುತ್ತದೆ. ಈ ಬಿಸಿ ಮಿಶ್ರಣ ಯಂತ್ರವನ್ನು ನಡೆಸದ ಹಾಗೆ ನಿಲ್ಲಿಸಲಾಗಿದೆ. ಈ ಯಂತ್ರವನ್ನು ಕೂಡಲೇ ನಗರಸಭೆಯ ಜಾಗದಿಂದ ತೆಗೆಯಲು ಗುತ್ತಿಗೆದಾರರಿಗೆ ತೀವ್ರವಾದ ಎಚ್ಚರಿಕೆ ನೀಡಲಾಗಿದೆ. ಇದರ ಪ್ರಕಾರ ಗುತ್ತಿಗೆದಾರರು ಯಂತ್ರವನ್ನು ಬೇರೆ ಕಡೆ ಸ್ಥಳಾಂತರಿಸುವ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಹಾಗೂ ಈ ಯಂತ್ರವನ್ನು ಜನವರಿ 93ರ ಒಳಗಾಗಿ ಸ್ಥಳಾಂತರಿಸಲಾಗುವುದು.

ಬಂಗಾರಪೇಟೆ ತಾಲ್ಲೂಕಿನಲ್ಲಿರುವ ಹಾಸ್ಟೆಲ್‌ಗಳ ಸಂಖ್ಯೆ

854E ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಗಾರಪೇಟೆ ತಾಲ್ಲೂಕಿನಲ್ಲಿರುವ ಹಾಸ್ಟೆಲ್‌ಗಳೆಷ್ಟು? (ವಿವರ ನೀಡುವುದು):

ಆ) ಅವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಹಾಸ್ಟೆಲ್‌ಗಳೆಷ್ಟು ಹಾಗೂ ಹಿಂದುಳಿದವರ ಹಾಸ್ಟೆಲ್ ಗಳೆಷ್ಟು(ವಿವರ ನೀಡುವುದು):

ಇ) ಈ ಮೇಲ್ಕಂಡ ಹಾಸ್ಟೆಲ್‌ಗಳ ದುರಸ್ತಿ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆಯೇ ಹಾಗಿದ್ದಲ್ಲಿ ಯಾವಾಗ ಪೂರ್ಣಗೊಳಿಸಲಾಗುವುದು.

ಈ) ಈ ತಾಲ್ಲೂಕಿನಲ್ಲಿ ಇನ್ನು ಹಾಸ್ಟೆಲುಗಳ ಅವಶ್ಯಕತೆ ಇದೆಯೇ ಅವಶ್ಯಕತೆ ಇದ್ದಲ್ಲಿ ಅವುಗಳನ್ನು ಪ್ರಾರಂಭಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

ಅ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಸಮಾಜ ಕಲ್ಯಾಣ ಒಟ್ಟು ಇಲಾಖೆ

	ಬಾಲಕ	ಬಾಲಕಿಯರು	ಬಾಲಕ	ಬಾಲಕಿಯರು	
ಮೆಟ್ರಿಕ್ ಪೂರ್ವ	1	1	6	4	12
ಮೆಟ್ರಿಕ್ ನಂತರ	1	-	-	-	1
	2	1	6	4	13

ಇ) 3 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಕಟ್ಟಡದ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗಿದ್ದು, ಮುಂಬರುವ ಜೂನ್ ಒಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಈ) ಅವಶ್ಯಕತೆಯನ್ನು ಗಮನಿಸಿ, ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

ಸೇಡಂ ಪುರಸಭೆ ಕೊಳಚೆ ಪ್ರದೇಶ ಅಭಿವೃದ್ಧಿ ಕುರಿತು.

867 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ನೇ ಸಾಲಿನಲ್ಲಿ ಸೇಡಂ ಪುರಸಭೆ ವ್ಯಾಪ್ತಿಯಲ್ಲಿರುವ 7 ಕೊಳಚೆ ಪ್ರದೇಶಗಳನ್ನು ಗುರುತಿಸಿರುವುದು ನಿಜವಲ್ಲವೆ?

ಆ) ಮೇಲ್ಕಂಡ ಸಾಲಿನಲ್ಲಿ ಸೇಡಂನಲ್ಲಿನ ಇಂದಿರಾನಗರದ ಅಭಿವೃದ್ಧಿಗಾಗಿ ಮೂರು ಲಕ್ಷ ರೂ.ಗಳನ್ನು ಮಂಜೂರು ಮಾಡಲಾಗಿದ್ದು, ಆದಷ್ಟು

ಉಳಿದಿರುವ ಕೊಳಚೆ ಪ್ರದೇಶಗಳನ್ನು ಆದ್ಯತೆ ಮೇರೆಗೆ ಸರ್ಕಾರದವರು ತೆಗೆದುಕೊಳ್ಳುವುದಾ ತಿಳಿಸಿದ್ದು ಕಾರ್ಯಗತವಾಗಿದೆಯೇ?

ಇ) ಮಂಜೂರು ಮಾಡಲಾಗಿದ್ದು 3.00 ಲಕ್ಷ ರೂ. ಹಣದಲ್ಲಿ ಇದುವರೆಗೆ ಬಿಡುಗಡೆಯಾಗಿರುವ ಹಣವೆಷ್ಟು ಹಾಗೂ ಖರ್ಚಾಗಿರುವ ಹಣವೆಷ್ಟು?

ಈ) ಅಭಿವೃದ್ಧಿ ಕಾರ್ಯಗಳಲ್ಲಿನ ವಿಳಂಬಕ್ಕೆ ಕಾರಣವೇನು?

ಉ) ಬಿಡುಗಡೆಯಾದ ಹಣವನ್ನು ಕಾಮಗಾರಿಗಳಿಗಾಗಿ ಸಮರ್ಪಕವಾಗಿ ಉಪಯೋಗಿಸಲಾಗಿದೆಯೇ?

ಊ) ದುರುಪಯೋಗವಾಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) 1989-90 ಸಾಲಿನಲ್ಲಿ ಎರಡು ಕೊಳಚೆ ಪ್ರದೇಶಗಳನ್ನು 1990-91ರಲ್ಲಿ ಐದು ಕೊಳಚೆ ಪ್ರದೇಶಗಳನ್ನು ಒಟ್ಟು 7 ಕೊಳಚೆ ಪ್ರದೇಶಗಳನ್ನು ಸೇಡಂ ಪಟ್ಟಣದಲ್ಲಿ ಗುರುತಿಸಲಾಗಿದೆ

ಆ) 1990-91ರ ಸಾಲಿನಲ್ಲಿ ಸೇಡಂನಲ್ಲಿರುವ ಇಂದಿರಾನಗರದ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ 3.00 ಲಕ್ಷ ರೂ.ಗಳನ್ನು ಮಂಜೂರು ಮಾಡಿರುವುದಿಲ್ಲ. ಆದರೆ 1989E90ನೇ ಸಾಲಿನಲ್ಲಿ 1.77 ಲಕ್ಷ ರೂ. (ಅಂದಾಜಿನಲ್ಲಿ) ಇಂದಿರಾನಗರದ ಹರಿಜನವಾಡಾ ಕೊಳಚೆ ಪ್ರದೇಶದ ಅಭಿವೃದ್ಧಿ ಕಾಮಗಾರಿಗಾಗಿ ಒದಗಿಸಲಾಗಿದೆ. ಈ ಪೈಕಿ ಗುತ್ತಿಗೆದಾರ 1.12 ಲಕ್ಷ ರೂ.ಗಳ ಕೆಲಸ ಮಾಡಿದ್ದಾರೆ. ಇದೇ ಆರ್ಥಿಕ ಸಾಲಿನಲ್ಲಿ ಸೇಡಂ ಹೊಸ ಹರಿಜನವಾಡಾ ಕೊಳಚೆ ಪ್ರದೇಶದ ಅಭಿವೃದ್ಧಿ ಕಾಮಗಾರಿಗಳಿಗಾಗಿ 3.69ಲಕ್ಷ ರೂ.ಗಳನ್ನು ಒದಗಿಸಲಾಗಿರುತ್ತದೆ. ಈ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಮುಖೇನ ಗುತ್ತಿಗೆದಾರರಿಗೆ ವಹಿಸಲಾಗಿದೆ

ಇ) ಇಂದಿರಾನಗರ ಹೊಸ ಹರಿಜನವಾಡ ಕೊಳಚೆ ಪ್ರದೇಶದ ಅಭಿವೃದ್ಧಿಗೆ 1.77 ಲಕ್ಷ ರೂ. ಮಂಜೂರಾಗಿದ್ದು, ಗುತ್ತಿಗೆದಾರರು 1.12 ಲಕ್ಷ ರೂ.ಗಳಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಹಣ ಪಡೆದಿರುತ್ತಾರೆ. ಹಾಗೂ ಹೊಸ ಹರಿಜನವಾಡ ಕೊಳಚೆ ಪ್ರದೇಶಕ್ಕೆ 3.69 ಲಕ್ಷ ರೂ.ಮಂಜೂರು ಮಾಡಲಾಗಿದ್ದು ಗುತ್ತಿಗೆದಾರರು ಈವರೆಗೆ 1.81 ಲಕ್ಷ ರೂ.ಗಳ ಅಭಿವೃದ್ಧಿ ಕೆಲಸಗಳನ್ನು ಪೂರ್ಣ ಗೊಳಿಸಿದ ಹಣ ಪಡೆದಿರುತ್ತಾರೆ.

ಈ) ಅಭಿವೃದ್ಧಿ ಕಾರ್ಯಗಳಲ್ಲಿನ ವಿಳಂಬಕ್ಕೆ ಗುತ್ತಿಗೆದಾರರು ಕೆಲಸ ನಡೆಯುವ ಸಮಯದಲ್ಲಿ ಲೋಕೋಪಯೋಗಿ ಇಲಾಖೆಯ ಹೊಸ ದರಪಟ್ಟಿ ಬಂದ ಕಾರಣ ಹೊಸ ದರಪಟ್ಟಿಯಂತೆ ಹಣ ಪಾವತಿ ಮಾಡಲು ಕೋರಿ ಕೆಲಸ ಸ್ಥಗಿತ ಗೊಳಿಸಿದ್ದೆ ಕಾರಣವಾಗಿರುತ್ತದೆ.

ಉ) ಹೌದು, ಈ ತನಕ ಖರ್ಚಾಗಿರುವ ಹಣವನ್ನು ಪೂರ್ಣಗೊಂಡಿರುವ ಕೆಲಸಗಳಿಗೆ ಮಾತ್ರ ಕೊಡಲಾಗಿರುತ್ತದೆ.

ಊ) ಈ ಕೆಲಸಗಳಿಗೆ ಮಂಜೂರಾಗಿದ್ದು ಹಣದಲ್ಲಿ ಯಾವುದೇ ದುರುಪಯೋಗವಾಗಿರುವುದಿಲ್ಲ. ಕಾರಣ ಗುತ್ತಿಗೆದಾರರಿಗೆ ಅವರು ಸಂಪೂರ್ಣವಾಗಿ ನಿರ್ವಹಿಸಿರುವಷ್ಟು ಕೆಲಸಕ್ಕೆ ಮಾತ್ರ ಹಣ ಪಾವತಿ ಮಾಡಲಾಗಿದೆ.

ಚಾಮರಾಜನಗರದಲ್ಲಿ ಪರಿಶಿಷ್ಟ ಜಾತಿಯವರಿಗೆ ವಿದ್ಯಾರ್ಥಿನಿಲಯದ ಕಟ್ಟಡದ ಬಗ್ಗೆ.

858 - ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಾಮರಾಜನಗಲದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಪದವಿಪೂರ್ವ ವಿದ್ಯಾರ್ಥಿಗಳು ಹಾಸ್ಟೆಲ್ ಸೌಲಭ್ಯವಿಲ್ಲದೆ ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಸರ್ಕಾರ ಇವರ ಕೋರಿಕೆಯನ್ನು ಪರಿಗಣಿಸುವುದೇ?*

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಹಾಲಿ ಮೈಸೂರು ವಿಶ್ವವಿದ್ಯಾಲಯದಿಂದ ನಡೆಯುತ್ತಿರುವ ಹಾಸ್ಟೆಲ್ ಕಟ್ಟಡದ ಮೇಲೆ ಮೊದಲನೆಯ ಮಹಡಿಯನ್ನು ನಿರ್ಮಿಸಿ, ವಿದ್ಯಾರ್ಥಿಗಳಿಗೆ ಹೆಚ್ಚುವರಿ ಹಾಸ್ಟೆಲ್ ಸೌಲಭ್ಯ ಕಲ್ಪಿಸಲು 33 ಕೊಠಡಿಗಳನ್ನು ಕಟ್ಟಲು ರೂ. 14.63 ಲಕ್ಷ ರೂ.ಗಳನ್ನು

ಬಿಡುಗಡೆ ಮಾಡಲು ಸರ್ಕಾರದವನ್ನು ವಿಶ್ವವಿದ್ಯಾನಿಲಯವು ಕೋರಿದ್ದು ಪರಿಶೀಲನೆಯಲ್ಲಿದೆ.

ಚಾಮರಾಜನಗರ ತಾಲ್ಲೂಕಿನ ಕುಡೇರಿನ ಪಿ.ಯು.ಸಿ. ವಿದ್ಯಾರ್ಥಿನಿಲಯದ ಬಗ್ಗೆ.

859 - ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಾಮರಾಜನಗರ ತಾಲ್ಲೂಕು ಕುಡೇರಿನ ಸಾರ್ವಜನಿಕರಿಂದ ಹಾಗೂ ಪ್ರಾಚಾರ್ಯರು ಪದವಿಪೂರ್ವ ಕಾಲೇಜು ಹಾಗೂ ವಾಣಿಜ್ಯ ಪ್ರಾಚಾರ್ಯರುಗಳಿಂದ ಕುಡೇರಿನಲ್ಲಿ ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯ ಕಟ್ಟಡ ಕಟ್ಟುರ ಸಲುವಾಗಿ ಅರ್ಜಿಗಳು ಬಂದಿರುವುದು ನಿಜವೇ?*

ಆ) *ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?*

ಇ) *ಇಲ್ಲದಿದ್ದಲ್ಲಿ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯ ಕಟ್ಟಡವನ್ನು ಕೂಡಲೇ ಕಟ್ಟುವುದೇ?*

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು

ಆ)ಮತ್ತು ಇ) ವಸತಿನಿಲಯದ ಕಟ್ಟಡಕ್ಕೆ ಸೂಕ್ತ ನಿವೇಶನವನ್ನು ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ನಿವೇಶನ ಪಡೆದ ನಂತರ, ಕಟ್ಟಡ ಕಟ್ಟುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರು ಲಕ್ಕಸಂದ್ರ ಮೊದಲನೇ ಮುಖ್ಯ ರಸ್ತೆ ಹಾಗೂ ಸುಣ್ಣಕಲ್ ಫಾರ್ಮ್‌ರಸ್ತೆ ಮಧ್ಯ ಗೃಹ ನಿರ್ಮಾಣ ಮಂಡಳಿಯ ವಿಸ್ತೀರ್ಣ.

885 - ಶ್ರೀ ರಾಮಲಿಂಗಾರೆಡ್ಡಿ, (ಜಯನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಲಕ್ಕಸಂದ್ರ ಮೊದಲನೇ ಮುಖ್ಯರಸ್ತೆ ಹಾಗೂ ಸುಣ್ಣಕಲ್ ಫಾರ್ಮ್‌ರಸ್ತೆ (ಬಿ.ಟಿ.ಎಸ್) ರಸ್ತೆ ಮಧ್ಯೆ ಇರುವ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ಜಮೀನಿನ ವಿಸ್ತೀರ್ಣವೆಷ್ಟು?

ಆ) ಈ ಮೇಲ್ಕಂಡ ಗೃಹ ನಿರ್ಮಾಣ ಮಂಡಳಿಯ ಜಮೀನಿನಲ್ಲಿ ಕಾಂಪೌಂಡ್ ಹಾಕಿಕೊಂಡು ಖಾಸಗಿ ವ್ಯಕ್ತಿಗಳು ಅನಧಿಕೃತ ನಿರ್ಮಾಣ ಕಾರ್ಯಗಳನ್ನು ಕೈಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಈ ರೀತಿ ಅನಧಿಕೃತ ನಿರ್ಮಾಣಕ್ಕೆ ಕಾರಣರಾರು?

ಈ) ಈ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಗೃಹ ನಿರ್ಮಾಣ ಮಂಡಳಿಯ ಮನೆಗಳನ್ನು ಕಟ್ಟತಕ್ಕ ಯಾವುದಾದರೂ ಯೋಜನೆ ಇದೆಯೇ?

ಉ) ಹಾಗಿದ್ದಲ್ಲಿ ಅದರ ವಿವರಗಳೇನು?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು) :

ಅ) ಜಮೀನಿನ ವಿಸ್ತೀರ್ಣ 6,386.67 ಚ.ಗಜಗಳು.

ಆ) ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಪಡೆದ 6386.87 ಚ.ಗಜಗಳ ಈ ಜಾಗದಲ್ಲಿ 46 ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಿದ್ದು, ಪೂರ್ಣ ವಿಸ್ತೀರ್ಣವನ್ನು ಉಪಯೋಗಿಸಿಕೊಳ್ಳಲಾಗಿದೆ. ಆದ್ದರಿಂದ ಕರ್ನಾಟಕ ಗೃಹ ಮಂಡಳಿಯ ಜಾಗದಲ್ಲಿ ಅನಧಿಕೃತ ನಿರ್ಮಾಣ ಕಾರ್ಯ ಉದ್ಭವಿಸುವುದಿಲ್ಲ.

ಇ) (ಆಗೆ ನೀಡಿರುವ ಉತ್ತರದಿಂದ ಉದ್ಭವಿಸುವುದಿಲ್ಲ)

ಈ) ಕರ್ನಾಟಕ ಗೃಹ ಮಂಡಳಿಯು ಮೇಲ್ಕಂಡ ವಿಸ್ತೀರ್ಣವನ್ನು ಪೂರ್ಣ ಉಪಯೋಗಿಸಿಕೆರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಕರ್ನಾಟಕ ಗೃಹ ಮಂಡಳಿಯಿಂದ ಮನೆಗಳ ನಿರ್ಮಾಣದ ಕುರಿತು

889-ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಗೃಹ ಮಂಡಳಿಯು ರಾಜ್ಯದ ಯಾವ ಯಾವ ನಗರಗಳಲ್ಲಿ, ಪಟ್ಟಣಗಳಲ್ಲಿ ಹಾಗೂ ಇತರೆ ಊರುಗಳಲ್ಲಿ ಯಾವ ಯಾವ ಯೋಜನೆಯಡಿ ಯಾವ ಯಾವ ರೀತಿಯ ಎಷ್ಟೆಷ್ಟು ಮನೆಗಳ ನಿರ್ಮಾಣ ಕಾರ್ಯಕ್ರಮವನ್ನು ಹಾಕಿಕೊಂಡಿದೆ. (ಪ್ರತಿ ಊರು ಹಾಗೂ ಯೋಜನೆಗೆ ಸಂಬಂಧಪಟ್ಟ ವಿವರಗಳನ್ನು ನೀಡುವುದು)?

ಆ) ಈ ಮನೆಗಳಿಗೆ ಸಾರ್ವಜನಿಕರಿಂದ ಬಂದಿರುವ ಅರ್ಜಿಗಳ ಸಂಖ್ಯೆ ಯಾವ ಯಾವ ಯೋಜನೆಯ ಮನೆಗಳಿಗೆ ಎಷ್ಟೆಷ್ಟು ಠೇವಣಿಗಳನ್ನು ಸಾರ್ವಜನಿಕರಿಂದ ಸಂಗ್ರಹಿಸಲಾಗಿದೆ. ಠೇವಣಿಗಳ ಒಟ್ಟು ಮೊತ್ತ ಎಷ್ಟು?

(ಮನೆಗಳು ಹಾಗೂ ಅವುಗಳಿಗೆ ಬಂದಿರುವ ಅರ್ಜಿಗಳ ಸಂಖ್ಯೆಗಳನ್ನು ವಿವರವಾಗಿ ನೀಡುವುದು)

ಇ) ಯಾವ ಯಾವ ಯೋಜನೆಗಳನ್ನು ಎಂದಿನಿಂದ ಪ್ರಾರಂಭಿಸಲಾಗಿದೆ. ಅವುಗಳು ಯಾವ ಹಂತದಲ್ಲಿದೆ. ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಮನೆಗಳನ್ನು ವಿತರಣೆ ಮಾಡಲಾಗುತ್ತಿದೆ?

ಈ) ಇವುಗಳ ವಿತರಣೆಗೆ ಅನುಸರಿಸುವ ವಿಧಾನಗಳೇನು? ಸಾರ್ವಜನಿಕರಿಂದ ಅರ್ಜಿಗಳನ್ನು ಕರೆದು ಠೇವಣಿ ಸಂಗ್ರಹಿಸಿ 3-4 ವರ್ಷಗಳಾದರೂ ಸಹ ಮನೆಗಳ ನಿರ್ಮಾಣ ಕಾರ್ಯ ಚಟುವಟಿಕೆಗಳನ್ನು ಏತಕ್ಕೆ ತಡಮಾಡಲಾಗಿದೆ ಕಾರಣಗಳನ್ನು ನೀಡುವುದು. ಸಾರ್ವಜನಿಕರ ಠೇವಣಿಗೆ ಮಂಡಳಿಯು ಬಡ್ಡಿ ಹಣವನ್ನು ನೀಡುವುದೇ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು) :

ಅ) ಒಟ್ಟು 18902 ಮನೆಗಳು. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) ವಿವರಗಳನ್ನು ಅನುಬಂಧ 'ಬಿ'ನಲ್ಲಿ ತಿಳಿಸಿದೆ.

ಇ) ಯೋಜನೆಯ ಹಂತಗಳನ್ನು ತೋರಿಸಲು ತಃಖ್ತೆಯನ್ನು ಲಗತ್ತಿಸಲಾಗಿದೆ (ಅನುಬಂಧ-ಎ)

ಈ) ಕರ್ನಾಟಕ ಗೃಹ ಮಂಡಳಿಯಿಂದ ನಿರ್ಮಿಸಿದ ನಿವೇಶನ ಮತ್ತು ಮನೆಗಳನ್ನು ಕರ್ನಾಟಕ ಗೃಹ ಮಂಡಳಿ (ಹಂಚಿಕೆ) (ನಿಯಮ) 1983ರ ಅನ್ವಯ ವಿತರಸಿಲಾಗುವುದು.

ಕೆಲವು ಯೋಜನೆಗಳಲ್ಲಿ ನ್ಯಾಯಾಲಯದಿಂದ ತಡೆ ಇರುವುದರರ ಪ್ರಯುಕ್ತ ಅಂತಹ ಕಡೆ ಸ್ವಲ್ಪ ತಡವಾಗಿದೆ. ಠೇವಣಿ ಹಣದ ಮೇಲೆ ಬಡ್ಡಿ ಕೊಡಲು ಕರ್ನಾಟಕ ಗೃಹ ಮಂಡಳಿ ಕಾಯಿದೆ ನಿಯಮದಲ್ಲಿ ಅವಕಾಶವಿರುವುದಿಲ್ಲ.

ANNEXURE-'A'

KARNATAKA HOUSING BOARD

SCHEMES TAKEN UP FROM THE YEAR 1989-90 TO 1991-92 AND STAGES OF WORKS UNDER HUDCO, STATE PLAN AND OTHERS.

Sl. No	Place	Category	Units sanctioned	Stage of work					
				N.S	F.L.	P.L.	L.L.	R.L.	R.O/C
1	2	3	4	5	6	7	8	9	10
1.	CHS at Yelahanka IV phase	EWS	206	-	-	-	-	-	206
		LIG	268	-	-	-	-	-	268
		MIG	233	-	-	-	-	-	233
2.	CHS at Shahapur	LIG	75	-	-	-	-	-	75
		MIG	75	-	-	-	-	-	75
		HIG	25	-	-	-	-	-	25
3.	Nursery School & Shops		25	-	-	-	-	-	25
4.		EWS	37	-	-	-	-	-	37
		LIG	76		-	-	-	-	76
		MIG	75	-	-	-	-	-	75

5.	SFS: Yelahanka	SFS	407	-	-	-	-	-	407
6.	CHS. Sandur (5582)	EWS	54	-	-	-	-	-	54
		LIG	112	-	-	-	-	-	78
		MIG	38	-	-	-	-	-	16
7.	CHS Kustagi (6340)	LIG	132	31	-	23	28	-	50
		MIG	38	-	-	30	-	-	8
8.	CHS Kudalagi (6405)	LIG	53	-	-	-	-	-	53
		MIG	36	-	-	-	-	-	36
9.	Sites Sindanur	EWS	54	-	-	-	-	-	54
10.	CHS Bhalki (5229)	EWS	36	-	-	-	36	-	-
		LIG	39	-	-	-	-	39	-
		MIG	54	-	-	-	-	54	-
11.	CHS Basavakalyana	EWS	24	-	24	-	-	-	-
		LIG	24	-	34	-	-	-	-
		MIG	47	-	-	-	-	-	47
12.	Cash Loan Scheme	LIG	20	-	-	-	-	-	20

		HIG	40	-	-	-	-	-	40
13.	CHS at Mudhol (5586)	EWS	13	-	-	-	-	-	13
		LIG	20	-	-	-	-	-	20
		MIG	56	-	-	-	-	-	56
			65	-	-	-	-	-	65
14.	CHS at Navanagar (5627)	EWS	65	-	-	-	-	-	65
		LIG	82	-	-	-	-	-	82
		MIG	71	-	-	-	-	-	71
15.	CHS Hirekerur (6380)	EWS	45	-	-	-	-	25	20
		LIG	14	-	-	-	-		74
		MIG	107	2	-	-	-		29
16.	CHS Mundargi (6341)	EWS	14	-	-	-	-		14
		LIG	107	-	-	-	-		106
		MIG	82	-	-	6	20	6	50
17.	CHS Sindagi (6513)	EWS	18	-	-	18	-	-	-
		LIG	69	-	-	69	-	-	-

		MIG	42	-	-	42	-	-	-
18.	CHS D.N. Koppa (6402)	LIG	200	-	-	-	66	10	124
		MIG	98	-	-	5	62	13	18
		HIG	22	-	-	3	19	-	-
19.	Cash Loan Hubli/Belgaum	HIG	40	-	-	-	-	-	40
20.	CHS Mahalbagayath (6512)	EWS	168	6	-	-	-	-	162
		LIG	95	6	-	-	19	-	70
		MIG	141	2	-	-	17	-	122
		HIG	14	-	-	-	-	-	14
21.	CHS at Karkala (6427)	LIG	58	-	-	-	-	35	23
		MIG	80	-	-	-	30	23	27
22.	Office Building at M'lore	Building	1	-	-	-	-	-	1
23.	CHS at Malavalli (5616)	LIG	145	28	-	-	-	-	87
24.	Cash Loan Mysote City	MIG	30	-	-	-	-	-	30
		HIG	40	-	-	-	-	-	40
25.	Shops/Office/complex Mysore	Complex	1	-	-	-	-	-	1

26.	CHS Baad Extension Karwar	LIG	619	272	-	234	17	6	90
		MIG	349	105	-	145	40	9	50
		HIG	177	110	-	53	4	5	5
27.	CHS Kallahalli-Shimoga	EWS	199	-	-	-	-	-	119
		LIG	690	-	-	-	-	48	642
		MIG	409	-	-	-	-	-	409
		HIG	75	-	-	-	-	9	66
28.	Housing Scheme for single Working Woken (8064)	LIG	64	-	-	-	-	-	64
		MIG	40	-	-	-	-	-	40
29.	CHS at Bidadi (7829)	EWS	60	2	-	33	-	-	25
		LIG	99	7	-	59	5	-	28
		MIG	122	25	-	77	-	-	20
30.	CHS at Channapatna (7126)	LIG	74	-	-	-	-	-	74
		MIG	82	6	-	-	-	-	76
31	CHS at TUmkur (7125)_	EWS	59	-	-	-	-	-	5
		LIG	176	-	-	-	-	34	142

		MIG	107	-	-	-	10	41	56
		HIG	15	-	-	-	-	-	15
32.	H.S. for Beedi Worker Bellary (8355)	LIG	156	-	-	128	-	20	8
33.	CHS at Badepur (7275)	EWS	44	-	4	24	16	-	-
		LIG	84	4	6	68	-	10	-
		MIG	36	6	13	-	-	23	-
34.	CHS Kanakapura II (6403)	EWS	14	13	-	-	2	-	12
		LIG	72	-	-	-	6	21	45
		MIG	72	-	-	-	8	41	21
35.	CHS at Beeranahalli (5584)	LIG	92	2	-	-	3	-	54
		MIG	47	15	-	-	-	-	26
36.	CHS Hukkeri (6365)	LIG	40	15	-	-	-	-	25
		MIG	54	44	-	-	-	-	10
37.	CHS at Nippani (6426)	LIG	90	-	-	-	-	-	80
		MIG	41	-	-	-	-	-	220
38.	Sites at Sattur	EWS	220	-	-	-	-	-	489

		LIG	489	-	-	-	-	-	181
		MIG	181	-	-	-	-	-	72
		HIG	72	-	-	-	-	-	-
39.	CHS at T. Narasipura (7276)	EWS	36	36	-	-	-	-	55
		LIG	55	-	-	-	-	-	59
		MIG	59	-	-	-	-	-	21
40.	Experimental Housing Yelanaka (7187)	LIG	21	-	-	-	-	-	32
		MIG	32	-	-	-	-	-	10
		HIG	10	-	-	-	-	-	70
41.	CHS at Bannur (6858	EWS	70	-	-	-	-	-	70
		LIG	75	-	-	-	-	-	74
		MIG	100	-	-	-	-	-	100
42.	H.S. B/w K.M. Halli (6761)	LIG	1000	-	-	-	-	-	1000
43.	CHS at Yalaburga (7087)	EWS	32	-	32	-	-	-	-
		LIG	60	60	-	-	-	-	-
		MIG	30	-	30	-	-	-	-

44.	CHS at Sirsi PH II (7127)	EWS	36	36	-	-	-	-	-
		LIG	53	-	53	-	-	-	-
		MIG	14	-	14	-	-	-	-
45.	H.S. b/w Gargeshwari (7184)	LIG	150	-	-	14	12	90	34
46.	H.S. B/W Gundlupet (7186)	LIG	150	-	-	-	-	15	135
47.	H.S. B/w Nippani (7185)	LIG	120	14	-	30	76	-	-
48.	CHS at Dandeli II (7199)	EWS	28	28	-	-	-	-	-
		LIG	67	67	-	-	-	-	-
		MIG	103	103	-	-	-	-	-
49.	CHS at Keelakote (7559)	EWS	46	23	23	-	-	-	-
		LIG	82	-	-	82	-	-	-
		MIG	104	28	-	50	-	2	24
50.	CHS at Pothagal (8288, 8559, 8289)	EWS	97	97	-	-	-	-	-
		LIG	513	513	-	-	-	-	-
		MIG	164	564	-	-	-	-	-
		HIG	54	54	-	-	-	-	-

51.	HS B/w Davanagere (8292)	LIG	302	-	302	-	-	-	-
52.	CHS at Kothnur (8290, 8291)	EWS	102	102	-	-	-	-	-
		LIG	199	95	104	-	-	-	-
		MIG	200	19	181	-	-	-	-
		HIG	47	47	-	-	-	-	-
53.	H.S. for Industrial Workers Tumkur (8723)	HIG	36	-	36	-	-		-
		MIG	273	200	72	-	-		-
54.	CHS Hootagalli, Mysore (NHB)	LIG	368	2	-	80	230	48	-
		MIG	60	30	-	9	21	-	-
		HIG	47	2	-	11	-	-	34
55.	CHS at Kengeri	LIG	608	68	-	340	72	-	128
		MIG	1056	196	-	298	50	-	512
		HIG	1376	1068	-	82	36	-	190
State Plan Schemes									
1.	CHS Chickmagalur	LIG	11	-	-	-	-	-	11

		MIG	39	-	-	-	-	-	39
2.	CHS Sakaleshpur	EWS	18	-	-	-	-	-	18
		LIG	25	-	-	-	-	-	25
		MIG	28	-	-	-	-	-	28
		HIG	6	-	-	-	-	-	6
3.	CHS at Mulki	LIG	10	-	-	-	-	-	10
		MIG	5	-	-	-	-	-	5
4.	CHS at Mudigere	LIG	32	20	12	-	-	-	-
		MIG	9	-	9	-	-	-	-
5.	CHS at Arkalgud	LIG	67	-			-	-	60
		MIG		-					41
6.	CHS at Mundagod	MIG	41	-					60
7.	CHS at Lingasugar	MIG	14	-	-	-	-	-	16
8.	CHS at Birur	MIG	6	-	-	-	-	-	-
9.	SFS at Rajapur, Gulbarga	MIG	50	-	-	-	-	-	10
10.	CHS at Sagar (5377)	EWS	31	-	-	-	-	-	31

		LIG	22	-	-	-	-	-	22
		MIG	21	-	-	-	-	-	21
11.	CHS at Hoskote (6423)	EWS	28	16	-	-	-	-	12
		LIG	102	37	-	-	-	-	65
		MIG	85	10	-	-	-	-	75
		HIG	12	-	-	-	-	-	12
12.	State Plan CHS Gopala	MIG	62	-	-	-	-	-	62
13.	RHS K.B. Sandra	RHS	349	-	-	-	-	-	349
Grand Total			18902	4293	1054	2049	937	480	10089

NO. OF APPLICATIONS RECEIVED FOR ALLOTMENT

Sl. No.	Name of the Tows/City	1989-90					
		EWS	LIG	MIG	HIG	SFS	Total Amount collected as Registration fee
1	2	3	4	5	6	7	8
1.	Hosakote	113	290	235	37	-	49,38,000
2.	Yelahanka	153	552	475	-	-	35,32,000
3.	Tumkur	-	-	-	-	-	-
4.	Channapatna	-	-	-	-	-	-
5.	Bidagi	-	-	-	-	-	-
6.	Kengeri	-	-	-	-	-	-
7.	Navanagara Hubli	123	615	392	-	-	33,13,000
8.	D.N. Koppa Dharawad	-	-	-	-	-	-
9.	Bijapur	-	-	-	-	-	-
10.	Mudhol	-	-	-	-	-	-
11.	Muundargi	-	-	-	-	-	-
12.	Sattur-Dharwad	-	-	-	-	-	-
13.	Kanakapur	248	410	161	-	-	8,62,900
14.	Ootagalli Mysore	-	-	-	-	-	-
15.	Arakalagud	-	-	-	-	-	-
16.	Alur	-	-	-	-	-	-
17.	sakaleshpur	-	-	-	-	-	-
18.	Gopala, Shimoga II Phase	-	86	91	-	-	6,27,000
19.	Sirsi IInd Phase	-	-	-	-	-	-
20.	Sagar	-	-	-	-	-	-
21.	Kallahalli Shimoga	-	-	-	-	-	-
22.	Mundagod	-	-	-	-	-	-
23.	Shahapur	-	31	84	42	-	6,60,000
24.	Basavakalyana	-	-	128	-	-	3,52,000
25.	Kustagi	-	-	-	-	-	-
26.	Sindhanoor	-	-	-	-	-	-
27.	Sandur	-	-	-	-	--	-
							1,42,84,900

NO. OF APPLICATIONS RECEIVED FOR [illegible]

Sl. No.	Name of the Tows/City	1990-91					
		EWS	LIG	MIG	HIG	SFS	Total Amount collected as Registration fee
9	10	11	12	13	14	15	16
1.	Hosakote	-	-	-	-	-	-
2.	Yelahanka	-	-	-	-	-	-
3.	Tumkur	70	176	100	10	-	10,42,000
4.	Channapatna	-	168	113	-	-	5,07,000
5.	Bidagi	-	-	-	-	-	-
6.	Kengeri	-	-	-	-	-	-
7.	Navanagara Hubli	-	-	-	-	-	-
8.	D.N. Koppa Dharawad	222	62	167	39	-	19,43,000
9.	Bijapur	237	373	290	23	-	26,63,000
10.	Mudhol	53	78	205	-	-	7,19,500
11.	Muundargi	-	-	-	-	-	-
12.	Sattur-Dharwad	-	-	-	-	-	-
13.	Kanakapur	-	-	-	-	-	-
14.	Ootagalli Mysore	50	445	221	134	-	35,46,600
15.	Arakalagud	59	38	38	-	-	1,81,500
16.	Alur	-	33	17	-	-	78,500
17.	sakaleshpur	-	-	-	-	-	-
18.	Gopala, Shimoga II Phase	-	-	-	-	-	-
19.	Sirsi IInd Phase	3	43	47	-	-	3,24,000
20.	Sagar	-	-	-	-	-	-
21.	Kallahalli Shimoga	-	-	-	-	-	-
22.	Mundagod	-	-	-	-	-	-
23.	Shahapur	-	-	-	-	-	6,60,000
24.	Basavakalyana	-	-	- -	-	-	3,52,000
25.	Kustagi	-	123	38	-	-	22,56,500
26.	Sindhanoor	7	5	11	-	-	11,500
27.	Sandur	-	-	-	-	-	-
							1,32,73,100

NO. OF APPLICATIONS RECEIVED FOR ALLOTMENT

Sl. No.	Name of the Tows/City	1991-92					
		EWS	LIG	MIG	HIG	SFS	Total Amount collected as Registration fee
17	18	19	20	21	22	23	24
1.	Hosakote	-	-	-	-	-	-
2.	Yelahanka	-	-	-	-	-	-
3.	Tumkur	-	-	-	-	-	-
4.	Channapatna	-	-	-	-	-	-
5.	Bidagi	63	77	91	-	-	5,52,500
6.	Kengeri	441	1493	1049	371	45	1,42,96,000
7.	Navanagara Hubli	-	-	-	-	-	-
8.	D.N. Koppa Dharawad	-	-	-	-	-	-
9.	Bijapur	-	-	-	-	-	-
10.	Mudhol	-	-	-	-	-	-
11.	Muundargi	71	12	9	26	-	82,500
12.	Sattur-Dharwad	1012	1032	455	141	-	74,14,250
13.	Kanakapur	-	-	-	-	-	-
14.	Ootagalli Mysore	-	-	-	-	-	-
15.	Arakalagud	-	-	-	-	-	-
16.	Alur	-	-	-	-	-	-
17.	sakaleshpur	26	49	23	5	-	1,44,500
18.	Gopala, Shimoga II Phase	-	-	-	-	-	-
19.	Sirsi IInd Phase	3,24,000	-	-	-	-	-
20.	Sagar	41	34	60	-	-	4,09,000
21.	Kallahalli Shimoga	99	338	383	53	-	42,20,000
22.	Mundagod	1	17	28	-	-	1,19,000
23.	Shahapur	-	-	-	-	-	-
24.	Basavakalyana	-	-	-	-	-	-
25.	Kustagi	-	-	-	-	-	-
26.	Sindhanoor	-	-	-	-	-	-
27.	Sandur	117	43	30	-	-	2,28,500
							2,74,66,250

ಮೈಸೂರಿನಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ಬಿಡುಗಡೆಯಾದ ಹಣ.

952- ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ಸರ್ಕಾರವು 1992-93ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಹಣವೆಷ್ಟು?

ಆ) ಮೈಸೂರು ನಗರಕ್ಕೆ ಬಿಡುಗಡೆ ಮಾಡಿರುವ ಹಣವೆಷ್ಟು?

ಇ) ಕುಡಿಯುವ ನೀರಿನ ಯೋಜನೆಗಳು ಸಂಪೂರ್ಣಗೊಳ್ಳಲು ಬೇಕಾಗುವ ಕಾಲಾವಧಿಯೆಷ್ಟು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ರೂ. 2,357.82 ಲಕ್ಷಗಳು (ನವೆಂಬರ್ 1992ರ ಅಂತ್ಯದವರೆಗೆ)

ಆ) ರೂ. 169.67 ಲಕ್ಷಗಳು.

ಇ) 3ರಿಂದ 5 ವರ್ಷಗಳು.

ಹುಕ್ಕೇರಿ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ

970-ಶ್ರೀ ಉಮೇಶ ವಿ. ಕತ್ತಿ (ಹುಕ್ಕೇರಿ) : ಮಾನ್ಯ ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ಪಟ್ಟಣದ ಕುಡಿಯುವ ನೀರಿನ ಯೋಜನೆ ಮಂಜೂರಾಗಿ ಎರಡು ವರ್ಷಗಳಾಗಿದ್ದರೂ ಇದುವರೆವಿಗೂ ಹುಕ್ಕೇರಿ ಪಟ್ಟಣಕ್ಕೆ ನೀರು ದೊರೆಯದಿರಲು ಕಾರಣವೇನು?

ಆ) ಅದನ್ನು ಯಾವಾಗ ಪೂರೈಸಲಾಗುವುದು ಹಾಗೂ ವಿಳಂಬಕ್ಕೆ ಕಾರಣವೇನು?

ಇ) ಅದಕ್ಕೆ ಸಂಬಂಧಿಸಿದ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ ಹಾಗೂ ಇಲ್ಲಿಯವರೆಗೆ ಯೋಜನೆಗೆ ವೆಚ್ಚವಾದ ಹಣವೆಷ್ಟು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಈ ಯೋಜನೆಯನ್ನು ದಿನಾಂಕ 16-12-92ರಂದು ಚಾಲ್ತಿ ಮಾಡಲಾಗಿದೆ. ಈ ಪಟ್ಟಣಕ್ಕೆ ದಿನಾಂಕ 29-12-92ರಂದು ನೀರು ಸರರಾಜು ಮಾಡಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ. ಈ ಯೋಜನೆಗೆ ರೂ. 45.60 ಲಕ್ಷಗಳು ಖರ್ಚಾಗಿದೆ.

ಹುಕ್ಕೇರಿ ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳು

972 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳೆಷ್ಟು?

ಆ) ಆ ಮನೆಗಳನ್ನು ಕಟ್ಟಲು ಯಾರಿಗೆ ಗುತ್ತಿಗೆ ಕೊಡಲಾಗಿದೆ?

ಇ) ಈ ವರ್ಷದಲ್ಲಿ ಆದಕ್ಕಾಗಿ ಒದಗಿಸಿದ ಹಣ ಎಷ್ಟು ಹಾಗೂ ಈ ವರ್ಷದಲ್ಲಿ ಎಷ್ಟು ಮನೆಗಳನ್ನು ಕಟ್ಟಲಾಗುವುದು?

ಈ) ಈಗ ಕಟ್ಟಿರುವ ಮನೆಗಳೆಷ್ಟು ಹಾಗೂ ಆದ್ಯತೆಯ ಮೇಲೆ ಮನೆಗಳನ್ನು ಕಟ್ಟಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು) :

ಅ) 1,000 ಮನೆಗಳು

ಆ) ಶ್ರೀ ಮೊಹಮ್ಮದ್ ಸೇಠ್, ಗುತ್ತಿಗೆದಾರರು, ಬಳ್ಳಾರಿ.

ಇ) ಸದರಿ ಗುತ್ತಿಗೆದಾರರಿಗೆ ಕರ್ನಾಟಕ ಗೃಹ ಮಂಡಳಿಯಿಂದ ಒಟ್ಟು ರೂ. 60.10 ಲಕ್ಷಗಳನ್ನು ಮುಂಗಡವಾಗಿ ಕೊಡಲಾಗಿದೆ. ಮಾರ್ಚ್ 93ರ ಅಂತ್ಯದೊಳಗೆ ಹುಕ್ಕೇರಿ ಕ್ಷೇತ್ರದಲ್ಲಿ 150 ಮನೆಗಳನ್ನು ಕಟ್ಟುವ ನಿರೀಕ್ಷೆ ಇದೆ.

ಈ) ಯಾವುದೇ ಮನೆ ಸಂಪೂರ್ಣವಾಗಿಲ್ಲ. ತ್ವರಿತವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನಲ್ಲಿ ಆಶ್ರಯ ಯೋಜನೆ

973 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟಲು ಗುತ್ತಿಗೆದಾರರಿಗೆ ಎಷ್ಟು ಕ್ಷೇತ್ರಗಳಲ್ಲಿ ಗುತ್ತಿಗೆ ನೀಡಲಾಗಿದೆ?

ಆ) ಆಯಾ ಕ್ಷೇತ್ರದಲ್ಲಿ ಸದರಿ ಗುತ್ತಿಗೆದಾರರಿಗೆ ಒದಗಿಸಿದ ಹಣವೆಷ್ಟು?

ಇ) ಎಲ್ಲಾ ಕ್ಷೇತ್ರಗಳಲ್ಲಿ ಒಬ್ಬನೇ ಗುತ್ತಿಗೆದಾರನು ಕೆಲಸ ನಿರ್ವಹಿಸುವ ಸಾಧ್ಯತೆ ಇದೆಯೇ?

ಈ) ಇಂಥ ಕ್ರಮ ಬದಲಾಯಿಸಿ ಬೇರೆ ಬೇರೆ ಕ್ಷೇತ್ರಕ್ಕೆ ಬೇರೆ ಬೇರೆ ಗುತ್ತಿಗೆ ದಾರರನ್ನು ನೇಮಿಸಲು ಸಾಧ್ಯವಿಲ್ಲವೆ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು) :

ಅ) ಹುಕ್ಕೇರಿ ಕ್ಷೇತ್ರವೂ ಸೇರಿದಂತೆ ಬೆಳಗಾವಿ ಜಿಲ್ಲೆಯ 18 ವಿಧಾನ ಸಭಾ ಕ್ಷೇತ್ರಕ್ಕೂ ಇಬ್ಬರು ಗುತ್ತಿಗೆದಾರರಿಗೆ ಕಾಮಗಾರಿ ನೀಡಲಾಗಿದೆ.

ಆ) 1) ಶ್ರೀ ಮೊಹಮ್ಮದ್ ಸೇಠ್, ಬಳ್ಳಾರಿ

2) ಅಕ್ಷಯ ಕನಸ್ಟ್ರಕ್ಷನ್ಸ್, ಬೆಳಗಾವಿ 9 ಕ್ಷೇತ್ರ

ಇ) 1) ರೂ. 66.40 ಲಕ್ಷಗಳು

2) ರೂ. 17.23 ಲಕ್ಷಗಳು

ಇ) ಇಲ್ಲ.

ಈ) ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 500 ಮನೆಗಳನ್ನು ನಿರ್ಮಿಸಲು ಸರ್ಕಾರವು ತೀರ್ಮಾನಿಸಿದ್ದು, ಯಾವ ಕ್ಷೇತ್ರದಲ್ಲಿ ಕರ್ನಾಟಕ ಗೃಹ ಮಂಡಳಿಯು

500 ಮನೆಗಳನ್ನು ನಿರ್ಮಿಸುವುದಿಲ್ಲವೋ ಆ ಕ್ಷೇತ್ರದಲ್ಲಿ ಉಳಿದ ಮನೆಗಳನ್ನು ಜಿಲ್ಲಾಧಿಕಾರಿಯವರಿಂದ ನಿರ್ಮಿಸಲು ನಿರ್ಧರಿಸಿದೆ.

ಹೊನ್ನಾವರ ತಾಲ್ಲೂಕಿನಲ್ಲಿ ಅಂಗನವಾಡಿ ಕಾರ್ಯಕ್ರಮ ಜಾರಿ.

1004-ಶ್ರೀ ಆರ್.ಎನ್. ನಾಯ್ಕ (ಭಟ್ಕಳ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದ ಎಷ್ಟು ತಾಲ್ಲೂಕುಗಳಲ್ಲಿ ಅಂಗನವಾಡಿ ಕಾರ್ಯಕ್ರಮ ಜಾರಿಯಲ್ಲಿರುವುದು ?

2) ಉತ್ತರ ಕನ್ನಡ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಅಂಗನವಾಡಿ ಕಾರ್ಯಕ್ರಮ ಜಾರಿಯಲ್ಲಿದೆ ?

3) ಹೊನ್ನಾವರ ತಾಲ್ಲೂಕಿನಲ್ಲಿ ಅಂಗನವಾಡಿ ಕಾರ್ಯಕ್ರಮ ಜಾರಿಗೊಳಿಸಲು ಸರ್ಕಾರದವರಿಗೆ ಇರುವ ತೊಂದರೆಗಳೇನು

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು)

ಅ) ರಾಜ್ಯದ 133ತಾಲ್ಲೂಕುಗಳಲ್ಲಿ ಐಸಿಡಿಎಸ್ ಕಾರ್ಯಕ್ರಮ ಜಾರಿಯಲ್ಲಿರುವುದು.

ಆ) ಸೂಫ, ಯಲ್ಲಾಪುರ, ಕಾರವಾರ, ಅಂಕೋಲ, ಕುಮಟಾ ಹಾಗೂ ಭಟ್ಕಳ ತಾಲ್ಲೂಕುಗಳಲ್ಲಿ ಐಸಿಡಿಎಸ್ ಕಾರ್ಯಕ್ರಮ ಜಾರಿಯಲ್ಲಿದೆ.

ಇ) ಈ ಯೋಜನೆಯನ್ನು ಕೇಂದ್ರ ಸರ್ಕಾರದವರೇ ಮಂಜೂರು ಮಾಡುತ್ತಾರೆ. ಕೇಂದ್ರ ಸರ್ಕಾರದಿಂದ ಹೊನ್ನಾವರ ಐಸಿಡಿಎಸ್ ಯೋಜನೆ ಇದುವರೆಗೂ ಮಂಜೂರಾಗಿಲ್ಲವೆಂದು ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿಲ್ಲ.

ಹೊನ್ನಾವರ ತಾಲ್ಲೂಕೂ ಸೇರಿದಂತೆ ಇನ್ನೂ ಮಂಜೂರಾಗದೆ ಇರುವ ರಾಜ್ಯದ ಎಲ್ಲಾ ತಾಲ್ಲೂಕುಗಳ ಮಾಹಿತಿಯನ್ನು ಕೇಂದ್ರ ಸರಕಾರದ ಪರಿಶೀಲನೆಗಾಗಿ ದಿನಾಂಕ 17-7-90ರಂದು ಕಳುಹಿಸಲಾಗಿದೆ. ಕೇಂದ್ರ ಸರಕಾರದ ಮಂಜೂರಾತಿ ದೊರೆತ ಮೇಲೆ ಇಲ್ಲೂ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ.

ಆಶ್ರಮ ಯೋಜನೆಯಲ್ಲಿ ನಿರ್ಮಿಸಲಾದ ಮನೆಗಳ ಸಂಖ್ಯೆ.

1033-ಶ್ರೀ ಮನೋಹರ ಐನಾಪುರ, (ಬೆಳ್ಳೋಳ್ಳಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆಶ್ರಮ ಯೋಜನೆಯಡಿ ರಾಜ್ಯದಲ್ಲಿ ಇದುವರೆವಿಗೂ ನಿರ್ಮಿಸಲಾದ ಮನೆಗಳ ಸಂಖ್ಯೆ ಎಷ್ಟು ?

ಆ) 1994.95ರೊಳಗೆ ಈ ಮನೆಗಳನ್ನು ಪೂರ್ಣಗೊಳಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ವಸತಿ ಸಚಿವರು)

ಅ) 1044 ಮನೆಗಳು.

ಆ) ಸರ್ಕಾರದ ಆದೇಶ ಸಂಖ್ಯೆ ಹೆಚ್‌ಯುಡಿ 352 ಕೆಹೆಚ್‌ಬಿ 92 ದಿನಾಂಕ 15:12:92 ರ ಪ್ರಕಾರ ಕರ್ನಾಟಕ ಗೃಹ ಮಂಡಳಿ ಗುತ್ತಿಗೆದಾರರಿಗೆ ಮುಂಗಡವಾಗಿ ನೀಡಿರುವ ಮೊತ್ತಕ್ಕೆ ಸೀಮಿತವಾಗಿ ಆಶ್ರಯ ಮನೆಗಳನ್ನು ಪೂರ್ತಿ ಮಾಡುವಂತೆಯೂ

ಮತ್ತು ಉಳಿದವುಗಳನ್ನು ಜಿಲ್ಲಾಧಿಕಾರಿಗಳ ಮೂಲಕ ನಿರ್ಮಿಸಲು ಸರ್ಕಾರ ನಿರ್ಧರಿಸಿದೆ.

ಬೆಂಗಳೂರು ಮಹಾನಗರ ಪಾಲಿಕೆ ಪರಿಸ್ಥಿತಿ ಕುರಿತು.

1076-ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಮಹಾನಗರ ಪಾಲಿಕೆಯು ಆರ್ಥಿಕ ಸಂದಿಗ್ಧ ಪರಿಸ್ಥಿತಿಯನ್ನು ಅನುಭವಿಸುತ್ತಿರುವುದು ಹಾಗೂ ಆದರಿಂದಾಗಿ ಸಾಧಾರಣ ನಿರ್ವಹಣೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಹ ತೆಗೆದುಕೊಳ್ಳಲಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ನಗರಪಾಲಿಕೆಯ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?*

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು)

ಅ) ಇಲ್ಲ.

ಆ) ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಪೈಕಿ ತೋರ್ಕರಸಿಹಳ್ಳಿ ಗ್ರಾಮದಲ್ಲಿ ಬಿ.ಸಿ.ಎಂ. ಹಾಸ್ಟೆಲ್ ಮಂಜೂರು.

1081-ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾಂ ಜಿಲ್ಲೆ ಬೈಲಹೊಂಗಲ ವಿದ್ಯಾರ್ಥಿಗಳಿಗೆ ತೋರ್ಕರಸಿಹಳ್ಳಿ ಗ್ರಾಮದಲ್ಲಿ ಸರ್ಕಾರಿ ಪ್ರೌಢ ಶಾಲೆ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಇಲ್ಲದೇ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೆ.*

ಇ) *ಹಾಗಿದ್ದಲ್ಲಿ, ಅಲ್ಲಿ ಹಿಂದುಳಿದ ವರ್ಗಗಳ ಪೈಕಿ ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?*

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು)

ಅ) ಹೌದು.

ಆ) ಇಲ್ಲ.

ಇ) ಅದ ಉತ್ತರದಿಂದ ಉದ್ಭವಿಸುವುದಿಲ್ಲ.

ಹೋಟೆಲ್ ಬಾಲ ಕಾರ್ಮಿಕರಿಗೆ ಕೆಲಸಕ್ಕೆ ತೆಗೆದುಕೊಳ್ಳುತ್ತಿರುವ ಬಗ್ಗೆ.

1082-ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಹೋಟೆಲ್‌ಗಳಲ್ಲಿ ಉಪಹಾರ ಗೃಹಗಳಲ್ಲಿ ಬಾಲಕಾರ್ಮಿಕರನ್ನು ಕೆಲಸಕ್ಕೆ ನೇಮಕ ಮಾಡಿಕೊಂಡಿರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಾಲ ಕಾರ್ಮಿಕರಿಗೆ ಹೋಟೆಲ್‌ಗಳಲ್ಲಿ ಕೆಲಸ ಮಾಡಿಕೊಳ್ಳಬಾರದು ಎಂಬ ನಿಯಮವಿದ್ದರೂ ಕೂಡ ಕೆಲಸಕ್ಕೆ ತೆಗೆದುಕೊಳ್ಳುತ್ತಿರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಎಷ್ಟು ಹೋಟೆಲ್‌ಗಳ ಮಾಲೀಕರುಗಳ ಮೇಲೆ ಸರ್ಕಾರವು ಕ್ರಮ ಕೈಗೊಂಡಿದೆ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು):

ಅ) ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, 1961ರನ್ವಯ 12 ವರ್ಷಕ್ಕಿಂತ ಮೇಲ್ಪಟ್ಟ ಯಾವುದೇ ಬಾಲ ಕಾರ್ಮಿಕನನ್ನು ಕಾನೂನಿನಲ್ಲಿಯ ನಿರ್ಬಂಧನೆಗಳಿಗೆ ಒಳಪಟ್ಟು ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಕೆಲಸಕ್ಕೆ ನೇಮಿಸಬಹುದಾಗಿದೆ.

ಆ) ಹೌದು.

ಇ) ಅಂತಹ ದೂರುಗಳು ಬಂದಾಗ ತಕ್ಷಣ ಅಗತ್ಯವಾದ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ. ಜೊತೆಗೆ ಇಲಾಖಾ ಅಧಿಕಾರಿಗಳು ಅನಿರೀಕ್ಷಿತ ತಪಾಸಣೆಯನ್ನು ತಪ್ಪದೆ ಮಾಡಿ ಕಾರ್ಮಿಕ ನಿಯಮದ ಮೇರೆಗೆ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಹಲವು ವರ್ಷಗಳಿಂದೀಚೆಗೆ ಅಂತಹ 4216 ಬಾರಿ ತಪಾಸಣೆಯನ್ನು ಮಾಡಿ ಕಾರ್ಮಿಕ ನಿಯಮದಂತೆ ಕ್ರಮ ತೆಗೆದುಕೊಂಡಿದ್ದಾರೆ ಮತ್ತು 12 ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ಹೂಡಲಾಗಿದೆ.

K.H.B HOUSE IS BAILAMANGAL TALUK.

1083-Sri Shivananda H. Kaujalagi (Bylamangala) : Will the Minister for Housing be pleased to state.

a) *When the applications were called from the public for consstruction of houses from Karnataka Housing Board, in Bailahongala Town, Belgaum District.*

b) *How many applications have been received from public.*

c) *What is the action taken by Karnataka Housing Board, to construct houses.*

d) *Even though Government land is available what is the reason for non-construction the houses by Karnataka Housing Board.*

e) *Either by acquiring private land or Government land whether Government will take action to construct the houses.*

Sri GOPINATHA SANDPA (Minister for Housing)

a) Demand Survey of application are called on 24.12.91 in Baillahongala Town, Belgaum District.

b) Total 62

Details are under :

E.W.S.	-	12
L.I.G.	-	38
M.I.G.	-	12

C) The Scheme is still in preliminary stage of construction.

d) The Karnataka Housing Board, has not been given the possession of any Government land in Bailahongalla Town, Belgaum District, by the Government.

e) Executive Engineer, Karnataka Housing Board, has been instructed to initiate action for acquiring 4 acres in Sy. No. 250/1 Bailahongala Town. Apart from that another 20 acres of land is initiated in Sy.No. 178 of Bailahongala Town, Which is a Government land and effort is being made to get the sanction.

ಚನ್ನಪಟ್ಟಣ ತಾಲ್ಲೂಕಿನಲ್ಲಿ ಅಂಗನವಾಡಿ ಯೋಜನೆ.

1086-ಶ್ರೀ ಸಾದಾತ್ ಅಲಿಖಾನ್ (ಚನ್ನಪಟ್ಟಣ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಅಂಗನವಾಡಿ ಯೋಜನೆಯನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಇ) ಏಕೆ ಈ ತನಕ ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಅಂಗನವಾಡಿ ಯೋಜನೆಯನ್ನು ಪ್ರಾರಂಭಿಸಿರುವುದಿಲ್ಲ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

ಅ) ಇಲ್ಲ.

ಆ) (ಅ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಕೇಂದ್ರ ಸರ್ಕಾರವು ಚನ್ನಪಟ್ಟಣ ತಾಲ್ಲೂಕಿಗೆ ಐಸಿಡಿಎಸ್ ಯೋಜನೆಯನ್ನು ಈ ತನಕ ಮಂಜೂರು ಮಾಡಿಲ್ಲವಾದ್ದರಿಂದ ಈ ಯೋಜನೆಯನ್ನು ಅಲ್ಲಿ ಪ್ರಾರಂಭಿಸಿರುವುದಿಲ್ಲ. ಕೇಂದ್ರ ಸರಕಾರವು ಈ ಯೋಜನೆಯನ್ನು ಊ ತಾಲ್ಲೂಕಿನಲ್ಲೂ ಮಂಜೂರು ಮಾಡಲು ಅನುಕಾಲವಾಗುವಂತೆ ಅಗತ್ಯವಾದ ಮಾಹಿತಿಗಳನ್ನು ಈಗಾಗಲೇ ಕೇಂದ್ರ ಸರ್ಕಾರಕ್ಕೆ ದಿನಾಂಕ 17-7-90ರಂದು ಒದಗಿಸಲಾಗಿದೆ. ಮಂಜೂರಾತಿ ನಿರೀಕ್ಷಿಸಲಾಗಿದೆ.

ಅಂಗವಿಕಲರ ಸಮರ್ಪಕ ರೀತಿಯಲ್ಲಿ ಮೀಸಲಾತಿ ಬಗ್ಗೆ.

1088-ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈಗ ಇರುವ ಮೀಸಲಾತಿಯಲ್ಲಿ ಸಮರ್ಪಕ ಸಹಾಯ ಅಂಗವಿಕಲರಿಗೆ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಮೀಸಲಾತಿ ಅನ್ವಯ ಅಂಗವಿಕಲರ ಸಂಖ್ಯೆಗೆ ಅನುಗುಣವಾಗಿ ಹೆಚ್ಚಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು)

ಅ) ಇಲ್ಲ.

ಆ) ಇಲ್ಲ.

ವಸತಿ ಸಮಸ್ಯೆ ಬಗ್ಗೆ.

1089-ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಸತಿ ಸಮಸ್ಯೆಯ ಜನಸಂಖ್ಯೆ ಎಡೆಗೆ ಅನುಗುಣವಾಗಿ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆ ಕಾರಣದಿಂದ ವಸತಿ ಸಂಖ್ಯೆಯನ್ನು ಜನಸಂಖ್ಯೆಗನುಗುಣವಾಗಿ ಒದಗಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?

ಶ್ರೀ ಗೋಪಿನಾಥ್ ಆರ್. ಸಾಂದ್ರ (ವಸತಿ ಸಚಿವರು)

ಅ) ಹೌದು.

ಆ) ಸಂಪನ್ಮೂಲ ಕ್ರೋಢೀಕರಣವನ್ನು ಅವಲಂಬಿಸಿ ವಸತಿ ಸಮಸ್ಯೆ ಬಗೆಹರಿಸಲು ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಶ್ರೀ ಜಿ.ಎಸ್. ಆಚಾರ್ : ಈ ಕೆಳಕಂಡ ಅರ್ಜಿಗಳನ್ನು ಸದನಕ್ಕೆ ಒಪ್ಪಿರುತ್ತೇನೆ.

ಅ) ತಗ್ಗರ್ಸೆ ಗ್ರಾಮದ ಮೂಕನಗದ್ದೆ ಎಂಬಲ್ಲಿ ಕೊಚ್ಚಿಹೋಗಿರುವ ವೆಂಟೆಡ್ ಡ್ಯಾಮನ್ನು ಭದ್ರವಾಗಿ ಕಟ್ಟಿ ಕೊಡುವ ಬಗ್ಗೆ.

ಆ) ಕುಂದಾಪುರ ತಾಲ್ಲೂಕು ಬಿಜೂರು ಗ್ರಾಮದ ಮೂರನೆಯ ವಾರ್ಡಿನ ಪೂರ್ವ ಭಾಗಕ್ಕೆ ಇರುವ ನದಿಗೆ ಸೇತುವೆ ಕಟ್ಟುವುದು.

ಇ) ಕುಂದಾಪುರ ತಾಲ್ಲೂಕಿನ ಶಿರೂರಿನಲ್ಲಿ ಚಿಕ್ಕಬಂದರು ನಿರ್ಮಾಣ ಹಾಗೂ ಮಂಜುಗಡ್ಡೆ ಕಾರ್ಖಾನೆ ಪುನರಾರಂಭಿಸುವುದು.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಉಪಾಧ್ಯಕ್ಷಣಿಯವರೆ, ಮಾನ್ಯ ಮಲ್ಲಾರಿಗೌಡ ಪಾಟೀಲ್‌ರವರ ಹೆಸರಿನಲ್ಲಿರುವ ಅರ್ಜಿಯನ್ನು ತಮ್ಮ ಅಪ್ಪಣೆ ಪಡೆದು ಸಭೆಯ ಮುಂದೆ ಮಂಡಿಸುತ್ತೇನೆ.

ಕೊಟಬಾಗಿ ಏತನೀರಾವರಿ ಯೋಜನೆಯಿಂದ ಹುಲ್ಲೋಳ್ಳಿ ಹಾಗೂ ಹುಲ್ಲೊಳ್ಳಿ ಹಟ್ಟಿ ಪಶ್ಚಿಮಭಾಗದ ಜಮೀನುಗಳಿಗೆ ನೀರಾವರಿ ಮಾಡುವ ಬಗ್ಗೆ.

ಶ್ರೀ ಬಿ. ಬಸವರಾಜ್ : ಮಾನ್ಯ ಉಪಾಧ್ಯಕ್ಷಣಿಯವರೆ ಉಡುಪಿ ತಾಲ್ಲೂಕಿನ ಮಟಪಾಡಿ ಗ್ರಾಮದ ಬೋಳುಗುಡ್ಡೆ ಬಳಿ ಬಂಡೆ ಒಡೆದು ಜೆಲ್ಲಿ ಮಾಡಲು ಕ್ರ್ಯಷರ್ ಸ್ಥಾಪನೆಗೆ ಅನುಮತಿ ನೀಡಿದ್ದರಿಂದ ರೈತರಿಗೆ ತೊಂದರೆಯಾಗಿರುವುದು.

ಶ್ರೀ ಬಿ. ಪುಟ್ಟಸ್ವಾಮಿಗೌಡ : ಮಾನ್ಯ ಉಪಾಧ್ಯಕ್ಷಿಣಿಯವರೇ ನಾನು 5ನೇ ತಾರೀಖು ಕೇಳಿದೆ. 6ನೇ ತಾರೀಖು ಕೇಳಿ ಎಂದಿರಿ. 6ನೇ ತಾರೀಖು ಕೇಳಿದೆ 7ನೇ ತಾರೀಖು ಕೇಳಿ ಎಂದು ಹೇಳಿದರೆ ತಾವು ನನಗೆ ರಕ್ಷಣೆ ಕೊಡದೆ ಇದ್ದರೆ ಇನ್ನು ಮೂರು ನಮಗೆ ಕೊಡುತ್ತಾರೆ, ದಯವಿಟ್ಟು, ಅವಕಾಶ ಕೊಡಿ.

ಉಪಾಧ್ಯಕ್ಷರು : ಅವತ್ತು ಬೆಳಿಗ್ಗೆ ತಮ್ಮ ಪತ್ರ ಬಂದಿದೆ. ನನಗೆ ಸ್ವಲ್ಪ ಅವಕಾಶ ಕೊಡಿ.

Sri Azeez Saib : Makam, the House is aware that I have moved my privilege motion. I had a discussion in your chambers also along with Mr. Yadiyurappa. I see it is a planned design. It is not that simple as Mr. Yadiyurappa tried to make himself very innocent. Even yesterday in Mysore his own partyman Mr. Maruti Rao Pawar make a statement. I want this matter to be cleared to be cleared once for all. I can't tolerate any more.

Madam Deputy Speaker : I have reserved the ruling. I will take decision very early. ಮಾನ್ಯ ವಾಟಾಳ್ ನಾಗರಾಜ್‌ರವರೇ ನೀವು ಬರುವುದಕ್ಕೆ ಮುಂಚೆ ಮಾನ್ಯ ಸಿಂಧ್ಯಾರವರು ಬಂದು ನನ್ನನ್ನು ಕೇಳಿದ್ದರು. ನಿಮ್ಮ ಉಪನಾಯಕರು ನಿಂತಿದ್ದಾರೆ. ಬಸವರಾಜ್ ಪಾಟೀಲ್‌ರವರೆ ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ನಾನೇನು ಪಾಪ ಮಾಡಿದ್ದೇನೆ. ನಾನು ಬೆಳಿಗ್ಗೆ ಎದ್ದು ಯಾವ ದೇವರ ಮುಖ ನೋಡಬೇಕು?

ಉಪಾಧ್ಯಕ್ಷರು : ನೀವೇನು ಪಾಪ ಮಾಡಿಲ್ಲ, ಕುಳಿತುಕೊಳ್ಳಿ.

ಅಧ್ಯಕ್ಷರ ಅಪ್ಪಣೆಮೇರೆಗೆ ಪ್ರಸ್ತಾಪಿಸಲಾದ ವಿಷಯ.

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬೌದ್ಧಿಕ ಚಟುವಟಿಕೆಗಳು ಸ್ಥಗಿತಗೊಂಡಿರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಿಣಿಯವರೇ ನಾನು ಸರ್ಕಾರಕ್ಕೆ ಒಂದು ಮಹತ್ವವಾದ ವಿಚಾರವನ್ನು ತಿಳಿಸಲಿಕ್ಕೆ ಎದ್ದು ನಿಂತಿದ್ದೇವೆ. ನನಗೆ ಪರವಾನಿಗೆ ಕೊಟ್ಟಿದ್ದಕ್ಕಾಗಿ ನಿಮಗೆ ಧನ್ಯವಾದಗಳು.

ಮಾನ್ಯ ಉಪಾಧ್ಯಕ್ಷಿಣಿಯವರೇ ಬೆಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆ ನಾನು ಹೇಳುವುದೇನೆಂದರೆ, ನಾನು ನಿಮ್ಮ ಗಮನಕ್ಕೆ ತರಲು ಇಚ್ಚಿಸುವುದೇನೆಂದರೆ ಸುಮಾರು ಕಳೆದ ಎರಡು ತಿಂಗಳುಗಳ ಕಾಲದಿಂದ ಇರುವ ಭೌದ್ಧಿಕ ಚಟುವಟಿಕೆಗಳು ನಿಂತುಹೋಗಿವೆ. ಮಾನ್ಯ ಸಂಸದೀಯ ವ್ಯವಹಾರ ಮಂತ್ರಿಗಳು ಇದರ ಬಗ್ಗೆ

ಗಮನ ಕೊಟ್ಟಿದ್ದಾರೆಂದು ನಾನು ಭಾವಿಸುತ್ತೇನೆ. ನಾನು ಒಂದು ಮಹತ್ವದ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿತ್ತು. ಮಾನ್ಯ ಶಿಕ್ಷಣ ಮಂತ್ರಿಗಳು ಕೂಡ ಕಳೆದ 3-4 ದಿವಸಗಳಿಂದ ಸಭೆಗೆ ಬಂದಿಲ್ಲ. ಇದರ ಬಗ್ಗೆ ಸರ್ಕಾರದಿಂದ ಒಂದು ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಈ ಬೆಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ಕೆಲಸಗಳು ನಿಂತು ವಿಶ್ವವಿದ್ಯಾನಿಲಯದ ಬಂದ್ ಪ್ರಾರಂಭವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಪರಿಸ್ಥಿತಿಯಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಈ ಬಗ್ಗೆ ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಮತ್ತು ಇತರ ಪತ್ರಿಕೆಗಳಲ್ಲಿ ಅನೇಕ ಲೇಖನಗಳು ಬಂದಿವೆ, ಈ ಸದನ ಪ್ರಾರಂಭವಾಗಿ 10 ದಿನಗಳಾಗಿವೆ.

ಮಾನ್ಯ ರಾಜ್ಯಪಾಲರು ಈಗಾಗಲೇ ತಮ್ಮ ವಿಶೇಷ ಅಧಿಕಾರವನ್ನು ಚಲಾಯಿಸಿ ವಿಶ್ವವಿದ್ಯಾನಿಲಯದ ಬಗ್ಗೆ ಕ್ರಮವನ್ನು ತೆಗೆದುಕೊಂಡಿದ್ದಾರೆ. ಅವರ ವಿದೇಶ ಪ್ರವಾಸವನ್ನು ರದ್ದು ಮಾಡಿದ್ದಾರೆ, ಮತ್ತು ಅವರು ಅನೇಕ ಹುದ್ದೆಗಳ ನೇಮಕಾತಿಯನ್ನು ಮಾಡಲಿಕ್ಕೆ ತರಾತುರಿಯಲ್ಲಿ ಏನು ಕ್ರಮ ತೆಗೆದುಕೊಂಡಿದ್ದುದು ಅದನ್ನು ಸಹ ರದ್ದು ಮಾಡಿದ್ದಾರೆಂದು ನಾನು ಕೇಳಿದ್ದೇನೆ. ವಿಶ್ವವಿದ್ಯಾನಿಲಯದ ಸಂಸ್ಥೆಗಳಾಗಿರತಕ್ಕ ಸಿಂಡಿಕೇಟ್, ಸೆನೆಟ್, ಅಕಾಡಮಿಕ್ ಕೌನ್ಸಿಲ್ ಈ ಎಲ್ಲಾ ಸಂಸ್ಥೆಗಳು ಕೂಡ ಉಪಕುಲಪತಿಗಳ ವಿರುದ್ಧ ಇದ್ದಾರೆ ಎಂದು ವರದಿಯಾಗಿದೆ. ವಿದ್ಯಾರ್ಥಿ ಸಂಘಗಳು, ಅಧ್ಯಾಪಕ ವೃಂದದವರು ಇವರೆಲ್ಲರೂ ಉಪಕುಲಪತಿಗಳ ವಿರುದ್ಧ ಸಿಡಿದೆದ್ದಿದ್ದಾರೆ ಎನ್ನುವುದು ಕೂಡ ಪತ್ರಿಕೆಯಲ್ಲಿ ವರದಿಯಾಗಿದೆ.

ಇಲ್ಲಿ ಉಪಕುಲಪತಿಗಳ ನಡವಳಿಕೆಯ ಬಗ್ಗೆ ಚರ್ಚೆ ಮಾಡುವುದು ಒಂದು ಖೇದದ ವಿಚಾರ. ವಿಶ್ವವಿದ್ಯಾನಿಲಯ ಸರಸ್ವತಿಯ ದೇಗುಲ ಹಾಗೂ ಶಿಕ್ಷಣದ ಶಿಖರ. ಅದರ ಬಗ್ಗೆ ಇಲ್ಲಿ ಚರ್ಚೆ ಮಾಡಲು ನನಗೆ ಮನಸ್ಸಿರಲಿಲ್ಲ. ಈ ಬಗ್ಗೆ ಪತ್ರಿಕೆಗಳಲ್ಲಿ ಬಂದಿರತಕ್ಕ ವರದಿಯ ಪ್ರಕಾರ ವಿಶ್ವವಿದ್ಯಾನಿಲಯದ ಚಟುವಟಿಕೆಗಳು ನಿಂತುಹೋಗಿವೆ.

ಮಾನ್ಯ ಮುಖ್ಯಮಂತ್ರಿಗಳಿಗೂ ಹಾಗೂ ಉಪಕುಲಪತಿಗಳಿಗೂ ತೀವ್ರವಾದ ಭಿನ್ನಾಭಿಪ್ರಾಯ ಇದೆ. ಇನ್ನು ಎರಡು ದಿನಗಳ ನಂತರ ಈ ಅಧಿವೇಶನ ಮುಗಿದು ಹೋಗುತ್ತದೆ. ಆದುದರಿಂದ ಇದರ ಬಗ್ಗೆ ಸರ್ಕಾರದ ಕ್ರಮ ಏನು ಎಂಬುದರ ಬಗ್ಗೆ ನಾನು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರಾದ ಆರ್.ವಿ. ದೇಶಪಾಂಡೆಯವರು ತೀವ್ರವಾಗಿ ಚರ್ಚೆ ಮಾಡಿದ್ದೇವೆ.

ಸರ್ಕಾರದ ನಿಲುವು ಏನು ಎಂದು ಖಚಿಕವಾಗಿ ಗೊತ್ತಿಲ್ಲ, ಸರ್ಕಾರ ಇದರ ಬಗ್ಗೆ ಇದುವರೆವಿಗೂ ಯಾವುದೇ ರೀತಿಯ ಹೇಳಿಕೆಯನ್ನು ಕೊಟ್ಟಿಲ್ಲ, ವಿದ್ಯಾರ್ಥಿಗಳು ಬೀದಿಗೆ ಇಳಿದಿದ್ದಾರೆ. ಮಾರ್ಚಿ ತಿಂಗಳಲ್ಲಿ ಪರೀಕ್ಷೆ ಪ್ರಾರಂಭವಾಗಬೇಕು. ಮುಖ್ಯಮಂತ್ರಿಗಳಿಗೂ, ಉಪಕುಲಪತಿಗಳಿಗೂ ಬಿನ್ನಾಬಿಪ್ರಾಯ ಇದೆ ಎಂದು ಹೇಳಿದ್ದೇನೆ. ಉಪಕುಲಪತಿಗಳು ರಜೆಯ ಮೇರೆಗೆ ಹೋಗಬೇಕು ಎನ್ನುವುದರ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ವಿರುದ್ಧವಾಗಿ ಇದ್ದಾರೆ ಎಂದು ಕೇಳಿದ್ದೇನೆ. ಏನು ಇದರ ಅರಿತ? ಈ ಬಗ್ಗೆ ಸರ್ಕಾರ ನಮಗೆ ಖಚಿತವಾಗಿ ತಿಳಿಸಬೇಕು. ಇದನ್ನು ತಿಳಿಸುವುದರ ಜೊತೆಗೆ ಈ ಬೆಂಗಳೂರು ವಿಶ್ವವಿದ್ಯಾನಿಲಯವು ಸರಿಯಾದ

ರೀತಿಯಲ್ಲಿ ನಡೆಸಲು ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಣಿಯವರೆ, ನಾನು ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ.

ಶ್ರೀ ಉಪಾಧ್ಯಕ್ಷಣಿಯವರು : ಮೊದಲು ಇದನ್ನು ಮುಗಿಸಿಬಿಡೋಣ. ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದು ನಿಂತಿದ್ದಾರೆ.

+ ಶ್ರೀ ಆರ್.ವಿ. ದೇಶಪಾಂಡೆ : ವಿಶ್ವನಾಥ್ ಕಮಿಟಿ ಸರ್ಕಾರಕ್ಕೆ ಏನು ವರದಿ ಸಲ್ಲಿಸಿದೆ, ಆದರ ಬಗ್ಗೆ ಸರ್ಕಾರದ ಕ್ರಮ ಏನು? ನೀವು ಈ ವರದಿಯನ್ನು ಮುಚ್ಚಿಡಲು ಪ್ರಯತ್ನ ಮಾಡುತ್ತಿದ್ದೀನೆ. ಎರಡನೆಯದಾಗಿ, ಇವತ್ತು ನಾನ್ ಟೀಚಿಂಗ್ ಸ್ಟ್ಯಾಪ್ ಏನಿದ್ದಾರೆ, ಅವರು ಮುಷ್ಕರ ಮಾಡುವುದಾಗಿ ನೋಟೀಸ್ ಕೊಟ್ಟಿದ್ದಾರೆ. ವಿದ್ಯಾರ್ಥಿಗಳ ಸಂಘದವರು ಚುನಾವಣೆ ಮಾಡಲಿಕ್ಕೆ ಉಪಕುಲಪತಿಗಳು ಅಡ್ಡ ಬಂದಿದ್ದಾರೆ. ರಾಜ್ಯಪಾಲ್ಗರು ಹಾಗೂ ಉಪಕುಲಪತಿಗಳ ಸಂಬಂಧ ಸರಿಯಿಲ್ಲ ಎಂದು ಗೊತ್ತಾಗಿದೆ. ಆದುದರಿಂದ ತಕ್ಷಣ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಅಲ್ಲಿ ಶಿಕ್ಷಕರಲ್ಲಾಗಲಿ, ವಿದ್ಯಾರ್ಥಿಗಳಲ್ಲಾಗಲಿ, ಸಿಬ್ಬಂದಿಗಳಲ್ಲಾಗಲಿ, ಹಾಗೂ ಎಲ್ಲರಲ್ಲಿಯೂ ಯಾವುದೇ ತರಹದ ಸೌಹಾರ್ದತೆಯ ಸಂಬಂಧ ಇಲ್ಲ. ಈ ಬಗ್ಗೆ ಸರ್ಕಾರದ ಕ್ರಮ ಏನು ಎಂದು ನಾನು ಕೇಳುತ್ತಿದ್ದೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಬೆಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆ ಅಲ್ಲಿರತಕ್ಕಂಥ ವಿದ್ಯಾರ್ಥಿಗಳು, ವಿದ್ಯಾರ್ಥಿ ಸಂಸ್ಥೆಗಳು, ಸಂಬಂಧಪಟ್ಟ ಅಧ್ಯಾಪಕ ವರ್ಗದವರು, ನಿರಂತರವಾಗಿ ಹೋರಾಟವನ್ನೇ ನಡೆಸಿದ್ದಾರೆ. ಅಲ್ಲಿ ಕಲುಷಿತವಾದ ಒಂದು ಸಮಸ್ಯೆ ಇದೆ ಹಾಗೂ ಗಂಬೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ವಿಶ್ವವಿದ್ಯಾನಿಲಯಕ್ಕೆ ಕೆಟ್ಟ ಹೆಸರು ಬರತಕ್ಕಂಥ ಪರಿಸ್ಥಿತಿಯಾಗಿದೆ. ಸರ್ಕಾರಕ್ಕೂ, ಉಪಕುಲಪತಿಗಳಿಗೂ ಒಳ್ಳೆಯ ಸಂಬಂಧ ಇಲ್ಲ. ರಾಜ್ಯಪಾಲರು ಇವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಇದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಈ ಉಪಕುಲಪತಿಗಳು ಇರಬೇಕೇ ಬೇಡವೇ ಎನ್ನುವುದನ್ನು ಸರ್ಕಾರ ನಿರ್ಧಾರ ಮಾಡಬೇಕು. ಇದು ಅತ್ಯಂತ ಗಂಬೀರವಾದ ಪ್ರಶ್ನೆ. ಈ ಸಮಸ್ಯೆಯನ್ನು ಹೀಗೆಯೇ ಬಿಡುವುದರಿಂದ ಬಹಳ ಅನ್ಯಾವಾಗುತ್ತದೆ. ಇತಿಹಾಸ ಪ್ರಸಿದ್ಧವಾದ ಬೆಂಗಳುರು ವಿಶ್ವ ವಿದ್ಯಾನಿಲಯಕ್ಕೆ ತೀವ್ರರಾದ ಕಳಂಕ ಬರುತ್ತಿದೆ.

ಈ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಸಹಕಾರ ಮಾಡಿದಂಥವರನ್ನು ನೆನಪಿಸಿಕೊಳ್ಳಬೇಕು. ಶ್ರೀಮಾನ್ ಎಸ್.ಆರ್. ಕಂಠಿಯವರು ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಿದಂಥವರು. ಈ ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರದ ಹೆಸರಾಂತ ಕವಿಗಳಾದ ಗೋಕಾಕ್‌ರವರು ಉಪಕುಲಪತಿಗಳಾಗಿದ್ದರು. ಅಲ್ಲಿ ಈಗ ಕಲುಷಿತ ವಾತಾವರಣ ನಿರ್ಮಾಣವಾಗಿದೆ. ಇದನ್ನು ಸರಿಪಡಿಸುವುದಕ್ಕೆ ಸರ್ಕಾರ ತೀವ್ರವಾದಂಥ ಕ್ರಮವನ್ನು ಕೈಗೊಳ್ಳಬೇಕೆಂದು ನಾವು ತಮ್ಮ ಮೂಲಕ ಆಗ್ರಹ ಪಡಿಸುತ್ತೇನೆ. ಈಗಾಗಲೇ ಸರ್ಕಾರಕ್ಕೆ ಬೋಧಕರು, ವಿದ್ಯಾರ್ಥಿಗಳು ಅನೇಕ ಮನವಿಗಳನ್ನು ಸಲ್ಲಿಸಿದ್ದಾರೆ. ಸಿಂಡಿಕೇಟ್ ಮತ್ತು ಸೆನೆಟ್ ತೀವ್ರವಾಗಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಪತ್ರಿಕೆಗಳಲ್ಲಿ ಲೇಖನಗಳು ಬಂದಿವೆ.

ಇಂಥ ಸಂದರ್ಭದಲ್ಲೂ ಸರ್ಕಾರ ನಿದ್ರಾವಸ್ಥೆಯಲ್ಲಿದ್ದರೆ ಇದು ಬಹಳ ಶೋಚನೀಯ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ.

+ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅಶಾಂತಿ ಅತಿ ಹೆಚ್ಚಾಗಿದೆ. ಯಾವುದೇ ಪ್ರಸಂಗದಲ್ಲಿ ಅಲ್ಲಿ ಯಾವ ಅನಾಹುತವಾಗುತ್ತದೆ ಎಂಬುದನ್ನು ಹೇಳುವುದಕ್ಕೆ ಬರುವಂತಿಲ್ಲ. ಏಕೆಂದರೆ, ಅಲ್ಲಿ ಇರತಕ್ಕಂಥ ವೈಸ್ ಚಾನ್ಸಲರ್, ವಿದ್ಯಾರ್ಥಿಗಳ ಹಾಗೂ ಟೀಚರ್‌ಗಳ ಸಮುದಾಯ, ಎಲ್ಲರಲ್ಲಿಯಾ ವಿರೋಧ ಕಟ್ಟಿಕೊಂಡು ಒಂದು ಯುದ್ಧ ಅಲ್ಲಿ ನಡೆಯುತ್ತಿದೆ ಎಂದರೆ ತಪ್ಪಾಗುವುದಿಲ್ಲ. ಅಲ್ಲಿ ಇರತಕ್ಕಂತ 150 ಜನ ಟೀಚರ್‌ಗಳೂ ಸಹಿತ ಗೌವರ್ನರ್‌ಗೆ ಸಹಿ ಮಾಡಿ ಕೂಡಲೇ ಇವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಒಂದು ಅರ್ಜಿಯನ್ನು ಸಹ ಕೊಟ್ಟಿದ್ದಾರೆ. ಅಲ್ಲದೆ 10 ಮಂದಿ ಸೆನೆಟ್ ಮೆಂಬರ್‌ಗಳೂ ಸಹ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಅರ್ಜಿ ಕೊಟ್ಟಿದ್ದಾರೆ. ಹೀಗಾಗಿ ಆ ಕ್ಯಾಂಪಾಸ್ನಲ್ಲಿ ಒಂದು ರೀತಿಯ ಅಶಾಂತಿ ವಾತಾವರಣ ಉಂಟಾಗಿದೆ. ಅದಕಾರಣ ಯಾವುದೇ ಪ್ರಸಂಗದಲ್ಲಿಯೂ ತಾವು ತಡಮಾಡದೆ ತಕ್ಷಣ ಏನಾದರೂ ಒಂದು ಕ್ರಮ ತೆಗೆದುಕೊಳ್ಳದಿದ್ದಲ್ಲಿ ಇದು ಬೇರೆ ಬೇರೆ ಕಡೆ ಹಬ್ಬುತ್ತೆದ. ಅದಕಾರಣ ದಯಮಾಡಿ ಇದು ಬೇರೆ ಕಡೆ ಹಬ್ಬದಂತೆ ಸರ್ಕಾರ ಇದರ ಬಗ್ಗೆ ನಿರ್ದಾಕ್ಷಿಣ್ಯವಾಗಿ ತಪ್ಪು ಮಾಡಿದಂಥ ವೈಸ್ ಚಾನ್ಸಲರ್‌ನ್ನು ಶಿಕ್ಷಿಸಬೇಕು. ಇಲ್ಲಿ ಏನಾಗಿದೆ ಎಂದರೆ ಅವರಿಗೆ ಇನ್ನು ಎರಡು ತಿಂಗಳ ಟರ್ಮ್ ಇದೆ, ನಾವು ಹೇಗೆ ಅವರನ್ನು ತೆಗೆಯುವುದು ಎಂಬ ಉದ್ದೇಶದಿಂದ ತಾವು ಇರಬಹುದು. ಇದು ಬೇರೆ ಕಡೆಗೆ ಹಬ್ಬಿ ಅನಾಹುತ ಆಗುವುದಕ್ಕೆ ಮುಂಚೆ ಅದನ್ನು ತಪ್ಪಿಸಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಎಂ. ಯಾಹ್ಯಾ : (ಉನ್ನತ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಶಾಸಕರು ಬೆಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆ ಕೆಲವು ದೋಷಗಳು ಮತ್ತು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಮಾನ್ಯ ಕೌಜಲಗಿಯವರು ಅಲ್ಲಿ ಅಶಾಂತ ಪರಿಸ್ಥಿತಿ ಉಂಟಾಗಿದೆ ಎಂದೂ ಸಹ ಹೇಳಿದ್ದಾರೆ. ಆ 2Ë3 ದಿವಸಗಳಲ್ಲಿ ಸ್ಟೂಡೆಂಟ್ ಯಾನಿಯನ್ ಎಲೆಕ್ಷನ್ನಾಗಿ ಅಲ್ಲಿ ಸ್ವಲ್ಪ ಅಶಾಂತಿ ಪರಿಸ್ಥಿತಿ ಇತ್ತು. ಈ ಅಶಾಂತಿ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ವೈಸ್ ಚಾಸಲರ್ ಮತ್ತು ಯೂನಿವರ್ಸಿಟಿ ಅಥವಾ ಟೀಸ್ ಆ ಎಲ್ಕ್ಷನೆ ಸಸಹ ಮುಂದಕ್ಕೆ ಹಾಕಿದ್ದಾರೆ. ಸರ್ಕಾರ ಯೂನಿವರ್ಸಿಟಿಯೆಟ್ಟಿಗೆ ವಿಚಾರವನ್ನು ಮಾತನಾಡಿ ಎಲ್ಲಾ ವ್ಯವಸ್ಥೆಗಳು ಇದ್ದರೆ ಅದರ ಬಗ್ಗೆ ಸ್ಟೇಟ್ಮೆಂಟ್ ಮಾಡಲಿಕ್ಕೂ ಸರ್ಕಾರ ತಯಾರು ಇದೆ.

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಸಭಾಧ್ಯಕ್ಷರೆ, ಇದು ವಿದ್ಯಾರ್ಥಿಗಳದ್ದಲ್ಲ, ಉಪಕುಲಪತಿಗಳ ಮೇಲೆ ಮಾಡಿದ ಆರೋಪದ ಬಗ್ಗೆ ಅವರು ಹೇಳಿರತಕ್ಕ ಮಾತುಗಳು, ಅವರ ಆಡಳಿತದ ಬಗ್ಗೆ ಈ ವಿಚಾರವನ್ನು ತಾವು ಸ್ವಲ್ಪ ಗ್ರಹಿ,ಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸಚಿವರಿಂದ ಹಾರ್ನಳ್ಳಿ ರಾಮಸ್ವಾಮಿಯವರು ಸದನದಲ್ಲಿ ಒಪ್ಪಿಕೊಂಡಿದ್ದಾರೆ. " ವಿಶ್ವನಾಥ್ ಕಮಿಟಿ ವರದಿ " ನಿಮಗೆ

ಬಂದಿದೆ ಎಂದು ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ. ವಿಶ್ವವಿದ್ಯಾನಿಲಯದಲ್ಲಿ ಸೌಹಾರ್ದತೆ ಇಲ್ಲ, ವೈಸ್ ಛಾನ್ಸಲರ್ ಅವರು ಪ್ಯಾರಿಸ್ಗೆ ಹೋಗುವವರಿದ್ದರು. His tour has been cancelled by the chancellor.

ಶ್ರೀ ಎಸ್.ಎಂ. ಯಾಹ್ಯಾ : ಇಲ್ಲಿ ಕೆಲವು ಮೂಲ ಪ್ರಶ್ನೆಗಳಿವೆ. ಅದರ ಬಗ್ಗೆ ಬೇಕಾದರೆ ನೋಟಿಸ್ ಕೊಡಲಿ, ಸ್ಟೇಟ್ಮೆಂಟ್ ಕೂಡಲೇ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇವತ್ತು ಹೇಳಿಕೆ ಕೊಡಿ.

ಶ್ರೀ ಎಸ್.ಎಂ. ಯಾಹ್ಯಾ : ಮಂಗಳವಾರ ಈ ಹೌಸ್ ಮುಗಿಯುವಷ್ಟರಲ್ಲಿ ಒಂದು ಹೇಳಿಕೆ ಕೊಡುತ್ತೇವೆ.

ಆಡಳಿತ ಭಾಷೆಯಾಗಿ ಕನ್ನಡ ಜಾರಿ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಗಮನಕ್ಕೂ ತಂದಿದ್ದೇನೆ. ಈ ಕರ್ನಾಟಕ ರಾಜ್ಯದಲ್ಲಿ ನಮ್ಮ ಆಡಳಿತ ಭಾಷೆ ಕನ್ನಡ ಎನ್ನತಕ್ಕಂಥದ್ದು, ಕನ್ನಡದಲ್ಲೇ ಆಡಳಿತ ನಡೆಸಬೇಕು ಎನತಕ್ಕಂಥದ್ದು, ಸರ್ಕಾರದಲ್ಲಿ ಮೊದಲಿನಿಂದಲೂ ಇರತಕ್ಕಂಥ ಒಂದು ಪ್ರಮುಖವಾದ ನೀತಿ ಮತ್ತು ಅದರ ಸಮಗ್ರ ವ್ಯವಸ್ಥೆ ಸಹ ಕನ್ನಡ ಆಡಳಿತ ಬಾಷ್ ಬಗ್ಗೆ ಇರುವಂಥಾದ್ದು ಈಗ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಕನ್ನಡ ಬಾಷೆ ಹೆಸರಿಗೆ ಇದೆ. ಈ ಸದನದಲ್ಲೇ ಕನ್ನಡಕ್ಕೆ ಅಗೌರವವಾಗುತ್ತಿದೆ. ಈ ಸದನಕ್ಕೆ ಅನೇಕ ಇಲಾಖೆಗಳವರು ಕಳುಹಿಸಿರತಕ್ಕಂಥ ಪುಸ್ತಕಗಳು, ಅವರ ವ್ಯವಹಾರಗಳ ಟಿಪ್ಪಣಿಗಳೆಲ್ಲ ಸಂಪೂರ್ಣವಾಗಿ ಇಂಗ್ಲೀಷ್ನಲ್ಲಿಯೇ ಬರುತ್ತದೆ. ನಾನು ಈ ಸದನಕ್ಕೆ ಬಂದಾಗಿನಿಂದಲೂ ಒಂದೇ ಸಮನೆ ಹೇಳುತ್ತಿದ್ದೇನೆ. ಕನ್ನಡ ಆಡಳಿತ ಬಾಷೆ ಎಂದು ತಾವು ಹಿಡಿದುಕೊಂಡಿದ್ದೇವೆ ಅದಕ್ಕೆ ಅಗೌರವವಾಗುವ ರೀತಿಯಲ್ಲಿ ನಡೆದುಕೊಳ್ಳಬಾರದು, ನಮ್ಮ ವ್ಯವಸ್ಥೆ ಸಂಪೂರ್ಣವಾಗಿ ಕನ್ನಡದಲ್ಲಿ ಇರಬೇಕು ಎಂದು ಒಂದೇ ಸಮನೆ ಹೇಳಿದ್ದೇನೆ.

10.50 ಎ.ಎಂ.

ನಾನು ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿದ್ದೇನೆ. ಅದರ ವರದಿಯೂ ಸಹ ಇಂಗ್ಲೀಷ್ನಲ್ಲಿದೆ.

ಉಪಾಧ್ಯಕ್ಷರು : ನೀವೇ ಅದರ ಮೆಂಬರ್ ಆಗಿದ್ದೀರಲ್ಲ !

ಶ್ರೀ ವಾಟಾಳ್ ನಾಗರಾಜ್ : ಆ ಸಮಿತಿಯಲ್ಲಿ ನಾನೂ ಸಹ ಸುಮಾರು ಎರಡು ವರ್ಷಗಳಿಂದ ಸದಸ್ಯನಾಗಿದ್ದೇನೆ. ಒಂದೇ ಸಮನೆ ಸಮಿತಿಗೆ ಹೇಳುತ್ತಿದ್ದೇನೆ. ಸಮಿತಿಯವರು ಕನ್ನಡದಲ್ಲಿ ವರದಿಯನ್ನು ಕೊಡುವುದಕ್ಕೆ ತಯಾರಾಗಿಲ್ಲ. ಇದಲ್ಲದೆ ಇವತ್ತು ಸರಕಾರದಿಂದ ಬಂದಿರತಕ್ಕಂಥ ಅನೇಕ ತರಹದ ಅಬಿವೃದ್ಧಿ ಬಗ್ಗೆ ವರದಿಗಳು ಇಂಗ್ಲೀಷ್ನಲ್ಲಿವೆ. ನೋಡಿ ಇದು ಇಂಗ್ಲೀಷ್ ತುಂಗಭದ್ರಾ ಸ್ಟೀಲ್ಸವರ ಇಂಗ್ಲೀಷ್.

ಶ್ರೀ ಆರ್.ವಿ. ದೇಶಪಾಂಡೆ : ಇಂಗ್ಲೀಷ್ ಏನು ಎಂದು ಓದಿ ಹೇಳಿರಿ.

ಶ್ರೀ ವಾಟಾಳ್ ನಾಗರಾಜ್ : ನನಗೆ ಗೊತ್ತಿದೆ ದೇಶಪಾಂಡೆಯವರೇ. ಈ ತರಹ ಅಷ್ಟು ಸುಲಭವಾಗಿ ನಾನು ಡ್ರ್ಯಾಪ್ ಆಗುವುದಿಲ್ಲ.

ಶ್ರೀ ಆರ್. ದಯಾನಂದರಾವ್ : ಇಂಗ್ಲೀಷ್ ಎನ್ನುವುದರ ಬದಲು ಆಂಗ್ಲ ಬಾಷೆ ಎಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಈ ವ್ಯವಸ್ಥೆ ಇದೆಯಲ್ಲ, ಇದು ನಿಜವಾಗಿಯೂ ಕನ್ನಡ ಬಾಷೆಗೆ ಕರ್ನಾಟಕ ಸರಕಾರ ಕೊಡತಕ್ಕಂಥ ಮರ್ಯಾದೆಯೇ? ಇದು ತೀರಾ ಅಗೌರವ ಪ್ರಶ್ನೆ. ಆದುದರಿಂದ ತಮಗೆ ಹೇಳುತ್ತಿದ್ದೇನೆ, ಇವತ್ತಿನಿಂದ ಇಂಗ್ಲೀಷ್ನಲ್ಲಿ ಬರತಕ್ಕಂಥ ಪುಸ್ತಕಗಳನ್ನು ಹರಿದು ಬಿಸಾಡುವ ಚಳುವಳಿಯನ್ನು ಇಂದಿನಿಂದಲೇ ಪ್ರಾರಂಭ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು : ಸರಕಾರ ಏನು ಹೇಳುತ್ತದೆ ಕೇಳಿರಿ.

ಶ್ರೀ ವಾಟಾಳ್ ನಾಗರಾಜ್ : ಈ ಬಗ್ಗೆ ಮೊದಲು ನನ್ನ ಪ್ರತಿಭಟನೆಯನ್ನು ತೋರಿಸಬೇಕಲ್ಲ. ಪ್ರತಿಯೊಂದು ಸರಕಾರ ಕಳುಹಿಸಿರತಕ್ಕಂಥ ಇಂಗ್ಲೀಷ್ ಪುಸ್ತಕಗಳನ್ನು ಹರಿದು ಬಿಸಾಡುತ್ತಿದ್ದೇನೆ. ಇನ್ನು ಮುಂದು ಇದು ನಡೆಯಬಾರದು, ಸರಕಾರದ ಚಿಂತನೆ ಇದರ ಬಗ್ಗೆ ಏನು? ಸರಕಾರಕ್ಕೆ ಕನ್ನಡದ ಬಗ್ಗೆ ಅಬಿಮಾನ ಇದ್ದರೆ, ಕನ್ನಡದ ಬಗ್ಗೆ ಕಾಳಜಿ ಇದ್ದರೆ, ಈ ಕೆಲಸ ಆಗಬಾರದು. ಕನ್ನಡದ ಬಗ್ಗೆ ಒಂದು ಅಬಿಮಾನ ಇದ್ದರೆ ಇದು ಆಗಬಾರದು ಎನ್ನುವ ಮಾತನ್ನು ನಾನು ತೀವ್ರವಾಗಿ ಹೇಳುತ್ತಿದ್ದೇನೆ. ಇದು ಕನ್ನಡಕ್ಕೆ ಆಗತಕ್ಕಂಥ ಅಗೌರವ. ಇದು ಬಾಷೆಗೆ ತೋರಿಸತಕ್ಕಂಥ ಒಂದು ಕೆಟ್ಟ ಪ್ರಚೋದನೆ. ಇದು ಆಗಬಾರದು ಎನ್ನುವ ಮಾತನ್ನು ನಾನು ತೀವ್ರವಾಗಿ ಹೇಳುತ್ತಿದ್ದೇನೆ. ಈ ವರದಿಗಳನ್ನು ನಾನು ಹರಿಯುತ್ತಿದ್ದೇನೆ. ಇದು ಸರಿಯಲ್ಲ. ಆದರೂ ನೀವು ಕನ್ನಡದಲ್ಲಿ ವರದಿಯನ್ನು ಕೊಡುವವರೆಗೆ ಇದು ಸರಿಯಲ್ಲ. ಯಾರು ಏನೇ ಹೇಳಲಿ ಇದು ಸರಿಯಲ್ಲ, ಇದು ಸರಿಯಾದ ನೀತಿ ಅಲ್ಲ. ಈ ರಾಜ್ಯದಲ್ಲಿ ಕನ್ನಡ ಆಡಳಿತಭಾಷೆ ಎಂದು ಒಪ್ಪಿಕೊಂಡಿರುವಾಗ ಈ ರೀತಿ ಆಗಬಾರದು. ಅನೇಕ ಜಿಲ್ಲಾ ಪರಿಷತ್‌ಗಳು ಇರತಕ್ಕಂಥ ವರದಿಗಳು ಇಂಗ್ಲೀಷ್‌ಲ್ಲಿವೆ. ಇನ್ನೂ ಕೆಲವು ಇಲಾಖೆಗಳು ಮಂಡಲಿಗಳು ಕಳುಹಿಸಿರತಕ್ಕಂಥಾದ್ದು ಇಂಗ್ಲೀಷ್ನಲ್ಲಿ ಇದೆ. ಈ ರೀತಿಯಾದರೆ ಯಾವ ನೀತಿಗೆ ಹೋಗುತ್ತಿದ್ದೇವೆ. ಎಲ್ಲಿಗೆ ತಲುಪುತ್ತಿದ್ದೇವೆ. ಇಂತಹ ಪರಿಸ್ಥಿತಿ ಕನ್ನಡಕ್ಕೆ ಆಗಬಾರದು. ಸರಕಾರ ನಿರ್ದಿಷ್ಟವಾಗಿ ಕನ್ನಡಕ್ಕೆ ಬೆಲೆ ಕೊಡುತ್ತೇವೆ, ಕನ್ನಡಕ್ಕೆ ಗೌರವ ಕೊಡುತ್ತೇವೆ, ಇನ್ನು ಮುಂದೆ ಕನ್ನಡಕ್ಕೆ ಮಾನ್ಯತೆ ಕೊಡುತ್ತೇವೆ, ಕನ್ನಡದಲ್ಲಿ ಸಂಪೂರ್ಣ ವ್ಯವಹಾರ ಮಾಡುತ್ತೇವೆ ಎಂದು ಹೇಳುವವರೆಗೆ ನಾನು ಸದನದಲ್ಲಿ ಧರಣಿ ಮಾಡುತ್ತೇನೆ.

(ಪಕ್ಷದ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರ ಧರಣಿ ಪ್ರಾರಂಬಿಸಿದರು.)

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಈ ಬಗ್ಗೆ ಏನು ಹೇಳುತ್ತಾರೆ ಕೇಳುವುದಕ್ಕೆ ಮುಂಚೆಯೇ ಹೀಗೆ ಮಾಡಿದರೆ ಹೇಗೆ?

ಶ್ರೀ ಬಿ.ಎಂ. ಇದಿನಬ್ಬ : ವಾಟಾಳ್ ನಾಗರಾಜ್‌ರವರಷ್ಟೇ ಕಳಕಳಿ ನನಗೂ ಉಂಟು. ಆಡಳಿತ ಬಾಷೆ ಕನ್ನಡ ಆಗಬೇಕೆಂದು ಅನೇಕ ವರ್ಷಗಳಿಂದ ಹೇಳುತ್ತಿದ್ದರು. ಅದನ್ನು ಮಾಡುವಂತಹವರು ಬಹಳ ಪ್ರಮುಖವಾದುದು. ಆದುದರಿಂದ ಇವತ್ತು ಅದು ನಮ್ಮ ವಿಧಾನಸೌಧದಿಂದಲೇ ಹೊರಡಬೇಕು ಎಲ್ಲಾ ಕನ್ನಡದಲ್ಲಿ ಆಗಬೇಕು ಎಂದು ಹೇಳುವಾಗ, ನಾವು ಹೇಳುವುದು ಒಂದು ಮಾಡುವುದು

ಒಂದು ಆಗುತ್ತಿದೆ. ವಾಟಾಳ್ ನಾಗರಾಜ್‌ರವರು ಅದನ್ನು ಹರಿದು ಬಿಸಾಡುವಷ್ಟು ಮಟ್ಟಕ್ಕೆ ಹೋಗಬಾರದಾಗಿತ್ತು. ಹೇಳಿ ಹೇಳಿ ಮಾಡಿಸಬೇಕಲ್ಲದೇ ಹರಿದು ಬಿಸಾಡಿದ ಕೂಡಲೇ ಸರಿ ಆಗುವುದಿಲ್ಲ. ಕನ್ನಡ ಆಡಳಿತ ಭಾಷೆ ಆಗಬೇಕೆಂದು ನೂರಕ್ಕೆ ನೂರು ನನ್ನ ಅಬಿಪ್ರಾಯ ಇದೆ. ಅದು ವಿಧಾನಸೌಧದಿಂದಲೇ ಹೊರಡಬೇಕು ಇಲ್ಲಿ ಬಿಟ್ಟರೆ ಬೇರೆ ಎಲ್ಲೂ ಇರುವುದಕ್ಕೆ ಸಾಧ್ಯ ಇಲ್ಲ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಕನ್ನಡದಲ್ಲಿ ಎಲ್ಲಾ ರಿಪೋರ್ಟ್ ಬರಬೇಕು. ಇದರ ಬಗ್ಗೆ ಸರಕಾರದವರು ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ.ಎಂ. ಇದಿನಬ್ಬ : ಆಡಳಿತ ಬಾಷೆ ಕನ್ನಡ ಎಂದು ಒಪ್ಪಿಕೊಂಡು ಇಂಗ್ಲೀಷ್ ಉಪಯೋಗ ಮಾಡುತ್ತಿದ್ದೇವೆ. ಅದು ಕೂಡದು, ಆದುದರಿಂದ ಆಡಳಿತ ಬಾಷೆ ಕನ್ನಡ ಎಂದು ಆದಮೇಲೆ ಎಲ್ಲಾ ಕನ್ನಡದಲ್ಲೇ ಆಗುವುದಕ್ಕೆ ತಾವು ಅಪ್ಪಣೆ ಕೊಡಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಈ ವಿಚಾರವನ್ನು ಈ ಸದನದಲ್ಲಿ ಅನೇಕ ಬಾರಿ ವಾಟಾಳ್ ನಾಗರಾಜ್ ಅವರು ಪ್ರಸ್ತಾಪ ಮಾಡುತ್ತಿದ್ದಾರೆ. ಕನ್ನಡ ಜಾರಿಗೆ ತರುತ್ತೇವೆಂದು ಹೇಳಿ ಕೊಂಡು ಬಂದು ಇದೇ ರೀತಿ ಇಂಗ್ಲೀಷ್‌ನಲ್ಲಿ ಪುಸ್ತಕಗಳನ್ನು ಪ್ರಿಂಟ್ ಮಾಡುವಂತಹದು ಸರಿ ಅಲ್ಲ. ಜಿಲ್ಲಾ ಪರಿಷತ್ ಮತ್ತು ಸರಕಾರ ಇದೇ ಕೆಲಸ ಮಾಡಿಕೊಂಡು ಹೋಗುತ್ತಿದೆ. ಇದರ ಬಗ್ಗೆ ಅನೇಕ ಸಲ ಇಲ್ಲಿ ಆಶ್ವಾಸನೆ ಕೊಟ್ಟಿದ್ದಾರೆ. ಆದರೂ ಇದು ಕಾರ್ಯರೂಪಕ್ಕೆ ಬಂದಿಲ್ಲ. ಇನ್ನು ಮುಂದೆ ಇಂಗ್ಲೀಷ್ನಲ್ಲಿ ಪುಸ್ತಕಗಳನ್ನು ಪ್ರಿಂಟ್ ಮಾಡಿ, ಬೇಡ ಎಂದು ನಾನು ಹೇಳುವುದಿಲ್ಲ, ಆದರೆ ಅದರ ಜೊತೆಗೆ ಪ್ರತಿಯೊಂದನ್ನು ಕನ್ನಡದಲ್ಲಿ ಪ್ರಿಂಟ್ ಮಾಡುತ್ತೇವೆ, ಕನ್ನಡದ ಒಂದು ಪ್ರತಿ ಪ್ರಿಂಟ್ ಮಾಡುತ್ತೇವೆ ಕನ್ನಡದಲ್ಲಿ ಕೊಡುತ್ತೇವೆ ಎಂದು ಒಂದು ಮಾತು ಸದನದ ಕಡೆಯಿಂದ ಪ್ರಮುಖದಲ್ಲಿ, ಸಬಾನಾಯಕರು ಹೇಳಿದರೆ ಅಥವಾ ಲಾ ಮಿನಿಸ್ಟರ್‌ರವರು ಹೇಳಿದರೆ ವಾಟಾಳ್ ನಾಗರಾಜ್ರವರು ಈ ಕಡೆ ಬಂದು ಕುಳಿತುಕೊಳ್ಳುತ್ತಾರೆ. ಇದೇ ತಪ್ಪನ್ನು ಮತ್ತೆ ಮತ್ತೆ ಮಾಡಬೇಡಿ. ಇದರಿಂದ ಏನಾಗುತ್ತದೆ ಎಂದರೆ ಹೇಳುವುದಕ್ಕೂ ಮಾಡುವುದಕ್ಕೂ ಸಂಬಂಧ ಇಲ್ಲದ ಹಾಗೆ ಆಗುತ್ತದೆ. ಕನ್ನಡಕ್ಕೆ ಅಪಮಾನ ಮಾಡಿದಂತಾಗುತ್ತದೆ. ಸರಕಾರ ಸ್ಪಷ್ಟವಾಗಿ ಹೇಳಿಕೆ ಕೊಡಬೇಕು. ಇನ್ನು ಮುಂದೆ ಇಂಗ್ಲೀಷ್ ಕನ್ನಡ ಎರಡೂ ಪ್ರತಿಯನ್ನು ಪ್ರಿಂಟ್ ಮಾಡಿ ಹಂಚುತ್ತೇವೆ ಎನ್ನುವ ಭರವಸೆಯನ್ನು ದಯವಿಟ್ಟು ಪಾರ್ಲಿಮೆಂಟರಿ ಸಚಿವರು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ): ಮಾನ್ಯ ಉಪಾಧ್ಯಕ್ಷರೇ ಸರ್ಕಾರ ಉತ್ತರ ಕೊಡುವುದಕ್ಕಿಂತ ಮುಂಚೆ ನಮ್ಮ ಸರ್ಕಾರವಿದ್ದಾಗ ನಾವು ಸರ್ಕಾರ ನಡೆಸಿದ್ದೇವೆ. ಸರ್ಕಾರ ನಡೆಸತಕ್ಕಂಥ ಸಂದರ್ಭದಲ್ಲಿ ಕನ್ನಡವನ್ನು ಆಡಳಿತ ಬಾಷೆಯನ್ನಾಗಿ ತರತಕ್ಕಂಥ ವಿಚಾರದಲ್ಲಿ ನಾವು ಸಂಪೂರ್ಣವಾಗಿ ಎಲ್ಲಾ ಸಹಿ ಮಾಡಿಬಿಟ್ಟಿದ್ದೇವೆಂದು ನಾನು ಹೇಳುವುದಿಲ್ಲ. ನಾವು ತಪ್ಪು ಮಾಡಿದ್ದೇವೆ. ಆದರೆ ಒಂದು ಮಾತನ್ನು ಹೇಳುತ್ತೇನೆ ಕಳೆದ ಒಂದೆರಡು ವರ್ಷಗಳಲ್ಲಿ ಕನ್ನಡವನ್ನು ಸಂಪೂರ್ಣವಾಗಿ ಮರೆತಿರತಕ್ಕಂಥಾದ್ದು ಇದೆ. ವಾಟಾಳ್ ನಾಗರಾಜ್‌ರವರು ಕಳೆದ

ವಿಧಾನಸಬೆಯಲ್ಲಿ ಅದರ ಹಿಂದಿನ ವಿಧಾನ ಸಬೆಗಳಲ್ಲಿ ಇರಲಿಲ್ಲ. ಅವರು ವಿಧಾನಸಬೆಗೆ ಬಂದ ಮೇಲೆ ಒಂದು ವಿಚಾರವನ್ನು ಒಪ್ಪಿಕೊಳ್ಳುತ್ತೇನೆ ಅವರು ಕನ್ನಡದ ಬಗ್ಗೆ ಬಹಳ ತೀವ್ರವಾಗಿ ಅದನ್ನು ಪ್ರತಿಭಟನೆ ಮಾಡಿದ್ದಾರೆ. ಅವರು ಇವತ್ತು ಆಂಗ್ಲ ವರದಿಯ್ನನು ಹರಿದು ಹಾಕಿದ್ದಾರೆ. ಬೆಂಕಿ ಹಾಕಬೇಕಾಗಿತ್ತು ಎನ್ನುವ ಮಾತ್ನನು ನಾನು ಹೇಳುತ್ತೇನೆ. ಇತ್ತೀಚಿನ ದಿನಗಳಲ್ಲಿ ಎಲ್ಲಾ ವರದಿಗಳು ಇಂಗ್ಲೀಷ್‌ನಲ್ಲಿ ಬರುವುದಕ್ಕೆ ಪ್ರಾರಂಭವಾಗಿದೆ. ಇನ್ನೊಂದು ವಿಚಾರ ಏನೆಂದರೆ ಈಗ ಅಟ್ನ ಪ್ರತಿಯೊಂದು ವಿಚಾರವನ್ನು ಕೇಂದ್ರ ಸರ್ಕಾರದ ಆಡಿಟರ್ ಜನರಲ್ ಇಲ್ಲಿ ಬೆಂಗಳೂರಿನಲ್ಲಿ ಅವರ ಕಛೇರಿ ಇದೆ. ಅವರು ಮಾಡುತ್ತಾರೆಂದು ಹೇಳಬಹುದು. ಅದನ್ನು ಇಂಗ್ಲೀಷ್ನಲ್ಲೇ ಮಾಡಬೇಕೆಂದೇನೂ ಇಲ್ಲ. ನಾವು ಕೇಂದ್ರ ಸರ್ಕಾರಕ್ಕೆ ಬರೆಯೋಣ. ಆಡಿಟರ್ ಜನರಲ್ ಆಫೀಸ್‌ನಲ್ಲಿ ಕನ್ನಡದವರು ಯಾರು ಇಲ್ಲವೇ? ಕನ್ನಡವನ್ನು ತಿಳಿದುಕೊಂಡು ಮಾಡಲಿ. ಕೇಂದ್ರ ಸರ್ಕಾರಕ್ಕೆ ನಾವು ತಿಳಿಸಬೇಕಾಗುತ್ತದೆ. ಈಗ ಬಿಹಾರ್ ಯು.ಪಿ. ಹೋಗಿ. ನಿಮಗೆ ನಾನು ಕೇಳುತ್ತೇನೆ ರಸ್ತೆಗಳಲ್ಲಿಯೂ ಸಹ ಹಿಂದಿಯಲ್ಲಿ ಒರೆದಿರುತ್ತಾರೆ. ಬಿಹಾರಿಯಲ್ಲಿ ಬರೆದಿರುತ್ತಾರೆ. ನಾವು ಎಲ್ಲಿದ್ದೇವೆಂದು ಗೊತ್ತಾಗುವುದಿಲ್ಲ. ಅಲ್ಲಿ ಇಂಗ್ಲೀಷ್‌ನಲ್ಲೂ ಸಹ ಬೋರ್ಡ್ ಇರುವುದಿಲ್ಲ, ನಾವು ಯಾವ ದೇಶದಲ್ಲಿದ್ದೇವೆಂದು ಅನಿಸುತ್ತದೆ. ನಮ್ಮಲ್ಲಿ ಯಾವುದಾದರೂ ಒಂದು ಸಣ್ಣದ್ದು ಹಳ್ಳಿ ಇರಲಿ, ಅಲ್ಲಿಯೂ ಕೂಡ ಇಂಗ್ಲೀಷ್ನಲ್ಲಿ ಹಾಕಿರುತ್ತಾರೆ. ಒರಿಸ್ಸಾ, ಬಿಹಾರ್ಗಳಲ್ಲಿ ಇದು ಇಂತಹ ಕಡೆ ಹೋಗುತ್ತದೆಂದು ಹಿಂದಿಯಲ್ಲಿ ಬರೆದಿರುತ್ತಾರೆ. ನಮಗೆ ಕನ್ನಡದಲ್ಲಿ ಬರೆಯಲು ತೊಂದರೆ ಏನು? ಅರ್ಥವಾಗುತ್ತಿಲ್ಲ. ದಯವಿಟ್ಟು ಈಗ ಇರತಕ್ಕಂಥ ಮುಖ್ಯಮಂತ್ರಿಗಳು ತಾವೇ ಸ್ವತಃ ಕನ್ನಡದ ಕವಿಗಳು. ಕನ್ನಡ ಸಂಸ್ಕೃತಿಯ ಬಗ್ಗೆ ಅಪಾರವಾದ ಶ್ರದ್ದೆ ನಂಬಿಕೆ ಇರತಕ್ಕಂಥವರು. ಸಾಹಿತಿಗಳು ಅದರೆ ಅವರು ಕನ್ನಡವನ್ನು ಕಾರ್ಯಾಚರಣೆಗೆ ತರಬೇಕು; ಇಲ್ಲಿನ ಎಲ್ಲಾ ವ್ಯವಹಾರಗಳು ಕನ್ನಡದಲ್ಲೇ ಆಗಬೇಕು. ಈಗ ಯಾರು ಕೆಲವು ಸದಸ್ಯರು ಇದ್ದಾರೆ ಅವರಿಗೆ ಕನ್ನಡ ಓದುವುದಕ್ಕೆ ಬಾರದೇ ಇರಬಹುದು. ಅಂತಹವರಿಗೆ ನೀವು 4 ಪ್ರತಿಗಳನ್ನು ಇಂಗ್ಲೀಷ್‌ನಲ್ಲಿ ಮಾಡಿ ಕೊಡಿ.

ಇಲ್ಲಿ ಬರತಕ್ಕಂಥ ಎಲ್ಲಾ ಉತ್ತರಗಳು ಇಂಗ್ಲೀಷ್‌ನಲ್ಲಿ ಬರುತ್ತವೆ. ಹಿಂದೆ ಮಾನ್ಯ ಅಧ್ಯಕ್ಷರೇ ನಮ್ಮ ಸರ್ಕಾರದಲ್ಲಿ ಮುಖ್ಯ ಕಾರ್ಯದರ್ಶಿಗಳಾಗಿದ್ದ ಶ್ರೀ ಸತೀಶ್ಚಂದ್ರರವರು ನಿವೃತ್ತಿಯಾದಾಗ ಅವರಿಗೆ ಪತ್ರಿಕಾ ಸಂದರ್ಶನಲ್ಲಿ ಒಂದು ಪ್ರಶ್ನೆ ಕೇಳಿದ್ದಾರೆ. ಕನ್ನಡವನ್ನು ಆಡಳಿತ ಬಾಷೆಯನ್ನಾಗಿ ಮಾಡಲಿಕ್ಕೆ ಐ.ಎ.ಎಸ್. ಅಧಿಕಾರಿಗಳ ಪೈಕಿ ಯಾರು ಅಡ್ಡಿಪಡಿಸುತ್ತಿದ್ದಾರೆಂದು ಕೇಳಿದಾಗ ಅದಕ್ಕೆ ಕನ್ನಡದ ಐ.ಎ.ಎಸ್. ಅಧಿಕಾರಿಗಳೇ ವಿರೋಧ ವ್ಯಕ್ತಪಡಿಸುತ್ತಾರೆ ಹೊರಗಡೆಯಿಂದ ಬಂದಂತಹ ಅಧಿಕಾರಿಗಳು ಕನ್ನಡ ಚೆನ್ನಾಗಿ ಕಲಿತಿದ್ದಾರೆಂದು ಹೇಳಿದ್ದಾರೆ. ಇಷ್ಟಾದರೂ ಸಹ ನಮ್ಮ ಕಾರ್ಯಾಲಯದಲ್ಲಿ ಏನು ಕೆಲಸ ಆಗಿಲ್ಲ ಎತಕ್ಕೋ ನನಗೂ ಅರ್ಥವಾಗುತ್ತಿಲ್ಲ. ಸರ್ಕಾರ ಇದರ ಬಗ್ಗೆ ಒಂದು ಖಚಿತವಾದ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಶ್ರೀ ರಾಮಸ್ವಾಮಿಯವರು ಎದ್ದು ನಿಂತು ನಿಮ್ಮ ಮಾತಿನಿಂದ ನನಗೆ ಎಲ್ಲಾ ಅರ್ಥವಾಗಿದೆ ನಿಮ್ಮ ನೋವು ನಲಿವು ಎಲ್ಲಾ ನನಗೆ ಅರ್ಥವಾಗಿದೆ ಎಂದು ಹೇಳಿಕುಳಿತುಕೊಂಡರೆ ಏನೂ ಆಗುವುದಿಲ್ಲ. ಕನ್ನಡವನ್ನು ಎಲ್ಲಾ ಹಂತಗಳಲ್ಲಿಯೂ ಜಾರಿಗೆ ತರುತ್ತೇವೆಂದು ಖಚಿತವಾಗಿ ಒಂದು ನಿರ್ಣಯ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಉಪಾಧ್ಯಕ್ಷರೇ ಇವತ್ತು ಸರ್ಕಾರದಿಂದ ಬಂದಿರತಕ್ಕಂಥ ಕೆಲವು ಇಂಗ್ಲೀಷ್ ಕಾಗದಪತ್ರಗಳನ್ನು ಶ್ರೀ ವಾಟಾಳ್ ನಾಗರಾಜ್‌ರವರು ಹರಿದು ಹಾಕಿದ್ದಾರೆ? ಈಗ ನಮಗೆ ಕೆಲವು ಬಿಲ್‌ಸ ಕೊಟ್ಟಿದ್ದೀರಿ. ಅವೆಲ್ಲವೂ ಕೂಡ ಇಂಗ್ಲೀಷ್‌ನಲ್ಲಿ ಇದೆ. ಬಿ.ಎ.ಸಿ.ನಲ್ಲಿ ನಮಗೆ ಕೊಟ್ಟಿರತಕ್ಕಂಥ 5-6 ಬಿಲ್ಸ್‌ಗಳನ್ನು ನೋಡಿ ಒಂದೂ ಕನ್ನಡದಲ್ಲಿ ಇಲ್ಲ. ಈಗ ನಾವು ಬಿಲ್‌ಸಗಳನ್ನು ಪಾಸ್ ಮಾಡಿದ್ದೇವೆ. ಅವು ಯಾವುವೂ ಕನ್ನಡದಲ್ಲಿ ಇಲ್ಲದೆ ಇರುವಾಗ ಇನ್ನು ಹೊರಗಡೆ ಕನ್ನಡ ಇರಬೇಕೆಂದು ಹೇಳಿದರೆ ಹೇಗೆ ಆಗುತ್ತದೆ. ತಾವು ದಯವಿಟ್ಟು ಆಲೋಚನೆ ಮಾಡಬೇಕು. ಇನ್ನೊಂದು ವಿಚಾರ ಕರ್ನಾಟಕ ರಾಜ್ಯದಲ್ಲಿ ಬ್ಯಾಂಕುಗಳು ಏನಿವೆ ನ್ಯಾಷನಲೈಸಡ್ ಬ್ಯಾಂಕ್ಸ್, ಯಾವುದಾದರೊಂದು ಬ್ಯಾಂಕ್‌ಗೆ ಹೋಗಿ ನೋಡಿ ಕನ್ನಡದಲ್ಲಿ ಒಂದು ಅರ್ಜಿಯೂ ಇಲ್ಲ, ಅವೆಲ್ಲಾ ಹಿಂದಿಯಲ್ಲಿವೆ. ಮತ್ತು ಅಲ್ಪ ಸ್ವಲ್ಪ ಅಲ್ಲೊಂದು ಇಲ್ಲೊಂದು ಇಂಗ್ಲೀಷ್ ಪದಗಳು ಇವೆ. ಆದರೆ ವ್ಯವಹಾರ ಎಲ್ಲಾ ಹಿಂದಿಯಲ್ಲಿ ತಾವು ಬ್ಯಾಂಕ್‌ಗಳವರಿಗೆ ಹೇಳಬೇಕಾಗುತ್ತದೆ ಹಿಂದಿ ಎಲ್ಲಿಯವರೆಗೆ ಮುಟ್ಟಿದೆ ಅಂದರೆ ಹುಟ್ಟಿದಂತಹ ಮಕ್ಕಳಿಗೆ ಹಾಲು ಕೊಡಬೇಕಾದರೆ ಆ ಹಾಲಿನಲ್ಲಿ ಹಿಂದಿ ಸೇರಿಸಿ ಹಾಲು ಕುಡಿಸತಕ್ಕಂಥಾದ್ದಕ್ಕೆ ಕೇಂದ್ರ ಸರ್ಕಾರ ಹೊರಟಿದೆ.

ಯಾವ ಬ್ಯಾಂಕುಗಳವರು, ಕನ್ನಡದಲ್ಲಿ ಅರ್ಜಿಗಳ ನಮೂನೆಗಳನ್ನು ಪ್ರಿಂಟ್ ಮಾಡಿ ಹಂಚುವುದಿಲ್ಲ? ಆ ಬ್ಯಾಂಕುಗಳಿಗೆ ಇಲ್ಲಿ ಜಾಗ ಕೊಡುವುದಿಲ್ಲ, ಸ್ಥಳ ಕೊಡುವುದಿಲ್ಲ, ಇಲ್ಲಿ ನಡೆಸುವುದಕ್ಕೆ ಬಿಡುವುದಿಲ್ಲ ಎನ್ನತಕ್ಕಂಥ ಮಾತನ್ನು ಸರ್ಕಾರ ಹೇಳಬೇಕಾಗುತ್ತದೆ ಇವತ್ತಿನ ದಿವಸ. ನಾವು ಈ ವಿಚಾರವನ್ನು ಬಹಳ ತೀವ್ರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಬ್ಯಾಂಕುಗಳವರ ಆಟ್ಟಿಟ್ಯೂಡ್ ಏನಿದೆ ಅದನ್ನು ಖಂಡಿಸಬೇಕಾಗುತ್ತದೆ. ಆಮೇಲೆ ರೈಲ್ವೇ ಇಲಾಖೆಯಲ್ಲಿ, ರೈಲ್ವೆ ಬೋಗಿಗಳಿವೆ, ಅವು ಇಲ್ಲಿಂದ ಮದ್ರಾಸ್‌ಗೆ ಹೋಗುತ್ತವೆ, ಅವುಗಳ ಮೇಲೆ ಕನ್ನಡದಲ್ಲಿ ಒಂದು ಬೋರ್ಡ್ ಇರುವುದಿಲ್ಲ, ಹಿಂದಿಯಲ್ಲಿ ಇರುತ್ತದೆ, ಇಲ್ಲಾ ತಮಿಳಿನಲ್ಲಿರುತ್ತದೆ. ಕನ್ನಡದಲ್ಲಿ ಒಂದರಲ್ಲೂ ಕೂಡ ಇರುವುದಿಲ್ಲ. ಅಷ್ಟೇ ಅಲ್ಲ ಉಪಾಧ್ಯಕ್ಷಣೆಯವರೆ, ನಮ್ಮ ರಾಜ್ಯದಿಂದ ವಿಮಾನಗಳು ಹೋಗುತ್ತವೆ, ಬೇರೆ ಕಡೆಯಿಂದ ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದರೆ, ನಾನು ತಮಿಳು ಪತ್ರಿಕೆಗಳನ್ನು ನೋಡಿದ್ದೇನೆ. ತೆಲುಗು ಪತ್ರಿಕೆಗಳನ್ನು ವಿಮಾನದಲ್ಲಿ ಇಟ್ಟಿರತಕ್ಕಂಥಾದ್ದನ್ನು ನೋಡಿದ್ದೇನೆ. ಕನ್ನಡ ಪತ್ರಿಕೆಗಳು ಒಂದೂ ಕೂಡ ವಿಮಾನದಲ್ಲಿ ಸಿಕ್ಕುವುದಿಲ್ಲ, ಅದನ್ನು ಹೇಳಬೇಕಾಗುತ್ತದೆ. ಯಾರು ವಿಮಾನಗಳನ್ನು ನಡೆಸುತ್ತಾರೋ ಅವರಿಗೆ ಸರ್ಕಾರದವರು ಹೇಳಬೇಕಾಗುತ್ತದೆ. ಕನ್ನಡದ ಪತ್ರಿಕೆಗಳು ಏನು ಅನ್ಯಾಯ ಮಾಡಿವೆ? ಕನ್ನಡದಲ್ಲಿ ಓದತಕ್ಕಂಥ ಜನ ಇಲ್ಲವೇ? ನಾವು 4 ಕೋಟಿ ಜನ ಇದ್ದೇವೆ. 4 ಕೋಟಿ ಜನ ಮಾತನಾಡತಕ್ಕಂಥ ಬಾಷೆಗೆ ಮಾನ್ಯತೆ ಇಲ್ಲವೆಂದರೆ ಈ ದೇಶದಲ್ಲಿ ಏಕೆ ಇರಬೇಕಾಗುತ್ತದೆ ಇದನ್ನು ಕೂಡ ನಾವು ತೀವ್ರವಾಗಿ ಆಲೋಚನೆ ಮಾಡಬೇಕಾಗುತ್ತೆದ. ವಿಮಾನದಲ್ಲೂ ಕನ್ನಡದ ಪತ್ರಿಕೆಗಳು ಇರಬೇಕು. ಬ್ಯಾಂಕುಗಳಲ್ಲಿ ಬರತಕ್ಕಂಥ ಎಲ್ಲಾ ಅರ್ಜಿ ನಮೂನೆಗಳು ಕನ್ನಡದಲ್ಲಿ ಇರಬೇಕಾಗುತ್ತದೆ. ಇದಕ್ಕೆ ತೀವ್ರ ಪ್ರತಿಭಟನೆಯನ್ನು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು. ಕರ್ನಾಟಕ ರಾಜ್ಯದಲ್ಲಿ ಕನ್ನಡಕ್ಕೆ ಆಗುತ್ತಿರುವ ಅನ್ಯಾಯವನ್ನು ತಡೆಯದಿದ್ದರೆ ಆಗುವುದಿಲ್ಲವೆಂದು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು.

+ ಶ್ರೀ ಆರ್.ವಿ. ದೇವಪಾಂಡೆ : ಇದು ಬಹಳ ಮಹತ್ವದ ವಿಚಾರ. ಇದನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ನಮ್ಮ ಸರ್ಕಾರ ಇದ್ದಾಗಲೇ ಆಗಲಿ ಅಥವಾ ನಿಮ್ಮ ಸರ್ಕಾರ ಬಂದಾಗಲೂ ಕನ್ನಡ ಬಾಷೆ ಆಡಳಿತ ಮಾಡುತ್ತೇವೆ, ಕನ್ನಡ ಬಾಷೆಗೆ ಪ್ರಾಮುಖ್ಯತೆ ಕೊಡುತ್ತೇವೆಂದು ತಾವು ಹೇಳಿದ್ದೀರಿ. ಆದರೆ ಇವತ್ತು, ಯಾವುದು ಪ್ರಾಮುಖ್ಯತೆ ಇದಕ್ಕೆ ಕೊಡಬೇಕಾಗಿತ್ತೋ ಮಹತ್ವ ಕೊಡಬೇಕಾಗಿತ್ತೋ ಅದನ್ನು ಕೊಡುತ್ತಿಲ್ಲ. ವಾಟಾಳ್ ನಾಗರಾಜ್‌ರವರು ಏನು ಹರಿದರಲ್ಲಾ? ಅವರು ಅದನ್ನು ನಿಜವಾಗಿ ಸುಡಬೇಕಾಗಿತ್ತು. ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ? ತಾವು ಇದಕ್ಕೆ ಉತ್ತರ ಕೊಡಬಹುದು. ಆದರೆ, ಅದರಿಂದ ನಮಗೆ ಸಮಾಧಾನವಾಗಲಿಕ್ಕೆ ಸಾಧ್ಯವಿಲ್ಲ. ಹಾಗಾಗಿ ಇದೊಂದು ಪಾಲಿಸಿ ಮ್ಯಾಟರ್ ಇರುವುದರಿಂದ, ಮಹತ್ವದ ವಿಷಯ ಇರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಡಬೇಕಾಗುತ್ತದೆ. ಏನು ನಿಮ್ಮ ನಿಲುವು, ಇನ್ನು ಮುಂದೆ ಯಾವ ಪ್ರಕಾರ ವ್ಯವಸ್ಥೆ ಮಾಡುತ್ತೀರಿ? ಕನ್ನಡ ಬಾಷೆಗೆ ಯಾವ ಪ್ರಕಾರ ಮಹತ್ವ ಕೊಡುತ್ತೀರಿ? ತಮಗೆ ವಿನಂತಿ ಮಾಡುತ್ತಿದ್ದೇನೆ, ತಾವು, ಮುಖ್ಯ ಮಂತ್ರಿಗಳನ್ನು ಸದನಕ್ಕೆ ಬರಲಿಕ್ಕೆ ಹೇಳಿ, ಬೇಕಾದರೆ ನಾವು ವಾಟಾಳ್ ನಾಗರಾಜ್‌ರವರನ್ನು ರಿಕ್ವೆಸ್ಟ ಮಾಡುತ್ತೇವೆ. ಏಕೆಂದರೆ, ಮುಖ್ಯಮಂತ್ರಿಗಳು ಉತ್ತರಕೊಡಬೇಕು. ಎಲ್ಲಿಯವರೆಗೆ ಮುಖ್ಯ ಮಂತ್ರಿಗಳು ಉತ್ತರ ಕೊಡುವುದಿಲ್ಲವೋ ಅ ತನಕ ಅದು ಬಹಳ ಕಷ್ಟವಾಗುತ್ತದೆ. ಇದರ ಬಗ್ಗೆ ಸರ್ಕಾರದ ನಿಲುವು ಏನು ಎಂದು ತಿಳಿದು ಕೊಳ್ಳುವುದಕ್ಕೆ ಕಷ್ಟವಾಗುತ್ತೆದ. ಮುಖ್ಯ ಮಂತ್ರಿಗಳನ್ನು ಇಲ್ಲಿಗೆ ಕರೆಯಿಸಿ ಉತ್ತರವನ್ನು ಕೊಡಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

(ವಾಟಾಳ್ ನಾಗರಾಜ್‌ರವರು ವೆಲ್‌ನಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಉಪಾಧ್ಯಕ್ಷಣಿಯವರೆ, ದಯವಿಟ್ಟು ಈ ಕಡೆ ನೋಡಬೇಕು.

ಶ್ರೀ ಕೆ. ಹರ್ಷಕುಮಾರ್ ಗೌಡ : ಅಧ್ಯಕ್ಷರೆ, ಹಾಗಾದರೆ ಕನ್ನಡದ ಬಗ್ಗೆ ಆಡಳಿತ ಪಕ್ಷಕ್ಕೆ ಕಾಳಜಿ ಇಲ್ಲವೆಂದೇ ಅವರು ಹೇಳುವುದು?

ಶ್ರೀ ಎಂ.ವಿ. ವೆಂಕಟಪ್ಪ : ಇಲ್ಲಿ ಏನಾಗಿದೆ ಎಂದರೆ, ಮಾನ್ಯ ಉಪಾಧ್ಯಕ್ಷಣಿಯವರೆ,

(ಕೆಲವು ಸದಸ್ಯರು ಜೋರಾಗಿ ಮಾತನಾಡುತ್ತಿದ್ದರು)

ನಾವೂ ಇಲ್ಲಿ ಜೋರಾಗಿ ಮಾತನಾಡಿದರೆ ಸರಿಹೋಗುತ್ತೆದಂದು ಕಾಣುತ್ತದೆ. ಮಾನ್ಯ ಉಪಾಧ್ಯಕ್ಷಣಿಯವರೆ, ಕನ್ನಡ ಬಾಷೆ ಬಗ್ಗೆ ಎಲ್ಲೆಲ್ಲಿ ಉಪಯೋಗಿಸುವುದಿಲ್ಲ? ಬ್ಯಾಂಕುಗಳಲ್ಲಾಗಲೀ, ಪ್ಲೇನ್‌ಗಳಲ್ಲಿ ಪೇಪರ್‌ಸ ಇಡುವುದಾಗಲಿ, ರೈಲ್ವೇಸ್‌ನಲ್ಲಿ ಆಗಲೀ, ಅದರ ಬಗ್ಗೆ ಸದಸ್ಯರ ಆತಂಕ ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಇವತ್ತು ಒಂದು ಅಶ್ಯೂರೆನ್‌ಸ ಕೊಡಲಿ, ಸಂಬಂಧಪಟ್ಟಂಥ ಕೇಂದ್ರ ಮಂತ್ರಿಗಳಿಗೆ ನಾವು ಬರೆಯುತ್ತೇವೆ, ಇನ್ನೊಂದೆರಡು ತಿಂಗಳಲ್ಲಿ ಇದನ್ನು ಸರಿ ಪಡಿಸುತ್ತೇನೆಂದು ಮಂತ್ರಿಗಳು ಅಶ್ಯೂರೆನ್‌ಸ ಕೊಡಲಿ ಇವತ್ತು.

ಶ್ರೀ ಸಿ. ಬೈರೇಗೌಡ : ಬೆಂಗಳೂರು ಏರ್‌ಪೋರ್ಟ್‌ನಲ್ಲಿ ಕನ್ನಡದಲ್ಲಿ ಅನೌನ್‌ಸ ಸಹ ಮಾಡುವುದಿಲ್ಲ.

+ ಶ್ರೀ ಕೆ. ಹರ್ಷಕುಮಾರ್ ಗೌಡ : ಅಧ್ಯಕ್ಷರೆ ಜಿಲ್ಲಾಪರಿಷತ್ತಿನಲ್ಲಿ ಗ್ರಾಮಾಂತರ ಜನತೆ ಇರುತ್ತಾರೆ. ಅಲ್ಲಿಯೂ ಇಂಗ್ಲೀಷ್‌ನಲ್ಲಿ ಪ್ರಿಂಟ್ ಮಾಡಿಸುವುದಾದರೆ ಗ್ರಾಮಾಂತರ ಜನತೆಗೆ ಏನು ಕಮ್ಯುನಿಕೇಟ್ ಮಾಡಬಹುದು? ಮಹಾರಾಷ್ಟ್ರದಲ್ಲಿ ನಾವು ಹೋಗಿದ್ದಾಗ ಇಂಗ್ಲೀಷ್‌ನ್ನು ದಮನ ಮಾಡಿದ್ದೀರಾ ಎಂದು ಕೇಳಿದ್ದಕ್ಕೆ ಅವರು ಹೇಳಿದರು, ಕಚೇರಿಗೆ ಹೋಗಿ, ಅಧಿಕಾರಿ ತೆಗೆದುಕೊಂಡು ಹೋದ ಇಂಗ್ಲೀಷ್‌ನ ವರದಿಯ್ನನು ಮಂತ್ರಿಗಳು ತೆಗೆದು ಎಸೆಯುತ್ತಾರೆ ಎಂದು. ಅದರಿಂದ ಅಲ್ಲಿಯ ರಾಜ್ಯ ಬಾಷೆಗಳು ಸರಿಯಾಗಿ ಬೆಳೆಯಲಿಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಮಾನ್ಯ ವಾಟಾಳ್ ನಾಗರಾಜ್ ಅವರು ಒಬ್ಬರೇ ಕನ್ನಡದ ಬಗ್ಗೆ ಮಾತನಾಡುವರರು ಅಲ್ಲ, ರಾಜ್ಯದ ಜನರು ನಮ್ಮ ಪಕ್ಷಕ್ಕೆ ಆಶೀರ್ವಾದ ಮಾಡಿದ್ದಾರೆ, ನಮ್ಮ ಪಕ್ಷ ಇದೆ, ನಾವು ಕೂಡ ಕನ್ನಡದ ಪರವಾಗಿಯೇ ಇದ್ದೇವೆ. ಇದನ್ನು ನಾವು ತೋರಿಸಬೇಕಾಗುತ್ತದೆ, ಆದ್ದರಿಂದ ಸ್ಪಷ್ಟವಾಗಿ ಈ ಬಗ್ಗೆ ತಾವುಗಳು ಹೇಳಬೇಕಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಅಧ್ಯಕ್ಷರೇ, ಕನ್ನಡದ ಬಗ್ಗೆ ಹೇಳುವುದಾದರೆ,

ಶ್ರೀ ಸಿ. ಬೈರೇಗೌಡ : ಗುರುಪಾದಪ್ಪನವರ ಕನ್ನಡ-ಮರಾಠಿ ಸೇರಿ ತುಂಬಾ ಚೆನ್ನಾಗಿರುತ್ತದೆ. ಕನ್ನಡಕ್ಕೆ ಅವರು ಕನ್‌ಡ್ ಎಂದು ಹೇಳುತ್ತಾರೆ...

+ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನನಗೂ ಕನ್ನಡ ಚೆನ್ನಾಗಿ ಬರುತ್ತದೆ. ಆದರೆ ನಮ್ಮ ಕನ್ನಡ ಬೇರೆ ಇದೆ, ಅದನ್ನು ಹೇಳಿದರೆ ತಮಗೆ ಅರ್ಥವಾಗುತ್ತದೆಯೆ? ಬೇಕಾದರೆ ಹೇಳುತ್ತೇನೆ. "ಮರ್ತ್ಯನ್ ಕಟ್ಟಿಮೇಗೆ ಸೊನ್ಯ ಬಂದಿತ್ತು, ಬೆಟ್‌ಸಕ್ ಹೋಗಿದ್ದೆ. ಬೈರನ್ ಮೆಟಲ್‌ಮೇಲೆ ಜೋಡಿ ಇಟ್ಟಿದ್ದೆ, ಕುತ್ರನ್ ಕುನ್ನಿ ಬಂದ್ ಎತ್ಕಂಡ್ ಹೋಗಿತ್ "ಅಂದರೆ ಹನುಮಂತನ ಕಟ್ಟೆಯ ಮೇಲೆ ಬೀಗರು ಬಂದಿದ್ದರು, ಅವರ್ನನು ಬೇಟಿಯಾಗಲು ಹೋಗಿದ್ದೆ, ಅಲ್ಲಿ ಮೆಟ್ಟಿಲುಗಳ ಮೇಲೆ ಚಪ್ಪಲಿ ಇಟ್ಟಿದ್ದೆ, ಅದನ್ನು ನಾಯಿಮರಿ ಬಂದು ಎತ್ತಿಕೊಂಡು ಹೋಯಿತು ಎಂದು ಅರ್ಥ ಬರುತ್ತದೆ. ಹೀಗೆ ನಮ್ಮ ಕನ್ನಡ ಇದೆ. ಇದನ್ನು ಬೇಡ ಅನ್ನುತ್ತೀರಾ? ನಮಗೆ ಕನ್ನಡ ಬೇಕೇ ಬೇಕು. ನಮಗೆ ಅಬಿಮಾನ ಕಡಿಮೆ. ಮಹಾರಾಷ್ಟ್ರದಲ್ಲಿ ಒಬ್ಬರೂ ಕೂಡ ಇಂಗ್ಲೀಷ್‌ನಲ್ಲಿ ಮಾತನಾಡುವುದಿಲ್ಲ. ಯಾವುದೇ ಅಧಿಕಾರಿಗಳು, ಯಾವುದೇ ಟಿಪ್ಪಣಿ, ಇತ್ಯಾದಿಗಳನ್ನು ಇಂಗ್ಲೀಷ್‌ನಲ್ಲಿ ಬರೆಯುವುದಿಲ್ಲ. ಎಲ್ಲಾ ಮರಾಠಿಯಲ್ಲಿಯೇ ಇರುತ್ತದೆ. ನಮ್ಮಲ್ಲಿ ಅದು ಇಂಗ್ಲೀಷ್‌ನಲ್ಲಿ ಇರುತ್ತದೆ. ಇವರೇನು ವಿದೇಶದಿಂದ ಬಂದಿದ್ದಾರೋ? ಅಥವಾ ನಮ್ಮ ಕನ್ನಡದ ಜನರಿಗೆ ತಿಳಿಯಬಾರದು ಎಂದು ಇಂಗ್ಲೀಷ್‌ನಲ್ಲಿ ಬರೆಯುತ್ತಾರೋ? ಹೀಗೆ ಇನ್ನು ಮುಂದಾದರು ಕಡತಗಳನ್ನು, ಟಿಪ್ಪಣಿಗಳನ್ನು, ವರದಿಗಳನ್ನು ಇಂಗ್ಲೀಷ್‌ನಲ್ಲಿ ಬರೆಯುವವರಿಗೆ ಶಿಕ್ಷೆ ವಿಧಿಸಬೇಕು. ಇಂಥ ಒಂದು ಕಾನೂನನ್ನು ತರಬೇಕು. ಇಲ್ಲದಿದ್ದರೆ ನಾವು ಸುಮ್ಮನೆ ಅಸೆಂಬ್ಲಿಯಲ್ಲಿ ಹೇಳುವುದು ಅವರು ತಮ್ಮ ಕೆಲಸವನ್ನು ಅವರ ಮನಸ್ಸಿಗೆ ಬಂದಹಾಗೆ ಮಾಡಿಕೊಂಡು ಹೋಗುವುದು ಆಗಬಾರದು. ಇಲ್ಲವಾದರೆ ಅದು ಪುಡೆ ಪಾಟ್ ಮಾಗೆ ಸಪಾಟ್ ಎನ್ನುವ ಹಾಗೆ ಆಗುತ್ತದೆ. ಆದ್ದರಿಂದ ಈ ಬಗ್ಗೆ ಇಂದು ನಿರ್ದಿಷ್ಟವಾದಂಥ ಕಾನೂನನ್ನು ತರಬೇಕು. ಹಾಗೆ ಮಾಡದಿದ್ದಲ್ಲಿ ಸರಿಹೋಗಲಾರದು. ವಾಟಾಳ್ ನಾಗರಾಜ್‌ರವರು ಅದನ್ನು ಹರಿದು ಹಾಕಿದರು, ನಾನಾಗಿದ್ದರೆ ಅದಕ್ಕೆ ಬೆಂಕಿ ಹಚ್ಚುತ್ತಿದ್ದೆ. ಆದ್ದರಿಂದ ಸರಕಾರದವರ ಕನ್ನಡ ಧೋರಣೆಯು ಸ್ಪಷ್ಟವಾಗಿರಬೇಕು.

ಉಪಾಧ್ಯಕ್ಷಣಿಯವರು : ಮುಖ್ಯಮಂತ್ರಿಯವರು ಈಗ ಇಲ್ಲಿ ಇಲ್ಲ...

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರನ್ನು ಕರೆಯಿಸಿ. ಮುಖ್ಯಮಂತ್ರಿಗಳು ಬಂದಮೇಲೆ ಇದಕ್ಕೆ ಉತ್ತರ ಕೊಡಲಿ. ಒಂದು ವೇಳೆ ಇವೊತ್ತು ಇಲ್ಲದಿದ್ದರೆ ಅವರು ಮತ್ತೊಂದು ದಿವಸ ಹೇಳಬಹುದು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಸರಕಾರಕ್ಕೆ ಈ ವಿಷಯದಲ್ಲಿ ಒಟ್ಟಾರೆ ಜವಾಬ್ದಾರಿ ಇದೆ.

ಉಪಾಧ್ಯಕ್ಷಣಿಯವರು : ಈಗ ನಾವು ಮುಂದೆ ಹೋಗೋಣ. ಮುಖ್ಯಮಂತ್ರಿಯವರು ಬಂದ ಮೇಲೆ ಅವರು ಏನು ಹೇಳುತ್ತಾರೋ ಅದನ್ನು ನೋಡೋಣ. ಆದ್ದರಿಂದ ಮಾನ್ಯ ವಾಟಾಳ್ ನಾಗರಾಜ್‌ರವರು ದಯಮಾಡಿ ತಮ್ಮ ಆಸನಕ್ಕೆ ಹಿಂದುರುಗಿ ಹೋಗಬೇಕು.

ಶ್ರೀ ಧರ್ಮಸಿಂಗ್ : ತಮ್ಮ ಸಮಸ್ಯೆಗಳಿಗೆ ಉತ್ತರ ಕೊಡಲು ಮುಖ್ಯಮಂತ್ರಿಗಳು ತಯಾರಾಗಿದ್ದಾರೆ. ಮುಖ್ಯಮಂತ್ರಿಗಳು ಬಂದಾಗ ಉತ್ತರ ಕೊಡುತ್ತಾರೆ. ತಾವುಗಳು ದಯಮಾಡಿ ತಮ್ಮ ಆಸನಕ್ಕೆ ಹೋಗಬೇಕು.

ಶ್ರೀ ವಾಟಾಳ್ ನಾಗರಾಜ್ : ಮುಖ್ಯಮಂತ್ರಿಗಳು ಬಂದು ಉತ್ತರಕೊಡುವುದಾದಲ್ಲಿ ನನ್ನ ಅಭ್ಯಂತರವಿಲ್ಲ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಆಸನಕ್ಕೆ ಹಿಂದಿರುಗಿದರು)

ರಾಯಚೂರು ಶಾಖೋತ್ಪನ್ನ ಘಟಕದಲ್ಲಿರುವ ಬೂದಿ ಸಾಗಾಣಿಕೆಯ ಟೆಂಡರ್‌ನಲ್ಲಿ ಅವ್ಯವಹಾರ.

+ಶ್ರೀ ಎಂ. ನಾರಾಯಣ ಸ್ವಾಮಿ : ಮಾನ್ಯ ಸಭಾಧ್ಯಕ್ಷಿಣಿಯವರೇ ಕರ್ನಾಟಕ ರಾಜ್ಯದ ಕೆಇಬಿ ಮತ್ತು ಕೆಪಿಸಿಯಲ್ಲಿ ರಾಯಚೂರು ಶಾಖೋತ್ಪನ್ನ ಘಟಕದಲ್ಲಿನ ಬೂದಿ ಸಾಗಾಣಿಕೆಯ ಟೆಂಡರ್ ಪ್ರಕರಣದಲ್ಲಿ ಸುಮಾರು 14 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ. ಮತ್ತು ತಂತಿ ಪರ್ಚೇಸ್ ವಿಚಾರದಲ್ಲಿಯೂ ಕೂಡ ಸುಮಾರು ಐದು ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆ ಎನ್ನುವ ಒಂದು ಸುದ್ದಿ ಇದೆ.

ರಾಯಚೂರು ಶಾಖೋತ್ಪನ್ನ ಘಟಕದ ಬೂದಿ ಸಾಗಾಣಿಕ ಟೆಂಡರ್‌ನಲ್ಲಿ ಮೆಸರ್ಸ್ ಇಂದೂರ್‌ನವರ ಒಂದು ಕಂಪನಿಗೆ ಕಡಿಮೆ ಟೆಂಡರ್‌ನಲ್ಲಿ ಕೊಟ್ಟಿರತಕ್ಕಂತಹ ವಿಚಾರವು ಕೂಡ ತಮ್ಮ ಸದನದ ಹಾಗೂ ಸರ್ಕಾರದ ಗಮನವನ್ನು ಸೆಳೆಯತಕ್ಕಂತಹ ಒಂದು ಪ್ರಯತ್ನವನ್ನು ಮಾಡುತ್ತಿದ್ದೇವೆ. ಈ ಅಕ್ರಮ ವ್ಯವಹಾರದಲ್ಲಿ ಅನೇಕ ಹಿಂದಿನ ಎಂ.ಡಿ.ಯವರು ಆಗಿರಬಹುದು, ಅಥವಾ ಹಿಂದಿನ ಛೇರ್‌ಮನ್ ಆಗಿರಬಹುದು, ಈಗಿನ ಎಂ.ಡಿ. ಯವರು ಕೂಡ ಆಗಿರಬಹುದು. ಅವರ ಹೆಸರುಗಳನ್ನು ಹೇಳಬಾರದು ಎಂದು ತಮ್ಮ ಅಭಿಪ್ರಾಯ ಇರಬಹುದು.

ಉಪಾಧ್ಯಕ್ಷಣಿಯವರು : ಬೇಡ ಹೆಸರು ತಮಗೆ ಗೊತ್ತಿದೆ, ತಿರುಗಿ ಏಕೆ ಅದನ್ನು ಹೇಳುತ್ತೀರಿ?

ಶ್ರೀ ಎಂ. ನಾರಾಯಣ ಸ್ವಾಮಿ : ಅವರು ಅನೇಕ ಅವ್ಯವಹಾರ ಮಾಡಿದ್ದಾರೆ ಎನ್ನುವ ಒಂದು ವಿಚಾರ ಒಂದು ದೊಡ್ಡ ದಿನ ಪತ್ರಿಕೆಯಲ್ಲೂ ಕೂಡ ಬಂದಿದೆ. ಇದರ ಜೊತೆಗೆ ಇನ್ನೂ 2-3 ವಿಷಯಗಳಿವೆ. 14 ಕೋಟಿ ರೂಪಾಯಿಗಳ ವ್ಯವಹಾರ ಹಾಗೂ ತಂತಿ ಖರೀದಿಯ 5 ಕೋಟಿ ರೂಪಾಯಿಗಳ ವ್ಯವಹಾರದಲ್ಲಿ ನಡೆದ ಅಕ್ರಮಗಳನ್ನು ಮುಚ್ಚಿ ಹಾಕಲು ಕೆಪಿಸಿಯ ಮ್ಯಾನೇಜಿಂಗ್ ಡೈರೆಕ್ಟರ್ ಹಾಗೂ ಕೆಇಬಿಯ ಎಕ್ಸ ಛೇರ್‌ಮನ್‌ರವರ ತೆರೆಮರೆಯಲ್ ಯತ್ನ ನಡೆಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲಿಯವರ ಮೇಲೆ ಒತ್ತಡ ತರುವ ಯತ್ನವೂ ನಡೆದಿದೆ. ಈಗ ರಾಯಚೂರು ಶಾಖೋತ್ಪನ್ನ ಘಟಕದಲ್ಲಿ ಬೂದಿ ಸಾಗಾಣಿಕೆ ಟೆಂಡರ್ ಪ್ರಕರಣದಲ್ಲಿ ಎಲ್ ಅಂಡ್ ಟಿ ಕಂಪನಿಗೆ ಕಡಿಮೆ ದರಗಳನ್ನು ನೀಡಿದ್ದರೂ ಅದನ್ನು ಕೈ ತಪ್ಪಿಸಿ ಟೆಂಡರ್ ಪಡೆದ ಮೆಸರ್ಸ್ ಇಂದೂರ್ ಕಂಪನಿಯವರು ದೆಹಲಿಯಲ್ಲಿ ಈ ಕುರಿತು ಕಾರ್ಯಾಚರಣೆ ನಡೆಸಿದ್ದಾರೆ ಎಂದು ತಿಳಿದು ಬಂದಿದೆ. ಆದ್ದರಿಂದ ಈ ವಿಚಾರವನ್ನು ತಮ್ಮ ಮುಖೇನ ಸದನದ ಹಾಗೂ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ದಯಮಾಡಿ ಇದಕ್ಕೆ ಉತ್ತರವನ್ನು ಕೊಡಬೇಕು.

ಉಪಾಧ್ಯಕ್ಷಣೆಯವರು ; ಸರ್ಕಾರದಿಂದ ಏನಾದರೂ ತಾವು ಹೇಳುತ್ತೀರಾ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ: ಹಿಂದೆ ಈ ಕೆಇಬಿ ಬಗ್ಗೆ ಬಹಳ ಚರ್ಚೆಆಗಿದೆ.

ಶ್ರೀ ಆರ್.ವಿ. ದೇಶಪಾಂಡೆ : ಇದು ಕೆಇಬಿ ಬಗ್ಗೆ ಅಲ್ಲ. ರಾಯಚೂರು ಥರ್ಮಲ್ ಪ್ಲಾಂಟ್‌ನಲ್ಲಿ ಏನು ಬೂದಿ ಇದೆ, ಅದರ ಟ್ರಾನ್ಸ್‌ಪೋರ್ಟೇಷನ್ ವಿಚಾರದಲ್ಲಿ ಎಲ್ ಆಂಡ್ ಟಿ ಕಂಪನಿಯವರದ್ದು ಲೋಯೆಸ್ಟ ಟೆಂಡರ್ ಇತ್ತು. ಇದು 14 ಕೋಟಿ ರೂಪಾಯಿಗಳ ವ್ಯವಹಾರ ಇತ್ತು ಆ ಟೆಂಡರನ್ನು ಎಲ್ ಆಂಡ್ ಟಿ ಕಂಪನಿಗೆ ತಪ್ಪಿಸಿ ದೆಹಲಿಯ ಮೆಸರ್ಸ್ ಇಂದೂರ್ ಕಂಪನಿಗೆ ಕೊಟ್ಟಿದ್ದಾರೆ. ಆ ವಿಚಾರದಲ್ಲಿ ಸಾರಷ್ಟು ಭ್ರಷ್ಟಾಚಾರ ಇದೆ ಎಂದು ನಾವು ಆರೋಪ ಮಾಡುತ್ತಿದ್ದೇವೆ. ಎರಡನೆಯದಾಗಿ ಹಿಂದಿನ ಮುಖ್ಯಮಂತ್ರಿಗಳ ಕಾರ್ಯದರ್ಶಿಯವರು ಯಾರು ಇದ್ದರು, ಹೊಸ ಮುಖ್ಯಮಂತ್ರಿ ಆದನಂತರ ಅವರನ್ನು ಪವರ್ ಸೆಕ್ರೆಟರಿಯ್ನನೂ ಕೂಡ ಅಲ್ಲಿಂದ ಟ್ರಾನ್ಸಪರ್ ಮಾಡಿದ್ದಾರೆ. ಮುಖ್ಯವಾಗಿ ಕಾರಣ ಅವರೂ ಸಹ ಈ ವ್ಯವಹಾರದಲ್ಲಿ ಇನ್‌ವಾಲ್ವ ಆಗಿದ್ದರು ಎನ್ನುವ ಒಂದು ವದಂತಿ ಇದೆ. ಆದ್ದರಿಂದ ಇದರ ಬಗ್ಗೆ ತಾವು ಡಿಟೆಲಾಗಿ ವಿಚಾರ ಮಾಡಿ ಸ್ಟೇಟ್‌ಮೆಂಟ್ ಮಾಡುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಇದರ ಬಗ್ಗೆ ವಿವರಗಳನ್ನು ತರಿಸಿಕೊಂಡು ಪ್ರತ್ಯೇಕವಾಗಿ ಸ್ಟೇಟ್‌ಮೆಂಟ್ ಕೊಡಲಾಗುತ್ತದೆ.

ಶ್ರೀ ಕೆ. ಹರ್ಷಕುಮಾರ್ ಗೌಡ : ಅಧ್ಯಕ್ಷರೇ, ಇದು ಒಂದು ಪ್ರಮುಖವಾದ ವಿಚಾರ. ಸರ್ವೋಚ್ಚ ನ್ಯಾಯಾಲಯ, ಮೀಸಲಾತಿ ಬಗ್ಗೆ ನಿರ್ಧಾರ ಆಗಬೇಕಾದರೆ ಪರ್‌ಮೆನೆಂಟ್ ಕಮಿಷನಗಳನ್ನು ರಾಜ್ಯಗಳಿಗೆ ಮಾಡಬೇಕು ಮತ್ತು ಆ ಕಮಿಷನ್‌ನವರು 4 ತಿಂಗಳ ಒಳಗಡೆ ವರದಿ ಕೊಡಬೇಕು ಎಂದು ಹೇಳಿ ಆದೇಶ ನೀಡಿದೆ. ಆ ದಿಶೆಯಲ್ಲಿ ರಾಜ್ಯಸರ್ಕಾರ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕ್ರೊಂಡಿದೆ? ಯಾವ ಮಟ್ಟದಲ್ಲಿ ಆ ಕಾರ್ಯ ನಡೆದಿದೆ ಎಂದು ತಮ್ಮ ಮೂಲಕ ಸಮಾಜ

ಕಲ್ಯಾಣ ಮಂತ್ರಿಗಳನ್ನು ನಾನು ಕೇಳಬಯಸುತ್ತೇನೆ. ಮಿಸಲಾತಿ ಬಗ್ಗೆ ಕೇಂದ್ರ ಸರ್ಕಾರದಿಂದ ಆದೇಶ ಬಂದಿದೆ. ವಿವಿಧ ರಾಜ್ಯಗಳು ಮಿಸಲಾತಿಯನ್ನು ನಿರ್ಧಾರ ಮಾಡುವುದಕ್ಕೆ ಪರಮನೆಂಟ್ ಕಮಿಷನ್ ಮಾಡಬೇಕು. ಆದರ ಬಗ್ಗೆ ರಾಜ್ಯ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ? ಯಾವಾಗ ವರದಿಯನ್ನು ಕಳುಹಿಸುತ್ತದೆ ಎಂದು ನಾನು ಕೇಳುತ್ತೇನೆ.

ಶ್ರೀ ಧರ್ಮಸಿಂಗ್ : ಈಗಾಗಲೇ ಸರ್ಕಾರಕ್ಕೆ ಸುಪ್ರೀ ಕೋರ್ಟ್ ತಿರ್ಪು ಕೂಡ ಬಂದಿದೆ. ನವೆಂಬರ್ 16ರಂದು ತೀರ್ಪು ಆದಮೇಲೆ 24ನೇ ನವೆಂಬರ್‌ಗೆ ರಾಜ್ಯ ಸರ್ಕಾರಕ್ಕೆ ಆದೇಶ ಕಳುಹಿಸಿಕೊಟ್ಟಿದ್ದಾರೆ. ಖಾಯಂ ಆಗಿ ಒಂದು ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಕಾನ್ಸ್ಟಿಟ್ಯೂಟ್ ಮಾಡಬೇಕು ಎಂದು ಬಂದಿದೆ. ಅದನ್ನು ಲಾ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಲಾಗಿದೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಏಕೆಂದರೆ ನಾಲ್ಕು ತಿಂಗಳ ಒಳಗಾಗಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಇದೆ ಅದನ್ನು ಕೂಡ ಮಾಡುತ್ತಿದ್ದೇನೆ.ಟಿ

ಬೆಣ್ಣೆತೊರಾ ನೀರಾವರಿ ಯೋಜನೆಯಡಿಯಲ್ಲಿ ಮುಳುಗಡೆಯಾಗುತ್ತಿರುವ ಹಳ್ಳಿಗಳ ಮನೆಗಳ ಪರಿಹಾರ ಧನದಲ್ಲಿ ಕಡಿತ (ಡಿಪ್ರಿಸಿಯೇಷನ್)

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ) : ಸನ್ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ನೀರಾವರಿ ಯೋಜನೆಗಳ ವಲಯದಲ್ಲಿ ಬರುವ ಬೀದರ್ ಜಿಲ್ಲೆಯ ಕಾರಂಜಾ ನೀರಾವರಿ ಯೋಜನೆ ಮತ್ತು ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಮುಲ್ಲಾಮರಿ ಯೋಜನೆಯಡಿಯಲ್ಲಿ ಮುಳುಗಡೆಯಾಗುವ ಹಳ್ಳಿಗಳ ಮನೆಗಳಿಗೆ ಪರಿಹಾರಧನ ಕೊಡುವಾಗ ಡಿಪ್ರಿಸಿಯೇಷನ್ ಹಣ ಕಡಿತ ಮಾಡದೆ ಕೊಡಬೇಕೆಂದು ಸರ್ಕಾರದ ಆದೇಶವಿದ್ದರೂ ಅದೇ ವಲಯದಲ್ಲಿ ಬರುವ ಬೆಣ್ಣೆತೋರ ಯೋಜನೆಗೆ ಮೇಲ್ಕಂಡ ಆದೇಶ ಬರುವುದಿಲ್ಲ, ಇದರಿಂದ ಸರ್ಕಾರ ಇಲ್ಲಿ ಮಲತಾಯಿ ಧೋರಣೆ ತೋರಿಸಿದಂತಾಗಿದೆ. ಇನನು 3Ë4 ತಿಂಗಳಲ್ಲಿ ಪರಿಹಾರ ಧನ ಕೊಡುವವರಿದ್ದಾರೆ. ಅದ್ದರಿಂದ ಈ ಯೋಜನೆಗೂ ಸರ್ಕಾರದಿಂದ ಡಿಪ್ರಿಸಿಯೇಷನ್‌ಸ ಬಗ್ಗೆ ಅದೇಶ ಹೊರಡಿಸಿ ಇಲ್ಲಿನ ರೈತರಿಗೆ ಅನುಕಬಲ ಮಾಡಿಕೊಡಬೇಕೆಂದು ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ. ನಮ್ಮ ಬಾಗದವರು ಶ್ರೀಮಾನ್ ಧರ್ಮಸಿಂಗ್ ಅವರು ಕುಳಿತುಕೊಂಡಿದ್ದಾರೆ ಅವರು ಅದರ ಬಗ್ಗೆ ನನಗೆ ಹೇಳಿದರೂ ಸಾಕು.

ಶ್ರೀ ಧರ್ಮಸಿಂಗ್ : ಈಗ ಅವರು ಇರಿಗೇಷನ್ ಪ್ರಾಜೆಕ್ಟ ಬಗ್ಗೆ ಹೇಳಿದ್ದಾರೆ ಈಗಾಗಲೇ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾ ಇದೇ.

ಕಿದ್ವಾಯಿ ಮತ್ತು ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಪರೀಕ್ಷೆ ಮಾಡದ ಬ್ಲಡ್ ಟ್ರಾನ್ಸ್‌ಫ್ಯೂಷನ್ ಮಾಡುತ್ತಿರುವುದು

ಶ್ರೀ ಆರ್. ವಿ. ದೇಶಪಾಂಡೆ : ಮೆಡಮ್. ಬೆಂಗಳೂರು ನಗರದ 2 ಆಸ್ಪತ್ರೆಗಳಲ್ಲಿ ಕಿದ್ವಾಯ್ ಮೆಮೋರಿಯಲ್ ಇನ್ಸಿಟ್ಯೂಟ್ ಮತ್ತು ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಇವತ್ತು ಪರೀಕ್ಷ ಮಾಡದ ಬ್ಲಡ್ ಟ್ರಾನ್ಸ್‌ಫ್ಯೂಷನ್ ಮಾಡುತ್ತಿದ್ದಾರೆ ಎಂದು ಟೈಮ್ಸ್ ಆಫ್ ಇಂಡಿಯಾದಲ್ಲಿ ವರದಿಯಾಗಿದೆ. ಉದಾಹರಣೆಯೂ ಬಂದಿದೆ. ಒಬ್ಬ ಸಿದ್ದಪ್ಪ ಕೆ. ಮತ್ತು ಶ್ರೀಮತಿ ರಾಮಕೃಷ್ಣಮ್ಮ ಇವರಿಗೆ ಬ್ಲಡ್ ಕೊಡುವಾಗ ಇಂಥ ಅನ ಟೆಸ್ಟೆಡ್-ಬ್ಲಡ್ ಕೊಟ್ಟು ಗಂಭೀರ ಸಮಸ್ಯೆ

ನಿರ್ಮಾಣವಾಗಿದೆ. ಇದು ಹೈಲಿ-ಡೆಂಜರಸ್. ಹಾಗಾಗಿ ಈ ಪರಿಸ್ಥಿತಿ ನಿಜವಾಗಿದ್ದರೆ ಸರ್ಕಾರಾ ಯಾವ ಕ್ರಮ ತೆಗೆದುಕೊಳ್ಳುತ್ತದೆ. ಎರಡನೆಯದು ಇದು ಸೆಕ್ಷನ್ 18 ಡ್ರಗ್ಸ್ ಮತ್ತು ಕೌಸ್ಮಟ್ರಿಕ್ಸ್ ಆಕ್ಟ್ ಪ್ರಕಾರ ಸಹಾ ಇಲ್ಲಂಘನೆಯಾಗುತ್ತದೆ ಮತ್ತು ಬ್ಲಡ್ ಬ್ಯಾಂಕ್ ಲೈಸೆನ್ಸ್ ಸಹಾ ಕ್ಯಾನ್ಸಲ್ ಆಗುತ್ತದೆ. ಇಂತಹ ಪರಿಸ್ಥಿತಿ ಇದ್ದರೆ ತಕ್ಷಣ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕುಗುತ್ತದೆ. ಯಾರು ಅಲ್ಲಿ ಅಧಿಕಾರಿಗಳಿದ್ದಾರೆ. ಡಾಕ್ಟರು ಇದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ಪರೀಕ್ಷೆ ಮಾಡದ ಬ್ಲಡ್ ಇನ್ನು ಮುಂದೆ ಯಾವ ಆಸ್ಪತ್ರೆಯಲ್ಲೂ ಟ್ರಾನ್ಸ್‌ಫ್ಯೂಷನ್ ಆಗಬಾರದು ಎಂದು ಸರ್ಕಾರದಿಂದ ಆದೇಶ ಹೋಗಬೇಕಾಗುತ್ತದೆ. ಆದ್ದರಿಂದ ಸರ್ಕಾರದ ಸ್ಪಷ್ಟೀಕರಣ ಈ ವಿಷಯದಲ್ಲಿ ಕೇಳುತ್ತಾ ಇದ್ದೇನ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ವರದಿ ತರಿಸಿಕೊಂಡು ಈ ಬಗ್ಗೆ ಹೇಳಿಕೆ ಕೊಡುತ್ತೇನೆ.

ಗಮನ ಸೆಳೆಯುವ ಸೂಚನೆ

ನಾಯಕ ಮತ್ತು ಪರಿವಾರ ಜನಾಂಗವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸದೆ ಇರುವುದು.

+ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯುತ್ತಾ ಇದ್ದೇನೆ. ನಾಯಕ ಮತ್ತು ಪರಿವಾರ ಜನಾಂಗ ಏನು ಇದೆ. ಈ ಪರಿವಾರ ಜನಾಂಗವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸದೆ ಇರತಕ್ಕದ್ದು ಮತ್ತು ಈ ಪರಿವಾರ ಜನಾಂಗ ಕ್ಕೆ ಇಡೀ ನಮ್ಮ ಜಿಲ್ಲೆ ಅಲ್ಲ ಕರ್ನಾಟಕದಲ್ಲಿ ಆಗಿರತಕ್ಕ ತೊಂದರೆ ಮತ್ತು ಅವವ ಶೋಷಣೆಗೆ ಒಳಗಾಗುತ್ತಿರುವ ಬಗ್ಗೆ ನಾನು ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮಂತ್ರಿಗಳು): ಅಧ್ಯಕ್ಷರೆ, ಯಾವುದೇ ಜಾತಿಯನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸೇರಿಸುವ ಅಧಿಕಾರವು ಕೇಂದ್ರ ಸರ್ಕಾರದ ವ್ಯಾಪ್ತಿಗೇ ಬರುತ್ತದೆ. ನಾಯ್ಕ, ನಾಯಕ್, ಬೇಡರ್, ಬೇಡ, ವಾಲ್ಮೀಕಿ, ಪರಿವಾರ, ತಳವಾರ ಈ ಜನಾಂಗಗಳನ್ನು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಇರುವ ನಾಯಕ ಜನಾಂಗದ ಸಮಾದ ಪದಗಳೆಂದು ಪರಿಗಣಿಸುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ 1984ರಲ್ಲ ರಾಜ್ಯ ಸರ್ಕಾರವು ಶಿಫಾರಸು ಮಾಡಿತ್ತು. ಆದರೆ ಕೇಂದ್ರ ಸರ್ಕಾರವು ತನ್ನ "ದಿ ಕಾನ್‌ಸ್ಟಿಟ್ಯೂಷನ್ (ಶೆಡ್ಯೂಲ್ಡ್ ಟ್ರೈಬ್ಸ್) ಆರ್ಡರ್ (ಸೆಕೆಂಡ್ ಅಮೆಂಡ್ ಮೆಂಟ್) ಆಕ್ಟ್ 1991"ರಲ್ಲಿ ನಾಯ್ಕ, ನಾಯಕ, ಬೇಡ, ಬೇಡರ್, ವಾಲ್ಮೀಕಿ ಜನಾಂಗಗಳನ್ನು ಮಾತ್ರ ಪರಿಶಿಷ್ಟ ವರ್ಗವೆ ದು 19-4-91ನೇ ದಿನಾಂಕದಿಂದ ಜಾರಿಗೆ ಬರುವಂತೆ ಪರಿಗಣಿಸಿದೆ. ಇದರಲ್ಲಿ ತಳವಾರ ಮತ್ತು ಪರಿವಾರ ಜನಾಂಗಗಳನ್ನು ಸೇರಿಸಿರುವುದಿಲ್ಲ, ಹಾಗೂ ಇದಕ್ಕೆ ಕಾರಣವನ್ನು ಸಹ ತಿಳಿಸಿರುವುದಿಲ್ಲ.

ರಾಜ್ಯ ಸರ್ಕಾರವು ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಈಗಾಗಲೇ ದಿನಾಂಕ 28-4-92ರಂದು ಪತ್ರ ಬರೆದು "ಪರಿವಾರ ಮತ್ತು ತಳವಾರ" ಜಾತಿಗಳನ್ನು ಸಹ ಯಾವ ಕಾರಣಕ್ಕೆ ಈ ಜನಾಂಗಗಳನ್ನು ಪರಿಶಿಷ್ಟ ವರ್ಗವೆಂದು

ಪರಿಗಣಿಸಿಲ್ಲವೆಂದು ಸ್ಪಷ್ಟೀಕರಣವನ್ನು ಸಹಾ ಕೇಳಲಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರದಿಂದ ಉತ್ತರವನ್ನು ನಿರೀಕ್ಷಿಸಲಾಗಿದೆ.

11.20 ಎ.ಎಂ.

ಮಾನ್ಯ ಉಪಾಧ್ಯಕ್ಷರೇ ಈ ವಿಚಾರದಲ್ಲಿ ಮಾನ್ಯ ವಾಟಾಳ್ ರು ಮತ್ತು ನಾನು ಕೂಡ ಅಧಿಕಾರಿಗಳ ಜೊತೆಯಲ್ಲಿ ಈಗಾಗಲೇ ಇದರ ಬಗ್ಗೆ ಚರ್ಚೆ ಮಾಡಿದ್ದೇನೆ. ಇದಕ್ಕೆ ಮೊದಲು ನಾವು 1984ರಲ್ಲಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಪರಿವಾರ ಮತ್ತು ನಾಯಕ ಜನಾಂಗ ಒಂದೇ ಎನ್ನುವುದು ಮೈಸೂರು ಜಿಲ್ಲೆಯಲ್ಲಿ ಮತ್ತು ಬೇರೆ ಎಲ್ಲಾ ಕಡೆಯಲ್ಲೂ ಇದೆ. ಮಾನ್ಯ ಸದಸ್ಯರ ಮನಸ್ಸಿನಲ್ಲಿ ಏನು ಇದೆ. ಆ ಜಿಲ್ಲೆಯಲ್ಲಿ ಒಬ್ಬರಿಗೆ, ಎರಡೂ ಒಂದೇ ಜನಾಂಗ ಪದ ಬೇರೆ ಬೇರೆ ಇದೆ. ಬ್ಬರಿಗೆ ಸಿಗತಕ್ಕ ಸೌಲಭ್ಯ ಮತ್ತೊಬ್ಬರಿಗೆ ಸಿಗುತ್ತಾ ಇಲ್ಲ, ಆದರೆ ಈ ಸವಲತ್ತುಗಳು ಬೇರೆಯವರಿಗೆ ಸಿಕ್ಕುತ್ತಿದೆ. 19ನೇ ತಿದ್ದುಪಡಿ ಆಗತಕ್ಕ ಸಂದರ್ಭದಲ್ಲಿ ನನಗನ್ನಿಸುತ್ತದೆ. ಇರತಕ್ಕಂಥ ಲೋಕಸಭಾ ಸದಸ್ಯರು ಕೂಡ ಯಾರಿಗೆ ಈ ಸಮಸ್ಯೆ ಗೊತ್ತಿತ್ತೋ ಅವರ ಲೋಕ ಸಭೆಯಲ್ಲಿ ಈ ತಿದ್ದುಪಡಿ ಬಂದಾಗ ಇದರ ಪ್ರತಿಪಾದನೆ ಮಾಡಬಹುದಾಗಿತ್ತು. ಆದರೆ ಆ ಕೆಲಸ ಆಗಿಲ್ಲ. ಆದರೂ ಕೂಡ ಈ ಎರಡು ಜಾತಿಗಳಿಗೆ ಈ ಎರಡು ಪದಗಳು ಬಿಟ್ಟು ಹೋಗಿದೆ. ಮತ್ತೆ ಸೇರಿಸಿಕೊಳ್ಳತಕ್ಕ ರೂಪದಲ್ಲಿ 28.4.92ರಲ್ಲಿ ಕೇಂದ್ರ ಸರ್ಕಾರಕ್ಕೆ ನಾವು ಪತ್ರ ಬರೆದಿದ್ದೇವೆ. ಕೇಂದ್ರ ಸರ್ಕಾರದವರು ಆಸಕ್ತಿ ವಹಿಸಿ ಮತ್ತೆ ತಿದ್ದುಪಡಿ ತರಬೇಕಾಗುತ್ತದೆ. ನಾನು 15ನೇ ತಾರೀಖಿನ ದಿವಸ ಡೆಲ್ಲಿಗೆ ಹೋಗುತ್ತಿದ್ದೇನೆ. ಈ ವಿಷಯವನ್ನು ಅಲ್ಲಿನ ಸಮಾಜ ಕಲ್ಯಾಮ ಸಚಿವರ ಗಮನಕ್ಕೆ ತರಬಯಸುತ್ತೇನೆ. ಮತ್ತು ಲೋಕಸಭಾ ಸದಸ್ಯರ ಜೊತೆಯಲ್ಲಿ ನಾನು ಮಾತನಾಡುತ್ತೇನೆ, ತಾವು ಕೂಡ ಮಾತನಾಡಿ. ಇದರ ಬಗ್ಗೆ ತಿದ್ದುಪಡಿ ತಂದರೆ ಅನುಕೂಲವಾಗುತ್ತದೆ. ಈ ವಿಚಾರದಲ್ಲಿ ಮುಂದೆ ಬರತಕ್ಕ ಅಧಿವೇಶನದಲ್ಲಿ ತಿದ್ದುಪಡಿ ಮಾಡತಕ್ಕ ವ್ಯವಸ್ಥೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಈ ಪರಿವಾರ, ನಾಯಕ ಎನ್ನುವುದು ಒಂದೇ. ಇವರು ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಕಡಿಮೆ 30 ಲಕ್ಷದವರೆಗೂ ಇದ್ದಾರೆ. ಇವರು ಕಡಿಮೆ ಇದ್ದಾರೆ ಎಂದು ಅಲ್ಲ. ಈ ಜನಾಂಗದ ಬಗ್ಗೆ. 'ಪರಿವಾರ' ಎನ್ನುವುದನ್ನು ಸೇರಿಸಬೇಕು. ನಾಯಕ ಜನಾಂಗದ ಹೆಸರಿನಲ್ಲಿ ಪರಿವಾರ ತಳವಾರ ಬರುತ್ತದೆ ಎಂದು ಕರ್ನಾಟಕ ಸರ್ಕಾರವೇ ಕೇಂದ್ರ ಸರ್ಕಾರಕ್ಕೆ ಬರೆದಿದ್ದಾರ. ಅಂದ ಮೇಲೆ ಕರ್ನಾಟಕ ಸರ್ಕಾರದವರು ಕೂಡ ಪರಿವಾರ ಎನ್ನುವುದನ್ನು ಒಪ್ಪಿದ್ದಾರೆ. ಇದರಲ್ಲಿ ಏನೂ ತಕರಾರು ಇಲ್ಲ. ಈ ಬಗ್ಗೆ 1988ರಲ್ಲಿ ಸರ್ಕಾರ ಏನು ಆದೇಶ ಹೊರಡಿಸಿದೆ ಎಂಬುದನ್ನು ತಾವು ತರಿಸಿ ನೋಡಿ ಕರ್ನಾಟಕ ಸರ್ಕಾರವು ಒಪ್ಪಿರುವುದರಿಂದ ಅಲ್ಲಿ ಪರಿವಾರ ಜನಾಂಗಕ್ಕೆ ತಿದ್ದುಪಡಿ ಆಗುವುದು ಆಗಲಿ, ಆದರೆ ತಿದ್ದುಪಡಿ ಆಗುವುದಕ್ಕೆ ಮುಂಚೆ ಇವರಿಗೆ ಕೊಡತಕ್ಕ ಸವಲತ್ತು ಶೈಕ್ಷಣಿಕವಾಗಿ ಆಗತಕ್ಕ ಅನುಕೂಲತೆಗಳು ಇವುಗಳನ್ನು ಕೊಡುವ ಬಗ್ಗೆ ನಮ್ಮದು ತಕರಾರು ಇಲ್ಲವೆಂದು ಕರ್ನಾಟಕ ಸರ್ಕಾರ ಆದೇಶ ಹೊರಡಿಸಬೇಕು. ನೀವು ನಮಗೆ ಭರವಸೆಯನ್ನು ಕೊಡಬೇಕು. ಇದು ಆದರೆ, ಈ ಪರಿವಾರ ಜನಾಂಗಕ್ಕೆ ಎಲ್ಲಿಯೂ ತೊಂದರೆ ಕೊಡುವುದಿಲ್ಲ. ಇವರಿಗೆ

ಸರ್ಟಿಫಿಕೇಟ್ ಕೊಡುವಾಗ ತಶೀಲ್ದಾರರಿಂದಾಗಲೀ ವಿದ್ಯಾ ಇಲಾಖೆಯಿಂದಾಗಲೀ ಯಾವುದೇ ಇಲಾಖೆಯಿಂದಲೂ ತೊಂದರೆ ಆಗುವುದಿಲ್ಲ. ಏಕೆಂದರೆ ನಾಯಕ, ಪರಿವಾರ, ತಳವಾರ ಬೇಡರ್ ಎನ್ನುವಂಥ ಪದವನ್ನು ಕೇಂದ್ರದಲ್ಲಿ ಸೇರಿಸಿದ್ದಾರೆ. ನಮ್ಮ ಮಾಜಿ, ಪ್ರಧಾನಿಗಳಾದೇ ಚಂದ್ರಶೇಖರ್‌ರವರ ಕಾಲದಲ್ಲಿ ಇದು ನಡೆದಿದೆ. ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಚಂದ್ರಶೇಖರ್‌ರವರು ಇದರ ಬಗ್ಗೆ ಆಳವಾಗಿ ತೀರ್ಮಾನ ಮಾಡಿ ಬಹಳ ಸ್ಪಷ್ಟ ನಿರ್ಧಾರ ಮಾಡಿದ್ದಾರೆ. ನನಗನಿಸುತ್ತದೆ ಇದನ್ನು ಮಾಡುವಾಗ ಇವರನ್ನುಬಿಡಬೇಕು ಎನ್ನುವ ಉದ್ದೇಶ ಇಲ್ಲ. ಈ ನಾಯಕ ಜನಾಂಗವೇ, ನಾಯಕ, ಬೇಡರ್. ಬೇಡರ್ ಎನ್ನುವುದು ಇಲ್ಲಿ ಪರಿವಾರ ಇದು ಅನ್ವರ್ಥ ಪ್ರತಿಯೊಂದು ಒಂದಕ್ಕೊಂದು ಅರ್ಥ ಕೊಡುತ್ತದೆ.

ಉಪಾಧ್ಯಕ್ಷರು : ಏನಾದರೂ ಕ್ಲಾರಿಫಿಕೇಷನ್ ಇದ್ದರೆ ಕೇಳಿ.

ಶ್ರೀ ವಾಟಾಳ್ ನಾಗರಾಜ್ : ನಮ್ಮಲ್ಲಿ ಒಂದೇ ಮನೆಯಲ್ಲಿ ಎರಡು ಜನ ಇರುತ್ತಾರೆ. ಎಷ್ಟು ವಿಪರ್ಯಾಸ ಎಂದು ಹೇಳಿದರೆ ನಾಯಕರಿಗೆ ಅನುಕೂಲ ಮಾಡಿದ್ದಾರೆ. ಆದರೆ ಅವರ ತಮ್ಮ 'ಪರಿವಾರ' ಎಂದು ಹೇಳುತ್ತಾನೆ. ಅನೇಕ ಕಡೆ ನಾಯಕರ ಬೀದಿ ಎಂದು ಇರುವುದನ್ನು ತಾವು ನೋಡಬಹುದು. ಚಾಮರಾಜ ನಗರ ತಾಲ್ಲೂಕೂ ಎಳಂದೂರು, ನಂಜನಗೂಡು, ಕೊಳ್ಳೇಗಾಲ ಮತ್ತು ಗುಂಡ್ಲುಪೇಟೆ ಈ ಭಾಗಗಳಲ್ಲಿ ನಾಯಕರ ಬೀದಿಗಳಿವೆ. ಅಂದ ಮೇಲೆ ಅಲ್ಲಿರತಕ್ಕ ನಾಯಕರೆಲ್ಲಾ ಪರಿವಾರದವರೇ? ನಾಯಕರು ಎಂದರೆ ಪರಿವಾರ, ಪರಿವಾರ ಎಂದರೆ ನಾಯಕರೂ. ಮತ್ತು ಈ ಬೇಡರ್ ಎಂದು ಹೇಳಿದ್ದಾರೆ. ಬೇಡರ್ ಎನ್ನುವುದೂ ಸಹ ನಾಯಕರೇ ತಮ್ಮ ಗಮನಕ್ಕೆ ಇನ್ನೊಂದು ವಿಷಯವನ್ನು ತರುತ್ತಿದ್ದೇನೆ. ಬೇಡ ಜಂಗಮ ಎಂದು ಅಲ್ಲಿ ಬೇಡರ್ ಎಂದು ಆಯಿತು. ಬೇಡ ಜಂಗಮರು ಎಂದರೆ ಬೇಡರು ಎಂದು ಕರ್ನಾಟಕ ಹೈಕೋರ್ಟಿನಲ್ಲಿ ಇವರಿಗೆ ಎಲ್ಲಾ ಸವಲತ್ತು ಕೊಡಬೇಕೆಂದು ಆಗಿದೆ. ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಈಗ ಇರತಕ್ಕ ಸವಲತ್ತಿನಲ್ಲಿ ಕೇಂದ್ರದಲ್ಲಿ ತಿದ್ದುಪಡಿ ಆಗುವವರೆಗೆ ಯಾವುದನ್ನು ನಿಲ್ಲಿಸಬಾರದು. ಅಲ್ಲಿ ತಿದ್ದುಪಡಿ ಆಗಲಿ ಅದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ನಾವು ಒತ್ತಡ ತರಬೇಕು. ತಾವು ಒತ್ತಡ ತರಬೇಕು. ನಾವು ಕೂಡ ಪಾರ್ಲಿಮೆಂಟ್ ಸದಸ್ಯರಿಗೆ ಹೇಳುತ್ತೇನೆ. ತಾವು 15 ದಿವಸದಲ್ಲಿ ಕೇಂದ್ರದ ಸಮಾಜ ಕಲ್ಯಾಣ ಸಚಿವರನ್ನು ಭೇಟಿ ಮಾಡುತ್ತೇವೆಂದು ಹೇಳಿದರು. ಈ ಜನಾಂಗಕ್ಕೆ ಪರಿವಾರ ಎನ್ನುವುದನ್ನು ಕರ್ನಾಟಕ ಸರ್ಕಾರದವರು ತತ್ವಶಃ ಒಪ್ಪಿದ್ದಾರೆ. ನೀವೇ ಬರೆದು ಇದನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದೀರಿ. ಅಂದ ಮೇಲೆ ಪರಿವಾರ ಎನ್ನುವುದನ್ನು ಕರ್ನಾಟಕ ಸರ್ಕಾರ ಅಲ್ಲಿಂದ ತಿದ್ದುಪಡಿ ಬರುವವರೆಗೆ ನೀವು ಅವರಿಗೆ ಸವಲತ್ತು ಕೊಡುವುದಕ್ಕಾಗುವುದಿಲ್ಲ. ಎಂದು ಹೇಳುವುದಕ್ಕಾಗುವುದಿಲ್ಲ.

ಆದುದರಿಂದ ದಯಮಾಡಿ ನೀವು ಅವರಿಗೆ ಕೊಡುವಂತಹ ವಸ್ತುಗಳನ್ನು ಕೊಡು. ನೀವು ಅವರಿಗೆ ಏನು ಕೊಡದಿದ್ದರೂ ಸರ್ಟಿಫಿಕೇಟ್ ಕೊಡತಕ್ಕದ್ದನ್ನು ತಡೆಹಿಡಿಯುವುದಕ್ಕೆ ಹೋಗಬೇಡಿ.

ಶ್ರೀ ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಆ ರೀತಿಯಾದ ಸಮಸ್ಯೆ ಇದೆ. ಆದರೆ 1988ರಲ್ಲಿಯೂ

ಕೂಡ ರಾಜ್ಯ ಸರ್ಕಾರ ಕ್ಲಿಯರಾಗಿ ಆದೇಶ ಕೊಟ್ಟಿದೆ ಆ ಆದೇಶವನ್ನು ಜಾರಿಗೆ ತರಬೇಕು ಎಂದು ಹೇಳುತ್ತಿದ್ದೀರಿ.ಈ ಬಗ್ಗೆ ತಪ್ಪಾಗಿದೆ ಎನ್ನತಕ್ಕಂಥ ರೀತಿ ಯಲ್ಲಿ ರಾಜ್ಯ ಸರ್ಕಾರ ಕೂಡ ಒಪ್ಪಿಕೊಂಡು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಾಗ ತತ್ವಶಃ ರಾಜ್ಯಸರ್ಕಾರ ಒಪ್ಪಿದ ಹಾಗೆ ಆಗಿದೆ. ಆದರೂ ಕೂಡ ಇದು ಕಾನ್‌ಸ್ಟಿಟ್ಯೂಷನ್‌ಲ್ ಅಮೆಂಡ್‌ಮೆಂಟ್. ಇದು ಬಿಟ್ಟು ಹೋಗಿದೆ ಎನ್ನತಕ್ಕಂಥ ರೀತಿಯಲ್ಲಿದ್ದರೆ ನೋಡೋಣ ನಾವು ತತ್ವಶಃ ಒಪ್ಪಿದ್ದೇವೆ. ಮತ್ತು ಕೇಂದ್ರ ಸರ್ಕಾರಕ್ಕೆ ಕೂಡ ಬರೆದಿದ್ದೇವೆ. ಒಂದೇ ಕಡೆಗೆ ತಾರತಮ್ಯ ಆಗಿದೆ. ನಮ್ಮ ಡಿಪಾರ್ಟ್‌ಮೆಂಟ್ ಕೂಡ ಒಪ್ಪಿದೆ. ಆದರೆ ಕ್ನಾನ್‌ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್ ಆಗುವವರೆಗೆ ವ್ಯಾಲಿಡ್ ಸರ್ಟಿಫಿಕೇಟ್‌ನ್ನು ಮಾತ್ರ ರಾಜ್ಯ ಸರ್ಕಾರ ಇಷ್ಯೂ ಮಾಡುವುದಕ್ಕಾಗುವುದಿಲ್ಲ. ಆದರೂ ಇದರ ಬಗ್ಗೆ ಮತ್ತೆ ಪರಿಶೀಲನೆ ಮಾಡಿ ಏನಾದರೂ ಅವರಿಗೆ ಸವಲತ್ತು ಕೊಡುವಂತಹ ರೀತಿಯಲ್ಲಿ ಅವಕಾಶವಾಯಿತು. ಎಂದರೆ ಅದನ್ನು ಕೂಡ ಪರಿಶೀಲನೆ ಮಾಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಅದರಲ್ಲಿ ಏನಾಗಿದೆ ಎಂದರೆ Naik ನಾಯಕ್ Nayak ನಾಯಕ್ - ಎರಡರಲ್ಲಿ ವ್ಯತ್ಯಾಸ ಇದೆ. ಮರಾಠಿ ಮರಾಠ ಎಂದು ಇದೆ ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮರಾಠಿ ಎನ್ನುವವರು ಷೆಡ್ಯೂಲ್ ಟ್ರೈಬ್ಸ್ ಶಿವಮೊಗ್ಗ ಜಿಲ್ಲೆಯಲ್ಲಿ ಅದೇ ಮರಾಠಿಯವರು ಫಾರ್‌ವರ್ಡ್ ಆಗಿದ್ದಾರೆ. ಇಂಥದ್ವಂದ್ವಗಳಿವೆ. ಆದ್ದರಿಂದ ಈ ವಿಷಯವನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಂತ್ರಿಗಳು ಈ ಸೀನಿಯಾರಿಟಿಗಳನ್ನು ಸ್ವಲ್ಪ ಗಮನಿಸಬೇಕು.

ಶ್ರೀ ಶಿವಾನಂದ ಹೆಚ್. ಕೌಜಲಗಿ :ಇದೇ ಪ್ರಕಾರ ಜಂಗಮರು ಬೇಡ ಜಂಗಮರಿದ್ದಾರೆ ಇವರೂ ಬ್ಯಾಕ್ ವರ್ಡ್.

ಶ್ರೀ ಧರ್ಮಸಿಂಗ್ : ಮರಾಠಿ-ಮರಾಠ.ಜನಾಂಗದವರು ನಿನ್ನೆಯೂ ಕೂಡ ನನಗೆ ರೆಪ್ರೆಸೆಂಟೇಷನ್ ಮಾಡಿದ್ದಾರೆ. ಈ ಸೀನಾನಿಮ್ಸ್ ಬಗ್ಗೆ ಈಗಾಗಲೇ ಸರ್ಕಾರದವರು ಒಂದು ಕಮಿಟಿ ಕೂಡ ಮಾಡಿದ್ದಾರೆ.

ತುರುವೇಕೆರೆ ತಾಲ್ಲೂಕು ಸೂಳೇಕೆರೆ ಗ್ರಾಮದ ಹೆಣ್ಣುಮಗಳ ಮೇಲೆ ಮತ್ತು ತುರುವೇಕೆರೆ ಟೌನ್‌ವಾಸಿ ರತ್ನಮ್ಮ (ಎಸ್.ಸಿ) ಹೆಣ್ಣುಮಗಳ ಮೇಲೆ ಅತ್ಯಾಚಾರ

ಶ್ರೀಎಸ್. ರುದ್ರಪ್ಪ (ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, ತುರುವೇಕೆರೆ ತಾಲ್ಲೂಕಿನ ಸೂಳೆಕೆರೆ ಗ್ರಾಮದ ಒಬ್ಬ ಹೆಣ್ಣುಮಗಳ ಮೇಲೆ ಅತ್ಯಾಚಾರ ಆದ ಬಗ್ಗೆ ಮತ್ತು ತುರುವೇಕೆರೆ ಟೌನ್ ವಾಸಿ ರತ್ನಮ್ಮ ಎಂಬ (ಎಸ್.ಸಿ) ಹೆಣ್ಣುಮಗಳ ಮೇಲೆ ಅತ್ಯಾಚಾರವಾದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

+ ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು ಮುಖ್ಯ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷಣೆಯವರೆ ತಮ್ಮ ಅನುಮತಿ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

1) ತುರುವೇಕೆರೆ ತಾಲ್ಲೂಕು ಸೂಳೆಕೆರೆ ಗ್ರಾಮದ ಶ್ರೀಮತಿ ಮಾಯಮ್ಮ ಬಿನ್ ದಿವಂಗತ ಗಂಗಣ್ಣ ಇವರು ಅದೇ ಗ್ರಾಮದ ಎಸ್. ಆರ್. ಲಕ್ಷ್ಮಣ್ ಎಂಬುವವರು ತಮ್ಮ ಮಗಳಾದ ಕುಮಾರಿ ವಸಂತಮ್ಮ ಇವಳನ್ನು ಮದುವೆಯಾಗುವುದಾಗಿ ವಚನ ಕೊಟ್ಟು ಅವಳೊಂದಿಗೆ ಅನೈತಿಕ ಸಂಬಂಧ

ಇಟ್ಟುಕೊಂಡಿದ್ದರು ಎಂದು ತುಮಕೂರು ಜಿಲ್ಲಾ ಪೋಲೀಸ್ ಅಧಿಕಾರಿಗೆ ದೂರು ಕೊಟ್ಟಿದ್ದರು. ಈ ಬಗ್ಗೆ ತುಮಕೂರು ಪೋಲೀಸ್ ಉಪ ವಿಭಾಗಾಧಿಕಾರಿಗಳು ಖುದ್ದಾಗಿ ವಿಚಾರಣೆ ಮಾಡಿದರು. ಡಿ.ಎಸ್.ಪಿ. ಇವರ ವಿಚಾರಣೆಯಿಂದ ಎಸ್. ಆರ್. ಲಕ್ಷ್ಮಣನ್ ಈತನ ಕುಮಾರಿ ವಸಂತಮ್ಮ ಇವಳೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದುದು ತಿಳಿದು ಬರಲಾಗಿ ಈ ಪ್ರಕರಣವನ್ನು ಅತ್ಯಾಚಾರದ ಪ್ರಕರಣ ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದು ವರದಿ ಮಾಡಿದರು. ಈ ಬಗ್ಗೆ ತುರುವೇಕೆರೆಯ ಸಹಾಯಕ ಅಭಿಯೋಗ ಅಧಿಕಾರಿಗಳು ಈ ಬಗ್ಗೆ ಅತ್ಯಾಚಾರದ ಪ್ರಕರಣದ ದಾಖಲು ಮಾಡುವುದು ಸರಿಯಿಲ್ಲ ಎಂದು ಅಭಿಪ್ರಾಯ ನೀಡಿದ್ದಾರೆ. ಆದ್ದರಿಂದ ಈ ಬಗ್ಗೆ ಪೋಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ.

2) ತುರುವೇಕೆರೆ ನಗರದ ಶ್ರೀಮತಿ ರತ್ನಮ್ಮ ಎಂಬ ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆಯೊಬ್ಬರು ದಿನಾಂಕ 11-12-92 ರಂದು ಮನೆ ಬಿಟ್ಟು ಹೋಗಿದ್ದರು. ಈ ಬಗ್ಗೆ ಶ್ರೀ ಓಂಕಾರಮೂರ್ತಿ ಎಂಬುವರು ಕೊಟ್ಟ ದೂರಿನ ಮೇಲೆ ಒಂದು ಮಹಿಳೆಯು ಕಾಣೆಯಾಗಿರುವ ಬಗ್ಗೆ ಪ್ರಕರಣವನ್ನು ತುರುವೇಕೆರೆ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 154:92ರಲ್ಲಿ ದಾಖಲು ಮಾಡಿಕೊಂಡು ತನಿಖೆ ಮಾಡಲಾಯಿತು. ಕಾಣೆಯಾಗಿದ್ದ ಶ್ರೀಮತಿ ರತ್ನಮ್ಮ ದಿನಾಂಕ 17-12-92ರಂದು ಮಾಯಸಂದ್ರದಲ್ಲಿ ಪತ್ತೆಯಾದಳು. ಶ್ರೀಮತಿ ರತ್ನಮ್ಮ ಇವರು ಏಕಾಂಗಿತನ ಮತ್ತು ಜೀವನದಲ್ಲಿ ಜಿಗುಪ್ಸೆಯಿಂದ ಅವರಮನೆ ಬಿಟ್ಟು ಹೋಗಿದ್ದರೆಂತಲೂ ಅವರ ಮೇಲೆ ಯಾರೂ ಅತ್ಯಾಚಾರ ಮಾಡಿಲ್ಲವೆಂದೂ ಹೇಳಿಕೆ ಕೊಟ್ಟಿರುವ ಪ್ರಕಾರ ಈ ಬಗ್ಗೆ ಅತ್ಯಾಚಾರದ ಪ್ರಕರಣ ದಾಖಲಾಗಿಲ್ಲ.

3. ದಿನಾಂಕ 7-12-92 ರಂದು ತುರುವೇಕೆರೆ ಸಬ್ ಇನ್ಸ್‌ಪೆಕ್ಟರ್ ಅವರು ನಗರದಲ್ಲಿ ಗಣಪತಿ ಮೆರವಣಿಗೆಲ್ಲಿ ಬಂದೋಬಸ್ತು ಕರ್ತವ್ಯ ನಿರ್ವಹಿಸುತ್ತಿದ್ದರು. ಆದ್ದರಿಂದ ಅವರು ಶಾಂತಿಪಾಲನಾ ಸಭೆಗೆ ಹಾಜರಾಗಿರಲಿಲ್ಲ ಎಂದು ವರದಿಯಾಗಿದೆ. ಈ ಸಭೆಗೆ ಸರ್ಕಲ್ ಇನ್ಸ್‌ಪೆಕ್ಟರ್ ಅವರು ಇಲಾಖೆಯ ಪರವಾಗಿ ಹಾಜರಾಗಿದ್ದರು. ಆದರೂ ಮಾನ್ಯ ಸದಸ್ಯರುಗಳು ತಮ್ಮ ಗಮನ ಸೆಳೆಯುವ ಸೂಚನೆಗಳಲ್ಲಿ ನಮೂದಿಸಿದ ಎಲ್ಲಾ ವಿಷಯಗಳನ್ನೂ ಪರಿಗಣಿಸಿ ಒಂದು ಸಮಗ್ರವಾದ ಹಾಗೂ ನಿಷ್ಪಕ್ಷಪಾತವಾದ ತನಿಖೆಯನ್ನು ಮಾಡಿಸುವುದು ಸೂಕ್ತ ಎಂದು ಸರ್ಕಾರ ಪರಿಗಣಿಸಿದೆ. ಆದ್ದರಿಂದ ಈ ತನಿಖೆಯ ಕಾರ್ಯವನ್ನು ಸಿಒಡಿಗೆ ಒಪ್ಪಿಸಲು ನಿರ್ಧರಿಸಲಾಗಿದೆ. ಅವರು ವರದಿಯನ್ನು ಈ ಬಗ್ಗೆ 15 ದಿನಗಳಲ್ಲಿ ಸಲ್ಲಿಸಲು ಸೂಚಿಸಲಾಗುವುದು. ಮತ್ತು ಅವರ ವರದಿ ಬಂದ ನಂತರ ಅವಶ್ಯ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಸ್. ರುದ್ರಪ್ಪ : ಸೂಳೆಕೆರೆ ಗ್ರಾಮದಲ್ಲಿ ಒಂದು ಹೆಣ್ಣುಮಗಳ ಮೇಲೆ ಅತ್ಯಾಚಾರ ಆಗಿರುವುದು ನಮ್ಮ ಗಮನಕ್ಕೆ ಬಂತು. ಆಗ ಆ ಎಸ್ ಐ ಆ ಹುಡುಗನನ್ನು ಕರೆಯಿಸಿ ತಾನು ಸಾಯಂಕಾಲ ತೀರ್ಮಾನ ಮಾಡುತ್ತೇನೆಂದು ಹೇಳಿ 10 ಸಾವಿರ ರೂ ತೆಗೆದುಕೊಂಡಿದ್ದಾನೆ. ಆಮೇಲೆ ಆ ಹುಡುಗನನ್ನು ಕಳುಹಿಸಿದ್ದಾನೆ. ಆ ಊರಿನ ಸುಮಾರು 150 ಜನ ಮಾಜಿ ಪ್ರಧಾನರಾದ ರಘು ಅವರ ನೇತೃತ್ವದಲ್ಲಿ ಹಿಂದಿನ ಗೃಹಸಚಿವರಾದ ಧರ್ಮಸಿಂಗ್ ರವರ ಹತ್ತಿರ ಬೆಂಗಳೂರಿಗೆ ಬಂದು, ಅವರನ್ನು ಕೇಳಿಕೊಂಡಾಗ ಆ ಎಸ್.ಐ. ಬಗ್ಗೆ ಸೂಕ್ತ

ಕ್ರಮ ತೆಗೆದುಕೊಂಡು ಅವನನ್ನು ಸಸ್ಪೆಂಡ್ ಮಾಡುತ್ತೇನೆ. ಎಂದು ನಮಗೆ ಆಶ್ವಾಸನೆ ಕೊಟ್ಟರು. ಅದಾದ ಮೇಲೆ ಸಸ್‌ಪೆಂಡೂ ಮಾಡಲಿಲ್ಲ. ಎಸ್‌ಪಿಯವರ ಹತ್ತಿರ ಹೋದರೆ ಅವರೂ ಗಮನ ಕೊಡಲಿಲ್ಲ ಆದ್ದರಿಂದ ಸಬ್‌ಇನ್ಸ್‌ಪೆಕ್ಟರ್ ದಾಖಲೆ ಏನಿದೆ ಇದರಲ್ಲ ಎಸ್ ಐ ಅವರ ಕೈವಾಡ ಬಹಳ ಇದೆ. ಆ ಕೈವಾರದಿಂದ ಈ ಕೇಸ್ ಹೋಗಿದೆ. ಮತ್ತು ಎರಡನೆಯದಾಗಿ ಏನು ತುರುವೇಕೆರೆಯಲ್ಲಿ ಮೊನ್ನೆ ತಾನೇ ರತ್ನಮ್ಮಳ ಅತ್ಯಾಚಾರ ಆಯಿತು ಅದನ್ನು ಕಣ್ಣಾರೆ ಕಂಡ ವಿಷಯ.

ಆ ಬಗ್ಗೆ ದೂರು ಕೊಟ್ಟಾಗ ಆ ಹುಡುಗನನ್ನು ಕರೆದುಕೊಂಡು ಬಂದು ಸ್ಟೇಶನ್‌ನಲ್ಲಿ ಒಂದು ದಿನ ಇಟ್ಟುಕೊಂಡು ಎರಡನೇಯ ದಿನ ಸಾಯಂಕಾಲ ಸುಮಾರು 5 ಸಾವಿರ ಲಂಚ ತೆಗೆದುಕೊಂಡು ಆ ಹುಡುಗನನ್ನು ಬಿಟ್ಟು, ಅದು ಅತ್ಯಾಚಾರಕ್ಕೆ ಒಳಗಾಗಿಲ್ಲ ಆ ಹುಡುಗಿ ಮನೆಯನ್ನೇ ಬಿಟ್ಟು ಹೋಗಿದ್ದಾರೆಂದು ಸುಳ್ಳು ಮಾತು ಕೊಟ್ಟಿದ್ದಾರೆ. ಮೂರನೆಯದಾಗಿ, ಈ ರಾಜ್ಯದಲ್ಲಿ 6ನೇ ತಾರೀಖು ಅಯೋಧ್ಯೆ ಗಲಭೆ ಆಯಿತು. ನಾವು 7ನೇ ತಾರೀಖು ಶಾಂತಿ ಸಭೆಯನ್ನು ಕರೆದಾಗ ಎಲ್ಲಾ ತಾಲ್ಲೂಕಿನ ಮುಖಂಡರೂ ಆ ಸಬೆಗೆ ಬಂದರು ಆ ಸಂದರ್ಭದಲ್ಲಿ ನಾವು ಎಸ್‌ಐ ಅನ್ನೂ ಕರೆದಾಗ ನಾವು ಆ ಸಭೆಗೆ ಬರುವುದಿಲ್ಲ ಎಂದು ನೇರವಾಗಿ ಉತ್ತರ ಕೊಟ್ಟಿದ್ದಾರೆ. ಮತ್ತು ಸರ್ಕಲ್ ಇನ್ಸ್‌ಪೆಕ್ಟರನ್ನು ನಾವು ಕೇಳಿದಾಗ ಅವರು ಬರುವುದಿಲ್ಲವಂತೆ ನಾನೇನು ಮಾಡಲಿ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಅಲ್ಲಿ ಮಾಹಿತಿ ಏನು ಹೇಳಿದ್ದಾರೆ ಗೊತ್ತಾ ಅಲ್ಲಿಗಣಪತಿ ಜಾತ್ರೆ ಎಂದು. ಗಣಪತಿ ಜಾತ್ರೆ ಇದ್ದುದು ಸಂಜೆ, ನಾವು ಸಭೆಯನ್ನು ಕರೆದದ್ದು 10-30ರಲ್ಲಿ, ಸರ್ಕಾರಕ್ಕೆ ಸುಳ್ಳು ಮಾಹಿತಿ ಕೊಟ್ಟು ವಂಚನೆಗೆ ಒಳಗಾಗಿದ್ದಾನೆ. ಅವನನ್ನು ಕೂಡಲೇ ಸಸ್ಪೆಂಡ್ ಮಾಡಿ ಎನ್‌ಕ್ವಯರಿ ಮಾಡಬೇಕು ಇಲ್ಲದಿದ್ದರೆ ನಮ್ಮ ತಾಲ್ಲೂಕಿನಲ್ಲಿ ಅಶಾಂತಿ ಹೆಚ್ಚಾಗಿದೆ ಆದ್ದರಿಂದ ಕೂಡಲೇ ಅವನನ್ನ ಸಸ್ಪೆಂಡ್ ಮಾಡಿ ಎನ್‌ಕ್ವಯರಿ ಮಾಡಬೇಕೆಂದು ತಮ್ಮನ್ನು ಒತ್ತಾಯಿಸುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ : ಸಭಾಧ್ಯಕ್ಷಣಿಯವರೇ, ಶ್ರೀ ರುದ್ರಪ್ಪನವರು ಏನು ಹೇಳಿದ್ದಾರೆ ಅದು ಪೂರ್ತಿ ನಿಜ. ಏಕೆಂದರೆ ನನಗೂ ಅಲ್ಲಿಯ ಜನ ಹೇಳಿದರು ಇದರ ಬಗ್ಗೆ ಸಿಒಡಿ ತನಿಖೆಯನ್ನು ನಾವು ಸ್ವಾಗತಿಸುತ್ತೇವೆ ಆದರೆ ಸಬ್ ಇನ್ಸ್‌ಪೆಕ್ಟರ್ ಅಲ್ಲೇ ಕೆಲಸ ಮಾಡುತ್ತಿದ್ದರೆ ಸಾಕ್ಷಿಗಳನ್ನು ಹೆದರಿಸುತ್ತಾನೆ ಆದ್ದರಿಂದ ಸಿಒಡಿ ತನಿಖೆ ಆದೇಶ ಕೊಟ್ಟಿರುವುದರಿಂದ ಇಮಿಡಿಯೇಟಾಗಿ ತಾವು ಅವನನ್ನು ಸಸ್ಪೆಂಡ್ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ರುದ್ರಪ್ಪನವರು ಮತ್ತು ಮಾನ್ಯ ರಾಮಲಿಂಗಾರೆಡ್ಡಿಯವರು ನಾನು ಗೃಹಮಂತ್ರಿಯಾಗಿದ್ದಾಗ ಆ ಎಸ್.ಐ ಬಗ್ಗೆ ಹೇಳಿದ್ದಾರೆ. ಈಗ ಸರ್ಕಾರಕ್ಕೆ ಆ ಘಟನೆಗಳ ಬಗ್ಗೆ ಗಮನಸೆಳೆದಿದ್ದಾರೆ. ಸರ್ಕಾರ 15 ದಿನಗಳೊಳಗಾಗಿ ಸಿಒಡಿ ತನಿಖೆಗೆ ಒಳಪಡಿಸಿದೆ,ಇದನ್ನು ಸಿಒಡಿಗೆ ಒಳಪಡಿಸಿದ ಮೇಲೆ ಅದರ ಮಧ್ಯದಲ್ಲಿ ಹೇಳುವುದು ಸರಿಯಲ್ಲ, ಸಿಒಡಿ ರಿಪೋರ್ಟ್ ಬರುತ್ತದೆ. ಸಮಗ್ರವಾದ ತನಿಖೆ ಮಾಡಿಸುತ್ತೇವೆ ಆ ತನಿಖೆ ಸಮಯದಲ್ಲಿ ಆ ಎಸ್‌ಐ ಅನ್ನು ಕಿತ್ತು ಹಾಕಬೇಕೆಂದು ಏನು ಹೇಳಿದ್ದಾರೆ ಅದರ ಬಗ್ಗೆ ಕೂಡ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಸಿ. ಬೈರೇಗೌಡ : ನಿನ್ನೆಯ ದಿವಸ ನನ್ನ ಗಮನ ಸೆಳೆಯುವ ಸೂಚನೆ ಇತ್ತು.

ಉಪಾಧ್ಯಕ್ಷಣಿಯವರು: ಹೌದು, ಅದಕ್ಕೆ ಘೋರ್ಪಡೆಯವರು ಟೈಮ್ ಕೇಳಿದ್ದಾರೆ. ಕಾಗದ ಬರೆದು 11ನೇ ತಾರೀಖು ತೆಗೆದುಕೊಳ್ಳೋಣ. ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ : ಆಯಿತು.

ಶ್ರೀ ಎಸ್. ರುದ್ರಪ್ಪ : ದಯವಿಟ್ಟು ಈ ಬಗ್ಗೆ ಎಸ್ಐ ಅನ್ನು ಸಸ್ಪೆಂಡ್ ಮಾಡಿ ಎನ್‌ಕ್ವಯರಿ ಮಾಡಬೇಕು, ಉತ್ತರ ಕೊಡಬೇಕು.

ಶ್ರೀ ಧರ್ಮಸಿಂಗ್ : ಸಿಒಡಿಗೆ ತನಿಖೆಗೆ ಒದಗಿಸಲಾಗಿದೆ, ಅವರು ಹೇಳುವುದೇನೆಂದರೆ ಆ ಎಸ್ ಐ ಅಲ್ಲಿದ್ದರೆ ಸಿಒಡಿ ತನಿಖೆಗೆ ಸರಿಯಾಗುವುದಿಲ್ಲವೆಂದು.

(ಗೊಂದಲ)

ಸಿ.ಒ.ಡಿ ರಿಪೋರ್ಟ್ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.15ದಿವಸಗಳೊಳಗಾಗಿ ರಿಪೋರ್ಟ್ ಬಂದಮೇಲೆ we will take action against him.

(ಗೊಂದಲ)

ಉಪಾಧ್ಯಕ್ಷರು : ಈಗ ನಿಯಮ 334.

(ಗೊಂದಲ)

ಶ್ರೀ ಎಸ್. ರುದ್ರಪ್ಪ : ಅವರನ್ನು ಯಾವತ್ತು ತೆಗೆಯುತ್ತೀರಿ ಎಂದು ಹೇಳಬೇಕು. ತುರುವೇಕೆರೆ ಪೋಲೀಸ್ ಸ್ಟೇಷನ್ ಲಂಚದ ಸ್ಟೇಷನ್ ಆಗಿದೆ. ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ, ಆರು ತಿಂಗಳಿಂದಲೂ ಇದನ್ನು ಹೇಳುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ರುದ್ರಪ್ಪನವರು ಇಷ್ಟು ಹೇಳುತ್ತಿದ್ದಾರೆ, ಅವರು ಕೇಳುತ್ತಿರುವುದು ಏತಕ್ಕೆಂದರೆ 150 ಜನರು ಬಂದು ಅರ್ಜಿ ಕೊಟ್ಟರೂ ಕೂಡ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ಅವರು ಹೇಳಿದ್ದಾರೆ. ಅವರ ಹತ್ತಿರ ಬಂದು ಮಾತನಾಡಿ ತಾವು ಬನ್ನಿ.

(ಗೊಂದಲ)

ಶ್ರೀ ಎಸ್.ರುದ್ರಪ್ಪ :ಕೂಡಲೇ ಅವನ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ.

(ಗೊಂದಲ)

ಶ್ರೀ ಧರ್ಮಸಿಂಗ್ : ಮಾನ್ಯ ಉಪಾಧ್ಯಕ್ಷಣಿಯವರೇ, ನಾನು ಮುಖ್ಯ ಮಂತ್ರಿಗಳ ಪರವಾಗಿ ಗಮನ ಸೆಳೆಯುವ ಸೂಚನೆಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಉತ್ತರದಲ್ಲಿ ಸ್ಪಷ್ಟವಾಗಿ ಸರ್ಕಾರ ಏನು ಹೇಳಿದೆ ಎಂದರೆ ಈ ಮೂರು ಘಟನೆಗಳ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ

ಸಮಗ್ರವಾದ ತನಿಖೆಯನ್ನು ಮಾಡತಕ್ಕಂಥ ರೀತಿಯಲ್ಲಿ ಸಿ.ಓ.ಡಿ.ಗೆ ನಾವು ಹೇಳಿದ್ದೇನೆ. ನೀವು ಏನು ಹೇಳಿದ್ದೀರಿ. ಸಸ್ಪೆಂಡ್ ಮಾಡತಕ್ಕಂಥದ್ದನ್ನು ಈಗಲೇ ಹೇಳಬೇಕು ಎಂದು ಹೇಳುತ್ತೀರಿ. ಸಸ್ಪೆಂಡ್ ಮಾಡತಕ್ಕಂಥದ್ದನ್ನು ಈಗಲೇ ಹೇಳಬೇಕು ಎಂದು ಹೇಳುತ್ತೀರಿ. ಅವನನ್ನು ನಾವು ಅಲ್ಲಿ ಇಟು ನಿಷ್ಪಕ್ಷಪಾತವಾದ ತನಿಖೆಯನ್ನು ಮಾಡುವುದಕ್ಕಾಗುವುದಿಲ್ಲ, ಅವನನ್ನು ತೆಗೆಯಬೇಕು ಎಂದು ನಾನು ಕೂಡ ಹೇಳಿದ್ದೇನೆ. ಸಸ್ಪೆಂಡ್ ಮಾಡತಕ್ಕಂಥದ್ದು ಬೇರೆ ವಿಚಾರಗಳು ಏನಾಗಿದೆ. ಸಮಕ್ಷಮ ತಾವು ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ. ಆದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಅಷ್ಟೇನೂ ದೀರ್ಘವಾದ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇಲ್ಲ, ಮತ್ತು ಸಿ.ಒ.ಡಿ. ತನಿಖೆಯ ವರದಿಯನ್ನು 15 ದಿವಸ ಒಳಗಾಗಿ ಒದಗಿಸಬೇಕು ಎಂದು ನಿರ್ದಿಷ್ಟವಾದ ಆದೇಶ ಕೂಡ ಸರ್ಕಾರ ಕೊಟ್ಟಿದೆ.

(ಗೊಂದಲ)

ಶ್ರೀ ಎಂ. ನಾರಾಯಣಸ್ವಾಮಿ : ಈ ರೀತಿ ಮಾಡುತ್ತೀರಲ್ಲಾ ಇದು ಸರಿಯಲ್ಲ

(ಗೊಂದಲ)

ಉಪಾಧ್ಯಕ್ಷರು : ತಾವು ಇದಕ್ಕೆ ಸಿಗ್ನೇಟರಿಯೇ?

ನಿಯಮ 334 ರ ಮೇರೆಗೆ

ರಾಜ್ಯದಲ್ಲಿ ಹೊಸ ವೈದ್ಯಕೀಯ ಹಾಗೂ ದಂತ ಕಾಲೇಜುಗಳ ಮಂಜೂರಾತಿಗೆ ನಕಾರ

ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ): ಮಾನ್ಯ ಸಭಾಧ್ಯಕ್ಷಣೆಯವರೆ, ಖಾಸಗಿ ಮೆಡಿಕಲ್ ಕಾಲೇಜುಗಳನ್ನು ಹಾಗೂ ಡೆಂಟಲ್ ಕಾಲೇಜುಗನ್ನು ಮಂಜೂರು ಮಾಡುವುದಾಗಿ ಹಿಂದಿನ ಸರ್ಕಾರದವರು ಆಶ್ವಾಸನೆ ಕೊಟ್ಟಿದ್ದರು. ಆದರೆ, ಇನ್ನೂವರೆಗೂ ಇದರ ಬಗ್ಗೆ ಹೊಸ ಸರ್ಕಾರ ಬಂದ ನಂತರೇ ನಿರ್ದಿಷ್ಟವಾದ ಧೋರಣೆಯನ್ನು ಹೊಸಕಾಲೇಜು ಮಂಜೂರು ಮಾಡುವಲ್ಲಿ ತಿಳಿಯಬಯಸಿರುವುದಿಲ್ಲ. ಹೀಗಾಗಿ ಜನರಿಗೆ ಇದರ ಬಗ್ಗೆ ಗೊಂದಲ ಉಂಟಾಗಿರುತ್ತದೆ. ಆದಕಾರಣ, ಹೊಸ ಸರ್ಕಾರದವರು ಮೆಡಿಕಲ್ ಕಾಲೇಜು ಹಾಗೂ ಡೆಂಟಲ್ ಕಾಲೇಜುಗಳನ್ನು ಕೊಡುವ ಬಗ್ಗೆ ಈ ಹೊಸ ಸರ್ಕಾರದ ಧೋರಣೆಯನ್ನು ಪ್ರಕಟಿಸಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಆರೋಗ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಧರ್ಮಸಿಂಗ್ (ಸಮಾಜ ಸಚಿವರು ಮುಖ್ಯ ಮಂತ್ರಿಗಳ ಪರವಾಗಿ): ಮಾನ್ಯ ಸಭಾಧ್ಯಕ್ಷಣೆಯವರೆ ಮುಖ್ಯ ಮಂತ್ರಿಗಳ ಹೇಳಿಕೆ ಈ ಕೆಳಕಂಡಂತೆ ಇದೆ.

ದಿನಾಂಕ 15-9-1990ರ ಸಚಿವ ಸಂಪುಟದ ತೀರ್ಮಾನದ ಪ್ರಕಾರ ರಾಜ್ಯದಲ್ಲಿ ಮುಂದಿನ ಮೂರು ವರ್ಷಗಳವರೆಗೆ ಯಾವುದೇ ಹೊಸ ವೈದ್ಯಕೀಯ ಕಾಲೇಜನ್ನು ತೆರೆಯಬಾರದೆಂದು ನಿರ್ಧರಿಸಿದೆ. ಆದರಂತೆ, ದಿನಾಂಕ 15-9-1993ರವರೆಗೆ ಹೊಸ ವೈದ್ಯಕೀಯ ಕಾಲೇಜನ್ನು ತೆರೆಯಲು ಅವಕಾಶವಿರುವುದಿಲ್ಲ. ಈತನಧ್ಯೆ ಕೇಂದ್ರ

ಸರ್ಕಾರ ಆಗಸ್ಟ್ 1992ರಲ್ಲಿ ಹೊರಡಿಸಿರುವ ಅಧ್ಯಾದೇಶದ ಪ್ರಕಾರ ರಾಜ್ಯದಲ್ಲಿ ಯಾವುದೇ ಹೊಸ ವೈದ್ಯಕೀಯ ಮತ್ತು ದಂತ ಕಾಲೇಜನ್ನು ತೆರೆಯಬೇಕಾದಲ್ಲಿ ಪ್ರಥಮವಾಗಿ ಕೇಂದ್ರ ಸರ್ಕಾರದ ಮತ್ತುಭಾರತೀಯ ವೈದ್ಯಕೀಯ ಪರಿಷತ್ತು ಹಾಗೂ ಭಾರತೀಯ ದಂತ ಪರಿಷತ್ತಿನ ಅನುಮೋದನೆ ಪಡೆಯಬೇಕಾಗುತ್ತದೆ. ಆದ್ದರಿಂದ, ರಾಜ್ಯದಲ್ಲಿ ವೈದ್ಯಕೀಯ ಮತ್ತು ದಂತ ಕಾಲೇಜನ್ನು ಹೊಸದಾಗಿ ಪ್ರಾರಂಭಿಸಲು ಕೇಂದ್ರ ಸರ್ಕಾರದ ಅನುಮೋದನೆಯ ನಂತರ ಪರಿಶೀಲನೆ ಮಾಡಲಾಗುವುದು. ಭಾರತ ಸರ್ಕಾರ ಹೊರಡಿಸಿರುವ ವೈದ್ಯಕೀಯ ಮತ್ತು ದಂತ ಕಾಲೇಜುಗಳಿಗೆ ಸಂಬಂಧಿಸಿದ ಅಧ್ಯಾದೇಶಗಳ ಸೂಚನೆಗಳನ್ನು ರಾಜ್ಯ ಸರ್ಕಾರ ಕಟ್ಟುನಿಟ್ಟಾಗಿ ಪಾಲಿಸಲಾಗುವುದು.

ವೆಸ್ಟ್ ಆಫ್ ಕಾರ್ಡ್ ರೋಡು ಸಹಕಾರಿ ಅಪೆಕ್ಸ್ ಬ್ಯಾಂಕ್, ಶಾಖೆಯಲ್ಲಿ 5 ಕೋಟಿ ರೂಪಾಯಿಗಳ ಅವ್ಯವಹಾರ.

ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ವೆಸ್ಟ್ ಆಫ್ ಕಾರ್ಡ್ ರೋಡ್ ಶಾಖೆಯಲ್ಲಿ 4-5 ವರ್ಷಗಳಿಂದ ಸತತವಾಗಿ ಅವ್ಯವಹಾರಗಳು ನಡೆದುಕೊಂಡು ಬಂದಿದ್ದು. ಇತ್ತೀಚಿನ ಆಡಿಟ್ ಪ್ರಕಾರ ಸುಮಾರು 5 ಕೋಟಿ ರೂಪಾಯಿ ಹಣ ದುರುಪಯೋಗವಾಗಿದೆ ಎಂದು ಕಂಡು ಬಂದಿದೆ. ಇದಕ್ಕೆ ಹಲವಾರು ಅಧಿಕಾರಿಗಳು ಹಾಗೂ ಹಿಂದೆ ಇದ್ದಂತಹ ಅಧ್ಯಕ್ಷರು ಹಾಗೂ ಇತರರು ಸಹ ಜವಾಬ್ದಾರಿ ಹೊಂದಿರುತ್ತಾರೆ. ಇದೊಂದು ಸ್ಟಾಕ್ ಸ್ಕಾಮ್ ರೀತಿಯಲ್ಲಿ ನಡೆದಿದೆ. ಇಷ್ಟಾದರೂ ಸಹ ಅಧಿಕಾರಿಗಳನ್ನು ಅಥವಾ ನೌಕರರ ಮೇಲೆ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಈ ಬಗ್ಗೆ ಕೂಡಲೇ ಸಿ.ಒ.ಡಿ. ತನಿಖೆಗೆ ಈ ಪ್ರಕರಣವನ್ನು ಒಪ್ಪಿಸಿದರೆ ಜನತೆಗೆ ಸಹಕಾರಿ ಬ್ಯಾಂಕ್‌ಗಳ ಮೇಲಿರತಕ್ಕ ವಿಶ್ವಾಸವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಇಲ್ಲದಿದ್ದ ಪಕ್ಷದಲ್ಲಿ ಜನತೆಯೂ ಸಹಕಾರ ಬ್ಯಾಂಕ್‌ಗಳ ಬಗ್ಗೆ ತಮ್ಮ ವಿಶ್ವಾಸವನ್ನು ಕಳೆದುಕೊಳ್ಳತಕ್ಕಂಥಹ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಕೂಡಲೇ ಸಿ.ಒ.ಡಿ ತನಿಖೆಗೆ ಆಜ್ಞೆ ಮಾಡಬೇಕೆಂದು ಸನ್ಮಾನ್ಯ ಸಹಕಾರ ಸಚಿವರನ್ನು ಕೋರುತ್ತೇನೆ.

ಶ್ರೀ ಆರ್. ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು ಸಹಕಾರ ಸಚಿವರ ಪರವಾಗಿ): ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನ ವೆಸ್ಟ್‌ಆಫ್ ಕಾರ್ಡ್‌ರೋಡ್ 2ನೇ ಹಂತದ ಶಾಖೆಯಲ್ಲಿ ಆಗಿರುವ ಹಣ ದುರುಪಯೋಗ ಕುರಿತಂತೆ ಲೆಕ್ಕ ಪತ್ರಗಳ ತನಿಖೆ ನಡೆಸಲು ಬ್ಯಾಂಕು ಕ್ರಮ ಕೈಗೊಂಡಿರುತ್ತದೆ. ಬ್ಯಾಂಕಿನ ಆಂತರಿಕ ಲೆಕ್ಕ ಪರಿಶೋಧಕರ ಮುಖಂಡತ್ವದಲ್ಲಿ ಅಧಿಕಾರಿಗಳ ತಂಡವೊಂದು ತನಿಖೆಯನ್ನು 4ನೇ ಅಕ್ಟೋಬರ್ 1991 ರಂದು ಆರಂಭಿಸಿತ್ತು. ಅಂತರಿಕ ಲೆಕ್ಕ ಪರಿಶೋಧಕರು ಕಾಲ ಕಾಲಕ್ಕೆ ಮಧ್ಯಂತರ ವರದಿಗಳನ್ನು ಕೊಟ್ಟಿದ್ದರು. ಆಂತರಿಕ ಲೆಕ್ಕ ಪರಿಶೋಧಖರ ಅಂತಿಮ ವರದಿಯು 14ನೇ ಡಿಸೆಂಬರ್ 1992ರಂದು ಬ್ಯಾಂಕಿಗೆ ಸಲ್ಲಿಸಲ್ಪಟ್ಟಿರುತ್ತದೆ. ಸದರಿ ವರದಿಯು ಮೇಲ್ಕಂಡ ಶಾಖೆಯ 1981-82 ರಿಂದ 1991-92 ವರೆಗಿನ ವ್ಯವಹಾರಗಳನ್ನು ಒಳಗೊಂಡಿರುತ್ತದೆ. ತನಿಖಾ ಕಾಲದಲ್ಲಿ ಶಾಖೆಯಲ್ಲಿ ಪತ್ತೆ ಹಚ್ಚಲ್ಪಟ್ಟಿರುವ ಹಣ ದುರುಪಯೋಗದ ಒಟ್ಟು ಮೊಬಲಗು ರೂ. 5,13,50 629-99 ಪೈಸೆಗಳಾಗಿರುತ್ತದೆ.

ಹಣ ದುರುಪಯೋಗ ನಡೆಸಿರುವ ಬಗ್ಗೆ ವಿವರಗಳು ಬಾಬತ್ತು ವಾರು ಈ ಕೆಳಕಂಡಂತಿದೆ.

1) ಕ್ಲೀಯರಿಂಗ್ ಪಾವತಿಗಳು	1981-82ರಿಂದ	1988-89ರವರೆಗೆ	ರೂ.	26,26,193-85
2) ನಗದು ಸ್ವೀಕೃತಿಗಳು	1982-83ರಿಂದ	1991-92ರವರೆಗೆ	ರೂ.	326,46,967-60
3) ನಗದು ಪಾವತಿಗಳು	1987-88ರಿಂದ	1991-92ರವರೆಗ	ರೂ.	1,60,06,427-05
4) ಲೆಡ್ಜರ ಸಂಕಲನ ವ್ಯತ್ಯಾಸಗಳು			ರೂ.	71,041-49
		ಒಟ್ಟು	ರೂ.	**5,13,50,629-99**

ಅಪೆಕ್ಸ್ ಬ್ಯಾಂಕಿನ ವೆಸ್ಟ್ ಆಫ್ ಕಾರ್ಡ್ ರೋಡ್ 2ನೇ ಹಂತದ ಶಾಖೆಯಲ್ಲಿ ಮೇಲ್ಕಂಡಂತೆ ಹಣ ದುರುಯೋಗ ಆಗಿರುವುದಕ್ಕೆ ಅನೇಕ ನೌಕರರ ಮತ್ತು ಅಧಿಕಾರಿಗಳ ಪಾತ್ರ ಇರುವುದಾಗಿ ತನಿಖಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಈ ಪೈಕಿ ಸದರಿ ಶಾಖೆಯ ಮ್ಯಾನೇಜರ್ ಶ್ರೀ. ಅಣ್ಣೇಗೌಡ ಮತ್ತು ಕ್ಯಾಷಿಯರ್ ಶ್ರೀ ಬಿ.ಎನ್. ಜಗನ್ನಾಥ್ ಇವರುಗಳು ನೇರವಾಗಿ ಜವಬ್ದಾರರಾಗಿರುತ್ತಾರೆ. ಹಣ ದುರುಪಯೋಗಕ್ಕೆ ಸಂಬಂಧಪಟ್ಟವರ ಮೇಲೆ ಕೈಗೊಳ್ಳಲಾದ ಕ್ರಮದ ವಿವರಗಳು ಈ ರೀತಿ ಇರುತ್ತವೆ.

1) ಕ್ರಿಮಿನಲ್ ಮೊಕದ್ದಮೆ: ಈ ಕೆಳಕಂಡ ನೌಕರರ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿರುತ್ತದೆ.
   1) ಶ್ರೀ ಅಣ್ಣೇಗೌಡ, ಬ್ರಾಂಚ್ ಮ್ಯಾನೇಜರ್
   2) ಶ್ರೀ ಬಿ.ಎನ್. ಜಗನ್ನಾಥ್, ಕ್ಯಾಷಿಯರ್
   3) ಶ್ರೀ ಕೆ. ಬೋರೆಗೌಡ, ಕ್ಲಾರ್ಕ್
   4) ಕುಮಾರಿ. ಕೆ. ಸರಸ್ವತಿ, ಕ್ಲಾರ್ಕ್
2) ಈ ಕೆಳಕಂಡ ನೌಕರರನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.
   1) ಶ್ರೀ ಅಣ್ಣೇಗೌಡ, ಬ್ರಾಂಚ್ ಮ್ಯಾನೇಜರ್,
   2) ಶ್ರೀ ಬಿ.ಎನ್. ಜಗನ್ನಾಥ್, ಕ್ಯಾಷಿಯರ್
   3) ಶ್ರೀ ಕೆ. ಬೋರೇಗೌಡ, ಕ್ಲಾರ್ಕ್
   4) ಕುಮಾರಿ. ಡಿ. ಸರಸ್ವತಿ, ಕ್ಲಾರ್ಕ್
   5) ಶ್ರೀಮತಿ ಬಿ.ಪಿ. ಹೇಮಲತಾ ಕ್ಲಾರ್ಕ್
   6) ಶ್ರೀ ತಿಮ್ಮಯ್ಯ, ಜವಾನ
   7) ಶ್ರೀ ಎಂ. ಕರಿಬಸಪ್ಪ, ತನಿಖಾಧಿಕಾರಿ.
3) ಈ ಕೆಳಕಂಡ ನೌಕರರ ಮೇಲೆ ಶಿಸ್ತಿನ ಕ್ರಮವನ್ನು ಆದೇಶಿಸಲಾಗಿದೆ.
   1) ಶ್ರೀ. ಅಣ್ಣೇಗೌಡ, ಬ್ರಾಂಚ್ ಮ್ಯಾನೇಜರ್,
   2) ಶ್ರೀ ಬಿ.ಎನ್. ಜಗನ್ನಾತ್, ಕ್ಯಾಷಿಯರ್
   3) ಶ್ರೀ ಎಂ. ಕರಿಬಸಪ್ಪ, ತನಿಖಾಧಿಕಾರಿ,

ಈ ಪೈಕಿ ಶ್ರೀಮತಿ ಬಿ.ಪಿ. ಹೇಮಲತಾ ಎಂಬುವವರನ್ನು ಸೇವೆಯಿಂದ ವಜಾ ಮಾಡಲಾಗಿದ್ದು ಅವರು ಇದಕ್ಕೆ ಹೈಕೋರ್ಟಿನಿಂದ ತಡೆಯಾಜ್ಞೆ ತಂದಿರುತ್ತಾರೆ.

ಹಣ ವಸೂಲಾತಿ ಕ್ರಮ: ದುರುಪಯೋಗವಾಗಿರುವ ಹಣದ ವಸೂಲಾತೆಗೆ ಬ್ಯಾಂಕು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 700ರ ಪ್ರಕಾರ ಶ್ರೀ ಅಣ್ಣೇಗೌಡ, ಮ್ಯಾನೇಜರ್ ಮತ್ತು ಶ್ರೀ ಬಿ.ಎನ್. ಜಗನ್ನಾಥ್, ಕ್ಯಾಷಿಯರ್

ಇವರುಗಳ ಮೇಲೆ ದಾವೆಗಳನ್ನು ಹೂಡಿರುತ್ತದದೆ ಅಲ್ಲದೇ ಶ್ರೀ ಅಣ್ಣೇಗೌಡ ಮತ್ತು ಶ್ರೀ ಬಿ.ಎನ್. ಜಗನ್ನಾಥ್ ಇವರ ಹೆಸರುಗಳಲ್ಲಿರುವ ಹಾಗೂ ಇವರ ಕುಟುಂಬದ ಸದಸ್ಯರ ಹೆಸರುಗಳಲ್ಲಿರುವ ಆಸ್ತಿಗಳನ್ನು ಅವರು ಪರಭಾರೆ ಮಾಡುವುದನ್ನು ನಿಷೇಧಿಸಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 103ರ ರೀತ್ಯಾ ಬ್ಯಾಂಕು ತೀರ್ಪು ಮುನ್ನ ಜಪ್ತು ಮಾಡಿರುತ್ತದೆ. (ಅಟ್ಯಾಚ್‌ಮೆಂಟ್ ಬಿಫೋರ್ ಜಡ್ಜ್‌ಮೆಂಟ್)

ಮೇಲ್ಕಂಡ ಹಣ ದುರುಪಯೋಗ ಕುರಿತಂತೆ ಪ್ರಕರಣವನ್ನು ಸಿ.ಓ.ಡಿ. ತನಿಖೆಗೆ ಒಪ್ಪಿಸಲಾಗಿದೆ. ಸಿ.ಓ.ಡಿ. ಅಧಿಕಾರಿಗಳು ತನಿಖೆಯನ್ನು ನಡೆಸುತ್ತಿದ್ದಾರೆ. ಇದಲ್ಲದೆ ಸಹಕಾರ ಸಂಘಗಳ ನಿಬಂಧಕರವರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 64ರ ಪ್ರಕಾರ ವಿಚಾರಣೆಗೆ ನಡೆಸಲು ಮತ್ತು ಈ ದುರುಪಯೋಗ ಪ್ರಕರಣಕ್ಕೆ ಸಂಬಂಧಪಟ್ಟವರ ಮೇಲೆ ಜವಾಬ್ದಾರಿ ನಿಗಧಿಗೊಳಿಸಲು ತನಿಖೆಯನ್ನುಆದೇಶಿಸಿ ತನಿಖಾಧಿಕಾರಿಗಳನ್ನು ನೇಮಿಸಿರುತ್ತಾರೆ. ತನಿಖೆಯು ವಿಚಾರಣಾ ಹಂತದಲ್ಲಿರುತ್ತದೆ.

ಚಿಕ್ಕಮಂಗಳೂರು ಜಿಲ್ಲಾ ಪರಿಷತ್ತಿನವರಿಂದ ಮೈಸೂರು ಲ್ಯಾಂಪ್ಸ್‌ಗಳನ್ನು ನಿಗದಿತ ಕಂಟ್ರಾಕ್ಟರ್ ನಿಂದ ಪಡೆಯಲು ಆದೇಶ

ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಸಭಾಧ್ಯಕ್ಷಣಿಯವರೆ, ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನವರು ಎಲ್ಲಾ ಮಂಡಲ ಪಂಚಾಯಿತಿ ಮೈಸೂರು ಲ್ಯಾಂಪ್ಸ್ ಬಲ್ಬ್ ಹಾಗೂ ಟ್ಯೂಬ್‌ಗಳನ್ನೇ ನಿಗದಿತ ಕಂಟ್ರಾಕ್ಟರ್ ಒಬ್ಬರಿಂದಲೇ ಪಡೆಯಬೇಕೆಂಬ ಆದೇಶ ಅರ್ಥವಾಗುತ್ತಿಲ್ಲ. ಕಾರಣ ಪ್ರತಿ ಹಳ್ಳಿಗಳಲ್ಲೂ ಬಲ್ಬ್ ಹಾಕಿದ ಒಂದೇ ತಿಂಗಳಲ್ಲಿ ಕೆಟ್ಟುಹೋಗುತ್ತಿರುವ ಬಗ್ಗೆ ಸಾಕಷ್ಟು ದೂರುಗಳು ಬರುತ್ತಿವೆ. ಒಳ್ಳೆಯ ಬಾಳಿಕೆ ಬರುವಂಥ ಬಲ್ಬುಗಳನ್ನು ಕೊಳ್ಳಲು ಜಿಲ್ಲಾಪರಿಷತ್ತು ಒಪ್ಪುವುದಿಲ್ಲ ಎನ್ನುತ್ತಾರೆ. ಆದ್ದರಿಂದ ಈ ಸಮಸ್ಯೆ ಪ್ರತಿ ನನ್ನ ತಾಲ್ಲೂಕಿನ ಹಳ್ಳಿಗಳಲ್ಲೂ ಇರುತ್ತದೆ. ಈ ಬಗ್ಗೆ ಕೂಡಲೇ ಸರಿಯಾದ ಕ್ರಮ ತೆಗೆದುಕೊಳ್ಳಬೇಕಾಗಿ ಆಗ್ರಹಪಡಿಸುತ್ತೇನೆ.

ಶ್ರೀ ಆರ್. ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ): ಮಾನ್ಯ ಸಭಾದ್ಯಕ್ಷಣಿಯವರೇ, ಮಾನ್ಯ ಸದಸ್ಯಣಿಯವರು ಸದನದಲ್ಲಿ ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ಸಂಬಂಧಪಟ್ಟ ಸಚಿವರ ಗಮನಕ್ಕೆ ತರುತ್ತೇನೆ.

ಹೆಣ್ಣೂರು-ಬಾಣಸವಾಡಿ ಬಿ.ಡಿ.ಎ. ಬಡಾವಣೆಗೆ ಕಪ್ಪು ಹಲಗೆಯ ಬಸ್ ಓಡಿಸಲು ಒತ್ತಾಯ

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ): ಮಾನ್ಯ ಸಭಾಧ್ಯಕ್ಷಣಿಯವರೇ, ನಗರ ಸಭೆಯ ವ್ಯಾಪ್ತಿಗೆ ಸೇರದ ಇತರ ಬಿ.ಡಿ.ಎ. ಬಡಾವಣೆಗಳಿಗೆ ನಗರ ಸಾರಿಗೆ ಕಪ್ಪು ಹಲಗೆಯ (ಬ್ಲಾಕ್ ಬೋರ್ಡ್) ಬಸ್ಸುಗಳನ್ನು (ಚಂದ್ರಾ ಬಡಾವಣೆ, ಗಿರಿನಗರ, ಪದ್ಮನಾಭನಗರ, ಕತ್ತರಿಗುಪ್ಪೆ, ಬಿ.ಟಿ.ಎಂ. ಬಡಾವಣೆ, ಕೋರಮಂಗಲ ಇತ್ಯಾದಿ) ಓಡಿಸುತ್ತಿರುವ ಹಾಗೆ ಹೆಣ್ಣೂರು-ಬಾಣಸವಾಡಿ (ಈಗ ಕಲ್ಯಾಣ ನಗರ) ಬಿ.ಡಿ.ಎ. ಬಡಾವಣೆಗೆ ನಗರ ಸಾರಿಗೆ ಕಪ್ಪು ಹಲಗೆ ಬಸ್ಸುಗಳನ್ನು ಓಡಿಸದೆ ಗ್ರಮಾಂತರ ಕೆಂಪು ಹಲಗೆ (ರೆಡ್ ಬೋರ್ಡ್) ಬಸ್ಸುಗಳನ್ನು ಓಡಿಸುತ್ತಿರುವುದರಿಂದ ಈ ಬಡಾವಣೆಯ ನಾಗರೀಕರಿಗೆ ಆಗಿರುವ ತಾರತಮ್ಯ ಮತ್ತು ಅನ್ಯಾಯದ

ಬಗ್ಗೆ ಸಾರಿಗೆ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ. ಮತ್ತು ತತ್‌ಕ್ಷಣದಿಂದ ನಗರ ಸಾರಿಗ ಕಪ್ಪುಹಲಗೆ ಬಸ್ಸುಗಳನ್ನು ಓಡಿಸಬೇಕೆಂದು ಹಾಗೂ ಈಗ ಓಡುತ್ತಿರುವ 302 ಸಿ, 302 ಎಫ್, ಬಸ್ಸುಗಳನ್ನು ಸಾಕಾದಷ್ಟು ಓಡುತ್ತಿಲ್ಲದಿರುವುದರಿಂದ ಬಡಾವಣೆಯ ನಿವಾಸಿಗಳಿಗೆ ತುಂಬಾ ತೊಂದರೆಯಾಗಿರುವುದರಿಂದ ಹೆಚ್ಚು ಬಸ್ಸುಗಳನ್ನು ಓಡಿಸಬೇಕೆಂದು ಕೋರುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು): ಮಾನ್ಯ ಸಭಾಧ್ಯಕ್ಷಣಿಯವರೇ, ಸಾರಿಗೆ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನಾನು ಕೊಡುತ್ತೇನೆ.

ಇದು ಬೆಂಗಳೂರು ನಗರ ಸಾರಿಗೆಯವರು ಓಡಿಸುತ್ತಿರುವ ನಗರ ಸಾರಿಗ ಬಸ್ಸುಗಳನ್ನು ಹೆಣ್ಣೂರು ಬಾಣಸವಾಡಿ ಬಡಾವಣೆಗೆ (ಕಲ್ಯಾಣ ನಗರ, ವಿಸ್ತರಿಸುವ ಕೋರಿಕೆಯಾಗಿದೆ. ಬೆಂಗಳೂರು ನಗರ ಸಾರಿಗೆಯ ಅನುಮೋದಿಸಿದ ಯೋಜನೆಯಂತೆ ನಗರ ಸಾರಿಗೆ (ಕಪ್ಪು ಹಲಗೆ ಬಸ್ಸುಗಳನ್ನು ನಗರ ಸಭೆ ಸರಹದ್ದಿನವರೆಗೆ ಓಡಿಸಲಾಗುತ್ತಿದೆ. ಚಂದ್ರ ಬಡಾವಣೆ, ಗಿರಿನಗರ, ಪದ್ಮನಾಭನಗರ, ಕತ್ರಿಗುಪ್ಪೆ, ಬಿ.ಟಿ.ಎಂ. ಲೇಔಟ್ ಮತ್ತು ಕೋರಮಂಗಲ ಬಡಾವಣೆಗಳು ನಗರ ಸಭೆ ವ್ಯಾಪ್ತಿಗೆ ಒಳಗೊಂಡಿರುವುದರಿಂದ ಈ ಬಡಾವಣೆಗಳಿಗೆ ನಗರ ಸಾರಿಗೆ (ಕಪ್ಪುಹಲಗೆ, ಬಸ್ಸುಗಳನ್ನು ಓಡಿಸಲಾಗುತ್ತಿದೆ, ಆದರೆ ಹೆಣ್ಣೂರು ಬಾಣಸವಾಡಿ ಬಡಾವಣೆಯನ್ನು ನಗರ ಸಭೆಯವರು ಇನ್ನು ತಮ್ಮ ವ್ಯಾಪ್ತಿಗೆ ಸೇರಿಸಿಕೊಂಡಿರುವುದಿಲ್ಲ. ಆದ್ದರಿಂದ ಬೆಂಗಳೂರು ನಗರ ಸಭೆಯವರು ಈ ಬಡಾವಣೆಯನ್ನು ತಮ್ಮ ವ್ಯಾಪ್ತಿಗೆ ಸೇರಿಸಿಕೊಳ್ಳುವ ತನಕ ನಗರ ಸಾರಿಗೆ ಬಸ್ಸುಗಳನ್ನು ಓಡಿಸಲು ಸಾಧ್ಯವಾಗುವುದಿಲ್ಲ. ಅದಾಗ್ಯೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹೆಣ್ಣೂರು ಬಾಣಸವಾಡಿ ಬಡಾವಣೆಗೆ ಈ ಕೆಳಕಂಡ ಬಸ್ಸುಗಳನ್ನು ಓಡಿಸುತ್ತಿದೆ.

ಕ್ರ ಸಂ	ಮಾರ್ಗ ಸಂಖ್ಯೆ	ಎಲ್ಲಿಂದ	ಎಲ್ಲಿಗೆ	ಆಚರಣೆಯಲ್ಲಿರುವ ಏಕಮುಖಿ ಸುತ್ತುಗಳು
1	302 ಸಿ	ಕೃ.ರಾ. ಮಾರುಕಟ್ಟೆ	ಹೆಣ್ಣೂರು ಬಾಣಸವಾಡಿ ಬಡಾವಣೆ	29
2	302 ಎ	ಬೆಂಗಳೂರು ಬಸ್ ನಿಲ್ದಾಣ	ಬಾಬಾಸಾಹೇಬ್ ಪಾಳ್ಯ	26
3	252 ಬಿ	ಪೀಣ್ಯ 2ನೇ ಘಟ್ಟ	ಹೆಣ್ಣೂರು ಬಾಣಸವಾಡಿ ಬಡಾವಣೆ	11
4	302ಇ	ಕೃ.ರಾ.ಮಾರುಕಟ್ಟೆ (ಮಾರ್ಗ : ಕಮ್ಮನ ಹಳ್ಳಿ)	ಚಳ್ಳಕೆರೆ	5 15
5	302 ಎಫ್	ಬೆಂಗಳೂರು ಬಸ್ ನಿಲ್ದಾಣ	ಹೆಣ್ಣೂರು ಬಾಣಸವಾಡಿ ಬಡಾವಣೆ	16

ಮಾರ್ಗ ಸಂಖ್ಯೆ : 302ಸಿ ಮತ್ತು 302 ಎ.ತಲಾ ಒಂದೊಂದು ಅನುಸೂಚಿಗಳನ್ನು (ಷೆಡ್ಯೂಲ್ಡ್ ಕ್ರಮವಾಗಿ ದಿ: 23-3-92 ಹಾಗೂ 1-7-92ರಂದು ಹೆಚ್ಚಿಸಲಾಗಿದೆ. ಅಲ್ಲದೇ ದಿ: 6-5-1992ರಿಂದ ಮತ್ತೊಂದು ಹೊಸ ಅನುಸೂಚಿಗಳನ್ನು

(ಮಾರ್ಗ ಸಂಖ್ಯೆ : 302ಎಫ್ ಪ್ರಾರಂಭಿಸಲಾಗಿದೆ) ಹೆಣ್ಣೂರು ಬಾಣಸವಾಡಿ ಬಡಾವಣೆಯ ನಿವಾಸಿಗಳ ಸಾರಿಗೆ ಅಗತ್ಯಗಳನ್ನು ಗ್ರಾಮಾಂತರ (ಅರ್ಬನ್) ಸಾರಿಗೆಗಳಿಂದ ಪೂರೈಸಲಾಗುತ್ತಿದೆ. ಗ್ರಾಮಾಂತರ ಸಾರಿಗೆಗಳಲ್ಲಿ ನಗರ ಸಾರಿಗೆಗಿಂತ ದರವು 25 ಪೈಸೆಗಿಂತ ಹೆಚ್ಚಾಗಿರುತ್ತದೆ. ಈ ವ್ಯತ್ಯಾಸದ ಹೊರತು ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯಲ್ಲಿ ಬೇರೆ ಯಾವುದೇ ವ್ಯತ್ಯಾಸ ಇರುವುದಿಲ್ಲ. ನಗರ ಸಭೆಯವರು ಹೆಣ್ಣೂರು ಬಾಣಸವಾಡಿ ಬಡಾವಣೆಯನ್ನು ತಮ್ಮ ವ್ಯಾಪ್ತಿಗೆ ಸೇರಿಸಿಕೊಂಡಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಈ ಬಡಾವಣೆಗೆ ನಗರಸಾರಿಗೆ ಸೇವೆಯನ್ನು ವಿಸ್ತರಿಸಲಾಗುವುದು.

ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿದಾರರಿಗೆ ಸಕ್ರಮೀಕರಣಕ್ಕೆ ಅರ್ಜಿ ಸಲ್ಲಿಸಲು ಅವಕಾಶ

ಶ್ರೀ ಕೆ. ಕುಶಾಲ (ಸುಳ್ಯ) : ಮಾನ್ಯ ಸಭಾಧ್ಯಕ್ಷಿಣಿಯವರೇ, ಕರ್ನಾಟಕ ರಾಜ್ಯಾದ್ಯಂತ ಸಾವಿರಾರು ಬಡ ಭೂ ರಹಿತರು, ಕೃಷಿ ಕಾರ್ಮಿಕ ಬಗರ್‌ಹುಕುಂ ಸಾಗುವಳಿದಾರರಿಗೆ ಸಕ್ರಮೀಕರಣಕ್ಕೆ ಅರ್ಜಿ ಸಲ್ಲಿಸಲು ಕಾನೂನಿನ ಅವಕಾಶವನ್ನು ನೀಡುವುದರ ಬಗ್ಗೆ ನಾನು ಪ್ರಸ್ತಾಪಿಸಬಯಸುತ್ತೇನೆ.

ಕರ್ನಾಟಕ ರಾಜ್ಯದಲ್ಲಿ ಲಕ್ಷಾಂತರ ಬಡ ಭೂರಹಿತ ಕೃಷಿ ಕಾರ್ಮಿಕರು, ಅವಿದ್ಯಾವಂತರಾಗಿದ್ದು ಬಡವರಾಗಿದ್ದು ಸಕ್ರಮೀಕರಣಕ್ಕೆ ಅರ್ಜಿ ಸಲ್ಲಿಸದೆ ತುಂಬ ಅನ್ಯಾಯವಾಗಿರುವುದು. ಮತ್ತು ಹಿಂದೆ ಅಕ್ರಮ ಭೂಮಿ ಸಕ್ರಮೀಕರಣಕ್ಕೆ ಸರಕಾರ ಕಾನೂನು ಮಾಡುವಾಗ ಗೋಮಾಳ ಜಮೀನು ಮತ್ತು ಭೂ ನ್ಯಾಯ ಮಂಡಳಿಯಿಂದ ತೀರ್ಪಾದ ಲಗ್ತ ಅನಾಧೀನ ಸರಕಾರಿ ಜಮೀನನ್ನು ಅಕ್ರಮದಾರರಿಗೆ ಸಕ್ರಮೀಕರಿಸಲು ಅವಕಾಶ ಇರಲಿಲ್. ಕಾನೂನು ಆದನಂತರ ಸಕ್ರಮೀಕರಣಕ್ಕೆ ಅವಕಾಶ ನೀಡಲಾಗಿರುವುದರಿಂದ, ಅರ್ಜಿದಾರರಿಗೆ ಅರ್ಜಿ ಸಲ್ಲಿಸಲು ಅವಕಾಶವಿಲ್ಲದೆ ವಂಚಿತರಾಗಿರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ರಮಿತ ಜಮೀನಾದ ಶಾನ, ಬಾಣೆ, ಸರಕಾರಿ ದೇವವಕಾನ, ಜಮ್ಮಾ ಭೂಮಿ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಫಿ ತೋಟ ಚಮೀನು ಚಿಕ್ಕ ಹಿಡುವಳಿದಾರರಿಗೆ ಹಾಗೂ ಇತರ ಜಿಲ್ಲೆಗಳಲ್ಲಿ ನೆಡು ಮಾವಿನ ತೋಪು, ಪುರಸಭೆ ವ್ಯಾಪ್ತಿಯಲ್ಲಿ ಏಳೂವರೆ ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಬರುವ ಆಕ್ರಮಿತ ಜಮೀನಿನ ಸಕ್ರಮೀಕರಣಕ್ಕೆ ಅವಕಾಶವಿರುವುದಿಲ್ಲ, ಈ ರಾಜ್ಯದ ಬಡ ಭೂರಹಿತ ಕೃಷಿ ಕಾರ್ಮಿಕರಿಗೆ ಇದರಿಂದ ತುಂಬಾ ಅನ್ಯಾವಾಗಿದ್ದು ಇವರ ಜೀವನ ಮರಣದ ಸಮಸ್ಯೆಯಾಗಿರುವುದರಿಂದ ಅರ್ಜಿ ಸಲ್ಲಿಸಲು ಮತ್ತಷ್ಟು ಕಾಲಾವಕಾಶ ನೀಡುವುದು ಇಲ್ಲವೇ ತಾಲ್ಲೂಕಿನಲ್ಲಿ ಈಗಾಗಲೇ ಅಕ್ರಮ ಭೂಮಿ ಸಕ್ರಮೀಕರಣ ಸಮಿತಿಯವರಿಗೆ ಬಡ ಜನತೆ ನಿಜವಾಗಿ ಅಕ್ರಮಣ ಜಮೀನು ಹೊಂದಿದ್ದು ನಿಜವಾಗಿದ್ದಲ್ಲಿ ಸ್ಥಳ ಪರಿಶೀಲನೆಯಿಂದ ಅರ್ಜಿ ಪಡೆದುಕೊಳ್ಳಲು ಅವಕಾಶ ಮತ್ತು ಅದಿಕಾರ ನೀಡುವಂತೆ ಮಾಡುವುದು. ನೆಡುತೋಪು, ಮಾವಿನ ತೋಪು, ಚಿಕ್ಕಕಾಫಿ ಹಿಡುವಳಿ, ಶಾನ, ಬಾಣೆ, ಕುಮ್ಕಿ, ದೇವರಕಾನ ಮುಂತಾದ ಭೂಮಿಯನ್ನು ಬಡಜನತೆಗೆ ಸಕ್ರಮೀಕರಿಸಲು ಕಾಯಿದೆ ತಿದ್ದುಪಡಿ ತಂದು ಎಷ್ಟೇ ಕಷ್ಟವಾದರೂ ಆದೇಶ ನೀಡಬೇಕಾಗಿ ಸರಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು): ಕರ್ನಾಟಕ ಭೂ ಕಂದಾಯ ಕಾಯಿದೆ ಉಪ ಕಲಂ (4) ಕಲಂ 94ಎ ಪ್ರಕಾರ ದಿನಾಂಕ: 20-3-91ರಿಂದ (ಅಂದರೆ ತಿದ್ದುಪಡಿ ಕಾಯ್ದೆ ಜಾರಿಗೆ ಬಂದ ದಿನಾಂಕದಿಂದ) ಸರ್ಕಾರಿ ಜಮೀನುಗಳ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ಅರ್ಜಿಗಳನ್ನು ಸಲ್ಲಿಸಲು 6 ತಿಂಗಳು ಕಾಲಾವಕಾಶವನ್ನು ನೀಡಲಾಗಿತ್ತು. ಇದರ ಕೊನೆಯ ದಿನಾಂಕ : 19-9-91 ಆಗಿರುತ್ತದೆ. ಅರ್ಜಿಗಳನ್ನು ಸ್ವೀಕೃತ ಮಾಡಲು ಕೊನೆಯ ದಿನಾಂಕದ ಬಗ್ಗೆ ಸಾಕಷ್ಟು ಪ್ರಚಾರವನ್ನು ಸಹ ಮಾಡಲಾಗಿತ್ತು. ಸುಮಾರು 25,80,214 ಎಕರೆಯ ಬಗರ್‌ಹುಕುಂ ಸಾಗುವಳಿಯ ಜಮೀನನ್ನು ಸಕ್ರಮಗೊಳಿಸಲು ದಿನಾಂಕ : 19-9-91ರವರೆಗೆ ಒಟ್ಟು 10,86,826 ಅರ್ಜಿಗಳು ಸ್ವೀಕೃತವಾಗಿರುತ್ತದೆ. ಈ ಬಗ್ಗೆ ಸರ್ಕಾರವು ಸುಮಾರು 3 ಲಕ್ಷದಷ್ಟು ಅರ್ಜಿಗಳು ಸ್ವೀಕೃತವಾಗುವಂದೆಂದು ಯೋಚಿಸಲಾಗಿತ್ತು. ಆದರೆ ವಾಸ್ತವಿಕವಾಗಿ ಬಂದಿರುವ ಅರ್ಜಿಗಳು ಯೋಚಿಸಲಾದ 3 ಲಕ್ಷ ಅರ್ಜಿಗಳಿಗಿಂತ ಜಾಸ್ತಿ ಸ್ವೀಕೃತವಾಗಿರುವುದರಿಂದ ನಿಗದಿಪಡಿಸಲಾದ ಅವಧಿಯನ್ನು ಮುಂದೆ ವಿಸ್ತರಿಸಲು ಸೂಕ್ತವಲ್ಲ.

ಕರ್ನಾಟಕ ಭೂಕಂದಾಯ ಕಾಯಿದೆ ಕಲಂ 94ಎ ಪ್ರಕಾರ ಅರಣ್ಯ ಜಮೀನುಗಳನ್ನು ಪ್ಲಾಂಟೇಷನ್ ಜಮೀನುಗಳನ್ನು ಅಥವಾ ಉಪಕಲಂ 9(2) ಕಲಂ 79ರ ಅಡಿಯಲ್ಲಿ ಬರುವ ಜಮೀನುಗಳನ್ನು ಸಕ್ರಮಗೊಳಿಸಲು ಅವಕಾಶ ಇರುವುದಿಲ್ಲ. ಕರ್ನಾಟಕ ಭೂಕಂದಾಯ ಕಾಯಿದೆ ಕಲಂ 79(2)ರ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕುಂಕಿ, ಬಾನೆ, ಮತ್ತು ಖಾನು, ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಬೆಟ್ಟ ಮತ್ತು ಹಾಡಿ ಜಮೀನುಗಳು, ಮೈಸೂರು ಪ್ರದೇಶದಲ್ಲಿರುವ ಖಾನು, ಸೊಪ್ಪಿನ ಬೆಟ್ಟ ಹಾಗೂ ಕೊಡಗು ಜಿಲ್ಲೆಯಲ್ಲಿರುವ ಜಮ್ಮ ಮತ್ತು ಬಾನೆ, ಜಮೀನುಗಳು ವಿಶೇಷ ಹಕ್ಕುಗಳ ಜಮೀನುಗಳಾಗಿರುತ್ತವೆ. ಈ ಜಮೀನುಗಳು ಮೂಲತಃ ಸೇಡಾ ಜಮೀನುಗಳಾಗಿದ್ದು ತರಿ ಜಮೀನನ್ನು ಹೊಂದಿರುವ ಮಾಲೀಕರಿಗೆ ಅನುಕೂಲವಾಗುತ್ತದೆ.

ಈ ವಿಶೇಷ ಹಕ್ಕುಳ್ಳ ಜಮೀನುಗಳ ಹಕ್ಕನ್ನು ಮುಂದುವರಿಸಲು ಅಥವಾ ನಿಷೇಧಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ. ಆದುದರಿಂದ ಸದರಿ ಜಮೀನನ್ನು ಸಕ್ರಮಗೊಳಿಸಲು ಬರುವುದಿಲ್ಲ. ಹಾಗೆಯೇ ಬೆಂಗಳೂರು ನಗರ ಪಾಲಿಕೆ ಸರಹದ್ದಿನಿಂದ 18 ಕಿಲೋ ಮೀಟರ್, ಇತರೆ ನಗರ ಪಾಲಿಕೆಗಳ ಸರಹದ್ದಿನಿಂದ 10 ಕಿಲೋ ಮೀಟರ್ ಮತ್ತು ಪುರಸಭೆ ಸರಹದ್ದಿನಿಂದ 5 ಕಿಲೋಮೀಟರ್ ಒಳಗೆ ಬಂದ ಸರ್ಕಾರಿ ಜಮೀನುಗಳನ್ನು ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ 94ಎ ಪ್ರಕಾರ ಸಕ್ರಮಗೊಳಿಸಲು ಸಹ ಇರುವುದಿಲ್ಲ.

11.50 ಎ.ಎಂ.

ಮನೆ ಕಂದಾಯ ವಸೂಲಾತಿಗೆ ನೀತಿ ನಿಯಮ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅಧ್ಯಕ್ಷಣಿಯವರೆ, ಕರ್ನಾಟಕ ರಾಜ್ಯದಲ್ಲಿ ಮನೆ ಕಂದಾಯ ವಸೂಲಿ ಮಾಡಲು ಯಾವ ನೀತಿ-ನಿಯಮ ಕೂಡ ಇರುವುದಿಲ್ಲ, ನೀತಿ-ನಿಯಮ ರೂಪಿಸಲು ಸರ್ಕಾರ ನೇಮಿಸಿರುವ ಸಮಿತಿ ಎಂದು ನೇಮಿಸಲ್ಪಟ್ಟಿತು? ಇದುವರೆಗೆ ಎಷ್ಟು ಸಭೆಗಳನ್ನು ನಡೆಸಲಾಗಿದೆ?

ಯಾವುದಾದರೂ ನೀತಿ-ನಿಯಮ ರೂಪಿಸಿದ್ದಾರೆಯೇ? ರೂಪಿಸಿದ್ದರೆ ಯಾವುವು? ರೂಪಿಸಿಲ್ಲದಿದ್ದರೆ, ಯಾವ ದಿನಾಂಕದೊಳಗೆ ರೂಪಿಸಲಾಗುವುದು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು): ಸದರಿ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಮಂಡ್ಯದ ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯಲ್ಲಿ ಹೆಚ್ಚಳ.

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಅಧ್ಯಕ್ಷಿಣಿಯವರೇ, ಮಂಡ್ಯದಲ್ಲಿರುವ ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಗೆ ಮಾಡಬೇಕಾದುದು ತುಂಬಾ ಅವಶ್ಯಕವಾಗಿದೆ ಮತ್ತು ಅನಿವಾರ್ಯವಾಗಿದೆ. ಈ ದಿಸೆಯಲ್ಲಿ ಸಾರ್ವಜನಿಕರು ಹಾಗೂ ಚುನಾಯಿತ ಪ್ರತಿನಿಧಿಗಳು ಸರ್ಕಾರಕ್ಕೆ ಮನವಿಯನ್ನು ಸಹ ಮಾಡಿದ್ದಾರೆ. ಮಂಡ್ಯ ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಗೆ ಮಾಡಬೇಕೆಂಬ ಕೋರಿಕೆಯ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾವನೆ ಇದ್ದು, ಈ ಪ್ರಸ್ತಾವನೆಗೆ ಸರ್ಕಾರದ ಮಂಜೂರಾತಿ ದೊರಕಬೇಕಾಗಿದೆ. ಜಿಲ್ಲಾ ಆಸ್ಪತ್ರೆಯು ಅಭಿವೃದ್ಧಿ ಯಾಗದಿದ್ದರೆ ಜನ ಸಾಮಾನ್ಯರಿಗೆ ತೊಂದರೆಯಾಗುವುದು ಸಹಜ. ಆದ ಕಾರಣ, ಈ ವಿಷಯದಲ್ಲಿರುವ ಪ್ರಸ್ತಾವನೆಗೆ ಸರ್ಕಾರದ ಮಂಜೂರಾತಿ ನೀತಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಶೀಘ್ರಕಾಮಗಾರಿ ಪ್ರಾರಂಭಿಸಲು ಆದೇಶ ನೀಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ.

ಮಂಡ್ಯ ಜಿಲ್ಲೆಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಈಗ ಹಾಲಿ 250 ಹಾಸಿಗೆಗಳು ಇದ್ದು ಇಲ್ಲಿ ಔಷಧ ವಿಭಾಗ, ಶಸ್ತ್ರ ಚಿಕಿತ್ಸಾ ವಿಭಾಗ, ಸ್ತ್ರೀರೋಗ ಚಿಕಿತ್ಸಾ ವಿಭಾಗ, ಮಕ್ಕಳ ವಿಭಾಗ, ಅಸ್ತಿ ಚಿಕಿತ್ಸಾ ವಿಭಾಗ, ಚರ್ಮರೋಗ ಚಿಕಿತ್ಸಾ ವಿಭಾಗ, ಕಿವಿ, ಮೂಗುಗಂಟಲು ವಿಭಾಗ, ದಂತ ಚಿಕಿತ್ಸಾ ವಿಭಾಗ, ಆರ್ಥಪೆಡಿಕ್ಸ್ ವಿಭಾಗ ಮತ್ತು ದಂತ ಚಿಕಿತ್ಸಾ ವಿಭಾಗ ಸೇವಾ ಸೌಲಭ್ಯಗಳು ಲಭ್ಯವಿರುತ್ತವೆ. ಮತ್ತೆ ಪ್ರತಿದಿನ 300 ಸೀಸೆಗಳ ಐ.ವಿ. ದ್ರಾವಣ ತಯಾರಿಸುವ ಘಟಕ, ಕ್ಷ-ಕಿರಣ, ವೀಡಿಯೋ ಎಂಡೋಸ್ಕೋಪ್ ವ್ಯವಸ್ಥೆ , ಪ್ರಯೋಗಶಾಲೆ ಮುಂತಾದ ಸೌಲಭ್ಯಗಳಿವೆ. ಮಂಡ್ಯ ಸಾರ್ವಜನಿಕ ಆಸ್ಪತ್ರೆಯ ಹಾಲಿ ಇರವ ಹಾಸಿಗೆಯ ಸಂಖ್ಯೆಯು ಇಲ್ಲಿಗೆ ಬರುವ ರೋಗಿಗಳ ಸೇವೆಗೆ ಸಾಲದಾಗಿರುವುದಿಲ್ಲ, ಎಂಬಅಂಶ ಸಾರ್ವಜನಿಕರಿಂದೇ ಮತ್ತು ಚುನಾಯಿತ ಪ್ರತಿನಿಧಿಗಳಿಂದ ಸರ್ಕಾರದ ಗಮನಕ್ಕೆ ಬಂದಿದ್ದು ಈ ವಿಷಯದ ಬಗ್ಗೆ ಪರಿಶೀಲಿಸಲು ಮಂಡ್ಯ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ, ಆ ಸಮಿತಿಯ ವಿಷಯಗಳನ್ನು ಪರಿಶೀಲಿಸಿ ಈ ಆಸ್ಪತ್ರೆಯ ಹಾಸಿಗೆ ಸಂಖ್ಯೆಯನ್ನು ಹೆಚ್ಚಿಸಲು ಶಿಫಾರಸ್ಸು ಮಾಡಿರುತ್ತದೆ. ಹಣದ ಲಭ್ಯತೆಯನ್ನು ಆಧರಿಸಿ ಸದರಿ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

8. ಗುಲ್ಬರ್ಗ ಬೀದರ್ ಹಾಗೂ ರಾಯಚೂರು ಜಿಲ್ಲೆಯಲ್ಲಿ 133 ಕಾರ್ಮಿಕರನ್ನು ಸಾರಿಗೆ ಸಂಸ್ಥೆಯಲ್ಲಿ ನೇಮಕ ಮಾಡುವಂತೆ ಒತ್ತಾಯ

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಗುಲ್ಬರ್ಗಾ, ಬೀದರೆ, ರಾಯಚೂರು, ಜಿಲ್ಲೆಗಳ ರಸ್ತೆಗಳನ್ನು ರಾಷ್ಟ್ರೀಕರಣಮಾಡಿ ಖಾಸಗೀಚಾಲಕರು ನಿರ್ವಾಹಕರು ಹಾಗೂ ಹೆಲ್ಪರುಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಒಂದು ಖಾಸಗೀ ಬಸ್ಸೆ 4.5 ರಂತೆ ನೇಮಕಾತಿ ಮಾಡಿಕೊಳ್ಳಲಾಗುತ್ತದೆಂದು ತಿಳಿಸಿ 4.5 ಎಂದರೆ 1119 ಒಟ್ಟುಕಾರ್ಮಿಕರು ಅದರಲ್ಲಿ ಇಲ್ಲಿವರೆಗೆ ಹೊಸ ಲೈಸೆನ್ಸ್, ಹಳೆ ಗುಲ್ಬರ್ಗಾ, ಬೀದರ್ ಹಾಗೂ ರಾಯಚೂರು ಜಿಲ್ಲೆಗಳ ಕಾರ್ಮಿಕರು ಉಳಿದಿದ್ದಾರೆ .. ಈ ಜಿಲ್ಲೆಗಳ ಕಾರ್ಮಿಕರಾದ 133 ಕಾರ್ಮಿಕರನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ನೇಮಕಾತಿ ಮಾಡಿ ಅವರ ಜೀವನೋದ್ಧಾರಕ್ಕೆ ಅವಕಾಶ ಮಾಡಿಕೊಂಡು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಸಚಿವರು): ಸಾರಿಗೆ ಸಚಿವರ ಪರವಾಗಿ, ಬೀದರ್, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ಮಾರ್ಗಗಳ ರಾಷ್ಟ್ರೀಕರಣದ ನಂತರ ಖಾಸಗೀ ವಾಹನಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಚಾಲಕ, ನಿರ್ವಾಹಕ ಮತ್ತು ಹೆಲ್ಪರ್-ಬಿ ಇವರುಗಳನ್ನು ಕ.ರಾ.ರ ಸಂಸ್ಥೆಯಲ್ಲಿ ಒಂದು ಖಾಸಗೀ 4.5ರಂತೆ ಒಟ್ಟು 1121ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಬೇಕಾಗಿರುತ್ತದೆ. ಅದರಲ್ಲಿ ಇಲ್ಲಿಯವರೆಗೆ 988 ಅರ್ಹರ್ಥಿಗಳನ್ನು ಚಾಲಕ, ನಿರ್ವಾಹರ, ಹೆಲ್ಪರ್, ಕಿರಿಯ ಸಹಾಯಕರ ಮತ್ತು ಮೇಲ್ವಿಚಾರಕರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗಿದೆ. ನೇಮಕಾತಿ ಮಾಡಿಕೊಳ್ಳಲಾಗಿರುವ ಚಾಲಕ ನಿರ್ವಾಹಕ ಅಭ್ಯರ್ಥಿಗಳು ನಿಗದಿತ ಹುದ್ದೆಗೆ ರಾಷ್ಟ್ರೀಕರಣದ ದಿನಾಂಕಕ್ಕೆ ಮೊದಲು ಪಡೆದಿದ್ದೇ ಪರವಾನಗಿ (ಲೈಸೆನ್ಸ್‌ನ್ನು ಅನುಕರಿಸಿ ನೇಮಕಾತಿ ಮಾಡಿಕೊಳ್ಳಲಾಗಿದೆ. ಉಳಿದ 133 ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳು ದೊರೆಯದಿದ್ದ ಕಾರಣ ಹಾಗೂ ಕೆಲವು ಅಭ್ಯರ್ಥಿಗಳು ರಾಷ್ಟ್ರೀಕರಣದ ನಂತರ ಪರವಾನಗಿ (ಲೈಸೆನ್ಸ್ ಪಡೆದಿರುವುದರಿಂದ, ಈ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಿರುವುದಿಲ್ಲ. ಒಂದು ಬಸ್ಸಿಗೆ 4.5 ಜನರಿಂದ -5 ಜನರಿಗೆ ಇತ್ತೀಚೆಗೆ ಹೆಚ್ಚಿಸಲಾಗಿದೆ.

ಉಳಿದಿರುವ ಅಭ್ಯರ್ಥಿಗಳ ಅರ್ಜಿಗಳನ್ನು ಪರಿಶೀಲಿಸಿ, ಅವರಲ್ಲಿ ಸೂಕ್ತವಾದವರನ್ನು ಮೇಲೆ ಹೇಳಿದ ಅನುಪಾತದಂತೆ ವಿವಿಧ ವರ್ಗಗಳಲ್ಲಿ ತುಂಬಲಾಗುವುದು.

9. ಸಂಕೇಶ್ವರ ಕ್ಷೇತ್ರದ ಕಮತನೂರನಾಲಾ ಕೆರೆ ಕೆಲಸದ ಪ್ರಾರಂಭಕ್ಕೆ ಒತ್ತಾಯ

ಶ್ರೀ ಬಿ.ಎಂ. ಇದಿನಬ್ಬ (ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್‌ರ ಪರವಾನಗಿ): ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಸಂಕೇಶ್ವರ ಮತಕ್ಷೇತ್ರ ಕರ್ಪೂರ ಹಳ್ಳದ (ಕಮತನೂರನಾಲಾ) ಕೆರೆಯನ್ನು ಕಟ್ಟಬೇಕಾಗಿರುವ ಕೆರೆಯ ಕೆಲಸವನ್ನು ಕರ್ನಾಟಕ ಸ್ಟೇಟ್ ಕನಸ್ಟ್ರಕ್ಷನ್ ಕಾರ್ಪೊರೇಷನ್ ಸಂಸ್ಥೆಗೆ ವಹಿಸಿಕೊಡಲಾಗಿದೆ. ಆದರೆ, ಇಲ್ಲಿಯವರೆಗೆ ಭೂಸ್ವಾಧೀನ ಹಾಗೂ ಇನ್ನುಳಿದ ಕೆಲಸಗಳಲ್ಲಿ ಪ್ರಗತಿಯಾಗಿಲ್ಲ. ಬಹುಕಾಲದ ಬೇಡಿಕೆಯಾಗಿರುವ ಈ ಯೋಜನೆಗೆ ಈ ವರ್ಷದಲ್ಲಿ 50 ಲಕ್ಷ ರೂಪಾಯಿಗಳ ಅನುದಾನ ನಿಗದಿ ಮಾಡಿದ್ದು, ಇದರಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ? ಭೂ ಸ್ವಾಧೀನತೆಗಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ? ಇಂತಹ ಒಂದುಕೆರೆಯ ಕೆಲಸವನ್ನು ಟೆಕ್ನಿಕಲ್ ಕಮಿಟಿಗೆ ಮಂಜೂರಾತಿಗಾಗಿ ಕಳುಹಿಸಿಕೊಟ್ಟಿದ್ದಕ್ಕೆ ಕಾರಣವೇನು? ಇದರ ಬಗ್ಗೆ ಕೂಡಲೇ ಕರ್ನಾಟಕ ಸ್ಟೇಟ್ ಕನಸ್ಟ್ರಕ್ಷನ್ ಕಾರ್ಪೊರೇಷನ್ ಸಂಸ್ಥೆಗೆ ಆದೇಶ ನೀಡಿ ಕೆಲಸ ಪ್ರಾರಂಭ ಮಾಡಲು

ಸರ್ಕಾರದ ಗಮನ ಸೆಳೆಯುತ್ತಾ ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳಿಂದ ಸದನದಲ್ಲಿ ಉತ್ತರವನ್ನು ಬಯಸುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ. ಬೆಳಗಾಂ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಕಾಮತ್‌ನೋರು ಬಳಿ ಸಣ್ಣ ನೀರಾವರಿ ಕೆರೆ ಕಟ್ಟುವ ಕಾಮಗಾರಿ 1992-93ನೇ ಸಾಲಿನ ಆಯವ್ಯಯದಲ್ಲಿ 60 ಲಕ್ಷ ರೂಪಾಯಿಗಳ ಅಂದಾಜಿನೊಂದಿಗೆ ಸೇರಿದೆ. ಈ ಕಾಮಗಾರಿಯ 196.55 ಲಕ್ಷ ರೂಪಾಯಿಗಳ ವಿವರವಾದ ಅಂದಾಜು ಪಟ್ಟಿಗೆ ಸರ್ಕಾರಿ ಆದೇಶ ಸಂಖ್ಯೆ ನೀಇ 89 ಸನಬಿ 78 ದಿನಾಂಕ 21-10-92ರಂದು ಈ ಕೆಳಕಂಡ ಕೆಲಸಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿತ್ತು.

1) ಮುಖ್ಯ ಅಭಿಯಂತರರು, ಸಣ್ಣ ನೀರಾವರಿ ಬೆಂಗಳೂರು ಇವರು ಸದರಿ ಡಿವಿಜನ್‌ಗೆ ತಾಂತ್ರಿಕ ಮಂಜೂರಾತಿ ನೀಡುವ ಮೊದಲು ತಾಂತ್ರಿಕ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯುವುದು.
2) ನಿವೇದನೆಗೆ ತಾಂತ್ರಿಕ ಸಮಿತಿಯ ಅನುಮೋದನೆ ಪಡೆದ ನಂತರ ಕಾಮಗಾರಿಗಳನ್ನು ಕೈಗೊಳ್ಳುವ ಆಯಾ ವರ್ಷಗಳ ದರ ಪಟ್ಟಿಯ ದರದಂತೆ ಹಾಗೂ ಶೇಕಡ 10ರಂತೆ ಹೆಚ್ಚುವರಿ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ಇವರಿಗೆ ವಹಿಸತಕ್ಕದ್ದು. ಈ ಕೆರೆ ಕಾಮಗಾರಿಕೆಗೆ ಬೇಕಾಗಿರುವ ಭೂಸ್ವಾಧೀನಕ್ಕಾಗಿ ಈಗಾಗಲೇ 23.27 ಲಕ್ಷ ರೂಪಾಯಿಗಳನ್ನು ಕಂದಾಯ ಇಲಾಖೆಗೆ ಪಾವತಿ ಮಾಡಲಾಗಿದೆ. ಆದರೆ ಈ ಕೆರೆಯ ಅಂದಾಜು ಮೊತ್ತ 100 ಲಕ್ಷ ರೂಪಾಯಿಗಳು ಮೀರಿರುವುದರಿಂದ ನಿಯಮಾವಳಿ ಪ್ರಕಾರ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆಯಬೇಕಿತ್ತು. ಈ ಕಾರಣ ಈ ಅಂದಾಜು ಪಟ್ಟಿಯನ್ನು ದಿನಾಂಕ 21-12-92ರಂದು ನಡೆದ ಕೃಷ್ಣಾ ಗೋದಾವರಿ ಜಲಾಯನ ಯೋಜನೆಗಳ ತಾಂತ್ರಿಕ ಸಮಿತಿಯಲ್ಲಿ ಮಂಡಿಸಲ್ಪಟ್ಟಿದ್ದು ಸಮಿತಿಯು ಪ್ರಸ್ತಾವನೆಯನ್ನು ಜಲ ವಿಜ್ಞಾನ ಜಲ ಸಂಪರ್ಕ ಅಭಿವೃದ್ಧಿ ಸಂಸ್ಥೆ ಬೆಂಗಳೂರು ಇವರಿಂದ ದೃಢೀಕರಿಸಿಕೊಡಬೇಕೆಂದು ತೀರ್ಮಾನಿಸಿದ್ದು ಅದರಂತೆ ಸಂಬಂಧಪಟ್ಟ ಮುಖ್ಯ ಅಭಿಯಂತರಿಗೆ ಆದೇಶ ನೀಡಲಾಗಿದೆ. ಈ ಬಗ್ಗೆ ಕ್ರಮ ಕೈಗೊಂಡು ಮುಂದಿನ ತಾಂತ್ರಿಕ ಸಮಿತಿಯ ಸಭೆಯಲ್ಲಿ ಪರಿಶೀಲಿಸಿ ಸರ್ಕಾರದ ಆದೇಶದಲ್ಲಿ ಸೂಚಿಸಿರುವಂತೆ ಷರತ್ತಿನ ಮೇರೆಗೆ ಕ್ರಮ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ಇತ್ತೀಚೆಗೆ ಉಂಟಾದ ಮಳೆ ಹಾಗೂ ನೆರೆ ಹಾವಳಿ ಬಗ್ಗೆ ಚರ್ಚೆ

ಛೇರ್ಮನ್ : ಇತ್ತೀಚೆಗೆ ರಾಜ್ಯದಲ್ಲಿ ಉಂಟಾದ ಮಳೆ ಹಾಗೂ ನೆರೆ ಹಾವಳಿಯ ಬಗ್ಗೆ ಚರ್ಚೆಯನ್ನು ಪ್ರಾರಂಭಿಸಬಹುದು.

ಶ್ರೀ ಹೆಚ್.ಏಕಾಂತಯ್ಯ : ಮಾನ್ಯ ಅಧ್ಯಕ್ಷಿಣಿಯವರೆ, ಇವತ್ತು ಶುಕ್ರವಾರವಾದ್ದರಿಂದ ನಾನು ತಮ್ಮ ಅನುಮೋದನೆಯನ್ನು ಕೋರಿ ಒಂದು ಪ್ರಸ್ತಾವನೆಯನ್ನು ಹೇಳುವುದಕ್ಕೆ....

ಛೇರ್ಮನ್ : ಶೂನ್ಯ ವೇಳೆ ಮುಗಿದು ಹೋಗಿದೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ಖಾಸಗಿ ಸದಸ್ಯನ ವಿಧೇಯಕಗಳನ್ನು ಪ್ರತಿ ಶುಕ್ರವಾರ ತೇರ್ಗಡು ಕೊಳ್ಳುವುದರ ಬಗ್ಗೆ ಕುರಿತು

ಶ್ರೀ ಹೆಚ್. ಏಕಾಂತಯ್ಯ : ಶೂನ್ಯ ವೇಳೆ ಮುಗಿದಿದ್ದರೂ ಪರವಾಗಿಲ್ಲ, ನಮ್ಮ ಸದನದ ನಿಯಮಾವಳಿಗಳ ರೀತಿ ನಮ್ಮ ನಡವಳಿಕೆಗಳು ಇರಬಹುದು. ಇವತ್ತು ಶುಕ್ರವಾರ, ಖಾಸಗೀ ಸದಸ್ಯರ ನಿರ್ಣಯಗಳು,, ಬಿಲ್ಲುಗಳನ್ನು ನಿಯಮಾವಳಿಯ ಪ್ರಕಾರ ತಾವು ತೆಗೆದುಕೊಳ್ಳಬೇಕು. ಆದರೆ ಇವತ್ತಿನ ಕಾರ್ಯ ಕಲಾಪಗಳ ಪಟ್ಟಿಯಲ್ಲಿ ಇದು ಬಂದಿಲ್ಲ, ಇದರ ಬಗ್ಗೆ ನಿನ್ನೆಯ ದಿವಸ ನಡೆದಂಥ ಬಿಸಿನೆಸ್ ಅಡ್ವೈಸರಿ ಕಮಿಟಿ ಸಭೆಯಲ್ಲೂ ಕೂಡ ಪ್ರಸ್ತಾಪವಾಗಿದೆ. ಆದರೆ ಈ ಬಿಸಿನೆಸ್‌ಗೆ ಇರತಕ್ಕ ಟೈಂನ್ನು ಆಲೋಕಟ್ ಮಾಡುವ ಅಥವಾ ತೆಗೆದುಹಾಕುವ ಅಧಿಕಾರ ಆ ಸಮಿತಿಗೆ ಇಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಆರ್.ವಿ. ದೇಶಪಾಂಡೆ : ಇವತ್ತು ಶುಕ್ರವಾರ, ನಾನ್ ಅಫಿಯಲ್‌ಬಿಸಿನೆಸ್‌ನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ತೆಗೆದುಕೊಂಡಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಇವತ್ತು ಶುಕ್ರವಾರ. ನಾವು ಕೆಲವು ನಿರ್ಣಯಗಳನ್ನು ತಮಗೆ ಕಳುಹಿಸಿಕೊಟ್ಟಿದ್ದೇವೆ. ಅವುಗಳನ್ನು ಆದ್ಯತೆಯ ಮೇಲೆ ತೆಗೆದುಕೊಂಡು ಸುಮಾರು * ಗಂಟೆಕಾಲ ಚರ್ಚೆಯಾಗಬೇಕು. ಆದರೆ ಇವತ್ತಿನ ಅಜೆಂಡಾದಲ್ಲಿ ಈ ಕಾರ್ಯ ಕಲಾಪವೇ ಇಲ್ಲ. ಆದುದರಿಂದ ಇದು ನಡೆಯಬೇಕಾದ ಕಾರ್ಯವಿಧಾನ ಮತ್ತು ನಿಯಮಕ್ಕೆ ವ್ಯತಿರಿಕ್ತವಾಗಿದೆ. ಇದಕ್ಕೆ ಸರ್ಕಾರದವರು ಏನು ಉತ್ತರ ಹೇಳುತ್ತಾರೆ? ಇದರ ಬಗ್ಗೆ ನಾನು ಸರ್ಕಾರದ ಉತ್ತರವನ್ನು ಬಯಸುತ್ತೇನೆ.

ಛೇರ್ಮನ್ : ನಿನ್ನೆ ಬಿಸಿನೆಸ್ ಅಡ್ವೈಸರಿ ಕಮಿಟಿಯ ಸಭೆಯಲ್ಲಿ ಚರ್ಚೆಯಾಗಿ ಕಾರ್ಯಕಲಾಪವನ್ನು ತಾತ್ಕಾಲಿಕವಾಗಿ ಮುಂದಕ್ಕೆ ಹಾಕಿ ಇವತ್ತು ನೆರಹಾವಳಿ ಬಗ್ಗೆ ಬಹಳ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆನ್ನುವ ದೃಷ್ಟಿಯಿಂದ ಇದನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ಹೆಚ್.ಏಕಾಂತಯ್ಯ : ನೀವು ಯಾವ ಕಾನೂನನ್ನು ಚಲಾಸಬಹುದೆಂದರೆ ಆ ಅಧಿಕಾರ ತಮಗೆ ಇದ್ದರೆ ಮಾತ್ರ ಚಲಾಯಿಸಬಹುದು.ನಾನಾದರೂ ಹೇಳುತ್ತೇನೆ, ಈ ವ್ಯವಹಾರವನ್ನು ನಿರಾಕರಣೆ ಮಾಡುವ ಅಥವಾ ತೆಗೆದುಹಾಕಿ ಕಾಲವನ್ನು ಬೇರೆಯದಕ್ಕೆ ಗೊತ್ತು ಪಡಿಸುವ ಅಧಿಕಾರ ಬೆಸಿನೆಸ್ ಅಡ್ವೈಸರಿ ಕಮಿಟಿಯವರಿಗೆ ಇದೆಯೇ?

ಛೇರ್ಮನ್ : ಬೆಸಿನೆಸ್ ಅಡ್ವೈಸರಿ ಕಮಿಟಿಯ ಸದಸ್ಯರೆಲ್ಲರೂ ಇದನ್ನು ಒಪ್ಪಿಕೊಂಡಿದ್ದರು. ಅವರೆಲ್ಲಾ ಒಪ್ಪಿಕೊಂಡಿದ್ದರಿಂದ ಇಲ್ಲಿ ಈ ಚರ್ಚೆಯನ್ನು ಹಾಕಿಕೊಂಡಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ : ಒಪ್ಪಿಕೊಂಡರೂ ಕೂಡ ಆ ಬಿಸಿನೆಸ್ ಅಡ್ವೈಸರಿ ಕಮಿಟಿಯವರೂ ಸಹ ನಿಯಮಾವಳಿಗಳಿಗೆ ಹೊರತಾಗಿ ನಡೆಯಬೇಕೆ?

ಛೇರ್ಮನ್ : ಹೊರತಾಗಿ ನಡೆಯಬೇಕೆಂದು ಏನೂ ಇಲ್ಲ, ಹೌಸ್ ಒಪ್ಪಿಕೊಂಡಿದೆ. ಬಿಸಿನೆಸ್ ಅಡ್ವೈಸರಿ ಕಮಿಟಿಗೆ ಹೋಗತಕ್ಕ ಎಲ್ಲಾ ಮಾನ್ಯ ಸದಸ್ಯರು ಈ ಸದನದ ಸದಸ್ಯರೇ ಆಗಿದ್ದಾರೆ. ಅವರೇ ಹೋಗಿ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ವಾರಕ್ಕೊಂದು ದಿವಸ ಖಾಸಗಿ ನಿರ್ಣಯ ಏನು ಇದೆ ಅದನ್ನು ಹಾಕತಕ್ಕಂಥಾದ್ದು ಇದೆ, ಅದು ಬರತಕ್ಕದ್ದು ಇದೆ. ಅದು ಚರ್ಚೆಯಾಗಬೇಕಾದದ್ದು ಬಹಳ ಅಗತ್ಯ. ಅದು ಸದಸ್ಯರಿಗೆ ಇರತಕ್ಕಂತಹ ಹಕ್ಕು ಅದನ್ನು ಬದಲಾವಣೆ ಮಾಡುವ ಉದ್ದೇಶ ಯಾರಿಗೂ ಇಲ್ಲ. ಆ ಹಕ್ಕೂ ಇಲ್ಲ, ಶಾಸನಸಭೆಯ ಇಲಾಖೆಗೂ ಇಲ್ಲ ವಿಶೇಷ ಕಡಿಮೆ ದಿವಸ ಸಭೆ ಸೇರುತ್ತಿದೆ ಮತ್ತು ವಿಶೇಷವಾಗಿ ಅಯೋಧ್ಯೆ ವಿಚಾರ ಎಲ್ಲರ ಗಮನವನ್ನು ಸೆಳೆದದ್ದು ನಿಜ. ಅಯೋಧ್ಯೆ ವಿಚಾರ ಮತ್ತು ಮಳೆಯಿಂದಾದ ಹಾನಿ ಎರಡೂ ಕೂಡ ಬಹಳ ಪ್ರಾಮುಖ್ಯವಾದ ವಿಷಯವಾಗಿರುವುದರಿಂದ ಇದು ಚರ್ಚೆಯಾಗಬೇಕಾಗಿದೆ. ಆದ್ದರಿಂದ ಸದಸ್ಯರು ತಮಗೆ ಇರತಕ್ಕಂತಹ ಹಕ್ಕುಗಳನ್ನು ತಾತ್ಕಾಲಿಕವಾಗಿ ಬಿಟ್ಟು ಕೊಟ್ಟಿದ್ದಾರೆಂಬ ಭಾವನೆಯ ಮೇಲೆ ಇದನ್ನು ಮಾಡಿದೆ.

ಶ್ರೀ ಹೆಚ್. ಏಕಾಂತಯ್ಯ : ಕೆಲವು ನಿಯಮಗಳನ್ನು ತಾವು ನೋಡಬೇಕಾಗುತ್ತದೆ. 28,284 ಇರಬಹುದು ಇದಕ್ಕೆ ಸಂಬಂಧಪಟ್ಟಂತೆ 29-30 ಅನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ತಾವು ಏನು ಸರಕಾರಿ ಕಾರ್ಯಕಲಾಪಗಳನ್ನು ಏರ್ಪಾಡು ಮಾಡುವಾಗ ಖಾಸಗಿ ಕಾರ್ಯಕಲಾಪಗಳಿಗೆ ಪ್ರತಿ ಶುಕ್ರವಾರ ಎರಡೂವರೆ ಗಂಟೆ ಎಂದು ಗೊತ್ತುಪಡಿಸಿದ್ದೀರಿ ಅದು ಕಡ್ಡಾಯವಾಗಿ ನಡೆಯಬೇಕೆಂಬುದು ನಮ್ಮ ನಿಯಮಗಳಲ್ಲಿದೆ. ಇದನ್ನು ಮಾನ್ಯ ಸಂಸದೀಯ ಸಚಿವರ ಗಮನಕ್ಕೆ ತರುತ್ತೇನೆ. ತಮ್ಮ ಬಿಜಿನೆಸ್ ಅಡ್ವೈಜರಿ ಸಮಿತಿ ಏನು ಇದೆ ಅದು ಇದರ ಬಗ್ಗೆ ಬಿಜಿನೆಸ್ ಅನ್ನು ಗೊತ್ತು ಪಡಿಸುವಂತಹ ಅಧಿಕಾರ ಇಲ್ಲ.

SRI HARNAHALLI RAMASWAMY : Sir, I am quoting Rule 29 of the Rules of Procedure and conduct of Business, Which reads thus:

"The last two and al half hours of a sitting on Friday shall be alloted for the transaction of Private Members' business :

Provided that the speaker may allot different Fridays for the disposal of different classes of such business and on Fridays, so alloted for any particular class of business, business of that class shall have precedence:

Provided further that the Speaker may, in consultation with the Leader of the House, to any day other than a friday for the transaction of provate members' business:

Provided further that if there is no sitting of the House on a Friday, the Speaker may direct that two and a half hours on any other day, in the week may be allotted for private members' business"

Therefore her there is a discretion to the Chair.

ಸಭಾಧ್ಯಕ್ಷರುಗಳಿಗೆ ಸ್ವಲ್ಪ ವ್ಯತ್ಯಾಸ ಮಾಡತಕ್ಕಂತಹ ಅಧಿಕಾರ ಇದೆ. ಡಿಸ್ಕ್ರೀಶನ್ ಇದೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಹಿರಿಯ ಸಚಿವರ ಗಮನಕ್ಕೆ ಮತ್ತೊಂದು ನಿಯಮವನ್ನು ತರಬಯಸುತ್ತೇನೆ. I am quoting rule 241 of the Rules of procedure and conduct of Business in the House relating to function of the Business Advisory Committee. It reads thus :

"It shall be the function of the Committee to recommend the time that should be allocated for the discussion of the stage or stages of such Government Bills and other business as the Speaker, in consultation with the Leader of the House, may direct for being referred to the Committee."

ಆದರೆ ಬಿಜ್‌ನೆಸ್ ಎಂದು ಹೇಳಿದ್ದಾರೆ. ಅದಕ್ಕೋಸ್ಕರ ಅಧಿಕಾರವಿದೆ ಎಂದು ಹೇಳುತ್ತೀರಾ? ಇಲ್ಲ. ಅಲ್ಲಿಂದ ಸ್ವಲ್ಪ ಮುಂದಕ್ಕೆ ಬನ್ನಿ. The Explaanation to the said rule reads thus :

"Thus expression other business referred to in this rule and rules 244 and 245 means business other than private members Bills under rule 74 and private members' resolution under rule 145."

ಆದ್ದರಿಂದ ನಿರ್ಧಿಷ್ಟವಾಗಿ ನಿಮ್ಮ ಬಿಜಿನೆಸ್ ಅಡ್ವೈಸರಿ ಸಮಿತಿ ಖಾಸಗಿ ಸದಸ್ಯರ ನಿರ್ಣಯವನ್ನು ವಾರಕ್ಕೊಂದು ದಿನ ಇಡಬೇಕಾಗುತ್ತದೆ. ಎರಡೂವರೆ ಗಂಟೆಗಳ ಕಾಲ ಇಡಬೇಕಾಗುತ್ತದೆ. ಅದನ್ನು ಬೇರ್ಪಡಿಸಪವಂತಹ ಅಧಿಕಾರ ನಿಮಗೆ ಇಲ್ಲ. ಅದಕ್ಕಿಂತ ಇದು ಹೆಚ್ಚು ಮಹತ್ವ ಪೂರ್ಣವೆಂದು ಹೇಳಿದ್ದೀರಿ. ಇದು ಮಹತ್ವ ಪೂರ್ಣವಲ್ಲವೆಂದು ನಾನು ಹೇಳುತ್ತಿಲ್ಲ. ಅದಕ್ಕಿಂತಲೂ ನಾವು ಏನು ಖಾಸಗಿ ನಿರ್ಣಯಗಳನ್ನು ಕಳಿಸಿದ್ದೇವೆ ಅದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಇದು ನಮ್ಮ ಕರ್ನಾಟಕ ರಾಜ್ಯದ ರೈತರಿಗೆ ಮಾತ್ರ ಸೀಮಿತವಾದಂಥಾದ್ದು ಅಲ್ಲ ಅಡೀ ಭಾರತ ರಾಜ್ಯದ ಪ್ರತಿಯೊಬ್ಬ ರೈತರಿಗೂ ಸಂಬಂಧಪಟ್ಟಂತಹ ವಿಚಾರ.

ವಿಚಾರವಾಗಿದೆ. ಈ ರೈತರಿಗೆ ಸಂಬಂಧಪಟ್ಟಂತೆ ಡಂಕೆಲ್ ಪ್ರಪೋಸಲ್ಸ್ ಬಂದಿದೆ ಅದರ ಬಗ್ಗೆ ಕೃಷಿಗೆ ಸಂವಿಧಾನದಲ್ಲಿ ಈ ರಾಜ್ಯ ಪಟ್ಟಿಯಲ್ಲಿ ಇದೆ ಆ ಪಟ್ಟಿಯಲ್ಲಿರತಕ್ಕಂತಹ ವಿಚಾರಗಳನ್ನು ಕೇಂದ್ರ ಸರಕಾರ ನಮ್ಮ ಅಭಿಪ್ರಾಯಗಳನ್ನು ಪಡೆಯದೆ ತಮಗೆ ಇಷ್ಟ ಬಂದಂತಹ ರೀತಿಯಲ್ಲಿ ಸಂವಿಧಾನಕ್ಕೆ ವಿರೋಧವಾಗಿ ಒಪ್ಪಂದಗಳನ್ನು ಮಾಡಿ ಕೊಳ್ಳುತ್ತಿದೆ. ಅದರ ಬಾಬತ್ತು ಖಾಸಗಿ ಕಾರ್ಯಕಲಾಪಗಳನ್ನು ನಾನು ಕಳಿಸಿದ್ದೇನೆ. ಅದು ಪ್ರಾಮುಖ್ಯವೆಂದು ತಮಗೆ ಅನ್ನಿಸಲಿಲ್ಲವೇ? ಅಷ್ಟೇ ಅಲ್ಲ ಶುಕ್ರವಾರ ಮಾತು ಅಲ್ಲ, ಶುಕ್ರವಾರ ರಜೆಯಾದರೆ ಆ ರಜೆ ಇದ್ದಂತಹ ಶುಕ್ರವಾರದ ಬದಲು ಬೇರೆ ದಿವಸಗಳಲ್ಲೂ ಈ ಕಾರ್ಯಕಲಾಪಗಳನ್ನು ನಡೆಸಬೇಕಾಗಿತ್ತು. ಮೊನ್ನೆ ಶುಕ್ರವಾರ ರಜೆ ಕೊಟ್ಟಿದ್ದೀರಿ. ಆವತ್ತಿನ ದಿವಸ ನಮ್ಮ ಹಕ್ಕನ್ನು ತೆಗೆದುಕೊಂಡಿರಿ. ಆದರೂ ಸಹ ನಿಯಮಗಳ ಅಡಿಯಲ್ಲಿ ಇನ್ನೊಂದು ದಿವಸ ಇದಕ್ಕೆ ಗೊತ್ತು ಪಡಿಸಿದಂತಹ ಕೆಲಸವನ್ನು ತೆಗೆದುಕೊಳ್ಳಬೇಕಾಗಿತ್ತು. ಆ ಕೆಲಸವನ್ನು ತಾವು ಮಾಡಲಿಲ್ಲ ಅದಕ್ಕೆ ಬದಲಾಗಿ ಇವತ್ತಿನ ದಿವಸ ನಮ್ಮಂತಹ ಸದಸ್ಯರಿಗೆ ಇರುವಂತಹ ಹಕ್ಕನ್ನು ಕಿತ್ತುಕೊಂಡಿದ್ದೀರಿ. ಇದು ನಿಯಮಗಳಿಗನುಗುಣವಾಗಿದೆಯೇ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ ; ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿ ಜೊತೆ ನಾವೂ ಸಹಭಾಗಿಗಳಾಗಿದ್ದೇವೆ. ಎಲ್ಲಾ ಪಕ್ಷದ ನಾಯಕರ ಒಪ್ಪಿಗೆಯನ್ನು ತೆಗೆದುಕೊಂಡು ಈ ಬದಲಾವಣೆ ಮಾಡಿದೆ. ಖಾಸಗಿ ಸದಸ್ಯರ ....

ಆದ್ದರಿಂದ ತಾವು ಬಯಸಿದರೆ ಮಂಗಳವಾರದ ದಿವಸ ಕೊನೆ ಎರಡು ಗಂಟೆಗಳನ್ನು ಖಾಸಗಿ ಸದಸ್ಯರಿಗೆ ಉಪಯೋಗಿಸಿಕೊಳ್ಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಭಾಪತಿಯವರೇ, ನಾವು ಈ ಕಡೆ ಕುಳಿತಿರತಕ್ಕಂಥವರು ವಿರೋಧ ಪಕ್ಷದ ನಾಯಕರು ಅವರು ಇದ್ದರು, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಚರ್ಚೆ ಆಯಿತು. ಸನ್ಮಾನ್ಯ ಹಿರಿಯ ಸದಸ್ಯರಾದಂತಹ ಏಕಾಂತಯ್ಯನವರು ಏನು ಹೇಳುತ್ತಿದ್ದಾರೆ ಇದು ತುಂಬ ಪ್ರಮುಖವಾದ ವಿಚಾರ. ನಮ್ಮ ಕಡೆಯಿಂದಲೂ ಸ್ವಲ್ಪ ಕೊರತೆಯಾಗಿದೆ. ನಮ್ಮದು ಈ ಕಡೆಯಿಂದ ತಪ್ಪಾಗಿದೆ. ಇನ್ನು ಮುಂದೆ ಆದಾಗದಂತೆ ಎಲ್ಲಾ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸಭಾಧ್ಯಕ್ಷಿಣೆಯವರೇ, ಈ ವಿಚಾರದಲ್ಲಿ ನಾವು ಸ್ಪಷ್ಟವಾದಂಥ ನಿಲುವನ್ನು ಚರ್ಚಿಸಬೇಕಾದರೆ ಸ್ಪೀಕರ್‌ರವರು ಈ ಸದನದಲ್ಲಿ ಹೇಳಿದ್ದಾರೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿಯೂ ಹೇಳಿದ್ದಾರೆ. ಯಾವುದೇ ಕಾರಣಕ್ಕೂ ಖಾಸಗಿ ಸದಸ್ಯರಿಗೆ ಇರತಕ್ಕಂಥ ಈ ಒಂದು ಹಕ್ಕನ್ನು ಕಿತ್ತುಕೊಳ್ಳತಕ್ಕಂಥ ಪ್ರಯತ್ನ ಮಾಡುವುದಿಲ್ಲವೆಂದು ಎಲ್ಲಾ ಕಾಲಕ್ಕೂ ಹೇಳಿದ್ದಾರೆ. ಮೊನ್ನೆ ನಡೆದಂಥ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲೂ ಕೂಡ ಈ ಮಾತನ್ನು ಹೇಳಿದ್ದಾರೆ. ಹಾಗೆ ಕಿತ್ತುಕೊಳ್ಳತಕ್ಕಂಥದ್ದು ನಮ್ಮ ವ್ಯಾಪ್ತಿಯಲ್ಲಿಲ್ಲವೆನ್ನುವ ಮಾತನ್ನು ಹೇಳಿದರು. Please hear me completely. ನಾನು ಹೇಳಿದ್ದುದು ಎರಡು ನಿರ್ಣಯಗಳು ಇವೆ. ಹೊಸ ಕೆಲವು ನಿರ್ಣಯಗಳು ಬಂದಿವೆ. ಆದ್ದರಿಂದ ಚರ್ಚೆಗೆ ಅವಕಾಶ ಕೊಡಬೇಕೆಂದು. ಅದಕ್ಕೆ ಉಳಿದ ಚರ್ಚೆಗಳಿಗೆ ಅವಕಾಶ ಕಡಿಮೆಯಾಗಬಹುದೆನ್ನುವ ದೃಷ್ಟಿಯಿಂದ ಎರಡು ದಿವಸ ಈ ಸದನವನ್ನು ಮುಂದೆ ಹಾಕತಕ್ಕಂಥ ಕೆಲಸವಾಯಿತು. ಎರಡು ದಿವಸಗಳು ಸದನವನ್ನು ಮುಂದಕ್ಕೆ ಹಾಕಿದ ಉದ್ದೇಶ ಇರತಕ್ಕಂಥದ್ದು ಅತಿ ಮುಖ್ಯವಾಗಿ ಇರತಕ್ಕಂಥ ನೆರೆ ಹಾವಳಿ ಇರಬಹುದು. ಗೊಬ್ಬರದ ವಿಚಾರ ಇರಬಹುದು. ಆದರೆ ನನ್ನ ಪ್ರಶ್ನೆಯನ್ನು ತಾವು ಕನ್ ವರ್ಟ್ ಮಾಡಿದಿರಿ. ಅದಕ್ಕೆ ಸಮಯವನ್ನು ಇನ್ನು ನಿಗದಿ ಮಾಡಲಿಲ್ಲ. ಆ ವಿಚಾರಗಳನ್ನು ಚರ್ಚೆ ಮಾಡಬೇಕು. ಈ ಎಕ್ಸ್‌ಟೆಂಡ್ ಪೀರಿಯಡ್ ನಲ್ಲಿ ಖಾಸಗಿ ಸದಸ್ಯರಿಗೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಹೇಳತಕ್ಕಂಥ ವಾದ ಒಪ್ಪತಕ್ಕಂಥದಲ್ಲ. ದಯವಿಟ್ಟು ಇಲ್ಲಿ ತಪ್ಪಾಗಿದೆ ಎಂದು ಹೇಳಿ ಒಪ್ಪಿಕೊಂಡರೆ ನಿಯಮ ಸರಿಯಾಗುವುದಿಲ್ಲ, I want to make myself very clear on this?

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಇದು ನಿಯಮದ ಪ್ರಕಾರವೇ ಇದೆ. ಈ ಡಿಸಕ್ಷನ್ ಇರತಕ್ಕಂಥದ್ದು ಸ್ಪೀಕರ್ ರವರಿಗೆ.

ಶ್ರೀ ಹೆಚ್. ಏಕಾಂತಯ್ಯ : "The speaker may in consultation with the Leader of the House." ನೀವು ಹೇಳಿದರೆ ಅವರು ಒಂದು ಹೇಳುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ ; ಸ್ಪೀಕರ್ ರವರಿಗೆ ಇರತಕ್ಕಂಥ ಅಧಿಕಾರ ಎಕ್ಸ್‌ಟೆಂಡ್ ಸದನದಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಇವತ್ತಿಗೆ ಸಭೆ ಮುಗಿಯಬೇಕಾಗಿತ್ತು. ನಮಗೆ ಸಿಕ್ಕಿದ್ದುದು 2 ಶುಕ್ರವಾರಗಳು ಅದನ್ನು ಮುಂದಕ್ಕೆ ಹಾಕುವುದಕ್ಕೆ ನಾವು ಒಪ್ಪುವುದಿಲ್ಲ. ಶ್ರೀಮಾನ್ ಏಕಾಂತಯ್ಯನವರು ಏನು ಹೇಳುತ್ತಾರೆ, ಇದು ನಿಯಮದ ವ್ಯಾಪ್ತಿಯೊಳಗೆ ಇದೆ, ಜೊತೆಗೆ ಆ ನಿಯಮವನ್ನು ಉಲ್ಲೇಖನ ಮಾಡಿ ಸಲಹೆ ಮಾಡಿದ್ದುದು ನೆನಪು ನನಗೆ ಇಲ್ಲ, ಕಲೆಕ್ಟೀವ್ ಲಿ ತೀರ್ಮಾನ ಮಾಡುತ್ತೇವೆಂದು ಸದನಕ್ಕೆ ಹೇಳಿದ್ದಾರೆ. ಅದನ್ನು ಒಪ್ಪಿಕೊಳ್ಳುವುದು ಬಿಡುವುದು ಮಾನ್ಯ ಸದಸ್ಯರಿಗೆ ಸೇರಿದ್ದುದು. ಆ ಹಕ್ಕನ್ನು ಕಿತ್ತುಕೊಳ್ಳುವ ಉದ್ದೇಶ ನನಗಂತೂ ಇರಲಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಸಭಾಪತಿಯವರೇ ಈಗ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಹೇಳಿದ್ದಾರೆ. ಈ ಒಂದು ಲೋಪವನ್ನು ಮುಂದುವರಿಸದಂತೆ ಈಗ ನಿಯಮ 29ರ ಅಡಿಯಲು ತರುವುದು ಸರ್ಕಾರಕ್ಕೆ ಮತ್ತು ಸಭಾನಾಯಕರಿಗೆ ಅಧಿಕಾರವಿದೆ. ಶುಕ್ರವಾರವಲ್ಲದೆ ಬೇರೆ ದಿವಸ ತೆಗೆದುಕೊಳ್ಳುತ್ತೇವೆನ್ನುವ ಮಾತನ್ನು ಹೇಳಿದ್ದಾರೆ. ಅದು ಇವತ್ತು ಇನ್ನು ಮುಂದೆ ಇಂಥ ಪ್ರಮಾದಗಳು ಆಗದಂತೆ ನೋಡಿಕೊಳ್ಳುತ್ತೇವೆ. ಮತ್ತು ಮುಂದಿನ ಸೋಮವಾರ ಅಥವಾ ಮಂಗಳವಾರ ಈ ಒಂದು ಖಾಸಗಿ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಮಾನ್ಯ ಸಭಾನಾಯಕರು ನಮಗೆ ಅಧಿಕಾರವಿದೆ ಎಂದು ಹೇಳುತ್ತಾರೆ. ಅಷ್ಟೇ ಅಲ್ಲದೆ ಮಾನ್ಯ ಅಧ್ಯಕ್ಷರೇ ಮಾನ್ಯ ಸಭಾ ನಾಯಕರೊಂದಿಗೆ ಸಮಾಲೋಚಿಸಿ ಶುಕ್ರವಾರವಲ್ಲದೆ ಇನ್ನಿತರ ಯಾವುದೇ ದಿನಗಳನ್ನು ಖಾಸಗಿ ಸದಸ್ಯರ ಕಾರ್ಯಕಲಾಪಗಳಿಗೆ ಗೊತ್ತುಪಡಿಸಬೇಕು. ಆದುದರಿಂದ ಇವತ್ತಿನ ದಿವಸ ಏನೋ ತಾವು ತರುತ್ತಿರುವಂಥದಕ್ಕೆ ಲೋಪವಾಗಿದೆ. ಅಂಥದ್ದೆಲ್ಲವನ್ನು ತಾವು ಮುಂದುವರಿಸದಂತೆ ಪುನಃ ಆಗದಂತೆ ತಾವು ನೋಡಿಕೊಳ್ಳುತ್ತೀರೆನ್ನುವ ಭಾವನೆಯಿಂದ ಮತ್ತು ಇವತ್ತಿನ ದಿವಸ ಖಾಸಗಿ ಸದಸ್ಯರ ಒಂದು ನಿರ್ಣಯ ಬರಬೇಕಾಗಿತ್ತು. ಅದನ್ನು ಶುಕ್ರವಾರ ಅಥವಾ ಮಂಗಳವಾರ ತೆಗೆದುಕೊಳ್ಳುವುದಕ್ಕೆ ಒಪ್ಪಿರುವುದರಿಂದ ಈ ವಿಚಾರವನ್ನು ಇಲ್ಲಿಗೆ ಕೈ ಬಿಡುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಂಗಳವಾರದ ದಿವಸ ಸಮಯ 2-00 ಗಂಟೆಯನ್ನು ನಿಗದಿ ಮಾಡಬೇಕೆಂದು ಸಭಾಧ್ಯಕ್ಷರಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

ನಿಯಮ 68ರ ಮೇರೆಗೆ

ರಾಜ್ಯದಲ್ಲಿ ಇತ್ತೀಚೆಗೆ ಬಿದ್ದ ಮಳೆಯಿಂದ ಉಂಟಾದ ಹಾನಿ ಮತ್ತು ನಷ್ಟದ ಬಗ್ಗೆ ಚರ್ಚೆ

+ ಶ್ರೀ ಆರ್. ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) ; ಮಾನ್ಯ ಅಧ್ಯಕ್ಷಿಣಿಯವರೇ, ರೂಲ್ 68ರ ಮೇರೆಗ ರಾಜ್ಯದಲ್ಲಿ ಭಾರಿ ಮಳೆಯಾಗಿ ನೆರೆ ಹಾವಳಿಯಿಂದ ಏನು ಅನಾಹುತವಾಯಿತು ಅದರ ಬಗ್ಗೆ ತಾವು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ನಾನು ತಮಗೆ ಕೃತಜ್ಞತೆಗಳನ್ನು ಸಲ್ಲಿಸಿ ಕೆಲವು ವಿಚಾರಗಳನ್ನು ಈ ಸದನದ ಮುಂದಿಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ನಮ್ಮ ರಾಜ್ಯದ ಇತಿಹಾಸದಲ್ಲಿ ಇಂಥ ಒಂದು ದುರಂತ ನಡೆದದ್ದು ನನಗೆ

ನೆನಪಿಲ್ಲ. ಬಹಳ ಜನ ಹಿರಿಯ ಸದಸ್ಯರು ಏನಿದ್ದಾರೆ ಅವರೂ ಸಹ ಇದರ ಬಗ್ಗೆ ಬೆಳಕು ಚೆಲ್ಲುವುದಕ್ಕೆ ಸಾಧ್ಯವಾಗಬಹುದು. 16ನೇ ನವೆಂಬರ್ ನಿಂದ 21ನೇ ಸೆಪ್ಟಂಬರ್ ರವರೆಗೆ ರಾಜ್ಯದ ಧಾರವಾಡ, ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಭಾರೀ ಮಳೆಯಾಗಿ ಲಕ್ಷಾಂತರ ಜನ ರೈತರು ಕಷ್ಟಕ್ಕೆ ತುತ್ತಾಗಿದ್ದಾರೆ. ಬಹಳಷ್ಟು ಮನೆಗಳು ಬಿದ್ದಿವೆ. ಬೆಳೆ ನಾಶವಾಗಿದೆ, ದನಕರುಗಳು ವಾಕ್ ಔಟ್ ಆಗಿವೆ. ಇಂಥ ಒಂದು ಅನಾಹುತ ರಾಜ್ಯದ ಇತಿಹಾಸದಲ್ಲಿ ಯಾವಾಗಲೂ ಆಗಿಲ್ಲ. ಆದರೆ ದುರ್ದೈವದ ಸಂಗತಿ ಏನೆಂದರೆ ಆ ಸಂದರ್ಭದಲ್ಲಿ ಸರ್ಕಾರ ಏನು ಮಾಡುತ್ತಿತ್ತು - ಸರ್ಕಾರ ಯಾವಾಗ ಇಂಥ ದುರಂತವಾಯಿತು ಆಗ ಸರ್ಕಾರಕ್ಕೆ ಯಾವುದೇ ಚಿಂತನೆ ಇರಲಿಲ್ಲ. 15ರ ರಾತ್ರಿ ಏನು ಮಳೆ ಪ್ರಾರಂಭವಾಯಿತು ಅಧರ ಬಗ್ಗೆ ಒಂದು ಶಬ್ದ ಆಗಿನ ಮುಖ್ಯ ಮಂತ್ರಿಗಳಾಗಲಿ, ಆಗಿನ ಕಂದಾಯ ಸಚಿವರಾಗಲಿ ಆಗಿನ ಕೃಷಿ ಸಚಿವರಾಗಲೀ ಹೇಳಲಿಲ್ಲ. ಸರ್ಕಾರ ಸಂಪೂರ್ಣ ಕೊಲ್ಯಾಪ್ಸ್ ಆಗಿತ್ತು. ಆ ಸಮಯದಲ್ಲಿ ಮಾಜಿ ಮುಖ್ಯ ಮಂತ್ರಿಗಳಾದ ಬಂಗಾರಪ್ಪನವರು ರಾಜೀನಾಮೆ ಕೊಟ್ಟಿದ್ದರು. ಹೊಸ ಮುಖ್ಯ ಮಂತ್ರಿಗಳ ಆಯ್ಕೆಯಾಗಬೇಕಾಗಿತ್ತು. ಅದರ ಬಗ್ಗೆ ಕಾಂಗ್ರೆಸ್ ಪಕ್ಷದಲ್ಲಿ ತೂರಾಟ ನಡೆದಿತ್ತು. ಅದರ ಬಗ್ಗೆ ಹೆಚ್ಚಿನ ಸ್ಪರ್ದೇ ನಡೆದಿತ್ತು. ರಾಜ್ಯದ ರೈತರು, ಕಡು ಬಡವರು ಕಂಗಾಲಾಗಿದ್ದರು. ಸರ್ಕಾರದ ಯಾವುದೇ ಕಾರ್ಯಕ್ರಮ ಇರಲಿಲ್ಲ. ಎಲ್ಲರೂ ಹೊಸ ಮುಖ್ಯ ಮಂತ್ರಿ ಯಾರಾಗುತ್ತಾರೆಂಬ ಕುತೂಹಲದಿಂದಿದ್ದರು. ಆ ಸ್ಪರ್ಧೆಯೇ ಹೆಚ್ಚಾಗಿ ರಾಜ್ಯದಲ್ಲಿ ನಡೆದಿತ್ತೇ ವಿನಹ ರಾಜ್ಯದ ರೈತರ ಬಗ್ಗೆ, ಬಡವರ ಬಗ್ಗೆ ದುರಂತದ ಬಗ್ಗೆ ಚರ್ಚೆ ನಡೆದಿರಲಿಲ್ಲ. When Rome was burning Nero was fidding ಅಂದ ಹಾಗೆ ಎಲ್ಲಾ ಕಡೆ ಇಷ್ಟು ದುರಂತವಾದರೂ ಸರ್ಕಾರಕ್ಕೆ ಅದರ ಬಗ್ಗೆ ಚಿಂತನೆ ಇರಲಿಲ್ಲ. ಆ ಸಮಯದಲ್ಲಿ ನನಗೆ ನೆನಪಿದೆ. 17È18ಕ್ಕೆ ಒಂದು ಸರ್ಕಾರೀ ಆಜ್ಞೆ ಆಯಿತು. ಮೂರೂವರೆ ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ ಎಂದು. ಆದರೆ ಆ ಹಣ ರಿಲೀಸ್ ಆಗಲಿಲ್ಲ. ಹಾಗಾಗಿ ಆವತ್ತು ಸ್ಟೇಟ್ ಮೆಂಟ್ ಆಯಿತು ಅಷ್ಟೇ. ಮೂರೂವರೆ ಕೋಟಿ ರೂಪಾಯಿ ಮಂಜೂರಾಗಿದೆ ಎಂದು ಆಜ್ಞೆ ಆಯಿತು.

12.20 ಪಿ.ಎಂ.

ಆ ಹಣ ಬಿಡುಗಡೆಯಾಗಿಲ್ಲ, ಹೊಸದಾಗಿ ಮುಖ್ಯ ಮಂತ್ರಿಗಳಾದರು. ನಾನು ಅವರನ್ನು ಅಭಿನಂದಿಸುತ್ತೇನೆ. ತಕ್ಷಣ ಹೊಸ ಮುಖ್ಯ ಮಂತ್ರಿಗಳು ಮತ್ತು ಮಂತ್ರಿ ಮಂಡಲದ ಸದಸ್ಯರು ಕೆಲವು ಜಾಗಗಳಿಗೆ ಭೇಟಿ ಕೊಟ್ಟಿದ್ದಾರೆ. ಎಲ್ಲೆಲ್ಲಿ ಜನ ನೆರೆ ಹಾವಳಿಗೆ ತುತ್ತಾಗಿದ್ದಾರೆ ಅಲ್ಲೆಲ್ಲಾ ನಾನೂ ಭೇಟಿ ಕೊಟ್ಟಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳೂ ಭೇಟಿ ಕೊಟ್ಟಿದ್ದಾರೆ. ತಕ್ಷಣ ಭೇಟಿ ಕೊಟ್ಟಿದ್ದಾರೆ. ಆದರೆ ದುರಂತ ಆಗಿ ಹೋಗಿತ್ತು. ತಾವು 19 ತಾರೀಖು ಮುಖ್ಯ ಮಂತ್ರಿಗಳಾದಿರಿ. 20ನೇ ತಾರೀಖು ಪ್ರವಾಸ ಮಾಡಿದಿರಿ. ಆದರೆ ಎಷ್ಟು ದೊಡ್ಡ ದುರಂತ ಆಗಿದೆ ಎಂದರೆ ಎಲ್ಲಾ ಜನ ಬೀದಿ ಪಾಲಾಗಿದ್ದರು. ಬೆಳೆ ಹಾಳಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ನಾನು ನೆರೆ ಹಾವಳಿ ಜಾಗಕ್ಕೆ ಭೇಟಿ ಕೊಟ್ಟ ಸಮಯದಲ್ಲಿ ಸರ್ಕಾರಿ ಯಂತ್ರ ಸ್ಟ್ಯಾಂಡ್ ಸ್ಟಿಲ್ ಆಗಿತ್ತು. ಅಧಿಕಾರಿಗಳು ಹೇಳಿದರು, ಏನು ಮಾಡುವುದು, ಬಹಳ ದುರಂತ ಆಗಿದೆ, ಸರ್ಕಾರದಲ್ಲಿ ಹಣ ಇಲ್ಲ, ರೈತರು

ಕಂಗಾಲು ಆಗಿದ್ದಾರೆ. ನಮ್ಮ ರಾಜ್ಯದ ರೈತ 1992ರಲ್ಲಿ ಏನು ಕಷ್ಟಕ್ಕೆ ಬಲಿಯಾಗಿದ್ದಾನೆ ಎನ್ನುವುದನ್ನು ನೋಡಿದರೆ ನನಗನ್ನಿಸುತ್ತದೆ, ಈ ರಾಜ್ಯದ ಇತಿಹಾಸದಲ್ಲಿ ಅವನು ಜೀವನದಲ್ಲಿ ಅಷ್ಟು ಕಷ್ಟಕ್ಕೆ ಬಿದ್ದಿಲ್ಲ. ಒಂದು ಕಡೆ ಬರಗಾಲ ಇತ್ತು. ಬರಗಾಲದಲ್ಲಿ ಎಲ್ಲಾ ಬೆಳೆ ಹಾಳಾಯಿತು. ಅಲ್ಪ ಸ್ವಲ್ಪ ಏನು ಬಂತೋ ಅದಕ್ಕೆ ಪೇಟೆಯಲ್ಲಿ ದರ ಇಲ್ಲ. ಏಕೆಂದರೆ ನಮ್ಮ ವ್ಯವಸ್ಥೆಯೇ ಆ ರೀತಿ ಇದೆ. ಯಾವ ಒಬ್ಬ ರೈತ ವರ್ಷದ 365 ದಿವಸ ತನ್ನ ಗದ್ದೆಯಲ್ಲಿ ದುಡಿದು ಭತ್ತ ಅಥವಾ ಜೋಳ ಅಥವಾ ಗೋಧಿಯನ್ನು ಬೆಳೆಯುತ್ತಾನೆ. ಅದಕ್ಕೆ ಯೋಗ್ಯ ದರ ಕೊಡುವ ಶಕ್ತಿ ನಮಗೆ ಇಲ್ಲ. ಇಂತಹ ಮಾರುಕಟ್ಟೆ ವ್ಯವಸ್ಥೆ ಇದೆ. ಮತ್ತೊಂದು ಕಡೆ ಅವನು ಏನು ಬೆಳೆಸುತ್ತಾನೆ ಅದಕ್ಕೆ ಹೆಚ್ಚಿನ ಲಾಭ ಮಾಡುವ ಅವಕಾಶವನ್ನು ವರ್ತಕರ ಪಾಲಿಗೆ ಬಿಟ್ಟಿದ್ದೇವೆ. ಆ ಲಾಭ ಕನ್ ಸ್ಯೂಮರ್ಸ್‌ಗೂ ಇಲ್ಲ. ಹೀಗಾಗಿ ಬರಗಾಲದಿಂದ ಕಷ್ಟದಲ್ಲಿದ್ದ ರೈತ ಏನೂ 4 ಕಾಳು ಬೆಳೆದರೂ ಅದಕ್ಕೆ ಯೋಗ್ಯ ದರ ಸಿಕ್ಕಿಲ್ಲ. ಅದರಲ್ಲೂ ಗೊಬ್ಬರದ ಬೆಲೆ ಗಗನಕ್ಕೆ ಹೋಗಿದೆ. ಐಎಂಎಫ್ ವಿಶ್ವ ಬ್ಯಾಂಕ್ ಒಟ್ಟಿಗೆ ಕೇಂದ್ರಸರ್ಕಾರ ಯಾವುದೂ ವಿಚಾರ ಮಾಡದೇ ನಮ್ಮದು ರೈತರ ಸರ್ಕಾರ ಎಂದು ಹೇಳಿ ರೈತರ ಬೆನ್ನಲ್ಲಿ ಚೂರಿ ಹಾಕಿದ್ದಾರೆ. ಗೊಬ್ಬರದ ದರ ಗಗನಕ್ಕೆ, ಕೃಷಿ ಔಷಧಿಗಳ ದರ ಗಗನಕ್ಕೆ, ಜೊತೆಗೆ ಭತ್ತಕ್ಕೆ ದರ ಇಲ್ಲ, ಜೋಳ, ಹತ್ತಿಗೆ ದರ ಇಲ್ಲ, ಎಲ್ಲಾ ಕುಸಿದು ಬಿದ್ದಿದೆ. ಇಂತಹ ಪರಿಸ್ಥಿತಿಯಲ್ಲಿ ರೈತರು ಇರುವಾಗ ನೆರೆ ಹಾವಳಿ ಆಯಿತು. ಇದರ ಬಗ್ಗೆ ವಿವರವಾಗಿ ನಮ್ಮ ಶಾಸಕರು ಮಾತನಾಡುತ್ತಾರೆ. ಶಾಸಕರಾದ ಹಂಪನಗೌಡರು ತಮ್ಮ ಕ್ಷೇತ್ರದಲ್ಲಿ ಏನಾಗಿದೆ ಎಂದು, ಬನ್ನೀಕೋಡ್ ಅವರು ತಮ್ಮ ಕ್ಷೇತ್ರದಲ್ಲಿ ಏನಾಗಿದೆ ಎಂದು ವಿವರವಾಗಿ ಹೇಳುತ್ತಾರೆ.

ಆದರೆ ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ ನಾನು ಕಂಡ ಆ ದೃಶ್ಯಗಳು, ಆ ದೃಶ್ಯಗಳನ್ನು ಯಾರೂ ನೋಡಬಾರದು ಹಾಗೂ ಯಾರೂ ನೋಡುವುದಕ್ಕಾಗುವುದಿಲ್ಲ. ಸಿಂಧನೂರು ತಾಲ್ಲೂಕಿನಲ್ಲಿ ನವೆಂಬರ್ 17ನೇ ತಾರೀಖಿನಿಂದ 19ನೇ ತಾರೀಖಿನವರೆಗೆ ಆದ ಮಳೆ 479 ಮಿ.ಮಿ. ಇಡೀ ತಾಲ್ಲೂಕಿಗೇ ಸರಾಸರಿ ಮಳೆ ಒಂದು ವರ್ಷಕ್ಕೆ ಆಗುವುದು. 360 ಮಿ.ಮಿ. ಅಷ್ಟು ಮಳೆ 3 ದಿವಸದಲ್ಲಿ ಅಲ್ಲಿ ಆಗಿದೆ. ನಾನು ಆ ಹಳ್ಳಿಗೆ ಹೋಗಿ ನೋಡಿದ ದೃಶ್ಯ ಬಹಳ ದಾರುಣವಾಗಿತ್ತು. ಅದನ್ನು ಯಾರೂ ನೋಡುವುದಕ್ಕೆ ಸಾಧ್ಯವಿಲ್ಲ.

ಬಾದಲಿ ಎಂಬ ಹಳ್ಳಿ. ನಮ್ಮ ಹಂಪನ ಗೌಡರು ಶಾಸಕರು. ಅದು ಅದು ಅವರ ಹಳ್ಳಿ. ಆ ಹಳ್ಳಿಯಲ್ಲಿ ಹೋದಾಗ ಆ ಹಳ್ಳಿಯಲ್ಲಿರುವ ಎಲ್ಲಾ ಮನೆಗಳು ನೆಲಸಮವಾಗಿವೆ. ಮಾನ್ಯ ಸಿಂಧ್ಯರವರು ನನ್ನ ಜೊತೆಯಲ್ಲಿದ್ದರು. ಅಲ್ಲಿಯ ಜನರೆಲ್ಲರೂ ಕಂಗಾಲಾಗಿದ್ದಾರೆ. ಸರ್ಕಾರದಿಂದ ಯಾವುದೂ ವ್ಯವಸ್ಥೆಯಿಲ್ಲ, ಪರಿಹಾರ ಕಾರ್ಯಕ್ರಮ ಅಲ್ಲಿ ಶುರುವಾಗಿಲ್ಲ. ತಾವೇನು ತಮ್ಮ ರಿಪೋರ್ಟ್‌ನಲ್ಲಿ ಹೇಳಿದ್ದೀರಿ, ಗಂಜಿ ಕೇಂದ್ರಗಳನ್ನು ಶುರು ಮಾಡಿದ್ದೇವೆಂದು ಹೇಳಿದ್ದೀರಿ. ನಾನು ರಾಣಿ ಬೆನ್ನೂರು ಹಾವೇರಿಗಳಿಗೆ ಹೋದಾಗ ಸರ್ಕಾರದಿಂದ ಗಂಜಿ ಕೇಂದ್ರ ಶುರುವಾಗಿಲ್ಲ. ಅಲ್ಲಿಯ ಸ್ಥಳೀಯ ಜನರು ವಾಲೆಂಟರಿ ಆರ್ಗನೈಸೇಷನ್ ಲಯನ್ಸ್ ಕ್ಲಬ್ ರೋಟರಿ ಕ್ಲಬ್ ನಗರಸಭೆಗಳು ಮತ್ತು ಮುನಿಸಿಪಾಲಿಟಿಗಳು ಗಂಜಿ ಕೇಂದ್ರಗಳನ್ನು ಶುರು ಮಾಡಿವೆ. ಇದೇ ಪರಿಸ್ಥಿತಿ ರಾಯಚೂರು ಜಿಲ್ಲೆಯಲ್ಲಿತ್ತು. 21-22ಕಡೆ

ಗಂಜಿ ಕೇಂದ್ರ ಶುರು ಮಾಡಿದ್ದೇವೆಂದು ರಿಪೋರ್ಟ್‌ನಲ್ಲಿದೆ. ಅಲ್ಲಿಯ ಪರಿಸ್ಥಿತಿಯೇನು? ಬಿದ್ದ ಮನೆಯ ಮೇಲೆ ನಾವು ನಡೆಯಬೇಕಾಯಿತು. ಎಲ್ಲಾ ಮನೆಗಳು ಸಂಪೂರ್ಣವಾಗಿ ಬಿದ್ದು ಒಂದು ಕಡೆಯಿಂದ ಒಂದು ಕಡೆಗೆ ಹೋಗುವ ಹಾಗೆ ಇಲ್ಲ. ಮನೆಯ ಕೆಳಗಡೆ ಎತ್ತು, ಎಮ್ಮೆ ಆಡು ಕುರಿ, ಕೋಳಿಗಳು ಸತ್ತ ವಾಸನೆ. ಎಲ್ಲಾ ಮನೆಗಳು ಬಿದ್ದು ಹೋಗಿವೆ. ಅಂತಹ ಒಂದು ದೃಶ್ಯವನ್ನು ನನ್ನ ಜೀವನ

(ಶ್ರೀಮತಿ ದಮಯಂತಿ ಬೋರೇಗೌಡ ಅಧ್ಯಕ್ಷ ಪೀಠದಲ್ಲಿದ್ದರು)

ದಲ್ಲಿ ನಾನು ಎಂದೂ ನೋಡಿದ್ದೇ ಇಲ್ಲ. ಅಂತಹ ಒಂದು ಪರಿಸ್ಥಿತಿ ಬೇರೆ ಬೇರೆ ಹಳ್ಳಿಗಳಲ್ಲಿ ಇತ್ತು. ಬಳ್ಳಾರಿ ಜಿಲ್ಲೆಯ ಹೊಸ ಪೇಟೆಯಲ್ಲಿ ಮತ್ತು ಸಿರಗುಪ್ಪದಲ್ಲಿ ಚಿತ್ರದುರ್ಗ ಜಿಲ್ಲೆಯ ಹರಿಹರದಲ್ಲಿ, ಧಾರವಾಡ ಜಿಲ್ಲೆಯ ರಾಣಿ ಬೆನ್ನೂರು ಮತ್ತು ಬನ್ನಿಕೋಡ್ ರವರ ಕ್ಷೇತ್ರದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿತ್ತು. ಆ ಸಂದರ್ಭದಲ್ಲಿ ಸರ್ಕಾರ ಏನು ಮಾಡುತ್ತಾ ಇತ್ತು? ಏನೇನು ಮಾಡಿಲ್ಲ. ಅಂತಹ ಒಂದು ಪರಿಸ್ಥಿತ ಇತ್ತು. ಸರ್ಕಾರದಿಂದ ವಾರ್ ಫುಟಿಂಗ್ ಮೇಲೆ ಕಾರ್ಯಕ್ರಮ ಆಗಬೇಕಾಗಿತ್ತು. ಆ ಕೆಲಸ ವಾರ್ ಫುಟ್ ಮೇಲೆ ಆಗಲಿಲ್ಲ. ಸರ್ಕಾರ ಮೂಕ ಪ್ರೇಕ್ಷಕವಾಗಿತ್ತು. ನಮಗೆ ಹಣ ಬರುವುದಿಲ್ಲ, ನಾವೇನು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದರು. ಹಣ ಬರುವುದಿಲ್ಲ ನಾವೇನು ಮಾಡುವುದಕ್ಕೆ ಸಾಧ್ಯವಿಲ್ಲವೆಂದರು. ಹೀಗಾದರೆ ಮುಂದೇನು? ಕೇಂದ್ರ ಸರ್ಕಾರ ಕರ್ನಾಟಕ ಸರ್ಕಾರಕ್ಕೆ ಮಲತಾಯಿ ಧೋರಣೆಯಿಂದ ನೋಡುತ್ತಿದೆ. ತಾವು ಕೇಳಬಹುದು ಏಕೆಂದು? ಅಷ್ಟೊಂದು ಫ್ಲಡ್ ಹ್ಯಾವೋಕ್ ಆಯಿತು. ಅಷ್ಟೊಂದು ಮನೆಗಳು ಹಾಳಾಗಿವೆ. ಅವರೇ ಉತ್ತರ ಕೊಟ್ಟಿದ್ದಾರೆ. ನನ್ನ ಪ್ರಶ್ನೆಗೆ ಉತ್ತರ ಕೊಡುವಾಗ ಈ ರೀತಿ ಹೇಳಿದ್ದಾರೆ. Partially damaged Hours 2,21,569. Fully damaged Hours 56,471. Live storse Losses 60,751. Agriculture crop damages 3,13,200. ಹೆಕ್ಟೇರ್ ಪ್ರದೇಶ. ಟೋಟಲ್ ಲಾಸ್ 206 ಕೋಟಿ. ಲಾಸಸ್ ಆಫ್ ಕಾಮನ್ ಪ್ರಾಪರ್ಟೀಸ್ ರೋಡ್ಸ್ ಬಿಲ್ಡಿಂಗ್ಸ್ ಇರಿಗೇಷನ್ ವೆಲ್ಸ್ ಮತ್ತು ಇತರೆ ಅದು 100 ಕೋಟಿ. ಒಟ್ಟು 306 ಕೋಟಿ ರೂಪಾಯಿ ಹಾನಿಯಾಗಿದೆಯೆಂದು ಸರ್ಕಾರ ಒಪ್ಪಿಕೊಂಡಿದೆ. ಅಷ್ಟು ಪ್ರಮಾಣದಲ್ಲಿ ನೆರೆ ಹಾವಳಿ ಎಷ್ಟು ಪರಿಣಾಮಕಾರಿಯಾಗಿರಬಹುದೆಂದು ನಾವು ಅಂದಾಜು ಮಾಡಬೇಕಾಗುತ್ತದೆ. ಆದರೆ ಕೇಂದ್ರ ಸರ್ಕಾರ ಏನು ಮಾಡಿತ್ತು? ಮಲತಾಯಿ ಧೋರಣೆ ಎಂದು ನಾನು ಆಗಲೇ ಹೇಳಿದ್ದೇನೆ. ನಮ್ಮ ಕೇಂದ್ರ ಸರ್ಕಾರದ ಕೃಷಿ ಸಚಿವರಾದ ಬಲರಾಂ ಜಾಖಡ್ ರವರು 16ನೇ ತಾರೀಖು ಬಂದು ಮದ್ರಾಸ್ ಗೆ ಹೋದರು, ಕೇರಳಕ್ಕೆ ಹೋದರು ಮತ್ತು ಪಾಂಡಿಚೇರಿಗೆ ಹೋದರು. ಆದರೆ ಇವತ್ತಿನ ತನಕ ಕೇಂದ್ರ ಸರ್ಕಾರ ಯಾವುದೇ ಸಚಿವರನ್ನು ನಮ್ಮ ರಾಜ್ಯಕ್ಕೆ ಭೇಟಿ ಕೊಡಲಿಕ್ಕೆ ಕಳುಹಿಸಿ ಕೊಟ್ಟಿಲ್ಲ. ಸೆಂಟ್ರಲ್ ಟೀಮ್ ನಮ್ಮ ರಾಜ್ಯಕ್ಕೆ ಬಂದಿಲ್ಲ.

ಒಬ್ಬ ಸದಸ್ಯರು ; ಕೇಂದ್ರ ಸಚಿವರಾದ ಜಾಫರ್ ಷರೀಫರವರು ಭೇಟಿ ಕೊಟ್ಟಿದ್ದಾರೆ. ಅದನ್ನು ತಾವು ಮರೆತಿದ್ದೀರಿ.

ಶ್ರೀ ಆರ್. ವಿ. ದೇಶಪಾಂಡೆ : ನಾನು ಫ್ಯಾಕ್ಟ್ ಹೇಳುತ್ತಿದ್ದೇನೆ. ನಾನು ಮೊದಲೇ ಮಲತಾಯಿ ಧೋರಣೆಯೆಂದು ಹೇಳಿದ್ದೇನೆ. ಯಾರೂ ಭೇಟಿ ಕೊಡಲಿಲ್ಲ. ತಾವು ಮತ್ತೊಂದು ವಿಚಾರದಲ್ಲಿ ತಮ್ಮ ಮೆಮೊರಾಂಡಮ್ ನಲ್ಲಿ ಹೇಳಿದ್ದೀರಿ. ಏನು ಹೇಳಿದ್ದೀರಿ?

The Government has submitted three Memorandums during 1991Ë92 i.e., August, november, December, 1991, seeking central assistance of Rs. 194 crore towards drought and flood relief measures. But the Government of India did not provide any financial assistance in this regard.

ಅಂದರೆ ಇದಕ್ಕೆ ಮುಂಚೆ ನೆರೆಹಾವಳಿ ಆಯಿತು, ಇದಕ್ಕಿಂತ ಮುಂಚೆ ಬರಗಾಲ ಬಂತು. ಇದರ ಬಗ್ಗೆ ಕೇಂದ್ರ ಸರ್ಕಾರದಿಂದ ಒಂದು ದುಡ್ಡೂ ರಾಜ್ಯ ಸರ್ಕಾರಕ್ಕೆ ಬಂದಿಲ್ಲ. in spite of three Memorandums. ಒಂದು ಕಡೆ ಕೇಂದ್ರ ಸರ್ಕಾರದ ಮಂತ್ರಿಗಳು ಬರುವುದಿಲ್ಲ. ಮೆಮೊರೆಂಡಮ್ ಕೊಟ್ಟರೆ ಅದರ ಬಗ್ಗೆ ಚಿಂತನೆ ಇಲ್ಲ. ನೆರೆ ಹಾವಳಿ ಆಯಿತು, ಆದಕ್ಕೆ ಮುಂಚೆ ಬರಗಾಲ ಬಂತು, ಅದರ ಬಗ್ಗೆ ಕೇಂದ್ರ ಸರ್ಕಾರದ ಒಂದು ದುಡ್ಡೂ ಬಂದಿಲ್ಲ. ಹಾಗಾದರೆ ಇದನ್ನು ಮಲತಾಯಿ ಧೋರಣೆ ಅಲ್ಲದೆ ಇನ್ನೇನು ಹೇಳಬೇಕು? ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರದ ವಿಶೇಷ ಸಹಾಯ 200 ಕೋಟಿ ಬರುತ್ತದೆ ಎಂದು ಹೇಳಿದ್ದರು.. I will quote him:

"200 Crores Central Aid for Flood Relief: The Chief Minister Mr. M. Veerappa Moily said here on monday that the State was likely to get central assistance of Rs. 200 crores from the Centre as flood relief, at the earliest."

ಏನಾಯಿತು? ಇವರು ಮೆಮರಂಡಮ್ ಮಾಡಿ 21ನೇ ತಾರೀಖಿಗೆ ಮನವಿ ಕೊಟ್ಟರು. ನಾನು ನಮ್ಮ ಪಕ್ಷದಿಂದ 21ನೇ ತಾರೀಖಿಗೆ ಟೆಲೆಕ್ಸ್ ಕೊಟ್ಟೆ. ಕೇಂದ್ರ ಸರ್ಕಾರಕ್ಕೆ ಟೆಲೆಕ್ಸ್ ಕೊಟ್ಟೆ. ಪ್ರಧಾನ ಮಂತ್ರಿಗಳಿಗೆ, ಕೇಂದ್ರದ ನಮ್ಮ ಮಂತ್ರಿಗಳಿಗೆ ಟೆಲೆಕ್ಸ್ ಕೊಟ್ಟೆ. ನಮ್ಮ ರಾಜ್ಯದ ಎಂ.ಪಿ.ಗಳಿಗೆ ನಮ್ಮ ರಾಜ್ಯದ ಕೇಂದ್ರ ಸಚಿವರುಗಳಿಗೆ ಟೆಲೆಕ್ಸ್ ಕೊಟ್ಟೆ. I said 11200 crores release as assistance"

ಎಂದು ಹೇಳಿದ್ದುದು ಏನಾಯಿತು? ವಿಶೇಷ ಸಹಾಯ ಒಂದು ದುಡ್ಡು ಸಹ ಅಂತ ಬರಲಿಲ್ಲ. ನಂತರ 55 ಕೋಟಿ ರಿಲೀಸ್ ಮಾಡಿದರು. ನಮ್ಮ ಮುಖ್ಯ ಮಂತ್ರಿಗಳು ಹೆಮ್ಮೆಯಿಂದ ಹೇಳಿದರು, ಇಷ್ಟು ಹಣ ಯಾವಾಗಲೂ ರಿಲೀಸ್ ಆಗಿಲ್ಲವೆಂದು. ಆದರೆ ಹಣ ಬಂದದ್ದು ಏನು? ಇದರಲ್ಲಿ 25 ಕೋಟಿ ರೂಪಾಯಿ our third and 4th instalments for this year under calamity relief fund, 30 crores as ways and means advance for the next year, 92-93.

ಕೇಂದ್ರ ಸರ್ಕಾರ ಕೊಟ್ಟಿದ್ದು ಏನು? ಶೂನ್ಯ. ಪ್ರಧಾನಿಗಳ ರಿಲೀಫ್ ಫಂಡ್ ನಿಂದ ಏಳೆಂಟು ಲಕ್ಷ ಕೊಟ್ಟರು. ಕೇಂದ್ರ ಸರ್ಕಾರದಿಂದ ಬಂದಂಥ ಹಣ

ಅದು ಬಿಟ್ಟರೆ ಕರ್ನಾಟಕಕ್ಕೆ ಸಹಾಯ ಕೇಂದ್ರ ಸರ್ಕಾರದಿಂದ ಬಂದದ್ದು ಏನೂ ಇಲ್ಲ, ಹಾಗಾದರೆ ಇದು ಮಲತಾಯಿ ಧೋರಣೆ ಅಲ್ಲದೆ ಬೇರೇನು? ಪ್ರಧಾನಿಗಳು ಬರುತ್ತೇವೆ ಎಂದು ಹೇಳಿದ್ದರು. ಸಂತೋಷ. ಏನು ಮಾಡಿದರು ಪ್ರಧಾನ ಮಂತ್ರಿಗಳು? ಒಂದನೇ ತಾರೀಖಿಗೆ ಬರುತ್ತೇನೆ ಎಂದು ಹೇಳಿದ್ದುದು ಬದಲಾವಣೆಯಾಯಿತು. ಎರಡನೆಯ ತಾರೀಖಿಗೆ ಪ್ರಧಾನಿಗಳು ಹೆಲಿಕಾಪ್ಟರ್ ನಲ್ಲಿ ಬಂದರು. ಡಿಸೆಂಬರ್ ತಿಂಗಳ ಎರಡನೇ ತಾರೀಖಿಗೆ ಅವರು ಪ್ರವಾಸ ಮಾಡಿದಾಗ ಎಲ್ಲಾ ಕಥೆ ಮುಗಿದಿತ್ತು. ಏನು ನೋಡುವುದಕ್ಕೆ ಸಾಧ್ಯ ಪ್ರಧಾನ ಮಂತ್ರಿಗಳಿಗೆ ? ಏನನ್ನೂ ನೋಡುವುದಕ್ಕೆ ಸಾಧ್ಯ ಇಲ್ಲ. ಪ್ರಧಾನಿಗೆ ಚಿಂತನೆ ಇಲ್ಲ, ಕೇಂದ್ರದ ಸಚಿವರಿಗೆ ಚಿಂತನೆ ಇಲ್ಲ, ನಮ್ಮ ರಾಜ್ಯದ ಎಂ.ಪಿ.ಗಳಿಗೆ ಚಿಂತನೆ ಇಲ್ಲ; ಹಾಗಾದರೆ ನಮ್ಮ ರಾಜ್ಯದ ಬಗ್ಗೆ ಚಿಂತನೆ ಮಾಡುವವರು ಯಾರು? ಹಾಗಾಗಿ ಇವತ್ತು ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಮಾಡಿದೆ ಎನ್ನುವುದರಲ್ಲಿ ಯಾವ ತರಹದ ಸಂದೇಹವೂ ಇಲ್ಲ, ಸಂಶಯವೂ ಇಲ್ಲ. ಇದನ್ನು ಸರ್ಕಾರ ಒಪ್ಪಿಕೊಳ್ಳಬೇಕಾಗುತ್ತದೆ. ಇಂತಹ ವಿಷಯದಲ್ಲಿ ನಮ್ಮ ಸರ್ಕಾರಕ್ಕೆ ಡೆಲ್ಲಿಯಲ್ಲಿ ಅವರ ಜೊತೆ ಹೇಗೆ ಫೈಟ್ ಮಾಡುವುದು ಎನ್ನತಕ್ಕಂಥ ಭಾವನೆ ಬರಬಾರದು. ರಾಜ್ಯದ ರೈತರ ಹಿತದೃಷ್ಟಿಯಿಂದ, ಬಡವರ ಹಿತ ದೃಷ್ಟಿಯಿಂದ ಅಲ್ಲಿ ನಿಮ್ಮ ಸರ್ಕಾರವಿದ್ದರೂ ಸಹ ಫೈಟ್ ಮಾಡುವ ಶಕ್ತಿ ನಿಮಗೆ ಇರಬೇಕಾಗುತ್ತದೆ, ಹಣ ತರುವ ಶಕ್ತಿ ನಿಮಗೆ ಬರಬೇಕಾಗುತ್ತದೆ.

ಚೇರ್ಮನ್ : ತಮಗೆ ಇನ್ನೆಷ್ಟು ಸಮಯ ಬೇಕಾಗಬಹುದು? ಇತರರಿಗೆ ಅವಕಾಶ ಕೊಡಬೇಕಾಗಿದೆ.

ಶ್ರೀ ಆರ್. ವಿ. ದೇಶಪಾಂಡೆ : ಆಯ್ತಮ್ಮಾ ಇನ್ನು ಹತ್ತು ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್ : ತಾವು ಉದ್ವೇಗದಲ್ಲಿದ್ದೀರಿ. ತಾವು ಅಧ್ಯಕ್ಷರಿಗೆ "ಏನಮ್ಮ" ಅಂದು ಬಿಟ್ಟಿರಿ.

"ಏನಮ್ಮ" ಎಂದು ಹೇಳಬಾರದಿತ್ತು. "ಅಧ್ಯಕ್ಷರು" ಎಂದು ಹೇಳಬೇಕು. ಅದಕ್ಕೇ ಈಗ "ಅಧ್ಯಕ್ಷರು" ಎಂದು ಹೇಳಿದೆನಲ್ಲ. "ಅಮ್ಮ" ಎಂದು ಹೇಳಿದ್ದು ಸರಿಯಲ್ಲವೆಂದು, "ಅಧ್ಯಕ್ಷರೇ" ಎಂದೇ ಹೇಳುತ್ತೇನೆ. ನಾನು ಏನು ಹೇಳುತ್ತಿದ್ದೇನೆಂದರೆ, At least I used a very decent word. She should be happy. Propriety, I understand.

ಹಾಗಾಗಿ ನಾನು ಒಪ್ಪಿಕೊಳ್ಳುತ್ತೇನೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗ್ಗೂ ಮೊನ್ನೆ 1ನೇ ಡಿಸೆಂಬರ್‌ನಲ್ಲಿ ಪತ್ರ ಬರೆದಿದ್ದೇನೆ. ರಾಜ್ಯದಲ್ಲಿ ಏನೇನು ನಡೆಯುತ್ತಾ ಇದೆ, ಪರಿಹಾರ ಕೊಡುವುದರಲ್ಲಿ ನೀವು ವಿಫಲರಾಗಿದ್ದೀರಿ, ಯಾವ ತರಹ ಪರಿಹಾರ ಕೊಡಬೇಕು ಎಂಬ ವಿಚಾರವಾಗಿ ಪತ್ರವನ್ನು ಬರೆದಿದ್ದೇನೆ. ಈ ವಿಚಾರಕ್ಕೆ ನಂತರ ಬರುತ್ತೇನೆ. ಇಂದು ಸರ್ಕಾರ ಹೇಳುತ್ತದೆ, 3025 crore plan outlay was approved for the State ಎಂದು. ಮುಂದಿನ ವರ್ಷಕ್ಕೆ ಏಕೆ ಔಟ್‌ಲೀ ಅಪ್ರೂವ್ ಆಯಿತು. ಬಹಳ ರಿಸೋರ್ಸಸ್ ಮೊಬಲೈಸ್ ಮಾಡಿದ್ದೇವೆಂದು ಹೇಳಿದ್ದೀರಿ. ನಮ್ಮ ಪರಿಸ್ಥಿತಿ ಸಾಕಷ್ಟು ಒಳ್ಳೆಯದಿದೆ ಎಂದು ಹೇಳಿದ್ದೀರಿ. ಹಾಗಾದರೆ ನೀವು ಏಕೆ ಹಣ ಬಿಡುಗಡೆ ಮಾಡಲಿಲ್ಲ, ನಿಮ್ಮ ಕಿಸೆಯಿಂದ; ನಿಮ್ಮ

ಟ್ರಜರಿಯಿಂದ ನೀವೇನು ಮಾಡಿದ್ದೀರಿ? ನಿಮ್ಮ ಕಾಂಟ್ರಿಬ್ಯೂಷನ್ ಏನು? 3,025 ಕೋಟಿ ಇದ್ದರೆ, ನಿಮ್ಮ ಕಡೆ ರಿಸೋರ್ಸ್ ಇದ್ದರೆ, ಇವತ್ತು ನಿಮ್ಮ ಟ್ರಜರಿ ಸರಿಯಾಗಿದ್ದರೆ, ಫೈನಾನ್ಷಿಯಲ್‌ನಲ್ಲಿ ಸರಿಯಾಗಿ ಹೋಗುತ್ತಿದ್ದೇವೆಂದು ಹೇಳಿದ್ದರೆ, ನೀವು ಏಕೆ ಹಣವನ್ನು ಬಿಡುಗಡೆ ಮಾಡುತ್ತಾ ಇಲ್ಲ. ನಿಮಗೇನು ಕಷ್ಟವಾಗಿದೆ. ಒಂದು ಕಡೆ ಟ್ರಜರಿಯಲ್ಲಿ ಬಿಲ್ ಹಾನರ್ ಆಗುವುದಿಲ್ಲ, ಮತ್ತೊಂದು ಕಡೆ 3,025 ಕೋಟಿ ಪ್ಲಾನ್ ಔಟ್ ಲೇ ಅಪ್ರೂವಲ್ ಮಾಡಿಕೊಂಡು ಬರುತ್ತಿದ್ದಾರೆ, ಇದು ನಮಗೂ ಗೊತ್ತಾಗುತ್ತಿದೆ. ಹಾಗಾರೆ ಫೈನಾನ್ಷಿಯಲ್ ಸ್ಟೆಬಿಲಿಟಿ ಬಗ್ಗೆ ನಿಮ್ಮದು ವೈಟ್ ಪೇಪರ್ ಕೊಡಿ ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ರಿಕ್ವೆಸ್ಟ್ ಮಾಡಿದ್ದೆ. ನಾವು ಯಾವ ಸ್ಟೇಜ್ ನಲ್ಲಿದ್ದೇವೆ, ಏನು ರಿಸೋರ್ಸಸ್ ಮೊಬಲೈಸ್ ಮಾಡಿದ್ದಾರೆ, ಸರ್ಕಾರಕ್ಕೆ ಏನು ಕಷ್ಟವಿದೆ ಎಂಬುದು ನಮಗೂ ಗೊತ್ತಾಗುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ ; ಉಪಾಧ್ಯಕ್ಷರೇ, ಈ ರಾಜ್ಯ ಸರ್ಕಾರದವರು ಕೇಂದ್ರಕ್ಕೆ ಏನು ಮೆಮೊರ್ಯಾಂಡಮ್ ಕೊಟ್ಟಿದ್ದಾರೆ ಆ ಮಾಹಿತಿಯನ್ನು ಸದಸ್ಯರಿಗೆ ಕೊಟ್ಟರೆ, ಚರ್ಚೆಯ ಮೇಲೆ ನಾವು ಭಾಗವಹಿಸುವುದು ಅಥವಾ ಬೆಳಕನ್ನು ಚೆಲ್ಲಬಹುದು. ದಯವಿಟ್ಟು ಅದನ್ನು ಸದಸ್ಯರಿಗೆ ಒದಗಿಸುವುದಕ್ಕೆ ತಾವು ಹೇಳಬೇಕು.

ಶ್ರೀ ಎಂ. ನಾರಾಯಣಸ್ವಾಮಿ : ಪ್ರಿಂಟ್ ಆಗಿದೆ. ಅದನ್ನು ನಮಗೆ ಕೊಡತಕ್ಕ ವ್ಯವಸ್ಥೆ ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ : ಮೆಮೊರ್‍ಯಾಂಡಂ ಕೊಟ್ಟಿದ್ದಾರೆ, ಈ ಮೆಮೊರ್‍ಯಾಂಡಂ ನೋಡಿದರೆ, ಇದು I am talking of the first Memorandum given in November 1992. ನವೆಂಬರ್ 1992ಕ್ಕೆ ಏನು ಮೆಮೊರ್ಯಾಂಡಮ್ ಕೊಟ್ಟಿದ್ದಾರೆ, ಈ ಮೆಮೊರ್‍ಯಾಂಡಮ್ ಟೋಟಲಿ ಸರ್ಕಾರದವರು ತಯಾರು ಮಾಡಿದ್ದಾರೆ, it shows how negligent are the officers, how irresponsible are the officers. ಈ ಮೆಮೊರ್‍ಯಾಂಡಮ್ ನೋಡಿದರೆ, ಕೇಂದ್ರ ಸರ್ಕಾರದಿಂದ ಹಣ ಯಾವ ರೀತಿ ಬರಬಹುದು ಎಂಬುದು ನಮಗೆ ಸಂಶಯವಾಗುತ್ತದೆ. ಏಕೆಂದರೆ ಇಲ್ಲಿಯ ಪರಿಸ್ಥಿತಿ ಏನಿದೆ, ಅದರ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ಉದಾಹರಣೆ ಕೊಡಬೇಕಾದರೆ, ಕೊನೆಯಲ್ಲಿ ಇಲ್ಲೊಂದು ಮ್ಯಾಪ್ ಹಾಕಿದ್ದಾರೆ. ಮ್ಯಾಪ್ ಹಾಕಿ ಬಿಲೋ 100 ಎಂ.ಎಂ. ರೈನ್ ಫಾಲ್ ಎಲ್ಲಿ ಆಯಿತು, 100Ë200 ಎಲ್ಲಿ ಆಯಿತು 201ನಿಂದ 300 ಎಲ್ಲಿ ಆಯಿತು, ಇದೆಲ್ಲಾ ತೋರಿಸಿದ್ದಾರೆ. ಸಿಂಧನೂರು ತಾಲ್ಲೂಕು, ನಮ್ಮ ಹಂಪನಗೌಡ ಅವರು ಏನು ಪ್ರತಿನಿಧಿಸುತ್ತಾರೆ, that is the worst affected Taluka in the State. It does not mention a place here. It does not mention a place in this Memorandum. What are your officers doing?

ಯಾವ ತರಹದ ಮೆಮೊರ್‍ಯಾಂಡಮ್‌ನ್ನು ನೀವು ತಯಾರು ಮಾಡಿದ್ದೀರಿ? ಮ್ಯಾಪ್ ತೋರಿಸಿದ್ದೀರಿ, ಈ ಮ್ಯಾಪ್‌ನಲ್ಲಿ ಸಿಂಧನೂರು ಬಿಲೋ 100 ಎಂ.ಎಂ. ರೈನ್‌ಫಾಲ್ ಎಂದು ತೋರಿಸಿದ್ದಾರೆ. ಮತ್ತು ಮೆಮೊರ್ಯಾಂಡಮ್‌ನಲ್ಲಿ ಏನೇನು ಒಂದು ಶಬ್ದ ಇಲ್ಲ. ಹರಿಹರದ ಬಗ್ಗೆ ಇಲ್ಲ. ಈ ಪ್ರಕಾರ ಡಿಫೆಕ್ಟಿವ್ ಮೆಮೊರ್‍ಯಾಂಡಂ ಇರೆಸ್ಪಾನ್ಸಿಬಲ್ ಆಗಿ, ನೆಗ್ಲಿಜೆನ್ಸಿನಿಂದ ಮೆಮೊರ್‍ಯಾಂಡಂ ಸಬ್‌ಮಿಟ್

ಆಗುತ್ತಾ ಹೋದರೆ ಯಾವ ರೀತಿ ಕೇಂದ್ರ ಸರ್ಕಾರಕ್ಕೆ ನೀವು ಕನ್ ವೀನ್ಸ್ ಮಾಡುತ್ತೀರಿ? ಹಾಗಾಗಿ ತಾವು ಇದರ ಬಗ್ಗೆ ವಿವರಣೆ ಕೊಡಬೇಕಾಗುತ್ತದೆ. ಇದಕ್ಕೆ ಜವಾಬ್ದಾರರು ಯಾರು? ನಿಮ್ಮ ಜಿಲ್ಲಾಧಿಕಾರಿಗಳು ಮಾಹಿತಿ ಕಳುಹಿಸಿಲ್ಲವೇ, ರಾಯಚೂರು ಜಿಲ್ಲಾಧಿಕಾರಿಗಳನ್ನು ನಾನು ಭೇಟಿ ಮಾಡಿದ್ದೇನೆ, ಅವರು ಒಳ್ಳೆಯ ಆಫೀಸರ್. ಆಕ್ಟೀವ್ ಆಫೀಸರ್, ಒಳ್ಳೆಯ ಕೆಲಸ ಮಾಡಿದ್ದಾರೆ, ಒಳ್ಳೆಯ ಅಧಿಕಾರಿ, ಹಗಲು ರಾತ್ರಿ ಕೆಲಸ ಮಾಡಿದ್ದಾರೆ. ಅವರು ಎಲ್ಲಾ ಮಾಹಿತಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ಈ ಪ್ರಕಾರದ ಮಾಹಿತಿ ಇವತ್ತು ಇದು ಬಂದಿರುವುದು ನೋಡಿದರೆ ನನಗೆ ಶಾಕ್ ಆಗಿದೆ. ಮುಂದೆ ಏನಾಯಿತು ಎಂದರೆ ಮತ್ತೊಂದು ಹೊಸ ಮೆಮೊರ್ಯಾಂಡಮ್ ಕೊಟ್ಟಿದ್ದಾರೆ. ನಾನು ಅದನ್ನು ಇನ್ನೂ ತೆಗೆದು ನೋಡಲಿಕ್ಕೆ ಸಾಧ್ಯವಾಗಲಿಲ್ಲ. ಆದರೆ ಇಲ್ಲಿ ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ, ಮತ್ತು ಮೆಮೊರ್ಯಾಂಡಮ್ ನಲ್ಲಿ ಏನು ಇನ್ ಫರ್ಮೇಷನ್ ಕೊಟ್ಟಿದ್ದಾರೆ, ಅವುಗಳು they are totally contrary.

ಹಾಗಾಗಿ ಇದರ ಬಗ್ಗೆ ಮಾನ್ಯ ಸಚಿವರು ಎಕ್ಸ್‌ಪ್ಲೈನ್ ಮಾಡಬೇಕಾಗುತ್ತದೆ. ಈ ತರಹ ಪರಿಸ್ಥಿತಿ ಏತಕ್ಕೆ ನಿರ್ಮಾಣವಾಯಿತು? ಈ ತರಹ ಮೆಮೊರ್ಯಾಂಡಮ್ ತಾವು ಏತಕ್ಕೆ ಕೊಟ್ಟಿರಿ? ಒಂದು ಕಡೆ ಸರಕಾರದ ಮುಖ್ಯ ಮಂತ್ರಿಗಳು ಹೋಗಿದ್ದರು. ಹೊಸ ಮುಖ್ಯ ಮಂತ್ರಿಗಳು ಬರಬೇಕಾಗಿತ್ತು. ಆಗ ದುರ್ಲಕ್ಷ್ಯ ಆಯಿತು. ಡಿಸೆಂಬರ್ ಆರ ನಂತರ ಏನಾಯಿತು? ಆಯೋಧ್ಯೆ ಗಲಾಟೆ ಆಯಿತು. ಅಯೋಧ್ಯೆ ಗಲಾಟೆಯಲ್ಲಿ ಪರಿಹಾರದ ಕೆಲಸ ನಿಲ್ಲಿಸಿಬಿಟ್ಟಿರಿ. ನಾನು ಧಾರವಾಡ ಜಿಲ್ಲೆಗೆ ಹೋದ ತಿಂಗಳು 14È16ಕ್ಕೆ ಹೋಗಿದ್ದೆ. ಅಲ್ಲಿ ಕೇಳಿದೆ ಕ್ರಾಪ್ ಕಂಪೆನ್ ಸೇಷನ್ ಬಂದಿದೆಯೇ ಎಂದು ಅಲ್ಲಿಯ ಜನರು ಯಾವುದೂ ಪರಿಹಾರ ಕೊಟ್ಟಿಲ್ಲ ಎಂದು ಹೇಳಿದರು. ಬೆಳಗಾವಿಗೆ ಹೋದೆ ಅಲ್ಲಿ ಪರಿಹಾರ ಕೊಟ್ಟಿಲ್ಲ ಎಂದು ಹೇಳಿದರು. ಗುಲ್ಬರ್ಗಾಕ್ಕೆ ಹೋದೆ ಅಲ್ಲಿ ಪರಿಹಾರ ಕೊಟ್ಟಿಲ್ಲ ಎಂದು ಹೇಳಿದರು. ಒಂದು ಕಡೆ ಮುಖ್ಯ ಮಂತ್ರಿ ಯಾರು ಆಗಬೇಕೆಂದು ಇವರ ಕಚ್ಚಾಟ ಇವರ ಜಗಳ ದುರ್ಲಕ್ಷ್ಯ ಮಾಡಿದರು. ಅದರ ನಂತರ ಅಯೋಧ್ಯೆ ಗಲಾಟೆ During this period all the relief works were stopped. ಅಯೋಧ್ಯೆ ಗಲಾಟೆಗೂ ರಿಲೀಫ್ ವರ್ಕ್ಸ್‌ಗೂ ಸಂಬಂಧ ಏನು ಇದೆ ಏನೇನೂ ಸಂಬಂಧ ಇಲ್ಲ, ಇನ್ನೂ ಸಹ ರಾಜ್ಯದಲ್ಲಿ ಸರಿಯಾಗಿ ಪರಿಹಾರದ ಕೆಲಸ ನಡೆಯುತ್ತಿಲ್ಲ, ಸರಿಯಾಗಿ ಮೌಲ್ಯ ಮಾಪನ ಮಾಡಿಲ್ಲ, ಸರಿಯಾಗಿ ಕ್ರಾಪ್ ಡ್ಯಾಮೇಜ್ ಅಸೆಸ್ ಮೆಂಟ್ ಆಗಿರುವುದಿಲ್ಲ, 55 ಸಾವಿರ ಮನೆ ಬಿದ್ದಿದೆ ಎಂದು ಹೇಳುತ್ತಿದ್ದಾರೆ. It is wrong.

ಮಾನ್ಯ ಸಚಿವರ ಗಮನಕ್ಕೆ ಒಂದು ಮಾತನ್ನು ತರುತ್ತೇನೆ, ನಾನು ರಾಯಚೂರು ಬಳ್ಳಾರಿ ಜಿಲ್ಲೆಯ ಕೆಲವು ಹಳ್ಳಿಗಳಿಗೆ ಹೋದಾಗ ಕೆಲವು ಕಡೆ ತಮ್ಮ ಆಫೀಸರ್ ಏನು ಮಾಡಿದ್ದಾರೆ ಎಂದರೆ ಕೆಲವು ಮನೆಗಳು ಪಾರ್ಷಿಯಲಿ ಡ್ಯಾಮೇಜ್ ಆಗಿದೆ ಎಂದು ಬರೆದಿದ್ದಾರೆ. They are mud houses. ಒಂದು ಕೈ ಹೀಗೆ ಹಚ್ಚಿದರೆ ಮನೆಗಳು ಬೀಳುತ್ತವೆ. ನಿಮ್ಮ ರೆಕಾರ್ಡ್‌ನಲ್ಲಿ ಏನು ಮಾಡಿದ್ದಾರೆ ಎಂದರೆ 'partially damaged.' Actually all are damaged houses. ಅದು ವಾಸ ಮಾಡುವ ಮನೆ ಅಲ್ಲ. ಹೀಗಾಗಿ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕಾಗುತ್ತದೆ. ನಿಮ್ಮ ಮಾತನ್ನು ನಂಬಿ ಆ ಮನೆಗಳು ಪಾರ್ಷಿಯಲಿ

ಡ್ಯಾಮೇಜ್ ಎಂದು ಯಾರಾದರೂ ವಾಸ ಮಾಡುವುದಕ್ಕೆ ಹೋದರೆ ಸರಕಾರದ ಮೇಲೆ ಜವಾಬ್ದಾರಿ ಬರಬಹುದು. ಹಾಗಾಗಿ ನಾನು ಎಲ್ಲೆಲ್ಲಿ ಹೋದೆ. ಅಲ್ಲಿ ಅಧಿಕಾರಿಗಳಿಗೆ ಹೇಳಿದೆ. You should be very liberal as far as your assistance is concerned. 'Government should be liberal. ಇಂತಹ ಸಮಯದಲ್ಲಿ ಇಂತಹ ಪ್ಯಾಥೆಟಿಕ್ ಸಿಚುಯೇಷನ್ ನಲ್ಲಿ ಇಂತಹ ಕಷ್ಟದಲ್ಲಿ ನಮ್ಮ ರೈತರು ಇದ್ದಾಗ ನಾವು ಸಹಾಯ ಭಾವನೆಯನ್ನು ಅವರ ಬಗ್ಗೆ ಇಟ್ಟಿಲ್ಲ ಎಂದರೆ ಹೇಗೆ ಸಾಧ್ಯ? ಆ ದೃಷ್ಟಿಯಿಂದ ಸರಕಾರದ ಕ್ರಮ ಆಗಬೇಕಾಗುತ್ತದೆ. ಕೆಲವು ಪರಿಹಾರದ ವಿಚಾರದಲ್ಲಿ ಸರಕಾರದವರು ಏನು ಮಾಡಿದ್ದಾರೆ, ಪ್ರಾಣ ಹಾನಿ ಎಲ್ಲೆಲ್ಲಿ ಆಗಿದೆ ಅಲ್ಲಿ ಎಂಟು ಸಾವಿರ ಇದ್ದುದು 20 ಸಾವಿರ ಮಾಡಿ, ಪ್ರೈವರ್ ಮಿನಿಸ್ಟರ್ ಫಂಡ್ ನಿಂದ 20 ಸಾವಿರ ಸೇರಿಸಿ, 40 ಸಾವಿರ ಕೊಡುತ್ತಿದ್ದೀರಿ. ಏರಿಸಿ, ಸಂತೋಷ, ತಮ್ಮನ್ನು ಅಭಿನಂದಿಸುತ್ತೇನೆ. ಆದರೆ ಇದು ಸಾಲದು. ರಯಟಿಂಗ್ ನಲ್ಲಿ ಯಾರು ಸತ್ತರು ಅವರಿಗೆ ಲಕ್ಷ ರೂಪಾಯಿ ಕೊಟ್ಟಿರಿ. ಅವರ ಪರಿವಾರದಲ್ಲಿ ಯಾರು ಮೈನರ್ ಇದ್ದಾರೆ ಅವರಿಗೆ ಪೆನ್ ಷನ್ ಕೊಡುತ್ತೇವೆ ಎಂದು ಹೇಳಿದಿರಿ. ಈ ಜನ ಏನು ತಪ್ಪು ಮಾಡಿದ್ದಾರೆ. What is threir mistake? ಏನು ತಪ್ಪಾಗಿದೆ. ನಮ್ಮ ರೈತರು ಈಗಾಗಲೇ ಕಂಗಾಲಾಗಿದ್ದಾರೆ. ರೈತರ ಸರಕಾರ, ರೈತರು ನಮ್ಮ ಬೆನ್ನೆಲುಬು ಎಂದು ನಾವೂ ನೀವೂ ಹೇಳುತ್ತೇವೆ. ರೈತರಿಗೆ ಸಹಾಯ ಮಾಡುವ ಪರಿಸ್ಥಿತ ಇದ್ದಾಗ ಏತಕ್ಕೆ ಈ ಆಟಿಟ್ಯೂಡ್? ತಾವು ಪರಿಹಾರ ಹೆಚ್ಚು ಮಾಡಿದ್ದೀರಿ, ಅಭಿನಂದನೆಗಳು ರಯಟಿಂಗ್‌ನಲ್ಲಿ ಏನು ಪರಿಹಾರ ಕೊಟ್ಟಿದ್ದೀರಿ, ಅದೇ ರೀತಿಯ ಪರಿಹಾರವನ್ನು ನೆರೆ ಹಾವಳಿಗೆ ಕೊಡುತ್ತೇವೆ ಎಂದು ತಾವು ತೀರ್ಮಾನ ತೆಗೆದುಕೊಳ್ಳಬೇಕು. ಈ ರೀತಿ ನಿರ್ಣಯ ಏತಕ್ಕೆ ತೆಗೆದುಕೊಳ್ಳಬಾರದು, ಏನು ಕಷ್ಟ ಇದೆ, ಇದು ಒಂದು ಕಡೆ. ಎರಡನೆಯದು ಮನೆ ಬಿದ್ದಿದ್ದಾವೆ. ಮುಂಚೆ ಏನು ಸ್ಕೇಲ್ ಇತ್ತು ಅದಕ್ಕಿಂತ ಹೆಚ್ಚು ಸ್ಕೇಲ್ ಮಾಡಿದ್ದೀರಿ. ಈಗ ಎರಡು ಸಾವಿರ ಕ್ಯಾಷ್ ಮತ್ತು ಮೂರು ಸಾವಿರ ಮೆಟೀರಿಯಲ್ಸ್ ಕೊಡಬೇಕೆಂದು ನಿರ್ಧಾರ ಮಾಡಿರುತ್ತೀರಿ. ಹಿಂದಿನ ಸ್ಕೇಲ್ ಗಿಂತ ಹೆಚ್ಚು. ಇದರಿಂದ ಮನೆ ಕಟ್ಟುವುದಕ್ಕೆ ಆಗುತ್ತದೆಯೇ? ಮನೆ ಕಟ್ಟುವುದಕ್ಕೆ ಆಗುವುದಿಲ್ಲ. ಮತ್ತೊಂದು ಕಡೆ ಈ ಎಲ್ಲಾ ಜನಗಳಿಗೂ ಆಶ್ರಯ ಸ್ಕೀಮ್‌ನಲ್ಲಿ ಮನೆ ಕಟ್ಟಿಕೊಡುತ್ತೇವೆಂದು ಮುಖ್ಯ ಮಂತ್ರಿಗಳು ಹೇಳಿದರು.

ಆದರೆ ಇಲ್ಲಿಯವರೆಗೂ ಒಂದು ಮನೆಯನ್ನೂ ಸಹ ಕಟ್ಟಿಲ್ಲ. ಅಥವಾ ಮನೆ ಕಟ್ಟುವ ಕಾರ್ಯಕ್ರಮ ಸರ್ಕಾರದಿಂದ ಆಗಿಲ್ಲ. ಹೀಗಾಗಿ ನಾನು ಸರ್ಕಾರದ ಮೇಲೆ ಒತ್ತಾಯ ಮಾಡುತ್ತೇನೆ ಎಲ್ಲೆಲ್ಲಿ ಮನೆಗಳು ಬಿದ್ದಿವೆ ಎಲ್ಲೆಲ್ಲಿ ಜನಗಳಿಗೆ ಹೆಚ್ಚಿನ ಸಹಾಯ ಆಗಬೇಕು ಅಲ್ಲಲ್ಲಿ ಈ 5 ಸಾವಿರದಿಂದ ಅವರು ಏನನ್ನು ಮಾಡುವುದಕ್ಕಾಗುವುದಿಲ್ಲ, ಆಶ್ರಯಾ ಯೋಜನೆಯಲ್ಲಿ ಅಥವಾ ಬೇರೆ ಯೋಜನೆಯಲ್ಲಿ ಪ್ರೆಯಾರಿಟಿ ಮೇಲೆ ಆ ಜನಗಳಿಗೆ ಮನೆ ಕಟ್ಟಿ ಕೊಡಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ: ಏನೇನೂ ಕೆಲಸ ಆಗಿಲ್ಲ, ಆ ಕೆಲಸಗಳು ಆಗಬೇಕಾಗುತ್ತದೆ. ಇದು ಬಹಳ ಮಹತ್ವದ್ದು ಇದೆ. ನಂತರ ಬೆಳೆ ಏನು ಹಾಳಾಗಿದೆ ನಾನು ಮೊದಲೇ ಹೇಳಿದೆ ರೈತರು ಕಂಗಾಲಾಗಿದ್ದಾರೆ ಏನು ರಿಯಾಯಿತಿ ಕೊಟ್ಟಿದ್ದೀರಿ? ನನಗೆ ಬಹಳ ಆಶ್ಚರ್ಯವಾಯಿತು ನನ್ನ ಜಿಲ್ಲೆಯಲ್ಲಿ ನಾನು 8-9 ರೂಪಾಯಿಗಳ ಚೆಕ್ ಕೊಡುವಂತಹ ಪರಿಸ್ಥಿತಿ ಬಂತು.

ಮೊನ್ನೆ ಪರಿಹಾರದ್ದು. ನನಾನು ಆಗ ಮುಖ್ಯಮಂತ್ರಿಗಳಿಗೆ ಮಾತನಾಡಿದೆ. ಏನಿದು ಇದು 8-9 ರೂಪಾಯಿಗಳ ಪರಿಹಾರ ಚೆಕ್ ನಾವು ಕೊಡಬೇಕು ಅಂತ. ಇದಾದ ನಂತರ ಒಂದು ಆಜ್ಞೆ ಹೊರಡಿಸಿದರು. 100 ರೂಪಾಯಿಗಳಿಗಿಂತ ಕಡಿಮೆ ಕೊಡಬಾರದು ಅಂತ. ಆಮೇಲೆ ಪರ್ ಹೆಕ್ಟೇರ್ 500/- ರೂಪಾಯಿಗಳು ಹೆಚ್ಚು ಮಾಡಿದಿರಿ. ಮುಂಚೆ 200 ರೂಪಾಯಿಗಳು ಪರ್ ಹೆಕ್ಟೇರ್ ಇತ್ತು. ಅದನ್ನು 5 ನೂರು ರೂಪಾಯಿಗಳಿಗೆ ಮಾಡಿದಿರಿ. ಅದು ಏನೇನು ಸಾಲದು. ನಮ್ಮ ಕೃಷಿ ಅಧಿಕಾರಿಗಳು ಮತ್ತು ಕಂದಾಯ ಇಲಾಖಾಧಿಕಾರಿಗಳು ಕ್ರಾಪ್ ಲೋನ್ ಅಸ್ಸೆಸ್ ಮಾಡಲಿಕ್ಕೆ ಡೀಸಲ್ ಮೇಲೆ ಏನು ಹಣ ಖರ್ಚು ಮಾಡಿದ್ದಾರೆ ನಾವು ಏನು ಅವರಿಗೆ ಟಿ.ಎ. ಡಿ.ಎ. ಕೊಟ್ಟಿದ್ದೇವೆ ಅಷ್ಟು ಪರಿಹಾರ ರೈತರಿಗೆ ಆಗುವುದಿಲ್ಲ.

TA, DA and diesel expenditure will be more. ನಿಸರ್ಗದ ಅನುಕಂಪದಿಂದ ಕಷ್ಟ ಬಂದಿದೆ. ಅದಕ್ಕೆ ಸಾಲ ಮನ್ನಾ ಮಾಡಬೇಕಾಗುತ್ತದೆ. ಯಾರು ಸಾಲ ಪಡೆದುಕೊಂಡಿಲ್ಲ, ಅವರಿಗೆ ಏನು ಲಾಸ್ ಆಗಿದೆ ಅದಕ್ಕೆ ಅಡಿಕ್ವೇಟ್ ಪರಿಹಾರ ಕೊಡಬೇಕಾಗುತ್ತದೆ. ಮತ್ತೊಂದು ನಾನು ನೋಡಿದೆ ಆಶ್ಚರ್ಯ ಆಯಿತು ಕೃಷಿ ಇಲಾಖೆ ಡೆಡ್ ಆಗಿದೆ. ಏನೇನೂ ಇಲ್ಲ. ನಾನು ಅಧಿಕಾರಿಗಳನ್ನು ಕರೆಯಿಸಿ ಮಾತನಾಡಿದೆ. What is the congingency plan? ಕೇಳಿದೆ. They asked 'For what, Sir?'

ಬೆಳೆ ಹಾಳಾಗಿ ಹೋಗಿದೆ ಪರ್ಯಾಯ ಬೆಳೆ ಏನು ಎಂದು ಏನು ತೆಗೆದುಕೊಳ್ಳುತ್ತೀರಿ ಎಂದು ಅದಕ್ಕೆ ಆದೇಶ ಇಲ್ಲ. ಸರ್ಕಾರದಿಂದ we have not drawn any contingency programme.'

ಅಂತ ಹೇಳಿದರು. ಅದಕ್ಕೆ ನಾನು ಸಲಹೆ ಮಾಡಿದೆ ಶಾರ್ಟ್ ದುರೇಶನ್ ಕ್ರಾಪ್ ಸನ್‌ಫ್ಲವರ್ ಇರಬಹುದು ಬೇರೆ ಬೇರೆ ಕ್ರಾಪ್ಸ್ ಇರಬಹುದು. ತಕ್ಷಣ ಪ್ರೆಯಾರಿಟಿ ಮೇಲೆ ಬೀಜ ಗೊಬ್ಬರ ಕೊಟ್ಟು ಸಾಗುವಳಿಗೆ ವ್ಯವಸ್ಥೆ ಮಾಡಿ ಎಂದು. ಆ ಕಾರ್ಯಕ್ರಮ ಸಕ್ಸಸ್ ಫುಲ್ ಆಗಿಲ್ಲ.

ಇವತ್ತು ರೈತರಿಗೆ ಬೀಜ ಕೊಟ್ಟಿಲ್ಲ. ಗೊಬ್ಬರ ಕೊಟ್ಟಿಲ್ಲ. ಔಷಧಿ ಕೊಟ್ಟಿಲ್ಲ. ಇವೆಲ್ಲವನ್ನು ತಾವು ಕಂಟಿನ್ ಜನ್ಸಿ ಪ್ರೋಗ್ರಾಂನಲ್ಲಿ ಫ್ರೀ ಆಗಿ ಕೊಡಬೇಕಾಗಿತ್ತು. ನೂರಾರು ಪ್ರೋಗ್ರಾಮ್ಸ್ ಇವೆ. ಸ್ಪೆಷಲ್ ರೈಸ್ ಪ್ರೋಗ್ರಾಂ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ಪ್ರೋಗ್ರಾಂ ಸರ್ಕಾರದ ಪ್ರೋಗ್ರಾಂಗಳಿವೆ, ಅವುಗಳಿಂದ ಕೊಡುವುದಕ್ಕೆ ಸಾಧ್ಯ ಇತ್ತು. ತಮಿಳು ನಾಡಿನಲ್ಲಿ ಮಾಡಿದ್ದಾರೆ. ನಾನು ಸಮಯದ ಅಭಾವದಿಂಜ ಡಿಟೇಲ್ಸ್‌ಗೆ ಹೋಗುವುದಿಲ್ಲ. ರೈತರಿಗೆ ಪರಿಹಾರ ಕೊಡುವ ವಿಚಾರದಲ್ಲಿ ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಸರ್ಕಾರದ ಕಂಟಿಜನ್ಸಿ ಫಂಡ್ ನಿಂದ ಡ್ರಾ ಮಾಡಿ ತಾವು ಪರಿಹಾರ ರೈತರಿಗೆ ಕೊಟ್ಟಿಲ್ಲ. ಪಂಪ್ ಸೆಟ್ಸ್ ಹೋಗಿದೆ. ಆಯಿಲ್ ಪಂಪ್ ಸೆಟ್ಸ್ ವಾಶ್ ಔಟ್ ಆಗಿದೆ. ಅಂತಹವರಿಗೆ ತಾವು 3000/- ಕೊಡಬೇಕೆಂದು ಆಜ್ಞೆ ಮಾಡಿದ್ದೀರಿ. ಇದರಿಂದ ಏನಾಗುತ್ತದೆ? ಒಂದು ಆಯಿಲ್ ಪಂಪ್ ಸೆಟ್ 25 ಸಾವಿರ ರೂಪಾಯಿಗಳಾಗುತ್ತದೆ. ಅವನಿಗೆ ತಾವು 3 ಸಾವಿರ ರೂಪಾಯಿ ಕೊಟ್ಟರೆ ಏನು ಮಾಡಬೇಕು? ಅಲ್ಲಿಯೂ ಸಹ ಸೂಕ್ತವಾದ ಪರಿಹಾರ ರೈತರಿಗೆ ಕೊಡುವ ವ್ಯವಸ್ಥೆ ಆಗಬೇಕಾಗಿದೆ. ನಂತರ ಲೈವ್ ಸ್ಟಾಕ್ ಕುರಿಗಳು ಎತ್ತುಗಳು ಆಕಳ ಕೊಚ್ಚಿಕೊಂಡು ಹೋಗಿವೆ. ನೆರೆ ಹಾವಳಿಯಿಂದ

ಅವರಿಗೆ ಪರಿಹಾರ 25 ಪರ್ಸೆಂಟ್ ಇದ್ದದ್ದು 50 ಪರ್ಸೆಂಟ್ ಮಾಡಿದ್ದೀರಿ. ಅಸೆಸ್ ಮೆಂಟ್ ಏನು ಮಾಡಿದ್ದಾರೆ ಎಂದರೆ ಕುರಿಗಳ ಬೆಲೆ 500 ರೂಪಾಯಿ ಇದ್ದರೆ 200 ರೂಪಾಯಿ ಮಾಡಿದ್ದಾರೆ. ಎತ್ತುಗಳ ಬೆಲೆ 3 ಸಾವಿರ ರೂಪಾಯಿ ಇದ್ದರೆ 1 ಸಾವಿರ ರೂಪಾಯಿ ಆಗಿದೆ. ನಮ್ಮ ಅಧಿಕಾರಿಗಳಿಗೆ ಏನಾಗಿದೆಯೋ ನನಗೆ ಗೊತ್ತಿಲ್ಲ, ಯಾವ ತರಹ ಅಟಿಟ್ಯೂಡ್ ನಮ್ಮ ಅಧಿಕಾರಿಗಳು ತೆಗೆದುಕೊಂಡಿದ್ದಾರೆ ಅದನ್ನು ತಿಳಿದು ನನಗೆ ಭಯವಾಗುತ್ತದೆ. ಈ ದೇಶದಲ್ಲಿ ಇದು ಒಂದು ರೆವಲ್ಯೂಷನ್ ಆಗಬಹುದು. ಒಂದು ವೇಳೆ ದನ ಕರು ಸತ್ತಿದ್ದರೆ ಐ.ಆರ್.ಡಿ.ಪಿ. ಸಾಲ ಕೊಟ್ಟಿದ್ದರೆ ಇನ್ ಶ್ಯೂರೆನ್ಸ್ ಇರುತ್ತದೆ. ಆ ಇನ್ ಶ್ಯೂರೆನ್ಸ್ ಪಾಲಿಸಿ ರಿವೋಕ್ ಮಾಡಿ ಕೊಡುವ ವ್ಯವಸ್ಥೆ ಮಾಡಬೇಕಾಗಿದೆ. ಎಲ್ಲಿ ಇನ್ ಶ್ಯೂರೆನ್ಸ್ ಇಲ್ಲ ಅಲ್ಲಿ ಅಡಿಕ್ವೇಟ್ ಪರಿಹಾರ ಕೊಡಿ.

12.50 ಪಿ.ಎಂ.

ಈ ವ್ಯಾಲ್ಯುಯೇಷನ್ ಸರಿಯಾಗಿಲ್ಲ, ಅಸೆಸ್ ಮೆಂಟ್ ಸರಿಯಾಗಿಲ್ಲ, ಇನ್ ಕಂ ಕ್ರೈಟೀರಿಯಾ ನಿಮ್ಮದು 6,400 ಇದ್ದದ್ದು 11 ಸಾವಿರ ಮಾಡಿದ್ದೀರಿ. ಸಂತೋಷ. ಮತ್ತೊಂದು ಇತ್ತು. ಸಣ್ಣ ಅತಿ ಸಣ್ಣ ಎನ್ನುವ ಒಂದು ಡೆಫನೇಷನ್ ಇತ್ತು. ಅದನ್ನು ತಾವು ಲಿಬರಲೈಸ್ ಮಾಡಿ 11 ಸಾವಿರದೊಳಗೆ ಯಾರು ಅರ್ಹ ಇದ್ದರೆ ಅವರಿಗೆಲ್ಲಾ ಕೊಡಿ ಎಂದು ಹೇಳಿದರು. ಏಕೆ ಅದು?

Farmer is a farmer. Why do you distinguish between a small farmer and a big farmer in such calamities?

ನಾರ್ಮಲ್ ಕೋರ್ಸ್‌ನಲ್ಲಿ ಸಬ್ಸೀಡಿ ಕೊಡುವುದಿದ್ದರೆ ಸಹಾಯ ಕೊಡುವುದಿದ್ದರೆ ಎಸ್.ಸಿ.ಎಸ್‌ಟಿಗೆ ಕೊಡಿ. ಬ್ಯಾಕ್ ವರ್ಡ್ ಕ್ಲಾಸ್‌ಗೆ ಕೊಡಿ. Small and marginal farmersಗೆ priority. ಇಂಥ ದುರಂತಕ್ಕೆ ಒಳಗಾದ ರೈತರಿಗೆ ಸಹಾಯ ಮಾಡುವಾಗ ಸಣ್ಣ ಮತ್ತು ದೊಡ್ಡ ರೈತರೆಂದು ಏಕೆ ಮಾಡಿದ್ದೀರಿ? 11 ಸಾವಿರ ಇನ್ ಕಂ ಕ್ರೈಟೀರಿಯಾ ಆಗಬೇಕು. Our request is to see that income criteria is removed. ನನಗೆ ಗೊತ್ತು ಕೆಲವು ರೆಗ್ಯುಲೇಷನ್, ರೂಲ್ಸ್, ಕೇಂದ್ರ ಸರ್ಕಾರದಿಂದ ನಿಯಮದಂತೆ ಇವೆ. ಆದರೆ ಕೇಂದ್ರ ಸರ್ಕಾರದ ಕಡೆ ದಾರಿ ನೋಡುವುದಕ್ಕಾಗುವುದಿಲ್ಲ. Government can take its own decision.

ಎಲ್ಲವನ್ನು ಕೇಂದ್ರ ಸರ್ಕಾರವನ್ನೇ ಕೇಳಿ ಮಾಡಬೇಕೆಂದೇನೂ ಇಲ್ಲ. ಹೆಚ್ಚಿನ ಪರಿಹಾರ ಹೆಚ್ಚಿನ ಸಹಾಯ ನೀವು ಕೊಟ್ಟರೆ, ಕೇಂದ್ರ ಸರ್ಕಾರ ಏಕೆ ಕೊಟ್ಟಿರಿ ಎಂದು ಕೇಳುವುದಿಲ್ಲ. They will be happy. ಈ ನಿಯಮ ಸಹಾ ಹೋಗಬೇಕಾಗುತ್ತದೆ. ಹಾಗಾಗಿ ಇದು ಒಂದು ಕಡೆ ನೆರೆ ಹಾವಳಿ, ಭಾರಿ ಮಳೆ ಆಯಿತು. ಮತ್ತೊಂದು ಕಡೆ ಬಳ್ಳಾರಿ ವಿಚಾರದಲ್ಲಿ ರಾಯಚೂರು ವಿಚಾರದಲ್ಲಿ it is man made. ನಾವೂ ಸಿಂಧ್ಯಾರವರು ರಾಯಚೂರು, ಬಳ್ಳಾರಿಗೆ ಹೋದಾಗ, ನಮ್ಮ ಶಾಸಕರೂ ಕೂಡ ಇದ್ದರು. What they did?

ರೈತರಿಗೆ ಕಾಷನ್ ಮಾಡದೆ ವಾರ್ನಿಂಗ್ ಕೊಡದೆ 17-18ನೇ ತಾರೀಖಿಗೆ 3.70 lakhs cusecs of water was released.

ನಾನು ಡಿ.ಸಿ. ರಾಯಚೂರ್ ಕೇಳಿದೆ, ಏನ್ರಿ, ಇದರ ಬಗ್ಗೆ ನಿಮಗೆ ಕಲ್ಪನೆ ಇತ್ತೋ ಎಂದು? ನಮಗೆ ಗೊತ್ತಿಲ್ಲ. ಮುಂಜಾನೆ ಹತ್ತೂವರೆ 11 ಗಂಟೆಗೆ ವಾಟರ್ ರಿಲೀಸ್ ಮಾಡಿದ್ದಾರೆ. ನಮಗೆ ಮಧ್ಯಾಹ್ನ 3 ಗಂಟೆಗೆ ಗೊತ್ತಾಯಿತೆಂದು ಹೇಳಿದರು. If sufficient warning was given ಎಷ್ಟೋ ಅನಾಹುತ ತಡೆಯಲಿಕ್ಕೆ ಸಾಧ್ಯವಿತ್ತು. ಆ ಕುರಿಗಳು, ದನಕರುಗಳು ಏನು ವಾಷ್ ಔಟ್ ಆದುವು ಅವನ್ನು ಸೇವ್ ಮಾಡಲಿಕ್ಕೆ ಸಾಧ್ಯವಿತ್ತು. ಜನ ಪ್ರಾಣ ಹಾನಿ ಆಗಿದೆಯೋ ಅದನ್ನು ತಪ್ಪಿಸಲಿಕ್ಕೆ ಸಾಧ್ಯ ಇತ್ತು. ಆಂಧ್ರ ಪ್ರದೇಶ ಚೀಫ್ ಮಿನಿಸ್ಟರ್ ಸ್ಟೇಟ್ ಮೆಂಟ್ ಮಾಡಿದ್ದಾರೆ. ಇವರ ನೆಗ್ಲಿಜನ್ಸ್ ನಿಂದ ನಮ್ಮ ರಾಜ್ಯದಲ್ಲೂ ಸಹಾ ಅನಾಹುತವಾಗಿದೆಯೆಂದು. ಆದರೆ ನಮ್ಮ ಮುಖ್ಯ ಮಂತ್ರಿಗಳ ಗಮನಕ್ಕೆ ತಂದರೂ ಸಹಾ ಇದರ ಬಗ್ಗೆ ವಿಚಾರಣೆ ಮಾಡುತ್ತೇನೆಂದು ಇನ್ನೂ ಹೇಳಿಲ್ಲ. ಇವತ್ತು ಇದರ ಬಗ್ಗೆ ವಿಚಾರಣೆಯಾಗಬೇಕಾಗುತ್ತದೆ. ಯಾರು ಇದಕ್ಕೆ ರೆಸ್ಪಾನ್ಸಿಬಲ್ ಇದ್ದಾರೆ? ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಯಾವ ಅಧಿಕಾರಿ ಈ ಬೇಜವಾಬ್ದಾರಿ ಕೆಲಸ ಮಾಡಿದ್ದಾರೆ? ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಸಹಾ ಇದೆ. ಸಾಯಿಲ್ ಇವತ್ತು ಏನಾಗಿದೆ? ಕ್ರಾಪ್ ಲಾಸ್ ಆದರೆ ಮತ್ತೊಂದು ಬೆಳೆ ತೆಗೆದುಕೊಳ್ಳಬಹುದು. ಆದರೆ ಸಾಯಿಲ್ ಎರೋಷನ್ ನಿಂದ ಇವತ್ತು ಭೂಮಿ ಗುಣ ಮಟ್ಟವೇ ಹೋಗಿ ಬಿಟ್ಟಿದೆ. ಹಾಗಾಗಿ ತಾವು ವಾರ್ ಫೂಟಿಂಗ್ ನಲ್ಲಿ ಈ ವರ್ಕ್ಸ್ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲವೆಂದರೆ ನೀವು ಎಷ್ಟೋ ಸಹಾಯ ಮಾಡಿದರೂ ಭೂಮಿಯಲ್ಲಿ ಯಾವುದೇ ಬೆಳೆ ಬರಲಿಕ್ಕೆ ಸಾಧ್ಯವಿಲ್ಲ, ಏಕೆಂದರೆ ಭೂಮಿಯ ಮೇಲಿನ ಲೇಯರ್ ಕೊಚ್ಚಿಕೊಂಡು ಹೋಗಿಬಿಟ್ಟಿದೆ. ವಾಕ್ಡ್ ಔಟ್. ಮತ್ತೊಂದು ನೋಡಿದ್ದೇನೆ, ತಮ್ಮ ಗಮನಕ್ಕೆ ತರಬಹುದು. ರಾಯಚೂರು ಅಂಡ್ ಬಳ್ಳಾರಿ, ಡಿಸ್ಟ್ರಿಕ್ಟ್ ನಲ್ಲಿ ಈ ನೆರೆ ಹಾವಳಿ ಮ್ಯಾಗ್ನಟ್ಯೂಟ್ ಪರಿಣಾಮವಾಗಲಿಕ್ಕೆ ಕಾರಣವೇನೆಂದರೆ ಅಲ್ಲಿ ಲ್ಯಾಂಡ್ ಮತ್ತು ಟ್ಯಾಂಕ್ ಎಲ್ಲಾ ಒಂದೇ ಆಗಿ ಬಿಟ್ಟಿದೆ. ಡೀಸಿಲ್ಟಿಂಗ್ ವರ್ಕ್ಸ್ ಆಗಿಲ್ಲ. No work of desilting has been done.

ರಾಜ್ಯದಲ್ಲಿ ಯಾವ ಕೆರೆಗಳನ್ನೂ ಮಾಡಿಲ್ಲ. ಎಲ್ಲಾ ಸಮಾನ ಆಗಿಬಿಟ್ಟಿದೆ. ಅಲ್ಲಿ ಹಾಗಾಗಿ ವಾರ್ ಫೂಟಿಂಗ್ ಡೀಸಿಲ್ಟಿಂಗ್ ವರ್ಕ್‌ಗೆ ತಾವು ಹಣ ಬಿಡುಗಡೆ ಮಾಡಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ಎಷ್ಟು ಸಣ್ಣ ಅಥವಾ ದೊಡ್ಡ ಕೆರೆಗಳಿವೆ? ಆ ಡೀಸಿಲ್ಟಿಂಗ್ ಕೆಲಸ ವಾರ್ ಫೂಟಿಂಗ್ ರೀತಿಯಲ್ಲಿ ಮಾಡಿದರೆ ರೈತರಿಗೆ ಅನುಕೂಲವಾಗಬಹುದು. ಮತ್ತು ನೆರೆ ಹಾವಳಿಯಿಂದ ಆಗುವ ಪರಿಣಾಮವನ್ನು ತಡೆಯಲಿಕ್ಕೆ ಸಾಧ್ಯವಾಗಬಹುದು. ಅದೇ ಪ್ರಕಾರ ಬ್ರಿಡ್ಜಸ್ ಬಿದ್ದಿವೆ. ಅದಕ್ಕೆ ಲೆಕ್ಕವೇ ಇಲ್ಲ. ಕೆಲವು ಕಡೆ ರಸ್ತೆಗಳು, ಬ್ರಿಡ್ಜಸ್ ವಾಷ್ ಔಟ್ ಆಗಿರಬಹುದು. ಅದರ ಬಗ್ಗೆಯೂ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮತ್ತೊಂದು ಕಾರಣವೇನೆಂದರೆ, ನಾನು ನೋಡಿದ್ದೇನೆ. ಬಳ್ಳಾರಿ ಮತ್ತು ರಾಯಚೂರಿನಲ್ಲಿ ಇಷ್ಟೊಂದು ಪ್ರಾಣ ಹಾನಿಯಾಗಲಿಕ್ಕೆ ಕಾರಣವೇನೆಂದರೆ on the side of the rivers , on the side of the nalas ಮನೆಗಳನ್ನು ಕಟ್ಟಿ ಕೊಂಡಿದ್ದಾರೆ.

ಹೊಸ ಮನೆಗಳನ್ನು ಕಟ್ಟುವಾಗ ಬಹಳ ಜಾಗ್ರತೆ ವಹಿಸಬೇಕಾಗುತ್ತದೆ. ಎತ್ತರದ ಜಾಗಗಳಲ್ಲಿ ಕಟ್ಟಬೇಕಾಗುತ್ತದೆ. ಅಲ್ಲಿ ವಾಸವಿರುವವರು ಖಾಯಂ ಆಗಿ

ಇರಬೇಕಾಗುತ್ತದೆ. ಈ ಒಂದು ಜಾಗ್ರತೆಯನ್ನು ಸರಕಾರದವರು ಮಾಡಬೇಕಾಗುತ್ತದೆ? ಈ ದಿಸೆಯಲ್ಲಿ ಅಧಿಕಾರಿಗಳಿಗೆ ಸರಿಯಾದ ಸೂಚನೆಗಳು ಸರಕಾರದಿಂದ ಹೋಗಬೇಕಾಗುತ್ತದೆ. ಇಲ್ಲವಾದಲ್ಲಿ ಪುನಃ ಇದೇ ಪರಿಸ್ಥಿತಿಯು ನಿರ್ಮಾಣವಾಗಬಹುದು. ಇಂಥ ಒಂದು ದುರಂತವಾಗಿರುವಾಗ ಕಷ್ಟವಾಗಿರುವಾಗ ಸರಕಾರದವರು ಸಂಪೂರ್ಣವಾಗಿ ಪರಿಹಾರವನ್ನು ವಾರಷೂಟ್‌ನಲ್ಲಿ ಕೊಡುವುದರಲ್ಲಿ ವಿಫಲವಾಗಿದ್ದಾರೆ. ಈ ಪರಿಸ್ಥಿತಿಯಲ್ಲಿ ನಾನು ತಮಗೆ ಒಂದೆರಡು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ನಮ್ಮ ಸೆಂಟ್ರಲ್ ಕೆಲಮಿಟೀಸ್ ರಿಲೀಫ್ ಫಂಡ್ ಏನು ಇತ್ತೆ, ಇಂಥ ಒಂದು ಫಂಡ್‌ನ್ನು ಹೊಸದಾಗಿ ಕ್ರಿಯೇಟ್ ಮಾಡುವುದಕ್ಕೆ ಸರಕಾರದವರು ಒತ್ತಾಯ ಮಾಡಬೇಕು. ಅದರಲ್ಲಿ ಕೇಂದ್ರ ಸರ್ಕಾರದಿಂದ 90 ಪರ್ಸೆಂಟ್, ಕಾಂಟ್ರಿಬ್ಯೂಷನ್ ಇರಬೇಕಾಗುತ್ತದೆ. ರಾಜ್ಯ ಸರಕಾರದವರದ್ದು 10 ಪರ್ಸೆಂಟ್‌ಷ್ಟು ಕಾಂಟ್ರಿಬ್ಯೂಷನ್ ಇರಬೇಕಾಗುತ್ತದೆ. 9ನೇ ಫೈನಾನ್ಸ್ ಕಮಿಶನ್ ಪ್ರಕಾರ ಹೀಗೆ ಮಾಡಿದ್ದಾರಲ್ಲ, ಅದರಲ್ಲಿ ಕೆಲವು ರಿಸ್ಟ್ರಿಕ್ಷನ್ಸ್ ಇವೆ. ಅದರ ಪ್ರಕಾರ ನಮಗೆ 28 ಕೋಟಿ ರೂಪಾಯಿಗಳು ಬರುತ್ತದೆ. ಇವೊತ್ತು ಇನ್‌ಫ್ಲೇಶನ್ ಸಾಕಷ್ಟು ಆಗಿದೆ, ರಾಜ್ಯಗಳಲ್ಲಿ ಸಮಸ್ಯೆಗಳು ಹಿಂದಿಗಿಂತಲೂ ಹೆಚ್ಚು ಬೆಳೆದಿವೆ, ಹಾಗಾಗಿ ಇದು ಸೋಶಿಯಲ್ ರಿವಲ್ಯೂಷನ್ ಆಗುವುದಿಲ್ಲ. ಆದ್ದರಿಂದ ಅಲ್ಲಿ ಮಾಡಿದ ನಾರ್ಮ್ಸ್ ಚೇಂಜ್ ಮಾಡಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಪ್ರಧಾನಿಯವರು ಕೂಡ ಒಂದು ಕಡೆ ಹೇಳಿದ್ದರು. Calamity fund which will be operated by the states.

ಇಲ್ಲಿ ಕಾಂಟ್ರಿಬ್ಯೂಶನ್ ಕೇಂದ್ರದ್ದು 90 ಮತ್ತೇ ರಾಜ್ಯದ್ದು 10ಪರ್ಸೆಂಟ್‌ನಷ್ಟು ಇರುತ್ತದೆ. ಅಲ್ಲಿ ರಾಜ್ಯ ಸರಕಾರದವರು ಆಪರೇಟ್ ಮಾಡುವುದಕ್ಕೆ ಪರ್ಮಿಶನ್ ಕೊಡಬೇಕು. ಕೇಂದ್ರ ಸರಕಾರದಲ್ಲಿಯೂ ಕೂಡ ಈ ಬಗ್ಗೆ ಒಂದು ಥಿಂಕಿಂಗ್ ಇದೆ. ತಾವುಗಳು ಕೂಡ ಈ ಬಗ್ಗೆ ಅವರಲ್ಲಿ ಸ್ವಲ್ಪ ಒತ್ತಾಯ ತಂದು, ಇದನ್ನು ಮಾಡಿಕೊಳ್ಳಬೇಕಾಗುತ್ತದೆ. ಇಲ್ಲವಾದಲ್ಲಿ ಯಾವುದೇ ರಾಜ್ಯ ಸರಕಾರಗಳಿಗೂ ಕಷ್ಟವಾಗಬಹುದು. ನಮ್ಮ ಆಡಳಿತ ಕಾಲದಲ್ಲಿಯೂ ಕೂಡ ಡ್ರಾಫ್ಟ್ ಇತ್ತು. ನಮಗೂ ಕಷ್ಟವಾಗಿತ್ತು. ಆದರೆ ಡೆವಲೆಪ್‌ಮೆಂಟ್ ವರ್ಕ್ಸ್ ನಿಲ್ಲಿಸಲಿಲ್ಲ, ರಲೀಫ್ ವರ್ಕ್ಸ್ ನಿಲ್ಲಿಸಲಿಲ್ಲ. ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ನಿಲ್ಲಿಸಲಿಲ್ಲ. ಆದರೆ ನೀವುಗಳು ಎಲ್ಲವನ್ನು ಒಟ್ಟಿಗೆ ಸ್ಟಾಪ್ ಮಾಡಿದ್ದೀರಿ. ನಾನು ಮುಖ್ಯಮಂತ್ರಿಗಳ ಗಮನಕ್ಕೆ ಕೂಡ ತಂದಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವ ರೀತಿಯಾಗಿ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಅಂದರೆ ತಾನಡೆಯವರ ಕ್ಷೇತ್ರದಲ್ಲಿ ಎರಡೇ ಬ್ರಿಡ್ಜ್, ರಾಣೆಯವರ ಕ್ಷೇತತ್ರದಲ್ಲಿ ಒಂದು ಬ್ರಿಡ್ಜ್. ಅದನ್ನು ಬಿಟ್ಟರೆ ಯಾವುದೇ ಕೆಲಸ ನಡೆದಿಲ್ಲ. ರಾಜ್ಯದಲ್ಲಿ ನೆರೆಹಾವಿಯಾಗುತ್ತದೆ, ಬರಗಾಲ ಬರುತ್ತದೆ. ಅದನ್ನು ಎದುರಿಸಲು ಸೂಕ್ತ ತಯಾರಿ ನಮ್ಮಲ್ಲಿ ಇರಬೇಕಾಗುತ್ತದೆ. You look always towards the centers. ಕೇಂದ್ರ ಸರಕಾರದವರು ನಿಮಗೆ ಹಣವನ್ನು ಎಲ್ಲಿಯ ತನಕ ಬಿಡುಗಡೆ ಮಾಡುವುದಿಲ್ಲವೋ ಅಲ್ಲಿಯವರೆಗೆ ನಿಮಗೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಒಂದೆರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಕೊಂಡು ನಿಮ್ಮ ಕಷ್ಟವನ್ನು ಹೇಳಿಕೊಂಡು ಕುಳಿತಿರುತ್ತೀರಿ. ಸೆಂಟ್ರಲ್ ಕೆಲಮಿಡೀಸ್ ರಿಲೀಫ್ ಫಂಡ್ ಯಾಯವ ತರಹ ಹೇಳುತ್ತಾ ಇದ್ದಾರೆ, ಈ ತರಹದ ಫಂಡನ್ನು where contribution is from sthe central government and operation ರಾಜ್ಯ ಸರಕಾರದವರೂ ಮಾಡಬೇಕು ಮತ್ತು ಅದನ್ನು ಮಾಡುವಾಗ

ಬಹಳ ಪರಿಣಾಮಕಾರಿಯಾಗಿ ಮಾಡಬೇಕಾಗುತ್ತದೆ. ಆ ಪ್ರಕಾರ ಒಂದು ಕೆಲಾಮಿಟೀಸ್ ಫಂಡ್ ಆಗಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಸಭಾಧ್ಯಕ್ಷಣಿಯವರಲ್ಲಿ ನನ್ನ ಪ್ರಾರ್ಥನೆ ಅಂದರೆ, ಇವೊತ್ತು ಇನ್ನೂ ಹೆಚ್ಚು ಹೊತ್ತು ಬೇಕಾದರೂ ಕುಳಿತುಕೋಳ್ಳೋಣ. ಅದೂ ಅಲ್ಲದೆ ಇನ್ನೆರಡು ದಿವಸಗಳ ಕಾಲ ಬೇಕಾದರೂ ಚರ್ಚೆಯನ್ನು ಮುಂದಿವರಿಸೋಣ. ನಾವು ತಮಗೆ ಪೂರ್ಣ ಸಹಕಾರವನ್ನು ರೊಡಿತ್ತೇವೆ. ಆದ್ದರಿಂದ ಇಂಥ ವಿಚಾರದ ಮೇಲೆ ಚರ್ಚೆ ಮಾಡಲು ಪೂರ್ಣ ಅವಕಾಶವನ್ನು ಮಾಡಿಕೊಡಬೇಕು. ಅದಕ್ಕೆ ಸರಕಾರ ಕೂಡ ಸಿದ್ದರಿದ್ದಾರೆ-ಎಂದು ನಾನು ಭಾವಿಸುತ್ತೇನೆ. ನಾವೆಲ್ಲರೂ ಸಿದ್ಧರಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಸಭಾಧ್ಯಕ್ಷಿಣಿಯವರು, ತಾವು ಪೀಠಕ್ಕೆ ಬಬಂದಾಗಲೆಲ್ಲಾ ನಮಗೆ ನೋವು ಆಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅವರಿಗೆ ಸಂಪೂರ್ಣವಾದಂಥ ಅವಕಾಶವನ್ನು ಕೊಡಬೇಕಾಗಿದೆ. ಇದು ನಮ್ಮ ಪ್ರಜಾಪ್ರಭುತ್ವದಲ್ಲಿ ಮಾಡಿಕೊಂಡ ವ್ಯವಸ್ಥೆ, ತಾವುಗಳು ಮಾತನಾಡುವಾಗಲೆಲ್ಲ ಯಾವಾಗ ಮುಗಿಸುತ್ತೀರಿ ಅಂದರೆ ಮಾತನಾಡುವವರೇ ಏನು ಮಾಡಬೇಕು?

ಉಪಾಧ್ಯಕ್ಷಿಣಿಯವರು: ದಯಮಾಡಿ ತಾವುಗಳು ಕುಳಿತುಕೊಳ್ಳ ಬೇಕು...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಕುಳಿತುಕೊಳ್ಳಿ ಅಂದರೆ ಏನು? ನಮ್ಮ ಮಾತುಗಳನ್ನು ನೀವು ಕೇಳುವುದಿಲ್ಲವೆ?

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಸೇಳುವುದು ಸರಕಾರದ ಕರ್ತವ್ಯ. ನೀವು ಕೇಳುವುದಿಲ್ಲ ಅಂದರೆ ಅವರು ಹೇಳಬೇಕಾಗುತ್ತದೆ... ಹೀಗೆ..ಅಗೌರವ

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷಿಣಿಯವರು ಬಗ್ಗೆ ನನಗೆ ತುಂಬಾ ಗೌರವ ಇದೆ. ಅದನ್ನು ನೀವು ಕಲಿಸಿಕೊಡಬೇಕಾಗಿಲ್ಲ.

ಶ್ರೀ ಎಂ. ರಾಜಶೇಖರಮೂರ್ತಿ: ಅಧ್ಯಕ್ಷರೆ, ಇದು ಮುಖ್ಯವಾದ ವಿಚಾರ ಸಹಸ್ರಾರಿ ಜನರಿಗೆ ತೊಂದರೆಯಾಗಿದೆ. ಕೋಟಿಗಟ್ಟಲೆ ಆಸ್ತಿಪಾಸ್ತಿ ನಷ್ಟವಾಗಿದೆ, ಸರ್ಕಾರ ಇದನ್ನು ಚರ್ಚೆ ಮಾಡಬೇಕೆಂದು ಮನಸಿನಲ್ಲಿದ್ದೆ, ಅದಕ್ಕೋಸ್ಕರವೇ ನಾವೂ ಒಪ್ಪಿಕೊಂಡಿದ್ದೇವೆ. ಮಾನ್ಯ ಸದಸ್ಯರು ಎಷ್ಟು ದಿವಸ ಎಷ್ಟು ಮೊತ್ತವಾದರೂ ಚರ್ಚೆ ಮಾಡಬಹುದು, ಯಾವ ಸಲಹೆ ಕೊಟ್ಟರೂ ನಾವು ಸ್ವೀಕಾರ ಮಾಡುವುದಕ್ಕೆ ಸೇದ್ಧವಾಗಿದ್ದೇವೆ ಉತ್ತಮವಾದ ಸಲಹೆಗಳನ್ನು ಇಂಪ್ಲಿಮೆಂಟ್ ಮಾಡಲಿಕ್ಕೂ ನಾವು ತಯಾರಿದ್ದೇವೆ, ಎಷ್ಟು ಟೈಮ್ ಬೇಕಾದರೂ ತೆಗೆದುಕೊಳ್ಳಲಿ ಚರ್ಚೆ ಮಾಡಲಿ ಸಂತೋಷ.

ಶ್ರೀ ಆರ್.ವಿ ದೇಶಪಾಂಡೆ: ನಾನು ಹೇಳುತ್ತೇನೆಂದರೆ 9ನೇ ಆರ್ಥಿಕ ಕಮೀಷನ್‌ನಲ್ಲಿ ಕೆಲಮಿಟಿಸ್ ರಿಲೀಫ್ ಫಂಡಿಗೆ ನಿಜವಾದ ಸಹಾಯ ನೀವು ಮಾಡಲಿಕ್ಕಾಗುವುದಿಲ್ಲ. ಏಕೆಂದರೆ ಅವರಲ್ಲಿ ರಿಜವಾದ ನಾರ್ಮ್ಸ ಇವೆ, ಪ್ರಾಕ್ಟಿಕಲ್

ನಾರ್ಮ್ಸ್ ಇಲ್ಲ. ನಿಮಗೆ ಕೊಟ್ಟಿದ್ದುದು 27 ಕೋಟಿ ರೂಪಾಯಿ ಏನು ಮಾಡುತ್ತೀರಿ ಹೇಳಿ, ಇಂತಹ ಒಂದು ಅನಾಹುತವಾದಾಗ ಏನು ಮಾಡಲು ಸಾಧ್ಯ? ನಿಮ್ಮ ಕಡೆ ನಾವಿದ್ದರೂ ನಮಗೆ ಕಷ್ಟವಾಗುತ್ತಿತ್ತು. ನಾವು ಹೇಳಬಹುದು ಇಲ್ಲಿಂದ, ತಾವೂ ಕೂಡ ಲಿಬರಲಾಗಿ ಕೆಲವು ಕಡೆ ರಿಲ್ಯಾಕ್ಸ್ ಮಾಡಿದ್ದೀರಿ. ಆದರೆ ಅದು ಸಾಲದು. ಇಂತಹ ಒಂದು ಅನಾಹುತ this is unprecedented in the history of the ststs. ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ನೆಕ್ಸ್ಟ್ ಫೈನಾನ್ಸ್ ಕಮಿಷನ್ ಮುದೆ ಇದು ಬಂದಾಗ ಈ ನಾರ್ಮ್ಸ್ ರಿಲ್ಯಾಕ್ಸ್ ಆಗಬೇಕಾಗುತ್ತದೆ. Natiral by the stste Government. You have to take action on a warfooting. It will be effective also. ಇದು ಒಂದು ಕಡೆ. ಮತ್ತೊಂದು ಕಡೆ ಈ ವಿಶ್ವಬ್ಯಾಂಕ್ ಅಸಿಸ್ಟೆನ್ಸ್ I don't know whether you have said anything in this memoramdum. ನನಗೆ ಗೊತ್ತಿಲ್ಲ ಏಕೆಂದರೆ ಅದನ್ನು ನಾನು ನೋಡಿಲ್ಲ ಈಗ ನಾನು ಮಾತನ್ನು ಶುರುಮಾಡಿದನಂತರ ಕೇಂದ್ರಸರ್ಕಾರದಿಂದ ಸಹಾಯ ಏನು ಬಂದಿದೆ ಹೇಳಿ? ಸ್ಪೆಶಲ್ ಅಸಿಸ್ಟೆನ್ಸ್ ತಾವು ಕೇಳಿದ್ದೀರಿ ಆದರೂ ಯಾವ ಸಹಾಯವೂ ತಮಗೆ ಬಂದಿಲ್ಲ. ಪ್ರೈಮ್‌ಮಿನಿಸ್ಟರ್ ರಿಲೀಫ್ ಫಂಡ್‌ನಿನದ ಬಂದದಷ್ಟೇ ಹಣ 7E8 ಲಕ್ಷ ರೂ . ಯಾವ ಸರ್ಕಾರ ತಾನೇ? ಏನು ಮಾಡಲಿಕ್ಕೆ ಸಾಧ್ಯವಿದೆ? ತಾವು ಹೇಳಿ, ತಾವೇ ಅರ್ಥಸಚಿವರಿದ್ದೀರಿ, ನಮಗಿಂತ ತಮಗೆ ಒಳ್ಳೆಯ ಅನುಭವ ಇದೆ. ತಾವೇ ಹೇಳಿ 30 ಕೋಟಿ ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಕೋಟ್ಟಿದ್ದರೆ, ಈಗ ಥರ್ಡ್ ಫೋರ್ತ ಇಹ್‌ಸ್ಟಾಲ್‌ಮೆಂಟಿಗೆ ಕೆಲಮಿಟಿ ಫಂಡಿನಿಂದ ಕೊಟ್ಟಿದ್ದಾರೆ. ನಿಮ್ಮ ಫೈನಾನ್ಷಿಯಲ್ ಪೊಜೀಶನ್ ಏನಾಗಬಹುದು ಮುಂದಿನ ವರ್ಷ? ನಿಮ್ಮ ರಿಸೋರ್ಸಸ್ ಏನಾಗಬಹುದು? ನಿಮ್ಮ ಡೆವಲಪ್‌ಮೆಂಟ್ ವರ್ಕ್ಸ್ ಸ್ಟಾಂಡ್‌ಸ್ಟಿಲ್ ಆಗುವುದಿಲ್ಲವೇನು? ಈ ಪರಿಣಾಮಗಳನ್ನು ವಿಚಾರ ಮಾಡಬೇಕಿಲ್ಲ, ಹಾಗಾಗಿ ಸ್ಪೆಶಲ್ ಅಸಿಸ್ಟೆನ್ಸ್ ಬರಬೇಕಾದರೆ ಕೇಂದ್ರ ಸರ್ಕಾರ ಹಲ್ಪ ಸಹಾಯ ಮಾಡೇಬೇಕಾತ್ತದೆ. ಆ ಕೆಲಸ ಆಗಿಲ್ಲ ಹಾಗೆ ಸಹಾಯ ಮಾಡಿಲ್ಲ ಎಂದರೆ ಬೇಜವಾಬ್ದಾರಿ ಎಂದು ಹೇಳಿತ್ತೇನೆ. They have no right to stay in power. ಚಿಂತನೆ ಇಲ್ಲ, ಕೂಲಿಕಾರರ ಬಗ್ಗೆ ಚಿಂತನೆ ಇಲ್ಲ, ಅಂದರೆ ಅಧಿಕಾರದಲ್ಲಿ ಉಳುಯೋದಿಕ್ಕೆ ಕೇಂದ್ರಕ್ಕೆ ಏನು ಅಧಿಕಾರ ಇದೆ? ಇವತ್ತು ಒಂದು ಸ್ಕಾನಲ್ಲಿ 3000ಕೋಟಿ ರೂ. ಹೋಗುತ್ತದೆ. ಅದರ ಬಗ್ಗೆ ಚಿಂತನೆ ಇಲ್ಲ, ಲೂಟಿಮಾಡಿದ್ದಾರೆ, ರೈತರಿಗೆ 10-20-30ಕೋಟಿ ಕೊಡಬೇಕಾದರೆ ಸ್ಪೆಶಲ್ ಅಸಿಸ್ಟೆನ್ಸ್ ಏಕೆ ಕೊಡಬಾರದು? ತಾವು ಅದರ ಬಗ್ಗೆ ಫೈಟ್ ಮಾಡಬೇಕಾಗುತ್ತದೆ. ರಾಜ್ಯ ಸರ್ಕಾರ ಕೇಂದ್ರಸರ್ಕಾರದ ಮೇಲೆ ಒತ್ತಾಯ ತರಬೇಕಾಗುತ್ತದೆ. ಮತ್ತೊಂದು ನಾನು ನೋಡಿಲ್ಲ, ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸನಲ್ಲಿnow you have to take a programme of receonstruction. Total reconstruction programme ನೀವು ಡ್ರಾ ಮಾಡಬೇಕಾಗುತ್ತದೆ. ಹಾಗೆ ಮಾಡಲು ಇದು ಕೇವಲ ನಿಮ್ಮ ರಿಸೋರ್ಸಸ್‌ನಿಂದ ಮಾಡಲಿಕ್ಕೆ ಸಾಧ್ಯವಿಲ್ಲ,ಇದು ಇಂಪಾಸಿಬಲ್, ಇದು ಬಹಳ ಡಿಫಿಕಲ್ಟ್ ಆಗಬಹುದು, ಟೋಟಲ್ ರಿಕನ್‌ಸ್ಟ್ರಷನ್ ಪ್ರೋಗ್ರಾಮಿನಲ್ಲಿ ಮನೆಗಳನ್ನು ಕಟ್ಟಬೇಕಾಗುತ್ತದೆ ರೋಡ್ಸ್‌ಗಳನ್ನು ಬ್ರಿಡ್ಜಗಳನ್ನು ಕಟ್ಟಬೇಕಾಗುತ್ತದೆ. ಡಿಸಿಲ್ಟಿಂಗ್‌ವರ್ಕ್ಸ್ ತೆಗೆದುಕೊಳ್ಳ ಬೇಕಾಗುತ್ತದೆ, ಹೊಸ ಕಾಲೋನಿ ಕಟ್ಟಬೇಕಾಗುತ್ತದೆ, ಇದು ಫಾರ್‌ಫುಟಿಂಗ್‌ನಲ್ಲಿ ಆಗಬೇಕಾದರೆ 1990ರಲ್ಲಿ ಆಂಧ್ರಪ್ರದೇಶದಲ್ಲಿ ಸೈಕ್ಲೋನ್‌ನಲ್ಲಿ

ಆದಾಗ the AP Government has approached the Would Bank and they got Rs.180 crores which they spent for roads, bridges and desilsting of tanks, etc. ರಿಡ್ಯೂಬಿಲಿಟೇಶನ್ ಮತ್ತು ರಿಕನ್‌ಸ್ಟ್ರಷನ್ ಪ್ರೋಗ್ರಾಂ ಆಗದಬೇಕಾದರೆ ಈ ರಾಜ್ಯಸರ್ಕಾರದ ಸಂಪನ್ಮೂಲದಿಂದ ಆಗುವುದು ಕಷ್ಟವಿದೆ.

ಆ ಪ್ರಾಬ್ಲಮನ್ನು ನಾವು ಒಪ್ಪಿಕೊಳ್ಳುತ್ತೇವೆ. ಯಾವ ಸರ್ಕಾರಕ್ಕೂ ಕೂಡ ಇದು ಕಷ್ಟ ಇದೆ. ಇವತ್ತಿನ ತನಕ ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ತಾವಾಗಲಿ ವರ್ಲ್ಡ್ ಬ್ಯಾಂಕ್ ಅಪ್ರೋಚ್ ಆಗುತ್ತೇವೆ ಎಂದು ಹೇಳಿದ್ದನ್ನು ನಾವು ಪತ್ರಿಕೆಯಲ್ಲಿ ಎಲ್ಲಿಯೂ ಓದಿಲ್ಲ. By this time you should have approached the World Bank. ಯಾವ ಪ್ರಕಾರ ಆಂಧ್ರಪ್ರದೇಶ ಗೌರ್ನಮೆಂಟ್‌ನವರು ವರ್ಲ್ಡ್ ಬ್ಯಾಂಕ್ ಅಪ್ರೋಚ್ ಆಗಿದ್ದಕ್ಕೆ ಸಹಾಯ ಬಂತು. ಅದೇ ಪ್ರಕಾರ ಸಹಾಯವನ್ನು ಪಡೆದುಕೊಳ್ಳುವುದಕ್ಕೆ ತಾವು ಕೂಡ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಆ ತರಹದ ಸಹಾಯವನ್ನು ತಾವು ಪ್ರಯತ್ನ ಮಾಡಿದ್ದರೆ ಇವತ್ತು ನಿಜವಾಗಿಯೂ ಈ ರೀ-ತನ್ಸಟ್ರಕ್ಷನ್, ರೀ-ಹ್ಯಾಬಿಲಿಟೇಷನ್ ಪ್ರೋಗ್ರಾಮ್ ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ಆ ದೃಷ್ಟಿಯಿಂದ ತಾವು ಕಾರ್ಯಕ್ರಮವನ್ನು ಹಾಕಬೇಕು ಮತ್ತು ಕೋಂದ್ರಸರ್ಕಾರದ ಮೇಲೆ ಒತ್ತಡವನ್ನು ತಂದು ಇದಕ್ಕೆ ಮಂಜೂರನ್ನು ಸಹ ಅದಷ್ಟು ಬೇಗನೆ ತಂದು ಕೆಲಸವನ್ನು ಶುರು ಮಾಡಿಸಬೇಕಾಗುತ್ತದೆ. ಮತ್ತೊಂದು ಮಾತನ್ನು ನಿಮಗೆ ಹೇಳುತ್ತೇನೆ. ಅದೇನೆಂದರೆ ಪ್ರವಾಹದಿಂದ ಬೆಳೆ ಹಾಳಾಗುತ್ತದೆ, ನ್ಯಾಚುರಲ್ ಕೆಲಾಮಿಟಿಯಿಂದ ಹಾಳಾಗುತ್ತದೆ ಎಂದು ತಾವು ಹೇಳಬಹುಗು. How can we cent per cent help the farmer? ಯಾವ ರಾಜ್ಯಸರ್ಕಾರಕ್ಕೂ ಇದು ಕಷ್ಟ ಇದೆಯೆಂದು ತಾವು ಹೇಳಬಹುದು. ಅದಕ್ಕೆ ಒಂದು ಔಷದಿ ಇದೆ. "Crop Insurance" is one of the solutions, ಕೇಂದ್ರ ಸರ್ಕರದ ಕ್ರಾಪ್ ಇನ್‌ಸೂರೆನ್ಸ ಏನು ಇದೆ, ಬೆಳೆ ವಿಮಾ ಯೋಜನೆ ಏವನು ಇದೆ, ಅದು ಪ್ರಾಕ್ಟಿಕಲ್ ಇಲ್ಲ. ಅದು ನಿಮ್ಮ ಕಾಲದಲ್ಲಿಯೂ ಇಲ್ಲ, ನಮ್ಮ ಕಾಲದಲ್ಲಿಯೂ ಅದೇ ಪರಿಸ್ಥಿತಿ ಇತ್ತು. ನಾನೂ ಸಹಾ ಕೃಷಿ ಮಂತ್ರಿಯಾಗಿದ್ದಾಗ ಅದರ ಬಗ್ಗೆ ಸಾಕಷ್ಟು ಸಾರಿ ಕೇಂದ್ರ ಸರ್ಕರದ ಮೇಲೆ ಒತ್ತಾಯವನ್ನು ತಂದಿದ್ದೆ. ಇವತ್ತಿನ ಕ್ರಾಪ್ ಇನ್‌ಸೂರೆನ್ಸ್ ಪ್ರಕಾರ ತಾಲ್ಲೂಕು ವೈಸ್ ಯೂನಿಟ್ ಮಾಡಿದ್ದಾರೆ, ತಾಲ್ಲೂಕಿನ ಒಂದು ಭಾಗದಲ್ಲಿ ಬೆಳೆ ಹಾಳಾದರೆ ಎಲ್ಲಾ ರೈತರಿಗೂ ಏನೂ ಅನುಕೂಲವಾಗುವುದಿಲ್ಲ. ಕಳೆದ ಏಳೆಂಟು ವರ್ಷಗಳಿಂದ ಕ್ರಾಪ್ ಇನ್‌ಷ್ಯೂರೆನ್ಸ್ ಯೋಜಯಿಂದ ಏನೂ ಅನುಕೂಲವಾಗಿಲ್ಲ. ಕ್ರಾಪ್ ಇನರೆನ್ಸ ಸ್ಕೀಮ್ ಏನು ಇದೆ ಅಧನ್ನು ಇನ್ನೂ ಎಫೆಕ್ಟೀವ್ ಆಗಿ ಮಾಡಬೇಕಾಗುತ್ತದೆ. ಮಂಡಲ ಒಂದು ಯೂನಿಟ್ ಆಗಬೇಕಾಗುತ್ತದೆ. ಏಕೆಂದರೆ ಇವತ್ತು ಮಂಡಲ ಲೆವೆಲ್‌ಗೆ ಹೋಗಿದ್ದೇವೆ. ಮಂಡಲ ಲೆವೆಲ್‌ನ್ನು ತಾವು ಯೂನಿಟ್ ಮಾಡಿದಾಗ ಏನು ಆಗುತ್ತದೆ, ಒಂದು ಮಂಡಲದಲ್ಲಿ ಬೆಳೆ ಹಾಳಾದರೂ ಸಹಾ ಅಲ್ಲಿಯೂ ರೈತನಿಗೆ ಅನುಕೂಲವಾಗುತ್ತದೆ. ಅದು ಕೆಲಾಮಿಟಿ ಇರಬಹುದು, ಅದು ಡ್ರಾಪ್ ಇರಬಹುದು. ಇದು ಆದರೆ ನಿಜವಾಗಿಯೂ ರೈತನಿಗೆ ಇನ್‌ಷ್ಯೂರೆನ್ಸನಿಂದ ಹಣ ಬರುತ್ತದೆ. ಸರ್ಕಾರಕ್ಕೂ ಒತ್ತಡ ಕಡಿಮೆಯಾಗಿತ್ತದೆ. ಕ್ರಾಪ್ ಇನ್‌ಷ್ಯೂರೆನ್ಸ್‌ನ ಒಂದು ಡಿಫೆಕ್ಟ್, ತಾಲ್ಲೂಕು ಯೂನಿಟ್ ಮಾಡಿರುವುದು, ಮತ್ತೊಂದು ಡಿಫೆಕ್ಟ್ ಏನೆಂದರೆ ಯಾವ ರೈತರು ಬೆಳೆ ಸಾಲವನ್ನು ತೇಗೆದುಕೊಳ್ಳುತ್ತಾರೆ, ಅವರಿಗಷ್ಟೇ ಕ್ರಾಪ್ ಇನ್‌ಷೂರೆನ್ಸ.

(ಗೊಂದಲ)

ಇದಕ್ಕೆ ಯಾರು ಕಾರಣರು ಎಂದು ನೋಡಬೇಕಿಲ್ಲ ಸಾರ್. ನಿಮ್ಮ ಸರಕಾರದಿಂದ 35ಕೋಟಿ ರೂಪಾಯಿ ರಿಲೀಸ್ ಡಿಸಿಸಿ ಬ್ಯಾಂಕಿಗೆ ಆಗಬಬೇಕು, ಮಾನ್ಯ ಖರ್ಗೆ ಸಾಹೇಬರು ಉತ್ತರವನ್ನು ಕೊಡುತ್ತಿದ್ದರು. ನೀವು ಹಣವನ್ನು ರಿಲೀಸ್ ಮಾಡಿದರೆ ಅಲ್ಲಿ ವಯಬಿಲಿಟಿ ಬರುತ್ತದೆ.

ಶ್ರೀ ಕೆ.ಹೆಚ್.ರಂಗನಾಥ್: ಋಣ ನಿನ್ನೆ ಮೊನ್ನೆಯದಲ್ಲ. ಇದು ಹಳೆಯ ಹಣ.

ಶ್ರೀ ಆರ್.ವಿ.ದೇಶಪಾಂಡೆ: ನಾನು ಏನು ಹೇಳುತ್ತಿದ್ದೇನೆಂದರೆ ತಮ್ಮ ಕಾಲದಲ್ಲಿ ಬಾಕಿ ಉಳಿದಿತ್ತು, ನಮ್ಮ ಕಾಲದಲ್ಲೂ ಕೆಲವು ಬಾಕಿಗಳು ಉಳಿದಿವೆ.

(ಗೊಂದಲ)

ಶ್ರೀ ಕೆ.ಹೆಚ್.ರಂಗನಾಥ್: ಇವರೆಲ್ಲಾ ತೀರಿಸಿದ್ದರಂತೆ. ಮತ್ತೆ ಬಾಕಿ ದಿದೆ. ಮಾನ್ಯ ಯಡಿಯೇರಪ್ಪನವರಿಂದ ಬಿದ್ದಿರಬಹುದು. ಇದು ಅವರದೇ ಕಾಂಟ್ರಿಬ್ಯೂಷನ್.

(ಗೊಂದಲ)

ಸಾಲ ಮನ್ನಾ ಮಾಡಿ ಮತ್ತೆ ಇವತ್ತು ಏನು ಆಗಿದೆ, ಬೆಳೆ ಬಂದಿದೆ ನನ್ನ ಕ್ಷೇತ್ರದಲ್ಲಿ, ಕೆರೆಗಳು ತುಂಬಿವೆ. ಬೆಳೆ ಸಾಲಕ್ಕಾಗಿ ನಾವು ಹೇಗುವುದಕ್ಕೆ ಅಲ್ಲಿ ಸೊಸೈಟಿಗಳೇ ಇಲ್ಲ, ಜಿಲ್ಲಾ ಬ್ಯಾಂಕ್‌ನಲ್ಲೂ ಕೂಡ ದುಡ್ಡು ಇಲ್ಲ. Again we will to go back ot the traditional moneyËlenders. ಯಾರು ಎರಡು ಪರ್‌ಸೆಂಟ್,3 ಪರ್‌ಸೆಂಟ್, 4ಪರ್ಸೆಂಟ್ ಬಡ್ಡಿಯನ್ನು ತೆಗೆದುಕೊಳ್ಳುತ್ತಾರೆ, ಅವರೇಗೆ ತೊಂದರೆಯಾಗುತ್ತದೆಂದು ಇಲ್ಲೆಲ್ಲಾ ಹೊರಾಟವನ್ನು ಮಾಡಿತ್ತಿದ್ದರು. ಅವ್ಯವಸ್ಥೆ ಮಾಡೇವುದಕ್ಕೋಸ್ಕರ ಸೇವಾ ಸಂಘಗಳನ್ನು ನಾವು ಜಾರಿ ಮಾಡಿದ್ದೇವೆ. ಅದರ ಉಪಯೋಗ ಈಗ ಇಲ್ಲ.

(money-lender)

ಅವನು ನಾಳೆ ಬೆಳೆಯನ್ನು ತೆಗೆದುಕೊಂಡು ಸೋದರೆ ಬಡ್ಡಿ ಕೊಟ್ಟಿದ್ದು ಅಲ್ಲಿಗೆ ನಾಳೆ ಅವನ ಮನೆಗೆ ಅವನ ಅಂಗಡಿಗೆ ಬಿಟ್ಟಮೇಲೆ ಅವನು ಹೇಳುವ ಕಮೀಷನನ್ನು ಮುರಿದಿಕೊಳ್ಳುತ್ತಾನೆ. ದಳ್ಳಾಳಿ ಮಾರಾಟ ಮಾಡಿದಾಗ ಕಮೀಷನನನ್ನು ಮುರಿದುಕೊಳ್ಳಿತ್ತಾನೆ. ಅದಕ್ಕೆ ನಮ್ಮ ರತರು ತಲೆ ಕೊಡಬೇಕಾಗುತ್ತದೆ. This we have not been thinking here.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ಬಗ್ಗೆ ರೈತರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪರಿಹಾರ ಮಾಡುವುದಕ್ಕೆ ಏನಾದರೂ ಉಪಾಯಗಳನ್ನು ಕಂಡು ಹಿಡಿದಿದ್ದೀರಾ? ರೈತರ ಸಾಲಕ್ಕೆ ಈ ಸಮಸ್ಯಗೆ ದುಡಿದಂತಹ ಮನುಷ್ಯ ಅವರಿಗೆ ತಕ್ಕಂತೆ ಪ್ರತಿಪಲ ಕೊಡಲಿಕ್ಕೆ ಸರ್ಕಾರ ಏನಾದರೂ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಂಡಿದೆಯೋ? ಎಂದು ಕೇಳುತ್ತೇನೆ. ಮಾನ್ಯ ರಂಗನಾಥ್‌ರವರು ಈಗ ಸರ್ಕಾರದಲ್ಲಿ ಇದ್ದಾರೆ. ತಮ್ಮ ಸರ್ಕಾರ ಈ ಬಗ್ಗೆ ವಿಚಾರ ಮಾಡಿ ರೈತರ ಸಂಕಷ್ಟಗಳನ್ನು ದೂರ ಮಾಡಲಿಕ್ಕೆ ಏನಾದರೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆಯೇ?

ಅವರ ದುಡಿತಕ್ಕೆ ತಕ್ಕಂಥ, ಶ್ರಮಕ್ಕೆ ತಕ್ಕಂಥ ಪ್ರತಿಪಲಗಳನ್ನು ದೊರಕಿಸಿಕೊಡಲಿಕ್ಕೆ ಏನಾದರೂ ಯೋಚನೆ ಮಾಡಿದ್ದೀರಾ ಎಂದು ಕೇಳಿದೆ.

ಶ್ರೀ ಕೆ.ಎಚ್. ರಂಗನಾಥ್ : ರೈತರ ಪರ ಹಸಿರು ಶಾಲು ಹೊದ್ದುಕೊಂಡಿದ್ದೀರಲ್ಲ ತಾವು ಯೋಚನೆ ಮಾಡಬೇಕು.

ಶ್ರೀ ಪಿ.ಸಿ. ಸಿದ್ದನಗೌಡರ್ : ಹಾಗೆ ಹೇಳುವುದು ಅಷ್ಟೆ. ಅದನ್ನು ಪರಿಹಾರ ಮಾಡುವವರರು ನೀವು.

ಶ್ರೀ ಬಿ.ಎಚ್. ಬನ್ನಿಕೋಡ್ : ನಾವು ಇಟ್ಟಂತಹ ಸಮಸ್ಯೆಗಳನ್ನು ತಾವು ಹೇಳಿದಿರಿ. ಅದಕ್ಕೆ ಪರಿಹಾರ ತಮ್ಮಿಂದ ತಮ್ಮ ಸರ್ಕಾರದಿಂದ ಕೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಒಂದು ಮಾತನ್ನು ಒಪ್ಪಿಕೊಳ್ಳುತ್ತೇನೆ ನಿಜ. ನಮ್ಮ ರಾಮಕೃಷ್ಣ ಹೆಗಡೆ ಸರ್ಕಾರ ಇದ್ದಾಗ, ಮಾನ್ಯ ಬೊಮ್ಮಾಯಿ ಅವರ ಸರ್ಕಾರ ಇದ್ದಾಗ...

ಶ್ರೀ ಕೆ.ಹೆಚ್. ರಂಗನಾಥ್ : ಕೋ-ಆಪರೇಟಿವ್ ಇನ್‌ಸ್ಟಿಟ್ಯೂಷನ್‌ಸ ಕಾರವಾರ ಜಿಲ್ಲೆಯಲ್ಲಿ, ಧಾರವಾಡ ಜಿಲ್ಲೆಯಲ್ಲಿ, ಬಿಜಾಪುರದ ಜಿಲ್ಲೆಯಲ್ಲಿ, ಬೆಳಗಾಂ ಜಿಲ್ಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಮಂಡ್ಯ ಜಿಲ್ಲೆಯಲ್ಲಿ ಅಂದರೆ ಹಳೆ ಮೈಸೂರಿನ ಮಹದ್ಯ ಬಾಗದಲ್ಲಿ, ಹೈದರಾಬಾದ್ ಕರ್ನಾಟಕದ ಬೀದರ್ ಜಿಲ್ಲೆಯಲ್ಲಿ ಉತ್ತಮವಾಗಿ ಇತ್ತು. ಉತ್ತಮವಾಗಿ ಇದ್ದವು ಎಂದು ಹೇಳಿದರೆ ಸಣ್ಣ ಸಣ್ಣ ಹಳ್ಳಿಗಳಲ್ಲಿ ಬ್ಯಾಂಕುಗಳ ತರಹ ಅವು ಕೆಲಸ ಮಾಡುತ್ತಿದ್ದವು. ಈ ಎಲ್ಲಾ ಕಾರಣಗಳಿಂದ ಇವತ್ತು ಅಲ್ಲಿ ಏನು ಆಗಿದೆ? ಈ ನಿಮ್ಮ ಜಿಲ್ಲಾ ಬ್ಯಾಂಕುಗಳು ಇವತ್ತು ಸಾಲ ಕೊಡುವ ಪರಿಸ್ಥಿತಿಯಲ್ಲಿ ಇದ್ದಾವೋ? ಇವತ್ತು ಪತ್ತಿನ ಸಾಲವನ್ನು ಕೊಡುತ್ತಿದ್ದಾವೋ? ಆ ಪರಿಸ್ಥಿತಿ ಇಲ್ಲ- ಇವತ್ತು. We will have to think about it.

ಶ್ರೀ ಜಿ.ಸಿ. ಮಾಧುಸ್ವಾಮಿ : ಜನತಾ ದಳ ಸರ್ಕಾರ ಇದ್ದಾಗ, ಸುಸ್ತಿ ಬಡಿ ವಜಾ ಮಾಡಿಬಿಟ್ಟು ಸಹಕಾರ ಸಂಘಗಳನ್ನು ರೀವೈಟಲೈಸ್ ಮಾಡಿದ್ದುದ ಆಗ ಎಂದು ತಾವು ಒಪ್ಪಿಕೊಳ್ಳಬೇಕು. ಸನ್ಮಾನ್ಯ ಜಾಲಪ್ಪನವರನ್ನು ಇವತ್ತು ನಾವು ಜ್ಞಾಪಿಸಿಕೊಳ್ಳಬೇಕಾಗುತ್ತದೆ. ಕೋ ಆಪಕೇಟೀವ್‌ಸನಲ್ಲಿ ಸುಸ್ತಿ ಬಡ್ಡಿ, ತಕಾವಿ ಸಾಲಗಳು ಮನ್ನಾ ಆಯಿತು. ಅವತ್ತಿನ ಕಾಲದಲ್ಲಿ ನಿಮ್ಮ ಬ್ಯಾಂಕುಗಳು, ಕ್ರೆಡಿಟ್ ಇನ್‌ಸ್ಟಿಟ್ಯೂಷನ್ ಚಾಲೂ ಆಯಿಗು. ಮತ್ತೆ ಹಿಂದಕ್ಕೆ ತಂದವರು ತಾವೇ, ಯಡಿಯೂರಪ್ಪನವರು ಅಲ್ಲ, ನೀವು ಮ್ಯಾನಿಪೆಸ್ಟೋದಲ್ಲಿ ಹೇಳಿದ್ದೀರಿ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ನಮ್ಮ ಮತ ಕ್ಷೇತ್ರದಲ್ಲಿ ಬಾಷಣ ಮಾಡಿ ಬಂದರು. 10 ಸಾವಿರ ರೂಪಾಯಿಗಳವರೆಗೆ ಯಾರೂ ಸಾಲವನ್ನು ಕಟ್ಟಬೇಡಿ, ನಾನು ಮುಖ್ಯಮಂತ್ರಿಯಾಗಿ ಹೇಳುತ್ತಿದ್ದೇನೆ ಎಂದು ಬಾಷಣ ಮಾಡಿ ಬಂದರು. ಇದಕ್ಕೆ ಯಾರು ಉತ್ತರ ಹೇಳುವವರು?

ಶ್ರೀ ಕೆ.ಹೆಚ್. ರಂಗನಾಥ್ : ಮಾಧುಸ್ವಾಮಿಯವರಿಗೆ ಈ ವಿಷಯ ಅರ್ಥ ಗುತ್ತದೆ. ಅವರಿಗೆ ಅರ್ಥ ಆಗುವುದಿಲ್ಲ ಎಂದಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅರ್ಥವಾಗುವ ಹಾಗೆ ಹೇಳುತ್ತಿದ್ದೇನೆ. ಬಡ್ಡಿ ರಿಯಾಯತಿ, ಸುಸ್ತಿ ಬಡ್ಡಿ ಮನ್ನಾ ಆಯಿತು, ಇಷ್ಟು ಕೃಪೆಯನ್ನು ನಿಮ್ಮ ಸರ್ಕಾರ ಮಾಡಿದ್ದರೆ ಇವತ್ತು ರೈತರು ಬದುಕುತ್ತಿದ್ದರು.

ಶ್ರೀ ಕೆ.ಹೆಚ್. ರಂಗನಾಥ್ : ನಾವು ನೀವು ಎಲ್ಲರೂ ಸೇರಿ ಓಟಿಗೋಸ್ಕರ ಮಾಡಿದ್ದೇವೆ. ಮಾಡಿ ಇವತ್ತು ರೈತ ನೆಲ ಹಿಡಿದಿದ್ದಾನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸುಸ್ತಿ ಬಡ್ಡಿ ಮನ್ನಾ ಮಾಡುತ್ತೇನೆ. ಬಡ್ಡಿಯಲ್ಲಿ ರಿಯಾಯಿತಿ ಕೊಡುತ್ತೇವೆ ಎನ್ನುವಷ್ಟು ಕೃಪೆ ಮಾಡಿದ್ದರೆ ರೈತರು ಬದುಕಿರುತ್ತಿದ್ದರು.

ನಿಮ್ಮ ಇನ್‌ಸ್ಟಿಟ್ಯೂಷನ್‌ಸ ಬದುಕಿರುತ್ತಿದ್ದವು.

ಶ್ರೀ ಬಿ.ಎಸ್. ಯಡಿಯೂರಪ್ಪ : ರೆಕಾರ್ಡ್‌ನಲ್ಲಿ

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಕೋಟಿಗಟ್ಟಲೆ ದುಡ್ಡು ಹೋಗುತ್ತವೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ಕಡೆ ಕುಳಿತು ಬಡ್ಡಿ ಮನ್ನಾ ಮಾಡುತ್ತೇವೆ, ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದೆವು. ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ಅತಿ ವೃಷ್ಟಿಯಲ್ಲಿ ರೈತರಿಗೆ ಆಗಿರತಕ್ಕ ಬೆಳೆ ಹಾನಿ, ಅವರಿಗೆ ಆಗಿರತಕ್ಕ ಸಂಕಷ್ಟಗಳು ಎಷ್ಟು ಇದೆ, ಈಗಲಾದರೂ ಈ ಸಹಕಾರಿ ಸಂಘಗಳನ್ನು ಪುನಶ್ಚೇತನಗೊಳಿಸುವುದಕ್ಕೆ ರೈತರಿಗೆ ಸ್ವಲ್ಪವಾದರೂ ಸಹಾಯ ಮಾಡಬೇಕು. ರೈತರು ಸೃಷ್ಟಿ ವಿಕೋಪಕ್ಕೆ ಒಳಗಾಗಿದ್ದಾರೆ, ಅವರಿಗೆ ಇರತಕ್ಕ ಬಡ್ಡಿಯನ್ನಾದರೂ ಮನ್ನಾ ಮಾಡುತ್ತೇವೆ ಎಂದು ಹೇಳಿ.

ಶ್ರೀ ಕೆ.ಹೆಚ್. ರಂಗನಾಥ್ : ರೈತರಿಗೋಸ್ಕರ ರಿಸರ್ವ್ ಬ್ಯಾಂಕಿನಲ್ಲಿ ಪ್ರತ್ಯೇಕವಾದ ಹಣದ ವ್ಯವಸ್ಥೆ, ನಬಾರ್ಡ್‌ನ ಆಗಿದೆ. ಹಿಂದೆ ಅದು ಇರಲಿಲ್ಲ. 1960ರಿಂದ 1975ರ ಆ ಬಾಗದಲ್ಲಿ ನಬಾರ್ಡ್ ವ್ಯವಸ್ಥೆ ಇರಲಿಲ್ಲ. 1988ರ ನಂತರ ಇವತ್ತು ರಿಸರ್ವ್ ಬ್ಯಾಂಕಿನಲ್ಲಿ ಆ ವ್ಯವಸ್ಥೆ ಇದೆ. ಈ ಅನುಕೂಲ ಪಡೆದುಕೊಳ್ಳುವುದಕ್ಕೆ ನಮ್ಮ ಹತ್ತಿರ ಅಂತಹ ಸಹಕಾರಿ ಸಂಸ್ಥೆಗಳು ಇಲ್ಲ. ಇದನ್ನು ವಿಚಾರ ಮಾಡಿ.

ಛೇರ್ಮನ್ : ಅವರು ಮುಗಿಸಲಿ ಬಿಡಿ.

ಶ್ರಿ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷಿಣಿಯವರೆ.

(ಗೊಂದಲ)

ಶ್ರೀ ಪಿ.ಸಿ. ಯಡಿಯೂರಪ್ಪ : ಒಂದು ಕೋಟಿ ರೂಪಾಯಿ ಲಾಸ್ ಆಗಿದೆ ಅದನ್ನು ಏಕೆ ಕೇಳುವುದಿಲ್ಲ?

(ಗೊಂದಲ)

ಶ್ರೀ ಎಂ. ನಾರಾಯಣ ಸ್ವಾಮಿ : ಮಾನ್ಯ ರಂಗನಾಥ್‌ರವರು ಹೇಳಿದರು. ಬಿ.ಎಸ್. ಯಡಿಯೂರಪ್ಪನವರು, ನೀವು ನಾವು ಎಲ್ಲರೂ ಸ್ಟೇರಿ ಓಟಿಗೋಸ್ಕರ ಮಾಡಿದ್ದೇವೆ ಎಂದು.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಯಡಿಯೂರಪ್ಪನವರು ಪ್ರತಿ ಸೆಷನ್‌ನಲ್ಲೂ ಸಾಲ ಮನ್ನಾ, ಬಡ್ಡಿ ಮನ್ನಾ ಎಂದು ಹೇಳುತ್ತಾರೆ. ಶ್ರೀ ಆರ್.ದಯಾನಂದ ರಾವ್ ಅವರು ಸಾಲ ಮನ್ನಾ ಎಂದು ಹೇಳುವುದು ಓಟಿಗೋಸ್ಕರ ಅಷ್ಟೆ?

(ಗೊಂದಲ)

ಛೇರ್ಮನ್ : ಇಂಟರಪ್‌ಷನ್ಸ್ ಬೇಡ. ಅವರು ಮುಗಿಸಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : 2.10.89ರವರೆಗೆ ಈ ರಾಜ್ಯದಲ್ಲಿ , ದೇಶದಲ್ಲಿ ಯಾರೂ ಸಾಲ ಪಡೆದಿದ್ದಾರೆ ಸಹಕಾರಿ ಸಂಘಗಳಿಂದ, ಬ್ಯಾಂಕ್‌ಗಳಿಂದ, ಅದನ್ನು ಯಡಿಯೂರಪ್ಪ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಲಿಲ್ಲ. ಅವತ್ತು ಇದ್ದಂತಹ ಸನ್ಮಾನ್ಯ ಪ್ರಧಾನಿಯವರು ಹೇಳಿದರು. ಅದು ಪತ್ರಿಕೆಯಲ್ಲಿ ಬಂತು. ಲೋಕ ಸಭೆಯಲ್ಲಿ ಬಜೆಟ್ ಅಧಿವೇಶನದಲ್ಲಿ ಘೋಷಣೆ ಮಾಡಿದರು. ಅದನ್ನು ಇಂಪ್ಲಿಮೆಂಟ್ ಮಾಡದೇ ಇದ್ದ ಪರಿಣಾಮ, ಮತ್ತೆ ಮೂರು ವರ್ಷದ ಹಿಂದೆ ಚುನಾವಣೆ ನಡೆದಾಗ 10ಸಾವಿರ ರೂಪಾಯಿ ಸಾಲ ಮನ್ನಾ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟು ಈ ಸರ್ಕಾರ ಅಧಿಕಾರಕ್ಕೆ ಬಂತು. ಅಧಿಕಾರಕ್ಕೆ ಬಂದ ಮೇಲೂ ಸಹ ಸನ್ಮಾನ್ಯ ವೀರೇಂದ್ರಪಾಟೀಲರು ಮುಖ್ಯ ಮಂತ್ರಿಯಾಗಿದ್ದಾಗ ಸದನದೊಳಗೆ ಬಂದ ತಕ್ಷಣ ಮೂರು ದಿವಸ ಕಾರ್ಯಕಲಾಪ ಮಾಡದೇ ಧರಣಿ ಕುಳಿತುಕೊಂಡೆ. ಇದು ನೆನೆಗುದಿಗೆ ಬಿದ್ದಿದ್ದರಿಂದ ಇವತ್ತು ರೈತರು ತಬ್ಬಲಿಯಾಗಿದ್ದಾರೆ. ಓಟಿಗೋಸ್ಕರ ಯಾರು ರಾಜಕಾರಣ ಮಾಡಿದ್ದಾರೆ, ಅದು ಬೇರೆ ವಿಷಯ.

ಶ್ರೀ ಕೆ.ಹೆಚ್. ರಂಗನಾಥ್ : ಭಾಷಣ ಮಾಡುವುದು, ಧರಣಿ ಕುಳಿತುಕೊಳ್ಳುವುದು ಸುಲಭ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೇಂದ್ರ ಸರ್ಕಾರ ಹೇಳಿದ್ದನ್ನು ಇಂಪ್ಲಿಮೆಂಟ್ ಮಾಡಿ ಎಂದು ಹೋರಾಟ ಮಾಡಿದೆವು ಅಷ್ಟೇ.

ಶ್ರೀ ಕೆ.ಹೆಚ್. ರಂಗನಾಥ್ : ನಾನೂ ರೈತಾಪಿ ವರ್ಗದವನು. ರೂರಲ್ ಕಾನ್‌ಸ್ಟಿಟ್ಯುಯೆನ್ಸಿಯವನು. ತಾವೂ ರೂರಲ್ ಕಾನ್‌ಸ್ಟಿಟ್ಯುಯೆನ್ಸಿ. ಧರಣಿ ಕುಳಿತುಕೊಳ್ಳುವುದು ಅದು ಬೇರೆ ವಿಷಯ. ಮಾನ್ಯ ಬನ್ನಿಕೋಡ್ ಅವರು ಈ ಪರಿಸ್ಥಿತಿ ಬಂದಿದೆ ಎಂದು ಹೇಳುತ್ತಿದ್ದರು.

ನಿಮ್ಮ ಸೊಸೈಟಿ ಇವತ್ತು is it in a position to borrow money? ಸಾಲ ಪಡೆಯತಕ್ಕಂಥ ಶಕ್ತಿ, ಮರುಪಾವತಿಯನ್ನು ಮಾಡದೆ ಇದ್ದುದ್ದರಿಂದ ಅದು ನಶಿಸಿ ಹೋಗಿರುವುದರಿಂದ it is not in a position to borrow money.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕೆ ಯಾರು ಜವಾಬ್ದಾರಿ ?

ಶ್ರೀ ಕೆ.ಹೆಚ್. ರಂಗನಾಥ್ : ಜಿಲ್ಲಾ ಕೇಂದ್ರ ಬ್ಯಾಂಕ್‌ಗಳು they are not in a position to lend money. Apex Bank is not in a position to lend money. Who is responsible for this? Let us think about it.

ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಎಲ್ಲರೂ ಇದರ ಬಗ್ಗೆ ಸೀರಿಯಸ್ ಆಗಿ ವಿಚಾರ ಮಾಡಬೇಕು. ರಿಸರ್ವ್ ಬ್ಯಾಂಕ್‌ನಲ್ಲಿ ರೈತರಿಗೋಸ್ಕರ ಪ್ರತ್ಯೇಕವಾಗಿರತಕ್ಕಂಥ ಸಬಾರ್ಡ್ ವ್ಯವಸ್ಥೆ ಇದೆ. ಆದರ ಸದುಪಯೋಗವನ್ನು ನಾವು ಮಾಡಿಕೊಳ್ಳುತ್ತಿಲ್ಲ. ಇಷ್ಟು ಅನುಕೂಲ ಉದ್ದಿಮೆದಾರರಿಗೆ ಇದ್ದಿದ್ದರೆ ಅವರು 100 ಪರ್ಸೆಂಟ್ ಆದರ ಉಪಯೋಗವ್ನನು ಮಾಡಿಕೊಳ್ಳುತ್ತಿದ್ದರು. ನಾವು ಬಡ್ಡಿ ಬಡ್ಡಿ ಎಂದು ಹೇಳಿ, ಹೇಳಿ ಎಲ್ಲಾ ಹಾಳು ಮಾಡಿದ್ದೇವೆ. ಕಾರಣಾಂತರದಿಂದ ಸಾರಿ ಒಳ್ಳೆಯ ಬೆಳೆಯಾಗಿದೆ. ಕ್ರಾಪ್ ಲೋನ್ ಅನ್ನು ನಾವು ಎಲ್ಲಿ ಪಡೆದುಕೊಳ್ಳುತ್ತಿದ್ದೇವೆ? ಒಂದಾಣೆ ಸಾಲ ಇಲ್ಲದೆ ಇರತಕ್ಕ ರೈತ ಅವನೂ ಸಾಲ ಕೊಡಿ ಎಂದು ಕೇಳಿದರೆ ಹೇಗೆ? I am not in a position to borrow. ನಮ್ಮಂಥವರು ಕೇಳಿದರೆ ಜಿಲ್ಲಾ ಬ್ಯಾಂಕ್‌ನವರು ಕೊಡುವುದಿಲ್ಲ ಎಂದು ಹೇಳುತ್ತಾರೆ. ಆ ಪರಿಸ್ಥಿತಿಗೆ ಹಳ್ಳಿ ಮಟ್ಟದಲ್ಲಿರುವ ಸಹಕಾರ ಸಂಘಗಳನ್ನು ನಾವು ತಂದಿಟ್ಟಿದ್ದೇವೆ. ಇದಕ್ಕೆ ಯಾರು ಹೊಣೆ? Consciously we have erred. We have to retrace our steps back.

(ಮಾನ್ಯ ಉಪಾಧ್ಯಕ್ಷಣಿಯವರು ಪೀಠವನ್ನು ಅಲಂಕರಿಸಿದರು)

ಉಪಾಧ್ಯಕ್ಷಣಿಯವರು : ಮಾನ್ಯ ದೇಶಪಾಂಡೆಯವರೆ ತಾವು 12.15ಕ್ಕೆ ಶುರುಮಾಡಿದ್ದೀರಿ. ಈಗಾಗಲೇ ಒಂದು ಗಂಟೆಯಾಗಿದೆ. ಬೇಗ ಮುಗಿಸಿ. ನನ್ನ ಮುಂದೆ 23 ಜನರ ಹೆಸರು ಇದೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಗೈರುಹಾಜರಿಯಲ್ಲಿ ಮಾನ್ಯ ಕಂದಾಯ ಸಚಿವರು ಏನು ಹೇಳಿದರು ಅಂದರೆ ಈ ಬಗ್ಗೆ ಮುಕ್ತವಾಗಿ..

ಉಪಾಧ್ಯಕ್ಷಣಿಯವರು : ತಾವು ಮಾತನಾಡುವಾಗ ಅದರ ಬಗ್ಗೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಈ ಬಗ್ಗೆ ಮುಕ್ತವಾಗಿ ಸಮಗ್ರವಾಗಿ ಚರ್ಚೆ ನಡೆಯಲಿ ಎಷ್ಟು ದಿವಸ ಚರ್ಚೆ ನಡೆದರೂ ನಾನು ಕುಳಿತುಕೊಂಡು ಕೇಳಿ ಅದಕ್ಕೆ ಸಮಂಜಸವಾದ ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಿದರು. ಅವರನ್ನು ತಾವು ಬಂದು ಎಷ್ಟೊತ್ತು ಸಮಯಬೇಕೆಂದು ಕೇಳಿದರೆ ಕಷ್ಟವಾಗುತ್ತದೆ. ಈ ಚರ್ಚೆಯನ್ನು ತಾವು 2.00 ಗಂಟೆಯೊಳಗೆ ಮುಗಿಸಿ ಮುಂದೆ ಬೇಕಾದರೆ ಸೋಮವಾರ ಇದರ ಬಗ್ಗೆ ಮಾತನಾಡೋಮ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಹಿರಿಯರಾದಂಥ ರಂಗನಾಥ್‌ರವರು ಏನು ಹೇಳಿದ್ದಾರೆ ಅದು ನಿಜ, ಕಷ್ಟದಲ್ಲಿದ್ದೇವೆ. ರೈತರಿಗೆ ನಾವು ಸಹಾಯ ಮಾಡುವುದಕ್ಕೆ ಆಗುತ್ತಿಲ್ಲ. ಇದಕ್ಕೆ ಯಾರು ಜವಾಬ್ದಾರರೆಂದು ಕುಳಿತುಕೊಂಡು ಚರ್ಚೆ ಮಾಡಬೇಕಾಗುತ್ತದೆ. ಮಾನ್ಯ ಕಂದಾಯ ಸಚಿವರು ಅವರು ಆರ್ಥಿಕ ಮಂತ್ರಿಯಾಗಿದ್ದಾಗ ಒಂದು ಮಾತನ್ನು ಹೇಳಿದರು. ಎಲ್ಲಾ ಸರ್ಕಾರಗಳು ಹೋದಾಗ, ಎಲ್ಲರ ಕಾಲದಲ್ಲಿಯುಬ ಕೆಲವು ರ್‍ಯೂಸ್ ಇರುತ್ತವೆ. ಮಾನ್ಯ ಗುಂಡೂರಾಯರ ಸರ್ಕಾರ ಇದ್ದಾಗಲೂ ಡ್ಯೂ ಇತ್ತು. ಅದನ್ನು ನಾವು ಕೊಟ್ಟಿದ್ದೇವೆ, ರೈತನಿಗೆ

ನಮ್ಮ ಸರ್ಕಾರದ ಬೆಂಬಲ ಇದ್ದಾಗ ನಾವು ಸಂದಾಯ ಮಾಡಬೇಕು ಎನ್ನತಕ್ಕದ್ದನ್ನು ಮಾಡಿ ಬಡ್ಡಿ ಮನ್ನಾ ಮಾಡಿದ್ದೆವು. ಸುಸ್ತಿ ಬಡ್ಡಿ ಮನ್ನಾ ಮಾಡಿದ್ದೆವು. ಆಗ್ರೋ ಇಂಡಸ್ಟ್ರಿಸ್ನಿಂದ ಲೋನ್ ಸಿಕ್ಕಿ ಅದನ್ನು ವೈಸ್‌ಔಟ್ ಮಾಡಿದ್ದೆವು. ಮಾನ್ಯ ವಿ.ಪಿ. ಸಿಂಗ್ ರವರು ಸಾಲಮನ್ನಾ ಕಾರ್ಯಕ್ರಮ ತೆಗೆದುಕೊಂಡು ಅವರೂ ಸಹಾಯ ಮಾಡಿದ್ದರು. ಸ್ವಲ್ಪ ಉಳಿದಿದ್ದ ಹಣವನ್ನು ನೀವು ಕೊಟ್ಟಿದ್ದುದು ನಿಜ. ನೀವು ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಸಹಕಾರ ಸಂಘಗಳು ಪ್ರೈಮರಿಬ್ಯಾಂಸ, ಮತ್ತು ಡಿ.ಸಿ.ಸಿ. ಬ್ಯಾಂಕ್ಗಳು ಐತಕ್ಕೆ ಸಾಲ ಕೊಡಲಿಕ್ಕೆ ಆಗುತ್ತಿಲ್ಲ ಅಂದರೆ ವಯಬಿಲಿಟಿ ಇಲ್ಲ, ನಬಾರ್ಡ್ ಪ್ರಕಾರ 65 ಪರ್ಸೆಂಟ್ ಬಿಲೋ ರಿಕವರಿ ಇದ್ದರೆ ಯಾವ ಬ್ಯಾಂಕಿಗೂ ಅನ್ರಿಸ್ಟ್ರಿಕ್ರಟೆಡ್ ಫೈನಾಸ ಕೊಡುವ ಅರ್ಹತೆ ಇಲ್ಲ. ಅನ್ರಿಸ್ಟ್ರಿಕ್ರೆಟೆಡ್ ಅರ್ಹತೆ ಬರಬೇಕಾದರೆ ವಸೂಲಾತಿಯಾಗಬೇಕಾಗುತ್ತದೆ. ಮಾನ್ಯ ಸಹಕಾರ ಸಚಿವರು ನಿನ್ನೆ 35Ë40 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಈ 35Ë40 ಕೋಟಿ ರೂಪಾಯಿ ಅಪೆಸ ಮತ್ತು ಡಿ.ಸಿ.ಸಿ. ಬ್ಯಾಂಕ್ಗೆ ಹೋದರೆ ಎಷ್ಟೋ ವಯಾಬಿಲಿಟಿ ಬರಬಹುದು. ಅದಕ್ಕೆ ತಾವು ಪ್ರಾತಿನಿಧ್ಯ ಹಣವನ್ನು ಬಿಡುಗಡೆ ಮಾಡಿದರೆ ಒಳ್ಳೆಯದು. ಇವತ್ತು ನನಗೆ ಬಂದಿರುವ ಮಾಹಿತಿಯ ಪ್ರಕಾರ ನಮ್ಮ ರಾಜ್ಯದಲ್ಲಿ ಅಗ್ರಿಕಲ್ಚರಲ್ ಹೊಲ್ಡಸಗೆ ನಾವೇನು ಲಾಂಗ್ term ಸಾಲ ಕೊಟ್ಟಿದ್ದೇವೆ.it is hardly 14 to 16%. Under shortËterm loan, it is not more than 22%.

ಅದರಿಂದ ಎಷ್ಟೋ ರೈತರಿಗೆ ಸಹಾಯ ಆಗಬೇಕಾಗಿದೆ. ಈ ರಿಪಾಲಟಸ ಆಗಿರುವುದರಿಂದ ಸಹಾಯ ಆಗುತ್ತಿಲ್ಲ. ಎಲ್ಲಿ ತಪ್ಪಿದೆ ಎಂದು ನಾವು ಕುಳಿತುಕೊಂಡು ನೋಡಬೇಕು. ನಾವು ನಿಮ್ಮ ಮೇಲೆ ಜವಾಬ್ದಾರಿಯ್ನನು ಹಾಕಬೇಕೆಂದು ಹೋಗುತ್ತಿಲ್ಲ. ಸರ್ಕಾರದಿಂದ ಏನು ಪರಿಹಾರ ಕಾಮಗಾರಿಗಳು ಇವತ್ತು ನಡೆದಿದೆ ಅದು ಸಾಲದು.

1.20 ಪಿ. ಎಂ.

ಅದು ಸಾಲದು, ಇನ್ನು ಚುರುಕಾಗಬೇಕಾಗಿದೆ. ಇದು ಸಮರೋಪಾದಿಯಲ್ಲಿ ನಡೆಯಬೇಕಾಗಿದೆ. ನಿಮ್ಮಂಥ ಒಬ್ಬ ಹಿರಿಯರು, ದಕ್ಷ ಮತ್ತು ಅನುಬವ ಇರುವ ಸಚಿವರಿದ್ದಾಗ ಯಾವುದೇ ಜಡತೆ ಅಥವಾ ಆಲಸ್ಯ ಇರಬಾರದು. ಅಧಿಕಾರಿಗಳು ಒಳ್ಳೆಯ ಕೆಲಸ ಮಾಡಿದ್ದಾರೆ. ಅವರನ್ನು ಮೆಚ್ಚಿ, ನೀವು ಅವರಿಗೆ ಸರ್ಟಿಫಿಕೇಟ್ ಕೊಡಿ. ಆದರೆ, ಎಲ್ಲಿ ಕೆಲಸ ಆಗುತ್ತಿಲ್ಲ, ಅಲ್ಲಿ ಕ್ರಮ ತೆಗೆದುಕೊಳ್ಳಿ. ರೈತರು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ನಾನು ತಮಗೆ 3Ë4 ಸಲಹೆಗಳನ್ನು ಕೊಟ್ಟೆ. Creation of natural calamity World Bank assistance and change the norms.

ಕ್ರಾಪ್ ಇನ್ಶ್ಯೂರೆಸ ಬಗ್ಗೆ ನಾನು ಮಾತನಾಡುವಾಗ ಹೇಳಿದೆ. Crop insurance is linked to,loan ಇದು ಆಗಬಾರದು, ಜೋವರ್ ಆಗಿರಬಹುದು Sugarcane is not covered ತಾವು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು All crops are to be included ; it should not be linked to loan.

ಯಾರೋ ರೈತರಿಂದ, ಇದನ್ನು ಕಡ್ಡಾಯ ಮಾಡಿದರೆ ತೊಂದರೆಯಿಲ್ಲ. ಈ ರೀತಿ ಮಾಡಿದರೆ ರೈತರ ಹಿತದೃಷ್ಟಿ ಕಾಪಾಡಿದಂತಾಗುತ್ತದೆ. ನಾವು ಇನ್ಶ್ಯೂರೆಸ ಮತ್ತು ಪ್ರೀಮಿಯಂ ತೆಗೆದುಕೊಳ್ಳುವುದಿಲ್ಲವೆನ್ನುವ ಒಂದು ರೀತಿ ಬಯ ರೈತರಿಗಿದೆ.

ಏಕೆಂದರೆ, ಇದು ತಾಲ್ಲೂಕು ಯೂನಿಟ್ಟಿಂದ ತೆಗೆದುಕೊಂಡರೆ ಅವನಿಗೆ ಖಚಿತವಾಗಿಯೂ ಲಾಭವಾಗುತ್ತದೆ. ಅಲ್ಲದೆ, ಇದರಿಂದ ಸರ್ಕಾರದಿಂದ ಜವಾಬ್ದಾರಿಯೂ ಕಡಿಮೆಯಾಗುತ್ತದೆ. ಆ ದೃಷ್ಟಿಯಿಂದ ಸರ್ಕಾರ ಕ್ರಮ ತೆಗದುಕೊಳ್ಳಬೇಕಾಗುತ್ತದೆ. ಮತ್ತು ನೆರೆ ಹಾವಳಿಗೆ ಕಾರಣವಾಗುವ especially coastal talukas ಇದಕ್ಕೂ ಸಹ ತಾವು ಕೆಲವು ಶಾಶ್ವತವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಕೋಸ್ಟಲ್ ತಾಲ್ಲೂಕುಗಳಲ್ಲಿ ಸೀ ಎರೋಡ ವಸ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಈ ಒಂದು ಕಾರ್ಯಕ್ರಮವನ್ನು ತಮಿಳುನಾಡಿನಲ್ಲಿ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರವು ಸಹ ಇದರ ಬಗ್ಗೆ ವಿಚಾರ ಮಾಡುತ್ತಿದೆ. ಇದರ ಬಗ್ಗೆ ಒಂದು ಶಾಶ್ವತವಾದಂಥ ವ್ಯವಸ್ಥೆಯಾಗಬೇಕು. ಒಂದು ಕೋಸ್ಟಲ್ ಡೆವಲಪ್ಮೆಂಟ್ ಅಥಾರಿಟಿ ಮಾಡಬೇಕು. ಅದು ಸೀ ಎರೋಜನ್ ವಸ ಬಗ್ಗೆ ಇರಬಹುದು, ಮತೊಂದು ಇರಬಹುದು. ಈ ನೆರೆ ಹಾವಳಿಯನ್ನು ಖಾಯಂ ಆಗಿ ಯಾರಿಂದಲೂ ತಪ್ಪಿಸವುದಕ್ಕಾಗುವುದಿಲ್ಲ. ಅದು ನಿಸರ್ಗದತ್ತ ಪ್ರಶ್ನೆ. ಆದರೆ, ಅದು ಮಿನಿಮೈಸ್ ಆಗುವುದಕ್ಕೆ ತಾವು ಪ್ರಯತ್ನ ಪಡಬೇಕು. ಮತ್ತು ಮಾಜಿ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ಒಂದು ಮಾತನ್ನು ಹೇಳಿದ್ದಾರೆ.

ಏನೆಂದರೆ, ನೆರೆ ಹಾವಳಿಯಿಂದ ನೊಂದವವಿಗೆ ಪರಿಹಾರ ಕೊಡಿಸುವ ಕೆಲಸ ಸರಿಯಾಗಿಲ್ಲವೆಂದು.

ರಾಣಿಬೆನ್ನೂರಿನಲ್ಲಿ ಇದರ ಬಗ್ಗೆ ಒಂದು ಹೇಳಿಕೆ ಕೊಟ್ಟಿದ್ದಾರೆ. ನಾನು ವಿರೋಧ ಪಕ್ಷದ ನಾಯಕನಾಗಿ ಈ ಆಪಾದನೆ ಮಾಡುತ್ತಿಲ್ಲ. ನಿಮ್ಮ ಪಕ್ಷದವರೇ ಆದಂಥ ಮಾಜಿ ಮುಖ್ಯಮಂತ್ರಿಗಳು ಈ ಮಾತನ್ನು ಹೇಳಿದ್ದದಾರೆ. ಹಾಗಾಗಿ, ತಾವು ಎಲ್ಲಾ ಕೆಲಸವನ್ನು ಸಮರೋಪಾದಿಯಲ್ಲಿ ಮಾಡಬೇಕಾಗಿದೆ ಮತ್ತು ನೀವು ಕೇಂದ್ರ ಸರ್ಕಾರದ ಮೇಲೆ ತರುತ್ತಿರುವ ಒತ್ತಡ ಕಡಿಮೆ ಎಂದು ಕಾಣಿಸುತ್ತದೆ. ಸ್ಪೆಷಲ್ ಅಸಿಸ್ಟೆನ್ಸ್ ಬಗ್ಗೆ ತಾವು ಫೈಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ, ನಿಮಗೆ ಎಷ್ಟೇ ಸಹಾಯ ಮಾಡಬೇಕೆಂಬ ಒಳ್ಳೆಯ ಮನಸ್ಸಿದ್ದರೂ ನಿಮ್ಮ ಖಜಾನೆಯಿಂದ ಸಹಾಯ ಮಾಡುವುದಕ್ಕೆ ಅಸಾಧ್ಯವಾಗುತ್ತದೆ. ಹಾಗಾಗಿ, ಅದರ ಕಡೆ ತಾವು ಹೆಚ್ಚಿನ ಗಮನ ಕೊಡಬೇಕು. ಅಲ್ಲದೆ, ಕೇಂದ್ರ ಸರ್ಕಾರದ ಮೇಲೆ ಹೆಚ್ಚಿನ ಒತ್ತಡ ತಂದು, ಹೆಚ್ಚಿನ ಗಮನ ಕೊಡಬೇಕು. ಅಲ್ಲದೆ, ಕೇಂದ್ರ ಸರ್ಕಾರದ ಮೇಲೆ ಹೆಚ್ಚಿನ ಒತ್ತಡ ತಂದು, ಹೆಚ್ಚಿನ ನೆರವು ತಂದು ರೈತರಿಗೆ ಅನುಕೂಲ ಮಾಡಿಕೊಡಬೇಕು. ಈ ರಾಜ್ಯದ ರೈತರು, ಕೂಲಿಗಾರರು ಬಹಳ ಕಷ್ಟದಲ್ಲಿದ್ದಾರೆ. ಇಂತಹ ಒಂದು ಸಮಯದಲ್ಲಿ ನಾನು ರಾಜಕೀಯ ಮಾಡುವುದಕ್ಕೆ ಹೋಗುತ್ತಿಲ್ಲ, ನಾವು-ನೀವು ಕೂಡಿ ಎಷ್ಟು ರೈತರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವೋ ಅಷ್ಟು ಬಡ ರೈತರಿಗೆ ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನಿಸೋಣ. ಅವರಿಗೆ ಅನುಕೂಲ ಮತ್ತು ಸಹಾಯ ಮಾಡುವುದಕ್ಕೆ ನಮ್ಮ ಸರ್ಕಾರ ಎಲ್ಲಾ ರೀತಿಯ ಪ್ರಯತ್ನ ಮಾಡಬೇಕು. ಇಷ್ಟರೊಳಗೆ ಪರಿಹಾರದ ಕೆಲಸ ನಡೆಯಬೇಕಾಗಿತ್ತು. ಆದರೆ, ತಾವು ಇಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ. ತಾವು ಮುಖ್ಯ ಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡ ತಕ್ಷಣ ನೆರೆ ಹಾವಳಿ ಪೀಡಿತ ಪ್ರದೇಶಗಳಿಗೆ ಭೇಟಿ ಕೊಟ್ಟಿದ್ದೀರಿ. ಮಾನ್ಯ ಘೋರ್ಪಡೆಯವರು ಮತ್ತು ರಂಗನಾಥ್ ನವರೂ ಸಹ ಸ್ಥಳಗಳಿಗೆ ಭೇಟಿ ಕೊಟ್ಟಿದ್ದಾರೆ. ಇದನ್ನು ನಾನು ಖಂಡಿತವಾಗಿ ಮೆಚ್ಚಿದ್ದೇನೆ. ತಾವು ಹೊಸ ಮಂತ್ರಿ ಮಂಡಲವನ್ನು ರಚಿಸಿದ ನಂತರ ಅಲ್ಲಿಗೆ ಹೋಗಿ ಬರುವ

ಪ್ರಯತ್ನ ಮಾಡಿದ್ದೀರಿ. ಆದರೆ, ಪರಿಹಾರ ಕಾರ್ಯಗಳು ಏನು ನಡೆಯಬೇಕಾಗಿತ್ತೋ, ಅದು ಸರಿಯಾಗಿ ನಡೆದಿಲ್ಲ; ಮಾನ್ಯ ಮುಖ್ಯ ಮಂತ್ರಿಗಳು ಕೆಲವು ನಾರ್ಮ್ಸ್ ಅನ್ನು ಲಿಬರಲೈಸ್ ಮಾಡಿದ್ದಾರೆ. ನೆರೆ ಹಾವಳಿ ಸಂದರ್ಭದಲ್ಲಿ ಯಾರ ಆಸ್ತಿ -ಪಾಸ್ತಿಗೆ ನಷ್ಟವಾಗಿದೆ, ಪ್ರಾಣಹಾನಿಯಾಗಿದೆ, ಅವರಿಗೆ ಕೊಟ್ಟಿರುವ ಪರಿಹಾರ ಸಾಲದು. ಆ ಸಂದರ್ಬದಲ್ಲಿ ಏನೇನು ಹಾನಿಯಾಗಿದೆ ಎಂಬುದರ ಬಗ್ಗೆ ಮೊನ್ನೆ ದಿವಸ ಬರವಣಿಗೆಯಲ್ಲಿ ಏನು ಕೊಟ್ಟಿದ್ದೀರಿ. ಅಷ್ಟೇ ಪ್ರೀತಿಯಿಂದ ತಾವು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇತ್ತೀಚೆಗೆ ನೆರೆ ಹಾವಳಿ ಬಂದು ಏನೇನು ಅನಾಹುತಗಳಾಗಿವೆ, ಇಂತಹ ಅನಾಹುತಗಳು ನಮ್ಮ ದೇಶದಲ್ಲಿ ಮುಂದೆಂದೂ ಘಟಿಸಬಾರದೆಂದು ನಾವು ದೇವರನ್ನು ಪ್ರಾರ್ಥಿಸಿಕೊಳ್ಳಬೇಕಾಗುತ್ತದೆ. ಇಂತಹ ಅನಾಹುತಗಳನ್ನು ನನ್ನ ಜೀವಮಾನದಲ್ಲಿ ಹಿಂದೆದೂ ನೋಡಿರಲಿಲ್ಲ. ಈ ದಿಸೆಯಲ್ಲಿ ಪರಿಹಾರ ಕಾರ್ಯಗಳಿಗೆ ಯಾವ್ಯಾವ ಜಿಲ್ಲೆಗಳಿಗೆ ಸರ್ಕಾರ ಎಷ್ಟೆಷ್ಟು ಹಣವನ್ನು ಕೊಡಬೇಕೋ, ಅಷ್ಟನ್ನೂ ಭರಿಸಬೇಕಾಗುತ್ತದೆ.

ನೆರೆ ಹಾವಳಿಯಾದಂಥ ಸಂದರ್ಭದಲ್ಲಿ ನಾನು ಹಳ್ಳಿ ಹಳ್ಳಿಗೂ ಹೋಗಿ ಬಂದಿದ್ದೇನೆ. ನನ್ನ ಅಂದಾಜಿನ ಪ್ರಕಾರ The losses are not less than 600Ë700 crores of rupees. ಆ ಕ್ರಾಪ್ ಲಾಸಸ್, ಮನೆಗಳು ಬಿದ್ದುಹೋಗಿರುವುದು ಅದನ್ನು ಸರಿಯಾಗಿ ಅಸಿಸ್ಮೆಂಟ್ ಮಾಡಿಲ್ಲ. ಅಧಿಕಾರಿಗಳು ಕೆಲವು ಕಡೆ ನಾವು ಹೇಗೆ ಅಸೆಸ್ ಮೆಂಟ್ ಮಾಡಬೇಕು 10Ë12 ಹಳ್ಳಿಗಳಲ್ಲಿ ತುಂಬಾ ನಷ್ಟವಾಗಿದದೆ ಆದರೆ ನಮ್ಮ ಹತ್ತಿರ ವಾಹನಗಳಿಲ್ಲ, ನಮ್ಮ ಹತ್ತಿರ ಸಿಬ್ಬಂದಿ ಇಲ್ಲ ಎಂದು ಹೇಳಿದರು. ಮತ್ತೆ ಕೆಲವು ಕಡೆ ಕುಳಿತು ಅಸೆಸ್‌ಮೆಂಟ್ ಮಾಡಿದ್ದಾರೆ. ಆ ಕೆಲಸ ಆಗಬಾರದು. ಕಡೆಯ ಪಕ್ಷ ರೈತರಿಗೆ ಬೆಳೆ ನಷ್ಟವಾದ್ದಕ್ಕೆ ಪರಿಹಾರವೂ ಸಹ ಸಿಕ್ಕಿಲ್ಲ, ಧಾರವಾಡದಲ್ಲಿ ಮತ್ತು ರಾಯಚೂರಿನಲ್ಲಿ ನಾನು ಹೋಗಿದ್ದಾಗ ಅವರು ನನ್ನನ್ನು ಭೇಟಿಯಾಗಿದ್ದಾರೆ. ಅವರಿಗೆ ಪರಿಹಾರ ಸಿಕ್ಕಿಲ್ಲ. ಈ ಅಯೋಧ್ಯೆಯ ಘಟನೆಯ ಕಾರಣದಿಂದಾಗಿ ಅದು ಆಗಿರಬಹುದು. ಆದರೆ ಆ ರೀತಿ ಆಗಬಾರದು. ಎಲ್ಲಾ ದೃಷ್ಟಿಯಿಂದಲೂ ರೈತರಿಗ ಅನುಕೂಲವಾಗುವುದಕ್ಕೆ ರೈತರಿಗೆ ಸಹಾಯವಾಗುವುದಕ್ಕೆ, ನಮ್ಮ ಸರ್ಕಾರ ಎಲ್ಲಾ ಪ್ರಯತ್ನಗಳನ್ನು ಮಾಡಬೇಕು, ಅದಕ್ಕೆ ನಮ್ಮ ಸಹಕಾರವೂ ಕೂಡ ಸಂಪೂರ್ಣವಾಗಿದೆ. ಈ ಒಂದು ವಿಚಾರದಲ್ಲಿ ಸದನದ ಮುಂದೆ ಕೆಲವು ವಿಷಯವನ್ನಿಡಲು ಅವಕಾಶ ಮಾಡಿಕೊಟ್ಟ ಮಾನ್ಯ ಉಪಾಧ್ಯಕ್ಷಣೆಯವರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಣೆಯವರು : ಮಾನ್ಯ ವಾಟಾಳ್ನಾಗರಾಜ್ ರವರು ಗೃಹನಿರ್ಮಾಣ ಸಹಕಾರಿ ಸಂಘಗಳ ಬಗ್ಗೆ ಏನೋ ಒಂದು ವಿಷಯವನ್ನು ಎತ್ತಿದ್ದರು. ಅವರು ಅದರ ಬಗ್ಗೆ ಸ್ವಲ್ಪ ಸ್ಟೇಟ್ ಮೆಂಟ್ ಮಾಡಲು ಅವಕಾಶ ಕೊಡುತ್ತೇನೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ಶ್ರೀ ಜಿ.ವಿ.ಕೆ. ರಾವ್ ಸಮಿತಿಯ ವರದಿಯ ಬಗ್ಗೆ ಪ್ರಸ್ತಾಪ

+ ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಉಪಾಧ್ಯಕ್ಷಣೆಯವರೆ, ಇಲ್ಲಿ ಏನೇನನ್ನೋ ಎತ್ತಲು ಸಾಧ್ಯವಾಗುವುದಿಲ್ಲ. ನಾನು ಇಲ್ಲಿ ಏನೋ ಒಂದನ್ನು

ಎತ್ತಿಲ್ಲ, ನನ್ನ ಪ್ರಶ್ನೆಯನ್ನು ಹೆಲ್ಡ್‌ಓವರ್ ಮಾಡಿ ಮುಂದಕ್ಕೆ ಹಾಕಿದ್ದನ್ನು ಈಗ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಸುಮಾರು 7 ವರ್ಷಗಳ ಹಿಂದೆ ಜಿ.ವಿ.ಕೆ. ರಾವ್ ಸಮಿತಿಯು ಗೃಹನಿರ್ಮಾಣ ಮತ್ತು ಸಹಕಾರ ಸಂಘಗಳ ಮೇಲೆ ಇರತಕ್ಕ ಆರೋಪಗಳನ್ನು ವರದಿ ಮಾಡಿತ್ತು, ಸರ್ಕಾರವೇ. ಆ ಸಮಿತಿಯನ್ನು ರಚಿಸಿತ್ತು. ಆ ಸಮಿತಿಯು ವರದಿಯು ಸರ್ಕಾರಕ್ಕೆ ಬಂದು 7 ವರ್ಷಗಳಾಗಿದೆ. ಆ ವರದಿ ಏನಾಗಿದೆ? ಅಂಥ ಸಂಘ ಸಂಸ್ಥೆಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಆ ಸಂಘ ಸಂಸ್ಥೆಗಳ ಪದಾಧಿಕಾರಿಗಳುಮಾಡಿರತಕ್ಕ ಭ್ರಷ್ಟಾಚಾರ, ಹಗಲುದರೋಡೆ, ಲೂಟಿಯ ಬಗ್ಗೆ ಸರ್ಕಾರದ ತೀರ್ಮಾನವೇನು? ಇಡೀ ಕರ್ನಾಟಕ ರಾಜ್ಯಾದ್ಯಂತ ಕರ್ನಾಟಕದ ಉದ್ದಗಲಕ್ಕೂ ಇಂಥ ಗೃಹ ನಿರ್ಮಾಣ ಸಹಕಾರ ಸಂಘಗಳು ಮಾಡಬಾರದಂಥ ಅನ್ಯಾಯಗಳನ್ನು, ಅಕ್ರಮಗಳನ್ನು ಮಾಡಿ ಮೋಸ ವನ್ನು ಮಾಡಿದ್ದಾರೆ. ಇದರ ಬಗ್ಗೆ ತಮಗೆ ಹೇಳುವುದಾದರೆ, ಇಂಥ ಗೃಹನಿರ್ಮಾಣ ಸಹಕಾರ ಸಂಘಗಳನ್ನು ಬೆಳೆಸುತ್ತಾ ಹೋದರೆ ನಮ್ಮಲ್ಲಿ ಬೆಂಗಳೂರು ಮತ್ತು ಮೈಸೂರು ಅಭಿವೃದ್ಧಿ ಪ್ರಾಧಿಕಾರಗಳೇಕಿರಬೇಕು? ಇಂಥ ಪ್ರಾಧಿಕಾರದ ಶಕ್ತಿಯನ್ನು ಕುಂದಿಸಿ ಯಾರೋ ಕೆಲವರು ಪಾಳೆಗಾರರ ರೀತಿ, ಅವರವರದೇ ಆದ ಸ್ವತ್ತನ್ನು ಮಾಡಿಕೊಂಡು, ಜಮೀನನ್ನು ಪಡೆದು ಅವರಿಗೆ ಇಚ್ಛೆ ಬಂದಂತೆ ಲಕ್ಷಾಂತರ ಸೈಟುಗಳನ್ನು ಕೋಟ್ಯಾಂತರ ರೂಪಾಯಿಗಳ ಲಾಭದಲ್ಲಿ ಜನರಿಗೆ ಮೋಸವನ್ನು ಮಾಡತಕ್ಕ ವ್ಯವಸ್ಥೆ ಏನಿದೆ ಈ ವ್ಯವಸ್ಥೆಯನ್ನು ತಮ್ಮ ಸರ್ಕಾರ ಬಂದಾಗ ನಿಲ್ಲಿಸುತ್ತೀರಿ ಎನ್ನತಕ್ಕಂಥ ಬಹಳ ಅಪಾರವಾದ ನಂಬಿಕೆ ಇತ್ತು. 1 ನಿನ್ನೆ ಅದರ ಮೇಲೆ ನಾನು ಒಂದು ಪ್ರಶ್ನೆಯನ್ನು ಕೇಳಿದೆ. ನಿನ್ನೆಯೇ ಆ ಬಗ್ಗೆ ತಮ್ಮಿಂದ ಉತ್ತರ ಬರುತ್ತದೆಂದು ಉಪಾಧ್ಯಕ್ಷಣಿಯರು ಹೇಳಿದ್ದರು. ಈಗ ಜಿ.ವಿ.ಕೆ.ರಾವ್ ಸಮಿತಿಯ ವರದಿಯನ್ನು ಒಪ್ಪಿಕೊಳ್ಳುವುದಾದರೆ ಗೃಹ ನಿರ್ಮಾಣ ಸಹಕಾರಿ ಸಂಘಗಳನ್ನು ನಡೆಸತಕ್ಕಂಥ ಬಹಳ ಜನ ದಳ್ಳಾಳಿಗಳನ್ನು ನೇರವಾಗಿ ಕೇಂದ್ರ ಕಾರಾಗೃಹಕ್ಕೆ ಕಳಿಸಬಹುದು. ವರದಿಯು ಪರಿಣಾಮಕಾರಿಯಾಗಿದೆ. ಆ ವರದಿಯ ಪ್ರಕಾರ ಒಬ್ಬರು ಹೇಳುತ್ತಾರೆ, ನಾನ ದುಡ್ಡನ್ನು ತೆಗೆದುಕೊಂಡಿರತಕ್ಕದ್ದು ನಿಜ, ನಾವಿವು ದುಡ್ಡನ್ನು ಹಂಚಬೇಕಾಗುತ್ತದೆಂದು ಹೇಳಿದ್ದಾರೆ. ಅಷ್ಟು ಅನಾಗರೀಕವಾಗಿ ಎದುರಿಗೇ ಮಾತನಾಡಿರತಕ್ಕ ಅನೇಕ ನಿದರ್ಶನಗಳು, ಸಾಕ್ಷಿ ಆಧಾರಗಳನ್ನು ಕೊಟ್ಟಿರತಕ್ಕ ಒಂದು ಬಹಳ ಪವಿತ್ರವಾದಂಥ ವರದಿ ಅದು. ಈ ವರದಿಯನ್ನು ಸುಮಾರು 7 ವರ್ಷಗಳಿಂದಲೂ ಹಾಗೆಯೇ ಮುಡುಪಾಗಿಲಾಗಿದೆ. ಆದರೂ ಸರ್ಕಾರದವರು ಇದರ ಬಗ್ಗೆ ಗಮನ ಹರಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಈಗ ಈ ರಾಜ್ಯದಲ್ಲಿ ಎಷ್ಟು ಗೃಹನಿರ್ಮಾಣ ಸಹಕಾರಿ ಸಂಘಗಳನ್ನು ನಡೆದಿರತಕ್ಕ ಪರಿಸ್ಥಿತಿಯನ್ನು ನೋಡಿದಾಗ ಇರತಕ್ಕ ನಿವೇಶನಗಳನ್ನು ಹಂಚುತ್ತೇವೆಂದು ಹೇಳಿ ಜನರಿಗೆ ಮೋಸವನ್ನು ಮಾಡತಕ್ಕದ್ದನ್ನು ತಡೆಹಿಡಿಯಲು ತಮ್ಮ ಕ್ರಮವೇನು? ಈ ಎಲ್ಲಾ ನಿವೇಶನಗಳನ್ನು ತಾವು ಬೆಂಗಳೂರು, ಮೈಸೂರು ಮತ್ತೆ ಎಲ್ಲೆಲ್ಲಿ ಇಂಥ ಗೃಹನಿರ್ಮಾಣ ಸಹಕಾರಿ ಸಂಘಗಳು ಜನರಿಗೆ ಮೋಸವನ್ನು ಮಾಡಿ ನಿವೇಶನಗಳನ್ನು ಹಂಚಲು ಹೋದರೆ, ಈ ಮೂಲಕ ಹಂಚತಕ್ಕ ವ್ಯವಸ್ಥೆಗೆ ಏನು ಕ್ರಮ ಮಾಡುತ್ತೀರಿ? ಈ ಬಗ್ಗೆ ತಾವು ಸಮಗ್ರವಾದ ಒಂದು ಹೇಳಿಕೆಯನ್ನು ಕೊಡಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ನಿಜವಾಗಿಯೂ ಈ ಗೃಹನಿರ್ಮಾಣ ಸಹಕಾರ ಸಂಘಗಳು ಜನರ ಶತ್ರುಗಳಾಗಿವೆ. ಲೂಟಿ ಮಾಡಿದ್ದಾರೆ. ರಾಜ್ಯದಲ್ಲಿರತಕ್ಕ ಅನೇಕ ಅಮೂಲ್ಯವಾದಂಥ ಸ್ಥಳಗಳನ್ನೆಲ್ಲಾ ಕಬಳಿಸಿದ್ದಾರೆ. ಇವರಿಗೆ

ನೆಲಗಳ್ಳರು ಎನ್ನತಕ್ಕ ಹೆಸರಿದೆ. ಉದಾಹರಣೆಗೆ ಬೆಂಗಳೂರು ನಗರವನ್ನೇ ತೆಗೆದುಕೊಳ್ಳಿ. ಬೆಂಗಳೂರಿನಲ್ಲಿರತಕ್ಕ ಅನೇಕ ಪವಿತ್ರವಾದ ಉದ್ಯಾನವನಗಳು, ಪವಿತ್ರ ಕೆರೆಗಳು ಮತ್ತು ಕೆರೆಯ ಅಂಗಳಗಳು, ಸಾರ್ವಜನಿಕರ ಉಪಯೋಗಿತವಾದ ಎಲ್ಲಾ ಸ್ಥಳಗಳನ್ನೂ ಲೂಟಿ ಮಾಡಿದ್ದಾರೆ.

ನಿಜವಾಗಿಯೂ ಹೇಳುವುದಾದರೆ ಈ ವರದಿಯು ಆಧಾರದಮೇಲೆ ಸಮಗ್ರವಾದ ಒಂದು ದೊಡ್ಡ ತನಿಖೆ ಇವತ್ತು ಆಗಬೇಕು. ಅವರನ್ನೆಲ್ಲಾ ತನಿಖಾಧಿಕಾರಿಗಳ ಮುಂದಿನ ಕಟಕಟೆಯಲ್ಲಿ ನಿಲ್ಲಿಸಬೇಕು. ಏಕೆಂದರೆ ಅವರು ಅಂಥ ಅನ್ಯಾಯವನ್ನು, ಮೋಸವನ್ನು ಮಾಡಿದ್ದಾರೆ. ಒಂದೊಂದು ಗೃಹ ನಿರ್ಮಾಣ ಸಂಘದವರೂ ಕೋಟ್ಯಾಂತರ ರೂಪಾಯಿಗಳನ್ನು ಮಾಡಿಕೊಂಡಿದ್ದಾರೆ. ವಿಶ್ವಭಾರತಿ ಎನ್ನತಕ್ಕ ಒಂದು ಗೃಹನಿರ್ಮಾಣ ಸಹಕಾರ ಸಂಘ ಇಡೀ ಸರ್ಕಾರಕ್ಕೆ ಸವಾಲು ಹಾಕುತ್ತಿದೆ. ಪ್ರಾಧಿಕಾರಕ್ಕೇ ಸವಾಲು ಹಾಕುತ್ತಿದೆ, ಅಷ್ಟೇ ಅಲ್ಲ ಅಧಿಕಾರಿಗಳಿಗೂ ಸವಾಲು ಹಾಕುತ್ತಿದೆ. ಅವರು ಕೊಡತಕ್ಕ ಜಾಹಿರಾತನ್ನು ತಾವು ನೋಡಿರಬಹುದು. ಒಂದೊಂದು ಪುಟದ ತುಂಬಾ ಜಾಹಿರಾತನ್ನು ಕೊಟ್ಟು ಸರ್ಕಾರಕ್ಕೆ ಉತ್ತರ ಕೊಡುತ್ತಿದ್ದಾರೆ. ಅವರನ್ನು ಬಗ್ಗಿಸುವ ಜಗ್ಗಿಸುವ ಕೆಲಸವನ್ನು ನಮ್ಮಲ್ಲಿ ಒಬ್ಬರು ಮಾಡಿದ್ದರು. ಮಾನ್ಯ ಕೆ.ಹೆಚ್. ರಂಗನಾಥ್ ರವರ ಕಛೇರಿಗೆ ಆ ವ್ಯಕ್ತಿ ಬಂದು ಅಲ್ಲಿಂದ ಹೊರಗಡೆ ಹೋಗುವುದರೊಳಗೆ ಅವನನ್ನ ದಸ್ತಗಿರಿ ಮಾಡಿಸಿದ್ದರು. ಆ ಮನುಷ್ಯ ಇವರ ಆಫೀಸಿಗೆ ಬಂದು ಮಾತನಾಡಿಕೊಂಡು ಹೊರಗೆ ಹೋಗುವುದರೊಳಗೆ ಅರೆಸ್ಟ್ ಆಗಿದ್ದ. ಇಂಥ ಗಂಟುಕಳ್ಳರು, ದರೋಡೆಖೋರರು ಯಾರಿದ್ದಾರೆ ಇವರಿಗೆ ಮಾನ್ಯ ಮೊಯ್ಲಿಯವರ ಸರ್ಕಾರದಲ್ಲಿ ಅವಕಾಶವಿಲ್ಲವೆಂದು ನಾವು ಅಂದುಕೊಂಡಿದ್ದೇವೆ. ನಾನಾದರೂ ಹೇಳುತ್ತೇನೆ. ಇರತಕ್ಕ ಎಎಲ್ಲಾ ಗೃಹ ನಿರ್ಮಾಣ ಸಹಕಾರ ಸಂಘಗಳನ್ನೂ ರದ್ದುಮಾಡಿ ಅವರಲ್ಲಿರತಕ್ಕ ಎಲ್ಲಾ ಆಸ್ತಿಯನ್ನೂ ವಾಪಸ್ಸು ಪಡೆದು ಅವರ ಬ್ಯಾಂಕ್ ಅಕೌಂಟ್‌ಗಳನ್ನು ಸಂಪೂರ್ಣವಾಗಿ ತಡೆಹಿಡಿದು ಅವರನ್ನೆಲ್ಲಾ ಜೈಲಿಗೆ ಕಳುಹಿಸತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಲೇಬೇಕು. ಹಾಗೆ ಮಾಡಲಿಲ್ಲ ಎಂದರೆ ಮಾನ್ಯ ಮೊಯ್ಲಿಯವರು ಏನು 100 ದಿವಸದಲ್ಲಿ ಒಂದು ಹೊಸ ಆಯಾಮ, ಹೊಸ ಶಕ್ತಿ, ಒಳ್ಳೆ ಯ ಆಡಳಿತವನ್ನು ಜನತೆಗೆ ಕೊಡುತ್ತೇನೆಂದು ಹೇಳಿದ್ದಾರೆ ಅದಕ್ಕೆ ಬೆಲೆ ಇಲ್ಲದಂತಾಗುತ್ತದೆ. ನಿಮ್ಮ ಹೇಳಿಕೆಯ ಮೇಲೆ ನಮಗೆ ಪ್ರಬಲ ನಂಬಿಕೆ ಇದೆ. ಆ ರೀತಿ ನಂಬಿಕೆ ಬರತಕ್ಕ ಅನೇಕ ಕೆಲಸಗಳನ್ನುನೀವು ಮಾಡಿದ್ದೀರಿ. ಇದನ್ನೂ ನೀವು ಮಾಡಿದರೆ ನಿಮಗೆ ಇನ್ನೂ ಒಳ್ಳೆಯ ಹೆಸರು ಬರುತ್ತದೆಂದು ನಾನು ಹೇಳತ್ತೇನೆ. ಈ ಬಗ್ಗೆ ತಮ್ಮ ಸರ್ಕಾರದ ನಿಲುವು ಏನೆಂಬುದನ್ನು ಹೇಳಬೇಕು.

+ ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಉಪಾಧ್ಯಕ್ಷಣೆಯವರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಹೇಳಿದ್ದಾರೆ ಅದಕ್ಕೆ ನನ್ನ ಬೆಂಬಲವನ್ನೂ ಕೊಡುತ್ತೇನೆ. ಈ ಗೃಹ ನಿರ್ಮಾಣ ಸಹಕಾರ ಸಂಘಗಳ ವಿಷಯ ಈಗಾಗಲೇ ಈ ಸದನದಲ್ಲಿ ಸಾಕಷ್ಟು ಸಾರಿ ಚರ್ಚೆ ಆಗಿದೆ. ಮಾನ್ಯ ಜಿ.ವಿ.ಕೆ. ರಾವ್ ರವರ ಸಮಿತಿಯನ್ನು ನಮ್ಮ ಸರ್ಕಾರ ಇದ್ದಾಗ ನಾವು ನೇಮಕ ಮಾಡಿದ್ದೆವು. ಸಾಧಾರಣ 2500 ಎಕರೆ ಭೂಮಿಯನ್ನು ಹಿಂದಿನ ಮಾನ್ಯ ಬಂಗಾರಪ್ಪನವರ ಸರ್ಕಾರ ಈ ಹೌಸಿಂಗ್ ಸೊಸೈಟಿಗಳಿಗೆ ಏನು ಕೊಟ್ಟಿತ್ತು ಅದನ್ನು ತಾವು ರದ್ದು ಮಾಡಿರುವುದಾಗಿ ನಾನು ಪತ್ರಿಕೆಗಳ ಮುಖಾಂತರ ತಿಳಿದುಕೊಂಡಿದ್ದೇನೆ.

ಈ ಹೌಸಿಂಗ್ ಸೊಸೈಟಿಗಳಿಗೆ ಏನು ಕೊಟ್ಟಿತ್ತು ಅದಕ್ಕಾಗಿ ನಾನು ಅಭಿನಂದಿಸುತ್ತೇನೆ. ಆದರೆ ಅಭಿನಂದಿಸುವಾಗ 2 ವಿಚಾರಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಾನು ಪ್ರಮುಖವಾಗಿ ಈ ಬೆಂಗಳೂರು ನಗರಕ್ಕೆ ಸೀಮಿತವಾಗಿ ಮಾತನಾಡುತ್ತಿದ್ದೇನೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿವೇ ಶನ ರಹಿತ ಜನರಿಗೆ ನಿವೇಶನ ಕೊಡುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. 1988ನೇ ಇಸವಿಯಲ್ಲಿ ನಾನು ಅರ್ಬನ್ ಡೆವಲಪ್ ಮೆಂಟ್ ಮಂತ್ರಿಯಾಗಿದ್ದಾಗ ಅಂದರೆ ಬಿ.ಡಿ.ಎ.ಗೆ ಸಂಬಂಧಪಟ್ಟ ಮಂತ್ರಿಯಾಗಿದ್ದಾಗ ನಾವು ಏನು ಸೈಟುಗಳನ್ನು ಹಂಚುವುದಾಗಿ ಜಾಹಿರಾತು ಕೊಟ್ಟಿದ್ದೆವು ಅದನ್ನು ಇವರು 92ನೇ ಇಸವಿಯಲ್ಲಿ ಸುಮಾರು 4E5 ಸೈಟುಗಳನ್ನು ಕೊಟ್ಟಿದ್ದಾರೆ ದು ನಾನು ಪತ್ರಿಕೆಗಳ ಮೂಖಾಂತರ ತಿಳಿದುಕೊಂಡಿದ್ದೇನೆ. ಇದನ್ನು ಬಿಟ್ಟರೆ ಬಿ.ಡಿ.ಎ.ನಿಂದ ಬೇರೆ ಯಾವುದೇ ಕೆಲಸವೂ ಆಗುತ್ತಿಲ್ಲ. ಬಿ.ಡಿ.ಎ. ಆರ್ಥಿಕ ಪರಿಸ್ಥಿತಿ ಇವತ್ತು ಬಹಳ ಕಷ್ಟವಾಗಿದೆ. ಕಾರ್ನರ್ ಸೈಟುಗಳನ್ನು ಹರಾಜು ಮಾಡಿದ ಆ ಹಣದಲ್ಲಿ ಇವತ್ತು ಬಿ.ಡಿ.ಎ. ನಡೆಯುತ್ತಿದೆ. ಅವರಿಗೆ ಕೆಲಸವೇ ಇಲ್ಲ. ನಿಮ್ಮ ಸರ್ಕಾರದಿಂದ ಏನು ಆಜ್ಞೆ ಹೋಗಿದೆ ಎಂದರೆ, ಲ್ಯಾಂಡ್ ಅಕ್ವಿಸಿಷನ್ ಆಕ್ಟ್‌ನ ಪ್ರಕಾರ ಯಾವುದೇ ಜಮೀನನ್ನೂ ಅಕ್ವೈರ್ ಮಾಡಬೇಡಿ. ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಪ್ರಕಾರ ಏನು ಹೆಚ್ಚುವರಿ ಜಮೀನು ಸಿಕ್ಕುತ್ತದೆ ಆ ಜಮೀನನ್ನು ತೆಗೆದುಕೊಂಡು ನೀವು ನಿವೇಶನವನ್ನುಂಟು ಮಾಡಿ ಹಂಚಿ ಎಂದು ಮಾನ್ಯ ಬಂಗಾರಪ್ಪನವರ ಸರ್ಕಾರ ಇದ್ದಾಗ ಆದೇಶ ಹೋಗಿದೆ. ನನಗೆ ತಿಳಿದಪ್ರಕಾರ 1000 ಎಕರೆಗಿಂತ ಹೆಚ್ಚು ಜಮೀನು 4(1) ನೋಟಿಫಿಕೇಷನ್ ಆಗಿ ಫೈನಲ್ ನೋಟಿಫಿಕೇಶನ್ ಪೆಂಡಿಂಗ್ ಇದೆ. ಇದಕ್ಕೆ ಕಾರಣ ಸರ್ಕಾರದಿಂದ ಹೋಗಿರತಕ್ಕ ಆದೇಶ. ಬಿ.ಡಿ.ಎ.ನವರು ನಮ್ಮ ಲ್ಯಾಂಡ್ ಅಕ್ವಿಸಿಷನ್ ಪ್ರಕಾರ ನಾವು ಜಮೀನನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಎಲ್ಲಾ ಪ್ರೋಸೆಸ್‌ನ್ನೂ ಮಾಡಿದ್ದೇವೆ. ಈಗ ಅದು ಕೊನೆಯ ಹಂತದಲ್ಲಿದೆ. ಇದಕ್ಕೆ ತಾವು ಪರ್ಮಿಷನ್ ಕೊಡಿ ಎಂದು ಸರ್ಕಾರವನ್ನು ಕೇಳಿ. ಅರ್ಬನ್ ಲ್ಯಾಂಡ್ ಸೀಲಿಂಗ್‌ನಿಂದ ಏನು ಮಾಡುವುದಕ್ಕಾಗುತ್ತದೆ. ಇವತ್ತಿನವರೆಗೆ ಯಾರಿಗಾದರೂ ಹೆಚ್ಚುವರಿ ಭೂಮಿ ಸಿಕ್ಕಿದೆಯೇ? ಸಿಕ್ಕಿದ್ದರೆ ನೀವು ತೆಗೆದುಕೊಳ್ಳಿ. ನಿಜವಾಗಿಯೂ ನಿಮ್ಮ ಗುರಿಸಾಧನೆಯಾಗಬೇಕಾದರೆ ಲ್ಯಾಂಡ್ ಆಕ್ಟ್‌ನ್ನು ಅಪರೇಟ್ ಮಾಡಬೇಕು. ಈ ಬಗ್ಗೆ ಸರ್ಕಾರದ ನಿಲುವು ಏನು? ಎರಡನೆಯದಾಗಿ ಈ ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ಬಹಳಷ್ಟು ಬಡಜನರು, ಸಾಮಾನ್ಯ ಜನರು, ಮಧ್ಯಮವರ್ಗದ ಜನರು ತಮ್ಮ ಜೀವಮಾನದಲ್ಲಿ ಸಂಪಾದನೆ ಮಾಡಿದ ಎಲ್ಲಾ ಹಣವನ್ನೂ ಹಾಕಿದ್ದಾರೆ. 10-20-30-40 ಸಾವಿರ ಹೀಗೆ ಹಣವನ್ನು ಹಾಕಿದ್ದಾರೆ. ಅವರದ್ದೇನೂ ತಪ್ಪಿಲ್ಲ. ಭಟ್ ಸೊಸೈಟಿ ಇರಬಹುದು, ಇನ್ನೊಂದು ಸೊಸೈಟಿ ಇರಬಹುದು. ಸರಕಾರ ಅವರಿಗೆ ಭೂಮಿ ಕೊಡುತ್ತದೆ ನಮಗೆ ಇದರಿಂದ ನಿವೇಶನ ಸಿಗುತ್ತದೆಂದು ಜನ ನಂಬಿ ನಿವೇಶನ ಯಾವಾಗ ಸಿಗುತ್ತದೆಯೋ ಎಂದು 14-15 ವರ್ಷಗಳಿಂದ ಕಾಯುತ್ತಿದ್ದಾರೆ. ಜನ ಇವತ್ತು ಆ ಕಷ್ಟಕ್ಕೆ ಬಂದಿದ್ದಾರೆ. ಇವತ್ತು ಸೊಸೈಟಿಯವರು ಅದನ್ನು ತೆಗೆದುಕೊಂಡು ದುರುಪಯೋಗ ಮಾಡಿಕೊಂಡಿದ್ದಾರೆ. ಲಂಚ ಕೊಟ್ಟಿರಬಹುದು. ಮತ್ತೊಂದು ಕೊಟ್ಟಿರಬಹುದು. ಆದರೆ ಅವರಿಗೆ ನಿವೇಶನ ಇಲ್ಲ, ಅವರ ಹಣ ಹೋಯಿತು. ನಿವೇಶನ ಇವತ್ತು ಕೊಟ್ಟರೂ ಸಹ ಸಿಮೆಂಟ್ ಸ್ಟೀಲ್ ಪ್ರೈಸ್ ಗಗನಕ್ಕೆ ಹೋಗಿದೆ. ಬಡವ ಮನೆ ಕಟ್ಟಬೇಕಾದರೆ ಕಷ್ಟ ಈ ಸರಕಾರದ ನೀತಿಯಿಂದ. ಹಾಗಾಗಿ ಈ ಸೊಸೈಟಿಗಳಲ್ಲಿ ಯಾರು ಜೆನ್ಯೂಯಿನ್ ಸದಸ್ಯರು

ಇದ್ದಾರೆ ಯಾರು ತಮ್ಮ ಲೈಫ್ ಟೈಂ ಸೇವಿಗ್ಸ್‌ನಲ್ಲಿ ಕೊಟ್ಟಿದ್ದಾರೆ ಅವರಿಗೆ ನಿವೇಶನ ಕೊಡುವ ಕಾರ್ಯಕ್ರಮ ಏನು? ಆದರೆ ಈ ಕಾರ್ಯಕ್ರಮವೆಂದು ಹೇಳವಾಗ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. it should be a time-bound programme. I am talking about the genuine people. ಬಿ.ಡಿ.ಎ. ಮುಖಾಂತರ ಕೊಡಿ ಇಲ್ಲವೇ ಯಾವ ಸಂಸ್ಥೆಗಳ ಮುಖಾಂತರವಾದರೂ ಕೊಡಿ. ತಾವು $2\frac{1}{2}$ ಸಾವಿರ ಎಕರೆ ಭೂಮಿ ಕೊಡುವುದನ್ನು ಕ್ಯಾನ್ಸಲ್ ಮಾಡಬೇಕಾದರೆ ಸಚಿವ ಸಂಪುಟದ ನಿರ್ಣಯ ತೆಗೆದುಕೊಂಡು ತಮ್ಮ ಪಾರ್ಟಿ ಸಭೆಯಲ್ಲಿ ಎಂಡಾರ್ಸ್‌ಮೆಂಟ್ ಆಗಬೇಕಾದರೆ ಅಲ್ಲಿ ಏನಾದರೂ ದುರ್ವ್ಯವಹಾರವಾಗಿರಬಹುದು. ಆ ವ್ಯವಹಾರ ಸರಿ ಇಲ್ಲ ಅಲಾಟ್‌ಮೆಂಟ್ ಸರಿ ಇಲ್ಲವೆಂದು ಮಾಡಿರಬಹುದು ಹಾಗೆ ಆಗಿದ್ದರೆ, ತಾವು ಈ ಅಭಿಪ್ರಾಯಕ್ಕೆ ಬಂದು ಇದನ್ನು ಮಾಡಬೇಕಾಗುತ್ತದೆ. ತಾವು ಹೌಸ್ ಬಿಲ್ಡಿಂಗ್ ಸೊಸೈಟಿಗೆ ಅಲಾಟ್‌ಮೆಂಟ್ ಆಫ್ ಲ್ಯಾಂಡ್‌ನಲ್ಲಿ ಭ್ರಷ್ಟಾಚಾರವಾಗಿಲ್ಲವೇ? ಭ್ರಷ್ಟಾಚಾರವಾಗಿದ್ದರೆ ಯಾವ ಪ್ರಮಾಣದಲ್ಲಿ ಆಗಿದೆ ಇದರಲ್ಲಿ ಯಾರು ಯಾರು ಇನ್‌ವಾಲ್ವ್ ಆಗಿದ್ದಾರೆ ನಾನ್ ಅಫಿಷಿಯಲ್ ಅಫಿಷಿಯಲ್ಸ್ ಯಾರ್ಯಾರಿದ್ದಾರೆ. ಇದರ ಬಗ್ಗೆ ಸಿ.ಬಿ.ಐ. ವಿಚಾರಣೆ ಮಾಡುತ್ತೀರಾ ಎಂದು ನೇರವಾಗಿ ಪ್ರಶ್ನೆ ಕೇಳುತ್ತಿದ್ದೇನೆ.

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಈ ಗೃಹ ನಿರ್ಮಾಣ ಸಹಕಾರ ಸಂಘಗಳು ಬೇನಾಮಿ ಹೆಸರಿನಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿಕೊಂಡು ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಮಾಡುತ್ತಿರುವುದು ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ಬೆಂಗಳೂರು ನಗರ ಇರಬಹುದು ಶಿವಮೊಗ್ಗ, ಮೈಸೂರು, ಹುಬ್ಬಳ್ಳಿ ಇರಬಹುದು ದೊಡ್ಡ ದೊಡ್ಡ ನಗರ ಪ್ರದೇಶಗಳಲ್ಲಿ 25E30 ಕಿಲೋ ಮೀಟರ್ ಸುತ್ತ ಮುತ್ತ ತಾವು ನಾಳೆ ಅಭಿವೃದ್ಧಿ ಕಾರ್ಯಕ್ಕೆ ಹತ್ತಾರು ಎಕರೆ ಭೂಮಿ ಸಿಕ್ಕದಂತೆ ಈ ಗೃಹ ನಿರ್ಮಾಣ ಸಹಕಾರ ಸಂಘದವರು ಮಾಡುತ್ತಿದ್ದಾರೆ. ನಾವು ಸರಕಾರಕ್ಕೆ ಅಭಿನಂದಿಸಬೇಕು ಎರಡೂವರೆ ಸಾವಿರ ಎಕರೆ ಜಮೀನನ್ನು ಈ ರೀತಿ ಕಾನೂನು ಬಾಹಿರವಾಗಿ ಗೃಹ ನಿರ್ಮಾಣ ಮಂಡಲಿಗಳು ತೆಗೆದುಕೊಂಡಿದ್ದನ್ನು ತಾವು ತೆಗೆದುಕೊಂಡು ಬಿಡಿಎಯಿಂದ ವಿತರಣೆ ಮಾಡುವುದನ್ನು ಯೋಚನೆ ಮಾಡುತ್ತಿದ್ದೀರಿ. ಇದು ಶ್ಲಾಘನೀಯವಾದ ಸಂಗತಿ. ಎನ್.ಆರ್.ಐ. ಹೆಸರಿನಲ್ಲಿ ಒತ್ತಾಯ ಮಾಡುವಂಥಾದ್ದು ಕೇವಲ ಬೆರಳೆಣಿಸುವಷ್ಟು ಸಹಕಾರ ಸಂಘಗಳು ಒಳ್ಳೆಯದಿದೆ ಬಡವರಿಗೆ ಹಂಚಬೇಕೆಂದು ಹೇಳುತ್ತಾರೆ ಅವರಿಗೆ ಅನುಕೂಲ ಮಾಡಿಕೊಡಿ. ಆದರೆ ನೂರಕ್ಕೆ 90 ಭಾಗ ಅವರ ಹೆಸರಿನಲ್ಲಿ ಕೆಲವರು ಕೋಟ್ಯಾಧಿಪತಿಗಳಾಗುತ್ತಾರೆ, ಲೂಟಿ ಮಾಡುವಂಥಾದ್ದು ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ನಾನು ಇಲ್ಲಿ ಶಾಸಕನಾಗಿ 6-7 ವರ್ಷಗಳನ್ನು ಕಳೆಯುತ್ತಾ ಬಂದರೂ ಇದರ ಬಗ್ಗೆ ಚರ್ಚೆಯಾಗಿದೆಯೇ ವಿನಃ ಇದರ ಬಗ್ಗೆ ಒಂದು ನಿಲುವನ್ನು ತೆಗೆದುಕೊಂಡು ಈ ರೀತಿ ದುರುಪಯೋಗವಾಗದಂತೆ ನೋಡಿಕೊಳ್ಳುವಂತಹ ಕೆಲಸವನ್ನು ಯಾವುದೇ ಹಿಂದಿನ ಸರಕಾರಗಳು ತಮ್ಮ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ, ಹೀಗಾಗಿ ಬಡವರ ಹೆಸರಲ್ಲಿ ಲೂಟಿ ಮಾಡುವುದು ಅವ್ಯಾಹತವಾಗಿ ನಡೆದುಕೊಂಡು ಹೋಗುತ್ತಿದೆ. ಪ್ರಮುಖವಾದ ವಿಷಯ ಪ್ರಸ್ತಾಪವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಒತ್ತಾಯ ಮಾಡುತ್ತಿದ್ದೇನೆ. ಜಿ.ವಿ.ಕೆ. ರಾವ್

ಸಮಿತಿಯ ವರದಿಯ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಸಮಸ್ಯೆಯನ್ನು ಬಗೆಹರಿಸಬಹುದು. ಸರಕಾರ ಇದರ ಬಗ್ಗೆ ಚರ್ಚೆ ಮಾಡಿಕೊಟ್ಟರ ಸಮಸ್ಯೆಯನ್ನು ಬಗೆಹರಿಸಬಹುದು ಸರಕಾರ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದಾದರೆ ಮತ್ತೆ ಈ ರೀತಿ ದುರುಪಯೋಗ ಮಾಡುವಂತಹ ಗೃಹ ನಿರ್ಮಾಣ ಸಹಕಾರ ಸಂಘಗಳು ಏನು ಇವೆ ಇವು ಇನ್ನು ಮುಂದೆ ಆಗದಂತೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಸ್ಪಷ್ಟವಾಗಿ ಹೇಳಬೇಕು.

ಉಪಾಧ್ಯಕ್ಷರು : ನಿಮ್ಮ ಲೀಡರ್ ಎಲ್ಲಾ ಹೇಳಿದ್ದಾರೆ.

ಶ್ರೀ ನಾರಾಯಣ ಸ್ವಾಮಿ : ಅದು ನನ್ನ ಅಭಿಪ್ರಾಯ ಕೂಡ. ಜಿ.ವಿ.ಕೆ.ರಾವ್ ವರದಿಯ ಬಗ್ಗೆ ನಿನ್ನೆ ನಾನು ಪ್ರಶ್ನೆ ಕೇಳಿದ್ದೆ. ರಾವ್ ಸಮಿತಿ ವರದಿ ಬಂದಿದೆ ಎಂದು ಕೇಳಿದ್ದೇನೆ. ಆ ವರದಿಯನ್ನು ಪ್ರಾಮಾಣಿಕವಾಗಿ ಜಾರಿಗೆ ಕೊಡತಕ್ಕಂತಹ ಕೆಲಸ ಸರಕಾರದಿಂದ ಆಗಬೇಕು. ಯಾವುದೇ ಒತ್ತಡಕ್ಕೆ ಇದೊಂದಕ್ಕೆ ಸಿಲುಕದ ರೀತಿಯಲ್ಲಿ ಆ ಕೆಲಸ ಮಾಡಬೇಕು. ಮತ್ತು ಆ ವರದಿಯನ್ನು ಸದನದಲ್ಲಿ ಮಾಡತಕ್ಕಂತಹ ಎಲ್ಲಾ ಸದಸ್ಯರಿಗೆ ತಿಳುವಳಿಕೆ ಮಾಡತಕ್ಕಂತಹ ಕೆಲಸವಾಗಬೇಕು. ಮಾನ್ಯ ಮುಖ್ಯಮಂತ್ರಿಗಳು ಒಳ್ಳೆಯ ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಪಿ.ಸಿ. ಸಿದ್ದನಗೌಡ : ಮಾನ್ಯ ಅಧ್ಯಕ್ಷಣಿಯವರೇ, ಈಹೌಸಿಂಗ್ ಸೊಸೈಟಿ ಜೊತೆಗೆ ಇಂಡಿವಿಜಿಯಲ್ಸ್ ಕೆಲವು ಜನರ ಎಕ್ಸೆಮ್ ಷನ್ ತೆಗೆದುಕೊಂಡಿರುತ್ತಾರೆ. ಅದು ಲ್ಯಾಂಡ್ ಟ್ರಿಬ್ಯುನಲ್, ಲ್ಯಾಂಡ್ ಇರಬಹುದು, ಅಥವಾ ಬೇರೆ ಫಾರೆಸ್ಟ್ ಲ್ಯಾಂಡ್ ಇರಬಹುದು. ಅವುಗಳನ್ನು ತೆಗೆದುಕೊಂಡ ಕೆಲವೊಂದು ಕಡೆ ಸೈಟ್‌ಗಳನ್ನು ಮಾಡಿದ್ದಾರೆ. ಈಗ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಹೇಳುವುದಿಷ್ಟೆ. ಹೌಸಿಂಗ್ ಬೋರ್ಡ್ ಎಂದು ಏನಿದೆ ಇದರಿಂದ ಎಲ್ಲೆಲ್ಲಿಯೂ ಸಿಟಿ ಒಳಗೆ ಸೈಟುಗಳು ಸಿಗದಂತೆ ಆಗಿದೆ. ಈಗಾಗಲೇ ಮಾನ್ಯ ಜಿ.ವಿ.ಕೆ.ರಾವ್‌ರವರು ತಮ್ಮ ರಿಪೋರ್ಟ್‌ನಲ್ಲಿ ಅನೇಕ ಸಲಹೆಗಳನ್ನು ಕೊಟ್ಟಿರುತ್ತಾರೆ. ಈ ಒಂದು ಯೋಜನೆಯನ್ನು ಕೈಬಿಟ್ಟರೆ ಬಹಳ ಒಳ್ಳೆಯದೆಂದು ಹೇಳಿರುತ್ತಾರೆ. ಏತಕ್ಕೆಂದರೆ ಬೆಂಗಳೂರು ಸಿಟಿ ಬಹಳವಾಗಿ ಬೆಳೆಯುತ್ತಿದೆ. ಲಾ ಅಂಡ್ ಆರ್ಡರ್ ಕಂಟ್ರೋಲ್‌ನಲ್ಲಿ ಉಳಿಯುವಂತಿಲ್ಲ. ನಮ್ಮಲ್ಲಿ ಜನರಿಗೆ ಕೊಡತಕ್ಕಂಥ ಎಲೆಕ್ಟ್ರಿಸಿಟಿ ವಾಟರ್ ಸಪ್ಲೈಯಂತೂ ಸಾಕಾಗುವುದಿಲ್ಲ. ಒಟ್ಟಾರೆ ಬಿ.ಡಿ.ಎ. ಎಂದು ಏನಿದೆ ಅದನ್ನು ಬಂದ್ ಮಾಡಿಬಿಡಿ ಎಂದು ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಈಗ ಕರಪ್ಷನ್ ಏನಿರುತ್ತದೆ ಇದಕ್ಕೆ ಮೇಜರ್ ಆಪರೇಷನ್ ಮಾಡುತ್ತೇವೆಂದು ಹೇಳಿದರೆ ಆಗುವುದಿಲ್ಲ. ಇದನ್ನು ಸಂಪೂರ್ಣವಾಗಿ ಬಂದ್ ಮಾಡಿಬಿಟ್ಟರೆ ಒಳ್ಳೆಯದೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಸಲಹೆಯನ್ನು ಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗಾರಾಜ್ : ಕೆಲವು ನೆಲಗಳ್ಳರಿಗೆ ರಾಷ್ಟ್ರಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ ಗಳನ್ನು ಕೊಟ್ಟಿದ್ದಾರೆ. ಇದು ಕೂಡ ತನಿಖೆಯಾಗಬೇಕು.

+ ಶ್ರೀ ಎಂ. ವೀರಪ್ಪ ಮೊಯ್ಲಿ : ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಾದಂಥ ದೇಶಪಾಂಡೆಯವರು ಸನ್ಮಾನ್ಯ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್ ರವರು ಮತ್ತು ನಮ್ಮ ನಾರಾಯಣ ಸ್ವಾಮಿಯವರು ಎತ್ತಿದ ಪ್ರಶ್ನೆಗೆ ಒಂದು ಹೇಳಿಕೆಯನ್ನು ತಯಾರು ಮಾಡಿದ್ದೇನೆ. ಆ ಹೇಳಿಕೆ ಕೊಡಲಿಕ್ಕೆ ತಾವು ಅಪ್ಪಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು): ಬೆಂಗಳೂರು ನಗರವು ಕಳೆದ ಕೆಲವು ದಶಕಗಳಲ್ಲಿ ವೇಗವಾಗಿ ಬೆಳೆಯುತ್ತಿದೆ. ಈಗಿನ ಜನಸಂಖ್ಯೆ 40 ಲಕ್ಷಗಳನ್ನು ಮೀರಿದೆ. ಬೆಳೆಯುತ್ತಿರುವ ಜನಸಂಖ್ಯೆಗೆ ವಸತಿ ಒದಗಿಸುವುದು ಒಂದು ಆದ್ಯತೆಯ ವಿಷಯವಾಗಿರುತ್ತದೆ. ಹೆಚ್ಚುತ್ತಿರುವ ಬೇಡಿಕೆಗಳನ್ನು ಈಡೇರಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಒಂದರಿಂದಲೇ ಸಾಧ್ಯವಾಗುವುದಿಲ್ಲವೆಂಬುದನ್ನು ಮನಗಂಡ ಸರ್ಕಾರವು ಜಮೀನುಗಳನ್ನು ಪಡೆದುಕೊಂಡು ನಿವೇಶನಗಳನ್ನು ಹಂಚಲು ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಪ್ರೋತ್ಸಾಹಿಸುತ್ತಿದೆ. ಹೊಸ ಬಡಾವಣೆಗಳನ್ನು ಮಾಡಿ, ನಿವೇಶನಗಳನ್ನು ಹಂಚುವ ಸಲುವಾಗಿ ಜಮೀನುಗಳನ್ನು ಪಡೆದುಕೊಳ್ಳುವಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳು ಕರ್ನಾಟಕ ಭೂ ಸುಧಾರಣಾ ಕಾಯಿದೆಗೆ ತಿದ್ದುಪಡಿ ಆದಾಗಿನಿಂದ ಎದುರಿಸುತ್ತಿರುವ ತೊಂದರೆಗಳನ್ನು ಗಮನಿಸಿ ಸರ್ಕಾರವು ಭೂ ಸ್ವಾಧೀನ ಕಾಯಿದೆಯಡಿಯಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳ ಸಲುವಾಗಿ 1977ರಿಂದ ಜಮೀನುಗಳನ್ನು ಸ್ವಾದೀನಪಡಿಸಿಕೊಳ್ಳುತ್ತಾ ಬಂದಿದೆ.

ನನ್ನ ನೈಜ ಸದಸ್ಯರಿಗೆ ನಿವೇಶನಗಳನ್ನು ಅಥವಾ ಮನೆಗಳನ್ನು ಒದಗಿಸುವುದು ಸಹಕಾರ ಸಂಘಗಳ ಉದ್ದೇಶವಾದರೂ ಸಹ, ದುರದೃಷ್ಟವಶಾತ್ ಕೆಲವು ಸಂಘಗಳು ಕೆಲಸ ಮಾಡಿರುವ ರೀತಿಯಿಂದಾಗಿ ನಿವೇಶನದ ನೈಜ ಅಗತ್ಯವಿರುವವರಿಗೆ ಹೆಚ್ಚಿನ ತೊಂದರೆಯುಂಟಾಗಿ ನೀತಿ ಬಾಹಿರ ಶಕ್ತಿಗಳಿಗೆ ಉತ್ತೇಜನ ದೊರೆತಿದೆ. ಕೆಲವು ಸಂಘಗಳು ಹೆಚ್ಚಿನ ವಿಸ್ತೀರ್ಣದ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳಲು ತಮ್ಮ ಹಕ್ಕುಗಳನ್ನು ಸ್ಥಾಪಿಸುವ ಸಲುವಾಗಿ ಅನೇಕ ಅನರ್ಹ ಸದಸ್ಯರನ್ನು ಸೇರಿಸಿಕೊಳ್ಳಲಾರಂಭಿಸಿದವು ಮತ್ತು ತಮ್ಮ ಸದಸ್ಯರಿಂದ ಸಂಗ್ರಹಿಸಿದ ಠೇವಣಿಗಳಿಂದ ಭಾರೀ ಮೊತ್ತಗಳನ್ನು ಜಮೀನು ಮಾಲೀಕರುಗಳಿಗೆ ಮುಂಗಡವಾಗಿ ನೀಡಿ ಪ್ರಶ್ನಾರ್ಹ ಒಪ್ಪಂದಗಳನ್ನು ಮಾಡಿಕೊಳ್ಳಲು ಪ್ರಾರಂಭಿಸಿದುವು. ಇದರಿಂದಾಗಿ ಸರ್ಕಾರವು ಅನಿವಾರ್ಯವಾಗಿ ಮಧ್ಯೆ ಪ್ರವೇಶಿಸಬೇಕಾಯಿತು ಮತ್ತು ಸಂಘಗಳ ಚಟುವಟಿಕೆಗಳ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯ ಕಲಂ 64ರ ಪ್ರಕಾರ ವಿಚಾರಣೆಗೆ ಆದೇಶಿಸಲು ನಿಬಂಧಕರಿಗೆ ನಿರ್ದೇಶಿಸಿತು. ಆ ಸಮಯದಲ್ಲಿ ತೂಕ ಮತ್ತು ಅಳತೆಗಳ ಕಂಟ್ರೋಲರ್ ಆಗಿದ್ದ ಶ್ರೀ ಜಿ.ವಿ.ಕೆ. ರಾವ್ ಅವರನ್ನು 91 ಗೃಹ ನಿರ್ಮಾಣ ಸಹಕಾರ ಸಂಘಗಳ ಚಟುವಟಿಕೆ ಬಗ್ಗೆ ವಿಚಾರಣೆಯನ್ನು ನಡೆಸಲು ವಿಚಾರಣಾಧಿ ಕಾರಿಯನ್ನಾಗಿ ಸಹಕಾರ ಸಂಘಗಳ ನಿಬಂಧಕರು ನೇಮಿಸಿದರು. ಶ್ರೀ ಜಿ.ವಿ.ಕೆ. ರಾವ್‌ರವರ ವಿಚಾರಣೆಯ ಸಮಯದಲ್ಲಿ ಈ ಕೆಳಕಂಡ ಅವ್ಯವಹಾರಗಳನ್ನು ಗಮನಿಸಿದರು.

1) ಸದಸ್ಯರುಗಳನ್ನು ಸೇರಿಸಿಕೊಳ್ಳುವ ವಿಧಾನದಲ್ಲಿ ಅವ್ಯವಹಾರ.

2) ಅನರ್ಹ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಸೇರಿಸಿಕೊಂಡಿರುವುದು.

3) ಬೈಲುಗಳಲ್ಲಿ ಅವಕಾಶ ಇಲ್ಲದಿದ್ದರೂ ಸಹ (ಅಸೋಸಿಯೇಟ್) ಸದಸ್ಯರನ್ನು ಸೇರಿಸಿಕೊಂಡಿರುವುದು.

4) ತಮ್ಮ (ಭೌಗೋಳಿಕ) ಕಾರ್ಯವ್ಯಾಪ್ತಿಯ ಹೊರಗಡೆ ಜಮೀನನ್ನು ಪಡೆಯಲು ಕ್ರಮ ಕೈಗೊಂಡಿರುವುದು.

5) ತಮ್ಮ ಸದಸ್ಯರಿಗೆ ಮಾತ್ರ ನಿವೇಶನಗಳನ್ನು ಹಂಚುವ ಸಲುವಾಗಿ ಲೇ ಔಟುಗಳನ್ನು ಮಾಡುವುದು ಸಂಘದ ಉದ್ದೇಶವಾಗಿದ್ದರೂ ಸಹ ಅಸೋಸಿಯೇಟ್ ಸದಸ್ಯರಿಂದಲೂ ಸಹ ನಿವೇಶನ ಠೇವಣಿಗಳನ್ನು ಸಂಗ್ರಹಸಿಸುವುದು.

6) ಜಮೀನು ಮಾಲೀಕರು ಮತ್ತು ಏಜೆಂಟರುಗಳೊಡನೆ ವಿವೇಚನೆ ಇಲ್ಲದೆ ಒಪ್ಪಂದಗಳನ್ನು ಮಾಡಿಕೊಂಡಿರುವುದು ಮತ್ತು ಕೆಲವು ಸಂದರ್ಭಗಳಲ್ಲಿ ಅನವಶ್ಯಕ ಒಪ್ಪಂದಗಳನ್ನು ಮಾಡಿಕೊಂಡಿರುವುದು.

7) ಏಜೆಂಟರುಗಳಿಗೆ ಭಾರಿ ಮೊತ್ತದ ಮುಂಗಡಗಳನ್ನು ಸೂಕ್ತ ಭದ್ರತೆಗಳಿಲ್ಲದೆ ಕೊಟ್ಟಿರುವುದು ಮತ್ತು

8) ವಿವಿಧ ಸಂಸ್ಥೆಗಳಿಗೆ ಮಾಡಬೇಕಾಗಿವು ಹಣ ಪಾವತಿಗಳನ್ನು ಗಣನೆಗೆ ತೆಗೆದುಕೊಳ್ಳದೆ ಸದಸ್ಯರಿಂದ ಠೇವಣಿಗಳನ್ನು ಸಂಗ್ರಹಿಸಿರುವುದು.

3. ಗಮನಕ್ಕೆ ಬಂದ ಲೋಪದೋಷಗಳಲ್ಲಿ ಕೆಲವು ಗಂಭೀರವಾದವುಗಳೆಂದು ಕಂಡುಬಂದಿದ್ದರಿಂದ, ಜಿ.ವಿ.ಕೆ. ರಾವ್‌ರವರ ವರದಿಯೂ ಬಂದ ತಕ್ಷಣ ಜಿ.ವಿ.ಕೆ.ರಾವ್ ವರದಿಯಲ್ಲಿ ಆಪಾದಿಸಲ್ಪಟ್ಟಿದ್ದ ಅನೇಕ ಸಂಘಗಳ ಬಗ್ಗೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುವವರೆವಿಗೂ ಆ ಸಂಘಗಳ ಪರವಾಗಿ ಸ್ವಾಧೀನಪಡಿಸಿಕೊಂಡಿದ್ದ ಜಮೀನುಗಳನ್ನು ಅವುಗಳಿಗೆ ವಹಿಸಿಕೊಡಬಾರದೆಂದು ಕಂದಾಯ ಇಲಾಖೆಗೆ, ರಾಜ್ಯವು ರಾಷ್ಟ್ರಪತಿಯ ಆಡಳಿತದಲ್ಲಿದ್ದಾಗ, ದಿನಾಂಕ 18-5-89ರಂದು, ನಿರ್ದೇಶನಗಳನ್ನು ನೀಡಲಾಯಿತು.

4. ಜಿ.ವಿ.ಕೆ. ರಾವ್ ವರದಿಯನ್ನು ಆಧರಿಸಿ ಸಂಘಗಳ ಲೆಕ್ಕಪತ್ರಗಳು ಹಾಗೂ ದಾಖಲೆಗಳ ವಿವರವಾದ ಪರಿಶೀಲನೆಗೆ ಸಹಕಾರ ಸಂಘಗಳ ನಿಬಂಧಕರು ತಮ್ಮ ಅಧಿಕಾರಿಗಳ ಮೂಲಕ ಆದೇಸಿದರು. ಜಿ.ವಿ.ಕೆ.ರಾವ್ ವರದಿ ತಲುಪಿದ ಮೇಲೆ, ಆಗಿನ ಮುಖ್ಯ ಮಂತ್ರಿಗಳು, ಜಮೀನು ಸ್ವಾಧೀನಪಡಿಸಿಕೊಳ್ಳುವುದರಲ್ಲಿ

ಮುಂದುವರಿಸಬಾರದೆಂದು ಕಂದಾಯ ಇಲಾಖೆಗೆ ಸೂಚನೆ ನೀಡಿದರು. ಆದರೆ ನಂತರ ಕಾಲಮಿತಿಗೆ ಒಳಪಟ್ಟ ಭೂ ಸ್ವಾಧೀನ ನಡವಳಿಕೆಗಳು ಅಸಿಂಧು ವಾಗುತ್ತದೆಂದು ಅವರ ಗಮನಕ್ಕೆ ತಂದ ನಂತರ, ಅವರು ಭೂಸ್ವಾಧೀನ ನಡವಳಿಕೆಗಳನ್ನು ಮುಂದುವರಿಸಬೇಕೆಂದು, ಆದರೆ ಸಹಕಾರ ಸಂಘಗಳಿಗೆ ಜಮೀನು ಗಳನ್ನು ವಹಿಸಿಕೊಡಬಾರದೆಂದು ಕಂದಾಯ ಇಲಾಖೆಗೆ ನಿರ್ದೇಶಿಸಿದರು.

ಸರ್ಕಾರವು ಜಿ.ವಿ.ಕೆ. ರಾವ್ ವರದಿಯನ್ನು ಪರಿಶೀಲಿಸಿತು. ಮತ್ತು ಬೆಂಗಳೂರು ನಗರ ಹಾಗೂ ರಾಜ್ಯದ ಇತರ ನಗರಗಳಲ್ಲಿನ ವಸತಿ ಕೊರತೆಯ ವಿಷಯದಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳ ಪಾತ್ರದ ಬಗ್ಗೆ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯು ತಯಾರು ಮಾಡಿದ್ದ ಸಂಪುಟ ಟಿಪ್ಪಣಿಯೊಂದಿಗೆ ಈ ವರದಿಯನ್ನು ಪರಿಶೀಲಿಸಬಹುದೆಂದು ನಿರ್ಧರಿಸಿತು. ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯು ತಯಾರು ಮಾಡಿದ್ದ ಟಿಪ್ಪಣಿಯನ್ನು ಪರಿಶೀಲಿಸಿದ ನಂತರ ಈ ಸಂಬಂಧದ ವಿಷಯಗಳನ್ನು ಆಳವಾಗಿ ಅಭ್ಯಾಸ ಮಾಡಿ ಶಿಫಾರಸ್ಸುಗಳನ್ನು ಮಾಡಲು ಒಂದು ಸಂಪುಟ ಉಪ ಸಮಿತಿಯನ್ನು ಸಂಪುಟವು ನೇಮಿಸಿತು. ಸಹಕಾರ ಸಂಘಗಳಲ್ಲಿ ಆಗಿದ್ದ ಕೆಲವು ಲೋಪದೋಷಗಳನ್ನು ಸರಿಪಡಿಸಲು ಈಗ ಇರುವ ಹಾಗೂ ಮುಂದೆ ಆಗಬಹುದಾದ ಎಲ್ಲಾ ಗೃಹ ನಿರ್ಮಾಣ ಸಹಕಾರ ಸಂಘಗಳು ಅಳವಡಿಸಿಕೊಳ್ಳಬೇಕಾದಂತಹ ಮಾದರಿ ಬೈಲಾಗಳನ್ನುಸಂಪುಟ ಉಪ ಸಮಿತಿ ಸಲಹೆ ಮಾಡಿತು. ಗೃಹ ನಿರ್ಮಾಣ ಸಹಕಾರ ಸಂಘಗಳ ಪರವಾಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಕೆಲವು ಇತರೆ ಶಿಫಾರಸ್ಸುಗಳನ್ನು ಸಹ ಸಂಪುಟ ಉಪ ಸಮಿತಿಯು ಮಾಡಿತು.

6. ಸಂಪುಟ ಉಪ ಸಮಿತಿಯು ಮಾಡಿದ್ದ ಶಿಫಾರಸ್ಸುಗಳನ್ನು ರಾಜ್ಯಕ್ಕೆ ಸಂಪುಟವು ದಿನಾಂಕ 10-8-92ರಂದು ಪರಿಶೀಲಿಸಿತು ಮತ್ತು ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿತು. ಈ ನಿರ್ಧಾರವನ್ನು ಅನುಸರಿಸಿ ಸರ್ಕಾರವು ತನ್ನ ಆದೇಶ ಕ್ರಮಾಂಕ ಸಿಎಂಡಬ್ಲ್ಯು 91 ಸಿಹೆಚ್‌ಎಸ್ 92 ದಿನಾಂಕ 14-8-92ರ ಮೂಲಕ ತನ್ನ ನೈಜ ಸದಸ್ಯರುಗಳಿಗೆ ನಿವೇಶನಗಳನ್ನು ಹಂಚುವ ಸಲುವಾಗಿ ನೈಜ ಸಹಕಾರಿ ಸಂಘಗಳ ಪರವಾಗಿ ಸ್ವಾಧೀನ ಮಾಡಿಕೊಂಡಿದ್ದ ಜಮೀನುಗಳನ್ನು ವಹಿಸಿಕೊಡಲು ಕಂದಾಯ ಇಲಾಖೆಗೆ ಸೂಚನೆಗಳನ್ನು ನೀಡಿತು. ಅಲ್ಲದೆ ಆದೇಶ ಕ್ರಮಾಂಕ ಸಿಎಂಡಬ್ಲ್ಯು 91 ಸಿಹೆಚ್‌ಎಸ್ 92 ದಿನಾಂಕ 7-10-92ರ ಮೂಲಕ ನೈಜ ಸಹಕಾರ ಸಂಘಗಳನ್ನು ಮತ್ತು ಅವುಗಳಲ್ಲಿನ ನೈಜ ಸದಸ್ಯರನ್ನು ಗುರುತಿಸಲು ಸರ್ಕಾರ ಮಾರ್ಗಸೂಚಿಗಳನ್ನು ನೀಡಿತು.

7. ಗೃಹ ನಿರ್ಮಾಣ ಸಹಕಾರ ಸಂಘಗಳಿಂದು ಸ್ವಾಧೀನಪಡಿಸಿಕೊಂಡ ಜಮೀನನ್ನು ವಹಿಸಿಕೊಡುವಾಗ ಕೆಲವು ನೈಜವಲ್ಲದ ಸಂಘಗಳಿಗೂ ಸಹ ಜಮೀನುಗಳನ್ನು ವಹಿಸಿಕೊಟ್ಟಿರುವುದು ಸರ್ಕಾರದಗಮನಕ್ಕೆ ಬರಲಾಗಿ, ಸರ್ಕಾರವು ತಾನು ಹಿಂದೆ ತೆಗೆದುಕೊಂಡಿದ್ದ ನಿರ್ಧಾರವನ್ನು ಪುನಃ ಪರಿಶೀಲಿಸಬೇಕಾಗಿ ಬಂದಿತು. ಅಂತೆಯೇ ನೈಜ ಸಹಕಾರ ಸಂಘಗಳಲ್ಲಿನ ನೈಜ ಸದಸ್ಯರ ಹಿತಾಸಕ್ತಿಗಳನ್ನು ರಕ್ಷಿಸುವುದಕ್ಕಾಗಿ ಈ ಕೆಳಗಿನಂತೆ ನಿರ್ಧಾರ ಕೈಗೊಂಡಿತು.

ಅ) ಗೃಹ ನಿರ್ಮಾಣ ಸಹಕಾರ ಸಂಘಗಳ ಪರವಾಗಿ ಸ್ವಾಧೀನಪಡಿಸಿಕೊಂಡಿದ್ದ ಜಮೀನುಗಳನ್ನು ಎಲ್ಲೆಲ್ಲಿ ಇನ್ನೂ ಆ ಸಂಘಗಳಗಿ ವಹಿಸಿಕೊಟ್ಟಿಲ್ಲವೋ ಆ ಜಮೀನುಗಳನ್ನು ಬಿ.ಡಿ.ಎ.ಗೆ ವಹಿಸಿಕೊಡಲಾಗುವುದು. ಮತ್ತು ಬಿ.ಡಿ.ಎ. ಈ ಸಂಘಗಳ ನೈಜ ಸದಸ್ಯರಿಗೆ ನಿವೇಶನಗಳನ್ನು ಹಂಚುವುದು.

ಆ) ಇದೇ ರೀತಿ ಸರ್ಕಾರದ ಕ್ರಮಾಂಕ ಸಿಎಂಡಬ್ಲ್ಯು 91 ಸಿಹೆಚ್‌ಎಸ್ 92 ದಿನಾಂಕ 14-8-92ರ ಆದೇಶದ ನಂತರ ಸ್ವಾಧೀನಪಡಿಸಿಕೊಂಡ ಜಮೀನುಗಳನ್ನು ಗೃಹನಿರ್ಮಾಣ ಸಂಘಗಳಿಗೆ ಎಲ್ಲೆಲ್ಲಿ ವಹಿಸಿಕೊಡಲಾಗಿದೆಯೋ ಅಂತಹ ಜಮೀನುಗಳನ್ನು ಬಿ.ಡಿ.ಎ.ಗೆ ವಹಿಸಿಕೊಡುವುದಕ್ಕಾಗಿ ಸರ್ಕಾರವು ಹಿಂದಕ್ಕೆ ತೆಗೆದುಕೊಳ್ಳುವುದು ಮತ್ತು ಬಿ.ಡಿ.ಎ. ನೈಜ ಸಂಘಗಳ ಸದಸ್ಯರಿಗೆ ನಿವೇಶನಗಳನ್ನು ಹಂಚುವುದು.

8. ನೈಜ ಸದಸ್ಯರಿಗೆ ಹಂಚುವುದಕ್ಕಾಗಿ ನೈಜ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಜಮೀನುಗಳನ್ನು ವಹಿಸಿಕೊಡಲು ಕಂದಾಯ ಇಲಾಖೆಗೆ ಅನುಮತಿಯನ್ನು ನೀಡಿರುವ ದಿನಾಂಕ 14-8-92ರ ಸರ್ಕಾರಿ ಆದೇಶ ಹೊರಟ ನಂತರ ಇತ್ತೀಚೆಗೆ 31 ಸಂಘಗಳಿಗೆ 2073 ಎಕರೆ ಮತ್ತು 4 ಗುಂಟೆ ಜಮೀನನ್ನು ವಹಿಸಿಕೊಡಲಾಗಿದೆ. ನೈಜ ಸಂಘಗಳಲ್ಲಿನ ನೈಜ ಸದಸ್ಯರಿಗೆ ನಿವೇಶನಗಳನ್ನು ಹಂಚುವುದನ್ನು ಖಚಿತಪಡಿಸಿಕೊಳ್ಳಲು ಸರ್ಕಾರದ ಕ್ರಮಾಂಕ ಸಿಎಂಡಬ್ಲ್ಯು 91 ಸಿಹೆಚ್‌ಎಸ್ 92 ದಿನಾಂಕ 14-8-92ರ ಸರ್ಕಾರದ ಆದೇಶದ ನಂತರ ಕಂದಾಯ ಇಲಾಖೆಯಿಂದ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ವಹಿಸಿಕೊಟ್ಟಿರುವ ಎಲ್ಲಾ ಜಮೀನುಗಳನ್ನು ಹಿಂತೆಗೆದುಕೊಳ್ಳಬೇಕೆಂದು ಮತ್ತು ಅವುಗಳನ್ನು ಬಿ.ಡಿ.ಎ.ಗೆ ವಹಿಸಿಕೊಡಲೇಬೇಕೆಂದು ನಿರ್ಧರಿಸಲಾಗಿದೆ. ಗೃಹ ನಿರ್ಮಾಣ ಸಹಕಾರ ಸಂಘಗಳು ಸರ್ಕಾರದಿಂದ ಅಂಗೀಕೃತವಾದ ಮಾದರಿ ಬೈಲಗಳನ್ನು ಅಳವಡಿಸಿಕೊಂಡ ನಂತರ ಮತ್ತು ಸರ್ಕಾರದ ಕ್ರಮಾಂಕ ಸಿಎಂಡಬ್ಲ್ಯು 91 ಸಿಹೆಚ್ ಎಸ್ 92 ದಿನಾಂಕ 7-10-92ರ ಆದೇಶದ

ಪ್ರಕಾರ ನೈಜ ಸಹಕಾರ ಸಂಘಗಳಲ್ಲಿನ ನೈಜ ಸದಸ್ಯರನ್ನು ಗುರುತಿಸಿದ ನಂತರ ಬಿ.ಡಿ.ಎ.ಯು ನಿವೇಶನಗಳನ್ನು ಅವರಿಗೆ ಹಂಚುವುದೆಂದು ನಿರ್ಧರಿಸಲಾಗಿದೆ.ಇದೇ ರೀತಿ ಗೃಹ ನಿರ್ಮಾಣ ಸಹಕಾರ ಸಂಘಗಳ ಪರವಾಗಿ ಸ್ವಾಧೀನಪಡಿಸಿಕೊಂಡಿದ್ದು ಇನ್ನೂ ಆಸಂಘಗಳಿಗೆ ವಹಿಸಿಕೊಡದೆ ಇರುವ ಜಮೀನುಗಳನ್ನು ಸಹ ಆ ಸಂಘಗಳ ನೈಜ ಸದಸ್ಯರುಗಳಿಗೆ ನಿವೇಶನಗಳನ್ನು ಹಂಚುವ ಸಲುವಾಗಿ ಬಿ.ಡಿ.ಎ.ಗೆ ವಹಿಸಿಕೊಡಲಾಗುವುದು.

9. ಮಾದರಿ ಬೈಲಾಗಳನ್ನು ಅಳವಡಿಸಿಕೊಳ್ಳದೆ ಹಾಗೂ ಸರ್ಕಾರಿ ಆದೇಶಗಳನ್ನು ಉಲ್ಲಂಘಿಸಿ ಸಂಘಗಳು ನಿವೇಶನಗಳನ್ನು ಹಂಚದಂತೆ ನೋಡಿ ಕೊಳ್ಳಲು ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯ 30-ಬಿ ಸೆಕ್ಷನ್ ಪ್ರಕಾರ ಕ್ರಮಾಂಕ ಆರ್‌ಎಸ್ ಆರ್ 222 ಎಕ್ಸ್‌ಎಂಎ 92-93 ದಿನಾಂಕ 31-10-92ರಲ್ಲಿ ಎಲ್ಲಾ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ನಿರ್ದೇಶನಗಳನ್ನು ನೀಡಿ ಸಂಘಗಳು ಸರ್ಕಾರಿ ಆದೇಶಗಳನ್ನು ಪಾಲಿಸುವವರೆಗೂ ಜಮೀನುಗಳನ್ನು ಪಡೆದುಕೊಳ್ಳುವುದು ಅಥವಾ ನಿವೇಶನಗಳನ್ನು ಹಂಚುವುದನ್ನು ಪ್ರತಿಬಂಧಿಸಿ ಆದೇಶವನ್ನು ಹೊರಡಿಸಿದ್ದಾರೆ.

10. ಗೃಹ ನಿರ್ಮಾಣ ಸಹಕಾರ ಸಂಘಗಳ ಬಹುಪಾಲು ಸದಸ್ಯರು ತಾವು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ನಿವೇಶನ ಸಿಗುವುದೆಂಬ ಆಸೆಯಿಂದ ಸಂಘಗಳಲ್ಲಿ ತೊಡಗಿಸಿ 15 ವರ್ಷಗಳಿಂದಲೂ ಕಾಯುತ್ತಿರುವರೆಂಬುದು ಸರ್ಕಾರಕ್ಕೆ ತಿಳಿದಿದೆ. ಅವರು ಸದಾ ಕಾಲ ಕಾಯುತ್ತಲೇ ಇರಬಾರದು. ಆದರೆ ಕ್ರಮಬದ್ಧ ಸದಸ್ಯರನ್ನು ಬಿಟ್ಟು ನೀತಿಬಾಹಿರ ಶಕ್ತಿಗಳು ಪ್ರವೇಶಿಸಿ ನಿವೇಶನಗಳನ್ನು ಬಾಚಿಕೊಂಡು ಹೋಗಲು ಸಹ ಬಿಡಬಾರದು. ಪಟ್ಟಭದ್ರ ಹಿತಾಸಕ್ತಿಗಳಿಂದ ಸಾಮಾನ್ಯ ಹಾಗೂ ಬಡ ಜನಗಳ ಶೋಷಣೆಯನ್ನು ಕೊನೆಗೊಳಿಸಲು ಸರ್ಕಾರವು ಬದ್ಧವಾಗಿದೆ.

1.50 ಪಿ.ಎಂ.

ಸನ್ಮಾನ್ಯ ಅಧ್ಯಕ್ಷರೇ, ಬಿಡಿಎಗೆ ಇರತಕ್ಕ ಸೀಮಿತವಾದ ವ್ಯವಸ್ಥೆಯ ಬಗ್ಗೆಯೂ ಕೂಡ ಸರ್ಕಾರಕ್ಕೆ ಪರಿವೆ ಇರುವ ಕಾರಣದಿಂದ ನಾವು ಈ ಒಂದು ಕಾರ್ಯಕ್ರಮವನ್ನು ಯಾರು ನೈಜ ಸದಸ್ಯರು ಇದ್ದಾರೆ ಇವರ ಅನುಕೂಲಕ್ಕೆ 3 ತಿಂಗಳ ಒಳಗೆ ಕೆಲಸ ಮುಗಿಸುವುದಕ್ಕೆ ನಾವು ಒಂದು ಸಮಿತಿ ಮಾಡಿದ್ದೇವೆ. ಆ ಸಮಿತಿಯ ಅಧ್ಯಕ್ಷರು, ಬೆಂಗಳೂರಿನ ಡಿವಿಜನಲ್ ಕಮೀಷನರ್‌ಅವರು ಇರುತ್ತಾರೆ. ಮತ್ತು ಲೂಕಾಸ್ ವಲ್ಲದೊರೈ, ಜಾಯಿಂಟ್ ರಿಜಿಸ್ಟಾರ್ ಆಫ್ ಕೋ-ಆಪರೇಟಿವ್ ಸ ಸೈಟೀಸ್ ಹಾಗೂ ಡೆರೆಕ್ಟರ್ ಆಫ್ ಟೌನ್ ಪ್ಲಾನಿಂಗ್, ಗಲಗಲಿಯವರು, ಇದರ ಸದಸ್ಯರು ಇರುತ್ತಾರೆ. ಮತ್ತು ರಾಮಮೂರ್ತಿ, ಡೆಪ್ಯೂಟಿ ಸೆಕ್ರೆಟರಿ, ಕೋ-ಆಪರೇಷನ್ ಇವರು ಕಾರ್ಯದರ್ಶಿಗಳಾಗಿರತಕ್ಕ ಈ ಸಮಿತಿಯನ್ನು ನಾವು ಈಗಾಗಲೇ ನೇಮಕ ಮಾಡುತ್ತಿದ್ದೇವೆ. ಬಿಡಿಎಗೆ ಪೂರ್ತಿ ವಹಿಸಿಕೊಟ್ಟರೆ ಆ ಬಗ್ಗೆ ಸರಿಯಾದ ವ್ಯವಸ್ಥೆ ಅಲ್ಲಿ ಇದೆಯೇ ಎನ್ನುವ ಬಗ್ಗೆ ಜನರಿಗೆ ಶಂಕೆ ಇದೆ. ಮೂರು ತಿಂಗಳ ಒಳಗೆ ಎಲ್ಲಾ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಮಾಡಬೇಕೆನ್ನುವ ಉದ್ದೇಶದಿಂದ ಇದನ್ನು ಮಾಡಿದ್ದೇವೆ. ಏಕೆಂದರೆ 15-16 ವರ್ಷಗಳಿಂದ ಜನರು ನಿವೇಶನಗಳಿಗಾಗಿ ಕಾಯುತ್ತಿದ್ದಾರೆ. ಇನ್ನೂ ಈ ವಿಚಾರವನ್ನು ಈ ಸೊಸೈಟಿಗಳಿಗೇ ಬಿಟ್ಟರೆ 2-3 ವರ್ಷಗಳಲ್ಲಿ ಜನರಿಗೆ ನಿವೇಶನ ಸಿಗತಕ್ಕ

ಪರಿಸ್ಥಿತಿ ಇಲ್ಲ. ಬಹುಶಃ ಈ ಜಾಗದ ಮೇಲೆ ಮ್ಯಾನ್ಯುಪುಲೇಟ್ ಮಾಡಿ ಹಣ ಮಾಡುವ ಪ್ರವೃತ್ತಿ ಬಹಳ ಇರುವುದರಿಂದ ಇದು ನಮಗೆ ಗೊತ್ತಿದೆ. ನಿಜವಾಗಿ ನೈಜವಾದ ಸೊಸೈಟಿಗಳಿಗೆ ಸ್ವಲ್ಪ ತೊಂದರೆ ಆಗಬಹುದು. ಆದರೆ ಈ ವ್ಯಾಪಕವಾದ ವ್ಯವಸ್ಥೆಯನ್ನೇ ಸದ್ಯ ಕೆಡಿಸಿಬಿಟ್ಟಿದದರಿಂದ ನಾವು ಎಲ್ಲರಿಗೂ ಕೂಡ ಒಳ್ಳೆಯ ರೀತಿಯ ಯೂನಿಫಾರ್ಮ್ ನಿರ್ಣಯ ತೆಗೆದುಕೊಳ್ಳುವ ಅವಶ್ಯಕತೆ ಇದ್ದದ್ದರಿಂದ ಕೆಲವು ನೈಜವಾದ ಸಹಕಾರ ಸಂಘಗಳಿಗೂ ತೊಂದರೆ ಆಗಿರುವುದನ್ನು ಗಮನಿಸಿದ್ದೇವೆ. ನೈಜ ಸೊಸೈಟಿಯ ನೈಜ ಸದಸ್ಯರಿದ್ದಾರೋ ಅವರಿಗೆ ಯಾವ ರೀತಿ ತೊಂದರೆ ಆಗದ ರೀತಿ ಕಾಪಾಡತಕ್ಕ ಜವಾಬ್ದಾರಿಯನ್ನು ಸರ್ಕಾರ ವಹಿಸುತ್ತಿದೆ. ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಜಿ.ವಿ.ಕೆ. ರಾವ್ ಸಮಿತಿ ಏನು ವರದಿ ಕೊಟ್ಟಿದೆ ಈ ಜಾಗವನ್ನು ಸ್ವಾಧೀನ ಮಾಡಿಕೊಂಡು ಬಿಡಿಎ ಮೂಲಕ ಸದಸ್ಯರಿಗೆ ಕೊಡುತ್ತೇವೆ. ಆದರೆ ನಾವು ಕಂಡದ್ದು ಎಂದರೆ, ಯಾರು ನಿಜವಾದ ತಪ್ಪಿತಸ್ಥರು ಇದ್ದಾರೆ, ಸಾರ್ವಜನಿಕರ ಹಣ ದುರುಪಯೋಗ ಮಾಡಿದ್ದಾರೆ ಮತ್ತು ಯಾರು ಶಾಮೀಲಾಗಿದ್ದಾರೆ ಎನ್ನತಕ್ಕ ಆಪಾದನೆ ಇರತಕ್ಕ ಆ ಪ್ರಕರಣಗಳು ಏನಿವೆ, ಅವುಗಳನ್ನು ನಾವು ಸಿಓಡಿಗೆ ಒಪ್ಪಿಸುತ್ತೇವೆ ಮತ್ತು ಜಿವಿಕೆ ರಾವ್ ಅವರು ಏನು ಆಪಾದನೆಯನ್ನು ಹೇಳಿದ್ದಾರೆ ಅದನ್ನು ಸಿಓಡಿಗೆ ತನಿಖೆಗೆ ಒಪ್ಪಿಸಿ ಯಾರೇ ತಪ್ಪಿತಸ್ಥರು ಇದ್ದರೂ ಕೂಡ ಸಾರ್ವಜನಿಕರ ಹಣ ಪೋಲು ಆಗುತ್ತಿದ್ದರೆ, ದುರುಪಯೋಗ ಮಾಡಿದ್ದರೆ ಅಥವಾ ನೈಜ ಸದಸ್ಯರಿಗೆ ಯಾವುದೇ ರೀತಿಯಲ್ಲಿ ಶೋಷಣೆಯನ್ನು ಮಾಡಿದ್ದರೆ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಲಾಗುವುದು. ಅಧಿಕಾರಿಗಳೇ ಶಾಮೀಲು ಆಗಿರಬಹುದು ಅಥವಾ ಯಾರೇ ಆಗಿರಬಹುದು. ಸರಿಯಾದ ತನಿಖೆ ಮಾಡಿ ಅದರ ಬಗ್ಗೆ ಕ್ರಿಮಿನಲ್ ಕೇಸ್ ಮಾಡುವುದು ಅಥವಾ ರಿಕವರಿ ಪ್ರೊಸೀಡಿಂಗ್ಸ್ ಮಾಡುವುದು ಅದನ್ನೆಲ್ಲಾ ನಾವು ಪ್ರತ್ಯೇಕವಾಗಿ ಮಾಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ನನ್ನ ಪ್ರಶ್ನೆಗಳಿಗೆ ಇಲ್ಲಿ ಉತ್ತರ ಬಂದಿಲ್ಲ. ತಾವು ಜಿವಿಕೆ ರಾವ್ ಮೇಲೆ ಏನು ಆಪಾದನೆಗಳು ಆದರಿಂದ ಸಾಬೀತಾಗಿದೆ ಅವುಗಳ ಬಗ್ಗೆ ಸಿಓಡಿ ಎನ್‌ಕ್ವಯರಿ ಮಾಡುತ್ತೇವೆಂದು ಹೇಳಿದಿರಿ. ಅದು ಬಹಳ ಸಂತೋಷ. ಆದರೆ ಪ್ರಶ್ನೆ ಏನೆಂದರೆ, ಅಕ್ಟೋಬರ್ ತಿಂಗಳಲ್ಲಿ 2 ಸಾವಿರ ಎಕರೆ ಲ್ಯಾಂಡ್ ಏನು ಕೊಟ್ಟಿದ್ದೀರಿ, ಸರ್ಕಾರಕ್ಕೆ ಜಿವಿಕೆ ರಾವ್ ರಿಪೋರ್ಟ್ ಬಂದಿದ್ದರೂ ಕೂಡ ಇದನ್ನು ಹಂಚಬಾರದು ಎಂದು ಹೇಳಿದರು ಅಕ್ಟೋಬರ್ ತಿಂಗಳಲ್ಲಿ ಏನು ಹಂಚಿಕೆ ಮಾಡಿದ್ದಾರೆ ಅದನ್ನು ತನಿಖೆ ಮಾಡುತ್ತೇವೆಂದು ತಾವು ಹೇಳಿಲ್ಲ. ತಮ್ಮದು ಕ್ಲೀನ್ ಗೌರ್ನಮೆಂಟ್, ಮೇಜರ್ ಸರ್ಜರಿ ಮಾಡಬೇಕಾದರೆ ಅದರ ಬಗ್ಗೆ ಸಿಬಿಐ ಎನ್‌ಕ್ವೈಯರಿ ಮಾಡಬೇಕಾಗುತ್ತದೆ. ಇದರ ಬಗ್ಗೆ ತಮ್ಮ ನಿಲುವು ಹೇಳಿ.

2 ಸಾವಿರ ಎಕರೆ ಲ್ಯಾಂಡ್ ಅಕ್ವಿಜಿಶನ್ ಮಾಡಬಾರದೆಂದು ಸರ್ಕಾರದಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಆರ್ಡರ್ ಹೋಗಿದೆ. ಆದ್ದರಿಂದ ಲ್ಯಾಂಡ್ ಅಕ್ವಿಜಿಶನ್ ಮಾಡುವುದು ಕ್ಯಾನ್ಸಲ್ ಆಗಿದೆ ಅದರ ಬಗ್ಗೆ ತಾವು ಹೇಳಿ. ತಾವು ಆ ವಿಚಾರದಲ್ಲಿ ಹೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ : ಕ್ಯಾಬಿನೆಟ್ ನಿರ್ಣಯದ ಪ್ರಕಾರ ಅಥವಾ ಏನು ಆದೇಶದ ಪ್ರಕಾರ ಅದನ್ನು ಉಲ್ಲಂಘಿಸಿ 2 ಸಾವಿರ ಚಿಲ್ಲರೆ ಎಕರೆ ಏನು ಸೊಸೈಟಿಗಳಿಗೆ ಕೊಟ್ಟಿದ್ದಾರೆ ಅದರಲ್ಲಿ ಅಗ್ರಿಮೆಂಟ್ ಅದಂತಹ ವಿಚಾರವನ್ನು

ನಾವು ವಿಚಾರ ಮಾಡುತ್ತಿದ್ದೇವೆ. ಅದು ಯಾವ ತರಹ ತನಿಖೆಯಾಗಬೇಕು ಎನ್ನುವುದು ವಿಚಾರಣೆಯಾಗಬೇಕು. ಅದನ್ನು ಆಮೇಲೆ ನೋಡುತ್ತೇನೆ. ಎರಡನೆಯ ವಿಚಾರ ಹೇಳಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ 2 ಸಾವಿರ ಎಕರೆ ಜಾಗವನ್ನು ಸ್ವಾಧೀನ ಕ್ಕೆ ತೆಗೆದುಕೊಳ್ಳಲಿಕ್ಕೆ ಏನು 4(1) ನೋಟಿಫಿಕೇಶನ್ ಮಾಡುತ್ತಿದ್ದಾರೆ ಅದನ್ನ ನಾವು ಪ್ರತ್ಯೇಕವಾಗಿ ಪರಿಶೀಲನೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಜಿ.ವಿ.ಕೆ. ರಾವ್‌ರವರು ವರದಿಯನ್ನು ಕೊಟ್ಟಿರತಕ್ಕ ಶಿಫಾರಸ್ಸುಗಳನ್ನು ತಾವು ಒಪ್ಪಿದ್ದೀರಿ ನಾನು ಸಂತೋಷಪಡುತ್ತೇನೆ. ಸಂಪೂರ್ಣವಾಗಿ ಜಿ.ವಿ.ಕೆ.ರಾವ್ ವರದಿಯಲ್ಲಿ ಕೊಟ್ಟಿದ್ದಾರೆ. ನಿಜವಾಗಿಯೂ ಅದು ಒಳ್ಳೆಯ ವರದಿ, ಅದನ್ನು ಸಮಗ್ರವಾಗಿ ಸರ್ಕಾರದವರು ಒಪ್ಪುತ್ತೀರಾ? ತಾವು ಒಪ್ಪುವುದರಿಂದ ನಮ್ಮ ಸರ್ಕಾರಕ್ಕೆ ಎತ್ತರವಾದ ಗೌರವ ಬರುತ್ತದೆ. ಅದಕ್ಕೊಂದು ಶಕ್ತಿ ಬರುತ್ತದೆಂದು ಹೇಳುತ್ತೇನೆ. ಆ ವರದಿಯ ಆಧಾರದ ಮೇಲೆ ತಾವು ಒಪ್ಪುವುದಲ್ಲದೆ ಆ ವರದಿ ಮೂಲಕ ಅನೇಕರಿಗೆ ಏನೇನು ಅನ್ಯಾಯ ಮಾಡಿದ್ದಾರೆ ಅವರಿಗೆ ತಮ್ಮ ಸರ್ಕಾರದ ಕ್ರಮಗಳೇನು ಎಂಬುದನ್ನು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ : ಜಿ.ವಿ.ಕೆ.ರಾವ್‌ರವರು ಸಮಿತಿಯ ವರದಿಯಲ್ಲಿ ಏನು ಆಪಾದನೆಗಳನ್ನು ಗುರುತಿಸಿದ್ದಾರೆ ಯಾವ ಸೊಸೈಟಿಗಳೇ ಇರಬಹುದು ಸೊಸೈಟಿಗಳ ಸಂಬಂಧಪಟ್ಟ ಪದಾಧಿಕಾರಿಗಳು ಯಾರೇ ಇರಬಹುದು ಏನು ಆಪಾದನೆಗಳನ್ನು ಗುರುತಿಸಿದ್ದಾರೆ ಅವುಗಳನ್ನು ಸಿಓಡಿಗೆ ಕಳುಹಿಸುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ನನ್ನ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಅವರಾಗಿಯೇ ಹೇಳಿಕೆ ಕೊಟ್ಟಿದ್ದಾರೆ. ತಮ್ಮ ಮುಖಾಂತರ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ಅವರು ಪ್ರಮುಖವಾದ ಒಂದು ಹೇಳಿಕೆಯನ್ನು ಕೊಟ್ಟಿರುವುದರಿಂದ ಅದರಿಂದ ಉದ್ಭವವಾಗಿರುವ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು : ತಾವು ಯಾವುದಾದರೂ ಬೇರೆ ರೂಪದಲ್ಲಿ ಇದಕ್ಕೆ ಸಂಬಂಧಿಸಿದಂತೆ ಸೂಚನೆಯನ್ನು ಕಳುಹಿಸಿದರೆ ಅದನ್ನು ನಾನ ಕನ್ಸೀಡರ್ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಅದನ್ನು ಚರ್ಚೆ ಮಾಡುವುದಕ್ಕೆ ನಮ್ಮದೇನು ಆಕ್ಷೇಪಣೆ ಇಲ್ಲ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯಲ್ಲಿ ಎರಡು ಮಾತುಗಳನ್ನು ಹೇಳಿದ್ದಾರೆ. ಮೊದಲನೆಯದಾಗಿ ಜಿ.ವಿ.ಕೆ. ರಾವ್ ರವರ ವರದಿಯಲ್ಲಿ ಶಿಫಾರಸ್ಸುಗಳನ್ನು ಏನು ಮಾಡಿದ್ದಾರೆ ಅದನ್ನು ಜಾರಿಗೆ ತರುತ್ತೇವೆಂದೂ ತಪ್ಪಿತಸ್ಥರ ಮೇಲೆ ಕೇವಲ ಕ್ರಮ ತೆಗದುಕೊಳ್ಳುವುದು ಮಾತ್ರ ಕಾನೂನು ಪ್ರಕಾರ ಸೀಮಿತವಾಗಿಲ್ಲದಕ್ಕಿಂತ ಹೆಚ್ಚಾಗಿ ಯಾರು ಅರ್ಹ ಸದಸ್ಯರಿದ್ದಾರೆ ಆ ಸದಸ್ಯರುಗಳಿಗೆ ನಿವೇಶನಗಳನ್ನು ಕೊಡುವುದಕ್ಕೆ ಒಂದು ಫುಲಪ್ರೂಫ್ ಸಿಸ್ಟಂ ತರಹ ಮಾಡಬೇಕೆಂದು ಅವರು ವರದಿಯಲ್ಲಿ ಹೇಳಿದ್ದಾರೆ. ಹಿಂದೆ ಆ ರೀತಿಯಾಗಿ ಅನ್ಯಾವಾಗದಂತೆ ಶೋಷಣೆಯಾಗದಂತೆ ಅರ್ಹರಾದಂತಹ ಸದಸ್ಯರಿಗೆ ನಿವೇಶನ ಕೊಡಲಿಕ್ಕೆ ಕೆಲವು ಪ್ರಸ್ತಾಪಗಳನ್ನು ಅಂದಿನ ಸರ್ಕಾರ ಮಾಡಿತ್ತು. ಅದರ ಬಗ್ಗೆಯೂ ಸಹ ಚರ್ಚೆ ಆಗಬೇಕಾಗಿದೆ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮುಖಾಂತರ

ವಿನಂತಿಸಿಕೊಳ್ಳುತ್ತೇನೆ ತಾವೇನು ಇವತ್ತಿನ ದಿವಸ ಹೇಳಿಕೆ ಕೊಟ್ಟಿದ್ದೀರಿ ಅದು ಮಹತ್ವವಾದ ಹೇಳಿಕೆಯೆಂದು ನಾನು ಭಾವಿಸುತ್ತೇನೆ. ಇದರಲ್ಲಿ ಕೆಲವು ವಿಚಾರಗಳನ್ನು ಪೂರ್ಣವಾಗಿ ಹೇಳುವುದಕ್ಕೆ ಸಾಧ್ಯವಾಗದಿರಬಹುದು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಈ ಅಧಿವೇಶನದಲ್ಲಿಯೇ ಕಾಲಾವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಸ್ಟೇಟ್ ಮೆಂಟ್ ಆದ ಮೇಲೆ ಯಾವ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ವಿರೋಧ ಪಕ್ಷದ ನಾಯಕರು ನಿಂತಿದ್ದಾರೆಂದು ಅವರಿಗೆ ಅವಕಾಶ ಕೊಟ್ಟಿದ್ದೇನೆ. ಮಾನ್ಯ ವಾಟಾಳ್ ನಾಗರಾಜ್ ರವರು ನಿಂತಿದ್ದಾರೆ. ಆಮೇಲೆ ನಾರಾಯಣಸ್ವಾಮಿಯವರು ಅವವು ಆದ ಮೇಲೆ ಇನ್ನೊಬ್ಬರು ಇದೇನಿದು ?

ಶ್ರೀ ವಾಟಾಳ್ ನಾಗರಾಜ್ : ನಾನು ಏನು ಹೇಳುತ್ತೇನೆ ತಾವು ದಯವಿಟ್ಟು ಕೇಳಿ. ನಾನು ಆ ಸಮಸ್ಯೆಯನ್ನು ಹೇಳುವುದಿಲ್ಲ, ಮಾನ್ಯ ಮುಖ್ಯಮಂತ್ರಿಗಳು ಮತ್ತೊಂದಕ್ಕೆ ಉತ್ತರ ಕೊಡಬೇಕಾಗಿದೆ. ಕನ್ನಡದ ಬಗ್ಗೆ ತಾವು ಹೀಗೆಂದರೆ ಹೇಗೆ? ನಾನು ಇನ್ನು ಮಾತನಾಡಿಲ್ಲ, ನಾನು ಇನ್ನು ಬಾಯಿಬಿಟ್ಟಿಲ್ಲ.

ಉಪಾಧ್ಯಕ್ಷರು : ಒಂದು ನಿಮಿಷ ತಾವು ಕುಳಿತುಕೊಳ್ಳಿ.

ಶ್ರೀ ಎಂ. ನಾರಾಯಣಸ್ವಾಮಿ : ಸರ್ಕಾರದವರು ಏನು ತೀರ್ಮಾನ ತೆಗೆದುಕೊಂಡಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಸರ್ಕಾರಿ ಆದೇಶ ಬಂದಾಗ ಅದು ಕೋರ್ಟ್‌ಗೆ ಹೋಗಿ ಹೈಕೋರ್ಟ್‌ನಲ್ಲಿ ಸ್ಟೇ ಆಗಿದೆ. ಈ ವಿಚಾರದಲ್ಲಿ ಸರ್ಕಾರ ಎಚ್ಚರಿಕೆ ವಹಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ ಅಷ್ಟೇ.

ಉಪಾಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರು ಕನ್ನಡ ಬಗ್ಗೆ ಮಾತನಾಡಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ ಆಡಳಿತದಲ್ಲಿ ಕನ್ನಡ ಭಾಷೆಯ ಅನುಷ್ಠಾನ

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಇಲ್ಲದಿದ್ದಾಗ ನಾನು ಈ ರಾಜ್ಯದ ಆಡಳಿತಭಾಷೆ ಕನ್ನಡ, ಕನ್ನಡದ ಬಗ್ಗೆ ಸರಿಯಾದ ರೀತಿಯಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಕನ್ನಡವನ್ನು ಅನುಷ್ಠಾನ ಮಾಡುವುದರಲ್ಲಿ ಸಂಪೂರ್ಣವಾಗಿ ಸರ್ಕಾರ ವಿಫಲವಾಗಿಯೆಂದು ಆರೋಪ ಮಾಡಿದ್ದೇನೆ. ಸರ್ಕಾರದಿಂದ ಬರತಕ್ಕ ಎಲ್ಲಾ ಟಿಪ್ಪಣಿಗಳು, ಎಲ್ಲಾ ಪುಸ್ತಕಗಳು ಶಾಸನ ಸಭೆಯಲ್ಲಿ ನಡೆಯತಕ್ಕ ಕೆಲವು ವಿಚಾರಗಳು ಎಲ್ಲವು ಸಂಪೂರ್ಣವಾಗಿ ಇಂಗ್ಲೀಷ್‌ನಲ್ಲಿ ಹೋಗುತ್ತಿವೆ. ಸಂಪೂರ್ಣವಾಗಿ ಕನ್ನಡ ಆಡಳಿತ ಭಾಷೆಯೆಂದು ಒಂದುಕಡೆ ಹೇಳುವುದು, ಮತ್ತೊಂದು ಕಡೆ ತದ್ವಿರುದ್ಧವಾಗಿ ಈ ಆಡಳಿತ ನಡೆಯುತ್ತಿದೆ. ಆದ್ದರಿಂದ ಕರ್ನಾಟಕ ಸರ್ಕಾರಕ್ಕೆ ಒಂದು ನಿಲುವು ಬೇಕು. ಒಂದು ನೀತಿಬೇಕು. ನಾವು ಕನ್ನಡವನ್ನು ಸಂಪೂರ್ಣವಾಗಿ ಒಪ್ಪುವುದಿಲ್ಲ,

ನಾವು ಚೌಚೌ ಏನು ಬೇಕಾದರೂ ಮಾಡುತ್ತೇವೆ ಆ ತರಹ ತೀರ್ಮಾನವನ್ನಾದರೂ ತೆಗೆದುಕೊಳ್ಳಬೇಕು.

ಯಾವ ತರಹ ಬೇಕಾದರೂ ಇರುತ್ತೇವೆ ಎಂದು ತೀರ್ಮಾನ ತೆಗೆದುಕೊಳ್ಳಲಿ. ಇಲ್ಲ, ಕನ್ನಡದ ಬಗ್ಗೆ ಒಂದು ಕಾಳಜಿ ಇದ್ದು, ಈ ರಾಜ್ಯದ ಭಾಷೆ ಕನ್ನಡ ಎನ್ನತಕ್ಕಂಥ ಅಭಿಮಾನ, ಅಭಿಮಾನಕ್ಕಿಂತ ಇದೊಂದು ನೀತಿಯಾಗಿದೆ. ನೀತಿಗಿಂತ ಹೆಚ್ಚಾಗಿ ಇದನ್ನು ಕ್ರಮಬದ್ಧವಾಗಿ ಸರ್ಕಾರ ಮಾಡಲೇಬೇಕೆನ್ನುವ ಒಂದು ತೀರ್ಮಾನ. ಈ ತೀರ್ಮಾನದ ಹಿಂದಕ್ಕೆ ಸರ್ಕಾರ ಹೋಗುವ ಹಾಗಿಲ್ಲ. ನಮ್ಮ ರಾಜ್ಯದಲ್ಲಿಯೇ ಈ ದುರ್ಗತಿ ಬಂದಿರತಕ್ಕಂಥಾದ್ದು, ಬೇರೆ ಪಕ್ಕದ ರಾಜ್ಯಗಳಲ್ಲಿ ಅವರವರ ಭಾಷೆ ಬಿಟ್ಟರೆ ಬೇರೆ ಭಾಷೆ ಇಲ್ಲವೇ ಇಲ್ಲ. ನಮ್ಮ ರಾಜ್ಯದಲ್ಲಿ ಮಾತ್ರ ಈ ದುರ್ಗತಿ ಬಂದಿದೆಯೆಂದು ನನಗನ್ನಿಸುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಕನ್ನಡದ ಬಗ್ಗೆ ಕಳಕಳಿ ಇದೆ. ಕನ್ನಡದ ಬಗ್ಗೆ ಅವರಿಗೆ ಅಭಿಮಾನ ಇದೆ. ಕನ್ನಡ ವಿಶ್ವವಿದ್ಯಾನಿಲಯ ಬೇಕು ಎಂದು ಪೀಠಿಕೆ ಎಲ್ಲಾ ಪ್ರಾರಂಭ ಮಾಡಿದ್ದಾರೆ. ಕನ್ನಡದ ಬಗ್ಗೆ, ಗಡಿಬಗ್ಗೆ ಅವರಿಗೆ ಆಸಕ್ತಿಯಿದೆಯೆನ್ನುವ ಪೂರ್ಣ ನಂಬಿಕೆ ನನಗೆ ಇದೆ. ತಮ್ಮ ಕಾಲದಲ್ಲಿ ಕನ್ನಡಕ್ಕೆ ಕಳಂಕ ಆಗಬಾರದು, ತಮ್ಮ ಆಡಳಿತ ಸಂಪೂರ್ಣವಾಗಿ 16ಆಣೆ ಕನ್ನಡದಲ್ಲೇ ನಡೆಯಬೇಕಾಗುತ್ತದೆ.

ಉಪಾಧ್ಯಕ್ಷರು : ಈಗ ಹದಿನಾರು ಆಣೆ ಇಲ್ಲ, ನೂರು ಪೈಸೆಗಳಿವೆ.

ಶ್ರೀ ವಾಟಾಳ್ ನಾಗರಾಜ್ : ಅದು ವ್ಯತ್ಯಾಸವಾಗುತ್ತದೆ. ಪೈಸೆ ಎಂದರೆ ಅದು ಹಿಂದಿಯಾಗುತ್ತದೆ. ಒಂದು ರೂಪಾಯಿ, ಸಂಪೂರ್ಣ ಒಂದು ರೂಪಾಯಿ. ನೂರಕ್ಕೆ ನೂರರಷ್ಟುಕನ್ನಡದಲ್ಲಿ ಆಡಳಿತ ನಡೆಯಬೇಕಾಗುತ್ತದೆ. ತಮಗೆ ಗೊತ್ತಿರುವ ಹಾಗೆ ಅನೇಕ ಇಲಾಖೆಗಳಲ್ಲಿ ಇದನ್ನು ಪಾಲಿಸುತ್ತಿಲ್ಲ. ನಮ್ಮಲ್ಲಿ ಇರತಕ್ಕಂಥ ಐ.ಎ.ಎಸ್. ಐ.ಪಿ.ಎಸ್. ಅಧಿಕಾರಿಗಳಿಗೆ ಕನ್ನಡ ಎಂದರೆ ಒಂದು ರೀತಿಯ ವಾಕರಿಕೆ. ನೂರಕ್ಕೆ 60 ಭಾಗ ಹೀಗಿದೆ. ಇದು ಸರಿಯಲ್ಲ. ಕೆಲವು ಉನ್ನತ ಅಧಿಕಾರಿಗಳು ಕನ್ನಡ ಇರಬೇಕೆಂದು ಹೇಳುವವರೂ ಇದ್ದಾರೆ. ಇದು ಎರಡು ಪ್ರಕಾರವಾಗಿದೆ. ಅವರಿಗೆ ತಾವು ಕಟ್ಟಾಜ್ಞೆ ಕಳುಹಿಸಿ ನೂರಕ್ಕೆ ನೂರರಷ್ಟು ಕನ್ನಡದಲ್ಲೇ ಇರಬೇಕೆಂದು ಹೇಳುವ ವ್ಯವಸ್ಥೆ ಮಾಡಬೇಕು. ಮಂಡಲ ಪಂಚಾಯತ್‌ನಿಂದ ಹಿಡಿದು ಶಾಸನಸಭೆವರೆಗೆ ಆಡಳಿತ ಸಂಪೂರ್ಣವಾಗಿ ಕನ್ನಡದಲ್ಲೇ ನಡೆಯಬೇಕು. ಅದು ಬಿಟ್ಟು ವಿಧಾನಸೌಧದಲ್ಲಿಯೇ ಕನ್ನಡ ಬಿದ್ದುಹೋಗಿದೆ. ಮತ್ತು ಸದನದ ಸಮಿತಿಗಳು ಏನಿವೆ, ಈ ಸಮಿತಿಗಳಲ್ಲಿಯೂ ಸಹ ನಡವಳಿಕೆಗಳು ಸಂಪೂರ್ಣವಾಗಿ ಕನ್ನಡದಲ್ಲಿ ನಡೆಯಬೇಕು. ಅವರು ಕೊಡತಕ್ಕಂಥ ವರದಿಗಳು ಸಹ ಕನ್ನಡದಲ್ಲಿಯೇ ನಡೆಯಬೇಕೆಂದು ಹೇಳುತ್ತೇನೆ. ಇಂಗ್ಲೀಷಿನಲ್ಲಿ ಕೊಟ್ಟಿರತಕ್ಕಂಥ ವರದಿಗಳನ್ನು ಗೈರುಹಾಜರಿಯಲ್ಲಿ ಹರಿದು ಬಿಸಾಡಿ ಪ್ರತಿಭಟನೆ ಮಾಡಿದ್ದೇವೆ.

ಕನ್ನಡದ ಬಗ್ಗೆ ಸರ್ಕಾರದ ನಿಲುವೇನು ಎಂದು ಸ್ಪಷ್ಟಪಡಿಸಬೇಕಾಗುತ್ತದೆ. ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಶ್ರೀ ಹನುಮೇಗೌಡರು ಅವಕಾಶ ಕೊಟ್ಟರೆ ಅವರು ಹೇಳಿಕೆ ಕೊಡುತ್ತಾರೆ.

ಶ್ರೀ ಎಂ. ಮಹದೇವ್ : ನಾಗರಾಜ್‌ರವರೆ, 'ಅಧ್ಯಕ್ಷರು' ಎನ್ನುವ ಪದ ಇಂಗ್ಲೀಷಿನಲ್ಲಿ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಹದೇವ್ ಅವರ ಅನೇಕನ್ನಡ, ನಮಗೆ ಬಹಳ ತಾಪತ್ರಯವಾಗಿದೆ.

ಶ್ರೀ ಬಿ.ಎಂ. ಇದಿನಬ್ಬ : ಆಡಳಿತ ಭಾಷೆ ಕನ್ನಡ ಆಗಬೇಕೆಂದು ಹಿಂದೆ ನಿರ್ಣಯ ಕೂಡ ಆಗಿದೆ. ಅದರಲ್ಲೂ ಈಗಿನ ಮುಖ್ಯಮಂತ್ರಿಗಳು ಕನ್ನಡದಲ್ಲಿ ನೂರಕ್ಕೆ ನೂರರಷ್ಟು ಎಲ್ಲಾ ವಿಷಯಗಳನ್ನು ತಿಳಿದುಕೊಂಡಿರುತ್ತಾರೆ. ಆದ್ದರಿಂದ ವಿಧಾನಸೌಧದಿಂದ ಅದು ಶುರು ಆಗಬೇಕು. ಇದು ತಲೆಗೆ ಹಾಕುವ ನೀರು ಹೇಗೆ ಕಾಲಿಗೆ ಬರಬೇಕೋ ಹಾಗೆ ಸಂಪೂರ್ಣವಾಗಿ ಜಾರಿಯಲ್ಲಿ ಬರಬೇಕು. ಈಗೇನು ಅರ್ಧಕ್ಕೆ ಅರ್ಧ ಇಂಗ್ಲೀಷಿನಲ್ಲಿ ಬರುತ್ತಿದೆ,ಅದನ್ನು ನಿಲ್ಲಿಸಬೇಕೆಂದು ನಾನೂ ಕೂಡ ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಸನ್ಮಾನ್ಯ ಅಧ್ಯಕ್ಷರ, ಹಿರಿಯ ಸದಸ್ಯ ಸನ್ಮಾನ್ಯ ವಾಟಾಳ್ ನಾಗರಾಜ್ ರವರು 'ವಾಟಾಳ್' ಎಂದರೆ ಅದು ಕನ್ನಡವೇ ನನಗೆ ಬಹಳ ಸಮಯದಿಂದ ಸಂಶಯ. ಅದು ತಮಿಳು ಶಬ್ದ ಎಂದು ಯಾರೋ ಹೇಳಿದರು.

ಶ್ರೀ ವಾಟಾಳ್ ನಾಗರಾಜ್ : ಯಾರೋ ಭಾಷೆಯ ಗಂಧವೇ ಗೊತ್ತಿಲ್ಲದವರು ಹೇಳಿರಬೇಕು. ಇದು ಭಾಷೆ , ಸಂಸ್ಕೃತಿ,ಸಾಹಿತ್ಯದ ಬಗ್ಗೆ ಅಭಿಮಾನ ಇಲ್ಲದವರು ಹೇಳಿದ ಹಾಗೆ ಕಾಣುತ್ತದೆ. ವಾಟಾಳ್ ಎಂದರೆ ನೂರಕ್ಕೆ ನೂರು ಅಚ್ಚಕನ್ನಡ, ತಿಳಿಗನ್ನಡ.

ಒಬ್ಬ ಮಾನ್ಯ ಸದಸ್ಯರು : 'ವಾಟಾಳ್ ' ಎನ್ನತಕ್ಕಂಥ ಅರ್ಥ ಶಬ್ದ ಕನ್ನಡದಲ್ಲಿ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಹಳೆಗನ್ನಡದ ಯಾವುದಾದರೂ ಸಾಲನ್ನು ಓದಿದರೆ ಅದು ತಮಿಳೇನೋ ಎಂದು ಭಾಸವಾಗುತ್ತದೆ. ಹಳೆಗನ್ನಡದಲ್ಲಿ ಹೇಳಿತಕ್ಕದ್ದು. ರಾಷ್ಟ್ರಕವಿ ಕುವೆಂಪು ಅವರು ಹೇಳಿರತಕ್ಕದ್ದು, ರಾಮಾಯಣ ದರ್ಶನಂ ಅನ್ನು ತಾವು ಓದಿದರೆ ಇದೇನು ಕನ್ನಡವೇ ಎಂದು ಸಂಶಯ ಬರಬಹುದು. ಆದ್ದರಿಂದ ವಾಟಾಳ್ ಎನ್ನತಕ್ಕಂಥ ಶಬ್ದ ಏನಿದೆ, ಇದು ಪವಿತ್ರವಾದಂಥ, ಅಚ್ಚಕನ್ನಡದ, ಅಭಿಮಾನಪದ.

ಶ್ರೀಮತಿ ರೇಣುಕಾರಾಜೇಂದ್ರನ್ : ಕನ್ನಡ ಶಬ್ದಕೋಶದಲ್ಲಿ 'ಕ' ಒತ್ತು ದೀರ್ಘಸ್ವರ ದೀರ್ಘಹ್ರಸ್ವಸ್ವರ, ಅದೆಲ್ಲ ಉಂಟು. ಕೊಂಬು, ಮತ್ತು 'ಎ' ತ್ವ, 'ಒ' ತ್ವ ಎಲ್ಲಾ ಇದೆ. ವಾಟಾಳ್ ಎನ್ನತಕ್ಕಂಥ ಪದ ಏನನ್ನು ತೋರಿಸುತ್ತದೆ? ಅದು 'ಳ' ಅಂತ ಬಂದಿಲ್ಲ, 'ಆಳ್' ಅಂತ ಬರುತ್ತದೆ. ಅಂಡಾಳ್ ಎನ್ನುವ ಹಾಗೆ, ಇದು 'ವಾಟಾಳ್' ಅಂತ ಬರುವಾಗ ಅದು ತಮಿಳು ಶಬ್ದವೇ ಇರಬೇಕೆಂದು ನನಗೆ ಸಂದೇಹ. ಏಕೆಂದರೆ, ಶ್ರೀನಿವಾಸ ಎಂದರೆ ಕನ್ನಡ ಆಗುತ್ತದೆ. ಶ್ರೀನಿವಾಸನ್ ಎಂದಕೂಡಲೇ ಸ್ವಲ್ಪ ಸಂಶಯ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಅನ್ನು ಅಲ್ಲ, ಅನ್ನು ಅಲ್ಲ, ರಮ್ಮು ಅಲ್ಲ, ಯಾವುದೂ ಅಲ್ಲ, ನಾನು ವಾಟಾಳು, ಎನ್ನತಕ್ಕಂತಾದ್ದು ವಾಟಾಳ್ ಎನ್ನತಕ್ಕಂಥ ಊಹೆ. ವಾಟಾಳು ಎನ್ನತಕ್ಕ ಒಂದು ಊರು ಬಹಳ ಪವಿತ್ರವಾದಂಥ ಸ್ಥಳ. ಆ ಸ್ಥಳದಿಂದ ಬಂದಿರತಕ್ಕಂಥವನು ನಾನು ಮೈಸೂರು ಜಿಲ್ಲೆಯಲ್ಲಿರತಕ್ಕಂಥಾದ್ದು ವಾಟಾಳು ಎನ್ನತಕ್ಕಂಥ ಕನ್ನಡದ ಪದ ಏನಿದೆ, ಇದು ನಿಜವಾಗಿಯೂ ಬಹಳ ಅತ್ಯಂತ, ಮಾಧುರ್ಯ, ನಿಮಗೆ ವಾಟಾಳ್ ಎಂದತಕ್ಷಣ. ನಮ್ಮ ಕಿವಿಯಲ್ಲಿ ಏನು ಬರುತ್ತದೆ. ಕನ್ನಡ ಎಂದು ಬರುತ್ತದೆ. ಈ ರೀತಿ ಬರತಕ್ಕಂಥ ಶಕ್ತಿಯನ್ನು ಕೊಟ್ಟಿರತಕ್ಕಂತಾದ್ದು ವಾಟಾಳ್ ಎನ್ನತಕ್ಕಂಥ ಪದ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ವಾಟಾಳು ಎಂದು ತಾವು ಇಟ್ಟುಕೊಳ್ಳಬೇಕು. ವಾಟಾಳ್ ಎಂದು ಇರಬಾರದು.

ಶ್ರೀ ಎ.ಕೆ. ಅನಂತಕೃಷ್ಣ : ವಾಟಾಳ್ ನಿಂದ ಬಂದಿದ್ದಲ್ಲ, ಅದು ವಾಟ್-ಆಲ್ ನಿಂದ.

ಶ್ರೀ ವಾಟಾಳ್ ನಾಗರಾಜ್ : ಭಾಷೆಯನ್ನು ಉಚ್ಚಾರಣೆ ಮಾಡುವುದಕ್ಕೆ ಬರದೇ ಇರತಕ್ಕಂಥ ಅನಾಗರೀಕರು ಈ ವಾಟಾಳ್ ಎನ್ನುವುದನ್ನು ಬೇರೆ ಬೇರೆ ಅರ್ಥದಲ್ಲಿ ಮಾತನಾಡುತ್ತಾ ಹೋಗುತ್ತಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಒಪ್ಪುತ್ತೇನೆ. ಏಕೆಂದರೆ, ನೂರಕ್ಕೆ ನೂರು ಪಾಲು, ತಾವು ಏನು ಪ್ರಸ್ತಾಪ ಮಾಡಿದ್ದೀರಿ ಮತ್ತು ಹಿರಿಯ ಸದಸ್ಯರಾದ ಬಿ.ಎಂ. ಇದಿನಬ್ಬನವರು ಹೇಳಿದ ಪ್ರಕಾರ, ಕನ್ನಡದ ಅಭಿವೃದ್ಧಿ ಅಥವಾ ಕನ್ನಡತನ ನಮ್ಮಿಂದಲೇ ಪ್ರಾರಂಭವಾಗಬೇಕು. ಇಲ್ಲದಿದ್ದರೆ, ನಮಗೆ ಆ ನೈತಿಕವಾದಂಥ ಹಕ್ಕು ಇಲ್ಲ. ಕೆಳಗಿನ ಸ್ಥಳಗಳಲ್ಲಿ ನೀವು ಕನ್ನಡವನ್ನು ಉಪಯೋಗ ಮಾಡಬೇಕು ಎಂದು ಹೇಳುವುದನ್ನು,ನಾನು ಒಪ್ಪುತ್ತೇನೆ. ಏನಾದರೂ ಸ್ವಲ್ಪ ಅಚಾತುರ್ಯ ಕೆಲವು ಸಲ ಆಗಬಹುದು. ಅಲ್ಲಿ, ಕನ್ನಡದ್ದೂ ಕೂಡ ಆಗಿದೆ. ಪ್ರೆಸ್‌ನಿಂದ ಬರಬೇಕು ಅಷ್ಟೆ. ಅದು ಬರುತ್ತದೆ. ಆದ್ದರಿಂದ ಕೆಲವು ಸಾರಿ ಆಂಗ್ಲ ಭಾಷೆಯಲ್ಲಿ ಬರುತ್ತದೆ. ಅದನ್ನು ತಾವು ಸ್ವಲ್ಪ ಸಹಿಸಿಕೊಳ್ಳಬೇಕು. ನಮ್ಮ ಇಚ್ಛೆ ಕನ್ನಡದಲ್ಲಿಯೇ ಅಚ್ಚು ಮಾಡಿಕೊಡಬೇಕೆಂದು ಇದೆ. ಆದ್ದರಿಂದ, ತಮಗೆ ಕನ್ನಡದಲ್ಲೇ ನೂರಕ್ಕೆ ನೂರು ಪಾಲು. ಅದರಲ್ಲಿ ಏನೂ ಒಂದು ಅಂಶ, ಎರಡು ಅಂಶದ ಪ್ರಶ್ನೆ ಇಲ್ಲ. ಕನ್ನಡದಲ್ಲೇ ಎಲ್ಲಾ ಹೊತ್ತಿಗೆಗಳು ಅಥವಾ ಎಲ್ಲಾ ವಿಚಾರಗಳೂ ಸದನದಲ್ಲಿ ಬರುವ ಹಾಗೆ ಮತ್ತು ನಮ್ಮ ಆಡಳಿತದಲ್ಲಿಯೂ ಕೂಡ ಕನ್ನಡದಲ್ಲಿಯೇ ಎಲ್ಲಾ ಮಟ್ಟದ ಅಧಿಕಾರಿಗಳ ಕೂಡ ಟಿಪ್ಪಣಿಯನ್ನು ಹಾಕಬೇಕೆಂದು, ನಮ್ಮ ಕಾರ್ಯದರ್ಶಿಯವರಿಗೂ ಕೂಡ ಹೇಳಿದ್ದೇನೆ. ಆದ್ದರಿಂದ, ಕನ್ನಡದ ಬಗ್ಗೆ ಮತ್ತೊಂದು ವಿಚಾರವೇ ಇಲ್ಲ, ಕನ್ನಡ, ಕನ್ನಡತನ, ಕರ್ನಾಟಕದಲ್ಲಿ ಅದು ಪರಿಪೂರ್ಣವಾಗಿ ಆಗಬೇಕೆಂಬುದೇ ನಮ್ಮ ಅಪೇಕ್ಷೆ ಮತ್ತು ನಮ್ಮ ಹಾರೈಕೆ. ಅದನ್ನು ಮುಂದೆ ನಡೆಸಿಕೊಂಡು ಹೋಗತಕ್ಕ ಕೆಲಸ ನಾವು ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ : ಕರ್ನಾಟಕ ರಾಜ್ಯದಲ್ಲಿರತಕ್ಕ ವಾಣಿಜ್ಯ ಬ್ಯಾಂಕುಗಳು, ಕನ್ನಡ ಅಲ್ಲ, ಒಂದು ಅಕ್ಷರ ಅಲ್ಲ, ಯಾವುದೇ ಫಾರಂ ತೆಗೆದುಕೊಳ್ಳಿ, ಕನ್ನಡ ಒಂದಕ್ಷರ ಇಲ್ಲ, ಬರೀ ಹಿಂದಿ ಮತ್ತು ಇಂಗ್ಲೀಷಿನಲ್ಲಿ. ಅಲ್ಲಿ, ಇಲ್ಲಿ ಒಂದು

ಪದ ಇಂಗ್ಲೀಷಿನಲ್ಲಿ ಇರುತ್ತದೆ. ನೀವು ಆ ಬ್ಯಾಂಕುಗಳವರಿಗೆ ಹೇಳಬೇಕಾಗುತ್ತದೆ. ಕೇಂದ್ರಸರ್ಕಾರಕ್ಕೆ ಹೇಳಬೇಕುಗುತ್ತದೆ. ಕರ್ನಾಟಕದಲ್ಲಿ, ಆ ಬ್ಯಾಂಕುಗಳವರ ಕಾಗದ ಪತ್ರ ಏನೇನಿವೆ, ಅವೆಲ್ಲವೂ ಕೂಡ ಕನ್ನಡದಲ್ಲಿರ ಬೇಕಾಗುತ್ತದೆಂಬುದನ್ನು ಹೇಳಬೇಕಾಗುತ್ತದೆ. ಇಲ್ಲದಿದ್ದರೆ, ಅವರನ್ನು ಬಾಗಿಲು ಹಾಕಿಕೊಂಡು ಹೋಗಿ, ಅಂಗಡಿ ಮುಚ್ಚಿಕೊಂಡು ಹೋಗಿ ಎಂದು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕಾಗುತ್ತದೆ. ಅದೇ ರೀತಿಯಲ್ಲಿ ಇವತ್ತಿನದಿವಸ ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದರೆ, ಕನ್ನಡ ಪತ್ರಿಕೆಗಳು ಒಂದೂ ಸಿಗುವುದಿಲ್ಲ, ತೆಲುಗು ಪತ್ರಿಕೆ ಸಿಗುತ್ತದೆ. ತಮಿಳು ಪತ್ರಿಕೆ ಸಿಗುತ್ತದೆ. ಮರಾಠಿ ಪತ್ರಿಕೆ ಸಿಗುತ್ತದೆ. ಕನ್ನಡ ಪತ್ರಿಕೆ,ಬೆಂಗಳೂರಿನಿಂದ ಹೊರಡತಕ್ಕ ಯಾವುದೇ ವಿಮಾನದಲ್ಲಿಯೂ ಸಿಗುವುದಿಲ್ಲ. ಜನ ಕನ್ನಡ ಪತ್ರಿಕೆಗಳನ್ನು ಓದಬಾರದೆ. ಅಷ್ಟೇ ಅಲ್ಲ, ನೀವು ಏರ್ ಪೋರ್ಟ್‌ಗೆ ಹೋದರೆ, ಕನ್ನಡದಲ್ಲಿ ಪ್ರಕಟಣೆಗಳನ್ನು ಮಾಡುವುದಿಲ್ಲ. ರೈಲಿನ ಮೇಲೆ ಹಾಕಿರತಕ್ಕ ಅನೇಕ ಬೋರ್ಡುಗಳಿವೆ. ಈ ರೈಲುಗಳ ಮೇಲೆಯೂ ಕನ್ನಡ ಕಾಣಿಸುವುದಿಲ್ಲ. ನಾವು ಕನ್ನಡ ಎಲ್ಲಿದೆ ಎಂದು. ಹುಡುಕಬೇಕಾಗುತ್ತದೆ. ರೈಲಿನಲ್ಲಿ ಹಿಂದಿಯಲ್ಲಿರುತ್ತದೆ, ಅಥವಾ ಇಂಗ್ಲೀಷಿನಲ್ಲಿರುತ್ತದೆ. ಹಾಗಾದರೆ, ಅಲ್ಲಿ ಕನ್ನಡದವರು ಇಲ್ಲವೆ? ಈ ಭಾಷೆಗೆ ಏಕೆ ಇಷ್ಟು ಅನಾದರಣೆ ತೋರಿಸುತ್ತಿದ್ದಾರೆ. ನೀವು ಕೇಂದ್ರ ಸರ್ಕಾರಕ್ಕೆ ತೀವ್ರವಾದ ರೀತಿಯಲ್ಲಿ ಇದನ್ನು ತಿಳಿಸಬೇಕಾಗುತ್ತದೆ. ಅವರು ಹೇಳಬೇಕಾಗುತ್ತದೆ. ನೀವು ಕನ್ನಡವನ್ನು ಇಲ್ಲಿ ಬಳಸದಿದ್ದರೆ, ನಿಮ್ಮ ವ್ಯವಹಾರವನ್ನು ಇಲ್ಲಿ ನಡೆಸುವುದಕ್ಕಾಗುವುದಿಲ್ಲ ಎಂಬ ಮಾತನ್ನು ಹೇಳಬೇಕಾಗುತ್ತದೆ. ನೀವು ಆ ಧೈರ್ಯವನ್ನು ದಯವಿಟ್ಟು ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಅದಕ್ಕೆ ಉತ್ತರ ಇಷ್ಟೆ. ತಾವು ವಿಮಾನ ನಿಲ್ದಾಣಕ್ಕೆ ಹೋಗುತ್ತಿದ್ದೀರಿ. ಆ ಪುಸ್ತಕದ ಮಾರಾಟ ಮಳಿಗೆಗೆ ಹೋಗಿ, ಒಂದು ಹತ್ತು ಜನರು ಹೋಗಿ ನಮಗೆ ಕನ್ನಡ ಪತ್ರಿಕೆ ಬೇಕು ಎಂದು ಕೇಳಿದರೆ, ಎಲ್ಲಾ ಸಮಸ್ಯೆ ಪರಿಹಾರಕ್ಕಾಗಿರುತ್ತದೆ. ಆ ರೀತಿ ಕೇಳುತ್ತೀರಾ? ನೀವು ಆ ರೀತಿ ಕೇಳುವುದಕ್ಕೆ ಪ್ರಯತ್ನ ಮಾಡಿ, ನಮಗೆ ಕನ್ನಡ ಪತ್ರಿಕೆ ಬೇಕು, ಪ್ರಜಾವಾಣಿ, ಕನ್ನಡಪ್ರಭಾ ಈ ಪತ್ರಿಕೆಗಳೆಲ್ಲಿ ಎಂದು ಕೇಳುವುದಕ್ಕೆ ಪ್ರಾರಂಭ ಮಾಡಿ. ಆಮೇಲೆ ಅವರು ಕನ್ನಡ ಪತ್ರಿಕೆಗಳನ್ನೂ ತರಿಸುತ್ತಾರೆ. ಆದರೆ, ಈಗ ಅಲ್ಲಿ ಕನ್ನಡ ಪತ್ರಕೆಗಳನ್ನು ಕೇಳುವವರೇ ಇಲ್ಲ, ಕನ್ನಡ ಪುಸ್ತಕ, ಕನ್ನಡ ಕಾದಂಬರಿ, ಕನ್ನಡ ಕಾದಂಬರಿ ಇಂಥಾದ್ದು ಬೇಕು ಎಂದು ಹೇಳಿ. ತ.ರಾ.ಸು. ಅವರ ಕಾದಂಬರಿ ಬೇಕು. ಅ.ನಾ.ಕೃಷ್ಣರಾಯರು ಬೇಕೆಂದು ಹೇಳಿದರೆ, ನೀವು ಇನ್ನೊಮ್ಮೆ ಹೋದಾಗ ತರಿಸುತ್ತೇವೆಂದು ಅವನಿಗೂ ಗ್ರಾಹಕರು ಬೇಕಾಗುತ್ತದೆ. ವಿಮಾನದಲ್ಲಿ ಕೆಲವು ಪತ್ರಿಕೆಗಳನ್ನು ನಾನು ನೋಡಿದ್ದೇ ಇಲ್ಲ.

ಕನ್ನಡ ಗ್ರಾಹಕರಲ್ಲಿ ಕನ್ನಡ ಪ್ರಜ್ಞೆ ಬರಬೇಕು. ನಾವು ಇಲ್ಲಿ ಬರೀ ಮಾತನಾಡಿಕೊಂಡು ಹೋದರೆ ಸಾಲದು. ಕನ್ನಡದ ಪತ್ರಿಕೆಗಳು ಬೇಕು. ಪ್ರಜಾವಾಣಿ ಬೇಕು, ಕನ್ನಡ ಪ್ರಭ ಬೇಕು ಎಂದು ಕೇಳಬೇಕು. ಒಂದು ಹತ್ತು ಜನ ಹಾಗೆ ಕೇಳುತ್ತಾರೆ ಎಂದಾದರೆ, ವಿಮಾನ ನಿಲ್ದಾಣದ ಅಂಗಡಿಯವನು ಇರುತ್ತಾನೆ. ಏತಕ್ಕೆಂದರೆ ಅವನಿಗೂ ವ್ಯಾಪಾರ ಆಗಬೇಕು.

ಶ್ರೀ ಸಿ. ಬೈರೇಗೌಡ : ನಾನು ಹೇಳತಕ್ಕಂಥಾದ್ದು ಬೆಂಗಳೂರಿನಲ್ಲಿ ಇದು ಸಾಮಾನ್ಯ ಜನರಿಗೆ ಸಂಬಂಧಪಟ್ಟದ್ದು. ಬ್ಯಾಂಕುಗಳಿಗೆ ಹೋಗಬೇಕಾದರೆ ಹಿಂದಿ

ಕಲಿತುಕೊಂಡು ಹೋಗಬೇಕು. ಇಂಗ್ಲೀಷ್ ಕಲಿತುಕೊಂಡು ಹೋಗಬೇಕು. ಇದು ಸಾಧ್ಯ ಇದೆಯೇ? ಇದನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು. ಬ್ಯಾಂಕ್‌ಗಳಲ್ಲಿರತಕ್ಕಂಥ ಫಾರಂಗಳು ಕನ್ನಡದಲ್ಲಿ ಇರಬೇಕು. ಅದನ್ನು ಕೇಂದ್ರ ಸರಕಾರಕ್ಕೆ ತಿಳಿಸುವುದಕ್ಕೆ ಏನು ತೊಂದರೆಯಾಗಿದೆ. ದಯವಿಟ್ಟು ಅದನ್ನು ಹೇಳಿರಿ. ಏರ್‌ಪೋರ್ಟ್ ಬುಕ್ ಸ್ಟಾಲ್ ಬಗ್ಗೆ ತಾವು ಹೇಳಿದ್ದೀರೇ ವಿನಹ ಫ್ಲೈಟ್ ಬಗ್ಗೆ ತಾವು ಹೇಳಲಿಲ್ಲ. ಫ್ಲೈಟ್‌ಗಳಲ್ಲ ತಮಿಳು ಪತ್ರಿಕೆಗಳು ಸಿಗುತ್ತವೆ. ತಮಿಳು ಪತ್ರಿಕೆಗಳು ಸಿಗುತ್ತವೆ. ಕನ್ನಡ ಪತ್ರಿಕೆಗಳನ್ನು ಅಲ್ಲಿ ಕೊಡುವುದಿಲ್ಲ. ಅದರ ಬಗ್ಗೆ ಕೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ : ಒಂದು ದಯವಿಟ್ಟು ನಾನು ಸದನಕ್ಕೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕನ್ನಡದ ಬಳಕೆ ನಮ್ಮಿಂದಲೇ ಆಗಬೇಕು. ಮತ್ತೊಬ್ಬರು ಮಾಡುತ್ತಾರೆ ಎಂದು ತಿಳಿದುಕೊಳ್ಳುವುದು ಬೇಡ ನೀವು ಬ್ಯಾಂಕ್‌ಗಳಿಗೆ ಹೋಗಿ ಕನ್ನಡದ ಫಾರಂ ಬೇಕೆಂದು ಕೇಳುತ್ತೀರಾ? ಕನ್ನಡದಲ್ಲೇ ಬರೆಯುವುದಕ್ಕೆ ಪ್ರಾರಂಭ ಮಾಡಿರಿ, ಎಲ್ಲಾ ಸರಿಹೋಗುತ್ತದೆ. ಕೆಲವು ಸಾರಿ ನಾವೆಲ್ಲಾ ಪರಿಸ್ಥಿತಿಗೆ ಒಗ್ಗಿಕೊಂಡು ಹೋಗುತ್ತೇವೆ. ಅದೇ ರೀತಿಯ ವ್ಯವಸ್ಥೆ ಆಗುತ್ತದೆ. ನಾವು ಒಂದು ಮಾಡೋಣ, ನಮ್ಮ ಕಾಲ ಮೇಲೆ ನಾವು ನಿಲ್ಲೋಣ, ಕನ್ನಡಿಗರು ಅಷ್ಟು ಮಾಡಿದರೆ ಎಲ್ಲಾ ಸರಿ ಹೋಗುತ್ತದೆ.

ಶ್ರೀ ಸಿ. ಬೈರೇಗೌಡ :ಹೀಗಾದರೆ ಬ್ಯಾಂಕ್‌ಗಳನ್ನು ಮುಚ್ಚಿಸಬೇಕಾಗುತ್ತದೆ. ಬ್ಯಾಂಕ್‌ಗಳಲ್ಲಿ ಕನ್ನಡದ ಫಾರಂ ಇಲ್ಲದೇ ಹೋದರೆ ಯಾವ ಫಾರಂನಲ್ಲಿ ಭರ್ತಿ ಮಾಡಬೇಕು. ಈಗ ಸಾಲ ಬೇಕಾಗುತ್ತದೆ. ಕನ್ನಡದಲ್ಲಿ ಫಾರಂ ಇಲ್ಲದೇ ಹ ದರೆ ಯಾವ ಫಾರಂನಲ್ಲಿ ಭರ್ತಿ ಮಾಡುವುದು. ಕೇಂದ್ರ, ಸರ್ಕಾರಕ್ಕೆ ನೀವು ಇದನ್ನು ತಿಳಿಸಬೇಕಾಗುತ್ತದೆ.

ಉಪಾಧ್ಯಕ್ಷಣಿಯವರು : ತಿಳಿಸುತ್ತಾರೆ.

Sri. K:C. MOdegekar Desai : We are 18 lakh people residing in Karnataka Since 36 years, even though we cannot sepak and write Kannada. Therefore, what is the previous procedure that is going on, it should be allowed. This bill should be printed in English. Then only we can under stand it. Second thing is, we have to consider the Minority Commission's Report, which has been appointed by the Central Government. If you stick to these people only.

(Interruptions)

ಶ್ರೀ ವಾಟಾಳ್ ನಾಗರಾಜ್ : 33 ವರ್ಷಗಳಾಗಿದೆ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಕನ್ನಡ ಕಲಿಯುವುದಕ್ಕೆ ಬರಲಿಲ್ಲ ಎಂದರೆ ಇದಕ್ಕಿಂತ ನಾಚಿಕೆಗೇಡು ಇಲ್ಲ. ಕನ್ನಡ ಓದಬೇಕು ಕನ್ನಡ ಕಲಿಯಬೇಕು, ನಿಮ್ಮ ಮಕ್ಕಳಿಗೆ ಕನ್ನಡ ಕಲಿಸಬೇಕು. ಅವರಿಗೆ ಕನ್ನಡ ಬರುತ್ತದೆ. ನನ್ನ ಜೊತೆಗೆ ಕನ್ನಡದಲ್ಲಿ ಮಾತನಾಡುತ್ತಾರೆ. ಇಲ್ಲಿ ಬಂದು ಕನ್ನಡ ಬರುವುದಿಲ್ಲ ಎಂದು ಹೇಳುತ್ತಾರೆ.

ಶ್ರೀ ಡಿ. ಹಲಗೇಗೌಡ : 36 ವರ್ಷಗಳಿಂದ ಕನ್ನಡ ನಾಡಿನಲ್ಲಿ ಇದ್ದು ಬೆಳೆದು ಇಲ್ಲಿನ ನೀರು ಕುಡಿದು, ಆಹಾರ ತಿಂದು, ಇಲ್ಲಿ ಜೀವನ ಮಾಡಿ,

ಎಲ್ಲಾ ಬದುಕುತ್ತಿದ್ದಾರೆ. ಅವರು ಕನ್ನಡ ಭಾಷೆ ಕಲಿತಿಲ್ಲ ಎಂದು ಹೇಳತಕ್ಕಂಥ ನಿಯತ್ತೇ ಇಲ್ಲದಿರತಕ್ಕಂಥ ಜನ ಕನ್ನಡ ನಾಡಿನಲ್ಲಿ ಯಾವುದಕ್ಕೆ ಆಗಲಿ ಅವರು ಇರಲು ಅರ್ಹರೇ ಅಲ್ಲ, ಯಾವುದೇ ಇರಬಹುದು. ಸರಕಾರಿ ಕೆಲಸಕ್ಕಾಗಲಿ ಬೇರೆ ರೀತಿ ಕೆಲಸಕ್ಕಾಗಲೀ, ಯಾರುದೇ ರೀತಿಯ ಒಂದು ಅನುಕಂಪಕ್ಕೆ ಅವರು ಅರ್ಹರಲ್ಲ ಎನ್ನತಕ್ಕಂಥ ಮಾತನ್ನು ಈ ಸಭೆಯ ಮುಖಾಂತರ ಹೇಳಬೇಕಾಗಿ ಬರುತ್ತದೆ. ದಯವಿಟ್ಟು ಅವರು ಮೊದಲು ಕನ್ನಡ ಕಲಿಯಬೇಕು.

ಶಾಸನಾ ರಚನಾ ಕಾರ್ಯಕಲಾಪಗಳು

1993ರ ಕರ್ನಾಟಕ ಧನವಿನಿಯೋಗ ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, 1993ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಈ ಸಬೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷಣಿಯವರು : ಪ್ರಸ್ತಾಪ ಏನೆಂದರೆ : "1993ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, 1993ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1993ರ ಕರ್ನಾಟಕ ಧನವಿನಿಯೋಗ ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು): ಉಪಾಧ್ಯಕ್ಷಣಿಯವರೇ, 1993ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ಮತ್ತು 3

ಉಪಾಧ್ಯಕ್ಷಣಿಯವರು : "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ಮತ್ತು 3 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ : ಮೊದಲನೇಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ, ಶೀರ್ಷಿಕೆ, ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು) : 1993ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂಧು ಕೋರುತ್ತೇನೆ.

ಉಫಾಧ್ಯಕ್ಷಣಿಯವರು : ಪ್ರಸ್ತಾವನೆ ಏನೆಂದರೆ "1993ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸುವುದು.

(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

ಪ್ರಕಟಣೆ

ಗೈರು ಹಾಜರಿಗೆ ಅನುಮತಿ ಕೋರಿಕೆ

ಉಪಾಧ್ಯಕ್ಷಣಿಯವರು : ಸನ್ಮಾನ್ಯ ಸದಸ್ಯರಾದೇ ಶ್ರೀ ಎಸ್.ವಿ. ಅಶ್ವತ್ಥನಾರಾಯಣರೆಡ್ಡಿ ಅವರು ದಿನಾಂಕ 5-1-93ರಂದು ಬರೆದ ಪತ್ರದಲ್ಲಿ ಅವರು ದಿನಾಂಕ 28-12-92ರಿಂದ ಅನಾರೋಗ್ಯದ ಪ್ರಯುಕ್ತ ಚಿಕಿತ್ಸೆ ಪಡೆಯುತ್ತಿರುವುದರಿಂದ ಪ್ರಸಕ್ತ ಅಧಿವೇಶನದಲ್ಲಿ ಪಾಲ್ಗೊಳ್ಳಲು ಆಗದೆ ಇರುವುದರಿಂದ ಅವರು ದಿನಾಂಕ 28-12-92ರಿಂದ ಗೈರು ಹಾಜರಿ ಕೋರಿ ಸದನದ ಅನುಮತಿಯನ್ನು ಕೇಳಿರುತ್ತಾರೆ.

ಶ್ರೀ ವಿ.ಎಸ್. ಅಶ್ವತ್ಥನಾರಾಯಣ ರೆಡ್ಡಿಯವರು ಮೇಲಿ ಸೂಚಿಸಿದ ಅವಧಿಯಲ್ಲಿ ಸದನದಲ್ಲಿ ಗೈರು ಹಾಜರಾಗಲು ಅನುಮತಿ ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೇ?

ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ.

ಉಪಾಧ್ಯಕ್ಷಣಿಯವರು : ಶ್ರೀ ಎಸ್.ವಿ. ಅಶ್ವತ್ಥನಾರಾಯಣರೆಡ್ಡಿಯವರಿಗೆ ಗೈರು ಹಾಜರಾಗಲು ಅನುಮತಿ ನೀಡಲಾಯಿತು.

ನಂತರ ಶ್ರೀ ಎಸ್. ಬಂಗಾರಪ್ಪ ಸರ್ಕಾರದ ಬಗ್ಗೆ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಮಂಡಿಸಿದ ನಿಲುವಳಿ ಸೂಚನೆ ಹಾಗೂ ಶ್ರೀ ಆರ್ ವಿ. ದೇಶಪಾಂಡೆ ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಮಾನ್ಯ ಇತರೆ ಸದಸ್ಯರು ನಿಯಮ 68ರ ಮೇರೆಗೆ ತಂದ ಪ್ರಸ್ತಾವದ ಬಗ್ಗೆ

+ ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೇ, ನಮ್ಮ ನಿಲುವಳಿ ಸೂಚನೆಗೆ ತಾವು ಆಪರ್ಚುನಿಟಿ ಕೊಟ್ಟಿಲ್ಲ, ನಿಮ್ಮ ಬಗ್ಗೆ ನನಗೆ ಸಾಕಷ್ಟು ಗೌರವ ಇದೆ. ರೂಲ್ 68ರ ಪ್ರಕಾರ ತಾವು ನಿರ್ಣಯ ಕೊಟ್ಟರೆ ಅದು ತಪ್ಪಾಗುತ್ತದೆ. ನಾನು ಬೇಕಾದರೆ ರೂಲ್ಸ್ ಕ್ವೋಟ್ ಮಾಡಬಹುದು. ತಾವು

ನಮಗೆ ಅವಕಾಶ ಮಾಡಿ ಕೊಡುತ್ತೇನೆಂದು ಹೇಳಿದ್ದೀರಿ. ನಾನು ತಮ್ಮನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ತಾವು ನಿನ್ನೆಯ ದಿವಸ ನಿಲುವಳಿ ಸೂಚನೆಯ ಮೇಲೆ ನಿರ್ಣಯ ಕೊಡುತ್ತೇನೆಂದು ಹೇಳಿದ್ದೀರಿ. ರೂಲ್ 68ಕ್ಕೆ ಅಲ್ಲ. ತಾವು ನಿಯಮ 68ನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ ಯಾವ ಯಾವ ಸದಸ್ಯರು ನೋಟೀಸ್ ಕೊಟ್ಟಿದ್ದಾರೆ ನಾವು ಮತ್ತು ಸ.ಜ.ಪ. ದವವು ಅವರಿಗೆ ಅವಕಾಶ ಕೊಡಬೇಕು. ಕಾರಣ ಅವರು ತಮ್ಮ ಅಭಿಪ್ರಾಯವನ್ನು ಕೊಡುತ್ತಾರೆ. ತಾವು ಬೇಕಾದರೆ ಸಂಬಂಧಪಟ್ಟ ಮಂತ್ರಿಗಳ ಅಭಿಪ್ರಾಯ ಕೇಳಿ ನಮ್ಮ ಅಭಿಪ್ರಾಯ ಕೇಳಿ ನಿರ್ಣಯ ಕೊಡಬೇಕಾಗುತ್ತದೆ. ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾವು ನಮ್ಮ ಅಭಿಪ್ರಾಯವನ್ನು ಹೇಳದಿದ್ದರೆ ತಪ್ಪಾಗುತ್ತದೆ. ಈ ಸದನದಲ್ಲಿ ಒಂದು ಕೆಟ್ಟ ಸಂಪ್ರದಾಯ ನಾವು ಹಾಕಿದಂತಾಗುತ್ತದೆ ನಮಗೆ ತಮ್ಮ ಬಗ್ಗೆ ಗೌರವ ಇದೆ.

ಈ ಬಗ್ಗೆ ತಾವು ಇನ್ನು ತಮ್ಮ ಆಪರ್ಚುನಿಟಿ ಕೊಟ್ಟಿಲ್ಲ. ನಾವು ಬಿ.ಎ.ಸಿ.ನಲ್ಲೂ ಕೂಡ ಹೇಳಿದ್ದೇವೆ. ಅಲ್ಲಿಯೂ ಕೂಡ ಇದು ಚರ್ಚೆ ಆಗಿದೆ. ಈ ಬಗ್ಗೆ ಸ.ಜ.ಪ. ಸದಸ್ಯರು ನೋಟೀಸ್ ಕೊಟ್ಟಿದ್ದಾರೆ ಅವರ ಅಭಿಪ್ರಾಯ ಕೇಳಿ ಮಾನ್ಯ ಮುಖ್ಯಮಂತ್ರಿಗಳ ಅಭಿಪ್ರಾಯ ಕೇಳಿ ಸಂಬಂಧಪಟ್ಟ ಮಂತ್ರಿಗಳ ಅಭಿಪ್ರಾಯ ಕೇಳಿ ನಂತರ ತಾವು ಒಂದು ನಿರ್ಣಯಕ್ಕೆ ಬನ್ನಿ. ತಾವು ಆಪರ್ಚುನಿಟಿ ಕೊಟ್ಟ ವಿನಃ ರೂಲ್ 68ನ್ನು ಪ್ರೊಸಿಜರ್ ಫಾಲೋ ಮಾಡಿ ನಿರ್ಣಯ ಕೊಟ್ಟರೆ ಒಳ್ಳೆಯದು ಇಲ್ಲದೆ ಹೋದರೆ ಸರಿ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ತಂದಿರತಕ್ಕಂಥ ನಿಲುವಳಿ ಸೂಚನೆ ಏನಿದೆ ಅದರ ಬಗ್ಗೆ ತಮ್ಮ ತೀರ್ಪನ್ನು ತಾವು ಕೊಡುತ್ತಿದ್ದೀರಿ. ತಾವು ನಿನ್ನೆಯ ದಿವಸ ಒಂದು ಮಾತು ಹೇಳಿದಿರಿ. ಇದರ ಬಗ್ಗೆ ತೀರ್ಪು ಕೊಡತಕ್ಕಂಥಾದ್ದು ತಮಗೆ ಬಿಟ್ಟ ವಿಷಯ. ಅದರ ಜೊತೆಯಲ್ಲೇ ನಿಯಮ 68ರ ಪ್ರಕಾರ ನಾವು ಏನು ಸೂಚನೆ ಕೊಟ್ಟಿದ್ದೇವೆ ಆ ಸೂಚನೆಯನ್ನೂ ಸಹ ಎರಡೂ ಒಟ್ಟಿಗೆ ಸೇರಿಸಿ ತೀರ್ಪು ಕೊಟ್ಟರೆ ಅದು ಸರಿ ಆಗುವುದಿಲ್ಲ. ನಮ್ಮಲ್ಲಿ ಏನೇನು ಸಂಶಯಗಳು ಇವೆ ಅವುಗಳನ್ನು ನಾವು ಸಭೆಯ ಗಮನಕ್ಕೆ ತಮ್ಮ ಗಮನಕ್ಕೆ ತರಬೇಕಾಗಿದೆ ಈ ಸಭೆಯ ಮೂಲಕ ರಾಜ್ಯ ಜನತೆಯ ಗಮನಕ್ಕೂ ಕೂಡ ತರಬೇಕಾಗಿದೆ. ತಾವು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ರೀತಿಯಲ್ಲಿ ಒಂದೇ ಏಟಿಗೆ ಎರಡು ಹಕ್ಕಿ ಹೊಡೆಯತಕ್ಕಂಥ ಪ್ರಯತ್ನ ಮಾಡಬಾರದೆಂದು ನಾನು ವಿನಂತಿಸಿಕೊಳ್ಳುತ್ತೇನೆ.

2.20 ಪಿ.ಎಂ.

ಉಪಾಧ್ಯಕ್ಷಣಿಯವರು : ನಾನು ಏನು ಹೇಳುತ್ತೇನೆ ಎನ್ನುವುದೇ ತಮಗೆ ಗೊತ್ತಿಲ್ಲ. ತಾವು ಸುಮ್ಮನೆ ಮಾತನಾಡುತ್ತಿದ್ದೀರಿಲ್ಲಾ?

ಶ್ರೀ ಸಿ. ಬೈರೇಗೌಡ : ನಮ್ಮದನ್ನು ತಾವು ತಳ್ಳಿಹಾಕಬಾರದು ಎನ್ನತಕ್ಕಂಥಾದ್ದು ನಮ್ಮ ವಿನಂತಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಲುವಳಿ ಸೂಚನೆ ಬಗ್ಗೆ ತಾವಲು ತೀರ್ಪು ಕೊಡುವ ಮುಂಚೆ ನ್ಯೂಸ್ ಟ್ರ್ಯಾಕ್‌ನಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು

ಏನು ಸಂದರ್ಶನ ಕೊಟ್ಟಿದ್ದಾರೋ ಅದರ ಕ್ಯಾಸೆಟ್ ಕಳುಹಿಸಿಕೊಟ್ಟಿದ್ದೇವೆ. ಅದನ್ನು ತಾವು ನೋಡಿ. ಇನ್ನೂ ತಾವು ನೋಡಿಲ್ಲ, ಅದನ್ನು ನೋಡಿದ ಮೇಲೆ ಇದರ ಬಗ್ಗೆ ತಮ್ಮ ತೀರ್ಪನ್ನು ಕಾದಿರಿಸಿ ಸೋಮವಾರದವರೆಗೆ ಮುಂದುವರಿಸಿ. ಆ ನ್ಯೂಸ್ ಟ್ರ್ಯಾಕ್ ಕ್ಯಾಸೆಟ್ ತಾವು ನೋಡಿ ನಂತರ ಕೊಡಿ ಎಂದು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ.

ಉಪಾಧ್ಯಕ್ಷಣಿಯವರು : ಈಗ ತಾವು ಏನು ರೂಲ್ಸ 68 ಪ್ರಕಾರ ಕಳುಹಿಸಿದ್ದೀರಿ ಅದರ ಬಗ್ಗೆ ನಾನೂ ಸಹ ವಿಚಾರ ಮಾಡುತ್ತೇನೆಂದು ಹೇಳಿದ್ದೆ. ಈಗ ಅದರಲ್ಲೂ ಸಹಾ ಏನು ಕಳುಹಿಸಿದ್ದೀರಿ, ಅದರಲ್ಲಿ ಯಾವ ಡೆಪನೆಟ್ ಇಶ್ಯೂಸ್ ಬಗ್ಗೆ ಕಳುಹಿಸಿಲ್ಲ. It is a blank one that you have sent. ಬಹಳ ಬೇಗ ಆಗಿರುವುದರಿಂದ

ಶ್ರೀ ಆರ್.ವಿ. ದೇಶಪಾಂಡೆ : ರೂಲ್ಸ 68ನ್ನು ನಾನು ಓದಿ ಹೇಳುತ್ತೇನೆ. ದಯಮಾಡಿ ರೂಲ್ಸ 68 ನೋಡಿ.

ಉಪಾಧ್ಯಕ್ಷಣಿಯವರು : ಅದನ್ನು ನಾನು ನೋಡಿಲ್ಲವೆಂದಲ್ಲ, ನಾನು ನೋಡಿಯೇ ಹೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ : ನಮ್ಮ ಸೂಚನೆ ಇರತಕ್ಕಂಥಾದ್ದು ಎರಡು ವರ್ಷದ ಅವದಿಯಲ್ಲಿ ನಡೆದಿರತಕ್ಕಂಥಾದ್ದು. ಈ ಒಂದು ಘಟನೆ ನೋಡಿದರೆ ಒಂದನ್ನು ನಾವು ನೇರವಾಗಿ ಹೇಳಬಹುದಾಗಿತ್ತು. ಹತ್ತಾರು ಘಟನೆಗಳು ನಡೆದಿವೆ. ಆದರಿಂದ ಅಷ್ಟನ್ನೂ ಚರ್ಚೆ ಮಾಡಬೇಕಾಗಿರತಕ್ಕಂಥ ಅವಶ್ಯಕತೆ ಇದೆ. ಆದ್ದರಿಂದ ತಾವು ಬ್ಲಾಂಕೆಟ್ ಆಗಿದೆಯೆಂದು ಹೇಳತಕ್ಕಂಥಾದ್ದು ಸರಿ ಹೊಂದಲಾರದು ಎನ್ನತಕ್ಕಂಥಾದ್ದು ನನ್ನ ಅಬಿಪ್ರಾಯ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆ, ಯಡಿಯೂರಪ್ಪನವರ ಒಂದು ಕಣ್ಣು ಹೋಗಲೆಂದು ಹೇಳುತ್ತಿದ್ದರು. ಈಗ ಇವರಿಬ್ಬರ ಎರಡೂ ಕಣ್ಣೂ ಹೋಗುತ್ತಿದೆ ಅಷ್ಟೇ.

ಶ್ರೀ ಸಿ. ಬೈರೇಗೌಡ : ಆ ತರಹ ಅಬಿಪ್ರಾಯ ನಮ್ಮದಲ್ಲ. ಯಡಿಯೂರಪ್ಪನವರ ಕಣ್ಣೂ ಉಳಿಯಬೇಕು. ನಮ್ಮ ಕಣ್ಣೂ ಉಳಿಯಬೇಕು. ನಿನ್ನೆ ಮಾಡಿದುದು ತದ್ವಿರುದ್ದವಾದ ರೀತಿಯಲ್ಲಿ ಯಡಿಯೂರಪ್ಪನವರು ಮಾಡಿದ್ದುದು. ಅದನ್ನು ನಾವು ಗಮನಿಸಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ : ಈಗ ನೋಡಿ ಮೇಡಮ್ ರೂಲ್ 68:

"Any member desirous of raising discussion on a matter of urgent puplic importantace may give notice in writing to the Secretary specifying clearly and precisely the matter to the raised :

ನಾವು ರೂಲ್ 68 ರಲ್ಲಿ explanatory statement ಕೊಟ್ಟಿದ್ದೇವೆ ಮತ್ತು two signatures ಕೊಟ್ಟಿದ್ದೇವೆ. ಇದರ ಮುಂದೆ : Speaker to decide admissibility and allotment of time.

ಅಲ್ಲಿ ತಾವು ಅವಕಾಶ ಕೊಡುತ್ತೇವೆಂದು ಹೇಳಿರುವುದು ಬೇಡ. ಇದರ ಬಗ್ಗೆ ಪ್ರೊಸೀಡಿಂಗ್ಸ್ ನನ್ನ ಕಡೆ ಇದೆ. ನಾನು ತೋರಿಸುತ್ತೇನೆ ನಿಮಗೆ.

"69(1) If the Speaker is satisfied, after calling for such information from the member who had given notice and from Minister as he may consider necessary, that the matter is urgent and is of sufficient importance to be raised in the House at an early date, he may admit the notice :"

ಇಲ್ಲ ನಮ್ಮ ಕಡೆಯಿಂದ ಏನು ಇನ್‌ಫರ್ಮೇಷನ್ ಬೇಕಾದರೆ ಕೇಳಿ. If you feel like asking anything I will try to satisfy. The chair may ask the Chief Minister who is the concerned Minister.

ಅದರಂತೆ ನೀವು ನಿರ್ಣಯ ತೆಗೆದುಕೊಳ್ಳಿ. ಇಲ್ಲಿ ನಾವು ಏನು ಮಾಡುತ್ತಿದ್ದೇವೆಂದು ನಾಡಿನ ಜನ ಕಾಯುತ್ತಿದ್ದಾರೆ, ನೋಡುತ್ತಿದ್ದಾರೆ. ಹಿಂದಿನ ಸರ್ಕಾರದ ಮೇಲೆ ಅಪರಾದಗಳನ್ನು ಅವರೂ ಮಾಡಿದ್ದಾರೆ ನಾವೂ ಮಾಡಿದ್ದೇವೆ. ಹಾಗಾಗಿ ತಾವು ಇದರ ಬಗ್ಗೆ ನಮ್ಮ ಅಬಿಪ್ರಾಯವ್ನನು ಕೇಳಬೇಕಾಗುತ್ತದೆ. ಅಬಿಪ್ರಾಯ ಕೇಳಿದ ಮೇಲೆ ನಿರ್ಣಯ ಕೊಟ್ಟರೆ ಸರಿಯಾಗುವುದಿಲ್ಲವೆಂದು ನಾನು ಬಾವಿಸುತ್ತೇನೆ. ದಯಮಾಡಿ ಮತ್ತೊಮ್ಮೆ ವಿನಂತಿಸುತ್ತೇನೆ. ತಾವು ನಮ್ಮದು ಮತ್ತು ಮುಖ್ಯ ಮಂತ್ರಿಗಳ ಅಬಿಪ್ರಾಯ ಕೇಳಿ ನಿರ್ಣಯಕ್ಕೆ ಬರಬಹುದು.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಈ ವಿಚಾರ ಬಹುಶಃ ನಿಲುವಳಿ ಸೂಚನೆಯನ್ನು ಸನ್ಮಾನ್ಯ ವಿರೋಧಪಕ್ಷದ ನಾಯಕರು, ಸನ್ಮಾನ್ಯ ಯಡಿಯೂರಪ್ಪನವರು, ಬೈರೇಗೌಡರು ಏನು ಕೊಟ್ಟಿದ್ದಾರೆ ಆ ವಿಚಾರಕ್ಕೆ ಸಂಬಂಧಪಟ್ಟಂತೆ ರೂಲ್ 68ರ ಪ್ರಕಾರ ಮಾದಬೇಕೇ ಅಥವಾ ಬೇಡವೇ ಎಂಬುದು ತಮಗೆ ಬಿಟ್ಟಿದ್ದುದು. ಇದರ ಬಗ್ಗೆ ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಇಡುವಾಗಲೂ ಕೂಡ ಇದು ಎಷ್ಟರಮಟ್ಟಿಗೆ ಪ್ರಸಕ್ತವಾಗುತ್ತದೆ? ರೂಲ್ 68 ರ ಪ್ರಕಾರ ಅದು ತಮಗೇ ಬಿಟ್ಟಿದ್ದುದು. ಆದರೆ ನಮ್ಮ ಮಟ್ಟಿಗೆ ಏನು ಅನಿಸುತ್ತದೆಯೆಂದರೆ, ಇದರಲ್ಲಿ ಪರ್ಟಿಕಲರ್ ಇಶ್ಯೂ ಇದ್ದರೆ It can be discussed. Otherwise ಇದೊಂದು omnibus discussion ಆಗುತ್ತದೆ. ಆ ತರಹ omnibus discussion ಮಾಡಬೇಕಾಗಿದೆ ; ಏಕೆಂದರೆ ರೂಲ್ 68 ನ್ನು ಇಂಥಾ ವಿಚಾರಗಳಿಗೆ ನೀವು strain ಮಾಡತಕ್ಕಂಥದ್ದು, ಯೋಗ್ಯವಾಗಲಿಕ್ಕಿಲ್ಲ. ತಮ್ಮಿಂದ ಅಬಿಪ್ರಾಯ ಬೇಕಾಗಿದ್ದರೆ, ನಿಲುಗಡೆ ಸೂಚನೆ ಕೊಟ್ಟಿದ್ದಾರೆ, ಈಗ ತಾವು ಅದಕ್ಕೆ ಸೂಕ್ತವಾದಂಥ ಆದೇಶ ಕೊಟ್ಟು ಅದನ್ನು ಮುಕ್ತಾಯ ಮಾಡಬಹುದು.

ಶ್ರೀ ಆರ್.ವಿ. ದೇಶಪಾಂಡೆ : ಸಬಾನಾಯಕರು, ತಾವು ನಿನ್ನೆ ಇದ್ದಿಲ್ಲ. ಯಡಿಯೂರಪ್ಪನವರ adjournment motion ಆದ ನಂತರ ಮಾನ್ಯ ಅಧ್ಯಕ್ಷರು, ನಾನು ಈ ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ರೂಲಿಂಗ್ ರಿಸರ್ವ ಮಾಡಿದ್ದೇನೆಂದು ಹೇಳಿದ್ದರು. ರೂಲ್ 68ರ ಪ್ರಕಾರ ನಮಗೆ ವಿವರಣೆಗಳನ್ನು ಕೊಡುವುದಕ್ಕೆ ಅವರು ಹೇಳಲಿಲ್ಲ, ನಮ್ಮ ಅಬಿಪ್ರಾಯವನ್ನು ಕೇಳಲಿಲ್ಲ. ತಾವುಗಳು ನಿನ್ನೆ ಅಡಜ್‌ರ್ನ್‌ಮೆಂಟ್ ಮೋಷನ್ ಬಗ್ಗೆ ಡಿಸಿಶನ್ ಕೊಡುತ್ತೇನೆ ಎಂದು ಹೇಳಿದ್ದೀರಿ. ಅದನ್ನು ಕೊಟ್ಟರೆ ಒಳ್ಳೆಯದು ಎಂದು ಕಾಣುತ್ತದೆ. ಆದರೆ ರೂಲ್

68ರ ಕೆಳಗೆ ಎರಡು ಸಾರಿ ಬಿ.ಎ.ಸಿ. ಮುಂದೆ ಈ ವಿಚಾರ ಬಂದಿದೆ. ಇದನ್ನು ಚರ್ಚೆ ಮಾಡಬೇಕೆಂದು ಮಾಡಿದ್ದೇವೆ. ತಾವುಗಳೂ ಕೂಡ ಚರ್ಚೆ ಮಾಡಲು ಒಪ್ಪಿಕೊಂಡಿದ್ದೀರಿ. ಅದನ್ನು ಬಿಟ್ಟು ನಿನ್ನೆ ಹೇಳಿದ್ದುದು ಸ್ವಲ್ಪ ಸರಿಯಾಗಿ ಕಾಣುವುದಿಲ್ಲ, ನಿಯಮ 68ರ ಕೆಳಗೆ I am going to give ruling Why are you clubbing Rule 68 and adjournment motion?

ತಾವು ನಿನ್ನ ರೂಲಿಂಗ್‌ಸ್ ರಿಸರ್ವ್ ಮಾಡಿದ್ದೇನೆ ಎಂದು ಹೇಳಿದಿರಿ. 68ರ ಬಗ್ಗೆ ತಾವುಗಳು ರೂಲಿಂಗ್‌ನ್ನು ಸೋಮವಾರ ಬೇಕಾದರೂ ಕೊಡಬಹುದು. ನಾವು ನಮ್ಮ ಅಭಿಪ್ರಾಯವನ್ನು ಕೊಡುತ್ತದೆ. ಅದಕ್ಕೆ ಅಲೋ ಮಾಡುವುದು, ಬಿಡುವುದು ತಮಗೆ ಬಿಟ್ಟ ವಿಚಾರ. ನಾವು ಅದಕ್ಕೆ ಅಡ್ಡ ಬರುವುದಿಲ್ಲ. That is a separate issue.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಯಡಿಯೂರಪ್ಪನವರು ಕಳುಹಿಸಿರತಕ್ಕಂಥ ನಿಲುವಳಿ ಸೂಚನೆಗೆ ಅವರ ಮಾತುಗಳನ್ನು ತಾವುಗಳು ಕೇಳಿದ್ದೀರಿ. ಅದಕ್ಕೆ ತೀರ್ಪು ಕೊಡತಕ್ಕಂಥ ಹಕ್ಕು ತಮ್ಮದ್ದು. ತಾವುಗಳು ಕೊಡುವ ತೀರ್ಪನ್ನು ನಾವು ಒಪ್ಪಿಕೊಳ್ಳುತ್ತೇವೆ. ರೂಲ್ 68ರ ಪ್ರಾಕಾರ ಈ ವಿಷಯ ಚರ್ಚೆ ಮಾಡುವುದಕ್ಕೆ ನಮ್ಮ ತಕರಾರು ಇಲ್ಲ ಎಂಬ ಅಬಿಪ್ರಾಯವನ್ನು ಮಾನ್ಯ ಮುಖ್ಯಮಂತ್ರಿಯವರು ಕೂಡ ಹೇಳಿದ್ದಾರೆ. ನಿರ್ಣಯವನ್ನು ತಮಗೆ ಬಿಟ್ಟಿದ್ದಾರೆ.ನಾನು ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಯಾಡಿಯೂರಪ್ಪನವರು ಏನು ಹೇಳಿದ್ದಾರೆ, ಅದನ್ನು ತಾವು ಹೇಳಿದ್ದೀರಿ. ಅದಕ್ಕೆ ತೀರ್ಪು ಕೊಡತಕ್ಕಂಥವರು ತಾವು ಅದನ್ನು ನಾವು ಒಪ್ಪಿಕೊಳ್ಳತ್ತೇನೆ. ಅದೇ ರೀತಿಯಲ್ಲಿ 68ರ ಕೆಳಗೆ ನಾವು ಕೂಡ ಸೂಚನೆಯನ್ನು ಕಳುಹಿಸಿದ ಬಗ್ಗೆ ಮಾನ್ಯ ಸಬಾನಾಯಕರು ತಮ್ಮದ್ದೇನೂ ತಕರಾರು ಇಲ್ಲ ಎಂದು ಹೇಳಿದ್ದಾರೆ. ಅದಕ್ಕೂ ಮುಖ್ಯವಾಗಿ ನಾವು ಎಕ್ಸ್‌ಪ್ಲನೇಟರಿ ನೋಟ್‌ನ್ ಕೂಡ ಅದರ ಜೊತೆಗೆ ಕಳುಹಿಸಿದ್ದೇನೆ. ಯಾವ ಯಾವ ವಿಚಾರವನ್ನು ಯಾವ ಯಾವ ಸಂದರ್ಭವನ್ನು ತೆಗೆದುಕೊಂಡು ಚರ್ಚೆ ಮಾಡಬೇಕೆಂದು ನಾವು ನಿರ್ದಿಷ್ಟವಾಗಿ ಕಳುಹಿಸಿದ್ದೇವೆ. ಇದು ರೂಲ್ಸ್ ಪ್ರಕಾರವೇ ಸಾರ್ವಜನಿಕ ಹಿತಾಸಕ್ತಿಯಿಂದ ಕೂಡಿದ ವಿಷಯವಾಗಿದೆ. ಇದೇ ಸದನದಲ್ಲಿ ಎರಡು ವರ್ಷಗಳ ಹಿಂದೆ, ಟೆಲಿಫೋನ್‌ನನ್ನು ರಾಮಕೃಷ್ಣ ಹೆಗಡೆಯವರು ಕದ್ದು ಕೇಳಿದ್ದಾರೆ ಎಂದು ಹೇಳಿ, it was an incident which had occurred one year earlier.

ಒಂದು ವರ್ಷ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ, ನಡಯಿತೆಂದು ಹೇಳಲಾಗುವ ಈ ಆಪಾದನೆಯಿಂದ ಸ್ಟೇಟ್ ಎಕ್ಸ್‌ಚೇಕರ್‌ಗೆ ಏನೂ ಬರ್ಡನ್ ಆಗಿರಲಿಲ್ಲ. ಆದರೆ ನಾವು ಏನು ಇನ್‌ಸ್ಟೆನ್ಸ್ ಕೋಟ್ ಮಾಡಿದ್ದೇವೆ, ಅದರಿಂದಾಗಿ ಸ್ಟೇಟ್ ಎಕ್ಸ್‌ಚೆಕರ್ ಮೇಲೆ ಬರ್ಡನ್ ಆಗುತ್ತದೆ. ಇದೇ ನಮ್ಮ ಅಪಾದನೆ ಆದ್ದರಿಂದ ದಯಮಾಡಿ ತಾವುಗಳು 68ರ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಾವು ಈ ಬಗ್ಗೆ ನಿಯಮಾವಳಿಗಳನ್ನು ರಚನೆ ಮಾಡಿಕೊಂಡಿದ್ದೇವೆ. ಅವುಗಳ ಪ್ರಕಾರವಾಗಿಯೇ ತಾವುಗಳು ಅವಕಾಶ ಮಾಡಿಕೊಡಬೇಕು. ಇದು ಸದನದಲ್ಲಿಯೆ ಚರ್ಚೆಯಾಗಿರತಕ್ಕಂಥ ವಿಚಾರ. 2-3 ದಿನಗಳ ಕಾಲ ಇದರ ಬಗ್ಗೆ ಚರ್ಚೆ ನಡೆಯಿತು. ಆದ್ದರಿಂದ ತಾವುಗಳು ದಯಮಾಡಿ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಣಿಯವರು : ತಾವುಗಳು ಎಲ್ಲರೂ ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ, ಅದನ್ನೆಲ್ಲಾ ಕನ್ಸಿಡರ್ ಮಾಡಿ ನನ್ನ ಒಂದು ತೀರ್ಪನ್ನು ತಿಳಿಸುತ್ತಾ ಇದ್ದೇನೆ.

"ಶ್ರೀ ಎಸ್. ಬಂಗಾರಪ್ಪನವರ ಸರಕಾರದ ಬಗ್ಗೆ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮಂಡಿಸಿದ ನಿಲುವಳಿ ಸೂಚನ ಪ್ರಸ್ತಾಪದ ಬಗ್ಗೆ ಈ ಮನೆಯ ಎರಡೂ ಕಡೆಯ ಸದಸ್ಯರಿಂದ ಸರಕಾರದಿಂದ ವಿವರಣೆಗಳನ್ನು ಪಡೆಯಲಾಗಿದೆ. ಈ ನಿಲುವಳಿ ಸೂಚನೆಯ ಅಂಗೀಕಾರದ ಬಗ್ಗೆ ಯಾವೊಂದು ನಿರ್ಧಿಷ್ಟವಾದ ವಿಷಯದ ಬಗ್ಗೆ ಸೂಚನೆ ಇಲ್ಲದಿರುವುದರಿಂದ ಈ ಸೂಚನೆಗೆ ನನ್ನ ಅನುಮತಿಯನ್ನು ನಿರಾಕರಿಸಿದ್ದೇನೆ.

Now the House stands adjourned to meet on Monday at 11.00 a.m.

(The House adjourned at thrity minutes past two of the clock to meet again at eleven of the clocke on 11-1993)

(+ ಈ ಚಿಹ್ನೆ ಮಾನ್ಯ ಸದಸ್ಯ ಟಿಪ್ಪಣಿ ಅಥವಾ ಬಾಷಣಗಳನ್ನು ಪರಿಸ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಕರ್ನಾಟಕ ವಿಧಾನಸಭೆ

(ಒಂಭತ್ತನೆಯ ವಿಧಾನಸಭೆ)

ಎಂಟನೆಯ ಅಧಿವೇಶನ

ಕರ್ನಾಟಕ ಧನ ವಿನಿಯೋಗ ವಿಧೇಯಕ 1993

(ವಿಧಾನಸಭೆ ವಿಧೇಯಕ 1993ರ ಸಂಖ್ಯೆ : 2)

1992-93ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲರು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

1992-93ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುತ್ತದೆ.

ಇದು ಬಾರತ ಗಣರಾಜ್ಯದ ನಲವತ್ತಮೂರನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ.

1. ಸಂಕ್ಷಿಪ್ತ ಹೆಸರು : ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ನಂ.) ಅಧಿನಿಯಮ, 1993 ಎಂದು ಕರೆಯತಕ್ಕದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 1992-93ನೇ ಹಣಕಾಸು ವರ್ಷಕ್ಕಾಗಿ 131,93,45.000 ರೂಪಾಯಿಗಳ ನೀಡಿಕೆ ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟವಾದ ಸೇವೆಗಳ ಸಂಬಂಧದಲ್ಲಿ, 1992-93ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡಿವಾಗ ಒದಗಿಸುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟ ಪಡಿಸಲಾಗಿದ್ದ ಮೊತ್ತದಲ್ಲಿ ನೂರ ಮೂವತ್ತೊಂದು ಕೋಟಿ ತೊಂಬತ್ತಮೂರು ಲಕ್ಷದ ನಲವತ್ತೈದು ಸೇವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗ್ಗನು ಮಾತ್ರ ಕರ್ನಾಟಕ ರಾಜ್ಯ ಸಂಡಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದ್ದು ಮತ್ತು ಉಪಯೋಗಿಸತಕ್ಕದ್ದು.

3. ಧನನಿಯೋಗ : ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು, ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾಗ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕುದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು		ಒಟ್ಟು
			ವಿಧಾನ ಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	
1	ವ್ಯವಸಾಯ (ತೋಟಗಾರಿಕೆ ಹೊರತು)	ರಾಜಸ್ವ	33,23,00,000	...	33,23,00,000
2	ತೋಟಗಾರಿಕೆ	ರಾಜಸ್ವ	1,00,00,000	...	1,00,00,000
5	ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು, ಮತ್ತು ರೇಷ್ಮೆ ವ್ಯವಸಾಯದ ಹೊರತು)	ರಾಜಸ್ವ ಬಂಡವಾಳ	 12,65,09,000	11,00,000	11,00,000 12,65,09,000
7	ಚಿಕ್ಕ ಪುಟ್ಟ ಉದ್ಯಮಗಳು	ರಾಜಸ್ವ	5,10,00,000	...	5,10,00,000
13	ಪ್ರಾಥಮಿಕ ಶಿಕ್ಷಣ	ರಾಜಸ್ವ	2,73,00,.000	...	2,73,00,000
14	ಸೆಕೆಂಡರಿ ಶಿಕ್ಷಣ	ರಾಜಸ್ವ	3,00,00,000	...	3,00,00,000
15	ವರಮಾನ ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳು	ರಾಜಸ್ವ	2,00,00,000	...	2,00,00,000

19	ಸಣ್ಣ ಉಳಿತಾಯಗಳು, ವಿಮೆ ಮತ್ತು ರಾಜ್ಯ ಲಾಟರಿ	ರಾಜಸ್ವ	2,00,00,000	...	2,00,00,000
20	ಇತರೆ ವಿವಿಧ ಸೇವೆಗಳು	ರಾಜಸ್ವ ಬಂಡವಾಳ	50,00,000 1,000	...	50,00,000 1,000
25	ಪೋಲಿಸ್ ಮತ್ತು ಅಗ್ನಿಶಾಮಕ ಸೇವೆಗಳು	ರಾಜಸ್ವ	5,00,00,000	...	5,00,00,000
27	ವಾರ್ತಾ ಮತ್ತು ಪ್ರವಾಸೋದ್ಯಮ	ರಾಜಸ್ವ ಬಂಡವಾಳ	27,00,000 44,00,000	...	27,00,000 44,00,000
29	ವೈದ್ಯಕೀಯ ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳು	ರಾಜಸ್ವ	10,00,000	...	10,00,000
31	ನಗರಾಭಿವೃದ್ಧಿ ಇತ್ಯಾದಿ	ಬಂಡವಾಳ	3,00,00,000	...	3,00,00,000
36	ನ್ಯಾಯ ಪರಿಪಾಲನೆ	ರಾಜಸ್ವ	10,00,000	...	10,00,000
39	ಸಚಿವಾಲಯ	ರಾಜಸ್ವ	50,13,000	...	50,13,000
41	ಸಾಮಾನ್ಯ ಆಡಳಿತ ಇತ್ಯಾದಿ	ರಾಜಸ್ವ	51,73,000	...	51,73,000
43	ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)	ರಾಜಸ್ವ	4,46,61,000	...	4,46,61,000

47	ವಿದ್ಯುಚ್ಛಕ್ತಿ ಯೋಜನೆಗಳು	ರಾಜಸ್ವ	36,28,000	...	36,28,000
48	ಭೂಕಂದಾಯ ಇತ್ಯಾದಿ	ರಾಜಸ್ವ	13,51,000	...	13,51,000
49	ಮುದ್ರಾಂಕಗಳು ಮತ್ತು ನೋಂದಣಿ	ರಾಜಸ್ವ	1,35,40,000	...	1,35,40,000
50.	ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ	ರಾಜಸ್ವ	15,00,00,000	...	15,00,00,000
52	ವಕ್ಫ್ ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳನ್ನು ಹೊರತುಪಡಿಸಿ)	ರಾಜಸ್ವ ರಾಜಸ್ವ	3,50,000 19,89,00,000	...	3,50,000 19,89,00,000
53	ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ	ರಾಜಸ್ವ ಬಂಡವಾಳ	13,05,00,000 4,00,00,000	...	13,05,00,000 4,00,00,000
59	ಮಹಿಳಾ ಮತ್ತು ಮಕ್ಕಳ ಕಲ್ಯಾಣ	ರಾಜಸ್ವ	1,18,00,000	...	1,18,00,000
60.	ವಿಜ್ಞಾನ ಮತ್ತು ತಂತ್ರಜ್ಞಾನ	ರಾಜಸ್ವ	21,19,000	...	21,19,000
	ಜುಮ್ಲಾ	ರಾಜಸ್ವ ಬಂಡವಾಳ	111,73,35,000 20,09,10,000	11,00,000	111,73,35,000 20,09,10,000
	ಒಟ್ಟು ಮೊತ್ತ		**131,82,45,000**	**131,82,45,000**	**131,82,45,000**

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1992-93ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅಗತ್ಯವಿರುವ ಮತ್ತಷ್ಟು ಹಣವನ್ನು ರಾಜ್ಯದ ಸಂಚಿತ ನಿಧಿಯೊಳಗಿನಿಂದ ಬಾರತ ಸಂವಿಧಾನದ 205 (1) (ಎ) ಅನುಚ್ಛೇದದ ಉಪ-ಬಂಧಗಳನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಎಂ. ವೀರಪ್ಪ ಮೊಯಿಲಿ
ಮುಖ್ಯಮಂತ್ರಿಗಳು

ಎಂ. ಇನ್ನಾಸಪ್ಪ
ಕಾರ್ಯದರ್ಶಿ

WD 143

Printed at Government Text Book Press, Mysore

750 copies 11.3.94

KSA LIBRARY, B'lore
B020640
328.32402 548 LAD,1993
JJ48